# ಪರಿಪೂರ್ಣಚಂದ್ರಿಕಾ

## ಭಾಗ – 4

ಸೂತ್ರ–ಭಾಷ್ಯ–ಟೀಕಾ–ಟಿಪ್ಪಣಿ–ಮೊದಲಾದ 18 ಗ್ರಂಥಗಳೊಂದಿಗೆ
ಶ್ರೀವ್ಯಾಸತೀರ್ಥರ ತಾತ್ಪರ್ಯಚಂದ್ರಿಕಾ ಸಂಸ್ಕೃತಮೂಲ ಹಾಗೂ ಕನ್ನಡಾನುವಾದ



ಆಕಾಶಾಧಿಕರಣ, ಪ್ರಾಣಾಧಿಕರಣ,
ಜ್ಯೋತಿರಧಿಕರಣ, ಗಾಯತ್ರ್ಯಧಿಕರಣ,
ಅಂತಿಮಪ್ರಾಣಾಧಿಕರಣಗಳು

ಪ್ರಕಾಶಕರು : ಶ್ರೀಪಾದರಾಜಮಠ, ಮುಳಬಾಗಿಲು

॥ ಶ್ರೀಲಕ್ಷ್ಮೀಹಯಗ್ರೀವೋ ವಿಜಯತೇತಮಾಮ್ ॥

## ಭಾಗ -೪

# ಪರಿಪೂರ್ಣಚಂದ್ರಿಕಾ

### ಆಕಾಶಾಧಿಕರಣ, ಪ್ರಾಣಾಧಿಕರಣ, ಜ್ಯೋತಿರಧಿಕರಣ, ಗಾಯತ್ರ್ಯಧಿಕರಣ ಅಂತಿಮಪ್ರಾಣಾಧಿಕರಣ

| | | | |
|---|---|---|---|
| ಬ್ರಹ್ಮಸೂತ್ರ | ಬ್ರಹ್ಮಸೂತ್ರಭಾಷ್ಯ | ತಾತ್ಪರ್ಯಚಂದ್ರಿಕಾ | ನ್ಯಾಯವಿವರಣ |
| ಸೂತ್ರದೀಪಿಕಾ | ಭಾಷ್ಯದೀಪಿಕಾ | ಪ್ರಕಾಶ | ನ್ಯಾಯವಿವರಣಟೀಕಾ |
| ತಂತ್ರದೀಪಿಕಾ | ಸತ್ತರ್ಕದೀಪಾವಳಿ | ಗುರುರಾಜೀಯ | ಅಣುಭಾಷ್ಯ |
| ನ್ಯಾಯಮುಕ್ತಾವಳಿ | ತತ್ತ್ವಪ್ರಕಾಶಿಕಾ | ಭಾಟ್ಟಸಂಗ್ರಹ | ತತ್ತ್ವಮಂಜರೀ |
| | ಭಾವದೀಪ | | |
| | ವಾಕ್ಯಾರ್ಥಮಂಜರೀ | | |

(ಶಂಕರಭಾಷ್ಯ, ಭಾಮತೀ, ಶ್ರೀಭಾಷ್ಯ ಇವುಗಳ ಆಯ್ದ ಭಾಗಗಳು)

* * * * * *


ಪ್ರಧಾನಸಂಪಾದಕರು :

ವಿ॥ ಆರ್. ವೇಂಕಟೇಶಾಚಾರ್ಯ

ಶ್ರೀರಂಗಮ್

ಸಂಗ್ರಹ ಮತ್ತು ಅನುವಾದ :

ವಿ॥ ಬೆಮ್ಮತ್ತಿ ವೇಂಕಟೇಶಾಚಾರ್ಯ

ಬೆಂಗಳೂರು


- - - - - -


ಪ್ರಕಾಶಕರು

ಶ್ರೀಪಾದರಾಜಮಠ

ಮುಳಬಾಗಿಲು.

'ಪರಿಪೂರ್ಣಚಂದ್ರಿಕಾ' ॥ ಖರನಾಮಸಂವತ್ಸರ ಜ್ಯೇಷ್ಠ ಶುದ್ಧ ಚತುರ್ದಶೀ (ದಿನಾಂಕ : 14-06-2011) ಶ್ರೀಶ್ರೀ ಶ್ರೀಪಾದರಾಜರ ೬೧೧ನೇ ಆರಾಧನಾಮಹೋತ್ಸವದ ಶುಭಮುಹೂರ್ತದಲ್ಲಿ ಮುಳಬಾಗಿಲು ಕ್ಷೇತ್ರದಲ್ಲಿ ಬಿಡುಗಡೆಯಾಯಿತು.

ಪ್ರಕಾಶನ : ಶ್ರೀಪಾದರಾಜಮಠ, ಮುಳಬಾಗಿಲು.

ಸಹಯೋಗ : ಶ್ರೀಮತಿ ಲೀಲಾ ಮತ್ತು ಶ್ರೀನಿವಾಸ ಪ್ರಹ್ಲಾದ
ಡಾಯಲ್ಸ್ ಟೌನ್, ಪೆನ್ಸಿಲ್‌ವೆನಿಯಾ, ೧೮೯೦೧,
ಯು.ಎಸ್.ಎ.

ಪ್ರಥಮಮುದ್ರಣ : ೨೦೧೧

ಬೆಲೆ : ೧೦೦೦ ರೂ

ಪ್ರತಿಗಳು : ೧೦೦೦

©

Publication Copy right :

ಶ್ರೀಪಾದರಾಜಮಠ, ರಾಘವೇಂದ್ರ ಕಾಲೋನಿ, ಬೆಂಗಳೂರು.

Author Copyright

ಬೆಮ್ಮತ್ತಿ ವೆಂಕಟೇಶಾಚಾರ್ಯ, ಬೆಂಗಳೂರು.

All rights reserved . No part of this publication may be produced, stored in a retrieval system, or transmitted in any form or by any means, electronic, mechanical, photocopying, recording or otherwise, without the proper permission of Bemmatti Venkateshacharya.

ಅಕ್ಷರಜೋಡಣೆ :

ಸುಬ್ಬಣ್ಣ ಕೆಂಪದಾಳಿಹಳ್ಳಿ - 91413 11280

ನಾಗಲತಾ(ಸುಧಾ)ಗಿರಿ, ಬೆಂಗಳೂರು.

ಮುದ್ರಣ

ದರ್ಶನ್ ಪ್ರಿಂಟರ್ಸ್, ರಾಘವೇಂದ್ರಕಾಲೋನಿ, ಬೆಂಗಳೂರು.

# ಬಿನ್ನಹ

ಅಭಿಮಾನಿಗಳ ಪ್ರಶಂಸೆಯಿಂದ ದೊಡ್ಡವನಾಗಲಾರ. ಅಥವಾ ಶತ್ರುಗಳು ಮಾಡುವ ಮುಖಸ್ತುತಿಯಿಂದಲೂ ದೊಡ್ಡವನಾಗಲಾರ. ಅಭಿಮಾನಿಗಳಲ್ಲದವಗ ಮನಸ್ಸನ್ನು ಸೂರೆಗೊಳ್ಳುವಂತಹ ಗುಣಶಾಲಿಗಳಾಗಬೇಕು. ಶತ್ರುಗಳಾದವರು ಅಥವಾ ಅಭಿಮಾನಿಗಳಾಗದವರು ನಮ್ಮ ಗುರುಗಳ ಮುಂದೆ ಯಾವ ಉದ್ದೇಶವೂ ಇಲ್ಲದೆ ಸಹಜವಾಗಿ ಪ್ರಶಂಸಿಸಬೇಕು. ಆವಾಗ ಮಾತ್ರ ದೊಡ್ಡವನಾಗಲು ಸಾಧ್ಯ.

ಒಮ್ಮೆ ಶ್ರೀಪಾದರಾಜರೆದುರು ತಾರ್ಕಿಕ ದುರಂಧರನಾದ ಪಕ್ಷಧರಮಿಶ್ರನು ಮಾಡಿದ ಉದ್ಗಾರವಿದು-

*ಯದಧೀತಂ ತದಧೀತಂ, ಯನ್ನಾಧೀತಂ ತದಪ್ಯಧೀತಮ್ ।*
*ಪಕ್ಷಧರವಿಪಕ್ಷಃ ನಾವೇಕ್ಷೆ ವಿನಾ ನವೀನವ್ಯಾಸೇನ ॥*

''ಸ್ವಾಮೀ!! ಈ ಸಮಸ್ತಜಗತ್ತಿನಲ್ಲಿ ಪಕ್ಷಧರನಿಗೆ ಸರಿಸಾಟಿಯಾದ ಮತ್ತೊಬ್ಬ ಪ್ರತಿವಾದಿಯೇ ಇರಲು ಸಾಧ್ಯವಿಲ್ಲ. ಆದರೆ ಇಂದು ತಮ್ಮ ಶಿಷ್ಯನಾದ ನವೀನವ್ಯಾಸ ಮಾತ್ರ ನಾನು ಓದಿದ್ದೆಲ್ಲವನ್ನೂ ಓದಿದ್ದಾನೆ. ನಾನು ಓದದೇ ಇದ್ದದ್ದನ್ನೂ ಸಹ ಓದಿದ್ದಾನೆ. ಇವನು ಮಾತ್ರ ನನಗೊಬ್ಬ ಪ್ರಬಲಪ್ರತಿಪಕ್ಷಿ. ಬೇರಾರೂ ಇಲ್ಲ.''

ಹೀಗೆ ಶ್ರೀವ್ಯಾಸತೀರ್ಥರ ವೈದುಷ್ಯ ಹಾಗೂ ಗುಣಗಳು ಪ್ರತಿವಾದಿಗಳ ಮನಸ್ಸನ್ನೂ ಸಹ ಸೂರೆಗೊಂಡಿದ್ದವು.

ಇಂತಹ ವ್ಯಾಸತೀರ್ಥರ ಪಾಂಡಿತ್ಯವೇ ಹೀಗಿರಬೇಕಾದರೆ ಅವರ ಗುರುಗಳಾದ ಶ್ರೀಪಾದರಾಜರ ಪಾಂಡಿತ್ಯ ಹಾಗೂ ಗುಣಗಳು ಯಾವ ಹಂತದಲ್ಲಿದ್ದವು ಎಂಬುದನ್ನು ನಮ್ಮಿಂದ ಊಹಿಸಲೂ ಸಹ ಸಾಧ್ಯವಿಲ್ಲ. ಶ್ರೀವ್ಯಾಸತೀರ್ಥರಿಗೆ ನ್ಯಾಯ, ವೇದಾಂತಪಾಠಗಳನ್ನೆಲ್ಲಾ ಹೇಳಿ ತ್ರಿಖಂಡಭೂಖಂಡದಲ್ಲಿಯೇ ಅಪ್ರತಿಮಪಂಡಿತರೆಂದು ಜಯ ಡಿಂಡಿಮ ಹೊಡೆಸಿದವರು ಶ್ರೀಪಾದರಾಜರು. ಅದಕ್ಕೆ ತಕ್ಕಂತೆ ಶ್ರೀಪಾದರಾಜರ ಮನಸ್ಸಿಗೆ ಸಂಪೂರ್ಣ ತೃಪ್ತಿಯಾಗುವಂತೆ ನಡೆದುಕೊಂಡ ಧೀರಪುರುಷರು ಶ್ರೀವ್ಯಾಸತೀರ್ಥರು. ಇವರಿಬ್ಬರ ಸಂಬಂಧ ಅನ್ಯಾದೃಶವಾದದ್ದು.

ಶ್ರೀವ್ಯಾಸತೀರ್ಥರ ಗುರುಭಕ್ತಿ ಹಾಗೂ ಶ್ರೀಪಾದರಾಜರ ಶಿಷ್ಯವಾತ್ಸಲ್ಯ ಎರಡೂ ಸಹ ಅದರ್ಶಪ್ರಾಯವಾಗಿವೆ. ಗುರುಗಳಾದ ಶ್ರೀಶ್ರೀಪಾದರಾಜರೇ ಶ್ರೀವ್ಯಾಸತೀರ್ಥ ಮೇಲೆ ಪದ್ಯಗಳನ್ನು ರಚಿಸಿ, ಪ್ರಶಂಸಿಸಿದ್ದು ಅತ್ಯಂತ ಅನುಕರಣೀಯ.

*'ಇದಿರದಾವನು ನಿನಗೀ ಧರೆಯೊಳು*
*ಪದುಮನಾಭನ ದಾಸ ಪರಮೋಲ್ಲಾಸ ।*
*ವಾದಿತಿಮಿರಮಾರ್ತಾಂಡನೆಂದೆನಿಸಿದೆ*
*ವಾದಿಶರಭಭೇರುಂಡ ವ್ಯಾಸರಾಯಾ ॥*

*.... ಹಮ್ಮನಳಿದು ಶ್ರೀಪತಿರಂಗವಿಟ್ಠಲನ್ನ*
*ಸುಮ್ಮಾನದಿಂ ಸೇವಿಪ ವ್ಯಾಸಮುನಿರಾಯಾ ॥೩॥*

ಎಂದು ಶಿಷ್ಯವಾತ್ಸಲ್ಯದಿಂದ ಗುರುಗಳು ಕೊಂಡಾಡಿದರೆ ಶಿಷ್ಯರಾದ ಶ್ರೀವ್ಯಾಸತೀರ್ಥರು

*'ವಾದಿಗಜಮಸ್ತಕಾಂಕುಶ ಸುಜನಬುಧಗೇಯ ।*
*ಮೇದಿನೀಸುರವಂದ್ಯ ಶ್ರೀಪಾದರಾಯ ॥*

ಎಂಬುದಾಗಿ ಗುರುಗಳು ತಮಗೆ ಮಾಡಿದ ಪ್ರಶಂಸೆಯನ್ನೇ ಇಮ್ಮಡಿಮಾಡಿ ಗುರುಗಳಿಗೆ ಸಮರ್ಪಿಸಿದ್ದಾರೆ.

ಗುರುಗಳಾದ ಶ್ರೀಪಾದರಾಜರು ಶಿಷ್ಯನನ್ನು

*'ಸಾಸಿರಜಿಹ್ವೆಯೊಳ್ ಶೇಷನೇ ಕೊಂಡಾಡಬೇಕು*
*ವ್ಯಾಸಮುನಿರಾಯರ ಸನ್ಯಾಸದಿರವ ।*

*ಆಸೆಯಿಂದ ತಮ್ಮುದರ ಪೋಷಣೆಗಾಗಿ ಭಪ್ಪನ್ನ*
*ದೇಶವ ತಿರುಗಿ ಸಂಚಾರ ಮಾಡುತ*
*ಮೀಸಲ ಮಡಿ ಬಚ್ಚಟ್ಟು ಮಿಂಚುಕೂಳನುಂಡು ದಿನ*
*ಮೋಸಮಾಡಿ ಕಳೆವ ಸನ್ಯಾಸಿಗಳ ಸರಿಯೆ ॥*

*ಕೆರೆ ಬಾವಿ ಪುರ ಅಗ್ರಹಾರಂಗಳ ಮಾಡಿ ಭೂ-*
*ಸುರರೊಂದು ಲಕ್ಷ ಕುಟುಂಬಗಳ*
*ಪೊರೆವ ವೈಭವ ಕೀರ್ತಿಯಿಂದಲಿ ವ್ಯಾಸರಾ-*
*ಯರ ಗುಣಗಣಗಾಂಭೀರ್ಯಾದಿಗಳ ॥*

*ಹಗಲಿರುಳೆನ್ನದೆ ಆವಾಗ ಶ್ರೀಹರಿ ಪದಪದ್ಮ-*
*ಯುಗಳವನರ್ಚಿಸಿ ಭಕುತಿಯಿಂದ*
*ರಘುಪತಿಭಜಕ ಬ್ರಹ್ಮಣ್ಯತೀರ್ಥಕುವರ*
*ರಂಗವಿಠಲನನ್ನು ಬಿಡೆಬಿಡೆನು ಎಂಬ ॥*

ಎಂದು ಪ್ರಶಂಸಿಸಿದರೆ, ಅದಕ್ಕೆ ತಕ್ಕಂತೆ ಶಿಷ್ಯರಾದ ವ್ಯಾಸತೀರ್ಥರೂ ಸಹ,
*'ಮಹಿಮೆ ಸಾಲದೇ ಇಪ್ಪೇ ಮಹಿಮೆ ಸಾಲದೆ*
*ಅಹಿಶಯನನ ಒಲುಮೆಯಿಂದ*
*ಮಹಿಯೊಳೆಮ್ಮ ಶ್ರೀಪಾದರಾಯರ ।'*

ಎಂಬುದಾಗಿ ಕೇವಲ ಮೂರು ನುಡಿಗಳಿಂದ ಶ್ರೀಪಾದರಾಜರ ಸಂಪೂರ್ಣಮಹಿಮೆಯನ್ನು ಸೆರೆಹಿಡಿದು ಸ್ತುತಿಸಿದ್ದಾರೆ. ಇದೇ ಮಾದರಿಯಲ್ಲಿ

*ಧರೆಯೊಳು ಮೂರೇಳು ಕುಮತರ ಕುಭಾಷ್ಯವ*

ಎಂಬ ವ್ಯಾಸರಾಜರ ಇನ್ನೊಂದು ಕೀರ್ತನೆಯಲ್ಲಿಯೂ ಸಹ ಗುರುಮಹಿಮೆಗಳ ಸರಮಾಲೆಯೇ ಪೋಣಿಸಲ್ಪಟ್ಟಿದೆ. ಈ ಎಲ್ಲ ಕೀರ್ತನೆಗಳ ಮೂಲ ಭಾಷ್ಯದಂತೆ ಶ್ರೀವ್ಯಾಸತೀರ್ಥರ ಪಂಚರತ್ನಮಾಲಿಕೆಯು ಸುಪ್ರಸಿದ್ಧವಾಗಿದೆ.

*'ವಂದೇ ಶ್ರೀಪಾದರಾಜಂ ರುಚಿತಮಹೃದಯಂ ಪೂಜಿತಶ್ರೀಸಹಾಯಂ'*

ಎಂದು ಪ್ರಾರಂಭವಾಗುವ ಈ ಪುಟ್ಟ ನುಡಿಗಟ್ಟಿನಲ್ಲಿ ವಿಸ್ತಾರವಾದ ಗುರುಗಳ ಮಹಿಮೆಯು ಅಡಕವಾಗಿದೆ.

*ಯದ್‌ವೃಂದಾವನಸೇವಯಾ ಸುವಿಮಲಾ ವಿದ್ಯಾಂ ಪಶೂನ್ ಸಂತತಿಮ್*
*ಧ್ಯಾನಾತ್ ಜ್ಞಾನಮನಲ್ಪಕೀರ್ತಿನಿವಹಂ ಪ್ರಾಪ್ನೋತಿ ಸೌಖ್ಯಂ ಜನಃ ।*
*ತಂ ವಂದೇ ನರಸಿಂಹತೀರ್ಥನಿಲಯಂ ಶ್ರೀವ್ಯಾಸರಾಟ್ ಪೂಜಿತಂ*
*ಧ್ಯಾಯಂತಂ ಮನಸಾ ನೃಸಿಂಹಚರಣಂ ಶ್ರೀಪಾದರಾಜಂ ಗುರುಮ್ ॥*

ಎಂಬುದಾಗಿ ಗುರುಸ್ಮರಣೆಯಿಂದ ಸಕಲವೂ ದೊರಯುತ್ತದಂದು ಧೈರ್ಯನೀಡಿದ್ದಾರೆ.

ತಾತ್ಪರ್ಯಚಂದ್ರಿಕಾಗ್ರಂಥವನ್ನು ಪ್ರಾರಂಭಮಾಡುವಾಗಲೂ ಸಹ ಅತ್ಯಂತಭಕ್ತಿಯಿಂದ ಗುರುಗಳನ್ನು ನಮಿಸುತ್ತಾರೆ.

*ಜ್ಞಾನವೈರಾಗ್ಯಭಕ್ತ್ಯಾದಿ ಕಲ್ಯಾಣಗುಣಶಾಲಿನಃ ।*
*ಲಕ್ಷ್ಮೀನಾರಾಯಣಮುನೀನ್ ವಂದೇ ವಿದ್ಯಾಗುರೂನ್ ಮಮ ॥*

ಪರಿಪೂರ್ಣಚಂದ್ರಿಕಾಗ್ರಂಥದ ನಾಲ್ಕನೆಯ ಸಂಪುಟವು ಶ್ರೀಪಾದರಾಜರ ಆರಾಧನೆಯ ಶುಭಸಂದರ್ಭದಲ್ಲಿ ಅರ್ಪಿತವಾಗುತ್ತಿದೆ. ೬೧೧ನೆಯ ಈ ಆರಾಧನೆಯ ಶುಭಮುಹೂರ್ತದಲ್ಲಿ ಶ್ರೀವ್ಯಾಸತೀರ್ಥರೇ ಗುರುಗಳಿಗೆ ಸಮರ್ಪಿಸುವಂತೆ ನಮ್ಮನ್ನು ಅನುಗ್ರಹಿಸಿದ್ದಾರೆ. ಈ ಕೃತಿಯ ಪ್ರಕಟನೆಗೆ ಸಂಪೂರ್ಣವಾಗಿ ಬೆಂಬಲ ನೀಡಿದ ಶ್ರೀಪಾದರಾಜಮಠದ ಯತಿಪುಂಗವರಿಗೆ ಹಾಗೂ ಲಕ್ಷ್ಮೀನಾರಾಯಣಾಚಾರ್ಯರಿಗೆ ಅನಂತನಮಸ್ಕಾರಗಳು ಹಾಗೂ ಕೃತಜ್ಞತೆಗಳು.

ಮುಖಪುಟವನ್ನು ಅಂದವಾಗಿ ಚಿತ್ರಿಸಿಕೊಟ್ಟ ಪಿ. ಮಧುಸೂದನಾಚಾರ್ಯರಿಗೆ ಕೃತಜ್ಞತೆಗಳು.

ವಿದ್ವಾಂಸರಾದ ಕಲ್ಲಾಪುರ ಗುರುರಾಜಾಚಾರ್ಯರು ಸುಮಾರು ೨೫,೦೦೦ರೂಗಳನ್ನು ಸಂಗ್ರಹಿಸಿ ಈ ಕೃತಿಯ ಪ್ರಕಟನೆಗಾಗಿ ನೀಡಿ ಆಶೀರ್ವದಿಸಿದ್ದಾರೆ. ಯಾರೊಬ್ಬರ ಮನೆಯಲ್ಲೂ ಒಂದು ಕ್ಷಣಮಾತ್ರ ನಿಲ್ಲುವ ಪಾದರಸದಂತೆ ಸಾಧನಾಪಥದಲ್ಲಿ ಸಂಚರಿಸುವ ಇವರ ಗುಣಗಳು ಹಾಗೂ ವೈದುಷ್ಯವು ಅತ್ಯಂತ ಆದರ್ಶಪ್ರಾಯವಾಗಿದೆ. ಇವರಿಗೆ ನನ್ನ ಅನಂತನಮಸ್ಕಾರಗಳು ಹಾಗೂ ಕೃತಜ್ಞತೆಗಳು.

ಪ್ರತಿಯೊಂದು ಸಂಪುಟಕ್ಕೂ ತುಂಬು ಹೃದಯದಿಂದ ಸಹಕಾರ ನೀಡಿ ಪ್ರೋತ್ಸಾಹಿಸುತ್ತಿರುವ ಶ್ರೀನಿವಾಸ ಪ್ರಹ್ಲಾದ್ ಇವರಿಗೂ ಕೃತಜ್ಞತೆಗಳು.

* * * *

# ಭೂಮಿಕಾ

ಚಂದ್ರಿಕಾಚಾರ್ಯರು ಆಕಾಶಾಧಿಕರಣದಲ್ಲಿ ಅನೇಕ ರೀತಿಯ ಪೂರ್ವಪಕ್ಷಗಳನ್ನು ತೋರಿಸಿದ್ದಾರೆ. ಇವುಗಳಲ್ಲಿ ಕೆಲವನ್ನು ಆಚಾರ್ಯರು ಭಾಷ್ಯದಲ್ಲಿ, ಅನುವ್ಯಾಖ್ಯಾನದಲ್ಲಿ, ನ್ಯಾಯವಿವರಣದಲ್ಲಿ ಹೇಳಿದ್ದಾರೆ. ಇನ್ನು ಕೆಲವನ್ನು ಸೂಚಿಸಿದ್ದಾರೆ.

ಅನುವ್ಯಾಖ್ಯಾನದ ಒಂದೇ ಶ್ಲೋಕದಲ್ಲಿ ಅನೇಕ ಪೂರ್ವಪಕ್ಷಗಳು ಹೇಗೆ ಆಡಕವಾಗಿವೆ ಎಂಬುದನ್ನು ಹೃದಯಂಗಮವಾಗಿ ಚಂದ್ರಿಕಾಚಾರ್ಯರು ತೋರಿಸಿದ್ದಾರೆ. ಅನುವ್ಯಾಖ್ಯಾನದ ಶ್ಲೋಕ ಹೀಗಿದೆ —

*ಚೇಷ್ಟಾ ಹಿ ಚೇತನಾನಾಂ ಯಾ ಸಾ ಭವೇತ್ ತತ್ಪ್ರಸಾದತಃ।*
*ಅಚೇತನಸ್ವಭಾವಸ್ತು ವಿವರಾದಿಃ ಕಥಂ ತತಃ?* - ಎಂದು.

ಇದಕ್ಕೆ ಮೊದಲನೆಯ ಅನ್ವಯ - **ಅಚೇತನಸ್ವಭಾವಃ = ಅಚೇತನಗತಸ್ವಭಾವಃ, ವಿವರಾದಿಃ = ವಿವರತ್ವಾದಿಃ, ತತಃ = ಭಗವತ್ಪ್ರಸಾದಾತ್, ಕಥಂ = ಕಥಮ್ ಅಪಿ ನ।**

ತಾತ್ಪರ್ಯ – ಚೇತನಪದಾರ್ಥದಲ್ಲಿರುವ ಪ್ರವೃತ್ತಿನಿಮಿತ್ತವು ವಿಷ್ಣುವಿನ ಪ್ರಸಾದದಿಂದ ಬರಬಹುದು. ಆದರೆ ಅಚೇತನಪದಾರ್ಥಕ್ಕೆ ಪ್ರಸಾದ(ಅನುಗ್ರಹ)ವನ್ನು ಮಾಡಲಿಕ್ಕೆ ಬರುವುದಿಲ್ಲ. ಆದ್ದರಿಂದ ಆಕಾಶಶಬ್ದ-ಪ್ರವೃತ್ತಿನಿಮಿತ್ತವಾದ ವಿವರತ್ವವನ್ನು ಜಡವಾದ ಆಕಾಶಕ್ಕೆ ಹೇಗೆ ಪ್ರಸಾದವಾಗಿ ಕೊಡಲಿಕ್ಕೆ ಬರುತ್ತದೆ.

ಎರಡನೆಯ ಪೂರ್ವಪಕ್ಷ –

**ಅಚೇತನಸ್ವಭಾವಃ ವಿವರಾದಿಃ = ವಿವರತ್ವಾದಿಃ ತತಃ =ಭಗವತಃ ಕಥಮ್ = ಭಗವದಧೀನಂ ಕಥಮ್? ಸ್ವಭಾವವತ್ವಾತ್ವ್।**

ತಾತ್ಪರ್ಯ– ಆಗಂತುಕವಾದ ಧರ್ಮವು ಭಗವಂತನಿಂದ ಬರಬಹುದು. ಉದಾ - ಇಂದ್ರನಲ್ಲಿರುವ ಪರಮೈಶ್ವರ್ಯವು ಭಗವಂತನ ಅಧೀನವಾಗಬಹುದು. ಆದರೆ ಪದಾರ್ಥದ ಸ್ವಭಾವವು ವಿಷ್ಣುವಿನ ಅಧೀನ-ವಾಗುವುದಿಲ್ಲ. ಸ್ವಭಾವವೆಂದರೆ ಅನ್ಯಾಧೀನವಲ್ಲವೆಂದರ್ಥ. ಹೀಗಾಗಿ ಆಕಾಶದ ಧರ್ಮವಾದ ವಿವರತ್ವವು ವಿಷ್ಣುವಿನ ಅಧೀನ ಹೇಗಾಗುತ್ತದೆ? ಎರಡು ಪ್ರಶ್ನೆಗಳ ಆಂತರ್ಯವೇನೆಂದರೆ - ಚೇತನದ, ಅಚೇತನದ ಸ್ವಭಾವವು ಎಂದೂ ಭಗವಂತನ ಅಧೀನವಾಗುವುದಿಲ್ಲ ಎಂದು.

ಮೂರನೆಯ ಪೂರ್ವಪಕ್ಷ -

**ವಿವರತ್ವಾದಿಕಂ ಕಥಂ ತತಃ = ತತ್ರ ಭಗವತಿ ಕಥಮ್? ಕುತಃ? ಅಚೇತನತ್ವಾತ್ ತತಶ್ಚ ತದ್ಗತತ್ವಾಭಾವಾತ್ ನ ನಿಮಿತ್ತಮ್ ।**

ತಾತ್ಪರ್ಯ - ಯಾವುದೇ ಶಬ್ದದಿಂದ ವಿಷ್ಣು ವಾಚ್ಯನಾಗಬೇಕಾದರೆ, ಆ ಶಬ್ದದ ಪ್ರವೃತ್ತಿನಿಮಿತ್ತ ವಿಷ್ಣುವಿನಲ್ಲಿರಬೇಕು. ಆದರೆ ಆಕಾಶಶಬ್ದದ ಪ್ರವೃತ್ತಿನಿಮಿತ್ತವಾದ ವಿವರತ್ವವು ಕೇವಲ ಆಕಾಶದಲ್ಲಿ ಮಾತ್ರ ಇರುವಂತಹದ್ದು. ಚೇತನಪದಾರ್ಥವಾದ ವಿಷ್ಣುವಿನಲ್ಲಿ ಹೇಗೆ ಬರಲಿಕ್ಕೆ ಸಾಧ್ಯ ? ಆದ್ದರಿಂದ ಆಕಾಶ-ಶಬ್ದದಿಂದ ವಿಷ್ಣುವು ಹೇಳಲ್ಪಡುವುದಿಲ್ಲ.

ನಾಲ್ಕನೆಯ ಪೂರ್ವಪಕ್ಷ –

ಅಚೇತನಸ್ವಭಾವಃ ವಿವರಾದಿಃ = ವಿವರತ್ವಾದಿಃ ಕಥಂ ತತಃ? ಐಶ್ವರ್ಯಾದಿವತ್ ಆಗಂತುಕಜ್ಞಾನಾದಿ -ಹೇತುದ್ವಾರಾಭಾವಾತ್ ಕಥಂ ಈಶ್ವರಾಯತ್ತಮ್?

ತಾತ್ಪರ್ಯ - ಇಂದ್ರನಲ್ಲಿ ಜಗತ್ಪಾಲನಾದಿ ಐಶ್ವರ್ಯವನ್ನು ಹೇಗೆ ಕೊಡುತ್ತಾನೆಂದರೆ, ಅವನಿಗೆ ಜ್ಞಾನವನ್ನು ಕೊಟ್ಟು, ಅವನಿಂದ ಪಾಲನೆಯನ್ನೂ ಮಾಡಿಸುತ್ತಾನೆ. ಈ ಪಾಲನರೂಪವಾದ ಇಂದ್ರಶಬ್ದ-ಪ್ರವೃತ್ತಿನಿಮಿತ್ತವಾದ ಐಶ್ವರ್ಯವನ್ನು ಚೇತನನಾದ ಇಂದ್ರನಿಗೆ ಕೊಟ್ಟು, ತಾನು (ವಿಷ್ಣುವು) ಇಂದ್ರಶಬ್ದದಿಂದ ವಾಚ್ಯನಾಗಬಹುದು. ಆದರೆ ಜಡವಾದ ಪದಾರ್ಥಕ್ಕೆ ಜ್ಞಾನವನ್ನು ಕೊಡುವುದಕ್ಕೆ ಬರುವುದಿಲ್ಲ. ಆದ್ದರಿಂದ ವಿವರತ್ವವನ್ನು ಆಕಾಶಕ್ಕೆ ಜ್ಞಾನಪ್ರಚೋದನೆಯ ಮೂಲಕ ಕೊಡಲಿಕ್ಕೆ ಬರುವುದಿಲ್ಲ.

ಇಷ್ಟು ಪ್ರಮೇಯದ ಮೇಲೆ ಬರುವ ಆಕ್ಷೇಪಗಳು. ಈ ಪೂರ್ವಪಕ್ಷಗಳನ್ನು ಆಚಾರ್ಯರು ಕಂಠತಃ ಹೇಳಿದ್ದಾರೆ.

ಇನ್ನು ಭಾಷ್ಯದಲ್ಲಿ, ಅನುವ್ಯಾಖ್ಯಾನದಲ್ಲಿ ಸೂಚಿತವಾದ ಕೆಲವು ಪೂರ್ವಪಕ್ಷಗಳನ್ನು ತೋರಿಸುತ್ತಾರೆ.

(೧) '' 'ಆಕಾಶ' ಶಬ್ದವು ಅನೇಕಬಾರಿ ಬಂದಿರುವುದರಿಂದ ನಿರವಕಾಶಲಿಂಗಗಳಿದ್ದರೂ 'ಆಕಾಶ'ಶಬ್ದಕ್ಕೆ ಶ್ರುತಿತ್ವೇನ ಪ್ರಾಮುಖ್ಯತೆಯನ್ನು ಕೊಟ್ಟು ರೂಢಿಯಿಂದ ತಿಳಿಯುವ ಭೂತಾಕಾಶವನ್ನೇ ತೆಗೆದುಕೊಳ್ಳಬೇಕು.''

— ಈ ಪೂರ್ವಪಕ್ಷವನ್ನು ಮಾಡುತ್ತಾ ಚಂದ್ರಿಕಾಚಾರ್ಯರು ಇನ್ನೊಂದು ಸೂಕ್ಷ್ಮವಾದ ಅಂಶವನ್ನು ತಿಳಿಸಿಕೊಡುತ್ತಾರೆ – ಹಿಂದಿನ ಅಧಿಕರಣದಲ್ಲಿಯೂ 'ಇಂದ್ರ'ಶಬ್ದವು (ಇಂದ್ರೋ ರಾಜಾ, ಬ್ರಹ್ಮೇಂದ್ರ-ಮಗ್ನಿಂ ಇತ್ಯಾದಿಯಾಗಿ) ಅನೇಕಬಾರಿ ಬಂದಿದೆ. ಆದರೆ ಅಲ್ಲಿ ಅನೇಕ ಬಾರಿ ಬಂದಿರುವ ಇಂದ್ರಶ್ರುತಿಯನ್ನು ಬಾಧಿಸಿ, ನಿರವಕಾಶವಾದ ಸಮುದ್ರಶಾಯಿತ್ವಲಿಂಗದಿಂದ ಇಂದ್ರಶಬ್ದವಾಚ್ಯನಾದವನು ವಿಷ್ಣುವೆಂದು ನಿರ್ಣಯಮಾಡಲಾಗಿದೆ. ಅದೇ ನ್ಯಾಯವನ್ನು ಈ ಅಧಿಕರಣದಲ್ಲಿ ವಿವಕ್ಷಿಸಲಾಗಿದೆ. ಆದ್ದರಿಂದ ಅನೇಕ ಬಾರಿ ಆಕಾಶಶಬ್ದವು ಬಂದಿದ್ದರೂ ನಿರವಕಾಶವಾದ ಅನಂತತ್ವಲಿಂಗದಿಂದ ಏಕೆ ಬಾಧಿಸಬಾರದು? ಎಂಬ ಸೂಕ್ಷ್ಮವಾದ ಪ್ರಶ್ನೆ ಬರುತ್ತದೆ. ಈ ಸಂದೇಹವನ್ನು ಚಂದ್ರಿಕಾಚಾರ್ಯರು ಪರಿಹಾರ ಮಾಡುತ್ತಾ ಹಿಂದಿನ ಅಧಿಕರಣದಲ್ಲಿ ಕೇವಲ ಶ್ರುತಿತ್ವಪ್ರಯುಕ್ತಪ್ರಾಬಲ್ಯವು ನಿರವಕಾಶತ್ವಪ್ರಯುಕ್ತಪ್ರಾಬಲ್ಯಕ್ಕಿಂತ ಹೆಚ್ಚು ಎನ್ನುವುದನ್ನು ಮಾತ್ರ ಖಂಡಿಸಿದ್ದಾರೆ. ಈ ಅಧಿಕರಣದಲ್ಲಾದರೋ ಶ್ರುತಿತ್ವಬಹುತ್ವ- ಉಭಯಪ್ರಯುಕ್ತ-ಪ್ರಾಬಲ್ಯಕ್ಕಿಂತ ನಿರವಕಾಶಪ್ರಯುಕ್ತಪ್ರಾಬಲ್ಯವು ಹೆಚ್ಚು ಎನ್ನುವುದನ್ನೂ ಸಮರ್ಥಿಸುತ್ತಾರೆ ಎಂಬ ಸೂಕ್ಷ್ಮ ಅಂಶವನ್ನು ತಿಳಿಸಿತ್ತಾರೆ.

ಈ ಪೂರ್ವಪಕ್ಷವು ಭಾಷ್ಯದಲ್ಲಿ ಉದಾಹೃತವಾದ ವಾಕ್ಯದಿಂದ ಸೂಚಿತವಾಗಿದೆ.

(೨) ಆಕಾಶಶ್ರುತಿಯು ಭೂತಾಕಾಶಪರವೇ ಆಗಿದೆ. ಏಕೆಂದರೆ-

(ಅ) ಆಕಾಶಶಬ್ದವು ವಿಷ್ಣುಪರವಾಗಬೇಕಾದರೆ, ಬೇರೆ ಕಡೆ ಎಲ್ಲಿಯಾದರೂ ಆಕಾಶಶಬ್ದವು ವಿಷ್ಣುಶಬ್ದದ ಜೊತೆಗೆ ಪಠಿತವಾಗಿರಬೇಕು. ಉದಾ - 'ಇಂದ್ರೋ ರಾಜಾ'

ಎಂದು ತೈತ್ತಿರೀಯ ಆರಣ್ಯಕದಲ್ಲಿ ಬರುವ ವಾಕ್ಯದಲ್ಲಿ, ಇಂದ್ರಶಬ್ದವು ಪ್ರಸಿದ್ಧ ಪುರಂದರನನ್ನು ಹೇಳುತ್ತದೋ ಆಥವಾ ವಿಷ್ಣುವನ್ನು ಹೇಳುತ್ತದೋ ಎಂದು ಚರ್ಚಿಸಿದಾಗ 'ಮತ್ತೀಂದ್ರಮಿಂದೋ ಪವಮಾನ ವಿಷ್ಣೂ' ಎಂದು ಪವಮಾನಸೂಕ್ತದಲ್ಲಿ ಬರುವ ವಾಕ್ಯದಲ್ಲಿ ಇಂದ್ರಶಬ್ದಕ್ಕೆ ವಿಷ್ಣುಶಬ್ದದ ಸಾಹಚರ್ಯವು ಇದೆಯಾದ್ದರಿಂದ 'ಇಂದ್ರೋ ರಾಜಾ' ಎನ್ನುವಲ್ಲೂ ಇಂದ್ರಶಬ್ದವು ವಿಷ್ಣುವನ್ನು ಹೇಳುತ್ತದೆ ಎಂದು ನಿರ್ಣಯಿಸಲಾಗಿದೆ. ಇದರಂತೆ ಆಕಾಶಶಬ್ದಕ್ಕೆ ವಿಷ್ಣುವಿನ ಸಾಹಚರ್ಯವು ಎಲ್ಲೂ ಕಂಡು ಬಂದಿಲ್ಲ.

(ಆ) ಆಕಾಶಶಬ್ದವು ವಿಷ್ಣುಪರ ಎಂದು ಹೇಳುವ ಯಾವ ವಿಶೇಷಶ್ರುತಿಯೂ ಇಲ್ಲ. ಉದಾಹ - 'ಇಂದ್ರೋ ರಾಜಾ' ಎನ್ನುವ ವಾಕ್ಯದಲ್ಲಿ ಇಂದ್ರಶಬ್ದವು ವಿಷ್ಣುಪರವಾಗಿದೆ ಎಂದು ಹೇಳಬಹುದು. ಏಕೆಂದರೆ, ಎಲ್ಲ ದೇವತೆಗಳ ನಾಮವೂ ವಿಷ್ಣುವಿನ ನಾಮಗಳೇ ಎಂದು ಹೇಳುವ "ಯೋ ದೇವಾನಾಂ ನಾಮಧಾ ಏಕ ಏವ' ಎಂದು ಹೇಳುವ ವಿಶೇಷಶ್ರುತಿಯಿದೆ. ಆದರಂತೆ ಎಲ್ಲ ಭೂತವಾಚಕಶಬ್ದಗಳೂ ವಿಷ್ಣುವಿನ ನಾಮಗಳು ಎಂದು ಹೇಳುವ ಯಾವ ಶ್ರುತಿಯೂ ಇಲ್ಲ.

ಈ ಎರಡೂ ಪೂರ್ವಪಕ್ಷಗಳನ್ನು ಇನ್ನೂ ಪ್ರಬಲಮಾಡಲು ರಾಯರು ಪ್ರಕಾಶದಲ್ಲಿ ಇನ್ನೂ ಹೆಚ್ಚಿನ ಅಂಶಗಳನ್ನು ಹೇಳುತ್ತಾರೆ.

— ಮೊದಲನೆಯ ಪೂರ್ವಪಕ್ಷದಲ್ಲಿ ಇಂದ್ರಶಬ್ದವು ಬೇರೊಂದು ಕಡೆ ವಿಷ್ಣುಶಬ್ದದ ಸಾಮಾನಾಧಿ- ಕರಣ್ಯವನ್ನು ಹೊಂದಿದೆ. ಆದರಂತೆ ಆಕಾಶಶಬ್ದವು ಹೊಂದಿಲ್ಲವೆಂದು ಹೇಳಿದಿರಿ. ಆದರೆ ಇದು ಸರಿಯಲ್ಲ. ಏಕೆಂದರೆ 'ಆಕಾಶೋ ವೈ ನಾಮ ನಾಮರೂಪಯೋಃ ನಿರ್ವಹಿತಾಃ ತೇ ಯದಂತರಾತ್ಮಾ ತದ್‌ಬ್ರಹ್ಮ, ತದಮೃತಂ ಸಾ ಆತ್ಮಾ' ಎಂದು ಬೇರೊಂದು (ಛಾಂದೋಗ್ಯದಲ್ಲಿ) ಕಡೆ ವಿಷ್ಣುವಿನಲ್ಲೇ ಇರುವ ಬ್ರಹ್ಮಶಬ್ದದ ಸಾಮಾನಾಧಿಕರಣ್ಯವು ಆಕಾಶ-ಶಬ್ದಕ್ಕೆ ಇದೆಯಲ್ಲವೇ? ಎಂದರೆ ಇಲ್ಲಿ 'ವೈ ನಾಮ' ಎಂದು ಪ್ರಸಿದ್ಧಿಯನ್ನು ಹೇಳುವ ಶಬ್ದಗಳ ಸಾಹಚರ್ಯದಿಂದ ಆಕಾಶಶಬ್ದವು ಪ್ರಸಿದ್ಧ ಆಕಾಶಪರವೇ ಆಗಿದೆ ಹೊರತು ವಿಷ್ಣುಪರವಾಗಿಲ್ಲ. ಬ್ರಹ್ಮಶಬ್ದವನ್ನು ಸಾವಕಾಶಮಾಡಿ ಪ್ರಸಿದ್ಧ ಆಕಾಶಪರ ಎಂದೇ ಹೇಳಬೇಕು ಎಂದು ಪೂರ್ವಪಕ್ಷಿಯ ಅಭಿಪ್ರಾಯವಿರುವುದರಿಂದ ಈ ಛಾಂದೋಗ್ಯವಾಕ್ಯವನ್ನು ಉದಾಹರಿಸು-ವಂತಿಲ್ಲ.

— ಇದರಂತೆ ಎರಡನೆಯ ಪೂರ್ವಪಕ್ಷದಲ್ಲಿ ಎಲ್ಲ ದೇವತೆಗಳ ಹೆಸರುಗಳೂ ವಿಷ್ಣುವಿನ ನಾಮಗಳೇ ಎಂದು ಹೇಳುವ 'ಯೋ ದೇವಾನಾಂ ನಾಮಧಾ ಏಕ ಏವ' ಎಂಬ ವಿಶೇಷಶ್ರುತಿಯಿರುವಂತೆ ಆಕಾಶಶಬ್ದ ಆಥವಾ ಎಲ್ಲಾ ಭೂತಶಬ್ದ ವಿಷ್ಣುವಿನ ನಾಮಗಳೇ ಆಗಿವೆ ಎಂದು ಹೇಳುವ ಯಾವ ವಿಶೇಷಶ್ರುತಿಯೂ ಇಲ್ಲ ಎಂದು ಹೇಳಿದ್ದೀರಿ. ಅದು ಸರಿಯಲ್ಲ. ಏಕೆಂದರೆ ಎಲ್ಲಾ ನಾಮಗಳೂ ವಿಷ್ಣುವಿನ ನಾಮಗಳೇ ಆಗಿವೆ ಎಂದು ಹೇಳುವ 'ನಾಮಾನಿ ಸರ್ವಾಣಿ ಯಮಾವಿಶಂತಿ' ಎಂಬ ಶ್ರುತಿಯು ಇದೆಯಲ್ಲವೇ? ಎಂಬ ಪ್ರಶ್ನೆ ಬಂದರೆ, ಅದಕ್ಕೆ ಉತ್ತರವನ್ನು ರಾಯರು ಹೇಳುತ್ತಾ ಈ ಶ್ರುತಿಯು ಸಾಮಾನ್ಯಶ್ರುತಿ. 'ಯೋ ದೇವಾನಾಂ'

ಎಂಬುದು ವಿಶೇಷಶ್ರುತಿ. ಆಂದರೆ ವಿಶಿಷ್ಟ ಎಲ್ಲಾ ದೇವತೆಗಳ ಹೆಸರುಗಳೂ ವಿಷ್ಣುವಿನ ಹೆಸರನ್ನೇ ಹೇಳುತ್ತವೆ. ಆದರಂತೆ ಇದು ಅಲ್ಲ. ಆದಕ್ಕಾಗಿ ಚಂದ್ರಿಕಾಚಾರ್ಯರು ವಿಶೇಷಶ್ರುತಿ ಎಂದು 'ವಿಶೇಷ'ಪದವನ್ನು ಹೇಳಿದ್ದಾರೆ. ಪ್ರತ್ಯುತ 'ಯೋ ದೇವಾನಾಂ' ಎಂದು ವಿಶೇಷಶ್ರುತಿಗೆ ಅನುಸಾರವಾಗಿ, 'ನಾಮಾನಿ ಸರ್ವಾಣಿ' ಎಂಬಲ್ಲಿರುವ 'ಸರ್ವಾಣಿ' ಎಂಬ ಪದಕ್ಕೆ ದೇವತೆಗಳು ಎಂಬ ಅರ್ಥವನ್ನು ಮಾಡಬೇಕಾಗುತ್ತದೆ.

ಹೀಗೆ ಚಂದ್ರಿಕಾದಲ್ಲಿ ಬರುವ ಸಣ್ಣಶಬ್ದಗಳೂ (ಇಲ್ಲಿನ ವಿಶೇಷಶಬ್ದದಂತೆ) ಔಚಿತ್ಯಪೂರ್ಣವಾಗಿವೆ ಎಂಬುದನ್ನು ರಾಯರು ಪ್ರಕಾಶದಲ್ಲಿ ತೋರಿಸುತ್ತಾರೆ.

ಈ ಮೇಲೆ ಹೇಳಿದ ಎಲ್ಲಾ ಪೂರ್ವಪಕ್ಷಗಳೂ

*'ಇತಿ ಶಂಕಾನಿವೃತ್ತ್ಯರ್ಥಂ ಆಕಾಶ ಇತಿ ನಾಮ ಚ।*

*ಪರತೋಽಪಿ ವರೀಯಸ್ತ್ವಪೂರ್ವಲಿಂಗಾತ್ ಹರೇಃ ಭವೇತ್ ॥*

ಎಂದು ಅನುವ್ಯಾಖ್ಯಾನದಲ್ಲಿ ಬರುವ ನಾಮ ಎಂಬ ಪದದಿಂದ ಸೂಚಿತವಾಗಿದೆ.

ಇನ್ನು ಆಚಾರ್ಯರು ಭಾಷ್ಯದಲ್ಲಿ ಹೇಳಿರುವ ವಿಷಯವಾಕ್ಯವನ್ನು ಪರಿಶೀಲಿಸಿದಾಗ ಇನ್ನೊಂದು ಪೂರ್ವಪಕ್ಷವು ಸೂಚಿತವಾಗುತ್ತದೆ - ಎಂದು ಚಂದ್ರಿಕಾಚಾರ್ಯರು ಅಭಿಪ್ರಾಯ ಪಡುತ್ತಾರೆ. ಆದೇನೆಂದರೆ 'ಅಸ್ಯ ಲೋಕಸ್ಯ ಕಾ ಗತಿಃ?' ಎಂದು ಶಾಲಾವತ್ಯರು ಪ್ರಶ್ನೆ ಮಾಡಿದಾಗ 'ಆಕಾಶ ಇತಿ ಹೋವಾಚ' ಎಂದು ಪ್ರವಾಹಣರು ಉತ್ತರ ಕೊಡುತ್ತಾರೆ. ಮುಂದೆ ಆಕಾಶದ ಬಗ್ಗೆ ಇನ್ನೂ ಅನೇಕ ಧರ್ಮಗಳನ್ನು ಹೇಳುತ್ತಾರೆ. ಹೀಗೆ ಆಕಾಶಶಬ್ದವು ಉಪಕ್ರಮದಲ್ಲಿ ಶ್ರುತವಾಗಿದೆ. ಹಾಗೂ ಅನೇಕ ಬಾರಿ ಶ್ರುತವಾಗಿದೆ. ಹಿಂದಿನ ಅಧಿಕರಣದಲ್ಲಾದರೂ (ಆಂತಃಸ್ಥತ್ವಾಧಿಕರಣದಲ್ಲಿ) ಒಂದೇ ವಾಕ್ಯದಲ್ಲಿ ಇಂದ್ರ, ಬೃಹಸ್ಪತಿ, ವರುಣ, ಸೂರ್ಯ, ಮೊದಲಾದ ಅನೇಕ ನಾಮಗಳು ಶ್ರುತವಾಗಿವೆ. ಆಗ ಅಲ್ಲಿ ಅನೇಕ ನಾಮಗಳು ಬಂದಿರುವುದರಿಂದ ಇವು ಅನೇಕ ದೇವತೆಗಳ ನಾಮಗಳೋ ಅಥವಾ 'ಯೋ ದೇವಾನಾಂ ನಾಮಧಾ ಏಕ ಏವ' ಎಂಬಂತೆ ವಿಷ್ಣುವಿನ ನಾಮಗಳೋ ಎಂದು ಸಂದೇಹಕ್ಕೆ ಅವಕಾಶವಿದೆ. ಆದರೆ ಇಲ್ಲಿ (ಆಕಾಶ ಇತಿ ಹೋವಾಚ' ಎಂಬಲ್ಲಿ) ಸಂದೇಹಕ್ಕೆ ಅವಕಾಶವೇ ಇಲ್ಲ. ಏಕೆಂದರೆ ಆಕಾಶಶಬ್ದ ಬಿಟ್ಟು ಬೇರೆ ಯಾವ ಶಬ್ದವೂ ಇಲ್ಲ. ಆದ್ದರಿಂದ ಶ್ರುತಿತ್ವಪ್ರಯುಕ್ತಪ್ರಾಬಲ್ಯ, ಪರಸ್ಪರನಾನಾರ್ಥಉಪಸ್ಥಾಪಕತ್ವಾಭಾವ, ಉಪಕ್ರಮಸ್ಥತ್ವ ಮೊದಲಾದ ಅನೇಕ ಪ್ರಬಲಕಾರಣಗಳು ಇರುವುದರಿಂದ ಆನಂತತ್ವಾದಿ ಲಿಂಗಗಳನ್ನು ಹೇಗಾದರೂ ಮಾಡಿ ಆಕಾಶದಲ್ಲಿ ಸಾವಕಾಶ ಮಾಡಬೇಕು. ಹೀಗೆ ಹಿಂದಿನ ಆಂತಸ್ಥತ್ವಾಧಿಕರಣದಲ್ಲಿ ಸಿದ್ಧಾಂತವನ್ನು ಹೇಳಿದ ಮೇಲೆ ಆದರ ಮೇಲೆ ಬರುವ ಅಭ್ಯಧಿಕಾಶಂಕೆಯನ್ನು ಅನೇಕ ರೀತಿ ಉಪಪಾದನೆ ಮಾಡಿ, ಆ ಎಲ್ಲಾ ಪೂರ್ವಪಕ್ಷಗಳೂ ಕೂಡ ಭಾಷ್ಯ, ಅನುವ್ಯಾಖ್ಯಾನಗಳಲ್ಲಿ ಹೇಗೆ ಸೂಚಿತವಾಗಿವೆ ಎಂಬುದನ್ನು ಚಂದ್ರಿಕಾಚಾರ್ಯರು ಹೃದಯಂಗಮವಾಗಿ ವಿವರಿಸಿದ್ದಾರೆ.

ಇನ್ನು ಚಂದ್ರಿಕಾಚಾರ್ಯರು ಅಭ್ಯಧಿಕಶಂಕಾ ಇಲ್ಲದೆಯೂ ಪೂರ್ವಪಕ್ಷವನ್ನು ಮಾಡಬಹುದು ಎಂದು ಮತ್ತೊಂದು ರೀತಿಯಲ್ಲಿ ಚಮತ್ಕಾರವಾಗಿ ಪೂರ್ವಪಕ್ಷವನ್ನು ತೋರಿಸುತ್ತಾರೆ.

ಆಂತಃಸ್ಥತ್ವಾಧಿಕರಣದಲ್ಲಿ ಸಮುದ್ರಶಾಯಿತ್ವ ಎಂಬ ವಿಷ್ಣುವಿನ ಪ್ರಸಿದ್ಧಲಿಂಗವನ್ನು ಆಧರಿಸಿ, ಇಂದ್ರ ಮೊದಲಾದ ಶಬ್ದಗಳು ವಿಷ್ಣುವಿನ ನಾಮಗಳು ಎಂದು ಹೇಳಲಾಗಿದೆ. ಆದರಂತೆ ಆನಂತತ್ವ ಎಂಬ ಲಿಂಗವು

ವಿಷ್ಣುವಿನ ಅಸಾಧಾರಣಧರ್ಮವಾಗಿದೆ ಎಂದು ನಿಶ್ಚಯವಿಲ್ಲ. ಆದ್ದರಿಂದ ಆನಂತತ್ವಾದಿಧರ್ಮಗಳು ವಿಷ್ಣುವಿನ ಅಸಾಧಾರಣಧರ್ಮವಾಗಿವೆ ಎಂದು ಹೇಳಲು ಈ ಅಧಿಕರಣ ಹೊರಟದೆ ಎಂದು ಹಿಂದಿನ ಅಧಿಕರಣವನ್ನಾಧರಿಸದೇನೇ ಪೂರ್ವಪಕ್ಷವನ್ನು ಮಾಡಬಹುದು.

ಈ ರೀತಿಯ ಪೂರ್ವಪಕ್ಷವು ಭಾಷ್ಯದಲ್ಲಿ ಅಭ್ಯಧಿಕಾಶಂಕಾವನ್ನು ಹೇಳದಿರುವುದರಿಂದಲೇ ಸೂಚಿತವಾಗಿದೆ ಎಂದು ಚಂದ್ರಿಕಾಚಾರ್ಯರು ಹೇಳುತ್ತಾರೆ. ಅನುವ್ಯಾಖ್ಯಾನದಲ್ಲಿ ಅಭ್ಯಧಿಕಾಶಂಕಾವನ್ನು ತೋರಿಸಿರುವುದು ಪೂರ್ವಪಕ್ಷವನ್ನು ದೃಢಪಡಿಸಲು ಹೊರತು ಹಾಗೆ ಪೂರ್ವಪಕ್ಷವನ್ನು ಹೇಳಬೇಕೆಂಬ ಅರ್ಥದಲ್ಲಿ ಅಲ್ಲ.

ಹೀಗೆ ಚಂದ್ರಿಕಾಚಾರ್ಯರು ಆಕಾಶಾಧಿಕರಣದಲ್ಲಿ ಎಂಟು ರೀತಿಯಲ್ಲಿ ಪೂರ್ವಪಕ್ಷವನ್ನು ತೋರಿಸುತ್ತಾರೆ. ಇದರಲ್ಲಿ ಮೂರು ರೀತಿಯನ್ನು ಕಂಠತಃ ಆಚಾರ್ಯರು ಅನುವ್ಯಾಖ್ಯಾನ, ಭಾಷ್ಯದಲ್ಲಿ ಹೇಳಿದ್ದಾರೆ. ಇನ್ನುಳಿದ ಐದು ಪೂರ್ವಪಕ್ಷಗಳನ್ನು ಚಂದ್ರಿಕಾಚಾರ್ಯರು ತಮ್ಮ ಸೂಕ್ಷ್ಮದೃಷ್ಟಿಯಿಂದ ಅನುವ್ಯಾಖ್ಯಾನ, ಭಾಷ್ಯದಲ್ಲಿ ಆಚಾರ್ಯರು ಹೇಳಿದ ವಾಕ್ಯಗಳಿಂದ, ಉದಾಹೃತವಾದ ಶ್ರುತಿಗಳಿಂದ, ಇನ್ನು ಕೆಲವುಕಡೆ ಹೇಳದೇ ಮೌನವಾಗಿರುವುದರಿಂದ (ಭಾಷ್ಯದಲ್ಲಿ ಅಭ್ಯಧಿಕಾಶಂಕೆಯು ಉಕ್ತವಾಗದೇ ಇರುವುದರಿಂದ) ಸೂಚಿತವಾದ ಪೂರ್ವಪಕ್ಷಗಳನ್ನು ತೋರಿಸಿದ್ದಾರೆ. ಈ ರೀತಿಯ ವ್ಯಾಖ್ಯಾನ ಚಂದ್ರಿಕಾದಲ್ಲಿಯೇ ಕಾಣಬಹುದಾದ ವಿಶಿಷ್ಟಶೈಲಿಯಾಗಿದೆ. ಚಂದ್ರಿಕಾದಲ್ಲಿರುವ ಇಂತಹ ರತ್ನಗಳನ್ನು ಶ್ರೀಮಂತ್ರಾಲಯಪ್ರಭುಗಳ ಪ್ರಕಾಶದ ಸಹಾಯವಿಲ್ಲದೆ ನೋಡುವುದು ದುಃಸಾಧ್ಯವಾಗಿದೆ.

## ಪ್ರಾಣಾಧಿಕರಣ

ಈ ಅಧಿಕರಣದಲ್ಲಿ ಸಕಲ ಆಧ್ಯಾತ್ಮಿಕಶಬ್ದಗಳನ್ನು ವಿಷ್ಣುಪರ ಎಂಬುದನ್ನು ಸಮರ್ಥಿಸುತ್ತಾರೆ. ಆದರಲ್ಲಿ ದೃಷ್ಟಾಂತವಾಗಿ ಪ್ರಾಣಶಬ್ದದ ಸಮನ್ವಯವನ್ನು ಮಾಡುತ್ತಾರೆ.

ಚಂದ್ರಿಕಾಚಾರ್ಯರು ಪೂರ್ವಪಕ್ಷವನ್ನು ಅತ್ಯಂತ ದೃಢವಾಗಿ ಸಮರ್ಥಿಸಿದ್ದಾರೆ. ಹಾಗೂ ಅನುವ್ಯಾಖ್ಯಾನ, ಸುಧಾದಲ್ಲಿ ಬರುವ ಆಪಾತತಃ ಪ್ರತೀತವಾದ ಅರ್ಥವನ್ನು ನಿರಾಕರಿಸಿ, ಸರಿಯಾದ ಅರ್ಥವನ್ನು ಹೇಳುತ್ತಾರೆ.

ಈ ಅಧಿಕರಣದಲ್ಲಿ ಬರುವ ದೊಡ್ಡತೊಂದರೆ ಏನೆಂದರೆ ಪೂರ್ವಪಕ್ಷವನ್ನೇ ಮಾಡಲು ಬರುವುದಿಲ್ಲ ಎಂದು. ಇದನ್ನು ಚಂದ್ರಿಕಾಚಾರ್ಯರು ಸಮರ್ಥನೆ ಮಾಡುತ್ತಾರೆ.

ಮೊದಲು — ಇಲ್ಲಿ ಬರುವ ವಿಷಯವಾಕ್ಯವೇನೆಂದರೆ 'ತದ್ವೈ ತ್ವಂ ಪ್ರಾಣೋಽಭವಃ' ಎಂಬ ತೈತ್ತಿರೀಯದ ವಾಕ್ಯ. ಇಲ್ಲಿ ಬರುವ ಪ್ರಾಣಶಬ್ದಾರ್ಥವು ಜಡವಾದ ವಾಯುವೋ; ಅಥವಾ ಮುಖ್ಯಪ್ರಾಣನೋ? ಜಡವಾದ ವಾಯು ಆಗುವುದಿಲ್ಲ. ಏಕೆಂದರೆ, ಅದೇ ವಾಕ್ಯದಲ್ಲಿ 'ತ್ವಂ ಪ್ರಾಣಃ ಅಭವಃ' ಎಂಬ ಸಂಬೋಧನೆ ಕೇಳಲ್ಪಡುತ್ತಿದೆ. ಜಡವಾದ ವಸ್ತುವಿಗೆ ಸಂಬೋಧನೆಯು ಹೇಗೆ ಕೂಡುತ್ತದೆ?

ಹಾಗಾದರೆ ಮುಖ್ಯಪ್ರಾಣನನ್ನು ತೆಗೆದುಕೊಳ್ಳಬಹುದಲ್ಲಾ? ಎಂದರೆ. ಇದಾಗದು. ಪ್ರಾಣಶಬ್ದದ ಪ್ರವೃತ್ತಿನಿಮಿತ್ತವಾದ ಜೀವನಹೇತುತ್ವವು (ಜೀವನಕ್ಕೆ ಕಾರಣವಾಗುವುದು) ಪ್ರಾಣನಲ್ಲಿ ಕೂಡುವುದಿಲ್ಲ.

ಏಕೆಂದರೆ, ಕಾರಣತ್ವವು ಅನ್ವಯವ್ಯತಿರೇಕದಿಂದ ಅನುಮೇಯ. ಇಂತಹ ಅನ್ವಯವ್ಯತಿರೇಕವು ಜಡರೂಪವಾದ ವಾಯುವಿಗೆ ಇದೆಯೇ ಹೊರತು ಚೇತನನಾದ ಮುಖ್ಯಪ್ರಾಣನಿಗೆ ಇಲ್ಲ.

ಹಾಗಾದರೆ ಜಡವಾದ ವಸ್ತುವಿಗೇ ಪ್ರಾಣಶಬ್ದವಾಚ್ಯತ್ವವನ್ನು ಹೇಳುತ್ತೀವೆ. ಜಡಕ್ಕೆ ಸಂಬೋಧನೆಯನ್ನು ಅಭಿಮಾನದ್ವಾರಾ ಕೂಡಿಸಬಹುದು. ಎಂದರೆ ಇದೂ ಸರಿಯಲ್ಲ. ಏಕೆಂದರೆ, ಪ್ರಾಣಶಬ್ದಕ್ಕೆ ಮುಖ್ಯವಾದ ಅರ್ಥ ಮುಖ್ಯಪ್ರಾಣ. ಅಮುಖ್ಯವಾದ ಅರ್ಥ ಜಡವಾದ ವಾಯು. ಆದ್ದರಿಂದ ಮುಖ್ಯಾರ್ಥವನ್ನು ಬಿಟ್ಟು ಅಮುಖ್ಯಾರ್ಥವನ್ನು ಇಟ್ಟುಕೊಳ್ಳಬಾರದು. ಆದರೆ ಹೀಗೆ ಹೇಳಿದರೆ, ಮುಖ್ಯಾರ್ಥನಾದವನು ಮುಖ್ಯಪ್ರಾಣನಿಗಿಂತ ವಿಷ್ಣುವು ಇದ್ದಾನೆ. ಆದ್ದರಿಂದ ಅವನೇ ಪ್ರಾಣಶಬ್ದಕ್ಕೆ ವಾಚ್ಯನಾಗುತ್ತಾನೆ. ಹಾಗಾಗಿ ಪೂರ್ವಪಕ್ಷವು ಹುಟ್ಟದೇ ಹೋದೀತು.

ಇನ್ನುಲೋಕಪ್ರಸಿದ್ಧಿಯನ್ನು ಇಟ್ಟುಕೊಂಡು, ಪ್ರಾಣಶಬ್ದವಾಚ್ಯನಾದದ್ದು ಜಡವಾಯು ಎಂದು ಹೇಳಿದರೆ; ಇದೂ ಸರಿಯಲ್ಲ. ಏಕೆಂದರೆ ಈ ರೀತಿ ಪೂರ್ವಪಕ್ಷ ಮಾಡಿದರೆ ಟೀಕಾ, ಮತ್ತು ಅನುವ್ಯಾಖ್ಯಾನಗಳ ವಿರೋಧ ಬರುತ್ತದೆ. ಅಲ್ಲಿ ಮುಖ್ಯಪ್ರಾಣನು ಪ್ರಾಣಶಬ್ದದಿಂದ ವಾಚ್ಯ ಎಂದು ಹೇಳಿದೆ ಹೊರತು ಜಡವಾಯುವೆಂದು ಹೇಳಲ್ಲ. ಆಷ್ಟೇ ಅಲ್ಲದೆ ತ್ವಂ, ಅಭವಃ, ಪ್ರಾಣಃ ಇತ್ಯಾದಿಯಾಗಿ ಅನೇಕ ಸಂಬೋಧನಾವಾಚಕಶಬ್ದಗಳಿಗೆ ಅಮುಖ್ಯಾರ್ಥವನ್ನು ಕಲ್ಪಿಸಬೇಕಾಗುತ್ತದೆ. ಆದ್ದರಿಂದ ಜಡವಾಯುವನ್ನು ತೆಗೆದುಕೊಳ್ಳಲಾಗುವುದಿಲ್ಲ. ಮುಖ್ಯಪ್ರಾಣನನ್ನೂ ತೆಗೆದುಕೊಳ್ಳಲು ಬರುವುದಿಲ್ಲ (ಜೀವನಹೇತುತ್ವವು ಅವನಲ್ಲಿ ಅಸಿದ್ಧ). ಆದ್ದರಿಂದ ಪೂರ್ವಪಕ್ಷದಲ್ಲಿ ಪ್ರಾಣಶಬ್ದದಿಂದ ಹೇಳಲ್ಪಡುವವನು ಯಾರು? ಎಂಬ ಪ್ರಶ್ನೆ ಬರುತ್ತದೆ.

ಈ ಪ್ರಶ್ನೆಗೆ ಚಂದ್ರಿಕಾಚಾರ್ಯರು ಎರಡು ರೀತಿಯಲ್ಲಿ ಸಮಾಧಾನವನ್ನು ಹೇಳುತ್ತಾರೆ.

(೧) ಪೂರ್ವಪಕ್ಷದಲ್ಲಿ ಮುಖ್ಯಪ್ರಾಣನನ್ನೇ ತೆಗೆದುಕೊಳ್ಳಬೇಕು. ಅವನಿಗೆ ಜೀವನಹೇತುತ್ವವನ್ನು ಪ್ರತ್ಯಕ್ಷದಿಂದ, ಅನ್ವಯವ್ಯತಿರೇಕದಿಂದ ಹೇಳಲು ಬರದಿದ್ದರೂ, ಆಗಮದಿಂದ ಹೇಳಬಹುದು. ಆಗಮದಲ್ಲಿ ''ತತ್‌ಪ್ರಾಣೇ ಪ್ರಪನ್ನಃ, ಉದತಿಷ್ಠತ್, ತತ್ಪ್ರಾಣ ಉತ್ಕ್ರಾಂತೇ ಪದ್ಯತೇ ಎಂಬುದಾಗಿ ಅನ್ವಯವ್ಯತಿರೇಕತ್ವಅನುವಿಧಾಯಿತ್ವವನ್ನು ಮುಖ್ಯಪ್ರಾಣನಿಗೆ ಹೇಳಲಾಗಿದೆ. ಇದರಿಂದ ಜೀವನ ಹೇತುತ್ವವನ್ನು ಮುಖ್ಯಪ್ರಾಣನಿಗೆ ಹೇಳಬಹುದು. ಹೀಗೆ ಪ್ರಾಣಶಬ್ದದ ಪ್ರವೃತ್ತಿನಿಮಿತ್ತವಾದ ಜೀವನ ಹೇತುತ್ವವು ಮುಖ್ಯಪ್ರಾಣನಲ್ಲಿರುವುದರಿಂದ ''ತದ್ವ್ಯೈ ತ್ವಂ ಪ್ರಾಣ ಅಭವಃ'' ಎಂಬಲ್ಲಿರುವ ಪ್ರಾಣಶಬ್ದದಿಂದ ವಾಚ್ಯನಾದವನು ಮುಖ್ಯಪ್ರಾಣನೇ ಎಂದು ಹೇಳಬಹುದು.

(೨) ಎರಡನೆ ರೀತಿಯ ಸಮಾಧಾನವನ್ನು ಚಂದ್ರಿಕಾಚಾರ್ಯರು ಆಗಮಸಹಾಯವಿಲ್ಲದೆ ಜೀವನಹೇತುತ್ವವನ್ನು ನೇರವಾಗಿ ಮುಖ್ಯಪ್ರಾಣನಿಗೆ ಹೇಳಬಹುದು ಎಂದು ಹೇಳಿದ್ದಾರೆ.

ಇದನ್ನು ಲೋಕದ ದೃಷ್ಟಾಂತವನ್ನು ಕೊಟ್ಟು ಸ್ವಾರಸ್ಯವಾಗಿ ಸಮರ್ಥಿಸಿದ್ದಾರೆ. ಒಂದು ಮಡಿಕೆಗೆ ಕಾರಣನಾದವನು ಯಾರು? ಎಂಬ ಪ್ರಶ್ನೆಗೆ ಕುಂಭಕಾರನು ಎಂದು ಉತ್ತರಿಸುತ್ತೇವೆ. ಆದರೆ ಈ ಘಟಕಾರಣತ್ವವನ್ನು ಅನ್ವಯವ್ಯತಿರೇಕಗಳಿಂದ ತಿಳಿದುಕೊಳ್ಳಬೇಕು. ಈ ಅನ್ವಯವ್ಯತಿರೇಕವಾದರೋ ಕುಲಾಲನ ಶರೀರಕ್ಕೆ ಇದೆಯೇ ಹೊರತು ಕುಲಾಲ(ಜೀವ)ನಿಗೆ ಬರುವುದಿಲ್ಲ.

ಏಕೆಂದರೆ, ಪ್ರತ್ಯಕ್ಷವಾಗಿ ಕಾಣುವುದು ಕುಲಾಲನ ಶರೀರ ಹೊರತು ಜೀವನಾದ ಕುಲಾಲನಲ್ಲ. 'ಕುಲಾಲಶರೀರವಿದ್ದರೆ ಘಟ, ಇಲ್ಲದಿದ್ದರೆ ಘಟವಿಲ್ಲ'. ಆದ್ದರಿಂದ ಕುಲಾಲನಿಗೆ ಘಟಕಾರಣತ್ವ-ವಿಲ್ಲ. ಆದರೆ ಲೋಕದಲ್ಲಿ ಘಟಕಾರಣತ್ವವನ್ನು ನಾವು ಕುಲಾಲನಿಗೆ ಒಪ್ಪುತ್ತೇವೆ. ಕುಲಾಲ-ಶರೀರಕ್ಕೆ ಅನ್ವಯವ್ಯತಿರೇಕವು ಕಂಡರೂ ಆ ಶರೀರದ ಸ್ವಾಮಿಯಾದ ಕುಲಾಲ ಆತ್ಮನಿಗೂ ಅನ್ವಯವ್ಯತಿರೇಕವು ಅರ್ಥಾತ್ ಸಿದ್ಧಿಸುವುದರಿಂದ.

ಅದರಂತೆ ಕೇವಲ ಈ ಜಡಭೂತವಾದ ವಾಯುವಿಗೆ ಜೀವನಹೇತುತ್ವವೆಂಬುದು ಅನ್ವಯ-ವ್ಯತಿರೇಕದಿಂದ ಸಿದ್ಧಿಸಿದರೂ, ಆ ಜಡಭೂತವಾದ ವಾಯುವನ್ನೇ ಶರೀರವಾಗಿ ಉಳ್ಳ ಮುಖ್ಯಪ್ರಾಣನಿಗೂ ಕೂಡ ಜೀವನಹೇತುತ್ವವನ್ನು ಹೇಳಬಹುದು.

ಆದರೆ ಹೀಗೆ ಹೇಳಿದರೆ ವಿಷ್ಣುವಿಗೂ ಜೀವನಹೇತುತ್ವವನ್ನು ಹೇಳಬೇಕಾಗುತ್ತದೆ. ಏಕೆಂದರೆ ಜಡಭೂತವಾದ ವಾಯುವಿನೊಳಗೆ ವಿಷ್ಣುವೂ ಇದ್ದಾನೆ. ಅವನೂ ಮುಖ್ಯಪ್ರಾಣನಂತೆ ಆ ವಾಯುವಿಗೆ ಸ್ವಾಮಿಯಾಗಿದ್ದಾನೆ. ಅದು ಅವನ ಶರೀರವೂ ಆಗಿದೆ. ಆದ್ದರಿಂದ ಪ್ರಾಣಶಬ್ದದಿಂದ ವಾಚ್ಯನಾದವನು ವಿಷ್ಣುವೂ ಆಗಿಬಿಡುತ್ತಾನೆ ಎಂದರೆ, ಆಗುವುದಿಲ್ಲ ಎಂದು ಉತ್ತರ. ಏಕೆಂದರೆ ವಿಷ್ಣುವಿಗೂ ಜೀವನಹೇತುತ್ವವನ್ನು ಹೇಳಬೇಕೆಂದರೆ ತದನ್ವಯವ್ಯತಿರೇಕವನ್ನು ಹೇಳಬೇಕು. ಆದರೆ ವಿಷ್ಣುವು ಸರ್ವಗತನಾದುದರಿಂದ ಅವನ ವ್ಯತಿರೇಕವನ್ನು ಎಲ್ಲೂ ಹೇಳಲಿಕ್ಕೆ ಬರುವುದಿಲ್ಲ. ಆದ್ದರಿಂದ ಅವನ ಅನ್ವಯವನ್ನು ಹೇಳಲಿಕ್ಕೆ ಬಂದರೂ, ವ್ಯತಿರೇಕವನ್ನು ಹೇಳಲಿಕ್ಕೆ ಬರುವುದಿಲ್ಲವಾದುದರಿಂದ ಜೀವನಹೇತುತ್ವವನ್ನು ವಿಷ್ಣುವಿಗೆ ಹೇಳಲಾಗುವುದಿಲ್ಲ.

ಆದರೆ ಹೀಗೆ ಉತ್ತರ ಕೊಡಲು ಬರುವುದಿಲ್ಲ. ಏಕೆಂದರೆ ಭೂಮಾಧಿಕರಣದಲ್ಲಿ 'ಉತ್ಕ್ರಾಂತ-ಪ್ರಾಣಾನ್ ಶೂಲೇನ ಸಮಾಸಂ ವ್ಯತಿಷಂ ದಹೇತ್' ಎಂಬಲ್ಲಿ ಉತ್ಕ್ರಮಣಲಿಂಗವಿರುವುದರಿಂದ ಪ್ರಾಣಶಬ್ದವಾಚ್ಯನಾದವನು ಇಲ್ಲಿ ವಾಯು ಎಂದು ಪೂರ್ವಪಕ್ಷ ಮಾಡಿಕೊಂಡು ಪೂರ್ಣ-ಸುಖತ್ವಲಿಂಗವಿರುವುದರಿಂದ ಉತ್ಕ್ರಮಣವು ಒಂದು ರೂಪವಿಶೇಷದಿಂದ ವಿಷ್ಣುವಿನಲ್ಲೂ ಇದೆ. ಆದ್ದರಿಂದ ಪ್ರಾಣ ಶಬ್ದವಾಚ್ಯನಾದವನು ವಿಷ್ಣುವೇ ಆಗಿದ್ದಾನೆ ಎಂದು ಸಿದ್ಧಾಂತ ಮಾಡಿದ್ದಾರೆ. ಆದ್ದರಿಂದ ವ್ಯತಿರೇಕವಿಲ್ಲವೆಂದು ಹೇಳಲಿಕ್ಕೆ ಬರುವುದಿಲ್ಲ. ಆದ್ದರಿಂದ ವಿಷ್ಣುವಿಗೂ ಜೀವನ-ಹೇತುತ್ವವನ್ನು ಹೇಳಬೇಕಾಗುತ್ತದೆ ಎಂದರೆ, ಇದಕ್ಕೆ ಚಂದ್ರಿಕಾಚಾರ್ಯರು ಅತ್ಯಂತ ಸೂಕ್ಷ್ಮವಾಗಿ ಉತ್ತರವನ್ನು ತೋರಿಸುತ್ತಾರೆ. 'ಉತ್ಕ್ರಾಂತಪ್ರಾಣಾನ್ ಶೂಲೇನ ಸಮಾಸಂ ವ್ಯತಿಷಂ ದಹೇತ್' ಎನ್ನುವಲ್ಲಿ ರೂಪವಿಶೇಷೇಣ ವಿಷ್ಣುವಿಗೂ ಉತ್ಕ್ರಮಣವನ್ನು ಹೇಳಿದ್ದಾರೆ ಹೊರತು ಶರೀರದಲ್ಲಿ ಇಲ್ಲ ಎಂದು ಹೇಳಿಲ್ಲ. ಆದ್ದರಿಂದ ಅವನು ಒಂದು ರೂಪದಿಂದ ಶರೀರದಲ್ಲೂ ಇರುತ್ತಾನೆ. ಹಾಗೆಯೇ ಇನ್ನೊಂದು ರೂಪದಿಂದ ಉತ್ಕ್ರಮಣವನ್ನು ಮಾಡುತ್ತಾನೆ. ಹೀಗಾಗಿ ಪುನಃ ವ್ಯತಿ-ರೇಕವನ್ನು ಹೇಳಲು ಆಗುವುದಿಲ್ಲ.

ಈ ವಿಷಯದಲ್ಲಿ ರಾಯರು ಒಂದು ದೃಷ್ಟಾಂತವನ್ನು ಕೊಡುತ್ತಾರೆ. ಹೇಗೆ ಶರೀರದಲ್ಲೇ ಇದ್ದು-ಕೊಂಡು, ಚಕ್ಷುರಿಂದ್ರಿಯವು ದೂರದ ಪದಾರ್ಥದ ತನಕ ನಿರ್ಗಮನ ಮಾಡುತ್ತದೋ, ಅದರಂತೆ ವಿಷ್ಣುವು ದೇಹದಲ್ಲಿದ್ದುಕೊಂಡೇ ಇಂದ್ರಿಯಗಳ ಜೊತೆಗೆ ನಿರ್ಗಮನವನ್ನು ಮಾಡು-

ತ್ತಾನೆ. ಆದ್ದರಿಂದ ದೇಹದಲ್ಲಿ ಅವನು ಇಲ್ಲದಿರುವ ಅವಕಾಶವೇ ಇಲ್ಲ. ಆದ್ದರಿಂದ ವ್ಯತಿರೇಕವನ್ನು ಹೇಳಲು ಆಗುವುದಿಲ್ಲವಾದ್ದರಿಂದ ಜೀವನಹೇತುತ್ವವನ್ನು ವಿಷ್ಣುವಿಗೆ ಹೇಳಲು ಬರುವುದಿಲ್ಲ.

ಆದ್ದರಿಂದ ಪ್ರತ್ಯಕ್ಷದಿಂದಾಗಲೀ, ಆಗಮದಿಂದಾಗಲೀ ಅನ್ವಯವ್ಯತಿರೇಕವನ್ನು ವಿಷ್ಣುವಿಗೆ ಹೇಳಲು ಬರುವುದಿಲ್ಲ. ಆದರೆ ಪ್ರತ್ಯಕ್ಷದಿಂದಲೂ, ಆಗಮದಿಂದಲೂ ಮುಖ್ಯಪ್ರಾಣನಿಗೆ ಅನ್ವಯವ್ಯತಿರೇಕವನ್ನು ಹೇಳಲು ಬರುವುದರಿಂದ ಜೀವನಹೇತುತ್ವವನ್ನು ಅವನಿಗೆ ಹೇಳ-ಬಹುದು. ಆದ್ದರಿಂದ ಪ್ರಾಣಶಬ್ದದ ಪ್ರವೃತ್ತಿನಿಮಿತ್ತವಾದ ಜೀವನಹೇತುತ್ವವು ಮುಖ್ಯಪ್ರಾಣನಲ್ಲಿ ಇರುವುದರಿಂದ 'ತದ್ವೈ ತ್ವಂ ಪ್ರಾಣೋऽಭವಃ' ಎಂಬಲ್ಲಿ ಪ್ರಾಣಶಬ್ದವಾಚ್ಯನಾದವನು ಮುಖ್ಯಪ್ರಾಣನೇ.

ಈ ರೀತಿಯಾಗಿ ಭಾಷ್ಯ-ತತ್ತ್ವಪ್ರಕಾಶಿಕಾ, ಅನುವ್ಯಾಖ್ಯಾನ-ಸುಧಾಗಳಲ್ಲಿ ಬಂದಿರುವ ಅನೇಕ ಪ್ರಮೇಯ-ಗಳ ವಿರೋಧವನ್ನು ಪರಿಹಾರಮಾಡುತ್ತಾ ಪೂರ್ವಪಕ್ಷವನ್ನು ದೃಢಪಡಿಸಿದ್ದಾರೆ.

## ಜ್ಯೋತಿರಧಿಕರಣ

ಓಂ ಜ್ಯೋತಿಶ್ಚರಣಾಭಿಧಾನಾತ್ ಓಂ ॥

ವ್ಯಾಸರಾಜರು ಚಂದ್ರಿಕೆಯ ಪ್ರಾರಂಭದಲ್ಲಿ 'ಟೀಕಾಸು ಚ ಯದಸ್ಪಷ್ಟಂ ತಚ್ಚ ಸ್ಪಷ್ಟೀಕರಿಷ್ಯತೇ' ಎಂದು ಪ್ರತಿಜ್ಞೆ ಮಾಡಿದ್ದಾರೆ. ಇದಕ್ಕೆ ದೊಡ್ಡ ನಿದರ್ಶನ ಜ್ಯೋತಿರಧಿಕರಣ. ಇಲ್ಲಿ ತತ್ತ್ವಪ್ರದೀಪ, ಸನ್ಧ್ಯಾಯರತ್ನಾವಳಿ ಹಾಗೂ ತತ್ತ್ವಪ್ರಕಾಶಿಕಾ ಈ ಮೂರೂ ಟೀಕಾಗ್ರಂಥಗಳಲ್ಲಿರುವ ಅಸ್ಪಷ್ಟತೆಯನ್ನು ಉತ್ತಮರೀತಿಯಲ್ಲಿ ಪರಿಹಾರ ಮಾಡಿದ್ದಾರೆ.

ತತ್ತ್ವಪ್ರದೀಪ ಹಾಗೂ ಸನ್ಧ್ಯಾಯರತ್ನಾವಳಿಗ್ರಂಥಗಳ ಪ್ರಕಾರ, ಜ್ಯೋತಿರಧಿಕರಣ ಹಾಗೂ ಗಾಯತ್ರ್ಯ-ಧಿಕರಣ ಇವೆರಡೂ ಸೇರಿ ಒಂದೇ ಅಧಿಕರಣ. ತತ್ತ್ವಪ್ರಕಾಶಿಕಾ ಗ್ರಂಥದ ಪ್ರಕಾರ 'ಜ್ಯೋತಿಶ್ಚರಣಾಭಿಧಾನಾತ್' ಎಂಬ ಒಂದು ಸೂತ್ರವು ಒಂದು ಅಧಿಕರಣ. ಇನ್ನು ಅದರ ಮುಂದೆ ಬರುವ ಮೂರು ಸೂತ್ರಗಳು ಸೇರಿ ಗಾಯತ್ರ್ಯಧಿಕರಣ.

ಇನ್ನು ವಿಷಯವಾಕ್ಯವು ಮೂರು ಟೀಕಾಗ್ರಂಥಗಳಲ್ಲಿ ಬೇರೆಯೇ ಹೇಳಿದ್ದಾರೆ. ತತ್ತ್ವಪ್ರದೀಪಕಾರರ ಮತದಲ್ಲಿ ಋಗ್ವೇದದಲ್ಲಿ ಬರುವ 'ಜ್ಯೋತಿರ್ಹೃದಯ ಆಹಿತಂ ಯತ್' ಎಂಬ ಅಗ್ನಿಸೂಕ್ತಸ್ಥವಾಕ್ಯವು ವಿಷಯವಾಕ್ಯ. ಸನ್ಧ್ಯಾಯರತ್ನಾವಳಿಕಾರರ ಮತದಲ್ಲಿ 'ಅಥ ಯದತಃ ಪರೋ ದಿವೋ ಜ್ಯೋತಿರ್ದೀಪ್ಯತೇ' ಎಂಬ ಛಾಂದೋಗ್ಯೋಪನಿಷತ್ತಿನಲ್ಲಿ ಬರುವ ವಾಕ್ಯವು ವಿಷಯವಾಕ್ಯ. ತತ್ತ್ವಪ್ರಕಾಶಿಕಾಕಾರರ ಪ್ರಕಾರ ಜ್ಯೋತಿರಧಿಕರಣಕ್ಕೆ ತತ್ತ್ವಪ್ರದೀಪಕಾರರು ಹೇಳಿದಂತೆ ಋಗ್ವೇದಮಂತ್ರವೇ ವಿಷಯವಾಕ್ಯ. ಇನ್ನು ಗಾಯತ್ರ್ಯಧಿಕರಣಕ್ಕೆ ಛಾಂದೋಗ್ಯದಲ್ಲಿ ಬರುವ 'ಗಾಯತ್ರೀ ವಾ ಇದಂ ಸರ್ವಂ ಭೂತಂ ಯದಿದಂ ಕಿಂಚ' ಎಂಬ ವಾಕ್ಯವು ವಿಷಯವಾಕ್ಯ.

ಈ ಮೂರು ಟೀಕಾಗಳಲ್ಲಿ ತೋರುವ ಅಧಿಕರಣರಚನೆ ಹಾಗೂ ವಿಷಯವಾಕ್ಯಗಳಲ್ಲಿ ಆಪಾತತಃ

ತೋರುವ ವಿರೋಧವನ್ನು ಚಂದ್ರಿಕಾಚಾರ್ಯರು ಪರಿಹಾರಮಾಡಿದ್ದಾರೆ. ಎಲ್ಲರ ಪಕ್ಷವನ್ನೂ ಸಮರ್ಥನೆ ಮಾಡಿದ್ದಾರೆ. ಪ್ರತಿಯೊಂದು ಮತದಲ್ಲೂ ಟೀಕಾದಲ್ಲೂ ಭಾಷ್ಯದಲ್ಲಿರುವ ವಾಕ್ಯಗಳು ಹೇಗೆ ಅಧಿಕರಣ ರಚನೆಗೆ ಸಹಾಯಮಾಡುತ್ತವೆ ಎನ್ನುವುದನ್ನು ಸ್ವಾರಸ್ಯವಾಗಿ ಸಮರ್ಥನೆ ಮಾಡುತ್ತಾರೆ. ಹಾಗೆಯೇ ಆಚಾರ್ಯರು ಭಾಷ್ಯದಲ್ಲಿ ಉದಾಹರಿಸಿದ ವಾಕ್ಯಗಳು ಹೇಗೆ ಪ್ರತಿಯೊಬ್ಬ ಟೀಕಾಕಾರರಿಗೆ ವಿಷಯವಾಕ್ಯಗಳನ್ನು ತೆಗೆದುಕೊಳ್ಳುವಲ್ಲಿ ಮಾರ್ಗದರ್ಶನ ಮಾಡಿವೆ ಎಂಬುದನ್ನು ಕೂಲಂಕಷವಾಗಿ ವಿಚಾರ ಮಾಡಿದ್ದಾರೆ.

''ಟೀಕಾಸು ಯದಸ್ಪಷ್ಟಂ'' ಎನ್ನುವುದಕ್ಕೆ ಮತ್ತೊಂದು ಉದಾಹರಣೆ —

ತತ್ತ್ವಪ್ರದೀಪದಲ್ಲಿ ಈ ಅಧಿಕರಣದಲ್ಲಿ ಹೀಗೊಂದು ವಾಕ್ಯವಿದೆ. - ಅಗ್ನಿಸೂಕ್ತಂ ಉದಾಹೃತ್ಯ ಮಂತ್ರ-ಗೋಚರಂ ವಿಚಾರಂ ಆರಚಯತಾ ಪರಮವೈದಿಕೇನ ಆಚಾರ್ಯೇಣ ನಿಖಿಲೋಽಪಿ ವೇದಸಮನ್ವಯಃ ವಿಚಾರಿತಃ ಭವತಿ'.

ಇದರ ಸಾಮಾನ್ಯ ಅರ್ಥ -- ''ಭಾಷ್ಯದಲ್ಲಿ 'ಜ್ಯೋತಿರ್ಹೃದಯ ಆಹಿತಂ ಯತ್' ಎಂದು ಋಗ್ವೇದದ ಅಗ್ನಿಸೂಕ್ತದ ಮಂತ್ರವನ್ನು ಉದಾಹರಿಸಿದ್ದರಿಂದ ಸಮಸ್ತವೇದದ ಸಮನ್ವಯವನ್ನು ಮಾಡಿದಂತಾಯಿತು'' ಎಂದು.

ಇಲ್ಲಿ ಒಂದು ಸಂದೇಹ ಬರುತ್ತದೆ. ಋಗ್ವೇದ ಮಂತ್ರವನ್ನು ಉದಾಹರಿಸಿದ್ದರಿಂದ ಹೇಗೆ ಇಡೀ ವೇದ-ಸಮನ್ವಯವನ್ನು ಮಾಡಿದಂತೆ ಆಯಿತು? ಎಂದು. ಇದಕ್ಕೆ ಉತ್ತರವನ್ನು ಚಂದ್ರಿಕೆಯ ಕೆಳಗಿನ ವಾಕ್ಯದಿಂದ ಪಡೆಯಬಹುದು ಎಂದೆನಿಸುತ್ತದೆ. ''*ಯದ್ಯಪಿ ಛಂದೋಗ್ಯೋಕ್ತಸ್ಯ ಬ್ರಹ್ಮತ್ವೇ, 'ಯದ್ವೈ ತದ್ ಬ್ರಹ್ಮ' ಇತ್ಯಾದಿ ಶ್ರುತಿಲಿಂಗಾನಿ ಸ್ವವಾಕ್ಯಸ್ಥಾನಿ ಸಂತಿ । ತಥಾಪಿ ತತ್ತತ್ಸೂಕ್ತಸ್ಥನಿರವಕಾಶವಿಷ್ಣುಲಿಂಗೈಃ ಸಾವಕಾಶ-ಶ್ರುತಿಸೂಕ್ತಬಾಧೇನ ಭಕ್ಷುಕ್ಷಪಾದಪ್ರಸರಣನ್ಯಾಯೇನ ಸರ್ವವೇದಾನಾಂ ವಿಷ್ಣೌ ಸಮನ್ವಯಂ ದರ್ಶಯಿತುಂ ಸೂತ್ರಕಾರೇಣ ಅಗ್ನಿಸೂಕ್ತಸ್ಥಂ ಲಿಂಗಮ್ ಉಕ್ತಮ್॥' ಈ ವಾಕ್ಯವನ್ನು ಚಂದ್ರಿಕಾಚಾರ್ಯರು ಸನ್ನ್ಯಾಯರತ್ನಾವಳಿಯ ರೀತ್ಯಾ ಅಧಿಕರಣ ರಚನೆ ಹಾಗೂ ವಿಷಯವಾಕ್ಯದ ಸಮರ್ಥನೆ ಮಾಡುವ ಸಂದರ್ಭದಲ್ಲಿ ಹೇಳಿದ್ದಾರೆ.

ಈ ವಾಕ್ಯಕ್ಕೆ ಪೀಠಿಕೆಯನ್ನು ಬರೆಯುತ್ತಾ ರಾಯರು *'ನನು ಅಯುಕ್ತಮ್ ಏತತ್ । ಛಾಂದೋಗ್ಯಗತ-ಜ್ಯೋತಿಷಃ ವಿಷ್ಣುತ್ವಂ ತತ್ರತ್ಯಾನಾಂ 'ತತೋ ಜ್ಯಾಯಾಂಶ್ಚ ಪೂರುಷಃ' 'ಯದ್ವೈ ತದ್ ಬ್ರಹ್ಮ' 'ಏತಾಮೇವ ಬ್ರಹ್ಮೋಪನಿಷದಂ ವೇದ' ಇತಿ ಶ್ರುತೀನಾಂ 'ಏತಾಮೇವ ನಾತಿಶೀಯಂತೇ' ಇತಿ ಸರ್ವೋತ್ತಮತ್ವ, ಗಾನತ್ರಾಣಕರ್ತೃತ್ವ, ಭೂತಾದಿಪಾದತ್ವಾದಿಲಿಂಗಾನಾಂ ಚ ತ್ಯಾಗೇನ, ಅನ್ಯಗತಲಿಂಗೋದಾಹರಣೇ ಪ್ರಯೋ-ಜನಾಭಾವಾತ್ ಇತ್ಯಾಶಂಕ್ಯ ಆಹ - ಯದ್ಯಪಿ ಇತಿ ॥'* ಎಂದು ಹೇಳಿದ್ದಾರೆ.

ಇದರ ತಾತ್ಪರ್ಯ -

ಸನ್ನ್ಯಾರತ್ನಾವಳಿಕಾರರ ಪ್ರಕಾರ ಛಾಂದೋಗ್ಯೋಪನಿಷತ್ತಿನಲ್ಲಿ ಬರುವ 'ಅಥ ಯದತಃ ಪರೋ ದಿವೋ ಜ್ಯೋತಿಃ' ಎಂಬ ವಾಕ್ಯವು ವಿಷಯವಾಕ್ಯ. ಇಲ್ಲಿ ಬರುವ ಜ್ಯೋತಿಃಶಬ್ದದ ಸಮನ್ವಯ-ವನ್ನು (ಜ್ಯೋತಿಃಶಬ್ದವು ವಿಷ್ಣುಪರವೆಂದು) ಮಾಡಬೇಕಾಗಿದೆ. ಇದು ವಿಷ್ಣುಪರ ಎಂದು ಸಾಧನೆ ಮಾಡಬೇಕಾದರೆ ಅಲ್ಲೇ ಇರುವ ಅನೇಕ ನಿರವಕಾಶಲಿಂಗಗಳು, ಬ್ರಹ್ಮಶ್ರುತಿಯು ಇವುಗಳನ್ನು

ಉದಾಹರಿಸುವುದನ್ನು ಬಿಟ್ಟು ಆಚಾರ್ಯರು ಋಗ್ವೇದದಲ್ಲಿ ಬರುವ ಅಗ್ನಿಸೂಕ್ತಸ್ಥಲಿಂಗಗಳನ್ನು ಯಾಕೆ ಉದಾಹರಿಸಿದ್ದಾರೆ? ಎಂದರೆ ಆದಕ್ಕೊಂದು ದೊಡ್ಡ ಪ್ರಯೋಜನವಿದೆ. ಅದೇನೆಂದರೆ ಆಚಾರ್ಯರು ಒಂದು ಸಾಮಾನ್ಯನಿಯಮವನ್ನು ತೋರಿಸುತ್ತಿದ್ದಾರೆ. ವೇದಗಳಲ್ಲಿ (ಮಂತ್ರಗಳೇ ಆಗಲಿ, ಉಪನಿಷತ್ತೇ ಆಗಲಿ) ಸಾವಕಾಶವಾದ ಲಿಂಗಗಳು ಇರುವ ವಾಕ್ಯಗಳು ಇದ್ದಾಗ ಆ ವಾಕ್ಯಗಳಲ್ಲಿ ಬರುವ ಶಬ್ದಗಳನ್ನು ವಿಷ್ಣುಪರವನ್ನಾಗಿ ಮಾಡಬೇಕಾದರೆ ವೇದಗಳಲ್ಲಿ ಆದೇ ವಾಕ್ಯದಲ್ಲಿ ಇರುವ ನಿರವಕಾಶವಿಷ್ಣುಲಿಂಗಗಳಿಂದ ಸಾವಕಾಶಲಿಂಗಗಳನ್ನು ಬಾಧಿಸಬೇಕು. ಆಗ ಆ ಸಾವಕಾಶವಾದ ಲಿಂಗಗಳು ಇರುವ ವಾಕ್ಯಗಳು ವಿಷ್ಣುಪರವಾಗುತ್ತವೆ. ವಸ್ತುತಃ ಛಾಂದೋಗ್ಯದಲ್ಲಿ ಬರುವ ಈ ವಾಕ್ಯಕ್ಕೆ ಈ ನಿಯಮವನ್ನು ಕೂಡಿಸಬೇಕಾಗಿಲ್ಲ. ಏಕೆಂದರೆ ಅದೇ ವಾಕ್ಯದಲ್ಲಿ ಜ್ಯೋತಿಃಶಬ್ದವು ವಿಷ್ಣುಪರವೆಂದು ಹೇಳಲಿಕ್ಕೆ ಅನೇಕ ನಿರವಕಾಶಲಿಂಗಗಳಿವೆ. ಆದರೂ ಋಗ್ವೇದದಲ್ಲಿ ಬರುವ ಲಿಂಗಗಳನ್ನು ತೋರಿಸಿದ್ದರಿಂದ ಆಚಾರ್ಯರು ಆ ನಿಯಮವನ್ನು ಸೂಚನೆಮಾಡಿದ್ದರೆ ಎಂದಿಟ್ಟುಕೊಳ್ಳಬಹುದು. ಈ ನಿಯಮವನ್ನು ಅನುಸರಿಸಿದಾಗ ಸಮಸ್ತವೇದವನ್ನು ವಿಷ್ಣುಪರವನ್ನಾಗಿ ಮಾಡಬಹುದು. ಹೀಗೆ ಭಿಕ್ಷುಕಪಾದಪ್ರಸರಣನ್ಯಾಯದಿಂದ (ಭಿಕ್ಷುಕ ವಾಮನದೇವರು ಬಲಿಯಿಂದ ದತ್ತವಾದ ಮೂರುಪಾದವನ್ನು ಅಳೆಯುವ ವ್ಯಾಜದಿಂದ ಸಮಸ್ತ ಮೂರುಲೋಕಗಳನ್ನು ಆಕ್ರಮಿಸಿದಂತೆ) ನಿರವಕಾಶವಾದ ವಿಷ್ಣುಲಿಂಗಗಳುಳ್ಳ ಎಲ್ಲ ವಾಕ್ಯಗಳನ್ನು ಅವಲಂಬಿಸಿ ಹೇಗೆ ಸಮಸ್ತವೇದವನ್ನು ವಿಷ್ಣುಪರ ಮಾಡಬಹುದು ಎಂಬ ಉಪಾಯವನ್ನು ಆಚಾರ್ಯರು ಋಗ್ವೇದದ ಮಂತ್ರವನ್ನು ಉದಾಹರಿಸುವ ಮೂಲಕ ಸೂಚಿಸಿದ್ದಾರೆ ಎಂದು ಚಂದ್ರಿಕಾಚಾರ್ಯರ ಅಭಿಪ್ರಾಯ.

ಈ ಅಭಿಪ್ರಾಯವನ್ನು ಸನ್ಮ್ಯಾಯರತ್ನಾವಳಿಯ ಮತವನ್ನು ಸಮರ್ಥನೆ ಮಾಡುವ ಸಂದರ್ಭದಲ್ಲಿ ಚಂದ್ರಿಕಾಚಾರ್ಯರು ಹೇಳಿದ್ದರೂ ತತ್ವಪ್ರದೀಪದ ವಾಕ್ಯಕ್ಕೆ ಇದು ಬೆಳಕನ್ನು ಚೆಲ್ಲುತ್ತದೆ. ಹೀಗೆ ವ್ಯಾಸರಾಜರು ಮಂತ್ರಗಳನ್ನು ವಿಷ್ಣುಪರವನ್ನಾಗಿ ಹೇಗೆ ಸಮನ್ವಯ ಮಾಡಬಹುದು ಎಂಬುದನ್ನು ಅನೇಕ ದೃಷ್ಟಾಂತಗಳನ್ನು ಕೊಟ್ಟು ಸಮರ್ಥಿಸಿದ್ದಾರೆ.

## ಗಾಯತ್ರ್ಯಧಿಕರಣ

ಆಕಾಶಾಧಿಕರಣದಲ್ಲಿ ಪದಾರ್ಥದ ಸ್ವಭಾವವೂ ಭಗವದಧೀನವಾಗಿದೆ ಎಂದು ಸಮರ್ಥಿಸಲಾಗಿತ್ತು. ಅಲ್ಲಿ ವಿವರತ್ವ(ಅವಕಾಶಪ್ರದಾತೃತ್ವ)ವೆಂಬ ಆಕಾಶದಲ್ಲಿರುವ ಸ್ವಾಭಾವಿಕವಾದ ಧರ್ಮವು ಭಗವದಧೀನ ಎಂದು ಹೇಳಿದೆ. ಈ ಅಧಿಕರಣದಲ್ಲಿ ಅನಾದಿನಿತ್ಯವಾದ ಧರ್ಮವೂ ಪರಮಾತ್ಮನ ಅಧೀನ ಎಂದು ಸಮರ್ಥನೆ ಮಾಡುತ್ತಾರೆ. ಇಲ್ಲಿ ಪೂರ್ವಪಕ್ಷವನ್ನು ಸಮರ್ಥನೆ ಮಾಡುವ ಸಂದರ್ಭದಲ್ಲಿ ಚಂದ್ರಿಕಾಚಾರ್ಯರು ಟೀಕಾಗಳಲ್ಲಿ ಬರುವ ವಿರೋಧವನ್ನು ಪರಿಹಾರಮಾಡಿದ್ದಾರೆ.

'ಟೀಕಾಸು ಚ ಯದಸ್ಪಷ್ಟಂ' ಎನ್ನುವ ಪ್ರತಿಜ್ಞೆಯ ಪ್ರಕಾರ ಟೀಕಾಸು ಎಂದರೆ ಕೇವಲ ಬ್ರಹ್ಮಸೂತ್ರಗಳಿಗೆ ವ್ಯಾಖ್ಯಾನರೂಪವಾಗಿರುವ ಅನುವ್ಯಾಖ್ಯಾನ, ಭಾಷ್ಯ, ನ್ಯಾಯವಿವರಣ, ಅಣುಭಾಷ್ಯ ಹಾಗೂ ಇವುಗಳಿಗೆ ಟೀಕಾರೂಪವಾಗಿರುವ ಸುಧಾ, ತತ್ವಪ್ರಕಾಶಿಕಾ, ತತ್ವಪ್ರದೀಪ, ಸನ್ಮ್ಯಾಯರತ್ನಾವಳಿ, ಸತರ್ಕದೀಪಾವಳಿ ಇವುಗಳಲ್ಲಿ ಆಪಾತತಃ ತೋರುವ ವಿರೋಧಗಳನ್ನು, ಅಸ್ಪಷ್ಟತೆಯನ್ನು ಪರಿಹಾರಮಾಡಿದ್ದಾರೆಂದಷ್ಟೇ ಅಲ್ಲ;

ಶ್ರೀಜಯತೀರ್ಥರ ಬೇರೆ ಟೀಕಾಗ್ರಂಥಗಳಲ್ಲಿ ಆಪಾತತಃ ಕಂಡು ಬರುವ ವಿರೋಧಗಳನ್ನೂ ಪರಿಹಾರ-ಮಾಡಿದ್ದಾರೆ. ಇದಕ್ಕೊಂದು ನಿದರ್ಶನ.

ಈ ಅಧಿಕರಣದಲ್ಲಿ ವೇದದ ನಿತ್ಯತ್ವವನ್ನು ಸಮರ್ಥನೆ ಮಾಡುತ್ತಾ ತತ್ವಸಂಖ್ಯಾನ ಹಾಗೂ ತತ್ವ-ನಿರ್ಣಯ ಟೀಕಾಗಳಲ್ಲಿ ಬರುವ ಪರಸ್ಪರ ವಿರುದ್ಧವಿರುವಂತೆ ತೋರುವ ವಾಕ್ಯಗಳ ವಿರೋಧವನ್ನು ಪರಿಹಾರ ಮಾಡುತ್ತಾರೆ. ತತ್ವನಿರ್ಣಯಟೀಕಾದಲ್ಲಿ 'ನ ಹಿ ವಯಂ ವೇದಸ್ಯ ಕೂಟಸ್ಥನಿತ್ಯತಾಂ ಬ್ರೂಮಃ' ಎಂದು ವೇದಗಳಿಗೆ ಕೂಟಸ್ಥತ್ವವನ್ನು ನಿಷೇಧ ಮಾಡಿದ್ದಾರೆ. ತತ್ವಸಂಖ್ಯಾನಟೀಕಾದಲ್ಲಿ 'ನಿತ್ಯಾ ವೇದಾಃ' ಎಂಬ ಆಚಾರ್ಯರ ವಾಕ್ಯಕ್ಕೆ ವ್ಯಾಖ್ಯಾನಮಾಡುತ್ತಾ, 'ಅತ್ರ ನಿತ್ಯತ್ವಂ ನಾಮ ಕೂಟಸ್ಥತಯಾ ಆದ್ಯಂತಶೂನ್ಯತ್ವಮ್' ಎಂದು ವೇದಗಳಿಗೆ ಕೂಟಸ್ಥತ್ವವನ್ನು ಹೇಳಲಾಗಿದೆ. ಈ ಎರಡು ವಾಕ್ಯಗಳಿಗೆ ಪರಸ್ಪರವಿರೋಧವನ್ನು ಪರಿಹಾರಮಾಡುತ್ತಾ ಚಂದ್ರಿಕಾಚಾರ್ಯರು — ಈಶ್ವರಬುದ್ಧಿಘಟಿತವಾದ ವೇದವು ನಿತ್ಯವಾಗಿದೆ. ಅಸ್ಮದ್‌ಬುದ್ಧಿಘಟಿತವಾದದ್ದು ಅನಿತ್ಯ' ಎಂದು ಹೇಳಿ ಎರಡೂ ವಾಕ್ಯಗಳನ್ನು ಕೂಡಿಸಿದ್ದಾರೆ.

ಇಲ್ಲಿ ರಾಯರು ಒಂದು ಅಪೂರ್ವವಿಷಯವನ್ನು ಹೇಳಿದ್ದಾರೆ. ಉಚ್ಚಾರಣಾಘಟಿತವಾದದ್ದೆಲ್ಲವೂ ಅನಿತ್ಯವಾಗಿರುತ್ತದೆ. ಈ ನಿಯಮವು ನಮಗೂ ಹಾಗೂ ಪರಮಾತ್ಮನಿಗೂ ಸಮನವಾಗಿದೆ. ಇದನ್ನೇ ವ್ಯಾಸರಾಜರು ತರ್ಕತಾಂಡವದಲ್ಲಿ ಹೇಳುತ್ತಾ *''ಅಧುನಿಕ ಅಧ್ಯಾಪಕೇನ ಸ್ವಬುದ್ಧಿಸ್ಥಪೂರ್ವಪೂರ್ವ-ದಿವಪೀಯಕ್ರಮಾನುಸಾರೇಣ ಏವ ಉತ್ತರೋತ್ತರದಿವಸೇಷ್ವಇವ ಈಶ್ವರೇಣಾಪಿ ಸ್ವಬುದ್ಧಿಸ್ಥಪ್ರವಾಹ ಅನಾದಿ-ಪೂರ್ವಪೂರ್ವಕಲ್ಪೀಯಕ್ರಮಾನುಸಾರೇಣ ಏವ ಉತ್ತರೋತ್ತರಕಲ್ಪೇಽಪಿ ವೇದಸ್ಯ ಉಚ್ಚಾರಿತತ್ವೇನ'* ಎಂದು ಉಚ್ಚಾರಣಾಘಟಿತವಾದ್ದರಿಂದ ಅನಿತ್ಯವೇ ಆಗಿದೆ ಎಂದು ಹೇಳಿದ್ದಾರೆ.

ಇನ್ನು 'ಜ್ಞಾನಂ ನಿತ್ಯಂ ಕ್ರಿಯಾ ನಿತ್ಯಂ ಬಲಂ ಶಕ್ತಿಃ ಪರಾತ್ಮನಃ' ಎಂದು ಅನುವ್ಯಾಖ್ಯಾನದಲ್ಲಿ ಹೇಳಿದಂತೆ ಭಗವಂತನ ಎಲ್ಲಾ ಕ್ರಿಯೆಗಳೂ ನಿತ್ಯವೆಂದು ಅಂಗೀಕರಿಸುವ ಪಕ್ಷದಲ್ಲಿ ಆಗ ಭಗವಂತನ ಉಚ್ಚಾರಣಾ-ಘಟಿತವಾದ ವೇದವೂ ನಿತ್ಯವೇ ಆಗುತ್ತದೆ.

ವ್ಯಾಸರಾಜರು ಇನ್ನೊಂದು ಪಕ್ಷವನ್ನು ಹೇಳಿದ್ದಾರೆ. 'ಕೃತ್ವಾಚಿಂತಯಾ ವಾ ಅನಾದಿತ್ವೋಕ್ತಿಃ' ಎಂದು. ಇದರ ಅರ್ಥ ವೇದದ ಕ್ರಮವು ಅನಾದಿನಿತ್ಯವಲ್ಲದಿದ್ದರೂ ಅನಾದಿನಿತ್ಯ ಎಂದು ಅಭ್ಯುಪೇತ್ಯ ಅನಾದಿತ್ವವನ್ನು ಹೇಳಲಾಗಿದೆ. ಚಂದ್ರಿಕಾಗ್ರಂಥಕ್ಕೆ ಸತ್ಯಾನಂದತೀರ್ಥರು ಚಂದ್ರಿಕಾವಿವೃತಿ ಎಂಬ ವ್ಯಾಖ್ಯಾನವನ್ನು ಬರೆದಿದ್ದಾರೆ. ಅದರಲ್ಲಿ ಈ ಚಂದ್ರಿಕಾವಾಕ್ಯಕ್ಕೆ ಹೀಗೆ ವ್ಯಾಖ್ಯಾನಮಾಡುತ್ತಾರೆ. - ತತ್ವಸಂಖ್ಯಾನಟೀಕಾವಾಕ್ಯವು ನಿರವಕಾಶ, ತತ್ವನಿರ್ಣಯಟೀಕಾವಾಕ್ಯವು ಸಾವಕಾಶ. ಇದನ್ನೆ ಚಂದ್ರಿಕಾಚಾರ್ಯರು ಸಮರ್ಥನೆ ಮಾಡಿ ತತ್ವನಿರ್ಣಯ -ಟೀಕಾದಲ್ಲಿ ಹೇಳಿರುವಂತೆ ವೇದಕ್ಕೆ ಕೂಟಸ್ಥತ್ವವನ್ನು ನಿಷೇಧಮಾಡಿಲ್ಲ. ನಿಷೇಧಮಾಡುವ ವಾಕ್ಯಕ್ಕೆ ನಮ್ಮ ಬುದ್ಧಿಯಲ್ಲಿ ಇರುವ ಕ್ರಮವು ಅನಿತ್ಯ ಎಂದರ್ಥ ಎಂದಿದ್ದಾರೆ. ಇನ್ನು ಕೃತ್ವಾಚಿಂತಯಾ ವಾ ಅನಾದಿತ್ವೋಕ್ತಿಃ ಎಂದು ಚಂದ್ರಿಕಾಚಾರ್ಯರು ಎರಡನೆಯ ಪಕ್ಷವನ್ನು ಯಾಕೆ ಹೇಳಿದ್ದಾರೆ? ಎಂದರೆ ಅನಾದಿತ್ವ ಇಲ್ಲದಿದ್ದರೂ ಅನಾದಿತ್ವವನ್ನು ಒಪ್ಪಿ ಹೇಳಿದ್ದು. ಇದಕ್ಕೆ ಪ್ರಯೋಜನವೇನೆಂದರೆ, 'ಅನಾದಿಸ್ವಭಾವನಿಯಾಮಕತ್ವರೂಪ-ಮಹಾಗುಣಸಿದ್ಧ್ಯರ್ಥಂ' ಅಂದರೆ ಅನಾದಿನಿತ್ಯವಾದ ಪದಾರ್ಥದಲ್ಲಿರುವ ಅನಾದಿಧರ್ಮವೂ ಕೂಡ ಪರಮಾತ್ಮನ ಅಧೀನವಾಗಿದೆಎಂದು ಸಮರ್ಥನೆ ಮಾಡಬೇಕಾಗಿದೆ. ಅದರ ಸಿದ್ಧಿಗಾಗಿ ಕೃತ್ವಾಚಿಂತಯಾ ಅನಾದಿತ್ವವನ್ನು ಹೇಳಿದ್ದೇ ಹೊರತು ವೇದಕ್ಕೆ ಅನಾದಿನಿತ್ಯತ್ವ ಇಲ್ಲ ಎಂದಲ್ಲ.

ಸತ್ಯಾನಂದತೀರ್ಥರು ಹೀಗೆ ವ್ಯಾಖ್ಯಾನಮಾಡುವುದಕ್ಕೆ ಒಂದು ಪ್ರಮಾಣವನ್ನು ಕೊಡುತ್ತಾರೆ. ವಾಯುಪುರಾಣದಲ್ಲಿ ಸ್ಪಷ್ಟವಾಗಿ ವರ್ಣಗಳಿಗೆ ಹಾಗೂ ಕ್ರಮಾತ್ಮಕವಾದ ವೇದ ಇವೆರಡಕ್ಕೂ ಪ್ರತ್ಯೇಕವಾಗಿ ನಿತ್ಯತ್ವವನ್ನು ಹೇಳಿದ್ದಾರೆ. 'ನಿತ್ಯಾಃ ವರ್ಣಾಃ ಸಮಸ್ತಶಃ ತಥಾ ವೇದಾಃ ಸಮಸ್ತಾಶ್ಚ । ತಥಾ ಅವ್ಯಾಕೃತಂ ಅಂಬರಮ್' ಇತಿ ವಾಯುಪುರಾಣವಿರೋಧಾಚ್ಚ ॥

ಇನ್ನು ತತ್ವನಿರ್ಣಯಟೀಕಾಕ್ಕೆ ವ್ಯಾಸತತ್ವಜ್ಞರು ಟಿಪ್ಪಣಿಯನ್ನು ಬರೆದಿದ್ದಾರೆ. ಅವರು ಚಂದ್ರಿಕಾದಲ್ಲಿ ಬರುವ ಈ ವಾಕ್ಯಕ್ಕೆ ವ್ಯಾಖ್ಯಾನಮಾಡುತ್ತಾ - *ವರ್ಣಾಃ ಏವ ಕೂಟಸ್ಥಾಃ ಕ್ರಮಸ್ತು ಜನ್ಯಃ ಏನಾಶೀ ಇತಿ ಸಿದ್ಧಂ ಪ್ರಮೇಯಮ್ । ತಥಾ ಚ ತತ್ವಸಂಖ್ಯಾನಟೀಕಾ ವರ್ಣಾಂಶೇ ಕೂಟಸ್ಥತ್ವಾಭಿಪ್ರಾಯಿಕಾ, ಕ್ರಮಾಂಶೇ ಸರ್ವದಾ ಈಶ್ವರಬುದ್ಧಿಸ್ಥತ್ವಾಭಿಪ್ರಾಯಿಕಾ ವಾ ಕೃತ್ವಾಚಂತೋಕ್ತಿರೂಪಾ ವಾ ।* ಎಂದು ತತ್ವಸಂಖ್ಯಾನಟೀಕಾವು ಸಾವಕಾಶ; ಕ್ರಮಕ್ಕೆ ಅನಿತ್ಯವನ್ನು ಹೇಳುವ ತತ್ವನಿರ್ಣಯಟೀಕಾವು ನಿರವಕಾಶ ಎಂದಿದ್ದಾರೆ. ಅವರು ಈ ರೀತಿಯಲ್ಲಿ ನಿರ್ಣಯಿಸಿದ ಪ್ರಮೇಯಕ್ಕೆ ಗಾಯತ್ಯಧಿಕರಣದಲ್ಲಿ ಬರುವ ಚಂದ್ರಿಕಾವಾಕ್ಯವನ್ನು ಉದಾಹರಿಸುತ್ತಾರೆ. **'ಅತ ಏವ ಗಾಯತ್ರ್ಯಧಿಕರಣಚಂದ್ರಿಕಾಯಾಂ ಈಶ್ವರಬುದ್ಧಿಸ್ಥತ್ವಾದೇವ ತತ್ತತ್ಸಂಖ್ಯಾನಟೀಕಾಯಾಃ ಯುಕ್ತತ್ವಮುಕ್ತ್ವಾ ಕೃತ್ವಾಚಿಂತಯಾ ವಾ ಅನಾದಿತ್ವೋಕ್ತಿಃ' ಇತ್ಯುಕ್ತಮ್ ।** ಎಂದಿದ್ದಾರೆ.

ಹೀಗೆ ಚಂದ್ರಿಕಾವಾಕ್ಯಕ್ಕೆ ಅನೇಕ ರೀತಿಯಲ್ಲಿ ವ್ಯಾಖ್ಯಾನಕಾರರು ಅರ್ಥವನ್ನು ಹೇಳಿದ್ದಾರೆ. ಒಟ್ಟಿನಲ್ಲಿ ಚಂದ್ರಿಕಾಗ್ರಂಥವು ಟೀಕಾ ಗ್ರಂಥಗಳಲ್ಲಿ ಬರುವ ಆಪಾತತಃ ವಿರುದ್ಧವಾಗಿ ತೋರುವ ಎರಡು ವಾಕ್ಯಗಳಿಗೆ ಅನೇಕರೀತಿಯಲ್ಲಿ ಸಮಾಧಾನ ಹೇಳಬಹುದೆಂದು ದಿಗ್ದರ್ಶನಮಾಡಿದೆ.

## ಪಾದಾಂತ್ಯಪ್ರಾಣಾಧಿಕರಣ

ಓಂ ಪ್ರಾಣಸ್ತಥಾನುಗಮಾತ್ ಓಂ ॥

ಈ ಅಧಿಕರಣದಲ್ಲಿ ಐತರೇಯದಲ್ಲಿ ಬರುವ 'ತಾ ವಾ ಏತಾಃ ಶೀರ್ಷನ್ ಶ್ರಿಯಃಶ್ರಿತಾಃ ಚಕ್ಷುಃ ಶ್ರೋತ್ರಂ ಮನೋ ವಾಕ್ ಪ್ರಾಣ' ಎಂದಾರಂಭಿಸಿ ಅನೇಕ ಕಡೆಗಳಲ್ಲಿ ಕೇಳಿಬರುವ ಪ್ರಾಣಶಬ್ದದ ಸಮನ್ವಯವನ್ನು ಮಾಡಲಾಗಿದೆ.

ಶಂಕಾ – ಇಲ್ಲಿ ಬರುವ ಮುಖ್ಯ ಸಂದೇಹವೇನೆಂದರೆ, ಹಿಂದಿನ ಪ್ರಾಣಾಧಿಕರಣದಿಂದಲೇ (ಅತಃ ಏವ ಪ್ರಾಣಃ ಎಂಬಲ್ಲಿ) ಪ್ರಾಣಶಬ್ದದ ಸಮನ್ವಯವನ್ನು ಮಾಡಲಾಗಿದೆ. ಈ ಅಧಿಕರಣದಲ್ಲಿ ಪುನಃ ಅದೇ ಪ್ರಾಣಶಬ್ದದ ಸಮನ್ವಯವನ್ನು ಸೂತ್ರಕಾರರು ಏಕೆ ಮಾಡಿದ್ದಾರೆ? ಎಂದು. ಇಲ್ಲಿ ಚಂದ್ರಿಕಾಚಾರ್ಯರು ಬಹುಮುಖದಿಂದ ಶಂಕಾವನ್ನು ದೃಢಪಡಿಸಿದ್ದಾರೆ. ಅದರ ಒಂದು ಸಾರಾಂಶವನ್ನು ನೋಡೋಣ.

ಸಮಾಧಾನ - ಹಿಂದಿನ ಪ್ರಾಣಾಧಿಕರಣಕ್ಕೂ ಈ ಅಧಿಕರಣಕ್ಕೂ ವೈಲಕ್ಷಣ್ಯ(ಭೇದ)ವಿದೆ. ಹಿಂದೆ ಪ್ರಾಣಶಬ್ದವು ವಾಯುಪರವಲ್ಲ ಎಂದು ಸಮಾಧಾನ ಮಾಡಿದ್ದಾರೆ. ಇಲ್ಲಿ ಪ್ರಾಣಶಬ್ದವು ಇಂದ್ರ, ಜೀವಪರ ಅಲ್ಲ ಎಂದು ಸಮರ್ಥಿಸಿ ವಿಷ್ಣುಪರ ಎಂದು ಸಮನ್ವಯಮಾಡಲಾಗಿದೆ.

ಶಂಕಾ - ಈ ರೀತಿಯ ಸಮಾಧಾನ ಸರಿಯಾದುದಲ್ಲ. ಏಕೆಂದರೆ ಇದೇ ಅಧಿಕರಣದಲ್ಲಿ 'ಜೀವ-ಮುಖ್ಯಪ್ರಾಣಲಿಂಗಾತ್' ಎಂಬ ಸೂತ್ರದಲ್ಲಿ ಮುಖ್ಯಪ್ರಾಣನನ್ನೂ ಪೂರ್ವಪಕ್ಷವನ್ನಾಗಿ ಇಟ್ಟುಕೊಂಡಿದ್ದಾರೆ. ಆದ್ದರಿಂದ ಈ ಅಧಿಕರಣದಲ್ಲಿ ವಾಯುಪರವಲ್ಲ ಎಂದೂ ಸಮರ್ಥಿಸಿದ್ದಾರೆ.

ಸಮಾಧಾನ - ಹಿಂದೆ ವಾಯುಪರವಲ್ಲ ಎಂದು ಸಮರ್ಥಿಸಿದ್ದಾರೆ. ಇಲ್ಲಿಯಾದರೋ ಇಂದ್ರ, ಜೀವ, ವಾಯು ಈ ಮೂರರ ಪರವಲ್ಲ ಎಂದು ಸಮರ್ಥಿಸಿದ್ದಾರೆ. ಆದ್ದರಿಂದ ಗತಾರ್ಥತಾ ಬರುವುದಿಲ್ಲ.

ಶಂಕಾ - ಹಾಗಾದರೆ ಈ ಅಧಿಕರಣ ಒಂದೇ ಸಾಕು. ಇಲ್ಲಿ ಪ್ರಾಣಶಬ್ದವು ವಾಯುಪರವಲ್ಲ ಎಂದು ಸಮರ್ಥನೆ ಮಾಡಿದ್ದರಿಂದ ಹಿಂದಿನ ಪ್ರಾಣಾಧಿಕರಣವು ಬೇಕಿಲ್ಲ. ಅಷ್ಟೇ ಅಲ್ಲದೆ ನ್ಯಾಯಭೇದದಿಂದ (ಪೂರ್ವಪಕ್ಷ ಸಿದ್ಧಾಂತನ್ಯಾಯ) ಅಧಿಕರಣಭೇದವನ್ನು ಹೇಳಬೇಕೇ ಹೊರತು ಒಂದೇ ನ್ಯಾಯದಿಂದ ನಿರಸನೀಯವಾದದ್ದರಲ್ಲಿ ಭೇದವನ್ನು ಹೇಳಿ ಅಧಿಕರಣಭೇದವನ್ನು ಹೇಳಬಾರದು.

ಸಮಾಧಾನ - ಹಿಂದಿನ ಪ್ರಾಣಾಧಿಕರಣಕ್ಕೆ ವಿಷಯವಾಕ್ಯವು ಬೇರೆ. (ತದ್ವೈ ತ್ವಂ ಪ್ರಾಣಃ ಅಭವಃ ಮಹಾನ್ ಭೋಗಃ ಪ್ರಜಾಪತೇಃ...) ಈ ಪ್ರಾಣಾಧಿಕರಣಕ್ಕೆ ವಿಷಯವಾಕ್ಯವು ಬೇರೆ (ತಾ ವಾ ಏತಾಃ) ಆದ್ದರಿಂದ ಅಧಿಕರಣಗಳು ಬೇರೆ ಬೇರೆ.

ಶಂಕಾ -- ವಿಷಯವಾಕ್ಯಗಳ ಭೇದದಿಂದ ಅಧಿಕರಣ ಭೇದವನ್ನು ಹೇಳಿದರೆ ಸೂತ್ರಗಳು ಅನಂತವಾಗ-ಬೇಕಾಗುತ್ತವೆ. ಸೂತ್ರವು ನ್ಯಾಯವನ್ನು ಹೇಳಿ ಆ ನ್ಯಾಯದಿಂದ ಅನೇಕ ವಿಷಯವಾಕ್ಯಗಳು ಸಂಗೃಹೀತ-ವಾಗಬೇಕು ಹೊರತು ಬೇರೆ ಬೇರೆ ವಿಷಯವಾಕ್ಯಗಳು ಇದ್ದುದಕ್ಕಾಗಿ ಒಂದೇ ನ್ಯಾಯವನ್ನು ಅನೇಕ ಸೂತ್ರಗಳಲ್ಲಿ ಹೇಳಿದ್ದಾರೆ ಎಂಬುದು ಸಮಂಜಸವಲ್ಲ.

ಸಮಾಧಾನ - ನ್ಯಾಯಭೇದವೇ ಇದೆ. ಆದ್ದರಿಂದ ಬೇರೆ ಅಧಿಕರಣಗಳೆಂದು ಹೇಳುತ್ತೇವೆ. ಹಿಂದಿನ ಅಧಿಕರಣದಲ್ಲಿ ಲೋಕಪ್ರಸಿದ್ಧಿಯಿಂದ ಪ್ರಾಣಶಬ್ದವು ವಾಯುಪರ ಎಂದು ಪೂರ್ವಪಕ್ಷಿಸಿ, ನಿರವಕಾಶ ಲಿಂಗಗಳಿಂದ ವಿಷ್ಣುಪರ ಎಂದು ಸಿದ್ಧಾಂತ ಮಾಡಲಾಗಿತ್ತು. ಈ ಅಧಿಕರಣದಲ್ಲಾದರೋ, ಲಿಂಗದಿಂದ ಪೂರ್ವಪಕ್ಷವನ್ನು ಮಾಡಿ, ಶ್ರುತಿ ಮತ್ತು ಲಿಂಗಗಳಿಂದ (ಬ್ರಹ್ಮಶ್ರುತಿ ಹಾಗೂ ಸರ್ವದೇವೋಪದೇಶ್ಯತ್ವಲಿಂಗ) ಸಿದ್ಧಾಂತವನ್ನು ಮಾಡಲಾಗಿದೆ.

ಶಂಕಾ --ಈ ರೀತಿಯಲ್ಲಿ ಪೂರ್ವಪಕ್ಷವನ್ನು ಹೇಳಲಿಕ್ಕೆ ಬರುವುದಿಲ್ಲ. ಏಕೆಂದರೆ, 'ಅತ ಏವ ಪ್ರಾಣಃ' ಎಂಬಲ್ಲಿ ಶ್ರುತ್ಯಾ ಪೂರ್ವಪಕ್ಷವನ್ನು ಮಾಡಿದಾಗ ಲಿಂಗದಿಂದ ಅದನ್ನು ಬಾಧ ಮಾಡಿದ ಮೇಲೆ ಪುನಃ ಪೂರ್ವಪಕ್ಷವನ್ನು ಉಜ್ಜೀವನ ಮಾಡುವುದಕ್ಕೆ ಕೇವಲ ಲಿಂಗದಿಂದ ಹೇಗೆ ಸಾಧ್ಯ ? ಅದರಲ್ಲೂ ವಿರೋಧಿ ಶ್ರುತಿ ಮತ್ತು ಲಿಂಗಗಳು ಇರುವಾಗ (ಬ್ರಹ್ಮಶ್ರುತಿ ಹಾಗೂ ಸರ್ವದೇವೋಪದೇಶ್ಯತ್ವಲಿಂಗ). ಆದ್ದರಿಂದ ಹಿಂದಿನ ಅಧಿಕರಣದಲ್ಲಿ ಲಿಂಗದಿಂದ ಸಿದ್ಧಾಂತವನ್ನು ಹೇಳಿದಾಗ ಆ ಲಿಂಗಕ್ಕಿಂತ ಪ್ರಬಲವಾದ ಪೂರ್ವಪಕ್ಷ ಪ್ರಾಪಕವನ್ನು (ಉದಾ ಶ್ರುತಿಸಹಿತಲಿಂಗ) ಹೇಳಿ ಪೂರ್ವಪಕ್ಷವನ್ನು ಉಜ್ಜೀವನ ಮಾಡಬಹುದು ಹೊರತು, ಕೇವಲ ಲಿಂಗದಿಂದ ಸಿದ್ಧಾಂತಕ್ಕೆ ವಿರೋಧಿಯಾದ ಬ್ರಹ್ಮಶ್ರುತಿ ಹಾಗೂ ಲಿಂಗಗಳನ್ನು ಬಾಧಿಸಿ ಪೂರ್ವ-ಪಕ್ಷವನ್ನು ದೃಢಪಡಿಸಲು ಸಾಧ್ಯವೇ ಇಲ್ಲ.

ಸಮಾಧಾನ -- ಕೇವಲ ಲಿಂಗದಿಂದ ಪೂರ್ವಪಕ್ಷವನ್ನು ಉಜ್ಜೀವನ ಮಾಡುವುದಿಲ್ಲ. ಕಿಂತು ಪ್ರಾಣ-ಶ್ರುತಿಬಾಹುಲ್ಯವಿರುವುದರಿಂದ ಮಾಡುತ್ತೇವೆ.

ಶಂಕಾ - ಶ್ರುತಿಬಾಹುಲ್ಯವಿದ್ದಾಗಲೂ ನಿರವಕಾಶಲಿಂಗವು ಪ್ರಬಲವೆಂಬುದನ್ನು ಗಾಯತ್ರ್ಯಧಿಕರಣದಲ್ಲಿ ಹೇಳಿದ್ದಾಗಿದೆ. ಆದ್ದರಿಂದ ಈ ಅಧಿಕರಣದಲ್ಲಿ ಹೊಸದಾದ ಪೂರ್ವಪಕ್ಷಪ್ರಾಪಕ ಯಾವುದೂ ಇಲ್ಲ.

ಸಮಾಧಾನ - ಗಾಯತ್ರ್ಯಧಿಕರಣ ಹಾಗೂ ಈ ಅಧಿಕರಣ ಇವೆರಡಕ್ಕೂ ವೈಷಮ್ಯ ಇದೆ. ಗಾಯತ್ರ್ಯಧಿಕರಣದಲ್ಲಿ ಗಾಯತ್ರೀ, ವಾಕ್, ಪೃಥಿವೀ ಎಂದು ಬೇರೆ ಬೇರೆ ನಾಮಗಳು ಇದ್ದವು. ಇಲ್ಲಾದರೋ ಪ್ರಾಣ ಎಂಬ ಒಂದೇ ನಾಮವು ಆವೃತ್ತಗೊಂಡಿದೆ.

ಶಂಕಾ - ಗಾಯತ್ರ್ಯಧಿಕರಣದಲ್ಲೂ 'ಗಾಯತ್ರೀ ವಾ ಇದಂ ಸರ್ವಮ್' 'ವಾಗ್ ವೈ ಗಾಯತ್ರೀ' 'ಸೈಷಾ ಷಡ್ವಿಧಾ ಗಾಯತ್ರೀ' ಎಂಬುದಾಗಿ ಒಂದೇ ಗಾಯತ್ರೀ ಪದವು ಆವೃತ್ತಿಗೊಂಡಿದೆ. ವಸ್ತುತಃ ಶ್ರುತಿಬಾಹುಲ್ಯದಿಂದ ಪ್ರಾಪ್ತವಾದ ಪೂರ್ವಪಕ್ಷವನ್ನು ತಕಾಶಾಧಿಕರಣದಲ್ಲಿಯೇ ನಿರಾಸಮಾಡಲಾಗಿದೆ. ಆದ್ದರಿಂದ ಈ ಅಧಿಕರಣದಲ್ಲಿ ಹೊಸದಾಗಿ ಪೂರ್ವಪಕ್ಷಪ್ರಾಪಕವಾದ ನ್ಯಾಯ ಯಾವುದೂ ಇಲ್ಲ.

ಸಮಾಧಾನ - ಕೇವಲ ಶ್ರುತಿಬಾಹುಲ್ಯದಿಂದ ಇಲ್ಲಿ ಪೂರ್ವಪಕ್ಷವನ್ನು ಉಜ್ಜೀವನ ಮಾಡುತ್ತಿಲ್ಲ. ಕಿಂತು ಶ್ರುತಿಲಿಂಗಬಾಹುಲ್ಯದಿಂದ ಮಾಡುತ್ತೇವೆ.

ಶಂಕಾ - ಶ್ರುತಿ ಮತ್ತು ಲಿಂಗಗಳನ್ನು ಹಿಂದಿನ ಅಧಿಕರಣಗಳಲ್ಲಿ ಆಗಲೇ ಸಾವಕಾಶಮಾಡಲಾಗಿದೆ. ಉದಾ - ಇಂದ್ರನ ಪರವಾಗಿ ಶ್ರುತಿಗಳನ್ನು ಹೇಳಿದರೆ ಅವನ್ನು ಅಂತರಧಿಕರಣದ ನ್ಯಾಯದಿಂದ ವಿಷ್ಣುಪರವನ್ನಾಗಿ ಮಾಡಬಹುದು. ಮುಖ್ಯಪ್ರಾಣಪರವಾಗಿ ಶ್ರುತಿಗಳನ್ನು ಹೇಳಿದರೆ ಆತ ಏವ ಪ್ರಾಣಃ ಎಂಬ ಸೂತ್ರದಲ್ಲಿ ವಿಷ್ಣುಪರವಾಗಿ ಮಾಡಿದ್ದಾಗಿದೆ. ಇನ್ನು ಜೀವಪರವಾಗಿ ಶ್ರುತಿಗಳನ್ನು ಹೇಳಿದರೆ ಗಾಯತ್ರ್ಯಧಿಕರಣದಲ್ಲಿ ಹೇಳಿದಂತೆ ವಿಷ್ಣುಪರವಾಗಿ ಮಾಡಲಾಗಿದೆ. ಇದರ ಜೊತೆಗೆ ಲಿಂಗಗಳನ್ನು ಹೇಳಿದರೂ ಸಹ ಇಲ್ಲಿ ಬಹುವಿಷ್ಣುಶ್ರುತಿಗಳು ಇರುವುದರಿಂದ, ಪ್ರಬಲವಾದ್ದರಿಂದ ಲಿಂಗಗಳನ್ನು ಸಾವಕಾಶ ಮಾಡಬೇಕು.

ಹೀಗೆ ಅನೇಕರೀತಿಯಲ್ಲಿ ಈ ಅಧಿಕರಣವು ಅನಾರಂಭಣೀಯ. ಏಕೆಂದರೆ ಈ ಅಧಿಕರಣದಲ್ಲಿ ಹೇಳಬೇಕಾದ ನ್ಯಾಯವು ಹಿಂದಿನ ಅಧಿಕರಣಗಳಲ್ಲೇ ಹೇಳಿಯಾಗಿದೆ ಎಂದು. ಇಲ್ಲಿ ಗಮನಿಸಬೇಕಾದ ಅಂಶ. ಈ ಪ್ರಾಣಾಧಿಕರಣವು ಹಿಂದಿನ ಹಾಗೂ ಮುಂದಿನ ಯಾವ ಅಧಿಕರಣದಿಂದಲೂ ಗತಾರ್ಥವಾಗಿಲ್ಲ - ಎಂಬುದನ್ನು ಚಂದ್ರಿಕಾಚಾರ್ಯರು ಅತ್ಯಂತ ಸೂಕ್ಷ್ಮವಾಗಿ ವಿಚಾರ ಮಾಡಿ ನಿರ್ಣಯ ಮಾಡಿದ್ದಾರೆ.

ಸಮಸ್ತ ಅಧಿಕರಣಗಳಲ್ಲೂ ಈ ರೀತಿಯ ವಿಚಾರವನ್ನು ಮಾಡಿ, ಹೇಗೆ ಪ್ರತಿಯೊಂದು ಅಧಿಕರಣವು ಹೊಸದಾದ ನ್ಯಾಯವನ್ನು ಹೇಳುತ್ತದೆ ಎಂಬುದನ್ನು ಚಂದ್ರಿಕಾಚಾರ್ಯರು ಸಮರ್ಥನೆ ಮಾಡುತ್ತಾರೆ.

ಈ ಎಲ್ಲವನ್ನೂ ಅನೇಕ ಮಜಲುಗಳಲ್ಲಿ ಸಮರ್ಥನೆ ಮಾಡಿದ್ದಾರೆ. ಇದಕ್ಕೂ ಹೆಚ್ಚು ರೋಚಕವಾಗಿ ಉತ್ತರವನ್ನು ಹೇಳುವ ಸಂದರ್ಭದಲ್ಲಿ ಸಮರ್ಥನೆಯನ್ನು ಕೊಡುವ ಶ್ರೀವ್ಯಾಸರಾಜರ ಕೌಶಲಕ್ಕೆ ನಮಸ್ಕಾರ.

* * *

# ವಿಷಯಾನುಕ್ರಮಣಿಕೆ

## ಆಕಾಶಾಧಿಕರಣ


ಬ್ರಹ್ಮಮೀಮಾಂಸಾಶಾಸ್ತ್ರ ಆಕಾಶಾಧಿಕರಣ 2
ಶ್ರೀಜಗನ್ನಾಥಯತಿಗಳಿಂದ ರಚಿಸಲ್ಪಟ್ಟ ಸೂತ್ರದೀಪಿಕಾ 2
ಭೂತಾಕಾಶವೇ ಆನಂದಮಯವೆಂದು ಪೂರ್ವಪಕ್ಷ 3
ಪರೋವರೀಯಸ್ತ್ವಾದಿ ವಿಷ್ಣುವಿನ ಅಸಾಧಾರಣವಾದ ಲಿಂಗಗಳು 11
ಅನಂತತ್ವಮತ್ತು ಸರ್ವೋತ್ತಮತ್ವಗಳು ವಿಷ್ಣುವಿನ ಲಿಂಗಗಳು 17


## ತಾತ್ಪರ್ಯಚಂದ್ರಿಕಾ


ಆಕಾಶಾಧಿಕರಣ ಸಾರ 30
ಆಧಿಭೌತಿಕಶಬ್ದಗಳ ಸಮನ್ವಯಕ್ಕಾಗಿ ಆಕಾಶಾಧಿಕರಣ 39
ಅಂತರಧಿಕರಣದ ಅನಂತರ ಆಕಾಶಾಧಿಕರಣವೇ ಏಕೆ? 48
ತೈತ್ತಿರೀಯದಂತೆ ಛಾಂದೋಗ್ಯದ ಮಾತೂ ಸಹ ವಿಷಯವಾಕ್ಯ 59
ವಿದ್ವಾಸಾಭಾಸರ ನಿರಾಕರಣೆ 69
ಅಧಿಕರಣದ ಸಂಶಯಕೋಟಿಗಳು 71
ಅನುವ್ಯಾಖ್ಯಾನಸೂಚಿತ ಪೂರ್ವಪಕ್ಷ 77
ವಾಜಪೇಯಾಧಿಕರಣ ''ನಾಮಧೇಯೇ ಗುಣಶ್ರುತೇಃ ಸ್ಯಾದ್ವಿಧಾನಮಿತಿ ಚೇತ್' (1-4-5) 83
ಜಡಸ್ವಭಾವವು ಹೇಗೆ ಭಗವದಧೀನ? 88
ಪ್ರಮೇಯಾಶ್ರಿತ ಪೂರ್ವಪಕ್ಷ 92
ಪ್ರಮಾಣಾಶ್ರಿತ ಪೂರ್ವಪಕ್ಷಗಳು 104
'ಫಲಚಮಸೋ ನೈಮಿತ್ತಿಕೋ ಭಕ್ಷವಿಕಾರಃ ಶ್ರುತಿಸಂಯೋಗಾತ್' (3-5- ಉಪಾಂತ್ಯ) 115
'ಗುಣಶ್ಚಾಪ್ಲವಸಂಯೋಗೇ ವಾಕ್ಯಯೋಃ ಸಮತ್ವಾತ್' (2-2-9) 118
ಭಾಷ್ಯ ಹಾಗೂ ಅನುವ್ಯಾಖ್ಯಾನಗಳ ವಿರೋಧ ಪರಿಹಾರ 122
ಸಿದ್ಧಾಂತ - ಆಕಾಶ ಎಂದರೆ ಮಹಾವಿಷ್ಣುವೇ 131
ಪಾರ್ವಣಹೋಮಾದ್ಯನನುಷ್ಠಾನಾಧಿಕರಣಮ್ 150
ಭಕ್ಷಮಂತ್ರಾಣಾಂ ಯಥಾಲಿಂಗಗ್ರಹಣಾದೌ ವಿನಿಯೋಗಾಧಿಕರಣಮ್ 153
ಅಭ್ಯುನ್ನೀತಸೋಮಭಕ್ಷಣಾಧಿಕರಣಮ್ 158
ಪುನರಭ್ಯುನ್ನೀತೇಷು ಸರ್ವೇಷಾಮುಪಲಕ್ಷಣಂ ದ್ವಿಶೇಷತ್ವಾತ್ (3-2-29)
ಪ್ರಮಾಣಾಶ್ರಿತಪೂರ್ವಪಕ್ಷ ನಿರಾಕರಣೆ 165

ಆಗ್ರಯಣೇ ಪ್ರಸೂನಬರ್ಹಿಷಾಮೇವ ಗ್ರಹಣಾಧಿಕರಣಮ್ (12-2-14) 172
ಪರೀಯರ ವಿಮರ್ಶೆ 179
'ಸಾರಸ್ವತ್ಯಾಂ ಮೇಷ್ಯಾಂ ಮದ್ರಿಗುವಚನಾಭಾವಾಧಿಕರಣಮ್ 191
'ಲಿಂಗವಿಶೇಷನಿರ್ದೇಶಾತ್ ಸಮಾನವಿಧಾನೇಷ್ವಪ್ಯಾಪ್ತಿಃ ಸಾರಸ್ವತೀ ಸ್ತ್ರೀತ್ವಾತ್' (9-1-15)
ಶೈವರ ಮತ ನಿರಾಕರಣೆ - ಟೀಕೆಯ ಕಠಿಣಪದಾರ್ಥ 195
ಸಂಸ್ಕಾರಾಯೋಗ್ಯಸ್ಯಾಪಿ ಮುಖ್ಯಸ್ಯೇವ ಉಪಾದಾನಾಧಿಕರಣಮ್(6/3/19) 200
ಆಕಾಶಾಧಿಕರಣ ಪರಿಶಿಷ್ಟಗ್ರಂಥಗಳು 205

## ಪ್ರಾಣಾಧಿಕರಣ

ಬ್ರಹ್ಮಮೀಮಾಂಸಾಶಾಸ್ತ್ರ ಪ್ರಾಣಾಧಿಕರಣ 216
ಶ್ರೀಜಗನ್ನಾಥಯತಿಗಳಿಂದ ರಚಿಸಲ್ಪಟ್ಟ ಸೂತ್ರದೀಪಿಕಾ 216
ಆಧ್ಯಾತ್ಮಿಕಶಬ್ದಗಳ ಸಮನ್ವಯಕ್ಕಾಗಿ ಪ್ರಾಣಾಧಿಕರಣ 217
ಮುಖ್ಯಪ್ರಾಣನೇ ಪ್ರಾಣನೆಂದು ಪೂರ್ವಪಕ್ಷ 222
ಶ್ರೀಲಕ್ಷ್ಮೀಪತಿತ್ವಲಿಂಗದಿಂದ ವಿಷ್ಣುವೇ ಪ್ರಾಣನೆಂದು ಸಿದ್ಧಾಂತ 225
ಸತ್ತರ್ಕದೀಪಾವಳಿ 245

## ತಾತ್ಪರ್ಯಚಂದ್ರಿಕಾ

ಅಧಿಕರಣದ ಸಾರ 244
ಸಂಗತಿ ಮತ್ತು ಭಾಷ್ಯೋಕ್ತ ಫಲವಿಚಾರ 248
ಸಂಶಯ ಪರಂಪರೆ 255
ಪೂರ್ವಪಕ್ಷಮಾಡಲು ಸಾಧ್ಯವೇ? 258
ವಾಕ್ಯಪ್ರಮಾಣದಿಂದ ಮುಖ್ಯಪ್ರಾಣನು ಪೂರ್ವಪಕ್ಷವಿಷಯ. 263

ಅಂತಿಮಪ್ರಾಣಾಧಿಕರಣದಿಂದ ಪುನರುಕ್ತಿಪರಿಹಾರ

ಮುಖ್ಯಪ್ರಾಣನ ಜೀವನಹೇತುತ್ವದಲ್ಲಿ ಪ್ರತ್ಯಕ್ಷಪ್ರಮಾಣ 268
ಪೂರ್ವಪಕ್ಷವಿಷಯದಲ್ಲಿ ಸ್ವಯೂಥ್ಯರ ನಿರಾಕರಣೆ 275
ಜೀವನಕಾರಣನಾದ ಮುಖ್ಯಪ್ರಾಣನೇ ಆನಂದಮಯ 278
ನಾಲ್ಕುಬಗೆಯ ಪ್ರಮಾಣಾಶ್ರಿತ ಪೂರ್ವಪಕ್ಷಗಳು 281
ಪೂರ್ವಪಕ್ಷಿಗಳಿಗೆ ಲಕ್ಷ್ಮೀಪತಿತ್ವಲಿಂಗವು ಬಾಧಕವಲ್ಲ 285
ಸಿದ್ಧಾಂತ (ವಿಷ್ಣುವಿನ ಶರೀರ ಮುಖ್ಯಪ್ರಾಣ) 287
ಪ್ರಾಣನು ವಿಷ್ಣುವಾಗಬಹುದು; ಲಕ್ಷ್ಮಿಯು ಭಾರತಿಯಾಗುವುದಿಲ್ಲ 292
ಎರಡು ಅನುವಾಕಗಳ ಹೃದಯ ಒಂದೇ 297
ಅದ್ವೈತಿಗಳ ಪ್ರಾಣಾಧಿಕರಣ 301
ಅದ್ವೈತಮತವಿಮರ್ಶೆ 311

ಅದ್ವೈತಿಗಳ ಸಿದ್ಧಾಂತವೂ ತಪ್ಪು 323
ರಾಮಾನುಜರ ಅಧಿಕರಣ ವಿಮರ್ಶೆ 329
ಪ್ರಾಣಾಧಿಕರಣ ಪರಿಶಿಷ್ಟಗ್ರಂಥಗಳು – 338

## ಜ್ಯೋತಿರಧಿಕರಣ

ಬ್ರಹ್ಮಮೀಮಾಂಸಾಶಾಸ್ತ್ರ 346
ಸೂತ್ರದೀಪಿಕಾ 346
ಜ್ಯೋತಿಯೆನಿಸಿದ ಅಗ್ನಿಯೇ ಆನಂದಮಯನೆಂದು ಪೂರ್ವಪಕ್ಷ 347
ಕರ್ಣಾದಿವಿದೂರತ್ವಲಿಂಗದಿಂದ ವಿಷ್ಣುವೇ ಜ್ಯೋತಿಯು 356
ಸತ್ತರ್ಕದೀಪಾವಳಿ 364

### ತಾತ್ಪರ್ಯಚಂದ್ರಿಕಾ

ಜ್ಯೋತಿರಧಿಕರಣದ ಸಾರ 368
ಅಧಿಕರಣವಿಭಾಗದಲ್ಲಿ ದೈ್ವತಸಿದ್ಧಾಂತದ ವಿಭಿನ್ನ ಅಭಿಪ್ರಾಯಗಳು 374
ತತ್ತ್ವಪ್ರದೀಪಕಾರರ ಅಭಿಪ್ರಾಯ ತಪ್ಪಲ್ಲ 377
ಸನ್ಯಾಯರತ್ನಾವಲೀಕಾರರ ಅಭಿಪ್ರಾಯವೂ ಸರಿ 387
ಇಬ್ಬರ ಮತದಲ್ಲಿ ಎರಡೂ ವಿಷಯವಾಕ್ಯಗಳಾಗಬಹುದು. 390
ಆಘಾರಾಗ್ನಿಹೋತ್ರಾಧಿಕರಣಮ್ 01(2/2/5) 395
ಅರ್ಥವಾದಾಧಿಕರಣಮ್ 397
'ಆಮ್ನಾಯಸ್ಯ ಕ್ರಿಯಾರ್ಥತ್ವಾದಾನರ್ಥಕ್ಯಮತದರ್ಥಾನಾಮ್'
ಟೀಕಾರಾಯರ ಪಕ್ಷವೂ ಸಮಂಜಸ 401
ಸಂಗತಿ 407
ಸಂಶಯ 416
ಸುಧೆಯಲ್ಲಿ ಹಾಗೂ ಟೀಕೆಯಲ್ಲಿ ವಿಭಿನ್ನ ಪೂರ್ವಪಕ್ಷಗಳು 419
ಶ್ರುತಿಲಿಂಗಗಳ ಬಲಾಬಲ ವ್ಯವಸ್ಥೆ 425
ಲಿಂಗ ಮತ್ತು ಶ್ರುತಿಗಳೆರಡೂ ಸಾವಕಾಶಗಳು(ಸುಧೆಯ ಪೂರ್ವಪಕ್ಷ) 429
ಟೀಕೆಯ ಪೂರ್ವಪಕ್ಷ ಸುಧೆಗೆ ಅನುಸಾರಿಯಾಗಿದೆ 432
ಕರ್ಣಾದಿವಿದೂರತ್ವಲಿಂಗವು ವಿಷ್ಣುವಿನಲ್ಲಿ ಮಾತ್ರ (ಸಿದ್ಧಾಂತ) 435
ಧಾನ್ಯಶಬ್ದಸ್ಯೋಹಾಧಿಕರಣಮ್ ಸೂತ್ರ : ಗುಣಶಬ್ದಸ್ತಥೇತಿ ಚೇತ್ (9/1/13) 443
ನಿರವಕಾಶಬ್ರಹ್ಮಲಿಂಗದ ಸಾಮರ್ಥ್ಯ 447
ವಿಭಿನ್ನ ಸಿದ್ಧಾಂತಗಳಿಂದ ಪುನರುಕ್ತಿ ಪರಿಹಾರ 453
ಸೂತ್ರಪದ ಸ್ವಾರಸ್ಯ 458
ಜ್ಯೋತಿರಧಿಕರಣ – ಪರಿಶಿಷ್ಟಗ್ರಂಥಗಳು – 466

## ಗಾಯತ್ರ್ಯಧಿಕರಣ


ಬ್ರಹ್ಮಮೀಮಾಂಸಾಶಾಸ್ತ್ರ 474
ಜ್ಯೋತಿಯೇ ಗಾಯತ್ರಿಯೆಂದು ಆಕ್ಷೇಪ 475
ಉಪಾಸನೆಗಾಗಿ ಅನೇಕಶಬ್ದಗಳ ಸಮನ್ವಯ 485
ಗಾನತ್ರಾಣಕರ್ತನಾದ ವಿಷ್ಣುವೇ ಗಾಯತ್ರೀ 491
ಬ್ರಹ್ಮಮೀಮಾಂಸಾಶಾಸ್ತ್ರ 500
ವಿಷ್ಣುವಿನ ಮಹಾಮಹಿಮೆ 500
ಪಾದಶಬ್ದಕ್ಕೆ ಭಿನ್ನಾಂಶ ಎಂದರ್ಥ 507
ಪುರುಷಸೂಕ್ತಪ್ರತಿಪಾದ್ಯನೇ ಗಾಯತ್ರೀ 513
ಬ್ರಹ್ಮಮೀಮಾಂಸಾಶಾಸ್ತ್ರ 517
ವಿರುದ್ಧಾರ್ಥವುಳ್ಳ ಎರಡು ವಿಭಕ್ತಿಗಳು ಒಬ್ಬನನ್ನೇ ಹೇಳಲಾರವು. 518
ಮೂರು ಹಾಗೂ ಏಳುಲೋಕಗಳ ವಿವಕ್ಷೆಯಿಂದ ವಿರೋಧಪರಿಹಾರ 519
ಸತ್ತರ್ಕದೀಪಾವಳಿ 529


## ತಾತ್ಪರ್ಯಚಂದ್ರಿಕಾ


ಗಾಯತ್ರ್ಯಧಿಕರಣದ ಸಾರ 534
ವಿಷಯವಾಕ್ಯದ ಜಿಜ್ಞಾಸೆ 541
ನ್ಯಾಯಸುಧೆ ಹಾಗೂ ಟೀಕೆಗಳಲ್ಲಿರುವ ಐದು ಪೂರ್ವಪಕ್ಷಗಳು 545
ಸಂಶಯ ಪರಂಪರೆ 551
ನಾಲ್ಕು ವಿಧ ಪ್ರಮಾಣಾಶ್ರಿತ ಪೂರ್ವಪಕ್ಷಗಳು 558
ಪ್ರಮೇಯಾಶ್ರಿತ ಪೂರ್ವಪಕ್ಷ 562
ವೇದಾಪೌರುಷೇಯತ್ವವಿಚಾರ 564
ಐದು ಪೂರ್ವಪಕ್ಷಗಳ ನಿರಾಕರಣೆ 572
ಅನಾದಿಯೂ ಭಗವದಧೀನ 578
ಈಶ್ವರನು ಅನ್ಯಥಾಕರ್ತುಂ ಸಮರ್ಥ 582
ಪ್ರಕೃತ ಸ್ವಾತಂತ್ರ್ಯವೆಂಬ ಪ್ರವೃತ್ತಿನಿಮಿತ್ತವೇ ಸಾಕು 588
ರಾಮಾನುಜ ಹಾಗೂ ಅದ್ವೈತಮತದ ಅಧಿಕರಣವಿಮರ್ಶೆ 594
'ಚತುಷ್ಪದಾ' ಶ್ರುತಿಯ ವ್ಯಾಖ್ಯಾನ ವಿಮರ್ಶೆ 609
ಸ್ವಮತದಲ್ಲಿ ಶ್ರುತ್ಯರ್ಥ 613
'ಪಾದೋಽಸ್ಯ' ಶ್ರುತ್ಯರ್ಥ 616
ಪೂರ್ವಮೀಮಾಂಸೆಯ ದೃಷ್ಟಾಂತ 623
ಪೂರ್ವಮೀಮಾಂಸಾಧಿಕರಣದರ್ಶಪೂರ್ಣಮಾಸೇಷ್ಟಿಪ್ರಭೃತಿಷು
ಸಂಘಭೇದೇನ ಅಂಗಾನಾಂ ಭೇದೇನ ಅನುಷ್ಠಾನಾಧಿಕರಣಮ್ 625

ಅದ್ವೈತಿಗಳ ನಾಲ್ಕನೇ ಸೂತ್ರ ವ್ಯಾಖ್ಯಾನ ವಿಮರ್ಶೆ 628
ರಾಮಾನುಜರ ನಾಲ್ಕನೇ ಸೂತ್ರ ವಿಮರ್ಶೆ 635
ಸ್ವಮತದಲ್ಲಿ ನಾಲ್ಕನೇ ಸೂತ್ರವ್ಯಾಖ್ಯಾನ 642
ದಿವಃ ಪರತ್ವಕ್ಕೆ ದಿವಿಸ್ಥಿತತ್ವದ ವಿರೋಧಪರಿಹಾರ 647
'ತ್ರಿಪಾದಸ್ಯ' ಎಂಬ ಶ್ರುತ್ಯರ್ಥ ವಿಮರ್ಶೆ 655
ರಾಮಾನುಜರ ವ್ಯಾಖ್ಯಾನದಲ್ಲಿ ಅಸ್ವಾರಸ್ಯ 659
ಗಾಯತ್ರ್ಯಧಿಕರಣ – ಪರಿಶಿಷ್ಟಗ್ರಂಥಗಳು 665

## ಅಂತಿಮಪ್ರಾಣಾಧಿಕರಣ

ಬ್ರಹ್ಮಮೀಮಾಂಸಾಶಾಸ್ತ್ರ 690
ತೈತ್ತಿರೀಯಪ್ರಾಣನು ವಿಷ್ಣುವಾಗಲಿ; ಐತರೇಯಪ್ರಾಣನು ವಿಷ್ಣುವಲ್ಲ 691
ವಿಷ್ಣುವಿನ ಲಿಂಗಗಳಿಂದ ವಿಷ್ಣುವೇ ಪ್ರಾಣನು 698
ಬ್ರಹ್ಮಶಬ್ದದ ಅನುಗಮ 705
ಬ್ರಹ್ಮಮೀಮಾಂಸಾಶಾಸ್ತ್ರ 710
ಸೂತ್ರದೀಪಿಕಾ 710
ಇಂದ್ರನು ಪ್ರಾಣನೆಂದು ಪೂರ್ವಪಕ್ಷ 711
ದೇವೇಂದ್ರನಲ್ಲಿ ವಿಷ್ಣುವಿನ ಸನ್ನಿಧಾನ 714
ಬ್ರಹ್ಮಮೀಮಾಂಸಾಶಾಸ್ತ್ರ 724
ಸೂತ್ರದೀಪಿಕಾ 724
ಅಂತರ್ಯಾಮಿಯ ವಿವಕ್ಷೆಯಿಂದ ಅಹಂಶಬ್ದಪ್ರಯೋಗ 724
ಬ್ರಹ್ಮಮೀಮಾಂಸಾಶಾಸ್ತ್ರ 733
ಸೂತ್ರದೀಪಿಕಾ 734
ಶತಾಯುಷ್ಟ್ವ ಪ್ರಾಣಸಂವಾದಲಿಂಗಗಳಿರುವುದರಿಂದ ಪುನಃ ಆಕ್ಷೇಪ 734
ಜೀವಾದಿಲಿಂಗಗಳು ತ್ರಿವಿಧೋಪಾಸನೆಗಾಗಿ 739
ಮೂರುಬಗೆಯ ಅಧಿಕಾರಿಗಳಿಗಾಗಿ ಮೂರು ಉಪಾಸನೆ 748
ಸತ್ತರ್ಕದೀಪಾವಳಿ 759

### ತಾತ್ಪರ್ಯಚಂದ್ರಿಕಾ

ಅಧಿಕರಣಸಾರ 762
ಸಂಶಯ ಹಾಗು ಸಂಗತಿ ಪ್ರದರ್ಶನ 774
ಪುನರುಕ್ತಿಪರಿಹಾರ 777
ಮತ್ತೊಂದು ಬಗೆಯಲ್ಲಿ ಪುನರುಕ್ತಿ ಪರಿಹಾರ 784

ನಾಮಧೇಯವನ್ನು ಅನುಸರಿಸಿ ಲಿಂಗಗಳನ್ನು ಅರ್ಥೈಸಬೇಕು
(ಪೂರ್ವಪಕ್ಷವೇ ಹುಟ್ಟುವುದಿಲ್ಲ) 787
ದೇವೇಂದ್ರನೇ ಪ್ರಾಣಶಬ್ದವಾಚ್ಯನೆಂದು ಪೂರ್ವಪಕ್ಷ 796
ಮುಖ್ಯವಾಯುವೇ ಪ್ರಾಣಶಬ್ದವಾಚ್ಯನೆಂದು ಪೂರ್ವಪಕ್ಷ 800
ಜೀವನೇ ಪ್ರಾಣಶಬ್ದವಾಚ್ಯನೆಂದು ಪೂರ್ವಪಕ್ಷ 803
'ಪ್ರಾಚೀನೋऽಪ್ಯನ್ಯಃ' ಎಂಬ ಶ್ರೀಮದಾಚಾರ್ಯರ ಮಾತಿಗೆ ಏನು ಅರ್ಥ? 810
ಶ್ರೀಮದಾಚಾರ್ಯರ ಮಾತಿಗೆ ಏಕತ್ರ ನಿರ್ಣೀತಶಾಸ್ತ್ರಾರ್ಥಃ ಸರ್ವತ್ರ ಎಂದರ್ಥ 812
ಇಲ್ಲಿ ಇಂದ್ರ ಪ್ರಾಣಾದಿಗಳು ಅಮುಖ್ಯವಾಗಿ
ಪ್ರತಿಪಾದ್ಯರೆಂಬ ಪಕ್ಷ ತಪ್ಪು 816
ಹಲವು ವಿಕಲ್ಪಗಳ ನಿರಾಸ 821
ಪೂರ್ವಪಕ್ಷದ ಫಲಸಮರ್ಥನೆ 826
ಸಿದ್ಧಾಂತದ ಫಲಸಮರ್ಥನೆ 830
''ದ್ರವ್ಯಸಂಸ್ಕಾರಕರ್ಮಸು ಪರಾರ್ಥತ್ವಾತ್
ಫಲಶ್ರುತಿರರ್ಥವಾದಃ ಸ್ಯಾತ್'' (4-3-1) 835
ಪಾದಸಂಗತಿಯ ಅನುಪಪತ್ತಿಪರಿಹಾರ 839
ಅನ್ಯತ್ರಪ್ರಸಿದ್ಧ ಹಾಗೂ ಉಭಯತ್ರಪ್ರಸಿದ್ಧ ಶಬ್ದಗಳ ಲಕ್ಷಣ ನಿರೂಪಣೆ
(ಪೂರ್ವಪಕ್ಷದ ಮುಕ್ತಾಯ) 842
ಸಿದ್ಧಾಂತ ಸ್ಥಾಪನೆ 848
ದೇವೇಂದ್ರನ ಲಿಂಗಗಳೆಲ್ಲವೂ ಸಾವಕಾಶ 853
ವಿಷ್ಣುವೇ ಅಹಂ ಶಬ್ದಾರ್ಥ 857
ಮುಖ್ಯವಾಯುವಿನ ಲಿಂಗಗಳೆಲ್ಲವೂ ಸಾವಕಾಶ 861
ಜೀವನ ಲಿಂಗಗಳೆಲ್ಲವೂ ಸಾವಕಾಶ (ಸಿದ್ಧಾಂತದ ಉಪಸಂಹಾರ) 866
ಸೂತ್ರಗಳ ವಿನ್ಯಾಸ ಕ್ರಮ 868
ಆದ್ಯೃತಿಗಳ ಸೂತ್ರವ್ಯಾಖ್ಯಾನ 876
ಆದ್ಯೃತಿಗಳ ಪ್ರಥಮಸೂತ್ರವ್ಯಾಖ್ಯಾನ 879
ಆದ್ಯೃತಿಗಳ ದ್ವಿತೀಯ ತೃತೀಯ ಸೂತ್ರವ್ಯಾಖ್ಯಾನ 880
ಆದ್ಯೃತಿಗಳ ಚತುರ್ಥ ಸೂತ್ರವ್ಯಾಖ್ಯಾನ 881
ಭಾಮತಿಯ ಪ್ರಕಾರ ಅಧಿಕರಣ ರಚನೆ 882
ಹಿತತಮತ್ವವು ಬ್ರಹ್ಮಲಿಂಗವಲ್ಲ 885
ಉಳಿದ ಧರ್ಮಗಳೂ ಬ್ರಹ್ಮನಲ್ಲಿಲ್ಲ 888
ರಾಮಾನುಜರ ಅಧಿಕರಣಶರೀರ 891
ರಾಮಾನುಜರ ಅಧಿಕರಣ ನಿರಾಸ 898

ಅದ್ವೈತಿಗಳ ಎರಡನೇ ಸೂತ್ರ ವ್ಯಾಖ್ಯಾನ 902
ಅದ್ವೈತಿಗಳ ಎರಡನೆಯ ಸೂತ್ರವ್ಯಾಖ್ಯಾನದಲ್ಲಿ 'ವಕ್ತುಃ' ಎಂಬ ಪದವು ವ್ಯರ್ಥ 904
ಅದ್ವೈತಿಗಳ ದ್ವಿತೀಯ ಸೂತ್ರ ವ್ಯಾಖ್ಯಾನ ನಿರಾಕರಣೆ 909
ಅದ್ವೈತಿಗಳ ಮೂರನೇ ಸೂತ್ರಾರ್ಥ ವಿಮರ್ಶೆ 913
ಶಾಸ್ತ್ರಶಬ್ದಾರ್ಥ ವಿಮರ್ಶೆ 917
ರಾಮಾನುಜರ ದ್ವಿತೀಯಸೂತ್ರವ್ಯಾಖ್ಯಾನದ ವಿಮರ್ಶೆ 923
ಅದ್ವೈತಿಗಳ ಅಂತಿಮಸೂತ್ರವ್ಯಾಖ್ಯಾನ ನಿರಾಕರಣೆ 925
ಭಾಮತಿಯ ವಿಮರ್ಶೆ 935
ಪ್ರಾಚೀನ ವೃತ್ತಿಕಾರರ ವ್ಯಾಖ್ಯಾನವಿಮರ್ಶೆ 939
ರಾಮಾನುಜಮತ ನಿರಾಸ 941
ಟೀಕೆಯ ಕಠಿಣಪದಾರ್ಥ 946
ಪ್ರಥಮಪಾದದಲ್ಲಿ ಹನ್ನೆರಡು ಅಧಿಕರಣಗಳ ಪಟ್ಟಿಗೆ 948
ಅಂತಿಮಪ್ರಾಣಾಧಿಕರಣ ಪರಿಶಿಷ್ಟಗ್ರಂಥಗಳು 953

* * * *

# ೦೦೮-ಆಕಾಶಾಧಿಕರಣ

ಭಾಗ -೧

ಬ್ರಹ್ಮಸೂತ್ರ, ಸೂತ್ರದೀಪಿಕಾ, ಬ್ರಹ್ಮಸೂತ್ರಭಾಷ್ಯ, ಭಾಷ್ಯದೀಪಿಕಾ,
ಸತ್ತರ್ಕದೀಪಾವಳೀ, ತತ್ವಪ್ರಕಾಶಿಕಾ,
ಭಾವದೀಪ, ವಾಕ್ಯಾರ್ಥಮಂಜರೀ

॥ ಶ್ರೀಗುರುಭ್ಯೋ ನಮಃ ॥

ದೇವದೇವೋತ್ತಮ ದೇವತಾಸಾರ್ವಭೌಮ ಅಖಿಲಾಂಡಕೋಟಿಬ್ರಹ್ಮಾಂಡನಾಯಕ, ಚತುರ್ದಶಲೋಕಗುರುಗಳಾದ

ಶ್ರೀವೇದವ್ಯಾಸದೇವರಿಂದ ಅನುಗ್ರಹಿಸಲ್ಪಟ್ಟ

# ಬ್ರಹ್ಮಮೀಮಾಂಸಾಶಾಸ್ತ್ರ

## ಆಕಾಶಾಧಿಕರಣ

**ಸೂ - ॐ ॥ ಆಕಾಶಸ್ತಲ್ಲಿಙ್ಗಾತ್ ॥ ॐ ॥ ೩ ॥**

ಅನುವಾದ - ಪರೋವರೀಯಸ್ತ್ವಾದಿಲಿಂಗಗಳಿಂದ ಆಕಾಶಶಬ್ದವಾಚ್ಯನು ವಿಷ್ಣುವೇ ಆಗಿದ್ದಾನೆ.

॥ಶ್ರೀವೇದವ್ಯಾಸದೇವರಿಂದ ರಚಿಸಲ್ಪಟ್ಟ ಬ್ರಹ್ಮಮೀಮಾಂಸಾಶಾಸ್ತ್ರದಲ್ಲಿ
ಆಕಾಶಾಧಿಕರಣವು ಸಮಾಪ್ತವಾಯಿತು ॥

* * * * * *

ಶ್ರೀಜಗನ್ನಾಥಯತಿಗಳಿಂದ ರಚಿಸಲ್ಪಟ್ಟ ಸೂತ್ರದೀಪಿಕಾ

**ಸೂತ್ರದೀಪಿಕಾ – ಆಕಾಶಃ ಆಕಾಶಶಬ್ದವಾಚ್ಯಃ ವಿಷ್ಣುರೇವ, ನ ಪ್ರಸಿದ್ಧಾಕಾಶಃ । ಕುತಃ? ತಲ್ಲಿಙ್ಗಾತ್ ಛಾಂದೋಗಶ್ರುತ್ಯುಕ್ತಾಕಾಶೇ ಪರೋವರೀಯಸ್ತ್ವಾದಿರೂಪವಿಷ್ಣುಲಿಙ್ಗಸ್ಯ ಶ್ರವಣಾದಿತ್ಯರ್ಥಃ ।**

ಅನುವಾದ -- ಸಮನ್ವಯ ಸೂತ್ರದಿಂದ ತತ್ತು ಎಂಬ ಶಬ್ದವು ಅನುವೃತ್ತವಾಗಿದೆ. ಆಕಾಶ ಇತಿ ಹೋವಾಚ (ಛಾಂ.) ಎಂಬಲ್ಲಿರುವ ಆಕಾಶಶಬ್ದದಿಂದ ವಿಷ್ಣುವೇ ವಾಚ್ಯನಾಗುತ್ತಾನೆ ಹೊರತು ಪ್ರಸಿದ್ಧವಾದ ಭೂತಾಕಾಶವಲ್ಲ. ಏಕೆಂದರೆ ತಲ್ಲಿಂಗಾತ್ = 'ಸ ಏಷಃ ಪರೋವರೀಯಾನ್'(ಛಾಂ ೧/೯) ಎಂಬ ಶ್ರುತಿಯಲ್ಲಿ ವಿಷ್ಣುವಿನ ಅಸಾಧಾರಣಧರ್ಮಗಳು ಕೇಳಿಸುತ್ತಿರುವುದರಿಂದ.

॥ ಸೂತ್ರದೀಪಿಕೆಯಲ್ಲಿ ಆಕಾಶಾಧಿಕರಣವು ಸಮಾಪ್ತವಾಯಿತು ॥

* * * * *

श्रीमदानन्दतीर्थभगवत्पादाचार्यविरचित-

# ब्रह्मसूत्रभाष्यम्

## ॥ आकाशाधिकरणम् ॥

ಭೂತಾಕಾಶವೇ ಆನಂದಮಯವೆಂದು ಪೂರ್ವಪಕ್ಷ

**भाष्यम् – 'को ह्येवान्यात् कः प्राण्यात्, यदेष आकाश आनन्दो न स्यात्'(तै. २-७.) इति आकाशस्याऽनन्दमयत्वे हेतुरुक्तः, न तु विष्णोः[१] ।**

ಆಕಾಶವು ಆನಂದಪೂರ್ಣವಾಗದಿದ್ದಲ್ಲಿ ಈ ಜಗತ್ತನ್ನು ಯಾರು ತಾನೇ ನಿಯಮನ ಮಾಡಿಯಾನು? ಮತ್ತು ಬದುಕಿಸಿಯಾನು? ಹೀಗೆ ಆಕಾಶಕ್ಕೆ ಆನಂದಮಯತ್ವವನ್ನು ಹೇಳುವುದರಲ್ಲಿ ತೈತ್ತಿರೀಯೋಪನಿಷತ್ತು ಕಾರಣವನ್ನು ಹೇಳಿದೆ ಹೊರತು ವಿಷ್ಣುವಿಗಲ್ಲ. ಆದ್ದರಿಂದ ಭೂತಾಕಾಶವೇ ಆನಂದಮಯವಾಗಲಿ ವಿಷ್ಣುವಲ್ಲ.

प्रतिपदार्थ– ईं अधिकरणदल्लि लोकतः अन्यत्रप्रसिद्धवाद आकाश मोदलाद आधिभौतिकशब्दगळ समन्वयवन्नु भगवन्तनल्लि माडलागिदे. फलवन्नु हेळुवुदरिन्दलेः पूर्वपक्षवु सूचितवागुत्तदेंबभिप्रायदिन्द नेरवागि पूर्वपक्षद फलवन्नेः हेळुत्तिद्दारे.

यत् = यावद प्रसिद्धवाद, एषः आकाशः = ईं आकाशशब्दवाच्यवादद्दु, आनंदोः न स्यात् = आनंदमयवागदिद्दल्लि, कः प्राण्यात् = यारु बदुकिसियानु? कोः हि = यावतनु, अन्यात् = जगत्तन्नु प्रेरिसियानु? इति = हीगे, आकाशस्य = आकाशक्के, आनंदमयत्वे = आनंदमयत्ववन्नु हेळुवुदरल्लि, हेतुः = कारणवु उक्तः = हेळल्पट्टदे. न तु = हॊरतागि, विष्णोः = विष्णुविगे कारणवन्नु हेळिल्ल.

---

(१) भाष्यदीपिका – अत्राधिकरणे भगवति लोकतोऽन्यत्रप्रसिद्धाकाशपदोपलक्षिताधिभौतिकाशेषशब्दसमन्वयः क्रियते । फलकथनेन पूर्वपक्षः सूचितो भवतीत्याशयेन पूर्वपक्षफलमाह – को हीति ॥ इतीति ॥ इत्यानन्दमयाधिकरणोदाहृतवाक्येनेत्यर्थः। तुशब्दस्याऽकाशस्य त्विति सम्बन्धः । तथा च छन्दोगश्रुत्यु क्ताकाशाभिन्नाकाशस्यैवेत्यर्थः । 'आनन्दमयत्वे' पूर्णानन्दत्वेन निमित्तेन आनन्दमयशब्दवाच्यत्वे 'हेतुः' लोकचेष्टकत्वरूपः । तुशब्दार्थैवकारव्यावर्त्यमाह- नेति ॥ अनेन विष्णुभिन्नभूताकाशस्यैव छन्दोगश्रुत्युक्ताकाशशब्दवाच्यत्वमिति पूर्वपक्षे 'को हि' इति तैत्तिरीयश्रुत्युक्तोऽपि स एवेति तदुक्तहेतुना तस्यैवाऽनन्दमयत्वं सिद्ध्यति, न विष्णोरिति फलमुक्तं भवति । पूर्वसङ्गतिस्त्वधिकाशङ्कां कृत्वाऽत्र पूर्वन्याय एवातिदिश्यत इत्यातिदेशिकी द्रष्टव्या ।

॥ ಶ್ರೀಗುರುಭ್ಯೋ ನಮಃ ॥

ದೇವದೇವೋತ್ತಮ ದೇವತಾಸಾರ್ವಭೌಮ ಅಖಿಲಾಂಡಕೋಟಬ್ರಹ್ಮಾಂಡನಾಯಕ,ಚತುರ್ದಶಲೋಕಗುರುಗಳಾದ

ಶ್ರೀವೇದವ್ಯಾಸದೇವರಿಂದ ಅನುಗ್ರಹಿಸಲ್ಪಟ್ಟ

# ಬ್ರಹ್ಮಮೀಮಾಂಸಾಶಾಸ್ತ್ರ

## ಆಕಾಶಾಧಿಕರಣ

**ಸೂ - ಓಂ ॥ ಆಕಾಶಸ್ತಲ್ಲಿಙ್ಗಾತ್ ॥ ಓಂ ॥ ೩ ॥**

ಅನುವಾದ - ಪರೋವರೀಯಸ್ತ್ವಾದಿಲಿಂಗಗಳಿಂದ ಆಕಾಶಶಬ್ದವಾಚ್ಯನು ವಿಷ್ಣುವೇ ಆಗಿದ್ದಾನೆ.

॥ಶ್ರೀವೇದವ್ಯಾಸದೇವರಿಂದ ರಚಿಸಲ್ಪಟ್ಟ ಬ್ರಹ್ಮಮೀಮಾಂಸಾಶಾಸ್ತ್ರದಲ್ಲಿ
ಆಕಾಶಾಧಿಕರಣವು ಸಮಾಪ್ತವಾಯಿತು ॥

* * * * * *

## ಶ್ರೀಜಗನ್ನಾಥಯತಿಗಳಿಂದ ರಚಿಸಲ್ಪಟ್ಟ ಸೂತ್ರದೀಪಿಕಾ

**ಸೂತ್ರದೀಪಿಕಾ – ಆಕಾಶಃ ಆಕಾಶಶಬ್ದವಾಚ್ಯಃ ವಿಷ್ಣುರೇವ, ನ ಪ್ರಸಿದ್ಧಾಕಾಶಃ । ಕುತಃ? ತಲ್ಲಿಙ್ಗಾತ್ ಛಾಂದೋಗ್ಯಶ್ರುತ್ಯುಕ್ತಾಕಾಶೇ ಪರೋವರೀಯಸ್ತ್ವಾದಿರೂಪವಿಷ್ಣುಲಿಙ್ಗಸ್ಯ ಶ್ರವಣಾದಿತ್ಯರ್ಥಃ ।**

ಅನುವಾದ -- ಸಮನ್ವಯ ಸೂತ್ರದಿಂದ ತತ್ತು ಎಂಬ ಶಬ್ದವು ಅನುವೃತ್ತವಾಗಿದೆ. ಆಕಾಶ ಇತಿ ಹೋವಾಚ (ಛಾಂ.) ಎಂಬಲ್ಲಿರುವ ಆಕಾಶಶಬ್ದದಿಂದ ವಿಷ್ಣುವೇ ವಾಚ್ಯನಾಗುತ್ತಾನೆ ಹೊರತು ಪ್ರಸಿದ್ಧವಾದ ಭೂತಾಕಾಶವಲ್ಲ. ಏಕೆಂದರೆ ತಲ್ಲಿಂಗಾತ್ = 'ಸ ಏಷಃ ಪರೋವರೀಯಾನ್'(ಛಾಂ ೧/೯) ಎಂಬ ಶ್ರುತಿಯಲ್ಲಿ ವಿಷ್ಣುವಿನ ಅಸಾಧಾರಣಧರ್ಮಗಳು ಕೇಳಿಸುತ್ತಿರುವುದರಿಂದ.

॥ ಸೂತ್ರದೀಪಿಕೆಯಲ್ಲಿ ಆಕಾಶಾಧಿಕರಣವು ಸಮಾಪ್ತವಾಯಿತು ॥

* * * * *

श्रीमदानन्दतीर्थभगवत्पादाचार्यविरचित-

# ब्रह्मसूत्रभाष्यम्

## ॥ आकाशाधिकरणम् ॥

ಭೂತಾಕಾಶವೇ ಆನಂದಮಯವೆಂದು ಪೂರ್ವಪಕ್ಷ

**भाष्यम् – 'को ह्येवान्यात् कः प्राण्यात्, यदेष आकाश आनन्दो न स्यात्'(तै. २-७.) इति आकाशस्याऽनन्दमयत्वे हेतुरुक्तः, न तु विष्णोः[१] ।**

ಆಕಾಶವು ಆನಂದಪೂರ್ಣವಾಗದಿದ್ದಲ್ಲಿ ಈ ಜಗತ್ತನ್ನು ಯಾರು ತಾನೇ ನಿಯಮನ ಮಾಡಿಯಾನು? ಮತ್ತು ಬದುಕಿಸಿಯಾನು? ಹೀಗೆ ಆಕಾಶಕ್ಕೆ ಆನಂದಮಯತ್ವವನ್ನು ಹೇಳುವುದರಲ್ಲಿ ತೈತ್ತಿರೀಯೋಪನಿಷತ್ತು ಕಾರಣವನ್ನು ಹೇಳಿದೆ ಹೊರತು ವಿಷ್ಣುವಿಗಲ್ಲ. ಆದ್ದರಿಂದ ಭೂತಾಕಾಶವೇ ಆನಂದಮಯವಾಗಲಿ ವಿಷ್ಣುವಲ್ಲ.

प्रतिपदार्थ– ईं अधिकरणदल्लि लोकतः अन्यत्रप्रसिद्धवाद आकाश मोदलाद आधिभौतिकशब्दगळ समन्वयवन्नु भगवंतनल्लि माडलागिदे. फलवन्नु हेळुवुदरिंदलेः पूर्वपक्षवु सूचितवागुत्तदेंबभिप्रायदिंद नेरवागि पूर्वपक्षद फलवन्नेः हेळुत्तिद्दारे.

यत् = यावद प्रसिद्धवाद, एषः आकाशः = ईं आकाशशब्दवाच्यवादद्दु, आनंदोः न स्यात् = आनंदमयवागदिद्दल्लि, कः प्राण्यात् = यारु बदुकिसियानु? कोः हि = यावातनु, अन्यात् = जगत्तन्नु प्रेरिसियानु? इति = हीगे, आकाशस्य = आकाशक्के, आनंदमयत्वे = आनंदमयत्ववन्नु हेळुवुदरल्लि, हेतुः = कारणवु उक्तः = हेळल्पट्टदे. न तु = हॊरतागि, विष्णोः = विष्णुविगे कारणवन्नु हेळिल्ल.

---

(१) भाष्यदीपिका – अत्राधिकरणे भगवति लोकतोऽन्यत्रप्रसिद्धाकाशपदोपलक्षिताधिभौतिकाशेषशब्दसमन्वयः क्रियते । फलकथनेन पूर्वपक्षः सूचितो भवतीत्याशयेन पूर्वपक्षफलमाह – को हीति ॥ इतीति ॥ इत्यानन्दमयाधिकरणोदाहृतवाक्येनेत्यर्थः। तुशब्दस्याऽकाशस्य त्विति सम्बन्धः । तथा च छन्दोगश्रुत्यु क्ताकाशाभिन्नाकाशस्यैवेत्यर्थः । 'आनन्दमयत्वे' पूर्णानन्दत्वेन निमित्तेन आनन्दमयशब्दवाच्यत्वे 'हेतुः' लोकचेष्टकत्वरूपः । तुशब्दार्थैवकारव्यावर्त्यमाह- नेति ॥ अनेन विष्णुभिन्नभूताकाशस्यैव छन्दोगश्रुत्युक्ताकाशशब्दवाच्यत्वमिति पूर्वपक्षे 'को हि' इति तैत्तिरीयश्रुत्युक्तोऽपि स एवेति तदुक्तहेतुना तस्यैवाऽनन्दमयत्वं सिद्ध्यति, न विष्णोरिति फलमुक्तं भवति । पूर्वसङ्गतिस्त्वधिकाशङ्कां कृत्वाऽत्र पूर्वन्याय एवातिदिश्यत इत्यातिदेशिकी द्रष्टव्या ।

**तत्वप्रकाशिका – अत्र लोकतोऽन्यत्रप्रसिद्धाकाशनाम्नो ब्रह्मणि समन्वय-प्रतिपादनादस्ति शास्त्रादिसङ्गतिः । 'को ह्येवान्यात्' इत्याकाशशब्द आनन्दमये प्रयुक्तः । स एव छन्दोगश्रुतौ पठ्यते – 'अस्य लोकस्य का गतिरिति, आकाश इति होवाच । सर्वाणि ह वा इमानि भूतान्याकाशादेव समुत्पद्यन्ते । आकाशं प्रत्यस्तं यन्ति । आकाशो ह्येवैभ्यो ज्यायानाकाशः परायणम् । स एष परोवरीयानुद्गीथः स एषोऽनन्तः' इति । स चाकाशो यदि विष्णोरन्यस्तदा प्रागुक्तोऽपि स एव इत्यानन्दमयोऽप्यन्यः प्रसज्यते, अतः स निर्णेयः ।**

ಈ ಅಧಿಕರಣದಲ್ಲಿ ಲೋಕದಿಂದ(ಲೋಕರೂಢಿಯಿಂದ) ಅನ್ಯತ್ರಪ್ರಸಿದ್ಧವಾದ 'ಆಕಾಶ' ಎಂಬ ನಾಮವನ್ನು ಬ್ರಹ್ಮನಲ್ಲಿ ಸಮರ್ಥನೆ ಮಾಡುವುದರಿಂದ ಶಾಸ್ತ್ರಸಂಗತಿ, ಅಧ್ಯಾಯಸಂಗತಿ, ಪಾದಸಂಗತಿಗಳು ಇವೆ. (ವೇದಾರ್ಥನಿರ್ಣಯ ಮಾಡುವುದರಿಂದ ಶಾಸ್ತ್ರಸಂಗತಿ, ಸಮನ್ವಯ ಮಾಡುವುದರಿಂದ ಅಧ್ಯಾಯಸಂಗತಿ, ನಾಮವನ್ನು ಸಮನ್ವಯ ಮಾಡುವುದರಿಂದ ಪಾದಸಂಗತಿ) 'कोः ह्येवान्यात्' ಎಂದು ಆಕಾಶಶಬ್ದವನ್ನು ಆನಂದಮಯನಲ್ಲಿ ಪ್ರಯೋಗಿಸಿದ್ದಾರೆ. ಆ ಆಕಾಶ-ಶಬ್ದವೇ ಛಾಂದೋಗ್ಯೋಪನಿಷತ್ತಿನಲ್ಲಿ 'ಇಮಾನಿ ಭೂತಾನಿ ಆಕಾಶಾದೇವ ಸಮುತ್ಪದ್ಯಂತೇ । ಆಕಾಶಂ ಪ್ರತ್ಯಸ್ತಂ ಯಂತಿ, ಆಕಾಶೋ ಹ್ಯೇವೇಭ್ಯೋ ಜ್ಯಾಯಾನಾಕಾಶಃ ಪರಾಯಣಂ, ಸ ಏಷ ಪರೋ- ವರೀಯಾನುದ್ಗೀಥಃ, ಸ ಏಷೋऽನಂತಃ' ಎಂದು ಪಠಿಸಲ್ಪಟ್ಟಿದೆ. ಆಕಾಶಶಬ್ದವಾಚ್ಯನು ಒಂದು ವೇಳೆ ವಿಷ್ಣುವಿಗಿಂತ ಭಿನ್ನನು ಎಂದಾದರೆ ಆನಂದಮಯಪ್ರಕರಣದಲ್ಲಿ ಹೇಳಲ್ಪಟ್ಟ ಆಕಾಶಶಬ್ದವಾಚ್ಯನೂ ಬೇರೆಯವನೇ ಎಂದಾಗಿ, ಆನಂದಮಯನು ಬೇರೆಯವನೇ ಹೊರತು ವಿಷ್ಣುವಲ್ಲ ಎಂದಾಗುತ್ತದೆ. ಆದ್ದರಿಂದ ಆಕಾಶಶಬ್ದವಾಚ್ಯನು ಯಾರು? ಎಂದು ನಿರ್ಣಯಿಸಬೇಕು.

**तत्वप्रकाशिका – स आकाशोऽत्र विषयः । विष्णुरन्यो वेति सन्देहः । आकाशशब्दस्याऽऽनन्दमये प्रयुक्तत्वमन्यत्रप्रसिद्धिश्च सन्देहबीजम्[१] ।**

ಆದ್ದರಿಂದ ಆಕಾಶವು ಈ ಅಧಿಕರಣದಲ್ಲಿ ವಿಷಯ. ವಿಷ್ಣುವೋ ಅಥವಾ ಅನ್ಯರೋ ಎಂದು

---

(೧) अत्राकाशः किं भूताकाशः उत ब्रह्मेति चिन्ता । तदर्थम् आकाशश्रुतिरनन्तत्वादि-लिङ्गबाधिका उत स्वयं तद्बाध्येति । तदर्थं सा श्रुतिः किं निरवकाशा उत सावकाशेति । तदर्थम् आकाशशब्दप्रवृत्तिनिमित्तं विवरत्वादिकं किमिन्द्रादिशब्दप्रवृत्तिनिमित्तैश्वर्यादि तदर्थम् अचेतनस्वभावः किं विष्ण्वाधीन उत

ಸಂದೇಹ. ಆಕಾಶಶಬ್ದವನ್ನು ಆನಂದಮಯನಲ್ಲಿ ಪ್ರಯೋಗಿಸಿರುವುದು ಮತ್ತು ಭೂತಾಕಾಶದಲ್ಲಿ ಪ್ರಸಿದ್ಧಿಯಿರುವುದು ಸಂದೇಹಕ್ಕೆ ಕಾರಣ.

**तत्वप्रकाशिका – भूताकाश एवायमिति पूर्वः पक्षः । आकाशशब्दस्य तत्र रूढत्वात् । न च वाच्यं 'योगवृत्त्याऽऽकाशशब्दो विष्णौ सावकाशः' इति, बाधकं विनाऽमुख्यार्थाङ्गीकारायोगात् ।**

**न च 'आकाशस्य भगवदधीनत्वेन तत्रैवाऽऽकाशशब्दो मुख्यः' इति युक्तम् । 'आकाशस्याचेतनत्वेनान्याधीनत्वायोगात् । चेतनस्य हि चेष्टादावन्याधीनत्वं सम्भवति' इति । आकाशशब्दस्यावकाशेऽपि रूढत्वादत्र भूताकाशग्रहणे को विशेषहेतुः? इति चेत् पृथिवीगतित्वोपपादनाय 'सर्वाणि ह वा इमानि भूतान्याकाशादेव समुत्पद्यन्ते' इत्यादिनाऽऽकाशस्य सर्वभूतकारणत्वलयाधिकरणत्वादेरुक्तत्वात् । तच्च 'आकाशाद् वायुः' इत्यादिना भूताकाशस्यैव प्रसिद्धम् । अतो भूताकाश एवायम् – इति मनसि निधाय पूर्वपक्षफलमाह – को हीति ॥**

ಪೂರ್ವಪಕ್ಷ -- ಆಕಾಶಶಬ್ದದಿಂದ ಭೂತಾಕಾಶವೇ ಪ್ರತಿಪಾದ್ಯವಾಗುತ್ತದೆ. ಏಕೆಂದರೆ ಭೂತಾಕಾಶದಲ್ಲಿಯೇ ಆಕಾಶಶಬ್ದವು ರೂಢವಾಗಿದೆ. ಇನ್ನು 'ಆ ಸಮಂತಾತ್ ಕಾಶತೇ' (ಸರ್ವತ್ರ-ಪ್ರಕಾಶವುಳ್ಳದ್ದು) ಎಂಬ ಯೋಗವೃತ್ತಿಯಿಂದ ವಿಷ್ಣುವಿನಲ್ಲಿ ಸಾವಕಾಶವಾಗಿದೆಯಲ್ಲ ಎಂದು ಪ್ರಶ್ನಿಸಬಾರದು. ಏಕೆಂದರೆ, ವಿಶೇಷಬಾಧಕವಿಲ್ಲದಿದ್ದಾಗ ಅಮುಖ್ಯಾರ್ಥವನ್ನು (ಯೋಗಾರ್ಥವನ್ನು) ಸ್ವೀಕರಿಸಬಾರದು. ಒಂದು ವೇಳೆ ಭಗವದಧೀನವಾಗಿದ್ದರೆ ಭಗವಂತನಲ್ಲಿ ಆಕಾಶಶಬ್ದವು ಮುಖ್ಯವಾಗುತ್ತಿತ್ತು. ಆದರೆ ಆಕಾಶವು ಅಚೇತನವಾದ್ದರಿಂದ ಭಗವದಧೀನವೂ ಆಗುವುದಿಲ್ಲ. ಏಕೆಂದರೆ ಚೇತನವಾಗಿದ್ದರೆ ತನ್ನ ವ್ಯಾಪಾರಕ್ಕೋಸ್ಕರ ಇನ್ನೊಂದು ಚೇತನ ಪದಾರ್ಥವನ್ನೇ ಅಪೇಕ್ಷಿಸಬೇಕು, ಆದರೆ ಆಕಾಶವು ಅಚೇತನವಾದ್ದರಿಂದ ಭಗವದಧೀನವಾಗಬೇಕಿಲ್ಲ.

ಪ್ರಶ್ನೆ -- ಆಕಾಶಶಬ್ದವು ಕೇವಲ ಅವಕಾಶ ಎಂಬರ್ಥದಲ್ಲಿ ರೂಢವಾಗಿದೆ ಹೊರತು ಭೂತಾಕಾಶದಲ್ಲಿ ಅಲ್ಲ. ಹೀಗಿರುವಾಗ ಭೂತಾಕಾಶವನ್ನೇ ಸ್ವೀಕರಿಸಬೇಕೆಂಬುದಕ್ಕೆ ವಿಶೇಷಕಾರಣವಿರುವುದಿಲ್ಲವಲ್ಲ?

---

तदधीन इति । तदर्थं तस्य तदधीनत्व एतत् कल्पकत्वेनाभिमतानन्तत्वादिलिङ्गनिरवकाशत्वे च प्रमाणं नास्त्युतास्तीति । – भावबोधः ।

ಉತ್ತರ -- ವಿಶೇಷಕಾರಣವಿದೆ. ಪೃಥಿವಿಗೆ ಯಾವುದು ಆಶ್ರಯ ಎಂಬ ಪ್ರಶ್ನೆಗೆ 'ಸರ್ವಾಣಿ ಹ ವಾ ಇಮಾನಿ ಭೂತಾನ್ಯಾಕಾಶಾದೇವ ಸಮುತ್ಪದ್ಯಂತೇ' (ಸಕಲ ಭೂತಪದಾರ್ಥಗಳು ಆಕಾಶದಿಂದಲೇ ಹುಟ್ಟುತ್ತವೆ) ಎಂಬ ಶ್ರುತಿಯಿಂದ ಉತ್ತರಿಸಲಾಗಿದೆ. ಆಕಾಶವು ಸಕಲ ಭೂತಪದಾರ್ಥಗಳಿಗೆ ಕಾರಣವಾಗಿದೆ ಮತ್ತು ಅವುಗಳ ಲಯಕ್ಕೆ ಆಶ್ರಯವಾಗಿದೆ ಎಂದು ಶ್ರುತಿಯು ಹೇಳುತ್ತಿರುವುದರಿಂದ ಆಕಾಶಶಬ್ದದಿಂದ ಪ್ರಸಿದ್ಧವಾದ ಭೂತಾಕಾಶವೇ ವಾಚ್ಯವಾಗಬೇಕು. ಏಕೆಂದರೆ 'ಆಕಾಶಾದ್ವಾಯುಃ' ಎಂಬ ಮತ್ತೊಂದು ಶ್ರುತಿಯು ಪ್ರಸಿದ್ಧವಾದ ಭೂತಾಕಾಶದಿಂದ ವಾಯುವಿನ ಉತ್ಪತ್ತಿಯನ್ನು ಹೇಳುತ್ತಿದೆ. ಆದರಂತೆ ಪ್ರಕೃತದಲ್ಲಿಯೂ ಆಕಾಶಶಬ್ದದಿಂದ ಭೂತಾಕಾಶವೇ ಪ್ರತಿಪಾದ್ಯವಾಗುತ್ತದೆ. ಈ ವಿಷಯವನ್ನು ಮನಸ್ಸಿನಲ್ಲಿಟ್ಟುಕೊಂಡು ಪೂರ್ವಪಕ್ಷದ ಫಲವನ್ನು ಶ್ರೀಮದಾಚಾರ್ಯರು 'ಕೋ ಹಿ' ಇತ್ಯಾದಿ ವಾಕ್ಯದಿಂದ ಹೇಳುತ್ತಿದ್ದಾರೆ.

**ತತ್ವಪ್ರಕಾಶಿಕಾ — ಏವಮಾಕಾಶೇ ಛಾನ್ದೋಗಶ್ರುತ್ಯುಕ್ತೇ ಭೂತಾಕಾಶೇ ಸತಿ 'ಕೋ ಹಿ' ಇತಿ ತೈತ್ತಿರೀಯಶ್ರುತ್ಯುಕ್ತೋऽಪಿ ಸ ಏವ ಸ್ಯಾತ್ । ತಥಾ ಚ ಲೋಕಚೇಷ್ಟಕತ್ವಹೇತು-ರಾಕಾಶಸ್ಯೈವಾऽऽನನ್ದಮಯತ್ವೇ ಕಥಿತಃ ಸ್ಯಾನ್ನ ವಿಷ್ಣೋಃ ತತಶ್ಚ ಸ ಏವಾऽऽನನ್ದಮಯೋ ಭವತಿ । ಆಕಾಶಸ್ಯಾಚೇತನತ್ವೇನಾऽऽನನ್ದಾನುಪಪತ್ತಾವಪ್ಯಭಿಮಾನಿದ್ವಾರಾ ತದುಪಪತ್ತೇರಿತಿ ಭಾವಃ । ಅನೇನೈವ 'ಅಕಾಶಶಬ್ದಸ್ಯಾऽऽನನ್ದಮಯೇ ಪ್ರಯುಕ್ತತ್ವಾತ್ ವಿಷ್ಣುರಾಕಾಶಃ ಕಿಂ ನ ಸ್ಯಾತ್?' ಇತಿ ಪರಾಸ್ತಮ್ । 'ರೂಢೇರ್ಬಲವತ್ತ್ವೇನ ತಸ್ಯಾಪಿ ಬಾಧೋಪಪತ್ತೇಃ' ಇತಿ ।**

ಛಾಂದೋಗ್ಯಶ್ರುತಿಯಲ್ಲಿರುವ ಆಕಾಶಶಬ್ದವು ಭೂತಾಕಾಶಪರವೆಂದು ಇಲ್ಲಿಯ ತನಕ ನಿರ್ಣಯಿಸಿದ್ದಾಯಿತು. ಇದರಿಂದಲೇ ತೈತ್ತಿರೀಯಶ್ರುತಿಯಲ್ಲಿರುವ ಆಕಾಶಶಬ್ದವೂ ಸಹ ಭೂತಾಕಾಶ- ಪರವೆಂದು ನಿರ್ಣಯವಾಗುತ್ತದೆ. ಆದ್ದರಿಂದ ಲೋಕಚೇಷ್ಟಕತ್ವವೆಂಬ ಹೇತುವು ಭೂತಾಕಾಶದಲ್ಲಿ ಆನಂದಮಯತ್ವವನ್ನು ಸಾಧಿಸಲು ಹೇತುವಾಗುತ್ತದೆ ಹೊರತು ವಿಷ್ಣುವಿನಲ್ಲಿ ಆನಂದಮಯತ್ವವನ್ನು ಸಾಧಿಸಲು ಅಲ್ಲ. ಆದ್ದರಿಂದ ಭೂತಾಕಾಶವೇ ಆನಂದಮಯವಾಗಿದೆ. ಅಚೇತನವಾದ ಆಕಾಶದಲ್ಲಿ ಆನಂದಮಯತ್ವವು ಅಸಂಭಾವಿತವಲ್ಲವೇ? ಎಂದು ಪ್ರಶ್ನಿಸಬಾರದು. ಆಕಾಶತತ್ವದ ಅಭಿಮಾನಿಯು ಆನಂದಮಯನಾದ್ದರಿಂದ ಅಭಿಮನ್ಯಮಾನವಾದ ಆಕಾಶದಲ್ಲಿ ಆನಂದಮಯಶಬ್ದವನ್ನು ಗೌಣವಾಗಿ ವ್ಯವಹರಿಸಲಾಗಿದೆ. ಹಾಗಾದರೆ ಅಂತರ್ಯಾಮಿಯಾದ ವಿಷ್ಣುವಿನಲ್ಲಿ ಆನಂದಮಯತ್ವವನ್ನು ಸುಲಭವಾಗಿ ಹೇಳಬಹುದಲ್ಲವೇ? ಎಂದು ಶಂಕಿಸಬಾರದು. ವಿಷ್ಣುವು ಆನಂದಮಯನಾದರೆ ಆಕಾಶಶಬ್ದವಾಚ್ಯತ್ವವನ್ನು ಅವನಲ್ಲೇ ಹೇಳಬೇಕಾಗುತ್ತದೆ. ಆದರೆ ಈಗ ತಾನೇ ಹೇಳಿದಂತೆ ರೂಢಿಯು ಯೋಗಕ್ಕಿಂತ ಪ್ರಬಲವಾಗಿದೆ. ಭೂತಾಕಾಶದಲ್ಲಿರುವ ಪ್ರಬಲವಾದ ಆಕಾಶಶಬ್ದದ ರೂಢಿಯು ದುರ್ಬಲವಾದ ವಿಷ್ಣುವಿನಲ್ಲಿರುವ ಯೋಗವನ್ನು ಬಾಧಿಸುತ್ತದೆ. ಆದ್ದರಿಂದ ಭೂತಾಕಾಶವೇ ಆಕಾಶಶಬ್ದವಾಚ್ಯವಾಗಿದೆ ಮತ್ತು ಆನಂದಮಯವಾಗಿದೆ.

**ಭಾವದೀಪಃ – ॐ॥ आकाशस्तल्लिङ्गात् ॥ॐ**

**ದ್ವೇಧಾ ಹ್ಯನ್ಯತ್ರಪ್ರಸಿದ್ಧಾಃ ಶಬ್ದಾಃ ಲೋಕತೋ ವಾ ಲೋಕಪ್ರಸಿದ್ಧಶ್ರುತಿಲಿಙ್ಗಸಾಹಿತ್ಯೇನ ವಾ? ತತ್ರಾದ್ಯಾಃ ಆದ್ಯಪಾದೇ, ದ್ವಿತೀಯಾಸ್ತು ದ್ವಿತೀಯಪಾದೇ ಸಮನ್ವೀಯನ್ತ ಇತಿ ಭಾವೇನಾಹ – ಲೋಕತ ಇತಿ ॥ 'ಲೋಕಪ್ರಯೋಗತಃ' ಇತ್ಯರ್ಥಃ । ಭಾಷ್ಯೇ ಪೂರ್ವಪಕ್ಷಫಲೋಕ್ತ್ಯಾ ಸೂಚಿತೇ ಶ್ರುತ್ಯಧಿಕರಣ–ಸಙ್ಗತೀ ಸ್ವಯಮಾಹ – ಕೋ ಹೀತಿ ॥ ಸ ಏವೇತಿ ॥ ಇತಃ ಪೂರ್ವಂ ಕಾಪಿ ಲೋಕಪ್ರಸಿದ್ಧೇರತ್ಯಾಜನೇನ ಲೋಕಪ್ರಸಿದ್ಧ್ಯಾ ಸರ್ವತ್ರೈಕಾರ್ಥತ್ವಾದಿತಿ ಭಾವಃ । ಛನ್ದೋಗೇತಿ ॥ ಆದ್ಯೇ ಅಧ್ಯಾಯೇ ವಿಷ್ಣು–ಲಿಙ್ಗಾನಾಂ ದೂರೇ ಶ್ರವಣಾತ್ ತದನ್ತವಾಕ್ಯೋಕ್ತಿಃ । ಪ್ರಾಗುಕ್ತೋऽಪಿ ಸ ಏವೇತಿ ॥ ಭೂತೇ ಪ್ರಸಿದ್ಧಿಮಾತ್ರೇಣ ಬ್ರಹ್ಮಲಿಙ್ಗಾನಾಮನ್ಯಥಾನಯನಸ್ಯ ಛಾನ್ದೋಗ್ಯ ಇವಾತ್ರಾಪಿ ಸಮ್ಭವಾದಿತಿ ಭಾವಃ । ವಕ್ಷ್ಯತಿ ಚ ತಥಾ ಚ 'ಲೋಕಚೇಷ್ಟಕತ್ವಹೇತುಃ' ಇತ್ಯಾದಿ ॥**

ಲೋಕತಃ ಅನ್ಯತ್ರಶಬ್ದಗಳು, ಲೋಕಪ್ರಸಿದ್ಧವಾದ ಶ್ರುತಿ,ಲಿಂಗಸಾಹಿತ್ಯವುಳ್ಳ ಅನ್ಯತ್ರಪ್ರಸಿದ್ಧಶಬ್ದಗಳು ಎಂದು ಅನ್ಯತ್ರಪ್ರಸಿದ್ಧಶಬ್ದಗಳು ಎರಡು ರೀತಿಯಾಗಿವೆ. ಅವುಗಳಲ್ಲಿ ಮೊದಲನೆಯ ಪಾದದಲ್ಲಿ ಲೋಕತಃ ಅನ್ಯತ್ರಶಬ್ದಗಳನ್ನು, ದ್ವಿತೀಯಪಾದದಲ್ಲಿ ಲೋಕಪ್ರಸಿದ್ಧಶ್ರುತಿಲಿಂಗಸಹಿತವಾದ ಅನ್ಯತ್ರಪ್ರಸಿದ್ಧಶಬ್ದಗಳನ್ನು ಸಮನ್ವಯ ಮಾಡುತ್ತಾರೆ ಎನ್ನುವ ಅಭಿಪ್ರಾಯದಿಂದ "ಲೋಕತಃ" ಎಂದಿದ್ದಾರೆ. ಲೋಕತಃ ಎಂದರೆ 'ಲೋಕದ (ಜನರ) ಪ್ರಯೋಗದಿಂದ' ಎಂದರ್ಥ. ಭಾಷ್ಯದಲ್ಲಿ ಪೂರ್ವಪಕ್ಷದ ಫಲವನ್ನು ಹೇಳಿದ್ದರಿಂದ ಸೂಚಿಸಲ್ಪಟ್ಟ ಶ್ರುತಿಸಂಗತಿ ಮತ್ತು ಅಧಿಕರಣಸಂಗತಿಗಳನ್ನು ತಾವೇ "ಕೋ ಹಿ" ಎಂಬಂಶದಿಂದ ತಿಳಿಸುತ್ತಿದ್ದಾರೆ. "ಸ ಏವ" ಎಂಬ ಟೀಕಾಭಾಗಕ್ಕೆ 'ಇದಕ್ಕೂ ಮೊದಲು ಎಲ್ಲಿಯೂ ಲೋಕಪ್ರಸಿದ್ಧಿಯನ್ನು ಬಿಟ್ಟಲ್ಲವಾದ್ದರಿಂದ ಲೋಕಪ್ರಸಿದ್ಧಿಯಿರುವುದರಿಂದ ಎಲ್ಲಾ ಕಡೆಯಲ್ಲಿಯೂ (ಆಕಾಶಶಬ್ದಕ್ಕೆ) ಒಂದೇ ಅರ್ಥವಿರುವುದರಿಂದ' ಎಂದರ್ಥ. "ಛಂದೋಗ" ಎಂಬ ಭಾಗದಿಂದ 'ಮೊದಲನೆಯ ಅಧ್ಯಾಯದ ಛಾಂದೋಗ್ಯೋಪನಿಷತ್ತಿನಲ್ಲಿ ವಿಷ್ಣುವಿನ ಲಿಂಗಗಳು ದೂರದಲ್ಲಿರುವುದರಿಂದ ತದಂತವಾದ ಶ್ರುತಿಗಳನ್ನು ಉದಾಹರಿಸುತ್ತಾರೆ' ಎಂದು ತಿಳಿಯಬೇಕು. "ಪ್ರಾಗುಕ್ತೇಽಪಿ ಸ ಏವ" ಎಂಬಂಶದಿಂದ ಭೂತಾಕಾಶದಲ್ಲಿ ಆಕಾಶಶಬ್ದದ ಪ್ರಸಿದ್ಧಿಯಿರುವುದರಿಂದಲೇ ಬ್ರಹ್ಮನ ಲಿಂಗಗಳನ್ನು ಛಂದೋಗಶ್ರುತಿಯಲ್ಲಿ ಬೇರೆ ರೀತಿ ಕೂಡಿಸಿರುವಂತೆ ತೈತ್ತಿರೀಯೋಪನಿಷತ್ತಿನಲ್ಲೂ ಕೂಡಿಸಬೇಕು (ಕೂಡುತ್ತದೆ) ಎಂದು ಭಾವ. ಇದನ್ನು ಟೀಕೆಯಲ್ಲಿ ಮುಂದೆ "ಲೋಕಚೇಷ್ಟಕತ್ವಹೇತುಃ" ಎಂಬಿತ್ಯಾದಿಯಾಗಿ ಹೇಳುತ್ತಾರೆ.

**ಭಾವದೀಪಃ – स आकाश इति ॥ शालावत्यकृतपृथिवीगतिप्रश्नं प्रत्यु–त्तरत्वेनोक्त इत्यर्थः । 'भूताकाशस्य प्राप्तिः' इति भाष्यं व्याचष्टे – भूतेति ॥ आकाशपदोक्त्या लब्धं हेतुमाह रूढत्वादिति ॥ 'विष्णौ तु न रूढिः' इति भावः ।**

"ಸ ಆಕಾಶಃ" ಎಂಬುದರಿಂದ 'ಶಾಲಾವತ್ಯರು ಮಾಡಿದ ಪೃಥಿವಿಯ ಚಲನೆಯ ಕುರಿತಾದ ಪ್ರಶ್ನೆಯ ಉತ್ತರರೂಪವಾಗಿ ಹೇಳಿದ ಎಂದರ್ಥ. 'ಭೂತಾಕಾಶಸ್ಯ ಪ್ರಾಪ್ತಿಃ' ಎಂಬ ಭಾಷ್ಯವನ್ನು "ಭೂತ"

ಎಂಬಿತ್ಯಾದಿಯಾಗಿ ವ್ಯಾಖ್ಯಾನಿಸುತ್ತಾರೆ. ಆಕಾಶಪದವನ್ನು ಹೇಳಿದ್ದರಿಂದ ದೊರೆತ ಹೇತುವನ್ನು ''ರೂಢತ್ವಾತ್'' ಎಂಬುದಾಗಿ ಹೇಳುತ್ತಾರೆ. 'ವಿಷ್ಣುವಿನಲ್ಲಾದರೋ ರೂಢಿಯಿಲ್ಲ' ಎಂದು ಭಾವ.

**ಭಾವದೀಪಃ** – ಪೂರ್ವೋಕ್ತರೀತ್ಯಾ ಗತಾರ್ಥತ್ವಮಾಶಙ್ಕತೇ – ನ ಚೇತಿ ॥ ತನ್ಯಾಯವಿಷಯತ್ವಮಾಹ – ಬಾಧಕಂ ವಿನೇತಿ ॥ 'ಅನನ್ತತ್ವಾದಿಲಿಙ್ಗಂ ತು ರೂಢಾಕಾಶಶ್ರುತ್ಯನುರೋಧೇನ ಭೂತೇ ಕಥಞ್ಚಿದ್ ಯೋಜ್ಯಮ್' ಇತಿ ಭಾವಃ । ಏವಂ ಚ ಪೂರ್ವತ್ರ ಸಮುದ್ರಸ್ಥತ್ವಾದೇರ್ಭಾಷ್ಯೋಕ್ತಶ್ರುತ್ಯಾದಿನಾ ವಿಷ್ಣ್ವೇಕನಿಷ್ಠತ್ವನಿಶ್ಚಯೇನ, ನಿರವಕಾಶಲಿಙ್ಗೇನ ಇನ್ದ್ರಾದಿಶ್ರುತೇರಜ್ಞರೂಢಿಬಾಧೇನ, ಯೋಗವೃತ್ಯಾ ವಿಷ್ಣುನಿಷ್ಠತ್ವೋಕ್ತಾವಪಿಹಾನನ್ತತ್ವಾದೇರ್ವಿಷ್ಣುನಿಷ್ಠತ್ವಾನಿಶ್ಚಯೇನ ಪೂರ್ವನ್ಯಾಯಾವಿಷಯತ್ವಾನ್ನ ತೇನಾಸ್ಯ ಗತಾರ್ಥತ್ವಮಿತಿ ಸೂಚಿತಮ್ । ಏತೇನ ಭಾಷ್ಯೇ ಪೂರ್ವಪಕ್ಷಪ್ರಾಪಕವಿಶೇಷಹೇತ್ವನುಕ್ತೇಸ್ತಾತ್ಪರ್ಯಮುದ್ಭಾವಿತಂ ಧ್ಯೇಯಮ್ । ಏವಮಗ್ರೇऽಪಿ । ಸುಧಾಯಾಂ ತು ಅನನ್ತತ್ವಾದಿಲಿಙ್ಗಾನಾಂ ವಾಸ್ತವಂ ನಿರವಕಾಶತ್ವಮುಪೇತ್ಯ ಗತಾರ್ಥತಾಮಾಶಙ್ಕ್ಯಾऽಭ್ಯಧಿಕಾऽऽಶಙ್ಕೋಕ್ತಾ । ಅತ ಏವ 'ತನ್ನ ಸುತರಾಂ ನಿರವಕಾಶಲಿಙ್ಗಾತ್' ಇತ್ಯುಕ್ತಮ್ ।

ಹಿಂದಿನ ಅಧಿಕರಣದಲ್ಲಿ ಹೇಳಿದ ನ್ಯಾಯದಿಂದ ಈ ಅಧಿಕರಣದ ವಿಷಯವನ್ನು ಯೋಜಿಸಬಹುದಲ್ಲವೇ? ಎಂದು ''ನ ಚ'' ಎಂಬುದಾಗಿ ಶಂಕೆಯನ್ನು ಮಾಡುತ್ತಾರೆ. ಆ ಅಧಿಕರಣದ ನ್ಯಾಯಕ್ಕೆ 'ಆಕಾಶ'ಶಬ್ದವು ವಿಷಯವಾಗುತ್ತದೆ ಎಂದು ''ಬಾಧಕಂ ವಿನಾ'' ಎಂಬಂಶದಿಂದ ಹೇಳುತ್ತಾರೆ. '(ಆ ಶ್ರುತಿಯಲ್ಲಿ ಶ್ರುತವಾದ) ಅನಂತತ್ವಾದಿಲಿಂಗವನ್ನು ರೂಢವಾದ ಆಕಾಶಶ್ರುತಿಗನುಗುಣವಾಗಿ ಭೂತಾಕಾಶದಲ್ಲಿ ಹೇಗಾದರೂ ಕೂಡಿಸಬೇಕು' ಎಂದು ಭಾವ. ಹೀಗಾಗಿ ಹಿಂದಿನ ಅಧಿಕರಣದಲ್ಲಿ ಸಮುದ್ರಸ್ಥತ್ವಲಿಂಗವು ಭಾಷ್ಯದಲ್ಲಿ ಹೇಳಿದ ಶ್ರುತಿಸ್ಮೃತಿಗಳಿಗನುಗುಣವಾಗಿ ವಿಷ್ಣುವಿನಲ್ಲಿ ಮಾತ್ರ ಇರುವುದೆಂದು ನಿಶ್ಚಿತವಾದ್ದರಿಂದ, ನಿರವಕಾಶಲಿಂಗದಿಂದ ಇಂದ್ರಾದಿಶ್ರುತಿಗಳಿಗೆ ಆಯಾಯ ಇಂದ್ರಾದಿದೇವತೆಗಳಲ್ಲಿ ಅಜ್ಞರ ರೂಢಿಯಿದ್ದರೂ ಬಾಧಿಸುವುದರಿಂದ, ಯೋಗವೃತ್ತಿಯಿಂದ ವಿಷ್ಣುವಿನಲ್ಲಿ (ಸಮುದ್ರಸ್ಥತ್ವಲಿಂಗವು) ಸಮರ್ಥಿಸಲ್ಪಟ್ಟಿದ್ದರೂ; ಈ ಅಧಿಕರಣದಲ್ಲಿ ಅನಂತತ್ವಲಿಂಗವು ವಿಷ್ಣುನಿಷ್ಠವೆಂದು ನಿಶ್ಚಿತವಾಗಿಲ್ಲವಾದ್ದರಿಂದ ಹಿಂದಿನ ಅಧಿಕರಣದಿಂದ ಈ ಅಧಿಕರಣಕ್ಕೆ ಗತಾರ್ಥತ್ವವಿಲ್ಲ ಎಂದು ಸೂಚಿಸಿದಂತಾಯಿತು. ಹೀಗೆ ಹೇಳಿದ್ದರಿಂದ ಭಾಷ್ಯದಲ್ಲಿ ಪೂರ್ವಪಕ್ಷವನ್ನು ಸಮರ್ಥಿಸುವ ವಿಶೇಷಹೇತುವನ್ನು ಹೇಳದಿದ್ದುದರ ತಾತ್ಪರ್ಯವನ್ನು ಬಿಡಿಸಿ ಹೇಳಿದಂತಾಯಿತು.

ಸುಧೆಯಲ್ಲಾದರೂ ಅನಂತತ್ವಲಿಂಗ ಮೊದಲಾದವುಗಳಿಗೆ ವಾಸ್ತವಿಕ ನಿರವಕಾಶತ್ವವನ್ನು ಸ್ವೀಕರಿಸಿ, ಹಿಂದಿನ ಅಧಿಕರಣದಿಂದ ಗತಾರ್ಥತ್ವವನ್ನು ಹೇಳಿ, ಅದರ ಮೇಲಿನ ಸಂದೇಹವನ್ನು (ಅಭ್ಯಧಿಕಾಶಂಕಾವನ್ನು) ಹೇಳಿದ್ದಾರೆ. (ಅತ ಏವ) ಆದುದರಿಂದಲೇ ಸುಧೆಯಲ್ಲಿ 'ತನ್ನ ಸುತರಾಂ ನಿರವಕಾಶತ್ವಲಿಂಗಾತ್' ಎಂದು ಹೇಳಿದ್ದಾರೆ.

**ಭಾವದೀಪಃ** – ಕಿಞ್ಚ ಯೋಗೋ ಹಿ ಪ್ರವೃತ್ತಿನಿಮಿತ್ತಸ್ಯ ತದ್ಗತತ್ವೇನ, ವಾ 'ತದಧೀನತ್ವಾದರ್ಥವತ್' ಇತಿ ವಕ್ಷ್ಯಮಾಣನ್ಯಾಯೇನಾನ್ಯಗತಸ್ಯ ತದಧೀನತ್ವಾದ್ವಾ, ದ್ವೇಧಾ ಪೂರ್ವಮುಕ್ತಃ । ತತ್ರಾ-

ಘಸ್ತ್ವಶಕ್ಯಶಙ್ಕಃ । ಆಕಾಶಪದಪ್ರವೃತ್ತಿನಿಮಿತ್ತಸ್ಯ ವಿವರತ್ವಸ್ಯಾऽಕಾಶಸ್ವಭಾವವತ್ವಾತ್ । ದ್ವಿತೀಯಂ ನಿರಸಿತುಮಾಶಙ್ಕತೇ – ನ ಚಾऽऽಕಾಶಸ್ಯೇತಿ ॥ ಆಕಾಶಪದಪ್ರವೃತ್ತಿನಿಮಿತ್ತ-ವಿವರತ್ವಾದೇರಾಕಾಶಸ್ವಭಾವತ್ವಾತ್ ಆಕಾಶಸ್ಯ ತದಧೀನತ್ವಾನಧೀನತ್ವಾಭ್ಯಾಂ ವಿವರತ್ವಸ್ಯಾಪಿ ತೇ ಸ್ಯಾತಾಮ್, ಇತಿ ಭಾವೇನ 'ಆಕಾಶಸ್ಯ' ಇತ್ಯೇವೋಕ್ತಮ್; ನ ತು 'ಆಕಾಶತ್ವಸ್ಯ' ಇತಿ ॥

**ಚೇಷ್ಟಾ ಹಿ ಚೇತನಾನಾಂ ಯಾ ಸಾ ಭವೇತ್ ತತ್ಪ್ರಸಾದತಃ ।**
**ಅಚೇತನಸ್ವಭಾವಸ್ತು ವಿವರಾದಿಃ ಕಥಂ ತತಃ? ॥'**

ಇತ್ಯನುಭಾಷ್ಯೋಕ್ತಸಮಾಧಿಮಾಹ – ಆಕಾಶಸ್ಯೇತಿ ॥ ಯದ್ವಾ, ದ್ವಿವಿಧಯೋಗಮಧ್ಯೇ ಆದ್ಯಸ್ಯ ನಿರಾಸೋ 'ಬಾಧಕಂ ವಿನಾ' ಇತ್ಯಾದಿ । ಆಕಾಶಪದಪ್ರವೃತ್ತಿಹೇತೋರಾಕಾಶಸ್ವಭಾವತಯಾ ವಿಷ್ಣಾವಸಮ್ಭವಾಚ್ಚೇತ್ಯಪಿ ಧ್ಯೇಯಮ್ । ದ್ವಿತೀಯಸ್ಯ ಶಙ್ಕಾಪೂರ್ವಂ ನಿರಾಸಃ 'ನ ಚಾಕಾಶಸ್ಯ' ಇತ್ಯಾದಿ ।

ಮತ್ತೊಂದು ರೀತಿಯಲ್ಲಿ ಗತಾರ್ಥತ್ವವನ್ನು ಪರಿಹಾರ ಮಾಡುತ್ತಾರೆ.

ಭಗವಂತನಲ್ಲಿ ಸಕಲಶಬ್ದಗಳನ್ನು ಯೌಗಿಕವೃತ್ತಿಯಿಂದ ಹಿಂದೆ ಕೂಡಿಸಿದರು. (೧)ಆ ಯೋಗ-ವೃತ್ತಿಯು ಆಯಾಯ ಶಬ್ದಗಳ ಪ್ರವೃತ್ತಿನಿಮಿತ್ತವು ಭಗವಂತನಲ್ಲಿದೆ ಅಥವಾ (೨)ಮುಂದೆ ಹೇಳುವ 'ತದಧೀನತ್ವಾತ್' ಎಂಬ ಸೂತ್ರದಲ್ಲಿ ಹೇಳಿದ ನ್ಯಾಯದಂತೆ ಆ ಪ್ರವೃತ್ತಿನಿಮಿತ್ತ ಭಗವದಧೀನವಾಗಿದೆ -- ಹೀಗೆ ಎರಡು ರೀತಿಯಾಗಿ ಹೇಳಿತ್ತು. ಆದರಲ್ಲಿ ಮೊದಲನೆಯದ್ದನ್ನು ಭಗವಂತನಲ್ಲಿ ಹೇಳಲು ಸಾಧ್ಯವಿಲ್ಲ. ಏಕೆಂದರೆ ಆಕಾಶಪದದ ಪ್ರವೃತ್ತಿನಿಮಿತ್ತವಾದ ವಿವರತ್ವ ಎನ್ನುವುದು ಆಕಾಶದ್ದೇ ಆದ ಸ್ವಭಾವ. ಎರಡನೆಯದ್ದನ್ನು ನಿರಾಕರಿಸಲೋಸುಗ ''ನ ಚಾಕಾಶಸ್ಯ'' ಎಂಬತ್ಯಾದಿಯಾಗಿ ಶಂಕಿಸುತ್ತಾರೆ. ಆಕಾಶಪ್ರವೃತ್ತಿನಿಮಿತ್ತವಾದ ವಿವರತ್ವವು ಆಕಾಶದ ಸ್ವಭಾವವಾದ್ದರಿಂದ ಆಕಾಶವು ಭಗವದಧೀನವಾದರೆ ವಿವರತ್ವವು ಭಗವದಧೀನವಾಗುತ್ತದೆ; ಇಲ್ಲದಿದ್ದರೆ ವಿವರತ್ವವು ಭಗವದಧೀನವಾಗುವುದಿಲ್ಲ ಎನ್ನುವ ಅಭಿಪ್ರಾಯದಿಂದ ''ಆಕಾಶಸ್ಯ'' ಎಂದು ಹೇಳಿದ್ದಾರೆ. ಇಲ್ಲದಿದ್ದರೆ ಆಕಾಶತ್ವಸ್ಯ ಎಂದು ಹೇಳಬೇಕಾಗಿತ್ತು.

'ಚೇಷ್ಟಾ ಹಿ ಚೇತನಾನಾಂ ಯಾ ಸಾ ಭವೇತ್ ತತ್ಪ್ರಸಾದತಃ ।
ಅಚೇತನಸ್ವಭಾವಸ್ತು ವಿವರಾದಿಃ ಕಥಂ ತತಃ ॥'

ಚೇತನರ ಚೇಷ್ಟೆಗಳು (ಕ್ರಿಯೆಗಳು) ಭಗವಂತನ ಪ್ರಸಾದದಿಂದ ನಡೆಯುತ್ತವೆ ಎಂದು ಒಪ್ಪೋಣ. ಆದರೆ ಅಚೇತನಸ್ವಭಾವಗಳಾದ ವಿವರತ್ವ ಮುಂತಾದವುಗಳು ಭಗವಂತನ ಅನುಗ್ರಹದಿಂದ ಇವೆ ಎನ್ನುವುದು ಹೇಗೆ?'' ಎನ್ನುವ ಅನುಭಾಷ್ಯದಲ್ಲಿ ಹೇಳಿದ ಅಭಿಪ್ರಾಯವನ್ನು ''ಆಕಾಶಸ್ಯ'' ಎನ್ನುವುದರಿಂದ ಹೇಳುತ್ತಾರೆ.

ಅಥವಾ ಕೆಲವರು ಹೀಗೆ ಹೇಳುತ್ತಾರೆ -- ಎರಡು ವಿಧವಾದ ಯೋಗಗಳ ಮಧ್ಯದಲ್ಲಿ ಮೊದಲನೆಯ

ವಿಧದ ಯೋಗವನ್ನು 'ಬಾಧಕಂ ವಿನಾ' ಎನ್ನುವುದರಿಂದ ನಿರಾಕರಣೆ ಮಾಡುತ್ತಾರೆ. ಆಕಾಶಪದ-ಪ್ರವೃತ್ತಿನಿಮಿತ್ತವಾದದ್ದು ಆಕಾಶದ ಸ್ವಭಾವವಾದ್ದರಿಂದ ವಿಷ್ಣುವಿನಲ್ಲಿ ಬರುವುದಿಲ್ಲ. ಎರಡನೆಯ ವಿಧವಾದ ಯೋಗವನ್ನು ಶಂಕೆ ಮಾಡಿ 'ನ ಚಾಕಾಶಸ್ಯ' ಎನ್ನುವುದರಿಂದ ನಿರಾಕರಣೆ ಮಾಡುತ್ತಾರೆ.

**ಭಾವದೀಪಃ – ಮುಖ್ಯ ಇತೀತಿ ॥**

**'ಸ್ವಾತನ್ತ್ರ್ಯಂ ತದ್ಗತತ್ವಂ ಚ ಶಬ್ದವೃತ್ತೇರ್ಹಿ ಕಾರಣಮ್ ।**
**ಸ್ವಾತನ್ತ್ರ್ಯಂ ತತ್ರ ಮುಖ್ಯಂ ಸ್ಯಾತ್ .....'**

**ಇತ್ಯನುಭಾಷ್ಯೋಕ್ತೇರಿತಿ ಭಾವಃ । ಏವಂ ಚ ವಿನೈವ ಅಭ್ಯಧಿಕಾಶಙ್ಕಾಂ ಪೂರ್ವನ್ಯಾಯಾ-ವಿಷಯತ್ವೇನೇಹ ಟೀಕಾಯಾಂ ಪೂರ್ವಪಕ್ಷಪ್ರವೃತ್ತಿರಭಿಮತಾ ಇತ್ಯಾಹುಃ ।**

ತದಧೀನತ್ವರೂಪವಾದ ಯೋಗವೃತ್ತಿಯು ಮುಖ್ಯವೃತ್ತಿಯಾಗಿದೆ. ಏಕೆಂದರೆ -

'ಸ್ವಾತಂತ್ರ್ಯಂ ತದ್ಗತತ್ವಂ ಚ ಶಬ್ದವೃತ್ತೇರ್ಹಿ ಕಾರಣಮ್ ।
ಸ್ವಾತಂತ್ರ್ಯಂ ತತ್ರ ಮುಖ್ಯಂ ಸ್ಯಾತ್ .....'

'ಸ್ವಾತಂತ್ರ್ಯ ಮತ್ತು ಆದರಲ್ಲಿ ಇರುವಿಕೆ ಎನ್ನುವುದು ಶಬ್ದವೃತ್ತಿಗೆ ಕಾರಣಗಳಾಗಿವೆ. ಆದರಲ್ಲಿ ಸ್ವಾತಂತ್ರ್ಯವು ಮುಖ್ಯವೃತ್ತಿಯೆನಿಸಿಕೊಳ್ಳುತ್ತದೆ' ಎಂದು ಅನುವ್ಯಾಖ್ಯಾನದಲ್ಲಿ ಹೇಳಿದ್ದಾರೆ ಎಂದು ಭಾವ. ಹೀಗಾಗಿ ಅಭ್ಯಧಿಕಾಶಂಕೆಯಿಲ್ಲದೆ (ಹೆಚ್ಚಿನ ಪ್ರಶ್ನೆ) ಹಿಂದಿನ ಅಧಿಕರಣದ ನ್ಯಾಯಕ್ಕೆ ಈ ಅಧಿಕರಣದ ವಿಷಯ ಒಳಪಡದೆ ಪೂರ್ವಪಕ್ಷವು ಟೀಕೆಯಲ್ಲಿ ಪ್ರವೃತ್ತವಾಗುತ್ತದೆ ಎಂದು ಕೆಲವರು ಹೇಳುತ್ತಾರೆ.

**ಭಾವದೀಪಃ – 'ಆಕಾಶಸ್ಯ ಪ್ರಾಪ್ತಿಃ' ಇತ್ಯನುಕ್ತ್ವಾ ಭಾಷ್ಯೇ 'ಭೂತೇ'ತ್ಯುಕ್ತೇರ್ಭಾವಂ ವಿವೃಣ್ವಾನಃ ತದುಪಪಾದಕತ್ವೇನ 'ಅಸ್ಯ ಲೋಕಸ್ಯ' ಇತಿ ಪೂರ್ವಾಂಶೋಕ್ತಿರಿತಿ ವಕ್ತುಂ ತಟಸ್ಥಶಙ್ಕಾಮಾಹ – ಆಕಾಶೇತಿ ॥ ಅವಕಾಶೇ = ಅವ್ಯಾಕೃತಾಕಾಶ ಇತ್ಯರ್ಥಃ । ಸರ್ವಭೂತೇತಿ ॥ 'ಸ್ವೇತರ-ಸರ್ವಭೂತಾಃ' ಇತ್ಯರ್ಥಃ । ಅತ್ರ ರೂಢತ್ವಾದಿನೋಕ್ತಃ ಪೂರ್ವಪಕ್ಷೀ ವಾಚಕಶಬ್ದಸ್ವರೂಪಪ್ರಮಾಣಾಶ್ರಿತಃ । 'ಆಕಾಶಸ್ಯಾಚೇತನತ್ವೇನ' ಇತ್ಯಾದಿನೋಕ್ತಸ್ತು ಶಬ್ದಪ್ರವೃತ್ತಿಹೇತುರೂಪಪ್ರಮೇಯಾಶ್ರಿತ ಇತ್ಯಾಹುಃ । ಭಾಷ್ಯೋಕ್ತೇರ್ನಿರ್ಬೀಜತ್ವಭ್ರಮನಿರಾಸಾಯಾಹ – ಇತಿ ಮನಸೀತಿ ॥ 'ಭೂತಾಕಾಶ ಏವಾಯಮಿತ್ಯಾದಿ-ನೋಕ್ತಮ್' ಇತ್ಯರ್ಥಃ ।**

ಭಾಷ್ಯದಲ್ಲಿ 'ಆಕಾಶಸ್ಯ ಪ್ರಾಪ್ತಿಃ' (ಆಕಾಶದ ಪ್ರಾಪ್ತಿಯಾಗುತ್ತದೆ) ಎಂದು ಹೇಳದೆ 'ಭೂತಾಕಾಶಸ್ಯ ಪ್ರಾಪ್ತಿಃ' (ಭೂತಾಕಾಶದ ಪ್ರಾಪ್ತಿ) ಎಂದು ಹೇಳಿದ್ದು ಏಕೆ? ಎನ್ನುವುದರ ಅಭಿಪ್ರಾಯವನ್ನು ವಿವರಿಸಲು, ಅದನ್ನು ಉಪಪಾದನೆ ಮಾಡುವುದಕ್ಕಾಗಿ 'ಅಸ್ಯ ಲೋಕಸ್ಯ ಕಾ ಗತಿಃ' ಎಂಬ ಮೊದಲಿನ ಭಾಗವನ್ನು ಹೇಳಿದ್ದಾರೆ. ಆದಕ್ಕಾಗಿ ತಟಸ್ಥಶಂಕೆಯನ್ನು "ಆಕಾಶ" ಎನ್ನುವುದರಿಂದ ತಿಳಿಸುತ್ತಾರೆ. 'ಅವಕಾಶೇ' ಎಂದರೆ

ಅವ್ಯಾಕೃತಾಕಾಶದಲ್ಲಿ ಎಂದರ್ಥ. ''ಸರ್ವಭೂತ'' ಎಂದರೆ 'ತನ್ನನ್ನು ಬಿಟ್ಟು ಉಳಿದ ಎಲ್ಲಾ ಭೂತಗಳು' ಎಂದರ್ಥ.

ಟೀಕೆಯಲ್ಲಿ 'ಆಕಾಶಶಬ್ದವು ಭೂತಾಕಾಶದಲ್ಲಿ ರೂಢವಾಗಿದೆ' ಎಂದಿಟ್ಟುಕೊಂಡು ಹೇಳಿದ ಪೂರ್ವಪಕ್ಷವು ಭೂತಾಕಾಶವನ್ನು ಹೇಳುವ ಶಬ್ದರೂಪಪ್ರಮಾಣವನ್ನಾಶ್ರಯಿಸಿ ಹೇಳಿದ್ದು. 'ಆಕಾಶವು ಅಚೇತನವಾಗಿದೆಯಾದ್ದರಿಂದ' ಎಂದು ಹೇಳಿದ ಪೂರ್ವಪಕ್ಷವು ಶಬ್ದಪ್ರವೃತ್ತಿನಿಮಿತ್ತವಾದ ಪ್ರಮೇಯವನ್ನು ಆಶ್ರಯಿಸಿ ಹೇಳಿದ್ದು ಎಂದು ಕೆಲವರು ಹೇಳುತ್ತಾರೆ.

'ಭೂತಾಕಾಶವೇ ಇಲ್ಲಿ ವಾಚ್ಯ' ಇತ್ಯಾದಿ ಭಾಷ್ಯದಲ್ಲಿ ಹೇಳಿದ್ದಕ್ಕೆ ಏನೂ ಪ್ರಮಾಣವಿಲ್ಲ ಎನ್ನುವ ಭ್ರಮೆಯನ್ನು ನಿವಾರಿಸಲು ''ಇತಿ ಮನಸಿ'' ಎಂಬಿತ್ಯಾದಿಯಾಗಿ ಹೇಳುತ್ತಾರೆ. 'ಭೂತಾಕಾಶ ಏವಾಯಮ್ ಇತ್ಯಾದಿನೋಕ್ತಮ್' ಎಂದು ಇದರ ಅರ್ಥ.

**ಭಾವದೀಪಃ – ಸ್ವೋಕ್ತಂ ಸರ್ವಂ ಭಾಷ್ಯೇ ಪೂರ್ವತ್ರ ಯೋಜ್ಯಮಿತಿ ಭಾವೇನ ಭಾಷ್ಯಂ ಯೋಜಯತಿ – ಏವಮಿತಿ ॥ ಸ ಏವೇತಿ ॥ ರೂಢ್ಯಾ ಭೂತಪ್ರಾಪ್ತಿಬಲೇನಾತ್ರತ್ಯಾನನ್ತತ್ವಾದಿಬ್ರಹ್ಮಲಿಙ್ಗಸ್ಯ ಚ ತತ್ರಾಪಿ ವಿಶ್ವಚೇಷ್ಟಕತ್ವರೂಪಬ್ರಹ್ಮಲಿಙ್ಗಸ್ಯಾಕಾಶೇ ಯೋಜನೀಯತ್ವಾದಿತಿ ಭಾವಃ । ಅನೇನೈವೇತಿ ॥ 'ಉಕ್ತರೀತ್ಯಾ ಆನನ್ದಮಯಸ್ಯಾಪ್ಯಾಕ್ಷೇಪಸಮ್ಭವೇನ' ಇತ್ಯರ್ಥಃ ।**

ಟೀಕೆಯಲ್ಲಿ ತಾವು ಹೇಳಿದ ಎಲ್ಲವನ್ನೂ ಭಾಷ್ಯದಲ್ಲಿ ಮೊದಲು ಸೇರಿಸಿಕೊಳ್ಳಬೇಕು ಎಂಬ ಅಭಿಪ್ರಾಯದಿಂದ ಭಾಷ್ಯವನ್ನು ''ಏವಮ್'' ಎಂಬುದಾಗಿ ಯೋಜಿಸುತ್ತಾರೆ. ''ಸ ಏವ'' ಎಂಬಂಶದಿಂದ ರೂಢಿಯಿಂದ ಆಕಾಶಶಬ್ದಕ್ಕೆ ಭೂತಾಕಾಶ ಎಂದು ಅರ್ಥವಿರುವುದರಿಂದ ಛಾಂದೋಗ್ಯಶ್ರುತಿಯಲ್ಲಿರುವ ಅನಂತತ್ವ ಮೊದಲಾದ ಬ್ರಹ್ಮನ ಲಿಂಗವನ್ನು ಮತ್ತು ತೈತ್ತಿರೀಯೋಪನಿಷತ್ತಿನಲ್ಲಿ ಶ್ರುತವಾದ ಸರ್ವಚೇಷ್ಟಕತ್ವರೂಪವಾದ ಬ್ರಹ್ಮಲಿಂಗವನ್ನು ಭೂತಾಕಾಶದಲ್ಲಿ ಯೋಜಿಸಬೇಕು ಎಂಬಭಿಪ್ರಾಯವನ್ನು ಸೂಚಿಸಿದ್ದಾರೆ. ''ಅನೇನೈವ'' ಎಂದರೆ 'ಅಭಿಮಾನಿನ್ಯಾಯದಿಂದಲೇ ಆಕಾಶಶಬ್ದವನ್ನು ಆನಂದಮಯನಲ್ಲಿ ಪ್ರಯೋಗಿಸಿದ್ದಾರೆ ಎಂದು ಆಕ್ಷೇಪ ಮಾಡಲು ಬರುವುದರಿಂದ' ಎಂದು ಅಭಿಪ್ರಾಯ.

## ಪರೋವರೀಯಸ್ತ್ವಾದಿ ವಿಷ್ಣುವಿನ ಅಸಾಧಾರಣವಾದ ಲಿಂಗಗಳು

**ಭಾಷ್ಯಮ್ – ಇತಿ ನ ಮನ್ತವ್ಯಮ್ । ಯತಃ –**

**ಸೂ - ॐ ॥ ಆಕಾಶಸ್ತಲ್ಲಿಙ್ಗಾತ್ ॥ ॐ ॥ ೨೨ ॥**

**'ಅಸ್ಯ ಲೋಕಸ್ಯ ಕಾ ಗತಿರಿತ್ಯಾಕಾಶ ಇತಿ ಹೋವಾಚ' (ಛಾ. ೧-೯.) ಇತ್ಯತ್ರ ಭೂತಾಕಾಶಸ್ಯ ಪ್ರಾಪ್ತಿಃ । ನ ಚಾಸೌ ಯುಜ್ಯತೇ, ಕಿನ್ತು ವಿಷ್ಣುರೇವ ।**

**'ಸ ಏಷ ಪರೋವರೀಯಾನುದ್ಗೀಥಃ ಸ ಏಷೋऽನನ್ತಃ' (ಛಾ. ೧-೯.) ಇತ್ಯಾದಿ ತಲ್ಲಿಙ್ಗಾತ್ ।**

ಹೀಗೆ ತಿಳಿಯಬಾರದು. ಏಕೆಂದರೆ ವಿಷ್ಣುವಿನ ಅಸಾಧಾರಣಲಿಂಗಗಳನ್ನೇ ಶ್ರುತಿಯಲ್ಲಿ ಹೇಳಲಾಗಿದೆ.

ಛಾಂದೋಗ್ಯೋಪನಿಷತ್ತಿನಲ್ಲಿ ಪೃಥ್ವೀಲೋಕಕ್ಕೆ ಯಾರು ಗತಿ(ಆಧಾರ)? ಎಂಬ ಶಲಕರು ಮಾಡುವ ಪ್ರಶ್ನೆಗೆ 'ಆಕಾಶವೇ ಆಧಾರ' ಎಂದು ಪ್ರವಾಹಣರು ಉತ್ತರಿಸಿದ್ದಾರೆ.

ಇಲ್ಲಿ ಆಕಾಶಶಬ್ದವು ಭೂತಾಕಾಶದಲ್ಲಿಯೇ ಪ್ರಸಿದ್ಧವಾದ್ದರಿಂದ ಅದೇ ಆನಂದಮಯವೆಂದು ಭಾಸವಾಗುತ್ತದೆ. ಇದು ತಪ್ಪು. ವಿಷ್ಣುವೇ ಆಕಾಶಶಬ್ದವಾಚ್ಯನಾಗಿದ್ದಾನೆ. ಏಕೆಂದರೆ 'ಬ್ರಹ್ಮ, ಲಕ್ಷ್ಮೀ ಮೊದಲಾದವರಿಗಿಂತಲೂ ಶ್ರೇಷ್ಠನು' 'ಸಕಲವೇದಗಳಿಂದ ಗಾನಮಾಡಿಸಿಕೊಳ್ಳಲು ಅರ್ಹನು' 'ಸಕಲವಿಧನಾಶರಹಿತನು' ಇವೇ ಮೊದಲಾದ ವಿಷ್ಣುವಿನ ಅಸಾಧಾರಣ ಧರ್ಮಗಳು ಆಕಾಶಶಬ್ದಪ್ರತಿಪಾದ್ಯವಾದ್ದರಲ್ಲಿ ಕೇಳಿಸುತ್ತಿದೆಯಾದ್ದರಿಂದ.

---

**ಭಾಷ್ಯದೀಪಿಕಾ –** ಸಿದ್ಧಾನ್ತಯತಿ – ಇತೀತಿ ॥ ಕುತೊ ನ ಮನ್ತವ್ಯಮಿತ್ಯಾಶಙ್ಕಾಯಾಂ ತತ್ರ ಹೇತುತಯಾ ಸೂತ್ರಮುಪಾದತ್ತೇ – ಯತ ಇತಿ ॥ ಇದಂ ಚಾऽವರ್ತತೇ । ತತ್ರಾऽಽದ್ಯಸ್ಯ 'ಯತಶ್ಚೋದೇತಿ' ಇತಿವತ್ ಕುತ ಇತ್ಯರ್ಥಃ । 'ಯಚ್ಛಬ್ದಸ್ತು ಪರಾಮರ್ಶೇ ಪ್ರಶ್ನಾರ್ಥೇऽಪಿ ಚ ಮಣ್ಯತೇ' ಇತಿ ಭಾಗವತತಾತ್ಪರ್ಯೋಕ್ತೇಃ। ದ್ವಿತೀಯಸ್ತು ನ ಮನ್ತವ್ಯಮಿತಿ ಪ್ರತಿಜ್ಞಾಯಾಂ ಸೂತ್ರಾರ್ಥಸ್ಯ ಹೇತುತ್ವದ್ಯೋತಕಃ ।

ವಿಷಯಾದೇಃ ಪೂರ್ವಪಕ್ಷಫಲಕಥನೇನ ಸೂಚನೇऽಪಿ ಮುಖತೋऽನುಕ್ತೇಃ ತದನುವಾದಪೂರ್ವಕಂ ಸೂತ್ರಂ ವ್ಯಾಚಷ್ಟೇ – ಅಸ್ಯೇತಿ ॥ 'ಇತ್ಯತ್ರ' ವಾಕ್ಯೇ ಪ್ರತಿಪಾದ್ಯತ್ವಸ್ಯೇತಿ ಶೇಷಃ । ಚೋऽಪ್ಯರ್ಥಃ । ಯದ್ಯಪಿ ತಥಾऽಪೀತ್ಯರ್ಥೇ । 'ಅಸೌ' ಆಕಾಶೋऽತ್ರ ವಾಚ್ಯ ಇತಿ ಶೇಷಃ । ಸೂತ್ರೇऽನುವೃತ್ತಸ್ಯ 'ತತ್ತು' ಇತ್ಯಸ್ಯಾರ್ಥೋ ವಿಷ್ಣುರೇವೇತಿ ॥ ಇತ್ಯಾದೀತಿ ॥ ಲುಪ್ತವಿಭಕ್ತಿಕೋ ನಿರ್ದೇಶಃ । ಆದಿಶಬ್ದಾತ್ 'ಸರ್ವಾಣಿ ಭೂತಾನಿ' ಇತ್ಯಾದಿಜಗತ್ಕಾರಣತ್ವಪ್ರತಿಪಾದಕಂ ವಾಕ್ಯಂ ಗೃಹ್ಯತೇ । ಯಥೋಕ್ತಂ ತತ್ತ್ವಪ್ರದೀಪೇ - 'ಸರ್ವಾಣಿ ಭೂತಾನಿ – ಇತ್ಯಾದಿನೋದೀರ್ಯಮಾಣಂ ಜಗದುತ್ಪಾದಕತ್ವಾದಿಕಮಾದಿಶಬ್ದಾದುಪಾದದೀತ' ಇತಿ । ಲಿಙ್ಗಪದಂ ಶ್ರುತ್ಯುಪಲಕ್ಷಕಮ್ ।

ತಥಾ ಚೇತ್ಥಂ ಯೋಜನಾ । ಯದ್ಯಪಿ 'ಅಸ್ಯ ಲೋಕಸ್ಯ' ಇತಿ ಛನ್ದೋಗವಾಕ್ಯೇ ಭೂತಾಕಾಶಸ್ಯ ಶ್ರುತ್ಯಾದಿಬಲಾದಸ್ತಿ ಪ್ರತಿಪಾದ್ಯತ್ವಸ್ಯ ಪ್ರಾಪ್ತಿಃ । ತಥಾऽಪಿ ನಾಸಾವತ್ರ ವಾಕ್ಯೇ ಆಕಾಶಪದೇನ ವಾಚ್ಯೋ ಯುಜ್ಯತೇ, ಕಿನ್ತು – ವಿಷ್ಣುರೇವ । ಕುತಃ? 'ಸ ಏಷಃ' ಇತ್ಯಾದಿವಾಕ್ಯೇ 'ತಲ್ಲಿಙ್ಗಾತ್' ತಸ್ಯ ವಿಷ್ಣೋರ್ಲಿಙ್ಗಮಸಾಧಾರಣಧರ್ಮಃ ಪರೋವರೀಯಸ್ತ್ವಾದಿಃ । ತಸ್ಯ ತಸ್ಮಿನ್ನಾಕಾಶೇ ಶ್ರವಣಾದುಕ್ತತ್ವಾತ್ । ಯತ ಏವಂ ತಲ್ಲಿಙ್ಗಾದ್ ಅಸೌ ಛನ್ದೋಗಶ್ರುತ್ಯುಕ್ತಾಕಾಶೋ ವಿಷ್ಣುರೇವ, ತತ ಏವ 'ಕೋ ಹಿ' ಇತಿ ತೈತ್ತಿರೀಯವಾಕ್ಯೇऽಪ್ಯಸಾವೇವ ಪ್ರತಿಪಾದ್ಯತ ಇತಿ ತಸ್ಯೈವಾऽನನ್ದಮಯತ್ವೇ ಹೇತುರುಕ್ತೋ ನ ತು ಭೂತಸ್ಯ । ಅತೋ ಭೂತಾಕಾಶಸ್ಯಾऽನನ್ದಮಯತ್ವೇ ಹೇತುರುಕ್ತಃ, ನ ತು ವಿಷ್ಣೋರಿತಿ ನ ಮನ್ತವ್ಯಮಿತಿ । ಅನೇನ ಸೂತ್ರಯೋಜನಾ ದರ್ಶಿತಾ ।

ಪ್ರತಿಪದಾರ್ಥ -- ಸಿದ್ಧಾಂತ ಹೀಗಿದೆ.

ಇತಿ ನ ಮಂತವ್ಯಮ್ = ಈ ಬಗೆಯ ಸಂಶಯ ಪಡಬಾರದು, ಯತಃ = ಏಕೆಂದರೆ, ಆಕಾಶಃ = ಆಕಾಶಶಬ್ದವಾಚ್ಯನಾದವನು ಆನಂದಮಯನಾದ ವಿಷ್ಣುವೇ ಆಗಿದ್ದಾನೆ. ತಲ್ಲಿಂಗಾತ್ = ವಿಷ್ಣುವಿನ ಅಸಾಧಾರಣಧರ್ಮಗಳು ಕೇಳಿಸುತ್ತಿರುವುದರಿಂದ,

ಅಸ್ಯ ಲೋಕಸ್ಯ = ಪ್ರತ್ಯಕ್ಷಸಿದ್ಧವಾದ ಈ ಪೃಥಿವಿಗೆ, ಕಾ ಗತಿಃ = ಯಾರು ಆಧಾರ? ಇತಿ = ಈ ಪ್ರಶ್ನೆಗೆ, ಆಕಾಶ ಇತಿ = ಆಕಾಶವೇ ಗತಿಯೆಂದು, ಉವಾಚ ಹ = ಶ್ರುತಿಯು ಹೇಳುತ್ತಿದೆಯಷ್ಟೇ. ಅತ್ರ = ಈ ವಾಕ್ಯದಲ್ಲಿ, ಭೂತಾಕಾಶಸ್ಯ = ಭೂತಾಕಾಶಕ್ಕೆ, ಪ್ರಾಪ್ತಿಃ = ಪ್ರಸಕ್ತಿ ಇದೆ; ಅಸೌ = ಈ ಭೂತಾಕಾಶವು, ನ ಯುಜ್ಯತೇ = ಪ್ರತಿಪಾದ್ಯವಾಗುವುದಿಲ್ಲ; ಕಿಂತು = ಆದರೆ, ವಿಷ್ಣುರೇವ = ವಿಷ್ಣುವೇ ಆಕಾಶನು. ಏಕೆಂದರೆ,

---

'अस्य' इत्यादेरयमर्थः – 'अस्य' प्रत्यक्षसिद्धस्य पृथिवीलोकस्य तदभिमानिनश्चतुर्मुखस्य 'का गतिः' आश्रय इति शिलकेन पृष्टः प्रवाहणो राजा आदीप्तत्वादाकाशनामको विष्णुरिति प्रत्युवाच । कथमित्याकाङ्क्षायां तदुपपादनाय तस्याऽऽकाशस्य महिमानमाह – 'सर्वाणि हवा इमानि भूतान्याकाशादेव समुत्पद्यन्ते आकाशं प्रत्यस्तं यन्ति आकाशो ह्येवैभ्यो ज्यायानाकाशः परायणं स एष परोवरीयानुद्गीथः स एषोऽनन्तः' इति । अत्र वैशब्दस्य प्रसिद्धिद्योतकस्य सन्निहितसर्वभूतान्वयो वा, 'स्युरेवं तु पुनर्वैवेत्यव-धारणवाचकाः' इत्यभिधानादवधारणार्थत्वं वा द्रष्टव्यम् । भूतशब्दो भूताकाश एवात्रोच्यते इति पूर्वपक्षे आकाशव्यतिरिक्तभूतपरः । सिद्धान्ते तु सर्वभूतपरः । ब्रह्मादिसर्वजगत्परो वा । तथा च 'सर्वाणीमानि' प्रमितानि आकाशादिभूतानि ब्रह्मादिजगद्वा आकाशादेव समुत्पद्यन्ते । 'हवै' प्रसिद्धं हि । आकाशं 'प्रत्यस्तम्' अदर्शनं 'यन्ति' तत्रैव प्रलये मुक्तौ च लीनाः भवन्ति । कुतः ? 'हि' यस्मादाकाश एव 'एभ्यः' ब्रह्मादिभ्यो 'ज्यायान्' अधिकोत्तमः । कुत एतत् यत आकाशः 'परायणम्' उत्तमाश्रयः नैतस्मादुत्तमं वस्त्वाशङ्क्यमिति भावेनाऽह – स इति ॥ 'स एषः' आकाशनामा भगवान् 'परोवरीयान्' अत्र –

**'परस्मादुत्तमं प्रोक्तं परो इति ततः परम् ।**
**परोवरं परं तस्मात् प्रोक्तं पारोवरीयकम् ॥'**

इति सामसंहितावचनानुसारेणाऽदौ पर इति शब्दान्तरस्य मध्ये वरशब्दान्तरस्य चाऽवापेन वृत्तिवाक्ये सुबादेशस्य सोरुलोपेन रुत्वोत्वगुणेषु समाने परे ओप्तशब्दद्वयस्य लोपे चोत्तमोत्तमोत्तम इत्यर्थो ज्ञातव्यः । 'उद्गीथः' उच्चत्वेन गीत उक्तो वेदेन । तकारस्य थकारो व्यत्ययात् । 'स एषः' आकाशः 'अनन्तः' देशकालगुणैरपरिच्छन्न इति । छान्दोग्यभाष्ये तु 'उच्चत्वाद्गीतत्वात् सर्वस्थानस्थत्वादुद्गीथो भगवान्' इति व्याख्यातम् ।

ಸ ಏಷಃ = ಪ್ರಸಿದ್ಧನಾದ ಪರಮಾತ್ಮನೇ, ಪರೋವರೀಯಾನ್ = (ಪರಃ) ರುದ್ರಬ್ರಹ್ಮಲಕ್ಷ್ಮೀದೇವಿಯರಿಗಿಂತ (ವರೀಯಾನ್=) ಶ್ರೇಷ್ಠನಾಗಿದ್ದಾನೆ. ಉದ್ಗೀಥಃ = ಸಕಲವೇದಗಳಿಂದ ಗಾನ ಮಾಡಿಸಿಕೊಳ್ಳಲು ಅರ್ಹನಾಗಿದ್ದಾನೆ. ಸ ಏಷಃ = ಇಂತಹ ವಿಷ್ಣುವೇ, ಅನಂತಃ = ಸಕಲವಿಧನಾಶರಹಿತನು. ಇತ್ಯಾದಿ = ಇವೇ ಮೊದಲಾದ, ತಲ್ಲಿಂಗಾತ್ = ವಿಷ್ಣುವಿನ ಧರ್ಮಗಳಿರುವುದರಿಂದ, ವಿಷ್ಣುವೇ ಆಕಾಶನು.

**ತತ್ವಪ್ರಕಾಶಿಕಾ – ಸಿದ್ಧಾನ್ತಯತಿ ಇತೀತಿ ॥ ಕುತೋ ನ ಮನ್ತವ್ಯಮ್? ಇತ್ಯಾಶಙ್ಕಾಯಾಂ ಹೇತುತಯಾ ಸೂತ್ರಮುಪಾದತ್ತೇ – ಯತ ಸತಿ ॥ ವಿಷಯಾದೇಃ ಪೂರ್ವಂ ಮುಖತೋऽನುಕ್ತೇಃ ತದನುವಾದಪೂರ್ವಕಂ ಸೂತ್ರಂ ವ್ಯಾಚಷ್ಟೇ – ಅಸ್ಯೇತಿ ॥ ಯದ್ಯಪಿ 'ಅಸ್ಯ ಲೋಕಸ್ಯ ಕಾ ಗತಿಃ' ಇತಿ ವಾಕ್ಯೇ ಭೂತಾಕಾಶಸ್ಯೋಕ್ತರೀತ್ಯಾऽಸ್ತಿ ಪ್ರತಿಪಾದ್ಯತ್ವಪ್ರಾಪ್ತಿಃ, ತಸ್ಯಾಪಿ ನಾಸಾವತ್ರ ವಾಚ್ಯೋ ಯುಜ್ಯತೇ, ಅಪಿ ತು ವಿಷ್ಣುರೇವ ಯುಜ್ಯತೇ ಪರೋವರೀಯಸ್ತ್ವಾದಿವಿಷ್ಣುಲಿಙ್ಗಸ್ಯಾऽऽಕಾಶನಿಷ್ಠತಯಾ ಶ್ರವಣಾತ್ । ಏವಂ 'ಯತಸ್ತಲ್ಲಿಙ್ಗಾತ್ ಛನ್ದೋಗಶ್ರುತ್ಯುಕ್ತಾऽऽಕಾಶೋ ವಿಷ್ಣುಃ, ತತಶ್ಚ 'ಕೋ ಹಿ' ಇತ್ಯತ್ರಾಪಿ ಸ ಏವ ಪ್ರತಿಪಾದ್ಯತ ಇತಿ ತಸ್ಯೈವಾऽऽನನ್ದಮಯತ್ವೇ ಹೇತುರುಕ್ತೋऽತ ಆಕಾಶಸ್ಯಾऽऽನನ್ದಮಯತ್ವೇ ಹೇತುರುಕ್ತ ಇತಿ ನ ಮನ್ತವ್ಯಮ್' ಇತ್ಯರ್ಥಃ ।**

**'ಪರಸ್ಮಾದುತ್ತಮಂ ಪ್ರೋಕ್ತಂ ಪರೋ ಇತಿ ತತಃ ಪರಮ್ ।**
**ಪರೋವರಂ ಪರಂ ತಸ್ಮಾತ್ ಪ್ರೋಕ್ತಂ ಪಾರೋವರೀಯಕಮ್'**

**ಇತಿ ಸ್ಮೃತಿಃ । ಉಚ್ಚತ್ವೇನ ಗೀತ ಉದ್ಗೀತಃ ಸ ಏವೋದ್ಗೀಥಃ ॥**

ಸಿದ್ಧಾಂತ -- ಭಾಷ್ಯಕಾರರು "ಇತಿ" ಇತ್ಯಾದಿ ಗ್ರಂಥದಿಂದ ಸಿದ್ಧಾಂತವನ್ನು ಮಾಡಿದ್ದಾರೆ. ಭೂತಾಕಾಶವನ್ನು ಆಕಾಶ ಪದದಿಂದ ಏಕೆ ವಿವಕ್ಷಿಸಬಾರದು? ಎಂಬ ಶಂಕೆಗೆ ಉತ್ತರಿಸುವ ಸೂತ್ರವನ್ನೇ ಯತಃ ಎಂದು ಉಲ್ಲೇಖಿಸಿದ್ದಾರೆ. ಈ ಅಧಿಕರಣದಲ್ಲಿ ವಿಷಯಾದಿಗಳನ್ನು ಸ್ಪಷ್ಟವಾಗಿ ಇದುವರೆಗೂ ಭಾಷ್ಯಕಾರರು ಹೇಳಿಲ್ಲ. ಆದ್ದರಿಂದ ವಿಷಯವಾಕ್ಯವನ್ನು ಅನುವಾದ ಮಾಡುವ ಮೂಲಕ 'ಅಸ್ಯ' ಇತ್ಯಾದಿಯಾಗಿ ವ್ಯಾಖ್ಯಾನಿಸುತ್ತಿದ್ದಾರೆ.

ವಸ್ತುತಸ್ತು 'ಅಸ್ಯ ಲೋಕಸ್ಯ ಕಾ ಗತಿಃ' ಎಂಬ ಶ್ರುತಿಯಲ್ಲಿ ಪೂರ್ವಪಕ್ಷಕಾರರು ಹೇಳಿದಂತೆ ಭೂತಾಕಾಶವು ಪ್ರತಿಪಾದ್ಯವೆಂದು ತಿಳಿಯುತ್ತದೆ. ಆದರೆ ಇದು ಸರಿಯಲ್ಲ. ವಿಷ್ಣುವೇ ಇಲ್ಲಿರುವ ಆಕಾಶಶಬ್ದದಿಂದ ಪ್ರತಿಪಾದ್ಯನಾಗಿದ್ದಾನೆ. ಈ ಶ್ರುತಿಯಲ್ಲಿ ವಿಷ್ಣುವಿನಲ್ಲಿ ಅಸಾಧಾರಣವಾಗಿರುವ ಪರೋವರೀಯಸ್ತ್ವಾದಿ ಲಿಂಗಗಳನ್ನು ಹೇಳಲಾಗಿದೆ. ಇದರಿಂದ ಛಾಂದೋಗ್ಯಶ್ರುತಿಯಲ್ಲಿರುವ ಆಕಾಶಶಬ್ದವು ವಿಷ್ಣುವನ್ನೇ ಪ್ರತಿಪಾದಿಸಬೇಕು. ಛಾಂದೋಗ್ಯದಲ್ಲಿರುವ ಆಕಾಶಶಬ್ದವು ವಿಷ್ಣುವನ್ನು ಪ್ರತಿಪಾದಿಸಿದರೆ 'ಕೋ ಹಿ' ಎಂಬ ತೈತ್ತಿರೀಯಶ್ರುತಿಯ ಆಕಾಶಶಬ್ದವೂ ಕೂಡ ವಿಷ್ಣುವನ್ನೇ

ಪ್ರತಿಪಾದಿಸಬೇಕಾಗುತ್ತದೆ. ವಿಷ್ಣುವು ಆನಂದಮಯನೆನ್ನಲು ಕೋ ಹಿ ಎಂಬ ಶ್ರುತಿಯು ಲಿಂಗವನ್ನು ಹೇಳುತ್ತಿದೆ ಎಂದು ಅನಿವಾರ್ಯವಾಗಿ ಅಂಗೀಕರಿಸಬೇಕು.

ಪರಸ್ಮಾದುತ್ತಮಂ ಪ್ರೋಕ್ತಂ ಪರೋ ಇತಿ ತತಃ ಪರಮ್ ।
ಪರೋವರಂ ಪರಂ ತಸ್ಮಾತ್ ಪ್ರೋಕ್ತಂ ಪಾರೋವರೀಯಕಮ್ ॥

ಪರ = ಭಾರತೀದೇವಿಗಿಂತ ಉತ್ತಮರಾಗಿರುವರು ಬ್ರಹ್ಮದೇವರು, ಬ್ರಹ್ಮದೇವರಿಗಿಂತ ಉತ್ತಮರಾದವರು ಪರೋ = ಲಕ್ಷ್ಮೀದೇವಿಯು; ಲಕ್ಷ್ಮೀದೇವಿಗಿಂತ ಉತ್ತಮನಾದವನು ಪರೋವರ = ಭಗವಂತನು; ಈ ಪರೋವರನೇ ಪಾರೋವರೀಯಕನಾಗಿದ್ದಾನೆ. (ಪರ + ಉ, ಎಂದಿರಬೇಕಾದರೆ ಗುಣ ಬಂದು ಪರೋ ಎಂದಾಗಿದೆ. ಪರ = ಬ್ರಹ್ಮ, ಪರೋ = ಲಕ್ಷ್ಮಿ, ಈಯಸುನ್ ಪ್ರತ್ಯಯ ಬಂದು ಪರೋವರೀಯ ಎಂಬ ರೂಪವು ನಿಷ್ಪನ್ನವಾಗಿದೆ. ಪರೋವರೀಯಃ ಏವ ಪಾರೋವರೀಯಕಮ್) ಈ ಸ್ಮೃತಿಯ ಪ್ರಕಾರ ಪರೋವರೀಯಸ್ತ್ವವು ಭಗವಂತನ ಅಸಾಧಾರಣಲಿಂಗವೆಂದು ತಿಳಿಯುತ್ತದೆ ಮತ್ತು ಉಚ್ಚತ್ವೇನ = ಸರ್ವೋತ್ತಮನೆಂದು, ಗೀತಃ = ಗಾನಮಾಡಲ್ಪಡುವವನು; ಆದ್ದರಿಂದ ಭಗವಂತನು ಉದ್ಗೀಥನೆನಿಸಿದ್ದಾನೆ. ಈ ಉದ್ಗೀಥತ್ವವು ಕೂಡ ಭಗವಂತನ ಅಸಾಧಾರಣಲಿಂಗವಾಗಿದೆ.

**ಭಾವದೀಪಃ – ಮುಖತ ಇತಿ ॥ ಫಲೋಕ್ತಿಪರವಾಕ್ಯೇನ ಸೂಚಿತತ್ವಾತ್ 'ಮುಖತಃ' ಇತ್ಯುಕ್ತಿಃ । ವ್ಯಾಘಾತಾದಿಭ್ರಾನ್ತಿಂ ನಿರಸ್ಯನ್ ಭಾಷ್ಯಂ ವ್ಯಾಚಷ್ಟೇ – ಯದ್ಯಪೀತಿ ॥ 'ತಲ್ಲಿಙ್ಗಾತ್' ಇತ್ಯತ್ರ 'ತತ್' ಇತಿ ತನ್ತ್ರಂ ಷಷ್ಠ್ಯನ್ತಂ ಸಪ್ತಮ್ಯನ್ತಂ ಚೇತಿ ಮತ್ವಾऽऽಹ – ವಿಷ್ಣುಲಿಙ್ಗಸ್ಯೇತಿ ॥ ಹೇತುತಯಾ ಸೂತ್ರಮುಪಾದತ್ತ ಇತ್ಯುಕ್ತಂ ವ್ಯನಕ್ತಿ – ಏವಮಿತಿ ॥**

**ಸ ಏವೇತಿ ॥ ನಿರವಕಾಶಲಿಙ್ಗೇನ ಭೂತೇ ಅಜ್ಞಪ್ರಸಿದ್ಧಿಬಾಧಸ್ಯ ಛಾನ್ದೋಗ್ಯವಾಕ್ಯ ಇವ ತೈತ್ತಿರೀಯವಾಕ್ಯೇऽಪಿ ವಿಶ್ವಚೇಷ್ಟಕತ್ವರೂಪನಿರವಕಾಶಾನ್ನಹಿಲಿಙ್ಗಭಾವೇನ ಭೂತೇ ಅಜ್ಞಪ್ರಸಿದ್ಧಿಬಾಧಸ್ಯ ತುಲ್ಯತ್ವಾದಿತಿ ಭಾವಃ ।**

"ಮುಖತಃ" ಎಂಬ ಟೀಕಾಭಾಗದಿಂದ ಫಲವನ್ನು ಹೇಳುವ ವಾಕ್ಯದಿಂದ ಸೂಚಿಸಿದ್ದರಿಂದ ಮುಖತಃ ಎಂದಿದ್ದಾರೆ. 'ಆಚಾರ್ಯರ ವಾಕ್ಯವು ವ್ಯಾಹತ' ಎಂಬ ಭ್ರಾಂತಿಯನ್ನು ನಿರಾಕರಿಸಲು ಭಾಷ್ಯವನ್ನು "ಯದ್ಯಪಿ" ಎಂಬಿತ್ಯಾದಿಯಾಗಿ ವ್ಯಾಖ್ಯಾನಿಸುತ್ತಿದ್ದಾರೆ. "ತಲ್ಲಿಂಗಾತ್" ಎಂಬ ಸೂತ್ರದ ಭಾಗದಲ್ಲಿ 'ತತ್' ಎಂಬ ಶಬ್ದವನ್ನು ತಂತ್ರದಿಂದ ಷಷ್ಠೀವಿಭಕ್ತ್ಯಂತವಾಗಿ 'ತಸ್ಯ' ಎಂದೂ, ಸಪ್ತಮೀ ವಿಭಕ್ತ್ಯಂತವಾಗಿ 'ತಸ್ಮಿನ್' ಎಂದೂ ಇಟ್ಟುಕೊಳ್ಳಬೇಕು ಎಂಬ ಅಭಿಪ್ರಾಯವನ್ನಿಟ್ಟುಕೊಂಡು "ವಿಷ್ಣುಲಿಂಗಸ್ಯ" ಎಂದು ಹೇಳಿದ್ದಾರೆ. 'ಹೇತುತಯಾ ಸೂತ್ರಮುಪಾದತ್ತೇ' (ಹೇತುವನ್ನಾಗಿ ಸೂತ್ರವನ್ನು ಹೇಳಿದ್ದಾರೆ) ಎಂದು ಹೇಳಿದ್ದನ್ನು "ಏವಮ್" ಎಂಬುದಾಗಿ ವ್ಯಕ್ತಪಡಿಸುತ್ತಾರೆ.

''ಸ ಏವ'' ಎಂಬ ವಾಕ್ಯದಿಂದ 'ಛಾಂದೋಗ್ಯಪನಿಷತ್ತಿನಲ್ಲಿರುವ ಆಕಾಶಶಬ್ದಕ್ಕೆ ಭೂತಾಕಾಶದಲ್ಲಿರುವ ಅಜ್ಞರ ಪ್ರಸಿದ್ಧಿಗೆ ನಿರವಕಾಶವಾದ 'ಪರೋವರೀಯಸ್ತ್ವ' ಮುಂತಾದ ಲಿಂಗದಿಂದ ಬಾಧವನ್ನು ಹೇಳುವಂತೆ, ತೈತ್ತಿರೀಯವಾಕ್ಯದಲ್ಲಿರುವ ಆಕಾಶಶಬ್ದಕ್ಕೆ ಭೂತಾಕಾಶದಲ್ಲಿರುವ ಅಜ್ಞರ ಪ್ರಸಿದ್ಧಿಗೆ ವಿಶ್ವಚೇಷ್ಟಕತ್ವರೂಪವಾದ ನಿರವಕಾಶವಾದ ಬ್ರಹ್ಮನ ಲಿಂಗವಿರುವುದರಿಂದ ಬಾಧವನ್ನು ಹೇಳುವುದು ಸಮಾನವಾಗಿದೆ' ಎಂದು ಅಭಿಪ್ರಾಯ.

**ಭಾವದೀಪಃ – ಭಾಷ್ಯೇ ಅತ್ರಾನುಕ್ತಮಪಿ ದ್ವಿತೀಯಛಾಂದೋಗ್ಯಭಾಷ್ಯೋಕ್ತಮರ್ಥಂ ವ್ಯನಕ್ತಿ – ಪರಸ್ಮಾದಿತಿ ॥ 'ಉಚ್ಚೋऽಸೌ ಗೀಯತೇ ಚ' ಇತಿ ಛಾಂದೋಗ್ಯಭಾಷ್ಯೋಕ್ತೇಃ । 'ಉದ್ಗೀಯಮಾನ ಉದ್ಗೀಥೋ ಭಗವಾನ್ ಪುರುಷೋತ್ತಮಃ' ಇತಿ ಸ್ಮೃತೇಶ್ಚಾಹ – ಉಚ್ಚತ್ವೇನೇತಿ ॥ ಸರ್ವೋತ್ತಮತ್ವೇನ ಪರೋವರೀಯಸ್ತ್ವೋದ್ಗೀಥತ್ವಯೋರ್ದ್ವಯೋರಪ್ಯುಕ್ತಿಃ ।**

ಇಲ್ಲಿ ಭಾಷ್ಯದಲ್ಲಿ ಹೇಳದಿದ್ದರೂ ದ್ವಿತೀಯಾಧ್ಯಾಯದ ಛಾಂದೋಗ್ಯಭಾಷ್ಯದಲ್ಲಿ ಹೇಳಿದ ಅರ್ಥವನ್ನು ''ಪರಸ್ಮಾತ್'' ಎಂಬಿತ್ಯಾದಿಯಾಗಿ ವ್ಯಕ್ತಪಡಿಸುತ್ತಾರೆ. 'ಉತ್ತಮನಾದ ಈ ಭಗವಂತನು ಗಾನಮಾಡಲ್ಪಡುತ್ತಾನೆ' ಎಂದು ಛಾಂದೋಗ್ಯಭಾಷ್ಯದಲ್ಲಿ ಹೇಳಿದೆ. 'ಉದ್ಗೀಯಮಾನ ಉದ್ಗೀಥೋ ಭಗವಾನ್ ಪುರುಷೋತ್ತಮಃ' ಎಂಬ ಸ್ಮೃತಿಯೂ ಇರುವುದರಿಂದ ''ಉಚ್ಚತ್ವೇನ'' ಎಂದು ಹೇಳಿದ್ದಾರೆ. ಭಗವಂತನು ಸರ್ವೋತ್ತಮನಾದ್ದರಿಂದ ಪರೋವರೀಯಸ್ತ್ವ ಮತ್ತು ಉದ್ಗೀಥತ್ವ ಎರಡನ್ನೂ ಹೇಳಿದ್ದಾರೆ.

### ಅನಂತತ್ವ ಮತ್ತು ಸರ್ವೋತ್ತಮತ್ವಗಳು ವಿಷ್ಣುವಿನ ಲಿಂಗಗಳು

**ಭಾಷ್ಯಮ್ – 'ವಿಷ್ಣೋರ್ನು ಕಂ ವೀರ್ಯಾಣಿ ಪ್ರವೋಚಂ ಯಃ ಪಾರ್ಥಿವಾನ್ ವಿಮಮೇ ರಜಾಂಸಿ' (ಋ. ೧-೧೫೪-೧.) 'ಪರೋ ಮಾತ್ರಯಾ ತನ್ವಾ ವೃಧಾನ' (ಋ. ೭-೯೯-೧.) ಇತ್ಯಾದಿನಾ ತಸ್ಯೈವ ಹಿ ತಲ್ಲಿಙ್ಗಮ್ ।**

---

ಭಾಷ್ಯದೀಪಿಕಾ –'ಸ ಏಷೋऽನನ್ತಃ' ಇತ್ಯುಕ್ತಾನನ್ತತ್ವಸ್ಯಾಪರಿಮಿತತ್ವಸ್ಯ ವಿಷ್ಣುನಿಷ್ಠತ್ವಂ ಕುತೋ ಜ್ಞಾಯತ ಇತ್ಯತ ಆಹ- ವಿಷ್ಣೋರಿತಿ ॥ ವಿಷ್ಣೋರ್ವೀರ್ಯಾಣಿ 'ಕಂ' ಕೋ ನು ಕೋ ವಾ 'ಪ್ರವೋಚಮ್' ಪ್ರಾವೋಚತ್ । ಸಾಕಲ್ಯೇನ ಪ್ರವಕ್ತಿ ನ ಕೋऽಪಿ । 'ಯಃ' ಕಃ ಕವಿರ್ಬ್ರಹ್ಮಾ 'ಪಾರ್ಥಿವಾನಿ ರಜಾಂಸಿ' ಪಾರ್ಥಿವಪರಮಾಣೂನ್ 'ವಿಮಮೇ' ಗಣಯತಿ । ಸೋऽಪಿ ನ ಪ್ರವಕ್ತೀತಿ ಶ್ರುತ್ಯರ್ಥಃ ।

'ಪರೋವರೀಯಾನ್' ಇತ್ಯುಕ್ತಸರ್ವೋತ್ತಮತ್ವಸ್ಯ ವಿಷ್ಣುಧರ್ಮತ್ವಂ ಕುತ ಇತ್ಯತ ಆಹ - ಪರ ಇತಿ ॥ ಅತ್ರ 'ನ ತೇ ಮಹಿತ್ವಮನ್ವಶ್ನುವನ್ತಿ' ಇತಿ ಉತ್ತರವಾಕ್ಯಾದುಕ್ತಾರ್ಥೋ ಜ್ಞಾಯತೇ । ಅತ ಏವಾऽದಿಶಬ್ದ ಉಭಯಾನ್ವಯೀ । ತತ್ರಾऽಽದ್ಯೋ 'ವಿಷ್ಣೋರ್ನು ವೀರ್ಯಗಣನಾಂ ಕತಮೋऽರ್ಹತೀಹ ಯಃ ಪಾರ್ಥಿವಾನ್ಯಪಿ ಕವಿರ್ವಿಮಮೇ ರಜಾಂಸಿ' ಇತಿ ಸ್ಮೃತಿಗ್ರಾಹೀ । ವ್ಯಾಖ್ಯಾತೇಯಂ ಶ್ರುತಿರ್ಜನ್ಮನಯೇ । ಇತ್ಯಾದಿನಾ ವಾಕ್ಯೇನೇತಿ ಶೇಷಃ । ಯದ್ಯಪಿ ಶ್ರುತ್ಯನುಸಾರಾತ್ ಸರ್ವೋತ್ತಮತ್ವೇ ಪ್ರಥಮಂ ಪ್ರಮಾಣಂ ವಕ್ತವ್ಯಂ ನ

'ಸಮಗ್ರ ಬ್ರಹ್ಮಾಂಡಲ್ಲಿರುವ ಧೂಳಿನ ಕಣಗಳನ್ನಾದರೂ ಎಣಿಸಬಹುದು; ಆದರೆ ವಿಷ್ಣುವಿನ ಮಹಿಮೆಯನ್ನು ಯಾರು ತಾನೆ ಎಣಿಸಿಯಾನು?' 'ಎಲೈ ಪರಮಾತ್ಮನೇ! ನೀನು ದೇಶಕಾಲಗಳ ಮಿತಿಯನ್ನು ಮೀರಿದವನು; ದೇಹದಿಂದಲೂ ನೀನು ಸರ್ವತ್ರ ವ್ಯಾಪ್ತನು; ಆದ್ದರಿಂದಲೇ ಸರ್ವೋತ್ತಮನು' ಹೀಗೆ ವಿಷ್ಣುಸೂಕ್ತದ ಆಧಾರದಿಂದ ಛಾಂದೋಗ್ಯದಲ್ಲಿ ಹೇಳಲ್ಪಟ್ಟ ಅನಂತತ್ವ ಮತ್ತು ಸರ್ವೋತ್ತಮತ್ವ ಗುಣಗಳು ವಿಷ್ಣುವಿನದ್ದೇ ಎಂದು ತಿಳಿಯಲ್ಪಡುತ್ತದೆ.

ಪ್ರತಿಪದಾರ್ಥ– ಅನಂತತ್ವ ಹಾಗೂ ಅಪರಿಮಿತತ್ವಗಳು ವಿಷ್ಣುವಿನ ಅಸಾಧಾರಣ ಧರ್ಮಗಳೆಂದು ಹೇಗೆ ನಿರ್ಣಯಿಸುತ್ತೀರಿ? ಎಂಬ ಪ್ರಶ್ನೆಗೆ ಉತ್ತರಿಸುತ್ತಿದ್ದಾರೆ.

ವಿಷ್ಣೋಃ = ಭಗವಂತನ, ವೀರ್ಯಾಣಿ = ಮಹಿಮೆಗಳನ್ನು, ಕಂ ನು = ಯಾರು ತಾನೇ, ಪ್ರವೋಚಮ್ = ಸಂಪೂರ್ಣವಾಗಿ ಹೇಳಲು ಸಮರ್ಥರು? (ಯಾರೂ ಇಲ್ಲ). ಯಃ = ಯಾವ ಬ್ರಹ್ಮನು, ಪಾರ್ಥಿವಾನಿ = ಸಮಗ್ರ ಪೃಥಿವಿಯಲ್ಲಿರುವ, ರಜಾಂಸಿ = ಪರಮಾಣುಗಳನ್ನು, ವಿಮಮೇ = ಕ್ಷಣಮಾತ್ರದಲ್ಲಿ ಎಣಿಸಬಲ್ಲನು; (ಅಂತಹ ಬ್ರಹ್ಮನೂ ಸಹ ವಿಷ್ಣುವಿನ ಗುಣಗಳನ್ನು ಹೇಳಲು ಅಸಮರ್ಥನು).

ಪರೋವರೀಯಾನ್ ಎಂಬಲ್ಲಿ ಹೇಳಿದ ಸರ್ವೋತ್ತಮತ್ವವು ವಿಷ್ಣುವಿನ ಧರ್ಮವೆಂದು ಹೇಗೆ ತಿಳಿಯುತ್ತದೆ ಎಂಬುದಕ್ಕೆ ಉತ್ತರಿಸುತ್ತಿದ್ದಾರೆ.

ಮಾತ್ರಯಾ ತನ್ವಾ = ಮಿತವಾದ ತನ್ನ ದೇಹದಿಂದ, ಪರಃ = ಪರಮಾತ್ಮನು, ವೃಧಾನ = ಸಮಸ್ತಜಗತ್ತನ್ನು ವ್ಯಾಪಿಸಿದ್ದಾನೆ; ಇತ್ಯಾದಿನಾ = ಇವೇ ಮೊದಲಾದ ಪ್ರಮಾಣಗಳಿಂದ, ತಲ್ಲಿಂಗಮ್ = ಛಾಂದೋಗ್ಯದಲ್ಲಿ ಹೇಳಲ್ಪಟ್ಟ ಧರ್ಮಗಳು, ತಸ್ಯೈವ ಹಿ = ವಿಷ್ಣುವಿನದ್ದೇ ಎಂದು ನಿರ್ಣಯವಾಗುತ್ತದಷ್ಟೇ.

**तत्वप्रकाशिका – ननु सर्वोत्तमत्वानन्तत्वयोः कुतो विष्णुर्लिङ्गत्वम्?, इत्यत आह – विष्णोरिति ॥ विष्णोर्वीर्याणि को नु प्रवक्ति, योऽपि पार्थिव-परमाणून् गणयतीति तस्यानन्तत्वमुच्यते । 'परो मात्रया' इत्यनेन सर्वोत्त-मत्वम् ।**

---

त्वनन्तत्वे । अत एव टीकायामादौ सर्वोत्तमत्वं गृहीतम् । तथाऽपि अनन्तत्वस्य सावकाशत्वशङ्काविषयत्वात् प्रथमं तत्र प्रमाणोपन्यासः । अत एव तत्रैवोत्तरत्र स्मृत्या सावकाशत्वशङ्कापरिहारः । 'तस्य' विष्णोः हिशब्दो यत इत्यर्थे । 'तत्' अनन्तत्वादि 'लिङ्गं' धर्म इत्यवगतम् । अतो न हेतुविशेषणासिद्धिरिति वाक्यशेषः । एवकारपाठे नानैकान्त्यमिति शेषः । उत्तरत्रान्वयो वा । यद्यपि 'अनन्तः' इति श्रुतिः; वाचकशब्दत्वात् । तथाऽपि तत्पदप्रवृत्तिनिमित्तस्य लिङ्गत्वमप्यविरुद्धम् ।

ಪರೋವರೀಯಸ್ತ್ವ ಮತ್ತು ಉದ್ಗೀಥತ್ವಗಳು ವಿಷ್ಣುವಿನ ಲಿಂಗಗಳಾಗಲಿ; ಆದರೆ ಅನಂತತ್ವ, ಸರ್ವೋತ್ತಮತ್ವಗಳು ವಿಷ್ಣುವಿನ ಲಿಂಗವೆಂದು ಹೇಗೆ ನಿರ್ಣಯಿಸುತ್ತೀರಿ? ಈ ಪ್ರಶ್ನೆಗೆ 'ವಿಷ್ಣೋರ್ನು ಕಂ' ಎಂಬ ಶ್ರುತಿಯಿಂದ ಉತ್ತರಿಸುತ್ತಿದ್ದಾರೆ.

ಯಾವ ಚತುರ್ಮುಖಬ್ರಹ್ಮದೇವರು ಸಕಲಪಾರ್ಥಿವಪರಮಾಣುಗಳನ್ನು ಕ್ಷಣಮಾತ್ರದಲ್ಲಿ ಎಣಿಸುತ್ತಾರೋ ಅಂತಹ ಬ್ರಹ್ಮದೇವರೂ ಕೂಡ ಭಗವಂತನ ಪರಾಕ್ರಮಗಳನ್ನು ಎಣಿಸಲಾರರು' ಎಂಬ ಶ್ರುತಿಯ ಮಾತಿನಂತೆ ಅನಂತತ್ವಗುಣವು ಭಗವಂತನ ಅಸಾಧಾರಣಧರ್ಮವೆಂದು ತಿಳಿಯುತ್ತದೆ. ಇನ್ನು 'ಪರೋ ಮಾತ್ರಯಾ' ಎಂಬ ಶ್ರುತಿಯು ಹೇಳುವಂತೆ ಸರ್ವೋತ್ತಮತ್ವ-ಧರ್ಮವೂ ಕೂಡ ಭಗವಂತನಲ್ಲಿ ಅಸಾಧಾರಣವಾಗಿದೆಯೆಂದು ತಿಳಿಯುತ್ತದೆ.

**ಭಾವದೀಪಃ – ಕಂ ಕಃ । ಪ್ರವೋಚಂ ಪ್ರವಕ್ತಿ । ವಿಮಮೇ ಗಣಯತಿ ।**

ತತ್ತ್ವಪ್ರದೀಪೇ ತು –

**ವಿಷ್ಣೋರ್ನು ವೀರ್ಯಗಣನಾಂ ಕತಮೋಽರ್ಹತೀಹ**
**ಯಃ ಪಾರ್ಥಿವಾನ್ಯಪಿ ಕವಿರ್ವಿಮಮೇ ರಜಾಂಸಿ ।**
**ಚಸ್ಕಮ್ಭ ಯಃ ಸ್ವರಭಸಾಚ್ಚಲಿತಂ ತ್ರಿಪೃಷ್ಠಂ**
**ಯನ್ಮಾಂ ನಿಶಾಮ್ಯ ಸದನಾದುರುಕಂಪಮಾನಮ್ ॥**

**ಇತಿ ಭಾಗವತವಚನಾದಸ್ಯಾರ್ಥೋಽವಗಮ್ಯತ ಇತ್ಯುಕ್ತಮ್ । 'ಪರೋ ಮಾತ್ರಯಾ' ಇತಿ ಶ್ರುತ್ಯರ್ಥೋ ಜನ್ಮಾದಿನಯೇऽಭಿಹಿತಃ ।**

ಭಾಷ್ಯೋದಾಹೃತ 'ವಿಷ್ಣೋರ್ನುಕಂ ವೀರ್ಯಾಣಿ' ಎಂಬ ಶ್ರುತಿಯಲ್ಲಿ 'ಕಂ' ಎಂದರೆ 'ಕಃ' (ಯಾವನು) ಎಂದರ್ಥ. 'ಪ್ರವೋಚಂ' ಎಂದರೆ 'ಪ್ರವಕ್ತಿ' (ಹೇಳುತ್ತಾನೆ) ಎಂದರ್ಥ. 'ವಿಮಮೇ' ಎಂದರೆ ಎಣಿಸುತ್ತಾನೆ ಎಂದರ್ಥ. ತತ್ತ್ವಪ್ರದೀಪದಲ್ಲಾದರೋ —

'ವಿಷ್ಣೋರ್ನು ವೀರ್ಯಗಣನಾಂ ಕತಮೋऽರ್ಹತೀಹ
ಯಃ ಪಾರ್ಥಿವಾನ್ಯಪಿ ಕವಿರ್ವಿಮಮೇ ರಜಾಂಸಿ ।
ಚಸ್ಕಂಭ ಯಃ ಸ್ವರಭಸಾಚ್ಚಲಿತಂ ತ್ರಿಪೃಷ್ಠಂ
ಯನ್ಮಾಂ ನಿಶಾಮ್ಯ ಸದನಾದುರುಕಂಪಮಾನಮ್ ॥'

ಎಂಬ ಭಾಗವತದ ಮಾತಿನಿಂದ ಈ ಅಭಿಪ್ರಾಯವು ತಿಳಿಯುತ್ತದೆ ಎಂದು ಹೇಳಿದ್ದಾರೆ. 'ಪರೋ ಮಾತ್ರಯಾ' ಎಂಬ ಶ್ರುತಿಯ ಅರ್ಥವನ್ನು ಜನ್ಮಾದಿಕರಣದಲ್ಲೇ ಹೇಳಲಾಗಿದೆ.

## ಅನಂತತ್ವವೂ ವಿಷ್ಣುವಿನ ಲಿಂಗ - ಬ್ರಾಹ್ಮಪುರಾಣದ ಸಮ್ಮತಿ

**ಭಾಷ್ಯಮ್ –**

**'ಅನನ್ತೋ ಭಗವಾನ್ ಬ್ರಹ್ಮ ಆನನ್ದೇತ್ಯಾದಿಭಿಃ ಪದೈಃ ।**
**ಪ್ರೋಚ್ಯತೇ ವಿಷ್ಣುರೇವೈಕಃ ಪರೇಷಾಮುಪಚಾರತಃ ॥' ಇತಿ ಬ್ರಾಹ್ಮೇ ।**

**'ನಾಮಾನಿ ಸರ್ವಾಣಿ ಯಮಾವಿಶನ್ತಿ' ಇತಿ ಚೋಕ್ತಮ್ ॥ ೨೨ ॥**

**॥ ಇತ್ಯಾಕಾಶಾಧಿಕರಣಮ್ ॥ ೮ ॥**

ಬ್ರಾಹ್ಮಪುರಾಣದಲ್ಲಿ ಅನಂತ ಎಂಬ ಹೆಸರು ವಿಷ್ಣುವಿನದ್ದೇ ಎಂದು ಹೇಳಲಾಗಿದೆ– 'ಅನಂತ, ಭಗವಾನ್, ಬ್ರಹ್ಮ, ಆನಂದ ಎಂಬವೇ ಮೊದಲಾದ ಪದಗಳು ಕೇವಲ ವಿಷ್ಣುವನ್ನೇ ಹೇಳುತ್ತವೆ. ಬೇರೆಯವರನ್ನು ಅಮುಖ್ಯವಾಗಿ ಹೇಳುತ್ತವೆ' ಎಂದು ಭಾಲ್ಲವೇಯ ಶಾಖೆಯು ಜಗತ್ತಿನಲ್ಲಿರುವ ಎಲ್ಲ ಹೆಸರುಗಳು ವಿಷ್ಣುವನ್ನೇ ಹೊಂದುತ್ತವೆಂದು ಹೇಳಿದೆ.

ಪ್ರತಿಪದಾರ್ಥ - ಅನಂತತ್ವವು ವಿಷ್ಣುವಿನ ಲಿಂಗವೆಂದು ಸಮರ್ಥಿಸಲು ಶ್ರುತಿಯನ್ನು ಉಲ್ಲೇಖಿಸುತ್ತಿದ್ದಾರೆ. ಭಗವಾನ್ = ಸಮರ್ಥನಾದವನು, ಅನಂತಃ = ಸಕಲವಿಧನಾಶರಹಿತನು, ಬ್ರಹ್ಮ = ಸಕಲಗುಣಪರಿಪೂರ್ಣನು, ಆನಂದಃ = ಆನಂದಪೂರ್ಣನು, ಇತ್ಯಾದಿಭಿಃ = ಇವೇ ಮೊದಲಾದ, ಪದೈಃ = ಪದಗಳಿಂದ, ವಿಷ್ಣುರೇವೈಕಃ = ವಿಷ್ಣುವೊಬ್ಬನೇ ಮುಖ್ಯವಾಗಿ, ಪ್ರೋಚ್ಯತೇ = ಕರೆಸಿಕೊಳ್ಳಲ್ಪಡುತ್ತಾನೆ. ಪರೇಷಾಂ = ಇತರರಲ್ಲಿ, ಉಪಚಾರತಃ = ಅಮುಖ್ಯವೃತ್ತಿಯಿಂದ, ಪ್ರೋಚ್ಯತೇ = ಹೇಳಲ್ಪಡುತ್ತದೆ. ಇತಿ = ಹೀಗೆ, ಬ್ರಾಹ್ಮೇ = ಬ್ರಹ್ಮಪುರಾಣದಲ್ಲಿ ಹೇಳಲ್ಪಟ್ಟಿದೆ.

---

**ಭಾಷ್ಯದೀಪಿಕಾ –** ನನ್ವನನ್ತತ್ವಮ್ 'ಅನನ್ತಾಕಾಶವತ್ ಪಶ್ಯನ್' ಇತ್ಯಾಕಾಶಸ್ಯಾಪಿ ಸ್ಮರ್ಯತೇ, ಅತಃ ಸಾವಕಾಶತ್ವಾತ್ ಕಥಂ ವಿಷ್ಣೋರೇವ ತಲ್ಲಿಙ್ಗಮಿತ್ಯತಃ ಸ್ಮೃತಿಮಾಹ – ಅನನ್ತ ಇತಿ ॥ ಆನನ್ದೇತಿ ಲುಪ್ತವಿಭಕ್ತಿಕತಾ ನಿರ್ದೇಶಃ । ವಿಷ್ಣುರೇವೈಕೋ ಮುಖ್ಯತಯಾ ಪ್ರೋಚ್ಯತ ಇತಿ ಸಮ್ಬನ್ಧಃ । 'ಪರೇಷಾಂ' ವಿಷ್ಣೋರನ್ಯೇಷಾಮ್ 'ಉಪಚಾರತಃ' ಸ್ವಸ್ವಸಮೀಪಗತಪರಮಾತ್ಮಸಮ್ಬನ್ಧಾದೇವ ವಾಚ್ಯತೇತಿ ಶೇಷಃ । ಇತಿ ಬ್ರಾಹ್ಮ ಇತ್ಯಸ್ಯ ತಸ್ಯೈವ ತಲ್ಲಿಙ್ಗಮಿತ್ಯುಕ್ತಮಿತಿ ಪೂರ್ವೇಣಾನ್ವಯಃ । ಅನೇನೈವಕಾರೋ ಲಿಙ್ಗಸ್ಯ ನಿರವಕಾಶತ್ವಜ್ಞಾಪಕ ಇತಿ ಸೂಚಿತಮ್ ।

ನನು ಶ್ರುತ್ಯಾ ಪೂರ್ವಪಕ್ಷಿತೇ ಕಥಂ ಲಿಙ್ಗೇನ ನಿರ್ಣಯಃ । ಲಿಙ್ಗಸ್ಯ ಶ್ರುತಿತೋ ದುರ್ಬಲತ್ವಾದಿತ್ಯತಃ ಆಕಾಶಶ್ರುತಿರ್ವಿಷ್ಣೌ ಸಾವಕಾಶೇತಿ ಶ್ರುತ್ಯಾ ದರ್ಶಯತಿ – ನಾಮಾನೀತಿ ॥ 'ಚ' ಯತಃ 'ನಾಮಾನಿ ಸರ್ವಾಣಿ' ಇತಿ ವಾಕ್ಯೇನ ವಿಷ್ಣೋರಾಕಾಶಾದಿಸರ್ವಶಬ್ದವಾಚ್ಯತ್ವಮುಕ್ತಮ್, ಅತೋ ಲಿಙ್ಗೇನ ಶ್ರುತೇರ್ಬಾಧಯಾ ನಿರ್ಣಯೋ ಯುಕ್ತ ಇತಿ ಯೋಜನಾ ।

॥ ಇತ್ಯಾಕಾಶಾಧಿಕರಣಮ್ ॥ ೮ ॥

ಚ = ಮತ್ತು, ನಾಮಾನಿ ಸರ್ವಾಣಿ = ಜಗತ್ತಿನಲ್ಲಿರುವ ಎಲ್ಲ ಹೆಸರುಗಳು, ಯಮಾವಿಶಂತಿ = ಯಾವ ವಿಷ್ಣುವನ್ನೇ ಪ್ರವೇಶಿಸುತ್ತವೋ, ಇತಿ = ಹೀಗೆ, ಉಕ್ತಮ್ = ಭಾಲ್ಲವೇಯಶ್ರುತಿಯಲ್ಲಿ ಹೇಳಲ್ಪಟ್ಟದೆ.

**तत्वप्रकाशिका – (अनन्तत्वं) नन्वन्तत्वं 'अनन्ताकाशवत्पश्यन्' इत्या -काशस्यापि स्मर्यते, अतः कथं विष्णोर्लिङ्गम्? इत्यत आह – अनन्त इति ॥ ननु श्रुत्या पूर्वपक्षिते कथं लिङ्गेन निर्णयः? लिङ्गस्य श्रुतितो दौर्बल्यात्, इत्यत आह – नामानीति ॥ श्रुत्या पूर्वपक्षितेऽपि लिङ्गमात्रेण निर्णयो घटते, आकाशश्रुतेः 'नामानि सर्वाणि' इति श्रुतिबलेन विष्णौ सावकाशत्वात् लिङ्गस्य चाकाशेऽ-नवकाशत्वात्, दुर्बलेनापि निरवकाशेन प्रबलस्यापि सावकाशस्य बाधोपपत्तेः – इति भावः ।**

**अस्तु लिङ्गेन श्रुतेर्बाधः; तथाऽपि विष्णौ श्रुतिरमुख्यैव, अन्यत्र रूढत्वात् विष्णौ यौगिकत्वात् – इति चेन्न । आकाशस्य भगवदधीनत्वेन तत्रैव मुख्यत्वात् महायोगविद्बद्धृढ्योर्भावाच्च । न चाऽऽकाशस्याऽपराधीनत्वम् । 'नभो ददाति श्वसतां मार्गं यन्नियमाददः' इत्यादेः । न च भूतकारणत्वोक्तिविरोधः, तस्य विष्णावेव सम्भवात् । तस्मात् 'आधिभौतिकसर्वशब्दोपलक्षकाकाशशब्दवाच्यो विष्णुरेवेति स एवाऽऽनन्दमयः' इति स्थितम् ॥ २२ ॥**

**॥ इति श्रीमज्जयतीर्थभिक्षुविरचितायां तत्वप्रकाशिकायाम् आकाशाधिकरणम् ॥**

'ಅನಂತಾಕಾಶವತ್ ಪಶ್ಯನ್' ಎಂಬ ಪ್ರಮಾಣದಂತೆ ಭೂತಾಕಾಶವೂ ಸಹ ಅನಂತವೆಂದು ಪ್ರಸಿದ್ಧವಾಗಿರುವಾಗ ಅನಂತತ್ವಧರ್ಮವು ವಿಷ್ಣುವಿನಂತೆ ಭೂತಾಕಾಶದಲ್ಲಿಯೂ ಬರುತ್ತದೆ. ಹೀಗಿರುವಾಗ ಈ ಧರ್ಮವು ಭಗವಂತನಲ್ಲಿ ಅಸಾಧಾರಣವಾಗಿದೆಯೆಂದು ಹೇಗೆ ಹೇಳಿದಿರಿ? ಈ ಪ್ರಶ್ನೆಗೆ ಬ್ರಾಹ್ಮಪುರಾಣದ 'ಅನಂತೋ ಭಗವಾನ್' ಎಂಬ ಮಾತಿನಿಂದ ಉತ್ತರಿಸುತ್ತಿದ್ದಾರೆ.

ಶ್ರುತಿಯಿಂದ ಪೂರ್ವಪಕ್ಷ ಮಾಡಿದರೆ ಲಿಂಗದಿಂದ ನಿರ್ಣಯಿಸುವುದು ತಪ್ಪಲ್ಲವೇ? ಏನೇ ಆದರೂ ಶ್ರುತಿಗಿಂತ ಲಿಂಗವು ದುರ್ಬಲವಾಗಿದೆ. ಈ ಪ್ರಶ್ನೆಗೆ 'ನಾಮಾನಿ ಸರ್ವಾಣಿ' ಎಂಬ ಭಾಲ್ಲವೇಯ ಶ್ರುತಿಯಿಂದ ಉತ್ತರಿಸುತ್ತಿದ್ದಾರೆ. ಶ್ರುತಿಯಿಂದ ಪೂರ್ವಪಕ್ಷ ಮಾಡಿದರೂ ಕೂಡ ಕೆಲವೊಮ್ಮೆ ಲಿಂಗದಿಂದ ನಿರ್ಣಯಿಸಬಹುದು. 'ನಾಮಾನಿ ಸರ್ವಾಣಿ' ಎಂಬ ಶ್ರುತಿಯು ಭೂತಾಕಾಶವನ್ನು ಪ್ರತಿಪಾದಿಸುವಂತೆ ವಿಷ್ಣುವನ್ನೂ ಪ್ರತಿಪಾದಿಸುತ್ತದೆ. ಆದರೆ ವಿಷ್ಣುವಿನಲ್ಲಿರುವ

ಪರೋವರೀಯಸ್ತ್ವ ಮೊದಲಾದ ಲಿಂಗಗಳು ಯಾವುದೇ ಕಾರಣದಿಂದಲೂ ಭೂತಾಕಾಶದಲ್ಲಿ ಬರುವುದಿಲ್ಲ. ಹೀಗೆ ನಿರವಕಾಶವಾಗಿ ಅತ್ಯಂತ ಬಲಿಷ್ಠವಾದ ಲಿಂಗಗಳು ಸಾವಕಾಶವಾದ 'ನಾಮಾನಿ ಸರ್ವಾಣಿ' ಎಂಬ ಶ್ರುತಿಯನ್ನು ಬಾಧಿಸುತ್ತವೆ. ಲಿಂಗವು ಸ್ವಾಭಾವಿಕವಾಗಿ ದುರ್ಬಲವಾಗಿದ್ದರೂ ಕೂಡ ನಿರವಕಾಶವಾದ ಪ್ರಯುಕ್ತ ಸ್ವಾಭಾವಿಕವಾಗಿ ಪ್ರಬಲವಾದ ಸಾವಕಾಶಶ್ರುತಿಯನ್ನು ಬಾಧಿಸಬಹುದು.

ಲಿಂಗದಿಂದ ಶ್ರುತಿಯು ಬಾಧಿತವಾದರೂ ಕೂಡ ವಿಷ್ಣುವಿನಲ್ಲಿ ಶ್ರುತಿಯು ಅಮುಖ್ಯವಾಗಿದೆ. ಆದರೆ ಭೂತಕಾಶದಲ್ಲಿ ರೂಢವಾಗಿದ್ದರಿಂದ ಮುಖ್ಯವಾಗಿದೆ. ಯೋಗಮಾತ್ರದಿಂದ ವಿಷ್ಣುವನ್ನು ಪ್ರತಿಪಾದಿಸುವ ಕಾರಣದಿಂದ ಭೂತಾಕಾಶಪರವಾದ ಶ್ರುತಿ ಪ್ರಬಲವಲ್ಲವೇ? ಎಂದು ಪ್ರಶ್ನಿಸ-ಬಾರದು. ಭೂತಾಕಾಶವು ಭಗವದಧೀನವಾದ್ದರಿಂದ ಭಗವಂತನಲ್ಲಿಯೇ ಶ್ರುತಿಯ ಮುಖ್ಯಪ್ರತಿ-ಪಾದ್ಯತ್ವವನ್ನು ಒಪ್ಪಬೇಕು. ಅಷ್ಟೇ ಅಲ್ಲದೆ ಭಗವಂತನಲ್ಲಿ ಸಕಲಶಬ್ದಗಳೂ ಸಹ ಮಹಾಯೋಗ ಹಾಗೂ ವಿದ್ವದ್ರೂಢಿಗಳಿಂದ ಇರುತ್ತವೆಂದು ತಿಳಿಯಬೇಕು. ಇನ್ನು ಭೂತಾಕಾಶವು ಭಗವಂತನ ಅಧೀನವೇ ಅಲ್ಲವಲ್ಲ? ಎಂಬ ಪ್ರಶ್ನೆಗೂ ಅವಕಾಶವಿಲ್ಲ. 'ನಭೋ ದದಾತಿ ಶ್ವಸತಾಂ ಮಾರ್ಗಂ ಯನ್ನಿಯಮಾದದಃ' ಎಂಬ ತೃತೀಯಸ್ಕಂಧದ ಮಾತಿನಂತೆ ಭೂತಾಕಾಶವು ಭಗವಂತನ ಅಧೀನವಾಗಿ ಶ್ವಾಸೋಚ್ಛ್ವಾಸಮಾಡುವ ಸಕಲಚೇತನರಿಗೆ ಅವಕಾಶವನ್ನು ಕೊಡುತ್ತದೆ. ಹೀಗಿರುವ ಆಕಾಶವು ಭಗವಂತನ ಅಧೀನವಾಗಿದೆಯೆಂದು ಸ್ಪಷ್ಟವಾಗಿ ತಿಳಿಯಬೇಕು.

'ಆಕಾಶಾದ್ವಾಯುಃ' ಎಂಬ ಶ್ರುತಿಯು ಭೂತಾಕಾಶಕ್ಕೆ ಕಾರಣತ್ವವನ್ನು ಹೇಳುತ್ತಿರುವುದರಿಂದ ವಿರೋಧವು ಬರುತ್ತದಲ್ಲವೇ? ಎಂದು ಶಂಕಿಸಬಾರದು. ಅಲ್ಲಿರುವ ಆಕಾಶಶಬ್ದದಿಂದ ಭಗವಂತನೇ ಪ್ರತಿಪಾದ್ಯನಾಗುತ್ತಾನೆ. ಆಕಾಶನೆನಿಸಿದ ಭಗವಂತನಲ್ಲಿಯೇ 'ಆಕಾಶಾದ್ವಾಯುಃ' ಎಂಬ ಶ್ರುತಿಯು ಕಾರಣತ್ವವನ್ನು ಪ್ರತಿಪಾದಿಸುತ್ತಿದೆ. ಆದ್ದರಿಂದ ಆದಿಭೌತಿಕವಾದ ಸಕಲಶಬ್ದಗಳನ್ನು (ಪೃಥಿವಿ, ಆಪ್ಪು, ತೇಜಸ್ಸು, ವಾಯು ಮೊದಲಾದ ಶಬ್ದಗಳನ್ನು) ಉಪಲಕ್ಷಿಸಿ ಆಕಾಶಶಬ್ದದಿಂದ ಮುಖ್ಯವಾಗಿ ವಾಚ್ಯ-ನಾದವನು ವಿಷ್ಣುವೇ ಆಗಿದ್ದಾನೆ. ಆವನೇ ಆನಂದಮಯನಾಗುತ್ತಾನೆ ಎಂದು ನಿರ್ಣಯವಾಯಿತು.

॥ತತ್ವಪ್ರಕಾಶಿಕೆಯ ಕನ್ನಡಾನುವಾದದಲ್ಲಿ ಆಕಾಶಾಧಿಕರಣವು ಸಮಾಪ್ತವಾಯಿತು॥

**ಭಾವದೀಪಃ – ಸ್ಮರ್ಯತ ಇತಿ ॥** 'ಪುರುಷಾರ್ಥನಯಭಾಷ್ಯೋಕ್ತಮವಿಷ್ಯತ್ಪರ್ವಸ್ಮೃತಿಕರ್ತ್ರಾ' ಇತ್ಯರ್ಥಃ । ಏತೇನ **ಅನನ್ಯಥಾಸಿದ್ಧಲಿಙ್ಗೈಃ** ಇತಿ ನ್ಯಾಯವಿವರಣೋಕ್ತಮನನ್ಯಥಾಸಿದ್ಧತ್ವಮುಪಪಾದಿತಂ ಭವತಿ । **ಶ್ರುತಿಬಲೇನೇತಿ ॥** ಶ್ರುತ್ಯರ್ಥಸ್ತು ಆಚಮನೇऽಭಿಹಿತಃ । ತತಶ್ಚ ಕಿಮ್? ಇತ್ಯತೋ 'ಅನನ್ಯಥಾಸಿದ್ಧಲಿಙ್ಗೈಃ ಭಗವದ್ವಿಷಯತ್ವಮೇವ' ಇತ್ಯನ್ಯತ್ರೋಕ್ತಂ ಹೃದಿ ಕೃತ್ವಾऽऽಹ – **ದುರ್ಬಲೇನಾ-ಪೀತಿ ॥**

**'..... .....ತಥೈವ ಹ್ಯಧಿಭೂತಗೈಃ ।**
**ಅನ್ಯಾದಿಶಬ್ದೈರ್ಭಗವಾನ್ ಏಕೋ ಮುಖ್ಯತಯೋದಿತಃ ।**
**ಶಬ್ದಪ್ರವೃತ್ತಿಹೇತೂನಾಂ ತಸ್ಮಿನ್ ಮುಖ್ಯಸಮನ್ವಯಾತ್ ॥'**

**ಇತ್ಯಾದ್ಯನುಭಾಷ್ಯಾರ್ಥಂ ವ್ಯಾವರ್ತ್ಯಶಙ್ಕಾಪೂರ್ವಮಾಹ – ಅಸ್ತ್ವಿತಿ ॥ ಆಕಾಶಸ್ಯೇತಿ ॥** ತಥಾ ಚ ತತ್ಸ್ವಭಾವಸ್ಯಾಪಿ ವಿವರತ್ವಸ್ಯ ಭಗವದಧೀನತ್ವಮೇವೇತ್ಯರ್ಥಃ ।

'ಸ್ಮರ್ಯತೇ'' ಎಂಬ ಟೀಕಾಭಾಗಕ್ಕೆ 'ಪುರುಷಾರ್ಥಾಧಿಕರಣದಲ್ಲಿ ಹೇಳಿದ ಭವಿಷ್ಯತ್‌ಪರ್ವ-ಸ್ಮೃತಿಯನ್ನು ರಚಿಸಿದ ವೇದವ್ಯಾಸದೇವರಿಂದ (ಸ್ಮರ್ಯತೇ = ಪುರಾಣದಲ್ಲಿ ಹೇಳಿದ್ದಾರೆ)' ಎಂದರ್ಥ. ಹೀಗೆ ಹೇಳಿದ್ದರಿಂದ 'ಅನನ್ಯಥಾಸಿದ್ಧಲಿಂಗೈಃ' ಎಂದು ನ್ಯಾಯವಿವರಣದಲ್ಲಿ ಹೇಳಿದ ಅನನ್ಯಥಾಸಿದ್ಧತ್ವವನ್ನು ಉಪಪಾದನೆ ಮಾಡಿದಂತಾಗುತ್ತದೆ. ''ಶ್ರುತಿಬಲೇನ'' ಎಂದು ಟೀಕೆಯಲ್ಲಿದೆ. 'ನಾಮಾನಿ ಸರ್ವಾಣಿ' ಎಂಬ ಶ್ರುತಿಯ ಅರ್ಥವನ್ನು ಮೊದಲನೆಯ ಅಧಿಕರಣದಲ್ಲೇ ಹೇಳಲಾಗಿದೆ. ಹೀಗೆ ಸಾವಕಾಶತ್ವ, ನಿರವಕಾಶತ್ವ ಹೇಳಿದ್ದರಿಂದ ಏನು ಪ್ರಯೋಜನ? ಎಂದರೆ ಅನನ್ಯಥಾಸಿದ್ಧಲಿಂಗಗಳಿಂದ ಭಗವದ್ ವಿಷಯತ್ವವನ್ನೇ ಆಕಾಶಶಬ್ದಕ್ಕೆ ಹೇಳಬೇಕು ಎಂದು ಬೇರೆ ಕಡೆ ಹೇಳಿದ್ದನ್ನು ಮನಸ್ಸಿನಲ್ಲಿಟ್ಟುಕೊಂಡು ''ದುರ್ಬಲೇನಾಪಿ'' ಎಂದು ಹೇಳುತ್ತಾರೆ.

'..... ತಥೈವ ಹ್ಯಧಿಭೂತಗೈಃ ।
ಅನ್ಯಾದಿಶಬ್ದೈರ್ಭಗವಾನ್ ಏಕೋ ಮುಖ್ಯತಯೋದಿತಃ ।
ಶಬ್ದಪ್ರವೃತ್ತಿಹೇತೂನಾಂ ತಸ್ಮಿನ್ ಮುಖ್ಯಸಮನ್ವಯಾತ್ ॥'

ಎಂಬ ಅನುವ್ಯಾಖ್ಯಾನದ ಅಭಿಪ್ರಾಯವನ್ನು, ಅದರಿಂದ ನಿರಾಕರಿಸಲ್ಪಡುವ ಶಂಕೆಯ ಸಹಿತ ''ಅಸ್ತು'' ಎಂದು ಹೇಳುತ್ತಾರೆ. ''ಆಕಾಶಸ್ಯ''. ಆಕಾಶದ ಸ್ವಭಾವವಾಗಿದ್ದರೂ ವಿವರತ್ವವು ನಿಶ್ಚಯವಾಗಿ ಭಗವಂತನ ಅಧೀನವೆಂದರ್ಥ.

**ಭಾವದೀಪಃ – ಮುಖ್ಯತ್ವಾದಿತಿ ॥ 'ಸ್ವಾತನ್ತ್ರ್ಯಂ ತತ್ರ ಮುಖ್ಯಂ ಸ್ಯಾತ್' ಇತ್ಯುಕ್ತೇರಿತಿ ಭಾವಃ । 'ಆಕಾಶಸ್ಯಾವಕಾಶದಾತೃತ್ವಸ್ಯ ಈಶ್ವರಾಯತ್ತತ್ವಮೀಶ್ವರಸ್ಯ ಪೃಥಕ್ ತದ್ಧರ್ತ್ವಂ ಚಾವಗಮ್ಯತೇ' ಇತಿ ಸುಧೋಕ್ತದಿಶಾ 'ಸರ್ವಭೂತಗುಣೈರ್ಯುಕ್ತಂ ದೇವಂ ತ್ವಂ ಜ್ಞಾತುಮರ್ಹಸಿ' ಇತಿ ಸ್ಮೃತ್ಯುಕ್ತದಿಶಾ ಚಾವಕಾಶದಾತೃತ್ವರೂಪವಿವರತ್ವಸ್ಯ ನಿರವಧಿಕತಯಾ ತದ್ಗತತ್ವಾಚೇತಿ ಭಾವೇನಾऽऽಹ – ಮಹಾಯೋಗೇತಿ ॥** ಅತ ಏವ **'ವಿದ್ವದ್ಮೂಢಿರಪಿ ಸಿದ್ಧಾ ಸಾ ಯೋಗಾದೇವ ಲಭ್ಯತೇ' ಇತ್ಯುಕ್ತೇಃ ।**

''ಮುಖ್ಯತ್ವಾದಿತಿ''. 'ಸ್ವಾತಂತ್ರ್ಯಂ ತತ್ರ ಮುಖ್ಯಂ ಸ್ಯಾತ್' ಎಂದು ಹೇಳಿದ್ದರಿಂದ ಮುಖ್ಯ ಎಂದರ್ಥ. 'ಆಕಾಶಸ್ಯಾವಕಾಶದಾತೃತ್ವಸ್ಯ ಈಶ್ವರಾಯತ್ತತ್ವಮೀಶ್ವರಸ್ಯ ಪೃಥಕ್ ತದ್ಧರ್ತ್ವಂ ಚಾವಗಮ್ಯತೇ' (ಆಕಾಶದಲ್ಲಿರುವ ಅವಕಾಶದಾತೃತ್ವವು ಭಗವಂತನ ಅಧೀನವಾಗಿದೆ; ಮತ್ತು ಭಗವಂತನಲ್ಲಿಯೇ

ಪ್ರತ್ಯೇಕವಾಗಿ ಅವಕಾಶದಾತೃತ್ವವು ಇದೆ ಎಂದು ತಿಳಿಯುತ್ತದೆ) ಎಂದು ಸುಧಾದಲ್ಲಿ ಹೇಳಿದಂತೆ; ಹಾಗೂ 'ಸರ್ವಭೂತಗುಣೈರ್ಯುಕ್ತಂ ದೇವಂ ತ್ವಂ ಜ್ಞಾತುಮರ್ಹಸಿ' ಎಂದು ಸ್ಮೃತಿಯಲ್ಲಿ ಹೇಳಿದಂತೆ ಅವಕಾಶದಾತೃತ್ವರೂಪವಾದ ವಿವರತ್ವವು ಪೂರ್ಣವಾಗಿ (ನಿರವಧಿಕವಾಗಿ) ಭಗವಂತನಲ್ಲಿ ಇದೆಯಾದ್ದರಿಂದ ಎಂಬ ಅಭಿಪ್ರಾಯದಿಂದ "ಮಹಾಯೋಗ" ಎಂಬಿತ್ಯಾದಿಯಾಗಿ ಹೇಳುತ್ತಾರೆ. ಆದುದರಿಂದಲೇ 'ವಿದ್ವದ್‌ರೂಢಿರಪಿ ಸಿದ್ಧಾ ಸಾ ಯೋಗಾದೇವ ಲಭ್ಯತೇ' ಎಂದು ಅನುವ್ಯಾಖ್ಯಾನದಲ್ಲಿ ಹೇಳಿದ್ದಾರೆ.

**ಭಾವದೀಪಃ – ಯದ್ವಾ, 'ಏತದ್ ಬ್ರಹ್ಮ ಇದಂ ವಾವ ತತ್ ಯೋऽಯಂ ಬಹಿರ್ಧಾ ಪುರುಷಾದಾಕಾಶಃ । ಯಾವಾನ್ವಾ ಅಯಮಾಕಾಶಃ । ಆಕಾಶೋ ವೈ ನಾಮ ನಾಮರೂಪಯೋಃ ನಿರ್ವಹಿತಾ' ಇತ್ಯಾದಿ ಪ್ರಯೋಗಬಾಹುಲ್ಯಾಚ್ಚೇತಿ ಭಾವಃ ।**

ಅಥವಾ, 'ಏತದ್ ಬ್ರಹ್ಮ ಇದಂ ವಾವ ತತ್ ಯೋऽಯಂ ಬಹಿರ್ಧಾ ಪುರುಷಾದಾಕಾಶಃ । ಯಾವಾನ್ ವಾ ಅಯಮಾಕಾಶಃ । ಆಕಾಶೋ ವೈ ನಾಮ ನಾಮರೂಪಯೋಃ ನಿರ್ವಹಿತಾ" ಇವೇ ಮೊದಲಾದ ಬಹಳಪ್ರಯೋಗದಿಂದ ಆಕಾಶಶಬ್ದವಾಚ್ಯನು ವಿಷ್ಣುವೆಂದು ತಿಳಿಯುತ್ತದೆ ಎಂಬ ಅಭಿಪ್ರಾಯ ತಿಳಿಯಬೇಕು.

**ಭಾವದೀಪಃ – ಅತ್ರ ಪ್ರತಿನಯಂ ವಿಷ್ಣೌ ಯೋಗರೂಢಿಸಮರ್ಥನಂ ತು ಸರ್ವತ್ರಾನುವೃತ್ತ-ತತ್ತ್ವಿತಿಶಬ್ದೇ ಅವಧಾರಣಾರ್ಥತುಶಬ್ದಸೂಚಿತಂ ಜ್ಞೇಯಮ್ । ವಿಷ್ಣೌ ಪರಮುಖ್ಯವೃತ್ತ್ಯಭಾವೇऽ-ನ್ಯಸ್ಮಿಂಸ್ತದ್ಭಾವೇ ವಾ ಅವಧಾರಣಾಯೋಗಾತ್ ಆಕಾಶಸ್ಯಾಚೇತನತ್ವೇನಾನ್ಯಾಧೀನತ್ವಾಯೋಗಾತ್ ಇತಿ ಪ್ರಾಗುಕ್ತಮನೂದ್ಯಾನುಭಾಷ್ಯೋಕ್ತಸಮಾಧಿಮಾಹ – ನ ಚಾऽऽಕಾಶಸ್ಯೇತಿ ॥**

ಈ ಪಾದದ ಪ್ರತಿಯೊಂದು ಅಧಿಕರಣದಲ್ಲಿಯೂ ವಿಷ್ಣುವಿನಲ್ಲಿ ಶಬ್ದಗಳ ಯೋಗ ಮತ್ತು ರೂಢಿಯ ಸಮರ್ಥನೆಯು ಎಲ್ಲಾ ಅಧಿಕರಣಗಳಲ್ಲಿ ಅನುವೃತ್ತವಾದ್ದರಿಂದ ತತ್ತು ಎಂಬ ಪದದಲ್ಲಿ ಅವಧಾರಣಾರ್ಥಕವಾದ ತು ಎಂಬುದರಿಂದ ಸೂಚಿತವಾಗಿದೆಯೆಂದು ತಿಳಿಯಬೇಕು. 'ವಿಷ್ಣುವಿನಲ್ಲಿ ಪರಮಮುಖ್ಯವೃತ್ತಿ ಇಲ್ಲವೆನ್ನುವುದಾದಲ್ಲಿ ಅಥವಾ ಬೇರೆಯವರಲ್ಲಿ ಇದೆಯೆನ್ನುವುದಾದಲ್ಲಿ ಆಗ ತತ್ತು ಎಂದು ಅವಧಾರಣೆ ಮಾಡಿರುವುದು ಕೂಡುವುದಿಲ್ಲ. ಮತ್ತು ಆಕಾಶವು ಅಚೇತನವಾದ್ದರಿಂದ ಮತ್ತೊಬ್ಬರ ಅಧೀನವಾಗುವುದೂ ಸಾಧ್ಯವಿಲ್ಲ' ಎಂದು ಹಿಂದೆ ಹೇಳಿದ ವಿಷಯವನ್ನು ಅನುವಾದ ಮಾಡಿ, ಆದಕ್ಕೆ ಅನುವ್ಯಾಖ್ಯಾನದಲ್ಲಿ ಹೇಳಿದ ಸಮಾಧಾನವನ್ನು "ನ ಚಾಕಾಶಸ್ಯ" ಎಂಬ ಟೀಕಾಭಾಗದಿಂದ ಹೇಳುತ್ತಾರೆ.

**ಭಾವದೀಪಃ – ಇತ್ಯಾದೇರಿತಿ ॥** ತೃತೀಯಸ್ಕಂಧೇ ಆದಿಪದೇನ **'ಪ್ರಾಣೇನ ಸೃಷ್ಟಾವನ್ತರಿಕ್ಷಂ ಚ ವಾಯುಶ್ಚ ಏತಸ್ಯ ವಾಕ್ಷರಸ್ಯ ಪ್ರಶಾಸನೇ ಗಾರ್ಗಿ ದ್ಯಾವಾಭೂಮೀ ವಿಧೃತೇ ತಿಷ್ಠತೇ'** ಇತ್ಯಾದಿಶ್ರುತಿ-ರ್ಗ್ರಾಹ್ಯಾ । ಅತ್ರ ಯುಕ್ತಿಸ್ತು ವಿವರತ್ವಾದಿಕಂ ಕಾರಣತಃ ಸ್ವರೂಪತೋऽಪ್ಯನಾಗನ್ತುಕಮ್ । ತಥಾಪಿ

ಧರ್ಮಿಣ ಏವಾಕಾಶಾದೇರುತ್ಪತ್ತಿವಿನಾಶವತೋ ಜನ್ಮಸ್ಥಿತಿಲಯೇಷ್ವೀಶಾಧೀನತ್ವೇ ಧರ್ಮಸ್ಯಾಪಿ ತಥಾಭಾವೋऽವರ್ಜನೀಯಃ । ತಸ್ಯ ಜನ್ಮಾದಿಸ್ತು 'ಆತ್ಮನಃ ಆಕಾಶಃ ಸಮ್ಭೂತಃ' ಇತ್ಯಾದಿನಾ ಸಿದ್ಧಾ ಇತಿ ಚಂದ್ರಿಕಾಯೇ ಸುಧಾಯಾಮುಕ್ತಾ । ಸಾ ವಿವೃತಾ ಚಂದ್ರಿಕಾಯಾಮ್ –

'ಅಸ್ತು ಸಚ್ಛಿದ್ರಮಿತಿ ಯಾ ಹರೀಚ್ಛಾ ತದ್ಗಶಾನ್ನಭಃ ।
ಛಿದ್ರಾತ್ಮಕಂ ಹಿ ಸಜ್ಞಾತಮನ್ಯಥಾ ನಿಬಿಡಂ ಭವೇತ್ ॥'

ಇತ್ಯಾದಿನಾ । ವಿಷ್ಣಾವೇವೇತಿ ॥ 'ಆತ್ಮನಃ ಆಕಾಶಃ' ಇತ್ಯತ್ರೇವಾಸಙ್ಕುಚಿತಸರ್ವಭೂತ-ಕಾರಣತ್ವಲಾಭಾದಿತಿ ಭಾವಃ ।

''ಇತ್ಯಾದೇಃ''. 'ನಭೋ ದದಾತಿ' ಎನ್ನುವುದು ಭಾಗವತತೃತೀಯಸ್ಕಂಧದ ವಾಕ್ಯ. 'ಇತ್ಯಾದೇಃ' ಎಂಬಲ್ಲಿ ಆದಿಪದದಿಂದ 'ಪ್ರಾಣೇನ ಸೃಷ್ಟಾವಂತರಿಕ್ಷಂ ಚ ವಾಯುಶ್ಚ ವಿಶಸ್ಯ ವಾ ಅಕ್ಷರಸ್ಯ ಪ್ರಶಾಸನೇ ಗಾರ್ಗಿ ದ್ಯಾವಾಭೂಮೀ ವಿಧೃತೇ ತಿಷ್ಠತಃ' ಇವೇ ಮೊದಲಾದ ಶ್ರುತಿಗಳನ್ನು ಸ್ವೀಕರಿಸಬೇಕು. ಈ ವಿಷಯದಲ್ಲಿ ಯುಕ್ತಿಯನ್ನು 'ವಿವರತ್ವಾದಿಕಂ ಕಾರಣತಃ ಸ್ವರೂಪತೋऽಪ್ಯನಾಗಂತುಕಮ್ । ತಥಾಪಿ ಧರ್ಮಿಣ ಏವಾಕಾಶಾದೇರುತ್ಪತ್ತಿವಿನಾಶವತೋ ಜನ್ಮಸ್ಥಿತಿಲಯೇಷ್ವೀಶಾಧೀನತ್ವೇ ಧರ್ಮಸ್ಯಾಪಿ ತಥಾಭಾವೋऽವರ್ಜನೀಯಃ । ತಸ್ಯ ಜನ್ಮಾದಿಸ್ತು ಆತ್ಮನ ಆಕಾಶಃ ಸಂಭೂತಃ ಇತ್ಯಾದಿನಾ ಸಿದ್ಧಾ' (ಆಕಾಶದಲ್ಲಿರುವ ವಿವರತ್ವವು ಜ್ಞಾನಾದಿಕಾರಣಗಳಿಂದ ಅಥವಾ ಸ್ವರೂಪತಃ ಈ ಎರಡೂ ರೀತಿಯಿಂದಲೂ ಆಗಂತುಕವಲ್ಲ/ಉತ್ಪನ್ನವಾಗುವುದಲ್ಲ. ಹಾಗಿದ್ದರೂ ಉತ್ಪತ್ತಿನಾಶವುಳ್ಳ ವಿವರತ್ವಕ್ಕೆ ಧರ್ಮಿಯಾದ ಆಕಾಶದ ಉತ್ಪತ್ತಿ, ಸ್ಥಿತಿ, ವಿನಾಶಗಳು ಭಗವಂತನ ಅಧೀನವಾದ್ದರಿಂದ ಆದರ ಧರ್ಮವಾದ ವಿವರತ್ವಕ್ಕೂ ಭಗವಂತನ ಅಧೀನತ್ವವು ಅಪರಿಹಾರ್ಯ. ಆಕಾಶದ ಉತ್ಪತ್ಯಾದಿಗಳು ಭಗವಂತನ ಅಧೀನ ಎನ್ನುವುದು ಆತ್ಮನ ಆಕಾಶಸ್ಸಂಭೂತಃ ಇವೇ ಮೊದಲಾದ ಪ್ರಮಾಣಗಳಿಂದ ಸಿದ್ಧವಾಗಿದೆ) ಎಂಬ ಛಂದೋಧಿಕರಣ (ಗಾಯತ್ರ್ಯಧಿಕರಣ)ದ ಸುಧೆಯಲ್ಲಿ ಹೇಳಿದ್ದಾರೆ. ಅದನ್ನೇ ಚಂದ್ರಿಕೆಯಲ್ಲಿ -

'ಅಸ್ತು ಸಚ್ಛಿದ್ರಮಿತಿ ಯಾ ಹರೀಚ್ಛಾ ತದ್ಗಶಾನ್ನಭಃ ।
ಛಿದ್ರಾತ್ಮಕಂ ಹಿ ಸಂಜಾತಮನ್ಯಥಾ ನಿಬಿಡಂ ಭವೇತ್ ॥'

'ಆಕಾಶವು ಛಿದ್ರವುಳ್ಳದ್ದಾಗಲಿ/ವಿವರತ್ವವುಳ್ಳದ್ದಾಗಲಿ ಎಂದು ಹರಿಯ ಇಚ್ಛೆಯಿರುವುದರಿಂದ ಆಕಾಶವು ಛಿದ್ರವುಳ್ಳದ್ದಾಗಿದೆ. ಇಲ್ಲದಿದ್ದರೆ ನಿಬಿಡವಾಗಿ/ಛಿದ್ರರಹಿತವಾಗಿ ಇರುತ್ತಿತ್ತು' ಎಂದು ವಿವರಿಸಿದ್ದಾರೆ. ''ವಿಷ್ಣಾವೇವ'' 'ಆತ್ಮನ ಆಕಾಶಸ್ಸಂಭೂತಃ' ಎನ್ನುವ ಶ್ರುತಿಯಲ್ಲಿರುವಂತಹ ಅಸಂಕುಚಿತವಾದ ಸಕಲಭೂತಗಳಿಗೆ ಕಾರಣನು (ಕಾರಣತ್ವವು ಅಸಂಕುಚಿತವಾಗಿದೆ) ಎಂದು ಸಿದ್ಧವಾಗುವುದರಿಂದ -ಎಂದು ಅಭಿಪ್ರಾಯ.

**ಭಾವದೀಪಃ – ವಿಶ್ವತೋಮುಖತ್ವಂ ವ್ಯಞ್ಜಯನ್ ಸೂತ್ರಾರ್ಥಮುಪಸಂಹರತಿ – ತಸ್ಮಾದಿತಿ ॥** ನಿರವಕಾಶಾನೇಕಲಿಙ್ಗಭಾವಾದಿತಿ ತಲ್ಲಿಙ್ಗಾದಿತ್ಯರ್ಥಃ । 'ಆಕಾಶಃ ತತ್ತು' ಇತಿ ಪ್ರತಿಜ್ಞಾಂಶಾರ್ಥ-ಮಾಹ – **ಆಧಿಭೌತಿಕೇತಿ ॥ 'ಅಧಿಭೂತಾಧ್ಯಾತ್ಮಾಧಿವೇದಗತಾನಾಮ್' ಇತಿ ನ್ಯಾಯವಿವ-ರಣೋಕ್ತೇಃ** । ಏತನ್ಯಾಯವಿಷಯಾಣಾಮತ್ರೈವ ವಾಚ್ಯತ್ವಾತ್ ಸೂತ್ರಸ್ಯಾಲ್ಪಾಕ್ಷರತ್ವೇನ ಸರ್ವೋಕ್ತೇ-ರಯೋಗಾತ್ । ಉಪಲಕ್ಷಣತ್ವೇನ ಕಸ್ಯಚಿದುದಾಹರ್ತವ್ಯತ್ವೇ ಸರ್ವಭೂತಮೂಲಕಾರಣತ್ವೇನ ಪ್ರಾಧಾನ್ಯಾತ್ ಪೂರ್ವಾಕ್ಷೇಪಕತ್ವೇನ ಸಙ್ಗತತ್ವಾಚ್ಚ ಆಕಾಶ ಏವೋದಾಹೃತಃ ಸೂತ್ರೇ ಇತಿ ಭಾವಃ । ಏವಮಗ್ರೇಽಪಿ ಮಹಾಯೋಗವಿದ್ಬದ್ರೂಢಿಮಾವಾದಾಹ – **ವಾಚ್ಯ ಇತಿ ॥** 'ಸ ಏವಾನನ್ದಮಯಃ' ಇತಿ ಫಲೋಕ್ತಿ-ಪರಭಾಷ್ಯಾರ್ಥೋಪಸಂಹಾರಃ ॥

॥ ಇತಿ ಶ್ರೀರಾಘವೇನ್ದ್ರಯತಿಕೃತೇ ಭಾವದೀಪೇ ಆಕಾಶಾಧಿಕರಣಮ್ ॥

ಸೂತ್ರವು ವಿಶ್ವತೋಮುಖವಾಗಿದೆ (ಅನೇಕ ಶಾಖಾನಿರ್ಣಾಯಕವಾಗಿದೆ) ಎಂಬುದನ್ನು ವ್ಯಕ್ತ-ಪಡಿಸುತ್ತಾ ಸೂತ್ರಾರ್ಥವನ್ನು ''ತಸ್ಮಾತ್'' ಎಂಬಿತ್ಯಾದಿ ಟೀಕಾಭಾಗದಿಂದ ಉಪಸಂಹರಿಸುತ್ತಾರೆ. 'ನಿರವಕಾಶವಾದ ಅನೇಕ ಲಿಂಗಗಳಿರುವುದರಿಂದ' ಎಂದು 'ತಲ್ಲಿಂಗಾತ್' ಎಂಬುದರ ಅರ್ಥ. 'ಆಕಾಶಃ ತತ್ ತು' ಎಂದು ಪ್ರತಿಜ್ಞೆ ಮಾಡಿದ ವಿಷಯವನ್ನು ''ಆಧಿಭೌತಿಕ'' ಎನ್ನುವುದರಿಂದ ಹೇಳುತ್ತಾರೆ. ಆಕಾಶಶಬ್ದದಿಂದ ಆಧಿಭೌತಿಕವಾದ ಶಬ್ದಗಳನ್ನು ಉಪಲಕ್ಷಣಯಾ ಇಟ್ಟುಕೊಳ್ಳುವುದಕ್ಕೆ ಪ್ರಮಾಣ-ವೇನೆಂದರೆ 'ಅಧಿಭೂತಾಧ್ಯಾತ್ಮಾಧಿವೇದಗತಾನಾಮ್' ಎಂದು ನ್ಯಾಯವಿವರಣದಲ್ಲಿ ಆಚಾರ್ಯರು ಹೇಳಿದ್ದಾರೆ.

ಸೂತ್ರಕ್ಕೆ ನೀವು ಹೇಳಿದ ಅಭಿಪ್ರಾಯವಿರುವುದಾದರೆ ಸೂತ್ರದಲ್ಲಿ ಆಕಾಶಶಬ್ದವನ್ನೇಕೆ ಗ್ರಹಣ ಮಾಡಿದ್ದಾರೆ? ಎಂದೆ ಈ ಅಧಿಕರಣದಲ್ಲಿ ಹೇಳುವ ನ್ಯಾಯಕ್ಕೆ ವಿಷಯವಾದ ಶಬ್ದಗಳನ್ನು ಇಲ್ಲಿಯೇ ಹೇಳಬೇಕು. ಆದರೆ ಸೂತ್ರವು ಅಲ್ಪಾಕ್ಷರವುಳ್ಳದ್ದಾದ್ದರಿಂದ ಎಲ್ಲವನ್ನೂ ಇಲ್ಲಿ ಹೇಳಲು ಸಾಧ್ಯವಿಲ್ಲ. ಆದ್ದರಿಂದ ಒಂದು ಶಬ್ದವನ್ನು ಹೇಳಿ ಉಳಿದವನ್ನು ಉಪಲಕ್ಷಣವನ್ನಾಗಿ ಇಟ್ಟುಕೊಳ್ಳಬೇಕು. ಆ ಸಂದರ್ಭದಲ್ಲಿ ಎಲ್ಲಾ ಭೂತಾದಿಗಳಿಗೆ ಮೂಲಕಾರಣ ಆಕಾಶವಾದ್ದರಿಂದ ಪ್ರಧಾನವಾಗಿದೆ ಮತ್ತು ಅಧಿ ಕರಣದ ಸಿದ್ಧಾಂತವನ್ನು ಆಕ್ಷೇಪಿಸಲು ಸಂಗತವಾಗಿದೆಯಾದ್ದರಿಂದ 'ಆಕಾಶ'ಶಬ್ದವನ್ನೇ ಸೂತ್ರದಲ್ಲಿ ಉದಾಹರಿಸಿದ್ದಾರೆ ಎಂದು ಅಭಿಪ್ರಾಯ.

ಹೀಗೆಯೇ ಮುಂದಿನ ಅಧಿಕರಣಗಳಲ್ಲಿ ಶಬ್ದಗಳು ಮಹಾಯೋಗ ಮತ್ತು ವಿದ್ವದ್ ರೂಢಿ-ಗಳಿರುವುದರಿಂದ ಭಗವಂತನನ್ನು ಹೇಳುತ್ತವೆ ಎನ್ನುವುದನ್ನು ''ವಾಚ್ಯ'' ಎಂಬಿತ್ಯಾದಿಯಾಗಿ ಹೇಳುತ್ತಾರೆ. ''ಸ ಏವ ಆನಂದಮಯಃ'' ಎನ್ನುವುದು ಅಧಿಕರಣದ ಫಲವನ್ನು ಹೇಳುವ ಭಾಷ್ಯಾರ್ಥದ ಉಪಸಂಹಾರರೂಪವಾಗಿದೆ.

॥ ಇಲ್ಲಿಗೆ ಭಾವದೀಪದ ಕನ್ನಡಾನುವಾದದಲ್ಲಿ ಆಕಾಶಾಧಿಕರಣವು ಮುಗಿಯಿತು ॥

## अथ श्रीशर्कराश्रीनिवासविरचिता वाक्यार्थमञ्जर्याम्
## आकाशाधिकरणम्

**अस्य लोकस्येति ।।** अस्य लोकस्य पृथिव्यभिमानिनो ब्रह्मणः का गतिरिति शालावत्येन पृष्टे आदीप्तत्वादाकाशनामको विष्णुरिति होवाच प्रवाहणः । कथमेतस्य पृथिव्यभिमानिब्रह्मणो गतित्वम्? इत्यतस्तस्य माहात्म्यमाह – **सर्वाणीति ।।** सर्वाणि इमानि प्रमाणप्रसिद्धानि भूतानि ब्रह्मरुद्रादीनि आकाशादेव समुत्पद्यन्ते । ह वा इत्यस्यार्थस्य वैदिकप्रसिद्धिमाह । आकाशं प्रति अस्तं अदर्शनं यान्ति यत्रैव प्रलये मुक्तौ च लीना भवन्ति । कुतः? हि यस्मादाकाश एवैभ्यो ब्रह्मरुद्रादिभूतेभ्यो ज्यायान्, तदपि कुतः? आकाशःपरायणम् उत्तमाश्रयः ।

नैतस्मादप्युत्तमंवस्त्वाशङ्क्यमित्याशयेनाह – **स इति ।।** स एष आकाशनामा भगवान् परोवरीयान् सर्वोत्तमः उद्गीथः उच्चैर्देवैर्गीथः स एषोऽनन्तः देशतः कालतः गुणतश्च परिच्छेद-शून्यत्वादनन्तनामक इत्यर्थः ।। **आकाशस्येति ।।** तथा च तत्स्वभावभूतप्रवृत्तिनिमित्तस्यापि भगवदधीनत्वमिति भावः । अवकाशे अव्याकृताकाशे ।। **अनेनैव ।।** 'आकाशस्ये' इयादिभाष्ये-णैव । कथमित्यत आह – **रूढेरिति ।।** तस्यापि आनन्दमयप्रयुक्ताकाशशब्दस्यपि ।।

**ॐ आकाशस्तल्लिङ्गात् ॐ ।।** 'आकाश इति होवाच' इत्याकाशशब्दवाच्यो विष्णुरेव 'स एष परोवरीयान् स एषोऽनन्तः' इत्यादिना आकाशे श्रुतपरोवरीयस्त्वानन्तत्वादिविष्णु-लिङ्गादित्यर्थः । परोवरीय व्याख्यानरूपां छान्दोग्यभाष्योदाशब्दतां स्मृतिमुदाहरति – **परस्मा-दिति ।।** 'परशब्दितभारत्युत्तमो ब्रह्मा परो इत्युच्यते; उशब्दस्योत्तमार्थकत्वात् तदुत्तमा रमा परोवरमिति; तदुत्तमो हरिः पारोवरीयक' इति छान्दोग्यभाष्योदाहृतस्मृत्यर्थः । उच्चत्वेन उत्तमत्वेन । **स एवेति ।।** निर्वचनत्वात्तकारस्य थकार इति भावः । योपि सोपि न प्रवक्तीत्यर्थः ।

**अनन्तत्वमुच्यत इति ।।** गुणतोऽनन्तत्वस्याप्यनन्तशब्दार्थत्वादिति भावः ।। **सर्वोत्तमत्वमिति ।।** मात्रशब्देन परिमितसर्वजगत् ग्रहणादिति भावः । स्मर्यते भविष्यत्पर्वणि ।। **महायोगेति ।।** सर्वभूतगुणैर्युक्तं 'देवत्वं ज्ञातुमर्हसि' इत्युक्तेः । पुरुषादाकाशः । यावान्वा अयमाकाशः । आकाशो वै नामेति वैदिकप्रयोगबाहुल्याच्चेति भावः । **नभ इति ।।** अदो नभः यस्य हरेःप्रेरणात् श्वासं कुर्वतां मार्गं ददाति इति तृतीयस्कन्धवाक्यार्थः ।। **विष्णावेवेति ।।** सर्वाणि ह वेति भूतकारणत्वमाकाशस्योच्यते । तच्चाकाशपदेन विष्णोरेव ग्रहणे सम्भवति । 'आत्मन आकाशः सम्भूतः' इत्यादिना विष्णोरेव सर्वभूतकारणत्वेन प्रमितत्वात् । भूताकाशस्य तु

स्वव्यतिरिक्तभूतकारणत्वेन तद्ग्रहणे सर्वशब्दस्य सङ्कोचः कार्य इति भावः । इदमभ्युपेत्योक्तम् । उक्तरीत्या भूतशब्दस्य ब्रह्मादिपरत्वात् ॥ **आधिभौतिकेति** ।। महाभूताधिकाराख्यग्रन्थप्रतिपाद्यं देहात् ब्राह्मप्रकृत्यन्तं जडमधिभूतं तद्गतेत्यर्थः । यथोक्तं महाभूताधिकारणे तत्कारणम् । तथा कार्यमधिभूतं तदन्तिकादिति ॥ ८ ॥

॥ इति श्रीशर्कराश्रीनिवासविरचितायां वाक्यार्थमञ्जर्याम्
आकाशाधिकरणम् ॥

* * * * *

## श्रीपद्मनाभतीर्थविरचितसत्तर्कदीपावळ्याम्
## आकाशाधिकरणम्

**ॐ आकाशस्तल्लिङ्गात् ॐ ॥२२॥**

**'इन्द्रादिजीवेष्वसम्भावितधर्मोपदेशात् तेभ्योऽन्यः परमात्मा विष्णुः' इत्युक्तम् । उपर्याकाशादिष्वसम्भावितलिङ्गनिर्देशात् तेभ्योऽन्य इत्येतत्प्रतिपादक-सूत्रव्याख्यानं कर्तुमाह – को ह्येवेति ॥ छान्दोग्ये श्रूयते – 'अस्य लोकस्य का गतिरिति आकाश इति होवाच सर्वाणि ह वा इमानि भूतानि आकाशादेव समुत्पद्यन्ते आकाशं प्रत्यस्तं यन्ति आकाशो ह्येवैभ्यो ज्यायान् आकाशः परायणं स एष परोवरीयानुद्गीथः स एषोऽनन्तः' इति तत्राकाशशब्दनिर्दिष्टो भूताकाश एव लोकप्रसिद्धत्वाद्भवेत् । ततश्च 'को ह्येवान्यात् कः प्राण्यात् । यदेष आकाश आनन्दो न स्यात्' इत्यानन्दमयप्रकरणपठितोऽपि स एव भवेदिति ।**

ಇಂದ್ರಾದಿದೇವತೆಗಳಲ್ಲಿ ಅಸಂಭಾವಿತಧರ್ಮವನ್ನು ಶ್ರುತಿಯಲ್ಲಿ ಹೇಳಿದ್ದರಿಂದ ಪರಮಾತ್ಮನು ವಿಷ್ಣುವು, ಇಂದ್ರಾದಿದೇವತೆಗಳಿಗಿಂತ ಭಿನ್ನನು ಎಂದು ಹೇಳಲಾಗಿತ್ತು. ಮುಂದಿನ ಅಧಿಕರಣಗಳಲ್ಲಿ ಆಕಾಶಾದಿಗಳಲ್ಲಿ ಅಸಂಭಾವಿತವಾದ ಲಿಂಗಗಳನ್ನು ಹೇಳಿದ್ದರಿಂದ ಆಕಾಶಾದಿಗಳಿಗಿಂತ ಭಿನ್ನ ಎಂದು ಪ್ರತಿಪಾದಿಸುವ ಸೂತ್ರದ ವ್ಯಾಖ್ಯಾನವನ್ನು ''ಕೋ ಹ್ಯೇವ'' ಎಂಬಿತ್ಯಾದಿಯಾಗಿ ಹೇಳುತ್ತಾರೆ.

''ಅಸ್ಯ ಲೋಕಸ್ಯ ಕಾ ಗತಿರಿತಿ; ಆಕಾಶ ಇತಿ ಹೋವಾಚ; ಸರ್ವಾಣಿ ಹ ವಾ ಇಮಾನಿ ಭೂತಾನಿ ಆಕಾಶಾದೇವ ಸಮುತ್ಪದ್ಯಂತೇ; ಆಕಾಶಂ ಪ್ರತ್ಯಸ್ತಂ ಯಂತಿ; ಆಕಾಶೋ ಹ್ಯೇವೈಭ್ಯೋ ಜ್ಯಾಯಾನ್ । ಆಕಾಶಃ ಪರಾಯಣಂ; ಸ ಏಷ ಪರೋವರೀಯಾನುದ್ಗೀಥಃ; ಸ ಏಷೋಽನಂತಃ'' ಎಂಬುದಾಗಿ

ಛಾಂದೋಗ್ಯೋಪನಿಷತ್ತಿನಲ್ಲಿ ಹೇಳಿದೆ. ಅಲ್ಲಿ ಆಕಾಶಶಬ್ದದಿಂದ ಹೇಳಿದ್ದು ಭೂತಾಕಾಶವನ್ನೇ ಎಂದಿಟ್ಟುಕೊಳ್ಳಬೇಕು. ಆದ್ದರಿಂದ 'ಕೋ ಹ್ಯೇವಾನ್ಯಾತ್ ಕಃ ಪ್ರಾಣ್ಯಾತ್ । ಯದೇಷ ಆಕಾಶ ಆನಂದೋ ನ ಸ್ಯಾತ್' ಎಂದು ಆನಂದಮಯಪ್ರಕರಣದಲ್ಲಿ ಹೇಳಲ್ಪಟ್ಟ ಆಕಾಶಶಬ್ದವಾಚ್ಯವಾದದ್ದು ಅದೇ ಆಗಬೇಕು ಎಂಬ ಪ್ರಶ್ನೆ ಬರುತ್ತದೆ.

**ಏವಂ ಪ್ರಾಪ್ತೇ ಅಭಿಧೀಯತೇ । ಅತ್ರಾಕಾಶಶಬ್ದೇನ ವಿಷ್ಣುರೇವೋಚ್ಯತೇ । ಸ ಏಷೋऽನನ್ತ ಇತ್ಯಾದಿಲಿಙ್ಗಾತ್ । ಅಪರಿಮಿತಗುಣತ್ವಂ ಹ್ಯನನ್ತತ್ವಂ ಮುಖ್ಯತೋ ವಿಷ್ಣೋರೇವ ಶ್ರೂಯತೇ 'ವಿಷ್ಣೋರ್ನು ಕಮ್' ಇತ್ಯಾದಿ ಶ್ರುತೌ । ಭಾಗವತೇ ಚೈತದುಕ್ತಮ್ । 'ವಿಷ್ಣೋರ್ನು ವೀರ್ಯಗಣನಾಂ ಕತಮೋರ್ಹತೀಹ ಯಃ ಪಾರ್ಥಿವಾನ್ಯಪಿ ಕವಿರ್ವಿಮಮೇ ರಜಾಂಸಿ' ಇತಿ । ಅತ ಏವಾನನ್ತಶಬ್ದೋ ವಿಷ್ಣುರೂಢಃ । ಸರ್ವಭೂತೋತ್ಪಾದಕತ್ವೇ ಹೇತುಃ ಇತಿ ಶ್ರವಣಾತ್ ಆಕಾಶಶಬ್ದಾರ್ಥಃ ಪರಮಾತ್ಮೇತಿ ಜ್ಞಾಯತೇ । ಸರ್ವಭೂತೋತ್ಪಾದಕತ್ವಮುಪನಿಷತ್ಸೂತ್ರಸಿದ್ಧಮ್ । (೧।೧।೮)**

**॥ ಇತಿ ಸತ್ತರ್ಕದೀಪಾವಳ್ಯಾಮ್ ಆಕಾಶಾಧಿಕರಣಮ್ ॥**

ಹೀಗೆ ಪ್ರಾಪ್ತವಾದರೆ; ಇಲ್ಲಿ ಆಕಾಶಶಬ್ದದಿಂದ ವಿಷ್ಣುವೇ ಹೇಳಲ್ಪಡುತ್ತಾನೆ. 'ಸ ಏಷೋऽನಂತಃ' ಎಂಬಿತ್ಯಾದಿ ವಿಷ್ಣುವಿನ ಲಿಂಗಗಳಿರುವುದರಿಂದ. ಅಪರಿಮಿತಗುಣವಿರುವಿಕೆಯೇ ಅನಂತತ್ವವು. ಅದಾದರೋ 'ವಿಷ್ಣೋರ್ನುಕಮ್' ಇತ್ಯಾದಿ ಶ್ರುತಿಗಳಲ್ಲಿ ಕೇಳಲ್ಪಡುತ್ತಿದೆ. ಭಾಗವತದಲ್ಲೂ ಕೂಡ

'ವಿಷ್ಣೋರ್ನು ವೀರ್ಯಗಣನಾಂ ಕತಮೋರ್ಹತೀಹ ।
ಯಃ ಪಾರ್ಥಿವಾನ್ಯಪಿ ಕವಿರ್ವಿಮಮೇ ರಜಾಂಸಿ'

ಎಂದು ಇದನ್ನೇ ಹೇಳಿದ್ದಾರೆ. ಆದುದರಿಂದ ಅನಂತಶಬ್ದವು ವಿಷ್ಣುವಿನಲ್ಲೇ ರೂಢವಾಗಿದೆ. ಸರ್ವಭೂತಗಳ ಉತ್ಪತ್ತಿಗೆ ಕಾರಣನಾದವನು ಎಂದು ಶ್ರುತವಾದ್ದರಿಂದ ಆಕಾಶಶಬ್ದದ ಅರ್ಥವು ಪರಮಾತ್ಮನೆಂಬುದಾಗಿ ತಿಳಿಯುತ್ತದೆ. (ವಿಷ್ಣುವಿನಲ್ಲಿನ) ಸರ್ವಭೂತೋತ್ಪಾದಕತ್ವವು ಉಪನಿಷತ್ತು, ಸೂತ್ರಗಳಿಂದ ಸಿದ್ಧವಾಗಿದೆ.

॥ ಇಲ್ಲಿಗೆ ಸತ್ತರ್ಕದೀಪಾವಳಿ ಕನ್ನಡಾನುವಾದದಲ್ಲಿ ಆಕಾಶಾಧಿಕರಣವು ಮುಗಿಯಿತು ॥

॥ ಶ್ರೀಮಧ್ವೇಶಾರ್ಪಣಮಸ್ತು ॥

# ೦೦೮-ಆಕಾಶಾಧಿಕರಣ

ಭಾಗ -೨

ತಾತ್ಪರ್ಯಚಂದ್ರಿಕಾ, ಪ್ರಕಾಶ, ಗುರುರಾಜೀಯ,
ಭಾಟ್ಟಸಂಗ್ರಹ, ಶಂಕರಭಾಷ್ಯ, ಭಾಮತೀ,
ಶ್ರೀಭಾಷ್ಯ, ಶ್ರುತಪ್ರಕಾಶ ಇವುಗಳ ಆಯ್ದ ಭಾಗಗಳು

॥ ಶ್ರೀಲಕ್ಷ್ಮೀಹಯಗ್ರೀವೋ ವಿಜಯತೇತಮಾಮ್ ॥

॥ ಶ್ರೀಮದ್ಧರಾಜೋ ವಿಜಯತೇತರಾಮ್ ॥

॥ ಶ್ರೀಗುರುಭ್ಯೋ ನಮಃ ॥

# ಆಕಾಶಾಧಿಕರಣ ಸಾರ

ಈ ಅಧಿಕರಣದಲ್ಲಿ ಭೂತಗಳಲ್ಲಿ ಪ್ರಸಿದ್ಧಗಳಾದ 'ಆಕಾಶ' ಮುಂತಾದ ನಾಮಗಳನ್ನು ಸಮನ್ವಯ ಮಾಡುತ್ತಾರೆ. ಪಂಚಭೂತಗಳಲ್ಲಿ ಮೊದಲನೆಯದಾದ್ದರಿಂದ ಆಕಾಶವು ಮುಖ್ಯವಾಗಿದೆ. ಆದ್ದರಿಂದ ಅದರ ಸಮನ್ವಯವನ್ನು ಸೂತ್ರದಲ್ಲಿ ಹೇಳಿ ಉಳಿದವುಗಳನ್ನು ಉಪಲಕ್ಷಣಯಾ ಸಮನ್ವಯ ಮಾಡುತ್ತಾರೆ. ವಸ್ತುತಃ ಈ ಅಧಿಕರಣದ ನ್ಯಾಯಕ್ಕೆ ವಿಷಯವಾದ ಭೂತಗಳಿಗಿಂತ ಭಿನ್ನವಾದ ಶಬ್ದಗಳನ್ನು ಸಮನ್ವಯ ಮಾಡುತ್ತಾರೆ ಎನ್ನಬಹುದು. ಆದರೆ ಆಕಾಶಾದಿಗಳು ಹೇಗೆ ಸ್ವಭಾವಭೂತವಾದ ಪ್ರವೃತ್ತಿನಿಮಿತ್ತವುಳ್ಳದ್ದೋ ಹಾಗೆ ಉಳಿದ ಶಬ್ದಗಳು ಆಗಿಲ್ಲ. ಹಾಗಾಗಿ ಅಧಿಭೂತಗತಶಬ್ದಗಳನ್ನು ಸಮನ್ವಯ ಮಾಡುತ್ತಾರೆ ಎಂದು ಹೇಳಿದ್ದಾರೆ. ಹಿಂದಿನ ಅಧಿಕರಣದಲ್ಲಿ 'ಅಂತಸ್ತತ್ವ' ಲಿಂಗವನ್ನು ಸಮನ್ವಯ ಮಾಡಿದಂತೆ ಈ ಅಧಿಕರಣದಲ್ಲಿಯೂ 'ಅನಂತತ್ವ' ಲಿಂಗವನ್ನು ಸಮನ್ವಯ ಮಾಡಬಹುದಿತ್ತಲ್ಲವೆ? ಎಂದರೆ ಹಿಂದಿನ ಅಧಿಕರಣದಲ್ಲಿ ಒಂದು ಲಿಂಗವನ್ನು ಸಮನ್ವಯ ಮಾಡಿದ್ದರಿಂದ ಬಹಳ ನಾಮಗಳ ಸಮನ್ವಯ ಮಾಡಲಾಗಿತ್ತು. ಈ ಅಧಿಕರಣದಲ್ಲಿ 'ಆಕಾಶ' ಎಂಬ ಒಂದು ನಾಮಸಮನ್ವಯವನ್ನು ಮಾಡುವುದರಿಂದ ಬಹಳ ಲಿಂಗಗಳ ಸಮನ್ವಯ ಸಿದ್ಧಿಸುತ್ತದೆ. ಹಾಗಾಗಿ ಇಲ್ಲಿ ನಾಮವನ್ನೇ ಸಮನ್ವಯ ಮಾಡಿದ್ದಾರೆ.

ಅಂತಸ್ತತ್ವಾಧಿಕರಣದ ನ್ಯಾಯದ ಅತಿದೇಶ ಆಕಾಶಾಧಿಕರಣದಲ್ಲಿ ಇರುವಂತೆ ಮುಂದಿನ ಪ್ರಾಣಾಧಿಕರಣ ಜ್ಯೋತಿರಧಿಕರಣಗಳಲ್ಲಿಯೂ ಇರುವುದರಿಂದ ಮೊದಲು ಆಕಾಶಾಧಿಕರಣ ಅನಂತರ ಪ್ರಾಣಾಧಿಕರಣ, ಅನಂತರ ಜ್ಯೋತಿರಧಿಕರಣ ಹೀಗೆ ಕ್ರಮವಾಗಿ ನಿರೂಪಣೆ ಮಾಡಲು ಏನು ಕಾರಣ? ಎಂದು ಪ್ರಶ್ನೆ ಬರಬಹುದು. ಅದಕ್ಕೆ ಎರಡು ರೀತಿಯ ಉತ್ತರವಿದೆ. ಮೊದಲನೆಯದಾಗಿ ಅಂತಸ್ತತ್ವಾಧಿಕರಣದ ನ್ಯಾಯದ ಮೇಲೆ ಅಭ್ಯಧಿಕಾಶಂಕಾವನ್ನು ಆಕಾಶಾಧಿಕರಣದಲ್ಲಿ ಮಾಡಿಕೊಂಡು ಉತ್ತರಿಸಿದ ಮೇಲೆ ಪುನಃ ಅದರ ಮೇಲೆ ಹೆಚ್ಚಿನ ಶಂಕೆಯನ್ನು ಪ್ರಾಣಾಧಿಕರಣದಲ್ಲಿ ಮಾಡಿದ್ದಾರೆ. ಅಲ್ಲಿ ಸಮಾಧಾನವನ್ನು ಹೇಳಿದಮೇಲೆ ಪುನಃ ಅಭ್ಯಧಿಕಾಶಂಕೆಯನ್ನು ಮಾಡಲಾಗಿದೆ. ಈ ಕ್ರಮದಿಂದಾಗಿ ಅವುಗಳಲ್ಲಿ ಕ್ರಮವು ಹೇಳಲ್ಪಟ್ಟಿದೆ. ಎರಡನೆಯದಾಗಿ ಶ್ರುತಿಯಲ್ಲಿ 'ಆಕಾಶದಿಂದ ವಾಯು ವಾಯುವಿನಿಂದ ಅಗ್ನಿ' ಹೀಗೆ ಕ್ರಮವಾಗಿ ಒಂದೊಂದಕ್ಕೆ ಕಾರಣತ್ವವನ್ನು ಹೇಳಿದ್ದರಿಂದ ಅದನ್ನಿಟ್ಟುಕೊಂಡು ಇಲ್ಲಿ ಕ್ರಮವು ಹೇಳಲ್ಪಟ್ಟಿದೆ.

ಭಾಷ್ಯದಲ್ಲಿ ಈ ಅಧಿಕರಣಫಲದ ಬಗ್ಗೆ ಹೇಳುವಾಗ ಛಾಂದೋಗ್ಯೋಪನಿಷತ್ತಿನಲ್ಲಿ ಬಂದಿರುವ 'ಆಕಾಶ' ಶಬ್ದವು ವಿಷ್ಣುವಾಚಕವಲ್ಲದಿದ್ದರೆ, ಆನಂದಮಯನನ್ನು ಕುರಿತು ಹೇಳಿದ 'ಆಕಾಶ' ಶಬ್ದವೂ ಕೂಡ ವಿಷ್ಣುವಾಚಕವಾಗುವುದಿಲ್ಲ. ಹಾಗಾಗಿ ಆನಂದಮಯನು ವಿಷ್ಣುವಾಗುವುದಿಲ್ಲ ಎಂದು ಪೂರ್ವಪಕ್ಷ ಮಾಡಿಕೊಂಡು ಸಮಾಧಾನವನ್ನು ಸಿದ್ಧಾಂತದಲ್ಲಿ ಹೇಳಿದ್ದರಿಂದ ಈ ಅಧಿಕರಣ ಸಾರ್ಥಕ ಎಂದಿದ್ದಾರೆ. ಆದರೆ ಅದು ಸರಿಯಲ್ಲ. ಏಕೆಂದರೆ ಛಾಂದೋಗ್ಯದಲ್ಲಿರುವ ಆಕಾಶಶಬ್ದವು ವಿಷ್ಣುವಾಚಕವಾಗಿದ್ದರೂ 'ಆತ್ಮನಃ ಆಕಾಶಃ

ಸಂಭೂತಃ' ಎಂಬಲ್ಲಿ ಆಕಾಶ ಶಬ್ದವನ್ನು ವಿಷ್ಣುಪರ ಎಂದು ಹೇಗೆ ಒಪ್ಪುವುದಿಲ್ಲವೋ ಹಾಗೆಯೇ ಆನಂದಮಯನ ಕುರಿತು ಹೇಳಿದ ವಾಕ್ಯದಲ್ಲಿಯೂ ಹೇಳಲು ಬರುವುದಿಲ್ಲ. ಆದ್ದರಿಂದ ಆನಂದಮಯಾಧಿಕರಣದಿಂದ ಸಂಗತಿಯನ್ನು ಹೇಳಿದ್ದು ಹೇಗೆ? ಎಂದರೆ ಛಾಂದೋಗ್ಯದಲ್ಲಿರುವ ಆಕಾಶ ಶಬ್ದವು ಮತ್ತು ಆನಂದಮಯ-ನಲ್ಲಿರುವ ಆಕಾಶಶಬ್ದವು ವಿಷ್ಣುವಾಚಕ ಎನ್ನಲು ಅಲ್ಲಿ ಬ್ರಹ್ಮನ ಲಿಂಗವಿರುವುದು ಕಾರಣ. 'ಆತ್ಮನಃ ಆಕಾಶಸ್ಸಂಭೂತಃ' ಎಂಬಲ್ಲಿ ಭೂತಾಕಾಶದ ಲಿಂಗವಿದೆಯೇ ಹೊರತು ಬ್ರಹ್ಮನ ಲಿಂಗವಿಲ್ಲ. ಹಾಗಾಗಿ ಅಲ್ಲಿ ಆಕಾಶಶಬ್ದವು ಭೂತಪರ. ಆದ್ದರಿಂದ ಆನಂದಮಯಾಧಿಕರಣದಿಂದ ಸಂಗತಿ ಹೇಳಿದ್ದು ಸರಿಯಾಗಿದೆ.

ಆಕಾಶಾಧಿಕರಣಕ್ಕೆ ಹೀಗೆ ಆನಂದಮಯಾಧಿಕರಣದಿಂದ ಸಂಗತಿಯನ್ನು ಹೇಳುವುದಾದರೆ ಈ ಅಧಿ-ಕರಣವೇ ವ್ಯರ್ಥ. ಹೇಗೆಂದರೆ ಇಲ್ಲಿ ಆಕಾಶಶಬ್ದವು ವಿಷ್ಣು ವಾಚಕ ಎಂದು ಸಾಧಿಸುತ್ತಾರೆ. ಆದರೆ ಅದನ್ನು ಹೇಳಲು ಪ್ರತ್ಯೇಕ ಅಧಿಕರಣದ ಅವಶ್ಯಕತೆಯಿಲ್ಲ. ಆನಂದಮಯ ಎಂಬಲ್ಲಿ ಮಯಟ್‌ಪ್ರತ್ಯಯವು ವಿಕಾರಾರ್ಥಕ ಎಂದು ಆಕ್ಷೇಪ ಮಾಡಿ ಸಮಾಧಾನ ಮಾಡುವ ಸೂತ್ರವನ್ನು ಆನಂದಮಯಾಧಿಕರಣದಲ್ಲಿ ಸೇರಿಸಿದಂತೆ ಆನಂದಮಯಪ್ರಕರಣದಲ್ಲಿ ಆಕಾಶಶಬ್ದವಿರುವುದರಿಂದ ವಿಷ್ಣುವಿನಲ್ಲಿ ಎಂದು ಆಕ್ಷೇಪ ಮಾಡಿ ಸಮಾಧಾನ ಪಡಿಸುವ ಸೂತ್ರವನ್ನು ಅಲ್ಲಿಯೇ ಸೇರಿಸಬಹುದಾದ್ದರಿಂದ ಪ್ರತ್ಯೇಕ ಅಧಿಕರಣದ ಅವಶ್ಯಕತೆಯಿಲ್ಲ.

ಹೀಗೆ ಹೇಳುವುದಾದರೆ ಆನಂದಮಯನಲ್ಲಿ ಶ್ರುತವಾದ ಅಂತಸ್ಥತ್ವವನ್ನಿಟ್ಟುಕೊಂಡು ಅಂತಸ್ಥಾಧಿ-ಕರಣವನ್ನು ಪ್ರಾರಂಭ ಮಾಡಿದ್ದಾರೆ. ಅಲ್ಲಿಯೂ ಹೀಗೆಯೇ ಹೇಳಿ ಆನಂದಮಯಾಧಿಕರಣದಲ್ಲಿಯೇ ಆ ಸೂತ್ರವನ್ನು ಸೇರಿಸಬಹುದು ಎಂದು ಆಕ್ಷೇಪ ಮಾಡಬಹುದು. ಅಲ್ಲಿ ಆಕ್ಷೇಪಿಸದೆ ಇಲ್ಲಿ ಏಕೆ ಹೇಳುತ್ತೀರಿ? ಎಂದರೆ ಅಂತಸ್ಥತ್ವವು ಆನಂದಮಯನಲ್ಲಿ ಶ್ರುತವಾದರೂ, ಆಕಾಶಶಬ್ದವು ಹೇಗೆ ವಿಷ್ಣುವನ್ನು ಬಿಟ್ಟು ಬೇರೆಯ-ವರಲ್ಲಿ (ಭೂತಾಕಾಶ) ಪ್ರಸಿದ್ಧವಾಗಿದೆಯೋ ಹಾಗೆ ಅಂತಸ್ಥತ್ವವೂ ಶ್ರುತವಾಗಿಲ್ಲ.

ಮತ್ತು ಅನ್ಯತ್ರಪ್ರಸಿದ್ಧವಾದ ಇಂದ್ರಾದಿ ಶ್ರುತಿಗಳ ಸಹಕಾರವೂ ಅದಕ್ಕಿಲ್ಲ. ಹಾಗಾಗಿ ಅದೇ ವಾಕ್ಯದಲ್ಲಿ ಈ ರೀತಿ ಪೂರ್ವಪಕ್ಷ ಮಾಡಲು ಅವಕಾಶವಿಲ್ಲವಾದ್ದರಿಂದ ಬೇರೆ ವಾಕ್ಯವನ್ನು ಇಟ್ಟುಕೊಂಡು ಪ್ರತ್ಯೇಕ ಅಧಿಕರಣ-ರಚನೆ ಮಾಡುವುದು ಅನಿವಾರ್ಯ. ಆದರೆ ಆಕಾಶಶಬ್ದವಾದರೂ ಆನಂದಮಯನಲ್ಲಿ ಶ್ರುತವಾಗಿದೆ. ಮತ್ತು ಅನ್ಯತ್ರ ಭೂತಾಕಾಶದಲ್ಲಿ ಪ್ರಸಿದ್ಧವಾಗಿದೆ.

ಆದ್ದರಿಂದ ಅದೇ ವಾಕ್ಯದಲ್ಲಿ ಪೂರ್ವಪಕ್ಷ ಮಾಡಲು ಬರುವುದರಿಂದ ಪ್ರತ್ಯೇಕಾಧಿಕರಣದ ಅವಶ್ಯಕತೆ-ಯಿಲ್ಲ ಎಂದು ಹೇಳಿದ್ದು ಎನ್ನಬಾರದು. ಆಕಾಶಶಬ್ದವನ್ನು ಸಮನ್ವಯ ಮಾಡಲು ಪ್ರತ್ಯೇಕವಾಗಿ ಅಧಿಕರಣರಚನೆ ಮಾಡುವುದಕ್ಕೆ ಅನೇಕ ಕಾರಣಗಳಿವೆ.

೧) ಆನಂದಮಯ ಎಂಬಲ್ಲಿ ಮಯಟ್ ಶಬ್ದವು ಹೇಗೆ ಆನಂದಮಯಶಬ್ದದ ಒಂದು ಭಾಗವಾಗಿದೆಯೋ ಹಾಗೆಯೇ ಆಕಾಶಶಬ್ದವು ಆನಂದಮಯಶಬ್ದದ ಒಂದು ಭಾಗವಾಗಿ ಆನಂದಮಯ ಶಬ್ದದಲ್ಲಿ ಸೇರಿಲ್ಲವಾದ್ದರಿಂದ ಅದೇ ನ್ಯಾಯದಿಂದ ಸಮನ್ವಯ ಮಾಡಲು ಬರುವುದಿಲ್ಲ. ಆದ್ದರಿಂದ ಮತ್ತೊಂದು ಯುಕ್ತಿಯನ್ನು ಹೇಳಬೇಕಾ-ಗುತ್ತದಾದ್ದರಿಂದ ಬೇರೆ ಅಧಿಕರಣವನ್ನು ರಚಿಸಲಾಗಿದೆ.

೨) ಬೇರೆ ಅಧಿಕರಣದಿಂದ ಸಮನ್ವಯ ಮಾಡಲು ಹೊರಟಾಗ ''ಆಕಾಶ ಇತಿ ಹೋವಾಚ'' ಎನ್ನುವ ಮತ್ತೊಂದು ವಾಕ್ಯವನ್ನು ವಿಷಯವಾಕ್ಯವೆಂದಿಟ್ಟುಕೊಂಡಾಗ. 'ಯದೇಷ ಆಕಾಶ' ಎಂದು ಆನಂದಮಯನಲ್ಲಿ

ಶ್ರುತವಾದ ವಾಕ್ಯದಲ್ಲಿರದ ಅನೇಕ ಗುಣಗಳು ಮತ್ತೊಂದು ವಾಕ್ಯದಲ್ಲಿರುವುದರಿಂದ ಅವುಗಳೂ ಕೂಡ ಈ ಆಕಾಶನಲ್ಲಿ ಹೇಳಿದಂತಾಗುತ್ತದೆ.

೩) ಮತ್ತು 'ಆಕಾಶ ಇತಿ ಹೋವಾಚ' ಎಂಬ ಬ್ರಹ್ಮ ಪ್ರಕರಣವೆಂದು ನಿರ್ಧರಿಸಲ್ಪಟ್ಟ ವಾಕ್ಯದಲ್ಲಿರುವ ಯುಕ್ತಿಗಳು 'ಯದೇಷ ಆಕಾಶ' ಎನ್ನುವ ವಾಕ್ಯದಲ್ಲಿ ಇಲ್ಲವಾದ್ದರಿಂದ ಅದಕ್ಕೋಸ್ಕರ ಆನಂದಮಯ ಪ್ರಕರಣದಲ್ಲಿರುವ ವಿಷಯ ವಾಕ್ಯವನ್ನು ಬಿಟ್ಟು ಮತ್ತೊಂದನ್ನು ಹೇಳಬೇಕಾಗುತ್ತದೆ.

ವಸ್ತುತಃ ಇಲ್ಲಿ ಆನಂದಮಯಾಧಿಕರಣದಿಂದ ಸಂಗತಿ ತೋರಿಸಿದಂತೆ. ''ಆಕಾಶಾದೇವ ಸಮುತ್ಪದ್ಯಂತೇ'' ಎಂದಿರುವುದರಿಂದ ಜನ್ಮಾಧಿಕರಣದಿಂದಲೂ ಸಂಗತಿಯನ್ನೂ ಹೇಳಬಹುದು. ಆದರೆ ಇಲ್ಲಿ ಶ್ರುತವಾದ ಕಾರಣತ್ವವನ್ನು ನಿಮಿತ್ತಕಾರಣ ಎನ್ನದೆ ಉಪಾದಾನಕಾರಣ ಎಂದು ಕೂಡಿಸಬಹುದಾದ್ದರಿಂದ ಆನಂದಮಯಾಧಿಕರಣದಿಂದಲೇ ಸಂಗತಿಯನ್ನು ಹೇಳಿದ್ದಾರೆ. ಆನಂದಮಯಾಧಿಕರಣದಿಂದ ಸಂಗತಿಯನ್ನು ಹೇಳದಿದ್ದರೆ ಅದರಿಂದ ಸಂಗತಿ ಇರುವ ಅಂತಸ್ಥತ್ವಾಧಿಕರಣದ ನಂತರ ಈ ಸೂತ್ರವಿರುವುದು ಸಂಗತವಾಗುವುದಿಲ್ಲವಾದ್ದರಿಂದ ಆನಂದಮಯಾಧಿಕರಣದಿಂದ ಸಂಗತಿ ಹೇಳಿದ್ದಾರೆ.

ಆನಂದಮಯಾಧಿಕರಣದಿಂದ ಸಂಗತಿಯನ್ನು ತೋರಿಸಿದ್ದಕ್ಕೆ ಕೆಲವರು ಹೀಗೆ ಅಭಿಪ್ರಾಯಪಡುತ್ತಾರೆ. ಪೂರ್ವಪಕ್ಷಿಗಳು 'ಆಕಾಶ' ಎಂದರೆ ಅಚೇತನವಾದ ವಸ್ತುವೆಂದು ಅಂಗೀಕರಿಸಿರುವುದರಿಂದ ಜನ್ಮಾದಿಸೂತ್ರದಲ್ಲಿ ಹೇಳಿರುವ ಚೇತನಕರ್ತೃತ್ವದಿಂದ ಸಂಗತಿಯನ್ನು ಹೇಳಲು ಬರುವುದಿಲ್ಲವಾದ್ದರಿಂದ ಹೀಗೆ ಹೇಳಿದ್ದು ಎನ್ನುತ್ತಾರೆ. ಅದು ಸರಿಯಲ್ಲ. ಆನಂದಮಯಶಬ್ದವಾಚ್ಯವಾದದ್ದು ಅಚೇತನವಾದರೂ ಅಭಿಮಾನಿದ್ವಾರಾ ಕರ್ತೃವಾಗಬಹುದು. ಆದ್ದರಿಂದ ಆಕಾಶವೂ ಕರ್ತೃವಾಗಬಹುದಾದ್ದರಿಂದ ಈ ರೀತಿ ಸಮರ್ಥನೆ ಸರಿಯಲ್ಲ.

ಮತ್ತೆ ಕೆಲವರು. ಹತ್ತಿರವಿರುವ ಆನಂದಮಯಾಧಿಕರಣದಿಂದ ಸಂಗತಿಯನ್ನು ತೋರಿಸಲು ಬರುವಾಗ ದೂರದಲ್ಲಿರುವ ಜನ್ಮಾಧಿಕರಣದಿಂದ ಸಂಗತಿಯನ್ನು ತೋರಿಸುವುದು ಸರಿಯಲ್ಲವೆನ್ನುತ್ತಾರೆ. ಆದರೆ ಇದೂ ಸರಿಯಲ್ಲ. ಟೀಕೆಯಲ್ಲಿ ಆನಂದಮಯಾಧಿಕರಣಕ್ಕೆ ಸಂಗತಿಯನ್ನು ಹೇಳುವಾಗ ದೂರಸ್ಥವಾದ ಜಿಜ್ಞಾಸಾಧಿಕರಣದಿಂದ ಸಂಗತಿಯನ್ನು ತೋರಿಸಿದ್ದಾರೆ. ಹಾಗಾಗಿ ಸಂಗತಿಯಿರುವುದು ಮುಖ್ಯವೇ ಹೊರತು ಸಮೀಪದ ಸಂಗತಿಯೇ ದೂರದ ಸಂಗತಿ ಎನ್ನುವುದು ಮುಖ್ಯವಲ್ಲ.

ಈ ಅಧಿಕರಣದ ಚಿಂತಾಕ್ರಮ ಹೀಗಿದೆ -

ಇಲ್ಲಿ ಆಕಾಶವೆಂದರೆ ಭೂತಾಕಾಶವನ್ನು ಇಟ್ಟುಕೊಳ್ಳಬೇಕೋ ಅಥವಾ ಬ್ರಹ್ಮನನ್ನೋ? ಅದಕ್ಕೋಸ್ಕರ ಶ್ರುತಿಪ್ರಸಿದ್ಧಿಯನ್ನಿಟ್ಟುಕೊಂಡು 'ಪರೋವರೀಯಸ್ತ್ವ' ಲಿಂಗವು ಬಾಧ್ಯವೋ? ಅಥವಾ ಪರೋವರೀಯಸ್ತ್ವಲಿಂಗದಿಂದ ಶ್ರುತಿಯೇ ಬಾಧ್ಯವೋ? ಅದಕ್ಕೋಸ್ಕರ ಪ್ರಸಿದ್ಧಿಬಾಧ ಬಂದಾಗ ಶ್ರುತಿಗೆ ಮುಖ್ಯಾರ್ಥತ್ವ ಹಾನಿಯಾಗುತ್ತದೋ ? ಅಥವಾ ಇಲ್ಲವೋ? ಅದಕ್ಕೋಸ್ಕರ ಆಕಾಶ ಶಬ್ದದ ಪ್ರವೃತ್ತಿ ನಿಮಿತ್ತವು ಬ್ರಹ್ಮನಲ್ಲಿ ಇಲ್ಲವೋ? ಅಥವಾ ಇದೆಯೋ? ಅದಕ್ಕೋಸ್ಕರ ಜಡದ ಸ್ವಭಾವವು ಈಶ್ವರನ ಅಧೀನವಲ್ಲವೋ? ಅಥವಾ ಈಶ್ವರನ ಅಧೀನವೋ? ಎಂದು ಚಿಂತಾ.

ಒಂದು ವೇಳೆ ಜಡದ ಸ್ವಭಾವವು ಈಶ್ವರನ ಅಧೀನವೆಂದಾದರೆ 'ತದಧೀನತ್ವ' ನ್ಯಾಯದಂತೆ ಆಕಾಶ-ಶಬ್ದವು ಬ್ರಹ್ಮನಲ್ಲಿ ಮುಖ್ಯವೆಂದಾಗುತ್ತದೆ. ಇಲ್ಲವೆಂದರೆ ಬ್ರಹ್ಮನಲ್ಲಿ ಆಕಾಶ ಶಬ್ದವು ಮುಖ್ಯವಲ್ಲವೆಂದಾಗುತ್ತದೆ.

ವಸ್ತುತಃ ಹಿಂದಿನ ಅಧಿಕರಣದಲ್ಲಿರುವ ನಿರವಕಾಶಲಿಂಗದಿಂದ ಲೋಕಪ್ರಸಿದ್ಧಿಗೆ ಬಾಧವನ್ನು ಹೇಳಬೇಕು ಎಂದು ನಿರ್ಣಯಿಸಿದೆ. ಅದನ್ನೇ ಇಲ್ಲಿ ಹೇಳಿದ್ದು. ಹಾಗಾಗಿ ಒಂದೊಂದು ವಿಷಯ ವಾಕ್ಯವನ್ನಿಟ್ಟುಕೊಂಡು ಅಧಿಕರಣ ಭೇದವನ್ನು ಹೇಳಿದರೆ ಅನಂತ್ಯದೋಷಬರುತ್ತದಲ್ಲವೆ? ಎಂದು ಪ್ರಶ್ನೆ ಬರಬಹುದು. ಆದರೆ ಕೇವಲ ವಿಷಯವಾಕ್ಯಭೇದವನ್ನಿಟ್ಟುಕೊಂಡು ಇಲ್ಲಿ ಅಧಿಕರಣರಚನೆ ಮಾಡಿದ್ದಲ್ಲ. ಕಂತು ಹಿಂದಿನ ಅಧಿಕರಣಕ್ಕಿಂತಲೂ ಅಧಿಕಾಶಂಕಾವಿರುವುದರಿಂದ. ಅದರ ನಿರಾಕರಣೆ ಮಾಡಲು ಈ ಅಧಿಕರಣವನ್ನು ರಚನೆ ಮಾಡಲಾಗಿದೆ. ಅಧಿಕಾಶಂಕೆಯನ್ನು ಅನುವ್ಯಾಖ್ಯಾನದಲ್ಲಿ ತೋರಿಸಿದ್ದಾಗಿ.

ಅಭ್ಯಧಿಕಾಶಂಕೆಯನ್ನು ತೋರಿಸುವ ಅನುವ್ಯಾಖ್ಯಾನದ ಅಭಿಪ್ರಾಯವನ್ನು ವಿವರಿಸುತ್ತಾರೆ.

ಆಕಾಶ ಶಬ್ದದ ಪ್ರವೃತ್ತಿ ನಿಮಿತ್ತವಾದ ವಿವರತ್ವವನ್ನು ಭಗವದಧೀನ ಎನ್ನಲು ಅಚೇತನಗತತ್ವ, ಮತ್ತು ಸ್ವಭಾವತ್ವ ಈ ಎರಡೂ ಬಾಧಕವಾಗಿವೆ. ಹೇಗೆಂದರೆ ರಾಜಾಧೀನವಾದ್ದರಿಂದ ಭೃತ್ಯನ ಜಯವನ್ನು ರಾಜನಲ್ಲಿ ವ್ಯವಹರಿಸುವಂತೆ ಅಚೇತನದಲ್ಲಿರುವ 'ತದ್‌ಗತತ್ವ' ಎಂಬ ಪ್ರವೃತ್ತಿನಿಮಿತ್ತವನ್ನಿಟ್ಟುಕೊಂಡು ಚೇತನನ ಅಧೀನವಾಗಿದೆ ಎಂದ ಮಾತ್ರಕ್ಕೆ ಜಡವಾಚಕ ಶಬ್ದಪ್ರಯೋಗವು ಲೋಕದಲ್ಲಿ ಕಂಡಿಲ್ಲ. 'ಚೇತನಪ್ರಸಾದಲಬ್ಧತ್ವ' ರೂಪ ಚೇತನಾಧೀನತ್ವನ್ನಿಟ್ಟುಕೊಂಡು ಹೇಳಬೇಕು. ಆದರೆ ಅಚೇತನವಾದದ್ದರಲ್ಲಿ ಭಗವಂತನ ಪ್ರಸಾದವನ್ನು ಹೇಳಲು ಬರುವುದಿಲ್ಲ ಎಂದು ಶಂಕಾಭಿಪ್ರಾಯ.

ಹೀಗೆ, ಇಂದ್ರಾದಿಶಬ್ದಗಳ ಪ್ರವೃತ್ತಿ ನಿಮಿತ್ತಗಳು ಹೇಗೆ ಇಂದ್ರಾದಿಗಳ ಸ್ವಭಾವವೋ ಹಾಗೆ ವಿವರತ್ವವೂ ಕೂಡ ಆಕಾಶದ್ದೇ ಸ್ವಭಾವ. ಹಾಗಾಗಿ ಇದನ್ನು ಭಗವಂತನ ಅಧೀನವೆನ್ನುವುದಾದರೆ. ಆದರ ಸ್ವಭಾವವಾಗಲಿಕ್ಕೆ ಹೇಗೆ ಸಾಧ್ಯ? ಭೃತ್ಯನಲ್ಲಿರುವ ಭೃತ್ಯನ ಸ್ವಾಭಾವಿಕ ರೂಪಾದಿಗಳನ್ನಿಟ್ಟುಕೊಂಡು ರಾಜನು ರೂಪವಂತ ಎಂದು ಎಲ್ಲಿಯಾದರೂ ಬಳಸುವುದು ಕಂಡಿದೆಯೇ? ಎಂದು ಪ್ರಶ್ನೆಯ ಅಭಿಪ್ರಾಯ.

ಇಂದ್ರಾದಿದೇವತೆಗಳಲ್ಲಿರುವ ಇಂದ್ರಾದಿಪದ ಪ್ರವೃತ್ತಿನಿಮಿತ್ತವಾದ 'ಐಶ್ವರ್ಯ' ಮುಂತಾದವುಗಳು ಭಗವಂತನ ಪ್ರಸಾದದಿಂದ ಲಭ್ಯವಾದುವುಗಳಾದ್ದರಿಂದ ಹೇಗೆ ಭಗವದಧೀನಗಳೋ ಹಾಗೆ. ವಿವರತ್ವ ಮೊದಲಾದುವುಗಳೂ ಸಹ ಭಗವಂತನ ಪ್ರಸಾದದಿಂದ ಲಬ್ಧವಾದ್ದರಿಂದ ಭಗವಂತನ ಅಧೀನವೋ? ಅಥವಾ ಕುಂಬಾರನ ಅಧೀನವಾಗಿ ಚಕ್ರದಲ್ಲಿ ಆಗಂತುಕವಾಗಿ ಬರುವ ಭ್ರಮಣದಂತೆ ಆಗಂತುಕವಾಗಿ ಭಗವದಧೀನವೋ? ಎರಡೂ ಸರಿಯಲ್ಲ. ವಿವರತ್ವಾದಿಗಳೂ ಅಚೇತನನಲ್ಲಿರುವುದರಿಂದ ಅವನ ಪ್ರಸಾದಲಭ್ಯಗಳು ಎನ್ನಲು ಬರುವುದಿಲ್ಲ. ವಿವರತ್ವಾದಿಗಳು ಸ್ವಭಾವಗಳಾದ್ದರಿಂದ ಆಗಂತುಕಾಧೀನತ್ವವೆಂದು ಹೇಳಲು ಬರುವುದಿಲ್ಲ.

ಅಥವಾ ''ಸ್ವಾತಂತ್ರ್ಯಂ ತದ್‌ಗತತ್ವಂಚ ಶಬ್ದವೃತ್ತೇರ್ಹಿಕಾರಣಮ್'' ಎಂದು ಶಬ್ದ ಪ್ರಯೋಗಕ್ಕೆ 'ಸ್ವಾತಂತ್ರ್ಯ ಮತ್ತು ತದ್‌ಗತತ್ವ' ಎರಡೂ ಕಾರಣ ಎಂದು ಹೇಳಿದ್ದರಿಂದ ಆ ಎರಡನ್ನೂ ಇಲ್ಲಿಲ್ಲವೆಂದು ತೋರಿಸುತ್ತಾರೆ. ಇಂದ್ರಾದಿಪದಪ್ರವೃತ್ತಿನಿಮಿತ್ತವಾದ ಐಶ್ವರ್ಯಾದಿಗಳು ನಿರವಧಿಕವಾಗಿ ಬ್ರಹ್ಮನಲ್ಲಿರುವಂತೆ ವಿವರತ್ವಾದಿಗಳನ್ನು ಹೇಳಲು ಬರುವುದಿಲ್ಲ. ಅವುಗಳು ಅಚೇತನಧರ್ಮಗಳಾದ್ದರಿಂದ ಚೇತನನಲ್ಲಿ ಹೇಳಲು ಬರುವುದಿಲ್ಲ. ಹಾಗೆಯೇ ಇಂದ್ರಾದಿಗಳಲ್ಲಿರುವ ಐಶ್ವರ್ಯಾದಿಗಳು ಭಗವಂತನ ಅಧೀನವಾಗಿರುವಂತೆ ವಿವರತ್ವವು ಭಗವದಧೀನ ಎನ್ನಲೂ ಬರುವುದಿಲ್ಲ. ವಿವರತ್ವಾದಿಗಳು ಆಕಾಶಾದಿಗಳ ಸ್ವಭಾವವಾಗಿದೆ. ಹಾಗಾಗಿ ಭಗವಂತನ ಅಧೀನವೆನ್ನಲೂ ಬರುವುದಿಲ್ಲ. ಹೀಗಾಗಿ ಆಕಾಶಶಬ್ದವು ಬ್ರಹ್ಮನನ್ನು ಹೇಳಬೇಕಾದರೆ ಅದಕ್ಕೆ ಬೇಕಾದ ನಿಮಿತ್ತವಿಲ್ಲವಾದ್ದರಿಂದ ಆಕಾಶಶಬ್ದವಾಚ್ಯನು ವಿಷ್ಣುವಾಗಲಾರ. ಸುಧಾದಲ್ಲಿ ಇದೇ ಅಭಿಪ್ರಾಯವನ್ನಿಟ್ಟುಕೊಂಡು ಇನ್ನೂ ವಿಸ್ತಾರವಾಗಿ ಹೇಳಿದ್ದಾರೆ.

ಸುಧಾಗ್ರಂಥದ ಅಂತಸ್ಥತ್ವಾಧಿಕರಣಪೂರ್ವಪಕ್ಷದಲ್ಲಿ ಅಚೇತನನ ಸ್ವಭಾವವನ್ನು ಭಗವದಧೀನ ಎಂದಿಟ್ಟು-ಕೊಂಡು ಪೂರ್ವಪಕ್ಷ ಮಾಡಿದ್ದು ಹೇಗೆ ಎಂದರೆ ಈ ಅಧಿಕರಣದ ಸಿದ್ಧಾಂತ ನ್ಯಾಯವನ್ನಿಟ್ಟುಕೊಂಡು ಹೇಳಿದ್ದಾರೆ. ಆದ್ದರಿಂದ ಅದು ಕೂಡುತ್ತದೆ.

''ಆಕಾಶಸ್ಯಾಚೇತನತ್ವೇನ'' ಎಂಬ ಟೀಕೆಯಲ್ಲಿ ಅನುವ್ಯಾಖ್ಯಾನ ಮತ್ತು ಸುಧಾಗ್ರಂಥದ ಅನುಸಾರವಾಗಿ 'ಆಕಾಶ' ಎಂದರೆ ''ಆಕಾಶಪದ ಪ್ರವೃತ್ತಿ ನಿಮಿತ್ತ'' ಎಂದಿಟ್ಟುಕೊಳ್ಳಬೇಕು. ಹೀಗೆ ಆಕಾಶ ಶಬ್ದವು ಬ್ರಹ್ಮನಲ್ಲಿ ಮುಖ್ಯವಾಗಿದೆ ಎನ್ನಲು ವಿರೋಧಿಯಾದ ಪ್ರಮೇಯಾಶ್ರಿತವಾದ ಶಂಕೆಯು ಇದಾಗಿದೆ.

ಪ್ರಮಾಣಾಶ್ರಿತ ಪೂರ್ವಪಕ್ಷವು ಮೂರು ರೀತಿಯಾಗಿದೆ -

೧) ಹಿಂದಿನ ಅಂತರಧಿಕರಣದಲ್ಲಿ ಸ್ವತಃ ಪ್ರಬಲವಾಗಿದ್ದರೂ ಶ್ರುತಿಯು ನಿರವಕಾಶಲಿಂಗದಿಂದ ಬಾಧಿತ-ವಾಗಿತ್ತು. ಆದರೆ ಈ ಅಧಿಕರಣದಲ್ಲಿ ಹಾಗಲ್ಲ; ಆಕಾಶ ಶ್ರುತಿಯು ಬಹಳ ಸಲ ಶ್ರುತವಾದ್ದರಿಂದ ಬಹುತ್ವವು ಇದೆ. ಹೀಗಾಗಿ ಸ್ವಭಾವತಃ ಪ್ರಾಬಲ್ಯ ಮತ್ತು ಬಹುತ್ವ ಪ್ರಯುಕ್ತ ಪ್ರಾಬಲ್ಯ ಎಂಬೆರಡು ರೀತಿಯ ಪ್ರಾಬಲ್ಯ-ವಿರುವುದರಿಂದ ಲಿಂಗವು ನಿರವಕಾಶವಾಗಿದ್ದರೂ ದುರ್ಬಲವೇ ಆಗಿದೆ. ಹಾಗಾಗಿ ನಿರವಕಾಶವಾದ ಲಿಂಗವನ್ನೂ ಆಕಾಶಶ್ರುತಿಯು ಬಾಧಿಸುತ್ತದೆ. ಆದ್ದರಿಂದ ನಿರವಕಾಶವಾದ ವಿಷ್ಣುವಿನ ಲಿಂಗವಿದ್ದರೂ ಪ್ರಬಲವಾದ ಆಕಾಶಶ್ರುತಿಯಿರುವುದರಿಂದ ಆಕಾಶಶಬ್ದವು ವಿಷ್ಣುವಾಚಕವಲ್ಲ.

೨) ವಿಷ್ಣುವಿತರರಲ್ಲಿ ಪ್ರಸಿದ್ಧಗಳಾದ ಇಂದ್ರಾದಿ ಶಬ್ದಗಳನ್ನು ವಿಷ್ಣುವಾಚಕ ಶಬ್ದಗಳ ಜೊತೆಗಿರುವುದರಿಂದ. ವಿಷ್ಣುವಾಚಕಗಳೇ ಎಂದು ಹಿಂದಿನ ಅಧಿಕರಣದಲ್ಲಿ ಹೇಳಿದ್ದರೂ ಈ ಅಧಿಕರಣದಲ್ಲಿರುವ ಆಕಾಶ ಶಬ್ದವು ವಿಷ್ಣುವಾಚಕ ಶಬ್ದಗಳ ಜೊತೆಗೆ ಎಲ್ಲೂ ಪಠಿತವಾಗಿಲ್ಲ. ಆದ್ದರಿಂದ ಆಕಾಶಶಬ್ದವು ವಿಷ್ಣುವನ್ನು ಹೇಳುತ್ತದೆನ್ನುವುದು ಸರಿಯಲ್ಲ.

೩) ಅಂತಸ್ಥತ್ವಾಧಿಕರಣದ ಪೂರ್ವಪಕ್ಷದಲ್ಲಿದ್ದ ಗೊಂದಲಗಳು ಈ ಅಧಿಕರಣದಲ್ಲಿ ಇಲ್ಲ. ಹಿಂದೆ ಅಂತಸ್ಥನು ಇಂದ್ರ, ಬೃಹಸ್ಪತಿ ಮೊದಲಾದವರ ಶ್ರುತಿಗಳಿದ್ದುದರಿಂದ ಇಂದ್ರನೋ ಬೃಹಸ್ಪತಿಯೋ ಎಂದು ನಿರ್ಣಯ ಮಾಡದೆ ಪೂರ್ವಪಕ್ಷ ಮಾಡಿದ್ದರಿಂದ ಏಕವಾಕ್ಯತಾ ಭಂಗವಿತ್ತು. ಹಾಗೆಯೇ ಇಂದ್ರಾದಿಗಳಿಗೆ ಬ್ರಹ್ಮನೊಂದಿಗೆ ಏಕ್ಯವನ್ನಿಟ್ಟುಕೊಳ್ಳೋಣವೆಂದರೆ ಭೇದವ್ಯಪದೇಶದ ಬಾಧಕವಿತ್ತು. ಆದರೆ ಆಕಾಶಾಧಿಕರಣ-ದಲ್ಲಿ ಈ ಯಾವ ಸಮಸ್ಯೆಗಳಿಲ್ಲ. ಮಾತ್ರವಲ್ಲ ಉಪಕ್ರಮದಲ್ಲಿ, ಸ್ವತಃ ಪ್ರಬಲವಾದ ಆಕಾಶಶ್ರುತಿಯಿದೆ. ಹೀಗಾಗಿ ಪ್ರಬಲವಾದ್ದರಿಂದ ಆಕಾಶಶಬ್ದಕ್ಕೆ ಭೂತಾಕಾಶವೆಂದೇ ಅರ್ಥ. ಪ್ರಬಲ ಶ್ರುತಿಯಿರುವುದರಿಂದ ಅನಂತತ್ವ ಮೊದಲಾದ ಲಿಂಗಗಳನ್ನು ಅದಕ್ಕನುಸಾರಿಯಾಗಿ ಅರ್ಥೈಸಬೇಕು.

ಈ ಅಧಿಕರಣದ ಪೂರ್ವಪಕ್ಷದಲ್ಲಿ ಆಕಾಶವೆಂದರೆ ಭೂತಾಕಾಶವೋ? ಅವ್ಯಾಕೃತಾಕಾಶವೋ? ಭೂತಾಕಾಶವೆಂದಿಟ್ಟುಕೊಳ್ಳೋಣವೆಂದರೆ ಅನುವ್ಯಾಖ್ಯಾನದ ವಿರೋಧ ಬರುತ್ತದೆ. ಅನುವ್ಯಾಖ್ಯಾನದಲ್ಲಿ ವಿವರತ್ವವು ಆಕಾಶದ ಸ್ವಭಾವವೆಂದಿದ್ದಾರೆ. ಅಂದರೆ ಅವ್ಯಕೃತಾಕಾಶವೆಂದು ಅನುವ್ಯಾಖ್ಯಾನದ ಅಭಿಪ್ರಾಯ. ಅವ್ಯಾಕೃತಾಕಾಶವೆಂದಿಟ್ಟುಕೊಳ್ಳೋಣವೆಂದರೆ ಭಾಷ್ಯದ ವಿರೋಧ ಬರುತ್ತದೆ. ಭೂತಪ್ರಕರಣವಾದ್ದರಿಂದ ಅಲ್ಲಿ ಭೂತಾಕಾಶ ಎಂದು ಪೂರ್ವಪಕ್ಷ ಮಾಡಿದ್ದಾರೆ. ಆದ್ದರಿಂದ ಎರಡನ್ನೂ ಕೂಡಿಸುವುದು ಹೇಗೆ? ಎಂಬ ಪ್ರಶ್ನೆ ಬಂದರೆ. ಭೂತಾಕಾಶವನ್ನೇ ಭಾಷ್ಯಾನುಸಾರಿಯಾಗಿ ಇಟ್ಟುಕೊಳ್ಳಬೇಕು. ಅನುವ್ಯಾಖ್ಯಾನದಲ್ಲಿ ವಿವರತ್ವವನ್ನು

ಹೇಳಿದ್ದರೂ ಅದು ಪ್ರಾಣಿಗಳ ಸಂಚಾರಕ್ಕೆ ಅನುಕೂಲವಾದ ವಿವರತ್ವ ಎಂದಿಷ್ಟೇ ಅರ್ಥೈಸಬೇಕು. ಅದು ಭೂತಾಕಾಶದಲ್ಲಿದೆ. ಆದ್ದರಿಂದ ವಿರೋಧವಿಲ್ಲ.

ಹಾಗಿದ್ದರೆ ಭಾಷ್ಯದಲ್ಲಿ ಹೇಳಿದ್ದನ್ನೇ ಅನುವ್ಯಾಖ್ಯಾನದಲ್ಲಿ ಹೇಳಿದ್ದರಿಂದ ಪುನರುಕ್ತಿಬರುತ್ತದವಲ್ಲವೆ? ಎಂದರೆ ಭಾಷ್ಯದಲ್ಲಿ ಅಭ್ಯಧಿಕಾಶಂಕಾವಿಲ್ಲದೇ ಅನಂತತ್ವ ಲಿಂಗವನ್ನು ವಿಷ್ಣುವಿನ ಲಿಂಗವೆಂದು ತಿಳಿಯದ ಪ್ರಯುಕ್ತ ಆಕಾಶ ಶಬ್ದದಿಂದ ಭೂತಾಕಾಶವನ್ನಿಟ್ಟುಕೊಂಡು ಪೂರ್ವಪಕ್ಷಮಾಡಿದ್ದಾರೆ. ಅನುವ್ಯಾಖ್ಯಾನದಲ್ಲಿ ಅನಂತತ್ವವು ವಿಷ್ಣುವಿನ ಲಿಂಗವೆಂದು ತಿಳಿದರೂ ಅಭ್ಯಧಿಕಾಶಂಕಾ ಪ್ರಯುಕ್ತವಾದ ಪೂರ್ವಪಕ್ಷ ಮಾಡಿದ್ದಾರೆ ಎಂದಿಟ್ಟುಕೊಂಡಾಗ ಭಾಷ್ಯ ಮತ್ತು ಅನುವ್ಯಾಖ್ಯಾನದಲ್ಲಿ ಎರಡು ರೀತಿಯ ಪೂರ್ವಪಕ್ಷ ಮಾಡಿದ್ದು ಪುನರುಕ್ತವಲ್ಲ.

ಈ ಆಕಾಶಾಧಿಕರಣದಲ್ಲಿ ಆಕಾಶಶಬ್ದವನ್ನು ವಿಷ್ಣುವಿನಲ್ಲಿ ಸಮರ್ಥನೆ ಮಾಡಲಾಗಿದೆ. ಮುಂದೆ ''ಆಕಾಶೋ ಅರ್ಥಾಂತರವ್ಯಪದೇಶಾತ್'' ಎಂಬಲ್ಲಿಯೂ, ಅದನ್ನೇ ಹೇಳುತ್ತಾರೆ. ವಿಯದಧಿಕರಣವೂ ಭೂತಾಕಾಶವಲ್ಲ ಕಿಂತು ವಿಷ್ಣುವೇ ಎಂದು ಹೇಳುತ್ತದೆ. ಹೀಗೆ ಒಂದೇ ವಿಷಯವನ್ನು ಕುರಿತು ಮೂರು ಅಧಿಕರಣಗಳಿದ್ದರೆ ಪುನರುಕ್ತವಲ್ಲವೆ ? ಎಂದರೆ. ಆಕಾಶವಲ್ಲ ಕಿಂತು ವಿಷ್ಣುವೇ ಎಂಬ ಸಮರ್ಥನೆ ಮೂರರಲ್ಲಿಯೂ ಸಮಾನವಾಗಿದ್ದರೂ ನ್ಯಾಯಭೇದವಿರುವುದರಿಂದ ಅಧಿಕರಣಭೇದವಿದೆ; ಹಾಗಾಗಿ ಪುನರುಕ್ತವಲ್ಲ. ಹೇಗೆಂದರೆ ಈ ಅಧಿಕರಣದಲ್ಲಿ ಆಕಾಶಶಬ್ದವು ಭಗವಂತನಲ್ಲಿ ಮುಖ್ಯ ಎಂದು ಹೇಳಲು ಆಕಾಶಶಬ್ದದ ಪ್ರವೃತ್ತಿನಿಮಿತ್ತ ಭಗವದಧೀನ ಎಂದು ಸಮರ್ಥನೆ ಮಾಡುತ್ತಾರೆ ಮುಂದಿನ ಆಕಾಶಾಧಿಕರಣದಲ್ಲಿ ಪ್ರವೃತ್ತಿನಿಮಿತ್ತ ಭಗವದಧೀನ ಮತ್ತು ಆಕಾಶಶಬ್ದವು ವಿಷ್ಣುವಾಚಕ ಎಂದು ಸಿದ್ಧವಾದರೂ ಶ್ರುತಿಯಲ್ಲಿರುವ 'ವೈ' ಶಬ್ದವನ್ನಿಟ್ಟುಕೊಂಡು ಪೂರ್ವಪಕ್ಷ ಮಾಡಿದಾಗ ಅದರ ಪರಿಹಾರವನ್ನು ಮಾಡಿದೆ. ವಿಯದಧಿಕರಣದಲ್ಲಿ ಜನ್ಮಾದಿಕಾರಣತ್ವವು ಆಕಾಶಕ್ಕಿಲ್ಲ ಕಿಂತು ವಿಷ್ಣುವಿಗೇ ಎಂದು ಸಮರ್ಥನೆ ಮಾಡಿದೆ. ಆದ್ದರಿಂದ ಪುನರುಕ್ತಿದೋಷಕ್ಕೆ ಅವಕಾಶವಿಲ್ಲ.

ಸಿದ್ಧಾಂತ ಹೀಗಿದೆ -

ಚೇತನರಲ್ಲಿರುವ ಪ್ರವೃತ್ತಿನಿಮಿತ್ತಗಳೇ ಭಗವಂತನ ಅಧೀನಗಳಾಗಿವೆಯೆಂದರೆ ಅಚೇತನಗಳಲ್ಲಿರುವ ಪ್ರವೃತ್ತಿ ನಿಮಿತ್ತಗಳು ಸರ್ವಥಾ ಭಗವದಧೀನಗಳೇ ಆಗುತ್ತವೆ. ಏಕೆಂದರೆ ಚೇತನಕ್ಕಿಂತ ಅಚೇತನಗಳು ಅತ್ಯಂತ ಪರಾಧೀನಗಳು ಎಂಬುದು ಎಲ್ಲರಿಗೂ ಸಿದ್ಧವಾದ ವಿಷಯ. ಹಾಗಾಗಿ ಅಚೇತನದಲ್ಲಿರುವ ಧರ್ಮಗಳು ಭಗವದಧೀನವಾಗಲಿಕ್ಕೆ ಹೇಗೆ ಸಾಧ್ಯ? ಎನ್ನುವುದು ಸರಿಯಲ್ಲ.

ಹಾಗೆಯೇ ಭೃತ್ಯನ ಜಯವನ್ನು ರಾಜನ ಜಯವೆಂದು ವ್ಯವಹರಿಸುವಂತೆ ಜಡವಸ್ತುಗಳಲ್ಲಿರುವ 'ಮೃತ್ವ' ಮುಂತಾದ ಧರ್ಮಗಳು ಅವುಗಳ ಅಭಿಮಾನಿಗಳ ಅಧೀನವಾದ್ದರಿಂದ ಅದನ್ನಿಟ್ಟುಕೊಂಡು 'ಮೃದಬ್ರವೀತ್' ಎಂದು ಪ್ರಯೋಗಿಸಲಾಗುವುದು. ಹೀಗೆ ಅಭಿಮಾನಿದೇವತೆಗಳಲ್ಲಿ 'ಮೃತ್ವ' ವ್ಯವಹಾರ ಕಂಡಿದೆಯಾದ್ದರಿಂದ ಚೇತನಗತವಾದ ಧರ್ಮವನ್ನು ಭಗವಂತನಲ್ಲಿ ಹೇಳಿದಂತೆ ಜಡಗತಧರ್ಮವನ್ನು ಹೇಳಲು ಬರುವುದಿಲ್ಲ ಎಂಬ ಆಕ್ಷೇಪಕ್ಕೆ ಅವಕಾಶವಿಲ್ಲ.

ಆಕಾಶದ ಸ್ವಭಾವವು ವಿಷ್ಣುವಿನ ಅಧೀನವಾಗಲಿಕ್ಕೆ ಹೇಗೆ ಸಾಧ್ಯ? ಎಂದರೆ. ಲೋಕದಲ್ಲಿ ಕುಂಬಾರನು ಘಟವನ್ನು ತಯಾರಿಸುವಾಗ ಘಟದ ಸ್ವಭಾವವಾದ ಘಟತ್ವವೂ ಅವನ ಅಧೀನವೇ ಆಗಿರುತ್ತದೆ. ಏಕೆಂದರೆ ಅವನು ಶರಾವವನ್ನು ಮಾಡಲು ಪ್ರಯತ್ನ ಮಾಡಿದಾಗ ಘಟವು ಹುಟ್ಟುವುದಿಲ್ಲ. ಘಟವನ್ನು ಮಾಡಲು

ಯತ್ನಸಿದಾಗಷ್ಟೇ ಘಟವು ಹುಟ್ಟುತ್ತದೆ. ಕೇವಲ ಮಣ್ಣಿನಿಂದ ಅವನು ಯಾವುದನ್ನಾದರೂ ಮಾಡಬಹುದು. ಹಾಗಾಗಿ ಘಟದ ಸ್ವಭಾವವಾದ ಘಟತ್ವ ಕುಂಬಾರನ ಅಧೀನವೇ ಆಗಿರುತ್ತದೆ. ಹೀಗಿರುವಾಗ ವಿಷ್ಣುವಿನಿಂದ ಹುಟ್ಟಿದ ಆಕಾಶದ ಸ್ವಭಾವವು ಭಗವದಧೀನ ಎಂದರೆ ಏನು ತೊಂದರೆ? ಅಲ್ಲದೆ ಅನೇಕ ಶ್ರುತಿಸ್ಮೃತಿಗಳೂ ಕೂಡ ಆಕಾಶದ ಸ್ವಭಾವವಾದ ವಿವರತ್ವವು ಭಗವಂತನ ಅಧೀನವೆಂದು ಸಾರುತ್ತಿವೆ. ಆದ್ದರಿಂದ ಆಕಾಶ-ಸ್ವಭಾವವೂ ಭಗವದಧೀನವಾಗಿದೆ. ಮತ್ತು ನಿರವಧಿಕವಾದ ವಿವರತ್ವವು ಭಗವಂತನಲ್ಲಿಯೇ ಇರುವುದರಿಂದ ಆಕಾಶ ಶಬ್ದದ ಮುಖ್ಯ ವಾಚ್ಯತ್ವ ವಿಷ್ಣುವಿಗೆ ಕೊಡುತ್ತದೆ.

ಪ್ರಮಾಣಾಶ್ರಿತವಾದ ಆಕಾಶಶಬ್ದವು ಭಗವಂತನಲ್ಲಿ ಮುಖ್ಯವಲ್ಲ ಎಂಬ ಶಂಕೆಯನ್ನು ನಿರಾಕರಿಸುತ್ತಾರೆ.

ಆನಂತತ್ವ ಮೊದಲಾದ ಲಿಂಗಗಳು ವಿಷ್ಣುವಿನಲ್ಲಿ ನಿರವಕಾಶಗಳು. ಏಕೆಂದರೆ ಆನಂತತ್ವ ಎಂದರೆ ಅಂತತ್ರಯವಿಲ್ಲದ್ದು ಎಂದರ್ಥ. ದೇಶತಃ ಕಾಲತಃ ಗುಣತಃ ಅಂತವಿಲ್ಲದವನು ವಿಷ್ಣುವೇ ಹೊರತು ಮೂರು ರೀತಿಯ ಅಂತವುಳ್ಳ ಭೂತಾಕಾಶವಲ್ಲ.

ಅವ್ಯಾಕೃತಾಕಾಶವನ್ನಿಟ್ಟುಕೊಂಡರೆ ಅದೂ ಕೂಡ ದೇಶತಃ ಕಾಲತಃ ಅಂತರಹಿತವಾದದ್ದು ಎಂದು ಕೋಶಗಳು ಹೇಳುತ್ತವೆಯಾದರೂ ಪೂರ್ವಪಕ್ಷಿಯು ಭೂತಕಾಶವನ್ನು ಆಕಾಶ ಶಬ್ದವಾಚ್ಯವೆಂದು ಹೇಳುತ್ತಾನೆ. ಅಲ್ಲಿ ಅದೂ ಕೂಡ ಇಲ್ಲ. ಹೀಗಾಗಿ ಭಾಷ್ಯದಲ್ಲಿ ಹೇಳಿದ ಶ್ರುತಿಯಿಂದ ಮತ್ತು ಲೋಕಪ್ರಸಿದ್ಧಿಯಿಂದ 'ಆನಂತ' ಶಬ್ದವು ವಿಷ್ಣುವಿನಲ್ಲೇ ಮುಖ್ಯವಾದ್ದರಿಂದ ಸಾವಕಾಶವಾದ ಆಕಾಶಶಬ್ದದಿಂದ ಬಾಧವನ್ನು ಹೇಳಲು ಬರುವುದಿಲ್ಲ.

ಬಲಾಬಲವನ್ನು ಪರೀಕ್ಷೆ ಮಾಡಿದಾಗ ಸ್ವಭಾವತಃ ಶ್ರುತಿ ಪ್ರಬಲವಾಗಿದ್ದರೂ ನಿರವಕಾಶತ್ವ ಮೊದಲಾದ ಪ್ರಾಬಲ್ಯ ಹೇತುಗಳಿಂದ ಕೂಡಿದ ಲಿಂಗವು ಅದಕ್ಕಿಂತಲೂ ಪ್ರಬಲವಾಗುತ್ತದೆಯಾದ್ದರಿಂದ ಇಲ್ಲಿ ಆಕಾಶ-ಶ್ರುತಿಯಿಂದ ವಿಷ್ಣುವಿನ ಲಿಂಗಕ್ಕೆ ಬಾಧವನ್ನು ಹೇಳಲು ಬರುವುದಿಲ್ಲ. ಹಾಗೆಯೇ ಭೂತಾಕಾಶದ ಲಿಂಗವಾದ ಭೂತಕಾರಣತ್ವವೂ ಕೂಡ ಬೇರೆ ಶ್ರುತಿಯಲ್ಲಿ ಹೇಳಿದಂತೆ ವಿಷ್ಣುವಿನಲ್ಲಿಯೇ ಮುಖ್ಯವಾಗಿದೆ. ಆದ್ದರಿಂದ ಆಕಾಶಶಬ್ದವು ವಿಷ್ಣುವನ್ನೇ ಮುಖ್ಯವಾಗಿ ಹೇಳುತ್ತದೆ.

ಅದ್ವೈತ ಹಾಗೂ ವಿಶಿಷ್ಟಾದ್ವೈತಮತಗಳ ವಿಮರ್ಶೆಯನ್ನು ಮಾಡುತ್ತಾರೆ. ಅದ್ವೈತಿಗಳು ಮತ್ತು ವಿಶಿಷ್ಟಾದ್ವೈತಿಗಳು ಇಬ್ಬರೂ ಹೀಗೆ ಹೇಳುತ್ತಾರೆ - ಈ ಅಧಿಕರಣದಲ್ಲಿ 'ಆಕಾಶ ಇತಿ ಹೋವಾಚ' ಎಂಬಲ್ಲಿ ಬಹುಕಾಲದಿಂದ ಭೂತಾಕಾಶದಲ್ಲಿ ಲೋಕಪ್ರಸಿದ್ಧವಾದ ಆಕಾಶಪದವು ಮೊದಲಿರುವುದರಿಂದ ಅದಕ್ಕನುಸಾರಿಯಾಗಿ ಕೊನೆಯಲ್ಲಿರುವ 'ಸರ್ವಕಾರಣತ್ವ' ಮೊದಲಾದ ಲಿಂಗಗಳನ್ನು ಹೇಗಾದರೂ ಅರ್ಥಿಸಬೇಕು ಎಂದು ಪೂರ್ವಪಕ್ಷ ಮಾಡಿ. ಉತ್ತರ ವಾಕ್ಯದಲ್ಲಿ ಆಕಾಶ ಪದವು ಮೊದಲು ಶ್ರುತವಾಗಿದ್ದರೂ, ಮೊದಲು ಶ್ರುತವಾದ ಪ್ರಶ್ನೆಗೆ ಅನುಸಾರವಾಗಿ ನಂತರದಲ್ಲಿರುವ ಉತ್ತರವನ್ನು ಕೊಡುವ ವಾಕ್ಯದಲ್ಲಿರುವ ಆಕಾಶಪದವನ್ನು ವ್ಯಾಖ್ಯಾನಿಸಬೇಕಾದ್ದರಿಂದ, 'ಅಸ್ಯಲೋಕಸ್ಯ ಕಾ ಗತಿಃ' ಎಂದು ಸಕಲಪ್ರಪಂಚಕ್ಕೆ ಯಾರು ಕಾರಣ? ಎಂಬ ಪ್ರಶ್ನೆಗೆ ಅನುಗುಣವಾದ ಉತ್ತರನೀಡುವ ಆಕಾಶ ಪದವನ್ನು ಹೇಳಿದಾಗ ಭೂತಾಕಾಶವನ್ನು ಹೇಳಲು ಬರುವುದಿಲ್ಲ. ಏಕೆಂದರೆ ಭೂತಾಕಾಶವೂ ಪ್ರಪಂಚದಲ್ಲಿ ಸೇರಿದೆ. ಮತ್ತು ರೂಢಿಯಿಂದ ಭೂತಾಕಾಶದ ಪ್ರಾಪ್ತಿಯಿದ್ದರೂ 'ಸರ್ವಕಾರಣತ್ವ ಮುಂತಾದ ಅನೇಕ ಲಿಂಗಗಳ ಅನುಕೂಲಕ್ಕಾಗಿ 'ತ್ಯಜೇದೇಕಂ ಕುಲಸ್ಯಾರ್ಥೇ' ಎಂಬ ನ್ಯಾಯಾನುಸಾರವಾಗಿ ಆಕಾಶಪದಕ್ಕೆ ರೂಢಿಯನ್ನು ಬಿಟ್ಟು ಲಕ್ಷಣಾದಿವೃತ್ತಿಯಿಂದ ಸೋಪಾಧಿಕ ಬ್ರಹ್ಮನೇ ಅರ್ಥವಾಗಿದ್ದಾನೆಂದು ಹೇಳಬೇಕು. ಹೀಗೆ ಸಿದ್ಧಾಂತ ಮಾಡುತ್ತಾರೆ.

ಆದರೆ ಇದು ಉಚಿತವಲ್ಲ. ಪ್ರಾರಂಭಕ್ಕೆ ಅನುಸಾರಿಯಾಗಿ ಕೊನೆಯಲ್ಲಿರುವುದಕ್ಕೆ ಅರ್ಥ್ಯಸಬೇಕು ಎನ್ನುವುದಾದರೆ ಹಿಂದಿನ ಅಧಿಕರಣದಲ್ಲೂ ಹೀಗೆ ಜೀವನೆಂದೇ ಸಿದ್ಧಾಂತ ಮಾಡಬೇಕಾಗುತ್ತದೆ.

ಹಾಗೆಯೆ ಈ ಪ್ರಶ್ನೆಯು ಸರ್ವಲೋಕ ಗತಿವಿಷಯಕವಾದದ್ದು ಎನ್ನುವುದೂ ಸರಿಯಲ್ಲ. ಪ್ರಶ್ನವಾಕ್ಯದಲ್ಲಿ 'ಅಸ್ಯ' ಎಂಬ ಸರ್ವನಾಮದಿಂದ ಪೃಥಿವಿಯನ್ನೇ ಇಟ್ಟುಕೊಳ್ಳಬೇಕು ಹೊರತು 'ಸರ್ವಪ್ರಪಂಚವನ್ನಲ್ಲ'.

ಪೃಥಿವಿಯನ್ನು ಮಾತ್ರ 'ಅಸ್ಯ' ಪದದಿಂದ ಸ್ವೀಕರಿಸಿದರೆ ಪೃಥಿವಿಗೆ ಜಲವು ಕಾರಣವೆಂಬುದು ಲೋಕಪ್ರಸಿದ್ಧವಾದ್ದರಿಂದ ಪ್ರಶ್ನೆಯೇ ವ್ಯರ್ಥವೆಂದರ ಸಕಲ ಪ್ರಪಂಚಕ್ಕೂ ಕಾರಣ ಭಗವಂತನೆಂದು ಬೇರೆ ಶ್ರುತಿಗಳಿಂದ ತಿಳಿಯುವುದರಿಂದ ನೀವು ಹೇಳುವುದೂ ವ್ಯರ್ಥ. ಮತ್ತು ಪೃಥಿವಿಗೆ ಜಲವು ಕಾರಣ ಎಂದು ಶಾಸ್ತ್ರದಿಂದ ಸಿದ್ಧವೇ ಹೊರತು ಲೋಕಪ್ರಸಿದ್ಧಿಯಿಂದಲ್ಲ.

ಹಾಗಿದ್ದರೆ ಪೃಥಿವಿಗೆ ಕಾರಣ ಜಲ ಎಂದಿಷ್ಟೇ ಹೇಳಬಹುದಿತ್ತು. ಆಕಾಶ ಎಂದು ಹೇಳಿದ್ದು ಏಕೆ? ಹಾಗೆಯೇ 'ಸರ್ವಾಣಿ' ಎಂದು ಸರ್ವಪದ ಹೇಳಿದ್ದು. 'ಆಕಾಶದೇವ' ಎಂದು ಅವಧಾರಣೆ ಮಾಡಿದ್ದೂ ಕೂಡುವುದಿಲ್ಲವಾದ್ದರಿಂದ ನಾವು ಅರ್ಥ್ಯಸಿದಂತೆಯೇ ಹೇಳಬೇಕು ಎಂದರೆ, ಭಾಮತಿಯಲ್ಲಿ ಪ್ರಶ್ನಾನುಸಾರಿಯಾಗಿ ಉತ್ತರವನ್ನು ವ್ಯಾಖ್ಯಾನಿಸಬೇಕು ಎಂದು ಹೇಳಿದೆ. ಆದರೆ ನೀವು ಉತ್ತರಾನುಸಾರಿಯಾಗಿ ಪ್ರಶ್ನೆಯನ್ನು ವ್ಯಾಖ್ಯಾನಿಸಬೇಕು ಎನ್ನುತ್ತಿರುವಿರಿಯಾದ್ದರಿಂದ ನಿಮ್ಮಲ್ಲೇ ಪರಸ್ಪರ ವಿರೋಧವಿದೆ.

''ತ್ಯಜೇದೇಕಂ ಕುಲಸ್ಯಾರ್ಥೇ'' ಎಂಬ ನ್ಯಾಯಾನುಸಾರಿಯಾಗಿ ಆಕಾಶಪದಕ್ಕೆ ರೂಢಿಯನ್ನು ಬಿಟ್ಟು ಬೇರೆ ಅರ್ಥವನ್ನು ಮಾಡಬೇಕು ಎಂದು ಹೇಳಿದ್ದು ಸರಿಯಲ್ಲ. ಆಕಾಶಶ್ರುತಿಯು ಪ್ರಧಾನವಾದ್ದರಿಂದ ಅಪ್ರಧಾನವಾದ 'ಸರ್ವಕಾರಣತ್ವ' ಮೊದಲಾದ ಲಿಂಗಗಳಿಗೇ ''ಆಕ್ಷಾರ್ಥೇ ಪೃಥಿವೀಂ ತ್ಯಜೇತ್'' ಎಂಬ ನ್ಯಾಯಾನುಸಾರವಾಗಿ ಬಾಧವನ್ನು ಹೇಳಬೇಕು. ಇದು ಮೀಮಾಂಸಕರಿಗೂ ಸಮ್ಮತವಾದ ವಿಷಯ. ಆಕಾಶಶಬ್ದವು ಬ್ರಹ್ಮನಲ್ಲಿ ಮುಖ್ಯವಾಗಿದೆ ಎಂದು ನೀವು ಒಪ್ಪಿಲ್ಲವಾದ್ದರಿಂದ ಈ ನ್ಯಾಯಾನುಸಾರಿಯಾಗಿ ಆಕಾಶಪದಕ್ಕೆ ಬ್ರಹ್ಮನೆಂದು ಅರ್ಥ್ಯಸುವುದು ಸರಿಯಲ್ಲ.

ಮತ್ತು ನೀವು ಹಿಂದಿನ ಅಧಿಕರಣದಲ್ಲಿ ಹೇಳಿದ ನ್ಯಾಯವನ್ನಿಟ್ಟುಕೊಂಡರೂ ಈ ಅಧಿಕರಣದಲ್ಲಿ ಪೂರ್ವಪಕ್ಷ ಸಿದ್ಧಾಂತಗಳಿಗೆ ಅವಕಾಶವಿಲ್ಲ. ಆಲ್ಲದೆ ಈ ಅಧಿಕರಣದಲ್ಲಿ ಹೇಳಿದ ವಾಕ್ಯವನ್ನು ವಿಷಯವಾಕ್ಯವನ್ನಾಗಿ ಸ್ವೀಕರಿಸುವುದೂ ನಿಮ್ಮ ಮತದಂತೆ ಬ್ರಹ್ಮನು ನಿರ್ವಿಶೇಷನಾದ್ದರಿಂದ ವಿರುದ್ಧವಾಗುತ್ತದೆ. ಈ ವಿರೋಧ ಪರಿಹಾರಕ್ಕಾಗಿ ಸವಿಶೇಷ ನಿರ್ವಿಶೇಷ ಎಂಬ ವಿಂಗಡನೆ ಮಾಡುವುದಾದರೆ ಫಲಭೇದ ಮತ್ತು ಪಾದಭೇದ ಮಾಡಿರುವುದು ಕೂಡುವುದಿಲ್ಲ. ಮತ್ತು ಸೂತ್ರದಲ್ಲಿ ಹೇಳಿರುವ ಲಿಂಗವೂ ಕೂಡ ವಾಸ್ತವಿಕವಾಗಿ ನಿಮ್ಮ ಮತದಂತೆ ಬ್ರಹ್ಮನಲ್ಲಿ ಇಲ್ಲ. ಹೀಗಾಗಿ ಅದನ್ನಿಟ್ಟುಕೊಂಡು ಸಿದ್ಧಾಂತ ಮಾಡುವುದೂ ಸರಿಯಲ್ಲ. ಆದ್ದರಿಂದ ಅದ್ವೈತಿಗಳು ಮತ್ತು ವಿಶಾಷ್ಟಾದ್ವೈತಿಗಳು ಇಬ್ಬರು ಹೇಳಿದ್ದೂ ಸರಿಯಲ್ಲ.

* * * * *

# ತಾತ್ಪರ್ಯಚಂದ್ರಿಕಾ

## अथ आकाशाधिकरणम्

ಆಧಿಭೌತಿಕಶಬ್ದಗಳ ಸಮನ್ವಯಕ್ಕಾಗಿ ಆಕಾಶಾಧಿಕರಣ

॥ ॐ आकाशस्तल्लिङ्गात् ॐ ॥ अत्राधिभूतगताकाशादिनाम्नां समन्वय उच्यते । भूतेष्वाकाशस्य प्राधान्यात् सूत्रे तस्य मुखतः कीर्तनमन्येषां तूपलक्षणम् । अत एव सङ्गतिटीकायां ''आकाशनाम्नः'' इत्युक्त्वा अधिकरणोपसंहारटीकायां ''आधिभौतिकसर्वशब्दोपलक्षकः'' इत्युक्तम् ।

यद्यपि भूतेतरवाचिनामप्येतन्न्यायविषयाणामनेन समन्वयस्सिद्ध्यति । तथाऽपि सजातीये भूतशब्दे प्रथमं बुद्ध्यवतारादाधिदैविकेन्द्रादिशब्देषु आध्यात्मिकप्राणादिशब्देषु च स्वभावप्रवृत्तिनिमित्तकत्वाभावेन इतरत्र एतन्न्यायाप्रवृत्तेश्च टीकायामाधिभौतिकोपलक्षकतोक्तिः ।

न चात्रापि पूर्वत्रेवाकाशनामसमन्वयार्थमनन्तत्वादिलिङ्गसमन्वय एवोच्यताम् इति शङ्क्यम्, पूर्वत्रान्तस्थत्वरूपैकलिङ्गसमन्वयेन बहुनामसमन्वयात्, अत्र तु 'आकाशः' इत्येकनामसमन्वयेन बहुलिङ्गसमन्वयसिद्धेः । अनन्तत्वादेः सिद्धान्तहेतुत्वेन तत्र संशयानुदयाच्च ।

अनन्तरसङ्गतिस्तु – अभ्यधिकां शङ्कां कृत्वा पूर्वन्याय एवातिदिश्यत इत्यातिदेशिकी ॥

ಅನುವಾದ - ಆಕಾಶಾಧಿಕರಣವು ಪ್ರಾರಂಭವಾಗುತ್ತಿದೆ. ಭೂತ ಪದಾರ್ಥಗಳನ್ನು ಪ್ರತಿಪಾದಿಸುವ ಆಕಾಶಾದಿಶಬ್ದಗಳ ಸಮನ್ವಯವನ್ನು ಈ ಅಧಿಕರಣದಲ್ಲಿ ಮಾಡುತ್ತಿದ್ದಾರೆ. ಭೂತಪದಾರ್ಥಗಳಲ್ಲಿ ಆಕಾಶವೇ ಪ್ರಧಾನವಾದ್ದರಿಂದ ಸೂತ್ರಕಾರರು ಆಕಾಶಶಬ್ದವನ್ನೇ ಉಲ್ಲೇಖಿಸಿದ್ದಾರೆ.

ವಾಯು ಮೊದಲಾದ ಶಬ್ದಗಳನ್ನು ಉಪಲಕ್ಷಣಯಾ ವಿವಕ್ಷಿಸಬೇಕು. ಆದ್ದರಿಂದಲೇ ಸಂಗತಿ-ಟೀಕೆಯಲ್ಲಿ 'ಆಕಾಶ ನಾಮ್ನಃ' ಎಂದು ಪ್ರಾರಂಭಿಸಿ ಅಧಿಕರಣದ ಉಪಸಂಹಾರದಲ್ಲಿ 'ಆಧಿಭೌತಿಕ-ಸರ್ವಶಬ್ದೋಪಲಕ್ಷಣಃ' ಎಂದು ಹೇಳಿದೆ. ಹೀಗೆ ಆಧಿಭೌತಿಕವಾದ ಸಕಲಶಬ್ದಗಳ ಸಮನ್ವಯವೇ ಈ ಅಧಿಕರಣದ ಉದ್ದೇಶ ಹೊರತು ಕೇವಲ ಆಕಾಶಶಬ್ದದ ಸಮನ್ವಯವಲ್ಲ.

ಪ್ರಶ್ನೆ - ವಸ್ತುತಸ್ತು ಈ ಅಧಿಕರಣದಲ್ಲಿ ಸ್ವಭಾವವೇ ಪ್ರವೃತ್ತಿನಿಮಿತ್ತವಾಗಿರುವ ಸಕಲ ಶಬ್ದಗಳನ್ನು ಸಮನ್ವಯ ಮಾಡಲಾಗಿದೆ. ಆದ್ದರಿಂದ ಪೃಥಿವೀ ವಾಯು ಮೊದಲಾದ ಆಧಿಭೌತಿಕ ಶಬ್ದಗಳನ್ನು ಉಪಲಕ್ಷಣಯಾ ತೆಗೆದುಕೊಳ್ಳುವಂತೆ ಭೂತವಾಚಕವಲ್ಲದ ಇಂದ್ರಪ್ರಾಣಾದಿಶಬ್ದಗಳನ್ನೂ ಉಪಲಕ್ಷಣಯಾ ಸ್ವೀಕರಿಸಬೇಕಲ್ಲವೇ?

ಉತ್ತರ - ಸೂತ್ರಕಾರರು ಆಕಾಶಶಬ್ದವನ್ನು ಪ್ರಯೋಗಿಸಿದ್ದಾರೆ. ಇದನ್ನು ಕೇಳಿದಾಗ ಸಜಾತೀಯವಾದ ಆಧಿಭೌತಿಕ ಪೃಥಿವೀ, ವಾಯು ಮುಂತಾದ ಶಬ್ದಗಳ ಸಮನ್ವಯವನ್ನು ಸೂತ್ರಕಾರರು ಮಾಡುತ್ತಿದ್ದಾರೆ ಎಂದೇ ಎಲ್ಲರಿಗೂ ತಿಳಿಯುತ್ತದೆ. ಇಂದ್ರ ಮೊದಲಾದ ಆಧಿದೈವಿಕಶಬ್ದಗಳಾಗಲೀ, ಪ್ರಾಣ ಮೊದಲಾದ ಆಧ್ಯಾತ್ಮಿಕಶಬ್ದಗಳಾಗಲಿ ಬುದ್ಧಿಯಲ್ಲಿ ಪ್ರಸಕ್ತವಾಗುವುದಿಲ್ಲ. ಮತ್ತೊಂದು ಕಾರಣ -- ಅಚೇತನದ ಸ್ವಭಾವವು ಭಗವಂತನ ಅಧೀನವಾಗುವುದಿಲ್ಲ ಎಂಬುದೇ ಈ ಅಧಿಕರಣದ ಪೂರ್ವಪಕ್ಷದ ನ್ಯಾಯ. ಈ ಪೂರ್ವಪಕ್ಷ ನ್ಯಾಯವು ಆಧಿಭೌತಿಕಶಬ್ದಗಳಲ್ಲಷ್ಟೇ ಸಂಚಾರವಾಗುತ್ತದೆ. ಆಧಿದೈವಿಕಶಬ್ದಗಳಲ್ಲಿ ಆಧ್ಯಾತ್ಮಿಕಶಬ್ದಗಳಲ್ಲಿ ಸಂಚಾರವಾಗುವುದಿಲ್ಲ. ಆಧಿದೈವಿಕ ಶಬ್ದಗಳಾಗಿರುವ ಇಂದ್ರಾದಿಶಬ್ದಗಳ ಪ್ರವೃತ್ತಿನಿಮಿತ್ತವು ಭಗವಂತನ ಅಧೀನಗಳಾಗಿವೆ. ಈ ಎರಡು ಕಾರಣಗಳಿಂದ ಟೀಕಾರಾಯರು ಆಧಿಭೌತಿಕಶಬ್ದಗಳನ್ನಷ್ಟೇ ಉಪಲಕ್ಷಣಯಾ ಸ್ವೀಕರಿಸಿದ್ದಾರೆ.

ಪ್ರಶ್ನೆ - ಹಿಂದಿನ ಅಂತಃಸ್ಥತ್ವಾಧಿಕರಣದಲ್ಲಿ ಅಂತಃಸ್ಥತ್ವವೆಂಬ ಲಿಂಗದ ಸಮನ್ವಯದಿಂದ ಅನೇಕ ಶಬ್ದಗಳ ಸಮನ್ವಯವನ್ನು ಮಾಡಿದಿರಿ. ಅದರಂತೆ ಈ ಅಧಿಕರಣದಲ್ಲಿಯೂ ಸಹ ಅನಂತತ್ವಾದಿ ಲಿಂಗದ ಸಮನ್ವಯದಿಂದ ಆಕಾಶ ಮೊದಲಾದ ಅನೇಕ ನಾಮಗಳ ಸಮನ್ವಯವನ್ನು ಮಾಡಬಹುದಲ್ಲವೇ?

ಉತ್ತರ - ಹಿಂದಿನ ಅಧಿಕರಣದಲ್ಲಿ ಬಹುವಿಧವಾದ ನಾಮಗಳ ಸಮನ್ವಯವನ್ನು ಅಂತಃಸ್ಥತ್ವವೆಂಬ ಒಂದೇ ಲಿಂಗಸಮನ್ವಯದಿಂದ ಮಾಡಲಾಗಿತ್ತು. ಆದರೆ ಈ ಅಧಿಕರಣದಲ್ಲಿ ಬಹುವಿಧವಾದ ನಾಮಗಳ ಸಮನ್ವಯವನ್ನು ಮಾಡುತ್ತಿಲ್ಲ. ಕೇವಲ ಆಕಾಶ ಎಂಬ ಒಂದೇ ನಾಮದ ಸಮನ್ವಯವನ್ನು ಮಾಡುತ್ತಿದ್ದಾರೆ. ಆದ್ದರಿಂದ ಲಿಂಗಸಮನ್ವಯವನ್ನು ಮಾಡಿಯೂ ಪ್ರಯೋಜನವಿಲ್ಲ. ಮತ್ತು ಅನಂತತ್ವ ಲಿಂಗವು ಸಿದ್ಧಾಂತದ ಹೇತುವಾಗಿದೆ. ಆಕಾಶಪದದ ಬದಲು ಅನಂತ ಪದವನ್ನು ಹೇಳಿದರೆ ಸಂಶಯವೇ ಹುಟ್ಟಲಾರದು.

ಈ ಅಧಿಕರಣಕ್ಕೆ ಅತಿದೇಶಿಕೀಸಂಗತಿಯನ್ನು ತಿಳಿಯಬೇಕು. ಹಿಂದಿನ ಅಧಿಕರಣದ ಸಿದ್ಧಾಂತ ನ್ಯಾಯದ ಮೇಲೆ ಅಧಿಕಾಶಂಕೆಯನ್ನು ಮಾಡಿ, ಹಿಂದಿನ ಅಧಿಕರಣದ ನ್ಯಾಯವನ್ನೇ ಅತಿದೇಶ ಮಾಡುತ್ತಿದ್ದಾರೆ. ಆದ್ದರಿಂದ ಈ ಅಧಿಕರಣಕ್ಕಿರುವ ಅನಂತರ ಸಂಗತಿಯು ಅತಿದೇಶಿಕ ರೂಪವಾಗಿದೆ.

ಕಠಿಣಪದಾರ್ಥ

ಅಧಿಭೂತಗತಾಃ = ಅಧಿಭೂತಂ ಗತಾಃ = ಭೂತಗಳಲ್ಲಿ ಪ್ರಸಿದ್ಧವಾದ; ಪ್ರಾಧಾನ್ಯಾತ್ = 'ಆಕಾಶಃ ಸಂಭೂತಃ' ಎಂಬ ಶ್ರುತಿಯಲ್ಲಿ ಆಕಾಶವನ್ನು ಪ್ರಥಮವಾಗಿ ಹೇಳಿದ್ದರಿಂದ, ಏತನ್ನ್ಯಾಯ = ಅಚೇತನವಾದ್ದರಿಂದ ಭಗವಂತನಿಂದ ನಿಯಮ್ಯವಾಗಿಲ್ಲ ಎಂಬ ಪೂರ್ವಪಕ್ಷನ್ಯಾಯ, ಅಧಿದೈವಿಕ = ದೇವತೆಗಳಲ್ಲಿ ಪ್ರಸಿದ್ಧವಾದ, ಪೂರ್ವತ್ರ = ಹಿಂದಿನ ಅಧಿಕರಣದಲ್ಲಿ, ಅತ್ರ ತು = ಈ ಆಕಾಶಾಧಿಕರಣದಲ್ಲಿ, ಅತಿದೇಶಿಕೀ = ಹಿಂದಿನ ಸಿದ್ಧಾಂತನ್ಯಾಯದಿಂದ ಅತಿದೇಶ ಮಾಡುವಿಕೆ.

# ಶ್ರೀರಾಘವೇಂದ್ರತೀರ್ಥವಿರಚಿತ
# ಪ್ರಕಾಶ

**ಪ್ರಕಾಶಃ** – ॐ ಆಕಾಶಸ್ತಲ್ಲಿಙ್ಗಾತ್ ॐ ॥ ಅತ್ರ ಸಙ್ಗತಿಟೀಕಾಯಾಂ ''ಆಕಾಶನಾಮ್ನಃ ಸಮನ್ವಯಃ'' ಇತ್ಯುಕ್ತಮ್, ತದಯುಕ್ತಂ, ಏಕೋದಾಹರಣಸ್ಯ ಯೋಗಾರಮ್ಭಾಪ್ರಯೋಜಕತ್ವಾತ್ । ತಥಾತ್ವೇ ವಿಶ್ವತೋಮುಖತ್ವಹಾನೇರಿತ್ಯತ ಏತದಧಿಕರಣಪ್ರತಿಪಾದ್ಯಂ ದರ್ಶಯನ್ ವಿಷಯೋಪಾಧಿಮಾಹ – **ಅತ್ರೇತಿ ॥**

ನನು ಸೂತ್ರೇ ಆಕಾಶಪದಸ್ಯೈವ ಗ್ರಹಣಾತ್ ''ಆಕಾಶಾದಿ'' ಇತಿ ಕಥಮ್ । ನಚೇತರೋಪಲಕ್ಷಕತ್ವೇನೈಕಸ್ಯೋಪಾದಾನಮ್, ತಥಾऽಪಿ ಅಸ್ಯೈವೋಪಾದಾನೇ ಹೇತ್ವಭಾವಾದಿತ್ಯತ ಆಹ – **ಭೂತೇಷ್ವಿತಿ ॥ ಪ್ರಾಧಾನ್ಯಾದಿತಿ ॥** ''ಆಕಾಶಃ ಸಮ್ಭೂತಃ ಆಕಾಶಾದ್ವಾಯುಃ'' ಇತ್ಯತ್ರ ಸರ್ವಭೂತಾದಿತ್ವೇನೋಪಾದಾನಾದಿತಿ ಭಾವಃ । ಉಕ್ತಞ್ಚ ಸುಧಾಯಾಮ್ – ''ಆಕಾಶಸ್ಯ ಭೂತೇಷು ಪ್ರಾಧಾನ್ಯಾತ್ ತತ್ ಶಬ್ದಸಮನ್ವಯಂ ಹರಾವಾಹ ಸೂತ್ರಕಾರಃ'' ಇತಿ ।

ನನು ''ಟೀಕಾಯಾಂ ''ಆಕಾಶನಾಮ್ನೋ ಬ್ರಹ್ಮಣಿ ಸಮನ್ವಯಪ್ರತಿಪಾದನಾತ್'' ಇತ್ಯೇಕಸ್ಯೈವೋಪಾದಾನಾತ್ 'ಆಕಾಶಾದಿ' ಇತಿ ಕಥಮಿತ್ಯತ ಆಹ – **ಅತ ಏವೇತಿ ॥**

ನನ್ವತ್ರ ವಕ್ಷ್ಯಮಾಣರೀತ್ಯಾ ಸ್ವಭಾವಪ್ರವೃತ್ತಿನಿಮಿತ್ತಕಾಃ ಶಬ್ದಾಃ ಸಮನ್ವೀಯನ್ತೇ । ತೇ ಚ ಭೂತಾಭೂತಶಬ್ದಸಾಧಾರಣಾ ಇತಿ ಭೌತಿಕಮಾತ್ರೋಪಲಕ್ಷಣತ್ವಮಯುಕ್ತಮಿತ್ಯಾಶಙ್ಕ್ಯ, ದ್ವೇಧಾ ಸಮಾಧಾನಮಾಹ – **ಯದ್ಯಪೀತಿ ॥ ಏತನ್ನ್ಯಾಯೇತಿ ॥** 'ಅಚೇತನಸ್ವಭಾವತ್ವಾನ್ನ ಭಗವನ್ನಿಯಮ್ಯತ್ವಮ್'

ಇತ್ಯಾದಿಪೂರ್ವಪಕ್ಷನ್ಯಾಯವಿಷಯಾಣಾಮಿತ್ಯರ್ಥಃ । 'ಅನೇನ' ಸ್ವಭಾವಸ್ಯಾಪೀಶಾಧೀನತ್ವಸಾಧಕೇನಾಧಿಕರಣೇನೇತ್ಯರ್ಥಃ ॥ **ಆಧಿದೈವಿಕೇತಿ॥** ಅತೀತಾಧಿಕರಣವಿಷಯೇಷು ಉತ್ತರಾಧಿಕರಣವಿಷಯೇಷು ಚೇತ್ಯರ್ಥಃ । ಏತೇನಾಧಿದೈವಿಕಾದಿವ್ಯಾವೃತ್ತ್ಯರ್ಥಮೇವ ತಥೋಕ್ತಿರಿತ್ಯುಕ್ತಂ ಭವತಿ ।

ನನು ಪೂರ್ವಾಧಿಕರಣೇ ಲಿಙ್ಗಸ್ಯ ಸಮನ್ವಿತತ್ವೇನ ಬುದ್ಧೌ ವಿಪರಿವರ್ತಮಾನಲಿಙ್ಗತ್ಯಾಗೇ ಹೇತ್ವಭಾವಾತ್ತದೇವ ಸಮನ್ವೇತವ್ಯಮ್, ನತು ನಾಮೇತ್ಯಾಕ್ಷಿಪ್ಯ ಹೇತುಮಾಹ – **ನ ಚಾತ್ರಾಪೀತಿ ॥ ನಾಮೇತಿ ॥** ತಥಾ ಚ ಫಲತಃ ಪಾದಸಙ್ಗತಿರ್ಭವಿಷ್ಯತೀತಿ ಭಾವಃ । ಅತ್ರ ಕಿಂ ಸರ್ವಭೂತಕಾರಣತ್ವಾದಿಲಿಙ್ಗಸ್ಯ ಸಮನ್ವಯಶ್ಚೋಚ್ಯತೇ, ಸಿದ್ಧಾನ್ತ್ಯಭಿಮತಸ್ಯ ವಾ?

ಆದ್ಯ ಆಹ – **ಪೂರ್ವತ್ರೇತಿ ॥ ಏಕನಾಮೇತಿ ॥** ವೈಶ್ವಾನರಾಧಿಕರಣವದಿತಿ ಭಾವಃ ।

ನನು ಅತ್ರಾಪಿ ಆಕಾಶನಾಮ್ನೋ ಬಹುಕೃತ್ವಃ ಶ್ರವಣೇನ ಬಹುನಾಮಸಮನ್ವಯೋऽಸ್ತೀತಿ ಚೇತ್, ನ,

ಪ್ರವೃತ್ತಿನಿಮಿತ್ತಭೇದಾಭಾವೇನ ಏಕಸಮನ್ವಯೇ ಸತಿ ಪುನಃ ಶ್ರುತಸಮನ್ವಯೇ ಯತ್ನಾಧಿಕ್ಯಾಭಾವೇನ ಭಿನ್ನಪ್ರವೃತ್ತಿನಿಮಿತ್ತಕನಾಮಬಹುತ್ವಸ್ಯ ವಿವಕ್ಷಿತತ್ವೇನಾತ್ರ ತದಭಾವಾದಿತಿ ತಾತ್ಪರ್ಯಾತ್ ।

ನಚ ವಾಚ್ಯಮೇಕಲಿಙ್ಗಸಮನ್ವಯೇನಾಪ್ಯನೇಕಲಿಙ್ಗಾನಾಂ ನಾಮ್ನಶ್ಚ ಸಮನ್ವಯೋऽರ್ಥಾತ್ ಸಿಧ್ಯತೀತಿ ಲಿಙ್ಗಮೇವ ಸಮನ್ವೇತವ್ಯಮಿತಿ, ಏಕಲಿಙ್ಗಸಮನ್ವಯೇನ ಸಜಾತೀಯವಿಜಾತೀಯಸಮನ್ವಯಾಕ್ಷೇಪಸ್ಯ ಗತ್ಯನ್ತರೇ ಸತಿ ಗೌರವಹತತ್ವಾತ್ । ನ ಚಾನ್ಯತ್ರ ನಿರೂಢನಾಮಸಮನ್ವಯಸ್ಯ ಪ್ರಥಮಂ ಬುದ್ಧಾವನಾರೋಹಾತ್ ಅನ್ಯತ್ರಾನಿರೂಢಲಿಙ್ಗಸಮನ್ವಯಸ್ಯ ಏವ ವಾಚ್ಯ ಇತಿ ವಾಚ್ಯಮ್, ಪೂರ್ವತ್ರ ತಾದೃಶಸ್ಯಾಪೀನ್ದ್ರಾದಿನಾಮ್ನಃ ಸಮನ್ವಯೋತ್ಕ್ಷ್ಯಾऽತ್ರ ಬುದ್ಧಾವಾರೋಹಸಮ್ಭವಾದಿತಿ ಭಾವಃ ।

ದ್ವಿತೀಯೇ ತ್ವಾಹ – **ಅನನ್ತತ್ವಾದೇರಿತಿ ॥** ಅನ್ಯಥಾ ಸನ್ದಿಗ್ಧಾಸಿದ್ಧತ್ವಾಪಾತಾದಿತಿ ಭಾವಃ ।

ಉಪಲಕ್ಷಣಮೇತತ್ – ಅನ್ಯತ್ರ ಪ್ರಸಿದ್ಧಾಕಾಶಾದಿಶ್ರುತಿತ್ವಾದಿರೂಪಪೂರ್ವಪಕ್ಷನ್ಯಾಯಸ್ಯ ಮುಖತಃ ಸೂಚನಾಭಾವಾಚ್ಚೇತ್ಯಪಿ ಧ್ಯೇಯಮ್ । ನನ್ವೇತತ್ ''ಸಮುದ್ರಾನ್ತಸ್ಥಿತತ್ವಾದೇರ್ವಿಷ್ಣುತ್ವನಿಶ್ಚಯೇऽಪ್ಯನನ್ತತ್ವಾದೇಸ್ತದನಿಶ್ಚಯಾತ್'' ಇತಿ ವಕ್ಷ್ಯಮಾಣೇನ ವಿರುಧ್ಯತ ಇತಿ ಚೇನ್ನ, ವಾಸ್ತವಾಭಿಪ್ರಾಯೇಣಾತ್ರ ಸ್ವಾರಸಿಕಸಂಶಯಾನುದಯೋಕ್ತೇಃ । ತತ್ರಾಕಾಶಶ್ರುತ್ಯಾದಿಸಾಹಚರ್ಯೇಣಾಹಿತಸಂಶಯೋಕ್ತೇಃ । ಶ್ರುತ್ಯಾಹಿತಸಂಶಯೋಪಾದಾನೇನ ಲಿಙ್ಗಸಮನ್ವಯೋತ್ಕ್ಷ್ಯಾ ಉಪಜೀವ್ಯತ್ವೇನ ಶ್ರುತಿಸಮನ್ವಯಸ್ಯೈವ

ನ್ಯಾಯ್ಯತ್ವಾದಿತಿ ತಾತ್ಪರ್ಯಾದಿತಿ । ಅತೊ ನಾಮಸಮನ್ವಯ ಏವ ಯುಕ್ತಃ, ಮುಖತಃ ಪಾದ-ಸಙ್ಗತೇರಪಿ ಸತ್ತ್ವಾದಿತಿ ಸ್ಥಿತಮ್ ।

ಏತೇನ ''ಆಕಾಶನಾಮ್ನಃ'' ಇತ್ಯಾದಿಸಙ್ಗತಿಟೀಕಾ ಸಮರ್ಥಿತಾ । ಪೂರ್ವಾಧಿಕರಣಸಙ್ಗತಿಮಾಹ – ಅನನ್ತರೇತಿ ॥ ಪೂರ್ವಸಿದ್ಧಾನ್ತಸ್ಯೋಪರಿ ತದನಿವರ್ತ್ಯಾಶಙ್ಕಾಂ ಕೃತ್ವಾ ತದುಪಮರ್ದನಪೂರ್ವಕಂ ನಿರವಕಾಶಲಿಙ್ಗೇನ ಸಾವಕಾಶಶ್ರುತಿಬಾಧರೂಪನ್ಯಾಯ ಏವೇತ್ಯರ್ಥಃ । ಅನೇನ –

**ಕೃತ್ವಾ ತ್ವಭ್ಯಧಿಕಾಶಙ್ಕಾಂ ಪೂರ್ವಮೇವಾತಿದಿಶ್ಯತೇ ।**
**ತತ್ರಾತಿದೇಶಿಕೀ ಪ್ರೋಕ್ತಾ ॥**

ಇತಿ ಲಕ್ಷಣಂ ಸ್ಮಾರಿತಂ ಭವತಿ । ಇಯಂ ಚ ಸಙ್ಗತಿಃ ''ಚೇಷ್ಟಾ ಹಿ'' ಇತ್ಯಾದ್ಯನು-ವ್ಯಾಖ್ಯಾನಾತ್ ಸ್ಪಷ್ಟಂ ಪ್ರತೀಯತ ಇತಿ ಭಾವಃ ।

ವಿವರಣೆ - ಆಕಾಶಾಧಿಕರಣಕ್ಕೆ ಹಿಂದಿನ ಅಧಿಕರಣದಿಂದ ಆತಿದೇಶಿಕೀಸಂಗತಿ ಇದೆಯೆಂದು. 'ಆಕಾಶನಾಮ್ನಃ' ಎಂಬ ಟೀಕೆಯು ಹೇಳಿದೆ.

ಶಂಕೆ - ಆಕಾಶಶಬ್ದಸಮನ್ವಯವನ್ನು ಈ ಅಧಿಕರಣವು ಮಾಡುತ್ತಿದೆ ಎಂದು ಟೀಕೆಯಲ್ಲಿ ಹೇಳಿದ್ದಾರೆ. ಇದು ಹೇಗೆ ಸರಿ? ಒಂದೇ ನಾಮದ ಸಮನ್ವಯ ಮಾಡಲು ಸಂಪೂರ್ಣ ಅಧಿಕರಣ ಹೊರಡುವುದು ವ್ಯರ್ಥ. ಹಾಗಾದಲ್ಲಿ ಸೂತ್ರದ ವಿಶ್ವತೋಮುಖತ್ವ ಲಕ್ಷಣಕ್ಕೆ ಹಾನಿ ಬರುತ್ತದಲ್ಲವೇ?

ಸಮಾಧಾನ - ಈ ಅಧಿಕರಣದಲ್ಲಿ ಕೇವಲ ಆಕಾಶಶಬ್ದದ ಸಮನ್ವಯವನ್ನಷ್ಟೇ ಮಾಡುತ್ತಿಲ್ಲ. ಆಧಿಭೌತಿಕವಾದ ಸಕಲಶಬ್ದಗಳ ಸಮನ್ವಯವನ್ನು ಮಾಡುತ್ತಿದ್ದಾರೆ. ಆ ಎಲ್ಲ ಶಬ್ದಗಳನ್ನು ಕ್ರೋಢೀಕರಿಸುವ ಧರ್ಮ ಎಂದರೆ 'ಆಧಿಭೌತಿಕಶಬ್ದತ್ವ'. ಇದು ಉಪಲಕ್ಷ್ಯತಾವಚ್ಛೇದಕವಾಗಿದೆ. ಇದನ್ನೇ 'ಅತ್ರ' ಇತ್ಯಾದಿ ಗ್ರಂಥದಿಂದ ವಿವರಿಸಿದ್ದಾರೆ. ಹಾಗಾಗಿ, ಪೃಥ್ವೀ, ಅಪ್, ತೇಜಸ್ಸು, ವಾಯು ಮೊದಲಾದ ಎಲ್ಲ ಶಬ್ದಗಳ ಸಮನ್ವಯವು ಈ ಅಧಿಕರಣದಿಂದ ಸಿದ್ಧವಾಗುತ್ತಿದೆ. ಟೀಕೆಯು 'ಆಕಾಶನಾಮ್ನಃ' ಎಂದು ಉಪಲಕ್ಷಣಕ್ಕೋಸ್ಕರ ಆಕಾಶಪದವನ್ನು ಉಲ್ಲೇಖಿಸಿದೆ ಹೊರತು, ಒಂದೇ ಆಕಾಶಶಬ್ದದ ಸಮನ್ವಯ-ಕ್ಕೋಸ್ಕರವಲ್ಲ.

ಶಂಕೆ - ಗ್ರಂಥಕಾರರು 'ಆಕಾಶಾದಿನಾಮ್ನಾಂ' ಎಂದಿದ್ದಾರೆ. ಆದರೆ ಸೂತ್ರದಲ್ಲಿ ಕೇವಲ ಆಕಾಶಪದವಷ್ಟೇ ಕಾಣಿಸುತ್ತಿದೆ. ಆದಿಪದ ಹೇಳಿದ್ದು ವ್ಯರ್ಥ. ಬೇರೆ ಶಬ್ದಗಳ ಉಪಲಕ್ಷಣಕ್ಕೋಸ್ಕರ ಆದಿಪದ ಹೇಳಿದ್ದು ಸಾರ್ಥಕವೆಂದು ಹೇಳಲಾಗದು. ಏಕೆಂದರೆ, ವಾಯು ಮೊದಲಾದ ಬೇರೆ ಶಬ್ದಗಳನ್ನು ಉಪಲಕ್ಷಣವಾಗಿ ಸ್ವೀಕರಿಸಿದಲ್ಲಿ ಆಕಾಶಶಬ್ದದ ಉಲ್ಲೇಖವನ್ನೇ ಏಕೆ ಮಾಡಬೇಕು?

ಸಮಾಧಾನ - ಈ ಶಂಕೆಗೆ 'ಭೂತೇಷು' ಇತ್ಯಾದಿ ವಾಕ್ಯದಿಂದ ಗ್ರಂಥಕಾರರು ಉತ್ತರಿಸಿದ್ದಾರೆ. 'ಆಕಾಶಃ ಸಂಭೂತಃ' 'ಆಕಾಶಾದ್ವಾಯುಃ' ಇತ್ಯಾದಿಯಾಗಿ ಶ್ರುತಿಯು ಆಕಾಶವನ್ನೇ ಪ್ರಧಾನವಾಗಿ

ಪ್ರಾರಂಭದಲ್ಲಿ ಹೇಳಿದೆ. ಸಕಲಭೂತಪದಾರ್ಥಗಳಿಗೆ ಪ್ರಥಮವಾಗಿ ಕಾರಣವಾದದ್ದು ಆಕಾಶ. 'ಪ್ರಥಮಾತಿಕ್ರಮಣೇ ಮಾನಾಭಾವಾತ್' ಎಂಬ ನ್ಯಾಯದಂತೆ ಸೂತ್ರಕಾರರು ಆಕಾಶಶಬ್ದವನ್ನೇ ಉಪಲಕ್ಷಕವಾಗಿ ಬಳಸಿದ್ದಾರೆ. ಈ ವಿಷಯವನ್ನು ಸುಧೆಯಲ್ಲಿ 'ಆಕಾಶಸ್ಯ ಭೂತೇಷು ಪ್ರಾಧಾನ್ಯಾತ್ ತತ್ ಶಬ್ದಸಮನ್ವಯಂ ಹರಾವಾಹ ಸೂತ್ರಕಾರಃ' (ಸಕಲಭೂತಪದಾರ್ಥಗಳಲ್ಲಿ ಆಕಾಶವೇ ಪ್ರಧಾನವಾದ್ದರಿಂದ ಆಕಾಶಶಬ್ದದ ಸಮನ್ವಯವನ್ನೇ ಹರಿಯಲ್ಲಿ ಹೇಳಿದ್ದಾರೆ) ಎಂದು ಉಲ್ಲೇಖಿಸಿದ್ದಾರೆ.

**ಶಂಕೆ** - ಟೀಕೆಯಲ್ಲಿ 'ಆಕಾಶನಾಮ್ನಃ ಬ್ರಹ್ಮಣಿ ಸಮನ್ವಯಪ್ರತಿಪಾದನಾತ್' ಎಂದು ಆಕಾಶ-ಶಬ್ದವನ್ನಷ್ಟೇ ಉಲ್ಲೇಖಿಸಿರುವಾಗ ಆಕಾಶಾದಿ ಎಂದು ಹೇಗೆ ಹೇಳಿದಿರಿ?

**ಸಮಾಧಾನ** - ಈ ಶಂಕೆಗೆ 'ಅತ ಏವ' ಇತ್ಯಾದಿ ಗ್ರಂಥದಿಂದ ಉತ್ತರಿಸುತ್ತಿದ್ದಾರೆ. ಟೀಕೆಯ ಪ್ರಾರಂಭದಲ್ಲಿ ಹೀಗೆ ಹೇಳಿದರೂ ಸಹ ಉಪಸಂಹಾರದಲ್ಲಿ ಸಕಲ ಭೌತಿಕಶಬ್ದಗಳನ್ನು ಉಪಲಕ್ಷಣಯಾ ವಿವಕ್ಷಿಸಬೇಕೆಂದು ಹೇಳಿದ್ದಾರೆ. ಆದ್ದರಿಂದ ಟೀಕೆಯ ವಿರೋಧವು ಬರುವುದಿಲ್ಲ.

**ಶಂಕೆ** - ಮುಂದೆ ಹೇಳುವಂತೆ ಸ್ವಭಾವವಾಚಕವಾದ ಮತ್ತು ಪ್ರವೃತ್ತಿನಿಮಿತ್ತವುಳ್ಳ ಶಬ್ದಗಳನ್ನು ಈ ಅಧಿಕರಣದಲ್ಲಿ ಸಮನ್ವಯ ಮಾಡಲಾಗಿದೆ. ಇದು ಭೂತಗಳಲ್ಲಿ ಹೇಗಿದೆಯೋ ಆದರಂತೆ ಭೂತವಲ್ಲದ ಪದಾರ್ಥಗಳಲ್ಲಿಯೂ ಸಾಧಾರಣವಾಗಿದೆ. ಹೀಗಿರುವಾಗ ಆಧಿಭೌತಿಕಶಬ್ದಗಳನ್ನಷ್ಟೇ ಉಪಲಕ್ಷಣವಾಗಿ ವಿವಕ್ಷಿಸಬೇಕೆಂಬ ಟೀಕೆಯು ಹೇಗೆ ಸಮಂಜಸವಾಗುತ್ತದೆ?

**ಸಮಾಧಾನ** - ಈ ಶಂಕೆಗೆ 'ಯದ್ಯಪಿ' ಇತ್ಯಾದಿ ಗ್ರಂಥದಿಂದ ಎರಡು ಬಗೆಯಲ್ಲಿ ಸಮಾಧಾನವನ್ನು ನೀಡುತ್ತಿದ್ದಾರೆ. ಆಧಿದೈವಿಕ(ಭೂತವಾಚಕವಾಗದ) ಇಂದ್ರಾದಿಶಬ್ದಗಳಾಗಲೀ ಪ್ರಾಣಾದಿ ಶಬ್ದಗಳಾಗಲೀ ಉಪಲಕ್ಷ್ಯಗಳಾಗುವುದಿಲ್ಲ. ಚೇತನನ ಸ್ವಭಾವವು ಭಗವಂತನಿಂದ ನಿಯಮ್ಯವಾಗಬಹುದು. ಆದರೆ ಅಚೇತನಪದಾರ್ಥದ ಸ್ವಭಾವವು ಭಗವಂತನಿಂದ ನಿಯಮ್ಯವಾಗುವುದಿಲ್ಲ. ಇದು ಈ ಅಧಿಕರಣದ ಪೂರ್ವಪಕ್ಷನ್ಯಾಯ. ಈ ನ್ಯಾಯವು ಆಧಿಭೌತಿಕಶಬ್ದಗಳಲ್ಲಾಗಲೀ ಆಧ್ಯಾತ್ಮಿಕ ಶಬ್ದಗಳಲ್ಲಾಗಲೀ ಹೇಳ-ಲಾಗದು. ಆಧಿದೈವಿಕವಾದ ಇಂದ್ರಾದಿಶಬ್ದಗಳು ಆಧ್ಯಾತ್ಮಿಕವಾದ ಪ್ರಾಣಾದಿಶಬ್ದಗಳು ಇಂದ್ರಾದಿ ಚೇತನರನ್ನು ಪ್ರತಿಪಾದಿಸುತ್ತಿವೆ. ಇಂದ್ರಾದಿಗಳಲ್ಲಿರುವ ಸ್ವಭಾವವಾಗಲೀ ಪ್ರವೃತ್ತಿನಿಮಿತ್ತವಾಗಲೀ ಭಗವಂತನಿಂದ ನಿಯಮ್ಯವಾಗಿವೆಯೆಂದು ಹಿಂದಿನ ಅಧಿಕರಣದಲ್ಲಿ ನಿರ್ಣಯಿಸಿದ್ದಾಗಿದೆ. ಚೇತನನ ಸ್ವಭಾವ ಮತ್ತು ಪ್ರವೃತ್ತಿನಿಮಿತ್ತಗಳು ಈಶಾಧೀನವಾಗಲು ಅಚೇತನ ಸ್ವಭಾವ ಮತ್ತು ಪ್ರವೃತ್ತಿನಿಮಿತ್ತವು ಈಶಾಧೀನವಾಗುವುದಿಲ್ಲ ಎಂಬ ಅಭ್ಯಧಿಕಾಶಂಕೆಗೆ ಉತ್ತರಿಸಲು ಈ ಅಧಿಕರಣವು ಹೊರಟಿದೆ.

**ಶಂಕೆ** - ಹಿಂದಿನ ಅಧಿಕರಣದಲ್ಲಿ ಲಿಂಗಸಮನ್ವಯವನ್ನು ಮಾಡಿದ್ದರಿಂದ ಈ ಅಧಿಕರಣದಲ್ಲಿಯೂ ಲಿಂಗಸಮನ್ವಯವೇ ಬುದ್ಧಿಯಲ್ಲಿ ಪ್ರಸಕ್ತವಾಗುತ್ತದೆ. ಆದರೆ ನೀವು ಲಿಂಗಸಮನ್ವಯವನ್ನು ಬಿಟ್ಟು, ನಾಮಸಮನ್ವಯವನ್ನು ಮಾಡುತ್ತಿದ್ದೀರಿ. ಹೀಗೆ ವ್ಯತ್ಯಾಸಮಾಡಿ ಸಮನ್ವಯ ಮಾಡುವುದು ತಪ್ಪಲ್ಲವೇ?

**ಸಮಾಧಾನ** - ಈ ಶಂಕೆಗೆ 'ನಚ ಅತ್ರಾಪಿ' ಇತ್ಯಾದಿ ಗ್ರಂಥದಿಂದ ಉತ್ತರಿಸುತ್ತಿದ್ದಾರೆ. ಹಿಂದಿನ ಅಧಿಕರಣದಲ್ಲಿ ಅನೇಕ ನಾಮಸಮನ್ವಯದ ಪ್ರಯೋಜನವಿದ್ದದ್ದರಿಂದ ಲಿಂಗಸಮನ್ವಯವು

ಅನಿವಾರ್ಯವಾಗಿತ್ತು. ಆದರೆ ಈ ಅಧಿಕರಣದಲ್ಲಿ ಲಿಂಗಸಮನ್ವಯ ಮಾಡುವುದರಿಂದ ಅಂತಹ ಯಾವ ಪ್ರಯೋಜನವೂ ಇರುವುದಿಲ್ಲ. ಲಿಂಗಸಮನ್ವಯ ಮಾಡುವುದರಿಂದ ಆರ್ಥಾತ್ ನಾಮದ ಸಮನ್ವಯವೂ ಸಿದ್ಧವಾಗುತ್ತದಲ್ಲ? ಎಂದು ಪ್ರಶ್ನಿಸಬಹುದು. ಆದರೆ ಇದು ನಾಮಪಾದ. ನಾಮಪಾದದಲ್ಲಿ ನೇರವಾಗಿ ನಾಮಸಮನ್ವಯವನ್ನೇ ಮಾಡಬೇಕು. ಇಲ್ಲದಿದ್ದಲ್ಲಿ ಪಾದಸಂಗತಿಯೇ ದುರ್ಲಭವಾಗುತ್ತದೆ. ಮತ್ತು ಈ ಅಧಿಕರಣದಲ್ಲಿ ಲಿಂಗಸಮನ್ವಯವನ್ನು ಮಾಡಬೇಕೆಂಬ ನಿಮ್ಮ ಅಭಪ್ರಾಯವೇನು? ಸರ್ವಭೂತಕಾರಣತ್ವವೇ ಮೊದಲಾದ ಪೂರ್ವಪಕ್ಷಲಿಂಗಗಳನ್ನು ಸಮನ್ವಯ ಮಾಡಬೇಕೆಂದೋ? ಅಥವಾ ಸಿದ್ಧಾಂತಿಗಳಿಗೆ ಅಭಪ್ರೇತವಾದ ಅನಂತತ್ವ ಮೊದಲಾದ ಲಿಂಗಗಳ ಸಮನ್ವಯ ಮಾಡಬೇಕೆಂದೋ? ಮೊದಲನೆಯ ವಿಕಲ್ಪಕ್ಕೆ 'ಪೂರ್ವತ್ರ' ಇತ್ಯಾದಿ ಗ್ರಂಥದಿಂದ ಉತ್ತರಿಸುತ್ತಿದ್ದಾರೆ. ವೈಶ್ವಾನರಾಧಿಕರಣದಲ್ಲಿ ಒಂದೇ ನಾಮದ ಸಮನ್ವಯದಿಂದ ಅನೇಕ ಲಿಂಗಗಳ ಸಮನ್ವಯವು ಸಿದ್ಧವಾಗುತ್ತದೆ. ಹಾಗೆ ಈ ಅಧಿಕರಣದಲ್ಲಿ ಆಕಾಶನಾಮ ಸಮನ್ವಯದಿಂದ ಅನೇಕ ಲಿಂಗಗಳ ಸಮನ್ವಯವೂ ಸಹ ಸಿದ್ಧವಾಗುತ್ತಿಲ್ಲ. ಹೀಗಿರುವಾಗ ಸರ್ವಭೂತಕಾರಣತ್ವಾದಿ ಲಿಂಗಗಳ ಸಮನ್ವಯವನ್ನು ಹೇಗೆ ಮಾಡುತ್ತೀರಿ?

**ಶಂಕೆ** - ಶ್ರುತಿಯಲ್ಲಿ ಆಕಾಶನಾಮವೂ ಸಹ ಅನೇಕ ಬಾರಿ ಕೇಳಿಸುತ್ತಿದೆ. ಆದ್ದರಿಂದ ಒಂದು ಲಿಂಗದ ಸಮನ್ವಯದಿಂದ ಅನೇಕ ಆಕಾಶನಾಮಗಳ ಸಮನ್ವಯವನ್ನು ಹಿಂದಿನ ಅಧಿಕರಣದಂತೆ ಇಲ್ಲಿಯೂ ಹೇಳಬಹುದಲ್ಲವೆ?

**ಸಮಾಧಾನ** - ಬೇರೆ ಬೇರೆ ಪ್ರವೃತ್ತಿನಿಮಿತ್ತಗಳನ್ನು ಹೊಂದಿರುವ ಅನೇಕ ನಾಮಗಳ ಸಮನ್ವಯ-ವನ್ನು ಹಿಂದಿನ ಅಧಿಕರಣದಲ್ಲಿ ಮಾಡಿದ್ದೇವೆ. ಆದರೆ ನೀವು ಒಂದೇ ಪ್ರವೃತ್ತಿನಿಮಿತ್ತವನ್ನು ಹೊಂದಿರುವ ಆಕಾಶಶಬ್ದದ ಸಮನ್ವಯವನ್ನಷ್ಟೇ ಆಕ್ಷೇಪಿಸುತ್ತಿದ್ದೀರಿ. ಒಂದೇ ಪ್ರವೃತ್ತಿನಿಮಿತ್ತ ಹೊಂದಿರುವ ಅನೇಕ ಶಬ್ದಗಳ ಸಮನ್ವಯವು ಕಷ್ಟಕರವಲ್ಲ. ಇದಕ್ಕೋಸ್ಕರ ಲಿಂಗಸಮನ್ವಯ ಮಾಡುವುದು ಅನಾವಶ್ಯಕ.

**ಶಂಕೆ** - ಲಿಂಗಸಮನ್ವಯ ಮಾಡುವುದು ತಪ್ಪಲ್ಲ. ಒಂದು ಲಿಂಗವನ್ನು ಸಮನ್ವಯ ಮಾಡುವುದರಿಂದ ಸಮಾನವಾದ ಅನೇಕ ಲಿಂಗಗಳ ಸಮನ್ವಯವು ಸಿದ್ಧವಾಗುತ್ತದೆ. ಅದರಂತೆ ಅನೇಕ ನಾಮಗಳ ಸಮನ್ವಯವೂ ಸಹ ಆರ್ಥಾತ್ ಸಿದ್ಧವಾಗುತ್ತದೆ. ಹೀಗೆ ಬಹಳ ಪ್ರಯೋಜನವಿರುವುದರಿಂದ ಲಿಂಗಸಮನ್ವಯ ಮಾಡುವುದೇ ಸ್ವರಸವಲ್ಲವೇ?

**ಸಮಾಧಾನ** - ಬೇರೆ ಗತಿ ಇಲ್ಲದಿದ್ದರೆ ನೀವು ಹೇಳಿದಂತೆ ಒಪ್ಪಬಹುದಿತ್ತು. ಆದರೆ ಲಿಂಗಸಮನ್ವಯವನ್ನು ಮಾಡದೇ ಇದ್ದರೂ ಸಹ ನಾಮಸಮನ್ವಯವು ಸಿದ್ಧವಾಗುತ್ತಿದೆ. ಒಂದು ಲಿಂಗದ ಸಮನ್ವಯದಿಂದ ಸಜಾತೀಯವಾದ ಅನೇಕ ಲಿಂಗಗಳ ಸಮನ್ವಯವನ್ನು ವಿಜಾತೀಯವಾದ ಅನೇಕ ನಾಮಗಳ ಸಮನ್ವಯವನ್ನು ಹೇಳುವುದು ಗೌರವ.

**ಶಂಕೆ** - ನಾಮಸಮನ್ವಯ ಮಾಡಿದಾಗಲೇ ಗೌರವ ಬರುತ್ತದೆ. ಏಕೆಂದರೆ ಆಕಾಶಾದಿ ನಾಮಗಳು ಬೇರೆ ಲೌಕಿಕ ಪದಾರ್ಥಗಳಲ್ಲಿ ರೂಢವಾಗಿವೆ. ಅನ್ಯತ್ರ ರೂಢವಾದ ಆಕಾಶಾದಿ ಶಬ್ದಗಳು ಬುದ್ಧಿಯಲ್ಲಿ

ಪ್ರಸಕ್ತವೇ ಆಗುವುದಿಲ್ಲ. ಆದರೆ ಲಿಂಗಗಳು ಭಗವಂತನಲ್ಲಿ ಪ್ರಸಿದ್ಧವಾಗಿ ಬೇರೆ ಕಡೆ ಅಪ್ರಸಿದ್ಧವಾಗಿರುತ್ತವೆ. ಆದ್ದರಿಂದ ನಾಮ ಮತ್ತು ಲಿಂಗಗಳಲ್ಲಿ ಮೊದಲು ಲಿಂಗವೇ ಬುದ್ಧಿಯಲ್ಲಿ ಬರುತ್ತದೆ. ಬುದ್ಧಿಯಲ್ಲಿ ಪ್ರಸಕ್ತವಾದ ಲಿಂಗಸಮನ್ವಯವೇ ಉಚಿತವಲ್ಲವೇ?

ಸಮಾಧಾನ - ಹಾಗೇನಿಲ್ಲ. ಹಿಂದಿನ ಆಧಿಕರಣಗಳಲ್ಲಿ ಇಂದ್ರಾದಿ ನಾಮಗಳನ್ನು ಭಗವಂತನಲ್ಲಿ ಸಮನ್ವಯ ಮಾಡಿದ್ದೇವೆ. ಹಾಗಾಗಿ ಆಕಾಶಾದಿ ಶಬ್ದಗಳು ಭಗವಂತನಲ್ಲಿ ಇವೆಯೋ ಇಲ್ಲವೋ? ಎಂಬ ಪ್ರಶ್ನೆ ಸಹಜವಾಗಿ ಬರುತ್ತದೆ. ಹೀಗೆ ಇಲ್ಲಿ ಪ್ರಸಕ್ತವಾದದ್ದು ಆಕಾಶಾದಿ ನಾಮಗಳೇ ಹೊರತು ಲಿಂಗಗಳಲ್ಲ.

ಅನಂತತ್ವಾದಿ ಲಿಂಗಗಳನ್ನು ಈ ಆಧಿಕರಣದಲ್ಲಿ ಸಮನ್ವಯ ಮಾಡುತ್ತೇವೆ ಎಂಬ ಎರಡನೆಯ ವಿಕಲ್ಪಕ್ಕೆ 'ಅನಂತತ್ವಾದೇಃ' ಎಂಬ ವಾಕ್ಯದಿಂದ ಉತ್ತರಿಸುತ್ತಿದ್ದಾರೆ. ಸಿದ್ಧಾಂತಯುಕ್ತಿಯನ್ನು ಸಮನ್ವಯ ಮಾಡುವುದಾದರೆ ಸಂಶಯ ಪೂರ್ವಪಕ್ಷಗಳು ಹೇಗೆ ಹುಟ್ಟುತ್ತವೆ? ಆಪ್ಪಾದರೂ ಅನಂತತ್ವ ಲಿಂಗವನ್ನು ಸಮನ್ವಯ ಮಾಡುವುದಾದಲ್ಲಿ ಸಂದಿಗ್ಧಾಸಿದ್ಧಿಯು ಅನಿವಾರ್ಯ -- 'ಆಕಾಶಃ ಬ್ರಹ್ಮ ಏವ ಅನಂತತ್ವಾದಿ ಲಿಂಗಾತ್' ಇದು ಸೂತ್ರದಿಂದ ಸಿದ್ಧವಾದ ಅನುಮಾನ. ಈ ಅನುಮಾನದಲ್ಲಿರುವ ಅನಂತತ್ವಲಿಂಗವನ್ನು ಸಂಶಯಕೋಟಿಯಲ್ಲಿ ಸೇರಿಸಿದರೆ ಹೇತುವೇ ಸಂದಿಗ್ಧವಾಗುತ್ತದೆ. ಗ್ರಂಥದಲ್ಲಿ ಹೇಳಿದ ಈ ದೋಷದಿಂದ ಉಪಲಕ್ಷಣಯಾ ಮತ್ತೊಂದು ದೋಷವನ್ನು ತಿಳಿಯಬೇಕು. - ಆಕಾಶಾದಿ ಶ್ರುತಿಯಲ್ಲಿ ಅನ್ಯತ್ರ-ಪ್ರಸಿದ್ಧವೆಂಬ ಪೂರ್ವಪಕ್ಷನ್ಯಾಯವು ಸ್ಪಷ್ಟವಾಗಿ ತಿಳಿಯುತ್ತಿದೆ. ಅನಂತತ್ವಲಿಂಗವನ್ನು ಸಮನ್ವಯ ಮಾಡುವುದಾದಲ್ಲಿ ಅನ್ಯತ್ರಪ್ರಸಿದ್ಧಿ ಎಂಬ ಪೂರ್ವಪಕ್ಷ ನ್ಯಾಯವನ್ನು ಮುಖತಃ ಹೇಳಿದಂತಾಗುವುದಿಲ್ಲ.

ಶಂಕೆ - ಗ್ರಂಥಕಾರರು ಇಲ್ಲಿ ಅನಂತತ್ವಲಿಂಗವನ್ನು ಅಸಂದಿಗ್ಧವೆಂದಿದ್ದಾರೆ. ಆದರೆ ಮುಂದೆ ಪೂರ್ವಪಕ್ಷ ಮಾಡುವಾಗ ಇದೇ ಗ್ರಂಥಕಾರರು 'ಏತತ್ ಸಮುದ್ರಾಂತಃಸ್ಥಿತತ್ವಾದೇಃ ವಿಷ್ಣುಲಿಂಗತ್ವ-ನಿಶ್ಚಯೇಪಿ ಅನಂತತ್ವಾದೇಃ ತದನಿಶ್ಚಯಾತ್ (ಸಮುದ್ರಾಂತಃಸ್ಥಿತತ್ವ ಮೊದಲಾದವು ವಿಷ್ಣುವಿನ ಲಿಂಗವೆಂದು ನಿಶ್ಚಯವಾದರೂ ಅನಂತತ್ವಾದಿಗಳು ವಿಷ್ಣುಲಿಂಗವೆಂದು ನಿಶ್ಚಯವಾಗಿಲ್ಲ)' ಎಂದು ಹೇಳುತ್ತಾರೆ. ಈ ವಾಕ್ಯಕ್ಕೂ ಇಲ್ಲಿ ಹೇಳುತ್ತಿರುವ 'ಅನಂತತ್ವಾದೇಃ ಸಿದ್ಧಾಂತಹೇತುತ್ವೇನ ತತ್ರ ಸಂಶಯಾನುದಯಾಚ್ಚ' (ಅನಂತತ್ವಾದಿಗಳು ಸಿದ್ಧಾಂತಹೇತುವಾದ್ದರಿಂದ ಅಲ್ಲಿ ಸಂಶಯವು ಹುಟ್ಟು-ವುದಿಲ್ಲ) ಎಂಬ ವಾಕ್ಯಕ್ಕೂ ಪರಸ್ಪರವಿರೋಧ ಬರುತ್ತಿದೆಯಲ್ಲ?

ಸಮಾಧಾನ - ಇಲ್ಲಿ ಸ್ವಾರಸಿಕಸಂಶಯ ಬರುವುದಿಲ್ಲವೆಂಬ ಅಭಿಪ್ರಾಯದಿಂದ 'ಸಂಶಯಾ-ನುದಯಾತ್' ಎಂದು ಹೇಳಿದ್ದಾರೆ. ಮುಂದಿನ ಗ್ರಂಥದಲ್ಲಿ ಆಕಾಶಶ್ರುತಿಯ ಸಾಹಚರ್ಯವಿರುವುದರಿಂದ ಆಹಿತವಾದ ಸಂಶಯವು ಬರುತ್ತದೆಂದು ಹೇಳಿದ್ದಾರೆ. ಸಂಶಯವು ಎರಡು ವಿಧ - (೧) ಸ್ವಾರಸಿಕ-ಸಂಶಯ, (೨) ಆಹಿತಸಂಶಯ ಎಂದು. ಸ್ವಾಭಾವಿಕವಾಗಿ ಬರುವ ಸಂಶಯವನ್ನು ಸ್ವಾರಸಿಕಸಂಶಯ-ವೆನ್ನುತ್ತಾರೆ. ಇಚ್ಛೆ ಪಟ್ಟು ಹೊಂದುವ ಸಂಶಯವನ್ನು ಆಹಿತಸಂಶಯ ಎನ್ನುತ್ತಾರೆ. ಈಗ ಅನಂತತ್ವ-ಲಿಂಗದಲ್ಲಿ ಸ್ವಾಭಾವಿಕವಾದ ಸಂಶಯವನ್ನು ಹೇಳಬಹುದು ಆಹಿತ ಸಂಶಯವನ್ನೂ ಹೇಳಬಹುದು. ಆದ್ದರಿಂದ ಎರಡೂ ಗ್ರಂಥಗಳಿಗೆ ಪರಸ್ಪರವಿರೋಧವು ಬರುವುದಿಲ್ಲ.

ಮತ್ತು ನಾಮಸಮನ್ವಯವನ್ನು ಹೇಳುವುದೇ ನ್ಯಾಯ. ಲಿಂಗಸಮನ್ವಯವನ್ನು ಹೇಳುವುದಾದಲ್ಲಿ ನಾಮದ ಅಪೇಕ್ಷೆಯು ಬೇಕಾಗುತ್ತದೆ. ಶ್ರುತಿಯ ಸಾಹಚರ್ಯದಿಂದ ಆಹಿತಸಂಶಯವನ್ನು ಹೊಂದಿ ಲಿಂಗಸಮನ್ವಯವನ್ನು ಹೇಳಬೇಕು. ಇಲ್ಲಿ ಶ್ರುತಿಯು = ನಾಮವು ಉಪಜೀವ್ಯವಾಗಿದೆ. ಲಿಂಗವು ಉಪಜೀವಕವಾಗಿದೆ. ಉಪಜೀವ್ಯವು ಪ್ರಬಲವಾದ್ದರಿಂದ ನಾಮಸಮನ್ವಯವು ಅನಿವಾರ್ಯವಾಗಿದೆ. ಮತ್ತು ನಾಮಸಮನ್ವಯ ಮಾಡಿದಾಗ ಪಾದಸಂಗತಿಯನ್ನು ನೇರವಾಗಿಯೇ ಹೇಳಬಹುದು. ಹೀಗೆ ಯಾವುದೇ ಮುಖದಲ್ಲಿ ವಿಚಾರಮಾಡಿದರೂ ಆಕಾಶಾಧಿಕರಣದಲ್ಲಿ ಆಧಿಭೌತಿಕವಾದ ಆಕಾಶಾದಿ-ನಾಮಗಳ ಸಮನ್ವಯವೇ ಅತ್ಯಂತ ಸ್ವರಸವೆಂದು ಮನದಟ್ಟಾಗುತ್ತದೆ. ಅನಂತತ್ವಾದಿಲಿಂಗಗಳ ಸಮನ್ವಯ ಮಾಡಿದರೆ ಅಸ್ವರಸವೂ ನಿಷ್ಪ್ರಯೋಜನವೂ ಅಸಂಗತವೂ ಆಗುತ್ತದೆ. ಇವಾಗ 'ಆಕಾಶನಾಮ್ನಃ' ಎಂಬ ಸಂಗತಿಟೀಕೆಯು ಅತ್ಯಂತ ಅರ್ಥಬದ್ಧವಾಗುತ್ತದೆ.

ಹಿಂದಿನ ಅಧಿಕರಣದಿಂದ ಇರುವ ಸಂಗತಿಯನ್ನು 'ಆನಂತರಸಂಗತಿಃ' ಎಂಬ ಗ್ರಂಥದಿಂದ ವಿವರಿಸುತ್ತಿದ್ದಾರೆ. ಹಿಂದಿನ ಅಧಿಕರಣದಲ್ಲಿ ಮಾಡಿದ ಸಿದ್ಧಾಂತವನ್ನು ಆಶ್ರಯಿಸಿ ಆ ಸಿದ್ಧಾಂತನ್ಯಾಯದಿಂದ ಪರಿಹಾರವಾಗದ ಶಂಕೆಯನ್ನು ಈ ಅಧಿಕರಣದಲ್ಲಿ ಮಾಡುತ್ತಿದ್ದಾರೆ. ನಿರವಕಾಶಲಿಂಗದಿಂದ ಸಾವಕಾಶಶ್ರುತಿಯನ್ನು ಬಾಧಿಸುವಂತಹ ನ್ಯಾಯವನ್ನು ಈ ಅಧಿಕರಣದಲ್ಲಿ ಸಿದ್ಧಾಂತನ್ಯಾಯವೆಂದು ಸಮರ್ಥಿಸಿದ್ದಾರೆ. ಈ ನ್ಯಾಯದಿಂದ ಅಧಿಕಾಶಂಕೆಯು ಪರಿಹಾರವಾಗುತ್ತದೆ. ಇದನ್ನು ಅತಿದೇಶಿಕೀಸಂಗತಿ ಎನ್ನುತ್ತಾರೆ.

'ಕೃತ್ವಾ ತ್ವಭ್ಯಧಿಕಾಶಂಕಾಂ ಪೂರ್ವಮೇವಾತಿದಿಶ್ಯತೇ।

ತತ್ಸಾತಿದೇಶಿಕೀ ಪ್ರೋಕ್ತಾ ...'

(ಅಭ್ಯಧಿಕಾಶಂಕೆಯನ್ನು ಮಾಡಿ ಪೂರ್ವನ್ಯಾಯದಿಂದಲೇ ಅತಿದೇಶಮಾಡಿದರೆ ಅಲ್ಲಿ ಅತಿದೇಶಿಕೀ ಸಂಗತಿಯೆಂದು ಹೇಳುತ್ತಾರೆ.) ಎಂಬ ಅತಿದೇಶಿಕೀಲಕ್ಷಣವನ್ನು ಒಪ್ಪಿಕೊಳ್ಳಬೇಕು. 'ಚೇಷ್ಟಾ ಹಿ' ಎಂಬ ಅನುವ್ಯಾಖ್ಯಾನದಿಂದ ಈ ಸಂಗತಿಯು ಸ್ಪಷ್ಟವಾಗುತ್ತದೆ.

ಪಾಂಡುರಂಗಿಕೇಶವಾಚಾರ್ಯವಿರಚಿತ

## ಗುರುರಾಜೀಯಮ್ (ಭಾವದೀಪ)

**ಗುರುರಾಜೀಯಮ್** – ॐ आकाशस्तल्लिङ्गात् ॐ ॥ एतदधिकरणोपाधिमाह – **अत्राधिभूतेति** ॥ विभक्तयर्थेऽधीत्यव्ययम् । तथा च भूतेष्वित्यधिभूतम् । अधिभूतं गताः अधिभूतगताः । भूतेषु वर्तमाना इत्यर्थ इति द्रष्टव्यम् ।

**नन्वेवं सूत्रविरोध इत्यत आह – भूतेष्विति** ॥ 'अत आकाश-शब्दोक्तस्तदेवोत्र विनायकः' इत्यनुव्याख्यानोक्तावपि ''महामान्'' इत्यादि

तत्रैवोक्तत्वात् ''इन्द्रियेभ्यः परा ह्यर्थाः'' इत्युक्तरीत्या भूतोत्पत्तिप्रसङ्गे तदुत्तमाभिमानिप्राधान्यक्रमेणोत्पादकस्योत्पाद्यात् प्राधान्यक्रमेण च जडभूतस्य तदभिमानिनश्चात्राप्राधान्यं ज्ञेयम् ॥ अत एवेति सूत्रस्थाकाशशब्दस्यापि भूतगत-पृथिव्यादिशब्दान्तरोपलक्षकत्वादेवेत्यर्थः । ननु तथाप्यस्मिन्नधिकरणे स्वभाव-प्रवृत्तिनिमित्तकानां शब्दानां समन्वयप्रतिपादनेनाधिभूतगतानां शब्दानामेव समन्वयाप्रतिपादनादुपसंहारस्थाधिभौतिकसर्वशब्दोपलक्षकः इत्यादिटीकाऽनुपपन्नैव इत्यत आह – यद्यपीति ॥ तथा च टीकायामाधिभौतिकोपलक्षकतोक्तिरयुक्तेति शेषः ।

ननु पूर्वाधिकरणवदत्राप्यनन्तत्वलिङ्गसमन्वयः किं नोच्यते? इत्याशङ्क्य निषेधति – नचेति ॥ वैषम्येण परिहरति – पूर्वत्रेति ॥

ननु पूर्वत्रान्तस्थत्वरूपलिङ्गसमन्वयेनेन्द्राद्यनेकनामसमन्वयसिद्धिवत् अत्रा- प्यनन्तत्वादिलिङ्गसमन्वयेन पृथिव्याद्यधिभूतगतसर्वगतशब्दसमन्वयसिद्धेः सम्भवेन कथमेतदित्यत आह – अनन्तत्वादेरिति ॥ अव्यवहितपूर्वाधिकरणेन सङ्गतिमाह – अनन्तरेति ॥

## ಸಾರ

ಈ ಅಧಿಕರಣದಲ್ಲಿ ಭೂತಗಳಲ್ಲಿ ಪ್ರಸಿದ್ಧಗಳಾದ 'ಆಕಾಶ' ಮುಂತಾದ ನಾಮಗಳನ್ನು ಸಮನ್ವಯ ಮಾಡುತ್ತಾರೆ. ಪಂಚಭೂತಗಳಲ್ಲಿ ಮೊದಲನೆಯದಾದ್ದರಿಂದ ಆಕಾಶವು ಮುಖ್ಯವಾಗಿದೆ. ಆದ್ದರಿಂದ ಆದರ ಸಮನ್ವಯವನ್ನು ಸೂತ್ರದಲ್ಲಿ ಹೇಳಿ ಉಳಿದವುಗಳನ್ನು ಉಪಲಕ್ಷಣಯಾ ಸಮನ್ವಯ ಮಾಡುತ್ತಾರೆ. ವಸ್ತುತಃ ಅಧಿಕರಣದ ನ್ಯಾಯಕ್ಕೆ ವಿಷಯವಾದ ಭೂತಗಳಿಗಿಂತ ಭಿನ್ನವಾದ ಶಬ್ದಗಳನ್ನು ಸಮನ್ವಯ ಮಾಡುತ್ತಾರೆ ಎನ್ನಬಹುದು. ಆದರೆ ಆಕಾಶಾದಿಗಳು ಹೇಗೆ ಸ್ವಭಾವಭೂತವಾದ ಪ್ರವೃತ್ತಿನಿಮಿತ್ತವುಳ್ಳದ್ದೋ ಹಾಗೆ ಉಳಿದ ಶಬ್ದಗಳು ಆಗಿಲ್ಲ. ಹಾಗಾಗಿ ಅಧಿಭೂತಗತಶಬ್ದಗಳನ್ನು ಸಮನ್ವಯ ಮಾಡುತ್ತಾರೆ ಎಂದು ಹೇಳಿದ್ದಾರೆ. ಹಿಂದಿನ ಅಧಿಕರಣದಲ್ಲಿ 'ಅಂತಸ್ಥತ್ವ' ಲಿಂಗವನ್ನು ಸಮನ್ವಯ ಮಾಡಿದಂತೆ ಈ ಅಧಿಕರಣದಲ್ಲಿಯೂ 'ಅನಂತತ್ವ' ಲಿಂಗವನ್ನು ಸಮನ್ವಯ ಮಾಡಬಹುದಿತ್ತಲ್ಲವೆ? ಎಂದರೆ ಹಿಂದಿನ ಅಧಿಕರಣದಲ್ಲಿ ಒಂದು ಲಿಂಗವನ್ನು ಸಮನ್ವಯ ಮಾಡಿದ್ದರಿಂದ ಬಹಳ ನಾಮಗಳ ಸಮನ್ವಯ ಮಾಡಲಾಗಿತ್ತು. ಈ ಅಧಿಕರಣದಲ್ಲಿ 'ಆಕಾಶ' ಎಂಬ ಒಂದು ನಾಮಸಮನ್ವಯವನ್ನು ಮಾಡುವುದರಿಂದ ಬಹಳ ಲಿಂಗಗಳ ಸಮನ್ವಯ ಸಿದ್ಧಿಸುತ್ತದೆ. ಹಾಗಾಗಿ ಇಲ್ಲಿ ನಾಮವನ್ನೇ ಸಮನ್ವಯ ಮಾಡಿದ್ದಾರೆ.

ಆಂತರಧಿಕರಣದ ಅನಂತರ ಆಕಾಶಾಧಿಕರಣವೇ ಏಕೆ?

**तात्पर्यचन्द्रिका**

यद्यपि 'अत एव प्राणः' इत्याद्यधिकरणत्रयेऽप्यन्तरधिकरणन्यायातिदेशः, तथाऽप्यधिकाशङ्काक्रमात्तत्क्रमः । शङ्काक्रमश्च तत्र तत्र वक्ष्यते ।

यद्वा – ''आकाशाद्वायुः वायोरग्निः'' इति श्रुत्या आकाशादेर्वाय्वादिकारणत्वोक्तेः तदनुसारेण आकाशप्राणज्योतिरधिकरणानां क्रमः । ''को ह्येवान्यात्'' इति भाष्ये तु ''आकाश इति होवाच'' इत्यत्र आकाशस्य विष्ण्वन्यत्वे ''यदेष आकाशः'' इत्यत्रापि अन्यः स्यादिति, आनन्दमयोप्यन्यः, प्रसज्येतेति पूर्वपक्षे आनन्दमयाधिकरणाक्षेपात्, सिद्धान्ते च तत्समाधानात्सफलोऽयं विचार इत्युक्तम् ।

नच यथा सिद्धान्ते ''आकाश इति होवाच'' इत्यत्राकाशशब्दस्य ब्रह्मपरत्वेऽपि, ''आकाशः सम्भूतः'' इत्यत्र भूतपरत्वं, तथा सिद्धान्ते ''यदेष आकाशः'' इत्यत्रापि भूतपरत्वमस्तु ।

यदि तु ''यदेषः'' इत्यत्र ब्रह्मलिङ्गात् ब्रह्मपरता, तर्हि यथा सिद्धान्ते सम्भूतवाक्ये आकाशशब्दस्य भूतलिङ्गात् भूतपरत्वेऽपि ''यदेषः'' इति वाक्ये ब्रह्मलिङ्गात् ब्रह्मपरता, तथा पूर्वपक्षे ''इति होवाच'' इति वाक्ये भूतपरत्वेऽपि ''यदेषः'' इत्यत्र ब्रह्मलिङ्गात् ब्रह्मपरता भविष्यतीति, नानन्दमयाधिकरणाक्षेप इति शङ्क्यम्, सिद्धान्ते सम्भूतवाक्ये सम्भूतत्ववत् ''यदेषः'' इति वाक्ये कस्यचित् भूतलिङ्गस्य अभावात्, भूते प्रसिद्धिमात्रस्य चैतत्सिद्धान्तेन निरासात् ।

''इति होवाच'' इति वाक्ये च पूर्वपक्षे प्रबलभूतलिङ्गाभावात्, ब्रह्मलिङ्गानामेव च भावात् । भूते प्रसिद्धिमात्रेण ब्रह्मलिङ्गानामन्यथाकरणस्य ''यदेषः'' इति वाक्येऽपि साम्यात् ।

तस्मायुक्तं प्रयोजनम् । एवमुत्तरत्रापि द्रष्टव्यम् ।

ಅನುವಾದ - ಪ್ರಶ್ನೆ - ಹಿಂದಿನ ಅಂತರಧಿಕರಣದಿಂದ ಈ ಆಕಾಶಾಧಿಕರಣಕ್ಕೆ ಅತಿದೇಶಿಕೀಸಂಗತಿಯೆಂದು ಹೇಳಿದಿರಿ. ಆದರೆ ಮುಂದಿನ ಪ್ರಾಣಾಧಿಕರಣ ಮತ್ತು ಜ್ಯೋತಿರಧಿಕರಣಗಳಲ್ಲಿಯೂ ಅಂತರಧಿಕರಣದ ಸಿದ್ಧಾಂತನ್ಯಾಯವನ್ನೇ ಅತಿದೇಶ ಮಾಡುತ್ತಾರೆ. ಹಾಗಾಗಿ ಆಕಾಶಾದಿ ಮೂರು ಅಧಿಕರಣಗಳಿಗೂ ಅಂತರಧಿಕರಣದಿಂದ ಅತಿದೇಶಿಕೀಸಂಗತಿಯು ಸಮಾನವಾಗಿದೆ. ಹೀಗಿರುವಾಗ ಆಕಾಶಾಧಿಕರಣವನ್ನೇ ಮೊದಲು ಹೇಳಲು ಏನು ಕಾರಣ?

ಉತ್ತರ - ವಸ್ತುತಃ ಮೂರೂ ಅಧಿಕರಣಗಳಿಗೆ ಸಂಗತಿಯು ಸಮಾನವಾಗಿದೆ. ಆದರೆ ಅಧಿಕಾಶಂಕೆಯಲ್ಲಿರುವ ಕ್ರಮವನ್ನು ಅನುಸರಿಸಿ ಅಧಿಕರಣದಲ್ಲಿಯೂ ಕ್ರಮವು ಅನುಗತವಾಗಿದೆ. ಹಿಂದಿನ ಅಧಿಕರಣದಲ್ಲಿ ಮಾಡಿರುವ ಶಂಕೆಯನ್ನು ಅವಲಂಬಿಸಿ ಮುಂದಿನ ಅಧಿಕರಣಗಳ ಶಂಕೆಯು ಹೊರಟಿರುತ್ತದೆ ಎಂದು ಅಭಿಪ್ರಾಯ. ಶಂಕಾಕ್ರಮದ ಬಗ್ಗೆ ಪ್ರಸಂಗ ಬಂದಾಗ ಮುಂದೆ ವಿವರಿಸುತ್ತೇವೆ. ಅಥವಾ -- ಶ್ರುತಿಯಲ್ಲಿ 'ಆಕಾಶಾದ್ವಾಯುಃ' 'ವಾಯೋರಗ್ನಿಃ' ಎಂಬುದಾಗಿ ವಾಯು ಮೊದಲಾದವುಗಳಿಗೆ ಆಕಾಶಾದಿಗಳನ್ನು ಕಾರಣವನ್ನಾಗಿ ಹೇಳಲಾಗಿದೆ. ಇಲ್ಲಿ ಮೊದಲು ಆಕಾಶವನ್ನು ಅನಂತರ ವಾಯುವನ್ನು ಅದರ ನಂತರ ಅಗ್ನಿಯನ್ನು ಕಾರಣವನ್ನಾಗಿ ಹೇಳಿದ್ದರಿಂದ ಅಧಿ-ಕರಣಗಳಲ್ಲಿಯೂ ಅದೇ ಕ್ರಮವನ್ನು ಅನುಸರಿಸಲಾಗಿದೆ. ಆಕಾಶಾಧಿಕರಣ, ಪ್ರಾಣಾಧಿಕರಣ, ಜ್ಯೋತಿರಧಿಕರಣ ಎಂಬುದಾಗಿ ಶ್ರುತಿಯಲ್ಲಿರುವ ಪದಗಳಿಗೆ ಅನುಗುಣವಾಗಿ ಅಧಿಕರಣಗಳನ್ನು ಜೋಡಿಸಲಾಗಿದೆ.

ಪ್ರಶ್ನೆ - ನೀವು ಅಂತರಧಿಕರಣದಿಂದ ಸಂಗತಿ ಹೇಳುತ್ತಿದ್ದೀರಿ. ಆದರೆ 'ಕೋ ಹ್ಯೇವಾನ್ಯಾತ್' ಎಂಬ ಭಾಷ್ಯದಲ್ಲಿ ಆನಂದಮಯಾಧಿಕರಣದಿಂದ ಸಂಗತಿಯನ್ನು ತೋರಿಸಿದ್ದಾರಲ್ಲ.

ಉತ್ತರ - 'ಆಕಾಶ ಇತಿ ಹೋವಾಚ' ಎಂಬ ಶ್ರುತಿಯಲ್ಲಿ ಆಕಾಶವು ವಿಷ್ಣುವಿಗಿಂತ ಬೇರೆಯಾದರೆ 'ಯದೇಷ ಆಕಾಶಃ' ಎಂಬಲ್ಲಿಯೂ ಬೇರೆ ಪದಾರ್ಥವೇ ಆಕಾಶವಾಗುತ್ತದೆ. ಯದೇಷ ಆಕಾಶ ಎಂಬಲ್ಲಿ ವಿಷ್ಣುವು ಆಕಾಶವಾಗದೇ ಇರುವುದರಿಂದ ಆನಂದಮಯನೂ ಸಹ ಬೇರೆ ಪದಾರ್ಥವೇ ಆಗುತ್ತದೆ, ವಿಷ್ಣುವು ಆಗುವುದಿಲ್ಲ. ಹೀಗೆ ಆನಂದಮಯಾಧಿಕರಣವನ್ನು ಆಕ್ಷೇಪಿಸಿ ಪೂರ್ವಪಕ್ಷ ಮಾಡಲಾಗಿದೆ. ಸಿದ್ಧಾಂತದಲ್ಲಿ ಇದಕ್ಕೆ ಪರಿಹಾರವನ್ನು ಮಾಡಲಾಗಿದೆ. ಆದ್ದರಿಂದ ಆಕಾಶಾಧಿಕರಣದ ವಿಚಾರವು ಸಾರ್ಥಕವೆಂದು ಭಾಷ್ಯದ ಅಭಿಪ್ರಾಯ ಹೊರತು ಆನಂದಮಯಾಧಿಕರಣದಿಂದ ಸಂಗತಿ ತೋರಿಸುವುದರಲ್ಲಿ ಭಾಷ್ಯಕ್ಕೆ ಅಭಿಪ್ರಾಯವಿಲ್ಲ. ಭಾಷ್ಯಕಾರರಿಗೂ ಸಹ ಅಂತರಧಿಕರಣದಿಂದ ಸಂಗತಿ ಹೇಳುವುದರಲ್ಲಿ ಅಭಿಪ್ರಾಯವಿದೆ.

ಪ್ರಶ್ನೆ - 'ಆಕಾಶ ಇತಿ ಹೋವಾಚ' ಎಂಬಲ್ಲಿರುವ ಆಕಾಶಶಬ್ದವು ಬ್ರಹ್ಮಪರವೆಂದು ಸಿದ್ಧಾಂತದಲ್ಲಿ ಹೇಳುತ್ತೀರಿ. ಆದರೆ ಬ್ರಹ್ಮನಲ್ಲಿ ಸಂಭೂತತ್ವವು ಕೂಡದಿರುವುದರಿಂದ 'ಆಕಾಶಃ ಸಂಭೂತಃ'

ಎಂಬಲ್ಲಿ ಆಕಾಶಶಬ್ದವನ್ನು ಭೂತಪರವೆನ್ನುತ್ತೀರಿ. ಹೀಗೆ ಈ ತೈತ್ತಿರೀಯಶ್ರುತಿಯಲ್ಲಿರುವ ಕೆಲವು ಬ್ರಹ್ಮಪರವೆಂದು, ಇನ್ನು ಕೆಲವು ಆಕಾಶಶಬ್ದಗಳು ಭೂತಪರವೆಂದೂ ಹೇಗೆ ಹೇಳುತ್ತೀರೋ ಅದರಂತೆ ಛಾಂದೋಗ್ಯದ 'ಯದೇಷ ಆಕಾಶಃ' ಎಂಬಲ್ಲಿರುವ ಆಕಾಶಶಬ್ದವು ಭೂತಪರವಾಗಲಿ?

ಉತ್ತರ - 'ಯದೇಷ ಆಕಾಶಃ' ಎಂಬ ಛಾಂದೋಗ್ಯವಾಕ್ಯದಲ್ಲಿ ಬ್ರಹ್ಮಲಿಂಗವು ಕೇಳಿಸುತ್ತಿದೆ. 'ಆಕಾಶಃ ಸಂಭೂತಃ' ಎಂಬ ತೈತ್ತಿರೀಯವಾಕ್ಯದಲ್ಲಿ ಭೂತಲಿಂಗವು ಕೇಳಿಸುತ್ತಿದೆ. ಹಾಗಾಗಿ ಛಾಂದೋಗ್ಯವಾಕ್ಯವು ಬ್ರಹ್ಮಪರವೇ ಆಗುತ್ತದೆ. ತೈತ್ತಿರೀಯವಾಕ್ಯವು ಭೂತಪರವೇ ಆಗುತ್ತದೆ.

ಪ್ರಶ್ನೆ - ಹಾಗಾದರೆ ಭೂತಲಿಂಗವಿರುವುದರಿಂದ 'ಆಕಾಶಃ ಸಂಭೂತಃ' ಎಂಬಲ್ಲಿರುವ ಆಕಾಶಶಬ್ದವು ಭೂತಪರವಾಗುತ್ತದೆಯೆಂದು, ಬ್ರಹ್ಮಲಿಂಗವಿರುವುದರಿಂದ 'ಯದೇಷ' ಎಂಬ ವಾಕ್ಯವು ಬ್ರಹ್ಮಪರವೆಂದು ಸಿದ್ಧಾಂತ ಮಾಡಿದ್ದೀರಿ. ಹಾಗೆಯೇ ಪೂರ್ವಪಕ್ಷದಲ್ಲಿಯೂ 'ಆಕಾಶ ಇತಿ ಹೋವಾಚ' ಎಂಬ ವಾಕ್ಯದಲ್ಲಿರುವ ಆಕಾಶ ಶಬ್ದವು ಭೂತಪರವಾದರೂ, 'ಯದೇಷ' ಎಂಬ ವಾಕ್ಯದಲ್ಲಿ ಬ್ರಹ್ಮಲಿಂಗ ಇರುವುದರಿಂದ ಬ್ರಹ್ಮಪರವಾಗಲಿ. ಅಂದರೆ ಪೂರ್ವಪಕ್ಷ ಮಾಡುವಾಗಲೇ 'ಯದೇಷ' ಎಂಬ ವಾಕ್ಯವು ಬ್ರಹ್ಮಪರವೆಂದು ಸಿದ್ಧವಾಗಿದೆ. ಪುನಃ ಬ್ರಹ್ಮಪರವಲ್ಲವೆಂದು ಆನಂದಮಯಾಧಿಕರಣದ ಮೇಲೆ ಹೇಗೆ ಆಕ್ಷೇಪ ಮಾಡುತ್ತೀರಿ?

ಉತ್ತರ - ಹೀಗೆ ಪ್ರಶ್ನಿಸಬಾರದು. 'ಆಕಾಶಃ ಸಂಭೂತಃ' ಎಂಬಲ್ಲಿ ಸಂಭೂತತ್ವಲಿಂಗ-ವಿರುವುದರಿಂದಷ್ಟೇ ಭೂತಪರವೆಂದು ಹೇಳುತ್ತಿದ್ದೇವೆ. ಇದರಂತೆ 'ಯದೇಷ ಆಕಾಶಃ' ಎಂಬ ವಾಕ್ಯದಲ್ಲಿ ಭೂತಪರವಾದ ಯಾವ ಲಿಂಗಗಳೂ ಕೇಳಿಸುತ್ತಿಲ್ಲ. ಹೀಗಿರುವಾಗ 'ಆಕಾಶಃ ಸಂಭೂತಃ' ಎಂಬಂತೆ 'ಯದೇಷ ಆಕಾಶಃ' ಎಂಬ ವಾಕ್ಯವೂ ಭೂತಪರವಾಗಲಿ? ಎಂಬ ನಿಮ್ಮ ಪ್ರಶ್ನೆಯಲ್ಲಿ ಅರ್ಥವೇ ಇಲ್ಲ.

ಪ್ರಶ್ನೆ - 'ಯದೇಷ ಆಕಾಶಃ' ಎಂಬಲ್ಲಿ ಸಂಭೂತತ್ವ ಲಿಂಗವಿಲ್ಲದಿರಬಹುದು. ಆದರೆ ಲೋಕ-ಪ್ರಸಿದ್ಧಿಯಂತೂ ಸ್ಪಷ್ಟವಾಗಿ ಕಾಣಿಸುತ್ತಿದೆ. ಭೂತಾಕಾಶದಲ್ಲಿರುವ ಈ ಲೋಕಪ್ರಸಿದ್ಧಿಯಿಂದಷ್ಟೇ ಭೂತಪರವಾಗಲಿ? ಎಂದು ನಮ್ಮ ಅಭಿಪ್ರಾಯ.

ಉತ್ತರ - ಲೋಕಪ್ರಸಿದ್ಧಿ ಮಾತ್ರವನ್ನು ಆಕಾಶಾಧಿಕರಣದ ಸಿದ್ಧಾಂತನ್ಯಾಯದಿಂದ ನಿರಾಸಮಾಡುವವರಿದ್ದೇವೆ. ಮತ್ತು 'ಆಕಾಶ ಇತಿ ಹೋವಾಚ' ಎಂಬ ವಾಕ್ಯದಲ್ಲಿ ಪ್ರಬಲವಾದ ಭೂತಲಿಂಗವು ಕೇಳಿಸುತ್ತಿಲ್ಲ. ಹಾಗಾಗಿ ನಿಮ್ಮಿಂದ ಪೂರ್ವಪಕ್ಷವನ್ನೇ ರಚಿಸಲಾಗದು. ಅಷ್ಟೇ ಅಲ್ಲದೆ ಬ್ರಹ್ಮಲಿಂಗವೇ ಸ್ಪಷ್ಟವಾಗಿ ಕಾಣಿಸುತ್ತಿದೆ.

ಪ್ರಶ್ನೆ - ಭೂತಾಕಾಶದಲ್ಲಿ ಪ್ರಸಿದ್ಧಿ ಇರುವುದರಿಂದ 'ಆಕಾಶ ಇತಿ ಹೋವಾಚ' ಎಂಬಲ್ಲಿನ ಬ್ರಹ್ಮಲಿಂಗವನ್ನು ಅನ್ಯಥಾ ಅರ್ಥೈಸಬೇಕಲ್ಲವೆ?

ಉತ್ತರ - ಹಾಗಾದರೆ 'ಯದೇಷ ಆಕಾಶಃ' ಎಂಬ ವಾಕ್ಯದಲ್ಲಿರುವ ಬ್ರಹ್ಮಲಿಂಗವನ್ನು ಬೇರೆ ರೀತಿಯಾಗಿಯೇ ಅರ್ಥೈಸಬಹುದಾದ್ದರಿಂದ ಈ ವಾಕ್ಯವು ವಿಷ್ಣುಪರವಾಗದಿರಬೇಕಾದೀತು. ಆದ್ದರಿಂದ ಆನಂದಮಯಾಧಿಕರಣವನ್ನು ಅವಲಂಬಿಸಿ ಆಕಾಶಾಧಿಕರಣದ ಪ್ರವೃತ್ತಿಯು ಸಾರ್ಥಕವಾಗುತ್ತದೆ. ಇದರಂತೆ ಮುಂದಿನ ಅಧಿಕರಣಗಳಲ್ಲಿಯೂ ಅನುಸಂಧಾನ ಮಾಡಿಕೊಳ್ಳಬೇಕು.

### ಕಠಿಣಪದಾರ್ಥ

ಅತಿದೇಶಃ = ವರ್ಗಾಯಿಸುವಿಕೆ = ಒಂದರ ಧರ್ಮವನ್ನು ಮತ್ತೊಂದರಲ್ಲಿ ಹೇಳುವಿಕೆ ಮೀಮಾಂಸಕಮತದಂತೆ ಅತಿದೇಶವು ಐದು ವಿಧ. (೧) ಶಾಸ್ತ್ರಾತಿದೇಶ (೨) ಕಾರ್ಯಾತಿದೇಶ (೩) ನಿಮಿತ್ತಾತಿದೇಶ (೪) ವೃಪದೇಶಾತಿದೇಶ (೫) ರೂಪಾತಿದೇಶ. ಅಧಿಕಾಶಂಕಾಕ್ರಮಾತ್ = ಅಧಿಕಾಶಂಕೆಗಳಲ್ಲಿರುವ ಪ್ರಾಬಲ್ಯವನ್ನು ಅನುಸರಿಸಿ (ಸೋಪಾನಾರೋಹಣ ನ್ಯಾಯದಂತೆ); ತದನುಸಾರೇಣ = ಶ್ರುತಿಯಲ್ಲಿರುವ ಶಬ್ದಕ್ರಮವನ್ನು ಅನುಸರಿಸಿ; ಸಫಲಃ = ಸಾರ್ಥಕವಾಗಿದೆ; 'ನಚ ಶಂಕ್ಯಮ್' ಎಂಬಲ್ಲಿ ಆನ್ವಯ; ಬ್ರಹ್ಮಲಿಂಗಾತ್ = ಆನಂದಮಯತ್ವವೆಂಬ ಬ್ರಹ್ಮಲಿಂಗವಿರುವುದರಿಂದ; ಸಂಭೂತವಾಕ್ಯೇ = 'ಆಕಾಶಃ ಸಂಭೂತಃ' ಎಂಬ ವಾಕ್ಯದಲ್ಲಿ; ಭೂತಲಿಂಗಾತ್ = ಉತ್ಪತ್ತಿಮತ್ತ್ವ, ವಿವರತ್ವ, ಮೊದಲಾದ ಲಿಂಗಗಳಿರುವುದರಿಂದ; ನಾನಂದಮಯಾಧಿಕರಣಾಕ್ಷೇಪಃ = ಆನಂದಮಯಾಕರಣದ ಸಿದ್ಧಾಂತವನ್ನು ಆಕ್ಷೇಪಿಸಲಾಗುವುದಿಲ್ಲ. ಏತತ್ಸಿದ್ಧಾಂತೇನ = ನಿರವಕಾಶಲಿಂಗದಿಂದ ಅನ್ಯತ್ರಪ್ರಸಿದ್ಧಿ ಎಂಬ ರೂಢಿಗೆ ಬಾಧವನ್ನು ಹೇಳುವ ಆಕಾಶಾಧಿಕರಣದ ಸಿದ್ಧಾಂತದಿಂದ; ಪ್ರಯೋಜನಮ್ = ಪೂರ್ವಪಕ್ಷ ಮತ್ತು ಸಿದ್ಧಾಂತಗಳ ಪ್ರಯೋಜನವು.

**ಪ್ರಕಾಶಃ** – नन्वेवमुत्तरेषामपि पूर्वानन्तर्यं स्यात्, न तु व्यवधानमित्याशङ्क्याह – यद्यपीति ॥ 'तदनुसारेण' श्रुतिक्रमानुसारेण । वायोरेवाध्यात्मं प्राणत्वाद् अग्निज्योतिश्शब्दयोरेकार्थत्वादिति भावः ।

ननु यदि पूर्वेणातिदेशिकीसङ्गतिः, तर्हि – '' 'को ह्येवान्यात् कः प्राण्यात् यदेष आकाश आनन्दो न स्यात्' इत्याकाशस्याऽऽनन्दमयत्वे हेतुरुक्तः, न तु विष्णोरिति न मन्तव्यम्'' इत्यानन्दमयाधिकरणाक्षेपसङ्गतिपरभाष्यं विरुध्येत इत्यतः तद्भाष्यं न सङ्गतिपरं, किन्तु फलमात्रपरमिति भावेनाह – को ह्येवान्यादितीति ॥ 'अयं विचारः' आकाशस्य विष्णुत्वविचारः । एतेन टीकाऽपीत्यमेव व्याख्येयेत्युक्तं भवति । अनन्तरसङ्गतिस्तूत्तरप्रस्थानाद्धचेयेति तात्पर्यमिति भावः ।

ननु यदुक्तं भाष्यटीकयोः, ''आकाश इति होवाच'' इत्यत्राकाशो भूतं चेत्, ''को ह्येवान्यात्'' इत्यत्रत्योऽप्याकाशः भूतं स्यात् । ततस्तस्य विष्णुत्वसिद्धचै

''आकाश इति होवाच'' इत्ययमाकाशो विष्णुरिति विचार्यत इति साफल्यं विचारस्येति, तदयुक्तं, छान्दोग्यस्याकाशस्य विष्णुत्वेऽपि ''को ह्येवान्यात्'' इत्यत्रत्यस्य विष्णुत्वासिद्धया विचारस्य साफल्यायोगादिति भावेन दृष्टान्तोक्तिपूर्वमाक्षिपति – नचेति ॥ ''शङ्क्यम्'' इत्यन्वयः ॥ भूतपरत्वमिति ॥

ननु, ''कारणत्वेन चाकाशादिषु'' इत्यधिकरणे सम्भूतवाक्यगताकाशादिशब्दस्य ब्रह्मपरत्वं वक्ष्यते । यद्वक्ष्यति ''भूतपरत्वे शङ्किते तन्निरासः'' इति । तथा च कथं भूतपरत्वोक्तिः? इति चेत् सत्यम्; तत्र भूतपरत्वापरित्यागेनैव ब्रह्मपरत्वाभिधानेन भूतपरत्वस्यापि सत्त्वात् । अन्यथा भूतोत्पत्त्यसिद्धिप्रसङ्गात् । वाक्यान्तरस्याप्येतत्तुल्यत्वात् । अत एवोक्तं प्राक् – ''प्राबल्यं हि तस्य शब्दस्य तद्युक्तवाक्यस्य वाऽपरमुख्यवृत्त्याऽन्यपरत्वं विनाऽनुपपद्यमानत्वम्'' इति ॥ अत एवानुव्याख्याने – 'भूतं भूताभिमानी च तदेहोऽन्तर्नियामकः ।' इत्युक्तमिति भावः ।

ननु सम्भूतवाक्ये भूतलिङ्गाद् भूतपरत्वेऽपि ''को ह्येवान्यात्'' इत्यत्र जगच्चेष्टकत्वादिब्रह्मलिङ्गात् ब्रह्मपरता एतदधिकरणसिद्धान्तन्यायेन स्यात् । तथा च सिद्धान्ते प्रयोजनं सेत्स्यतीत्याशङ्क्य, तर्हि पूर्वपक्षे पूर्वोक्ताक्षेपरूपफलासिद्धिरिति सदृष्टान्तमाह – यदि त्विति ॥

ननु सम्भूतवाक्य इव ''यदेषः'' इति वाक्येऽप्युभयपरत्वमस्तु, आकाशश्रुतिब्रह्मलिङ्गयोः सत्त्वात् । तथा च तस्य भूतपरत्वेऽपि विष्णुपरत्वस्यापि सत्त्वात् आनन्दमयस्य विष्णुत्वे हेतुव्यपदेशत्वं सेत्स्यतीति चेन्न, सम्भूतवाक्येऽन्यपरत्वानभ्युपगतौ भूतोत्पत्त्याद्यसिद्धिवदिहान्यपरत्वाभावे बाधकाभावात् निरवकाशब्रह्मलिङ्गानुपपत्तेश्च । उक्तं च चतुर्थपादीयानुव्याख्याने –

**तेषु तेषु पदार्थेषु रूढिरङ्गीकृता यतः ।**
**प्रयोजनबहुत्वेन तस्य तस्याविरोधतः ।**
**उपदेशादिसामर्थ्याद् विष्णौ शक्तिश्च गृह्यते ।**
**तथाऽप्येतद्विरोधे तु तद् वाचित्वमपोद्यते ।**

इति । यत् तावत्सिद्धान्तिनं प्रत्यापादितं – सम्भूतवाक्य इव ''को

ಹ್ಯೇವಾನ್ಯಾತ್'' ಇತ್ಯತ್ರಾಪಿ ಭೂತಪರತ್ವಂ ಸ್ಯಾತ್ । ತಥಾ ಚ ನ ಸಿದ್ಧಾನ್ತಫಲಸಿದ್ಧಿಃ' ಇತಿ, ತದ್ವೈಷಮ್ಯಪ್ರದರ್ಶನೇನ ಪರಿಹರತಿ – ಸಿದ್ಧಾನ್ತ ಇತ್ಯಾದಿನಾ ॥

ನನು ಭೂತಲಿಙ್ಗಾಭಾವೇऽಪಿ ಭೂತೇ ಪ್ರಸಿದ್ಧಾಕಾಶಶ್ರುತಿರಸ್ತೀತ್ಯತ ಆಹ – ಭೂತ ಇತಿ ॥ ಏತದಿತಿ ॥ ನಿರವಕಾಶಲಿಙ್ಗೇನಾನ್ಯತ್ರ ಪ್ರಸಿದ್ಧಿಬಾಧಕಥನರೂಪೇಣೇತ್ಯರ್ಥಃ । ಏವಂ ಸಿದ್ಧಾನ್ತೇ ''ಆಕಾಶ ಇತಿ ಹೋವಾಚ'' ಇತಿ ವಾಕ್ಯಸ್ಥ ''ಕೋ ಹ್ಯೇವಾನ್ಯಾತ್'' ಇತಿ ವಾಕ್ಯಸ್ಯ ಚ ತುಲ್ಯನ್ಯಾಯವಿಷಯತಾಪ್ರದರ್ಶನೇನ ಸಿದ್ಧಾನ್ತೇ ಪ್ರಯೋಜನಸಿದ್ಧಿಂ ಸಮರ್ಥ್ಯ, ಇದಾನೀಂ ಪೂರ್ವಪಕ್ಷೇऽಪಿ ದ್ವಯೋಸ್ತುಲ್ಯನ್ಯಾಯವಿಷಯತಾಪ್ರದರ್ಶನೇನ ಪೂರ್ವಪಕ್ಷಫಲಂ ಚ ಸಮರ್ಥಯತೇ – ಇತಿ ಹೋವಾಚೇತಿ ॥ ಸಾಮ್ಯಾದಿತಿ ॥ ತಥಾ ಚ ಪೂರ್ವಪಕ್ಷೇऽಪಿ ''ಇತಿ ಹೋವಾಚ'' ಇತ್ಯಸ್ಯ ಭೂತಪರತ್ವೇ ''ಕೋ ಹ್ಯೇವಾನ್ಯಾತ್'' ಇತ್ಯಪಿ ಭೂತಪರಂ ಸ್ಯಾದಿತಿ ಭಾವಃ । ಪ್ರಯೋಜನಮಿತಿ ॥ 'ಪೂರ್ವಪಕ್ಷೇ ಸಿದ್ಧಾನ್ತೇ ಚ' ಇತಿ ಶೇಷಃ । ಏವಮಿತಿ ॥ ಯತ್ರ ಯತ್ರ ಪೂರ್ವಾಕ್ಷೇಪಃ ಪ್ರಾಣಜ್ಯೋತಿರಧಿಕರಣಾದೌ, ತತ್ರ ಸರ್ವತ್ರಾಪಿ ತುಲ್ಯನ್ಯಾಯವಿಷಯತಾಮಾಪಾದ್ಯ ವ್ಯುತ್ಪಾದನೀಯಮಿತ್ಯರ್ಥಃ ।

ವಿವರಣೆ - ಶಂಕೆ - ಅಂತರಧಿಕರಣದ ಅನಂತರ ಆಕಾಶಾಧಿಕರಣವನ್ನೇ ನಿರ್ವೇಶಿಸಲು ಕಾರಣವಿಲ್ಲ. ಮುಂದಿನ ಪ್ರಾಣಾಧಿಕರಣ, ಹಾಗೂ ಜ್ಯೋತಿರಧಿಕರಣಗಳಿಗೂ ಸಹ ಅಂತರಧಿಕರಣದಿಂದ ಅತಿದೇಶಿಕೀಸಂಗತಿಯು ಇರುತ್ತದೆ. ಹೀಗೆ ಮೂರು ಅಧಿಕರಣಗಳಲ್ಲಿಯೂ ಅಂತರಧಿಕರಣದಿಂದ ಸಂಗತಿಯು ಸಮಾನವಾಗಿರುವಾಗ ಆ ಎರಡು ಅಧಿಕರಣಗಳನ್ನು ವ್ಯವಹಿತವಾಗಿ ಉಲ್ಲೇಖಿಸಲು ಏನು ಕಾರಣ?

ಸಮಾಧಾನ - ಎರಡು ಕಾರಣಗಳಿಂದ ಅಂತರಧಿಕರಣದ ಅನಂತರ ಆಕಾಶಾಧಿಕರಣವನ್ನು ಹೇಳಿದ್ದು ಸಮಂಜಸವಾಗಿದೆ. ೧) ಅಧಿಕಾಶಂಕೆಗಳಲ್ಲಿರುವ ಕ್ರಮವನ್ನು ಅನುಸರಿಸುವಿಕೆ. ೨) ಶ್ರುತಿಯಲ್ಲಿ ಇರುವ ಕ್ರಮವನ್ನು ಅನುಸರಿಸುವಿಕೆ ಎಂದು.

ಶ್ರುತಿಯಲ್ಲಿ 'ಆಕಾಶಾತ್ ವಾಯುಃ ವಾಯೋರಗ್ನಿಃ' ಎಂದು ಆಕಾಶ, ವಾಯು, ಅಗ್ನಿ ಶಬ್ದಗಳನ್ನು ಕ್ರಮವಾಗಿ ಹೇಳಲಾಗಿದೆ. ಆಕಾಶ ಶಬ್ದದ ಸಮನ್ವಯವನ್ನು ಆಕಾಶಾಧಿಕರಣದಲ್ಲಿ ಅಗ್ನಿ ಮತ್ತು ಜ್ಯೋತಿಶಬ್ದಗಳು ಪರ್ಯಾಯ ಪದಗಳಾದ್ದರಿಂದ ಅಗ್ನಿ ಶಬ್ದವನ್ನು ಜ್ಯೋತಿರಧಿಕರಣದಲ್ಲಿ ಸಮನ್ವಯ ಮಾಡಲಾಗಿದೆ. ಇನ್ನು ವಾಯುಶಬ್ದದ ಸಮನ್ವಯವನ್ನು ಪ್ರಾಣಾಧಿಕರಣದಲ್ಲಿ ಮಾಡಿದ್ದಾರೆ. ಆಧಿ-ಭೌತಿಕಶಬ್ದಗಳ ಸಮನ್ವಯವನ್ನು ಆಕಾಶಾಧಿಕರಣದಲ್ಲಿ ಮಾಡಿದಂತೆ ಆಧ್ಯಾತ್ಮಿಕಶಬ್ದಗಳ ಸಮನ್ವಯವನ್ನು ಪ್ರಾಣಾಧಿಕರಣದಲ್ಲಿ ಮಾಡಿದ್ದಾರೆ.

ಶಂಕೆ - ಹಿಂದಿನ ಅಧಿಕರಣದಿಂದ ಅತಿದೇಶಿಕೀಸಂಗತಿಯನ್ನು ಹೇಳುತ್ತಿದ್ದೀರಿ. ಹಾಗಾದಲ್ಲಿ ಭಾಷ್ಯದ ಮಾತಿಗೆ ವಿರೋಧ ಬರುತ್ತದೆ. 'ಕೋ ಹ್ಯೇವಾನ್ಯಾತ್ ಪ್ರಾಣ್ಯಾದ್ಯದೇಷ ಆಕಾಶ ಆನಂದೋ ನ ಸ್ಯಾತ್'

ಎಂಬ ಶ್ರುತಿಯಲ್ಲಿ ಆಕಾಶವು ಆನಂದವೆನ್ನಲು ಕಾರಣವನ್ನು ಹೇಳಿದ್ದಾರೆ. ಹೊರತು ವಿಷ್ಣುವು ಆನಂದಮಯನೆನ್ನಲು ಕಾರಣ ಹೇಳಿಲ್ಲ. ಆದ್ದರಿಂದ ಆನಂದಮಯಾಧಿಕರಣದಲ್ಲಿ ವಿಷ್ಣುವೇ ಆನಂದಮಯನಾಗಿದ್ದಾನೆಂಬ ಸಿದ್ಧಾಂತವು ಸರಿಯಲ್ಲವೆಂಬ ಆಕ್ಷೇಪವನ್ನು ಈ ಆಕಾಶಾಧಿಕರಣದಲ್ಲಿ ಪರಿಹರಿಸುತ್ತಿದ್ದಾರೆಂದು ಭಾಷ್ಯದಲ್ಲಿ ಹೇಳಿದ್ದಾರೆ. ಭಾಷ್ಯದ ಈ ಮಾತಿನಿಂದ ಆಕಾಶಾಧಿಕರಣಕ್ಕೆ ಆನಂದಮಯಾಧಿಕರಣದಿಂದಲೇ ನೇರವಾದ ಸಂಗತಿ ಇದೆಯೆಂದು ತಿಳಿಯುತ್ತದೆ. ಹೊರತು ಅವ್ಯವಹಿತವಾದ ಅಂತರಧಿಕರಣದಿಂದ ಸಂಗತಿಯು ತಿಳಿಯವುದಿಲ್ಲವಲ್ಲ?

**ಸಮಾಧಾನ** - ನೀವು ಹೇಳಿದ ಭಾಷ್ಯವಾಕ್ಯವು ಆಕಾಶಾಧಿಕರಣದ ಸಾರ್ಥಕ್ಯವನ್ನು ತೋರಿಸಲು ಹೊರಟಿದೆ ಹೊರತು ಸಂಗತಿಗಾಗಿ ಅಲ್ಲ. ಈ ವಿಷಯವನ್ನು 'ಕೋ ಹ್ಯೇವಾನ್ಯಾದಿತಿ' ಎಂಬ ಗ್ರಂಥದಿಂದ ಸಮರ್ಥಿಸಿದ್ದಾರೆ. ಭಾಷ್ಯಕ್ಕೆ ವ್ಯಾಖ್ಯಾನಿಸುವ ಟೀಕೆಯ ಮಾತಿಗೂ ಹೀಗೆಯೇ ವ್ಯಾಖ್ಯಾನಿಸಬೇಕು. ಉತ್ತರ ಪ್ರಸ್ಥಾನವೆನಿಸಿದ ಅನುವ್ಯಾಖ್ಯಾನ ಮತ್ತು ಸುಧೆಗಳಿಂದ ಅನಂತರಸಂಗತಿಯೆಂದು ತಿಳಿಯಬೇಕು. ಪೂರ್ವಪ್ರಸ್ಥಾನವಾದ ಭಾಷ್ಯಟೀಕೆಗಳಿಂದ ಪ್ರಯೋಜನವನ್ನು ತಿಳಿಯಬೇಕು. ಪ್ರಕೃತ ಗ್ರಂಥಕಾರರು ಅನುವ್ಯಾಖ್ಯಾನ ಸುಧೆಗಳನ್ನು ಅವಲಂಬಿಸಿ ಸಂಗತಿಯನ್ನು ತೋರಿಸಿದ್ದಾರೆ.

''ಆಕಾಶ ಇತಿ ಹೋವಾಚ'' ಎಂಬಲ್ಲಿರುವ ಆಕಾಶಶಬ್ದವು ಭೂತಪರವಾದರೆ 'ಕೋ ಹ್ಯೇವಾನ್ಯಾತ್' ಎಂಬಲ್ಲಿರುವ ಆಕಾಶ ಶಬ್ದವೂ ಸಹ ಭೂತಪರವಾಗಲಿ ಎಂಬ ಆಕ್ಷೇಪ ಬರುತ್ತದೆ. ಆದ್ದರಿಂದ 'ಕೋ ಹ್ಯೇವಾನ್ಯಾತ್' ಎಂಬಲ್ಲಿರುವ ಆಕಾಶಶಬ್ದವು ವಿಷ್ಣುವೆಂದು ನಿರ್ಣಯಿಸಲು 'ಆಕಾಶ ಇತಿ ಹೋವಾಚ' ಎಂಬಲ್ಲಿರುವ ಆಕಾಶಶಬ್ದವು ವಿಷ್ಣುಪರವೆಂದು ನಿರ್ಣಯಿಸಲೇ ಬೇಕು. ಆದಕ್ಕೊಸ್ಕರ ಆಕಾಶಾಧಿಕರಣವು ಸಾರ್ಥಕವಾಗಿದೆ' ಎಂದು ಭಾಷ್ಯ ಟೀಕೆಗಳಲ್ಲಿ ಹೇಳಿದ್ದಾರೆ. ಇದು ಹೇಗೆ ಸರಿ? ಏಕೆಂದರೆ ಛಾಂದೋಗ್ಯದಲ್ಲಿರುವ ಆಕಾಶವು ವಿಷ್ಣುವಾದರೆ ತೈತ್ತಿರೀಯದ 'ಕೋ ಹ್ಯೇವಾನ್ಯಾತ್' ಎಂಬಲ್ಲಿರುವ ಆಕಾಶ ಪದವು ಏಕೆ ವಿಷ್ಣುಪರವಾಗಬೇಕು? ಹಾಗಾಗಿ ಆಕಾಶಾಧಿಕರಣದ ವಿಚಾರವು ಸಾರ್ಥಕವೆಂದು ಸಮರ್ಥಿಸಲಾಗದೆಂಬ ಅಭಿಪ್ರಾಯದಿಂದ 'ನಚ' ಇತ್ಯಾದಿ ಗ್ರಂಥವು ಹೊರಟಿದೆ.

**ಶಂಕೆ** - 'ಆಕಾಶಃ ಸಂಭೂತಃ' ಎಂಬಲ್ಲಿರುವ ಆಕಾಶ ಪದವು ಭೂತಾಕಾಶಪರವಾಗುತ್ತದೆಂದು ಹೇಳುತ್ತಿದ್ದೀರಿ. ಆದರೆ 'ಕಾರಣತ್ವೇನ ಚಾಕಾಶಾದಿಷು' ಎಂಬ ಅಧಿಕರಣದಲ್ಲಿ ಸಂಭೂತವಾಕ್ಯದಲ್ಲಿರುವ ಆಕಾಶಪದವೂ ಸಹ ಬ್ರಹ್ಮಪರವೆಂದು ಸಮರ್ಥಿಸುತ್ತೀರಿ - 'ಭೂತಪರತ್ವೇ ಶಂಕತೇ ತನ್ನಿರಾಸಃ' (ಸಂಭೂತವಾಕ್ಯವು ಭೂತಪರವೆಂದು ಆಶಂಕಿಸಿದರೆ ಸೂತ್ರವು ಪರಿಹಾರ ಮಾಡುತ್ತಿದೆ) ಎಂದು. ಆದ್ದರಿಂದ ಸಂಭೂತವಾಕ್ಯವು ಭೂತಪರವೆಂದು ಇಲ್ಲಿ ಹೇಳುತ್ತಿರುವುದು ತಪ್ಪಲ್ಲವೇ?

**ಸಮಾಧಾನ** - 'ಆಕಾಶಃ ಸಂಭೂತಃ' ಎಂಬ ವಾಕ್ಯಕ್ಕೆ ಭೂತಪರತ್ವವನ್ನು ಬಿಡದೆ ಬ್ರಹ್ಮಪರತ್ವವನ್ನು ಒಪ್ಪುತ್ತೇವೆ. ಆದ್ದರಿಂದ ಈ ಅಧಿಕರಣದಲ್ಲಿ ಹೇಳಿದಂತೆ ಸಂಭೂತವಾಕ್ಯವು ಭೂತಪರವೂ ಆಗುತ್ತದೆ, ಕಾರಣತ್ವೇನ ಇತ್ಯಾದಿ ಸೂತ್ರದಲ್ಲಿ ಹೇಳುವಂತೆ ಬ್ರಹ್ಮಪರವೂ ಆಗುತ್ತದೆ. ಒಂದು ವೇಳೆ ಭೂತಪರವೆಂದು ಒಪ್ಪದಿದ್ದರೆ 'ಆತ್ಮನಿಂದ ಆಕಾಶವು ಹುಟ್ಟಿತು' ಎಂಬ ವಿಷಯವೇ ಸಿದ್ಧವಾಗದಿರಬೇಕಾದೀತು. ಆಕಾಶದ ಉತ್ಪತ್ತಿ ಎಂದು ಬೇರೆ ವಾಕ್ಯದಿಂದಲೂ ಸಮರ್ಥಿಸಲಾಗದು. ಬೇರೆ ವಾಕ್ಯವೂ ಸಹ ಭಗವತ್ಪರ-

ವಾಗುವುದರಿಂದ ಆಕಾಶದ ಉತ್ಪತ್ತಿಯನ್ನು ಹೇಗೆ ಹೇಳುತ್ತದೆ? ಎಂಬ ಆಕ್ಷೇಪವು ಅಲ್ಲಿಯೂ ಸಮಾನ. ಆದ್ದರಿಂದಲೇ ಹಿಂದೆ ಗ್ರಂಥಕಾರರು ಹೀಗೆ ಹೇಳಿದ್ದರು - ''ಪ್ರಾಬಲ್ಯಂ ಹಿ ತಸ್ಯ ಶಬ್ದಸ್ಯ ಪ್ರತ್ಯುಕ್ತವಾಕ್ಯಸ್ಯ ವಾ ಅಪರಮುಖ್ಯವೃತ್ಯಾ ಅನ್ಯಪರತ್ವಂ ವಿನಾ ಅನುಪಪದ್ಯಮಾನತ್ವಮ್ (ಶಬ್ದವು ಮತ್ತು ಶಬ್ದದಿಂದ ಕೂಡಿರುವ ವಾಕ್ಯವು ಅಪರಮುಖ್ಯವೃತ್ತಿಯಿಂದ ಅನ್ಯಪರವಾಗದೆ ಪ್ರಾಬಲ್ಯವು ಕೂಡುವುದಿಲ್ಲ)' ಎಂದು. ಅನುವ್ಯಾಖ್ಯಾನದಲ್ಲಿಯೂ ಸಹ 'ಭೂತಂ ಭೂತಾಭಿಮಾನೀ ಚ ತದ್ದೇಹೋಂತರ್ನಿಯಾಮಕಃ (ಭೂತಪದಾರ್ಥ, ಭೂತಾಭಿಮಾನಿದೇವತೆ, ಅಭಿಮಾನಿದೇವತೆಯ ದೇಹ, ನಿಯಾಮಕವಾದ ಭಗವದ್ರೂಪ ಈ ನಾಲ್ಕೂ ಶಬ್ದಪ್ರತಿಪಾದ್ಯಗಳು) ಎಂದು ಹೇಳಿದ್ದಾರೆ.

ಸಂಭೂತವಾಕ್ಯವು ಹೇಗೆ ಉತ್ಪತ್ತಿಮತ್ವವೆಂಬ ಭೂತಲಿಂಗ ಇರುವುದರಿಂದ ಭೂತಪರವಾಗುತ್ತದೋ ಆದರಂತೆ 'ಕೋ ಹ್ಯೇವಾನ್ಯಾತ್' ಎಂಬ ವಾಕ್ಯದಲ್ಲಿಯೂ ಸಹ ಜಗಚ್ಚೇಷ್ಟಕತ್ವಾದಿ ಬ್ರಹ್ಮನ ಲಿಂಗಗಳು ಕೇಳಿಸುತ್ತಿರುವುದರಿಂದ ಬ್ರಹ್ಮಪರವಾಗುತ್ತದೆ. ಈ ಅಧಿಕರಣದ ಸಿದ್ಧಾಂತನ್ಯಾಯದಿಂದಲೇ ಈ ವಿಷಯವು ಸ್ಪಷ್ಟವಾಗುತ್ತದೆ. ಹೀಗೆ ಸಿದ್ಧಾಂತವು ಸಪ್ರಯೋಜನವಾದ್ದರಿಂದ ಅಧಿಕರಣವು ಸಾರ್ಥಕವೆಂದೇ ಹೇಳಬಹುದು. ಹೀಗೆ ಹೇಳಿದಾಗ ಪೂರ್ವಪಕ್ಷದಲ್ಲಿ ಹಿಂದಿನ ಅಧಿಕರಣದಲ್ಲಿ ಹೇಳಿದ ಸಿದ್ಧಾಂತವನ್ನು ಆಕ್ಷೇಪ ಮಾಡುವಿಕೆಯೆಂಬ ಪ್ರಯೋಜನವು ಸಿದ್ಧವಾಗಲಿಲ್ಲ. ಎಂಬ ವಿಷಯವನ್ನು ದೃಷ್ಟಾಂತಪುರಃಸರವಾಗಿ 'ಯದಿ ತು' ಇತ್ಯಾದಿ ಗ್ರಂಥವು ಆಕ್ಷೇಪಿಸುತ್ತಿದೆ.

ಶಂಕೆ - ಸಂಭೂತವಾಕ್ಯವನ್ನು ಉಭಯಪರವೆಂದು ಹೇಳಿದಿರಿ. ಇದರಂತೆ 'ಯದೇಷ' ಇತ್ಯಾದಿ ವಾಕ್ಯವೂ ಸಹ ಉಭಯಪರವಾಗಲಿ. ಭೂತಾಕಾಶಪರವೆನ್ನಲು ರೂಢಿ ಎಂಬ ಆಕಾಶಶ್ರುತಿಯು ಇದೆ. ಬ್ರಹ್ಮಪರವೆನ್ನಲು ಆನಂದಮಯತ್ವವೆಂಬ ಬ್ರಹ್ಮಲಿಂಗವೂ ಇದೆ. ಆದ್ದರಿಂದ 'ಯದೇಷ' ಇತ್ಯಾದಿ ವಾಕ್ಯವು ಭೂತಪರವಾದರೂ ವಿಷ್ಣುಪರವೂ ಆಗುತ್ತದೆ. ಹೀಗೆ ಹೇಳಿದಾಗ ಆನಂದಮಯನು ವಿಷ್ಣು ಎಂಬಲ್ಲಿ ಇನ್ನೊಂದು ಹೇತುವನ್ನು ಸಹ ಹೇಳಿದಂತಾಗುತ್ತದಲ್ಲವೆ?

ಸಮಾಧಾನ - ಹಾಗೆ ಹೇಳಬಾರದು. ಸಂಭೂತವಾಕ್ಯವನ್ನು ಭೂತಾಕಾಶಪರವೆನ್ನದೆ ಬೇರೆ ಗತಿಯಿಲ್ಲ. ಭೂತಾಕಾಶಪರವಾಗದಿದ್ದಲ್ಲಿ ಭೂತೋತ್ಪತ್ಯಾದಿಗಳೇ ಅಸಿದ್ಧವಾಗುತ್ತವೆ. ಆದರಂತೆ 'ಯದೇಷ' ಇತ್ಯಾದಿ ವಾಕ್ಯವು ಭೂತಾಕಾಶಪರವಾಗದಿದ್ದಲ್ಲಿ ಬೇರೇನೂ ಬಾಧಕಗಳು ಇರುವುದಿಲ್ಲ. ಭೂತಾಕಾಶಪರತ್ವವು ಅನಿವಾರ್ಯವಲ್ಲ ಮತ್ತು ನಿರವಕಾಶವಾದ ಬ್ರಹ್ಮಲಿಂಗವು ಅನುಪಪನ್ನವಾದೀತು. ಇದನ್ನೇ ನಾಲ್ಕನೇ ಪಾದದ ಜ್ಯೋತಿರುಪಕ್ರಮಾಧಿಕರಣದ ಅನುವ್ಯಾಖ್ಯಾನವು ಹೇಳಿದೆ.

''ತೇಷು ತೇಷು ಪದಾರ್ಥೇಷು ರೂಢಿರಂಗೀಕೃತಾ ಯತಃ ।
ಪ್ರಯೋಜನಬಹುತ್ವೇನ ತಸ್ಯ ತಸ್ಯಾವಿರೋಧತಃ।
ಉಪದೇಶಾದಿಸಾಮರ್ಥ್ಯಾದ್ವಿಷ್ಣೌ ಶಕ್ತಿಶ್ಚ ಗೃಹ್ಯತೇ ॥
ತಥಾಪ್ಯೇತದ್ವಿರೋಧೇ ತು ತದ್ಭಾವಿತ್ವಮಪೋದ್ಯತೇ।

(ಆಯಾ ಅರ್ಥಗಳಲ್ಲಿ ಆಯಾ ಶಬ್ದಗಳಿಗೆ ರೂಢಿಯು ಅಂಗೀಕರಿಸಲ್ಪಟ್ಟಿದೆ. ವ್ಯುತ್ಪತ್ತಿಯ ಕೂಡುವಿಕೆ, ಲೋಕವ್ಯವಹಾರ ಮೊದಲಾದ ಅನೇಕ ಪ್ರಯೋಜನಗಳು ಬೇರೆಡೆ ರೂಢಿಯನ್ನು ಅಂಗೀಕರಿಸಿದರೆ ಮಾತ್ರ

ಹೇಳಲು ಸಾಧ್ಯ. ಆಯಾ ಅರ್ಥಗಳಿಗೆ ವಿರೋಧ ಬಾರದಂತೆ ಉಪದೇಶ ಮೊದಲಾದ ಸಾಮರ್ಥ್ಯದಿಂದ ವಿಷ್ಣುವಿನಲ್ಲಿ ಶಕ್ತಿಯನ್ನೂ ಅಂಗೀಕರಿಸಬೇಕು. ಶಬ್ದಗಳಿಗೆ ಉಭಯಾರ್ಥವನ್ನು ಒಪ್ಪಿದಾಗ ಪರಮಾತ್ಮಪರವಾಗುವ ವಿಷಯದಲ್ಲಿ ವಿರೋಧ ಬಂದರೆ ಮಾತ್ರ ಅನ್ಯಾರ್ಥದಲ್ಲಿ ರೂಢಿಯನ್ನು ಪರಿತ್ಯಾಗ ಮಾಡಬೇಕು).

''ಸಂಭೂತವಾಕ್ಯದಲ್ಲಿ ಉಭಯಪರತ್ವವನ್ನು ಒಪ್ಪಿದಂತೆ 'ಕೋ ಹ್ಯೇವಾನ್ಯಾತ್' ಎಂಬ ವಾಕ್ಯದಲ್ಲಿಯೂ ಉಭಯಪರತ್ವವನ್ನು ಒಪ್ಪಬೇಕು. ಆವಾಗ ಸಂಭೂತವಾಕ್ಯವು ಭೂತಪರವಾಗುವುದರಿಂದ ಸಿದ್ಧಾಂತ ಫಲವು ಸಿದ್ಧವಾಗುವುದಿಲ್ಲ'' ಎಂದು ಸಿದ್ಧಾಂತಿಗಳನ್ನು ಕುರಿತು ಹಿಂದೆ ಆಕ್ಷೇಪಿಸಲಾಗಿತ್ತು. ಆ ಆಕ್ಷೇಪವು ವಿಷಮವಾಗಿದೆ ಎಂದು 'ಸಿದ್ಧಾಂತೇ' ಇತ್ಯಾದಿ ವಾಕ್ಯದಿಂದ ನಿರಾಕರಿಸುತ್ತಿದ್ದಾರೆ.

'ಕೋ ಹ್ಯೇವಾನ್ಯಾತ್' ಎಂಬ ಶ್ರುತಿಯಲ್ಲಿ ಭೂತಲಿಂಗವಿಲ್ಲದಿರಬಹುದು. ಆದರೆ ಭೂತದಲ್ಲಿ ರೂಢಿಯನ್ನು ಹೇಳುವ ಆಕಾಶಶ್ರುತಿ ಇದೆಯಲ್ಲ? ಎಂಬ ಆಕ್ಷೇಪಕ್ಕೆ 'ಭೂತೇ ಪ್ರಸಿದ್ಧಿಮಾತ್ರಸ್ಯ' ಎಂಬ ವಾಕ್ಯದಿಂದ ಉತ್ತರಿಸುತ್ತಿದ್ದಾರೆ.

'ಆಕಾಶ ಇತಿ ಹೋವಾಚ' ಎಂಬ ವಾಕ್ಯವು ಮತ್ತು 'ಕೋ ಹ್ಯೇವಾನ್ಯಾತ್' ಎಂಬ ವಾಕ್ಯವು ಸಮಾನವಾದ ನ್ಯಾಯಕ್ಕೆ ವಿಷಯವಾಗಿವೆ. 'ಆಕಾಶ ಇತಿ ಹೋವಾಚ' ಎಂಬ ವಾಕ್ಯವು ವಿಷ್ಣುಪರವಾದರೆ 'ಕೋ ಹ್ಯೇವಾನ್ಯಾತ್' ಎಂಬ ವಾಕ್ಯವೂ ಸಹ ವಿಷ್ಣುಪರವಾಗುತ್ತದೆ. ಹೀಗೆ 'ಸಿದ್ಧಾಂತೇ' ಎಂಬ ವಾಕ್ಯದಿಂದ ಮೊದಲು ಸಿದ್ಧಾಂತದ ಪ್ರಯೋಜನವನ್ನು ಸಮರ್ಥಿಸಿದರು. ಈಗ ಪೂರ್ವಪಕ್ಷದಲ್ಲಿಯೂ ಸಹ ಈ ಎರಡೂ ಶ್ರುತಿಗಳು ಸಮಾನನ್ಯಾಯಕ್ಕೆ ವಿಷಯವಾಗಿವೆಯೆಂದು ಪೂರ್ವಪಕ್ಷದ ಫಲವನ್ನು 'ಇತಿ ಹೋವಾಚೇತಿ' ಎಂಬ ವಾಕ್ಯದಿಂದ ಸಮರ್ಥಿಸುತ್ತಿದ್ದಾರೆ. ಅದು ಹೀಗೆ - ಪೂರ್ವಪಕ್ಷದಲ್ಲಿ 'ಆಕಾಶ ಇತಿ ಹೋವಾಚ' ಎಂಬ ಶ್ರುತಿಯು ಭೂತಪರವಾದರೆ 'ಕೋ ಹ್ಯೇವಾನ್ಯಾತ್' ಎಂಬ ವಾಕ್ಯವೂ ಸಹ ಭೂತಪರವೇ ಆಗುತ್ತದೆ. ಆಕಾಶಶ್ರುತಿಯು ಎರಡೂ ಕಡೆ ಸಮಾನವಾದ್ದರಿಂದ. ಮುಂದಿನ ಅಧಿಕರಣಗಳಲ್ಲಿಯೂ ಸಹ ಎರಡು ಶ್ರುತಿಗಳಿಗೆ ಸಮಾನನ್ಯಾಯವಿಷಯತ್ವವನ್ನು ಸಿದ್ಧಾಂತದಲ್ಲಿ ಹೇಳಿದರೆ ಪೂರ್ವಪಕ್ಷದಲ್ಲಿಯೂ ಸಹ ಹೇಳಬೇಕೆಂದು ಇದರಂತೆ ತಿಳಿಯಬೇಕು.

**ಗುರುರಾಜೀಯಮ್** – ನನ್ವನ್ತರಾಧಿಕರಣನ್ಯಾಯಾತಿದೇಶಸ್ಯಾಧಿಕರಣತ್ರಯೇಪಿ ಸತ್ತ್ವಾತ್ ಕಥಮೇತೇಷಾಂ ಕ್ರಮಃ? ಇತ್ಯತ ಆಹ – **ಯದ್ಯಪೀತಿ ॥ ಅಧಿಕಾಶಙ್ಕಾಕ್ರಮಾದಿತಿ ॥** ಪ್ರಬಲಾಧಿಕಶಙ್ಕಾಕ್ರಮಾದಿತ್ಯರ್ಥಃ । ತಥಾ ಚ ಸೋಪಾನಾರೋಹಣನ್ಯಾಯೇನ ಯತ್ರಾಧಿಕಶಙ್ಕಾಯಾ ಅಲ್ಪತ್ವಂ ತಸ್ಯ ಪ್ರಾಥಮ್ಯಮಿತಿ ಭಾವಃ । ಮಹಾಮಲ್ಲಭಙ್ಗನ್ಯಾಯೇನ ವೈಪರೀತ್ಯಮೇವ ಕಿಂ ನ ಸ್ಯಾತ್? ಇತ್ಯತ ಆಹ – **ಯಚ್ಚೇತಿ ॥**

ನನು ಭಿನ್ನಭಿನ್ನಶಾಖಾಸ್ಥವಾಕ್ಯನಿರ್ಣಾಯಕಾನಾಂ ಸೂತ್ರಾಣಾಂ ಪರಸ್ಪರಂ ಸಙ್ಗತ್ಯಭಾವೇನ ಪುರುಷೋತ್ಪ್ರೇಕ್ಷಯೈವಾಭ್ಯಧಿಕಾಶಙ್ಕಾಕ್ರಮೇಣಾಧಿಕರಣಾನಾಂ ಕ್ರಮಶ್ಚೇತ್ ತರ್ಹ್ಯನ್ಯಥಾಪಿ ಪುರುಷೋತ್ಪ್ರೇಕ್ಷಾಸಮ್ಭವೇನ ಪ್ರಕಾರಾನ್ತರೇಣಾಪಿ ಸಙ್ಗತಿಃ ಸ್ಯಾದಿತ್ಯನುಶಯಾಢ್ಡಾऽऽಹ – **ಯಚ್ಚೇತಿ ॥**

**नन्वेवं साक्षादन्तरधिकरणसङ्गतिरेव चेदाकाशस्य सङ्गतिः तर्ह्यानन्द-मयाधिकरणेन सह सङ्गतिप्रदर्शककोह्येवान्यादित्यादिभाष्यविरोध इत्यतो न तत्सङ्गतिप्रदर्शकं किं नाम विचारसाफल्यमात्रकथनमित्यतो न विरोध इति भावेनाह – को हीति ॥**

नन्वेतदयुक्तम् । सिद्धान्ते 'आकाश इति होवाच' इत्यत्राकाशशब्दस्य ब्रह्मपरत्वेपि 'यदेष आकाश' इति वाक्ये आकाशशब्दस्य भूतपरत्वस्यैव सम्भवात् कथं सिद्धान्ते तत्साधनम् । न चैकत्राकाशशब्दस्य ब्रह्मपरत्वेऽन्यत्रापि ब्रह्मपरत्वमेव स्यादिति वाच्यं तथात्वे सिद्धान्ते आकाश इति होवाचेति वाक्ये आकाशशब्दस्य ब्रह्मपरत्वेन 'आत्मन आकाशः सम्भूतः' इति सम्भूत-वाक्येप्याकाशशब्दस्य ब्रह्मपरत्वापातात् ।

नच सति ब्रह्मलिङ्गे आकाशशब्दस्य ब्रह्मपरत्वाभ्युपगमात् सम्भूतवाक्ये ब्रह्मलिङ्गाभावेन तत्राकाशशब्दस्य ब्रह्मपरत्वाभावेपि 'यदेष आकाशः' इति वाक्ये ब्रह्मलिङ्गानां विद्यमानत्वेनाकाशशब्दस्य ब्रह्मपरत्वं सम्भवतीति समाधानं युक्तमिति वाच्यम् ।

तथात्वे सिद्धान्ते सम्भूतवाक्ये ब्रह्मलिङ्गाभावेनाकाशशब्दस्य ब्रह्म-परत्वाभावेऽपि 'यदेष आकाश' इति वाक्ये ब्रह्मलिङ्गानां सत्वेनाकाशशब्दस्य विष्णुपरत्ववत्, पूर्वपक्षेपि 'आकाश इति होवाच' इति वाक्ये ब्रह्मलिङ्गानाम-भावेनाकाशशब्दस्य ब्रह्मपरत्वाभावेपि यदेष इति वाक्ये ब्रह्मलिङ्गानां विद्यमानत्वेनाकाशशब्दस्यान्यपरत्वं स्यादित्यानन्दमयोप्यन्यएवेत्याक्षेप एवानुप-पन्न इति पूर्वपक्षे आनन्दमयाधिकरणाक्षेपात्सिद्धान्ते तत्समाधानात् 'को ह्येवान्यात्' इति वाक्यचिन्तासाफल्यमात्रपरमित्युच्यते । तथा चास्य भाष्यस्य चिन्तासाफल्यपरत्वासम्भवेनानन्दमयाधिकरणसङ्गतिप्रदर्शनपरत्वस्यैवावश्यकत्वात् साक्षादनन्तराधिकरणसङ्गत्यभिधाने भाष्यविरोधः स्यादेवेत्याशयेन शङ्कते – **न चेत्यादि ॥** 'इति होवाच' इति वाक्ये आकाशस्य ब्रह्मपरत्वे यदेष इति वाक्येपि ब्रह्मपरत्वं स्यादेवेति सिद्धान्ते आनन्दमयाक्षेपपरिहारः ।

नच 'इति होवाच' इति वाक्ये आकाशशब्दस्य ब्रह्मपरत्वेपि सम्भूतवाक्ये तदभाववत् यदेष इति वाक्येपि तदभावः किं न स्यादिति वाच्यम् ।

तत्राकाशशब्दस्य ब्रह्मपरत्वेपि सम्भूतवाक्ये आकाशशब्दस्य ब्रह्मपरत्वे बाधकाभावेन ब्रह्मपरत्वोपपत्तेः । तथाहि । बाधकं भवत्सम्भूतत्वं वा स्यादाकाशशब्दस्यान्यत्र प्रसिद्धत्वं वा स्यात् । नाद्यः । यदेष इति वाक्ये सम्भूतत्वादेरभावात् । न द्वितीयः । तल्लिङ्गन्यायेन तस्यापि परिहारात् । तस्मात् 'इति होवाच' इति वाक्ये आकाशशब्दस्य ब्रह्मपरत्वे यदेष इति वाक्येपि ब्रह्मपरत्वं स्यादित्यानन्दमयस्यापि ब्रह्मत्वमित्यानन्दमयाक्षेपसमाधानं सिद्धान्ते युक्तमेव । एवं पूर्वपक्षेपि इति होवाचेत्यत्राब्रह्मत्वे यदेष इति वाक्येप्यब्रह्मत्वस्य वक्तुं शक्यत्वेनानन्दमयाक्षेपकतोपपन्ना ।

नच सिद्धान्ते सम्भूतवाक्येऽब्रह्मत्वेपि ब्रह्मलिङ्गाद् यदेष इति वाक्ये ब्रह्मत्ववत्, 'इति होवाच' इत्यत्र ब्रह्मपरत्वेपि यदेष इति वाक्ये ब्रह्मपरत्वं स्यादिति शङ्क्यम् । यदेष वाक्ये ब्रह्मलिङ्गत्वात् 'इति होवाच' इत्यत्रापि ब्रह्मलिङ्गानां सत्त्वात्तत्रोक्तस्यापि ब्रह्मत्वम् ।

यदि च तत्रान्यत्रप्रसिद्धिमात्रेण लिङ्गानां सावकाशत्वापत्तावत्रोक्तस्यापि ब्रह्मत्वं न स्यादेव । तथा च 'इति होवाच' इति वाक्ये आकाशस्याब्रह्मत्वे यदेष इति वाक्येप्यब्रह्मत्वं स्यादित्यानन्दमयोप्यन्यएव स्यादिति पूर्वपक्षे आनन्द-मयाधिकरणाक्षेपो युक्त एव ।

तथा च भाष्यस्य चिन्तासाफल्यमात्रप्रदर्शनपरत्वेन सङ्गतिप्रदर्शनपरत्वा-भावात् साक्षात्सङ्गत्यभिधानेन भाष्यविरोध इत्याशयवान् परिहरति – **सिद्धान्त इत्यादिना ॥**

ननु भूतेषु प्रसिद्ध्या यदेष आकाश इति वाक्यस्थाकाशशब्दस्याप्यन्य-परत्वम् इत्यत आह – **भूते प्रसिद्धिमात्रस्येति ॥**

ननु तत्रत्यब्रह्मलिङ्गातिप्रसिद्ध्याऽन्यथा क्रियत इत्यत आह – **भूत इति ॥** उक्तन्यायमन्यत्राप्यतिदिशति – **एवमिति ॥**

## ಸಾರ

ಆಂತಸ್ಥತ್ವಾಧಿಕರಣದ ನ್ಯಾಯದ ಅತಿದೇಶ ಆಕಾಶಾಧಿಕರಣದಲ್ಲಿ ಇರುವಂತೆ ಮುಂದಿನ ಪ್ರಾಣಾಧಿಕರಣ ಜ್ಯೋತಿರಧಿಕರಣಗಳಲ್ಲಿಯೂ ಇರುವುದರಿಂದ ಮೊದಲು ಆಕಾಶಾಧಿಕರಣ ಅನಂತರ ಪ್ರಾಣಾಧಿಕರಣ, ಅನಂತರ ಜ್ಯೋತಿರಧಿಕರಣ ಹೀಗೆ ಕ್ರಮವಾಗಿ ನಿರೂಪಣೆ ಮಾಡಲು ಏನು ಕಾರಣ? ಎಂದು ಪ್ರಶ್ನೆ ಬರಬಹುದು. ಅದಕ್ಕೆ ಎರಡು ರೀತಿಯ ಉತ್ತರವಿದೆ. ಮೊದಲನೆಯದಾಗಿ ಆಂತಸ್ಥತ್ವಾಧಿಕರಣದ ನ್ಯಾಯದ ಮೇಲೆ ಅಭ್ಯಧಿಕಾಶಂಕಾವನ್ನು ಆಕಾಶಾಧಿಕರಣದಲ್ಲಿ ಮಾಡಿಕೊಂಡು ಉತ್ತರಿಸಿದ ಮೇಲೆ ಪುನಃ ಆದರ ಮೇಲೆ ಹೆಚ್ಚಿನ ಶಂಕೆಯನ್ನು ಪ್ರಾಣಾಧಿಕರಣದಲ್ಲಿ ಮಾಡಿದ್ದಾರೆ. ಅಲ್ಲಿ ಸಮಾಧಾನವನ್ನು ಹೇಳಿದಮೇಲೆ ಪುನಃ ಅಭ್ಯಧಿ-ಕಾಶಂಕೆಯನ್ನು ಮಾಡಲಾಗಿದೆ. ಈ ಕ್ರಮದಿಂದಾಗಿ ಅವುಗಳಲ್ಲಿ ಕ್ರಮವು ಹೇಳಲ್ಪಟ್ಟಿದೆ. ಎರಡನೆಯದಾಗಿ ಶ್ರುತಿಯಲ್ಲಿ 'ಆಕಾಶದಿಂದ ವಾಯು ವಾಯುವಿನಿಂದ ಅಗ್ನಿ' ಹೀಗೆ ಕ್ರಮವಾಗಿ ಒಂದೊಂದಕ್ಕೆ ಕಾರಣತ್ವವನ್ನು ಹೇಳಿದ್ದರಿಂದ ಅದನ್ನಿಟ್ಟುಕೊಂಡು ಇಲ್ಲಿ ಕ್ರಮವು ಹೇಳಲ್ಪಟ್ಟಿದೆ.

ಭಾಷ್ಯದಲ್ಲಿ ಈ ಅಧಿಕರಣಫಲದ ಬಗ್ಗೆ ಹೇಳುವಾಗ ಛಾಂದೋಗ್ಯೋಪನಿಷತ್ತಿನಲ್ಲಿ ಬಂದಿರುವ 'ಆಕಾಶ' ಶಬ್ದವು ವಿಷ್ಣುವಾಚಕವಲ್ಲದಿದ್ದರೆ, ಆನಂದಮಯನನ್ನು ಕುರಿತು ಹೇಳಿದ 'ಆಕಾಶ' ಶಬ್ದವೂ ಕೂಡ ವಿಷ್ಣು-ವಾಚಕವಾಗುವುದಿಲ್ಲ. ಹಾಗಾಗಿ ಆನಂದಮಯನು ವಿಷ್ಣುವಾಗುವುದಿಲ್ಲ ಎಂದು ಪೂರ್ವಪಕ್ಷ ಮಾಡಿಕೊಂಡು ಸಮಾಧಾನವನ್ನು ಸಿದ್ಧಾಂತದಲ್ಲಿ ಹೇಳಿದ್ದರಿಂದ ಈ ಅಧಿಕರಣ ಸಾರ್ಥಕ ಎಂದಿದ್ದಾರೆ. ಆದರೆ ಅದು ಸರಿಯಲ್ಲ. ಏಕೆಂದರೆ ಛಾಂದೋಗ್ಯದಲ್ಲಿರುವ ಆಕಾಶಶಬ್ದವು ವಿಷ್ಣುವಾಚಕವಾಗಿದ್ದರೂ 'ಆತ್ಮನಃ ಆಕಾಶಸ್ಸಂಭೂತಃ' ಎಂಬಲ್ಲಿ ಆಕಾಶ ಶಬ್ದವನ್ನು ವಿಷ್ಣುಪರ ಎಂದು ಹೇಗೆ ಒಪ್ಪುವುದಿಲ್ಲವೋ ಹಾಗೆಯೇ ಆನಂದಮಯನ ಕುರಿತು ಹೇಳಿದ ವಾಕ್ಯದಲ್ಲಿಯೂ ಹೇಳಲು ಬರುವುದಿಲ್ಲ. ಆದ್ದರಿಂದ ಆನಂದಮಯಾಧಿಕರಣದಿಂದ ಸಂಗತಿಯನ್ನು ಹೇಳಿದ್ದು ಹೇಗೆ? ಎಂದರೆ ಛಾಂದೋಗ್ಯದಲ್ಲಿರುವ ಆಕಾಶ ಶಬ್ದವು ಮತ್ತು ಆನಂದಮಯನಲ್ಲಿರುವ ಆಕಾಶಶಬ್ದವು ವಿಷ್ಣುವಾಚಕ ಎನ್ನಲು ಅಲ್ಲಿ ಬ್ರಹ್ಮನ ಲಿಂಗವಿರುವುದು ಕಾರಣ. 'ಆತ್ಮನಃ ಆಕಾಶಸ್ಸಂಭೂತಃ' ಎಂಬಲ್ಲಿ ಭೂತಾಕಾಶದ ಲಿಂಗವಿದೆಯೇ ಹೊರತು ಬ್ರಹ್ಮನ ಲಿಂಗವಿಲ್ಲ. ಹಾಗಾಗಿ ಅಲ್ಲಿ ಆಕಾಶಶಬ್ದವು ಭೂತಪರ. ಆದ್ದರಿಂದ ಆನಂದಮಯಾಧಿಕರಣದಿಂದ ಸಂಗತಿ ಹೇಳಿದ್ದು ಸರಿಯಾಗಿದೆ.

---

### ತೈತ್ತಿರೀಯದಂತೆ ಛಾಂದೋಗ್ಯದ ಮಾತೂ ಸಹ ವಿಷಯವಾಕ್ಯ

**ತಾತ್ಪರ್ಯಚನ್ದ್ರಿಕಾ –**

**ನನು ಯದ್ಯೇವಮಾನನ್ದಮಯಾಧಿಕರಣಾಕ್ಷೇಪಃ, ತರ್ಹಿ ಸಾಕ್ಷಾತ್ ತದಾಕ್ಷೇಪಾರ್ಥಮ್ ಆನನ್ದಮಯ-ಶಬ್ದೇ ಮಯಟೋ ವಿಕಾರಾರ್ಥತ್ವಮಿವ ''ಯದೇಷಃ'' ಇತಿ ವಾಕ್ಯೇ ಆಕಾಶಶಬ್ದಸ್ಯ ಭೂತಾಕಾಶ-ಪರತ್ವಮಾಶಙ್ಕ್ಯ, ಆನನ್ದಮಯಸ್ಯ ವಿಷ್ಣುತ್ವಸಿದ್ಧಯೇ ಬ್ರಹ್ಮಣಿ ಸಮನ್ವಯ ಉಚ್ಯತಾಮ್ ।**

**ಅನ್ತಸ್ಥತ್ವಸ್ಯ ತು ಆನನ್ದಮಯಪ್ರಕರಣೇ ಶ್ರವಣೇऽಪಿ ತಸ್ಯ ಸ್ವತोऽನ್ಯತ್ರ ಪ್ರಸಿದ್ಧ್ಯಭಾವಾತ್ ಅನ್ಯತ್ರ ಪ್ರಸಿದ್ಧೇನ್ದ್ರಾದಿಶ್ರುತಿಸಾಹಚರ್ಯಸ್ಯ ತತ್ಪ್ರಕರಣೇ ಅಭಾವೇನ ತತ್ರ ಪೂರ್ವಪಕ್ಷಾನುದಯಾದ್ ವಾಕ್ಯಾನ್ತರೋದಾಹರಣಂ ಯುಕ್ತಮ್ । ಆಕಾಶಶಬ್ದಸ್ತ್ವಾನನ್ದಮಯಪ್ರಕರಣೇ ಶ್ರುತಃ ಸ್ವತोऽನ್ಯತ್ರ ಪ್ರಸಿದ್ಧಶ್ಚೇತಿ ತತ್ರೈವ ಪೂರ್ವಪಕ್ಷೋದಯ ಇತಿ ವೈಷಮ್ಯಮ್ ।**

**ಸತ್ಯಮ್, ತಥಾऽಪಿ ಮಯಟ ಇವ ಆಕಾಶಶಬ್ದಸ್ಯ ಸಮನ್ವೇತವ್ಯಾನನ್ದಮಯ-ಶಬ್ದಾನ್ತರ್ಭಾವಾಭಾವೇನ ನ್ಯಾಯಭೇದೇನ ಚಾಧಿಕರಣಭೇದೇ ಸ್ಥಿತೇ, ''ಆಕಾಶ ಇತಿ ಹೋವಾಚ'' ಇತಿ ವಾಕ್ಯಾನ್ತರಸ್ಯಾऽಪಿ ಸಮನ್ವಯೇ ಏತತ್ಪ್ರಕರಣಸ್ಥಬಹುಗುಣಲಾಭಾತ್, ತಥಾ ಏತತ್ ಸಮನ್ವಯೇನ ನಿರ್ಣೀತಬ್ರಹ್ಮಪ್ರಕರಣಸ್ಥ'ಯದೇಷ'ವಾಕ್ಯಸಮನ್ವಯವತ್, ''ಯದೇಷಃ'' ಇತಿ ವಾಕ್ಯ-ಸಮನ್ವಯೇನ ಅನಿರ್ಣೀತಬ್ರಹ್ಮಪ್ರಕರಣಸ್ಥೈತದ್ವಾಕ್ಯಸಮನ್ವಯಾಸಿದ್ಧೇಃ, ತಥಾ ಸಿದ್ಧಾನ್ತಿನಾ ಸಾವಕಾಶಯಿತವ್ಯಾನಾಂ ಭೂತಲಯಾಧಿಷ್ಠಾನತ್ವಾದಿಪೂರ್ವಪಕ್ಷಯುಕ್ತೀನಾಂ ನಿರವಕಾಶಯಿತವ್ಯಾನಾಂ ಪರೋವರೀಯಸ್ತ್ವಾದಿಸಿದ್ಧಾನ್ತಯುಕ್ತೀನಾಂ ಚ ''ಯದೇಷಃ'' ಇತ್ಯತ್ರಾಭಾವಾಚ್ಚ ವಾಕ್ಯಾನ್ತರೋದಾಹರಣಂ ಯುಕ್ತಮ್ ।**

**ಅತ್ರ ಯದ್ಯಪಿ ''ಆಕಾಶ ಇತಿ ಹೋವಾಚ'' ಇತ್ಯತ್ರ ಆಕಾಶಸ್ಯಾನ್ಯತ್ವೇ ''ಆಕಾಶಾದೇವ ಸಮುತ್ಪದ್ಯನ್ತೇ'' ಇತಿ ತತ್ಪ್ರಕರಣೇ ಶ್ರುತ ಕಾರಣತ್ವಮಪಿ ಅನ್ಯಸ್ಯೈವ ಸ್ಯಾದಿತಿ ಜನ್ಮಾದಿ-ಸೂತ್ರಮಪ್ಯಾಕ್ಷೇತುಂ ಶಕ್ಯಂ ಭಾತಿ । ತಥಾऽಪಿ ''ಸಮುತ್ಪದ್ಯನ್ತೇ'' ಇತ್ಯಸ್ಯೋಪಾದಾನತ್ವೇऽಪ್ಯುಪಪತ್ತೇಃ ಜನ್ಮಾದಿಸೂತ್ರೋಕ್ತಕರ್ತೃತ್ವಾಕ್ಷೇಪಾಯೋಗಾತ್, ಆನನ್ದಮಯಾಧಿಕರಣಾನಾಕ್ಷೇಪೇ ತದಾಕ್ಷೇಪಕಾನ್ತರಧಿ-ಕರಣಪ್ರಾಣಾಧಿಕರಣಯೋರ್ಮಧ್ಯೇ ಅಸ್ಯ ನಿವೇಶಾಯೋಗಾಚ್ಚ ಆನನ್ದಮಯಾಧಿಕರಣಮೇವಾऽಕ್ಷಿಪ್ತಮ್ ।**

ಅನುವಾದ - ಪ್ರಶ್ನೆ - ಆನಂದಮಯಾಧಿಕರಣವನ್ನು ಆಕ್ಷೇಪಿಸಿ ಆಕಾಶಾಧಿಕರಣವು ಹೊರಡುತ್ತಿದೆಯೆಂದು ಈ ಹಿಂದೆ ಹೇಳಿದಿರಿ. ಹಾಗಾದಲ್ಲಿ ಕೇವಲ ತೈತ್ತಿರೀಯವಾಕ್ಯದಲ್ಲಿರುವ ಆಕಾಶಶಬ್ದವನ್ನಷ್ಟೇ ವಿಷ್ಣುಪರವಲ್ಲವೆಂದು ಪೂರ್ವಪಕ್ಷ ಮಾಡಿ, ಸಿದ್ಧಾಂತ ಮಾಡುವುದು ಉಚಿತ. ಛಾಂದೋಗ್ಯದ ಮಾತು ಇಲ್ಲಿ ಅಪ್ರಸ್ತುತ. ಯಾವ ರೀತಿಯಾಗಿ ಆನಂದಮಯ ಶಬ್ದದಲ್ಲಿರುವ ವಿಕಾರಾರ್ಥವುಳ್ಳ ಮಯಟ್ ಪ್ರತ್ಯಯವು ವಿಷ್ಣುತ್ವ ನಿರ್ಣಯಕ್ಕೆ ಬಾಧಕವೆಂದು ಪೂರ್ವಪಕ್ಷ ಮಾಡುತ್ತೀರೋ, ಅದರಂತೆ 'ಯದೇಷ ಆಕಾಶಃ' ಎಂಬ ತೈತ್ತಿರೀಯದ ಆಕಾಶಶಬ್ದವು ಭೂತಾ-ಕಾಶಪರವಾಗಿದೆ ಎಂದು ಆಕ್ಷೇಪಿಸಬಹುದು. ಆನಂದಮಯನು ವಿಷ್ಣುವೆಂದು ನಿರ್ಣಯವಾಗ-ಬೇಕಾದರೆ ತೈತ್ತಿರೀಯದ ಈ ಆಕಾಶಶಬ್ದವು ವಿಷ್ಣುಪರವೇ ಆಗಬೇಕೆಂದು ಸಿದ್ಧಾಂತ ಮಾಡುವುದು

ಅತ್ಯಂತ ಸಮಂಜಸ. ಪುನಃ 'ಆಕಾಶ ಇತಿ ಹೋವಾಚ' ಎಂಬ ಛಾಂದೋಗ್ಯದ ಆಕಾಶಶಬ್ದವು ಇಲ್ಲಿ ಪೂರ್ವಪಕ್ಷಕ್ಕಾಗಲೀ ಸಿದ್ಧಾಂತಕ್ಕಾಗಲೀ ಕಾರಣವಾಗುವುದಿಲ್ಲ.

ಅಂತಃಸ್ಥತ್ವಾಧಿಕರಣದಲ್ಲಿ ಬೇರೆ ಪ್ರಕರಣದಲ್ಲಿರುವ ವಾಕ್ಯವನ್ನು ಉದಾಹರಿಸಿದಂತೆ ಇಲ್ಲಿಯೂ ಉದಾಹರಿಸಿದ್ದೇವೆಂದು ಹೇಳಬಾರದು. ಅಂತಃಸ್ಥತ್ವವು ಆನಂದಮಯ ಪ್ರಕರಣದಲ್ಲಿ ಶ್ರುತವಾಗಿದೆ. ಆದರೆ ಆ ಅಂತಃಸ್ಥತ್ವವು ಆಕಾಶಶಬ್ದದಂತೆ ಅನ್ಯತ್ರಪ್ರಸಿದ್ಧವಾಗಿಲ್ಲ. ಅಷ್ಟೇ ಅಲ್ಲದೆ ಅನ್ಯತ್ರಪ್ರಸಿದ್ಧವಾದ ಇಂದ್ರಾದಿ ಶ್ರುತಿಗಳ ಸಾಹಚರ್ಯವೂ ಕೂಡ ಅಂತಃಸ್ಥತ್ವಕ್ಕೆ ಇರುವುದಿಲ್ಲ. ಆದ್ದರಿಂದ ಅಂತಃಸ್ಥತ್ವವು ವಿಷ್ಣುವಿನಲ್ಲಿ ಇರುವುದಿಲ್ಲವೆಂಬ ಪೂರ್ವಪಕ್ಷಕ್ಕೆ ಬೀಜವೇ ಇಲ್ಲದಂತಾಗುತ್ತದೆ. ಆದ್ದರಿಂದ ಅನಿವಾರ್ಯವಾಗಿ ಪೂರ್ವಪಕ್ಷದ ಸ್ಥಾಪನೆಗೋಸ್ಕರ ವಾಕ್ಯಾಂತರವನ್ನು ಉದಾಹರಿಸಿದ್ದೇವೆ. ಆದರೆ ತೈತ್ತಿರೀಯದಲ್ಲಿರುವ ಆಕಾಶಶಬ್ದದಲ್ಲಿ ಪೂರ್ವಪಕ್ಷಪ್ರಾಪಕವಾದ ಕಾರಣಗಳು ಇರುತ್ತದೆ. ಆನಂದಮಯಪ್ರಕರಣದಲ್ಲಿ ಆಕಾಶಶಬ್ದವು ಶ್ರುತವಾಗಿದೆ. ಮತ್ತು ಅನ್ಯತ್ರಪ್ರಸಿದ್ಧವೂ ಆಗಿದೆ. ಇದರಿಂದ ಆಕಾಶವು ವಿಷ್ಣುವಲ್ಲ. ಆನಂದಮಯನೂ ಸಹ ವಿಷ್ಣುವಾಗಲಾರ ಎಂಬ ಪೂರ್ವಪಕ್ಷವನ್ನು ಸುಲಭವಾಗಿಯೇ ಮಾಡಬಹುದು. ವಾಕ್ಯಾಂತರದ ಅಪೇಕ್ಷೆಯು ಇರುವುದಿಲ್ಲ. ಹೀಗೆ ಅಂತಃಸ್ಥತ್ವಾಧಿಕರಣಕ್ಕೂ ಆಕಾಶಾಧಿಕರಣಕ್ಕೂ ವೈಷಮ್ಯವಿದೆ.

ಉತ್ತರ - ಹೌದು, ಆದರೂ ಸಹ ಛಾಂದೋಗ್ಯಮಾತಿನ ಅನಿವಾರ್ಯತೆ ಇಲ್ಲಿಯೂ ಇದೆ. ಮಯಟ್ ಪ್ರತ್ಯಯವು ಸಮನ್ವಯ ಮಾಡಬೇಕಾಗಿರುವ ಆನಂದಮಯ ಶಬ್ದದ ಗರ್ಭದಲ್ಲಿ ಸೇರಿದೆ. ಆದರೆ ಆಕಾಶಶಬ್ದವು ಹಾಗಿಲ್ಲ. ಆನಂದಮಯಶಬ್ದದ ಸಮನ್ವಯದಿಂದ ಆಕಾಶಶಬ್ದದ ಸಮನ್ವಯವು ಸಿದ್ಧವಾಗದ ಕಾರಣ ಆನಂದಮಯಾಧಿಕರಣದಿಂದ ಆಕಾಶಾಧಿಕರಣವು ಗತಾರ್ಥವಾಗುವುದಿಲ್ಲ.

ಮತ್ತು ಆನಂದಮಯಾಧಿಕರಣದ ನ್ಯಾಯಕ್ಕೂ ಆಕಾಶಾಧಿಕರಣದ ನ್ಯಾಯಕ್ಕೂ ಭೇದವಿರುವುದರಿಂದ ಆಕಾಶಾಧಿಕರಣವನ್ನು ಪ್ರತ್ಯೇಕವಾಗಿ ಹೇಳಲೇಬೇಕು. 'ಆಕಾಶ ಇತಿ ಹೋವಾಚ' ಎಂಬ ಛಾಂದೋಗ್ಯದ ವಾಕ್ಯವನ್ನು ಸಮನ್ವಯ ಮಾಡುವುದರಿಂದ ಅನೇಕ ಪ್ರಯೋಜನಗಳಿರುತ್ತವೆ. 'ಆಕಾಶ ಇತಿ ಹೋವಾಚ' ಎಂಬ ಪ್ರಕರಣದಲ್ಲಿನ ಅನೇಕಗುಣಗಳ ಸಮನ್ವಯವು ಸಿದ್ಧವಾಗುತ್ತದೆ.

ತೈತ್ತಿರೀಯದ ಸಮನ್ವಯದಿಂದಲೇ ಛಾಂದೋಗ್ಯದ ಸಮನ್ವಯವು ಸಿದ್ಧವಾಗಿ ಬಹುಗುಣಸಮನ್ವಯದ ಲಾಭವನ್ನು ಹೊಂದಬಹುದಲ್ಲವೇ? ಎಂದು ಪ್ರಶ್ನಿಸಬಾರದು. ಏಕೆಂದರೆ ಛಾಂದೋಗ್ಯದ ಪ್ರಕರಣವು ಬ್ರಹ್ಮಪರವೆಂದು ಇದುವರೆಗೂ ನಿರ್ಣಯವಾಗಿಲ್ಲ. ಒಂದು ವೇಳೆ ಬ್ರಹ್ಮಪರವೆಂದು ನಿರ್ಣಯವಾಗಿದ್ದಲ್ಲಿ ತೈತ್ತಿರೀಯವಾಕ್ಯದ ಸಮನ್ವಯದಿಂದ ಇದರ ಸಮನ್ವಯವು ನಿರ್ಣಯವಾಯಿತೆಂದು ಹೇಳಬಹುದಿತ್ತು.

ಆದ್ದರಿಂದ 'ಆಕಾಶ ಇತಿ ಹೋವಾಚ' ಎಂಬ ವಾಕ್ಯದ ಸಮನ್ವಯದಿಂದ ನಿರ್ಣೀತ-ಬ್ರಹ್ಮಪ್ರಕರಣದಲ್ಲಿರುವ ಯದೇಷವಾಕ್ಯದ ಸಮನ್ವಯದಂತೆ 'ಯದೇಷ' ಎಂಬ ವಾಕ್ಯದ ಸಮನ್ವಯ-ದಿಂದ ನಿರ್ಣೀತವಲ್ಲದ ಛಾಂದೋಗ್ಯದ ಬ್ರಹ್ಮಪ್ರಕರಣದಲ್ಲಿರುವ 'ಆಕಾಶ ಇತಿ ಹೋವಾಚ' ಎಂಬ ವಾಕ್ಯದ ಸಮನ್ವಯವು ಸಿದ್ಧವಾಗುವುದಿಲ್ಲ. ಮತ್ತು ಭೂತಲಯಾಧಿಷ್ಠಾನತ್ವವೇ ಮೊದಲಾದ ಪೂರ್ವಪಕ್ಷಯುಕ್ತಿಗಳು ಸಾವಕಾಶಗಳಾಗಿವೆ. ಪರೋವರೀಯಸ್ತ್ವ ಅನಂತತ್ವ, ಮೊದಲಾದ ಸಿದ್ಧಾಂತಯುಕ್ತಿಗಳು ನಿರವಕಾಶಗಳಾಗಿವೆ ಎಂದು ಈ ಅಧಿಕರಣದ ಸಿದ್ಧಾಂತದಲ್ಲಿ ಹೇಳುತ್ತಾರೆ. ಈ ಪೂರ್ವಪಕ್ಷಯುಕ್ತಿಗಳಾಗಲೀ, ಸಿದ್ಧಾಂತಯುಕ್ತಿಗಳಾಗಲೀ 'ಯದೇಷ' ಎಂಬ ತೈತ್ತಿರೀಯಪ್ರಕರಣದಲ್ಲಿ ಕಾಣಿಸುವುದೇ ಇಲ್ಲ. ಆದರೆ ಛಾಂದೋಗ್ಯದಲ್ಲಿ ಸ್ಪಷ್ಟವಾಗಿ ಹೇಳಲಾಗಿದೆ. ಈ ಕಾರಣದಿಂದಲೂ ಛಾಂದೋಗ್ಯದ ಉಲ್ಲೇಖ ಇಲ್ಲಿ ಅತ್ಯಂತ ಪ್ರಸುತ್ತ ವೆನಿಸುತ್ತದೆ.

ಪ್ರಶ್ನೆ - ಆನಂದಮಯಾಧಿಕರಣವನ್ನು ಆಕ್ಷೇಪಿಸಿ ಆಕಾಶಾಧಿಕರಣಕ್ಕೆ ಸಾರ್ಥಕ್ಯವನ್ನು ಹೇಳಿದಿರಿ. ಹಾಗಾದರೆ ಜನ್ಮಾಧಿಕರಣವನ್ನೂ ಸಹ ಆಕ್ಷೇಪಿಸಿ ಸಾರ್ಥಕ್ಯ ಹೇಳಬಹುದಲ್ಲವೇ? ಏಕೆಂದರೆ 'ಆಕಾಶ ಇತಿ ಹೋವಾಚ' ಎಂಬ ಛಾಂದೋಗ್ಯದ ಆಕಾಶಶಬ್ದವು ಅನ್ಯಪರವಾದಾಗ 'ಆಕಾಶಾದೇವ ಸಮುತ್ಪದ್ಯಂತೇ' ಎಂಬ ಅದೇ ಪ್ರಕರಣದಲ್ಲಿ ಶ್ರುತವಾದ ಜಗತ್ಕಾರಣತ್ವವು ಅನ್ಯಪರವೇ ಆಗಬೇಕು. ಆದ್ದರಿಂದ ಜನ್ಮಾಧಿಕರಣದ ಸಿದ್ಧಾಂತವು ಕೂಡುವುದಿಲ್ಲ ಎಂಬ ಆಕ್ಷೇಪಕ್ಕೆ ಆಕಾಶಾಧಿಕರಣದಲ್ಲಿ ಉತ್ತರಿಸುತ್ತಿದ್ದಾರೆಂದು ಹೇಳಬಹುದಲ್ಲವೇ?

ಉತ್ತರ - ಹಾಗೆ ಹೇಳಲಾಗದು. 'ಸಮುತ್ಪದ್ಯಂತೇ' ಎಂಬ ಮಾತಿನಿಂದ ಉಪಾದಾನಕಾರಣತ್ವ-ವನ್ನು ತಿಳಿಯಬಹುದು. ಆದರೆ ಜನ್ಮಾಧಿಕರಣದಲ್ಲಿ ನಿಮಿತ್ತಕಾರಣತ್ವವನ್ನು ಭಗವಂತನಲ್ಲಿ ಸಮರ್ಥಿಸಲಾಗಿದೆ. ಅದನ್ನು ಆಕ್ಷೇಪಿಸಲು ಸಾಧ್ಯವಿಲ್ಲ. ಮತ್ತು ಆನಂದಮಯಾಧಿಕರಣವನ್ನು ಆಕ್ಷೇಪ ಮಾಡದೇ ಇದ್ದರೆ ಅಂತರಧಿಕರಣ, ಪ್ರಾಣಾಧಿಕರಣಗಳ ಮಧ್ಯದಲ್ಲಿ ಆಕಾಶಾಧಿಕರಣದ ಉಲ್ಲೇಖವು ತಪ್ಪಾಗುತ್ತದೆ. ಆ ಎರಡು ಅಧಿಕರಣಗಳು ಆನಂದಮಯಾಧಿಕರಣವನ್ನು ಆಕ್ಷೇಪಿಸಿ ಹೊರಟಿರುವಾಗ ಅವುಗಳ ಮಧ್ಯದಲ್ಲಿ ಇದರ ಉಲ್ಲೇಖವು ಅಪ್ರಸ್ತುತವಾಗುವುದಿಲ್ಲವೇ? ಈ ಎರಡು ಕಾರಣಗಳಿಂದ ಆನಂದಮಯಾಧಿಕರಣವನ್ನು ಆಕ್ಷೇಪಿಸಿಯೇ ಆಕಾಶಾಧಿಕರಣಕ್ಕೆ ಸಾರ್ಥಕ್ಯ-ವನ್ನು ಭಾಷ್ಯಟೀಕೆಗಳಲ್ಲಿ ಹೇಳಿದ್ದಾರೆ.

### ಕಠಿಣಪದಾರ್ಥ

ಸಾಕ್ಷಾತ್ = 'ಇತಿ ಹೋವಾಚ' ಎಂಬ ತೈತ್ತಿರೀಯದ ಮಾತನ್ನೇ ಆಕ್ಷೇಪಿಸಿ ಉತ್ತರಿಸುವುದು ನೇರಮಾರ್ಗ, ಆನಂದಮಯಪ್ರಕರಣೇ ಶ್ರವಣೇಽಪಿ = 'ಯೋ ವೇದ ನಿಹಿತಂ ಗುಹಾಯಾಮ್' ಎಂದು ಆನಂದಮಯಪ್ರಕರಣದಲ್ಲಿ ಗುಹಾನಿಹಿತತ್ವದಿಂದ ತಿಳಿಯಲ್ಪಟ್ಟಿದ್ದರೂ, ತಸ್ಯ = ಅಂತಃಸ್ಥತ್ವವು ; ತತ್ಪ್ರಕರಣೇ = ಆನಂದಮಯಪ್ರಕರಣದಲ್ಲಿ;

ವಾಕ್ಯಾಂತರೋದಾಹರಣಮ್ = ಅಂತಃಸ್ಥತ್ವಪ್ರಕರಣ ಬಿಟ್ಟು ಬೇರೆ ಪ್ರಕರಣದಲ್ಲಿರುವ ವಾಕ್ಯದ ಉದಾಹರಣೆಯು, ವೈಷಮ್ಯಂ = ಅಂತಃಸ್ಥತ್ವಾಧಿಕರಣಕ್ಕೂ ಆಕಾಶಾಧಿಕರಣಕ್ಕೂ ವ್ಯತ್ಯಾಸವಿದೆ; ನ್ಯಾಯಭೇದೇನ = ಆನಂದಮಯಾಧಿಕರಣದಲ್ಲಿ ಬ್ರಹ್ಮಶಬ್ದದ ಅಭ್ಯಾಸವು ನ್ಯಾಯವಾಗಿದೆ. ಆಕಾಶಾಧಿಕರಣದಲ್ಲಿ ಅಚೇತನಸ್ವಭಾವವೂ ಭಗವದಧೀನವಾಗಿದೆ ಎಂಬ ನ್ಯಾಯಭೇದವಿರುವುದರಿಂದ; ವಾಕ್ಯಾಂತರಸ್ಯಾಪಿ = ಛಾಂದೋಗ್ಯದ ಮಾತಿಗೂ; ಏತತ್‌ಪ್ರಕರಣಸ್ಥ = ಛಾಂದೋಗ್ಯಪ್ರಕರಣದಲ್ಲಿರುವ; ಏತತ್ ಸಮನ್ವಯೇನ = ಛಾಂದೋಗ್ಯದಲ್ಲಿರುವ ಆಕಾಶಶಬ್ದದ ಸಮನ್ವಯದಿಂದ, ನಿರ್ಣೀತಬ್ರಹ್ಮಪ್ರಕರಣಸ್ಥ = ನಿರ್ಣಯವಾದ ತೈತ್ತಿರೀಯದಲ್ಲಿರುವ ಬ್ರಹ್ಮಪ್ರಕರಣದಲ್ಲಿರುವ; ಉಪಾದಾನತ್ವೇಪ್ಯುಪಪತ್ತೇಃ = ನಿಮಿತ್ತಕಾರಣದಂತೆ ಉಪಾದಾನಕಾರಣ ಎಂಬರ್ಥವನ್ನು ಹೇಳುತ್ತದೆ.

**प्रकाशः** – ननु यदि ‘‘‘को ह्येवान्यात्’’ इत्यत्रत्याकाशस्य विष्णुत्वसिद्धिः फलं तर्हि नाधिकरणान्तरमारम्भणीयम्, ‘‘विकारशब्दान्नेति चेत्’’ इतिवत् हेतुव्यपदेशसूत्रानन्तरं ‘‘आकाशशब्दान्नेति चेत्तल्लिङ्गात्’’ इति गुणसूत्रेणैव विष्णोरेवाकाशशब्दवाच्यत्वोक्तिसम्भवात् । अधिकरणान्तरत्वेऽपि ‘‘को ह्येवान्यात्’’ इत्यस्यैव विषयत्वसम्भवे वाक्यान्तरोदाहरणस्यायुक्तत्वादित्याशङ्क्ते – **ननु यद्येवमिति ॥**

**साक्षादिति ॥** ‘‘इति होवाच’’ इत्यस्य भूतपरत्वात्तत्तुल्यन्यायतया अयमपि भूतपरस्यादित्यस्य वक्त्रत्वादिति भावः । इयं शङ्काऽन्तरधिकरण एव कुतो न कृता, किं विशिष्यात्रेत्यत आह – **अन्तस्स्थत्वस्य त्विति ॥**

यद्यपि ‘‘यो वेद निहितं गुहायां’’ इति मन्त्रवर्ण एवान्तस्स्थत्वं श्रुतं, तथाऽपि मन्त्रवर्णोक्तस्यैवात्रानन्दमयशब्देनोच्यमानत्वात् ‘तत्प्रकरणे श्रवणेपि’ इत्युक्तम् । यत् तावदुक्तमधिकरणान्तरं न कार्यमिति, तत् तावन्नेत्याह – **तथाऽपीति ॥ न्यायेति ॥** अचेतनस्वभावस्यापि भगवदधीनत्व प्रतिपादनरूपन्यायभेदेनेत्यर्थः । अधिकरणान्तरत्वेऽपि वाक्यान्तरमयुक्तमित्येतन्निरस्यति – **आकाश इतीति ॥ एतदिति ॥** ‘‘इति होवाच’’ इत्येतत्परामृश्यते ।

नन्वस्त्वधिकरणान्तरं वाक्यान्तरोदाहरणं च । तथाऽपि न भाष्योक्तं प्रयोजनं, ‘‘सर्वाणि ह वा इमानि भूतान्याकाशादेव’’ इति साक्षाच्छ्रुतकारणत्वस्य पूर्वपक्षे भूतनिष्ठत्वेन जन्मादिसूत्राक्षेपस्य ऋजुत्वादित्याशङ्क्याह – **अत्रेति ॥ उपादानत्वेऽपीति ॥**

ಆದ್ದರಿಂದ 'ಆಕಾಶ ಇತಿ ಹೋವಾಚ' ಎಂಬ ವಾಕ್ಯದ ಸಮನ್ವಯದಿಂದ ನಿರ್ಣೀತ-ಬ್ರಹ್ಮಪ್ರಕರಣದಲ್ಲಿರುವ ಯದೇಷವಾಕ್ಯದ ಸಮನ್ವಯದಂತೆ 'ಯದೇಷ' ಎಂಬ ವಾಕ್ಯದ ಸಮನ್ವಯ-ದಿಂದ ನಿರ್ಣೀತವಲ್ಲದ ಛಾಂದೋಗ್ಯದ ಬ್ರಹ್ಮಪ್ರಕರಣದಲ್ಲಿರುವ 'ಆಕಾಶ ಇತಿ ಹೋವಾಚ' ಎಂಬ ವಾಕ್ಯದ ಸಮನ್ವಯವು ಸಿದ್ಧವಾಗುವುದಿಲ್ಲ. ಮತ್ತು ಭೂತಲಯಾಧಿಷ್ಠಾನತ್ವವೇ ಮೊದಲಾದ ಪೂರ್ವಪಕ್ಷಯುಕ್ತಿಗಳು ಸಾವಕಾಶಗಳಾಗಿವೆ. ಪರೋವರೀಯಸ್ತ್ವ ಅನಂತತ್ವ, ಮೊದಲಾದ ಸಿದ್ಧಾಂತಯುಕ್ತಿಗಳು ನಿರವಕಾಶಗಳಾಗಿವೆ ಎಂದು ಈ ಅಧಿಕರಣದ ಸಿದ್ಧಾಂತದಲ್ಲಿ ಹೇಳುತ್ತಾರೆ. ಈ ಪೂರ್ವಪಕ್ಷಯುಕ್ತಿಗಳಾಗಲೀ, ಸಿದ್ಧಾಂತಯುಕ್ತಿಗಳಾಗಲೀ 'ಯದೇಷ' ಎಂಬ ತೈತ್ತಿರೀಯಪ್ರಕರಣದಲ್ಲಿ ಕಾಣಿಸುವುದೇ ಇಲ್ಲ. ಆದರೆ ಛಾಂದೋಗ್ಯದಲ್ಲಿ ಸ್ಪಷ್ಟವಾಗಿ ಹೇಳಲಾಗಿದೆ. ಈ ಕಾರಣದಿಂದಲೂ ಛಾಂದೋಗ್ಯದ ಉಲ್ಲೇಖ ಇಲ್ಲಿ ಅತ್ಯಂತ ಪ್ರಸುತ್ತ ವೆನಿಸುತ್ತದೆ.

ಪ್ರಶ್ನೆ - ಆನಂದಮಯಾಧಿಕರಣವನ್ನು ಆಕ್ಷೇಪಿಸಿ ಆಕಾಶಾಧಿಕರಣಕ್ಕೆ ಸಾರ್ಥಕ್ಯವನ್ನು ಹೇಳಿದಿರಿ. ಹಾಗಾದರೆ ಜನ್ಮಾಧಿಕರಣವನ್ನೂ ಸಹ ಆಕ್ಷೇಪಿಸಿ ಸಾರ್ಥಕ್ಯ ಹೇಳಬಹುದಲ್ಲವೇ? ಏಕೆಂದರೆ 'ಆಕಾಶ ಇತಿ ಹೋವಾಚ' ಎಂಬ ಛಾಂದೋಗ್ಯದ ಆಕಾಶಶಬ್ದವು ಅನ್ಯಪರವಾದಾಗ 'ಆಕಾಶಾದೇವ ಸಮುತ್ಪದ್ಯಂತೇ' ಎಂಬ ಅದೇ ಪ್ರಕರಣದಲ್ಲಿ ಶ್ರುತವಾದ ಜಗತ್ಕಾರಣತ್ವವು ಅನ್ಯಪರವೇ ಆಗಬೇಕು. ಆದ್ದರಿಂದ ಜನ್ಮಾಧಿಕರಣದ ಸಿದ್ಧಾಂತವು ಕೂಡುವುದಿಲ್ಲ ಎಂಬ ಆಕ್ಷೇಪಕ್ಕೆ ಆಕಾಶಾಧಿಕರಣದಲ್ಲಿ ಉತ್ತರಿಸುತ್ತಿದ್ದಾರೆಂದು ಹೇಳಬಹುದಲ್ಲವೇ?

ಉತ್ತರ - ಹಾಗೆ ಹೇಳಲಾಗದು. 'ಸಮುತ್ಪದ್ಯಂತೇ' ಎಂಬ ಮಾತಿನಿಂದ ಉಪಾದಾನಕಾರಣತ್ವ-ವನ್ನು ತಿಳಿಯಬಹುದು. ಆದರೆ ಜನ್ಮಾಧಿಕರಣದಲ್ಲಿ ನಿಮಿತ್ತಕಾರಣತ್ವವನ್ನು ಭಗವಂತನಲ್ಲಿ ಸಮರ್ಥಿಸಲಾಗಿದೆ. ಅದನ್ನು ಆಕ್ಷೇಪಿಸಲು ಸಾಧ್ಯವಿಲ್ಲ. ಮತ್ತು ಆನಂದಮಯಾಧಿಕರಣವನ್ನು ಆಕ್ಷೇಪ ಮಾಡದೇ ಇದ್ದರೆ ಅಂತರಧಿಕರಣ, ಪ್ರಾಣಾಧಿಕರಣಗಳ ಮಧ್ಯದಲ್ಲಿ ಆಕಾಶಾಧಿಕರಣದ ಉಲ್ಲೇಖವು ತಪ್ಪಾಗುತ್ತದೆ. ಆ ಎರಡು ಅಧಿಕರಣಗಳು ಆನಂದಮಯಾಧಿಕರಣವನ್ನು ಆಕ್ಷೇಪಿಸಿ ಹೊರಟಿರುವಾಗ ಅವುಗಳ ಮಧ್ಯದಲ್ಲಿ ಇದರ ಉಲ್ಲೇಖವು ಅಪ್ರಸ್ತುತವಾಗುವುದಿಲ್ಲವೇ? ಈ ಎರಡು ಕಾರಣಗಳಿಂದ ಆನಂದಮಯಾಧಿಕರಣವನ್ನು ಆಕ್ಷೇಪಿಸಿಯೇ ಆಕಾಶಾಧಿಕರಣಕ್ಕೆ ಸಾರ್ಥಕ್ಯ-ವನ್ನು ಭಾಷ್ಯಟೀಕೆಗಳಲ್ಲಿ ಹೇಳಿದ್ದಾರೆ.

### ಕಠಿಣಪದಾರ್ಥ

ಸಾಕ್ಷಾತ್ = 'ಇತಿ ಹೋವಾಚ' ಎಂಬ ತೈತ್ತಿರೀಯದ ಮಾತನ್ನೇ ಆಕ್ಷೇಪಿಸಿ ಉತ್ತರಿಸುವುದು ನೇರಮಾರ್ಗ, ಆನಂದಮಯಪ್ರಕರಣೇ ಶ್ರವಣೇಽಪಿ = 'ಯೋ ವೇದ ನಿಹಿತಂ ಗುಹಾಯಾಮ್' ಎಂದು ಆನಂದಮಯಪ್ರಕರಣದಲ್ಲಿ ಗುಹಾನಿಹಿತತ್ವದಿಂದ ತಿಳಿಯಲ್ಪಟ್ಟದ್ದರೂ, ತಸ್ಯ = ಅಂತಃಸ್ಥತ್ವವು ; ತತ್ಪ್ರಕರಣೇ = ಆನಂದಮಯಪ್ರಕರಣದಲ್ಲಿ;

ವಾಕ್ಯಾಂತರೋದಾಹರಣಮ್ = ಅಂತಃಸ್ಥತ್ವಪ್ರಕರಣ ಬಿಟ್ಟು ಬೇರೆ ಪ್ರಕರಣದಲ್ಲಿರುವ ವಾಕ್ಯದ ಉದಾಹರಣೆಯು, ವೈಷಮ್ಯಂ = ಅಂತಃಸ್ಥತ್ವಾಧಿಕರಣಕ್ಕೂ ಆಕಾಶಾಧಿಕರಣಕ್ಕೂ ವೈಷಮ್ಯವಿದೆ; ನ್ಯಾಯಭೇದೇನ = ಆನಂದಮಯಾಧಿಕರಣದಲ್ಲಿ ಬ್ರಹ್ಮಶಬ್ದದ ಅಭ್ಯಾಸವು ನ್ಯಾಯವಾಗಿದೆ. ಆಕಾಶಾಧಿಕರಣದಲ್ಲಿ ಆಚೇತನಸ್ವಭಾವವೂ ಭಗವದಧೀನವಾಗಿದೆ ಎಂಬ ನ್ಯಾಯಭೇದವಿರುವುದರಿಂದ; ವಾಕ್ಯಾಂತರಸ್ಯಾಪಿ = ಛಾಂದೋಗ್ಯದ ಮಾತಿಗೂ; ಏತತ್ಪ್ರಕರಣಸ್ಥ = ಛಾಂದೋಗ್ಯಪ್ರಕರಣದಲ್ಲಿರುವ; ಏತತ್ ಸಮನ್ವಯೇನ = ಛಾಂದೋಗ್ಯದಲ್ಲಿರುವ ಆಕಾಶಶಬ್ದದ ಸಮನ್ವಯದಿಂದ, ನಿರ್ಣೀತಬ್ರಹ್ಮಪ್ರಕರಣಸ್ಥ = ನಿರ್ಣಯವಾದ ತೈತ್ತಿರೀಯದಲ್ಲಿರುವ ಬ್ರಹ್ಮಪ್ರಕರಣದಲ್ಲಿರುವ; ಉಪಾದಾನತ್ವೇಪ್ಯುಪಪತ್ತೇಃ = ನಿಮಿತ್ತಕಾರಣದಂತೆ ಉಪಾದಾನಕಾರಣ ಎಂಬರ್ಥವನ್ನು ಹೇಳುತ್ತದೆ.

**ಪ್ರಕಾಶಃ** – ನನು ಯದಿ ‘‘‘को ह्येवान्यात्’’ इत्यत्रत्याकाशस्य विष्णुत्वसिद्धिः फलं तर्हि नाधिकरणान्तरमारम्भणीयम्, ‘‘विकारशब्दान्नेति चेत्’’ इतिवत् हेतुव्यपदेशसूत्रानन्तरं ‘‘आकाशशब्दान्नेति चेत्तल्लिङ्गात्’’ इति गुणसूत्रेणैव विष्णोरेवाकाशशब्दवाच्यत्वोक्तिसम्भवात् । अधिकरणान्तरत्वेऽपि ‘‘को ह्येवान्यात्’’ इत्यस्यैव विषयत्वसम्भवे वाक्यान्तरोदाहरणस्यायुक्तत्वादित्याशङ्कते – ननु यद्येवमिति ॥

**साक्षादिति** ॥ ‘‘इति होवाच’’ इत्यस्य भूतपरत्वात्तत्तुल्यन्यायतया अयमपि भूतपरस्यादित्यस्य वक्तृत्वादिति भावः । इयं शङ्काऽन्तरधिकरण एव कुतो न कृता, किं विशिष्यात्रेत्यत आह – **अन्तस्स्थत्वस्य त्विति** ॥

यद्यपि ‘‘यो वेद निहितं गुहायां’’ इति मन्त्रवर्ण एवान्तस्स्थत्वं श्रुतं, तथाऽपि मन्त्रवर्णोक्तस्यैवात्रानन्दमयशब्देनोच्यमानत्वात् ‘तत्प्रकरणे श्रवणेपि’ इत्युक्तम् । यत् तावदुक्तमधिकरणान्तरं न कार्यमिति, तत् तावन्नेत्याह – **तथाऽपीति** ॥ **न्यायेति** ॥ अचेतनस्वभावस्यापि भगवदधीनत्व प्रतिपादनरूपन्यायभेदेनेत्यर्थः । अधिकरणान्तरत्वेऽपि वाक्यान्तरमयुक्तमित्येतन्निरस्यति – **आकाश इतीति** ॥ **एतदिति** ॥ ‘‘इति होवाच’’ इत्येतत्परामृश्यते ।

नन्वस्त्वधिकरणान्तरं वाक्यान्तरोदाहरणं च । तथाऽपि न भाष्योक्तं प्रयोजनं, ‘‘सर्वाणि ह वा इमानि भूतान्याकाशादेव’’ इति साक्षाच्छ्रुतकारणत्वस्य पूर्वपक्षे भूतनिष्ठत्वेन जन्मादिसूत्राक्षेपस्य ऋजुत्वादित्याशङ्क्याह – **अत्रेति** ॥ **उपादानत्वेऽपीति** ॥

**ನನ್ವಪಾದಾನತ್ವೋಕ್ತೌ ಕಾ ಸಙ್ಗತಿಃ? ಇತಿ ಚೇತ್, ಅಯಂ ಭಾವಃ – ''ಅಸ್ಯ ಲೋಕಸ್ಯ ಕಾ ಗತಿಃ'' ಇತಿ ಪೃಥಿವೀಗತಿಪ್ರಶ್ನಸ್ಯ 'ಆಕಾಶಃ' ಇತ್ಯುತ್ತರಮಭಿಧಾಯ, ಕಥಮೇತತ್, ಅಪಾಂ ಕಾರ್ಯಂ ಹಿ ಪೃಥಿವೀ, ತತ್ರೈವ ಚ ಲೀಯತ ಇತಿ ತಾಸಾಮೇವ ಪೃಥಿವೀಗತಿತ್ವೋಪಪತ್ತೇರಿತ್ಯಾಶಙ್ಕ್ಯ, ಮೈವಂ, ಮೂಲೋಪಾದಾನತ್ವಾತ್ ಇತ್ಯಾಹ – ಸರ್ವಾಣಿ ಹ ವಾ ಇಮಾನಿ ಭೂತಾನ್ಯಾಕಾಶಾದೇವ ಸಮುತ್ಪದ್ಯನ್ತ ಇತಿ ।**

**ನಚ ತರ್ಹಿ ''ಆತ್ಮನ ಆಕಾಶಃ'' ಇತಿ ಶ್ರುತೇರಾತ್ಮಾ ವಾಚ್ಯ ಇತಿ ಶಙ್ಕ್ಯಮ್, ಭೂತವಿಷಯವಿಚಾರೇ ವಿಯತ ಏವ ವಕ್ತವ್ಯತ್ವಾತ್ । ನ ಚಾಕಾಶಸ್ಯಾಪಿ ಭೂತತ್ವಾತ್ 'ಸರ್ವಾಣಿ' ಇತಿ ವಿರುದ್ಧಂ, ''ಇದಂ ಸರ್ವಮಸೃಜತ'' ಇತಿವತ್ ತದ್ವ್ಯತಿರಿಕ್ತಗ್ರಹಣೋಪಪತ್ತೇಃ ।**

**ನಚ 'ಏವ' ಇತ್ಯವಧಾರಣಾನುಪಪತ್ತಿಃ, ಪರಮ್ಪರಯಾ ಭೂತೋಪಾದಾನಸ್ಯಾಪರಸ್ಯಾಭಾವಾದಿತಿ । ಹೇತ್ವನ್ತರಮಾಹ – ಆನನ್ದಮಯೇತಿ ॥ ತತ್ರಾಕ್ಷೇಪಾನ್ತರಾಭಾವಾದಿತಿ ಭಾವಃ ।**

ವಿವರಣೆ - 'ಕೋ ಹ್ಯೇವಾನ್ಯಾತ್ ಕಃ ಪ್ರಾಣ್ಯಾತ್ ಯದೇಷ ಆಕಾಶ ಆನಂದೋ ನ ಸ್ಯಾತ್' ಎಂಬ ತೈತ್ತಿರೀಯದಲ್ಲಿರುವ ಆಕಾಶಶಬ್ದದ ಸಮನ್ವಯವನ್ನು ವಿಷ್ಣುವಿನಲ್ಲಿ ಮಾಡುವುದು ಈ ಅಧಿಕರಣದ ಪ್ರಯೋಜನ ಎಂದು ಸಮರ್ಥಿಸಿದಿರಿ; ಹಾಗಾದಲ್ಲಿ, ಪ್ರತ್ಯೇಕವಾಗಿ ಆಕಾಶಾಧಿಕರಣವನ್ನು ಆರಂಭಿಸುವುದೇ ಬೇಡ. ಆನಂದಮಯಾಧಿಕರಣದಲ್ಲಿಯೇ ಇದನ್ನು ಸೇರಿಸಬಹುದು. ಆನಂದಮಯಶಬ್ದವು ವಿಷ್ಣುಪರವೆನ್ನಲು 'ವಿಕಾರಶಬ್ದಾನ್ನೇತಿ ಚೇನ್ನ ಪ್ರಾಚುರ್ಯಾತ್' ಎಂಬ ಸೂತ್ರವು ಹೊರಟಂತೆ 'ತದ್ಧೇತುವ್ಯಪದೇಶಾಚ್ಚ' ಎಂಬ ಸೂತ್ರದ ಆನಂತರ 'ಆಕಾಶಶಬ್ದಾನ್ನೇತಿ ಚೇತ್ ತಲ್ಲಿಂಗಾತ್' ಎಂಬ ಗುಣಸೂತ್ರವನ್ನು ಉಲ್ಲೇಖಿಸಿದರೆ ಸಾಕು. ಇದರಿಂದಲೇ ಆಕಾಶಶಬ್ದ ಪ್ರತಿಪಾದ್ಯನಾದವನು ವಿಷ್ಣುಮಾತ್ರನೆಂದು ಸಮರ್ಥಿಸಿದಂತಾಗುತ್ತದೆ. ಪ್ರತ್ಯೇಕಾಧಿಕರಣದ ಅವಶ್ಯಕತೆ ಇರುವುದಿಲ್ಲ. ಪ್ರತ್ಯೇಕವಾದ ಅಧಿಕರಣವನ್ನು ಆರಂಭಿಸುವುದಾದರೂ ಸಹ 'ಕೋ ಹ್ಯೇವಾನ್ಯಾತ್ ಕಃ ಪ್ರಾಣ್ಯಾತ್' ಎಂಬ ತೈತ್ತಿರೀಯವಾಕ್ಯವಷ್ಟೇ ವಿಷಯವಾಕ್ಯವಾಗುತ್ತದೆ. ಛಾಂದೋಗ್ಯದ ಉದಾಹರಣೆಯು ಕೂಡುವುದಿಲ್ಲ. ಈ ಎರಡೂ ಆಶಂಕೆಗಳನ್ನು 'ನನು ಯದ್ಯೇವಂ' ಎಂಬ ಗ್ರಂಥದಿಂದ ಮಾಡುತ್ತಿದ್ದಾರೆ.

'ಆಕಾಶ ಇತಿ ಹೋವಾಚ' ಎಂಬ ಛಾಂದೋಗ್ಯವು ಭೂತಪರವಾದರೆ ಸಮಾನನ್ಯಾಯದಿಂದ ತೈತ್ತಿರೀಯದ 'ಕೋ ಹ್ಯೇವಾನ್ಯಾತ್' ಎಂಬ ವಾಕ್ಯವೂ ಸಹ ಭೂತಪರವಾಗುತ್ತದೆಂದು ಹೇಳುವುದು ವಕ್ರಮಾರ್ಗ. ಇದಕ್ಕಿಂತ ತೈತ್ತಿರೀಯದ ವಾಕ್ಯವು ಭೂತಪರವಾಗಿದೆಯೆಂದು ಪೂರ್ವಪಕ್ಷ ಮಾಡಿ ಬ್ರಹ್ಮಲಿಂಗಗಳಿರುವುದರಿಂದ ಭೂತಪರವಲ್ಲವೆಂದು ಸಿದ್ಧಾಂತ ಮಾಡುವುದು ನೇರಮಾರ್ಗ.

ವಾಕ್ಯಾಂತರವನ್ನು ಅಪೇಕ್ಷಿಸದೆ ವಿಷಯವಾಕ್ಯದಿಂದಷ್ಟೇ ಆಕ್ಷೇಪ ಸಿದ್ಧಾಂತಗಳನ್ನು ಮಾಡಿದರೆ ಆಂತರಧಿಕರಣದಲ್ಲಿಯೂ ಸಹ ಹೀಗೆಯೇ ಮಾಡಿರಿ. ಆಕಾಶಾಧಿಕರಣದಲ್ಲಿ ವಾಕ್ಯಾಂತರವನ್ನು ಉದಾಹರಿಸುವುದು ಬೇಡವೆನ್ನುತ್ತೀರಿ. ಆದರೆ ಆಂತರಧಿಕರಣದಲ್ಲಿ ವಾಕ್ಯಾಂತರವನ್ನು ಉದಾಹರಿಸಿಯೇ

ಪೂರ್ವಪಕ್ಷ ಮಾಡಿದ್ದಿರಿ. ಈ ಒಂದೊಂದು ಅಧಿಕರಣಗಳಲ್ಲಿ ಒಂದೊಂದು ವಿಧವಾದ ನಿಮ್ಮ ಧೋರಣೆಗಳನ್ನು ಶಿಷ್ಯರು ಹೇಗೆ ಅರ್ಥೈಸಿಕೊಳ್ಳಬೇಕು? ಎಂಬ ಶಂಕೆಗೆ 'ಅಂತಃಸ್ಥತ್ವಸ್ಯ ತು' ಎಂಬ ವಾಕ್ಯದಿಂದ ಉತ್ತರಿಸುತ್ತಿದ್ದಾರೆ.

'ಯೋ ವೇದ ನಿಹಿತಂ ಗುಹಾಯಾಮ್' ಎಂಬ ಮಂತ್ರವರ್ಣದಲ್ಲಿರುವ ಗುಹಾನಿಹಿತತ್ವವು ಅಂತಃಸ್ಥತ್ವವನ್ನು ಹೇಳುತ್ತಿದೆ. ಆದ್ದರಿಂದ ಆನಂದಮಯಪ್ರಕರಣದಲ್ಲಿಯೇ ಅಂತಸ್ಥತ್ವವು ಶ್ರುತವಾಗಿದೆ. ಆದರೂ ಸಹ ಪೂರ್ವಪಕ್ಷಪ್ರಾಪಕವಾದ ಅನ್ಯತ್ರಪ್ರಸಿದ್ಧ್ಯಾದಿಗಳು ಇರುವುದಿಲ್ಲ. ಈ ಮಂತ್ರವರ್ಣದಿಂದ ಆನಂದಮಯನು ಪ್ರತಿಪಾದ್ಯನಾಗಿದ್ದಾನೆ. ಅವನು ಅಂತಃಸ್ಥನೂ ಆಗಿದ್ದಾನೆ ಎಂದಷ್ಟೇ ತಿಳಿಯುತ್ತದೆ. ಈ ವಿಚಾರವನ್ನು 'ತತ್ ಪ್ರಕರಣೇ ಶ್ರವಣೇಪಿ' ಎಂಬ ಮಾತಿನಿಂದ ಗ್ರಂಥಕಾರರು ತಿಳಿಸಿದ್ದಾರೆ.

ಆನಂದಮಯಾಧಿಕರಣದಲ್ಲಿಯೇ ಆಕಾಶಾಧಿಕರಣದ ಪ್ರಮೇಯವನ್ನು ಸಾಧಿಸಲು ಬರುವಾಗ ಪ್ರತ್ಯೇಕ ಅಧಿಕರಣದ ರಚನೆಯು ಅನಾವಶ್ಯಕವೆಂದು ಹಿಂದೆ ಆಕ್ಷೇಪಿಸಿದ್ದರು. ಅದನ್ನು 'ತಥಾಪಿ' ಇತ್ಯಾದಿ ಗ್ರಂಥದಿಂದ ನಿರಾಕರಿಸುತ್ತಿದ್ದಾರೆ. ಪ್ರತ್ಯೇಕ ಅಧಿಕರಣವು ವ್ಯರ್ಥವಾಗದಿರಬಹುದು. ಆದರೆ ಛಾಂದೋಗ್ಯವಾಕ್ಯದ ಉದಾಹರಣೆಯು ಅನಾವಶ್ಯಕವೆಂಬ ಮತ್ತೊಂದು ಆಕ್ಷೇಪಕ್ಕೆ 'ಆಕಾಶ ಇತಿ' ಎಂಬ ಗ್ರಂಥದಿಂದ ಉತ್ತರಿಸುತ್ತಿದ್ದಾರೆ. ಅಧಿಕರಣಾಂತರವು ಮತ್ತು ವಾಕ್ಯಾಂತರ ಉದಾಹರಣೆಯು ಸಾರ್ಥಕವಾಗಲಿ, ಆದರೆ ಛಾಷ್ಯದಲ್ಲಿ ಹೇಳಿದ ಪ್ರಯೋಜನವನ್ನು ಈ ಅಧಿಕರಣಕ್ಕೆ ಹೇಳಲಾಗದು. 'ಸರ್ವಾಣಿ ಹ ವಾ ಇಮಾನಿ ಭೂತಾನಿ ಆಕಾಶಾದೇವ ಸಮುತ್ಪದ್ಯಂತೇ' ಎಂಬ ಶ್ರುತಿಯಲ್ಲಿ ಸಾಕ್ಷಾತ್ತಾಗಿ ಭೂತಕಾರಣತ್ವವು ಆಕಾಶದಲ್ಲಿ ಕೇಳಿಸುತ್ತಿದೆ. ಆದ್ದರಿಂದ ಜನ್ಮಾಧಿಕರಣದಲ್ಲಿ ನಿರ್ಣಯಿಸಿದ ಜಗತ್ಕಾರಣತ್ವವು ಬ್ರಹ್ಮನಿಗೆ ಕೂಡುವುದಿಲ್ಲ. ಹೀಗೆ ಜನ್ಮಾಧಿಕರಣವನ್ನು ಈ ಅಧಿಕರಣದಲ್ಲಿ ಉತ್ತರಿಸಲಾಗುತ್ತಿದೆಯೆಂದು ನೇರವಾಗಿ ಹೇಳಲು ಬರುತ್ತದೆ. ಆದರೆ ಛಾಷ್ಯದಲ್ಲಿ ಆನಂದಮಯಾಧಿಕರಣದ ಆಕ್ಷೇಪಕ್ಕೆ ಈ ಅಧಿಕರಣದಲ್ಲಿ ಉತ್ತರಿಸುತ್ತಿದ್ದಾರೆಂದು ಪ್ರಯೋಜನವನ್ನು ಹೇಳಿದ್ದಾರೆ. ಇದು ಸರಿಯಲ್ಲವೆಂಬ ಆಕ್ಷೇಪಕ್ಕೆ 'ಅತ್ರ ಯದ್ಯಪಿ' ಇತ್ಯಾದಿ ಗ್ರಂಥದಿಂದ ಉತ್ತರಿಸುತ್ತಿದ್ದಾರೆ.

ಜನ್ಮಾಧಿಕರಣದಲ್ಲಿ ನಿಮಿತ್ತಕಾರಣತ್ವವನ್ನು ಹೇಳಿದ್ದಾರೆ. ಆದರೆ 'ಸಮುತ್ಪದ್ಯಂತೇ' ಎಂಬ ಶ್ರುತಿಯು ನಿಮಿತ್ತಕಾರಣದಂತೆ ಉಪಾದಾನಕಾರಣವನ್ನು ಹೇಳಬಹುದು. ಹಾಗಾಗಿ ಜನ್ಮಾಧಿಕರಣದಿಂದ ಸಂಗತಿ ಹೇಳುವುದು ದುರ್ಲಭವಾಗಿದೆ.

ಪ್ರಶ್ನೆ - 'ಆಸ್ಯ ಲೋಕಸ್ಯ ಕಾ ಗತಿಃ?' ಎಂದು ಪೃಥಿವೀಗತಿಯ ಪ್ರಶ್ನೆಗೆ. 'ಆಕಾಶ ಇತಿ ಹೋವಾಚ' ಎಂದು ಉತ್ತರಿಸಿದ ಮೇಲೆ ಪುನಃ ಇದು ಹೇಗೆ? ಎಂಬ ಪ್ರಶ್ನೆ ಬರುತ್ತದೆ. ಪೃಥಿವೀಯು ಜಲದ ಕಾರ್ಯವಾಗಿದೆ. ಜಲದಲ್ಲೇ ಲೀನವಾಗುತ್ತದೆ. ಆದ್ದರಿಂದ ಪೃಥಿವೀಗೆ ಗತಿ ಜಲವಾಗುತ್ತದೆ ಹೊರತು ಆಕಾಶವಾಗುವುದಿಲ್ಲವಲ್ಲ?

ಉತ್ತರ - ಎಲ್ಲ ತತ್ವಗಳಿಗೂ ಸಹ ಮೂಲ ಉಪಾದಾನವಾದದ್ದು ಆಕಾಶ. ಪ್ರಕೃತ ಪೃಥಿವೀಗೆ ಮೂಲೋಪಾದಾನವಾದದ್ದು ಯಾವುದು? ಎಂದೇ ಪ್ರಶ್ನೆಯ ಆಂತರ್ಯ. ಈ ಪ್ರಶ್ನೆಗೆ 'ಸರ್ವಾಣಿ ಹ ವಾ

ಇಮಾನಿ ಭೂತಾನಿ ಆಕಾಶಾದೇವ ಸಮುತ್ಪದ್ಯಂತೇ' (ಪೃಥಿವೀ ಮೊದಲಾದ ಸಕಲಭೂತಪದಾರ್ಥಗಳು ಆಕಾಶದಿಂದಲೇ ಹುಟ್ಟುತ್ತವೆ) ಎಂಬ ವಾಕ್ಯವು ಸಮಂಜಸವಾದ ಉತ್ತರವನ್ನು ನೀಡುತ್ತಿದೆ.

ಪ್ರಶ್ನೆ - ಆಕಾಶಕಾರಣತ್ವಕ್ಕಿಂತ ಮೊದಲು ಅಪ್ ಕಾರಣತ್ವವನ್ನು ಶ್ರುತಿ ಹೇಳುತ್ತಿದೆ. 'ಆತ್ಮನಃ ಆಕಾಶಃ ಸಂಭೂತಃ' (ಆತ್ಮನಿಂದ ಆಕಾಶವು ಹುಟ್ಟಿತು) ಈ ಶ್ರುತಿಯಿಂದ ಸಕಲಭೂತಪದಾರ್ಥಗಳಿಗೆ ಆತ್ಮನೇ ಮೂಲ ಉಪಾದಾನಕಾರಣನೆಂದು ತಿಳಿಯುವಾಗ ಆಕಾಶವು ಮೂಲ ಉಪಾದಾನವೆಂದು ಹೇಗೆ ಹೇಳುತ್ತೀರಿ?

ಉತ್ತರ - ಆತ್ಮನು ಚೇತನನಾಗಿದ್ದಾನೆ. ಪೃಥಿವೀ ಮೊದಲಾದವುಗಳು ಅಚೇತನವಾಗಿವೆ. ಅಚೇತನ ಪದಾರ್ಥಗಳಿಗೆ ಮತ್ತೊಂದು ಅಚೇತನ ಪದಾರ್ಥವೇ ಉಪಾದಾನಕಾರಣವಾಗಬೇಕು. ಆಕಾಶವು ಅಚೇತನವಾದ ಭೂತಪದಾರ್ಥವಾದ್ದರಿಂದ ಪೃಥಿವ್ಯಾದಿಗಳಿಗೆ ಉಪಾದಾನಕಾರಣವಾಗುತ್ತದೆ ಆತ್ಮನಾಗಲಾರ.

ಪ್ರಶ್ನೆ - 'ಆಕಾಶಾದೇವ' ಎಂದು ಜಲಾದಿಗಳನ್ನು ವ್ಯಾವೃತ್ತಿ ಮಾಡುವ ಏವಕಾರವು ತಪ್ಪಲ್ಲವೇ? ಪೃಥಿವೀಗೆ ಆಕಾಶವು ಉಪಾದಾನಕಾರಣವಾದಂತೆ ಜಲವೂ ಉಪಾದಾನಕಾರಣವಾಗುತ್ತದೆ. ಆದರೆ ಶ್ರುತಿಯು ಏವಕಾರದಿಂದ ಆಕಾಶ ಮಾತ್ರ ಉಪಾದಾನಕಾರಣವೆಂದು ಹೇಳುವುದು ಹೇಗೆ ಸರಿ.

ಉತ್ತರ - ಜಲವು ಕೇವಲ ಪೃಥಿವೀಗೆ ಉಪಾದಾನಕಾರಣವಾಗಿದೆ. ಆದರೆ ಆಕಾಶವು ಸಕಲಭೂತಪದಾರ್ಥಗಳಿಗೂ ಉಪಾದಾನಕಾರಣವಾಗಿದೆ. ಪರಂಪರಯಾ ಅಥವಾ ಸಾಕ್ಷಾತ್ತಾಗಿ ಸಕಲಭೂತಪದಾರ್ಥಗಳಿಗೆ ಉಪಾದಾನಕಾರಣವಾದದ್ದು ಆಕಾಶ ಮಾತ್ರವೇ ಹೊರತು ಉಳಿದ ಯಾವ ಪದಾರ್ಥಗಳೂ ಆಗುವುದಿಲ್ಲ. ಈ ವಿಷಯವನ್ನು ಏವಕಾರವು ನಿಖರವಾಗಿ ಹೇಳುತ್ತಿದೆ.

ಆನಂದಮಯಾಧಿಕರಣದಿಂದಲೇ ಆಕ್ಷೇಪಮಾಡಿಕೊಳ್ಳಬೇಕು ಎನ್ನುವುದಕ್ಕೆ ಇನ್ನೊಂದು ಕಾರಣವನ್ನು 'ಆನಂದಮಯಾಧಿಕರಣಾನಾಕ್ಷೇಪೇ' ಎಂಬ ಗ್ರಂಥದಿಂದ ವಿವರಿಸುತ್ತಿದ್ದಾರೆ. ಅಂತರಧಿಕರಣಕ್ಯಾಗಲೀ, ಪ್ರಾಣಾಧಿಕರಣಕ್ಯಾಗಲೀ ಆನಂದಮಯಾಧಿಕರಣದಿಂದಲೇ ಆಕ್ಷೇಪ ಮಾಡಿಕೊಳ್ಳಬೇಕು. ಬೇರೆ ಆಕ್ಷೇಪವು ಇರುವುದಿಲ್ಲ. ಹೀಗೆ ಅನಿವಾರ್ಯವಾಗಿ ಆನಂದಮಯಾಧಿಕರಣದ ಅನಂತರವೇ ಅಂತರಧಿಕರಣ ಪ್ರಾಣಾಧಿಕರಣಗಳನ್ನು ನಿವೇಶಿಸುವುದು ಉಚಿತ. ಈ ಎರಡು ಅಧಿಕರಣಗಳ ಮಧ್ಯದಲ್ಲಿ ಆನಂದಮಯಾಧಿಕರಣವನ್ನು ನಿವೇಶಿಸಿದ್ದರಿಂದ ಈ ಅಧಿಕರಣಕ್ಕೂ ಆನಂದಮಯಾಧಿಕರಣದಿಂದಲೇ ಆಕ್ಷೇಪಿಸಿ ಸಾರ್ಥಕ್ಯವನ್ನು ಹೇಳಬೇಕೆಂದು ಮನದಟ್ಟಾಗುತ್ತದೆ.

**ಗುರುರಾಜೀಯಮ್ – ನನ್ವಾನನ್ದಮಯಾಧಿಕರಣಾಕ್ಷೇಪೇಣಾಸ್ತು ವಿಚಾರಸಾಫಲ್ಯಮ್ । ತಥಾऽಪಿ ವಾಕ್ಯಾನ್ತರೋದಾಹರಣಮಯುಕ್ತಂ ಆನನ್ದಮಯಪ್ರಕರಣಸ್ಥೇ ಯದೇಷ ಇತ್ಯತ್ರೈವ ಪೂರ್ವಪಕ್ಷಸಿದ್ಧಾನ್ತೌ ಕರ್ತವ್ಯೌ । ಲಾಘವಾತ್ ಇತಿ ಶಙ್ಕತೇ – ನನ್ವಿತಿ ॥ ತರ್ಹ್ಯಾನನ್ದಮಯಪ್ರಕರಣೇऽತಸ್ಥತ್ವಸ್ಯ ಶ್ರುತತ್ವಾದನ್ತರಧಿಕರಣೇಪಿ ವಾಕ್ಯಾನ್ತರಂ ನೋದಾಹರ್ತವ್ಯಮ್ । ಅತ ಆಹ – ಅನ್ತಸ್ಥತ್ವಸ್ಯೇತಿ ॥ ತಸ್ಯ ಸ್ವತೋನ್ಯತ್ರ ಪ್ರಸಿದ್ಧ್ಯಭಾವಾದಿತಿ ॥**

यद्यपि द्युभ्वाद्यधिकरणे 'एवं सर्वगतत्वादीनि ब्रह्मण्ययुक्तत्वादेव अन्यत्र प्रसिद्धानि' इति वक्ष्यमाणत्वात् गुहानिहितत्वरूपान्तस्स्थत्वस्यापि स्वत एवान्यत्र प्रसिद्धिर्वक्तुं शक्या, तथापि अथवान्यत्र प्रसिद्धेरन्यत्र प्रसिद्धान्य-साहित्यसापेक्षत्वात् इति तत्पूर्वोक्तपक्षानुसारेणेदमित्यविरोधः ॥

**तत्प्रकरणेऽभावेनेति** ॥ यद्यपि 'ते ये शतं प्रजापतेरानन्दाः ते ये शतं बृहस्पतेरानन्दाः' इतीन्द्रादिश्रुतिरप्यस्ति तथाप्यस्य उपहंसारस्थाया उपक्रमस्थ-गुहानिहितत्वेन मध्यस्थसृष्ट्यन्नमयादिप्रकरणैरव्यवधानात् प्रकृते चान्तस्थप्रश्न-प्रकरण एवेन्द्रादिश्रुतिश्रवणाद्वैषम्यमित्याशयेनोक्तं **तत्प्रकरण इति** ॥ किं वा बाधकपरिहारत्वादस्य विकारशब्दादिवत् अधिकरणान्तर्भाव इत्याशयः, किं वा भिन्नाधिकरणत्वेऽपि वाक्यं तदेवोदाहार्यमिति विकल्पं मनसि निधाय क्रमेण निराह – **सत्यमित्यादिना** ॥

नन्वेवं तर्हि पुनर्वैषम्यापत्त्योक्ताक्षेपानुपपत्तितादवस्थ्यमिति चेन्न । तथा पूर्वपक्षफलस्य जिज्ञासाक्षेपपर्यन्तस्य सिद्धये विद्यमानस्याप्यस्य विषयत्वस्य पूर्वपक्षिणा विवक्षणोपपत्तेः, यद्वा भूतलयाद्यधिष्ठानत्वादिभूतलिङ्गोपेतस्यापि 'इति होवाच' इति वाक्यस्य ब्रह्मलिङ्गाद् ब्रह्मपरत्वे भूतलिङ्गविधुरस्य यदेष इति वाक्यस्य ब्रह्मपरत्वं किमु वाच्यम्? इति सिद्धान्ते कैमुत्येनैव सिद्धान्त-फलसिद्धेरभिप्रेतत्वात् तदनुसारेण पूर्वपक्षेपि परोवरीयस्त्वादिब्रह्मलिङ्गोपेतस्यापि भूतपरत्वे भूतप्रसिद्धिबाधकब्रह्मलिङ्गविधुरस्य भूतपरत्वं कैमुत्येनैव स्यादित्या-क्षेपाभिप्रायः । **न्यायभेदेनेति** ॥ आनन्दमयाधिकरणे 'गुणिसामान्यवाचिनां गुण -वाचिनां च समन्वयः आकाशाधिकरणे चाधिभूतगताशेषशब्दसमन्वयः प्रति-पाद्यते' इति न्यायभेदेन – इत्यर्थः ।

यद्वा 'अचेतनस्वभावस्यापि भगवदधीनत्वम्' इत्येतदधिकरणन्यायेन – इत्यर्थः । ननु यदेष इति वाक्यसमन्वयेनैव 'इति होवाच' इत्यस्यापि समन्वयसिद्धौ तद्वाक्यस्थगुणलाभस्यापि सम्भवेन वाक्यान्तरोदाहरणमयुक्तम् । अन्यथा यदेष इत्यस्य समन्वयार्थमप्यधिकरणान्तरमारभ्येत, इत्यत आह – **तथैतदिति** ॥

**ननु यदेष इति वाक्यसमन्वय उक्ते एतत्समानन्यायानामपि समन्वयः सेत्स्यतीति निर्णीतत्वानिर्णीतत्वे अप्रयोजके इति न वाक्यान्तरमुदाहर्तव्यम् इत्यत आह – तथा सिद्धान्तिनेति ॥** ननु चात्र जन्माधिकरणाक्षेपस्यापि सम्भवेन प्रयोजनस्यान्यथाप्युपपत्तेर्नैतद्भाष्यं चिन्तासाफल्यपरम् । अन्यथा अन्तरधिकरणेपि 'अदृश्येऽनात्म्ये' इत्यादिभाष्यस्य चिन्तासाफल्यपरत्वापत्त्या सङ्गतिप्रदर्शकत्वाभावापत्तेः । तत्र तथाभ्युपगमे चात्रापि तथैव स्यात्, इत्यत आह – **अत्र यद्यपीत्यादिना ॥**

**ननु 'समुत्पद्यन्ते' इत्यस्य निमित्तकारणपरत्वेप्युपपत्तेः जन्मादिसूत्रोक्त-कर्तृत्वाक्षेपः स्यादेव, इत्यत आह – आनन्दमयाधिकरणानाक्षेप इति ॥**

## ಸಾರ

ಆಕಾಶಾಧಿಕರಣಕ್ಕೆ ಹೀಗೆ ಆನಂದಮಯಾಧಿಕರಣದಿಂದ ಸಂಗತಿಯನ್ನು ಹೇಳುವುದಾದರೆ ಈ ಆಧಿಕರಣವೇ ವ್ಯರ್ಥ. ಹೇಗೆಂದರೆ ಇಲ್ಲಿ ಆಕಾಶಶಬ್ದವು ವಿಷ್ಣು ವಾಚಕ ಎಂದು ಸಾಧಿಸುತ್ತಾರೆ. ಆದರೆ ಆದನ್ನು ಹೇಳಲು ಪ್ರತ್ಯೇಕ ಅಧಿಕರಣದ ಅವಶ್ಯಕತೆಯಿಲ್ಲ. ಆನಂದಮಯ ಎಂಬಲ್ಲಿ ಮಯಟ್‌ಪ್ರತ್ಯಯವು ವಿಕಾರಾರ್ಥಕ ಎಂದು ಆಕ್ಷೇಪ ಮಾಡಿ ಸಮಾಧಾನ ಮಾಡುವ ಸೂತ್ರವನ್ನು ಆನಂದಮಯಾಧಿಕರಣದಲ್ಲಿ ಸೇರಿಸಿದಂತೆ ಆನಂದಮಯಪ್ರಕರಣದಲ್ಲಿ ಆಕಾಶಶಬ್ದವಿರುವುದರಿಂದ ವಿಷ್ಣುವಿನಲ್ಲಿ ಎಂದು ಆಕ್ಷೇಪ ಮಾಡಿ ಸಮಾಧಾನ ಪಡಿಸುವ ಸೂತ್ರವನ್ನು ಅಲ್ಲಿಯೇ ಸೇರಿಸಬಹುದಾದ್ದರಿಂದ ಪ್ರತ್ಯೇಕ ಅಧಿಕರಣದ ಅವಶ್ಯಕತೆಯಿಲ್ಲ.

ಹೀಗೆ ಹೇಳುವುದಾದರೆ ಆನಂದಮಯನಲ್ಲಿ ಶ್ರುತವಾದ ಅಂತಸ್ಥತ್ವವನ್ನಿಟ್ಟುಕೊಂಡು ಅಂತಸ್ಥತ್ವಾಧಿಕರಣವನ್ನು ಪ್ರಾರಂಭ ಮಾಡಿದ್ದಾರೆ. ಅಲ್ಲಿಯೂ ಹೀಗೆಯೇ ಹೇಳಿ ಆನಂದಮಯಾಧಿಕರಣದಲ್ಲಿಯೇ ಆ ಸೂತ್ರವನ್ನು ಸೇರಿಸಬಹುದು ಎಂದು ಆಕ್ಷೇಪ ಮಾಡಬಹುದು. ಅಲ್ಲಿ ಆಕ್ಷೇಪಿಸದೆ ಇಲ್ಲಿ ಏಕೆ ಹೇಳುತ್ತೀರಿ? ಎಂದರೆ ಅಂತಸ್ಥತ್ವವು ಆನಂದಮಯನಲ್ಲಿ ಶ್ರುತವಾದರೂ, ಆಕಾಶಶಬ್ದವು ಹೇಗೆ ವಿಷ್ಣುವನ್ನು ಬಿಟ್ಟು ಬೇರೆಯವರಲ್ಲಿ (ಭೂತಾಕಾಶ) ಪ್ರಸಿದ್ಧವಾಗಿದೆಯೋ ಹಾಗೆ ಅಂತಸ್ಥತ್ವವೂ ಶ್ರುತವಾಗಿಲ್ಲ.

ಮತ್ತು ಅನ್ಯತ್ರಪ್ರಸಿದ್ಧವಾದ ಇಂದ್ರಾದಿ ಶ್ರುತಿಗಳ ಸಹಕಾರವೂ ಆದಕ್ಕಿಲ್ಲ. ಹಾಗಾಗಿ ಆದೇ ವಾಕ್ಯದಲ್ಲಿ ಈ ರೀತಿ ಪೂರ್ವಪಕ್ಷ ಮಾಡಲು ಅವಕಾಶವಿಲ್ಲವಾದ್ದರಿಂದ ಬೇರೆ ವಾಕ್ಯವನ್ನು ಇಟ್ಟುಕೊಂಡು ಪ್ರತ್ಯೇಕ ಅಧಿಕರಣರಚನೆ ಮಾಡುವುದು ಅನಿವಾರ್ಯ. ಆದರೆ ಆಕಾಶಶಬ್ದವಾದರೂ ಆನಂದಮಯನಲ್ಲಿ ಶ್ರುತವಾಗಿದೆ. ಮತ್ತು ಅನ್ಯತ್ರ ಭೂತಾಕಾಶದಲ್ಲಿ ಪ್ರಸಿದ್ಧವಾಗಿದೆ. ಆದ್ದರಿಂದ ಆದೇ ವಾಕ್ಯದಲ್ಲಿ ಪೂರ್ವಪಕ್ಷ ಮಾಡಲು ಬರುವುದರಿಂದ ಪ್ರತ್ಯೇಕಾಧಿಕರಣದ ಅವಶ್ಯಕತೆಯಿಲ್ಲ ಎಂದು ಹೇಳಿದ್ದು ಎನ್ನಬಾರದು. ಆಕಾಶಶಬ್ದವನ್ನು ಸಮನ್ವಯ ಮಾಡಲು ಪ್ರತ್ಯೇಕವಾಗಿ ಅಧಿಕರಣರಚನೆ ಮಾಡುವುದಕ್ಕೆ ಅನೇಕ ಕಾರಣಗಳಿವೆ.

೧) ಆನಂದಮಯ ಎಂಬಲ್ಲಿ ಮಯಟ್ ಶಬ್ದವು ಹೇಗೆ ಆನಂದಮಯಶಬ್ದದ ಒಂದು ಭಾಗವಾಗಿದೆಯೋ ಹಾಗೆಯೇ ಆಕಾಶಶಬ್ದವು ಆನಂದಮಯಶಬ್ದದ ಒಂದು ಭಾಗವಾಗಿ ಆನಂದಮಯ ಶಬ್ದದಲ್ಲಿ ಸೇರಿಲ್ಲವಾದ್ದರಿಂದ ಆದೇ ನ್ಯಾಯದಿಂದ ಸಮನ್ವಯ ಮಾಡಲು ಬರುವುದಿಲ್ಲ. ಆದ್ದರಿಂದ ಮತ್ತೊಂದು ಯುಕ್ತಿಯನ್ನು ಹೇಳಬೇಕಾಗುತ್ತದಾದ್ದರಿಂದ ಬೇರೆ ಅಧಿಕರಣವನ್ನು ರಚಿಸಲಾಗಿದೆ.

೨) ಬೇರೆ ಅಧಿಕರಣದಿಂದ ಸಮನ್ವಯ ಮಾಡಲು ಹೊರಟಾಗ ''ಆಕಾಶ ಇತಿ ಹೋವಾಚ'' ಎನ್ನುವ ಮತ್ತೊಂದು ವಾಕ್ಯವನ್ನು ವಿಷಯವಾಕ್ಯವೆಂದಿಟ್ಟುಕೊಂಡಾಗ. 'ಯದೇಷ ಆಕಾಶ' ಎಂದು ಆನಂದಮಯನಲ್ಲಿ ಶ್ರುತವಾದ ವಾಕ್ಯದಲ್ಲಿರದ ಅನೇಕ ಗುಣಗಳು ಮತ್ತೊಂದು ವಾಕ್ಯದಲ್ಲಿರುವುದರಿಂದ ಅವುಗಳೂ ಕೂಡ ಈ ಆಕಾಶನಲ್ಲಿ ಹೇಳಿದಂತಾಗುತ್ತದೆ.

೩) ಮತ್ತು 'ಆಕಾಶ ಇತಿ ಹೋವಾಚ' ಎಂಬ ಬ್ರಹ್ಮ ಪ್ರಕರಣವೆಂದು ನಿರ್ಧರಿಸಲ್ಪಟ್ಟ ವಾಕ್ಯದಲ್ಲಿರುವ ಯುಕ್ತಿಗಳು 'ಯದೇಷ ಆಕಾಶ' ಎನ್ನುವ ವಾಕ್ಯದಲ್ಲಿ ಇಲ್ಲವಾದ್ದರಿಂದ ಅದಕ್ಕೋಸ್ಕರ ಆನಂದಮಯ ಪ್ರಕರಣದಲ್ಲಿರುವ ವಿಷಯ ವಾಕ್ಯವನ್ನು ಬಿಟ್ಟು ಮತ್ತೊಂದನ್ನು ಹೇಳಬೇಕಾಗುತ್ತದೆ.

ವಸ್ತುತಃ ಇಲ್ಲಿ ಆನಂದಮಯಾಧಿಕರಣದಿಂದ ಸಂಗತಿ ತೋರಿಸಿದಂತೆ. ''ಆಕಾಶಾದೇವ ಸಮುತ್ಪದ್ಯಂತೇ'' ಎಂದಿರುವುದರಿಂದ ಜನ್ಮಾದ್ಯಧಿಕರಣದಿಂದಲೂ ಸಂಗತಿಯನ್ನೂ ಹೇಳಬಹುದು. ಆದರೆ ಇಲ್ಲಿ ಶ್ರುತವಾದ ಕಾರಣತ್ವವನ್ನು ನಿಮಿತ್ತಕಾರಣ ಎನ್ನದೆ ಉಪಾದಾನಕಾರಣ ಎಂದು ಕೂಡಿಸಬಹುದಾದ್ದರಿಂದ ಆನಂದಮಯಾಧಿಕರಣದಿಂದಲೇ ಸಂಗತಿಯನ್ನು ಹೇಳಿದ್ದಾರೆ. ಆನಂದಮಯಾಧಿಕರಣದಿಂದ ಸಂಗತಿಯನ್ನು ಹೇಳದಿದ್ದರೆ ಅದರಿಂದ ಸಂಗತಿ ಇರುವ ಅಂತಸ್ಥತ್ವಾಧಿಕರಣದ ನಂತರ ಈ ಸೂತ್ರವಿರುವುದು ಸಂಗತವಾಗುವುದಿಲ್ಲವಾದ್ದರಿಂದ ಆನಂದಮಯಾಧಿಕರಣದಿಂದ ಸಂಗತಿ ಹೇಳಿದ್ದಾರೆ.

---

## ವಿದ್ವಾಂಸಾಭಾಸರ ನಿರಾಕರಣೆ

**ತಾತ್ಪರ್ಯಚನ್ದ್ರಿಕಾ –**

**केचित्तु – 'अचेतनस्यैव पूर्वपक्षिणाऽऽकाशत्वेन शङ्क्यमानत्वात् जन्मादिसूत्रोक्तकर्तृत्वानाक्षेपः' इत्याहुः ।**

**तन्न, अचेतनस्याप्यभिमानिद्वारा आनन्दमयत्ववत् कर्तृत्वस्याप्युपपत्तेः ।**

**अन्ये तु – 'सन्निकृष्टानन्दमयाक्षेपसम्भवे विप्रकृष्टजन्मादिसूत्राक्षेपो न युक्तः' इत्याहुः । तन्न, टीकायामानन्दमयाक्षेपस्य व्यवहितजिज्ञासाक्षेपपर्यन्तत्वोक्तेः ।**

ಅನುವಾದ - ಇಲ್ಲಿ ಕೆಲವರು ಜನ್ಮಾದಿಸೂತ್ರದಿಂದ ಭಾಷ್ಯಕಾರರು ಆಕ್ಷೇಪವನ್ನು ಏಕೆ ಮಾಡಲಿಲ್ಲ? ಎಂದರೆ ಈ ಅಧಿಕರಣದ ಪೂರ್ವಪಕ್ಷಿಯು ಅಚೇತನವಾದ ಆಕಾಶವೇ

ಸಕಲಕಾರಣವೆಂದು ಆಕ್ಷೇಪಿಸುತ್ತಿದ್ದಾನೆ. ಆದರೆ ಜನ್ಮಾದಿಸೂತ್ರದಲ್ಲಿ ನಿರ್ಣಯಿಸಿದ ಕರ್ತೃತ್ವವು ಚೇತನನಿಷ್ಠವಾಗಿದೆ. ಆದನ್ನು ಈ ಅಧಿಕರಣದಲ್ಲಿ ಆಕ್ಷೇಪಿಸಲಾಗದು.

ನಿರಾಕರಣೆ - ಅಚೇತನಪದಾರ್ಥಕ್ಕೂ ಸಕಲಜಗತ್ಕರ್ತೃತ್ವವನ್ನು ಆಕ್ಷೇಪಿಸಬಹುದು. ಯಾವರೀತಿಯಾಗಿ ಆನಂದಮಯತ್ವವು ಅಚೇತನ ಪದಾರ್ಥದಲ್ಲಿ ಅನುಪಪನ್ನವಾದಾಗ ಅಭಿಮಾನಿಯ ವಿವಕ್ಷೆಯಿಂದ ಸಮರ್ಥಿಸಲಾಗುತ್ತದೋ, ಅದರಂತೆ ಜಡವು ಸಕಲಜಗತ್ಕಾರಣವಾಗದಿದ್ದರೂ ಅಭಿಮಾನಿಯು ಸಕಲಜಗತ್ಕಾರಣನಾಗಬಹುದು. ಹೀಗೆ ಅಭಿಮಾನಿಯ ವಿವಕ್ಷೆಯಿಂದ ಜಡಪದಾರ್ಥಕ್ಕೆ ಸಕಲಜಗತ್ಕಾರಣತ್ವ ಹೇಳುವುದು ತಪ್ಪಾಗುವುದಿಲ್ಲ.

ಇನ್ನು ಕೆಲವರು - ಹತ್ತಿರವಿರುವ ಆನಂದಮಯಾಧಿಕರಣವನ್ನೇ ಆಕ್ಷೇಪಿಸುವುದು ಸುಲಭ. ಜನ್ಮಾಧಿಕರಣವು ದೂರದಲ್ಲಿರುವುದರಿಂದ ಅದರ ಆಕ್ಷೇಪವು ಕ್ಲೇಶದಾಯಕವಾಗಿದೆ.

ನಿರಾಕರಣೆ - ಟೀಕೆಯಲ್ಲಿ ಆನಂದಮಯನನ್ನು ಆಕ್ಷೇಪಿಸಿ ಅತ್ಯಂತ ದೂರದಲ್ಲಿರುವ ಬ್ರಹ್ಮಜಿಜ್ಞಾಸೆಯು ತಪ್ಪೆಂದು ಆಕ್ಷೇಪಿಸುತ್ತಾರೆ. ಹಾಗಾಗಿ ದೂರದಲ್ಲಿರುವುದನ್ನು ಆಕ್ಷೇಪ ಮಾಡುವುದು ತಪ್ಪಾಗುವುದಿಲ್ಲ.

### ಕಠಿಣಪದಾರ್ಥ

ಕೇಚಿತ್ತು = ನಮ್ಮಲ್ಲಿನ ಕೆಲವು ವಿದ್ವಾಂಸರು; ಅಭಿಮಾನಿದ್ವಾರಾ = ಆಕಾಶವು ಅಚೇತನವಾದ್ದರಿಂದ ಆನಂದವು ಅನುಪಪನ್ನವಾಗುತ್ತದೆ, ಆದ್ದರಿಂದ ಅಭಿಮಾನಿದೇವತೆಯ ವಿವಕ್ಷೆಯಿಂದ ಆನಂದವನ್ನು ಕೂಡಿಸಬೇಕು; ಕರ್ತೃತ್ವಸ್ಯಾಪಿ = ಜಗತ್ಕಾರಣತ್ವವನ್ನು ಕೂಡ. ಉಪಪತ್ತೇಃ = ಅಭಿಮಾನಿಯ ಮೂಲಕವಾಗಿ ಕೂಡಿಸಬಹುದು; ಅನ್ಯೇ ತು = ಆಪಾತತಃ ತೋರುವ ಪರಿಹಾರ.

**प्रकाशः – उत्तानदृशां परिहारमनूद्य निरस्यति – केचित्त्विति ॥**

**अभिमानिद्वारेति ॥** ''आकाशस्याचेतनत्वेनानन्दानुपपत्तावपि अभिमानिद्वारा तदुपपत्तेः'' इति टीकोक्तेरिति भावः । आपाततः प्रतीयमानं परिहारान्तरमुद्दङ्क्य निरस्यति – **अन्ये त्विति ॥**

**टीकायामिति ॥** यद्यप्येतदधिकरणटीकायां न जिज्ञासासूत्राक्षेपपर्यन्तत्वोक्तिरस्ति तथाऽपि अन्तरधिकरणादौ तत्र तत्र टीकायां तदाक्षेपपर्यन्तत्वोक्तेरनुक्तिस्थले तदाक्षेपपर्यन्तत्वमभिप्रेतमिति भावः ।

ವಿವರಣೆ - ವಿಚಾರದ ಆಳಕ್ಕಿಳಿಯದ ಕೆಲವು ವಿದ್ವಾಂಸರ ಅಭಿಪ್ರಾಯವನ್ನು 'ಕೇಚಿತ್ತು' ಎಂದು

ಅನುವಾದ ಮಾಡಿ ನಿರಾಕರಿಸುತ್ತಿದ್ದಾರೆ. ಆಪಾತತಃ ತೋರುವ ಅರ್ಥವನ್ನು ಆಶಂಕಿಸಿ ನಿರಾಸ-ಮಾಡುತ್ತಿದ್ದಾರೆ - 'ಅನ್ಯೇತು' ಇತ್ಯಾದಿ ಗ್ರಂಥದಿಂದ.

ವಸ್ತುತಃ ಈ ಅಧಿಕರಣದ ಟೀಕೆಯಲ್ಲಿ ಜಿಜ್ಞಾಸಾಸೂತ್ರದ ಪರ್ಯಂತವಾಗಿ ಆಕ್ಷೇಪಿಸಿಲ್ಲ. ಆದರೆ ಅಂತರಧಿಕರಣವೇ ಮೊದಲಾದ ಅನೇಕ ಅಧಿಕರಣಗಳ ಟೀಕೆಯಲ್ಲಿ ಜಿಜ್ಞಾಸಾಸೂತ್ರಪರ್ಯಂತವಾಗಿ ಆಕ್ಷೇಪಿಸಿದ್ದಾರೆ. ಆಕಾಶಾಧಿಕರಣ ಮೊದಲಾದ ಅಧಿಕರಣಗಳಲ್ಲಿ ಜಿಜ್ಞಾಸಾಸೂತ್ರಪರ್ಯಂತವಾಗಿ ಆಕ್ಷೇಪ ಮಾಡದಿದ್ದರೂ ಟೀಕಾರಾಯರ ಅಭಿಪ್ರಾಯವಿದೆ ಎಂದು ತಿಳಿಯಬೇಕು.

**गुरुराजीयम् – केचित्त्विति ॥ बुद्ध्यादिमत्त्वघटितं कर्तृत्वमचेतने न सम्भवतीति भावः । एवं ह्यानन्दमयत्वमपि कथमचेतने स्यात्? न चाभिमानिद्वारा तदुपपत्तिः । कर्तृत्वस्याप्यभिमानिद्वारोपपत्तेरित्याह – तन्नेति ॥**

## ಸಾರ

ಆನಂದಮಯಾಧಿಕರಣದಿಂದ ಸಂಗತಿಯನ್ನು ತೋರಿಸಿದ್ದಕ್ಕೆ ಕೆಲವರು ಹೀಗೆ ಅಭಿಪ್ರಾಯಪಡುತ್ತಾರೆ. ಪೂರ್ವಪಕ್ಷಿಗಳು 'ಆಕಾಶ' ಎಂದರೆ ಅಚೇತನವಾದ ವಸ್ತುವೆಂದು ಅಂಗೀಕರಿಸಿರುವುದರಿಂದ ಜನ್ಮಾದಿಸೂತ್ರದಲ್ಲಿ ಹೇಳಿರುವ ಚೇತನಕರ್ತೃತ್ವದಿಂದ ಸಂಗತಿಯನ್ನು ಹೇಳಲು ಬರುವುದಿಲ್ಲವಾದ್ದರಿಂದ ಹೀಗೆ ಹೇಳಿದ್ದು ಎನ್ನುತ್ತಾರೆ. ಅದು ಸರಿಯಲ್ಲ. ಆನಂದಮಯಶಬ್ದವಾಚ್ಯವಾದದ್ದು ಅಚೇತನವಾದರೂ ಅಭಿಮಾನಿದ್ವಾರಾ ಕರ್ತೃವಾಗ-ಬಹುದು. ಆದ್ದರಿಂದ ಆಕಾಶವೂ ಕರ್ತೃವಾಗಬಹುದಾದ್ದರಿಂದ ಈ ರೀತಿ ಸಮರ್ಥನೆ ಸರಿಯಲ್ಲ.

ಮತ್ತೆ ಕೆಲವರು. ಹತ್ತಿರವಿರುವ ಆನಂದಮಯಾಧಿಕರಣದಿಂದ ಸಂಗತಿಯನ್ನು ತೋರಿಸಲು ಬರುವಾಗ ದೂರದಲ್ಲಿರುವ ಜನ್ಮಾಧಿಕರಣದಿಂದ ಸಂಗತಿಯನ್ನು ತೋರಿಸುವುದು ಸರಿಯಲ್ಲವೆನ್ನುತ್ತಾರೆ. ಆದರೆ ಇದೂ ಸರಿಯಲ್ಲ. ಟೀಕೆಯಲ್ಲಿ ಆನಂದಮಯಾಧಿಕರಣಕ್ಕೆ ಸಂಗತಿಯನ್ನು ಹೇಳುವಾಗ ದೂರಸ್ಥವಾದ ಜಿಜ್ಞಾಸಾಧಿ ಕರಣದಿಂದ ಸಂಗತಿಯನ್ನು ತೋರಿಸಿದ್ದಾರೆ. ಹಾಗಾಗಿ ಸಂಗತಿಯಿರುವುದು ಮುಖ್ಯವೇ ಹೊರತು ಸಮೀಪದ ಸಂಗತಿಯೇ ದೂರದ ಸಂಗತಿ ಎನ್ನುವುದು ಮುಖ್ಯವಲ್ಲ.

---

ಅಧಿಕರಣದ ಸಂಶಯಕೋಟಿಗಳು

### तात्पर्यचन्द्रिका

**अत्र आकाशः किं भूताकाशः किं वा ब्रह्म इति? चिन्ता । तदर्थं किमाकाश-श्रुतिप्रसिद्ध्यनुसारेण परोवरीयस्त्वादिलिङ्गं बाध्यं किं वा विपरीतम्? इति । तदर्थं**

**प्रसिद्धिबाधे श्रुतेः किं मुख्यत्वहानिः उत न? इति । तदर्थमाकाशशब्दप्रवृत्तिनिमित्तं ब्रह्मणि किं नास्ति उतास्ति? इति । तदर्थं जडस्वभावः किमीश्वरानधीनः उत तदधीनः? इति ।**

**यद्यधीनः, तदा तदधीनत्वन्यायेन ब्रह्मणि मुख्यत्वम्, अन्यथा तु न ।**

**यद्यपि निरवकाशलिङ्गैः लोकप्रसिद्धिबाध इह पूर्वत्र च अविशिष्टः विषयवाक्यभेदमात्रेण च नाधिकरणभेदः ।**

**तथाप्यधिकाशङ्कानिरासादपौनरुक्त्यम् । शङ्का च,**

**'चेष्टा हि चेतनानां या सा भवेत् तत्प्रसादतः ।**
**अचेतनस्वभावस्तु विवरादिः कथं ततः ॥'**

**इत्यनुव्याख्यानेन दर्शिता ।**

ಅನುವಾದ - ಈ ಅಧಿಕರಣದ ಸಂಶಯಕೋಟಿಗಳು -- ಶ್ರುತಿಯಲ್ಲಿರುವ ಆಕಾಶವು ಭೂತಾಕಾಶವೋ? ಅಥವಾ ಬ್ರಹ್ಮನೋ? ಎಂದು ಸಂಶಯ. ಈ ಸಂಶಯವು ಪರಿಹಾರವಾಗಬೇಕಾದರೆ ಆಕಾಶಶ್ರುತಿಯ ಪ್ರಸಿದ್ಧಿಯಿಂದ 'ಪರೋವರೀಯಸ್ತ್ವಾದಿ'ಲಿಂಗಗಳು ಬಾಧ್ಯವಾಗುತ್ತವೋ ಅಥವಾ ಪರೀವರೀಯಸ್ತ್ವಾದಿ ಲಿಂಗಗಳಿಂದ ಆಕಾಶಶ್ರುತಿಪ್ರಸಿದ್ಧಿಯು ಬಾಧ್ಯವಾಗುತ್ತದೋ? ಎಂಬ ಸಂಶಯವು ಪರಿಹಾರವಾಗಬೇಕು. ಈ ಸಂಶಯ ಪರಿಹಾರವಾಗಬೇಕಾದರೆ, ಪ್ರಸಿದ್ಧಿಬಾಧ ಹೇಳಿದರೆ ಶ್ರುತಿಗೆ ಮುಖ್ಯತ್ವ ಹಾನಿಯು ಬರುತ್ತದೋ ಅಥವಾ ಇಲ್ಲವೋ? ಎಂಬ ಸಂಶಯವು ಪರಿಹಾರವಾಗಬೇಕು. ಈ ಸಂಶಯವು ಪರಿಹಾರವಾಗಬೇಕಾದರೆ ಆಕಾಶಶಬ್ದದ ಪ್ರವೃತ್ತಿನಿಮಿತ್ತವು ಬ್ರಹ್ಮನಲ್ಲಿ ಇರುವುದಿಲ್ಲವೋ ಅಥವಾ ಇರುತ್ತದೋ? ಎಂಬ ಸಂಶಯವು ಪರಿಹಾರವಾಗಬೇಕು. ಈ ಸಂಶಯವು ಪರಿಹಾರವಾಗಬೇಕಾದರೆ ಜಡಸ್ವಭಾವವು ಈಶ್ವರನ ಅಧೀನ ಆಗಿಲ್ಲವೋ ಅಥವಾ ಆಗಿದೆಯೋ? ಎಂಬ ಸಂಶಯದ ಪರಿಹಾರವಾಗಬೇಕು.

ಒಂದು ವೇಳೆ ಈಶ್ವರನ ಅಧೀನವಾದರೆ ತದಧೀನತ್ವನ್ಯಾಯದಿಂದ ಬ್ರಹ್ಮನಲ್ಲಿ ಆಕಾಶಶಬ್ದವು ಮುಖ್ಯವಾಗುತ್ತದೆ. ಇಲ್ಲದಿದ್ದರೆ ಆಗುವುದಿಲ್ಲ. ವಸ್ತುತಸ್ತು ನಿರವಕಾಶಲಿಂಗಗಳಿಂದ ಲೋಕಪ್ರಸಿದ್ಧಿಗೆ ಬಾಧವನ್ನು ಈ ಅಧಿಕರಣದಲ್ಲಿ ಹೇಳುತ್ತಿರುವಂತೆ ಹಿಂದಿನ ಅಧಿಕರಣದಲ್ಲಿಯೂ ಹೇಳಿದ್ದಾರೆ. ಎರಡೂ ಅಧಿಕರಣಗಳ ಸಿದ್ಧಾಂತನ್ಯಾಯವು ಒಂದೇ ಆಗಿರುವುದರಿಂದ ಪ್ರತ್ಯೇಕ ಅಧಿಕರಣದ ಆವಶ್ಯಕತೆಯು ಇರುವುದಿಲ್ಲ. ಇನ್ನು ವಿಷಯವಾಕ್ಯದಲ್ಲಿ ಭೇದ ಇರುವುದರಿಂದ ಅಧಿಕರಣ-

ಭೇದವನ್ನು ಹೇಳುತ್ತೇವೆನ್ನುವುದು ಸಮಂಜಸವಾಗುವುದಿಲ್ಲ. ಆದರೂ ಸಹ ಅಭ್ಯಧಿಕಾಶಂಕೆಯನ್ನು ಈ ಅಧಿಕರಣದಲ್ಲಿ ನಿರಾಸ ಮಾಡುತ್ತಿರುವುದರಿಂದ ಹಿಂದಿನ ಅಧಿಕರಣದಿಂದ ಪುನರುಕ್ತಿಯು ಬರುವುದಿಲ್ಲ. ಅಭ್ಯಧಿಕಾಶಂಕೆಯನ್ನು ಅನುವ್ಯಾಖ್ಯಾನದಲ್ಲಿ ಹೀಗೆ ಹೇಳಿದ್ದಾರೆ.

''ಚೇಷ್ಟಾ ಹಿ ಚೇತನಾನಾಂ ಯಾ ಸಾ ಭವೇತ್ ತತ್ಪ್ರಸಾದತಃ।
ಅಚೇತನಸ್ವಭಾವಸ್ತು ವಿವರಾದಿಃ ಕಥಂ ತತಃ ॥''

(ಚೇತನರ ಚೇಷ್ಟೆಯು ಭಗವಂತನ ಪ್ರಸಾದದಿಂದ ನಡೆಯುತ್ತದೆ. ಆದ್ದರಿಂದ ಭಗವಂತನ ಅಧೀನವಾಗಿದೆ. ಆದರೆ ಅಚೇತನ ಸ್ವಭಾವವು ಅಚೇತನಸ್ವಭಾವವಾದ ವಿವರಾದಿಗಳಿಗೆ ಭಗವಂತನ ಆಧೀನ್ಯವನ್ನು ಹೇಳಲು ಹೇಗೆ ಸಾಧ್ಯ ?)

ಕಠಿಣಶಬ್ದಾರ್ಥ

ಅತ್ರ = 'ಅಸ್ಯಲೋಕಸ್ಯ' ಇತ್ಯಾದಿ ಛಾಂದೋಗ್ಯದಲ್ಲಿರುವ; ಬಾಧ್ಯಮ್ = ಸಾವಕಾಶ ಮಾಡಬೇಕು; ವಿಪರೀತಂ = ಲಿಂಗವನ್ನು ಅನುಸರಿಸಿ ಶ್ರುತಿಗೆ ಬಾಧ ಹೇಳಬೇಕು. ಪ್ರಸಿದ್ಧಿಬಾಧೇ = ಅನ್ಯಪರತ್ವವನ್ನು ಬಿಟ್ಟರೆ, ತದಧೀನತ್ವನ್ಯಾಯೇನ = ಅವರತ್ವಾದಿಗಳು ಭಗವಂತನ ಅಧೀನವಾಗಿವೆ ಎಂಬ ನ್ಯಾಯದಿಂದ; ತತ್‌ಪ್ರಸಾದತಃ = ಭಗವಂತನ ಪ್ರಸಾದದಿಂದ;

**ಪ್ರಕಾಶಃ – ಏವಂ ಸಙ್ಗತಿಮುಕ್ತ್ವಾ, ಭಾಷ್ಯಕಾರೀಯಾಂ ಪ್ರಯೋಜನೋಕ್ತಿಂ ತತ್ರ ವಾಕ್ಯಾನ್ತರೋದಾಹರಣಂ ಚ ಸಮರ್ಥ್ಯ, ಇದಾನೀಂ ವಿಷಯಸಂಶಯೌ ದರ್ಶಯತಿ – ಅತ್ರೇತಿ ॥**

ಛಾನ್ದೋಗ್ಯೇ ''ಅಸ್ಯ ಲೋಕಸ್ಯ ಕಾ ಗತಿರಿತಿ ಆಕಾಶ ಇತಿ ಹೋವಾಚ ಸರ್ವಾಣಿ ಹ ವಾ ಇಮಾನಿ ಭೂತಾನ್ಯಾಕಾಶಾದೇವ ಸಮುತ್ಪದ್ಯನ್ತೇ ಆಕಾಶಂ ಪ್ರತ್ಯಸ್ತಂ ಯನ್ತಿ ಆಕಾಶೋ ಹ್ಯೇವೈಭ್ಯೋ ಜ್ಯಾಯಾನಾಕಾಶಃ ಪರಾಯಣಮ್ । ಸ ಏಷ ಪರೋವರೀಯಾನುದ್ಗೀಥಃ ಸ ಏಷೋನನ್ತಃ'' ಇತಿ ಶ್ರುತಿ-ವಾಕ್ಯೇ ಶಾಲಾವತ್ಯೇನ ಕೃತಸ್ಯ ಪೃಥಿವೀಗತಿಪ್ರಶ್ನಸ್ಯೋಕ್ತತ್ವೇನ ಪ್ರವಾಹಣೇನೋಕ್ತಆಕಾಶೋऽತ್ರ ವಿಷಯ ಇತ್ಯರ್ಥಃ । ಉಪಲಕ್ಷಣಮೇತತ್ । 'ವಾ�य್ವಾದಿಭೂತವಾಚಿನಃ ಸರ್ವೇऽಪಿ' ಇತಿ ಧ್ಯೇಯಮ್ ।

**ಭೂತೇತಿ ॥** ಆಕಾಶಶಬ್ದಸ್ಯಾವಕಾಶಸಾಧಾರಣತ್ವೇऽಪಿ ಭೂತಪ್ರಕರಣತ್ವಾತ್ 'ಭೂತಾಕಾಶಃ' ಇತ್ಯುಕ್ತಮ್ ॥ **ಬಾಧ್ಯಮಿತಿ ॥** ಸಾವಕಾಶಯಿತವ್ಯಮಿತ್ಯರ್ಥಃ ॥ **ವಿಪರೀತಮಿತಿ ॥** ಲಿಙ್ಗಾನುಸಾರೇಣ ಶ್ರುತಿರ್ಬಾಧ್ಯೇತ್ಯರ್ಥಃ । 'ಪ್ರಸಿದ್ಧಿಬಾಧೇ' ಅನ್ಯಪರತ್ವತ್ಯಾಜನೇ ।

ಅಸ್ಪಷ್ಟಾಂಶೇ ಫಲಫಲಿಭಾವಂ ಸ್ವಯಮೇವಾಹ – **ಯದ್ಯಧೀನ ಇತಿ ॥** ಅನ್ಯತ್ರ ಸ್ಪಷ್ಟಮಿತಿ ಭಾವಃ । ತಥಾ ಹಿ – 'ಯದಿ ಜಡಸ್ವಭಾವ ಈಶ್ವರಾನಧೀನಸ್ತದಾ ಜಡಸ್ವಭಾವಂ ಪ್ರತಿ ಸ್ವಾತನ್ತ್ರ್ಯರೂಪಸ್ಯ ಜಡವಾಚಿಶಬ್ದಪ್ರವೃತ್ತಿನಿಮಿತ್ತಸ್ಯ ಬ್ರಹ್ಮಣ್ಯಭಾವಾಚ್ಛ್ರುತೇಃ ಮುಖ್ಯತ್ವಹಾನೇನ

ಬಾಧಾಯೋಗಾಚ್ಚುತ್ಯಾ ಭೂತಮ್' ಇತಿ ಪೂರ್ವಪಕ್ಷೇ ಫಲಫಲಿಭಾವಃ । 'ಯದ್ಯಧೀನಸ್ತದಾ ಸ್ವಾತನ್ತ್ರ್ಯ-ರೂಪಪ್ರವೃತ್ತಿನಿಮಿತ್ತಸ್ಯ ಸತ್ತ್ವಾತ್ ಬ್ರಹ್ಮಣಿ ಶ್ರುತೇರ್ಮುಖ್ಯತ್ವೇನ ಬಾಧಾಭಾವೇನ ವಿಷ್ಣುಃ' ಇತಿ ಸಿದ್ಧಾನ್ತೇ ಫಲಫಲಿಭಾವಃ ।

**ತದಧೀನತ್ವನ್ಯಾಯೇನೇತಿ ॥** 'ಆನುಮಾನಿಕಮಪ್ಯೇಕೇಷಾಮ್' ಇತ್ಯಧಿಕರಣೇ, 'ತದಧೀನತ್ವಾದರ್ಥವತ್' ಇತಿ ಗುಣಸೂತ್ರೇ 'ಅವ್ಯಕ್ತಾತ್ ಪುರುಷಃ ಪರಃ' ಇತ್ಯಾದೌ – ಅವ್ಯಕ್ತಾದಿಗತಾವರತ್ವಸ್ಯ ಭಗವದ್ಗತತ್ವಾಭಾವೇऽಪಿ ತಸ್ಮಿನ್ನೇವಾವರತ್ವಾದಿವಾಚಿಶಬ್ದಜಾತಮರ್ಥವತ್, ಪ್ರಧಾನಾದಿಗತ-ಪರಾವರತ್ವಾದಿಧರ್ಮಾಣಾಂ ಭಗವದಧೀನತ್ವಾತ್ – ಇತಿ ವಕ್ಷ್ಯಮಾಣನ್ಯಾಯೇನ ಜಡಸ್ವಭಾವಸ್ಯ ವಿವರತ್ವಾದೇರ್ಭಗವತ್ಯಭಾವೇऽಪಿ ತದಧೀನತ್ವೇನ ಜಡವಾಚಿಶಬ್ದವಾಚ್ಯತ್ವಂ ಭವಿಷ್ಯತೀತ್ಯರ್ಥಃ ।

ನನ್ವತ್ರಾಕಾಶಸ್ವಭಾವ ಈಶ್ವರಾಧೀನಸ್ತದನಧೀನ ಇತಿ ವಾ, ಭೂತಸ್ವಭಾವಃ ತದಧೀನಸ್ತದನಧೀನ ಇತಿ ವಾ ಚಿನ್ತನೀಯಮ್ । ನ ತು ಜಡಸ್ವಭಾವ ಇತಿ ಚೇತ್, ಅಯಂ ಭಾವಃ – ನ ಕೇವಲಂ ಭೂತವಾಚಿನ ಏವೋದಾಹರಣಂ, ಕಿಂ ತು ಸ್ವಭಾವಪ್ರವೃತ್ತಿನಿಮಿತ್ತಕಾಸ್ಸರ್ವೇऽಪಿ ಜಡವಾಚಿನಃ – ಇತಿ । ವಕ್ಷ್ಯತೇ ಚೈತದನುಪದಮ್ ।

ಅನುವ್ಯಾಖ್ಯಾನೋಕ್ತಪ್ರಮೇಯಾಶ್ರಿತಾಭ್ಯಧಿಕಾಶಙ್ಕೋಪಯುಕ್ತೇಯಂ ಚಿನ್ತಾಪರಮ್ಪರಾ ಸೂತ್ರಪ್ರತಿಜ್ಞಾಂಶ-ವ್ಯಾವರ್ತ್ಯಾ ಪ್ರದರ್ಶಿತಾ । ಹೇತ್ವಂಶವ್ಯಾವರ್ತ್ಯಭಾಷ್ಯಾದಿಸೂಚಿತಪ್ರಮಾಣಾಶ್ರಿತಾಭ್ಯಧಿಕಾಶಙ್ಕೋಪ-ಯುಕ್ತಾ ತು 'ಲಿಙ್ಗಂ ಬಾಧ್ಯಂ ಕಿಂ ವಾ ವಿಪರೀತಮ್' ಇತ್ಯನನ್ತರಂ, 'ತದರ್ಥಂ ಶ್ರುತಿಃ ಪ್ರಬಲಾ ಲಿಙ್ಗಂ ತು ದುರ್ಬಲಮುತ ವಿಪರೀತಮಿತಿ, ತದರ್ಥಂ ಶ್ರುತಿಪ್ರಾಬಲ್ಯೇ ಹೇತುರಸ್ತಿ ನ ವಾ' ಇತಿ ದ್ರಷ್ಟವ್ಯಾ ।

ಪೂರ್ವೇಣೇದಂ ಗತಾರ್ಥಮಿತ್ಯಾಕ್ಷಿಪ್ಯ, ಸಮಾಧತ್ತೇ – **ಯದ್ಯಪೀತಿ ॥** ವಿಷಯಭೇದೇನಾಧಿಕರಣಭೇದ-ಮಾಶಙ್ಕ್ಯ ನಿರಸ್ಯತಿ – **ವಿಷಯೇತಿ ॥** ತಥಾತ್ವೇ ವಿಷಯಾಣಾಮನನ್ತತ್ವೇನ ಶಾಸ್ತ್ರಾಪರ್ಯವಸಾನಂ ಸ್ಯಾದಿತಿ ಭಾವಃ । ಭಾಷ್ಯೇ ಅನುಪಲಮ್ಭಾದಾಹ – **ಶಙ್ಕಾ ಚೇತಿ ॥** 'ದರ್ಶಿತಾ' ಇತ್ಯನ್ವಯಃ ।

ವಿವರಣೆ - ಇಲ್ಲಿಯ ತನಕ ಆಕಾಶಾಧಿಕರಣಕ್ಕೆ ಸಂಗತಿಯನ್ನು, ಭಾಷ್ಯಕಾರರು ಹೇಳಿದ ಪ್ರಯೋಜನವನ್ನು, ಮತ್ತು ವಾಕ್ಯಾಂತರ ಉದಾಹರಣೆಯ ಅನಿವಾರ್ಯತೆಯನ್ನು ಸಮರ್ಥಿಸಿದ್ದಾಯಿತು. ಪ್ರಕೃತ ಆಕಾಶಾಧಿಕರಣದ ವಿಷಯ ಮತ್ತು ಸಂಶಯಗಳನ್ನು 'ಅತ್ರ' ಇತ್ಯಾದಿ ಗ್ರಂಥದಿಂದ ಹೇಳುತ್ತಿದ್ದಾರೆ. ಛಾಂದೋಗ್ಯದಲ್ಲಿ "ಅಸ್ಯ ಲೋಕಸ್ಯ ಕಾ ಗತಿರಿತಿ ಆಕಾಶ ಇತಿ ಹೋವಾಚ ಸರ್ವಾಣಿ ಹವಾ ಇಮಾನಿ ಭೂತಾನ್ಯಾಕಾಶಾದೇವ ಸಮುತ್ಪದ್ಯಂತೇ ಆಕಾಶಂ ಪ್ರತ್ಯಸ್ತಂ ಯಂತಿ ಆಕಾಶೋ ಹ್ಯೇವೈಭ್ಯೋ ಜ್ಯಾಯಾನಾಕಾಶಃ ಪರಾಯಣಂ ಸ ಏಷ ಪರೋ ವರೀಯಾನ್ ಉದ್ಗೀಥಃ ಸ ಏಷೋ ಅನಂತಃ" ಎಂದು ಕೇಳಿಸುತ್ತಿದೆ. ಇದು ಆಕಾಶಾಧಿಕರಣದ ವಿಷಯವಾಕ್ಯ.

ವಾಯುವೇ ಮೊದಲಾದ ಸಕಲಭೂತವಾಚಕಶಬ್ದಗಳನ್ನು ಸಂಶಯಕೋಟಿಯಲ್ಲಿ ಸೇರಿಸಬೇಕು. ಮೊದಲನೆಯ ಸಂಶಯದಲ್ಲಿ 'ಭೂತಾಕಾಶಃ' ಎಂಬ ಪದವನ್ನು ಪ್ರಯೋಗಿಸಿದ್ದಾರೆ. ಆಕಾಶಶಬ್ದದಿಂದ ಅವ್ಯಾಕೃತಾಕಾಶವನ್ನು ವಿವಕ್ಷಿಸಲು ಬರುತ್ತದೆ. ಭೂತಪ್ರಕರಣವು ಪ್ರಕೃತವಾದ್ದರಿಂದ 'ಭೂತಾಕಾಶಃ' ಎಂದೇ ಸಂಶಯಕೋಟಿಯಲ್ಲಿ ಹೇಳಿದ್ದಾರೆ. ಸಂಶಯಕೋಟಿಯಲ್ಲಿರುವ ಅಸ್ಪಷ್ಟಭಾಗದ ಫಲಫಲಿಭಾವವನ್ನು ಸ್ವತಃ ಗ್ರಂಥಕಾರರು ಯದ್ಯಧೀನಃ ಎಂಬ ವಾಕ್ಯದಿಂದ ತೋರಿಸಿದ್ದಾರೆ. ಉಳಿದ ಫಲಫಲಿಭಾವವು ಸ್ಪಷ್ಟವಾಗಿಯೇ ಇದೆ. ಅದು ಹೀಗೆ - ಒಂದು ವೇಳೆ ಜಡಸ್ವಭಾವವು ಈಶ್ವರನ ಅಧೀನವಾಗದಿದ್ದರೆ ಜಡಸ್ವಭಾವವನ್ನು ಕುರಿತು ಸ್ವಾತಂತ್ರ್ಯರೂಪವಾದ ಜಡವಾಚಿಯಾದ ಶಬ್ದಪ್ರವೃತ್ತಿನಿಮಿತ್ತವು ಬ್ರಹ್ಮನಲ್ಲಿ ಬರುವುದಿಲ್ಲ. ಆವಾಗ ಶ್ರುತಿಗೆ ಮುಖ್ಯತ್ವದ ಹಾನಿಯಿಂದ ಬಾಧವನ್ನು ಹೇಳಲಾಗದ ಕಾರಣ ಶ್ರುತಿಯು ಭೂತಪರವಾಗುತ್ತದೆ. ಇಷ್ಟು ಪೂರ್ವಪಕ್ಷದ ಫಲಫಲಿಭಾವ.

ಒಂದುವೇಳೆ ಜಡಸ್ವಭಾವವು ಈಶ್ವರನ ಅಧೀನವಾದಲ್ಲಿ ಸ್ವಾತಂತ್ರ್ಯರೂಪವಾದ ಪ್ರವೃತ್ತಿನಿಮಿತ್ತವು ಬ್ರಹ್ಮನಲ್ಲಿ ಬರುತ್ತದೆ. ಆವಾಗ ಶ್ರುತಿಯು ಬ್ರಹ್ಮನಲ್ಲಿ ಮುಖ್ಯವಾಗುವ ಕಾರಣ ಬಾಧವನ್ನು ಹೇಳಲಾಗದು. ಶ್ರುತಿಯಿಂದ ಮುಖ್ಯಪ್ರತಿಪಾದ್ಯನು ವಿಷ್ಣುವೇ ಆಗುತ್ತಾನೆ. ಇಷ್ಟು ಸಿದ್ಧಾಂತದ ಫಲಫಲಿಭಾವ.

ತದಧೀನತ್ವನ್ಯಾಯದಿಂದ ಜಡವಾಚಕವಾದ ಶಬ್ದಗಳಿಂದ ಭಗವಂತನು ಪ್ರತಿಪಾದ್ಯನಾಗುತ್ತಾನೆಂದು ಇಲ್ಲಿ ಗ್ರಂಥಕಾರರು 'ತದಧೀನತ್ವನ್ಯಾಯೇನ' ಇತ್ಯಾದಿಯಾಗಿ ಹೇಳಿದ್ದಾರೆ. 'ಅನುಮಾನಿಕಮಪ್ಯೇಕೇಷಾಮ್ ' ಎಂಬ ಅಧಿಕರಣದಲ್ಲಿ 'ತದಧೀನತ್ವಾದರ್ಥವತ್' ಎಂಬ ಗುಣಸೂತ್ರವಿದೆ. ಅಲ್ಲಿ 'ಅವ್ಯಕ್ತಾ' ಪುರುಷಃ ಪರಃ' ಇತ್ಯಾದಿ ವಾಕ್ಯದಿಂದ ಅವ್ಯಕ್ತಾದಿಗಳಲ್ಲಿರುವ ಅವರತ್ವವು ತಿಳಿಯುತ್ತದೆ. ಈ ಅವರತ್ವವನ್ನು ಭಗವಂತನಲ್ಲಿ ಹೇಳಲು ಹೇಗೆ ಸಾಧ್ಯ ? ಎಂಬ ಪ್ರಶ್ನೆಗೆ 'ಅಸ್ಮಿನ್ನೇವಾವರತ್ವಾದಿವಾಚಿಶಬ್ದಜಾತಮರ್ಥವತ್ । ಪ್ರಧಾನಾದಿಗತ-ಪರಾವರತ್ವಾದಿಧರ್ಮಾಣಾಂ ಭಗವದಧೀನತ್ವಾತ್ (ಭಗವಂತನಲ್ಲಿ ಅವರತ್ವಾದಿಗಳನ್ನು ಹೇಳುವ ಶಬ್ದಸಮೂಹವು ಅರ್ಥವುಳ್ಳವುಗಳು. ಪ್ರಧಾನಾದಿಗಳಲ್ಲಿರುವ ಪರಾವರತ್ವಾದಿ ಧರ್ಮಗಳು ಭಗವದಧೀನ- ವಾದ್ದರಿಂದ)' ಎಂಬ ನ್ಯಾಯದಿಂದ ಉತ್ತರಿಸಿದ್ದಾರೆ. ಪ್ರಕೃತ ಜಡಸ್ವಭಾವವಾದ ವಿವರತ್ವಾದಿಗಳನ್ನು ಭಗವಂತನಲ್ಲಿ ಹೇಳಲು ಹೇಗೆ ಸಾಧ್ಯ ? ಎಂಬ ಪ್ರಶ್ನೆ ಬಂದರೆ ಮೂರನೆಯ ಪಾದದ ಅನುಮಾನಿಕಾಧಿಕರಣದಲ್ಲಿ ಹೇಳಿರುವ ತದಧೀನತ್ವನ್ಯಾಯವನ್ನೇ ಅನುಸರಿಸಬೇಕು. ಆಕಾಶಾದಿಗಳಲ್ಲಿರುವ ವಿವರತ್ವಾದಿಗಳು ಭಗವಂತನ ಅಧೀನವಾದ್ದರಿಂದ ಜಡವಾಚಕಶಬ್ದಪ್ರತಿಪಾದ್ಯತ್ವವನ್ನು ಸುಲಭವಾಗಿ ಭಗವಂತನಲ್ಲಿ ಹೇಳಬಹುದು.

ಪ್ರಶ್ನೆ - ಇಲ್ಲಿ ಜಡಸ್ವಭಾವವು ಈಶ್ವರನ ಅಧೀನವಲ್ಲವೋ? ಅಥವಾ ಅಧೀನವೋ? ಎಂದು ಸಂಶಯ ತೋರಿಸಿದ್ದಾರೆ. ಆದರೆ ಆಕಾಶದ ಸ್ವಭಾವವು ಈಶ್ವರನ ಅಧೀನವಲ್ಲವೋ ಅಥವಾ ಹೌದೋ? ಎಂದು ಸಂಶಯ ತೋರಿಸಬೇಕಿತ್ತು. ಅಥವಾ ಭೂತಸ್ವಭಾವವು ಈಶ್ವರನ ಅಧೀನವಲ್ಲವೋ ಹೌದೋ? ಎಂದಾದರೂ ಸಂಶಯ ತೋರಿಸಬಹುದಿತ್ತು.

ಉತ್ತರ - ಈ ಅಧಿಕರಣದಲ್ಲಿ ಭೂತವಾಚಕವಾದ ಶಬ್ದಗಳ ಸಮನ್ವಯವಷ್ಟೇ ಉದ್ದೇಶವಾಗಿಲ್ಲ; ಹೊರತಾಗಿ ಸ್ವಭಾವವೇ ಪ್ರವೃತ್ತಿನಿಮಿತ್ತವಾಗಿ ಉಳ್ಳ ಜಡವಾಚಕವಾದ ಸಕಲಶಬ್ದಗಳ ಸಮನ್ವಯವು

ಉದ್ದೇಶವಾಗಿದೆ. ಈ ವಿಷಯವನ್ನು ಸದ್ಯದಲ್ಲೇ ಉಪಪಾದಿಸುವವರಿದ್ದಾರೆ. ಅನುವ್ಯಾಖ್ಯಾನದಲ್ಲಿ ಹೇಳಿರುವ ಪ್ರಮೇಯವನ್ನು ಆಶ್ರಯಿಸಿ ಗ್ರಂಥದಲ್ಲಿ ಚಿಂತಾಪರಂಪರೆಯನ್ನು ತೋರಿಸಿದ್ದಾರೆ. ಇದರಿಂದ ಹಿಂದಿನ ಅಧಿಕರಣದ ಮೇಲಿರುವ ಅಭ್ಯಧಿಕಾಶಂಕೆಯನ್ನು ತೋರಿಸಿದಂತೆಯೂ ಆಗುತ್ತದೆ. ಆದರೆ ಭಾಷ್ಯದಲ್ಲಿ ಪ್ರಮಾಣವನ್ನು ಆಶ್ರಯಿಸಿದ ಅಭ್ಯಧಿಕಾಶಂಕೆಯನ್ನು ತೋರಿಸಿದ್ದಾರೆ. ಅದಕ್ಕೆ ಉಪಯುಕ್ತವಾದ ಚಿಂತಾಪರಂಪರೆಯನ್ನು ಗ್ರಂಥಕಾರರು ತೋರಿಸಿಲ್ಲ. ಉಪಲಕ್ಷಣಯಾ ಅದನ್ನು ಸ್ವತಃ ಊಹಿಸಬೇಕು -- ಪರೋವರೀಯಸ್ತ್ವಾದಿಲಿಂಗಗಳು ಆಕಾಶಶ್ರುತಿಯಿಂದ ಬಾಧ್ಯವಾಗುತ್ತದೋ ಅಥವಾ ಆಕಾಶಶ್ರುತಿಯೇ ಪರೋವರೀಯಸ್ತ್ವಾದಿಲಿಂಗಗಳಿಂದ ಬಾಧ್ಯವಾಗುತ್ತದೋ? ಎಂಬ ಸಂಶಯದ ಅನಂತರ ಈ ಎರಡು ಸಂಶಯಗಳನ್ನು ತಿಳಿಯಬೇಕು. ಈ ಸಂಶಯವು ಪರಿಹಾರವಾಗಬೇಕೆಂದರೆ 'ಶ್ರುತಿಯು ಪ್ರಬಲ, ಲಿಂಗವು ದುರ್ಬಲ' ಎಂದು ಹೇಳಬೇಕೋ? 'ಲಿಂಗವು ಪ್ರಬಲ, ಶ್ರುತಿಯು ದುರ್ಬಲ' ಎಂದು ಹೇಳಬೇಕೋ? ಎಂಬ ಸಂಶಯವು ಪರಿಹಾರವಾಗಬೇಕು. ಈ ಸಂಶಯ ಪರಿಹಾರವಾಗಬೇಕಾದರೆ ಶ್ರುತಿಪ್ರಾಬಲ್ಯಕ್ಕೆ ಹೇತುವಿದೆಯೋ ಇಲ್ಲವೋ? ಎಂಬ ಸಂಶಯವು ಪರಿಹಾರವಾಗಬೇಕು -- ಎಂದು.

ಹಿಂದಿನ ಅಧಿಕರಣದಿಂದಲೇ ಆಕಾಶಾಧಿಕರಣದ ಸಿದ್ಧಾಂತವು ಗತಾರ್ಥವಾಗಿದೆಯಲ್ಲವೆ? ಎಂದು ಆಕ್ಷೇಪಿಸಿ ಸಮಾಧಾನವನ್ನು 'ಯದ್ಯಪಿ' ಇತ್ಯಾದಿ ವಾಕ್ಯದಿಂದ ಹೇಳುತ್ತಿದ್ದಾರೆ. ವಿಷಯವಾಕ್ಯದ ಭೇದದಿಂದ ಅಧಿಕರಣಭೇದವನ್ನು ಹೇಳಬಹುದಲ್ಲವೇ? ಎಂಬ ಶಂಕೆಯನ್ನು 'ವಿಷಯವಾಕ್ಯ' ಎಂಬ ಗ್ರಂಥದಿಂದ ನಿರಾಸ ಮಾಡುತ್ತಿದ್ದಾರೆ. ವಿಷಯವಾಕ್ಯದಿಂದ ಅಧಿಕರಣಭೇದ ಹೇಳುವುದಾದರೆ ವಿಷಯವಾಕ್ಯಗಳು ಅನಂತವಾದ್ದರಿಂದ ಶಾಸ್ತ್ರಕ್ಕೆ ಪರ್ಯವಸಾನವೇ ಇಲ್ಲದಿರಬೇಕಾಗಿತ್ತು. ನೀವು ಹೇಳಿದ ಅಭ್ಯಧಿಕಾಶಂಕೆಯು ಭಾಷ್ಯದಲ್ಲಿ ತೋರುತ್ತಿಲ್ಲ ? ಎಂದು ಸಂಶಯ ಬಂದರೆ ಅನುವ್ಯಾಖ್ಯಾನದ ಆಧಾರದಿಂದ ಉತ್ತರಿಸುತ್ತಿದ್ದಾರೆ.

**ಗುರುರಾಜೀಯಮ್ – ಅನ್ತ್ಯಚಿನ್ತಾಯಾ ಅವ್ಯವಹಿತೋಪಾನ್ತ್ಯಚಿನ್ತಾರ್ಥತ್ವಪ್ರತೀತಿಂ ವಾರಯತಿ ॥ ಯದ್ಯಧೀನ ಇತಿ ॥ ಅಸ್ಯಾಧಿಕರಣಸ್ಯ ಪೂರ್ವಾಧಿಕರಣೇನ ಗತಾರ್ಥತಾಂ ಪರಿಹರತಿ – ಯದ್ಯಪೀತಿ ॥**

**ನನ್ವಭ್ಯಧಿಕಾಶಂಕಾಯಾಷ್ಟೀಕಾದಾವಪ್ರದರ್ಶಿತತ್ವಾತ್ ತತ್ಪ್ರದರ್ಶನೇ ಟೀಕಾವಿರೋಧಃ ಸ್ಯಾತ್, ಇತ್ಯತ ಆಹ – ಶಙ್ಕಾ ಚೇತಿ ॥**

## ಸಾರ

ಈ ಅಧಿಕರಣದ ಚಿಂತಾಕ್ರಮ ಹೀಗಿದೆ -

ಇಲ್ಲಿ ಆಕಾಶವೆಂದರೆ ಭೂತಾಕಾಶವನ್ನು ಇಟ್ಟುಕೊಳ್ಳಬೇಕೋ ಅಥವಾ ಬ್ರಹ್ಮನನ್ನೋ? ಅದಕ್ಕೋಸ್ಕರ ಶ್ರುತಿಪ್ರಸಿದ್ಧಿಯನ್ನಿಟ್ಟುಕೊಂಡು 'ಪರೋವರೀಯಸ್ತ್ವ' ಲಿಂಗವು ಬಾಧ್ಯವೋ? ಅಥವಾ ಪರೋವರೀಯಸ್ತ್ವ

ಲಿಂಗದಿಂದ ಶ್ರುತಿಯೇ ಬಾಧ್ಯವೋ? ಅದಕ್ಕೋಸ್ಕರ ಪ್ರಸಿದ್ಧಿಬಾಧ ಬಂದಾಗ ಶ್ರುತಿಗೆ ಮುಖ್ಯಾರ್ಥತ್ವ ಹಾನಿಯಾಗುತ್ತದೋ ? ಅಥವಾ ಇಲ್ಲವೋ? ಅದಕ್ಕೋಸ್ಕರ ಆಕಾಶ ಶಬ್ದದ ಪ್ರವೃತ್ತಿ ನಿಮಿತ್ತವು ಬ್ರಹ್ಮನಲ್ಲಿ ಇಲ್ಲವೋ? ಅಥವಾ ಇದೆಯೋ? ಅದಕ್ಕೋಸ್ಕರ ಜಡದ ಸ್ವಭಾವವು ಈಶ್ವರನ ಅಧೀನವಲ್ಲವೋ? ಅಥವಾ ಈಶ್ವರನ ಅಧೀನವೋ? ಎಂದು ಚಿಂತಾ.

ಒಂದು ವೇಳೆ ಜಡದ ಸ್ವಭಾವವು ಈಶ್ವರನ ಅಧೀನವೆಂದಾದರೆ 'ತದಧೀನತ್ವ' ನ್ಯಾಯದಂತೆ ಆಕಾಶಶಬ್ದವು ಬ್ರಹ್ಮನಲ್ಲಿ ಮುಖ್ಯವೆಂದಾಗುತ್ತದೆ. ಇಲ್ಲವೆಂದರೆ ಬ್ರಹ್ಮನಲ್ಲಿ ಆಕಾಶ ಶಬ್ದವು ಮುಖ್ಯವಲ್ಲವೆಂದಾಗುತ್ತದೆ.

ವಸ್ತುತಃ ಹಿಂದಿನ ಅಧಿಕರಣದಲ್ಲಿರುವ ನಿರವಕಾಶಲಿಂಗದಿಂದ ಲೋಕಪ್ರಸಿದ್ಧಿಗೆ ಬಾಧವನ್ನು ಹೇಳಬೇಕು ಎಂದು ನಿರ್ಣಯಿಸಿದೆ. ಅದನ್ನೇ ಇಲ್ಲಿ ಹೇಳಿದ್ದು. ಹಾಗಾಗಿ ಒಂದೊಂದು ವಿಷಯ ವಾಕ್ಯವನ್ನಿಟ್ಟುಕೊಂಡು ಅಧಿಕರಣ ಭೇದವನ್ನು ಹೇಳಿದರೆ ಆನಂತ್ಯದೋಷಬರುತ್ತದಲ್ಲವೆ? ಎಂದು ಪ್ರಶ್ನೆ ಬರಬಹುದು. ಆದರೆ ಕೇವಲ ವಿಷಯವಾಕ್ಯಭೇದವನ್ನಿಟ್ಟುಕೊಂಡು ಇಲ್ಲಿ ಅಧಿಕರಣರಚನೆ ಮಾಡಿದ್ದಲ್ಲ. ಕಂತು ಹಿಂದಿನ ಅಧಿಕರಣಕ್ಕಿಂತಲೂ ಅಧಿಕಾಶಂಕಾವಿರುವುದರಿಂದ. ಅದರ ನಿರಾಕರಣೆ ಮಾಡಲು ಈ ಅಧಿಕರಣವನ್ನು ರಚನೆ ಮಾಡಲಾಗಿದೆ. ಅಧಿಕಾಶಂಕೆಯನ್ನು ಅನುವ್ಯಾಖ್ಯಾನದಲ್ಲಿ ತೋರಿಸಿದ್ದಾರೆ.

---

## ಅನುವ್ಯಾಖ್ಯಾನಸೂಚಿತ ಪೂರ್ವಪಕ್ಷ

### ತಾತ್ಪರ್ಯಚನ್ದ್ರಿಕಾ

**तत्राकाशशब्दप्रवृत्तिनिमित्तस्य विवरत्वादेः भगवदधीनत्वे अचेतनगतत्वं स्वभावत्वं चेति हेतुद्वयं विवक्षितम् ।**

**तत्र आद्ये भृत्यगतस्य जयस्य राजाधीनत्वेन 'राजा जयी' इति प्रयोगस्येव अचेतनगतप्रवृत्तिनिमित्तस्य चेतनाधीनत्वे चेतने जडवाचिशब्द-प्रयोगस्य अदर्शनात्, तत्प्रसादलब्धत्वरूपं तदधीनत्वं शब्दप्रवृत्तिनिमित्तम्, न तु यथेष्टविनियोगार्हत्वरूपम् । न चाचेतने भगवतः प्रसादोऽस्ति इति शङ्काभिप्रायः । अत एवानुव्याख्याने ''तत्प्रसादतः'' इत्युक्तम् । एवं चाचेतनगतप्रवृत्तिनिमित्तकाः सर्वेऽपि शब्दा इह तेन रूपेण विचार्याः ।**

**द्वितीये तु इन्द्रादिशब्दप्रवृत्तिनिमित्तानामैश्वर्यादीनामिव विवरत्वादीनां स्वभावत्वान्नेशाधीनता, अन्याधीनत्वे स्वभावत्वहानेः । भृत्यादिगतस्वाभाविका-**

**भिरूप्यादिना राज्ञाभिरूपादिशब्दाप्रयोगाचेति शङ्काभिप्रायः । अत्रापि स्वाभाविक-प्रवृत्तिनिमित्तकाः शब्दाः सर्वेऽपीह तेन रूपेण विचार्याः ।**

**कस्यचिद्दुदाहर्तव्यत्वादानन्दमयाक्षेपकत्वाच्च आकाशशब्द उदाहृतः, वाज-पेयाधिकरणे उद्भिदादिशब्दानामपि विचार्यत्वेऽपि वाजपेयशब्द इव ।**

ಅನುವಾದ - ಅನುವ್ಯಾಖ್ಯಾನದಲ್ಲಿ ಸೂಚಿಸಿದ ಪೂರ್ವಪಕ್ಷ ಹೀಗಿದೆ - ಆಕಾಶಶಬ್ದದ ಪ್ರವೃತ್ತಿನಿಮಿತ್ತವು ವಿವರತ್ವವಾಗಿದೆ. ಈ ವಿವರತ್ವವು ಭಗವಂತನ ಅಧೀನವಲ್ಲವೆನ್ನಲು ಅಚೇತನಗತತ್ವ ಮತ್ತು ಸ್ವಭಾವತ್ವ ಎಂದು ಎರಡು ಹೇತುಗಳು ವಿವಕ್ಷಿತವಾಗಿವೆ. ಮೊದಲನೆಯ ಹೇತುವನ್ನು ವಿವಕ್ಷಿಸಿದಾಗ ಅನುಮಾನವನ್ನು ಹೀಗೆ ತಿಳಿಯಬೇಕು - ''ವಿವರತ್ವಾದಿಕಂ ನ ಭಗವದಧೀನಂ, ಅಚೇತನಗತತ್ವಾತ್'' ಎಂದು. ''ಭೃತ್ಯನಲ್ಲಿರುವ ಜಯವು ರಾಜಾಧೀನವಾಗಿದೆ, ಆದ್ದರಿಂದ ಭೃತ್ಯನು ಗೆದ್ದರೆ ರಾಜನು ಗೆದ್ದ'' ಎಂಬ ಪ್ರಯೋಗವು ಲೋಕದಲ್ಲಿ ಕಾಣಿಸುತ್ತದೆ.

ಇದರಂತೆ ಅಚೇತನದಲ್ಲಿರುವ ಪ್ರವೃತ್ತಿನಿಮಿತ್ತವು ಚೇತನಾಧೀನವಾದರೆ ಚೇತನನಲ್ಲಿ ಜಡ-ವಾಚಕವಾದ ಶಬ್ದಪ್ರಯೋಗವು ಕಾಣಿಸುವುದಿಲ್ಲ. ಆದ್ದರಿಂದ 'ತತ್ಪ್ರಸಾದಲಬ್ಧತ್ವ'ವನ್ನೇ 'ತದ-ಧೀನತ್ವ' ಎಂದು ಹೇಳಬೇಕು. ಇದು ಶಬ್ದದ ಪ್ರವೃತ್ತಿನಿಮಿತ್ತವಾಗಿದೆ. ಎಂದರೆ ಭಗವಂತನ ಪ್ರಸಾದಕ್ಕೆ ವಿಷಯವಾಗಿರುವಿಕೆಯನ್ನು ಶಬ್ದಪ್ರವೃತ್ತಿನಿಮಿತ್ತವೆನ್ನಬೇಕು ಹೊರತು 'ಯಥೇಷ್ಟವಿನಿಯೋಗಾರ್ಹತ್ವ (ಇಚ್ಛೆಬಂದಂತೆ ವಿನಿಯೋಗಿಸುವಿಕೆ)' ರೂಪವಾದದ್ದಲ್ಲ. ಅಚೇತನದಲ್ಲಿ ಭಗವಂತನ ಪ್ರಸಾದ-ವಿಷಯತ್ವವನ್ನು ಹೇಳಲು ಸಾಧ್ಯವಿಲ್ಲ. ಚೇತನದಲ್ಲಷ್ಟೇ ಇಂತಹ ಪ್ರವೃತ್ತಿನಿಮಿತ್ತವನ್ನು ಹೇಳಬಹುದು. ಆದ್ದರಿಂದ ಭೃತ್ಯನು ಗೆದ್ದರೆ 'ರಾಜಾ ಜಯೀ' ಎಂಬ ಪ್ರಯೋಗವು ಸಮಂಜಸವಾಗುತ್ತದೆ. ಆದರೆ ಘಟಾದಿಗಳಲ್ಲಿರುವ 'ಪೃಥುಬುಧ್ನೋದರಾದ್ಯಾಕಾರತ್ವ'ವು ಕುಲಾಲನ ಅಧೀನವಾದ ಮಾತ್ರದಿಂದ ಕುಲಾಲನಲ್ಲಿ ಪೃಥುಬುಧ್ನೋದರಾದಿಶಬ್ದಗಳ ಪ್ರತಿಪಾದ್ಯತ್ವವು ಬರುವುದಿಲ್ಲ.

ಅನುವ್ಯಾಖ್ಯಾನದಲ್ಲಿ ಹೀಗೆ ಪ್ರಸಾದಲಬ್ಧತ್ವರೂಪವಾದ ತದಧೀನತ್ವವನ್ನೇ ವಿವಕ್ಷಿಸಬೇಕೆಂದು ''ತತ್ಪ್ರಸಾದತಃ'' ಎಂಬ ಪದವನ್ನು ಬಳಸಿದ್ದಾರೆ. ಹೀಗೆ ಅಚೇತನದಲ್ಲಿರುವ ಪ್ರವೃತ್ತಿನಿಮಿತ್ತಗಳನ್ನು ಅಪೇಕ್ಷಿಸಿರುವ ಎಲ್ಲಾ ಶಬ್ದಗಳನ್ನು ಈ ಆಕಾಶಾಧಿಕರಣದಲ್ಲಿ ವಿಮರ್ಶಿಸಲಾಗಿದೆ. ಅಚೇತನಗತ-ಪ್ರವೃತ್ತಿನಿಮಿತ್ತರೂಪದಿಂದ ಆಕಾಶಶಬ್ದದ ವಿಚಾರದಂತೆ ಪ್ರಾಣ, ಗಾಯತ್ರೀ, ಜ್ಯೋತಿರಾದಿಶಬ್ದ-ಗಳನ್ನೂ ಸಹ ಈ ಅಧಿಕರಣದಲ್ಲಿ ವಿಚಾರ ಮಾಡಲಾಗಿದೆ. ಆದ್ದರಿಂದ ಅಚೇತನಗತವಾದ ವಿವರತ್ವಾದಿಗಳು ಭಗವಂತನ ಅಧೀನವಾಗಲು ಸಾಧ್ಯವಿಲ್ಲವೆಂದು ಸಿದ್ಧವಾಯಿತು.

ವಿವರತ್ವಾದಿಗಳು ಭಗವಂತನ ಅಧೀನವಲ್ಲವೆನ್ನಲು ಅಚೇತನಸ್ವಭಾವತ್ವವೆಂಬುದು ಮತ್ತೊಂದು ಕಾರಣ - 'ವಿವರತ್ವಾದಿಕಂ ನ ಭಗವದಧೀನಂ, ಆಕಾಶಸ್ವಭಾವತ್ವಾತ್' ಎಂದು. ಇಂದ್ರಾದಿಶಬ್ದಗಳ

ಪ್ರವೃತ್ತಿನಿಮಿತ್ತವು ಐಶ್ವರ್ಯಾದಿಗಳಾಗಿವೆ. ಇದರಂತೆ ವಿವರತ್ವಾದಿಗಳು ಜಡವಾದ ಆಕಾಶದ ಸ್ವಭಾವವಾದ್ದರಿಂದ ಭಗವಂತನ ಅಧೀನವಾಗಲು ಸಾಧ್ಯವಿಲ್ಲ. ಆಗಂತುಕವಾದ ಧರ್ಮವಷ್ಟೇ ಅನ್ಯಾಧೀನವಾಗುತ್ತದೆ. ಭೃತ್ಯನ ಜಯವು ಆಗಂತುಕಧರ್ಮವಾದ್ದರಿಂದ, ರಾಜನ ಅಧೀನವಾಗಿದೆ. ಆದರೆ ಸ್ವಭಾವಭೂತವಾದ ಧರ್ಮವು ಅನ್ಯಾಧೀನವಾಗುವುದಿಲ್ಲ. ಅನ್ಯಾಧೀನವಾದರೆ ಸ್ವಭಾವತ್ವವೇ ಹಾನಿಯಾಗಬೇಕಾಗುತ್ತದೆ. ಭೃತ್ಯನಲ್ಲಿ ಸ್ವಾಭಾವಿಕವಾದ ಸೌಂದರ್ಯ ಮೊದಲಾದ ಧರ್ಮಗಳಿವೆ. ಇವುಗಳನ್ನು ವಿವಕ್ಷಿಸಿ ರಾಜನಲ್ಲಿ ಸೌಂದರ್ಯಾದಿಶಬ್ದಗಳ ಪ್ರಯೋಗವನ್ನು ಯಾರೂ ಮಾಡುವುದಿಲ್ಲ. ಅದರಂತೆ ವಿವರತ್ವಾದಿಗಳೂ ಸಹ ಸ್ವಾಭಾವಿಕಧರ್ಮವಾದ್ದರಿಂದ ವಿವರತ್ವಾದಿಗಳನ್ನು ವಿವಕ್ಷಿಸಿ ಭಗವಂತನಲ್ಲಿ ಆಕಾಶಾದಿಶಬ್ದಗಳ ಪ್ರಯೋಗವು ಉಚಿತವಾಗುವುದಿಲ್ಲ.

ಈ ಪಕ್ಷದಲ್ಲಿಯೂ ಸಹ ಸ್ವಾಭಾವಿಕವಾದ ಪ್ರವೃತ್ತಿನಿಮಿತ್ತವುಳ್ಳ ಎಲ್ಲಾ ಶಬ್ದಗಳನ್ನು ಆಕಾಶಾಧಿಕರಣದಲ್ಲಿ ವಿಚಾರ ಮಾಡಲಾಗಿದೆ ಅಂದರೆ ಸ್ವಾಭಾವಿಕಪ್ರವೃತ್ತಿನಿಮಿತ್ತಕತ್ವರೂಪೇಣ ಆಕಾಶಶಬ್ದದ ವಿಚಾರದಂತೆ ಪ್ರಾಣ, ಗಾಯತ್ರೀ, ಜ್ಯೋತಿರಾದಿ ಶಬ್ದಗಳನ್ನೂ ಸಹ ವಿಚಾರ ಮಾಡಲಾಗಿದೆ. ಹಾಗಾದರೆ ಪ್ರಾಣಾದಿಶಬ್ದಗಳನ್ನೇ ಉದಾಹರಿಸಲು ಬರುವಾಗ ಆಕಾಶಶಬ್ದವನ್ನೇಕೆ ಮೊದಲು ಉದಾಹರಿಸಿದಿರಿ? ಎಂಬ ಪ್ರಶ್ನೆ ಬರುತ್ತದೆ. ಆದರೆ ಯಾವುದೇ ಶಬ್ದಗಳನ್ನು ಉದಾಹರಿಸಿದರೂ ಈ ಪ್ರಶ್ನೆಯು ಸಮಾನವಾದ್ದರಿಂದ ಆಕಾಶಶಬ್ದವನ್ನು ಉದಾಹರಿಸಿದ್ದು ತಪ್ಪಲ್ಲ. ಅಥವಾ 'ಕೋ ಹ್ಯೇವಾನ್ಯಾತ್, ಕಃ ಪ್ರಾಣ್ಯಾತ್ ಯದೇಷ ಆಕಾಶ ಆನಂದೋ ನ ಸ್ಯಾತ್' ಎಂದು ಆನಂದಮಯನಲ್ಲಿ ಶ್ರುತವಾದ ಆಕಾಶಶಬ್ದವಾಚ್ಯನಾದವನು ಭಗವಂತನಲ್ಲ ಎಂದು ಆನಂದಮಯಾಧಿಕರಣದ ಮೇಲೆ ಆಕ್ಷೇಪ ಬಂದರೆ ಅದಕ್ಕೆ ಉತ್ತರಿಸುವುದಕ್ಕಾಗಿ ಈ ಅಧಿಕರಣ ಹೊರಟಿದೆ. ಆದ್ದರಿಂದಲೂ ಸಹ ಆಕಾಶಶಬ್ದದ ಉದಾಹರಣೆಯು ಸಮರ್ಪಕವಾಗಿದೆ.

ಪೂರ್ವಮೀಮಾಂಸೆಯ ವಾಜಪೇಯಾಧಿಕರಣದಲ್ಲಿ ಉದ್ಭಿದಾದಿ ಅನೇಕಶಬ್ದಗಳನ್ನು ವಿಚಾರ ಮಾಡಿದ್ದಾರೆ. ಆದರೂ ಸಹ ವಾಜಪೇಯಶಬ್ದವನ್ನಷ್ಟೇ ಉದಾಹರಿಸಿ ವಾಜಪೇಯಾಧಿಕರಣವೆಂದು ಹೇಳಿದ್ದಾರೆ. ಅದರಂತೆ ಇಲ್ಲಿಯೂ ಸಹ ಪ್ರಾಣಾದಿ ಅನೇಕ ಶಬ್ದಗಳ ಸಮನ್ವಯವು ವಿವಕ್ಷಿತವಾಗಿದ್ದರೂ ಆಕಾಶಶಬ್ದವನ್ನಷ್ಟೇ ಉಲ್ಲೇಖಿಸಿ ಆಕಾಶಾಧಿಕರಣವೆಂದು ಹೇಳಿದ್ದು ತಪ್ಪಾಗುವುದಿಲ್ಲ.

### ಕಠಿಣಪದಾರ್ಥ

ತತ್ರ = ಅನುವ್ಯಾಖ್ಯಾನಶ್ಲೋಕದಲ್ಲಿ; ಹೇತುದ್ವಯಂ = ಸಾಕ್ಷಾತ್ತಾಗಿ ಅಥವಾ ಪರಂಪರೆಯಿಂದ ಎರಡು ಹೇತುಗಳನ್ನು, ತತ್ರ = ಎರಡು ಹೇತುಗಳ ಮಧ್ಯದಲ್ಲಿ; ತತ್ಪ್ರಸಾದಲಬ್ಧತ್ವರೂಪಂ = ಭಗವಂತನ ಪ್ರಸಾದವನ್ನು ಹೊಂದುವಿಕೆಯೆಂಬ; ತದಧೀನತ್ವಂ = ಭಗವಂತನ ಅಧೀನ್ಯ, ಯಥೇಷ್ಟವಿನಿಯೋಗಾರ್ಹತ್ವರೂಪಂ = ಇಚ್ಛೆ ಬಂದಂತೆ ವಿನಿಯೋಗ ಮಾಡಲು ಅರ್ಹವಾಗಿರುವಿಕೆ; ಇಹ = ಆಕಾಶಾಧಿಕರಣದಲ್ಲಿ, ತೇನ ರೂಪೇಣ = ಅಚೇತನಪ್ರವೃತ್ತಿನಿಮಿತ್ತಕತ್ವರೂಪದಿಂದ, ದ್ವಿತೀಯೇ ತು =

ಜಡಸ್ವಭಾವವಾದ್ದರಿಂದ ಭಗವದಧೀನವಾಗುವುದಿಲ್ಲವೆಂಬ ಎರಡನೆಯ ಪಕ್ಷದಲ್ಲಿ, ಆಧಿರೂಪ್ಯಾದಿನಾ = ಸೌಂದರ್ಯಾದಿಗಳಿಂದ, ಆತ್ಮಾಪಿ = ಆಕಾಶಾಧಿಕರಣದಲ್ಲಿಯೂ, ತೇನ ರೂಪೇಣ = ಸ್ವಭಾವಪ್ರವೃತ್ತಿನಿಮಿತ್ತಕತ್ವರೂಪದಿಂದ, ಕಸ್ಮೈ ಚಿತ್ = ಯಾವುದಾದರೊಂದು ಶಬ್ದವನ್ನು, ಆನಂದಮಯಆಕ್ಷೇಪಕತ್ವಾತ್ = 'ಕೋ ಹ್ಯೇವಾನ್ಯಾತ್ ಕಃ' ಎಂಬ ಶ್ರುತಿಯಲ್ಲಿ ಆನಂದಮಯನು ಬ್ರಹ್ಮನಲ್ಲವೆಂದು ಆಕ್ಷೇಪಿಸಿದ್ದರಿಂದ, ವಾಜಪೇಯ = ಸುರಾಪಾನವುಳ್ಳ ಯಾಗ,

**ಪ್ರಕಾಶಃ** – ಶ್ಲೋಕಾರ್ಥೆ ವಿಶದಯನ್ನಧಿಕಾಶಙ್ಕಾಪ್ರಕಾರಮಾಹ – **ತತ್ರೇತಿ** ॥ ಅತ್ರೇದಂ ದ್ರಷ್ಟವ್ಯಮ್ – ಅಯಮಾಕಾಶೋ ಭೂತಮೇವ, ನ ತು ವಿಷ್ಣುಃ । ತಸ್ಯ ವಿಷ್ಣುವಾಚಿತ್ವಂ ಹಿ ರೂಢ್ಯಾ ಯೋಗೇನ ವಾ? ನಾದ್ಯಃ, ಭೂತ ಏವ ತಸ್ಯಾಃ ಸತ್ತ್ವೇನಾಸಿದ್ಧೇಃ । ದ್ವಿತೀಯೇऽಪಿ ಯೋಗಃ ಕೃತ್ಸ್ನೋ ವಾ ಕಲ್ಪ್ಯೋ ವಾ ।

ಆದ್ಯೇऽಪಿ ಅವಕಾಶತ್ವಮ್ ಆಕಾಶತ್ವಮಿತಿ ಯದ್ವಿವರತ್ವಂ ಪ್ರವೃತ್ತಿನಿಮಿತ್ತಂ, ತಸ್ಯ ಪ್ರಧಾನಾದಿಗತಾವರತ್ವಾದಿವತ್ ಭಗವದಧೀನತ್ವೇನ ವಾ ಇನ್ದ್ರಾದಿಶಬ್ದಪ್ರವೃತ್ತಿನಿಮಿತ್ತೈಶ್ವರ್ಯಾದಿವತ್ ಭಗವದ್ಗತತ್ವೇನ ವಾ ಯೋಗोऽಭಿಮತಃ । ನಾದ್ಯಃ, ತದಭಾವಾತ್ । ಕುತಃ? ಇತ್ಯತಃ ''ಅಚೇತನಸ್ವಭಾವಸ್ತು'' ಇತ್ಯನೇನಾಭಿಮತಂ ಹೇತುದ್ವಯಮಾಹ – **ಆಕಾಶಶಬ್ದಪ್ರವೃತ್ತಿನಿಮಿತ್ತಸ್ಯೇತಿ** ॥

**ಹೇತುದ್ವಯಮಿತಿ** ॥ 'ಸಾಕ್ಷಾದ್ವಾ ಪರಮ್ಪರಯಾ ವಾ' ಇತಿ ಶೇಷಃ । 'ತತ್ರ' ಆಕಾಶಗತಂ ವಿವರತ್ವಂ ನ ಭಗವದಧೀನಂ, ಅಚೇತನಗತತ್ವಾದಚೇತನಸ್ವಭಾವತ್ವಾಚ್ಚೇತಿ ಸಾಕ್ಷಾದ್ಧೇತುತ್ವಪಕ್ಷೇ ನನು ಸರ್ವಸ್ಯ ಭಗವತೋ ಯಥೇಷ್ಟವಿನಿಯೋಗಯೋಗ್ಯತ್ವಸ್ಯ ಸಿದ್ಧತ್ವಾದಚೇತನಗತತ್ವಮನಧೀನತ್ವೇ ಕಥಂ ಹೇತುರಿತ್ಯಾಶಙ್ಕ್ಯ, ಆದ್ಯಂ ಹೇತುಂ ದೃಷ್ಟಾನ್ತೋಕ್ತಿಪೂರ್ವಂ ವಿವೃಣೋತಿ – **ಆದ್ಯ ಇತಿ** ॥ **ಅದರ್ಶನಾದಿತಿ** ॥

ನನು ''ಮೃದಬ್ರವೀದಾಪोऽಬ್ರುವನ್'' ಇತ್ಯಾದಾವಭಿಮಾನಿಚೇತನೇ ಮೃದಾದಿಶಬ್ದಪ್ರಯೋಗೋ ದೃಷ್ಟ ಇತಿ ಚೇನ್ನ, ಅತ್ರತ್ಯಸಿದ್ಧಾನ್ತನ್ಯಾಯೇನಾಭಿಮಾನ್ಯಧೀನತ್ವೇ ಸಿದ್ಧೇ ''ತದಧೀನತ್ವಾತ್'' ಇತಿ ನ್ಯಾಯೇನ ದೇವತಾಯಾಂ ಪ್ರಯೋಗಸ್ಯ ವಕ್ಷ್ಯಮಾಣತ್ವೇನಾತ್ರತ್ಯಪೂರ್ವಪಕ್ಷಿಣोऽ ಸಮ್ಪ್ರತಿಪತ್ತೇರಿತಿ ಭಾವಃ ।

ಏತೇನಾಚೇತನಗತಂ 'ವಿವರಾದಿಃ' ವಿವರತ್ವಾದಿಕಂ, 'ತತಃ' ಭಗವತ್ಪ್ರಸಾದಾತ್, 'ಕಥಂ' ನ ಕಥಮಪೀತಿ ಯೋಜಿತಮ್ । ಅನೇನ ಲಬ್ಧಮರ್ಥಮಾಹ – **ಏವञ್ಚೇತಿ** ॥ 'ತೇನ ರೂಪೇಣ' ಅಚೇತನಗತಪ್ರವೃತ್ತಿನಿಮಿತ್ತಕತ್ವೇನ ರೂಪೇಣ, ಪ್ರಾಣಗಾಯತ್ರೀಜ್ಯೋತಿರಾದಿಶಬ್ದಾ ಉದಾಹರಣಮ್ । ಏಕಸ್ಯಾನೇಕತ್ರೋದಾಹರಣಂ ತೂಪಪಾದಯಿಷ್ಯತೇ । ಅನ್ಯಥಾ ತೇಷು ಶಬ್ದೇಷು ವಿಷ್ಣುವಾಚಿತ್ವವದತ್ರಾಪಿ ವಿಷ್ಣುವಾಚಿತ್ವಪ್ರಸಙ್ಗಾದಿತಿ ಭಾವಃ ।

**ಸ್ವಭಾವತ್ವಹೇತುಂ ವಿವೃಣೋತಿ – ದ್ವಿತೀಯೇ ತ್ವಿತಿ ॥ ಸ್ವಾಭಾವಿಕೇತಿ ॥** ಸ್ವಭಾವಸಿದ್ಧಂ ಅನಾಗನ್ತುಕಮೇವ ಪ್ರವೃತ್ತಿನಿಮಿತ್ತಂ ಯೇಷಾಂ ತ ಇತ್ಯರ್ಥಃ । ತರ್ಹಿ ಭಾಷ್ಯಾದ್ಯುಕ್ತೋದಾಹರಣವಿರೋಧ ಇತ್ಯತ ಆಹ – **ಕಸ್ಯಚಿದಿತಿ ॥**

**ವಾಜಪೇಯಾಧಿಕರಣ ಇತಿ ॥** ಪ್ರಥಮಾಧ್ಯಾಯೇ ಚತುರ್ಥಪಾದೇ ''ನಾಮಧೇಯೇ ಗುಣಶ್ರುತೇಃ ಸ್ಯಾದ್ವಿಧಾನಮಿತಿ ಚೇತ್'' ಇತಿ ಪಞ್ಚಮೇऽಧಿಕರಣೇ ಚಿನ್ತಿತಮ್ । ''ವಾಜಪೇಯೇನ ಸ್ವಾರಾಜ್ಯಕಾಮೋ ಯಜೇತ'' ಇತ್ಯತ್ರ ವಾಜಪೇಯಶಬ್ದಃ ಕಿಂ ಗುಣವಿಧಿಃ ಕರ್ಮನಾಮ ವೇತಿ ಸನ್ದೇಹೇ, 'ಯಜೇತ' ಇತ್ಯತ್ರ ಯಾಗೇ ದ್ವಿತೀಯಾದ್ಯಭಾವೇನ ಕರ್ಮಕರಣತ್ವಯೋರಪ್ರತೀತೇಃ ಪ್ರಕೃತಿಪ್ರತ್ಯಯಾಭ್ಯಾಂ ಯಾಗಭಾವನಾಮಾತ್ರಾಭಿಧಾನಾತ್, ಸಮಭಿವ್ಯಾಹಾರೇಣ ತಯೋಃ ಸಮ್ಬನ್ಧಮಾತ್ರಮೇವಾವಗಮ್ಯತೇ । ತಚ್ಚ ಕರ್ಮತ್ವಕರಣತ್ವಸಾಧಾರಣಮಿತಿ ಯಾಗಕರ್ಮತ್ವಾಂಶೇ ಗುಣಸಮ್ಬನ್ಧಃ, ತತ್ಕರಣತ್ವಾಂಶೇ ಫಲಸಮ್ಬನ್ಧಶ್ಚ ವಿನೈವ ಮತ್ವರ್ಥಲಕ್ಷಣಯಾ ತನ್ತ್ರೇಣ ಸ್ಯಾದಿತಿ ಗುಣವಿಧಿರಿತಿ ಪ್ರಾಪ್ತೇ,

ಸಮ್ಬನ್ಧಮಾತ್ರಪರತ್ವೇ ಆಕಾಙ್ಕ್ಷಾನುದಯೇನ ಗುಣಫಲಯೋರನ್ಯತರೇಣಾಪ್ಯಸಮ್ಬನ್ಧಸ್ಸ್ಯಾತ್ । ಲಕ್ಷಣಯाऽನ್ಯತರವಿಶೇಷಪರತ್ವೇ ಅನ್ತರೇಣೈವ ಸಮ್ಬನ್ಧಸ್ಸ್ಯಾತ್ । ಉಭಯವಿಷಯಪರತ್ವೇ ತು ವಾಕ್ಯಾವೃತ್ತಿಃ, ಗುಣಪ್ರಧಾನತ್ವೋದ್ದೇಶ್ಯತ್ವೋಪಾದೇಯತ್ವವಿಧೇಯಾನುವಾದ್ಯತ್ವಕೃತಂ ವೈರೂಪ್ಯಂ ಚ ಸ್ಯಾದಿತಿ ತನ್ತ್ರಸಮ್ಬನ್ಧಾಸಮ್ಭವಾತ್ ಗುಣವಿವಕ್ಷಾಸಾಮಾನಾಧಿಕರಣ್ಯನಿರ್ವಾಹಾಯ ಮತ್ವರ್ಥಲಕ್ಷಣಾದೋಷೋ ದುರ್ವಾರ ಇತಿ ವಾಜಮನ್ನರೂಪಂ ಸುರಾದ್ರವ್ಯಂ ಪೇಯಮಸ್ಮಿನ್ನಿತಿ ಸುರಾಗ್ರಹಣವಿಧಾನಾತ್ ತತ್ಪ್ರಖ್ಯನ್ಯಾಯೇನ ನಾಮಧೇಯಮಿತಿ ಸಿದ್ಧಾನ್ತ ಇತಿ ।

ಅತ್ರ –

**ಸರ್ವೇಷ್ವಾಖ್ಯಾತಶಬ್ದೇಷು ತನ್ತ್ರಸಮ್ಬನ್ಧಸಮ್ಭವಾತ್ ।**
**ಮತ್ವರ್ಥಲಕ್ಷಣಾದೋಷೋ ನಾಸ್ತೀತ್ಯಾಕ್ಷಿಪ್ಯತೇऽಧುನಾ ॥**

ಇತ್ಯುಕ್ತರೀತ್ಯಾ ಪೂರ್ವಪಕ್ಷೇ ಉದ್ಭಿದಾದಿಷು ವಿಶಿಷ್ಟವಿಧಿಪಕ್ಷೋದ್ಭಾವಿತಮತ್ವರ್ಥಲಕ್ಷಣಾದೋಷೋದ್ಧಾರಾತ್ ಸಿದ್ಧಾನ್ತೇ ತದ್ವ್ಯವಸ್ಥಾಪನಾಚ್ಚೋದ್ಭಿದಾದಿಶಬ್ದಾನಾಂ ವಿಚಾರ್ಯತ್ವೇऽಪಿ ಯಥಾ ವಾಜಪೇಯಶಬ್ದೋದಾಹರಣಂ, ತಥಾ ಪ್ರಕೃತೇऽಪೀತ್ಯರ್ಥಃ।

ಏತೇನ ಸ್ವಭಾವರೂಪಂ ವಿವರತ್ವಾದಿಕಂ 'ತತಃ' ಭಗವತಃ, ಕಥಂ ಭಗವದಧೀನಂ ಕಥಂ ಸ್ವಭಾವತ್ವಾದಿತಿ ಯೋಜನೋಕ್ತಾ ಭವತಿ ।

ವಿವರಣೆ - ಆಕಾಶಾಧಿಕರಣದ ಪೂರ್ವಪಕ್ಷವನ್ನು ರಚಿಸುತ್ತಿದ್ದಾರೆ ''ಚೇಷ್ಟಾ ಹಿ'' ಇತ್ಯಾದಿ ಅನುವ್ಯಾಖ್ಯಾನದಲ್ಲಿ ಹೇಳಿದ ಪೂರ್ವಪಕ್ಷವನ್ನೇ ಗ್ರಂಥಕಾರರು ''ತತ್ರ'' ಇತ್ಯಾದಿ ಗ್ರಂಥದಿಂದ ವ್ಯಾಖ್ಯಾನಿಸುತ್ತಿದ್ದಾರೆ.

ಈ ಅಧಿಕರಣದಲ್ಲಿರುವ ಅಧಿಕಾಶಂಕೆಯ ಕ್ರಮವನ್ನು ಸ್ಪಷ್ಟವಾಗಿ ಹೀಗೆ ತಿಳಿಯಬೇಕು -- ಶ್ರುತಿಯಲ್ಲಿ ಕೇಳಿ ಬರುವ ಆಕಾಶವು ಭೂತಾಕಾಶವನ್ನೇ ಪ್ರತಿಪಾದಿಸುತ್ತದೆ; ವಿಷ್ಣುವನ್ನು ಪ್ರತಿಪಾದಿಸುವುದಿಲ್ಲ. ಒಂದು ವೇಳೆ ವಿಷ್ಣುವನ್ನು ಪ್ರತಿಪಾದಿಸುವುದಾದರೆ ರೂಢಿಯನ್ನು ಹೇಳುತ್ತೀರೋ ಅಥವಾ ಯೋಗವನ್ನು ಹೇಳುತ್ತೀರೋ? ರೂಢಿಯಿಂದ ವಿಷ್ಣುವನ್ನು ಪ್ರತಿಪಾದಿಸಲು ಸಾಧ್ಯವಿಲ್ಲ. ಭೂತಾಕಾಶದಲ್ಲಿಯೇ ಆಕಾಶಶಬ್ದದ ರೂಢಿಯು ಪ್ರಸಿದ್ಧವಾದ್ದರಿಂದ ವಿಷ್ಣುವಿನಲ್ಲಿ ರೂಢಿಯನ್ನು ಹೇಳಲಾಗದು. ಯೋಗದಿಂದ ವಿಷ್ಣುವಾಚಕತ್ವವನ್ನು ಹೇಳುವುದಾದರೆ ಆ ಯೋಗವು ಪ್ರಮಾಣಸಿದ್ಧವಾಗಿದೆಯೋ ಅಥವಾ ಇಲ್ಲವೋ? ಪ್ರಮಾಣಸಿದ್ಧವೆಂದಾದಲ್ಲಿ ಅವಕಾಶತ್ವವನ್ನು ಆಕಾಶತ್ವವೆನ್ನಬೇಕು ಅಂದರೆ ವಿವರತ್ವವು ಆಕಾಶಶಬ್ದದ ಪ್ರವೃತ್ತಿನಿಮಿತ್ತ ಎಂದಂತಾಗುತ್ತದೆ. ಇದನ್ನು ಪ್ರಧಾನದಲ್ಲಿರುವ ಅವರತ್ವಾದಿಗಳಂತೆ ಭಗವಂತನ ಅಧೀನವೆಂದು ಹೇಳುತ್ತೀರೋ ಅಥವಾ ಇಂದ್ರಾದಿ ಶಬ್ದಗಳ ಪ್ರವೃತ್ತಿನಿಮಿತ್ತವಾದ ಐಶ್ವರ್ಯಾದಿಗಳಂತೆ ಭಗವಂತನಲ್ಲಿಯೇ ವಿವರತ್ವಾದಿಗಳು ಇವೆಯೆನ್ನುತ್ತೀರೋ? ಈ ಎರಡು ಕಾರಣಗಳಿಂದಷ್ಟೇ ಭಗವಂತನಲ್ಲಿ ಆಕಾಶಶಬ್ದದ ಪ್ರಯೋಗವನ್ನು ಕೂಡಿಸಬಹುದು.

ಆದರೆ ಮೊದಲನೆಯ ಪಕ್ಷ ತಪ್ಪು. ಚೇತನರ ಸ್ವಭಾವವು ಮತ್ತೊಬ್ಬರ ಅಧೀನವಾದಾಗ ನಿಯಾಮಕವ್ಯಕ್ತಿಯಲ್ಲಿ ಆ ಶಬ್ದದ ಪ್ರಯೋಗವು ಕಂಡಿದೆ. ಆದರೆ ಜಡವಾದ ವಸ್ತುವಿನ ಸ್ವಭಾವವು ಚೇತನಾಧೀನವಾದರೂ ಸಹ ಚೇತನರಲ್ಲಿ ಆ ಜಡಸ್ವಭಾವ ಶಬ್ದದ ಪ್ರಯೋಗವು ಲೋಕದಲ್ಲಿ ಕಂಡಿಲ್ಲ. ಈ ವಿಷಯದಲ್ಲಿ ಎರಡು ಹೇತುಗಳನ್ನು ಗ್ರಂಥಕಾರರು 'ಆಕಾಶಶಬ್ದಪ್ರವೃತ್ತಿನಿಮಿತ್ತಸ್ಯ' ಇತ್ಯಾದಿ ಗ್ರಂಥದಿಂದ ವಿವಕ್ಷಿಸಿದ್ದಾರೆ. ಅಚೇತನಗತತ್ವ ಮತ್ತು ಅಚೇತನಸ್ವಭಾವತ್ವವೆಂಬ ಎರಡು ಹೇತುಗಳು ಸಾಕ್ಷಾತ್ತಾಗಿ ಅಥವಾ ಪರಂಪರೆಯಿಂದಾಗಿ ಭಗವಂತನ ಅಧೀನಗಳಾಗಲಾರವು. ಮೊದಲನೆಯ ಹೇತುವನ್ನು ದೃಷ್ಟಾಂತಪುರಃಸರವಾಗಿ 'ಆದ್ಯೇ' ಇತ್ಯಾದಿ ವಾಕ್ಯದಿಂದ ವಿವರಿಸಿದ್ದಾರೆ. ಎಲ್ಲವೂ ಸಹ ಭಗವಂತನಿಂದ ನಿಯಮ್ಯಗಳಾಗಿವೆ. ಹೀಗಿರುವಾಗ ಅಚೇತನಗತತ್ವವು ಭಗವಂತನ ಅಧೀನವಲ್ಲವೆನ್ನಲು ಹೇಗೆ ಹೇತುವಾಗುತ್ತದೆ? ಅಚೇತನಗತತ್ವವೆಂಬ ಹೇತುವಿದ್ದರೂ ಭಗವದನಧೀನತ್ವವೆಂಬ ಸಾಧ್ಯವಿರುವುದು ಬೇಡ ಎಂಬ ಅಪ್ರಯೋಜಕಾಶಂಕೆಯನ್ನು ಗ್ರಂಥಕಾರರು ಪರಿಹರಿಸಿದ್ದಾರೆ.

ಶಂಕೆ - ಅಚೇತನದ ಧರ್ಮವನ್ನು ಚೇತನರಲ್ಲಿ ಹೇಳಲಾಗದೆಂದು ಹೇಳಿದಿರಿ. 'ಮೃದಬ್ರವೀತ್' 'ಆಪೋಽಬ್ರುವನ್' ಇತ್ಯಾದಿ ಸ್ಥಳದಲ್ಲಿ ಅಭಿಮಾನಿ ಚೇತನರಲ್ಲಿ ಮೃದಾದಿಶಬ್ದಗಳ ಪ್ರಯೋಗವನ್ನು ನೀವೇ ಸಮರ್ಥಿಸಿದ್ದೀರಲ್ಲ. ಆದರಂತೆ ಇಲ್ಲಿಯೂ ಸಹ ಜಡವಾಚಿಯಾದ ಆಕಾಶಶಬ್ದವನ್ನು ವಿಷ್ಣುವಿನಲ್ಲಿ ಪ್ರಯೋಗಿಸಬಹುದು.

ಸಮಾಧಾನ - ಈ ಆಕಾಶಾಧಿಕರಣದ ಸಿದ್ಧಾಂತನ್ಯಾಯದಿಂದ ಅಭಿಮಾನಿ ಚೇತನರ ಆಧೀನ್ಯವನ್ನು ಜಡಪದಾರ್ಥಗಳಿಗೆ ಹೇಳಬಹುದೆಂದು ಸಿದ್ಧವಾಗುತ್ತದೆ. ಈ ನ್ಯಾಯವನ್ನು ಆಶ್ರಯಿಸಿ ದೇವತೆಗಳಲಿ

ಜಡವಾಚಕಶಬ್ದಗಳ ಪ್ರಯೋಗವನ್ನು ಮಾಡಬಹುದೆಂದು ಅಭಿಮಾನ್ಯಧಿಕರಣದಲ್ಲಿ ಸಮರ್ಥಿಸುತ್ತಾರೆ. ಹೀಗಿರುವಾಗ ಆಕಾಶಾಧಿಕರಣದ ಪೂರ್ವಪಕ್ಷಿಯು ಅಭಿಮಾನ್ಯಧಿಕರಣದ ಸಿದ್ಧಾಂತವನ್ನು ಆಶ್ರಯಿಸಿ ಶಂಕಿಸಲು ಸಾಧ್ಯವಿಲ್ಲ. ಅವನಿಗೆ ಅಭಿಮಾನ್ಯಧಿಕರಣದ ಸಿದ್ಧಾಂತವೂ ಸಹ ಸಮ್ಮತವಾಗಿಲ್ಲ. ಹೀಗೆ ''ಅಚೇತನಸ್ವಭಾವಸ್ತು ವಿವರಾದಿಃ ಕಥಂ ತತಃ?'' ಎಂಬ ಅನುವ್ಯಾಖ್ಯಾನಶ್ಲೋಕವನ್ನು ವ್ಯಾಖ್ಯಾನಿಸಿದಂತಾಯಿತು.

ಅಚೇತನದಲ್ಲಿರುವ ಪ್ರವೃತ್ತಿನಿಮಿತ್ತವನ್ನು ಅಪೇಕ್ಷಿಸಿರುವ ಸಕಲಶಬ್ದಗಳ ಸಮನ್ವಯವನ್ನು ಈ ಆಕಾಶಾಧಿಕರಣದಲ್ಲಿ ಮಾಡುತ್ತಿದ್ದಾರೆ. ಆದ್ದರಿಂದ ಮುಂದಿನ ಅಧಿಕರಣಗಳಲ್ಲಿ ಸಮನ್ವಯ ಮಾಡುವ ಪ್ರಾಣ, ಗಾಯತ್ರೀ, ಜ್ಯೋತಿರಾದಿ ಶಬ್ದಗಳನ್ನೂ ಸಹ ಇಲ್ಲಿ ಸಮನ್ವಯ ಮಾಡುತ್ತಿದ್ದಾರೆ. ಹಾಗಾದರೆ ಪುನರುಕ್ತಿ ಬರುತ್ತದಲ್ಲಾ? ಎಂಬ ಶಂಕೆಗೆ ಅವಕಾಶವಿಲ್ಲ. ಮುಂದಿನ ಅಧಿಕರಣಗಳಲ್ಲಿ ಅಧಿಕಾಶಂಕೆಗೆ ಅನುಗುಣವಾಗಿ ಆಧ್ಯಾತ್ಮಿಕಶಬ್ದತ್ವೇನ ರೂಪೇಣ ಜ್ಞಾನಾದಿಶಬ್ದಗಳ ಸಮನ್ವಯವನ್ನು ಮಾಡುತ್ತಾರೆ. ಆದೇ ಶಬ್ದಗಳನ್ನು ಇಲ್ಲಿ ಅಚೇತನಗತಪ್ರವೃತ್ತಿನಿಮಿತ್ತಕತ್ವರೂಪೇಣ ಸಮನ್ವಯ ಮಾಡುತ್ತಿದ್ದಾರೆ. ಹೀಗೆ ಅವಚ್ಛೇದಕಭೇದೇನ ಒಂದೇ ಶಬ್ದವನ್ನು ಅನೇಕ ಅಧಿಕರಣಗಳಲ್ಲಿ ಸಮನ್ವಯ ಮಾಡಬಹುದು. ಹೀಗೆ ಹೇಳಿದಿದ್ದರೆ ಪ್ರಾಣಾದಿಶಬ್ದಗಳು ಹೇಗೆ ವಿಷ್ಣುವಾಚಿಯಾಗುತ್ತವೋ ಆದರಂತೆ ಆಕಾಶಶಬ್ದವೂ ಸಹ ವಿಷ್ಣುವಾಚಿಯಾಗುತ್ತದಲ್ಲವೇ? ಎಂಬ ಶಂಕೆಯು ಸಹಜವಾಗಿ ಬರುತ್ತದೆ. ಆದಕ್ಕೋಸ್ಕರ ಪ್ರಾಣಾದಿಶಬ್ದಗಳನ್ನೂ ಸಹ ಈ ಅಧಿಕರಣದಲ್ಲಿ ವಿಷ್ಣುವಾಚಿಯಲ್ಲವೆಂದು ಆಕ್ಷೇಪಿಸಿ, ಉತ್ತರಿಸಬೇಕಾದ ಅನಿವಾರ್ಯತೆ ಇದೆ. ಈ ಅಧಿಕರಣದ ಪೂರ್ವಪಕ್ಷಿಯು ಆಕಾಶಶಬ್ದದಂತೆ ಪ್ರಾಣಾದಿಶಬ್ದಗಳೂ ಸಹ ವಿಷ್ಣುಪರವಲ್ಲವೆಂದು ಅಭಿಪ್ರಾಯ ಪಡುತ್ತಾನೆ. ಹಾಗಾದಾಗ ಮಾತ್ರ ಆಕಾಶಾಧಿಕರಣಕ್ಕೆ ಸಾರ್ಥಕ್ಯವನ್ನು ಹೇಳಲು ಸಾಧ್ಯ.

ಅಚೇತನಸ್ವಭಾವತ್ವವೆಂಬ ಎರಡನೆಯ ಹೇತುವನ್ನು 'ದ್ವಿತೀಯೇ ತು' ಇತ್ಯಾದಿ ಗ್ರಂಥದಿಂದ ವಿವರಿಸುತ್ತಿದ್ದಾರೆ. ಭಾಷ್ಯದಲ್ಲಿ ಹೇಳಿದ ಉದಾಹರಣವಾಕ್ಯಕ್ಕೆ ವಿರೋಧ ಬಾರದಂತೆ 'ಕಸ್ಯಚಿತ್' ಎಂಬ ವಾಕ್ಯದಿಂದ ವ್ಯಾಖ್ಯಾನಿಸಿದ್ದಾರೆ.

## ವಾಜಪೇಯಾಧಿಕರಣ

''ನಾಮಧೇಯೇ ಗುಣಶ್ರುತೇಃ ಸ್ಯಾದ್ವಿಧಾನಮಿತಿ ಚೇತ್' (೧-೪-೫)

ಸಂಶಯ - 'ವಾಜಪೇಯೇನ ಸ್ವಾರಾಜ್ಯಕಾಮೋ ಯಜೇತ' ಎಂಬುದು ಈ ಅಧಿಕರಣದ ವಿಷಯವಾಕ್ಯ. ಇಲ್ಲಿ ಕೇಳಿಸುತ್ತಿರುವ ವಾಜಪೇಯಶಬ್ದವು ಗುಣವಿಧಿಯೋ? ಅಥವಾ ಯಾಗವೆಂಬ ಕರ್ಮದ ಹೆಸರೋ?

ಪೂರ್ವಪಕ್ಷ - ವಾಜಪೇಯಶಬ್ದವು ಗುಣವಿಧಾಯಕವಾಗಿದೆ. ಅದು ಹೀಗೆ -- ಯಜೇತ ಎಂಬಲ್ಲಿ 'ಯಜ್' ಎಂಬ ಪ್ರಕೃತಿಯು 'ಈತ' ಎಂಬ ಲಿಙ್‌ಪ್ರತ್ಯಯವು ಕೇಳಿಸುತ್ತದೆ. ಯಜ್ ಧಾತುವು ಯಾಗವನ್ನು ಲಿಙ್ ಪ್ರತ್ಯಯವು ಭಾವನಾವನ್ನು ಹೇಳುತ್ತಿದೆ. ಕರ್ಮತ್ವ ಮತ್ತು ಕರಣತ್ವಗಳು ಸ್ಪಷ್ಟವಾಗಿ ಕಾಣಿಸದ

ಕಾರಣ 'ಯಾಗೇನ ಭಾವಯೇತ್' ಎಂದಾಗಲೀ, 'ಯಾಗಂ ಭಾವಯೇತ್' ಎಂದಾಗಲೀ ಹೇಳುವುದು ಕಷ್ಟ. ಅಂದರೆ ಭಾವನಾದಲ್ಲಿ ಯಾಗವು ಕರ್ಮವೋ? ಅಥವಾ ಕರಣವೋ? ಎಂದು ತಿಳಿಯುವುದಿಲ್ಲ. ಆದ್ದರಿಂದ ಯಾಗಕರ್ಮಕಭಾವನಾ ಎಂದೂ ಹೇಳಬಹುದು, ಯಾಗಕರಣಕಭಾವನಾ ಎಂದೂ ಹೇಳಬಹುದು. ಯಾಗಕರ್ಮಕಭಾವನಾ ಎಂದು ಹೇಳಿದಾಗ 'ಯಾಗಂ ಭಾವಯೇತ್' ಎಂದಾಗುತ್ತದೆ. ಇವಾಗ ಕರ್ಮಕ್ಕೆ ಫಲಸಂಬಂಧವನ್ನು ಹೇಳುವುದು ಅನಿವಾರ್ಯ. ಶ್ರುತಿಯಲ್ಲಿಯೇ ಸ್ವಾರಾಜ್ಯಕಾಮಃ ಎಂಬ ಪದವು ಸ್ವಾರಾಜ್ಯವೆಂಬ ಫಲದ ಸಂಬಂಧವನ್ನು ಹೇಳುತ್ತಿದೆ. ಆದ್ದರಿಂದ ಭಾವನಾವಾಚಕವಾದ 'ಈತ' ಎಂಬ ಪ್ರತ್ಯಯವನ್ನು ತಂತ್ರದಿಂದ ಎರಡು ಬಾರಿ ಅನ್ವಯ ಮಾಡಬೇಕು. 'ಯಾಗಂ ಭಾವಯೇತ್' ಮತ್ತು 'ಸ್ವಾರಾಜ್ಯಂ ಭಾವಯೇತ್' ಎಂದು ತಂತ್ರದಿಂದ ಫಲಸಂಬಂಧವನ್ನು ಹೇಳಿದಾಗ ಆಕಾಂಕ್ಷೆಯು ಬರುವುದಿಲ್ಲ. 'ವಾಜಪೇಯೇನ ಸ್ವಾರಾಜ್ಯಕಾಮೋ ಯಜೇತ' ಎಂಬ ವಾಕ್ಯಕ್ಕೆ

---

ಭಾಟ್ಟಸಙ್ಗ್ರಹಃ –

**अथ षष्ठं वाजपेयादिशब्दानां यागनामधेयताधिकरणम् (सूत्राणि ६-८)**

**नामधेये गुणश्रुतेः स्याद्विधानमिति चेत् ॥ ६ ॥**

**(तुल्यत्वात्क्रियायोर्न ॥ ७ ॥ ऐकशब्द्ये परार्थवत् ॥ ८ ॥)**

प्रागधिकरणचतुष्टयोक्तनामत्वाक्षेपेणेह शङ्कनादाक्षेपिकी सङ्गतिः । 'वाजपेयेन स्वाराज्यकामो यजेत' इत्यत्र श्रुतो वाजपेयशब्दो गुणविधिपरोऽथ नामधेयमिति सन्देहः । पूर्वपक्षस्तु 'यजेत' इत्यत्र प्रत्ययोक्तभावनायां प्रकृतिप्रत्ययसमभिव्याहारादन्वीयमानो धात्वर्थो यागः कर्मत्वेन करणत्वेन वा यद्यन्वीयेत तदा वाजपेयपदोपात्तगुण-स्वाराज्यकामपदोपात्तफलयोरन्यतरान्वय एव स्यात्, नोभाभ्याम् । न चैवम् । कर्मत्वादिविशेषान्वयवाचिपदाभावात् । किन्तु कर्मत्वकरणत्वसाधारणसम्बन्ध-मात्रेणान्वेति । तत्र कर्मत्वांशमादाय गुणस्य करणत्वांशेन फलस्य 'पेयरूपवाजेन यागं, यागेन स्वाराज्यं' इति च युगपदन्वयसम्भवेन मत्वर्थलक्षणादिकं विनैव तन्त्रेण फलकरणाभ्यां यागः सम्बद्धुमर्हतीति (पेयरूपमन्नं वाजं सुराद्रव्यमिति यावत्) सुराग्रहाणां तत्रानुष्ठेयत्वात् तद्रूपगुणपरोऽयं वाजपेयशब्दः । 'उद्भिदायजेत' इत्यादिपूर्वोदाहरणेष्वप्येवं वक्तुं शक्यत्वान्न कापि नामधेयत्वमिति । सिद्धान्तस्तु कर्मत्वकरणत्वौदासीन्येन सम्बन्धमात्रावगतौ गुणफलयोरन्यतरेणाप्यनन्वयः । कर्मत्व-करणत्वयोरन्यतरविशेषबोधने गुणफलयोरन्यतरेणान्वयो न द्वाभ्यामपि । यागकर्मिका यागकरणिका च भावनेति युगपदुभयान्वयबोधपक्षे गुणफलयोभयसम्बन्धसम्भवेऽपि तथा बोध एवायुक्तः । विरुद्धत्रिकद्वयापत्तेः । कर्मत्वसमानाश्रया उद्देश्यत्वानुवाद्यत्वप्रधानत्व-रूपास्त्रयो धर्माः । करणत्वसमानाधिकरणा उपादेयत्वविधेयत्वगुणत्वरूपास्त्रयो धर्माः । ते युगपदापद्येरन् । अतः पेयरूपवाजभूतसुराद्रव्यसम्बन्धनिमित्तेन वाजपेयशब्दो नाम-

ಪಾನಾರ್ಹವಾದ ಅನ್ನಸ್ಥಾನದಲ್ಲಿರುವ ಸುರಾದಿಗಳಿಂದ ಯಾಗಂ ಭಾವಯೇತ್ ಎಂದು ಅರ್ಥ. ಈ ಪಕ್ಷದಲ್ಲಿ ವಾಜಪೇಯೇನ ಎಂಬ ಶಬ್ದಕ್ಕೆ 'ವಾಜಪೇಯವತಾ ಯಾಗೇನ' ಎಂಬ ಮತ್ವರ್ಥಲಕ್ಷಣಾವನ್ನು ಮಾಡಬೇಕಾಗಿಲ್ಲ. ವಾಜಪೇಯಕರಣದಿಂದ 'ಯಾಗಂ ಭಾವಯೇತ್ ತೇನ ಸ್ವಾರಾಜ್ಯಂ ಚ ಭಾವಯೇತ್' ಎಂದು ಸುಲಭವಾಗಿಯೇ ಅರ್ಥವನ್ನು ಹೇಳಬಹುದು. ಈ ಕಾರಣದಿಂದ ವಾಜಪೇಯಶಬ್ದವು ಯಾಗದಲ್ಲಿ ಗುಣವನ್ನಷ್ಟೇ ವಿಧಿಸುತ್ತಿದೆ ಹೊರತು ವಾಜಪೇಯವೆಂಬ ಕರ್ಮವನ್ನು ವಿಧಿಸುತ್ತಿಲ್ಲ.

ಸಿದ್ಧಾಂತ - ವಾಜಪೇಯಶಬ್ದವು ಯಾಗದ ನಾಮಧೇಯವಾದ್ದರಿಂದ ಕರ್ಮವಿಧಾಯಕವೇ ಆಗಿದೆ. ಆದ್ದರಿಂದ ಗುಣವಿಧಾಯಕವೆಂಬ ಪೂರ್ವಪಕ್ಷವು ತಪ್ಪು. ಏಕೆಂದರೆ, 'ಯಜೇತ' ಎಂಬಲ್ಲಿ ಪ್ರಕೃತಿ ಪ್ರತ್ಯಯಗಳ ಸಮಭಿವ್ಯಾಹಾರವಿದೆ. ಆ ಸಮಭಿವ್ಯಾಹಾರದಿಂದ ಸಂಬಂಧವಷ್ಟೇ ತಿಳಿಯುತ್ತದೆಂದು ಪೂರ್ವಪಕ್ಷಿಗಳು ಹೇಳಿದರು. ಹಾಗಾದಲ್ಲಿ ಗುಣ ಹಾಗೂ ಫಲಗಳ ಸಂಬಂಧವನ್ನು ಹೇಳುವುದು ಸಾಧ್ಯವಿಲ್ಲ.

ಸ್ವಾರಾಜ್ಯವೆಂಬ ಫಲದ ವಾಜಪೇಯವೆಂಬ ಗುಣದ ಸಂಬಂಧವನ್ನು ಭಾವನಾದಲ್ಲಿ ಹೇಗೆ ಹೇಳುತ್ತೀರಿ? ಯಾಗಕ್ಕೂ ಹಾಗೂ ಭಾವನಾಕ್ಕೂ ಸಂಬಂಧವನ್ನಷ್ಟೇ ಹೇಳಿದರೆ ಆಕಾಂಕ್ಷವೇ ಬರಲಾರದು. (ಯಾಗೇನ ಭಾವಯೇತ್ ಎಂದು ಹೇಳಿದಾಗ ಕೀದೃಶೇನ ಕಿಂ ಭಾವಯೇತ್? ಎಂಬ ಆಕಾಂಕ್ಷೆ ಬರುತ್ತದೆ. ಯಾಗಂ ಭಾವಯೇತ್ ಎಂದು ಹೇಳಿದಾಗ ಕೇನ ಕಿಮರ್ಥಂ ಭಾವಯೇತ್? ಎಂಬ ಆಕಾಂಕ್ಷೆಯು ಬರುತ್ತದೆ. ಪೂರ್ವಪಕ್ಷಿ ಹೇಳುವಂತೆ ಯಾಗ ಹಾಗೂ ಭಾವನಾಗಳಿಗೆ ಸಂಬಂಧವನ್ನಷ್ಟೇ ಹೇಳಿದರೆ ಈ ಆಕಾಂಕ್ಷೆಯು ಬರಲಾರದೆಂದು ಅಭಿಪ್ರಾಯ.) ಇನ್ನು ಹಿಂದೆ ಪೂರ್ವಪಕ್ಷಿಗಳು ಸಂಬಂಧಸಾಮಾನ್ಯವಷ್ಟೇ ತಿಳಿಯುತ್ತದೆ, ಆ ಸಂಬಂಧಸಾಮಾನ್ಯವು ಕರ್ಮ ಅಥವಾ ಕರಣ ಯಾವುದೂ ಆಗಬಹುದೆಂದಿದ್ದರು. ಇದೂ ಸಹ ತಪ್ಪು.

ಸಮಭಿವ್ಯಾಹಾರದಿಂದ ಕರ್ಮತ್ವರೂಪ ಸಂಬಂಧವಿಶೇಷವನ್ನು ಲಕ್ಷಣಯಾ ಹೇಳಬೇಕು. ಆಗ ವಾಜಪೇಯವೆಂಬ ಗುಣದ ಸಂಬಂಧವನ್ನಷ್ಟೇ ಹೇಳಬಹುದು ಹೊರತು ಫಲದ ಸಂಬಂಧವನ್ನು ಹೇಳಲಾಗದು. ಇನ್ನು ಕರಣತ್ವಸಂಬಂಧವನ್ನು ಹೇಳಿದರೆ, ಆಮಾಗ 'ಯಾಗೇನ ಭಾವಯೇತ್' ಎಂದು ಫಲದ ಸಂಬಂಧವನ್ನು ಹೇಳಬಹುದು. ಆದರೆ ಗುಣದ ಸಂಬಂಧವನ್ನು ಹೇಳಲಾಗದು. ಎರಡನ್ನೂ ತೆಗೆದುಕೊಂಡರೆ ವಾಜಪೇಯರೂಪಕರಣೇನ ಯಾಗಂ ಭಾವಯೇತ್, 'ಯಾಗೇನ ಸ್ವಾರಾಜ್ಯಂ ಭಾವಯೇತ್' ಎಂದಂತಾಗುತ್ತದೆ.

---

धेयम् । एवमुच्चिदादयः प्राचीनाः सर्वेऽपि शब्दा इति । **फलन्तु** गुणविधित्वे औषधद्रव्यकादैष्टिकविध्यन्तातिदेशः । नामत्वे त्वनवगतदेवतात्वेनाव्यक्तचोदनात्वात् **'अव्यक्तासु तु सोमस्य'** (८-१-१६) इति सौमिमकविध्यन्तातिदेशः । **सूत्रार्थस्तु, वाजपेये** नामधेयत्वाभिमते वाजपेयशब्दे **गुणश्रुतेः** गुणश्रवणात् **गुणविधानं स्यात्** इति ॥ ६ ॥

इति षष्ठं वाजपेयादिशब्दानां यागनामधेयताधिकरणम्

ಆವಾಗ ಅನೇಕ ದೋಷಗಳು ಬರುತ್ತವೆ -- ಎರಡು ವಾಕ್ಯದಿಂದ ಶ್ರುತ್ಯರ್ಥವನ್ನು ವಿವರಿಸಿದರೆ ವಾಕ್ಯಾವೃತ್ತಿಯೆಂಬ ದೋಷ ಬರುತ್ತದೆ. ಮತ್ತು 'ಯಾಗಂ ಭಾವಯೇತ್' ಎಂಬಲ್ಲಿ ಯಾಗವು ಪ್ರಧಾನವಾಗಿದೆ. 'ಯಾಗೇನ ಭಾವಯೇತ್' ಎಂಬಲ್ಲಿ ಯಾಗವು ಗುಣವಾಗಿದೆ. ಹೀಗೆ ಒಂದೇ ಯಾಗ-ಪದಾರ್ಥದಲ್ಲಿ ಗುಣತ್ವ, ಪ್ರಧಾನತ್ವವೆಂಬ ವಿರುದ್ಧಧರ್ಮದ್ವಯಗಳು ಬರಬೇಕಾದೀತು. ಮತ್ತು 'ಯಾಗಂ ಭಾವಯೇತ್' ಎಂಬಲ್ಲಿ ಯಾಗವು ಉದ್ದೇಶವಾಗಿದೆ. 'ಯಾಗೇನ ಭಾವಯೇತ್' ಎಂಬಲ್ಲಿ ವಿಧೇಯವಾಗಿದೆ. ಉದ್ದೇಶ್ಯತ್ವ ಹಾಗೂ ವಿಧೇಯತ್ವಗಳು ವಿರುದ್ಧಧರ್ಮಗಳಾದ್ದರಿಂದ ಒಂದೇ ಯಾಗದಲ್ಲಿ ಹೇಳಲು ಸಾಧ್ಯವಿಲ್ಲ. ಅಷ್ಟೇ ಅಲ್ಲದೆ 'ಯಾಗಂ ಭಾವಯೇತ್' ಎಂಬಲ್ಲಿ ಯಾಗವು ವಿಧಿಯಾಗಿದೆ. 'ಯಾಗೇನ ಭಾವಯೇತ್' ಎಂಬಲ್ಲಿ ಅನುವಾದವಾಗಿದೆ. ವಿಧಿ ಹಾಗೂ ಅನುವಾದಗಳೂ ಸಹ ವಿರುದ್ಧವಾದ್ದರಿಂದ ಒಂದೇ ಯಾಗದಲ್ಲಿ ಹೇಳಲಾಗದು. ಹೀಗೆ ಅನೇಕ ಮುಖದಲ್ಲಿ ವೈರೂಪ್ಯದೋಷ ಬರುವುದರಿಂದ ತಂತ್ರದಿಂದ ಅನ್ವಯವನ್ನು ಪೂರ್ವಪಕ್ಷಿಗಳಿಗೆ ಹೇಳಲು ಬರುವುದಿಲ್ಲ

ಮತ್ತು ವಾಜಪೇಯಶಬ್ದಕ್ಕೆ ಮತ್ವರ್ಥದಲ್ಲಿ ಲಕ್ಷಣಾಪ್ರಸಂಗವೆಂಬ ದೋಷವನ್ನು ಪೂರ್ವಪಕ್ಷಿಗಳು ಹೇಳಿದ್ದರು. ಈ ದೋಷವೂ ಸಹ ಬರುವುದಿಲ್ಲ. ಏಕೆಂದರೆ ಇದುವರೆಗೂ ನಿರೂಪಿಸಿದ ಪ್ರಕಾರ ತಂತ್ರಸಂಬಂಧವನ್ನು ಹೇಳುವುದು ಸಾಧ್ಯವೇ ಇಲ್ಲ. ಆದ್ದರಿಂದ ಮತ್ವರ್ಥದಲ್ಲಿ ಲಕ್ಷಣಾ ಮಾಡುವುದು ಪೂರ್ವಪಕ್ಷಿಗಳಿಗೆ ಅನಿವಾರ್ಯವಾಗಿದೆ. 'ಯಜೇತ' ಎಂಬಲ್ಲಿ ಕರಣತ್ವವೇ ಸಂಬಂಧವಾಗುತ್ತದೆ. 'ವಾಜಪೇಯೇನ ಯಾಗೇನ ಸ್ವಾರಾಜ್ಯಂ ಭಾವಯೇತ್' ಎಂದು ವಾಜಪೇಯಕ್ಕೂ ಮತ್ತು ಯಾಗಕ್ಕೂ ಸಾಮಾನಾಧಿಕರಣ್ಯದ ನಿರ್ವಹಣೆಗಾಗಿ ಮತ್ವರ್ಥಲಕ್ಷಣಾವನ್ನು ಒಪ್ಪಬೇಕಾಗುತ್ತದೆ. ವಾಜವೆಂಬ ಅನ್ನಸ್ಥಾನದಲ್ಲಿರುವ ಸುರಾ ಎಂಬ ದ್ರವ್ಯವನ್ನು ಹೊಂದಿರುವ ವಾಜಪೇಯವೆಂಬ ಯಾಗವನ್ನು ಮಾಡಬೇಕೆಂದು ಶ್ರುತಿಗೆ ಅರ್ಥ. ಈ ವಾಕ್ಯದಲ್ಲಿ ವಾಜಪೇಯವೆಂಬ ಯಾಗವನ್ನು ಮತ್ತು ಸುರಾವೆಂಬ ಗುಣವನ್ನು ವಿಧಿಸಬೇಕಾದ್ದರಿಂದ ವಾಜಪೇಯಶಬ್ದವು ನಾಮಧೇಯವೆಂದೇ ಹೇಳಬೇಕು. ವಾಜಪೇಯ ಯಾಗದಲ್ಲಿ ಮುಖ್ಯವಾಗಿ ಕ್ಷತ್ರಿಯರಿಗೆ ಸುರಾಪಾನವನ್ನು ವಿಧಿಸಿದ್ದಾರೆ. ಆದ್ದರಿಂದ ತತ್ಪುಚ್ಛನ್ಯಾಯದಂತೆ ವಾಜಪೇಯಶಬ್ದವು ನಾಮಧೇಯವೇ ಆಗಿದೆ. ಗುಣವಿಧಾಯಕವಾಗಿಲ್ಲ.

ಸರ್ವೇಷ್ವಾಖ್ಯಾತಶಬ್ದೇಷು ತಂತ್ರಸಂಬಂಧಸಂಭವಾತ್ ।
ಮತ್ವರ್ಥಲಕ್ಷಣಾದೋಷೋ ನಾಸ್ತೀತ್ಯಾಕ್ಷಿಪ್ತತೇऽಧುನಾ ॥

'ವಾಜಪೇಯೇನ ಯಜೇತ' 'ಜ್ಯೋತಿಷ್ಟೋಮೇನ ಯಜೇತ' ಇತ್ಯಾದಿ ಶ್ರುತಿಗಳಲ್ಲಿ 'ಯಜೇತ 'ಎಂಬ ಆಖ್ಯಾತಶಬ್ದವು ಕೇಳಿಸುತ್ತಿದೆ. ಆದ್ದರಿಂದ ಈ ಸ್ಥಳಗಳೆಲ್ಲೆಲ್ಲಾ ತಂತ್ರಸಂಬಂಧವನ್ನು ಹೇಳಬಹುದು. 'ಯಾಗಂ ಭಾವಯೇತ್, ಯಾಗೇನ ಫಲಂ ಭಾವಯೇತ್' ಎಂದು ಹಿಂದೆ ಹೇಳಿದಂತೆ ಇಲ್ಲಿಯೂ ಸಹ ಹೇಳಬೇಕು. ಹೀಗೆ ತಂತ್ರಸಂಬಂಧವನ್ನು ಮಾಡಿದಾಗ ಮತ್ವರ್ಥಲಕ್ಷಣಾದೋಷವು ಬರುವುದಿಲ್ಲ. ಎಂದು ಪೂರ್ವಪಕ್ಷಿಗಳು ಆಕ್ಷೇಪಿಸಿದ್ದಾರೆ.

ವಸ್ತುತಸ್ತು ಉದ್ಭಿದಾದಿಶಬ್ದಗಳು ನಾಮಧೇಯಗಳೆಂದು ಹಿಂದಿನ ಅಧಿಕರಣಗಳಲ್ಲಿಯೇ ನಿರ್ಣಯಿಸಲಾಗಿದೆ. ಆದರೂ ಸಹ ಈ ವಾಜಪೇಯಾಧಿಕರಣದಲ್ಲಿ ಉದ್ಭಿದಾದಿಶಬ್ದಗಳನ್ನು ಸೇರಿಸಿ

ಪೂರ್ವಪಕ್ಷಿಗಳು ಆಕ್ಷೇಪ ಮಾಡುತ್ತಿದ್ದಾರೆ. 'ಉದ್ಭಿದಾದಿಶಬ್ದಗಳಲ್ಲೇಕೆ ಮತ್ವರ್ಥಲಕ್ಷಣಾ ಮಾಡಬೇಕು? ಗುಣವಿಶಿಷ್ಟಕರ್ಮಪಕ್ಷದಲ್ಲಷ್ಟೇ ಮತ್ವರ್ಥಲಕ್ಷಣಾದೋಷವು ಬರುತ್ತದೆ. ಗುಣವಿಧಾಯಕ ಪಕ್ಷದಲ್ಲಿ ತಂತ್ರಸಂಬಂಧವನ್ನು ಹೇಳಿದ್ದರಿಂದ ಮತ್ವರ್ಥಲಕ್ಷಣಾದೋಷವು ಬರುವುದಿಲ್ಲ'' ಹೀಗೆ ಪೂರ್ವಪಕ್ಷಿಗಳು ಆಕ್ಷೇಪಿಸಿದ್ದಾರೆ. ಸಿದ್ಧಾಂತದಲ್ಲಿ ಇದನ್ನು ನಿರಾಕರಿಸುತ್ತಾ ಕೇವಲ ಗುಣವಿಧಿಯಾಗಿದ್ದರೆ ಮತ್ವರ್ಥಲಕ್ಷಣಾದೋಷವು ಬರುತ್ತಿತ್ತು. ಆದರೆ ನಾಮಧೇಯವೆಂದು ನಾವು ಹೇಳುವುದರಿಂದ ಮತ್ವರ್ಥಲಕ್ಷಣಾದೋಷವು ಬರುವುದಿಲ್ಲವೆಂದು ಹೇಳಿದ್ದಾರೆ. ಈ ಅಧಿಕರಣದಲ್ಲಿ ಉದ್ಭಿದಾದಿ ಎಲ್ಲಾ ಶಬ್ದಗಳನ್ನು ವಿಚಾರ ಮಾಡಿದ್ದರೂ ವಾಜಪೇಯಶಬ್ದವನ್ನಷ್ಟೇ ಉದಾಹರಿಸಿದ್ದಾರೆ. ಇದರಂತೆ ಪ್ರಕೃತ ಆಕಾಶಾಧಿಕರಣದಲ್ಲಿಯೂ ಸಹ ಪ್ರಾಣ ಗಾಯತ್ರೀ, ಜ್ಯೋತಿರಾದಿಸಕಲಶಬ್ದಗಳ ಸಮನ್ವಯವನ್ನು ಮಾಡುತ್ತಿದ್ದರೂ ಸಹ ಕೇವಲ ಆಕಾಶಶಬ್ದದ ಉಲ್ಲೇಖವು ತಪ್ಪಲ್ಲ. ಅಚೇತನಗತಪ್ರವೃತ್ತಿನಿಮಿತ್ತಕತ್ವ-ರೂಪದಿಂದ ಸ್ವಭಾವಪ್ರವೃತ್ತಿನಿಮಿತ್ತಕತ್ವರೂಪದಿಂದ ಸಕಲಶಬ್ದಗಳು ಉದಾಹರಣೆಯಾಗಿದ್ದರೂ ಒಂದನ್ನಷ್ಟೇ ಸ್ವೀಕರಿಸಿದ್ದು ವಾಜಪೇಯಶಬ್ದದಂತೆ.

''ಅಚೇತನಸ್ವಭಾವಸ್ತು ವಿವರಾದಿಃ ಕಥಂ ತತಃ'' ಎಂಬ ಆಚಾರ್ಯರ ಮಾತನ್ನು ಹೀಗೆ ಯೋಜಿಸಬೇಕು -- ವಿವರಾದಿಃ = ಸ್ವಭಾವರೂಪವಾದ ವಿವರತ್ವಾದಿಗಳು ತತಃ = ಭಗವಂತನ ಅಧೀನ, ಕಥಂ = ಹೇಗಾಗುತ್ತವೆ? ಅಚೇತನಸ್ವಭಾವಃ = ಅಚೇತನಸ್ವಭಾವವಾದ್ದರಿಂದ - ಎಂದು.

**ಗುರುರಾಜೀಯಮ್ – अचेतने भगवत्प्रसादोस्तीति ॥** सेवासाध्यसेवकेष्टानिष्ट-प्राप्तिपरिहारानुग्रहेच्छाविशेषस्यैव प्रसादशब्दार्थत्वस्य 'इच्छानिमित्तको यस्मात्' इत्यनुव्याख्यान उक्तत्वादित्यर्थः । इन्द्रादिशब्दप्रवृत्तिनिमित्तानामैश्वर्यादीनामिवेति व्यतिरेकदृष्टान्तः ॥

**अन्याधीनत्वे स्वभावत्वहानेरिति ॥** स्वहेत्वतिरिक्तहेत्वधीनत्वे औत्पत्ति-कत्वरूपस्वाभाविकत्वहान्यापातादित्यर्थः ।

नन्वेवमचेतनप्रवृत्तिनिमित्तकानां स्वाभाविकप्रवृत्तिनिमित्तकानां च शब्दा-नामुदाहरणीयत्वे आकाशशब्दस्यैवोदाहरणं कुतः? इत्यत आह **कस्यचिदिति ॥**

ननु प्रथमातिक्रमे कारणाभावात्पृथिवीशब्द एवोदाहर्तव्यः, इत्यत आह – **आनन्दमयेति ॥**

नन्वनेकेषां विचार्यत्वे एकस्यैवोदाहरणं कुत्राप्यदृष्टं प्रकृत एव कथम् अङ्गीकार्यम्? इत्यतस्तत्र पूर्वसम्प्रतिपन्नदृष्टान्तमाह – **वाजपेयाधिकरण इति ॥**

## ಸಾರ

ಅಭ್ಯಧಿಕಾಶಂಕೆಯನ್ನು ತೋರಿಸುವ ಆನುವ್ಯಾಖ್ಯಾನದ ಅಭಿಪ್ರಾಯವನ್ನು ವಿವರಿಸುತ್ತಾರೆ.

ಆಕಾಶ ಶಬ್ದದ ಪ್ರವೃತ್ತಿ ನಿಮಿತ್ತವಾದ ವಿವರತ್ವವನ್ನು ಭಗವದಧೀನ ಎನ್ನಲು ಆಚೇತನಗತತ್ವ, ಮತ್ತು ಸ್ವಭಾವತ್ವ ಈ ಎರಡೂ ಬಾಧಕವಾಗಿವೆ. ಹೇಗೆಂದರೆ ರಾಜಾಧೀನವಾದ್ದರಿಂದ ಭೃತ್ಯನ ಜಯವನ್ನು ರಾಜನಲ್ಲಿ ವ್ಯವಹರಿಸುವಂತೆ ಆಚೇತನದಲ್ಲಿರುವ 'ತದ್‌ಗತತ್ವ' ಎಂಬ ಪ್ರವೃತ್ತಿನಿಮಿತ್ತವನ್ನಿಟ್ಟುಕೊಂಡು ಚೇತನನ ಅಧೀನವಾಗಿದೆ ಎಂದ ಮಾತ್ರಕ್ಕೆ ಜಡವಾಚಕ ಶಬ್ದಪ್ರಯೋಗವು ಲೋಕದಲ್ಲಿ ಕಂಡಿಲ್ಲ. 'ಚೇತನಪ್ರಸಾದಲಬ್ಧತ್ವ' ರೂಪ ಚೇತನಾಧೀನತ್ವನ್ನಿಟ್ಟುಕೊಂಡು ಹೇಳಬೇಕು. ಆದರೆ ಅಚೇತನವಾದದ್ದರಲ್ಲಿ ಭಗವಂತನ ಪ್ರಸಾದವನ್ನು ಹೇಳಲು ಬರುವುದಿಲ್ಲ ಎಂದು ಶಂಕಾಭಿಪ್ರಾಯ.

ಹೀಗೆ, ಇಂದ್ರಾದಿಶಬ್ದಗಳ ಪ್ರವೃತ್ತಿ ನಿಮಿತ್ತಗಳು ಹೇಗೆ ಇಂದ್ರಾದಿಗಳ ಸ್ವಭಾವವೋ ಹಾಗೆ ವಿವರತ್ವವೂ ಕೂಡ ಆಕಾಶದ್ದೇ ಸ್ವಭಾವ. ಹಾಗಾಗಿ ಇದನ್ನು ಭಗವಂತನ ಅಧೀನವೆನ್ನುವುದಾದರೆ. ಅದರ ಸ್ವಭಾವವಾಗಲಿಕ್ಕೆ ಹೇಗೆ ಸಾಧ್ಯ? ಭೃತ್ಯನಲ್ಲಿರುವ ಭೃತ್ಯನ ಸ್ವಾಭಾವಿಕ ರೂಪಾದಿಗಳನ್ನಿಟ್ಟುಕೊಂಡು ರಾಜನು ರೂಪವಂತ ಎಂದು ಎಲ್ಲಿಯಾದರೂ ಬಳಸುವುದು ಕಂಡಿದೆಯೇ? ಎಂದು ಪ್ರಶ್ನೆಯ ಅಭಿಪ್ರಾಯ.

---

### ಜಡಸ್ವಭಾವವು ಹೇಗೆ ಭಗವದಧೀನ?

**ತಾತ್ಪರ್ಯಚನ್ದ್ರಿಕಾ –**

**ಯಥಾ – ವಿವರತ್ವಾದಿಕಂ ಕಿಮಿನ್ದ್ರಾದಿಗತೈಶ್ವರ್ಯಾದಿವದೀಶ್ವರಪ್ರಸಾದಲಬ್ಧತ್ವಾತ್ ತದಧೀನಮ್ ಕಿಂ ವಾ ಕುಲಾಲಾಧಧೀನಚಕ್ರಾದಿಭ್ರಮಣವದಾಗನ್ತುಕತ್ವಮಾತ್ರೇಣ? ನಾಽಽಃ, ತಸ್ಯಾಚೇತನಗತತ್ವೇನ ತದಭಾವಾತ್ । ನಾನ್ತ್ಯಃ, ಸ್ವಭಾವತ್ವಾತ್ । ತಥಾ ಚ ವಿವರತ್ವಾದಿಕಂ ನೇಶ್ವರಾಧೀನಮಿತೀಶ್ವರಾನಧೀನತ್ವೇ ಸಾಪೇಕ್ಷಯೋರೇವಾಚೇತನಗತತ್ವಸ್ವಭಾವತ್ವಯೋರ್ಹೇತುತ್ವಮ್ ।**

ಅನುವಾದ - ಅಥವಾ ಹೀಗೆ ಪ್ರಶ್ನಿಸುತ್ತೇವೆ - ಇಂದ್ರಾದಿಗಳಲ್ಲಿರುವ ಐಶ್ವರ್ಯಾದಿಗುಣಗಳು ಭಗವಂತನ ಪ್ರಸಾದದಿಂದ ಲಭ್ಯವಾಗಿವೆ. ಆದಕಾರಣ ಭಗವಂತನ ಅಧೀನಗಳಾಗಿವೆ. ಅದರಂತೆ ಆಕಾಶಾದಿಗಳಲ್ಲಿರುವ ವಿವರತ್ವಾದಿಗಳು ಭಗವಂತನ ಪ್ರಸಾದದಿಂದ ಲಭ್ಯವಾದ ಕಾರಣ ಭಗವಂತನ ಅಧೀನವೆಂದು ಹೇಳುತ್ತೀರೋ? ಅಥವಾ ಆಗಂತುಕ ಧರ್ಮವಾದ ಚಕ್ರಭ್ರಮಣಾದಿಗಳು ಕುಲಾಲನ ಅಧೀನವಾದಂತೆ ಆಕಾಶಾದಿಗಳಲ್ಲಿರುವ ವಿವರತ್ವಾದಿಗಳು ಪರಮಾತ್ಮನಿಂದ ಉಂಟಾದ ಆಗಂತುಕಧರ್ಮವೆಂದು ಹೇಳುತ್ತೀರೋ?

ಮೊದಲನೆಯ ಪಕ್ಷ ಸರಿಯಲ್ಲ. ವಿವರತ್ವಾದಿಗಳು ಜಡಪದಾರ್ಥಗಳಲ್ಲಿರುವುದರಿಂದ ಭಗವಂತನ ಪ್ರಸಾದಕ್ಕೆ ಅರ್ಹವಾಗಲು ಸಾಧ್ಯವಿಲ್ಲ. ಎರಡನೆಯ ಪಕ್ಷವೂ ಸರಿಯಲ್ಲ. ವಿವರತ್ವಾದಿಗಳು ಜಡಸ್ವಭಾವವಾದ್ದರಿಂದ ಆಗಂತುಕಧರ್ಮವೆನ್ನಲು ಹೇಗೆ ಸಾಧ್ಯ? ಆದ್ದರಿಂದ ವಿವರತ್ವಾದಿಗಳು ಭಗವಂತನ ಅಧೀನವಾದ ಧರ್ಮಗಳಾಗಲಾರವು. ಈ ವಿಷಯದಲ್ಲಿ ಅಚೇತನ-ಗತತ್ವ ಹಾಗೂ ಸ್ವಭಾವತ್ವ ಎಂಬ ಎರಡು ಧರ್ಮಗಳು ಪರಂಪರೆಯಿಂದ ಹೇತುಗಳಾಗುತ್ತವೆ

ಕಠಿಣಪದಾರ್ಥ

ತಸ್ಯ = ವಿವರತ್ವಾದಿಗಳು, ತದಭಾವಾತ್ = ಈಶ್ವರನ ಪ್ರಸಾದದಿಂದ ಲಭ್ಯವಾಗಲಾರವು; ಸ್ವಭಾವತ್ವಾತ್ = ಜಡದ ಸ್ವಭಾವವಾದ್ದರಿಂದ, ಸಾಪೇಕ್ಷಯೋಃ = ಭಗವದಧೀನ-ವಲ್ಲವೆನ್ನಲು ಮಧ್ಯದಲ್ಲಿ ಮತ್ತೊಂದು ಹೇತುವನ್ನು ಅಪೇಕ್ಷಿಸುತ್ತದೆ.

**ಪ್ರಕಾಶಃ – ಏವಂ ದ್ವಯೋಸ್ತದಧೀನತ್ವೇ ಸಾಕ್ಷಾದ್ಧೇತುತ್ವಮುಪಪಾದ್ಯ ಪರಂಪರಯಾ ಹೇತುತ್ವಂ ವ್ಯನಕ್ತಿ – ಯದ್ಧೇತಿ ॥**

**ವಿವರತ್ವಾದಿಕಂ ನ ಭಗವದಧೀನಂ ಭಗವತ್ಪ್ರಸಾದಾಲಬ್ಧತ್ವಾದ್ಘಟತಿರೇಕೇಣೈಶ್ವರ್ಯಾದಿವತ್, ತಥಾ ಅನಾಗನ್ತುಕತ್ವಾನ್ನಾನ್ಯಾಧೀನಂ ವ್ಯತಿರೇಕೇಣ ವಿವರಕುಲಾಲಚಕ್ರಭ್ರಮಣವತ್ । ತತ್ರಾಸಿದ್ಧೌ ಹೇತೂ ಇತ್ಯತಃ ಕ್ರಮೇಣಾಚೇತನಗತತ್ವಂ ಸ್ವಭಾವತ್ವಂ ಚ ಹೇತುದ್ವಯಸಮರ್ಥನಪರತಯೇಷ್ಯತ ಇತಿ ಭಾವೇನ ವಿಕಲ್ಪಮುಖೇನೋಪಪಾದಯತಿ – ವಿವರತ್ವಾದಿಕಮಿತಿ ॥ ಸಾಪೇಕ್ಷಯೋರಿತಿ ॥ ಉಕ್ತರೀತ್ಯಾ ಮಧ್ಯೇ ಹೇತ್ವನ್ತರಸಾಪೇಕ್ಷಯೋರಿತ್ಯರ್ಥಃ । ಯಥಾ ಸಾವಯವತ್ವಸ್ಯ ಕಾರ್ಯತ್ವದ್ವಾರಾ ಕರ್ತೃಸಾಧನತ್ವಂ, ತದ್ವದಿತಿ ।**

ತಥಾ ಚಾನುವ್ಯಾಖ್ಯಾನಸ್ಯೈವಂ ಯೋಜನಾ – 'ವಿವರತ್ವಾದಿ' ವಿವರತ್ವಾದಿಕಂ ಕಥಂ 'ತತಃ' ಭಗವತ್ಪ್ರಸಾದಾತ್, ಕಥಂ ಭಗವತ್ಪ್ರಸಾದಲಬ್ಧಂ, ಅಚೇತನಗತತ್ವಾತ್ । ತಥಾ ಚ ತತ್ಪ್ರಸಾದ-ಲಬ್ಧತ್ವಾಭಾವಾತ್ ವಿವರತ್ವಾದಿಕಂ 'ಕಥಂ ತತಃ' ತದಧೀನಂ ಕಥಂ, ನ ಕಥಮಪೀತಿ ।

ತಥಾ ವಿವರತ್ವಾದಿಕಂ 'ಕಥಂ ತತಃ' ತದಧೀನಂ ಕಥಮ್, 'ಅನಾಗನ್ತುಕತ್ವಾತ್' ಇತಿ ಶೇಷಃ । ತದೇವ ಕುತ ಇತಿ ಚೇತ್ – **ಸ್ವಭಾವತ್ವಾದಿತಿ** । ಏವಂ ''ಅಚೇತನಸ್ವಭಾವಸ್ತು'' ಇತ್ಯನೇನ ವಿವಕ್ಷಿತಂ ಹೇತುದ್ವಯಂ ಸ್ವಾತನ್ತ್ರ್ಯರೂಪಪ್ರವೃತ್ತಿನಿಮಿತ್ತನಿರಸನೇ ಸಾಕ್ಷಾತ್ಪರಮ್ಪರಯಾ ವಾ ಸಾಧನಮಿತ್ಯೇತಚ್ಛ್ಲೋಕಾರೂಢತಯಾ ದರ್ಶಿತಮ್ ।

'ವಿವರತ್ವಾದೇರ್ಭಗವದ್ಗತತ್ವೇನ ಯೋಗೋऽಭಿಮತಃ' ಇತಿ ದ್ವಿತೀಯಃ ಕಲ್ಪಃ । ತನ್ನಿರಾಸಸ್ತು ಶ್ಲೋಕಾದ್ ಬಹಿರೇವ ಧ್ಯೇಯಃ। ತಥಾ ಹಿ । 'ವಿವರತ್ವಾದಿಕಮ್ ಐಶ್ವರ್ಯಾದಿವನ್ನ ಭಗವದ್ಗತಮ್' ಇತಿ ಸಾಧ್ಯಮಧ್ಯಾಹಾರ್ಯಮ್ । ಹೇತುಸ್ತು 'ಅಚೇತನಗತತ್ವಾತ್' ಇತಿ ।

ಅನುವಾದ - ಇಲ್ಲಿಯ ತನಕ ವಿವರತ್ವಾದಿಗಳು ಭಗವಂತನ ಅಧೀನವಲ್ಲವೆನ್ನಲು ಅಚೇತನಗತತ್ವ ಹಾಗೂ ಸ್ವಭಾವತ್ವಧರ್ಮಗಳನ್ನು ಸಾಕ್ಷಾತ್ತಾಗಿ ಕಾರಣಗಳೆಂದು ಉಪಪಾದಿಸಿದ್ದಾಯಿತು. ಪ್ರಕೃತ ಈ ಎರಡು ಧರ್ಮಗಳು ಪರಂಪರೆಯಿಂದಲೂ ಸಹ ಹೇತು(ಕಾರಣ)ಗಳಾಗುತ್ತವೆ ಎಂದು ''ಯದ್ವಾ'' ಇತ್ಯಾದಿ ಗ್ರಂಥದಿಂದ ವ್ಯಾಖ್ಯಾನಿಸಿದ್ದಾರೆ.

ಅನುಮಾನ ಹೀಗಿದೆ - 'ವಿವರತ್ವಾದಿಕಂ ನ ಭಗವದಧೀನಂ ಭಗವತ್ಪ್ರಸಾದಾಲಭ್ಯತ್ವಾತ್ ವ್ಯತಿರೇಕೇಣ ಐಶ್ವರ್ಯಾದಿವತ್' ಇಂದ್ರಾದಿಗಳಲ್ಲಿರುವ ಐಶ್ವರ್ಯಾದಿ ಧರ್ಮಗಳು ಭಗವತ್ ಪ್ರಸಾದದಿಂದ ಲಭ್ಯವಾಗಿವೆ. ಮತ್ತು ಭಗವದಧೀನಗಳೂ ಆಗಿವೆ. ಆದರೆ ಆಕಾಶಾದಿಗಳಲ್ಲಿರುವ ವಿವರತ್ವಾದಿ ಧರ್ಮಗಳು ಭಗವಂತನ ಪ್ರಸಾದದಿಂದ ಲಭ್ಯವಾಗದ ಕಾರಣ ಭಗವದಧೀನವೂ ಸಹ ಆಗಲಾರವೆಂದು ಅನುಮಾನದ ಅಭಿಪ್ರಾಯ. ಈ ಅನುಮಾನದಲ್ಲಿ ಭಗವತ್ಪ್ರಸಾದ ಅಲಭ್ಯತ್ವ ಎಂಬ ಹೇತುವೇ ಅಸಿದ್ಧವಾಗಿದೆಯೆಂದು ಆಕ್ಷೇಪಿಸಿದರೆ ಅಚೇತನಗತತ್ವವು ಹೇತ್ವಸಿದ್ಧಿಯನ್ನು ಪರಿಹರಿಸುತ್ತದೆ. 'ವಿವರತ್ವಾದಿಕಂ ಭಗವತ್ಪ್ರಸಾದ ಅಲಭ್ಯಂ ಅಚೇತನಗತತ್ವಾತ್' ಎಂದು ಅಚೇತನಗತತ್ವಧರ್ಮವು ಭಗವಂತನ ಅಧೀನವಲ್ಲವೆನ್ನಲು ಹೇತ್ವಸಿದ್ಧಿಯನ್ನು ಪರಿಹರಿಸುವ ಮೂಲಕ (ಪರಂಪರೆಯಿಂದ) ಹೇತುವಾಗುತ್ತದೆ. ಇದರಂತೆ ಮತ್ತೊಂದು ಅನುಮಾನ - 'ವಿವರತ್ವಾದಿಕಂ ನ ಭಗವದಧೀನಂ ಅನಾಗಂತುಕತ್ವಾತ್ ವ್ಯತಿರೇಕೇಣ ಕುಲಾಲಚಕ್ರಭ್ರಮಣವತ್'. ಕುಲಾಲನಿಂದ ಉಂಟಾದ ಚಕ್ರಭ್ರಮಣವು ಆಗಂತುಕಧರ್ಮವಾಗಿದೆ. ಮತ್ತು ಕುಲಾಲನ ಅಧೀನವಾಗಿದೆ. ಆದರೆ ಆಕಾಶಾದಿಗಳಲ್ಲಿರುವ ವಿವರತ್ವಾದಿಗಳು ಸ್ವಾಭಾವಿಕಧರ್ಮವಾದ್ದರಿಂದ ಭಗವಂತನ ಅಧೀನ- ವಾಗಲಾರವೆಂದು ಅನುಮಾನದ ಅಭಿಪ್ರಾಯ. ಈ ಅನುಮಾನದಲ್ಲಿಯೂ ಸಹ ಅನಾಗಂತುಕತ್ವವೆಂಬ ಹೇತುವೇ ಅಸಿದ್ಧವಾಗಿದೆಯೆಂದು ಹೇತ್ವಸಿದ್ಧಿಯನ್ನು ಆಕ್ಷೇಪಿಸಿದರೆ ಸ್ವಭಾವತ್ವಧರ್ಮವು ಆ ಹೇತ್ವಸಿದ್ಧಿದೋಷವನ್ನು ಪರಿಹರಿಸುತ್ತದೆ. ಅಂದರೆ 'ವಿವರತ್ವಾದಿಕಂ ಅನಾಗಂತುಕಂ ಜಡಸ್ವಭಾವತ್ವಾತ್' ಎಂದು ಸ್ವಭಾವತ್ವಹೇತುವು ಭಗವದಧೀನವಲ್ಲವೆನ್ನಲು ಕಾರಣವಾದ ಅನಾಗಂತುಕತ್ವಹೇತುವನ್ನು ಸಮರ್ಥಿಸುವ ಮೂಲಕ (ಪರಂಪರೆಯಿಂದ) ಕಾರಣವಾಗಿದೆ. ಈ ಅಭಿಪ್ರಾಯದಿಂದ ಗ್ರಂಥಕಾರರು ''ವಿವರತ್ವಾದಿಕಂ'' ಇತ್ಯಾದಿ ವಾಕ್ಯದಿಂದ ವಿಕಲ್ಪ ಮಾಡುವ ಮೂಲಕ ವಿವರಿಸುತ್ತಿದ್ದಾರೆ.

ಗ್ರಂಥದಲ್ಲಿ ಸಾಪೇಕ್ಷವಾದ ಅಚೇತನಗತತ್ವ ಹಾಗೂ ಸ್ವಭಾವತ್ವಧರ್ಮಗಳು ಹೇತುಗಳಾಗಿವೆಯೆಂದು ಹೇಳಿದ್ದಾರೆ. ಇದಕ್ಕೆ ಹೀಗೆ ಅರ್ಥ -- ಯಾವರೀತಿಯಾಗಿ 'ಕ್ಷಿತ್ಯಂಕುರಾದಿಕಂ ಸಕರ್ತೃಕಂ ಕಾರ್ಯತ್ವಾತ್ ಘಟವತ್' ಎಂಬ ಅನುಮಾನದಲ್ಲಿ ಕಾರ್ಯತ್ವಹೇತುವೇ ಅಸಿದ್ಧವೆಂದು ಶಂಕಿಸಿದಾಗ 'ಕ್ಷಿತ್ಯಂಕುರಾದಿಕಂ ಕಾರ್ಯಂ ಸಾವಯವತ್ವಾತ್' ಎಂದು ಸಾವಯವತ್ವಹೇತುವಿನಿಂದ ಕಾರ್ಯತ್ವವನ್ನು ಸಾಧಿಸುತ್ತಾರೆ. ಅಂದರೆ ಸಕರ್ತೃಕತ್ವವಿಷಯದಲ್ಲಿ ಸಾವಯವತ್ವವು ನೇರವಾಗಿ ಹೇತುವಾಗಲು ಕಾರ್ಯತ್ವಹೇತುವನ್ನು ಸಮರ್ಥಿಸುವ ಮೂಲಕ ಹೇಗೆ ಹೇತುವಾಗುತ್ತದೋ, ಅದರಂತೆ ಪ್ರಕೃತದಲ್ಲಿಯೂ ಸಹ ಅಚೇತನಗತತ್ವ ಮತ್ತು ಸ್ವಭಾವತ್ವಧರ್ಮಗಳು ಭಗವದಧೀನವಲ್ಲವೆನ್ನಲು ನೇರವಾಗಿ ಕಾರಣಗಳಾಗಲಾರವು; ಹೊರತಾಗಿ ಭಗವತ್ಪ್ರಸಾದ ಅಲಭ್ಯತ್ವ ಮತ್ತು ಅನಾಗಂತುಕತ್ವವೆಂಬ ಎರಡು ಹೇತುಗಳನ್ನು ಸಮರ್ಥಿಸುವ ಮೂಲಕ ಹೇತುಗಳಾಗುತ್ತವೆ. ಆದ್ದರಿಂದ ಅಚೇತನಗತತ್ವ ಮತ್ತು ಸ್ವಭಾವತ್ವಧರ್ಮಗಳು ಸಾಪೇಕ್ಷಹೇತುಗಳಾಗಿವೆ.

ಈ ವ್ಯಾಖ್ಯಾನದಲ್ಲಿ ಅನುವ್ಯಾಖ್ಯಾನದ ಮಾತಿಗೆ ಹೀಗೆ ಅರ್ಥ -- ವಿವರಾದಿಃ = ವಿವರತ್ವಾದಿಗಳು ಕಥಂ ತತಃ? = ಹೇಗೆ ಭಗವತ್ಪ್ರಸಾದಲಬ್ಧವೆನಿಸುತ್ತವೆ?, ಅಚೇತನಗತತ್ವಾತ್ = ಅಚೇತನಸ್ವಭಾವವು ಅಚೇತನಧರ್ಮವಾದ್ದರಿಂದ ಎಂದು. ಹೀಗೆ ಭಗವಂತನ ಪ್ರಸಾದ ಲಬ್ಧವಾಗದ ವಿವರತ್ವಾದಿಗಳು ಹೇಗೆ ಭಗವದಧೀನಗಳಾಗುತ್ತವೆ. ಯಾವುದೇ ಕಾರಣದಿಂದಲೂ ಭಗವಂತನ ಪ್ರಸಾದಕ್ಕೆ ವಿಷಯ-ಗಳಾಗುವುದಿಲ್ಲವೆಂದು ಅನುವ್ಯಾಖ್ಯಾನಕ್ಕೆ ಅರ್ಥ. ಆದ್ದರಿಂದ 'ವಿವರತ್ವಾದಿಕಂ ಕಥಂ ತತಃ ತದಧೀನಂ ಕಥಂ ಅನಾಗಂತುಕತ್ವಾತ್?' ಎಂದು ಶೇಷಪೂರಣ ಮಾಡಿಕೊಳ್ಳಬೇಕು.

ಹೀಗೆ 'ಅಚೇತನಸ್ವಭಾವಸ್ತು' ಎಂಬ ಶ್ಲೋಕದಿಂದ ಸ್ವಾತಂತ್ರ್ಯವೆಂಬ ಪ್ರವೃತ್ತಿನಿಮಿತ್ತವನ್ನು ನಿರಾಸ ಮಾಡಲು ಎರಡು ಹೇತುಗಳನ್ನು ಹೇಳಿದ್ದಾರೆ. ಈ ಎರಡು ಹೇತುಗಳು ಸಾಕ್ಷಾತ್ತಾಗಿ ಮತ್ತು ಪರಂಪರೆಯಿಂದಲೂ ಸ್ವಾತಂತ್ರ್ಯಧರ್ಮವನ್ನು ನಿರಾಸ ಮಾಡುತ್ತವೆಂದು ಇಲ್ಲಿಯ ತನಕ ತೋರಿಸಿದ್ದಾಯಿತು. ಇನ್ನು ವಿವರತ್ವಾದಿಗಳು ಭಗವಂತನಲ್ಲಿ ಇರುತ್ತವೆಂದು ಹೇಳುವ ತದ್ಗತತ್ವವೆಂಬ ಪ್ರವೃತ್ತಿನಿಮಿತ್ತವನ್ನು ನಿರಾಸ ಮಾಡಬೇಕಾಗಿದೆ. ಈ ಪಕ್ಷವನ್ನು ಅನುವ್ಯಾಖ್ಯಾನಶ್ಲೋಕದಲ್ಲಿ ಸ್ಪಷ್ಟವಾಗಿ ನಿರಾಕರಿಸಿಲ್ಲ. ಆದರೂ ಸಹ ಶ್ಲೋಕದಿಂದ ಹೊರಗಡೆಯೇ ಚಿಂತಿಸಬೇಕಾಗಿದೆ. ಅದು ಹೀಗೆ - ''ವಿವರತ್ವಾದಿಕಂ ಐಶ್ವರ್ಯಾದಿವತ್ ನ ಭಗವದ್ಗತಮ್' ಎಂಬ ಪ್ರತಿಜ್ಞೆಯನ್ನು ಶ್ಲೋಕದಲ್ಲಿ ಅಧ್ಯಾಹಾರ ಮಾಡಿಕೊಂಡು ಶ್ಲೋಕದಲ್ಲಿರುವ ಅಚೇತನಗತತ್ವವನ್ನು ಹೇತುವನ್ನಾಗಿ ಯೋಜಿಸಬೇಕು. ಆಗ ಸ್ವಾತಂತ್ರ್ಯ ಮತ್ತು ತದ್ಗತತ್ವಗಳೆಂಬ ಎರಡುವಿಧ ಪ್ರವೃತ್ತಿನಿಮಿತ್ತಗಳನ್ನು ಅನುವ್ಯಾಖ್ಯಾನಶ್ಲೋಕದಿಂದಲೇ ನಿರಾಕರಿಸಿದಂತಾಗುತ್ತದೆ.

**ಗುರುರಾಜೀಯಮ್ – परस्परनिरपेक्षाभ्यामेवाचेतनगतत्वाचेतनस्वभावत्वाभ्या-माकाशशब्दप्रवृत्तिनिमित्तविवरत्वादेरीश्वरानधीनत्वं प्रसाध्य सापेक्षयोरप्यचेतन-गतत्वस्वभावत्वयोरीश्वराधीनत्वसाधकमाह – यद्वेति ॥**

## ಸಾರ

ಇಂದ್ರಾದಿದೇವತೆಗಳಲ್ಲಿರುವ ಇಂದ್ರಾದಿಪದ ಪ್ರವೃತ್ತಿನಿಮಿತ್ತವಾದ 'ಐಶ್ವರ್ಯ' ಮುಂತಾದವುಗಳು ಭಗವಂತನ ಪ್ರಸಾದದಿಂದ ಲಭ್ಯವಾದುವುಗಳಾದ್ದರಿಂದ ಹೇಗೆ ಭಗವದಧೀನಗಳೋ ಹಾಗೆ. ವಿವರತ್ವ ಮೊದಲಾದುವುಗಳೂ ಸಹ ಭಗವಂತನ ಪ್ರಸಾದದಿಂದ ಲಬ್ಧವಾದ್ದರಿಂದ ಭಗವಂತನ ಅಧೀನವೋ? ಅಥವಾ ಕುಂಬಾರನ ಅಧೀನವಾಗಿ ಚಕ್ರದಲ್ಲಿ ಆಗಂತುಕವಾಗಿ ಬರುವ ಭ್ರಮಣದಂತೆ ಆಗಂತುಕವಾಗಿ ಭಗವದಧೀನವೋ? ಎರಡೂ ಸರಿಯಲ್ಲ. ವಿವರತ್ವಾದಿಗಳೂ ಅಚೇತನನಲ್ಲಿರುವುದರಿಂದ ಅವನ ಪ್ರಸಾದಲಭ್ಯಗಳು ಎನ್ನಲು ಬರುವುದಿಲ್ಲ. ವಿವರತ್ವಾದಿಗಳು ಸ್ವಭಾವಗಳಾದ್ದರಿಂದ ಆಗಂತುಕಾಧೀನತ್ವವೆಂದು ಹೇಳಲು ಬರುವುದಿಲ್ಲ.

## ಪ್ರಮೇಯಾಶ್ರಿತ ಪೂರ್ವಪಕ್ಷ

**तात्पर्यचन्द्रिका –**

**यद्वा – 'स्वातन्त्र्यं तद्गतत्वं च शब्दवृत्तेर्हि कारणम् ।'**

**इत्युक्तत्वात् द्वयं निमित्तम् । तत्र न तावत् निरवधिकैश्वर्यादिवत् निरवधिक विवरत्वादिकं ब्रह्मगतम्, तस्याचेतनगतत्वात् । नापि पुरन्दरादिगतैश्वर्यवत् तदधीनम्, स्वभावत्वात् ।**

**तथा च विवरत्वादिकं ब्रह्मण्याकाशादिशब्दवृत्तौ न निमित्तमिति निमित्तत्वाभावे सापेक्षयोर्हेतुत्वम् । श्लोके सार्वविभक्तिकतस्यन्तस्य ततश्शब्दस्य तत्रेत्यप्यर्थः । अस्मिन्मते तद्गतत्वपक्षोऽपि श्लोकेनैव दूषितः । मतान्तरे तु बहिरेव दूष्यः ।**

**सुधायां तु – न तावद् विवरत्वादिकमैश्वर्यादिवदागन्तुकज्ञानादिरूपहेतुद्वारा ईश्वरायत्तम्, अचेतनाश्रितत्वात् । नापि स्वरूपतः, स्वभावत्वात् – इति व्याख्यातम् । तत्र इन्द्रादिशब्दप्रवृत्तिनिमित्ते पालनादिरूपप्रयत्नात्मकैश्वर्ये ज्ञानादेरेव हेतुत्वदर्शनात् अत्रापि ज्ञानादिरेव हेतुर्वाच्यः । स च अचेतने नास्तीत्यभिप्रायः ।**

**यत्तु सुधायाम् अन्तरधिकरणपूर्वपक्षे अचेतनस्वभावस्यान्नत्वादेर्भगवदधीनत्वाङ्गीकरणम्, तदेतदधिकरणसिद्धान्तन्यायानुसन्धानेन । न ह्येतदधिकरणपूर्वपक्षस्थेनैव तत्रापि पूर्वपक्षिणा भाव्यम्, तथात्वे एतदधिकरणसिद्धान्तेनैव तत्रत्यपूर्वपक्षनिरासेन तत्रत्यसिद्धान्तवैयर्थ्यात् ।**

**अनुव्याख्यानसुधाद्यनुसारेण चात्रापि टीकायाम् ''आकाशस्याचेतनत्वेन अन्याधीनत्वायोगात्'' इत्यादावाकाशपदं तत्पदप्रवृत्तिनिमित्तपरम् । तस्मादाकाशादिशब्दानां कृत्स्नं रूढं वा, ''आकाशनमवकाशत्वम्'' इति सुधोक्तं यौगिकं वा कृत्स्नं निमित्तम् नेश्वरगतम्, नापि तदधीनम् । 'आ समन्तात् काशते' इति कल्प्यो योगस्तु कृत्स्नया भूताकाशे रूढ्या बाधितः । विद्वद्रूढिमहायोगौ तु असिद्धौ, वैदिकप्रयोगबाहुल्यादेरद्याप्यसिद्धेः ।**

**ಯತ್ತು ಆನನ್ದಮಯಾಧಿಕರಣೇ –**

**'ಅಧ್ಯಾತ್ಮಗೈಶ್ಚ ಪ್ರಾಣಾದ್ಯೈಸ್ತಥೈವ ಹ್ಯಧಿಭೂತಗೈಃ ।'**

**ಇತ್ಯಾದ್ಯನುವ್ಯಾಖ್ಯಾನಮ್, ತದಾನನ್ದಮಯಪ್ರಕರಣಸ್ಥಾಕಾಶಾದಿಶಬ್ದಾನಾಂ ಬ್ರಹ್ಮಪರತ್ವಾಯ ಆಕಾಶಾದ್ಯಧಿಕರಣೇ ವಕ್ಷ್ಯಮಾಣನ್ಯಾಯಮುಪಜೀವ್ಯ ಪ್ರವೃತ್ತಮಿತಿ ನ ತೇನ ವಿಘ್ನದ್ವೈತ್ಯಾದಿ-ಸಿದ್ಧಿಃ । ತಸ್ಮಾದ್ಯುಕ್ತಾ ಅಭ್ಯಧಿಕಾಶಙ್ಕಾ ।**

**ಇಯಂ ಚ ಪ್ರಮೇಯಾಶ್ರಿತಾ ಆಕಾಶಶಬ್ದಸ್ಯ ಬ್ರಹ್ಮಣಿ ಮುಖ್ಯತ್ವವಿರೋಧಿನೀ ಶಙ್ಕಾ ।**

ಅನುವಾದ - ಹಾಗಿಲ್ಲದಿದ್ದರೆ 'ಸ್ವಾತಂತ್ರ್ಯಂ ತದ್ಗತತ್ವಂ ಚ ಶಬ್ದವೃತ್ತೇರ್ಹಿ ಕಾರಣಮ್' (ಸ್ವಾತಂತ್ರ್ಯ ಹಾಗೂ ತದ್ಗತತ್ವಗಳು ಶಬ್ದಗಳ ಪ್ರವೃತ್ತಿಗೆ ಕಾರಣಗಳಾಗಿವೆ) ಎಂದು ಅನುವ್ಯಾಖ್ಯಾನದಲ್ಲಿ ಹೇಳಿದಂತೆ ಶಬ್ದಗಳ ಪ್ರವೃತ್ತಿಗೆ ಎರಡು ನಿಮಿತ್ತಗಳಿವೆ. ಇವೆರಡರಲ್ಲಿ ತದ್ಗತತ್ವವು ಪ್ರವೃತ್ತಿನಿಮಿತ್ತವೆನ್ನಲು ಸಾಧ್ಯವಿಲ್ಲ. ಇಂದ್ರಾದಿಗಳಲ್ಲಿರುವ ಐಶ್ವರ್ಯಾದಿಗಳು ಹೇಗೆ ಬ್ರಹ್ಮನಲ್ಲಿ ನಿರವಧಿಕವಾಗಿ ಇವೆಯೋ ಅದರಂತೆ ಆಕಾಶಾದಿಗಳಲ್ಲಿರುವ ವಿವರತ್ವಾದಿಗಳು ನಿರವಧಿಕವಾಗಿ ಬ್ರಹ್ಮನಲ್ಲಿ ಇವೆಯೆಂದು ಹೇಳಲು ಸಾಧ್ಯವಿಲ್ಲ. ಐಶ್ವರ್ಯಾದಿಗಳು ಚೇತನನಿಷ್ಠವಾದ್ದರಿಂದ ನಿರವಧಿಕವಾಗಿ ಬ್ರಹ್ಮನಲ್ಲಿ ಇವೆಯೆಂದು ಹೇಳಬಹುದು. ಆದರೆ ವಿವರತ್ವಾದಿಗಳು ಅಚೇತನ ಧರ್ಮವಾದ್ದರಿಂದ ನಿರವಧಿಕವಾಗಿ ಬ್ರಹ್ಮನಲ್ಲಿ ಇವೆಯೆಂದು ಹೇಳಲು ಹೇಗೆ ಸಾಧ್ಯ? ಇನ್ನು ಇಂದ್ರಾದಿಗಳಲ್ಲಿರುವ ಐಶ್ವರ್ಯಾದಿ ಗುಣಗಳು ಭಗವಂತನ ಅಧೀನಗಳಾಗಿವೆ. ಆದರಂತೆ ಆಕಾಶಾದಿಗಳಲ್ಲಿರುವ ವಿವರತ್ವಾದಿ ಧರ್ಮಗಳು ಭಗವಂತನ ಅಧೀನಗಳಾಗಿವೆ ಎಂದು ಹೇಳಬೇಕು. ಆದರೆ ಇಂದ್ರಾದಿಗಳಲ್ಲಿರುವ ಐಶ್ವರ್ಯಾದಿ ಧರ್ಮಗಳು ಸ್ವಾಭಾವಿಕಗಳಲ್ಲ. ಆದರೆ ಆಕಾಶಾದಿಗಳಲ್ಲಿರುವ ವಿವರತ್ವಾದಿಗಳು ಸ್ವಾಭಾವಿಕಧರ್ಮಗಳಾಗಿವೆ. ಆದ್ದರಿಂದ ಹೀಗೆ ಅನುಮಾನ ಮಾಡುತ್ತೇವೆ - 'ವಿವರತ್ವಾದಿಕಂ ಬ್ರಹ್ಮಣಿ ಆಕಾಶಾದಿಶಬ್ದವೃತ್ತೌ ನಿಮಿತ್ತಂ ನ ಭವತಿ, ಅಚೇತನಗತತ್ವಾತ್, ಅಚೇತನಸ್ವಭಾವತ್ವಾತ್' ವಿವರತ್ವಾದಿಗುಣಗಳು ಅಚೇತನ ಸ್ವಭಾವವಾದ್ದರಿಂದ ಮತ್ತು ಅಚೇತನದಲ್ಲಿರುವುದರಿಂದ ಬ್ರಹ್ಮನಲ್ಲಿ ಆಕಾಶಾದಿಶಬ್ದಗಳ ಪ್ರಯೋಗಕ್ಕೆ ನಿಮಿತ್ತಗಳಾಗುವುದಿಲ್ಲ. ಈ ಅರ್ಥದಲ್ಲಿ ಅನುವ್ಯಾಖ್ಯಾನ ಶ್ಲೋಕದಲ್ಲಿರುವ 'ತತಃ' ಎಂಬ ಶಬ್ದಕ್ಕೆ ತತ್ರ ಎಂಬರ್ಥವನ್ನು ಹೇಳಬೇಕು. ತತ್ ಶಬ್ದದ ಮೇಲೆ ಎಲ್ಲಾ ವಿಭಕ್ತಿಗಳಲ್ಲಿ ಬರುವ ತಸಿ ಪ್ರತ್ಯಯವು ಸಪ್ತಮ್ಯರ್ಥದಲ್ಲಿ ಬಂದಿದೆ. ಆದ್ದರಿಂದ ತದ್ಗತತ್ವಪಕ್ಷವನ್ನೂ ಸಹ ಶ್ಲೋಕದಿಂದಲೇ ದೂಷಿಸಿದಂತಾಗುತ್ತದೆ. ಹಿಂದಿನ ಪಕ್ಷವನ್ನು ಶ್ಲೋಕದಿಂದ ಹೊರಗಡೆ ದೂಷಿಸಬೇಕು.

ಈ ವಿಷಯದಲ್ಲಿ ಸುಧೆಯು ಹೀಗೆ ಹೇಳಿದೆ - "ವಿವರತ್ವಾದಿಗಳು ಭಗವಂತನ ಅಧೀನವೆಂದು ಹೀಗೆ ಹೇಳಬಹುದು 'ಇಂದ್ರನಲ್ಲಿ ಐಶ್ವರ್ಯ ಜಗತ್ಪಾಲಕತ್ವ ಮೊದಲಾದ ಧರ್ಮಗಳಿವೆ. ಹೇಗೆ

ಇವು ಭಗವಂತನ ಅಧೀನಗಳು? ಎಂದರೆ ಪಾಲಕತ್ವವು ಪ್ರಯತ್ನರೂಪವಾಗಿದೆ. ಇದಕ್ಕೆ ಜ್ಞಾನೇಚ್ಛಾದಿಗಳು ಕಾರಣವಾಗಿವೆ. ಇಂದ್ರಾದಿಗಳಲ್ಲಿರುವ ಈ ಜ್ಞಾನೇಚ್ಛಾದಿಗಳು ಭಗವಂತನ ಅಧೀನವಾದ್ದರಿಂದ ಇಂದ್ರಾದಿಗಳಲ್ಲಿರುವ ಪಾಲಕತ್ವಾದಿ ಧರ್ಮಗಳೂ ಸಹ ಭಗವಂತನ ಅಧೀನಗಳಾಗುತ್ತವೆಂದು ಹೇಗೆ ಹೇಳುತ್ತೇವೋ, ಇದರಂತೆ ಪ್ರಕೃತದಲ್ಲಿಯೂ ವಿವರತ್ವಾದಿಗಳಿಗೆ ಜ್ಞಾನೇಚ್ಛಾದಿಗಳು ಕಾರಣಗಳಾಗಿವೆ. ಈ ಜ್ಞಾನೇಚ್ಛಾದಿಗಳು ಭಗವಂತನ ಅಧೀನವಾದ್ದರಿಂದ ವಿವರತ್ವಾದಿಗಳೂ ಸಹ ಭಗವಂತನ ಅಧೀನಗಳಾಗಿವೆ ಎಂದು ಹೇಳಬೇಕು. ಆದರೆ ವಿವರತ್ವಾದಿಗಳು ಜಡನಿಷ್ಠವಾದ್ದರಿಂದ ಜ್ಞಾನೇಚ್ಛಾದಿಗಳ ಅಧೀನವೆಂದು ಹೇಳಲು ಸಾಧ್ಯವಿಲ್ಲ. ಆದರಂತೆ ವಿವರತ್ವಾದಿಗಳು ಸ್ವರೂಪತಃ ಭಗವಂತನ ಅಧೀನಗಳಾಗಿವೆ ಎಂದೂ ಸಹ ಹೇಳಲಾಗದು ಜಡಸ್ವಭಾವವಾದ್ದರಿಂದ. ಹೀಗೆ ಎರಡು ವಿಧದಲ್ಲಿ ವಿವರತ್ವಾದಿಗಳನ್ನು ಭಗವಂತನ ಸ್ವರೂಪವೆಂದು ಹೇಳಬಹುದು. ಆದರೆ ಅಚೇತನಾಶ್ರಿತವಾದ್ದರಿಂದ ಮತ್ತು ಜಡಸ್ವಭಾವವಾದ್ದರಿಂದ ಎರಡು ಉಪಾಯ -ಗಳಿಂದ ಭಗವಂತನ ಅಧೀನವೆಂದು ಸಮರ್ಥಿಸಲಾಗದು'' ಇಷ್ಟು ಸುಧೆಯಲ್ಲಿ ಹೇಳಿದ ವಿಚಾರ.

ಐಶ್ವರ್ಯವು ಇಂದ್ರಾದಿಶಬ್ದಗಳ ಪ್ರವೃತ್ತಿನಿಮಿತ್ತ. ಈ ಐಶ್ವರ್ಯವು ಪಾಲನರೂಪವಾದ್ದರಿಂದ ಪ್ರಯತ್ನವೆನಿಸಿದೆ. ಪ್ರಯತ್ನಕ್ಕೆ ಜ್ಞಾನೇಚ್ಛೆಗಳು ಕಾರಣಗಳೆಂದು ಕಂಡಿರುವುದರಿಂದ ವಿವರತ್ವಾದಿ-ಗಳಲ್ಲಿಯೂ ಸಹ ಜ್ಞಾನೇಚ್ಛೆಗಳನ್ನೇ ಕಾರಣವೆಂದು ಹೇಳಬೇಕು. ಆದರೆ ಜಡದಲ್ಲಿ ಜ್ಞಾನೇಚ್ಛೆಗಳನ್ನು ಹೇಳಲು ಸಾಧ್ಯವಿಲ್ಲ. ಸುಧೆಯ ಮರ್ಮವನ್ನು ಸ್ಪಷ್ಟವಾಗಿ ಗಮನಿಸಬೇಕು.

ಪ್ರಶ್ನೆ - ಸುಧೆಯ ಅಂತರಧಿಕರಣದ ಪೂರ್ವಪಕ್ಷದಲ್ಲಿ ಹೀಗೆ ಹೇಳಿದ್ದಾರೆ. ''ಅನ್ನ ಔಷಧಾದಿ ಶಬ್ದಗಳು ಪರಮಾತ್ಮನಲ್ಲಿ ಮುಖ್ಯವಾಗಿ ಬರಬಹುದು. ಏಕೆಂದರೆ, ಈ ಶಬ್ದಗಳ ಪ್ರವೃತ್ತಿನಿಮಿತ್ತವಾದ ಅನ್ನತ್ವಾದಿಗಳು ಅಚೇತನಸ್ವಭಾವವಾದ್ದರಿಂದ ಭಗವಂತನ ಅಧೀನವಾಗುತ್ತವೆ. ಆದರೆ ಇಂದ್ರಾದಿ-ಶಬ್ದಗಳ ಪ್ರವೃತ್ತಿನಿಮಿತ್ತವು ಚೇತನ ಸ್ವಭಾವವಾದ್ದರಿಂದ ಭಗವದಧೀನವಾಗುವುದಿಲ್ಲ. ಆದ್ದರಿಂದ ಆಕಾಶಾದಿಶಬ್ದಗಳ ಪ್ರವೃತ್ತಿನಿಮಿತ್ತವು ಸುಧೆಯ ಮಾತಿನಂತೆ ಭಗವಂತನ ಅಧೀನವೆಂದು ಸುಲಭವಾಗಿ ತಿಳಿಯುವುದರಿಂದ ಈ ಅಧಿಕರಣದ ಪೂರ್ವಪಕ್ಷವನ್ನು ಹೇಗೆ ಸ್ಥಾಪನೆ ಮಾಡುತ್ತೀರಿ?

ಉತ್ತರ - ಹೌದು. ಅಂತಃಸ್ಥತ್ವಾಧಿಕರಣದ ಪೂರ್ವಪಕ್ಷದಲ್ಲಿ ಜಡವಾಚಿಯಾದ ಶಬ್ದಗಳು ಭಗವತ್ಪರವೆಂದು ಹೇಳಿದ್ದಾರೆ. ಆದರೆ ಆ ಪೂರ್ವಪಕ್ಷವು ಆಕಾಶಾಧಿಕರಣದ ಸಿದ್ಧಾಂತನ್ಯಾಯವನ್ನು ಆವಲಂಬಿಸಿ ಹೊರಟಿದೆ. ಆದ್ದರಿಂದ ಈ ಅಧಿಕರಣದ ಪೂರ್ವಪಕ್ಷಿಯು ಆದನ್ನೂ ಸಹ ಆಕ್ಷೇಪಿಸು-ತ್ತಾನೆ. ಅಂದರೆ ಆಕಾಶಾಧಿಕರಣದ ಸಿದ್ಧಾಂತನ್ಯಾಯವನ್ನು ಯಾವುದೇ ಕಾರಣದಿಂದಲೂ ಅಂಗೀ-ಕರಿಸದ ಪೂರ್ವಪಕ್ಷಿಯು ಹಿಂದಿನ ಅಧಿಕರಣದ ಪೂರ್ವಪಕ್ಷದಲ್ಲಿ ಹೇಳಿದ ಜಡವಾಚಿಶಬ್ದಗಳು ಭಗವತ್ಪರವೆಂಬುದನ್ನು ಹೇಗೆ ತಾನೆ ಒಪ್ಪುತ್ತಾನೆ?

ಪ್ರಶ್ನೆ - ಎಲ್ಲಾ ಅಧಿಕರಣಗಳ ಪೂರ್ವಪಕ್ಷಕಾರನೂ ಒಬ್ಬನೇ ಆದ್ದರಿಂದ ಜಡವಾಚಿಶಬ್ದಗಳನ್ನು ಭಗವತ್ಪರವೆಂದು ಒಪ್ಪದ ಆಕಾಶಾಧಿಕರಣದ ಪೂರ್ವಪಕ್ಷಿಯು ಅಂತರಧಿಕರಣದಲ್ಲಿ ಹೇಗೆ ಒಪ್ಪುತ್ತಾನೆ?

ಉತ್ತರ - ಹಾಗೇನಿಲ್ಲ. ಪ್ರತಿಯೊಂದು ಅಧಿಕರಣಗಳ ಪೂರ್ವಪಕ್ಷಿಯು ಒಬ್ಬನೇ ಆಗಲಾರ. ಆಯಾ ಅಧಿಕರಣದ ಸಿದ್ಧಾಂತನ್ಯಾಯಕ್ಕೆ ಅನುಗುಣವಾಗಿ ಪೂರ್ವಪಕ್ಷಿಗಳು ಬೇರೆ ಬೇರೆಯೇ ಆಗಿರುತ್ತಾರೆ. ಹಾಗಾಗಿ ಆಕಾಶಾಧಿಕರಣದ ಪೂರ್ವಪಕ್ಷಿಯೇ ಅಂತರಧಿಕರಣದ ಪೂರ್ವಪಕ್ಷಿಯಾಗಲು ಸಾಧ್ಯವಿಲ್ಲ. ಒಂದು ವೇಳೆ ಪೂರ್ವಪಕ್ಷಿಗಳು ಒಬ್ಬನೇ ಆದಲ್ಲಿ ಈ ಆಕಾಶಾಧಿಕರಣದ ಸಿದ್ಧಾಂತನ್ಯಾಯದಿಂದಲೇ ಹಿಂದಿನ ಅಂತರಧಿಕರಣದ ಪೂರ್ವಪಕ್ಷವನ್ನು ನಿರಾಸ ಮಾಡಲು ಬರುವುದರಿಂದ, ಅಂತರಧಿಕರಣದ ಸಿದ್ಧಾಂತ ನ್ಯಾಯವೇ ವ್ಯರ್ಥವಾಗಬೇಕಾದೀತು!

ಅನುವ್ಯಾಖ್ಯಾನ ಮತ್ತು ಸುಧೆಗೆ ಅನುಸಾರಿಯಾದ ಈ ಅಧಿಕರಣದ ಪೂರ್ವಪಕ್ಷ ಟೀಕೆಯು ಹೀಗೆ ಹೊರಟಿದೆ -- ''ಆಕಾಶಸ್ಯ ಅಚೇತನತ್ವೇನ ಅನ್ಯಾಧೀನತ್ವಾಯೋಗಾತ್'' (ಆಕಾಶಶಬ್ದದ ಪ್ರವೃತ್ತಿನಿಮಿತ್ತವು ಅಚೇತನದಲ್ಲಿರುವುದರಿಂದ ಅನ್ಯಾಧೀನವಾಗದು). ಟೀಕೆಯಲ್ಲಿರುವ ಆಕಾಶಪದಕ್ಕೆ ಆಕಾಶಪದಪ್ರವೃತ್ತಿನಿಮಿತ್ತವೆಂದು ಅರ್ಥೈಸಬೇಕು. ಅಚೇತನತ್ವೇನ ಎಂದರೆ ಅಚೇತನಗತತ್ವೇನ ಎಂದರ್ಥ. ಒಟ್ಟು ''ಆಕಾಶವು ಅಚೇತನವಾಗಿದೆ. ಆದರಲ್ಲಿರುವ ಪ್ರವೃತ್ತಿನಿಮಿತ್ತವು ಅಚೇತನಗತವಾಗಿದೆ. ಆದ್ದರಿಂದ ವಿವರತ್ವಾದಿಗಳು ಅನ್ಯಾಧೀನವಾಗುವುದಿಲ್ಲ'' ಎಂದು ಹೇಳಿದಂತಾಗುತ್ತದೆ. ಆದ್ದರಿಂದ ಆಕಾಶಾದಿಶಬ್ದಗಳಲ್ಲಿ ಕ್ಲೃಪ್ತವಾದ (ಪ್ರಮಾಣಸಿದ್ಧವಾದ) ಶಬ್ದಾಶ್ರಯತ್ವವೇ ಮೊದಲಾದ ಧರ್ಮಗಳಿವೆ. ಇವುಗಳನ್ನು ಈಶ್ವರನಲ್ಲಿ ಹೇಳಲು ಸಾಧ್ಯವಿಲ್ಲ. ಇನ್ನು 'ಆಕಾಶನಮವಕಾಶತ್ವಂ' ಎಂದು ಸುಧೆಯಲ್ಲಿ ಹೇಳಿದಂತೆ ಅವಕಾಶತ್ವವು (ಅವಕಾಶರೂಪವಾಗಿ ಇರೋಣ) ಆಕಾಶಶಬ್ದದ ಯೌಗಿಕಧರ್ಮವಾಗಿದೆ. ಪ್ರಮಾಣಸಿದ್ಧವಾದ ಈ ಯೌಗಿಕಧರ್ಮವನ್ನೂ ಕೂಡ ಈಶ್ವರನಲ್ಲಿ ಹೇಳಲಾಗದು. ರೂಢವಾದ ಮತ್ತು ಯೌಗಿಕವಾದ ಈ ಎರಡು ಧರ್ಮಗಳು ಈಶ್ವರನಲ್ಲಿ ಬರುವುದಿಲ್ಲವೆಂದಷ್ಟೇ ಅಲ್ಲ; ಈಶ್ವರನ ಅಧೀನಗಳೂ ಸಹ ಆಗಲಾರವು. ಇನ್ನು 'ಅಸಮಂತಾತ್ ಕಾಶ್ಯತೇ' (ಎಲ್ಲಡೆ ಪ್ರಕಾಶಿಸುತ್ತಾನೆ) ಎಂದು ಯೋಗವನ್ನು ಈಶ್ವರನಲ್ಲಿ ಕಲ್ಪಿಸಬಹುದು.

ಆದರೆ ಭೂತಾಕಾಶದಲ್ಲಿ ಆಕಾಶಶಬ್ದದ ರೂಢಿಯು ಪ್ರಮಾಣಸಿದ್ಧವಾಗಿದೆ. ಪ್ರಮಾಣಸಿದ್ಧವಾದ ರೂಢಿಯಿಂದ ಕಲ್ಪಿತವಾದ ಯೋಗವು ಸುಲಭವಾಗಿ ಬಾಧಿತವಾಗುತ್ತದೆ.

ಭಗವಂತನಲ್ಲಿ ಆಕಾಶಶಬ್ದದ ರೂಢಿಯನ್ನಾಗಲೀ, ಯೋಗವನ್ನಾಗಲೀ ಹೇಳಲಾಗದೆಂದು ಇಲ್ಲಿಯ ತನಕ ಸಮರ್ಥಿಸಿದ್ದಾಯಿತು. ಅಷ್ಟೇ ಅಲ್ಲ ವಿದ್ವದ್ರೂಢಿ, ಮಹಾಯೋಗಗಳನ್ನೂ ಸಹ ಭಗವಂತನಲ್ಲಿ ಹೇಳಲಾಗದು. ವಿದ್ವದ್ರೂಢಿಯನ್ನು ಹೇಳುವುದಾದರೆ ಅನೇಕ ವೈದಿಕಪ್ರಯೋಗಗಳನ್ನು ತೋರಿಸಬೇಕು. ಆದರೆ ವೇದದ ಯಾವುದೇ ಭಾಗದಲ್ಲಿರುವ ಆಕಾಶಶಬ್ದವನ್ನು ಭೂತಾಕಾಶ-

ಪರವೆಂದೇ ಪೂರ್ವಪಕ್ಷಿಯು ಆಗ್ರಹಿಸುವಾಗ ಭಗವಂತನಲ್ಲಿ ವಿದ್ವದ್ಬೂಢಿಯನ್ನು ಅದೇ ಆಕಾಶಶಬ್ದಕ್ಕೆ ಹೇಗೆ ಹೇಳುತ್ತೀರಿ? ಮಹಾಯೋಗವನ್ನೂ ಸಹ ಹೇಳಲಾಗದು. ಆಕಾಶಶಬ್ದದ ಪ್ರವೃತ್ತಿನಿಮಿತ್ತವನ್ನು ನಿರವಧಿಕವಾಗಿ ಭಗವಂತನಲ್ಲಿ ಹೇಳಬೇಕು. ಆದರೆ ನಿರವಧಿಕಪ್ರವೃತ್ತಿನಿಮಿತ್ತವು ಭಗವಂತನಲ್ಲಿ ಇದೆಯೆಂದು ಇದುವರೆಗೂ ಸಿದ್ಧವಾಗಿಲ್ಲ.

ಪ್ರಶ್ನೆ - ಆಕಾಶಾದಿಶಬ್ದಗಳಿಗೆ ಭಗವಂತನಲ್ಲಿ ವಿದ್ವದ್ಬೂಢಿಯನ್ನು ಈಗಾಗಲೇ ಆನಂದಮಯಾಧಿಕರಣದಲ್ಲಿ ಸಮರ್ಥಿಸಿದ್ದೇವೆ. 'ಅಧ್ಯಾತ್ಮಗೈಶ್ಚ ಪ್ರಾಣಾದ್ಯೈಃ ತಥೈವ ಹ್ಯಧಿಭೂತಗೈಃ' ಇತ್ಯಾದಿಯಾಗಿ ಆನಂದಮಯಾಧಿಕರಣದ ಅನುವ್ಯಾಖ್ಯಾನಶ್ಲೋಕವು ಹೀಗೆ ಹೇಳಿದೆ. - ''ಅನ್ನಮಯಾದಿ ಪ್ರಕರಣಗಳಲ್ಲಿ ಅನ್ನ, ಪ್ರಾಣ, ಆಕಾಶಾದಿ ಶಬ್ದಗಳು ವಿದ್ವದ್ಬೂಢಿಯಿಂದ ಭಗವಂತನನ್ನೇ ಪ್ರತಿಪಾದಿಸುತ್ತವೆ'' ಎಂದು. ಹೀಗಿರುವಾಗ ಆಕಾಶಾದಿಶಬ್ದಗಳನ್ನು ಅಜ್ಞರೂಢಿಯಿಂದ ಭೂತಾಕಾಶಪರವೆಂದು ಹೇಗೆ ಹೇಳುತ್ತೀರಿ?

ಉತ್ತರ - ಆನಂದಮಯಾಧಿಕರಣದಲ್ಲಿ ಆಕಾಶಾದಿಶಬ್ದಗಳನ್ನು ಭಗವತ್ಪರವೆಂದದ್ದು ಸತ್ಯ. ಆದರೆ ಆಕಾಶಾಧಿಕರಣದ ಸಿದ್ಧಾಂತನ್ಯಾಯವನ್ನು ಉಪಜೀವಿಸಿ ಹಾಗೆ ಹೇಳಿದ್ದಾರೆ. ಹೀಗಿರುವಾಗ ಆಕಾಶಾಧಿಕರಣದ ಪೂರ್ವಪಕ್ಷಿಯು ಇದೇ ಅಧಿಕರಣದ ಸಿದ್ಧಾಂತನ್ಯಾಯವೆಂದು ಹೇಗೆ ತಾನೆ ಒಪ್ಪುತ್ತಾನೆ. ಇದರಿಂದ ಆಕಾಶಾದಿಶಬ್ದಗಳಿಗೆ ಭಗವಂತನಲ್ಲಿ ವಿದ್ವದ್ಬೂಢಿಯನ್ನು ಸಮರ್ಥಿಸಲಾಗದು. ಈ ಎಲ್ಲ ಕಾರಣಗಳಿಂದ ಅಂತರಧಿಕರಣದ ಮೇಲೆ ಬರುವ ಅಭ್ಯಧಿಕಾಶಂಕೆಯು ಸುದೃಢವಾಗಿದೆ. ಇದನ್ನು ಪರಿಹರಿಸಲು ಆಕಾಶಾಧಿಕರಣವು ಹೊರಟಿದ್ದು ಅತ್ಯಂತ ಸಾರ್ಥಕ. ಈ ಅಭ್ಯಧಿಕಾಶಂಕೆಯು ಪ್ರಮೇಯಾಶ್ರಿತವಾಗಿದೆ.ಆಕಾಶಶಬ್ದವು ಭಗವಂತನಲ್ಲಿ ಮುಖ್ಯವಾಗಿ ಇದೆಯೆನ್ನಲು ಈ ಅಭ್ಯಧಿಕಾಶಂಕೆಯು ವಿರೋಧಿಯಾಗಿದೆ. (ಪ್ರಮಾಣಾಶ್ರಿತಪೂರ್ವಪಕ್ಷವನ್ನು ಈ ಮುಂದೆ ತೋರಿಸಲಿದ್ದಾರೆ.)

### ಕಠಿಣಪದಾರ್ಥ

ದ್ವಯಂ = ಸ್ವಾತಂತ್ರ್ಯ ಮತ್ತು ತದ್ಗತತ್ವ; ವಿವರತ್ವಾದಿಕಂ = ಅನುವ್ಯಾಖ್ಯಾನದಲ್ಲಿರುವ ವಿವರಾದಿಃ ಎಂಬ ಪದವು ಭಾವಪ್ರಧಾನದಿಂದ ನಿರ್ದಿಷ್ಟವಾಗಿದೆ; ತಸ್ಯ = ವಿವರತ್ವಾದಿಗಳು; ತದಧೀನಂ = ಭಗವಂತನ ಆಧೀನ; ಸ್ವಭಾವತ್ವಾತ್ = ಜಡ ಸ್ವಭಾವವಾದ್ದರಿಂದ; ಸಾಪೇಕ್ಷಯೋಃ = ತದ್ಗತತ್ವಾಭಾವ ತದಧೀನತ್ವರೂಪ ಎಂಬ ಹೇತುಗಳು ಮಧ್ಯದಲ್ಲಿ ಮತ್ತೊಂದು ಹೇತುವನ್ನು ಅಪೇಕ್ಷಿಸಿವೆ; ಶ್ಲೋಕೇ = 'ಚೇಷ್ಟಾ ಹಿ' ಎಂಬ ಅನುವ್ಯಾಖ್ಯಾನದಲ್ಲಿ, ತಸ್ಯಂತಸ್ಯ = 'ತಸ'ಪ್ರತ್ಯಯಾಂತವಾದ; ಶ್ಲೋಕೇನೈವ = ಚೇಷ್ಟಾ ಹಿ ಇತ್ಯಾದಿಶ್ಲೋಕದಿಂದಲೇ; ಮತಾಂತರೇ ತು = ಹಿಂದೆ ಹೇಳಿದ ಎರಡು ಪಕ್ಷಗಳನ್ನು, ಬಹಿರೇವ = ಶ್ಲೋಕದಿಂದ ಹೊರಗಡೆ; ಸ್ವರೂಪತಃ = ಜ್ಞಾನಾದಿಹೇತುಗಳನ್ನು ಅಪೇಕ್ಷಿಸದೆ; ಪಾಲನ = ಪ್ರಯತ್ನ; ತತ್ರಾಪಿ = ಅಂತರಧಿಕರಣ- ದಲ್ಲಿಯೂ; ತಥಾತ್ವೇ = ಎಲ್ಲೆಡೆ ಒಬ್ಬನೇ ಪೂರ್ವಪಕ್ಷಿಯಾದರೆ; ತತ್ರತ್ಯ = ಅಂತರಧಿಕರಣದಲ್ಲಿರುವ; ಅತ್ರಾಪಿ = ಆಕಾಶಾಧಿಕರಣದ; ರೂಢಂ ವಾ = ಶಬ್ದಾಶ್ರಯತ್ವರೂಪವಾದ ರೂಢವನ್ನಾಗಲೀ;

ಆಕಾಶನಂ = ಅವಕಾಶರೂಪದಿಂದ ಇರುವಿಕೆ; ವೈದಿಕಪ್ರಯೋಗಬಾಹುಲ್ಯಾದೇಃ = ವೇದದಲ್ಲಿರುವ ಬಹುಳವಾದ ಪ್ರಯೋಗ ಮತ್ತು ಪುಷ್ಕಲವಾದ ಪ್ರವೃತ್ತಿನಿಮಿತ್ತಗಳು; ಆಧ್ಯಾತ್ಮಗ್ಗೈಃ = ಆಧ್ಯಾತ್ಮಿಕವಾದ ಪ್ರಾಣಾದಿಶಬ್ದಗಳಿಂದ; ವಕ್ಷ್ಯಮಾಣನ್ಯಾಯಂ = ಆಕಾಶಾಧಿಕರಣದಲ್ಲಿ ಹೇಳುವ ನ್ಯಾಯವನ್ನು.

**ಪ್ರಕಾಶಃ** – ನನೂಕ್ತಪಕ್ಷದ್ವಯೇ ತದಧೀನತ್ವನಿರಾಸ ಏವ ಶ್ಲೋಕಾರೂಢೋ ನ ತದ್ಗತತ್ವನಿರಾಸಃ । ನಚ 'ತದ್ಗತತ್ವಂ ನಿಮಿತ್ತಮೇವ ನ' ಇತಿ ವಾಚ್ಯಮ್, ಅನುವ್ಯಾಖ್ಯಾನವಿರೋಧಾತ್ ಇತ್ಯನುಶಯೇನ ದ್ವಯೋರಪಿ ಶ್ಲೋಕಾರೂಢತಯಾ ಕಲ್ಪಾನ್ತರಮಾಹ – **ಯದ್ವಾ ಸ್ವಾತನ್ತ್ರ್ಯಮಿತಿ ॥ ವಿವರತ್ವಾದಿಕಮಿತಿ ॥** ಶ್ಲೋಕೇ ಭಾವಪ್ರಧಾನನಿರ್ದೇಶ ಇತ್ಯುಕ್ತಂ ಭವತಿ ।

**ಸಾಪೇಕ್ಷಯೋರಿತಿ ॥** ತದ್ಗತತ್ವಾಭಾವತದನಧೀನತ್ವರೂಪಹೇತುದ್ವಯಂ ಮಧ್ಯೇ ಅಪೇಕ್ಷ್ಯ 'ಅಚೇತನಸ್ವಭಾವಃ' ಇತ್ಯತ್ರ ವಿವಕ್ಷಿತಂ ಹೇತುದ್ವಯಂ ನಿಮಿತ್ತತ್ವಾಭಾವಂ ಸಾಧಯತೀತ್ಯರ್ಥಃ ॥

**ಸಾರ್ವವಿಭಕ್ತಿಕೇತಿ ॥** ಯದ್ಯಪಿ ''ಪಞ್ಚಮ್ಯಾಸ್ತಸಿಲ್'' ಇತಿ ಪಞ್ಚಮ್ಯರ್ಥ ಏವ ತಸಿಲ್ ವಿಹಿತಃ । ತಥಾऽಪಿ ''ಪ್ರತಿಯೋಗೇ ಪಞ್ಚಮ್ಯಾಸ್ತಸಿಃ'' ''ಆದ್ಯಾದಿಭ್ಯ ಉಪಸಙ್ಖ್ಯಾನಮ್'' ಇತ್ಯುಕ್ತೇಃ ''ಯತೋ ಯತೋ ನಿಶ್ಚಲತಿ ಮನಶ್ಚಞ್ಚಲಮ್'' ಇತ್ಯಾದಾವಿವ ಸಪ್ತಮ್ಯರ್ಥೇ ತಸಿರಿತ್ಯರ್ಥಃ ।

ತತಶ್ಚೈವಂ ಯೋಜನಾ – ವಿವರತ್ವಾದಿಕಂ 'ಕಥಂ ತತಃ' ತತ್ರ ಭಗವತಿ ಕಥಂ, ಕುತಃ? ಅಚೇತನಗತತ್ವಾತ್ । ತತಶ್ಚ ತದ್ಗತತ್ವಾಭಾವಾನ್ನ ನಿಮಿತ್ತಮಿತಿ । ತಥಾ ವಿವರತ್ವಂ 'ಕಥಂ ತತಃ' ತದಧೀನಂ ಕಥಂ, ಕುತಃ? ಸ್ವಭಾವತ್ವಾತ್ ತತಶ್ಚ ತದಧೀನತ್ವಾಭಾವಾನ್ನ ನಿಮಿತ್ತಮಿತಿ ।

ಪೂರ್ವೋಕ್ತಪಕ್ಷಯೋರಸ್ಯ ಚ ಪಕ್ಷಸ್ಯ ವಿಶೇಷಂ ಸ್ವಯಮೇವಾಹ – **ಅಸ್ಮಿನ್ಮತ ಇತಿ ॥ ಬಹಿರೇವೇತಿ ॥** ಉಕ್ತಮಿದಂ ಪ್ರಾಕ್ತನೈರಿವಾಸ್ಮಾಭಿಃ । ಏವಂ ಸ್ವಯಮನುವ್ಯಾಖ್ಯಾನಸ್ಯ ತ್ರೇಧಾऽಭಿಪ್ರಾಯಮುಕ್ತ್ವಾ, ಸುಧೋಕ್ತಮಪಿ ಪ್ರಕಾರಾನ್ತರಮನುಸನ್ಧೇಯಮಿತಿ ಭಾವೇನ ತದುಕ್ತಂ ಸಙ್ಗ್ರಹೇಣಾನೂದ್ಯ ತದಭಿಪ್ರಾಯಂ ಚಾಸ್ಫುಟತ್ವಾದ್ ವ್ಯನಕ್ತಿ – **ಸುಧಾಯಾಂ ತ್ವಿತಿ ॥** 'ಸ್ವರೂಪತಃ' ಜ್ಞಾನಾದಿಹೇತುಮನಪೇಕ್ಷ್ಯ ।

ನನ್ವೇವಂ ಸುಧಾಯಾಂ ''ನನೂಕ್ತಮನ್ಯತ್ರಾನ್ಯರೂಢೇರವಿದ್ವತ್ಸಮ್ಬನ್ಧಿತ್ವಾದ್ ಯೋಗಸ್ಯ ಚ ಪರಮೇಶ್ವರಾಯತ್ತಾಲ್ಪನಿಮಿತ್ತತ್ವಾದಮುಖ್ಯತಾ' ಇತಿ । ಸತ್ಯಂ, 'ತದನ್ನೌಷಧ್ಯಾದಿಪದಾರ್ಥೇಷು ಸ್ಯಾನ್ನ ತು ಪುರನ್ದರಾದಿಷು' ಇತ್ಯಾದಿನಾ ಅಚೇತನಸ್ಯಾಪಿ ಭಗವದಧೀನತ್ವೋಕ್ತಿರಯುಕ್ತಾ ಇತಿ, ಅತ ಆಹ – **ಯತ್ತಿತಿ ॥**

ನನ್ವತ್ರಾನಙ್ಗೀಕುರ್ವನ್ ಪೂರ್ವಪಕ್ಷೀ ತತ್ರ ಕಥಮಙ್ಗೀಕುರ್ಯಾತ್? ಇತ್ಯತ ಆಹ – **ನ ಹೀತಿ ॥** ಉತ್ತರಪ್ರಸ್ಥಾನಾವಿರೋಧಾಯ ಟೀಕಾರ್ಥಮಾಹ – **ಅನುವ್ಯಾಖ್ಯಾನೇತಿ ॥**

यद्वा – विवरत्वस्य भगवदधीनत्ववर्णनं टीकाविरुद्धम्, इत्यत आह – **अनुव्याख्यानेति** ॥ **कृप्तो योगो नेत्युपपादितमुपसंहरति – तस्मादिति** ॥ **रूढं वेति** ॥ शब्दाश्रयत्वादिरूपं वेत्यर्थः । 'निमित्तम्' इत्यन्वयः ।

ननु मास्तु कृप्तो योगः, कल्प्यो भविष्यतीति द्वितीयं पक्षं निरस्यति – **आ समन्तादिति**॥ असिद्धत्वे हेतुः – **वैदिकप्रयोगेति** ॥ आदिपदेन प्रवृत्तिनिमित्तपौष्कल्यप्रहणम् ।

ननु 'विद्वद्रूढिमहायोगावसिद्धौ' इति कथं, अनुव्याख्यानविरोधादित्यत आह – **यत्त्विति**॥ 'अत्रादिशब्दैर्भगवानेको मुख्यतयोदितः ।' इत्युत्तरार्धेनान्वयः ।

ननु यद्येवं तर्हि ''यदि आनन्दमयोऽभ्यासात्'' इति वदतः सूत्रकारस्यैतावानर्थोऽभिमतो भवेत् तर्हि तत एव गतार्थत्वात्, 'अन्तस्तद्धर्मोपदेशात्' इत्याद्यधिकरणानामनुत्थानमेव स्यात् इत्याशङ्क्य, 'अभ्यधिकाशङ्कासद्भावेनाधिकरणान्तरारम्भोपपत्तिः' इत्यन्तराधिकरणोपक्रमसुधाविरोधः, तत्र 'विद्वद्रूढिमहायोगौ सर्वशब्दानां सिद्धौ' इत्युपेत्य तदाच्छादकाभ्यधिकाशङ्क्याऽधिकरणारम्भसमर्थनोक्तिप्रतीतेरिति चेत्, मैवम् ।

उत्तरत्र तदाच्छादकाभ्यधिकाशङ्कोक्तेरदर्शनात् । ''तदन्नौषध्यादिपदार्थेषु स्यान्न तु पुरन्दरादिषु'' इति वाक्यस्य गतेरुक्तत्वात् । सूत्रकारस्याकाशाद्यधिकरणन्यायेन अभिमतस्य भाष्यकारेण तत्र कथनेऽपि विद्वद्रूढिमहायोगयोरसिद्धत्वादिनाऽऽक्षेपेण पूर्वपक्षप्रवृत्तिसम्भवेन तद्वाक्यस्याप्येवं योज्यत्वादिति भावः ।

तस्माद्विद्वद्रूढिमहायोगयोरेतत्सिद्धान्तात् पूर्वमसिद्धत्वात् अनुव्याख्यानोक्ता युक्तेत्यर्थः । 'इयम्' अनुव्याख्यानोक्ता आकाशपदप्रवृत्तिनिमित्तविवरत्वरूपप्रमेयमाश्रित्य प्रवृत्तेत्यर्थः ॥

ವಿವರಣೆ – ಇಲ್ಲಿಯ ತನಕ ಎರಡು ಬಗೆಯಲ್ಲಿ ಪೂರ್ವಪಕ್ಷವನ್ನು ತೋರಿಸಿದ್ದಾಯಿತು. ಈ ಎರಡೂ ಪೂರ್ವಪಕ್ಷಗಳು ಅಚೇತಸ್ವಭಾವತ್ವವಿವರಾದಿಃ ಕಥಂ ತತಃ? ಎಂಬ ಅನುವ್ಯಾಖ್ಯಾನಶ್ಲೋಕದಿಂದ ಸೂಚಿತವಾಗಿವೆ. ಸಕಲಪದಾರ್ಥಗಳು ಭಗವಂತನ. ಅಧೀನವಾಗಿವೆ. ಮತ್ತು ಆ ಪದಾರ್ಥಗಳನ್ನು ಪ್ರತಿಪಾದಿಸುವ ಶಬ್ದಗಳ ಪ್ರವೃತ್ತಿನಿಮಿತ್ತವು ಭಗವಂತನಲ್ಲಿಯೇ ಇವೆ ಎಂದು ಸಿದ್ಧಾಂತಿಗಳ ನಿಲುವು. ಇದನ್ನು ಪೂರ್ವಪಕ್ಷಿಗಳು ಎರಡು ಮುಖದಲ್ಲಿ ಆಕ್ಷೇಪಿಸಿದ್ದಾರೆ. ಯಾವುದೇ ಜಡಪದಾರ್ಥಗಳು

ಭಗವಂತನ ಅಧೀನವಾಗುವುದಿಲ್ಲ, ಜಡವಾಚಿಶಬ್ದಗಳ ಪ್ರವೃತ್ತಿನಿಮಿತ್ತವೂ ಸಹ ಭಗವಂತನಲ್ಲಿ ಬರುವುದಿಲ್ಲವೆಂದು ಪೂರ್ವಪಕ್ಷಿಗಳ ಧೋರಣೆ. ಅನುವ್ಯಾಖ್ಯಾನಶ್ಲೋಕದಿಂದಲೇ ಈ ವಿಷಯವು ತಿಳಿಯುತ್ತದೆ.

ಶಂಕೆ - ತದಧೀನತ್ವದ ನಿರಾಸವು ಅನುವ್ಯಾಖ್ಯಾನಶ್ಲೋಕದಿಂದ ಹೇಗೆ ತಿಳಿಯುತ್ತದೆಂದು ನಿರೂಪಿಸಿದಿರಿ, ಆದರೆ ತದ್ಗತತ್ವನಿರಾಸವನ್ನು ಅನುವ್ಯಾಖ್ಯಾನಶ್ಲೋಕದಿಂದ ಹೇಗೆ ಮಾಡಿದ್ದಾರೆಂದು ನೀವು ತೋರಿಸಿಲ್ಲ. ಆದ್ದರಿಂದ ತದ್ಗತತ್ವವು ಶಬ್ದಗಳ ಪ್ರವೃತ್ತಿನಿಮಿತ್ತವೇ ಆಗುವುದಿಲ್ಲವಲ್ಲ?

ಸಮಾಧಾನ - ಹಾಗೆ ಹೇಳಿದರೆ ಅನುವ್ಯಾಖ್ಯಾನದ ವಿರೋಧವು ಬರುತ್ತದೆ. ಆದ್ದರಿಂದ ತದ್ಗತತ್ವದ ನಿರಾಸವನ್ನೂ ಸಹ 'ಯದ್ವಾ ಸ್ವಾತಂತ್ಯ್ರಂ'' ಎಂಬ ಗ್ರಂಥದಿಂದ ಮತ್ತೊಂದು ಬಗೆಯಲ್ಲಿ ಶ್ಲೋಕಾರೂಢ ಮಾಡುತ್ತಿದ್ದಾರೆ. ಈ ಪಕ್ಷದಲ್ಲಿ ಶ್ಲೋಕದಿಂದ ಹೀಗೆ ತಿಳಿಯುತ್ತದೆ - 'ವಿವರತ್ವಾದಿಕಂ ಬ್ರಹ್ಮಣ ಆಕಾಶಾದಿಶಬ್ದವೃತ್ತೋ ನ ನಿಮಿತ್ತಂ ತದಧೀನತ್ವಾಭಾವಾತ್' (ವಿವರತ್ವಾದಿಗಳು ಭಗವಂತನ ಅಧೀನವಾಗದ ಕಾರಣ ಆಕಾಶಾದಿಶಬ್ದಗಳು ಬ್ರಹ್ಮನನ್ನು ಪ್ರತಿಪಾದಿಸಲು ನಿಮಿತ್ತವಾಗುವುದಿಲ್ಲ). ಈ ಅನುಮಾನದಲ್ಲಿ ತದಧೀನತ್ವಾಭಾವವೆಂಬ ಹೇತುವೇ ಅಸಿದ್ಧವೆಂಬ ಪ್ರಶ್ನೆ ಬಂದರೆ; ಸ್ವಭಾವತ್ವಹೇತುವಿನಿಂದ ತದಧೀನತ್ವಾಭಾವವನ್ನು ಸಾಧಿಸಬೇಕು - ವಿವರತ್ವಾದಿಕಂ ಭಗವದಧೀನಂ ನ ಭವತಿ, ಅಚೇತನಸ್ವಭಾವತ್ವಾತ್ (ಅಚೇತನಸ್ವಭಾವವಾದ್ದರಿಂದ ವಿವರತ್ವಾದಿಗಳು ಭಗವಂತನ ಅಧೀನವಾಗುವುದಿಲ್ಲ) ಮತ್ತು ವಿವರತ್ವಾದಿಕಂ ಆಕಾಶಾದಿಶಬ್ದವೃತ್ತೌ ನಿಮಿತ್ತಂ ನ ಭವತಿ ತದ್ಗತತ್ವಾಭಾವಾತ್ (ವಿವರತ್ವಾದಿಗಳು ಭಗವಂತನಲ್ಲಿ ಇಲ್ಲದ ಕಾರಣ ಆಕಾಶಾದಿಗಳ ಶಬ್ದಗಳ ಪ್ರವೃತ್ತಿಯಲ್ಲಿ ನಿಮಿತ್ತಗಳಾಗಲಾರವು) ಈ ಅನುಮಾನದಲ್ಲಿಯೂ ಸಹ ತದ್ಗತತ್ವಾಭಾವಹೇತುವೇ ಅಸಿದ್ಧವೆಂಬ ಪ್ರಶ್ನೆ ಬಂದರೆ, ಅಚೇತನಗತತ್ವಹೇತುವಿನಿಂದ ಸಾಧಿಸಬೇಕು. 'ವಿವರತ್ವಾದಿಕಂ ನ ಭಗವದ್ಗತಂ ಅಚೇತನಗತತ್ವಾತ್ (ವಿವರತ್ವಾದಿಗಳು ಅಚೇತನನಿಷ್ಠವಾಗಿರುವುದರಿಂದ ಭಗವದ್ಗತವಾಗಲಾರವು) ಹೀಗೆ ಸ್ವಭಾವತ್ವ ಹಾಗೂ ಅಚೇತನಗತತ್ವಗಳು ಮಧ್ಯದಲ್ಲಿ ಮತ್ತೊಂದನ್ನು ಹೇತು ಮಾಡಿಕೊಂಡು ಬ್ರಹ್ಮನಲ್ಲಿ ಶಬ್ದಗಳ ಪ್ರವೃತ್ತಿಗೆ ನಿಮಿತ್ತವಲ್ಲವೆನ್ನಲು ಕಾರಣಗಳಾಗಿವೆ.

ಅನುವ್ಯಾಖ್ಯಾನಶ್ಲೋಕದಲ್ಲಿರುವ 'ತತಃ' ಎಂಬ ಶಬ್ದಕ್ಕೆ ತತ್ರ = ಭಗವಂತನಲ್ಲಿರುವ ಎಂದರ್ಥ. ತತ್ ಶಬ್ದದ ಮೇಲೆ ತಸಿಪ್ರತ್ಯಯವು ಸಪ್ತಮ್ಯರ್ಥದಲ್ಲಿ ಬಂದಿದೆ. ಆದ್ದರಿಂದ ತತಃ ಎಂಬ ಶಬ್ದಕ್ಕೆ ತತ್ರ ಎಂಬರ್ಥವು ವ್ಯಾಕರಣ ಸಮ್ಮತವಾಗಿದೆ. ವಸ್ತುತಸ್ತು 'ಪಂಚಮ್ಯಾಸ್ತಸಿಲ್' ಎಂಬ ಸೂತ್ರವು ಪಂಚಮ್ಯರ್ಥದಲ್ಲಷ್ಟೇ ತಸಿಲ್ ಪ್ರತ್ಯಯವನ್ನು ವಿಧಿಸಿದೆ. ಆದರೆ ಇಲ್ಲಿ ತಸಿಲ್ ಪ್ರತ್ಯಯವನ್ನು ವಿವಕ್ಷಿಸದೆ ತಸಿ ಪ್ರತ್ಯಯವನ್ನು ವಿವಕ್ಷಿಸಬೇಕು. 'ಪ್ರತಿಯೋಗೇ ಪಂಚಮ್ಯಾಸ್ತಸಿ' 'ಆದ್ಯಾದಿಭ್ಯಃ ಉಪಸಂಖ್ಯಾನಮ್' ಇತ್ಯಾದಿ ಸೂತ್ರದಿಂದ ಪಂಚಮ್ಯರ್ಥದಲ್ಲಷ್ಟೇ ಅಲ್ಲದೆ ಸಪ್ತಮ್ಯರ್ಥದಲ್ಲಿಯೂ ಸಹ ತಸಿಪ್ರತ್ಯಯವನ್ನು ಹೇಳಬಹುದು. ಈ ವಿಷಯದಲ್ಲಿ ಗೀತಾಚಾರ್ಯನ ಪ್ರಯೋಗವು ಸಮ್ಮತವಾಗಿದೆ. 'ಯತೋ ಯತೋ ನಿಶ್ಚಲತಿ ಮನಶ್ಚಂಚಲಮ್' (ಚಂಚಲವಾದ ಮನಸ್ಸು ಎಲ್ಲಿ ಎಲ್ಲಿ ಹೋಗುತ್ತದೋ) ಎಂದು ಯತ್ ಶಬ್ದದ ಮೇಲೆ ಸಪ್ತಮ್ಯರ್ಥದಲ್ಲಿ ತಸಿಪ್ರತ್ಯಯದ ಪ್ರಯೋಗವು ಕಾಣಿಸುತ್ತದೆ.

ತದ್ಗತತ್ವವನ್ನು ಶ್ಲೋಕಾರೂಢ ಮಾಡಿದಾಗ ಹೀಗೆ ಯೋಜನೆ - 'ವಿವರಾದಿಃ = ವಿವರತ್ವಾದಿಗಳು, ತತಃ = ಭಗವಂತನಲ್ಲಿ ಕಥಂ = ಹೇಗೆ ತಾನೆ ಬರುತ್ತವೆ?; ಅಚೇತನಸ್ವಭಾವಃ = ಅಚೇತನದಲ್ಲಿರುವುದರಿಂದ, ಭಗವಂತನಲ್ಲಿ ಬರುವುದಿಲ್ಲ. ಆದ್ದರಿಂದ ತದ್ಗತತ್ವವು ಶಬ್ದಪ್ರವೃತ್ತಿಗೆ ನಿಮಿತ್ತವಾಗುವುದಿಲ್ಲ. ಇದರಂತೆ ವಿವರಾದಿಃ = ವಿವರತ್ವಾದಿಗಳು, ಕಥಂ ತತಃ? = ಹೇಗೆ ಭಗವದಧೀನವಾಗುತ್ತವೆ? ಅಚೇತನಸ್ವಭಾವಃ = ಅಚೇತನಸ್ವಭಾವವಾದ್ದರಿಂದ. ಹೀಗೆ ವಿವರತ್ವಾದಿಗಳು ಭಗವದಧೀನವಾಗದ ಕಾರಣ ಆಕಾಶಾದಿಶಬ್ದಗಳ ಪ್ರವೃತ್ತಿಗೆ ನಿಮಿತ್ತಗಳಾಗುವುದಿಲ್ಲ.

ಹಿಂದೆ ಹೇಳಿದ ಎರಡು ಪಕ್ಷಗಳಿಗಿಂತ ಈ ಪಕ್ಷದಲ್ಲಿರುವ ವೈಶಿಷ್ಟ್ಯವನ್ನು ಸ್ವತಃ ಗ್ರಂಥಕಾರರೇ 'ಅಸ್ಮಿನ್ ಮತೇ' ಇತ್ಯಾದಿ ವಾಕ್ಯದಿಂದ ವಿವರಿಸುತ್ತಿದ್ದಾರೆ. ಹಿಂದಿನ ಎರಡು ಪಕ್ಷಗಳಲ್ಲಿ ತದ್ಗತತ್ವಪಕ್ಷವನ್ನು ಶ್ಲೋಕದಿಂದ ದೂಷಣೆ ಮಾಡಿರಲಿಲ್ಲ. ಈ ಪಕ್ಷದಲ್ಲಿ ಅದನ್ನೂ ಶ್ಲೋಕದಿಂದಲೇ ದೂಷಿಸಿದ್ದಾರೆಂದು ಅಭಿಪ್ರಾಯ. ಶ್ಲೋಕದಲ್ಲಿ ತದ್ಗತತ್ವಪಕ್ಷವು ಹಿಂದೆ ಹೇಗೆ ದೂಷಿಸಿರಲಿಲ್ಲವೆಂದು ಆವಾಗಲೇ ಹೇಳಿದ್ದೇವೆ. ಈಗ ವಿವರಿಸುವ ಅವಶ್ಯಕತೆ ಇಲ್ಲ. ಹೀಗೆ ಅನುವ್ಯಾಖ್ಯಾನಕ್ಕೆ ಗ್ರಂಥಕಾರರು ಮೂರು ಬಗೆಯಲ್ಲಿ ಸ್ವತಃ ವ್ಯಾಖ್ಯಾನಿಸಿದರು. ಈಗ ಅದೇ ಅನುವ್ಯಾಖ್ಯಾನಶ್ಲೋಕಕ್ಕೆ ಸುಧಾಕಾರರು ಮಾಡಿದ ವ್ಯಾಖ್ಯಾನವನ್ನು ಮತ್ತೊಂದು ಪ್ರಕಾರದಲ್ಲಿಯೂ ಅನುಸಂಧಾನ ಮಾಡಿಕೊಳ್ಳಬೇಕೆಂದು 'ಸುಧಾಯಾಂ ತು' ಇತ್ಯಾದಿ ವಾಕ್ಯದಿಂದ ವ್ಯಾಖ್ಯಾನಿಸುತ್ತಿದ್ದಾರೆ. ಸುಧೆಯಲ್ಲಿ ಹೇಳಿದ ಅಭಿಪ್ರಾಯವು ಸ್ಪಷ್ಟವಾಗಿ ತಿಳಿಯದ ಕಾರಣ ಇಲ್ಲಿ ಗ್ರಂಥಕಾರರು ಸಂಗ್ರಹಿಸಿ ವ್ಯಾಖ್ಯಾನಿಸಿದ್ದಾರೆ.

ಹಿಂದೆ ಪೂರ್ವಪಕ್ಷದಲ್ಲಿ ಸುಧಾಕಾರರು ಹೀಗೆ ಶಂಕಿಸಿದ್ದಾರೆ 'ಬೇರೆಡೆ ವಿದ್ವದ್ಬೂಢಿಯು ಇರುವುದಿಲ್ಲ. ಯೋಗವೂ ಸಹ ಭಗವಂತನ ಅಧೀನವಾಗಿರುತ್ತದೆ. ಪ್ರವೃತ್ತಿನಿಮಿತ್ತವೂ ಸಹ ಅಲ್ಪವಾಗಿರುತ್ತದೆ. ಆದ್ದರಿಂದ ಭಗವಂತನನ್ನು ಬಿಟ್ಟು ಉಳಿದ ಎಲ್ಲ ಪದಾರ್ಥಗಳು ಅಮುಖ್ಯವಾಗಿ ಪ್ರತಿಪಾದ್ಯಗಳಾಗುತ್ತವೆ' ಎಂದು ಹೇಳಿದ್ದಾರೆ. ಹೀಗಿರುವಾಗ ಆಕಾಶಾದಿಶಬ್ದಗಳು ಜಡಪದಾರ್ಥಗಳಲ್ಲಿಯೇ ಮುಖ್ಯವಾಗಿ ಬರುತ್ತದೆಂದು ಹೇಗೆ ಆಕ್ಷೇಪಿಸುತ್ತಿದ್ದೀರಿ? ಹೌದು, ಅನ್ನ ಓಷಧಾದಿಪದಾರ್ಥಗಳಲ್ಲಷ್ಟೇ ಅಮುಖ್ಯಪ್ರಯೋಗವೆಂದು ಹೇಳಬಹುದು ಹೊರತು ಪುರಂದರಾದಿಚೇತನಪದಾರ್ಥಗಳಲ್ಲಿ ಅಮುಖ್ಯಪ್ರಯೋಗವೆಂದು ಹೇಳಲಾಗದು ಇತ್ಯಾದಿಯಾಗಿ ಜಡಪದಾರ್ಥಗಳಿಗೆ ಭಗವದಧೀನತ್ವವನ್ನು ಸುಧಾಕಾರರು ಹೇಳಿದ್ದಾರೆ. ಇದು ಈಗ ತಪ್ಪಾಗಬೇಕಾದೀತು ಎಂಬ ಶಂಕೆಗೆ ಗ್ರಂಥಕಾರರು ''ಯತ್ ತು''ಇತ್ಯಾದಿಯಾಗಿ ಉತ್ತರಿಸುತ್ತಿದ್ದಾರೆ.

ಈ ಅಧಿಕರಣದ ಪೂರ್ವಪಕ್ಷಿಯು ಜಡಪದಾರ್ಥಗಳನ್ನು ಭಗವದಧೀನವೆಂದು ಒಪ್ಪದಿದ್ದಾಗ ಅಂತರಧಿಕರಣದ ಪೂರ್ವಪಕ್ಷಿಯು ಭಗವದಧೀನವೆಂದು ಹೇಗೆ ಒಪ್ಪುತ್ತಾನೆ? ಎಂಬ ಶಂಕೆಗೆ 'ನ ಹಿ' ಇತ್ಯಾದಿ ಗ್ರಂಥದಿಂದ ಉತ್ತರಿಸುತ್ತಿದ್ದಾರೆ. ಉತ್ತರಪ್ರಸ್ಥಾನವೆನಿಸಿದ ಅನುವ್ಯಾಖ್ಯಾನ ಹಾಗೂ ಸುಧೆಗಳಿಗೆ ವಿರೋಧ ಬಾರದಂತೆ ಟೀಕೆಯ ಅರ್ಥವನ್ನು 'ಅನುವ್ಯಾಖ್ಯಾನ' ಇತ್ಯಾದಿ ಗ್ರಂಥದಿಂದ ವಿವರಿಸುತ್ತಿದ್ದಾರೆ. ಅಥವಾ ವಿವರತ್ವವು ಭಗವಂತನ ಅಧೀನವೆಂದು ಹೇಳಿದ್ದು ಟೀಕೆಗೆ ವಿರುದ್ಧವಾಗಿದೆ ಎಂಬ ಶಂಕೆಗೂ 'ಅನುವ್ಯಾಖ್ಯಾನ' ಎಂಬ ವಾಕ್ಯದಿಂದಲೇ ಉತ್ತರಿಸುತ್ತಿದ್ದಾರೆ.

ಹಿಂದಿನ ಮೂಲದಲ್ಲಿ ಹೀಗೆ ವಿಕಲ್ಪಿಸಿದ್ದರು - ಆಕಾಶಶಬ್ದವು ರೂಢಿಯಿಂದ ವಿಷ್ಣುವನ್ನು ಪ್ರತಿಪಾದಿಸುತ್ತದೋ? ಅಥವಾ ಯೋಗದಿಂದಲೋ? ಎರಡನೆಯ ಪಕ್ಷದಲ್ಲಿ ಯೋಗವು ಪ್ರಮಾಣ-

ಸಿದ್ಧವೋ ಅಲ್ಲವೋ? ಪ್ರಮಾಣಸಿದ್ಧವೆಂಬ ಪಕ್ಷದಲ್ಲಿಯೂ ಆಕಾಶಶಬ್ದದ ಪ್ರವೃತ್ತಿನಿಮಿತ್ತವು ಭಗವದಧೀನವೆಂದೋ? ಅಥವಾ ಭಗವದ್ಗತತವೆಂದೋ? ಎಂದು ವಿಕಲ್ಪಿಸಿದ್ದರು. ಇಲ್ಲಿಯ ತನಕ ಪ್ರಮಾಣಸಿದ್ಧವಾದ ಯೋಗವನ್ನು ಭಗವಂತನಲ್ಲಿ ಹೇಳಲಾಗದೆಂದು ಸಮರ್ಥಿಸಿದ್ದಾಯಿತು. 'ತಸ್ಮಾತ್' ಇತ್ಯಾದಿ ಗ್ರಂಥದಿಂದ ಇದನ್ನೇ ಉಪಸಂಹಾರ ಮಾಡುತ್ತಿದ್ದಾರೆ. ಪ್ರಮಾಣಸಿದ್ಧವಾದ ಯೋಗವನ್ನು ಭಗವಂತನಲ್ಲಿ ಹೇಳುವುದು ಬೇಡ. ರೂಢನಿಮಿತ್ತವನ್ನು ಅಪೇಕ್ಷಿಸಿದ (ಪ್ರಮಾಣಸಿದ್ಧವಲ್ಲದ) ಯೋಗವನ್ನು ಭಗವಂತನಲ್ಲಿ ಹೇಳೋಣವೆಂಬ ಎರಡನೆಯ ಪಕ್ಷವನ್ನು 'ಅಸಮಂತಾತ್' ಎಂಬ ಗ್ರಂಥದಿಂದ ನಿರಾಕರಿಸುತ್ತಿದ್ದಾರೆ. ಕಲ್ಪಿತವಾದ ಯೋಗವು ಪ್ರಮಾಣಸಿದ್ಧವಾದ ರೂಢಿಯಿಂದ ಬಾಧಿತವಾಗುತ್ತದೆ. ಇನ್ನು ವಿದ್ವದ್ರೂಢಿ ಮಹಾಯೋಗಗಳನ್ನು ಭಗವಂತನಲ್ಲಿ ಹೇಳಬೇಕು. ಇವೆರಡೂ ಸಹ ಅಸಿದ್ಧಗಳಾಗಿವೆ. ಅಸಿದ್ಧವಾಗುವುದಕ್ಕೆ ಕಾರಣವನ್ನು 'ವೈದಿಕಪ್ರಯೋಗ' ಇತ್ಯಾದಿ ವಾಕ್ಯದಿಂದ ಹೇಳಿದ್ದಾರೆ. ಗ್ರಂಥದಲ್ಲಿರುವ ಆದಿಪದದಿಂದ ಪುಷ್ಕಲವಾದ ಪ್ರವೃತ್ತಿನಿಮಿತ್ತವನ್ನು ಸ್ವೀಕರಿಸಬೇಕು. 'ವಿದ್ವದ್ರೂಢಿ ಮಹಾಯೋಗಗಳನ್ನು ಅಸಿದ್ಧವೆಂದು ಹೇಗೆ ಹೇಳುತ್ತೀರಿ? ಅನುವ್ಯಾಖ್ಯಾನದಲ್ಲಿ ಸ್ಪಷ್ಟವಾಗಿ ಭಗವಂತನಲ್ಲಿ ಪ್ರತಿಪಾದಿಸಿದ್ದಾರಲ್ಲ?' ಎಂಬ ಪ್ರಶ್ನೆಗೆ 'ಯತ್ ತು' ಇತ್ಯಾದಿ ವಾಕ್ಯದಿಂದ ಉತ್ತರಿಸುತ್ತಿದ್ದಾರೆ.

''ಅಧ್ಯಾತ್ಮಗೈಶ್ಚ ಪ್ರಾಣಾದ್ಯೈಸ್ತಥೈವ ಹ್ಯಧಿಭೂತಗೈಃ।
ಅನ್ನಾದಿಶಬ್ದೈರ್ಭಗವಾನೇಕೋ ಮುಖ್ಯತಯೋದಿತಃ॥''

(ಆಧ್ಯಾತ್ಮಿಕವಾದ ಪ್ರಾಣಾದಿಶಬ್ದಗಳಿಂದಲೂ, ಅಧಿಭೂತವಾಚಯಾದ ಆಕಾಶಾದಿಶಬ್ದಗಳಿಂದಲೂ, ಅನ್ನಮೊದಲಾದ ಶಬ್ದಗಳಿಂದಲೂ ಭಗವಂತನೊಬ್ಬನೇ ಮುಖ್ಯವಾಗಿ ಪ್ರತಿಪಾದ್ಯನಾಗುತ್ತಾನೆ.)

ಆನಂದಮಯಾಧಿಕರಣದಲ್ಲಿರುವ ಅನುವ್ಯಾಖ್ಯಾನದ ಈ ಮಾತು ಆಕಾಶಾಧಿಕರಣದ ಸಿದ್ಧಾಂತನ್ಯಾಯವನ್ನು ಉಪಜೀವಿಸಿ ಹೊರಟಿದೆ. ಆದ್ದರಿಂದ ಪ್ರಕೃತ ಪೂರ್ವಪಕ್ಷಿಯು ಇದನ್ನೂ ಸಹ ಆಕ್ಷೇಪಿಸುತ್ತಾನೆ.

ಶಂಕೆ - ವಿದ್ವದ್ರೂಢಿ ಮಹಾಯೋಗಗಳು ಇಲ್ಲಿಯ ತನಕ ಸಿದ್ಧವಾಗಿಲ್ಲ, ಆಕಾಶಾಧಿಕರಣದ ಸಿದ್ಧಾಂತನ್ಯಾಯದಿಂದ ಸಿದ್ಧವಾಗುತ್ತದೆಂದು ಹೇಳಿದಿರಿ. ಹಾಗಾದರೆ ಅಂತರಧಿಕರಣದ ಪ್ರಾರಂಭದಲ್ಲಿರುವ ಸುಧಾವಾಕ್ಯದ ವಿರೋಧ ಬರುತ್ತದೆ. ಸುಧಾವಾಕ್ಯವು ಹೀಗಿದೆ - 'ಆನಂದಮಯೋಭ್ಯಾಸಾತ್ ಎಂದು ಹೇಳುವ ಸೂತ್ರಕಾರರಿಗೆ ಇಷ್ಟೆಲ್ಲಾ ಅಭಿಪ್ರಾಯವು ಒಂದು ವೇಳೆ ಸಮ್ಮತವಾಗಿದ್ದರೆ ಆವಾಗ ಆನಂದಮಯಾಧಿಕರಣದಿಂದಲೇ ಮುಂದಿನ ಅಧಿಕರಣಗಳ ಪ್ರಮೇಯವು ಸಿದ್ಧವಾಗುವಾಗ ಅಂತಃಸ್ಥದ್ಭರ್ಮೋಪದೇಶಾತ್, ಇತ್ಯಾದಿ ಅಧಿಕರಣಗಳು ವ್ಯರ್ಥವಾಗಬೇಕಾದೀತು' ಎಂದು ಆಶಂಕಿಸಿ ಹೀಗೆ ಉತ್ತರಿಸಿದ್ದಾರೆ. 'ಆನಂದಮಯಾಧಿಕರಣದಲ್ಲಿ ಪ್ರಮೇಯವು ಸಿದ್ಧವಾಗಿದ್ದರೂ ಅಭ್ಯಧಿಕಾಶಂಕೆಯು ಇರುವುದರಿಂದ ಮುಂದಿನ ಅಧಿಕರಣಗಳು ಸಾರ್ಥಕವಾಗಿವೆ'. ಆನಂದಮಯಾಧಿಕರಣದಲ್ಲಿಯೇ ಸುಧೆಯ ಈ ವಾಕ್ಯವನ್ನು ಗಮನಿಸಿದಾಗ ವಿದ್ವದ್ರೂಢಿ ಮತ್ತು ಮಹಾಯೋಗಗಳು ಸಕಲಶಬ್ದಗಳಲ್ಲಿಯೂ ಸಿದ್ಧವಾಗಿವೆ. ಇದನ್ನು ಅಂಗೀಕರಿಸಿ ಪುನಃ ಅಭ್ಯಧಿಕಾಶಂಕೆಯನ್ನು ಮಾಡುವ ಮೂಲಕ ಮುಂದಿನ ಅಧಿಕರಣಗಳ ಸಾರ್ಥಕ್ಯವನ್ನು ಹೇಳಬೇಕೆಂದು ತಿಳಿಯುತ್ತದೆ. ಆದರೆ ವಿದ್ವದ್ರೂಢಿ ಮಹಾಯೋಗಗಳು ಆಕಾಶಾಧಿ-

ಕರಣದಿಂದಲೇ ಸಿದ್ಧವಾಗುವ ಪ್ರಮೇಯ ಆನಂದಮಯಾಧಿಕರಣದಿಂದ ಸಿದ್ಧವಾಗುವುದಿಲ್ಲವೆಂದು ನೀವು ಹೇಳುತ್ತಿದ್ದೀರಿ. ಇದು ಹೇಗೆ ಸರಿ?

ಸಮಾಧಾನ - ನೀವು ಹೇಳಿದ್ದನ್ನು ಒಪ್ಪಬಹುದಿತ್ತು. ಒಂದು ವೇಳೆ ವಿದ್ವದ್ಧೂಢಿ ಮಹಾಯೋಗಗಳನ್ನು ಆಚ್ಛಾದಿಸುವ ಅಭ್ಯಧಿಕಾಶಂಕೆಯನ್ನು ಮುಂದಿನ ಅಧಿಕರಣಗಳಲ್ಲಿ ಮಾಡಿದ್ದರೆ, ಆದರೆ ಮುಂದಿನ ಯಾವುದೇ ಅಧಿಕರಣಗಳಲ್ಲಿಯೂ ಸಹ ಅಂತಹ ಅಭ್ಯಧಿಕಾಶಂಕೆಯು ಕಾಣಿಸುತ್ತಿಲ್ಲ.

ಶಂಕೆ - 'ಅನ್ಶೌಷಧ್ಯಾದಿಪದಾರ್ಥೇಷು ಸ್ಯಾನ್ನ ತು ಪುರಂದರಾದಿಷು' ಎಂಬ ಅಂತರಧಿಕರಣದ ಸುಧೆಯಲ್ಲಿ ಅನ್ನಾದಿಶಬ್ದಗಳಿಗೆ ವಿದ್ವದ್ಧೂಢಿಯನ್ನು ಅಂಗೀಕರಿಸಿ ಇಂದ್ರಾದಿಗಳಲ್ಲಿ ಅಂಗೀಕರಿಸಬಾರದೆಂಬ ಅಭ್ಯಧಿಕಾಶಂಕೆಯು ಕಾಣಿಸುತ್ತಿದೆಯಲ್ಲ?

ಸಮಾಧಾನ - ನೀವು ಹೇಳುವಂತೆ ಈ ವಾಕ್ಯದ ಅರ್ಥವಲ್ಲ. ಆಕಾಶಾಧಿಕರಣದ ಸಿದ್ಧಾಂತನ್ಯಾಯವನ್ನೇ ಅವಲಂಬಿಸಿ ಈ ವಾಕ್ಯ ಹೊರಟಿದೆಯೆಂದು ಈಗಾಗಲೇ ಸಮರ್ಥಿಸಿದ್ದೇವೆ. ವಿದ್ವದ್ಧೂಢಿ ಮಹಾಯೋಗಗಳನ್ನು ಸೂತ್ರಕಾರರು ಆಕಾಶಾಧಿಕರಣದಲ್ಲಿಯೇ ಸಮರ್ಥಿಸುತ್ತಾರೆ. ಸೂತ್ರಕಾರರಿಗೆ ಸಮ್ಮತವಾದದ್ದನ್ನು ಭಾಷ್ಯಕಾರರು ಆನಂದಮಯಾಧಿಕರಣದಲ್ಲಿಯೇ ಹೇಳಿದ್ದಾರಷ್ಟೇ ಹೊರತು ವಿದ್ವದ್ಧೂಢಿ ಮಹಾಯೋಗಗಳು ಆನಂದಮಯಾಧಿಕರಣದ ಪ್ರಮೇಯವಲ್ಲ. ಹೀಗಿರುವಾಗ ವಿದ್ವದ್ಧೂಢಿ ಮಹಾಯೋಗಗಳು ಅಸಿದ್ಧವೆಂದು ಆಕಾಶಾಧಿಕರಣದಲ್ಲಿ ಪೂರ್ವಪಕ್ಷ ಮಾಡುವುದು ತಪ್ಪಲ್ಲ. ಆದ್ದರಿಂದ ವಿದ್ವದ್ಧೂಢಿ ಮಹಾಯೋಗಗಳು ಆಕಾಶಾಧಿಕರಣದ ಸಿದ್ಧಾಂತವೇ ಆಗಿದೆ. ಇಲ್ಲಿಯ ತನಕ ಸಿದ್ಧವೂ ಆಗಿಲ್ಲ. ಅನುವ್ಯಾಖ್ಯಾನದಲ್ಲಿ ಹೇಳಿದ್ದು ಅತ್ಯಂತ ಸಮಂಜಸವಾಗಿದೆ.

'ಚೇಷ್ಟಾ ಹಿ ಚೇತನಾನಾಂ' ಇತ್ಯಾದಿ ಅನುವ್ಯಾಖ್ಯಾನದಲ್ಲಿ ಹೇಳಿದ ಪೂರ್ವಪಕ್ಷವು ಆಕಾಶಶಬ್ದದ ಪ್ರವೃತ್ತಿನಿಮಿತ್ತವಾದ ವಿವರತ್ವವೆಂಬ ಪ್ರಮೇಯವನ್ನು ಆಶ್ರಯಿಸಿ ಹೊರಟಿದೆ.

**ಗುರುರಾಜೀಯಮ್ –** ಅಸ್ಮಿನ್ಪಕ್ಷೇ ತನ್ನತತ್ವಪಕ್ಷಃ ಶ್ಲೋಕಾಭ್ರಹಿರೇವ ದೃಶ್ಯೋ ಭವತೀತ್ಯ-ಸ್ವರಸಾತ್ ಪಕ್ಷಾನ್ತರಮಾಹ – **ಯದ್ವೇತಿ** ॥

ನನ್ವನುವ್ಯಾಖ್ಯಾನೇ ವಿವರತ್ವಾದೇರೀಶ್ವರಾಧೀನತ್ವಾಭಾವ ಏವ ವಿವರಾದಿಃ ಕಥಂ ತತ ಇತ್ಯಾದಿನೋಕ್ತಃ । ಭವದ್ಭಿಶ್ಚ ವಿವರಾದೇರೀಶ್ವರಗತತ್ವಾಭಾವೋಪಿ ಚೇತ್, ಉಚ್ಯತೇ ತರ್ಹ್ಯನು-ವ್ಯಾಖ್ಯಾನವಿರೋಧಃ ಸ್ಯಾದಿತ್ಯತ ಆಹ – **ಶ್ಲೋಕ ಇತಿ** ॥

ನನ್ವೇವಮನುವ್ಯಾಖ್ಯಾನೇ ಸುಧಾವಿರೋಧ ಇತ್ಯತಸ್ತದುಕ್ತಂ ಪ್ರಕಾರಾನ್ತರಮಿತ್ಯಭಿಪ್ರಾಯೇಣ ತತ್ರಾನುಪಪತ್ತಿಪರಿಹಾರಪೂರ್ವಕಂ ತದನುವದತಿ – **ಸುಧಾಯಾಂ ತ್ವಿತಿ** ॥ ನನ್ವನ್ತರಧಿಕರಣಪೂರ್ವ-ಪಕ್ಷೀಯಸುಧಾಯಾಮ್ ಅಚೇತನಸ್ವಭಾವಸ್ಯಾಪ್ಯನ್ನತ್ವಾದೇರ್ಭಗವದಧೀನತ್ವಾಭ್ಯುಪಗಮಾತ್ ಕಥಮತ್ರ ತದಭಾವೇನ ಪೂರ್ವಪಕ್ಷಕರಣೇ ತತ್ಸುಧಾವಿರೋಧೋ ನ ಸ್ಯಾತ್, ಇತ್ಯತ ಆಹ – **ಯತ್ತ್ವಿತಿ** ॥

ನನು 'ಆಕಾಶಪದಪ್ರವೃತ್ತಿನಿಮಿತ್ತವಿವರತ್ವಾದೇರ್ಭಗವದಧೀನತ್ವಾಭಾವೇನ ತದ್ಗತತ್ವಾಭಾವೇನ ಶಬ್ದಪ್ರವೃತ್ತಿಕಾರಣೀಭೂತಸ್ವಾತನ್ತ್ರ್ಯತದ್ಗತತ್ವಯೋರಭಾವಾದ್ ಆಕಾಶಶಬ್ದಸ್ಯ ಬ್ರಹ್ಮಪರತ್ವಂ ನ ಸಮ್ಭವತಿ' ಇತಿ ಪೂರ್ವಪಕ್ಷೇ ಕ್ರಿಯಮಾಣೇ ಟೀಕಾವಿರೋಧಃ ಸ್ಯಾತ್ । ಟೀಕಾಯಾಮಾಕಾಶಸ್ಯಾಚೇತನತ್ವೇನೇಶ್ವರಾಧೀನತ್ವಾಸಮ್ಭವಸ್ಯ ಪ್ರತಿಪಾದಿತತ್ವಾತ್, ಇತ್ಯತ ಆಹ – **ಅನುವ್ಯಾಖ್ಯಾನೇತಿ** ॥ 'ಆಕಾಶಪದಂ ತತ್ಪದಪ್ರವೃತ್ತಿನಿಮಿತ್ತಪರಮ್' ಇತ್ಯುಪಲಕ್ಷಣಮ್ । ಅಚೇತನೇತ್ಯತ್ರ ಅಚೇತನಪದಂ ತದ್ಗತಪರಮಿತ್ಯಪಿ ದ್ರಷ್ಟವ್ಯಮ್ ।

ನನು ರೂಢಸ್ಯಾಕಾಶಶಬ್ದಪ್ರವೃತ್ತಿನಿಮಿತ್ತಸ್ಯ ಭಗವದ್ಗತತ್ವಾದ್ಯಸಮ್ಭವೇಪಿ ಯೌಗಿಕಸ್ಯ ತದ್ಭವಿಷ್ಯತೀತ್ಯಾಶಙ್ಕಾಮುಪಸಂಹಾರವ್ಯಾಜೇನ ಪರಿಹರತಿ – **ತಸ್ಮಾದಿತಿ** ॥ ಹೇತುದ್ವಯಂ ತೂಕ್ತಮೇವೇತಿ ಭಾವಃ । ನನ್ವಾಸಮನ್ತಾತ್ಕಾಶತ ಇತಿ ಯೌಗಲಭ್ಯಪ್ರವೃತ್ತಿನಿಮಿತ್ತಸ್ಯ ಪ್ರಕಾಶತ್ವಸ್ಯ ಭಗವದ್ಗತತ್ವಾತ್ ತದ್ವಾಚಕತ್ವಮ್' ಇತ್ಯತ ಆಹ – **ಆಸಮನ್ತಾದಿತಿ** ॥ 'ರೂಢಿರ್ಯೌಗಮಪಹರತಿ' ಇತಿ ನ್ಯಾಯಾದಿತಿ ಭಾವಃ । ವಿದ್ವದ್ಢಿಹಾಯೋಗಾಭ್ಯಾಂ ತದ್ಗಾಧಃ, ಇತ್ಯತ ಆಹ – **ವಿದ್ವದಿತಿ** ॥ ವೈದಿಕಪ್ರಯೋಗಾದೇವ ತತ್ಸಿದ್ಧಿಃ, ಇತ್ಯತ ಆಹ – **ವೈದಿಕೇತಿ** ॥

ನನ್ವಾನನ್ದಮಯಾಧಿಕರಣೇ 'ಅಧ್ಯಾತ್ಮಗೈಶ್ಚ' ಇತ್ಯನುವ್ಯಾಖ್ಯಾನೇನ ವಿದ್ವದ್ಢಿಃ ಸಾಧಿತತ್ವಾತ್, ಇತ್ಯತ ಆಹ – **ಯತ್ತ್ವಿತಿ** ॥ ನ ಕೇವಲಮುಕ್ತೈವಾಭ್ಯಧಿಕಾಶಙ್ಕಾ ಕಿನ್ತ್ವನ್ಯಾಪಿ ಇತ್ಯಾಹ – **ಇಯಚ್ಚೇತಿ** ॥

## ಸಾರ

ಅಥವಾ ''ಸ್ವಾತಂತ್ರ್ಯಂ ತದ್ಗತತ್ವಂಚ ಶಬ್ದವೃತ್ತೇರ್ಹಿಕಾರಣಮ್'' ಎಂದು ಶಬ್ದ ಪ್ರಯೋಗಕ್ಕೆ 'ಸ್ವಾತಂತ್ರ್ಯ ಮತ್ತು ತದ್ಗತತ್ವ' ಎರಡೂ ಕಾರಣ ಎಂದು ಹೇಳಿದ್ದರಿಂದ ಆ ಎರಡನ್ನೂ ಇಲ್ಲಿಲ್ಲವೆಂದು ತೋರಿಸುತ್ತಾರೆ. ಇಂದ್ರಾದಿಪದಪ್ರವೃತ್ತಿನಿಮಿತ್ತವಾದ ಐಶ್ವರ್ಯಾದಿಗಳು ನಿರವಧಿಕವಾಗಿ ಬ್ರಹ್ಮನಲ್ಲಿರುವಂತೆ ವಿವರತ್ವಾದಿಗಳನ್ನು ಹೇಳಲು ಬರುವುದಿಲ್ಲ. ಅವುಗಳು ಅಚೇತನಧರ್ಮಗಳಾದ್ದರಿಂದ ಚೇತನನಲ್ಲಿ ಹೇಳಲು ಬರುವುದಿಲ್ಲ. ಹಾಗೆಯೇ ಇಂದ್ರಾದಿಗಳಲ್ಲಿರುವ ಐಶ್ವರ್ಯಾದಿಗಳು ಭಗವಂತನ ಅಧೀನವಾಗಿರುವಂತೆ ವಿವರತ್ವವು ಭಗವದಧೀನ ಎನ್ನಲೂ ಬರುವುದಿಲ್ಲ. ವಿವರತ್ವಾದಿಗಳು ಆಕಾಶಾದಿಗಳ ಸ್ವಭಾವವಾಗಿದೆ. ಹಾಗಾಗಿ ಭಗವಂತನ ಅಧೀನವೆನ್ನಲೂ ಬರುವುದಿಲ್ಲ. ಹೀಗಾಗಿ ಆಕಾಶಶಬ್ದವು ಬ್ರಹ್ಮನನ್ನು ಹೇಳಬೇಕಾದರೆ ಅದಕ್ಕೆ ಬೇಕಾದ ನಿಮಿತ್ತವಿಲ್ಲವಾದ್ದರಿಂದ ಆಕಾಶಶಬ್ದವಾಚ್ಯನು ವಿಷ್ಣುವಾಗಲಾರ. ಸುಧಾದಲ್ಲಿ ಇದೇ ಅಭಿಪ್ರಾಯವನ್ನಿಟ್ಟುಕೊಂಡು ಇನ್ನೂ ವಿಸ್ತಾರವಾಗಿ ಹೇಳಿದ್ದಾರೆ.

ಸುಧಾಗ್ರಂಥದ ಅಂತಸ್ಥತ್ವಾಧಿಕರಣಪೂರ್ವಪಕ್ಷದಲ್ಲಿ ಅಚೇತನನ ಸ್ವಭಾವವನ್ನು ಭಗವದಧೀನ ಎಂದಿಟ್ಟುಕೊಂಡು ಪೂರ್ವಪಕ್ಷ ಮಾಡಿದ್ದು ಹೇಗೆ ಎಂದರೆ ಈ ಅಧಿಕರಣದ ಸಿದ್ಧಾಂತ ನ್ಯಾಯವನ್ನಿಟ್ಟುಕೊಂಡು

ಹೇಳಿದ್ದಾರೆ. ಆದ್ದರಿಂದ ಆದು ಕೂಡುತ್ತದೆ. "ಆಕಾಶಸ್ಯಾಚೇತನತ್ವೇನ" ಎಂಬ ಟೀಕೆಯಲ್ಲಿ ಅನುವ್ಯಾಖ್ಯಾನ ಮತ್ತು ಸುಧಾಗ್ರಂಥದ ಆನುಸಾರವಾಗಿ 'ಆಕಾಶ' ಎಂದರೆ "ಆಕಾಶಪದ ಪ್ರವೃತ್ತಿ ನಿಮಿತ್ತ" ಎಂದಿಟ್ಟುಕೊಳ್ಳಬೇಕು.

ಹೀಗೆ ಆಕಾಶ ಶಬ್ದವು ಬ್ರಹ್ಮನಲ್ಲಿ ಮುಖ್ಯವಾಗಿದೆ ಎನ್ನಲು ವಿರೋಧಿಯಾದ ಪ್ರಮೇಯಾಶ್ರಿತವಾದ ಶಂಕೆಯು ಇದಾಗಿದೆ.

---

## ಪ್ರಮಾಣಾಶ್ರಿತ ಪೂರ್ವಪಕ್ಷಗಳು

**ತಾತ್ಪರ್ಯಚನ್ದ್ರಿಕಾ –**

**प्रमाणाश्रितावाक्यस्य ब्रह्मपरत्वविरोधिनी शङ्का तु – युक्तः पूर्वत्र श्रुतित्व–मात्रप्रयुक्तप्राबल्यात् निरवकाशत्वप्रयुक्तप्राबल्यस्य बलवत्त्वात् निरवकाशलिङ्गेन श्रुतिबाधः ।**

**अत्र त्वाकाशश्रुतेः ''आकाशादेव समुत्पद्यन्ते', 'आकाशं प्रत्यस्तं यन्ति', 'आकाशो ह्येवैभ्यो भूतेभ्यो ज्यायान्', 'आकाशः परायणम्'' इति बहुकृत्वः श्रुतित्वात्, श्रुतित्वबहुत्वोभयप्रयुक्तप्राबल्यात् निरवकाशत्वमात्रप्रयुक्तप्राबल्यस्य दुर्बलत्वात् निरवकाशस्यापि लिङ्गस्य बाधः । अत एव पूर्वत्र सवित्रादिश्रुतेरबहुत्वेन बाधेऽपि इन्द्रश्रुतेर्बहुत्वान्न बाधः ।**

**एवञ्चेन्द्रश्रुतिः श्रुतित्वेन तत्रोदाहरणं, बहुश्रुतित्वेनात्रापि । यथाऽग्निहोत्रादि–शब्दो नामधेयतया नामधेयपादे तूदाहरणम्, समुदायानुवादापवादतया शब्दान्तर–पादे,**

**यथा च जीवकारणता श्रुतिप्राप्ततया द्वितीयस्याद्यपाद उदाहृता, समयप्राप्ततया तु द्वितीयपादे,**

**यथा च अयमेवाकाशशब्दः अन्यत्रप्रसिद्धत्वेन अत्रोदाहरणम्, उभयत्र प्रसिद्धत्वेन तु तृतीये, तद्वत् – इत्येका ।**

**अपरा तु – युक्तमन्यत्र निरूढानामपीन्द्रादिशब्दानां श्येनादिशब्दानां यजि–सामानाधिकरण्यवत् ''मत्सीन्द्रमिन्दो पवमान विष्णुम्'' इत्यादौ विष्णु-**

**शब्दसामानाधिकरण्यात्, ''यो देवानां नामधा'' इति विशेषश्रवणात्, अन्यत्रानिरूढान्तःस्थत्वमुखसद्भावाच्च विष्णुपरत्वम्, उत्पत्तिशिष्टसोमावरुद्धेऽपि यागे उत्पन्नशिष्टस्य फलचमसस्य भक्षणमुखेन अनुप्रवेशवदर्थान्तरावरुद्धेऽपीन्द्रादिशब्दे अन्तस्थत्वमुखेन ब्रह्मप्रवेशाविरोधात् । आकाशशब्दस्य तु क्वापि तत्सामानाधिकरण्याभावात् विशेषश्रुत्यभावादन्यत्रानिरूढमुखाभावाच्च, आमिक्षाऽवरुद्धे यागे वाजिनवद् विरोधात् न विष्णुपरत्वमिति ।**

**अन्या तु – आकाशशब्दस्योपक्रमस्थत्वेन श्रुतित्वेन च प्रबलत्वात् इन्द्रबृहस्पत्यादिशब्दवच्च परस्परविरुद्धनानार्थोपस्थापकत्वाभावेनैकवाक्यत्वभङ्गाभावात्, आकाशब्रह्मणोर्विरुद्धांशत्यागेनैक्याङ्गीकारे च पूर्वत्रेवात्र बाधकस्य भेदव्यपदेशस्य अभावाच्च आकाशशब्दः प्रसिद्धार्थपर इति । प्रबलश्रुत्यनुसारेण चानन्तत्वादिलिङ्गानि कथञ्चिद् भूताकाशे योज्यानि ।**

**एताश्च प्रमाणश्रिताः शङ्काः अनुव्याख्याने ''आकाश इति नाम च'' इति अन्यत्रानिरूढमुखान्तरेण विष्णुशब्दसामानाधिकरण्येन विशेषश्रवणेन च रहितनामोक्त्या, अत्र भाष्यटीकयोरसकृच्छ्रुतोपक्रमस्थाकाशैकशब्दवतो भेदव्यपदेशशून्यस्य च विषयवाक्यस्योदाहरणेन च सूचिताः ।**

ಅನುವಾದ - ಸಮಗ್ರವಾಕ್ಯವು ಬ್ರಹ್ಮನಲ್ಲಿ ತಾತ್ಪರ್ಯಹೊಂದಿದೆ ಎಂಬುದಕ್ಕೆ ವಿರೋಧಿಯಾದ ಪ್ರಮಾಣಾಶ್ರಿತವಾದ ಶಂಕೆಯು ಹೀಗಿದೆ - ಹಿಂದಿನ ಅಂತಃಸ್ಥತ್ವಾಧಿಕರಣದಲ್ಲಿ ನಿರವಕಾಶತ್ವಪ್ರಯುಕ್ತವಾದ ಪ್ರಾಬಲ್ಯವನ್ನು ಲಿಂಗಕ್ಕೆ ಪ್ರತಿಪಾದಿಸಲಾಯಿತು. 'ಅನಂತತ್ವ ಮತ್ತು ಪರೋವರೀಯಸ್ತ್ವಾದಿ ಲಿಂಗಗಳಿಗಿಂತ ಇಂದ್ರಾದಿಶ್ರುತಿಗಳು ಸ್ವಭಾವತಃ ಬಲಿಷ್ಠವಾಗಿದ್ದರೂ ಲಿಂಗವು ನಿರವಕಾಶವಾಗಿದ್ದರಿಂದ ಬಾಧಿತವಾಗುತ್ತವೆಂದು ಸಮರ್ಥಿಸಲಾಯಿತು.

ಪ್ರಕೃತ ಈ ಅಧಿಕರಣದಲ್ಲಿ ನಿರವಕಾಶಲಿಂಗಕ್ಕಿಂತಲೂ ಶ್ರುತಿಯೇ ಪ್ರಬಲವಾಗಿದೆಯೆಂದು ಹೇಳುತ್ತಿದ್ದಾರೆ. ಅದು ಹೀಗೆ – 'ಆಕಾಶಾದೇವ ಸಮುತ್ಪದ್ಯಂತೇ ಆಕಾಶಂ ಪ್ರತ್ಯಸ್ತಂ ಯಂತಿ ಆಕಾಶೋ ಹ್ಯೇವೇಭ್ಯೋ ಜ್ಯಾಯಾನ್ ಆಕಾಶಃ ಪರಾಯಣಮ್' (ಛಾಂದೋಗ್ಯ) ಎಂಬ ಶ್ರುತಿಯಲ್ಲಿ ಅನೇಕಬಾರಿ ಆಕಾಶಪದವು ಕೇಳಿಸುತ್ತಿದೆ. ಆದ್ದರಿಂದ ಶ್ರುತಿತ್ವ ಮತ್ತು ಬಹುತ್ವಪ್ರಯುಕ್ತವಾದ ಪ್ರಾಬಲ್ಯವಿರುವುದರಿಂದ ಕೇವಲ ನಿರವಕಾಶತ್ವಪ್ರಯುಕ್ತವಾದ ಪ್ರಾಬಲ್ಯವು ದುರ್ಬಲವಾಗುತ್ತದೆ.

ಆದ್ದರಿಂದ ಲಿಂಗವು ನಿರವಕಾಶವಾಗಿದ್ದರೂ ಶ್ರುತಿಯಿಂದ ಲಿಂಗವೇ ಬಾಧಿತವಾಗುತ್ತದೆ. ಆದ್ದರಿಂದಲೇ ಹಿಂದಿನ ಅಧಿಕರಣದಲ್ಲಿ ಬೃಹಸ್ಪತ್ಯಾದಿಶ್ರುತಿಗಳಿಗೆ ಮಾತ್ರ ಬಾಧವನ್ನು ಹೇಳಿದ್ದಾರೆ; ಹೊರತು ಇಂದ್ರಪ್ರತಿಪಾದಕಶ್ರುತಿಗಳಿಗೆ ಬಾಧವನ್ನು ಹೇಳಿಲ್ಲ. ಏಕೆಂದರೆ ಇಂದ್ರಪ್ರತಿಪಾದಕಶ್ರುತಿಗೂ ಆಕಾಶಶ್ರುತಿಯಂತೆ ಬಹುತ್ವಪ್ರಯುಕ್ತವಾಗಿ ಮತ್ತು ಶ್ರುತಿತ್ವಪ್ರಯುಕ್ತವಾಗಿ ಎರಡು ಬಗೆಯಿಂದ ಪ್ರಾಬಲ್ಯವಿರುತ್ತದೆ. ಆದ್ದರಿಂದ ಇಂದ್ರಶ್ರುತಿಯನ್ನು ಸೇರಿಸಿಕೊಂಡೇ ಇಲ್ಲಿ ಆಕ್ಷೇಪಮಾಡಲಾಗಿದೆ-ಯೆಂದು ತಿಳಿಯಬೇಕು.

ಹಾಗಾದರೆ ಇಂದ್ರಶಬ್ದವನ್ನು ಹಿಂದಿನ ಅಧಿಕರಣದಲ್ಲಿ ಮತ್ತು ಈ ಅಧಿಕರಣದಲ್ಲಿ ಎರಡು ಕಡೆ ವಿಚಾರಮಾಡಿದಂತಾಯಿತಲ್ಲ! ಎಂಬ ಪ್ರಶ್ನೆ ಬರುತ್ತದೆ. ಆದರೆ ಹಿಂದಿನ ಅಧಿಕರಣದಲ್ಲಿ ಕೇವಲ ಶ್ರುತಿತ್ವೇನ ಇಂದ್ರಶ್ರುತಿಯನ್ನು ಉದಾಹರಿಸಿದ್ದಾರೆ. ಈ ಅಧಿಕರಣದಲ್ಲಿ ಬಹುತ್ವೇನ ಬಹುಶ್ರುತಿತ್ವ-ಪ್ರಯುಕ್ತವಾಗಿ ಇಂದ್ರಶ್ರುತಿಯನ್ನು ಉದಾಹರಿಸಿದ್ದಾರೆಂಬ ವ್ಯತ್ಯಾಸವನ್ನು ಗಮನಿಸಬೇಕು.

ಒಂದೇ ವಾಕ್ಯವನ್ನು ಎರಡು ಅಧಿಕರಣದಲ್ಲಿ ವಿಚಾರಮಾಡುವುದೇನೂ ತಪ್ಪಲ್ಲವೆಂದು ಪೂರ್ವಮೀಮಾಂಸಕರೂ ಒಪ್ಪಿದ್ದಾರೆ. ಅಗ್ನಿಹೋತ್ರಾದಿಶಬ್ದಗಳು ಯಾಗದ ನಾಮಧೇಯಗಳಾದ್ದರಿಂದ ನಾಮಧೇಯಪಾದದಲ್ಲಿ ವಿಷಯವಾಕ್ಯಗಳಾಗಿವೆ. ಅವೇ ಅಗ್ನಿಹೋತ್ರಾದಿಶಬ್ದಗಳು ಪುನಃ ಶಬ್ದಾಂತರ ಪಾದದಲ್ಲಿ ಸಮುದಾಯಾನುವಾದವನ್ನು ಅಪವಾದ ಮಾಡುವ ಮೂಲಕ ವಿಷಯಗಳಾಗಿವೆ.

ಉತ್ತರಮೀಮಾಂಸೆಯ ದೃಷ್ಟಾಂತವೂ ಇದೆ. ಜೀವನಿಗೆ ಪ್ರಾಪ್ತವಾದ ಜಗತ್ಕಾರಣತ್ವವು ಎರಡನೆಯ ಅಧ್ಯಾಯದ ಮೊದಲನೆಯ ಪಾದದಲ್ಲಿ ಶ್ರುತಿಪ್ರಾಪ್ತವೆಂದು ವಿಷಯವಾಗಿದೆ. ಸಾಂಖ್ಯಾದಿಸಮಯಪ್ರಾಪ್ತವೆಂದು ಪುನಃ ಅದೇ ಜೀವಕಾರಣತ್ವವು ಎರಡನೆಯ ಪಾದದಲ್ಲಿಯೂ ವಿಷಯವಾಗಿದೆ. ಅಷ್ಟೇ ಏಕೆ, ಇದೇ ಆಕಾಶಶಬ್ದವು ಅನ್ಯತ್ರಪ್ರಸಿದ್ಧವಾಗಿದೆಯೆಂಬ ವಿವಕ್ಷೆಯಿಂದ ಈ ಅಧಿಕರಣದಲ್ಲಿ ವಿಷಯವಾಗಿದೆ, ಉಭಯತ್ರಪ್ರಸಿದ್ಧವಾಗಿದೆಯೆಂಬ ವಿವಕ್ಷೆಯಿಂದ ಆಕಾಶಶಬ್ದವು ಮೂರನೆಯ ಪಾದದಲ್ಲಿಯೂ ವಿಷಯವಾಗಿದೆ.

ಎರಡನೆಯ ಪ್ರಮಾಣಾಶ್ರಿತವಾದ ಪೂರ್ವಪಕ್ಷ ಹೀಗಿದೆ — ಅನ್ಯತ್ರನಿರೂಢವಾದ ಇಂದ್ರಾದಿ-ಶಬ್ದಗಳ ಸಾಮಾನಾಧಿಕರಣ್ಯವು ವಿಷ್ಣುಶಬ್ದಕ್ಕಿರುತ್ತದೆ. ಆದ್ದರಿಂದ ಇಂದ್ರಾದಿಶಬ್ದಗಳಿಂದ ವಿಷ್ಣುವೇ ಪ್ರತಿಪಾದ್ಯನೆಂದು ಹಿಂದಿನ ಅಧಿಕರಣದ ಸಿದ್ಧಾಂತವನ್ನು ಒಪ್ಪಿಕೊಳ್ಳೋಣ. 'ಶ್ಯೇನೇನ ಅಭಿಚರನ್ ಯಜೇತ' ಎಂಬ ಪೂರ್ವಮೀಮಾಂಸೆಯಲ್ಲಿ ಉದಾಹರಿಸುವ ವಾಕ್ಯದಲ್ಲಿ 'ಯಜೇತ' ಎಂಬ ಪದಕ್ಕೆ 'ಯಾಗೇನ ಫಲಂ ಭಾವಯೇತ್' ಎಂದರ್ಥ. ಇಲ್ಲಿ 'ಶ್ಯೇನೇನ' ಎಂಬ ಪದಕ್ಕೂ 'ಯಾಗೇನ' ಎಂಬ ಪದಕ್ಕೂ ಸಾಮಾನಾಧಿಕರಣ್ಯವಿರುವುದರಿಂದ ಶ್ಯೇನಪದವು ಪಕ್ಷಿವಾಚಕವಲ್ಲ ಹೊರತು ಯಾಗ-ವಾಚಕವೆಂದು ನಿರ್ಣಯಿಸುತ್ತಾರೆ. ಆದರಂತೆ 'ಮತ್ಸೀಂದ್ರಮಿಂದೋ ಪವಮಾನವಿಷ್ಣೂ' ಎಂಬಲ್ಲಿ ಇಂದ್ರಂ ಎಂಬ ಪದವು ಮತ್ತು ವಿಷ್ಣೂ ಎಂಬ ಪದವು ಸಮಾನವಿಭಕ್ತಿಯಲ್ಲೇ ಇರುವುದರಿಂದ

ಇಂದ್ರಪದವು ದೇವೇಂದ್ರವಾಚಕವಲ್ಲ ಹೊರತು ವಿಷ್ಣುವಾಚಕವೆಂದು ನಿರ್ಣಯಿಸಬಹುದು. ಆದರೆ ವಿಷ್ಣುಶಬ್ದಸಾಮಾನಾಧಿಕರಣ್ಯವು ಆಕಾಶಪದಕ್ಕಿರುವುದಿಲ್ಲ. ಆದ್ದರಿಂದ ಆಕಾಶವನ್ನು ವಿಷ್ಣುವೆಂದು ಹೇಳಲಾಗದು.

ಮತ್ತು 'ಯೋ ದೇವಾನಾಂ ನಾಮಧಾ' ಎಂಬ ಶ್ರುತಿಯು ಸಕಲದೇವತಾವಾಚಕಪದಗಳನ್ನು ವಿಷ್ಣುವಿನ ಹೆಸರೆಂದು ಹೇಳುತ್ತಿದೆ. ಭೂತವಾಚಕವಾಗಿ ಆಕಾಶಾದಿಪದಗಳನ್ನು ವಿಷ್ಣುವಿನ ಹೆಸರೆಂದು ಹೇಳುವ ಇಂತಹ ಯಾವುದೇ ಶ್ರುತಿಗಳು ಇರುವುದಿಲ್ಲ.

ಅನ್ಯತ್ರನಿರೂಢವಲ್ಲದ ಅಂತಃಸ್ಥತ್ವದಂತಹ ಲಿಂಗದ ಮೂಲಕವಾಗಿ ಇಂದ್ರಾದಿಶಬ್ದಗಳು ವಿಷ್ಣುಪರವಾಗಬಹುದು. ಆದರೆ ಆಕಾಶಶಬ್ದವನ್ನು ವಿಷ್ಣುಪರವೆಂದು ಹೇಳಲು ಅಂತಃಸ್ಥತ್ವದಂತಹ ಯಾವುದೇ ಮುಖಗಳಿರುವುದಿಲ್ಲ.

ಮತ್ತೊಂದು ಬಗೆಯ ಪ್ರಮಾಣಾಶ್ರಿತವಾದ ಪೂರ್ವಪಕ್ಷ. 'ಅಸ್ಯ ಲೋಕಸ್ಯ ಕಾ ಗತಿಃ? ಆಕಾಶ ಇತಿ ಹೋವಾಚ' ಎಂಬ ವಾಕ್ಯದಲ್ಲಿ ಆಕಾಶಶಬ್ದವು ಉಪಕ್ರಮದಲ್ಲಿಯೇ ಕೇಳಿಸುತ್ತಿದೆ. ಆದ್ದರಿಂದ ಉಪಕ್ರಮಪ್ರಯುಕ್ತವಾಗಿ ಮತ್ತು ಶ್ರುತಿತ್ವಪ್ರಯುಕ್ತವಾಗಿ ಪ್ರಬಲವಾದ್ದರಿಂದ ಆಕಾಶಶ್ರುತಿಯು ಭೂತಾಕಾಶವನ್ನೇ ಹೇಳುತ್ತದೆ. ಮತ್ತು ಇಂದ್ರಬೃಹಸ್ಪತ್ಯಾದಿಶಬ್ದಗಳಂತೆ ಪರಸ್ಪರ ವಿರುದ್ಧವಾದ ಅನೇಕ ಅರ್ಥಗಳನ್ನು ಈ ವಿಷಯವಾಕ್ಯವು ನಿರೂಪಿಸದ ಕಾರಣ ಏಕವಾಕ್ಯತ್ವಕ್ಕೆ ಭಂಗವು ಬರುವುದಿಲ್ಲ. ಆದ್ದರಿಂದ ಭೂತಾಕಾಶಪರವೆನ್ನಬಹುದು.

ಮತ್ತು ಆಕಾಶ ಮತ್ತು ಬ್ರಹ್ಮರಲ್ಲಿರುವ ವಿರುದ್ಧಾಂಶವನ್ನು ತ್ಯಾಗಮಾಡಿ ಐಕ್ಯವನ್ನು ಅಂಗೀಕರಿಸಿದರೆ ಹಿಂದಿನ ಅಧಿಕರಣದಲ್ಲಿ 'ಭೇದವ್ಯಪದೇಶಾಚ್ಚಾನ್ಯಃ' ಎಂಬ ಸೂತ್ರದಲ್ಲಿ ಹೇಳಿದ ಬಾಧಕವು ಇಲ್ಲಿ ಬರುವುದಿಲ್ಲ. ಆದ್ದರಿಂದಲೂ ಆಕಾಶಪದವನ್ನು ಭೂತಾಕಾಶಪರವೆನ್ನಬಹುದು. ಭೂತಾಕಾಶವೆಂಬ ಅರ್ಥವನ್ನು ಸ್ವೀಕರಿಸಲು ಅನಂತತ್ವ ಮೊದಲಾದ ಲಿಂಗಗಳೇ ಬಾಧಕವಾಗಿವೆಯಲ್ಲವೇ? ಎಂದು ಪ್ರಶ್ನಿಸಬಾರದು. ಆ ಲಿಂಗಗಳನ್ನು ಗೌಣಮಾಡಿ ಭೂತಾಕಾಶದಲ್ಲಿಯೇ ಯೋಜನೆ ಮಾಡಬೇಕು.

ಈ ಮೂರುವಿಧವಾದ ಪ್ರಮಾಣಾಶ್ರಿತಶಂಕೆಗಳನ್ನು ಅನುವ್ಯಾಖ್ಯಾನದಲ್ಲಿ 'ಆಕಾಶ ಇತಿ ನಾಮ ಚ' ಎಂಬ ಶ್ಲೋಕದಿಂದ ತಿಳಿಸಿದ್ದಾರೆ. ಬೇರೆಕಡೆ ನಿರೂಢವಾಗದ ಅಂತಃಸ್ಥತ್ವಾದಿಗಳಂತೆ ಆಕಾಶಶಬ್ದಕ್ಕೆ ಭೂತಕಾಶಪರವೆನ್ನಲು ಬೇರೆ ಯಾವುದೇ ಲಿಂಗಗಳು ಇರುವುದಿಲ್ಲ. ಮತ್ತು ವಿಷ್ಣುಶಬ್ದ ಸಾಮಾನಾಧಿ-ಕರಣ್ಯವಾಗಲೀ 'ಯೋ ದೇವಾನಾಂ ನಾಮಧಾ' ಇತ್ಯಾದಿಯಾದ ವಿಶೇಷಶ್ರುತಿಗಳಾಗಲೀ ಇಲ್ಲವೆಂದು ಹೇಳಿದ್ದಾರೆ.

ಮತ್ತು ಭಾಷ್ಯ ಹಾಗೂ ಟೀಕೆಗಳಲ್ಲಿ ಅನೇಕಬಾರಿ ಕೇಳಿಸುತ್ತಿರುವ ಉಪಕ್ರಮದಲ್ಲಿರುವ

ಆಕಾಶಶಬ್ದವನ್ನು ವಿಷಯವಾಕ್ಯವನ್ನಾಗಿ ಸ್ವೀಕರಿಸಿದ್ದರಿಂದಲೇ ಈ ಪ್ರಮಾಣಾಶ್ರಿತಪೂರ್ವಪಕ್ಷಗಳು ಸೂಚಿತಗಳಾಗಿವೆ.

ಕಠಿಣಪದಾರ್ಥ

ಪ್ರಮಾಣಾಶ್ರಿತಾ = ಆಕಾಶ ಎಂಬ ಪದವನ್ನು ಆಶ್ರಯಿಸಿರುವ, ಪೂರ್ವತ್ರ = ಅಂತರಧಿಕರಣದಲ್ಲಿ, ಅತ ಏವ = ಉಭಯಪ್ರಯುಕ್ತವಾದ ಪ್ರಾಬಲ್ಯ-ವಿರುವುದರಿಂದಲೇ, ಸವಿತ್ರಾದಿಶ್ರುತೇಃ = ಬೃಹಸ್ಪತ್ಯಾದಿಶ್ರುತಿಗಳು (ಅತದ್ಗುಣ-ಸಂವಿಜ್ಞಾನಬಹುವ್ರೀಹಿಯಿಂದ ಸವಿತೃಶ್ರುತಿಯನ್ನು ಬಿಡಬೇಕು), ತತ್ರ = ಅಂತರಧಿಕರಣದಲ್ಲಿ, ಅತ್ರಾಪಿ = ಆಕಾಶಾಧಿಕರಣದಲ್ಲಿಯೂ, ಅಪರಾ ತು = ಪ್ರಮಾಣಾಶ್ರಿತವಾದ ಮತ್ತೊಂದು ಬಗೆಯ ಪೂರ್ವಪಕ್ಷವು, ಮತ್ಸಿ= ಸಂತೋಷಪಡಿಸು, ಅನ್ಯತ್ರ ಅನಿರೂಢ = ವಿಷ್ಣುವನ್ನು ಬಿಟ್ಟು ಬೇರೆಲ್ಲಿಯೂ ಪ್ರಸಿದ್ಧವಾಗದ, ಅಮೀಕ್ಷಾ = ಒಡೆದ ಹಾಲು, ವಾಜಿನ = ಒಡೆದ ಹಾಲಿನಿಂದ ಬರುವ ನೀರು, ಅನ್ಯಾ ತು = ಪ್ರಮಾಣಾಶ್ರಿತವಾದ ಮೂರನೆಯ ಪೂರ್ವಪಕ್ಷವು, ಕಥಂಚಿತ್ = ಭೂತಾಕಾಶದಲ್ಲಿ ಹೊಂದಾಣಿಕೆಯಾಗುವಂತೆ ಸಂಕೋಚ ಮಾಡಿ; ಉತ್ಪತ್ತಿಶಿಷ್ಟ = ಪ್ರಥಮತಃ ಕರ್ಮವನ್ನು ವಿಧಿಸುವ (ಶಿಷ್ಟ = ವಿಹಿತ), ಉತ್ಪನ್ನಶಿಷ್ಟಸ್ಯ= ಅನುವಾದ ಮಾಡಿ ವಿಧಿಸುವ,

**प्रकाशः – प्रमाणेति ॥** 'आकाशपदरूपमाश्रित्य प्रवर्तमाने' इत्यर्थः ॥ **ब्रह्मपरत्वेति ॥** शक्तितात्पर्यावधारणं हि समन्वयः । तत्र पूर्वं 'शक्तिर्न' इत्युक्तम्, अधुना 'तात्पर्यं न' इत्युच्यत इत्यर्थः । भाष्यादावुदाहृतबहुकृत्वःश्रुताकाश-पदोपेतविषयवाक्यसूचितामाह – **युक्त इति ॥** 'पूर्वत्र' अन्तरधिकरणे, 'लिङ्गस्य' अनन्तत्वादिलिङ्गस्य 'बाधः' सङ्कोच इत्यर्थः ।

ननु पूर्वत्र बहुकृत्वः श्रुतस्यापीन्द्रशब्दस्य समुद्रशायित्वादिलिङ्गेन बाध उक्तः, इत्यत आह – **अत एवेति ॥** 'उभयप्रयुक्तप्राबल्यस्य बलवत्त्वादेव' इत्यर्थः ॥ **सवित्रादीति ॥** अतद्गुणसंविज्ञानेन बृहस्पत्यादिश्रुतिरिति ध्येयम्, सवितृश्रुति-बहुत्वस्यापि सत्त्वात् ।

ननु एकस्याकारभेदेनाप्यनेकत्रोदाहरणम् अदृष्टचरम्, इत्यत आह – **यथेति ॥** ''अग्निहोत्रं जुहोति'' इत्यत्रत्याग्निहोत्रशब्दो यथा ''अग्निर्ज्योतिर्ज्योतिरग्निस्स्वाहेति सायं जुहोति'' इति नामधेयत्वापादकगुणप्रख्यापकशास्त्रान्तरविषयतया नामधेय-पादे ''तत्प्रख्यं चान्यशास्त्रम्'' इति तृतीयाधिकरणोदाहरणं, ''दध्ना जुहोति'' इत्यादिवाक्यप्राप्तहोमसमुदायानुवादकत्वशङ्काविषयतया द्वितीयाध्यायद्वितीयपादे पञ्चमाधिकरणे उदाहरणं तद्वदित्यर्थः ॥

**यथा च जीवकारणतेति ॥** ''इतरव्यपदेशाद्धिताकरणादिदोषप्रसक्तिः'' इति युक्तिपादीयसप्तमाधिकरणे ''जीवाद्भवन्ति भूतानि'' इत्यादिश्रुतिसंवादिचेतनत्वादि-युक्तिप्राप्ततयोदाहृताऽपि जीवकर्तृता ''अन्यथाऽनुमितौ च ज्ञशक्तियोगात्'' इति समयचरणपञ्चमाधिकरणे प्रकृत्युपसर्जनपुरुषकर्तृकमतप्राप्ततयोदाहृता तद्व-दित्यर्थः । उक्तं च टीकायाम् ''इतरव्यपदेशात्'' इत्यत्र – अत्र 'जीवाद्भवन्ति भूतानि' इति श्रुतिप्राप्तो जीवकर्तृत्वपक्षो निराक्रियते, उत्तरत्र समयप्राप्त इत्यर्थभेदः – इति ॥ तृतीय इति ॥

द्युभ्वादिपादे ''आकाशोऽर्थान्तरत्वादिव्यपदेशात्'' इति द्वादशेऽधिकरणे उदाहरणमित्यर्थः।

**..... विवरादिः कथं ततः ।**
**इति शङ्कानिवृत्त्यर्थं आकाश इति नाम च ।**
**परतोऽपि वरीयस्त्वपूर्वालिङ्गाद्धरेर्भवेत् ॥**

इत्यनुव्याख्याने नामपदसूचितशङ्कान्तरमाह – **अपरा त्विति ॥** 'युक्तमिन्द्रादि-शब्दानां विष्णुपरत्वम्' इत्यन्वयः ।

तत्र हेतुद्वयमभिप्रेत्य सदृष्टान्तमाह – **श्येनेति ॥** ''श्येनेनाभिचरन्यजेत'' इत्यत्र तृतीयान्ततया निर्दिष्टस्य श्येनशब्दस्यान्यत्र रूढस्यापि प्रत्ययार्थभूतभावना-करणतासमर्थयागवाचियजिधातुसामानाधिकरण्यात् ''यथा वै श्येनोऽयं निपत्या-दत्ते'' इति सादृश्यबोधकवाक्यशेषाच्च यागपरत्वं, तथा ''मत्सि सोम वरुणं मत्सि मित्रं मत्सीन्द्रमिन्द्रो पवमान विष्णुम्'' इति विष्णुशब्दसामानाधिकरण्यात् ''यो देवानाम्'' इति विशेषश्रवणाच्चेत्यर्थः । न च 'इन्द्रं विष्णुं च मत्सि मदयसि' इति पृथगन्वयोपपत्तेः सामानाधिकरण्यमसिद्धमिति वाच्यं, तथा सति वरुणादिषु पृथक् मत्सिशब्दवत् मत्सीन्द्रं मत्सि विष्णुम्'' इति पृथङ्मत्सिशब्दश्रवणापातात् । सर्वेषां पृथङ्मत्सिशब्ददर्शनेन एकस्यैवान्यथात्वायोगादश्रुतकल्पनापाताच्च ।

''मत्सि महामिन्द्रमिन्दो मदाय'' इत्यन्येन्द्रस्य पृथगुक्त्या पौनरुक्त्यापाताच्च । महत्त्वस्यादितिपुत्रत्वेनाग्रजत्वमात्रेणोपपत्तेश्चेति व्यक्तमेतदैतरेयभाष्य इति भावः । तृतीयहेतुं दृष्टान्तेनोपपादयति – **उत्पत्तिशिष्टेति ॥**

तृतीयेऽध्याये पञ्चमे पादे ''फलचमसो नैमित्तिको भक्षविकारः श्रुतिसंयोगात्'' इत्युपान्त्याधिकरणे चिन्तितम् । ''यदि राजन्यं वैश्यं वा याजयेत्स यदि सोमं बिभक्षयिषेत् न्यग्रोधस्तिभिनीराहृत्य ताः सम्पिष्य दधन्युन्मृज्य तमस्मै भक्षं प्रयच्छेत् सोमम्'' इत्यत्र राजन्यवैश्यनिमित्तेन सोमविकारतया श्रूयमाणः फलचमसः किं तद्भक्षमात्रे सोमं विकुर्यात् उत यागेऽपीति संशये, 'बिभक्षयिषेत्' इति 'भक्षं प्रयच्छेत्' इति तूपक्रमोपसंहाराभ्यां तत्रैव विकारो न यागेऽश्रवणादिति प्राप्ते, यागसाधनद्रव्यसंस्काररूपभक्षसम्बन्धित्वेन श्रूयमाणः फलचमसः अन्यथा तत्सम्बन्धायोगाद्यजमानचमसयागाभ्याससाधनत्वं प्रतिपद्यते । अतो यागेऽपि सोमविकार इति । अत्रोत्पत्तिशिष्टनित्यापेक्षया नैमित्तिकस्योत्पन्नशिष्टस्यापि प्राबल्यात् फलचमसस्य यागसाधनद्रव्यसंस्काररूपभक्षणद्वारा यागसाधनत्वेन यथायागेऽनुप्रवेशस्तथेन्द्रादिशब्देऽपि पुरन्दरादिरूपार्थान्तरवाचिन्यपि वाच्यतया ब्रह्मानुप्रवेश इत्यर्थः ।

प्रकृते तद्वैषम्यमाह – **आकाशेति** ॥ 'तत्' इति विष्णुवाचिशब्दः परामृश्यते । ननु ''आकाशो वै नाम नामरूपयोर्निर्वहिता ते यदन्तरा तद्ब्रह्म तदमृतं स आत्मा'' इति छान्दोग्ये विष्ण्वसाधारणब्रह्मात्मशब्दसामानाधिकरण्यमस्तीति चेन्न, तत्र प्रसिद्धिद्योतकनिपातबलेन ब्रह्मादिशब्दानां विष्णुवाचित्वस्य पूर्वपक्षिणोऽसम्मतेः ।

ननु तथाऽपि कथं 'विशेषश्रुत्यभावात्' इति, ''नामानि सर्वाणि यमाविशन्ति'' इति श्रुतेः सत्त्वादिति चेन्न, 'देवानाम्' इतिवत् भूतानामिति विशिष्याभावात् । अत एव 'विशेष' इत्युक्तम् । ''यो देवानाम्'' इति श्रुत्यनुसारेण ''सर्वाणि'' इति सामान्यशब्दस्य सङ्कोचोपपत्तेश्चेति भावः ॥

**आमिक्षाऽवरुद्ध इति** ॥ द्वितीयस्य द्वितीये पादे ''गुणश्चापूर्वसंयोगे वाक्ययोः समत्वात्'' इति नवमेऽधिकरणे चिन्तितम् । ''वैश्वदेव्यामिक्षा'' इति यागं विधायाम्नाते ''वाजिभ्यो वाजिनम्'' इत्यत्र किं पूर्वस्मिन्नामिक्षायागे वाजिनं गुणो विधीयते, किं वा कर्मान्तरमिति संशये, वाजिशब्देनामिक्षायागदेवतारूपविश्वेदेवप्रत्यभिज्ञानात् तत्र सम्बध्यमानं वाजिनं पूर्वकर्मण्येव विहितं भवति । सम्भवति

चैवं गुणमात्रविधाने विशिष्टविधिगौरवं नाश्रयितुं युक्तम् । अतः पूर्वयागे वैकल्पिकद्रव्यविधानमिति प्राप्ते, आमिक्षायुक्तस्यैवोत्पत्तौ पूर्वयागस्यावगमाद् वाजिनविधौ तेनैव रूपेणानुवाद्यत्वात्तस्य द्रव्यान्तरसम्बन्धापेक्षायोग्यत्वयोरभावात् तत्र निवेशमलभमानं वाजिनं आत्मनिवेशक्षमं कर्मान्तरं साधयतीति कर्मान्तर-विधिरिति । तद्विरोधान्न विष्णुपरत्वमित्यर्थः।

अत्रोदाहृतविषयवाक्यपर्यालोचनया प्राप्तं शङ्कान्तरमप्याह – **अन्यात्विति** ॥ उपक्रमाधिकरणन्यायेनोपक्रमस्य प्राबल्यं मन्वानस्य शङ्कितुः 'उपक्रमस्थत्वेन' इत्युक्तिः । ननु श्रुतेरपि पूर्वत्र लिङ्गात् बाध उक्त इत्यतो वैषम्यं द्वेधा दर्शयति – **इन्द्रेति** ॥ निरवकाशलिङ्गविरोध इत्यत आह – **प्रबलेति** ॥

**कथञ्चिदिति** ॥ सङ्कुचितानन्तत्वादिनेत्यर्थः । तदुक्तं सञ्न्यायरत्नावल्यां – ''प्रथमं पठितत्वात् प्रसिद्धत्वाच्च तत्रैव वाक्यशेषो भाक्तो वर्णनीयः'' इति । सुधायां च ''प्रथमावगत-स्वभावबलवच्छ्रुत्यनुरोधेन लिङ्गानि कथञ्चिद्योज्यानि'' इति । उक्ताश्च प्रमाणाश्रितास्तिस्रः शङ्का नानवधेया इति भावेन मूलमाह – **एताश्चेति** ॥ आद्यतृतीये विषयवाक्यसूचिते । द्वितीया तु नामोक्तेति ध्येयम् ।

ವಿವರಣೆ - ಈ ಹಿಂದೆ ಆಕಾಶ ಎಂಬ ಪದದಿಂದ ಪ್ರಮೇಯಾಶ್ರಿತವಾದ ಶಂಕೆಯನ್ನು ಮಾಡಿದ್ದಾಯಿತು. ಈಗ ಸಮಗ್ರವಾಕ್ಯವು ಬ್ರಹ್ಮನಲ್ಲಿ ತಾತ್ಪರ್ಯ ಹೊಂದಿದೆ ಎಂಬುದಕ್ಕೆ ವಿರೋಧಿಯಾದ ಪ್ರಮಾಣಾಶ್ರಿತವಾದ ಶಂಕೆಯನ್ನು ಮಾಡುತ್ತಿದ್ದಾರೆ. ಸಮನ್ವಯವೆಂದರೆ ಶಕ್ತಿತಾತ್ಪರ್ಯದ ನಿಶ್ಚಯವೆಂದರ್ಥ. ಹಿಂದೆ ಆಕಾಶಪದಕ್ಕೆ ಬ್ರಹ್ಮನಲ್ಲಿ ಶಕ್ತಿಯಿಲ್ಲವೆಂದು ಹೇಳಿದರು. ಈಗ ಬ್ರಹ್ಮನಲ್ಲಿ ತಾತ್ಪರ್ಯವಿಲ್ಲವೆಂದು ಹೇಳುತ್ತಿದ್ದಾರೆ. ಒಟ್ಟಾರೆ ಬ್ರಹ್ಮನಲ್ಲಿ ಸಮನ್ವಯ ಕೂಡುವುದಿಲ್ಲವೆಂದು ಅಭಿಪ್ರಾಯ.

ಭಾಷ್ಯಾದಿಗಳಲ್ಲಿ ಯಾವ ಶ್ರುತಿವಾಕ್ಯವನ್ನು ಉದಾಹರಿಸಿದ್ದಾರೋ ಅದರಲ್ಲಿ ಅನೇಕ ಬಾರಿ ಆಕಾಶ-ಶಬ್ದವು ಕೇಳಿಸುತ್ತಿದೆ. ಇದರಿಂದ ಶ್ರುತಿತ್ವಪ್ರಯುಕ್ತವಾಗಿ ಮತ್ತು ಬಹುತ್ವಪ್ರಯುಕ್ತವಾಗಿ ಪ್ರಾಬಲ್ಯವನ್ನು ಸೂಚಿಸಿದಂತಾಗುತ್ತದೆ. ಇದನ್ನೇ ಗ್ರಂಥಕಾರರು 'ಯುಕ್ತಃ' ಎಂದು ಹೇಳಿದ್ದಾರೆ.

ಹಿಂದಿನ ಅಧಿಕರಣದಲ್ಲಿ ಇಂದ್ರಶಬ್ದವು ಅನೇಕ ಬಾರಿ ಶ್ರುತವಾಗಿದ್ದರೂ ಸಹ ಸಮುದ್ರಶಾಯಿತ್ವಾದಿ-ಲಿಂಗದಿಂದ ಬಾಧವನ್ನು ಹೇಳಿದಿರಿ. ಆದರೆ ಈಗ ಬಹುತ್ವಪ್ರಯುಕ್ತವಾದ ಮತ್ತು ಶ್ರುತಿತ್ವಪ್ರಯುಕ್ತವಾದ್ದರಿಂದ ಪ್ರಾಬಲ್ಯವನ್ನು ಹೇಳುತ್ತಿದ್ದೀರಿ. ಇದು ಹೇಗೆ ಕೂಡುತ್ತದೆ? ಎಂಬ ಪ್ರಶ್ನೆಗೆ 'अत एव' ಇತ್ಯಾದಿ ಗ್ರಂಥದಿಂದ ಉತ್ತರಿಸುತ್ತಿದ್ದಾರೆ.

ಗ್ರಂಥಕಾರರು ಸವಿತ್ರಾದಿ ಶ್ರುತಿಯಲ್ಲಿ ಬಹುತ್ವ ಇಲ್ಲವೆಂದು ಹೇಳಿದ್ದಾರೆ. ಆದರೆ ಸವಿತೃಶ್ರುತಿಯು ಅನೇಕ ಬಾರಿ ಕೇಳಿಸುತ್ತಿದೆಂಬ ಪ್ರಶ್ನೆ ಬರುತ್ತದೆ. ಅದಕ್ಕೋಸ್ಕರ 'ಸವಿತ್ರಾದಿಶ್ರುತೇಃ' ಎಂಬುದಕ್ಕೆ ಅತದ್ಗುಣಸಂವಿಜ್ಞಾನ-ಬಹುವ್ರೀಹಿಯನ್ನು ಮಾಡಬೇಕು. ಅಂದರೆ ಸವಿತೃಶ್ರುತಿಯನ್ನು ಬಿಟ್ಟು ಬೃಹಸ್ಪತ್ಯಾದಿಶ್ರುತಿಗಳು ಬಹುಶ್ರುತವಾಗಿವೆ ಎಂದು ಅಭಿಪ್ರಾಯ.

ಒಂದೇ ಶ್ರುತಿವಾಕ್ಯವು ಆಕಾರಭೇದದಿಂದ ಅನೇಕ ಬಾರಿ ಉದಾಹರಿಸಿದ್ದು ಎಲ್ಲಿಯೂ ಕಂಡಿಲ್ಲವಲ್ಲ? ಎಂಬ ಪ್ರಶ್ನೆಗೆ 'ಯಥಾ' ಇತ್ಯಾದಿ ವಾಕ್ಯದಿಂದ ಉತ್ತರಿಸುತ್ತಿದ್ದಾರೆ. 'ಅಗ್ನಿಹೋತ್ರಂ ಜುಹೋತಿ' ಎಂಬ ಶ್ರುತಿಯಲ್ಲಿರುವ ಅಗ್ನಿಹೋತ್ರಶಬ್ದವು ಯಾಗದ ನಾಮಧೇಯವಾಗಿದೆ. ಯಾಗಕ್ಕೆ ಅಗ್ನಿಹೋತ್ರವೆಂಬ ಹೆಸರು ಬರಲು ಕಾರಣವೇನೆಂದರೆ, ಅದು ಗುಣವನ್ನು ತಿಳಿಸುತ್ತಿದೆ. 'ಅಗ್ನಿರ್ಜ್ಯೋತಿರ್ಜ್ಯೋತಿರಗ್ನಿಃ ಸ್ವಾಹೇತಿ ಸಾಯಂ ಜುಹೋತಿ' ಈ ಮಂತ್ರವು ಅಗ್ನಿಪ್ರತಿಪಾದಕವಾಗಿದೆ. ಮತ್ತು ಅಗ್ನಿಶಬ್ದ ಘಟಿತವಾಗಿದೆ. ಈ ಮಂತ್ರದಿಂದ ಯಾಗವನ್ನು ಆಚರಿಸುವುದರಿಂದ ಆ ಯಾಗಕ್ಕೆ ಅಗ್ನಿಹೋತ್ರ ಎಂದು ಹೆಸರು. ಹೀಗೆ ಅಗ್ನಿಹೋತ್ರಶಬ್ದವು ನಾಮಧೇಯವಾದ್ದರಿಂದ 'ತತ್ಪಕ್ಷ್ಮಿಂ ಚಾನ್ಯಶಾಸ್ತ್ರಂ' ಎಂಬ ನಾಮಧೇಯಪಾದದ ಮೂರನೆಯ ಅಧಿಕರಣದಲ್ಲಿ ಉದಾಹರಿಸಲ್ಪಟ್ಟಿದೆ. ಅದರಂತೆ ಶಬ್ದಾಂತರಪಾದದಲ್ಲಿಯೂ ಸಹ 'ಅಗ್ನಿಹೋತ್ರಂ ಜುಹೋತಿ' ಎಂಬುದು ವಿಷಯವಾಕ್ಯವಾಗಿದೆ. ಅದು ಹೀಗೆ - 'ಯ ಏವಂ ವಿದ್ವಾನ್ ಅಮಾವಾಸ್ಯಾಯಾಂ ಯಜತೇ ಯ ಏವಂ ವಿದ್ವಾನ್ ಪೌರ್ಣಮಾಸ್ಯಾಂ ಯಜತೇ' ಎಂಬ ಶ್ರುತಿಯಲ್ಲಿರುವ ಅಮಾವಾಸ್ಯಾ ಹಾಗೂ ಪೌರ್ಣಮಾಸೀ ಶಬ್ದಗಳು ಆರು ಯಾಗಗಳನ್ನು ಎರಡು ಭಾಗ ಮಾಡಿ ಯಾಗಸಮುದಾಯವನ್ನು ಅನುವಾದ ಮಾಡುತ್ತಿವೆ. ಇದರಂತೆ ಪ್ರಕೃತ ಅಗ್ನಿಹೋತ್ರಶಬ್ದವು 'ದಧ್ನಾ ಜುಹೋತಿ' ಇತ್ಯಾದಿ ವಾಕ್ಯಗಳಿಂದ ಪ್ರಾಪ್ತವಾದ ಅನೇಕ ಯಾಗಗಳ ಸಮುದಾಯವನ್ನು ಅನುವಾದ ಮಾಡಿ ಹೊಸದೊಂದು ಯಾಗವನ್ನು ವಿಧಿಸುತ್ತಿದೆ ಎಂಬ ಶಂಕೆಯನ್ನು ಎರಡನೆ ಅಧ್ಯಾಯದ ಎರಡನೇ ಪಾದದ ಪಂಚಮಾಧಿಕರಣದಲ್ಲಿ ನಿರಾಕರಿಸಿದ್ದಾರೆ. ಈ ನಿರಾಕರಣೆಗೋಸ್ಕರ ಅಗ್ನಿಹೋತ್ರಶಬ್ದವು ವಿಷಯವಾಕ್ಯವಾಗಿದೆ. ಹೀಗೆ ಒಂದೇ ಅಗ್ನಿಹೋತ್ರಶಬ್ದವು ಆಕಾರಭೇದದಿಂದ ನಾಮಧೇಯಪಾದದಲ್ಲಿ ಮತ್ತು ಶಬ್ದಾಂತರಪಾದದಲ್ಲಿ ವಿಷಯವಾದಂತೆ ಒಂದೇ ಇಂದ್ರಶಬ್ದವು ಅಂತರಧಿಕರಣದಲ್ಲಿ ಮತ್ತು ಆಕಾಶಾಧಿಕರಣದಲ್ಲಿ ಆಕಾರಭೇದದಿಂದ ವಿಷಯವಾಗಬಹುದು.

ಉತ್ತರಮೀಮಾಂಸೆಯ ದೃಷ್ಟಾಂತವೂ ಇದೆ. ''ಇತರವ್ಯಪದೇಶಾತ್ ಹಿತಾಕರಣಾದಿದೋಷಪ್ರಸಕ್ತಿಃ'' ಎಂಬ ಸೂತ್ರದಲ್ಲಿ ಜೀವಕರ್ತೃತ್ವವನ್ನು ಹೇಳುವ 'ಜೀವಾದ್ಭವಂತಿ ಭೂತಾನಿ' ಎಂಬ ಶ್ರುತಿಯನ್ನು ಉದಾಹರಿಸಿದ್ದಾರೆ. 'ಜೀವಃ ಜಗತ್ಕರ್ತಾ ಚೇತನತ್ವಾತ್ ವಿಷ್ಣುವತ್' ಎಂಬ ಯುಕ್ತಿಯಿಂದ ಜೀವನಲ್ಲಿ ಜಗತ್ಕರ್ತೃತ್ವವು ಪ್ರಾಪ್ತವಾಗುತ್ತದೆ. ಈ ಯುಕ್ತಿಗೆ 'ಜೀವಾದ್ ಭವಂತಿ ಭೂತಾನಿ' ಎಂಬ ಶ್ರುತಿಯ ಸಂವಾದವಿದೆ. ಹೀಗೆ ಶ್ರುತಿಸಂವಾದಿಯಾದ ಯುಕ್ತಿಯಿಂದ ಪ್ರಾಪ್ತವಾದ ಜೀವಕರ್ತೃತ್ವವನ್ನು ನಿರಾಕರಿಸಲು ಇತರವ್ಯಪದೇಶಾಧಿಕರಣವು ಹೊರಟಿದೆ. ಎರಡನೇ ಅಧ್ಯಾಯದ ಯುಕ್ತಿಪಾದದ ಏಳನೇ ಅಧಿಕರಣದಲ್ಲಿ ಜೀವಾದ್ಭವಂತಿ ಇತ್ಯಾದಿ ಶ್ರುತಿಯು ವಿಷಯವಾಕ್ಯವಾಗಿ ಪ್ರಾಪ್ತವಾಗಿದ್ದರೂ ಸಹ ಪುನಃ 'ಅನ್ಯಥಾನುಮಿತೌ ಚ ಜ್ಞಶಕ್ತಿವಿಯೋಗಾತ್' ಎಂಬ ಎರಡನೇ ಅಧ್ಯಾಯದ ಸಮಯಪಾದದ ಐದನೇ ಅಧಿಕರಣದಲ್ಲಿಯೂ

ವಿಷಯವಾಕ್ಯವಾಗಿ ಪ್ರಾಪ್ತವಾಗಿದೆ. ಪುರುಷನೇ ಜಗತ್ತಿಗೆ ಕರ್ತೃ, ಪ್ರಕೃತಿಯು ಉಪಸರ್ಜನವಾಗಿರುತ್ತದೆ ಎಂಬ ಮತವನ್ನು ನಿರಾಕರಣೆ ಮಾಡುವುದಕ್ಕೋಸ್ಕರ ಈ ವಾಕ್ಯವನ್ನು ಪುನಃ ಉದಾಹರಿಸಿದ್ದಾರೆ.

ಇದನ್ನೇ 'ಇತರವ್ಯಪದೇಶಾತ್' ಎಂಬ ಸೂತ್ರದ ಟೀಕೆಯಲ್ಲಿ ಹೀಗೆ ಹೇಳಿದ್ದಾರೆ. - ''ಅತ್ರ ಜೀವಾದ್ಭವಂತಿ ಭೂತಾನಿ ಇತಿ ಶ್ರುತಿಪ್ರಾಪ್ತೋ ಜೀವಕರ್ತೃತ್ವಪಕ್ಷೋ ನಿರಾಕ್ರಿಯತೇ । ಉತ್ತರತ್ರ ತು ಸಮಯಪ್ರಾಪ್ತಃ ಇತ್ಯರ್ಥಭೇದಃ (ಇತರವ್ಯಪದೇಶಾಧಿಕರಣದಲ್ಲಿ ಜೀವಾದ್ಭವಂತಿ ಭೂತಾನಿ ಎಂಬ ಶ್ರುತಿಯಿಂದ ಪ್ರಾಪ್ತವಾದ ಜೀವಕರ್ತೃತ್ವಪಕ್ಷವನ್ನು ನಿರಾಕರಿಸಿದ್ದಾರೆ. ಮುಂದೆ ಸಮಯಪ್ರಾಪ್ತವಾದ ಜೀವಕರ್ತೃತ್ವಪಕ್ಷವನ್ನು ನಿರಾಕರಿಸಿದ್ದಾರೆಂಬ ಅರ್ಥಭೇದವಿದೆ)''. ಇಲ್ಲಿ ಯಾವ ರೀತಿಯಾಗಿ ಒಂದೇ ವಿಷಯವಾಕ್ಯವು ಎರಡು ಅಧಿಕರಣಗಳಲ್ಲಿ ಆಕಾರಭೇದದಿಂದ ಪ್ರಸಕ್ತವಾಗಿದೆಯೋ ಅದೇ ರೀತಿಯಾಗಿ ಪ್ರಕೃತದಲ್ಲಿಯೂ ಒಂದೇ ಇಂದ್ರಶಬ್ದವು ಎರಡು ಅಧಿಕರಣಗಳಲ್ಲಿ ವಿಷಯವಾಗಬಹುದು.

ಮತ್ತು ಇದೇ ಆಕಾಶಶಬ್ದವು ಈ ಅಧಿಕರಣದಲ್ಲಿ ವಿಷಯವಾದಂತೆ ಮೂರನೇ ಪಾದದ 'ಆಕಾಶೋऽರ್ಥಾಂತರತ್ವಾದಿವ್ಯಪದೇಶಾತ್' ಎಂಬ ಹನ್ನೆರಡನೆಯ ಅಧಿಕರಣದಲ್ಲಿಯೂ ವಿಷಯವಾಗಿದೆ.

'ವಿವರಾದಿಃ ಕಥಂ ತತಃ ಇತಿ ಶಂಕಾನಿವೃತ್ತ್ಯರ್ಥಂ ಆಕಾಶ ಇತಿ ನಾಮ ಚ ।
ಪರತೋऽಪಿ ವರೀಯಸ್ತ್ವಪೂರ್ವಾಲ್ಲಿಂಗಾದ್ಧರೇರ್ಭವೇತ್'

ವಿವರತ್ವಾದಿಗಳು ಭಗವಂತನ ಅಧೀನಗಳು ಹೇಗಾಗುತ್ತವೆ? ಎಂಬ ಶಂಕೆಯನ್ನು ನಿರಾಕರಣೆ ಮಾಡುವುದಕ್ಕಾಗಿ ಆಕಾಶ ಎಂಬ ನಾಮವನ್ನು ಪರೋವರೀಯಸ್ತ್ವಲಿಂಗದಿಂದ ಭಗವಂತನಲ್ಲಿ ಸಮನ್ವಯ ಮಾಡಲಾಗಿದೆ. ಈ ಅನುವ್ಯಾಖ್ಯಾನ ಶ್ಲೋಕದಲ್ಲಿ 'ನಾಮ' ಎಂಬ ಪದವನ್ನು ಉಲ್ಲೇಖಿಸಿದ್ದಾರೆ. ಇದರಿಂದ ತಿಳಿಯುವ ಶಂಕೆಯೊಂದನ್ನು 'ಅಪರಾ ತು' ಇತ್ಯಾದಿ ವಾಕ್ಯದಿಂದ ವಿವರಿಸಿದ್ದಾರೆ. ಹಿಂದಿನ ಅಧಿಕರಣದಲ್ಲಿ ಹೇಳಿದಂತೆ ಇಂದ್ರಾದಿಶಬ್ದಗಳು ವಿಷ್ಣುಪರವಾಗಬಹುದು. ಆದರೆ ಈ ಅಧಿಕರಣದಲ್ಲಿ ಹೇಳುತ್ತಿರುವ ಆಕಾಶಾದಿಶಬ್ದಗಳು ವಿಷ್ಣುಪರವಾಗುವುದು ಸಾಧ್ಯವಿಲ್ಲ. ಈ ವಿಷಯದಲ್ಲಿ ಮೂರು ಹೇತುಗಳನ್ನು ದೃಷ್ಟಾಂತಪೂರ್ವಕವಾಗಿ 'ಶ್ಯೇನ' ಇತ್ಯಾದಿ ವಾಕ್ಯದಿಂದ ಹೇಳುತ್ತಿದ್ದಾರೆ.

'ಶ್ಯೇನೇನ ಅಭಿಚರನ್ ಯಜೇತ' (ಶ್ಯೇನಯಾಗದಿಂದ ಶತ್ರುವಧೆಯನ್ನು ಬಯಸುವವನು ಯಾಗ ಮಾಡಬೇಕು) ಈ ಶ್ರುತಿಯನ್ನು ನೋಡಿದಾಗ ಶ್ಯೇನಪಕ್ಷಿಯನ್ನು ದ್ರವ್ಯವನ್ನಾಗಿ ಮಾಡಿಕೊಂಡು ಯಾಗ ಮಾಡಬೇಕೋ? ಅಥವಾ ಶ್ಯೇನವೆಂಬುದು ಕೇವಲ ಯಾಗದ ಹೆಸರೋ? ಎಂದು ಸಂಶಯ ಬರುತ್ತದೆ. ಶ್ಯೇನಪದವು ದ್ರವ್ಯಪರವೆಂದು ಪೂರ್ವಪಕ್ಷ. ಯಾಗಪರವೆಂದು ಸಿದ್ಧಾಂತ.

ಯಾಗಪರವೆಂದು ಏಕೆ ಹೇಳಬೇಕೆಂದರೆ ಶ್ಯೇನಶಬ್ದವು ತೃತೀಯಾವಿಭಕ್ತ್ಯಂತವಾಗಿ ನಿರ್ದಿಷ್ಟವಾಗಿದೆ. ಈ ಶ್ಯೇನಶಬ್ದವು ಶ್ಯೇನಪಕ್ಷಿಯಲ್ಲಿ ರೂಢವಾಗಿದ್ದರೂ ಸಹ ಯಾಗಶಬ್ದದಿಂದ ಸಮಾನಾಧಿಕರಣವಾಗಿದೆ. 'ಯಜೇತ' ಎಂಬಲ್ಲಿ ಈತಪ್ರತ್ಯಯಕ್ಕೆ ಭಾವನಾ ಎಂದರ್ಥ. ಭಾವನಾದಲ್ಲಿ ಕರಣವಾಗಲು ಸಮರ್ಥವಾದದ್ದು ಯಾಗ. ಈ ಯಾಗವನ್ನು ಯಜ್ ಧಾತುವು ಪ್ರತಿಪಾದಿಸುತ್ತದೆ. ಈ ಯಜ್ ಧಾತುವಿನ

ವಿಭಕ್ತಿಯಲ್ಲಿಯೇ ಶ್ಯೇನ ಶಬ್ದವೂ ಪ್ರಯುಕ್ತವಾಗಿದೆ. ಅಂದರೆ 'ಶ್ಯೇನೇನ ಯಾಗೇನ (ಶತ್ರುವಧಂ) ಭಾವಯೇತ್' (ಶ್ಯೇನ ಯಾಗದಿಂದ ಶತ್ರುವಧೆಯನ್ನು ಹೊಂದಬಹುದು) ಎಂದು ಶ್ರುತಿಯ ಅರ್ಥ. ಹೀಗೆ ಸಾಮಾನಾಧಿಕರಣ್ಯದ ಜೊತೆಗೆ ವಾಕ್ಯಶೇಷದ ಸಂವಾದವೂ ಇದೆ. 'ಯಥಾ ವೈ ಶ್ಯೇನೋऽಯಂ ನಿಪತ್ಯಾದತ್ತೇ' (ಯಾವ ರೀತಿಯಾಗಿ ಶ್ಯೇನಪಕ್ಷಿಯು ಒಂದೇ ಬಾರಿಗೆ ಹಾರಿ ಶತ್ರುಗಳನ್ನು ನಾಶ ಮಾಡುತ್ತದೋ, ಅದೇ ರೀತಿಯಾಗಿ ಯಾಗವೂ ಸಹ ಶತ್ರುವಧೆಯನ್ನು ಮಾಡುತ್ತದೆ) ಎಂದು ವಾಕ್ಯಶೇಷವಿದೆ. ಹೀಗೆ ಶತ್ರುವಧ ಉಪಾಯತ್ವವೆಂಬ ಗುಣದ ಯೋಗದಿಂದ ಶ್ಯೇನಪದವು ಯಾಗಪರ-ವೆಂದು ತಿಳಿಯಬೇಕು.

ಅದೇ ರೀತಿಯಾಗಿ ಇಂದ್ರಶಬ್ದಕ್ಕೂ ಮತ್ತು ವಿಷ್ಣುಶಬ್ದಕ್ಕೂ ಸಾಮಾನಾಧಿಕರಣ್ಯ ಇರುವುದರಿಂದ ಇಂದ್ರಶಬ್ದವು ವಿಷ್ಣುಪರವೆಂದು ತೀರ್ಮಾನಿಸಬಹುದು. 'ಮತ್ಸಿ ಸೋಮಂ ವರುಣಂ ಮತ್ಸಿ ಮಿತ್ರಂ ಮತ್ಸೀಂದ್ರಮಿಂದೋ ಪವಮಾನ ವಿಷ್ಣೂಂ'' (ಎಲೈ ಪವಮಾನನೇ ! ಸೋಮನನ್ನು ಸಂತೋಷಪಡಿಸು, ವರುಣನನ್ನು ಸಂತೋಷಪಡಿಸು, ಮಿತ್ರನನ್ನು ಸಂತೋಷಪಡಿಸು, ಇಂದ್ರನಾದ ವಿಷ್ಣುವನ್ನು ಸಂತೋಷ-ಪಡಿಸು) ಈ ಶ್ರುತಿಯಲ್ಲಿ ಇಂದ್ರಹಾಗೂ ವಿಷ್ಣುಶಬ್ದಗಳು ಸಮಾನಾಧಿಕರಣವಾಗಿ ಪ್ರಯೋಗಿಸಲ್ಪಟ್ಟಿವೆ. ಸಾಮಾನಾಧಿಕರಣ್ಯವಿದ್ದಲ್ಲಿ ಅಭೇದವನ್ನು ಹೇಳಬೇಕಾದ್ದರಿಂದ ಇಂದ್ರನನ್ನು ವಿಷ್ಣು- ವೆಂದು ಸುಲಭವಾಗಿ ತಿಳಿಯಬಹುದು.

ಅಷ್ಟೇ ಅಲ್ಲದೇ 'ಯೋ ದೇವಾನಾಂ' ಎಂಬ ಶ್ರುತಿಯು ಸಕಲದೇವತೆಗಳ ನಾಮವನ್ನು ವಿಷ್ಣುಪರ-ವೆಂದು ಸಮ್ಮತಿಸುತ್ತದೆ. ಈ ಶ್ರುತಿಯಲ್ಲಿ ಮತ್ಸಿ (ಸಂತೋಷಪಡಿಸು) ಎಂಬ ಪದವನ್ನು ವಿಷ್ಣುಪದದ ಜೊತೆಗೆ ಪ್ರತ್ಯೇಕವಾಗಿ ಅನ್ವಯ ಮಾಡಿಕೊಂಡಾಗ ಸಾಮಾನಾಧಿಕರಣ್ಯವು ಅಸಿದ್ಧವಾಗುತ್ತದಲ್ಲವೆ? ಎಂದು ಶಂಕಿಸಬಾರದು. ಹಾಗಾದಲ್ಲಿ ವರುಣಾದಿಶಬ್ದಗಳ ಜೊತೆಗೆ ಪ್ರತ್ಯೇಕ ಪ್ರತ್ಯೇಕವಾಗಿ ಮತ್ಸಿ ಶಬ್ದವನ್ನು ಹೇಳಿದಂತೆ 'ಇಂದ್ರಂ ಮತ್ಸಿ' 'ವಿಷ್ಣುಂ ಮತ್ಸಿ' ಎಂದು ಶ್ರುತಿಯೇ ಹೇಳಬೇಕಿತ್ತು. ಪ್ರತಿಯೊಬ್ಬರಿಗೂ ಶ್ರುತಿಯು ಪ್ರತ್ಯೇಕವಾಗಿ 'ಮತ್ಸಿ' ಎಂದು ಹೇಳಿ ವಿಷ್ಣುವಿಗೆ ಮಾತ್ರ 'ಮತ್ಸಿ' ಶಬ್ದವನ್ನು ಹೇಳಿಲ್ಲ. ಇದರಿಂದ ಇಂದ್ರನನ್ನೇ ವಿಷ್ಣುವೆಂದು ತಿಳಿಯಬೇಕು. ಇಲ್ಲವಾದರೆ ಅಶ್ರುತಕಲ್ಪನಾದೋಷವೂ ಸಹ ಬರುತ್ತದೆ.

ಅಷ್ಟೇ ಅಲ್ಲದೆ ಮುಂದೆ ಶ್ರುತಿಯಲ್ಲಿ 'ಮತ್ಸಿ ಮಹಾಮಿಂದ್ರವಿಂದೋ ಮದಾಯ' ಎಂದು ಇಂದ್ರನನ್ನು ಪ್ರತ್ಯೇಕವಾಗಿ ಮತ್ಸಿ ಎಂದು ಶ್ರುತಿಯು ಹೇಳುತ್ತಿದೆ. ಹೀಗಿರುವಾಗ ಮೊದಲೇ ಇಂದ್ರನನ್ನು ಮತ್ಸಿ ಎಂದು ಹೇಳಿ ಪುನಃ ಮುಂದೆ ಅದೇ ಇಂದ್ರನನ್ನು ಮತ್ಸಿ ಎಂದು ಹೇಳಿದರೆ ಪುನರುಕ್ತಿ ಬರುವುದಿಲ್ಲವೇ? ಮುಂದಿನ ಶ್ರುತಿಯಲ್ಲಿ ಮಹಾಶಬ್ದ ಇರುವುದರಿಂದ ಅದು ವಿಷ್ಣುಪರವೆಂದು ಶಂಕಿಸಬಾರದು. ಪುರಂದರನೇ ಮಹೇಂದ್ರ ಎಂದು ಕರೆಸಿಕೊಳ್ಳುತ್ತಾನೆ. ಅದಿತಿ ಪುತ್ರರಲ್ಲಿ ಅಗ್ರಜನು ಪುರಂದರನು. ವಿಷ್ಣುವು ಅನುಜನಾಗಿದ್ದಾನೆ. ಅಗ್ರಜನಾದ್ದರಿಂದ ಪುರಂದರನೇ ಮಹೇಂದ್ರನೆನಿಸುತ್ತಾನೆ. ವಿಷ್ಣುವು ಉಪೇಂದ್ರನೆನಿಸುತ್ತಾನೆ. (ಕುಲಪತಿ ಉಪಕುಲಪತಿಗಳಂತೆ ಪುರಂದರನು ಇಂದ್ರ, ವಿಷ್ಣು ಉಪೇಂದ್ರ). ಇದರ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಐತರೇಯಭಾಷ್ಯದಲ್ಲಿ ತಿಳಿಯಬೇಕು. ಮೂರನೇ ಹೇತುವನ್ನು ದೃಷ್ಟಾಂತಪುರಃಸರವಾಗಿ 'ಉತ್ಪತ್ತಿಶಿಷ್ಟ' ಇತ್ಯಾದಿ ಗ್ರಂಥದಿಂದ ಹೇಳುತ್ತಿದ್ದಾರೆ.

## 'ಫಲಚಮಸೋ ನೈಮಿತ್ತಿಕೋ ಭಕ್ಷವಿಕಾರಃ ಶ್ರುತಿಸಂಯೋಗಾತ್' (೩-೫- ಉಪಾಂತ್ಯ)

ಚಿದ್ಗತಸ್ಯೇಶತಂತ್ರತ್ವೇ ಸ್ಯಾದೇವಾಚಿದ್ಗತಸ್ಯ ತತ್ ।
ಯತೋಽತ್ಯಂತಪರಾಧೀನಂ ಚೇತನಾದಪ್ಯಚೇತನಮ್ ॥೧॥

ಚೇತನದಲ್ಲಿರುವ ಧರ್ಮಗಳೇ ಭಗವಂತನ ಅಧೀನ ಆದ ಮೇಲೆ ಅಚೇತನಗಳಲ್ಲಿರುವ

ಧರ್ಮಗಳು ಭಗವದಧೀನವೆಂದು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ಏಕೆಂದರೆ ಚೇತನಕ್ಕಿಂತ ಅಚೇತನವು ಬಹಳಷ್ಟು ಅಸ್ವತಂತ್ರವಾಗಿದೆ.

ಯಾವ ರೀತಿಯಾಗಿ ಚೇತನನಾದ ಭೃತ್ಯನಲ್ಲಿರುವ 'ಜಯ' ಎಂಬ ಧರ್ಮವು ರಾಜನ ಅಧೀನವಾದ್ದರಿಂದ 'ರಾಜಾ ಜಯಿ' ಎಂಬ ಪ್ರಯೋಗವಿದೆಯೋ ಅದರಂತೆ ಜಡದಲ್ಲಿರುವ 'ಮೃತ್ವ' ಎಂಬ ಧರ್ಮವು ಅಭಿಮಾನಿ ದೇವತೆಗಳ ಅಧೀನವಾಗಿದೆ. ಆದ್ದರಿಂದ ದೇವತೆಗಳಲ್ಲಿ 'ಮೃದ-ಬ್ರವೀತ್' ಎಂಬ ಪ್ರಯೋಗವು ವೇದದಲ್ಲಿ ಕಾಣಿಸುತ್ತದೆ. ಈ ಎಲ್ಲ ಕಾರಣಗಳಿಂದ ವಿವರತ್ವಾದಿಗಳು ಅಚೇತನನಿಷ್ಠವಾದ್ದರಿಂದ ಈಶ್ವರಾಧೀನವಾಗುವುದಿಲ್ಲ ಎಂಬ ಮತವನ್ನು ನಿರಾಕರಿಸಿದಂತಾಯಿತು.

''ವಿವರತ್ವಾದಿಗಳು ಅಚೇತನಸ್ವಭಾವವಾದ್ದರಿಂದ ಭಗವದಧೀನವಾಗುವುದಿಲ್ಲ'' ಎಂದು ಕೆಲವರ ಮತ. ಈ ಮತವೂ ಸಹ ತಪ್ಪು. ಏಕೆಂದರೆ -

'ಅಸ್ತು ಖಂ ಚಿದ್ರಮಿತಿ ಯಾ ಹರೀಚ್ಛಾತದ್ವಶಾನ್ನಭಃ।
ಛಿದ್ರಾತ್ಮಕಂ ಹಿ ಸಂಜಾತಮನ್ಯಥಾ ನಿಬಿಡಂ ಭವೇತ್ ॥

'ಆಕಾಶವು ಛಿದ್ರವಾಗಲಿ ಎಂಬುದು ಹರಿಯ ಇಚ್ಛೆ. ಅದಕ್ಕನುಗುಣವಾಗಿ ಆಕಾಶವು ಛಿದ್ರ-ರೂಪವಾಗಿದೆ. ಹರಿಯ ಇಚ್ಛೆ ಇಲ್ಲದಿದ್ದಲ್ಲಿ ಕಲ್ಲಿನಂತೆ ನಿಬಿಡವಾಗುತ್ತಿತ್ತು.

ಲೋಕದಲ್ಲಿಯೂ ಸಹ ಅಚೇತನದ ಧರ್ಮಗಳು ಚೇತನಾಧೀನವಾಗಿರುವುದು ಕಂಡಿದೆ --

ಕುಂಭಸ್ವಭಾವಃ ಕುಂಭತ್ವಂ ಪುಂತಂತ್ರಂ ಧರ್ಮಿಣಾ ಸಹ।
ನ ಶರಾವಾರ್ಥಯತ್ನೇನ ಕುಂಭಕಾರೋ ಹಿ ಸಿದ್ಧ್ಯತಿ ॥
ಯಯೈವ ಹಿ ಮೃದಾ ಕುಂಭಃ ಕುಂಭಕಾರೇಣ ನಿರ್ಮಿತಃ।
ತಯೈವ ಚ ಮೃದಾ ಕರ್ತುಂ ಶರಾವಾದ್ಯಪಿ ಶಕ್ಯತೇ ॥

ಕುಂಭಕಾರನು (ಕುಂಬಾರನು) ಘಟವನ್ನು ನಿರ್ಮಿಸುತ್ತಾನೆ. ಇದರಿಂದ ಘಟವು ಕುಂಬಾರನ ಅಧೀನವೆಂಬುದು ಸ್ಪಷ್ಟ. ಇದರ ಜೊತೆಗೆ ಘಟದ ಸ್ವಭಾವವೆನಿಸಿದ ಘಟತ್ವವೂ ಸಹ ಕುಂಬಾರನ ಅಧೀನವೇ ಆಗಿದೆ. ಏಕೆಂದರೆ ಶರಾವದ ಪ್ರವೃತ್ತಿಯಲ್ಲಿ ಕುಂಬಾರನು ತೊಡಗಿದಾಗ ಘಟಾಕಾರವು ಸಿದ್ಧವಾಗುವುದಿಲ್ಲವಷ್ಟೇ. ಮತ್ತು ಯಾವ ಮಣ್ಣಿನಿಂದ ಘಟವನ್ನು ಕುಂಬಾರನು ತಯಾರಿಸುತ್ತಾನೋ ಅದೇ ಮಣ್ಣಿನಿಂದ ಶರಾವಾದಿಗಳನ್ನೂ ಮಾಡಲು ಸಮರ್ಥನಾಗಿದ್ದಾನೆ.

ಇಲ್ಲಿರುವ ವ್ಯತ್ಯಾಸವಿಷ್ಟು -- ಘಟಾದಿಗಳ ನಿರ್ಮಾಣವಿಷಯದಲ್ಲಿ ಕುಂಬಾರನ ಸಂಕಲ್ಪಕ್ಕೆ ವಿರುದ್ಧವಾಗಿ ಅನೇಕ ವ್ಯತ್ಯಾಸಗಳು ನಡೆಯುತ್ತವೆ. ಆದರೆ ಈಶ್ವರನ ಸೃಷ್ಟಿಯ ವಿಷಯದಲ್ಲಿ ಈಶ್ವರನ ಸಂಕಲ್ಪಕ್ಕೆ ವಿರುದ್ಧವಾಗಿ ಒಂದು ಅಣುವೂ ಸಹ ಹುಟ್ಟಲಾರದು. ಅಷ್ಟೇ ಅಲ್ಲದೆ ಭಗವಂತನು ಆಕಾಶವು ಹುಟ್ಟಿದ ನಂತರವೂ ಆಕಾಶದ ಸ್ವಭಾವವಾದ ವಿವರತ್ವವನ್ನು ಅಪಹರಿಸಿ ನಿಬಿಡ-

ವಾಗುವಂತೆ ಮಾಡಲು ಸಮರ್ಥವಾಗಿದ್ದಾನೆ. ಆದರೆ ಆ ರೀತಿಯಾದ ಇಚ್ಛೆಯನ್ನು ಮಾಡದ ಕಾರಣ ಆಕಾಶವು ನಿಬಿಡವಾಗುವುದಿಲ್ಲ.

ಔಷಧಾದಿವಶಾಲ್ಲೋಕೇ ತಾಮ್ರಾದೇರಪ್ಯತಾಮ್ರತಾಮ್
ಕುರ್ವನ್ನೀಶಾಸ್ತು ನೇಷ್ಟೇ ಕಿಂ ಛಿದ್ರಸ್ಯಾಚ್ಛಿದ್ರತಾಕೃತೇಃ ॥

ಲೋಕದಲ್ಲಿ ಜಡವಾದ ಔಷಧವೇ ತಾಮ್ರವನ್ನು ಬೆಳ್ಳಿಯನ್ನಾಗಿಸುತ್ತದೆ. ಹೀಗಿರುವಾಗ ಸರ್ವ-ಸಮರ್ಥನಾದ ಈಶ್ವರನಿಗೆ ಛಿದ್ರರೂಪವಾದ ಆಕಾಶವನ್ನು ನಿಬಿಡರೂಪವಾಗಿ ಮಾಡಲು ಸಾಧ್ಯವಿಲ್ಲವೇನು?

ಆದ್ದರಿಂದ ಭಗವಂತನು ಅಚೇತನಸ್ವಭಾವವನ್ನು ವ್ಯತ್ಯಾಸ ಮಾಡದಿದ್ದರೂ ವ್ಯತ್ಯಾಸ ಮಾಡಲು ಸಮರ್ಥನಾಗಿದ್ದಾನೆ (ಅನ್ಯಥಾಕರ್ತುಂ ಸಮರ್ಥನಾಗಿದ್ದಾನೆ). ಈ ಕಾರಣದಿಂದ ಆಕಾಶದಲ್ಲಿ ಯಥೇಷ್ಟವಿನಿಯೋಗಾರ್ಹತೆಯು ಬಂದೇ ಬರುತ್ತದೆ. (ಆಕಾಶವು ಭಗವಂತನಿಂದ ಛಿದ್ರರೂಪ-ವನ್ನಾಗಲೀ, ನಿಬಿಡರೂಪವನ್ನಾಗಲೀ ಹೊಂದಲು ಯೋಗ್ಯವಾಗಿದೆ). ಶ್ರುತಿಸ್ಮೃತಿಗಳೂ ಸಹ ಜಡಸ್ವಭಾವವು ಈಶ್ವರಾಧೀನವೆಂದೇ ಕೂಗಿ ಹೇಳುತ್ತಿವೆ.

ಸ್ಯಂದಂತೇ ಶಾಸನಾನ್ನದ್ಯೋ ಭೀಷಾಸ್ಮಾತ್ ಪವತೇऽನಿಲಃ।
ನಭೋ ದದಾತಿ ಶಶ್ವತಾಂ ಮಾರ್ಗಮಿತ್ಯಾದಿಕಾಶ್ಚ ತಾಃ ॥

ಭಗವಂತನ ಆಜ್ಞೆಯಿಂದ ನದಿಗಳು ಹರಿಯುತ್ತಿವೆ. ಭಗವಂತನಿಗೆ ಹೆದರಿ ಗಾಳಿಯು ಬೀಸುತ್ತಿದೆ. ಮತ್ತು ಆಕಾಶವೂ ಸಹ ಪ್ರಾಣಿಗಳಿಗೆ ಮಾರ್ಗವನ್ನು ನೀಡುತ್ತಿದೆ. ಹೀಗೆ ಹಲವು ಶ್ರುತಿಗಳು ಅಚೇತನಸ್ವಭಾವವನ್ನು ಭಗವದಧೀನವೆನ್ನುತ್ತಿವೆ.

ಆಕಾಶಶಬ್ದಕ್ಕೆ ಯೋಗಾರ್ಥವನ್ನೇ ಹೇಳಲು ಬರುವಾಗ ರೂಢ್ಯರ್ಥವನ್ನು ಹೇಳಬೇಕಾಗಿಲ್ಲ. ಈ ವಿಷಯದಲ್ಲಿ ಪೂರ್ವಮೀಮಾಂಸೆಯ ದೃಷ್ಟಾಂತ ಹೀಗಿದೆ - 'ಸ್ರುವೇಣ ಪಾರ್ವಣೋ ಹೋಮೌ' ಈ ಶ್ರುತಿಯ ಬಗ್ಗೆ ಪೂರ್ವಮೀಮಾಂಸೆಯ ಒಂಬತ್ತನೆಯ ಅಧ್ಯಾಯದಲ್ಲಿ ವಿಚಾರ ಮಾಡಿದ್ದಾರೆ. ಶ್ರುತಿಯಲ್ಲಿರುವ ಪರ್ವಶಬ್ದಕ್ಕೆ ಪೂರ್ವಪಕ್ಷಕಾರರು ಪ್ರೀಯತೇ = ದೀಯತೇ ಅಸ್ಮಿನ್ನಿತಿ ಎಂದು ಅಧಿಕರಣ ವ್ಯುತ್ಪತ್ತಿಯನ್ನು ಮಾಡಿ ದರ್ಶಾದಿಕಾಲವೆಂಬ ಅರ್ಥವನ್ನು ಅಂಗೀಕರಿಸಿದ್ದಾರೆ. ಸಿದ್ಧಾಂತ-ದಲ್ಲಿಯೂ ಸಹ ಭಾವಾರ್ಥವನ್ನು ಅಂಗೀಕರಿಸಿ ಕರ್ಮವೆಂಬ ಅರ್ಥವನ್ನು ಅಂಗೀಕರಿಸಿದ್ದಾರೆ. ಅಂತೂ ಪೂರ್ವಪಕ್ಷದಲ್ಲಾಗಲೀ ಸಿದ್ಧಾಂತದಲ್ಲಾಗಲೀ ರೂಢ್ಯರ್ಥವನ್ನು ಅಂಗೀಕರಿಸದೆ ಯೋಗಾರ್ಥವನ್ನೇ ಒಪ್ಪಿದ್ದಾರೆ.

ಇದರಂತೆ ಪ್ರಕೃತದಲ್ಲಿಯೂ ಸಹ ಆಕಾಶನಂ ಎಂಬ ವ್ಯುತ್ಪತ್ತಿಯಿಂದ ಆಕಾಶಶಬ್ದವನ್ನು ನಿಷ್ಪನ್ನ-ಗೊಳಿಸಬೇಕು. ಆವಾಗ ಭೂತಾಕಾಶದಲ್ಲಿ ಯೋಗವೃತ್ತಿಯಿಂದಲೇ ಆಕಾಶಶಬ್ದವನ್ನು ಪ್ರಯೋಗಿಸಿ-

ದಂತಾಗುತ್ತದೆ. ಸುಧೆಯಲ್ಲಿ ಹೇಳಿದಂತೆ ಯೌಗಿಕವಾದ ಆಕಾಶಶಬ್ದದ ಪ್ರವೃತ್ತಿನಿಮಿತ್ತವು ಆಕಾಶದಲ್ಲಿ ಇದೆ. ಪ್ರವೃತ್ತಿನಿಮಿತ್ತವಾದ ಈ ವಿವರತ್ವವು (ಅವಕಾಶಪ್ರದತ್ವವು) ಭಗವದಧೀನವಾಗಿದೆ. ಆದ್ದರಿಂದ ಆಕಾಶಶಬ್ದವು ಭೂತಾಕಾಶದಲ್ಲಿ ಯೋಗವೃತ್ತಿಯಿಂದ ಇರುತ್ತದೆ. ಭಗವಂತನಲ್ಲಿ ಮಹಾಯೋಗ-ವೃತ್ತಿಯಿಂದ ಇರುತ್ತದೆ ಎಂಬ ಅಂಶವನ್ನು ಸ್ಪಷ್ಟವಾಗಿ ತಿಳಿಯಬೇಕು. ಆಕಾಶದಲ್ಲಿರುವ ವಿವರತ್ವವು ಭಗವದಧೀನವೆಂದಷ್ಟೇ ಅಲ್ಲ, ಭಗವಂತನಲ್ಲಿಯೂ ಸಹ ಅಪರಿಚ್ಛಿನ್ನವಾಗಿ ವೃತ್ತಿಯಾಗಿದೆ. ಪರಿಚ್ಛಿನ್ನವಾದ ಆಕಾಶಶಬ್ದದಲ್ಲಿರುವ ವಿವರತ್ವವು ಪರಿಚ್ಛಿನ್ನರೂಪದಿಂದಷ್ಟೇ ಇರಲು ಸಾಧ್ಯ. ಆದರೆ ಅಪರಿಚ್ಛಿನ್ನನಾದ ಭಗವಂತನಲ್ಲಿ ವಿವರತ್ವವು ನಿರವಧಿಕವಾಗಿಯೇ ಇರುತ್ತದೆ. ಸರ್ವಭೂತ-ಗುಣೈರ್ಯುಕ್ತಃ (ಸಕಲಭೂತಪದಾರ್ಥಗಳ ಗುಣಗಳಿಂದ ಭಗವಂತನು ಕೂಡಿದ್ದಾನೆ) ಎಂಬ ಮಾತಿನಂತೆ ಅಪರಿಚ್ಛಿನ್ನವಾದ ವಿವರತ್ವವನ್ನು ಭಗವಂತನಲ್ಲಿ ಹೇಳಬಹುದು.

ಆದ್ದರಿಂದಲೇ ಸುಧೆಯಲ್ಲಿ ಹೀಗೆ ಹೇಳಿದ್ದಾರೆ -- 'ನ ಹಿ ದೇಶಕಾಲಾಭ್ಯಾಂ ಪರಿಚ್ಛಿನ್ನಸ್ಯಾವ-ಕಾಶದಾತೃತ್ವಂ ನಿರವಧಿಕಮ್' (ದೇಶಕಾಲಗಳಿಂದ ಪರಿಚ್ಛಿನ್ನವಾದ ಆಕಾಶಕ್ಕೆ ಅವಕಾಶಪ್ರದತ್ವ-ಗುಣವನ್ನು ಭಗವಂತನೇ ನೀಡಿದ್ದಾನೆ. ಅಷ್ಟೇ ಅಲ್ಲದೆ ಈ ಗುಣವು ಭಗವಂತನಲ್ಲಿ ನಿರವಧಿಕವಾಗಿ ಇದೆ), 'ಆಕಾಶಸ್ಯಾವಕಾಶದಾತೃತ್ವಸ್ಯೇಶ್ವರಾಯತ್ತತ್ವಮೀಶ್ವರಸ್ಯಾಪಿ ಪೃಥಕ್ ತದ್ವತ್ವಂ ಚ' (ಆಕಾಶ-ದಲ್ಲಿರುವ ಅವಕಾಶದಾತೃತ್ವವು ಭಗವದಧೀನವಾಗಿದೆ; ಮತ್ತು ಭಗವಂತನಲ್ಲಿಯೂ ಪ್ರತ್ಯೇಕವಾಗಿ ಆ ಗುಣವು ನಿರವಧಿಕವಾಗಿ ಇದೆ) ಎಂದು.

ಆದ್ದರಿಂದ ಪೂರ್ವಪಕ್ಷಿಯು ಅವಕಾಶಪ್ರದತ್ವವನ್ನು ಅಚೇತನಸ್ವಭಾವವೆಂದು ಹೇಳಿದ್ದು ಕೇವಲ ಅಭಿಮಾನದಿಂದ. ಸಿದ್ಧಾಂತದಲ್ಲಿ ವಿವರತ್ವವನ್ನು ಭಗವದಧೀನವೆಂದು ಸಮರ್ಥಿಸಿದ್ದು ಆಕಾಶದ ಸ್ವಭಾವಕ್ಕೂ ಸಹ ಭಗವಂತನು ನಿಯಾಮಕನಾಗಿದ್ದಾನೆಂಬ ಮಹಾಗುಣದ ಸಿದ್ಧಿಗೋಸ್ಕರ. ಇದರಿಂದ ಜಡವಾಚಕವಾದ ಸಕಲಶಬ್ದಗಳ ಸಮನ್ವಯವನ್ನು ಭಗವಂತನಲ್ಲಿ ಹೇಳಿದಂತಾಗುತ್ತದೆ. ಜಡಪದಾರ್ಥಗಳ ಸ್ವಭಾವಕ್ಕೆ ಭಗವಂತನು ನಿಯಾಮಕನಾದ್ದರಿಂದ ಉಳಿದ ಜಡವಾಚಕಪದಗಳ ಸಮನ್ವಯವು ಸುಲಭವಾಗುತ್ತದೆ. ಈ ಉದ್ದೇಶದಿಂದ ಪೂರ್ವಪಕ್ಷದಲ್ಲಿ ಅವಕಾಶಪ್ರದತ್ವವನ್ನು ಅಚೇತನಸ್ವಭಾವವೆಂದು ಕೃತ್ವಾಚಿಂತೆಯಿಂದ ಶಂಕಿಸಿ, ಸಿದ್ಧಾಂತದಲ್ಲಿ ಉತ್ತರಿಸಿದ್ದಾರೆ.

ವಸ್ತುತಸ್ತು, ಪ್ರವೃತ್ತಿನಿಮಿತ್ತವು ಭಗವಂತನಲ್ಲಿ ಮುಖ್ಯವಾಗಿರುವುದರಿಂದಲೇ ಆಕಾಶಾದಿಶಬ್ದಗಳ ಸಮನ್ವಯವನ್ನು ಮಾಡಬಹುದು. ಆದರೂ ಸಹ ಭೂತಸ್ವಭಾವವೆಂದು ಶಂಕಿಸಿ, ಭಗವ-ದಧೀನವೆಂದು ಪ್ರಯತ್ನಪಟ್ಟು ಸಿದ್ಧಾಂತ ಮಾಡಿದ್ದು ವ್ಯರ್ಥವಾಗುವುದಿಲ್ಲ. ಕೃತ್ವಾಚಿಂತೆಯಿಂದ ಹೀಗೆ ಶಂಕೆ ಸಮಾಧಾನಗಳನ್ನು ಮಾಡುವುದು ತಪ್ಪೇನಲ್ಲ. ಪೂರ್ವಮೀಮಾಂಸೆಯಲ್ಲಿಯೂ ಕೂಡ ಈ ತರಹದ ಕೃತ್ವಾಚಿಂತೆಗಳು ಕಾಣಿಸುತ್ತವೆ --

ಪೂರ್ವಮೀಮಾಂಸೆಯ ತೃತೀಯಾಧ್ಯಾಯದಲ್ಲಿ ಹೀಗೆ ವಿಚಾರ ಮಾಡಿದ್ದಾರೆ. -- 'ಇಂದ್ರ-ಪೀತಸ್ಯ' ಎಂಬ ಮಂತ್ರವನ್ನು ಮೈತ್ರಾವರುಣಾದಿಗಳ ಸೋಮಶೇಷದ ಭಕ್ಷಣದಲ್ಲಿ ವಸ್ತುತಃ ಊಹಿಸ -ಬೇಕಾಗಿಲ್ಲ. ಆದರೂ ಕೂಡ ಸಿದ್ಧಾಂತನ್ಯಾಯದ ಸಿದ್ಧಿಗೋಸ್ಕರ ಊಹವಿಷಯಕವಾದ ಅನೇಕ ಬಗೆಯ ಪೂರ್ವಪಕ್ಷಗಳನ್ನು ಅನೇಕ ಅಧಿಕರಣಗಳಲ್ಲಿ ಮಾಡಲಾಗಿದೆ. ಈ ಎಲ್ಲಾ ಅಧಿಕರಣಗಳು ಕೇವಲ ಕೃತ್ವಾಚಿಂತೆಯಿಂದಷ್ಟೇ ಹೊರಟಿವೆ. ಇದರಂತೆ ಪ್ರಕೃತದಲ್ಲಿಯೂ ಕೃತ್ವಾಚಿಂತೆಯಿಂದ ಪ್ರವೃತ್ತಿನಿಮಿತ್ತವು ಭೂತಸ್ವಭಾವವೆಂದು ಶಂಕಿಸಿ ಉತ್ತರಿಸಿದ್ದು ತಪ್ಪಲ್ಲ.

ಆಕಾಶಾಧಿಕರಣದ ಭಾಷ್ಯದಲ್ಲಿ ಆಕಾಶಶಬ್ದಕ್ಕೆ ಯೋಗವೃತ್ತಿಯನ್ನು ಶ್ರೀಮದಾಚಾರ್ಯರು ಹೇಳಲ್ಲ. ಆದರೆ ಬೇರೆಡೆ ಆಕಾಶಶಬ್ದದ ಯೋಗವೃತ್ತಿಯನ್ನು ಆಚಾರ್ಯರೇ ಹೇಳಿದ್ದಾರೆ -- 'ಆ-ಸಮಂತಾತ್ ಕಾಶತೇ' (ಎಲ್ಲೆಡೆ ಪ್ರಕಾಶಿಸುತ್ತದೆ) ಮತ್ತು 'ಆಸಮಂತಾತ್ ಕಂ ಅಶ್ನಾತಿ' (ಸಮಸ್ತ-ಸುಖವನ್ನು ತಿನ್ನುತ್ತದೆ) - ಎಂದು. ಇಲ್ಲಿ ಹೇಳದಿರಲು ಕಾರಣವೇನೆಂದರೆ ಪೂರ್ವಪಕ್ಷಿಗೆ ಅಭಿಮತ-ವಾದ ರೂಢ್ಯರ್ಥವನ್ನೇ ಬ್ರಹ್ಮನಲ್ಲಿ ಸಮನ್ವಯ ಮಾಡಬಹುದು.

ಆದ್ದರಿಂದ ಭೂತಪ್ರಸಿದ್ಧಿಯೆಂಬ ರೂಢ್ಯರ್ಥವೂ ಸಹ ಸಮನ್ವಯಕ್ಕೆ ಬಾಧಕವಾಗುವುದಿಲ್ಲ. ಈ ಅಭಿಪ್ರಾಯದಿಂದ ಭಾಷ್ಯದ ಮಾತುಗಳು ಹೊರಟಿವೆ. ಈ ಸಂದರ್ಭದಲ್ಲಿ ಯೋಗಾರ್ಥ ಹೇಳು-ವುದು ಅನುಪಯುಕ್ತವೇ ಆಗುತ್ತದೆ. ಆದ್ದರಿಂದಲೇ ವಿದ್ವದ್ಗೂಢಿಯನ್ನೂ ಸಹ ಭಗವಂತನಲ್ಲಿ ಸಮರ್ಥಿಸಿದಂತಾಯಿತು. ವೈದಿಕವಾದ ಬಹುಲಪ್ರಯೋಗವೇ ಇದಕ್ಕೆ ಕಾರಣ. ಇದರಂತೆ ಮುಂದಿನ ಅಧಿಕರಣಗಳಲ್ಲಿಯೂ ವಿದ್ವದ್ಗೂಢಿಯನ್ನು ಸಮರ್ಥಿಸಬೇಕು. ಆದ್ದರಿಂದ ಆಕಾಶಶಬ್ದವು ಬ್ರಹ್ಮನಲ್ಲಿಯೇ ಮುಖ್ಯವಾಗಿದೆ.

### ಕಠಿಣಪದಾರ್ಥ

ನಿಪಾತಬಲಾತ್ = ವೈ ಎಂಬ ಅವ್ಯಯದ ಬಲದಿಂದ; ತನ್ನಿರಾಸಃ = ಭೂತಾಕಾಶವನ್ನು ನಿರಾಕರಿಸಲಾಗಿದೆ; ಅತ್ರಾಪಿ = ಈ ಆಕಾಶಾಧಿಕರಣದಲ್ಲಿಯೂ; ತಸ್ಯ = ಹ, ವಾ, ಎಂಬ ನಿಪಾತಕ್ಕೆ; ಭೂತಸನ್ನಿಧಾನೇನ = ಭೂತಾನಿ ಎಂಬ ಪದದ ಹತ್ತಿರವಿರುವುದರಿಂದ; ತನ್ನಿರಾಸಃ = ಪರಮಮುಖ್ಯವೃತ್ತಿಯಿಂದ ಭೂತಾಕಾಶವನ್ನು ನಿರಾಕರಿಸಲಾಗಿದೆ; ಏತದಧಿಕರಣಾಭಾವೇ = ಪ್ರಥಮಪಾದದ ಆಕಾಶಾಧಿಕರಣವೇ ಇಲ್ಲವಾದರೆ; ಕ್ವಾಪಿ ವಾಕ್ಯೇ = ಬೇರೆ ಪಾದದಲ್ಲಿರುವ ಆಕಾಶಾಧಿಕರಣಗಳ ವಾಕ್ಯ-ದಲ್ಲಿ; ತೈಃ = 'ತದಧೀನತ್ವಾತ್' ಇತ್ಯಾದಿ ಸೂತ್ರಗಳಿಂದ; ಚಿದ್ಧರ್ಮಸ್ಯ = ಸಕಲ-ಚೇತನನಿಷ್ಠವಾದ ಧರ್ಮವು; ಈಶತಂತ್ರತ್ವೇ = ಭಗವದಧೀನವಾದ ಮೇಲೆ; ಅಚಿದ್ಧರ್ಮಸ್ಯ = ಸಕಲಜಡನಿಷ್ಠವಾದ ಧರ್ಮಗಳು; ತತ್ = ಈಶಾಧೀನವೆಂದು; ಸ್ಯಾದೇವ = ಆಗಲೇಬೇಕು; ಸ್ವಭಾವತ್ವಾತ್ = ಜಡದ ಸ್ವಭಾವವಾದ್ದರಿಂದ; ತದನಧೀನತ್ವಂ = ಭಗವದಧೀನವಾಗುವುದಿಲ್ಲವೆಂಬ; ಖಂ = ಆಕಾಶವು; ತದ್ವಶಾತ್ = ಭಗವಂತನ ಅಧೀನವಾಗಿ; ನಿಬಡಂ = ಘನವಾಗಿ/ದಟ್ಟವಾಗಿ; ಶರಾವಃ = ಮಣ್ಣಿನ

ಪಾತ್ರೆ; ನಿಹ್ನುಯ = ಮರೆಮಾಚ; ಅತಾಮ್ರತಾಮ್ = ಬೆಳ್ಳಿ ಚಿನ್ನಮೊದಲಾದ ರೂಪಾಂತರವನ್ನು; ನೇಷ್ಟೇ ಕಿಮ್ = ಸಮರ್ಥನಲ್ಲವೇನು?; ಯಥೇಷ್ಟ-ವಿನಿಯೋಗಾರ್ಹತಾ = ಭಗವಂತನ ಇಚ್ಛೆಯಂತೆ ನಿಬಿಡರೂಪವನ್ನಾಗಲೀ ಛಿದ್ರರೂಪವನ್ನಾಗಲೀ ಹೊಂದುವ ಯೋಗ್ಯತೆಯು; ಸ್ಯಂದಂತೇ = ಹರಿಯುತ್ತವೆ; ಶಾಸನಾತ್ = ಆಜ್ಞೆಯಿಂದ; ಭೀಷಾಸ್ಮಾತ್ = ಹೆದರಿಕೆಯಿಂದ; ಪವತೇ = ಬೀಸುತ್ತದೆ; ಶ್ವಸತಾಂ = ಉಸಿರಾಡುವ ಸಕಲಪ್ರಾಣಿಗಳಿಗೆ; ಮಾರ್ಗಂ = ಅವಕಾಶವನ್ನು; ಪಾರ್ವಣಾ ಹೋಮೌ = ಹುಣ್ಣಿಮೆ ಹಾಗೂ ಅಮಾವಾಸ್ಯೆಯಲ್ಲಿ ಮಾಡುವ ಎರಡು ಹೋಮಗಳು; ಆಕಾಶನಂ = ಅವಕಾಶವುಳ್ಳದ್ದು; ಅಭಿಮಾನಮಾತ್ರೇಣ = ತಪ್ಪೆಂದು ಗೊತ್ತಿದ್ದರೂ ಪೂರ್ವಪಕ್ಷೆಯ ಅಭಿಪ್ರಾಯವನ್ನನುಸರಿಸಿ ಹೇಳಿದ್ದು; ಸ್ವಭಾವನಿಯಾಮಕತ್ವರೂಪಮಹಾಗುಣ-ಸಿದ್ಧ್ಯರ್ಥಂ = 'ಸಕಲಜಡಸ್ವಭಾವಗಳಿಗೆ ಭಗವಂತನೇ ನಿಯಾಮಕನಾಗಿದ್ದಾನೆ' ಎಂಬ ಮಹಾಗುಣದ ಸಿದ್ಧಿಗೋಸ್ಕರ; ಶಬ್ದಾಂತರಸಮನ್ವಯೇ = ಉಳಿದ ಜಡವಾಚಕಶಬ್ದಗಳ ಸಮನ್ವಯದಲ್ಲಿ; ಕೃತ್ವಾಚಿಂತಯಾ = ಶಂಕೆಗಳನ್ನು ಸ್ವತಃ ಊಹಿಸಿಕೊಂಡು; ಮೈತ್ರಾವರುಣಾದಿಶೇಷಭಕ್ಷಣೇ = ಮಿತ್ರ,ವರುಣ ಮೊದಲಾದ ದೇವತೆಗಳ ಹೋಮಶಿಷ್ಟವಾದ ಸೋಮರಸದ ಭಕ್ಷಣೆಯಲ್ಲಿ; ಆಸಮಂತಾತ್ = ಎಲ್ಲೆಡೆ; ಕಾಶತೇ = ಪ್ರಕಾಶಿಸುತ್ತದೆ; ಕಂ = ಸುಖವನ್ನು; ತದ್ಬಾಧೋಽಪಿ = ರೂಢಿಯಿಂದ ಬಾಧವನ್ನು ಸಹ; ಇಹ = ಈ ಆಕಾಶಾಧಿಕರಣದಲ್ಲಿ; ಅತ ಏವ = ಮಹಾಯೋಗ ಇರುವುದರಿಂದಲೇ;

**ಪ್ರಕಾಶಃ** – ನ್ಯಾಯಭೇದಮನ್ತರೇಣ ಪೂರ್ವಪಕ್ಷೇ ಪ್ರಕಾರಭೇದಮಾತ್ರೇಣಾಧಿಕರಣಭೇದೇऽತಿಪ್ರಸಙ್ಗಾಚೇತಿ ಭಾವೇನ ನ್ಯಾಯಭೇದಮಾಹ – **ಆಕಾಶೋऽರ್ಥಾನ್ತರತ್ವಾದೀತಿ ॥ ವಿಷ್ಣುಪರತಾಂ ಚೇತಿ ॥** ಅನ್ಯಥೋಭಯತ್ರ ಪ್ರಸಿದ್ಧತಾ ನ ಸ್ಯಾದಿತಿ ಭಾವಃ ॥ **ನಿಪಾತೇತಿ ॥** ಅತ್ರ ತು ಶ್ರುತಿಬಲಾದಿತಿ ಭಾವಃ ॥ **ತನ್ನಿರಾಸ ಇತಿ ॥** ಏತಚ್ಚ ತತ್ರೈವ ಸ್ಪಷ್ಟೀಕರಿಷ್ಯತ ಇತಿ ಭಾವಃ ।

ನನು ನ್ಯಾಯಭೇದोऽಸಿದ್ಧಃ, ಅತ್ರಾಪಿ ತತ್ರೈವ ನಿಪಾತಸ್ಯ ಸತ್ತ್ವಾದಿತ್ಯಾಶಙ್ಕ್ಯ ನಿರಾಹ – **ನಚೇತಿ ॥ ಭೂತೇಷ್ವಿತಿ ॥** ಯಾನಿ ಪ್ರಸಿದ್ಧಾನಿ ಭೂತಾನೀತ್ಯರ್ಥೋಪಪತ್ತೇರಿತ್ಯರ್ಥಃ । ತತ್ರ ಚಾಕಾಶಸ್ಯೈವ ''ಆಕಾಶೋ ವೈ ನಾಮ'' ಇತಿ ಸನ್ನಿಧಾನಮಿತಿ ಭಾವಃ ।

ನನ್ವೇವಮಪಿ ಚತುರ್ಥಪಾದೀಯಾಧಿಕರಣೇ ವಿಷಯವಾಕ್ಯೇ ನಿಪಾತಸ್ಯಾಭಾವೇನ ವಿಷಯಾದಿಭೇದ-ಮಾತ್ರಸ್ಯಾಧಿಕರಣಾನ್ತರಾರಮ್ಭಾನಾಪಾದಕತ್ವೇನ ಚ ತತ್ರಾಪ್ಯಾಕಾಶಶಬ್ದಸ್ಯ ಭಗವತ್ಪರತ್ವೋಕ್ತೇಸ್ತೇನ ಪೌನರುಕ್ತ್ಯಮ್ ಇತ್ಯತ ಆಹ – **ಕಾರಣತ್ವೇನ ಚೇತಿ ॥ ಉಭಯಮಿತಿ ॥** ಪ್ರವೃತ್ತಿನಿಮಿತ್ತಸ್ಯ ಭಗವದಧೀನತ್ವಮ್, ''ಇತಿ ಹೋವಾಚ'' ಇತ್ಯಾದೌ ಆಕಾಶಶಬ್ದಸ್ಯ ವಿಷ್ಣುಪರತ್ವಂ ಚೇತ್ಯುಭಯ-ಮಿತ್ಯರ್ಥಃ ॥ **ತನ್ನಿರಾಸ ಇತಿ ॥** 'ಪರಮಮುಖ್ಯವೃತ್ತ್ಯಾ' ಇತಿ ಶೇಷಃ। ಅಪರಮುಖ್ಯವೃತ್ತ್ಯಾ

ಭೂತಪರತ್ವಸ್ಯಾಙ್ಗೀಕಾರಾದಿತ್ಯರ್ಥಃ । ವಕ್ಷ್ಯಮಾಣಾನಾಂ ಪ್ರಮೇಯಮುಕ್ತ್ವಾ, ತದ್ವೈಲಕ್ಷಣ್ಯಜ್ಞಾಪನಾಯೈ-ತತ್ಪ್ರತಿಪಾದ್ಯಮಾಹ – ಇಹ ತ್ವಿತಿ ॥ ತತಃ ಕಿಂ ಸಿದ್ಧಮ್? ಇತ್ಯತ ಆಹ – ತತಶ್ಚೇತಿ ॥

ನನ್ವೇವಮಪಿ ದ್ವಿತೀಯಾಧ್ಯಾಯತೃತೀಯಪಾದಾದ್ಯಧಿಕರಣೇ ಆಕಾಶಸ್ಯ ಭಗವದಧೀನತೋಕ್ತೇ-ಸ್ತತ್ಸಿದ್ಧಿರಿತ್ಯತ ಆಹ – ನ ಚಿಯದಿತಿ ॥ ತೈರಿತಿ ॥ ''ತದಧೀನತ್ವಾತ್'' ಇತ್ಯಾದಿಭಿ-ರಿತ್ಯರ್ಥಃ ।

ನನು ತಥಾऽಪ್ಯನ್ತರ್ಯಾಮ್ಯಧಿಕರಣೇ ''ಯ ಆಕಾಶೇ ತಿಷ್ಠನ್'' ಇತ್ಯುಪಕ್ರಮ್ಯ ''ಯ ಆಕಾಶಮನ್ತರೋ ಯಮಯತ್ಯೇಷ ತ ಆತ್ಮಾನ್ತರ್ಯಾಮ್ಯಮೃತಃ'' ಇತ್ಯಾಕಾಶಾನ್ತರ್ಯಾಮಿತ್ವಮುಚ್ಯತೇ । ಅತಸ್ತದಧೀನತ್ವಂ ತತ್ರ ಸಿದ್ಧಮ್ । ಉಕ್ತಂ ಚಾನುವ್ಯಾಖ್ಯಾನೇ –

**ಸ್ವಾತ್ಮನಾऽನಿಯತಂ ವಸ್ತು ಪ್ರತೀಪಂ ಹ್ಯಾತ್ಮನೋ ಭವೇತ್ ।**
**ಸ್ವಾಧೀನಸತ್ತಾಶಕ್ತ್ಯಾದಿ ಕಥಮಾತ್ಮಪ್ರತೀಪಕಮ್ ॥**

ಇತಿ – ಇತಿ ಚೇನ್ನ,

ಸತ್ತಾದೇರೇವ ತದಧೀನತ್ವಾತ್ತ್ಯಾ ಸ್ವಭಾವಸ್ಯ ತದನುಕ್ತೇಃ, ಆಕಾಶಾದೇರ್ದೇವತಾತ್ವೇನ ಜಡತ್ವಾ-ಭಾವಾಚ್ಚ, ಆಕಾಶಶಬ್ದಸಮನ್ವಯಾನುಕ್ತೇಶ್ಚೇತಿ ಭಾವಃ । ಸಮನ್ವಯಸೂತ್ರಾತ್ 'ತತ್ತು' ಇತ್ಯನುವೃತ್ತೇಃ 'ಆಕಾಶೋ ವಿಷ್ಣುರೇವ' ಇತಿ ಭಾಷ್ಯಪ್ರದರ್ಶಿತಸೌತ್ರಪ್ರತಿಜ್ಞಾಭಾಗಸ್ಥಾವಧಾರಣೇನ ವಿಷ್ಣೌ ಮಹಾಯೋಗವಿದ್ಬದ್ಧೂಢ್ಯೋಸ್ಸೂಚನಾಚ್ಚಬ್ದಪ್ರವೃತ್ತಿನಿಮಿತ್ತಸ್ಯ ಸ್ವಾತನ್ತ್ರ್ಯತದ್ಗತತ್ವಾಭ್ಯಾಂ ಮಹಾಯೋಗಂ ವಿದ್ಬದ್ಧೂಢಿಂ ಚ ವಕ್ತುಂ ''ಆಕಾಶಸ್ಯ ಭಗವದಧೀನತ್ವೇನ ತತ್ರೈವ ಮುಖ್ಯತ್ವಾತ್, ಮಹಾ-ಯೋಗವಿದ್ಬದ್ಧೂಢ್ಯೋರ್ಭಾವಾಚ್ಚ'' ಇತ್ಯಾದಿಟೀಕಾಂ ವಿವೃಣ್ವಾನೋऽಚೇತನಗತಂ ಪ್ರತಿ ಸ್ವಾತನ್ತ್ರ್ಯಂ ತಾವದಾಹ – ಚಿದ್ಗತಸ್ಯೇತ್ಯಾದಿನಾ ॥ ಯದಾ ಪೂರ್ವತ್ರೇನ್ದ್ರಾದಿಚೇತನಸ್ಥೈಶ್ವರ್ಯಾದೇರಿಶಾಧೀನತೋಕ್ತಾ, ತದಾ ಕೈಮುತ್ಯನ್ಯಾಯೇನ ಅಚೇತನಸ್ಥಸ್ಯ ಛಿದ್ರತ್ವಾದೇರಿಶಾಧೀನತಾ ಸಿದ್ಧ್ಯತಿ, ತಸ್ಯ ಚೇತನಾದಪಿ ಪರಾಧೀನತಾಯಾ ದರ್ಶನಾದಿತ್ಯರ್ಥಃ । ಏತೇನ 'ಅನಧೀನತ್ವೇऽಚೇತನಗತತ್ವಮಪ್ರಯೋಜಕಮ್' ಇತಿ ದರ್ಶಿತಮ್ ।

ಯದಪ್ಯುಕ್ತಂ ಜಯಿಶಬ್ದವಜ್ಜಡವಾಚಿಶಬ್ದಸ್ಯ ಸ್ವತನ್ತ್ರೇ ಪ್ರಯೋಗಾದೃಷ್ಟೇರಿತಿ, ತದಪ್ಯ-ಸಿದ್ಧಮಿತ್ಯಾಹ – ಅಸ್ತಿ ಚೇತಿ ॥ ''ಚಿದ್ಗತಸ್ಯ'' ಇತ್ಯಾದ್ಯತ್ರತ್ಯನ್ಯಾಯೇನ ತುಲ್ಯನ್ಯಾಯ-ತಯಾऽಭಿಮಾನ್ಯಧೀನತ್ವೇ ಸಿದ್ಧೇ, ''ತದಧೀನತ್ವಾತ್'' ಇತಿ ನ್ಯಾಯೇನಾಭಿಮಾನಿನಿ ಮೃದಾದಿ-ಶಬ್ದಪ್ರಯೋಗಂ ಸಿದ್ಧಂ ಕೃತ್ವಾऽಭಿಮಾನ್ಯಧಿಕರಣೇ ಮೃದಾದಿಶಬ್ದೇನಾಭಿಮಾನಿದೇವತೋಚ್ಯತ ಇತಿ

सूत्रकृता वक्ष्यमाणत्वादिति भावः । ''तस्योत्पत्तिमतोऽवकाशत्वसहितस्यैव परायत्तोत्पत्त्या तदुपपत्तेः'' इति न्यायविवरणटीकां ''धर्मिण एवाकाशादेरुत्पत्ति-विनाशवतो जन्मस्थितिलयेष्वीश्वराधीनत्वे धर्मस्याऽपि तथाभावोऽवर्जनीयः'' इति गायत्र्यधिकरणसुधां च हृदि कृत्वा, स्वभावं प्रत्यपि स्वातन्त्र्यमाह – अस्तु खमिति ॥ 'हि' यतोऽत इति पूर्वेणान्वयः । 'जनिमतः स्वभावो जनकायत्तः' इत्येतल्लोकसिद्धम् इत्याह – लोकेऽपि हीति ॥ 'हि' यस्मात् 'न सिध्यत्यतः पुन्तन्त्रं' इति पूर्वेणान्वयः ।

ननु घटे कुलालानधीनविशेषवदीशानधीनं छिद्रत्वमस्त्विति प्रश्नोत्तरमाह – किन्त्विति ॥ एतेन स्वभावत्वमप्यनधीनत्वेऽप्रयोजकमित्युक्तम् । ''तादृशत्वाच्च तच्छक्तेः'' इति गायत्रीनयानुव्याख्यानं हृदि कृत्वा, यथेष्टविनियोगार्हत्वरूपं च तदधीनत्वमाह – किञ्चेति ॥ 'अताम्रताम्' स्वर्णादिरूपताम् । 'अच्छिद्रताकृतेः' निबिडीकरणस्य । ''अधीगर्थदयेशां कर्मणि'' इति षष्ठी । अन्यथेश्वरत्व-व्याघातादिति भावः ॥

स्यन्दन्त इति ॥ अनेन ''एतस्य वा अक्षरस्य प्रशासने गार्गि प्राच्यो नद्यः स्यन्दन्ते'' ''भीषाऽस्माद् वातः पवते''

**नभो ददाति श्वसतां मार्गं यन्नियमाददः ।**
**द्रव्यं कर्म च कालश्च स्वभावो जीव एव च ॥** इत्यादिका इत्यर्थः ।

एतेन यदप्यचेतनगतत्वेन प्रसादनायत्तत्वात् स्वभावत्वेनानागन्तुकत्वात् नेशाधीनं विवरत्वम्' इति परम्परया हेतुत्वमिति मतं, तदपि निरस्तम् । तथाविधस्याप्यधीनतायाः श्रुत्यादिसिद्धत्वात् । यथेष्टविनियोगयोग्यत्वरूपाधीनत्व-सम्भवाच्च ।

एतेन ''आकाशस्य भगवदधीनत्वात्'' इति टीका त्रेधा व्याख्याता । 'आकाशस्य' आकाशपदप्रवृत्तिनिमित्तस्येत्यर्थः। एवं विवरत्वादिकमीशाधीनमिति समर्थ्य, 'विवरत्वादिकं नेशगतमचेतनगतत्वात्' इति यत्तृतीयं मतं, तदपि निराकुर्वन्नेवं सति लब्धार्थमाह – एवञ्चेति ॥ 'न केवलं' इत्यादिनाऽन्वयः ।

ननु रूढ्या पद्मत्वादिहेतुकस्य पङ्कजादिशब्दस्येवाकाशशब्दस्याकाशे रूढत्वात् तन्निमित्तस्य शब्दसमवायित्वादेरन्यत्र रूढस्य कथं विष्णौ निरवधिकत्वम्? इत्यतः ''भवेतां यदि वृक्षस्य'' इत्युक्तन्यायेन भूतेऽपि यौगिक एवायं शब्द इति सदृष्टान्तमाह – **यथेति** ॥

नवमे द्वितीयपादे ''पार्वणहोमयोस्त्वप्रवृत्तिः समुदायार्थसंयोगात्तदभीज्या हि'' इति पञ्चविंशेऽधिकरणे दर्शपूर्णमासयोः श्रुतं ''स्रुवेण पार्वणौ जुहोति'' इति वाक्यमुदाहृत्य, तद्धितश्रुत्या पर्वदैवत्यौ होमौ विकृतिष्वतिदिश्येते न वेति सन्दिह्य, पर्वशब्दस्य काले मुख्यत्वात्तस्य चासंस्कार्यत्वेनासन्निपातित्वादादादुपकारकाविमौ विकृतिष्वतिदिश्येते इति प्रापय्य, पृणातेर्दानार्थधातोः पर्वशब्दो निष्पन्नः । स च 'प्रियते दीयतेऽस्मिन्' इत्यधिकरणव्युत्पत्त्या काले मुख्यः । भावव्युत्पत्त्या तु कर्मण्यपि । तत्र प्रकरणात् सामवायिकत्वलाभाच्च कर्मवाचित्वमङ्गीकृत्य तत्संस्काराथौं होमावित्युपेयम्, तेषां च कर्मणां तन्त्रेणोक्तानामग्नीषोमयोरिव व्यासक्तं देवतात्वमिति समुदायस्य देवतात्वात्तस्य च विकृतिष्वनतिदेशादविकारत्वाच्च सौर्यादेर्न तत्र होमयोरतिदेश इति सिद्धान्तितम्।

अत्र पर्वशब्दस्य पूर्वोत्तरपक्षयोर्मुख्यत्वाविशेषप्रदर्शनार्थं पृणातेरधिकरणव्युत्पत्त्या यौगिकत्वमङ्गीकृतं, तथेहापि भूतेऽपि योग एव, न तु रूढिः, लाघवादित्यर्थः ।

एतेन पूर्वपक्षिणा योगो न युक्त इति यदुक्तं तन्निरस्तं भवति ॥ **तस्येति** ॥ विवरत्वस्य । एवं योगान्महायोगस्य बलवत्त्वान्नात्र तद्ग्रहणम् ।

नन्वेवं प्रवृत्तिहेतोरीशगतत्वेनैव महायोगोपपत्तौ तस्य पूर्वपक्षे भूतस्वभावत्वोक्तिः, सिद्धान्ते यत्नेनेशाधीनतोक्तिश्च व्यर्था, इत्यत आह – **एवञ्चेति** ॥ **कृत्वेति** ॥ विवरत्वादिकमीशे नास्तीति कृत्वा चिन्तयेत्यर्थः ॥

**यथेति** ॥ तृतीये द्वितीयपादे एकादशाद्यधिकरणेषु चिन्तितम् । भक्षानुवाके श्रुतः ''इन्द्रपीतस्य नराशंसपीतस्य पितृपीतस्य मधुमत उपहूतस्योपहूतो भक्षयामि'' इति मन्त्रः किमनैन्द्रप्रदानशेषभक्षणे न प्रयोज्य उत तेष्वप्यूहेन

प्रयोज्यः, यद्वा सर्वत्र यथासमाम्नात एव प्रयोक्तव्य इति संशये, इन्द्रेण पीतो यस्मिन्निति बहुव्रीहेर्द्वयोः पदयोरन्यपरत्वेन दुर्बलत्वात् सवनविशेषणत्वा-योगादिन्द्रेण पीत इति तत्पुरुषस्योत्तरपदे स्वार्थलाभेनाभ्यर्हिततया सोम-विशेषणत्वात्, तस्यानैन्द्रेष्वसामर्थ्यात् समानकर्मणि प्रकृतिविकारा-सम्भवेनोहाभावादमन्त्रकं भक्षणमित्येकं पक्षमुक्त्वा, सत्यपि कर्मैक्ये प्रदानानां भिन्नतया प्रकृतिविकृतिभावसम्भवात् ''इन्द्राय त्वा वसुमते सोमं गृह्णामि'' इति मानग्रहणमन्त्रवशात् सोमस्याभिषवादेश्चैन्द्रप्रदानधर्मत्वादधर्मकाणां अनैन्द्रप्रदानानां तद्विकृतित्वात्तत्र चोदकप्राप्तस्यान्यमन्त्रस्योहेन प्रयोग इति द्वितीयं पक्षमुक्त्वा, अधिकरणमसमाप्य कृत्वाचिन्तारूपेण षड्भिरधिकरणैरूहविषयं विचार्य, मानग्रहणमन्त्रयोर्लिङ्गादैन्द्रप्रदानविषयत्वेऽप्युत्पत्तिवाक्ये श्रुतस्य सोमस्य सर्वाभ्यासससाधारण्यात् समानविधानतया प्रकृतिविकृतिभावाभावान्नास्त्यूह इति द्वितीयं पक्षं निरस्य, प्रथमपक्षावलम्बेन पुनः कृत्वाचिन्तारूपेण अधिकरण-द्वयमुपन्यस्य तत्पुरुषाश्रयणे च वसुमद्ग्रणस्य 'सोमदेवत' इत्यादि सम्बुध्यन्तेन सोमशब्देन 'ते' इति प्रत्यक्षविषयेण युष्मच्छब्देन निर्दिष्टस्य शिष्टस्य सोमावयवस्य विशेषणं स्यात्। तथा च हुताहुतसमुदायविषये इन्द्रपीतशब्दे लक्षणा स्यात्। अतो बहुव्रीह्याश्रयणेन सवनविशेषणत्वात्, अनैन्द्रेष्वपि यथाम्नातमन्त्रकं भक्षणमिति सिद्धान्त इति।

इत्थं हि कृत्वाचिन्ताधिकरणं – सवनमुखीमयेषु चमसेषु ऐन्द्रेषु सर्वेषु हुतेषु ये होतृकशब्दितानां मैत्रावरुणब्राह्मणाच्छंसिपोत्रादीनां चमसाः। तेष्वभक्षितेषु सशेषेष्वेव पुनः सोममभ्युन्नीय देवतान्तरेभ्यो मित्रावरुणादिभ्यो हुत्वा भक्ष्यते। तत्र किं पूर्वप्रकृतप्रधानदेवतेन्द्रोऽप्युपलक्षणीयः इन्द्रमित्रावरुणपीतस्येति, किं वा नेति विशये, उन्नयनकाले देवतानिर्देशाभावात्प्रदानकाल एव तन्निर्देशात्, पूर्वशेषस्याप्युन्नीतस्य च चमसस्थत्वेन देवतान्तरसम्बन्धात्पूर्वदेवता अपेत-सम्बन्धत्वान्नोपलक्षणीयेति प्राप्ते, यद्यप्युन्नयनकाले न देवतासङ्कल्पस्तथाऽपि उन्नयनं तावत्करिष्यमाणयागार्थम् इत्यसन्दिग्धम्। यश्च करिष्यमाणयागार्थस्तस्यैव तदीयदेवतासम्बन्धो नान्यस्य। तस्मात् 'पूर्वशेषस्य स्वदेवतासम्बन्धानपायात् साऽप्युपलक्षणीया' इति सिद्धान्तः, इति।

तत्र बहुव्रीह्याश्रयणेन सवनविशेषणत्वान्मित्रावरुणप्रदानशेषभक्षणे मन्त्रस्य वस्तुत ऊहाभावेऽपि ऊहमुपेत्य प्रवृत्तान्यनेकान्यधिकरणानि यथा युक्तानि तथेत्यर्थः । एवं प्रसिद्धं विवरत्वादिकं प्रवृत्तिनिमित्तमीशगतं समर्थ्य, क्लृप्तो योगः समर्थितः । कल्प्योऽपि योगोऽन्यत्रोक्तोऽनुसन्धेयः । भूते रूढिरूपबाधकस्य त्याजितत्वादिति भावेन तस्यात्रानुक्तौ हेतुमाह – **आ समन्तादिति** ॥ 'कं' सुख-मित्यर्थः ॥ **अन्यत्रेति** ॥ छान्दोग्यभाष्ये अष्टमाध्यायाद्यखण्डे ''आसमन्तात् काशनादाकाशः आसमन्तात्कमश्नातीति वा'' इत्युक्तत्वादित्यर्थः ।

हेत्वन्तरमाह – **पूर्वपक्षीति** ॥ **रूढार्थेति** ॥ प्रसिद्धप्रवृत्तिनिमित्तमुखेनेत्यर्थः । सञ्चायरत्नावल्यां तदुक्तिस्तु सोऽप्यस्तीति दर्शयितुमिति भावः ॥ **अत एवेति** ॥ प्रसिद्धप्रवृत्तिनिमित्तेन प्रवृत्तेर्भगवति साधितत्वादित्यर्थः ।

**विद्वद्रूढिर्वैदिका स्यात् सा योगादेव लभ्यते ।**

इत्युक्तेरिति भावः ॥ **वैदिकेति** ॥ ''यावान्वा अयमाकाशः'' ''आकाशो वै नाम'' ''योऽयं बहिर्वा पुरुषादाकाशः'' इत्यादाविति भावः ।

एतेन 'आकाशे रूढस्य कथं योगमात्रेणापहारः, दुर्बलत्वात्' इति निरस्तम् । महायोगस्य तन्निमित्तस्यप्राज्ञप्रयोगबाहुल्यरूपरूढेश्चोक्तत्वात् ।

**प्रयोगहेतोर्बाहुल्यं ज्ञेयं परममुख्यता ।**
**तत्र प्रयोगबाहुल्यं ज्ञेयं तत्परता किमु ॥**

इत्युक्तमहायोगरूढिलक्षणसत्त्वादिति भावः । एतेन ''महायोगविद्वद्रूढ्यो-र्भावाच्च'' इति टीका विवृता ।

ವಿವರಣೆ ಶಂಕೆ - 'तदधीनत्व'ಸೂತ್ರದಿಂದ ಗತಾರ್ಥತ್ವವು ಬಾರದಿರಬಹುದು. ಆದರೆ ಮೂರನೆಯ ಪಾದದಲ್ಲಿರುವ 'आकाशोऽर्थान्तरत्वात्' ಎಂಬುದರಿಂದ ಪುನರುಕ್ತಿ ಬರುತ್ತದೆ. ಈ ಅಧಿಕರಣದಂತೆ ಅಲ್ಲಿಯೂ ಸಹ ಭಗವಂತನು ಆಕಾಶಶಬ್ದದಿಂದ ಪ್ರತಿಪಾದ್ಯನೆಂದು ಹೇಳಲಾಗಿದೆ. ಅಲ್ಲಿ ಆ ಅಧಿಕರಣದಲ್ಲಿ 'आकाशो वै नाम नामरूपयोः' ಎಂಬ ಬೇರೆ ಶ್ರುತಿವಾಕ್ಯವು ವಿಷಯವಾದ್ದರಿಂದ ಪುನರುಕ್ತಿ ಬರುವುದಿಲ್ಲವೆಂದು ಉತ್ತರಿಸಬಾರದು. ಹಾಗೆ ವಿಷಯವಾಕ್ಯಭೇದದಿಂದ ಅಧಿಕರಣಭೇದವನ್ನು ಹೇಳಿದರೆ ಶಾಸ್ತ್ರವು ಪರ್ಯವಸಾನವಾಗದಿರಬೇಕಾದೀತು. ಇನ್ನು ಮೂರನೇ

ಪಾದದ ಅಧಿಕರಣದಲ್ಲಿ ಅವ್ಯಾಕೃತಾಕಾಶವನ್ನು ಪೂರ್ವಪಕ್ಷ ಮಾಡಿದ್ದಾರೆ. ಈ ಅಧಿಕರಣದಲ್ಲಿ ಭೂತಾಕಾಶವನ್ನು ಪೂರ್ವಪಕ್ಷ ಮಾಡಿದ್ದಾರೆ. ಹಾಗಾಗಿ ಅಧಿಕರಣಭೇದವು ವ್ಯರ್ಥವಲ್ಲವೆಂದು ಹೇಳಬಾರದು. ನಿರವಕಾಶಲಿಂಗದಿಂದ ಅನ್ಯತ್ರಪ್ರಸಿದ್ಧವಾದ ಶ್ರುತಿಯು ಬಾಧಿತವಾಗುತ್ತದೆಂಬುದು ಎರಡೂ ಅಧಿಕರಣಗಳಲ್ಲಿ ಸಮಾನವಾಗಿದೆ. ಸಿದ್ಧಾಂತನ್ಯಾಯಗಳಲ್ಲಿ ಸೇರದಿದ್ದರೆ ಮಾತ್ರ ಅಧಿಕರಣಭೇದವನ್ನು ಹೇಳಬೇಕು. ಒಂದುವೇಳೆ ಸಿದ್ಧಾಂತನ್ಯಾಯದಲ್ಲಿ ಭೇದವಿಲ್ಲದೆ ಪೂರ್ವಪಕ್ಷದ ಪ್ರಕಾರದಲ್ಲಷ್ಟೇ ಭೇದವೊಪ್ಪಿ ಅಧಿಕರಣಭೇದವನ್ನು ಹೇಳುವುದಾದರೆ ಅತಿಪ್ರಸಂಗವು ಬಂದೇ ಬರುತ್ತದೆ. ಆದ್ದರಿಂದ ಪುನರುಕ್ತಿಯನ್ನು ಹೇಗೆ ಪರಿಹರಿಸುತ್ತೀರಿ?

ಸಮಾಧಾನ - ಈ ಶಂಕೆಯನ್ನು ಪರಿಹರಿಸುವುದಕ್ಕಾಗಿ ಗ್ರಂಥಕಾರರು 'ಆಕಾಶೋऽರ್ಥಾಂತರ-ತ್ವಾತ್' ಇತ್ಯಾದಿಯಾಗಿ ಹೇಳುತ್ತಿದ್ದಾರೆ. ಆಕಾಶಾಧಿಕರಣದಲ್ಲಿ ಸಿದ್ಧವಾದ ಪ್ರಮೇಯವನ್ನು ಅಂಗೀಕರಿಸಿ ಛಾಂದೋಗ್ಯದಲ್ಲಿರುವ 'ಆಕಾಶೋ ವೈ' ಎಂಬ ವಾಕ್ಯದಲ್ಲಷ್ಟೇ ಮೂರನೆ ಪಾದದಲ್ಲಿ ವಿಚಾರ ಮಾಡಿದ್ದಾರೆ. 'ವೈ ನಾಮ'ವೆಂಬ ಪ್ರಸಿದ್ಧಿದ್ಯೋತಕವಾದ ಪೂರ್ವಪಕ್ಷನ್ಯಾಯವು ಬಲಿಷ್ಠವಾದ್ದರಿಂದ 'ಆಕಾಶೋऽರ್ಥಾಂತರತ್ವಾತ್' ಎಂಬ ಅಧಿಕರಣದ ಪ್ರಾರಂಭವು ಅನಿವಾರ್ಯವಾಗಿದೆ. ಆಕಾಶಾಧಿ-ಕರಣದಲ್ಲಿ ಶ್ರುತಿಯ ಬಲದಿಂದ ಭೂತಾಕಾಶವೆಂದು ಶಂಕಿಸಿದ್ದಾರೆ, 'ಆಕಾಶೋऽರ್ಥಾಂತರತ್ವಾತ್' ಎಂಬಲ್ಲಿ ನಿಪಾತದ ಬಲದಿಂದ ಅನ್ಯತ್ರಪ್ರಸಿದ್ಧಿಯನ್ನು ಶಂಕಿಸಿದ್ದಾರೆ. ಈ ಸೂಕ್ಷ್ಮವನ್ನು ಗಮನಿಸಬೇಕು. ಹೆಚ್ಚಿನ ವಿಚಾರವನ್ನು ಆ ಅಧಿಕರಣದಲ್ಲಿಯೇ ಸ್ಪಷ್ಟ ಪಡಿಸುತ್ತಾರೆ.

ಶಂಕೆ - ಗ್ರಂಥಕಾರರು ಹೇಳಿದ ನ್ಯಾಯಭೇದವೇ ಅಸಿದ್ಧವಾಗಿದೆ. ಏಕೆಂದರೆ ಈ ಅಧಿಕರಣದಲ್ಲಿಯೂ ಸಹ ತೃತೀಯಪಾದದ ಆಕಾಶಾಧಿಕರಣದಂತೆ ನಿಪಾತವು ಕೇಳಿಸುತ್ತಿದೆ. ಆದ್ದರಿಂದ ನಿಪಾತದ ಬಲದಿಂದ ಅಧಿಕರಣಭೇದವನ್ನು ಹೇಗೆ ಸಮರ್ಥಿಸುತ್ತೀರಿ?

ಸಮಾಧಾನ - ಈ ಶಂಕೆಗೆ 'ನಚ' ಎಂಬ ವಾಕ್ಯದಿಂದ ಉತ್ತರಿಸುತ್ತಿದ್ದಾರೆ. ಇಲ್ಲಿರುವ ನಿಪಾತವು ಭೂತಶಬ್ದದ ಜೊತೆಗೆ ಇರುತ್ತದೆ. ತೃತೀಯಪಾದದ ಆಕಾಶಾಧಿಕರಣದಲ್ಲಿರುವ ನಿಪಾತವು ಆಕಾಶಶಬ್ದದ ಜೊತೆಗೆ ಇರುತ್ತದೆ. ಹಾಗಾಗಿ ಇಲ್ಲಿರುವ ನಿಪಾತವು ಭೂತಪ್ರಸಿದ್ಧಿಯನ್ನಷ್ಟೇ ಹೇಳುತ್ತದೆ. ಅಲ್ಲಿರುವ ನಿಪಾತವು ಭೂತಾಕಾಶಪ್ರಸಿದ್ಧಿಯನ್ನು ಹೇಳುತ್ತದೆ. ಈ ವ್ಯತ್ಯಾಸವನ್ನು ಗಮನಿಸಿ ಗ್ರಂಥಕಾರರು ನ್ಯಾಯಭೇದವನ್ನು ಹೇಳಿದ್ದಾರೆ.

ಶಂಕೆ - ಹಾಗಾದರೆ ನಾಲ್ಕನೇ ಪಾದದಲ್ಲಿರುವ ಆಕಾಶಾಧಿಕರಣದಿಂದ ಪುನರುಕ್ತಿ ಬರುತ್ತದೆ. ಏಕೆಂದರೆ ಆ ಅಧಿಕರಣದಲ್ಲಿ ಉಲ್ಲೇಖಿಸುವ ವಿಷಯವಾಕ್ಯದಲ್ಲಿ ನಿಪಾತವು ಇರುವುದಿಲ್ಲ. ಕೇವಲ ವಿಷಯವಾಕ್ಯದ ಭೇದದಿಂದಷ್ಟೇ ಪ್ರಥಮಪಾದದ ಆಕಾಶಾಧಿಕರಣಕ್ಕೂ ಮತ್ತು ಚತುರ್ಥಪಾದದ ಆಕಾಶಾಧಿಕರಣಕ್ಕೂ ವೈಲಕ್ಷಣ್ಯವನ್ನು ಹೇಳುವುದಾದರೆ ಶಾಸ್ತ್ರಾನಂತ್ಯದೋಷವು ತಪ್ಪಿದ್ದಲ್ಲ. ಹಾಗಾಗಿ ಈ ಅಧಿಕರಣದಲ್ಲಿ ಹೇಗೆ ಆಕಾಶಶಬ್ದವನ್ನು ಭಗವತ್ಪರವೆಂದು ಸಮರ್ಥಿಸುತ್ತಿದ್ದಾರೋ, ಅದರಂತೆ ಚತುರ್ಥಪಾದದ ಆಕಾಶಾಧಿ-ಕರಣದಲ್ಲಿಯೂ ಸಹ ಆಕಾಶಶಬ್ದವನ್ನು ಭಗವತ್ಪರವೆಂದು ಸಮರ್ಥಿಸುವುದರಿಂದ ಪುನರುಕ್ತಿದೋಷವು ಬರುತ್ತದೆ.

ಸಮಾಧಾನ - ಈ ಶಂಕೆಗೆ 'ಕಾರಣತ್ವೇನ ಚ' ಇತ್ಯಾದಿ ಗ್ರಂಥದಿಂದ ಉತ್ತರಿಸುತ್ತಿದ್ದಾರೆ. ಚತುರ್ಥಪಾದದ ಆಕಾಶಾಧಿಕರಣದಲ್ಲಿ ಪ್ರವೃತ್ತಿನಿಮಿತ್ತವು ಭಗವದಧೀನವೆಂದು ಅಂಗೀಕರಿಸಿದ್ದಾರೆ. ಮತ್ತು 'ಆಕಾಶ ಇತಿ ಹೋವಾಚ' ಎಂಬಲ್ಲಿರುವ ಆಕಾಶಶಬ್ದವು ವಿಷ್ಣುಪರವೆಂದು ಕೂಡ ಅಂಗೀಕರಿಸಿದ್ದಾರೆ. ಹೀಗೆ ಆಕಾಶಾಧಿಕರಣದ ಸಿದ್ಧಾಂತಪ್ರಮೇಯವನ್ನು ಅಂಗೀಕರಿಸಿ 'ಆತ್ಮನಃ ಆಕಾಶಃ ಸಂಭೂತಃ' ಎಂಬಲ್ಲಷ್ಟೇ ಇರುವ ಆಕಾಶಪದವು ಭೂತಾಕಾಶಪರವಾಗುತ್ತದೆಂದು ಆಶಂಕಿಸಿದ್ದಾರೆ. ಈ ಶಂಕೆಗೆ ಪರಮಮುಖ್ಯವೃತ್ತಿಯಿಂದ ಭಗವಂತನೇ ಆಕಾಶಃ ಸಂಭೂತಃ ಎಂಬಲ್ಲಿರುವ ಆಕಾಶಶಬ್ದದಿಂದಲೂ ಪ್ರತಿಪಾದ್ಯನಾಗುತ್ತಾನೆ. ಅಪರಮಮುಖ್ಯವೃತ್ತಿಯಿಂದ ಭೂತಾಕಾಶವು ಪ್ರತಿಪಾದ್ಯವಾಗುತ್ತದೆಂದು ಅಲ್ಲಿ ಸಿದ್ಧಾಂತ ಮಾಡಿದ್ದಾರೆ. ಚತುರ್ಥಪಾದದ ಆಕಾಶಾಧಿಕರಣದ ಪ್ರಮೇಯಕ್ಕಿಂತ ವಿಲಕ್ಷಣವಾದ ಪ್ರಮೇಯವನ್ನು ಈ ಅಧಿಕರಣದಲ್ಲಿ ಹೇಳಿದ್ದಾರೆಂದು 'ಇಹ ತು' ಇತ್ಯಾದಿ ಗ್ರಂಥವು ವಿವರಿಸುತ್ತಿದೆ. ಈ ಆಕಾಶಾಧಿಕರಣದಲ್ಲಿ 'ಆಕಾಶಶಬ್ದವು ಮುಖ್ಯವೃತ್ತಿಯಿಂದ ಭಗವಂತನನ್ನೇ ಹೇಳುತ್ತದೆ, ಆಕಾಶಶಬ್ದದ ಪ್ರವೃತ್ತಿನಿಮಿತ್ತವೂ ಸಹ ಭಗವದಧೀನವಾಗಿದೆ' ಎಂದು ಸಮರ್ಥಿಸಿದ್ದಾರೆ. ಈ ಅಧಿಕರಣವನ್ನು ಉಪಜೀವಿಸಿಕೊಂಡು ಚತುರ್ಥಪಾದದ ಆಕಾಶಾಧಿಕರಣವು ಹೊರಟಿದೆ. ಹೀಗಿರುವಾಗ ಪುನರುಕ್ತಿಯನ್ನು ಹೇಗೆ ಶಂಕಿಸುತ್ತೀರಿ? ಎಂದು ತತಶ್ಚ ಎಂಬ ಗ್ರಂಥವು ಪ್ರತಿಪಾದಿಸಿದೆ.

ಶಂಕೆ - ಇದುವರೆಗೂ ನಿರೂಪಿಸಿದಂತೆ ತೃತೀಯಪಾದದ ಆಕಾಶಾಧಿಕರಣದಿಂದಾಗಲೀ, ಚತುರ್ಥಪಾದದ ಆಕಾಶಾಧಿಕರಣದಿಂದಾಗಲೀ ಪ್ರಥಮಪಾದದ ಆಕಾಶಾಧಿಕರಣಕ್ಕೆ ಪುನರುಕ್ತಿ ಬರುವುದಿಲ್ಲವೆಂದು ಒಪ್ಪಿಕೊಳ್ಳೋಣ. ಆದರೆ ಎರಡನೇ ಅಧ್ಯಾಯದಲ್ಲಿರುವ 'ನ ವಿಯದಶ್ರುತೇಃ' ಎಂಬ ಮೂರನೆಯ ಪಾದದಲ್ಲಿ ಬರುವ ವಿಯದಧಿಕರಣದಿಂದ ಪುನರುಕ್ತಿ ಬರುತ್ತಲ್ಲ. ಏಕೆಂದರೆ ಆಕಾಶಾದಿಪದಾರ್ಥಗಳಿಗೆ ಭಗವದಧೀನತ್ವವನ್ನು ವಿಯದಧಿಕರಣದಲ್ಲಿ ಸಮರ್ಥಿಸುತ್ತಾರೆ. ಅದೇ ವಿಷಯವನ್ನು ಈ ಅಧಿಕರಣದಲ್ಲಿಯೂ ಹೇಳಿದಾಗ ಹೇಳಿದ್ದನ್ನೇ ಹೇಳಿದಂತಾಗುತ್ತದೆ.

ಸಮಾಧಾನ - ಈ ಶಂಕೆಗೆ 'ನ ವಿಯತ್' ಎಂಬ ವಾಕ್ಯದಿಂದ ಉತ್ತರಿಸುತ್ತಿದ್ದಾರೆ. ಭೂತಾಕಾಶ, ಜೀವ, ಕಾಲ ಮೊದಲಾದ ಪದಾರ್ಥಗಳು ಭಗವಂತನಿಂದ ಹುಟ್ಟುತ್ತವೆಂದು ವಿಯದಧಿಕರಣದಲ್ಲಿ ಸಮರ್ಥಿಸಿದ್ದಾರೆ ಹೊರತು ಆಕಾಶಾದಿಗಳ ಸ್ವಭಾವವು ಭಗವದಧೀನವಾಗಿದೆ ಎಂದು ಸಮರ್ಥಿಸಿಲ್ಲ. ಆದ್ದರಿಂದ ಭಗವದಧೀನತ್ವಾದಿ ಧರ್ಮಗಳನ್ನು ಈ ಆಕಾಶಾಧಿಕರಣದಲ್ಲಷ್ಟೇ ಹೇಳಿದ್ದಾರೆ. ಹೀಗಿರುವಾಗ ವಿಯದಧಿಕರಣದಲ್ಲಿ ಹೇಳಿದ ಪ್ರಮೇಯವನ್ನು ಇಲ್ಲಿ ಹೇಳಿದಂತಾಗುವುದಿಲ್ಲ.

ಶಂಕೆ - ಹಾಗಿದ್ದರೂ ಸಹ ಅಂತರ್ಯಾಮ್ಯಧಿಕರಣದಿಂದ ಪುನರುಕ್ತಿಯ ಸಂದೇಹ ಬಂದೇ ಬರುತ್ತದೆ. ಏಕೆಂದರೆ 'ಯ ಆಕಾಶೇ ತಿಷ್ಠನ್' ಎಂದು ಪ್ರಾರಂಭಿಸಿ 'ಯಃ ಆಕಾಶಮಂತರಾ ಯಮಯತಿ ಏಷ ತೇ ಆತ್ಮಾ ಅಂತರ್ಯಾಮ್ಯಮೃತಃ' ಎಂಬುದರ ತನಕ ಶ್ರುತಿಯು ಭಗವಂತನು ಆಕಾಶದ ಅಂತರ್ಯಾಮಿಯಾಗಿದ್ದಾನೆಂದು ಶ್ರುತಿಯು ಹೇಳುತ್ತಿದೆ. ಭಗವಂತನು ಆಕಾಶದ ಅಂತರ್ಯಾಮಿಯಾಗಬೇಕಾದರೆ ಆಕಾಶವು ಭಗವಂತನ ಅಧೀನವಾಗಬೇಕು. ಇದನ್ನೇ ಅನುವ್ಯಾಖ್ಯಾನದಲ್ಲಿ ಹೀಗೆ ಹೇಳಿದ್ದಾರೆ.

ಸ್ವಾತ್ಮನಾऽನಿಯತಂ ವಸ್ತು ಪ್ರತೀಪಂ ಹ್ಯಾತ್ಮನೋ ಭವೇತ್ ।
ಸ್ವಾಧೀನ ಸತ್ತಾ ಶಕ್ತ್ಯಾದಿ ಕಥಮಾತ್ಮಪ್ರತೀಪಕಮ್ ॥

ತನ್ನ ನಿಯಂತ್ರಣಕ್ಕೊಳಪಡದ ಪದಾರ್ಥವು ತನಗೆ ವಿರೋಧವಾಗಬಹುದು. ಆದರೆ ಯಾವ ವಸ್ತುವಿನ ಇರುವಿಕೆ, ಮತ್ತು ಶಕ್ತಿಗಳು ಯಾರ ಅಧೀನವೋ ಆ ವಸ್ತುವು ವಿರೋಧಿಯಾಗುವುದಿಲ್ಲ.

ಅನುವ್ಯಾಖ್ಯಾನದ ಈ ಮಾತಿನಿಂದ ಆಕಾಶವು ಅಂತರ್ಯಾಮಿಯಾದ ಭಗವಂತನ ಅಧೀನವೆಂದು ತಿಳಿಯುತ್ತದೆ. ಅಂತರ್ಯಾಮ್ಯಧಿಕರಣದಲ್ಲಿ ಆಕಾಶಾದಿಗಳ ಇರುವಿಕೆಯನ್ನಷ್ಟೇ ಭಗವದಧೀನವೆಂದಿದ್ದಾರೆ. ಆಕಾಶದ ಸ್ವಭಾವಗಳನ್ನು ಭಗವದಧೀನವೆಂದು ಅಲ್ಲಿ ಹೇಳಿಯೇ ಇಲ್ಲ. ಅದನ್ನು ಇಲ್ಲಿ ಸಮರ್ಥಿಸುತ್ತಿದ್ದಾರೆ. ಮತ್ತು ಆಕಾಶಶಬ್ದವು ದೇವತಾವಾಚಕವಾದ್ದರಿಂದ ಜಡವೆಂದೂ ಹೇಳಲಾಗದು. ಮತ್ತು ಆಕಾಶಶಬ್ದದ ಸಮನ್ವಯವನ್ನೂ ಸಹ ಅಂತರ್ಯಾಮ್ಯಧಿಕರಣದಲ್ಲಿ ಮಾಡಿಲ್ಲ.

ಹಿಂದಿನ ಅಧಿಕರಣದಲ್ಲಿ ಹೇಳಿದಂತೆ ಈ ಅಧಿಕರಣದಲ್ಲಿಯೂ ಸಹ 'ತತ್ತು ಸಮನ್ವಯಾತ್' ಸೂತ್ರದಲ್ಲಿನ 'ತತ್ತು' ಪದವನ್ನು ಅನುವೃತ್ತಿ ಮಾಡಿಕೊಳ್ಳಬೇಕು. ಆವಾಗ ವಿಷ್ಣುವಿನ ಲಿಂಗಗಳಿರುವುದಿಂದ ಆಕಾಶಶಬ್ದದಿಂದ ವಿಷ್ಣುವೇ ಪ್ರತಿಪಾದ್ಯನಾಗುತ್ತಾನೆ. ('ಆಕಾಶಃ ವಿಷ್ಣುರೇವ ತಲ್ಲಿಂಗಾತ್') ಈ ವಿಷಯವನ್ನು ಭಾಷ್ಯಕಾರರು ಸೂತ್ರಪ್ರತಿಜ್ಞೆಯ ಸಂದರ್ಭದಲ್ಲಿ ಹೇಳಿದ್ದಾರೆ. ಹೀಗೆ ಅವಧಾರಣದಿಂದ ಆಕಾಶಶಬ್ದವಾಚ್ಯತ್ವವನ್ನು ವಿಷ್ಣುವಿನಲ್ಲಿ ಸಮರ್ಥಿಸಿದಾಗ ಒಂದು ಮಹತ್ ಪ್ರಯೋಜನವಿದೆ -- 'ಮಹಾಯೋಗ ಹಾಗೂ ವಿದ್ವದ್ಭೂಢಿಗಳನ್ನು ಭಗವಂತನಲ್ಲಿ ಬಿಟ್ಟು ಬೇರೆಯವರಲ್ಲಿ ಹೇಳಲಾಗದು' ಎಂದು. ಮಹಾಯೋಗವನ್ನು ಹೇಳಿದಾಗ ಆಕಾಶಶಬ್ದದ ಪ್ರವೃತ್ತಿನಿಮಿತ್ತವು ಭಗವಂತನಲ್ಲಿ ಇದೆ ಮತ್ತು ಸ್ವತಂತ್ರವಾಗಿ ಇದೆ. ಎಂದು ತಿಳಿಯುತ್ತದೆ. ಇದನ್ನು ಆಕಾಶಸ್ಯ ಭಗವದಧೀನತ್ವೇನ ತತ್ಯೈವ ಮುಖ್ಯತ್ವಾತ್, ಮಹಾಯೋಗವಿದ್ವದ್ಭೂಢ್ಯೋಃ ಭಾವಾಚ್ಚ' (ಆಕಾಶವು ಭಗವಂತನ ಅಧೀನವಾದ್ದರಿಂದ ಭಗವಂತನಲ್ಲಿಯೇ ಮುಖ್ಯವಾಗಿ ಇದೆ. ಆದ್ದರಿಂದಲೇ ಮಹಾಯೋಗ ವಿದ್ವದ್ಭೂಢಿಗಳನ್ನು ಭಗವಂತನಲ್ಲಷ್ಟೇ ಹೇಳಲು ಸಾಧ್ಯ) ಎಂಬ ಟೀಕೆಯು ಹೇಳಿದೆ. ಹೀಗೆ 'ತತ್ತು'ಶಬ್ದದ ಅನುವೃತ್ತಿಯಿಂದ ಅಪೂರ್ವವಾದ ಈ ಪ್ರಮೇಯವು ತಿಳಿಯುತ್ತದೆ. ಇದನ್ನು ಭಾಷ್ಯಕಾರರು ಹಾಗೂ ಟೀಕಾಕಾರರು ಎತ್ತಿ ತೋರಿಸಿದ್ದಾರೆ. ಅದನ್ನು ಪ್ರಕೃತ ಗ್ರಂಥಕಾರರು 'ಚಿದ್ಗತಸ್ಯ' ಇತ್ಯಾದಿ ಗ್ರಂಥದಿಂದ ವಿವರಿಸುತ್ತಿದ್ದಾರೆ.

ಹಿಂದಿನ ಅಧಿಕರಣದಲ್ಲಿ ಇಂದ್ರಾದಿ ಚೇತನರಲ್ಲಿರುವ ಐಶ್ವರ್ಯಾದಿಗಳು ಭಗವದಧೀನವೆಂದು ಸಮರ್ಥಿಸಿದರು. ಚೇತನರಲ್ಲಿರುವ ಧರ್ಮಗಳೇ ಭಗವದಧೀನವಾದ ಮೇಲೆ ಪುನಃ ಅಚೇತನಗಳಲ್ಲಿರುವ ಛಿದ್ರತ್ವಾದಿ ಧರ್ಮಗಳು ಭಗವದಧೀನವೆಂದು ಪ್ರತ್ಯೇಕ ಹೇಳಬೇಕೇನು? ಎಂಬ ಕೈಮುತ್ಯನ್ಯಾಯವನ್ನು ಶ್ಲೋಕದಲ್ಲಿ ಪ್ರದರ್ಶಿಸಿದ್ದಾರೆ. ಏಕೆಂದರೆ ಕೆಲವೊಮ್ಮೆ ಚೇತನರಲ್ಲಿ ಸ್ವತಂತ್ರಕರ್ತೃತ್ವಾದಿಗಳ ಭ್ರಾಂತಿಯಾದರೂ ಬರಲು ಸಾಧ್ಯವಿದೆ. (ಕುಂಬಾರನು ಘಟವನ್ನು ನಿರ್ಮಿಸಿದ ಇತ್ಯಾದಿಯಾಗಿ ಘಟಾದಿ-ಕರ್ತೃತ್ವವು). ಆದರೆ ಅಚೇನಪದಾರ್ಥಗಳಲ್ಲಿ ಯಾವ ಮೂರ್ಖನಿಗೂ ಕರ್ತೃತ್ವದ ಭ್ರಾಂತಿ ಬರಲು ಸಾಧ್ಯವಿಲ್ಲ. ಹೀಗೆ ಹೇಳಿದ್ದರಿಂದ 'ವಿವರತ್ವಾದಿಕಂ ನ ಭಗವದಧೀನಂ, ಅಚೇತನಗತತ್ವಾತ್' ಎಂಬ ಅನುಮಾನದಲ್ಲಿ ಹೇತುವಿಗೆ ಅಪ್ರಯೋಜಕತ್ವವನ್ನು ಹೇಳಿದಂತಾಯಿತು.

'ಜಯಿ'ಶಬ್ದದ ಪ್ರಯೋಗವು ನಿಯಾಮಕವ್ಯಕ್ತಿಯಲ್ಲಿ ಬರುವಂತೆ ಜಡವಾಚಿಶಬ್ದಪ್ರಯೋಗವು ನಿಯಾಮಕನಲ್ಲಿ ಬಂದದ್ದು ಎಲ್ಲಿಯೂ ಕಂಡಿಲ್ಲವೆಂದು ಹೇಳಿದರೆ ಇದೂ ಸಹ ಅಸಿದ್ಧಿ ಎಂಬುದನ್ನು 'ಅಸ್ತಿ ಚ' ಎಂಬ ಗ್ರಂಥವು ಪ್ರತಿಪಾದಿಸುತ್ತಿದೆ. ಯಾವ ಕಾರಣದಿಂದ ಚೇತನಪದಾರ್ಥನಲ್ಲಿರುವ ಧರ್ಮಗಳೇ ಭಗವದಧೀನವಾದ ಮೇಲೆ ಅಚೇತನ ಧರ್ಮಗಳು ಭಗವದಧೀನವೆಂದು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ ಎಂಬ ತದಧೀನತ್ವನ್ಯಾಯದಂತೆ ಜಡವಾಚಿಶಬ್ದಗಳೂ ಸಹ ಚೇತನರಲ್ಲಿ ಪ್ರಯೋಗಿಸಬಹುದು. ಈ ವಿಷಯವನ್ನೇ ಅಭಿಮಾನ್ಯಧಿಕರಣದಲ್ಲಿ ಮಣ್ಣಿನಲ್ಲಿರುವ ವಕ್ಯತ್ವವನ್ನು ಅಭಿಮಾನಿಚೇತನರಲ್ಲಿ ಸೂತ್ರಕಾರರೇ ಪ್ರತಿಪಾದಿಸಿದ್ದಾರೆ.

'ತಸ್ಯೋತ್ಪತ್ತಿಮತೋಽವಕಾಶತ್ವಸಹಿತಸ್ಯೈವ ಪರಾಯತ್ತೋತ್ಪತ್ತ್ಯಾ ತದುಪಪತ್ತೇಃ' (ಉತ್ಪತ್ತಿಯುಳ್ಳ ಆಕಾಶಕ್ಕೆ ಅವಕಾಶತ್ವಸಹಿತವಾಗಿಯೇ ಭಗವದಧೀನತ್ವವನ್ನು ಹೇಳಬೇಕು.) ಈ ನ್ಯಾಯವಿವರಣ-ಟೀಕೆಯನ್ನು ಮನಸ್ಸಿನಲ್ಲಿಟ್ಟುಕೊಂಡು ಆಕಾಶಸ್ವಭಾವವೂ ಸಹ ಭಗವದಧೀನವಾಗಿದೆಯೆಂದು 'ಅಸ್ತು ಖಂ' ಎಂಬ ಗ್ರಂಥದಿಂದ ಪ್ರತಿಪಾದಿಸುತ್ತಿದ್ದಾರೆ. ಹುಟ್ಟುವ ಪದಾರ್ಥದ ಸ್ವಭಾವವು ಹುಟ್ಟಿಸುವ ವ್ಯಕ್ತಿಯ ಅಧೀನವಾಗಿದೆಯೆಂದು ಲೋಕದಲ್ಲಿಯೂ ಕಂಡಿದೆ. ಇದನ್ನು 'ಕುಂಭಸ್ವಭಾವ' ಎಂಬ ಶ್ಲೋಕದಿಂದ ಉದಾಹರಿಸಿದ್ದಾರೆ.

ಶಂಕೆ - ಘಟವು ಕುಲಾಲನ ಅಧೀನವಾಗಿರಬಹುದು; ಆದರೆ ಎಷ್ಟೋ ಬಾರಿ ಕುಲಾಲನ ಸಂಕಲ್ಪಕ್ಕೆ ವಿರುದ್ಧವಾಗಿ ಘಟದ ಆಕಾರದಲ್ಲಿ ಬದಲಾವಣೆಯು ಕಾಣಿಸುತ್ತದೆ. ಅಂತೂ ಕುಲಾಲನ ಅಧೀನಕ್ಕೆ ಒಳಪಡದ ಧರ್ಮಗಳು ಘಟಾದಿಗಳಲ್ಲಿವೆಯೆಂದು ಎಲ್ಲರೂ ಅಂಗೀಕರಿಸಬೇಕಾಗುತ್ತದೆ. ಇದರಂತೆ ಆಕಾಶದಲ್ಲಿರುವ ಛಿದ್ರತ್ವವೂ ಸಹ ಭಗವದಧೀನವಾಗುವುದು ಬೇಡ?

ಸಮಾಧಾನ - ಈ ಪ್ರಶ್ನೆಗೆ 'ಕಿಂಚ' ಇತ್ಯಾದಿ ಗ್ರಂಥದಿಂದ ಉತ್ತರಿಸುತ್ತಿದ್ದಾರೆ. ಹೀಗೆ ಹೇಳಿದ್ದರಿಂದ 'ವಿವರತ್ವಾದಿಕಂ ನ ಭಗವದಧೀನಂ ಆಕಾಶಸ್ವಭಾವವತ್ವಾತ್' ಎಂಬ ಅನುಮಾನದಲ್ಲಿ ಸ್ವಭಾವತ್ವಹೇತುವು ಅಪ್ರಯೋಜಕವೆಂದು ಹೇಳಿದಂತಾಯಿತು. 'ತಾದೃಶತ್ವಾಚ್ಚ ತಚ್ಛಕ್ತೇಃ' ಎಂಬ ಗಾಯತ್ಯಧಿಕರಣದಲ್ಲಿ ಬರುವ ಅನುವ್ಯಾಖ್ಯಾನಶ್ಲೋಕವನ್ನು ಮನಸ್ಸಿನಲ್ಲಿಟ್ಟುಕೊಂಡು 'ಕಿಂಚ' ಇತ್ಯಾದಿ ಗ್ರಂಥವು ಹೊರಟಿದೆ. ತದಧೀನತ್ವವೆಂದರೆ ಯಥೇಷ್ಟವಿನಿಯೋಗಾರ್ಹತ್ವವೆಂದರ್ಥ. ಇಂತಹ ತದಧೀನತ್ವವನ್ನು ಆಕಾಶಾದಿಗಳಲ್ಲಿ ಸುಲಭವಾಗಿ ಹೇಳಬಹುದೆಂದು 'ಔಷಧಾದಿ' ಎಂಬ ಶ್ಲೋಕವು ವಿವರಿಸಿದೆ.

ಛಿದ್ರಸ್ಯ ಛಿದ್ರತಾಕೃತೇಃ ನೇಷ್ಟೇ ಕಿಮ್? (ಛಿದ್ರಕ್ಕೆ ಅಚ್ಛಿದ್ರತ್ವವನ್ನು ತರಲು ಸಮರ್ಥನಲ್ಲವೇನು?) ಇಲ್ಲಿ ಅಚ್ಛಿದ್ರತಾಕೃತೇಃ ಎಂದು ಷಷ್ಠಿ ವಿಭಕ್ತಿ ಇದೆ. 'ಅಧೀಗರ್ಥದಯೇಷಾಂ ಕರ್ಮಣಿ' (೨-೩-೫೨) ಎಂಬ ಸೂತ್ರದಿಂದ ಇಲ್ಲಿ ಷಷ್ಠಿ ವಿಭಕ್ತಿಯು ಬಂದಿದೆ. ಕರಣಾರ್ಥಕವಾದ ಧಾತು ದಯಧಾತು ಮತ್ತು ಈಶಧಾತು ಇವುಗಳಿಗೆ ಕರ್ಮಕಾರಕವು ಶೇಷತ್ವೇನ ವಿವಕ್ಷಿತವಾದಾಗ ಷಷ್ಠೀವಿಭಕ್ತಿಯು ಬರುತ್ತದೆಂದು ಈ ಸೂತ್ರದಲ್ಲಿ ಹೇಳಿದ್ದಾರೆ. ಪ್ರಕೃತ 'ಈಷ್ಟೇ' ಎಂದು ಈಶಧಾತುವಿನ ಯೋಗವಿರುವುದರಿಂದ ಇದರ ಯೋಗವನ್ನು ಹೊಂದಿದ ಕರ್ಮಕಾರಕವಾದ ಅಚ್ಛಿದ್ರಾಕೃತೇಃ ಎಂಬ ಪದಕ್ಕೆ ಷಷ್ಠಿವಿಭಕ್ತಿಯು ಬಂದಿದೆ. ಈ ಸೂತ್ರದಿಂದ ಷಷ್ಠೀವಿಭಕ್ತಿಯನ್ನು ಹೇಳದಿದ್ದರೆ ಈಶ್ವರತ್ವದ ಸಮರ್ಥನೆಯೇ ವ್ಯಾಹತವಾಗುತ್ತದೆ.

ಗ್ರಂಥಕಾರರು 'ಸ್ಯಂದಂತೇ' ಎಂಬ ಶ್ಲೋಕದಿಂದ ಕೆಲವು ಶ್ರುತಿಗಳನ್ನು ಅರ್ಥಶಃ ಅನುವಾದ ಮಾಡಿದ್ದಾರೆ -- 'ಏತಸ್ಯ ವಾऽಕ್ಷರಸ್ಯ ಪ್ರಶಾಸನೇ ಗಾರ್ಗಿ ಪ್ರಾಚ್ಯೋ ನದ್ಯಃ ಸ್ಯಂದಂತೇ' 'ಭೀಷಾऽಸ್ಮಾದ್ವಾತಃ ಪವತೇ' 'ನಭೋ ದದಾತಿ ಶ್ವಸತಾಂ ಮಾರ್ಗಂ ಯನ್ನಿಯಮಾದದಃ' 'ದ್ರವ್ಯಂ ಕರ್ಮ ಚ ಕಾಲಶ್ಚ ಸ್ವಭಾವೋ ಜೀವ ಏವ ಚ' ಈ ಶ್ರುತಿಸ್ಮೃತಿಗಳಿಂದ ಸಕಲಭೂತಗಳೂ ಭಗವದ-ಧೀನವೆಂದು ತಿಳಿಯುತ್ತದೆ.

'ವಿವರತ್ವಾದಿಕಂ ನ ಭಗವದಧೀನಂ ಅಚೇತನಸ್ವಭಾವತ್ವಾತ್, ತದ್ಗತತ್ವಾಭಾವಾತ್' ಈ ಎರಡು ಹೇತುಗಳು ಪ್ರಸಾದನಾಯತ್ತತ್ವ, ಅನಾಗಂತುಕತ್ವ ಇವುಗಳನ್ನು ಮಧ್ಯದಲ್ಲಿ ಹೇತುವನ್ನಾಗಿಸಿಕೊಂಡು ಈಶಾನನಧೀನತ್ವವನ್ನು ಪರಂಪರೆಯಿಂದ ಸಾಧಿಸುತ್ತವೆ ಎಂದು ಹಿಂದೆ ಹೇಳಿದಿರಿ. ಅದನ್ನೂ ಸಹ ಈಗ ನಿರಾಕರಿಸಿದಂತಾಯಿತು. ಯಾವ ಧರ್ಮಗಳು ಅಚೇತನದಲ್ಲಿ ಇವೆಯೋ, ಮತ್ತು ಅಚೇತನದ ಸ್ವಭಾವವೂ ಆಗಿವೆಯೋ ಅವೆಲ್ಲವೂ ಭಗವದಧೀನವಾಗಿವೆ ಎಂದು ಈಗ ತಾನೇ ಉದಾಹರಿಸಿದ ಶ್ರುತಿಸ್ಮೃತಿಗಳಿಂದ ಸಿದ್ಧವಾಗಿದೆ. ಮತ್ತು ಯಥೇಷ್ಟವಿನಿಯೋಗಯೋಗ್ಯತ್ವರೂಪವಾದ ಆಸ್ವಾತಂತ್ರ್ಯವೂ ಸಹ ಅವುಗಳಲ್ಲಿ ಇರುತ್ತದೆ. ಇದರಿಂದ 'ಆಕಾಶಸ್ಯ ಭಗವದಧೀನತ್ವಾತ್' ಎಂಬ ಟೀಕೆಯನ್ನು ಮೂರು ಪ್ರಕಾರದಲ್ಲಿ ವ್ಯಾಖ್ಯಾನಿಸಿದಂತಾಯಿತು. 'ಆಕಾಶಸ್ಯ' ಎಂಬ ಪದಕ್ಕೆ ಆಕಾಶಪದದ ಪ್ರವೃತ್ತಿನಿಮಿತ್ತವೆಂಬ ಮೊದಲನೆಯ ಅರ್ಥವನ್ನು ಹಿಂದೆಯೇ ಹೇಳಿದ್ದಾಗಿದೆ.

ಆಕಾಶಪದದ ಪ್ರವೃತ್ತಿನಿಮಿತ್ತವಾದ ವಿವರತ್ವಾದಿಗಳು ಈಶಾಧೀನವೆಂದು ಇಲ್ಲಿಯ ತನಕ ಸಮರ್ಥಿಸಿದ್ದಾಯಿತು. ಮುಂದೆ ''ವಿವರತ್ವಾದಿಕಂ ನ ಈಶಗತಂ ಅಚೇತನಗತತ್ವಾತ್'' (ಅಚೇತನನಿಷ್ಠವಾದ್ದರಿಂದ ವಿವರತ್ವಾದಿಗಳು ಭಗವಂತನಲ್ಲಿ ಬರಲಾರವು) ಎಂಬ ಮೂರನೆಯ ಪಕ್ಷವನ್ನು ನಿರಾಕರಣೆ ಮಾಡುವುದಕ್ಕಾಗಿ 'ಏವಂಚ' ಇತ್ಯಾದಿ ಗ್ರಂಥವು ಹೊರಟಿರುತ್ತದೆ. ಆಕಾಶಪದದ ಪ್ರವೃತ್ತಿನಿಮಿತ್ತವೆನಿಸಿದ ವಿವರತ್ವಾದಿಗಳೂ ಕೂಡ ಭಗವಂತನಲ್ಲಿ ನಿರವಧಿಕವಾಗಿದೆ ಎಂದು ಇಲ್ಲಿ ಹೇಳಿದ್ದಾರೆ. ಆದರೆ ಆಕಾಶಪದದ ಪ್ರವೃತ್ತಿನಿಮಿತ್ತವೇ ಆದ ಶಬ್ದಸಮವಾಯಿತ್ವವೆಂಬ ಮತ್ತೊಂದು ಧರ್ಮವನ್ನು ಭಗವಂತನಲ್ಲಿ ನಿರವಧಿಕವಾಗಿ ಹೇಳಲು ಹೇಗೆ ಸಾಧ್ಯ ? ಕಮಲದಲ್ಲಿ 'ಪಂಕಜ'ಶಬ್ದವನ್ನು ಪ್ರಯೋಗಿಸಲು ರೂಢವಾದ ಪದತ್ವವು ಹೇತುವಾಗಿದೆ. ಅದರಂತೆ ಆಕಾಶದಲ್ಲಿ ಆಕಾಶಶಬ್ದವನ್ನು ಪ್ರಯೋಗಿಸಲು ಭೂತಾಕಾಶದಲ್ಲಿ ರೂಢವಾದ ಶಬ್ದಸಮವಾಯಿತ್ವವನ್ನು ಹೇತುವೆಂದು ಹೇಳಬೇಕು. ಸಮವಾಯಿಸಂಬಂಧದಿಂದ ಶಬ್ದವು ಆಕಾಶದಲ್ಲಷ್ಟೇ ಇರಬಹುದು ಹೊರತು ಭಗವಂತನಲ್ಲಿ ಇರಲು ಹೇಗೆ ಸಾಧ್ಯ ? ಎಂಬ ಪ್ರಶ್ನೆಗೆ 'ಯಥಾ' ಇತ್ಯಾದಿಯಾಗಿ ದೃಷ್ಟಾಂತಪುರಃಸರವಾಗಿ ಉತ್ತರಿಸುತ್ತಿದ್ದಾರೆ. ಜನ್ಯಾದ್ಯಧಿ-ಕರಣದಲ್ಲಿ ಹೇಳಿದ 'ಭವೇತಾಂ ಯದಿ ವೃಕ್ಷಸ್ಯ' ಎಂಬ ನ್ಯಾಯವನ್ನು ಇಲ್ಲಿ ಅನುಸಂಧಾನ ಮಾಡಿ-ಕೊಳ್ಳಬೇಕು.

ಭವೇತಾಂ ಯದಿ ವೃಕ್ಷಸ್ಯ ವಾಜಿಕರ್ಣೌ ಕಥಂಚನ।
ಅಕ್ಷ್ಣಪ್ತಾಂ ಸಮುದಾಯಸ್ಯ ಕಃ ಶಕ್ತಂ ಜಾತು ಕಲ್ಪಯೇತ್ ॥

ಒಂದು ವೇಳೆ ವೃಕ್ಷಕ್ಕೆ ಕುದುರೆಯ ಕಿವಿ ಇದ್ದಿದ್ದರೆ ಯೋಗವನ್ನು ಹೇಳಬಹುದಿತ್ತು. ಆದರೆ ವೃಕ್ಷಕ್ಕೆ ಕಿವಿ

ಇರುವುದಿಲ್ಲ. ಅದಕ್ಕೋಸ್ಕರ ಪ್ರಮಾಣಸಿದ್ಧವಾಗದೇ ಇದ್ದರೂ ರೂಢಿಯನ್ನು ಕಲ್ಪಿಸುತ್ತೇವೆ. ಎಲ್ಲಿ ಅವಯವಶಕ್ತಿಯಿಂದಲೇ ಪ್ರಯೋಗವನ್ನು ಕೂಡಿಸಲು ಬರುತ್ತದೋ ಅಲ್ಲಿ ಮಾತ್ರ ಅದೃಷ್ಟವಾದ ಸಮುದಾಯಶಕ್ತಿಯನ್ನು ಹೇಳುವುದು ತಪ್ಪು. ಮೀಮಾಂಸಕರು ಹೇಳುವ ಈ ನ್ಯಾಯದಂತೆ ಪ್ರಕೃತ ಭೂತಾಕಾಶದಲ್ಲಿಯೂ ಆಕಾಶಶಬ್ದವನ್ನು ಯೌಗಿಕವಾಗಿಯೇ ಹೇಳಬೇಕು. ಆದ್ದರಿಂದ ರೂಢಿ ಎಂದು ಹೇಳುವ ಅವಶ್ಯಕತೆ ಇಲ್ಲ.

## ಪಾರ್ವಣಹೋಮಾದ್ಯನನುಷ್ಠಾನಾಧಿಕರಣಮ್

''ಪಾರ್ವಣಹೋಮಯೋಸ್ತ್ವಪ್ರವೃತ್ತಿಃ ಸಮುದಾಯಾರ್ಥಸಂಯೋಗಾತ್
ತದಭೀಜ್ಯಾ ಹಿ' (೯-೨-೨೫)

ದರ್ಶಪೂರ್ಣಮಾಸಪ್ರಕರಣದಲ್ಲಿ 'ಸ್ರುವೇಣ ಪಾರ್ವಣೋ ಜುಹೋತಿ' ಎಂಬ ವಾಕ್ಯವು ಕೇಳಿಸುತ್ತಿದೆ. ಈ ವಾಕ್ಯದಲ್ಲಿ ಪಾರ್ವಣೋ ಎಂಬ ತದ್ಧಿತಶ್ರುತಿಯಿಂದ ಪರ್ವದೇವತಾಕವಾದ ಎರಡು ಹೋಮಗಳನ್ನು ಮಾಡಬೇಕೆಂದು ತಿಳಿಯುತ್ತದೆ. ಪರ್ವಶಬ್ದದ ಮೇಲೆ ಅಣ್ ಎಂಬ ತದ್ಧಿತಪ್ರತ್ಯಯ ಬಂದು ಪಾರ್ವಣಶಬ್ದವು ನಿಷ್ಪನ್ನವಾಗಿದೆ. ಇದರಿಂದ ಪರ್ವದೇವತೆಗಳಿಗೆ ಸಂಬಂಧಿಸಿದ್ದೆಂಬ ಅರ್ಥವು ತಿಳಿಯುತ್ತದೆ. ದರ್ಶಪೂರ್ಣಮಾಸಯಾಗದ ವಿಕೃತಿಯಾಗದಲ್ಲಿ ಪರ್ವದೇವತಾಕವಾದ ಯಾಗಕ್ಕೆ ಅತಿದೇಶವಿದೆಯೋ? ಇಲ್ಲವೋ? ಎಂದು ಸಂದೇಹ.

ಪೂರ್ವಪಕ್ಷ - ಪರ್ವಶಬ್ದಕ್ಕೆ ಹುಣ್ಣಿಮೆಯ ಕಾಲ, ಅಮಾವಾಸ್ಯೆಯ ಕಾಲ ಎಂದರ್ಥ. ಆದ್ದರಿಂದ ಪಾರ್ವಣ ಎಂದರೆ ಕಾಲವೇ ದೇವತೆಯಾಗಿ ಉಳ್ಳ ಯಾಗವೆಂದರ್ಥ.

---

ಭಾಟ್ಟಸಙ್ಗ್ರಹಃ –

**पार्वणहोमयोस्त्वप्रवृत्तिः समुदायार्थसंयोगात्तदभिज्या हि ॥ ५१ ॥**
**(कालस्येति चेत् ॥ ५२ ॥ नाप्रकरणत्वात् ॥ ५३ ॥ मन्त्रवर्णाच्च ॥ ५४ ॥**
**तदभावेऽग्निवदिति चेत् ॥ ५५॥ नाधिकारिकत्वात् ॥ ५६ ॥)**

प्रासङ्गिकी सङ्गतिः । दर्शपूर्णमासयोः श्रूयते ''स्रुवेण पार्वणौ जुहोति'' इति । तत्र वाक्ये पार्वणावित्यत्र तद्धितश्रुत्या पर्वदैवत्यौ द्वौ होमौ श्रुतौ । तत्र पर्वशब्दः किं कालपर अथ कर्मसमुदायपर इति सन्देहे, पर्वपदस्य तिथिविशेषरूपकाले सर्वजनप्रसिद्ध्या तत्र शब्दस्य मुख्यत्वात् पर्वरूपकालविशेषदेवताकावमौ होमौ दर्शादेरारादुपकारकाविति प्राप्ते सिद्धान्तः । पृणातिधातुर्दानार्थः सन् ''दीयते हविरस्मिन्, काले'' इत्यधिकरणव्युत्पत्त्या पर्वकाल इत्त भावव्युत्पत्त्या दानरूपकर्मण्यपि मुख्यः । तथा लोके प्रयोगवशेन पर्वकाले प्रसिद्ध इव ''पर्वेष्टिरद्य प्रवर्तते'' इत्यभियुक्तप्रयोगबलेन दर्शपूर्णमासाख्यकर्मसमुदायेऽपि प्रसिद्ध एव । अतः काल इत्त कर्मण्यपि मुख्यत्वात् '' ऋषभं वाजिनं वयं पूर्णमासं यजामहे'' इति ''अमावास्या

ಯಜ್ಞದಲ್ಲಿರುವ ಅಂಗಗಳು ಎರಡು ವಿಧ : ೧) ಸನ್ನಿಪತ್ಯೋಪಕಾರಕ ೨) ಆರಾದುಪಕಾರಕ. ಸನ್ನಿಪತ್ಯೋಪಕಾರಕವೆಂದರೆ ಯಾಗದ ಸ್ವರೂಪಕ್ಕೆ ಕಾರಣವಾಗಿರುವುದು ಎಂದರ್ಥ. ಉದಾಹರಣೆ - ಅವಘಾತ ಮಾಡದಿದ್ದರೆ ತಂಡುಲವು ನಿಷ್ಪನ್ನವಾಗುವುದಿಲ್ಲ. ಇದರಿಂದ ಪುರೋಡಾಶದ ನಿರ್ಮಾಣವು ಸಾಧ್ಯವಾಗುವುದಿಲ್ಲ. ಪುರೋಡಾಶದಿಂದ ಯಾಗವನ್ನು ಮಾಡಬೇಕೆಂದರೆ ವ್ರೀಹಿಯನ್ನು ಅವಹನನ ಮಾಡಬೇಕು. ಆದ್ದರಿಂದ ಅವಘಾತವು ಯಾಗಸ್ವರೂಪಕ್ಕೆ ಕಾರಣವಾಗಿದೆ.

ಆರಾದುಪಕಾರಕಕ್ಕೆ ಉದಾಹರಣೆ - 'ಇಡೋ ಯಜತಿ ಸಮಿದೋ ಯಜತಿ' ಇವುಗಳು ದರ್ಶಪೂರ್ಣಮಾಸಕ್ಕೆ ಅಂಗಗಳು. ಇವುಗಳು ಯಾಗದಿಂದ ಫಲ ಬರಲು ಕಾರಣವಾಗಿವೆ ಹೊರತು ನೇರವಾಗಿ ಯಾಗಸ್ವರೂಪಕ್ಕೆ ಕಾರಣವಾಗಿಲ್ಲ. ಅಂದರೆ ಸಮಿದಾದಿ ಯಾಗಗಳನ್ನು ಮಾಡದಿದ್ದರೆ ದರ್ಶಪೂರ್ಣಮಾಸಯಾಗವನ್ನು ಮಾಡಲು ಸಾಧ್ಯವಿಲ್ಲವೆಂದೇನಿಲ್ಲ. ದರ್ಶಪೂರ್ಣಮಾಸಯಾಗದಿಂದ ಫಲ ಬರುವುದಿಲ್ಲ ಎಂದಷ್ಟೇ ಅರ್ಥ. ಹಾಗಾಗಿ ಸಮಿದಾದಿಪಂಚಪ್ರಯಾಜಗಳು ಆರಾದುಪಕಾರಕವಾದ ಅಂಗವೆನಿಸುತ್ತವೆ. ಯಾವುದೇ ಪ್ರಕೃತಿಯಾಗದಲ್ಲಿ ಆರಾದುಪಕಾರಕ ಅಂಗಗಳನ್ನು ಹೇಳಿದರೆ ಅವುಗಳನ್ನು ವಿಕೃತಿಯಾಗದಲ್ಲಿಯೂ ಅತಿದೇಶ ಮಾಡಿಕೊಳ್ಳಬೇಕು. ಆದರೆ ಸ್ವರೂಪೋಪಕಾರಕ ಅಂಗಕ್ಕೆ ವಿಕೃತಿಯಾಗದಲ್ಲಿ ಅತಿದೇಶವಿರುವುದಿಲ್ಲ.

ಪ್ರಕೃತದಲ್ಲಿ ಪರ್ವವೆಂಬ ಕಾಲದಲ್ಲಿ ಪ್ರಸಿದ್ಧವಾದ ಎರಡು ಹೋಮಗಳು ಆರಾದುಪಕಾರಕವಾದ ಅಂಗಗಳಾಗಿವೆ. ಆದ್ದರಿಂದ ವಿಕೃತಿಯಾಗವಾದ ಸೌರ್ಯಾದಿ ಯಾಗಗಳಲ್ಲಿ ಅತಿದೇಶವನ್ನು ಮಾಡಬೇಕು. ಆದ್ದರಿಂದ ದರ್ಶಪೂರ್ಣಮಾಸದ ಯಾಗದ ವಿಕೃತಿಯಾಗವೆನಿಸಿದ ಸೌರ್ಯಾದಿ ಯಾಗದಲ್ಲಿ ಸ್ರುವೇಣ ಪಾರ್ವಣೋ ಜುಹೋತಿ ಎಂಬ ವಾಕ್ಯವನ್ನು ಅತಿದೇಶ ಮಾಡಬೇಕು.

ಸಿದ್ಧಾಂತ - ಪರ್ವಶಬ್ದವು ಪೃಣಧಾತುವಿನಿಂದ ನಿಷ್ಪನ್ನವಾಗಿದೆ. ಪೃಣಧಾತುವಿಗೆ 'ದಾನ' ಎಂದರ್ಥ. 'ಪ್ರೀಯತೇ = ದೀಯತೇ ಹವಿಃ ಅಗ್ನಿಂ ಕಾಲೇ' ಎಂಬ ಅಧಿಕರಣ ವ್ಯುತ್ಪತ್ತಿಯನ್ನು ಮಾಡಿದರೆ ಯಾವ ಕಾಲವಿಶೇಷದಲ್ಲಿ ದಾನಾದಿಗಳನ್ನು ಮಾಡುತ್ತೇವೋ ಆ ಕಾಲವೇ ಪರ್ವ ಎನಿಸುತ್ತದೆ. ಅಥವಾ ಪ್ರೀಣನಂ = ಪರ್ವ ಎಂದು ಭಾವವ್ಯುತ್ಪತ್ತಿಯನ್ನು ಮಾಡಿದರೆ ದಾನವೆಂಬ ಕರ್ಮವನ್ನು ಪರ್ವ ಎಂದಂತಾಗುತ್ತದೆ.

---

सुभगा सुशेवा'' इति च मन्त्रद्वयेन कर्मसमुदायद्वयस्मरणशत्प्रकरणानुग्रहाच्च कर्म-समुदायद्वयपरोऽत्र पर्वशब्द इति समुदायद्वयसंस्कारकतया दर्शपूर्णमासाख्यकर्म-समुदायद्वयदेवताकौ सन्निपात्यङ्गमिमौ होमाविति । तदाह **सूत्रे, पार्वणहोमयोर्विकृतिषु** सौर्यादिष्वप्रवृत्तिः पर्वशब्दस्य आग्नेयाकर्म**समुदायद्वय**रूपार्थवाचित्वेन **तत्संयोगात् तदभिज्या** तत्संस्कारकहोमो हि यत इति । **फलन्तु पूर्वपक्षे** कालदैवत्यत्वात्कालस्य चासंस्कार्यत्वेनाऽरादुपकारकौ होमाविति सौर्यादिविकृतिष्वेतयोः प्रवृत्तिः । **सिद्धान्ते तु,** समुदायदेवताकत्वात्सौर्यादेराग्नेयादिसमुदायिविकृतितया समुदायाविकरत्वान्नास्ति तत्र एतयोरतिदेश इति ।

ಹೀಗೆ ಪರ್ವಶಬ್ದಕ್ಕೆ ಅಧಿಕರಣವ್ಯುತ್ಪತ್ತಿಯನ್ನು ಮಾಡಿದಾಗ ಕಾಲವೆಂಬ ಅರ್ಥವೂ, ಭಾವವ್ಯುತ್ಪತ್ತಿಯನ್ನು ಮಾಡಿದಾಗ ಕರ್ಮ ಎಂಬರ್ಥವೂ ದೊರೆಯುತ್ತದೆ. ಈ ಎರಡು ವಿಧವಾದ ಅರ್ಥಗಳಲ್ಲಿ ಕರ್ಮವೆಂಬರ್ಥವನ್ನೇ ಸ್ವೀಕರಿಸಬೇಕು. ಏಕೆಂದರೆ 'ಸ್ರುವೇಣ ಪಾರ್ವಣೋ ಜುಹೋತಿ' ಎಂಬ ವಾಕ್ಯವು 'ವೃಷಭಂ ವಾಜಿನಂ ವಯಂ ಪೂರ್ಣಮಾಸಂ ಯಜಾಮಹೇ' ಮತ್ತು 'ಅಮಾವಾಸ್ಯಾ ಸುಭಗಾ ಸುಷೇವಾ' ಇತ್ಯಾದಿಯಾದ ಕರ್ಮಪ್ರಕರಣದಲ್ಲಿ ಪ್ರಸಕ್ತವಾಗಿದೆ. ಹಿಂದೆ ಯಜಾಮಹೇ ಇತ್ಯಾದಿಯಾಗಿ ಕರ್ಮವು ಪ್ರಸಕ್ತವಾದ್ದರಿಂದ ಕರ್ಮದ ಉಪಸ್ಥಿತಿಯೇ ಮನಸ್ಸಿನಲ್ಲಿರುತ್ತದೆ. ಆ ಸಂದರ್ಭದಲ್ಲಿ ಪ್ರಸಕ್ತವಾದ 'ಪಾರ್ವಣೋ ಜುಹೋತಿ' ಎಂಬ ವಾಕ್ಯವೂ ಸಹ ಕರ್ಮವಿಷಯಕವೆಂದೇ ಎಲ್ಲರೂ ತಿಳಿಯುತ್ತಾರೆ. ಮತ್ತು ಸಾಮವಾಯಿಕತ್ವದಿಂದಲೂ ಸಹ ಕರ್ಮವಾಚಿಯೆಂದು ಅಂಗೀಕರಿಸಬೇಕು.

ಹೀಗೆ ಪರ್ವಶಬ್ದವು ಅಧಿಕರಣವ್ಯುತ್ಪತ್ತಿಯಿಂದ ಕಾಲವನ್ನು ಹೇಳಿದರೂ, (ಅದಕ್ಕೆ) ಭಾವವ್ಯುತ್ಪತ್ತಿಯಿಂದ ಕರ್ಮವಾಚಿತ್ವವನ್ನು ಅಂಗೀಕರಿಸುವುದು ಅನಿವಾರ್ಯ. ಆದ್ದರಿಂದ ಪಾರ್ವಣೋ ಎಂದರೆ ಕರ್ಮದೇವತಾಕವಾದ ಎರಡು ಯಾಗಗಳು ಎಂದರ್ಥ. 'ಪರ್ವಣಶ್ಚ ಪರ್ವಣಶ್ಚ ಪರ್ವಣೌ' ಎಂದು ತಂತ್ರದಿಂದ ಪರ್ವಶಬ್ದವನ್ನು ಎರಡು ಬಾರಿ ಇಟ್ಟುಕೊಳ್ಳಬೇಕು. ಆಗ 'ಅಮಾವಾಸ್ಯೆಯ ಮೂರು ಯಾಗಗಳು ಮತ್ತು ಪೂರ್ಣಮಾಸಿಯ ಮೂರು ಯಾಗಗಳು; ಈ ಮೂರು ಯಾಗಗಳೇ ದೇವತೆಯಾಗಿಯುಳ್ಳ ಮತ್ತೊಂದು ಯಾಗ' ಎಂದರ್ಥ.

ಅಂದರೆ - ಯಾಗವೆಂಬ ಕರ್ಮವೇ ಯಾವ ಯಾಗದಲ್ಲಿ ದೇವತೆಯಾಗಿ ಇದೆಯೋ ಅಂತಹ ಯಾಗವನ್ನು ಈ ವಾಕ್ಯವು ವಿಧಿಸುತ್ತಿದೆ. (ದೇವತೆಯೆಂದರೆ ಚೇತನವೇ ಆಗಿರಬೇಕೆಂದು ಮೀಮಾಂಸಕರು ಅಂಗೀಕರಿಸುವುದಿಲ್ಲ. ಕೆಲವೊಮ್ಮೆ ಕಾಲವನ್ನೂ ದೇವತೆಯೆನ್ನುತ್ತಾರೆ. ಕೆಲವೊಮ್ಮೆ ಇಂದ್ರಾದಿಗಳನ್ನೂ ದೇವತೆ ಎನ್ನುತ್ತಾರೆ. ಆದರೆ ಪ್ರಕೃತದಲ್ಲಿ ಯಾಗವೆಂಬ ಕರ್ಮವನ್ನೇ ದೇವತೆ ಎನ್ನುತ್ತಿದ್ದಾರೆ. ಕರ್ಮವನ್ನೇ ದೇವತೆಯಾಗಿ ಉಳ್ಳ ಯಾಗಕ್ಕೆ ಈ ಅಧಿಕರಣವು ಹೊಸದೊಂದು ಉದಾಹರಣೆಯಾಗಿದೆ). ಈ ಅರ್ಥದಲ್ಲಿ ದೇವತಾತ್ವವು ವ್ಯಾಸಜ್ಯವೃತ್ತಿಧರ್ಮವಾಗಿದೆ. ಯಾವ ರೀತಿಯಾಗಿ ಅಗ್ನಿ ಹಾಗೂ ಸೋಮ ಇಬ್ಬರಲ್ಲಿರುವ (ಅಗ್ನಿ ಸೋಮರಲ್ಲಿರುವ ದೇವತಾತ್ವವು ವ್ಯಾಸಜ್ಯವೃತ್ತಿಯಾಗಿದೆಯೋ, ಅದರಂತೆ ಯಾಗತ್ರಿಕದ್ವಯವೆಂಬ ಕರ್ಮದ್ವಯಗಳಲ್ಲಿ ದೇವತಾತ್ವವು ಇಲ್ಲಿ ವ್ಯಾಸಜ್ಯವೃತ್ತಿಯಾಗಿದೆ. ಅಂದರೆ ಅಮಾವಾಸ್ಯೆಯ ಮೂರು ಯಾಗಗಳು ಮತ್ತು ಪೂರ್ಣಮಾಸಿಯ ಮೂರು ಯಾಗಗಳು ಈ ಆರು ಯಾಗಗಳನ್ನು ಎರಡು ಭಾಗ ಮಾಡಿದರೆ ಯಾಗತ್ರಿಕದ್ವಯವಾಗುತ್ತದೆ. ಈ ತ್ರಿಕದ್ವಯಗಳಲ್ಲಿ ದೇವತಾತ್ವವು ಸಮಾನವಾಗಿ ಆಧೇಯವಾಗಿದೆ.

ಹೀಗೆ ದರ್ಶಪೂರ್ಣಮಾಸಯಾಗವೆಂಬ ಕರ್ಮಗಳೇ ದೇವತೆಯಾಗಿರುವ ಯಾಗವನ್ನು ವಿಕೃತಿಯಲ್ಲಿ ಅತಿದೇಶ ಮಾಡಲು ಹೇಗೆ ಸಾಧ್ಯ ? ಸೌರ್ಯದೇವತಾಕವಾದ ವಿಕೃತಿಯಾಗದಲ್ಲಿ ದರ್ಶಪೂರ್ಣಮಾಸ-ಯಾಗವೆಂಬ ಕರ್ಮವು ದೇವತೆಯಾಗಲು ಸಾಧ್ಯವೇ ಇಲ್ಲ. ದರ್ಶಪೂರ್ಣಮಾಸಯಾಗದಲ್ಲಷ್ಟೇ ದರ್ಶಪೂರ್ಣಮಾಸಯಾಗಗಳೆಂಬ ಕರ್ಮವು ದೇವತೆಯಾಗಬಹುದು. ಅಷ್ಟೆ ಅಲ್ಲದೆ ದರ್ಶಪೂರ್ಣಮಾಸ ಪ್ರಕರಣದಲ್ಲಿ ಒಟ್ಟು ಆರು ಯಾಗಗಳಿವೆ. ಸೌರ್ಯವೆಂಬ ವಿಕೃತಿಯಾಗವು ಸಮುದಾಯರೂಪವಾದ ಈ

ಆರು ಯಾಗಗಳ ವಿಕೃತಿಯಾಗವಲ್ಲ. ಹೊರತು ಈ ಆರು ಯಾಗಗಳ ಸಮುದಾಯದಲ್ಲಿ ಒಂದು ಯಾಗಕ್ಕಷ್ಟೇ ವಿಕೃತಿಯಾಗವಾಗಿದೆ.

ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಸೌರ್ಯಯಾಗವು ಸಮುದಾಯವಿಕಾರವೇ ಹೊರತು ಸಮುದಾಯದ ವಿಕಾರವಲ್ಲ. ಆದರೆ ಪಾರ್ವಣ ಹೋಮವು ಸಮುದಾಯಯಾಗವೇ ದೇವತೆಯಾಗಿಯುಳ್ಳದ್ದು. ಇದನ್ನು ಸಮುದಾಯವಿಕಾರವಾದ ಸೌರ್ಯಯಾಗದಲ್ಲಿ ದೇವತೆಯೆಂದು ಹೇಳಲು ಹೇಗೆ ಸಾಧ್ಯ? ಆದ್ದರಿಂದ ಪೂರ್ವಪಕ್ಷಿಗಳು ಹೇಳುವಂತೆ ಪರ್ವಶಬ್ದಕ್ಕೆ ಅಧಿಕರಣವ್ಯುತ್ಪತ್ತಿಯಿಂದ ಕಾಲವೆಂಬ ಅರ್ಥವನ್ನೂ ಮಾಡಬಾರದು, ಮತ್ತು ಪಾರ್ವಣ ಹೋಮವನ್ನು ವಿಕೃತಿಯಾಗದಲ್ಲಿ ಅತಿದೇಶವನ್ನೂ ಮಾಡಬಾರದು. ಹೊರತಾಗಿ ಪರ್ವಶಬ್ದಕ್ಕೆ ಭಾವವ್ಯುತ್ಪತ್ತಿಯಿಂದ ಕರ್ಮವೆಂಬ ಅರ್ಥವನ್ನು ಮಾಡಬೇಕು. ಮತ್ತು ವಿಕೃತಿಯಾಗದಲ್ಲಿ ಪಾರ್ವಣಹೋಮದ ಅತಿದೇಶವನ್ನು ಮಾಡಬೇಕು.

ಈ ಪಾರ್ವಣಹೋಮಾಧಿಕರಣದಿಂದ ಏನು ತಿಳಿಯಬೇಕೆಂದರೆ ಪೂರ್ವಪಕ್ಷದಲ್ಲಾಗಲೀ ಸಿದ್ಧಾಂತದಲ್ಲಾಗಲೀ ಪಾರ್ವಣಶಬ್ದವನ್ನು ಯೌಗಿಕವೆಂದೇ ಅಂಗೀಕರಿಸಿದ್ದಾರೆ. ಪೂರ್ವಪಕ್ಷಿಗಳು ಅಧಿಕರಣವ್ಯುತ್ಪತ್ತಿಯಿಂದ ಕಾಲವೆಂಬ ಅರ್ಥವನ್ನು ಹೇಳುತ್ತಾರೆ. ಸಿದ್ಧಾಂತಿಗಳು ಭಾವವ್ಯುತ್ಪತ್ತಿಯಿಂದ ಕರ್ಮವೆಂಬ ಅರ್ಥವನ್ನು ಹೇಳುತ್ತಾರೆ. ಏನೇ ಆಗಲಿ ಪಾರ್ವಣಶಬ್ದಕ್ಕೆ ಯೋಗಾರ್ಥವನ್ನೇ ಸ್ವೀಕರಿಸಲು ಬರುವಾಗ ರೂಢ್ಯರ್ಥವನ್ನು ಪೂರ್ವಪಕ್ಷಿಗಳಾಗಲೀ ಸಿದ್ಧಾಂತಿಗಳಾಗಲೀ ಅಂಗೀಕರಿಸಿಲ್ಲ. ಈ ದೃಷ್ಟಾಂತದಂತೆ ಪ್ರಕೃತ ಆಕಾಶಶಬ್ದಕ್ಕೂ ಕೂಡ ಭೂತಾಕಾಶದಲ್ಲಿ ಯೋಗವನ್ನೇ ಹೇಳಲು ಬರುವಾಗ ರೂಢಿಯನ್ನು ಅಂಗೀಕರಿಸಬಾರದು. ಈಗಾಗಲೇ ಹೇಳಿದಂತೆ ಯೋಗವನ್ನು ಅಂಗೀಕರಿಸುವುದರಿಂದ ಲಾಘವವಿದೆ. ಆದ್ದರಿಂದ ಆಕಾಶಶಬ್ದಕ್ಕೆ ಯೋಗಾರ್ಥವು ಕೂಡುವುದಿಲ್ಲ ಎಂಬ ಪೂರ್ವಪಕ್ಷಿಯ ನಿಲುವು ಆಧಾರವಿಲ್ಲದಂತಾಗಿದೆ.

ಆಕಾಶಶಬ್ದಕ್ಕೆ ಭೂತಾಕಾಶದಲ್ಲಿ ಕೇವಲ ಯೋಗವನ್ನು ಹೇಳಬಹುದು. ಆದರೆ ವಿಷ್ಣುವಿನಲ್ಲಿ ಮಹಾಯೋಗದಿಂದ ಆಕಾಶಶಬ್ದದ ಪ್ರಯೋಗವಿದೆ. ಯೋಗಕ್ಕಿಂತ ಮಹಾಯೋಗವು ಬಲಿಷ್ಠವಾದ್ದರಿಂದ ವಿಷ್ಣುವೇ ಆಕಾಶಶಬ್ದವಾಚ್ಯನಾಗುತ್ತಾನೆ. ಆಕಾಶಶಬ್ದದ ಪ್ರವೃತ್ತನಿಮಿತ್ತವಾದ ವಿವರತ್ವವು ಭಗವಂತನಲ್ಲಿರುವುದರಿಂದ ಮಹಾಯೋಗವೃತ್ತಿಯನ್ನು ಹೇಳಿದಿರಿ. ಹಾಗಾದರೆ ಪೂರ್ವಪಕ್ಷದಲ್ಲಿ ವಿವರತ್ವವನ್ನು ಭೂತಾಕಾಶದ ಸ್ವಭಾವವೆಂದು ಹೇಳಿದ್ದು ಮತ್ತು ಸಿದ್ಧಾಂತದಲ್ಲಿ ಭಗವದಧೀನವೆಂದು ಹೇಳಿದ್ದು ಎರಡು ಸಹ ವ್ಯರ್ಥವಲ್ಲವೇ? ಎಂಬ ಪ್ರಶ್ನೆಗೆ 'ಏವಂಚ' ಇತ್ಯಾದಿ ಗ್ರಂಥದಿಂದ ಉತ್ತರಿಸಿದ್ದಾರೆ.

ಭಕ್ಷಮಂತ್ರ್ಯಾಣಾಂ ಯಥಾಲಿಂಗಗ್ರಹಣಾದೌ ವಿನಿಯೋಗಾಧಿಕರಣಮ್
ಲಿಂಗಸಮಾಖ್ಯಾಯಾಂ ಭಕ್ಷಾರ್ಥತಾ ಅನುವಾಕಸ್ಯ - (೩-೨-೧೧)

'ಇಂದ್ರಪೀತಸ್ಯ ನರಾಶಂಸಪೀತಸ್ಯ ಪೀತ್ಯಪೀತಸ್ಯ ಮಧುಮತ ಉಪಹೂತಸ್ಯೋಪಹೂತೋ ಭಕ್ಷಯಾಮಿ'

ಈ ಮಂತ್ರವು ಈ ಅಧಿಕರಣದ ವಿಷಯವಾಕ್ಯವಾಗಿದೆ.

ಸಂಶಯಪೂರ್ವಪಕ್ಷಾದಿಗಳನ್ನು ವಿಚಾರ ಮಾಡುವ ಮೊದಲು ಪ್ರಾಸಂಗಿಕವಾಗಿ ಕೆಲವು ವಿಚಾರಗಳನ್ನು ತಿಳಿದರೆ ಅನುಕೂಲವಾಗುತ್ತದೆ. ಪ್ರಾತಃಸವನ, ಮಾಧ್ಯಂದಿನಸವನ ಹಾಗೂ ಸಾಯಂಸವನಗಳನ್ನು ಅನುಷ್ಠಾನ ಮಾಡುವಾಗ ಸೋಮವನ್ನು ಅಭಿಷವ ಮಾಡಬೇಕು. ಆ ಸೋಮವನ್ನು ಬೇರೆ ಬೇರೆ ಪಾತ್ರೆಗಳಲ್ಲಿ ಇರಿಸಿ, ಆಹುತಿಯನ್ನಾಗಿ ಇಂದ್ರಾದಿ ದೇವತೆಗಳಿಗೆ ನೀಡಬೇಕು. ಒಬ್ಬೊಬ್ಬ ದೇವತೆಗೂ ನೀಡಿ ಉಳಿದದ್ದು ಹವಿಪ್ರದಾನಶೇಷವೆನಿಸುತ್ತದೆ. ಆವಾಗ ಪ್ರಾತಃಸವನಾದಿಗಳು ಇಂದ್ರ, ಅಗ್ನಿ, ಮೊದಲಾದ ದೇವತೆಗಳಿಂದ ಪೀತವಾದ ಶೇಷವುಳ್ಳದ್ದು ಎನಿಸುತ್ತವೆ. ಪಾತ್ರೆಯಲ್ಲಿ ಉಳಿದ ಹವಿಸ್ಸನ್ನು ಭಕ್ಷಣ ಮಾಡಬೇಕಾದರೆ ಮಂತ್ರವನ್ನು ಹೇಳಿ ಭಕ್ಷಿಸಬೇಕೋ? ಅಥವಾ ಹಾಗೆಯೇ ಭಕ್ಷಿಸಬೇಕೋ? ಎಂದು ಸಂಶಯ ಬಂದರೆ, ಮಂತ್ರವನ್ನು ಹೇಳಿಯೇ ಭಕ್ಷಿಸಬೇಕೆಂದು ತಿಳಿಸುವುದಕ್ಕೋಸ್ಕರ 'ಇಂದ್ರಪೀತಸ್ಯ' ಎಂಬ

---

ಭಾಟ್ಟಸಙ್ಗ್ರಹಃ –

**लिङ्गसमाख्याभ्यां भक्षार्थताऽनुवाकस्य ॥ २४ ॥**

**(तस्य रूपोपदेशाभ्यामपकर्षोऽर्थस्य चोदितत्वात् ॥ २५ ॥)**

सामान्यसम्बन्धमपेक्ष्य लिङ्गं विनियोगकमित्यस्य क्वचिदपवादोप्यस्तीत्यत्रोच्यते इति **सङ्गतिः** । ज्योतिष्टोमो हुतस्य सोमरसस्य शेषभक्षणं विहितं 'अभिषुत्याऽऽहवनीये हुत्वा प्रत्यञ्चः परेत्य सदसि सोमं भक्षयन्ति' इति । तस्मिन् भक्षणे ग्रहणावेक्षणनिगिरण-सम्यग्जरणरूपाश्चत्वारो व्यापाराभक्षानुवाकसंज्ञके भक्षमन्त्रे समाम्नाताः । 'भक्षे हि मा विश दीर्घायुत्वाय शन्तनुत्वाय रायस्फोषाय वर्चसे सुप्रजास्त्वाय । एहि वसो पुरोवसो प्रियो मे हृदोऽस्यश्विनोस्त्वा बाहुभ्यां सख्यासम् । नृचक्षसं त्वा देव सोम सुचक्षा अवख्येषम् । हिन्व मे गात्रा हरिवो गणान्मे वा वीतीतृषः । शिवो मे सप्तर्षीनुपतिष्ठस्व मा मेऽवाङ्नाभिमतिगाः । मन्द्राभिभूतिः केतुर्यज्ञानां वाग्जुषणा सोमस्य तृप्यतु । वसुमद्गणस्य रुद्रवद्गणस्य आदित्यवद्गणस्य सोमदेव ते मतिविदः प्रातःसवनस्य माध्यन्दिनस्य सवनस्य तृतीयस्य सवनस्य गायत्रछन्दसस्त्रिष्टुप्छन्दसो जगती-च्छन्दसोऽभिष्टुत इन्द्रपीतस्य नराशँसपीतस्य पितृपीतस्य मधुमत उपहूतस्योपहूतो भक्षयामि'' इति ।

तत्र किं सर्वोऽपि भक्षानुवाकः सोमभक्षणे विनियुज्यते, उत 'एहि वसो' इत्यादिः सख्यासम्' इत्यन्तस्तद्ग्रहणे, 'नृचक्षसम्' इत्यादिः 'अवख्येषम्' इत्यन्तस्तद्दर्शने, 'हिन्व' इत्यादिः 'हे हरिवः सोम मे गात्राणि हिन्व प्रीणय । गणान् इन्द्रियाणि मा वितीतृषः वितृष्णानि मा कुरु । शिवस्सन् मे सप्तर्षीन् चक्षुर्द्वयनासाद्वारद्वय-श्रोत्रद्वयाऽस्यान् उपतिष्ठस्व व्याप्नुहि । मे नाभिमवाक् नाभेरधस्तात् मातिगाः' इति । **पूर्वपक्षस्तु** भक्षणवद्ग्रहणादिकं न साक्षाद्विहित् । किन्तु भक्षणं ग्रहणादिना विना न सम्भवतीत्यर्थतः प्राप्तम् । 'मन्त्रश्च क्रत्वर्थत्वेन विहितमेवार्थं प्रकाशयति' इत्यविहिते

ಶ್ರುತಿಯು ಹೊರಟಿದೆ. ಅನೇಕ ದೇವತೆಗಳಿಗೆ ಆಹುತಿಯನ್ನು ನೀಡಿ ಶಿಷ್ಟವಾದ ಹವಿಸ್ಸುಗಳು ಇರುತ್ತವೆ. ಅವುಗಳನ್ನು ಋತ್ವಿಜರು ಭಕ್ಷಿಸುವಾಗ 'ಇಂದ್ರಪೀತಸ್ಯ' ಎಂಬ ಒಂದೇ ಮಂತ್ರವನ್ನು ಹೇಳಬೇಕು. ಬೇರೆ ಬೇರೆ ಮಂತ್ರಗಳನ್ನು ಹೇಳುವ ಅವಶ್ಯಕತೆ ಇಲ್ಲವೆಂದು ಪೂರ್ವಮೀಮಾಂಸೆಯ ಮೂರನೇ ಅಧ್ಯಾಯ ಎರಡನೆಯ ಪಾದದಲ್ಲಿ ನಿರ್ಧರಿಸಲಾಗಿದೆ.

ಸಂಶಯ - ಇಂದ್ರನಿಗೆ ಸಂಬಂಧಿಸಿದ ಹವಿಪ್ರದಾನಶೇಷದ ಭಕ್ಷಣದಲ್ಲಿ ಇಂದ್ರಪೀತಸ್ಯ ಎಂಬ ಮಂತ್ರವನ್ನು ಹೇಳಬೇಕು ಹೊರತು ಇಂದ್ರನಿಗೆ ಸಂಬಂಧಪಡದ ಅಗ್ನಿ ಮಿತ್ರ ವರುಣ ಮೊದಲಾದವರ ಹವಿಸ್ಸಿನ ಶೇಷವನ್ನು ಭಕ್ಷಿಸುವಾಗ ಈ ಮಂತ್ರವನ್ನು ಪ್ರಯೋಗಿಸದೆ ಅಮಂತ್ರಕವಾಗಿ ಭಕ್ಷಿಸಬೇಕೆಂದು ಹೇಳುತ್ತೀರೋ? ಅಥವಾ ಅಲ್ಲಿಯೂ ಸಹ ಅಗ್ನಿ ಮೊದಲಾದ ಶಬ್ದಗಳನ್ನು ಊಹೆ ಮಾಡಿಕೊಂಡು ಮಂತ್ರವನ್ನು ಪ್ರಯೋಗಿಸಬೇಕೆನ್ನುತ್ತೀರೋ? ಅಥವಾ ಯಾವರೂಪದಲ್ಲಿ ಮಂತ್ರವಿದೆಯೋ ಅದೇ ರೂಪದಲ್ಲಿಯೇ ಉಳಿದ ದೇವತೆಗಳ ಹವಿಸ್ಸಿನ ಶೇಷವನ್ನು ಭಕ್ಷಣ ಮಾಡುವಾಗ ಹೇಳಬೇಕೆನ್ನುತ್ತೀರೋ?

ಮೊದಲನೆಯ ಪೂರ್ವಪಕ್ಷ - ಮೈತ್ರಾವರುಣಸೋಮಭಕ್ಷಣದಲ್ಲಾಗಲೀ ಅಥವಾ ಆಗ್ನೇಯಸೋಮಭಕ್ಷಣದಲ್ಲಾಗಲೀ 'ಇಂದ್ರಪೀತಸ್ಯ' ಎಂಬ ಮಂತ್ರವನ್ನು ಪ್ರಯೋಗಿಸುವುದು ಬೇಡ. ಯಾವುದೇ ಮಂತ್ರವನ್ನು ಉಚ್ಚರಿಸದೆ ಮೌನವಾಗಿ ಸೋಮವನ್ನು ಭಕ್ಷಿಸಬೇಕು. ಒಂದು ವೇಳೆ ಇಂದ್ರಪೀತಸ್ಯ ಎಂಬ ಪದವು ಬಹುವ್ರೀಹಿಸಮಾಸವಾಗಿದ್ದಲ್ಲಿ ಆಗ್ನೇಯಾದಿ ಸೋಮಭಕ್ಷಣದಲ್ಲಿ ಇಂದ್ರಪೀತಸ್ಯ ಎಂಬ ಮಂತ್ರವನ್ನು ಹೇಳಬಹುದು ಎಂದಾಗುತ್ತಿತ್ತು. ಆದರೆ ಬಹುವ್ರೀಹಿ ಎಂದು ಮಾಡಲಾಗದು.

ಅದು ಹೀಗೆ -- 'ಇಂದ್ರೇಣ ಪೀತಃ ಯಸ್ಮಿನ್ ಸಃ ಇಂದ್ರಪೀತಃ, ಎಂದು ಬಹುವ್ರೀಹಿಯನ್ನು ಮಾಡಿದಾಗ 'ಇಂದ್ರನಿಂದ ಕುಡಿಯಲ್ಪಟ್ಟ ಸೋಮದಿಂದ ಕೂಡಿದ ಪ್ರಾತಃಸವನಾದಿಗಳು' ಎಂದರ್ಥವಾಗುತ್ತದೆ. ಈ ಅರ್ಥದಲ್ಲಿ ಇಂದ್ರಪೀತಶಬ್ದವು ಸವನಕ್ಕೆ ವಿಶೇಷಣವಾಗುತ್ತದೆ. ಸವನಕ್ಕೆ ವಿಶೇಷಣವಾದ್ದರಿಂದ ಮೈತ್ರಾವರುಣಾದಿಗಳ ಸೋಮಭಕ್ಷಣದಲ್ಲಿಯೂ ಈ ಮಂತ್ರವನ್ನು ಹೇಳಬಹುದು ಎಂದಂತಾಗುತ್ತದೆ. ಏಕೆಂದರೆ ಈ ಮಂತ್ರದಲ್ಲಿ ಇಂದ್ರನಿಂದ ಪೀತವಾದ ಸೋಮವನ್ನು ಹೇಳಿಲ್ಲ, ಇಂದ್ರನಿಂದ ಪೀತವಾದ ಸೋಮವುಳ್ಳ ಸವನದಲ್ಲಿ ಹವಿಃಶೇಷವನ್ನು ಭಕ್ಷಣ ಮಾಡುತ್ತೇನೆ ಎಂದು ಹೇಳಲಾಗಿದೆ. ಹೀಗೆ ಹೇಳಿದಾಗ ಮೈತ್ರಾವರುಣಾಗ್ನೇಯಮೊದಲಾದ ಸೋಮಭಕ್ಷಣದಲ್ಲಿಯೂ ಈ ಮಂತ್ರವನ್ನು ಪ್ರಯೋಗಿಸಲು ತೊಂದರೆ ಇಲ್ಲ. ಬಹುವ್ರೀಹಿಸಮಾಸ ಮಾಡಿದರಷ್ಟೇ ಹೀಗೆ ಹೇಳಲು ಸಾಧ್ಯ. ಆದರೆ ಬಹುವ್ರೀಹಿ-

---

ग्रहणादौ मन्त्रस्य विनियोगायोगात् कृस्नोप्यनुवाकः 'सख्यासम्' 'अवख्येषम्' इत्यादेर्लक्षणया भक्षणप्रकाशनसामर्थ्यकल्पनेन भक्षण एव विनियुज्यते । तथा च **सूत्रम्, भक्षानुवाकस्य** समस्तस्य **भक्षार्थतैव** । कुतः? **लिङ्गसमाख्याभ्यां** 'भक्षे हि' 'भक्षयामि' इत्यादिलिङ्गात्, भक्षानुवाक इति समाख्यानाच्चेति । **सिद्धान्तस्तु** ग्रहणादेः साक्षाद्विधानाभावेऽपि भक्षविधिनैवार्थात्कर्तव्यतया प्राप्तत्वाद्यथासामर्थ्यं विभज्य विनियोग इति । **फलन्तु** कृस्नाकृस्नविनियोग इति व्यक्तम् ।

ಸಂಶಯಪೂರ್ವಪಕ್ಷಾದಿಗಳನ್ನು ವಿಚಾರ ಮಾಡುವ ಮೊದಲು ಪ್ರಾಸಂಗಿಕವಾಗಿ ಕೆಲವು ವಿಚಾರಗಳನ್ನು ತಿಳಿದರೆ ಅನುಕೂಲವಾಗುತ್ತದೆ. ಪ್ರಾತಃಸವನ, ಮಾಧ್ಯಂದಿನಸವನ ಹಾಗೂ ಸಾಯಂಸವನಗಳನ್ನು ಅನುಷ್ಠಾನ ಮಾಡುವಾಗ ಸೋಮವನ್ನು ಅಭಿಷವ ಮಾಡಬೇಕು. ಆ ಸೋಮವನ್ನು ಬೇರೆ ಬೇರೆ ಪಾತ್ರೆಗಳಲ್ಲಿ ಇರಿಸಿ, ಆಹುತಿಯನ್ನಾಗಿ ಇಂದ್ರಾದಿ ದೇವತೆಗಳಿಗೆ ನೀಡಬೇಕು. ಒಬ್ಬೊಬ್ಬ ದೇವತೆಗೂ ನೀಡಿ ಉಳಿದದ್ದು ಹವಿಪ್ರದಾನಶೇಷವೆನಿಸುತ್ತದೆ. ಆವಾಗ ಪ್ರಾತಃಸವನಾದಿಗಳು ಇಂದ್ರ, ಅಗ್ನಿ, ಮೊದಲಾದ ದೇವತೆಗಳಿಂದ ಪೀತವಾದ ಶೇಷವುಳ್ಳದ್ದು ಎನಿಸುತ್ತವೆ. ಪಾತ್ರೆಯಲ್ಲಿ ಉಳಿದ ಹವಿಸ್ಸನ್ನು ಭಕ್ಷಣ ಮಾಡಬೇಕಾದರೆ ಮಂತ್ರವನ್ನು ಹೇಳಿ ಭಕ್ಷಿಸಬೇಕೋ? ಅಥವಾ ಹಾಗೆಯೇ ಭಕ್ಷಿಸಬೇಕೋ? ಎಂದು ಸಂಶಯ ಬಂದರೆ, ಮಂತ್ರವನ್ನು ಹೇಳಿಯೇ ಭಕ್ಷಿಸಬೇಕೆಂದು ತಿಳಿಸುವುದಕ್ಕೋಸ್ಕರ 'ಇಂದ್ರಪೀತಸ್ಯ' ಎಂಬ

---

ಭಾಟ್ಟಸಙ್ಗ್ರಹಃ –

**ಲಿಙ್ಗಸಮಾಖ್ಯಾಭ್ಯಾಂ ಭಕ್ಷಾರ್ಥತಾऽನುವಾಕಸ್ಯ ॥ ೨೪ ॥**

**(ತಸ್ಯ ರೂಪೋಪದೇಶಾಭ್ಯಾಮಪಕರ್ಷೋऽರ್ಥಸ್ಯ ಚೋದಿತತ್ವಾತ್ ॥ ೨೫ ॥)**

ಸಾಮಾನ್ಯಸಮ್ಬನ್ಧಮಪೇಕ್ಷ್ಯ ಲಿಙ್ಗಂ ವಿನಿಯೋಗಕಮಿತ್ಯಸ್ಯ ಕ್ವಚಿದಪವಾದೋಪ್ಯಸ್ತೀತ್ಯತ್ರೋಚ್ಯತೇ ಇತಿ **ಸಙ್ಗತಿಃ** । ಜ್ಯೋತಿಷ್ಟೋಮೇ ಹುತಸ್ಯ ಸೋಮರಸಸ್ಯ ಶೇಷಭಕ್ಷಣಂ ವಿಹಿತಂ 'ಅಭಿಷುತ್ಯಾऽऽಹವನೀಯೇ ಹುತ್ವಾ ಪ್ರತ್ಯಞ್ಚಃ ಪರೇತ್ಯ ಸದಸಿ ಸೋಮಂ ಭಕ್ಷಯನ್ತಿ' ಇತಿ । ತಸ್ಮಿನ್ ಭಕ್ಷಣೇ ಗ್ರಹಣಾವೇಕ್ಷಣನಿಗಿರಣ-ಸಮ್ಯಗ್ಜರಣರೂಪಾಶ್ಚತ್ವಾರೋ ವ್ಯಾಪಾರಾಭಕ್ಷಾನುವಾಕಸಂಜ್ಞಕೇ ಭಕ್ಷಮನ್ತ್ರೇ ಸಮಾಮ್ನಾತಾಃ । 'ಭಕ್ಷೇ ಹಿ ಮಾ ವಿಶ ದೀರ್ಘಾಯುತ್ವಾಯ ಶನ್ತನುತ್ವಾಯ ರಾಯಸ್ಪೋಷಾಯ ವರ್ಚಸೇ ಸುಪ್ರಜಾಸ್ತ್ವಾಯ । ಏಹಿ ವಸೋ ಪುರೋವಸೋ ಪ್ರಿಯೋ ಮೇ ಹೃದೋऽಸ್ಯಶ್ವಿನೋಸ್ತ್ವಾ ಬಾಹುಭ್ಯಾಂ ಸಖ್ಯಾಸಮ್ । ನೃಚಕ್ಷಸಂ ತ್ವಾ ದೇವ ಸೋಮ ಸುಚಕ್ಷಾ ಅವಖ್ಯೇಷಮ್ । ಹಿನ್ವ ಮೇ ಗಾತ್ರಾ ಹರಿವೋ ಗಣಾನ್ಮೇ ವಾ ವೀತೀತೃಷಃ । ಶಿವೋ ಮೇ ಸಪ್ತರ್ಷೀನುಪತಿಷ್ಠಸ್ವ ಮಾ ಮೇऽವಾङ್ನಾಭಿಮತಿಗಾಃ । ಮನ್ದ್ರಾಭಿಭೂತಿಃ ಕೇತುರ್ಯಜ್ಞಾನಾಂ ವಾಗ್ಜುಷಣಾ ಸೋಮಸ್ಯ ತೃಪ್ಯತು । ವಸುಮದ್ಗಣಸ್ಯ ರುದ್ರವದ್ಗಣಸ್ಯ ಆದಿತ್ಯವದ್ಗಣಸ್ಯ ಸೋಮದೇವ ತೇ ಮತಿವಿದಃ ಪ್ರಾತಃಸವನಸ್ಯ ಮಾಧ್ಯನ್ದಿನಸ್ಯ ಸವನಸ್ಯ ತೃತೀಯಸ್ಯ ಸವನಸ್ಯ ಗಾಯತ್ರಚ್ಛನ್ದಸಸ್ತ್ರಿಷ್ಟುಪ್ಛನ್ದಸೋ ಜಗತೀ-ಚ್ಛನ್ದಸೋऽಭಿಷ್ಟುತ ಇನ್ದ್ರಪೀತಸ್ಯ ನರಾಶಂಸಪೀತಸ್ಯ ಪಿತೃಪೀತಸ್ಯ ಮಧುಮತ ಉಪಹೂತಸ್ಯೋಪಹೂತೋ ಭಕ್ಷಯಾಮಿ'' ಇತಿ ।

ತತ್ರ ಕಿಂ ಸರ್ವೋऽಪಿ ಭಕ್ಷಾನುವಾಕಃ ಸೋಮಭಕ್ಷಣೇ ವಿನಿಯುಜ್ಯತೇ, ಉತ 'ಏಹಿ ವಸೋ' ಇತ್ಯಾದಿಃ ಸಖ್ಯಾಸಮ್' ಇತ್ಯನ್ತಸ್ತದ್ಗ್ರಹಣೇ, 'ನೃಚಕ್ಷಸಮ್' ಇತ್ಯಾದಿಃ 'ಅವಖ್ಯೇಷಮ್' ಇತ್ಯನ್ತಸ್ತದ್ದರ್ಶನೇ, 'ಹಿನ್ವ' ಇತ್ಯಾದಿಃ 'ಹೇ ಹರಿವಃ ಸೋಮ ಮೇ ಗಾತ್ರಾಣಿ ಹಿನ್ವ ಪ್ರೀಣಯ । ಗಣಾನ್ ಇನ್ದ್ರಿಯಾಣಿ ಮಾ ವಿತೀತೃಷಃ ವಿತೃಷ್ಣಾನಿ ಮಾ ಕುರು । ಶಿವಸ್ಸನ್ ಮೇ ಸಪ್ತರ್ಷೀನ್ ಚಕ್ಷುರ್ದ್ವಯನಾಸಾದ್ವಾರದ್ವಯ-ಶ್ರೋತ್ರದ್ವಯಾऽऽಯಾನ್ ಉಪತಿಷ್ಠಸ್ವ ವ್ಯಾಪ್ನುಹಿ । ಮೇ ನಾಭಿಮವಾಕ್ ನಾಭೇರಧಸ್ತಾತ್ ಮಾತಿಗಾಃ' ಇತಿ । **ಪೂರ್ವಪಕ್ಷಸ್ತು** ಭಕ್ಷಣವದ್ಗ್ರಹಣಾದಿಕಂ ನ ಸಾಕ್ಷಾದ್ವಿಹಿತ್ । ಕಿನ್ತು ಭಕ್ಷಣಂ ಗ್ರಹಣಾದಿನಾ ವಿನಾ ನ ಸಮ್ಭವತೀತ್ಯರ್ಥತಃ ಪ್ರಾಪ್ತಮ್ । 'ಮನ್ತ್ರಶ್ಚ ಕ್ರತ್ವರ್ಥತ್ವೇನ ವಿಹಿತಮೇವಾರ್ಥಂ ಪ್ರಕಾಶಯತಿ' ಇತ್ಯವಿಹಿತೇ

ಶ್ರುತಿಯು ಹೊರಟಿದೆ. ಅನೇಕ ದೇವತೆಗಳಿಗೆ ಆಹುತಿಯನ್ನು ನೀಡಿ ಶಿಷ್ಟವಾದ ಹವಿಸ್ಸುಗಳು ಇರುತ್ತವೆ. ಅವುಗಳನ್ನು ಋತ್ವಿಜರು ಭಕ್ಷಿಸುವಾಗ 'ಇಂದ್ರಪೀತಸ್ಯ' ಎಂಬ ಒಂದೇ ಮಂತ್ರವನ್ನು ಹೇಳಬೇಕು. ಬೇರೆ ಬೇರೆ ಮಂತ್ರಗಳನ್ನು ಹೇಳುವ ಆವಶ್ಯಕತೆ ಇಲ್ಲವೆಂದು ಪೂರ್ವಮೀಮಾಂಸೆಯ ಮೂರನೇ ಅಧ್ಯಾಯ ಎರಡನೆಯ ಪಾದದಲ್ಲಿ ನಿರ್ಧರಿಸಲಾಗಿದೆ.

ಸಂಶಯ - ಇಂದ್ರನಿಗೆ ಸಂಬಂಧಿಸಿದ ಹವಿಪ್ರದಾನಶೇಷದ ಭಕ್ಷಣದಲ್ಲಿ ಇಂದ್ರಪೀತಸ್ಯ ಎಂಬ ಮಂತ್ರವನ್ನು ಹೇಳಬೇಕು ಹೊರತು ಇಂದ್ರನಿಗೆ ಸಂಬಂಧಪಡದ ಅಗ್ನಿ ಮಿತ್ರ ವರುಣ ಮೊದಲಾದವರ ಹವಿಸ್ಸಿನ ಶೇಷವನ್ನು ಭಕ್ಷಿಸುವಾಗ ಈ ಮಂತ್ರವನ್ನು ಪ್ರಯೋಗಿಸದೆ ಅಮಂತ್ರಕವಾಗಿ ಭಕ್ಷಿಸಬೇಕೆಂದು ಹೇಳುತ್ತೀರೋ? ಅಥವಾ ಅಲ್ಲಿಯೂ ಸಹ ಅಗ್ನಿ ಮೊದಲಾದ ಶಬ್ದಗಳನ್ನು ಊಹೆ ಮಾಡಿಕೊಂಡು ಮಂತ್ರವನ್ನು ಪ್ರಯೋಗಿಸಬೇಕೆನ್ನುತ್ತೀರೋ? ಅಥವಾ ಯಾವರೂಪದಲ್ಲಿ ಮಂತ್ರವಿದೆಯೋ ಅದೇ ರೂಪದಲ್ಲಿಯೇ ಉಳಿದ ದೇವತೆಗಳ ಹವಿಸ್ಸಿನ ಶೇಷವನ್ನು ಭಕ್ಷಣ ಮಾಡುವಾಗ ಹೇಳಬೇಕೆನ್ನುತ್ತೀರೋ?

ಮೊದಲನೆಯ ಪೂರ್ವಪಕ್ಷ - ಮೈತ್ರಾವರುಣಸೋಮಭಕ್ಷಣದಲ್ಲಾಗಲೀ ಅಥವಾ ಆಗ್ನೇಯಸೋಮಭಕ್ಷಣದಲ್ಲಾಗಲೀ 'ಇಂದ್ರಪೀತಸ್ಯ' ಎಂಬ ಮಂತ್ರವನ್ನು ಪ್ರಯೋಗಿಸುವುದು ಬೇಡ. ಯಾವುದೇ ಮಂತ್ರವನ್ನು ಉಚ್ಚರಿಸದೆ ಮೌನವಾಗಿ ಸೋಮವನ್ನು ಭಕ್ಷಿಸಬೇಕು. ಒಂದು ವೇಳೆ ಇಂದ್ರಪೀತಸ್ಯ ಎಂಬ ಪದವು ಬಹುವ್ರೀಹಿಸಮಾಸವಾಗಿದ್ದಲ್ಲಿ ಆಗ್ನೇಯಾದಿ ಸೋಮಭಕ್ಷಣದಲ್ಲಿ ಇಂದ್ರಪೀತಸ್ಯ ಎಂಬ ಮಂತ್ರವನ್ನು ಹೇಳಬಹುದು ಎಂದಾಗುತ್ತಿತ್ತು. ಆದರೆ ಬಹುವ್ರೀಹಿ ಎಂದು ಮಾಡಲಾಗದು.

ಅದು ಹೀಗೆ -- 'ಇಂದ್ರೇಣ ಪೀತಃ ಯಸ್ಮಿನ್ ಸಃ ಇಂದ್ರಪೀತಃ, ಎಂದು ಬಹುವ್ರೀಹಿಯನ್ನು ಮಾಡಿದಾಗ 'ಇಂದ್ರನಿಂದ ಕುಡಿಯಲ್ಪಟ್ಟ ಸೋಮದಿಂದ ಕೂಡಿದ ಪ್ರಾತಃಸವನಾದಿಗಳು' ಎಂದರ್ಥವಾಗುತ್ತದೆ. ಈ ಅರ್ಥದಲ್ಲಿ ಇಂದ್ರಪೀತಶಬ್ದವು ಸವನಕ್ಕೆ ವಿಶೇಷಣವಾಗುತ್ತದೆ. ಸವನಕ್ಕೆ ವಿಶೇಷಣವಾದ್ದರಿಂದ ಮೈತ್ರಾವರುಣಾದಿಗಳ ಸೋಮಭಕ್ಷಣದಲ್ಲಿಯೂ ಈ ಮಂತ್ರವನ್ನು ಹೇಳಬಹುದು ಎಂದಂತಾಗುತ್ತದೆ. ಏಕೆಂದರೆ ಈ ಮಂತ್ರದಲ್ಲಿ ಇಂದ್ರನಿಂದ ಪೀತವಾದ ಸೋಮವನ್ನು ಹೇಳಿಲ್ಲ, ಇಂದ್ರನಿಂದ ಪೀತವಾದ ಸೋಮವುಳ್ಳ ಸವನದಲ್ಲಿ ಹವಿಃಶೇಷವನ್ನು ಭಕ್ಷಣ ಮಾಡುತ್ತೇನೆ ಎಂದು ಹೇಳಲಾಗಿದೆ. ಹೀಗೆ ಹೇಳಿದಾಗ ಮೈತ್ರಾವರುಣಾಗ್ನೇಯಮೊದಲಾದ ಸೋಮಭಕ್ಷಣದಲ್ಲಿಯೂ ಈ ಮಂತ್ರವನ್ನು ಪ್ರಯೋಗಿಸಲು ತೊಂದರೆ ಇಲ್ಲ. ಬಹುವ್ರೀಹಿಸಮಾಸ ಮಾಡಿದರಷ್ಟೇ ಹೀಗೆ ಹೇಳಲು ಸಾಧ್ಯ. ಆದರೆ ಬಹುವ್ರೀಹಿ-

---

ग्रहणादौ मन्त्रस्य विनियोगायोगात् कृत्स्नोप्यनुवाकः 'सख्यासम्' 'अवख्येषम्' इत्यादेर्लक्षणया भक्षणप्रकाशनसामर्थ्यकल्पनेन भक्षण एव विनियुज्यते । तथा च **सूत्रम्, भक्षानुवाकस्य** समस्तस्य **भक्षार्थतैव** । कुतः? **लिङ्गसमाख्याभ्यां** 'भक्षे हि' 'भक्षयामि' इत्यादिलिङ्गात्, भक्षानुवाक इति समाख्यानाच्चेति । **सिद्धान्तस्तु** ग्रहणादेः साक्षाद्विधानाभावेऽपि भक्षविधिनैवार्थात्कर्तव्यतया प्राप्तत्वाद्यथासामर्थ्यं विभज्य विनियोग इति । **फलन्तु** कृत्स्नाकृत्स्नविनियोग इति व्यक्तम् ।

ಸಮಾಸವನ್ನು ಮಾಡುವುದೇ ತಪ್ಪು. ಏಕೆಂದರೆ ಬಹುವ್ರೀಹಿಸಮಾಸದಲ್ಲಿ ಎರಡು ಪದಗಳಿಗೆ ಸ್ವಾರ್ಥದಲ್ಲಿ ತಾತ್ಪರ್ಯವಿರುವುದಿಲ್ಲ. ಅನ್ಯಪದಾರ್ಥವೇ ಪ್ರಧಾನವಾದ್ದರಿಂದ ಬಹುವ್ರೀಹಿಯು ದುರ್ಬಲವಾಗಿದೆ. ಇದಕ್ಕಿಂತ ತತ್ಪುರುಷವು ಪ್ರಬಲ.

ವಸ್ತುತಃ ತತ್ಪುರುಷದಲ್ಲಿಯೂ ಕೂಡ ಪೂರ್ವಪದಕ್ಕೆ ಸ್ವಾರ್ಥದಲ್ಲಿ ತಾತ್ಪರ್ಯವಿರುವುದಿಲ್ಲ. ಆದರೆ ಉತ್ತರಪದಾರ್ಥಕ್ಕೆ ಸ್ವಾರ್ಥದಲ್ಲಿ ತಾತ್ಪರ್ಯವಿರುವುದರಿಂದ ಬಹುವ್ರೀಹಿಗಿಂತ ಶ್ರೇಷ್ಠವಾಗಿದೆ. ಹೀಗೆ ತತ್ಪುರುಷವನ್ನು ಅನಿವಾರ್ಯವಾಗಿ ಆಶ್ರಯಿಸಬೇಕಾದ್ದರಿಂದ ಮೈತ್ರಾವರುಣಾದಿಗಳ ಸೋಮಭಕ್ಷಣದಲ್ಲಿ ಈ ಮಂತ್ರಕ್ಕೆ ಅವಕಾಶವಿರುವುದಿಲ್ಲ. ಆ ಅರ್ಥವನ್ನು ಪ್ರಕಾಶಿಸುವ ಸಾಮರ್ಥ್ಯವೇ ಇಂದ್ರಪೀತಸ್ಯ ಎಂಬ ಮಂತ್ರಕ್ಕೆ ಇರುವುದಿಲ್ಲ. ತತ್ಪುರುಷಸಮಾಸಮಾಡಿದಾಗ 'ಇಂದ್ರಪೀತ'ಶಬ್ದವು ಸೋಮಭಕ್ಷಣಕ್ಕೆ ವಿಶೇಷಣವಾಗುತ್ತದೆ ಹೊರತು, ಸವನಕ್ಕೆ ವಿಶೇಷಣವಾಗುವುದಿಲ್ಲ.

ಇನ್ನು ಮೈತ್ರಾವರುಣಾದಿ ಸೋಮಭಕ್ಷಣದಲ್ಲಿ ಆಯಾ ದೇವತಾವಾಚಕವಾದ ಪದಗಳನ್ನು ಊಹಿಸಿಕೊಂಡು ಮಂತ್ರವನ್ನು ಪ್ರಯೋಗಿಸಬೇಕೆನ್ನುವುದೂ ಸಹ ತಪ್ಪು. ಏಕೆಂದರೆ ಪ್ರಕೃತಿವಿಕೃತಿ-ಭಾವವಿದ್ದರೆ ಮಾತ್ರ ಊಹೆಯನ್ನು ಮಾಡಬೇಕು. 'ಪ್ರಾಕೃತಸ್ಥಾನಪತಿತಪದಾರ್ಥಾಂತರಕಾರ್ಯತಃ ಊಹಃಪ್ರಯೋಗೋ ವಿಕೃತೇಃ' ಎಂದು ಊಹೆಯ ಲಕ್ಷಣವನ್ನು ಹೇಳಿದ್ದಾರೆ. ಪ್ರಕೃತಿಯಾಗದಲ್ಲಿರುವ ಶಬ್ದವನ್ನೇ ವಿಕೃತಿಯಾಗದಲ್ಲಿ ಪ್ರಯೋಗಿಸದೆ ಬೇರೆ ಶಬ್ದವನ್ನು ಪ್ರಯೋಗಿಸುವುದೇ ಊಹೆ ಎನಿಸುತ್ತದೆ. ಆದರೆ ಪ್ರಕೃತದಲ್ಲಿ ಜ್ಯೋತಿಷ್ಟೋಮವೆಂಬ ಒಂದೇ ಕರ್ಮವು ಪ್ರಸಕ್ತವಾದ್ದರಿಂದ ಪ್ರಕೃತಿವಿಕೃತಿಭಾವವನ್ನು ಹೇಳಲಾಗದು. (ಅಂದರೆ ಜ್ಯೋತಿಷ್ಟೋಮವೆಂಬ ಒಂದೇ ಯಾಗದಲ್ಲಿ ಪ್ರಾತಃಸವನಾದಿಗಳು ಪ್ರಸಕ್ತವಾಗಿವೆ. ಅವುಗಳಲ್ಲಿ ಇಂದ್ರಾದಿ ಅನೇಕದೇವತೆಗಳಿಗೆ ನೀಡಿದ ಹವಿಸ್ಸಿನ ಶೇಷವನ್ನು ಭಕ್ಷಣ-ಮಾಡುವಂತಹ ಸಂದರ್ಭವಿರುತ್ತದೆ. ಹಾಗಾಗಿ ಐಂದ್ರಸೋಮಭಕ್ಷಣಕ್ಕೂ, ಮೈತ್ರಾವರುಣ-ಸೋಮಭಕ್ಷಣಕ್ಕೂ ಪ್ರಕೃತಿವಿಕೃತಿಭಾವವನ್ನು ಹೇಳಲು ಸಾಧ್ಯವಿಲ್ಲ. ಇವೆಲ್ಲವೂ ಸಹ ಕೇವಲ ಅವಾಂತರಕರ್ಮಗಳಾಗಿವೆ. ಈ ಅಂಶವನ್ನು ಗಮನಿಸಬೇಕು.) ಪ್ರಕೃತಿವಿಕೃತಿಭಾವ ಇಲ್ಲದ ಕಾರಣ ಊಹಿಸಿ ಮಂತ್ರಪ್ರಯೋಗ ಮಾಡುವುದು ತಪ್ಪಾಗುತ್ತದೆ. ಆದ್ದರಿಂದ ಮೈತ್ರಾವರುಣಾದಿ ಸೋಮಭಕ್ಷಣಗಳನ್ನು ಅಮಂತ್ರಕವಾಗಿಯೇ ಮಾಡಬೇಕು.

ಎರಡನೆಯ ಪೂರ್ವಪಕ್ಷ - ಮೈತ್ರಾವರುಣಾದಿ ಸೋಮಭಕ್ಷಣದಲ್ಲಿಯೂ ಆಯಾದೇವತೆಗಳ ಶಬ್ದ(ಪದ)ಗಳನ್ನು ಊಹಿಸಿಕೊಂಡು ಮಂತ್ರವನ್ನು ಹೇಳಲೇ ಬೇಕು. ಪ್ರಕೃತಿವಿಕೃತಿಭಾವವಿಲ್ಲದ ಕಾರಣ ಊಹಿಸುವುದು ತಪ್ಪೆಂದು ಪ್ರಥಮಪೂರ್ವಪಕ್ಷಕಾರರು ಹೇಳಿದ್ದಾರಲ್ಲ ಎಂದರೆ ಇಲ್ಲಿ ಪ್ರಕೃತಿ-ವಿಕೃತಿಭಾವವನ್ನು ಹೇಳಬಹುದು. ಒಂದೇ ಕರ್ಮವಾಗಿದ್ದರೂ ಸಹ ಆಯಾ ದೇವತಾಕವಾದ ಐಂದ್ರ-ಪ್ರದಾನವೇ ಬೇರೆ, ಆಗ್ನೇಯಪ್ರದಾನವೇ ಬೇರೆ, ಮೈತ್ರಾವರುಣಪ್ರದಾನವೇ ಬೇರೆ. ಐಂದ್ರಪ್ರದಾನವನ್ನು ಶ್ರುತಿಯಲ್ಲಿ ಹೇಳುವಾಗ ಸೋಮ ಅಭಿಷವ ಮೊದಲಾದ ಧರ್ಮಗಳನ್ನು ಹೇಳಿದ್ದಾರೆ. - ಮೈತ್ರಾ-ವರುಣಪ್ರದಾನವನ್ನು ಹೇಳುವಾಗ ಆ ಅಭಿಷವಾದಿಗಳನ್ನು ಹೇಳಿರುವುದಿಲ್ಲ.

ಆದ್ದರಿಂದ ಪ್ರಕೃತಿವಿಕೃತಿಭಾವಯಾಗದಲ್ಲಿ ಹೇಗೆ ಊಹೆಯನ್ನು ಮಾಡುತ್ತೇವೋ ಆದರಂತೆಯೇ ಇಲ್ಲೂ ಕೂಡ ಸಧರ್ಮಕಪ್ರದಾನವು ಪ್ರಕೃತಿಯಾಗಿದೆ. ಅಧರ್ಮಕಪ್ರದಾನವು ವಿಕೃತಿಯಾಗಿದೆ.

ವಿಕೃತಿಯೆನಿಸಿದ ಅಧರ್ಮಕಪ್ರದಾನದಲ್ಲಿ ಆಯಾದೇವತಾವಾಚಕವಾದ ಪದಗಳನ್ನು ಊಹಿಸಿಕೊಳ್ಳುವುದು ತಪ್ಪಾಗುವುದಿಲ್ಲ. 'ಇಂದ್ರಾಯ ತ್ವಾ ವಸುಮತೇ ಸೋಮಂ ಗೃಹ್ಣಾಮಿ' ಎಂಬ ಮಂತ್ರದಲ್ಲಿ ಸೋಮದ ಅಭಷವವನ್ನು ಹೇಳಿದ್ದಾರೆ. ಇದು ಐಂದ್ರಪ್ರದಾನದ ಧರ್ಮವಾಗಿದೆ. ಇದನ್ನು ಮೈತ್ರಾವರುಣಾದಿ-ಪ್ರದಾನಗಳಲ್ಲಿ ಹೇಳಿರುವುದಿಲ್ಲ. ಆದ್ದರಿಂದ 'ಪ್ರಕೃತಿವತ್ ವಿಕೃತಿಃ ಕರ್ತವ್ಯಾ' ಎಂಬ ವಿಧಿಯಂತೆ ಪದಗಳನ್ನು ಊಹಿಸಿ ಮಂತ್ರವನ್ನು ಉಚ್ಚರಿಸಬೇಕು.

ಪೂರ್ವಮೀಮಾಂಸೆಯಲ್ಲಿ ಬರುವ ಮೂರನೆಯ ಅಧ್ಯಾಯದ ಎರಡನೆಯ ಪಾದದ ೧೧ನೆಯ ಅಧಿಕರಣದಲ್ಲಿ ಸಿದ್ಧಾಂತವನ್ನು ಮಾಡದೆ ಅಧಿಕರಣವನ್ನು ಮುಗಿಸಿದ್ದಾರೆ. ಪುನಃ ಕೃತ್ವಾ ಚಿಂತೆಯನ್ನು ಮಾಡಿ ಮುಂದಿನ ಆರು ಅಧಿಕರಣಗಳಿಂದ ಊಹೆಯನ್ನು ಮಾಡಬಹುದೋ ಇಲ್ಲವೋ? ಎಂದು ವಿಚಾರ ಮಾಡಿದ್ದಾರೆ. ಏಳನೆಯ ಅಧಿಕರಣದಲ್ಲಿ ಇವುಗಳಿಗೆಲ್ಲ ಸಿದ್ಧಾಂತವನ್ನು ಸ್ಥಾಪಿಸಿದ್ದಾರೆ. (ವಸ್ತುತಸ್ತು ವಿಷಯವಾಕ್ಯ, ಸಂಶಯ, ಪೂರ್ವಪಕ್ಷ, ಸಿದ್ಧಾಂತ, ಪ್ರಯೋಜನ ಈ ಐದು ಇದ್ದರೆ ಮಾತ್ರ ಅಧಿ-ಕರಣವೆಂದು ಜ್ಞಾನಿಗಳು ಹೇಳುತ್ತಾರೆ. ಆದರೆ ಪೂರ್ವಮೀಮಾಂಸೆಯ ಈ ಅಧಿಕರಣದಲ್ಲಿ ಕೇವಲ ಪೂರ್ವಪಕ್ಷ ಮಾಡಿ ಮುಗಿಸಿದ್ದಾರೆ. ಇದು ಹೇಗೆ ಎಂಬುದನ್ನು ದೊಡ್ಡವರು ವಿಚಾರ ಮಾಡಬೇಕು.)

ಸಿದ್ಧಾಂತ - ಎರಡನೆಯ ಪೂರ್ವಪಕ್ಷವನ್ನು ಮೊದಲು ನಿರಾಕರಿಸಲಾಗಿದೆ. ಒಂದೇ ಕರ್ಮ-ವಾಗಿದ್ದರೂ ಪ್ರಕೃತಿವಿಕೃತಿಭಾವವನ್ನು ಹೇಳಬಹುದೆಂದು ಆಕ್ಷೇಪಿಸಿದಿರಿ. ಆದರೆ ಒಂದು ಸಧರ್ಮಕ ಮತ್ತೊಂದು ಅಧರ್ಮಕವಾಗಿದ್ದರೆ ಪ್ರಕೃತಿವಿಕೃತಿಭಾವವನ್ನು ಹೇಳಬಹುದಿತ್ತು. ಆದರೆ ಎಲ್ಲವೂ ಸಧರ್ಮಕವೇ ಆಗಿದೆ. ಯಾವರೀತಿಯಾಗಿ ಐಂದ್ರಪ್ರದಾನದಲ್ಲಿ ಸೋಮಅಭಷವಾದಿ ಶಬ್ದಗಳು ಕೇಳಿಸು-ತ್ತಿವೆಯೋ ಆದರಂತೆ ಮೈತ್ರಾವರುಣಪ್ರದಾನದಲ್ಲಿಯೂ ಸೋಮಅಭಷವಾದಿ ಶಬ್ದಗಳು ಕೇಳಿಸುತ್ತಿವೆ.

ಆದ್ದರಿಂದ 'ಇಂದ್ರಾಯ ತ್ವಾ ವಸುಮತೇ ಸೋಮಂ ಗೃಹ್ಣಾಮಿ' ಎಂಬ ಮಾನಗ್ರಹಣ ಮಂತ್ರಕ್ಕೆ ಇಂದ್ರ-ಪ್ರಕಾಶಕಸಾಮರ್ಥ್ಯವಿರುವುದರಿಂದ ಮಂತ್ರವು ಇಂದ್ರಪ್ರದಾನ ಧರ್ಮವಾಗಿದೆ. ಮೈತ್ರಾವರುಣಾದಿ ಮಂತ್ರಗಳಿಗೆ ಇಂದ್ರಪ್ರಕಾಶಸಾಮರ್ಥ್ಯವು ಇರುವುದಿಲ್ಲ. ಈ ಅಂಶದಲ್ಲಿ ವ್ಯತ್ಯಾಸವಿದ್ದರೂ ಪ್ರಕೃತಿವಿಕೃತಿ-ಭಾವವನ್ನು ಹೇಳಲು ಬೇಕಾಗಿರುವ ಸೋಮಅಭಷವಾದಿಶಬ್ದಗಳ ಇರುವಿಕೆ ಇಲ್ಲದಿರುವಿಕೆಯಲ್ಲಿ ವ್ಯತ್ಯಾಸವನ್ನು ಹೇಳಲಾಗದು. ಪ್ರತಿಯೊಂದು ಮಂತ್ರಗಳಲ್ಲಿಯೂ ಸೋಮ ಅಭಷವಾದಿ ಶಬ್ದಗಳನ್ನು ಸಮಾನವಾಗಿ ವಿಧಿಸಿದ್ದರಿಂದ ಪ್ರಕೃತಿವಿಕೃತಿಭಾವವನ್ನು ಹೇಳಲಾಗದು. ಪ್ರಕೃತಿವಿಕೃತಿಭಾವವಿಲ್ಲದ ಕಾರಣ ಇಂದ್ರಪ್ರದಾನದಲ್ಲಿರುವುದನ್ನು ಮೈತ್ರಾವರುಣಪ್ರದಾನಗಳಲ್ಲಿಯೂ ಊಹಿಸಬೇಕೆಂಬ ಎರಡನೆಯ ಪಕ್ಷವು ಸಮಂಜಸವಲ್ಲ.

ಹೀಗೆ ಪೂರ್ವಮೀಮಾಂಸೆಯಲ್ಲಿ ಆರು ಅಧಿಕರಣಗಳಲ್ಲಿ ಕೃತ್ವಾಚಿಂತೆಯ ಮೂಲಕ ಊಹ-ವಿಷಯವನ್ನು ವಿಚಾರ ಮಾಡಿದ್ದಾರೆ. ಏಳನೆಯ ಅಧಿಕರಣದಲ್ಲಿ ಎರಡನೆಯ ಪೂರ್ವಪಕ್ಷವನ್ನು ನಿರಾಕರಿಸಿದ್ದಾರೆ. ಪುನಃ ಮುಂದಿನ ಎರಡು ಅಧಿಕರಣಗಳಲ್ಲಿ ಕೃತ್ವಾಚಿಂತೆಯ ಮೂಲಕ ಪ್ರಥಮಪಕ್ಷವನ್ನೇ ಸಮರ್ಥಿಸಿದ್ದಾರೆ. ಮುಂದಿನ ಅಧಿಕರಣದಲ್ಲಿ ಪ್ರಥಮಪಕ್ಷವನ್ನು ನಿರಾಕರಿಸಿ ಸಿದ್ಧಾಂತವನ್ನು ಸ್ಥಾಪಿಸಿದ್ದಾರೆ.

ಬಹುವ್ರೀಹಿಯನ್ನು ಮಾಡದೇ ತತ್ಪುರುಷವನ್ನೇ ಮಾಡಬೇಕೆಂದು ಪ್ರಥಮಪಕ್ಷದವರ ಆಗ್ರಹ. ಆದರೆ ತತ್ಪುರುಷವನ್ನು ಆಶ್ರಯಿಸಿದರೂ ಕ್ಲೇಶವು ತಪ್ಪಿದ್ದಲ್ಲ. 'ಇಂದ್ರೇಣ ಪೀತಃ ಇಂದ್ರಪೀತಃ' ಎಂದು ತತ್ಪುರುಷ ಮಾಡಿದಾಗ ಇಂದ್ರಪೀತವಾದದ್ದು ಶಿಷ್ಟವಾದ ಸೋಮದ ಅಭಿಷವ ಎಂದಂತಾಗುತ್ತದೆ. ಅಂದರೆ ಸೋಮದ ಅಭಿಷವಕ್ಕೆ ಇಂದ್ರಪೀತವು ವಿಶೇಷಣವಾಯಿತು. ಮತ್ತು ಆ ಮಂತ್ರದಲ್ಲಿ 'ಹೇ ಸೋಮದೇವ = ಎಲೈ ಸೋಮದೇವನೇ!, ತೇ = ಇಂದ್ರನಿಂದ ಪಾನಮಾಡಲ್ಪಟ್ಟ ನಿನ್ನನ್ನು (ಕರ್ಮಾರ್ಥದಲ್ಲಿ ಷಷ್ಠಿ), ನಾನು ಭಕ್ಷಿಸುತ್ತೇನೆ.' ಎಂದು ಅರ್ಥೈಸಬೇಕಾಗುತ್ತದೆ. ಹಾಗೆ ಮಾಡಿದಾಗ ಹುತಾಹುತಸಮುದಾಯದಲ್ಲಿ ಲಕ್ಷಣಾಮಾಡಬೇಕಾಗುತ್ತದೆ. ಆವಾಗ ಮಾತ್ರ ಹೋಮಶೇಷವನ್ನು ಇಟ್ಟುಕೊಳ್ಳಬಹುದು. ಇಂದ್ರಪೀತ-ಶಬ್ದವು ಹುತಾಹುತವಾಚಕಶಬ್ದವಾದ್ದರಿಂದ ಹೋಮದ ಏಕದೇಶವನ್ನು ತೆಗೆದುಕೊಂಡರೆ ಏಕದೇಶ-ಲಕ್ಷಣಾಪ್ರಸಂಗ ಬರುತ್ತದೆ. ತತ್ಪುರುಷದಲ್ಲಿಯೂ ಏಕದೇಶಲಕ್ಷಣಾಪ್ರಸಂಗವಿರುವುದರಿಂದ ಬಹುವ್ರೀಹಿ-ಯನ್ನು ಆಶ್ರಯಿಸಬೇಕು. ಆವಾಗ ಇಂದ್ರಪೀತಶಬ್ದವು ಸೋಮದಲ್ಲಿ ವಿಶೇಷಣವಾಗದೇ ಪ್ರಾತಃಸವನದಲ್ಲಿ ವಿಶೇಷಣವಾಗುತ್ತದೆ.

ಆದ್ದರಿಂದ ಈ ಮಂತ್ರವನ್ನು ಇಂದ್ರಸೋಮಶೇಷಭಕ್ಷಣದಲ್ಲಿ ಹೇಳುವಂತೆ ಮೈತ್ರಾವರುಣಶೇಷ-ಭಕ್ಷಣದಲ್ಲಿಯೂ ಹೇಳಬಹುದು. ಏಕೆಂದರೆ ಇಂದ್ರಪೀತದಿಂದ ಕೂಡಿರುವಂತಹದ್ದು ಪ್ರಾತಃಸವನ, ಆದರಲ್ಲಿ ಈ ಮಂತ್ರವನ್ನು ಹೇಳಬೇಕು. ಆವಾಗ ಇಂದ್ರನಿಂದ ಪೀತವಾದ ಪ್ರಾತಃಸವನಕ್ಕೆ ಸಂಬಂಧಿಸಿದ ಸೋಮವನ್ನು ನಾನು ಭಕ್ಷಿಸುತ್ತೇನೆ ಎಂದಂತಾಯಿತು. ಇದನ್ನು ಪ್ರತಿಯೊಬ್ಬ ದೇವತೆಗಳ ಹೋಮಶೇಷದ ಭಕ್ಷಣದಲ್ಲಿ ಸುಲಭವಾಗಿ ಉಚ್ಚರಿಸಬಹುದು. ಇಷ್ಟು ಸಿದ್ಧಾಂತ.

ಪೂರ್ವಮೀಮಾಂಸಾದಲ್ಲಿ ಪ್ರಥಮ ಹಾಗೂ ದ್ವಿತೀಯಪಕ್ಷಗಳನ್ನು ಪೂರ್ವಪಕ್ಷ ಮಾಡಿ ಅನಂತರ ಆರು ಅಧಿಕರಣಗಳಿಂದ ಕೃತ್ವಾಚಿಂತೆಯನ್ನು ಮಾಡಿದ್ದಾರೆ. ಅವುಗಳಲ್ಲಿ ಒಂದನ್ನು ವಿಚಾರ ಮಾಡೋಣ.

ಅಭ್ಯುನ್ನೀತಸೋಮಭಕ್ಷಣಾಧಿಕರಣಮ್
ಪುನರಭ್ಯುನ್ನೀತೇಷು ಸರ್ವೇಷಾಮುಪಲಕ್ಷಣಂ ದ್ವಿಶೇಷತ್ವಾತ್ (೩-೨-೨೯)

ಜ್ಯೋತಿಷ್ಟೋಮಪ್ರಕರಣದಲ್ಲಿ ಒಟ್ಟು ಹತ್ತು ಚಮಸಗಳಿವೆ. ಪಾತ್ರವಿಶೇಷದಲ್ಲಿ ಇಡಲ್ಪಟ್ಟ ಸೋಮರಸವೇ ಚಮಸ ಎನಿಸುತ್ತದೆ. (ಅಂದರೆ ಒಟ್ಟು ಹತ್ತುಪಾತ್ರೆಗಳಲ್ಲಿ ಸೋಮರಸವನ್ನು ಇಟ್ಟಿರುತ್ತಾರೆಂದರ್ಥ). ಜ್ಯೋತಿಷ್ಟೋಮದಲ್ಲಿ ಪ್ರಧಾನವಾಗಿ ಹೋಮ ಮಾಡುವವರು ನಾಲ್ಕು ಮಂದಿ - ಬ್ರಹ್ಮ, ಉದ್ಗಾತೃ, ಯಜಮಾನ, ಹೋತೃ ಎಂದು. ಈ ನಾಲ್ಕುಮಂದಿಗೆ ನಾಲ್ಕು ಚಮಸಗಳು ವಿಹಿತವಾಗಿವೆ.

---

ಭಾಟ್ಟಸಙ್ಗ್ರಹಃ –

**ಪುನರಭ್ಯುನ್ನೀತೇಷು ಸರ್ವೇಷಾಮುಪಲಕ್ಷಣಂ ದ್ವಿಶೇಷತ್ವಾತ್ ॥ ೨೯ ॥**
**(ಅಪನಯಾದ್ವಾ ಪೂರ್ವಸ್ಯಾನುಪಲಕ್ಷಣಮ್ ॥೩೦ ॥ ಗ್ರಹಣಾದ್ವಾऽಪನಯಃ ಸ್ಯಾತ್ ॥ ೩೧ ॥**
ಜ್ಯೋತಿಷ್ಟಮೋ ಸನ್ತಿ ದಶ ಚಮಸಾಃ । ಬ್ರಹ್ಮೋದ್ಗಾತೃಯಜಮನಹೋತೃಸಂಜ್ಞಕಾನಾಂ ಮಧ್ಯತಃಕಾರಿಣಾಂ

ಆಪ್ರಧಾನವಾಗಿ ಹೋಮ ಮಾಡುವವರು ಐದುಮಂದಿ - ಮೈತ್ರಾವರುಣ, ಬ್ರಾಹ್ಮಣಾಚ್ಛಂಸಿ, ಹೋತೃ, ನೇಷ್ಟೃ, ಆಗ್ನೀಧ್ರ. ಈ ಐದು ಮಂದಿಗೆ ಐದು ಚಮಸಗಳು ವಿಹಿತವಾಗಿವೆ. ಉಳಿದ ಒಂದು ಚಮಸವು ಆಚ್ಛಾವಾಕನಿಗೆ ವಿಹಿತವಾಗಿದೆ. ಮೈತ್ರಾವರುಣನು 'ಮಿತ್ರಂ ವಯಂ ಹವಾಮಹೇ' ಎಂಬ ಮಂತ್ರದಿಂದ ಮಿತ್ರಾವರುಣರನ್ನು ಹೋಮಿಸುತ್ತಾನೆ. ಬ್ರಾಹ್ಮಣಾಚ್ಛಂಸಿಯು 'ಇಂದ್ರ ತ್ವಾ ವೃಷಭಂ ವಯಮ್' ಎಂಬ ಮಂತ್ರದಿಂದ ಇಂದ್ರನನ್ನು, ಹೋತೃವು 'ಮರುತೋ ಯಸ್ಯ ಹಿ ಕ್ಷಯೇ' ಎಂಬ ಮಂತ್ರದಿಂದ ಮರುತ್ತನನ್ನೂ, ನೇಷ್ಟೃವು 'ಅಗ್ನೇ ತ್ವಕ್ಷೀರಿಹಾವಹ' ಎಂಬ ಮಂತ್ರದಿಂದ ತ್ವಷ್ಟೃ ಮತ್ತು ತ್ವಷ್ಟೃಪತ್ನಿಯನ್ನು, ಆಗ್ನೀಧ್ರನು 'ಉಕ್ಷಾ ನಾಯ ವಶಾಂ ನಾಯ' ಎಂಬ ಮಂತ್ರದಿಂದ ಅಗ್ನಿಯನ್ನು ಕುರಿತು ಹೋಮಿಸುತ್ತಾರೆ. ಪ್ರಧಾನವಾಗಿ ಹೋಮ ಮಾಡುವ ನಾಲ್ಕು ಮಂದಿ ನಾಲ್ಕು ಚಮಸಗಳಿಂದ ಇಂದ್ರನನ್ನು ಉದ್ದೇಶಿಸಿ ಎರಡು ಬಾರಿ ಹೋಮಿಸಬೇಕು. ಐದು ಮಂದಿ ಹೋತೃಕರು ಐದು ಚಮಸಗಳಿಂದ ಇಂದ್ರನನ್ನೇ ಉದ್ದೇಶಿಸಿ ಹೋಮಿಸಬೇಕು. ಅನಂತರ ಇಂದ್ರಶೇಷವನ್ನು ಭಕ್ಷಣ ಮಾಡದೆ ಇಂದ್ರಶಿಷ್ಟವಾದ ಅದೇ ಪಾತ್ರೆಯಲ್ಲಿ ದೊಡ್ಡ ಪಾತ್ರೆಯಲ್ಲಿರುವ ಸೋಮವನ್ನು ಪುನಃ ಬೆರೆಸಿಕೊಂಡು ಮಿತ್ರಾವರುಣ, ಇಂದ್ರ, ಮರುತ್ವತ್ಸ್ತೋ, ತ್ವಷ್ಟೃ, ಅಗ್ನಿ ಮೊದಲಾದ ಉಳಿದ ದೇವತೆಗಳನ್ನು ಕುರಿತು ಹೋಮಿಸಬೇಕು.

---

चत्वारश्चमसाः । मैत्रावरुणब्राह्मणाच्छंसिपोतृनेष्ट्राग्नीध्रसंज्ञाकानां होतृकशब्दितानां पञ्च । अच्छावाकस्यैकः । तत्र मध्यतःकारिणां चतुर्भिश्चमसैरिन्द्रमुद्दिश्य द्विहोतव्यम् । होतृकाणां तु चमसैः पञ्चभिरिन्द्रमेवोद्दिश्य सकृद्धोमं विधायाभक्षितेषु सशेष्वेव तेषु द्रोणकलशात्सोमं पुनरानीय मित्रावरुणेन्द्रमरुत्पत्नीवत्त्वष्ट्रग्रादिभ्यो देवातन्तरेभ्यो हुत्वा भक्ष्यते । अच्छावाकचमसस्तु भक्षोत्तरकालमानेष्यते । तत्र होतृकाणां चसमेष्विन्द्रस्य मित्रावरुणादीनां च शेषोऽस्ति । तस्मिन् भक्ष्यमाणे **सन्देहः** मित्रावरुणपीतस्येत्येवाहेः कर्याः, उत इन्द्रमित्रावरुणपीतस्येति । **पूर्वपक्षस्तु** इन्द्रपीतशेषस्याप्युपादाने हि इन्द्रपीतस्य मित्रावरुणपीतस्य सोमस्य शेषं भक्षयामीत्यर्थः स्यात् । नच तत्र इन्द्रपीतसोमस्य शेषोऽस्ति । अभ्युन्नीतस्य पूर्वतनशेषेण सह मित्रावरुणादिभ्यो दत्तत्वेन तेभ्यो दत्तशेषस्य इन्द्रसम्बन्धाभावान्मित्रावरुणपीतस्येत्येवोहः कार्य इति ।

**सिद्धान्तस्तु** द्रोणकलशादानयनं करिष्यमाणां मित्रावरुणादियागार्थमिति बुद्ध्वा आनीयमानस्यैव मित्रावरुणादिदेवतासम्बन्धावगमेन पूर्वशेषस्य इन्द्रदेवतासम्बन्धानपायात् इन्द्रमित्रावरुणपीतस्येत्येवाहः कार्य इति । तथा च **सूत्रम् । पुनरभ्युन्नीतेषु** हुत्वा भक्ष्यमाणेषु पूर्वदेवतानामभ्युन्नीतदेवतानां **चोपलक्षणत्वम् ।** कुतः? भक्ष्यमाणस्य **द्विशेषत्वात्** इति । **फलन्तु** इन्द्रपदानुपादानोपादाने ।

इति द्वादशमभ्युन्नीतसोमभक्षणाधिकरणम् (सूत्राणि २९-३१)

ಆನಂತರ ಪಾತ್ರೆಯಲ್ಲಿ ಉಳಿದ ಶೇಷವನ್ನು ಭಕ್ಷಿಸಬೇಕು. ಅಚ್ಛಾವಾಕನ ಚಮಸವು ಒಂಭತ್ತು-ಕಲಶದಲ್ಲಿರುವ ಹೋಮಶೇಷವನ್ನು ಭಕ್ಷಿಸಿದ ಅನಂತರ ತರಬೇಕು. ಹೀಗಿರಬೇಕಾದರೆ ಐದು ಮಂದಿ ಹೋತೃಕರಿಗೆ ಸಂಬಂಧಿಸಿದ ಚಮಸಪಾತ್ರೆಗಳಲ್ಲಿ ಇಂದ್ರ ಹಾಗೂ ಮಿತ್ರಾವರುಣಾದಿಗಳ ಶೇಷವು ಇದೆ. ಇದನ್ನು ಭಕ್ಷಿಸುವಾಗ ಸಂದೇಹ ಬರುತ್ತದೆ. ಮೈತ್ರಾವರುಣಚಮಸಪಾತ್ರೆಯಲ್ಲಿ ಮಿತ್ರಾವರುಣನಿಗೆ ಆಹುತಿ ನೀಡಿ ಉಳಿದ ಸೋಮರಸವಿದೆ. ಅದನ್ನು ಭಕ್ಷಿಸುವಾಗ 'ಮಿತ್ರಾವರುಣಶೇಷಂ ಭಕ್ಷಯಾಮಿ' ಎಂದು ಊಹಿಸಬೇಕು. ಇದರಂತೆ ಹೋತೃಚಮಸಪಾತ್ರಾದಿಗಳಲ್ಲಿರುವ ಶೇಷವನ್ನು ಭಕ್ಷಿಸುವಾಗ 'ಮರುಚ್ಛೇಷಂ ಭಕ್ಷಯಾಮಿ' ಎಂದು ಊಹಿಸಬೇಕು.ಆದ್ದರಿಂದ ಮಿತ್ರಾವರುಣಪೀತಸ್ಯ ಎಂದು ಊಹಿಸಬೇಕೋ? ಅಥವಾ ಇಂದ್ರಶಿಷ್ಟವೂ ಆಗಿದ್ದರಿಂದ ಇಂದ್ರಶಬ್ದವನ್ನು ಬಿಡದೆ 'ಇಂದ್ರಮಿತ್ರಾವರುಣಪೀತಸ್ಯ' ಎಂದು ಉಚ್ಚರಿಸಬೇಕೋ?

ಪೂರ್ವಪಕ್ಷ - ಇಂದ್ರಶಬ್ದವನ್ನು ಉಪಲಕ್ಷಣಯಾ ಇಟ್ಟುಕೊಳ್ಳುವ ಆವಶ್ಯಕತೆ ಇಲ್ಲ. ಏಕೆಂದರೆ ದೊಡ್ಡ ಪಾತ್ರೆಯಿಂದ ಇಂದ್ರಶಿಷ್ಟವಾದ ಪಾತ್ರೆಯಲ್ಲೇ ಸೋಮವನ್ನು ಹಾಕುವಾಗ ದೇವತೆಯನ್ನು ನಿರ್ದೇಶಿಸಿರುವುದಿಲ್ಲ. ಕೇವಲ ಯಾಗ ಮಾಡುವ ಸಂದರ್ಭದಲ್ಲಷ್ಟೇ ದೇವತೆಯ ನಿರ್ದೇಶವಿದೆ. ಒಂದು ವೇಳೆ ಇಂದ್ರಶಬ್ದವನ್ನು ಉಪಲಕ್ಷಣಯಾ ಇಟ್ಟುಕೊಂಡಲ್ಲಿ ಇಂದ್ರಪೀತವಾದ ಮತ್ತು ವರುಣಪೀತವಾದ ಸೋಮದ ಶೇಷವನ್ನು ಭಕ್ಷಿಸುತ್ತೇನೆ ಎಂದರ್ಥವಾದೀತು. ಆದರೆ ಇಂದ್ರಪೀತವಾದ ಸೋಮದ ಶೇಷವನ್ನು ಹೇಳಲು ಸಾಧ್ಯವಿಲ್ಲ. ಯಾವ ಕಾಲದಲ್ಲಿ ದೊಡ್ಡಪಾತ್ರೆಯಲ್ಲಿರುವ ಸೋಮವನ್ನು ಇಂದ್ರಶಿಷ್ಟಪಾತ್ರೆಗೆ ಬೆರೆಸಿ ಅದರಿಂದ ಮಿತ್ರಾವರುಣರಿಗೆ ಆಹುತಿಯನ್ನು ನೀಡಿದ ಮೇಲೆ ಉಳಿದ ಭಾಗವು ಮಿತ್ರಾವರುಣ-ಶೇಷವೇ ಆಗುತ್ತದೆ ಹೊರತು, ಇಂದ್ರಶೇಷವೆನಿಸುವುದಿಲ್ಲ. ಆ ಶಿಷ್ಟವಾದ ಭಾಗಕ್ಕೂ ಇಂದ್ರನಿಗೂ ಯಾವುದೇ ಸಂಬಂಧವಿರುವುದಿಲ್ಲ. ಆದ್ದರಿಂದ ಇಂದ್ರಶಬ್ದವನ್ನು ಉಪಲಕ್ಷಣಯಾ ಸೇರಿಸದೆ ಮಿತ್ರಾ-ವರುಣಶಬ್ದವನ್ನು ಊಹಿಸಿ ಮಂತ್ರವನ್ನು ಉಚ್ಚರಿಸಬೇಕು.

ಸಿದ್ಧಾಂತ - ವಸ್ತುತಃ ದೊಡ್ಡಪಾತ್ರೆಯಿಂದ ಸೋಮವನ್ನು ಬೆರೆಸುವಾಗ ದೇವತೆಯ ನಿರ್ದೇಶ-ವಿರುವುದಿಲ್ಲ. ಆದರೂ ಸಹ ಯಾವುದೇ ವ್ಯಕ್ತಿಯು ಸೋಮರಸವನ್ನು ಬೆರೆಸುವಾಗ ಮುಂದೆ ಮಾಡುವಂತಹ ಯಾಗಕ್ಕೋಸ್ಕರವೇ ಈ ದ್ರವ್ಯವನ್ನು ಸೇರಿಸುತ್ತೇನೆಂದು ಸಂಕಲ್ಪಿಸಿರುತ್ತಾನೆ. ಆ ಯಾಗದ ದೇವತೆಗೆ ಈ ದ್ರವ್ಯವು ಸಂಬಂಧಿಸುತ್ತದೆ ಹೊರತು ಬೇರೆ ದೇವತೆಗೆ ಸಂಬಂಧಿಸಿರುವುದಿಲ್ಲವೆಂದು ತಿಳಿದಿರುತ್ತಾನೆ. ಆದ್ದರಿಂದ ಸೋಮರಸವು ಮಿತ್ರಾವರುಣರಿಗೆ ಸಂಬಂಧಿಸಿದೆಯೆಂದು ಸ್ಪಷ್ಟವಾಗುತ್ತದೆ. ಮತ್ತು ಪೂರ್ವಶಿಷ್ಟವಾದ ದ್ರವ್ಯವು ಇಂದ್ರನಿಗೂ ಸಂಬಂಧಪಟ್ಟಿರುತ್ತದೆ. ಆದ್ದರಿಂದ ಇಂದ್ರಪದವನ್ನೂ ಸಹ ಉಪಲಕ್ಷಣಯಾ ಇಟ್ಟುಕೊಂಡು 'ಇಂದ್ರಮಿತ್ರಾವರುಣಪೀತಸ್ಯ' ಎಂದು ಉಚ್ಚರಿಸಬೇಕು. ಸಕಲ-ದೇವತಾವಾಚಕವಾದ ಪದಗಳನ್ನು ಊಹಿಸುವುದು ತಪ್ಪಲ್ಲ.

ವಸ್ತುತಸ್ತು ಪರಮಸಿದ್ಧಾಂತದಲ್ಲಿ ಬಹುವ್ರೀಹಿಯನ್ನೇ ಆಶ್ರಯಿಸಿದ ಇಂದ್ರಪೀತವು ಸವನಕ್ಕೆ ವಿಶೇಷಣವೆಂದು ಸಮರ್ಥಿಸುತ್ತಾರೆ. ಬಹುವ್ರೀಹಿಸಮಾಸವನ್ನು ಆಶ್ರಯಿಸಿದಾಗ ಇಂದ್ರಪೀತವಾದದ್ದು ಪ್ರಾತಃಸವನವಾಗುತ್ತದೆ. ಆದಕ್ಕೆ ಸಂಬಂಧಿಸಿದ ಸೋಮವನ್ನು ನಾನು ಭಕ್ಷಿಸುತ್ತೇನೆ ಎಂದು ಇಂದ್ರಪೀತ

ಮಂತ್ರದ ಅರ್ಥ. ಈ ಅರ್ಥವನ್ನು ವಿವಕ್ಷಿಸಿದಾಗ ಮೈತ್ರಾವರುಣಾದಿಶಬ್ದಗಳನ್ನು ಊಹಿಸದೆ ಮೈತ್ರಾವರುಣಾದಿ ಶೇಷಭಕ್ಷಣದಲ್ಲಿಯೂ ಯಥಾಸ್ಥಿತವಾಗಿ ಈ ಮಂತ್ರವನ್ನು ಉಚ್ಚರಿಸಬಹುದು. ಆದರೆ ಮಿತ್ರಾವರುಣಾದಿ- ಶಬ್ದಗಳನ್ನು ಊಹಿಸಬೇಕೆಂದು ಅನೇಕ ಅಧಿಕರಣಗಳು ಕೃತ್ವಾಚಿಂತೆಯಿಂದ ಪೂರ್ವಪಕ್ಷವನ್ನೇ ಉಪೋದ್ಬಲಿಸುತ್ತಿವೆ. ಅದಕ್ಕೋಸ್ಕರ ಈ ಒಂದು ಅಧಿಕರಣವನ್ನು ಉದಾಹರಣೆಯಾಗಿ ನೀಡಿದ್ದೇವೆ.

ವಸ್ತುತಸ್ತು 'ಇಂದ್ರಪೀತಸ್ಯ' ಎಂಬ ಮಂತ್ರವನ್ನು ಊಹಿಸಬಾರದೆಂಬುದು ಪರಮಸಿದ್ಧಾಂತ. ಆದರೂ ಕೂಡ ಊಹೆಯನ್ನು ಅಂಗೀಕರಿಸಿ, ಅನೇಕ ಅಧಿಕರಣಗಳು ಇಲ್ಲಿ ಹೊರಟಿವೆ. ಇದರಂತೆ ಪ್ರಕೃತದಲ್ಲಿಯೂ ಸಹ ಆಕಾಶಶಬ್ದದ ಪ್ರವೃತ್ತಿನಿಮಿತ್ತಗಳು ಮಹಾಯೋಗವೃತ್ತಿಯಿಂದ ಭಗವಂತನಲ್ಲಿಯೇ ಇವೆ. ಪುನಃ 'ಆ ಪ್ರವೃತ್ತಿನಿಮಿತ್ತವು ಜಡವಾದ ಆಕಾಶದಲ್ಲಿದೆ' ಎಂಬ ಪೂರ್ವಪಕ್ಷವನ್ನಾಗಲೀ, 'ಇಲ್ಲ'ವೆಂಬ ಸಿದ್ಧಾಂತವನ್ನಾಗಲೀ ಮಾಡುವ ಅವಶ್ಯಕತೆ ಇಲ್ಲ. ಆದರೂ ಕೂಡ ಸ್ವಭಾವ-ನಿಯಾಮಕತ್ವವೆಂಬ ಮಹಾಗುಣದ ಸಿದ್ಧಿಗೋಸ್ಕರ ಕೃತ್ವಾಚಿಂತೆಯನ್ನು ಮಾಡಲಾಗಿದೆ. ಹೀಗೆ ಪ್ರಸಿದ್ಧವಾದ ವಿವರತ್ವಾದಿಪ್ರವೃತ್ತಿನಿಮಿತ್ತಗಳನ್ನು ಈಶಗತವೆಂದು ಸಮರ್ಥಿಸಿದ್ದಾಯಿತು. ಇದರಿಂದ ಆಕಾಶಶಬ್ದದ ಕ್ಲೃಪ್ತ(ಪ್ರಮಾಣಸಿದ್ಧವಾದ)ಯೋಗವು ಭಗವಂತನಲ್ಲಿ ಸಿದ್ಧವಾಯಿತು. ಅಷ್ಟೇ ಅಲ್ಲ ಕಲ್ಪ್ಯವಾದ ಯೋಗವೂ ಸಹ ಭಗವಂತನಲ್ಲಿಯೇ ಇರುತ್ತದೆಂದು ಬೇರೆ ಗ್ರಂಥಗಳಿಂದ ತಿಳಿಯಬೇಕು. ಆಕಾಶಶಬ್ದವು ಭಗವಂತನಲ್ಲಿ ಯೋಗವೃತ್ತಿಯಿಂದ ಇದೆ ಎನ್ನಲು ಭೂತಾಕಾಶದಲ್ಲಿ ಪ್ರಸಿದ್ಧವಾದ ರೂಢಿಯು ಬಾಧಕವಾಗುತ್ತದೆ ಎಂದು ಪೂರ್ವಪಕ್ಷಿಯು ಶಂಕಿಸಿದ್ದ. ಆದರೆ ರೂಢಿಯೂ ಸಹ ಭಗವಂತನಲ್ಲಿದೆ ಎಂದು ಇದುವರೆಗೂ ಸಮರ್ಥಿಸಿದರು. ಆದ್ದರಿಂದ ಆಕಾಶಶಬ್ದದ ಯೋಗವೃತ್ತಿಯನ್ನೇಕೆ ಭಾಷ್ಯಕಾರರು ಹೇಳಿಲ್ಲ? ಎಂಬ ಶಂಕೆಗೆ ಅವಕಾಶವಿಲ್ಲ. ಈ ಎಲ್ಲ ವಿಷಯವನ್ನು 'ಆಸಮಂತಾತ್' ಎಂಬ ಗ್ರಂಥವು ನಿರೂಪಿಸಿದೆ.

ಛಾಂದೋಗ್ಯಭಾಷ್ಯದ ಅಷ್ಟಮಾಧ್ಯಾಯದ ಪ್ರಥಮಖಂಡದಲ್ಲಿ 'ಆಸಮಂತಾತ್ ಕಾಶನಾತ್ ಆಕಾಶಃ' 'ಆಸಮಂತಾತ್ ಕಂ ಅಶ್ನಾತೀತಿ ವಾ' ಎಂಬ ಮಾತನ್ನು ಇಲ್ಲಿ ಸ್ಮರಿಸಿಕೊಳ್ಳಬೇಕು. ಆಕಾಶಶಬ್ದದ ಯೋಗವೃತ್ತಿಯನ್ನು ಈ ಅಧಿಕರಣದಲ್ಲಿ ಭಾಷ್ಯಕಾರರು ಹೇಳದಿರಲು ಛಾಂದೋಗ್ಯಭಾಷ್ಯದಲ್ಲಿ ಹೇಳಿದ್ದಾಗಿದೆ ಎಂಬುದು ಒಂದು ಕಾರಣ. ಮತ್ತೊಂದು ಕಾರಣ ಪೂರ್ವಪಕ್ಷಿಗೆ ಅಭಿಮತವಾದ ರೂಢ್ಯರ್ಥವೇ ಭಗವಂತನಲ್ಲಿ ಇದೆ ಎಂದು ಸಮರ್ಥಿಸುವಿಕೆ. ಹಾಗಾದರೆ ಸನ್ನ್ಯಾಯರತ್ನಾವಲಿಯಲ್ಲಿ ಯೋಗ ಮತ್ತು ರೂಢಿ ಎರಡನ್ನೂ ಹೇಳಿದ್ದಾರಲ್ಲ? ಎಂದರೆ ರೂಢ್ಯರ್ಥದ ಜೊತೆಗೆ ಯೋಗಾರ್ಥವೂ ಇದೆ ಎಂದು ತಿಳಿಸುವ ಅಭಿಪ್ರಾಯದಿಂದ ಮಾತ್ರ ಹಾಗೆ ಹೇಳಿದ್ದಾರೆ. ಮಹಾಯೋಗವನ್ನು ಸಮರ್ಥಿಸುವುದರಿಂದ ವಿದ್ವದ್ರೂಢಿಯೂ ಸಿದ್ಧವಾಗುತ್ತದೆಂದು 'ವಿದ್ವದ್ರೂಢಿರ್ವೈದಿಕಾ ಸ್ಯಾತ್ ಸಾ ಯೋಗಾದೇವ ಲಭ್ಯತೇ' ಎಂದು ಅನುವ್ಯಾಖ್ಯಾನದಲ್ಲಿ ಹೇಳಿದ್ದಾರೆ. 'ಯಾವಾನ್ವಾऽಯಮಾಕಾಶಃ' 'ಆಕಾಶೋ ವೈ ನಾಮ' 'ಯೋಯಂ ಬಹಿರ್ಧಾ ಪುರುಷಾದಾಕಾಶಃ' ಎಂದು ಆಕಾಶಶಬ್ದವು ವೈದಿಕವೆಂದು ಸಿದ್ಧವಾಗುತ್ತದೆ. ಹೀಗೆ ಹೇಳಿದ್ದರಿಂದ ಆಕಾಶದಲ್ಲಿ ಪ್ರಸಿದ್ಧವಾದ ರೂಢಿಯನ್ನು ಯೋಗವು ಹೇಗೆ ತಾನೆ

ಅಪಹರಿಸುತ್ತದೆ? ಎಂಬ ಶಂಕೆಯನ್ನು ಪರಿಹರಿಸಿದ್ದಾಯಿತು. ಏಕೆಂದರೆ, ಭಗವಂತನಲ್ಲಿ ಇರುವ ಮಹಾಯೋಗವು ಪ್ರಯೋಗಬಾಹುಲ್ಯವೆಂಬ ಪ್ರಾಜ್ಞರೂಢಿಯನ್ನು ಒಳಗೊಂಡಿರುತ್ತದೆ. ಇದನ್ನು ಅನುವ್ಯಾಖ್ಯಾನವೇ ಹೇಳಿದೆ.

ಪ್ರಯೋಗಹೇತೋರ್ಬಾಹುಲ್ಯಂ ಜ್ಞೇಯಂ ಪರಮಮುಖ್ಯತಾ ।
ತತ್ರ ಪ್ರಯೋಗಬಾಹುಲ್ಯಂ ಜ್ಞೇಯಂ ತತ್ಪರತಾ ಕಿಮು ॥

ನಿರವಧಿಕವಾದ ಶಬ್ದಪ್ರವೃತ್ತಿನಿಮಿತ್ತವು ಎಲ್ಲಿ ಇರುತ್ತದೋ ಅದನ್ನು ಪರಮಮುಖ್ಯವೃತ್ತಿಯೆಂದು ತಿಳಿಯಬೇಕು. ನಿರವಧಿಕವಾದ ಪ್ರವೃತ್ತಿನಿಮಿತ್ತವುಳ್ಳ ಅದೇ ಅರ್ಥದಲ್ಲಿ ಪ್ರಯೋಗಬಾಹುಲ್ಯವಿದ್ದರೆ ಆ ಶಬ್ದಪ್ರವೃತ್ತಿನಿಮಿತ್ತವು ಮಹಾಯೋಗರೂಢಿರೂಪವಾದ ಪರಮಮುಖ್ಯವೃತ್ತಿಯಾಗುತ್ತದೆಂದು ಪ್ರತ್ಯೇಕ ಹೇಳಬೇಕೇನು?

'ಮಹಾಯೋಗವಿದ್ವದ್ರೂಢ್ಯೋಃ ಭಾವಾಚ್ಚ' (ಮಹಾಯೋಗವಿದ್ವದ್ರೂಢಿಗಳು ಆಕಾಶಶಬ್ದದಲ್ಲಿರುವುದರಿಂದ) ಎಂಬ ಟೀಕೆಯನ್ನು ಇಲ್ಲಿಯ ತನಕ ವ್ಯಾಖ್ಯಾನಿಸಿದ್ದಾಯಿತು.

**ಗುರುರಾಜೀಯಮ್** – ತತ್ರಾದಾವಚೇತನಗತತ್ವೇನ ವಿವರತ್ವಾದೇರೀಶ್ವರಾನಧೀನತ್ವಂ ಯದುಕ್ತಂ ತದ್ದೂಷಯನ್ ಸಿದ್ಧಾನ್ತಯತಿ – **ಚಿದ್ಗತಸ್ಯೇತಿ** ॥

ನನು ಭೃತ್ಯಗತಸ್ಯ ಜಯಸ್ಯ ರಾಜಾಧೀನತ್ವೇನ 'ರಾಜಾ ಜಯೀ' ಇತಿ ಪ್ರಯೋಗಸ್ಯೇವಾಚೇತನಗತಪ್ರವೃತ್ತಿನಿಮಿತ್ತಸ್ಯ ಚೇತನಾನಧೀನತ್ವೇನ ಚೇತನೇ ಜಡವಾಚಿಶಬ್ದಪ್ರಯೋಗಸ್ಯಾದರ್ಶನಾತ್ ಕಥಂ ತಸ್ಯೇಶ್ವರಾಧೀನತ್ವಮ್? ಇತ್ಯತ ಆಹ – **ಅಸ್ತಿ ಚೇತಿ** ॥ ನಚ ಘಟಾದಿಶಬ್ದಾನಾಂ ಕುಲಾಲಾದೌ ಪ್ರಯೋಗಾಪತ್ತಿಃ । ಪ್ರಯೋಗೋ ನಾಮ ಶಕ್ತಿಶ್ಚೇದಿಷ್ಟಾಪತ್ತೇಃ । ಅಭಿಲಾಪಶ್ಚೇದತಿಸಹಜಬಲವತಿ ಪುರುಷೇ ಸಿಂಹಶಬ್ದಾಪ್ರಯೋಗೇಣ ನಿಮಿತ್ತಸ್ಯೈವ ಪ್ರಯೋಗಾನುರೋಧಿತ್ವೇನ ಪ್ರಯೋಗಸ್ಯ ನಿಮಿತ್ತಾನುಸಾರಿತ್ವನಿಯಮಾಭಾವಾತ್ । ಅನ್ಯಥಾऽತಿಪ್ರಸಙ್ಗಾದಿತಿ ಭಾವಃ ।

ನನು ಕುಮ್ಭಾದಿಸ್ವಭಾವಸ್ಯ ಕುಲಾಲಾಧೀನತ್ವೇ ಆಕಾಶಾದಿಸ್ವಭಾವಸ್ಯೇಶ್ವರಾಧೀನತ್ವೇ ಚ ಕುಲಾಲೇಶ್ವರಯೋಃ ಕೋ ವಿಶೇಷಃ? ಇತ್ಯತ ಆಹ – **ಕಿಂ ತ್ವಿತಿ** ॥

ನನು ವಿವರತ್ವಸ್ಯೇಶ್ವರಾಧೀನತ್ವೇನ ಕದಾಚಿತ್ತದಪಗಮೇನಾವಿವರತ್ವಮಪಿ ಸ್ಯಾತ್ । ಅನ್ಯಾಧೀನೇऽನ್ಯಥಾಭಾವಸ್ಯಾಪಿ ಕದಾಚಿದ್ ದರ್ಶನಾದಿತ್ಯತ ಆಹ – **ಕಿಞ್ಚೇತಿ** ॥

ನನು ಲೋಕेऽನ್ಯಸ್ಯ ವಸ್ತುನोऽನ್ಯಥಾಭಾವಸ್ಯ ಕುತ್ರಾಪ್ಯದರ್ಶನಾತ್ ಕಥಮೀಶ್ವರಸ್ಯಾನ್ಯಥಾಕರಣಸಾಮರ್ಥ್ಯಮ್? ಇತ್ಯತ ಆಹ – **ಔಷಧಾದೀತಿ** ॥ ಅಚ್ಛಿದ್ರತಾಕೃತೇರಿತಿ 'ಅಧೀಗರ್ಥದಯೇಶಾಂ ಕರ್ಮಣಿ' ಇತಿ ಷಷ್ಠೀ । 'ಇನ್ದ್ರಾದಿಶಬ್ದಪ್ರವೃತ್ತಿನಿಮಿತ್ತಾನಾಮೈಶ್ವರ್ಯಾದೀನಾಮಿವ

ವಿವರತ್ವಾದೇಃ ಸ್ವಭಾವತ್ವಾನ್ನ ಬ್ರಹ್ಮಾಧೀನತ್ವಮ್' ಇತಿ ಪರೋಕ್ತಂ ಬಾಧಕಂ ಪರಿಹರತಿ – **ಬೋಧಯನ್ತಿ ಚೇತಿ ॥** ಅತ್ರ 'ಸ್ಯನ್ದನ್ತೇ' ಇತ್ಯನೇನ 'ಏತಸ್ಯ ವಾಕ್ಷರಸ್ಯ ಪ್ರಶಾಸನೇ ಗಾರ್ಗಿ ಪ್ರಾಚ್ಯೋ ನದ್ಯಃ ಸ್ಯನ್ದನ್ತೇ' ಇತಿ ಶ್ರುತೇಃ 'ನದ' ಇತ್ಯನೇನ ಸ್ಮೃತೇರ್ಗ್ರಹಣಮಿತಿ ಜ್ಞಾತವ್ಯಮ್ ।

ನನ್ವಾಕಾಶಶಬ್ದಪ್ರವೃತ್ತಿನಿಮಿತ್ತಸ್ಯ ಭಗವದಧೀನತ್ವೇನಾಕಾಶಶಬ್ದಸ್ಯ ಭಗವತ್ಪರತ್ವೇ ರೂಢತ್ವಮೇವೋಕ್ತಂ ಸ್ಯಾತ್ । ತಥಾ ಚ ಯೋಗಾಗಭಾವಾನ್ನ ಗುಣಪೂರ್ತಿಸಿದ್ಧಿಃ, ಇತ್ಯತ ಆಹ – **ಏವಞ್ಚೇತಿ ॥**

ನನ್ವೇತಸ್ಯ ಸುಧಾದಾವನುಕ್ತತ್ವಾತ್ ತದ್ವಿರೋಧಃ, ಇತ್ಯತ ಆಹ – **ಅತ ಏವೇತಿ ॥** ನನ್ವವಕಾಶಪ್ರದತ್ವಸ್ಯೇಶ್ವರಗತತ್ವೇ ಕಥಂ ತಸ್ಯಾಕಾಶಸ್ವಭಾವತ್ವಮ್? ಇತ್ಯತ ಆಹ – **ಏವಞ್ಚೇತಿ ॥** ತರ್ಹಿ ಸಿದ್ಧಾನ್ತೇ ಈಶತನ್ತ್ರತ್ವಕಥನಮಯುಕ್ತಮ್, ಇತ್ಯತ ಆಹ – **ಸಿದ್ಧಾನ್ತ ಇತಿ ॥ ಕೃತ್ವಾ ಚಿನ್ತಯೇತಿ ॥** 'ಯೋಗೋ ಮಾಸ್ತು ಕೇವಲರೂಢ್ಯೈವೇಷ್ಟಸಿದ್ಧಿಃ' ಇತಿ ಕೃತ್ವಾ ಚಿನ್ತಯೇತ್ಯರ್ಥಃ । ಕೃತ್ವಾ ಚಿನ್ತಯಾಧಿಕರಣಾರಮ್ಭಸ್ಯ ಕಾಪ್ಯದರ್ಶನಾತ್? ಇತ್ಯತ ಆಹ – **ಯಥೇತಿ ॥** ನನು 'ಆ ಸಮನ್ತಾತ್ ಕಾಶತೇ' ಇತ್ಯಾದಿರೂಪೋ ಯೋಗಃ ಕುತೋ ನೋಕ್ತಃ? ಇತ್ಯತ ಆಹ – **ಆ ಸಮನ್ತಾದಿತಿ ॥**

## ಸಾರ

ಈ ಆಕಾಶಾಧಿಕರಣದಲ್ಲಿ ಆಕಾಶಶಬ್ದವನ್ನು ವಿಷ್ಣುವಿನಲ್ಲಿ ಸಮರ್ಥನೆ ಮಾಡಲಾಗಿದೆ. ಮುಂದೆ "ಆಕಾಶೋ ಅರ್ಥಾನ್ತರವ್ಯಪದೇಶಾತ್" ಎಂಬಲ್ಲಿಯೂ, ಆದನ್ನೇ ಹೇಳುತ್ತಾರೆ. ವಿಯದಧಿಕರಣವೂ ಭೂತಾಕಾಶವಲ್ಲ ಕಿಂತು ವಿಷ್ಣುವೇ ಎಂದು ಹೇಳುತ್ತದೆ. ಹೀಗೆ ಒಂದೇ ವಿಷಯವನ್ನು ಕುರಿತು ಮೂರು ಅಧಿ -ಕರಣಗಳಿದ್ದರೆ ಪುನರುಕ್ತವಲ್ಲವೆ ? ಎಂದರೆ. ಆಕಾಶವಲ್ಲ ಕಿಂತು ವಿಷ್ಣುವೇ ಎಂಬ ಸಮರ್ಥನೆ ಮೂರರಲ್ಲಿಯೂ ಸಮಾನವಾಗಿದ್ದರೂ ನ್ಯಾಯಭೇದವಿರುವುದರಿಂದ ಅಧಿಕರಣಭೇದವಿದೆ; ಹಾಗಾಗಿ ಪುನರುಕ್ತವಲ್ಲ. ಹೇಗೆಂದರೆ ಈ ಅಧಿಕರಣದಲ್ಲಿ ಆಕಾಶಶಬ್ದವು ಭಗವಂತನಲ್ಲಿ ಮುಖ್ಯ ಎಂದು ಹೇಳಲು ಆಕಾಶಶಬ್ದದ ಪ್ರವೃತ್ತಿನಿಮಿತ್ತ ಭಗವದಧೀನ ಎಂದು ಸಮರ್ಥನೆ ಮಾಡುತ್ತಾರೆ ಮುಂದಿನ ಆಕಾಶಾಧಿಕರಣದಲ್ಲಿ ಪ್ರವೃತ್ತಿನಿಮಿತ್ತ ಭಗವದಧೀನ ಮತ್ತು ಆಕಾಶಶಬ್ದವು ವಿಷ್ಣುವಾಚಕ ಎಂದು ಸಿದ್ಧವಾದರೂ ಶ್ರುತಿಯಲ್ಲಿರುವ 'ವೈ' ಶಬ್ದವನ್ನಿಟ್ಟುಕೊಂಡು ಪೂರ್ವಪಕ್ಷ ಮಾಡಿದಾಗ ಆದರ ಪರಿಹಾರವನ್ನು ಮಾಡಿದೆ. ವಿಯದಧಿಕರಣದಲ್ಲಿ ಜನ್ಮಾದಿಕಾರಣತ್ವವು ಆಕಾಶಕ್ಕಲ್ಲ ಕಿಂತು ವಿಷ್ಣುವಿಗೇ ಎಂದು ಸಮರ್ಥನೆ ಮಾಡಿದೆ. ಆದ್ದರಿಂದ ಪುನರುಕ್ತದೋಷಕ್ಕೆ ಅವಕಾಶವಿಲ್ಲ.

ಸಿದ್ಧಾಂತ ಹೀಗಿದೆ - ಚೇತನರಲ್ಲಿರುವ ಪ್ರವೃತ್ತಿನಿಮಿತ್ತಗಳೇ ಭಗವಂತನ ಅಧೀನಗಳಾಗಿವೆಯೆಂದರೆ ಅಚೇತನಗಳಲ್ಲಿರುವ ಪ್ರವೃತ್ತಿ ನಿಮಿತ್ತಗಳು ಸರ್ವಥಾ ಭಗವದಧೀನಗಳೇ ಆಗುತ್ತವೆ. ಏಕೆಂದರೆ ಚೇತನಕ್ಕಿಂತ

ಅಚೇತನಗಳು ಅತ್ಯಂತ ಪರಾಧೀನಗಳು ಎಂಬುದು ಎಲ್ಲರಿಗೂ ಸಿದ್ಧವಾದ ವಿಷಯ. ಹಾಗಾಗಿ ಅಚೇತನದಲ್ಲಿರುವ ಧರ್ಮಗಳು ಭಗವದಧೀನವಾಗಲಿಕ್ಕೆ ಹೇಗೆ ಸಾಧ್ಯ? ಎನ್ನುವುದು ಸರಿಯಲ್ಲ.

ಹಾಗೆಯೇ ಭೃತ್ಯನ ಜಯವನ್ನು ರಾಜನ ಜಯವೆಂದು ವ್ಯವಹರಿಸುವಂತೆ ಜಡವಸ್ತುಗಳಲ್ಲಿರುವ 'ಮೃತ್ವ' ಮುಂತಾದ ಧರ್ಮಗಳು ಅವುಗಳ ಅಭಿಮಾನಿಗಳ ಅಧೀನವಾದ್ದರಿಂದ ಅದನ್ನಿಟ್ಟುಕೊಂಡು 'ಮೃದಬ್ರವೀತ್' ಎಂದು ಪ್ರಯೋಗಿಸಲಾಗುವುದು. ಹೀಗೆ ಅಭಿಮಾನಿದೇವತೆಗಳಲ್ಲಿ 'ಮೃತ್ವ' ವ್ಯವಹಾರ ಕಂಡಿದೆಯಾದ್ದರಿಂದ ಚೇತನಗತವಾದ ಧರ್ಮವನ್ನು ಭಗವಂತನಲ್ಲಿ ಹೇಳಿದಂತೆ ಜಡಗತಧರ್ಮವನ್ನು ಹೇಳಲು ಬರುವುದಿಲ್ಲ ಎಂಬ ಆಕ್ಷೇಪಕ್ಕೆ ಅವಕಾಶವಿಲ್ಲ.

ಆಕಾಶದ ಸ್ವಭಾವವು ವಿಷ್ಣುವಿನ ಅಧೀನವಾಗಲಿಕ್ಕೆ ಹೇಗೆ ಸಾಧ್ಯ? ಎಂದರೆ. ಲೋಕದಲ್ಲಿ ಕುಂಬಾರನು ಘಟವನ್ನು ತಯಾರಿಸುವಾಗ ಘಟದ ಸ್ವಭಾವವಾದ ಘಟತ್ವವೂ ಅವನ ಅಧೀನವೇ ಆಗಿರುತ್ತದೆ. ಏಕೆಂದರೆ ಅವನು ಶರಾವವನ್ನು ಮಾಡಲು ಪ್ರಯತ್ನ ಮಾಡಿದಾಗ ಘಟವು ಹುಟ್ಟುವುದಿಲ್ಲ. ಘಟವನ್ನು ಮಾಡಲು ಯತ್ನಿಸಿದಾಗಷ್ಟೇ ಘಟವು ಹುಟುತ್ತದೆ. ಕೇವಲ ಮಣ್ಣಿನಿಂದ ಅವನು ಯಾವುದನ್ನಾದರೂ ಮಾಡಬಹುದು. ಹಾಗಾಗಿ ಘಟದ ಸ್ವಭಾವವಾದ ಘಟತ್ವ ಕುಂಬಾರನ ಅಧೀನವೇ ಆಗಿರುತ್ತದೆ. ಹೀಗಿರುವಾಗ ವಿಷ್ಣುವಿನಿಂದ ಹುಟ್ಟಿದ ಆಕಾಶದ ಸ್ವಭಾವವು ಭಗವದಧೀನ ಎಂದರೆ ಏನು ತೊಂದರೆ? ಅಲ್ಲದೆ ಅನೇಕ ಶ್ರುತಿಸ್ಮೃತಿಗಳೂ ಕೂಡ ಆಕಾಶದ ಸ್ವಭಾವವಾದ ವಿವರತ್ವವು ಭಗವಂತನ ಅಧೀನವೆಂದು ಸಾರುತ್ತಿವೆ. ಆದ್ದರಿಂದ ಆಕಾಶಸ್ವಭಾವವೂ ಭಗವದಧೀನವಾಗಿದೆ. ಮತ್ತು ನಿರವಧಿಕವಾದ ವಿವರತ್ವವು ಭಗವಂತನಲ್ಲಿಯೇ ಇರುವುದರಿಂದ ಆಕಾಶ ಶಬ್ದದ ಮುಖ್ಯ ವಾಚ್ಯತ್ವ ವಿಷ್ಣುವಿಗೆ ಕೊಡುತ್ತದೆ.

---

**ತಾತ್ಪರ್ಯಚನ್ದ್ರಿಕಾ –**

**अनन्तत्वादिलिङ्गानि तु निरवकाशानि ।**

**अन्तत्रयोज्झिते विष्णौ निरूढं लोकवेदयोः ।**

**अनन्तत्वं कथं तिष्ठेत् भूतेऽन्तत्रयसंयुते ॥**

**यद्यप्यव्याकृताकाशे गुणतोऽनन्तत्वाभावेऽपि देशकालाभ्यामानन्त्ये अनन्त-शब्दस्य नैघण्टुकी प्रसिद्धिश्चास्ति । तथाऽपि पूर्वपक्ष्यभिमते अन्तत्रयवति भूताकाशे ते अपि न स्तः ।**

**निरूढश्चान्तत्रयहीने विष्णौ भाष्योक्तश्रुतितो लोकतश्च नामत्रयान्तर्गतोऽ-नन्तशब्दः । लोकप्रसिद्धिमाश्रित्यापि नाकाशश्रुत्या विष्णुलिङ्गं बाधार्हम् ।**

**द्वाभ्यामावृत्तिजातिभ्यामेव हि प्रबला श्रुतिः ।**
**अगतित्वपरत्वानेकत्वैर्लिङ्गानि तु त्रिभिः ॥**

**श्रुतिर्हि जात्या आवृत्त्या च प्रबला । लिङ्गानि तु निरवकाशत्वचरमत्वानेकत्वैः । एवञ्च यदा च निरवकाशत्वप्रयुक्तमेव प्राबल्यं ''परनित्यान्तरङ्गप्रतिपदविधिषु परबलीयस्त्वम्'' इत्युक्तत्वात् कांस्यभोजिन्यायेन स वै प्राबल्यानां बाधकम्, तदा किमु वाच्यं चरमत्वादियुतमिति ।**

**परोवरीयस्त्वादिविष्णुलिङ्गानां तु निरवकाशता भाष्य एवोक्ता । दृश्यते च घृतादौ निरूढानामप्याज्यादिशब्दानां मुखान्तरं विनैव ''आज्यैः स्तुवते'' इत्यादौ तैस्तैर्हेतुभिः स्तोत्रादिनामधेयत्वम् । भूतकारणत्वादि तु भूतलिङ्गं श्रुत्यन्तरानुसारेण विष्णावेव मुख्यम् । तस्मादाकाशादिशब्दवाच्यो विष्णुरिति ।**

ಅನುವಾದ - ಆಕಾಶದಲ್ಲಿರುವ ಅನಂತತ್ವಾದಿ ಲಿಂಗಗಳಂತೂ ನಿರವಕಾಶವಾಗಿವೆ.

ಅಂತತ್ರಯೋಜ್ಜ್ವತೇ ವಿಷ್ಣೌ ನಿರೂಢಂ ಲೋಕವೇದಯೋಃ।
ಅನಂತತ್ವಂ ಕಥಂ ತಿಷ್ಠೇದ್ಭೂತೇऽಂತತ್ರಯಸಂಯುತೇ ॥

ವಿಷ್ಣುವು ದೇಶತಃ ಕಾಲತಃ ಗುಣತಃ ಅನಂತನಾಗಿದ್ದಾನೆ. ಹೀಗೆ ವೇದಗಳಷ್ಟೇ ಹೇಳುತ್ತಿಲ್ಲ. ಲೋಕದಲ್ಲಿರುವವರೂ ಹೇಳುತ್ತಾರೆ. ಆದರೆ ಭೂತಾಕಾಶದಲ್ಲಿ ಈ ಮೂರುವಿಧವಾದ ಆನಂತ್ಯಗಳಲ್ಲಿ ಒಂದನ್ನೂ ಹೇಳಲಾಗದು. ಹೀಗಿರುವಾಗ ಭೂತಾಕಾಶದಲ್ಲಿ ಅನಂತತ್ವಧರ್ಮವು ಬರಲು ಹೇಗೆ ಸಾಧ್ಯ ?

ವಸ್ತುತಸ್ತು - ಅವ್ಯಾಕೃತಾಕಾಶದಲ್ಲಿ ಗುಣತಃ ಆನಂತ್ಯವಿಲ್ಲದಿರಬಹುದು, ಆದರೆ ದೇಶತಃ ಕಾಲತಃ ಆನಂತ್ಯವನ್ನು ಹೇಳಲು ಸಾಧ್ಯ. ಈ ನಿಟ್ಟಿನಲ್ಲಿಯೇ ಕೋಷಗಳು ಆಕಾಶವನ್ನು ಅನಂತವೆಂದು ಹೇಳುತ್ತವೆ. ಆದರೂ ಸಹ ಪೂರ್ವಪಕ್ಷಿಗೆ ಅಭಿಮತವಾದ ಭೂತಾಕಾಶದಲ್ಲಿ ದೇಶತಃ ಕಾಲತಃ ಆನಂತ್ಯವೂ ಸಹ ಇರುವುದಿಲ್ಲವೆಂದು ಇಲ್ಲಿ ವಿವಕ್ಷಿಸಲಾಗಿದೆ. ಭಾಷ್ಯದಲ್ಲಿ ಉದಾಹರಿಸಿದ ಶ್ರುತಿಯಂತೆ ಮೂರುವಿಧವಾದ ಆನಂತ್ಯವು ವಿಷ್ಣುವಿನಲ್ಲಿ ಪ್ರಸಿದ್ಧ(ನಿರೂಢ)ವಾಗಿವೆ. ಲೋಕದಲ್ಲಿಯೂ ಸಹ 'ಅಚ್ಯುತ, ಅನಂತ, ಗೋವಿಂದ' ಎಂದು ಭಗವಂತನನ್ನು ಯಾವುದೇ ತರಹದ ಅಂತಗಳಿಲ್ಲದವನೆಂದು ಕರೆಯುತ್ತಾರೆ. ಲೋಕಪ್ರಸಿದ್ಧಿಯನ್ನು ಆಶ್ರಯಿಸಿಯೂ ಸಹ ಆಕಾಶಶ್ರುತಿಯು ಅನಂತತ್ವವೆಂಬ ವಿಷ್ಣುಲಿಂಗವನ್ನು ಬಾಧಿಸಲು ಸಮರ್ಥವಾಗುವುದಿಲ್ಲ.

**ದ್ವಾಭ್ಯಾಮಾವೃತ್ತಿಜಾತಿಭ್ಯಾಮೇವ ಹಿ ಪ್ರಬಲಾ ಶ್ರುತಿಃ।**
**ಆಗತಿತ್ವಪರತ್ವಾನೇಕತ್ವೈರ್ಲಿಂಗಾನಿ ತು ತ್ರಿಭಿಃ॥**

ಸ್ವಭಾವತಃ ಮತ್ತು ಅನೇಕತ್ವದಿಂದಷ್ಟೇ ಶ್ರುತಿಯು ಪ್ರಬಲವಾಗಿದೆ. ಆದರೆ ನಿರವಕಾಶತ್ವ ಪರತ್ವ ಅನೇಕತ್ವವೆಂಬ ಮೂರು ಕಾರಣಗಳಿಂದ ಲಿಂಗವು ಪ್ರಬಲವಾಗಿದೆ.

ಇದರ ಅಭಿಪ್ರಾಯ ಇಷ್ಟು - ಶ್ರುತಿಯು ಸ್ವಭಾವತಃ ಮತ್ತು ಅನೇಕತ್ವಪ್ರಯುಕ್ತವಾಗಿ ಪ್ರಬಲವಾಗಿದೆ. ಆನಂತತ್ವ ಮೊದಲಾದ ಲಿಂಗಗಳಾದರೂ ಕೂಡ ನಿರವಕಾಶತ್ವ, ಚರಮತ್ವ ಮತ್ತು ಅನೇಕತ್ವ ಮೊದಲಾದವುಗಳಿಂದ ಯುಕ್ತವಾಗಿ ಶ್ರುತಿಗಿಂತಲೂ ಪ್ರಬಲವಾಗುತ್ತವೆ. ಕೇವಲ ನಿರವಕಾಶತ್ವ ಇದ್ದರೆ ಸಾಕು ಸ್ವಭಾವತಃ ಪ್ರಬಲವಾದ ಶ್ರುತಿಗಿಂತಲೂ ಲಿಂಗವು ಪ್ರಬಲವಾಗುತ್ತದೆ; ಇನ್ನು ಚರಮತ್ವ ಮೊದಲಾದವುಗಳಿಂದ ಕೂಡಿದಾಗ ಶ್ರುತಿಗಿಂತ ಪ್ರಬಲವೆಂದು ಪ್ರತ್ಯೇಕ ಹೇಳಬೇಕೇನು? ವ್ಯಾಕರಣದಲ್ಲಿ ನಿರಕಾಶತ್ವ ಇದ್ದರೆ ಸಾಕು ಎಲ್ಲವನ್ನೂ ಬಾಧಿಸುತ್ತದೆಂದು ಪ್ರತಿಪಾದಿಸಿದ್ದಾರೆ. ಪರ, ನಿತ್ಯ, ಅಂತರಂಗ, ನಿರವಕಾಶವಿಧಿಗಳಲ್ಲಿ ಉತ್ತರೋತ್ತರಪ್ರಾಬಲ್ಯವು ಸರ್ವಸಿದ್ಧವಾಗಿದೆ. ಪೂರ್ವಮೀಮಾಂಸೆಯಲ್ಲಿಯೂ ಸಹ ಕಾಂಸ್ಯಭೋಜನ್ಯಾಯವನ್ನು ಉದಾಹರಿಸುವ ಮುಖಾಂತರ ನಿರವಕಾಶವಿಧಿಗೆ ಸರ್ವಪ್ರಾಬಲ್ಯವನ್ನು ಒಪ್ಪಿದ್ದಾರೆ. ಪ್ರಕೃತ ಆನಂತತ್ವಾದಿ ಲಿಂಗಗಳು ನಿರವಕಾಶಗಳಾದ್ದರಿಂದ ಆಕಾಶಶ್ರುತಿಯನ್ನು ಬಾಧಿಸುವುದರಲ್ಲಿ ಸಂಶಯವಿಲ್ಲ. ಆನಂತತ್ವಲಿಂಗವಷ್ಟೇ ನಿರವಕಾಶವಲ್ಲ. ಪರೋವರೀಯಸ್ತ್ವವೇ ಮೊದಲಾದ ಇನ್ನೂ ಅನೇಕ ಲಿಂಗಗಳು ನಿರವಕಾಶಗಳಾಗಿವೆ. ಭಾಷ್ಯಕಾರರು ಅದನ್ನೆಲ್ಲಾ ಖಚಿತವಾಗಿ ಸ್ಪಷ್ಟಪಡಿಸಿದ್ದಾರೆ.

ಆಕಾಶಶಬ್ದವು ವಿಷ್ಣುವನ್ನು ಪ್ರತಿಪಾದಿಸುತ್ತದೆ ಎಂದು ಸಮರ್ಥಿಸಲು ಆಕಾಶಶ್ರುತಿಯ ಹತ್ತಿರ ಯಾವ ವಿಷ್ಣುಲಿಂಗಗಳೂ ಕಾಣಿಸುತ್ತಿಲ್ಲವಲ್ಲ? ಎಂದರೆ, ಯಾವರೀತಿಯಾಗಿ ಆಜ್ಯಾದಿಶಬ್ದಗಳು ಯಾವ ದ್ವಾರವೂ (ಲಿಂಗಗಳೂ) ಇಲ್ಲದೆ ಆಜ್ಯಸೂಕ್ತವನ್ನೇ ಪ್ರತಿಪಾದಿಸುತ್ತದೋ ಅದರಂತೆ ಆಕಾಶಾದಿಶಬ್ದಗಳೂ ಸಹ ಬೇರೆ ದ್ವಾರವಿಲ್ಲದಿದ್ದರೂ (ಲಿಂಗಗಳಿಲ್ಲದಿದ್ದರೂ) ವಿಷ್ಣುವನ್ನು ಸ್ವತಃ ಪ್ರತಿಪಾದಿಸಬಹುದು. ಇಲ್ಲಿ ಆಕಾಶಶಬ್ದವು ಹೇಗೆ ಭೂತಾಕಾಶದಲ್ಲಿ ನಿರೂಢವಾಗಿದೆಯೋ ಅದರಂತೆ ಆಜ್ಯಶಬ್ದವೂ ಸಹ ತುಪ್ಪದಲ್ಲಿ ನಿರೂಢವಾಗಿದೆ. ಆದರೆ 'ಆಜ್ಯೈಃ ಸ್ತುವತಃ' ಎಂದು ಹೇಳಿದಾಗ ತುಪ್ಪದಿಂದ ಸ್ತೋತ್ರ ಮಾಡುತ್ತಾರೆಂದು ಯಾರೂ ಹೇಳುವುದಿಲ್ಲ. ಆಜ್ಯಸೂಕ್ತದಿಂದ ಸ್ತೋತ್ರ ಮಾಡುತ್ತಾರೆಂದೇ ಎಲ್ಲರೂ ತಿಳಿಯುತ್ತಾರೆ. ಅದರಂತೆ ಆಕಾಶಶಬ್ದವೂ ಸಹ ವಿಷ್ಣುವನ್ನೇ ಪ್ರತಿಪಾದಿಸುತ್ತದೆ.

ಆಕಾಶಶ್ರುತಿಯು ಭೂತಾಕಾಶಪರವೆನ್ನಲು ಕೂಡ ಸಮಸ್ತಭೂತಕಾರಣತ್ವವೆಂಬ ಲಿಂಗಗಳಿವೆಯಲ್ಲ ಎಂದು ಪ್ರಶ್ನಿಸಬಹುದು. ಆದರೆ ಅವೆಲ್ಲವೂ ಸಹ ವಿಷ್ಣುವಿನಲ್ಲಿಯೇ ಮುಖ್ಯವೃತ್ತಿಯಿಂದ ಕೂಡುತ್ತವೆ. ಈ ಎಲ್ಲ ಕಾರಣಗಳಿಂದ ಆಕಾಶಶಬ್ದದಿಂದ ಮುಖ್ಯಪ್ರತಿಪಾದ್ಯವಾದದ್ದು ಭೂತಾಕಾಶವಾಗುವುದಿಲ್ಲ, ವಿಷ್ಣುವೇ ಆಗುತ್ತಾನೆ.

ಕಠಿಣಪದಾರ್ಥ -

ಅಂತತ್ರಯೋಜ್ಜ್ಯತೇ = ದೇಶತಃ ಕಾಲತಃ ಗುಣತಃ ಕೊನೆಯಿಲ್ಲದ; ನಿರೂಢಂ = ಪ್ರಸಿದ್ಧವಾದ, ಅಂತತ್ರಯಸಂಯುತೇ = ದೇಶತಃ ಕಾಲತಃ ಗುಣತಃ ಕೊನೆಯಿರುವ; ನೈಘಂಟಿಕೀ ಪ್ರಸಿದ್ಧಿಃ = ಕೋಷಗಳಲ್ಲಿ ಪ್ರಸಿದ್ಧಿಯು; ಆವೃತ್ತಿಜಾತಿಭ್ಯಾಂ = ಅನೇಕತ್ವಪ್ರಯುಕ್ತವಾಗಿ ಮತ್ತು ಸ್ವಭಾವಪ್ರಯುಕ್ತವಾಗಿ; ದ್ವಾಭ್ಯಾಂ = ಎರಡು ಕಾರಣಗಳಿಂದ; ಅಗತಿತ್ವಾತ್ = ನಿರವಕಾಶತ್ವ; ಪರನಿತ್ಯಅಂತರಂಗಪ್ರತಿಪದವಿಧಿಷು = ಪರ - ಮುಂದಿನ ಸೂತ್ರ ಅಥವಾ ಮುಂದಿನ ಕಾರ್ಯ, ನಿತ್ಯ- ಕೃತಾಕೃತಪ್ರಸಂಗವಾದ ವಿಧಿ (ಉಳಿದದ್ದು ಬರಲಿ ಬಿಡಲಿ ತಾನಂತೂ ಬರುತ್ತೇನೆಂಬ ವಿಧಿ), ಅಂತರಂಗ - ಸ್ವಲ್ಪವನ್ನು ಅಪೇಕ್ಷಿಪಡುವಂತಹದ್ದು, ಪ್ರತಿಪದವಿಧಿಷು - ನಿರವಕಾಶವಿಧಿಗಳಲ್ಲಿ; ಪರಬಲೀಯಸ್ತ್ವಂ = ಉತ್ತರೋತ್ತರಪ್ರಾಬಲ್ಯವನ್ನು; ಉಕ್ತತ್ವಾತ್ = ವೈಯ್ಯಾಕರಣರಿಂದ ಹೇಳಲ್ಪಟ್ಟದ್ದರಿಂದ; ಮುಖಾಂತರಂ = ಬೇರೆ ದ್ವಾರ (ಬೇರೆ ಲಿಂಗ).

**प्रकाशः** – एवं प्रमेयाश्रितां शब्दस्य भगवति मुख्यत्वविरोधिनीं शङ्कां प्रवृत्तिनिमित्तस्येशगतत्वेशाधीनत्वयोः समर्थनपूर्वं मुख्यत्वप्रसाधनेन निरस्य, इदानीं प्रमाणाश्रितां वाक्यस्य तत्परत्वविरोधिनीं शङ्कां निरसितुं 'तल्लिङ्गात्' इत्यनेन अभिमतं न्यायं विशदयन् आह – **अनन्तत्वादीति** ॥ अनन्तत्वं तावन्निरवकाशमित्याह – **अन्तत्रयेति** ॥ देशकालगुणैरित्यर्थः। 'निरूढं' प्रसिद्धम् । उत्तरार्धे भूतपदव्यावर्त्यं शङ्कापूर्वमाह – **यद्यपीति** ॥ 'आनन्त्ये स्तः' इति योज्यम् । एतेन –

**नभोऽन्तरिक्षं गगनमनन्तं सुरवर्त्म खम् ।**

इति नैघण्टुकी प्रसिद्धिरव्याकृतविषया अज्ञानमूला वेत्युक्तं भवति । पूर्वार्धं विशदयति –**निरूढश्चेति** ॥ ''विष्णोर्नु कं वीर्याणि'' इत्यादिश्रुतित इत्यर्थः । लोकप्रसिद्धिः कथमित्यत आह – **लोकतश्च नामत्रयेति** ॥ ''अच्युतानन्तगोविन्द'' इति नामत्रयेत्यर्थः । 'निरूढः' इत्यनुवर्तनीयः । निरवकाशत्वोक्तेः फलमाह – **लोकेति** ॥ यदुक्तं 'श्रुतित्वबहुत्वोभयप्रयुक्तप्राबल्यात् निरवकाशत्वमात्रप्रयुक्तप्राबल्यस्य दुर्बलत्वात्' इति तदिदानीं निरस्यति – **द्वाभ्यामिति** ॥ ''पूर्वान्तवत् स्वरः सन्धौ'' इत्यादे नात्र यतिभङ्गः ।

श्लोकं व्याख्याति – **यदा चेति** ॥ 'प्राबल्यं बाधकम्' इत्यन्वयः । तत्र शाब्दिकमीमांसकसंवादावाह – **परनित्येति** ॥ **उक्तत्वादिति** ॥

**परं विदुः पूर्वपरोपपत्तौ परस्य नित्यस्य च नित्यमेव ।**
**नित्यान्तरङ्गोपगमेऽन्तरङ्गस्तथाविधात् प्रातिपदो बलीयान् ॥**

इति वदद्भिर्वैयाकरणैरिति शेषः । 'परं' पश्चात्तनं सूत्रं कार्यं वा । 'नित्यं' नाम कृताकृतप्रसङ्गि । 'अन्तरङ्गं' नामाल्पापेक्षम् । 'प्रतिपदिविधिः' नाम निरवकाशविधिः ।

यथा षष्ठे अङ्गपादे ''आडजादीनाम्'' इति सूत्रवृत्तावेव परापेक्षया नित्यस्य बलवत्त्वमुक्तम्। 'ऐज्यन्त' इति यजतेः कर्मणि लङि कृते तिङादेशः प्राप्नोति । ''लुङ्लङ्लृङ् क्ष्वट्'' इत्यडागमश्च । तत्र ''विप्रतिषेधे परं कार्यम्'' इत्याडागमे प्राप्ते लकारमात्रापेक्षत्वेनान्तरङ्गत्वाल्लादेशे सति ''सार्वधातुके यक्'' इत यक् प्राप्नोति, अडागमश्च । तत्र परत्वादटि प्राप्ते परमपि बाधित्वा यगेव कृताकृत-प्रसङ्गित्वेन नित्यत्वात्प्राप्नोति । तस्मिंश्च कृते पुनः परत्वादटि प्राप्ते ''वचिस्वपि-यजादीनां किति'' इति सम्प्रसारणमेव नित्यत्वाद्भवति । तत आडागम इति । नित्यादप्यन्तरङ्गस्य बलवत्त्वं तु तत्रैव नित्यादप्याडागमाल्लादेशस्य पूर्वं प्राप्तत्वाद् द्रष्टव्यम् । ''अचिश्नुधातुभ्रुवां य्वोरियङुवङौ'' इत्यादौ ''श्रियौ श्रियः'' इत्यादिषु अन्तरङ्गत्वाद्यणादेशे प्राप्ते निरवकाशत्वेनेयङेव कृत इति परबलीयस्त्वं द्रष्टव्यम् ॥ **कांस्यभोजीति ॥**

द्वादशे द्वितीयपादे ''अधिकश्च गुणः साधारणेऽविरोधात् कांस्यभोजि-वदमुख्येऽपि'' उपान्त्याधिकरणे चिन्तितम् । आग्रयणेष्ट्यां ऐन्द्राग्नवैश्वदेवद्यावा-पृथिव्यानि हवींष्याम्नातानि । तत्र द्यावापृथिव्यस्य वैश्वदेवपर्वस्थद्यावापृथिव्य-विकारत्वात् प्रसूनं बर्हिः प्राप्तम् । ऐन्द्राग्नादेस्तु प्रसूनमप्रसूनं वा बर्हिर्मात्रम् । तत्र समानतन्त्रेषु प्रसूनमप्रसूनं वोपादेयमुत प्रसूनमेवेति संशये, मुख्यत्वाद् भूयस्त्वाच्चानियम एव युक्त इति प्राप्ते, न ह्यनियमो नाम किञ्चिदङ्गं यदनुगृह्येत । बर्हिर्मात्रं त्वङ्गं, तच्च प्रसूनोपादानेऽप्यविरुद्धमिति न कस्यचिद्वैगुण्यम् । अनियमे तु द्यावापृथिव्यस्य वैगुण्यं स्यात् । न चावैगुण्यस्य सम्भवे तद्युक्तम् । अतः प्रसून-मेवोपादेयमिति सिद्धान्त इति ।

प्रसूनपदेन पुष्पितमुच्यते । अत्र मुख्यद्यावापृथिव्यबर्हिषः प्रसूनस्योपादाने दृष्टान्तत्वेन कांस्यभोजिन्यायस्सूत्रितः । यथा शिष्यस्य कांस्यभोजनव्रतनियमः,

ಗುರೋಃ ಅನಿಯಮಃ । ಏಕತ್ರೋಭಯಸಮಾವೇಶೇ ಗುರುಣಾ ಶಿಷ್ಯಾನುರೋಧೇನ ಕಾಂಸ್ಯಪಾತ್ರಮಾದತವ್ಯಮಿತಿ, ತನ್ಯಾಯೇನೇತ್ಯರ್ಥಃ ।

**ಚರಮತ್ವೇತಿ ॥** ಏತೇನ 'ಉಪಕ್ರಮಸ್ಥತ್ವೇನಾಕಾಶಶಬ್ದಸ್ಯ ಪ್ರಾಬಲ್ಯಮ್' ಇತಿ ತೃತೀಯಶಙ್ಕಾಪಿ ನಿರಸ್ತಾ । ''ಪ್ರಥಮೇऽಶ್ರವಣಾತ್'' ಇತ್ಯತ್ರ ಚರಮಪ್ರಾಬಲ್ಯಸ್ಯ ವಕ್ಷ್ಯಮಾಣತ್ವಾದಿತಿ ಭಾವಃ । ಇತರಲಿಙ್ಗಾನಾಂ ಪರೋವರೀಯಸ್ತ್ವೋದ್ಗೀಥತ್ವಾದೀನಾಂ ನಿರವಕಾಶತಾ ಕುತೋ ನೋಚ್ಯತೇ? ಇತ್ಯತ ಆಹ – **ಪರೋವರೀಯಸ್ತ್ವಾದೀತಿ ॥** ''ಪರೋ ಮಾತ್ರಯಾ ತನ್ವಾ ವೃಧಾನ'' ''ಓಮಿತ್ಯೇತದಕ್ಷರಮುದ್ಗೀಥಮುಪಾಸೀತ'' ಇತ್ಯಾದಿವಚನೇನೇತ್ಯರ್ಥಃ । 'ತಲ್ಲಿಙ್ಗಾತ್' ಇತ್ಯೇಕವಚನಂ ಸಮುದಾಯಾಭಿಪ್ರಾಯೇಣ– ಇತ್ಯುಕ್ತಂ ಭವತಿ ।

ಏತೇನ ''ಶ್ರುತ್ಯಾ ಪೂರ್ವಪಕ್ಷಿತೇऽಪಿ'' ಇತ್ಯಾದಿಟೀಕಾ ವಿವೃತಾ । ಏವಂ ಪ್ರಮಾಣಾಶ್ರಿತಾ ಆದ್ಯಾ ಶಙ್ಕಾ ನಿರಾಕೃತಾ । ದ್ವಿತೀಯಶಙ್ಕಾಯಾಮಪಿ ಶ್ರುತ್ಯನ್ತರೇ ವಿಷ್ಣ್ವಾದಿಶಬ್ದಸಾಮಾನಾಧಿಕರಣ್ಯಾಭಾವ ಅಪ್ಯತ್ರೈವಾನನ್ತಾದಿಪದಸಾಮಾನಾಧಿಕರಣ್ಯಾತ್, ''ಆಕಾಶೋ ವೈ ನಾಮ'' ಇತ್ಯಾದೌ ವಕ್ಷ್ಯಮಾಣಬ್ರಹ್ಮಪದಸಾಮಾನಾಧಿಕರಣ್ಯಾಚ್ಚ ''ನಾಮಾನಿ ಸರ್ವಾಣಿ'' ಇತ್ಯಾದೌ ಸಙ್ಕೋಚೇ ಕಾರಣಾಭಾವೇನ ವಿಶೇಷಶ್ರುತಿಸದ್ಭಾವಾದಿತಿ ಪರಿಹಾರಸ್ಯ ಸ್ಪಷ್ಟತ್ವಾದಾದ್ಯಹೇತುದ್ವಯಂ ನಿರಸ್ತಂ ಮತ್ವಾ, ಅನ್ಯತ್ರ ನಿರೂಢಮುಖಾಭಾವಾದಿತಿ ಹೇತೋಃ ಪರಿಹಾರಮಾಹ – **ದೃಶ್ಯತೇ ಚೇತಿ ॥** ಚಿತ್ರಾಜ್ಯಾಧಿಕರಣಂ ಪ್ರಾಗುಕ್ತಮ್ । 'ಮುಖಾನ್ತರಂ' ಶ್ಯೇನವಜ್ಜಿಪತ್ಯಾದಾನರೂಪಕ್ರಿಯಾದ್ವಾರಕಂ ಗೌರತ್ವಂ, ವಿನೈವ ತೈಸ್ತೈರ್ವಾಕ್ಯಭೇದಾದಿಹೇತುಭಿರಿತ್ಯರ್ಥಃ ।

ನನು ''ಸರ್ವಾಣಿ ಹ ವಾ ಇಮಾನಿ ಭೂತಾನಿ'' ಇತ್ಯುಕ್ತಭೂತಕಾರಣತ್ವವಿರೋಧ ಇತ್ಯತ ಆಹ – **ಭೂತೇತಿ ॥** ''ಸರ್ವಾಣಿ ಭೂತಾನಿ'' ಇತ್ಯಾಕಾಶಾದಿಸರ್ವಭೂತಕಾರಣತ್ವಮುಚ್ಯಮಾನಮ್ ''ಆತ್ಮನ ಆಕಾಶಸ್ಸಮ್ಭೂತಃ'' ಇತಿ ಶ್ರುತ್ಯನ್ತರಾನುರೋಧೇನ ಆಕಾಶಶಬ್ದಿತವಿಷ್ಣೋರೇವ ಮುಖ್ಯಮನ್ಯಥಾ ಸಙ್ಕೋಚಸ್ಯಾದಿತಿ ಭಾವಃ । ಏತೇನ ''ನಚ ಭೂತಕಾರಣತ್ವೋಕ್ತಿವಿರೋಧಃ'' ಇತ್ಯಾದಿಟೀಕಾ ವಿವೃತಾ ।

ಯದಪಿ 'ಯದ್ವಾ ಯೇನ' ಇತ್ಯಾದಿನಾऽಭ್ಯಧಿಕಾಶಙ್ಕಾಂ ವಿನಾ ಪೂರ್ವಪಕ್ಷಾನ್ತರಕರಣಂ, ತದಪಿ ಲಿಙ್ಗಾನಾಂ ವೈಷ್ಣವತ್ವಸಮರ್ಥನೇನ ನಿರಸ್ತಮ್ । ಅಭೇದಮತಂ ತ್ವನೇಕಮಾನವಿರುದ್ಧಮಿತಿ ಭಾವೇನಾಕಾಶಪದಮುಪಲಕ್ಷಣಮಭಿಪ್ರೇತ್ಯ, ಉಪಸಂಹರತಿ – **ತಸ್ಮಾದಿತಿ ॥**

ವಿವರಣೆ - ಅರ್ಥ - ಇಲ್ಲಿಯ ತನಕ ಆಕಾಶಶಬ್ದವು ಭಗವಂತನಲ್ಲಿ ಮುಖ್ಯವೃತ್ತಿಯಿಂದ ಇದೆ ಎನ್ನಲು ಬಾಧಕವಾದ ಪ್ರಮೇಯಾಶ್ರಿತಪೂರ್ವಪಕ್ಷವನ್ನು ನಿರಾಕರಿಸಿದರು. ಆಕಾಶಶಬ್ದದ ಪ್ರವೃತ್ತಿನಿಮಿತ್ತವು

ಮುಖ್ಯವಾಗಿ ಭಗವಂತನಲ್ಲಿಯೇ ಇದೆ. ಅಮುಖ್ಯವಾಗಿ ಆಕಾಶದಲ್ಲಿದ್ದರೂ ಸಹ ಭಗವದಧೀನವಾಗಿಯೇ ಇರುತ್ತದೆಂದು ಸಮರ್ಥಿಸುವ ಮೂಲಕ ಆಕಾಶಶಬ್ದದಿಂದ ಭಗವಂತನೇ ಮುಖ್ಯವಾಗಿ ಪ್ರತಿಪಾದ್ಯನಾಗಿದ್ದಾನೆಂದೂ ಸಹ ಸಮರ್ಥಿಸಿದ್ದಾಯಿತು. ಪ್ರಕೃತದಲ್ಲಿ ಸಮಗ್ರ ಆಕಾಶಶ್ರುತಿಯು ಭಗವಂತನಲ್ಲಿಯೇ ತಾತ್ಪರ್ಯ ಹೊಂದಿದೆ ಎಂಬುದಕ್ಕೆ ವಿರುದ್ಧವಾದ ಪ್ರಮಾಣಾಶ್ರಿತವಾದ ಶಂಕೆಯನ್ನು ನಿರಾಕರಿಸುವುದಕ್ಕಾಗಿ ಸೂತ್ರದಲ್ಲಿರುವ 'ತಲ್ಲಿಂಗಾತ್' ಎಂಬ ನ್ಯಾಯವನ್ನು ವಿವರಿಸುತ್ತಿದ್ದಾರೆ.

ಭಗವಂತನಲ್ಲಿರುವ ಅನಂತತ್ವಧರ್ಮವು ಬೇರೆ ಎಲ್ಲಿಯೂ ಇಲ್ಲವೆಂದು ನಿರವಕಾಶತ್ವವನ್ನು 'ಅಂತತ್ರಯ' ಎಂಬ ಶ್ಲೋಕದಿಂದ ಖಚಿತಪಡಿಸುತ್ತಿದ್ದಾರೆ. ಶ್ಲೋಕವನ್ನು ಸ್ವತಃ ಗ್ರಂಥಕಾರರೇ ವ್ಯಾಖ್ಯಾನಿಸುವವರಾಗಿ ಉತ್ತರಾರ್ಧದಲ್ಲಿರುವ ಭೂತಪದದ ಕೃತ್ಯವನ್ನು 'ಯದ್ಯಪಿ' ಎಂಬ ಗ್ರಂಥದಿಂದ ಹೇಳುತ್ತಿದ್ದಾರೆ. ಅವ್ಯಾಕೃತಾಕಾಶದಲ್ಲಿ ದೇಶತಃ ಕಾಲತಃ ಆನಂತ್ಯವು ಇರುತ್ತದೆಂದು ತಿಳಿಯಬೇಕು. ಇದರಿಂದ 'ನಭೋಽಂತರಿಕ್ಷಂ ಗಗನಮನಂತಂ ಸುರವರ್ತ್ಮ ಖಮ್' ಈ ಕೋಷವು ಕೇವಲ ಅವ್ಯಾಕೃತಾಕಾಶವಿಷಯವೆಂದು ತಿಳಿಯಬೇಕು. ಒಂದು ವೇಳೆ ಭೂತಾಕಾಶವಿಷಯವೆಂದು ಹೇಳಿದರೆ ಅದು ಅಜ್ಞಾನಮೂಲವೆಂದು ತಿಳಿಯಬೇಕು. ಶ್ಲೋಕದ ಪೂರ್ವಾರ್ಧವನ್ನು 'ನಿರೂಢಶ್ಚ' ಎಂಬ ಗ್ರಂಥದಿಂದ ವ್ಯಾಖ್ಯಾನಿಸುತ್ತಿದ್ದಾರೆ. 'ವಿಷ್ಣೋರ್ನುಕಂ ವೀರ್ಯಾಣಿ' ಎಂಬ ಶ್ರುತಿಯಲ್ಲಿ ಭಗವಂತನಿಗೆ ಮೂರುವಿಧ ಆನಂತ್ಯವನ್ನು ಹೇಳಲಾಗಿದೆ. ಲೋಕಪ್ರಸಿದ್ಧಿಯೂ ಸಹ ಅಚ್ಯುತಾನಂತ ಗೋವಿಂದ ಎಂಬ ನಾಮತ್ರಯದಿಂದ ಎಂದು ಹೇಳಿದಂತಾಯಿತು. ಲೋಕತಶ್ಚ ಎಂಬ ವಾಕ್ಯದಲ್ಲಿ ಹಿಂದಿನ ವಾಕ್ಯದಲ್ಲಿರುವ ನಿರೂಢಃ ಎಂಬ ಪದವನ್ನು ಆನುವೃತ್ತಿ ಮಾಡಬೇಕು. ಹೀಗೆ ಅನಂತತ್ವ ಮೊದಲಾದ ವಿಷ್ಣುಲಿಂಗಗಳು ನಿರವಕಾಶಗಳಾಗಿವೆಯೆಂದು ಸಿದ್ಧವಾಯಿತು. ಇದರ ಪ್ರಯೋಜನವನ್ನು ಲೋಕಪ್ರಸಿದ್ಧಿಂ ಇತ್ಯಾದಿ ವಾಕ್ಯದಿಂದ ಹೇಳುತ್ತಿದ್ದಾರೆ.

ಹಿಂದೆ ಪೂರ್ವಪಕ್ಷಿಯು ಶ್ರುತಿತ್ವ, ಬಹುತ್ವ ಉಭಯಪ್ರಯುಕ್ತವಾದ ಪ್ರಾಬಲ್ಯಕ್ಕಿಂತ ನಿರವಕಾಶತ್ವ ಮಾತ್ರ ಪ್ರಯುಕ್ತವಾದ ಪ್ರಾಬಲ್ಯವು ದುರ್ಬಲವಾಗುತ್ತದೆಂದು ಆಕ್ಷೇಪಿಸಿದ್ದ. ಅದನ್ನು ಈಗ ದ್ವಾಭ್ಯಾಂ ಇತ್ಯಾದಿ ಶ್ಲೋಕದಿಂದ ನಿರಾಕರಿಸುತ್ತಿದ್ದಾರೆ. ಈ ಶ್ಲೋಕದಲ್ಲಿ ಯತಿಭಂಗದೋಷವು ಆಪಾತತಃ ಕಾಣಿಸುತ್ತದೆ. 'ಆಗತಿತ್ವಪರತ್ವಾನೇ' 'ಕರ್ತೃರ್ಲಿಂಗಾನಿ ತು ತ್ರಿಭಿಃ' ಹೀಗೆ ಪದದ ಮಧ್ಯದಲ್ಲಿ ಮೂರನೆಯ ಪಾದವು ನಿಲ್ಲುವುದರಿಂದ ಯತಿಭಂಗದೋಷವು ಸ್ಪಷ್ಟ. ಆದರೆ ಸ್ವರಸಂಧಿಯಲ್ಲಿ ಮುಂದಿನ ಅಕ್ಷರವು ಪೂರ್ವಪದದ ಅಂತೋದ್ಭಾವವನ್ನು ಹೊಂದುವುದರಿಂದ 'ಪೂರ್ವಾಂತವತ್ ಸ್ವರಸ್ಸಂಧೌ' ಎಂಬ ಮಾತಿನಂತೆ ಇಲ್ಲಿ ಯತಿಭಂಗವನ್ನು ಶಂಕಿಸಬಾರದು. ಸ್ವತಃ ಗ್ರಂಥಕಾರರೇ ತಮ್ಮ ಶ್ಲೋಕವನ್ನು 'ಶ್ರುತಿರಿತ್ಯಾದಿ' ವಾಕ್ಯದಿಂದ ವ್ಯಾಖ್ಯಾನಿಸುತ್ತಿದ್ದಾರೆ. ಶ್ರುತಿಯು ಸ್ವಭಾವಪ್ರಯುಕ್ತವಾಗಿ ಮತ್ತು ಬಹುತ್ವ-ಪ್ರಯುಕ್ತವಾಗಿ ಪ್ರಬಲವಾಗುತ್ತದೆ. ಲಿಂಗವು ನಿರವಕಾಶಪ್ರಯುಕ್ತವಾಗಿ ಮತ್ತು ಚರಮತ್ವ ಅನೇಕತ್ವ-ಪ್ರಯುಕ್ತವಾಗಿಯೂ ಪ್ರಬಲವಾಗುತ್ತದೆ. ಈ ವಿಷಯದಲ್ಲಿ ವೈಯ್ಯಾಕರಣರ ಹಾಗೂ ಮೀಮಾಂಸಕರ ಸಮ್ಮತಿಯನ್ನು ಪರನಿತ್ಯ ಎಂಬ ವಾಕ್ಯದಿಂದ ತೋರಿಸಿದ್ದಾರೆ.

'ಪರಂ ವಿದುಃ ಪೂರ್ವಪರೋಪಪತ್ತೌ ಪರಸ್ಯ ನಿತ್ಯಸ್ಯ ಚ ನಿತ್ಯಮೇವ।
ನಿತ್ಯಾಂತರಗೋಪಗಮೇಽಂತರಂಗಸ್ಥಥಾವಿಧಾತ್ ಪ್ರಾತಿಪದೋ ಬಲೀಯಾನ್'

ಪೂರ್ವ ಮತ್ತು ಪರಗಳಲ್ಲಿ ಪರವೇ ಪ್ರಬಲವಾಗುತ್ತದೆ. (ಪರ = ಮುಂದಿನ ಸೂತ್ರ ಅಥವಾ ಮುಂದಿನ ಕಾರ್ಯ). ಪರ ಮತ್ತು ನಿತ್ಯಗಳಲ್ಲಿ ನಿತ್ಯವೇ ಪ್ರಬಲವಾಗುತ್ತದೆ. ನಿತ್ಯ ಮತ್ತು ಅಂತರಂಗಗಳಲ್ಲಿ ಅಂತರಂಗವೇ ಪ್ರಬಲವಾಗುತ್ತದೆ. ಅಂತರಂಗ ಮತ್ತು ನಿರವಕಾಶವಿಧಿಗಳಲ್ಲಿ ನಿರವಕಾಶವೇ ಪ್ರಬಲವಾಗುತ್ತದೆ. ಹೀಗೆ ವೈಯ್ಯಾಕರಣರು ಅಂಗೀಕರಿಸಿದ ಸಿದ್ಧಾಂತ.

ಪೂರ್ವಕ್ಕಿಂತ ಪರವೇ ಪ್ರಬಲವೆನ್ನಲು ಉದಾಹರಣೆ -- ಪಾಣಿನಿ ವ್ಯಾಕರಣದ ಆರನೇ ಅಧ್ಯಾಯದ ಆಂಗಪಾದದಲ್ಲಿ (ಚತುರ್ಥಪಾದ) ಹೀಗೆ ವಿಚಾರ ಮಂಡಿದ್ದಾರೆ. 'ಆಡಜಾದೀನಾಂ' 'ಆಡಾಗಮೋ ಭವತಿ ಅಜಾದೀನಾಂ ಲುಙ್ ಲಙ್ ಲೃಙ್ಷು ಪರತಃ ಉದಾತ್ತಶ್ಚ ಸಃ ಭವತಿ । ಐಜ್ಯಂತ' ಈ ಸೂತ್ರದ ಕಾಶಿಕಾವೃತ್ತಿಯಲ್ಲಿ ಪರಕ್ಕಿಂತ ನಿತ್ಯವೇ ಪ್ರಬಲವೆಂದು ನಿರ್ಣಯಿಸಿ ಐಜ್ಯಂತ ಎಂಬ ರೂಪನಿಷ್ಪತ್ತಿಯನ್ನು ಮಾಡಿದ್ದಾರೆ. ಯಜ್ ಧಾತುವಿಗೆ ಕರ್ಮಾರ್ಥದಲ್ಲಿ ಲಙ್‌ಲಕಾರವನ್ನು ವಿಧಿಸಿದ ಮೇಲೆ ತಿಙಾದೇಶವು ಪ್ರಾಪ್ತವಾಗುತ್ತದೆ. ಅದೇ ಕಾಲದಲ್ಲಿ 'ಲುಙ್‌ಲಙ್‌ಲೃಙ್‌ಕ್ಷ್ವಡುದಾತ್ತಃ' ಎಂಬ ಸೂತ್ರದಿಂದ ಆಡಾಗಮವು ಪ್ರಾಪ್ತವಾಗುತ್ತದೆ. ಇಲ್ಲಿ ಪ್ರಶ್ನೆ -- ಯಜ್ ಧಾತುವಿಗೆ ಲಙ್‌ಲಕಾರವನ್ನು ಹೇಳಿದ ಮೇಲೆ 'ತಿಪ್‌ತಸ್‌ಝಿ' ಇತ್ಯಾದಿ ಸೂತ್ರದಿಂದ ತಿಙಾದೇಶವನ್ನು ಹೇಳಬೇಕೋ? ಅಥವಾ 'ಲುಙ್‌ಲಙ್' ಇತ್ಯಾದಿ ಸೂತ್ರದಿಂದ ಆಡಾಗಮವನ್ನು ಹೇಳಬೇಕೋ? ಎಂದು. ಹೀಗಿರುವಾಗ 'ವಿಪ್ರತಿಷೇಧೇ ಪರಂ ಕಾರ್ಯಮ್' (ವಿರೋಧ ಬಂದಾಗ ಪರವೇ ಶ್ರೇಷ್ಠ) ಎಂಬ ನಿಯಮದಂತೆ ಪರವಾದ್ದರಿಂದ ಆಡಾಗಮವೇ ಬರಬೇಕು. ಆದರೆ ಪರಸೂತ್ರಕ್ಕಿಂತಲೂ ಅಂತರಂಗಸೂತ್ರವು ಪ್ರಬಲವಾದ್ದರಿಂದ ತಿಙಾದೇಶವೇ ಬರುತ್ತದೆ. ಏಕೆಂದರೆ ತಿಙಾದೇಶವು ಕೇವಲ ಲಕಾರವನ್ನಷ್ಟೇ ಅಪೇಕ್ಷಿಸುವುದರಿಂದ ಅಂತರಂಗವಾಗಿದೆ. ಆದರೆ ಆಡಾಗಮವು ಲುಙ್ ಮೊದಲಾದ ಲಕಾರಗಳನ್ನು ಮತ್ತು ಅಂಗಸಂಜ್ಞೆಯನ್ನು ಅಪೇಕ್ಷಿಸುವುದರಿಂದ ಬಹಿರಂಗವಾಗಿದೆ.

ಹೀಗೆ ಯಜ್ ಧಾತುವಿಗೆ ತಿಙಾದೇಶವು ಬಂದ ಮೇಲೆ ಪುನಃ 'ಸಾರ್ವಧಾತುಕೇ ಯಕ್' ಎಂಬ ಸೂತ್ರದಿಂದ ಯಕ್ ಪ್ರತ್ಯಯ ಬರಲು ಪ್ರಸಕ್ತಿ ಇದೆ. ಆದರ ಜೊತೆಗೆ 'ಲುಙ್‌ಲಙ್‌ಲೃಙ್‌ಕ್ಷ್ವಡುದಾತ್ತಃ' ಎಂಬ ಸೂತ್ರದಿಂದ ಆಡಾಗಮವು ಬರಲು ಪ್ರಸಕ್ತಿ ಇದೆ. ಇಲ್ಲಿಯೂ ಸಹ ಯಕ್ ಪ್ರತ್ಯಯವನ್ನು ಹೇಳಬೇಕೋ? ಆಡಾಗಮವನ್ನು ಹೇಳಬೇಕೋ? ಎಂಬ ಪ್ರಶ್ನೆ ಬಂದರೆ ಪರಸೂತ್ರವಾದ್ದರಿಂದ ಆಡಾಗಮವು ಪ್ರಾಪ್ತವಾಗುತ್ತದೆ. ಆದರೆ ಇದನ್ನೂ ಸಹ ಬಾಧಿಸಿ ನಿತ್ಯಸೂತ್ರವಾದ 'ಸಾರ್ವಧಾತುಕೇ ಯಕ್' ಎಂಬ ಸೂತ್ರದಿಂದ ಯಕ್‌ಪ್ರತ್ಯಯವು ಬರುತ್ತದೆ. ಆದರೆ ಯಕ್‌ಪ್ರತ್ಯಯಕ್ಕೆ ಸಂಪ್ರಸಾರಣ-ಸಂಜ್ಞೆಯಿರುವುದರಿಂದ ಸಂಪ್ರಸಾರಣವು ಪರದಲ್ಲಿದ್ದಾಗ ಆಡಾಗಮವು ಬರುವುದಿಲ್ಲ. ಆದ್ದರಿಂದ 'ಸಾರ್ವಧಾತುಕೇ ಯಕ್' ಎಂಬ ಸೂತ್ರವು ನಿತ್ಯವೆನಿಸಿದೆ. (ಕೃತಾಕೃತಪ್ರಸಂಗೀ ಯೋ ವಿಧಿಃ ಸಃ ನಿತ್ಯಃ = ಉಳಿದದ್ದು ಬರಲಿ ಬಾರದಿರಲಿ ತಾನಂತೂ ಬರುತ್ತದೆ)

ಹೀಗೆ ಯಜ್‌ಧಾತುವಿಗೆ ಮೊದಲು ತಿಙಾದೇಶ ಬಂದು ಆನಂತರ ಯಕ್‌ಪ್ರತ್ಯಯವು ಪ್ರಾಪ್ತವಾಗುತ್ತದೆ. ಯಕ್‌ಪ್ರತ್ಯಯ ಬಂದ ಮೇಲೆ ಪುನಃ 'ವಚಿ ಸ್ವಪಿ ಯಜಾದೀನಾಂ ಕಿತಿ' ಎಂಬ ಸೂತ್ರದಿಂದ ಸಂಪ್ರಸಾರಣ ಬರುವ ಪ್ರಸಕ್ತಿ ಇದೆ. ಆದರಂತೆ 'ಲುಙ್‌ಲಙ್‌ಲೃಙ್‌ಕ್ಷ್ವಡುದಾತ್ತಃ' ಎಂಬ ಸೂತ್ರದಿಂದ ಆಡಾಗಮವು ಬರುವ ಪ್ರಸಕ್ತಿ ಇದೆ. ಹೀಗಿರುವಾಗ ಸಂಪ್ರಸಾರಣಸಂಜ್ಞೆಯನ್ನು ಹೇಳಬೇಕೋ?

ಆಡಾಗಮವನ್ನು ಹೇಳಬೇಕೋ? ಎಂಬ ಪ್ರಶ್ನೆ ಬಂದರೆ, ಪರಸೂತ್ರಕ್ಕಿಂತ ನಿತ್ಯಸೂತ್ರವೇ ಪ್ರಬಲವಾದ್ದರಿಂದ ಸಂಪ್ರಸಾರಣಸಂಜ್ಞೆಯೇ ಬರುತ್ತದೆ. ಇದರಿಂದ ಪೂರ್ವಸೂತ್ರಕ್ಕಿಂತ ಪರವು ಪ್ರಬಲವೆಂದೂ, ಪರಸೂತ್ರಕ್ಕಿಂತ ಅಂತರಂಗಸೂತ್ರವು ಪ್ರಬಲವೆಂದೂ ನಿಶ್ಚಿತವಾಗುತ್ತದೆ. ಸಂಪ್ರಸಾರಣಸಂಜ್ಞೆಯು ಬಂದ ಮೇಲೆ 'ಆಡಜಾದೀನಾಂ' ಎಂಬ ಸೂತ್ರದಿಂದ ಆಡಾಗಮವು ಬರುತ್ತದೆ. ಆದರ ಜೊತೆಗೆ 'ಲುಪ್‌ಲಪ್ ಲೃಪ್‌ಕ್ಪ್ವಡುದಾತ್ತಃ' ಎಂಬ ಸೂತ್ರದಿಂದ ಪುನಃ ಆಡಾಗಮವು ಬರಲು ಪ್ರಸಕ್ತಿ ಇದೆ. ಆದರೆ ಪೂರ್ವಕ್ಕಿಂತ ಪರವು ಪ್ರಬಲವಾದ್ದರಿಂದ ಆಡಾಗಮವೇ ಬರುತ್ತದೆ. ಅನಂತರ ಐಜ್ಯಂತ ಎಂಬ ರೂಪವು ನಿಷ್ಪನ್ನವಾಗುತ್ತದೆ. ಹೀಗೆ ಪರಸೂತ್ರಕ್ಕಿಂತ ನಿತ್ಯಸೂತ್ರವೂ ಮತ್ತು ಪರಸೂತ್ರಕ್ಕಿಂತ ಅಂತರಂಗಸೂತ್ರವು ಪ್ರಬಲವೆಂದು ನಿಶ್ಚಯವಾಯಿತು.

ನಿತ್ಯಸೂತ್ರಕ್ಕಿಂತ ಅಂತರಂಗವು ಪ್ರಬಲ -- ಐಜ್ಯಂತ ಎಂಬ ರೂಪನಿಷ್ಪತ್ತಿ ಸಂದರ್ಭದಲ್ಲಿಯೇ ಲಾದೇಶವು ಬರಲು ಪ್ರಸಕ್ತಿ ಇದೆ. ಅದರಂತೆ ಆಡಾಗಮವು ಬರಲು ಪ್ರಸಕ್ತಿ ಇದೆ. ಆಡಾಗಮವು ಪರವಾದರೂ ಸಹ ಅಂತರಂತವೆನಿಸಿದ ಲಾದೇಶವೇ ಮೊದಲು ಬರುತ್ತದೆ.

ಅಂತರಂಗಕ್ಕಿಂತ ನಿರವಕಾಶವು ಪ್ರಬಲ -- 'ಅಚಿಶ್ನುಧಾತುಭ್ರುವಾಂ ವ್ಯೋರಿಯಙುವಙೌ' 'ಶ್ನುಪ್ರತ್ಯಯಾಂತಸ್ಯ ಅಂಗಸ್ಯ ಧಾತೋಃ ಇವರ್ಣೋವರ್ಣಾಂತಸ್ಯ ಭ್ರುರಿತ್ಯೇತಸ್ಯ ಚ ಇಯಙ್‌ಉವಙ್ ಇತ್ಯೇತಾವಾದೇಶೌ ಭವತಃ ಅಚಿಪರತಃ (ಶ್ನುಪ್ರತ್ಯಯಾಂತವಾದ ಮತ್ತು ಇವರ್ಣಾಂತವಾದ ಉವರ್ಣಾಂತವಾದ ಧಾತುವಿಗೆ ಮತ್ತು ಭ್ರುಶಬ್ದಕ್ಕೆ ಅಚ್‌ಪರದಲ್ಲಿದ್ದಾಗ ಇಯಙ್ ಹಾಗೂ ಉವಙ್ ಆದೇಶಗಳು ಬರುತ್ತವೆ). ಪ್ರಕೃತ 'ಶ್ರೀ+ಙಿ' ಎಂದಿರಬೇಕಾದರೆ ಈ ಸೂತ್ರದಿಂದ ಇವರ್ಣಾಂತವಾದ ಶ್ರೀಶಬ್ದಕ್ಕೆ ಅಚ್ ಪರದಲ್ಲಿರುವುದರಿಂದ ಇಯಙ್ ಆದೇಶವು ಬರಲು ಪ್ರಸಕ್ತಿ ಇದೆ. ಇದರಂತೆ 'ಇಕೋ ಯಣಚಿ' ಎಂಬ ಸೂತ್ರದಿಂದ ಯಣಾದೇಶವು ಬರಲು ಪ್ರಸಕ್ತಿ ಇದೆ. ವಸ್ತುತಃ 'ಇಕೋ ಯಣಚಿ' ಎಂಬ ಸೂತ್ರವು ಅಂತರಂಗವಾದ್ದರಿಂದ ಯಣಾದೇಶವೇ ಬರಬೇಕು. ಆದರೆ 'ಅಚಿಶ್ನುಧಾತು' ಇತ್ಯಾದಿ ಸೂತ್ರವು ನಿರವಕಾಶವಾದ್ದರಿಂದ ಅಂತರಂಗಕ್ಕಿಂತ ಪ್ರಬಲವಾಗಿದೆ. ಹಾಗಾಗಿ ಶ್ರೀಶಬ್ದದ ಮೇಲೆ ಇಯಙ್‌ಆದೇಶ ಬಂದರೆ ಶ್ರಿಯೌ ಮತ್ತು ಶ್ರಿಯಃ ಇತ್ಯಾದಿ ರೂಪಗಳು ಸಿದ್ಧವಾಗುತ್ತವೆ. ಈ ಉದಾಹರಣೆಯಿಂದ ಅಂತರಂಗಸೂತ್ರಕ್ಕಿಂತ ನಿರವಕಾಶಸೂತ್ರವು ಪ್ರಬಲವೆಂದು ಸ್ಪಷ್ಟವಾಗುತ್ತದೆ.

**ಆಗ್ರಯಣೇ ಪ್ರಸೂನಬರ್ಹಿಷಾಮೇವ ಗ್ರಹಣಾಧಿಕರಣಮ್ (೧೨-೨-೧೪)**
**'ಅಧಿಕಶ್ಚ ಗುಣಃ ಸಾಧಾರಣೇऽವಿರೋಧಾತ್ ಕಾಂಸ್ಯಭೋಜಿವದಮುಖ್ಯೇಽಪಿ' (ಸೂತ್ರ)**

ಆಗ್ರಯಣೇಷ್ಟಿಯಲ್ಲಿ ಇಂದ್ರಾಗ್ನಿದೇವತಾವಿಷಯಕವಾದ ವೈಶ್ವದೇವವಿಷಯಕವಾದ ಮತ್ತು ದ್ಯಾವಾಪೃಥ್ವೀವಿಷಯಕವಾದ ಮೂರು ಬರ್ಹಿಗಳು (ದರ್ಭೆಮುಷ್ಟಿಗಳು) ಹೇಳಲ್ಪಟ್ಟಿವೆ. ಈ ಮೂರರ ಮಧ್ಯದಲ್ಲಿ ದ್ಯಾವಾಪೃಥಿವೀ ವಿಷಯಕವಾದ ದರ್ಭೆಮುಷ್ಟಿಯು ವೈಶ್ವದೇವಪರ್ವದಲ್ಲಿರುವ ದ್ಯಾವಾಪೃಥ್ವಿಯ ವಿಕಾರವಾಗಿದೆ. ಅಂದರೆ ಈ ಮೂರನ್ನು ಬಿಟ್ಟು ವೈಶ್ವದೇವಪರ್ವದಲ್ಲಿ ಬೇರೆ ಇಷ್ಟಿಯನ್ನೇ ಹೇಳಿದ್ದಾರೆ. ಅದು ಪ್ರಕೃತಿಯೆನಿಸುತ್ತದೆ. ಈ ಮೂರರ ಮಧ್ಯದಲ್ಲಿರುವುದು ವಿಕೃತಿಯಾಗಿದೆ. ಪ್ರಕೃತಿಯಲ್ಲಿ ಬರ್ಹಿ ಎಂದರೆ ಪ್ರಸೂನಬರ್ಹಿಯು (ಹೂಬಿಟ್ಟ ದರ್ಭೆಮುಷ್ಟಿಯು) ಪ್ರಾಪ್ತವಾಗಿದೆ. ಅದರ ವಿಕೃತಿಯೆನಿಸಿದ

ಮೂರರ ಮಧ್ಯದಲ್ಲಿರುವ ದ್ಯಾವಾಪೃಥಿವಿಯ ದರ್ಭೆಮುಷ್ಟಿಯೂ ಸಹ ಪ್ರಸೂನಬರ್ಹಿ-ವಿಷಯವಾಗುತ್ತದೆ.

ಸಂದೇಹ - ಪ್ರಕೃತಿಯಲ್ಲಿ ಪ್ರಸಕ್ತವಾದದ್ದೇ ವಿಕೃತಿಯಲ್ಲಿಯೂ ಅನುವೃತ್ತವಾಗುವುದರಿಂದ ದ್ಯಾವಾಪೃಥಿವಿಯಲ್ಲಿ ಪ್ರಸೂನಬರ್ಹಿಯೇ ಪ್ರಸಕ್ತವಾಗುತ್ತದೆ. ಉಳಿದೆರಡರಲ್ಲಿ ಕೇವಲ ಬರ್ಹಿಯಷ್ಟೇ ಪ್ರಸಕ್ತವಾಗಿದೆ. ಸಮಾನನ್ಯಾಯದಂತೆ ಮೂರರಲ್ಲಿಯೂ ಪ್ರಸೂನಬರ್ಹಿಯನ್ನಾಗಲೀ, ಅಪ್ರಸೂನ-ಬರ್ಹಿಯನ್ನಾಗಲೀ ಇಟ್ಟುಕೊಳ್ಳಬಹುದೆಂಬ ಅನಿಯಮವನ್ನು ಹೇಳಬೇಕೋ? ಅಥವಾ ದ್ಯಾವಾಪೃಥಿವಿ-ಯಲ್ಲಿ ಪ್ರಸಕ್ತವಾದ್ದರಿಂದ ಪ್ರಸೂನಬರ್ಹಿಯನ್ನೇ ಮೂರರಲ್ಲಿಯೂ ಇಟ್ಟುಕೊಳ್ಳಬೇಕೋ?

ಪೂರ್ವಪಕ್ಷ - ಮೂರರ ಮಧ್ಯದಲ್ಲಿ ಐಂದ್ರಾಗ್ನ ಮತ್ತು ವೈಶ್ವದೇವಗಳೇ ಮುಖ್ಯ. ದ್ಯಾವಾಪೃಥಿವಿಯು ಅಮುಖ್ಯ. ಮತ್ತು ಐಂದ್ರಾಗ್ನ, ವೈಶ್ವದೇವಗಳು ಅನೇಕವಾಗಿವೆ. ದ್ಯಾವಾಪೃಥಿವಿಯು ಒಂದೇ ಆಗಿದೆ. ಹೀಗೆ ಮುಖ್ಯತ್ವ ಮತ್ತು ಅನೇಕತ್ವಲಿಂಗಗಳಿಂದ ಪ್ರಸೂನಬರ್ಹಿಯನ್ನಾಗಲೀ ಅಪ್ರಸೂನಬರ್ಹಿಯನ್ನಾಗಲೀ ಇಟ್ಟುಕೊಳ್ಳಬಹುದೆಂಬ ಅನಿಯಮಪಕ್ಷವೇ ಗ್ರಾಹ್ಯ. ದ್ಯಾವಾಪೃಥಿವಿಯಲ್ಲಿ ಪ್ರಸಕ್ತವಾದ ಪ್ರಸೂನಬರ್ಹಿಯೆಂಬ ನಿಯಮವು ಗೌಣವಾದ್ದರಿಂದ ಅಗ್ರಾಹ್ಯ.

---

ಭಾಷ್ಯಸಙ್ಗ್ರಹಃ –

**अथ चतुर्दशमाग्रयणे प्रसूनबर्हिषामेव ग्रहणाधिकरणम् (सूत्र ३३)**

**अधिकश्च गुणस्साधारणेऽविरोधात्कांस्यभोजिवदमुख्येऽपि ॥ ३३ ॥**

पूर्वन्यायेन शङ्कनात्सङ्गतिः । आग्रयणेष्टौ ऐन्द्राग्नवैश्वदेवद्यावापृथिव्यानि त्रीणि बर्हिषि । तत्र द्यावापृथिव्यस्य वैश्वदैविकद्यावापृथिव्यविकारत्वात्प्रसूनं बर्हिः प्राप्तम् । **पुष्पितकाशमयं बर्हिरित्यर्थः** । उतरयोस्तु प्रसूनमप्रसूनं वा बर्हिर्मात्रम् । तत्र समानतन्त्रेषु किं प्रसूनमप्रसूनं वोपादेयम्, उत प्रसूनमेवेति **संदेहे**, ऐन्द्राग्नवैश्व-देवयोर्मुख्यत्वादनेकत्वात्तदीयबर्हिषि प्रसूनमप्रसूनं वेत्यनियमरूपो गुणस्स्यात् । द्यावापृथिव्यस्य तु जघन्यत्वादेकत्वाच्च न तदीयः प्रसूनमेवेति नियमरूपो गुणः । एवं पूर्वत्र प्रकृतिरिव द्यावापृथिव्यैकैकपालोऽपि प्रसङ्गीति **प्राप्ते सिद्धान्तः**, यद्धितं तदेवाङ्गम् । ऐन्द्राग्नवैश्वदेवयोस्तु बर्हिर्मात्रमेव विहितम् । अतस्तदेवाङ्गम् । अनियमस्त्वबिहितत्वादनङ्गम् । अतो न तदनुग्राह्यामिति प्रसूनमेवोपादेयम् । तदुपादाने हि द्यावापृथिव्यस्यैन्द्राग्नादेश्च त्रयाणामप्यवैगुण्यम् । मुख्यानुरोधेनानियमे तु द्यावा-पृथिव्यस्य वैगुण्यं स्यात् । तस्मात्प्रसूनमेव ग्राह्यमिति । तदाह **सूत्रे, अधिकः** प्रसूनतारूपो **गुणः साधारणे** मुख्साधारण्ये **सत्यविरोधान्मुख्यविरोधाभावदमुख्येऽपि** स्यात् । यथा शिष्यस्य कांस्यभोजित्वनियमः । गुरोस्तदनियमः । तन्त्र तयोर्यद्येकस्मिन् पात्रे भोजनं प्रसक्तं चेत्तदा गुरुधर्मलोपेन शिष्यस्यामुख्यस्यापि धर्मोनुगृह्यते तद्वदिति ।

इति चतुर्दशमाग्रयणे प्रसूनबर्हिषामेव ग्रहणाधिकरणम् (सूत्रम् ३३)

ಸಿದ್ಧಾಂತ - ವಿಹಿತವಾದದ್ದೇ ಅಂಗವೆನಿಸುತ್ತದೆ. ಐದ್ರಾಗ್ನ ಮತ್ತು ವೈಶ್ವದೇವಗಳಲ್ಲಿ ಕೇವಲ (ವಿಶೇಷಣರಹಿತವಾದ) ಬರ್ಹಿಯು ವಿಧಿಸಲ್ಪಟ್ಟಿದೆ. ಆದ್ದರಿಂದ ಕೇವಲಬರ್ಹಿಯೇ ಅಂಗವಾಗುತ್ತದೆ. ನಿಯಮವಿಲ್ಲದ ಬರ್ಹಿಯು ವಿಧಿಸಲ್ಪಡದ ಕಾರಣ ಅಂಗವಾಗುವುದಿಲ್ಲ. ಕೇವಲಬರ್ಹಿಯೇ ಅಂಗವೆನಿಸುವುದರಿಂದ ಮೂರರಲ್ಲಿಯೂ ಪ್ರಸೂನಬರ್ಹಿಯನ್ನೇ ಇಟ್ಟುಕೊಳ್ಳಬೇಕು. ಪ್ರಸೂನಬರ್ಹಿಯನ್ನಾಗಲೀ, ಅಪ್ರಸೂನಬರ್ಹಿಯನ್ನಾಗಲೀ ಇಟ್ಟುಕೊಳ್ಳಲು ಪ್ರಸಕ್ತಿ ಇರುವಾಗ ಪ್ರಸೂನಬರ್ಹಿಯನ್ನು ಇಟ್ಟುಕೊಳ್ಳುವುದರಿಂದ ಯಾವುದೇ ಹಾನಿ ಇಲ್ಲ. ಮತ್ತು ದ್ಯಾವಾಪೃಥಿವಿಯಲ್ಲಿ ಪ್ರಸಕ್ತವಾದ ಪ್ರಸೂನಬರ್ಹಿಯನ್ನು ಉಳಿದರಡರಲ್ಲಿ ವಿವಕ್ಷಿಸಿದಾಗ ಯಾವುದೇ ವೈಗುಣ್ಯವು ಬರುವುದಿಲ್ಲ. ಒಂದು ವೇಳೆ ಪೂರ್ವಪಕ್ಷಿಗಳು ಹೇಳಿದಂತೆ ಮೂರರಲ್ಲಿಯೂ ಸಮಾನವಾಗಿ ಅನಿಯಮಪಕ್ಷವನ್ನು ಆಶ್ರಯಿಸಿದರೆ ದ್ಯಾವಾಪೃಥಿವಿಗೆ ವೈಗುಣ್ಯದೋಷ ಬರುತ್ತದೆ. ಅಂದರೆ ಚೋದಕಪ್ರಾಪ್ತವಾದ ನಿಯಮವನ್ನು ಬಿಟ್ಟಂತಾಗುತ್ತದೆ. ವೈಗುಣ್ಯದೋಷವಿಲ್ಲದೆ ಕೂಡಿಸಲು ಬರುವಾಗ ವೈಗುಣ್ಯದೋಷವನ್ನು ಸಹಿಸಿಕೊಂಡು ಅನಿಯಮಪಕ್ಷವನ್ನು ಆಶ್ರಯಿಸುವುದು ತಪ್ಪಲ್ಲವೇ? ಆದ್ದರಿಂದ ಪ್ರಸೂನಬರ್ಹಿಯನ್ನೇ ಮೂರರಲ್ಲಿಯೂ ಇಟ್ಟುಕೊಳ್ಳಬೇಕು.

ಪೂರ್ವಮೀಮಾಂಸೆಯ ಈ ಸೂತ್ರದಲ್ಲಿ 'ಕಾಂಸ್ಯಭೋಜ'ನ್ಯಾಯವನ್ನು ಉದಾಹರಿಸಿದ್ದಾರೆ. ದ್ಯಾವಾ-ಪೃಥಿವಿಯ ಬರ್ಹಿಯು ಅಮುಖ್ಯವಾದರೂ ಸಹ ವೈಗುಣ್ಯದೋಷವು ಬರಬಾರದೆಂದು ಪ್ರಸೂನಬರ್ಹಿಯನ್ನೇ ಎಲ್ಲೆಡೆ ಇಟ್ಟುಕೊಂಡಿದ್ದಾರೆ. ಅಂದರೆ ಮುಖ್ಯಕ್ಕೆ ವಿರೋಧವು ಬಾರದಿದ್ದಾಗ ಅಮುಖ್ಯವನ್ನು ಉಪೇಕ್ಷಿಸಬಾರದು.

ಹೇಗೆಂದರೆ -- ಒಂದೆಡೆ ಗುರು ಹಾಗೂ ಶಿಷ್ಯರು ಒಟ್ಟಿಗೆ ಹೋಗಿರುತ್ತಾರೆ. ಅಲ್ಲಿ ಊಟ ಮಾಡುವ ಸಂದರ್ಭ ಬಂದಾಗ ಒಂದು ಊಟದ ಎಲೆ ಮತ್ತೊಂದು ಕಂಚಿನ ತಟ್ಟೆ ಇರುತ್ತದೆ. ವಸ್ತುತಃ ಎಲೆಗಿಂತ ಕಂಚಿನ ತಟ್ಟೆಯು ಶ್ರೇಷ್ಠವಾದ್ದರಿಂದ ಗುರುವು ಕಂಚಿನ ತಟ್ಟೆಯಲ್ಲಿ ಊಟ ಮಾಡಬೇಕು; ಶಿಷ್ಯನು ಎಲೆಯಲ್ಲಿ ಊಟ ಮಾಡಬೇಕು. ಆದರೆ ಶಿಷ್ಯನಾದವನು 'ಕಂಚಿನ ತಟ್ಟೆಯಲ್ಲಿಯೇ ಊಟ ಮಾಡುತ್ತೇನೆ' ಎಂಬ ನಿಯಮದಲ್ಲಿರುತ್ತಾನೆ. ಗುರುವಿಗೆ ಆ ನಿಯಮವಿರುವುದಿಲ್ಲ. ಒಂದು ವೇಳೆ ಗುರುವು ಪೂಜ್ಯನೆಂದು ಕಾಂಸ್ಯಪಾತ್ರವನ್ನು ಗುರುವಿಗೆ ನೀಡಿದರೆ ಶಿಷ್ಯನಿಗೆ ಊಟವೇ ಇಲ್ಲದಂತಾಗುತ್ತದೆ. ಆದ್ದರಿಂದ ಆ ಸಂದರ್ಭದಲ್ಲಿ ಪೂಜ್ಯನಾಗಿದ್ದರೂ ಸಹ ಗುರುವಾದವನು ಎಲೆಯಲ್ಲಿ ಊಟ ಮಾಡುತ್ತಾನೆ. ಶಿಷ್ಯನಾದವನು ಕಂಚಿನ ತಟ್ಟೆಯಲ್ಲಿ ಊಟ ಮಾಡುತ್ತಾನೆ. ಆದ್ದರಿಂದ ಶಿಷ್ಯನು ಸ್ವಭಾವತಃ ದುರ್ಬಲನಾಗಿದ್ದರೂ ನಿರವಕಾಶಪ್ರಯುಕ್ತವಾಗಿ ಪ್ರಬಲನಾಗಿದ್ದಾನೆ. ಗುರುವು ಸ್ವಭಾವತಃ ಪ್ರಬಲನಾಗಿದ್ದರೂ ನಿರವಕಾಶಶಿಷ್ಯನಿಂದ ಬಾಧಿತನಾಗಿದ್ದಾನೆ. ಇದರಂತೆ ಪ್ರಕೃತದಲ್ಲಿ ಶ್ರುತಿಗಿಂತ ಲಿಂಗಗಳು ಸ್ವಭಾವತಃ ದುರ್ಬಲವಾಗಿವೆ. ಶ್ರುತಿಗಳು ಸ್ವಭಾವತಃ ಪ್ರಬಲವಾಗಿವೆ. ಆದರೂ ಕೂಡ ಲಿಂಗಗಳು ನಿರವಕಾಶವಾಗಿದ್ದರೆ ಸ್ವಭಾವತಃ ಪ್ರಬಲವಾಗಿರುವ ಶ್ರುತಿಗಳನ್ನು ಬಾಧಿಸಲು ಸಮರ್ಥವಾಗುತ್ತವೆ. ಹೀಗೆ ಕಾಂಸ್ಯಭೋಜಿನ್ಯಾಯದಿಂದ ವಿಷ್ಣುವಿನಲ್ಲಿ ಪ್ರಸಿದ್ಧವಾದ ಆನಂತತ್ವಾದಿ ನಿರವಕಾಶಲಿಂಗಗಳಿಂದ ಆಕಾಶಶ್ರುತಿಯು ಬಾಧಿತವಾಗುತ್ತದೆಂದು ತಿಳಿಸಲು ಕಾಂಸ್ಯಭೋಜಿನ್ಯಾಯವನ್ನು ಉದಾಹರಿಸಿದ್ದಾರೆ.

ಪೂರ್ವಮೀಮಾಂಸೆಯ ಸೂತ್ರದಲ್ಲಿ ಈ ನ್ಯಾಯವನ್ನು ಉದಾಹರಣವಾಗಿ ಹೇಗೆ ಉಪಯೋಗಿಸಿಕೊಂಡಿದ್ದಾರೆಂದು ಸಮರ್ಥಿಸಿದ್ದರಿಂದ ಈ ವಿಷಯವು ಅತ್ಯಂತ ಸ್ಪಷ್ಟವಾಗುತ್ತದೆ.

ಹಿಂದೆ ಪೂರ್ವಪಕ್ಷಿಯು ಪ್ರಮೇಯಾಶ್ರಿತ ಶಂಕೆಯನ್ನು ಮತ್ತು ಪ್ರಮಾಣಾಶ್ರಿತಶಂಕೆಗಳನ್ನು ಮಾಡಿದ್ದ. ಪ್ರಮಾಣಾಶ್ರಿತಶಂಕೆಯಲ್ಲಿ 'ಆಕಾಶಶಬ್ದವು ಪ್ರಥಮಶ್ರುತವಾದ್ದರಿಂದ ಪ್ರಬಲವಾಗಿದೆ' ಎಂದು ಸಮರ್ಥಿಸಿದ್ದ. ಅದನ್ನು ಗ್ರಂಥಕಾರರು ಇಲ್ಲಿ ನಿರಾಕರಿಸಿದ್ದಾರೆ. ಉಪಕ್ರಮಕ್ಕಿಂತ ಉಪಸಂಹಾರವೇ ಪ್ರಬಲ. 'ಪ್ರಥಮೇ ಆಶ್ರವಣಾತ್' ಇತ್ಯಾದಿ ಸೂತ್ರದಲ್ಲಿ ಈ ವಿಷಯವನ್ನು ವಿವರವಾಗಿ ಸಮರ್ಥಿಸಲಾಗಿದೆ.

ವಿಷ್ಣುವಿನಲ್ಲಿ ಕೇವಲ ಅನಂತತ್ವಾದಿ ಲಿಂಗಗಳಷ್ಟೇ ಕೇಳಿಸುತ್ತಿಲ್ಲ. ಪರೋವರೀಯಸ್ತ್ವಾದಿ ಲಿಂಗಗಳೂ ಸಹ ಕೇಳಿಸುತ್ತಿವೆ. ಅನಂತತ್ವಾದಿ ಲಿಂಗಗಳಿಗಷ್ಟೇ ನಿರವಕಾಶತ್ವವನ್ನು ಇಲ್ಲಿಯ ತನಕ ಸಮರ್ಥಿಸಿದ್ದಾಯಿತು. ಪರೋವರೀಯಸ್ತ್ವಾದಿ ಲಿಂಗದಲ್ಲಿ ನಿರವಕಾಶತ್ವವನ್ನು ಏಕೆ ಸಮರ್ಥಿಸಲಿಲ್ಲ? ಎಂಬ ಪ್ರಶ್ನೆ ಬಂದರೆ 'ಪರೋವರೀಯಸ್ತ್ವಾದಿ' ಎಂಬ ವಾಕ್ಯದಿಂದ ಉತ್ತರಿಸಿದ್ದಾರೆ. ವಸ್ತುತಸ್ತು, ಅನಂತತ್ವಾದಿ ಲಿಂಗಗಳಂತೆ ಪರೋವರೀಯಸ್ತ್ವಾದಿ ಲಿಂಗಗಳೂ ಸಹ ನಿರವಕಾಶಗಳಾಗಿವೆ. 'ಪರೋ ಮಾತ್ರಯಾ ತನ್ವಾ ವೃಧಾನ', 'ಓಮಿತ್ಯೇತದಕ್ಷರಮುದ್ಗೀಥಮುಪಾಸೀತ' ಇತ್ಯಾದಿ ಮಾತುಗಳಿಂದ ಭಾಷ್ಯಕಾರರು ನಿರವಕಾಶತ್ವವನ್ನು ಸಮರ್ಥಿಸಿದ್ದಾರೆ. ಭಾಷ್ಯದಲ್ಲಿಯೇ ನಿರವಕಾಶತ್ವವನ್ನು ಸಮರ್ಥಿಸಿದ ಮೇಲೆ ಪುನಃ ಅದರ ಸಮರ್ಥನೆ ಇಲ್ಲಿ ಆನಾವಶ್ಯಕವೆಂದು ಹೇಳಿಲ್ಲ. ಹೀಗೆ ವಿಷ್ಣುವಿಷಯಕವಾದ ಅನೇಕ ಲಿಂಗಗಳಿರುವುದರಿಂದ ಸೂತ್ರದಲ್ಲಿರುವ 'ತಲ್ಲಿಂಗಾತ್' ಎಂಬ ಏಕವಚನವನ್ನು ಸಮುದಾಯಾರ್ಥದಲ್ಲಿ ವಿವಕ್ಷಿಸಬೇಕು. ಸಮಸ್ತಜಗತ್ಕರ್ತೃತ್ವ, ಅನಂತತ್ವ, ಬ್ರಹ್ಮಾಂಡವೀರ್ಯತ್ವ, ಪರೋವರೀಯಸ್ತ್ವ, ಉದ್ಗೀಥತ್ವ ಇವೇ ಮೊದಲಾದ ನಿರವಕಾಶವಾದ ಅನೇಕ ವಿಷ್ಣುಲಿಂಗಗಳಿರುವುದರಿಂದ ಆಕಾಶಶಬ್ದವಾಚ್ಯನಾದವನು ವಿಷ್ಣುವೇ ಆಗುತ್ತಾನೆಂದು ಸೂತ್ರದ ಅರ್ಥ. ಇದರಿಂದ 'ಶ್ರುತ್ಯಾ ಪೂರ್ವಪಕ್ಷಿತೇತಿ' ಇತ್ಯಾದಿ ಟೀಕೆಯನ್ನು ವ್ಯಾಖ್ಯಾನಿಸಿದಂತಾಯಿತು.

ಇಲ್ಲಿಯ ತನಕ ಪ್ರಮಾಣಾಶ್ರಿತವಾದ ಮೊದಲನೆಯ ಶಂಕೆಯನ್ನು ನಿರಾಕರಿಸಿದ್ದಾಯಿತು.

ಹಿಂದೆ ಪೂರ್ವಪಕ್ಷವನ್ನು ಮಾಡುವಾಗ ಮೂರು ಬಗೆಯಲ್ಲಿ ಶಂಕಿಸಲಾಗಿತ್ತು -

(೧) ಆಕಾಶಶಬ್ದಕ್ಕೆ ವಿಷ್ಣುಶಬ್ದದ ಸಾಮಾನಾಧಿಕರಣ್ಯವಿಲ್ಲ; ಆದರೆ ಇಂದ್ರಾದಿ ಶಬ್ದಗಳಿಗೆ ವಿಷ್ಣುಶಬ್ದದ ಸಾಮಾನಾಧಿಕರಣ್ಯವಿದೆ. ಆದ್ದರಿಂದ ಆಕಾಶಶಬ್ದದಿಂದ ಇಂದ್ರಾದಿಗಳೇ ಪ್ರತಿಪಾದ್ಯರಾಗಲಿ.

(೨) ದೇವತಾವಾಚಕವಾದ ಪದಗಳು ವಿಷ್ಣುವನ್ನು ಪ್ರತಿಪಾದಿಸುತ್ತವೆ ಎನ್ನಲು 'ಯೋ ದೇವಾನಾಂ' ಇತ್ಯಾದಿಯಾದ ವಿಶೇಷಶ್ರುತಿಯು ಇರುತ್ತದೆ. ಅದರಂತೆ ಭೂತವಾಚಕಶಬ್ದಗಳೂ ಸಹ ವಿಷ್ಣುವನ್ನು ಪ್ರತಿಪಾದಿಸುತ್ತವೆನ್ನಲು ಅಂತಹ ವಿಶೇಷಶ್ರುತಿಯು ಇರಬೇಕು. ಆದರೆ 'ಯೋ ಭೂತಾನಾಂ ನಾಮಧಾ' ಇತ್ಯಾದಿಯಾಗಿ ಯಾವ ಶ್ರುತಿಗಳೂ ಹೇಳುತ್ತಿಲ್ಲ.

(೩) ಇಂದ್ರಾದಿಶಬ್ದಗಳು ಅಂತಃಸ್ಥತ್ವಮುಖದಿಂದ ವಿಷ್ಣುವನ್ನು ಪ್ರತಿಪಾದಿಸುತ್ತವೆ. ಆದರೆ ಆಕಾಶಶಬ್ದವು ವಿಷ್ಣುವನ್ನು ಪ್ರತಿಪಾದಿಸಲು ಅಂತಹ ಮುಖಗಳು (ದ್ವಾರಗಳು) ಯಾವುದೂ ಇರುವುದಿಲ್ಲವೆಂದು.

ಈ ಮೂರು ಶಂಕೆಗಳಲ್ಲಿ ಮೊದಲೆರಡು ಶಂಕೆಗಳ ನಿರಾಕರಣೆಯು ಸುಲಭವಾಗಿದೆ. ಆಕಾಶಶಬ್ದಕ್ಕೆ ವಿಷ್ಣುಶಬ್ದದ ಸಾಮಾನಾಧಿಕರಣ್ಯವಿಲ್ಲದಿರಬಹುದು; ಆದರೆ ಅದೇ ಪ್ರಕರಣದಲ್ಲಿ ಶ್ರುತವಾದ ಅನಂತತ್ವ ಮೊದಲಾದ ಲಿಂಗಸಾಮಾನಾಧಿಕರಣ್ಯವು ಇರುತ್ತದೆ. ಮತ್ತು 'ಆಕಾಶೋ ವೈ ನಾಮ' ಎಂಬುದಾಗಿ ಮುಂದೆ ಬ್ರಹ್ಮಪದ ಸಾಮಾನಾಧಿಕರಣ್ಯವು ಕಾಣಿಸುತ್ತಿದೆ.

ಅಷ್ಟೇ ಅಲ್ಲದೆ ಆಕಾಶಶಬ್ದವು ವಿಷ್ಣುವನ್ನು ಪ್ರತಿಪಾದಿಸದಿದ್ದರೆ 'ನಾಮಾನಿ ಸರ್ವಾಣಿ' ಎಂಬ ಶ್ರುತಿಯನ್ನು ಸಂಕೋಚ ಮಾಡಬೇಕಾಗುತ್ತದೆ. ಆದರೆ ಸಂಕೋಚ ಮಾಡಲು ವಿಶೇಷಕಾರಣವಿಲ್ಲದ ಕಾರಣ ಆಕಾಶಶಬ್ದಕ್ಕೆ ವಿಷ್ಣುವಾಚಕಶಬ್ದಸಾಮಾನಾಧಿಕರಣ್ಯವು ಇದೆ; 'ನಾಮಾನಿ ಸರ್ವಾಣಿ' ಎಂಬ ಶ್ರುತಿಯೂ ಪ್ರಮಾಣವಾಗಿರುವ ಕಾರಣದಿಂದಲೇ ವಿಷ್ಣು ಆಕಾಶನೆನಿಸುತ್ತಾನೆ. ಅಂತಸ್ಥತ್ವಮುಖದಿಂದ ಇಂದ್ರಾದಿಶಬ್ದಗಳು ವಿಷ್ಣುವನ್ನೇ ಪ್ರತಿಪಾದಿಸುತ್ತವೆ. ಸಮಸ್ತಜಗತ್ಕರ್ತೃತ್ವ, ಬ್ರಹ್ಮಾಂಡವೀರ್ಯತ್ವ ಮೊದಲಾದ ವಿಷ್ಣುಲಿಂಗಗಳು ಹತ್ತಿರವಿರುವುದರಿಂದ ಅಂತಃಸ್ಥತ್ವವು ವಿಷ್ಣುಲಿಂಗವಾಗುತ್ತದೆ. ಆದರ ಮೂಲಕ ಇಂದ್ರಾದಿಶಬ್ದಗಳು ವಿಷ್ಣುವಿನಲ್ಲಿ ಬರುತ್ತವೆಂದು ಹಿಂದಿನ ಅಧಿಕರಣದಲ್ಲಿ ಸಮರ್ಥಿಸಿದ್ದಾಯಿತು. ಆದರೆ, ಅದರಂತೆ ಆಕಾಶಶಬ್ದವನ್ನು ವಿಷ್ಣುವಿನಲ್ಲಿ ಸಮರ್ಥಿಸಲು ಯಾವುದೇ ಲಿಂಗಗಳು ಇರುವುದಿಲ್ಲವಲ್ಲಾ? ಎಂಬ ಪ್ರಶ್ನೆಗೆ 'ದೃಶ್ಯತೇ ಚ' ಇತ್ಯಾದಿ ಗ್ರಂಥದಿಂದ ಉತ್ತರಿಸುತ್ತಿದ್ದಾರೆ.

ಆಜ್ಯಾದಿಶಬ್ದಗಳು ಬೇರೆ ದ್ವಾರವಿಲ್ಲದಿದ್ದರೂ ತುಪ್ಪವನ್ನೇ ಪ್ರತಿಪಾದಿಸುವಂತೆ ಆಕಾಶಶಬ್ದವು ಬೇರೆ ದ್ವಾರವಿಲ್ಲದಿದ್ದರೂ ವಿಷ್ಣುವನ್ನು ಪ್ರತಿಪಾದಿಸುತ್ತದೆ. 'ಶ್ಯೇನೇನ ಯಾಗೇನ' ಎಂಬಲ್ಲಿ ಶ್ಯೇನಶಬ್ದಕ್ಕೆ ಯಾಗಶಬ್ದದಿಂದ ಸಾಮಾನಾಧಿಕರಣ್ಯವಿದೆ. ಮತ್ತು ಶ್ಯೇನಶಬ್ದಕ್ಕೆ ಸಾದೃಶ್ಯಾರ್ಥವನ್ನು ಹೇಳಿದ್ದರಿಂದ ಗೌಣೀವೃತ್ತಿಯಿಂದ ಯಾಗವನ್ನು ಪ್ರತಿಪಾದಿಸುತ್ತದೆ. ಇದರಂತೆ 'ಆಜ್ಯೈಃ ಸ್ತುವತೇಃ' ಎಂಬಲ್ಲಿ ಆಜ್ಯಶಬ್ದಕ್ಕೆ ಸಾಮಾನಾಧಿಕರಣ್ಯವಾಗಲೀ ಸಾದೃಶ್ಯವಾಗಲೀ ಇರುವುದಿಲ್ಲ. ಆದರೂ ಸಹ ಬೇರೆ ಬೇರೆ ಮುಖಗಳಿಂದ ಸೂಕ್ತದ ನಾಮಧೇಯವಾಗಿದೆ.

'ಸರ್ವಾಣಿ ಹ ವಾ ಇಮಾನಿ ಭೂತಾನಿ' ಎಂಬ ಶ್ರುತಿಯು ಸಮಗ್ರಭೂತಕಾರಣತ್ವವನ್ನು ಭೂತಾಕಾಶದಲ್ಲಿ ಪ್ರತಿಪಾದಿಸುತ್ತಿದೆ. ಈಗ ಆಕಾಶಶಬ್ದದಿಂದ ವಿಷ್ಣುವು ಪ್ರತಿಪಾದ್ಯನಾದರೆ ಈ ಆಕಾಶಶ್ರುತಿ-ವಿರೋಧ ಬರುತ್ತದಲ್ಲವೇ? ಎಂಬ ಪ್ರಶ್ನೆಗೆ 'ಭೂತಕಾರಣತ್ವಾದಿ' ಎಂಬ ವಾಕ್ಯದಿಂದ ಉತ್ತರಿಸುತ್ತಿದ್ದಾರೆ. ಸಮಗ್ರಭೂತಕಾರಣತ್ವವು ವಿಷ್ಣುವಿನಲ್ಲಿಯೇ ಮುಖ್ಯವಾಗಿ ಉಪಪನ್ನವಾಗುತ್ತದೆ ಹೊರತು ಭೂತಾಕಾಶದಲ್ಲಲ್ಲ. 'ಆತ್ಮನಃ ಆಕಾಶಃ ಸಂಭೂತಃ' ಎಂಬ ಹಿಂದಿನ ಶ್ರುತಿಯ ಬಲದಿಂದ ಆಕಾಶಶಬ್ದವು ವಿಷ್ಣುವಿನಲ್ಲಿ ಮುಖ್ಯವಾಗುತ್ತದೆ. ಹೀಗೆ ಒಪ್ಪಿದಿದ್ದರೆ 'ಸರ್ವಾಣಿ ಹ ವಾ' ಎಂಬ ಶ್ರುತಿಯಲ್ಲಿ ಸರ್ವಶಬ್ದಕ್ಕೆ 'ಆಕಾಶವನ್ನು ಬಿಟ್ಟು' ಎಂಬರ್ಥದಲ್ಲಿ ಸಂಕೋಚ ಮಾಡಬೇಕಾಗುತ್ತದೆ. ಇದರಿಂದ 'ನ ಭೂತಕಾರಣತ್ವೋಕ್ತಿವಿರೋಧಃ' (ಭೂತಕಾರಣತ್ವಶ್ರುತಿಯ ವಿರೋಧವು ಬರುವುದಿಲ್ಲ) ಎಂಬ ಟೀಕೆಯನ್ನು ವ್ಯಾಖ್ಯಾನಿಸಿದಂತಾಯಿತು. ಇನ್ನು ಹಿಂದೆ ಪೂರ್ವಪಕ್ಷ ಮಾಡುವಾಗ ಅಭ್ಯಧಿಕಾಶಂಕೆಯನ್ನು ಮಾಡಿಕೊಳ್ಳದಿದ್ದರೂ ಮತ್ತೊಂದು ಪೂರ್ವಪಕ್ಷವನ್ನು ಮಾಡಬಹುದೆಂದು ಹೇಳಿದ್ದರು. ಅದನ್ನೂ ಸಹ ಈಗ ಸಕಲಲಿಂಗಗಳು ವಿಷ್ಣುವಾಚಕವೆಂದು ಸಮರ್ಥಿಸಿದ್ದರಿಂದ ನಿರಾಕರಿಸಿದಂತಾಯಿತು.

ಭೂತಾಕಾಶಕ್ಕೂ ವಿಷ್ಣುವಿಗೂ ಅಭೇದವನ್ನು ಹೇಳುವ ಮತವು ಅನೇಕಪ್ರಮಾಣವಿರುದ್ಧವಾದ್ದರಿಂದ ಸ್ವೀಕಾರಾರ್ಹವಲ್ಲ. ಹಾಗಾಗಿ ವಿಷ್ಣುವೇ ಆಕಾಶಶಬ್ದದಿಂದ ಮುಖ್ಯವಾಗಿ ಪ್ರತಿಪಾದ್ಯನಾಗುತ್ತಾನೆ.

**ಗುರುರಾಜೀಯಮ್** – ಏವಮ್ 'ಆಕಾಶಶ್ರುತೇರ್ಬ್ರಹ್ಮಣಿ ಮುಖ್ಯತ್ವಮುಪಪಾದ್ಯ ಯದುಕ್ತಂ ಪರೇಣ ಪ್ರಬಲಶ್ರುತ್ಯನುಸಾರೇಣಾನನ್ತತ್ವಾದಿಲಿಙ್ಗಾನಿ ಕಥಞ್ಚಿದ್ಭೂತಾಕಾಶೇ ನೇಯಾನಿ' ಇತಿ, ತದ್ದೂಷಯತಿ – **ಅನನ್ತತ್ವಾದೀತಿ** ॥ ನನ್ವೇತಾವತಾ ನಿರವಕಾಶತ್ವಪ್ರಯುಕ್ತಂ ಪ್ರಾಬಲ್ಯಂ ಯದಿ ಬಹುತ್ವ-ಶ್ರುತಿತ್ವಪ್ರಯುಕ್ತಪ್ರಾಬಲ್ಯಾಪೇಕ್ಷಯಾ ದುರ್ಬಲಂ ತದಾ ಪೂರ್ವೋಕ್ತತ್ಯಾಗಃ ಯದಿ ಚ ಪ್ರಬಲಂ ತರ್ಹಿ ತ್ರಿತಯೋಕ್ತಿರನುಪಪನ್ನಾ ಇತ್ಯತ ಆಹ – **ಏವಞ್ಚೇತಿ** ॥

ಯದ್ವಾ ನನ್ವನ್ತರಧಿಕರಣನ್ಯಾಯಸ್ಯೈವಾತಿದೇಶಾತ್ ಪರಿಹಾರೇ ವಿಶೇಷನ್ಯಾಯೋಕ್ತಿರಯುಕ್ತಾ । ತದಭಾವೇ ಪೂರ್ವೋಕ್ತದೃಢಪೂರ್ವಪಕ್ಷಸ್ಯೋಕ್ತರೀತ್ಯಾ ಪೂರ್ವನ್ಯಾಯೇನಾಪರಿಹಾರಾತ್ ಸಿದ್ಧಾನ್ತಾನುತ್ಥಾನಾದತಿದೇಶಾನುಪಪತ್ತಿಃ, ಇತ್ಯತ ಆಹ – **ಏವಞ್ಚೇತಿ** ॥ **ಪರನಿತ್ಯಾನ್ತರಙ್ಗಪ್ರತಿಪದವಿಧಿಷು ಪರಬಲೀಯಸ್ತ್ವಮಿತ್ಯುಕ್ತತ್ವಾದಿತಿ** ॥

ಯದ್ಯಪ್ಯತ್ರಾತುಲ್ಯಬಲಯೋರೇಕತ್ರ ಪ್ರಸಕ್ತೌ ನ ಪರೇಣ ಪೂರ್ವಬಾಧಃ । ಯಥಾ ಸುಗ್ಲಃ ಸುಮ್ಲ ಇತ್ಯತ್ರ ಶ್ಯಾದ್ಶ್ವಧಾ ಇತ್ಯಾಕಾರಾನ್ತಲಕ್ಷಣಂ ಣಪ್ರತ್ಯಯಮನುಪಸರ್ಗೇ ಸಾವಕಾಶತ್ವಾದ್ದುರ್ಬಲಂ ಪರಮಪಿ ಬಾಧಿತ್ವಾ ''ಆತಶ್ಚೋಪಸರ್ಗ'' ಇತಿ ಪೂರ್ವಃ ಕಪ್ರತ್ಯಯ ಏವ ಭವತಿ । ತಥಾऽಪಿ ತುಲ್ಯಬಲಯೋರ್ವಿರುದ್ಧಯೋರೇಕತ್ರ ಪ್ರಸಙ್ಗೇ ಪರೇಣ ಪೂರ್ವಸ್ಯ ಬಾಧಃ । ಯಥಾ ವೃಕ್ಷಾಭ್ಯಾಮಿತ್ಯತ್ರ ''ಸುಪಿಚೇತಿ'' ದೀರ್ಘತ್ವಂ ಸಾವಕಾಶಂ ವೃಕ್ಷೇಷ್ವಿತ್ಯತ್ರ ''ಬಹುವಚನೇ ಝಲ್ಯೇತ್'' ಇತ್ಯೇತತ್ ಸಾವಕಾಶಂ ವೃಕ್ಷೇಭ್ಯ ಇತ್ಯತ್ರೋಭಯೋಃ ಪ್ರಸಙ್ಗೇ ಪರತ್ವೇನ ದೀರ್ಘಸ್ಯೈವ ಬಾಧಃ । ರನ್ಧಯತೀತ್ಯತ್ರ ''ರಧಿಜಭೋರಚೀತಿ'' ನುಮಾಗಮಸ್ಯ ''ಅತ ಉಪಧಾಯಾ'' ಇತ್ಯುಪಧಾವೃದ್ಧೌ ಕೃತಾಯಾಮಕೃತಾಯಾಂ ವಾ ಪ್ರಾಪ್ಯಮಾಣಸ್ಯ ಕೃತಾಕೃತಪ್ರಸಙ್ಗೀ ಯೋ ವಿಧಿಃ ಸ ನಿತ್ಯ ಇತಿ ನಿತ್ಯತ್ವಾದುಪಧಾವೃದ್ಧೇಶ್ಚ ನುಮಿ ಕೃತೇ ''ಅಲೋನ್ತ್ಯಾತ್ಪೂರ್ವ ಉಪಧೇತಿ'' ನಕಾರಸ್ಯೈವೋಪಧಾತ್ವೇನಾಕಾರಸ್ಯಾನುಪಧಾತ್ವಾದಪ್ರಾಪ್ತೇಃ ಅನಿತ್ಯತ್ವಾತ್ಪೂರ್ವೇಣಾಪಿ ನಿತ್ಯೇನಾನುಮಾऽನಿತ್ಯಾಯಾಃ ಪರಸ್ಯಾ ಅಪಿ ವೃದ್ಧೇರ್ಬಾಧಃ । ತಥಾ ಪ್ರಜಗ್ಧ್ಯೇತ್ಯತ್ರ ಸಮಾಸಾವಯವಭೂತಾನೇಕಪದಾಶ್ರಯತ್ವಾದ್ ಬಹಿರಙ್ಗೋ ಲ್ಯಪ್ ಜಗ್ಧ್ಯಾದೇಶೇ ಕೃತೇऽಕೃತೇಪಿ ಜಾಯಮಾನತ್ವಾನ್ನಿತ್ಯೋಪಿ ಲ್ಯಪ್ಯಕೃತೇ ಕೃತೇ ''ಪಿಸಿದ್ಧಂ ಬಹಿರಙ್ಗಮನ್ತರಙ್ಗ'' ಇತ್ಯಸಿದ್ಧೇಃ ಪ್ರಾಪ್ತೇರ್ನಿತ್ಯಮಪ್ಯನ್ತರಙ್ಗಂ ಜಗ್ಧ್ಯಾದೇಶಂ ಬಾಧತೇ ।

ನಿತ್ಯಸ್ಯ ಸರ್ವಥಾ ಬಾಧಾಸಮ್ಭವಾತ್ ಪ್ರಥಮತಃ ಸ್ವಾರಸ್ಯೇನ ಪ್ರಾಪ್ತಸ್ಯ ಜಘನ್ಯತಯಾ ಸ್ವಾಧೀನತಾಸಮ್ಪಾದನಾದಿನಾऽಸ್ವಾರಸ್ಯಮೇವ ಬಾಧ ಇತಿ ನಿತ್ಯಸ್ಯಾಪಿ ನಿತ್ಯೇನ ಬಾಧೇ

उदाहरणम् । अशिश्रयत् अदुद्रवत् । इत्यत्रान्तर्भूतचङपेक्षत्वादियङुवङावन्तरङ्गौ बहिर्भूततिबपेक्षत्वाद् बहिरङ्गं लघूपधलक्षणं गुणं बाधेते । न चात्र चङा व्यवधानेन गुणप्राप्तेरेवाभावात्कथं तद्बाधकत्वमियङुवङोरिति - वाच्यम् । अप्राप्तेरेवात्र बाधत्वम् । उपचारात् । यद्वा शिवे हीत्यत्र धातूपसर्गकार्यत्वे-नान्तरङ्गो गुणः उप- सर्गपदान्तरकार्यत्वेन बहिरङ्गसवर्णदीर्घं बाधते । अश्नुवन्तीत्यत्र प्राप्तं ''इको यणची''ति यण् ''अचिश्नुधात्वि''ति श्नुप्रत्यय-रूपप्रतिपदनिमित्त उवङादेशो बाधते । यथोक्तं पदमञ्जर्यां विप्रतिषेधसूत्रे -

**परं विदुः पूर्वपरोपपत्तौ परस्य नित्यस्य च नित्यमेव ।**
**नित्यान्तरङ्गोपगमेन्तरङ्गं तस्माद्विधिः प्रातिपदो बलीयानिति ।**

एतेषां निरवकाशेन प्रतिपदादिना सावकाशान्तरङ्गादेर्बाधान्निरवकाशत्व-प्रयुक्तप्राबल्यस्यान्तरङ्गत्वादिस्वभावप्रयुक्तप्राबल्याद्बलवत्त्वमिति ज्ञायत इति भावः ।

स्वभावदुर्बलमपि निरवकाशं स्वभावप्रबलमपि सावकाशं बाधत इत्यत्र दृष्टान्तमाह – **कांस्यभोजिन्यायेनेति ॥** कांस्यभोजिनयस्यायमर्थः । गुरुशिष्या-वेकत्र स्तः । तत्र शिष्यस्य कांस्यपात्रेणैव भोजननियमः । गुरोरनियमः । तथा चैकं कांस्यपात्रम् । इतरत्रार्कपत्रामत्रम् । तत्र गुरोः पूज्यतया स्वारस्येन कांस्यपात्रं प्राप्तम् । इतरच्छिष्यस्य । प्रधानस्योपसर्जनभूतशिष्यानुरोध्यत्वात् । तथा च सति शिष्यस्य नियमभङ्गेन भोजनमेव न स्यात् । तस्माद् गुणस्यात्यन्तबाधापेक्षया प्रधानस्वारस्यहानमात्रं युक्तमिति कांस्यपात्रं शिष्यस्यैवेति । तथा च स्वभावतो दुर्बलस्यापि शिष्यस्य निरवकाशत्वेन प्रबलत्वात्तेन स्वभावतः प्रबलस्यापि गुरोर्बाधवत् लिङ्गानां निरवकाशत्वेन तैः स्वभावप्रबलश्रुत्यादिबाधो युक्तः ।

ननु तथापीन्द्रादिशब्दानां विष्णुपरत्वेऽतस्स्थत्वादिरूपनिरूढमुखान्तरवत् प्रकृतेऽपि निरूढमुखान्तराभावात्कथं तस्य ब्रह्मपरत्वमित्यत आह – **दृश्यते चेति ॥** तर्हि भूतलिङ्गस्य का गतिरित्यत आह – **भूतेति ॥**

## ಸಾರ

ಪ್ರಮಾಣಾಶ್ರಿತವಾದ ಆಕಾಶಶಬ್ದವು ಭಗವಂತನಲ್ಲಿ ಮುಖ್ಯವಲ್ಲ ಎಂಬ ಶಂಕೆಯನ್ನು ನಿರಾಕರಿಸುತ್ತಾರೆ.

ಅನಂತತ್ವ ಮೊದಲಾದ ಲಿಂಗಗಳು ವಿಷ್ಣುವಿನಲ್ಲಿ ನಿರವಕಾಶಗಳು. ಏಕೆಂದರೆ ಅನಂತತ್ವ ಎಂದರೆ ಅಂತ ತ್ರಯವಿಲ್ಲದ್ದು ಎಂದರ್ಥ. ದೇಶತಃ ಕಾಲತಃ ಗುಣತಃ ಅಂತವಿಲ್ಲದವನು ವಿಷ್ಣುವೇ ಹೊರತು ಮೂರು ರೀತಿಯ ಅಂತವುಳ್ಳ ಭೂತಾಕಾಶವಲ್ಲ.

ಅವ್ಯಾಕೃತಾಕಾಶವನ್ನಿಟ್ಟುಕೊಂಡರೆ ಅದೂ ಕೂಡ ದೇಶತಃ ಕಾಲತಃ ಅಂತರಹಿತವಾದದ್ದು ಎಂದು ಕೋಶಗಳು ಹೇಳುತ್ತವೆಯಾದರೂ ಪೂರ್ವಪಕ್ಷಿಯು ಭೂತಕಾಶವನ್ನು ಆಕಾಶ ಶಬ್ದವಾಚ್ಯವೆಂದು ಹೇಳುತ್ತಾನೆ. ಅಲ್ಲಿ ಅದೂ ಕೂಡ ಇಲ್ಲ. ಹೀಗಾಗಿ ಭಾಷ್ಯದಲ್ಲಿ ಹೇಳಿದ ಶ್ರುತಿಯಿಂದ ಮತ್ತು ಲೋಕಪ್ರಸಿದ್ಧಿಯಿಂದ 'ಅನಂತ' ಶಬ್ದವು ವಿಷ್ಣುವಿನಲ್ಲೇ ಮುಖ್ಯವಾದ್ದರಿಂದ ಸಾವಕಾಶವಾದ ಆಕಾಶಶಬ್ದದಿಂದ ಬಾಧವನ್ನು ಹೇಳಲು ಬರುವುದಿಲ್ಲ.

ಬಲಾಬಲವನ್ನು ಪರೀಕ್ಷೆ ಮಾಡಿದಾಗ ಸ್ವಭಾವತಃ ಶ್ರುತಿ ಪ್ರಬಲವಾಗಿದ್ದರೂ ನಿರವಕಾಶತ್ವ ಮೊದಲಾದ ಪ್ರಾಬಲ್ಯ ಹೇತುಗಳಿಂದ ಕೂಡಿದ ಲಿಂಗವು ಆದಕ್ಕಿಂತಲೂ ಪ್ರಬಲವಾಗುತ್ತದೆಯಾದ್ದರಿಂದ ಇಲ್ಲಿ ಆಕಾಶಶ್ರುತಿಯಿಂದ ವಿಷ್ಣುವಿನ ಲಿಂಗಕ್ಕೆ ಬಾಧವನ್ನು ಹೇಳಲು ಬರುವುದಿಲ್ಲ. ಹಾಗೆಯೇ ಭೂತಾಕಾಶದ ಲಿಂಗವಾದ ಭೂತಕಾರಣತ್ವವೂ ಕೂಡ ಬೇರೆ ಶ್ರುತಿಯಲ್ಲಿ ಹೇಳಿದಂತೆ ವಿಷ್ಣುವಿನಲ್ಲಿಯೇ ಮುಖ್ಯವಾಗಿದೆ. ಆದ್ದರಿಂದ ಆಕಾಶಶಬ್ದವು ವಿಷ್ಣುವನ್ನೇ ಮುಖ್ಯವಾಗಿ ಹೇಳುತ್ತದೆ.

---

**तात्पर्यचन्द्रिका –**

**अत्रोभयेऽप्याहुः – ''आकाश इति होवाच'' इति आकाशे निरूढप्रथमानुपसञ्जातविरोध्याकाशपदानुरोधेन बहून्यपि चरमाणि सर्वकारणत्वज्यायस्त्वानन्तत्वादीनि भूताकाशे कथञ्चिद्योज्यानीति प्राप्ते(*)**

(*) शङ्करभाष्यम् – इदमामनन्ति – 'अस्य लोकस्य का गतिरित्याकाश इति होवाच सर्वाणि ह वा इमानि भूतान्याकाशादेव समुत्पद्यन्त आकाशं प्रत्यस्तं यन्त्याकाशो ह्येवैभ्यो ज्यायानाकाशः परायणम्' (छान्दो. १।९।१) इति । तत्र संशयः – किमाकाशशब्देन परं ब्रह्माभिधीयत उत भूताकाशमिति । कुतः संशयः; उभयत्र प्रयोगदर्शनात् । भूतविशेषे तावत्सुप्रसिद्धो लोकवेदयोराकाशशब्दः । ब्रह्मण्यपि कचित्प्रयुज्यमानो दृश्यते । यत्र वाक्यशेषवशादसाधरणगुणश्रवणाद्वा निर्धारितं ब्रह्म भवति, यथा –'यदेव आकाश आनन्दो न स्यात्' (तै. २।७) इति । 'आकाशो वै

नाम नामरूपयोर्निर्वहिता ते यदन्तरा तद्ब्रह्म' (छा. ८।१४।१) इति चैवमादौ । अतः संशयः । किं पुनरत्र युक्तं, भूताकाशमिति । कुतः, तद्धि प्रसिद्धतरेण प्रयोगेण शीघ्रं बुद्धिमारोहति ।

न चायमाकशशब्द उभयोः साधारणः शक्यो विज्ञातुं, अनेकार्थत्वप्रसङ्गात् । तस्माद्ब्रह्मणि गौण आकाशशब्दो भवितुमर्हति । विभुत्वादिभिर्हि बहुभिर्धर्मैः सदृशमाकाशेन ब्रह्म भवति । न च मुख्यसंभवे गौणोऽर्थो ग्रहणमर्हति । सम्भवति चेह मुख्यैवाकाशस्य ग्रहणम् । ननु भूताकाशपरिग्रहे । वाक्यशेषो नोपपद्यते - 'सर्वाणि ह वा इमानि भूतान्याकाशादेव समुत्पद्यन्ते' इत्यादिः । नैष दोषः । भूताकाशस्यापि वाय्वादिक्रमेण कारणत्वोपपत्तेः । विज्ञायते हि – 'तस्माद्वा एतस्मादात्मन आकाशः सम्भूत । आकाशाद्वायुः । वायोरग्निः' (तै. २।१) इत्यादि । ज्यायस्त्वपरायणत्वे अपि भूतान्तरापेक्षयोपपद्येते भूताकाशस्यापि । तस्मादाकाशशब्देन भूताकाशस्य ग्रहणमित्येवं प्राप्ते,

ब्रूमः – 'आकाशस्तल्लिङ्गात्'। आकाशशब्देन ब्रह्मणो ग्रहणं युक्तम् । कुतः, तल्लिङ्गात् । परस्य हि ब्रह्मण इदं लिङ्गम् – 'सर्वाणि ह वा इमानि भूतान्याकाशादेव समुत्पद्यन्ते' इति । परस्माद्धि ब्रह्मणो भूतानामुत्पत्तिरिति वेदान्तेषु मर्यादा । ननु भूताकाशस्यापि वाय्वादिक्रमेण कारणत्वं दर्शितम् । सत्यं, दर्शितम् । तथापि मूलकारणस्य ब्रह्मणोऽपरिग्रहादाकाशादेवेत्यवधारणं, सर्वाणीति च भूतविशेषणं नानुकूलं स्यात् । तथा 'आकाशं प्रत्यस्तं यन्ति' इति ब्रह्मलिङ्गं 'आकाशो ह्येवैभ्यो ज्यायानाकाशः परायणम्' इति च ज्यायस्त्वपरायणत्वे। ज्यायस्त्वं ह्यनापेक्षिकं परमात्मन्येवैकस्मिन्नाम्नातम् - 'ज्यायान्पृथिव्या ज्यायानन्तरिक्षाज्ज्यायान्दिवो ज्यायान् एभ्यो लोकेभ्यः' (छा. ३।१४।३) इति । तथा परायणात्वमपि परमकारणत्वात् परमात्मन्येवोपपन्नतरम् । श्रुतिश्च भवति – 'विज्ञानमानन्दं ब्रह्म रातेर्दातुः परायणम्' (बृ. ३।९।२८) इति । अपि चान्तवत्त्वदोषेण शालावत्यस्य पक्षं निन्दित्वा, अनन्तं किञ्चिद्वक्तुकामेन जैवलिना आकाशः परिगृहितः, तं चाकाशमुद्गीथे सम्पाद्योपसंहरति – 'स एष परोवरीयानुद्गीथः स एषोऽनन्तः' (छ. १।९।२) इति ।

तच्चानन्त्यं ब्रह्म- लिङ्गम् । यत्पुनरुक्तं भूताकाशं प्रसिद्धिबलेन प्रथमतरं प्रतीयत इति, अत्र ब्रूमः – प्रथमतरं प्रतीतमपि सत् वाक्यशेषगतान्ब्रह्मगुणान्दृष्ट्वा न परिगृह्यते । दर्शितश्च ब्रह्मण्यप्याकाशशब्दः – 'आकाशो वै नाम नामरूपयोर्निर्वहिता' इत्यादौ । तथाकाशपर्यायवाचिनामपि ब्रह्मणि प्रयोगो दृश्यते - 'ऋचो अक्षरे परमे

व्योमन्यस्मिन्देवा अधि विश्वे निषेदुः' (ऋ. सं. १।१६४।३९) 'सैषा भार्गवी वारुणी विद्या परमे व्योमन्प्रतिष्ठिता' (तै. ३।६) 'ॐ कं ब्रह्म खं ब्रह्म' (छा. ४।१०।५) 'खं पुराणम्' (बृ. ५।१) इति चैवमादौ । वाक्योपक्रमेऽपि वर्तमानस्या- काशशब्दस्य वाक्यशेषवशाद्युक्ता ब्रह्मविषयत्वानवधारणा । 'अग्निरधीतेऽनुवाकम्' इति हि वाक्योपक्रमगतोऽप्यग्निशब्दो माणवकविषयो दृश्यते । तस्मादाकाशशब्दं ब्रह्मेति सिद्धम् ॥२२॥

**भामातीव्याख्या – अकाशस्तल्लिङ्गात् ।**

पूर्वस्मिन्नधिकरणे ब्रह्मणोऽसाधारणधर्मदर्शनाद्विवक्षितोपाधिनोऽस्यैवोपासना, न त्वादित्यशरीराभिमानिनो जीवात्मन इति निरूपितम् । इदानीं त्वसाधारण-धर्मदर्शनात्तदेवोद्वीधे संपाद्योपास्यत्वेनोपदिश्यते, न भूताकाश इति निरूप्यते । तत्र 'आकाश इति होवाच' इति किं मुख्याकाशपदानुरोधेन 'अस्य लोकस्य का गतिः' इति 'सर्वाणि ह वा इमानि भूतानि' इति च 'ज्यायान्' इति च 'परायणम्' इति च कथञ्चिव्याख्यायतां, उतैतदनुरोधेनाकाशशब्दो भक्त्या परात्मनि व्याख्यायता-मिति । तत्र

**'प्रथमत्वात्प्रधानत्वादाकाशं मुख्यमेव नः ।**
**तदानुगुण्येनान्यानि व्याख्येयानीति निश्चयः ॥'**

'अस्य लोकस्य का गतिः' इति प्रश्नोत्तरे 'आकाश इति होवाच' इत्याकाशस्य गतित्वेन प्रतिपाद्यतया प्राधान्यात्, 'सर्वाणि ह वा' इत्यादीनां तु तद्विशेषणतया गुणत्वात्, गुणे त्वन्याय्यकल्पना' इति बहून्यप्यप्रधानानि प्रधानानुरोधेन नेतव्यानि । अपिच 'आकाश इति होवाच' इत्युत्तरे प्रथमावगतमाकाशमनुपजातविरोधि, तेन तदनुरक्तायां बुद्धौ यद्यदेव तदेकवाक्यगतमुपनिपतति तत्तज्जघन्यतया उपसंजातविरोधि तदानुगुण्येनैव व्यवस्थानमर्हति । नच क्वचिदाकाशशब्दो भक्त्या ब्रह्मणि प्रयुक्त इति सर्वत्र तेन तत्परेण भवितव्यम् । नहि गङ्गायां घोष इत्यत्र गङ्गापदमनुपपत्त्या तीरपरमिति यादांसि गङ्गायामित्यत्राप्यनेन तत्परेण भवितव्यम् । सम्भवश्चोभयत्र तुल्यः ।

नच ब्रह्मण्यप्याकाशशब्दो मुख्यः, अनेकार्थत्वस्यान्याय्यत्वात्, भक्त्या च ब्रह्मणि प्रयोगदर्शनोपपत्तेः । लोके चास्य नभसि निरूढतरत्वात्, तत्पूर्वकत्वाच्च वैदिकार्थप्रतितेर्वैपरीत्यानुपपत्तेः। तदानुगुण्येन च 'सर्वाणि ह वा' इत्यादीनि भाष्यकृता स्वयमेव नीतानि । तस्माद्भूताकाशमेवात्रोपास्यत्वेनोपदिश्यते, न परमात्मेति प्राप्तम् ।

**यद्यप्याकाशपदं ''सर्वाणि'' इत्यादितः प्रथमम्, तथाऽपि परिहारवाक्य-स्थाकाशपदादपि प्रथमानुपसञ्जातविरोधिप्रश्नानुसारेण चरमस्योत्तरस्य नेयत्वात्, ''अस्य लोकस्य का गतिः'' इति प्रश्नस्य च दृश्यमानसर्वप्रपञ्चविषयत्वात्**

---

एवं प्राप्तेऽभिधीयते – **आकाशशब्देन ब्रह्मणो ग्रहणम्** । कुतः, **तल्लिङ्गात्** । तथाहि – 'सामानाधिकरण्येन प्रश्नतत्प्रतिवाक्ययोः । पौर्वापर्यपरामर्शात्प्रधानत्वेऽपि गौणता ॥' यद्यप्याकाशपदं प्रधानार्थं तथापि यत्पृष्टं तदेव प्रतिवक्तव्यम् । न खल्वनुन्मत्त आम्रान्पृष्टः कोविदाराणाचष्टे । तदिह, 'अस्य लोकस्य का गतिः' इति प्रश्नो दृश्यमाननामरूपप्रपञ्चमात्रगतिविषय इति तदनुरोधाद्य एव सर्वस्य लोकस्य गतिः स एवाकाशशब्देन प्रतिवक्तव्यः । नच भूताकाशः सर्वस्य लोकस्य गतिः, तस्यापि लोकमध्यपातित्वात् । तदेव तस्य गतिरित्यनुपपत्तेः । न चोत्तरे भूताकाशश्रवणाद् भूताकाशकार्यमेव पृष्टमिति युक्तं, प्रश्नस्य प्रथमावगतस्यानुपजातविरोधिनो लोक-सामान्यविषयस्योपजातविरोधिनोत्तरेण सङ्कोचानुपपत्तेस्तदनुरोधेनोत्तरव्याख्यानात् । नच प्रश्नेन पूर्वपक्ष-रूपेणानवस्थितार्थेनोत्तरं व्यवस्थितार्थं न शक्यं नियन्तुमिति युक्तं, तन्निमित्तानामज्ञानसंशयविपर्यासानामनवस्थानेऽपि तस्य स्वविषये व्यवस्थानात् । अन्यथोत्तरस्यानालम्बनत्वापत्तेर्वैयधिकरण्यापत्तेर्वा । अपि चोत्तरेऽपि बह्वसमञ्जसम् ।

तथाहि – 'सर्वाणि ह वा इमानि भूतान्याकाशादेव समुत्पद्यन्ते' इति सर्वशब्दः कथञ्चिदल्पविषयो व्याख्येयः । एवमेवकारोऽप्यसमञ्जसः । न खल्वपामाकाश एव कारणमपि तु तेजोऽपि । एवमन्नस्यापि नाकाशमेव कारणमपि तु पावकपाथसी अपि । मूलकारणविवक्षायां तु ब्रह्मण्येवावधारणं समञ्जसम् । असमञ्जसं तु भूताकाशे । एवं सर्वेषां भूतानां लयो ब्रह्मण्येव । एवं सर्वेभ्यो ज्यायस्त्वं ब्रह्मण एव । परमयनं ब्रह्मैव । तस्मात्सर्वेषां लोकानामिति प्रश्नेनोपक्रमात्, उत्तरे च तत्तदसाधारणब्रह्मगुण-परामर्शात् पृष्टायाश्च गतेः परमयनमित्यसाधारणब्रह्मगुणोपसंहारात्, भूयसीनां श्रुतीनामनुग्रहाय 'त्यजेदेकं कुलस्यार्थे' इतिवद्वरमाकाशपदमात्रमसमञ्जसमस्तु । एतावता हि बहु समञ्जसं स्यात् ।

न चाकाशस्य प्राधान्यमुत्तरे, किंतु पृष्टार्थत्वादुत्तरस्य, लोकसामान्यगतेश्च पृष्टत्वात्, 'परायणम्' इति च तस्यैवोपसंहाराद्ब्रह्मैव प्रधानम् । तथा च तदर्थं सत् आकाशपदं प्रधानार्थं भवति, नान्यथा । तस्माद्ब्रह्मैव प्रधानमाकाश-पदेनेहोपास्यत्वेनोपक्षिप्तं, न भूताकाशमिति सिद्धम् ।

**सर्वलोकगतिरेवाकाशपदेन प्रतिवक्तव्या । नच लोकान्तर्गतो भूताकाशः सर्वलोकगतिः(*) ।**

**किञ्च सर्वलोककारणत्वादिबह्वनुग्रहार्थमेकमाकाशपदं जघन्यवृत्त्या ब्रह्मपरम्, ''त्यजेदेकं कुलस्यार्थे'' इति न्यायात् ।**

**तस्मात्सोपाधिकं ब्रह्मैव आकाशपदेनोपास्यत्वोनोपक्षिप्तमिति सिद्धान्त इति ।**

---

(*)श्रीभाष्यम् - इदमाम्नायते छान्दोग्ये, 'अस्य लोकस्य का गतिरिति । आकाश इति होवाच, सर्वाणि ह वा इमानि भूतान्याकाशादेव समुत्पद्यन्ते; आकाशं प्रति अस्तं यन्ति । आकाशो ह्येवैभ्यो ज्यायान् आकाशः परायणम्' (छा. १-९-१) इति ।

तत्र सन्देहः - किं प्रसिद्धाकाश एवात्राकाशशब्देनाभिधीयते, उतोक्तलक्षणमेव ब्रह्मेति । किं प्राप्तम् । प्रसिद्धाकाश इति । कुतः । शब्दैकसमधिगम्ये वस्तुनि य एवार्थो व्युत्पत्तिसिद्धः शब्देन प्रतीयते, स एव ग्रहीतव्यः । अतः प्रसिद्धाकाश एव चराचरभूतजातस्य कृत्स्नस्य कारणम् । अतस्तस्मादनतिरिक्तं ब्रह्म । नन्वीक्षापूर्वकसृष्ट्यादिभिरचेतनात् जीवाच्च व्यतिरिक्तं ब्रह्मेत्युक्तम् ॥

सत्यमुक्तम्; अयुक्तं तु तत् । तथा हि - 'यतो वा इमानि भूतानि जायन्ते.....तद्ब्रह्म' इत्युक्ते, (तै. ३-१-१) कुत इमानि भूतानि जायन्त इत्यादिविशेषापेक्षायाम्, 'सर्वाणि ह वा इमानि भूतान्याकाशादेव समुत्पद्यन्ते' (छा. १-९-१) इत्यादिना विशेषप्रतीतेर्जगज्जन्मादिकारणमाकाश एवेति निश्चिते सति, 'सदेव सोम्येदमग्र आसीत्' (छा. ६-२-१) इत्यादिष्वपि सदादिशब्दाः साधारणाकाराः तमेव विशेषमाकाशमभिदधति । 'आत्मा वा इदमेक एवाग्र आसीत्' (ऐ. १-१-१) इत्यादिष्वात्मशब्दोऽपि तत्रैव वर्तते । तस्यापि हि चेतनैकान्तत्वं न सम्भवति; यथा 'मृदात्मको घटः' इति । आप्नोतीत्यात्मेति व्युत्पत्त्या सुतरामाकाशेऽप्यात्मशब्दो वर्तते । अत एव-आकाश एव कारणं ब्रह्मेति निश्चिते सति ईक्षणादयः तदनुगुणागौणा वर्णनीयाः । यदि हि साधारणशब्दैरेव सदादिभिः कारणमभ्यधायिष्यत, ईक्षणाद्यर्थानुरोधेन चेतन-विशेष एव कारणमिति निरचेष्यत । आकाशशब्देन तु विशेष एव निश्चित इति नार्थस्वाभाव्यान्निर्णेतव्यमस्ति ॥

ननु 'आत्मन आकाशः सम्भूतः' (तै. २-१-१) इति आकाशस्यापि कार्यत्वं प्रतीयते ॥ सत्यम् । सर्वेषामेवाकाशवाय्वादीनां सूक्ष्मावस्था स्थूलावस्था चेत्यवस्थाद्वयमस्ति । तत्राकाशस्य सूक्ष्मावस्था कारणम्; स्थूलावस्था तु कार्यम् । 'आत्मन आकाशस्सम्भूतः' (तै. २-१-१) इति, स्वस्मादेव सूक्ष्मरूपात् स्वयं स्थूलरूपः सम्भूत

**अत्र ब्रूमः – प्रथमानुसारेण चरमास्वारस्ये पूर्वाधिकरणेऽपि प्रथमहिरण्यश्मश्रुत्वाद्यनुसारेण चरमं पापातीतत्वं जीवे कथञ्चिन्नेयं स्यात् । इहापि हि प्रश्नस्य अनुरोध्यत्वे प्राथम्यमेव हेतुः, । प्रश्नोत्तरयोरेकविषयत्वस्य उत्तरानुसारेण प्रश्नव्याख्यानेऽपि सिद्धेः । किञ्च –**

**प्रकृतां पृथिवीं वक्ति प्रश्नस्थं सर्वनाम यत् ।**
**तस्मात्तदनुरोधी चेत् समाधिश्च तथा भवेत् ॥**

**तथा हि – ''असौ लोकः'' इत्यादिना दाल्भ्योक्तं स्वर्गलोकस्य सामाश्रयत्वं शालावत्यः ''अप्रतिष्ठितं वै किल'' इत्यादिना दूषयित्वा ''अयं लोकः'' इत्यादिना पृथिवीलोकः सामाश्रय इत्यूचे । प्रवाहणस्तु तं ''अन्तवद्वै किल'' इत्यादिना अदूषयत् । तर्हि ''अस्य लोकस्य का गतिः'' इति शालावत्येन प्रकृतपृथिवीलोकगतिरेव पृष्टा, न सर्वगतिः, 'अस्य' इति सर्वनाम्नः ''प्रास्मा अग्निम्'' इत्यादाविव प्रकृतपरत्वात् । तथा च प्रश्नानुसारेणोत्तरव्याख्याने ''सर्वाणि ह वा'' इत्यत्र सर्वशब्दः पृथिवीमात्रपरः स्यात् । नच पृथिवीकारणस्य**

---

इत्यर्थः । 'सर्वाणि ह वा इमानि भूतान्याकाशादेव समुत्पद्यन्ते' (छा. १-९-१) इति सर्वस्य जगतः आकाशादेव प्रभवाप्ययादिश्रवणात् तदेव हि कारणं ब्रह्मेति निश्चितम् । यत एवं प्रसिद्धाकाशादनतिरिक्तं ब्रह्म, अत एव (च) 'यदेष आकाश आनन्दो न स्यात्', (तै. २-७-१) 'आकाशो वै नाम नामरूपयोर्निर्वहिता' (छा. ८-१४-१) इत्येवमादिनिर्देशोऽप्युपपन्नतरः । अतः प्रसिद्धाकाशादनतिरिक्तं ब्रह्मेति ॥

॥ सिद्धान्तः ॥

एवं प्राप्ते ब्रूमः-आकाशस्तल्लिङ्गात् । आकाशशब्दाभिधेयः प्रसिद्धाकाशादचेतनार्थान्तरभूतो यतोक्तलक्षणः परमात्मैव । कुतः । तल्लिङ्गात् । निखिलजगदेककारणत्वं सर्वस्मात् ज्यायस्त्वं परायणत्वमित्यादीनि परमात्मलिङ्गान्युपलभ्यन्ते । निखिलकारणत्वं ह्यचिद्वस्तुनः प्रसिद्धाकाशशब्दाभिधेयस्य नोपपद्यते; चेतनवस्तुनस्तत्कार्यत्वासंभवात् । परायणत्वं च चेतानानां परमप्राप्यत्वम् । तच्चाचेतनस्य हेयस्य सकलपुरुषार्थविरोधिनो न सम्भवति । सर्वस्माज्ज्यायस्त्वं च निरुपाधिकं सर्वैः कल्याणगुणैः सर्वेभ्यो निरतिशयोत्कर्षः । तदप्यचितो नोपपद्यते ।

**अपां प्रसिद्धत्वेन प्रश्नवैयर्थ्यम्, सर्वलोककारणस्यापि वाक्यान्तरतः प्रसिद्धेः । लोकतस्तु अपां पृथिवीकारणत्वस्याप्यप्रसिद्धेः ।**

**नच पृथिवीमात्रकारणप्रश्ने आप इति वक्तव्यत्वात् प्रतिवचने आकाशपदं, 'सर्वाणि' इति सर्वपदं, ''आकाशादेव'' इत्यवधारणं च युक्तम् । तस्मात्प्रश्नोऽपि सर्वलोकगतिविषय इति वाच्यम् ।**

**भामत्यां 'प्रश्नानुरोधेन उत्तरव्याख्यानात्'' इत्युक्तत्वेन उत्तरानुसारेण प्रश्नव्याख्याने अन्योन्याश्रयात् ।**

ಅನುವಾದ - ಆಕಾಶಾಧಿಕರಣದ ರಚನೆಯ ಬಗ್ಗೆ ಅದ್ವೈತಿಗಳು ಮತ್ತು ವಿಶಿಷ್ಟಾದ್ವೈತಿಗಳು ಹೀಗೆ ಹೇಳುತ್ತಾರೆ.

ಪೂರ್ವಪಕ್ಷ - 'ಆಕಾಶೇತಿ ಹೋವಾಚ' ಎಂಬಲ್ಲಿ ಆಕಾಶಶಬ್ದವು ಭೂತಾಕಾಶದಲ್ಲಿ ಪ್ರಸಿದ್ಧವಾಗಿದೆ. ಮತ್ತು ಯಾವ ವಿರೋಧಗಳೂ ಇಲ್ಲದೆ ಮೊದಲೇ ಹೇಳಲ್ಪಟ್ಟಿದೆ. ಈ ಎರಡು ಕಾರಣಗಳಿಂದ ಆಕಾಶಶಬ್ದವು ಭೂತಾಕಾಶವನ್ನೇ ಪ್ರತಿಪಾದಿಸಬೇಕು. ಇನ್ನು ಅದೇ ಶ್ರುತಿಯಲ್ಲಿ ಸರ್ವಕಾರಣತ್ವ, ಜ್ಯಾಯಸ್ತ್ವ, ಅನಂತತ್ವ ಮೊದಲಾದ ಲಿಂಗಗಳು ಕೇಳಿಸಬಹುದು. ಆದರೆ ಆ ಎಲ್ಲ ಲಿಂಗಗಳನ್ನು ಭೂತಾಕಾಶಪರವಾಗಿಯೇ ಹೇಗಾದರೂ ಮಾಡಿ ಯೋಜಿಸಬೇಕು.

ಸಿದ್ಧಾಂತ - ವಸ್ತುತಃ ಆಕಾಶಪದವು 'ಸರ್ವಾಣಿ ಹ ವಾ' ಎಂಬ ಉತ್ತರ ನೀಡುವ ಶ್ರುತಿ-ಗಿಂತಲೂ ಮೊದಲೇ ಪ್ರಸಕ್ತವಾಗಿದೆ. ಆದರೂ ಕೂಡ ಪರಿಹಾರವಾಕ್ಯದಲ್ಲಿರುವ ಆಕಾಶಪದವನ್ನು ಪ್ರಶ್ನೆಗೆ ಅನುಸಾರವಾಗಿ ಅರ್ಥೈಸಬೇಕು. ಪ್ರಶ್ನೆಯ ವಾಕ್ಯದಲ್ಲಿ ಆಕಾಶಪದವು ವಿರೋಧವಿಲ್ಲದೆ ಮೊದಲು ಪ್ರಸಕ್ತವಾದ್ದರಿಂದ ಪ್ರಬಲವಾಗಿದೆ. 'ಅಸ್ಯ ಲೋಕಸ್ಯ ಕಾ ಗತಿಃ?' ಎಂಬಲ್ಲಿ ಕಣ್ಣಿಗೆ ಕಾಣಿಸುವ ಸಮಗ್ರಪ್ರಪಂಚಕ್ಕೆ ಯಾರು ಆಶ್ರಯ? ಎಂದು ಪ್ರಶ್ನಿಸಲಾಗಿದೆ. ಇದಕ್ಕೆ ಅನುಗುಣವಾಗಿ ಸರ್ವಲೋಕಕ್ಕೆ ಆಶ್ರಯವನ್ನು ಆಕಾಶಪದದಿಂದಷ್ಟೇ ಉತ್ತರಿಸಬೇಕು. ಆದರೆ ಈ ಲೋಕದಲ್ಲಿಯೇ ಸೇರಿಕೊಂಡ ಭೂತಾಕಾಶವು ಸರ್ವಲೋಕಕ್ಕೆ ಆಶ್ರಯವಾಗಲು ಹೇಗೆ ಸಾಧ್ಯ ?

ಮತ್ತು ಸರ್ವಲೋಕಕಾರಣತ್ವವೇ ಮೊದಲಾದ ಅನೇಕ ಲಿಂಗಗಳನ್ನು ಹೊಂದಿಸುವುದಕ್ಕೋಸ್ಕರ (ಅನುಗ್ರಹಿಸುವುದಕ್ಕೋಸ್ಕರ) ಗೌಣೀವೃತ್ತಿಯಿಂದ ಆಕಾಶಪದವು ಬ್ರಹ್ಮನನ್ನೇ ಪ್ರತಿಪಾದಿಸುತ್ತದೆಂದು ಒಪ್ಪಬೇಕು. 'ತ್ಯಜೇದೇಕಂ ಕುಲಸ್ಯಾರ್ಥೇ' (ಕುಲದ ಸಂರಕ್ಷಣೆಗಾಗಿ ಒಬ್ಬನನ್ನು ಹೊರಹಾಕಿದರೂ ತೊಂದರೆಯಿಲ್ಲ) ಎಂಬ ನ್ಯಾಯದಂತೆ ಸರ್ವಜಗತ್ಕಾರಣತ್ವಾದಿಗಳನ್ನು ಮುಖ್ಯವಾಗಿ ಕೂಡಿಸಲು ಕೇವಲ ಆಕಾಶಪದವನ್ನು ಗೌಣವಾಗಿ ಒಪ್ಪುವುದು (ಬಿಡುವುದು) ಉಚಿತ. ಆದ್ದರಿಂದ

ಸೋಪಾಧಿಕನಾದ ಬ್ರಹ್ಮನೇ (ಆಕಾಶರೂಪ ಉಪಾಧಿಯಿಂದ ಅವಚ್ಛಿನ್ನನಾದ ಬ್ರಹ್ಮನೇ) ಆಕಾಶಪದದಿಂದ ಪ್ರತಿಪಾದ್ಯನಾಗಿದ್ದಾನೆ. ಬ್ರಹ್ಮನ ಉಪಾಸನೆಯನ್ನು ಆಕಾಶಪದದಿಂದ ಮಾಡ-ಬೇಕೆನ್ನಲು ಶ್ರುತಿಯು ಹೊರಟಿದೆ.

ಆದ್ವೈತಿಗಳ ಈ ವಾದ ತಪ್ಪು. ಇಷ್ಟನ್ನು ಪ್ರಶ್ನಿಸುತ್ತೇವೆ -- ಪ್ರಥಮವಾಕ್ಯವನ್ನು ಅನುಸರಿಸಿ ಕೊನೆಯ ವಾಕ್ಯಕ್ಕೆ ಆಸ್ವಾರಸ್ಯ ಹೇಳಿದರೆ ಹಿಂದಿನ ಅಧಿಕರಣದಲ್ಲಿ ತೀರ್ಮಾನಿಸಿದ ನಿಮ್ಮ ಸಿದ್ಧಾಂತವೇ ತಪ್ಪಾದೀತು. ಏಕೆಂದರೆ ಪ್ರಥಮದಲ್ಲಿ ಶ್ರುತವಾದ ಹಿರಣ್ಯಶ್ಮಶ್ರುತ್ವ ಮೊದಲಾದ ಧರ್ಮಗಳನ್ನು ಅನುಸರಿಸಿ ಕೊನೆಯಲ್ಲಿ ಶ್ರುತವಾದ ಪಾಪರಾಹಿತ್ಯವನ್ನು ಜೀವನಲ್ಲಿ ಹೇಗಾದರೂ ಮಾಡಿ ಯೋಜಿಸಬೇಕಾಗುತ್ತದೆ. ಆದರೆ ನೀವು ಹಾಗೆ ಮಾಡದೆ ಎರಡನ್ನೂ ಬ್ರಹ್ಮನಲ್ಲಿ ಹೇಳುತ್ತೀರಿ. ಈ ಅಧಿಕರಣದಲ್ಲಿ ಪ್ರಶ್ನವಾಕ್ಯವನ್ನು ಅನುಸರಿಸಲು ಪ್ರಾಥಮ್ಯವೇ ಕಾರಣವಷ್ಟೇ. ಇನ್ನು ಪ್ರಶ್ನೆ ಹಾಗೂ ಉತ್ತರಗಳಲ್ಲಿ ಏಕವಿಷಯತ್ವವು ಬರಬೇಕೆಂದು ಪ್ರಶ್ನೆವಾಕ್ಯವನ್ನು ಅನುಸರಿಸಿ ಚರಮವಾಕ್ಯವನ್ನು ಯೋಜಿಸಬೇಕೆಂದು ಹೇಳಬೇಕು. ಆದರೆ ಚರಮವಾಕ್ಯವನ್ನು ಅನುಸರಿಸಿಯೂ ಕೂಡ ಪ್ರಶ್ನೆವಾಕ್ಯವನ್ನು ಹೊಂದಿಸಿದಾಗಲೂ ಏಕವಾಕ್ಯತ್ವವು ಕೂಡುತ್ತದೆ.

''ಪ್ರಕೃತಾಂ ಪೃಥಿವೀಂ ವಕ್ತಿ ಪ್ರಶ್ನಸ್ಥಂ ಸರ್ವನಾಮ ಯತ್ ।
ತಸ್ಮಾತ್ ತದನುರೋಧೀ ಚೇತ್ ಸಮಾಧಿಶ್ಚ ತಥಾ ಭವೇತ್ ॥''

ಪ್ರಶ್ನವಾಕ್ಯದಲ್ಲಿರುವ ಸರ್ವನಾಮಶಬ್ದವು ಪ್ರಕೃತವಾದ ಪೃಥಿವಿಯನ್ನು ಹೇಳುತ್ತಿದೆ. ಆದ್ದರಿಂದ ಅದಕ್ಕನುಗುಣವಾಗಿ ಸಮಾಧಾನವನ್ನು ಹೇಳಬೇಕು.

ಆದು ಹೀಗೆ -- ದಾಲ್ಭ್ಯ ಋಷಿಗಳು 'ಅಸೌ ಲೋಕಃ' ಇತ್ಯಾದಿಯಾಗಿ ಸ್ವರ್ಗಲೋಕವು ಸಾಮಕ್ಕೆ ಆಶ್ರಯವೆನ್ನುತ್ತಾರೆ. ಆವಾಗ ಶಾಲಾವತ್ಯ ಋಷಿಗಳು 'ಆಪ್ರತಿಷ್ಠಿತಂ ವೈ' ಇತ್ಯಾದಿಯಾಗಿ ಆದನ್ನು ದೂಷಿಸಿ, 'ಅಯಂ ಲೋಕಃ' ಇತ್ಯಾದಿಯಾಗಿ ಸಾಮಕ್ಕೆ ಪೃಥಿವಿಯೇ ಆಶ್ರಯವೆನ್ನುತ್ತಾರೆ. ಆವಾಗ ಪ್ರವಾಹಣ ಋಷಿಗಳು 'ಅಂತವದ್ವೈ ಕಿಲ' ಇತ್ಯಾದಿಯಾಗಿ ಆದನ್ನು ನಿಂದಿಸಿದ್ದಾರೆ. ಆವಾಗ ಶಾಲಾವತ್ಯ ಋಷಿಗಳು 'ಹಾಗಾದರೆ ಈ ಲೋಕಕ್ಕೆ ಯಾವುದು ಆಶ್ರಯ?' ಎಂದು ಪ್ರಶ್ನಿಸಿದಾಗ ಪ್ರಕೃತವಾದ ಪೃಥಿವೀಲೋಕದ ಗತಿಯನ್ನಷ್ಟೇ ಪ್ರಶ್ನಿಸಿದ್ದಾರೆ ಹೊರತು, ಸಕಲಲೋಕದ ಗತಿಯನ್ನು ಪ್ರಶ್ನಿಸಿಲ್ಲ. ಸರ್ವನಾಮಶಬ್ದದಿಂದ ಪೂರ್ವಪ್ರಕೃತವಾದದ್ದನ್ನಷ್ಟೇ ಪರಾಮರ್ಶಿಸಬೇಕು. ಪೂರ್ವ-ಮೀಮಾಂಸೆಯಲ್ಲಿ 'ಪ್ರಾಸ್ಯೈ ಅಗ್ನಿ' ಎಂಬಲ್ಲಿ ಈ ವಿಷಯವನ್ನು ನಿರ್ಣಯಿಸಿದ್ದಾರೆ. ಅಂತೂ ಪ್ರಶ್ನೆಗೆ ಅನುಸಾರಿಯಾಗಿಯೇ ಉತ್ತರವಾಕ್ಯವನ್ನು ವ್ಯಾಖ್ಯಾನಿಸಬೇಕು. ಆದ್ದರಿಂದ 'ಸರ್ವಾಣಿ ಹ ವಾ' ಎಂಬಲ್ಲಿರುವ ಸರ್ವಶಬ್ದವು ಕೇವಲ ಪೃಥ್ವಿಯನ್ನಷ್ಟೇ ಹೇಳುತ್ತದೆ ಹೊರತು, ಆದ್ವೈತಿಗಳು ಹೇಳುವಂತೆ ಸಕಲಲೋಕವನ್ನು ಹೇಳುತ್ತಿಲ್ಲ.

ನೀರು ಪೃಥಿವಿಗೆ ಕಾರಣವೆಂದು ಲೋಕಪ್ರಸಿದ್ಧವಾಗಿದೆ. ಪ್ರಸಿದ್ಧವಾದ ವಿಚಾರವನ್ನೇ ಪುನಃ ಪ್ರಶ್ನಿಸುವುದರಲ್ಲಿ ಅರ್ಥವಿಲ್ಲದ ಕಾರಣ ಸಕಲಲೋಕದ ಆಶ್ರಯದ ಬಗ್ಗೆ ಪ್ರಶ್ನೆಯನ್ನು ಹೇಳ-ಬೇಕಲ್ಲವೇ? ಎಂದು ಶಂಕಿಸಬಾರದು. ಸಕಲಲೋಕಕಾರಣತ್ವವೂ ಕೂಡ ಬೇರೆ ಸೃಷ್ಟಿವಾಕ್ಯಗಳಿಂದಲೇ ಸಿದ್ಧವಾಗಿರುವಾಗ ಪುನಃ ಆದನ್ನೇ ಇಲ್ಲಿ ಹೇಳುವ ಅವಶ್ಯಕತೆ ಇಲ್ಲ. ಸಕಲಲೋಕಕಾರಣತ್ವವು ಲೋಕಪ್ರಸಿದ್ಧಿಯಿಂದ ಸಿದ್ಧವಾಗಿಲ್ಲ. ಅದನ್ನು ತಿಳಿಸಲು ಈ ಶ್ರುತಿ ಹೊರಟಿದೆಯೆಂದೂ ಶಂಕಿಸಬಾರದು. ಹಾಗಾದರೆ ನೀರು ಪೃಥಿವಿಗೆ ಕಾರಣವೆಂದೂ ಕೂಡ ಲೋಕದಲ್ಲಿ ಪ್ರಸಿದ್ಧವಾಗಿಲ್ಲ. ಅದನ್ನು ತಿಳಿಸಲು ಶ್ರುತಿಯು ಹೊರಡುವುದು ಸಾರ್ಥಕವಲ್ಲವೇ? ಕೇವಲ ಪೃಥಿವಿಗಷ್ಟೇ ಕಾರಣತ್ವವನ್ನು ಶ್ರುತಿಯು ಹೇಳುವುದಾದರೆ 'ಆಪಃ' ಎಂದು ಹೇಳಬೇಕು. ಮತ್ತು ಉತ್ತರವಾಕ್ಯದಲ್ಲಿ ಆಕಾಶಪದವೂ 'ಸರ್ವಾಣಿ' ಎಂಬ ಸರ್ವಪದವೂ 'ಆಕಾಶಾದೇವ' ಎಂಬ ಅವಧಾರಣವೂ ತಪ್ಪಾಗುತ್ತದೆ. ಆದ್ದರಿಂದ ಉತ್ತರವಾಕ್ಯವನ್ನು ಅನುಸರಿಸಿ ಪ್ರಶ್ನೆವಾಕ್ಯವು ಸರ್ವಲೋಕಗತಿಯನ್ನೇ ವಿಷಯೀಕರಿಸುತ್ತದೆ ಎಂದು ಹೇಳಬೇಕಲ್ಲವೇ? ಇದೂ ಕೂಡ ತಪ್ಪು. ಭಾಮತಿಯಲ್ಲಿ 'ಪ್ರಶ್ನಾನುರೋಧೇನ ಉತ್ತರವ್ಯಾಖ್ಯಾನಾತ್' (ಪ್ರಶ್ನೆಗೆ ಅನುಸರಿಸಿ ಉತ್ತರವನ್ನು ವ್ಯಾಖ್ಯಾನಿಸಬೇಕು) ಎನ್ನಲಾಗಿದೆ. ಆದರೆ ನೀವು ಉತ್ತರವನ್ನು ಅನುಸರಿಸಿ ಪ್ರಶ್ನೆಯನ್ನು ವ್ಯಾಖ್ಯಾನಿಸುತ್ತಿದ್ದೀರಿ. ಇದರಿಂದ ಪ್ರಶ್ನೆಗೆ ಅನುಸಾರಿಯಾಗಿ ಉತ್ತರವಾಕ್ಯದ ವ್ಯಾಖ್ಯಾನ, ಉತ್ತರವಾಕ್ಯದ ವ್ಯಾಖ್ಯಾನಕ್ಕೆ ಅನುಸಾರಿಯಾಗಿ ಪ್ರಶ್ನೆಗೆ ವ್ಯಾಖ್ಯಾನವೆಂದು ಅನ್ಯೋನ್ಯಾಶ್ರಯದೋಷವು ಬರುತ್ತದೆ.

ಕಠಿಣಪದಾರ್ಥ

ಪ್ರಥಮ ಅನುಪಸಂಜಾತವಿರೋಧಿ = ಆಕಾಶಪದವು ಪ್ರಥಮದಲ್ಲಿ ಕೇಳಲ್ಪಟ್ಟಿದೆ. ಮತ್ತು ಯಾವುದೇ ವಿರೋಧಗಳನ್ನೂ ಹೊಂದಿಲ್ಲ; ಉತ್ತರಸ್ಯ = ಆಕಾಶ ಇತಿ ಹೋವಾಚ ಎಂಬ ಪರಿಹಾರವಾಕ್ಯದ; ಯತ್ = ಯಾವ ಕಾರಣದಿಂದ; ಸೋಪಾಧಿಕಂ = ಆಕಾಶವೆಂಬ ಉಪಾಧಿಯಿಂದ ಅವಚ್ಛಿನ್ನನಾದ; ವಾಕ್ಯಾಂತರತಃ = 'ಸ ಇಮಾನ್ ಲೋಕಾನಸೃಜತ' ಇತ್ಯಾದಿ ಬೇರೆ ವಾಕ್ಯದಿಂದ; ಆಪ ಇತಿ = 'ಆದ್ಭ್ಯಃ ಪೃಥಿವೀ' ಎಂಬ ಮಾತಿನಿಂದ;

**प्रकाशः – उत्तरस्येति ॥** ''आकाश इति होवाच'' इति परिहारस्येत्यर्थः । तथाऽपि कथमुत्तरस्य ब्रह्मपरत्वमित्यत आह – **अस्य लोकस्येति ॥** 'अस्य' इति न पृथिवीमात्रपरामर्शः, किन्तु ''जन्माद्यस्य'' इतिवत् प्रत्यक्षादिसिद्धस्य सर्वस्य । 'अस्य' इति परामर्शेन सर्वलोकगतिप्रश्ने तदनुरोधेनोत्तरे ब्रह्मैवाकाशपदवाच्य-मित्यर्थः ।

ननु रूढ्या परिहारस्याकाशपरत्वात्तदनुसारेण प्रश्नो नेतव्य इत्यत आह – **किञ्चेति ॥**

**त्यजेदेकं कुलस्यार्थे ग्रामस्यार्थे कुलं त्यजेत् ।**
**ग्रामं जनपदस्यार्थे आत्मार्थे पृथिवीं त्यजेत् ॥**

इति भारतोक्तन्यायेनेत्यर्थः ॥ **सोपाधिकमिति** ॥ आकाशरूपोपाध्यवच्छिन्नमित्यर्थः । अत्र प्रश्नानुसारेण प्रतिवचनस्य नयने प्राथम्यं हेतुत्वेन विवक्षितं, प्रश्नप्रतिवचनयोरेकविषयत्वं वा । आद्ये दोषमाह – **प्रथमेति** ॥ द्वितीये त्वाह – **प्रश्नेति** ॥ यदपि प्रश्नस्य सर्वलोकगतिविषयत्वात्तदनुरोधेनोत्तरं नेयमिति, तदपि नेत्याह – **किञ्चेति** ॥ 'सर्वनाम' 'अस्य' इति पदं, 'यत्' तस्मादित्यर्थः । 'तथा भवेत्' पृथिवीगतित्वेन भूताकाशपर एव भवेत् । पृथिव्याः प्रकृतत्वं विशदयन् श्लोकं व्याख्याति – **तथा हीति** ॥

छान्दोग्ये आद्येऽध्याये ''त्रयो होद्गीथे कुशला बभूवुः शिलकः शालावत्यश्चैकितायनेयो दाल्भ्यः प्रवाहणो जैबिलिरिति । ते होचुः उद्गीथे वै कुशलास्स्मः हन्तोद्गीथे कथां वदामः'' इत्युपक्रम्योच्यते शालावत्येन का साम्नो गतिरित्यादिप्रश्ने कृते ''असौ लोक इति दाल्भ्य उवाच'' इति । दाल्भ्येनोक्तमित्यर्थः । उपालब्धेन दाल्भ्येन अमुष्य लोकस्य का गतिरिति प्रश्ने कृते शालावत्यः 'अयं लोकः' इति पृथिवीलोकः सामाश्रय इत्युवाचेत्यर्थः ॥ 'ऊचे' इति ''ब्रूञ् व्यक्तायां वाचि'' इत्यस्य ''ब्रुवो वचिः'' इति वच्यादेशे रूपम् । तेनात्मनेपदं साधु । 'तं' शालावत्यमपि, उपालब्धेन शालावत्येनेत्यर्थः ।

ननु पृथिव्याः प्रस्तुतत्वेऽपि 'अस्य' इत्येतत्सर्वपदं किं न स्यादित्यत आह – **अस्येतीति** ॥

नवमाद्यपादे ''लिङ्गविशेषनिर्देशात् समानविधानेष्वप्राप्ताः सारस्वती स्त्रीत्वात्'' इति पञ्चदशेऽधिकरणे चिन्तितम् । ज्योतिष्टोमे सवनीयाः पशवः श्रुताः ''आग्नेयमग्निष्टोम आलभेत ऐन्द्राग्नमुक्थ्ये द्वितीयम् ऐन्द्रं षोडशिनि तृतीयं सारस्वतीं मेषीं चतुर्थीमतिरात्रे'' इति । तत्र ''प्रास्मा अग्निं भरत'' इति अग्निगुवचनं मेष्यां भवत्युत नेति संशये, प्रकरणाविशेषात् ''प्रास्मै पशवः'' इति पशुत्वाभिप्रायेण स्त्रियामपि 'प्रास्मै' इति पुल्लिङ्गोपपत्तेश्चात्राप्यस्त्वग्निगुवचनमिति प्राप्ते, प्रत्यक्षपशुशब्दाभावात् 'प्रास्मै' इति पुल्लिङ्गस्य प्रत्यक्षस्थितपुंपशौ कृतार्थत्वान्नास्ति

मेष्यामध्रिगुवचनमिति सिद्धान्त इति । तत्र यथा 'प्रास्मै' इति शब्दस्य प्रकृता-जादिपरत्वं तथाऽत्रापीत्यर्थः ।

'अस्य' इत्यस्य पृथिवीपरत्वे प्रश्नायोगमाशङ्क्य निरस्यति – **नचेति** ॥ प्रसिद्धत्वं किं वेदादुत लोकतः?

आद्य आह – **सर्वेति** ॥ **वाक्यान्तरत** इति ॥ ''स इमान् लोकानसृजत'' इत्यादित इत्यर्थः ।

द्वितीय आह – **लोकत इति** ॥ प्रश्नस्य पृथिवीगतिमात्रपरत्वे बाधकान्याशङ्क्य निरस्यति – **नचेति** ॥ **आप इतीति** ॥ ''अद्भ्यः पृथिवी'' इति वचनादिति भावः ॥

**सर्वाणीति** ॥ पृथिवीकारणमात्रात् सर्वोत्पत्तेरभावादन्यस्यापि जनकत्वेनाव-धारणस्याप्ययोगादिति भावः । 'अन्योन्याश्रयात्' इत्युपलक्षणम् । अपां पृथिवी-गतित्वेऽपि मूलकारणत्वाभिप्रायेणाकाशोक्तिसम्भवान्मूलकारणतोपपादनार्थमेव ''सर्वाणि ह वै'' इत्यादेरुपपत्तेः । सर्वपदस्य स्वव्यतिरिक्तसर्वपरत्वोपपत्तेः । नच तर्हि ''आत्मन आकाशः'' इत्यादेरात्मा वाच्य इति वाच्यम्, भूतविषयविचारे वियत एव वाच्यत्वात् । परम्परया भूतोपादानस्यापरस्याभावेनावधारणोपपत्ते-श्चेत्यपि ध्येयम् ।

ವಿವರಣೆ - ಇಲ್ಲಿಯ ತನಕ ಸಿದ್ಧಾಂತದ ಪ್ರಕಾರ ಅಧಿಕರಣವನ್ನು ರಚಿಸಿದ್ದಾಯಿತು. ಈಗ ಅದ್ವೈತಿಗಳು ಹೇಳುವ ಅಧಿಕರಣಶರೀರವನ್ನು ಅನುವಾದ ಮಾಡಿ ನಿರಾಕರಿಸುತ್ತಿದ್ದಾರೆ.

ಅದ್ವೈತಿಗಳ ಪ್ರಕಾರ 'ಅಸ್ಯಲೋಕಸ್ಯ ಕಾ ಗತಿಃ? ಆಕಾಶ ಇತಿ ಹೋವಾಚ' ಎಂಬುದು ವಿಷಯವಾಕ್ಯ. 'ಅಸ್ಯ ಲೋಕಸ್ಯ' ಎಂಬ ವಾಕ್ಯದಿಂದ ಕೇವಲ ಪೃಥಿವಿಗೆ ಆಶ್ರಯವನ್ನಷ್ಟೇ ಪ್ರಶ್ನಿಸಿಲ್ಲ; ಸಮಸ್ತಲೋಕಕ್ಕೆ ಯಾರು ಆಶ್ರಯವೆಂದು ಪ್ರಶ್ನಿಸಲಾಗಿದೆ. ಈ ಪ್ರಶ್ನೆಗೆ ಅನುಗುಣವಾಗಿಯೇ ಉತ್ತರ ನೀಡುವ ವಾಕ್ಯವನ್ನು ಅರ್ಥೈಸಬೇಕು. 'ಜನ್ಮಾದ್ಯಸ್ಯ' ಇತ್ಯಾದಿ ಸೂತ್ರಗಳಲ್ಲಿ ನಿರೂಪಿಸಿದಂತೆ ಪ್ರತ್ಯಕ್ಷಸಿದ್ಧವಾದ ಸಮಸ್ತ ಜಗತ್ತನ್ನು 'ಅಸ್ಯ' ಎಂಬ ಪದದಿಂದ ಪರಾಮರ್ಶಿಸಿ ಪ್ರಶ್ನಿಸಿದಾಗ ಅದಕ್ಕೆ ಅನುಗುಣವಾಗಿ ಬ್ರಹ್ಮನೆಂದೇ ಉತ್ತರಿಸಬೇಕು. ಆದ್ದರಿಂದ 'ಆಕಾಶ ಇತಿ ಹೋವಾಚ' ಎಂಬ ಉತ್ತರ ನೀಡುವ ವಾಕ್ಯದಲ್ಲಿರುವ ಆಕಾಶಪದದಿಂದ ಬ್ರಹ್ಮನೇ ವಾಚ್ಯನಾಗುತ್ತಾನೆ. ಈ ಎಲ್ಲ ವಿಷಯಗಳನ್ನು ಗ್ರಂಥಕಾರರು 'ಆಕಾಶ ಇತಿ' ಇತ್ಯಾದಿ ಗ್ರಂಥದಿಂದ ಅನುವಾದ ಮಾಡಿದ್ದಾರೆ. ಉತ್ತರ ನೀಡುವ

ವಾಕ್ಯದಲ್ಲಿರುವ ಆಕಾಶಶಬ್ದವು ಲೋಕರೂಢಿಯಿಂದ ಭೂತಾಕಾಶವನ್ನೇ ಹೇಳುತ್ತದೆ. ಇದಕ್ಕೆ ಅನುಗುಣವಾಗಿ ಪ್ರಶ್ನೆವಾಕ್ಯವನ್ನು ಯೋಜಿಸಬೇಕಲ್ಲವೇ? ಎಂಬ ಶಂಕೆಗೆ 'ಕಿಂಚ' ಇತ್ಯಾದಿ ವಾಕ್ಯದಿಂದ ಉತ್ತರಿಸಿದ್ದಾರೆ. ಆಕಾಶಪದಕ್ಕೆ ಭೂತಾಕಾಶವೆಂದು ಮುಖ್ಯಾರ್ಥವಿರಬಹುದು. ಆದರೆ ಸಕಲ-ಜಗತ್ಕಾರಣತ್ವಾದಿಗಳನ್ನು ಕೂಡಿಸುವುದಕ್ಕೋಸ್ಕರ ಕೇವಲ ಒಂದು ಆಕಾಶಪದಕ್ಕೆ ಗೌಣಾರ್ಥವನ್ನು ಆಶ್ರಯಿಸಬೇಕಾಗುತ್ತದೆ. ಮಹಾಭಾರತದಲ್ಲಿ ಹೇಳಿದ ನ್ಯಾಯದಂತೆ ಇದೇನೂ ತಪ್ಪಾಗುವುದಿಲ್ಲ.

ತ್ಯಜೇದೇಕಂ ಕುಲಸ್ಯಾರ್ಥೇ ಗ್ರಾಮಸ್ಯಾರ್ಥೇ ಕುಲಂ ತ್ಯಜೇತ್ ।
ಗ್ರಾಮಂ ಜನಪದಸ್ಯಾರ್ಥೇ ಆತ್ಮಾರ್ಥೇ ಪೃಥಿವೀಂ ತ್ಯಜೇತ್ ॥

ಕುಲದ ಉದ್ಧಾರಕ್ಕೋಸ್ಕರ ದುಷ್ಟನಾದ ಒಬ್ಬನನ್ನು ಹೊರಹಾಕಬೇಕಾಗುತ್ತದೆ; ಗ್ರಾಮದ ಉದ್ಧಾರ-ಕ್ಕೋಸ್ಕರ ದುಷ್ಟವಾದ ಕುಲವನ್ನೇ ಬಿಡಬೇಕಾಗುತ್ತದೆ; ದೊಡ್ಡ ಪಟ್ಟಣದ ಉದ್ಧಾರಕ್ಕೋಸ್ಕರ ಸಣ್ಣಗ್ರಾಮ-ವನ್ನಾದರೂ ಬಿಟ್ಟರೆ ತಪ್ಪಿಲ್ಲ; ಆದರೆ ಆತ್ಮೋದ್ಧಾರಕ್ಕೋಸ್ಕರ ಸಮಸ್ತ ಭೂಲೋಕವನ್ನೇ ಬಿಡಬೇಕು.

-- ಇಷ್ಟು ಅದ್ವೈತಿಗಳ ಸಿದ್ಧಾಂತ.

ಅದ್ವೈತಿಗಳ ಈ ಅಧಿಕರಣಶರೀರ ಸರಿಯಿಲ್ಲ. ಅದ್ವೈತಿಗಳು ಉಪಕ್ರಮಕ್ಕೆ ಪ್ರಾಬಲ್ಯವನ್ನು ಅಂಗೀಕರಿಸಿ ಪ್ರಶ್ನೆಗೆ ಅನುಗುಣವಾಗಿ ಉತ್ತರವಾಕ್ಯವನ್ನು ಕೊಂಡೊಯ್ಯಬೇಕೆಂದು ವಾದಿಸಿದರು. ಇವರ ಅಭಿಪ್ರಾಯವೇನು? ಪ್ರಶ್ನೆವಾಕ್ಯವು ಉಪಕ್ರಮದಲ್ಲಿದೆ ಎಂಬ ಕಾರಣದಿಂದಲೇ ಉತ್ತರವಾಕ್ಯವನ್ನು ಪ್ರಶ್ನೆ ವಾಕ್ಯಕ್ಕೆ ಅನುಗುಣವಾಗಿ ಯೋಜಿಸಬೇಕೆಂದೋ ಅಥವಾ ಪ್ರಶ್ನೆ ಹಾಗೂ ಉತ್ತರವಾಕ್ಯಗಳಿಗೆ ಏಕವಿಷಯತ್ವವಿರಬೇಕೆಂದೋ? ಮೊದಲನೆಯ ಪಕ್ಷವನ್ನು 'ಪ್ರಥಮಾನುಸಾರೇಣ' ಇತ್ಯಾದಿ ಗ್ರಂಥದಿಂದ ನಿರಾಕರಿಸಿದ್ದಾರೆ. ಹಿಂದಿನ ಅಂತಃಸ್ಥತ್ವಾಧಿಕರಣದಲ್ಲಿ ಅದ್ವೈತಿಗಳು 'ಯ ಏಷಃ ಅಂತರಾದಿತ್ಯೇ ಹಿರಣ್ಮಯಃಪುರುಷೋ ದೃಶ್ಯತೇ ಹಿರಣ್ಯಶ್ಮಶ್ರುಃ ಹಿರಣ್ಯಕೇಶಃ' ಇತ್ಯಾದಿಯಾಗಿ ಪ್ರಾರಂಭಿಸಿ 'ಯ ಏಷು ಆಂತರಕ್ಷಿಣಿ ಪುರುಷೋ ದೃಶ್ಯತೇ' ಎಂಬಲ್ಲಿಯ ತನಕ ಇರುವ ಶ್ರುತಿಯು ಪರಮಾತ್ಮನನ್ನೇ ಪ್ರತಿಪಾದಿಸುತ್ತದೆಂದು ಸಿದ್ಧಾಂತ ಮಾಡಿದ್ದಾರೆ. ಈಗ ಉಪಕ್ರಮದಂತೆ ಉಪಸಂಹಾರವನ್ನು ಅಂಗೀ-ಕರಿಸಬೇಕೆಂದು ಹೇಳುವುದಾದರೆ ಅಲ್ಲಿಯೂ ಕೂಡ ಹಿರಣ್ಯಶ್ಮಶ್ರುತ್ವಾದಿಗಳನ್ನು ಅನುಸರಿಸಿ, ಉಪ-ಸಂಹಾರದಲ್ಲಿ ಶ್ರುತವಾದ ಪಾಪರಾಹಿತ್ಯವನ್ನು ಜೀವನಲ್ಲಿ ಹೇಗಾದರೂ ಮಾಡಿ ಯೋಜಿಸಬೇಕಾಗುತ್ತದೆ.

ಎರಡನೆ ಪಕ್ಷವನ್ನು 'ಪ್ರಶ್ನೋತ್ತರಯೋಃ' ಇತ್ಯಾದಿ ಗ್ರಂಥದಿಂದ ನಿರಾಕರಿಸಿದ್ದಾರೆ. ಪ್ರಶ್ನೆಯು ಸರ್ವಲೋಕಗತವಿಷಯಕವಾಗಿದೆ. ಅದಕ್ಕೆ ಅನುಸಾರಿಯಾಗಿ ಉತ್ತರವಾಕ್ಯವನ್ನು ಸರ್ವಲೋಕಗತ-ವಿಷಯಕವೆಂದೇ ಹೇಳಬೇಕೆಂಬ ವಿಚಾರವನ್ನು ಅಂಗೀಕರಿಸಿ ಇಲ್ಲಿಯ ತನಕ ನಿರಾಕರಿಸಿದರು. ಮುಂದೆ 'ಕಿಂಚ' ಇತ್ಯಾದಿ ಗ್ರಂಥದಿಂದ ಪ್ರಶ್ನೆಯು ಸರ್ವಲೋಕಗತವಿಷಯಕವೇ ಆಗುವುದಿಲ್ಲವೆಂದು ನಿರಾಕರಿಸುತ್ತಿದ್ದಾರೆ. ಶ್ಲೋಕದಲ್ಲಿ ಹೇಳಿದ್ದನ್ನು 'ತಥಾ ಹಿ' ಇತ್ಯಾದಿ ಗ್ರಂಥದಿಂದ ಸ್ವತಃ ಗ್ರಂಥಕಾರರೇ ವ್ಯಾಖ್ಯಾನಿಸುತ್ತಿದ್ದಾರೆ.

ಛಾಂದೋಗ್ಯದ ಮೊದಲನೆಯ ಅಧ್ಯಾಯದಲ್ಲಿ ''ತ್ರಯೋ ಹೋದ್ಗೀಥೇ ಕುಶಲಾ ಬಭೂವುಃ ಶಿಲಕಃ ಶಾಲಾವತ್ಯಃ, ಚೈಕಿತಾಯನೇಯೋ ದಾಲ್ಭ್ಯಃ, ಪ್ರವಾಹಣೋ ಜೈಬಿಲಿರಿತಿ । ತೇ ಹೋಚುರುದ್ಗೀಥೇ

ವೈ ಕುಶಲಾಃ ಸ್ಮಃ । ಹಂತೋದ್ಗೀಥೇ ಕಥಾಂ ವದಾಮಃ'' (ಶಾಲಾವತಿಯ ಮಗನಾದ ಶಿಲಕ, ಚಿಕಿತಾಯನನ ಮಗನಾದ ದಾಲ್ಭ್ಯ, ಜಿಬಿಲನ ಮಗ ಪ್ರವಾಹಣ ಎಂಬ ಮೂರು ಜನ ಉದ್ಗೀಥನಾಮಕ ಪರಮಾತ್ಮನ ವಿಷಯದಲ್ಲಿ ವಿದ್ವಾಂಸರಾಗಿದ್ದರು. ಅವರು ತಮ್ಮೊಳಗೆ ಪರಸ್ಪರ ಮಾತನಾಡಿಕೊಂಡರು. 'ನಾವು ಉದ್ಗೀಥನ ವಿಷಯದಲ್ಲಿ ವಿದ್ವಾಂಸರಾಗಿದ್ದೇವೆ. ಆದ್ದರಿಂದ ಉದ್ಗೀಥನ ವಿಷಯದಲ್ಲಿ ವಿಚಾರ-ಗೋಷ್ಠಿ ನಡೆಸೋಣ' ಇತೀತ್ಯುಪಕ್ರಮ್ಯೋಚ್ಯತೇ ಶಾಲಾವತ್ಯೇನ ''ಕಾ ಸಾಮ್ನೋ ಗತಿಃ'' ಇತ್ಯಾದಿಪ್ರಶ್ನೇ ಕೃತೇ ಶಾಲಾವತ್ಯಃ ''ಅಯಂ ಲೋಕ ಇತಿ ಅಸೌ ಲೋಕ ಇತಿ ದಾಲ್ಭ್ಯ ಉವಾಚೇತಿ''

ಪ್ರಶ್ನೆ - ಗ್ರಂಥಕಾರರು 'ಊಚೇ' ಎಂಬ ಆತ್ಮನೇಪದಪ್ರಯೋಗ ಮಾಡಿದ್ದಾರೆ. ಆದರೆ 'ವಚ ಪರಿಭಾಷಣೇ' ಎಂಬ ಧಾತುವಿಗೆ ಆತ್ಮನೇ ಪದದಲ್ಲಿ ಪ್ರಯೋಗವೇ ಇಲ್ಲ. ಆದ್ದರಿಂದ ಈ ಪ್ರಯೋಗವು ವ್ಯಾಕರಣವಿರುದ್ಧವಲ್ಲವೇ?

ಉತ್ತರ - 'ವಚ ಪರಿಭಾಷಣೇ' ಧಾತುವಿನ ರೂಪವಾಗಿದ್ದರೆ ನಿಮ್ಮ ಪ್ರಶ್ನೆಯು ಸರಿಯಾಗುತ್ತಿತ್ತು. ಆದರೆ ಇದು 'ಬ್ರೂಞ್ ವ್ಯಕ್ತಯಾಂ ವಾಚಿ' ಎಂಬ ಧಾತುವಿನಿಂದ ನಿಷ್ಪನ್ನವಾಗಿದೆ. 'ಬ್ರೂ'ಧಾತುವಿಗೆ 'ಬ್ರುವೋ ವಚಿ' ಎಂಬ ಸೂತ್ರದಿಂದ 'ವಚಿ' ಎಂಬ ಆದೇಶ ಬಂದಿದೆ. ಬ್ರೂಞ್ ಧಾತುವು ಪರಸ್ಮೈಪದ ಹಾಗೂ ಆತ್ಮನೇಪದ ಎರಡರಲ್ಲಿಯೂ ಇರುವುದರಿಂದ ಪ್ರಕೃತ ಗ್ರಂಥಕಾರರು ಮಾಡಿದ 'ಊಚೇ' ಎಂಬ ಆತ್ಮನೇಪದ ಪ್ರಯೋಗವು ವ್ಯಾಕರಣವಿರುದ್ಧವಾಗಿಲ್ಲ.

ಪೃಥಿವಿಯು ಹಿಂದೆ ಪ್ರಸ್ತುತವಾದ್ದರಿಂದ ಅಸ್ಯ ಎಂಬ ಸರ್ವನಾಮಶಬ್ದದಿಂದ ಪೃಥಿವಿಯನ್ನೇ ಪರಾಮರ್ಶಿಸಬೇಕು ಹೊರತು ಸಮಸ್ತಜಗತ್ತನ್ನು ಪರಾಮರ್ಶಿಸಬಾರದಲ್ಲವೇ? ಎಂಬ ಪ್ರಶ್ನೆಗೆ ಗ್ರಂಥಕಾರರು 'ಅಸ್ಯ ಇತಿ' ಎಂಬ ವಾಕ್ಯದಿಂದ ಉತ್ತರಿಸುತ್ತಿದ್ದಾರೆ.

'ಸಾರಸ್ವತ್ಯಾಂ ಮೇಷ್ಯಾಂ ಮದ್ರಿಗುವಚನಾಭಾವಾಧಿಕರಣಮ್'

'ಲಿಂಗವಿಶೇಷನಿರ್ದೇಶಾತ್ ಸಮಾನವಿಧಾನೇಷ್ವಪ್ರಾಪ್ತಿಃ ಸಾರಸ್ವತೀ ಸ್ತ್ರೀತ್ವಾತ್' (೯-೧-೧೫)

ಜ್ಯೋತಿಷ್ಟೋಮದಲ್ಲಿ ಸಂಸ್ಥಾಭೇದದಿಂದ ಆಹುತಿನೀಡಬೇಕಾದ ಪಶುಗಳು ಅನೇಕ ಕೇಳಿಸುತ್ತಿವೆ. 'ಆಗ್ನೇಯಮಗ್ನಿಷ್ಟೋಮ ಆಲಭತೇ । ಐಂದ್ರಾಗ್ನಮುಕ್ಥೇ ದ್ವಿತೀಯಮ್ । ಐಂದ್ರಂ ವೃಷ್ಣಿಂ ಷೋಡಶಿನಿ ತೃತೀಯಮ್ । ಸಾರಸ್ವತೀಂ ಮೇಷೀಂ ಚತುರ್ಥಿಮತಿರಾತ್ರೇ ।' -- ಅಗ್ನಿಷ್ಟೋಮವೆಂಬ ಇಷ್ಟಿಯಲ್ಲಿ ಆಗ್ನಿಯನ್ನು ಉದ್ದೇಶಿಸಿ ಅಜವೆಂಬ ಪಶುವನ್ನು ಆಲಂಭನ ಮಾಡಬೇಕು. ಉಕ್ಥ್ಯ ಎಂಬ ಇಷ್ಟಿಯಲ್ಲಿ ಇಂದ್ರಾಗ್ನಿಯನ್ನು ಉದ್ದೇಶಿಸಿ ಎರಡನೆಯ ಪಶುವನ್ನು ಆಲಂಭನ ಮಾಡಬೇಕು. ಐಂದ್ರ ಮತ್ತು ವೃಷ್ಣಿಯನ್ನು ಉದ್ದೇಶಿಸಿ ಷೋಡಶಿ ಎಂಬ ಇಷ್ಟಿವಿಶೇಷದಲ್ಲಿ ಮೂರನೆಯ ಪಶುವನ್ನು ಆಲಂಭನ ಮಾಡಬೇಕು. ಅತಿರಾತ್ರ ಎಂಬ ಇಷ್ಟಿವಿಶೇಷದಲ್ಲಿ ಹೆಣ್ಣು ಮೇಕೆಯನ್ನು ನಾಲ್ಕನೆಯದ್ದಾಗಿ ಆಲಂಭನ ಮಾಡಬೇಕು - ಎಂದು.

ಮುಖ್ಯ ಋತ್ವಿಜನಾದ ಅಧ್ವರ್ಯವು ಅವಾಂತರ ಋತ್ವಿಜನಾದ ಅಧ್ರಿಗು ಎಂಬುವನನ್ನು ಕುರಿತು ಮಂತ್ರವನ್ನು ಹೇಳುತ್ತಾನೆ. ಅದನ್ನು ಅಧ್ರಿಗುಪ್ರೈಷಮಂತ್ರವೆನ್ನುತ್ತಾರೆ. 'ಪ್ರಾಸ್ಮಾ ಅಗ್ನಿಂ ಭರತ'

(ಪಶುವಿಗೋಸ್ಕರ ಅಗ್ನಿಯನ್ನು ಜ್ವಲಿಸಿರಿ ಎಂದು ಅಧ್ವಗುಪ್ರೈಷಮಂತ್ರದ ಅಭಿಪ್ರಾಯ.) ಈ ಪ್ರೈಷಮಂತ್ರವು ಅಜಾದಿ ಮೂರು ಪ್ರಾಣಿಗಳ ವಿಷಯದಲ್ಲಿ ಸಂಬಂಧ ಪಡುತ್ತದೆ. ನಾಲ್ಕನೆಯ ಹೆಣ್ಣು ಮೇಕೆಯಲ್ಲಿ ಸಂಬಂಧಪಡುತ್ತದೋ ಇಲ್ಲವೋ? ಎಂದು ಸಂದೇಹ. ಹೆಣ್ಣು ಮೇಕೆಗೂ ಸಂಬಂಧಿಸಿದೆ ಯೆಂದು ಪೂರ್ವಪಕ್ಷ. ಏಕೆಂದರೆ ಪಶುಧರ್ಮಗಳು ಹೆಣ್ಣು ಹಾಗೂ ಗಂಡು ಎರಡೂ ಪಶುಗಳಲ್ಲಿ

---

ಭಾಟ್ಟಸಙ್ಗ್ರಹಃ –

**ಲಿಙ್ಗವಿಶೇಷನಿರ್ದೇಶಾತ್ಸಮಾನವಿಧಾನೇಷ್ವಪ್ರಾಪ್ತಾ ಸಾರಸ್ವತೀ ಸ್ತ್ರೀತ್ವಾತ್ ॥ ೪೪ ॥**
**(ಪಶ್ವಭಿಧಾನಾದ್ಧಾ ತದ್ಧಿ ಚೋದನಾಭೂತಂ ಪುಂವಿಷಯಂ ಪುನಃ ಪಶುತ್ವಮ್ ॥ ೪೫ ॥ ವಿಶೇಷೋ ವಾ**
**ತದರ್ಥನಿರ್ದೇಶಾತ್ ॥ ೪೬ ॥ ಪಶುತ್ವಶ್ಚೈಕಶಬ್ದಾತ್ ॥ ೪೭ ॥ ಯಥೋಕ್ತಂ ವಾ**
**ಸನ್ನಿಧಾನಾತ್ ॥ ೪೮॥ )**

ಅತ್ರಾಪಿ ಪೂರ್ವನ್ಯಾಯೇನ ಶಙ್ಕನಾತ್ಸಙ್ಕತಿಃ । ಜ್ಯೋತಿಷ್ಟೋಮೇ ಸಂಸ್ಥಾಭೇದೇನ ಸವನೀಯಾಃ ಪಶವಃ ಪೂರ್ವಪೂರ್ವಸಾಹಿತ್ಯೇನೋತ್ತರೋತ್ತರವೃದ್ಧ್ಯಾ ನಾನಾ ಶ್ರೂಯನ್ತೇ । ''ಆಗ್ನೇಯಮಜಮಗ್ನಿಷ್ಟೋಮ ಆಲಭತೇ । ಐನ್ದ್ರಾಗ್ನಮುಕ್ಷಣ್ಯೇ ದ್ವಿತೀಯಮ್ । ಐನ್ದ್ರಂ ವೃಷ್ಣಿಂ ಷೋಡಶಿನಿ ತೃತೀಯಮ್ । ಸಾರಸ್ವತೀಂ ಮೇಷೀಂ ಚತುರ್ಥೀಮತಿರಾತ್ರೇ'' ಇತಿ । ತತ್ರ ''ದೈವ್ಯಾಃ ಶಮಿತಾರಃ ಆರಮಧ್ವಮ್ । ಉತ ಮನುಷ್ಯಾಃ । ಉಪನಯತ ಮೇಧ್ಯಾದುರ ಆಶಾಸಾನಾ ಮೇಧಪತಿಭ್ಯಾಂ ಮೇಘಮ್ । ಪಾಸ್ಮಾ ಅಗ್ನಿಂ ಭರತಾ'' ಇತ್ಯಧ್ವಿಗುಚ್ಚೋದಿತ-ಶಮಿತೄನ್ ಪ್ರತ್ಯುಚ್ಯಮಾನಮಧ್ವಿಗುಪ್ರೈಷವಚನಮಿದಮಜಾದಿಷು ತ್ರಿಷು ಪ್ರವರ್ತಮಾನಂ ಮೇಧ್ಯಾಂ ಚತುರ್ಥ್ಯಾಮಪಿ ಪ್ರವರ್ತತೇ, ಅಥ ನೇತಿ **ಸನ್ದೇಹೇ**, ಪ್ರವರ್ತತ ಇತಿ **ಪ್ರಾಪ್ತಮ್** । ಕುತಃ? ಪಶುಧರ್ಮಾಣಾಂ ಸರ್ವಪಶು-ಸಾಧಾರಣ್ಯಾತ್ಸಂಸ್ಥಾನಾಮಪಿ ಸಮಾನವಿಧಾನತ್ವಾತ್ ಸರ್ವನಾಮ್ನಃ ಸನ್ನಿಹಿತಪರತ್ವೇನ ಪ್ರಕರಣ-ಸನ್ನಿಧಾಪಿತಮೇಷೀಪರತ್ವಸ್ಯಾಪ್ಯಧ್ವಿಗುವಚನಾನ್ತರ್ಗತಾಸ್ಮೈಶಬ್ದಸ್ಯ ನ್ಯಾಯ್ಯತ್ವಾತ್ । ನಚ ಪುಲ್ಲಿಙ್ಗ-ವಿರೋಧಃ । ಪಶುಶಬ್ದಾಧ್ಯಾಹಾರೇಣ ಪೂರ್ವತ್ರ ತ್ರಿವತ್ಸೇ ಸಾಣ್ಡೇ ''ತಸ್ಮೈ ಶೃತಮ್'' ಇತ್ಯಾದೇರಿವ ''ಪ್ರಾಸ್ಮೈ ಪಶವಃ'' ಇತಿ ಮೇಧ್ಯಾಮಪ್ಯುಕ್ತ್ಯವಿರೋಧಾದಿತಿ । **ಸಿದ್ಧಾನ್ತಸ್ತು**, ಸ್ಯಾದೇವಂ ಪಶುಶಬ್ದಶ್ರವಣೇ ಮೇಧ್ಯಾಮಪಿ ಪ್ರವೃತ್ತಿರ್ವಚನಸ್ಯ । ನ ಚಾತ್ರ ಪಶುಶಬ್ದೋಸ್ತಿ । ಪ್ರಯೋಗವೇಲಾಯಾಂ ಪ್ರತ್ಯಕ್ಷ-ಸನ್ನಿಹಿತಾಜಾದಿಪರತ್ವೇನ ''ಅಸ್ಮೈ'' ಇತಿ ಶಬ್ದ ಉಪಪನ್ನಃ ಸನ್ನ ಮೇಧ್ಯಾಂ ಸ್ತ್ರಿಯಾಂ ಲಿಙ್ಗವಿರೋಧಾತ್ ಪ್ರವರ್ತತೇ । ಕಲ್ಪಕಾಭಾವಾನ್ನಾಧ್ಯಾಹಾರ ಇತಿ । ತದಾಹ **ಸೂತ್ರೇ**, **ಸಮಾನವಿಧಾನೇಷು** ಪಶುಷು **ಸಾರಸ್ವತೀ ಮೇಷೀ ಸ್ತ್ರೀತ್ವಾದಧ್ವಿಗುವಚನಮಪ್ರಾಪ್ತೇತಿ** । **ಫಲನ್ತು** ಮೇಧ್ಯಾಮಧ್ವಿಚನಾಪ್ರವೃತ್ತಿರಿತಿ ವ್ಯಕ್ತಮ್ ।

ಇದಂ ತು ಕೃತ್ವಾಚಿನ್ತಯಾ ಪ್ರವೃತ್ತಮ್ । ತುಲ್ಯಃ **ಸರ್ವೇಷಾಂ ಪಶುವಿಧಿರಿತಿ** ಸೂತ್ರೇ ಪಶುಧರ್ಮಾಣಾಮಗ್ನೀಷೋಮೀಯಾರ್ಥತ್ವಸ್ಯ **ಸಂಸ್ಥಾಸ್ತು ಸಮಾನವಿಧಾನಾ** ಇತಿ ಸಂಸ್ಥಾನಾಮಗ್ನಿಷ್ಟೋಮ-ಸಂಸ್ಥಾವಿಕೃತಿತ್ವಸ್ಯ ತಾರ್ತೀಯಷಷ್ಠಪಾದೇऽಭಿಧಶಾನೇನಾಗ್ನೀಷೋಮೀಯಃ ಸವನೀಯಸ್ಯ ಪ್ರಕೃತಿರಿತ್ಯ-ಷ್ಟಮಾದ್ಯಪಾದೇ **ದೈಕ್ಷಸ್ಯ ಚೇತರೇಷು** ಇತಿ ಸೂತ್ರೇऽಭಿಧಾನೇನ ಚ ಸಮಾನವಿಧಿತ್ವಾಭಾವೇನ ಪಶ್ವನ್ತರೇಷ್ವೇನ ಪ್ರವೃತ್ತಿಸಿದ್ಧೇರಿತಿ ಧ್ಯೇಯಮ್ ।

ಇತ್ಯಷ್ಟಾದಶಂ ಸಾರಸ್ವತ್ಯಾಂ ಮೇಧ್ಯಾಮಧ್ವಿಗುವಚನಾಭಾವಾಧಿಕರಣಮ್ (೪೪ - ೪೮)

ಸಾಧಾರಣವಾಗಿರುತ್ತದೆ. ಮತ್ತು ವಿಧಿವಾಕ್ಯಗಳಲ್ಲಿಯೂ ಕೂಡ ಲಿಂಗವನ್ನು ನಿರ್ದೇಶಿಸದೇ ಏಕಪ್ರಕಾರದಲ್ಲಿ ನಿರ್ದೇಶಿಸಲಾಗಿದೆ. 'ಅಸ್ಮೈ' ಎಂಬ ಸರ್ವನಾಮವೂ ಕೂಡ ಮೊದಲು ಸನ್ನಿಹಿತವಾದ ಸ್ತ್ರೀಪಶುವನ್ನು ಅನುಕರ್ಷಿಸುತ್ತದೆ. ಹಾಗಾಗಿ ಅಧ್ವರ್ಗುವಚನದಲ್ಲಿರುವ ಅಸ್ಮೈಶಬ್ದದಿಂದ ನಾಲ್ಕೂ ಪಶುಗಳನ್ನು ವಿವಕ್ಷಿಸಬೇಕು. ಸ್ತ್ರೀಲಿಂಗಪದವನ್ನು 'ಅಸ್ಮೈ' ಎಂಬ ಪುಲ್ಲಿಂಗಶಬ್ದದಿಂದ ಅನುಕರ್ಷಿಸುವುದು ಹೇಗೆ? ಎಂಬ ಪ್ರಶ್ನೆಗೆ ಅವಕಾಶವಿಲ್ಲ. ಪುಲ್ಲಿಂಗವಾದ ಪಶುಶಬ್ದವನ್ನು ಅಧ್ಯಾಹಾರ ಮಾಡಿದಾಗ ಸಮಸ್ಯೆ ಪರಿಹಾರವಾಗುತ್ತದೆ.

ಸಿದ್ಧಾಂತ - ಪ್ರತ್ಯಕ್ಷವಾಗಿ ಪಶುಶಬ್ದವು ಕಾಣಿಸುತ್ತಿಲ್ಲ. ಮತ್ತು ಪುಲ್ಲಿಂಗದಲ್ಲಿರುವ ಮೂರು ಪಶುಗಳೂ ಪ್ರತ್ಯಕ್ಷವಾಗಿವೆ. ಆ ಮೂರನ್ನೇ ಸುಲಭವಾಗಿ ಅನುಕರ್ಷ ಮಾಡಲು ಬರುವಾಗ ಸ್ತ್ರೀಪಶುವನ್ನು ಅನುಕರ್ಷ ಮಾಡುವ ಅಗತ್ಯವಿಲ್ಲ. ಮತ್ತು ಸ್ತ್ರೀವಾಚಕವಾದ್ದರಿಂದ ಅನುಕರ್ಷ ಮಾಡಲೂ ಸಾಧ್ಯವಿಲ್ಲ. ಹೀಗೆ ಲಿಂಗವಿರೋಧವಿರುವುದರಿಂದಲೇ ಸ್ತ್ರೀಪಶುವನ್ನು ಬಿಟ್ಟು ಉಳಿದ ಮೂರು ಪಶುಗಳ ವಿಷಯದಲ್ಲಷ್ಟೇ ಪೈಷಮಂತ್ರವು ಉಪಯುಕ್ತವಾಗುತ್ತದೆ. 'ಪ್ರಾಸ್ಮೈ' ಎಂಬಲ್ಲಿರುವ ಸರ್ವನಾಮವಾಚಕವಾದ ಅಸ್ಮೈ ಎಂಬ ಪುಲ್ಲಿಂಗಶಬ್ದದಿಂದ ಪೂರ್ವಪ್ರಕೃತವಾದ ಅಜಾದಿ ಮೂರು ಪ್ರಾಣಗಳನ್ನು ಅನುಕರ್ಷಿಸುವುದು ಅತ್ಯಂತ ಸೂಕ್ತ.

ಪೂರ್ವಮೀಮಾಂಸೆಯ ಈ ಅಧಿಕರಣದಲ್ಲಿ ಸರ್ವನಾಮಶಬ್ದದಿಂದ ಪೂರ್ವಪ್ರಕೃತವಾದದ್ದನ್ನೇ ಅನುಕರ್ಷಿಸಬೇಕೆಂದು ಸಿದ್ಧಾಂತ ಮಾಡಲಾಗಿದೆ. ಆದರಂತೆ ಪ್ರಕೃತದಲ್ಲಿಯೂ ಕೂಡ 'ಅಸ್ಯ' ಎಂಬ ಸರ್ವನಾಮಶಬ್ದದಿಂದ ಪೂರ್ವಪ್ರಕೃತವಾದ ಪೃಥಿವೀಲೋಕವನ್ನೇ ಪರಾಮರ್ಶಿಸಬೇಕು; ಹೊರತು ಸರ್ವನಾಮಶಬ್ದವೆಂದು ಪೂರ್ವಪ್ರಸಕ್ತವಾಗದ ಸಮಸ್ತ ಜಗತ್ತನ್ನು ಅನುಕರ್ಷಿಸುವುದು ತಪ್ಪು.

'ಅಸ್ಯ' ಎಂಬ ಸರ್ವನಾಮಶಬ್ದದಿಂದ ಕೇವಲ ಪೃಥಿವಿಯನ್ನು ಅನುಕರ್ಷ ಮಾಡುವುದಾದರೆ ಪ್ರಶ್ನೆಯೇ ಕೂಡುವುದಿಲ್ಲವಲ್ಲ? ಎಂಬ ಶಂಕೆಯನ್ನು 'ನಚ' ಎಂಬ ವಾಕ್ಯದಿಂದ ನಿರಾಕರಿಸುತ್ತಿದ್ದಾರೆ. ನೀರು ಪೃಥಿವಿಗೆ ಕಾರಣವೆಂದು ವೇದದಿಂದ ಸಿದ್ಧವಾಗಿದೆಯೋ ಅಥವಾ ಲೋಕದಿಂದ ಸಿದ್ಧವಾಗಿದೆಯೋ? ಮೊದಲನೆಯ ಪಕ್ಷಕ್ಕೆ 'ಸರ್ವಲೋಕ' ಇತ್ಯಾದಿ ವಾಕ್ಯದಿಂದ ಉತ್ತರಿಸಿದ್ದಾರೆ. ಎರಡನೆಯ ಪಕ್ಷಕ್ಕೆ 'ಲೋಕತಃ' ಇತ್ಯಾದಿ ವಾಕ್ಯದಿಂದ ಉತ್ತರಿಸಿದ್ದಾರೆ. ಒಂದು ವೇಳೆ ಪ್ರಶ್ನೆವಾಕ್ಯವು ಪೃಥಿವಿಗತಿಯನ್ನಷ್ಟೇ ವಿಷಯೀಕರಿಸುವುದಾದರೆ ಅನೇಕ ಬಾಧಕಗಳನ್ನು ಆಶಂಕಿಸಿ 'ನಚ' ಇತ್ಯಾದಿ ಗ್ರಂಥದಿಂದ ಉತ್ತರಿಸಿದ್ದಾರೆ. ಪೃಥಿವಿಗೆ ಯಾವುದು ಕಾರಣವಾಗಿದೆಯೋ ಆ ಕಾರಣದಿಂದ ಕೇವಲ ಪೃಥಿವಿಯು ಹುಟ್ಟುತ್ತದೆ ಹೊರತು ಸಮಸ್ತ ಜಗತ್ತು ಹುಟ್ಟಲಾರದು. ಆದ್ದರಿಂದ ಸರ್ವಪದವು ತಪ್ಪಾಗುತ್ತದೆ. ಮತ್ತು ಪೃಥಿವಿಗೆ ಕಾರಣವಾದದ್ದು ಆಕಾಶದ ಜೊತೆಗೆ ಇನ್ನೂ ಕೆಲವು ಇರುವುದರಿಂದ ಏವ ಕಾರವು ತಪ್ಪಾಗುತ್ತದೆ.

ಗ್ರಂಥಕಾರರು ಹೇಳಿದ ಅನ್ಯೋನ್ಯಾಶ್ರಯದೋಷವು ಕೇವಲ ಉಪಲಕ್ಷಣವಾಗಿದೆ -- ನೀರು ಪೃಥಿವಿಗೆ ಕಾರಣವಾಗಿರಬಹುದು. ಆದರೆ ಪೃಥಿವಿಗೆ ಮೂಲಕಾರಣವಾದದ್ದು ಆಕಾಶವಾಗಿದೆ. ಮೂಲಕಾರಣವನ್ನು ಹೇಳುವ ಉದ್ದೇಶದಿಂದ 'ಸರ್ವಾಣಿ ಹ ವಾ' ಇತ್ಯಾದಿ ವಾಕ್ಯಗಳೆಲ್ಲವೂ ಹೊರಟಿವೆ.

ಇಲ್ಲಿರುವ ಸರ್ವಪದದಿಂದ ಆಕಾಶವನ್ನು ವಿವಕ್ಷಿಸಬೇಕೆಂಬ ನಿಯಮವಿಲ್ಲ. ಆಕಾಶವನ್ನು ಬಿಟ್ಟು ಉಳಿದ ಭೂತಪದಾರ್ಥಗಳನ್ನು ವಿವಕ್ಷಿಸಬಹುದು. ಆದ್ದರಿಂದ ಪೃಥಿವೀಗತಿಯ ಬಗ್ಗೆ ಪ್ರಶ್ನೆ ಮಾಡಿದರೆ ಏನು ತಪ್ಪು? ಹಾಗಾದರೆ 'ಆತ್ಮನಃ ಆಕಾಶಃ ಸಂಭೂತಃ' ಎಂಬ ಮಾತಿರುವುದರಿಂದ ಮೂಲಕಾರಣನಾದ ಆತ್ಮನನ್ನು ಹೇಳಬೇಕಲ್ಲವೇ? ಎಂದು ಪ್ರಶ್ನಿಸಬಾರದು. ಕೇವಲ ಭೂತಪದಾರ್ಥಗಳ ವಿಷಯದಲ್ಲಷ್ಟೇ ಕಾರ್ಯಕಾರಣಭಾವವನ್ನು ಶ್ರುತಿಯು ಹೇಳುತ್ತದೆ. ಪೃಥಿವಿ ಎಂಬ ಭೂತಪದಾರ್ಥಕ್ಕೆ ಆಕಾಶವೆಂಬ ಭೂತಪದಾರ್ಥವು ಮೂಲ ಉಪಾದಾನಕಾರಣವಾಗಿದೆ ಹೊರತು ಬೇರೆ ಯಾವುದೂ ಮೂಲ-ಕಾರಣವಲ್ಲ. ಈ ಅಭಿಪ್ರಾಯದಿಂದಲೇ ಏವಕಾರವನ್ನು ಶ್ರುತಿಯು ಹೇಳಿದೆ.

**ಗುರುರಾಜೀಯಮ್** – ನನು ಪ್ರಶ್ನೋಪ್ಯಾಕಾಶಪರ ಏವಾಸ್ತಿವತ್ಯತ ಆಹ – **ಅಸ್ಯೇತಿ** ॥ ಪ್ರತ್ಯಕ್ಷಾದಿಸಿದ್ಧಸ್ಯೇತ್ಯರ್ಥಃ । ನನು ಪ್ರಶ್ನೋತ್ತರಯೋರೇಕವಿಷಯತಾ ಪ್ರಶ್ನಾನುಸಾರೇಣೋತ್ತರವ್ಯಾಖ್ಯಾನ ಇವೋತ್ತರಾನುಸಾರೇಣ ಪ್ರಶ್ನವ್ಯಾಖ್ಯಾನೇ ಸಮ್ಭವತ್ಯೇವೇತಿ ಸನ್ದೇಹ ಏವ ಸ್ಯಾತ್ । ನ ತು ನಿಶ್ಚಯ ಇತ್ಯರುಚೇರಾಹ – **ಕಿಞ್ಚೇತಿ** ॥

ನನು ಪ್ರಕೃತಪೃಥಿವೀಲೋಕಗತಿರೇವ ಪೃಷ್ಟೇತ್ಯಯುಕ್ತಮ್ । ತಥಾಸತ್ಯಸ್ಯೇತ್ಯನುಪಪನ್ನಂ ಸ್ಯಾತ್ । ಏತಚ್ಛಬ್ದಸ್ಯ ದೃಶ್ಯಮಾನಸರ್ವಪ್ರಪಞ್ಚವಿಷಯತ್ವಾದಿತ್ಯತ ಆಹ – **ಅಸ್ಯೇತಿ** ॥ ಸರ್ವಶಬ್ದಃ ಪೃಥಿವೀಮಾತ್ರಪರಃ ಸ್ಯಾದಿತಿ ॥ ಪಾರ್ಥಿವಕಾರ್ಯಬಹುತ್ವಾದ್ಬಹುವಚನಾದ್ಯುಪಪತ್ತೇರಿತಿ ಭಾವಃ । ಪ್ರಸಿದ್ಧತ್ವಂ ಕಿಂ ಶ್ರುತಿತಃ ಕಿಂ ವಾ ಲೋಕತಃ? ನಾದ್ಯ ಇತ್ಯಾಹ – **ಸರ್ವೇತಿ** ॥ ನ ದ್ವಿತೀಯ ಇತ್ಯಾಹ – **ಲೋಕತ ಇತಿ** ॥ ನನ್ವೇವಂ ಪ್ರಶ್ನಸ್ಯ ಪೃಥಿವೀಮಾತ್ರವಿಷಯತ್ವೇ ಪರಿಹಾರ-ವಾಕ್ಯಾನುಪಪತ್ತಿರಿತ್ಯಾಶಙ್ಕ್ಯ ನಿಷೇಧತಿ – **ನಚೇತಿ** ॥ **ಅನ್ಯೋನ್ಯಾಶ್ರಯಾದಿತಿ** ॥

ನಚ ಸರ್ವಾಣಿ ಹ ವಾ ಇಮಾನಿ ಭೂತಾನೀತ್ಯುತ್ತರವಾಕ್ಯಬಲೇನ ಪ್ರಶ್ನವಾಕ್ಯಂ ವ್ಯಾಖ್ಯಾಯ ತದನುರೋಧೇನಾಕಾಶ ಇತಿ ಹೋವಾಚೇತಿ ಪ್ರತಿವಚನವಾಕ್ಯಂ ವ್ಯಾಖ್ಯಾಯತ ಇತಿ ನಾನ್ಯೋನ್ಯಾಶ್ರಯ ಇತಿ ವಾಚ್ಯಮ್ । ಅನುಪಸಞ್ಜಾತವಿರೋಧಿನಃ ಪೂರ್ವಸ್ಯ ವ್ಯಾಖ್ಯಾನಾಯೋತ್ತರಾನುಸರಣೇ ಉತ್ತರೇಣ ಮಧ್ಯಸ್ಥಸ್ಯಾಕಾಶ ಇತಿ ಹೋವಾಚೇತ್ಯಸ್ಯೈವ ವ್ಯಾಖ್ಯಾನೇ ಲಾಘವಾತ್ । ಸ್ವನ್ಯಾಯವಿರೋಧಾ-ಪತ್ತೇಃ ।

## ಸಾರ

ಅದ್ವೈತ ಹಾಗೂ ವಿಶಿಷ್ಟಾದ್ವೈತಮತಗಳ ವಿಮರ್ಶೆಯನ್ನು ಮಾಡುತ್ತಾರೆ. ಅದ್ವೈತಿಗಳು ಮತ್ತು ವಿಶಿಷ್ಟಾದ್ವೈತಿಗಳು ಇಬ್ಬರೂ ಹೀಗೆ ಹೇಳುತ್ತಾರೆ - ಈ ಅಧಿಕರಣದಲ್ಲಿ 'ಆಕಾಶ ಇತಿ ಹೋವಾಚ' ಎಂಬಲ್ಲಿ ಬಹುಕಾಲದಿಂದ ಭೂತಾಕಾಶದಲ್ಲಿ ಲೋಕ ಪ್ರಸಿದ್ಧವಾದ ಆಕಾಶ ಪದವು ಮೊದಲಿರುವುದರಿಂದ

ಅದಕ್ಕನುಸಾರಿಯಾಗಿ ಕೊನೆಯಲ್ಲಿರುವ 'ಸರ್ವಕಾರಣತ್ವ' ಮೊದಲಾದ ಲಿಂಗಗಳನ್ನು ಹೇಗಾದರೂ ಅರ್ಥೈಸಬೇಕು ಎಂದು ಪೂರ್ವಪಕ್ಷ ಮಾಡಿ. ಉತ್ತರ ವಾಕ್ಯದಲ್ಲಿ ಆಕಾಶ ಪದವು ಮೊದಲು ಶ್ರುತವಾಗಿದ್ದರೂ, ಮೊದಲು ಶ್ರುತವಾದ ಪ್ರಶ್ನೆಗೆ ಅನುಸಾರವಾಗಿ ನಂತರದಲ್ಲಿರುವ ಉತ್ತರವನ್ನು ಕೊಡುವ ವಾಕ್ಯದಲ್ಲಿರುವ ಆಕಾಶ ಪದವನ್ನು ವ್ಯಾಖ್ಯಾನಿಸಬೇಕಾದ್ದರಿಂದ, 'ಅಸ್ಯಲೋಕಸ್ಯ ಕಾ ಗತಿಃ' ಎಂದು ಸಕಲಪ್ರಪಂಚಕ್ಕೆ ಯಾರು ಕಾರಣ? ಎಂಬ ಪ್ರಶ್ನೆಗೆ ಅನುಗುಣವಾದ ಉತ್ತರನೀಡುವ ಆಕಾಶ ಪದವನ್ನು ಹೇಳಿದಾಗ ಭೂತಾಕಾಶವನ್ನು ಹೇಳಲು ಬರುವುದಿಲ್ಲ. ಏಕೆಂದರೆ ಭೂತಾಕಾಶವೂ ಪ್ರಪಂಚದಲ್ಲಿ ಸೇರಿದೆ. ಮತ್ತು ರೂಢಿಯಿಂದ ಭೂತಾಕಾಶದ ಪ್ರಾಪ್ತಿಯಿದ್ದರೂ 'ಸರ್ವಕಾರಣತ್ವ ಮುಂತಾದ ಅನೇಕ ಲಿಂಗಗಳ ಅನುಕೂಲಕ್ಕಾಗಿ 'ತ್ಯಜೇದೇಕಂ ಕುಲಸ್ಯಾರ್ಥೇ' ಎಂಬ ನ್ಯಾಯಾನುಸಾರವಾಗಿ ಆಕಾಶಪದಕ್ಕೆ ರೂಢಿಯನ್ನು ಬಿಟ್ಟು ಲಕ್ಷಣಾವೃತ್ತಿಯಿಂದ ಸೋಪಾಧಿಕ ಬ್ರಹ್ಮನೇ ಅರ್ಥವಾಗಿದ್ದಾನೆಂದು ಹೇಳಬೇಕು. ಹೀಗೆ ಸಿದ್ಧಾಂತ ಮಾಡುತ್ತಾರೆ.

ಆದರೆ ಇದು ಉಚಿತವಲ್ಲ. ಪ್ರಾರಂಭಕ್ಕೆ ಅನುಸಾರಿಯಾಗಿ ಕೊನೆಯಲ್ಲಿರುವುದಕ್ಕೆ ಅರ್ಥೈಸಬೇಕು ಎನ್ನುವುದಾದರೆ ಹಿಂದಿನ ಅಧಿಕರಣದಲ್ಲೂ ಹೀಗೆ ಜೀವನೆಂದೇ ಸಿದ್ಧಾಂತ ಮಾಡಬೇಕಾಗುತ್ತದೆ.

ಹಾಗೆಯೆ ಈ ಪ್ರಶ್ನೆಯು ಸರ್ವಲೋಕ ಗತಿವಿಷಯಕವಾದದ್ದು ಎನ್ನುವುದೂ ಸರಿಯಲ್ಲ. ಪ್ರಶ್ನೆವಾಕ್ಯದಲ್ಲಿ 'ಅಸ್ಯ' ಎಂಬ ಸರ್ವನಾಮದಿಂದ ಪೃಥಿವಿಯನ್ನೇ ಇಟ್ಟುಕೊಳ್ಳಬೇಕು ಹೊರತು 'ಸರ್ವಪ್ರಪಂಚವನ್ನಲ್ಲ'.

ಪೃಥಿವಿಯನ್ನು ಮಾತ್ರ 'ಅಸ್ಯ' ಪದದಿಂದ ಸ್ವೀಕರಿಸಿದರೆ ಪೃಥಿವಿಗೆ ಜಲವು ಕಾರಣವೆಂಬುದು ಲೋಕಪ್ರಸಿದ್ಧವಾದ್ದರಿಂದ ಪ್ರಶ್ನೆಯೇ ವ್ಯರ್ಥವೆಂದರೆ ಸಕಲ ಪ್ರಪಂಚಕ್ಕೂ ಕಾರಣ ಭಗವಂತನೆಂದು ಬೇರೆ ಶ್ರುತಿಗಳಿಂದ ತಿಳಿಯುವುದರಿಂದ ನೀವು ಹೇಳುವುದೂ ವ್ಯರ್ಥ. ಮತ್ತು ಪೃಥಿವಿಗೆ ಜಲವು ಕಾರಣ ಎಂದು ಶಾಸ್ತ್ರದಿಂದ ಸಿದ್ಧವೇ ಹೊರತು ಲೋಕಪ್ರಸಿದ್ಧಿಯಿಂದಲ್ಲ.

ಹಾಗಿದ್ದರೆ ಪೃಥಿವಿಗೆ ಕಾರಣ ಜಲ ಎಂದಿಷ್ಟೇ ಹೇಳಬಹುದಿತ್ತು. ಆಕಾಶ ಎಂದು ಹೇಳಿದ್ದು ಏಕೆ? ಹಾಗೆಯೇ 'ಸರ್ವಾಣಿ' ಎಂದು ಸರ್ವಪದ ಹೇಳಿದ್ದು. 'ಆಕಾಶಾದೇವ' ಎಂದು ಅವಧಾರಣೆ ಮಾಡಿದ್ದೂ ಕೂಡುವುದಿಲ್ಲವಾದ್ದರಿಂದ ನಾವು ಅರ್ಥೈಸಿದಂತೆಯೇ ಹೇಳಬೇಕು ಎಂದರೆ, ಭಾಮತಿಯಲ್ಲಿ ಪ್ರಶ್ನಾನುಸಾರಿಯಾಗಿ ಉತ್ತರವನ್ನು ವ್ಯಾಖ್ಯಾನಿಸಬೇಕು ಎಂದು ಹೇಳಿದೆ. ಆದರೆ ನೀವು ಉತ್ತರಾನುಸಾರಿಯಾಗಿ ಪ್ರಶ್ನೆಯನ್ನು ವ್ಯಾಖ್ಯಾನಿಸಬೇಕು ಎನ್ನುತ್ತಿರುವಿರಿಯಾದ್ದರಿಂದ ನಿಮ್ಮಲ್ಲೇ ಪರಸ್ಪರ ವಿರೋಧವಿದೆ.

---

**तात्पर्यचन्द्रिका**

**यच्चोक्तम् – ''त्यजेदेकं कुलस्यार्थे'' इति,**

**तन्न, आकाशश्रुतः प्रधानत्वादप्रधानानेकलिङ्गबाधस्यापि ''आत्मार्थे पृथिवीं त्यजेत्'' इति न्यायसिद्धत्वात् । उक्तं हि षष्ठे प्रधानखदिराबाधाय तक्षणाद्यनेकगुणबाधेन तक्षणाद्ययोग्योऽपि पशुनियोजनयोग्यः खदिर एवोपादेयः, न तु**

तक्षणादियोग्यः खदिरप्रतिनिधिः कदर इति । न हि त्वत्पक्षे ब्रह्मण्याकाशशब्दो मुख्यः । किञ्च –

कारणे कार्यगा यद्वत् तथा कार्येऽपि हेतुगाः ।
व्यपदेष्टुं हि शक्यन्ते धर्मा ऐक्याविशेषतः ॥

पूर्वाधिकरणे त्वत्पक्षे कार्यगतस्य हिरण्यश्मश्रुत्वादेः कारणे व्यपदेश इव, इह कारणब्रह्मधर्माणां सर्वकारणत्वादीनां भूताकाशे व्यपदेशोऽस्तु, तयोरभेदाविशेषात् । किञ्च –

विशिष्टविषयत्वं चेत् अनन्तत्वाद्यसम्भवः ।
विशुद्धविषयत्वं चेत् ज्यायस्त्वादेरसम्भवः ॥

न हि सोपाधिके परिच्छिन्ने ब्रह्मण्यनन्तत्वादिकम् । नापि निर्विशेषे ज्यायस्त्वादिकम् । न हि ज्यायस्त्वमपरिच्छिन्नत्वम्, 'अनन्तः' इत्यनेन पुनरुक्तेः । किन्तु परिमाणाधिक्यं गुणाधिक्यं वा । नच तन्निर्विशेषेऽस्ति ।

यद्यपि वस्तुतो निर्विशेषे आरोपितो विशेषो न विरुद्धः । तथाऽपि त्वदुक्तः सविशेषनिर्विशेषविषयोरधिकारिभेदः, फलभेदः, विद्याभेदेन पादभेदश्च न स्यात् । एवमुत्तराधिकरणविषयवाक्येष्वपि सगुणनिर्गुणोभयलिङ्गयुक्तेषु दोष ऊह्यः । किञ्च सूत्रोक्तं लिङ्गं न तावद् ब्रह्मणि तत्वतोऽस्ति ।

यदि चारोपितं लिङ्गं तत्साध्या ब्रह्मताऽपि हि ।
आरोपिता स्यादेवञ्च पूर्वपक्षः स्थिरो भवेत् ॥

तस्मान्मतान्तरमयुक्तम् ॥

टीकाक्षरार्थस्तु – अस्ति शास्त्रादिसङ्गतिरिति ॥ अत्र 'ब्रह्मणि' इत्यनेन शास्त्रसङ्गतिः, 'समन्वय' इत्यनेन अध्यायसङ्गतिः, 'अन्यत्र प्रसिद्धनाम्नः' इत्यनेन पादसङ्गतिः सूचिता । एवमुत्तरत्रापि द्रष्टव्यम् ॥

॥ इति श्रीब्रह्मण्यतीर्थपूज्यश्रीपादशिष्यव्यासतीर्थविरचिता
तात्पर्यचन्द्रिकायां आकाशाधिकरणं सम्पूर्णम् ॥८॥

ಅನುವಾದ - ಅದ್ವೈತಿಗಳು ಹೇಳಿದ 'ತ್ಯಜೇದೇಕಂ ಕುಲಸ್ಯಾರ್ಥೇ' (ಕುಲದ ಉದ್ಧಾರಕ್ಕೋಸ್ಕರ ಒಬ್ಬ ವ್ಯಕ್ತಿಯನ್ನು ತ್ಯಜಿಸಬೇಕು) ಎಂಬ ನ್ಯಾಯವು ತಪ್ಪು. 'ಆತ್ಮರಕ್ಷಣೆಗೋಸ್ಕರ ಸಕಲ ಪೃಥಿವಿಯನ್ನೇ ಬಿಡಬೇಕು' ಎಂದು ಅದೇ ಶ್ಲೋಕದಲ್ಲಿ ಇರುವಂತೆ ಪ್ರಧಾನವಾದ್ದನ್ನು ಅನುಸರಿಸಿ ಅಪ್ರಧಾನವಾದ ಅನೇಕವನ್ನು ಬಿಡಬೇಕೆಂದು ತಿಳಿಯುತ್ತದೆ. ಪ್ರಕೃತ ಆಕಾಶಶ್ರುತಿ ಪ್ರಧಾನವಾದ್ದರಿಂದ ಸರ್ವಕಾರಣತ್ವಾದಿ ಅನೇಕ ಲಿಂಗಗಳನ್ನು ಬಿಡುವುದು ತಪ್ಪಾಗುವುದಿಲ್ಲ. ಪೂರ್ವಮೀಮಾಂಸೆಯ ಆರನೆಯ ಅಧ್ಯಾಯವೂ ಕೂಡ ಇದನ್ನು ಸಮರ್ಥಿಸುತ್ತದೆ. ಖದಿರವು ಪ್ರಧಾನವಾಗಿದೆ. ಕದರವು ಅಪ್ರಧಾನವಾಗಿದೆ. ಪ್ರಧಾನವಾದ ಖದಿರವನ್ನು ಆಶ್ರಯಿಸಿದಾಗ ತಕ್ಷಣ ಮೊದಲಾದ ಅನೇಕ ಗುಣಗಳ ಹಾನಿಯುಂಟಾಗುತ್ತದೆ. ಆದರೂ ಕೂಡ ಪಶುವನ್ನು ಕಟ್ಟಲು ಯೋಗ್ಯವಾದ್ದರಿಂದ ಖದಿರವನ್ನೇ ಸ್ವೀಕರಿಸಬೇಕು. ತಕ್ಷಣಾದಿ ಅನೇಕಗುಣಗಳಿಗೆ ಯೋಗ್ಯವಾಗಿದ್ದರೂ ಕೂಡ ಖದಿರಪ್ರತಿನಿಧಿಯಾದ ಕದರವನ್ನು ಬಿಡುವುದು ತಪ್ಪಲ್ಲ. ಪ್ರಧಾನವನ್ನು ಅನುಸರಿಸುವುದೇ ಮುಖ್ಯ ಹೊರತು ಅಪ್ರಧಾನವನ್ನು ಅನುಸರಿಸಿ ಅನೇಕ ಗುಣಗಳನ್ನಾಗಲೀ ಲಿಂಗಗಳನ್ನಾಗಲೀ ಕೂಡಿಸುವುದು ಮುಖ್ಯವಲ್ಲ. ನಿಮ್ಮ ಪಕ್ಷದಲ್ಲಿ ಆಕಾಶಶಬ್ದವನ್ನು ಬ್ರಹ್ಮನಲ್ಲಿ ಮುಖ್ಯವೆಂದು ಹೇಳುವುದಿಲ್ಲವಷ್ಟೇ! ಅಷ್ಟೇ ಅಲ್ಲದೆ --

ಕಾರಣೇ ಕಾರ್ಯಗಾ ಯದ್ವತ್ತಥಾ ಕಾರ್ಯೇಽಪಿ ಹೇತುಗಾಃ।
ವ್ಯಪದೇಷ್ಟುಂ ಹಿ ಶಕ್ಯಂತೇ ಧರ್ಮಾ ಐಕ್ಯಾವಿಶೇಷತಃ॥

ಕಾರ್ಯದಲ್ಲಿರುವ ಧರ್ಮಗಳನ್ನು ಕಾರಣದಲ್ಲಿ ಹೇಳುವಂತೆ ಬರುತ್ತವೆಂದು ನೀವು ಹೇಳುವಂತೆ ಕಾರಣದಲ್ಲಿರುವ ಧರ್ಮಗಳನ್ನು ಕಾರ್ಯದಲ್ಲಿಯೂ ಹೇಳಬಹುದು. ಕಾರ್ಯಕಾರಣಗಳಲ್ಲಿ ಐಕ್ಯವಿರುವುದರಿಂದ.

ಹಿಂದಿನ ಅಧಿಕರಣದಲ್ಲಿ ಅದ್ವೈತಿಗಳಾದ ನೀವು ಕಾರ್ಯಭೂತನಾದ ಜೀವನಲ್ಲಿರುವ ಹಿರಣ್ಯಶ್ಮಶ್ರುತ್ವ ಮೊದಲಾದ ಧರ್ಮಗಳನ್ನು ಕಾರಣಭೂತನಾದ ಬ್ರಹ್ಮನಲ್ಲಿ ವ್ಯಪದೇಶಿಸಿದ್ದೀರಿ. ಅದರಂತೆ ಈ ಅಧಿಕರಣದಲ್ಲಿಯೂ ಕೂಡ ಕಾರಣಭೂತನಾದ ಬ್ರಹ್ಮನಲ್ಲಿರುವ ಸರ್ವಕಾರಣತ್ವಾದಿ ಧರ್ಮಗಳನ್ನು ಭೂತಾಕಾಶದಲ್ಲಿಯೂ ವ್ಯಪದೇಶಿಸಬಹುದು. ಭೂತಾಕಾಶಕ್ಕೂ ಬ್ರಹ್ಮನಿಗೂ ನೀವು ಅಭೇದವನ್ನು ಹೇಳುವುದರಿಂದ. ಮತ್ತು

ವಿಶಿಷ್ಟವಿಷಯತ್ವಂ ಚೇದನಂತತ್ವಾದ್ಯಸಂಭವಃ।
ವಿಶುದ್ಧವಿಷಯತ್ವಂ ಚೇಜ್ಜ್ಯಾಯಸ್ತ್ವಾದೇರಸಂಭವಃ॥

ನೀವು ಉದಾಹರಿಸಿದ ವಿಷಯವಾಕ್ಯವು ವಿಶಿಷ್ಟಬ್ರಹ್ಮನನ್ನು ವಿಷಯೀಕರಿಸುತ್ತದೋ ಅಥವಾ ಶುದ್ಧಬ್ರಹ್ಮನನ್ನು ವಿಷಯೀಕರಿಸುತ್ತದೋ? ವಿಶಿಷ್ಟಬ್ರಹ್ಮವಿಷಯಕವಾದರೆ ಅನಂತತ್ವಾದಿಧರ್ಮಗಳು ಕೂಡುವುದಿಲ್ಲ. ಶುದ್ಧಬ್ರಹ್ಮನ ವಿಷಯಕವಾದರೆ ಜ್ಯಾಯಸ್ತ್ವಾದಿಗಳು ಕೂಡುವುದಿಲ್ಲ.

ಪರಿಚ್ಛಿನ್ನನಾದ ಸೋಪಾಧಿಕಬ್ರಹ್ಮನಲ್ಲಿ ಅನಂತತ್ವಾದಿಧರ್ಮಗಳು ಕೂಡುವುದಿಲ್ಲ. ನಿರ್ವಿಶೇಷವಾದ ಶುದ್ಧಬ್ರಹ್ಮನಲ್ಲಿ ಜ್ಯಾಯಸ್ತ್ವಾದಿಗಳು ಕೂಡುವುದಿಲ್ಲ. ಏಕೆಂದರೆ ಜ್ಯಾಯಸ್ತ್ವಶಬ್ದಕ್ಕೆ ಅಪರಿಚ್ಛಿನ್ನತ್ವ ಎಂಬರ್ಥವನ್ನು ಹೇಳಲಾಗದು. ಹಾಗಾದಲ್ಲಿ ಅನಂತಶಬ್ದದಿಂದ ಪುನರುಕ್ತಿ ಬರುತ್ತದೆ. ಹೊರತು ಪರಿಮಾಣದಿಂದ ಅಧಿಕ್ಯವನ್ನು ಗುಣದಿಂದ ಅಧಿಕ್ಯವನ್ನು ಹೇಳಬೇಕು. ಆದರೆ ನಿರ್ವಿಶೇಷಬ್ರಹ್ಮನಲ್ಲಿ ಇವೆರಡೂ ಅಸಂಭಾವಿತ.

ವಸ್ತುತಸ್ತು ನಿರ್ವಿಶೇಷಬ್ರಹ್ಮನಲ್ಲಿ ಪಾರಮಾರ್ಥಿಕವಾದ ಧರ್ಮಗಳಿಲ್ಲದಿದ್ದರೂ ಕಲ್ಪಿತವಾದ ಧರ್ಮಗಳನ್ನು ಹೇಳಲು ಅಡ್ಡಿಯಿಲ್ಲ. ಆದರೂ ಕೂಡ ಅದ್ವೈತಿಗಳಿಗೆ ಇಲ್ಲಿ ಹಾಗೆ ಹೇಳುವುದು ಕಷ್ಟ. ಏಕೆಂದರೆ ಸವಿಶೇಷಬ್ರಹ್ಮನ ಜ್ಞಾನದಿಂದ ದೊರೆಯುವ ಫಲವೇ ಬೇರೆ; ನಿರ್ವಿಶೇಷಬ್ರಹ್ಮನ ಜ್ಞಾನದಿಂದ ದೊರೆಯುವ ಫಲವೇ ಬೇರೆ. ಈ ಎರಡೂ ಜ್ಞಾನವನ್ನು ಹೊಂದುವ ಅಧಿಕಾರಿಗಳೂ ಬೇರೆ. ಈ ಎರಡೂ ಜ್ಞಾನಗಳಲ್ಲಿ ಭೇದವಿರುವುದರಿಂದಲೇ ಪ್ರಥಮಾಧ್ಯಾಯದ ಪಾದಭೇದವು ಸುಸಂಗತವಾಗುತ್ತದೆ. ಇತ್ಯಾದಿ ಮಾತುಗಳನ್ನು ಅದ್ವೈತಿಗಳು ಹೇಳುತ್ತಾರೆ. ಇದರಂತೆ ಮುಂದಿನ ಅಧಿಕರಣಗಳ ವಿಷಯವಾಕ್ಯಗಳಲ್ಲೂ ಸಗುಣ ಹಾಗೂ ನಿರ್ಗುಣ ಎರಡೂವಿಧ ಬ್ರಹ್ಮರಲ್ಲಿರುವ ಲಿಂಗವನ್ನು ಹೇಳಿದಾಗ ದೋಷವನ್ನು ಊಹಿಸಿಕೊಳ್ಳಬೇಕು. ಅಷ್ಟೇ ಅಲ್ಲದೆ ಅದ್ವೈತಿಗಳು ಹೇಳುವ ಪ್ರಕಾರ ಸೂತ್ರದಲ್ಲಿ ಉಕ್ತವಾದ ಲಿಂಗವು ಬ್ರಹ್ಮನಲ್ಲಿ ಕೂಡುವುದೇ ಇಲ್ಲ. --

''ಯದಿ ಚಾರೋಪಿತಂ ಲಿಂಗಂ ತತ್ಸಾಧ್ಯಾಬ್ರಹ್ಮತಾಪಿ ಹಿ।
ಆರೋಪಿತಾ ಸ್ಯಾದೇವಂ ಚ ಪೂರ್ವಪಕ್ಷಃ ಸ್ಥಿರೋ ಭವೇತ್ ॥

(ಒಂದು ವೇಳೆ ಬ್ರಹ್ಮನಲ್ಲಿ ಆರೋಪಿತವಾದ ಲಿಂಗವನ್ನು ಹೇಳಿದರೆ ಅದರಿಂದ ಸಾಧಿಸಲ್ಪಟ್ಟ ಬ್ರಹ್ಮತ್ವವೂ ಕೂಡ ಆರೋಪಿತವೇ ಆಗುತ್ತದೆ. ಇದರಿಂದ ಪೂರ್ವಪಕ್ಷವೇ ದೃಢವಾಗುತ್ತದೆ ಹೊರತು ಸಿದ್ಧಾಂತದ ಸ್ಥಾಪನೆಯಾಗುವುದಿಲ್ಲ.)

ಆದ್ದರಿಂದ ಅದ್ವೈತಮತವು ಅಯುಕ್ತವಾಗುತ್ತದೆ.

ಟೀಕೆಯ ಕಠಿಣಪದಾರ್ಥ

ಅಸ್ತಿ ಶಾಸ್ತ್ರಾದಿಸಂಗತಿಃ = ಈ ವಾಕ್ಯದಲ್ಲಿ 'ಬ್ರಹ್ಮಣಿ' ಎಂದು ಹೇಳಿದ್ದರಿಂದ ಶಾಸ್ತ್ರಸಂಗತಿಯು 'ಸಮನ್ವಯ' ಎಂದು ಹೇಳಿದ್ದರಿಂದ ಅಧ್ಯಾಯಸಂಗತಿಯು, 'ಆನ್ಯತ್ರ ಪ್ರಸಿದ್ಧನಾಮ್ನಃ' ಎಂದು ಹೇಳಿದ್ದರಿಂದ ಪಾದಸಂಗತಿಯು ಸೂಚಿಸಲ್ಪಟ್ಟಿದೆ. ಇದರಂತೆ ಮುಂದಿನ ಅಧಿಕರಣಗಳಲ್ಲಿಯೂ ಸಂಗತಿತ್ರಯಗಳನ್ನು ತಿಳಿಯಬೇಕು.

ಇಲ್ಲಿಗೆ ಶ್ರೀವ್ಯಾಸತೀರ್ಥರು ವಿರಚಿಸಿದ ತಾತ್ಪರ್ಯಚಂದ್ರಿಕೆಯ ಕನ್ನಡಾನುವಾದದಲ್ಲಿ
ಆಕಾಶಾಧಿಕರಣವು ಸಂಪೂರ್ಣವಾಯಿತು.

ಪರಿಪೂರ್ಣಚಂದ್ರಿಕಾ

**प्रकाशः** – उक्तं हीति ॥ षष्ठे तृतीयपादे ''द्रव्यसंस्कारविरोधे द्रव्यं तदर्थत्वात्'' इत्येकोनविंशेऽधिकरणे चिन्तितम् । यदापुनस्तनुत्वात् तक्षणादि-संस्काराणामयोग्यः खदिरः नियोजनमात्रे योग्यो लब्धः, कदरो महान् संस्कारयोग्यः तदा कस्योपादानमिति संशये, खदिरोपादाने संस्काराणां बहूनां लोपः स्यात्, कदरोपादाने कृते तेषामनुग्रहः । खदिरशास्त्रमपि किञ्चिन्यूनं सम्पादितं भवति अतस्तस्योपादानमिति प्राप्ते, बहवोऽपि द्रव्यार्था एव संस्कारास्तेषां नान्यत्प्रयोजनं, न तद्वशेन द्रव्यपरित्यागो युक्तः । अतः प्रधानभूतः खदिर एवोपादातव्यः । तक्षणादीनि लुप्येरन्निति सिद्धान्त इति प्रधानानुग्रहादप्रधानानेक-बाधनमुक्तमित्यर्थः ।

नन्वाकाशशब्दो भूत इव ब्रह्मण्यपि मुख्य एवातो न ब्रह्मपक्षेऽपि मुख्यबाध इत्यत आह – न हीति ॥ ''त्यजेदेकं कुलस्यार्थे'' इति न्यायेन बहूनुग्रहाय आकाशपदं बाध्यमित्यत्र दोषान्तरमाह – किञ्च – कारण इति ॥ 'तयोः' उपादानोपादेयभावापन्नयोरित्यर्थः । इदं विषयवाक्यमद्वैतिमते अत्यन्तायुक्तमित्याह – किञ्चेति ॥ श्लोकं व्याख्याति – न हीति ॥ निर्विशेषे ज्यायस्त्वं नेत्युक्तमुपपादयति – न हीति ॥

ननु वास्तवगुणाभावेऽपि निर्विशेषे कल्पितः परिमाणादिः स्यादित्याशङ्क्य अतिप्रसङ्गमाह – यद्यपीति ॥ अधिकारीति ॥ मन्दामन्दरूपाधिकारीत्यर्थः । फलेति । निर्विशेषज्ञानमोक्षरूपफलभेद इत्यर्थः ॥ विद्येति ॥ सविशेषनिर्विशेष-विद्येत्यर्थः । परमते सूत्रं चायुक्तमित्याह – किञ्चेति ॥

एतेन यदत्र मूर्खप्रलपनम् – ''आकाशाद्वायुः'' इति श्रुत्यन्तरे आकाशस्य सर्वभूतकारणत्वेनोक्तेः ''इति होवाच'' इत्यत्राप्याकाशो भूतमेवेति प्राप्ते, सर्व-कारणत्वात् तल्लिङ्गात् परमाकाशभिन्नः शिव एवात्रोच्यते इति । तदुक्तम् –

**आकाशस्यात्मानाच्छान्दोग्ये सर्वभूतकारणता ।**
**आम्नायबोधितेऽर्थे नच विमतिः कर्तुमुचिता नः ॥**
**अस्तु स परमाकाशस्तदभेदस्त्वीश्वरोऽपि तद्धर्मी ।**

ಇತ್ಯಾದಿ । ತನ್ನಿರಸ್ತಮ್, ಸರ್ವಭೂತಕಾರಣತ್ವಸ್ಯ ಭೂತಾಕಾಶ ಏವ ಸಾವಕಾಶಿತತ್ವಾತ್ । ವೈಷ್ಣವನಾಮತ್ರಯಾನ್ತರ್ಗತಾನನ್ತಶಬ್ದಸಾಮಾನಾಧಿಕರಣ್ಯವಿರೋಧಾಚ್ಚ ॥

**ಬ್ರಹ್ಮೈವ ಹಿ ಪೃಥಿವ್ಯಾತ್ಮಾ ವಿಷ್ಣುರಾಕಾಶನಾಮಕಃ ।**
**ಆದೀಸತ್ವಾದ್ಧರೀಯಾಂಶ್ಚ ಪರಮೋ ಹರಿರೇವ ಹಿ ॥**

ಇತಿ ಸ್ಮೃತಿವಿರೋಧಾಚ್ಚ । ಭಾಷ್ಯಾದಾವುದಾಹೃತವಚನವಿರೋಧಾಚ್ಚ । ಲಿಙ್ಗಾನಾಂ ಭಾಷ್ಯಾದೌ ವೈಷ್ಣವತ್ವಸಮರ್ಥನಾಚ್ಚೇತಿ ॥

''ಲೋಕತೋऽನ್ಯತ್ರ ಪ್ರಸಿದ್ಧಾಕಾಶನಾಮ್ನೋ ಬ್ರಹ್ಮಣಿ ಸಮನ್ವಯಪ್ರತಿಪಾದನಾದಸ್ತಿ ಶಾಸ್ತ್ರಾದಿ-ಸಙ್ಗತಿಃ'' ಇತ್ಯತ್ರ ಕಥಂ ಸಙ್ಗತಿತ್ರಯಲಾಭ ಇತ್ಯತ ಆಹ – ಅತ್ರೇತಿ ॥ ಉಪನ್ಯಾಸಮುಖೇನ ಶಿಷ್ಟಂ ವಿವೃತಮಿತಿ ಭಾವಃ॥

**ಇತಿ ಶ್ರೀಮತ್ಸರ್ವತನ್ತ್ರಸ್ವತನ್ತ್ರಸುಧೀನ್ದ್ರತೀರ್ಥಗುರುಪಾದಶಿಷ್ಯರಾಘವೇನ್ದ್ರಯತಿಕೃತೇ**
**ಚನ್ದ್ರಿಕಾಪ್ರಕಾಶೇ ಆಕಾಶಾಧಿಕರಣಂ ಸಮ್ಪೂರ್ಣಮ್ ॥೮॥**

ವಿವರಣೆ -

ಸಂಸ್ಕಾರಾಯೋಗ್ಯಸ್ಯಾಪಿ ಮುಖ್ಯಸ್ಯೈವ ಉಪಾದಾನಾಧಿಕರಣಮ್
''ದ್ರವ್ಯಸಂಸ್ಕಾರವಿರೋಧೇ ದ್ರವ್ಯಂ ತದರ್ಥತ್ವಾತ್' -(೬/೩/೧೯)(*)

ಈ ಅಧಿಕರಣದಲ್ಲಿ ಹೀಗೆ ವಿಚಾರ ಮಾಡಿದ್ದಾರೆ -- ಯಾಗಕಾಲದಲ್ಲಿ ಖದಿರಮರವನ್ನು ಉಪಯೋಗಿಸಬೇಕೋ ಅಥವಾ ಕದರ ಮರವನ್ನು ಉಪಯೋಗಿಸಬೇಕೋ? ಖದಿರ ಮರವು ಕೃಶವಾಗಿರುತ್ತದೆ. ಕದರ ಮರವು ಸ್ಥೂಲವಾಗಿರುತ್ತದೆ. ಖದಿರಮರವು ಕೃಶವಾದ್ದರಿಂದ ಅದರಲ್ಲಿ ತಕ್ಷಣ ಮತ್ತು ಅಪ್ಪಾಪ್ತೀಕರಣ ಮೊದಲಾದ ಸಂಸ್ಕಾರಗಳನ್ನು ಮಾಡುವುದು ಕಷ್ಟ. ಆದರೆ ಕದರ ಮರವು ಸ್ಥೂಲವಾಗಿರುವುದರಿಂದ ತಕ್ಷಣಾದಿ ಸಂಸ್ಕಾರಗಳನ್ನು ಸುಲಭವಾಗಿ ಪೂರೈಸಬಹುದು. ಕದರಮರವನ್ನು ಸ್ವೀಕರಿಸುವುದರಿಂದ ಅನೇಕಸಂಸ್ಕಾರಗಳನ್ನು ಸಾಧಿಸಿದಂತಾಗುತ್ತದೆ. 'ಖಾದಿರೋ ಯೂಪೋ ಭವತಿ' ಎಂಬ ಪ್ರಮಾಣವಿದ್ದರೂ ಕೂಡ ಖದಿರಮರವನ್ನು ವಿವಕ್ಷಿಸಿದರೆ ಅನೇಕ ಸಂಸ್ಕಾರಗಳು ಲೋಪವಾಗುವುದರಿಂದ ಖದಿರವಿಧಿಯನ್ನು ಬಿಡಬೇಕಾಗುತ್ತದೆ. ಇದಿಷ್ಟು ಪೂರ್ವಪಕ್ಷ.

ಸಿದ್ಧಾಂತ - ಸಂಸ್ಕಾರಗಳನ್ನು ಮುಖ್ಯವೆಂದು ಪರಿಗಣಿಸಿ ದ್ರವ್ಯವನ್ನೇ ಬಿಡುತ್ತಿದ್ದೀರಿ. ಆದರೆ ಖದಿರವೆಂಬ ದ್ರವ್ಯವು ಸಿದ್ಧವಾದರಷ್ಟೇ ಉಳಿದ ಸಂಸ್ಕಾರಗಳು ಸಾಧ್ಯ. ಆದ್ದರಿಂದ ಸಂಸ್ಕಾರಗಳನ್ನು ಸ್ವೀಕರಿಸಬೇಕಾದರೆ ಖದಿರದ್ರವ್ಯವು ಬೇಕೇ ಬೇಕು. ಇನ್ನು ಖದಿರದ್ರವ್ಯವನ್ನು ಸ್ವೀಕರಿಸಿದರೆ ಸಂಸ್ಕಾರಾದಿಗಳೇ ಸಾಧ್ಯವಿಲ್ಲವಲ್ಲ? ಎಂಬ ಪ್ರಶ್ನೆ ಬರಬಹುದು. ಆದರೆ ದ್ರವ್ಯವು ಮುಖ್ಯವಾದ್ದರಿಂದ ಸಂಸ್ಕಾರಗಳನ್ನು

ಬಟ್ಟರೂ ಪರವಾಗಿಲ್ಲ. ಪ್ರಧಾನವಾದ ಖದಿರದ್ರವ್ಯವನ್ನೇ ಸ್ವೀಕರಿಸಬೇಕು. ತಕ್ಷಣ ಅಪ್ಪಾಶೀಕರಣ ಮೊದಲಾದ ಸಂಸ್ಕಾರಗಳು ಲೋಪವಾದರೆ ಆಗಲಿ.

ಪ್ರಧಾನವಾದ್ದನ್ನು ಸ್ವೀಕರಿಸಿ ಅಪ್ರಧಾನವಾದ ಅನೇಕಕ್ಕೆ ಬಾಧವನ್ನು ಅಂಗೀಕರಿಸಿರುವುದು ಪೂರ್ವಮೀಮಾಂಸೆಯ ಈ ಅಧಿಕರಣದಲ್ಲಿ ಕಂಡಿದೆ. ಆದರಂತೆ ಪ್ರಕೃತದಲ್ಲಿಯೂ ಕೂಡ ಪ್ರಧಾನವಾದದ್ದು ಆಕಾಶಶ್ರುತಿ, ಜಗತ್ಕಾರಣತ್ವಾದಿ ಲಿಂಗಗಳು ಅಪ್ರಧಾನವಾಗಿವೆ. ಪ್ರಧಾನವಾದ ಆಕಾಶಶ್ರುತಿಯನ್ನು ಅನುಸರಿಸಿ ಅಪ್ರಧಾನವಾದ ಸರ್ವಕಾರಣತ್ವಾದಿ ಅನೇಕಲಿಂಗಗಳನ್ನು ಬಾಧಿಸುವುದು ತಪ್ಪಾಗುವುದಿಲ್ಲ.

ಆಕಾಶಶಬ್ದವು ಭೂತದಲ್ಲಿ ಹೇಗೆ ಮುಖ್ಯವಾಗಿದೆಯೋ ಅದರಂತೆ ಬ್ರಹ್ಮನಲ್ಲಿಯೂ ಮುಖ್ಯವಾಗಿದೆ. ಹಾಗಾಗಿ ಬ್ರಹ್ಮಪಕ್ಷದಲ್ಲಿಯೂ ಮುಖ್ಯವಾದದ್ದಕ್ಕೆ ಬಾಧವು ಬಂದೇ ಬರುತ್ತದೆಂಬ ಪ್ರಶ್ನೆಗೆ 'ನ ಹಿ' ಇತ್ಯಾದಿ ಗ್ರಂಥದಿಂದ ಉತ್ತರಿಸುತ್ತಿದ್ದಾರೆ. 'ತ್ಯಜೇದೇಕಂ ಕುಲಸ್ಯಾರ್ಥೇ' ಎಂಬ ನ್ಯಾಯದಂತೆ ಅನೇಕ ಲಿಂಗಗಳನ್ನು ಹೊಂದಿಸುವುದಕ್ಕೋಸ್ಕರ ಒಂದು ಆಕಾಶಶ್ರುತಿಯನ್ನು ಬಾಧಿಸುವುದು ತಪ್ಪೇನಲ್ಲವಲ್ಲ? ಎಂಬ ಪ್ರಶ್ನೆಗೆ ಮತ್ತೊಂದು ದೋಷವನ್ನು 'ಕಿಂಚ' ಇತ್ಯಾದಿ ಗ್ರಂಥದಿಂದ ಹೇಳುತ್ತಿದ್ದಾರೆ. ಅದ್ವೈತಿಗಳು ಉದಾಹರಿಸಿದ ವಿಷಯವಾಕ್ಯವು ಅವರಿಗೇ ಬಾಧಕವಾಗುತ್ತದೆ ಎಂದು 'ಕಿಂಚ' ಇತ್ಯಾದಿ ಗ್ರಂಥವು ವಿವರಿಸಿದೆ. ಸ್ವತಃ ಗ್ರಂಥಕಾರರೇ 'ವಿಶಿಷ್ಟವಿಷಯತ್ವಂ' ಎಂಬ ಶ್ಲೋಕವನ್ನು 'ನ ಹಿ' ಇತ್ಯಾದಿ ಗ್ರಂಥದಿಂದ ವ್ಯಾಖ್ಯಾನಿಸುತ್ತಿದ್ದಾರೆ. ನಿರ್ವಿಶೇಷಬ್ರಹ್ಮನಲ್ಲಿ ಜ್ಯಾಯಸ್ತ್ವಗುಣವನ್ನು ಹೇಳಲು ಸಾಧ್ಯವೇ ಇಲ್ಲ ಎಂಬ ವಿಷಯವನ್ನು 'ನ ಹಿ ಜ್ಯಾಯಸ್ತ್ವಂ' ಎಂಬ ಗ್ರಂಥವು ವಿವರಿಸಿದೆ. ನಿರ್ವಿಶೇಷವಾದ ಬ್ರಹ್ಮನಲ್ಲಿ ಪಾರಮಾರ್ಥಿಕವಾದ ಗುಣಗಳು ಇರದೇ ಇರಬಹುದು, ಕಲ್ಪಿತವಾದ ಪರಿಮಾಣಾದಿಗುಣಗಳು ಇರಲು ಏನು ತೊಂದರೆ?

---

(*)**ಭಾಟ್ಟಸಙ್ಗಹಃ – ಅಥೈಕೋನವಿಂಶಂ ಸಂಸ್ಕಾರಾಯೋಗ್ಯಸ್ಯಾಪಿ ಮುಖ್ಯಸ್ಯೈವೋಪಾದಾನಾಧಿಕರಣಮ್**

**ದ್ರವ್ಯಸಂಸ್ಕಾರವಿರೋಧೇ ದ್ರವ್ಯಂ ತದರ್ಥತ್ವಾತ್ ॥ ೩೮ ॥**

ಅತ್ರಾಪಿ ಪೂರ್ವನ್ಯಾಯೇನ ಶಙ್ಕನಾತ್ಸಙ್ಗತಿಃ । **ಯದಾ** ತನುತ್ವಾತ್ತಕ್ಷಣಾದಿಸಂಸ್ಕಾರಾಯೋಗ್ಯಃ ಖದಿರೋ ನಿಯೋಜನಮಾತ್ರಯೋಗ್ಯೋ ಲಭ್ಯಃ, ಕದರಶ್ಚ ಮಹಾನ್ ಸಂಸ್ಕಾರಯೋಗ್ಯಃ, ತದಾ ಕಸ್ಯೋಪಾದಾನಮಿತಿ **ಸನ್ದೇಹೇ**, ಖದಿರಗ್ರಹೇ ಸಂಸ್ಕಾರಣಾಂ ಬಹೂನಾಂ ತಕ್ಷಾಣಾಷ್ಟಾಶ್ರೀಕರಣಾದೀನಾಂ ಲೋಪಾಪತ್ತೇಃ, ಕದರಗ್ರಹೇ ತದಪರಿಲೋಪಾತ್ ಸಂಸ್ಕಾರವಿಧೀನಾಂ ಬಹೂನಾಂ ಬಾಧಾಪೇಕ್ಷಯಾ ''ಖಾದಿರೋ ಯೂಪೋ ಭವತಿ'' ಇತಿ ಖದಿರವಿಧಿಮಾತ್ರಪೀಡನಸ್ಯಾದೋಷತ್ವಾತ್ ಪೂರ್ವತ್ರೈವ ಖದಿರೋ ನಾದರ್ತವ್ಯಃ, ಕಿನ್ತು ಕದರ ಏವೇತಿ **ಪ್ರಾಪ್ತೇ ಸಿದ್ಧಾನ್ತಃ**, ಖದಿರವಿಕಾರಯೂಪದ್ರವ್ಯಸ್ಯ ಪ್ರಧಾನತ್ವಾತ್, ತಕ್ಷಣಾದಿಸಂಸ್ಕಾರಾಣಾಞ್ಚ ಗುಣತ್ವಾತ್, ಗುಣಾನುರೋಧೇನ ಪ್ರಧಾನಂ ಕಿಞ್ಚಿದಪಿ ನೋಪರುಣ್ಧ್ಯೆ ಯುಕ್ತಮಿತಿ ಸಂಸ್ಕಾರಹೀನೋಪಿ ಖದಿರ ಏವೋಪಾದೇಯ ಇತಿ ತತ್ರೈವ ಪಶುನಿ ಯಾಜನಮಿತಿ । ತದಾಹ ''**ದ್ರವ್ಯಸಂಸ್ಕಾರವಿರೋಧೇ ದ್ರವ್ಯಮೇವ**'' ಗ್ರಾಹ್ಯಮ್ । ಕುತಃ? ಸಂಸ್ಕಾರಸ್ಯ ದ್ರವ್ಯಾರ್ಥತ್ವಾದಿತಿ । **ಫಲಂ** ತು ವ್ಯಕ್ತಮ್ ।

॥ ಇತ್ಯೇಕೋನವಿಂಶಂ ಸಂಸ್ಕಾರಾಯೋಗ್ಯಸ್ಯಾಪಿ ಮುಖ್ಯಸ್ಯೈವೋಪಾದನಾಧಿಕರಣಮ್ ॥

ಎಂದು ಶಂಕೆಯನ್ನು 'ಯದ್ಯಪಿ' ಎಂಬ ಗ್ರಂಥದಿಂದ ಹೇಳಿ, ಅದಕ್ಕೆ ಅತಿಪ್ರಸಂಗದೋಷವನ್ನು 'ತಥಾ ಪಿ' ಎಂಬ ಗ್ರಂಥದಿಂದ ಹೇಳುತ್ತಿದ್ದಾರೆ. ಸವಿಶೇಷಬ್ರಹ್ಮನ ಜ್ಞಾನದಿಂದ ನಿರ್ವಿಶೇಷಬ್ರಹ್ಮನ ಜ್ಞಾನವು ಬರುತ್ತದೆ; ನಿರ್ವಿಶೇಷಬ್ರಹ್ಮನ ಜ್ಞಾನದಿಂದ ಮೋಕ್ಷವೆಂಬ ಫಲವು ದೊರೆಯುತ್ತದೆ. ಹೀಗೆ ನಿರ್ವಿಶೇಷಬ್ರಹ್ಮನ ಜ್ಞಾನಕ್ಕೂ ಸವಿಶೇಷಬ್ರಹ್ಮನ ಜ್ಞಾನಕ್ಕೂ ಫಲದಲ್ಲಿರುವ ವ್ಯತ್ಯಾಸವನ್ನು ಗಮನಿಸಬೇಕು. ಅದ್ವೈತಮತದಲ್ಲಿ ಸೂತ್ರಾರ್ಥವು ತಪ್ಪಾಗಿದೆಯೆಂದು 'ಕಿಂಚ' ಇತ್ಯಾದಿ ಗ್ರಂಥವು ನಿರೂಪಿಸುತ್ತಿದೆ.

ಶೈವರ ಅಧಿಕರಣಶರೀರ - 'ಆಕಾಶಾದ್ವಾಯುಃ' ಎಂಬ ಶ್ರುತಿಯಲ್ಲಿ ಆಕಾಶಕ್ಕೆ ಸರ್ವಭೂತ-ಕಾರಣತ್ವವನ್ನು ಹೇಳಿದ್ದಾರೆ. ಸರ್ವಭೂತಕಾರಣತ್ವವನ್ನು ಕೇವಲ ಭೂತಾಕಾಶದಲ್ಲಷ್ಟೇ ಹೇಳಲು ಸಾಧ್ಯ. ಹಾಗಾಗಿ ಆಕಾಶಶಬ್ದದಿಂದ ಪ್ರತಿಪಾದ್ಯವಾದದ್ದು ಭೂತಕಾಶವಾಗುತ್ತದೆಂದು ಪೂರ್ವಪಕ್ಷ. ಸರ್ವಕಾರಣತ್ವಲಿಂಗವು ಶಿವನಲ್ಲಿ ಇರುವುದರಿಂದ ಶಿವನು ಆಕಾಶಶಬ್ದದಿಂದ ವಾಚ್ಯನಾಗುತ್ತಾನೆ. ವಸ್ತುತಃ ಸಕಲಭೂತಪದಾರ್ಥಗಳಿಗೆ ಭೂತಾಕಾಶವು ಉಪಾದಾನಕಾರಣವಾಗಿರಬಹುದು; ಆದರೆ ಆ ಭೂತಾಕಾಶ-ದಿಂದ ಶಿವನು ಅಭಿನ್ನನಾದ್ದರಿಂದ ಶಿವನಲ್ಲಿ ಆಕಾಶಶಬ್ದವನ್ನು ಹೇಳಲು ಏನೂ ತೊಂದರೆ ಇಲ್ಲ. ಆದ್ದರಿಂದಲೇ ಛಾಂದೋಗ್ಯದಲ್ಲಿ ಆಕಾಶಕ್ಕೆ ಸರ್ವಭೂತಕಾರಣತ್ವ ಹೇಳಿದ್ದು ತಪ್ಪಾಗುವುದಿಲ್ಲ. ಹೀಗೆ ಶಿವನೇ ಆಕಾಶಶಬ್ದವಾಚ್ಯನೆಂದು ಶ್ರುತಿಯಿಂದ ತಿಳಿಯುತ್ತಿರುವಾಗ ಆ ವಿಷಯದಲ್ಲಿ ವಿಪ್ರತಿಪತ್ತಿ ಮಾಡುವುದು ತಪ್ಪಾಗುತ್ತದೆ. ಆಕಾಶದಿಂದ ಈಶ್ವರನಲ್ಲಿ ಅಭೇದವನ್ನು ಒಪ್ಪಿದರೆ ಏನೂ ಬಾಧಕವಿಲ್ಲ.

ಅಜ್ಞಾನಿಗಳಾದ ಶೈವರ ಈ ಮಾತು ತಪ್ಪು. ಈಗಾಗಲೇ ನಾವು ಹೇಳಿದಂತೆ ಸರ್ವಭೂತಕಾರಣತ್ವವನ್ನು ಭೂತಾಕಾಶದಲ್ಲಿ ಸಾವಕಾಶ ಮಾಡಲು ಬರುತ್ತದೆ. ಸಾವಕಾಶಲಿಂಗದಿಂದ ಶಿವನನ್ನು ಆಕಾಶಶಬ್ದ-ವಾಚ್ಯನೆಂದು ಹೇಳಲಾಗದು. ಅಷ್ಟೇ ಅಲ್ಲದೆ ವಿಷ್ಣುವಿನಲ್ಲಿ ಪ್ರಸಿದ್ಧವಾದ ನಾಮತ್ರಯಗಳಲ್ಲಿ ಒಂದಾದ ಅನಂತಶಬ್ದದ ಸಾಮಾನಾಧಿಕರಣ್ಯದ ವಿರೋಧವು ಬರುತ್ತದೆ. ಮತ್ತು

'ಬ್ರಹ್ಮೈವ ಹಿ ಪೃಥಿವ್ಯಾತ್ಮಾ ವಿಷ್ಣುರಾಕಾಶನಾಮಕಃ।
ಆದೀಪ್ತತ್ವಾದ್ವರೀಯಾಂಶ್ಚ ಪರಮೋ ಹರಿರೇವ ಹಿ॥

(ಬ್ರಹ್ಮನೇ ಪೃಥಿವಿಯಾಗಿದ್ದಾನೆ; ಎಲ್ಲಡೆ ಪ್ರಕಾಶರೂಪನಾದ್ದರಿಂದ ಶ್ರೇಷ್ಠನೂ ಆದ್ದರಿಂದ ವಿಷ್ಣುವು ಆಕಾಶನೆನಿಸಿದ್ದಾನೆ) ಇತ್ಯಾದಿ ಸ್ಮೃತಿಯ ವಿರೋಧವು ಬರುತ್ತದೆ. ಭಾಷ್ಯದಲ್ಲಿ ಉದಾಹರಿಸಿದ ಅನೇಕ ವಚನಗಳ ವಿರೋಧವಂತೂ ಸುಸ್ಪಷ್ಟ. ಮತ್ತು ಶ್ರುತಿಯಲ್ಲಿ ಹೇಳಿರುವ ಎಲ್ಲ ಲಿಂಗಗಳು ವಿಷ್ಣುವಿನಲ್ಲಷ್ಟೇ ಕೂಡುತ್ತವೆಂದು ಭಾಷ್ಯದಲ್ಲಿ ಸಮರ್ಥಿಸಿದ್ದಾರೆ. ಹುರುಳಿಲ್ಲದ ಶೈವರ ನಿರಾಕರಣೆಗೆ ಹೆಚ್ಚು ಮಾತುಗಳ ಆವಶ್ಯಕತೆ ಇಲ್ಲ.

''ಲೋಕತೋऽನ್ಯತ್ರ ಪ್ರಸಿದ್ಧಾಕಾಶನಾಮ್ನೋ ಬ್ರಹ್ಮಣಿ ಸಮನ್ವಯಪ್ರತಿಪಾದನಾದಸ್ತಿ ಶಾಸ್ತ್ರಾದಿ-ಸಂಗತಿಃ'' (ಲೋಕತಃ ಅನ್ಯತ್ರಪ್ರಸಿದ್ಧವಾದ ಆಕಾಶನಾಮವನ್ನು ಬ್ರಹ್ಮನಲ್ಲಿ ಸಮನ್ವಯ ಮಾಡುತ್ತಿರು-ವುದರಿಂದ ಶಾಸ್ತ್ರಾದಿಸಂಗತಿಗಳು ಲಭಿಸುತ್ತವೆ). ಭಾಷ್ಯದ ಈ ಮಾತಿನಿಂದ ಮೂರುವಿಧಸಂಗತಿಗಳನ್ನು ಹೇಗೆ ತಿಳಿಯಬೇಕು? ಎಂಬ ಪ್ರಶ್ನೆಗೆ 'ಅತ್ರ' ಇತ್ಯಾದಿ ಗ್ರಂಥವು ಉತ್ತರಿಸುತ್ತಿದೆ. ಆಕಾಶಾಧಿಕರಣದಲ್ಲಿರುವ

ಟೀಕೆಯ ಕಠಿಣಪದದ ಅರ್ಥವನ್ನು ಗ್ರಂಥಕಾರರು ಒಂದನ್ನಷ್ಟೇ ನಿರೂಪಿಸಿದ್ದಾರೆ. ಉಳಿದ ಪದದ ಅರ್ಥಗಳನ್ನು ಉಪನ್ಯಾಸಮುಖದಿಂದಲೇ ಆಯಾ ಸಂದರ್ಭಗಳಲ್ಲಿ ವಿವರಿಸಿದ್ದಾರೆ.

ಇಲ್ಲಿಗೆ ಪ್ರಕಾಶಟಪ್ಪಣಿಯ ಕನ್ನಡಾನುವಾದದಲ್ಲಿ ಆಕಾಶಾಧಿಕರಣವು ಮುಕ್ತಾಯವಾಯಿತು.

**गुरुराजीयम्** – ननु प्रधानानुसारेणाप्रधानबाध इत्येतत्कोपलब्धमित्यत आह – **उक्तं हीति** ॥ ननु दृष्टान्तदार्ष्टान्तिकयोर्वैषम्यम् । दृष्टान्ते हि तल्लक्षणादियोग्यत्वरूपानेकलिङ्गैःखदिरप्रतिनिधिकदरग्रहणे खादिरो यूपो भवतीत्यादिना प्रधानत्वेन श्रुतखादिरादिबाधवत् प्रकृते कारणत्वादिलिङ्गैराकाश-शब्दस्य ब्रह्मपरत्वेन प्रधानाबाधात् । प्रधानीभूताकाशश्रुतेर्ब्रह्मणि मुख्यत्वाभ्युप-गमादित्यत आह – **न हि त्वत्पक्ष इति** ॥ **पादभेदश्च न स्यादिति** ॥ द्वितीय-तृतीयपादभेदश्च न स्यादित्यर्थः । नन्वारोपाविशेषेपि प्रातिस्विकशेषस्य व्याव-हारिकविशेषाभावेन निर्विशेषत्वात् पादभेदादिकं युक्तमिति चेन्न । आरोपेऽ-वान्तरविशेषस्यैवाप्रामाणिकत्वात् । भावेपि वा पदार्थविनिमयस्यापि व्याख्यान-सम्भवेनोक्तव्यवस्थायोगापरिहारात् ॥ **शास्त्रादिसङ्गतिरितीति** ॥ पूर्वाधिकरणद्वये लिङ्गविचारात् फलतः पादसङ्गतावपि मुख्यतस्तदभावादक्षरार्थकथनास्वारस्या-दुपन्यासमुखेनैव व्याख्यातत्वाच्चात्र सङ्गतिटीकाक्षरानुक्तिरिति ज्ञेयम् – **एवमुत्त-रत्रापीति** ॥ उपलक्षणमेतत् । पूर्वत्रापीत्यपि द्रष्टव्यम् ॥

॥ इति श्रीकेशवभट्टारकेण विरचितायां भावदीपिकायाम्
आकाशाधिकरणं सम्पूर्णम् ॥

## ಸಾರ

"तृजेदेकं कुलस्यार्थे" ಎಂಬ ನ್ಯಾಯಾನುಸಾರಿಯಾಗಿ ಆಕಾಶಪದಕ್ಕೆ ರೂಢಿಯನ್ನು ಬಿಟ್ಟು ಬೇರೆ ಅರ್ಥವನ್ನು ಮಾಡಬೇಕು ಎಂದು ಹೇಳಿದ್ದು ಸರಿಯಲ್ಲ. ಆಕಾಶಶ್ರುತಿಯು ಪ್ರಧಾನವಾದ್ದರಿಂದ ಅಪ್ರಧಾನವಾದ 'ಸರ್ವಕಾರಣತ್ವ' ಮೊದಲಾದ ಲಿಂಗಗಳಿಗೇ "आत्मार्थे पृथिवीं तृजेत्" ಎಂಬ ನ್ಯಾಯಾನುಸಾರವಾಗಿ ಬಾಧವನ್ನು ಹೇಳಬೇಕು. ಇದು ಮೀಮಾಂಸಕರಿಗೂ ಸಮ್ಮತವಾದ ವಿಷಯ. ಆಕಾಶಶಬ್ದವು ಬ್ರಹ್ಮನಲ್ಲಿ ಮುಖ್ಯವಾಗಿದೆ ಎಂದು ನೀವು ಒಪ್ಪಿಲ್ಲವಾದ್ದರಿಂದ ಈ ನ್ಯಾಯಾನುಸಾರಿಯಾಗಿ ಆಕಾಶಪದಕ್ಕೆ ಬ್ರಹ್ಮನೆಂದು ಅರ್ಥೈಸುವುದು ಸರಿಯಲ್ಲ.

ಮತ್ತು ನೀವು ಹಿಂದಿನ ಅಧಿಕರಣದಲ್ಲಿ ಹೇಳಿದ ನ್ಯಾಯವನ್ನಿಟ್ಟುಕೊಂಡರೂ ಈ ಅಧಿಕರಣದಲ್ಲಿ ಪೂರ್ವಪಕ್ಷ ಸಿದ್ಧಾಂತಗಳಿಗೆ ಅವಕಾಶವಿಲ್ಲ. ಅಲ್ಲದೆ ಈ ಅಧಿಕರಣದಲ್ಲಿ ಹೇಳಿದ ವಾಕ್ಯವನ್ನು ವಿಷಯವಾಕ್ಯವನ್ನಾಗಿ ಸ್ವೀಕರಿಸುವುದೂ ನಿಮ್ಮ ಮತದಂತೆ ಬ್ರಹ್ಮನು ನಿರ್ವಿಶೇಷನಾದ್ದರಿಂದ ವಿರುದ್ಧವಾಗುತ್ತದೆ. ಈ ವಿರೋಧ ಪರಿಹಾರಕ್ಕಾಗಿ ಸವಿಶೇಷ ನಿರ್ವಿಶೇಷ ಎಂಬ ವಿಂಗಡನೆ ಮಾಡುವುದಾದರೆ ಫಲಭೇದ ಮತ್ತು ಪಾದಭೇದ ಮಾಡಿರುವುದು ಕೂಡುವುದಿಲ್ಲ. ಮತ್ತು ಸೂತ್ರದಲ್ಲಿ ಹೇಳಿರುವ ಲಿಂಗವೂ ಕೂಡ ವಾಸ್ತವಿಕವಾಗಿ ನಿಮ್ಮ ಮತದಂತೆ ಬ್ರಹ್ಮನಲ್ಲಿ ಇಲ್ಲ. ಹೀಗಾಗಿ ಅದನ್ನಿಟ್ಟುಕೊಂಡು ಸಿದ್ಧಾಂತ ಮಾಡುವುದೂ ಸರಿಯಲ್ಲ. ಆದ್ದರಿಂದ ಅದ್ವೈತಿಗಳು ಮತ್ತು ವಿಶಾಷ್ಟಾದ್ವೈತಿಗಳು ಇಬ್ಬರು ಹೇಳಿದ್ದೂ ಸರಿಯಲ್ಲ.

॥ ಪರಿಪೂರ್ಣಚಂದ್ರಿಕಾದಲ್ಲಿ ಆಕಾಶಾಧಿಕರಣದ ಚಂದ್ರಿಕಾಸಾರವು ಮುಗಿಯಿತು ॥

* * * * * * *

ಶ್ರೀಕೃಷ್ಣಾರ್ಪಣಮಸ್ತು.

# ೦೦೮-ಆಕಾಶಾಧಿಕರಣ

ಭಾಗ -೧

ನ್ಯಾಯವಿವರಣ, ನ್ಯಾಯವಿವರಣಟೀಕಾ,
ಅಣುಭಾಷ್ಯ, ತತ್ವಮಂಜರೀ,
ತಂತ್ರದೀಪಿಕಾ, ನ್ಯಾಯಮುಕ್ತಾವಳಿಃ,
ಸೂತ್ರಾರ್ಥರತ್ನಾವಳಿಃ

श्रीमदानन्दतीर्थभगवत्पादाचार्यविरचितम्

# अणुभाष्यम्

## अन्तःस्थत्वाधिकरणम्

**अणुभाष्यम् –**

**..... ..... .. पूर्णानन्दोऽन्तरः खवत् ।**
**प्रणेता ज्योतिरित्याद्यैः प्रसिद्धैरन्यवस्तुषु ।**
**उच्यते विष्णुरेवैकः सर्वैः सर्वगुणत्वतः ॥**

ಮಹಾವಿಷ್ಣುವು ಪರಿಪೂರ್ಣವಾದ ಆನಂದವುಳ್ಳವನು. ಎಲ್ಲರ ಅಂತರ್ಯಾಮಿಯು. ಅವಕಾಶಪ್ರದನಾದ್ದರಿಂದ ಆಕಾಶನೂ ಸಕಲಕ್ಕೂ ಪ್ರೇರಕನೂ, ಜ್ಯೋತಿಯೂ ಆಗಿದ್ದಾನಾದ್ದರಿಂದ ಈ ಶಬ್ದಗಳಿಂದೆಲ್ಲಾ ಪ್ರತಿಪಾದ್ಯನಾಗಿದ್ದಾನೆ. ಬೇರೆ ವಸ್ತುಗಳಲ್ಲಿ ಪ್ರಸಿದ್ಧವಾದ ಎಲ್ಲಾ ಶಬ್ದಗಳಿಂದ ವಿಷ್ಣು ಒಬ್ಬನೇ ಪ್ರಸಿದ್ಧನಾಗಿದ್ದಾನೆ. ಏಕೆಂದರೆ ಎಲ್ಲಾ ಶಬ್ದಗಳು ಹೇಳುವ ಗುಣಗಳು ಅವನಲ್ಲಿ ಮಾತ್ರ ಇರುವುದರಿಂದ.

* * * *

श्री राघवेन्द्रतीर्थविरचिता

# तत्वमञ्जरी

## आकाशाधिकरणम्

नन्वथापि न पूर्णानन्दो विष्णुरिति युक्तम् । तत्प्रकरणे 'यदेष आकाश आनन्दो न स्यात्' इत्याकाशस्य निरुपपदानन्दपदेन पूर्णनन्दोक्तेः, तस्यैवाकाशस्य छांदोग्ये प्रथमेऽध्याये 'अस्य लोकस्य का गतिरिति । आकाश इति होवाच । सर्वाणि इवा इमानि भूतान्याकाशादेव समुत्पद्यन्ते' इत्यादिवाक्ये पुथिवीगतिप्रश्नविषयत्वेन

**वाय्वादिभूतकारणत्वेन च श्रुततया लोकप्रसिद्ध्या न भूताकाशत्वादित्यतः ॐ आकाशस्तल्लिंगादिति ।**

ಆನಂದಮಯಾಧಿಕರಣದಲ್ಲಿ ಪೂರ್ಣಾನಂದನು ವಿಷ್ಣು ಎಂದು ಹೇಳಿದ್ದು ಸರಿಯಲ್ಲ. ಏಕೆಂದರೆ ಆ ಪ್ರಕರಣದಲ್ಲಿ 'ಯದೇಶ ಆಕಾಶ ಆನಂದೋ ನ ಸ್ಯಾತ್' ಎಂದು ಆಕಾಶನಿಗೆ ಉಪಪದವಿಲ್ಲದ 'ಆನಂದ'ಪದದಿಂದ ಪೂರ್ಣಾನಂದವನ್ನು ಹೇಳಿದ್ದಾರೆ. ಅದೇ ಆಕಾಶಕ್ಕೆ ಛಾಂದೋಗ್ಯೋಪನಿಷತ್ತಿನ ಪ್ರಥಮಾಧ್ಯಾಯದಲ್ಲಿ 'ಅಸ್ಯ ಲೋಕಸ್ಯ ಕಾ ಗತಿರಿತಿ । ಆಕಾಶ ಇತಿ ಹೋವಾಚ । ಸರ್ವಾಣಿ ಹವಾ ಇಮಾನಿ ಭೂತಾನ್ಯಾಕಾಶಾದೇವ ಸಮುತ್ಪದ್ಯಂತೇ' ಇತ್ಯಾದಿ ವಾಕ್ಯದಲ್ಲಿ ಪೃಥಿವಿಗೆ ಯಾವುದು ಗತಿ? ಎಂಬ ಪ್ರಶ್ನೆಗೆ ಉತ್ತರರೂಪವಾಗಿ ಮತ್ತು ವಾಯು ಮುಂತಾದ ಭೂತಗಳಿಗೆ ಕಾರಣವಾಗಿ ಶ್ರುತವಾದ್ದರಿಂದ ಮತ್ತು ಲೋಕಪ್ರಸಿದ್ಧಿಯೂ ಇರುವುದರಿಂದ ಆಕಾಶವೆಂದರೆ ಭೂತಾಕಾಶ ಎಂದರ್ಥವಲ್ಲವೇ? ಎಂಬ ಪ್ರಶ್ನೆ ಬಂದರೆ ''ಓಂ ಆಕಾಶಸ್ತಲ್ಲಿಂಗಾತ್'' ಎಂಬುದಾಗಿ ಸೂತ್ರಕಾರರು ಹೇಳುತ್ತಾರೆ.

**तदर्थः खवदिति । अंतर इत्यस्ति । स चावकाशवाची सन् पूर्ववददर्श आद्यचप्रत्ययान्तः । विष्णुः खवदाकाशवदंतरोऽवकाशवान् । 'यथाऽकाशः प्राणिसंचारायनुकूलविवरत्वशब्दितावकाशवांस्तथा विष्ण्वाख्याकाशः आ काशनमवकाशः' इति सुधोक्तदिशा आकाशपदप्रवृत्तिनिमित्तभूतविवरत्वशब्दितप्राणिसंचारानुकूलावकाशवान् । 'सर्वभूतगुणैर्युक्तं देवं त्वं ज्ञातुमर्हसि' इति नवमगीताभाष्योक्तेर्निरवधिकाकाशशब्दप्रवृत्तिनिमित्तवानित्यर्थः । यद्वा खवत् अंतरो विवरः प्राणिसंचारानुकूल इत्यर्थः । उक्तमेव तात्पर्यम् ।**

ಆದರ ಸಂಗ್ರಹವೇ ''ಖವತ್''. ಇಲ್ಲಿ ''ಅಂತರಃ'' ಎಂಬುದನ್ನು ಅನುವೃತ್ತಿ ಮಾಡಿಕೊಳ್ಳಬೇಕು. ಅದನ್ನು ಅವಕಾಶ ಎಂಬರ್ಥದಲ್ಲಿ ಹಿಂದಿನಂತೆ 'ಅರ್ಶ ಆದ್ಯಚ್' ಪ್ರತ್ಯಯಾಂತವನ್ನಾಗಿ ಇಟ್ಟುಕೊಳ್ಳಬೇಕು. ಆಗ ವಿಷ್ಣುಃ ಖವತ್ = ಆಕಾಶದಂತೆ, ಅಂತರಃ = ಅವಕಾಶವುಳ್ಳವನು ಎಂದರ್ಥ. ಹೇಗೆ ಆಕಾಶವು ಪ್ರಾಣಿಗಳ ಸಂಚಾರಕ್ಕೆ ಅನುಕೂಲವಾದ ವಿವರತ್ವಶಬ್ದವಾಚ್ಯವಾದ ಅವಕಾಶವುಳ್ಳದ್ದೋ ಹಾಗೆ ವಿಷ್ಣುವೆಂಬ ಆಕಾಶವೂ ಕೂಡ ಆ ಕಾಶನಮ್(ಅವಕಾಶಃ) ಅಂದರೆ ಅವಕಾಶವುಳ್ಳದ್ದು' (ಯಥಾऽಕಾಶಃ ಪ್ರಾಣಿಸಂಚಾರಾದ್ಯನುಕೂಲವಿವರತ್ವಶಬ್ದಿತಾವಕಾಶವಾನ್ ತಥಾ ವಿಷ್ಣ್ವಾಖ್ಯಾಕಾಶಃ ಆ ಕಾಶನಮವಕಾಶಃ) ಎಂದು ಸುಧೆಯಲ್ಲಿ ಹೇಳಿದಂತೆ ಆಕಾಶಪದಪ್ರವೃತ್ತಿನಿಮಿತ್ತವಾದ ವಿವರತ್ವಶಬ್ದದಿಂದ ಕರೆಯಲ್ಪಡುವ ಪ್ರಾಣಿಸಂಚಾರಕ್ಕೆ ಅನುಕೂಲವಾದ ಅವಕಾಶವುಳ್ಳವನು ವಿಷ್ಣುವು. ''ಸರ್ವಭೂತಗುಣೈಯುಕ್ತಂ ದೇವಂ ತ್ವಂ ಜ್ಞಾತುಮರ್ಹಸಿ'' (ಸಕಲಭೂತಗಳ ಗುಣದಿಂದ ಕೂಡಿದ ದೇವನನ್ನು ನೀನು ತಿಳಿಯಲು ಯೋಗ್ಯನಾಗಿದ್ದಿ) ಎಂದು ಒಂಭತ್ತನೇ ಅಧ್ಯಾಯದ ಗೀತಾಭಾಷ್ಯದಲ್ಲಿ ಹೇಳಿದಂತೆ, ನಿರವಧಿಕವಾದ ಆಕಾಶಪದಪ್ರವೃತ್ತಿನಿಮಿತ್ತವುಳ್ಳವನು ಎಂದು ಅಭಿಪ್ರಾಯ. ಅಥವಾ ಖವತ್ = ಆಕಾಶದಂತೆ, ಅಂತರಃ =

ವಿವರತ್ವವುಳ್ಳವನು; ಪ್ರಾಣಸಂಚಾರಕ್ಕೆ ಅನುಕೂಲವುಳ್ಳವನು ಎಂದರ್ಥ. ಈ ರೀತಿಯ ಯೋಜನೆಯಲ್ಲಿಯೂ ತಾತ್ಪರ್ಯವನ್ನು ಹಿಂದಿನಂತೆ ಸ್ವೀಕರಿಸಬೇಕು.

**ಶಬ್ದಾಂತರನಿಮಿತ್ತಸ್ಯಾಪ್ಯುಪಲಕ್ಷಕಮಿದಮ್ । ತಥಾऽನ್ಯವಸ್ತುಷು ಪ್ರಸಿದ್ಧೈರಾಕಾಶಾದ್ಯಧಿಭೂತಗತೈಃ ಸರ್ವೈಃ ಶಬ್ದೈರೆಕೊ ವಿಷ್ಣುರೇವೋచ್ಯತೇ । ನ ತು ಭೂತಕಾಶಾದಿಸ್ತದರ್ಥಃ । ಅವಕಾಶದಾತೃತ್ವಾದೇರ್ವೈಷ್ಣವತ್ವೇ ತಚ್ಛಬ್ದಾನಾಂ ವೈಷ್ಣವತ್ವಾವಶ್ಯಂಭಾವಾದಿತಿ ಭಾವಃ । ಕುತಃ? ಸರ್ವಗುಣತ್ವತಃ । ತಸ್ಯ 'ಸ ಏಷ ಪರೋವರೀಯಾನುದ್ಗೀಥಃ' 'ಸ ಏಷोऽನಂತಃ' 'ಕೊ ಹ್ಯೇವಾನ್ಯಾತ್ಕಃ ಪ್ರಾಣ್ಯಾತ್' ಇತ್ಯಾದಿಸರ್ವಗುಣತ್ತ್ವಾತ್ । ಭೂತೇ ತದಯೋಗಾದಿತ್ಯರ್ಥಃ ।**

ಈ ಅಧಿಕರಣದಲ್ಲಿ ಸಮನ್ವಯ ಮಾಡಿದ ಆಕಾಶಶಬ್ದವು ಉಪಲಕ್ಷಣ. ಆದ್ದರಿಂದ 'ಅನ್ಯವಸ್ತುಷು ಪ್ರಸಿದ್ಧೈಃ' ಆಕಾಶ ಮೊದಲಾದ ಬೇರೆ ಭೂತಗಳಲ್ಲಿ ಪ್ರಸಿದ್ಧವಾದ ಎಲ್ಲಾ ಶಬ್ದಗಳಿಂದಲೂ ವಿಷ್ಣುವೊಬ್ಬನೇ ''ಉಚ್ಯತೇ'' ಹೇಳಲ್ಪಡುತ್ತಾನೆ ಹೊರತು ಭೂತಾಕಾಶ ಮೊದಲಾದವುಗಳಲ್ಲ. ಅವಕಾಶದಾತೃತ್ವ ಮೊದಲಾದ ಧರ್ಮಗಳು ವಿಷ್ಣುವಿನದ್ದು ಎಂದಾದರೆ ಅದನ್ನು ನಿಮಿತ್ತೀಕರಿಸಿ ಪ್ರವೃತ್ತವಾಗುವ ಶಬ್ದಗಳೂ ವಿಷ್ಣುವಾಚಕಗಳೇ ಆಗಬೇಕು ಎಂದಭಿಪ್ರಾಯ. ಏಕೆಂದರೆ ''ಸರ್ವಗುಣತ್ವತಃ''. ಆ ವಿಷ್ಣುವು 'ಸ ಏಷ ಪರೋವರೀಯಾನುದ್ಗೀಥಃ' 'ಸ ಏಷोऽನಂತಃ' 'ಕೋ ಹ್ಯೇವಾನ್ಯಾತ್ ಕಃ ಪ್ರಾಣ್ಯಾತ್' ಇತ್ಯಾದಿ ಶ್ರುತ್ಯುಕ್ತವಾದ ಪರೋವರೀಯಸ್ತ್ವಮುಂತಾದ ಸರ್ವಗುಣವುಳ್ಳವನಾಗಿದ್ದಾನೆ.

**ಉಚ್ಯತ ಇತಿ ಮುಖ್ಯವೃತ್ತಿರುಕ್ತಾ । ಸಾ ಕೇನ ನಿಮಿತ್ತೇನ? ಇತ್ಯತೋत्यತोऽಪಿ ಪ್ರಾಗುಕ್ತಮಾಕಾಶಪದಪ್ರವೃತ್ತಿನಿಮಿತ್ತವತ್ತ್ವಮುಪಲಕ್ಷಣಮಿತಿ ಭಾವೇನಾಹ – ಸರ್ವಗುಣತ್ವತ ಇತಿ ॥ ತಚ್ಛಬ್ದಪ್ರವೃತ್ತಿನಿಮಿತ್ತಾವಕಾಶದಾತೃತ್ವಾದಿಸರ್ವಗುಣವತ್ತ್ವಾತ್ ಅನ್ಯಗತಪ್ರವೃತ್ತಿನಿಮಿತ್ತಂ ಪ್ರತಿ ಸ್ವಾತಂತ್ರ್ಯಾಚ್ಚೇತ್ಯರ್ಥಃ ।**

''ಉಚ್ಯತೇ'' ಎಂದು ಅನುಭಾಷ್ಯದಲ್ಲಿ ಹೇಳುವುದರ ಮೂಲಕ ಮುಖ್ಯವೃತ್ತಿಯಿಂದ ಎಂದು ಹೇಳಿದೆ. ಆದಕ್ಕೇನು ಕಾರಣ? ಎಂದರೆ ಹಿಂದೆ ಹೇಳಿದ ಆಕಾಶಪದಪ್ರವೃತ್ತಿನಿಮಿತ್ತವತ್ವವು ಉಪಲಕ್ಷಣ ಎನ್ನುವ ಅಭಿಪ್ರಾಯದಿಂದ ''ಸರ್ವಗುಣತ್ವತಃ'' ಎಂದು ಹೇಳುತ್ತಾರೆ. ಆಕಾಶಪದಪ್ರವೃತ್ತಿನಿಮಿತ್ತವಾದ ಅವಕಾಶದಾತೃತ್ವ ಮೊದಲಾದ ಸಕಲಗುಣವುಳ್ಳವನಾದ್ದರಿಂದ ಮತ್ತು ಭೂತಾಕಾಶದಲ್ಲಿರುವ (ತದನ್ಯಗತ) ಪ್ರವೃತ್ತಿನಿಮಿತ್ತವನ್ನು ಕುರಿತು ಸ್ವಾತಂತ್ರ್ಯವೂ ಇರುವುದರಿಂದ (ಅವನು ಮುಖ್ಯವೃತ್ತಿಯಿಂದ ವಾಚ್ಯ) ಎಂದರ್ಥ.

**ಆಕಾಶಾದಿಶಬ್ದಾನಾಂ ವಿಷ್ಣೌ ಯೌಗಿಕತ್ವದ್ಯೋತನಾಯ ಅನ್ತರ ಇತ್ಯುಕ್ತಿಃ। ಖेऽपि ತಚ್ಛಬ್ದಪ್ರವೃತ್ತಿಹೇತುರಯಮೇವೇತಿ ದ್ಯೋತನಾಯ ಖವತ್ ಇತ್ಯುಕ್ತಿಃ ॥೮॥**

ಆಕಾಶಾದಿಶಬ್ದಗಳು ವಿಷ್ಣುವಿನಲ್ಲಿ ಯೌಗಿಕ ಎಂದು ತೋರಿಸುವುದಕ್ಕಾಗಿ ಅಣುಭಾಷ್ಯದಲ್ಲಿ ಅಂತರಃ

ಎಂದು ಹೇಳಿದ್ದಾರೆ. ಆಕಾಶದಲ್ಲಿಯೂ ಆ ಶಬ್ದಪ್ರವೃತ್ತವಾಗಲು ಈ ವಿಷ್ಣುವೇ ಕಾರಣ ಎಂದು ತಿಳಿಸಲು ''ಖವತ್'' ಎಂದು ಹೇಳಿದ್ದಾರೆ.

ಶ್ರೀರಾಘವೇಂದ್ರತೀರ್ಥಶ್ರೀಪಾದಂಗಳವರಿಂದ ವಿರಚಿತವಾದ
ತತ್ತ್ವಮಂಜರಿಯ ಕನ್ನಡಾನುವಾದದಲ್ಲಿ ಆಕಾಶಾಧಿಕರಣವು ಮುಗಿಯಿತು.

* * * * *

॥श्रीः ॥

श्रीराघवेन्द्रतीर्थविरचिता

# तन्त्रदीपिका

## आकाशाधिकरणम्

॥ ॐ आकाशस्तल्लिङ्गात् ॐ ॥ १-१-२२

अत्र नये आधिभौतिकसर्वनामसमन्वय उच्यते । प्राधान्यादन्योपलक्षकत्वेनाकाशस्योक्तिः । तत्त्विति वर्तते । ''आकाश इति होवाच'' इति छान्दोग्यस्याकाशो हरिरेव । महायोगविद्वद्रूढिभ्यां मुख्यवृत्त्या ब्रह्मपर आकाशशब्द इति यावत् । न तु रूढ्या भूताकाशम् । ''स एषः परोवरीयानुद्गीथः स एषोऽनन्तः'' इति परोवरीयस्त्वादेस्तत्राकाशे तस्य विष्णोर्लिङ्गादित्यर्थः । ब्रह्माव्यभिचारिलिङ्गस्याकाशे श्रवणादिति यावत् । लिङ्गादित्युक्तिः समुदायाशया । प्रतिनयं तत्त्वित्यवधारणार्थकतोरनुवृत्तिः ''अभिमानिव्यपदेशस्तु'' इत्यत्राभिमानिदेवतेव महायोगविद्वद्रूढिभ्यामीश एव तत्तच्छब्दमुख्यार्थ इति दर्शयितुम् । अन्यस्य मुख्यत्वे वा अस्यामुख्यत्वे वा तदयोगात् । एवं च मुख्यामुख्यन्यायेनैव श्रुतिषु तैस्तैः शब्दैः विष्णुग्रहणसिद्धवाप्यभ्यासतद्धर्मतल्लिङ्गाद्युक्तिस्तात्पर्यज्ञप्त्यर्था । मुख्यत्वं नेत्यभ्युपेत्य, अनुवादेन वेति ज्ञेयम् ॥८॥

ಈ ಅಧಿಕರಣದಲ್ಲಿ ಆಧಿಭೌತಿಕಸಕಲಶಬ್ದಗಳ ಸಮನ್ವಯನ್ನು ಹೇಳುತ್ತಾರೆ. ಮುಖ್ಯವಾದ್ದರಿಂದ ಭೂತಗಳನ್ನು ಹೇಳುವ ಪದಗಳಿಗೆ ಉಪಲಕ್ಷಕವಾದ್ದರಿಂದ ಆಕಾಶಪದವನ್ನು ಹೇಳುತ್ತಾರೆ. 'ತತ್ ತು' ಎಂಬ ಪದಗಳನ್ನು ಅನುವೃತ್ತಿ ಮಾಡಿಕೊಳ್ಳಬೇಕು.

ಆಕಾಶ ಇತಿ ಹೋವಾಚ' ಎಂದು ಛಾಂದೋಗ್ಯೋಪನಿಷತ್ತಿನಲ್ಲಿ ಹೇಳಲ್ಪಟ್ಟ ಆಕಾಶನು (ಆಕಾಶಶಬ್ದವಾಚ್ಯನು) ವಿಷ್ಣುವೇ ಆಗಿದ್ದಾನೆ. ಮಹಾಯೋಗವಿದ್ವದ್‌ರೂಢಿಗಳಿಂದ ಮುಖ್ಯವೃತ್ತಿಯಿಂದ ಆಕಾಶಶಬ್ದವು ಬ್ರಹ್ಮನನ್ನೇ ಹೇಳುತ್ತಿದೆ ಎಂದು ಅಭಿಪ್ರಾಯ ಹೊರತು ರೂಢಿಯಿಂದ ಭೂತಾಕಾಶವನ್ನಲ್ಲ. ಏಕೆಂದರೆ 'ಸ ಏಷಃ ಪರೋವರೀಯಾನುದ್ಗೀಥಃ ಸ ಏಷೋಽನಂತಃ' ಎಂದು ಪರೋವರೀಯಸ್ತ್ವ ಮುಂತಾದ ಲಿಂಗಗಳು ಆಕಾಶನಲ್ಲಿವೆ ಎಂದು ಶ್ರುತಿ ಹೇಳುತ್ತಿದೆ. ಅವು ವಿಷ್ಣುಲಿಂಗಗಳಾಗಿವೆ. ಪರೋವರೀಯಸ್ತ್ವವು ಆಕಾಶನಲ್ಲಿದ್ದು, ಆ ಪರೋವರೀಯಸ್ತ್ವವು ವಿಷ್ಣುಲಿಂಗವಾಗಿದೆ ಎಂದರ್ಥ. ಬ್ರಹ್ಮನನ್ನು ಬಿಟ್ಟು ಬೇರೆ ಕಡೆ ಇರದ ಗುಣಗಳು ಆಕಾಶನಲ್ಲಿ ಶ್ರುತವಾಗಿವೆ ಎಂದಭಿಪ್ರಾಯ. 'ಲಿಂಗಾತ್' ಎಂದು ಏಕವಚನವನ್ನು ಹೇಳಿದ್ದು ಸಮೂಹದ ಅಭಿಪ್ರಾಯದಿಂದ. ಪ್ರತಿಯೊಂದು ಅಧಿಕರಣದಲ್ಲಿಯೂ 'ತತ್ ತು' ಎಂಬಿತ್ಯಾದಿ ಅವಧಾರಣಾರ್ಥಕವಾದ ತುಶಬ್ದದ ಅನುವೃತ್ತಿಯು. 'ಅಭಿಮಾನಿವ್ಯಪದೇಶಸ್ತು' ಎಂಬ ಸೂತ್ರದಲ್ಲಿ ಹೇಳಿದಂತೆ ಅಭಿಮಾನಿದೇವತೆಯು ಆಯಾಯ ಶಬ್ದದ ಮುಖ್ಯಾರ್ಥವಾಗುವಂತೆ, ಮಹಾಯೋಗ ಮತ್ತು ವಿದ್ವದ್‌ರೂಢಿಗಳಿಂದ ಆಯಾಯ ಶಬ್ದಗಳ ಮುಖ್ಯಾರ್ಥನು ಭಗವಂತನೇ ಆಗಿದ್ದಾನೆ ಎಂದು ತೋರಿಸುವುದಕ್ಕಾಗಿ ಹೇಳಿದ್ದು. ಬೇರೆಯವರು ಮುಖ್ಯಾರ್ಥರಾಗಿದ್ದರೆ ಅಥವಾ ಬ್ರಹ್ಮನು ಅಮುಖ್ಯಾರ್ಥನಾಗಿದ್ದರೆ ಆ ರೀತಿಯ ಅವಧಾರಣೆಯು ಕೂಡುವುದಿಲ್ಲ. ಹೀಗೆ ಮುಖ್ಯಾರ್ಥ ಮತ್ತು ಅಮುಖ್ಯಾರ್ಥಗಳೆರಡರಲ್ಲಿ ''ಮುಖ್ಯಾಮುಖ್ಯಯೋರ್ಮುಖ್ಯೇ ಕಾರ್ಯಸಂಪ್ರತ್ಯಯಃ' (ಮುಖ್ಯ ಮತ್ತು ಅಮುಖ್ಯಗಳೆರಡು ಇದ್ದಾಗ ಮುಖ್ಯವಾದುದನ್ನೇ ಸ್ವೀಕರಿಸಬೇಕು) ಎಂಬ ನ್ಯಾಯದಂತೆ ಶ್ರುತಿಗಳಲ್ಲಿ ಆಯಾಯ ಶಬ್ದಗಳಿಂದ ವಿಷ್ಣುವನ್ನೇ ಸ್ವೀಕರಿಸಬೇಕು ಎಂದು ಸಿದ್ಧವಾದರೂ ಸೂತ್ರದಲ್ಲಿ ಬ್ರಹ್ಮಶಬ್ದಾಭ್ಯಾಸ, ಬ್ರಹ್ಮಲಿಂಗ ಇವುಗಳನ್ನು ಯುಕ್ತಿಯನ್ನಾಗಿ ಹೇಳಿರುವುದು ತಾತ್ಪರ್ಯಜ್ಞಾನಕ್ಕೋಸ್ಕರ. ಅಥವಾ ಬ್ರಹ್ಮನಿಗೆ ಆ ಶಬ್ದಗಳ ಮುಖ್ಯತ್ವವು ಇಲ್ಲ ಎಂಬುದನ್ನು ಅಂಗೀಕರಿಸಿ ಹೇಳಿದ್ದು ಅಥವಾ ಅನುವಾದ ಮಾಡಿದ್ದು ಎಂದು ತಿಳಿಯಬೇಕು.

॥ಇಲ್ಲಿಗೆ ತಂತ್ರದೀಪಿಕಾ ಕನ್ನಡಾನುವಾದದಲ್ಲಿ ಆಕಾಶಾಧಿಕರಣವು ಮುಗಿಯಿತು ॥

* * * * *

श्रीराघवेन्द्रयतिकृता

# न्यायमुक्तावलिः

## आकाशाधिकरणम्

॥ ॐ आकाशस्तल्लिङ्गात् ॐ ॥ ८ ॥

अधिकाशङ्कां कृत्वा पूर्वन्यायस्यातिदेशात् आतिदेशिकी वा पूर्ववैषम्येण पूर्वपक्षोत्थानात् प्रत्युदाहरणरूपा वा सङ्गतिः ॥ छान्दोग्ये आद्येऽध्याये आम्नायते (छां. १-९) 'अस्य लोकस्य का गतिरित्याकाश इति होवाच' इत्यादि तत्र शालावत्यप्रश्नोत्तरत्वेन श्रुत आकाशशब्दः किं भूताकाशवाची उत विष्णुवाची? इति सन्देहः । आकशशब्दः किं भूताकाशवाची उत विष्णुवाचीति सन्देहः ।

आकाशशब्दस्य आकाशे रूढत्वात् भूताकाशमेवेति प्राप्तम् । न च विष्णुलिङ्गविरोधः । श्रुतितो लिङ्गस्य दुर्बलत्वात् ।

न च 'लिङ्गस्य निरवाकाशत्वान्निरवकाशलिङ्गेन रूढिबाधः पूर्वत्रैव सिद्धः' इति नास्योत्थितिरिति शंक्यम् । इन्द्रादिगतैश्वर्यादेरीशप्रसादलब्धत्वेन तदधीनत्वादिति यायेन इन्द्रादिशब्दानामीशवाचित्वेऽपि अचेतने तत्प्रसादाभावेन आकाशपद-प्रवृत्तिहेतोर्विवरत्वस्य तदनधीनत्वादतद्गतत्वाच्चेत्यधिकाशङ्कयोत्थानाद्वा येन लिङ्गेन पूर्वत्र सिद्धान्तः न तेनैवात्र किंत्वन्येन । एवं च प्रागुक्तलिङ्गेन वैष्णवत्वस्य भाष्योक्तश्रुत्यादिना निश्चयेऽप्यत्र तदनिश्चयात् निरूढाकाशश्रुत्या भूताकाश एवेति पूर्वः पक्षः । एवमग्रेपि ॥

ಈ ಅಧಿಕರಣಕ್ಕೆ ಹೆಚ್ಚಿನ ಪ್ರಶ್ನೆಯನ್ನು ಮಾಡಿ ಹಿಂದಿನ ಅಧಿಕರಣದ ನ್ಯಾಯವನ್ನು ಅತಿದೇಶಮಾಡುವುದರಿಂದ ಅತಿದೇಶಕೀ ಸಂಗತಿ. ಅಥವಾ ಹಿಂದಿನ ಅಧಿಕರಣದ ಪೂರ್ವಪಕ್ಷಕ್ಕಿಂತ ಭಿನ್ನವಾಗಿ ಪೂರ್ವಪಕ್ಷ ಹೇಳುವುದರಿಂದ ಪ್ರತ್ಯುದಾಹರಣರೂಪವಾದ ಸಂಗತಿ. ಛಾಂದೋಗ್ಯೋ-ಪನಿಷತ್ತಿನ ಮೊದಲನೆಯ ಅಧ್ಯಾಯದಲ್ಲಿ ಹೀಗೆ ಹೇಳಿದೆ -- 'ಅಸ್ಯ ಲೋಕಸ್ಯ ಕಾ ಗತಿರಿತಿ । ಆಕಾಶ ಇತಿ ಹೋವಾಚ' ಎಂದು ಶಾಲಾವತ್ಯರ ಪ್ರಶ್ನೆಗೆ ಉತ್ತರರೂಪವಾಗಿ ಹೇಳಲ್ಪಟ್ಟ ಆಕಾಶಶಬ್ದವು ಭೂತಾಕಾಶವನ್ನು ಹೇಳುತ್ತದೋ ಅಥವಾ ವಿಷ್ಣುವನ್ನು ಹೇಳುತ್ತದೋ ಎಂದು ಸಂದೇಹ.

ಆಕಾಶಶಬ್ದವು ಭೂತಾಕಾಶದಲ್ಲಿ ರೂಢವಾಗಿರುವುದರಿಂದ ಭೂತಾಕಾಶವೇ ಎಂದು ಪೂರ್ವಪಕ್ಷ. ಭೂತಾಕಾಶವೆಂದು ಹೇಳಿದರೆ ಅಲ್ಲಿ ವಿಷ್ಣುಲಿಂಗದ ವಿರೋಧವು ಬರುವುದಿಲ್ಲವೇ? ಎಂದರೆ ಶ್ರುತಿಗಿಂತ ಲಿಂಗವು ದುರ್ಬಲವಾದ್ದರಿಂದ ವಿರೋಧವಿಲ್ಲ.

ಲಿಂಗವು ನಿರವಕಾಶವಾದ್ದರಿಂದ ನಿರವಕಾಶವಾದ ಲಿಂಗದಿಂದ ರೂಢಿಗೆ (ಶ್ರುತಿಗೆ) ಬಾಧವು ಪೂರ್ವಾಧಿಕರಣದಲ್ಲೇ ಸಿದ್ಧವಾಗಿರುವುದರಿಂದ ಈ ರೀತಿ ಪೂರ್ವಪಕ್ಷ ಮಾಡುವುದು ಸರಿಯಲ್ಲ ಎಂದರೆ, 'ಇಂದ್ರಾದಿದೇವತೆಗಳಲ್ಲಿರುವ ಐಶ್ವರ್ಯ ಮೊದಲಾದವುಗಳು ಭಗವಂತನ ಪ್ರಸಾದದಿಂದ ಹೊಂದಿದವುಗಳಾದ್ದರಿಂದ ತದಧೀನತ್ವನ್ಯಾಯದಿಂದ ಇಂದ್ರಾದಿಶಬ್ದಗಳು ಭಗವಂತನನ್ನು ಹೇಳುತ್ತವೆಯಾದರೂ, ಅಚೇತನವಾದುದರಲ್ಲಿ ಈಶ್ವರನ ಪ್ರಸಾದಕ್ಕೆ ಅವಕಾಶವಿಲ್ಲದ್ದರಿಂದ ಆಕಾಶಪದಪ್ರವೃತ್ತಿನಿಮಿತ್ತವಾದ ವಿವರತ್ವವು ಅವನ ಅಧೀನವಾಗಿಲ್ಲ ಮತ್ತು ಅವನಲ್ಲಿ ಇಲ್ಲ ಎಂದು ಹೆಚ್ಚಿನ ಸಂದೇಹ ಇರುವುದರಿಂದ ಮತ್ತು ಹಿಂದಿನ ಅಧಿಕರಣದಲ್ಲಿ ಯಾವ ಲಿಂಗದಿಂದ ಸಿದ್ಧಾಂತಮಾಡಲಾಗಿತ್ತೋ ಅದೇ ಲಿಂಗದಿಂದ ಇಲ್ಲಿ ಸಿದ್ಧಾಂತವಲ್ಲ ಹೊರತು ಬೇರೆಯ ಲಿಂಗದಿಂದ ಸಿದ್ಧಾಂತ. ಹಾಗಾಗಿ ಹಿಂದಿನ ಅಧಿಕರಣದಲ್ಲಿ ಹೇಳಿದ ಲಿಂಗದಿಂದ ಆ ಅಧಿಕರಣದಲ್ಲಿ ಭಾಷ್ಯೋಕ್ತಶ್ರುತ್ಯಾದಿಗಳಿಂದ ವಿಷ್ಣುತ್ವವನ್ನು ನಿಶ್ಚಯ ಮಾಡಿದ್ದರೂ ಈ ಅಧಿಕರಣದಲ್ಲಿ ಆ ಲಿಂಗದಿಂದ ವಿಷ್ಣುತ್ವನಿಶ್ಚಯವಿಲ್ಲದ್ದರಿಂದ ಲೋಕಪ್ರಸಿದ್ಧ ಆಕಾಶಶ್ರುತಿಯಿಂದ ಭೂತಾಕಾಶವೇ ಆಕಾಶಶಬ್ದವಾಚ್ಯ ಎಂದು ಹಿಂದಿನ ಅಧಿಕರಣದ ಮೇಲೆ ಪೂರ್ವಪಕ್ಷ. ಹೀಗೆಯೇ ಮುಂದಿನ ಅಧಿಕರಣಗಳಲ್ಲೂ ತಿಳಿಯಬೇಕು.

**ಸಿದ್ಧಾನ್ತಸ್ತು** ॥ 'ಸ ಏಷ ಪರೋವರೀಯಾನುದ್ಗೀಥಃ' 'ಸ ಏಷೋऽನನ್ತಃ' ಇತಿ ಪರೋವರೀಯಸ್ತ್ವೋದ್ಗೀಥತ್ವಾನನ್ತತ್ವಲಿಙ್ಗಾನಾಂ 'ಪರಸ್ಮಾದುತ್ತಮಂ ಪ್ರೋಕ್ತಮ್' ಇತಿಸ್ಮೃತ್ಯಾ 'ಪರೋ ಮಾತ್ರಯಾ' ಇತಿಶ್ರುತ್ಯಾ (ಋ.೭-೯೯-೧) 'ವಿಷ್ಣೋರ್ನುಕಮ್' ಇತಿಶ್ರುತ್ಯಾ (ಋ. ೧-೧೫೪-೧) ಚ ವಿಷ್ಣ್ವೇಕನಿಷ್ಠತ್ವಾತ್ ತದ್ಬಲೇನ ಶ್ರುತೇರ್ಲೋಕಪ್ರಸಿದ್ಧಿತ್ಯಾಗೇನ ವಿಷ್ಣುವಾಚಿತ್ವಾವಶ್ಯಮ್ಭಾವಾದಾಕಾಶೋ ವಿಷ್ಣುರೇವ ।

ನ ಚ ನಿಮಿತ್ತಾಭಾವಃ । 'ನಭೋ ದದಾತಿ ಶ್ವಸತಾಂ ಮಾರ್ಗೌ ಯನ್ನಿಯಮಾದದಃ' ಇತಿ ಸ್ಮೃತ್ಯಾ (ಭಾಗ. ೩-೩೦-೪೩) ಚೇತನಸ್ಯೇಶಾಧೀನತ್ವೇ ಸುತರಾಂ ಜಡಸ್ಯೇತಿ ಲೋಕನ್ಯಾಯಾಚ್ಚ ತದಧೀನತ್ವೇನ ವಿವರತ್ವಸ್ಯ ತತ್ಪದನಿಮಿತ್ತಸ್ಯೇಶಗತತ್ವಾಭಾವेऽಪಿ ತತ್ಪ್ರತಿ ಸ್ವಾತನ್ತ್ರ್ಯೇಣ 'ತದಧೀನತ್ವಾತ್' ಇತಿ ವಕ್ಷ್ಯಮಾಣನ್ಯಾಯೇನ 'ಸರ್ವಭೂತಗುಣೈರ್ಯುಕ್ತಮ್' ಇತ್ಯಾದಿಸ್ಮೃತ್ಯಾ ತದ್ಗತತ್ವೇನ ಚ ಮುಖ್ಯತೋ ವಿಷ್ಣುವಾಚಿತ್ವೋಪಪತ್ತೇರಿತಿ ॥ ಅತ್ರಾಯಮಾಕಾಶೋऽನ್ಯಶ್ಚೇತ್ 'ಯದೇಷ ಆಕಾಶ ಆನನ್ದೋ ನ ಸ್ಯಾತ್' ಇತ್ಯುಕ್ತೋऽಪಿ ವಿಷ್ಣೋರನ್ಯ ಇತಿ ತದಾಕ್ಷೇಪಸಮಾಧಾನೇ ಪೂರ್ವೋತ್ತರಪಕ್ಷಫಲೇ ॥೮॥

ಸಿದ್ಧಾಂತ ಹೀಗಿದೆ — ''ಸ ಏಷ ಪರೋವರೀಯಾನುದ್ಗೀಥಃ' 'ಸ ಏಷೋऽನಂತಃ' ಎಂದು ಶ್ರುತಿಯಲ್ಲಿ ಪರೋವರೀಯಸ್ತ್ವ, ಉದ್ಗೀಥತ್ವ, ಅನಂತತ್ವ ಮುಂತಾದ ಲಿಂಗಗಳು 'ಪರಸ್ಮಾದುತ್ತಮಂ ಪ್ರೋಕ್ತಮ್' ಇತ್ಯಾದಿ ಸ್ಮೃತಿಗಳಿಂದ ಮತ್ತು 'ಪರೋ ಮಾತ್ರಯಾ' ಎನ್ನುವ ಶ್ರುತಿಯಿಂದ;

'ವಿಷ್ಣೋರ್ನುಕಮ್' ಎನ್ನುವ ಶ್ರುತಿಯಿಂದ ವಿಷ್ಣುವಿನಲ್ಲಿ ಮಾತ್ರ ಇರುವವುಗಳೆಂದು ಸಿದ್ಧವಾಗುವುದರಿಂದ ಆ ಲಿಂಗಗಳ ಬಲದಿಂದ ಶ್ರುತಿಯು ಲೋಕಪ್ರಸಿದ್ಧವಾದ ಭೂತಾಕಾಶವನ್ನು ಬಿಟ್ಟು ವಿಷ್ಣುವನ್ನು ಹೇಳಲೇ ಬೇಕಾಗುತ್ತದೆಯಾದ್ದರಿಂದ ಆಕಾಶಶಬ್ದವಾಚ್ಯನು ವಿಷ್ಣುವೇ.

ಆಕಾಶಪದಪ್ರವೃತ್ತಿನಿಮಿತ್ತ ವಿವರತ್ವವಿಲ್ಲದಿರುವುದರಿಂದ ಆಕಾಶಪದವಾಚ್ಯನು ಹೇಗೆ? ಎನ್ನುವುದೂ ಸರಿಯಲ್ಲ. 'ನಭೋ ದದಾತಿ ಶ್ವಸತಾಂ ಮಾರ್ಗಂ ಯನ್ನಿಯಮಾದದಃ' ಎನ್ನುವ (ಭಾಗವತ) ಸ್ಮೃತಿಯಿಂದ 'ಚೇತನವು ಈಶಾಧೀನವಾದರೆ ಜಡವು ಖಂಡಿತಾ ಈಶ್ವರನ ಅಧೀನವೇ' ಎಂಬ ಲೋಕದ ನ್ಯಾಯದಿಂದಲೂ ಆಕಾಶವು ಅವನ ಅಧೀನವಾದ್ದರಿಂದ.

ಹಾಗೆಯೇ ಆಕಾಶಪದಪ್ರವೃತ್ತಿನಿಮಿತ್ತ ವಿವರತ್ವವು ಭಗವಂತನಲ್ಲಿ ಇಲ್ಲದಿದ್ದರೂ ಆಕಾಶದಲ್ಲಿರುವ ವಿವರತ್ವವನ್ನು ಕುರಿತು ಸ್ವಾತಂತ್ರ್ಯವಿರುವುದರಿಂದ 'ತದಧೀನತ್ವಾತ್' ಎಂದು ಮುಂದೆ ಹೇಳುವ ನ್ಯಾಯದಿಂದಲೂ,

'ಸರ್ವಭೂತಗುಣೈರ್ಯುಕ್ತಂ' ಎನ್ನುವ ಸ್ಮೃತಿಯಿಂದ ವಿವರತ್ವವು ಅವನಲ್ಲಿದೆಯಾದ್ದರಿಂದ

ಆಕಾಶಶಬ್ದವು ಮುಖ್ಯವಾಗಿ ವಿಷ್ಣುವನ್ನು ಹೇಳುತ್ತದೆ ಎನ್ನಬಹುದು.

ಈ ಅಧಿಕರಣದಲ್ಲಿಯೂ ಇಲ್ಲಿ ಹೇಳಿದ ಆಕಾಶಶಬ್ದವು ಬೇರೆಯವನೆಂದಾದರೆ 'ಯದೇಷ ಆಕಾಶೋ ಆನಂದೋ ನ ಸ್ಯಾತ್' ಎಂದು ಹೇಳಿದಂತೆ ಆಕಾಶನೂ ಕೂಡ ವಿಷ್ಣುವಿನಿಗಿಂತ ಭಿನ್ನ ಎಂದು ಆಕ್ಷೇಪ ಮತ್ತು ಅದರ ಪರಿಹಾರ ಈ ಅಧಿಕರಣದ ಫಲ.

॥ನ್ಯಾಯಮುಕ್ತಾವಳಿಯ ಕನ್ನಡಾನುವಾದದಲ್ಲಿ ಆಕಾಶಾಧಿಕರಣವು ಮುಗಿಯಿತು॥

* * * *

# सूत्रार्थरत्नावलिः

(अत्र भगवति लोकतोऽन्यत्रप्रसिद्धाकाशपदोपलक्षिताधिभौतिकाशेषशब्दसमन्वयः क्रियते)

ॐ ॥ आकाशस्तल्लिङ्गात् ॐ

ननु 'अस्य लोकस्य' इति श्रुत्युक्ताशो भूताकाश एव । आकाशशब्दस्य तत्र रूढत्वात् । न चायमाकाशो विष्णुः । आकाशशब्दस्य तत्र यौगिकत्वेन सम्प्रतिपक्षतेति वाच्यम् । योगस्य हीनबलत्वेनाप्रतिपक्षत्वात् । न चाकाशशब्दप्रवृत्तिनिमित्तस्यावकाशत्वस्य समवायेनाकाशवृत्तित्ववत् स्वातन्त्र्यलक्षणेन सम्बन्धेन हरावपि सत्वादुभयत्रापि रूढेरविशिष्टतेति न रूढ्या भूताकाशत्वनिर्णय इति वाच्यम् । आकाशस्याचेतनत्वाद् भगवदधीनत्वाभावेनाकाशत्वस्य स्वस्वामिभावसम्बन्धेन तद्वृत्तित्वाभावात् ।

एवं छन्दोगश्रुत्युक्ताकाशे भूताकाशे सति तैत्तिरीयश्रुत्युक्ताकाशेऽपि रूढिबलादेव भूताकाशः । 'सर्वाणि ह वा' तदाकाशस्य भूतकारणतयोक्तत्वात् । कार्यगतचेष्टायाः कारणाधीनतादर्शनेन 'को ह्येवान्यात्' (तै. २/७) श्रुत्युक्तजगच्चेष्टकत्वलिङ्गस्य सावकाशत्वेनाबाधकत्वात् । अत आकाशो न विष्णुरिति प्राप्ते सूत्रितम् ।

ॐ ॥ आकाशस्तल्लिङ्गात् ॥ ॐ अस्यार्थः – आकाशशब्दवाच्यो विष्णुरेव । न प्रसिद्धाकाशः । कुतः? तल्लिङ्गात् । छन्दोगश्रुत्युक्ताकाशे(छां १/७) परोवरीयस्त्वादिरूपलिङ्गस्य श्रवणादित्यर्थः ।

एवं च परोवरीयस्त्वादिनिरवकाशविष्णुलिङ्गात् आकाशशब्दस्य महायोगविद्वद्रूढिसद्भावेन तत्रैव मुख्यत्वात् । ततश्च छन्दोगश्रुत्युक्ताकाशस्य विष्णुत्वे तैत्तिरीयोक्तोऽपि जगच्चेष्टकत्वलिङ्गबलादेव विष्णुः । चेष्टकत्वस्य कर्तर्येव मुख्यत्वात् । मुख्ये सम्भवत्यमुख्यत्वग्रहणायोगात् । सर्वचेष्टकत्वस्य सर्वोत्तमत्वव्याप्तत्वेन भूताकाशे सर्वोत्तमत्वस्याभावेन सर्वचेष्टकत्वाभावात् । न चाचेतनस्यापि चेतनानुग्रहेणानन्दः सम्भवति । अप्रामाणिकत्वात् । तस्मादाकाशो विष्णुरेवेति सिद्धम् ।

॥ इति सूत्रार्थरत्नावळ्याम् आकाशाधिकरणम् ॥

॥ಇಲ್ಲಿಗೆ ಪರಿಪೂರ್ಣಚಂದ್ರಿಕಾದಲ್ಲಿ ಆಕಾಶಾಧಿಕರಣವು ಸಮಾಪ್ತವಾಯಿತು॥

॥ ಶ್ರೀಮದ್ಧೇಶಾರ್ಪಣಮಸ್ತು ॥

# ೦೦೯-ಪ್ರಾಣಾಧಿಕರಣ

ಭಾಗ-೧

ಬ್ರಹ್ಮಸೂತ್ರ, ಸೂತ್ರದೀಪಿಕಾ, ಬ್ರಹ್ಮಸೂತ್ರಭಾಷ್ಯ, ಭಾಷ್ಯದೀಪಿಕಾ,
ಸತ್ತರ್ಕದೀಪಾವಳೀ, ತತ್ತ್ವಪ್ರಕಾಶಿಕಾ,
ಭಾವದೀಪ, ವಾಕ್ಯಾರ್ಥಮಂಜರೀ

॥ ಶ್ರೀಗುರುಭ್ಯೋ ನಮಃ ॥

ದೇವದೇವೋತ್ತಮ ದೇವತಾಸಾರ್ವಭೌಮ ಅಖಿಲಾಂಡಕೋಟಬ್ರಹ್ಮಾಂಡನಾಯಕ,

ಚತುರ್ದಶಲೋಕಗುರುಗಳಾದ

ಶ್ರೀವೇದವ್ಯಾಸದೇವರಿಂದ ಅನುಗ್ರಹಿಸಲ್ಪಟ್ಟ

# ಬ್ರಹ್ಮಮೀಮಾಂಸಾಶಾಸ್ತ್ರ

## ಪ್ರಾಣಾಧಿಕರಣ

**ಸೂ - ಓಂ ॥ ಅತ ಏವ ಪ್ರಾಣಃ ॥ ಓಂ ॥ ೨೩ ॥**

ಸೂತ್ರಾರ್ಥ --

ಲಕ್ಷ್ಮೀಪತಿತ್ವವೆಂಬ ನಿರವಕಾಶಲಿಂಗವಿರುವುದರಿಂದ ತದ್ವೈ ತ್ವಂ ಪ್ರಾಣಃ ಎಂಬ ಶ್ರುತಿಯಲ್ಲಿ ಪ್ರಾಣಶಬ್ದವಾಚ್ಯನಾದವನು ವಿಷ್ಣುವೇ ಆಗಿದ್ದಾನೆ.

* * * *

ಶ್ರೀಜಗನ್ನಾಥಯತಿಗಳಿಂದ ರಚಿಸಲ್ಪಟ್ಟ

## ಸೂತ್ರದೀಪಿಕಾ

**ಸೂತ್ರದೀಪಿಕಾ** – 'ತದ್ವೈ ತ್ವಂ ಪ್ರಾಣೋ ಅಭವಃ' ಇತ್ಯುಕ್ತಃ ಪ್ರಾಣೋ ವಿಷ್ಣುರೇವ ನಾನ್ಯಃ । ಕುತಃ? ಅತ ಏವ 'ಶ್ರೀಶ್ಚ ತೇ' ಇತಿ ಶ್ರೀಪತಿತ್ವಲಿಙ್ಗಾದೇವ ಇತ್ಯರ್ಥಃ ॥

ಪ್ರಾಣಃ ='ತದ್ವೈ ತ್ವಂ ಪ್ರಾಣಃ' ಎಂಬ ತೈತ್ತಿರೀಯಶ್ರುತಿಯಲ್ಲಿ ಹೇಳಲ್ಪಟ್ಟ ಪ್ರಾಣನು, ತತ್ತು = ವಿಷ್ಣುವೇ ಆಗಿದ್ದಾನೆ. ಮುಖ್ಯಪ್ರಾಣನಲ್ಲ. ಅತ ಏವ = ಶ್ರೀಶ್ಚ ತೇ ಲಕ್ಷ್ಮೀಶ್ಚ ಪತ್ನ್ಯೌ ಎಂಬ ನಿರವಕಾಶ ಶ್ರೀಪತಿತ್ವಲಿಂಗ ಇರುವುದರಿಂದ.

* * * *

श्रीमदानन्दतीर्थभगवत्पादाचार्यविरचित-

# ब्रह्मसूत्रभाष्यम्

## १.प्राणाधिकरणम्

ಆಧ್ಯಾತ್ಮಿಕಶಬ್ದಗಳ ಸಮನ್ವಯಕ್ಕಾಗಿ ಪ್ರಾಣಾಧಿಕರಣ

**सू - ॐ ॥ अत एव प्राणः ॥ ॐ ॥ २३ ॥**

**'तद्वै त्वं प्राणो अभवः महान् भोगः प्रजापतेः ।**
**भुजः करिष्यमाणः यद् देवान् प्राणयो नव' (तै.आ.३- १४.)**

**इति महाभोगशब्देन परमानन्दत्वं प्राणस्योक्तम् ॥**

ಅರ್ಥ -- ಚತುರ್ಮುಖಬ್ರಹ್ಮದೇವರೇ ಮೊದಲಾದ ಜೀವರಿಗೆ ಭೋಗವನ್ನು ಉಂಟುಮಾಡುವವನಾದ್ದರಿಂದಲೇ ನೀನು ಮಹಾನಂದರೂಪನಾಗಿರುವಿ. ಆದ್ದರಿಂದಲೇ ಪ್ರಾಣಶಬ್ದವಾಚ್ಯನೂ ಆಗಿದ್ದಿ. ಮತ್ತು ಒಂಭತ್ತು ಇಂದ್ರಿಯಾಭಿಮಾನಿ ದೇವತೆಗಳನ್ನು ಪ್ರೇರಣೆ ಮಾಡುವವನಾದ್ದರಿಂದಲೂ ನೀನು ಪ್ರಾಣನಾಗಿದ್ದಿ ಎಂದು ಹೀಗೆ ಮಹಾಭೋಗಶಬ್ದದಿಂದ ಉತ್ಕೃಷ್ಟವಾದ ಆನಂದವನ್ನು ಪ್ರಾಣನಿಗೆ ತೈತ್ತಿರೀಯೋಪನಿಷತ್ತಿನಲ್ಲಿ ಹೇಳಲ್ಪಟ್ಟಿದೆ.

---

**भाष्यदीपिका–** अत्राधिकरणे लोकतोऽन्यत्र प्रसिद्धाध्यात्मिकाशेषशब्दोप-लक्षकप्राणशब्दस्य ब्रह्मणि समन्वयः क्रियते । सर्वत्राऽदौ सूत्रं पाठ्यम् । पश्चात् सङ्गत्यादिकं वक्तव्यमिति सूचयितुमत्र सूत्रमादावेव पठति – अत एवेति ॥

विषयवाक्योदाहरणपूर्वकं पूर्वाधिकरणेन सङ्गतिं विषयसंशयौ च सूचयति – तदिति ॥ अत्र यत्तदोरावृत्तिः । भुज्यत इति भोग आनन्दः । तेन तद्भानुपलक्ष्यते, धर्मधर्मिणोरभेदविवक्षा वा । तथा च हे विष्णो 'यत्' यस्मात् 'प्रजापतेः' हिरण्यगर्भस्य तदुपलक्षितानां सकलजीवानां 'भुजः' भोगान् योग्यानन्दान् 'करिष्यमाणः' उपलक्षणमेतत् – कुर्वाणोऽकार्षीश्च । 'तस्मात्त्वं' 'महान् भोगः' पूर्णानन्दवानभवः । स्वस्य महाभोगाभावे परस्मै तद्दानानुपपत्तेः । यस्माच्च पायुगुह्यैक्येन नवेन्द्रियाभिमानिनो देवान् त्वं 'प्राणयः' अचेष्टयः । इदमप्युपलक्षणं – चेष्टयसि चेष्टयिष्यसि च । तस्मात् त्वं प्राणः प्राणशब्द वाच्योऽभव इति सिद्धान्तरीत्या श्रुत्यर्थः । पूर्वपक्षे त्वेतत् सर्वं मुख्यप्राणे योज्यम् ।

॥ ಶ್ರೀಗುರುಭ್ಯೋ ನಮಃ ॥

ದೇವದೇವೋತ್ತಮ ದೇವತಾಸಾರ್ವಭೌಮ ಅಖಿಲಾಂಡಕೋಟಿಬ್ರಹ್ಮಾಂಡನಾಯಕ,

ಚತುರ್ದಶಲೋಕಗುರುಗಳಾದ

ಶ್ರೀವೇದವ್ಯಾಸದೇವರಿಂದ ಅನುಗ್ರಹಿಸಲ್ಪಟ್ಟ

# ಬ್ರಹ್ಮಮೀಮಾಂಸಾಶಾಸ್ತ್ರ

## ಪ್ರಾಣಾಧಿಕರಣ

**ಸೂ - ॐ ॥ अत एव प्राणः ॥ ॐ ॥ ೨೩ ॥**

ಸೂತ್ರಾರ್ಥ --

ಲಕ್ಷ್ಮೀಪತಿತ್ವವೆಂಬ ನಿರವಕಾಶಲಿಂಗವಿರುವುದರಿಂದ ತದ್ವೈ ತ್ವಂ ಪ್ರಾಣಃ ಎಂಬ ಶ್ರುತಿಯಲ್ಲಿ ಪ್ರಾಣಶಬ್ದವಾಚ್ಯನಾದವನು ವಿಷ್ಣುವೇ ಆಗಿದ್ದಾನೆ.

* * * *

ಶ್ರೀಜಗನ್ನಾಥಯತಿಗಳಿಂದ ರಚಿಸಲ್ಪಟ್ಟ

## ಸೂತ್ರದೀಪಿಕಾ

**ಸೂತ್ರದೀಪಿಕಾ –** 'तद्वै त्वं प्राणो अभवः' इत्युक्तः प्राणो विष्णुरेव नान्यः । कुतः? अत एव 'श्रीश्च ते' इति श्रीपतित्वलिङ्गादेव इत्यर्थः ॥

ಪ್ರಾಣಃ ='ತದ್ವೈ ತ್ವಂ ಪ್ರಾಣಃ' ಎಂಬ ತೈತ್ತಿರೀಯಶ್ರುತಿಯಲ್ಲಿ ಹೇಳಲ್ಪಟ್ಟ ಪ್ರಾಣನು, ತತ್ತು = ವಿಷ್ಣುವೇ ಆಗಿದ್ದಾನೆ. ಮುಖ್ಯಪ್ರಾಣನಲ್ಲ. ಅತ ಏವ = ಶ್ರೀಶ್ಚ ತೇ ಲಕ್ಷ್ಮೀಶ್ಚ ಪತ್ನ್ಯೌ ಎಂಬ ನಿರವಕಾಶ ಶ್ರೀಪತಿತ್ವಲಿಂಗ ಇರುವುದರಿಂದ.

* * * *

श्रीमदानन्दतीर्थभगवत्पादाचार्यविरचित-

# ब्रह्मसूत्रभाष्यम्

## ९.प्राणाधिकरणम्

ಆಧ್ಯಾತ್ಮಿಕಶಬ್ದಗಳ ಸಮನ್ವಯಕ್ಕಾಗಿ ಪ್ರಾಣಾಧಿಕರಣ

**सू - ॐ ॥ अत एव प्राणः ॥ ॐ ॥ २३ ॥**

**'तद्वै त्वं प्राणो अभवः महान् भोगः प्रजापतेः ।**
**भुजः करिष्यमाणः यद् देवान् प्राणयो नव' (तै.आ.३- १४.)**

**इति महाभोगशब्देन परमानन्दत्वं प्राणस्योक्तम् ॥**

ಅರ್ಥ -- ಚತುರ್ಮುಖಬ್ರಹ್ಮದೇವರೇ ಮೊದಲಾದ ಜೀವರಿಗೆ ಭೋಗವನ್ನು ಉಂಟುಮಾಡುವವನಾದ್ದರಿಂದಲೇ ನೀನು ಮಹಾನಂದರೂಪನಾಗಿರುವಿ. ಆದ್ದರಿಂದಲೇ ಪ್ರಾಣಶಬ್ದವಾಚ್ಯನೂ ಆಗಿದ್ದಿ. ಮತ್ತು ಒಂಭತ್ತು ಇಂದ್ರಿಯಾಭಿಮಾನಿ ದೇವತೆಗಳನ್ನು ಪ್ರೇರಣೆ ಮಾಡುವವನಾದ್ದರಿಂದಲೂ ನೀನು ಪ್ರಾಣನಾಗಿದ್ದಿ ಎಂದು ಹೀಗೆ ಮಹಾಭೋಗಶಬ್ದದಿಂದ ಉತ್ಕೃಷ್ಟವಾದ ಆನಂದವನ್ನು ಪ್ರಾಣನಿಗೆ ತೈತ್ತಿರೀಯೋಪನಿಷತ್ತಿನಲ್ಲಿ ಹೇಳಲ್ಪಟ್ಟಿದೆ.

---

**भाष्यदीपिका–** अत्राधिकरणे लोकतोऽन्यत्र प्रसिद्धाध्यात्मिकाशेषशब्दोप-लक्षकप्राणशब्दस्य ब्रह्मणि समन्वयः क्रियते । सर्वत्राऽदौ सूत्रं पाठ्यम् । पश्चात् सङ्गत्यादिकं वक्तव्यमिति सूचयितुमत्र सूत्रमादावेव पठति – अत एवेति ॥

विषयवाक्योदाहरणपूर्वकं पूर्वाधिकरणेन सङ्गतिं विषयसंशयौ च सूचयति – तदिति ॥ अत्र यत्तदोरावृत्तिः । भुज्यत इति भोग आनन्दः । तेन तद्वानुपलक्ष्यते, धर्मधर्मिणोरभेदविवक्षा वा । तथा च हे विष्णो 'यत्' यस्मात् 'प्रजापतेः' हिरण्यगर्भस्य तदुपलक्षितानां सकलजीवानां 'भुजः' भोगान् योग्यानन्दान् 'करिष्यमाणः' उपलक्षणमेतत् – कुर्वाणोऽकार्षीश्च । 'तस्मात्त्वं' 'महान् भोगः' पूर्णानन्दवानभवः । स्वस्य महाभोगाभावे परस्मै तद्दानानुपपत्तेः । यस्माच्च पायुगुह्यैक्येन नवेन्द्रियाभिमानिनो देवान् त्वं 'प्राणयः' अचेष्टयः । इदमप्युपलक्षणं – चेष्टयसि चेष्टयिष्यसि च । तस्मात् त्वं प्राणः प्राणशब्द वाच्योऽभव इति सिद्धान्तरीत्या श्रुत्यर्थः । पूर्वपक्षे त्वेतत् सर्वं मुख्यप्राणे योज्यम् ।

ಪ್ರತಿಪದಾರ್ಥ -- ಈ ಅಧಿಕರಣದಲ್ಲಿ ಲೋಕತಃ ಅನ್ಯತ್ರಪ್ರಸಿದ್ಧವಾದ ಎಲ್ಲಾ ಆಧ್ಯಾತ್ಮಿಕಶಬ್ದಗಳನ್ನು ಬ್ರಹ್ಮನಲ್ಲಿ ಸಮನ್ವಯ ಮಾಡಲು ಉಪಲಕ್ಷಣವಾಗಿ ಪ್ರಾಣಶಬ್ದದ ಸಮನ್ವಯವನ್ನು ಸೂತ್ರಕಾರರು ಮಾಡುತ್ತಿದ್ದಾರೆ.

ಪ್ರಜಾಪತೇಃ = ಚತುರ್ಮುಖರೇ ಮೊದಲಾದ ಸಕಲಜೀವರಿಗೆ, ಭುಜಃ = ಭೋಗವನ್ನು, ಕರಿಷ್ಯಮಾಣಃ = ಉಂಟುಮಾಡುವವನು, ತದ್ದ್ವೈ = ಆ ಕಾರಣ- ದಿಂದಲೇ, ತ್ವಂ = ನೀನು, ಭೋಗಃ = ಮಹಾನಂದವುಳ್ಳ, ಪ್ರಾಣಃ = ಪ್ರಾಣಶಬ್ದ- ವಾಚ್ಯನು, ಅಭವಃ = ಆಗಿರುವಿ. ಮತ್ತು ನವ = ಒಂಭತ್ತು ಇಂದ್ರಿಯಗಳಿಗೆ, ದೇವಾನ್ = ಅಭಿಮಾನಿಗಳಾದ ದೇವತೆಗಳನ್ನು, ಪ್ರಾಣಯಃ= ಪ್ರೇರಣೆಮಾಡುತ್ತಿ. ಹೀಗೆ, ಮಹಾಭೋಗಶಬ್ದೇನ = ಮಹಾಭೋಗ ಎಂಬ ಶಬ್ದದಿಂದ, ಪರಮಾನಂದತ್ವಂ = ಉತ್ಕೃಷ್ಟವಾದ ಆನಂದವನ್ನು, ಪ್ರಾಣಸ್ಯ = ಪ್ರಾಣನಿಗೆ, ಉಕ್ತಮ್ = ತೈತ್ತಿರೀಯೋಪನಿಷತ್ತಿನಲ್ಲಿ ಹೇಳಲ್ಪಟ್ಟದೆ.

**तत्वप्रकाशिका – अन्यत्राप्येवमिति ज्ञापनार्थमत्र सूत्रमादावेव पठति – अत एवेति ॥ अत्र लोकतोऽन्यत्रप्रसिद्धप्राणनाम्नो विष्णौ समन्वयसमर्थनादस्ति शास्त्रादिसङ्गतिः । विषयवाक्योदाहरणपूर्वकं सङ्गतिं विषयसंशयौ च सूचयति तदिति ॥**

**यदुदितमानन्दमयत्वं विष्णोस्तत्कस्यचित्प्राणस्य 'तद्वै त्वम्' इति वाक्ये महाभोगशब्देन प्रतीयते । यस्माद् ब्रह्मणो भोगान् करिष्यमाणः कुर्वाणोऽकार्षीश्च तस्मात् त्वं महाभोगोऽभवः । स्वस्य महाभोगाभावे परस्मै तद्दानानुपपत्तेः । यस्मात्पायुगुह्यैक्येन नवेन्द्रियाभिमानिनो देवानचेष्टयश्चेष्टयसि च चेष्टयिष्यसि च तस्मात्त्वं प्राणश्चाभव इति ।**

**तस्य च प्राणस्य विष्णोरन्यत्वेऽन्यस्यैवाऽऽनन्दमयत्वं स्यादित्ययं निर्णेयो भवति । स प्राणोऽत्र विषयः । किं विष्णुरुत वायुरिति सन्देहः । महाभोगत्वं प्राणशब्दस्यान्यत्र प्रसिद्धिश्च सन्देहबीजमिति भावः ।**

---

इतीति ॥ 'इति' तैत्तिरीयशाखागतवाक्ये 'परमानन्दत्वं' पूर्णानन्दत्वमुक्तमित्यावर्तते । तथा च यदानन्दमयत्वं विष्णोरुक्तं तत् परमानन्दत्वपर्यवसितं 'तद्वै त्वम्' इति वाक्ये 'महाभोगशब्देन' 'महान् भोगः' इति पदद्वयात्मकवाक्येन च प्राणस्योक्तमिति योजना ।

अनेन प्राणाख्यो विषयः । तस्य विष्वन्यत्वाक्षेपमुखेनाऽनन्दमयत्वस्याप्यन्यनिष्ठत्वाक्षेपादानन्दमयाधिकरणेनास्याऽक्षेपिकी सङ्गतिः । सः वायुरुत विष्णुरिति संशयश्च सूचितो भवति ।

ಅನುವಾದ -- ಈ ಅಧಿಕರಣದಲ್ಲಿ ಭಾಷ್ಯಕಾರರು ಮೊದಲು ಸೂತ್ರವನ್ನೇ ಪಠಿಸಿದ್ದಾರೆ. ಏಕೆಂದರೆ ಉಳಿದ ಅಧಿಕರಣಗಳಲ್ಲಿಯೂ ಸಹ ಮೊದಲು ಸೂತ್ರವನ್ನೇ ಹೇಳಬೇಕೆಂದು ತಿಳಿಸುವುದಕ್ಕಾಗಿ. ವಿಷಯ ಸಂಶಯ ಮೊದಲಾದವುಗಳನ್ನು ಸೂತ್ರವನ್ನು ಹೇಳಿದ ಆನಂತರ ತೋರಿಸಬೇಕು.

ಈ ಅಧಿಕರಣದಲ್ಲಿ ಲೋಕವ್ಯವಹಾರದಿಂದ ಅನ್ಯತ್ರಪ್ರಸಿದ್ಧವಾದ ಪ್ರಾಣ ಎಂಬ ನಾಮವನ್ನು ವಿಷ್ಣುವಿನಲ್ಲಿ ಸಮನ್ವಯ ಮಾಡುತ್ತಿದ್ದಾರೆ. ಇದರಿಂದ ಪ್ರಾಣಾಧಿಕರಣಕ್ಕೆ ಶಾಸ್ತ್ರಸಂಗತಿ, ಅಧ್ಯಾಯಸಂಗತಿ, ಪಾದಸಂಗತಿಗಳನ್ನು ತೋರಿಸಿದಂತಾಗುತ್ತದೆ. ವಿಷಯವಾಕ್ಯವನ್ನು ಉದಾಹರಿಸುವ ಮೂಲಕ ವಿಷಯ, ಸಂಗತಿ ಮತ್ತು ಸಂಶಯಗಳನ್ನು ತತ್ ಇತ್ಯಾದಿಯಾಗಿ ಸೂಚಿಸುತ್ತಿದ್ದಾರೆ.

ಹಿಂದಿನ ಆನಂದಮಯಾಧಿಕರಣದಲ್ಲಿ ವಿಷ್ಣುವಿಗೆ ಆನಂದಮಯತ್ವವನ್ನು ಹೇಳಲಾಯಿತು. ಆದರೆ 'ತದ್ವೈ ತ್ವಂ' ಎಂಬ ತೈತ್ತಿರೀಯಶ್ರುತಿಯು ಮಹಾಭೋಗಶಬ್ದದಿಂದ ಆನಂದಮಯತ್ವವನ್ನು ಯಾರೋ ಒಬ್ಬ ಪ್ರಾಣನಲ್ಲಿ ಹೇಳುತ್ತಿದೆ. ''ಯಾವ ಕಾರಣದಿಂದ ಚತುರ್ಮುಖಬ್ರಹ್ಮನಿಗೆ ಸುಖಭೋಗವನ್ನು ಹಿಂದೆ ಕೊಟ್ಟಿದ್ದಿ; ಈಗ ಕೊಡುತ್ತಿರುವಿ; ಮುಂದೆಯೂ ಕೊಡುವವನಾಗಿದ್ದಿ; ಆ ಕಾರಣದಿಂದ ನೀನು ಪರಮಾನಂದದಿಂದ ಕೂಡಿರುವಿ (ಮಹಾಭೋಗನಾಗಿರುವಿ). ಏಕೆಂದರೆ ಸ್ವತಃ ನಿನಗೆ ಪರಮಾನಂದವು ಇಲ್ಲದಿದ್ದರೆ ಇನ್ನೊಬ್ಬರಿಗೆ ಪರಮಾನಂದವನ್ನು ಕೊಡಲು ಸಾಧ್ಯವಿಲ್ಲ.

ಪಾಯು ಇಂದ್ರಿಯ ಮತ್ತು ಗುಹ್ಯೇಂದ್ರಿಯ (ಜನನೇಂದ್ರಿಯ ಮತ್ತು ಉತ್ಸರ್ಜನೇಂದ್ರಿಯ) ಇವೆರಡಕ್ಕೆ ಏಕ್ಯವನ್ನು ವಿವಕ್ಷಿಸಿ ಉಪನಿಷತ್ತು ಒಂಭತ್ತು ಇಂದ್ರಿಯಗಳೆಂದು ಹೇಳುತ್ತಿದೆ. ಈ ಒಂಭತ್ತು ಇಂದ್ರಿಯಗಳ ಅಭಿಮಾನಿಗಳನ್ನು ಯಾವ ಕಾರಣದಿಂದ ಹಿಂದೆ ಪ್ರೇರಣೆ ಮಾಡಿದ್ದಿ, ಈಗ ಮಾಡುತ್ತಿದ್ದಿ, ಮುಂದೆಯೂ ಮಾಡುವವನಾಗಿದ್ದೀಯೋ ಆ ಕಾರಣದಿಂದ ನೀನು 'ಪ್ರಾಣ' ಎಂದು ಪ್ರಸಿದ್ಧನಾಗಿರುವಿ ಎಂದು 'ತದ್ವೈ ತ್ವಂ' ಎಂಬ ಶ್ರುತಿಯ ಅರ್ಥ.

ವಿಷಯ ಮತ್ತು ಸಂಗತಿ -- ಈ ಶ್ರುತಿಯ ವಾಕ್ಯದಲ್ಲಿ ಪ್ರತಿಪಾದ್ಯನಾದ ಪ್ರಾಣನು ವಿಷ್ಣುವಿಗಿಂತ ಭಿನ್ನನಾದರೆ ಆವಾಗ ವಿಷ್ಣುವು ಆನಂದಮಯನಾಗುವುದಿಲ್ಲ. ವಿಷ್ಣುವಿಗಿಂತ ಭಿನ್ನನಾದ ಪ್ರಾಣನೇ ಆನಂದಮಯನಾಗಬೇಕಾದೀತು? ಈ ಆಕ್ಷೇಪವನ್ನು ಪರಿಹರಿಸಬೇಕೆಂದರೆ, ಪ್ರಾಣನು ಯಾರು? ಎಂಬುದನ್ನು ನಿಶ್ಚಯಿಸಬೇಕು. ಆದ್ದರಿಂದ ಪ್ರಾಣನೇ ಈ ಅಧಿಕರಣಕ್ಕೆ ವಿಷಯ. ಪ್ರಾಣನು ವಿಷ್ಣುವೇ? ಅಥವಾ ವಾಯುವೇ? ಎಂದು ಸಂದೇಹ. ಮಹಾಭೋಗತ್ವ ಮತ್ತು ಅನ್ಯತ್ರಪ್ರಸಿದ್ಧವಾದ ಪ್ರಾಣಶಬ್ದ ಇವೆರಡೂ ಸಂದೇಹಕ್ಕೆ ಕಾರಣ.

ಭಾವದೀಪಃ – **अन्यत्राप्येवमिति ॥** व्याख्येयसूत्रमेव सर्वत्राप्यादौ पाठ्यं पश्चाद् विषयादिकं वाच्यमिति सूचयितुमित्यर्थः । क्वचित् सङ्गत्यादिपूर्वकम्, तत्पाठस्तु

श्रोतृबुद्धिसौकर्याद्याशयेन इति भावः । एतेन सङ्गतिपूर्वकत्वाभावान्नेदमधिकरणान्तरमिति चोद्यम् प्रत्युक्तम् । एतेन छन्दःसूत्राद्यपि अधिकरणान्तरमेव न तु प्राचां रीत्या ज्योतिरधिकरणशेष इति सूचितम् । **सङ्गतिमिति** ॥ आनन्दमयाधिकरणतद्विषयवाक्याभ्याम् एतदधिकरणैतद्विषयवाक्ययोरित्यर्थः ।

सङ्गतिपरत्वेन तावद् भाष्यं व्याकुर्वन् 'उक्तम्' इत्यन्तस्यार्थोक्त्या तां व्यनक्ति – **यदुदितमिति** ॥ भाष्ये यत्तदोः शेषः । 'परमानन्दत्वम्' इत्यस्यार्थः – **आनन्दमयत्वमिति** ॥ 'यत् परमानन्दत्वमुक्तं पूर्वत्र तत् महाभोगशब्देन प्राणस्य प्रतीयत इति' शेषोक्त्या योजना सूचिता । 'प्रतीयते' इत्येतत् श्रुत्यर्थोक्त्या व्यनक्ति – **यस्मादिति** ॥ श्रुतौ यत्तदोरावृत्तिरिति भावः । भुजः भोगान् । करिष्यमाणः इत्यादिरुपलक्षणमिति मत्वाऽऽह – **कुर्वाण इति** ॥ 'यद् देवान् प्राणयो नव' इत्यस्यार्थः – **यस्मादित्यादि** ॥ 'पूर्वभागार्थोक्त्यैव पूर्तौ शेषोक्तिरुत्तरत्रोपयोक्ष्यते' इति भावः । **ऐक्येन** ऐक्यविवक्षया । अनेन प्राणन्ति जीवन्ति अनेनेति प्राणः इति नवदेवोपलक्षितसर्वजीवनहेतुत्वरूपः प्राणपदयोगः पूर्वपक्षाद्युपयोगाय दर्शितः । 'इति'शब्दस्य 'इति प्रतीयते' इति पूर्वेणान्वयः ।

ಓಂ अत एव प्राणः ಓಂ ॥ (*)ಅನ್ಯತ್ರಾಪ್ಯೇವಮಿತಿ ವ್ಯಾಖ್ಯಾನಮಾಡುವ ಸೂತ್ರವನ್ನೇ ಎಲ್ಲಾ ಕಡೆಯೂ ಮೊದಲೇ ಹೇಳಿಕೊಳ್ಳಬೇಕು. ನಂತರ ವಿಷಯಾದಿಗಳನ್ನು ಹೇಳಬೇಕು ಈ ರೀತಿ ಸೂಚನೆಯನ್ನು ನೀಡುವುದಕ್ಕಾಗಿಯೇ ಮೊದಲು ಸೂತ್ರವನ್ನು ಹೇಳಿದ್ದಾರೆ ಎಂದು ಅರ್ಥ. ಕೆಲವು ಕಡೆ ಸಂಗತ್ಯಾದಿಗಳನ್ನು ಹೇಳುವ ಮೂಲಕ ಸೂತ್ರವನ್ನು ನಂತರ ಹೇಳಿರುವುದು ಶ್ರೋತೃಗಳ ಬುದ್ಧಿಸೌಕರ್ಯವನ್ನು ಉಂಟುಮಾಡುವುದಕ್ಕಾಗಿ ಎಂಬ ಅಭಿಪ್ರಾಯವನ್ನು ಸೂಚಿಸಿದ್ದಾರೆ. ಹೀಗೆ ವ್ಯಾಖ್ಯಾನ ಮಾಡಿರುವುದರಿಂದ ಸಂಗತಿಯನ್ನು ಮೊದಲು ಹೇಳದಿರುವುದರಿಂದ ಇದು ಬೇರೆ ಅಧಿಕರಣವಲ್ಲ ಎಂಬ ಚೋದ್ಯವನ್ನು ನಿರಾಕರಿಸಿದಂತಾಗುತ್ತದೆ. ಇದರಿಂದ ಛಂದಃಸೂತ್ರಾದಿಗಳೂ ಕೂಡ ಇನ್ನೊಂದು ಅಧಿಕರಣವೇ ಹೊರತು ಪ್ರಾಚೀನರ ಕ್ರಮದಂತೆ ಜ್ಯೋತಿರಧಿಕರಣದ ಶೇಷವಲ್ಲ ಎಂದು ಸೂಚಿಸಿದಂತೆ ಆಗುತ್ತದೆ.

''ಸಂಗತಿಮ್'' ಎಂಬ ಭಾಗಕ್ಕೆ 'ಆನಂದಮಯಾಧಿಕರಣ ಮತ್ತು ಅದರ ವಿಷಯವಾಕ್ಯಗಳಿಂದ ಈ ಅಧಿಕರಣ ಮತ್ತು ಇಲ್ಲಿನ ವಿಷಯವಾಕ್ಯಗಳಿಗೆ ಸಂಗತಿಯನ್ನು' ಎಂದರ್ಥ. ಇಲ್ಲಿಯವರೆಗೆ

(*) अन्यत्राप्येवं ज्ञापनार्थमिति । न केवलम् आनन्दमयाधिकरणे प्रथमं सूत्रोदाहरणं सङ्गत्यादि जिज्ञासाजननार्थं किन्त्वन्यत्रापि प्रथममुदाहरणं तत्प्रदर्शनार्थमेवेति ज्ञापयितुमित्यर्थः । – **तत्त्वसुबोधिनी**

ಸಂಗತಿಪರವಾಗಿ ಭಾಷ್ಯವನ್ನು ವ್ಯಾಖ್ಯಾನ ಮಾಡುತ್ತಾ ''ಉಕ್ತಮ್'' ಎಂಬಲ್ಲಿಯ ವರೆಗೆ ಅರ್ಥವನ್ನು ವಿವರಿಸುತ್ತಾ, ''ಯದುದಿತಂ'' ಇತ್ಯಾದಿವಾಕ್ಯಗಳಿಂದ ಅದನ್ನು ಸ್ಪಷ್ಟಪಡಿಸುತ್ತಿದ್ದಾರೆ. ಭಾಷ್ಯದಲ್ಲಿ ಯತ್ ಮತ್ತು ತತ್ ಎಂಬ ಪದಗಳನ್ನು ಶೇಷಪೂರಣೆ ಮಾಡಿಕೊಳ್ಳಬೇಕು.

'ಪರಮಾನಂದತ್ವಮ್' ಎಂಬ ಪದದ ಅರ್ಥವನ್ನು 'ಆನಂದಮಯತ್ವಮ್' ಎಂಬುದಾಗಿ ವ್ಯಾಖ್ಯಾನ ಮಾಡಿದ್ದಾರೆ. ಹಿಂದೆ ಬ್ರಹ್ಮನಿಗೆ ಯಾವ ಪರಮಾನಂದತ್ವವನ್ನು ಹೇಳಿದ್ದಾರೋ ಅದನ್ನೇ ಮಹಾಭೋಗಶಬ್ದದಿಂದ ಹೇಳುವ ಮೂಲಕ ಆ ಪರಮಾನಂದತ್ವವು ಪ್ರಾಣನಲ್ಲಿದೆ ಎಂದು ಕಾಣುತ್ತದೆ ಎಂದು ಶೇಷಪೂರಣೆ ಮಾಡಿರುವುದರಿಂದ ವಾಕ್ಯಯೋಜನೆ ಮಾಡುವ ಕ್ರಮವನ್ನು ಸೂಚಿಸಿದ್ದಾರೆ. ''ಯಸ್ಮಾತ್'' ಇತ್ಯಾದಿ ಭಾಗದಿಂದ 'ಪ್ರತೀಯತೇ' ಎಂಬ ಅಂಶವನ್ನು ಶ್ರುತಿಯ ಅರ್ಥವನ್ನು ಹೇಳುವ ಮೂಲಕ ಸ್ಪಷ್ಟಪಡಿಸುತ್ತಿದ್ದಾರೆ. ಶ್ರುತಿಯಲ್ಲಿ 'ಯತ್ ತತ್'ಪದಗಳನ್ನು ಆವೃತ್ತಿಮಾಡಿಕೊಳ್ಳಬೇಕು ಎಂದಭಿಪ್ರಾಯ. ''ಭುಜಃ'' ಎಂಬ ಪದಕ್ಕೆ ಭೋಗಗಳನ್ನು ಎಂಬುದಾಗಿ ಅರ್ಥ. 'ಕರಿಷ್ಯಮಾಣಃ' ಎಂಬಿತ್ಯಾದಿ ಪದಗಳು ಭೂತ ಮತ್ತು ವರ್ತಮಾನಕಾಲಕ್ಕೆ ಉಪಲಕ್ಷಣವಾಗಿವೆ ಎಂಬ ಅಭಿಪ್ರಾಯದಿಂದ ''ಕುರ್ವಾಣಃ'' ಎಂದು ಹೇಳಿದ್ದಾರೆ. 'ಯದ್ದೇವಾನ್ ಪ್ರಾಣಯೋ ನವ' ಎಂಬ ಶ್ರುತಿಯ ಅರ್ಥವನ್ನು ''ಯಸ್ಮಾತ್'' ಇತ್ಯಾದಿಭಾಗದಿಂದ ವಿವರಿಸಿದ್ದಾರೆ. ಈ ಶ್ರುತಿಯಲ್ಲಿ ಪೂರ್ವಭಾಗದ ಅರ್ಥವನ್ನು ವಿವರಿಸುವುದರಿಂದಲೇ ಇಲ್ಲಿಗೆ ಬೇಕಾದ ಅಂಶವು ಪೂರ್ಣವಾಗುವುದಿದ್ದರೂ ಉಳಿದ ಭಾಗವನ್ನೂ ಹೇಳಿರುವುದು ಮುಂದಿನ ಸೂತ್ರಗಳಲ್ಲಿ ಈ ಶ್ರುತಿಯ ಉಪಯೋಗ ಇದೆ ಎಂಬ ಅಭಿಪ್ರಾಯದಿಂದ ಎಂದು ತಿಳಿಯಬೇಕು. ''ಐಕ್ಯೇನ'' ಎಂಬ ಪದಕ್ಕೆ ಐಕ್ಯವಿವಕ್ಷೆಯಿಂದ ಎಂದರ್ಥ.

ಹೀಗೆ ವ್ಯಾಖ್ಯಾನಮಾಡಿರುವುದರಿಂದ 'ಪ್ರಾಣಂತಿ ಜೀವಂತಿ ಅನೇನ ಇತಿ ಪ್ರಾಣಃ' ಎಂಬ ವಿಗ್ರಹವಾಕ್ಯಕ್ಕೆ ಅನುಸಾರಿಯಾಗಿ ಒಂಭತ್ತುಮಂದಿ ಇಂದ್ರಿಯಾಭಿಮಾನಿದೇವತೆಗಳಿಂದ ಉಪಲಕ್ಷಿತರಾದ ಎಲ್ಲಾ ಜೀವಿಗಳ ಜೀವನಕ್ಕೆ ಕಾರಣರೂಪವಾದ ಪ್ರಾಣಪದದ ಸಂಬಂಧವು ಪೂರ್ವಪಕ್ಷಾದಿಗಳಲ್ಲಿ ಉಪಯೋಗವಾಗುವುದಕ್ಕೋಸ್ಕರ ತೋರಿಸಿದ್ದಾರೆ ಎಂದು ತಿಳಿಯಬೇಕು. ''ಇತಿ''ಶಬ್ದಕ್ಕೆ 'ಇತಿ ಪ್ರತೀಯತೇ' ಎಂಬುದಾಗಿ ಹಿಂದಿನ ವಾಕ್ಯದೊಂದಿಗೆ ಅನ್ವಯವನ್ನು ಹೇಳಬೇಕು.

**ವಾಕ್ಯಾರ್ಥಮಞ್ಜರೀ – ಅನ್ಯತ್ರಾಪ್ಯೇವಮೇವೇತಿ ॥ ಅತ್ರಾದಾವಿತಿ ॥** ವ್ಯಾಖ್ಯೇಯ-ಸೂತ್ರಮೇವಾದೌ ಪಾಠ್ಯಮ್ ಅನ್ಯಥಾ ಸಙ್ಗತ್ಯಾಕಾङ्क्षಾನುದಯಾತ್ । ಪಶ್ಚಾದ್ ವಿಷಯಾದಿಕಂ ವಾಚ್ಯಮಿತಿ ಸೂಚಯಿತುಮಿತ್ಯರ್ಥಃ । ಕ್ವಚಿತ್ ಸಙ್ಗತ್ಯಾದಿಪೂರ್ವಕತತ್ಪಾಠಸ್ತು ಶ್ರೋತೃಬುದ್ಧಿ-ಸೌಕರ್ಯಾಯೇತಿ ಭಾವಃ ॥

ॐ ಅತ ಏವ ಪ್ರಾಣಃ ॐ ॥ 'ತದ್ವೈ ತ್ವಂ ಪ್ರಾಣಃ' ಇತ್ಯುಕ್ತಪ್ರಾಣೋ ವಿಷ್ಣುರೇವ । 'ಶ್ರೀಶ್ಚ ತೇ ಲಕ್ಷ್ಮೀಶ್ಚಪತ್ನ್ಯೌ' ಇತಿ ನಿರವಕಾಶಶ್ರೀಲಕ್ಷ್ಮೀಪತಿತ್ವಲಿಙ್ಗಾದೇವೇತ್ಯರ್ಥಃ । ಲಿಙ್ಗ-ನಿರವಕಾಶತ್ವಮೇವಕಾರಾರ್ಥಃ । ಯತ್ತಚ್ಛಬ್ದಯೋರಾವೃತ್ತಿಂ ಮತ್ವಾ ಶ್ರುತ್ಯರ್ಥಮಾಹ – **ಯಸ್ಮಾದಿತಿ ॥** ಅಭವ ಇತ್ಯತೀತಾರ್ಥಕಲङ्ಲಟನಾಯ ಕರಿಷ್ಯಮಾಣ ಇತ್ಯೇತದುಪಲಕ್ಷಣಮಿತ್ಯಾಶಯೇನಾಹ –

**ಕುರ್ವಾಣೋऽಕಾರ್ಷೀಶ್ಚೇತಿ ॥** ಹೇತುಹೇತುಮದ್ಭಾವಂ ವ್ಯನಕ್ತಿ – **ಸ್ವಸ್ಯೇತಿ ॥** ಇಂದ್ರಿಯಾಭಿಮಾನಿ-ದೇವಾನಾಂ ದಶತ್ವಾ- ದಾಹ – **ಪಾಯುಗುಹ್ಯೈಕ್ಯೇನೇತಿ ॥** ಐಕ್ಯವಿವಕ್ಷಯೇತ್ಯರ್ಥಃ ।

## ಮುಖ್ಯಪ್ರಾಣನೇ ಪ್ರಾಣನೆಂದು ಪೂರ್ವಪಕ್ಷ

**ಭಾಷ್ಯಮ್ – ಸ ಚ ಪ್ರಾಣಃ ಪ್ರಸಿದ್ಧೇರ್ವಾಯುರಿತ್ಯಾಪತತಿ ।**

ಆ ಪ್ರಾಣನು ವಾಯುವೆಂದು ಪ್ರಸಿದ್ಧನಾದ್ದರಿಂದ ಆನಂದಮಯನೂ ಸಹ ಆವನೇ ಆಗಬೇಕು. ಮತ್ತು ಬ್ರಹ್ಮನೂ ಜಿಜ್ಞಾಸ್ಯನೂ ಆವನೇ ಆಗುತ್ತಾನೆ ಹೊರತು ವಿಷ್ಣುವಲ್ಲ.

ಪ್ರತಿಪದಾರ್ಥ -- ಸಿದ್ಧಾಂತ ಹೀಗಿದೆ -- ನ ಚೈವಮ್ = ಇದು ತಪ್ಪು. ಯತಃ = ಏಕೆಂದರೆ, ವಿಷ್ಣುರೇವ = ಭಗವಂತನೇ, ಪ್ರಾಣಃ = ಪ್ರಾಣಶಬ್ದವಾಚ್ಯನು. ಅತ ಏವ = ಆದ್ದರಿಂದಲೇ, ಶ್ರೀಶ್ಚ ತೇ ಲಕ್ಷ್ಮೀಶ್ಚ = ಶ್ರೀದೇವಿ ಮತ್ತು ಲಕ್ಷ್ಮೀದೇವಿಯರು, ಪತ್ನ್ಯೌ = ಪತ್ನಿಯರು, ಅಹೋರಾತ್ರೇ = ಹಗಲು ಇರುಳು, ಪಾರ್ಶ್ವೇ = ಎಡಬಲಭಾಗಗಳಲ್ಲಿ ಸೇವಕರಾಗಿರುತ್ತಾರೆ. ಇತ್ಯಾದಿ = ಇವೇ ಮೊದಲಾದ, ತಲ್ಲಿಂಗಾದೇವ = ವಿಷ್ಣುವಿನ ಲಿಂಗಗಳಿರುವುದರಿಂದಲೇ. ವಿಷ್ಣುವು ಪ್ರಾಣಶಬ್ದವಾಚ್ಯನಾಗುತ್ತಾನೆ.

**ತತ್ವಪ್ರಕಾಶಿಕಾ – ತತ್ರ ಸಯುಕ್ತಿಕಂ ಪೂರ್ವಪಕ್ಷಯತಿ ॥ ಸ ಚೇತಿ ॥ ಸ ಪ್ರಾಣೋ ವಾಯುರ್ಭವೇತ್ । ಪ್ರಾಣಶಬ್ದಸ್ಯ ತಸ್ಮಿನ್ಪ್ರಸಿದ್ಧೇಃ । ನ ಚ ಮಹಾಭೋಗತ್ವಂ ಶ್ರುತಿರ್ಬಾಧಕಮ್ । ಶ್ರುತಿತೋ ಲಿಙ್ಗಸ್ಯ ದೌರ್ಬಲ್ಯಾತ್ । ನ ಚ ಸಾವಕಾಶತ್ವಾದಿನಾ ಬಾಧ್ಯಬಾಧಕಭಾವಃ ।**

**ಮಹಾಭೋಗ(ವತ್ತ್ವ)ಸ್ಯೈವ ವಾಯೌ ಸಾವಕಾಶತ್ವಾತ್ । ಪ್ರಾಣಶ್ರುತೇರ್ವಿಷ್ಣಾವನವಕಾಶಾತ್ ।**

**ನ (ಹಿ) ತಾವತ್ ಪ್ರಾಣಪದಸ್ಯ ತತ್ರ ರೂಢಿರಸ್ತಿ । ನಾಪಿ ಯೋಗಃ ಸಮ್ಭವತಿ । ಪ್ರಾಣಶಬ್ದಪ್ರವೃತ್ತಿನಿಮಿತ್ತಜೀವನಕಾರಣತ್ವಸ್ಯಾನ್ವಯವ್ಯತಿರೇಕಾಭ್ಯಾಂ ವಾಯಾವೇವ ದರ್ಶನಾತ್(*) । 'ಯತ್ಪ್ರಾಸಿರ್ಯತ್ಪರಿತ್ಯಾಗ ಉತ್ಪತ್ತಿರ್ಮರಣಂ ತಥಾ' ಇತ್ಯಾದೇಃ । ತಥಾ ಚ ನಿರವಕಾಶಪ್ರಾಣಶ್ರುತ್ಯಾ**

---

**ಭಾಷ್ಯದೀಪಿಕಾ –**ಸಯುಕ್ತಿಕಂ ಪೂರ್ವಪಕ್ಷಂ ದರ್ಶಯತಿ – ಸ ಚೇತಿ ॥ ತಚ್ಛಬ್ದ ಆವರ್ತತೇ । ಚಶಬ್ದೋऽವಧಾರಣೇ, ವಾಯುರಿತ್ಯನೇನ ಸಮ್ಬಧ್ಯತೇ । ಆನನ್ದಮಯಶ್ಚೇತಿ ಸಮುಚ್ಚಯೇ ವಾ । ತಥಾ ಚ ಪರಮಾನನ್ದತ್ವಂ ಯಸ್ಯ ಪ್ರಾಣಸ್ಯೋಕ್ತಂ ಸಃ 'ಪ್ರಾಣಃ' ತಚ್ಛಬ್ದವಾಚ್ಯೋ ಮುಖ್ಯವಾಯುರೇವೇತಿ 'ಆಪತತಿ' ಪ್ರಾಪ್ನೋತಿ । ಅತ ಏವಾऽನನ್ದಮಯೋऽಪಿ ಸ ಏವೇತ್ಯಾಪತತಿ । ಕುತಃ ? ಪ್ರಸಿದ್ಧೇಃ ಪ್ರಾಣಶ್ರುತೇಃ । ತಸ್ಯಾಶ್ಚ ತಸ್ಮಿನ್ ವಾಯೌ ಪ್ರಸಿದ್ಧೇ ರೂಢತ್ವಾತ್ । ಪ್ರಾಣಪದಪ್ರವೃತ್ತಿನಿಮಿತ್ತಸ್ಯ ಜೀವನಾದಿಹೇತುತ್ವಸ್ಯ ಚ ಶರೀರೇ ಸತಿ ಮುಖ್ಯೇ ಜೀವನಾದಿಕಂ ಸಮ್ಭವತಿ ನಾಸತೀತ್ಯನ್ವಯವ್ಯತಿರೇಕಾಭ್ಯಾಂ ಸ್ವಶರೀರ-ಗತವಾಯುವಿಕಾರದ್ವಾರಾ ಮುಖ್ಯವಾಯಾವೇವ ಪ್ರಸಿದ್ಧೇರ್ದರ್ಶನಾದಿತಿ ಯೋಜನಾ ।

**महाभोगत्वलिङ्गस्य सावकाशस्य सुतरां बाधोपपत्तेर्वायुरेवायं प्राणः प्रागुक्ताऽऽनन्दमयश्च । प्राणशब्दस्य अन्यत्र वृत्तावपि 'मुखे मुख्यः प्रकीर्तितः' इति मुख्यवायावेव मुख्यत्वात्स एव प्राणो भवेदिति भावः(**) ।**

ಈ ವಿಷಯದಲ್ಲಿ 'ಸ ಚ' ಇತ್ಯಾದಿ ಗ್ರಂಥದಿಂದ ಸಯುಕ್ತಿಕವಾಗಿ ಪೂರ್ವಪಕ್ಷವನ್ನು ರಚಿಸುತ್ತಿದ್ದಾರೆ.

ಪೂರ್ವಪಕ್ಷ -- ತೈತ್ತಿರೀಯ ಆರಣ್ಯಕದ 'ತದ್ವೈ ತ್ವಂ' ಎಂಬ ಶ್ರುತಿಯಲ್ಲಿರುವ ಪ್ರಾಣಶಬ್ದದಿಂದ ವಾಯುವೇ ಪ್ರತಿಪಾದ್ಯನಾಗುತ್ತಾನೆ. ಏಕೆಂದರೆ ಲೋಕದಲ್ಲಿ ವಾಯುವಿನಲ್ಲೇ ಪ್ರಾಣಶಬ್ದದ ವ್ಯವಹಾರವಿದೆ. ಆನಂದಪೂರ್ಣತ್ವ(ಮಹಾಭೋಗತ್ವ)ವೆಂಬ ಲಿಂಗವು ಶ್ರುತಿಗೆ ಬಾಧಕವೆಂದು ಹೇಳಬಾರದು. ಶ್ರುತಿಗಿಂತ ಲಿಂಗವು ದುರ್ಬಲವಾಗಿದೆ. ಲಿಂಗವು ನಿರವಕಾಶವಾದ್ದರಿಂದ ಸಾವಕಾಶ-ಶ್ರುತಿಯನ್ನು ಬಾಧಿಸಬಹುದಲ್ಲವೇ? ಎಂಬ ಪ್ರಶ್ನೆಗೂ ಅವಕಾಶವಿಲ್ಲ. ವಾಯುವಿನಲ್ಲಿ ಮಹಾ-ಭೋಗತ್ವ ಲಿಂಗವೇ ಸಾವಕಾಶವಾಗಿದೆ. (ಅದು ಹೀಗೆ -- ದೇಹದಲ್ಲಿ ಪ್ರಾಣವಾಯು ಇದ್ದರೆ ಮಾತ್ರ ಜೀವನಿಗೆ ಆನಂದವನ್ನು ವಾಯುವು ಕೊಡುತ್ತಾನೆ. ಇಲ್ಲದಿದ್ದರೆ ಇಲ್ಲ. ಹೀಗೆ ಜೀವನಿಗೆ ಮಹಾನಂದವನ್ನು ನೀಡಬೇಕಾದರೆ ಸ್ವತಃ ವಾಯುವು ಮಹಾಭೋಗನಾಗಬೇಕು). ಮತ್ತು ಪ್ರಾಣ-ಶ್ರುತಿಗೆ ವಿಷ್ಣುವಿನಲ್ಲಿ ಅವಕಾಶವಿಲ್ಲ. ಏಕೆಂದರೆ ಪ್ರಾಣಪದದ ರೂಢಿಯು ವಿಷ್ಣುವಿನಲ್ಲಿ ಇಲ್ಲ-ವೆಂಬುದು ನಿಶ್ಚಿತ. ಇನ್ನು ಜೀವಧಾರಣವೆಂಬ ಯೋಗಾರ್ಥವನ್ನು ಹೇಳಬೇಕು. ಆದರೆ ಪ್ರಾಣಶಬ್ದದ ಪ್ರವೃತ್ತಿನಿಮಿತ್ತವಾದ ಜೀವನ ಕಾರಣತ್ವವು ಅನ್ವಯವ್ಯತಿರೇಕಗಳಿಂದ (ಪ್ರಾಣನಿದ್ದರೆ ದೇಹದಲ್ಲಿ ಜೀವರ ಸ್ಥಿತಿ, ಇಲ್ಲದಿದ್ದರೆ ಇಲ್ಲ) ವಾಯುವಿನಲ್ಲೇ ಯೋಗಾರ್ಥವು ಕೂಡುತ್ತದೆ. ಈ ಅನ್ವಯವ್ಯತಿರೇಕವನ್ನು ಸ್ಮೃತಿಯೂ ಸಹ ಹೇಳುತ್ತಿದೆ 'ಯತ್ಪ್ರಾಪ್ತಿರ್ಯತ್ಪರಿತ್ಯಾಗೇ ಉತ್ಪತ್ತಿರ್ಮರಣಂ

---

(*) 'दर्शनात्' इत्यनेन प्रसिद्धेरित्येतत् प्राक् प्राणश्रुतेस्तत्र प्रसिद्धेर्महायोग-तल्लिङ्गस्यापि तत्रैव प्रसिद्धेरिति द्वेधा व्याख्यातमधुना प्राणपदप्रवृत्तिनिमित्तस्यापि तत्रैव प्रसिद्धेरिति द्वेधा व्याख्यातं भवति । – **वाक्यार्थमुक्तावली**

(**) अत्र प्राणः किं मुख्यवायुरुत विष्णुरिति चिन्ता । तदर्थं प्राणश्रुतिः किं श्रीपतित्वादिलिङ्गबाधिका, उत तद्बाध्या इति । तदर्थं सा श्रुतिर्निरवकाशा उत सावकाशेति । तदर्थं प्राणशब्दप्रवृत्तिनिमित्तं प्राणनादिहेतुत्वं किं विवरत्वादि-समानयोगक्षेमं न भवति, उत भवतीति । तदर्थं तत्कल्पकान्वयव्यतिरेकौ किं मुख्य-वायोरेवानन्यथासिद्धौ, उत विष्णावन्वयव्यतिरेकोपजीवित्वेनान्यथासिद्धाविति । तदर्थं तयोस्तदुपजीवित्व एतत्कल्पकत्वेनाभिमतश्रीपतित्वादिलिङ्गस्य निरवकाशत्वे च प्रमाणं नास्त्युतास्तीति । – **भावबोधः ।**

ತಥಾ'. ದೇಹದಲ್ಲಿ ಪ್ರಾಣನು ಬಂದರೆ ಹುಟ್ಟು ಎಂದೂ, ಪ್ರಾಣನು ಹೋದರೆ ಮರಣ ಎಂದೂ ಹೇಳುತ್ತಾರೆ. ಆದ್ದರಿಂದ 'ತದ್ವೈ ತ್ವಂ' ಎಂಬ ಪ್ರಾಣಶ್ರುತಿಯು ವಾಯುವಿನಲ್ಲಿ ನಿರವಕಾಶವಾಗಿದೆ. ಮಹಾಭೋಗತ್ವಲಿಂಗವು ಸಾವಕಾಶವಾಗಿದೆ. ಸಾವಕಾಶಲಿಂಗವನ್ನು ನಿರವಕಾಶವಾದ ಪ್ರಾಣಶ್ರುತಿಯು ನಿಶ್ಚಯವಾಗಿ ಬಾಧಿಸುತ್ತದೆ. ಆದ್ದರಿಂದ ವಾಯುವೇ ಪ್ರಾಣನಾಗಿದ್ದಾನೆ. ಹಿಂದೆ ಹೇಳಿದ ಆನಂದಮಯನೂ ಸಹ ಅವನೇ ಆಗುತ್ತಾನೆ. ವಸ್ತುತಃ ಪ್ರಾಣಶಬ್ದಕ್ಕೆ ಜಡವಾಯುವಿನಲ್ಲಿಯೂ ಪ್ರಯೋಗವಿದೆ. ಆದರೂ ಕೂಡ 'ಮುಖೇ ಮುಖ್ಯ ಪ್ರಕೀರ್ತಿತಃ' ಎಂಬ ಮಾತಿನಂತೆ ಜಡವಾಯುವಿಗಿಂತ ಮುಖ್ಯವಾಯುವೇ ಶ್ರುತಿಯ ಮುಖ್ಯಾರ್ಥವಾಗುತ್ತದೆ. ಆದ್ದರಿಂದ ಮುಖ್ಯವಾಯುವೇ ಪ್ರಾಣನಾಗುತ್ತಾನೆಂದು ಪೂರ್ವಪಕ್ಷದ ತಾತ್ಪರ್ಯ.

**ಭಾವದೀಪಃ – 'ಸಚ' ಇತ್ಯಾದಿಭಾಷ್ಯಭಾವಮಾಹ – तस्य चेति ॥ अन्यत्व इति ॥ 'प्रसिद्धिबलाद् वायुत्वे' इत्यर्थः । अन्यस्यैवेति ॥ विवक्षितनिरतिशयपूर्णानन्दत्वस्य द्वयोः 'एकमेवाद्वितीयं ब्रह्म' इत्यादिश्रुतिविरोधेन अयोगादिति भावः । 'इत्ययम्' इत्यत्र इतिशब्दो हेत्वर्थः । 'इति पूर्वाक्षेपरूपसङ्गतिसद्भावाद्धेतोः' इत्यर्थः । 'स' इति पूर्वाक्षेपकमहाभोगत्वयुक्त इत्यर्थः ।**

**पूर्वपक्षतद्युक्तितत्फलपरत्वेनाप्येतद् भाष्यं व्याकुर्वन् 'स च' इति भाष्यं तावदवतार्य व्याचष्टे – तत्रेति ॥ 'वायुर्मुख्यप्राणो भवेत्' इत्यर्थः । 'महाभोगत्वम्' इत्युपलक्षणम् । 'श्रीलक्ष्मीपतित्वादिब्रह्मलिङ्गं च' इत्यपि ज्ञेयम् । दौर्बल्यादिति ॥ 'शब्दादेव' इत्यत्र वक्ष्यमाणन्यायेनेति भावः ।**

'ಸ ಚ' ಇತ್ಯಾದಿಭಾಷ್ಯದ ಅಭಿಪ್ರಾಯವನ್ನು ''ತಸ್ಯ ಚ'' ಇತ್ಯಾದಿವಾಕ್ಯದಿಂದ ವಿವರಿಸಿದ್ದಾರೆ. ''ಅನ್ಯತ್ವೇ'' ಎಂಬ ಪದಕ್ಕೆ 'ಪ್ರಸಿದ್ಧಿಯ ಬಲದಿಂದ ವಾಯುತ್ವದಲ್ಲಿ' ಎಂದರ್ಥ. ''ಅನ್ಯಸ್ಯೈವ'' ಎಂಬ ವಾಕ್ಯಭಾಗವು ಇಲ್ಲಿ ವಿವಕ್ಷಿತವಾದ ನಿರತಿಶಯವಾದ ಪೂರ್ಣಾನಂದತ್ವವು ಎರಡು ಮಂದಿ ವ್ಯಕ್ತಿಗಳಿಗೆ 'ಏಕಮೇವಾದ್ವಿತೀಯಂ ಬ್ರಹ್ಮ' ಇತ್ಯಾದಿಶ್ರುತಿಗಳ ವಿರೋಧ ಬರುವುದರಿಂದ ಹೊಂದುವುದಿಲ್ಲ ಎಂಬ ಅಭಿಪ್ರಾಯವುಳ್ಳದ್ದು. ''ಇತ್ಯಯಮ್'' ಎಂಬಲ್ಲಿ ಇತಿಶಬ್ದಕ್ಕೆ ಹೇತ್ವರ್ಥವನ್ನು ಗ್ರಹಿಸಬೇಕು. ಆಗ ಇತಿಶಬ್ದಕ್ಕೆ 'ಹಿಂದಿನ ಅಧಿಕರಣಕ್ಕೆ ಆಕ್ಷೇಪಮಾಡುವ ಮೂಲಕ ಆಕ್ಷೇಪಿಕೀಸಂಗತಿ ಇರುವ ಕಾರಣದಿಂದ' ಎಂದರ್ಥ. ''ಸಃ'' ಎಂಬ ಪದಕ್ಕೆ 'ಪೂರ್ವಾಧಿಕರಣವನ್ನು ಆಕ್ಷೇಪಮಾಡುವ ಮಹಾಭೋಗತ್ವದಿಂದ ಕೂಡಿರುವುದು' ಎಂದರ್ಥ.

ಇಲ್ಲಿಯವರೆಗೆ ಪೂರ್ವಪಕ್ಷ, ಅದರ ಯುಕ್ತಿ ಮತ್ತು ಅದರ ಫಲಪರವಾಗಿ ಭಾಷ್ಯವನ್ನು ವ್ಯಾಖ್ಯಾನಮಾಡಿ 'ಸಚ' ಇತ್ಯಾದಿಭಾಷ್ಯವನ್ನು ''ತತ್ರ'' ಇತ್ಯಾದಿವಾಕ್ಯದಿಂದ ಅವತರಣಿಕೆ ನೀಡುವ ಮೂಲಕ ವ್ಯಾಖ್ಯಾನ ಮಾಡುತ್ತಿದ್ದಾರೆ. ವಾಯುಶಬ್ದಕ್ಕೆ ಮುಖ್ಯಪ್ರಾಣ ಎಂದರ್ಥ. ಈ ಶ್ರುತಿಯಲ್ಲಿ ಮಹಾ-

ಭೋಗತ್ವವು ಉಪಲಕ್ಷಣವಾಗಿದೆ. ಇದರಿಂದ ಶ್ರೀಪತಿತ್ವ, ಲಕ್ಷ್ಮೀಪತಿತ್ವಾದಿ ಬ್ರಹ್ಮಲಿಂಗವನ್ನೂ ಕೂಡ ಸ್ವೀಕರಿಸಿಕೊಳ್ಳಬೇಕು. ''ದೌರ್ಬಲ್ಯಾತ್'' ಎಂಬ ವಾಕ್ಯಭಾಗಕ್ಕೆ 'ಶಬ್ದಾದೇವ' ಎಂಬಲ್ಲಿ ತಿಳಿಸುವ ನ್ಯಾಯದಿಂದ ದುರ್ಬಲವಾಗಿರುವುದರಿಂದ ಎಂದು ಅಭಿಪ್ರಾಯ.

**वाक्यार्थमञ्जरी – द्वितीयाध्यायभाष्योदाहृतस्मृतिमुदाहरति – यत्प्राप्ति इति ॥** यथाक्रममन्वयः ॥ **सुतरामिति ॥** स्वभावत एव बाधे निरवकाशत्वादिना किम्विति भावः । वायुरेवेत्यवधारणानुपपत्तिमाशङ्क्याह – **प्राणशब्दस्येति ॥**

**चेष्टायां बाह्यवायौ च मुख्यवायौ च गीयते ।**
**प्राणशब्दस्त्रिषु ह्येषु मुखे मुख्यः प्रकीर्तितः ॥**

इति द्वितीयाध्यायभाष्योदाहृता स्मृतिः ॥

## ಶ್ರೀಲಕ್ಷ್ಮೀಪತಿತ್ವಲಿಂಗದಿಂದ ವಿಷ್ಣುವೇ ಪ್ರಾಣನೆಂದು ಸಿದ್ಧಾಂತ

**भाष्यम् – न चैवम् । यतो विष्णुरेव प्राणः । अत एव 'श्रीश्च ते लक्ष्मीश्च पत्न्यौ । अहोरात्रे पार्श्वे' (तै.आ.३-१३) इत्यादितलिङ्गादेव ॥२३॥**

**॥ इति प्राणाधिकरणम् ॥ ९ ॥**

ಇದು ತಪ್ಪು. ಏಕೆಂದರೆ, ವಿಷ್ಣುವೇ ಪ್ರಾಣಶಬ್ದವಾಚ್ಯನು. ಆದ್ದರಿಂದಲೇ ತೈತ್ತಿರೀಯ-ಶ್ರುತಿಯಲ್ಲಿ 'ಹಗಲು ಇರುಳು ಶ್ರೀ ಮತ್ತು ಲಕ್ಷ್ಮೀದೇವಿಯರು ನಿನ್ನ ಹೆಂಡಂದಿರಾಗಿ ಬಳಿಯಲ್ಲಿ ಇರುತ್ತಾರೆ' ಎಂದು ವಿಷ್ಣುವಿನ ಅಸಾಧಾರಣಧರ್ಮವನ್ನು ಪ್ರಾಣನಲ್ಲಿ ಹೇಳಲ್ಪಟ್ಟದೆ. ಆದ್ದರಿಂದ ವಿಷ್ಣುವೇ ಪ್ರಾಣನು ಅವನೇ ಜಿಜ್ಞಾಸ್ಯನಾದ ಬ್ರಹ್ಮನು ಎಂದು ಸಿದ್ಧವಾಯಿತು.

---

**ಭಾಷ್ಯದೀಪಿಕಾ** –ಸಿದ್ಧಾನ್ತಯತಿ – न चेति ॥ एवं प्राणस्य वायुत्वम् आनन्दमयत्वं च न युक्तमित्यर्थः । कुतो नैवमित्याशङ्कायां तत्र हेतुतया सूत्रं व्याचष्टे - यत इति ॥ सूत्रार्थस्य हेतुत्वद्योतकोऽयं यतश्शब्दः । सूत्रेऽनुवृत्तस्य तत्त्वित्यस्यार्थो विष्णुरेवेति । तथा च यतोऽयं प्राणो विष्णुरेव अतो नैवमित्यन्वयः । कुतोऽयं प्राणो विष्णुरेवेत्यतः सौत्रं हेतुमनूद्य व्याचष्टे – अत एवेति ॥ इत्यादीति ॥ इत्यादिनोक्तं यद्विष्णुलिङ्गं तस्मादेवेत्यर्थः । कथं श्रुत्या पूर्वपक्षिते लिङ्गेन निर्णय इत्यतो लिङ्गस्य निरवकाशत्व-ज्ञापनायैवकारः । तथा च सावकाशश्रुतेर्निरवकाशलिङ्गेन बाध इति भावः । हे विष्णो ! 'ते' तव श्रीश्च लक्ष्मीश्चेति द्वे पत्न्यौ स्तः । वक्षस्थलाश्रिता श्रीः, अङ्कस्थिता लक्ष्मीरिति

ಪ್ರತಿಪದಾರ್ಥ -- ಸಿದ್ಧಾಂತ ಹೀಗಿದೆ -- ನ ಚೈವಮ್ = ಇದು ತಪ್ಪು. ಯತಃ = ಏಕೆಂದರೆ, ವಿಷ್ಣೋರೇವ = ಭಗವಂತನೇ, ಪ್ರಾಣಃ = ಪ್ರಾಣಶಬ್ದವಾಚ್ಯನು. ಅತ ಏವ = ಆದ್ದರಿಂದಲೇ, ಶ್ರೀಶ್ಚ ತೇ ಲಕ್ಷ್ಮೀಶ್ಚ = ಶ್ರೀದೇವಿ ಮತ್ತು ಲಕ್ಷ್ಮೀದೇವಿಯರು, ಪತ್ನ್ಯೌ = ಪತ್ನಿಯರು, ಅಹೋರಾತ್ರೇ = ಹಗಲು ಇರುಳು, ಪಾರ್ಶ್ವೇ = ಎಡಬಲಭಾಗಗಳಲ್ಲಿ ಸೇವಕರಾಗಿರುತ್ತಾರೆ. ಇತ್ಯಾದಿ = ಇವೇ ಮೊದಲಾದ, ತಲ್ಲಿಂಗಾದೇವ = ವಿಷ್ಣುವಿನ ಲಿಂಗಗಳಿರುವುದರಿಂದಲೇ. ವಿಷ್ಣುವು ಪ್ರಾಣಶಬ್ದವಾಚ್ಯನಾಗುತ್ತಾನೆ.

**तत्त्वप्रकाशिका – सिद्धान्तयति – न चेति ॥ कुतो नैवं इति आशङ्कायां हेतुतया सूत्रं व्याचष्टे – यत इति ॥(*) यतोऽयं प्राणो विष्णुरेवेति स एवानन्दमयोऽतो वायुरयं प्राण आनन्दमयश्चेत्येतन्न युक्तमित्यर्थः । कुतोऽयं प्राणो विष्णुरेव? इत्यतः सौत्रं हेतुमुपादाय व्याचष्टे – अत एवेति ॥ श्रीलक्ष्मीपतित्वादिविष्णुलिङ्गात् प्राणो विष्णुरेवेत्यर्थः ।**

---

सम्प्रदायविदः । तत्त्वप्रदीपे तु – अङ्गस्थिता श्रीः, वक्षसि लक्ष्मभूता लक्ष्मीरित्युक्तम् । 'अहोरात्रे' तदभिमानिसूर्यचन्द्रौ 'पार्श्वे' पार्श्वस्थितावित्यर्थः । दिवारात्रमेते पार्श्वगते इति वा । यद्यपीदम् 'अङ्गयः' इति पूर्वानुवाकगतम् । 'तद्वै त्वं प्राणः' इत्येतच्च 'भर्ता सन् म्रियमाणः' इत्युत्तरानुवाकगतम् । तथा च नानयोर्लिङ्गलिङ्गिभावो युज्यते । तथाऽपि 'श्रीश्च ते' इति युष्मच्छब्देनोक्तस्य 'तद्वै त्वं प्राणः' इत्यत्रापि युष्मच्छब्देन प्रत्यभिज्ञानात् तदुपपत्तिः । निरवकाशत्वाद्भिन्नानुवाकस्थस्यापि मुखतो ग्रहणं युक्तम् । आदिशब्देन 'हरिं हरन्तमनुयन्ति देवाः । विश्वस्येशानं वृषभं मतीनाम्' (तै.आ.३-१५) इति तत्त्वप्रदीपोदाहृतमनुवाकान्तरस्थं गृह्यते । सर्वबुद्धिनियन्तारं जगत्पतिं सर्वसंहर्तारं हरिं देवा अनुगच्छन्तीत्यर्थः । चन्द्रिकायां तु – 'भर्ता सन्' इत्युत्तरानुवाकगतं 'तमेव मृत्युममृतं तमाहुस्तं भर्तारं तमु गोप्तारमाहुः' (तै.आ. ३-१४) इत्यादिकमादिपदेन ग्राह्यमित्युक्तम् । यद्यपि तैत्तिरीयशाखायां 'ह्रीश्च ते' इति पाठः । तथाऽपि वाजसनेयशाखाभिप्रायेण एवमुदाहृतमिति ध्येयम् । सूत्रार्थस्तु स्पष्टः । ॥ इति प्राणाधिकरणम् ॥ ९ ॥

-- अत एव विष्णुलिङ्गादेव प्राणो विष्णुरिति यथास्थितसूत्रार्थस्यैवं न चेति पूर्वपक्षनिषेधहेतुत्वादर्शनाद्यस्मात् प्राणो विष्णुरिति निर्णीतः, तस्मादेवं प्राणोऽन्यो न चेति हेतुहेतुमद्भावं स्फोरयितुं यत्तच्छब्दावध्याहृत्य प्राक् सौत्रप्रतिज्ञां समाकृष्य पूर्वपक्षं तावन्निषेधति – यत इति ॥ प्राणस्य विष्णुत्वनिर्णीतिरेव कुतः? इत्यत अत एव विष्णुलिङ्गादेव प्राणो विष्णुरिति यथास्थितसूत्रं व्याख्याति – अत एवेति ॥

– गुर्वर्थदीपिका ।

वक्षस्थलाश्रिता श्रीरिति सम्प्रदायविदः । कथं श्रुत्या पूर्वपक्षिते सति लिङ्गेन निर्णय इति चेत् लिङ्गस्य निरवकाशत्वात् प्राणश्रुतेर्विष्णावपि सावकाशत्वात् निरकवकाशेन सावकाशस्य बाधोपपत्तेः ।

रूढियोगयोरभावात् कथं विष्णौ प्रणश्रुतेरवकाश इति चेन्न । 'ईशानः प्राणदः प्राणः' इत्यादिविद्रद्रूढेर्महायोगस्य च सत्वात् । न च जीवनस्य प्राणान्वयव्यतिरेकविरोधः । प्राणगतजीवनकारणत्वस्यापि भगवदधीनत्वात् । तथा च श्रुतिः ।

'न प्राणेन नापानेन मर्त्यो जीवति कश्चन ।
इतरेण तु जीवन्ति यस्मिन्नेतावुपाश्रितौ' इति ।

तस्मादाध्यात्मिका शेषशब्दोपलक्षकप्राणशब्दवाच्यो हरिरेवेति (स्थितम्) सिद्धम् ॥ २३ ॥

॥ इति श्रीमज्जयतीर्थविरचिततत्वप्रकाशिकायां प्राणाधिकरणम् ॥

ಸಿದ್ಧಾಂತ -- ಆಚಾರ್ಯರು 'ನ ಚ' ಎಂಬ ಭಾಷ್ಯದಿಂದ ಸಿದ್ಧಾಂತವನ್ನು ಸ್ಥಾಪಿಸುತ್ತಿದ್ದಾರೆ. ಮುಖ್ಯವಾಯುವು ಪ್ರಾಣಶಬ್ದದಿಂದ ಏಕೆ ವಾಚ್ಯನಲ್ಲ? ಎಂಬ ಶಂಕೆಯನ್ನು ಪರಿಹರಿಸಲು ಹೇತುವನ್ನು ಹೇಳುವ ಸೂತ್ರವನ್ನು 'ಯತಃ' ಎಂದು ವ್ಯಾಖ್ಯಾನಿಸುತ್ತಿದ್ದಾರೆ. ಯಾವ ಕಾರಣದಿಂದ ಪ್ರಾಣಶಬ್ದದಿಂದ ವಿಷ್ಣುವೇ ವಾಚ್ಯನಾಗುತ್ತಾನೋ ಆದ್ದರಿಂದಲೇ ಆನಂದಮಯನೂ ವಿಷ್ಣುವೇ ಆಗುತ್ತಾನೋ ಆದ್ದರಿಂದಲೇ 'ವಾಯುವು ಪ್ರಾಣನಾಗಿದ್ದಾನೆ ಮತ್ತು ಆನಂದಮಯನಾಗಿದ್ದಾನೆ' ಎಂಬ ಪೂರ್ವಪಕ್ಷವು ಕೂಡುವುದಿಲ್ಲವೆಂದು ಅರ್ಥ. ಈ ಶ್ರುತಿಯಲ್ಲಿ ಪ್ರಾಣಶಬ್ದದಿಂದ ವಿಷ್ಣುವೇ ವಾಚ್ಯನಾಗುತ್ತಾನೆಂದು ಹೇಗೆ ಹೇಳುತ್ತೀರಿ? ಎಂಬ ಶಂಕೆಯನ್ನು ಪರಿಹರಿಸಲು ಸೂತ್ರದಲ್ಲಿರುವ 'ಅತ ಏವ' ಎಂಬ ಹೇತುವಾಚಕ ಪದವನ್ನು 'ಅತ ಏವ' ಇತ್ಯಾದಿಯಾಗಿ ವ್ಯಾಖ್ಯಾನಿಸುತ್ತಿದ್ದಾರೆ.

ಶ್ರೀಲಕ್ಷ್ಮೀಪತಿತ್ವಮೊದಲಾದ ಲಿಂಗಗಳು ವಿಷ್ಣುವಿನಲ್ಲೇ ಅಸಾಧಾರಣವಾಗಿ ಇವೆ. ಈ ಲಿಂಗಗಳನ್ನು ಶ್ರುತಿಯು ಉಲ್ಲೇಖಿಸುತ್ತಿರುವುದರಿಂದ 'ತದ್ವೈ ತ್ವಂ' ಎಂಬ ಶ್ರುತಿಯಲ್ಲಿರುವ ಪ್ರಾಣಶಬ್ದದಿಂದ ವಿಷ್ಣುವೇ ವಾಚ್ಯನಾಗಬೇಕು. ವಿಷ್ಣುವಿನ ವಕ್ಷಸ್ಥಲದಲ್ಲಿ ಶ್ರೀದೇವಿಯು ಇರುತ್ತಾಳೆಂದು ಸಂಪ್ರದಾಯಜ್ಞರು ಹೇಳುತ್ತಾರೆ. ಪ್ರಬಲವಾದ ಶ್ರುತಿಯಿಂದ ಪೂರ್ವಪಕ್ಷ ಮಾಡಿದಾಗ ದುರ್ಬಲ ಲಿಂಗದಿಂದ ನಿರ್ಣಯ ಮಾಡುವುದು ತಪ್ಪಲ್ಲವೇ? ಎಂದು ಪ್ರಶ್ನಿಸಬಾರದು. ಏಕೆಂದರೆ, ವಿಷ್ಣುವಿನಲ್ಲಿ ಲಿಂಗವು ನಿರವಕಾಶವಾಗಿ ಬಲಿಷ್ಠವಾಗಿದೆ. ಆದರೆ ಪ್ರಾಣಶ್ರುತಿಯು ವಿಷ್ಣುವಿನಲ್ಲಿಯೂ ಸಾವಕಾಶವಾದ್ದರಿಂದ ದುರ್ಬಲವಾಗಿದೆ. ನಿರವಕಾಶಲಿಂಗದಿಂದ ಸಾವಕಾಶಶ್ರುತಿಗೆ ಬಾಧ ಹೇಳುವುದು ತಪ್ಪಲ್ಲ

ಪ್ರಾಣಶ್ರುತಿಗೆ ವಿಷ್ಣುವಿನಲ್ಲಿ ರೂಢಿ ಅಥವಾ ಯೋಗ ಎರಡನ್ನೂ ಹೇಳಲು ಸಾಧ್ಯವಿಲ್ಲ. ಹೀಗಿರುವಾಗ ವಿಷ್ಣುವಿನಲ್ಲಿ ಸಾವಕಾಶವೆಂದು ಹೇಗೆ ಹೇಳುತ್ತೀರಿ? ಎಂದರೆ ಪ್ರಾಣಶಬ್ದಕ್ಕೆ ವಿಷ್ಣುವಿನಲ್ಲಿ ವಿದ್ವದ್ರೂಢಿ ಇದೆ. ವಿಷ್ಣುಸಹಸ್ರನಾಮದಲ್ಲಿ 'ಈಶಾನಃ ಪ್ರಾಣದಃ ಪ್ರಾಣಃ' ಎಂದು ಭಗವಂತನನ್ನು ವಿದ್ವದ್ರೂಢಿಯಿಂದ ಸ್ತೋತ್ರಮಾಡಲಾಗಿದೆ. ವಿದ್ವದ್ರೂಢಿಯಿರುವುದರಿಂದಲೇ ಮಹಾಯೋಗವೂ ಸಹ ಭಗವಂತನಲ್ಲಿ ಸಿದ್ಧವಾಗುತ್ತದೆ. ಅನ್ವಯವ್ಯತಿರೇಕದಿಂದ ವಾಯುವೇ ಪ್ರಾಣಶಬ್ದದಿಂದ ವಾಚ್ಯನೆಂದು ತಿಳಿಯುತ್ತದಲ್ಲ? ಎಂಬ ಶಂಕೆಗೂ ಈಗ ಅವಕಾಶವಿಲ್ಲ. ಮುಖ್ಯ-ವಾಯುವಿನಲ್ಲಿ ಜೀವನಕಾರಣತ್ವವು ಇರುವುದು ಸತ್ಯ. ಆದರೆ, ವಿಷ್ಣುವಿನ ಅಧೀನವಾಗಿ ಇರುತ್ತದೆ. ಇದನ್ನೇ ಶ್ರುತಿಯೂ ಹೇಳಿದೆ.

'ನ ಪ್ರಾಣೇನ ನಾಪಾನೇನ ಮರ್ತ್ಯೋ ಜೀವತಿ ಕಶ್ಚನ।
ಇತರೇಣ ತು ಜೀವಂತಿ ಯಸ್ಮಿನ್ನೇತಾವುಪಾಶ್ರಿತೌ ॥'

ಯಾರೊಬ್ಬ ಮನುಷ್ಯನೂ ಪ್ರಾಣನಿಂದಲಾಗಲೀ ಅಪಾನನಿಂದಾಗಲೀ ಜೀವಿಸುವುದಿಲ್ಲ. ಪ್ರಾಣ ಮತ್ತು ಅಪಾನರು ಯಾವ ಪರಮಾತ್ಮನನ್ನು ಆಶ್ರಯಿಸಿದ್ದಾರೋ ಅಂತಹ ಪರಮಾತ್ಮನಿಂದಲೇ ಜೀವಿಸುತ್ತಾರೆ. ಹೀಗೆ ಪ್ರಾಣಶಬ್ದದಿಂದ ಭಗವಂತನೇ ಮುಖ್ಯವಾಗಿ ಪ್ರತಿಪಾದ್ಯನಾದ್ದರಿಂದ ಇಂದ್ರಿಯ, ಮನಸ್ಸು ಮೊದಲಾದ ಸಕಲಆಧ್ಯಾತ್ಮಿಕಶಬ್ದಗಳಿಂದ ಭಗವಂತನೇ ಮುಖ್ಯವಾಗಿ ಪ್ರತಿಪಾದ್ಯನಾಗುತ್ತಾನೆ ಎಂದು ನಿರ್ಣಯವಾಯಿತು.

ತತ್ತ್ವಪ್ರಕಾಶಿಕೆಯ ಕನ್ನಡಾನುವಾದದಲ್ಲಿ ಪ್ರಾಕಾಧಿಕರಣವು ಮುಗಿಯಿತು.

**ಭಾವದೀಪಃ** – ನನು ನಿರವಕಾಶಲಿಙ್ಗೇನ ಸಾವಕಾಶಶ್ರುತಿಬಾಧಃ ಪೂರ್ವಮುಕ್ತಃ । ತಥೇಹಾಪಿ ಸ್ಯಾದಿತಿ ಶಙ್ಕತೇ – **ನ ಚೇತಿ** ॥ ಸತ್ಯಮೇವಂ ನ ತ್ವಿಹ ನಿರವಕಾಶಲಿಙ್ಗಮಸ್ತಿ ಯೇನ ತನ್ಯಾಯವಿಷಯತ್ವಮತ್ರ ಸ್ಯಾದಿತಿ ಭಾವೇನ ಸೌತ್ರೈವಕಾರವ್ಯಾವರ್ತ್ಯಮಾಹ – **ಮಹಾಭೋಗಸ್ಯೈವೇತಿ** ॥ 'ಪ್ರಜಾಪತ್ಯುಪಲಕ್ಷಿತಾನಾಂ ಸರ್ವಜೀವಾನಾಂ ಸಕಲಭೋಗಕಾರಣತ್ವಮನ್ವಯವ್ಯತಿರೇಕಾಭ್ಯಾಂ ಮುಖ್ಯಸ್ಯ ದೃಶ್ಯತೇ' ಇತಿ ಸುಧೋಕ್ತದಿಶೇತಿ ಭಾವಃ । ಉಪಲಕ್ಷಣಮೇತತ್ । ಶ್ರೀಪತಿತ್ವಾದೇಃ 'ಅದ್ಭ್ಯಃ ಸಮ್ಭೂತಃ' ಇತ್ಯನುವಾಕಾನ್ತರೇ ಶ್ರವಣೇನ 'ಭರ್ತಾ ಸನ್' ಇತ್ಯನುವಾಕಸ್ಥಪ್ರಾಣನಿಷ್ಠತ್ವಾಭಾವೇನ ವಾ ಶ್ರೀಲಕ್ಷ್ಮ್ಯಾದಿಶಬ್ದಾನಾಮಪಿ ಯೋಗೇನ ತತ್ಪ್ರಾಣಭಾರ್ಯಾಪರತ್ವೇನ ವಾ ಸಾವಕಾಶತ್ವಾದಿತಿ ಧ್ಯೇಯಮ್ ।

ಉಕ್ತಂ ಚ ಸುಧಾಯಾಮ್ 'ನ ಚಾತ್ರ ವಾಕ್ಯೇ ಪೂರ್ವವದನನ್ಯಥಾಸಿದ್ಧಂ ಕಿಮಪೀಶ್ವರಲಿಙ್ಗಮಸ್ತಿ ಯೇನ ಶ್ರುತಿಬಾಧಂ ಪ್ರತ್ಯೇಷ್ಯಾಮಃ' ಇತಿ । ಸುಧಾಯಾಂ ಗತಾರ್ಥತ್ವಮಾಶಙ್ಕ್ಯಾಧಿಕಾಶಙ್ಕೋಕ್ತಿರಪಿ ವಾಸ್ತವಲಿಙ್ಗನಿರವಕಾಶತ್ವೋಪಗಮಪಕ್ಷ ಏವೇತಿ ಧ್ಯೇಯಮ್ ।

'ನಿರವಕಾಶಲಿಂಗದಿಂದ ಸಾವಕಾಶವಾದ ಶ್ರುತಿಯು ಬಾಧಿತವಾಗುತ್ತದೆ' ಎಂದು ಹಿಂದೆ ತಿಳಿಸಲಾಗಿದೆ. ಅದೇ ರೀತಿ ಇಲ್ಲೂ ಕೂಡ ಇಟ್ಟುಕೊಳ್ಳಬಹುದು ಎಂಬ ಶಂಕೆಯನ್ನು 'ನಚ' ಇತ್ಯಾದಿವಾಕ್ಯದಿಂದ ವಿವರಿಸಿದ್ದಾರೆ. ನೀವು ಹೇಳಿದ ಅಂಶ ಸರಿಯಾಗಿಯೇ ಇದೆ; ಆದರೂ ಇಲ್ಲಿ ನಿರವಕಾಶವಾದ ಲಿಂಗವೇ ಇಲ್ಲ. ಒಂದು ವೇಳೆ ಹಾಗಿದ್ದಿದ್ದರೆ ಆ ರೀತಿಯ ನ್ಯಾಯಕ್ಕೆ ವಿಷಯತ್ವವು ಇಲ್ಲಿ ಬರಬಹುದಿತ್ತು ಎಂಬ ಅಭಪ್ರಾಯದಿಂದ ಸೂತ್ರದಲ್ಲಿರುವ 'ಏವ'ಕಾರದಿಂದ ವ್ಯಾವೃತ್ತಿಮಾಡಬೇಕಾದ ಅಂಶವನ್ನು ''ಮಹಾಭೋಗಸ್ಯೈವ'' ಎಂಬ ವಾಕ್ಯಭಾಗದಿಂದ ವಿವರಿಸಿದ್ದಾರೆ. ನ್ಯಾಯಸುಧೆಯಲ್ಲಿ 'ಪ್ರಾಜಾಪತ್ಯುಪಲಕ್ಷಿತಾನಾಂ ಸರ್ವಜೀವಾನಾಂ ಸಕಲಭೋಗಕಾರಣತ್ವಮನ್ವಯವ್ಯತಿರೇಕಾಭ್ಯಾಂ ಮುಖ್ಯಸ್ಯ ದೃಶ್ಯತೇ' (ಪ್ರಜಾಪತಿಗಳಿಂದ ಉಪಲಕ್ಷಿತರಾದ ಸರ್ವಜೀವರುಗಳಿಗೆ ಸಕಲಭೋಗಕಾರಣತ್ವವು ಅನ್ವಯವ್ಯತಿರೇಕವ್ಯಾಪ್ತಿಗಳಿಂದ ಮುಖ್ಯನಲ್ಲೇ ಕಾಣುತ್ತದೆ) ಎಂಬುದಾಗಿ ಹೇಳಿದ್ದು; ಆದಕ್ಕೆ ಅನುಸಾರವಾಗಿ ಇಲ್ಲಿ ವ್ಯಾಖ್ಯಾನಮಾಡಲಾಗಿದೆ.

ಈ ಅಂಶವನ್ನು ಉಪಲಕ್ಷಣವಾಗಿ ಸ್ವೀಕರಿಸಬೇಕು. ಶ್ರೀಪತಿತ್ವಾದಿಲಕ್ಷಣಗಳು 'ಅದ್ಭ್ಯಃ ಸಂಭೂತಃ' ಎಂಬ ಬೇರೊಂದು ಅನುವಾಕದಲ್ಲಿ ಕೇಳಿ ಬರುವುದರಿಂದ 'ಭರ್ತಾ ಸನ್' ಎಂಬ ಅನುವಾಕದಲ್ಲಿರುವ ಪ್ರಾಣನಿಷ್ಠತ್ವವು ಅದಕ್ಕೆ ಹೊಂದಲಾರದು. ಅಥವಾ ಲಕ್ಷ್ಮ್ಯಾದಿಶಬ್ದಗಳೂ ಕೂಡ ಯೋಗದಿಂದ ಆ ಪ್ರಾಣನ ಪತ್ನಿಯ ಪರವಾಗಿ ಸಾವಕಾಶವೇ ಆಗಿದೆ ಎಂದು ತಿಳಿಯಬೇಕು. ಈ ಅಂಶವನ್ನು ಸುಧಾದಲ್ಲಿ 'ನ ಚಾತ್ರ ವಾಕ್ಯೇ ಪೂರ್ವವದನನ್ಯಥಾಸಿದ್ಧಂ ಕಿಮಪೀಶ್ವರಲಿಂಗಮಸ್ತಿ ಯೇನ ಶ್ರುತಿಬಾಧಂ ಪ್ರತ್ಯೇಷ್ಯಾಮಃ' (ಈ ವಾಕ್ಯದಲ್ಲಿ ಹಿಂದಿನಂತೆ ಅನ್ಯಥಾಸಿದ್ಧವಲ್ಲದ ಯಾವುದೇ ಈಶ್ವರಲಿಂಗವು ಇರುವುದಿಲ್ಲ. ಒಂದು ವೇಳೆ ಹಾಗಿದ್ದಿದ್ದರೆ ಶ್ರುತಿಬಾಧವನ್ನು ಹೇಳಬಹುದಿತ್ತು) ಎಂದು ಹೇಳಿದ್ದಾರೆ. ಹಾಗೆಯೇ ಸುಧೆಯಲ್ಲಿ ಗತಾರ್ಥತ್ವವನ್ನು ಶಂಕೆಮಾಡಿಕೊಂಡು ಅಧಿಕವಾಗಿ ಆಶಂಕೆಯನ್ನು ಹೇಳಿರುವುದು ವಾಸ್ತವಲಿಂಗವು ನಿರವಕಾಶ ಎಂಬುದಾಗಿ ಒಪ್ಪಿಕೊಂಡೇ ಆಗಿದೆ ಎಂದು ತಿಳಿಯಬೇಕು.

**ಭಾವದೀಪಃ** – ಏವಂ ನಿರ್ಬಾಧರೂಢಪ್ರಾಣಶ್ರುತ್ಯಾದಿಸಿದ್ಧೇऽಪಿ ಪ್ರಾಣಾಶ್ರಿತಪೂರ್ವಪಕ್ಷೇ ತದ್ದಾರ್ಢ್ಯಾಯಾಭ್ಯುಚ್ಚಯತ್ವೇನ ಶ್ರುತೇರ್ನಿರವಕಾಶತ್ವಮಪ್ಯಾಹ – **ಪ್ರಾಣಶ್ರುತೇರಿತಿ** ॥ ಅತ ಏವ ವಕ್ಷ್ಯತಿ – **ಸುತರಾಮಿತಿ** ॥ **ನ ತಾವದಿತಿ** ॥ ಲೋಕಪ್ರಯೋಗಾಭಾವಾದಿತಿ ಭಾವಃ ।

**'..... ಅಧ್ಯಾತ್ಮಮನ್ವಯವ್ಯತಿರೇಕತಃ ।**
**ಪ್ರಾಣಾದಿಹೇತುತಾದೃಷ್ಟೇಃ .....'**

ಇತ್ಯನುಭಾಷ್ಯೋಕ್ತಮೇವ ಹೇತುಮಾಹ – **ಪ್ರಾಣಶಬ್ದೇತಿ** ॥ **ಜೀವನಕಾರಣತ್ವಸ್ಯೇತಿ** ॥ 'ಯದ್ ದೇವಾನ್ ಪ್ರಾಣಯೋ ನವ । ತತ್ಪ್ರಾಣಃ' ಇತಿ ವಾಕ್ಯಶೇಷೇ ತಸ್ಯೈವೋಕ್ತೇರಿತಿ ಭಾವಃ । ಏತದರ್ಥಮೇವ ಪೂರ್ವೆ ಶೇಷಸ್ಯಾಪ್ಯರ್ಥೋಕ್ತಿಃ ।

ನನು ಮುಖ್ಯವಾಯೋರತೀನ್ದ್ರಿಯತ್ವಾತ್ ಪ್ರಾಣೇ ಸತಿ ಜೀವನಂ ತದಭಾವೇ ತದಭಾವಃ ಇತಿ ಕಥಮನ್ವಯವ್ಯತಿರೇಕಾಭ್ಯಾಂ ಜೀವನಹೇತುತ್ವಸ್ಯ ಮುಖ್ಯವಾಯೌ ದರ್ಶನಮ್? ಇತ್ಯತಃ ಪ್ರತ್ಯಕ್ಷತಃ

ಅಭಾವೇऽपि ಶಬ್ದಾತ್ ಸ್ಯಾದೇವೇತ್ಯಾಹ – **ಯತ್ಪ್ರಾಪ್ತಿರಿತಿ** ॥ 'ಶ್ರೇಷ್ಠಶ್ಚ' ಇತ್ಯತ್ರ ದ್ವಿತೀಯೇ ಭಾಷ್ಯೋಕ್ತಾ ಸ್ಮೃತಿಃ । **'ಏತೇನಾಧ್ಯಾತ್ಮಗತಶಬ್ದಾನಾಮನ್ವಯವ್ಯತಿರೇಕೇ ವಿದ್ಯಮಾನೇऽपಿ'** ಇತಿ ನ್ಯಾಯವಿವರಣಾಂಶೋ ವಿವೃತಃ । ಭಾಷ್ಯೇ 'ಪ್ರಸಿದ್ಧೇಃ' ಇತ್ಯಸ್ಯ 'ಜೀವನಹೇತುತ್ವರೂಪಪ್ರಾಣ-ಪದಪ್ರವೃತ್ತಿನಿಮಿತ್ತಸ್ಯ ಸ್ಮೃತಿಬಲೇನ ವಾಯಾವೇವ ಪ್ರಸಿದ್ಧೇಃ' ಇತ್ಯಪ್ಯರ್ಥ ಉಕ್ತೋ ಭವತಿ । ಉಕ್ತಂ ಚ ಸುಧಾಯಾಮ್ 'ಭಾಷ್ಯೇऽप್ಯಸ್ಯ ಸರ್ವಸ್ಯ ಸ್ವೀಕಾರಾರ್ಥಂ ಪ್ರಸಿದ್ಧೇರಿತ್ಯಾಹ' ಇತಿ । ತೇನೇಯಂ ಪ್ರಮೇಯಾಶ್ರಿತಾ ಶಙ್ಕಾ ಚ ಭಾಷ್ಯಾರೂಢೈವೇತಿ ಜ್ಞೇಯಮ್ ।

**ಮಹಾಭೋಗತ್ವೇತಿ** ॥ ಲಿಙ್ಗಾನ್ತರೋಪಲಕ್ಷಣಮ್ । 'ಉಕ್ತಮ್' ಇತ್ಯನ್ತಂ ಫಲಪರಂ ಚೇತ್ಯುಪೇತ್ಯ, ತಾತ್ಪರ್ಯಮಾಹ– **ಪ್ರಾಗುಕ್ತಾನನ್ದಮಯಶ್ಚೇತಿ** ॥ **ಅನ್ಯತ್ರೇತಿ** ॥ ಜಡರೂಪಪ್ರಾಣವೃತ್ತ್ಯಾದಾವಿತ್ಯರ್ಥಃ ।

**ಚೇಷ್ಟಾಯಾಂ ಬಾಹ್ಯವಾಯೌ ಚ ಮುಖ್ಯಪ್ರಾಣೇ ಚ ಗೀಯತೇ ।**
**ಪ್ರಾಣಶಬ್ದಸ್ತ್ರಿಷು ಹ್ಯೇಷು ಮುಖೇ ಮುಖ್ಯಃ ಪ್ರಕೀರ್ತಿತಃ ॥'**

ಇತಿ ದ್ವಿತೀಯೇ 'ನ ವಾಯುಕ್ರಿಯೇ ಪೃಥಗುಪದೇಶಾತ್' ಇತ್ಯತ್ರ ಭಾಷ್ಯೋಕ್ತಸ್ಮೃತ್ಯಾ, 'ಹಸ್ತ-ಚರಣಶ್ರವಣತ್ವಗಾದೀನ್ ಪ್ರಾಣಾನ್' ಇತಿ ಭಾಗವತೇ ಪ್ರಯೋಗೇಣ ಲೋಕಪ್ರಸಿದ್ಧ್ಯಾ ಚೇತಿ ಭಾವಃ । 'ಮುಖ್ಯತ್ವಾತ್' ಇತ್ಯುಪಲಕ್ಷಣಮ್ । ಸುಧೋಕ್ತದಿಶಾ ವಾಯುವೃತ್ತ್ಯಾದಿಜಡಂ ಪ್ರತಿ 'ತ್ವಮೇವಮಭವಃ' ಇತ್ಯುಕ್ತ್ಯಯೋಗಾಚ್ಚ । 'ಔಷಧೇ ತ್ರಾಯಸ್ವೈನಮ್' ಇತ್ಯಾದೇರಪ್ಯಭಿಮಾನಿಪರತ್ವಾದಿತ್ಯಪಿ ಧ್ಯೇಯಮ್ ।

ಹೀಗೆ ನಿರ್ಬಾಧರೂಢಿಯುಳ್ಳ ಪ್ರಾಣಶ್ರುತ್ಯಾದಿಗಳಿಂದ ಸಿದ್ಧವಾಗಿದ್ದರೂ ಪ್ರಾಣಾಶ್ರಿತವಾದ ಪೂರ್ವಪಕ್ಷದಲ್ಲಿ ಆ ಪೂರ್ವಪಕ್ಷಕ್ಕೆ ದಾರ್ಢ್ಯವನ್ನು ಒದಗಿಸುವ ಸಲುವಾಗಿ ಶ್ರುತಿಯು ನಿರವಕಾಶ ಎಂಬರ್ಥವನ್ನು ''ಪ್ರಾಣಶ್ರುತೇಃ'' ಇತ್ಯಾದಿಯಾಗಿ ಹೇಳುತ್ತಿದ್ದಾರೆ. ಆದ್ದರಿಂದಲೇ ಮುಂದೆ 'ಸುತರಾಮ್' ಎಂಬ ಪದವನ್ನು ಉಪಯೋಗಿಸಿದ್ದಾರೆ. ''ನ (ಹಿ) ತಾವತ್'' ಎಂಬ ವಾಕ್ಯದಿಂದ ಲೋಕದಲ್ಲಿ ಪ್ರಯೋಗ ಇಲ್ಲದಿರುವುದರಿಂದ ಪ್ರಾಣಪದಕ್ಕೆ ವಿಷ್ಣುವಿನಲ್ಲಿ ರೂಢಿಯಿಲ್ಲ ಎಂಬಭಿಪ್ರಾಯವನ್ನು ಸೂಚಿಸಿದ್ದಾರೆ. ''ಪ್ರಾಣಶಬ್ದ'' ಇತ್ಯಾದಿವಾಕ್ಯಕ್ಕೆ 'ಆಧ್ಯಾತ್ಮಮನ್ವಯವ್ಯತಿರೇಕತಃ । ಪ್ರಾಣಾದಿಹೇತುತಾ ದೃಷ್ಟೇಃ' ಎಂಬು-ದಾಗಿ ಅನುವ್ಯಾಖ್ಯಾನದಲ್ಲಿ ಹೇಳಿದ ಹೇತುವನ್ನೇ ಹೇಳಿದ್ದಾರೆ. ''ಜೀವನಕಾರಣತ್ವಸ್ಯ'' ಎಂಬ ಅಂಶದಿಂದ 'ಯದ್ದೇವಾನ್ ಪ್ರಾಣಯೋ ನವ । ತತ್ ಪ್ರಾಣಃ' ಎಂಬ ಭಾಷ್ಯೋದಾಹೃತವಾಕ್ಯದ ಉತ್ತರಾರ್ಧದಲ್ಲಿ ಬಂದ ವಿಷಯವೇ ಆಗಿದೆ ಎಂಬಭಿಪ್ರಾಯವನ್ನು ಇಟ್ಟುಕೊಳ್ಳಬೇಕು. ಈ ಅಂಶವನ್ನು ಸೂಚಿಸು-ವುದಕ್ಕಾಗಿಯೇ ಈ ಹಿಂದೆ ಟೀಕೆಯಲ್ಲಿ ಈ ವಾಕ್ಯದ ಉತ್ತರಾರ್ಧಕ್ಕೂ ಅರ್ಥವನ್ನು ವಿವರಿಸಿದ್ದಾರೆ.

ಇಲ್ಲಿ ಬರಬಹುದಾದ 'ಮುಖ್ಯವಾಯುವು ಅತೀಂದ್ರಿಯನಾಗಿರುವುದರಿಂದ ಪ್ರಾಣ ಇದ್ದಾಗಲೇ ಜೀವನ, ಪ್ರಾಣನಿಲ್ಲದಿದ್ದರೆ ಜೀವನವಿಲ್ಲ' ಎಂಬ ರೀತಿಯಿಂದ ಅನ್ವಯವ್ಯತಿರೇಕಗಳಿಂದ ಜೀವನ-ಹೇತುತ್ವವನ್ನು ಮುಖ್ಯವಾಯುವಿನಲ್ಲಿ ಹೇಗೆ ತಿಳಿದುಕೊಳ್ಳುವುದು?' ಎಂಬ ಶಂಕೆಗೆ ಉತ್ತರವಾಗಿ

ಪ್ರತ್ಯಕ್ಷದಿಂದ ಇಲ್ಲದಿದ್ದರೂ ಶಬ್ದದಿಂದ ಈ ಜ್ಞಾನ ಬಂದೇ ಬರುವುದು ಎಂಬ ಅಂಶವನ್ನು ''ತತ್ ಪ್ರಾಪ್ತಿಃ'' ಎಂಬ ವಾಕ್ಯದಿಂದ ವಿವರಿಸಿದ್ದಾರೆ. ಇಲ್ಲಿ ಉದಾಹರಿಸಿದ ವಾಕ್ಯವು ಎರಡನೇ ಅಧ್ಯಾಯದಲ್ಲಿ 'ಶ್ರೇಷ್ಠಶ್ಚ' ಎಂಬ ಸೂತ್ರದಲ್ಲಿ ಉದಾಹರಿಸಿದ ಸ್ಮೃತಿವಾಕ್ಯವಾಗಿದೆ.

ಹೀಗೆ ವಿವರಣೆ ನೀಡಿರುವುದರಿಂದಲೇ 'ಅಧ್ಯಾತ್ಮಗತಶಬ್ದಾನಾಮ್ ಅನ್ವಯವ್ಯತಿರೇಕೇ ವಿದ್ಯಮಾನೇऽಪಿ' ಎಂಬ ನ್ಯಾಯವಿವರಣದ ಅಂಶವನ್ನು ವಿವರಿಸಿದಂತೆ ಆಯಿತು. ಹೀಗೆ ಭಾಷ್ಯದಲ್ಲಿ 'ಪ್ರಸಿದ್ಧೇಃ' ಎಂಬ ಪದಕ್ಕೆ 'ಜೀವನಹೇತುತ್ವರೂಪವಾದ ಪ್ರಾಣಪದಪ್ರವೃತ್ತಿನಿಮಿತ್ತವು ಸ್ಮೃತಿಯ ಬಲದಿಂದ ವಾಯುವಿನಲ್ಲೇ ಪ್ರಸಿದ್ಧವಾಗಿದೆ' ಎಂಬರ್ಥವನ್ನೂ ಹೇಳಿದಂತೆ ಆಯಿತು ಎಂದು ಸುಧಾದಲ್ಲೂ 'ಭಾಷ್ಯದಲ್ಲೂ ಕೂಡ ಈ ಎಲ್ಲಾ ಅಂಶವನ್ನು ಸ್ವೀಕಾರಮಾಡುವುದಕ್ಕಾಗಿಯೇ ಪ್ರಸಿದ್ಧೇಃ ಎಂಬ ಪದವನ್ನು ಬಳಸಿದ್ದಾರೆ' (ಭಾಷ್ಯೇऽಪ್ಯಸ್ಯ ಸರ್ವಸ್ಯ ಸ್ವೀಕಾರಾರ್ಥಂ ಪ್ರಸಿದ್ಧೇರಿತ್ಯಾಹ) ಎಂದು ಹೇಳಿದ್ದಾರೆ. ಇದರಿಂದ ಈ ಪ್ರಮೇಯವನ್ನಾಶ್ರಯಿಸಿದ ಶಂಕೆಯು ಭಾಷ್ಯಾರೂಢವೇ ಆಗಿದೆ ಎಂದು ತಿಳಿಯಬೇಕು.

''ಮಹಾಭೋಗತ್ವ'' ಎಂಬ ಅಂಶವು ಬೇರೆ ಹೇತುಗಳಿಗೂ ಕೂಡ ಉಪಲಕ್ಷಣವಾಗಿದೆ. ಭಾಷ್ಯದಲ್ಲಿ 'ಉಕ್ತಮ್' ಎಂಬ ಪದದವರೆಗಿನ ಭಾಗವು ಫಲಪರವೂ ಕೂಡ ಆಗಿದೆ ಎಂದು ಒಪ್ಪಿಕೊಂಡು ''ಪ್ರಾಗುಕ್ತಾನಂದಮಯತ್ವ'' ಇತ್ಯಾದಿ ವಾಕ್ಯದಿಂದ ತಾತ್ಪರ್ಯವನ್ನು ವಿವರಿಸಿದ್ದಾರೆ. ''ಅನ್ಯತ್ರ'' ಎಂಬ ಪದಕ್ಕೆ 'ಜಡರೂಪವಾದ ಪ್ರಾಣವೃತ್ತ್ಯಾದಿಗಳಲ್ಲಿ' ಎಂದರ್ಥ.

'ಚೇಷ್ಟಾಯಾಂ ಬಾಹ್ಯವಾಯೌ ಚ ಮುಖ್ಯಪ್ರಾಣೇ ಚ ಗೀಯತೇ।
ಪ್ರಾಣಶಬ್ದಸ್ತ್ರಿಷು ಹ್ಯೇಷು ಮುಖೇ ಮುಖ್ಯಃ ಪ್ರಕೀರ್ತಿತಃ ॥'

ಪ್ರಾಣಶಬ್ದವು ಕ್ರಿಯೆಯಲ್ಲಿ, ಬಾಹ್ಯವಾಯುವಿನಲ್ಲಿ ಮತ್ತು ಮುಖ್ಯಪ್ರಾಣನಲ್ಲಿ ಪ್ರವೃತ್ತಿಯುಳ್ಳದ್ದಾಗಿದ್ದರೂ ಈ ಮೂರೂ ಅರ್ಥಗಳಲ್ಲಿ ಮುಖ್ಯಪ್ರಾಣನಲ್ಲಿ ಮುಖ್ಯವಾಗಿ ಪ್ರವೃತ್ತವಾಗುತ್ತದೆ.' ಹೀಗೆ ಎರಡನೇ ಅಧ್ಯಾಯದಲ್ಲಿ 'ನ ವಾಯುಕ್ರಿಯೇ ಪೃಥಗುಪದೇಶಾತ್'(೨/೪/೧೦) ಎಂಬ ಸೂತ್ರದ ಭಾಷ್ಯದಲ್ಲಿ ಹೇಳಿದ ಸ್ಮೃತಿಯಿಂದ ಅಲ್ಲದೆ 'ಹಸ್ತಚರಣಶ್ರವಣತ್ವಗಾದೀನ್ ಪ್ರಾಣಾನ್' ಎಂಬುದಾಗಿ ಭಾಗವತದಲ್ಲೂ ಪ್ರಯೋಗ ಮಾಡಿರುವುದರಿಂದ, ಲೋಕಪ್ರಸಿದ್ಧಿಯೂ ಕೂಡ ಈ ವಿಷಯದಲ್ಲಿ ಇದೆ' ಎಂದು ಅಭಿಪ್ರಾಯ. ಟೀಕೆಯಲ್ಲಿ ''ಮುಖ್ಯತ್ವಾತ್'' ಎಂದು ಹೇಳಿದ ಅಂಶವು ಉಪಲಕ್ಷಣವಾಗಿದೆ. ಸುಧಾದಲ್ಲಿ ಹೇಳಿದಂತೆ ವಾಯುವೃತ್ತ್ಯಾದಿ ಜಡವಸ್ತುವನ್ನು ಕುರಿತು 'ತ್ವಮೇವಮಭವಃ' ಎಂಬುದಾಗಿ ವ್ಯವಹಾರವನ್ನು ಮಾಡಲು ಸಾಧ್ಯವಿಲ್ಲದಿರುವುದರಿಂದಲೂ, 'ಓಷಧೇ ತ್ರಾಯಸ್ವ ಏನಮ್' ಇತ್ಯಾದಿ ಕಡೆಗಳಲ್ಲಿರುವಂತೆ ಅಭಿಮಾನಿದೇವತೆಯನ್ನು ಕುರಿತು ಈ ರೀತಿಯ ವ್ಯವಹಾರಹೊರಟಿದೆ ಎಂದೂ ತಿಳಿಯಬೇಕು.

ಭಾವದೀಪಃ– **ಹೇತ್ವಂತ್ವಂ ವ್ಯಞ್ಜಯನ್ನೇವ 'ನ ಚೈವಮ್' ಇತಿ ಸಾಧ್ಯೇನಾನ್ವಯಮಾಹ – ಯತೋऽಯಮಿತಿ ॥ 'ಪ್ರಾಣಸ್ತತ್ತ್ವ' ಇತ್ಯಸ್ಯಾರ್ಥಃ 'ಪ್ರಾಣೋ ವಿಷ್ಣುರೇವ' ಇತಿ । ಶ್ರೀಲಕ್ಷ್ಮೀಪತಿತ್ವಾದಿತಿ ॥ ಯದ್ಯಪಿ ತೈತ್ತಿರೀಯೇ 'ಹ್ರೀಶ್ಚ ತೇ ಲಕ್ಷ್ಮೀಶ್ಚ' ಇತ್ಯೇವ ಪಾಠಃ । ತಥಾಪ್ಯತ್ರ**

शाखान्तरस्थवाक्यान्यप्युदाहरणतया ग्राह्याणीति सूचयितुं 'श्रीश्च ते' इति शाखान्तरस्थवाक्यशेषो दर्शित इति भावः । तथा च वक्ष्यति दहरनये 'धृतेश्च' इति सूत्रे टीकायाम् 'अत्र स सेतुरिति वक्तव्ये एष सेतुरित्युक्तिः शाखान्तराणामप्यत्रोपसङ्ग्रहार्थम् । एवमन्यत्रापि' इति । एवं च अत्र तत्समाख्यया हीरपि श्रीरेवेति भावः । एतल्लिङ्गस्य अनुवाकान्तरस्थत्वेप्यनुवाकान्तरस्थप्राणनिष्ठत्वं च 'श्रीश्च ते' इति युष्मच्छब्दनिर्दिष्टस्यैव 'तद्वै त्वम्' इति निर्देशेन ऐक्यप्रत्यभिज्ञानबलेनेति ज्ञेयम् । अत एवोक्तं सुधायाम् – 'सन्निहितवाक्ये श्रूयमाणस्य श्रीलक्ष्मीपतित्वस्य' इति । आदिपदेन 'तमेव मृत्युममृतं तमाहुस्तं भर्तारं तमु गोप्तारमाहुः' इति, 'यस्तद्वेद ब्रह्मणैष रमते' इत्यादेर्ग्रहः । 'इत्यादितल्लिङ्गात्' इति भाष्यस्य पूर्वप्रतिज्ञयान्वयमाह – **प्राण इति** ॥

विष्णोरेकपत्नीकत्वप्रसिद्धेः 'पत्न्यौ' इति कथम्? इत्यतः स्थानभेदस्थरूपविशेषाभिप्रायेण तथोक्तिरित्युपेत्य स्थानभेदमाह – **वक्षःस्थलेति** ॥ लक्ष्मीस्तु अङ्कस्थिता इति भावः ।

ननु कथमेवं तत्वप्रदीपे हि 'अङ्काश्रिता श्रीः वक्षसि लक्षणभूता लक्ष्मीः' इत्युक्तेः? इत्यतः स्वोक्तार्थे सम्मतिमाह – **इति सम्प्रदायविद इति** (*) ॥

तथा चोदाहरन्ति –

**तस्याः श्रियः सजगतो जनको जनन्या वक्षोधिवासमकरोत् परमं विभूतेः ।**
**श्रीः स्वाः प्रजाः सकरुणेन निरीक्षणेन यत्र स्थितैधयत साधिपतींस्त्रिलोकान् ॥**

इत्यष्टमस्कन्धादिस्थानि वाक्यानि ।

---

(*) श्रीभूदुर्गाख्यरूपत्रयसम्भवेऽपि श्रीलक्ष्मीरिति च रूपद्वयाभावात् 'पत्न्यौ' इति द्विवचनानुपपत्तिरिति शङ्का माभूदिति भावेनोक्तम् – वक्षःस्थलेति ॥ कथमन्यथा 'श्रीवत्सः' इत्येव भगवल्लिङ्गस्य नाम न तु लक्ष्मीवत्स इति भावः । 'को नाम विष्ण्वनुपजीवक आस यस्य नित्याश्रयादभिहिताऽपि सा सदा श्रीः' इति तात्पर्यनिर्णये रमाऽपि यस्य वक्षसि नित्याश्रयात् सदा श्रीरित्यभिहिता इति सम्प्रदायप्रवर्तक-श्रीमदाचार्यैरेव कथितत्वात् सम्प्रदायविदः इत्युक्तम् ॥ – **गुर्वर्थदीपिका** ।

'ಯತೋऽಯಮ್' ಇತ್ಯಾದಿವಾಕ್ಯದಿಂದ ಹೇತುತ್ವವನ್ನು ತಿಳಿಸುತ್ತಲೇ 'ನ ಚೈವಮ್' ಎಂಬುದಾಗಿ ಭಾಷ್ಯದಲ್ಲಿರುವ ಸಾಧ್ಯಭಾಗದಿಂದ ಅನ್ವಯವನ್ನು ಹೇಳುತ್ತಿದ್ದಾರೆ. 'ಪ್ರಾಣಃ ತತ್ತು' ಎಂಬ ಸೂತ್ರಭಾಗದ ಅರ್ಥವನ್ನು ''ಪ್ರಾಕೋ ವಿಷ್ಣುರೇವ'' ಎಂದು ಹೇಳಿದ್ದಾರೆ. ''ಶ್ರೀಲಕ್ಷ್ಮೀಪತಿತ್ವಾತ್'' ಇತ್ಯಾದಿ-ವಾಕ್ಯಭಾಗದಿಂದ ಲಿಂಗವನ್ನು ಹೇಳುತ್ತಿದ್ದು; ಈ ಅಂಶವು ತೈತ್ತಿರೀಯಶಾಖೆಯಲ್ಲಿ 'ಹ್ರೀಶ್ಚ ತೇ ಲಕ್ಷ್ಮೀಶ್ಚ' ಎಂಬುದಾಗಿಯೇ ಉದಾಹೃತವಾಗಿದ್ದರೂ ಈ ಗ್ರಂಥದಲ್ಲಿ ಬೇರೆ ಶಾಖೆಗಳಲ್ಲಿರುವ ವಾಕ್ಯಗಳನ್ನೂ ಕೂಡ ಉದಾಹರಣರೂಪವಾಗಿ ಸ್ವೀಕರಿಸಬೇಕು ಎಂಬುದನ್ನು ಸೂಚಿಸುವುದಕ್ಕಾಗಿ 'ಶ್ರೀಶ್ಚ ತೇ ಲಕ್ಷ್ಮೀಶ್ಚ' ಎಂಬ ಬೇರೆಶಾಖೆಯಲ್ಲಿರುವ ವಾಕ್ಯಶೇಷವನ್ನು ತೋರಿಸಿದ್ದಾರೆ ಎಂದು ತಿಳಿಯಬೇಕು. ಇಲ್ಲಿ ಮಾತ್ರವಲ್ಲದೆ ಮುಂದೆ ದಹರಾಧಿಕರಣದಲ್ಲಿ 'ಧೃತೇಶ್ಚ' ಎಂಬ ಸೂತ್ರದಲ್ಲಿ 'ಅತ್ರ ಸ ಸೇತುರಿತಿ ವಕ್ತವ್ಯೇ ಏಷ ಸೇತುರಿತ್ಯುಕ್ತಿಃ ಶಾಖಾಂತರಾಣಾಮಪ್ಯತ್ರೋಪಸಂಗ್ರಹಾರ್ಥಮ್ । ಏವಮನ್ಯತ್ರಾಪಿ' (ಈ ಉದಾಹೃತ-ಶ್ರುತಿಯಲ್ಲಿ 'ಸ ಸೇತುಃ' ಎಂದೇ ಹೇಳಬೇಕಾಗಿದ್ದರೂ, 'ಏಷ ಸೇತುಃ' ಎಂದು ಉದಾಹರಿಸಿರುವುದು ಬೇರೆ ಶಾಖೆಯಲ್ಲಿರುವ ಮಂತ್ರಗಳನ್ನೂ ಕೂಡ ಇಲ್ಲಿ ಸ್ವೀಕರಿಸಬೇಕು ಎಂಬ ಅಭಿಪ್ರಾಯದಿಂದ. ಇದೇ ರೀತಿ ಬೇರೆಕಡೆಯಲ್ಲಿಯೂ ಕೂಡ ತಿಳಿದುಕೊಳ್ಳಬೇಕು) ಎಂದು ಟೀಕೆಯಲ್ಲಿ ವಿವರಿಸಿದ್ದಾರೆ. ಆದ್ದರಿಂದ ಅದಕ್ಕೆ ಸದೃಶವಾಗಿ ಇಲ್ಲಿ 'ಹ್ರೀ'ಯೂ ಕೂಡ ಲಕ್ಷ್ಮ್ಯಯೇ ಆಗಿದ್ದಾಳೆ ಎಂದು ಅಭಿಪ್ರಾಯ. ಈ ಲಿಂಗವು ಬೇರೊಂದು ಅನುವಾಕದಲ್ಲಿ ಇರುವುದಾಗಿದ್ದರೂ 'ಶ್ರೀಶ್ಚ ತೇ' ಇತ್ಯಾದಿಯಾಗಿ ಯುಷ್ಮತ್‌ಶಬ್ದದಿಂದ ನಿರ್ದೇಶಮಾಡಿರುವ ವ್ಯಕ್ತಿಯನ್ನೇ 'ತದ್ವೈ ತ್ವಮ್' ಎಂಬುದಾಗಿ ಯುಷ್ಮತ್‌ಶಬ್ದದಿಂದಲೇ ಮುಂದೆ ನಿರ್ದೇಶಮಾಡಿರುವುದರಿಂದ ಈ ಇಬ್ಬರೂ ಕೂಡ ಒಬ್ಬನೇ ವ್ಯಕ್ತಿಯಾಗಿದ್ದಾರೆ ಎಂಬ ಜ್ಞಾನಕ್ಕೆ ಪೂರಕವಾಗಿರುವುದರಿಂದ ಇನ್ನೊಂದು ಅನುವಾಕದಲ್ಲಿ ಪ್ರಾಣನಿಷ್ಠತ್ವವನ್ನು ನಾವು ತಿಳಿದುಕೊಳ್ಳ-ಬಹುದಾಗಿದೆ. ಆದ್ದರಿಂದಲೇ ಸುಧಾಗ್ರಂಥದಲ್ಲಿ 'ಸನ್ನಿಹಿತವಾಕ್ಯೇ ಶ್ರೂಯಮಾಣಸ್ಯ ಶ್ರೀಲಕ್ಷ್ಮೀಪತಿತ್ವಸ್ಯ' ಇತ್ಯಾದಿಯಾಗಿ ಹೇಳಿದ್ದಾರೆ.

''ಆದಿ''ಪದದಿಂದ 'ತಮೇವ ಮೃತ್ಯುಮಮೃತಂ ತಮಾಹುಸ್ತಂ ಭರ್ತಾರಂ ತಮು ಗೋಪ್ತಾರ-ಮಾಹುಃ' ಎಂಬ ಶ್ರುತಿಯನ್ನು 'ಯಸ್ತದ್ವೇದ ಬ್ರಹ್ಮಣೈಷ ರಮತೇ' ಇವೇ ಮೊದಲಾದ ಶ್ರುತಿಗಳನ್ನು ಸ್ವೀಕರಿಸಬೇಕು.

'ಇತ್ಯಾದಿಲಿಂಗಾತ್' ಎಂಬ ಭಾಷ್ಯಭಾಗಕ್ಕೆ ಹಿಂದೆ ಹೇಳಿದ ಪ್ರತಿಜ್ಞಾಭಾಗದೊಂದಿಗೆ ಅನ್ವಯವನ್ನು ''ಪ್ರಾಣ'' ಇತ್ಯಾದಿವಾಕ್ಯಭಾಗದಿಂದ ಹೇಳುತ್ತಿದ್ದಾರೆ. ವಿಷ್ಣುವು ಒಬ್ಬನೇ ಪತ್ನಿಯುಳ್ಳವ ಎಂಬ ಪ್ರಸಿದ್ಧಿ ಇರುವುದರಿಂದ ಇಬ್ಬರು ಪತ್ನಿಯರು ಎಂಬ ಅಂಶವನ್ನು ಶ್ರುತಿ ಹೇಗೆ ಹೇಳಿತು? ಎಂಬ ಪ್ರಶ್ನೆಗೆ ಉತ್ತರವಾಗಿ ಸ್ಥಾನಭೇದಗಳಲ್ಲಿರುವ ರೂಪವಿಶೇಷವನ್ನು ಹೇಳುವ ಅಭಿಪ್ರಾಯದಿಂದ ಹಾಗೆ ಹೇಳಿದ್ದಾರೆ ಎಂದು ಒಪ್ಪಿಕೊಂಡು, ಸ್ಥಾನಭೇದವನ್ನು ''ವಕ್ಷಸ್ಥಲ'' ಇತ್ಯಾದಿ ವಾಕ್ಯದಿಂದ ವಿವರಿಸಿದ್ದಾರೆ. ಇದೇ ಸಂದರ್ಭದಲ್ಲಿ ಲಕ್ಷ್ಮೀದೇವಿಯು ತೊಡೆಯಲ್ಲಿ ಕುಳಿತಿದ್ದಾಳೆ ಎಂದೂ ತಿಳಿಯಬೇಕು.

ಇಲ್ಲಿ ಹೀಗೊಂದು ಪ್ರಶ್ನೆ ಬರಬಹುದು. ತತ್ತ್ವಪ್ರದೀಪದಲ್ಲಿ 'ತೊಡೆಯಲ್ಲಿ ಕುಳಿತವಳು ಶ್ರೀದೇವಿ; ಎದೆಯಲ್ಲಿ ಲಕ್ಷಣತ್ವೇನ ಇರುವವಳು ಲಕ್ಷ್ಮೀದೇವಿ' ಎಂದು ವ್ಯತ್ಯಾಸವಾಗಿ ಹೇಳಿದ್ದು ನೀವು ಅದನ್ನು

ಹಿಂದು ಮುಂತಾಗಿ ಹೇಳಿದ್ದೀರಿ ಎಂಬ ಪ್ರಶ್ನೆಗೆ ಉತ್ತರವಾಗಿ ತಾವು ಹೇಳಿದ ಈ ಅರ್ಥಕ್ಕೆ ''ಇತಿ ಸಂಪ್ರದಾಯವಿದಃ'' ಎಂಬುದಾಗಿ ಸಮ್ಮತಿಯನ್ನು ತಿಳಿಸುತ್ತಿದ್ದಾರೆ. ಈ ವಿಷಯದಲ್ಲಿ

'ತಸ್ಯಾಃ ಶ್ರಿಯಃ ಸ ಜಗತೋ ಜನಕೋ ಜನನ್ಯಾ ವಕ್ಷೋಧಿವಾಸಮಕರೋತ್ ಪರಮಂ ಏಭೂತೇಃ।
ಶ್ರೀಃ ಸ್ವಾಃ ಪ್ರಜಾಃ ಸಕರುಣೇನ ನಿರೀಕ್ಷಣೇನ ಯತ್ರ ಸ್ಥಿತೈಧಯತ ಸಾಧಿಪತೀಂಸ್ತ್ರಿಲೋಕಾನ್ ॥'

ಇತ್ಯಾದಿಯಾಗಿ ಅಷ್ಟಮಸ್ಕಂಧವೇ ಮೊದಲಾದ ಕಡೆಗಳಲ್ಲಿ ಬರುವ ವಾಕ್ಯವನ್ನು ಉದಾಹರಣೆಯಾಗಿ ಕೊಡಬಹುದು.

**ಭಾವದೀಪಃ– 'ಲಿಙ್ಗಂ ಬಲವದೇವ ಸ್ಯಾತ್' ಇತ್ಯನುಭಾಷ್ಯೇ 'ಸೌತ್ರೈವಕಾರಸ್ಯಾನುವಾದೇನ ಬಲವದಿತಿ ವ್ಯಾಖ್ಯಾನಮ್' ಇತಿ ಸುಧೋಕ್ತದಿಶಾ ಸೌತ್ರೈವಕಾರೇಣ ಲಿಙ್ಗಸ್ಯ ಪ್ರಾಬಲ್ಯಮುಕ್ತಮ್ । ತದ್ವ್ಯಕ್ತಿಪರಮ್ 'ಅನನ್ಯಥಾಸಿದ್ಧಲಿಙ್ಗೈರ್ಭಗವದ್ವಿಷಯತ್ವಮೇವ' ಇತಿ ನ್ಯಾಯವಿವರಣಾಂಶಂ ಶಙ್ಕಾಪೂರ್ವಂ ವಿವೃಣೋತಿ – ಕಥಮಿತಿ ॥ ನಿರವಕಾಶತ್ವಾದಿತಿ ॥ ಲಕ್ಷ್ಮ್ಯಾದಿಶಬ್ದಾನಾಮನ್ಯತ್ರಾಪ್ರಯೋಗಾತ್ ಮುಖ್ಯಾರ್ಥತ್ಯಾಗಾಪಾತಾತ್ । ಅನ್ಯಪರತ್ವೇ 'ನಾಮಾನಿ' ಇತಿವತ್ ಮಾನಾಭಾವಾತ್ ನಾನ್ಯತ್ರ ಯೌಗಿಕತೇತಿ ಭಾವಃ । ಅತ ಏವ ಸುಧಾಯಾಂ 'ಶ್ರೀಲಕ್ಷ್ಮೀಪತಿತ್ವಸ್ಯಾಪ್ಯನ್ಯತ್ರಾಶಕ್ಯಚಿನ್ತನಸ್ಯ ಬಲವತ್ವಾತ್' ಇತ್ಯುಕ್ತಮ್ । ಸಾವಕಾಶತ್ವಾದಿತಿ ॥ ವಕ್ಷ್ಯಮಾಣದಿಶೇತಿ ಭಾವಃ । 'ಬಾಧೋಪಪತ್ತೇಃ' ಇತ್ಯನೇನ ಪ್ರಮಾಣಾಶ್ರಿತಶಙ್ಕಾऽಪಾಸ್ತಾ ।**

'ಲಿಂಗಂ ಬಲವದೇವ ಸ್ಯಾತ್' ಎಂಬುದಾಗಿ ಅನುವ್ಯಾಖ್ಯಾನದಲ್ಲಿ ಹೇಳಿದ್ದು ಇಲ್ಲಿ ಸೂತ್ರಗತವಾದ ಏವಕಾರವನ್ನು ಅನುವಾದ ಮಾಡಿ; 'ಬಲವತ್' ಎಂಬ ಅಂಶವನ್ನು 'ವ್ಯಾಖ್ಯಾನರೂಪವಾಗಿ ಹೇಳಿದ್ದಾರೆ' ಎಂದು ಸುಧೆಯಲ್ಲಿ ಹೇಳಿರುವಂತೆ ಸೂತ್ರಗತವಾದ ಏವಕಾರದಿಂದಲೇ ಲಿಂಗವು ಪ್ರಬಲ ಎಂದು ತಿಳಿಸಲಾಗಿದೆ. ಈ ವಿಷಯವನ್ನು ಸ್ಪಷ್ಟಪಡಿಸುವ 'ಅನನ್ಯಥಾಸಿದ್ಧಲಿಂಗೈರ್ಭಗವದ್ವಿಷಯತ್ವಮೇವ' ಎಂಬ ನ್ಯಾಯವಿವರಣದ ಅಂಶವನ್ನು ಶಂಕೆಪೂರ್ವಕವಾಗಿ ''ಕಥಂ'' ಇತ್ಯಾದಿವಾಕ್ಯದಿಂದ ವಿವರಿಸುತ್ತಿದ್ದಾರೆ.

ಲಕ್ಷ್ಮ್ಯಾದಿಶಬ್ದಗಳಿಗೆ ವಿಷ್ಣುಪತ್ನಿಯ ಹೊರತಾಗಿ ಬೇರೆ ಕಡೆ ಪ್ರಯೋಗ ಇಲ್ಲದಿರುವುದರಿಂದ ಪ್ರಾಣ-ಭಾರ್ಯಾಪರವಾಗಿ ವ್ಯಾಖ್ಯಾನಮಾಡಿದರೆ ಮುಖ್ಯಾರ್ಥವನ್ನು ಬಿಟ್ಟಂತೆ ಆಗುತ್ತದೆ. ಹೀಗೆ ಪ್ರಾಣ-ಭಾರ್ಯಾಪರವಾಗಿ ವ್ಯಾಖ್ಯಾನಮಾಡಿದರೆ 'ನಾಮಾನಿ ಸರ್ವಾಣಿ' ಇತ್ಯಾದಿ ಶ್ರುತಿಗಳಂತೆ ಪ್ರಮಾಣ ಇಲ್ಲದಿರುವುದರಿಂದ ವಿಷ್ಣುಪತ್ನಿಯ ಹೊರತಾಗಿ ಬೇರೆ ಕಡೆ ಯೌಗಿಕತ್ವವು ಇಲ್ಲ ಎಂಬ ಅಭಿಪ್ರಾಯವನ್ನು ''ನಿರವಕಾಶತ್ವಾತ್'' ಎಂಬ ವಾಕ್ಯಭಾಗದಿಂದ ಹೇಳಿದ್ದಾರೆ. ಆದ್ದರಿಂದಲೇ ಸುಧೆಯಲ್ಲಿ ''ಶ್ರೀಲಕ್ಷ್ಮೀಪತಿತ್ವವು ಬೇರೆಕಡೆ ಚಿಂತಿಸಲು ಅಶಕ್ಯವಾದುದರಿಂದ ಈ ಲಿಂಗವೇ ಬಲವತ್ತಾಗಿದೆ' ಎಂದು ಹೇಳಿದ್ದಾರೆ.

''ಸಾವಕಾಶತ್ವಾತ್'' ಎಂಬ ವಾಕ್ಯಭಾಗದಿಂದ ಮುಂದೆ ವಿವರಿಸಲಿರುವ ಅಂಶವನ್ನು ಸ್ವೀಕರಿಸಬೇಕು. ''ಬಾಧೋಪಪತ್ತೇಃ'' ಎಂಬ ವಾಕ್ಯಭಾಗದಿಂದ ಪ್ರಮಾಣಾಶ್ರಿತವಾದ ಶಂಕೆಯನ್ನು ನಿರಾಕರಣೆ ಮಾಡಿದ್ದಾರೆ.

**ಭಾವದೀಪ.** – ಪ್ರಮೇಯಾಶ್ರಿತಾಮಪಿ ತಾಮನೂದ್ಯ 'ಅಧ್ಯಾತ್ಮಗೈಶ್ಚ ಪ್ರಾಣಾದ್ಯೈರೇಕೋ ಮುಖ್ಯತಯೋದಿತಃ' ಇತ್ಯಾದ್ಯನುಭಾಷ್ಯೋಕ್ತದಿಶಾ ನಿರಾಹ – **ರೂಢೀತಿ ॥** 'ಈಶಾನಃ' ಇತಿ ಸಹಸ್ರನಾಮಸು । ಆದಿಪದೇನ 'ಪ್ರಾಣಸ್ಯ ಪ್ರಾಣಃ' ಇತಿ ತಲವಕಾರೇ, 'ಪ್ರಾಣಸ್ಯ ಪ್ರಾಣಸ್ತು' ಇತಿ ಕಾಣ್ವಶ್ರುತೌ, 'ಪ್ರಾಣಬನ್ಧನಂ ಹಿ ಸೋಮ್ಯ ಮನಃ' ಇತಿ ಛಾನ್ದೋಗ್ಯಾದೌ ಚ ತತ್ರ ತತ್ರ ವಿಷ್ಣೌ ಪ್ರಯೋಗಬಾಹುಲ್ಯಾದಿತಿ ಗ್ರಾಹ್ಯಮ್ ।

ಮಹಾಯೋಗಭಾವಂ ವ್ಯಕ್ತೀಕರ್ತುಮುಕ್ತಮನೂದ್ಯ 'ಪ್ರೇರಕೋऽಸ್ಯಾಪಿ ಯದ್ಧರಿಃ' ಇತ್ಯನುಭಾಷ್ಯೋಕ್ತಮಾಹ – **ನ ಚೇತಿ ॥ ಅಧೀನತ್ವಾದಿತಿ ॥** ಪೃಥಕ್ ಭಗವದ್ಗತತ್ವಾಚ್ಚೇತ್ಯಪಿ ಧ್ಯೇಯಮ್ । **ಶ್ರುತಿರಿತಿ ॥** ಕಾಠಕೇ 'ಇತರೇಣ ತು ಜೀವನ್ತಿ' ಇತಿ ಯದ್ಗತತ್ವಂ, 'ಯಸ್ಮಿನ್ನೇತೌ' ಇತ್ಯನೇನ ತು ಪ್ರಾಣಗತಸ್ಯ ತದಧೀನತ್ವಮುಚ್ಯತ ಇತಿ ಜ್ಞೇಯಮ್ । 'ಇತರೇಣ' ಇತ್ಯೇತಚ್ಚ ವಿಷ್ಣುಪರಮ್ ।

ಪೂರ್ವತ್ರ 'ಮಧ್ಯೇ ವಾಮನಮ್' ಇತಿ ವಾಮನಶಬ್ದಾತ್ ಉತ್ತರತ್ರ ಚ 'ಗುಹ್ಯಂ ಬ್ರಹ್ಮ ಸನಾತನಮ್' ಇತಿ ಬ್ರಹ್ಮಶಬ್ದಾತ್ 'ಯೇನ ಜಾತಾನಿ ಜೀವನ್ತಿ' ಇತಿ ಸಮಾಖ್ಯಾನಾಚ್ಚ ।

ಪ್ರಮೇಯವನ್ನು ಆಶ್ರಯಿಸಿ ಬರುವ ಶಂಕೆಯನ್ನೂ ಕೂಡ ಅನುವಾದ ಮಾಡಿ 'ಅಧ್ಯಾತ್ಮಗೈಶ್ಚ ಪ್ರಾಣಾದ್ಯೈಃ ಏಕೋ ಮುಖ್ಯತಯೋದಿತಃ' ಇತ್ಯಾದಿಯಾಗಿ ಅನುವ್ಯಾಖ್ಯಾನದಲ್ಲಿ ಹೇಳಿದಂತೆ ''ರೂಢಿ'' ಇತ್ಯಾದಿವಾಕ್ಯದಿಂದ ನಿರಾಕರಣೆ ಮಾಡುತ್ತಿದ್ದಾರೆ. ''ಈಶಾನ'' ಇತ್ಯಾದಿವಾಕ್ಯವು ವಿಷ್ಣುಸಹಸ್ರನಾಮದಲ್ಲಿ ಬಂದ ವಾಕ್ಯವಾಗಿದೆ. ''ಆದಿ'' ಪದದಿಂದ 'ಪ್ರಾಣಸ್ಯ ಪ್ರಾಣಃ' ಎಂಬ ತಲವಕಾರೋಪನಿಷತ್ತಿನ ವಾಕ್ಯವನ್ನು ''ಪ್ರಾಣಸ್ಯ ಪ್ರಾಣಸ್ತು'' ಎಂಬ ಕಾಣ್ವಶ್ರುತಿಯನ್ನೂ 'ಪ್ರಾಣಬಂಧನಂ ಹಿ ಮನಃ ಸೋಮ್ಯ' ಎಂಬ ಛಾಂದೋಗ್ಯವಾಕ್ಯವನ್ನೂ ಹೀಗೆ ಅಲ್ಲಲ್ಲಿ ವಿಷ್ಣುವನ್ನು ಕುರಿತು ಪ್ರಾಣಶಬ್ದದ ಪ್ರಯೋಗವು ವಿಪುಲವಾಗಿ ಬಂದಿದೆ ಎಂಬ ಆಂಶವನ್ನು ಸ್ವೀಕರಿಸಬೇಕು.

ಪ್ರಾಣಶಬ್ದಕ್ಕೆ ವಿಷ್ಣುವಿನಲ್ಲಿ ಮಹಾಯೋಗವಿದೆ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸುವುದಕ್ಕಾಗಿ ''ನ ಚ'' ಇತ್ಯಾದಿವಾಕ್ಯದಿಂದ ಹಿಂದೆ ಹೇಳಿದ ಆಂಶವನ್ನು ಅನುವಾದ ಮಾಡಿ 'ಪ್ರೇರಕೋऽಸ್ಯಾಪಿ ಯದ್ಧರಿಃ' ಎಂದು ಅನುವ್ಯಾಖ್ಯಾನದಲ್ಲಿ ಹೇಳಿದ ಆಂಶವನ್ನೇ ವಿವರಿಸಿದ್ದಾರೆ. ''ಅಧೀನತ್ವಾತ್'' ಎಂಬ ವಾಕ್ಯಭಾಗದಿಂದ 'ಪ್ರತ್ಯೇಕವಾಗಿ ಭಗವದ್ಗತವಾಗಿರುದರಿಂದಲೂ ಕೂಡ' ಎಂಬ ಆಂಶವನ್ನು ಸ್ವೀಕರಿಸಬೇಕು.

ಟೀಕೆಯಲ್ಲಿ ಉದಾಹರಿಸಿದ ಶ್ರುತಿಯು ಕಾಠಕಶ್ರುತಿಯಾಗಿದ್ದು, 'ಇತರೇಣ ತು ಜೀವಂತಿ' ಎಂಬ ಆಂಶದಿಂದ ವಿಷ್ಣುವು ಪ್ರಾಣಗತನಾಗಿದ್ದಾನೆ ಎಂಬ ಆಂಶವನ್ನು; ''ಯಸ್ಮಿನ್ ಏತೌ'' ಎಂಬ ಭಾಗದಿಂದ ಪ್ರಾಣನು ವಿಷ್ಣುವಿನ ಅಧೀನನಾಗಿದ್ದಾನೆ ಎಂಬ ಆಂಶವನ್ನು ಹೇಳಿದ್ದಾರೆ ಎಂದು ತಿಳಿಯಬೇಕು. ''ಇತರೇಣ'' ಎಂಬ ಆಂಶವೂ ಕೂಡ ವಿಷ್ಣುಪರವೇ ಆಗಿದೆ.

ಪ್ರಾರಂಭದಲ್ಲಿ 'ಮಧ್ಯೇ ವಾಮನಮ್' ಎಂಬುದಾಗಿ ವಾಮನಶಬ್ದದಿಂದ, ನಂತರದಲ್ಲಿ 'ಗುಹ್ಯಂ ಬ್ರಹ್ಮ ಸನಾತನಮ್' ಎಂಬುದಾಗಿ ಬ್ರಹ್ಮಶಬ್ದದಿಂದ ವಿಷ್ಣುವನ್ನೇ ಸ್ವೀಕರಿಸಿದ್ದು, 'ಯೇನ ಜಾತಾನಿ

ಜೀವಂತಿ' ಎಂಬುದಾಗಿ ವಿಷ್ಣುವಿನ ಮಹಿಮೆಯನ್ನು ವರ್ಣನೆ ಮಾಡಿರುವುದರಿಂದಲೂ ವಿಷ್ಣುವೇ ಮುಖ್ಯವಾಗಿ ಜಗಜ್ಜೀವನವನ್ನು ಕೊಡುವವನು ಎಂದು ತಿಳಿಯಬೇಕು.

**ಭಾವದೀಪಃ–** ಅತ್ರ ಯದ್ಯಪಿ ಮುಖ್ಯಪ್ರಾಣರೂಪಯೋರೇವ ಈಶಾಧೀನತ್ವಮುಚ್ಯತೇ ನ ತು ತಯೋರ್ಜಗ- ಜ್ಜೀವನಕಾರಣತ್ವಸ್ಯಾಪಿ । ಪ್ರತ್ಯುತ 'ನ ಪ್ರಾಣೇನ' ಇತಿ ನಿಷೇಧಶ್ಚ । ತಥಾಪಿ 'ಪ್ರಾಣಾದಿದ- ಮಾವಿರಾಸೀತ್ ಪ್ರಾಣೋ ಧತ್ತೇ' ಇತಿ ಪಞ್ಚವೃತ್ತ್ಯೈತತ್ ಪ್ರವರ್ತತೇ । 'ಪ್ರಾಣೋ ವಾ ಪಞ್ಚವೃತ್ತಿರಿತಿ । ಉತ್ಕ್ರಾನ್ತಪ್ರಾಣಾನ್ ಶೂಲೇನ ಸಮಾಸಂ ವ್ಯತಿಷನ್ ದಹೇತ್ ನೈನಂ ಬ್ರೂಯುಃ ಪಿತೃಹಾಸೀತಿ । ತಥಾ ಪ್ರಾಣ ಉತ್ಕ್ರಮಿಷ್ಯನ್ಯಥಾ ಸುಹಯಃ ಪಟ್ಟೀಶಶಙ್ಕೂನ್ ಸಞ್ಚಿದೇದೇವಮಿತರಾನ್ ಪ್ರಾಣಾನ್ ಸಮಖಿದದ್' ಇತ್ಯಾದಿಶ್ರುತಿಭಿಃ 'ಯತ್ಪ್ರಾಪ್ತಿಃ' ಇತ್ಯಾದಿಸ್ಮೃತಿಭಿಶ್ಚ ಮುಖ್ಯಪ್ರಾಣ-ಸ್ಯಾಪಿ ಜೀವನಹೇತ್ವತ್ವಸ್ಯ ಪ್ರಮಿತತ್ವೇನ 'ಪ್ರಾಣೇನ ಸ್ವತನ್ತ್ರೇಣ ಮರ್ತ್ಯೋ ನ ಜೀವತಿ' ಇತ್ಯೇವಂರೂಪೇಣ ತತ್ಸ್ವಾತನ್ತ್ರ್ಯಮಾತ್ರನಿರಾಸಾರ್ಥತ್ವಾದೇತತ್ ಶ್ರುತೇಃ ।

ನ ಕೇವಲಂ ಪ್ರಾಣ ಏವ ಚೇತನಾನಾಂ ವಿಧಾರಕಃ ಕಿನ್ತು 'ವಿಷ್ಣುಂ ಸಮಾಶ್ರಿತ್ಯ ಪ್ರಾಣೋ ಜೀವಾನ್ ಬಿಭರ್ತ್ಯಯಮ್' ಇತಿ ಕಾಠಕಭಾಷ್ಯೋಕ್ತಮಹಾಕೌರ್ಮಸ್ಮೃತೌ ತಥೈವ ವ್ಯಾಖ್ಯಾನಾಚ್ಚ । ಅತ ಏವ ಸುಧಾಯಾಮ್ 'ಪ್ರೇರಕೋऽಸ್ಯಾಪಿ' ಇತ್ಯತ್ರ 'ಅಸ್ಯ ಜೀವನಾದೇಃ ಪ್ರೇರಕೋ ಹರಿಃ' ಇತ್ಯಾದ್ಯನೇಕಾರ್ಥ-ಮಿಧಾಯೋಕ್ತಮ್ 'ಸಂವದತೀಮಂ ಸರ್ವಮಪ್ಯರ್ಥಂ ಶ್ರುತಿರ್ನ ಪ್ರಾಣೇನ ಇತ್ಯೇವಂ ಜಾತೀಯಕಾ' ಇತಿ । ಅತ್ರಾಪಿ ಮುಖ್ಯತ್ವೋಪಪಾದನಂ ಪೂರ್ವತ್ರೇವಾತ್ರಾನುವೃತ್ತಾವಧಾರಣಲಬ್ಧಂ ಬೋಧ್ಯಮ್ ।

ವಾಸ್ತವಿಕವಾಗಿ ಇಲ್ಲಿ ಮುಖ್ಯಪ್ರಾಣನ ರೂಪಗಳಿಗೆ ಮಾತ್ರ ಈಶಾಧೀನತ್ವವನ್ನು ಹೇಳಿದ್ದಾರೆಯೇ ವಿನಹ ಆ ರೂಪಗಳಿಗೆ ಜಗಜ್ಜೀವನಕಾರಣತ್ವವನ್ನು ಹೇಳಿಲ್ಲ. ಅದಕ್ಕೆ ಬದಲಾಗಿ 'ನ ಪ್ರಾಣೇನ' ಎಂಬುದಾಗಿ ನಿಷೇಧವನ್ನೇ ಮಾಡಿದ್ದಾರೆ. ಹಾಗಿದ್ದರೂ 'ಪ್ರಾಣಾದಿದಮಾವಿರಾಸೀತ್ ಪ್ರಾಣೋ ಧತ್ತೇ' (ಪ್ರಾಣನಿಂದ ಈ ಜಗತ್ತು ಹುಟ್ಟಿದೆ; ಪ್ರಾಣನೇ ಈ ಜಗತ್ತನ್ನು ಧಾರಣೆ ಮಾಡುತ್ತಾನೆ) ಎಂಬುದಾಗಿ 'ಪಂಚವೃತ್ತ್ಯಾ ಏತತ್ ಪ್ರವರ್ತತೇ । ಪ್ರಾಣೋ ವಾವ ಪಂಚವೃತ್ತಿಃ' (ಈ ಜಗತ್ತು ಪಂಚವೃತ್ತಿಯಿಂದಲೇ ಪ್ರವೃತ್ತಿಯನ್ನು ಮಾಡುತ್ತಿದೆ; ಪಂಚವೃತ್ತಿಯೆಂದರೆ ಪ್ರಾಣನೇ ಆಗಿದ್ದಾನೆ) 'ಉತ್ಕ್ರಾಂತಪ್ರಾಣಾನ್ ಶೂಲೇನ ಸಮಾಸಂ ವ್ಯತಿಷನ್ ದಹೇತ್ । ನೈನಂ ಬ್ರೂಯುಃ ಪಿತೃಹಾಸಿ' (ಪ್ರಾಣ ಬಿಟ್ಟುಹೋದನಂತರ ಶರೀರವನ್ನು ಶೂಲದಿಂದ ಸಂಪೂರ್ಣವಾಗಿ ತಿವಿದರೂ, ಸುಟ್ಟರೂ ಅಂತಹ ತಿವಿದ ವ್ಯಕ್ತಿಯನ್ನು ತಂದೆಯ ಮರಣಕ್ಕೆ ಕಾರಣನಾದವನು ಎಂದು ಯಾರೂ ಹೇಳಲಾರರು) ಎಂಬುದಾಗಿ ಹಾಗೆಯೇ 'ಪ್ರಾಣ ಉತ್ಕ್ರಮಿಷ್ಯನ್ ಯಥಾ ಸುಹಯಃ ಪಟ್ಟೀಶಶಂಕೂನ್ ಸಂಖಿದೇತ್ ಏವಮ್ ಇತರಾನ್ ಪ್ರಾಣಾನ್ ಸಮಖಿದತ್' (ಛಾಂದೋಗ್ಯೋಪನಿಷತ್ ಐದನೇ ಅಧ್ಯಾಯ) (ಪ್ರಾಣದೇವರು ಈ ಶರೀರದಿಂದ ಹೊರಟಾಗ ಹೇಗೆ ಉತ್ತಮವಾದ ಕುದುರೆಯು ಕಟ್ಟಿಹಾಕಿದ್ದಂತೆಯೇ ಹೊರಡಲು ಪ್ರಾರಂಭಿಸಿದಾಗ ತನ್ನನ್ನು ಕಟ್ಟಿದ ಹಗ್ಗ ಮತ್ತು ಶಂಕುಗಳನ್ನು ಕಿತ್ತು ತನ್ನ ಜೊತೆಯೇ ಹೊರಡಿಸುತ್ತದೋ ಹಾಗೆಯೇ ಪ್ರಾಣದೇವರು ತನ್ನ

ಜೊತೆಗಿರುವ ಇತರ ಇಂದ್ರಿಯಾಭಿಮಾನಿದೇವತೆಗಳನ್ನು ಜೊತೆಗೆ ಸೆಳೆದುಕೊಂಡರು) ಇತ್ಯಾದಿ ಶ್ರುತಿಗಳಿಂದ 'ಯತ್ಪ್ರಾಪ್ತಿಃ' ಇತ್ಯಾದಿ ಸ್ಮೃತಿಗಳಿಂದಲೂ ಕೂಡ ಮುಖ್ಯಪ್ರಾಣನಿಗೂ ಜೀವನಹೇತುತ್ವವು ಪ್ರಮಿತವಾಗಿರುವುದರಿಂದ, 'ಪ್ರಾಣೇನ ಸ್ವತಂತ್ರೇಣ ಮರ್ತ್ಯೋ ನ ಜೀವಂತಿ' (ಸ್ವತಂತ್ರವಾಗಿ ಪ್ರಾಣನಿಂದಲೇ ಮರ್ತ್ಯನು ಜೀವಿಸುವುದಿಲ್ಲ) ಎಂಬ ರೀತಿಯಲ್ಲಿ ಪ್ರಾಣಗತವಾದ ಸ್ವಾತಂತ್ರ್ಯಮಾತ್ರವನ್ನು ನಿರಾಸ ಮಾಡುವುದೇ ಈ ಶ್ರುತಿಯ ಅಭಿಪ್ರಾಯವಾಗಿದೆ. ಇದಕ್ಕೆ ಸಂವಾದಿಯಾಗಿ

'ನ ಕೇವಲಂ ಪ್ರಾಣ ಏವ ಚೇತನಾನಾಂ ವಿಧಾರಕಃ।
ಕಿಂತು ವಿಷ್ಣುಂ ಸಮಾಶ್ರಿತ್ಯ ಪ್ರಾಣೋ ಜೀವಾನ್ ಬಿಭರ್ತ್ಯಯಮ್ ॥'

(ಕೇವಲ ಪ್ರಾಣದೇವರೇ ಜೀವರುಗಳನ್ನು ಧಾರಣೆ ಮಾಡಿದ್ದು ಅಲ್ಲ; ವಿಷ್ಣುವನ್ನು ಆಶ್ರಯಿಸಿಕೊಂಡು ಪ್ರಾಣದೇವರು ಜೀವರುಗಳನ್ನು ಧಾರಣೆ ಮಾಡಿದ್ದಾರೆ) ಹೀಗೆ ಕಾಠಕಭಾಷ್ಯದಲ್ಲಿ ಉದಾಹರಿಸಿದ ಮಹಾಕೌರ್ಮಸ್ಮೃತಿಯಲ್ಲಿ ಹಿಂದೆ ಹೇಳಿದಂತೆಯೇ ವ್ಯಾಖ್ಯಾನಮಾಡಿದ್ದಾರೆ. ಆದ್ದರಿಂದಲೇ ಸುಧೆಯಲ್ಲಿ ಕೂಡ 'ಪ್ರೇರಕೋऽಸ್ಯಾಪಿ' ಎಂಬ ಅನುವ್ಯಾಖ್ಯಾನಭಾಗದಲ್ಲಿ ಅಸ್ಯ = ಈ ಜೀವನಾದಿಗಳಿಗೆ, ಪ್ರೇರಕಃ = ಪ್ರೇರಕನಾಗಿರುವವನು; ಶ್ರೀಹರಿಯೇ ಆಗಿದ್ದಾನೆ ಎಂಬಿತ್ಯಾದಿಯಾಗಿ ಆನೇಕಾರ್ಥವನ್ನು ವಿವರಿಸಿ 'ಸಂವದತೀಮಂ ಸರ್ವಮಪ್ಯರ್ಥಂ ಶ್ರುತಿರ್ನ ಪ್ರಾಣೇನ ಇತ್ಯೇವಂ ಜಾತೀಯಕಾ' (ನ ಪ್ರಾಣೇನ ಎಂಬ ಶ್ರುತಿಯಲ್ಲಿರುವ ಈ ರೀತಿಯಾದ ಎಲ್ಲಾ ಶ್ರುತಿಯೂ ಕೂಡ ನಾವು ಇಲ್ಲಿ ವಿವರಿಸಿದ ಎಲ್ಲಾ ಅರ್ಥವನ್ನು ಹೀಗೆಯೇ ವಿವರಿಸುತ್ತದೆ) ಎಂದು ಹೇಳಿದ್ದಾರೆ. ಇಲ್ಲೂ ಕೂಡ ಮುಖ್ಯತ್ವದ ಉಪಪಾದನೆಯು ಹಿಂದೆ ಹೇಳಿದಂತೆ ಇಲ್ಲಿ ಅನುವೃತ್ತವಾದ ತತ್ ತು ಎಂಬಲ್ಲಿರುವ ಅವಧಾರಣಾಪದದಿಂದ ಲಬ್ಧವಾಗಿದೆ ಎಂದು ತಿಳಿಯಬೇಕು.

**ಭಾವದೀಪಃ–** 'ಮುಖೇ ಮುಖ್ಯಃ' ಇತ್ಯುಕ್ತಿಸ್ತು 'ಪ್ರಾಣ ಏವಾಕರಣಸ್ತಸ್ಮಾತ್ ಮುಖ್ಯಸ್ತಸ್ಮಾತ್ ಮುಖ್ಯಃ' ಇತಿ ಶ್ರುತೇಶ್ಚಕ್ಷುರಾದಿಕರಣಭೂತಪ್ರಾಣಾಪೇಕ್ಷಯೈವ । ತದುಕ್ತಮ್ ಐತರೇಯಭಾಷ್ಯೇ –

**ಅನ್ಯವ್ಯಪೇಕ್ಷಯಾ ವಾಯೌ ಮುಖ್ಯವೃತ್ತಿರ್ವಿಧೀಯತೇ ।**
**ತಸ್ಮಾತ್ ಪ್ರಾಣಾದಿಶಬ್ದಾಶ್ಚ ವಿಷ್ಣಾವೇವ ಹಿ ಮುಖ್ಯತಃ ॥'**

ಇತಿ । 'ಅತ ಏವ' ಇತಿ ಸೌತ್ರಾಂಶಾರ್ಥಃ ತಸ್ಮಾನ್ನಿರವಕಾಶಲಿಙ್ಗಸತ್ವಾದಿತಿ । 'ಪ್ರಾಣಸ್ತತ್ತು' ಇತ್ಯಸ್ಯಾರ್ಥಃ ಆಧ್ಯಾತ್ಮಿಕಾ ಇತಿ । ಅಧ್ಯಾತ್ಮಗತಶಬ್ದಾನಾಮಿತಿ ನ್ಯಾಯವಿವರಣೋಕ್ತೇರಿತಿ ಭಾವಃ । ಪ್ರಧಾನತ್ವಾತ್ ಪೂರ್ವಾಕ್ಷೇಪಲಿಙ್ಗಯುಕ್ತತ್ವಾಚ್ಚ ಪ್ರಾಣಶಬ್ದಃ ಸಾಕ್ಷಾತ್ ಸೂತ್ರ ಉಪಾತ್ತ ಇತಿ ಭಾವಃ ।

ಯತ್ ತು – ಅತ ಏವ ಇತಿ ಸೌತ್ರೈತಚ್ಛಬ್ದೇನ ಪೂರ್ವೋಕ್ತಕಾರಣತ್ವಪರಾಮರ್ಶಸ್ಯೈವ ಸ್ವರಸ್ಯಾತ್ ತಸ್ಯ ಚ 'ಕತಮಾ ಸಾ ದೇವತಾ ಪ್ರಾಣ ಇತಿ ಹೋವಾಚ' ಇತಿ ಛಾನ್ದೋಗ್ಯವಾಕ್ಯಸ್ಥಪ್ರಾಣ ಏವ

**ಶ್ರವಣಾತ್ ನ 'ತದ್ವೈ ತ್ವಂ ಪ್ರಾಣಃ' ಇತಿ ವಾಕ್ಯಂ ಸೂತ್ರಾನನುಗುಣಮ್ – ಇತಿ, ತನ್ನುಚ್ಯತೇ । ಪೂರ್ವತ್ರ ಪರೋವರೀಯಸ್ತ್ವಾದಿರೂಪನಿರವಕಾಶಲಿಙ್ಗಸ್ಯೈವ ಹೇತ್ವಂಶಕರಣಾದಿಹ ಚ 'ಅತ ಏವ' ಇತಿ ಸರ್ವನಾಮ್ನಾ ನಿರವಕಾಶಲಿಙ್ಗಸ್ಯೈವ ಪರಾಮರ್ಶಾತ್ । ತಸ್ಯ ಚ ತೈತ್ತಿರೀಯವಾಕ್ಯೇऽಪಿ ಭಾವಾತ್ ತದೇವ ಲಿಙ್ಗಮತ್ರಾಪಿ ಪರಾಮರ್ಷ್ಟವ್ಯಮಿತ್ಯತ್ರ ಹೇತ್ವಭಾವಾತ್ । ತದ್ವಾಕ್ಯೇ ಪೂರ್ವಪಕ್ಷಾನುದಯಸ್ಯ ಚನ್ದ್ರಿಕಾಯಾಂ ವ್ಯಕ್ತತ್ವಾಚ್ಚ ಯತ್ಕಿಞ್ಚಿದೇತತ್ ॥೨೩॥**

**॥ ಇತಿ ಶ್ರೀಮದ್ರಾಘವೇನ್ದ್ರಯತಿವಿರಚಿತೇ ತತ್ತ್ವಪ್ರಕಾಶಿಕಾದಿಪ್ಪಣೀಭಾವದೀಪೇ ಪ್ರಾಣಾಧಿಕರಣಮ್ ॥**

'ಮುಖೇ ಮುಖ್ಯ ಪ್ರಕೀರ್ತಿತಃ' ಎಂಬ ಉಕ್ತಿಯಾದರೋ 'ಪ್ರಾಣ ಏವಾಕರಣಸ್ತಸ್ಮಾನ್ ಮುಖ್ಯಸ್ತಸ್ಮಾನ್ ಮುಖ್ಯಃ' ಎಂಬ ಶ್ರುತಿಯಲ್ಲಿ ಹೇಳಿದಂತೆ ಚಕ್ಷುರಾದಿ ಇಂದ್ರಿಯಗಳಿಗೆ ಕರಣಭೂತವಾದ ಪ್ರಾಣನ ಅಪೇಕ್ಷೆಗಿಂತ ಮುಖ್ಯತ್ವವನ್ನು ಸಮರ್ಥನೆ ಮಾಡುತ್ತದೆ ಎಂದು ತಿಳಿಯಬೇಕು. ಈ ವಿಷಯವನ್ನು ಐತರೇಯಭಾಷ್ಯದಲ್ಲಿ --

'ಅನ್ಯವ್ಯಪೇಕ್ಷಯಾ ವಾಯೌ ಮುಖ್ಯವೃತ್ತಿರ್ವಿಧೀಯತೇ ।
ತಸ್ಮಾತ್ ಪ್ರಾಣಾದಿಶಬ್ದಾಶ್ಚ ವಿಷ್ಣಾವೇವ ಹಿ ಮುಖ್ಯತಃ ॥'

(ಬೇರೆ ಇಂದ್ರಿಯಾಭಿಮಾನಿ ದೇವತೆಗಳ ಅಪೇಕ್ಷೆಗಿಂತ ವಾಯುವಿನಲ್ಲಿ ಮುಖ್ಯತ್ವವನ್ನು ವಿಧಾನ ಮಾಡುತ್ತಿದ್ದಾರೆ. ಆದ್ದರಿಂದ ಪ್ರಾಣಾದಿಶಬ್ದಗಳೂ ಕೂಡ ವಿಷ್ಣುವಿನಲ್ಲೇ ಮುಖ್ಯವಾಗಿ ಪ್ರವೃತ್ತಿಯಾಗುತ್ತಿವೆ) ಎಂದು ಹೇಳಲಾಗಿದೆ.

'ಅತ ಏವ' ಎಂಬ ಸೂತ್ರದಲ್ಲಿ ಬಂದ ಅಂಶದ ಅರ್ಥವು ''ತಸ್ಮಾತ್ ನಿರವಕಾಶಲಿಂಗಸತ್ವಾತ್' ಎಂಬುದಾಗಿ ವಿವರಿಸಲ್ಪಟ್ಟಿದೆ. 'ಪ್ರಾಣಃ ತತ್ ತು' ಎಂಬ ಅಂಶದ ಅರ್ಥವನ್ನು ''ಆಧ್ಯಾತ್ಮಿಕಾ'' ಇತ್ಯಾದಿ ವಾಕ್ಯದಿಂದ ವಿವರಿಸಿದ್ದಾರೆ. ಇದನ್ನು 'ಅಧ್ಯಾತ್ಮಗತಶಬ್ದಾನಾಂ' ಎಂಬುದಾಗಿ ನ್ಯಾಯವಿವರಣದಲ್ಲೂ ಹೇಳಿದ್ದಾರೆ. ಆದ್ದರಿಂದ ಪ್ರಧಾನವಾಗಿರುವ ಪ್ರಯುಕ್ತ ಹಿಂದೆ ಹೇಳಿದಂತೆ ಆಕ್ಷೇಪಲಿಂಗದಿಂದಲೂ ಯುಕ್ತವಾಗಿರುವ ಪ್ರಯುಕ್ತ ಪ್ರಾಣಶಬ್ದವನ್ನು ಸಾಕ್ಷಾತ್ತಾಗಿ ಸೂತ್ರದಲ್ಲಿ ಸ್ವೀಕರಿಸಿದ್ದಾರೆ ಎಂಬ ಅಭಿಪ್ರಾಯವನ್ನು ಗ್ರಹಿಸಬೇಕು.

ಇಲ್ಲಿ ಕೆಲವರು ಹೀಗೆ ಶಂಕೆ ಮಾಡುತ್ತಾರೆ. -- ಅತ ಏವ ಎಂಬುದಾಗಿ ಸೂತ್ರದಲ್ಲಿ ಹೇಳಿದ ತತ್ ಶಬ್ದದಿಂದ ಹಿಂದೆ ಹೇಳಿದ ಕಾರಣತ್ವವನ್ನು ಅನುವೃತ್ತಿ ಮಾಡುವುದೇ ಸ್ವರಸವಾಗಿರುವುದರಿಂದ, ಆ ಕಾರಣತ್ವವನ್ನು 'ಕತಮಾ ಸಾ ದೇವತಾ ಪ್ರಾಣ ಇತಿ ಹೋವಾಚ' ಎಂಬುದಾಗಿ ಛಾಂದೋಗ್ಯ-ವಾಕ್ಯದಲ್ಲಿರುವ ಪ್ರಾಣನಲ್ಲೇ ಹೇಳಿರುವುದರಿಂದ, 'ತದ್ವೈ ತ್ವಂ ಪ್ರಾಣಃ' ಎಂಬ ವಾಕ್ಯವು ಸೂತ್ರಕ್ಕೆ ಅನುಗುಣವಾಗಿಲ್ಲ -- ಎಂದು. ಆದರೆ ಇದು ಸರಿಯಲ್ಲ. ಹಿಂದೆ ಪರೋವರೀಯಸ್ತ್ವಾದಿರೂಪವಾದ ನಿರವಕಾಶಲಿಂಗವನ್ನೇ ಹೇತುವನ್ನಾಗಿ ಮಾಡಿರುವುದರಿಂದ 'ಅತ ಏವ' ಎಂಬುದಾಗಿ ಸರ್ವನಾಮ ಪದದಿಂದ ನಿರವಕಾಶಲಿಂಗವನ್ನೇ ಸ್ವೀಕರಿಸಬೇಕಾಗುತ್ತದೆ. ಆ ನಿರವಕಾಶಲಿಂಗವೇ ತೈತ್ತಿರೀಯವಾಕ್ಯದಲ್ಲೂ

ಕಂಡುಬರುವುದರಿಂದ ಇಲ್ಲೂ ಕೂಡ ಅದನ್ನೇ ಪರಾಮರ್ಶೆ ಮಾಡಬೇಕು ಎಂಬ ವಿಷಯದಲ್ಲಿ ಸ್ಪಷ್ಟವಾಗಿ ಕಾರಣವು ಇಲ್ಲದಿರುವುದರಿಂದ ಅವರು ಹೇಳಿರುವ ಅಂಶವು ಸರಿಯಲ್ಲ. ಅವರು ಹೇಳಿದಂತೆ ವ್ಯಾಖ್ಯಾನಮಾಡಿದರೆ ಪೂರ್ವಪಕ್ಷವೇ ಹುಟ್ಟಲಾರದು ಎಂಬುದಾಗಿ ಚಂದ್ರಿಕೆಯಲ್ಲಿ ಸ್ಪಷ್ಟಪಡಿಸಿರುವುದರಿಂದ ಇದು ಬಹಳ ಸಣ್ಣವಿಷಯವಾಗಿದೆ.

॥ಇಲ್ಲಿಗೆ ಭಾವದೀಪದ ಕನ್ನಡಾನುವಾದದಲ್ಲಿ ಪ್ರಾಕಾಧಿಕರಣವು ಮುಗಿಯಿತು॥

**वाक्यार्थमञ्जरी – श्रीलक्ष्मीरिति ॥** यद्यपि 'ह्रीश्च ते' इति तैत्तिरेयाः पठन्ति, तथापि शाखान्तरमप्यत्रोदाहर्तव्यमित्याशयेन शाखान्तरस्थवाक्यमत्रोदाहृतमिति ध्येयम् । रमारूपविशेषयोः स्थानविशेषाकाङ्क्षायामाह – **वक्षःस्थलाश्रिता श्रीरिति ॥** लक्ष्म्यास्त्वङ्गतत्वं प्रसिद्धमिति भावः । ननु कथमयं निर्णयः? नच वाच्यम्,

**तस्याः श्रियः स जगतो जनको**
**जनन्या वक्षोऽधिवासमकरोत् परमं विभूतेः ।**
**श्रीः स्वाः प्रजाः स्वकरुणेन निरीक्षणेन**
**यत्र स्थितैधयति साधिपतींस्त्रिलोकान् ॥**

इति भागवतवचनेन निर्णय इति ।

न केवलमङ्गतायाः श्रियोऽहमिति भगवत्पादैः श्रियोऽङ्गतत्वोक्तेः । नापि श्रयते वक्षःस्थलमिति श्रीरिति तन्निर्वचनेन तन्निर्णयः । श्रयतेऽङ्गमित्यपि सम्भवाद् वक्षसि लक्षणभूता लक्ष्मीरिति तत्त्वप्रदीपोक्तनिर्वचनानुसारेण वैपरीत्यसम्भवाच्च तस्मात् कथं श्रियो वक्षःस्थलाश्रितत्वनिर्णय इत्यत आह – **इति सम्प्रदायविद इति ॥**

तथाच सम्प्रदाय एवात्र निर्णायकं प्रमाणमित्युक्तं भवति । अत एव श्रीवत्स इत्येव भगवल्लिङ्गस्य नाम न लक्ष्मीवत्स इति । व्यामिश्रोक्तिस्तु 'लक्ष्मीः पद्मालया पद्मा कमला श्रीर्हरिप्रिया' इति श्रीलक्ष्मीशब्दयोः पर्यायत्वाद्युक्ता । 'स्मरणीयमुरो विष्णोरिन्दिरावासम्' इत्यादिवत् । या त्वङ्गश्रिता श्रीः वक्षसि लक्षणभूता लक्ष्मीरिति निरुक्तिः सारूप्यविशेषयोरभेदाभिप्रायेण वस्तुस्थिति-

कथनाय न स्थाननियमाभिप्रायेणेत्यर्थः । एतेनैव, स्वोक्तार्थे भगवद्वाक्यरूपागममनभिधाय सम्प्रदायोक्तौ किं बीजम् ।

नच तयोरभेद एवेति वाच्यम् ''आगमो ग्रन्थनिबन्धनं वाक्यम् सम्प्रदायस्तूपदेशपरम्परामात्रमिति भेदः'' इति प्रमेयदीपिकोक्तेरिति निरस्तम् । उक्तरीत्या भगवद् वाक्यस्य स्वोक्तार्थानिर्णायकत्वशङ्कानिरासाय सम्प्रदायग्रहणादिति ॥ **महायोगस्य चेति** ॥ प्राणशब्दप्रवृत्तिनिमित्तजीवनप्रदत्वस्य तत्रैव निरवधिकत्वादिति भावः ॥ **न प्राणेनेति** ॥ कश्चन मर्त्यो जीवः प्राणादिना न जीवति, किन्तु यस्मिन् हरावेतौ प्राणापानावुपाश्रितौ तेनेतरेण हरिणा सर्वे जीवन्तीत्यर्थः ॥ **आध्यात्मिकेति** ॥ आत्माधिकाराख्यग्रन्थप्रतिपाद्यमत्यन्तात्माभिमानविषयान्तःकरणादिदेहपर्यन्त- मध्यात्मं तद्गतमित्यर्थः । तथोक्तम् –

**'आत्माभिमानाधिकारस्थितमध्यात्ममुच्यते ।**
**देहाद् बाह्यं विनातीव बाह्यत्वाद्.....'**

इति ॥९॥

**॥ इति श्रीशर्कराश्रीनिवासाचार्यविरचिता**
**वाक्यार्थमञ्जर्यां प्राणाधिकरणम् ॥**

* * * * *

श्रीपद्मनाभतीर्थविरचितसत्तर्कदीपावळ्याम्

## - प्राणाधिकरणम् –(००९)

ॐ ॥ अत एव प्राणः ॥ॐ

उक्तन्यायेन श्रुत्यन्तरस्य विष्णुपरत्वं च साधयत् सूत्रमुपन्यस्य व्याचष्टे – अत एवेत्यादिना ॥ इदमाम्नायते । 'तद्वै त्वं प्राणोऽभवः' इति प्राणशब्दस्य वायौ रूढत्वात् तेनात्र तावद् वायुरेवोच्यते ।

न च गताधिकरणन्यायेन प्राणशब्दार्थो विष्णुरिति सिद्ध्यति । 'यद् देवान् प्राणयो नव' इति वाक्यशेषविरोधात् । नवशब्दोपलक्षितेन्द्रियदेवादिप्रणेतृत्वस्य प्राणलिङ्गत्वात् ।

आनन्दमयत्वं विष्णुरेवोक्तम् । तदपि न युज्यते 'महान् भोगः' इति प्राणशब्दार्थस्य वायोः परानन्दश्रवणात् । 'भुज्यत इति भोगः' इति आनन्दस्य भोगशब्देन ग्रहणादित्येतं पक्षं प्रतिक्षिपति – न चैवमित्यादिना ॥

'श्रीश्च ते लक्ष्मीश्च पत्न्यौ' इति श्रूयमाणं द्विरूपलक्ष्मीपतित्वं प्राणशब्दार्थो विष्णुरेवेति ज्ञापयति । न हि वायोर्लक्ष्मीपतित्वं युज्यते । यदुक्तं देवप्रणेतृत्वं प्राणलिङ्गं तत्प्रेरके हृषीकेश एव मुख्यं 'प्राणस्य प्राणम्' इति श्रुतेरित्यर्थः ।

ಹಿಂದಿನ ಅಧಿಕರಣದ ನ್ಯಾಯದಂತೆ ಮತ್ತೊಂದು ಶ್ರುತಿಗೆ ವಿಷ್ಣುಪರತ್ವವನ್ನು ಸಾಧಿಸುವುದಕ್ಕಾಗಿ ಸೂತ್ರವನ್ನು ಪಠಿಸುತ್ತಾ ''ಅತ ಏವ'' ಎಂಬುದರಿಂದ ವ್ಯಾಖ್ಯಾನಿಸುತ್ತಿದ್ದಾರೆ. ಇಲ್ಲಿ ತಿಳಿಯುವ ವಿಚಾರ ಹೀಗಿದೆ. 'ತದ್ ವೈ ತ್ವಂ ಪ್ರಾಣೋಽಭವಃ' ಎಂಬಲ್ಲಿರುವ ಪ್ರಾಣಶಬ್ದವು ಮುಖ್ಯ-ವಾಯುವಿನಲ್ಲಿ ರೂಢವಾಗಿದೆ. ಆದ್ದರಿಂದ ಮುಖ್ಯವಾಯುವೇ ಪ್ರಾಣಶಬ್ದವಾಚ್ಯನು.

ಹಿಂದಿನ ಅಧಿಕರಣದ ನ್ಯಾಯದಿಂದ ವಿಷ್ಣುವೇ ಪ್ರಾಣಶಬ್ದವಾಚ್ಯನೆಂದು ಹೇಳಬಾರದು. ಏಕೆಂದರೆ 'ಯದ್ದೇವಾನ್ ಪ್ರಾಣಯೋ ನವ' ಎಂಬ ವಾಕ್ಯಶೇಷದ ವಿರೋಧ ಬರುತ್ತದೆ. 'ನವ' ಎಂಬ ಶಬ್ದದಿಂದ ಉಪಲಕ್ಷಿತವಾದ ಇಂದ್ರಿಯಾಭಿಮಾನಿದೇವತೆಗಳನ್ನು ನಿಯಮನಮಾಡುವ ಮುಖ್ಯಪ್ರಾಣನ ಲಿಂಗವು ಕೇಳಿಸುತ್ತಿದೆ. ಮತ್ತು ಆನಂದಮಯತ್ವವನ್ನು ವಿಷ್ಣುವಿಗೆ ಹೇಳಿದ್ದೂ ಸಹ ಕೂಡುವುದಿಲ್ಲ. ಏಕೆಂದರೆ, 'ಮಹಾನ್ ಭೋಗಃ' ಎಂಬುದಾಗಿ ಪ್ರಾಣಶಬ್ದಪ್ರತಿಪಾದ್ಯನಾದ

ಮುಖ್ಯವಾಯುವಿನಲ್ಲಿಯೇ ಆನಂದಮಯತ್ವವು ಕೇಳಿಸುತ್ತಿದೆ. 'ಭುಜ್ಯತೇ ಇತಿ ಭೋಗಃ' ಎಂಬ ವ್ಯುತ್ಪತ್ತಿಯನ್ನು ಆಶ್ರಯಿಸಿದಾಗ ಭೋಗಶಬ್ದಕ್ಕೆ ಆನಂದ ಎಂಬ ಅರ್ಥವು ತಿಳಿಯುತ್ತದೆ. ಆದ್ದರಿಂದ ಮುಖ್ಯವಾಯುವೇ ಪ್ರಾಣಶಬ್ದವಾಚ್ಯನು ಮತ್ತು ಆನಂದಮಯನು ಎಂದು ಪೂರ್ವಪಕ್ಷ.

ಈ ಪೂರ್ವಪಕ್ಷವನ್ನು ''ನಚ'' ಇತ್ಯಾದಿ ಗ್ರಂಥದಿಂದ ನಿರಾಕರಿಸುತ್ತಿದ್ದಾರೆ. ಪ್ರಾಣಶಬ್ದದಿಂದ ವಿಷ್ಣುವೇ ಮುಖ್ಯವಾಗಿ ವಾಚ್ಯನಾಗಿದ್ದಾನೆ. ಏಕೆಂದರೆ, 'ಶ್ರೀಶ್ಚ ತೇ ಲಕ್ಷ್ಮೀಶ್ಚ ಪತ್ನ್ಯೌ' ಎಂಬುದಾಗಿ ಶ್ರೀಪತಿತ್ವ ಹಾಗೂ ಲಕ್ಷ್ಮೀಪತಿತ್ವ ಎಂಬ ಲಿಂಗಗಳು ವಿಷ್ಣುವಿನಲ್ಲಿ ಅಸಾಧಾರಣವಾಗಿ ಕೇಳಿಸುತ್ತಿವೆ. ಈ ಲಿಂಗಗಳು ಮುಖ್ಯವಾಯುವಿನಲ್ಲಿ ಸರ್ವಥಾ ಕೂಡಲಾರವು.

ಇನ್ನು ದೇವಪ್ರಣೇತೃತ್ವವೆಂಬ ಮುಖ್ಯಪ್ರಾಣನ ಲಿಂಗವೂ ಸಹ ವಿಷ್ಣುವಿನಲ್ಲೇ ಮುಖ್ಯವಾಗಿದೆ. ಮುಖ್ಯಪ್ರಾಣನಲ್ಲಿರುವ ದೇವಪ್ರೇರಕತ್ವಕ್ಕೆ ನಿಯಾಮಕನಾದವನು ವಿಷ್ಣುವೇ ಆಗಿದ್ದಾನೆಂದು 'ಪ್ರಾಣಸ್ಯ ಪ್ರಾಣಮ್' ಎಂಬ ಶ್ರುತಿಯು ಹೇಳುತ್ತಿದೆ.

ಆದ್ದರಿಂದಲೇ ವಿಷ್ಣುವಿಗೆ ಹೃಷೀಕೇಶನೆಂಬ ಬಿರುದು ಪ್ರಸಿದ್ಧವಾಗಿದೆ.

ಇಲ್ಲಿಗೆ ಶ್ರೀಪದ್ಮನಾಭತೀರ್ಥಶ್ರೀಮಚ್ಚರಣರಿಂದ ವಿರಚಿತವಾದ
ಸತ್ತರ್ಕದೀಪಾವಳಿಯ ಕನ್ನಡಾನುವಾದದಲ್ಲಿ ವ್ಯಾಕಾಧಿಕರಣವು ಮುಗಿಯಿತು
॥ ಶ್ರೀಮದ್ಗೋಶಾರ್ಪಣಮಸ್ತು ॥

# ಭಾಗ -೨

## ತಾತ್ಪರ್ಯಚಂದ್ರಿಕಾ, ಪ್ರಕಾಶ, ಗುರುರಾಜೀಯ, ಭಾಟ್ಟಸಂಗ್ರಹ, ಶಂಕರಭಾಷ್ಯ, ಭಾಮತೀ, ಶ್ರೀಭಾಷ್ಯ, ಶ್ರುತಪ್ರಕಾಶ ಇವುಗಳ ಆಯ್ದ ಭಾಗಗಳು

॥ ಶ್ರೀಲಕ್ಷ್ಮೀಹಯಗ್ರೀವೋ ವಿಜಯತೇತಮಾಮ್ ॥
॥ ಶ್ರೀಮಧ್ವರಾಜೋ ವಿಜಯತೇತರಾಮ್ ॥
॥ ಶ್ರೀಗುರುಭ್ಯೋ ನಮಃ ॥

# ಪ್ರಾಣಾಧಿಕರಣದ ಸಾರ

ಪ್ರಾಣಾಧಿಕರಣದ ಉದ್ದೇಶ ಪ್ರಾಣಶಬ್ದ ಸಮನ್ವಯದ ಮೂಲಕ ಆಧ್ಯಾತ್ಮಿಕ ಸಕಲಶಬ್ದಗಳನ್ನು ಭಗವಂತನಲ್ಲಿ ಸಮನ್ವಯ ಮಾಡುವುದು. ಜೀವನಹೇತುತ್ವವೇ ಪ್ರಾಣಶಬ್ದದ ಪ್ರವೃತ್ತಿನಿಮಿತ್ತವಾಗಿದೆ. ಅನ್ವಯ ವ್ಯತಿರೇಕದಿಂದ ಈ ಪ್ರವೃತ್ತಿನಿಮಿತ್ತವು ಮುಖ್ಯವಾಯುವಿನಲ್ಲಿ ಸಿದ್ಧವಾಗಿದೆ. ಆದ್ದರಿಂದ ಭಗವಂತನು ಪ್ರತಿಪಾದ್ಯನಾಗಲಾರನೆಂಬ ಅಧಿಕಾಶಂಕೆಯ ಪರಿಹಾರಕ್ಕಾಗಿ ಈ ಅಧಿಕರಣ ಹೊರಟಿದೆ. ಹಿಂದಿನ ಆಕಾಶಾಧಿಕರಣದಲ್ಲಿ ಹೀಗೆ ಅನ್ವಯವ್ಯತಿರೇಕದಿಂದ ಪೂರ್ವಪಕ್ಷ ಮಾಡಲಾಗದ ಕಾರಣ ಇದು ಅಧಿಕಾಶಂಕೆಯೆನಿಸಿದೆ. ಹಿಂದೆ ಸಮರ್ಥಿಸಿದ ಆನಂದಮಯತ್ವವನ್ನೇ ಈ ಅಧಿಕರಣದಲ್ಲಿ ಆಕ್ಷೇಪಿಸಬೇಕು. ಪ್ರಾಣಮಯತ್ವವನ್ನು ಆಕ್ಷೇಪಿಸಬಾರದು. ಹಾಗಾದಲ್ಲಿ ಅಸ್ವಾರಸ್ಯ ಮತ್ತು ಪುನರುಕ್ತಿದೋಷಗಳು ಬರುತ್ತವೆ.

ಈ ಅಧಿಕರಣದಲ್ಲಿ ಸಿದ್ಧಾಂತಸ್ಥಾಪನೆಯಾಗಬೇಕೆಂದರೆ ಮೊದಲು ಪೂರ್ವಪಕ್ಷ ಮಾಡಬೇಕು? ಆದರೆ ಪೂರ್ವಪಕ್ಷ ಮಾಡುವುದೇ ಕಠಿಣವಾಗಿದೆ. ಜಡವಾಯುವನ್ನಾಗಲೀ ಚೇತನವಾಯುದೇವತೆಯನ್ನಾಗಲೀ ಪ್ರಾಣನೆಂದು ಪೂರ್ವಪಕ್ಷ ಮಾಡಬೇಕು. ಆದರೆ ಜಡವಾಯುವಿನಲ್ಲಿ ಸಂಬೋಧನೆ ಮೊದಲಾದವುಗಳು ಕೂಡುವುದಿಲ್ಲ. ಮುಖ್ಯವಾಯುವಿನಲ್ಲಿ ಅನ್ವಯವ್ಯತಿರೇಕದಿಂದ ಜೀವನಹೇತುತ್ವವಿರುವುದು ಯಾರಿಗೂ ಸಿದ್ಧವಾಗಿಲ್ಲ.

ಜಡವಾಯುವಿನಲ್ಲಿ ಅಭಿಮಾನಿವಿವಕ್ಷೆಯಿಂದ ಸಂಬೋಧನೆಯನ್ನೇನೋ ಕೂಡಿಸಬಹುದು. ಆದರೆ ಅನುವ್ಯಾಖ್ಯಾನ ಮತ್ತು ಟೀಕೆಗಳಲ್ಲಿ ಮುಖ್ಯವಾಯುವನ್ನು ಪೂರ್ವಪಕ್ಷ ಮಾಡಿದ್ದಾರೆ. ಹಾಗಾಗಿ ಅವುಗಳ ವಿರೋಧ ಬರುತ್ತದೆ. ಮತ್ತು ಅನೇಕ ಶ್ರುತಿಗಳಿಗೆ ಅಮುಖ್ಯಾರ್ಥಮಾಡಬೇಕಾದ ಪ್ರಸಂಗವಿದೆ. ಹೀಗೆ ಜಡವಾಯುವಂತೂ ಪ್ರಾಣ ಎನಿಸಲು ಸಾಧ್ಯವಿಲ್ಲ. ಮುಖ್ಯವಾಯುವನ್ನು ಪ್ರಾಣ ಎನ್ನೋಣವೆಂದರೆ ಹೇತ್ವಸಿದ್ಧಿ ತಪ್ಪಿದ್ದಲ್ಲ. ಹೀಗಿರುವಾಗ ಪೂರ್ವಪಕ್ಷವನ್ನು ಹೇಗೆ ರಚಿಸೋಣ?

ಜೀವನಹೇತುತ್ವವು ಪ್ರತ್ಯಕ್ಷಪ್ರಮಾಣದಿಂದ ಮುಖ್ಯಪ್ರಾಣನಲ್ಲಿ ಇದೆಯೆಂದು ತಿಳಿಯದಿರಬಹುದು. ಆದರೆ 'ತತ್ಪ್ರಾಣೇ' ಇತ್ಯಾದಿ ಶ್ರುತಿಸ್ಮೃತಿಗಳಿಂದ ತಿಳಿಯುತ್ತದೆ. ಆದ್ದರಿಂದ ಮುಖ್ಯವಾಯುವೇ ಪ್ರಾಣನಾಗುತ್ತಾನೆಂಬ ಪೂರ್ವಪಕ್ಷವು ಸಿದ್ಧವಾಗುತ್ತದೆ.

'ತತ್ಪ್ರಾಣೇ' ಎಂಬ ಶ್ರುತಿಯು ವಿಷ್ಣುಪರವೆಂದು ಅಂತಿಮಪ್ರಾಣಾಧಿಕರಣದಲ್ಲಿ ನಿರ್ಣಯಿಸಿದ್ದಾರೆ. ಆದರೆ ಇಲ್ಲಿ ಮಾಡಿದ ಸಿದ್ಧಾಂತವನ್ನು ಅವಲಂಬಿಸಿ ಅಂತಿಮಪ್ರಾಣಾಧಿಕರಣವು ಹೊರಟಿದೆ. ಹೀಗಿರುವಾಗ ಈ ಅಧಿಕರಣದ ಪೂರ್ವಪಕ್ಷದ ದೆಸೆಯಲ್ಲಿ ಅಂತಿಮಪ್ರಾಣಾಧಿಕರಣದ ಸಿದ್ಧಾಂತವು ಅಸಿದ್ಧವಾಗಿದೆ. ಪ್ರಥಮಪಾದದ ಆಕಾಶಾಧಿಕರಣಕ್ಕೆ ಮೂರನೆಯ ಪಾದದ ಆಕಾಶಾಧಿಕರಣದ ಸಿದ್ಧಾಂತವು ಹೇಗೆ ತಿಳಿದಿಲ್ಲವೋ ಆದರಂತೆ. ಮತ್ತು ಅಂತಿಮಪ್ರಾಣಾಧಿಕರಣದಿಂದ ಪುನರುಕ್ತಿದೋಷಕ್ಕೂ ಆಸ್ಪದವಿಲ್ಲ. ಈ ಅಧಿಕರಣದ ಸಿದ್ಧಾಂತವು ಸ್ಥಾಪಿತವಾದ

ಮೇಲಷ್ಟೇ ಅಂತಿಮಪ್ರಾಣಾಧಿಕರಣದ ಪೂರ್ವಪಕ್ಷವು ಹೊರಡಲು ಸಾಧ್ಯ. ಈ ಪುನರುಕ್ತಿಯ ಪರಿಹಾರವನ್ನು ಸೂಚಿಸುವುದಕ್ಕಾಗಿಯೇ ಗ್ರಂಥಕಾರರು 'ತತ್ಪ್ರಾಣೇ' ಎಂಬ ಶ್ರುತಿಯನ್ನು ಉಲ್ಲೇಖಿಸಿದ್ದಾರೆ.

ಜಡವಾಯುವು ಮುಖ್ಯಪ್ರಾಣನ ಶರೀರ. ಜಡವಾಯುವಿದ್ದರೆ ನಮ್ಮ ಜೀವನ ಇಲ್ಲದಿದ್ದರೆ ಇಲ್ಲವೆಂಬ ಅನ್ವಯವ್ಯತಿರೇಕ ನಮಗೆಲ್ಲ ಸಿದ್ಧವಾಗಿದೆ. ಇದರಿಂದ ಮುಖ್ಯವಾಯುವು ಜೀವನಕಾರಣನೆಂದು ಹೇಳಿದಂತಾಗುತ್ತದೆ. ಕುಲಾಲನ ಶರೀರವಿದ್ದರೆ ಮಾತ್ರ ಘಟವು ಹುಟ್ಟುವುದನ್ನು, ಕುಲಾಲಶರೀರವಿಲ್ಲದಿದ್ದರೆ ಘಟ ಹುಟ್ಟದಿರು- ವುದನ್ನು ನಾವು ಕಂಡಿದ್ದೇವೆ. ಇದರಿಂದ ಕುಲಾಲಶರೀರದ ಒಳಗಿರುವ ಆತ್ಮನು ಘಟಕಾರಣನೆಂದು ಎಲ್ಲರೂ ಒಪ್ಪಿರುವ ವಿಚಾರ. ಆದರಂತೆ ಮುಖ್ಯಪ್ರಾಣನ ವಿಷಯದಲ್ಲಿಯೂ ತಿಳಿಯಬೇಕು.

ಆದರೆ ಬ್ರಹ್ಮನಲ್ಲಿ ಈ ಅನ್ವಯವ್ಯತಿರೇಕವನ್ನು ಹೇಳಲು ಸಾಧ್ಯವಿಲ್ಲ. ಹಾಗೆ ಹೇಳಬೇಕಾದರೆ ಮೊದಲು ಬ್ರಹ್ಮನಿಗೆ ಶರೀರವಿರಬೇಕು. ಮತ್ತು ನಮ್ಮ ದೇಹದಲ್ಲಿ ಬ್ರಹ್ಮನಿಲ್ಲವೆಂದು ಹೇಳಬೇಕು. ಆದರೆ ಶ್ರುತಿಗಳೇ ಹೇಳುವಂತೆ ಬ್ರಹ್ಮನಿಗೆ ಶರೀರವೇ ಇಲ್ಲ. ಅಂತರ್ಯಾಮ್ಯಧಿಕರಣದಲ್ಲಿ ವಿಷ್ಣುವಿಗೆ ಗೌಣಶರೀರವನ್ನು ಹೇಳಿದ್ದಾರೆ. ಆದರೆ ಗೌಣಶರೀರವು ಕಾರ್ಯತ್ವಕ್ಕೆ ಸಾಧಕವಾಗುವುದಿಲ್ಲ. ಮತ್ತು ಬ್ರಹ್ಮನು ಸರ್ವಗತನಾಗಿದ್ದಾನೆ. ಭೂಮಾಧಿಕರಣದಲ್ಲಿ ನಮ್ಮ ಶರೀರದಿಂದ ಬ್ರಹ್ಮನು ಉತ್ಕ್ರಮಣನಾಗುತ್ತಾನೆಂದು ಹೇಳಿದ್ದರೂ ಮತ್ತೊಂದು ರೂಪದಿಂದ ನಮ್ಮ ಶರೀರದಲ್ಲಿಯೇ ಇರುತ್ತಾನೆಂದು ಹೇಳಿದ್ದಾರೆ. ಆದ್ದರಿಂದ ವ್ಯತಿರೇಕವ್ಯಾಪ್ತಿಯನ್ನು ವಿಷ್ಣುವಿನಲ್ಲಿ ಹೇಳುವುದು ಕಷ್ಟ.

ಇನ್ನು ಶ್ರುತಿಯಿಂದ ಬ್ರಹ್ಮನು ಜೀವನಕಾರಣನಾಗಿದ್ದಾನೆಂದು ಹೇಳಬೇಕು. ಆದರೆ ಆ ಶ್ರುತಿಗಳನ್ನೆಲ್ಲಾ ಮುಖ್ಯಪ್ರಾಣನಲ್ಲಿಯೇ ಸಮನ್ವಯ ಮಾಡಲು ಬರುತ್ತದೆ. ಆದ್ದರಿಂದ ಮುಖ್ಯಪ್ರಾಣನೇ ಜೀವನಕಾರಣನಾಗುತ್ತಾನೆ. ವಿಷ್ಣುವಲ್ಲವೆಂದು ಪೂರ್ವಪಕ್ಷ.

ಹೇತುರೂಪವಾದ ಜೀವನಹೇತುತ್ವವನ್ನು ಅನ್ವಯವ್ಯತಿರೇಕಗಳಿಂದಷ್ಟೇ ತಿಳಿಯಬಹುದು; ಶ್ರುತಿಯಿಂದ ತಿಳಿಯಲು ಸಾಧ್ಯವೇ ಇಲ್ಲ. ಹೀಗಿರುವಾಗ ಶ್ರುತಿಪ್ರಮಾಣದ ಉಲ್ಲೇಖ ಮತ್ತು ನಿರಾಕರಣೆಗಳು ಅಸಂಗತವೆಂದು ಕೆಲವರ ವಾದ.

ಇದು ತಪ್ಪು. ಹಾಗಾದರೆ ಯಾಗವು ಸ್ವರ್ಗಕ್ಕೆ ಹೇತುವೆಂದು ಹೇಳಬೇಕಾದರೆ ಅನ್ವಯವ್ಯತಿರೇಕವನ್ನೇ ಹೇಳಬೇಕೆಂದಂತಾಯಿತು. ಆದರೆ ಸ್ವರ್ಗಯಾಗಗಳ ಕಾರ್ಯಕಾರಣಭಾವದಲ್ಲಿ ಅನ್ವಯವ್ಯತಿರೇಕವು ಪ್ರತ್ಯಕ್ಷಸಿದ್ಧವಾಗಿಲ್ಲ.

ಭಗವಂತನು ಜೀವನಕಾರಣನೆಂದು ಶ್ರುತಿಯಿಂದ ಸಾಧಿಸಲಾಗದು. ಯಾವುದೇ ಕಾರಣತ್ವವಾದರೂ ಕೂಡ ವ್ಯತಿರೇಕವ್ಯಾಪ್ತಿಯಿಂದ ಗರ್ಭಿತವಾಗಿರುತ್ತದೆ. ಆದರೆ ಎಲ್ಲೆಡೆ ವ್ಯಾಪ್ತನಾದ ಭಗವಂತನಲ್ಲಿ ವ್ಯತಿರೇಕವ್ಯಾಪ್ತಿಯನ್ನು ಹೇಗೆ ಹೇಳುತ್ತೀರಿ? ಎಂದು ಕೆಲವರ ಗೊಂದಲ.

ಇವರ ಗೊಂದಲಕ್ಕೆ ಆಸ್ಪದವಿಲ್ಲ. ಹಾಗಾದರೆ ಎಲ್ಲೆಡೆ ವ್ಯಾಪ್ತವಾಗಿರುವ ಪ್ರಕೃತ್ಯಾದಿಗಳಿಗೆ ಕಾರಣತ್ವವೇ ಸಿದ್ಧವಾಗದಿರಬೇಕಾದೀತು!

ಅಂತೂ ಜೀವನಹೇತುತ್ವವನ್ನು ಬ್ರಹ್ಮನಲ್ಲಿ ಒಪ್ಪಲು ಸಾಧ್ಯವಿಲ್ಲ. ಮುಖ್ಯಪ್ರಾಣಾದಿಗಳಲ್ಲಿರುವ ಜೀವನಹೇತುತ್ವಕ್ಕೆ ಬ್ರಹ್ಮನು ನಿಯಾಮಕನೂ ಆಗಲು ಸಾಧ್ಯವಿಲ್ಲವೆಂದು ಒಪ್ಪುವುದು ಅನಿವಾರ್ಯ. ಹಾಗಾದಲ್ಲಿ

ಜನ್ಮಾದಿಸೂತ್ರದಲ್ಲಿ ಸಾಧಿಸಿದ ಸ್ಥಿತಿಹೇತುತ್ವಲಕ್ಷಣಕ್ಕೆ ಅಸಂಭವ ಹಾಗೂ ಅತಿವ್ಯಾಪ್ತಿದೋಷಗಳು ಬರುತ್ತವೆ. ಆದ್ದರಿಂದ ಜೀವನಕಾರಣನೆಂದು ನಿರ್ಣೀತನಾದ ಮುಖ್ಯಪ್ರಾಣನೇ ಆನಂದಮಯನಾಗಬೇಕು. ಆನಂದಮಯನಿಂದ ಮುಖ್ಯಪ್ರಾಣನಲ್ಲಿ ಭೇದವೂ ಕೇಳಿಸುತ್ತಿಲ್ಲ ಮತ್ತು ಚೇತನನೂ ಆಗಿರುವುದರಿಂದ ಮುಖ್ಯಪ್ರಾಣನೇ ಪ್ರಾಣಶಬ್ದದಿಂದ ವಾಚ್ಯನಾಗುತ್ತಾನೆ ಮತ್ತು ಆನಂದಮಯನಾಗುತ್ತಾನೆಂಬುದು ಪ್ರಮೇಯಾಶ್ರಿತಪೂರ್ವಪಕ್ಷ.

ಲಕ್ಷ್ಮೀಪತಿತ್ವಲಿಂಗವಿರುವುದು ಬೇರೆ ಅನುವಾಕದಲ್ಲಿ. ಆದಕ್ಕೂ 'ತದ್ವೈ ತ್ವಂ ಪ್ರಾಣಃ' ಎಂಬ ಅನುವಾಕಕ್ಕೂ ಯಾವುದೇ ಸಂಬಂಧವಿಲ್ಲ. ಹೀಗಿರುವಾಗ ಮುಖ್ಯಪ್ರಾಣನು ಪ್ರಾಣಶಬ್ದದಿಂದ ವಾಚ್ಯನಾಗಲು ಲಕ್ಷ್ಮೀಪತಿತ್ವಲಿಂಗವು ಬಾಧಕವಲ್ಲ. ಈ ಅನುವಾಕದಿಂದ ಮುಖ್ಯಪ್ರಾಣನೇ ವಾಚ್ಯನೆನ್ನಲು ಮಾತರಿಶ್ವಶ್ರುತಿಯು ಅಪಾನಶ್ರುತಿಯ ಸಾಹಿತ್ಯವು ಪೂರಕವಾಗಿವೆ. ಇಲ್ಲಿಗೆ ಎರಡು ಬಗೆಯ ಪ್ರಮೇಯಾಶ್ರಿತವಾದ ಪೂರ್ವಪಕ್ಷಗಳು ಮತ್ತು ನಾಲ್ಕುಬಗೆಯ ಪ್ರಮಾಣಾಶ್ರಿತಪೂರ್ವಪಕ್ಷಗಳು ಮುಗಿದವು.

ನಮ್ಮೆಲ್ಲರ ಜೀವನಕ್ಕೆ ಕಾರಣನಾದವನು ಭಗವಂತನೇ ಆಗಿದ್ದಾನೆ. ಭೌತಿಕವಾದ ಪ್ರಾಣವಾಯುವು ವಾಯುದೇವನಿಗೆ ಹೇಗೆ ಶರೀರವಾಗಿದೆಯೋ ಅದರಂತೆ ವಾಯುದೇವರು ಭಗವಂತನ ಶರೀರದಂತಿದ್ದಾರೆ. ಸರ್ವರ ಜೀವನಕ್ಕೆ ಕಾರಣನಾದ ವಾಯುದೇವರೇ ಭಗವಂತನ ಶರೀರವಾಗಿರುವಾಗ ಅವನಿಗೆ ಪ್ರೇರಕನಾದ ಭಗವಂತನು ಸಕಲಜೀವರ ಜೀವನಕ್ಕೆ ಕಾರಣನಾಗಿರಲೇ ಬೇಕು. ದೇಹದ ಕ್ರಿಯೆಗೆ ಜೀವನು ಹೇಗೆ ಪ್ರವರ್ತಕನಾಗಿರುತ್ತಾನೋ, ಆದರಂತೆ ಸಕಲಪ್ರಾಣಾದಿದೇವತೆಗಳ ಕ್ರಿಯೆಗಳಿಗೂ ಭಗವಂತನೇ ಪ್ರವರ್ತಕನಾಗಿದ್ದಾನೆ. ಆದ್ದರಿಂದ ಎಲ್ಲರಲ್ಲಿರುವ ಧರ್ಮಗಳಿಗೂ ಅವನೇ ನಿಯಾಮಕನು.

ಭಗವಂತನು ಯಾವಾಗಲೂ ಎಲ್ಲಾ ಕಡೆಯಿದ್ದರೂ ತನ್ನ ವಿಶಿಷ್ಟವಾದ ಒಂದುರೂಪವನ್ನು ಪ್ರಕಟಮಾಡಿ ಜೀವನಕ್ಕೆ ಕಾರಣನಾಗಿದ್ದಾನೆ. ಆ ರೂಪವನ್ನು ಅಂತರ್ಧಾನಗೊಳಿಸಿದಾಗ ಸಾವಿಗೆ ತುತ್ತಾಗುತ್ತಾರೆ.

ಮತ್ತು ಕಾಠಕದಲ್ಲಿರುವ 'ಇತರೇಣ ತು' ಎಂಬ ಶ್ರುತಿಯು ಪ್ರಾಣಪರವಾಗುವುದಿಲ್ಲ. ಇಲ್ಲಿರುವ ಇತರಶಬ್ದವು ಬ್ರಹ್ಮಪರವೆ ಆಗಿದೆ. ಹಿಂದಿನ ಮುಂದಿನ ವಾಕ್ಯಗಳು ಬ್ರಹ್ಮನನ್ನೇ ಪ್ರತಿಪಾದಿಸುತ್ತಿರುವಾಗ ಮಧ್ಯದ ಈ ವಾಕ್ಯವು ಬ್ರಹ್ಮನನ್ನು ಪ್ರತಿಪಾದಿಸದೆ ಇರಲಾರದಲ್ಲವೇ?

'ತದ್ವೈ ತ್ವಂ ಪ್ರಾಣೋ ಅಭವಃ' ಎಂಬ ಉಪನಿಷತ್ತಿನಲ್ಲಿ ಸಾಮಾನ್ಯವಾಗಿ ಪ್ರಾಣ ಎಂದು ಹೇಳಿಲ್ಲ. ಪರಮಾತ್ಮನಲ್ಲಿರುವ ಅನೇಕವಿಶಿಷ್ಟಗುಣಗಳನ್ನು ಧರ್ಮಗಳನ್ನು ಪ್ರಾಣನಲ್ಲಿ ನಿರೂಪಿಸಲಾಗಿದೆ. ಪ್ರಾಣನು ಶ್ರೀದೇವಿ ಲಕ್ಷ್ಮೀದೇವಿಯರ ಅಧಿಪತಿಯೆಂದು ಸ್ಪಷ್ಟವಾಗಿ ಶ್ರುತಿ ಹೇಳಿದೆ. ಜಗನ್ಮಾತೆಗೆ ಶ್ರೀಹರಿಯನ್ನು ಬಿಟ್ಟು ಬೇರೆ ಯಾರನ್ನೂ ಅಧಿಪತಿಗಳೆಂದು ಮನಸ್ಸಿನಿಂದಲೂ ಆಲೋಚಿಸಲು ಸಾಧ್ಯವಿಲ್ಲ. ಆದ್ದರಿಂದ ಲಕ್ಷ್ಮೀ, ಶ್ರೀ ಮೊದಲಾದ ಶಬ್ದಗಳನ್ನು ಭಾರತೀ ಮೊದಲಾದವರಲ್ಲಿ ಪ್ರಯೋಗಿಸಬಾರದು. ಆದರೆ 'ಪ್ರಾಣಸ್ಯ ಪ್ರಾಣಃ' ಎಂಬಲ್ಲಿ ಪ್ರಾಣಶಬ್ದದಿಂದ ಭಗವಂತನು ವಾಚ್ಯನಾಗಿದ್ದಾನೆನ್ನಲು ಸಾಕಷ್ಟು ಪ್ರಮಾಣಗಳಿವೆ.

ಮತ್ತು ಮುಖ್ಯಪ್ರಾಣನಲ್ಲಿ ಅಪೇಕ್ಷಿತವಾದ ಮುಖ್ಯತ್ವವಷ್ಟೇ ಇದೆ. ಯಾವರೀತಿಯಾಗಿ ಜಡಪ್ರಕೃತಿಗಿಂತ ಚೇತನಪ್ರಕೃತಿಯು ಮುಖ್ಯವಾದ್ದರಿಂದ ಪರಾಕ್ಷರ ಎನಿಸಿದೆಯೋ ಅದರಂತೆ ಭೌತಿಕವಾಯುವಿಗಿಂತ ಮುಖ್ಯನಾದ್ದರಿಂದ ವಾಯುವು ಮುಖ್ಯಪ್ರಾಣನೆನಿಸಿದ್ದಾನೆ.

ಶ್ರೀಪತಿತ್ವಲಿಂಗವಿರುವ ಅನುವಾಕವು ಬೇರೆಯಾಗಿರಬಹುದು. ಆದರೂ 'ತದ್ವೈ ತ್ವಂ' ಎಂಬ ಪ್ರಾಣಶ್ರುತಿಯಿರುವ ಅನುವಾಕವೂ ಸಹ ಭಗವಂತನಲ್ಲಿ ಅಸಾಧಾರಣವಾದ ಮಾರಕತ್ವಾದಿ ಗುಣಗಳನ್ನು ಹೇಳುತ್ತಿದೆ. ಆದ್ದರಿಂದ ಈ ಅನುವಾಕವು

ಭಗವತ್ಪರವಾಗಿದೆ ಎಂದು ನಿರ್ಣಯವಾಗುತ್ತದೆ. ಮತ್ತು 'ಶ್ರೀಶ್ಚತೇ' ಎಂಬಲ್ಲಿ ಯುಷ್ಮಚ್ಛಬ್ದದಿಂದ ಹೇಳಿದವನನ್ನೇ 'ತದ್ವೈ ತ್ವಂ' ಎಂಬ ಯುಷ್ಮಚ್ಛಬ್ದದಿಂದಲೂ ಹೇಳಲಾಗಿದೆ. ಆದ್ದರಿಂದ ಎರಡೂ ಅನುವಾಕಗಳು ಒಬ್ಬನನ್ನೇ ಪ್ರತಿಪಾದಿಸುತ್ತಿವೆ.

ಮಾತರಿಶ್ವಶ್ರುತಿಯಲ್ಲಿಯೂ ಭಗವಂತನ ಸಕಲಸಂಹರ್ತೃತ್ವಗುಣವನ್ನು ಹೇಳಿದ್ದರಿಂದ ಇದು ಮುಖ್ಯ-ಪ್ರಾಣಪರವಾಗುವುದಿಲ್ಲ. ಇನ್ನು ತನ್ನಿಂದ ತನಗೆ ಸಾಹಿತ್ಯವು ಅಸಂಭಾವಿತವಾದ್ದರಿಂದ ಅಪಾನಸಾಹಿತ್ಯಲಿಂಗವು ಮುಖ್ಯಪ್ರಾಣನಿಗೆ ಪೂರಕವಲ್ಲ. ಆದ್ದರಿಂದ ಪ್ರಾಣಶಬ್ದದಿಂದ ಮುಖ್ಯಪ್ರಾಣನು ಪ್ರತಿಪಾದ್ಯನಾಗುವುದಿಲ್ಲ; ವಿಷ್ಣುವೇ ಪ್ರತಿಪಾದ್ಯನಾಗುತ್ತಾನೆ.

ಶಾಂಕರಭಾಷ್ಯದಲ್ಲಿ ಪ್ರಾಣಾಧಿಕರಣವನ್ನು ಹೀಗೆ ರಚಿಸಿದ್ದಾರೆ. 'ಕತಮಾ ಸಾ ದೇವತಾ ಇತಿ ಪ್ರಾಣ ಇತಿ ಹೋವಾಚ। ಸರ್ವಾಣಿ ಹ ವಾ ಭೂತಾನಿ ಪ್ರಾಣಮೇವಾಭಿಸಂವಿಶಂತಿ ಛಾಂದೋಗ್ಯದ ಈ ವಾಕ್ಯದಲ್ಲಿ ಪ್ರಾಣಶಬ್ದದಿಂದ ಯಾರು ವಾಚ್ಯರು? ಪ್ರಸಿದ್ಧವಾದ ಪ್ರಾಣವಾಯುವೋ ಅಥವಾ ಬ್ರಹ್ಮನೋ?

ಪೂರ್ವಪಕ್ಷ - ಪ್ರಾಣವಾಯುವೇ ಪ್ರಾಣಶಬ್ದದ ಮುಖ್ಯಾರ್ಥವೆಂದು ಛಾಂದೋಗ್ಯ ಹೇಳುತ್ತಿದೆ. ಏಕೆಂದರೆ ಅಲ್ಲಿಯೇ ಮುಂದೆ 'ಸರ್ವಾಣಿ ಹ ವಾ ಭೂತಾನಿ' ಎಂದು ಸಮಸ್ತಭೂತಪದಾರ್ಥಗಳ ಉತ್ಪತ್ತಿಲಯಗಳಿಗೆ ಪ್ರಾಣನೇ ಕಾರಣನೆಂದು ಹೇಳಲಾಗಿದೆ. ಸುಷುಪ್ತಿಕಾಲದಲ್ಲಿ ಬೇರೆ ಯಾವುದೇ ಇಂದ್ರಿಯಗಳ ವ್ಯಾಪಾರವಿಲ್ಲದೇ ಪ್ರಾಣವಾಯುವಿನ ವ್ಯಾಪಾರವಷ್ಟೇ ಇರುತ್ತದೆ. ಹಾಗಾಗಿ ಉಳಿದೆಲ್ಲ ಇಂದ್ರಿಯಗಳು ಸುಷುಪ್ತಿಕಾಲದಲ್ಲಿ ಪ್ರಾಣವಾಯುವಿನಲ್ಲಿ ಲಯ ಹೊಂದಿ, ಎಚ್ಚರಾವಸ್ಥೆಯಲ್ಲಿ ಪುನಃ ಹುಟ್ಟುತ್ತವೆ. ಈ ಪಂಚೇಂದ್ರಿಯಗಳು ಪಂಚಭೂತಗಳ ಸಾರರೂಪವಾದ್ದರಿಂದ ಸಮಸ್ತಭೂತಗಳ ಉತ್ಪತ್ತಿಲಯಗಳಿಗೆ ಜಡವಾಯುವೇ ಕಾರಣವೆಂದು ಇದರಿಂದ ಸಿದ್ಧವಾಗುತ್ತದೆ. ಆದ್ದರಿಂದ ಛಾಂದೋಗ್ಯದಲ್ಲಿರುವ ಪ್ರಾಣನೆಂದರೆ ಜಡವಾಯುವೇ ಹೊರತು ಬ್ರಹ್ಮನಲ್ಲ.

ಸಿದ್ಧಾಂತ - 'ಸರ್ವಾಣಿ ಹ ವಾ' ಎಂಬ ಛಾಂದೋಗ್ಯವು ಸಕಲಪ್ರಾಣಿಗಳ ಉತ್ಪತ್ತಿಲಯಕಾರಣತ್ವವನ್ನು ಸ್ಪಷ್ಟವಾಗಿ ಹೇಳುತ್ತಿದೆ. ಅದನ್ನು ಸಂಕೋಚಮಾಡಿ ಕೇವಲ ಇಂದ್ರಿಯಗಳಲ್ಲಷ್ಟೇ ಉತ್ಪತ್ತಿಲಯಕಾರಣತ್ವವನ್ನು ಹೇಳುವುದು ತಪ್ಪಾಗುತ್ತದೆ. ಆದ್ದರಿಂದ ಪ್ರಪಂಚಕಾರಣನಾದ ಬ್ರಹ್ಮನೇ ಪ್ರಾಣಶಬ್ದದಿಂದ ವಾಚ್ಯನಾಗಿದ್ದಾನೆ.

ಪ್ರಾಣಾಧಿಕರಣದ ಸಿದ್ಧಾಂತವು ಆಕಾಶಾಧಿಕರಣದಿಂದ ಗತಾರ್ಥವಾಗಿದೆ ಎಂದು ಶಂಕಿಸಬಾರದು. ಎರಡು ಬಗೆಯಲ್ಲಿ ಅಧಿಕಾಶಂಕೆಗೆ ಪ್ರಸಕ್ತಿ ಇರುವುದರಿಂದ ಪ್ರಾಣಾಧಿಕರಣವು ಆರಂಭಣೀಯವಾಗಿದೆ.

೧. ಪ್ರತ್ಯಕ್ಷಾನುಮಾನಗಳ ಬೆಂಬಲವಿರುವ ಸ್ವಾಪಶ್ರುತಿಯು ಸಕಲಭೂತಗಳ ಲಯವನ್ನು ಜಡವಾಯುವಿನಲ್ಲಿ ಪ್ರತಿಪಾದಿಸುತ್ತಿದೆ. ಅದಕ್ಕನುಗುಣವಾಗಿ ಪ್ರಸ್ತಾವವಾಕ್ಯವೂ ಕೂಡ ಜಡವಾಯುವನ್ನೇ ಪ್ರತಿಪಾದಿಸುತ್ತದೆ.

೨. ಅಥವಾ ಸ್ವಾಪವಾಕ್ಯಕ್ಕೆ ಅನುಗುಣವಾಗಿ ಪ್ರಸ್ತಾವವಾಕ್ಯವೇ ಇಂದ್ರಿಯಗಳ ಲಯವನ್ನು ಜಡವಾಯುವಿನಲ್ಲಿ ಪ್ರತಿಪಾದಿಸುತ್ತಿದೆ.

ಸ್ವಾಪವಾಕ್ಯದಂತೆ ಆಕಾಶಶ್ರುತಿಗೆ ಪ್ರಮಾಣಾಂತರಗಳ ಬೆಂಬಲವಿಲ್ಲದ ಕಾರಣ ಇಲ್ಲಿ ಅಧಿಕಾಶಂಕೆಗೆ ಅವಕಾಶವಿದೆ. ಈ ಅಧಿಕಾಶಂಕೆಯ ನಿರಾಕರಣೆಗಾಗಿ ಪ್ರಾಣಾಧಿಕರಣವು ಹೊರಡಲೇಬೇಕು.

* * * *

ಜನ್ಮಾದಿಸೂತ್ರದಲ್ಲಿ ಸಾಧಿಸಿದ ಸ್ಥಿತಿಹೇತುತ್ವಲಕ್ಷಣಕ್ಕೆ ಅಸಂಭವ ಹಾಗೂ ಅತಿವ್ಯಾಪ್ತಿದೋಷಗಳು ಬರುತ್ತವೆ. ಆದ್ದರಿಂದ ಜೀವನಕಾರಣನೆಂದು ನಿರ್ಣೀತನಾದ ಮುಖ್ಯಪ್ರಾಣನೇ ಆನಂದಮಯನಾಗಬೇಕು. ಆನಂದಮಯನಿಂದ ಮುಖ್ಯಪ್ರಾಣನಲ್ಲಿ ಭೇದವೂ ಕೇಳಿಸುತ್ತಿಲ್ಲ ಮತ್ತು ಚೇತನನೂ ಆಗಿರುವುದರಿಂದ ಮುಖ್ಯಪ್ರಾಣನೇ ಪ್ರಾಣಶಬ್ದದಿಂದ ವಾಚ್ಯನಾಗುತ್ತಾನೆ ಮತ್ತು ಆನಂದಮಯನಾಗುತ್ತಾನೆಂಬುದು ಪ್ರಮೇಯಾಶ್ರಿತಪೂರ್ವಪಕ್ಷ.

ಲಕ್ಷ್ಮೀಪತಿತ್ವಲಿಂಗವಿರುವುದು ಬೇರೆ ಅನುವಾಕದಲ್ಲಿ. ಅದಕ್ಕೂ 'ತದ್ವೈ ತ್ವಂ ಪ್ರಾಣಃ' ಎಂಬ ಅನುವಾಕಕ್ಕೂ ಯಾವುದೇ ಸಂಬಂಧವಿಲ್ಲ. ಹೀಗಿರುವಾಗ ಮುಖ್ಯಪ್ರಾಣನು ಪ್ರಾಣಶಬ್ದದಿಂದ ವಾಚ್ಯನಾಗಲು ಲಕ್ಷ್ಮೀಪತಿತ್ವಲಿಂಗವು ಬಾಧಕವಲ್ಲ. ಈ ಅನುವಾಕದಿಂದ ಮುಖ್ಯಪ್ರಾಣನೇ ವಾಚ್ಯನೆನ್ನಲು ಮಾತರಿಶ್ವಶ್ರುತಿಯು ಅಪಾನಶ್ರುತಿಯ ಸಾಹಿತ್ಯವು ಪೂರಕವಾಗಿವೆ. ಇಲ್ಲಿಗೆ ಎರಡು ಬಗೆಯ ಪ್ರಮೇಯಾಶ್ರಿತವಾದ ಪೂರ್ವಪಕ್ಷಗಳು ಮತ್ತು ನಾಲ್ಕುಬಗೆಯ ಪ್ರಮಾಣಾಶ್ರಿತಪೂರ್ವಪಕ್ಷಗಳು ಮುಗಿದವು.

ನಮ್ಮೆಲ್ಲರ ಜೀವನಕ್ಕೆ ಕಾರಣನಾದವನು ಭಗವಂತನೇ ಆಗಿದ್ದಾನೆ. ಭೌತಿಕವಾದ ಪ್ರಾಣವಾಯುವು ವಾಯುದೇವನಿಗೆ ಹೇಗೆ ಶರೀರವಾಗಿದೆಯೋ ಅದರಂತೆ ವಾಯುದೇವರು ಭಗವಂತನ ಶರೀರದಂತಿದ್ದಾರೆ. ಸರ್ವರ ಜೀವನಕ್ಕೆ ಕಾರಣನಾದ ವಾಯುದೇವರೇ ಭಗವಂತನ ಶರೀರವಾಗಿರುವಾಗ ಅವನಿಗೆ ಪ್ರೇರಕನಾದ ಭಗವಂತನು ಸಕಲಜೀವರ ಜೀವನಕ್ಕೆ ಕಾರಣನಾಗಿರಲೇ ಬೇಕು. ದೇಹದ ಕ್ರಿಯೆಗೆ ಜೀವನು ಹೇಗೆ ಪ್ರವರ್ತಕನಾಗಿರುತ್ತಾನೋ, ಆದರಂತೆ ಸಕಲಪ್ರಾಣಾದಿದೇವತೆಗಳ ಕ್ರಿಯೆಗಳಿಗೂ ಭಗವಂತನೇ ಪ್ರವರ್ತಕನಾಗಿದ್ದಾನೆ. ಆದ್ದರಿಂದ ಎಲ್ಲರಲ್ಲಿರುವ ಧರ್ಮಗಳಿಗೂ ಅವನೇ ನಿಯಾಮಕನು.

ಭಗವಂತನು ಯಾವಾಗಲೂ ಎಲ್ಲಾ ಕಡೆಯಿದ್ದರೂ ತನ್ನ ವಿಶಿಷ್ಟವಾದ ಒಂದುರೂಪವನ್ನು ಪ್ರಕಟಮಾಡಿ ಜೀವನಕ್ಕೆ ಕಾರಣನಾಗಿದ್ದಾನೆ. ಆ ರೂಪವನ್ನು ಅಂತರ್ಧಾನಗೊಳಿಸಿದಾಗ ಸಾವಿಗೆ ತುತ್ತಾಗುತ್ತಾರೆ.

ಮತ್ತು ಕಾಠಕದಲ್ಲಿರುವ 'ಇತರೇಣ ತು' ಎಂಬ ಶ್ರುತಿಯು ಪ್ರಾಣಪರವಾಗುವುದಿಲ್ಲ. ಇಲ್ಲಿರುವ ಇತರಶಬ್ದವು ಬ್ರಹ್ಮಪರವೆ ಆಗಿದೆ. ಹಿಂದಿನ ಮುಂದಿನ ವಾಕ್ಯಗಳು ಬ್ರಹ್ಮನನ್ನೇ ಪ್ರತಿಪಾದಿಸುತ್ತಿರುವಾಗ ಮಧ್ಯದ ಈ ವಾಕ್ಯವು ಬ್ರಹ್ಮನನ್ನು ಪ್ರತಿಪಾದಿಸದೆ ಇರಲಾರದಲ್ಲವೇ?

'ತದ್ವೈ ತ್ವಂ ಪ್ರಾಣೋ ಅಭವಃ' ಎಂಬ ಉಪನಿಷತ್ತಿನಲ್ಲಿ ಸಾಮಾನ್ಯವಾಗಿ ಪ್ರಾಣ ಎಂದು ಹೇಳಿಲ್ಲ. ಪರಮಾತ್ಮನಲ್ಲಿರುವ ಅನೇಕವಿಶಿಷ್ಟಗುಣಗಳನ್ನು ಧರ್ಮಗಳನ್ನು ಪ್ರಾಣನಲ್ಲಿ ನಿರೂಪಿಸಲಾಗಿದೆ. ಪ್ರಾಣನು ಶ್ರೀದೇವಿ ಲಕ್ಷ್ಮೀದೇವಿಯರ ಅಧಿಪತಿಯೆಂದು ಸ್ಪಷ್ಟವಾಗಿ ಶ್ರುತಿ ಹೇಳಿದೆ. ಜಗನ್ಮಾತೆಗೆ ಶ್ರೀಹರಿಯನ್ನು ಬಿಟ್ಟು ಬೇರೆ ಯಾರನ್ನೂ ಅಧಿಪತಿಗಳೆಂದು ಮನಸ್ಸಿನಿಂದಲೂ ಆಲೋಚಿಸಲು ಸಾಧ್ಯವಿಲ್ಲ. ಆದ್ದರಿಂದ ಲಕ್ಷ್ಮೀ, ಶ್ರೀ ಮೊದಲಾದ ಶಬ್ದಗಳನ್ನು ಭಾರತೀ ಮೊದಲಾದವರಲ್ಲಿ ಪ್ರಯೋಗಿಸಬಾರದು. ಆದರೆ 'ಪ್ರಾಣಸ್ಯ ಪ್ರಾಣಃ' ಎಂಬಲ್ಲಿ ಪ್ರಾಣಶಬ್ದದಿಂದ ಭಗವಂತನು ವಾಚ್ಯನಾಗಿದ್ದಾನೆನ್ನಲು ಸಾಕಷ್ಟು ಪ್ರಮಾಣಗಳಿವೆ.

ಮತ್ತು ಮುಖ್ಯಪ್ರಾಣನಲ್ಲಿ ಅಪೇಕ್ಷಿಕವಾದ ಮುಖ್ಯತ್ವವಷ್ಟೇ ಇದೆ. ಯಾವರೀತಿಯಾಗಿ ಜಡಪ್ರಕೃತಿಗಿಂತ ಚೇತನಪ್ರಕೃತಿಯು ಮುಖ್ಯವಾದ್ದರಿಂದ ಪರಾಕ್ಷರ ಎನಿಸಿದೆಯೋ ಅದರಂತೆ ಭೌತಿಕವಾಯುವಿಗಿಂತ ಮುಖ್ಯನಾದ್ದರಿಂದ ವಾಯುವು ಮುಖ್ಯಪ್ರಾಣನೆನಿಸಿದ್ದಾನೆ.

ಶ್ರೀಪತಿತ್ವಲಿಂಗವಿರುವ ಅನುವಾಕವು ಬೇರೆಯಾಗಿರಬಹುದು. ಆದರೂ 'ತದ್ವೈ ತ್ವಂ' ಎಂಬ ಪ್ರಾಣಶ್ರುತಿಯಿರುವ ಅನುವಾಕವೂ ಸಹ ಭಗವಂತನಲ್ಲಿ ಅಸಾಧಾರಣವಾದ ಮಾರಕತ್ವಾದಿ ಗುಣಗಳನ್ನು ಹೇಳುತ್ತಿದೆ. ಆದ್ದರಿಂದ ಈ ಅನುವಾಕವು

ಭಗವತ್ಪರವಾಗಿದೆ ಎಂದು ನಿರ್ಣಯವಾಗುತ್ತದೆ. ಮತ್ತು 'ಶ್ರೀಶ್ಚತೇ' ಎಂಬಲ್ಲಿ ಯುಷ್ಮಚ್ಛಬ್ದದಿಂದ ಹೇಳಿದವನನ್ನೇ 'ತದ್ವೈ ತ್ವಂ' ಎಂಬ ಯುಷ್ಮಚ್ಛಬ್ದದಿಂದಲೂ ಹೇಳಲಾಗಿದೆ. ಆದ್ದರಿಂದ ಎರಡೂ ಅನುವಾಕಗಳು ಒಬ್ಬನನ್ನೇ ಪ್ರತಿಪಾದಿಸುತ್ತಿವೆ.

ಮಾತರಿಶ್ವಶ್ರುತಿಯಲ್ಲಿಯೂ ಭಗವಂತನ ಸಕಲಸಂಹರ್ತೃತ್ವಗುಣವನ್ನು ಹೇಳಿದ್ದರಿಂದ ಇದು ಮುಖ್ಯ-ಪ್ರಾಣಪರವಾಗುವುದಿಲ್ಲ. ಇನ್ನು ತನ್ನಿಂದ ತನಗೆ ಸಾಹಿತ್ಯವು ಅಸಂಭಾವಿತವಾದ್ದರಿಂದ ಅಪಾನಸಾಹಿತ್ಯಲಿಂಗವು ಮುಖ್ಯಪ್ರಾಣನಿಗೆ ಪೂರಕವಲ್ಲ. ಆದ್ದರಿಂದ ಪ್ರಾಣಶಬ್ದದಿಂದ ಮುಖ್ಯಪ್ರಾಣನು ಪ್ರತಿಪಾದ್ಯನಾಗುವುದಿಲ್ಲ; ವಿಷ್ಣುವೇ ಪ್ರತಿಪಾದ್ಯನಾಗುತ್ತಾನೆ.

ಶಾಂಕರಭಾಷ್ಯದಲ್ಲಿ ಪ್ರಾಣಾಧಿಕರಣವನ್ನು ಹೀಗೆ ರಚಿಸಿದ್ದಾರೆ. 'ಕತಮಾ ಸಾ ದೇವತಾ ಇತಿ ಪ್ರಾಣ ಇತಿ ಹೋವಾಚ। ಸರ್ವಾಣಿ ಹ ವಾ ಭೂತಾನಿ ಪ್ರಾಣಮೇವಾಭಿಸಂವಿಶಂತಿ ಛಾಂದೋಗ್ಯದ ಈ ವಾಕ್ಯದಲ್ಲಿ ಪ್ರಾಣಶಬ್ದದಿಂದ ಯಾರು ವಾಚ್ಯರು? ಪ್ರಸಿದ್ಧವಾದ ಪ್ರಾಣವಾಯುವೋ ಅಥವಾ ಬ್ರಹ್ಮನೋ?

ಪೂರ್ವಪಕ್ಷ - ಪ್ರಾಣವಾಯುವೇ ಪ್ರಾಣಶಬ್ದದ ಮುಖ್ಯಾರ್ಥವೆಂದು ಛಾಂದೋಗ್ಯ ಹೇಳುತ್ತಿದೆ. ಏಕೆಂದರೆ ಅಲ್ಲಿಯೇ ಮುಂದೆ 'ಸರ್ವಾಣಿ ಹ ವಾ ಭೂತಾನಿ' ಎಂದು ಸಮಸ್ತಭೂತಪದಾರ್ಥಗಳ ಉತ್ಪತ್ತಿಲಯಗಳಿಗೆ ಪ್ರಾಣನೇ ಕಾರಣನೆಂದು ಹೇಳಲಾಗಿದೆ. ಸುಷುಪ್ತಿಕಾಲದಲ್ಲಿ ಬೇರೆ ಯಾವುದೇ ಇಂದ್ರಿಯಗಳ ವ್ಯಾಪಾರವಿಲ್ಲದೇ ಪ್ರಾಣವಾಯುವಿನ ವ್ಯಾಪಾರವಷ್ಟೇ ಇರುತ್ತದೆ. ಹಾಗಾಗಿ ಉಳಿದೆಲ್ಲ ಇಂದ್ರಿಯಗಳು ಸುಷುಪ್ತಿಕಾಲದಲ್ಲಿ ಪ್ರಾಣವಾಯುವಿನಲ್ಲಿ ಲಯ ಹೊಂದಿ, ಎಚ್ಚರಾವಸ್ಥೆಯಲ್ಲಿ ಪುನಃ ಹುಟ್ಟುತ್ತವೆ. ಈ ಪಂಚೇಂದ್ರಿಯಗಳು ಪಂಚಭೂತಗಳ ಸಾರರೂಪವಾದ್ದರಿಂದ ಸಮಸ್ತಭೂತಗಳ ಉತ್ಪತ್ತಿಲಯಗಳಿಗೆ ಜಡವಾಯುವೇ ಕಾರಣವೆಂದು ಇದರಿಂದ ಸಿದ್ಧವಾಗುತ್ತದೆ. ಆದ್ದರಿಂದ ಛಾಂದೋಗ್ಯದಲ್ಲಿರುವ ಪ್ರಾಣನೆಂದರೆ ಜಡವಾಯುವೇ ಹೊರತು ಬ್ರಹ್ಮನಲ್ಲ.

ಸಿದ್ಧಾಂತ - 'ಸರ್ವಾಣಿ ಹ ವಾ' ಎಂಬ ಛಾಂದೋಗ್ಯವು ಸಕಲಪ್ರಾಣಿಗಳ ಉತ್ಪತ್ತಿಲಯಕಾರಣತ್ವವನ್ನು ಸ್ಪಷ್ಟವಾಗಿ ಹೇಳುತ್ತಿದೆ. ಅದನ್ನು ಸಂಕೋಚಮಾಡಿ ಕೇವಲ ಇಂದ್ರಿಯಗಳಲ್ಲಷ್ಟೇ ಉತ್ಪತ್ತಿಲಯಕಾರಣತ್ವವನ್ನು ಹೇಳುವುದು ತಪ್ಪಾಗುತ್ತದೆ. ಆದ್ದರಿಂದ ಪ್ರಪಂಚಕಾರಣನಾದ ಬ್ರಹ್ಮನೇ ಪ್ರಾಣಶಬ್ದದಿಂದ ವಾಚ್ಯನಾಗಿದ್ದಾನೆ.

ಪ್ರಾಣಾಧಿಕರಣದ ಸಿದ್ಧಾಂತವು ಆಕಾಶಾಧಿಕರಣದಿಂದ ಗತಾರ್ಥವಾಗಿದೆ ಎಂದು ಶಂಕಿಸಬಾರದು. ಎರಡು ಬಗೆಯಲ್ಲಿ ಅಧಿಕಾಶಂಕೆಗೆ ಪ್ರಸಕ್ತಿ ಇರುವುದರಿಂದ ಪ್ರಾಣಾಧಿಕರಣವು ಆರಂಭಣೀಯವಾಗಿದೆ.

೧. ಪ್ರತ್ಯಕ್ಷಾನುಮಾನಗಳ ಬೆಂಬಲವಿರುವ ಸ್ವಾಪಶ್ರುತಿಯು ಸಕಲಭೂತಗಳ ಲಯವನ್ನು ಜಡವಾಯುವಿನಲ್ಲಿ ಪ್ರತಿಪಾದಿಸುತ್ತಿದೆ. ಅದಕ್ಕನುಗುಣವಾಗಿ ಪ್ರಸ್ತಾವವಾಕ್ಯವೂ ಕೂಡ ಜಡವಾಯುವನ್ನೇ ಪ್ರತಿಪಾದಿಸುತ್ತದೆ.

೨. ಅಥವಾ ಸ್ವಾಪವಾಕ್ಯಕ್ಕೆ ಅನುಗುಣವಾಗಿ ಪ್ರಸ್ತಾವವಾಕ್ಯವೇ ಇಂದ್ರಿಯಗಳ ಲಯವನ್ನು ಜಡವಾಯುವಿನಲ್ಲಿ ಪ್ರತಿಪಾದಿಸುತ್ತಿದೆ.

ಸ್ವಾಪವಾಕ್ಯದಂತೆ ಆಕಾಶಶ್ರುತಿಗೆ ಪ್ರಮಾಣಾಂತರಗಳ ಬೆಂಬಲವಿಲ್ಲದ ಕಾರಣ ಇಲ್ಲಿ ಅಧಿಕಾಶಂಕೆಗೆ ಅವಕಾಶವಿದೆ. ಈ ಅಧಿಕಾಶಂಕೆಯ ನಿರಾಕರಣೆಗಾಗಿ ಪ್ರಾಣಾಧಿಕರಣವು ಹೊರಡಲೇಬೇಕು.

* * * *

ಶ್ರೀಬ್ರಹ್ಮಣ್ಯತೀರ್ಥಶ್ರೀಪಾದಶಿಷ್ಯವ್ಯಾಸತೀರ್ಥವಿರಚಿತಾ

# ತಾತ್ಪರ್ಯಚಂದ್ರಿಕಾ

## अथ प्राणाधिकरणम्

ಸಂಗತಿ ಮತ್ತು ಭಾಷ್ಯೋಕ್ತ ಫಲವಿಚಾರ

**॥ ॐ अत एव प्राणः ॐ ॥ अत्र आध्यात्मिकप्राणादिशब्दसमन्वय उच्यते । अत्रापि 'प्राणशब्दप्रवृत्तिनिमित्तं जीवनादिहेतुत्वमन्वयव्यतिरेकाभ्यां प्राणशब्दार्थत्वेन प्रसिद्धस्य वायोरेवेति, स एव प्राणशब्दवाच्यो न तु विष्णुरित्याद्यधिकाशङ्कानिरासेन पूर्वन्याय एवातिदिश्यते' इत्यातिदेशिकी अवान्तरसङ्गतिः । भूताकाशस्य त्ववकाशहेतुत्वेऽन्वयव्यतिरेकौ न स्तः, परिच्छिन्नस्य तस्याभावेऽपि क्वचिदवकाशदर्शनात् ।**

**यद्यप्यत्र ''तद्वै त्वं प्राणः'' इत्यत्र प्राणस्य विष्णोः अन्यत्वे ''प्राणं देवाः'' इत्यादावप्यन्यत्वं स्यात् इत्यपि प्रयोजनं वक्तुं शक्यम् । तथाऽपि सूत्रे कण्ठोक्तानन्दमयत्वाक्षेपो दर्शनीय इति भाष्यादौ तदुक्तिः । अत एवानन्दमयोक्ताया विष्णोः प्राणतायाः इहाक्षेपात्र तेन गतार्थता, नापि प्राणशब्दस्योभयत्रप्रसिद्धता ।**

ಅನುವಾದ - ॥ ಓಂ ಅತ ಏವ ಪ್ರಾಣಃ ಓಂ ॥ ಪ್ರಾಣಾಧಿಕರಣವು ಪ್ರಾರಂಭವಾಗುತ್ತಿದೆ. ಈ ಅಧಿಕರಣದಲ್ಲಿ ಪ್ರಾಣಶಬ್ದವನ್ನು ಸಮನ್ವಯ ಮಾಡುವ ಮೂಲಕ ಇಂದ್ರಿಯ ಮನಸ್ಸು ಮೊದಲಾದ ಸಕಲ ಆಧ್ಯಾತ್ಮಿಕಶಬ್ದಗಳ ಸಮನ್ವಯವನ್ನು ಮಾಡುತ್ತಿದ್ದಾರೆ. ಈ ಅಧಿಕರಣದಲ್ಲಿಯೂ ಸಹ ಪ್ರಾಣಶಬ್ದದಿಂದ ವಿಷ್ಣುವು ಪ್ರತಿಪಾದ್ಯನಾಗಲಾರ ಎಂದು ಪೂರ್ವಪಕ್ಷ. ಏಕೆಂದರೆ ಜೀವನಾದಿಹೇತುತ್ವವು ಪ್ರಾಣಶಬ್ದದ ಪ್ರವೃತ್ತಿನಿಮಿತ್ತವಾಗಿದೆ. ದೇಹದಲ್ಲಿ ಮುಖ್ಯವಾಯುವಿದ್ದರೆ ಮಾತ್ರ ಜೀವನ ಇಲ್ಲದಿದ್ದರೆ ಇಲ್ಲ ಎಂಬ ಅನ್ವಯವ್ಯತಿರೇಕದಿಂದ ಪ್ರಾಣಶಬ್ದದ ಪ್ರವೃತ್ತಿನಿಮಿತ್ತವು ಮುಖ್ಯವಾಯುವಿನಲ್ಲೇ ಕೂಡುತ್ತದೆ. ಆದ್ದರಿಂದ ಮುಖ್ಯವಾಯುವೇ ಪ್ರಾಣಶಬ್ದದಿಂದ ವಾಚ್ಯನಾಗುತ್ತಾನೆ ಹೊರತು ವಿಷ್ಣುವಲ್ಲ ಎಂಬ ಅಧಿಕಾಶಂಕೆಯನ್ನು ಹಿಂದಿನ ಅಧಿಕರಣದ ಸಿದ್ಧಾಂತನ್ಯಾಯದಿಂದಲೇ ನಿರಾಕರಿಸುತ್ತಿದ್ದಾರೆ. ಹಿಂದಿನ ಅಧಿಕರಣದ ಸಿದ್ಧಾಂತನ್ಯಾಯವನ್ನು ಇಲ್ಲಿ ಅತಿದೇಶ ಮಾಡುತ್ತಿರುವುದರಿಂದ ಆತಿದೇಶಕೀ ಎಂಬ ಅವಾಂತರಸಂಗತಿಯನ್ನು ತಿಳಿಯಬೇಕು. ಇದು ಏಕೆ ಅಧಿಕಾಶಂಕೆಯೆಂದರೆ

ಭೂತಾಕಾಶದಲ್ಲಿ ಅನ್ವಯವ್ಯತಿರೇಕವನ್ನು ಹೇಳಲು ಬರುವುದಿಲ್ಲ. ಅವಕಾಶಹೇತುತ್ವವೆಂಬ ಪ್ರವೃತ್ತಿ-ನಿಮಿತ್ತವನ್ನು ಭೂತಾಕಾಶದಲ್ಲಿ ಹೇಳಬೇಕೆಂದರೆ, ಭೂತಾಕಾಶ ಇಲ್ಲದ ಕಡೆ ಅವಕಾಶವು ಇರ-ಬಾರದು, ಆದರೆ ಪರಿಚ್ಛಿನ್ನವಾದ ಭೂತಾಕಾಶ ಇಲ್ಲದಿದ್ದರೂ ಸಹ ಬ್ರಹ್ಮಾಂಡದ ಹೊರಗೆ ಅವಕಾಶ ಇರುವುದು ಸಿದ್ಧವಾಗಿದೆ.

ವಸ್ತುತಸ್ತು ಈ ಅಧಿಕರಣದಲ್ಲಿ 'ತದ್ವೈ ತ್ವಂ ಪ್ರಾಣಃ' ಎಂಬ ತೈತ್ತಿರೀಯದ ಪ್ರಾಣಶಬ್ದದಿಂದ ವಿಷ್ಣುವು ವಾಚ್ಯನಾಗದಿದ್ದರೆ 'ಪ್ರಾಣಂ ದೇವಾಃ' ಎಂಬ ಹಿಂದಿನ ಪ್ರಾಣಶಬ್ದದಿಂದಲೂ ವಿಷ್ಣುವು ವಾಚ್ಯನಾಗಲಾರ ಎಂದು ಆಕ್ಷೇಪಿಸಬಹುದು. ಆದರೆ ಸೂತ್ರಕಾರರು 'ಆನಂದಮಯೋऽಭ್ಯಾಸಾತ್' ಎಂದು ಆನಂದಮಯನನ್ನೇ ಆಕ್ಷೇಪಿಸಿದ್ದಾರೆ. ಅದಕ್ಕೆ ಅನುಸಾರಿಯಾಗಿಯೇ ಭಾಷ್ಯಾದಿಗಳಲ್ಲಿ ವ್ಯಾಖ್ಯಾನಿಸಿದ್ದಾರೆ. ಆದ್ದರಿಂದಲೇ 'ವಿಷ್ಣುವು ಆನಂದಮಯ'ನೆಂದು ಹಿಂದೆ ಸಿದ್ಧಾಂತ ಮಾಡಿದ್ದೀರಿ. ಆದರೆ ಆ ವಿಷ್ಣುವು ಪ್ರಾಣನಾದ್ದರಿಂದ ಆನಂದಮಯನಾಗಲಾರ ಎಂದು ಇಲ್ಲಿ ಆಕ್ಷೇಪಿಸಿದ್ದಾರೆ. ಇದರಿಂದ ಪುನರುಕ್ತಿದೋಷವು ಬರುವುದಿಲ್ಲ. ಆಕಾಶಾದಿಶಬ್ದಗಳಂತೆ ಪ್ರಾಣಶಬ್ದವು ಉಭಯತ್ರ-ಪ್ರಸಿದ್ಧವಾಗಿಲ್ಲ.

ಕಠಿಣಪದಾರ್ಥ

ಅತ್ರ = ಆಕಾಶಾಧಿಕರಣದಲ್ಲಿ, ಆಧ್ಯಾತ್ಮಿಕ = ಇಂದ್ರಿಯ ಮನಸ್ಸು ಶರೀರ ಮೊದಲಾದವುಗಳಿಗೆ ಸಂಬಂಧಿಸಿದ, ಪೂರ್ವನ್ಯಾಯಃ = ನಿರವಕಾಶಲಿಂಗದಿಂದ ಪ್ರಸಿದ್ಧಿಗೆ ಬಾಧವೆಂಬ ಹಿಂದಿನ ನ್ಯಾಯವು, ತಸ್ಯ = ಆಕಾಶಕ್ಕೆ, ಕ್ವಚಿತ್ = ಬ್ರಹ್ಮಾಂಡದ ಹೊರಗೆ, ಪ್ರಾಣತಾಯಾಃ = 'ಕೋ ಹ್ಯೇವಾನ್ಯಾತ್ ಕಃ ಪ್ರಾಣ್ಯಾತ್' ಎಂಬಲ್ಲಿ ಹೇಳಿರುವ ಚೇಷ್ಟಾಪ್ರದತ್ವವನ್ನು, ತೇನ = ಆನಂದಮಯಾಧಿಕರಣದಿಂದ.

**ಪ್ರಕಾಶಃ – ॥ ॐ अत एव प्राणः ॐ ॥** ''आध्यात्मिकाशेषशब्दोपलक्षकप्राण-शब्दवाच्यो हरिः'' इति टीकां मनसि निधायाधिकरणोपाधिमाह – **अत्रेति** ॥ प्राधान्यात् प्राणशब्दस्य सूत्रे मुखतः कीर्तनमिति भावः । अत्र भाष्यदिशाऽऽनन्द-मयाधिकरणानन्तर्यप्रतीतेः ''अतिदेशो हि तादृशः'' इत्यनुभाष्यदिशान्तरधिकरणेन सङ्गतिमाह – **अत्रापीति** ॥ न केवलं पूर्वत्रेत्यपेरर्थः । 'जीवनादिहेतुत्वमन्वय-व्यतिरेकाभ्यां वायोरेव' इत्यन्वयः ॥ **इत्यादीति** ॥ 'प्रमाणाश्रिता तु' इत्यादिना वक्ष्यमाणदिशाऽऽदिशब्दः । तर्हि पूर्वानन्तर्ये को हेतुरित्यतः पूर्ववैषम्यमाह – **भूतेति** ॥ नच भाष्यविरोध इति शङ्कचं, तस्य, ''तद्वै त्वं प्राणः'' इति प्राणस्य विष्वन्यत्वे महाभोगशब्दोक्तं पूर्णानन्दत्वमपि तस्यैवेत्यानन्दमयोऽप्यन्यस्यादिति पूर्वपक्षे तदाक्षेपेण सिद्धान्ते तत्समाधानेन प्रयोजनमात्रपरत्वेनोपपत्तेः ।

ನಚ ಪೂರ್ವಂ ಬ್ರಹ್ಮಶಬ್ದಾದಿನಾ ವಿಷ್ಣುನಿಷ್ಠತಯಾऽವಧಾರಿತಸ್ಯಾನನ್ದಮಯತ್ವರೂಪ-ಪೂರ್ಣಾನನ್ದತ್ವಸ್ಯ ಅತ್ರ ಪ್ರಾಣೇ ಶ್ರವಣಾತ್ ಪ್ರಾಣೋ ವಿಷ್ಣುರೇವೇತಿ ವೈಪರೀತ್ಯಸ್ಯಾಪಿ ಸಮ್ಭವಾಚ್ಚೇದಂ ಪ್ರಯೋಜನಂ ಯುಕ್ತಮಿತಿ ವಾಚ್ಯಂ, ಟೀಕೋಕ್ತದಿಶಾ ಸಾವಕಾಶೇನ ಲಿಙ್ಗಮಾತ್ರೇಣ ನಿರವಕಾಶಪ್ರಾಣಶ್ರುತಿಬಾಧಾಯೋಗಾತ್ । ಉಕ್ತಞ್ಚ ಟೀಕಾಯಾಂ – ''**ನಚ ಮಹಾಭೋಗತ್ವಂ ಶ್ರುತಿಬಾಧಕಂ, ಶ್ರುತಿತೋ ಲಿಙ್ಗಸ್ಯ ದೌರ್ಬಲ್ಯಾತ್**'' ಇತಿ । ಕಥಂ ತರ್ಹ್ಯಾನನ್ದಮಯೇ ಶ್ರುತಸ್ಯ ಬ್ರಹ್ಮಶಬ್ದಾದೇರ್ಬಾಧಃ? ಇತಿ ಚೇತ್, ಅತ್ರತ್ಯಪೂರ್ವಪಕ್ಷನ್ಯಾಯೇನ ಅನ್ಯತ್ರಪ್ರಸಿದ್ಧನಿರವಕಾಶಪ್ರಾಣಶ್ರುತಿಸಾಹಚರ್ಯೇಣ ಅನನ್ದ-ಮಯತ್ವಸ್ಯ ಅನ್ಯತ್ರಪ್ರಸಿದ್ಧತ್ವಾಪತ್ತ್ಯಾ ತದ್‌ಬಲೇನ ಬ್ರಹ್ಮಶಬ್ದಾದೇರ್ಮುಖ್ಯಪ್ರಾಣ ಏವ ಕಥಞ್ಚಿತ್ ಸಾವಕಾಶತ್ವಾದಿತಿ ಭಾವಃ ।

ಭಾಷ್ಯೋಕ್ತಂ ಫಲಂ ಪ್ರಕಾರಾನ್ತರೇಣಾಕ್ಷಿಪ್ಯ ಸಮಾಧತ್ತೇ – **ಯದ್ಯಪೀತಿ** ॥ ನನ್ವೇವಮಯಂ ಪ್ರಾಣೋऽನ್ಯಶ್ಚೇತ್ ''ಪ್ರಾಣಂ ದೇವಾ ಅನುಪ್ರಾಣನ್ತಿ'' ಇತ್ಯುಕ್ತೋऽಪ್ಯನ್ಯಸ್ಯಾದಿತಿ ಸಾಕ್ಷಾತ್ ಪ್ರಾಣಮಯಾಕ್ಷೇಪಸಮಾಧಾನೇನ ಸಾಫಲ್ಯಸಮ್ಭವೇ ಮಹಾಭೋಗತ್ವಮುಖೇನಾಕ್ಷೇಪಸ್ತು ವಕ್ರೋ ನಾಶ್ರಯಣೀಯ ಇತಿ ಶಙ್ಕಾರ್ಥಃ । ನಚಾತ್ರ ವಕ್ಷ್ಯಮಾಣರೀತ್ಯಾ ಪ್ರಾಣಶ್ರುತಿಬಾಹುಲ್ಯಾಪಾದನಸಾಹಿತ್ಯಾದಿರೂಪಸ್ಯೈವ ತತ್ರ ವಿಶೇಷಹೇತೋರಭಾವಾನ್ನ ತದಾಕ್ಷೇಪ ಇತಿ ವಾಚ್ಯಂ, ಏಕತ್ರ ನಿರ್ಣೀತಸ್ಯೈವಾರ್ಥಸ್ಯ ಬಾಧಕಾಭಾವೇ ಸರ್ವತ್ರ ಗ್ರಾಹ್ಯತ್ವಾತ್ । ನಚ ತತ್ರ ವಿಷ್ಣುಪರತ್ವಂ ಬಾಧಕಂ, ಅದ್ಯಾಪ್ಯಸಿದ್ಧೇಃ। ನಚ ತತ್ರ ಮುಕ್ತಪ್ರಾಪ್ಯತ್ವಾದಿಬ್ರಹ್ಮಲಿಙ್ಗಮೇವ ಬಾಧಕಮಿತಿ ವಾಚ್ಯಂ, ಅನ್ಯತ್ರ ಪ್ರಸಿದ್ಧ್ಯಾ ಬ್ರಹ್ಮಲಿಙ್ಗಾನಾ-ಮನ್ಯಥಾ ನಯನಸ್ಯಾತ್ರೈವ ತತ್ರಾಪಿ ತುಲ್ಯತ್ವಾದಿತ್ಯುಕ್ತತ್ವಾತ್ ॥

**ಕಣ್ಠೋಕ್ತೇತಿ** ॥ ಉಪಲಕ್ಷಣಮೇತತ್, ಮಹಾಭೋಗತ್ವಮುಖೇನಾನಾಕ್ಷೇಪೇ ವಿಷ್ಣುಧರ್ಮತಯಾ ನಿರ್ಣೀತೇನ ಮಹಾಭೋಗತ್ವೇನ ವಿಷ್ಣುರೇವ ಪ್ರಾಣ ಇತಿ ಶಙ್ಕಾ ಸ್ಯಾತ್ । ಸಾ ಮಾ ಭೂತ್, ಮಹಾಭೋಗತ್ವಸ್ಯಾಪಿ ವಾಯುಧರ್ಮತ್ವಾದಿತಿ ದರ್ಶಯಿತುಮಿತ್ಯಪಿ ಧ್ಯೇಯಮ್ । ಏವಂ ಹಿ ಪ್ರಾಣತ್ವಸ್ಯಾ- ನಾಕ್ಷೇಪೇ ಗತಾರ್ಥತಾ ಇತ್ಯತ ಆಹ – **ಅತ ಏವೇತಿ** ॥ 'ಪ್ರಾಣತಾಯಾಃ' 'ಕೋ ಹ್ಯೇವಾನ್ಯಾತ್ ಕಃ ಪ್ರಾಣ್ಯಾತ್'' ಇತ್ಯುಕ್ತಾಯಾಃ ಅನ್ಯಥಃ ತತ್ರೈವ ವಿಷ್ಣೋರ್ಜೀವನಹೇತುತ್ವರೂಪಪ್ರಾಣದತ್ವಸ್ಯ ಸಿದ್ಧತ್ವಾದಿಹ ಸಿದ್ಧಾನ್ತೇ ತತ್ಸಮರ್ಥನಂ ನ ಸ್ಯಾದಿತಿ ಭಾವಃ ॥ **ನಾಪೀತಿ** ॥ 'ಅತ ಏವ' ಇತ್ಯನುವರ್ತತೇ । ಪ್ರಾಣಪದಪ್ರವೃತ್ತಿನಿಮಿತ್ತಸ್ಯ ವಿಷ್ಣಾವಾಕ್ಷೇಪೇಣ ಪ್ರಾಣಪದಸ್ಯ(ಶಬ್ದಸ್ಯ) ಭಗವತಿ ವೃತ್ತೇರ-ಸಮ್ಮತೇಃ । ಅನ್ಯಥಾ ''ಆಕಾಶೋऽರ್ಥಾನ್ತರತ್ವಾತ್'' ಇತ್ಯತ್ರ ಪೂರ್ವಪಕ್ಷೇ ''ಆಕಾಶ ಇತಿ ಹೋವಾಚ'' ಇತ್ಯತ್ರ ವಿಷ್ಣೋರಾಕಾಶತಾಯಾಃ ಅನಾಕ್ಷೇಪೇಣೋಭಯತ್ರಪ್ರಸಿದ್ಧಿವದು- ಭಯತ್ರಪ್ರಸಿದ್ಧತಾ ಸ್ಯಾದಿತಿ ಭಾವಃ ।

ವಿವರಣೆ - ಆಕಾಶಾಧಿಕರಣದಲ್ಲಿ ಆಧಿಭೌತಿಕವಾದ ಸಕಲಶಬ್ದಗಳನ್ನು ಸಮನ್ವಯ ಮಾಡಿದ್ದಾಯಿತು. ಪ್ರಕೃತ ಪ್ರಾಣಾಧಿಕರಣದಲ್ಲಿ ಆಧ್ಯಾತ್ಮಿಕವಾದ ಸಕಲಶಬ್ದಗಳನ್ನು ಸಮನ್ವಯ ಮಾಡುತ್ತಿದ್ದಾರೆ. 'ಆಧ್ಯಾತ್ಮಿಕಾ-ಶೇಷಶಬ್ದೋಪಲಕ್ಷಕಪ್ರಾಣಶಬ್ದವಾಚ್ಯೋ ಹರಿಃ' (ಪ್ರಾಣಶಬ್ದವು ಆಧ್ಯಾತ್ಮಿಕ ಸಕಲಶಬ್ದಗಳನ್ನು ಉಪಲಕ್ಷಿಸುತ್ತಿದೆ. ಆ ಎಲ್ಲ ಶಬ್ದಗಳಿಂದ ಹರಿಯು ಪ್ರತಿಪಾದ್ಯನಾಗಿದ್ದಾನೆ) ಎಂಬ ಟೀಕೆಯನ್ನು ವ್ಯಾಖ್ಯಾನಿಸುತ್ತ ಮೊದಲು ಅಧಿಕರಣದ ಉಪಾಧಿಯನ್ನು ಹೇಳಿದ್ದಾರೆ. ಆಧ್ಯಾತ್ಮಿಕಸಕಲಶಬ್ದಗಳ ಮಧ್ಯದಲ್ಲಿ ಪ್ರಾಣಶಬ್ದವೇ ಪ್ರಧಾನವಾದ್ದರಿಂದ ಅದನ್ನು ಸೂತ್ರದಲ್ಲಿ ಕಂಠತಃ ಉಚ್ಚರಿಸಿದ್ದಾರೆ.

ಭಾಷ್ಯವನ್ನು ನೋಡಿದಾಗ ಆನಂದಮಯಾಧಿಕರಣದ ಅನಂತರದಲ್ಲಿ ಪ್ರಾಣಾಧಿಕರಣವು 'ಬರಬೇಕೆಂದು ತೋರುತ್ತದೆ. ಆದರೆ ಅನುವ್ಯಾಖ್ಯಾನದಲ್ಲಿ 'ಆತಿದೇಶೋ ಹಿ ತಾದೃಶಃ' ಎಂದು ಸ್ಪಷ್ಟವಾಗಿ ಆಕಾಶಾಧಿಕರಣದಿಂದ ಸಂಗತಿಯನ್ನು ಹೇಳಿದ್ದಾರೆ. ಅನುವ್ಯಾಖ್ಯಾನದಲ್ಲಿ ಹೇಳಿದ ಸಂಗತಿಯನ್ನೇ 'ಅತ್ರಾಪಿ' ಇತ್ಯಾದಿ ಗ್ರಂಥದಿಂದ ವಿವರಿಸುತ್ತಿದ್ದಾರೆ. ಆಕಾಶಾಧಿಕರಣದ ಹಾಗೂ ಪ್ರಾಣಾಧಿಕರಣದ ಸಿದ್ಧಾಂತವು ಒಂದೇ ಆಗಿದೆ ಎಂದು ಹೇಳಿದರು. ಹಾಗಾದರೆ ಮೊದಲು ಪ್ರಾಣಾಧಿಕರಣವನ್ನು ಹೇಳಿ, ಅನಂತರ ಆಕಾಶಾಧಿಕರಣವನ್ನು ಹೇಳಬಹುದು. ಆಕಾಶಾಧಿಕರಣದ ಅನಂತರದಲ್ಲಿಯೇ ಪ್ರಾಣಾಧಿಕರಣವನ್ನು ಹೇಳಲು ಏನು ಕಾರಣ? ಎಂಬ ಶಂಕೆಗೆ 'ಭೂತಾಕಾಶಸ್ಯ' ಎಂಬ ಮಾತಿನಿಂದ ಉತ್ತರಿಸುತ್ತಿದ್ದಾರೆ. ಪ್ರಾಣಶಬ್ದದ ಪ್ರವೃತ್ತಿನಿಮಿತ್ತಕ್ಕೆ ಅನ್ವಯವ್ಯತಿರೇಕದಿಂದ ಪೂರ್ವಪಕ್ಷವು ಕೂಡುತ್ತದೆ. ಆದರೆ ಆಕಾಶಶಬ್ದದ ಪ್ರವೃತ್ತಿನಿಮಿತ್ತಕ್ಕೆ ಅನ್ವಯವ್ಯತಿರೇಕವು ಕೂಡುವುದಿಲ್ಲ. ಪೂರ್ವಪಕ್ಷದಲ್ಲಿರುವ ಈ ಅಧಿಕಾಂಶವನ್ನು ವಿವಕ್ಷಿಸಿ ಆಕಾಶಾಧಿಕರಣದ ಅನಂತರ ಪ್ರಾಣಾಧಿಕರಣವನ್ನು ಹೇಳಿದ್ದಾರೆ.

ಶಂಕೆ - ಭಾಷ್ಯದಲ್ಲಿ ಆನಂದಮಯಾಧಿಕರಣದಿಂದ ನೇರವಾಗಿ ಪ್ರಾಣಾಧಿಕರಣಕ್ಕೆ ಸಂಗತಿಯನ್ನು ಹೇಳಿದ್ದಾರೆ. ಆದರೆ ನೀವು ಆಕಾಶಾಧಿಕರಣದಿಂದ ಸಂಗತಿಯನ್ನು ಹೇಳುತ್ತಿದ್ದೀರಿ. ಹಾಗಾದರೆ ಭಾಷ್ಯವಿರೋಧ ಬರುತ್ತದಲ್ಲವೇ?

ಸಮಾಧಾನ - ಭಾಷ್ಯದಲ್ಲಿ ಆನಂದಮಯಾಧಿಕರಣದಿಂದ ಸಂಗತಿಯನ್ನು ತೋರಿಸಿಲ್ಲ. ಹೊರತು ಪೂರ್ವಪಕ್ಷದ ಪ್ರಯೋಜವನ್ನು ಮತ್ತು ಸಿದ್ಧಾಂತದ ಪ್ರಯೋಜನವನ್ನಷ್ಟೇ ಆನಂದಮಯಾಧಿಕರಣದಿಂದ ತೋರಿಸಿದ್ದಾರೆ. 'ತದ್ವೈ ತ್ವಂ ಪ್ರಾಣಃ' ಎಂಬಲ್ಲಿರುವ ಮುಖ್ಯವಾಯುವು ಪ್ರತಿಪಾದ್ಯನಾದರೆ ಅದೇ ಶ್ರುತಿಯಲ್ಲಿ ಮಹಾಭೋಗಶಬ್ದದಿಂದ ಹೇಳಲ್ಪಟ್ಟ ಪೂರ್ಣಾನಂದತ್ವವು ಮುಖ್ಯವಾಯುವಿಗೇ ಬರಬೇಕು. ಹಾಗಾಗಿ ಆನಂದಮಯನೂ ಸಹ ಮುಖ್ಯವಾಯುವೇ ಆಗುತ್ತಾನೆ ಎಂದು ಪೂರ್ವಪಕ್ಷದ ಫಲ. ಪ್ರಾಣಶಬ್ದದಿಂದ ಮುಖ್ಯವಾಯುವು ವಾಚ್ಯನಾಗುವುದಿಲ್ಲ ಹೊರತು ವಿಷ್ಣುವೇ ವಾಚ್ಯನಾಗುತ್ತಾನೆ. ಆದ್ದರಿಂದ ಮಹಾಭೋಗಶಬ್ದದಿಂದ ಹೇಳಲ್ಪಟ್ಟ ಪೂರ್ಣಾನಂದತ್ವವು ವಿಷ್ಣುವಿಗೇ ಕೂಡುತ್ತದೆ; ಆನಂದಮಯಶಬ್ದದಿಂದ ವಿಷ್ಣುವೇ ವಾಚ್ಯನಾಗುತ್ತಾನೆ ಎಂಬುದು ಸಿದ್ಧಾಂತದ ಫಲ.

ಶಂಕೆ - ಹಿಂದೆ ಬ್ರಹ್ಮಶಬ್ದದ ಬಲದಿಂದ ಆನಂದಮಯತ್ವರೂಪವಾದ ಪೂರ್ಣಾನಂದತ್ವರೂಪವನ್ನು ವಿಷ್ಣುವಿನ ಧರ್ಮವೆಂದು ನಿಶ್ಚಯಿಸಲಾಗಿತ್ತು. ಆದರೆ ಅದೇ ಪೂರ್ಣಾನಂದತ್ವವು ಪ್ರಕೃತ ಶ್ರುತಿಯಲ್ಲಿ ಪ್ರಾಣನಲ್ಲಿ ಕೇಳಿಸುತ್ತಿದೆ. ಆದ್ದರಿಂದ ಪ್ರಾಣಶಬ್ದದಿಂದಲೂ ವಿಷ್ಣುವೇ ವಾಚ್ಯನಾಗಬೇಕು ಎಂದು

ವಿಪರೀತವಾಗಿಯೂ ಸಹ ಹೊಂದಿಸಬಹುದಾದ್ದರಿಂದ ಆನಂದಮಯಶಬ್ದದಿಂದ ವಿಷ್ಣುವೇ ವಾಚ್ಯ-ನಾಗುತ್ತಾನೆಂಬ ಸಿದ್ಧಾಂತದ ಫಲವನ್ನು ಹೇಳಲಾಗದು ಅಲ್ಲವೇ?

ಸಮಾಧಾನ - ಪೂರ್ಣಾನಂದತ್ವವೆಂಬ ಲಿಂಗವು ಟೀಕೆಯಲ್ಲಿ ಹೇಳಿದ ಪ್ರಕಾರ ಸಾವಕಾಶವಾಗಿದೆ. ಆದರೆ ಪ್ರಾಣಶ್ರುತಿಯು ನಿರವಕಾಶವಾಗಿದೆ. ಸಾವಕಾಶಲಿಂಗದಿಂದ ನಿರವಕಾಶಶ್ರುತಿಯನ್ನು ಬಾಧಿಸಲು ಹೇಗೆ ಸಾಧ್ಯ? ಹಾಗಾಗಿ ಪೂರ್ಣಾನಂದತ್ವಲಿಂಗದಿಂದ ಪ್ರಾಣಶಬ್ದವು ವಿಷ್ಣುವನ್ನು ಪ್ರತಿಪಾದಿಸುತ್ತದೆಂದು ನಿರ್ಣಯಿಸಲಾಗದು. ಟೀಕೆಯ ಮಾತು ಹೀಗಿದೆ - ''ನಚ ಮಹಾಭೋಗತ್ವಂ ಶ್ರುತಿಬಾಧಕಮ್ । ಶ್ರುತೇಶ್ಚ ಲಿಂಗಸ್ಯ ದೌರ್ಬಲ್ಯಾತ್' (ಪೂರ್ಣಾನಂದತ್ವವು ಶ್ರುತಿಗೆ ಬಾಧಕವಾಗುವುದಿಲ್ಲ; ಶ್ರುತಿಗಿಂತ ಲಿಂಗವು ದುರ್ಬಲವಾದ್ದರಿಂದ).

ಶಂಕೆ - ಹಾಗಾದರೆ ಆನಂದಮಯನಲ್ಲಿ ಶ್ರುತವಾದ ಬ್ರಹ್ಮಶ್ರುತಿಗೆ ಬಾಧವನ್ನು ಹೇಗೆ ಹೇಳುತ್ತೀರಿ? ಈಗ ಹೇಳಿದಂತೆ ಶ್ರುತಿಗಿಂತ ಲಿಂಗವು ದುರ್ಬಲವಲ್ಲವೇ?

ಸಮಾಧಾನ - ಆನಂದಮಯನಲ್ಲಿ ಶ್ರುತವಾದ ಬ್ರಹ್ಮಶಬ್ದವೂ ಸಹ ಸಾವಕಾಶವೇ ಆಗಿದೆ. ಏಕೆಂದರೆ ಈ ಅಧಿಕರಣದ ಪೂರ್ವಪಕ್ಷದ ನ್ಯಾಯದಂತೆ ಅನ್ಯತ್ರಪ್ರಸಿದ್ಧವಾದ ಪ್ರಾಣಶ್ರುತಿಯು ನಿರವಕಾಶವಾಗಿ ಬಲಿಷ್ಠವಾಗಿದೆ. ಇದರ ಜೊತೆಗೆ ಶ್ರುತವಾದ ಆನಂದಮಯತ್ವವೂ ಸಹ ಪ್ರಬಲವಾಗಿ ಅನ್ಯತ್ರಪ್ರಸಿದ್ಧವಾಗುತ್ತದೆ. ಈ ಆನಂದಮಯತ್ವದ ಬಲದಿಂದ ಬ್ರಹ್ಮಶ್ರುತಿಯನ್ನು ಸಹ ಮುಖ್ಯಪ್ರಾಣ-ನಲ್ಲಿಯೇ ಸಮನ್ವಯ ಮಾಡಬಹುದು. ಈ ಅಧಿಕರಣದ ಪೂರ್ವಪಕ್ಷದ ನ್ಯಾಯವನ್ನು ಅವಲಂಬಿಸಿ ಸಾವಕಾಶವಾದ ಬ್ರಹ್ಮಶ್ರುತಿಯು ದುರ್ಬಲವಾಗಿದೆ. ದುರ್ಬಲವಾದ ಬ್ರಹ್ಮಶ್ರುತಿಗೆ ಬಾಧಹೇಳುವುದು ತಪ್ಪೇನಲ್ಲ.

ಭಾಷ್ಯದಲ್ಲಿ ಹೇಳಿರುವ ಆನಂದಮಯಾಧಿಕರಣದಿಂದ ಈ ಅಧಿಕರಣಕ್ಕಿರುವ ಇರುವ ಪ್ರಯೋಜನವನ್ನು ಒಂದು ಬಗೆಯಲ್ಲಿ ವ್ಯಾಖ್ಯಾನಿಸಿದ್ದಾಯಿತು. ಈಗ ಮತ್ತೊಂದು ಬಗೆಯಲ್ಲಿ ಆಕ್ಷೇಪಿಸಿ ಸಮಾಧಾನ 'ಯದ್ಯಪಿ' ಇತ್ಯಾದಿ ಗ್ರಂಥದಿಂದ ನೀಡುತ್ತಿದ್ದಾರೆ.

ಶಂಕೆ - 'ತದ್ವೈ ತ್ವಂ ಪ್ರಾಣಃ' ಎಂಬಲ್ಲಿರುವ ಪ್ರಾಣನು ಬೇರೆಯವನಾದರೆ ಆನಂದಮಯಾಧಿಕರಣ-ದಲ್ಲಿ 'ಪ್ರಾಣಂ ದೇವಾ ಅನುಪ್ರಾಣಂತಿ' ಎಂಬ ಶ್ರುತಿಯಿಂದ ಪ್ರತಿಪಾದ್ಯನಾದ ಪ್ರಾಣಮಯನೂ ಸಹ ಬೇರೆಯವನೇ ಆಗುತ್ತಾನೆ. ಹೀಗೆ ನೇರವಾಗಿಯೇ ಪ್ರಾಣಮಯನನ್ನು ಆಕ್ಷೇಪಿಸಿ ಸಮಾಧಾನವನ್ನು ಹೇಳಬಹುದು. ಇದರಿಂದಲೂ ಆನಂದಮಯಾಧಿಕರಣದಿಂದ ಪ್ರಯೋಜನವನ್ನುತೋರಿಸಿದಂತಾಗುತ್ತದೆ. ಪ್ರತ್ಯೇಕವಾಗಿ ಮಹಾಭೋಗತ್ವವನ್ನು ಆಕ್ಷೇಪಿಸಿ ತನ್ಮೂಲಕವಾಗಿ ಆನಂದಮಯನನ್ನು ಆಕ್ಷೇಪಿಸುವುದು ವಕ್ರಮಾರ್ಗವಲ್ಲವೇ?

ಸಮಾಧಾನ - 'ತದ್ವೈ ತ್ವಂ ಪ್ರಾಣಃ' ಎಂಬ ಶ್ರುತಿಯು ಅನ್ಯಪರವೆನ್ನಲು ಪ್ರಬಲಕಾರಣಗಳಿವೆ. ಬಹುಲವಾದ ಪ್ರಾಣಶ್ರುತಿ, ಆಪಾದನಸಾಹಿತ್ಯ ಇತ್ಯಾದಿ ಅನೇಕ ಕಾರಣಗಳಿರುವುದರಿಂದ 'ತದ್ವೈ ತ್ವಂ ಪ್ರಾಣಃ' ಎಂಬಲ್ಲಿರುವ ಪ್ರಾಣನು ಅನ್ಯನೆಂದು ಆಕ್ಷೇಪಿಸಬಹುದು. ಆದರೆ 'ಪ್ರಾಣಂ ದೇವಾಃ'

ಎಂಬಲ್ಲಿರುವ ಪ್ರಾಣನು ಅನ್ಯನೆಂದು ಆಕ್ಷೇಪಿಸಲು ಇಂತಹ ಯಾವುದೇ ವಿಶೇಷಕಾರಣಗಳಿರುವುದಿಲ್ಲ. ಆದ್ದರಿಂದ ನೇರವಾಗಿ ಪ್ರಾಣಮಯನನ್ನು ಆಕ್ಷೇಪಿಸಲಾಗದು.

ಶಂಕೆ - ಬಾಧಕವಿಲ್ಲದಿದ್ದಾಗ ಮಾತ್ರ ಒಂದು ಕಡೆ ನಿರ್ಣೀತವಾದ ಅರ್ಥವನ್ನು ಎಲ್ಲೆಡೆ ಇಟ್ಟುಕೊಳ್ಳ ಬಹುದು. 'ತದ್ವೈ ತ್ವಂ ಪ್ರಾಣಃ' ಎಂಬಲ್ಲಿ ಪ್ರಾಣನು ಅನ್ಯನೆಂದು ನಿರ್ಣೀತವಾಗಿದೆ; ಆದನ್ನು ಎಲ್ಲಾ ಪ್ರಾಣಶಬ್ದಗಳಲ್ಲಿಯೂ ಅನ್ವಯಿಸಬೇಕಾದರೆ ಬಾಧಕಗಳು ಇರಬಾರದು. 'ಪ್ರಾಣಂ ದೇವಾಃ' ಎಂಬ ಶ್ರುತಿಯಲ್ಲಿ ಪ್ರಾಣಪರವೆನ್ನಲು ಯಾವುದೇ ಬಾಧಕವು ಕಾಣಿಸುತ್ತಿಲ್ಲ. ಆದ್ದರಿಂದ ನೇರವಾಗಿ ಪ್ರಾಣಮಯನನ್ನು ಆಕ್ಷೇಪಿಸಲು ಏನು ತೊಂದರೆ?

ಸಮಾಧಾನ - 'ಪ್ರಾಣಂ ದೇವಾಃ' ಎಂಬ ಶ್ರುತಿಯು ವಿಷ್ಣುಪರವೆಂದು ಅಂಗೀಕರಿಸುತ್ತೇವೆ. ವಿಷ್ಣುಪರವಾಗಿರುವಿಕೆಯೇ ಬಾಧಕವಾದ್ದರಿಂದ ಇಲ್ಲಿರುವ ಪ್ರಾಣನು ಅನ್ಯನಾಗಲಾರ.

ಶಂಕೆ - ಒಂದು ವೇಳೆ 'ಪ್ರಾಣಂ ದೇವಾಃ' ಎಂಬ ಶ್ರುತಿಯು ವಿಷ್ಣುಪರವೆಂದು ಸಿದ್ಧವಾಗಿದ್ದರೆ, ವಿಷ್ಣುಪರತ್ವವು ಬಾಧಕವಾಗುತ್ತಿತ್ತು. ಆದರೆ ಪೂರ್ವಪಕ್ಷಿಗಳಾದ ನಾವು ವಿಷ್ಣುಪರತ್ವವೆಂದು ಅಂಗೀಕರಿಸುವುದಿಲ್ಲ. ವಿಷ್ಣುಪರವೆಂಬ ವಿಷಯ ಇಲ್ಲಿಯ ತನಕ ನಿರ್ಣಯವಾಗಿಲ್ಲ.

ಸಮಾಧಾನ - ಹಾಗಿದ್ದರೆ ಮುಕ್ತಪ್ರಾಪ್ಯತ್ವ ಮೊದಲಾದ ಬ್ರಹ್ಮಲಿಂಗಗಳು ಶ್ರುತಿಯಲ್ಲಿ ಕೇಳಿಸುತ್ತಿವೆ. ಇವುಗಳು ಬಾಧಕವಾಗುತ್ತವೆ.

ಶಂಕೆ - ಅನ್ಯತ್ರಪ್ರಸಿದ್ಧವಾದ ಪ್ರಾಣಶ್ರುತಿಯು ಪ್ರಬಲವಾದ್ದರಿಂದ ಮುಕ್ತಪ್ರಾಪ್ಯತ್ವಾದಿಬ್ರಹ್ಮಲಿಂಗಗಳನ್ನು ಬೇರೆ ರೀತಿಯಾಗಿ ಅರ್ಥೈಸಬೇಕಲ್ಲವೇ?

ಸಮಾಧಾನ - 'ಪ್ರಾಣಂ ದೇವಾಃ' ಎಂಬ ಶ್ರುತಿಯಲ್ಲಿ ಮುಕ್ತಪ್ರಾಪ್ಯತ್ವಾದಿ ಬ್ರಹ್ಮಲಿಂಗಗಳಿರು-ವುದರಿಂದ ವಿಷ್ಣುಪರವೆಂದು ನಿರ್ಣಯಿಸುತ್ತಿದ್ದೀರಿ. ಹಾಗಾದರೆ 'ತದ್ವೈ ತ್ವಂ ಪ್ರಾಣಃ' ಎಂಬಲ್ಲಿಯೂ ಸಹ ಇಂತಹ ಶ್ರೀಪತಿತ್ವ ಮೊದಲಾದ ವಿಷ್ಣುಲಿಂಗಗಳಿರುವುದರಿಂದ ಈ ಶ್ರುತಿಯು ವಿಷ್ಣುಪರವಾಗುತ್ತದೆ. ಹಾಗಾಗಿ 'ತದ್ವೈ ತ್ವಂ ಪ್ರಾಣಃ' ಎಂಬ ಶ್ರುತಿಯು ಅನ್ಯಪರವಾದ ಕಾರಣದಿಂದ 'ಪ್ರಾಣಂ ದೇವಾಃ' ಎಂಬ ಶ್ರುತಿಯೂ ಕೂಡ ಅನ್ಯಪರವಾಗಬೇಕೆಂದೇನೂ ನಿಯಮವಿಲ್ಲ. ಆದ್ದರಿಂದ ನೇರವಾಗಿ ಪ್ರಾಣಮಯನನ್ನು ಆಕ್ಷೇಪಿಸದೆ ಮಹಾಭೋಗತ್ವಮೂಲಕವಾಗಿ ಆಕ್ಷೇಪಿಸಿದ್ದಾರೆ. ಈ ಅಭಿಪ್ರಾಯದಿಂದ ಗ್ರಂಥಕಾರರು ಸೂತ್ರಕಾರರು ಕಂಠತಃ ಹೇಳಿದ ಆನಂದಮಯತ್ವವನ್ನೇ ಆಕ್ಷೇಪಿಸುವುದು ಭಾಷ್ಯಕಾರರ ಅಭಿಪ್ರಾಯವೆಂದು ವ್ಯಾಖ್ಯಾನಿಸಿದ್ದಾರೆ.

ಉಪಲಕ್ಷಣಯಾ ಇದನ್ನು ತಿಳಿಯಬೇಕು. ಮಹಾಭೋಗತ್ವಮೂಲಕವಾಗಿ ಆಕ್ಷೇಪ ಮಾಡುವುದೇ ಸ್ವರಸ. ಹಾಗೆ ಮಾಡದಿದ್ದರೆ ಮಹಾಭೋಗತ್ವವು ವಿಷ್ಣುಧರ್ಮವೆಂದು ಆನಂದಮಯಾಧಿಕರಣದಲ್ಲಿ ನಿರ್ಣಯವಾಗಿರುವುದರಿಂದ ಮಹಾಭೋಗತ್ವಲಿಂಗದಿಂದ ವಿಷ್ಣುವೇ ಪ್ರಾಣನಾಗುತ್ತಾನೆಂಬ ಶಂಕೆಯು ಬರುತ್ತದೆ. ಹೀಗೆ ವಿಷ್ಣುವು ಪ್ರಾಣನೆಂದು ಸಿದ್ಧವಾದಮೇಲೆ ಪುನಃ ಆದೇ ವಿಷಯವನ್ನು ಪ್ರಾಣಾಧಿ ಕರಣದಲ್ಲಿ ಸಿದ್ಧಾಂತ ಮಾಡುವುದು ಪುನರುಕ್ತವಾಗುತ್ತದೆ. ಆದ್ದರಿಂದ ಮಹಾಭೋಗತ್ವಲಿಂಗದಿಂದ ವಿಷ್ಣುವು ಪ್ರಾಣನೆಂಬ ಶಂಕೆಯು ಬರಬಾರದು. ಈ ಶಂಕೆ ಬರಬಾರದೆಂದರೆ ಮಹಾಭೋಗತ್ವಧರ್ಮವೂ

ಕೂಡ ವಾಯುವಿನ ಧರ್ಮವೆಂದು ಆಕ್ಷೇಪಿಸಬೇಕು. ಈ ಅಭಿಪ್ರಾಯದಿಂದ 'ಅತ ಏವ' ಎಂಬ ವಾಕ್ಯವು ಹೊರಟಿದೆ. ಪ್ರಾಣಶ್ರುತಿಯಲ್ಲಿ ಚೇಷ್ಟಾಪ್ರದತ್ವ, ಜೀವನಹೇತುತ್ವಧರ್ಮಗಳೂ ಸಹ ಕೇಳಿಸುತ್ತಿವೆ. ಒಂದು ವೇಳೆ ಮಹಾಭೋಗತ್ವಧರ್ಮವು ವಿಷ್ಣುವಿನಲ್ಲಿ ಸಿದ್ಧವಾದ್ದರಿಂದ ಪ್ರಾಣನು ವಿಷ್ಣುವಾಗುತ್ತಾನೆಂದು ಶಂಕಿಸುವುದಾದರೆ ಪ್ರಾಣಶ್ರುತಿಯಲ್ಲಿ ಕೇಳಿಸುತ್ತಿರುವ ಚೇಷ್ಟಾಪ್ರದತ್ವಾದಿ ಧರ್ಮಗಳೂ ಸಹ ವಿಷ್ಣುವಿನ ಧರ್ಮವೆಂದು ನಿರ್ಣಯಿಸಲಾಗಿದೆ. ಪುನಃ ಅವುಗಳನ್ನೇ ವಿಷ್ಣುವಿನಲ್ಲಿ ಈ ಅಧಿಕರಣದಲ್ಲಿ ಸಮನ್ವಯ ಮಾಡಿದರೆ ಪುನರುಕ್ತಿ ಬಂದೇ ಬರುತ್ತದೆ. ಆದ್ದರಿಂದ ಹಿಂದಿನ ಅಧಿಕರಣಗಳಲ್ಲಿ ಸಿದ್ಧವಾದ ಮಹಾಭೋಗತ್ವ, ಚೇಷ್ಟಾಪ್ರದತ್ವ, ಜೀವನಹೇತುತ್ವ ಇತ್ಯಾದಿ ಎಲ್ಲ ವಿಷ್ಣುವಿನ ಧರ್ಮಗಳನ್ನು ಪ್ರಕೃತ ಅಧಿಕರಣದಲ್ಲಿ ವಿಷ್ಣುವಿನಲ್ಲಿ ಇಲ್ಲವೆಂದು ಆಕ್ಷೇಪಿಸಲಾಗಿದೆ. ಹೀಗೆ ಆಕ್ಷೇಪ ಮಾಡದಿದ್ದರೆ ಪ್ರಾಣಾಧಿಕರಣಕ್ಕೆ ಕೃತ್ಯವೇ ಇಲ್ಲ. ಹಿಂದಿನ ಅಧಿಕರಣದಲ್ಲಿ ಸಿದ್ಧವಾದ ಪ್ರಮೇಯವನ್ನು ಆಕ್ಷೇಪಿಸುವುದು ತಪ್ಪಲ್ಲ. ಏಕೆಂದರೆ ಆಕಾಶಾಧಿಕರಣದಲ್ಲಿ 'ಆಕಾಶ ಇತಿ ಹೋವಾಚ' ಎಂಬ ಶ್ರುತಿಯಿಂದ ಭಗವಂತನೇ ಆಕಾಶನೆಂದು ನಿರ್ಣಯಿಸಲಾಗಿದೆ. ಪುನಃ 'ಆಕಾಶೋऽರ್ಥಾಂತರತ್ವಾದಿ' ಇತ್ಯಾದಿಸೂತ್ರದಲ್ಲಿ ಆಕಾಶಾಧಿಕರಣದ ಪ್ರಮೇಯವನ್ನು ಆಕ್ಷೇಪ ಮಾಡುವುದಿಲ್ಲ.

**ಗುರುರಾಜೀಯಮ್ – ॥ ॐ अत एवप्राणः ॐ ॥** ಅಧಿಕರಣೋಪಾಧಿಪ್ರದರ್ಶನಪೂರ್ವಕಮಧಿಕರಣಪ್ರತಿಪಾಢ್ಯಂ ದರ್ಶಯತಿ – **अत्रेति** ॥ ನನು ಪ್ರಾಣಶಬ್ದಪ್ರವೃತ್ತಿನಿಮಿತ್ತಸ್ಯ ಜೀವನಾದಿಹೇತುತ್ವಸ್ಯಾನ್ವಯವ್ಯತಿರೇಕಾಭ್ಯಾಂ ವಾಯೌ ಪ್ರಸಿದ್ಧತ್ವವತ್ ಆಕಾಶಶಬ್ದಪ್ರವೃತ್ತಿನಿಮಿತ್ತಸ್ಯಾವಕಾಶಪ್ರದತ್ವಸ್ಯಾನ್ವಯವ್ಯತಿರೇಕಾಭ್ಯಾಂ ಭೂತಾಕಾಶೇಪಿ ಪ್ರಸಿದ್ಧತ್ವಾತ್ ಕಥಮಿಯಮ್ಯಧಿಕಾಶಙ್ಕಾ? ಇತ್ಯತ ಆಹ – **ಭೂತಾಕಾಶಸ್ಯ ತ್ವಿತಿ** ॥ 'ಪರಿಚ್ಛಿನ್ನಸ್ಯ' ಇತಿ ಹೇತುಗರ್ಭವಿಶೇಷಣಮ್ । ಪರಿಚ್ಛಿನ್ನತ್ವಾತ್ ಕಚಿದ್ ಭೂತಾಕಾಶವ್ಯತಿರೇಕೇ ವಕ್ತವ್ಯೇ ತತ್ರೈವಾವಕಾಶದರ್ಶನಾದಿತಿ ಭಾವಃ। ನನ್ವಾನನ್ದಮಯಾಧಿಕರಣೇ ಪ್ರಾಣಶಬ್ದಸ್ಯ ಭಗವತ್ಪರತ್ವಸ್ಯ ಪ್ರತಿಪಾದಿತತ್ವೇನಾತ್ರಾಪಿ ತತ್ಪ್ರತಿಪಾದನೇ ತೇನ ಗತಾರ್ಥತ್ವಂ ಸ್ಯಾತ್ । ಕಿಂ ಚ 'ಆಕಾಶಸ್ತಲ್ಲಿಙ್ಗಾತ್' ಇತ್ಯಾದಿನಾ ಇತಿ 'ಹೋವಾಚ' ಇತಿ ವಾಕ್ಯೇ ಆಕಾಶಶಬ್ದಸ್ಯ ವಿಷ್ಣುಪರತ್ವಸ್ಯ ಪ್ರತಿಪಾದಿತತ್ವೇನ ಆಕಾಶೋರ್ಥಾನ್ತರತ್ವಾದೀತ್ಯತ್ರಾಕಾಶಶಬ್ದಸ್ಯೋಭಯತ್ರಪ್ರಸಿದ್ಧತ್ವವತ್ । ಆನನ್ದಮಯಾಧಿಕರಣೇ ಪ್ರಾಣಶಬ್ದಸ್ಯ ಭಗವತ್ಪರತ್ವೇನ ಸಮರ್ಥಿತತ್ವಾದಸ್ಯಾಪ್ಯುಭಯತ್ರಪ್ರಸಿದ್ಧತ್ವಾಪತ್ತ್ಯಾ ಪಾದಾಸङ्गತಿಶ್ಚ ಸ್ಯಾತ್, ಇತ್ಯತ ಆಹ – **ಅತ ಏವೇತಿ** ॥ ತಸ್ಯೈವ ವಿವರಣಮ್ **'ಆನನ್ದಮಯೋಕ್ತಾಯಾಃ'** ಇತ್ಯಾದಿ ।

## ಸಾರ

ಪ್ರಾಣಾಧಿಕರಣದ ಉದ್ದೇಶ ಪ್ರಾಣಶಬ್ದ ಸಮನ್ವಯದ ಮೂಲಕ ಅಧ್ಯಾತ್ಮಿಕ ಸಕಲಶಬ್ದಗಳನ್ನು ಭಗವಂತನಲ್ಲಿ ಸಮನ್ವಯ ಮಾಡುವುದು. ಜೀವನಹೇತುತ್ವವೇ ಪ್ರಾಣಶಬ್ದದ ಪ್ರವೃತ್ತಿನಿಮಿತ್ತವಾಗಿದೆ. ಅನ್ವಯ ವ್ಯತಿರೇಕದಿಂದ ಈ ಪ್ರವೃತ್ತಿನಿಮಿತ್ತವು ಮುಖ್ಯವಾಯುವಿನಲ್ಲಿ ಸಿದ್ಧವಾಗಿದೆ. ಆದ್ದರಿಂದ ಭಗವಂತನು

ಪ್ರತಿಪಾದ್ಯನಾಗಲಾರನೆಂಬ ಅಧಿಕಾಶಂಕೆಯ ಪರಿಹಾರಕ್ಕಾಗಿ ಈ ಅಧಿಕರಣ ಹೊರಟಿದೆ. ಹಿಂದಿನ ಆಕಾಶಾಧಿಕರಣದಲ್ಲಿ ಹೀಗೆ ಆನ್ವಯವ್ಯತಿರೇಕದಿಂದ ಪೂರ್ವಪಕ್ಷ ಮಾಡಲಾಗದ ಕಾರಣ ಇದು ಅಧಿಕಾಶಂಕೆಯೆನಿಸಿದೆ. ಹಿಂದೆ ಸಮರ್ಥಿಸಿದ ಆನಂದಮಯತ್ವವನ್ನೇ ಈ ಅಧಿಕರಣದಲ್ಲಿ ಆಕ್ಷೇಪಿಸಬೇಕು. ಪ್ರಾಣಮಯತ್ವವನ್ನು ಆಕ್ಷೇಪಿಸಬಾರದು. ಹಾಗಾದಲ್ಲಿ ಅಸ್ವಾರಸ್ಯ ಮತ್ತು ಪುನರುಕ್ತಿದೋಷಗಳು ಬರುತ್ತವೆ.

---

## ಸಂಶಯಪರಂಪರೆ

**ತಾತ್ಪರ್ಯಚನ್ದ್ರಿಕಾ –**

**अत्र प्राणः किं मुख्यवायुः उत ब्रह्म? इति चिन्ता । तदर्थम्, किं प्राणश्रुतिप्रसिद्ध्यनुसारेण श्रीपतित्वादिलिङ्गं बाध्यं किं वा विपरीतम्? इति । तदर्थं, प्रसिद्धिबाधे किं श्रुतेर्मुख्यत्वहानिरुत न? इति । तदर्थम्, प्राणशब्दप्रवृत्तिनिमित्तं जीवनहेतुत्वं किं ब्रह्मणि नास्ति उतास्ति? इति । तदर्थम्, किं जीवनं मुख्यप्राणान्वयव्यतिरेकानुविधाय्युतेश्वरान्वयव्यतिरेकानुविधायि? इति । तथा, ''भर्ता सन् म्रियमाणो बिभर्ति'' इत्यनुवाकस्थेन ''तद्वै त्वं प्राणः'' इति वाक्येनोक्तः प्राणः किं ''अक्ष्यः सम्भूतः'' इत्यनुवाकस्थेन ''श्रीश्च ते लक्ष्मीश्च पत्न्यौ'' इति वाक्येन उक्तादन्यः किं वा अनन्यः? इति ।**

ಅನುವಾದ - ಪ್ರಾಣಾಧಿಕರಣದ ಸಂಶಯಕೋಟಿ

ಪ್ರಾಣಶ್ರುತಿಯನ್ನು ನೋಡಿದಾಗ ಪ್ರಾಣಶಬ್ದದಿಂದ ಪ್ರತಿಪಾದ್ಯನಾದವನು ಮುಖ್ಯವಾಯುವೋ ಅಥವಾ ಬ್ರಹ್ಮನೋ? ಎಂದು ಸಂಶಯ ಬರುತ್ತದೆ. ಈ ಸಂಶಯವು ಪರಿಹಾರವಾಗಬೇಕಾದರೆ ಪ್ರಸಿದ್ಧಿಯನ್ನು ಅನುಸರಿಸಿ ಬಲಿಷ್ಠವಾದ ಪ್ರಾಣಶ್ರುತಿಯು ಶ್ರೀಪತಿತ್ವಾದಿಲಿಂಗಗಳನ್ನು ಬಾಧಿಸುತ್ತದೋ ಅಥವಾ ಶ್ರೀಪತಿತ್ವಾದಿಲಿಂಗಗಳಿಂದ ತಾನೇ ಬಾಧಿತವಾಗುತ್ತದೋ? ಎಂಬ ಸಂಶಯವು ಪರಿಹಾರವಾಗಬೇಕು. ಈ ಸಂಶಯ ಪರಿಹಾರವಾಗಬೇಕೆಂದರೆ ಪ್ರಸಿದ್ಧಿಗೆ ಬಾಧವನ್ನು ಹೇಳಿದರೆ ಶ್ರುತಿಗೆ ಮುಖ್ಯತ್ವದ ಹಾನಿಯಾಗುತ್ತದೋ ಇಲ್ಲವೋ? ಎಂಬ ಸಂಶಯವು ಪರಿಹಾರವಾಗಬೇಕು. ಈ ಸಂಶಯವು ಪರಿಹಾರವಾಗಬೇಕೆಂದರೆ ಪ್ರಾಣಶಬ್ದದ ಪ್ರವೃತ್ತಿನಿಮಿತ್ತವಾದ ಜೀವನಹೇತುತ್ವವು ಬ್ರಹ್ಮನಲ್ಲಿ ಇಲ್ಲವೋ ಅಥವಾ ಇದೆಯೋ? ಎಂಬ ಸಂಶಯವು ಪರಿಹಾರವಾಗಬೇಕು. ಈ ಸಂಶಯವು ಪರಿಹಾರವಾಗಬೇಕೆಂದರೆ ಜೀವನವು ಆನ್ವಯವ್ಯತಿರೇಕದಿಂದ ಮುಖ್ಯಪ್ರಾಣನನ್ನು ಅನುಸರಿಸಿದೆಯೋ ಅಥವಾ ಈಶ್ವರನನ್ನೋ? ಎಂಬ ಸಂಶಯವು ಪರಿಹಾರವಾಗಬೇಕು. ಇದರಂತೆ

'ಭರ್ತಾ ಸಂಭ್ರಿಯಮಾಣಃ' ಎಂಬ ಅನುವಾಕದಲ್ಲಿರುವ 'ತದ್ವೈ ತ್ವಂ ಪ್ರಾಣಃ' ಎಂಬ ವಾಕ್ಯದಿಂದ ಪ್ರತಿಪಾದ್ಯನಾದ ಪ್ರಾಣನು 'ಅದ್ಭ್ಯಃ ಸಂಭೂತಃ' ಎಂಬ ಮತ್ತೊಂದು ಅನುವಾಕದಲ್ಲಿರುವ 'ಶ್ರೀಶ್ಚ ತೇ ಲಕ್ಷ್ಮೀಶ್ಚ ಪತ್ನ್ಯೌ' ಎಂದು ಹೇಳಲ್ಪಟ್ಟವನಿಗಿಂತ ಬೇರೆಯವನೋ ಅಥವಾ ಒಬ್ಬನೋ? ಎಂಬ ಸಂಶಯವು ಪರಿಹಾರವಾಗ ಬೇಕು.

**ಪ್ರಕಾಶಃ** – ಏವಂ ಸಙ್ಗತಿಮುಕ್ತ್ವಾ, ಭಾಷ್ಯೋಕ್ತಪ್ರಯೋಜನಟೀಕಾಂ ಚ ಸಮರ್ಥ್ಯ, ವಿಷಯಸಂಶಯಟೀಕಾಂ ವ್ಯನಕ್ತಿ – **ಅತ್ರೇತಿ** ॥ ''ತದ್ವೈ ತ್ವಂ ಪ್ರಾಣೋ ಅಭವಃ ಮಹಾನ್ ಭೋಗಃ ಪ್ರಜಾಪತೇಃ ಭುಜಃ ಕರಿಷ್ಯಮಾಣಃ ಯದ್ದೇವಾನ್ ಪ್ರಾಣಯೋ ನವ'' ಇತಿ ತೈತ್ತರೀಯೇ ಶ್ರುತಃ ಪ್ರಾಣೋ ವಿಷಯ ಇತಿ ಧ್ಯೇಯಮ್ । **ಮುಖ್ಯೇತಿ** ॥ ಪ್ರಾಣಶಬ್ದಸ್ಯ ವಾಯುವೃತ್ತ್ಯಾದಿಸಾಧಾರಣತ್ವೇऽಪಿ ತಸ್ಯಾತ್ರಾಸಮ್ಭವಪ್ರಕಾರಸ್ಯ ವಕ್ಷ್ಯಮಾಣತ್ವಾತ್ 'ಮುಖ್ಯವಾಯುಃ'' ಇತ್ಯುಕ್ತಮ್ ॥ **ವಿಪರೀತಮಿತಿ** ॥ ಲಿಙ್ಗಾನುಸಾರೇಣ ಶ್ರುತಿರ್ಬಾಧ್ಯೇತ್ಯರ್ಥಃ ॥ **ಜೀವನೇತಿ** ॥ ''ಯದ್ದೇವಾನ್ ಪ್ರಾಣಯೋ ನವ'' ಇತಿ ವಾಕ್ಯಶೇಷೇ ತಥೋಕ್ತೇರಿತಿ ಭಾವಃ ॥ **ಜೀವನಮಿತಿ** ॥ 'ಜೀವಾನಾಂ' ಇತಿ ಶೇಷಃ । ಯದಿ ಜೀವನಂ ಮುಖ್ಯಾ-ನ್ವಯವ್ಯತಿರೇಕಾನುವಿಧಾಯಿ, ತದಾ ಪ್ರಾಣಶಬ್ದಪ್ರವೃತ್ತಿನಿಮಿತ್ತಂ ಬ್ರಹ್ಮಣಿ ನೇತಿ ಮುಖ್ಯತ್ವಹಾನೇರ್ನ ಶ್ರುತಿಬಾಧಃ ಕಾರ್ಯ ಇತಿ ವಾಯುರೇವೇತಿ ಪೂರ್ವಪಕ್ಷೇ ಫಲಮ್ । ಯದಾ ತು ವಿಪರೀತಂ ತದಾ ಬ್ರಹ್ಮೇತಿ ಸಿದ್ಧಾನ್ತೇ ಫಲಮ್ । ಇಯಂ ಚ ಚಿನ್ತಾಪರಮ್ಪರಾ 'ಪ್ರಾಣಸ್ತತ್ತು' ಇತಿ ಸೌತ್ರ-ಪ್ರತಿಜ್ಞಾಶಬ್ಯಾವರ್ತ್ಯಪ್ರಮೇಯಾಶ್ರಿತಾಭ್ಯಧಿಕಾಶಙ್ಕೋಪಯುಕ್ತಾ । ಏಷಾ ಶಙ್ಕಾऽನುಬ್ಯಾಖ್ಯಾನೇ ಕಣ್ಠೋಕ್ತೇತಿ ತದುಪಯುಕ್ತಚಿನ್ತೈವ ಪ್ರಥಮಂ ವಿಶದೀಕೃತಾ । ಹೇತ್ವಂಶಬ್ಯಾವರ್ತ್ಯಪ್ರಮಾಣಾಶ್ರಿತಾ-ಭ್ಯಧಿಕಾಶಙ್ಕೋಪಯುಕ್ತಾಂ ಚಿನ್ತಾಮಾಹ – **ತಥೇತಿ** ॥ ತತ್ರೈವಂ ದ್ರಷ್ಟವ್ಯಮ್ – ಪ್ರಾಣೋ ಮುಖ್ಯವಾಯುರುತ ಬ್ರಹ್ಮೇತಿ ಚಿನ್ತಾ । ತದರ್ಥಂ ಬ್ರಹ್ಮತ್ವಸಾಧಕಂ ಲಿಙ್ಗಾದಿಕಂ ನಾಸ್ತ್ಯುತಾಸ್ತೀತಿ । ತದರ್ಥಂ ''ಭರ್ತಾ ಸನ್ ಮ್ರಿಯಮಾಣಃ'' ಇತ್ಯುಕ್ತಚಿನ್ತೇತಿ । ಯದಾ ತ್ವನ್ಯಸ್ತದಾ ಬ್ರಹ್ಮಲಿಙ್ಗಮತ್ರ ನಾಸ್ತೀತಿ ಸಾಧಕಾಭಾವಾದ್ವಾಯುರೇವೇತಿ ಪೂರ್ವಪಕ್ಷೇ ಫಲಮ್ । ಯದಾ ತ್ವನನ್ಯಸ್ತದಾ ಬ್ರಹ್ಮಲಿಙ್ಗಸತ್ತ್ವಾದ್ಬ್ರಹ್ಮೇತಿ ಸಿದ್ಧಾನ್ತೇ ಫಲಮಿತಿ ಧ್ಯೇಯಮ್ ।

ವಿವರಣೆ - ಇಲ್ಲಿಯ ತನಕ ಸಂಗತಿಯನ್ನು ಮತ್ತು ಭಾಷ್ಯ, ಟೀಕೆಗಳಲ್ಲಿ ಹೇಳಿದ ಪ್ರಯೋಜನವನ್ನು ಸಮರ್ಥಿಸಿದ್ದಾಯಿತು. ಈಗ ವಿಷಯ, ಸಂಶಯಗಳನ್ನು ವ್ಯಾಖ್ಯಾನಿಸುವ ಟೀಕೆಯ ಅರ್ಥವನ್ನು ವಿವರಿಸುತ್ತಿದ್ದಾರೆ. 'ತದ್ವೈ ತ್ವಂ ಪ್ರಾಣೋऽಭವಃ ಮಹಾನ್‌ಭೋಗಃ ಪ್ರಜಾಪತೇಃ ಭುಜಃ ಕರಿಷ್ಯಮಾಣಃ ಯದ್ದೇವಾನ್ ಪ್ರಾಣಯೋ ನವ' (ಎಲೈ ಪ್ರಾಣನೇ ನೀನು ಬ್ರಹ್ಮನೇ ಮೊದಲಾದ ಜೀವರಿಗೆ ಆನಂದವನ್ನು ಕೊಡುವುದರಿಂದ ಮಹಾನಂದರೂಪನಾಗಿರುವಿ. ಮತ್ತು ಸಕಲಚೇತನರ ಒಂಭತ್ತು ಇಂದ್ರಿಯಗಳನ್ನು ಪ್ರೇರಣೆ ಮಾಡುವುದರಿಂದ ಪ್ರಾಣನಾಗಿರುವಿ) ಈ ತೈತ್ತಿರೀಯವಾಕ್ಯದಲ್ಲಿ ಕೇಳಿಸುತ್ತಿರುವ ಪ್ರಾಣನೇ ಈ ಅಧಿಕರಣಕ್ಕೆ ವಿಷಯನಾಗಿದ್ದಾನೆ. ಗ್ರಂಥಕಾರರು 'ವಾಯುಃ' ಎಂದಷ್ಟೇ

ಹೇಳಬಹುದಿತ್ತು. 'ಮುಖ್ಯವಾಯುಃ' ಎಂದು ಹೇಳಲು ಕಾರಣವಿದೆ. ಕೇವಲ ವಾಯುವಿನಲ್ಲಿ ಪ್ರಾಣ-ಶಬ್ದವು ಕೂಡುವುದಿಲ್ಲ; ಮುಖ್ಯವಾಯುವಿಲ್ಲಷ್ಟೇ ಕೂಡುತ್ತದೆಂದು ಮುಂದೆ ಹೇಳುತ್ತಾರೆ.

ಪೂರ್ವಪಕ್ಷದ ಫಲ - ಒಂದು ವೇಳೆ ಜೀವನವು ಅನ್ವಯವ್ಯತಿರೇಕದಿಂದ ಮುಖ್ಯವಾಯುವನ್ನು ಅನುಸರಿಸುವುದಾದರೆ ಪ್ರಾಣಶಬ್ದದ ಪ್ರವೃತ್ತಿನಿಮಿತ್ತವು ಬ್ರಹ್ಮನಲ್ಲಿ ಬರುವುದಿಲ್ಲ. ಬ್ರಹ್ಮಪರವೆಂದು ಹೇಳಿದರೆ ಶ್ರುತಿಗೆ ಮುಖ್ಯಾರ್ಥವನ್ನು ಬಿಟ್ಟಂತಾಗುತ್ತದೆ. ಆದ್ದರಿಂದ ಶ್ರುತಿಬಾಧವನ್ನು ಮಾಡಬಾರದು. ಆದ್ದರಿಂದ ವಾಯುವೇ 'ತದ್ವೈ ತ್ವಂ ಪ್ರಾಣಃ' ಎಂಬ ಪ್ರಾಣಶಬ್ದದಿಂದ ಪ್ರತಿಪಾದ್ಯನಾಗುತ್ತಾನೆ.

ಸಿದ್ಧಾಂತದ ಫಲ - ಒಂದು ವೇಳೆ ಜೀವನವು ಅನ್ವಯವ್ಯತಿರೇಕದಿಂದ ಈಶ್ವರನನ್ನು ಅನುಸರಿಸಿದರೆ ಆವಾಗ ಪ್ರಾಣಶಬ್ದದ ಪ್ರವೃತ್ತಿನಿಮಿತ್ತವಾದ ಜೀವನಹೇತುತ್ವವು ಬ್ರಹ್ಮನಲ್ಲಿ ಸಂಭವಿಸುತ್ತದೆ. ಆವಾಗ ಶ್ರುತಿಯು ಬ್ರಹ್ಮಪರವೆಂದು ಹೇಳಿದರೂ ಶ್ರುತಿಗೆ ಮುಖ್ಯಾರ್ಥವನ್ನು ಬಿಟ್ಟಂತಾಗುವುದಿಲ್ಲ. ಶ್ರೀಪತಿತ್ವಾದಿ ಲಿಂಗಗಳಿಂದ ಪ್ರಾಣಶ್ರುತಿಯೇ ಬಾಧಿತವಾಗುತ್ತದೆ. ಆದ್ದರಿಂದ 'ತದ್ವೈ ತ್ವಂ ಪ್ರಾಣಃ' ಎಂಬಲ್ಲಿರುವ ಪ್ರಾಣಶಬ್ದದಿಂದ ಬ್ರಹ್ಮನೇ ಪ್ರತಿಪಾದ್ಯನಾಗುತ್ತಾನೆ.

ಈ ಸಂಶಯಕೋಟಿಗಳು 'ಪ್ರಾಣಃ ತತ್ತು' ಎಂಬ ಸೂತ್ರದ ಪ್ರತಿಜ್ಞಾಂಶದಿಂದ ವ್ಯಾವರ್ತ್ಯವಾದ ಪ್ರಮೇಯಾಶ್ರಿತ ಪೂರ್ವಪಕ್ಷಕ್ಕೆ ಉಪಯುಕ್ತವಾಗಿವೆ. ಪ್ರಮೇಯಾಶ್ರಿತವಾದ ಶಂಕೆಯನ್ನು ಅನು-ವ್ಯಾಖ್ಯಾನದಲ್ಲಿ ಕಂಠತಃ ಹೇಳಿದ್ದರಿಂದ ಆದಕ್ಕೆ ಉಪಯುಕ್ತವಾದ ಚಿಂತೆಯನ್ನೇ ಮೊದಲು ತೋರಿಸಿದ್ದಾರೆ. ಸೂತ್ರದಲ್ಲಿರುವ 'ಅತ ಏವ' ಎಂಬ ಹೇತ್ವಂಶದಿಂದ ಪ್ರಮಾಣಾಶ್ರಿತಪೂರ್ವಪಕ್ಷವು ವ್ಯಾವೃತ್ತವಾಗಿದೆ. ಅದಕ್ಕೆ ಉಪಯುಕ್ತವಾದ ಚಿಂತೆಯನ್ನು 'ತಥಾ' ಎಂಬ ವಾಕ್ಯದಿಂದ ಗ್ರಂಥಕಾರರು ತೋರಿಸುತ್ತಿದ್ದಾರೆ.

ಪ್ರಮಾಣಾಶ್ರಿತಶಂಕೆಗೆ ಉಪಯುಕ್ತವಾದ ಚಿಂತಾಪರಂಪರೆ ಹೀಗಿದೆ -- ಪ್ರಾಣಶಬ್ದದಿಂದ ಮುಖ್ಯ-ವಾಯುವು ಪ್ರತಿಪಾದ್ಯನೋ ಅಥವಾ ಬ್ರಹ್ಮನೋ? ಅದಕ್ಕೋಸ್ಕರ ಬ್ರಹ್ಮತ್ವಸಾಧಕವಾದ ಲಿಂಗಾದಿಗಳು ಇಲ್ಲವೋ ಅಥವಾ ಇವೆಯೋ? ಅದಕ್ಕೋಸ್ಕರ 'ಭರ್ತಾ ಸಂಭ್ರಿಯಮಾಣಃ' ಎಂಬ ಅನುವಾಕದ 'ತದ್ವೈ ತ್ವಂ ಪ್ರಾಣಃ' ಎಂಬಲ್ಲಿರುವ ಪ್ರಾಣಶಬ್ದದಿಂದ ಪ್ರತಿಪಾದ್ಯನಾದವನು 'ಶ್ರೀಶ್ಚ ತೇ' ಎಂಬ ವಾಕ್ಯಪ್ರತಿಪಾದ್ಯ-ನಿಗಿಂತ ಭಿನ್ನನೋ ಅಥವಾ ಒಬ್ಬನೋ. ಒಂದು ವೇಳೆ ಬೇರೆಯವನಾದರೆ ಬ್ರಹ್ಮನ ಲಿಂಗವು ಇಲ್ಲದ ಕಾರಣ ವಾಯುವೇ ಪ್ರಾಣನಾಗುತ್ತಾನೆಂದು ಪೂರ್ವಪಕ್ಷದ ಫಲ. ಒಂದು ವೇಳೆ ಒಬ್ಬನೇ ಆದರೆ ಬ್ರಹ್ಮಲಿಂಗಗಳಿರುವುದರಿಂದ ಬ್ರಹ್ಮನೇ ಪ್ರಾಣನಾಗುತ್ತಾನೆಂದು ಸಿದ್ಧಾಂತದ ಫಲ. ಹೀಗೆ ಎರಡು ವಿಧ ಸಂಶಯಕೋಟಿಗಳನ್ನು ಸ್ಪಷ್ಟವಾಗಿ ಗಮನಿಸಬೇಕು.

ಮುಂದಿನ ಗ್ರಂಥದಲ್ಲಿರುವ ಪೂರ್ವಪಕ್ಷದ ಹಂತಗಳು.

೧. ಮುಖ್ಯವಾಯುವು ಪ್ರಾಣಶಬ್ದದಿಂದ ವಾಚ್ಯನಾಗುತ್ತಾನೆ.

೨. ಪ್ರಸಿದ್ಧಪ್ರಾಣಶ್ರುತಿಯಿಂದ ವಿಷ್ಣುಲಿಂಗಗಳಿಗೆ ಬಾಧ.

೩. ಪ್ರಾಣನು ವಾಚ್ಯನಾಗದಿದ್ದರೆ ಮುಖ್ಯಾರ್ಥವನ್ನು ಬಿಟ್ಟಂತಾಗುತ್ತದೆ.

೪. ಜೀವನ ಹೇತುತ್ವವೆಂಬ ಪ್ರಾಣಶಬ್ದದ ಪ್ರವೃತ್ತಿನಿಮಿತ್ತವು ಬ್ರಹ್ಮನಲ್ಲಿ ಬರುವುದಿಲ್ಲ.

೫. ಅದು ಅನ್ವಯವ್ಯತಿರೇಕದಿಂದ ಪ್ರಾಣನಲ್ಲಿ ಬರುತ್ತದೆ.

ಸಿದ್ಧಾಂತದ ಹಂತಗಳು --

೧. ಪ್ರಾಣಶಬ್ದದಿಂದ ಭಗವಂತನೇ ವಾಚ್ಯನಾಗಿದ್ದಾನೆ.

೨. ವಿಷ್ಣುಲಿಂಗಗಳಿಂದ ಪ್ರಸಿದ್ಧಪ್ರಾಣಶ್ರುತಿಯು ಬಾಧಿತವಾಗಿದೆ.

೩. ಪ್ರಾಣನು ವಾಚ್ಯನಾಗದಿದ್ದರೆ ಮುಖ್ಯಾರ್ಥವನ್ನು ಬಿಟ್ಟಂತಾಗುವುದಿಲ್ಲ.

೪. ಪ್ರಾಣಶಬ್ದದ ಪ್ರವೃತ್ತಿನಿಮಿತ್ತವು ಬ್ರಹ್ಮನಲ್ಲಿ ಬರುತ್ತದೆ.

೫. ಅನ್ವಯವ್ಯತಿರೇಕದಿಂದ ಬ್ರಹ್ಮನಲ್ಲಿ ಬರುತ್ತದೆ.

## ಪೂರ್ವಪಕ್ಷಮಾಡಲು ಸಾಧ್ಯವೇ?

**तात्पर्यचन्द्रिका –**

**नन्वत्र प्राणो न तावत् जडरूपो वायुरिति पूर्वः पक्षः, जडं प्रति ''त्वं प्राणो अभवः'' इत्याद्युक्त्ययोगात् । ''ओषधे त्रायस्वैनम्'' इत्यादेश्च स्वमतेऽभिमानिदेवतापरत्वात्, मीमांसकमते चान्यपरत्वेन अचेतनसम्बोधनपरत्वाभावात् । नापि मुख्यप्राण इति, जीवनस्य तदन्वयव्यतिरेकानुविधानादर्शनेन अधिकाशङ्काऽयोगात् ।**

**ननु आकाशाधिकरणपूर्वपक्षे जडस्याप्याकाशस्य आनन्दमयत्वादिकमिव, अत्रापि जडस्याप्यभिमानिद्वारा सम्बोधनादि युक्तम् । नच मुख्ये मुख्यत्वात् प्राणशब्दस्य कथं जडपरत्वेन पूर्वपक्ष इति युक्तम्, लोकप्रसिद्ध्या पूर्वपक्षयतो ब्रह्मणीव मुख्येऽपि मुख्यत्वज्ञानाभावादिति चेन्न, ''मुख्यवायावेव मुख्यत्वात्'' इत्यादिपूर्वपक्षटीकया ''प्रेरकोऽस्यापि यद्धरिः'' इत्याद्यनुव्याख्यानेन च विरोधात् । 'त्वमभवः करिष्यमाणः प्राणयः' इत्यादीनां बहूनाममुख्यार्थत्वापाताच्चेति चेत्,**

ಅನುವಾದ - ಪೂರ್ವಪಕ್ಷವನ್ನು ಹೇಗೆ ಮಾಡುತ್ತೀರಿ? ಜಡರೂಪವಾದ ವಾಯುವು ಪ್ರಾಣಶಬ್ದದಿಂದ ವಾಚ್ಯವೆಂದು ಪೂರ್ವಪಕ್ಷ ಮಾಡಲಾಗದು. ಏಕೆಂದರೆ ಜಡವಾಯುವನ್ನು ಕುರಿತು 'ತ್ವಂ ಪ್ರಾಣೋ ಅಭವಃ' (ನೀನು ಪ್ರಾಣನಾಗಿದ್ದಿ) ಇತ್ಯಾದಿಯಾಗಿ ಸಂಬೋಧನೆಯನ್ನು

ಮಾಡಲಾಗದು. 'ಓಷಧೇ ತ್ರಾಯಸ್ವೈನಮ್' (ಎಲೈ ಔಷಧವೇ! ಇವನನ್ನು ರಕ್ಷಿಸು) ಇತ್ಯಾದಿಯಾಗಿ ಜಡಪದಾರ್ಥವನ್ನು ಸಂಬೋಧಿಸಿದ್ದು ಕಂಡಿದೆಯಲ್ಲ ಎಂದು ಪ್ರಶ್ನಿಸಬಾರದು. ಓಷಧಶಬ್ದಕ್ಕೆ ಸಿದ್ಧಾಂತದಲ್ಲಿ ಅಭಿಮಾನಿದೇವತೆಯೆಂದರ್ಥ. ಮೀಮಾಂಸಕಮತದಲ್ಲಿಯೂ ಕೂಡ ಅರ್ಥವಾದ-ಪರವೆಂದು ಹೇಳುವುದರಿಂದ ಸಂಬೋಧನೆ ಎಂದು ಹೇಳಬೇಕಾಗಿಲ್ಲ.

ಮುಖ್ಯವಾಯುವು ಪ್ರಾಣನೆಂದೂ ಸಹ ಪೂರ್ವಪಕ್ಷ ಮಾಡಲಾಗದು. ಏಕೆಂದರೆ ಜೀವನ-ಹೇತುತ್ವ ಎಂಬ ಪ್ರಾಣಶಬ್ದದ ಪ್ರವೃತ್ತಿನಿಮಿತ್ತವು ಅನ್ವಯವ್ಯತಿರೇಕದಿಂದ ಮುಖ್ಯಪ್ರಾಣನಲ್ಲಿ ಸಿದ್ಧವಾಗಿಲ್ಲ. ಹೇತ್ವಸಿದ್ಧಿ ದೋಷ ಬರುವುದರಿಂದ ಅಧಿಕಾಶಂಕೆಯು ಮುಖ್ಯಪ್ರಾಣನಲ್ಲಿ ಕೂಡುವುದಿಲ್ಲ.

ಪ್ರಶ್ನೆ - ಜಡವಾಯುವೆಂದೇ ಪೂರ್ವಪಕ್ಷ ಮಾಡುತ್ತೇವೆ. ಆಕಾಶಾಧಿಕರಣ ಪೂರ್ವಪಕ್ಷದಲ್ಲಿ ಜಡವಾದ ಆಕಾಶದಲ್ಲಿ ಅಂತರ್ಯಾಮಿವಿವಕ್ಷೆಯಿಂದ ಆನಂದಮಯತ್ವವನ್ನು ಹೇಳಿದಂತೆ ಇಲ್ಲಿಯೂ ಸಹ ಜಡವಾದ ವಾಯುವಿನಲ್ಲಿ ಅಭಿಮಾನಿದೇವತೆಯ ವಿವಕ್ಷೆಯಿಂದ ಸಂಬೋಧನಾದಿಗಳನ್ನು ಕೂಡಿಸಬಹುದು. ಮುಖ್ಯಪ್ರಾಣನಲ್ಲಿ ಪ್ರಾಣಶಬ್ದವು ಮುಖ್ಯವಾಗಿರುವಾಗ ಜಡಪರವೆಂಬ ಪೂರ್ವ-ಪಕ್ಷವು ತಪ್ಪಲ್ಲವೇ? ಎಂದು ಶಂಕಿಸಬಾರದು. ಲೋಕಪ್ರಸಿದ್ಧಿಯಿಂದಷ್ಟೇ ಇಲ್ಲಿ ಪೂರ್ವಪಕ್ಷ ಮಾಡಲಾಗಿದೆ. ಯಾವರೀತಿಯಾಗಿ ಬ್ರಹ್ಮನಲ್ಲಿ ಲೋಕಪ್ರಸಿದ್ಧಿ ಇಲ್ಲವೋ ಆದರಂತೆ ಮುಖ್ಯಪ್ರಾಣ-ನಲ್ಲಿಯೂ ಸಹ ಪ್ರಾಣಶಬ್ದದ ಪ್ರಸಿದ್ಧಿ ಇಲ್ಲ. ಆದ್ದರಿಂದ ಬ್ರಹ್ಮನಲ್ಲಿ ಪ್ರಾಣಶಬ್ದವು ಮುಖ್ಯವಾಗಿದೆ ಎಂಬ ಜ್ಞಾನವು ಹೇಗೆ ಇಲ್ಲವೋ ಆದರಂತೆ ಮುಖ್ಯಪ್ರಾಣನಲ್ಲೂ ಇಲ್ಲ. ಆದ್ದರಿಂದ ಜಡವಾಯುವೇ ಪ್ರಾಣನೆಂದು ಪೂರ್ವಪಕ್ಷ ಮಾಡಬಹುದಲ್ಲವೇ?

ಉತ್ತರ - ಹಾಗಾದಲ್ಲಿ ಟೀಕೆ ಮತ್ತು ಅನುವ್ಯಾಖ್ಯಾನಗಳಿಗೆ ವಿರೋಧ ಬರುತ್ತದೆ. ''ಮುಖ್ಯ-ವಾಯಾವೇವ ಮುಖ್ಯತ್ವಾತ್'' ಪ್ರಾಣಶಬ್ದವು ಮುಖ್ಯವಾಯುವಿನಲ್ಲೇ ಮುಖ್ಯವಾಗಿದೆ ಎಂದು ಪೂರ್ವಪಕ್ಷ ಟೀಕೆಯು ಹೇಳುತ್ತಿದೆ. ಮತ್ತು 'ಪ್ರೇರಕೋಽಸ್ಯಾಪಿ ಯದ್ಧರಿಃ' (ಮುಖ್ಯಪ್ರಾಣನಿಗೂ ಯಾವ ಹರಿಯು ಪ್ರೇರಕನಾಗಿದ್ದಾನೋ) ಎಂದು ಅನುವ್ಯಾಖ್ಯಾನವು ಹೇಳುತ್ತಿದೆ. ಹೀಗಿರುವಾಗ ನೀವು ಜಡವಾಯು ಎಂಬ ಪೂರ್ವಪಕ್ಷವನ್ನು ಹೇಗೆ ಮಾಡುತ್ತೀರಿ? ಅಷ್ಟೇ ಅಲ್ಲದೆ 'ತ್ವಂ ಅಭವಃ' 'ಕರಿಷ್ಯಮಾಣಃ' 'ಪ್ರಾಣಯಃ' ಈ ಎಲ್ಲ ಶಬ್ದಗಳು ಚೇತನವನ್ನು ಹೇಳುತ್ತಿವೆ. ಜಡವಾಯು ಎಂದು ಪೂರ್ವಪಕ್ಷ ಮಾಡಿದರೆ ಇಂತಹ ಅನೇಕ ಶಬ್ದಗಳಿಗೆ ಅಮುಖ್ಯಾರ್ಥವನ್ನು ಮಾಡಬೇಕಾಗುತ್ತದೆ.

ಆದ್ದರಿಂದ ಜಡವಾಯುವೆಂದು ಪೂರ್ವಪಕ್ಷ ಮಾಡುವುದು ಕಷ್ಟ. ಚೇತನವಾಯುವನ್ನು ಪೂರ್ವಪಕ್ಷ ಮಾಡಿದರೆ ಅಸಿದ್ಧಿದೋಷ ತಪ್ಪಿದ್ದಲ್ಲ. ಹೀಗಿರುವಾಗ ಪೂರ್ವಪಕ್ಷರಚನೆ ಹೇಗೆ ಸಾಧ್ಯ ?

ಕಠಿಣಪದಾರ್ಥ -

ಜಡಂ ಪ್ರತಿ = ಜಡವಾದ ವಾಯುವನ್ನು ಕುರಿತು, ತದನ್ವಯವ್ಯತಿರೇಕ ಅನುವಿಧಾನ ಆದರ್ಶನೇನ = ಮುಖ್ಯವಾಯುವಿನಲ್ಲಿ ಜೀವನಹೇತುತ್ವದ ಅನ್ವಯವ್ಯತಿರೇಕ ಇರುವುದು ಕಂಡಿಲ್ಲವಾದ ಕಾರಣ, ಅಸ್ಯಾಪಿ = ಮುಖ್ಯಪ್ರಾಣನಿಗೂ

**ಪ್ರಕಾಶಃ** – ಅತ್ರೈವಂ ಪೂರ್ವಪಕ್ಷಕ್ರಮಃ – ಪ್ರಾಣಶಬ್ದಸ್ಯ ವಾಯಾವೇವ ಪ್ರಸಿದ್ಧೇಃ ವಾಯುರೇವ ಪ್ರಾಣೋ ನ ವಿಷ್ಣುರಿತಿ । ಯದ್ಯಪಿ ನಿರವಕಾಶಲಿಙ್ಗೈರ್ಲೋಕಪ್ರಸಿದ್ಧಿಬಾಧ ಇಹ ಪೂರ್ವತ್ರ ಚ ಅವಿಶಿಷ್ಟಃ, ವಿಷಯವಾಕ್ಯಭೇದೇನ ಚ ನಾಧಿಕರಣಭೇದಃ। ತಥಾऽಪಿ –

**.....ಅಧ್ಯಾತ್ಮಮನ್ವಯವ್ಯತಿರೇಕತಃ ।**
**ಪ್ರಾಣಾದಿಹೇತುತಾದೃಷ್ಟೇರತಿದೇಶೋ ಹಿ ತಾದೃಶಃ ॥**

ಇತ್ಯನುವ್ಯಾಖ್ಯಾನೋಕ್ತರೀತ್ಯಾ, ''ಪ್ರಾಣಶಬ್ದಪ್ರವೃತ್ತಿನಿಮಿತ್ತಜೀವನಕಾರಣತ್ವಸ್ಯಾನ್ವಯ-ವ್ಯತಿರೇಕಾಭ್ಯಾಂ ವಾಯಾವೇವ ದರ್ಶನಾತ್'' ಇತಿ ಟೀಕೋಕ್ತಾಭ್ಯಧಿಕಾಶಙ್ಕಯಾ ಪೂರ್ವಪಕ್ಷೋತ್ಥಾನ-ಸಮ್ಭವೋ ವಾಚ್ಯಃ । ಸ ಚಾಯುಕ್ತಃ, ಪ್ರಾಣೋ ಜಡವಾಯುರಿತಿ ವಾ ಮುಖ್ಯವಾಯುದೇವತೇತಿ ವಾ ಪೂರ್ವ-ಪಕ್ಷಯಿತವ್ಯತ್ವಾತ್ । ತತ್ರಾದ್ಯಸ್ತ್ವಯುಕ್ತಃ, ಅನ್ತ್ಯೇ ಹೇತೋರಸಿದ್ಧಿರಿತಿ ಭಾವೇನ ''ಪ್ರಾಣಶಬ್ದಸ್ಯಾ-ನ್ಯತ್ರ ವೃತ್ತೌ'' ಇತ್ಯಾದಿಟೀಕಾಂ ವಿವೃಣ್ವನ್ನಾಕ್ಷಿಪತಿ – **ನನ್ವಿತಿ ॥ ಜಡಂ ಪ್ರತೀತಿ ॥** ಚೇತನಂ ಪ್ರತೀವ ಸಮ್ಬೋಧನಾದಿರೂಪೋತ್ತ್ಯಯೋಗಾದಿತ್ಯರ್ಥಃ । ಏತೇನ ಟೀಕಾಯಾಂ ಮುಖ್ಯತ್ವೋಕ್ತಿರುಪಲಕ್ಷಣೇತಿ ಸೂಚಿತಮ್ ।

ನನು ''ಓಷಧೇ ತ್ರಾಯಸ್ವ'' ಇತ್ಯಾದೌ ಜಡಸ್ಯಾಪಿ ಸಮ್ಬೋಧನಂ ದೃಶ್ಯತ ಇತ್ಯತ ಆಹ – **ಓಷಧ ಇತಿ ॥ ಅನ್ಯಪರತ್ವೇನೇತಿ ॥** ''ಅಭಿಧಾನೇऽರ್ಥವಾದ'' ಇತಿ ಮನ್ತ್ರಾಧಿಕರಣಗುಣಸೂತ್ರೇ ಯತ್ರಾಚೇತನಾ ಓಷಧಿಗ್ರಾವಾದಯಸ್ತ್ರಾಣಶ್ರವಣಾರ್ಥಮಾಮನ್ತ್ರ್ಯನ್ತೇ, ಕಿಂ ಪುನರ್ವಿದ್ವಾಂಸೋ ಬ್ರಾಹ್ಮಣಾ ಇತಿ ಕರ್ಮಸಮುತ್ಸಾಹಾರ್ಥಮಿತ್ಯುಕ್ತೇರುತ್ಸಾಹಪರತ್ವೇನೇತ್ಯರ್ಥಃ । ಏತೇನ ''ನ ಹ್ಯಚೇತನಂ ಪ್ರತಿ ತ್ವಮೇವಮಭವ ಇತಿ ಬುದ್ಧಿಮತೋಚ್ಯತೇ'' ಇತಿ ಸುಧಾವಾಕ್ಯಂ ವಿವೃತಮ್ – **ತದನ್ವಯೇತಿ ॥** ವಾಯುವಿಕಾರಾನ್ವಯ-ವ್ಯತಿರೇಕಾನುವಿಧಾಯಿತ್ವಸ್ಯೈವ ಜೀವನಾದೇಃ ಪ್ರತೀಯಮಾನತ್ವೇನ ಮುಖ್ಯಾನ್ವಯವ್ಯತಿರೇಕಾನು-ವಿಧಾನಾದರ್ಶನಾದಿತ್ಯರ್ಥಃ ।

ಮನ್ದಾನಾಂ ಜಡಪರತ್ವೇನಾಪಿ ಪೂರ್ವಪಕ್ಷಸಮ್ಭವಭ್ರಮಮಾಶಙ್ಕ್ಯ ಟೀಕಾದಿವಿರೋಧೇನ ನಿರಸ್ಯತಿ – **ನನ್ವಿತಿ ॥ ಆನನ್ದಮಯತ್ವಾದಿಕಮಿತಿ ॥** ಪೂರ್ವತ್ರ ಸ್ಪಷ್ಟಮೇತತ್ । 'ಅಸ್ಯಾಪಿ' ಮುಖ್ಯ-ಪ್ರಾಣಸ್ಯಾಪೀತ್ಯರ್ಥಃ । ಟೀಕಾದೇರಪಿ ಕಿಂ ಮೂಲಮ್? ಇತ್ಯತ ಆಹ – **ತ್ವಮಭವ ಇತಿ ॥**

ವಿವರಣೆ - ಈ ಅಧಿಕರಣದ ಪೂರ್ವಪಕ್ಷದ ಕ್ರಮ ಹೀಗಿದೆ - ವಾಯುವಿನಲ್ಲಿ ಪ್ರಾಣಪದವು ಪ್ರಸಿದ್ಧವಾದ್ದರಿಂದ ವಾಯುವೇ ಪ್ರಾಣನಾಗುತ್ತಾನೆ ವಿಷ್ಣುವಲ್ಲ. ವಸ್ತುತಃ 'ನಿರವಕಾಶಲಿಂಗದಿಂದ ಲೋಕಪ್ರಸಿದ್ಧಿಬಾಧ' ಎಂಬುದೇ ಈ ಅಧಿಕರಣ ಸಿದ್ಧಾಂತನ್ಯಾಯ. ಹಿಂದಿನ ಅಧಿಕರಣದ ನ್ಯಾಯವೂ ಇದೇ ಆಗಿದೆ. ಹಾಗಾಗಿ ಪ್ರತ್ಯೇಕ ಅಧಿಕರಣವೆಂದು ಪರಿಗಣಿಸಲು ಕಾರಣವಿಲ್ಲ. ಕೇವಲ ವಿಷಯವಾಕ್ಯ

ಭೇದದಿಂದ ಅಧಿಕರಣಭೇದವೆಂಬುದು ಮೂರ್ಖತನ. ಆದರೂ ಕೂಡ ಅಭ್ಯಧಿಕಾಶಂಕೆಯಿಂದ ಪೂರ್ವಪಕ್ಷವು ಹೊರಟಾಗ ಪ್ರತ್ಯೇಕ ಅಧಿಕರಣದ ಅವಶ್ಯಕತೆ ಇದೆ. ಇದನ್ನೇ ಅನುವ್ಯಾಖ್ಯಾನದಲ್ಲಿ

'..... ಆಧ್ಯಾತ್ಮಮನ್ವಯವ್ಯತಿರೇಕತಃ।
ಪ್ರಾಣಾದಿಹೇತುತಾದೃಷ್ಟೇರತಿದೇಶೋ ಹಿ ತಾದೃಶಃ ॥'

ಜೀವನಹೇತುತ್ವ ಎಂಬ ಪ್ರಾಣಶಬ್ದದ ಪ್ರವೃತ್ತಿನಿಮಿತ್ತವು ಅನ್ವಯವ್ಯತಿರೇಕದಿಂದ ಮುಖ್ಯವಾಯುವಿನಲ್ಲಿ ಕಾಣಿಸುತ್ತಿದೆ. ಆದರೆ ಹಿಂದಿನ ಅಧಿಕರಣದ ಸಿದ್ಧಾಂತವೇ ಈ ಅಧಿಕಾಶಂಕೆಯನ್ನು ನಿರಾಕರಿಸುತ್ತದೆ. ಮತ್ತು 'ಪ್ರಾಣಶಬ್ದಪ್ರವೃತ್ತಿನಿಮಿತ್ತಸ್ಯ ಜೀವನಕಾರಣತ್ವಸ್ಯಾನ್ವಯವ್ಯತಿರೇಕಾಭ್ಯಾಂ ವಾಯಾವೇವ ದರ್ಶನಾತ್' (ಜೀವನಕಾರಣತ್ವವೆಂಬ ಪ್ರಾಣಶಬ್ದದ ಪ್ರವೃತ್ತಿನಿಮಿತ್ತವು ಅನ್ವಯವ್ಯತಿರೇಕದಿಂದ ಮುಖ್ಯಪ್ರಾಣನಲ್ಲಿಯೇ ಕಾಣಿಸುತ್ತಿದೆ ಎಂಬ ಟೀಕೆಯಲ್ಲಿಯೂ ಅಧಿಕಾಶಂಕೆಯಿಂದ ಪೂರ್ವಪಕ್ಷವನ್ನು ಮಾಡಲಾಗಿದೆ. ಇದನ್ನು ಪರಿಹರಿಸಲು ಪ್ರಾಣಾಧಿಕರಣವು ಸಾರ್ಥಕವಾಗಿದೆ.

ಇದು ಹೇಗೆ ಸರಿ? ಏಕೆಂದರೆ, ಜಡವಾಯುವನ್ನಾಗಲೀ ಅಥವಾ ಮುಖ್ಯವಾಯುವನ್ನಾಗಲೀ ಪ್ರಾಣನೆಂದು ಪೂರ್ವಪಕ್ಷ ಮಾಡಬೇಕು? ಜಡವಾಯುವನ್ನು ಪ್ರಾಣನೆಂಬುವುದು ತಪ್ಪು. ಮುಖ್ಯವಾಯುವನ್ನು ಪ್ರಾಣನೆಂದರೆ ಹೇತ್ವಸಿದ್ಧಿ ಬರುತ್ತದೆ ಎಂಬ ಅಭಿಪ್ರಾಯದಿಂದ 'ಪ್ರಾಣಶಬ್ದಸ್ಯ ಅನ್ಯತ್ರ ವೃತ್ತಾವಪಿ' (ಪ್ರಾಣಶಬ್ದವು ಜಡವಾಯುವಿನಲ್ಲಿ ಇದ್ದರೂ ಕೂಡ) ಇತ್ಯಾದಿ ಟೀಕೆಯನ್ನು ವಿವರಿಸುತ್ತಾ ಆಕ್ಷೇಪ ಮಾಡುತ್ತಿದ್ದಾರೆ.

'ಓಷಧೇ ತ್ರಾಯಸ್ವ' ಇತ್ಯಾದಿ ಸ್ಥಳದಲ್ಲಿ ಜಡದಲ್ಲಿಯೂ ಸಂಬೋಧನೆ ಕಾಣಿಸುತ್ತದಲ್ಲ? ಎಂಬ ಪ್ರಶ್ನೆಗೆ 'ಓಷಧೇ' ಎಂಬ ವಾಕ್ಯದಿಂದ ಉತ್ತರಿಸುತ್ತಿದ್ದಾರೆ. ಅಂದರೆ ಓಷಧಿಯಲ್ಲಿರುವ ಅಭಿಮಾನಿದೇವತೆಗಳನ್ನು ಉದ್ದೇಶಿಸಿ ಸಂಬೋಧನೆ ಮಾಡಿದ್ದಾರೆಂದು ನಮ್ಮ ಸಿದ್ಧಾಂತ. ಮೀಮಾಂಸಕರೂ ಕೂಡ ಜಡದಲ್ಲಿ ಸಂಬೋಧನೆ ಎಂದು ಒಪ್ಪುವುದಿಲ್ಲ. 'ಅಭಿಧಾನೇ ಅರ್ಥವಾದಃ' ಎಂಬ ಮಂತ್ರಾಧಿಕರಣದ ಗುಣಸೂತ್ರದಲ್ಲಿ ಇದರ ಬಗ್ಗೆ ಹೇಳಿದ್ದಾರೆ. 'ಔಷಧಿ, ಕಲ್ಲು ಮೊದಲಾದ ಅಚೇತನಗಳನ್ನು ಕುರಿತು ರಕ್ಷಣಾಮಂತ್ರದಲ್ಲಿ ಆಮಂತ್ರಿಸಲಾಗಿದೆ. ಜಡವಾದ ಪದಾರ್ಥಗಳನ್ನೇ ಆಮಂತ್ರಿಸಿದ ಮೇಲೆ ವಿದ್ವಾಂಸರಾದ ಬ್ರಾಹ್ಮಣರ ಆಮಂತ್ರಣವನ್ನು ಮಾಡಲಾಗಿದೆ ಎಂದು ಪುನಃ ಹೇಳಬೇಕೇನು? ಅಂದರೆ ವಿದ್ವಾಂಸರು ಅವಶ್ಯವಾಗಿ ಬರಲೇಬೇಕು ಎಂದರ್ಥ. ಈ ಅರ್ಥವಾದದ ವಿವಕ್ಷೆಯಿಂದ ಜಡಪದಾರ್ಥಗಳಲ್ಲಿ ಸಂಬೋಧನಾದಿಗಳನ್ನು ಮಾಡಲಾಗಿದೆ. ಇದರಿಂದ ವಿದ್ವಾಂಸರ ಆಹ್ವಾನದಲ್ಲಿ ಉತ್ಸಾಹವನ್ನು ತೋರಿಸಿದಂತಾಗುತ್ತದೆ. ಇದರಿಂದ 'ನ ಹ್ಯಚೇತನಂ ಪ್ರತಿ ತ್ವಮೇವಮಭವಃ ಇತಿ ಬುದ್ಧಿಮತೋಚ್ಯತೇ' (ಅಚೇತನವನ್ನು ಕುರಿತು ನೀನು ಹೀಗಿದ್ದಿ ಇತ್ಯಾದಿರೀತಿಯಲ್ಲಿ ಯಾವ ಬುದ್ಧಿವಂತನೂ ಮಾತನಾಡುವುದಿಲ್ಲ) ಎಂಬ ಸುಧಾವಾಕ್ಯವನ್ನು ವಿವರಿಸಿದಂತಾಯಿತು.

ಮುಖ್ಯವಾಯುವಿನಲ್ಲಿ ಅನ್ವಯವ್ಯತಿರೇಕವು ಕಾಣಿಸುತ್ತಿಲ್ಲ. ಹೊರತಾಗಿ ಜಡವಾದ ವಾಯುವಿಕಾರದಲ್ಲಿಯೇ ಜೀವನಹೇತುತ್ವವೆಂಬ ಅನ್ವಯವ್ಯತಿರೇಕವು ಕಾಣಿಸುತ್ತಿದೆ.

ಪ್ರಾಣಶಬ್ದದಿಂದ ಜಡವಾಯುವೇ ಪ್ರತಿಪಾದ್ಯವಾಗುತ್ತದೆಂದು ಮಂದಾಧಿಕಾರಿಗಳಿಗೆ ಭ್ರಾಂತಿ ಬರುತ್ತದೆ. ಅವರ ವಿವಕ್ಷೆಯನ್ನು ಶಂಕೆ ಮಾಡಿ ಟೀಕಾವಿರೋಧ ಬರುತ್ತದೆಂದು 'ನನು' ಇತ್ಯಾದಿ ಗ್ರಂಥದಿಂದ ನಿರಾಕರಿಸಿದ್ದಾರೆ. ಆಕಾಶದಲ್ಲಿ ಆನಂದಮಯತ್ವವನ್ನು ಹಿಂದಿನ ಅಧಿಕರಣದಲ್ಲಿ ಹೇಳಿದ್ದಾರೆ. ಆ ವಿಚಾರವು ಅಲ್ಲಿಯೇ ಸ್ಪಷ್ಟವಾದ್ದರಿಂದ ಇಲ್ಲಿ ವಿವರಿಸಿಲ್ಲ. ಮುಖ್ಯವಾಯುವಿನಲ್ಲಿ ಪ್ರಾಣಶಬ್ದವು ಮುಖ್ಯವಾಗಿದೆಯೆಂದು ಟೀಕೆ ಮತ್ತು ಅನುವ್ಯಾಖ್ಯಾನಗಳಲ್ಲಿ ಹೇಳಿದ್ದು ಸತ್ಯ. ಆದರೆ ಅನುವ್ಯಾಖ್ಯಾನ ಮತ್ತು ಟೀಕೆಯ ಈ ಮಾತಿಗೆ ಏನು ಆಧಾರ? ಎಂಬ ಪ್ರಶ್ನೆಗೆ ಶ್ರುತಿಯನ್ನು 'ತ್ವಮಭವಃ' ಎಂಬುದಾಗಿ ಉಲ್ಲೇಖಿಸುತ್ತಿದ್ದಾರೆ.

**ಗುರುರಾಜೀಯಮ್ –** ನನು ಜಡಂ ಪ್ರತ್ಯಪಿ 'ತ್ವಮಭವಃ' ಇತ್ಯಾದಿ ಪ್ರಯುಜ್ಯತೇ । 'ಓಷಧೇ ತ್ರಾಯಸ್ವೈನಮ್' ಇತ್ಯಾದೌ ತಥಾ ದರ್ಶನಾತ್, ಇತ್ಯತ ಆಹ – **ಓಷಧ ಇತಿ ॥ ಮೀಮಾಂಸಕಮತೇ ಚಾನ್ಯಪರತ್ವೇನೇತಿ ॥** ಅರ್ಥವಾದೇ ತಥಾ ಶಾಸ್ತ್ರಾಧಿಕರಣೇ 'ಅಚೇತನೇऽರ್ಥಬನ್ಧನಾತ್' ಇತ್ಯಸ್ಮಿನ್ ಸೂತ್ರೇ 'ಓಷಧೇ ತ್ರಾಯಸ್ವ' 'ಶೃಣೋತ ಗ್ರಾವಾಣಃ' ಇತಿ ಚ ಸಮ್ಬೋಧನಂ ಕಾರ್ಯನಿಯೋಗಾಭಿಮುಖ್ಯಕರಣಾರ್ಥಮ್ । ನ ಚಾಚೇತನಸ್ಯಾಭಿಮುಖ್ಯಂ ಸಮ್ಭವತಿ ।

ನಚ ಪಶುತ್ರಾಣೇ ಪ್ರಾತರನುವಾಕಶ್ರವಣೇ ವಾऽಚೇತನಪ್ರೇರಣಪ್ರವೃತ್ತಿರುಪಪದ್ಯತ ಇತ್ಯಾ-ನರ್ಥಕ್ಯಮರ್ಥವಿವಕ್ಷಾಯಾಮ್ । ಅತೋऽದೃಷ್ಟಪರತ್ವೇನಾಚೇತನಸಮ್ಬೋಧನಪರತ್ವಾಭಾವಾದಿತಿ ಭಾವಃ । ಅಥವಾ ಸ್ತುತಿಪರತ್ವೇನಾಚೇತನಸಮ್ಬೋಧನಪರತ್ವಾಭಾವಾದಿತಿ ಭಾವಃ । ತಥಾಚೋಕ್ತಂ ವಾರ್ತಿಕೇ ಏವಮ್ 'ಓಷಧೇ ತ್ರಾಯಸ್ವ' ಇತ್ಯಾದ್ಯಚೇತನಸಮ್ಬೋಧನಾನಿ ಸ್ತುತಿಪರತ್ವೇನ ಯೋಜ್ಯಾನಿ । ಯಸ್ಮಿಂಶ್ಚಯನ ಓಷಧಿರಪಿ ತ್ರಾಯೇತ, ತತ್ರ ಚಯನಕರ್ತಾ ತ್ರಾಯತ ಇತಿ ಕಿಮು ವಾಚ್ಯಮ್ । ತಥಾ ಗ್ರಾವಾಣೋಪಿ ಪ್ರಾತರನುವಾಕಂ ಶೃಣ್ವನ್ತಿ ಕಿಮುತ ವಿದ್ವಾಂಸೋ ಬ್ರಾಹ್ಮಣಾ ಇತ್ಯಾಮನ್ತ್ರಣಾ-ಭಿಪ್ರಾಯಃ ।

ಯದ್ವಾ 'ಅಭಿಧಾನೇऽರ್ಥವಾದೇ' ಇತಿ ಮನ್ತ್ರಾಧಿಕರಣಗುಣಸೂತ್ರೋಕ್ತರೀತ್ಯಾ 'ಓಷಧೇ ತ್ರಾಯಸ್ವೈನಮ್' ಇತ್ಯಾದೇಶ್ಚೈತನ್ಯಾರೋಪೇಣ ಕ್ರತುಸಾಧನೀಭೂತೋಪಕರಣವಿಹಿತಸ್ತುತಿಪರತ್ವೇನ ಇತ್ಯರ್ಥಃ ।

ಅಸ್ತು ಜಡವಾಯುರೇವ ಪ್ರಾಣ ಇತಿ ಪೂರ್ವಪಕ್ಷಃ । ನಚೈವಂ 'ತ್ವಮಭವಃ' ಇತ್ಯಾದ್ಯಯೋಗ ಇತಿ ವಾಚ್ಯಮ್ । ಅಭಿಮಾನಿದ್ವಾರೋಪಪತ್ತೇರಿತ್ಯಾಶಙ್ಕತೇ – **ನನ್ವಿತಿ ॥** ನನು ಟೀಕಾನು-ವ್ಯಾಖ್ಯಾನಯೋರನ್ಯಥಾಪಿ ಯೋಜಯಿತುಂ ಶಕ್ಯತ್ವಾನ್ನ ತದ್ವಿರೋಧ ಇತ್ಯತ ಆಹ – **ತ್ವಮಭವ ಇತಿ ॥**

## ಸಾರ

ಈ ಅಧಿಕರಣದಲ್ಲಿ ಸಿದ್ಧಾಂತಸ್ಥಾಪನೆಯಾಗಬೇಕೆಂದರೆ ಮೊದಲು ಪೂರ್ವಪಕ್ಷ ಮಾಡಬೇಕು? ಆದರೆ ಪೂರ್ವಪಕ್ಷ ಮಾಡುವುದೇ ಕಠಿಣವಾಗಿದೆ. ಜಡವಾಯುವನ್ನಾಗಲೀ ಚೇತನವಾಯುದೇವತೆಯನ್ನಾಗಲೀ ಪ್ರಾಣನೆಂದು ಪೂರ್ವಪಕ್ಷ ಮಾಡಬೇಕು. ಆದರೆ ಜಡವಾಯುವಿನಲ್ಲಿ ಸಂಬೋಧನೆ ಮೊದಲಾದವುಗಳು ಕೂಡುವುದಿಲ್ಲ. ಮುಖ್ಯವಾಯುವಿನಲ್ಲಿ ಅನ್ವಯವ್ಯತಿರೇಕದಿಂದ ಜೀವನಹೇತುತ್ವವಿರುವುದು ಯಾರಿಗೂ ಸಿದ್ಧವಾಗಿಲ್ಲ.

ಜಡವಾಯುವಿನಲ್ಲಿ ಅಭಿಮಾನಿವಿವಕ್ಷೆಯಿಂದ ಸಂಬೋಧನೆಯನ್ನೇನೋ ಕೂಡಿಸಬಹುದು. ಆದರೆ ಅನುವ್ಯಾಖ್ಯಾನ ಮತ್ತು ಟೀಕೆಗಳಲ್ಲಿ ಮುಖ್ಯವಾಯುವನ್ನು ಪೂರ್ವಪಕ್ಷ ಮಾಡಿದ್ದಾರೆ. ಹಾಗಾಗಿ ಅವುಗಳ ವಿರೋಧ ಬರುತ್ತದೆ. ಮತ್ತು ಅನೇಕ ಶ್ರುತಿಗಳಿಗೆ ಅಮುಖ್ಯಾರ್ಥಮಾಡಬೇಕಾದ ಪ್ರಸಂಗವಿದೆ. ಹೀಗೆ ಜಡವಾಯುವಂತೂ ಪ್ರಾಣ ಎನಿಸಲು ಸಾಧ್ಯವಿಲ್ಲ. ಮುಖ್ಯವಾಯುವನ್ನು ಪ್ರಾಣ ಎನ್ನೋಣವೆಂದರೆ ಹೇತ್ವಸಿದ್ಧಿ ತಪ್ಪಿದ್ದಲ್ಲ. ಹೀಗಿರುವಾಗ ಪೂರ್ವಪಕ್ಷವನ್ನು ಹೇಗೆ ರಚಿಸೋಣ?

### ವಾಕ್ಯಪ್ರಮಾಣದಿಂದ ಮುಖ್ಯಪ್ರಾಣನು ಪೂರ್ವಪಕ್ಷವಿಷಯ.
### ಅಂತಿಮಪ್ರಾಣಾಧಿಕರಣದಿಂದ ಪುನರುಕ್ತಿಪರಿಹಾರ

**ತಾತ್ಪರ್ಯಚಂದ್ರಿಕಾ –**

**उच्यते – प्रत्यक्षेण जीवनस्य मुख्यप्राणान्वयव्यतिरेकानुविधानाज्ञानेऽपि ''तत्प्राणे प्रपन्न उदतिष्ठत्'' ''तत्प्राण उत्क्रान्तेऽपद्यत'' इत्यादिवाक्यात् तज्ज्ञानम् । नच ''प्राणस्तथाऽनुगमात्'' इति वक्ष्यमाणन्यायेन ''तत्प्राणे'' इत्यत्र प्राणो विष्णुरिति युक्तम्, अत्रत्यसिद्धान्तन्यायेन प्राणशब्दप्रवृत्तिनिमित्तं जीवनादिहेतुत्वं विष्णोरङ्गीकृत्य निरवकाशान्यलिङ्गेन तत्र पूर्वपक्षोदयेन तद्विचारस्यैतत्सिद्धान्तोत्तरभावितया एतत्पूर्वपक्षदशायां तत्रत्यसिद्धान्तासिद्धेः । यथा – ''आकाशोऽर्थान्तर'' इत्यस्य ''आकाशस्तल्लिङ्गात्'' इत्येतत्सिद्धान्तानन्तरभावितया ''आकाशस्तल्लिङ्गात्'' इत्येतत्पूर्वपक्षदशाया ''आकाशोऽर्थान्तर'' इत्येतत् सिद्धान्तासिद्धिः, तद्वत् । एतेन ''प्राणस्तथा'' इत्यनेन अस्य गतार्थत्वशङ्काऽपि निरस्ता । एतदभावे ब्रह्मणो जीवनहेतुत्वाभावेन तत्र प्राणशब्दस्य मुख्यत्वासिद्धेः । अत एव टीकायां अन्वयव्यतिरेकयोः ''यत्प्रासिर्यत्परित्यागः'' इति स्मृतिरेवोक्ता ।**

ಅನುವಾದ - ಹೀಗೆ ಉತ್ತರಿಸುತ್ತೇವೆ -- ಜೀವನಹೇತುತ್ವವು ಮುಖ್ಯಪ್ರಾಣನಲ್ಲಿ ಅನ್ವಯ ವ್ಯತಿರೇಕದಿಂದ ಇದೆ ಎಂಬುದು ಪ್ರತ್ಯಕ್ಷದಿಂದ ಸಿದ್ಧವಾಗದಿದ್ದರೂ ಶ್ರುತಿಯಿಂದ ಸಿದ್ಧವಾಗಿದೆ. 'ತತ್ಕ್ರಾಣೇ ಉತ್ಕ್ರಾಂತೇ' ಅಪದ್ಯತೇ (ಬ್ರಹ್ಮದೇವರ ಶರೀರವನ್ನು ಮುಖ್ಯಪ್ರಾಣದೇವರು ಪ್ರವೇಶಿಸಿದಾಗ ಆ ಶರೀರವು ಎಚ್ಚರವಾಯಿತು, ಮುಖ್ಯಪ್ರಾಣದೇವರು ಹೊರಟಾಗ ಮರಣಹೊಂದಿತು) ಎಂಬ ಶ್ರುತಿಯಿಂದ ಜೀವನಹೇತುತ್ವದ ಅನ್ವಯವ್ಯತಿರೇಕವು ಮುಖ್ಯಪ್ರಾಣನಲ್ಲಿ ಇದೆಯೆಂದು ಸ್ಪಷ್ಟವಾಗಿ ತಿಳಿಯುತ್ತಿದೆ. ಆದ್ದರಿಂದ ಪೂರ್ವಪಕ್ಷ ಮಾಡಲು ಯಾವುದೇ ಬಾಧಕವಿಲ್ಲ.

ಪ್ರಶ್ನೆ - 'ಪ್ರಾಣಸ್ಥಾನುಗಮಾತ್' ಎಂಬ ಅಂತಿಮಪ್ರಾಣಾಧಿಕರಣದ ನ್ಯಾಯದಂತೆ 'ತತ್ಕ್ರಾಣೇ' ಎಂಬ ಶ್ರುತಿಯು ವಿಷ್ಣುಪರವೆಂದು ನಿರ್ಣಯವಾಗಿದೆ. ವಿಷ್ಣುಪರವಾದ ಶ್ರುತಿಯಿಂದ ಮುಖ್ಯಪ್ರಾಣನಲ್ಲಿ ಅನ್ವಯವ್ಯತಿರೇಕವನ್ನು ಹೇಗೆ ಸಾಧಿಸುತ್ತೀರಿ?

ಉತ್ತರ - ಅಂತಿಮಪ್ರಾಣಾಧಿಕರಣದ ಸಿದ್ಧಾಂತವನ್ನು ಇಲ್ಲಿ ಇಟ್ಟುಕೊಳ್ಳಬಾರದು. ಏಕೆಂದರೆ, ಈ ಪ್ರಾಣಾಧಿಕರಣದ ಸಿದ್ಧಾಂತನ್ಯಾಯವನ್ನು ಅವಲಂಬಿಸಿ ಅಂತಿಮಪ್ರಾಣಾಧಿಕರಣವು ಹೊರಟಿದೆ. ಅಂದರೆ ಪ್ರಾಣಶಬ್ದದ ಪ್ರವೃತ್ತಿನಿಮಿತ್ತವೆನಿಸಿದ ಜೀವನಾದಿ ಹೇತುತ್ವವನ್ನು ವಿಷ್ಣುವಿನಲ್ಲಿ ಅಂಗೀಕರಿಸಿ ನಿರವಕಾಶವಾದ ಬೇರೆ ಲಿಂಗದಿಂದ ಪೂರ್ವಪಕ್ಷವನ್ನು ಮಾಡಿಕೊಂಡು ಅಂತಿಮಪ್ರಾಣಾಧಿಕರಣವು ಹೊರಟಿದೆ. ಹೀಗಿರುವಾಗ ಅಂತಿಮಪ್ರಾಣಾಧಿಕರಣದ ವಿಚಾರವು ಪ್ರಾಣಾಧಿಕರಣದ ಸಿದ್ಧಾಂತದ ಅನಂತರವಷ್ಟೇ ತಿಳಿಯಲು ಸಾಧ್ಯ. ಈ ಅಧಿಕರಣದ ಪೂರ್ವಪಕ್ಷದ ಅವಸ್ಥೆಯಲ್ಲಿ ಪ್ರಾಣಾಧಿಕರಣದ ಸಿದ್ಧಾಂತವು ಸಿದ್ಧವಾಗಿರುವುದಿಲ್ಲ. ಉದಾಹರಣೆ -- ಪ್ರಥಮಪಾದದ ಆಕಾಶಾಧಿಕರಣದ ಸಿದ್ಧಾಂತವನ್ನು ಅವಲಂಬಿಸಿ ಮೂರನೆಯ ಪಾದದ ಆಕಾಶಾಧಿಕರಣವು ಹೊರಟಿದೆ. ಆದ್ದರಿಂದ ಪ್ರಥಮಪಾದದ ಆಕಾಶಾಧಿಕರಣದ ಪೂರ್ವಪಕ್ಷದೆಶೆಯಲ್ಲಿ ಮೂರನೇ ಪಾದದ ಆಕಾಶಾಧಿಕರಣದ ಸಿದ್ಧಾಂತವು ಹೇಗೆ ಸಿದ್ಧವಾಗಿರುವುದಿಲ್ಲವೋ? ಅದರಂತೆ ಇಲ್ಲಿಯೂ ತಿಳಿಯಬೇಕು.

ಪ್ರಾಣಾಧಿಕರಣದ ಪೂರ್ವಪಕ್ಷದೆಶೆಯಲ್ಲಿ ಅಂತಿಮಪ್ರಾಣಾಧಿಕರಣದ ಸಿದ್ಧಾಂತವು ಸಿದ್ಧವಾಗಿರುವುದಿಲ್ಲವೆಂದು ಹೇಳಿದ್ದರಿಂದ ಅಂತಿಮಪ್ರಾಣಾಧಿಕರಣದಿಂದ ಈ ಅಧಿಕರಣಕ್ಕೆ ಪುನರುಕ್ತಿದೋಷ ಬರುತ್ತದೆಂಬ ಶಂಕೆಯು ಪರಿಹಾರವಾಯಿತು. ಏಕೆಂದರೆ ಈ ಅಧಿಕರಣದ ಸಿದ್ಧಾಂತನ್ಯಾಯವಿಲ್ಲದೆ ವಿಷ್ಣುವಿನಲ್ಲಿ ಜೀವನಹೇತುತ್ವವೇ ಸಿದ್ಧವಾಗುವುದಿಲ್ಲ. ಆದ್ದರಿಂದ ಅಂತಿಮಪ್ರಾಣಾಧಿಕರಣದಲ್ಲಿ ಪ್ರಾಣಪದದ ಮುಖ್ಯಾರ್ಥವು ವಿಷ್ಣುವೆಂದೂ ಸಹ ಹೇಳಲಾಗುವುದಿಲ್ಲ.

ಜೀವನಹೇತುತ್ವದ ಅನ್ವಯವ್ಯತಿರೇಕವನ್ನು ಮುಖ್ಯಪ್ರಾಣನಲ್ಲಿ ಶ್ರುತಿಯಿಂದ ತಿಳಿಯಬೇಕೆಂದು ಇಲ್ಲಿಯ ತನಕ ಸಮರ್ಥಿಸಿದ್ದರಿಂದಲೇ ಟೀಕೆಯ ಮಾತು ಸಮಂಜಸವಾಗುತ್ತದೆ. ಅನ್ವಯವ್ಯತಿರೇಕದ ವಿಷಯದಲ್ಲಿ 'ಯತ್ಕ್ರಾಪ್ತಿರ್ಯತ್ಪರಿತ್ಯಾಗಃ' (ಯಾವ ಮುಖ್ಯಪ್ರಾಣನ ಪ್ರವೇಶದಿಂದ ಜೀವನವು

ಮುಖ್ಯಪ್ರಾಣನ ನಿರ್ಗಮನದಿಂದ ಮರಣವು) ಎಂಬ ಸ್ಮೃತಿಯನ್ನು ಉದಾಹರಿಸಿದ್ದು ಸಮಂಜಸವಾಗಿದೆ.

### ಕಠಿಣಪದಾರ್ಥ

ತತ್ = ಬ್ರಹ್ಮದೇವರ ಶರೀರವನ್ನು, ಉತ್ಕ್ರಾಂತೇ = ಹೊರಟಾಗ, ನಿರವಕಾಶಅನ್ಯಲಿಂಗೇನ = ನಿರವಕಾಶವಾದ ಪ್ರಾಣಸಂವಾದಾದಿ ಲಿಂಗದಿಂದ, ತತ್ರ = ಅಂತಿಮಪ್ರಾಣಾಧಿ-ಕರಣದಲ್ಲಿ, ಏತತ್ಪೂರ್ವಪಕ್ಷದಶಾಯಾಂ = ಪ್ರಾಣಾಧಿಕರಣದ ಪೂರ್ವಪಕ್ಷದ ಸಂದರ್ಭದಲ್ಲಿ, ತತ್ರತ್ಯ = ಅಂತಿಮಪ್ರಾಣಾಧಿಕರಣದಲ್ಲಿರುವ, ಏತೇನ = ಅಂತಿಮಪ್ರಾಣಾಧಿಕರಣದಲ್ಲಿ ಹೇಳಲ್ಪಟ್ಟ ಪ್ರಾಣನು ವಾಯುವೆಂದು ಪೂರ್ವಪಕ್ಷ ಮಾಡಿದ್ದರಿಂದ, ಏತದಭಾವೇ = ಈ ಆಧಿಕರಣವು ಇಲ್ಲದಿದ್ದರೆ, ಅತಏವ = (೧) ಮುಖ್ಯವಾಯುವಿನಲ್ಲಿ ಜೀವನಹೇತುತ್ವವು ಪ್ರತ್ಯಕ್ಷದಿಂದ ತಿಳಿಯವುದಿಲ್ಲವೆಂದು ಹೇಳಿದ್ದರಿಂದಲೇ (೨) ಜೀವನ ಹೇತುತ್ವವು ವಚನಪ್ರಮಾಣದಿಂದ ಸಿದ್ಧವಾದ್ದರಿಂದಲೇ.

**प्रकाशः – यदुक्तं जडरूपो वायुरिति वा मुख्य इति वा पूर्वपक्ष इति, तत्र त्वदुक्तानुपपत्त्यैव जडायोगान्मुख्य एवेति ब्रूम इति भावेन तत्रोक्तं दोषं परिहर्तुमाह – उच्यत इति ॥** ''प्राणशब्दप्रवृत्तिनिमित्त'' इत्यादिटीकां विवृण्वन् तत्र ''यत्प्राप्तिः'' इति स्मृत्युक्तिरुपलक्षणमिति भावेनाह – **तदिति ॥ ब्रह्मणश्शरीर-मित्यर्थः ।** आदिपदेन – **'यत्प्राप्तिर्यत्परित्याग उत्पत्तिर्मरणं तथा'** इत्यादि, ''श्रेष्ठश्च'' इत्यत्र भाष्यस्थमत्र टीकोक्तं ग्राह्यम् । ''तत्प्राणे'' इति वाक्यं विष्णुपरं न वायुपरम् । अतोऽस्मादपि न जीवनहेतुत्वज्ञानं मुख्यस्येत्याक्षिपति – **नचेति ॥ वक्ष्यमाणेति ॥**

तत्र हि ''तावा एताः शीर्षन् श्रियःश्रिता'' इत्यारभ्य बहुस्थलेषु श्रूयमाणः प्राणो विष्णुरन्यो वेति विशये, प्राणसंवादादिलिङ्गात् मुख्यप्राणादिरन्य एवेति प्राप्ते,

''तं देवाः प्राणयन्त'' इत्यादिना देवोपदेशश्चयत्वादिविष्णुलिङ्गानामस्मिन्प्रकरणे अनुगमादनुवृत्तेरन्यप्रापकाणामन्तर्यामिणि सम्भवात् प्राणो विष्णुरिति वक्ष्य-माणन्यायेन – इत्यर्थः । एतदुपजीवनेन तदधिकरणसिद्धान्तोत्थानादेतत् पूर्वपक्ष-दशायां तत्रत्यन्यायेनास्य वाक्यस्य न विष्णुपरत्वं शङ्कार्हमिति भावेन समाधत्ते – **अत्रत्येति ॥ सिद्धान्तासिद्धेरिति ॥** अन्यथा स्वर्गकामाधिकरणसिद्धफलान्वयमुपेत्य किं भावार्थस्य फलकरणता किं वा नामार्थस्येति विचारात्मकभावार्थाधिकरण-

**सिद्धान्तेन फलाभावरूपस्वर्गकामाधिकरणपूर्वपक्षानुदयः स्यादिति भावः ॥ यथाऽऽकाशोऽर्थान्तरेत्यादि ॥ प्रागेव विस्तृतमेतत् ।**

**एतेनेति ॥ एतत्पूर्वपक्षदशायां तत्रत्यस्य प्राणस्य वायुपरत्वकथनेनेत्यर्थः । अन्यथा ''तत्प्राणे'' इति श्रुतेः तत्रैव विष्णुपरत्वसिद्धौ विष्णोरेव श्रौतान्वयव्यतिरेकाभ्यां जीवनहेतुत्वसिद्ध्या प्राणपदमुख्यार्थत्वसिद्धेरेतदनारम्भ एव स्यादिति भावः। तदेव व्यनक्ति –एतदिति ॥ वाक्यात्तज्ज्ञानमित्युक्तपरिहारं टीकारूढं करोति – अत एवेति ॥ प्रत्यक्षेण जीवनहेतुत्वस्य ज्ञानायोगादेवेति वा, वचनगम्यत्वादेवेति वाऽर्थः । टीकायां स्मृत्युदाहरणेऽपि वक्ष्यमाणप्राणनयेनागतार्थत्वादि द्योतयितुमस्माभिः श्रुतिरुदाहृतेति हृदयम् ।**

ವಿವರಣೆ - ಪ್ರಾಣಶಬ್ದದಿಂದ ಜಡವಾಯುವು ಪ್ರತಿಪಾದ್ಯವೋ? ಮುಖ್ಯವಾಯುವು ಪ್ರತಿಪಾದ್ಯನೋ? ಎಂದು ಪ್ರಶ್ನಿಸಲಾಗಿತ್ತು. ಮುಖ್ಯವಾಯುವೆಂದೇ ಉತ್ತರಿಸುತ್ತೇವೆ. ಶ್ರುತಿಯಲ್ಲಿ ಹೇಳಲ್ಪಟ್ಟ ಸಂಬೋಧನಾದಿಗಳು ಅನುಪಪನ್ನವಾದ್ದರಿಂದ ಜಡವಾಯುವನ್ನು ವಿವಕ್ಷಿಸುವುದು ನೀವೇ ಹೇಳಿದಂತೆ ತಪ್ಪಾಗುತ್ತದೆ. ಮುಖ್ಯವಾಯುವನ್ನು ವಿವಕ್ಷಿಸಿದರೆ ಹೇತ್ವಸಿದ್ಧಿದೋಷಕ್ಕೆ ಅವಕಾಶವಿಲ್ಲ. ಏಕೆಂದರೆ ಪ್ರತ್ಯಕ್ಷ-ಪ್ರಮಾಣದಿಂದ ಜೀವನದ ಅನ್ವಯವ್ಯತಿರೇಕವನ್ನು ಮುಖ್ಯವಾಯುವಿನಲ್ಲಿ ಹೇಳಲು ಆಗದಿರಬಹುದು. ಆದರೆ ಶ್ರುತಿಪ್ರಮಾಣದಿಂದ ಅನ್ವಯವ್ಯತಿರೇಕವನ್ನು ಹೇಳಲು ಏನು ತೊಂದರೆ? ಏಕೆಂದರೆ ಶ್ರುತಿಯಲ್ಲಿ ಸ್ಪಷ್ಟವಾಗಿ 'ಮುಖ್ಯವಾಯು ಇದ್ದರೆ ಮಾತ್ರ ಜೀವನ, ಮುಖ್ಯವಾಯುವಿಲ್ಲದಿದ್ದರೆ ಮರಣ' ಎಂಬ ಅನ್ವಯವ್ಯತಿರೇಕವು ಕಾಣಿಸುತ್ತಿದೆ ಎಂಬ ಪರಿಹಾರವನ್ನು 'ಉಚ್ಯತೇ' ಇತ್ಯಾದಿ ಗ್ರಂಥದಿಂದ ಹೇಳುತ್ತಿದ್ದಾರೆ.

ಪ್ರಾಣಶಬ್ದಪ್ರವೃತ್ತಿನಿಮಿತ್ತ' ಇತ್ಯಾದಿ ಟೀಕೆಯನ್ನು ಈ ವಾಕ್ಯದಿಂದಲೇ ವ್ಯಾಖ್ಯಾನಿಸಿದ್ದಾರೆ. ಟೀಕೆಯಲ್ಲಿ ಉದಾಹರಿಸಿದ ಸ್ಮೃತಿವಾಕ್ಯವು ಉಪಲಕ್ಷಣವೆಂದು ಗ್ರಂಥಕಾರರು ಇಲ್ಲಿ ಉದಾಹರಿಸಿದ ಶ್ರುತಿಯಿಂದ ತಿಳಿಯುತ್ತದೆ. ಅಂದರೆ ಟೀಕೆಯಲ್ಲಿ 'ಯತ್ಪ್ರಾಪ್ತಿಃ' ಎಂಬ ಸ್ಮೃತಿಯ ಜೊತೆಗೆ 'ತತ್ಪ್ರಾಣೇ' ಎಂಬ ಶ್ರುತಿಯನ್ನೂ ಪ್ರಮಾಣವನ್ನಾಗಿ ವಿವಕ್ಷಿಸಬೇಕು. ಗ್ರಂಥದಲ್ಲಿರುವ ಆದಿಪದದಿಂದ ಟೀಕೆಯಲ್ಲಿ ಉದಾಹರಿಸಿದ ಸ್ಮೃತಿಯನ್ನು ಇಟ್ಟುಕೊಳ್ಳಬೇಕು. ಅಂದರೆ 'ತತ್ಪ್ರಾಣೇ' ಎಂಬ ಶ್ರುತಿಯ ಜೊತೆಗೆ ಟೀಕೆಯಲ್ಲಿ ಹೇಳಿದ 'ಯತ್ಪ್ರಾಪ್ತಿಃ' ಎಂಬ ಸ್ಮೃತಿವಾಕ್ಯವನ್ನು ಜೋಡಿಸಿಕೊಳ್ಳಬೇಕು.

ಶಂಕೆ - 'ತತ್ಪ್ರಾಣೇ' ಎಂಬ ಶ್ರುತಿವಾಕ್ಯವು ವಿಷ್ಣುಪರವಾಗಿರುವುದರಿಂದ ಮುಖ್ಯವಾಯುವನ್ನು ಹೇಳುವುದಿಲ್ಲ. ಈ ಶ್ರುತಿಯ ಆಧಾರದಿಂದ ಜೀವನಹೇತುತ್ವವನ್ನು ಮುಖ್ಯವಾಯುವಿನಲ್ಲಿ ಹೇಗೆ ತಿಳಿಯುತ್ತೀರಿ? ಎಂಬ ಆಕ್ಷೇಪವನ್ನು 'ನಚ' ಇತ್ಯಾದಿ ವಾಕ್ಯದಿಂದ ಮಾಡಿದ್ದಾರೆ. ಅಂತಿಮಪ್ರಾಣಾಧಿಕರಣದಲ್ಲಿ 'ತಾ ವಾ ಏತಾಃ ಶೀರ್ಷನ್ ಶ್ರಿಯಃಶ್ರಿತಾಃ' ಎಂಬುದರಿಂದ ಪ್ರಾರಂಭಿಸಿ ಅನೇಕಸ್ಥಳಗಳಲ್ಲಿ

ಕೇಳಿಸಲ್ಪಡುವ ಪ್ರಾಣಶಬ್ದವು ವಿಷ್ಣುವನ್ನು ಹೇಳುತ್ತದೋ? ಅಥವಾ ಬೇರೆಯವರನ್ನು ಹೇಳುತ್ತದೋ? ಎಂಬ ಸಂಶಯ ಬಂದರೆ ಪ್ರಾಣಸಂವಾದವೇ ಮೊದಲಾದ ಲಿಂಗಗಳಿರುವುದರಿಂದ ಮುಖ್ಯಪ್ರಾಣ, ಇಂದ್ರ, ಅಥವಾ ಜೀವಾದಿಗಳೇ ಪ್ರಾಣರಾಗುತ್ತಾರೆಂದು ಪೂರ್ವಪಕ್ಷ ಮಾಡಿದ್ದಾರೆ. 'ತಂ ದೇವಾಃ ಪ್ರಾಣಯಂತ' ಇತ್ಯಾದಿಶ್ರುತಿಗಳ ಆಧಾರದಿಂದ ದೇವೋಪದೇಶ್ಯತ್ವಾದಿಲಿಂಗಗಳು ಕೇವಲ ವಿಷ್ಣುವಿನ ಲಿಂಗಗಳಾಗಿವೆ ಎಂದು ತಿಳಿಯುತ್ತದೆ. ಅವುಗಳನ್ನು ಈ ಪ್ರಕರಣದಲ್ಲಿಯೂ ಅನುವೃತ್ತಿ ಮಾಡಿಕೊಳ್ಳಬೇಕು. ಆವಾಗ ಎಲ್ಲಾ ಸ್ಥಳಗಳಲ್ಲಿರುವ ಪ್ರಾಣಶಬ್ದಗಳಿಂದ ವಿಷ್ಣುವೇ ವಾಚ್ಯನಾಗುತ್ತಾನೆ. ಮತ್ತು ಬೇರೆಯಲ್ಲಿರುವ ಧರ್ಮಗಳನ್ನು ಅಂತರ್ಯಾಮಿಯಾದ ವಿಷ್ಣುವಿನಲ್ಲಿ ಸುಲಭವಾಗಿ ಸಮರ್ಥಿಸಬಹುದು ಎಂಬುದು ಮುಂದಿನ ಅಂತಿಮಪ್ರಾಣಾಧಿಕರಣದಲ್ಲಿ ಹೇಳುವ ನ್ಯಾಯ. ಈ ನ್ಯಾಯದಿಂದ 'ತತ್ಪ್ರಾಣೇ' ಎಂಬ ಶ್ರುತಿಯಲ್ಲಿ ವಿಷ್ಣುವೇ ವಾಚ್ಯನೆಂದು ತಿಳಿಯುತ್ತದೆ. ಆದ್ದರಿಂದ ಪ್ರಕೃತದಲ್ಲಿ 'ತತ್ಪ್ರಾಣೇ' ಎಂಬ ಶ್ರುತಿಯನ್ನು ಮುಖ್ಯಪ್ರಾಣನಲ್ಲಿ ಹೇಳುವುದು ತಪ್ಪಲ್ಲವೇ?

ಸಮಾಧಾನ - ಪ್ರಾಣಾಧಿಕರಣವನ್ನು ಉಪಜೀವಿಸಿ ಅಂತಿಮಪ್ರಾಣಾಧಿಕರಣದ ಸಿದ್ಧಾಂತವು ಸ್ಥಾಪಿತವಾಗಿದೆ. ಹೀಗಿರುವಾಗ ಪ್ರಾಣಾಧಿಕರಣದ ಪೂರ್ವಪಕ್ಷದ ದಶೆಯಲ್ಲಿ ಅಂತಿಮಪ್ರಾಣಾಧಿಕರಣದ ಸಿದ್ಧಾಂತದ ನ್ಯಾಯವನ್ನು ಅವಲಂಬಿಸುವುದು ತಪ್ಪು. ಆದ್ದರಿಂದ 'ತತ್ಪ್ರಾಣೇ' ಎಂಬ ಶ್ರುತಿಯು ವಿಷ್ಣುಪರವೆಂದು ಇಲ್ಲಿಯ ತನಕ ನಿರ್ಣಯವಾಗಿಲ್ಲವೆಂದೇ ತಿಳಿಯಬೇಕು. ಈ ಸಮಾಧಾನವನ್ನು 'ಅತ್ರಕ್ಯ' ಎಂಬ ವಾಕ್ಯವು ಹೇಳಿದೆ. ಈ ವಿಷಯವನ್ನು ಪೂರ್ವಮೀಮಾಂಸೆಯೂ ಸಮ್ಮತಿಸಿದೆ.

ಸ್ವರ್ಗಕಾಮಾಧಿಕರಣದಲ್ಲಿ ಹೀಗೆ ವಿಚಾರ ಮಾಡಿದ್ದಾರೆ - 'ವಿಶ್ವಜಿದಾ ಯಜೇತ' ಎಂಬ ವಾಕ್ಯದಲ್ಲಿ ಯಾಗದ ಫಲವನ್ನು ಹೇಳಿಲ್ಲ. ಆದ್ದರಿಂದ ವಾಕ್ಯಕ್ಕೆ ಅಪ್ರಾಮಾಣ್ಯಬರುತ್ತದೆಂದು ಪೂರ್ವಪಕ್ಷ. ಅಧ್ಯಾಹಾರದಿಂದ ಫಲಾನ್ವಯವನ್ನು ಮಾಡಬೇಕೆಂದು ಸಿದ್ಧಾಂತ. ಸ್ವರ್ಗಕಾಮಾಧಿಕರಣದಲ್ಲಿ ಹೇಳಿದ ಈ ಸಿದ್ಧಾಂತನ್ಯಾಯವನ್ನು ಅವಲಂಬಿಸಿ ಭಾವಾರ್ಥಾಧಿಕರಣವು ಹೊರಟಿದೆ. ಭಾವಾರ್ಥಾಧಿಕರಣದಲ್ಲಿ ಫಲವೆಂದರೆ ಭಾವಾರ್ಥವಾದ ಸ್ವರ್ಗವೋ ಅಥವಾ ನಾಮಾರ್ಥವಾದ ಯಾಗವೋ? ಎಂದು ವಿಚಾರ ಮಾಡಿದ್ದಾರೆ. ಭಾವಾರ್ಥಾಧಿಕರಣದ ಸಿದ್ಧಾಂತವು ಸ್ವರ್ಗಕಾಮಾಧಿಕರಣದ ಪೂರ್ವಪಕ್ಷದ ಸಂದರ್ಭದಲ್ಲಿ ತಿಳಿದಿರುವುದಿಲ್ಲ. ಏಕೆಂದರೆ ಸ್ವರ್ಗಕಾಮಾಧಿಕರಣದ ಸಿದ್ಧಾಂತವನ್ನು ಅವಲಂಬಿಸಿ ಭಾವಾರ್ಥಾಧಿಕರಣವು ಹೊರಟಿರುತ್ತದೆ. ಪ್ರಕೃತ ನೀವು ಒಂದುವೇಳೆ ಅಂತಿಮಪ್ರಾಣಾಧಿಕರಣದ ಸಿದ್ಧಾಂತವನ್ನು ಪ್ರಾಣಾಧಿಕರಣದಲ್ಲಿ ಅವಲಂಬಿಸುವುದಾದರೆ ಭಾವಾರ್ಥಾಧಿಕರಣದ ಸಿದ್ಧಾಂತವನ್ನು ಅವಲಂಬಿಸಿ ಸ್ವರ್ಗಕಾಮಾಧಿಕರಣದ ಪೂರ್ವಪಕ್ಷವೇ ಹುಟ್ಟದಿರಬೇಕಾದೀತು?

ಮೂರನೆಯ ಪಾದದ ಆಕಾಶಾಧಿಕರಣದ ವಿಚಾರವನ್ನು ಈ ಹಿಂದೆಯೇ ವಿವರಿಸಿದ್ದೇವೆ.

ಆದ್ದರಿಂದ ಒಟ್ಟು ಯಾವ ಯಾವ ಶ್ರುತಿಯಲ್ಲಿ ಪ್ರಾಣಶಬ್ದವಿದೆಯೋ ಅವೆಲ್ಲವೂ ಸಹ ಮುಖ್ಯವಾಯುವನ್ನೇ ಹೇಳುತ್ತವೆಂದು ಈ ಅಧಿಕರಣದ ಪೂರ್ವಪಕ್ಷ. ಅಂತಿಮಪ್ರಾಣಾಧಿಕರಣದ ವಿಷಯವಾಕ್ಯದಲ್ಲಿ ಪ್ರಸಕ್ತವಾದ ಪ್ರಾಣಶಬ್ದವೂ ಸಹ ಆಕ್ಷೇಪಕ್ಕೆ ವಿಷಯವಾಗಿದೆ. ಹೀಗೆ ಒಪ್ಪಿರುವುದರಿಂದ ಅಂತಿಮಪ್ರಾಣಾಧಿಕರಣದಿಂದ ಪುನರುಕ್ತಿದೋಷ ಬರುವುದಿಲ್ಲ. ಇಲ್ಲದಿದ್ದರೆ 'ತತ್ಪ್ರಾಣೇ' ಎಂಬ ಶ್ರುತಿಯು

ವಿಷ್ಣುಪರವೆಂದು ಅಂತಿಮಪ್ರಾಣಾಧಿಕರಣದಲ್ಲಿ ನಿರ್ಣಯವಾಗಿದೆ. ಶ್ರುತಿಯಲ್ಲಿ ಹೇಳಲ್ಪಟ್ಟ ಜೀವನದ ಅನ್ವಯವ್ಯತಿರೇಕವೂ ಸಹ ವಿಷ್ಣುವಿನಲ್ಲೇ ಸಿದ್ಧವಾಗುತ್ತದೆಂದು ನಿರ್ಣಯವಾದ ಮೇಲೆ ಪುನಃ ಈ ಅಧಿಕರಣವು ವ್ಯರ್ಥವಾಗಬೇಕಾದೀತು. ಈ ವಿಷಯವನ್ನು ''ಏತದಭಾವ'' ಎಂಬ ಗ್ರಂಥವು ವಿವರಿಸಿದೆ.

ಜೀವನಹೇತುತ್ವದ ಅನ್ವಯವ್ಯತಿರೇಕವು ಮುಖ್ಯಪ್ರಾಣನಲ್ಲಿ ಇದೆಯೆನ್ನಲು ವಾಕ್ಯವೇ ಪ್ರಮಾಣವಾಗಿದೆ. ಆದ್ದರಿಂದಲೇ ಟೀಕೆಯಲ್ಲಿ ಸ್ಮೃತಿವಾಕ್ಯವನ್ನು ಉದಾಹರಿಸಿದ್ದಾರೆ. ಗ್ರಂಥಕಾರರು ತಾವು ಹೇಳಿದ ವಿಷಯವನ್ನು 'ಆತ ಏವ' ಎಂಬ ವಾಕ್ಯದಿಂದ ಟೀಕಾರೂಢ ಮಾಡುತ್ತಿದ್ದಾರೆ. ವಸ್ತುತಃ ಟೀಕೆಯಲ್ಲಿ ಸ್ಮೃತಿಯನ್ನು ಉದಾಹರಿಸಿರುವುದರಿಂದ ಗ್ರಂಥಕಾರರು ಅದನ್ನೇ ಉದಾಹರಿಸಬೇಕಿತ್ತು. ಆದರೆ ಅಂತಿಮಪ್ರಾಣಾಧಿಕರಣದಿಂದ ಗತಾರ್ಥತ್ವದೋಷವನ್ನು ಪರಿಹರಿಸುವುದಕ್ಕಾಗಿ ಶ್ರುತಿಯನ್ನು ಉಲ್ಲೇಖಿಸಿದ್ದಾರೆ. ಶ್ರುತಿಯ ಉಲ್ಲೇಖದಿಂದ ತಿಳಿಯುವ ಈ ಸೂಕ್ಷ್ಮಾಂಶವನ್ನು ಗಮನಿಸಬೇಕು.

**ಗುರುರಾಜೀಯಮ್ – ಅತ ಏವ ಟೀಕಾಯಾಮಿತಿ ॥ ಪ್ರತ್ಯಕ್ಷೇಣಾನ್ವಯವ್ಯತಿರೇಕಗ್ರಹಾಸಮ್ಭವೇಪಿ ಶ್ರುತ್ಯಾ ತತ್ಸಮ್ಭವಸ್ಯ ಟೀಕಾಕೃದಭಿಪ್ರೇತತ್ವಾದೇವೇತ್ಯರ್ಥಃ ।**

## ಸಾರ

ಜೀವನಹೇತುತ್ವವು ಪ್ರತ್ಯಕ್ಷಪ್ರಮಾಣದಿಂದ ಮುಖ್ಯಪ್ರಾಣನಲ್ಲಿ ಇದೆಯೆಂದು ತಿಳಿಯದಿರಬಹುದು. ಆದರೆ 'ತತ್ಪ್ರಾಣೇ' ಇತ್ಯಾದಿ ಶ್ರುತಿಸ್ಮೃತಿಗಳಿಂದ ತಿಳಿಯುತ್ತದೆ. ಆದ್ದರಿಂದ ಮುಖ್ಯವಾಯುವೇ ಪ್ರಾಣನಾಗುತ್ತಾನೆಂಬ ಪೂರ್ವಪಕ್ಷವು ಸಿದ್ಧವಾಗುತ್ತದೆ.

'ತತ್ಪ್ರಾಣೇ' ಎಂಬ ಶ್ರುತಿಯು ವಿಷ್ಣುಪರವೆಂದು ಅಂತಿಮಪ್ರಾಣಾಧಿಕರಣದಲ್ಲಿ ನಿರ್ಣಯಿಸಿದ್ದಾರೆ. ಆದರೆ ಇಲ್ಲಿ ಮಾಡಿದ ಸಿದ್ಧಾಂತವನ್ನು ಆವಲಂಬಿಸಿ ಅಂತಿಮಪ್ರಾಣಾಧಿಕರಣವು ಹೊರಟಿದೆ. ಹೀಗಿರುವಾಗ ಈ ಅಧಿಕರಣದ ಪೂರ್ವಪಕ್ಷದ ದೆಸೆಯಲ್ಲಿ ಅಂತಿಮಪ್ರಾಣಾಧಿಕರಣದ ಸಿದ್ಧಾಂತವು ಅಸಿದ್ಧವಾಗಿದೆ. ಪ್ರಥಮಪಾದದ ಆಕಾಶಾಧಿಕರಣಕ್ಕೆ ಮೂರನೆಯ ಪಾದದ ಆಕಾಶಾಧಿಕರಣದ ಸಿದ್ಧಾಂತವು ಹೇಗೆ ತಿಳಿದಿಲ್ಲವೋ ಆದರಂತೆ. ಮತ್ತು ಅಂತಿಮಪ್ರಾಣಾಧಿಕರಣದಿಂದ ಪುನರುಕ್ತದೋಷಕ್ಕೂ ಆಸ್ಪದವಿಲ್ಲ. ಈ ಅಧಿಕರಣದ ಸಿದ್ಧಾಂತವು ಸ್ಥಾಪಿತವಾದ ಮೇಲಷ್ಟೇ ಅಂತಿಮಪ್ರಾಣಾಧಿಕರಣದ ಪೂರ್ವಪಕ್ಷವು ಹೊರಡಲು ಸಾಧ್ಯ. ಈ ಪುನರುಕ್ತಿಯ ಪರಿಹಾರವನ್ನು ಸೂಚಿಸುವುದಕ್ಕಾಗಿಯೇ ಗ್ರಂಥಕಾರರು 'ತತ್ಪ್ರಾಣೇ' ಎಂಬ ಶ್ರುತಿಯನ್ನು ಉಲ್ಲೇಖಿಸಿದ್ದಾರೆ.

### ಮುಖ್ಯಪ್ರಾಣನ ಜೀವನಹೇತುತ್ವದಲ್ಲಿ ಪ್ರತ್ಯಕ್ಷಪ್ರಮಾಣ

**ತಾತ್ಪರ್ಯಚನ್ದ್ರಿಕಾ –**

**ಯದ್ವಾ – ಕುಲಾಲಶರೀರಸ್ಯ ಘಟಂ ಪ್ರತೀವ ಮುಖ್ಯಪ್ರಾಣಶರೀರಭೂತವಾಯೋರ್ಜೀವನಂ ಪ್ರತ್ಯನ್ವಯವ್ಯತಿರೇಕದರ್ಶನಮಾತ್ರೇಣ ತಸ್ಯ ತತ್ರ ಹೇತುತ್ವಮ್ । ಅತ ಏವೋಕ್ತಂ ಸುಧಾಯಾಮ್ – ''ವಾಯುವಿಕಾರಶರೀರತ್ವಾನ್ಮುಖ್ಯಸ್ಯ'' ಇತಿ । ಬ್ರಹ್ಮಣಸ್ತು ಸರ್ವಗತತ್ವಾದಶರೀರತ್ವಾಚ್ಚ ತಸ್ಯ ವಾ ತಚ್ಛರೀರಸ್ಯ**

**ವಾ ನಾಸ್ಮದಾದಿಶರೀರೇ ಅಭಾವ ಇತಿ, ನ ತದ್ವ್ಯತಿರೇಕಾಜ್ಜೀವನವ್ಯತಿರೇಕಃ । ಯದ್ಯಪಿ ''ಅನ್ತರ್ಯಾಮೀ'' ಇತ್ಯತ್ರೇಶಸ್ಯ ಗೌಣಂ ಯೌಗಿಕಂ ವಾ ಶರೀರಮಸ್ತೀತಿ ವಕ್ಷ್ಯತೇ, ತಥಾಽಪಿ ನ ಜೀವನವ್ಯತಿರೇಕಸ್ಯ ಗೌಣಾದಿಶರೀರವ್ಯತಿರೇಕಾನುವಿಧಾನೇನ ತತ್ಕಾರ್ಯತ್ವಮತಿಪ್ರಸಙ್ಗಾತ್ । ಭೂಮಾಧಿಕರಣೇ ತು ಸರ್ವಗತಸ್ಯಾಪಿ ಈಶಸ್ಯ ಅಸ್ಮದಾದಿಶರೀರಾದುತ್ಕ್ರಮಣಮಸ್ತೀತಿ ಚ ವಕ್ಷ್ಯತೇ, ನತು ತತ್ರಾಭಾವಃ । ತಸ್ಮಾನ್ನ ವಿಷ್ಣೋರ್ಜೀವನಾದಿಹೇತುತ್ವಂ ಅನ್ವಯವ್ಯತಿರೇಕಕಲ್ಪ್ಯಮ್ । ನಾಪಿ ಶ್ರುತಿಸಿದ್ಧಮ್, ಅನ್ವಯವ್ಯತಿರೇಕಾನುಸಾರೇಣ ''ಯೇನ ಜಾತಾನಿ ಜೀವನ್ತಿ'' ಇತ್ಯಾದೇರ್ಮುಖ್ಯಪ್ರಾಣವಿಷಯತ್ವಾತ್ । ''ಇತರೇಣ ತು ಜೀವನ್ತಿ'' ಇತ್ಯಾದಾವಿತರಶಬ್ದಸ್ತು ವಾಯುವೃತ್ತಿರೂಪಪ್ರಸಿದ್ಧಪ್ರಾಣೇತರತ್ವವಿವಕ್ಷಯಾ ಮುಖ್ಯಪ್ರಾಣೇಽಪಿ ಯುಕ್ತಃ ।**

ಅನುವಾದ - ಅಥವಾ ಜೀವನಹೇತುತ್ವವು ಮುಖ್ಯವಾಯುವಿನ ಅಧೀನವಾಗಿದೆ ಎಂದು ಪ್ರತ್ಯಕ್ಷದಿಂದಲೇ ಸಿದ್ಧವಾಗಿದೆ. ಅದು ಹೀಗೆ -- ''ಕುಲಾಲಶರೀರವಿದ್ದರೆ ಘಟವು ಹುಟ್ಟುತ್ತದೆ. ಕುಲಾಲನ ಶರೀರವಿಲ್ಲದಿದ್ದರೆ ಘಟವು ಹುಟ್ಟುವುದಿಲ್ಲ. ಹೀಗೆ ಕುಲಾಲಶರೀರದ ಅನ್ವಯವ್ಯತಿರೇಕದಿಂದ ಘಟಕ್ಕೆ ಕುಲಾಲನು ಕಾರಣವೆಂದು ಸಿದ್ಧವಾಗುತ್ತದೆ. ಇದರಂತೆ ಮುಖ್ಯಪ್ರಾಣನ ಶರೀರವೆನಿಸಿದ ಜಡವಾಯು ಇದ್ದರೆ ಮಾತ್ರ ಜೀವನ ನಡೆಯುತ್ತದೆ. ಅದಿಲ್ಲದಿದ್ದರೆ ಜೀವನವು ನಡೆಯುವುದಿಲ್ಲ ಎಂದು ಮುಖ್ಯಪ್ರಾಣನ ಶರೀರವಾದ ಜಡವಾಯುವಿನ ಜೊತೆಗೆ ಅನ್ವಯವ್ಯತಿರೇಕವಿರುವುದರಿಂದ ಮುಖ್ಯಪ್ರಾಣನು ಜೀವನಕ್ಕೆ ಕಾರಣವೆಂದು ಸಿದ್ಧವಾಗುತ್ತದೆ. ಈ ಅನ್ವಯವ್ಯತಿರೇಕದಿಂದ ಜೀವನಹೇತುತ್ವವಿಷಯದಲ್ಲಿ ಪ್ರತ್ಯಕ್ಷಪ್ರಮಾಣವನ್ನು ಹೇಳಿದಂತಾಗುತ್ತದೆ. ಆದ್ದರಿಂದಲೇ ಶ್ರುತಿಯಲ್ಲಿ ಈ ಮಾತಿದೆ. 'ವಾಯುವಿಕಾರಶರೀರತ್ವಾತ್ ಮುಖ್ಯಸ್ಯ' (ವಿಕಾರಭೂತವಾದ ಜಡವಾಯುವು ಮುಖ್ಯಪ್ರಾಣನ ಶರೀರವಾದ್ದರಿಂದ) ಎಂದು. ಈ ಅನ್ವಯವ್ಯತಿರೇಕವನ್ನು ಮುಖ್ಯಪ್ರಾಣನಲ್ಲಷ್ಟೇ ಹೇಳಬಹುದು. ವಿಷ್ಣುವಿನಲ್ಲಿ ಹೇಳಲಾಗದು. ಏಕೆಂದರೆ ವಿಷ್ಣುವು ಸರ್ವಗತನಾಗಿದ್ದಾನೆ ಮತ್ತು ಅಶರೀರಿಯಾಗಿದ್ದಾನೆ. ಆದಕಾರಣ ವಿಷ್ಣುವಿನ ಶರೀರವಾಗಲಿ ಅಥವಾ ವಿಷ್ಣುವಾಗಲೀ ನಮ್ಮ ಶರೀರದಲ್ಲಿ ಇಲ್ಲವೆಂದು ಹೇಳಲು ಸಾಧ್ಯವಿಲ್ಲ. ವಿಷ್ಣುವಿನ ಅಭಾವದಿಂದ ಜೀವನ ಅಭಾವವೆಂಬ ವ್ಯತಿರೇಕವ್ಯಾಪ್ತಿಯನ್ನು ಹೇಳಲು ಬರುವುದಿಲ್ಲ.

ವಸ್ತುತಸ್ತು, ಅಂತರ್ಯಾಮ್ಯಧಿಕರಣದಲ್ಲಿ ಗೌಣವಾದ ಶರೀರವನ್ನು ಅಥವಾ ಯೌಗಿಕವಾದ ಶರೀರವನ್ನು ವಿಷ್ಣುವಿಗೆ ಹೇಳಿದ್ದಾರೆ. ಆದ್ದರಿಂದ ವ್ಯತಿರೇಕವ್ಯಾಪ್ತಿಯನ್ನು ಹೇಳಬಹುದೆನ್ನಿಸುತ್ತದೆ. ಆದರೆ ಗೌಣಾದಿಶರೀರಗಳ ವ್ಯತಿರೇಕಗಳ ಜೀವನದ ವ್ಯತಿರೇಕಾಭಾವವನ್ನು ಹೇಳುವುದರಿಂದ ಜೀವನ ಹೇತುತ್ವವನ್ನು ವಿಷ್ಣುವಿನಲ್ಲಿ ಸಮರ್ಥಿಸಲಾಗದು. ಹಾಗಾದಲ್ಲಿ ಅತಿಪ್ರಸಂಗ ಬರುತ್ತದೆ. ಭೂಮಾಧಿಕರಣದಲ್ಲಿ ಸರ್ವಗತನಾಗಿದ್ದರೂ ಸಹ ವಿಷ್ಣುವಿಗೆ ನಮ್ಮ ಶರೀರದಿಂದ ಉತ್ಕ್ರಮಣವನ್ನು

ಹೇಳಿದ್ದಾರೆ. ಆದರೆ ನಮ್ಮ ಶರೀರದಲ್ಲಿ ವಿಷ್ಣುವಿನ ಅಭಾವವನ್ನು ಹೇಳಿಲ್ಲ. ಆದ್ದರಿಂದ ಜೀವನಾದಿಹೇತುತ್ವವು ಅನ್ವಯವ್ಯತಿರೇಕದಿಂದ ವಿಷ್ಣುವಿನಲ್ಲಿ ಸಿದ್ಧವಾಗುವುದಿಲ್ಲ. ಶ್ರುತಿಯಿಂದಲೂ ಸಹ ಸಿದ್ಧವಾಗುವುದಿಲ್ಲ. ಏಕೆಂದರೆ ಅನ್ವಯವ್ಯತಿರೇಕಪ್ರಮಾಣದಂತೆ 'ಯೇನ ಜಾತಾನಿ ಜೀವಂತಿ' ಇತ್ಯಾದಿಶ್ರುತಿಗಳು ಮುಖ್ಯಪ್ರಾಣವಿಷಯಕವೇ ಆಗಿವೆ. ಅಷ್ಟೇ ಅಲ್ಲದೆ 'ಇತರೇಣ ತು ಜೀವಂತಿ' ಎಂಬ ಸ್ಮೃತಿಯಲ್ಲಿರುವ ಇತರಶಬ್ದವು ಪ್ರಸಿದ್ಧಪ್ರಾಣನನ್ನು ಬಿಟ್ಟು ಅಮುಖ್ಯಜಡವಾಯುವನ್ನು ಹೇಳುತ್ತದೆ. ಹಾಗಾಗಿ ಮುಖ್ಯಪ್ರಾಣನು ಜೀವನಕಾರಣನಾಗಲು ಯಾವುದೇ ಬಾಧಕವಿಲ್ಲ.

ಕಠಿಣಪದಾರ್ಥ

ವಾಯೋಃ = ಜಡವಾಯುವಿಗೆ, ತಸ್ಯ = ಮುಖ್ಯಪ್ರಾಣನಿಗೆ, ತತ್ರ = ಜೀವನದಲ್ಲಿ, ಅತ ಏವ = ಶರೀರಕ್ಕೆ ಅನ್ವಯವ್ಯತಿರೇಕವು ಇರುವುದರಿಂದ ಶರೀರಿಗೆ ಕಾರಣತ್ವವು ಸಿದ್ಧವಾಗುತ್ತದೆಂದು ಹೇಳಿದ್ದರಿಂದಲೇ, ವಾಯುವಿಕಾರಶರೀರತ್ವಾತ್ = ಜಡವಾಯುವು ಶರೀರವಾದ್ದರಿಂದ, ತಸ್ಯ ವಾ = ಬ್ರಹ್ಮನಾಗಲೀ, ತಚ್ಛರೀರಸ್ಯ ವಾ = ಬ್ರಹ್ಮನ ಶರೀರವಾಗಲೀ, ತದ್ವ್ಯತಿರೇಕಾತ್ = ಬ್ರಹ್ಮನ ಇಲ್ಲದಿರುವಿಕೆಯಿಂದ, ನ ಅನ್ವಯವ್ಯತಿರೇಕಕಲ್ಪ್ಯಮ್ = ಪ್ರತ್ಯಕ್ಷ ಅಥವಾ ಆಗಮದಿಂದ ಸಿದ್ಧವಾದ ಅನ್ವಯವ್ಯತಿರೇಕಗಳಿಂದ ವಿಷ್ಣುವು ಕಲ್ಪ್ಯನಾಗುವುದಿಲ್ಲ.

**ಪ್ರಕಾಶಃ –** ಏವಂ 'ಟೀಕಾನುರೋಧೇನ ಜೀವನಹೇತುತ್ವಾದೇರ್ಮುಖ್ಯಾಧೀನತ್ವಂ ವಾಕ್ಯಸಿದ್ಧಮ್' ಇತ್ಯುಕ್ತ್ವಾ, ಇದಾನೀಂ ಸುಧಾನುಸಾರೇಣ ಪ್ರತ್ಯಕ್ಷೇಣೈವ ಸಿದ್ಧಮಿತ್ಯಾಹ – **ಯದ್ವೇತಿ ॥** 'ಯಥಾ ಘಟಂ ಪ್ರತಿ ಕುಲಾಲಶರೀರಸ್ಯ ಅನ್ವಯವ್ಯತಿರೇಕದರ್ಶನಮಾತ್ರೇಣ ಕುಲಾಲಾತ್ಮನೋ ಹೇತುತ್ವಂ ಗಮ್ಯತೇ, ತಥಾ' ಇತ್ಯರ್ಥಃ। **ವಾಯೋರಿತಿ ॥** ಜಡಭೂತಸ್ಯೇತ್ಯರ್ಥಃ । **'ತಸ್ಯ'** ಮುಖ್ಯಪ್ರಾಣಸ್ಯ । **'ತತ್ರ'** ಜೀವನೇ ॥ **ಅತ ಏವೇತಿ ॥** ಶರೀರಾನ್ವಯವ್ಯತಿರೇಕದರ್ಶನಮಾತ್ರೇಣ ತಚ್ಛರೀರಿಣೋ ಹೇತುತ್ವಾವಗಮಾದೇವೇತ್ಯರ್ಥಃ । ಏತೇನ ಟೀಕಾಯಾಮಪಿ 'ದರ್ಶನಾತ್' ಇತ್ಯಸ್ಯ 'ಪ್ರತ್ಯಕ್ಷೇಣ ದರ್ಶನಾತ್' ಇತ್ಯರ್ಥಃ । ಸ್ಮೃತ್ಯುಕ್ತಿಶ್ಚಾಭ್ಯುಚ್ಚಯತ್ವೇನೇತ್ಯಪಿ ಸೂಚಿತಮ್ ।

ನನು ಬ್ರಹ್ಮಣೋऽಪ್ಯೇವಂ ಕಿಂ ನ ಸ್ಯಾತ್? ಇತ್ಯತಃ ''**ವಾಯಾವೇವ ದರ್ಶನಾತ್**'' ಇತಿ ಟೀಕಾಸ್ಥಾವಧಾರಣವ್ಯಾವರ್ತ್ಯಂ ವಿವೃಣ್ವನ್, ತತ್ಕಿಂ ಪ್ರತ್ಯಕ್ಷಾದಿಸಿದ್ಧಾಭ್ಯಾಮನ್ವಯವ್ಯತಿರೇಕಾಭ್ಯಾಂ ಜೀವನಹೇತುತ್ವಂ ವಿಷ್ಣೋರುಚ್ಯತೇ ಅಥ ಶ್ರುತ್ಯಾ ಇತಿ ವಿಕಲ್ಪೌ ಹೃದಿ ನಿಧಾಯಾಹ ಆಹ – **ಬ್ರಹ್ಮಣಸ್ತ್ವಿತಿ ॥ ಸರ್ವಗತತ್ವಾದಿತಿ ॥** ''ಸ ಏವಾಧಸ್ತಾತ್ಸ ಉವೋಪರಿಷ್ಟಾತ್'' ''ಸರ್ವಗತಂ ಸುಸೂಕ್ಷ್ಮಂ'' ''ಅಶರೀರಃ ಪ್ರಜ್ಞಾತ್ಮಾ'' ಇತ್ಯಾದೇರಿತಿ ಭಾವಃ ॥ **ಅಭಾವ ಇತಿ ॥**

ನನ್ವಕ್ಷರಾಧಿಕರಣೇ ಅಣುತ್ವಸ್ಯಾಪಿ ವಕ್ಷ್ಯಮಾಣತ್ವಾತ್ ತದ್ವ್ಯತಿರೇಕೋऽಪಿ ಸಮ್ಭವತೀತಿ ಚೇನ್ನ, ಸರ್ವಗತತ್ವಾಸಮಾನಾಧಿಕರಣಾಣುತ್ವಸ್ಯೈವ ವ್ಯತಿರೇಕೇ ಪ್ರಯೋಜಕತ್ವಾದಿತ್ಯಾಶಯಾತ್ ।

नन्वन्तर्याम्यधिकरणे ''यस्य पृथिवी शरीरम्'' इत्यादिना सशरीरत्वं वक्ष्यते । तत्कथमशरीरत्वम्' इत्याशङ्क्य, निरस्यति – **यद्यपीति ॥**

नन्वथाऽपि ''**भूमा सम्प्रसादात्**'' इत्यत्र – ''**उत्क्रान्तप्राणान् शूलेन समासं व्यतिषं दहेत्**'' इत्युत्क्रमणलिङ्गात् प्राणो वायुः – इति प्राप्ते, '**पूर्णसुखत्वलिङ्गात् उत्क्रमणस्य च रूपविशेषेण विष्णावपि सम्भवाद्विष्णुरेव प्राणः**' इत्युक्तन्यायेन विष्णोरप्यभावो युक्त इत्यत आह – **भूमेति ॥** यथा शरीरस्थस्यैव चक्षुषो ध्रुवादिमण्डलपर्यन्तं निर्गमनं, तथा विष्णोरपि विचित्रशक्तिवशाद्रूपविशेषादिना देहे सत एव महत्त्वस्य शक्त्याऽणुत्वस्य व्यक्त्या उत्क्रमणोपपत्तेरिति भावः । **अन्वयेति ॥** प्रत्यक्षेण वा आगमेन वा सिद्धाभ्यामन्वयव्यतिरेकाभ्यां कल्प्यं न भवतीत्यर्थः ।

यद्यप्यत्र विष्णोर्व्यतिरेकमुपेत्यापि किमन्वयव्यतिरेकौ प्रत्यक्षगम्यौ उतागम-गम्यौ? आद्येऽपि किं साक्षादुत शरीरद्वारा? नाद्यः, अयोग्यत्वात् । न द्वितीयः, अशरीरत्वात् । नान्त्यः, ''तत्प्राणे प्रपन्ने'' इत्यादेरिव तद्बोधकागमस्याभावात् । भावे वा तस्य वायुपरत्वादित्यपि वक्तुं शक्यं भाति । तथाऽप्यस्य स्पष्टत्वादन्वय-व्यतिरेकासिद्धत्वेऽपि श्रुत्या जीवनहेतुत्वं सिध्यतीत्यस्यावश्यापाकर्तव्यत्वाद् वास्तवाभिप्रायेण व्यतिरेकाभावेनैवान्वयव्यतिरेकाकल्प्यत्वमुक्तम् । एतेन '**प्राणादि-हेतुता दृष्टेः**' इत्यत्र प्राणादिहेतुतायाः परमात्मन्यन्वयव्यतिरेकतः 'अदृष्टेरदर्शनात्' इत्यनुव्याख्यानयोजना, सुधोक्ता 'व्यतिरेकायोगेनोपपादनीया' इति स्पष्टीकृता । एवं – '**अदृष्टेरागमेनाप्यदर्शनात्**' इत्यर्थान्तरमप्यभिप्रेत्य द्वितीयपक्षमपि निषेधति – **नापीति ॥ मुख्यप्राणेति ॥** अन्यथा श्रुत्या प्रत्यक्षेण चोक्तान्वयव्यतिरेकानुप-पत्तेरिति भावः । ननु च–

**न प्राणेन नापानेन मर्त्यो जीवति कश्चन ।**
**इतरेण तु जीवन्ति यस्मिन्नेतावुपाश्रितौ ॥**

इत्यत्र प्राणस्य जीवनहेतुत्वनिरासपूर्वं विष्णोरेव तदुक्तेस्तद्विरोध इत्यतः, प्राणापानशब्दयोः जडवायुपरत्वेनेतरशब्देन तद्भिन्नचेतनस्य वायोरेव ग्रहणादित्याह – **इतरेण त्विति ॥**

ವಿವರಣೆ - ಇಲ್ಲಿಯ ತನಕ ಜೀವನಹೇತುತ್ವವು ಮುಖ್ಯಪ್ರಾಣನ ಅಧೀನವಾಗಿದೆ ಎಂಬ ವಿಷಯದಲ್ಲಿ ಶ್ರುತಿಪ್ರಮಾಣವನ್ನು ಟೀಕೆಯಪ್ರಕಾರ ಹೇಳಿದ್ದಾಯಿತು. ಪ್ರಕೃತ ಪ್ರತ್ಯಕ್ಷಪ್ರಮಾಣವನ್ನು ಸುಧೆಯ ಪ್ರಕಾರ ಹೇಳುತ್ತಿದ್ದಾರೆ. ಕುಲಾಲನ ಶರೀರದಿಂದಷ್ಟೇ ಅನ್ವಯವ್ಯತಿರೇಕವು ಘಟಕ್ಕೆ ಕಂಡಿದೆ. ಆದರೂ ಸಹ ಕುಲಾಲನೆಂಬ ಜೀವನು ಘಟಕ್ಕೆ ಕಾರಣನೆಂದು ನಾವು ತಿಳಿಯುತ್ತೇವೆ. ಆದರಂತೆ ಮುಖ್ಯಪ್ರಾಣನಿಗೆ ಜಡವಾಯುವು ಶರೀರವಾಗಿದೆ. ಜಡವಾಯುವಿನಿಂದ ಅನ್ವಯವ್ಯತಿರೇಕವು ಜೀವನದಲ್ಲಿ ಕಂಡಿದೆ. ಇದರಿಂದ ಜಡವಾಯುಶರೀರದೊಳಗಿರುವ ಮುಖ್ಯಪ್ರಾಣನು ಜೀವನಕಾರಣನೆಂದು ನಾವು ತಿಳಿಯಬಹುದು. ಈ ಪ್ರತ್ಯಕ್ಷಪ್ರಮಾಣವನ್ನು ಟೀಕೆಯು ಕೂಡ ಸುಧೆಯಂತೆ 'ದರ್ಶನಾತ್' ಎಂಬ ಪದದಿಂದ ಸೂಚಿಸಿದೆ. ದರ್ಶನಾತ್ ಎಂದರೆ ಪ್ರತ್ಯಕ್ಷಪ್ರಮಾಣಸಿದ್ಧವಾದ್ದರಿಂದ ಎಂದರ್ಥ.

ಇದೇ ಅನ್ವಯವ್ಯತಿರೇಕದಿಂದ ಬ್ರಹ್ಮನಲ್ಲಿಯೂ ಕೂಡ ಜೀವನಹೇತುತ್ವವನ್ನು ಹೇಳಬಹುದಲ್ಲವೇ? ಎಂಬ ಪ್ರಶ್ನೆಗೆ ಅವಕಾಶವಿಲ್ಲ. ಏಕೆಂದರೆ ಪ್ರತ್ಯಕ್ಷಸಿದ್ಧವಾದ ಅನ್ವಯವ್ಯತಿರೇಕದಿಂದ ವಿಷ್ಣುವಿನಲ್ಲಿ ಜೀವನಹೇತುತ್ವವನ್ನು ಹೇಳುತ್ತಿದ್ದೀರೋ ಅಥವಾ ಶ್ರುತಿಸಿದ್ಧವಾದ ಅನ್ವಯವ್ಯತಿರೇಕದಿಂದ ವಿಷ್ಣುವಿನಲ್ಲಿ ಜೀವನಹೇತುತ್ವವನ್ನು ಹೇಳುತ್ತಿದ್ದೀರೋ? ಎಂದು ವಿಕಲ್ಪಿಸಿ ಮೊದಲನೆಯ ಪಕ್ಷವನ್ನು 'ಬ್ರಹ್ಮಣಸ್ತು' ಎಂಬ ವಾಕ್ಯದಿಂದ ನಿರಾಕರಿಸಿದ್ದಾರೆ. ಮತ್ತು 'ವಾಯಾವೇವ ದರ್ಶನಾತ್' ಎಂಬ ಟೀಕೆಯಲ್ಲಿರುವ ಅವಧಾರಣದಿಂದ ವ್ಯಾವರ್ತ್ಯವಾದದ್ದನ್ನು ವಿವರಿಸುತ್ತಿದ್ದಾರೆ. 'ಸ ಏವ ಅಧಸ್ತಾತ್, ಸ ಏವ ಉಪರಿಷ್ಟಾತ್' 'ಸರ್ವಗತಂ ಸುಸೂಕ್ಷ್ಮಮ್' ಇತ್ಯಾದಿ ಶ್ರುತಿಗಳು ವಿಷ್ಣುವನ್ನು ಸರ್ವಗತವೆನ್ನುತ್ತಿವೆ. 'ಅಶರೀರಃ ಪ್ರಜ್ಞಾತ್ಮಾ' ಇತ್ಯಾದಿ ಶ್ರುತಿಗಳು ವಿಷ್ಣುವಿಗೆ ಶರೀರವಿಲ್ಲವೆನ್ನುತ್ತಿವೆ.

ಶಂಕೆ - ಅಕ್ಷರಾಧಿಕರಣದಲ್ಲಿ ವಿಷ್ಣುವು ಅಣುವಾಗಿದ್ದಾನೆಂದು ಹೇಳುತ್ತಾರೆ. ಅಣುವಾದ ವಿಷ್ಣುವಿನಲ್ಲಿ ವ್ಯತಿರೇಕವನ್ನು ಹೇಳುವುದು ಸುಲಭವಲ್ಲವೇ?

ಸಮಾಧಾನ - ಅಕ್ಷರಾಧಿಕರಣದಲ್ಲಿ ವಿಷ್ಣುವಿನಲ್ಲಿ ಅಣುತ್ವದ ಜೊತೆಗೆ ಮಹತ್ವವನ್ನೂ ಹೇಳಿದ್ದಾರೆ. ಸರ್ವಗತನಾಗಿಲ್ಲವೆಂದು ಹೇಳಿಲ್ಲ. ಸರ್ವಗತತ್ವದ ಜೊತೆಗೆ ಇಲ್ಲದ ಅಣುತ್ವವಷ್ಟೇ ವ್ಯತಿರೇಕವ್ಯಾಪ್ತಿಗೆ ಪ್ರಯೋಜಕ. ಆದ್ದರಿಂದ ಅಕ್ಷರಾಧಿಕರಣದಲ್ಲಿ ಹೇಳಿದ ಅಣುತ್ವದಿಂದ ವ್ಯತಿರೇಕವ್ಯಾಪ್ತಿಯನ್ನು ಸಮರ್ಥಿಸಲಾಗದು.

ಶಂಕೆ - ಅಂತರ್ಯಾಮ್ಯಧಿಕರಣದಲ್ಲಿ 'ಯಸ್ಯ ಪೃಥಿವೀ ಶರೀರಮ್' ಇತ್ಯಾದಿ ವಾಕ್ಯದಿಂದ ವಿಷ್ಣುವಿಗೆ ಶರೀರವನ್ನು ಹೇಳಿದ್ದಾರೆ. ನೀವು ಈಗ ಶರೀರವಿಲ್ಲವೆಂದು ಹೇಳುವುದು ತಪ್ಪಲ್ಲವೇ?

ಸಮಾಧಾನ - ಅಂತರ್ಯಾಮ್ಯಧಿಕರಣದಲ್ಲಿ ಕೇವಲ ಗೌಣವಾದ ಅಥವಾ ಯೌಗಿಕವಾದ ಶರೀರವನ್ನು ಹೇಳಿದ್ದಾರೆ ಹೊರತು ಮುಖ್ಯವಾದ ಶರೀರವನ್ನು ಹೇಳಿಲ್ಲ. ಗೌಣಶರೀರವನ್ನು ಇಟ್ಟುಕೊಂಡು ಕಾರ್ಯಕಾರಣಭಾವವನ್ನು ನಿಶ್ಚಯಿಸಲಾಗದು. ಹಾಗಾದಲ್ಲಿ ಅತಿಪ್ರಸಂಗ ಬರುತ್ತದೆ. ಗೃಹಾದಿಗಳೂ ಸಹ ದೇವದತ್ತನಿಗೆ ನಿಯಮ್ಯತ್ವೇನ ಅಥವಾ ಅಧಿಷ್ಠಾನತ್ವೇನ ಗೌಣಶರೀರವಾಗಿವೆ. ಆ ಮನೆಯು ಯಾವ ವಸ್ತುವಿನ ಜೊತೆಗೆ ಅವಿನಾಭಾವವಾಗಿದೆಯೋ ಆ ವಸ್ತುವು ದೇವದತ್ತನ ಕಾರ್ಯವಾಗಬೇಕಾದೀತು. ಇಷ್ಟು ಅಭಿಪ್ರಾಯ -- ಮುಖ್ಯಪ್ರಾಣನಿಗೂ ಕೂಡ ಜಡವಾಯುವು ಅಭಿಮನ್ಯಮಾನವಾದ್ದರಿಂದ

ಗೌಣಶರೀರವೇ ಆಗಿದೆ. ಗೌಣಶರೀರದ ಅನ್ವಯವ್ಯತಿರೇಕದಿಂದ ವಾಯುವಿನಲ್ಲಿ ಜೀವನ ಹೇತುತ್ವವನ್ನು ಹೇಳಿದಂತೆ ಪೃಥಿವ್ಯಾದಿರೂಪವಾದ ಗೌಣಶರೀರವು ವಿಷ್ಣುವಿಗೂ ಇರುವುದರಿಂದ ವಿಷ್ಣುವಿನಲ್ಲಿಯೂ ಜೀವನಾದಿಹೇತುತ್ವವನ್ನು ಹೇಳಬಹುದಲ್ಲವೇ? ಎಂಬ ಪ್ರಶ್ನೆಗೆ ಈಗ ಅವಕಾಶವಿಲ್ಲ. ಶರೀರಶಬ್ದಕ್ಕೆ ಮುಖ್ಯಶರೀರವೆಂದರ್ಥ. ಮುಖ್ಯಪ್ರಾಣನಿಗೆ ಜಡವಾಯುವು ಅಭಿಮನ್ಯಮಾನವಾದ ಮುಖ್ಯಶರೀರವೇ ಆಗಿದೆ. ಸುಖಾದಿಗಳೆಲ್ಲವೂ ಸಹ ಮುಖ್ಯಪ್ರಾಣನಿಗೆ ಆ ಜಡಶರೀರದಿಂದಲೇ ಆಗುತ್ತದೆ. ಆದರೆ ಗೌಣವಾದ ಪೃಥಿವ್ಯಾದಿಶರೀರಗಳಿಂದ ವಿಷ್ಣುವಿಗೆ ಸುಖಾದಿಗಳು ಉಂಟಾಗುವುದಿಲ್ಲ. ಬ್ರಹ್ಮನಿಗೆ ಜನ್ಯಸುಖವು ಪ್ರಮಾಣಬಾಧಿತವಾದ್ದರಿಂದ ಪೃಥಿವ್ಯಾದಿಗಳನ್ನು ಮುಖ್ಯಶರೀರವೆಂದು ಹೇಳಲಾಗದು.

ಶಂಕೆ - 'ಭೂಮಾ ಸಂಪ್ರಸಾದಾತ್' ಎಂಬ ಅಧಿಕರಣದಲ್ಲಿ ವಿಷ್ಣುವಿಗೂ ಕೂಡ ದೇಹದಿಂದ ಉತ್ಕ್ರಮಣವನ್ನು ಹೇಳಿದ್ದಾರೆ. 'ಉತ್ಕ್ರಾಂತಪ್ರಾಣಾನ್ ಶೂಲೇನ ಸಮಾಸಂ ವ್ಯತಿಷಂ ದಹೇತ್' ಎಂಬ ಶ್ರುತಿಯಲ್ಲಿ ಉತ್ಕ್ರಮಣಲಿಂಗವು ಕೇಳಿಸುತ್ತಿರುವುದರಿಂದ ಪ್ರಾಣಶಬ್ದದಿಂದ ವಾಯು ವಾಚ್ಯನಾಗುತ್ತಾನೆಂಬ ಪೂರ್ವಪಕ್ಷ ಬಂದರೆ ಪೂರ್ಣಸುಖತ್ವ ಎಂಬ ಲಿಂಗದಿಂದ ಉತ್ಕ್ರಮಣಲಿಂಗವನ್ನು ವಿಷ್ಣುವಿನಲ್ಲಿ ಸಾಧಿಸಿದ್ದಾರೆ. ಭಗವಂತನ ರೂಪವಿಶೇಷದಿಂದ ಉತ್ಕ್ರಮಣವನ್ನು ಹೇಳಬಹುದಾದ್ದರಿಂದ ಪ್ರಾಣಶಬ್ದದಿಂದ ವಿಷ್ಣುವೇ ವಾಚ್ಯನಾಗುತ್ತಾನೆ ಎಂದು ಸಿದ್ಧಾಂತ ಮಾಡಿದ್ದಾರೆ. ಹೀಗೆ ಉತ್ಕ್ರಮಣವನ್ನು ಭಗವಂತನಲ್ಲಿ ಸಾಧಿಸಿದ್ದರಿಂದ ನಮ್ಮ ದೇಹದಲ್ಲಿ ವಿಷ್ಣುವಿನ ಇಲ್ಲದಿರುವಿಕೆಯೆಂಬ ವ್ಯತಿರೇಕವ್ಯಾಪ್ತಿಯನ್ನು ಹೇಳಬಹುದಲ್ಲವೇ?

ಸಮಾಧಾನ - ಭೂಮಾಧಿಕರಣದಲ್ಲಿ ಉತ್ಕ್ರಮಣವನ್ನು ವಿಷ್ಣುವಿನಲ್ಲಿ ಹೇಳಿದ್ದು ಸತ್ಯ. ಆದರೆ ಶರೀರದಲ್ಲಿ ವಿಷ್ಣುವಿನ ಇಲ್ಲದಿರುವಿಕೆಯನ್ನು ಸರ್ವಥಾ ಪ್ರತಿಪಾದಿಸಿಲ್ಲ. ಶರೀರದಲ್ಲಿ ಒಂದು ರೂಪದಿಂದ ಭಗವಂತನು ನೆಲೆಸಿ ಮತ್ತೊಂದು ರೂಪದಿಂದ ಉತ್ಕ್ರಮಣನಾಗುತ್ತಾನೆಂದು ಅಲ್ಲಿ ಸಾಧಿಸಿದ್ದಾರೆ. ಯಾವ ರೀತಿಯಾಗಿ ನಮ್ಮ ಶರೀರದಲ್ಲಿ ಇರುವ ಚಕ್ಷುರಿಂದ್ರಿಯವು ಧ್ರುವಮಂಡಲದ ತನಕ ಹೋದರೂ ನಮ್ಮ ಶರೀರದಲ್ಲಿಯೇ ಮತ್ತೊಂದು ಅಂಶದಿಂದ ಇರುತ್ತದೋ ಆದರಂತೆ ವಿಷ್ಣುವೂ ಕೂಡ ತನ್ನ ವಿಚಿತ್ರಶಕ್ತಿಯಿಂದ ಒಂದು ರೂಪದಿಂದ ದೇಹದಿಂದ ಹೊರಟರೂ ಮತ್ತೊಂದು ರೂಪದಿಂದ ದೇಹದಲ್ಲಿಯೇ ಇರುತ್ತಾನೆ. ಆ ಸಂದರ್ಭದಲ್ಲಿ ಭಗವಂತನಲ್ಲಿರುವ ಮಹತ್ವಗುಣವು ಶಕ್ತಿರೂಪದಲ್ಲಿಯು ಅಣುತ್ವಗುಣವು ವ್ಯಕ್ತಿರೂಪದಲ್ಲಿಯೂ ಇರುತ್ತದೆ. ಆದ್ದರಿಂದ ಉತ್ಕ್ರಮಣವನ್ನು ಹೇಳಿದರೂ ಸರ್ವಗತತ್ವಕ್ಕೆ ವಿರೋಧ ಬರುವುದಿಲ್ಲ.

ಶಂಕೆ - ಗ್ರಂಥಕಾರರು ವ್ಯತಿರೇಕವ್ಯಾಪ್ತಿಯನ್ನು ವಿಷ್ಣುವಿನಲ್ಲಿ ಅಂಗೀಕರಿಸದೆ ಜೀವನಹೇತುತ್ವವನ್ನು ಅಲ್ಲಗಳೆದಿದ್ದಾರೆ. ವಿಚಾರಮಾಡಿದರೆ ವ್ಯತಿರೇಕವ್ಯಾಪ್ತಿಯನ್ನು ಅಂಗೀಕರಿಸಿಯೂ ಕೂಡ ಜೀವನಹೇತುತ್ವವನ್ನು ವಿಷ್ಣುವಿನಲ್ಲಿ ನಿರಾಕರಿಸಬಹುದು. ಅದು ಹೀಗೆ -- ವಿಷ್ಣುವಿನಲ್ಲಿ ಅನ್ವಯವ್ಯತಿರೇಕವನ್ನು ಪ್ರತ್ಯಕ್ಷದಿಂದ ಹೇಳುತ್ತೀರೋ ಅಥವಾ ಆಗಮದಿಂದ ಹೇಳುತ್ತೀರೋ? ಪ್ರಥಮಪಕ್ಷದಲ್ಲಿ ಸಾಕ್ಷಾತ್ತಾಗಿ ಅನ್ವಯವ್ಯತಿರೇಕಗಳು ವಿಷ್ಣುವಿನಲ್ಲಿ ಕಾಣಿಸುತ್ತಿವೆಯೆಂದೋ ಅಥವಾ ವಿಷ್ಣುವಿನ ಶರೀರದ ಮೂಲಕ ಕಾಣಿಸುತ್ತಿದೆಯೋ? ಮೊದಲನೆಯ ಪಕ್ಷ ತಪ್ಪು. ಭಗವಂತನು ಪ್ರಾಕೃತ ಇಂದ್ರಿಯಗಳಿಂದ ಗೋಚರಿಸದ

ಕಾರಣ ಸಾಕ್ಷಾತ್ತಾಗಿ ಅನ್ವಯವ್ಯತಿರೇಕವನ್ನು ವಿಷ್ಣುವಿನಲ್ಲಿ ತಿಳಿಯಲು ಸಾಧ್ಯವಿಲ್ಲ. ಇನ್ನು ಶರೀರದ ಮೂಲಕವಾಗಿ ಅನ್ವಯವ್ಯತಿರೇಕವನ್ನು ತಿಳಿಯಬೇಕು. ಆದರೆ ಶ್ರುತಿಗಳು ಹೇಳುವಂತೆ ಭಗವಂತನಿಗೆ ಶರೀರವೇ ಇಲ್ಲ. ಕೊನೆಯ ಪಕ್ಷವೂ ತಪ್ಪು. 'ತತ್ಪ್ರಾಣೇ ಪ್ರಪನ್ನೇ' ಎಂಬ ಶ್ರುತಿಯು ಮುಖ್ಯಪ್ರಾಣನಲ್ಲಿ ಅನ್ವಯವ್ಯತಿರೇಕವನ್ನು ಹೇಳುವಂತೆ ವಿಷ್ಣುವಿನಲ್ಲಿ ಅನ್ವಯವ್ಯತಿರೇಕವನ್ನು ಹೇಳುವ ಯಾವುದೇ ಶ್ರುತಿಗಳಿರುವುದಿಲ್ಲ. ಒಂದು ವೇಳೆ ಇದ್ದರೂ ಸಹ ಆ ಶ್ರುತಿಗಳನ್ನು ವಾಯುಪರವಾಗಿ ಅರ್ಥೈಸಬಹುದು. ಹೀಗೆ ಅನ್ವಯವ್ಯತಿರೇಕವನ್ನು ಒಪ್ಪಿಯೇ ಜೀವನಹೇತುತ್ವವನ್ನು ವಿಷ್ಣುವಿನಲ್ಲಿ ನಿರಾಕರಿಸಲು ಬರುವಾಗ ವ್ಯತಿರೇಕವ್ಯಾಪ್ತಿಯನ್ನು ನಿರಾಕರಣೆ ಮಾಡಿದ್ದು ಅನಾವಶ್ಯಕವಲ್ಲವೇ?

ಸಮಾಧಾನ - ಹೌದು. ವ್ಯತಿರೇಕವ್ಯಾಪ್ತಿಯನ್ನು ಅಂಗೀಕರಿಸಿಯೂ ಜೀವನಹೇತುತ್ವವನ್ನು ನಿರಾಕರಿಸಬಹುದು. ಆದರೂ ಕೂಡ ವ್ಯತಿರೇಕವ್ಯಾಪ್ತಿಯಿಲ್ಲವೆಂದು ಹೇಳಿದಾಗ ವಿಷಯವು ಸ್ಪಷ್ಟವಾಗಿ ತಿಳಿಯುತ್ತದೆ. ಮತ್ತು ವ್ಯತಿರೇಕವ್ಯಾಪ್ತಿಯಿಂದ ತಿಳಿಯದಿದ್ದರೂ ಶ್ರುತಿಯಿಂದ ಜೀವನಹೇತುತ್ವವನ್ನು ಸಾಧಿಸಬಹುದಲ್ಲವೇ? ಎಂಬ ಶಂಕೆಯನ್ನು ಅವಶ್ಯವಾಗಿ ನಿರಾಕರಿಸಬೇಕಾಗಿದೆ. ಅದಕ್ಕೋಸ್ಕರ ವಾಸ್ತವವಿಚಾರವನ್ನು ಅನುಸರಿಸಿ ವ್ಯತಿರೇಕವ್ಯಾಪ್ತಿಯನ್ನು ನಿರಾಕರಿಸುವ ಮೂಲಕವಾಗಿ ಅನ್ವಯವ್ಯತಿರೇಕದಿಂದ ಗಮ್ಯನಲ್ಲವೆಂದು ಗ್ರಂಥಕಾರರು ಹೇಳಿದ್ದು ಸಮಂಜಸವಾಗಿದೆ. ಇದರಿಂದ 'ಪ್ರಾಣಾದಿ-ಹೇತುತಾದೃಷ್ಟೇಃ' ಎಂಬ ಅನುವ್ಯಾಖ್ಯಾನವನ್ನು ವ್ಯಾಖ್ಯಾನಿಸಿದಂತಾಯಿತು. 'ಪರಮಾತ್ಮನಲ್ಲಿ ಅನ್ವಯ-ವ್ಯತಿರೇಕಗಳು ಕಾಣಸಿದಿರುವುದರಿಂದ' ಎಂಬ ಅಭಿಪ್ರಾಯದಿಂದ ಸುಧೆಯು ಅನುವ್ಯಾಖ್ಯಾನವನ್ನು ವ್ಯಾಖ್ಯಾನಿಸುತ್ತಿದೆ. ಅನುವ್ಯಾಖ್ಯಾನದಲ್ಲಿರುವ 'ಅದೃಷ್ಟೇಃ' ಎಂಬ ಪದಕ್ಕೆ ಅನ್ವಯವ್ಯತಿರೇಕದಿಂದ ಕಂಡಿಲ್ಲವೆಂದು ಒಂದು ಅರ್ಥ. ಮತ್ತೊಂದು ಅರ್ಥ ಆಗಮದಿಂದಲೂ ಕಂಡಿಲ್ಲವೆಂದು. ಅದನ್ನು 'ನಾಪಿ' ಇತ್ಯಾದಿ ಗ್ರಂಥದಿಂದ ವಿವರಿಸಿದ್ದಾರೆ.

'ಯೇನ ಜಾತಾನಿ ಜೀವಂತಿ' ಇತ್ಯಾದಿ ಶ್ರುತಿಗಳು ವಿಷ್ಣುವಿನಲ್ಲಿ ಜೀವನಹೇತುತ್ವವನ್ನು ಹೇಳುತ್ತಿರುವಂತೆ ಕಾಣುತ್ತದೆ. ಆದರೆ ಇಲ್ಲಿಯ ತನಕ ಸಮರ್ಥಿಸಿದ ಅನ್ವಯವ್ಯತಿರೇಕದ ಬಲದಿಂದ ಮುಖ್ಯವಾಯುವಿನಲ್ಲಿ ಆ ಶ್ರುತಿಗಳನ್ನು ಹೊಂದಿಸಬೇಕು. ಇಲ್ಲದಿದ್ದರೆ ಶ್ರುತಿಯಿಂದ ಹಾಗೂ ಪ್ರತ್ಯಕ್ಷದಿಂದ ಮುಖ್ಯಪ್ರಾಣನಲ್ಲಿ ಅನ್ವಯವ್ಯತಿರೇಕವನ್ನು ಸಾಧಿಸಿದಂತಾಗುವುದಿಲ್ಲ.

ಶಂಕೆ - 'ಯತೋ ವಾ' ಎಂಬ ಶ್ರುತಿಯನ್ನು ಸಾವಕಾಶವೆಂದು ಹೇಳಬಹುದು. ಆದರೆ ನಿರವಕಾಶವಾದ ಅನೇಕ ಸ್ಮೃತಿಗಳನ್ನು ಸಾವಕಾಶವೆನ್ನಲಾಗದು.

ನ ಪ್ರಾಣೇನ ನಾಪಾನೇನ ಮರ್ತ್ಯೋ ಜೀವತಿ ಕಶ್ಚನ।
ಇತರೇಣ ತು ಜೀವಂತಿ ಯಸ್ಮಿನ್ನೇತಾವುಪಾಶ್ರಿತೌ ॥

'ಪ್ರಾಣನಿಂದಾಗಲೀ ಅಥವಾ ಅಪಾನನಿಂದಾಗಲೀ ಮನುಷ್ಯನು ಜೀವಿಸುವುದಿಲ್ಲ; ಹೊರತಾಗಿ ಪ್ರಾಣ ಅಪಾನರು ಯಾವ ವಿಷ್ಣುವನ್ನು ಆಶ್ರಯಿಸಿದ್ದಾರೋ ಆ ವಿಷ್ಣುವಿನಿಂದಲೇ ಜೀವಿಸುತ್ತಾರೆ'

ಈ ಶ್ರುತಿಯು ಜೀವನಹೇತುತ್ವವನ್ನು ಮುಖ್ಯಪ್ರಾಣನಲ್ಲಿ ನಿರಾಕರಿಸಿ ವಿಷ್ಣುವಿನಲ್ಲಿ ಸಮರ್ಥಿಸುತ್ತಿದೆ. ಮುಖ್ಯಪ್ರಾಣನಲ್ಲಿ ಜೀವನಹೇತುತ್ವವನ್ನು ಹೇಳಿದರೆ ಈ ಸ್ಮೃತಿಯ ವಿರೋಧ ಬರುತ್ತದಲ್ಲವೇ?

ಸಮಾಧಾನ - ಇದೂ ಸಹ ಸಾವಕಾಶವಾಗಿದೆ. ಪ್ರಾಣ ಅಪಾನ ಮೊದಲಾದ ಜಡವಾಯುಗಳಿಂದ ಮನುಷ್ಯನು ಜೀವಿಸುವುದಿಲ್ಲ. ಜಡವಾಯುಗಳು ಯಾವ ಮುಖ್ಯಪ್ರಾಣನನ್ನು ಆಶ್ರಯಿಸಿವೆಯೋ ಆ ಮುಖ್ಯಪ್ರಾಣನಿಂದ ಜೀವಿಸುತ್ತಾನೆಂದು ಇದರ ಅರ್ಥ. ಆದ್ದರಿಂದ ಸಕಲಶ್ರುತಿಸ್ಮೃತಿಗಳೂ ಮತ್ತು ಪ್ರತ್ಯಕ್ಷಾದಿಗಳೂ ಮುಖ್ಯಪ್ರಾಣನೇ ಜೀವನಕಾರಣನೆಂದು ಹೇಳುತ್ತಿವೆ.

**ಗುರುರಾಜೀಯಮ್ –** ಟೀಕಾನುಸಾರೇಣ ಪೂರ್ವಪಕ್ಷಮುಕ್ತ್ವಾ ಸುಧಾನುಸಾರೇಣ ತಮಾಹ – **ಯಚ್ಚೇತಿ ॥ ಅತಿಪ್ರಸಙ್ಗಾದಿತಿ ॥** ಗೃಹಾದಿರೂಪಂ ಯದ್ದೇವದತ್ತಸ್ಯ ಗೌಣಂ ಶರೀರಂ ತದವಿನಾಭೂತಂ ಯತ್ಕಿಞ್ಚಿತ್ ತಸ್ಯ ದೇವದತ್ತಕಾರ್ಯತ್ವಪ್ರಸಙ್ಗಾದಿತ್ಯರ್ಥಃ । ಜಡವಾಯುರಪಿ ಪ್ರಾಣಸ್ಯ ಗೌಣಂ ಶರೀರಮ್ । ಅಭಿಮನ್ಯಮಾನತ್ವಾತ್ । ತಥಾಚ ಗೌಣಶರೀರಾನ್ವಯವ್ಯತಿರೇಕಾಭ್ಯಾಂ ವಾಯೋರ್ಜೀವನಾದಿಹೇತುತ್ವವತ್ ಅತ್ರಾಪಿ ಪೃಥಿವ್ಯಾದಿರೂಪಗೌಣಶರೀರಾನ್ವಯವ್ಯತಿರೇಕಾಭ್ಯಾಂ ಬ್ರಹ್ಮಣೋಪಿ ಜೀವನಾದಿಹೇತುತ್ವಂ ಕಿಂ ನ ಸ್ಯಾದಿತಿ ಚೇನ್ಮೈವಮ್ । ಅತ್ರ ಶರೀರಶಬ್ದಸ್ಯ ಮುಖ್ಯಾವಚ್ಛೇದಕಶರೀರಪರತ್ವಾತ್ । ಮುಖ್ಯಸ್ಯ ತ್ವಭಿಮನ್ಯಮಾನಶರೀರಾವಚ್ಛೇದೇನಾಪಿ ಸುಖೋತ್ಪಾದನಾತ್ । ನ ಚೈವಂ ಪ್ರಕೃತೇ ಗೌಣಪೃಥಿವ್ಯಾದಿಶರೀರಾವಚ್ಛೇದೇನ ಸುಖಂ ವಕ್ತುಂ ಯುಕ್ತಮ್ । ಜನ್ಯಸುಖಸ್ಯ ಬ್ರಹ್ಮಣಃ ಪ್ರಮಾಣಬಾಧಿತತ್ವಾದಿತಿ ಭಾವಃ । ತರ್ಹಿ ಭೂಮಾಧಿಕರಣೇ ವಕ್ಷ್ಯಮಾಣಮುತ್ಕ್ರಮಣಮಪಯುಕ್ತಂ ಸ್ಯಾದಿತ್ಯತ ಆಹ – **ಭೂಮೇತಿ ॥**

## ಸಾರ

ಜಡವಾಯುವು ಮುಖ್ಯಪ್ರಾಣನ ಶರೀರ. ಜಡವಾಯುವಿದ್ದರೆ ನಮ್ಮ ಜೀವನ ಇಲ್ಲದಿದ್ದರೆ ಇಲ್ಲವೆಂಬ ಅನ್ವಯವ್ಯತಿರೇಕ ನಮಗೆಲ್ಲ ಸಿದ್ಧವಾಗಿದೆ. ಇದರಿಂದ ಮುಖ್ಯವಾಯುವು ಜೀವನಕಾರಣನೆಂದು ಹೇಳಿದಂತಾಗುತ್ತದೆ. ಕುಲಾಲನ ಶರೀರವಿದ್ದರೆ ಮಾತ್ರ ಘಟವು ಹುಟ್ಟುವುದನ್ನು, ಕುಲಾಲಶರೀರವಿಲ್ಲದಿದ್ದರೆ ಘಟ ಹುಟ್ಟದಿರುವುದನ್ನು ನಾವು ಕಂಡಿದ್ದೇವೆ. ಇದರಿಂದ ಕುಲಾಲಶರೀರದ ಒಳಗಿರುವ ಆತ್ಮನು ಘಟಕಾರಣನೆಂದು ಎಲ್ಲರೂ ಒಪ್ಪಿರುವ ವಿಚಾರ. ಆದರಂತೆ ಮುಖ್ಯಪ್ರಾಣನ ವಿಷಯದಲ್ಲಿಯೂ ತಿಳಿಯಬೇಕು.

ಆದರೆ ಬ್ರಹ್ಮನಲ್ಲಿ ಈ ಅನ್ವಯವ್ಯತಿರೇಕವನ್ನು ಹೇಳಲು ಸಾಧ್ಯವಿಲ್ಲ. ಹಾಗೆ ಹೇಳಬೇಕಾದರೆ ಮೊದಲು ಬ್ರಹ್ಮನಿಗೆ ಶರೀರವಿರಬೇಕು. ಮತ್ತು ನಮ್ಮ ದೇಹದಲ್ಲಿ ಬ್ರಹ್ಮನಿಲ್ಲವೆಂದು ಹೇಳಬೇಕು. ಆದರೆ ಶ್ರುತಿಗಳೇ ಹೇಳುವಂತೆ ಬ್ರಹ್ಮನಿಗೆ ಶರೀರವೇ ಇಲ್ಲ. ಅಂತರ್ಯಾಮ್ಯಧಿಕರಣದಲ್ಲಿ ವಿಷ್ಣುವಿಗೆ ಗೌಣಶರೀರವನ್ನು ಹೇಳಿದ್ದಾರೆ. ಆದರೆ ಗೌಣಶರೀರವು ಕಾರ್ಯತ್ವಕ್ಕೆ ಸಾಧಕವಾಗುವುದಿಲ್ಲ. ಮತ್ತು ಬ್ರಹ್ಮನು ಸರ್ವಗತನಾಗಿದ್ದಾನೆ. ಭೂಮಾಧಿಕರಣದಲ್ಲಿ ನಮ್ಮ ಶರೀರದಿಂದ ಬ್ರಹ್ಮನು ಉತ್ಕ್ರಮಣನಾಗುತ್ತಾನೆಂದು ಹೇಳಿದ್ದರೂ ಮತ್ತೊಂದು ರೂಪದಿಂದ ನಮ್ಮ ಶರೀರದಲ್ಲಿಯೇ ಇರುತ್ತಾನೆಂದು ಹೇಳಿದ್ದಾರೆ. ಆದ್ದರಿಂದ ವ್ಯತಿರೇಕವ್ಯಾಪ್ತಿಯನ್ನು ವಿಷ್ಣುವಿನಲ್ಲಿ ಹೇಳುವುದು ಕಷ್ಟ. ಇನ್ನು ಶ್ರುತಿಯಿಂದ ಬ್ರಹ್ಮನು ಜೀವನಕಾರಣನಾಗಿದ್ದಾನೆಂದು ಹೇಳಬೇಕು. ಆದರೆ ಆ ಶ್ರುತಿಗಳನ್ನೆಲ್ಲಾ ಮುಖ್ಯಪ್ರಾಣನಲ್ಲಿಯೇ ಸಮನ್ವಯ ಮಾಡಲು ಬರುತ್ತದೆ. ಆದ್ದರಿಂದ ಮುಖ್ಯಪ್ರಾಣನೇ ಜೀವನಕಾರಣನಾಗುತ್ತಾನೆ. ವಿಷ್ಣುವಲ್ಲವೆಂದು ಪೂರ್ವಪಕ್ಷ.

## ಪೂರ್ವಪಕ್ಷವಿಷಯದಲ್ಲಿ ಸ್ವಯೂಥ್ಯರ ನಿರಾಕರಣೆ

**ತಾತ್ಪರ್ಯಚಂದ್ರಿಕಾ –**

**ಕೇಚಿತ್ತು ''ಅನ್ವಯವ್ಯತಿರೇಕಾಭ್ಯಾಂ ಹಿ ಹೇತುತಾ ಕಲ್ಪ್ಯಾ'' ಇತಿ ಸುಧಾಯಾಃ ಪ್ರಾತೀತಿಕಾರ್ಥಂ ಗೃಹೀತ್ವಾ ಹೇತುತಾಯಾ ಅನ್ವಯವ್ಯತಿರೇಕಮಾತ್ರಗಮ್ಯತ್ವಾನ್ನ ಶ್ರುತಿಸ್ತತ್ರ ಪ್ರಮಾಣಮಿತಿ ಪೂರ್ವಪಕ್ಷ್ಯಭಿಪ್ರಾಯ ಇತ್ಯಾಹುಃ । ತನ್ನ, ಯಾಗಾದೇಃ ಸ್ವರ್ಗಾದೌ ಅಹೇತುತ್ವಾಪಾತಾತ್ ।**

ಅನುವಾದ - ನಮಲ್ಲೇ ಕೆಲವು ವಿದ್ವಾಂಸರ ಅಭಿಪ್ರಾಯ -- 'ಅನ್ವಯವ್ಯತಿರೇಕಾಭ್ಯಾಂ ಹಿ ಹೇತುತಾ ಕಲ್ಪ್ಯಾ' (ಹೇತುತ್ವವನ್ನು ಅನ್ವಯವ್ಯತಿರೇಕಗಳಿಂದಷ್ಟೇ ಹೇಳಬೇಕು) ಎಂಬ ಸುಧೆಯ ಮಾತನ್ನು ಮೇಲ್ನೋಟಕ್ಕೆ ಹೀಗೆ ವ್ಯಾಖ್ಯಾನಿಸುತ್ತಾರೆ - ಜೀವನಹೇತುತ್ವವು ಹೇತುರೂಪವಾಗಿರುವುದರಿಂದ ಅನ್ವಯವ್ಯತಿರೇಕಗಳಿಂದಷ್ಟೇ ತಿಳಿಯಲು ಸಾಧ್ಯ, ಹೊರತು ಜೀವನಹೇತುತ್ವವಿಷಯದಲ್ಲಿ ಶ್ರುತಿಯು ಪ್ರಮಾಣವಾಗುವುದಿಲ್ಲವೆಂದು ಪೂರ್ವಪಕ್ಷಿಗಳ ಅಭಿಪ್ರಾಯವೆಂದು ಇವರ ವಾದ.

ಇದು ತಪ್ಪು. ಹೇತುತ್ವವು ಅನ್ವಯವ್ಯತಿರೇಕದಿಂದಷ್ಟೇ ತಿಳಿಯುವುದಾದರೆ ಯಾಗಾದಿಗಳಿಗೆ ಸ್ವರ್ಗಹೇತುತ್ವವು ಸಿದ್ಧವಾಗದಿರಬೇಕಾದೀತು.

### ಕಠಿಣಪದಾರ್ಥ

ಕೇಚಿತ್ತು = ಸ್ವಯೂಥ್ಯರು; ಅನ್ವಯವ್ಯತಿರೇಕಮಾತ್ರಗಮ್ಯತ್ವಾತ್ = ಪ್ರತ್ಯಕ್ಷಸಿದ್ಧವಾದ ಅನ್ವಯವ್ಯತಿರೇಕದಿಂದಷ್ಟೇ ತಿಳಿಯುವುದರಿಂದ, ತತ್ರ = ಅನ್ವಯವ್ಯತಿರೇಕಮೂಲಕವಾದ ಹೇತುತ್ವದಲ್ಲಿ.

**ಪ್ರಕಾಶಃ –** ನನು 'ನಾಪಿ ಶ್ರುತಿಸಿದ್ಧಂ' ಇತ್ಯಾಶಙ್ಕಾನಿರಾಸಾವಯುಕ್ತೌ, **''ಅನ್ವಯವ್ಯತಿರೇಕಾಭ್ಯಾಂ ಹಿ ಹೇತುತಾ ಕಲ್ಪ್ಯಾ । ನಚ ಪರಮಾತ್ಮನಃ ಪ್ರಾಣಶಬ್ದಪ್ರವೃತ್ತಿನಿಮಿತ್ತಜೀವನಾದಿಹೇತುತಾವಗಮಕಾನ್ವಯವ್ಯತಿರೇಕೌ ಪಶ್ಯಾಮಃ''** ಇತಿ ಸುಧಾವಿರೋಧಾತ್ । ತತ್ರಾನ್ವಯವ್ಯತಿರೇಕಕಲ್ಪ್ಯತಾಯಾ ಏವ ಹೇತುತ್ವಸ್ಯ ಪ್ರತೀತೇರಿತ್ಯುತ್ತಾನದೃಶಾಂ ಭ್ರಮಮನೂದ್ಯ ನಿರಸ್ಯತಿ – **ಕೇಚಿತ್ತ್ವಿತಿ ॥ ಅನ್ವಯವ್ಯತಿರೇಕಮಾತ್ರೇತಿ ॥** ಪ್ರತ್ಯಕ್ಷಸಿದ್ಧಾನ್ವಯವ್ಯತಿರೇಕೇತ್ಯರ್ಥಃ ॥ **ತತ್ರೇತಿ ॥** ಅನ್ವಯವ್ಯತಿರೇಕದ್ವಾರಕಹೇತುತಾಯಾಮ್ ॥ **ಯಾಗಾದೇರಿತಿ ॥** ತತ್ರ ಪ್ರತ್ಯಕ್ಷಸಿದ್ಧಾನ್ವಯವ್ಯತಿರೇಕಯೋರಪ್ರಸರಾದಿತಿ ಭಾವಃ । ಏತೇನ **'ನಚ ಪಶ್ಯಾಮಃ'** ಇತಿ ಸುಧಾಗತಸ್ಯಾಗಮೇನ ನ ಪಶ್ಯಾಮಃ **''ಯೇನ ಜೀವನ್ತಿ''** ಇತ್ಯಾದೇರಪಿ ಮುಖ್ಯವಿಷಯತ್ವಾದಿತ್ಯಪಿ ತಾತ್ಪರ್ಯಮುಕ್ತಂ ಭವತಿ । ಏತೇನ **''ಅನ್ವಯವ್ಯತಿರೇಕಪ್ರಮಾಣಕತ್ವಾದ್ಧೇತುಹೇತುಮದ್ಭಾವಸ್ಯ'** ಇತಿ ನ್ಯಾಯವಿವರಣಟೀಕಾऽಪಿ ಕಾಚಿತ್ಕತ್ವಾಶಯೇತಿ ದರ್ಶಿತಮ್ ।

ವಿವರಣೆ - ಈ ಹಿಂದೆ ಗ್ರಂಥಕಾರರು ಜೀವನಹೇತುತ್ವವು ವಿಷ್ಣುವಿನಲ್ಲಿ ಇದೆ ಎನ್ನಲು ಅನ್ವಯವ್ಯತಿರೇಕವಾಗಲೀ, ಶ್ರುತಿಯಾಗಲೀ ಪ್ರಮಾಣವಾಗಿಲ್ಲವೆಂದು ಪ್ರತಿಪಾದಿಸಿದರು. ಆದರೆ ಪೂರ್ವಪಕ್ಷವಿಷಯದಲ್ಲಿ ನಮ್ಮಲ್ಲೇ ಕೆಲವು ವಿದ್ವಾಂಸರು ಸ್ವಲ್ಪವ್ಯತ್ಯಾಸ ಮಾಡಿದ್ದಾರೆ. ಅಂದರೆ ಜೀವನಹೇತುತ್ವವು ಶ್ರುತಿಸಿದ್ಧವೆಂಬ ಶಂಕೆಯನ್ನಾಗಲೀ, ನಿರಾಕರಣೆಯನ್ನಾಗಲೀ ಮಾಡುವುದು ತಪ್ಪು. ಹಾಗೆ ಮಾಡಿದರೆ 'ಅನ್ವಯವ್ಯತಿರೇಕಾಭ್ಯಾಂ ಹಿ ಹೇತುತಾ ಕಲ್ಪ್ಯಾ । ನ ಚ ಪರಮಾತ್ಮನಃ ಪ್ರಾಣಶಬ್ದ-ಪ್ರವೃತ್ತಿನಿಮಿತ್ತಜೀವನಾದಿಹೇತುತಾವಗಮಕಾನ್ವಯವ್ಯತಿರೇಕೌ ಪಶ್ಯಾಮಃ ॥' (ಹೇತುತ್ವವನ್ನು ಅನ್ವಯ-ವ್ಯತಿರೇಕಗಳಿಂದಷ್ಟೇ ಕಲ್ಪಿಸಬೇಕು. ಪ್ರಾಣಶಬ್ದದ ಪ್ರವೃತ್ತಿನಿಮಿತ್ತವಾದ ಜೀವನಹೇತುತ್ವವನ್ನು ಪರಮಾತ್ಮ-ನಲ್ಲಿ ಅನ್ವಯವ್ಯತಿರೇಕಗಳಿಂದ ಕಾಣಲು ಸಾಧ್ಯವಿಲ್ಲ.) ಎಂಬ ಸುಧಾವಾಕ್ಯಕ್ಕೆ ವಿರೋಧ ಬರುತ್ತದೆ. ಏಕೆಂದರೆ ಹೇತುತ್ವವು ಕೇವಲ ಅನ್ವಯವ್ಯತಿರೇಕಗಳಿಂದಷ್ಟೇ ಹೇಳಬೇಕು. ಆದರೆ ನೀವು ಶ್ರುತಿಯಿಂದ ಜೀವನಹೇತುತ್ವವನ್ನು ನಿರಾಕರಿಸುತ್ತಿದ್ದೀರಿ. ಇದು ಹೇಗೆ ಸರಿ? ಎಂದು ಇವರ ಅಭಿಪ್ರಾಯ. ಆದರೆ ಆಳಕ್ಕಿಳಿಯದೇ ಮೇಲ್ನೋಟದ ವಿದ್ವತ್ತಿನಿಂದ ಇವರು ಗ್ರಂಥಕ್ಕೆ ವ್ಯಾಖ್ಯಾನಿಸುತ್ತಾರೆ ಹೊರತು ನಿಜವಾದ ಸುಧೆಯ ಅರ್ಥವನ್ನು ಹೇಳಲು ಇವರು ಅಸಮರ್ಥರು. ಇಂತಹ ಕೆಲವು ಮಾಧ್ವ- ವಿದ್ವಾಂಸರನ್ನು ಪ್ರಕೃತದಲ್ಲಿ ಗ್ರಂಥಕಾರರು ನಿರಾಕರಿಸುತ್ತಿದ್ದಾರೆ. ಯಾಗದಲ್ಲಿ ಸ್ವರ್ಗಹೇತುತ್ವವು ಅನುಭವಸಿದ್ಧವಾಗಿದೆ. ಅನ್ವಯವ್ಯತಿರೇಕಗಳಿಂದಷ್ಟೇ ಹೇತುತ್ವವನ್ನು ನಿರ್ಣಯಿಸುವುದಾದರೆ ಯಾಗದಲ್ಲಿ ಸ್ವರ್ಗಹೇತುತ್ವವನ್ನು ಹೇಳಲು ಹೇಗೆ ಸಾಧ್ಯ? 'ಯಾಗವಿದ್ದರೆ ಸ್ವರ್ಗ; ಇಲ್ಲದಿದ್ದರೆ ಇಲ್ಲ'ವೆಂಬ ಅನ್ವಯವ್ಯತಿರೇಕವನ್ನು ಪ್ರತ್ಯಕ್ಷದಿಂದ ಯಾಗಕ್ಕೂ ಸ್ವರ್ಗಕ್ಕೂ ಕಾರ್ಯಕಾರಣಭಾವವನ್ನು ಯಾರಿಂದಲೂ ನಿರ್ಣಯಿಸಲಾಗದು.

ಹೀಗೆ ಹೇಳಿದ್ದರಿಂದ ಸುಧೆಯಲ್ಲಿರುವ 'ನ ಚ ಪಶ್ಯಾಮಃ' ಎಂಬ ಮಾತಿಗೆ ''ಅನ್ವಯ-ವ್ಯತಿರೇಕದಿಂದಾಗಲೀ, ಆಥವಾ ಶ್ರುತಿಯಿಂದಾಗಲೀ ಜೀವನಹೇತುತ್ವವನ್ನು ಸಾಧಿಸಲಾಗದು. ಏಕೆಂದರೆ 'ಯೇನ ಜಾತಾನಿ ಜೀವಂತಿ' ಇತ್ಯಾದಿ ಶ್ರುತಿಗಳೆಲ್ಲವೂ ಮುಖ್ಯಪ್ರಾಣನನ್ನೇ ಹೇಳುತ್ತವೆ'' ಎಂದು ವ್ಯಾಖ್ಯಾನಿಸಿದಂತಾಯಿತು. ಅಷ್ಟೇ ಅಲ್ಲದೆ ನ್ಯಾಯವಿವರಣದ 'ಅನ್ವಯವ್ಯತಿರೇಕಪ್ರಮಾಣಕತ್ವಾದ್ ಹೇತುಹೇತುಮದ್ಭಾವಸ್ಯ' ಎಂಬ ಟೀಕೆಯನ್ನು 'ದಂಡ,ಘಟಾದಿ ಕೆಲವು ಸ್ಥಳಗಳಲ್ಲಿ ಮಾತ್ರ ಹೊರತು ಎಲ್ಲೆಡೆ ಹೇಳಬಾರದು' ಎಂದು ವ್ಯಾಖ್ಯಾನಿಸಿದಂತಾಯಿತು.

## ಸಾರ

ಹೇತುರೂಪವಾದ ಜೀವನಹೇತುತ್ವವನ್ನು ಅನ್ವಯವ್ಯತಿರೇಕಗಳಿಂದಷ್ಟೇ ತಿಳಿಯಬಹುದು; ಶ್ರುತಿಯಿಂದ ತಿಳಿಯಲು ಸಾಧ್ಯವೇ ಇಲ್ಲ. ಹೀಗಿರುವಾಗ ಶ್ರುತಿಪ್ರಮಾಣದ ಉಲ್ಲೇಖ ಮತ್ತು ನಿರಾಕರಣೆಗಳು ಅಸಂಗತವೆಂದು ಕೆಲವರ ವಾದ.

ಇದು ತಪ್ಪು. ಹಾಗಾದರೆ ಯಾಗವು ಸ್ವರ್ಗಕ್ಕೆ ಹೇತುವೆಂದು ಹೇಳಬೇಕಾದರೆ ಅನ್ವಯವ್ಯತಿರೇಕವನ್ನೇ ಹೇಳಬೇಕೆಂದಂತಾಯಿತು. ಆದರೆ ಸ್ವರ್ಗಯಾಗಗಳ ಕಾರ್ಯಕಾರಣಭಾವದಲ್ಲಿ ಅನ್ವಯವ್ಯತಿರೇಕವು ಪ್ರತ್ಯಕ್ಷಸಿದ್ಧವಾಗಿಲ್ಲ.

## ಜೀವನಕಾರಣನಾದ ಮುಖ್ಯಪ್ರಾಣನೇ ಆನಂದಮಯ

**ತಾತ್ಪರ್ಯಚನ್ದ್ರಿಕಾ**

**अन्ये तु – व्यतिरेकगर्भिताया हेतुतायास्तद्रहिते परमात्मनि अयोगान्न तस्य जीवनहेतुता श्रुत्याऽपि बोधयितुं शक्येति तदभिप्राय इत्याहुः ।**

**तदपि न, नित्यविभूनामहेतुत्वापत्तेः । तस्माज्जीवनादिहेतुत्वं न ब्रह्मगतम् । नाप्यन्यगतं तदधीनम्, जन्मादिसूत्रोक्तस्थितिहेतुताया असम्भवादिप्रसङ्गात् । तस्मान्मुख्यवायुरेव प्राण इति स एवानन्दमयः, तस्यान्तरधिकरणे पूर्व-पक्षितेन्द्रादिवदानन्दवल्लभ्यामानन्दमयात् भेदव्यपदेशाभावेन, आकाशाधिकरणे पूर्व-पक्षिताकाशवच्च जडत्वाभावेन स्वत एवानन्दमयत्वसम्भवात् । तस्मात् ''अन्वय-व्यतिरेकतः'' इत्यनुव्याख्यानोक्ताऽधिकाशङ्का युक्ता । इयञ्च प्रमेयाश्रिता ।**

ಅನುವಾದ - 'ವ್ಯತಿರೇಕವ್ಯಾಪ್ತಿಯಿಂದ ಗರ್ಭಿತವಾದ ಜೀವನಹೇತುತ್ವವನ್ನು ಪರಮಾತ್ಮನಲ್ಲಿ ಹೇಳುವುದು ಕಷ್ಟ. ಆದ್ದರಿಂದ ಶ್ರುತಿಯಿಂದಲೂ ಸಹ ಪರಮಾತ್ಮನಲ್ಲಿ ಜೀವನಹೇತುತ್ವವನ್ನು ಹೇಳಲು ಸಾಧ್ಯವಿಲ್ಲ' ಎಂದು ಸ್ವಯೂಥ್ಯರಲ್ಲಿ ಇನ್ನು ಕೆಲವರ ಅಭಿಪ್ರಾಯ.

ಇದೂ ಸಹ ತಪ್ಪು. ಹಾಗಾದರೆ ಎಲ್ಲೆಡೆ ವ್ಯಾಪ್ತವಾದ ಪ್ರಕೃತ್ಯಾದಿಗಳಿಗೆ ಕಾರಣತ್ವವನ್ನೇ ಹೇಳದಿರಬೇಕಾದೀತು. ಆದ್ದರಿಂದ ಜೀವನಾದಿಹೇತುತ್ವವು ಬ್ರಹ್ಮನಲ್ಲಿ ಬರುವುದಿಲ್ಲ. ಅಷ್ಟೇ ಅಲ್ಲದೆ ಮುಖ್ಯಪ್ರಾಣನಲ್ಲಿರುವ ಜೀವನಹೇತುತ್ವವು ವಿಷ್ಣುವಿನ ಅಧೀನವೆಂದು ಹೇಳಬಾರದು. ಹಾಗಾದಲ್ಲಿ ಜನ್ಮಾದಿಸೂತ್ರದಲ್ಲಿ ಸಮರ್ಥಿಸಿದ ಸ್ಥಿತಿಹೇತುತ್ವಕ್ಕೆ (ಜೀವನಹೇತುತ್ವಕ್ಕೆ) ವಿಷ್ಣುವಿನಲ್ಲಿ ಅಸಂಭವ-ದೋಷವು ಮುಖ್ಯಪ್ರಾಣನಲ್ಲಿ ಅತಿವ್ಯಾಪ್ತಿದೋಷವು ಬರಬೇಕಾದೀತು. ಹಾಗಾಗಿ ಪ್ರಾಣಶಬ್ದದಿಂದ ಮುಖ್ಯವಾಯುವೇ ವಾಚ್ಯನಾಗುತ್ತಾನೆ. ಆನಂದಮಯನೂ ಕೂಡ ಮುಖ್ಯವಾಯುವೇ ಆಗಬೇಕು. ಏಕೆಂದರೆ, ಹಿಂದಿನ ಅಂತರಧಿಕರಣದ ಪೂರ್ವಪಕ್ಷಕ್ಕೆ ವಿಷಯವಾದ ಇಂದ್ರಾದಿಗಳಿಗೆ ಆನಂದ-ಮಯತ್ವವನ್ನು ನಿರಾಕರಿಸಲಾಗಿತ್ತು. ಅದರಂತೆ ಪ್ರಾಣನಿಗೆ ಆನಂದಮಯನಿಂದ ಭೇದವನ್ನು ಆನಂದವಲ್ಲಿಯಲ್ಲಿ ಹೇಳಿಲ್ಲ. ಆದಕಾರಣ ಪ್ರಾಣನು ಆನಂದಮಯನಾಗಬಹುದು. ಮತ್ತು ಆಕಾಶಾಧಿಕರಣದ ಪೂರ್ವಪಕ್ಷಕ್ಕೆ ವಿಷಯವಾದ ಆಕಾಶವು ಜಡವಾದ್ದರಿಂದ ಆನಂದಮಯ-ವಲ್ಲವೆಂದು ಹೇಳಲಾಗಿತ್ತು. ಆದರೆ ಇಲ್ಲಿ ಪ್ರಾಣನು ಚೇತನನಾದ್ದರಿಂದ ಆನಂದಮಯ-ನಾಗಬಹುದು. ಈ ಎಲ್ಲಕಾರಣದಿಂದ 'ಅನ್ವಯವ್ಯತಿರೇಕತಃ' ಎಂಬ ಅನುವ್ಯಾಖ್ಯಾನದಲ್ಲಿ ಹೇಳಿದ ಅಧಿಕಾಶಂಕೆಯು ಅತ್ಯಂತ ಸಮಂಜಸವಾಗಿದೆ. ಇಷ್ಟು ಪ್ರಮೇಯಾಶ್ರಿತ ಪೂರ್ವಪಕ್ಷ.

ಕಠಿಣಪದಾರ್ಥ

ಅನ್ಯೇ ತು = ಮಾಧ್ವರಲ್ಲಿ ಕೆಲವು ವಿದ್ವಾಂಸರು, ತದ್ರಹಿತೇ = ವ್ಯತಿರೇಕಕ್ಕೆ ಆಶ್ರಯನಾಗದ, ತಸ್ಯ = ಪರಮಾತ್ಮನಿಗೆ, ತದಭಿಪ್ರಾಯಃ = ಅನುವ್ಯಾಖ್ಯಾನದ ಅಭಿಪ್ರಾಯ, ನಿತ್ಯವಿಭೂನಾಂ = ಪ್ರಕೃತ್ಯಾದಿಗಳಿಗೆ, ಅನ್ಯಗತಮ್ = ಮುಖ್ಯಪ್ರಾಣನಲ್ಲಿರುವ ಜೀವನಹೇತುತ್ವವು, ನಾಪಿ ತದಧೀನಂ = ಭಗವದಧೀನವಲ್ಲ, ಸ್ಥಿತಿಹೇತುತಾಯಾಃ = ಜೀವನಹೇತುತ್ವಲಕ್ಷಣಕ್ಕೆ, ತಸ್ಯ = ಪ್ರಾಣನಿಗೆ, ಇಂದ್ರಾದಿವತ್ = ಇಂದ್ರಾದಿಗಳಂತೆ, ಭೇದವ್ಯಪದೇಶಾಭಾವೇನ = ಭೇದವ್ಯಪದೇಶಾಚ್ಚ ಎಂಬ ಸೂತ್ರದಲ್ಲಿ ಹೇಳಿದ ಭೇದವಿಲ್ಲದ ಕಾರಣ, ಇಯಂಚ = ಅನುವ್ಯಾಖ್ಯಾನದಲ್ಲಿ ಹೇಳಿದ ಪ್ರಾಣಪದದ ಪ್ರವೃತ್ತಿನಿಮಿತ್ತವನ್ನು ಆಶ್ರಯಿಸಿದ ಪೂರ್ವಪಕ್ಷವು.

**ಪ್ರಕಾಶಃ** – ನನ್ವಸ್ತ್ವೀಶ್ವರಹೇತುತ್ವೇ ಶ್ರುತಿಪ್ರಮಾಣಶಙ್ಕಾ, ತನ್ನಿರಾಸಸ್ತು ನ ಮುಖ್ಯಪ್ರಾಣ-ವಿಷಯತ್ವಮುಪೈತ್ಯ, ಕಿಂ ತ್ವನ್ಯಥೈವೇತಿ ಭ್ರಮಮನೂದ್ಯ ನಿರಸ್ಯತಿ – **ಅನ್ಯೇ ತ್ವಿತಿ ॥ ತದ್ರಹಿತ ಇತಿ ॥** ನಿತ್ಯವಿಭುತ್ವಾದೇಶಾತಃ ಕಾಲತೋ ವಾ ಸ ನಾಸ್ತೀತಿ ಭಾವಃ । 'ನಿತ್ಯವಿಭೂನಾಂ' ಪ್ರಕೃತ್ಯಾದೀನಾಮ್ । ''ಪ್ರಾಣಶಬ್ದಪ್ರವೃತ್ತಿನಿಮಿತ್ತಸ್ಯ ವಾಯಾವೇವ'' ಇತಿ ಟೀಕಾಸ್ಥಾವಧಾರಣಸ್ಯ ಸ್ವಾತನ್ತ್ರ್ಯರೂಪಸ್ಯಾಪಿ ನ ವಿಷ್ಣಾವಿತ್ಯರ್ಥಾನ್ತರಮಪ್ಯುಪೈತ್ಯಾಹ – **ನಾಪೀತಿ ॥ ಸ್ವಾತನ್ತ್ರ್ಯಸ್ಯಾಪಿ ಶಬ್ದಪ್ರವೃತ್ತಿಹೇತುತ್ವೇನ ಪ್ರಾಣೋ ವಿಷ್ಣುಸ್ಸ್ಯಾತ್ ಇತಿ ಶಙ್ಕಾಭಿಪ್ರಾಯಃ ॥ ಅಸಮ್ಭವಾದಿತಿ ॥** ಭಗವತಿ ಜೀವನರೂಪಸ್ಥಿತಿಹೇತುತ್ವಸ್ಯಾಭಾವೇನಾನ್ಯತ್ರ ಭಾವೇನ ಚಾಸಮ್ಭವಾತಿವ್ಯಾಪ್ತೀ ಸ್ಯಾತಾಮಿತಿ ಭಾವಃ ।

ಟೀಕೋಕ್ತಮಾನನ್ದಮಯಾಕ್ಷೇಪಮನೂದ್ಯ ಸಮರ್ಥಯತೇ – **ಸ ಏವೇತಿ ॥** 'ಮಹಾಭೋಗಃ' ಇತ್ಯಾನನ್ದ-ಮಯತ್ವೇನೋಕ್ತಸ್ಯ ಪ್ರಾಣಸ್ಯ ಮುಖ್ಯತ್ವಾತ್ ಪ್ರಾಗುಕ್ತಾನನ್ದಮಯೋऽಪಿ ಸ ಏವ ಸ್ಯಾದಿತ್ಯರ್ಥಃ । 'ಇನ್ದ್ರಾದಿವತ್' ಇನ್ದ್ರಾದೇರಿವ ॥ **ಭೇದವ್ಯಪದೇಶೇತಿ ॥** ''ಭೇದವ್ಯಪದೇಶಾಚ್ಚ'' ಇತಿ ಸೂತ್ರಭಾಷ್ಯೋಕ್ತ-ದಿಶೇತಿ ಭಾವಃ । ''ಪ್ರಾಣಶಬ್ದಪ್ರವೃತ್ತಿ'' ಇತ್ಯಾದಿಟೀಕಾಯಾ ಮೂಲಂ ದರ್ಶಯನ್ನುಪಸಂಹರತಿ – **ತಸ್ಮಾದಿತಿ ॥ ಇಯಞ್ಚೇತಿ ॥** ಅನುವ್ಯಾಖ್ಯಾನೋಕ್ತಾ ಪ್ರಾಣಪದಪ್ರವೃತ್ತಿನಿಮಿತ್ತಾಶ್ರಿತೇತ್ಯರ್ಥಃ ।

ವಿವರಣೆ - ಭಗವಂತನು ಜೀವನಕ್ಕೆ ಕಾರಣನಾಗಿದ್ದಾನೆ ಎಂಬ ವಿಷಯದಲ್ಲಿ ಗ್ರಂಥಕಾರರು ಮಾಡಿದ ಶ್ರುತಿಪ್ರಮಾಣವನ್ನು ಉಲ್ಲೇಖಿಸಿದ್ದು ತಪ್ಪಲ್ಲ. ಆದರೆ ನಿರಾಕರಣೆಯಲ್ಲಿ ಸ್ವಲ್ಪವ್ಯತ್ಯಾಸ ಮಾಡಬೇಕು. ಗ್ರಂಥಕಾರರು ಶ್ರುತಿಪ್ರಮಾಣವನ್ನು ವಿಷ್ಣುವಿನಲ್ಲಿ ನಿರಾಕರಿಸುವಾಗ ಶ್ರುತಿಯು ಮುಖ್ಯಪ್ರಾಣ-ವಿಷಯಕವಾಗಿದೆ ಎಂದು ಹೇಳಿದರು. ಹೀಗೆ ಹೇಳುವುದಕ್ಕಿಂತ ವ್ಯತಿರೇಕವ್ಯಾಪ್ತಿಯಿಂದ ಗರ್ಭಿತವಾದ ಹೇತುತ್ವವು ಪರಮಾತ್ಮನಲ್ಲಿ ಹೇಳಲು ಸಾಧ್ಯವಿಲ್ಲ. ಆದ್ದರಿಂದ ಜೀವನಹೇತುತ್ವವಿಷಯದಲ್ಲಿ ಶ್ರುತಿಯು ಪ್ರಮಾಣವಲ್ಲ ಎಂದು ಹೇಳುವುದು ಹೆಚ್ಚು ಸ್ವರಸವಲ್ಲವೇ ! ಎಂದು ಮತ್ತೆ ಕೆಲವು ವಿದ್ವಾಂಸರ ವಾದ.

ಆದರೆ ಇವರ ವಾದವೂ ಕೂಡ ಭ್ರಾಂತಿಮೂಲಕವಾಗಿದೆ. ಸರ್ವತ್ರವ್ಯಾಪ್ತನಾದ ಭಗವಂತನಲ್ಲಿ ವ್ಯತಿರೇಕವನ್ನು ಹೇಳಲಾಗದ ಕಾರಣ ಕಾರಣತ್ವವು ತೀರ್ಮಾನವಾಗುವುದಿಲ್ಲವೆನ್ನುವುದಾದರೆ ನಿತ್ಯವಿಭು ಪದಾರ್ಥಗಳಾದ ಪ್ರಕೃತ್ಯಾದಿಗಳಿಗೂ ಕಾರಣತ್ವವನ್ನು ಹೇಳದಿರಬೇಕಾದೀತು. ಆದರೆ ಅನೇಕಶ್ರುತಿಗಳು ಪ್ರಕೃತ್ಯಾದಿಗಳಿಗೆ ಕಾರಣತ್ವವನ್ನು ಹೇಳುತ್ತಿವೆ.

'ಪ್ರಾಣಶಬ್ದಪ್ರವೃತ್ತಿನಿಮಿತ್ತಸ್ಯ ವಾಯಾವೇವ' (ಪ್ರಾಣಶಬ್ದದ ಪ್ರವೃತ್ತಿನಿಮಿತ್ತವು ಮುಖ್ಯಪ್ರಾಣನಲ್ಲಷ್ಟೇ ಬರುತ್ತದೆ) ಎಂಬ ಟೀಕೆಯಲ್ಲಿರುವ 'ಏವ'ಕಾರವು ಸ್ವಾತಂತ್ರ್ಯರೂಪವಾದ ಪ್ರವೃತ್ತಿನಿಮಿತ್ತವೂ ಕೂಡ ವಿಷ್ಣುವಿನಲ್ಲಿ ಬರುವುದಿಲ್ಲ ಎಂದು ಹೇಳುತ್ತಿದೆ. ಆಂದರೆ ಜೀವನಹೇತುತ್ವವು ಮುಖ್ಯಪ್ರಾಣನಲ್ಲಿದ್ದರೂ ಕೂಡ ಅದರ ಸ್ವಾತಂತ್ರ್ಯ ಭಗವಂತನಲ್ಲಿರುವುದರಿಂದ ಅವನೇ ಪ್ರಾಣನಾಗುತ್ತಾನೆ ಎಂದು ಶಂಕೆಯ ಅಭಿಪ್ರಾಯ. ಇದನ್ನು ಗ್ರಂಥಕಾರರು 'ನಾಪಿ' ಇತ್ಯಾದಿ ವಾಕ್ಯದಿಂದ ನಿರಾಕರಿಸಿದ್ದಾರೆ. ಜೀವನಹೇತುತ್ವವು ಮುಖ್ಯಪ್ರಾಣನಲ್ಲಿಯೇ ಇದ್ದು, ಆದರ ಸ್ವಾತಂತ್ರ್ಯವಷ್ಟೇ ಭಗವಂತನಲ್ಲಿ ಇದೆ ಎಂದು ನೀವು ಶಂಕಿಸುತ್ತಿದ್ದೀರಿ. ಹಾಗಾದರೆ ಜನ್ಮಾಧಿಕರಣದಲ್ಲಿ ಸ್ಥಿತಿಹೇತುತ್ವವು (ಜೀವನಕಾರಣತ್ವವು) ಭಗವಂತನ ಲಕ್ಷಣವೆಂದು ಹೇಳಿದ್ದು ತಪ್ಪಾಯಿತು. ಏಕೆಂದರೆ ಈಗ ಆ ಜೀವನಕರ್ತೃತ್ವವನ್ನು ಪ್ರಾಣನಲ್ಲಿ ಹೇಳುತ್ತಿದ್ದೀರಿ. ಆದ್ದರಿಂದ ವಿಷ್ಣುವಿನ ಲಕ್ಷಣ ವಿಷ್ಣುವಿನಲ್ಲಿ ಬಾರದ ಕಾರಣ ಅಸಂಭವದೋಷವೂ, ಮುಖ್ಯಪ್ರಾಣನಲ್ಲಿ ಬರುವ ಕಾರಣ ಅತಿವ್ಯಾಪ್ತಿದೋಷವೂ ಬರುತ್ತದೆ. ಪ್ರಾಣನಲ್ಲಿ ಆನಂದಮಯತ್ವವನ್ನು ಕೂಡ ಸುಲಭವಾಗಿ ಹೇಳಬಹುದೆಂದು ಟೀಕೆಯಲ್ಲಿ ಹೇಳಿದ್ದಾರೆ. ಅದನ್ನು ''ಸ ಏವ'' ಎಂಬ ಗ್ರಂಥದಿಂದ ವ್ಯಾಖ್ಯಾನಿಸಿದ್ದಾರೆ. 'ಮಹಾಭೋಗ' ಎಂಬ ಶಬ್ದದಿಂದ ಆನಂದಮಯತ್ವೇನ ಹೇಳಲ್ಪಟ್ಟ ಪ್ರಾಣನು ಮುಖ್ಯವಾಯುವೇ ಆಗಿರುವುದರಿಂದ ಆನಂದಮಯಾಧಿಕರಣದಲ್ಲಿ ಹೇಳಿದ ಆನಂದಮಯನೂ ಕೂಡ ಮುಖ್ಯವಾಯುವೇ ಆಗುತ್ತಾನೆ. ''ಪ್ರಾಣಶಬ್ದಪ್ರವೃತ್ತಿ'' ಇತ್ಯಾದಿ ಟೀಕೆಗೆ ವ್ಯಾಖ್ಯೇಯವಾದ ಮೂಲವನ್ನು ತೋರಿಸುತ್ತಾ ''ತಸ್ಮಾತ್'' ಎಂದು ಉಪಸಂಹಾರಮಾಡುತ್ತಿದ್ದಾರೆ. ಅನುವ್ಯಾಖ್ಯಾನದಲ್ಲಿ ಹೇಳಲ್ಪಟ್ಟ ಈ ಅಧಿಕಾಶಂಕೆಯು ಪ್ರಾಣಪದದ ಪ್ರವೃತ್ತಿನಿಮಿತ್ತವನ್ನು ಆಶ್ರಯಿಸಿ ಹೊರಟಿದೆ. ಇದು ಪ್ರಮೇಯಾಶ್ರಿತಪೂರ್ವಪಕ್ಷವೆಂದು ತಿಳಿಯಬೇಕು.

**ಗುರುರಾಜೀಯಮ್ – ನನು ಯತೋ ವೇತ್ಯಾದಿಶ್ರುತ್ಯೈವ ಬ್ರಹ್ಮಣೋ ಜೀವನಾದಿಹೇತುತ್ವ-ಮಸ್ತ್ವಿತ್ಯತ ಆಹ – ನಾಪೀತಿ ॥ ಅಸಮ್ಭವಾದಿಪ್ರಸಙ್ಗಾದಿತಿ ॥** ಜೀವನಾದಿಹೇತುತ್ವಸ್ಯ ಬ್ರಹ್ಮಗತತ್ವಾಭಾವೇನಾಸಮ್ಭವಃ । ಜೀವನಾದಿಹೇತುತ್ವಸ್ಯಾನ್ಯಗತತ್ವೇನಾತಿವ್ಯಾಪ್ತಿರಿತ್ಯರ್ಥಃ । ನನು ಮುಖ್ಯಪ್ರಾಣಸ್ಯಾಪಿ ನಾನನ್ದಮಯತ್ವಂ ಯುಕ್ತಮ್ । ಪೂರ್ವತ್ರ ಚಾತ್ರಾಪಿ ಭೇದವ್ಯಪದೇಶ-ರೂಪಬಾಧಕಸತ್ವಾದಿತಿ ತತ್ರಾಹ – **ತಸ್ಯೇತಿ ॥**

## ಸಾರ

ಭಗವಂತನು ಜೀವನಕಾರಣನೆಂದು ಶ್ರುತಿಯಿಂದ ಸಾಧಿಸಲಾಗದು. ಯಾವುದೇ ಕಾರಣತ್ವವಾದರೂ ಕೂಡ ವ್ಯತಿರೇಕವ್ಯಾಪ್ತಿಯಿಂದ ಗರ್ಭಿತವಾಗಿರುತ್ತದೆ. ಆದರೆ ಎಲ್ಲೆಡೆ ವ್ಯಾಪ್ತನಾದ ಭಗವಂತನಲ್ಲಿ ವ್ಯತಿರೇಕ-

ವ್ಯಾಪ್ತಿಯನ್ನು ಹೇಗೆ ಹೇಳುತ್ತೀರಿ? ಎಂದು ಕೆಲವರ ಗೊಂದಲ. ಇವರ ಗೊಂದಲಕ್ಕೆ ಆಸ್ಪದವಿಲ್ಲ. ಹಾಗಾದರೆ ಎಲ್ಲೆಡೆ ವ್ಯಾಪ್ತವಾಗಿರುವ ಪ್ರಕೃತ್ಯಾದಿಗಳಿಗೆ ಕಾರಣತ್ವವೇ ಸಿದ್ಧವಾಗದಿರಬೇಕಾದೀತು!

ಅಂತೂ ಜೀವನಹೇತುತ್ವವನ್ನು ಬ್ರಹ್ಮನಲ್ಲಿ ಒಪ್ಪಲು ಸಾಧ್ಯವಿಲ್ಲ. ಮುಖ್ಯಪ್ರಾಣಾದಿಗಳಲ್ಲಿರುವ ಜೀವನಹೇತುತ್ವಕ್ಕೆ ಬ್ರಹ್ಮನು ನಿಯಾಮಕನೂ ಆಗಲು ಸಾಧ್ಯವಿಲ್ಲವೆಂದು ಒಪ್ಪುವುದು ಅನಿವಾರ್ಯ. ಹಾಗಾದಲ್ಲಿ ಜನ್ಮಾದಿಸೂತ್ರದಲ್ಲಿ ಸಾಧಿಸಿದ ಸ್ಥಿತಿಹೇತುತ್ವಲಕ್ಷಣಕ್ಕೆ ಅಸಂಭವ ಹಾಗೂ ಅತಿವ್ಯಾಪ್ತಿದೋಷಗಳು ಬರುತ್ತವೆ. ಆದ್ದರಿಂದ ಜೀವನಕಾರಣನೆಂದು ನಿರ್ಣೀತನಾದ ಮುಖ್ಯಪ್ರಾಣನೇ ಆನಂದಮಯನಾಗಬೇಕು. ಆನಂದಮಯನಿಂದ ಮುಖ್ಯಪ್ರಾಣನಲ್ಲಿ ಭೇದವೂ ಕೇಳಿಸುತ್ತಿಲ್ಲ ಮತ್ತು ಚೇತನನೂ ಆಗಿರುವುದರಿಂದ ಮುಖ್ಯಪ್ರಾಣನೇ ಪ್ರಾಣಶಬ್ದದಿಂದ ವಾಚ್ಯನಾಗುತ್ತಾನೆ ಮತ್ತು ಆನಂದಮಯನಾಗುತ್ತಾನೆಂಬುದು ಪ್ರಮೇಯಾಶ್ರಿತಪೂರ್ವಪಕ್ಷ.

## ನಾಲ್ಕುಬಗೆಯ ಪ್ರಮಾಣಾಶ್ರಿತ ಪೂರ್ವಪಕ್ಷಗಳು

**ತಾತ್ಪರ್ಯಚನ್ದ್ರಿಕಾ –**

**ಪ್ರಮಾಣಾಶ್ರಿತಾ ತು – ಪೂರ್ವತ್ರಾಕಾಶಶ್ರುತೇರಿವ ಇಹ ನ ಶ್ರುತೇರಾವೃತ್ತಿಮಾತ್ರಮ್, ಕಿನ್ತು ''ತ್ವಂ ಪ್ರಾಣಃ'' ದೇವಾನ್ ಪ್ರಾಣಯಃ'' ''ಮಾತರಿಶ್ವಾ'' ಇತಿ ಶ್ರುತಿಬಹುತ್ವಮಸ್ತೀತಿ ನಿರವಕಾಶೇನಾಪಿ ನ ಬಾಧ ಇತ್ಯೇಕಾ । ಇಯಞ್ಚ ಭಾಷ್ಯೇ ಬಹುಶ್ರುತಿಯುಕ್ತವಿಷಯವಾಕ್ಯೋದಾಹರಣಾತ್ ಸೂಚಿತಾ ।**

**ಅನ್ಯಾ ತು – ಯದಿ ಪ್ರಾಣಶಬ್ದಸ್ಯ ಯೋಗೇನ ವಿಷ್ಣುಪರತಾ, ತರ್ಹಿ ಲಕ್ಷ್ಮ್ಯಾದಿಶಬ್ದಾನಾಮಪಿ ಯೋಗೇನ ಪ್ರಾಣಭಾರ್ಯಾಪರತ್ವಸಮ್ಭವಾತ್ ಲಕ್ಷ್ಮೀಪತಿತ್ವಾದಿಲಿಙ್ಗಸ್ಯೈವಾಸಿದ್ಧಿಃ । ಅಥ ಲಕ್ಷ್ಮ್ಯಾದಿಶಬ್ದೇಷು ನ ಪ್ರಸಿದ್ಧಾರ್ಥತ್ಯಾಗಃ, ತರ್ಹಿ ಪ್ರಾಣಶಬ್ದೇऽಪಿ ತಥಾ । ಇಯಞ್ಚ ''ಪ್ರಸಿದ್ಧೇರ್ವಾಯುಃ'' ಇತಿ ಭಾಷ್ಯೇ ಸೂಚಿತಾ । ಇಯಂ ಯದ್ಯಪಿ ಆಕಾಶಾದಿಶಬ್ದಸಾಧಾರಣೀ, ಆಕಾಶಶ್ರುತೇಃ ಪ್ರಸಿದ್ಧಾರ್ಥಹಾನೌ ಅನನ್ತತ್ವಾದಿಲಿಙ್ಗಾನಾಮಪಿ ತದ್ಧಾನಿಸ್ಸ್ಯಾತ್ ಇತಿ ಶಙ್ಕೋದಯಾತ್ । ತಥಾऽಪಿ ಪೂರ್ವಾಧಿಕರಣೇ ಅನುದ್ಧೃತೇತ್ಯಧಿಕಾಶಙ್ಕಾ ।**

**ಅಪರಾ ತು – ಮುಖ್ಯವಾಯೌ ಮುಖ್ಯಪ್ರಾಣತ್ವಪ್ರಸಿದ್ಧೇಃ ''ಮುಖೇ ಮುಖ್ಯಃ ಪ್ರಕೀರ್ತಿತಃ'' ಇತಿ ವಚನಾಚ್ಚ ಪ್ರಾಣಶಬ್ದಸ್ಯ ಪರಮಾತ್ಮನಿ ಮುಖ್ಯತ್ವಾಯೋಗಾತ್ ಮುಖ್ಯಸಮ್ಭವೇ ಚಾಮುಖ್ಯಗ್ರಹಣಾಯೋಗಾತ್ ನಾತ್ರ ಪ್ರಾಣಶಬ್ದಃ ಪರಮಾತ್ಮಪರಃ। ಆಕಾಶಶಬ್ದಸ್ಯ ತು ಭೂತೇ ಮುಖ್ಯತ್ವೇನ ಪ್ರಮಾಣಮಸ್ತೀತಿ । ಇಯಞ್ಚ ಟೀಕಾಯಾಂ ಮುಖ್ಯಪದಪ್ರಯೋಗಾದಿನಾ ಸೂಚಿತಾ ।**

**ಇತರಾತು ಪೂರ್ವವನ್ನಿರವಕಾಶಬ್ರಹ್ಮಲಿಙ್ಗಾಭಾವಾನ್ನ ಬ್ರಹ್ಮಪರತೇತಿ ।**

ಅನುವಾದ - ಪ್ರಮಾಣಾಶ್ರಿತಪೂರ್ವಪಕ್ಷ ಹೀಗಿದೆ - ಹಿಂದಿನ ಅಧಿಕರಣದಲ್ಲಿ ಆಕಾಶಶ್ರುತಿಯಲ್ಲಿ ಆವೃತ್ತಿಯನ್ನು ಹೇಳಲಾಗಿತ್ತು. ಆದರಂತೆ ಇಲ್ಲಿಯೂ ಪ್ರಾಣಶ್ರುತಿಯ ಆವೃತ್ತಿ ಇದೆ. ಅಷ್ಟೇ ಅಲ್ಲ

'ತ್ವಂ ಪ್ರಾಣಃ ದೇವಾನ್ ಪ್ರಾಣಯಃ ಮಾತರಿಶ್ವಾ,' ಎಂದು ಪ್ರಾಣ, ಮಾತರಿಶ್ವಾ ಇತ್ಯಾದಿಯಾಗಿ ಶ್ರುತಿಯಲ್ಲಿ ಬಹುತ್ವವೂ ಇದೆ. ಇಂತಹ ಶ್ರುತಿಬಹುತ್ವವನ್ನು ಲಿಂಗವು ನಿರವಕಾಶವಾದರೂ ಕೂಡ ಬಾಧಿಸಲು ಸಮರ್ಥವಾಗುವುದಿಲ್ಲ.' ಈ ಪೂರ್ವಪಕ್ಷವನ್ನು ಭಾಷ್ಯದಲ್ಲಿ 'ಬಹುಶ್ರುತಿಗಳಿಂದ ಕೂಡಿದ ವಿಷಯವಾಕ್ಯಗಳನ್ನು ಉದಾಹರಿಸುವ ಮೂಲಕವಾಗಿ ಸೂಚಿಸಿದ್ದಾರೆ.

ಮತ್ತೊಂದು ಪೂರ್ವಪಕ್ಷ - ಒಂದು ವೇಳೆ ಪ್ರಾಣಶಬ್ದವು ಯೋಗವೃತ್ತಿಯಿಂದ ವಿಷ್ಣುವನ್ನು ಪ್ರತಿಪಾದಿಸುವುದಾದರೆ ಆವಾಗ ಲಕ್ಷ್ಮೀ ಮೊದಲಾದ ಶಬ್ದಗಳೂ ಕೂಡ ಯೋಗವೃತ್ತಿಯಿಂದ ಭಾರತಿಯನ್ನು ಪ್ರತಿಪಾದಿಸಬಹುದಲ್ಲವೇ? ಆವಾಗ ಲಕ್ಷ್ಮೀಪತಿತ್ವಲಿಂಗವು ನಿರವಕಾಶವೆಂದೇ ಹೇಳಲಾಗದು. ಒಂದು ವೇಳೆ ಲಕ್ಷ್ಮೀ ಮೊದಲಾದ ಶಬ್ದಗಳಿಗೆ ಪ್ರಸಿದ್ಧಾರ್ಥವನ್ನು ಬಿಡಬಾರದೆಂದರೆ ಆವಾಗ ಪ್ರಾಣಶಬ್ದದ ಪ್ರಸಿದ್ಧಾರ್ಥವನ್ನು ಬಿಡಬಾರದು. ಈ ಪೂರ್ವಪಕ್ಷವನ್ನು ಭಾಷ್ಯದಲ್ಲಿ 'ಪ್ರಸಿದ್ಧೇರ್ವಾಯುಃ' ಎಂದು ಸೂಚಿಸಿದ್ದಾರೆ.

ಪ್ರಶ್ನೆ - ಎರಡನೆಯ ಈ ಪೂರ್ವಪಕ್ಷವನ್ನು ಆಕಾಶಾಧಿಕರಣದಲ್ಲಿ ಮಾಡಬಹುದಿತ್ತು. ಏಕೆಂದರೆ ಆಕಾಶಸ್ಮೃತಿಗೆ ಪ್ರಸಿದ್ಧಾರ್ಥವನ್ನು ಬಿಡುವುದಾದರೆ ವಿಷ್ಣುವಿನಲ್ಲಷ್ಟೇ ಪ್ರಸಿದ್ಧವಾದ ಅನಂತತ್ವಾದಿಲಿಂಗಗಳನ್ನು ಆಕಾಶಾದಿಗಳಲ್ಲಿ ಶಂಕಿಸಬಹುದಲ್ಲವೇ?

ಉತ್ತರ - ಆಕಾಶಾಧಿಕರಣದ ಸೂತ್ರದಲ್ಲಿ ಈ ಪೂರ್ವಪಕ್ಷವನ್ನು ನಿರಾಕರಿಸಿಲ್ಲ. ಆದರೆ 'ಅತ ಏವ ಪ್ರಾಣಃ' ಎಂಬ ಸೂತ್ರದಲ್ಲಿ 'ಏವ'ಕಾರದಿಂದ ನಿರಾಕರಿಸುವುದರಿಂದ ಇಲ್ಲಿಯೇ ಪೂರ್ವಪಕ್ಷವನ್ನು ಮಾಡಿದ್ದಾರೆ.

ಇನ್ನೊಂದು ಪೂರ್ವಪಕ್ಷ ಹೀಗಿದೆ - ಪ್ರಾಣಶಬ್ದವು ಮುಖ್ಯವಾಯುವಿನಲ್ಲಷ್ಟೇ ಲೋಕದಲ್ಲಿ ಪ್ರಸಿದ್ಧವಾಗಿದೆ. ಮತ್ತು 'ಮುಖೇ ಮುಖ್ಯಃ ಪ್ರಕೀರ್ತಿತಃ' ಎಂಬ ಪ್ರಮಾಣವು ಮುಖ್ಯವಾಯುವಿನಲ್ಲಷ್ಟೇ ಪ್ರಾಣಶಬ್ದವನ್ನು ಹೇಳುತ್ತಿದೆ. ಹೀಗೆ ಮುಖ್ಯವಾಯುವಿನಲ್ಲಿ ಪ್ರಾಣಶಬ್ದವು ಮುಖ್ಯವೆಂದು ಒಪ್ಪಬೇಕು. ಪರಮಾತ್ಮನಲ್ಲಿ ಮುಖ್ಯವಾಗಿರಲು ಸಾಧ್ಯವಿಲ್ಲ. ಪ್ರಾಣಶಬ್ದದಿಂದ ಮುಖ್ಯಾರ್ಥವನ್ನೇ ಇಟ್ಟುಕೊಳ್ಳಲು ಬರುವಾಗ ಅಮುಖ್ಯಾರ್ಥನಾದ ಪರಮಾತ್ಮನನ್ನು ವಿವಕ್ಷಿಸಬಾರದು. ಜಡಾಕಾಶದಲ್ಲಿ ಇದರಂತೆ ಆಕಾಶಶಬ್ದದ ಮುಖ್ಯಪ್ರಯೋಗವಿದೆಯೆನ್ನಲು ಯಾವುದೇ ಪ್ರಮಾಣವಿರುವುದಿಲ್ಲ. ಈ ಪೂರ್ವಪಕ್ಷವನ್ನು ಟೀಕೆಯಲ್ಲಿ ಮುಖ್ಯಪದಪ್ರಯೋಗದಿಂದ ಸೂಚಿಸಿದ್ದಾರೆ.

ಮಗದೊಂದು ಪೂರ್ವಪಕ್ಷ ಹೀಗಿದೆ - ಹಿಂದಿನ ಅಧಿಕರಣದಲ್ಲಿ ಅನಂತತ್ವವೆಂಬ ನಿರವಕಾಶ-ಬ್ರಹ್ಮಲಿಂಗದಿಂದ ಬ್ರಹ್ಮನನ್ನು ಆಕಾಶವೆಂದು ಸಾಧಿಸಿದರು. ಆದರೆ ಪ್ರಾಣನನ್ನು ಬ್ರಹ್ಮನೆನ್ನಲು ಅಂತಹ ಯಾವುದೇ ನಿರವಕಾಶಲಿಂಗಗಳಿರುವುದಿಲ್ಲ.

**ಪ್ರಕಾಶಃ – ''प्राणशब्दस्य तस्मिन् प्रसिद्धेः''** इत्यादिटीकायां श्रुतित्वनिरवकाशत्वाभ्यां लिङ्गात् श्रुतेः प्राबल्येन पूर्वपक्षोक्तिरुपलक्षणमिति मत्वाऽऽह –

**आवृत्तीति ॥** ''प्राणः, प्राणयः'' इत्यावृत्तिमात्रं नेत्यर्थः । ''त्वं भर्ता मातरिश्वा प्रजानाम्'' इति मातरिश्वश्रुतिर्ध्येया । 'निरवकाशेनापि' श्रीपतित्वालिङ्गेनेत्यर्थः । 'अपि' इत्यभ्युपगमः, तदभावस्याग्रे स्पष्टत्वात् ।

नन्वियं शङ्का गायत्र्यधिकरणे क्रियते । यदाहुः – **'कथं प्रसिद्धबहुलशब्दानामन्यथार्थता'** इतीति चेन्न, अनेकश्रुतिप्रसिद्ध्युपजीवनेन तत्र प्रवृत्तत्वात्, इह बहुत्वमात्रस्योपजीवनात् । यद्वा – गायत्रीवाक्पृथिव्यादिश्रुतीनां भिन्नविषयत्वादिहैकविषयतद्बाहुल्यस्याभिप्रेतत्वात् । नन्वथापि पादान्त्यप्राणाधिकरणे तादृक् श्रुतिबाहुल्यशङ्काऽपाक्रियते । तदुक्तं ''बाहुल्यात् श्रुतिलिङ्गयोः'' इति । सत्यं, तत्र बहुश्रुतिगतनिरवकाशत्वोपजीवनेन पूर्वपक्षप्रवृत्तिरिह तु बहुत्वमात्रोपजीवनेन प्रवृत्तिरिति ध्येयम् । वक्ष्यते चैतत्तत्रैव ॥ **योगेनेति ॥** ''लक्ष दर्शने'' इति धातोर्लक्षयति सर्वमित्यादियोगेनेत्यर्थः ॥ **भाष्ये सूचितेति ॥** ''भाष्येऽप्यस्य सर्वस्यापि स्वीकारार्थं प्रसिद्धेरित्याह'' इति सुधायां दिक्प्रदर्शनस्य कृतत्वादिति भावः ॥ **अनुद्धृतेति ॥** इहैव सौत्रैवकारेण लिङ्गनिरवकाशत्ववाचिनाद्ध्रियते । तथा चानेन रूपेण तदप्यत्रोदाहरणमित्युक्तं भवति ॥ **वचनाच्चेति ॥**

**चेष्टायां बाह्यवायौ च मुख्यप्राणे च गीयते ।**
**प्राणशब्दस्त्रिषु ह्येषु मुख्ये मुख्यः प्रकीर्तितः ॥**

इति वचनाच्चेत्यर्थः ॥ **मुख्यत्वायोगादिति ॥** प्रसिद्धिवचनयोरभावादिति भावः ।

नन्वाकाशशब्दस्य भूते मुख्यस्यापि बाधः कथमित्यत आह – **आकाशेति ॥** उपलक्षणमेतत् । इन्द्रादिशब्दस्य तत्र ''मुख्ये मुख्यः'' इत्यादिवदिन्द्राकाशादौ मुख्य इति वचनाभावात् । अत एव 'वचनाच्च' इत्युक्तम् । 'आदिना' इत्यादिपदेन प्रमाणकथनादिर्ग्राह्यः । 'पूर्ववत्' आकाशाधिकरण इवेत्यर्थः ।

ವಿವರಣೆ - ಇಲ್ಲಿಯ ತನಕ ಪ್ರಮೇಯಾಶ್ರಿತವಾದ ಪೂರ್ವಪಕ್ಷವನ್ನು ಮಾಡಿದ್ದಾಯಿತು. ಈಗ ನಾಲ್ಕು ಬಗೆಯಲ್ಲಿ ಪ್ರಮಾಣಾಶ್ರಿತವಾದ ಪೂರ್ವಪಕ್ಷಗಳನ್ನು ಮಾಡುತ್ತಿದ್ದಾರೆ.

'ಪ್ರಾಣಶಬ್ದಸ್ಯ ತಸ್ಮಿನ್ ಪ್ರಸಿದ್ಧೇಃ' (ಪ್ರಾಣಶಬ್ದವು ಮುಖ್ಯಪ್ರಾಣನಲ್ಲಿ ಪ್ರಸಿದ್ಧವಾದ್ದರಿಂದ) ಇತ್ಯಾದಿ ಟೀಕೆಯಲ್ಲಿ ಲಿಂಗಕ್ಕಿಂತ ಶ್ರುತಿತ್ವನಿರವಕಾಶತ್ವಪ್ರಯುಕ್ತವಾದ ಶ್ರುತಿಯೇ ಪ್ರಬಲವೆಂದು ಪೂರ್ವಪಕ್ಷ

ಮಾಡಿದ್ದಾರೆ. ಈ ಪೂರ್ವಪಕ್ಷವು ಕೇವಲ ಉಪಲಕ್ಷಣವೆಂದು ಇನ್ನೂ ಹಲವು ಬಗೆಯ ಪೂರ್ವಪಕ್ಷಗಳನ್ನು ತೋರಿಸುತ್ತಿದ್ದಾರೆ.

'ಪ್ರಾಣಃ ಪ್ರಾಣಯಃ' ಎಂದು ಪ್ರಾಣಶ್ರುತಿಯಲ್ಲಿ ಆವೃತ್ತಿಯಿದೆ. ಅಷ್ಟೇ ಅಲ್ಲ 'ತ್ವಂ ಭರ್ತಾ ಮಾತರಿಶ್ವಾ ಪ್ರಜಾನಾಮ್' ಎಂದು ಬಹುತ್ವವೂ ಇದೆ. ಹೀಗೆ ಬಹುತ್ವಪ್ರಯುಕ್ತವಾದ ಶ್ರುತಿಯನ್ನು ಶ್ರೀಪತಿತ್ವ ಮೊದಲಾದ ನಿರವಕಾಶಲಿಂಗದಿಂದ ಬಾಧಿಸಲು ಸಾಧ್ಯವಿಲ್ಲ. ನಿರವಕಾಶಲಿಂಗದಿಂದ ಶ್ರುತಿಗೆ ಬಾಧವನ್ನು ಅಂಗೀಕರಿಸಿ ಹೇಳಿರುವ ಮಾತಿದು. ವಸ್ತುತಃ ಇದು ಸಮ್ಮತವಲ್ಲವೆಂದು ಮುಂದೆ ಸ್ಪಷ್ಟ ಮಾಡುತ್ತೇವೆ. ಈ ಅಭ್ಯುಪಗಮವಾದವು 'ನಿರವಕಾಶೇನಾಪಿ' ಎಂಬಲ್ಲಿರುವ ಅಪಿಶಬ್ದದಿಂದ ತಿಳಿಯುತ್ತದೆ.

ಶಂಕೆ - ನಿರವಕಾಶಲಿಂಗಕ್ಕಿಂತಲೂ ಶ್ರುತಿಬಾಹುಲ್ಯಕ್ಕೆ ಪ್ರಾಧಾನ್ಯವೆಂಬ ಶಂಕೆಯನ್ನು ಗಾಯತ್ರ್ಯಧಿಕರಣದಲ್ಲಿ ಮಾಡುವವರಿದ್ದಾರೆ. ಅಲ್ಲಿ ಕೇಳಿಸುವ ಮಾತು -- 'ಕಥಂ ಪ್ರಸಿದ್ಧಬಹುಲಶಬ್ದಾನಾಮ್ ಅನ್ಯತಾರ್ಥತಾ?' (ಶ್ರುತಿಯಲ್ಲಿ ಬಾಹುಲ್ಯವಿದ್ದಮೇಲೆ ಅನ್ಯಾರ್ಥವು ಹೇಗೆ ಸಾಧ್ಯ?) ಎಂದು. ಅಲ್ಲಿ ಮಾಡುವ ಆಕ್ಷೇಪವನ್ನು ಪುನಃ ಇಲ್ಲಿ ಮಾಡಿದರೆ ಗತಾರ್ಥತ್ವ ಬರುತ್ತದಲ್ಲವೇ?

ಸಮಾಧಾನ - ವ್ಯತ್ಯಾಸವಿದೆ. ಗಾಯತ್ರ್ಯಧಿಕರಣದಲ್ಲಿ ಅನೇಕಶ್ರುತಿಪ್ರಸಿದ್ಧಿಯನ್ನು ಉಪಜೀವಿಸಿ ಶಂಕೆಯು ಹೊರಟಿದೆ. ಆದರೆ ಇಲ್ಲಿ ಶ್ರುತಿಬಹುತ್ವವನ್ನಷ್ಟೇ ಉಪಜೀವಿಸಿ ಶಂಕೆಯು ಹೊರಟಿದೆ. ಅಥವಾ ಗಾಯತ್ರ್ಯಧಿಕರಣದಲ್ಲಿ ಉದಾಹರಿಸುವ ಶ್ರುತಿಗಳು 'ಗಾಯತ್ರೀ, ವಾಕ್, ಪೃಥಿವೀ' ಮೊದಲಾದ ಅನೇಕ ಪದಾರ್ಥಗಳನ್ನು ವಿಷಯೀಕರಿಸುತ್ತಿವೆ. ಆದರೆ ಇಲ್ಲಿ ಉದಾಹರಿಸುವ ಪ್ರಾಣಶ್ರುತಿಯು ಪ್ರಾಣನನ್ನಷ್ಟೇ ವಿಷಯೀಕರಿಸುತ್ತಿದೆ.

ಶಂಕೆ - ಆದರೂ ಪಾದಾಂತ್ಯಪ್ರಾಣಾಧಿಕರಣದಿಂದ ಗತಾರ್ಥತ್ವ ಬರುತ್ತದೆ. ಏಕ ವಿಷಯಕವಾದ ಶ್ರುತಿಬಾಹುಲ್ಯಶಂಕೆಯನ್ನು ಅಲ್ಲಿ ನಿರಾಕರಿಸಿದ್ದಾರೆ. ಅಲ್ಲಿ ಕೇಳಿಸುವ ಮಾತು -- 'ಬಾಹುಲ್ಯಾತ್ ಶ್ರುತಿಲಿಂಗಯೋಃ' (ಶ್ರುತಿಲಿಂಗಗಳಲ್ಲಿ ಬಾಹುಲ್ಯವಿರುವುದಕ್ಕೆ ಪ್ರಾಧಾನ್ಯ) ಎಂದು ಹೇಳಿದೆಯಲ್ಲ.

ಪಾದಾಂತ್ಯಪ್ರಾಣಾಧಿಕರಣದಿಂದಲೂ ವೈಲಕ್ಷಣ್ಯವಿದೆ. ಅನೇಕಶ್ರುತಿಗಳಲ್ಲಿರುವ ನಿರವಕಾಶತ್ವವನ್ನು ಉಪಜೀವಿಸಿ ಪಾದಾಂತ್ಯಪ್ರಾಣಾಧಿಕರಣದ ಪೂರ್ವಪಕ್ಷವು ಹೊರಟಿದೆ. ಆದರೆ ಇಲ್ಲಿ ಕೇವಲ ಶ್ರುತಿಯಲ್ಲಿರುವ ಬಹುತ್ವವನ್ನು ಉಪಜೀವಿಸಿ ಪೂರ್ವಪಕ್ಷವು ಹೊರಟಿದೆ. ಹೆಚ್ಚಿನ ವಿಚಾರವನ್ನು ಅಲ್ಲಿಯೇ ವಿಮರ್ಶಿಸೋಣ.

ಲಕ್ಷ್ಮೀಶಬ್ದದ ಯೋಗಾರ್ಥವನ್ನು ಭಾರತಿಯಲ್ಲಿಯೂ ಹೇಳಬಹುದು. '' 'ಲಕ್ಷ ದರ್ಶನೇ' ಎಂಬ ಧಾತುವಿನಿಂದ ನಿಷ್ಪನ್ನವಾದ ಲಕ್ಷ್ಮೀಶಬ್ದಕ್ಕೆ 'ಎಲ್ಲವನ್ನೂ ತಿಳಿಸುತ್ತಾಳೆ' ಎಂಬ ಅರ್ಥವನ್ನು ಹೇಳಬಹುದು.'' ಎಂದು ಯೋಗೇನ ಎಂಬ ಗ್ರಂಥದಿಂದ ಹೇಳಿದ್ದಾರೆ.

'ಭಾಷ್ಯೇऽಪ್ಯಸ್ಯ ಸರ್ವಸ್ಯಾಪಿ ಸ್ವೀಕಾರಾರ್ಥಂ ಪ್ರಸಿದ್ಧೇರಿತ್ಯಾಹ' (ಭಾಷ್ಯದಲ್ಲಿಯೂ ಇದೆಲ್ಲವನ್ನೂ ತಿಳಿಯಬೇಕೆಂದು ಆಚಾರ್ಯರು ಪ್ರಸಿದ್ಧೇಃ ಎಂಬ ಪದವನ್ನು ಪ್ರಯೋಗಿಸಿದ್ದಾರೆ) ಎಂದು ಸುಧೆಯಲ್ಲಿ ದಿಕ್ಪದರ್ಶನ ಮಾಡಿದ್ದನ್ನು ಪ್ರಕೃತ ಗ್ರಂಥಕಾರರು 'ಭಾಷ್ಯೇ ಸೂಚಿತಾ' ಎಂದು ವಿವರಿಸಿದ್ದಾರೆ.

ಆಕಾಶಾಧಿಕರಣದಲ್ಲಿ ಎರಡನೆಯ ಈ ಪೂರ್ವಪಕ್ಷವನ್ನು ಏಕೆ ಮಾಡಿಲ್ಲವೆಂದರೆ ಸೂತ್ರಕಾರರು ಯಾವುದೇ ಪದಗಳಿಂದಲೂ ಈ ಪೂರ್ವಪಕ್ಷವನ್ನು ನಿರಾಕರಿಸಿಲ್ಲ. ಆದರೆ ಪ್ರಕೃತ ಪ್ರಾಣಾಧಿಕರಣದಲ್ಲಿ ಲಿಂಗಕ್ಕೆ ನಿರವಕಾಶತ್ವವನ್ನು ಸಮರ್ಥಿಸುವ 'ಏವ'ಕಾರದಿಂದ ಈ ಪೂರ್ವಪಕ್ಷವನ್ನು ನಿರಾಕರಿಸಿದ್ದಾರೆ. ಆದ್ದರಿಂದ ಈ ಮುಖದ ಪೂರ್ವಪಕ್ಷಕ್ಕೆ ಆಕಾಶಾಧಿಕರಣದ ಉದಾಹರಣವಾಕ್ಯವು ವಿಷಯವಾಗುತ್ತದೆ.

ಚೇಷ್ಟಾಯಾಂ ಬಾಹ್ಯವಾಯೌ ಚ ಮುಖ್ಯಪ್ರಾಣೇ ಚ ಗೀಯತೇ।
ಪ್ರಾಣಶಬ್ದಸ್ತ್ರಿಷು ಹ್ಯೇಷು ಮುಖೇ ಮುಖ್ಯಃ ಪ್ರಕೀರ್ತಿತಃ ॥

'ಚೇಷ್ಟೆ(ಕ್ರಿಯೆ) ಮತ್ತು ಜಡವಾಯು ಮುಖ್ಯಪ್ರಾಣ ಈ ಮೂರರಲ್ಲಿ ಪ್ರಾಣಶಬ್ದವು ಮುಖ್ಯವಾಗಿ ಮುಖ್ಯಪ್ರಾಣನಲ್ಲಿ ಪ್ರಸಿದ್ಧವಾಗಿದೆ.' ಎಂಬ ಪ್ರಮಾಣದಿಂದ ಮುಖ್ಯಪ್ರಾಣನೇ ಮುಖ್ಯವಾಚ್ಯನೆಂದು ತಿಳಿಯುತ್ತದೆ. ಆದರೆ ವಿಷ್ಣುವೂ ಮುಖ್ಯವಾಚ್ಯನೆನ್ನಲು ಯಾವುದೇ ಪ್ರಮಾಣವಿಲ್ಲವೆಂದು ತಿಳಿಯಬೇಕು.

ಹಾಗಾದರೆ ಆಕಾಶಶಬ್ದವು ಜಡಾಕಾಶದಲ್ಲಿ ಮುಖ್ಯವಾಗಿರುವಾಗ ಬಾಧವನ್ನು ಹೇಗೆ ಹೇಳಿದಿರಿ? ಎಂಬ ಪ್ರಶ್ನೆಗೆ 'ಆಕಾಶ' ಎಂಬ ಮಾತಿನಿಂದ ಉತ್ತರಿಸಿದ್ದಾರೆ. ಜಡಾಕಾಶದಲ್ಲಿ ಆಕಾಶಶಬ್ದದ ಮುಖ್ಯಪ್ರಯೋಗಕ್ಕೆ ಪ್ರಮಾಣವಿಲ್ಲ. ಇದು ಉಪಲಕ್ಷಣ. ಇಂದ್ರಾದಿಶಬ್ದಗಳೂ ಸಹ ಇಂದ್ರಾದಿಗಳಲ್ಲಿ ಮುಖ್ಯವಾಗಿದೆ ಎನ್ನಲು ಯಾವುದೇ ಪ್ರಮಾಣವಿಲ್ಲ. ಆದ್ದರಿಂದಲೇ ಗ್ರಂಥಕಾರರು ಕೇವಲ 'ವಚನಾಚ್ಚ' ಎಂದಷ್ಟೇ ಹೇಳಿದ್ದಾರೆ. 'ಮುಖ್ಯಪದಪ್ರಯೋಗಾದಿನಾ' ಎಂಬಲ್ಲಿರುವ ಆದಿಪದದಿಂದ ಪ್ರಮಾಣಗಳ ಉಲ್ಲೇಖವನ್ನು ವಿವಕ್ಷಿಸಬೇಕು.

**ಗುರುರಾಜೀಯಮ್ – ಯದ್ಯಪೀತಿ ॥** ತಥಾಚ ನೇಯಮಭ್ಯಧಿಕಾಶಙ್ಕೇತಿ ಶೇಷಃ । ನನು ಮುಖ್ಯವಾಯೌ ಪ್ರಾಣತ್ವಪ್ರಸಿದ್ಧ್ಯಾದೇರಿವ ಭೂತಾಕಾಶಸ್ಯ ಘಟಾಕಾಶತ್ವಪ್ರಸಿದ್ಧೇಃ ಸತ್ತ್ವೇನ ಪರಮಾತ್ಮನಿ ಮುಖ್ಯತ್ವಾಯೋಗಾತ್ ಮುಖ್ಯಸಮ್ಭವೇ ಚಾಮುಖ್ಯಗ್ರಹಣಾಯೋಗಾದಾಕಾಶಶಬ್ದೋ ನ ಬ್ರಹ್ಮಪರ ಇತಿ ಪೂರ್ವಾಧಿಕರಣೇऽಪಿ ಶಙ್ಕಾಸಮ್ಭವಾತ್ ಕಥಮಿಯಮಭ್ಯಧಿಕಾಶಙ್ಕೇತ್ಯತ ಆಹ – **ಆಕಾಶಶಬ್ದಸ್ಯೇತಿ ॥**

## ಪೂರ್ವಪಕ್ಷಿಗಳಿಗೆ ಲಕ್ಷ್ಮೀಪತಿತ್ವಲಿಂಗವು ಬಾಧಕವಲ್ಲ

**ತಾತ್ಪರ್ಯಚನ್ದ್ರಿಕಾ –**

ನಚ ಶ್ರೀಪತಿತ್ವಾದಿಕಂ ಲಿಙ್ಗಂ ನಿರವಕಾಶಮಿತಿ ವಾಚ್ಯಮ್; ''ಅದ್ಭ್ಯಃ ಸಮ್ಭೂತಃ'' ಇತ್ಯನುವಾಕೇ ''ಹ್ರೀಶ್ಚ ತೇ ಲಕ್ಷ್ಮೀಶ್ಚ ಪತ್ನ್ಯೌ''ಇತಿ ಉಕ್ತಸ್ಯ ವಿಷ್ಣುತ್ವೇऽಪಿ ''ಭರ್ತಾ ಸನ್ ಮ್ರಿಯಮಾಣಃ'' ಇತ್ಯನುವಾಕೇ ''ತದ್ವೈ ತ್ವಂ ಪ್ರಾಣಃ'' ಇತ್ಯುಕ್ತಸ್ಯ ''ತ್ವಂ ಭರ್ತಾ ಮಾತರಿಶ್ವಾ ಪ್ರಜಾನಾಮ್'' ಇತಿ ಮಾತರಿಶ್ವಶ್ರುತ್ಯಾ ''ಪ್ರಾಣಾಪಾನಾವಜಿರ ೪ಸಞ್ಚರನ್ತೌ'' ಇತ್ಯಪಾನ-

**साहित्यलिङ्गेन चाविष्णुत्वात् । इयमपि शङ्का ''न चात्र वाक्ये पूर्ववदनन्यथासिद्धं लिङ्गमस्ति'' इति सुधाग्रन्थेऽत्रपदेन सूचिता । तस्माद्युक्ता अधिकाशङ्का ।**

ಅನುವಾದ - ಪ್ರಾಣಶಬ್ದದಿಂದ ಪ್ರಾಣನು ವಾಚ್ಯನಾಗಲಾರ. ಏಕೆಂದರೆ ನಿರವಕಾಶವಾದ ಲಕ್ಷ್ಮೀಪತಿತ್ವಲಿಂಗವು ಬಾಧಕವಾಗಿದೆಯಲ್ಲ ಎಂಬ ಪ್ರಶ್ನೆಗೆ ಅವಕಾಶವಿಲ್ಲ. ಏಕೆಂದರೆ, 'ಅದ್ಭ್ಯಃ ಸಂಭೂತಃ' ಎಂಬ ಅನುವಾಕದಲ್ಲಿ 'ಶ್ರೀಶ್ಚ ತೇ ಲಕ್ಷ್ಮೀಶ್ಚ ಪತ್ನ್ಯೌ' ಎಂಬ ಲಕ್ಷ್ಮೀಪತಿತ್ವವನ್ನು ಹೇಳುವ ಶ್ರುತಿಯು ಪ್ರಸಕ್ತವಾಗಿದೆ. ಆದ್ದರಿಂದ 'ಅದ್ಭ್ಯಃ ಸಂಭೂತಃ' ಎಂಬ ಸಂಪೂರ್ಣ ಅನುವಾಕವು ವಿಷ್ಣುಪರವಾಗುತ್ತದೆ. ಆದರೆ 'ತದ್ವೈ ತ್ವಂ ಪ್ರಾಣಃ' ಎಂಬ ಶ್ರುತಿಯು ಈ ಅನುವಾಕದಲ್ಲಿ ಪ್ರಸಕ್ತವೇ ಆಗಿಲ್ಲ ಹೊರತಾಗಿ 'ಭರ್ತಾ ಸನ್ ಭ್ರಿಯಮಾಣಃ' ಎಂಬ ಬೇರೆ ಅನುವಾಕದಲ್ಲಿಯೇ ಪ್ರಸಕ್ತ - ವಾಗಿದೆ. 'ಭರ್ತಾ ಸನ್ ಭ್ರಿಯಮಾಣಃ' ಎಂಬ ಅನುವಾಕವು ವಿಷ್ಣುಪರವಲ್ಲ ಹೊರತು ಪ್ರಾಣ-ಪರವೇ ಆಗಿದೆ. ಏಕೆಂದರೆ, 'ತ್ವಂ ಭರ್ತಾ ಮಾತರಿಶ್ವಾ ಪ್ರಜಾನಾಂ' (ಎಲ್ಲ ಪ್ರಜೆಗಳಿಗೆ ಒಡೆಯನಾದ್ದರಿಂದ ನೀನು ಮಾತರಿಶ್ವನಾಗಿದ್ದಿ) ಎಂಬ ಮಾತರಿಶ್ವಶ್ರುತಿಯು ಮುಖ್ಯಪ್ರಾಣನನ್ನು ಹೇಳುತ್ತಿದೆ. ಅಷ್ಟೇ ಅಲ್ಲದೆ 'ಪ್ರಾಣಾಪಾನಾವಜಿರಂ ಸಂಚರಂತೌ' (ಪ್ರಾಣಾಪಾನರು ಜೊತೆಗೆ ಅಂಗಳದಲ್ಲಿ ಸಂಚರಿಸುತ್ತಾರೆ) ಎಂಬ ಅಪಾನಸಾಹಿತ್ಯಲಿಂಗವು ಕೇಳಿಸುತ್ತಿದೆ. ಇದರಿಂದ ಅನುವಾಕವು ಪ್ರಾಣಪರವೇ ಆಗಬೇಕು.

ಈ ಶಂಕೆಯನ್ನು ಸುಧೆಯಲ್ಲಿ 'ನ ಚಾತ್ರ ವಾಕ್ಯೇ ಪೂರ್ವವದನನ್ಯಥಾಸಿದ್ಧಂ ಲಿಂಗಮಸ್ತಿ' ಎಂಬ ವಾಕ್ಯದಲ್ಲಿರುವ 'ಅತ್ರ' ಎಂಬ ಪದದಿಂದ ಸೂಚಿಸಿದ್ದಾರೆ. ಆದ್ದರಿಂದ ಅಧಿಕಾಶಂಕೆಯು ಯುಕ್ತವಾಗಿದೆ.

**प्रकाशः – तत्र निरवकाशलिङ्गमाशङ्क्य तस्य भिन्नप्रकरणगतत्वेन परिहारमाह – नचेति ॥ अत्रपदेनेति ॥ तदनेन ''नचात्र वाक्ये पूर्ववदनन्यथासिद्धं किमपीश्वरलिङ्गमस्ति, येन श्रुतिबाधं प्रत्येष्यामः'' इति वाक्यं, श्रीपतित्वादिलिङ्गं भिन्नप्रकरणगतं, महाभोगत्वादिकं त्वन्यथासिद्धमित्याशयतया योज्यमित्युक्तं भवति ।**

ವಿವರಣೆ - 'ತದ್ವೈ ತ್ವಂ ಪ್ರಾಣೋ ಅಭವಃ' ಎಂಬ ಉಪನಿಷತ್ತಿನಲ್ಲಿರುವ ಪ್ರಾಣಶಬ್ದದಿಂದ ಮುಖ್ಯವಾಯುವು ವಾಚ್ಯವೆನ್ನಲು ನಿರವಕಾಶಶ್ರೀಪತಿತ್ವಲಿಂಗವು ಬಾಧಕವಾಗಿದೆಯಲ್ಲ ಎಂದು ಶಂಕಿಸಿ ಶ್ರೀಪತಿತ್ವಲಿಂಗವು ಬೇರೆ ಪ್ರಕರಣದಲ್ಲಿರುವುದರಿಂದ ಬಾಧಕವಾಗುವುದಿಲ್ಲವೆಂಬ ಪರಿಹಾರವನ್ನು ಪ್ರಕೃತ ಮಾಡುತ್ತಿದ್ದಾರೆ. ಈ ವ್ಯಾಖ್ಯಾನದಿಂದ ಸುಧೆಯ ಮಾತು ಸ್ಪಷ್ಟವಾಯಿತು - 'ನ ಚಾತ್ರ ವಾಕ್ಯೇ ಪೂರ್ವವದನನ್ಯಥಾಸಿದ್ಧಂ ಕಿಮಪೀಶ್ವರಲಿಂಗಮಸ್ತಿ । ಯೇನ ಶ್ರುತಿಬಾಧಂ ಪ್ರತ್ಯೇಷ್ಯಾಮಃ' ಈ ವಾಕ್ಯದಲ್ಲಿ

ಹಿಂದಿನಂತೆ ಅನ್ಯಥಾ ಸಿದ್ಧವಾಗದ ಯಾವುದೇ ಈಶ್ವರಲಿಂಗವಿರುವುದಿಲ್ಲ. ಹಾಗಿದ್ದಲ್ಲಿ ಶ್ರುತಿಬಾಧವನ್ನು ತಿಳಿಯಬಹುದಿತ್ತು. ಅಂದರೆ ಶ್ರೀಪತಿತ್ವಲಿಂಗವು ಬೇರೆ ಪ್ರಕರಣದಲ್ಲಿದೆ. ಮಹಾಭೋಗತ್ವಲಿಂಗವು ಅನ್ಯಥಾಸಿದ್ಧವಾಗಿದೆ. ಹಾಗಾಗಿ ಯಾವುದೇ ನಿರವಕಾಶವಾದ ವಿಷ್ಣುಲಿಂಗಗಳಿರುವುದಿಲ್ಲವೆಂದು ಸುಧೆಯ ಅಭಿಪ್ರಾಯ.

## ಸಾರ

ಲಕ್ಷ್ಮೀಪತಿತ್ವಲಿಂಗವಿರುವುದು ಬೇರೆ ಅನುವಾಕದಲ್ಲಿ. ಅದಕ್ಕೂ 'ತದ್ವೈ ತ್ವಂ ಪ್ರಾಣಃ' ಎಂಬ ಅನುವಾಕಕ್ಕೂ ಯಾವುದೇ ಸಂಬಂಧವಿಲ್ಲ. ಹೀಗಿರುವಾಗ ಮುಖ್ಯಪ್ರಾಣನು ಪ್ರಾಣಶಬ್ದದಿಂದ ವಾಚ್ಯನಾಗಲು ಲಕ್ಷ್ಮೀಪತಿತ್ವಲಿಂಗವು ಬಾಧಕವಲ್ಲ. ಈ ಅನುವಾಕದಿಂದ ಮುಖ್ಯಪ್ರಾಣನೇ ವಾಚ್ಯನೆನ್ನಲು ಮಾತರಿಶ್ವಶ್ರುತಿಯು ಅಪಾನಶ್ರುತಿಯ ಸಾಹಿತ್ಯವು ಪೂರಕವಾಗಿವೆ.

ಇಲ್ಲಿಗೆ ಎರಡು ಬಗೆಯ ಪ್ರಮೇಯಾಶ್ರಿತವಾದ ಪೂರ್ವಪಕ್ಷಗಳು ಮತ್ತು ನಾಲ್ಕುಬಗೆಯ ಪ್ರಮಾಣಾಶ್ರಿತಪೂರ್ವಪಕ್ಷಗಳು ಮುಗಿದವು.

---

## ಸಿದ್ಧಾಂತ
## (ವಿಷ್ಣುವಿನ ಶರೀರ ಮುಖ್ಯಪ್ರಾಣ)

**ತಾತ್ಪರ್ಯಚನ್ದ್ರಿಕಾ –**

**ತತ್ಪರಿಹಾರೇಣ ಸಿದ್ಧಾನ್ತಸ್ತು –**

**ವಾಯುವೃತ್ತಿರ್ಯಥಾ ಮುಖ್ಯಪ್ರಾಣದೇಹಸ್ತಥೈವ ಸಃ ।**
**ವಿಷ್ಣೋರ್ದೇಹಸ್ತತಸ್ತಸ್ಯೈವಾನ್ವಯವ್ಯತಿರೇಕಿತಾ ॥**

**ವಾಯುವೃತ್ತಿರ್ಮುಖ್ಯಪ್ರಾಣಸ್ಯೈವ ಸೋऽಪಿ ಹಿ ಬ್ರಹ್ಮಣೋ ದೇಹಸ್ಥಾನೀಯಃ । ಯುಕ್ತಶ್ಚ ಭೂಮಾಧಿಕರಣ ಈಶ್ವರಸ್ಯಾಸ್ಮದಾದಿಶರೀರಾದುತ್ಕ್ರಮಣಸ್ಯ ವಕ್ಷ್ಯಮಾಣತ್ವಾದಜೀವನದಶಾಯಾಂ ರೂಪ-ವಿಶೇಷಸ್ಯ ವ್ಯಕ್ತ್ಯಾತ್ಮನಾ ತತ್ಸಂಯೋಗಾಭಾವಾತ್ ವ್ಯತಿರೇಕಃ । ''ಇತರೇಣ'' ಇತಿ ಶ್ರುತೌ ಇತರಶಬ್ದೋ ಬ್ರಹ್ಮಪರಃ, ಪೂರ್ವತ್ರ ''ಮಧ್ಯೇ ವಾಮನಂ'' ಇತಿ ವಾಮನಶಬ್ದಾತ್, ಉತ್ತರತ್ರ ಚ ''ಗುಹ್ಯಂ ಬ್ರಹ್ಮ ಸನಾತನಂ'' ಇತಿ ಬ್ರಹ್ಮಶಬ್ದಾತ್ । ಕಿಞ್ಚ ಮುಖ್ಯಪ್ರಾಣಸ್ಯ ಜೀವನಾದಿಹೇತುತ್ವೇऽಪಿ ತಸ್ಯ ಭಗವದಧೀನತ್ವೇನಾಪಿ ತತ್ರ ಪ್ರಾಣಶಬ್ದೋ ಮುಖ್ಯಃ ।**

ಅನುವಾದ - ಎಲ್ಲ ಪೂರ್ವಪಕ್ಷಗಳನ್ನು ಪರಿಹರಿಸುವ ಸಿದ್ಧಾಂತ ಹೀಗಿದೆ -

ವಾಯುವೃತ್ತಿರ್ಯಥಾ ಮುಖ್ಯಪ್ರಾಣದೇಹಸ್ತಥೈವ ಸಃ।
ವಿಷ್ಣೋರ್ದೇಹಸ್ತತಸ್ತಸ್ಯೈವಾನ್ವಯವ್ಯತಿರೇಕತಾ ॥

ಭೌತಿಕವಾದ ಪ್ರಾಣವಾಯುವು ಹೇಗೆ ಮುಖ್ಯಪ್ರಾಣನ ಶರೀರವಾಗಿದೆಯೋ, ಅದರಂತೆ ಮುಖ್ಯಪ್ರಾಣನು ವಿಷ್ಣುವಿನ ಶರೀರ. ಆದ್ದರಿಂದ ಅನ್ವಯವ್ಯತಿರೇಕವು ವಿಷ್ಣುವಿನಲ್ಲಷ್ಟೇ ಬರುತ್ತದೆ.

ಶ್ಲೋಕವ್ಯಾಖ್ಯಾನ - ಭೌತಿಕಪ್ರಾಣವಾಯುವು ಮುಖ್ಯಪ್ರಾಣನ ಶರೀರವಾದಂತೆ ಮುಖ್ಯಪ್ರಾಣನು ವಿಷ್ಣುವಿನ ಶರೀರನಾಗಿದ್ದಾನೆ. ಅನ್ವಯವ್ಯತಿರೇಕವನ್ನು ವಿಷ್ಣುವಿನಲ್ಲಿ ಸುಲಭವಾಗಿ ಹೇಳಬಹುದು. ಮುಂದೆ ಭೂಮಾಧಿಕರಣದಲ್ಲಿ ಹೇಳುವಂತೆ ನಮ್ಮೆಲ್ಲರ ಶರೀರದಿಂದ ಭಗವಂತನಿಗೆ ಉತ್ಕ್ರಮಣವಿದೆ. ಮರಣವನ್ನು ಆಪ್ತಿದಾಗ ಭಗವಂತನ ರೂಪವಿಶೇಷಕ್ಕೆ ನಮ್ಮ ಶರೀರದಿಂದ ವ್ಯಕ್ತಾತ್ಮನಾ ಸಂಯೋಗವಿರುವುದಿಲ್ಲ ಅಂದರೆ ಮೃತದೇಹದಲ್ಲಿ ಭಗವಂತನು ಶಕ್ತಿರೂಪದಿಂದ ಇದ್ದರೂ ವ್ಯಕ್ತಿರೂಪದಿಂದ ಇರುವುದಿಲ್ಲ. ಆದ್ದರಿಂದ ವ್ಯತಿರೇಕವ್ಯಾಪ್ತಿಯನ್ನು ವ್ಯಕ್ತಾತ್ಮನಾ ಹೇಳಬಹುದು.

'ಇತರೇಣ' ಎಂಬ ಕಾಠಕಶ್ರುತಿಯಲ್ಲಿ ಇತರಶಬ್ದವು ಬ್ರಹ್ಮಪರವೇ ಆಗಿದೆ. ಏಕೆಂದರೆ, ಈ ಶ್ರುತಿಯ ಹಿಂದೆ 'ಮಧ್ಯೇ ವಾಮನಮ್' ಎಂದು ವಿಷ್ಣುಪರವಾದ ವಾಮನಶ್ರುತಿಯಿದೆ. ಮುಂದೆಯೂ 'ಗುಹ್ಯಂ ಬ್ರಹ್ಮ ಸನಾತನಮ್' ಎಂದು ವಿಷ್ಣುಪರವಾದ ಬ್ರಹ್ಮಶ್ರುತಿಯಿದೆ.

ಮತ್ತು ಮುಖ್ಯಪ್ರಾಣನು ಜೀವನಕಾರಣನಾದರೂ ಅವನಲ್ಲಿರುವ ಜೀವನಕಾರಣತ್ವವು ಭಗವದಧೀನವಾಗಿದೆ. ಆದ್ದರಿಂದಲೂ ವಿಷ್ಣುವೇ ಪ್ರಾಣಶಬ್ದದಿಂದ ಮುಖ್ಯವಾಚ್ಯನಾಗುತ್ತಾನೆ.

ಕಠಿಣಪದಾರ್ಥ

ತತ್ಪರಿಹಾರೇಣ = ಪೂರ್ವಪಕ್ಷದ ಪರಿಹಾರದಿಂದ, ವಾಯುವೃತ್ತಿಃ = ಜಡವಾದ ಪ್ರಾಣವಾಯುವು, ಸಃ = ಮುಖ್ಯಪ್ರಾಣನು, ತಸ್ಯೈವ = ವಿಷ್ಣುವಿಗೆ, ಸೋಽಪಿ = ಮುಖ್ಯಪ್ರಾಣನಾದರೂ, ದೇಹಸ್ಥಾನೀಯಃ = ದೇಹದಂತಿದ್ದಾನೆ, ವ್ಯಕ್ತಾತ್ಮನಾ = ಪ್ರಕಟರೂಪದಿಂದ, ತತ್ಸಂಯೋಗಾಭಾವಾತ್ = ರೂಪವಿಶೇಷದ ಸಂಯೋಗವಿಲ್ಲದ್ದರಿಂದ, ಪೂರ್ವತ್ರ = ಇತರೇಣ ಎಂಬ ಶ್ರುತಿಯ ಹಿಂದೆ, ತಸ್ಯ = ಮುಖ್ಯಪ್ರಾಣನ, ತತ್ರ = ವಿಷ್ಣುವಿನಲ್ಲಿ.

**ಪ್ರಕಾಶಃ** – ನನು 'ಏತಚ್ಛಙ್ಕಾನಿರಾಸಕನ್ಯಾಯಂ ಸೂತ್ರೇ ನೋಪಲಭಾಮಹೇ' ಇತ್ಯಾಶಙ್ಕ್ಯ, 'ಪ್ರಾಣಸ್ತನ್ತ್ರ', ಇತಿ ಪ್ರತಿಜ್ಞಾಂಶತಾತ್ಪರ್ಯೇ ವ್ಯಞ್ಜಯನ್, ಆದಾವನುವ್ಯಾಖ್ಯಾನೋಕ್ತಪ್ರಮೇಯಾಶ್ರಿತಾಭ್ಯಧಿಕಾಶಙ್ಕಯೋರ್ಮಧ್ಯೇ, ನ ವಿಷ್ಣೋರ್ಜೀವನಾದಿಹೇತುತ್ವಮನ್ವಯವ್ಯತಿರೇಕಕಲ್ಪ್ಯಮಿತಿ ಯದುಕ್ತಂ, ತಚ್ಛಙ್ಕಾನಿವರ್ತನಪ್ರಕಾರಂ ಸಙ್ಗೃಹ್ಣಾತಿ – **ತತ್ಪರಿಹಾರೇಣೇತಿ ॥ ''ಪ್ರಾಣಗತಜೀವನಾದಿಕಾರಣತ್ವಸ್ಯಾಪಿ ಭಗವದಧೀನತ್ವಾತ್''** ಇತಿ ಟೀಕಾ ಉಪಲಕ್ಷಣಮ್ । ಅತ ಏವ **''ಪ್ರೇರಕೋऽಸ್ಯಾಪಿ'' ಇತ್ಯನುವ್ಯಾಖ್ಯಾನಂ 'ಅಸ್ಯಾಪಿ'** ಜೀವನಾದೇರಪಿ ಇತ್ಯಪಿ ಇತಿ ಸುಧಾಯಾಂ ವ್ಯಾಖ್ಯಾತಮಿತಿ

ಭಾವಃ । 'ದೇಹ' ಇತ್ಯುಕ್ತ್ವಾ ಮುಖ್ಯದೇಹಭ್ರಮಂ ವಾರಯನ್ ವ್ಯಾಚಷ್ಟೇ – **ವಾಯುವೃತ್ತಿರಿತಿ** । 'ಸೋऽಪಿ' ಮುಖ್ಯೋऽಪಿ ।

ತಥಾಚ ಯಥಾ ಪ್ರಾಣಶರೀರಭೂತವಾಯೋರ್ಜೀವನಂ ಪ್ರತ್ಯನ್ವಯಾದಿದರ್ಶನಮಾತ್ರೇಣ ಮುಖ್ಯಸ್ಯ ತತ್ರ ಹೇತುತ್ವಂ, ತಥಾ ಮುಖ್ಯಸ್ಯಾಪಿ ಸಾಕ್ಷಾತ್ಪ್ರಯತ್ನಾಧಿಷ್ಠೇಯತ್ವೇನ ವಿಷ್ಣುದೇಹತ್ವಾತ್ತದನ್ವಯಾದಿದರ್ಶನಮಾತ್ರೇಣ ತಸ್ಯ ತತ್ರ ಹೇತುತ್ವಂ ಭವಿಷ್ಯತೀತ್ಯರ್ಥಃ । ಏತೇನಾಶರೀರತ್ವಾನ್ನ ತಚ್ಛರೀರಸ್ಯಾಸ್ಮದಾದಿಶರೀರೇ ವ್ಯತಿರೇಕ ಇತಿ ನಿರಸ್ತಮ್ । ಪ್ರಾಣಸ್ಯ ತಚ್ಛರೀರತ್ವೇನ ವ್ಯತಿರೇಕಸಮ್ಭವಾತ್ ।

ಯದಪ್ಯಸ್ಮದಾದಿಶರೀರೇ ತಸ್ಯ ಸರ್ವಗತತ್ವಾತ್ ವ್ಯತಿರೇಕೋ ನೇತಿ, ತನ್ನಿರಸ್ಯತಿ – **ಯುಕ್ತಶ್ಚೇತಿ ॥ ವ್ಯಕ್ತ್ಯಾತ್ಮನೇತಿ ॥** ಶಕ್ತ್ಯಾತ್ಮನಾ ತತ್ಸಂಯೋಗಸ್ಯ ಸತ್ತ್ವೇನ ಸರ್ವಗತತ್ವೋಕ್ತಿರಿತಿ ಭಾವಃ । ವಿವರಿಷ್ಯತೇ ಚೈತದ್ಭೂಮಾದಿನಯೇ । ಯದಪಿ ನಾಪಿ ಶ್ರುತಿಸಿದ್ಧಮಿತ್ಯಾದಿ, ತಚ್ಚ 'ಯೇನ ಜೀವನ್ತಿ' ಇತ್ಯಾದೇರ್ಬ್ರಹ್ಮಪರತ್ವಂ **ಜನ್ಮಾದಿಸೂತ್ರೇ ಸಿದ್ಧಮಿತಿ ಭಾವೇನ ಟೀಕೋಕ್ತಕಾಠಕಶ್ರುತೇ**ರ್ಬ್ರಹ್ಮಪರತ್ವಂ ಸಾಧಯತಿ – **ಇತರೇಣೇತಿ ॥ ವಾಮನೇತಿ ॥** ವಕ್ಷ್ಯತೇ ಚ **ವಾಮನಶ್ರುತೇರ್ವೈಷ್ಣವತ್ವಂ** ''**ಶಬ್ದಾದೇವ**'' ಇತ್ಯತ್ರ । ಪ್ರಾಣಗತಸ್ಯೇಶಾಧೀನತ್ವೇ ಸಾಕ್ಷಿತಯಾ **ಟೀಕೋಕ್ತಾऽಪಿ** 'ಇತರೇಣ' ಇತಿ ಶ್ರುತಿಸ್ತದ್ಗತತ್ವೇऽಪಿ ಪ್ರಮಾಣಂ ಭವತೀತಿ ಭಾವಃ ।

ಏವಂ 'ಜೀವನಹೇತುತ್ವಂ ಪ್ರಾಣಪದಪ್ರವೃತ್ತಿನಿಮಿತ್ತಂ ಭಗವದ್ಗತಮ್' ಇತಿ ಸಮರ್ಥ್ಯ, ಇದಾನೀಂ 'ಟೀಕೋಕ್ತರೀತ್ಯಾऽನ್ಯಗತಂ ಚ ಭಗವದಧೀನಮೇವ ತತಶ್ಚ ಪ್ರಾಣಶಬ್ದಾರ್ಥೋ ಭಗವಾನೇವ' ಇತ್ಯಭಿಪ್ರೇತ್ಯಾಹ – **ಕಿಞ್ಚೇತಿ ॥** ನಚ ಪ್ರಾಗುಕ್ತಾಸಮ್ಭವಾದಿಪ್ರಸಙ್ಗಃ, ಅನನ್ಯಾಧೀನಜೀವನಹೇತುತ್ವಸ್ಯ ಭಗವನ್ಮಾತ್ರಗತತ್ವೇನಾನ್ಯಗತತ್ವಾಭಾವಾತ್ ತಸ್ಯೈವ ಲಕ್ಷಣತ್ವೇನ **ಜನ್ಮಾದಿಸೂತ್ರೇ** ಅಭಿಪ್ರೇತತ್ವಾದಿತಿ ತಾತ್ಪರ್ಯಾತ್ । ಅತ ಏವ ತದ್ಗತತ್ವಸ್ಯಾಪಿ ಸಮರ್ಥನಮಕಾರಿ । **ಟೀಕಾಯಾಂ** ತು ಜನ್ಮಾದಿಸೂತ್ರಾದೌ ಸಿದ್ಧತ್ವಾತ್ಕಣ್ಠತೋ ನೋಕ್ತಮ್ ।

ವಿವರಣೆ - ಇಲ್ಲಿಯ ತನಕ ಎರಡು ಬಗೆಯ ಪ್ರಮೇಯಾಶ್ರಿತಪೂರ್ವಪಕ್ಷಗಳನ್ನು ನಾಲ್ಕುಬಗೆಯ ಪ್ರಮಾಣಾಶ್ರಿತಪೂರ್ವಪಕ್ಷಗಳನ್ನು ಮಾಡಿದ್ದಾಯಿತು. ಆ ಎಲ್ಲ ಪೂರ್ವಪಕ್ಷಗಳನ್ನು ಪ್ರಕೃತ ನಿರಾಕರಿಸಿ ಸಿದ್ಧಾಂತವನ್ನು ಸ್ಥಾಪಿಸುತ್ತಿದ್ದಾರೆ. ಪೂರ್ವಪಕ್ಷ ನಿರಾಸಕವಾದ ನ್ಯಾಯವು ಸೂತ್ರದಲ್ಲಿ ಕಾಣಿಸುತ್ತಿಲ್ಲವೆಂಬ ಗೊಂದಲಕ್ಕೆ ಆವಕಾಶವಿಲ್ಲ. 'ಪ್ರಾಣಃ ತತ್ತು' ಎಂಬ ಪ್ರತಿಜ್ಞೆಯಿಂದಲೇ ಪೂರ್ವಪಕ್ಷಗಳನ್ನು ನಿರಾಕರಿಸಿದ್ದಾರೆ. ಹಿಂದೆ ಅನುವ್ಯಾಖ್ಯಾನದಲ್ಲಿ ಹೇಳಿದಂತೆ ಎರಡು ಬಗೆಯಲ್ಲಿ ಪ್ರಮೇಯಾಶ್ರಿತ ಪೂರ್ವಪಕ್ಷಗಳನ್ನು ಮಾಡಿದ್ದರು. ಅವುಗಳಲ್ಲಿ ಅನ್ವಯವ್ಯತಿರೇಕದಿಂದ ಜೀವನಕಾರಣತ್ವವನ್ನು ವಿಷ್ಣುವಿನಲ್ಲಿ ಹೇಳಲಾಗದೆಂಬ ಶಂಕೆಯನ್ನು ಪರಿಹರಿಸುತ್ತಿದ್ದಾರೆ. ಪರಿಹಾರದ ವಿವರಣೆಯನ್ನು ಶ್ಲೋಕದ ಮೂಲಕ ಸಂಗ್ರಹಿಸಿದ್ದಾರೆ.

ವಾಯುವೃತ್ತಿರ್ಯಥಾ ಮುಖ್ಯಪ್ರಾಣದೇಹಸ್ತಥೈವ ಸಃ।
ವಿಷ್ಣೋರ್ದೇಹಸ್ತತಸ್ತಸ್ಯೈವಾನ್ವಯವ್ಯತಿರೇಕತಾ ॥

ಭೌತಿಕವಾದ ಪ್ರಾಣವಾಯುವು ಹೇಗೆ ಮುಖ್ಯಪ್ರಾಣನ ಶರೀರವಾಗಿದೆಯೋ, ಅದರಂತೆ ಮುಖ್ಯಪ್ರಾಣನು ವಿಷ್ಣುವಿನ ಶರೀರ. ಆದ್ದರಿಂದ ಅನ್ವಯವ್ಯತಿರೇಕವು ವಿಷ್ಣುವಿನಲ್ಲಷ್ಟೇ ಬರುತ್ತದೆ.

ಶ್ಲೋಕವ್ಯಾಖ್ಯಾನ - ಭೌತಿಕಪ್ರಾಣವಾಯುವು ಮುಖ್ಯಪ್ರಾಣನ ಶರೀರವಾದಂತೆ ಮುಖ್ಯಪ್ರಾಣನು ವಿಷ್ಣುವಿನ ಶರೀರನಾಗಿದ್ದಾನೆ. ಆನ್ವಯವ್ಯತಿರೇಕವನ್ನು ವಿಷ್ಣುವಿನಲ್ಲಿ ಸುಲಭವಾಗಿ ಹೇಳಬಹುದು. ಮುಂದೆ ಭೂಮಾಧಿಕರಣದಲ್ಲಿ ಹೇಳುವಂತೆ ನಮ್ಮೆಲ್ಲರ ಶರೀರದಿಂದ ಭಗವಂತನಿಗೆ ಉತ್ಕ್ರಮಣವಿದೆ. ಮರಣವನ್ನು ಅಪ್ಪಿದಾಗ ಭಗವಂತನ ರೂಪವಿಶೇಷಕ್ಕೆ ನಮ್ಮ ಶರೀರದಿಂದ ವ್ಯಕ್ತ್ಯಾತ್ಮನಾ ಸಂಯೋಗವಿರುವುದಿಲ್ಲ ಅಂದರೆ ಮೃತದೇಹದಲ್ಲಿ ಭಗವಂತನು ಶಕ್ತಿರೂಪದಿಂದ ಇದ್ದರೂ ವ್ಯಕ್ತಿರೂಪದಿಂದ ಇರುವುದಿಲ್ಲ. ಆದ್ದರಿಂದ ವ್ಯತಿರೇಕವ್ಯಾಪ್ತಿಯನ್ನು ವ್ಯಕ್ತ್ಯಾತ್ಮನಾ ಹೇಳಬಹುದು.

'ಇತರೇಣ' ಎಂಬ ಕಾಠಕಶ್ರುತಿಯಲ್ಲಿ ಇತರಶಬ್ದವು ಬ್ರಹ್ಮಪರವೇ ಆಗಿದೆ. ಏಕೆಂದರೆ, ಈ ಶ್ರುತಿಯ ಹಿಂದೆ 'ಮಧ್ಯೇ ವಾಮನಮ್' ಎಂದು ವಿಷ್ಣುಪರವಾದ ವಾಮನಶ್ರುತಿಯಿದೆ. ಮುಂದೆಯೂ 'ಗುಹ್ಯಂ ಬ್ರಹ್ಮ ಸನಾತನಮ್' ಎಂದು ವಿಷ್ಣುಪರವಾದ ಬ್ರಹ್ಮಶ್ರುತಿಯಿದೆ.

ಮತ್ತು ಮುಖ್ಯಪ್ರಾಣನು ಜೀವನಕಾರಣನಾದರೂ ಅವನಲ್ಲಿರುವ ಜೀವನಕಾರಣತ್ವವು ಭಗವದಧೀನವಾಗಿದೆ. ಆದ್ದರಿಂದಲೂ ವಿಷ್ಣುವೇ ಪ್ರಾಣಶಬ್ದದಿಂದ ಮುಖ್ಯವಾಚ್ಯನಾಗುತ್ತಾನೆ.

### ಕಠಿಣಪದಾರ್ಥ

ತತ್ಪರಿಹಾರೇಣ = ಪೂರ್ವಪಕ್ಷದ ಪರಿಹಾರದಿಂದ, ವಾಯುವೃತ್ತಿಃ = ಜಡವಾದ ಪ್ರಾಣವಾಯುವು, ಸಃ = ಮುಖ್ಯಪ್ರಾಣನು, ತಸ್ಯೈವ = ವಿಷ್ಣುವಿಗೆ, ಸೋಽಪಿ = ಮುಖ್ಯಪ್ರಾಣನಾದರೂ, ದೇಹಸ್ಥಾನೀಯಃ = ದೇಹದಂತಿದ್ದಾನೆ, ವ್ಯಕ್ತ್ಯಾತ್ಮನಾ = ಪ್ರಕಟರೂಪದಿಂದ, ತತ್ಸಂಯೋಗಾಭಾವಾತ್ = ರೂಪವಿಶೇಷದ ಸಂಯೋಗವಿಲ್ಲದ್ದರಿಂದ, ಪೂರ್ವತ್ರ = ಇತರೇಣ ಎಂಬ ಶ್ರುತಿಯ ಹಿಂದೆ, ತಸ್ಯ = ಮುಖ್ಯಪ್ರಾಣನ, ತತ್ರ = ವಿಷ್ಣುವಿನಲ್ಲಿ.

**ಪ್ರಕಾಶಃ** – ನನು 'ಎತಚ್ಛಙ್ಕಾನಿರಾಸಕನ್ಯಾಯಂ ಸೂತ್ರೇ ನೋಪಲಭಾಮಹೇ' ಇತ್ಯಾಶಙ್ಕ್ಯ, 'ಪ್ರಾಣಸ್ತತ್ತು', ಇತಿ ಪ್ರತಿಜ್ಞಾಂಶತಾತ್ಪರ್ಯೇ ವ್ಯಞ್ಜಯನ್, ಆದಾವನುವ್ಯಾಖ್ಯಾನೋಕ್ತಪ್ರಮೇಯಾಶ್ರಿತಾಭ್ಯಧಿಕಾಶಙ್ಕಯೋರ್ಮಧ್ಯೇ, ನ ವಿಷ್ಣೋರ್ಜೀವನಾದಿಹೇತುತ್ವಮನ್ವಯವ್ಯತಿರೇಕಕಲ್ಪ್ಯಮಿತಿ ಯದುಕ್ತಂ, ತಚ್ಛಙ್ಕಾನಿವರ್ತನಪ್ರಕಾರಂ ಸಙ್ಗೃಹ್ಣಾತಿ – **ತತ್ಪರಿಹಾರೇಣೇತಿ ॥ ''ಪ್ರಾಣಗತಜೀವನಾದಿಕಾರಣತ್ವಸ್ಯಾಪಿ ಭಗವದಧೀನತ್ವಾತ್''** ಇತಿ ಟೀಕಾ ಉಪಲಕ್ಷಣಮ್ । ಅತ ಏವ **''ಪ್ರೇರಕೋऽಸ್ಯಾಪಿ''** ಇತ್ಯನುವ್ಯಾಖ್ಯಾನಂ 'ಅಸ್ಯಾಪಿ' ಜೀವನಾದೇರಪಿ ಇತ್ಯಪಿ ಇತಿ ಸುಧಾಯಾಂ ವ್ಯಾಖ್ಯಾತಮಿತಿ

ಭಾವಃ । 'ದೇಹ' ಇತ್ಯುಕ್ತ್ವಾ ಮುಖ್ಯದೇಹಭ್ರಮಂ ವಾರಯನ್ ವ್ಯಾಚಷ್ಟೇ – **ವಾಯುವೃತ್ತಿರಿತಿ** । 'ಸೋऽಪಿ' ಮುಖ್ಯೋऽಪಿ ।

ತಥಾಚ ಯಥಾ ಪ್ರಾಣಶರೀರಭೂತವಾಯೋರ್ಜೀವನಂ ಪ್ರತ್ಯನ್ವಯಾದಿದರ್ಶನಮಾತ್ರೇಣ ಮುಖ್ಯಸ್ಯ ತತ್ರ ಹೇತುತ್ವಂ, ತಥಾ ಮುಖ್ಯಸ್ಯಾಪಿ ಸಾಕ್ಷಾತ್ಪ್ರಯತ್ನಾಧಿಷ್ಠೇಯತ್ವೇನ ವಿಷ್ಣುದೇಹತ್ವಾತ್ತದನ್ವಯಾದಿದರ್ಶನಮಾತ್ರೇಣ ತಸ್ಯ ತತ್ರ ಹೇತುತ್ವಂ ಭವಿಷ್ಯತೀತ್ಯರ್ಥಃ । ಏತೇನಾಶರೀರತ್ವಾನ್ನ ತಚ್ಛರೀರಸ್ಯಾಸ್ಮದಾದಿಶರೀರೇ ವ್ಯತಿರೇಕ ಇತಿ ನಿರಸ್ತಮ್ । ಪ್ರಾಣಸ್ಯ ತಚ್ಛರೀರತ್ವೇನ ವ್ಯತಿರೇಕಸಮ್ಭವಾತ್ ।

ಯದಪ್ಯಸ್ಮದಾದಿಶರೀರೇ ತಸ್ಯ ಸರ್ವಗತತ್ವಾತ್ ವ್ಯತಿರೇಕೋ ನೇತಿ, ತನ್ನಿರಸ್ಯತಿ – **ಯುಕ್ತಶ್ಚೇತಿ ॥ ವ್ಯಕ್ತ್ಯಾತ್ಮನೇತಿ ॥** ಶಕ್ತ್ಯಾತ್ಮನಾ ತತ್ಸಂಯೋಗಸ್ಯ ಸತ್ತ್ವೇನ ಸರ್ವಗತತ್ವೋಕ್ತಿರಿತಿ ಭಾವಃ । ವಿವರಿಷ್ಯತೇ ಚೈತದ್ಭೂಮಾದಿನಯೇ । ಯದಪಿ ನಾಪಿ ಶ್ರುತಿಸಿದ್ಧಮಿತ್ಯಾದಿ, ತಚ್ಚ 'ಯೇನ ಜೀವನ್ತಿ' ಇತ್ಯಾದೇರ್ಬ್ರಹ್ಮಪರತ್ವಂ **ಜನ್ಮಾದಿಸೂತ್ರೇ ಸಿದ್ಧಮಿತಿ ಭಾವೇನ ಟೀಕೋಕ್ತಕಾಠಕಶ್ರುತೇ**ರ್ಬ್ರಹ್ಮಪರತ್ವಂ ಸಾಧಯತಿ – **ಇತರೇಣೇತಿ ॥ ವಾಮನೇತಿ ॥** ವಕ್ಷ್ಯತೇ ಚ ವಾಮನಶ್ರುತೇರ್ವೈಷ್ಣವತ್ವಂ ''ಶಬ್ದಾದೇವ'' ಇತ್ಯತ್ರ । ಪ್ರಾಣಗತಸ್ಯೇಶಾಧೀನತ್ವೇ ಸಾಕ್ಷಿತಯಾ **ಟೀಕೋಕ್ತಾऽಪಿ** 'ಇತರೇಣ' ಇತಿ ಶ್ರುತಿಸ್ತದ್ಗತತ್ವೇऽಪಿ ಪ್ರಮಾಣಂ ಭವತೀತಿ ಭಾವಃ ।

ಏವಂ 'ಜೀವನಹೇತುತ್ವಂ ಪ್ರಾಣಪದಪ್ರವೃತ್ತಿನಿಮಿತ್ತಂ ಭಗವದ್ಗತಮ್' ಇತಿ ಸಮರ್ಥ್ಯ, ಇದಾನೀಂ 'ಟೀಕೋಕ್ತರೀತ್ಯಾऽನ್ಯಗತಂ ಚ ಭಗವದಧೀನಮೇವ ತತಶ್ಚ ಪ್ರಾಣಶಬ್ದಾರ್ಥೋ ಭಗವಾನೇವ' ಇತ್ಯಭಿಪ್ರೇತ್ಯಾಹ – **ಕಿಞ್ಚೇತಿ ॥** ನಚ ಪ್ರಾಗುಕ್ತಾಸಮ್ಭವಾದಿಪ್ರಸಙ್ಗಃ, ಅನನ್ಯಾಧೀನಜೀವನಹೇತುತ್ವಸ್ಯ ಭಗವನ್ಮಾತ್ರಗತತ್ವೇನಾನ್ಯಗತತ್ವಾಭಾವಾತ್ ತಸ್ಯೈವ ಲಕ್ಷಣತ್ವೇನ **ಜನ್ಮಾದಿಸೂತ್ರೇ** ಅಭಿಪ್ರೇತತ್ವಾದಿತಿ ತಾತ್ಪರ್ಯಾತ್ । ಅತ ಏವ ತದ್ಗತತ್ವಸ್ಯಾಪಿ ಸಮರ್ಥನಮಕಾರಿ । **ಟೀಕಾಯಾಂ** ತು ಜನ್ಮಾದಿಸೂತ್ರಾದೌ ಸಿದ್ಧತ್ವಾತ್ಕಣ್ಠತೋ ನೋಕ್ತಮ್ ।

ವಿವರಣೆ - ಇಲ್ಲಿಯ ತನಕ ಎರಡು ಬಗೆಯ ಪ್ರಮೇಯಾಶ್ರಿತಪೂರ್ವಪಕ್ಷಗಳನ್ನು ನಾಲ್ಕುಬಗೆಯ ಪ್ರಮಾಣಾಶ್ರಿತಪೂರ್ವಪಕ್ಷಗಳನ್ನು ಮಾಡಿದ್ದಾಯಿತು. ಆ ಎಲ್ಲ ಪೂರ್ವಪಕ್ಷಗಳನ್ನು ಪ್ರಕೃತ ನಿರಾಕರಿಸಿ ಸಿದ್ಧಾಂತವನ್ನು ಸ್ಥಾಪಿಸುತ್ತಿದ್ದಾರೆ. ಪೂರ್ವಪಕ್ಷ ನಿರಾಸಕವಾದ ನ್ಯಾಯವು ಸೂತ್ರದಲ್ಲಿ ಕಾಣಿಸುತ್ತಿಲ್ಲವೆಂಬ ಗೊಂದಲಕ್ಕೆ ಆವಕಾಶವಿಲ್ಲ. 'ಪ್ರಾಣಃ ತತ್ತು' ಎಂಬ ಪ್ರತಿಜ್ಞೆಯಿಂದಲೇ ಪೂರ್ವಪಕ್ಷಗಳನ್ನು ನಿರಾಕರಿಸಿದ್ದಾರೆ. ಹಿಂದೆ ಅನುವ್ಯಾಖ್ಯಾನದಲ್ಲಿ ಹೇಳಿದಂತೆ ಎರಡು ಬಗೆಯಲ್ಲಿ ಪ್ರಮೇಯಾಶ್ರಿತ ಪೂರ್ವಪಕ್ಷಗಳನ್ನು ಮಾಡಿದ್ದರು. ಆವುಗಳಲ್ಲಿ ಅನ್ವಯವ್ಯತಿರೇಕದಿಂದ ಜೀವನಕಾರಣತ್ವವನ್ನು ವಿಷ್ಣುವಿನಲ್ಲಿ ಹೇಳಲಾಗದೆಂಬ ಶಂಕೆಯನ್ನು ಪರಿಹರಿಸುತ್ತಿದ್ದಾರೆ. ಪರಿಹಾರದ ವಿವರಣೆಯನ್ನು ಶ್ಲೋಕದ ಮೂಲಕ ಸಂಗ್ರಹಿಸಿದ್ದಾರೆ.

ಪ್ರಾಣಗತಜೀವನಕಾರಣಸ್ಯಾಪಿ ಭಗವದಧೀನತ್ವಾತ್' (ಪ್ರಾಣನಲ್ಲಿರುವ ಜೀವನಕಾರಣತ್ವವು ಭಗವದಧೀನವಾಗಿದೆ) ಎಂಬ ಟೀಕೆಯ ಮಾತು ಉಪಲಕ್ಷಣವಾಗಿದೆ. ಆದ್ದರಿಂದಲೇ 'ಪ್ರೇರಕೋಽಸ್ಯಾಪಿ' ಎಂಬ ಅನುವ್ಯಾಖ್ಯಾನವನ್ನು ಸುಧೆಯಲ್ಲಿ 'ಅಸ್ಯಾಪಿ = ಜೀವನಸ್ಯಾಪಿ' ಎಂದು ವ್ಯಾಖ್ಯಾನಿಸಿದ್ದಾರೆ. ಟೀಕೆಯಲ್ಲಿ ಸ್ವಾತಂತ್ರ್ಯಪ್ರವೃತ್ತಿನಿಮಿತ್ತವನ್ನಷ್ಟೇ ಹೇಳಿದ್ದಾರೆ. ತದ್ಗತತ್ವವನ್ನು ಉಪಲಕ್ಷಣಯಾ ಇಟ್ಟುಕೊಳ್ಳಬೇಕೆಂದು ಸುಧೆಯ ಈ ಮಾತಿನಿಂದ ತಿಳಿಯುತ್ತದೆ. ಮುಖ್ಯಪ್ರಾಣನು ಭಗವಂತನ ಮುಖ್ಯಶರೀರನೆಂಬ ಭ್ರಾಂತಿಯನ್ನು ಉದಾಹರಣೆಯ ಮೂಲಕ 'ವಾಯುವೃತ್ತಿ' ಎಂಬ ವಾಕ್ಯದಿಂದ ಪರಿಹರಿಸುತ್ತಿದ್ದಾರೆ. ಹೇಗೆ ಮುಖ್ಯಪ್ರಾಣನಿಗೆ ಭೌತಿಕಪ್ರಾಣವು ಸಾಕ್ಷಾತ್‌ಪ್ರಯತ್ನಕ್ಕೆ ಅಧಿಷ್ಠಾನವಾದ ಮಾತ್ರದಿಂದ ಶರೀರ ಎನಿಸಿದೆಯೋ ಅದೇ ರೀತಿಯಲ್ಲಿ ಭಗವಂತನ ಸಾಕ್ಷಾತ್‌ಪ್ರಯತ್ನಕ್ಕೆ ಅಧಿಷ್ಠಾನನಾದ ಕಾರಣ ಮುಖ್ಯಪ್ರಾಣನು ಶರೀರ ಎನಿಸಿದ್ದಾನೆ. ಭೌತಿಕಪ್ರಾಣಶರೀರಕ್ಕೂ ಮುಖ್ಯಪ್ರಾಣನಿಗೂ ಅನ್ವಯವ್ಯಾಪ್ತಿಯಿಂದಷ್ಟೇ ಕಾರಣತ್ವವನ್ನು ನಿರ್ಣಯಿಸಲಾಗಿದೆ. ಆದೇ ರೀತಿಯಲ್ಲಿ ಮುಖ್ಯಪ್ರಾಣನಿಗೂ ವಿಷ್ಣುವಿಗೂ ಅನ್ವಯವ್ಯಾಪ್ತಿ ಇರುವುದರಿಂದ ಜೀವನಕಾರಣತ್ವವನ್ನು ಸಾಧಿಸಬಹುದು. ಹೀಗೆ ಹೇಳಿದ್ದರಿಂದ ಅಶರೀರಿಯಾದ ವಿಷ್ಣುವಿಗೆ ನಮ್ಮ ಶರೀರದಲ್ಲಿ ವ್ಯತಿರೇಕವನ್ನು ಹೇಳಲಾಗದೆಂಬ ಆಕ್ಷೇಪವನ್ನು ಪರಿಹರಿಸಿದಂತಾಯಿತು. ಭಗವಂತನಿಗೆ ಮುಖ್ಯಪ್ರಾಣನು ಶರೀರನಾಗಿರುವುದರಿಂದ ವ್ಯತಿರೇಕವನ್ನು ಹೇಳಬಹುದು.

ಸರ್ವಗತನಾದ ಭಗವಂತನಿಗೆ ನಮ್ಮ ಶರೀರದಲ್ಲಿ ವ್ಯತಿರೇಕವನ್ನು ಹೇಳಲು ಹೇಗೆ ಸಾಧ್ಯ ? ಎಂಬ ಶಂಕೆಯನ್ನು ''ಯುಕ್ತಶ್ಚ'' ಎಂಬ ವಾಕ್ಯದಿಂದ ನಿರಾಕರಿಸಿದ್ದಾರೆ. ಶಕ್ಯಾತ್ಮನಾ ಭಗವಂತನ ರೂಪಕ್ಕೆ ಸಂಯೋಗ ಇರುವುದರಿಂದ ಸರ್ವಗತತ್ವವನ್ನು ಶಾಸ್ತ್ರಗಳಲ್ಲಿ ಹೇಳಿದ್ದಾರೆ. ಆದರೆ ವ್ಯಕ್ತಾತ್ಮನಾ ರೂಪವಿಶೇಷಕ್ಕೆ ಸಂಯೋಗವಿಲ್ಲದ ಕಾರಣ ವ್ಯತಿರೇಕವನ್ನು ಹೇಳಬಹುದು. ಹೆಚ್ಚಿನ ವಿಚಾರವನ್ನು ಭೂಮಾಧಿಕರಣದಲ್ಲಿ ಹೇಳಲಾಗಿದೆ.

ಇನ್ನು ಹಿಂದೆ ಪೂರ್ವಪಕ್ಷ ಮಾಡುವಾಗ ಜೀವನಕಾರಣತ್ವವು ಭಗವಂತನಲ್ಲಿ ಶ್ರುತಿಯಿಂದಲೂ ಸಿದ್ಧವಾಗಿಲ್ಲವೆಂದು ಆಕ್ಷೇಪಿಸಲಾಗಿತ್ತು. ಆದರೆ ಜನ್ಮಾದ್ಯಧಿಕರಣದಲ್ಲಿ ಸಾಧಿಸಿದಂತೆ 'ಯೇನ ಜಾತಾನಿ ಜೀವಂತಿ' ಎಂಬ ಶ್ರುತಿಯನ್ನು ವಿಷ್ಣುಪರವಾಗಿಯೇ ಅರ್ಥೈಸಬೇಕು. ಮುಖ್ಯಪ್ರಾಣಪರವಾಗಿ ಅರ್ಥೈಸಲಾಗದು. ಈ ಅಭಿಪ್ರಾಯದಿಂದ ಟೀಕೆಯಲ್ಲಿ ಹೇಳಿದ 'ಇತರೇಣ ತು ಜೀವಂತಿ' ಎಂಬ ಕಾಠಕ ಶ್ರುತಿಗೆ 'ಇತರೇಣ' ಎಂಬ ಗ್ರಂಥದಿಂದ ಬ್ರಹ್ಮಪರತ್ವವನ್ನು ಸಾಧಿಸುತ್ತಿದ್ದಾರೆ. 'ಇತರೇಣ ತು' ಎಂಬ ಶ್ರುತಿಯ ಹಿಂದೆ ವಾಮನಶ್ರುತಿಯಿದೆ. 'ಶಬ್ದಾದೇವ ಪ್ರಮಿತಃ' ಎಂಬ ಸೂತ್ರದಲ್ಲಿ ಸಮರ್ಥಿಸುವಂತೆ ಈ ವಾಮನಶ್ರುತಿಯು ವಿಷ್ಣುಪರವಾಗಿದೆ. ಆದ್ದರಿಂದ 'ಇತರೇಣ' ಎಂಬ ಶ್ರುತಿಯು ವಿಷ್ಣುಪರವೇ ಆಗಬೇಕು. ಅಷ್ಟೇ ಅಲ್ಲದೆ 'ಗುಹ್ಯಂ ಬ್ರಹ್ಮ'ನೆಂಬ ಮುಂದಿನ ಶ್ರುತಿಯು ವಿಷ್ಣುಪರವಾಗಿದೆ. ಪ್ರಾಣನಲ್ಲಿರುವ ಜೀವನಕಾರಣತ್ವವು ವಿಷ್ಣುವಿನ ಅಧೀನವಾಗಿದೆ. ಅಷ್ಟೇ ಅಲ್ಲದೆ ಭಗವದ್ಗತವೂ ಆಗಿದೆ. ಹೀಗೆ ಸ್ವಾತಂತ್ರ್ಯ ಮತ್ತು ತದ್ಗತತ್ವವೆಂಬ ಎರಡು ಪ್ರವೃತ್ತಿನಿಮಿತ್ತಗಳು ಭಗವಂತನಲ್ಲಿರುವುದರಿಂದ ಭಗವಂತನು ಪ್ರಾಣನಾಗುತ್ತಾನೆನ್ನಲು 'ಇತರೇಣ' ಎಂಬ ಶ್ರುತಿಯೇ ಪ್ರಮಾಣವಾಗಿದೆ. ಆದ್ದರಿಂದ ಜೀವನಹೇತುತ್ವವು ಪ್ರಾಣಪದದ ಪ್ರವೃತ್ತಿನಿಮಿತ್ತವಾಗಿದೆ; ಇದರಿಂದ ಭಗವದ್ಗತವಾಗಿದೆ ಎಂದು ಸಮರ್ಥಿಸಿದಂತಾಯಿತು.

ಮುಂದೆ ಟೀಕೆಯಲ್ಲಿ ಹೇಳಿದಂತೆ ಪ್ರಾಣನಲ್ಲಿರುವ ಜೀವನಹೇತುತ್ವವು ಭಗವದಧೀನವಾಗಿದೆ. ಆದ್ದರಿಂದಲೂ ಭಗವಂತನು ಪ್ರಾಣನೆನಿಸುತ್ತಾನೆ ಎಂದು 'ಕಿಂಚ' ಎಂಬ ಗ್ರಂಥದಿಂದ ಪ್ರತಿಪಾದಿಸುತ್ತಿದ್ದಾರೆ. ಹಾಗಾದರೆ ಮುಖ್ಯಪ್ರಾಣನಲ್ಲಿ ಜೀವನಕಾರಣತ್ವವಿದೆ; ಅದು ಭಗವಂತನ ಆಧೀನವೆಂದು ಹೇಳಿದಂತಾಯಿತು. ಇದರಿಂದ ಭಗವಂತನ ಲಕ್ಷಣಕ್ಕೆ ಅತಿವ್ಯಾಪ್ತಿ ಹಾಗೂ ಅಸಂಭವ ದೋಷಗಳು ಬರುತ್ತವಲ್ಲವೇ? ಎಂಬ ಶಂಕೆಗೆ ಅವಕಾಶವಿಲ್ಲ. ಏಕೆಂದರೆ ಅನನ್ಯಾಧೀನವಾದ ಜೀವನಹೇತುತ್ವವು ಭಗವಂತನ ಲಕ್ಷಣ. ಇದನ್ನೇ ಜನ್ಮಾದಿಸೂತ್ರದಲ್ಲಿ ಹಿಂದೆ ಸಮರ್ಥಿಸಿದ್ದೇವೆ. ಮುಖ್ಯಪ್ರಾಣನಲ್ಲಿರುವ ಜೀವನಹೇತುತ್ವವು ಭಗವದಧೀನವಾದ್ದರಿಂದ ಅನನ್ಯಾಧೀನವಾಗಿಲ್ಲ. ಆದ್ದರಿಂದ ಅತಿವ್ಯಾಪ್ತಿ ಮತ್ತು ಅಸಂಭವದೋಷಗಳಿಗೆ ಅವಕಾಶವಿಲ್ಲ.

ಅಥವಾ ಈ ದೋಷಗಳು ಬರಬಾರದೆಂದೇ ತದ್ಗತತ್ವವನ್ನು ವಿಷ್ಣುವಿನಲ್ಲಿ ಸಮರ್ಥಿಸಿದ್ದಾರೆ. ಟೀಕೆಯಲ್ಲಿ ತದ್ಗತತ್ವವನ್ನು ಹೇಳದಿದ್ದರೂ ಜನ್ಮಾದಿಸೂತ್ರದಲ್ಲಿ ಸಿದ್ಧವಾಗಿದೆಯೆಂದು ಅವರ ಅಭಿಪ್ರಾಯ. ಹಾಗಾಗಿ ಸ್ವಾತಂತ್ರ್ಯ ಮತ್ತು ತದ್ಗತತ್ವವೆಂಬ ಎರಡು ಪ್ರವೃತ್ತಿನಿಮಿತ್ತಗಳನ್ನು ಆಧರಿಸಿ ಪ್ರಾಣಾದಿಶಬ್ದಗಳಿಂದ ಭಗವಂತನೇ ಮುಖ್ಯವಾಗಿ ವಾಚ್ಯನಾಗುತ್ತಾನೆ. ಪ್ರಮೇಯಾಶ್ರಿತವಾದ ಯಾವುದೇ ಶಂಕೆಗಳಿಗೂ ಅವಕಾಶವಿಲ್ಲ. ಇಲ್ಲಿಗೆ ಪ್ರಮೇಯಾಶ್ರಿತಪೂರ್ವಪಕ್ಷದ ನಿರಾಕರಣೆಯು ಮುಗಿಯಿತು.

**गुरुराजीयम् –** यदुक्तं 'कुलालशरीरस्य घटं प्रतीव मुख्यप्राणशरीरभूतवायोर्जीवनं प्रत्यन्वयव्यतिरेकदर्शनमात्रेण तस्य तत्र हेतुत्वम्' इति तं पूर्वपक्षं निराकरोति – **वायुवृत्तिरित्यादिना ॥** अत्रोक्तं ब्रह्मणः सर्वगतत्वादशरीरत्वाच्च तस्य वा तच्छरीरस्य वाऽस्मदादिशरीरेऽभावेन तद्व्यतिरेकेण जीवनव्यतिरेको न सम्भवतीति बाधकं परिहरति – **युक्तश्चेति ॥**

एवं विष्णोर्जीवनादिहेतुत्वमन्वयव्यतिरेकाभ्यामुपपाद्य श्रुत्याप्युपपादयति – **इतरेणेति ॥** ननु कथमनया श्रुत्या ब्रह्मणो जीवनहेतुताग्रहः । तस्याः प्राणपरत्वात् । नच प्राणपरत्वे इतरशब्दानुपपत्तिः । वायुवृत्तिरूपप्रसिद्धप्राणेतरत्वविवक्षया प्राणेपि सम्भवादित्यत आह – **पूर्वत्रेति ॥** एवं प्रमेयाश्रितां शङ्कां निराकृत्याधुनाऽन्यात्वित्यादिनोक्तां प्रमाणाश्रितां शङ्कां निराकर्तुमाह – **किञ्चेति ॥**

## ಸಾರ

ನಮ್ಮೆಲ್ಲರ ಜೀವನಕ್ಕೆ ಕಾರಣನಾದವನು ಭಗವಂತನೇ ಆಗಿದ್ದಾನೆ. ಭೌತಿಕವಾದ ಪ್ರಾಣವಾಯುವು ವಾಯುದೇವನಿಗೆ ಹೇಗೆ ಶರೀರವಾಗಿದೆಯೋ ಆದರಂತೆ ವಾಯುದೇವರು ಭಗವಂತನ ಶರೀರದಂತಿದ್ದಾರೆ. ಸರ್ವರ ಜೀವನಕ್ಕೆ ಕಾರಣನಾದ ವಾಯುದೇವರೇ ಭಗವಂತನ ಶರೀರವಾಗಿರುವಾಗ ಅವನಿಗೆ ಪ್ರೇರಕನಾದ

ಭಗವಂತನು ಸಕಲಜೀವರ ಜೀವನಕ್ಕೆ ಕಾರಣನಾಗಿರಲೇ ಬೇಕು. ದೇಹದ ಕ್ರಿಯೆಗೆ ಜೀವನು ಹೇಗೆ ಪ್ರವರ್ತಕನಾಗಿರುತ್ತಾನೋ, ಅದರಂತೆ ಸಕಲಪ್ರಾಣಾದಿದೇವತೆಗಳ ಕ್ರಿಯೆಗಳಿಗೂ ಭಗವಂತನೇ ಪ್ರವರ್ತಕನಾಗಿದ್ದಾನೆ. ಆದ್ದರಿಂದ ಎಲ್ಲರಲ್ಲಿರುವ ಧರ್ಮಗಳಿಗೂ ಅವನೇ ನಿಯಾಮಕನು.

ಭಗವಂತನು ಯಾವಾಗಲೂ ಎಲ್ಲಾ ಕಡೆಯಿದ್ದರೂ ತನ್ನ ವಿಶಿಷ್ಟವಾದ ಒಂದುರೂಪವನ್ನು ಪ್ರಕಟಮಾಡಿ ಜೀವನಕ್ಕೆ ಕಾರಣನಾಗಿದ್ದಾನೆ. ಆ ರೂಪವನ್ನು ಅಂತರ್ಧಾನಗೊಳಿಸಿದಾಗ ಸಾವಿಗೆ ತುತ್ತಾಗುತ್ತಾರೆ.

ಮತ್ತು ಕಾಠಕದಲ್ಲಿರುವ 'ಇತರೇಣ ತು' ಎಂಬ ಶ್ರುತಿಯು ಪ್ರಾಣಪರವಾಗುವುದಿಲ್ಲ. ಇಲ್ಲಿರುವ ಇತರಶಬ್ದವು ಬ್ರಹ್ಮಪರವೆ ಆಗಿದೆ. ಹಿಂದಿನ ಮುಂದಿನ ವಾಕ್ಯಗಳು ಬ್ರಹ್ಮನನ್ನೇ ಪ್ರತಿಪಾದಿಸುತ್ತಿರುವಾಗ ಮಧ್ಯದ ಈ ವಾಕ್ಯವು ಬ್ರಹ್ಮನನ್ನು ಪ್ರತಿಪಾದಿಸದೆ ಇರಲಾರದಲ್ಲವೇ?

---

## ಪ್ರಾಣನು ವಿಷ್ಣುವಾಗಬಹುದು; ಲಕ್ಷ್ಮ್ಯಯು ಭಾರತಿಯಾಗುವುದಿಲ್ಲ

**ತಾತ್ಪರ್ಯಚಂದ್ರಿಕಾ –**

**ಲಕ್ಷ್ಮ್ಯಾದಿಶಬ್ದಾನಾಂ ತು ಬಹುತ್ವಾದನ್ಯತ್ರಪ್ರಯೋಗಾಭಾವಾತ್ ಮುಖ್ಯಾರ್ಥತ್ಯಾಗಾಪಾತಾತ್ ಅನ್ಯಪರತ್ವೇ ಮಾನಾಭಾವಾಚ್ಚ ನಾನ್ಯತ್ರ ಯೌಗಿಕತಾ । ಪ್ರಾಣಶಬ್ದಸ್ಯ ತ್ವೇಕತ್ವಾತ್ 'ಪ್ರಾಣಸ್ಯ ಪ್ರಾಣಃ' ಇತ್ಯಾದೌ ಬ್ರಹ್ಮಣಿ ಪ್ರಯೋಗಾತ್ ತತ್ರ ಪರಮಮುಖ್ಯತ್ವೇನ ಮುಖ್ಯಾರ್ಥತ್ಯಾಗಾತ್ ''ನಾಮಾನಿ ಸರ್ವಾಣಿ'' ಇತ್ಯಾದಿಮಾನಸದ್ಭಾವಾಚ್ಚ ಬ್ರಹ್ಮಪರತಾ ।**

**ಆಪೇಕ್ಷಿಕಾಚ್ಚ ಮುಖ್ಯತ್ವಾದ್ವಾಯೌ ಮುಖ್ಯಪದಂ ಭವೇತ್ ।**
**ಯಥಾ ಪರಾಕ್ಷರಪದಂ ಶ್ರೀತತ್ವೇ ಮಧ್ಯಮಾಕ್ಷರೇ ॥**

**ಮುಖ್ಯಪ್ರಾಣೋ ಹಿ ಕರಣಭೂತಚಕ್ಷುರಾದಿಪ್ರಾಣಾಪೇಕ್ಷಯಾ ಮುಖ್ಯಃ । ದೃಶ್ಯತೇ ಚ ಮಧ್ಯಮಾಕ್ಷರೇऽಪಿ ಶ್ರೀತತ್ವೇ 'ತಾಮಕ್ಷರಂ ಪರಂ ಪ್ರಾಹುಃ' ಇತ್ಯಾದೌ ಪರಶಬ್ದಃ, ಜಡಪ್ರಕೃತಿರೂಪಾಧಮಾಕ್ಷರಾತ್ ಪರತ್ವಾತ್ । ಅತ ಏವ ಶ್ರುತಿಃ ''ಪ್ರಾಣ ಏವಾಕರಣಃ ತಸ್ಮಾನ್ಮುಖ್ಯಸ್ತಸ್ಮಾನ್ಮುಖ್ಯಃ'' ಇತಿ, ''ಯೋऽಯಂ ಮಧ್ಯಮಃ ಪ್ರಾಣಃ'' ಇತಿ ಚ ।**

ಅನುವಾದ - ಮುಖ್ಯಪ್ರಾಣನಲ್ಲಷ್ಟೇ ಪ್ರಸಿದ್ಧವಾದ ಪ್ರಾಣಶಬ್ದವನ್ನು ಭಗವಂತನಲ್ಲಿ ಸಮನ್ವಯ ಮಾಡುವುದಾದರೆ ಲಕ್ಷ್ಮ್ಯಯಲ್ಲಷ್ಟೇ ಪ್ರಸಿದ್ಧವಾದ ಲಕ್ಷ್ಮ್ಯಾದಿಶಬ್ದಗಳನ್ನು ಭಾರತಿಯಲ್ಲೇಕೆ ಸಮನ್ವಯ ಮಾಡಬಾರದು? ಎಂಬ ಶಂಕೆಗೆ ಅವಕಾಶವಿಲ್ಲ. ಏಕೆಂದರೆ ಲಕ್ಷ್ಮ್ಯಾದಿಶಬ್ದಗಳು 'ಶ್ರೀ ಹ್ರೀ' ಇತ್ಯಾದಿಯಾಗಿ ಬಹಳ ಇವೆ. ಮತ್ತು ಬೇರೆಲ್ಲಿಯೂ ಈ ಶಬ್ದಗಳ ಪ್ರಯೋಗವಿಲ್ಲ. ಬೇರೆ ಬೇರೆ ಪ್ರಯೋಗಿಸಿದರೆ ಮುಖ್ಯಾರ್ಥಹಾನಿಯೆಂಬ ದೋಷ ಬರುತ್ತದೆ. ಮತ್ತು ಭಾರತ್ಯಾದಿ ಪರವೆನ್ನಲು

इति स्मृतावादित्यादेर्विष्णुत्वम् । उक्तञ्च सुधायां – "आदित्यान्न-योरब्रह्मत्वस्याप्यसिद्धेः"। तत्रापि "सर्वाणि ह वा इमानि भूतान्यादित्यमुचैस्सन्तं गायन्ति" इत्यादिब्रह्मलिङ्गसद्भावात् । "अन्नमेव प्रतिहरमाणानि" इत्येतस्य तु प्रायपाठादुपजीवनार्थत्वेन ग्राह्यत्वात्" इति । एतेन 'एतत्प्राणस्य ब्रह्मत्व-निर्णयावश्यम्भावात् तन्निर्णायकस्यान्यस्याभावादत्रैव निर्णीयते इति निरस्तम् । ब्रह्मलिङ्गस्यात्र सत्त्वात् । पक्षान्तरप्रापकस्य चाभावेन संशयपूर्वपक्षयोरयोगेन पूर्वन्यायेनैव निर्णयसिद्धेरिति । उक्तञ्च – सुधायां 'अत्रापि संशयाद्ययोगात्' इति ।

ವಿವರಣೆ - ಛಾಂದೋಗ್ಯದಲ್ಲಿರುವ ಪ್ರಾಣಶಬ್ದವು ಜಡವಾಯುವನ್ನು ಹೇಳುತ್ತಿದೆಯೋ ಅಥವಾ ಚೇತನವಾಯುವನ್ನು ಹೇಳುತ್ತಿದೆಯೋ? ಎಂದು ವಿಕಲ್ಪಿಸಿ ಅದ್ವೈತಿಗಳು ರಚಿಸಿದ ಪೂರ್ವಪಕ್ಷವೇ

ತಪ್ಪದು ಕ್ರಮವಾಗಿ ನಿರಾಕರಿಸುತ್ತಿದ್ದಾರೆ. ಜಡವಾಯುವೆಂದರೆ ದೇವತಾಪದವು ಅನುಪಪನ್ನವಾಗುತ್ತದೆ. ಮತ್ತು ಪ್ರಸ್ತಾವಾನ್ವಾಯತತ್ತ್ವವು ತಪ್ಪಾಗುತ್ತದೆ. ಅಂದರೆ ಪ್ರಸ್ತಾವವೆಂಬ ಮಂತ್ರದಿಂದ ದೇವತೆಯಷ್ಟೇ ಪ್ರತಿಪಾದ್ಯವಾಗಬಹುದು ಜಡಪದಾರ್ಥವಾಗುವುದಿಲ್ಲ. ಹಾಗೆಯೇ ದೇವತಾಪದವೂ ಸಹ ಚೇತನನಲ್ಲಷ್ಟೇ ಪ್ರಯೋಗಿಸಲು ಸಾಧ್ಯ.

ಶಂಕೆ - 'ಕತಮಾ ಸಾ ದೇವತಾ .....' ಇತ್ಯಾದಿ ಶ್ರುತಿಯಲ್ಲಿ ಅಚೇತನಪದಾರ್ಥದಲ್ಲಿಯೂ ದೇವತಾಶಬ್ದವನ್ನು ಪ್ರಯೋಗಿಸಿದ್ದಾರೆ. ಆದರೆ ನೀವು ಜಡಪದಾರ್ಥವು ಪ್ರತಿಪಾದ್ಯವಲ್ಲವೆಂದು ಹೇಳುವುದು ತಪ್ಪಲ್ಲವೇ?

ಸಮಾಧಾನ - ಕತಮಾ ಸಾ ಎಂಬ ಶ್ರುತಿಯಲ್ಲಿಯೂ ಸಹ ದೇವತಾಪದದಿಂದ ಚೇತನವೇ ಪ್ರತಿಪಾದ್ಯವೆಂದು ನಮ್ಮ ಅಭಿಪ್ರಾಯ. ಹೀಗೆ ವಿಪ್ರತಿಪನ್ನವಾದ ದೃಷ್ಟಾಂತ ನೀಡುವುದು ಸರಿಯಲ್ಲ.

ಆದ್ವೈತಿಗಳು ಆಕಾಶಾಧಿಕರಣದಿಂದ ಗತಾರ್ಥತ್ವವನ್ನು ಶಂಕಿಸಿ ಎರಡು ಬಗೆಯಲ್ಲಿ ಅಭ್ಯಧಿಕಾಶಂಕೆಯನ್ನು ಪ್ರದರ್ಶಿಸಿದ್ದರು. ಅದನ್ನು ಪ್ರಕೃತ 'ಸ್ವಾಪವಾಕ್ಯೇ' ಎಂಬ ಗ್ರಂಥದಿಂದ ನಿರಾಕರಿಸಿದ್ದಾರೆ. 'ಯದಾ ವೈ ಪುರುಷಃ ಸ್ವಪಿತಿ' ಎಂಬ ವಾಕ್ಯದಲ್ಲಿ ಮುಖ್ಯವಾಗಿ ಇಂದ್ರಿಯಲಯಗಳನ್ನು ಹೇಳಲಾಗಿದೆ. ಲಕ್ಷಣಯಾ ಭೂತಲಯವು ಸಿದ್ಧವಾಗುತ್ತದೆ. ಆದ್ದರಿಂದ ಇಂದ್ರಿಯಗಳ ಮತ್ತು ಭೂತಗಳ ಲಯಕ್ಕೆ ಪ್ರಾಣನೇ ಆಧಾರನಾಗಿದ್ದಾನೆಂದು ಶ್ರುತಿಯು ಹೇಳುತ್ತಿದೆ ಎಂದು ಆದ್ವೈತಿಗಳು ಹೇಳಿದ್ದರು. ಆದರೆ ಈ ಶ್ರುತಿಯು ಪ್ರಮಾಣಾಂತರದ ಸಂವಾದಿಯಾದರೆ ಮಾತ್ರ ಆದ್ವೈತಿಗಳ ವ್ಯಾಖ್ಯಾನವು ಸರಿಯೆನ್ನಬಹುದು. ಆವಾಗ ಸ್ವಾಪವಾಕ್ಯಕ್ಕೆ ಅನುಸಾರಿಯಾಗಿ ಪ್ರಸ್ತಾವವಾಕ್ಯವನ್ನು ವ್ಯಾಖ್ಯಾನಿಸಬಹುದು. ಆದರೆ ಸ್ವಾಪವಾಕ್ಯಕ್ಕೆ ಪ್ರಮಾಣಾಂತರಗಳ ಸಂವಾದವೇ ಅಸಾಧ್ಯ. ಇದನ್ನೇ ಗ್ರಂಥಕಾರರು 'ನ ಹಿ' ಎಂಬ ಶ್ಲೋಕದಿಂದ ವಿವರಿಸಿದ್ದಾರೆ. ಇಂದ್ರಿಯಲಯಗಳ ಮೂಲಕ ಭೂತಗಳ ಲಯವೆಂಬ ಅಭಿಪ್ರಾಯದಿಂದ 'ಪೃಥಿವ್ಯಾದೇಃ' ಎಂದಿದ್ದಾರೆ. ನೇರವಾಗಿ ಇಂದ್ರಿಯಗಳ ಲಯವೆಂಬ ಅಭಿಪ್ರಾಯದಿಂದ ಅಕ್ಷ್ಣಾಂ ಎಂದಿದ್ದಾರೆ. ಪ್ರಮಾಣಾಂತರಸಂವಾದವೆಂದರೆ ಆ ಪ್ರಮಾಣ ಪ್ರತ್ಯಕ್ಷವೋ ಅನುಮಾನವೋ? ಎಂದು ವಿಕಲ್ಪಿಸಿ, ಎರಡೂ ಸಾಧ್ಯವಿಲ್ಲವೆಂದು 'ಪ್ರತ್ಯಕ್ಷಾದ್ ಅನುಮಾನಾದ್ವಾ' ಎಂಬ ಮಾತಿನಿಂದ ನಿರಾಕರಿಸಿದ್ದಾರೆ. 'ಪ್ರಾಣಂ ವಾಗಪ್ಯೇತಿ' ಎಂಬಲ್ಲಿಯೂ ಪ್ರಾಣಶಬ್ದವು ಜಡವಾಯುಪರವೋ? ಅಥವಾ ಅಭಿಮಾನಿದೇವತಾ ಪರವೋ? ಎಂಬ ವಿಕಲ್ಪವನ್ನು ದೇವತಾಯಾಂ ಜಡೇ ಎಂಬ ಪದಗಳಿಂದ ಸೂಚಿಸಿದ್ದಾರೆ.

ವಾಗಾದಿಶಬ್ದಗಳು ಭೂತಪರವಾಗಿದೆ ಎಂದು ಅಂಗೀಕರಿಸಿ, ಪ್ರಾಣನಲ್ಲಿ ಭೂತಲಯವನ್ನು ಹೇಳಬೇಕೆಂಬುದು ಪ್ರಥಮಪಕ್ಷ. ಈ ವಿಷಯದಲ್ಲಿ ಪ್ರಮಾಣಾಂತರಸಂವಾದವಿಲ್ಲವೆಂದು 'ನ ತಾವತ್' ಎಂಬ ವಾಕ್ಯದಿಂದ ನಿರಾಕರಿಸಿದ್ದಾರೆ.

ದೃಷ್ಟಿಸೃಷ್ಟಿಮತದ ಪ್ರಕಾರ ಸುಷುಪ್ತವಸ್ಥೆಯಲ್ಲಿ ಯಾವುದೇ ಜ್ಞಾನವಿಲ್ಲದ ಕಾರಣ ಇಂದ್ರಿಯಲಯವನ್ನು ಹೇಳಬಹುದಲ್ಲವೇ? ಎಂಬ ಪ್ರಶ್ನೆಗೆ ದೃಷ್ಟಿಸೃಷ್ಟಿಮತೇ ಎಂಬ ವಾಕ್ಯದಿಂದ ಉತ್ತರಿಸಿದ್ದಾರೆ. ಇಂದ್ರಿಯಲಯ-ವಿಷಯದಲ್ಲಿ ಪ್ರತ್ಯಕ್ಷಪ್ರಾಮಾಣವಿಲ್ಲವೆಂಬುದನ್ನು 'ನಾಪಿ' ಇತ್ಯಾದಿವಾಕ್ಯದಿಂದ ವಿವರಿಸಿದ್ದಾರೆ.

ಅನುಮಾನವು ಪ್ರಮಾಣವಾಗದೆಂದು ಮುಂದಿನ 'ನಾಪಿ'ಗ್ರಂಥವು ವ್ಯಾಖ್ಯಾನಿಸಿದೆ. ಅನುಮಾನದ ಸ್ವರೂಪ -- ''ತೇಷಾಮಿಂದ್ರಿಯಾಣಿ ಪ್ರಾಣೇ ಲೀಯಂತೇ ಪ್ರಾಣವೃತ್ತ್ಯೌ ಸತ್ಯಾಮಪಿ ಇಂದ್ರಿಯವೃತ್ತೀನಾಂ ಪರಿಲುಪ್ಯಮಾನತ್ವಾತ್, ಯಸ್ಮಿನ್ ಸವ್ಯಾಪಾರೇ ಸತಿ ಯನ್ನಿರ್ವ್ಯಾಪಾರಂ ತತ್ತತ್ರ ಲೀಯತೇ ಯಥಾ ಸಂಪ್ರತಿಪನ್ನಮ್'' (ಸವ್ಯಾಪಾರವಸ್ತುವಿನಲ್ಲಿ ನಿರ್ವ್ಯಾಪಾರವಸ್ತುವು ಲೀನವಾಗುವುದು ಕಂಡಿದೆ; ಸುಷುಪ್ತಿಯಲ್ಲಿ ಪ್ರಾಣವಾಯುವು ಸವ್ಯಾಪಾರವಾಗಿದ್ದು ಚಕ್ಷುರಾದಿ ಇಂದ್ರಿಯಗಳು ನಿರ್ವ್ಯಾಪಾರವಾದ್ದರಿಂದ ಪ್ರಾಣವಾಯುವಿನಲ್ಲಿ ಲೀನವಾಗುತ್ತವೆ.)

ಜನ್ಮಾಧಿಕರಣದಲ್ಲಿ 'ಯತೋ ವಾ' ಇತ್ಯಾದಿ ಶ್ರುತಿಯು ಬ್ರಹ್ಮನ ಉಪಾದಾನಕಾರಣವಿಷಯದಲ್ಲಿ ಪ್ರಮಾಣವಾಗಿದೆಯೆಂದು ಅದ್ವೈತಿಗಳು ಹೇಳುತ್ತಾರೆ. ಈ ಶ್ರುತಿಯ ಬೆಂಬಲದಿಂದ ಬ್ರಹ್ಮನಲ್ಲಿ ಜಗತ್ಕಾರಣತ್ವವನ್ನು ಸಾಧಿಸಬಹುದೆಂದು ಅದ್ವೈತಿಗಳೇ ಹೇಳಿದ್ದಾರೆ. ಆದ್ದರಿಂದಲೇ 'ಯತೋ ವಾ' ಇತ್ಯಾದಿವಾಕ್ಯಕ್ಕೆ ಅನುಮಾನಸಂವಾದವನ್ನು ಹೇಳಿದಂತಾಗುತ್ತದೆ. ಹೀಗೆ ಅದ್ವೈತಿಗಳ ಪ್ರಕಾರವೇ 'ಯತೋ ವಾ' ಇತ್ಯಾದಿ ವಾಕ್ಯವು ಪ್ರಮಾಣಾಂತರಸಂವಾದಿಯಾಯಿತು. ಪ್ರಬಲವಾದ ಈ ಶ್ರುತಿಗನುಗುಣವಾಗಿ ಪ್ರಸ್ತಾವವಾಕ್ಯಕ್ಕೆ ಬ್ರಹ್ಮಪರವಾಗಿ ವ್ಯಾಖ್ಯಾನಿಸುವುದು ತಪ್ಪಾಗುವುದಿಲ್ಲ. ಆದ್ದರಿಂದ ಪ್ರಮಾಣಾಂತರಸಂವಾದಿಯಾದ ಮಾತ್ರದಿಂದ ಸ್ವಾಪವಾಕ್ಯವನ್ನು ಪ್ರಬಲವೆನ್ನಲಾಗದು. ಬ್ರಹ್ಮನ ಉಪಾದಾನಕಾರಣವಿಷಯದಲ್ಲಿ ಪ್ರಮಾಣಾಂತರಸಂವಾದವಿದ್ದರೂ ಭೂತಲಯಾಧಾರದ ವಿಷಯದಲ್ಲಿ ಪ್ರಮಾಣವಿಲ್ಲವೆಂದು ಶಂಕಿಸಬಾರದು. ಉಪಾದಾನಶಬ್ದಕ್ಕೆ ಲಯಾಧಾರವೆಂದೇ ಅರ್ಥ.

ಮತ್ತು ಸಂಪ್ರತಿಪನ್ನವಾದ ದೃಷ್ಟಾಂತವಿಲ್ಲದ ಕಾರಣ ವ್ಯಾಪ್ತಿಯನ್ನು ಹೇಳಲಾಗದು. ಸವ್ಯಾಪಾರವಾದ್ದರಲ್ಲಿ ನಿರ್ವ್ಯಾಪಾರವಸ್ತುವಿಗೆ ಲಯವನ್ನು ಹೇಳುವುದಾದರೆ ವ್ಯಭಿಚಾರದೋಷ ಬರುತ್ತದೆ. ಪರಮಾತ್ಮನೂ ಕೂಡ ಸುಷುಪ್ತಿಕಾಲದಲ್ಲಿ ಜಡವಾಯುವಂತೆ ಸವ್ಯಾಪಾರನಾಗಿದ್ದಾನೆ. ಆದರೆ ನೀವು ಜಡವಾಯುವಿನಲ್ಲಷ್ಟೇ ಲಯವನ್ನು ಹೇಳುತ್ತೀರಿ, ಪರಮಾತ್ಮನಲ್ಲಿ ಹೇಳದ ಕಾರಣ ವ್ಯಾಪ್ತಿಯು ವ್ಯಭಚರಿತವಾಗಿದೆ. ಅಥವಾ ಕುಠಾರವು ಸವ್ಯಾಪಾರವಾಗಿದೆ. ಖಡ್ಗವು ನಿರ್ವ್ಯಾಪಾರವಾಗಿದೆ. ಸವ್ಯಾಪಾರವಸ್ತುವಿನಲ್ಲಿ ನಿರ್ವ್ಯಾಪಾರವಸ್ತುವಿಗೆ ಲಯ ಹೇಳುವುದಾದರೆ ಖಡ್ಗಕ್ಕೂ ಕುಠಾರದಲ್ಲಿ ಲಯವನ್ನು ಹೇಳಬೇಕಾದೀತು.

ಅನುಮಾನಕ್ಕೆ ಪ್ರತ್ಯಕ್ಷವಿರೋಧವನ್ನು 'ಪೂರ್ವೇದ್ಯುಃ' ಎಂಬ ವಾಕ್ಯದಿಂದ ಹೇಳುತ್ತಿದ್ದಾರೆ. 'ವಾಗಪ್ಯೇತಿ' ಎಂಬ ಶ್ರುತಿವಿರೋಧದಿಂದ ಪ್ರತ್ಯಭಿಜ್ಞೆಯು ಭ್ರಾಂತಿಯೆನಿಸುತ್ತದೆ ಎಂಬ ಶಂಕೆಯನ್ನು ಇದರಿಂದ ಪರಿಹರಿಸಿದಂತಾಯಿತು. ಏಕೆಂದರೆ ಶ್ರುತಿಗಿಂತ ಪ್ರತ್ಯಕ್ಷವೇ ಬಲಿಷ್ಠವಾದ್ದರಿಂದ ಪ್ರತ್ಯಕ್ಷದಿಂದ ಶ್ರುತಿಯೇ ಬಾಧಿತವಾಗುತ್ತದೆ. ಆದ್ದರಿಂದ ಶ್ರುತಿಯಲ್ಲಿರುವ ಆಪ್ಯಶಬ್ದಕ್ಕೆ ನಿರ್ವ್ಯಾಪಾರವೆಂಬ ಅರ್ಥವನ್ನು ಹೇಳಿ ಸಾವಕಾಶ ಮಾಡಬೇಕು. ಅನುಮಾನಕ್ಕೆ ಪ್ರತ್ಯಕ್ಷವಿರೋಧದ ಜೊತೆಗೆ ಶ್ರುತಿವಿರೋಧವೂ ಬರುತ್ತದೆಂದು 'ಯಥಾ ಸೋಮ್ಯ' ಎಂಬ ವಾಕ್ಯದಿಂದ ಹೇಳುತ್ತಿದ್ದಾರೆ. ಶ್ರುತಿಯಲ್ಲಿರುವ ಸರ್ವಶಬ್ದದ ಅರ್ಥವನ್ನೇ 'ಚಕ್ಷುಶ್ಚ ದ್ರಷ್ಟವ್ಯಂ' ಎಂಬ ಮತ್ತೊಂದು ಶ್ರುತಿಯಿಂದ ವ್ಯಾಖ್ಯಾನಿಸಿದ್ದಾರೆ. ಶ್ರುತಿಯಲ್ಲಿರುವ 'ಸಂಪ್ರತಿಷ್ಠಂತೇ' ಎಂಬ ಶಬ್ದಕ್ಕೆ ಲಯ ಎಂಬರ್ಥವನ್ನು ಹೇಳಿದರೆ ಪಕ್ಷಿಗಳಿಗೆ

ಆಶ್ರಯಭೂತವಾದ ವೃಕ್ಷದ ದೃಷ್ಟಾಂತವು ಅನುಪಪನ್ನವಾಗುತ್ತದೆ. ಹಾಗಾಗಿ ಆಶ್ರಯ ಹೊಂದುತ್ತವೆ ಎಂದಷ್ಟೇ ಅರ್ಥೈಸಬೇಕು. ಮತ್ತು 'ತಸ್ಮಿನ್ ಸರ್ವೇ ಪ್ರತಿಷ್ಠಿತಾಃ' ಎಲ್ಲ ಇಂದ್ರಿಯಗಳು ಯಾರಲ್ಲಿ ಆಶ್ರಿತವಾಗಿವೆ? ಎಂಬ ಪ್ರಶ್ನೆಗೆ 'ಆತ್ಮನಲ್ಲಿ ಲಯ ಹೊಂದುತ್ತವೆ' ಎಂಬ ಉತ್ತರವು ತಪ್ಪಾಗುತ್ತದೆ. ಪ್ರಶ್ನೆಗೆ ಅನುಗುಣವಾಗಿ ಇಂದ್ರಿಯಗಳು ಆತ್ಮನಲ್ಲಿ ಆಶ್ರಿತವಾಗಿವೆ ಎಂದೇ ಹೇಳಬೇಕು. ಶ್ರುತಿಯಲ್ಲಿ 'ಪರೇ ಆತ್ಮನಿ' ಎಂದು ಹೇಳಿದ್ದರಿಂದ ಚಕ್ಷುರಾದಿ ಇಂದ್ರಿಯಗಳು ಜಡವಾಯುವಿನಲ್ಲಿ ಲಯ ಹೊಂದುತ್ತವೆ ಎಂಬ ಅನುಮಾನವು ಪ್ರಮಾಣಬಾಧಿತವೆಂದು ಸೂಚಿಸಿದಂತಾಯಿತು. ಆದ್ದರಿಂದ ಜಡವಾಯುವಿನಲ್ಲಿ ಸಕಲ ಇಂದ್ರಿಯಗಳಿಗೆ ಲಯವನ್ನು ಸಾಧಿಸುವ ಆದ್ವೈತಿಗಳ ಅನುಮಾನವನ್ನು ನಿರಾಕರಿಸಿದಂತಾಯಿತು.

ಇಲ್ಲಿಯ ತನಕ ಸ್ವಾಪವಾಕ್ಯವು ಮಾನಾಂತರಸಂವಾದಿಯಾಗಿಲ್ಲ; ಅದಕ್ಕನುಸಾರಿಯಾಗಿ ಪ್ರಸ್ತಾವವಾಕ್ಯವನ್ನು ಪ್ರಾಣಪರವಾಗಿ ಅರ್ಥೈಸಬಾರದು ಹೊರತು ಜನ್ಮಾಧಿಕರಣದಲ್ಲಿ ಆದ್ವೈತಿಗಳೇ ಹೇಳಿದಂತೆ 'ಯತೋ ವಾ' ಇತ್ಯಾದಿ ವಾಕ್ಯವೇ ಪ್ರಮಾಣಾಂತರಸಂವಾದಿಯಾಗಿದೆ ಅದಕ್ಕನುಸಾರಿಯಾಗಿ ಪ್ರಸ್ತಾವವಾಕ್ಯವು ಬ್ರಹ್ಮಪರವಾಗುತ್ತದೆ ಆದ್ದರಿಂದ ಅಭ್ಯಧಿಕಾಶಂಕೆಗೆ ಅವಕಾಶವಿಲ್ಲವೆಂದು ಸಮರ್ಥಿಸಿದ್ದಾಯಿತು. ಈಗ ಹಿಂದಿನ ಅಧಿಕರಣದಿಂದ ಆದ್ವೈತಿಗಳು ತೋರಿಸಿದ ವೈಷಮ್ಯವು ತಪ್ಪೆಂದು 'ಆಕಾಶಾದ್ವಾಯುಃ' ಇತ್ಯಾದಿ ವಾಕ್ಯದಿಂದ ಸಮರ್ಥಿಸುತ್ತಿದ್ದಾರೆ. ಯಾವರೀತಿಯಾಗಿ ಪ್ರಾಣಾಧಿಕರಣದ ಪ್ರಸ್ತಾವವಾಕ್ಯವು ಮಾನಾಂತರಸಂವಾದಿಯೆಂದು ಹೇಳುವಿರೋ, ಅದರಂತೆ ಆಕಾಶಾಧಿಕರಣದ 'ಆಕಾಶಾದ್ವಾಯುಃ' ಎಂಬ ವಾಕ್ಯವೂ ಕೂಡ ಮಾನಾಂತರಸಂವಾದಿಯಾಗಿದೆ.

'ಪವನಸ್ಯ, ದಹನಸ್ಯ' ಇತ್ಯಾದಿ ಷಷ್ಠ್ಯಂತಪದಗಳಿಗೆ 'ಉತ್ಪತ್ತ್ಯೇರ್ದರ್ಶನಾತ್' ಎಂಬಲ್ಲಿ ಅನ್ವಯ. ಅವಕಾಶವೇ ಇಲ್ಲದಿದ್ದರೆ ಗಾಳಿಯಿರಲು ಹೇಗೆ ಸಾಧ್ಯ? ಆದ್ದರಿಂದ ಆಕಾಶದಿಂದ ಗಾಳಿಯ ಹುಟ್ಟನ್ನು ತಿಳಿಯಬೇಕು. ಗಾಳಿಯಿಂದ ಬೆಂಕಿಯ ಉತ್ಪತ್ತಿಯು ಎಲ್ಲಿ ಕಂಡಿದೆ? ಎಂಬ ಪ್ರಶ್ನೆಗೆ ಫೂತ್ಕಾರದಿಂದ (ಊದುವುದರಿಂದ) ಎಂದು ಉತ್ತರಿಸುತ್ತಿದ್ದಾರೆ. ಇದರಂತೆ ಬೇಗೆಯಿಂದ ಬೆವರಿನ ಸೃಷ್ಟಿಯನ್ನು ತಿಳಿಯಬೇಕು. ಭಾಷ್ಯಕಾರರು 'ಆಪ' ಎಂಬ ಸೂತ್ರದಲ್ಲಿ 'ಘರ್ಮಾತ್ ಸ್ವೇದಾದಿದೃಷ್ಟೇಃ' (ಶಕೆಯಿಂದ ಬೆವರಿನ ಸೃಷ್ಟಿಯು ಕಂಡಿದೆ) ಎಂದಿದ್ದಾರೆ.

ಶಾಂಕರಭಾಷ್ಯದ 'ಆದಿತ್ಯೋನ್ನಂ ಚೋದ್ಗೀಥಪ್ರತಿಹಾರದೇವತಾ' ಇತ್ಯಾದಿ ಮಾತುಗಳನ್ನು ಪ್ರಕೃತ ನಿರಾಕರಿಸುತ್ತಿದ್ದಾರೆ -- 'ಕತಮಾ ಸಾ ದೇವತೇತಿ ॥ ಆದಿತ್ಯ ಇತಿ ಹೋವಾಚ । ಸರ್ವಾಣಿ ಹ ವಾ ಇಮಾನಿ ಭೂತಾನ್ಯಾದಿತ್ಯಮುಚ್ಚೈಸ್ಸಂತಂ ಗಾಯಂತಿ । ಸೈಷಾ ದೇವತೋದ್ಗೀಥಮನ್ವಾಯತ್ತಾ' ('ಯಾರು ಆ ದೇವತೆ' ಎಂಬ ಆ ಉದ್ಗಾತನ ಪ್ರಶ್ನೆಗೆ ಉಷಸ್ತಿಯ ಉತ್ತರ 'ಆದಿತ್ಯನೇ ಆ ದೇವತೆಯಾಗಿದ್ದಾನೆ. ಏಕೆಂದರೆ ಸಕಲಭೂತಗಳು ಆದಿತ್ಯನನ್ನು ಸರ್ವೋತ್ತಮನಾಗಿದ್ದಾನೆಂದು ಗಾನ ಮಾಡುತ್ತವೆ. ಆದ್ದರಿಂದ ಆ ಆದಿತ್ಯನನ್ನು ಉದ್ಗೀಥನೆಂದು ಸರ್ವೋತ್ತಮನೆಂದು ತಿಳಿಯಬೇಕು. ಉದಾಹರಣೆಗೆ - 'ಕತಮಾ ಸಾ ದೇವತೇತಿ ॥ ಅನ್ನಮಿತಿ ಹೋವಾಚ । ಸರ್ವಾಣಿ ಹವಾ ಇಮಾನಿ ಭೂತಾನ್ಯನ್ನಮೇವ ಪ್ರತಿಹರಮಾಣಾನಿ ಜೀವಂತಿ । ಸೈಷಾ ದೇವತಾ ಪ್ರತಿಹಾರಮನ್ವಾಯತ್ತಾ' (ಯಾರು ಆ ದೇವತೆಯೆಂಬ ಪ್ರತಿಹರ್ತನ ಪ್ರಶ್ನೆಗೆ ಉಷಸ್ತಿಯ ಉತ್ತರ. ಅನ್ನವೇ ದೇವತೆಯಾಗಿದೆ. ಏಕೆಂದರೆ ಸಕಲಪ್ರಾಣಿಗಳು ಅನ್ನವನ್ನು ಆಶ್ರಯಿಸಿ

ಜೀವಿಸುತ್ತವೆ. ಅಂತಹ ದೇವತೆಯೇ ಪ್ರತಿಹಾರವೆಂದು ತಿಳಿಯಬೇಕು) ಹೀಗೆ ಉದ್ಗಾತನ ಹಾಗೂ ಪ್ರತಿಹರ್ತೃವಿನ ಎರಡೂ ಪ್ರಶ್ನೆಗಳಿಗೆ ಬ್ರಹ್ಮವಲ್ಲದ ಪದಾರ್ಥವನ್ನೇ ದೇವತೆ ಎನ್ನಲಾಗಿದೆ. ಇದರ ಜೊತೆಗಿರುವ ''ಪ್ರಸ್ತೋತೃವಿನ ಪ್ರಶ್ನೆಗೆ ಉತ್ತರಿಸುವ 'ಕತಮಾ ಸಾ ದೇವತೇತಿ । ಪ್ರಾಣ ಇತಿ ಹೋವಾಚ । ಸರ್ವಾಣಿ ಹವಾ ಇಮಾನಿ ಭೂತಾನಿ ಪ್ರಾಣಮೇವಾಭಿಸಂವಿಶಂತಿ ।' ಎಂಬಲ್ಲಿ ಹೇಳಲ್ಪಟ್ಟ ಪ್ರಾಣನೂ ಸಹ ಬ್ರಹ್ಮನಾಗಲಾರ'' ಎಂಬ ಅದ್ವೈತಿಗಳ ಮತ್ತೊಂದು ಶಂಕೆಯನ್ನು ಹಿಂದಿನ ಅಧಿಕರಣಕ್ಕೆ ಸಮಾನವಾಗಿದೆ ಎಂದು ನಿರಾಕರಿಸುತ್ತಿದ್ದಾರೆ.

ಈ ಕ್ರಮದಲ್ಲಿ ಅದ್ವೈತಿಗಳು ಅಭ್ಯಧಿಕಾಶಂಕೆಯನ್ನು ತೋರಿಸುವುದಾದರೆ ಆಕಾಶಾಧಿಕರಣದಲ್ಲಿಯೂ ಇದೇ ಶಂಕೆಯನ್ನು ಮಾಡಬಹುದು. ಆಕಾಶಾಧಿಕರಣದ ವಿಷಯವಾಕ್ಯ ಹೀಗಿದೆ 'ಕಾ ಸಾಮ್ನೋ ಗತಿರಿತಿ । ಸ್ವರ ಇತಿ ಹೋವಾಚ । ಸ್ವರಸ್ಯ ಕಾ ಗತಿರಿತಿ । ಪ್ರಾಣ ಇತಿ ಹೋವಾಚ । ಪ್ರಾಣಸ್ಯ ಕಾ ಗತಿರಿತಿ । ಅನ್ನಮಿತಿ ಹೋವಾಚ । ಅನ್ನಸ್ಯ ಕಾ ಗತಿರಿತಿ । ಆಪ ಇತಿ ಹೋವಾಚ । ಅಪಾಂ ಕಾ ಗತಿರಿತಿ । ಅಸೌ ಲೋಕ ಇತಿ ಹೋವಾಚ' ( ಸಾಮಕ್ಕೆ ಯಾರು ಆಶ್ರಯ? ಸ್ವರನು ಎಂದು ಉತ್ತರ. ಸ್ವರಕ್ಕೆ ಯಾರು ಆಶ್ರಯ? ಪ್ರಾಣನು; ಪ್ರಾಣಕ್ಕೆ ಯಾರು ಆಶ್ರಯ? ಅನ್ನವು; ಅನ್ನಕ್ಕೆ ಯಾರು ಆಶ್ರಯ? ನೀರು; ನೀರಿಗೆ ಯಾರು ಆಶ್ರಯ? ಸ್ವರ್ಗಲೋಕ.) ಹೀಗೆ ಶಾಲಾವತ್ಯರ ಮಗನಾದ ಶಿಲಕರ ಪ್ರಶ್ನೆಗೆ ದಾಲ್ಭ್ಯರು ಸ್ವರ್ಗಲೋಕವೇ ಗತಿಯೆಂದು ಉತ್ತರಿಸಿದ್ದಾರೆ. ಪುನಃ ಶಿಲಕರು ದಾಲ್ಭ್ಯರಿಗೆ ಹೇಳಿದರು 'ಅಪ್ರತಿಷ್ಠಿತಂ ವೈ ಕಿಲ ತೇ ದಾಲ್ಭ್ಯಸಾಮ' ಎಲೈ ದಾಲ್ಭ್ಯರೇ ! ಸಾಮಪ್ರತಿಪಾದ್ಯನೆಂದು ನೀನು ತಿಳಿದ ದೇವತೆಯು ಸರ್ವೋತ್ತಮನಲ್ಲ ಎಂದು ನಿರಾಕರಿಸಿದಾಗ ದಾಲ್ಭ್ಯರು ಪುನಃ ಹೀಗೆ ಪ್ರಶ್ನಿಸುತ್ತಾರೆ 'ಅಮುಷ್ಯ ಲೋಕಸ್ಯ ಕಾ ಗತಿಃ?' (ಈ ಸ್ವರ್ಗಲೋಕಕ್ಕೆ ಯಾರು ಆಶ್ರಯ?) ಶಿಲಕರ 'ಅಯಂ ಲೋಕ ಇತಿ ಹೋವಾಚ' (ಪೃಥಿವೀಲೋಕವೇ ಆಶ್ರಯ) ಎಂಬ ಉತ್ತರ. ದಾಲ್ಭ್ಯರ ಪಕ್ಷದಲ್ಲಿ ಜೈಬಲಿಗಳ (ಪ್ರವಾಹಣರ) ಮಾತು ಹೀಗಿದೆ - 'ಅಂತವದ್ವೈ ಕಿಲ ತೇ ಶಾಲಾವತ್ಯಸಾಮ' (ಶಾಲಾವತಿಯ ಮಗನಾದ ಶಿಲಕರೇ! ನೀವು ಸಾಮಪ್ರತಿಪಾದ್ಯನೆಂದು ತಿಳಿದ ದೇವತೆಯು ಸರ್ವೋತ್ತಮನಲ್ಲ) ಎಂದು. ಪುನಃ ಶಿಲಕರ ಪ್ರಶ್ನೆ - 'ಹಾಗಾದರೆ ಅಸ್ಯಲೋಕಸ್ಯ ಕಾ ಗತಿಃ?' (ಪೃಥಿವೀಲೋಕಕ್ಕೆ ಯಾರು ಆಶ್ರಯ?) ಎಂದು. ಅದಕ್ಕೆ ಉತ್ತರ 'ಆಕಾಶ ಇತಿ ಹೋವಾಚ?' (ಆಕಾಶವೇ ಪೃಥಿವಿಗೆ ಆಶ್ರಯ) ಎಂದು. ಇಷ್ಟು ಛಾಂದೋಗ್ಯದಲ್ಲಿರುವ ಪ್ರಕರಣ. ಈ ಪ್ರಾಯಪಾಠದಿಂದ ಆಕಾಶವು ಬ್ರಹ್ಮನಲ್ಲವೆಂದು ತಿಳಿಯುತ್ತದೆ.

**ಶಂಕೆ** - ಅಸೌ ಲೋಕಃ ಇತ್ಯಾದಿವಾಕ್ಯಗಳಲ್ಲಿ ಬ್ರಹ್ಮಲಿಂಗಗಳು ಇರುವುದಿಲ್ಲ. ಆದ್ದರಿಂದ 'ಅಪ್ರತಿಷ್ಠಂ ಕಿಲ ಇತ್ಯಾದಿ' ವಾಕ್ಯದಿಂದ ದೂಷಿಸಿದ್ದಾರೆ. ಹೀಗಿರುವಾಗ ಪ್ರಸಕ್ತವಾದ ಸ್ವರ್ಗಾದಿಗಳನ್ನು ಬ್ರಹ್ಮನೆಂದು ನಿರ್ಣಯಿಸಲಾಗದು. ಆದರೆ ಸರ್ವಭೂತಕಾರಣತ್ವವೆಂಬ ಬ್ರಹ್ಮಲಿಂಗವಿರುವ ಆಕಾಶವಾಕ್ಯವು ಬ್ರಹ್ಮನನ್ನು ಪ್ರತಿಪಾದಿಸಬಹುದು. ಅಷ್ಟೇ ಅಲ್ಲದೆ 'ಪರೋವರೀಯೋಹಾಸ್ಯ ಭವತಿ' ಎಂದು ಆಕಾಶವನ್ನು ಅತ್ಯಂತ ಉತ್ತಮವೆನ್ನಲಾಗಿದೆ. ಆದ್ದರಿಂದ ಹಿಂದೆ ಪ್ರಸಕ್ತವಾದ ಸ್ವರ್ಗಾದಿಗಳು ಬ್ರಹ್ಮವಾಗದಿದ್ದರೂ ಆಕಾಶವು ಬ್ರಹ್ಮವಾಗಬಹುದಲ್ಲವೇ? ಮತ್ತು ಪ್ರಾಯಪಾಠದಿಂದ ಆಕಾಶವನ್ನು ಬ್ರಹ್ಮನಲ್ಲವೆಂದು ನಿರ್ಣಯಿಸ-ಲಾಗದು. ಸಂಶಯವಿದ್ದರೆ ಮಾತ್ರ ಪ್ರಾಯಪಾಠವು ನಿರ್ಣಾಯಕವಾಗುತ್ತದೆ. ಪ್ರಕೃತ ಆಕಾಶಶಬ್ದದ ಪ್ರತಿಪಾದ್ಯವಿಷಯದಲ್ಲಿ ಸಂಶಯವಿಲ್ಲದ ಕಾರಣ ಪ್ರಾಯಪಾಠದ ಬಲದಿಂದ ನಿರ್ಣಯಿಸಲಾಗದು.

ಇದನ್ನೇ ಪೂರ್ವಮೀಮಾಂಸೆಯಲ್ಲಿ 'ವಿಶಯೇ ಪ್ರಾಯದರ್ಶನಾತ್' (ಸಂಶಯ ಬಂದಾಗ ಪ್ರಾಯಪಾಠವು ನಿರ್ಣಾಯಕವೆಂದು ಕಂಡಿದ್ದರಿಂದ) ಎಂದು ಹೇಳಲಾಗಿದೆ.

ಸಮಾಧಾನ - ಹಾಗಾದರೆ ಪ್ರಾಣಾಧಿಕರಣದ ವಿಷಯವಾಕ್ಯದಲ್ಲಿಯೂ ಇದು ಸಮಾನ. ಭೂತಸಂವೇಶನಾದಿ ಬ್ರಹ್ಮಲಿಂಗಗಳು ಪ್ರಕೃತದಲ್ಲಿಯೂ ಕೇಳಿಸುತ್ತಿವೆ. ಹೀಗಿರುವಾಗ ಆಕಾಶಾಧಿಕರಣದಿಂದ ಪ್ರಾಣಾಧಿಕರಣಕ್ಕೆ ವೈಷಮ್ಯವನ್ನು ನಿಮ್ಮಿಂದ ತೋರಿಸಲಾಗದು. ಇದನ್ನೇ ಗ್ರಂಥಕಾರರು 'ಸಾಮ್ಯಾತ್' ಎಂದಿದ್ದಾರೆ.

ಶಂಕೆ - 'ಉಚ್ಚೈಸ್ತಂ ಗಾಯಂತಿ' ಇತ್ಯಾದಿಯಾಗಿ ಆದಿತ್ಯಾದಿಗಳಲ್ಲಿಯೂ ಬ್ರಹ್ಮಲಿಂಗಗಳು ಕೇಳಿಸುತ್ತಿವೆ. ಹೀಗೆ ವಿಚಾರಮಾಡಿದರೆ ಆಕಾಶವಾಕ್ಯದಲ್ಲಷ್ಟೇ ಅಲ್ಲದೆ ಆದಿತ್ಯಾದಿವಾಕ್ಯಗಳಲ್ಲಿಯೂ ಬ್ರಹ್ಮಲಿಂಗಗಳು ಕೇಳಿಸುತ್ತಿರುವುದರಿಂದ ಸ್ವರ್ಗಾದಿವಾಕ್ಯಗಳಂತೆ ಎಂಬ ದೃಷ್ಟಾಂತವೇ ತಪ್ಪಾಗುತ್ತದೆ.

ಸಮಾಧಾನ - ಹಾಗಾದರೆ ನೀವೇ ಹೇಳುವಂತೆ ಆದಿತ್ಯಾದಿಗಳನ್ನು ಬ್ರಹ್ಮನೆನ್ನಬೇಕು. ಹೀಗಿರುವಾಗ ಅಬ್ರಹ್ಮಸನ್ನಿಧಾನವೆಂಬ ಹೇತುವೇ ಅಸಿದ್ಧವಾಗುತ್ತದೆ. ಆದ್ದರಿಂದ ಯಾವುದೇ ಕಾರಣದಿಂದಲೂ ಅಭ್ಯಧಿಕಾಶಂಕೆಯು ಕೂಡುವುದಿಲ್ಲ.

ಆದಿತ್ಯಸಂಸ್ಥಿತೋ ವಿಷ್ಣುಃ ಯತ್ಸದಾ ಸರ್ವಗೀತಭುಕ್ ।
ರಾಜಾದೌ ಗೀತಮಪ್ಯಜ್ಞೈಃ ಭುಂಕ್ತೇ ಗಾನಸ್ಯ ದೇವತಾ ॥
ಉದ್ಗೀಥದೇವತಾ ತಸ್ಮಾತ್ ಸ ಏವ ಪುರುಷೋತ್ತಮಃ ।
ಅನ್ನಸ್ಥೇನೈವ ಜೀವಂತಿ ಭೂತಾನ್ಯೇತಾನಿ ವಿಷ್ಣುನಾ ॥
ಪ್ರತಿಹಾರದೇವತಾತಸ್ಥಃ ಪ್ರತಿಹಾರೋ ಹಿ ಭೋಜನಮ್ ।

(ಆದಿತ್ಯನಲ್ಲಿರುವ ವಿಷ್ಣುವೇ ಸರ್ವಕಾಲದಲ್ಲಿಯೂ ಎಲ್ಲರಿಂದ ಗಾನಮಾಡಿಸಿಕೊಳ್ಳುತ್ತಾನೆ. ಅಜ್ಞಜನರು ತಮ್ಮ ರಾಜರುಗಳನ್ನುದ್ದೇಶಿಸಿ ಗಾನ ಮಾಡಬಹುದು. ಆ ಗಾನವನ್ನೂ ಕೂಡ ಗಾನ-ದೇವತೆಯಾದ ಆದಿತ್ಯನಲ್ಲಿರುವ ವಿಷ್ಣುವೇ ಸ್ವೀಕರಿಸುತ್ತಾನೆ. ಆದ್ದರಿಂದ ಪುರುಷೋತ್ತಮನಾದ ಆದಿತ್ಯಾಂತರ್ಗತ ವಿಷ್ಣುವೇ ಉದ್ಗೀಥಪ್ರತಿಪಾದ್ಯದೇವತೆ. ಅನ್ನನಲ್ಲಿರುವ ವಿಷ್ಣುವಿನಿಂದಲೇ ಎಲ್ಲ ಪ್ರಾಣಿಗಳು ಜೀವಿಸುತ್ತವೆ. ಆದ್ದರಿಂದ ಆ ವಿಷ್ಣುವೇ ಪ್ರತಿಹಾರ ಪ್ರತಿಪಾದ್ಯದೇವತೆ. ಏಕೆಂದರೆ ಪ್ರತಿಹಾರ-ವೆಂದರೆ ಭೋಜನವೆಂದು ಪ್ರಸಿದ್ಧಿಯಿದೆ) ಹೀಗೆ ಸ್ಮೃತಿವಾಕ್ಯಗಳಿಂದ ಆದಿತ್ಯಾದಿ ಶಬ್ದಗಳು ವಿಷ್ಣುವನ್ನು ಪ್ರತಿಪಾದಿಸುತ್ತಿವೆ ಎಂದು ತಿಳಿಯುತ್ತದೆ. ನ್ಯಾಯಸುಧೆಯೂ ಕೂಡ ಇದನ್ನು ಸಮ್ಮತಿಸಿದೆ. 'ಆದಿತ್ಯ-ನ್ನಯೋಃ ಅಬ್ರಹ್ಮತ್ವಸ್ಯಾಪಿ ಅಸಿದ್ಧೇಃ । ತತ್ರಾಪಿ ಸರ್ವಾಣಿ ಹ ವಾ ಇಮಾನಿ ಭೂತಾನಿ ಆದಿತ್ಯಮುಚ್ಚೈಸ್ತಂ ಗಾಯಂತಿ ಇತ್ಯಾದಿ ಬ್ರಹ್ಮಲಿಂಗಸದ್ಭಾವಾತ್ ಅನ್ನಮೇವ ಪ್ರತಿಹಾರಮಾಣಿ ಇತ್ಯೇತಸ್ಯ ತು ಪ್ರಾಯಪಾಠಾತ್ ಉಪಜೀವನಾರ್ಥತ್ವೇನ ಗ್ರಾಹ್ಯತ್ವಾತ್' (ಆದಿತ್ಯ ಅನ್ನರನ್ನು ಅಬ್ರಹ್ಮರೆಂದು ಹೇಳಿದ್ದೂ ತಪ್ಪು. ಅಲ್ಲಿಯೂ ಕೂಡ ಸಕಲಭೂತಕಾರಣತ್ವ, ಸಕಲಗಾನಪ್ರತಿಪಾದ್ಯತ್ವವೆಂಬ ಬ್ರಹ್ಮನ ಅಸಾಧಾರಣಲಿಂಗಗಳು ಕೇಳಿಸುತ್ತಿವೆ. ಇನ್ನು ಅನ್ನಮೇವ ಪ್ರತಿಹಾರಮಾಣಿ ಎಂಬುದನ್ನು ಪ್ರಾಯಪಾಠದ ಬಲದಿಂದ ಭಗವಂತನು ಉಪಜೀವ್ಯನಾಗಿದ್ದಾನೆಂದು ತಿಳಿಯಬೇಕು) ಎಂದು.

ಹೀಗೆ ಹೇಳಿದ್ದರಿಂದ ಈ ಪ್ರಾಣನು ಬ್ರಹ್ಮನೆಂದು ಅವಶ್ಯನಿರ್ಣಯಿಸಬೇಕಾಗಿರುವುದರಿಂದ ಈ ಅಧಿಕರಣದಲ್ಲಿಯೇ ಪ್ರಾಣಶಬ್ದವಾಚ್ಯತ್ವವನ್ನು ಬ್ರಹ್ಮನಲ್ಲಿ ನಿರ್ಣಯಿಸಲಾಗಿದೆ ಎಂಬ ಅದ್ವೈತಿಗಳ ಕಲ್ಪನೆಯನ್ನು ನಿರಾಕರಿಸಿದಂತಾಯಿತು. ಬ್ರಹ್ಮಲಿಂಗಗಳು ಪ್ರಾಣಪ್ರಕರಣದಲ್ಲಿರುವಂತೆ ಆಕಾಶಪ್ರಕರಣದಲ್ಲಿಯೂ ಸಮಾನವಾಗಿದೆ ಎಂದು. ಪಕ್ಷಾಂತರಪ್ರಾಪಕವಾದ ಬೇರೆ ಹೇತುವಿಲ್ಲದ ಕಾರಣ ಈ ಅಧಿಕರಣದ ಸಂಶಯಪೂರ್ವಪಕ್ಷಗಳೇ ಹುಟ್ಟಲಾರವು. ಹಿಂದಿನ ಅಧಿಕರಣದ ಸಿದ್ಧಾಂತನ್ಯಾಯದಿಂದಲೇ ಪ್ರಾಣನು ಬ್ರಹ್ಮನೆಂದು ನಿರ್ಣಯವಾಗುತ್ತದೆ. ಸುಧಾಕಾರರು 'अत्रापि संशयाद्यभावात्' (ಅದ್ವೈತಿಗಳ ಪಕ್ಷದಲ್ಲಿ ಸಂಶಯಾದಿಗಳು ಕೂಡುವುದಿಲ್ಲವೆಂದು ಹೇಳಿದ್ದಾರೆ.

**ಗುರುರಾಜೀಯಮ್** – ಅತ್ರ ಹಿ ಪೂರ್ವಪಕ್ಷೇ ಪ್ರಾಣಶಬ್ದೇನ ಜಡವಾಯುಃ ಕಿಂ ವಾ ತದಭಿಮಾನಿಚೇತನಃ? ಇತಿ ವಿಕಲ್ಪಂ ಮನಸಿ ನಿಧಾಯ, ಆದ್ಯೇ ದೋಷಮಾಹ – **ಪೂರ್ವಪಕ್ಷ ಇತಿ** ॥ ಜಡೇ ದೇವತಾಶಬ್ದಸ್ಯ ಕಾಪ್ಯಪ್ರಯೋಗಾದಿತಿ ಭಾವಃ । ದ್ವಿತೀಯಂ ದೂಷಯತಿ – **ತದಭಿಮಾನೀತಿ** ॥ ಮಾನಾನ್ತರಸಂವಾದೇನ ಪ್ರಾಬಲ್ಯಮಾಶ್ರಿತ್ಯಾಭ್ಯಧಿಕಾಶಙ್ಕಯಾ ಕೃತಂ ಪೂರ್ವಪಕ್ಷಂ ದೂಷಯತಿ – **ಸ್ವಾಪವಾಕ್ಯ ಇತಿ** ॥ ಅಕ್ಷಾಣಾಮತೀನ್ದ್ರಿಯತ್ವೇನ ಪ್ರತ್ಯಕ್ಷಾದನುಮಾನಾದ್ವೇತಿ ಅವ್ಯವಸ್ಥಿತವಿಕಲ್ಪಾಯೋಗಾದ್ವ್ಯವಸ್ಥಾಂ ದರ್ಶಯತಿ – **ನ ತಾವದಿತ್ಯಾದಿನಾ** ॥

ನನು ದೃಷ್ಟಿಸೃಷ್ಟಿಪಕ್ಷಮನುಸೃತ್ಯ ಸ್ವಾಪಇನ್ದ್ರಿಯಾಣಾಂ ಲಯ ಉಚ್ಯತ ಇತ್ಯತ ಆಹ – **ದೃಷ್ಟಿಸೃಷ್ಟಿಮತ ಇತಿ** ॥ ನನ್ವಿನ್ದ್ರಿಯಾಣಿ ವಾಯೌ ಸ್ವಾಪಕಾಲೇ ವಿಲೀಯನ್ತೇ ವಾಯುವ್ಯಾಪಾರದಶಾಯಾಂ ಲುಪ್ತವ್ಯಾಪಾರತ್ವಾದಿತ್ಯನುಮಾನೇನ ಲಯೋऽನುಮೀಯತ ಇತ್ಯಾಶಙ್ಕ್ಯ ನಿರಾಕರೋತಿ – **ನಾಪೀತಿ** ॥ **ವ್ಯಾಪ್ಯಭಾವಾದ್ಧೇತಿ** ॥ ದೇವದತ್ತೇ ಸವ್ಯಾಪಾರೇಪಿ ನಿರ್ವ್ಯಾಪಾರಸ್ಯ ಯಜ್ಞದತ್ತಸ್ಯ ತತ್ರ ಲಯಾಭಾವಾದಿತಿ ಭಾವಃ । ಅಪ್ರಾಧಾನ್ಯಕ್ರಮೇಣಾದೌ ವ್ಯಭಿಚಾರಮುಕ್ತ್ವಾ ಬಾಧಮಾಹ **ಪೂರ್ವೇದ್ಯುರಿತಿ** ॥

## ಅದ್ವೈತಿಗಳ ಸಿದ್ಧಾಂತವೂ ತಪ್ಪು

**ತಾತ್ಪರ್ಯಚನ್ದ್ರಿಕಾ–**

**ಯಚ್ಚೋಕ್ತಮ್ 'ಪುಂವಾಕ್ಯಸ್ಯ' ಇತ್ಯಾದಿ, ತತ್ರ ಬ್ರೂಮಃ –**
**ಅಪುಂವಾಕ್ಯಪ್ಯಯೇऽಪ್ಯೇಕೇನಾನ್ಯಾನುಸರಣೇ ಧ್ರುವಮ್ ।**
**ಕರ್ತವ್ಯೇ ಸತಿ ಕೃಪತ್ವಾತ್ಸಂವಾದೇವಾನುರುಧ್ಯತಾಮ್ ॥**

**ತಥಾಹಿ – ಪ್ರಮಾಣಭೂತೇ ಪುಂವಾಕ್ಯೇ ಪ್ರತ್ಯಕ್ಷಾದೌ ಚ ಸಂವಾದಿನ ಏವ ಅನುಸರಣೀಯತ್ವಂ ಕೃಪಮ್, ಇತಿ ಇಹಾಪಿ ತಥೈವ ಯುಕ್ತಮ್; ಅರ್ಥಾಬಾಧರೂಪಪ್ರಾಮಾಣ್ಯಸ್ಯ ಸಂವಾದೇನ ದಾರ್ಢ್ಯಾತ್,**

**अनपेक्षत्वस्य च दैवात्संवादेन आहानेः । सप्रयोजनत्वाय च प्रस्ताव-वाक्यस्यापूर्वार्थत्वे स्वापवाक्येऽपि तत्प्रसङ्गात् । स्वापवाक्यस्याप्यभिमानिदेवता-परत्वे अपूर्वार्थत्वसम्भवाच्च । अनाशङ्कितदोषत्वात्तु द्वयोरपि प्रामाण्यम्, न त्वन्योन्यमननुसरणम् । अन्यथा श्रुत्या श्रुत्यन्तरसंवादः उपक्रमाद्यानुगुण्यं च नानुसरणीयं स्यात् । मानान्तरविरोधश्च न परिहार्यः स्यात् । तदुक्तं भामत्यामपि – 'यद्यपि श्रुतयः स्वतः प्रमाणतयानपेक्षाः । तथाऽपि मानान्तरोपनीतार्थवशेन व्यवस्थाप्यन्ते'' इति । तस्मात्परेषामधिकरणमयुक्तम् ॥**

ಅನುವಾದ - 'पुंवाक्यस्य' ಇತ್ಯಾದಿ ವಾಕ್ಯದಿಂದ ಆದ್ವೈತಿಗಳು ಮಾಡಿದ ಸಿದ್ಧಾಂತವು ಕೂಡ ತಪ್ಪು.

अपुंवाक्यद्वयेप्येकेनान्यानुसरणे ध्रुवम् ।
कर्तव्ये सति क्लृप्तत्वात् संवाद्येवानुरुद्ध्यताम् ॥

(ಎರಡು ಅಪೌರುಷೇಯವಾಕ್ಯಗಳಿದ್ದಾಗ ಒಂದು ವಾಕ್ಯದಿಂದ ಮತ್ತೊಂದನ್ನು ಅನುಸರಿಸಿ ಅದರ ತಾತ್ಪರ್ಯವನ್ನು ಅವಶ್ಯವಾಗಿ ನಿಶ್ಚಯಿಸಬೇಕಾಗುತ್ತದೆ. ಆ ಸಂದರ್ಭದಲ್ಲಿ ಪ್ರಮಾಣಸಿದ್ಧವಾದ್ದರಿಂದ ಮಾನಾಂತರಸಂವಾದಿವಾಕ್ಯವನ್ನೇ ಅನುಸರಿಸಬೇಕು.)

ಅದು ಹೀಗೆ - ಪ್ರಮಾಣಭೂತವಾದ ಪೌರುಷೇಯವಾಕ್ಯದಲ್ಲಿ ಮತ್ತು ಪ್ರತ್ಯಕ್ಷಾದಿಗಳಲ್ಲಿ ಮಾನಾಂತರ ಸಂವಾದಿಯನ್ನೇ ಅನುಸರಿಸುವುದು ಪ್ರಮಾಣಸಿದ್ಧವಾಗಿದೆ. ಆದರಂತೆ ಅಪೌರುಷೇಯ-ವಾಕ್ಯದಲ್ಲಿಯೂ ಮಾನಾಂತರಸಂವಾದಿಯಾದದ್ದನ್ನು ಅನುಸರಿಸುವುದು ಉಚಿತ. ಅರ್ಥ ಅಬಾಧ-ರೂಪವಾದ ಪ್ರಾಮಾಣ್ಯಕ್ಕೆ ಪ್ರಮಾಣಾಂತರಸಂವಾದದಿಂದ ದಾರ್ಢ್ಯ ಬರುತ್ತದೆ. ವಸ್ತುತಃ ವಾಕ್ಯವು ಪ್ರಮಾಣವಾಗಲು ಮತ್ತೊಂದರ ಅಪೇಕ್ಷೆ ಇಲ್ಲ. ಆದರೆ ಅದೃಷ್ಟವಶಾತ್ ಪ್ರಮಾಣಾಂತರ-ಸಂವಾದಿಯಾದರೆ ಏನೂ ಹಾನಿಯಿಲ್ಲ. ಇನ್ನು ಪ್ರಸ್ತಾವವಾಕ್ಯಕ್ಕೆ ಪ್ರಯೋಜನಕ್ಕೋಸ್ಕರ ಅಪೂರ್ವ-ವಾದ ಅರ್ಥವನ್ನು ಹೇಳಬೇಕು. ಹಾಗಾದಲ್ಲಿ ಸ್ವಾಪವಾಕ್ಯವೂ ಅಪೂರ್ವಾರ್ಥವಾಗ- ಬೇಕಾದೀತು. ಮತ್ತು ಸ್ವಾಪವಾಕ್ಯವು ಅಭಿಮಾನಿಯಾದ ದೇವತೆಯನ್ನು ಪ್ರತಿಪಾದಿಸುವುದಾದರೆ ಅಪೂರ್ವಾ-ರ್ಥವುಳ್ಳದ್ದಾಗಬೇಕಾದೀತು.

ಎರಡೂ ವಾಕ್ಯಗಳು ಅಪೌರುಷೇಯವಾಗಿದ್ದಾಗ ದೋಷಶಂಕೆಗೆ ಅವಕಾಶವಿರುವುದಿಲ್ಲ. ಆ ಸಂದರ್ಭದಲ್ಲಿ ಎರಡಕ್ಕೂ ಪ್ರಾಮಾಣ್ಯ ಹೇಳಬೇಕು. ಹೊರತು ಪರಸ್ಪರವಾಗಿ ಒಂದನ್ನೊಂದು ಅನುಸರಿಸದೇ ಇರಬಾರದು. ಇಲ್ಲದಿದ್ದರೆ ಒಂದು ಶ್ರುತಿಗೆ ಮತ್ತೊಂದು ಶ್ರುತಿಯ ಸಂವಾದ-ವನ್ನಾಗಲೀ ಉಪಕ್ರಮಾದಿಗಳ ಅನುಗುಣ್ಯವನ್ನಾಗಲೀ ಅನುಸರಿಸುವುದು ತಪ್ಪಾಗುತ್ತದೆ. ಮತ್ತು

ಅಪೌರುಷೇಯವಾಕ್ಯಕ್ಕೆ ಪ್ರಮಾಣಾಂತರದಿಂದ ವಿರೋಧ ಬಂದಾಗ ಅದನ್ನು ಪರಿಹರಿಸಬೇಕಾಗಿಲ್ಲ. ನಿಮ್ಮ ಪ್ರಕಾರ ಅಪೌರುಷೇಯವಾದ್ದರಿಂದಲೇ ಪ್ರಮಾಣವಾಗಿರುವಾಗ ಪ್ರಮಾಣಾಂತರವಿರೋಧವು ಏನು ತಾನೆ ಮಾಡೀತು? ಇದನ್ನೇ ಭಾಮತಿಯಲ್ಲಿ ಹೀಗೆ ಹೇಳಲ್ಪಟ್ಟಿದೆ. '' 'ಯದ್ಯಪಿ ಶ್ರುತಯಃ ಸ್ವತಃ ಪ್ರಮಾಣತಯಾನಪೇಕ್ಷಾಃ । ತಥಾಪಿ ಮಾನಾಂತರೋಪನೀತಾರ್ಥವಶೇನ ವ್ಯವಸ್ಥಾಪ್ಯಂತೇ' ವಸ್ತುತಃ ಶ್ರುತಿಗಳು ಸ್ವತಃಪ್ರಮಾಣವಾದ್ದರಿಂದ ಮತ್ತೊಂದು ಪ್ರಮಾಣವನ್ನು ಅಪೇಕ್ಷಿಸಲಾರವು. ಆದರೂ ಕೂಡ ಪ್ರಮಾಣಾಂತರದಿಂದ ತಿಳಿಯಲ್ಪಟ್ಟ ಅರ್ಥದ ಅಧೀನವಾಗಿ ಶ್ರುತಿಯ ಅರ್ಥವನ್ನು ನಿಶ್ಚಯಿಸಬಹುದು'' ಎಂದು. ಆದ್ದರಿಂದ ಆದ್ವೈತಿಗಳ ಅಧಿಕರಣವು ಅಯುಕ್ತವಾಗಿದೆ.

**ಪ್ರಕಾಶಃ** – ಏವಮಭ್ಯಧಿಕಾಶಙ್ಕಾಪ್ರಕಾರಂ ನಿರಸ್ಯ, ತನ್ನಿವರ್ತಕತಯೋಕ್ತಂ ಸಿದ್ಧಾನ್ತಪ್ರಕಾರಂ ಚ ನಿರಸ್ಯತಿ – **ಯಚ್ಚೋಕ್ತಮಿತಿ ॥ ಅಪುಂವಾಕ್ಯೇತಿ ॥** ಪ್ರಸ್ತಾವವಾಕ್ಯಂ ತಾವದವಶ್ಯಂ ಸ್ವಾಪವಾಕ್ಯ-ಕಾರಣವಾಕ್ಯಾನ್ಯತರಾನುರೋಧೇನ ನೇಯಂ, ಭೂತಸಂವೇಶನಾದಿಲಿಙ್ಗಮಾತ್ರಸ್ಯಾತ್ರ ನಿರ್ಣಾಯಕತ್ವೇ ಪೂರ್ವೇಣ ಗತಾರ್ಥತ್ವಸ್ಯೋಕ್ತತ್ವಾತ್। ತತ್ರ ದ್ವಯೋರಪೌರುಷೇಯತ್ವೇऽಪಿ ಪೂರ್ವಪಕ್ಷ್ಯುಕ್ತರೀತ್ಯಾ ಮಾನಾನ್ತರಸಂವಾದಿ - ಸ್ವಾಪವಾಕ್ಯಮೇವಾನುರುದ್ಧವ್ಯಂ, ಲೋಕೇ ತಥಾ ಕ್ಷುಪತ್ವಾತ್ । ತಥಾಚ ಪ್ರಸ್ತಾವವಾಕ್ಯಂ ಪ್ರಸಿದ್ಧ-ಪ್ರಾಣಪರಮೇವೇತಿ ನ ಪೂರ್ವಪಕ್ಷೋಪಮರ್ದ ಇತ್ಯರ್ಥಃ ।

'ಕ್ಷುಪತ್ವಾತ್' ಇತ್ಯೇತದುಪಪಾದಯತಿ – **ಪ್ರಮಾಣೇತಿ ॥** ನನು ಮಾನಾನ್ತರಸಂವಾದಿನೋऽ-ಪ್ರಾಮಾಣ್ಯಾತ್ ಕಥಂ ತದನುಸರಣಮ್? ಇತಿ ಚೇತ್ ಕಿಮಿದಮಪ್ರಾಮಾಣ್ಯಂ ಕಿಂ ಜ್ಞಾತಾರ್ಥಕತ್ವಮ್ ಉತ ಮಾನಾನ್ತರಸಾಪೇಕ್ಷತ್ವರೂಪಮ್ ?

ಆದ್ಯ ಆಹ – **ಅರ್ಥೇತಿ ॥** ವಿಷಯಾಬಾಧರೂಪಂ ಯಾಥಾರ್ಥ್ಯಮೇವ ಪ್ರಾಮಾಣ್ಯಂ, ನ ತ್ವನಧಿಗತಾರ್ಥತ್ವಮ್ । ಅನ್ಯತ್ರ ನಿರಸ್ತತ್ವಾದಿತಿ ಭಾವಃ । ಏತೇನ – ಪ್ರಮಾಣಸಿದ್ಧೇ ಮಾನಾನ್ತರಸಂವಾದೋ ವ್ಯರ್ಥಃ' ಇತಿ ನಿರಸ್ತಮ್ । ಪ್ರಮಾಣಸಿದ್ಧತ್ವೇಪಿ ತತ್ರಾನಾಶ್ವಾಸಶಙ್ಕಾನಿರಾಸೇನ ದಾಢ್ರ್ಯಾರ್ಥತ್ವಾತ್ – ಇತಿ ।

ದ್ವಿತೀಯ ಆಹ – **ಅನಪೇಕ್ಷತ್ವಸ್ಯೇತಿ ॥** ಸ್ವಾಪವಾಕ್ಯಂ ಚ ನ ಮಾನಾನ್ತರಮಪೇಕ್ಷ್ಯಾರ್ಥಂ ಬೋಧಯತಿ, ಕಿನ್ತು ತದುಕ್ತೇऽರ್ಥೇ ದೈವಾನ್ಮಾನಾನ್ತರಸಂವಾದಃ । ನಚ ತಾವತಾ ಸಾಪೇಕ್ಷತ್ವಮ್ । ಉಕ್ತಞ್ಚ ವಾಚಸ್ಪತ್ಯೇ – **'ಯತ್ರ ತು ಪ್ರಮಾಣಾನ್ತರಸಂವಾದಸ್ತತ್ರ ಪ್ರಮಾಣಾನ್ತರಾದಿವಾರ್ಥವಾದಾದಪಿ ಸೋऽರ್ಥಃ ಪ್ರಸಿಧ್ಯತಿ, ದ್ವಯೋಃ ಪರಸ್ಪರಾನಪೇಕ್ಷಯೋ; ಪ್ರತ್ಯಕ್ಷಾನುಮಾನಯೋರಿವೈಕತ್ರಾರ್ಥೇ ಪ್ರವೃತ್ತೇಃ'** ಇತೀತಿ ಭಾವಃ । ಸ್ವಾಪವಾಕ್ಯಾನನುಸರಣೇ ಕಾರಣವಕ್ಯಸ್ಯೈವಾನುಸರಣೇ ಬೀಜಾನ್ತರಮಾಶಙ್ಕ್ಯಾಹ –

**ಸಪ್ರಯೋಜನತ್ವಾಯೇತಿ ॥** ಬ್ರಹ್ಮಪರತ್ವ ಏವಾಪೂರ್ವಾರ್ಥತ್ವಂ, ನ ತು ಪ್ರಾಣಪರತ್ವ ಇತಿ ಭಾವಃ । 'ತತ್ಪ್ರಸಙ್ಗಾತ್' ಅಪೂರ್ವಾರ್ಥತ್ವಪ್ರಸಙ್ಗಾತ್ ।

ನನ್ವತ್ರ ಬ್ರಹ್ಮಪರತ್ವೇನಾಪೂರ್ವಾರ್ಥತ್ವವತ್ತತ್ರ ತನ್ನ ಸಮ್ಭವತಿ, ಪ್ರಾಣಪರತ್ವೇನ ಸಿದ್ಧತ್ವಾದಿತ್ಯತ ಆಹ – **ಸ್ವಾಪವಾಕ್ಯಸ್ಯೇತಿ ॥** ಪ್ರಾಣವಾನ್ವಭಿಮಾನೀತ್ಯರ್ಥಃ । ಏವಞ್ಚ ಸ್ವಾಪವಾಕ್ಯಗತ-ಪ್ರಾಣಶಬ್ದಸ್ಯ ತದಭಿಮಾನಿದೇವತಾಪರತ್ವೇ ತದನುಸಾರೇಣ ಪ್ರಸ್ತಾವವಾಕ್ಯಸ್ಯಾಪಿ ದೇವತಾಪರತ್ವೇ ಅಪೂರ್ವತಾಲಾಭಾನ್ನ ಬ್ರಹ್ಮಪರತ್ವಸಿದ್ಧಿರಿತಿ ಭಾವಃ ।

ಯದಪ್ಯುಕ್ತಂ – 'ಅಪುಂವಾಕ್ಯತಯಾऽನಾಶಙ್ಕಿತದೋಷತ್ವಾನ್ನಾನ್ಯಾನುಸರಣಂ' ಇತಿ, ತದಪಿ ನ , ಇತ್ಯಾಹ – **ಅನಾಶಙ್ಕಿತೇತಿ ॥ ಸಂವಾದ ಇತಿ ॥** 'ನಾನುಸರಣೀಯಃ' ಇತಿ ಯೋಜ್ಯಮ್ – **ಮಾನಾನ್ತರೇತಿ ॥** 'ಅನ್ಯಥಾ' ಇತ್ಯನುವರ್ತತೇ । 'ಅಪೌರುಷೇಯೇऽಪ್ಯನ್ಯಾನುಸರಣಮ್' ಇತ್ಯತ್ರ ತದ್ವಚನಮೇವ ಸಂವಾದಯತಿ – **ಉಕ್ತಞ್ಚೇತಿ ॥**

ಏತೇನ – 'ಸ್ವಾಪವಾಕ್ಯಂ ಸಂವರ್ಗವಿದ್ಯಾಯಾಂ ಶ್ರೂಯತೇ, ಪ್ರಸ್ತಾವವಾಕ್ಯಂ ತು ಉದ್ಗೀಥವಿದ್ಯಾಯಾಂ, ಅತಸ್ತಯೋರ್ನೈಕವಾಕ್ಯತ್ವಮಿತಿ ಸಿದ್ಧಾನ್ತಃ' ಇತಿ ನಿರಸ್ತಮ್ । ಬ್ರಹ್ಮಕಾರಣವಾಕ್ಯಸ್ಯಾಪಿ ತಥಾತ್ವಾತ್ – ಇತಿ । ಯದತ್ರ ಕೈಶ್ಚಿದುಕ್ತಂ 'ಪ್ರಾಣಸ್ಯ ಪ್ರಾಣಃ ಪ್ರಾಣಬನ್ಧನಂ ಹಿ ಸೋಮ್ಯ ಮನಃ' ಇತಿ ಚೋದಾಹರಣಮಿತಿ, ತತ್ತು ಪರಭಾಷ್ಯ ಏವ ಸಂಶಯಾನುದಯೇನ ದೂಷಿತತ್ವಾನ್ನ ನಿರಾಕೃತಮ್ ।

ಅನುವಾದ - ಇಲ್ಲಿಯ ತನಕ ಆದ್ವೈತಿಗಳು ತೋರಿಸಿದ ಅಭ್ಯಧಿಕಶಂಕಾಪ್ರಕಾರವನ್ನು ನಿರಾಕರಿಸಿದ್ದಾಯಿತು. ಅಂದರೆ ಆದ್ವೈತಿಗಳ ಅಧಿಕರಣಪೂರ್ವಪಕ್ಷವನ್ನು ನಿರಾಕರಿಸಿದಂತಾಯಿತು. ಪ್ರಕೃತ ಅಭ್ಯಧಿಕಾಶಂಕೆಯನ್ನು ನಿವಾರಿಸುವ ಸಿದ್ಧಾಂತವನ್ನೂ ನಿರಾಕರಿಸುತ್ತಿದ್ದಾರೆ.

''ಪೌರುಷೇಯವಾಕ್ಯದಲ್ಲಿ ಪ್ರಮಾಣಾಂತರಸಂವಾದವಿರುವುದರಿಂದ ಪ್ರಾಬಲ್ಯವನ್ನು ಪ್ರಮಾಣಾಂತರ-ಸಂವಾದವಿಲ್ಲದ್ದರಿಂದ ದೌರ್ಬಲ್ಯವನ್ನು ಹೇಳಬಹುದು. ಆದರೆ ಅಪೌರುಷೇಯವಾಕ್ಯದಲ್ಲಿ ವಕ್ತೃದೋಷದ ಶಂಕೆಗೆ ಆಸ್ಪದವಿಲ್ಲದ್ದರಿಂದ ಪ್ರಮಾಣಾಂತರಸಂವಾದದಿಂದ ಪ್ರಾಬಲ್ಯವನ್ನಾಗಲೀ, ಪ್ರಮಾಣಾಂತರಸಂವಾದವಿಲ್ಲದ್ದರಿಂದ ದೌರ್ಬಲ್ಯವನ್ನಾಗಲೀ ಹೇಳುವುದು ತಪ್ಪು'' ಎಂದು ಆದ್ವೈತಿಗಳು ಹೇಳಿದ ಸಿದ್ಧಾಂತ. ಇದು ತಪ್ಪು. 'ಯದಾ ವೈ ಪುರುಷಃ ಸ್ವಪಿತಿ' ಎಂಬ ಸ್ವಾಪವಾಕ್ಯ, 'ಯತೋ ವಾ ಇಮಾನಿ' ಇತ್ಯಾದಿ ಕಾರಣ-ವಾಕ್ಯ ಇವೆರಡನ್ನೂ ಅನುಸರಿಸಿ 'ಪ್ರಸ್ತೋತರ್ಯಾ ದೇವತಾ' ಎಂಬ ಪ್ರಸ್ತಾವವಾಕ್ಯದ ತಾತ್ಪರ್ಯವನ್ನು ನಿಶ್ಚಯಿಸಬೇಕು. ಹೊರತು ಕೇವಲ ಭೂತಸಂವೇಶನಾದಿಲಿಂಗದಿಂದ ಪ್ರಸ್ತಾವವಾಕ್ಯದ ತಾತ್ಪರ್ಯವನ್ನು ನಿಶ್ಚಯಿಸುವುದಾದರೆ ಹಿಂದಿನ ಆಕಾಶಾಧಿಕರಣದಿಂದ ಗತಾರ್ಥತ್ವದೋಷ ಬರುತ್ತದೆ. ಸ್ವಾಪವಾಕ್ಯ ಹಾಗೂ ಕಾರಣವಾಕ್ಯಗಳೆರಡೂ ಅಪೌರುಷೇಯವಾಗಿದ್ದರೂ ಪೂರ್ವಪಕ್ಷಿ ಹೇಳಿದಂತೆ ಮಾನಾಂತರಸಂವಾದಿಯಾದ

ಸ್ವಾಪವಾಕ್ಯವನ್ನೇ ಅನುಸರಿಸಿ ಪ್ರಸ್ತಾವವಾಕ್ಯದ ತಾತ್ಪರ್ಯವನ್ನು ನಿಶ್ಚಯಿಸಬೇಕು. ಏಕೆಂದರೆ ಲೋಕದಲ್ಲಿ ಮಾನಾಂತರಸಂವಾದಿಯಾದ ಪ್ರಮಾಣವನ್ನು ಅನುಸರಿಸಿ ತಾತ್ಪರ್ಯವನ್ನು ನಿಶ್ಚಯಿಸುವುದು ಕಂಡಿದೆ. ಹೀಗಿರುವಾಗ ಪ್ರಸ್ತಾವವಾಕ್ಯವು ಸ್ವಾಪವಾಕ್ಯಕ್ಕೆ ಪ್ರಸಿದ್ಧನಾದ ಪ್ರಾಣನನ್ನೇ ಪ್ರತಿಪಾದಿಸುತ್ತದೆ ಹೊರತು ಬ್ರಹ್ಮನನ್ನು ಪ್ರತಿಪಾದಿಸಲಾರದು. ಆದ್ದರಿಂದ ಸಿದ್ಧಾಂತದಿಂದ ಪೂರ್ವಪಕ್ಷವು ಹೇಗೆ ನಿರಾಕೃತವಾಗುತ್ತದೆ.

ಶ್ಲೋಕದಲ್ಲಿರುವ ಕ್ಲಪ್ತತ್ವಾತ್ ಎಂಬುದನ್ನು 'ಪ್ರಮಾಣಭೂತೇ' ಎಂಬ ವಾಕ್ಯದಿಂದ ವಿಸ್ತರಿಸುತ್ತಿದ್ದಾರೆ.

ಶಂಕೆ - ಯಾವ ವೇದವಾಕ್ಯವು ಪ್ರಮಾಣಾಂತರಸಂವಾದಿಯಾಗಿರುತ್ತದೋ, ಆದು ಅಪ್ರಮಾಣವಾಗುತ್ತದೆ. ಹೀಗಿರುವಾಗ ಮಾನಾಂತರಸಂವಾದಿವಾಕ್ಯವನ್ನು ಅನುಸರಿಸುವುದು ತಪ್ಪಲ್ಲವೇ?

ಸಮಾಧಾನ - ನಿಮ್ಮ ಅಭಿಪ್ರಾಯವೇನು? ಜ್ಞಾತಜ್ಞಾಪಕವಾಗುವುದರಿಂದ ಅಪ್ರಮಾಣವಾಗುತ್ತದೆಂದೋ ಅಥವಾ ಪ್ರಮಾಣಾಂತರವನ್ನು ಅಪೇಕ್ಷಿಸುವುದರಿಂದ ಅಪ್ರಮಾಣವಾಗುತ್ತದೆಂದೋ? ಪ್ರಥಮಪಕ್ಷದಲ್ಲಿ 'ಅರ್ಥಾಬಾಧ' ಎಂಬ ವಾಕ್ಯವು ಉತ್ತರಿಸುತ್ತಿದೆ. ಯಥಾವಸ್ಥಿತಜ್ಞೇಯವಿಷಯಕಾರಿತ್ವವು ಪ್ರಮಾಣದ ಲಕ್ಷಣ ಹೊರತು ಅನಧಿಗತಾರ್ಥತ್ವವು ಅಲ್ಲ. ಇದನ್ನು ಬೇರೆ ಗ್ರಂಥಗಳಲ್ಲಿ ನಿರಾಕರಿಸಲಾಗಿದೆ. ಒಂದು ವೇಳೆ ಅನಧಿಗತಾರ್ಥತ್ವವೇ ಪ್ರಮಾಣದ ಲಕ್ಷಣವಾಗಿದ್ದಲ್ಲಿ ಮಾನಾಂತರಸಂವಾದಿಯಾದ ಕಾರಣ ಅಪ್ರಮಾಣವಾಗುತ್ತದೆಂಬ ನಿಲುವನ್ನು ಒಪ್ಪಬಹುದಿತ್ತು. ಇದರಿಂದ ಪ್ರಮಾಣಸಿದ್ಧವಾದ ಮೇಲೆ ಪುನಃ ಪ್ರಮಾಣಾಂತರಸಂವಾದವು ಅನಾವಶ್ಯಕ ಎಂಬ ಮತ್ತೊಂದು ಶಂಕೆಯನ್ನು ನಿರಾಕರಿಸಿದಂತಾಯಿತು. ಏಕೆಂದರೆ ಪ್ರಮಾಣಸಿದ್ಧವಾದರೂ ಅವಿಶ್ವಾಸದ ಶಂಕೆ ಬಂದಾಗ ಅವಿಶ್ವಾಸವನ್ನು ಪರಿಹರಿಸಿ ದಾರ್ಢ್ಯವನ್ನು ತಂದು ಕೊಡುವುದಕ್ಕಾಗಿ ಬೇರೆ ಪ್ರಮಾಣದ ಅವಶ್ಯಕತೆ ಇದೆ.

ಎರಡನೆಯ ಪಕ್ಷವನ್ನು 'ಅನಪೇಕ್ಷತ್ವಸ್ಯ' ಎಂಬ ವಾಕ್ಯದಿಂದ ನಿರಾಕರಿಸುತ್ತಿದ್ದಾರೆ. ಸ್ವಾಪವಾಕ್ಯವು ಪ್ರಮಾಣಾಂತರವನ್ನು ಅಪೇಕ್ಷಿಸಿ ಅರ್ಥವನ್ನು ತಿಳಿಸುತ್ತಿಲ್ಲ; ಹೊರತು ಸ್ವಾಪವಾಕ್ಯವು ಪ್ರತಿಪಾದಿಸುವ ಅರ್ಥದಲ್ಲಿ ಅದೃಷ್ಟವಶಾತ್ ಪ್ರಮಾಣಾಂತರದ ಸಂವಾದವಿದೆ. ಇಷ್ಟರಿಂದ ಸ್ವಾಪವಾಕ್ಯವೇನೂ ಪ್ರಮಾಣಾಂತರವನ್ನು ಅವಲಂಬಿಸಿದಂತಾಗುವುದಿಲ್ಲ. ಇದನ್ನು ವಾಚಸ್ಪತ್ಯದಲ್ಲಿ ''ಯತ್ರ ತು ಪ್ರಮಾಣಾಂತರಸಂವಾದಸ್ತತ್ರ ಪ್ರಮಾಣಾಂತರಾದಿವಾರ್ಥವಾದಾದಪಿ ಸೋರ್ಥಃ ಪ್ರಸಿದ್ಧ್ಯತಿ । ದ್ವಯೋಃ ಪರಸ್ಪರಾನಪೇಕ್ಷಯೋಃ ಪ್ರತ್ಯಕ್ಷಾನುಮಾನಯೋರಿವೈಕತ್ರಾರ್ಥೇ ಪ್ರವೃತ್ತೇರಿತಿ'' (ಎಲ್ಲಿ ಪ್ರಮಾಣಾಂತರಸಂವಾದವಿರುತ್ತದೋ ಅಲ್ಲಿ ಬೇರೆ ಪ್ರಮಾಣದಂತೆ ಅರ್ಥ ಹೇಳಿದೆ ವಾದದಿಂದಲೂ ಪ್ರತಿಪಾದ್ಯವಾದ ಅರ್ಥವು ಸಿದ್ಧವಾಗುತ್ತದೆ. ಏಕೆಂದರೆ ಪರಸ್ಪರನಿರಪೇಕ್ಷಿತವಾದ ಎರಡು ಪ್ರಮಾಣಗಳು ಒಂದೇ ಅರ್ಥದಲ್ಲಿ ಪ್ರವೃತ್ತವಾದ್ದರಿಂದ ಪರಸ್ಪರ ನಿರಪೇಕ್ಷಿತಗಳಾದ ಪ್ರತ್ಯಕ್ಷಾನುಮಾನಗಳಂತೆ ಎಂದು)

ಸ್ವಾಪವಾಕ್ಯವನ್ನು ಅನುಸರಿಸದಿದ್ದರೆ ಮತ್ತೊಂದು ತೊಂದರೆಯನ್ನು 'ಸಪ್ರಯೋಜನತ್ವಾಯ' ಎಂಬ ವಾಕ್ಯದಿಂದ ಆಕ್ಷೇಪಿಸುತ್ತಿದ್ದಾರೆ. ಪ್ರಸ್ತಾವವಾಕ್ಯವು ಬ್ರಹ್ಮಪರವಾದಾಗ ಮಾತ್ರ ಅಪೂರ್ವಾರ್ಥವನ್ನು ಬೋಧಿಸುತ್ತದೆ. ಪ್ರಾಣಪರವಾದರೆ ಅಲ್ಲ ಎಂದು ಈ ವಾಕ್ಯದ ಅಭಿಪ್ರಾಯ.

'ಪ್ರಸ್ತಾವವಾಕ್ಯವು ಬ್ರಹ್ಮಪರವಾದಾಗ ಅಪೂರ್ವಾರ್ಥವಾಗುತ್ತದೆ. ಆದರೆ ಸ್ವಾಪವಾಕ್ಯವು ಬ್ರಹ್ಮಪರವಾದ ಮಾತ್ರದಿಂದ ಅಪೂರ್ವಾರ್ಥವಾಗುವುದಿಲ್ಲ. ಏಕೆಂದರೆ ಸ್ವಾಪವಾಕ್ಯವು ಪ್ರಾಣಪರವೆಂದು ಈಗಾಗಲೇ ಸಿದ್ಧವಾಗಿದೆ' ಎಂಬ ಪ್ರಶ್ನೆಗೆ 'ಸ್ವಾಪವಾಕ್ಯಸ್ಯ' ಎಂಬುದರಿಂದ ಉತ್ತರಿಸುತ್ತಿದ್ದಾರೆ. ಆದ್ದರಿಂದ ಸ್ವಾಪವಾಕ್ಯದಲ್ಲಿರುವ ಪ್ರಾಣಶಬ್ದವು ಅಭಿಮಾನಿದೇವತೆಯಾದ ಮುಖ್ಯಪ್ರಾಣಪರವಾಗಿದೆ. ಅದನ್ನು ಅನುಸರಿಸಿದಾಗ ಪ್ರಸ್ತಾವವಾಕ್ಯವೂ ಕೂಡ ಮುಖ್ಯಪ್ರಾಣಪರವೇ ಆಗಬೇಕು. ಆವಾಗ ಸ್ವಾಪವಾಕ್ಯದಂತೆ ಪ್ರಸ್ತಾವವಾಕ್ಯವೂ ಕೂಡ ಅಪೂರ್ವಾರ್ಥವಾಗುತ್ತದೆ. ಅದ್ವೈತಿಗಳಿಗೆ ಬ್ರಹ್ಮಪರತ್ವವನ್ನು ಸಾಧಿಸಲು ಸಾಧ್ಯವಿಲ್ಲ.

ಅಪೌರುಷೇಯವಾಕ್ಯದಲ್ಲಿ ದೋಷಶಂಕೆಗೆ ಅವಕಾಶವಿಲ್ಲದ ಕಾರಣ ಮತ್ತೊಂದನ್ನು ಅನುಸರಿಸುವುದಿಲ್ಲವೆಂದು ಅದ್ವೈತಿಗಳು ಹೇಳಿದ್ದರು. ಇದೂ ಕೂಡ ತಪ್ಪೆಂದು 'ಆನಾಶಂಕಿತ' ಎಂಬ ವಾಕ್ಯದಿಂದ ವಿವರಿಸಿದ್ದಾರೆ. 'ಅನ್ಯಥಾ' ಎಂಬ ವಾಕ್ಯದಲ್ಲಿ ಶ್ರುತ್ಯಂತರಸಂವಾದಃ ಎಂದು ಪುಲ್ಲಿಂಗ ಪದವನ್ನು ಅನುಸರಣೀಯಂ ಎಂಬ ನಪುಂಸಕಲಿಂಗಪದವನ್ನು ವಿಶೇಷ್ಯವಿಶೇಷಣವಾಗಿ ಹೇಳಿದ್ದಾರೆ. ಇದು ತಪ್ಪಲ್ಲವೇ? ಎಂಬ ಪ್ರಶ್ನೆಗೆ 'ನಾನುಸರಣೀಯಃ' ಎಂಬ ಪುಲ್ಲಿಂಗಪದವನ್ನು ಶೇಷಪೂರಣ ಮಾಡಿಕೊಳ್ಳಬೇಕು. ಅಪೌರುಷೇಯವಾಕ್ಯದಲ್ಲಿಯೂ ಮತ್ತೊಂದು ವಾಕ್ಯವನ್ನು ಅನುಸರಿಸಬಹುದೆನ್ನಲು ಅದ್ವೈತಿಗಳ ಮಾತನ್ನೇ ಸಂವಾದವನ್ನಾಗಿ ನೀಡುತ್ತಿದ್ದಾರೆ 'ಉಕ್ತಂಚ' ಇತ್ಯಾದಿ ಗ್ರಂಥದಿಂದ.

ಮತ್ತೊಂದು ಆಕ್ಷೇಪವೂ ಇದರಿಂದ ಪರಿಹಾರವಾಯಿತು. ''ಸ್ವಾಪವಾಕ್ಯವು ಸಂವರ್ಗವಿದ್ಯೆಯಲ್ಲಿ ಕೇಳಿಸುತ್ತಿದೆ. ಪ್ರಸ್ತಾವವಾಕ್ಯವು ಉದ್ಗೀಥವಿದ್ಯೆಯಲ್ಲಿ ಕೇಳಿಸುತ್ತಿದೆ. ಹೀಗಿರುವಾಗ ಸ್ವಾಪವಾಕ್ಯಕ್ಕೂ ಪ್ರಸ್ತಾವವಾಕ್ಯಕ್ಕೂ ಏಕವಾಕ್ಯತ್ವವೆಂಬ ಸಿದ್ಧಾಂತವನ್ನು ಮಾಡಲು ಸಾಧ್ಯವಿಲ್ಲವಲ್ಲವೇ?'' ಎಂದರೆ ಬ್ರಹ್ಮಕಾರಣವಾಕ್ಯವೂ ಬೇರೆ ಪ್ರಕರಣಗಳಲ್ಲಿ ಇರುವುದರಿಂದ ಅದರಿಂದಲೂ ಏಕವಾಕ್ಯತ್ವವನ್ನು ಹೇಳದಿರಬೇಕಾದೀತು.

ಇನ್ನು ಕೆಲವರು 'ಪ್ರಾಣಸ್ಯ ಪ್ರಾಣಃ ಪ್ರಾಣಬಂಧನಂ ಹಿ ಸೋಮ್ಯ ಮನ ಇತಿ ಚೋದಾಹರಣಮ್' ಎಂಬ ವಾಕ್ಯವನ್ನು ವಿಷಯವಾಕ್ಯವೆನ್ನುತ್ತಾರೆ. ಆದರೆ ಈ ವಾಕ್ಯವು ವಿಷಯವಾಕ್ಯವಾಗಲಾರದೆಂದು ಶಂಕರಭಾಷ್ಯದಲ್ಲಿಯೇ ದೂಷಿಸಲಾಗಿದೆ. ಪುನಃ ನಾವು ಅದನ್ನು ದೂಷಿಸಬೇಕಾಗಿಲ್ಲ.

ಗುರುರಾಜೀಯಮ್ – ಅಧಿಕಾಶಙ್ಕಾಂ ನಿರಸ್ಯ ಸಿದ್ಧಾನ್ತಮಪಿ ದೂಷಯತಿ – **ಯಚ್ಚೋಕ್ತಮಿತಿ** ॥ ನನು 'ಸಂವಾದಾನುಸರಣಮಯುಕ್ತಮ್ । ವೈಯರ್ಥ್ಯಾತ್', ಇತ್ಯತ ಆಹ – **ಅರ್ಥಾ- ಬಾಧೇತಿ** ॥ ನನು 'ಸಂವಾದಾನುಸರಣೇ ಸಾಪೇಕ್ಷತ್ವೇನ ನಿರಪೇಕ್ಷತ್ವಹಾನಿಃ' ಇತ್ಯತ ಆಹ – **ಅನಪೇಕ್ಷತ್ವಸ್ಯೇತಿ** ॥ ನನು 'ಪ್ರಸ್ತಾವವಾಕ್ಯಸ್ಯ ಪ್ರಾಣಪರತ್ವೇ ಬೋಧಿತಾರ್ಥಬೋಧಕತ್ವೇನ ವೈಯರ್ಥ್ಯಂ ಸ್ಯಾತ್ । ಬ್ರಹ್ಮಪರತ್ವೇ ತ್ವಪೂರ್ವಾರ್ಥತ್ವೇನ ನ ವೈಯರ್ಥ್ಯಮಿತಿ ತದೇವ ಸ್ವೀಕ್ರಿಯತೇ' ಇತ್ಯತ ಆಹ – **ಸಪ್ರಯೋಜನತ್ವಾಯೇತಿ** ॥

किञ्च स्वापवाक्यस्याभिमानिदेवतापरत्वेऽपूर्वार्थत्वसम्भवात् प्रस्तावावाक्य-मप्यभिमानिदेवतापरत्वेनापूर्वार्थं स्यादिति न ब्रह्मपरत्वमेवेष्टव्यम्, इत्याह – **स्वापवाक्यस्यापीति ॥** ब्रह्मपरत्वेप्यपूर्वतालाभसम्भवेपि प्रस्तावावाक्य-समानार्थत्वात् 'अग्निहोत्रं जुहोति' इति प्राप्तहोमांशे 'दध्नेन्द्रियकामो जुहुयात्' इत्यस्येवापूर्वार्थत्वा- भावादभिमानिदेवतापरत्वमुक्तमिति ज्ञेयम् ।

ननु 'अन्योन्यानुसरणे सापेक्षत्वेनाप्रामाण्यापत्तिः', इत्यत आह – **अना-शङ्कितेति ॥** ननु विरुद्धार्थत्वेन द्वयोरप्रामाण्यमित्यत आह – **नत्विति ॥** तथाच 'संवादरहितवाक्ये संवादिवाक्यमनुसरणीयमिति न तयोर्विरुद्धार्थत्वेनाप्रामाण्यम्' इति भावः ॥ **अन्यथेति ॥** अन्योन्यानुसरणेऽप्रामाण्ये चेत्यर्थः ॥

॥ इति श्रीकेशवभट्टारकेण विरचितायां
भावदीपिकायां प्राणाधिकरणं सम्पूर्णम् ॥९॥

## ರಾಮಾನುಜರ ಅಧಿಕರಣ ವಿಮರ್ಶೆ

**तात्पर्यचन्द्रिका –**

**केचित्तु – कृत्स्नस्य जगतः प्रसिद्धप्राणाधीनप्रवृत्त्यादिदर्शनात् प्रस्तावावाक्ये प्रसिद्धप्राण एवोच्यते इत्याकाशाधिकरणादधिकाशङ्कायां, शिलाकाष्ठादिषु तदभावात् 'सर्वाणि' इत्यस्यायोग इति परिहारोऽभिप्रेतः – इत्याहुः । तन्न, प्राणाधीनप्रवृत्तिकं शरीरमिव तदनधीनप्रवृत्तिकं शरीरादन्यदपि बहु पश्यतः पूर्वपक्षिणः सर्वं प्राणाधीनप्रवृत्तिकमिति शङ्काऽयोगात् । ग्रन्थस्तु स्पष्टार्थः ॥**

॥ इति श्रीब्रह्मण्यतीर्थपूज्यश्रीपादशिष्यव्यासतीर्थविरचिता
तात्पर्यचन्द्रिकायां प्राणाधिकरणं सम्पूर्णम् ॥९॥

ಅನುವಾದ - "ಸಮಸ್ತಜಗತ್ತು ಪ್ರಸಿದ್ಧವಾದ ಜಡವಾಯುವಿನ ಅಧೀನವಾಗಿ ನಡೆಯುತ್ತಿದೆಯೆಂದು ಎಲ್ಲರಿಂದಲೂ ಸಿದ್ಧವಾಗಿದೆ. ಹಾಗಾಗಿ ಪ್ರಸ್ತಾವವಾಕ್ಯದಲ್ಲಿಯೂ ಪ್ರಸಿದ್ಧವಾದ ಜಡವಾಯುವೇ ಪ್ರತಿಪಾದ್ಯವಾಗಬೇಕು" ಎಂದು ಪೂರ್ವಪಕ್ಷ. ಆಕಾಶಾಧಿಕರಣದ ಮೇಲೆ ಬರುವ ಈ ಅಭ್ಯಧಿಕಾಶಂಕೆಯನ್ನು ಪರಿಹರಿಸಲು ಈ ಪ್ರಾಣಾಧಿಕರಣವು ಹೊರಟಿದೆ. ಸಮಸ್ತಜಗತ್ತು ಜಡವೃತ್ತಿವಾಯುವಿನ ಅಧೀನವಾಗಿ ನಡೆಯುತ್ತದೆ ಎಂಬುದೇ ತಪ್ಪು. ಕಲ್ಲು, ಕಟ್ಟಿಗೆ ಮೊದಲಾದ-

ವುಗಳ ಸ್ಥಿತಿಗೆ ಜಡವಾಯುವಿನ ಅವಶ್ಯಕತೆ ಇಲ್ಲ. ಹಾಗಾಗಿ ಪ್ರಸ್ತಾವವಾಕ್ಯದಲ್ಲಿರುವ 'ಸರ್ವಾಣಿ' ಎಂಬ ಪದದ ಅರ್ಥವನ್ನು ಸಂಕೋಚ ಮಾಡಬೇಕಾಗುತ್ತದೆ. ಆದ್ದರಿಂದ ಪ್ರಸ್ತಾವವಾಕ್ಯದಲ್ಲಿರುವ 'ಪ್ರಾಣ'ಶಬ್ದದಿಂದ ಪರಮಾತ್ಮನೇ ಪ್ರತಿಪಾದ್ಯನಾಗುತ್ತಾನೆಂದು ಸಿದ್ಧಾಂತ.

(*)ರಾಮಾನುಜರ ಈ ಅಧಿಕರಣಶರೀರ ತಪ್ಪು. ಜಡವಾಯುವಿನ ಅಧೀನವಾಗಿ ಶರೀರಾದಿಗಳಿರುವುದು ಕಂಡಿದೆ. ಆದರೆ ಶರೀರವನ್ನು ಬಿಟ್ಟು ಅನೇಕ ಜಡಪದಾರ್ಥಗಳು ಜಡವಾಯುವಿನ ಅಧೀನವಾಗಿಲ್ಲದಿರುವುದು ಲೋಕದಲ್ಲಿ ಕಂಡಿದೆ. ಹೀಗಿರುವಾಗ ಪೂರ್ವಪಕ್ಷಿಯು ಸಮಸ್ತಜಗತ್ತು

---

**ಶ್ರೀಭಾಷ್ಯಮ್** – ಇದಮಾಮ್ನಾಯತೇ ಛಾನ್ದೋಗ್ಯೇ, 'ಪ್ರಸ್ತೋತರ್ಯಾ ದೇವತಾ ಪ್ರಸ್ತಾವಮನ್ವಾಯತ್ತಾ'' (ಛಾ. ೧-೧೦-೯) ಇತಿ ಪ್ರಸ್ತುತ್ಯ 'ಕತಮಾ ಸಾ ದೇವೇತೇತಿ । ಪ್ರಾಣ ಇತಿ ಹೋವಾಚ, ಸರ್ವಾಣಿ ಹ ವಾ ಇಮಾನಿ ಭೂತಾನಿ ಪ್ರಾಣಮೇವಾಭಿಸಂವಿಶನ್ತಿ, ಪ್ರಾಣಮಭ್ಯುಜ್ಜಿಹತೇ (ಛಾ. ೧-೧೧-೪) ಸೈಷಾ ದೇವತಾ ಪ್ರಸ್ತಾವಮನ್ವಾಯತ್ತಾ । ತಾಂ ಚೇದವಿದ್ವಾನ್ ಪ್ರಾಸ್ತೋಷ್ಯಃ ಮೂರ್ಧಾ ತೇ ವ್ಯಪತಿಷ್ಯತ್' (ಛಾ. ೧-೧೧-೫) ಇತಿ ॥ ಅತ್ರ ಪ್ರಾಣಶಬ್ದೋऽಪ್ಯಾಕಾಶಶಬ್ದವತ್ ಪ್ರಸಿದ್ಧಪ್ರಾಣವ್ಯತಿರೇಕ್ತೇ ಪರಸ್ಮಿನ್ನೇವ ಬ್ರಹ್ಮಣಿ ವರ್ತತೇ, ತದಸಾಧಾರಣನಿಖಿಲಜಗತ್ಪ್ರವೇಶನಿಷ್ಕ್ರಮಾದಿಲಿಙ್ಗಾತ್ ಪ್ರಸಿದ್ಧವನ್ನಿರ್ದಿಷ್ಟಾತ್ ।

ಅಧಿಕಾಶಙ್ಕಾ ತು ಕೃತ್ಸ್ನಸ್ಯ ಭೂತಜಾತಸ್ಯ ಪ್ರಾಣಾಧೀನಸ್ಥಿತಿಪ್ರವೃತ್ತ್ಯಾದಿದರ್ಶನಾತ್ ಪ್ರಸಿದ್ಧ ಏವ ಪ್ರಾಣೋ ಜಗತ್ಕಾರಣತಯಾ ನಿರ್ದೇಶಮರ್ಹತೀತಿ ॥

ಪರಿಹಾರಸ್ತು ಶಿಲಾಕಾಷ್ಠಾದಿಷು, ಚೇತನಸ್ವರೂಪೇ ಚ ತದಭಾವಾತ್, 'ಸರ್ವಾಣಿ ಹ ವಾ ಇಮಾನಿ ಭೂತಾನಿ ಪ್ರಾಣಮೇವಾಭಿಸಂವಿಶನ್ತಿ ಪ್ರಾಣಮಭ್ಯುಜ್ಜಿಹತೇ' (ಛಾ. ೧-೧೧-೫) ಇತಿ ನೋಪಪದ್ಯತ ಇತಿ । ಅತಃ ಪ್ರಾಣಯತಿ ಸರ್ವಾಣಿ ಭೂತಾನೀತಿ ಕೃತ್ವಾ ಪರಂ ಬ್ರಹ್ಮೈವ ಪ್ರಾಣಶಬ್ದೇನಾಭಿಧೀಯತೇ । ಅತಃ ಪ್ರಸಿದ್ಧಾಕಾಶಪ್ರಾಣಾದೇರನ್ಯದೇವ ನಿಖಿಲಜಗದೇಕಕಾರಣಮಹತಪಾಪ್ಮತ್ವಸಾರ್ವಜ್ಞ್ಯಸತ್ಯಸಙ್ಕಲ್ಪತ್ವಾದ್ಯನನ್ತಕಲ್ಯಾಣಗುಣಗಣಂ ಪರಂ ಬ್ರಹ್ಮೈವಾಕಾಶಪ್ರಾಣಾದಿಶಬ್ದಾಭಿಧೇಯಮಿತಿ ಸಿದ್ಧಮ್ ॥ ೨೪ ॥ ಇತಿ ಪ್ರಾಣಾಧಿಕರಣಮ್ ॥ ೯ ॥

**ಶ್ರುತಪ್ರಕಾಶಿಕಾ** – ಉಕ್ತಾಧಿಕರಣನ್ಯಾಯಮತಿದಿಶತಿ ಅತ ಏವ ಪ್ರಾಣಃ ॥ ವಿಷಯಮಾಹ – ಇದಮಿತಿ । ಮೂರ್ಧಾ ತೇ ವ್ಯಪತಿಷ್ಯತ್ – ಆತ್ಮಸತ್ತಾ ನ ಲಭ್ಯೇತೇತ್ಯರ್ಥಃ । ಕಿಂ ವೇದಾನ್ತವೇದ್ಯಃ ಪ್ರಸಿದ್ಧಃ ಪ್ರಾಣಃ, ಉತ ಪರಮಾತ್ಮಾ; ತದರ್ಥಂ ಪ್ರಾಣ ಇತಿ ಹೋವಾಚ, ಪ್ರಾಣಮೇವಾಭಿಸಂವಿಶನ್ತೀತ್ಯುಕ್ತಃ ಪ್ರಾಣಃ ಕಿಂ ಪ್ರಸಿದ್ಧಃ, ಉತ ಪರಃ, ತದರ್ಥಂ ಕಿಂ ಪ್ರಾಣಶಬ್ದೋ ರೂಢಃ, ಉತ ಯೌಗಿಕಃ, ತದರ್ಥಂ ಭೂತಜಾತಸ್ಯ ಪ್ರಸಿದ್ಧಪ್ರಾಣಾಯತ್ತಸ್ಥಿತಿಪ್ರವೃತ್ತಿತ್ವಮಸ್ತಿ, ಉತ ನ – ಇತಿ ವಿಚಾರಃ । ಯದಾऽಸ್ತಿ, ತದಾ ರೂಢತ್ವಾತ್ ವಿಷಯವಾಕ್ಯಸ್ಥಪ್ರಾಣಶಬ್ದಃ ಪ್ರಸಿದ್ಧಪ್ರಾಣಪರ ಇತಿ ಸರ್ವವೇದಾನ್ತವೇದ್ಯಃ ಪ್ರಸಿದ್ಧಃ ಪ್ರಾಣ ಇತಿ ಪೂರ್ವಪಕ್ಷೇ ಫಲಿತಮ್ । ರಾದ್ಧಾನ್ತೇ ತು ಯದಾ ಪ್ರಾಣಾಯತ್ತಸ್ಥಿತಿಪ್ರವೃತ್ತಿತ್ವಂ ನಾಸ್ತಿ, ತದಾऽವಯವಶಕ್ತ್ಯಾ ವಿಷಯವಾಕ್ಯಸ್ಥಪ್ರಾಣಶಬ್ದಃ ಪರಮಾತ್ಮಪರ ಇತಿ ಸರ್ವವೇದಾನ್ತವೇದ್ಯಃ ಪರಮಾತ್ಮೇತಿ ಫಲಫಲಿಭಾವಃ । ಅಕ್ಷರಾರ್ಥಮಾಹ ಅತ್ರೇತಿ । ಆಕಾಶಶಬ್ದವದಿತ್ಯತ್ರ ರೂಢಿಪ್ರಾಬಲ್ಯತತ್ಪರಿಹಾರಾದಿಕಂ

ಜಡವಾಯುವಿನ ಅಧೀನವಾಗಿದೆಯೆಂದು ಹೇಗೆ ತಾನೆ ಶಂಕಿಸುತ್ತಾನೆ? ಆದ್ದರಿಂದ ರಾಮಾನುಜರ ಪೂರ್ವಪಕ್ಷವೇ ಹುಟ್ಟಲಾರದು. ಪೂರ್ವಪಕ್ಷವೇ ಹುಟ್ಟದಿದ್ದಾಗ ಸಿದ್ಧಾಂತಕ್ಕೆ ಅವಕಾಶವಿಲ್ಲ.

---

पूर्वोक्तं सर्वमनुसन्धेयम् । न हि प्रत्युदाहरणन्यायोऽतिदेष्टव्यः । अतिदेशस्य हि प्रयोजनम् अधिकाशङ्कापरिहारः । अतः सूत्रकाराभिमताम्-धिकाशङ्कां दर्शयति – कृत्स्नस्येति । अत्र अविरोधशङ्क्या प्रत्यवस्थानं विरोधफुटीकरणं चानुसन्धेयम् । स्थितिप्रवृत्त्यादीत्यादिशब्देन निवृत्तिरुच्यते; प्रवृत्तिहेतुभूतज्ञानचिकीर्षे च । स्थितिप्रवृत्तिहेतुत्वेनोत्पत्तिकारणत्वमर्थसिद्धमिति भावः । यद्वा – 'यदा वै पुरुषः स्वपिति प्राणं तर्हि वागप्येति, प्राणं चक्षुः, प्राणं श्रोत्रम्, प्राणं मनः । यदा प्रबुद्धचते, प्राणादेवाधि पुनर्जायन्ते' इति प्रसिद्धवन्निर्देशरहितया श्रुत्या प्राणस्य अप्ययोद्गमनहेतुत्वावगमश्च आदिशब्देन विवक्षितः । अस्मिन् प्रकरणे उद्गीथप्रतिहारयोर्देवतात्वेन अन्नादित्यावुक्तौ । तयोश्चाब्रह्मत्वात् प्राणोऽपि ब्रह्मव्यतिरिक्तः प्रसिद्ध एव ग्राह्य इतीदं भाष्येऽनादृतम्; प्रकरणोक्तानाम् अन्नमयादीनामब्रह्मत्वेऽपि कारणस्य परब्रह्मत्वमानन्दवल्लचां समर्थितमिति प्रकरणमात्रस्य पूर्वपक्षावलम्बनत्वेन बुद्धावनारोहात् । जगत्कारणतयेति । संसृष्टं प्रति कारणत्वं सम्भवतीति भावः ॥

अधिकं परिहारं दर्शयति – परिहारस्त्विति । आदिशब्दोक्त आकाशादिः । 'प्राणं तर्हि वागप्येति' इत्यादि श्रुतिरिन्द्रियव्यापारविषया । प्राणशब्दस्य परब्रह्मवाचित्वं कथमिति शङ्कां परिहरन् अधिकरणार्थमुपसंहरति – अत इति । वृत्ताधिकरणद्वस्य अवान्तरपेटिकात्वं दर्शयति – अतः प्रसिद्धेति ॥ वर्तिष्यमाणाधिकरणद्वयस्य पेटिकान्तरत्वमाह – अतः परमिति ॥ वस्त्वन्तरासाधारणैः शब्दैर्जगत्कारणे निर्दिश्यमानेऽपि कारणत्वाभिधायिनां वाक्यानां विशेषपर्यवसानं कृतम् । अथ कारणत्वाक्षेपक-लिङ्ग(विशेष) वाचिनां वाक्यानमभिमतविशेषपर्यवसानमुच्यत इत्यवान्तरपेटिकाभेद-स्तत्सङ्गतिश्चेत्यर्थः । ज्योतिश्शब्देनावान्तरसङ्गतिश्च द्योतिता । प्राणः वायुविशेषः; आदित्यादिज्योतिः तेजोविशेषः; अतः आकाशप्राणज्योतिषां क्रमो युक्त इति ॥ नन्वाकाशादिशब्दत्रयं परमात्मपरमिति सिद्धान्तितम् ॥ सत्यम्; तथापि प्रसिद्धवनुसारिण्या पूर्वपक्षदृष्ट्या सङ्गत्युपपत्तिः । येन केनापीति न लिङ्गाल्पत्वं विवक्षितम्; किन्तु उदाहृतविषयवाक्यप्रतिपन्नोऽयमेव गुणः कारणत्वाक्षेपक इति गुणविशेषानियम इति भावः । उभयोः पेटिकयोरनुयायिनमाकारं दर्शयति अर्थान्तर-प्रसिद्धैरपीति ॥ २४ ॥

ಗ್ರಂಥದ ಕಠಿಣಪದಗಳ ಅರ್ಥವು ಸ್ಪಷ್ಟವಾಗಿರುವುದರಿಂದ ಪ್ರತ್ಯೇಕವಾಗಿ ಉಲ್ಲೇಖಿಸಿಲ್ಲ.

ಇಲ್ಲಿಗೆ ತಾತ್ಪರ್ಯಚಂದ್ರಿಕೆಯ ಕನ್ನಡಾನುವಾದದಲ್ಲಿ ಪ್ರಾಕ್ಕಾಧಿಕರಣವು ಸಂಪೂರ್ಣವಾಯಿತು.

**प्रकाशः – रामानुजीयमतमपाकरोति – केचित्त्विति ॥** ''प्रस्तोतर्या देवता' इति वाक्ये निखिलजगत्कारणतया प्राणशब्दनिर्दिष्टः प्रसिद्धः प्राण; परात्मा वेति सन्देहे पूर्वपक्षादिकमनुवदति – **कृत्स्नस्येति ॥**

**शिलेति ॥** शिलाकाष्टाद्यचेतनेषु प्राणायत्तस्थित्यदर्शनात् ''सर्वाणि ह वा इमानि भूतानि प्राणमेवाभिसंविशन्ति प्राणमभ्युज्जिहते'' इति सर्वपदायोगात् अत एव ''सर्वाणि ह वा इमानि'' इति प्रसिद्धवन्निर्देशादेव हेतोः प्राणशब्दनिर्दिष्टः परमात्मैवेति सिद्धान्त इत्यर्थः । पूर्वपक्षस्य निर्दलत्वेनानूदितं निरस्यति – **तन्नेत्यादिना ॥**

एतेन, यत्केनचित्प्रलपितं – पूर्वत्राकाशपदेन परमाकाशस्य परप्रकृतिरूपस्य ग्रहणेन तदभेदादस्त्वीश्वर आकाशः । 'प्रस्तावावाक्यगतप्राणस्तु ''प्राणाद्ध्येव खल्विमानि भूतानि'' इत्यादिश्रुतेः प्रसिद्धप्राण एव' इति शङ्कायां, सर्वकारणत्वादिलिङ्गात् प्राणशिव एव, ''प्राणाद्ध्येव'' इति श्रुतेस्त्वानन्दरूपस्य ब्रह्मणः कारणत्व एव तात्पर्यमिति परिहार इति । उक्तञ्च –

**प्राणे तु का गतिरिह प्राणाद्ध्येवेत्यपि श्रुतेर्नैतत् ।**
**शिव एव सोऽपि लिङ्गात् सा श्रुतिरानन्दविश्रान्ता ॥** – इति तन्निरस्तम् ।

पूर्वत्रापि ''आकाशाद्वायुः'' इत्यपि श्रुतेस्सत्वात् । ऐकाधिकरण्ये तु ''अत एव'' इति विन्यासायोगात् । ''प्राणाद्ध्येव'' इत्यादेर्विष्णुपरत्वेनानन्दमयाधिकरण एव साधितत्वाच्च ।

सिद्धान्तोऽप्ययुक्तः,

**प्राणस्थविष्णुना सर्वे प्रसूयन्ते यतस्ततः ।**
**प्रस्तावदेवता स स्यात् प्रस्तावस्तु जनिर्यतः ॥**

ಇತ್ಯಾದಿ ವ್ಯಾಖ್ಯಾನರೂಪಸ್ಮೃತಿವಿರೋಧಾಚ್ಚ । ''ಪ್ರಾಣಃ ಸ್ಥೂಣಾ ಅಯಂ ವಾವ ಶಿಶುರ್ಯೋऽಯಂ ಮಧ್ಯಮಃ ಪ್ರಾಣಃ'' ಇತಿ ಶ್ರುತಿವಿರೋಧಾಚ್ಚ ।

**ದ್ವಾವಾತ್ಮಾನೌ ಹಿ ದೇವೇಷು ದ್ವೌ ಪ್ರಾಣೌ ದ್ವೌ ಚ ಚೇತನೌ ।**
**ಅಜ್ಞಾನಾಭಿಭವಾಸ್ಪೃಷ್ಟೌ ವಾಯುರ್ನಾರಾಯಣಶ್ಚ ತೌ ।**
**ತದನ್ಯೇ ಚೇತನಾಸ್ಸರ್ವೇ ಪ್ರಾಣಾಶ್ಚಾತ್ಮಾನ ಏವ ಚ ।**
**ಅಜ್ಞಾನಾಭಿಭವಸ್ಪೃಷ್ಟಾಸ್ತಸ್ಮಾತ್ತೇ ಹ್ಯಧಮಾಃ ಸ್ಮೃತಾಃ ।**
**ಮಧ್ಯಮೋ ವಾಯುರೇವೈಕ ಉತ್ತಮಃ ಕೇವಲೋ ಹರಿಃ ॥**

ಇತಿ ಬ್ರಹ್ಮಾಂಡಪುರಾಣವಿರೋಧಾಚ್ಚೇತಿ । ಉಪನ್ಯಾಸಮುಖೇನೈವ ಟೀಕಾಗ್ರನ್ಥಸ್ಯ ವಿವೃತತ್ವಾನ್ನಾಕ್ಷರಾರ್ಥವರ್ಣನೇ ಯತಿತವ್ಯಮಿತ್ಯಾಹ – **ಗ್ರನ್ಥಸ್ತ್ವಿತಿ ॥**

**ಇತಿ ಶ್ರೀಮತ್ಸರ್ವತನ್ತ್ರಸ್ವತನ್ತ್ರಸುಧೀನ್ದ್ರತೀರ್ಥಗುರುಪಾದಶಿಷ್ಯರಾಘವೇನ್ದ್ರಯತಿಕೃತೇ**
**ಚನ್ದ್ರಿಕಾಪ್ರಕಾಶೇ ಪ್ರಾಣಾಧಿಕರಣಂ ಸಮ್ಪೂರ್ಣಮ್ ॥೯॥**

ವಿವರಣೆ - ಇಲ್ಲಿಯ ತನಕ ಅದ್ವೈತಮತವನ್ನು ಪ್ರಕೃತ ರಾಮಾನುಜಮತವನ್ನು ನಿರಾಕರಿಸುತ್ತಿದ್ದಾರೆ. ರಾಮಾನುಜಮತದಲ್ಲಿಯೂ 'ಪ್ರಸ್ತೋತಾರ್ಯಾ ದೇವತಾ' ಎಂಬ ಶ್ರುತಿಯೇ ಪ್ರಾಣಾಧಿಕರಣದ ವಿಷಯವಾಕ್ಯ. ಸಮಸ್ತಜಗತ್ತಿಗೆ ಕಾರಣವಾದದ್ದು ಪ್ರಾಣನೆಂದು ಈ ಶ್ರುತಿಯು ಹೇಳುತ್ತಿದೆ. ಈ ಪ್ರಾಣಶಬ್ದದಿಂದ ಜಡವೃತ್ತಿವಾಯುವು ಪ್ರತಿಪಾದ್ಯವೋ? ಪರಮಾತ್ಮನು ಪ್ರತಿಪಾದ್ಯನೋ? ಎಂದು ಸಂದೇಹ. ಪೂರ್ವಪಕ್ಷವನ್ನು ಗ್ರಂಥಕಾರರು 'ಕೃತ್ಸ್ನಸ್ಯ' ಎಂಬ ಮಾತಿನಿಂದ ವಿವರಿಸಿದ್ದಾರೆ. ಸಿದ್ಧಾಂತವನ್ನು 'ಶಿಲಾಕಾಷ್ಠಾದಿಷು' ಎಂಬ ಗ್ರಂಥದಿಂದ ವಿವರಿಸಿದ್ದಾರೆ. ಕಲ್ಲು ಕಟ್ಟಿಗೆ ಮೊದಲಾದ ಜಡಪದಾರ್ಥಗಳಲ್ಲಿ ಜಡವಾಯುವಿನ ಆಧೀನ್ಯವು ಕಾಣದಿದ್ದರಿಂದ 'ಸರ್ವಾಣಿ ಹ ವಾ ಇಮಾನಿ ಭೂತಾನಿ ಪ್ರಾಣಮೇವಾಭಿಸಂವಿಶಂತಿ ಪ್ರಾಣಮಭ್ಯುಜ್ಜಿಹತೇ' ಎಂಬ ಶ್ರುತಿಯಲ್ಲಿರುವ ಸರ್ವಪದದ ಅರ್ಥವು ಸಮಂಜಸವಾಗುವುದಿಲ್ಲ. ಆದ್ದರಿಂದ 'ಸರ್ವಾಣಿ ಹ ವಾ ಇಮಾನಿ' ಎಂದು ಪ್ರಸಿದ್ಧಿಯನ್ನು ಹೇಳಿದ್ದರಿಂದಲೇ ಪ್ರಾಣಶಬ್ದದಿಂದ ಪರಮಾತ್ಮನೇ ವಾಚ್ಯನಾಗುತ್ತಾನೆಂದು ಸಿದ್ಧವಾಗುತ್ತದೆ ಎಂದು ರಾಮಾನುಜರ ಅಭಿಪ್ರಾಯ. ಆದರೆ ರಾಮಾನುಜರ ಪೂರ್ವಪಕ್ಷವೇ ನಿರ್ದಲವಾದ್ದರಿಂದ ಸಿದ್ಧಾಂತಸ್ಥಾಪನೆಯು ಸಮಂಜಸವಾಗುವುದಿಲ್ಲವೆಂದು ''ತನ್ನ'' ಇತ್ಯಾದಿ ಗ್ರಂಥದಿಂದ ನಿರಾಕರಿಸಿದ್ದಾರೆ.

ಶೈವಮತನಿರಾಸ - ಶೈವರ ಅಧಿಕರಣಶರೀರ

ಹಿಂದಿನ ಅಧಿಕರಣದಲ್ಲಿ ಆಕಾಶಪದದಿಂದ ಪರಪ್ರಕೃತಿರೂಪವಾದ ಪರಮಾಕಾಶವು ವಾಚ್ಯವಾಗಿದೆಯೆಂದು ಹೇಳಲಾಗಿತ್ತು. ಪರಮಾಕಾಶದಿಂದ ಅಭಿನ್ನನಾದ ಕಾರಣ ಈಶ್ವರನೂ ಕೂಡ ಆಕಾಶದಿಂದ ವಾಚ್ಯನಾಗುತ್ತಾನೆ. ಆದರೆ ಪ್ರಸ್ತಾವವಾಕ್ಯದಲ್ಲಿರುವ ಪ್ರಾಣಶಬ್ದದಿಂದ ಈಶ್ವರನು

ವಾಚ್ಯನಾಗಬೇಕಾಗಿಲ್ಲ. 'ಪ್ರಾಣಾದ್ಧ್ಯೇವ ಖಲ್ವಿಮಾನಿ ಭೂತಾನಿ' ಎಂಬ ಶ್ರುತಿಯು ಪ್ರಾಣಾಧಿಕರಣದ ವಿಷಯವಾಕ್ಯ. ಇಲ್ಲಿರುವ ಪ್ರಾಣಶಬ್ದದಿಂದ ಜಡವಾಯುವು ಪ್ರತಿಪಾದ್ಯವಾಗುತ್ತದೆಂದು ಪೂರ್ವಪಕ್ಷ. ಸರ್ವಕಾರಣತ್ವಲಿಂಗವಿರುವುದರಿಂದ ಶಿವನೇ ಪ್ರಾಣಶಬ್ದವಾಚ್ಯನಾಗುತ್ತಾನೆಂದು ಸಿದ್ಧಾಂತ. 'ಪ್ರಾಣಾದ್ಧ್ಯೇವ' ಎಂಬ ಶ್ರುತಿಯಲ್ಲಿರುವ ಪ್ರಾಣಶಬ್ದಕ್ಕೆ ಆನಂದವೆಂದು ಅರ್ಥ. ಆನಂದರೂಪನಾದ ಬ್ರಹ್ಮನು ಜಗತ್ಕಾರಣನಾಗಿದ್ದಾನೆಂದು ಶ್ರುತಿಯ ತಾತ್ಪರ್ಯ. ಹಾಗಾಗಿ ಶಿವನ ಜಗತ್ಕಾರಣತ್ವವನ್ನೇ ಶ್ರುತಿಯು ಹೇಳಿದಂತಾಗುತ್ತದೆ. ಇದನ್ನೇ ವಿವರಿಸುವ ಕಾರಿಕೆ ಹೀಗಿದೆ --

'ಪ್ರಾಣೇ ತು ಕಾ ಗತಿರಿಹ ಪ್ರಾಣಾದ್ಧ್ಯೇವೇತ್ಯಪಿ ಶ್ರುತೇರ್ನತ್ರ ।
ಶಿವ ಏವ ಸೋಽಪಿ ಲಿಂಗಾತ್ ಸಾ ಶ್ರುತಿರಾನಂದವಿಶ್ರಾಂತಾ ॥'

(ಪ್ರಾಣಶಬ್ದದಿಂದ ಯಾರು ವಾಚ್ಯ ? ಎಂದು ಪ್ರಶ್ನೆ ಬಂದರೆ ಪ್ರಾಣಾದ್ಧ್ಯೇವ ಎಂಬ ಶ್ರುತಿಯೇ ಉತ್ತರಿಸುತ್ತಿದೆ. ಲಿಂಗರೂಪನಾದ ಶಿವನೇ ಪ್ರಾಣನಾಗಿದ್ದಾನೆ; ಅಂತಹ ಶಿವನು ಆನಂದರೂಪನಾಗಿದ್ದಾನೆಂಬರ್ಥದಲ್ಲಿ ಶ್ರುತಿಯು ವಿಶ್ರಾಂತವಾಗಿದೆ.) ಎಂದು.

ಶೈವರ ಈ ಅಧಿಕರಣಶರೀರವು ನಿರಸ್ತವಾಯಿತು. ಈ ವಿಷಯವಾಕ್ಯದಲ್ಲಿ ಜಗತ್ಕಾರಣತ್ವವು ಕೇಳಿಸುತ್ತಿರುವಂತೆ ಹಿಂದಿನ ಆಕಾಶವಾಕ್ಯದಲ್ಲಿಯೂ 'ಆಕಾಶಾದ್ವಾಯುಃ' ಎಂಬ ಜಗತ್ಕಾರಣತ್ವ-ಪ್ರತಿಪಾದಕವಾದ ಮಾತು ಕೇಳಿಸುತ್ತಿದೆ. ಆದ್ದರಿಂದ ಆಕಾಶಸೂತ್ರದಿಂದ ಪ್ರಾಣಸೂತ್ರಕ್ಕೆ ಅಭ್ಯಧಿಕಾಶಂಕೆಯನ್ನೇ ತೋರಿಸಲಾಗದು. ಮತ್ತು ಶೈವರು ಆಕಾಶಸೂತ್ರ ಹಾಗೂ ಪ್ರಾಣಸೂತ್ರಗಳನ್ನು ಒಂದೇ ಅಧಿಕರಣದಲ್ಲಿ ನಿವೇಶಿಸಿದ್ದಾರೆ. ಒಂದೇ ಅಧಿಕರಣವಾದರೆ 'ಆತ ಏವ' ಎಂಬ ಪದಗಳ ವಿನ್ಯಾಸವು ತಪ್ಪಾಗುತ್ತದೆ. ಇನ್ನು 'ಪ್ರಾಣಾದ್ಧ್ಯೇವ' ಇತ್ಯಾದಿ ಶ್ರುತಿಯು ವಿಷ್ಣುಪರವಾಗಿದೆಯೆಂದು ಈಗಾಗಲೇ ಆನಂದಮಯಾಧಿಕರಣದಲ್ಲಿ ಸಮರ್ಥಿಸಿದ್ದಾಗಿದೆ. ಇನ್ನು ಶೈವರ ಸಿದ್ಧಾಂತವೂ ತಪ್ಪು.

ಪ್ರಾಣಸ್ಥವಿಷ್ಣುನಾ ಸರ್ವೇ ಪ್ರಸ್ತೂಯಂತೇ ಯತಸ್ತತಃ ।
ಪ್ರಸ್ತಾವದೇವತಾ ಸ ಸ್ಯಾತ್ ಪ್ರಸ್ತಾವಸ್ತು ಜನಿರ್ಯತಃ ॥

(ಮುಖ್ಯಪ್ರಾಣನಲ್ಲಿರುವ ವಿಷ್ಣುವಿನಿಂದಲೇ ಸಮಸ್ತ ಜಗತ್ತು ಹುಟ್ಟಿದೆ; ಆದ್ದರಿಂದ ಪ್ರಸ್ತಾವ-ದೇವತೆಯು ವಿಷ್ಣುವೇ ಆಗುತ್ತಾನೆ. ಪ್ರಸ್ತಾವಶಬ್ದಕ್ಕೆ ಹುಟ್ಟು ಎಂಬ ಅರ್ಥವು ಪ್ರಸಿದ್ಧವಾಗಿದೆಯಷ್ಟೇ.) ಇತ್ಯಾದಿ ಪ್ರಾಣಶ್ರುತಿಯನ್ನು ವ್ಯಾಖ್ಯಾನಿಸುವ ಸ್ಮೃತಿಯ ವಿರೋಧವು ಬರುತ್ತದೆ. ಮತ್ತು 'ಪ್ರಾಣಸ್ಥೋಣಾ ಅಯಂ ವಾವ ಶಿಶುರ್ಯೋಯಂ ಮಧ್ಯಮಃ ಪ್ರಾಣಃ' ಎಂಬ ಶ್ರುತಿಯು ಮುಖ್ಯಪ್ರಾಣನನ್ನು ಮಧ್ಯಮಪ್ರಾಣನೆಂದು ವಿಷ್ಣುವನ್ನು ಉತ್ತಮಪ್ರಾಣನೆಂದು ಹೇಳುತ್ತಿದೆ ಹೊರತು ಶಿವನನ್ನು ಪ್ರಾಣನೆಂದು ಹೇಳಿಲ್ಲ. ಈ ಶ್ರುತಿಯ ವಿರೋಧವು ಶೈವರಿಗೆ ತಪ್ಪಿದ್ದಲ್ಲ.

ದ್ವಾವಾತ್ಮಾನೌ ಹಿ ದೇವೇಷು ದ್ವೌ ಪ್ರಾಣೌ ದ್ವೌ ಚ ಚೇತನೌ ।
ಅಜ್ಞಾನಾಭಿಭವಾಸ್ಪೃಷ್ಟೌ ವಾಯುರ್ನಾರಾಯಣಶ್ಚ ತೌ ।
ತದನ್ಯೇ ಚೇತನಾಃ ಸರ್ವೇ ಪ್ರಾಣಾಶ್ಚಾತ್ಮಾನ ಏವ ಚ ।

ಅಜ್ಞಾನಾಭಿಭವಸ್ಪೃಷ್ಟಸ್ಸಾತ್ ತೇ ಹ್ಯಧಮಾಃ ಸ್ಮೃತಾಃ ।
ಮಧ್ಯಮೋ ವಾಯುರೇವೈಕ ಉತ್ತಮಃ ಕೇವಲೋ ಹರಿಃ ॥

''ದೇವತೆಗಳ ಮಧ್ಯದಲ್ಲಿ ಆತ್ಮ, ಪ್ರಾಣ, ಚೇತನರೆನ್ನಿಸಿದ ಇಬ್ಬರು ಮಾತ್ರ ಅಜ್ಞಾನದ ಸಂಪರ್ಕವಿಲ್ಲದವರು - ವಾಯುದೇವರು ಮತ್ತು ನಾರಾಯಣರಿಬ್ಬರು. ಅವರನ್ನು ಬಿಟ್ಟು ಉಳಿದ ಚೇತನರು ಪ್ರಾಣರು ಮತ್ತು ಆತ್ಮರು ಅಜ್ಞಾನದ ಸಂಪರ್ಕಕ್ಕೊಳಗಾದವರು. ಆದ್ದರಿಂದ ಉಳಿದೆಲ್ಲ ದೇವತೆಗಳು ಅಧಮರೆನ್ನಿಸುತ್ತಾರೆ. ವಾಯುದೇವರೊಬ್ಬರೇ ಮಧ್ಯಮರೆನ್ನಿಸುತ್ತಾರೆ. ಹರಿಯು ಉತ್ತಮನೆನ್ನಿಸಿದ್ದಾರೆ.'' ಎಂಬ ಬ್ರಹ್ಮಾಂಡಪುರಾಣದ ವಿರೋಧವು ಬರುತ್ತದೆ.

ಪ್ರತಿಯೊಂದು ಅಧಿಕರಣದ ಕೊನೆಯಲ್ಲಿ ಗ್ರಂಥಕಾರರು (ಚಂದ್ರಿಕಾಚಾರ್ಯರು) ಟೀಕೆಯ ಕಠಿಣಪದಾರ್ಥಗಳನ್ನು ಹೇಳುತ್ತಾರೆ. ಆದರೆ ಈ ಅಧಿಕರಣದ ಉಪನ್ಯಾಸಶೈಲಿಯಲ್ಲಿಯೇ ವಿವರಿಸಿದ್ದರಿಂದ ಪ್ರತ್ಯೇಕವಾಗಿ ಹೇಳಿಲ್ಲ.

ಇಲ್ಲಿಗೆ ಶ್ರೀರಾಘವೇಂದ್ರತೀರ್ಥಶ್ರೀಪಾದರಿಂದ ವಿರಚಿತವಾದ
ಪ್ರಕಾಶಟಪ್ಪಣಿಯ ಕನ್ನಡಾನುವಾದದಲ್ಲಿ ಪ್ರಾಣಾಧಿಕರಣವು ಮುಕ್ತಾಯವಾಯಿತು.

* * * * * * *

ಶ್ರೀಕೃಷ್ಣಾರ್ಪಣಮಸ್ತು.

# ಭಾಗ -೧

## ನ್ಯಾಯವಿವರಣ, ನ್ಯಾಯವಿವರಣಟೀಕಾ, ಅಣುಭಾಷ್ಯ, ತತ್ವಮಂಜರೀ, ತಂತ್ರದೀಪಿಕಾ, ನ್ಯಾಯಮುಕ್ತಾವಳಿಃ, ಸೂತ್ರಾರ್ಥರತ್ನಾವಳಿಃ

श्रीमदानन्दतीर्थभगवत्पादाचार्यविरचितम्

# अणुभाष्यम्

## प्राणाधिकरणम्

श्री राघवेन्द्रतीर्थविरचिता

# तत्वमञ्जरी

## प्राणाधिकरणम्

नन्वथापि न पूर्णानन्दो विष्णुरिति युक्तम् । 'तद्वै त्वं प्राणोऽभवः महान् भोगः प्रजापतेः' इति श्रुतौ प्राणस्यैव महाभोगशब्दितपूर्णानन्दत्वोक्तेः प्राणपदस्य च प्रसिद्धया मुख्यप्राणपरत्वात् । न हि द्वयोः पूर्णानन्दत्वं युक्तं विरोधादित्यतः प्राप्तम् ॥ ॐ अत एव प्राण इति ॥

ಇಷ್ಟು ಹೇಳಿದರೂ ಸಹ ವಿಷ್ಣುವು ಆನಂದಮಯನಾಗಲಾರನು. ಏಕೆಂದರೆ, 'ತದ್ ವೈ ತ್ವಂ ಪ್ರಾಣೋ ಅಭವಃ ಮಹಾನ್ ಭೋಗಃ ಪ್ರಜಾಪತೇಃ' ಇತ್ಯಾದಿ ಶ್ರುತಿಯಲ್ಲಿ ಮಹಾಭೋಗಶಬ್ದದಿಂದ ಪೂರ್ಣಾನಂದತ್ವವನ್ನು ಮುಖ್ಯಪ್ರಾಣನಲ್ಲಿ ಹೇಳಬೇಕು. ಏಕೆಂದರೆ ಈ ಶ್ರುತಿಯಲ್ಲಿ ಕೇಳಿಸುತ್ತಿರುವ ಪ್ರಾಣಶಬ್ದವು ಮುಖ್ಯಪ್ರಾಣನನ್ನೇ ಪ್ರತಿಪಾದಿಸುತ್ತಿದೆ. ವಿಷ್ಣು ಹಾಗೂ ಮುಖ್ಯಪ್ರಾಣರು ಇಬ್ಬರೂ ಸಹ ಪೂರ್ಣಾನಂದರಾಗಲಿ ಎಂದು ಹೇಳಬಾರದು. ಇಬ್ಬರಿಗೆ ಪೂರ್ಣಾನಂದತ್ವವನ್ನು ಹೇಳುವುದು ಪರಸ್ಪರ ವಿರುದ್ಧವಾಗಿದೆ. ಈ ಶಂಕೆಯನ್ನು ಪರಿಹರಿಸಲು 'ಓಂ ಅತ ಏವ ಪ್ರಾಣಃ' ಎಂಬ ಸೂತ್ರವು ಹೊರಟಿದೆ.

तदर्थः **प्रणेतेति** ॥ **प्रणेता** जीवनहेतुः । उपलक्षणमेतत् । प्रणेत्रादिरेको मुख्यो विष्णुरेव । तथाच प्राण इत्याद्यैरध्यात्मगैरन्यवस्तुषु प्रसिद्धैः **सर्वैः** शब्दैर्विष्णुरेवोच्यते । नतु मुख्यप्राणादिः ।

ಈ ಅಧಿಕರಣದ ಸಾರವನ್ನೇ "ಪ್ರಣೇತಾ" ಎಂಬ ಪದದಿಂದ ಶ್ರೀಮದಾಚಾರ್ಯರು ಸಂಗ್ರಹಿಸಿದ್ದಾರೆ. 'ಪ್ರಣೇತಾ' ಎಂಬ ಪದಕ್ಕೆ ಜೀವನಕಾರಣನೆಂದರ್ಥ. ಜೀವನಪ್ರದತ್ವವು ವಿಷ್ಣುವಿನಲ್ಲಿರುವುದರಿಂದ ವಿಷ್ಣುವೇ ಪ್ರಾಣಶಬ್ದವಾಚ್ಯನಾಗುತ್ತಾನೆ. ಉಪಲಕ್ಷಣಯಾ ಉಳಿದ ಧರ್ಮಗಳನ್ನೂ ಸಹ ತಿಳಿಯಬೇಕು. ಆದ್ದರಿಂದ ಬೇರೆ ವಸ್ತುಗಳಲ್ಲಿ ಪ್ರಸಿದ್ಧವಾದ ಆಧ್ಯಾತ್ಮಿಕಪದಗಳೆಲ್ಲವೂ ವಿಷ್ಣುವನ್ನೇ ಪ್ರತಿಪಾದಿಸುತ್ತದೆ ಹೊರತು ಮುಖ್ಯಪ್ರಾಣನನ್ನು ಪ್ರತಿಪಾದಿಸುವುದಿಲ್ಲ.

**ಕುತಃ ? ಸರ್ವಗುಣತ್ವತಃ । 'ಹ್ರೀಶ್ಚ ತೇ ಲಕ್ಷ್ಮೀಶ್ಚ ಪತ್ನ್ಯಾ' ವಿತಿ 'ಭರ್ತಾ ಸನ್ ಭ್ರಿಯಮಾಣ' ಇತಿ ಹ್ರೀಶಬ್ದಿತಶ್ರೀಪತಿತ್ವವಿಶ್ವಭರ್ತೃತ್ವಾದ್ಯೇತತ್ಪ್ರಕರಣಸ್ಥಸರ್ವಗುಣವತ್ತ್ವಾದಿತ್ಯರ್ಥಃ । ಕೇನ ನಿಮಿತ್ತೇನೋಚ್ಯತೇ? ಆಹ – ಸರ್ವಗುಣತ್ವತ ಇತಿ । 'ಯದ್ವೇವಾನ್ಪ್ರಾಣಯೊ ನವೇ'ತಿ ವಾಕ್ಯಶೇಷೋಕ್ತ-ನವದೇವೋಪಲಕ್ಷಿತಸರ್ವಪ್ರಾಣಿಜೀವನಹೇತುತ್ವಾದಿರೂಪಗುಣತ್ವಾದನ್ಯಗತಂ ಪ್ರತಿ ಸ್ವಾತನ್ತ್ರ್ಯಾಚ್ಚೇ-ತ್ಯರ್ಥಃ । ಅತ್ರ ಪ್ರಾಣ ಇತಿ ವಾಚ್ಯೇ ಪ್ರಣೇತೇತಿ ತದರ್ಥೋಕ್ತಿಃ । ಪ್ರಾಣಪದಸ್ಯ ಹರೌ ಯೌಗಿಕತ್ವಸ್ಯ, ಏವ ಇತ್ಯುಕ್ತಿಃ ಪ್ರವೃತ್ತಿಹೇತೋರ್ಮುಖ್ಯತ್ವಸ್ಯ ಸೂಚನಾಯ ॥ ೯ ॥**

ಹೀಗೇಕೆ ಒಪ್ಪಬೇಕು? ಎಂದರೆ "ಸರ್ವಗುಣತ್ವತಃ" ಎಂದು ಉತ್ತರಿಸಿದ್ದಾರೆ. ಅಂದರೆ, ಈ ಪ್ರಕರಣದಲ್ಲಿ ಕೇಳಿಸುತ್ತಿರುವ ಎಲ್ಲ ಧರ್ಮಗಳೂ ವಿಷ್ಣುವಿನ ಅಸಾಧಾರಣಗುಣಗಳಾಗಿವೆ. 'ಹ್ರೀಶ್ಚ ತೇ ಲಕ್ಷ್ಮೀಶ್ಚ ಪತ್ನ್ಯೌ' ಎಂಬ ಶ್ರುತಿಯಲ್ಲಿ ಶ್ರೀಪತಿತ್ವ ಹಾಗೂ ಲಕ್ಷ್ಮೀಪತಿತ್ವಧರ್ಮಗಳು ಕೇಳಿಸುತ್ತಿವೆ. 'ಭರ್ತಾ ಸನ್ ಭ್ರಿಯಮಾಣಃ' ಎಂಬ ಶ್ರುತಿಯಲ್ಲಿ ವಿಶ್ವಪಾಲಕತ್ವವೆಂಬ ವಿಷ್ಣುವಿನ ಅಸಾಧಾರಣಧರ್ಮವು ಕೇಳಿಸುತ್ತಿದೆ. ಈ ಪ್ರಕರಣದಲ್ಲಿ ವಿಷ್ಣುವಿನ ಅನೇಕ ಗುಣಗಳು ಕೇಳಿಸುತ್ತಿರುವುದರಿಂದ ವಿಷ್ಣುವೇ ಪ್ರಾಣಶಬ್ದವಾಚ್ಯನು. ಯಾವ ಕಾರಣದಿಂದ ಇವುಗಳನ್ನು ವಿಷ್ಣುವಿನ ಅಸಾಧಾರಣಧರ್ಮಗಳೆಂದು ಗುರುತಿಸುತ್ತೀರಿ? ಎಂಬ ಪ್ರಶ್ನೆಗೂ "ಸರ್ವಗುಣತ್ವತಃ" ಎಂದೇ ಉತ್ತರ. 'ಯದ್ವೇವಾನ್ ಪ್ರಾಣಯೋ ನವ' ಇತ್ಯಾದಿ ವಾಕ್ಯಶೇಷದಲ್ಲಿ ನವದೇವತೆಗಳಿಂದ ಉಪಲಕ್ಷಿತರಾದ ಸಕಲಪ್ರಾಣಿಗಳ ಜೀವನಹೇತುತ್ವವು ವಿಷ್ಣುವಿನಲ್ಲಿಯೇ ಇದೆ. ಮುಖ್ಯಪ್ರಾಣನಲ್ಲಿರುವ ಸರ್ವಪ್ರಾಣಿಜೀವನಹೇತುತ್ವವು ವಿಷ್ಣುವಿನ ಅಧೀನ-ವಾಗಿದೆ. ಶ್ರೀಮದಾಚಾರ್ಯರು ಈ ಅಧಿಕರಣದ ಸಾರವನ್ನು 'ಪ್ರಾಣಃ' ಎಂದು ಸಂಗ್ರಹಿಸದೆ ಪ್ರಣೇತಾ ಎಂದು ಸಂಗ್ರಹಿಸಲು ಏನುಕಾರಣ? ಎಂದರೆ ಪ್ರಾಣಶಬ್ದವು ಮಹಾಯೋಗವೃತ್ತಿಯಿಂದ ವಿಷ್ಣುವಾಚಕ-ವಾಗಿದೆ. ಮತ್ತು ಏವಕಾರದಿಂದ ಪರಮಮುಖ್ಯವೃತ್ತಿಯಿಂದ ವಿಷ್ಣುವೊಬ್ಬನೇ ವಾಚ್ಯನೆಂದು ತಿಳಿಸಿದ್ದಾರೆ. ॥೯॥

* * * * *

॥ಶ್ರೀಃ ॥

### ಶ್ರೀರಾಘವೇಂದ್ರತೀರ್ಥವಿರಚಿತಾ

# ತನ್ತ್ರದೀಪಿಕಾ

## ಪ್ರಾಣಾಧಿಕರಣಮ್

॥ ॐ अत एव प्राणः ॐ ॥ ೧-೧-೨೩

अत्र नये आध्यात्मिकाशेषनामसमन्वय उच्यते । प्राधान्यादन्योपलक्षणत्वेन प्राणोक्तिः । **''तद्वै त्वं प्राण''** इत्युक्तः प्राणो ब्रह्मैव । न तु रूढ्या मुख्यप्राणः । कुतः? अत एव **''श्रीश्च ते लक्ष्मीश्च पत्न्यौ''** इति निरवकाशश्रीलक्ष्मीपतित्व-लिङ्गादेवेत्यर्थः । एवेति **''शब्दादेव''** इत्यत्रैव लिङ्गस्य निरवकाशत्वमाह ॥೯॥

ಈ ಅಧಿಕರಣದಲ್ಲಿ ಆಧ್ಯಾತ್ಮಿಕವಾದ (ದೇಹೇಂದ್ರಿಯಾದಿಗಳಿಗೆ ಸಂಬಂಧಪಟ್ಟ) ಸಮಸ್ತವಿಧವಾದ ನಾಮಾತ್ಮಕಶಬ್ದಗಳ ಸಮನ್ವಯವನ್ನು ಹೇಳುತ್ತಿದ್ದಾರೆ. ಆಧ್ಯಾತ್ಮಿಕಶಬ್ದಗಳ ಮಧ್ಯದಲ್ಲಿ ಪ್ರಾಣನಿಗೆ ಪ್ರಾಧಾನ್ಯವಿರುವುದರಿಂದ ಪ್ರಾಣಶಬ್ದವನ್ನು ಮುಖ್ಯವಾಗಿ ಸ್ವೀಕರಿಸಿ ಉಳಿದ ಶಬ್ದಗಳನ್ನು ಉಪಲಕ್ಷಣವಾಗಿ ಸಮನ್ವಯ ಮಾಡುತ್ತಿದ್ದಾರೆ.

ಸೂತ್ರಾರ್ಥ ಹೀಗಿದೆ — ಪ್ರಾಣಃ = 'ತದ್ ವೈ ತ್ವಂ ಪ್ರಾಣಃ' ಎಂಬ ಶ್ರುತಿಯಲ್ಲಿ ಹೇಳಲ್ಪಟ್ಟ ಪ್ರಾಣನು ಬ್ರಹ್ಮನೇ ಆಗಿದ್ದಾನೆ, ಹೊರತು ರೂಢಿಯಿಂದ ಮುಖ್ಯಪ್ರಾಣನು ಪ್ರತಿಪಾದ್ಯನಾಗಿಲ್ಲ. ಅತ ಏವ = ಏಕೆಂದರೆ 'ಶ್ರೀಶ್ಚ ತೇ ಲಕ್ಷ್ಮೀಶ್ಚ ಪತ್ನ್ಯೌ' ಎಂಬುದಾಗಿ ಶ್ರೀಪತಿತ್ವ ಲಕ್ಷ್ಮೀಪತಿತ್ವವೆಂಬ ನಿರವಕಾಶವಾದ ವಿಷ್ಣುಲಿಂಗವಿರುವುದರಿಂದಲೇ ಎಂದರ್ಥ. ಏವ = ಶಬ್ದಾದೇವ ಪ್ರಮಿತಃ ಎಂಬ ಸೂತ್ರದಲ್ಲಿ ಏವಕಾರವು ಹೇಗೆ ನಿರವಕಾಶತ್ವವನ್ನು ಹೇಳುತ್ತಿದೆಯೋ ಅದರಂತೆ ಈ ಸೂತ್ರದಲ್ಲಿರುವ ಏವಕಾರವೂ ಸಹ ಲಿಂಗಕ್ಕೆ ನಿರವಕಾಶತ್ವವನ್ನು ಹೇಳುತ್ತಿದೆ.

* * * *

श्रीराघवेन्द्रयतिकृता

# न्यायमुक्तावलिः

## प्राणाधिकरणम्

॥ ॐ अत एव प्राणः ॐ ॥ ९ ॥

अत्राप्यातिदेशिकी वा पूर्ववैषम्येण पूर्वपक्षोत्थानात् प्रत्युदाहरणरूपा वा आकाशाद्वायुरिति श्रौतक्रमेण विचारणाद्वा सङ्गतिः । तद्वै त्वं प्राणो अभव इति तैत्तिरीये (तै. आ. ३-१४) 'भर्ता सन् म्रियमाणः' इत्यनुवाके श्रुतः प्राणः किं मुख्यवायुरुत विष्णुरिति सन्देहः ।

प्राणशब्दस्य मुख्यवायौ रूढत्वात् प्राणो मुख्यवायुरेवेत्यस्य पूर्वन्यायेन अत्रत्यनिरवकाशलिङ्गेन निरासेऽपि प्राणपदस्य विष्णौ रूढेरभावात् तत्प्रवृत्ति-निमित्तप्राणनाख्यजीवनहेतुत्वस्य 'तत्प्राणे प्रपन्न उदतिष्ठत्'(ऐ.२-१-४) 'यत्प्राप्ति-र्यत्परित्यागः' (ब्र. सू. भा. २-४-१) इति श्रुतिस्मृतिभिर्वासुधोक्तदिशा कुलाल-शरीरस्य घटं प्रतीव मुख्यप्राणशरीरभूतवायोर्जीवनं प्रत्यन्वयव्यतिरेकदर्शनेन प्रत्यक्षेण चावगतान्वयव्यतिरेकाभ्यां वा मुख्यवायुगतत्वेन योगस्याप्यभावदिति न प्राणो विष्णुरिति विशेषशङ्क्योत्थानाद्वा पूर्ववन्निरवकाशलिङ्गाभवादिति वा पूर्वः पक्षः ॥

ಈ ಅಧಿಕರಣದಲ್ಲಿಯೂ ಸಹ ಆತಿದೇಶಿಕೀಸಂಗತಿಯನ್ನು ಹೇಳಬಹುದು. ಅಥವಾ ಹಿಂದಿನ ಅಧಿ-ಕರಣಕ್ಕಿಂತ ವಿಲಕ್ಷಣವಾದ ಪೂರ್ವಪಕ್ಷವನ್ನು ಮಾಡುತ್ತಿರುವುದರಿಂದ ಪ್ರತ್ಯುದಾಹರಣವೆಂಬ ಸಂಗತಿಯನ್ನು ಹೇಳಬಹುದು. ಅಥವಾ ಆಕಾಶಾದ್ ವಾಯುಃ ಇತ್ಯಾದಿ ಶ್ರುತಿಕ್ರಮವನ್ನು ಅನುಸರಿಸಿ ವಿಚಾರ ಮಾಡುತ್ತಿರುವುದರಿಂದಲೂ ಆಕಾಶಾಧಿಕರಣದ ಅನಂತರ ಈ ಅಧಿಕರಣಕ್ಕೆ ಸಂಗತಿಯು ಇರುತ್ತದೆ. ತೈತ್ತಿರೀಯದಲ್ಲಿ ಕೇಳಿಸುತ್ತಿರುವ 'ತದ್ವೈ ತ್ವಂ ಪ್ರಾಣೋಽಭವಃ' ಎಂಬ ಶ್ರುತಿಯಲ್ಲಿರುವ ಪ್ರಾಣಶಬ್ದವು 'ಭರ್ತಾ ಸನ್ ಭ್ರಿಯಮಾಣಃ' ಎಂಬಲ್ಲಿ ಕೇಳಿಸುತ್ತಿರುವ ಪ್ರಾಣಶಬ್ದವು ಮುಖ್ಯಪ್ರಾಣನನ್ನು ಪ್ರತಿಪಾದಿಸುತ್ತದೋ ಅಥವಾ ವಿಷ್ಣುವನ್ನೋ? ಎಂದು ಸಂದೇಹ.

ಇಲ್ಲಿರುವ ಪ್ರಾಣಶಬ್ದದಿಂದ ಮುಖ್ಯಪ್ರಾಣನೇ ಪ್ರತಿಪಾದ್ಯನು. ಏಕೆಂದರೆ, ಪ್ರಾಣಶಬ್ದವು ಮುಖ್ಯಪ್ರಾಣನಲ್ಲೇ ರೂಢವಾಗಿದೆ. ವಸ್ತುತಃ ಪ್ರಾಣನು ಮುಖ್ಯಪ್ರಾಣನೇ ಆಗಿದ್ದಾನೆ ಎಂಬುದನ್ನು

ಹಿಂದಿನ ಅಧಿಕರಣದ ನ್ಯಾಯದಿಂದ ಮತ್ತು ಇಲ್ಲಿ ಹೇಳುತ್ತಿರುವ ನಿರವಕಾಶಲಿಂಗದಿಂದ ನಿರಾಸಮಾಡಬಹುದು. ಆದರೆ ವಿಷ್ಣುವಿನಲ್ಲಿ ಪ್ರಾಣಪದಕ್ಕೆ ರೂಢಿಯೇ ಇರುವುದಿಲ್ಲ. ಅಷ್ಟೇ ಅಲ್ಲದೆ ಪ್ರಾಣಶಬ್ದದ ಪ್ರವೃತ್ತಿನಿಮಿತ್ತವೆನಿಸಿದ ಜೀವನಹೇತುತ್ವವೂ ಸಹ ಇರುವುದಿಲ್ಲ. ಹೊರತಾಗಿ ಮುಖ್ಯಪ್ರಾಣನಲ್ಲಿಯೇ ಜೀವನಹೇತುತ್ವವು ಶ್ರುತವಾಗಿದೆ. 'ತತ್ಪ್ರಾಣೇ ಪ್ರಪದ್ಯೇ ಉದತಿಷ್ಠತ್' ಎಂಬ ಐತರೇಯದಲ್ಲಿ ಕೇಳಿಸುತ್ತಿರುವಂತೆ ಮತ್ತು 'ಯತ್‌ಪ್ರಾಪ್ತಿರ್ಯತ್ ಪರಿತ್ಯಾಗಃ' ಎಂಬ ಭಾಷ್ಯದ ಮಾತಿನಂತೆ, ಹೀಗೆ ಶ್ರುತಿಸ್ಮೃತಿಗಳಿಂದ ಸುಧೆಯಲ್ಲಿ ಹೇಳಿದಂತೆ ಜೀವನಹೇತುತ್ವವು ಮುಖ್ಯಪ್ರಾಣನಲ್ಲೇ ಇರುತ್ತದೆ. ಯಾವ ರೀತಿಯಾಗಿ ಘಟಕ್ಕೆ ಕುಲಾಲನ ಶರೀರವು ಕಾರಣವಾಗಿದೆಯೋ ಆದರಂತೆ ಮುಖ್ಯಪ್ರಾಣನ ಶರೀರವೆನಿಸಿದ ಭೂತವಾಯುವಿಗೆ ಮಾತ್ರ ಜೀವನದ ಅನ್ವಯವ್ಯತಿರೇಕವು ಕಾಣಿಸುತ್ತಿದೆ. ಹೀಗೆ ಪ್ರತ್ಯಕ್ಷದಿಂದ ಸಿದ್ಧವಾದ ಅನ್ವಯವ್ಯತಿರೇಕಗಳಿಂದ ಪ್ರಾಣಶಬ್ದದ ಪ್ರವೃತ್ತಿನಿಮಿತ್ತವು ಮುಖ್ಯವಾಯುವಿನಲ್ಲೇ ಇರುತ್ತದೆಂದು ನಿರ್ಣಯವಾಗುತ್ತದೆ. ಯೋಗ ವೃತ್ತಿಯನ್ನೂ ಸಹ ಮುಖ್ಯಪ್ರಾಣನಲ್ಲಿಯೇ ಹೇಳಬಹುದಾದ್ದರಿಂದ ಪ್ರಾಣಶಬ್ದದಿಂದ ವಿಷ್ಣುವು ಪ್ರತಿಪಾದ್ಯನಾಗುವುದಿಲ್ಲ. ಹೀಗೆ ವಿಶೇಷವಾದ ಸಂಶಯವು ಬರುವುದರಿಂದ ಮತ್ತು ಹಿಂದಿನ ಅಧಿಕರಣದಂತೆ ನಿರವಕಾಶಲಿಂಗವು ಇಲ್ಲದ ಕಾರಣ ಮುಖ್ಯಪ್ರಾಣನೇ ಪ್ರಾಣಶಬ್ದವಾಚ್ಯನೆಂದು ಪೂರ್ವಪಕ್ಷ ಹುಟ್ಟುತ್ತದೆ.

**ಸಿದ್ಧಾನ್ತಸ್ತು ॥ 'ಅದ್ಭ್ಯಃ ಸಮ್ಭೂತಃ' ಇತಿ ಪೂರ್ವಾನುವಾಕೇ 'ಶ್ರೀಶ್ಚ ತೇ ಲಕ್ಷ್ಮೀಶ್ಚ ಪತ್ನ್ಯೌ'** ಇತಿ ಶ್ರುತೇನ ಶ್ರೀಲಕ್ಷ್ಮೀಪತಿತ್ವರೂಪನಿರವಕಾಶಲಿಙ್ಗೇನ ಲೋಕಪ್ರಸಿದ್ಧೇಸ್ತ್ಯಾಜ್ಯತ್ವಾತ್ । **'ಶ್ರೀಶ್ಚ ತೇ'** ಇತಿ ಯುಷ್ಮಚ್ಛಬ್ದೇನೋಕ್ತಸ್ಯ **'ತಷ್ಟೈ ತ್ವಂ ಪ್ರಾಣಃ'** ಇತಿ ಅತ್ರಾಪಿ ಯುಷ್ಮಚ್ಛಬ್ದೇನ ಪ್ರತ್ಯಭಿಜ್ಞಾನೇನ ತಯೋರನುವಾಕಯೋರ್ಭಿನ್ನಾರ್ಥತ್ವಶಙ್ಕಾನುದಯಾತ್ ಭರ್ತಾ ಸನ್ನಿತ್ಯನುವಾಕೇ 'ತಮೇವ ಮೃತ್ಯುಮಮೃತಂ ತಮಾಹುಃ' ಇತ್ಯಾದಿನಾ ಅಮೃತತ್ವಾದಿಲಿಙ್ಗಶ್ರವಣಾತ್ **'ತತ್ಪ್ರಾಣ'** ಇತಿ ಶ್ರುತೇಃ (ಐ. ೨-೧-೪) **'ಪ್ರಾಣಸ್ತಥಾ'** ಇಯತ್ರತ್ಯನ್ಯಾಯೇನ(ಬ್ರ.ಸೂ. ೧-೧-೨೮) ವೈಷ್ಣವತ್ವಾತ್ ವಾಯುವೃತ್ತೇರ್ಮುಖ್ಯಪ್ರಾಣದೇಹತ್ವಮಿವ ಮುಖ್ಯಪ್ರಾಣಸ್ಯಾಪಿ ವಿಷ್ಣುದೇಹತ್ವೇನಾನ್ವಯವ್ಯತಿರೇಕಯೋರಪಿ ತದೀಯತಯಾ ತಸ್ಯೈವ ಜೀವನಹೇತುತ್ವಾತ್ ವಾಯುಗತಸ್ಯಾಪಿ ತದಧೀನತ್ವೇನ ತದಧೀನತ್ವನ್ಯಾಯಾತ್ **'ಪ್ರಾಣಸ್ಯ ಪ್ರಾಣಃ'** ಇತ್ಯಾದೌ (ತಲ. ೧-೨) ಪ್ರಯೋಗಾಚ್ಚ ಯೋಗರೂಢಿಭ್ಯಾಂ ವಿಷ್ಣುರೇವ ಪ್ರಾಣಪದವಾಚ್ಯ ಇತಿ । **'ಶ್ರೀಶ್ಚ ತೇ ಲಕ್ಷ್ಮೀಶ್ಚ ಪತ್ನ್ಯೌ'** ಇತಿ ಭಾಷ್ಯೋಕ್ತಶ್ರುತ್ಯನ್ತರಬಲಾತ್ ಹ್ರೀರತ್ರ ಶ್ರೀರೇವೇತಿ ಧ್ಯೇಯಮ್ ॥ ಪ್ರಯೋಜನಂ ತು ಮಹಾನ್‌ಭೋಗ ಇತಿ ಮಹಾಭೋಗಶಬ್ದಿತಪೂರ್ಣಾನನ್ದತ್ವ-ಮುಖೇನಾನನ್ದಯಾಕ್ಷೇಪಃ ತತ್ಸಮಾಧಿಶ್ಚ ॥೯॥

ಸಿದ್ಧಾಂತ ಹೀಗಿದೆ -- 'ಅದ್ಭ್ಯಃ ಸಂಭೂತಃ' ಎಂಬ ಹಿಂದಿನ ಅನುವಾಕದಲ್ಲಿ 'ಶ್ರೀಶ್ಚ ತೇ ಲಕ್ಷ್ಮೀಶ್ಚ ಪತ್ನ್ಯೌ' ಎಂದು ಶ್ರುತವಾಗಿದೆ. ಈ ಶ್ರುತಿಯಲ್ಲಿ ಶ್ರೀಲಕ್ಷ್ಮೀಪತಿತ್ವವೆಂಬ ವಿಷ್ಣುವಿನ ನಿರವಕಾಶಲಿಂಗ-ವಿರುವುದರಿಂದ ಲೋಕರೂಢಿಯನ್ನು ಬಿಡಬೇಕಾಗುತ್ತದೆ. ಮತ್ತು ಶ್ರೀಶ್ಚ ತೇ' ಎಂಬಲ್ಲಿರುವ ಯುಷ್ಮತ್-

ಶಬ್ದದಿಂದ ಯಾರು ಪ್ರತಿಪಾದ್ಯನಾಗಿದ್ದಾನೋ ಅವನೇ 'ತದ್‌ವೈ ತ್ವಂ ಪ್ರಾಣಃ' ಎಂಬಲ್ಲಿರುವ ಯುಷ್ಮತ್ ಶಬ್ದದಿಂದಲೂ ಪ್ರತಿಪಾದ್ಯನಾಗುತ್ತಿದ್ದಾನೆಂಬ ಪ್ರತ್ಯಭಿಜ್ಞೆಯು ಬರುತ್ತದೆ. ಆದ್ದರಿಂದ ಎರಡೂ ಅನುವಾಕಗಳು ಭಿನ್ನ ಭಿನ್ನ ವಿಷಯಕವೆಂಬ ಶಂಕೆಯೇ ಹುಟ್ಟುವುದಿಲ್ಲ.

ಇದರಂತೆ 'ಭರ್ತಾ ಸನ್' ಎಂಬ ಅನುವಾಕದಲ್ಲೂ 'ತಮೇವ ಮೃತ್ಯುಂ ಅಮೃತಂ ತಮಾಹುಃ' ಇತ್ಯಾದಿಯಾಗಿ ಅಮೃತತ್ವಾದಿಲಿಂಗಗಳು ಕೇಳಿಸುತ್ತಿವೆ. ಈ ಲಿಂಗಗಳು ತತ್‌ಪ್ರಾಣ ಎಂಬ ಐತರೇಯಶ್ರುತಿಯಂತೆ ಮತ್ತು ಪ್ರಾಣಸ್ತಥಾ ಎಂಬ ಸೂತ್ರದಲ್ಲಿ ಹೇಳುವ ನ್ಯಾಯದಂತೆ ವಿಷ್ಣುವಿನಲ್ಲೇ ಇರುತ್ತವೆಂದು ಸಿದ್ಧವಾಗುತ್ತದೆ. ಮತ್ತು ಪಂಚವಾಯುವೃತ್ತಿಗಳು ಯಾವ ರೀತಿಯಾಗಿ ಮುಖ್ಯಪ್ರಾಣದೇವರ ಶರೀರವಾಗಿವೆಯೋ ಅದರಂತೆ ಮುಖ್ಯಪ್ರಾಣನೂ ಸಹ ವಿಷ್ಣುವಿನ ಶರೀರನೆನಿಸಿದ್ದಾನೆ. ಆದ್ದರಿಂದ ಜೀವನಹೇತುತ್ವದ ಅನ್ವಯವ್ಯತಿರೇಕವು ಮುಖ್ಯಪ್ರಾಣನಲ್ಲಿರುವಂತೆ ವಿಷ್ಣುವಿನಲ್ಲಿಯೂ ಇವೆ. ವಾಯುವಿನಲ್ಲಿರುವ ಜೀವನ ಹೇತುತ್ವವು ತದಧೀನತ್ವನ್ಯಾಯದಿಂದ ವಿಷ್ಣುವಿನ ಅಧೀನವಾಗಿರುತ್ತದೆ. ಮತ್ತು 'ಪ್ರಾಣಸ್ಯ ಪ್ರಾಣಃ' ಎಂಬ ತಲವಕಾರದ ಮಾತು ಈ ವಿಷಯದಲ್ಲಿ ಆಧಾರವಾಗಿದೆ. ಈ ಎಲ್ಲ ಕಾರಣಗಳಿಂದ ಪ್ರಾಣಶಬ್ದದ ಯೋಗ ಹಾಗೂ ರೂಢಿಗಳಿಂದ ವಿಷ್ಣುವೇ ಪ್ರತಿಪಾದ್ಯನಾಗುತ್ತಾನೆ.

'ಶ್ರೀಶ್ಚ ತೇ ಲಕ್ಷ್ಮೀಶ್ಚ ಪತ್ನ್ಯೌ' ಎಂಬ ಭಾಷ್ಯದಲ್ಲಿ ಹೇಳಲ್ಪಟ್ಟ ಶ್ರುತ್ಯಂತರದ ಆಧಾರದಿಂದ ಇಲ್ಲಿರುವ ಹ್ರೀಶಬ್ದದಿಂದ ಶ್ರೀದೇವಿಯನ್ನು ವಿವಕ್ಷಿಸಬೇಕು. ಇದರ ಪ್ರಯೋಜನವೇನೆಂದರೆ 'ಮಹಾನ್ ಭೋಗಃ' ಎಂಬಲ್ಲಿ ಕೇಳಿಸುತ್ತಿರುವ ಮಹಾಭೋಗಶಬ್ದದಿಂದ ತಿಳಿಯುವ ಪೂರ್ಣಾನಂದತ್ವಮುಖದಿಂದ ಆನಂದಮಯತ್ವವನ್ನು ಆಕ್ಷೇಪಿಸುವುದು ಮತ್ತು ಸಮಾಧಾನವನ್ನು ನೀಡುವುದು.

* * * *

# सूत्रार्थरत्नावलिः

**सूत्रार्थरत्नावलिः –**

(अत्र लोकतोऽन्यत्रप्रसिद्धचाध्यामिकाशेषशब्दोपलक्षकप्राणशब्दस्य ब्रह्मणि समन्वयः क्रियते)

ॐ॥ अत एव प्राणः ॥ॐ

नन्वयं प्राणो वायुरेव । प्राणशब्दस्य तत्र रूढत्वात् । विष्णौ रूढेरभावात् प्राणश्रुतेस्तत्र सावकाशत्वाभावात् । यौगिकार्थस्य जीवनकारणत्वस्यान्वयव्यतिरेकाभ्यां वायावेव दर्शनात् । ततश्च प्राणो वायुरेवेति प्राप्ते, सूत्रमाह –

ॐ॥ अत एव प्राणः ॥ॐ – अस्यार्थः । 'तद्वै त्वं प्राणोऽभवः' इत्युक्तप्राणो विष्णुरेव । नान्यः । कुतः? अत एव 'श्रीश्च ते'(तै.आ.३/१३) इति श्रीपतित्व-लिङ्गादेवेत्यर्थः ।

एवंच निरवकाशश्रीपतित्वलिङ्गात् । 'ईशानः प्राणदः प्राणः' इति विद्वद्रूढेर्महायोगस्य च विष्णौ सत्वेन श्रुतेः सावकाशत्वात् । प्राणगतजीवनान्वयव्यतिरेकस्यापि 'न प्राणेन' इति श्रुतेर्भगवधीनत्वात् । अतः प्राणशब्दवाच्यो विष्णुरेवेति सिद्धम् ॥

* * * * *

॥ इति परिपूर्णचन्द्रिकायां प्राणाधिकरणम् ॥

॥ श्रीमध्वेशार्पणमस्तु ॥

# ೦೧೦-ಜ್ಯೋತಿರಧಿಕರಣ

ಭಾಗ -೧

ಬ್ರಹ್ಮಸೂತ್ರ, ಸೂತ್ರದೀಪಿಕಾ, ಬ್ರಹ್ಮಸೂತ್ರಭಾಷ್ಯ, ಭಾಷ್ಯದೀಪಿಕಾ,
ಸತರ್ಕದೀಪಾವಳೀ, ತತ್ತ್ವಪ್ರಕಾಶಿಕಾ,
ಭಾವದೀಪ, ವಾಕ್ಯಾರ್ಥಮಂಜರೀ

॥ ಶ್ರೀಗುರುಭ್ಯೋ ನಮಃ ॥

ದೇವದೇವೋತ್ತಮ ದೇವತಾಸಾರ್ವಭೌಮ
ಅಖಿಲಾಂಡಕೋಟಬ್ರಹ್ಮಾಂಡನಾಯಕ, ಚತುರ್ದಶಲೋಕಗುರುಗಳಾದ
ಶ್ರೀವೇದವ್ಯಾಸದೇವರಿಂದ ಅನುಗ್ರಹಿಸಲ್ಪಟ್ಟ

# ಬ್ರಹ್ಮಮೀಮಾಂಸಾಶಾಸ್ತ್ರ

## ॥ ೧೦. अथ ज्योतिरधिकरणम् ॥

**॥ ॐ ज्योतिश्चरणाभिधानात् ॐ ॥**

ಕಿವಿ ಮೊದಲಾದ ಇಂದ್ರಿಯಗಳಿಗೆ ಅಗೋಚರನೆಂದು ಶ್ರುತಿ ಹೇಳುತ್ತಿರುವುದರಿಂದ ವಿಷ್ಣುವೇ ಜ್ಯೋತಿಃಶಬ್ದವಾಚ್ಯನು.

ಬ್ರಹ್ಮಮೀಮಾಂಸಾಶಾಸ್ತ್ರದಲ್ಲಿ ಜ್ಯೋತಿರಧಿಕರಣವು ಮುಗಿಯಿತು

* * * * * *

ಶ್ರೀಜಗನ್ನಾಥಯತಿಗಳಿಂದ ರಚಿಸಲ್ಪಟ್ಟ

## ಸೂತ್ರದೀಪಿಕಾ

**सूत्रदिपिका – ज्योतिः = ज्योतिःशब्दवाच्यं ब्रह्म एव न त्वन्यत् । कुतः? चरणाभिधानात् = कर्णादीनां विचरणाभिधानात् । विमे कर्णा (ऋ.६/९/६) इति ज्योतिषः साकल्येन कर्णादिविदूरत्वश्रवणादित्यर्थः ।**

ಜ್ಯೋತಿಃ = ಜ್ಯೋತಿಸ್ ಶಬ್ದದಿಂದ ಬ್ರಹ್ಮನೇ ವಾಚ್ಯನಾಗಿದ್ದಾನೆ. ಬೇರೆಯವರಲ್ಲ. ಏಕೆಂದರೆ ಚರಣಾಭಿಧಾನಾತ್ = ಕಿವಿ ಮೊದಲಾದ ಇಂದ್ರಿಯಗಳಿಗೆ ಅತೀತವಾಗಿದೆಯೆಂದು ಜ್ಯೋತಿಯನ್ನು ಹೇಳಿದ್ದರಿಂದ. 'ವಿಮೇ ಕರ್ಣಾ' ಎಂಬ ಋಗ್ವೇದವಾಕ್ಯವು ಜ್ಯೋತಿಯು ಕಿವಿ ಮೊದಲಾದ ಇಂದ್ರಿಯಗಳಿಂದ ಬಹುದೂರವೆಂದು ಹೇಳಿದೆ.

ಶ್ರೀಜಗನ್ನಾಥಯತಿಗಳಿಂದ ರಚಿತವಾದ ಸೂತ್ರದೀಪಿಕಾದಲ್ಲಿ
ಜ್ಯೋತಿರಧಿಕರಣವು ಮುಗಿಯಿತು.

श्रीमदानन्दतीर्थभगवत्पादाचार्यविरचित-

# ब्रह्मसूत्रभाष्यम्

# ९. ज्योतिरधिकरणम्

ಜ್ಯೋತಿಯೆನಿಸಿದ ಅಗ್ನಿಯೇ ಆನಂದಮಯನೆಂದು ಪೂರ್ವಪಕ್ಷ

**भाष्यम् – 'यो वेद निहितं गुहायाम्' (तै.उ. २-१) इत्युक्तम् ।**

**तच्च गुहानिहितम् – 'वि मे कर्णा पतयतो विचक्षुर्वी३दं ज्योतिर्हृदय आहितं यत् । वि मे मनश्चरति दूर आधीः किं स्विद् वक्ष्यामि किमु नू मनिष्ये' (ऋ. ६-९-६) इति ज्योतिरुक्तम् ।**

ತೈತ್ತಿರೀಯೋಪನಿಷತ್ತಿನಲ್ಲಿ 'ಎಲ್ಲರ ಹೃದಯಗುಹೆಯಲ್ಲಿರುವ ಆನಂದಮಯನನ್ನು ಯಾರು ತಿಳಿದಿದ್ದಾನೆ?' ಎಂದು ಪ್ರಶ್ನಿಸಲ್ಪಟ್ಟಿದೆ. ಅಂತಹ ಹೃದಯಗುಹೆಯಲ್ಲಿರುವ ವ್ಯಕ್ತಿಯು ಜ್ಯೋತಿರೂಪನಾಗಿದ್ದಾನೆ. ಇವನನ್ನು 'ನನ್ನ ಕಿವಿ ಮೊದಲಾದ ಇಂದ್ರಿಯಗಳು, ಕಿವಿಗಳು, ಕಣ್ಣುಗಳು ಹೊಂದಲು ಸಾಧ್ಯವಿಲ್ಲ. ಹೃದಯದಲ್ಲೇ ಇವನು ಸನ್ನಿಹಿತನಾಗಿದ್ದರೂ ನನ್ನ ಮನಸ್ಸು ಇವನಿಂದ ದೂರವೇ ಉಳಿದಿದೆ. ಇವನ ಬಗ್ಗೆ ನಾನು ಏನು ತಾನೇ ಹೇಳಬಲ್ಲೆನು. ಇವನನ್ನು ಏನೆಂದು ತಿಳಿದೇನು? ಹೀಗೆ ಜ್ಯೋತಿಯನ್ನು ಆನಂದಮಯನೆಂದು ಶ್ರುತಿಯು ಹೇಳಿದೆ.

ಪ್ರತಿಪದಾರ್ಥ -- ಈ ಅಧಿಕರಣದಲ್ಲಿ ಲೋಕತಃ ಅನ್ಯತ್ರಪ್ರಸಿದ್ಧವಾದ ಜ್ಯೋತಿ ಎಂಬ ನಾಮಾತ್ಮಕಶಬ್ದವನ್ನು ಬ್ರಹ್ಮನಲ್ಲಿ ಸಮನ್ವಯ ಮಾಡಲಾಗಿದೆ. ಹಿಂದಿನ ಅಧಿಕರಣದಿಂದ ಮತ್ತು ಅದರ ವಿಷಯವಾಕ್ಯದಿಂದ ಸಂಗತಿಯನ್ನು ತೋರಿಸುವ ಮೂಲಕ ವಿಷಯ ಮತ್ತು ಸಂಶಯಗಳನ್ನು ತೋರಿಸುತ್ತಿದ್ದಾರೆ(೦೧).

---

(೦೧) ಭಾಷ್ಯದೀಪಿಕಾ – ॥ १०. अथ ज्योतिरधिकरणम् ॥

अत्राधिकरणे तत्तत्सूक्तगताशेषशब्दोपलक्षकस्य लोकतोऽन्यत्रप्रसिद्धस्य ज्योतिर्नाम्नो ब्रह्मणि समन्वयः क्रियते । पूर्वाधिकरणतद्विषयसङ्गती विषयवाक्योदाहरणपूर्वकं विषयसंशयौ च दर्शयति - यो वेदेति ॥ ततः किमित्यत आह - तच्चेति ॥ चोऽवधारणे । तथा च यत् पूर्वं मान्त्रवर्णिकपदोपात्तमन्त्रवर्णगतेन 'यो वेद' इति वाक्येन गुहानिहितं वस्त्वुक्तं तदेवाऽनन्दमयाद्याख्यमित्युक्तम् । तदेव 'विमे कर्णा' इति वाक्ये 'ज्योतिरुक्तं' ज्योतिश्शब्देनोक्तमित्यर्थः । अनेन वक्ष्यमाणपूर्वपक्षपर्यालोचनया ज्योतिषो विष्व-

॥ ಶ್ರೀಗುರುಭ್ಯೋ ನಮಃ ॥

ದೇವದೇವೋತ್ತಮ ದೇವತಾಸಾರ್ವಭೌಮ
ಅಖಿಲಾಂಡಕೋಟಿಬ್ರಹ್ಮಾಂಡನಾಯಕ, ಚತುರ್ದಶಲೋಕಗುರುಗಳಾದ
ಶ್ರೀವೇದವ್ಯಾಸದೇವರಿಂದ ಅನುಗ್ರಹಿಸಲ್ಪಟ್ಟ

# ಬ್ರಹ್ಮಮೀಮಾಂಸಾಶಾಸ್ತ್ರ

## ॥ ೧೦. अथ ज्योतिरधिकरणम् ॥

**॥ ॐ ज्योतिश्चरणाभिधानात् ॐ ॥**

ಕವಿ ಮೊದಲಾದ ಇಂದ್ರಿಯಗಳಿಗೆ ಅಗೋಚರನೆಂದು ಶ್ರುತಿ ಹೇಳುತ್ತಿರುವುದರಿಂದ ವಿಷ್ಣುವೇ ಜ್ಯೋತಿಃಶಬ್ದವಾಚ್ಯನು.

ಬ್ರಹ್ಮಮೀಮಾಂಸಾಶಾಸ್ತ್ರದಲ್ಲಿ ಜ್ಯೋತಿರಧಿಕರಣವು ಮುಗಿಯಿತು

* * * * * *

ಶ್ರೀಜಗನ್ನಾಥಯತಿಗಳಿಂದ ರಚಿಸಲ್ಪಟ್ಟ

## ಸೂತ್ರದೀಪಿಕಾ

**ಸೂತ್ರದಿಪಿಕಾ – ज्योतिः = ज्योतिःशब्दवाच्यं ब्रह्म एव न त्वन्यत् । कुतः? चरणाभिधानात् = कर्णादीनां विचरणाभिधानात् । विमे कर्णा (ऋ.६/९/६) इति ज्योतिषः साकल्येन कर्णादिविदूरत्वश्रवणादित्यर्थः ।**

ಜ್ಯೋತಿಃ = ಜ್ಯೋತಿಸ್ ಶಬ್ದದಿಂದ ಬ್ರಹ್ಮನೇ ವಾಚ್ಯನಾಗಿದ್ದಾನೆ. ಬೇರೆಯವರಲ್ಲ. ಏಕೆಂದರೆ ಚರಣಾಭಿಧಾನಾತ್ = ಕವಿ ಮೊದಲಾದ ಇಂದ್ರಿಯಗಳಿಗೆ ಅತೀತವಾಗಿದೆಯೆಂದು ಜ್ಯೋತಿಯನ್ನು ಹೇಳಿದ್ದರಿಂದ. 'ವಿಮೇ ಕರ್ಣಾ' ಎಂಬ ಋಗ್ವೇದವಾಕ್ಯವು ಜ್ಯೋತಿಯು ಕವಿ ಮೊದಲಾದ ಇಂದ್ರಿಯಗಳಿಂದ ಬಹುದೂರವೆಂದು ಹೇಳಿದೆ.

ಶ್ರೀಜಗನ್ನಾಥಯತಿಗಳಿಂದ ರಚಿತವಾದ ಸೂತ್ರದೀಪಿಕಾದಲ್ಲಿ
ಜ್ಯೋತಿರಧಿಕರಣವು ಮುಗಿಯಿತು.

श्रीमदानन्दतीर्थभगवत्पादाचार्यविरचित-

# ब्रह्मसूत्रभाष्यम्

# ९.ज्योतिरधिकरणम्

ಜ್ಯೋತಿಯೆನಿಸಿದ ಅಗ್ನಿಯೇ ಆನಂದಮಯನೆಂದು ಪೂರ್ವಪಕ್ಷ

**भाष्यम् – 'यो वेद निहितं गुहायाम्' (तै.उ. २-१) इत्युक्तम् ।**

**तच्च गुहानिहितम् – 'वि मे कर्णा पतयतो विचक्षुर्वी३दं ज्योतिर्हृदय आहितं यत् । वि मे मनश्चरति दूर आधीः किं स्विद् वक्ष्यामि किमु नू मनिष्ये' (ऋ. ६-९-६) इति ज्योतिरुक्तम् ।**

ತೈತ್ತಿರೀಯೋಪನಿಷತ್ತಿನಲ್ಲಿ 'ಎಲ್ಲರ ಹೃದಯಗುಹೆಯಲ್ಲಿರುವ ಆನಂದಮಯನನ್ನು ಯಾರು ತಿಳಿದಿದ್ದಾನೆ?' ಎಂದು ಪ್ರಶ್ನಿಸಲ್ಪಟ್ಟಿದೆ. ಅಂತಹ ಹೃದಯಗುಹೆಯಲ್ಲಿರುವ ವ್ಯಕ್ತಿಯು ಜ್ಯೋತಿರೂಪನಾಗಿದ್ದಾನೆ. ಇವನನ್ನು 'ನನ್ನ ಕಿವಿ ಮೊದಲಾದ ಇಂದ್ರಿಯಗಳು, ಕಿವಿಗಳು, ಕಣ್ಣುಗಳು ಹೊಂದಲು ಸಾಧ್ಯವಿಲ್ಲ. ಹೃದಯದಲ್ಲೇ ಇವನು ಸನ್ನಿಹಿತನಾಗಿದ್ದರೂ ನನ್ನ ಮನಸ್ಸು ಇವನಿಂದ ದೂರವೇ ಉಳಿದಿದೆ. ಇವನ ಬಗ್ಗೆ ನಾನು ಏನು ತಾನೇ ಹೇಳಬಲ್ಲೆನು. ಇವನನ್ನು ಏನೆಂದು ತಿಳಿದೇನು? ಹೀಗೆ ಜ್ಯೋತಿಯನ್ನು ಆನಂದಮಯನೆಂದು ಶ್ರುತಿಯು ಹೇಳಿದೆ.

ಪ್ರತಿಪದಾರ್ಥ -- ಈ ಅಧಿಕರಣದಲ್ಲಿ ಲೋಕತಃ ಅನ್ಯತ್ರಪ್ರಸಿದ್ಧವಾದ ಜ್ಯೋತಿ ಎಂಬ ನಾಮಾತ್ಮಕಶಬ್ದವನ್ನು ಬ್ರಹ್ಮನಲ್ಲಿ ಸಮನ್ವಯ ಮಾಡಲಾಗಿದೆ. ಹಿಂದಿನ ಅಧಿಕರಣದಿಂದ ಮತ್ತು ಅದರ ವಿಷಯವಾಕ್ಯದಿಂದ ಸಂಗತಿಯನ್ನು ತೋರಿಸುವ ಮೂಲಕ ವಿಷಯ ಮತ್ತು ಸಂಶಯಗಳನ್ನು ತೋರಿಸುತ್ತಿದ್ದಾರೆ(೦೧).

---

(೦೧) ಭಾಷ್ಯದೀಪಿಕಾ – ॥ १०. अथ ज्योतिरधिकरणम् ॥

अत्राधिकरणे तत्तत्सूक्तगताशेषशब्दोपलक्षकस्य लोकतोऽन्यत्रप्रसिद्धस्य ज्योतिर्नाम्नो ब्रह्मणि समन्वयः क्रियते । पूर्वाधिकरणतद्विषयसङ्गती विषयवाक्योदाहरणपूर्वकं विषयसंशयौ च दर्शयति - यो वेदेति ॥ ततः किमित्यत आह - तच्चेति ॥ चोऽवधारणे । तथा च यत् पूर्वं मान्त्रवर्णिकपदोपात्तमन्त्रवर्णगतेन 'यो वेद' इति वाक्येन गुहानिहितं वस्त्वुक्तं तदेवाऽनन्दमयाद्याख्यमित्युक्तम् । तदेव 'विमे कर्णा' इति वाक्ये 'ज्योतिरुक्तं' ज्योतिश्शब्देनोक्तमित्यर्थः । अनेन वक्ष्यमाणपूर्वपक्षपर्यालोचनया ज्योतिषो विष्व-

ಗುಹಾಯಾಂ = ಹೃದಯಗುಹೆಯಲ್ಲಿ, ನಿಹಿತಂ = ನೆಲೆಸಿರುವ ಆನಂದಮಯನನ್ನು, ಯಃ = ಯಾವ ವ್ಯಕ್ತಿಯು, ವೇದ = ತಿಳಿದಿದ್ದಾನೆ? ಇತ್ಯುಕ್ತಂ = ಹೀಗೆ ಹೇಳಲ್ಪಟ್ಟಿದೆ. ತಚ್ಚ = ಅಂತಹ, ಗುಹಾನಿಹಿತಂ = ಹೃದಯಗುಹೆಯಲ್ಲಿರುವುದು (ಜ್ಯೋತಿಯೇ ಆಗಿದೆ). ಇದಂ = ಇದನ್ನು, ಮೇ = ನನ್ನ, ಕರ್ಣ = ಕಿವಿಗಳು, ಚಕ್ಷುಃ = ಕಣ್ಣುಗಳು, ವಿ ಪತಯತಃ = ಹೊಂದಲಾರವು. ಯತ್ = ಯಾವ ಜ್ಯೋತಿಯು, ಹೃದಯೇ ಆಹಿತಂ = ಹೃದಯದಲ್ಲಿಯೇ ಸನ್ನಿಹಿತವಾಗಿದೆ. ಮೇ = ನನ್ನ, ಮನಃ = ಮನಸ್ಸು, ವಿಚರತಿ = ವಿಷಯೀಕರಿಸಲು ಅಸಮರ್ಥವಾಗಿದೆ. ಆದ್ದರಿಂದಲೇ ದೂರೇ ಆಧೀಃ = ದೂರದಲ್ಲಿ ಉಳಿದಿದೆ. ಕಿಂಸ್ವಿತ್ = ಆದರ ವಿಷಯದಲ್ಲಿ, ಏನನ್ನು ತಾನೇ, ವಕ್ಷ್ಯಾಮಿ = ಹೇಳಬಲ್ಲೆನು. ಕಂ = ಏನೆಂದು, ಮನೀಷೇ = ತಿಳಿಯುವೆನು. ಇತಿ = ಹೀಗೆ, ಜ್ಯೋತಿಃ = ಜ್ಯೋತಿಯು, ಉಕ್ತಮ್ = ಆನಂದಮಯಸ್ವರೂಪವೆಂದು ಹೇಳಲ್ಪಟ್ಟಿದೆ.

**तच्च ज्योतिरग्निसूक्तत्वात् प्रसिद्धेश्चाग्निरेवेति प्राप्तम् ।**

ಆ ಜ್ಯೋತಿಃಶಬ್ದವು ಅಗ್ನಿಯಲ್ಲೇ ಪ್ರಸಿದ್ಧವಾಗಿದೆ. ಅಗ್ನಿಪ್ರಕರಣವೂ ಆಗಿರುವುದರಿಂದ ಅಗ್ನಿಯೇ ಆನಂದಮಯನೆಂದು ಪೂರ್ವಪಕ್ಷ[೧೨].

---

न्यत्वसाधनमुखेन आनन्दमयत्वस्यान्यनिष्ठत्वाक्षेपादानन्दमयाधिकरणेन अस्याऽक्षेपिकी सङ्गतिः सूचिता भवति । ज्योतिर्विषयः, किमग्निरुत विष्णुरिति सन्देहश्च सूचितो भवति । 'वि मे' इति ऋङ्मन्त्रे वीत्युपसर्गाणां क्रियापदेनान्वयः । तत्र धातोरेव विचरणाभिधायकत्वम् । उपसर्गास्तु द्योतकाः, न वाचकाः । अत एव सूत्रे 'चरणाभिधानात्' इत्येवोक्तम् । भाष्ये तु 'विचरणाभिधानात्' इति स्पष्टार्थमुक्तम् । अत एव तत्त्वप्रदीपे 'स्पष्टत्वाय विचरणाभिधानाद् इत्युक्तम्' इत्युक्तम् । 'मे' इत्यस्मच्छब्देन मन्त्रद्रष्टा ऋषिरुच्यते । 'दूर आधीः' इत्यस्य एकपदत्वेऽप्यवग्रहदर्शनेन द्विखण्डत्वाद् विभज्यान्वयः । आङ् ईषदभिव्याप्त्युभयार्थकः । वर्तत इति शेषः । तथा च यतो मे कर्णौ ज्योतिषो विरुद्धं पतयतः पततः । स्वार्थे णिच् । चक्षुश्च विरुद्धं पततीति विपरिणामेनान्वयः । यथा कर्णादेर्ज्योतिर्विदूरत्वम् एवं ज्योतिषोऽपि कर्णादिविदूरत्वमित्याह - वीदमिति ॥ कम्पोऽत्यन्तमित्यर्थे । तथा च यदिदं हृदये 'आहितम्' आ समन्तात् स्थितं ज्योतिस्तदत्यन्तं कर्णादिविरुद्धं वर्तते । एवं मे मनः ज्योतिषो दूरे विचरति अतीव तद्दर्शनविरुद्धं वर्तते । मनश्चरणस्य तत्त्वनिष्ठाविरोधित्वं 'चञ्चलं हि मनः कृष्ण' इति गीतायामुक्तम् । अतः कारणात् 'आधीः' ईषद्बुद्धिरहं व्याप्तबुद्धिरपीति वा 'किं स्वित्' किं नु वक्ष्यामि । किमु किं वा नु इदानीं 'मनिष्ये' चिन्तयामीति मन्त्रार्थः । तत्त्वप्रदीपे तु - आ समन्ताद् दूरस्थबुद्धिरहमित्येकान्वयेन व्याख्यातम् ।

ಪ್ರತಿಪದಾರ್ಥ -- ತಚ್ಚ ಜ್ಯೋತಿಃ = ಆ ಜ್ಯೋತಿಯಾದರೋ, ಅಗ್ನಿಸೂಕ್ತತ್ವಾತ್ = ಅಗ್ನಿಪ್ರಕರಣದಲ್ಲಿರುವುದರಿಂದ, ಪ್ರಸಿದ್ಧೇಶ್ಚ = ಅಗ್ನಿಯಲ್ಲಿ ಲೋಕಪ್ರಸಿದ್ಧವಾದ್ದರಿಂದ, ಅಗ್ನಿರೇವ = ಅಗ್ನಿಯೇ ಆಗಿದೆ, ಇತಿ = ಎಂದು, ಪ್ರಾಪ್ತಮ್ = ತಿಳಿಯುತ್ತದೆ.

**ತತ್ತ್ವಪ್ರಕಾಶಿಕಾ –**

**अत्र लोकतोऽन्यत्र प्रसिद्धज्योतिर्नाम्नो ब्रह्मणि समन्वयप्रतिपादनादस्ति शास्त्रादिसङ्गतिः । श्रुत्यधिकरणसङ्गती विषयवाक्योदाहरणपूर्वकं विषयसंशयौ च सूचयति – यो वेदेति ॥ यो वेद निहितं गुहायामित्यानन्दमयस्य हृदयगुहा-निहितत्वमुक्तम् । मन्त्रवर्णोक्तस्यैवान्नमयादिशब्दैरुच्यमानत्वात् । तद्गुहानिहितत्वं 'वि मे कर्णा पतयत' इति कस्यचिद् ज्योतिषः प्रतीयते । मे कर्णौ ज्योतिषो विरुद्धं पततः । चक्षुश्च विरुद्धं पतति । यदिदं हृदय आहितं ज्योतिस्तदप्यत्यन्तं कर्णादिविरुद्धं वर्तते । मे मनश्चातीव विरुद्धं चरति । अतो व्यामबुद्धिरप्यहं किं नु वक्ष्यामि किं वेदानीं न्तियामीति ।**

**एतच्च यदि विष्णोरन्यत्तर्ह्यानन्दमयत्वं चान्यस्यैव प्रसज्येतेति निर्णेयं भवति । तज्ज्योतिरत्र विषयः । किं विष्णुरुताग्निः? इति सन्देहः । गुहानिहितत्वं ज्योतिःशब्दस्याग्नौ प्रसिद्धिश्च सन्देहबीजमिति भावः ।**

**तत्र सयुक्तिकं पूर्वपक्षयति – तच्चेति ॥ तज्ज्योतिरग्निरेव भवेत् । एतत् सूक्तस्याग्निसूक्तत्वात् । न च वाच्यं प्रकरणादपि लिङ्गस्य बलीयस्त्वाद्**

---

ಭಾಷ್ಯದೀಪಿಕಾ – अथ सयुक्तिकं पूर्वपक्षयति तच्चेति ॥ चः समुच्चये । तदिति चाऽवर्तते । अग्निशब्दो भूततद्देवतापरः । द्वितीयचशब्दो भिन्नक्रमः । तथा च तज्ज्योतिर्गुहानिहितं चाग्निरेव भवेदिति प्राप्तं, कुतः ? 'प्रसिद्धेः' ज्योतिश्श्रुतेस्तस्याश्च तस्मिन्नग्नावेव प्रसिद्धेः रूढत्वात् । न केवलं श्रुतेरेवेदं ज्योतिरग्निः, किन्तु तस्य ज्योतिषः 'अग्निसूक्तत्वात्' अग्निप्रकरणगतत्वाच्चेति योजना । अत एव पूर्वपक्षोपसंहारटीकायां श्रुतिप्रकरणयो-र्बलवत्त्वादिति प्रसिद्धपदलक्षितायाः श्रुतेः प्रथममुक्तिः । अत एव चन्द्रिकायां भाष्ये अग्निसूक्तस्थत्वाच्चेति चशब्दप्रयोगादित्युक्तम् । तथा च श्रुतिप्रकरणाभ्यां गुहानिहितत्वलिङ्गमात्रस्य बाधाद् अग्निरेवेदं ज्योतिर्गुहानिहितं चेति भावः ।

**ಗುಹಾನಿಹಿತ್ವಲಿಙ್ಗೇನಾಸ್ಯ ಬಾಧ ಇತಿ । ಜ್ಯೋತಿಃಶ್ರುತೇರಾವೇವ ರೂಢತ್ವಾತ್ । ನ ಹಿ ಲಿಙ್ಗಂ ಶ್ರುತಿಪ್ರಕರಣಾಪಬಾಧನೇ ಶಕ್ತಂ ಯಾವತಾ ಶ್ರುತಿತ ಏವ ದುರ್ಬಲಮ್ ।**

**ಶ್ರುತಿಃ ಸಾವಕಾಶೇತಿ ಚೇನ್ನ । ಜಾಠರಜಾತವೇದಸಿ ಲಿಙ್ಗಸ್ಯಾಪಿ ಸಾವಕಾಶತ್ವಾತ್ । ತಥಾಚ ಸಾವಕಾಶಲಿಙ್ಗಮಾತ್ರಾತ್ಸಾವಕಾಶಶ್ರುತಿಪ್ರಕರಣಯೋರ್ಬಲವತ್ವಾದಗ್ನಿರೇವೇದಂ ಜ್ಯೋತಿಸ್ತತಶ್ಚ ಗುಹಾ- ನಿಹಿತತ್ವಮಾನನ್ದಮಯತ್ವಂ ಚ ತಸ್ಯೈವೇತ್ಯರ್ಥಃ ।**

ಅನುವಾದ -- ಜ್ಯೋತಿರಧಿಕರಣದಲ್ಲಿ ಲೋಕದಲ್ಲಿ ಅನ್ಯತ್ರಪ್ರಸಿದ್ಧವಾದ 'ಜ್ಯೋತಿ' ಎಂಬ ನಾಮವನ್ನು ಬ್ರಹ್ಮನಲ್ಲಿ ಸಮನ್ವಯ ಮಾಡಲಾಗಿದೆ. ಇದರಿಂದ ಶಾಸ್ತ್ರಸಂಗತಿ, ಅಧ್ಯಾಯಸಂಗತಿ, ಪಾದಸಂಗತಿಗಳನ್ನು ತೋರಿಸಿದಂತಾಯಿತು. ಶ್ರುತಿ ಮತ್ತು ಅಧಿಕರಣಗಳ ಸಂಗತಿಯನ್ನು ವಿಷಯ-ವಾಕ್ಯವನ್ನು ಉದಾಹರಿಸುವ ಮೂಲಕ ತೋರಿಸುತ್ತಾರೆ. ಮತ್ತು ವಿಷಯಸಂಶಯಗಳನ್ನು 'ಯೋ ವೇದ' ಇತ್ಯಾದಿ ವಾಕ್ಯದಿಂದ ಆಚಾರ್ಯರು ಸೂಚಿಸಿದ್ದಾರೆ.

'ಯೋ ವೇದ ನಿಹಿತಂ ಗುಹಾಯಾಮ್' ಎಂಬ ಶ್ರುತಿಯಲ್ಲಿ ಆನಂದಮಯನಿಗೆ ಹೃದಯ-ಗುಹಾನಿಹಿತತ್ವವು ಹೇಳಲ್ಪಟ್ಟಿದೆ. ಏಕೆಂದರೆ 'ಸತ್ಯಂ ಜ್ಞಾನಂ' ಎಂಬ ಮಂತ್ರವರ್ಣದಲ್ಲಿ ಹೇಳ-ಲ್ಪಟ್ಟದ್ದನ್ನೇ ಮುಂದೆ ಅನ್ನಮಯಾದಿಶಬ್ದಗಳಿಂದ ಹೇಳಲಾಗಿದೆ. ಆ ಹೃದಯಗುಹಾನಿಹಿತತ್ವವು 'ವಿ ಮೇ ಕರ್ಣಾ ಪತಯತಃ' ಎಂಬ ಶ್ರುತಿಯಿಂದ ಯಾವುದೋ ಒಂದು ಜ್ಯೋತಿಯಲ್ಲಿ ಕೇಳಿಸುತ್ತಿದೆ.

ಶ್ರುತ್ಯರ್ಥ -- ''ನನ್ನ ಎರಡು ಕಿವಿಗಳು ಜ್ಯೋತಿಗೆ ವಿರುದ್ಧವಾಗಿ ನಿಂತಿವೆ. ಚಕ್ಷುರಿಂದ್ರಿಯವೂ ವಿರುದ್ಧವಾಗಿ ಹೋಗುತ್ತಿದೆ. ಈ ಹೃದಯದಲ್ಲಿರುವ ಜ್ಯೋತಿಯೂ ಕೂಡ ಕಿವಿಕಣ್ಣು ಮೊದಲಾದ ಇಂದ್ರಿಯಗಳಿಗೆ ಅತ್ಯಂತ ವಿರುದ್ಧವಾಗಿಯೇ ಇದೆ. ನನ್ನ ಮನಸ್ಸೂ ಜ್ಯೋತಿಯಿಂದ ಅತ್ಯಂತ ವಿರುದ್ಧವಾಗಿ ಸಂಚಾರ ಮಾಡುತ್ತಿದೆ. ಆದ ಕಾರಣ ನಾನು ವಿಶಾಲಬುದ್ಧಿಯವನಾದರೂ ಜ್ಯೋತಿ-ವಿಷಯದಲ್ಲಿ ಏನು ತಾನೆ ಹೇಳಲಿ? ಅಥವಾ ಜ್ಯೋತಿಯೆಂದು ಏನೆಂದು ಚಿಂತನೆ ಮಾಡಲಿ?'

ಶ್ರುತಿಯಲ್ಲಿ ಕೇಳಿಸುತ್ತಿರುವ ಈ ಜ್ಯೋತಿಯು ಒಂದು ವೇಳೆ ವಿಷ್ಣುವಿನಿಂದ ಬೇರೆಯಾದರೆ ಆವಾಗ ಆನಂದಮಯವೂ ಅದೇ ಆಗುತ್ತದೆ. ಈ ಕಾರಣಕ್ಕೋಸ್ಕರ ಜ್ಯೋತಿಶಬ್ದದ ಅರ್ಥವನ್ನು ಅವಶ್ಯವಾಗಿ ನಿರ್ಣಯಿಸಬೇಕು. ಈ ಅಧಿಕರಣಕ್ಕೆ ಜ್ಯೋತಿಃಶಬ್ದವು ವಿಷಯವಾಗಿದೆ. ಜ್ಯೋತಿಃಶಬ್ದ-ದಿಂದ ವಿಷ್ಣುವು ಪ್ರತಿಪಾದ್ಯನೋ? ಅಗ್ನಿಯೋ? ಎಂದು ಸಂದೇಹ. ಹೃದಯಗುಹಾನಿಹಿತತ್ವವು ಮತ್ತು ಜ್ಯೋತಿಃಶಬ್ದದ ಪ್ರಸಿದ್ಧಿಯು ಅಗ್ನಿಯಲ್ಲಿ ಇರುವಿಕೆಯು ಸಂದೇಹಕ್ಕೆ ಕಾರಣವಾಗಿದೆ ಎಂದು ತಿಳಿಯಬೇಕು.

ಈ ವಿಷಯವಾಕ್ಯವನ್ನು ವಿವಕ್ಷಿಸಿ ಯುಕ್ತಿಬದ್ಧವಾದ ಪೂರ್ವಪಕ್ಷವನ್ನು 'ತಚ್ಚ' ಇತ್ಯಾದಿ ವಾಕ್ಯದಿಂದ ಭಾಷ್ಯಕಾರರು ತೋರಿಸುತ್ತಿದ್ದಾರೆ. ಆ ಜ್ಯೋತಿಯು ಅಗ್ನಿಯೇ ಆಗಬೇಕು. ಏಕೆಂದರೆ

ಜ್ಯೋತಿಃಶಬ್ದವಿರುವ ಶ್ರುತಿಯು ಅಗ್ನಿಸೂಕ್ತವೆನಿಸಿದೆ. ಅಗ್ನಿಪ್ರಕರಣದ ಬಲದಿಂದ ಜ್ಯೋತಿಃಶಬ್ದದಿಂದ ಅಗ್ನಿಯೇ ಪ್ರತಿಪಾದ್ಯವೆಂದು ಹೇಳಬೇಕು.

ಇನ್ನು ಪ್ರಕರಣಕ್ಕಿಂತ ಲಿಂಗವು ಬಲಿಷ್ಠವಾಗಿದೆ. ಗುಹಾನಿಹಿತತ್ವವೆಂಬ ಲಿಂಗವಾದರೋ ವಿಷ್ಣುವಿನಲ್ಲೇ ಕೂಡುತ್ತದೆ ಹೊರತು, ಅಗ್ನಿಯಲ್ಲಿ ಕೂಡುವುದಿಲ್ಲ. ಆದ್ದರಿಂದ ಜ್ಯೋತಿಃಶಬ್ದಕ್ಕೆ ಅಗ್ನಿ ಎಂಬ ಅರ್ಥವನ್ನು ಇಟ್ಟುಕೊಂಡರೆ ಲಿಂಗದಿಂದ ಬಾಧಬರುತ್ತದಲ್ಲವೇ?

ಇದು ತಪ್ಪು. ಜ್ಯೋತಿ ಎಂಬ ಶಬ್ದವು ಅಗ್ನಿಯಲ್ಲಿಯೇ ಪ್ರಸಿದ್ಧವಾಗಿದೆ. ಲಿಂಗವು ಶ್ರುತಿ ಮತ್ತು ಪ್ರಕರಣಗಳೆರಡನ್ನೂ ಬಾಧಿಸಲು ಸಮರ್ಥವಾದುದಲ್ಲ. ಏಕೆಂದರೆ ಶ್ರುತಿಗಿಂತ ಲಿಂಗವು ದುರ್ಬಲವೇ ಆಗಿರುತ್ತದೆ. ಶ್ರುತಿಯು ಸಾವಕಾಶವಾದ್ದರಿಂದ ನಿರವಕಾಶಲಿಂಗವು ಬಲಿಷ್ಠವಾಗುತ್ತದೆಂದು ಹೇಳಬಾರದು. ಏಕೆಂದರೆ ಜಠರಾಗ್ನಿಯಲ್ಲಿ ಗುಹಾನಿಹಿತತ್ವವೆಂಬ ಲಿಂಗವೂ ಸಾವಕಾಶವಾಗಿದೆ. ಜಠರಾಗ್ನಿಯು ಉದರಗುಹೆಯಲ್ಲಿ ಇರುವುದರಿಂದ ಗುಹಾನಿಹಿತತ್ವವನ್ನು ಹೇಳಬಹುದು. ಆದ್ದರಿಂದ ಕೇವಲ ಸಾವಕಾಶಲಿಂಗಕ್ಕಿಂತ ಸಾವಕಾಶಗಳಾದ ಶ್ರುತಿ ಮತ್ತು ಪ್ರಕರಣಗಳು ಪ್ರಬಲವಾಗುತ್ತವೆ. ಆದ್ದರಿಂದ ಜ್ಯೋತಿಃಶಬ್ದದ ಅರ್ಥವು ಅಗ್ನಿಯೆನ್ನಲು ತೊಂದರೆ ಇಲ್ಲ. ಆದಕಾರಣ ಗುಹಾನಿಹಿತತ್ವ ಮತ್ತು ಆನಂದಮಯತ್ವಧರ್ಮಗಳೂ ಸಹ ಅಗ್ನಿಯಲ್ಲಿಯೇ ಇರುತ್ತವೆ ಎಂದು ಹೇಳಬಹುದು.

ಭಾವದೀಪಃ – **ॐ ज्योतिश्चरणाभिधानात् ॥ 'लोकतः' इत्यादि तु पूर्ववद् व्याख्येयम् । शेषोक्त्या सङ्गतिपरत्वेन तावद्भाष्यं व्यनक्ति – यो वेदेति ॥ मन्त्रवर्णस्थलिङ्गस्य कथमानन्दमयस्थत्वम्? इत्यतः प्रागुक्तं स्मारयति – मन्त्रवर्णेति* ॥**

**तच्च गुहानिहितम् इत्यादेर्ज्योतिरुक्तमित्यन्तस्य व्याख्यानं तदित्यादि । प्रतीयत इत्युक्तं श्रुत्यर्थोक्त्या व्यनक्ति – म इति ॥ वीत्युपसर्गस्य व्यवहिताश्चेति पाणिन्युक्तेर्धातुनान्वयमुपेत्यार्थमाह – विरुद्धमिति ॥ पतयत इति स्वार्थे णिजिति मत्वोक्तम् – पतत इति ॥ कम्पार्थोऽत्यन्तमिति । 'दूर आधीः' इत्यस्यैकपदत्वेऽपि दुःखण्डत्वाद्दूर इत्यस्य पूर्वेणान्वयमाह – अतीवेति ॥ पूर्वोक्तं हेतुत्वेनोपादायाधीरित्यादि व्याचष्टे – अत इति ॥ तत्वप्रदीपे तु अत आ समन्ताद्**

---

* ननु 'यो वेद निहितं गुहायाम्' इति वाक्यं न आनन्दमयप्रकरणगतं किन्तु 'ब्रह्मविदाप्नोति परम्' इति प्रकरणगतं तथा च कथं तेनानन्दमयस्य गुहानिहितत्ववचनमित्यत आह – मन्त्रवर्णोक्तस्यैवेति ॥ – तत्वसुखबोधिनी

दूरस्थबुद्धिरहमिति दूर आधीरित्येतदेकान्वयेनैव व्याख्यातमिति भाति । 'किंस्विद्' इत्यस्यार्थः **किन्त्विति** । नु इत्यस्यार्थ **इदानीमिति** । 'इति प्रतीयते' इति 'इति'शब्दस्य पूर्वेणान्वयः । भाष्ये तच्च गुहानिहितं ज्योतिर्हृदय आहितं यदिति ज्योतिरुक्तमित्येव वाच्ये शेषोक्तिरर्थसङ्गत्यर्थं वा सिद्धान्तोपयोगार्थं वेति भावेन समग्रवाक्यार्थोक्तिः ।

''ಲೋಕತಃ'' ಇತ್ಯಾದಿ ಗ್ರಂಥಗಳಲ್ಲಿ ಹೇಳಿದ ವಿಷಯವನ್ನು ಹಿಂದಿನ ಅಧಿಕರಣಗಳಲ್ಲಿ ಹೇಳಿದಂತೆ ವ್ಯಾಖ್ಯಾನ ಮಾಡಿಕೊಳ್ಳಬೇಕು. ''ಯೋ ವೇದ'' ಇತ್ಯಾದಿ ವಾಕ್ಯಗಳಿಂದ ಶೇಷಪೂರೈಕೆ ಮಾಡಿಕೊಳ್ಳುವುದರ ಮೂಲಕ ಸಂಗತಿಪರವಾಗಿ ಭಾಷ್ಯವನ್ನು ವ್ಯಾಖ್ಯಾನ ಮಾಡುತ್ತಿದ್ದಾರೆ. ಮಂತ್ರವರ್ಣದಲ್ಲಿರುವ ಲಿಂಗಕ್ಕೆ ಆನಂದಮಯನಲ್ಲಿ ಇರುವಿಕೆಯು ಹೇಗೆ? ಎಂಬ ಆಶಂಕೆಗೆ ಸಮಾಧಾನವಾಗಿ ಹಿಂದೆ ಹೇಳಿದ ಅಂಶವನ್ನು ''ಮಂತ್ರವರ್ಣ'' ಇತ್ಯಾದಿ ವಾಕ್ಯಗಳಿಂದ ನೆನಪಿಸಿಕೊಡುತ್ತಿದ್ದಾರೆ. ''ತಚ್ಚ ಗುಹಾನಿಹಿತಮ್'' ಎಂದು ಪ್ರಾರಂಭವಾದ ''ಜ್ಯೋತಿರುಕ್ತಮ್'' ಎಂಬಲ್ಲಿಯವರೆಗಿರುವ ಭಾಷ್ಯದ ವ್ಯಾಖ್ಯಾನವನ್ನು 'ತತ್' ಎಂಬಲ್ಲಿಂದ 'ಪ್ರತೀಯತೇ' ಎಂಬಲ್ಲಿಯ ವರೆಗಿನ ವಾಕ್ಯಗಳಿಂದ ಮಾಡಿ, ಈ ವಿಷಯವನ್ನು ಶ್ರುತಿಯ ಅರ್ಥವನ್ನು ಹೇಳುವುದರ ಮೂಲಕ 'ಮೇ' ಇತ್ಯಾದಿ ವಾಕ್ಯಗಳಿಂದ ಸ್ಪಷ್ಟಪಡಿಸುತ್ತಿದ್ದಾರೆ. 'ವಿ' ಎಂಬ ಉಪಸರ್ಗಕ್ಕೆ 'ವ್ಯವಹಿತಾಶ್ಚ' ಎಂಬ ಪಾಣಿನಿಯ ಸೂತ್ರದಂತೆ ಧಾತುವಿನೊಂದಿಗೆ ಅನ್ವಯವನ್ನು ಹೇಳುವುದರ ಮೂಲಕ ''ವಿರುದ್ಧಮ್'' ಎಂಬುದಾಗಿ ಅರ್ಥವನ್ನು ಹೇಳುತ್ತಿದ್ದಾರೆ. 'ಪತಯತಃ' ಎಂಬಲ್ಲಿ ಪತ್ ಧಾತುವಿಗೆ ಸ್ವಾರ್ಥದಲ್ಲಿ ಣಿಚ್‌ಪ್ರತ್ಯಯ ಬಂದಿದೆ ಎಂಬ ಅಭಿಪ್ರಾಯದಿಂದ ''ಪತತಃ'' ಎಂದು ವ್ಯಾಖ್ಯಾನ ಮಾಡಿದ್ದಾರೆ. 'ವೀತಿದಮ್' ಎಂಬಲ್ಲಿ ಇರುವ ಕಂಪದ ಅರ್ಥವನ್ನು ಅತ್ಯಂತಮ್ ಎಂಬುದಾಗಿ ಬಿಡಿಸಿದ್ದಾರೆ(*). 'ದೂರೇ ಆಧೀಃ' ಎಂಬುದು ಒಂದೇ ಪದವಾಗಿದ್ದರೂ ಆದು ಖಂಡಪದವಾದುದರಿಂದ ದೂರೇ ಎಂಬ ಖಂಡಕ್ಕೆ ಹಿಂದಿನ ಭಾಗದೊಂದಿಗೆ ಅನ್ವಯವನ್ನು ''ಅತೀವ'' ಇತ್ಯಾದಿ ವಾಕ್ಯದಿಂದ ಹೇಳುತ್ತಿದ್ದಾರೆ. ಹಿಂದೆ ಹೇಳಿದ ಅಂಶವನ್ನು ಕಾರಣವಾಗಿ ಕೊಟ್ಟು ''ಆಧೀಃ'' ಇತ್ಯಾದಿಭಾಗವನ್ನು ''ಅತಃ'' ಇತ್ಯಾದಿವಾಕ್ಯದಿಂದ ವ್ಯಾಖ್ಯಾನಮಾಡಿದ್ದಾರೆ. ತತ್ಪ್ರದೀಪದಲ್ಲಿಯಾದರೂ 'ದೂರೇ ಆಧೀಃ' ಎಂಬ ಪದಕ್ಕೆ 'ಆ' ಎಂದರೆ ಚೆನ್ನಾಗಿ ದೂರಸ್ಥಬುದ್ಧಿಯುಳ್ಳವನಾಗಿದ್ದೇನೆ ಎಂಬುದಾಗಿ ಏಕಪದತ್ವವನ್ನು ಒಪ್ಪಿಕೊಂಡೇ ಏಕಾನ್ವಯದಿಂದಲೇ ವ್ಯಾಖ್ಯಾನ ಮಾಡಿದಂತೆ ಕಾಣುತ್ತದೆ.

---

(*) **वीदम् इत्यत्र कम्पार्थोत्यन्तमिति ।**
**किं शेषग्रहे कापि लज्जायां वा पुरातने ।**
**पृथक्त्वे धृष्यतायां च हरिणां संहितेरितः'**

इति ऋग्भाष्ये शेषग्रहार्थकत्वोक्तेरिहात्यन्तमशेषेन्द्रियदूरत्वमर्थ इति भावः । दूर इत्यस्यार्थो अतीवेति । यद्यपि दूर आधीरित्येकं पदम् । तथाप्यग्रहदर्शनात् तस्य पृथक्पदतुल्यत्वात् । बुद्ध्याविवेकेन मनश्च दूरे विचरति इति व्याख्यातम् । आधीरित्याङोर्थः । – **वाक्यार्थमुक्तावली**

'ಕಿಂಸ್ವಿತ್' ಎಂಬುದರ ಅರ್ಥವನ್ನು "ಕಿನ್ನು" ಎಂಬುದಾಗಿ ವ್ಯಾಖ್ಯಾನ ಮಾಡಿದ್ದಾರೆ. 'ನು' ಎಂಬ ಪದದ ಅರ್ಥವನ್ನು "ಇದಾನೀಮ್" ಎಂಬುದಾಗಿ ಬಿಡಿಸಿದ್ದಾರೆ. 'ಇತಿ'ಶಬ್ದಕ್ಕೆ 'ಇತಿ ಪ್ರತೀಯತೇ' ಎಂಬುದಾಗಿ ಹಿಂದಿನಿಂದ ಅನ್ವಯವನ್ನು ಹೇಳಬೇಕು.

ಭಾಷ್ಯದಲ್ಲಿ 'ತಚ್ಚ ಗುಹಾನಿಹಿತಂ ಜ್ಯೋತಿರ್ಹೃದಯ ಆಹಿತಂ ಯತ್ ಇತಿ ಜ್ಯೋತಿರುಕ್ತಮ್' ಎಂಬ ಇಷ್ಟೇ ವಾಕ್ಯವನ್ನು ಹೇಳಬಹುದಾಗಿದ್ದರೂ ಶ್ರುತಿಯ ಉಳಿದ ಅಂಶವನ್ನೂ ಸೇರಿಸಿ ಸಮಗ್ರವಾಕ್ಯವನ್ನು ಹೇಳಿರುವುದು ಅರ್ಥಸಂಗತಿಯನ್ನು ತೋರಿಸುವುದಕ್ಕಾಗಿ ಅಥವಾ ಸಿದ್ಧಾಂತದಲ್ಲಿ ಉಪಯೋಗಿಸಿಕೊಳ್ಳುವುದಕ್ಕಾಗಿ ಎಂಬ ಅಭಿಪ್ರಾಯದಿಂದ ಎಂದು ತಿಳಿಯಬೇಕು.

ಭಾವದೀಪಃ – **तच्च ज्योतिरित्यादेर्भावमाह – एतच्चेति ॥** गुहास्थं ज्योतिरग्नि-सूक्तस्थत्वादिना यद्यग्निरित्यर्थः । **'यो वेद' इतिवाक्यभावमाह – तर्हीति ॥** अत्रापीतिशब्दो हेतौ इति यतः अतः पूर्वाक्षेपरूपसङ्गतिसम्भवादित्यर्थः । ज्योति-रुक्तमित्याद्युक्तिसूचितविषयाद्याह – **तज्ज्योतिरिति ॥** (*)एवमवश्यनिर्णेयं ज्योति-रित्यर्थः । **अग्निरिति(**) ॥** ज्योतिश्शब्दस्य तमोविरोधिमात्रवृत्तावपि इह हृदया-हितत्वलिङ्गात् **'त्वामग्ने तमसि'** इत्यग्निश्रुतेश्च नान्यस्य संशयविषयत्वमिति भावेन भाष्योक्त्यनुरोधादग्निरित्युक्तिः । **प्रसिद्धिश्चेति ॥** **'प्राबल्याद्यविवेकेन'** इति ध्येयम् । एकस्य निरवकाशत्वेनान्यस्य श्रुतित्वेन च प्राबल्याभिधानात् ।

"ತಚ್ಚ ಜ್ಯೋತಿಃ" ಇತ್ಯಾದಿವಾಕ್ಯದ ಅಭಿಪ್ರಾಯವನ್ನು "ಏತಚ್ಚ" ಇತ್ಯಾದಿವಾಕ್ಯದಿಂದ ವಿವರಿಸಿದ್ದಾರೆ. ಹೃದಯಗುಹೆಯಲ್ಲಿರುವ ಜ್ಯೋತಿಯು ಅಗ್ನಿಸೂಕ್ತದಲ್ಲಿ ವಿವರಿಸಲ್ಪಟ್ಟಿರುವುದರಿಂದ ಒಂದು ವೇಳೆ ಅಗ್ನಿಯಾಗಿದ್ದರೆ ಎಂಬ ಅರ್ಥವನ್ನು ಸ್ವೀಕರಿಸಬೇಕು. "ತರ್ಹಿ" ಇತ್ಯಾದಿವಾಕ್ಯದಿಂದ 'ಯೋ ವೇದ' ಇತ್ಯಾದಿ ಶ್ರುತಿಯ ಅಭಿಪ್ರಾಯವನ್ನು ವಿವರಿಸಿದ್ದಾರೆ. ಇಲ್ಲೂ ಕೂಡ 'ಇತಿ'ಶಬ್ದವನ್ನು ಹೇತ್ವರ್ಥದಲ್ಲಿ

---

* अत्र ज्योतिः किमग्निरुत विष्णुरिति चिन्ता । तदर्थं ज्योतिःश्रुतिः कर्णादिविदूरत्व-लिङ्गबाधिका, उत तद्बाध्या इति । तदर्थं श्रुत्युपोद्बलकमग्निसूक्तरूपमग्निप्रकरणं निरवकाशमुत सावकाशमिति । तदर्थं सूक्तस्य सावकाशत्वे तत्कल्पकत्वेनाभिमतस्य कर्णादिविदूरत्वलिङ्गस्य निरवकाशत्वे च प्रमाणं नास्युतास्तीति । – **भावबोधः**

**ननु कथमग्नावेव इत्यवधारणं ज्योतिश्शब्दस्य तमोविरोधिमात्रे रूढत्वादिति चेन्न । एतत्सूक्तस्य अग्निसूक्तत्वेन सामान्यशब्दस्य विशेषपर्यवसानात् ।
अग्निर्ज्योतिरिति द्वेधैवार्चिषः सम्प्रतिष्ठितिः ।
अग्निं गत्वा ज्योतिरेति .....' इत्यादौ अग्नौ रूढत्वाच्चेति ज्ञेयम् ।
– **वाक्यार्थमुक्तावली**

ಸ್ವೀಕರಿಸಬೇಕು. 'ಇತಿ' ಯಾವ ಕಾರಣದಿಂದ ಅತಃ ಆದ್ದರಿಂದ ಅಂದರೆ ಪೂರ್ವಾಕ್ಷೇಪರೂಪಸಂಗತಿಯು ಹೊಂದುವುದರಿಂದ ಎಂದು ಅರ್ಥೈಸಿಕೊಳ್ಳಬೇಕು. 'ಜ್ಯೋತಿರುಕ್ತಮ್'' ಇತ್ಯಾದಿ ಯುಕ್ತಿಯಿಂದ ಸೂಚಿತವಾದ ವಿಷಯಾದಿಗಳನ್ನು ''ತಜ್ಜ್ಯೋತಿಃ'' ಇತ್ಯಾದಿವಾಕ್ಯದಿಂದ ವಿವರಿಸಿದ್ದಾರೆ. ಹೀಗೆ ಈ ಜ್ಯೋತಿಯು ಆವಶ್ಯವಾಗಿ ನಿರ್ಣಯಿಸಲ್ಪಡಬೇಕಾದದ್ದು ಎಂದರ್ಥ. 'ಜ್ಯೋತಿಃ'ಶಬ್ದಕ್ಕೆ ಕರ್ತೃಲೆಯ ವಿರೋಧಿಯಾದದ್ದು ಎಂಬ ಅರ್ಥದಲ್ಲಿ ಮಾತ್ರ ವೃತ್ತಿ ಇದ್ದರೂ ಇಲ್ಲಿ ಹೃದಯಾಹಿತತ್ವರೂಪವಾದ ಲಿಂಗ ಇರುವುದರಿಂದ 'ತ್ವಾಮಗ್ನೇ ತಮಸಿ' ಎಂಬುದಾಗಿ ಇದು ಅಗ್ನಿಶ್ರುತಿಯೂ ಆಗಿರುವುದರಿಂದ ಬೇರೆ ವಸ್ತುವಿಗೆ ಸಂಶಯದಲ್ಲಿ ವಿಷಯತ್ವವು ಬರಲಾರದು ಎಂಬ ಅಭಿಪ್ರಾಯದಿಂದ ಭಾಷ್ಯೋಕ್ತಿಯನ್ನು ಅನುಸರಿಸಿ ''ಅಗ್ನಿಃ'' ಎಂಬುದಾಗಿ ಹೇಳಿದ್ದಾರೆ.

''ಪ್ರಸಿದ್ಧಿಶ್ಚ'' ಎಂಬಲ್ಲಿ ಪ್ರಾಬಲ್ಯಾದಿಗಳ ಅವಿವೇಕದಿಂದ ಇಲ್ಲಿ ಪ್ರಸಿದ್ಧಿಯನ್ನು ಹೇಳಲಾಗಿದೆ ಎಂದು ತಿಳಿಯಬೇಕು. ಒಂದು ಕಡೆ ನಿರವಕಾಶತ್ವ ಇರುವ ಪ್ರಯುಕ್ತ ಪ್ರಾಬಲ್ಯವನ್ನೂ, ಇನ್ನೊಂದು ಕಡೆ ಇದು ಶ್ರುತಿಯಾಗಿರುವುದರಿಂದ ಪ್ರಾಬಲ್ಯವನ್ನೂ ಇಲ್ಲಿ ಹೇಳಲಾಗಿದೆ.

**ಭಾವದೀಪಃ – ಪೂರ್ವಪಕ್ಷಾದಿಪರತ್ವೇನಾಪಿ ಭಾಷ್ಯಂ ವ್ಯಾಚಷ್ಟೇ – ತತ್ರೇತಿ ॥ ಪ್ರಮಾಣಾಶ್ರಯ-ಪೂರ್ವಪಕ್ಷಮಾಹ – ಅಗ್ನಿಸೂಕ್ತತ್ವಾದಿತಿ ॥ ಪ್ರಸಿದ್ಧೇಶ್ಚೇತ್ಯೇತದ್ಧೇತುಂ ವ್ಯಾವರ್ತ್ಯ ಶಙ್ಕಾಪೂರ್ವಮಾಹ ನ ಚ ವಾಚ್ಯಮಿತಿ ॥ ಪ್ರಕರಣಾತ್ ಸೂಕ್ತರೂಪಾತ್ – ಬಾಧ ಇತಿ ॥ ಯಥಾ ಶುಂಬ್ವಾದಿನಯಪೂರ್ವಪಕ್ಷೇ ಜಾಯಮಾನತ್ವಲಿಙ್ಗೇನ 'ದ್ವೇ ವಿದ್ಯೇ ವೇದಿತವ್ಯೇ' ಇತಿ ಬ್ರಹ್ಮಪ್ರಕರಣಸ್ಯ ಬಾಧಃ, ತದ್ವದಿತಿ ಭಾವಃ । ಅಗ್ನಾವೇವೇತಿ ॥ ನ ತು ವಿಷ್ಣಾವಿತ್ಯರ್ಥಃ । ತಮೋವಿರೋಧಿಮಾತ್ರೇ ರೂಢೇಃ ಸತ್ವೇऽಪಿ ಪ್ರಕೃತಾಶಯೇನೈವಮುಕ್ತಿಃ । 'ಯಾವತಾ' ಇತಿ ನಿಪಾತೋ ಯಸ್ಮಾದಿತ್ಯರ್ಥೇ । ತಥಾ ಚ ಶ್ರುತ್ಯೈವ ಪೂರ್ವಪಕ್ಷೇ ಪ್ರಕರಣೋಕ್ತಿರಭ್ಯುಚ್ಚಯತ್ವೇನ । ಅತ ಏವ ಭಾಷ್ಯೇ ಅಗ್ನಿಸೂಕ್ತತ್ವಾಚ್ಚೇತಿ ಚಶಬ್ದೋ ಭಿನ್ನಕ್ರಮ ಇತಿ ಸೂಚಿತಮ್ ।**

''ತತ್ರ'' ಇತ್ಯಾದಿ ವಾಕ್ಯದಿಂದ ಭಾಷ್ಯವನ್ನು ಪೂರ್ವಪಕ್ಷಾದಿ ಪರವಾಗಿ ವ್ಯಾಖ್ಯಾನ ಮಾಡುತ್ತಿದ್ದಾರೆ.

ಪ್ರಮಾಣವನ್ನು ಆಶ್ರಯಿಸಿಕೊಂಡು ಪೂರ್ವಪಕ್ಷವನ್ನು ''ಅಗ್ನಿಸೂಕ್ತತ್ವಾತ್'' ಇತ್ಯಾದಿ ವಾಕ್ಯದಿಂದ ವಿವರಿಸುತ್ತಿದ್ದಾರೆ. ''ಪ್ರಸಿದ್ಧೇಶ್ಚ'' ಎಂಬ ಹೇತುವನ್ನು ಪ್ರತ್ಯೇಕವಾಗಿ ಇರಿಸಿಕೊಂಡು ಶಂಕೆಗಿಂತ ಮೊದಲ ಅಭಿಪ್ರಾಯವನ್ನು ''ನಚ ವಾಚ್ಯಮ್'' ಇತ್ಯಾದಿವಾಕ್ಯದಿಂದ ವಿವರಿಸಿದ್ದಾರೆ. ''ಪ್ರಕರಣಾತ್'' ಎಂಬ ಪದಕ್ಕೆ 'ಸೂಕ್ತರೂಪವಾದ ಪ್ರಕರಣವಾಗಿರುವುದರಿಂದ' ಎಂದು ಅರ್ಥ.

ಯಾವ ರೀತಿಯಾಗಿ ದ್ಯುಭ್ವಾದ್ಯಧಿಕರಣದ ಪೂರ್ವಪಕ್ಷದಲ್ಲಿ ಜಾಯಮಾನತ್ವಲಿಂಗದಿಂದ 'ದ್ವೇ ವಿದ್ಯೇ ವೇದಿತವ್ಯೇ' ಎಂಬ ಬ್ರಹ್ಮಪ್ರಕರಣಕ್ಕೆ ಬಾಧವು ಹೇಳಲ್ಪಟ್ಟಿದೆಯೋ ಅದರಂತೆ ಇಲ್ಲಿಯೂ ಸಹ ಗುಹಾನಿಹಿತತ್ವಲಿಂಗದಿಂದ ಅಗ್ನಿಪ್ರಕರಣಕ್ಕೆ ಬಾಧವನ್ನು ಹೇಳಬಹುದಲ್ಲವೇ? ಎಂದು ಅಭಿಪ್ರಾಯ. ''ಅಗ್ನಾವೇವ'' ಎಂಬಲ್ಲಿರುವ ಏವಕಾರದಿಂದ ವಿಷ್ಣುವಿನಲ್ಲಿರುವ ರೂಢಿಯನ್ನು ಅಲ್ಲಗಳೆಯಲಾಗಿದೆ. ವಸ್ತುತಃ ತಮೋವಿರೋಧಿ ಎಂಬರ್ಥದಲ್ಲಿ ರೂಢಿಯನ್ನು ಹೇಳಬಹುದು. ಆದರೆ ಪ್ರಕೃತಕ್ಕೆ ಉಪ-

ಯೋಗವಾಗುವಂತೆ ಅಗ್ನಿ ಎಂಬ ಶಬ್ದವನ್ನು ಪ್ರಯೋಗಿಸಿದ್ದಾರೆ. 'ಯಾವತಾ' ಎಂಬ ನಿಪಾತಕ್ಕೆ 'ಯಸ್ಮಾತ್' (ಯಾವಕಾರಣದಿಂದ) ಎಂದರ್ಥ. ಆದ್ದರಿಂದ ಶ್ರುತಿಯಿಂದಲೇ ಪೂರ್ವಪಕ್ಷಮಾಡಲು ಬರುವಾಗ ಹೆಚ್ಚುಗಾರಿಕೆಗೋಸ್ಕರವಷ್ಟೇ ಪ್ರಕರಣವನ್ನು ತೆಗೆದುಕೊಂಡಿದ್ದಾರೆ. ಆದ್ದರಿಂದಲೇ ಭಾಷ್ಯದಲ್ಲಿ 'ಅಗ್ನಿಸೂಕ್ತತ್ವಾಚ್ಚ' ಎಂಬಲ್ಲಿರುವ ಚಶಬ್ದವು ಭಿನ್ನಕ್ರಮದಲ್ಲಿದೆ ಎಂದು ಸೂಚಿಸಿದಂತಾಯಿತು.

**ಭಾವದೀಪಃ – ನನು ಜ್ಯೋತಿಃಶ್ರುತಿರಗ್ನಿದೇವತಾಪರಾ ಚೇದ್ದನ್ತರ್ನಯನ್ಯಾಯೇನ ವಿಷ್ಣುಪರಾ ಜಡಪರಾ ಚೇದಾಕಾಶನಯನ್ಯಾಯೇನ ವಿಷ್ಣುಪರಾ ಸೇತ್ಸ್ಯತೀತಿ ಭಾವೇನ ಶಙ್ಕತೇ – ಶ್ರುತಿರಿತಿ ॥ ತಥಾ ಚ ಶ್ರುತೇಃ ಸಾವಕಾಶತ್ವೇ ತದ್ಯುಕ್ತಸ್ಯಾಪಿ ಪ್ರಕರಣಸ್ಯ ಸಾವಕಾಶತಯಾ ನಿರವಕಾಶಲಿಙ್ಗೇನ ತಯೋರ್ಬಾಧಃ ಸ್ಯಾದಿತಿ ಭಾವಃ । ಸಾವಕಾಶೇತಿ ॥ ಸಾವಕಾಶಯೋಃ ಶ್ರುತಿಪ್ರಕರಣಯೋರಿತ್ಯರ್ಥಃ । ಯದ್ವಾ ಉಕ್ತದಿಶಾ ಶ್ರುತೇಃ ಸಾವಕಾಶತ್ವೇಽಪಿ ಇದಮಗ್ನಿಸೂಕ್ತಂ ನ ವಿಷ್ಣುಸೂಕ್ತಮ್ ಇತ್ಯಧ್ಯಾಪಕಪ್ರಸಿದ್ಧ್ಯನ್ಯಥಾನುಪಪತ್ತ್ಯಾ ಸೂಕ್ತಂ ನಿರವಕಾಶಮ್ । ತಥಾ ಚ ಸಾವಕಾಶತ್ವಂ ಶ್ರುತೇರೇವ ವಿಶೇಷಣಮ್ । ಅತ ಏವ ಕರ್ಣಾದಿವಿದೂರತ್ವಮಪ್ಯನೇಕವೈಭವಾತಿಶಯೇನಾಗ್ನಾವೇವ ಕಥಞ್ಚಿದ್ಯೋಜ್ಯಮ್ । ಶ್ರುತಿಪ್ರಕರಣಯೋರ್ಬಲವತ್ವಾದಿತಿ ಭಾವೇನ ಭಾಷ್ಯಮುಪಸಂಹರತಿ – ಅಗ್ನಿರೇವೇತಿ ॥ 'ಯೋ ವೇದ' ಇತಿ ಭಾಷ್ಯಂ ಫಲಪರಮಿತಿ ಭಾವೇನ ತತ್ ತಾತ್ಪರ್ಯೋಕ್ತಿಃ – ಅನನ್ದಮಯತ್ವಂ ಚೇತಿ ॥**

ಜ್ಯೋತಿಶ್ಶ್ರುತಿಯು ಅಗ್ನಿದೇವತೆಯನ್ನು ಪ್ರತಿಪಾದಿಸುವುದಾದರೆ ಅಂತರಧಿಕರಣದ ನ್ಯಾಯದಂತೆ ವಿಷ್ಣುಪರವಾಗುತ್ತದೆ. ಜ್ಯೋತಿಶ್ಶ್ರುತಿಯು ಜಡವಾದ ಅಗ್ನಿಯನ್ನು ಪ್ರತಿಪಾದಿಸುವುದಾದರೆ ಆಕಾಶಾಧಿಕರಣದ ನ್ಯಾಯದಿಂದ ವಿಷ್ಣುಪರವಾಗುತ್ತದೆಂಬ ಅಭಿಪ್ರಾಯದಿಂದ ''ಶ್ರುತಿ'' ಎಂಬುದಾಗಿ ಶಂಕಿಸುತ್ತಿದ್ದಾರೆ. ಆದ್ದರಿಂದ ಶ್ರುತಿಯು ಸಾವಕಾಶವಾದರೆ ಶ್ರುತಿಯಿಂದ ಕೂಡಿರುವಂತಹ ಪ್ರಕರಣವೂ ಸಹ ಸಾವಕಾಶವಾಗುತ್ತದೆ. ಆವಾಗ ನಿರವಕಾಶವಾದ ಲಿಂಗದಿಂದ ಶ್ರುತಿ ಹಾಗೂ ಪ್ರಕರಣಗಳಿಗೆ ಬಾಧವನ್ನು ಹೇಳಬಹುದೆಂದು ಅಭಿಪ್ರಾಯ. 'ಸಾವಕಾಶಯೋಃ' ಎಂದರೆ ಸಾವಕಾಶವಾದ ಶ್ರುತಿ ಹಾಗೂ ಪ್ರಕರಣಗಳು ಎಂದರ್ಥ.

ಅಥವಾ ಹಿಂದೆ ಹೇಳಿದ ಪ್ರಕಾರ ಶ್ರುತಿಯು ಸಾವಕಾಶವಾದರೂ ಸಹ 'ಇದು ಅಗ್ನಿಸೂಕ್ತ ಹೊರತು ವಿಷ್ಣುಸೂಕ್ತವಲ್ಲ' ಎಂಬ ಅಧ್ಯಾಪಕಪ್ರಸಿದ್ಧಿಯ ಬಲದಿಂದ ಪ್ರಕರಣವು ನಿರವಕಾಶವಾಗುತ್ತದೆ. ಈ ಪಕ್ಷದಲ್ಲಿ ಸಾವಕಾಶತ್ವವು ಕೇವಲ ಶ್ರುತಿಯಲ್ಲಷ್ಟೇ ವಿಶೇಷಣವಾಗುತ್ತದೆ. ಆದ್ದರಿಂದಲೇ 'ಕರ್ಣಾದಿವಿದೂರತ್ವ'ವನ್ನೂ ಸಹ ಅನೇಕವೈಭೋಗಗಳಿರುವಂತಹ ಅಗ್ನಿಯಲ್ಲಿಯೇ ಹೇಗಾದರೂ ಮಾಡಿ ಕೂಡಿಸಬೇಕು. ಏಕೆಂದರೆ ಶ್ರುತಿ ಹಾಗೂ ಪ್ರಕರಣಗಳು ಬಲಿಷ್ಠವಾಗಿರುವುದರಿಂದ. ಈ ಅಭಿಪ್ರಾಯದಿಂದ 'ಅಗ್ನಿರೇವ'' ಎಂಬುದಾಗಿ ಭಾಷ್ಯವನ್ನು ಉಪಸಂಹಾರಮಾಡುತ್ತಿದ್ದಾರೆ.

'ಯೋ ವೇದ' ಎಂಬ ಭಾಷ್ಯವು ಈ ಅಧಿಕರಣದ ಫಲವನ್ನು ಸೂಚಿಸುತ್ತಿದೆಯೆಂಬಭಿಪ್ರಾಯದಿಂದ ''ಆನಂದಮಯತ್ವಂ ಚ'' ಎಂಬುದಾಗಿ ಆದರ ತಾತ್ಪರ್ಯವನ್ನು ಹೇಳುತ್ತಿದ್ದಾರೆ.

## ಕರ್ಣಾದಿವಿದೂರತ್ವಲಿಂಗದಿಂದ ವಿಷ್ಣುವೇ ಜ್ಯೋತಿಯು

**ಭಾಷ್ಯಮ್ – अत आह -**

**ಸೂ – ॐ ॥ ज्योतिश्चरणाभिधानात् ॥ ॐ ॥ ೨೪ ॥**

**विष्णुरेव ज्योतिः । कर्णादीनां विचरणाभिधानात् ।**

ಇದಕ್ಕೆ ಉತ್ತರರೂಪವಾಗಿ ಸೂತ್ರವು ಹೊರಟಿದೆ. ಆನಂದಮಯಪ್ರಕರಣದಲ್ಲಿ ಹೇಳಲ್ಪಟ್ಟ ಮತ್ತು ಅಗ್ನಿಸೂಕ್ತದಲ್ಲಿ ಹೇಳಲ್ಪಟ್ಟ ಜ್ಯೋತಿಯು ವಿಷ್ಣುವೇ ಆಗಿದ್ದಾನೆ. ಏಕೆಂದರೆ, ಕವಿಮೊದಲಾದ ಇಂದ್ರಿಯಗಳಿಗೆ ಅಗೋಚರನೆಂದು ಹೇಳಿರುವುದರಿಂದ(*).

ಪ್ರತಿಪದಾರ್ಥ -- अत आह = ಇದಕ್ಕೆ ಉತ್ತರಿಸುವುದಕ್ಕಾಗಿಯೇ ಸೂತ್ರಕಾರರು ಹೇಳುತ್ತಿದ್ದಾರೆ. ಸಿದ್ಧಾಂತ ಹೀಗಿದೆ -- ज्योतिः = ಅಗ್ನಿಪ್ರಕರಣದಲ್ಲಿ ಹೇಳಲ್ಪಟ್ಟ ಜ್ಯೋತಿಯು ವಿಷ್ಣುರೇವ = ವಿಷ್ಣುವೇ ಆಗಿದ್ದಾನೆ. कर्णादीनाम् = ಕವಿ ಮೊದಲಾದ ಇಂದ್ರಿಯಗಳಿಗೆ, विचरणाभिधानात् = ಅತ್ಯಂತ ದೂರನಾಗಿದ್ದಾನೆಂದು ಹೇಳಿದ್ದರಿಂದ.

**स हि 'परो मात्रया तन्वा वृधान' (ऋ. ७/९९/१)**
**इत्यादिना कर्णादिविदूरः ॥ १० ॥**

**॥ इति ज्योतिरधिकरणम् ॥१०॥**

ವಿಷ್ಣುವೇ ಜ್ಯೋತಿಯು ಏಕೆಂದರೆ, ಕವಿ ಮೊದಲಾದ ಯಾವುದೇ ಇಂದ್ರಿಯಗಳಿಗೆ ಗೋಚರನಲ್ಲವೆಂದು ಹೇಳಿದ್ದರಿಂದ. ಹಿಂದೆ ಹೇಳಲ್ಪಟ್ಟ 'ಪರೋ ಮಾತ್ರಯಾ' ಶ್ರುತಿ ಮೊದಲಾದ ಪ್ರಮಾಣಗಳಿಂದ ಸಕಲ ಇಂದ್ರಿಯಗಳಿಗೆ ವಿಷ್ಣುವು ಅಗೋಚರನೆಂದು

---

**ಭಾಷ್ಯದೀಪಿಕಾ** – ಸಿದ್ಧಾನ್ತಯತ್ಸೂತ್ರಮವತಾರಯತಿ – अत इति ॥ यतः पूर्वपक्षः प्राप्तोऽतः उत्तरं सूत्रमाह भगवान् बादरायण इत्यर्थः । तदेव सूत्रं पठति – ज्योतिरिति ॥ सूत्रे तत्त्वित्यस्यानुवृत्तिं विपरिणामं चाभिप्रेत्य प्रतिज्ञांशं व्याचष्टे – विष्णुरेवेति ॥ 'ज्योतिः' तच्छब्दवाच्यो विष्णुरेव भवेदिति योजना । कुत इत्यतः प्राप्तं 'चरणाभिधानात्' इति हेत्वंशं चरणशब्दस्य विचरणार्थत्वं कर्णादीनामित्यस्याध्याहारं चाभिप्रेत्य व्याचष्टे – कर्णादीनामिति ॥ अत्र वाक्ये कर्णादीनामेतज्ज्योतिः प्रति विरुद्धचरणोक्तेः कर्णादिविदूरत्वलिङ्गश्रवणादित्यर्थः॥ अत्र कर्णादिविदूरत्वं नाम तैरियदिति परिच्छेदायोग्यवैभवत्वं, न तु कर्णादिविदूरत्वमात्रम् । तद्विषये तस्यासम्भवात् । अभिधानपर्यन्तधावनं हेत्वसिद्धिपरिहारायेति द्रष्टव्यम् ।

ತೀರ್ಮಾನವಾಗಿದೆ. ಆದರೆ ಅಗ್ನಿಯು ಎಲ್ಲ ಇಂದ್ರಿಯಗಳಿಂದಲೂ ವೇದ್ಯನೇ ಆಗಿದ್ದಾನೆ. ಆದ್ದರಿಂದ ಆನಂದಮಯನಾದ ವಿಷ್ಣುವೇ ಜ್ಯೋತಿಃಶಬ್ದವಾಚ್ಯನೆಂದು ಸಿದ್ಧಾಂತ.

ಪ್ರತಿಪದಾರ್ಥ — ಸ ಹಿ = ಆ ವಿಷ್ಣುವೇ, ಪರೋ ಮಾತ್ರಯಾ ತನ್ವಾ ವೃಧಾನ ಇತ್ಯಾದಿನಾ = 'ಪರೋ ಮಾತ್ರಯಾ' ಎಂಬಿತ್ಯಾದಿ ಶ್ರುತಿ ಮೊದಲಾದ ಪ್ರಮಾಣಗಳಿಂದ, ಕರ್ಣಾದಿವಿದೂರಃ = ಸಕಲೇಂದ್ರಿಯಗಳಿಗೆ ಗೋಚರನಾಗಲಾರನೆಂದು ಹೇಳಲ್ಪಟ್ಟಿದ್ದಾನೆ(*).

**तत्वप्रकाशिका – सिद्धान्तयत्सूत्रमवतारयति अत इति ॥ यस्मादिति प्राप्तमत आह सूत्रकार इत्यर्थः । सूत्रं व्याचष्टे – विष्णुरेवेति ॥ विष्णुरेवेदं ज्योतिर्भवेत् । कर्णादीनामेतज्ज्योतिर्विरुद्धाचरणाभिधानात् । कर्णादिविदूरत्वलिङ्गात् इत्यर्थः ।**

**कर्णादिविदूरत्वाभिधानेऽपि कुतो विष्णुरिदं ज्योतिरित्यत आह – स हीति ॥ मीयन्ते विषया अनेनेति मात्रा इन्द्रियगणस्ततस्त्वं परोसीत्यर्थः । न च प्रकरणविरोधः । लिङ्गेन प्रकरणबाधोपपत्तेः ।**

---

भाष्यदीपिका – नन्वस्तु ज्योतिषः कर्णादिविदूरत्वोक्तिः, तावता तस्य विष्णुत्वं कुत इत्यतः कर्णादिविदूरत्वस्य विष्ण्वेकलिङ्गत्वे श्रुतिमुदाहरन् तत् प्रतिजानीते - स हीति ॥ एवेत्यनुषज्यते । आदिशब्देन 'न ते विष्णो' इत्यादिकं गृह्यते । तथा च 'हि' यस्मात् 'सः' विष्णुरेव 'परो मात्रया' इत्यादिवाक्येन कर्णादिविदूर इति प्रमितः तस्मान्नाप्रयोजकता, न वा हेतुविशेषणासिद्धिरित्यध्याहारेण योजना । अनेन 'ज्योतिः' तच्छब्दवाच्यं ब्रह्मैव । कुतः? अत्र कर्णादीनामेतज्ज्योतिः प्रति साकल्येन तदविषयीकरणरूपविरुद्ध 'चरणाभिधानात्' कर्णादिविदूरत्वलिङ्गश्रवणाद् इत्यावृत्त्यध्याहाराभ्यां सूत्रार्थ उक्तो भवति । मापयति ज्ञापयति विषयानिति वा मीयन्ते विषया अनेनेति वा मात्रा इन्द्रियगणः तया ततस्त्वं 'परो' दूरोऽसीति हे विष्णो ! अन्यमहिम्नः परमन्तं सीमानं ते महिमानं कोऽपि श्रोत्रादिना नाऽपेति च प्रकृतानुगुण्येन श्रुतिर्व्याख्येया । अत्र तत्त्वप्रदीपसञ्न्यायरत्नावलीकारयोः ज्योतिरित्यादिचतुस्सूत्री एकमेवान्तर्भेदाधिकरणमित्यभिप्रेतम् । अग्निसूक्तच्छान्दोग्यगतविषयवाक्यभेदादनयोर्भेदः । टीकाकृतस्तु ज्योतिस्सूत्रमेकमधिकरणं 'छन्दः' इत्यादित्रिसूत्री अधिकरणान्तरमिति ज्ञातव्यम् ॥१०॥ ॥इति ज्योतिरधिकरणम् ॥१०॥

**ನ ಚ ಶ್ರುತಿವಿರೋಧಃ । ಶ್ರುತೇರ್ವಿಷ್ಣಾವಪಿ ಸಾವಕಾಶತ್ವಾತ್ । ಮಹಾಯೋಗವಿದ್ಬೃಢಿ-ಸಙ್ಭಾವೇನ ಮುಖ್ಯತ್ವಾಚ್ಚ । ನಿರವಕಾಶಲಿಙ್ಗೇನ ಸಾವಕಾಶಶ್ರುತ್ಯಾದೇರ್ಬಾಧೋಪಪತ್ತೇಃ । ಅತೋ 'ವಿಷ್ಣುರೇವೇದಂ ಜ್ಯೋತಿರಿತಿ ತಸ್ಯೈವ ಗುಹಾನಿಹಿತತ್ವಮಾನನ್ದಮಯತ್ವಂ ಚ' ಇತಿ ಸಿದ್ಧಮ್ ॥೨೪॥**

**॥ ಇತಿ ಶ್ರೀಮಜ್ಜಯತೀರ್ಥಭಿಕ್ಷುವಿರಚಿತಾಯಾಂ ತತ್ವಪ್ರಕಾಶಿಕಾಯಾಂ ಜ್ಯೋತಿರಧಿರಕಣಮ್ ॥**

ಈ ಪೂರ್ವಪಕ್ಷವನ್ನು ನಿರಾಕರಿಸಲು ಸಿದ್ಧಾಂತಸ್ಥಾಪಕವಾದ ಸೂತ್ರವು ಹೊರಟಿದೆ. ಆ ಸೂತ್ರಕ್ಕೆ ಆಚಾರ್ಯರು ''ಅತಃ'' ಎಂಬುದರಿಂದ ಅವತಾರಿಕೆ ನೀಡಿದ್ದಾರೆ. ಯಾವ ಅರ್ಥದಲ್ಲಿ ಈ ಪೂರ್ವ-ಪಕ್ಷವು ಬಂದಿದೆಯೋ ಅದೇ ಅರ್ಥದಲ್ಲಿ ಸೂತ್ರಕಾರರು ಹೇಳಿದ್ದಾರೆ. ಸೂತ್ರದ ವ್ಯಾಖ್ಯಾನವನ್ನು ''ವಿಷ್ಣುರೇವ'' ಎಂಬ ವಾಕ್ಯದಿಂದ ಆಚಾರ್ಯರು ಮಾಡಿದ್ದಾರೆ.

''ಜ್ಯೋತಿಃಶಬ್ದದಿಂದ ವಿಷ್ಣುವೇ ಪ್ರತಿಪಾದ್ಯನಾಗಿದ್ದಾನೆ. ಕಿವಿ ಮೊದಲಾದ ಇಂದ್ರಿಯಗಳಿಗೆ ವಿರುದ್ಧವಾದ ಗಮನವನ್ನು ಹೇಳಿದ್ದರಿಂದಲೇ ಜ್ಯೋತಿಯು ವಿಷ್ಣುವೆಂದು ನಿಶ್ಚಯವಾಗುತ್ತದೆ'' ಎಂದು ಸೂತ್ರದ ಅಭಿಪ್ರಾಯ.

ಕಿವಿಮೊದಲಾದ ಇಂದ್ರಿಯಗಳಿಗೆ ದೂರವಾದ ಮಾತ್ರದಿಂದ ಜ್ಯೋತಿಯು ವಿಷ್ಣುವೇಕೆ ಆಗಬೇಕು? ಎಂಬ ಪ್ರಶ್ನೆಗೆ ''ಸ ಹಿ'' ಎಂಬುದರಿಂದ ಉತ್ತರಿಸಿದ್ದಾರೆ. ಯಾವುದರ ಸಂಪರ್ಕದಿಂದ ವಿಷಯಗಳು ತಿಳಿಯುತ್ತವೋ ಅದನ್ನು ಮಾತ್ರಾ ಎನ್ನುತ್ತಾರೆ. ಆಂದರೆ ಸಕಲ ಇಂದ್ರಿಯಗಳು. ಈ ಇಂದ್ರಿಯಗಳಿಂದ ನೀನು ಶ್ರೇಷ್ಠನಾಗಿದ್ದೀಯೆ. ಜ್ಯೋತಿಃಶಬ್ದದಿಂದ ವಿಷ್ಣುವಾಚ್ಯನಾದರೆ ಅಗ್ನಿಪ್ರಕರಣದ ವಿರೋಧ ಬರುತ್ತದೆಂದು ಶಂಕಿಸಬಾರದು. ಏಕೆಂದರೆ ಲಿಂಗದಿಂದ ಪ್ರಕರಣವು ಬಾಧಿತವಾಗುತ್ತದೆ.

ಹಾಗಾದರೆ ಜ್ಯೋತಿಃಶ್ರುತಿಯ ವಿರೋಧವು ಬರುತ್ತದಲ್ಲವೇ? ಎಂಬ ಪ್ರಶ್ನೆಗೂ ಅವಕಾಶವಿಲ್ಲ. ಜ್ಯೋತಿಃಶ್ರುತಿಯು ವಿಷ್ಣುವಿನಲ್ಲಿ ಸಾವಕಾಶವಾಗಿದೆ. ಅಷ್ಟೇ ಅಲ್ಲದೇ ಮಹಾಯೋಗ, ವಿದ್ವದ್ರೂಢಿಗಳು ವಿಷ್ಣುವಿನಲ್ಲಿರುವುದರಿಂದ ಜ್ಯೋತಿಃಶಬ್ದದ ಮುಖ್ಯಾರ್ಥವು ವಿಷ್ಣುವೇ ಆಗಬೇಕು. ಇಂದ್ರಿಯವಿದೂರತ್ವಾದಿ ನಿರವಕಾಶಲಿಂಗದಿಂದ ಸಾವಕಾಶವಾದ ಜ್ಯೋತಿಃಶ್ರುತಿಗೆ ಬಾಧವು ಬರುತ್ತದೆ.

ಈ ಎಲ್ಲಾ ಕಾರಣಗಳಿಂದ ಶ್ರುತಿಯಲ್ಲಿರುವ ಜ್ಯೋತಿಃಶಬ್ದವು ವಿಷ್ಣುವನ್ನೇ ಪ್ರತಿಪಾದಿಸುತ್ತದೆ. ಅಂತಹ ವಿಷ್ಣುವಿನಲ್ಲಿಯೇ ಗುಹಾನಿಹಿತತ್ವ ಮತ್ತು ಆನಂದಮಯತ್ವಧರ್ಮಗಳು ಬರುತ್ತವೆಂದು ಸಿದ್ಧವಾಯಿತು.

॥ ಇಲ್ಲಿಗೆ ತತ್ವಪ್ರಕಾಶಿಕೆಯ ಕನ್ನಡಾನುವಾದದಲ್ಲಿ ಜ್ಯೋತಿರಧಿಕರಣವು ಮುಗಿಯಿತು ॥

**ಭಾವದೀಪಃ** – 'ಜ್ಯೋತಿಸ್ತತ್ತು' ಇತಿ ಸೌತ್ರಪ್ರತಿಜ್ಞಾಭಾಗಮಭಿಪ್ರೇತ್ಯ ಭಾಷ್ಯಂ ವ್ಯಾಚಷ್ಟೇ –

**विष्णुरेवेति ॥** 'स हि' इत्यग्रेतनभाष्यानुरोधाद्धेतुसाध्ययोः सामानाधिकरण्याय हेतोः पक्षनिष्ठतामाह **कर्णेति ॥** सूत्रे वीत्युपसर्गस्यानुक्तिकृत्यं चन्द्रिकायां व्यक्तम् । श्रुतौ पतनस्यादित्वेऽपि तस्य 'स्पृहिगृहिपतिदयि' इति निर्दिष्टस्य 'पतगतौ' इत्यस्य चुराद्यदन्ततया स्वार्थिकण्यन्तत्वेन पतनाभिधानादित्युक्तौ कर्णादिविदूरत्वस्य स्पष्टमप्रतीतेश्चरणस्य च ज्योतिःसान्निध्यात् प्रधानमनोन्वितक्रियात्वात् पतनार्थ-स्यात्रप्राप्तेश्च सूत्रादौ (*)चरणेत्युक्तिः ।

जन्मादिसूत्रे 'मात्राया मितेः' इत्यर्थोक्तावपि इहोपयोगितया अर्थान्तरमाह – **मीयन्त इति ॥** श्रुतिप्रकरणाभ्यां कृतपूर्वपक्षस्य कथं लिङ्गमात्रेणापवादः? इत्यतः **'सन्दिग्धश्रुतिलिङ्गाभ्याम् उक्ताभ्यामसन्दिग्धयोः केवलयोरेव बलवत्त्वात्'** इति न्यायविवरणमत्राप्याकृष्य विवृण्वन् लिङ्गमुपलक्षणमुपेत्य शङ्कापूर्वं निर्णयमाह – **न चेति ॥** सन्दिग्धाभ्यां सावकाशाभ्यामित्यर्थात् ।

**प्रकरणबाधेति ॥** 'अभिव्यक्तेरित्याश्मरथ्यः' इत्यादिवक्ष्यमाणन्यायेनाग्निसूक्त-मित्यादिव्यवहारः, तत्तत् सूक्तप्रतिपाद्यविष्णवधिष्ठाननिमित्तक औपचारिकः । इदं न विष्णुसूक्तमिति प्रसिद्धिस्तु विष्ण्वादिशब्दाभावादज्ञानमूलेति । न तस्य निरवकाशत्वमिति भावः ।

---

(*) पतनस्याऽऽदिमत्वेऽप्यमङ्गलत्वात् सूत्रकृता चरणमेव गृहीतमिति भावष्टीकाकारस्य । वस्तुतस्तु कर्णादिनिष्ठज्योतिर्विषयकविचरणहेतूक्तरणे हेतुसाध्ययोर्वैय्यधिकरणप्रसङ्गात् कर्णादीनां विषयेऽपि 'इदं ज्योतिर्हृदय आहितं यत्' इति यज्ज्योतिषो विचरणं श्रुतावुक्तं तस्याभिधानादिति ज्योतिर्निष्ठमेव विचरणं भाष्यकृतोऽभिमतम् । एवं च सतीदं ज्योतिरित्यत्र क्रियाभावादध्याहारस्य बहिरङ्गत्वात् श्रौतमेव पतत इति पदमावर्तनीयं वा वाच्यं चरतीत्युत्तरपदमाकर्षणीयं वा स्यात् । तत्र च पतत इति द्विवचनान्तपदस्य विभक्तिव्यत्ययेनाऽऽवर्तने गौरवात् समानविभक्तिकं चरतीत्येव पदमाकर्षणीयम् । अतः 'चरणाभिधानात्' इति सूत्रे भाष्ये च चरणपदस्यैव ग्रहणं चोक्तं जायते । ..... चरणाभिधानात् पादाभिधानात् इति केचित् । तदयुक्तम् । तथा सत्यल्पाक्षरत्वेन पादाभिधानादित्येव सूत्रं स्यात् । भूतादिपादव्यपदेशोपपत्तेश्चेवम्' इति सूत्रेण पौनरुक्त्यप्रसङ्गाच्च । – गुर्वर्थदीपिका

**ಶ್ರುತೇರಿತಿ ॥** ಅನ್ತರ್ನಯಾದ್ಯುಕ್ತನ್ಯಾಯಾದಿತಿ ಭಾವಃ । ಶ್ರುತೇರಗ್ರೌ ರೂಢತ್ವಾತ್ ವಿಷ್ಣಾವ-ಮುಖ್ಯತಾ ಇತ್ಯತ ಆಹ – **ಮಹಾಯೋಗೇತಿ ॥** ಜ್ಯೋತಿಃಪದಪ್ರವೃತ್ತಿನಿಮಿತ್ತಸ್ಯ ಪ್ರಕಾಶಾತ್ವಾದಿ-ರೂಪಜ್ಯೋತಿಷ್ಟಸ್ಯ ವಿಷ್ಣುಗತತ್ವಾದನ್ಯಗತಸ್ಯಾಪಿ **'ತಮೇವ ಭಾನ್ತಮನುಭಾತಿ ಸರ್ವಮ್'** ಇತ್ಯಾದಿನಾ ತದಧೀನತ್ವಾಚ್ಚ ಮಹಾಯೋಗಸ್ಯ **'ತದ್ದೇವಾ ಜ್ಯೋತಿಷಾಂ ಜ್ಯೋತಿರಾಯುರ್ಹೋಪಾಸತೇऽಮೃತಮ್'** ಇತಿ ವಾಜಸನೇಯೇ । **'ನಾರಾಯಣಪರೋ ಜ್ಯೋತಿಃ'** ಇತಿ ತೈತ್ತಿರೀಯೇ, **'ವಿಷ್ಣುರೇವ ಜ್ಯೋತಿಃ'** ಇತ್ಯಾದಿಚತುರ್ವೇದಶಿಖಾದಿಶ್ರುತಿಷು । **'ಜ್ಯೋತಿಷಾಮಪಿ ತಜ್ಜ್ಯೋತಿಸ್ತಮಸಃ ಪರಮುಚ್ಯತೇ'** ಇತ್ಯಾದಿಸ್ಮೃತಿಷು ಚ ಪ್ರಯೋಗಬಾಹುಲ್ಯೇನ ರೂಢೇರಪಿ ಸದ್ಭಾವೇನೇತ್ಯರ್ಥಃ । ಅತ ಇತಿ ॥ ನಿರವಕಾಶಲಿಙ್ಗಸದ್ಭಾವಾದಿತಿ ಚರಣಾಭಿಧಾನಾದಿತ್ಯಸ್ಯಾರ್ಥಃ । **'ಜ್ಯೋತಿಸ್ತತ್ತು'** ಇತ್ಯಸ್ಯೋಪ-ಸಂಹಾರೋ **'ವಿಷ್ಣುರೇವ'** ಇತ್ಯಾದಿ । ಅತ್ರಾಪಿ ಪೂರ್ವೋತ್ತರತ್ರೈವ ಚ ಸರ್ವಸೂತ್ರಗತತತ್ತಚ್ಛಬ್ದೋಪ-ಲಕ್ಷಿತೇತಿ ಬೋಧ್ಯಮ್ । **'ಚರಣಾಭಿಧಾನಾತ್'** ಇತ್ಯಸ್ಯ ತತ್ತತ್ಸೂತ್ರಸ್ಥನಿರವಕಾಶಲಿಙ್ಗೋಪ-ಲಕ್ಷಣತ್ವಾತ್ । **'ಆನನ್ದಮಯತ್ವಂ ಚ'** ಇತಿ ಫಲಪರಭಾಷ್ಯತಾತ್ಪರ್ಯೋಪಸಂಹಾರಃ ।

ಯತ್ ತು ಅತ್ರ ಕಶ್ಚಿದಾಹ – ಚರಣಂ ಹಿ ಪ್ರತಿಸಮ್ಬನ್ಧಿಸಾಪೇಕ್ಷಮ್ । ನ ಚೇನ್ದ್ರಿಯ-ರೂಪಪ್ರತಿಸಮ್ಬನ್ಧಿ ಸೂತ್ರೇ ನಿರ್ದಿಷ್ಟಮ್ । ಚರಣಶಬ್ದಸ್ಯ ಪಾದಪರತ್ವೇ ತು ಜ್ಯೋತಿಷ ಏವ ಪ್ರತಿಸಮ್ಬನ್ಧಿತ್ವೇನಾನ್ವಯಾತ್ ನ ದೋಷ ಇತಿ ಛಾನ್ದೋಗ್ಯವಾಕ್ಯಮೇವ ಸೂತ್ರಾನುಗುಣಂ ನ ತ್ವಗ್ನಿಸೂಕ್ತಗತಮ್ – ಇತಿ । ತನ್ನ । ತದ್ವಾಕ್ಯೇ ಚನ್ದ್ರಿಕಾಯಾಮನೇಕದೋಷೋದ್ಭಾವನಾತ್ । ಪ್ರತಿ-ಸಮ್ಬನ್ಧಿನೋ ವಿಷಯವಾಕ್ಯೇ ಸನ್ನಿಹಿತಸ್ಯಾರ್ಥದನ್ವಯಸಮ್ಭವೇ **'ಕಮ್ಪನಾತ್'** ಇತ್ಯಾದಾವಿವ ನಿರ್ದೇಶಸ್ಯಾನಪೇಕ್ಷಿತತ್ವಾತ್ । 'ಚರಣಪದಸ್ಯ ಪಾದಪರತ್ವೇ ಪಾದೇತ್ಯೇವ ವಾಚ್ಯತ್ವಾಚ್ಚ' - ಇತಿ ಯತ್ಕಿಞ್ಚಿದೇತತ್ ॥೨೪॥

**॥ ಇತಿ ಶ್ರೀರಾಘವೇನ್ದ್ರಯತಿಕೃತೇ ಭಾವದೀಪೇ ಜ್ಯೋತಿರಧಿಕರಣಮ್ ॥**

'ತತ್ತು ಸಮನ್ವಯಾತ್' ಎಂಬ ಸೂತ್ರದಿಂದ ತತ್ತು ಎಂಬುದನ್ನು ಆನುವೃತ್ತಿ ಮಾಡಿದಾಗ ವಿಷ್ಣುವೇ ಜ್ಯೋತಿಃಶಬ್ದವಾಚ್ಯನು ಎಂಬುದಾಗಿ ಸೂತ್ರದ ಪ್ರತಿಜ್ಞೆಯಾಗುತ್ತದೆ. ಈ ಅಭಿಪ್ರಾಯದಿಂದ ಭಾಷ್ಯವನ್ನು "ವಿಷ್ಣುರೇವ" ಎಂಬುದಾಗಿ ವ್ಯಾಖ್ಯಾನಿಸುತ್ತಿದ್ದಾರೆ. 'ಸ ಹಿ ಪರೋ ಮಾತ್ರಯಾ' ಎಂಬ ಮುಂದಿನ ಭಾಷ್ಯವನ್ನು ಅನುಸರಿಸಿ ಹೇತು ಮತ್ತು ಸಾಧ್ಯಗಳಿಗೆ ಸಾಮಾನಾಧಿಕರಣ್ಯವನ್ನು(ಏಕಾಧಿಕರಣವೃತ್ತಿತ್ವವನ್ನು) ಸಂಪಾದಿಸುವುದಕ್ಕಾಗಿ ಹೇತುವಿಗೆ ಪಕ್ಷನಿಷ್ಠತ್ವವನ್ನು "ಕರ್ಣ" ಇತ್ಯಾದಿವಾಕ್ಯದಿಂದ ಪ್ರತಿಪಾದಿಸುತ್ತಿದ್ದಾರೆ. ಶ್ರುತಿಯಲ್ಲಿರುವ 'ಏ' ಎಂಬ ಉಪಸರ್ಗವನ್ನು ಸೂತ್ರದಲ್ಲೇಕೆ ಹೇಳಿಲ್ಲ? ಎಂಬ ಪ್ರಶ್ನೆಯು ಸಹಜ-ವಾಗಿಯೇ ಬರುತ್ತದೆ. ಇದರ ವಿಚಾರವನ್ನು ಚಂದ್ರಿಕೆಯಲ್ಲಿ ತಿಳಿಯಬೇಕು.

ಶ್ರುತಿಯಲ್ಲಿ ಪತನವನ್ನು ಹೇಳಿದ್ದಾರೆ. ಆದರೆ ಸೂತ್ರದಲ್ಲಿ ಚರಣವನ್ನು ಮೊದಲು ಹೇಳಿದ್ದಾರೆ. ಈ

ರೀತಿಯಾದ ವ್ಯತ್ಯಾಸಕ್ಕೆ ಕಾರಣವನ್ನು ಹೀಗೆ ತಿಳಿಯಬೇಕು – 'ಸ್ಪೃಹಿಗೃಹಿಪತಿದಯಿ' ಇತ್ಯಾದಿಯಾದ ಪಾಣಿನಿಯ ಸೂತ್ರದಂತೆ 'ಪತಗತೌ' ಎಂಬ ಧಾತುವು ಚುರಾದಿಗಣದಲ್ಲಿ ಸೇರಿದೆ. ಆದ್ದರಿಂದ ಸ್ವಾರ್ಥದಲ್ಲಿ ಬಂದಿರುವ ಣ್ಯಂತಪ್ರತ್ಯಯಾಂತವಾಗಿದೆ. ಒಂದು ವೇಳೆ ಸೂತ್ರದಲ್ಲಿ 'ಪತನಾಭಿಧಾನಾತ್' ಎಂದು ಹೇಳಿದರೆ ಕರ್ಣಾದಿವಿದೂರತ್ವವು ಸ್ಪಷ್ಟವಾಗಿ ತಿಳಿಯುವುದೇ ಇಲ್ಲ. ಆದರೆ ಚರಣಾಭಿಧಾನಾತ್ ಎಂದು ಹೇಳಿದಾಗ ಕರ್ಣಾದಿವಿದೂರತ್ವವು ಸ್ಫುಟವಾಗಿ ತಿಳಿಯುತ್ತದೆ. ಏಕೆಂದರೆ ಚರಣಶಬ್ದದ ಜೊತೆಗೆ ಜ್ಯೋತಿಃಶಬ್ದವು ಕೇಳಿಸುತ್ತಿದೆ. ಪ್ರಧಾನವಾದ ಮನಸ್ಸಿನ ಜೊತೆಗೆ ಅನ್ವಿತವಾದ ಕ್ರಿಯೆಯು ಚರಣಶಬ್ದದಿಂದ ತಿಳಿಯುತ್ತಿರುವುದರಿಂದ ಪತನ ಎಂಬರ್ಥವೂ ಸಹ ಇದರಿಂದ ಸುಲಭವಾಗಿ ತಿಳಿಯುತ್ತದೆ. ಈ ದೃಷ್ಟಿಯಿಂದ ಸೂತ್ರದಲ್ಲಿ ಪತನಶಬ್ದವನ್ನು ಪ್ರಯೋಗಿಸದೆ 'ಚರಣ'ಶಬ್ದವನ್ನು ಪ್ರಯೋಗಿಸಿದ್ದಾರೆ.

ಟೀಕೆಯಲ್ಲಿ 'ಮಾತ್ರಾ' ಎಂಬ ಶಬ್ದಕ್ಕೆ 'ಇಂದ್ರಿಯಸಮೂಹ' ಎಂಬರ್ಥವನ್ನು ಹೇಳಿದ್ದಾರೆ. ಆದರೆ ಜನ್ಮಾದಿಸೂತ್ರದಲ್ಲಿ 'ಪರಿಮಾಣ'ಎಂಬರ್ಥವನ್ನು ಹೇಳಿದ್ದಾರೆ. ಪ್ರಕೃತ ಉಪಯುಕ್ತವಾದ್ದರಿಂದ ಮತ್ತೊಂದು ಅರ್ಥವನ್ನು ಇಲ್ಲಿ ''ಮೀಯಂತೇ'' ಎಂಬ ವಾಕ್ಯದಿಂದ ಹೇಳಿದ್ದಾರೆಂದು ತಿಳಿಯಬೇಕು.

ಶ್ರುತಿ ಹಾಗೂ ಪ್ರಕರಣಗಳಿಂದ ಮಾಡಲ್ಪಟ್ಟ ಪೂರ್ವಪಕ್ಷವನ್ನು ಕೇವಲ ಲಿಂಗದಿಂದ ಹೇಗೆ ನಿರಾಕರಿಸುತ್ತೀರಿ? ಎಂದರೆ, ಶ್ರುತಿ ಹಾಗೂ ಪ್ರಕರಣಗಳು ಸಂದಿಗ್ಧವಾಗಿವೆ. ಲಿಂಗವು ಅಸಂದಿಗ್ಧವಾಗಿದೆ. ಆದ್ದರಿಂದ ಅಸಂದಿಗ್ಧವಾದ ಲಿಂಗದಿಂದ ಸಂದಿಗ್ಧವಾದ ಶ್ರುತಿ ಪ್ರಕರಣಗಳು ಬಾಧಿತವಾಗಬಹುದು. ಈ ವಿಷಯದಲ್ಲಿ 'ಸಂದಿಗ್ಧಶ್ರುತಿಲಿಂಗಾಭ್ಯಾಮ್ ಉಕ್ತಾಭ್ಯಾಮಸಂದಿಗ್ಧಯೋಃ ಕೇವಲಯೋರೇವ ಬಲವತ್ತ್ವಾತ್' ಎಂಬುದಾಗಿ ನ್ಯಾಯವಿವರಣದ ಸಮ್ಮತಿ ಇದೆ. ಇದನ್ನು ಇಲ್ಲಿಯೂ ಅನುವೃತ್ತಿ ಮಾಡಿಕೊಂಡು ವಿವರಿಸುತ್ತಾ ಲಿಂಗವನ್ನು ಉಪಲಕ್ಷಣವೆಂದು ವಿವಕ್ಷಿಸಿ ಶಂಕೆಯನ್ನು ಮಾಡುತ್ತಾ ''ನಚ'' ಇತ್ಯಾದಿ-ಗ್ರಂಥದಿಂದ ಉತ್ತರಿಸುತ್ತಿದ್ದಾರೆ. ಸಂದಿಗ್ಧಾಭ್ಯಾಂ ಎಂಬ ಪದಕ್ಕೆ ಸಾವಕಾಶಗಳಾದ ಎಂಬ ಅರ್ಥವು ಅರ್ಥಾತ್ ತಿಳಿಯುತ್ತದೆ.

'ಅಭಿವ್ಯಕ್ತೇರಿತ್ಯಾಶ್ಮರಥ್ಯಃ' ಎಂಬ ಮುಂದೆ ಹೇಳುವ ನ್ಯಾಯವನ್ನು ಅನುಸರಿಸಿ 'ಅಗ್ನಿಸೂಕ್ತಂ' ಎಂಬ ವ್ಯವಹಾರವನ್ನು ಮಾಡಿದ್ದಾರೆ. ವಸ್ತುತಃ ಆಯಾಸೂಕ್ತಗಳಿಂದ ವಿಷ್ಣುವೇ ಪ್ರತಿಪಾದ್ಯನಾಗಿದ್ದಾನೆ. ಆದರೆ ಅದನ್ನು ಇಲ್ಲಿ ಔಪಚಾರಿಕವಾಗಿ ವಿವಕ್ಷಿಸಬೇಕು. ಎಲ್ಲಾ ಸೂಕ್ತಗಳಿಂದ ವಿಷ್ಣುವೇ ಪ್ರತಿಪಾದ್ಯನಾದರೆ 'ಇದಂ ನ ವಿಷ್ಣುಸೂಕ್ತಮ್' ಎಂಬ ಪ್ರಸಿದ್ಧಿಯನ್ನು ಹೇಗೆ ಕೂಡಿಸುತ್ತೀರಿ? ಎಂದರೆ ವಿಷ್ಣ್ವಾದಿ ಶಬ್ದಗಳಿಲ್ಲದ್ದರಿಂದ ಅಜ್ಞಾನಮೂಲಕವೆಂದು ತಿಳಿಯಬೇಕು. ಆದ್ದರಿಂದ ಅಗ್ನಿಸೂಕ್ತಕ್ಕೆ ನಿರವಕಾಶತ್ವವು ಇರುವುದಿಲ್ಲವೆಂದು ತಿಳಿಯಬೇಕು.

ಟೀಕೆಯಲ್ಲಿ 'ಶ್ರುತೇಃ ವಿಷ್ಣಾವಪಿ ಸಾವಕಾಶತ್ವಾತ್'' ಎಂದಿದ್ದಾರೆ. ಅಂತರಧಿಕರಣದಲ್ಲಿ ಹೇಳಲ್ಪಟ್ಟ ನ್ಯಾಯದಂತೆ ಈ ಸಾವಕಾಶತ್ವವನ್ನು ತಿಳಿಯಬೇಕು. ಶ್ರುತಿಯು ಅಗ್ನಿಯಲ್ಲಿ ರೂಢವಾದ್ದರಿಂದ ವಿಷ್ಣುವಿನಲ್ಲಿ ಮುಖ್ಯಾರ್ಥವನ್ನು ಹೇಗೆ ಹೇಳುತ್ತೀರಿ? ಎಂಬ ಪ್ರಶ್ನೆಗೆ ''ಮಹಾಯೋಗ'' ಎಂಬ ವಾಕ್ಯದಿಂದ ಉತ್ತರಿಸಿದ್ದಾರೆ.

ಪ್ರಕಾಶತ್ವವು ಜ್ಯೋತಿಃಶಬ್ದದ ಪ್ರವೃತ್ತಿನಿಮಿತ್ತವಾಗಿದೆ. ಈ ಪ್ರಕಾಶತ್ವವೇ ಜ್ಯೋತಿಷ್ಟ್ವ ಎನಿಸಿದೆ. ಇದು ವಿಷ್ಣುವಿನಲ್ಲಿರುವುದರಿಂದ ಬೇರೆಯವರಲ್ಲಿರುವ ಜ್ಯೋತಿಷ್ಟ್ವವು ವಿಷ್ಣುವಿನ ಅಧೀನವಾಗಿದೆ ಎಂದು 'ತಮೇವ ಭಾಂತಮನುಭಾತಿ ಸರ್ವಮ್' ಇತ್ಯಾದಿ ಪ್ರಮಾಣಗಳು ಹೇಳುತ್ತಿವೆ. 'ತದ್ದೇವಾ ಜ್ಯೋತಿಷಾಂ ಜ್ಯೋತಿಃ, ಆಯುರ್ಹೋಪಾಸತೇ ಅಮೃತಮ್' ಎಂಬ ಬೃಹದಾರಣ್ಯಕದ ಮಾತಿನಂತೆ ಮಹಾಯೋಗವೃತ್ತಿಯು ವಿಷ್ಣುವಿನಲ್ಲೇ ಇರುತ್ತದೆ. ಮತ್ತು 'ನಾರಾಯಣ ಪರೋ ಜ್ಯೋತಿಃ' ಎಂದು ತೈತ್ತಿರೀಯದಲ್ಲಿ, 'ವಿಷ್ಣುರೇವ ಜ್ಯೋತಿಃ' ಎಂದು ಚತುರ್ವೇದಶಿಖಾದಿ ಶ್ರುತಿಗಳಲ್ಲಿ 'ಜ್ಯೋತಿಷಾಮಪಿ ಜ್ಯೋತಿಃ ತಮಸಃ ಪರಮುಚ್ಯತೇ' ಇತ್ಯಾದಿ ಸ್ಮೃತಿಗಳಲ್ಲಿ ಜ್ಯೋತಿಃಶಬ್ದದ ಪ್ರಯೋಗಬಾಹುಲ್ಯವು ವಿಷ್ಣುವಿನಲ್ಲಿರುವುದರಿಂದ ವಿಷ್ಣುವಿನಲ್ಲಿ ರೂಢಿಯು ಸಹ ಹೇಳಿದಂತಾಗುತ್ತದೆ.

ಟೀಕೆಯಲ್ಲಿರುವ 'ಅತಃ' ಎಂಬ ಪದಕ್ಕೆ 'ನಿರವಕಾಶಲಿಂಗಸದ್ಭಾವಾತ್' ಎಂದರ್ಥ. ಅಂದರೆ 'ಚರಣಾಭಿಧಾನಾತ್' ಎಂದರ್ಥ. 'ಜ್ಯೋತಿಃ ತತ್ತು' ಎಂಬುದರ ಉಪಸಂಹಾರವನ್ನು ''ವಿಷ್ಣುರೇವ'' ಎಂಬುದಾಗಿ ಮಾಡುತ್ತಿದ್ದಾರೆ. ಈ ಅಧಿಕರಣದಲ್ಲಿಯೂ ಸಹ ಹಿಂದಿನ ಮುಂದಿನ ಅಧಿಕರಣಗಳಂತೆ ಸಕಲ ಸೂಕ್ತಗಳಲ್ಲಿರುವ ಆಯಾ ಶಬ್ದಗಳನ್ನು ಉಪಲಕ್ಷಣಯಾ ಸ್ವೀಕರಿಸಬೇಕೆಂದು ತಿಳಿಯಬೇಕು. 'ಚರಣಾಭಿ- ಧಾನಾತ್' ಎಂಬುದರಿಂದ ಆಯಾ ಸೂಕ್ತಗಳಲ್ಲಿರುವ ನಿರವಕಾಶಲಿಂಗಗಳನ್ನು ಉಪಲಕ್ಷಣಯಾ ಸ್ವೀಕರಿಸಬೇಕು. 'ಆನಂದಮಯತ್ವಮ್' ಎಂಬುದು ಫಲಪ್ರತಿಪಾದಕವಾದ ಭಾಷ್ಯದ ತಾತ್ಪರ್ಯವನ್ನು ಉಪಸಂಹಾರ ಮಾಡುತ್ತಿದೆ.

ಕೆಲವರು ಹೀಗೆನ್ನುತ್ತಾರೆ -- 'ಚರಣವು ಪ್ರತಿಸಂಬಂಧಿಯನ್ನು ಅಪೇಕ್ಷಿಸುತ್ತದೆ. ಆ ಪ್ರತಿಸಂಬಂಧಿಯನ್ನು ಇಂದ್ರಿಯಗಳೆಂದು ಸೂತ್ರದಲ್ಲಿ ನಿರ್ದೇಶಿಸಿಲ್ಲ. ಒಂದು ವೇಳೆ ಚರಣಶಬ್ದಕ್ಕೆ ಪಾದವೆಂಬರ್ಥವನ್ನು ವಿವಕ್ಷಿಸಿದರೆ ಜ್ಯೋತಿಯ ಪಾದವೆಂದೇ ಅರ್ಥವಾಗುತ್ತದೆ. ಆದ್ದರಿಂದ ಚರಣಕ್ಕೆ ಪ್ರತಿಸಂಬಂಧಿಯಾದದ್ದು ಜ್ಯೋತಿಯೇ ಆಗಿದೆ. ಹಾಗಾಗಿ ಛಾಂದೋಗ್ಯದಲ್ಲಿರುವ ವಾಕ್ಯವೇ ಸೂತ್ರಕ್ಕನುಗುಣವಾಗಿದೆ ಹೊರತು ಅಗ್ನಿಸೂಕ್ತದಲ್ಲಿರುವ ವಾಕ್ಯವು ಸೂತ್ರಕ್ಕೆ ಅನುಗುಣವಾಗಿಲ್ಲ.

ಇವರ ವಿಚಾರ ಸರಿಯಿಲ್ಲ. ಏಕೆಂದರೆ ಛಾಂದೋಗ್ಯದಲ್ಲಿರುವ ವಾಕ್ಯದಲ್ಲಿ ಅನೇಕ ಸಮಸ್ಯೆಗಳಿವೆ ಎಂಬುದನ್ನು ಚಂದ್ರಿಕೆಯಲ್ಲಿ ತೋರಿಸಲಾಗಿದೆ.

ವಿಷಯವಾಕ್ಯದಲ್ಲಿ ಪ್ರತಿಸಂಬಂಧಿಯು ಕಾಣಿಸದಿದ್ದರೂ ಸನ್ನಿಹಿತಕ್ಕೆ ಅರ್ಥಾತ್ ಅನ್ವಯಮಾಡಲು ಬರುತ್ತದೆ. 'ಕಂಪನಾತ್' ಎಂಬ ಸೂತ್ರದಲ್ಲಿ ಈ ಸಮಸ್ಯೆಯನ್ನು ಪರಿಹರಿಸಿದ್ದಾರೆ. ಅಷ್ಟೇ ಅಲ್ಲದೆ ಚರಣಪದಕ್ಕೆ ಪಾದವೆಂಬರ್ಥವನ್ನು ವಿವಕ್ಷಿಸಿದರೆ ಸೂತ್ರದಲ್ಲಿ ಪಾದಶಬ್ದವನ್ನು ಬಿಟ್ಟು ಚರಣಪದವನ್ನು ಹೇಳಲು ಅರ್ಥವೇ ಇಲ್ಲ. ಆದ್ದರಿಂದ ಇವರ ವಿಚಾರವು ಧೂಳೀಪಟವಾಯಿತು.

ಇಲ್ಲಿಗೆ ಭಾವದೀಪದ ಕನ್ನಡಾನುವಾದದಲ್ಲಿ ಜ್ಯೋತಿರಧಿಕರಣವು ಮುಗಿಯಿತು.

**ವಾಕ್ಯಾರ್ಥಮಞ್ಜರಿ** – ನನು ಗುಹಾನಿಹಿತತ್ವಂ ಮನ್ತ್ರವರ್ಣೇ ಶ್ರೂಯತೇ, ನತ್ವಾನನ್ದಮಯಪ್ರಕರಣೇ । ಅತಃ ಕಥಂ ತದಾನನ್ದಮಯನಿಷ್ಠತಯೋಚ್ಯತೇ ? ಇತ್ಯತಃ ಪ್ರಾಗುಕ್ತಂ ಸ್ಮಾರಯತಿ – **ಮನ್ತ್ರವರ್ಣೇತಿ** ॥ ಪತತಃ

चरतः वोदमित्यत्र कम्पार्थोऽत्यन्तमिति । दूर इत्यस्यार्थः – **अतीवेति** ॥ आङोऽर्थः – **व्याप्तेति** ॥ 'दूर आधि' इत्यस्यैकपदत्वेऽपि दुःखं अदर्शनाद्दूर इत्येतत् पृथक्कृत्यास्य पूर्वत्रान्वयकरणमुपपन्नम् । नुशब्दार्थः – **इदानीमिति** ॥ प्रकरणमात्रस्य लिङ्गतो दौर्बल्येऽपि श्रुतिसहितस्य प्राबल्यं सम्भवतीत्याशयेनाह – **ज्योतिः श्रुते- रिति** ॥ **यावता** येन प्रकारेण ॥ ॐ ज्योतिश्चरणाभिधानात् ॐ ॥ ज्योतिर्हृदय इत्युक्तम् ज्योतिर्ब्रह्मैव । 'वि मे कर्णा' इत्यादिना विरुद्धचरणोक्तेः । कर्णादि-सर्वेन्द्रियदूरत्वलिङ्गादित्यर्थः । वैय्यधिकरण्यनिरासाय कर्णादिविदूर इत्युत्तरभाष्यानु-सारेणाह – **कर्णादिविदूरत्वेति** ॥ अत्र कर्णादिविदूरत्वं नाम इयदिति परिच्छेद-रहितवैभवत्वं बोध्यम् । यापयति ज्ञापयति ॥ **महायोगेति** ॥ निरवधिकप्रकाशवत्त्वाद् अग्न्यादिनिष्ठप्रकाशनियामकत्वात् । ज्योतिषां ज्योतिः । नारायणः परो ज्योतिः । विष्णुरेव ज्योतिरित्यादिवैदिकप्रयोगबाहुल्याच्चेति भावः ॥ **निरवकाशलिङ्गेनेति** ॥ 'अग्निर्वै देवानामवमः' इत्यवमतया 'भीषाऽस्मादग्निस्तपति' इति सभयतया 'परिह्वेनं म्रियन्ते विद्युट् वृष्टिश्चन्द्रमा आदित्योऽग्निः' इति मरणादिमत्तया च श्रुतस्याग्नेरपरिच्छिन्नवैभवासम्भवादिति भावः ॥

**॥इति श्रीशर्कराश्रीनिवासाचार्यविरचिता वाक्यार्थमञ्जर्यां ज्योतिरधिकरणम् ॥**

ಶ್ರೀಪದ್ಮನಾಭತೀರ್ಥಶ್ರೀಮಚ್ಚರಣರಿಂದ ರಚಿಸಲ್ಪಟ್ಟ

# ಸತ್ತರ್ಕದೀಪಾವಳಿ

**सत्तर्कदीपावलिः – ॐ ज्योतिश्चरणाभिधानात् ॐ ॥ ऐतरेये श्रूयते – 'वि मे कर्णा पतयत' इत्यादि । अत्र परमात्मधर्मेण 'यो वेद निहितं गुहायाम्' इति श्रुतिसिद्धेन विशिष्टं ज्योतिरुच्यते । 'इदं ज्योतिर्हृदय आहितं यत्' इति । अतो विचार्यते । किमयं ज्योतिःशब्दोऽग्निपरः उत विष्णुपर इति ज्योतिःशब्दस्याग्नि-सूक्तगत्वादग्नौ प्रसिद्धत्वात् । तेनाग्निरेवोच्यत इत्येतत् पक्षं प्रतिक्षिपत् सूत्र-मुपन्यस्य व्याचष्टे – ज्योतिश्चरणाभिधानादित्यादिना ॥**

**अत्र तावत् कर्णादीन्द्रियाणां विपतनं विचरणं अन्तर्ज्योतिर्विपरीतगमनमेव ज्योतिषश्च तद्विपरीतावस्थानं 'किंस्विद् वक्ष्यामि किमु नू मनिष्ये' इति वाक्यशेषादवगम्यते । अतो 'यन्मनसा न मनुते' इत्यादिश्रुत्यन्तरसिद्धादिन्द्रिय-विदूरत्वाख्यविष्णुलिङ्गात् हृदयाहितं ज्योतिर्विष्णुरेव हि । मनआदिविदूरत्वं नाम मन आदिभिरपरिमेयत्वमेव । न तु सर्वथाऽग्राह्यत्वम् । 'श्रोतव्यो मन्तव्यः' इत्यादिश्रुतिविरोधापत्तेः । अप्रमेयत्वं च विष्णोरेव श्रुतम् । 'परो मात्रया तन्वा वृधान' इत्यादिश्रुत्यन्तरेण । अत्र परशब्दस्यावध्यपेक्षत्वात् मात्राशब्दः पञ्चम्यन्तः कार्यः । ततश्च मात्रया मितेः परोऽपरिमेयप्रभावो मितिसाधनत्वेन मात्राशब्दो-दितेन्द्रियगणपथातीतश्चेत्युक्तं भवति ॥**

ಐತರೇಯಶ್ರುತಿಯಲ್ಲಿ ಹೀಗೆ ಕೇಳಿಸುತ್ತಿದೆ. 'ವಿ ಮೇ ಕರ್ಣಾ ಪತಯತಃ' ಇತ್ಯಾದಿಯಾಗಿ. ಪರಮಾತ್ಮನ ಅಸಾಧಾರಣಧರ್ಮವಾದ ಗುಹಾನಿಹಿತತ್ವವನ್ನು 'ಯೋ ವೇದ ನಿಹಿತಂ ಗುಹಾಯಾಮ್' ಎಂಬ ಶ್ರುತಿಯು ಹೇಳುತ್ತಿದೆ. ಈ ಗುಹಾನಿಹಿತತ್ವವಿಶಿಷ್ಟವಾದ ವ್ಯಕ್ತಿಯನ್ನು ಜ್ಯೋತಿಃಶಬ್ದವು ಪ್ರತಿಪಾದಿಸುತ್ತಿದೆ. 'ಜ್ಯೋತಿರ್ಹೃದಯ ಆಹಿತಂ ಯತ್' ಎಂಬ ಶ್ರುತಿಯಿಂದ ಈ ವಿಚಾರವು ಸ್ಪಷ್ಟವಾಗುತ್ತದೆ. ಆದ್ದರಿಂದ ಈ ಶ್ರುತಿಯನ್ನು ವಿಚಾರಮಾಡಬೇಕು. ಇಲ್ಲಿ ಕೇಳಿಸುತ್ತಿರುವ ಜ್ಯೋತಿಃಶಬ್ದವು ಅಗ್ನಿಪ್ರತಿಪಾದಕವೋ ವಿಷ್ಣುಪ್ರತಿಪಾದಕವೋ ಎಂದು. ಏಕೆಂದರೆ ಜ್ಯೋತಿಃಶಬ್ದವು ಅಗ್ನಿಪ್ರಕರಣದಲ್ಲಿರುವುದರಿಂದ ಅಗ್ನಿಯಲ್ಲಿಯೂ ಪ್ರಸಿದ್ಧವಾಗಿದೆ. ಲೋಕಪ್ರಸಿದ್ಧಿಯು ಬಲಿಷ್ಠ-ವಾದ್ದರಿಂದ ಅಗ್ನಿಯೇ ಜ್ಯೋತಿಃಶಬ್ದಪ್ರತಿಪಾದ್ಯನೆಂದು ಪೂರ್ವಪಕ್ಷ. ಈ ಪೂರ್ವಪಕ್ಷವನ್ನು

ನಿರಾಕರಣೆ ಮಾಡುವುದಕ್ಕಾಗಿ ಸೂತ್ರವನ್ನು ಪಠಿಸುತ್ತಾ ವ್ಯಾಖ್ಯಾನಿಸುತ್ತಿದ್ದಾರೆ ''ಜ್ಯೋತಿಶ್ಚರಣಾ-ಭಿಧಾನಾತ್'' ಇತ್ಯಾದಿಯಾಗಿ.

ಜ್ಯೋತಿಃಶಬ್ದದಿಂದ ವಿಷ್ಣುವೇ ಪ್ರತಿಪಾದ್ಯನು. ಏಕೆಂದರೆ ಈ ಶ್ರುತಿಯಲ್ಲಿ 'ಕರ್ಣಾದಿ ಇಂದ್ರಿಯಗಳಿಗೆ ಅಂತರ್ಜ್ಯೋತಿಯು ಗೋಚರನಾಗಲಾರ' ಎಂಬುದಾಗಿ ಇಂದ್ರಿಯಗಳ ವಿಪರೀತ-ಗಮನವನ್ನು ಜ್ಯೋತಿಗೆ ಹೇಳಲಾಗಿದೆ. 'ಕಂ ಸ್ವಿದ್ ವಕ್ಷ್ಯಾಮಿ ಕಿಮು ನೂ ಮನಿಷ್ಯೇ' ಎಂಬ ವಾಕ್ಯಶೇಷದಿಂದ ಕರ್ಣಾದಿವಿದೂರತ್ವವೇ ಪ್ರಕೃತವಾದ ಜ್ಯೋತಿಗೆ ತಿಳಿಯುತ್ತದೆ. ಆದ್ದರಿಂದ 'ಯನ್ನಸಾ ನ ಮನುತೇ' ಇತ್ಯಾದಿ ಶ್ರುತ್ಯಂತರದಿಂದ ಸಿದ್ಧವಾದ ಇಂದ್ರಿಯವಿದೂರತ್ವವೆಂಬ ವಿಷ್ಣುವಿನ ಅಸಾಧಾರಣವಾದ ಧರ್ಮವಿರುವುದರಿಂದ ಹೃದಯದಲ್ಲಿರುವ ಜ್ಯೋತಿಯು ವಿಷ್ಣುವೇ ಆಗಿದ್ದಾನೆಂದು ನಿರ್ಣಯವಾಗುತ್ತದೆ. 'ಮನ ಆದಿ ವಿದೂರತ್ವ' ಎಂಬ ಶಬ್ದಕ್ಕೆ ಮನಸ್ಸು ಮೊದಲಾದವುಗಳಿಂದ ಪರಿಪೂರ್ಣವಾಗಿ ತಿಳಿಯಲಾರ ಎಂದಷ್ಟೇ ಅರ್ಥ ಹೊರತು ಸರ್ವಥಾ ತಿಳಿಯಲಾರ ಎಂದರ್ಥವಲ್ಲ. ಹಾಗೆ ಅರ್ಥ ಹೇಳಿದರೆ 'ಶ್ರೋತವ್ಯೋ ಮಂತವ್ಯಃ' ಎಂಬ ಶ್ರುತಿಯ ವಿರೋಧ ಬರುತ್ತದೆ. ಸಂಪೂರ್ಣವಾಗಿ ತಿಳಿಯಲಾರನೆಂಬ ಅಪ್ರಮೇಯತ್ವಧರ್ಮವು ವಿಷ್ಣುವಿನದ್ದೇ ಆಗಿದೆ ಎಂಬುದು 'ಪರೋ ಮಾತ್ರಯಾ ತನ್ವಾ ವೃಧಾನ' ಇತ್ಯಾದಿ ಶ್ರುತ್ಯಂತರದಿಂದ ನಿರ್ಣಯ-ವಾಗಿದೆ. 'ಪರೋ ಮಾತ್ರಯಾ' ಎಂಬ ಶ್ರುತಿಯಲ್ಲಿರುವ ಪರಃ ಎಂಬ ಪದವು ಅವಧಿಯನ್ನು ಅಪೇಕ್ಷಿಸುತ್ತಿದೆ. ಆದ್ದರಿಂದ ಮಾತ್ರಾಶಬ್ದವನ್ನು ಪಂಚಮ್ಯಂತ ಮಾಡಬೇಕು. ಆದ್ದರಿಂದ 'ಮಾತ್ರಯಾಃ ಮಿತೇಃ ಪರಃ' ಎಂದು ಹೇಳಿದಂತಾಗುತ್ತದೆ. ಇದರಿಂದ ಅಪ್ರಮೇಯತ್ವವು ಸ್ಪಷ್ಟವಾಗುತ್ತದೆ. ಮಾತ್ರಾ ಶಬ್ದಕ್ಕೆ ಮಿತಿಸಾಧನತ್ವವನ್ನು ವಿವಕ್ಷಿಸಿದಾಗ ಇಂದ್ರಿಯಗಣಾತೀತತ್ವವೆಂಬ ಧರ್ಮವು ತಿಳಿಯುತ್ತದೆ.

ಇಲ್ಲಿಗೆ ಶ್ರೀಪದ್ಮನಾಭತೀರ್ಥಶ್ರೀಮಚ್ಚರಣರಿಂದ ವಿರಚಿತವಾದ ಸತ್ತರ್ಕದೀಪಾವಳಿಯ ಕನ್ನಡಾನುವಾದದಲ್ಲಿ
ಜ್ಯೋತಿರಧಿಕರಣವು ಮುಗಿಯಿತು ॥ ಇತಿ ಶಮ್ ॥

# ೦೧೦-ಜ್ಯೋತಿರಧಿಕರಣ

ಭಾಗ-೨

ತಾತ್ಪರ್ಯಚಂದ್ರಿಕಾ, ಪ್ರಕಾಶ, ಗುರುರಾಜೀಯ,
ಭಾಟ್ಟಸಂಗ್ರಹ, ಶಂಕರಭಾಷ್ಯ, ಭಾಮತೀ,
ಶ್ರೀಭಾಷ್ಯ, ಶ್ರುತಪ್ರಕಾಶ ಇವುಗಳ ಆಯ್ದ ಭಾಗಗಳು

॥ ಶ್ರೀಲಕ್ಷ್ಮೀಹಯಗ್ರೀವೋ ವಿಜಯತೇತಮಾಮ್ ॥

॥ ಶ್ರೀಮಧ್ವರಾಜೋ ವಿಜಯತೇತರಾಮ್ ॥

॥ ಶ್ರೀಗುರುಭ್ಯೋ ನಮಃ ॥

# ಜ್ಯೋತಿರಧಿಕರಣದ ಸಾರ

ಜ್ಯೋತಿರಧಿಕರಣದ ವಿಷಯದಲ್ಲಿ ಮೂವರು ಜ್ಞಾನಿಗಳು ವಿಭಿನ್ನಾಭಿಪ್ರಾಯಗಳನ್ನೊಳಗೊಂಡಿದ್ದಾರೆ.

ತ್ರಿವಿಕ್ರಮಪಂಡಿತರು -- ಈ ಸೂತ್ರವು ಪ್ರತ್ಯೇಕ ಅಧಿಕರಣವಲ್ಲ. ಮುಂದಿನ ಮೂರು ಸೂತ್ರಗಳು ಸೇರಿ ಒಟ್ಟು ನಾಲ್ಕು ಸೂತ್ರಗಳು ಒಂದೇ ಅಧಿಕರಣ. 'ಜ್ಯೋತಿರ್ಹೃದಯ ಆಹಿತಂ ಯತ್' ಎಂಬ ಋಗ್ವೇದದ ಅಗ್ನಿಸೂಕ್ತವು ವಿಷಯವಾಕ್ಯ.

ಪದ್ಮನಾಭತೀರ್ಥರು -- ನಾಲ್ಕುಸೂತ್ರಗಳು ಒಂದೇ ಅಧಿಕರಣವಾಗಿವೆ. ಆದರೆ 'ಅಥ ಯದತಃ ಪರೋ ದಿವೋ ಜ್ಯೋತಿಃ' ಎಂಬ ಛಾಂದೋಗ್ಯವು ವಿಷಯವಾಕ್ಯ. ಅಗ್ನಿಸೂಕ್ತದ ಮಂತ್ರವು ವಿಷಯವಾಕ್ಯವಲ್ಲ.

ಟೀಕಾರಾಯರು – ಮೊದಲನೆಯ ಸೂಕ್ತವು ಜ್ಯೋತಿರಧಿಕರಣ. ಅನಂತರದ ಮೂರು ಸೂತ್ರಗಳು ಗಾಯತ್ರ್ಯಧಿಕರಣ. ಹೀಗೆ ಎರಡೂ ಕೂಡ ಪ್ರತ್ಯೇಕ ಅಧಿಕರಣಗಳಾಗಿವೆ. ಜ್ಯೋತಿರಧಿಕರಣದಲ್ಲಿ ಅಗ್ನಿಸೂಕ್ತದ ಮಂತ್ರವು ವಿಷಯವಾಕ್ಯ. ಗಾಯತ್ರ್ಯಧಿಕರಣದಲ್ಲಿ ಛಾಂದೋಗ್ಯದ ಮಂತ್ರವು ವಿಷಯವಾಕ್ಯ.

ಅಗ್ನಿಸೂಕ್ತದಲ್ಲಿ ಹಾಗೂ ಛಾಂದೋಗ್ಯದಲ್ಲಿ ಹೇಳಲ್ಪಟ್ಟ ತೇಜಸ್ಸು ಹಾಗೂ ಗಾಯತ್ರಿಯು ಒಂದೇ ಹೊರತು ಬೇರೆಯಲ್ಲ. ಈ ವಿಷಯದಲ್ಲಿ 'ತೇಜೋ ವೈ ಬ್ರಹ್ಮವರ್ಚಸಂ ಗಾಯತ್ರೀ' ಎಂಬ ಶ್ರುತಿಯು ಆಧಾರ. ಅಗ್ನಿಸೂಕ್ತದಲ್ಲಿ ಹೇಳಿದ ಕರ್ಣಾದಿವಿದೂರತ್ವಕ್ಕೆ ವಿರುದ್ಧವಾಗಿ ದೃಷ್ಟತ್ವಧರ್ಮವನ್ನು ಛಾಂದೋಗ್ಯವು ಹೇಳಿರಬಹುದು. ಆದರೆ ಭಗವಂತನು ಸಂಪೂರ್ಣ ತಿಳಿಯಲಾರದ ಕಾರಣ ಕರ್ಣಾದಿವಿದೂರನೆಂಬುದು ಅಗ್ನಿಸೂಕ್ತದ ಅಭಿಪ್ರಾಯ. ವಿಕದೇಶದಿಂದ ಎಲ್ಲರಿಗೂ ತಿಳಿಯುತ್ತಾನೆಂಬುದು ಛಾಂದೋಗ್ಯದ ಅಭಿಪ್ರಾಯ.

ತತ್ತ್ವಪ್ರದೀಪಕಾರರಂತೆ ಸನ್ಯಾಯರತ್ನಾವಲೀಕಾರರೂ ಕೂಡ ನಾಲ್ಕೂ ಸೂತ್ರಗಳನ್ನು ಜ್ಯೋತಿರಧಿಕರಣವೆನ್ನುತ್ತಾರೆ. ಆದರೆ ಅಗ್ನಿಸೂಕ್ತವು ವಿಷಯವಲ್ಲ. 'ಅಥ ಯದತಃ ಪರೋ ದಿವೋ ಜ್ಯೋತಿಃ' ಎಂಬ ಛಾಂದೋಗ್ಯವೇ ವಿಷಯವಾಕ್ಯ. ಪ್ರಥಮಸೂತ್ರದಲ್ಲಿ ಹೇಳಿದ ವಿಚರಣಾಭಿಧಾನಹೇತುವು ಈ ವಿಷಯವಾಕ್ಯದಲ್ಲಿ ಇಲ್ಲದಿರಬಹುದು. ಆದರೆ ಛಾಂದೋಗ್ಯದಲ್ಲಿ ಪ್ರತಿಪಾದ್ಯನಾದ ಜ್ಯೋತಿಯೇ ಅಗ್ನಿಸೂಕ್ತದಲ್ಲಿ ಪ್ರತಿಪಾದ್ಯನಾಗಿದ್ದಾನೆ ಹಾಗಾಗಿ ವಿಚರಣಾಭಿಧಾನಹೇತುವಿನಿಂದ ಛಾಂದೋಗ್ಯದ ಜ್ಯೋತಿಯು ವಿಷ್ಣುವೆಂದು ಪ್ರಥಮಸೂತ್ರವು ಪ್ರತಿಪಾದಿಸುತ್ತಿದೆ.

ವಾಸ್ತವಿಕವಾಗಿ ನಿರವಕಾಶವಾದ ಅನೇಕ ವಿಷ್ಣುಲಿಂಗಗಳು ಛಾಂದೋಗ್ಯದಲ್ಲಿಯೇ ಇದೆ. ಅವುಗಳಿಂದಲೇ ಜ್ಯೋತಿಯನ್ನು ವಿಷ್ಣುವೆಂದು ಸಾಧಿಸಬಹುದು. ಅಗ್ನಿಸೂಕ್ತವು ಬೇಕಾಗಿಲ್ಲ. ಆದರೆ ಬೇರೆ ಬೇರೆ ಜ್ಯೋತಿಃಶ್ರುತಿಯಲ್ಲಿರುವ ನಿರವಕಾಶಲಿಂಗಗಳಿಂದ ವಿಷ್ಣುವೇ ಪ್ರತಿಪಾದ್ಯನೆಂದು ಸಾಧಿಸಿದಾಗ ಅನೇಕ ಶ್ರುತಿಗಳ ಸಮನ್ವಯವು ವಿಷ್ಣುವಿನಲ್ಲಿ ಸಿದ್ಧವಾಗುತ್ತದೆ. ವಾಮನನು ಬಲಿಯ ಮೂಲಕ ಮೂರು ಹೆಜ್ಜೆಗಳನ್ನಷ್ಟೇ ಬೇಡಿ, ಅನಂತರ ತ್ರಿವಿಕ್ರಮನಾಗಿ ಸಮಸ್ತ ಜಗತ್ತನ್ನೇ ವ್ಯಾಪಿಸಿದನು. ಇದರಂತೆ ಬೇರೆ ಬೇರೆ ವೇದಗಳಲ್ಲಿರುವ

ವಿಷ್ಣುಲಿಂಗಗಳನ್ನು ಉಲ್ಲೇಖಿಸಿದಾಗ ಕ್ರಮವಾಗಿ ತ್ರಿವಿಕ್ರಮನಂತೆ ಸಮಸ್ತ ವೇದದ ಸಮನ್ವಯವು ಸಿದ್ಧವಾಗುತ್ತದೆ. ಹೀಗೆ ಪದ್ಮನಾಭತೀರ್ಥರು ಚಮತ್ಕಾರಮಯವಾಗಿ ಸೂತ್ರಗಳಿಗೆ ವ್ಯಾಖ್ಯಾನಿಸಿದ್ದಾರೆ.

ತತ್ತ್ವಪ್ರದೀಪಕಾರರ ಮತ್ತು ಸನ್ಯಾಯರತ್ನಾವಲೀಕಾರರ ಪ್ರಕಾರ ಅಗ್ನಿಸೂಕ್ತ ಹಾಗೂ ಛಾಂದೋಗ್ಯ-ವಾಕ್ಯಗಳೆರಡೂ ವಿಷಯವಾಕ್ಯಗಳಾಗಬಹುದು. ವಿಷಯವಾಕ್ಯಗಳು ಬೇರೆ ಬೇರೆಯಾದ ಮಾತ್ರದಿಂದ ಅಧಿಕರಣಗಳಲ್ಲಿ ಭೇದವು ಬರಬೇಕಾಗಿಲ್ಲ. ನ್ಯಾಯಭೇದವಿದ್ದರಷ್ಟೇ ಅಧಿಕರಣಭೇದವನ್ನು ಒಪ್ಪಬೇಕು. ಪ್ರಕೃತ ಎರಡೂ ವಿಷಯವಾಕ್ಯಗಳಲ್ಲಿ ಪ್ರಕರಣದ ಬೆಂಬಲ ಪಡೆದ ಶ್ರುತಿಯೆಂಬ ಪೂರ್ವಪಕ್ಷ ನ್ಯಾಯವು ನಿರತಿಶಯವೈಭವತ್ವವೆಂಬ ಸಿದ್ಧಾಂತನ್ಯಾಯವು ಸಮಾನವಾಗಿದೆ. ಪೂರ್ವಮೀಮಾಂಸೆಯ ಆಘಾರಾಗ್ನಿಹೋತ್ರಾಧಿಕರಣದಲ್ಲಿ ಅನೇಕವಾಕ್ಯಗಳು ವಿಷಯವಾಕ್ಯಗಳಾಗಿವೆ. ಆದರೆ ದ್ರವ್ಯದೇವತಾರೂಪವಾದ ಯಾಗಸ್ವರೂಪದ ಇಲ್ಲದಿರುವಿಕೆಯೆಂಬ ಪೂರ್ವಪಕ್ಷನ್ಯಾಯವು ಮಂತ್ರವರ್ಣಾದಿರೂಪವಾದ ಯಾಗಸ್ವರೂಪದ ನಿಷ್ಪತ್ತಿ-ಯಾಗುವಿಕೆಯೆಂಬ ಸಿದ್ಧಾಂತನ್ಯಾಯವು ಆ ವಿಷಯವಾಕ್ಯಗಳಲ್ಲಿ ಸಮಾನವಾಗಿವೆ. ಆದ್ದರಿಂದ ಒಂದೇ ಅಧಿಕರಣ-ದಲ್ಲಿ ಅವುಗಳನ್ನು ವಿಚಾರ ಮಾಡಿದ್ದಾರೆ. ಹೀಗೆ ಮೀಮಾಂಸಕರಂತೆ ನಾವೂ ಹೇಳಬಹುದು.

ಗಮನಿಸಬೇಕಾದ ಮತ್ತೊಂದು ಸೂಕ್ಷ್ಮವಿಚಾರ. ಮೊದಲೆರಡು ಸೂತ್ರಗಳಿಗೆ ಮಾತ್ರ ಎರಡೂ ವಿಷಯ-ವಾಕ್ಯಗಳಾಗುತ್ತವೆ. ಆನಂತರದ ಎರಡು ಸೂತ್ರಗಳಿಗೆ ಛಾಂದೋಗ್ಯವಾಕ್ಯವಷ್ಟೇ ವಿಷಯವಾಕ್ಯವಾಗುತ್ತದೆ. ಎರಡು ಹಂತದಲ್ಲಿ ವಿಚಾರಮಾಡುವ ಈ ಪದ್ಧತಿಯನ್ನು ಪೂರ್ವಮೀಮಾಂಸೆಯ ಅರ್ಥವಾದಾಧಿಕರಣದಲ್ಲಿ ನೋಡಬಹುದು. ಇಷ್ಟೆಲ್ಲಾ ಅಭಿಪ್ರಾಯದಿಂದ ತತ್ತ್ವಪ್ರದೀಪಕಾರರು ಗರ್ಭಣಿಸ್ತ್ರೀಯಂತೆ ಈ ಅಧಿಕರಣವನ್ನು ಅಂತರ್ಭೇದಾಧಿಕರಣವೆಂದಿದ್ದಾರೆ.

'ಜ್ಯೋತಿಶ್ಚರಣಾಭಿಧಾನಾತ್' ಎಂಬ ಒಂದೇ ಸೂತ್ರ ಪ್ರತ್ಯೇಕ ಅಧಿಕರಣವೆಂದು ಟೀಕಾರಾಯರ ಪಕ್ಷ. ಹಾಗಾದರೆ ಮುಂದಿನ ಗಾಯತ್ಯಧಿಕರಣದಲ್ಲಿ, ಸಮನ್ವಯ ಮಾಡಬೇಕಾದ ಶಬ್ದವನ್ನು ಉಲ್ಲೇಖಿಸಿಲ್ಲವಲ್ಲ? ಎಂಬ ಗೊಂದಲಕ್ಕೆ ಆವಕಾಶವಿಲ್ಲ. ಸಮನ್ವಯ ಮಾಡಬೇಕಾದ ಶಬ್ದವನ್ನು ಪ್ರತಿಯೊಂದು ಅಧಿಕರಣಗಳಲ್ಲಿ ಸೂತ್ರಕಾರರು ಉಲ್ಲೇಖಿಸುತ್ತಾರೆಂಬ ನಿಯಮವಿಲ್ಲ. ಕಂಪನಾಧಿಕರಣದಲ್ಲಿ ಸಮನ್ವಯ ಮಾಡುವ ವಜ್ರಶಬ್ದವನ್ನು ಉಲ್ಲೇಖಿಸಿದ್ದು ಕಾಣುತ್ತಿಲ್ಲ. ಆದರೆ ವಜ್ರಶಬ್ದದ ಅರ್ಥವನ್ನು ಕಂಪನಶಬ್ದದಿಂದ ಸೂಚಿಸಿದ್ದಾರೆ. ಆದರಂತೆ ಇಲ್ಲಿಯೂ 'ಛಂದೋಭಿಧಾನಾತ್' ಎಂಬುದರಿಂದ ಗಾಯತ್ರೀಶಬ್ದದ ಸಮನ್ವಯವನ್ನು ಸೂಚಿಸಿದ್ದಾರೆ.

ಇಲ್ಲಿ ಬರುವ ಮತ್ತೊಂದು ಪ್ರಶ್ನೆ – 'ಛಂದೋಭಿಧಾನಾತ್' ಇತ್ಯಾದಿ ಮೂರು ಸೂತ್ರಗಳು ಗಾಯತ್ರೀಶಬ್ದದ ಸಮನ್ವಯಕ್ಕೋಸ್ಕರ ಹೊರಟಿದ್ದೇ ಆದರೆ ಭಾಷ್ಯಕಾರರು ಅಗ್ನಿಗಾಯತ್ಯಾದಿ ಎಂದು ಅಗ್ನಿಶಬ್ದದ ಸಮನ್ವಯವನ್ನು ಹೇಳಿದ್ದು ತಪ್ಪಾಗುತ್ತದಲ್ಲವೇ? ಎಂದು.

ಭಾಷ್ಯಕಾರರ ಮಾತಿನಲ್ಲಿರುವ ಸೂಕ್ಷ್ಮವನ್ನು ಗಮನಿಸಬೇಕು. ಅಗ್ನಿಶಬ್ದದ ಸಮನ್ವಯಕ್ಕೋಸ್ಕರ ಅಗ್ನಿಶಬ್ದವನ್ನು ಉಲ್ಲೇಖಿಸಿಲ್ಲ ಹೊರತಾಗಿ ಅನ್ಯತ್ರಪ್ರಸಿದ್ಧವಾದ ಗಾಯತ್ರೀಶಬ್ದವನ್ನು ಸಮನ್ವಯ ಮಾಡಿದ್ದರಿಂದ ವಿಷ್ಣುವನ್ನು ಗಾಯತ್ರೀರೂಪದಿಂದ ಉಪಾಸನೆ ಮಾಡಬೇಕು. ಇದರಂತೆ ಹಿಂದಿನ ಮುಂದಿನ ಅಧಿಕರಣಗಳಲ್ಲಿ ಮಾಡಿರುವ ಆಯಾಯ ಶಬ್ದಗಳ ಸಮನ್ವಯದ ಉದ್ದೇಶ ಉಪಾಸನೆಗೋಸ್ಕರ. ಇದನ್ನು ತಿಳಿಸುವುದಕ್ಕಾಗಿ ಹಿಂದಿನ ಅಧಿಕರಣದ ಅಗ್ನಿಶಬ್ದವನ್ನು ಉಪಲಕ್ಷಕವಾಗಿ ಉಲ್ಲೇಖಿಸಿದ್ದಾರೆ. ತತ್ತ್ವಪ್ರದೀಪಕಾರರು ಹಾಗೂ ಸನ್ಯಾಯ-ರತ್ನಾವಲೀಕಾರರೂ ಕೂಡ ಅಗ್ನಿಗಾಯತ್ಯಾದಿ ಎಂಬಲ್ಲಿರುವ ಆದಿ ಪದದ ಸಾರ್ಥಕ್ಯವನ್ನು ಹೀಗೆಯೇ ಹೇಳಬೇಕಾಗುತ್ತದೆ.

ವಸ್ತುತಃ ಅನುವ್ಯಾಖ್ಯಾನ ನ್ಯಾಯವಿವರಣಗಳಲ್ಲಿ ಜ್ಯೋತಿರಧಿಕರಣಕ್ಕೆ ಪ್ರತ್ಯೇಕವಾದ ಅಧಿಕಾಶಂಕೆಯನ್ನು ತೋರಿಸಿಲ್ಲ. 'ಅಗ್ನಿಸೂಕ್ತಸ್ಥತ್ವಾತ್' ಎಂಬ ಭಾಷ್ಯದಲ್ಲಿಯೇ ಅಧಿಕಾಶಂಕೆಯನ್ನು ತೋರಿಸಿದ್ದರಿಂದ ಪುನಃ ಹೇಳಬೇಕಾಗಿಲ್ಲವೆಂದಷ್ಟೇ ಅಭಿಪ್ರಾಯ ಹೊರತು ಪ್ರತ್ಯೇಕ ಅಧಿಕರಣವೆಂದಲ್ಲ. ಪ್ರತಿಯೊಂದು ಅಧಿಕರಣಗಳ ಉಪಾಧಿಯನ್ನು ಹೇಳುವ ನ್ಯಾಯವಿವರಣೆಯ ಅಭಿಪ್ರಾಯವೂ ಇದೇ ಆಗಿದೆ. -- ಆಕಾಶಾಧಿಕರಣದಂತೆ ಅಧಿಭೂತಶಬ್ದವಿಷಯತ್ವ ಅಥವಾ ಅಂತರಧಿಕರಣದಂತೆ ಅಧಿದೈವಗತಶಬ್ದವಿಷಯತ್ವವು ಉಪಾಧಿಯಾಗುತ್ತದೆಂದು ಅಭಿಪ್ರಾಯ. ಸೂಕ್ತವಿಷಯತ್ವವೆಂಬುದು ಅಧಿಕರಣವೈಲಕ್ಷಣ್ಯಕ್ಕೆ ಕಾರಣವಾಗಿದೆ.

ಈ ಮೂರು ಮತಗಳೂ ಸೂತ್ರದ ಯೋಜನೆಯಲ್ಲಷ್ಟೇ ಚರ್ಚಿಸಿವೆ. ಪ್ರಮೇಯವಿಚಾರದಲ್ಲಿ ಚರ್ಚಿಸಿಲ್ಲ. ಮೂವರೂ ಮಹಾಜ್ಞಾನಿಗಳಾದ್ದರಿಂದ ಯಾವ ಪಕ್ಷವನ್ನೂ ಕಡೆಗಾಣಿಸಬಾರದು.

ಎರಡು ಪೂರ್ವಪಕ್ಷಗಳನ್ನು ಸಂಕ್ಷೇಪವಾಗಿ ಹೀಗೆ ಹೇಳಬಹುದು. (೧) ಹಿಂದಿನ ಪ್ರಾಣಾಧಿಕರಣದಲ್ಲಿ ಶ್ರೀಪತಿತ್ವಾದಿಲಿಂಗಗಳು ವಿಷ್ಣುವಿನಲ್ಲಿ ನಿರವಕಾಶಗಳಾಗಿವೆ. ಪ್ರಾಣಶ್ರುತಿಯು ಸಾವಕಾಶವಾದ್ದರಿಂದ ಬಾಧಿತವಾಗುತ್ತದೆಂದು ಸಮರ್ಥಿಸಲಾಯಿತು. ಆದರಂತೆ ಈ ಅಧಿಕರಣದಲ್ಲಿ ಶ್ರುತಿಗೆ ಬಾಧವನ್ನು ಹೇಳಲಾಗದು. ಏಕೆಂದರೆ ಅಗ್ನಿಶ್ರುತಿಗೆ ಅಗ್ನಿಪ್ರಕರಣದ ಬೆಂಬಲವಿದೆ. ಇದು ಸುಧೆಯ ಪೂರ್ವಪಕ್ಷ.

(೨) ಜ್ಯೋತಿಃಶ್ರುತಿ ಹಾಗೂ ವಿಷ್ಣುಲಿಂಗಗಳು ಎರಡೂ ಸಾವಕಾಶವಾಗಿವೆ. ಇವೆರಡರಲ್ಲಿ ಸ್ವಭಾವತಃ ಸಾವಕಾಶ- ಶ್ರುತಿಯೇ ಪ್ರಬಲವೆನಿಸುತ್ತದೆ. ಇಂತಹ ಶ್ರುತಿಯಿಂದ ವಿಷ್ಣುಲಿಂಗವು ಬಾಧಿತವಾಗುತ್ತದೆ. ಇದು ಟೀಕೆಯ ಪೂರ್ವಪಕ್ಷ.

ಸಹಜವಾಗಿ ಇಲ್ಲೊಂದು ಪ್ರಶ್ನೆ ಬರುತ್ತದೆ. ''ಜ್ಯೋತಿಶಬ್ದವು ದೇವತಾಪರವಾದರೆ ಅಂತರಧಿಕರಣನ್ಯಾಯದಿಂದ ವಿಷ್ಣುಪರವೆಂದು ಸಿದ್ಧವಾಗುತ್ತದೆ. ಭೂತಪರವಾದರೆ ಆಕಾಶಾಧಿಕರಣನ್ಯಾಯದಿಂದ ವಿಷ್ಣುಪರವಾಗುತ್ತದೆ. ಹೀಗೆ ಸಾವಕಾಶವಾದ ಜ್ಯೋತಿಶ್ರುತಿಯು ನಿರವಕಾಶವಿಷ್ಣುಲಿಂಗದಿಂದ ಬಾಧಿತವಾಗುತ್ತದಲ್ಲವೇ? ಹೀಗಿರುವಾಗ ಜ್ಯೋತಿರಧಿಕರಣದ ಪೂರ್ವಪಕ್ಷವನ್ನು ಹೇಗೆ ಮಾಡುತ್ತೀರಿ? ಇನ್ನು ಪ್ರಕರಣದ ಬೆಂಬಲವನ್ನು ಜ್ಯೋತಿಶ್ರುತಿಗೆ ಹೇಳಬೇಕು. ಆದರೆ ಶ್ರುತಿಯಂತೆ ಪ್ರಕರಣವೂ ಕೂಡ ಸಾವಕಾಶವಾದಾಗ ಶ್ರುತಿಯನ್ನು ಹೇಗೆ ತಾನೇ ಉಜ್ಜೀವನ ಮಾಡುತ್ತದೆ?'' ಎಂದು. ಈ ಪ್ರಶ್ನೆಗೆ ಇಷ್ಟೇ ಉತ್ತರ -- ಶ್ರುತಿ ಹಾಗೂ ಲಿಂಗಗಳು ಎರಡೂ ಸಾವಕಾಶವಾದಾಗ ಶ್ರುತಿಯೇ ಪ್ರಬಲವಾಗುತ್ತದೆ. ಆದ್ದರಿಂದ ಜ್ಯೋತಿರಧಿಕರಣದ ಪೂರ್ವಪಕ್ಷ ಹೊರಡಲು ಏನೂ ತೊಂದರೆ ಇಲ್ಲ.

ಲಿಂಗ ಹಾಗೂ ಶ್ರುತಿ ಎರಡೂ ಸಾವಕಾಶಗಳಾದಾಗ ಶ್ರುತಿಯು ಸ್ವಭಾವತಃ ಬಲಿಷ್ಠ; ಲಿಂಗವು ಸ್ವಭಾವತಃ ದುರ್ಬಲ ಎನಿಸುತ್ತದೆ. ಇಷ್ಟೇ ಹೇಳಿದರೆ ಸಾಕು. ಶ್ರುತಿಗೆ ಪ್ರಕರಣದ ಬೆಂಬಲ ಹೇಳುವುದು ಅನಾವಶ್ಯಕ. ಜ್ಯೋತಿಶಬ್ದವು ಅಗ್ನಿಯನ್ನು ಪ್ರತಿಪಾದಿಸುತ್ತದೆಂಬ ವಿಚಾರವು ಹೃದಯಾಹಿತತ್ವಲಿಂಗದಿಂದಾಗಲೀ, ಅಥವಾ ಅಗ್ನಿಶಬ್ದದ ಸನ್ನಿಧಾನದಿಂದಾಗಲೀ ತಿಳಿಯುತ್ತದೆ. ಪ್ರಕರಣವು ಬೇಕಾಗಿಲ್ಲ. ಆದರೆ ಭಾಷ್ಯದಲ್ಲಿ ಪ್ರಕರಣವನ್ನು ಪ್ರತ್ಯೇಕವಾಗಿ ಉಲ್ಲೇಖಿಸಿದ್ದಾರೆ. ಭಾಷ್ಯದ ಆಂತರ್ಯವನ್ನು ಹೀಗೆ ತಿಳಿಯಬೇಕು -- 'ಶ್ರುತಿಯು ಸ್ವಾಭಾವಿಕವಾಗಿಯೇ ಲಿಂಗವನ್ನು ಬಾಧಿಸುತ್ತದೆ. ಇದರ ಜೊತೆಗೆ ಪ್ರಕರಣದ ಬೆಂಬಲವಿದ್ದಾಗ ನಿಶ್ಚಯವಾಗಿ ಬಾಧಿಸುತ್ತದೆ' ಎಂದು.

ಇನ್ನು ವಿಷ್ಣುವಿನಲ್ಲಿರುವ ಲಿಂಗಗಳು ನಿರವಕಾಶಗಳಾಗಿದ್ದರೂ ಶ್ರುತಿಯಿಂದ ಬಾಧವು ಬರುತ್ತಿರಲಿಲ್ಲ.

ಆದರೆ ಗುಹಾನಿಹಿತತ್ವಲಿಂಗವು ಜಾಠರಾಗ್ನಿಯಲ್ಲಿ ಸಾವಕಾಶವಾಗಿದೆ. ನಿರತಿಶಯವೈಭವತ್ವವನ್ನೂ ಸಹ ಅಗ್ನಿಶ್ರುತಿಯು ಅಗ್ನಿಯಲ್ಲಿ ಸಾವಕಾಶ ಮಾಡಿದೆ. ಹೀಗೆ ಎಲ್ಲಾ ವಿಷ್ಣುಲಿಂಗಗಳೂ ಸಾವಕಾಶಗಳೇ ಆಗಿವೆ.

'ಅಧಿಕಾಶಂಕಾ ಅಗ್ನಿಸೂಕ್ತಸ್ಥತ್ವಾತ್ ಭಾಷ್ಯ ಏವ ದರ್ಶಿತಾ' ಎಂಬ ಸುಧಾವಾಕ್ಯಕ್ಕೆ ಕೇವಲ ಶ್ರುತಿಯಿಂದ ಪೂರ್ವಪಕ್ಷ ಹುಟ್ಟದ ಕಾರಣ ಅಧಿಕಾಶಂಕೆಯು ಹೊರಟಿದೆ ಎಂದರ್ಥವಲ್ಲ. ಕೇವಲ ಶ್ರುತಿಯಿಂದಲೇ ಪೂರ್ವಪಕ್ಷ ಹುಟ್ಟುತ್ತದೆ; ಆದರ ದಾರ್ಢ್ಯಕ್ಕಾಗಿ ಅಧಿಕಾಶಂಕೆಯ ಪ್ರವೃತ್ತಿಯನ್ನು ತಿಳಿಯಬೇಕು. ಅಥವಾ ಹಿಂದಿನ ಅಧಿಕರಣಗಳಲ್ಲಿ ಅಧಿಕಾಶಂಕೆಯನ್ನು ತೋರಿಸಿದ್ದಾರೆ. ಆದರಂತೆ ಇಲ್ಲಿಯೂ ಪೂರ್ವನ್ಯಾಯದಿಂದ ಗತಾರ್ಥತ್ವವನ್ನು ಪರಿಹರಿಸಲು ಅಧಿಕಾಶಂಕೆಯನ್ನು ತೋರಿಸಿದ್ದಾರೆಂದು ಸುಧೆಯ ಅಭಿಪ್ರಾಯವಾಗಿದೆ.

ಲಿಂಗ ಹಾಗೂ ಶ್ರುತಿ ಎರಡೂ ನಿರವಕಾಶಗಳಾಗಿವೆ. ಶ್ರುತಿಗೆ ನಿರವಕಾಶಪ್ರಕರಣದ ಅನುಗ್ರಹವಿದೆ. ಮತ್ತು ಸ್ವಭಾವತಃ ಪ್ರಾಬಲ್ಯವಿದೆ. ಇಂತಹ ಶ್ರುತಿಯಿಂದ ನಿರವಕಾಶಲಿಂಗವೇ ಬಾಧಿತವಾಗುತ್ತದೆ ಎಂದು ಟೀಕೆಯ ಪೂರ್ವಪಕ್ಷ.

ಟೀಕೆಯ ಪೂರ್ವಪಕ್ಷವನ್ನು ಹಿಂದೆ ಉಪಪಾದಿಸಿದ್ದಾಯಿತು. ಇಲ್ಲಿ ಸುಧೆಯ ಪೂರ್ವಪಕ್ಷವನ್ನು ವಿವರಿಸುತ್ತಿದ್ದಾರೆ. -- ಹಿಂದಿನ ಅಧಿಕರಣದ ನ್ಯಾಯದಂತೆ ಸಾವಕಾಶಶ್ರುತಿಗೆ ಬಾಧವನ್ನು ಹೇಳಬಹುದು. ಆದರೆ ಶ್ರುತಿಯು ಯಾವ ಪ್ರಕರಣವನ್ನು ಆವಲಂಬಿಸಿದೆಯೋ ಆ ಪ್ರಕರಣವು ನಿರವಕಾಶವಾಗಿದೆ. ಇದು ಅಗ್ನಿಸೂಕ್ತ ಹೊರತು ವಿಷ್ಣುಸೂಕ್ತವಲ್ಲ ಎಂಬ ಅಧ್ಯಾಪಕಪ್ರಸಿದ್ಧಿಯೇ ನಿರವಕಾಶತ್ವಸಂಪಾದಕವಾಗಿದೆ. ಹೀಗೆ ನಿರವಕಾಶ-ಪ್ರಕರಣದ ಅನುಗ್ರಹವಿರುವುದರಿಂದ ಶ್ರುತಿಯು ಬಲಿಷ್ಠವಾಗುತ್ತದೆ. ಆಷ್ಟೇ ಅಲ್ಲದೆ ಶ್ರುತಿತ್ವಪ್ರಯುಕ್ತವಾಗಿಯೂ ಬಲಿಷ್ಠವಾಗಿದೆ. ಹೀಗೆ ಎರಡು ಮುಖಗಳಿಂದ ಶ್ರುತಿಯು ಅತ್ಯಂತ ಪ್ರಬಲವೆನಿಸಿದೆ. ಆದರೆ ಲಿಂಗವು ಕೇವಲ ನಿರವಕಾಶಪ್ರಯುಕ್ತವಾಗಿ ಪ್ರಬಲವಾಗಿದೆ. ಈ ಲಿಂಗವು ನಿರವಕಾಶಪ್ರಕರಣದ ಅನುಗ್ರಹವಿರುವ ಶ್ರುತಿಯಿಂದ ಬಾಧಿತವಾಗುವುದರಲ್ಲಿ ಸಂದೇಹವಿಲ್ಲ. ಇನ್ನು ದುರ್ಬಲವಾದ ಅನೇಕ ಲಿಂಗಗಳ ಬೆಂಬಲವನ್ನು ಮುಂದಿಡ-ಬಹುದು ಆದರೆ ಬಲಿಷ್ಠವಾದ ಶ್ರುತಿಯು ಆ ಎಲ್ಲ ಲಿಂಗಗಳನ್ನು ಶಕ್ತಿ ಇಲ್ಲದಂತೆ ಮಾಡುತ್ತದೆ. ನಿರವಕಾಶ-ಪ್ರಕರಣದ ಅನುಗ್ರಹವಿರುವ ಶ್ರುತಿಯಿಂದ ಲಿಂಗವು ಬಾಧಿತವಾಗುತ್ತದೆಂಬ ಈ ಪೂರ್ವಪಕ್ಷವನ್ನು ಹಿಂದಿನ ಮುಂದಿನ ಯಾವುದೇ ಅಧಿಕರಣಗಳಿಂದಲೂ ಪರಿಹರಿಸಲು ಸಾಧ್ಯವಿಲ್ಲದ ಕಾರಣ ಈ ಅಧಿಕರಣದ ಪ್ರವೃತ್ತಿಯು ಅನಿವಾರ್ಯವಾಗಿದೆ.

ಸುಧೆಗೆ ಅನುಸಾರಿಯಾಗಿಯೇ ಟೀಕೆಯ ಪೂರ್ವಪಕ್ಷವನ್ನು ಹೊಂದಿಸಬಹುದು. ಸುಧೆಗೆ ವಿರುದ್ಧವಾಗಿ ಟೀಕೆಯಲ್ಲಿ ಲಿಂಗ ಸಾವಕಾಶ ಎಂಬ ಮಾತು ಕಾಣಿಸುತ್ತದೆ. ಆದರ ಕರ್ಣಾದಿವಿದೂರತ್ವಲಿಂಗವು ಸಾವಕಾಶವೆಂದು ಇದರ ಅರ್ಥವಲ್ಲ. ಗುಹಾನಿಹಿತತ್ವವು ಸಾವಕಾಶ ಎಂದರ್ಥ. ಅಥವಾ ಕರ್ಣಾದಿವಿದೂರತ್ವಲಿಂಗವು ಸ್ವತಃ ನಿರವಕಾಶವಾಗಿದ್ದರೂ ನಿರವಕಾಶಪ್ರಕರಣದ ಅನುಗ್ರಹವಿರುವ ಶ್ರುತಿಯ ಬಲದಿಂದ ಕರ್ಣಾದಿವಿದೂರತ್ವವನ್ನು ಅಗ್ನಿಯಲ್ಲಿ ಸಾವಕಾಶ ಮಾಡಬಹುದು. ಹೀಗೆ ಟೀಕೆಯನ್ನು ಅರ್ಥೈಸಿದಾಗ ಸುಧೆಯ ಅಭಿಪ್ರಾಯವನ್ನೇ ಸ್ಪಷ್ಟಪಡಿಸಿದಂತಾಗುತ್ತದೆ.

ಹೀಗೆ ಪ್ರಮಾಣಾಶ್ರಿತಪೂರ್ವಪಕ್ಷವನ್ನು ಎರಡು ಬಗೆಯಲ್ಲಿ ತಿಳಿಯಬೇಕು.

ಪ್ರಮೇಯಾಶ್ರಿತಪೂರ್ವಪಕ್ಷ. ತಮೋವಿರೋಧಿತ್ವವು ಜ್ಯೋತಿಶಬ್ದದ ಪ್ರವೃತ್ತಿನಿಮಿತ್ತವಾಗಿದೆ. ತಮಸ್ಸಿನ ಜೊತೆಯಲ್ಲಿ ವಾಸಮಾಡುವ ಬ್ರಹ್ಮನಲ್ಲಿ ಈ ಪ್ರವೃತ್ತಿನಿಮಿತ್ತವನ್ನು ಕೂಡಿಸಲು ಸಾಧ್ಯವಿಲ್ಲ. ಆದ್ದರಿಂದ ಜ್ಯೋತಿಶಬ್ದದಿಂದ ಅಗ್ನಿಯೇ ಪ್ರತಿಪಾದ್ಯನಾಗುತ್ತಾನೆ; ವಿಷ್ಣುವಲ್ಲ.

ಈ ಅಧಿಕರಣದ ಸಿದ್ಧಾಂತ : ಕರ್ಣಾದಿವಿದೂರತ್ವಲಿಂಗವು ವಿಷ್ಣುವಿನಲ್ಲಿ ನಿರವಕಾಶವಾಗಿದೆಯೆಂದು 'ಪರೋ ಮಾತ್ರಯಾ' ಇತ್ಯಾದಿ ಶ್ರುತಿಗಳು ಸಾಧಿಸುತ್ತಿವೆ. ಅಪರಿಮಿತಗುಣಗಳಿದ್ದು ಯಾವುದೇ ದೋಷವಿಲ್ಲದ ವ್ಯಕ್ತಿಯಲ್ಲಷ್ಟೇ ಕರ್ಣಾದಿ ವಿದೂರತ್ವವನ್ನು ಹೇಳಲು ಸಾಧ್ಯ. ಭಯ ಮರಣ ಮೊದಲಾದ ದೋಷಗಳಿಂದ ಕೂಡಿದ ಅಧಮನಾದ ಅಗ್ನಿದೇವತೆಯಲ್ಲಿ ಕರ್ಣಾದಿವಿದೂರತ್ವವನ್ನು ಹೇಳಲು ಹೇಗೆ ತಾನೆ ಸಾಧ್ಯ ? ಹೀಗೆ ಯಾವುದೇ ಕಾರಣದಿಂದಲೂ ವಿಷ್ಣುವನ್ನು ಬಿಟ್ಟು ಅಗ್ನಿದೇವತೆಯಲ್ಲಿ ಕರ್ಣಾದಿವಿದೂರತ್ವವನ್ನು ಹೇಳಲಾಗದು. ಆದ್ದರಿಂದ ಕರ್ಣಾದಿವಿದೂರತ್ವಲಿಂಗವು ಅಗ್ನಿಯಲ್ಲಿ ಸಾವಕಾಶವಾಗಿದೆಯೆಂಬ ಪೂರ್ವಪಕ್ಷವು ನಿರಾಕೃತವಾಯಿತು.

ಇನ್ನು ಅಗ್ನಿಪ್ರಕರಣ ಹಾಗೂ ಶ್ರುತಿಗಳು ನಿರವಕಾಶವೆಂಬ ಪೂರ್ವಪಕ್ಷವು ಸರಿಯಲ್ಲ. ಹತ್ತಾರು ಶ್ರುತಿಸ್ಮೃತಿಗಳು ವಿಷ್ಣುವನ್ನೇ 'ಅಗ್ನಿ, ಜ್ಯೋತಿ' ಎಂದು ಸಾರಿ ಹೇಳುತ್ತಿರುವಾಗ ಈ ಶಬ್ದಗಳು ಅಗ್ನಿದೇವತೆಯಲ್ಲಿ ನಿರವಕಾಶಗಳಾಗುವುದಿಲ್ಲ. 'ಇದು ಅಗ್ನಿಸೂಕ್ತವೇ ಹೊರತು ವಿಷ್ಣುಸೂಕ್ತವಲ್ಲ' ಎಂದು ಕೆಲವು ಅಧ್ಯಾಪಕರು ಹೇಳಿದರೆ ಅದು ಕೇವಲ ಅವರ ಅಜ್ಞಾನ ಹೊರತು ಯಥಾರ್ಥಸಂಗತಿಯಲ್ಲ.

ಅಗ್ನಿಸೂಕ್ತವಾಗಿದ್ದರೂ ಸಹ ಕರ್ಣಾದಿವಿದೂರತ್ವ ಮೊದಲಾದ ನಿರವಕಾಶಲಿಂಗಬಲದಿಂದ ವಿಷ್ಣುಪರವೇ ಆಗುತ್ತದೆ. ಈ ನ್ಯಾಯವು ಅಗ್ನಿಸೂಕ್ತದಲ್ಲಷ್ಟೇ ಅಲ್ಲ. ಇಂದ್ರ ಬೃಹಸ್ಪತಿ ಸೂರ್ಯ ವರುಣ ವಿಶ್ವಕರ್ಮ ಮೊದಲಾದವರ ಸೂಕ್ತಗಳಲ್ಲಿಯೂ ಅನ್ವಯಿಸುತ್ತದೆ. ಮತ್ತು ಸೌರಸೂಕ್ತದಲ್ಲಿ ಪಾವಕವರುಣ ಮೊದಲಾದ ಬೇರೆ ಬೇರೆ ದೇವತೆಗಳನ್ನು ಸಂಬೋಧನೆ ಮಾಡುವ ಶಬ್ದಗಳಿವೆ. ವರುಣಸೂಕ್ತದಲ್ಲಿ ಆದಿತ್ಯ ಎಂದಿದೆ. ಅಗ್ನಿಸೂಕ್ತದಲ್ಲಿ ಇಂದ್ರ ಎಂದಿದೆ. ಹೀಗೆ ಆಯಾಯ ದೇವತೆಗಳನ್ನು ಹೇಳುವ ಸೂಕ್ತಗಳಲ್ಲಿ ಬೇರೆ ದೇವತೆಗಳನ್ನು ಸಂಬೋಧಿಸುವ ಪದಗಳು ಬಹಳಷ್ಟು ಕಾಣಿಸುತ್ತವೆ. ಆದ್ದರಿಂದ ನಿರವಕಾಶಬ್ರಹ್ಮಲಿಂಗಗಳಿರುವ ಸೂಕ್ತಗಳೆಲ್ಲವೂ ವಿಷ್ಣುವನ್ನಷ್ಟೇ ಪ್ರತಿಪಾದಿಸುತ್ತವೆ ಎಂದು ಒಪ್ಪಿದಾಗ ಮಾತ್ರ ಈ ಅನುಪಪತ್ತಿಯು ಪರಿಹಾರವಾಗಲು ಸಾಧ್ಯ.

ಈ ಸೂಕ್ತಗಳಲ್ಲಿರುವ ಬ್ರಹ್ಮಲಿಂಗಗಳು ಕೇವಲ ಸ್ತೋತ್ರಪರವೆಂದು ಕೆಲವರ ಅಭಿಪ್ರಾಯ. ಹಾಗಾದಲ್ಲಿ ಆಕಾಶಪ್ರಾಣಾದಿಗಳಲ್ಲಿ ಹೇಳಿದ ಪರೋವರೀಯಸ್ತ್ವಾದಿ ಲಿಂಗಗಳೂ ಸಹ ಸ್ತೋತ್ರಪರವೆಂದಾಗಿ ಬ್ರಹ್ಮಲಿಂಗಗಳೇ ಆಗದಿರಬೇಕಾದೀತು? ಆವಾಗ ಆಕಾಶಾದ್ಯಧಿಕರಣಗಳು ಹೊರಟಿದ್ದೇ ವ್ಯರ್ಥವಾಗಬೇಕಾದೀತು.

ನಿರವಕಾಶಲಿಂಗದಿಂದ ಪ್ರಕರಣಾನುಗ್ರಹವಿರುವ ಶ್ರುತಿಯು ಸಹ ಬಾಧಿತವಾಗುತ್ತದೆಂಬುದು ಈ ಅಧಿಕರಣದ ಸಿದ್ಧಾಂತನ್ಯಾಯ. ಈ ನ್ಯಾಯದಿಂದಲೇ ಅಂತರಧಿಕರಣದ ಪೂರ್ವಪಕ್ಷವೂ ಸಹ ನಿರಾಕೃತವಾಗುತ್ತದೆ. ಪುನಃ ಅಂತರಧಿಕರಣದ ಸಿದ್ಧಾಂತನ್ಯಾಯವು ಅನಾವಶ್ಯಕವಲ್ಲವೇ? ಎಂಬ ಪ್ರಶ್ನೆಗೆ ಹೀಗೆ ಉತ್ತರ -- ಅಂತರಧಿಕರಣದ ನ್ಯಾಯವನ್ನು ಅವಲಂಬಿಸಿಯೇ ಈ ಅಧಿಕರಣವು ಹೊರಟಿದೆ. ಈ ಅಧಿಕರಣವು ಪುನಃ ತನಗೆ ಆಶ್ರಯವಾದ ಅಂತರಧಿಕರಣವನ್ನೇ ಅಲ್ಲಗಳೆಯಲು ಸಾಧ್ಯವಿಲ್ಲ.

ಮೂರನೆಯ ಪಾದದ ಜ್ಯೋತಿರುಪಕ್ರಮಾಧಿಕರಣದಿಂದ ಈ ಅಧಿಕರಣದಿಂದ ಪುನರುಕ್ತಿ ಬರುತ್ತದೆಂದು ಮತ್ತೊಂದು ಪ್ರಶ್ನೆ. ಆದರೆ ಬೃಹದಾರಣ್ಯಕದಲ್ಲಿ ಬರುವ ಉಪಕ್ರಮ ಉಪಸಂಹಾರಗಳು ವಿಷ್ಣುಪರವಾದ್ದರಿಂದ ಜೀವಲಿಂಗವೆನಿಸಿದ ಮ್ರಿಯಮಾಣತ್ವಾದಿಗಳು ಕಥಂಚಿತ್ ವಿಷ್ಣುವಿನಲ್ಲಿ ಯೋಜನೆ ಮಾಡಬೇಕೆಂಬುದು ಜ್ಯೋತಿರುಪಕ್ರಮಾಧಿಕರಣದ ಸಿದ್ಧಾಂತನ್ಯಾಯ. ನಿರವಕಾಶಲಿಂಗದಿಂದ ಸಾವಕಾಶವು ಬಾಧಿತವಾಗುತ್ತದೆಂಬುದು ಈ ಅಧಿಕರಣದ ಸಿದ್ಧಾಂತನ್ಯಾಯ. ಹೀಗೆ ಎರಡೂ ಅಧಿಕರಣದ ಸಿದ್ಧಾಂತನ್ಯಾಯಗಳು ವಿಭಿನ್ನವಾಗಿರುವಾಗ ಪುನರುಕ್ತಿಗೆ ಅವಕಾಶವಿಲ್ಲ.

ಪ್ರಕಾಶತ್ವವು ಜ್ಯೋತಿಶಬ್ದದ ಪ್ರವೃತ್ತಿನಿಮಿತ್ತವಾದ್ದರಿಂದ ಪ್ರಮೇಯಾಶ್ರಿತ ಪೂರ್ವಪಕ್ಷಕ್ಕೆ ಅವಕಾಶವಿಲ್ಲ.

ಸೂತ್ರಕಾರರು ಕರ್ಣಾದಿವಿದೂರತ್ವಲಿಂಗವನ್ನೇ ಉಲ್ಲೇಖಿಸಲು ಕಾರಣವೇನೆಂದರೆ ವಿಷಯವಾಕ್ಯದಲ್ಲಿ ಸ್ಪಷ್ಟವಾಗಿ ಕೇಳಿಸುತ್ತಿದೆ ಎಂದು. ಮತ್ತು ಉಳಿದೆಲ್ಲ ಲಿಂಗಗಳು ಆಪರಿಮಿತವೈಭವದಲ್ಲಿಯೇ ಸೇರಿಹೋಗಿವೆ ಎಂದು. ವಸ್ತುತಃ ಸೂತ್ರಕಾರರು ವಿಚರಣಾಭಿಧಾನಾತ್ ಎಂದೇ ಹೇಳಬೇಕು. ಆದರೆ ಶ್ರುತಿಯಲ್ಲಿ ಈ ಶಬ್ದವು ದೂರದಲ್ಲಿದ್ದು ಚರಣಾಭಿಧಾನ 'ಶಬ್ದವು' ಎಂದಷ್ಟೇ ಕೇಳಿಸುತ್ತಿದೆ. ಆದರ ಅನುಗಮಕ್ಕಾಗಿ 'ಚರಣಾಭಿಧಾನಾತ್' ಎಂದಿದ್ದಾರೆ. ಜ್ಯೋತಿಶಬ್ದದ ಪ್ರವೃತ್ತಿನಿಮಿತ್ತವು ಮುಖ್ಯವಾಗಿ ಭಗವಂತನಲ್ಲಿಯೇ ಬರುವುದರಿಂದ ಭಗವಂತನೇ ಜ್ಯೋತಿಮೊದಲಾದ ಶಬ್ದಗಳಿಂದ ಪ್ರತಿಪಾದ್ಯನಾಗಿದ್ದಾನೆ.

* * * * *

ಶ್ರೀಬ್ರಹ್ಮಣ್ಯತೀರ್ಥಶ್ರೀಪಾದಶಿಷ್ಯವ್ಯಾಸತೀರ್ಥವಿರಚಿತಾ

# ತಾತ್ಪರ್ಯಚಂದ್ರಿಕಾ

## अथ ज्योतिरधिकरणम्

ಜ್ಯೋತಿರಧಿಕರಣ - ಅಧಿಕರಣವಿಭಾಗದಲ್ಲಿ ದ್ವೈತಸಿದ್ಧಾಂತದ ವಿಭಿನ್ನ ಅಭಿಪ್ರಾಯಗಳು

**ॐ ज्योतिश्चरणाभिधानात् ॐ ॥ अत्र त्रीणि दर्शनानि । 'ज्योतिः'इत्यादि-चतुस्सूत्री एकमधिकरणम् । विषयवाक्यं तु अग्निसूक्तस्थं ''ज्योतिर्हृदय आहितं यत्'' इति वाक्यमेवेत्येकं मतम् । इदं च ''ज्योतिः'' इत्यस्य सूत्रस्य अग्निसूक्तस्थं वाक्यमेव उदाहृत्य, ''इदं चैकमधिकरण'' इति वदतः तत्त्वप्रदीपकृतोऽभिप्रेतम् ।**

**मतान्तरं तु – चतुस्सूत्र्या एकाधिकरणत्वेऽपि, विषयवाक्यं ''ज्योतिः'' इत्यस्यापि ''अथ यदतः परोदिवो ज्योतिः'' इति छान्दोग्यवाक्यमेवेति । इदं च ''छन्दोऽभिधानात्'' इति सूत्रव्याख्यानरूपं ''नित्यत्वादेव शब्दानाम्'' इत्यनु-व्याख्यानं, 'ज्योतिश्चरणाभिधानात्' इत्यधिकरणं तात्पर्यतो विवृणोतीत्यवतार्य, ''ज्योतिः'' इति सूत्रस्य छान्दोग्यवाक्यमेवोदाहरतः सन्न्यायरत्नावलीकारस्याभि-प्रेतम् ।**

**मतान्तरं तु – ज्योतिस्सूत्रमेकाधिकरणं, ''छन्दः'' इत्यादि त्रिसूत्री त्वधि-करणान्तरमिति । इदं च टीकाकारस्याभिप्रेतम् ।**

ಅನುವಾದ - ಜ್ಯೋತಿರಧಿಕರಣದ ವಿಭಾಗದಲ್ಲಿ ಮೂರು ಮತಗಳಿವೆ.

೧. ಜ್ಯೋತಿರಿತ್ಯಾದಿ ನಾಲ್ಕು ಸೂತ್ರಗಳು ಸೇರಿ ಒಂದೇ ಅಧಿಕರಣ. ಅಗ್ನಿಸೂಕ್ತದಲ್ಲಿರುವ 'ಜ್ಯೋತಿರ್ಹೃದಯ ಆಹಿತಂ ಯತ್' ಎಂಬ ವಾಕ್ಯವೇ ಅಧಿಕರಣದ ವಿಷಯವಾಕ್ಯವೆಂದು ಮೊದಲನೆಯ ಮತ. ಈ ಮತದವರು 'ಜ್ಯೋತಿಶ್ಚರಣಾಭಿಧಾನಾತ್' ಎಂಬ ಸೂತ್ರಕ್ಕೆ ಅಗ್ನಿಸೂಕ್ತ-ದಲ್ಲಿರುವ ವಾಕ್ಯವನ್ನೇ ಉದಾಹರಿಸಿ 'ಇದಂ ಚ ಏಕಮಧಿಕರಣಮ್' (ಇದು ಒಂದೇ ಅಧಿಕರಣ-ವಾಗಿದೆ) ಎಂಬುದು ತತ್ವಪ್ರದೀಪಕಾರರ ಅಭಿಪ್ರಾಯವಾಗಿದೆ.

೨. ಮತ್ತೊಂದು ಮತ ನಾಲ್ಕುಸೂತ್ರಗಳು ಒಂದೇ ಅಧಿಕರಣವಾಗಿದ್ದರೂ 'ಜ್ಯೋತಿಶ್ಚರಣಾ-

ಭಿಧಾನಾತ್' ಎಂಬ ಸೂತ್ರಕ್ಕೆ 'ಅಥ ಯದತಃ ಪರೋ ದಿವೋ ಜ್ಯೋತಿಃ' ಎಂಬ ಛಾಂದೋಗ್ಯ-ಶ್ರುತಿಯು ವಿಷಯವಾಕ್ಯವಾಗಿದೆ. 'ಛಂದೋಭಿಧಾನಾತ್' ಎಂಬ ಸೂತ್ರವ್ಯಾಖ್ಯಾನರೂಪವಾದ 'ನಿತ್ಯತ್ವಾದೇವ ಶಬ್ದಾನಾಮ್' ಎಂಬ ಅನುವ್ಯಾಖ್ಯಾನದ ಅವತಾರಿಕೆ ಹೀಗಿದೆ - 'ಜ್ಯೋತಿಶ್ಚರಣಾಭಿ-ಧಾನಾತ್ ಇತ್ಯಧಿಕರಣಂ ತಾತ್ಪರ್ಯತಃ ವಿವೃಣೋತಿ' (ಜ್ಯೋತಿರಧಿಕರಣದ ತಾತ್ಪರ್ಯವನ್ನು ವಿವರಿಸುತ್ತಿದ್ದಾರೆ' ಎಂದು) ಹೀಗೆ ಅವತಾರಿಕೆ ನೀಡಿ ಛಾಂದೋಗ್ಯವಾಕ್ಯವನ್ನೇ ಸೂತ್ರದ ವಿಷಯ-ವಾಕ್ಯವನ್ನಾಗಿ ಉದಾಹರಿಸುವುದು. ಇದು ಸನ್ನ್ಯಾಯರತ್ನಾವಲೀಕಾರರ ಅಭಿಪ್ರಾಯ.

೩. ಮತ್ತೊಂದು ಮತ. 'ಜ್ಯೋತಿಶ್ಚರಣಾಭಿಧಾನಾತ್' ಎಂಬ ಒಂದು ಸೂತ್ರವು ಪ್ರತ್ಯೇಕ ಅಧಿಕರಣವಾಗಿದೆ. 'ಛಂದೋಭಿಧಾನಾತ್' ಇತ್ಯಾದಿ ಮೂರು ಸೂತ್ರಗಳು ಮತ್ತೊಂದು ಅಧಿಕರಣ-ವಾಗಿದೆ. ಇದು ತತ್ತ್ವಪ್ರಕಾಶಿಕಾಕಾರರಿಗೆ ಸಮ್ಮತವಾದದ್ದು.

ಕಠಿಣಪದಾರ್ಥ

ಅತ್ರ = ಅಧಿಕರಣವಿಭಾಗವಿಷಯದಲ್ಲಿ; ತ್ರೀಣಿ ದರ್ಶನಾನಿ = ಸಿದ್ಧಾಂತಿಗಳ ಮೂರು ವಿಭಿನ್ನ ಅಭಿಪ್ರಾಯಗಳಿವೆ; ಇದಂ ಚ = ಈ ಮತವು; ತತ್ತ್ವಪ್ರದೀಪಕೃತಃ = ಪ್ರಾಚೀನಭಾಷ್ಯವ್ಯಾಖ್ಯಾನಕಾರರೆಂದು ಪ್ರಸಿದ್ಧರಾದ ತ್ರಿವಿಕ್ರಮಪಂಡಿತಚಾರ್ಯರರಿಗೆ ಅಭಿಪ್ರೇತವಾಗಿದೆ; ಸನ್ನ್ಯಾಯರತ್ನಾವಲೀಕಾರಸ್ಯ = ಪ್ರಾಚೀನ ಅನುವ್ಯಾಖ್ಯಾನ ವ್ಯಾಖ್ಯಾನಕಾರರೆಂದು ಪ್ರಸಿದ್ಧರಾದ ಪದ್ಮನಾಭತೀರ್ಥರಿಗೆ, ಟೀಕಾಕಾರಸ್ಯ = ತತ್ತ್ವಪ್ರಕಾಶಿಕಾಕಾರರಾದ ಟೀಕಾರಾಯರಿಗೆ

**ಪ್ರಕಾಶಃ – ॐ ज्योतिश्चरणाभिधानात् ॐ ॥** ''ಟೀಕಾಸು ಚ ಯದಸ್ಪಷ್ಟಮ್'' ಇತಿ ಪ್ರತಿಜ್ಞಾನುರೋಧೇನ ಟೀಕಾಕೃತಾಂ ಯೋಜನಾಭೇದೇಷ್ವಪಪತ್ತೀರ್ವಿಕ್ಷುರ್ವಿರೋಧಂ ಚ ಪರಿಜಿಹೀರ್ಷುಸ್ತದುಕ್ತ-ಯೋಜನಾಭೇದಾನ್ ದರ್ಶಯತಿ – **ಅತ್ರೇತಿ ॥** ''ತ್ರೀಣಿ ದರ್ಶನಾನಿ'' ಇತ್ಯುಕ್ತ್ವಾ ತ್ರಯಮಪ್ಯುಪಾದೇಯ-ಮಿತಿ ಸೂಚಯತಿ – **ಚತುಸ್ಸೂತ್ರೀತಿ॥** 'ಜ್ಯೋತಿಃ' ಇತ್ಯೇಕಮ್, **'ಛನ್ದೋऽಭಿಧಾನಾನ್ನೇತಿ ಚೇನ್ನ ತಥಾ ಚೇತೋರ್ಪಣನಿಗದಾತ್ತಥಾ ಹಿ ದರ್ಶನಮ್' 'ಭೂತಾದಿಪಾದವ್ಯಪದೇಶೋಪಪತ್ತೇಶ್ಚೈವಮ್' 'ಉಪದೇಶಭೇದಾನ್ನೇತಿ ಚೇನ್ನೋಭಯಸ್ಮಿನ್ನಪ್ಯವಿರೋಧಾತ್'** ಇತಿ ಚತುಸ್ಸೂತ್ರೀ ॥ **ತತ್ತ್ವಪ್ರದೀಪೇತಿ ॥** ಪ್ರಾಚೀನಭಾಷ್ಯವ್ಯಾಕರ್ತುಃ ।

''ಇತಿ ಸೂತ್ರವ್ಯಾಖ್ಯಾನರೂಪಂ'' ಇತಿ ಸುಧಾರೀತ್ಯೋಕ್ತಮ್, ಏತನ್ಮತೇ ಜ್ಯೋತಿಸ್ಸೂತ್ರಸ್ಯಾಪಿ ತಾತ್ಪರ್ಯತೋ ವ್ಯಾಖ್ಯಾನರೂಪತ್ವಾತ್ । ಯದ್ವಾ – ಸಾಕ್ಷಾಚ್ಛನ್ದಸ್ಸೂತ್ರಸ್ಯೈವ ವ್ಯಾಖ್ಯಾನರೂಪತ್ವಾ-ಭಿಪ್ರಾಯೇಣೈವಮುಕ್ತಮ್ 'ಇತ್ಯನುವ್ಯಾಖ್ಯಾನಂ ಇತ್ಯವತಾರ್ಯ' ಇತ್ಯನ್ವಯಃ ॥ **ಸನ್ಯಾಯೇತಿ ॥** ಪ್ರಾಚೀನಾನುವ್ಯಾಖ್ಯಾನವ್ಯಾಖ್ಯಾತುಃ ॥ **ಟೀಕಾಕಾರಸ್ಯೇತಿ ॥** ತತ್ವಪ್ರಕಾಶಿಕಾಕೃತಃ ।

ವಿವರಣೆ - ಜ್ಯೋತಿರಧಿಕರಣವು ಪ್ರಾರಂಭವಾಗುತ್ತಿದೆ. 'ಟೀಕಾಸು ಚ ಯದಸ್ಪಷ್ಟಮ್' ಎಂದು ಗ್ರಂಥಕಾರರು ಎಲ್ಲಾ ಟೀಕೆಗಳ ವಿರೋಧವನ್ನು ಪರಿಹಾರ ಮಾಡುತ್ತೇವೆಂದು ಪ್ರತಿಜ್ಞೆ ಮಾಡಿದ್ದರು. ಅದರಂತೆ ಜ್ಯೋತಿರಧಿಕರಣದ ವಿಷಯದಲ್ಲಿ ಆಪಾತತಃ ತೋರುವ ಟೀಕೆಗಳ ವಿರೋಧವನ್ನು ಪರಿಹರಿಸುತ್ತಿದ್ದಾರೆ. 'ಜ್ಯೋತಿಶ್ಚರಣಾಭಿಧಾನಾತ್' ಇತ್ಯಾದಿ ನಾಲ್ಕು ಸೂತ್ರಗಳು ಸೇರಿ ಒಂದೇ ಅಧಿಕರಣವೋ? ಅಥವಾ ಎರಡು ಅಧಿಕರಣಗಳೋ? ಒಂದೇ ಅಧಿಕರಣವಾದರೂ ಅಗ್ನಿಸೂಕ್ತದಲ್ಲಿರುವ ಶ್ರುತಿಯು ವಿಷಯವಾಕ್ಯವೋ? ಛಾಂದೋಗ್ಯಶ್ರುತಿಯು ವಿಷಯವಾಕ್ಯವೋ? ಎಂದು ಮೂರು ಟೀಕೆಗಳಿಗೆ ಪರಸ್ಪರವಿರೋಧ ಕಾಣಿಸುತ್ತಿದೆ. ಗ್ರಂಥಕಾರರು 'ತ್ರೀಣಿ ದರ್ಶನಾನಿ' ಎಂದು ಹೇಳಿದ್ದರಿಂದ (ಕೇಚಿತ್ತು ಇತ್ಯಾದಿ ಪದಗಳನ್ನಾಗಲೀ, ಅಹುಃ ಇತ್ಯಾದಿ ಪದಗಳನ್ನಾಗಲೀ ಉಲ್ಲೇಖಿಸದ ಕಾರಣ) ಮೂರೂ ಮತಗಳು ಉಪಾದೇಯವೆಂದು ಸೂಚಿಸಿದ್ದಾರೆ.

ಓಂ ಜ್ಯೋತಿಶ್ಚರಣಾಭಿಧಾನಾತ್ ಓಂ, 'ಓಂ ಛಂದೋಭಿಧಾನಾತ್ ನೇತಿ ಚೇನ್ನ ತಥಾ ಚೇತೋರ್ಪಣನಿಗದಾತ್ ತಥಾ ಹಿ ದರ್ಶನಮ್ ಓಂ', 'ಓಂ ಭೂತಾದಿಪಾದವ್ಯಪದೇಶೋಪಪತ್ತೇಶ್ಚೈವಂ ಓಂ' 'ಓಂ ಉಪದೇಶಭೇದಾತ್ ನೇತಿ ಚೇನ್ನ ಉಭಯಸ್ಮಿನ್ನಪ್ಯವಿರೋಧಾತ್ ಓಂ' ಈ ನಾಲ್ಕುಸೂತ್ರಗಳನ್ನೂ ಸೇರಿಸಿ ಒಂದೇ ಅಧಿಕರಣವೆಂದು ತತ್ತ್ವಪ್ರದೀಪಕಾರರು ಹೇಳುತ್ತಾರೆ. ಆದರೆ ಶ್ರೀಪದ್ಮನಾಭತೀರ್ಥರು ಅಧಿಕರಣ ಒಂದೇ ಆಗಿದ್ದರೂ ವಿಷಯವಾಕ್ಯಮಾತ್ರ ಭಿನ್ನ ಭಿನ್ನವೆನ್ನುತ್ತಾರೆ. 'ನಿತ್ಯತ್ವಾದೇವ ಶಬ್ದಾನಾಮ್' ಎಂಬ ಅನುವ್ಯಾಖ್ಯಾನವು ಛಂದೋಭಿಧಾನಾತ್ ಎಂಬ ಸೂತ್ರದ ವ್ಯಾಖ್ಯಾನರೂಪವಾಗಿದೆ ಎಂದು ನ್ಯಾಯಸುಧಾಪ್ರಕಾರ ಹೇಳಿದ್ದು. ಆದರೆ ಪದ್ಮನಾಭತೀರ್ಥರ ಪ್ರಕಾರ ಜ್ಯೋತಿಃಸೂತ್ರದ ತಾತ್ಪರ್ಯವನ್ನು ಈ ವಾಕ್ಯವು ವ್ಯಾಖ್ಯಾನಿಸುತ್ತಿದೆ. ಅಥವಾ ಛಂದಸೂತ್ರಕ್ಕೆ ಸಾಕ್ಷಾತ್ತಾಗಿ ವ್ಯಾಖ್ಯಾನವಾಗಿದೆ ಎಂದು ಹೇಳಬಹುದು. ತತ್ತ್ವಪ್ರಕಾಶಿಕಾಕಾರರು ಮಾತ್ರ ಈ ನಾಲ್ಕುಸೂತ್ರಗಳನ್ನು ಒಂದೇ ಅಧಿಕರಣದಲ್ಲಿ ಸೇರಿಸುವುದಿಲ್ಲ. ಜ್ಯೋತಿರಧಿಕರಣದಲ್ಲಿ 'ಜ್ಯೋತಿಶ್ಚರಣಾಭಿಧಾನಾತ್' ಎಂಬ ಸೂತ್ರವು ಸೇರಿದೆ. ಗಾಯತ್ರ್ಯಧಿಕರಣದಲ್ಲಿ ಉಳಿದ ಮೂರು ಸೂತ್ರಗಳು ಸೇರಿವೆ ಎನ್ನುತ್ತಾರೆ.

**ಗುರುರಾಜೀಯಮ್ – ॐ ज्योतिश्चरणाभिधानात् ॐ ॥** ननु ज्योतिरधिकरण-टीका न व्याख्येया । अनुपपन्नत्वान्मानान्तरविरुद्धत्वाच्चेत्यतो मानान्तराविरोधं दर्शयितुं तत्रान्तरानुपपत्तीश्च परिहरन् मतान्तरमुपन्यस्यति – **अत्रेति ॥** यद्वा टीकासु च यदस्पष्टं तच्च स्पष्टीकरिष्यत इति प्रतिज्ञामवंध्यां कर्तुमाह – **अत्रेति ॥** सिद्धान्तिनामितिशेषः ।

## ಸಾರ

ಜ್ಯೋತಿರಧಿಕರಣದ ವಿಷಯದಲ್ಲಿ ಮೂವರು ಜ್ಞಾನಿಗಳು ವಿಭಿನ್ನಾಭಿಪ್ರಾಯಗಳನ್ನೊಳಗೊಂಡಿದ್ದಾರೆ. ತ್ರಿವಿಕ್ರಮಪಂಡಿತರು -- ಈ ಸೂತ್ರವು ಪ್ರತ್ಯೇಕ ಅಧಿಕರಣವಲ್ಲ. ಮುಂದಿನ ಮೂರು ಸೂತ್ರಗಳು ಸೇರಿ

ಒಟ್ಟು ನಾಲ್ಕು ಸೂತ್ರಗಳು ಒಂದೇ ಅಧಿಕರಣ. 'ಜ್ಯೋತಿರ್ಹೃದಯ ಆಹಿತಂ ಯತ್' ಎಂಬ ಋಗ್ವೇದದ ಅಗ್ನಿಸೂಕ್ತವು ವಿಷಯವಾಕ್ಯ.

ಪದ್ಮನಾಭತೀರ್ಥರು -- ನಾಲ್ಕುಸೂತ್ರಗಳು ಒಂದೇ ಅಧಿಕರಣವಾಗಿವೆ. ಆದರೆ 'ಅಥ ಯದತಃ ಪರೋ ದಿವೋ ಜ್ಯೋತಿಃ' ಎಂಬ ಛಾಂದೋಗ್ಯವು ವಿಷಯವಾಕ್ಯ. ಅಗ್ನಿಸೂಕ್ತದ ಮಂತ್ರವು ವಿಷಯವಾಕ್ಯವಲ್ಲ.

ಟೀಕಾರಾಯರು – ಮೊದಲನೆಯ ಸೂಕ್ತವು ಜ್ಯೋತಿರಧಿಕರಣ. ಅನಂತರದ ಮೂರು ಸೂತ್ರಗಳು ಗಾಯತ್ರ್ಯಧಿಕರಣ. ಹೀಗೆ ಎರಡೂ ಕೂಡ ಪ್ರತ್ಯೇಕ ಅಧಿಕರಣಗಳಾಗಿವೆ. ಜ್ಯೋತಿರಧಿಕರಣದಲ್ಲಿ ಅಗ್ನಿಸೂಕ್ತದ ಮಂತ್ರವು ವಿಷಯವಾಕ್ಯ. ಗಾಯತ್ರ್ಯಧಿಕರಣದಲ್ಲಿ ಛಾಂದೋಗ್ಯದ ಮಂತ್ರವು ವಿಷಯವಾಕ್ಯ.

---

## ತತ್ವಪ್ರದೀಪಕಾರರ ಅಭಿಪ್ರಾಯ ತಪ್ಪಲ್ಲ

**ತಾತ್ಪರ್ಯಚನ್ದ್ರಿಕಾ –**

**ನ ಚಾತ್ರಾऽऽಘಪಕ್ಷೇ ಅಗ್ನಿಸೂಕ್ತೇ ಗಾಯತ್ರೀರೂಪಚ್ಛನ್ದೋऽಭಿಧಾನಭೂತಾದಿಪಾದವ್ಯಪದೇಶೋಪದೇಶಭೇದಾನಾಮಭಾವೇನ ''ಚ್ಛನ್ದೋऽಭಿಧಾನಾತ್'' ಇತ್ಯಾದೇರಯೋಗ ಇತಿ ವಾಚ್ಯಮ್,**

**''ಜ್ಯೋತಿರ್ಹೃದಯ ಆಹಿತಂ ಯತ್'' ಇತಿ ಅಗ್ನಿಸೂಕ್ತಸ್ಥಸ್ಯೈವ ಜ್ಯೋತಿಷಃ ಛಾನ್ದೋಗ್ಯೇऽಪಿ ಜ್ಯೋತಿಃಶ್ರುತ್ಯಾ, ''ಯೋऽಯಮನ್ತರ್ಹೃದಯೇ'' ಇತಿ ಹೃದಯನಿಹಿತತ್ವಧರ್ಮೇಣ ಚ ಶಾಖಾನ್ತರಾಧಿಕರಣನ್ಯಾಯೇನ ಪ್ರತ್ಯಭಿಜ್ಞಾಯಮಾನತ್ವೇನೈಕತ್ವಾತ್ । ಅನ್ಯಥಾ ಅನೇಕಾಧಿಕರಣಪಕ್ಷೇऽಪಿ ಛಾನ್ದೋಗ್ಯೋಕ್ತಸ್ಯ ಜ್ಯೋತಿಷೋ ''ಗಾಯತ್ರೀ ವಾ ಇದꣳಸರ್ವಮ್'' ಇತಿ ಶ್ರವಣಾತ್ ಚ್ಛನ್ದಸ್ತ್ವೇऽಪ್ಯಗ್ನಿಸೂಕ್ತಸ್ಥಸ್ಯ ಚ್ಛನ್ದಸ್ತ್ವಾನಾಪತ್ತ್ಯಾ ಪೂರ್ವಾಧಿಕರಣಸಿದ್ಧಾನ್ತಾಕ್ಷೇಪೇಣ ಉತ್ತರಾಧಿಕರಣಪೂರ್ವಪಕ್ಷೋ ನ ಸ್ಯಾತ್ ।**

**ತಥಾಚ ''ಚ್ಛನ್ದೋऽಭಿಧಾನಾತ್'' ಇತ್ಯಸ್ಯಾಯಮರ್ಥಃ – ಅಗ್ನಿಸೂಕ್ತಸ್ಥಂ ಜ್ಯೋತಿರ್ನ ವಿಷ್ಣುಃ, ಅಸ್ಯೈವ ಜ್ಯೋತಿಷಃ ಛಾನ್ದೋಗ್ಯೇ ಗಾಯತ್ರೀತ್ವಾಭಿಧಾನಾತ್ ಇತಿ । ಏವಂ ಭೂತಾದಿಪಾದವ್ಯಪದೇಶಾದಾವಪಿ ದ್ರಷ್ಟವ್ಯಮ್ ।**

**ನಚ ಪೂರ್ವಪಕ್ಷೇ ಅಗ್ನಿಸೂಕ್ತಸ್ಯಾಗ್ನಿಪರತ್ವಾತ್, ಛಾನ್ದೋಗ್ಯಸ್ಯ ಚ ಚ್ಛನ್ದಃ ಪರತ್ವಾತ್ ಪ್ರತ್ಯಭಿಜ್ಞಾऽಯೋಗ ಇತಿ ಶಙ್ಕ್ಯಮ್, ಅಸ್ಮಿನ್ಮತೇ ''ತೇಜೋ ವೈ ಬ್ರಹ್ಮವರ್ಚಸಂ ಗಾಯತ್ರೀ'' ಇತಿ ಶ್ರುತೌ ಅಗ್ನಿಶಬ್ದಾನತಿಭಿನ್ನಾರ್ಥತೇಜಶ್ಶಬ್ದಗಾಯತ್ರೀಶಬ್ದಯೋಃ ಸಾಮಾನಾಧಿಕರಣ್ಯದರ್ಶನೇನಾಗ್ನೌ ಗಾಯತ್ರೀಶಬ್ದಸ್ಯ, ಗಾಯತ್ರ್ಯಾಂ ವಾ ಅಗ್ನಿಶಬ್ದಸ್ಯ ಸಮ್ಭವೇನ ಅಗ್ನಿಸೂಕ್ತವತ್ ಛಾನ್ದೋಗ್ಯಸ್ಯಾಗ್ನಿಪರತಾಯಾಃ,**

**ಛಾನ್ದೋಗ್ಯವದಗ್ನಿಸೂಕ್ತಸ್ಯಾಽಪಿ ಗಾಯತ್ರೀಪರತಾಯಾ ವಾ ಸಮ್ಭವೇನ ದ್ವಯೋರಪ್ಯೇಕಾರ್ಥತ್ವಾತ್ । ನ ಚಾಗ್ನಿಸೂಕ್ತಸ್ಥೇನ ಕರ್ಣಾದಿವಿದೂರತ್ವೇನ ''ತದೇತದೃಚಾ ಽಭ್ಯನೂಕ್ತಂ ಚ ಶ್ರುತಂ ಚ'' ಇತಿ ಛಾನ್ದೋಗ್ಯಸ್ಥ-ದೃಷ್ಟತ್ವಾದಿಕಂ ವಿರುದ್ಧಮಿತಿ ಶಙ್ಕ್ಯಂ, ಆಕಾರಭೇದೇನಾವಿರೋಧಾತ್ ।**

**ಏಕಾಧಿಕರಣತ್ವಾದೇವ ಹಿ ''ಛನ್ದೋಭಿಧಾನಾತ್'' ಇತಿ ಸೂತ್ರೇ ಸಮನ್ವೇತವ್ಯಶಬ್ದಾನ್ತರ-ಮನುಕ್ತ್ವಾ ''ವಿಕಾರಶಬ್ದಾನ್ನೇತಿ ಚೇನ್ನ'' ಇತ್ಯಾದಾವಿವ ಪೂರ್ವಸೂತ್ರೋಕ್ತಸಮನ್ವಯಬಾಧಕಮಾತ್ರ-ಮುದ್ಧೃತಮ್ । ಭಾಷ್ಯೇಽಪಿ ಛನ್ದಸ್ಸೂತ್ರವ್ಯಾಖ್ಯಾನಾವಸರೇ ''ಅಗ್ನಿಗಾಯತ್ರ್ಯಾದಿ'' ಇತಿ ಅಗ್ನಿಪದಂ ಪ್ರಯುಕ್ತಮ್ । ತಸ್ಮಾದಾದ್ಯಂ ಮತಂ ಯುಕ್ತಮ್।**

ಅನುವಾದ - ಪ್ರಶ್ನೆ - ಮೊದಲನೆಯ ಮತದಲ್ಲಿ ಅಗ್ನಿಸೂಕ್ತವನ್ನು ವಿಷಯವಾಕ್ಯವೆಂದು ಹೇಳಿದಿರಿ. ಆದರೆ ಆ ವಿಷಯವಾಕ್ಯದಲ್ಲಿ ಗಾಯತ್ರೀರೂಪಛಂದೋವಾಚಕವಾದ ಶಬ್ದವಾಗಲೀ ಭೂತಾದಿ ಪಾದವ್ಯಪದೇಶವಾಗಲಿ ಉಪದೇಶಭೇದವಾಗಲೀ ಕೇಳಿಸುತ್ತಿಲ್ಲ. ಆದ್ದರಿಂದ ಛಂದೋಭಿ-ಧಾನಾತ್ ಇತ್ಯಾದಿಯಾಗಿ ಮುಂದಿನ ಸೂತ್ರಗಳಲ್ಲಿ ಹೇಳಿದ್ದು ತಪ್ಪಾಗುತ್ತದಲ್ಲವೇ.

ಉತ್ತರ - ಜ್ಯೋತಿರ್ಹೃದಯ ಆಹಿತಂ ಯತ್ ಎಂಬಲ್ಲಿರುವ ಅಗ್ನಿಸೂಕ್ತದಿಂದ ಜ್ಯೋತಿಶ್ಶಬ್ದವೇ ಛಾಂದೋಗ್ಯದಲ್ಲಿಯೂ ಶ್ರುತವಾಗಿದೆ.ಮತ್ತು ಯೋಯಂ ಅಂತರ್ಹೃದಯಃ ಎಂಬ ಹೃದಯನಿಹಿತತ್ವ ಧರ್ಮವೂ ಸಮಾನವಾಗಿ ಶ್ರುತವಾಗಿದೆ. ಆದ್ದರಿಂದ ಶಾಖಾಂತರ ಅಧಿಕರಣನ್ಯಾಯದಂತೆ ಪ್ರತ್ಯಭಿಜ್ಞಾ ಬರುವುದರಿಂದ ಒಂದೇ ವಿಷಯವಾಕ್ಯವೆಂದು ಹೇಳಬಹುದು. ಇಲ್ಲದಿದ್ದರೆ ಅನೇಕ ಅಧಿ ಕರಣವೆಂದು ಹೇಳುವ ಟೀಕಾಕಾರರ ಪಕ್ಷದಲ್ಲಿಯೂ ದೋಷ ತಪ್ಪಿದ್ದಲ್ಲ. ಏಕೆಂದರೆ ಛಾಂದೋಗ್ಯದಲ್ಲಿ ಹೇಳಲ್ಪಟ್ಟ ಜ್ಯೋತಿಯನ್ನು 'ಗಾಯತ್ರೀ ವಾ ಇದಂ ಸರ್ವಮ್' ಎಂದು ಛಂದಸ್ಸೆಂದು ಅಗ್ನಿಸೂಕ್ತವು ಹೇಳುತ್ತಿದೆ. ಎರಡೂ ಸೂಕ್ತಗಳು ಬೇರೆ ವಿಷಯವನ್ನು ಪ್ರತಿಪಾದಿಸುವುದಾದರೆ ಜ್ಯೋತಿಸ್ಸನ್ನು ಛಂದಸ್ಸೆಂದು ಹೇಳಲಾಗದ ಕಾರಣ ಜ್ಯೋತಿರಧಿಕರಣದ ಸಿದ್ಧಾಂತವನ್ನು ಆಕ್ಷೇಪಿಸಿ ಗಾಯತ್ರ್ಯಧಿಕರಣದ ಪೂರ್ವಪಕ್ಷವನ್ನೇ ಮಾಡಲು ಸಾಧ್ಯವಿಲ್ಲ. ಆದ್ದರಿಂದ ಛಂದೋಭಿಧಾನಾತ್ ಎಂಬ ಸೂತ್ರಕ್ಕೆ ಹೀಗೆ ಅರ್ಥ. ಅಗ್ನಿಸೂಕ್ತದಲ್ಲಿರುವ ಜ್ಯೋತಿಯು ವಿಷ್ಣುವಲ್ಲ. ಏಕೆಂದರೆ ಇದೇ ಜ್ಯೋತಿಸ್ಸನ್ನು ಛಾಂದೋಗ್ಯದಲ್ಲಿ ಗಾಯತ್ರಿ ಎಂದು ಹೇಳಿರುವುದರಿಂದ. ಇದರಂತೆ ಭೂತಾದಿಪಾದವ್ಯಪದೇಶಾದಿಗಳನ್ನು ಅಗ್ನಿಸೂಕ್ತದಲ್ಲಿ ಹೇಳಲಾಗಿದೆ ಎಂದು ತಿಳಿಯಬೇಕು.

ಪ್ರಶ್ನೆ - ಪೂರ್ವಪಕ್ಷ ಮಾಡುವಾಗ ಅಗ್ನಿಸೂಕ್ತದಲ್ಲಿರುವ ಜ್ಯೋತಿಃಶಬ್ದವು ಅಗ್ನಿಪರವಾಗಿರುತ್ತದೆ ಛಾಂದೋಗ್ಯದಲ್ಲಿರುವ ಜ್ಯೋತಿಃಶಬ್ದವು ಛಂದಸ್ಸನ್ನು ಹೇಳುತ್ತದೆ ಹೀಗಿರುವಾಗ ಎರಡೂ ಒಂದೇ ಎಂಬ ಪ್ರತ್ಯಭಿಜ್ಞೆಯು ಹೇಗೆ ಬರುತ್ತದೆ?

ಉತ್ತರ - ಇವರ ಮತದಲ್ಲಿ ಛಾಂದೋಗ್ಯ ಹಾಗೂ ಅಗ್ನಿಸೂಕ್ತಕ್ಕೆ ಒಂದೇ ಅರ್ಥ. ಏಕೆಂದರೆ 'ತೇಜೋ ವೈ ಬ್ರಹ್ಮವರ್ಚಸಂ ಗಾಯತ್ರೀ' ಎಂಬ ಮತ್ತೊಂದು ಶ್ರುತಿಯು ಆಗ್ನಿಶಬ್ದದ ಅರ್ಥವನ್ನೇ ಹೇಳುವ ತೇಜಸ್ ಎಂಬ ಶಬ್ದಕ್ಕೆ ಮತ್ತು ಗಾಯತ್ರೀಶಬ್ದಕ್ಕೆ ಸಾಮಾನಾಧಿಕರಣ್ಯವನ್ನು (ಒಂದೇ ವಿಭಕ್ತಿಯನ್ನು) ಹೇಳಿದೆ. ಇದರಿಂದ ಅಗ್ನಿಯಲ್ಲಿ ಗಾಯತ್ರೀಶಬ್ದವನ್ನು ಅಥವಾ ಗಾಯತ್ರಿಯಲ್ಲಿ ಅಗ್ನಿಶಬ್ದವನ್ನು ಪ್ರಯೋಗಿಸಬಹುದೆಂದು ತಿಳಿಯುತ್ತದೆ. ಈಗ ಅಗ್ನಿಸೂಕ್ತವು ಹೇಗೆ ಅಗ್ನಿಯನ್ನು ಹೇಳು-ತ್ತದೋ ಅದರಂತೆ ಛಾಂದೋಗ್ಯವೂ ಅಗ್ನಿಯನ್ನು ಪ್ರತಿಪಾದಿಸಬಹುದು. ಅಥವಾ ಛಾಂದೋಗ್ಯವು ಹೇಗೆ ಗಾಯತ್ರಿಯನ್ನು ಪ್ರತಿಪಾದಿಸುತ್ತದೋ ಅದರಂತೆ ಅಗ್ನಿಸೂಕ್ತವೂ ಗಾಯತ್ರಿಯನ್ನು ಪ್ರತಿಪಾದಿಸ-ಬಹುದು. ಹೀಗೆ ಎರಡೂ ಸೂಕ್ತಗಳು ಒಂದೇ ಅರ್ಥವನ್ನು ಪ್ರತಿಪಾದಿಸುತ್ತಿವೆಯೆಂದು ನಿರ್ಧಾರ-ವಾದ ಮೇಲೆ ಪ್ರಶ್ನೆಗೆ ಅವಕಾಶವಿಲ್ಲ.

ಪ್ರಶ್ನೆ - ಎರಡೂ ಸೂಕ್ತಗಳು ಒಂದೇ ಅರ್ಥವನ್ನು ಪ್ರತಿಪಾದಿಸಲು ಸಾಧ್ಯವಿಲ್ಲ. ಅಗ್ನಿಸೂಕ್ತದಲ್ಲಿ ಕರ್ಣಾದಿವಿದೂರತ್ವಧರ್ಮವನ್ನು ಜ್ಯೋತಿಯಲ್ಲಿ ಹೇಳಲಾಗಿದೆ. ಇದಕ್ಕೆ ವಿರುದ್ಧವಾದ ದೃಷ್ಟತ್ವ ಧರ್ಮವನ್ನು 'ತದೇತದ್ದೃಷ್ಟಂ ಚ ಶ್ರುತಂ ಚ' ಎಂಬ ಛಾಂದೋಗ್ಯವು ಹೇಳುತ್ತಿದೆ. ಎರಡೂ ಒಂದೇ ಆದರೆ ಈ ವಿರುದ್ಧಧರ್ಮಗಳು ತಪ್ಪಾಗುತ್ತದಲ್ಲವೇ?

ಉತ್ತರ - ಅನಂತಮಹಿಮೋಪೇತನಾದ ವಿಷ್ಣುವಿನಲ್ಲಿ ಇಂತಹ ವಿರುದ್ಧಧರ್ಮಗಳನ್ನು ಸುಲಭ-ವಾಗಿ ಹೇಳಬಹುದು. ಸಂಪೂರ್ಣವಾಗಿ ತಿಳಿಯಲಾರದವನಾದ್ದರಿಂದ ಕರ್ಣಾದಿವಿದೂರನೆಂದೂ; ಏಕದೇಶದಿಂದ ತಿಳಿಯುತ್ತಾನಾದ್ದರಿಂದ ದರ್ಶನವಿಷಯನೆಂದು ಆಕಾರಭೇದದಿಂದ ವಿರೋಧವನ್ನು ಪರಿಹರಿಸಬಹುದು.

ನಾಲ್ಕೂ ಸೂತ್ರಗಳು ಒಂದೇ ಅಧಿಕರಣವಾಗಿವೆ. ಆದ್ದರಿಂದಲೇ 'ಛಂದೋಭಿಧಾನಾತ್' ಎಂಬ ಮುಂದಿನ ಸೂತ್ರದಲ್ಲಿ ಸೂತ್ರಕಾರರು ಮತ್ತೊಂದು ಶಬ್ದವನ್ನು ಸಮನ್ವಯ ಮಾಡದೇ ಹಿಂದಿನ ಸೂತ್ರದಲ್ಲಿ ಸಮನ್ವಯ ಮಾಡಿದ ಬಾಧಕವನ್ನಷ್ಟೇ ಪರಿಹರಿಸುತ್ತಿದ್ದಾರೆ. ಯಾವರೀತಿಯಾಗಿ 'ವಿಕಾರಶಬ್ದಾನ್ನೇತಿ ಚೇನ್ನ' ಎಂಬ ಸೂತ್ರವು ಆನಂದಮಯಶಬ್ದದ ಸಮನ್ವಯದಲ್ಲಿ ಬಾಧಕವನ್ನಷ್ಟೇ ಪರಿಹರಿಸುತ್ತಿರುವುದರಿಂದ ಪ್ರತ್ಯೇಕ ಅಧಿಕರಣವಲ್ಲವೋ ಅದರಂತೆ 'ಛಂದೋಭಿಧಾನಾತ್' ಇತ್ಯಾದಿ ಮೂರು ಸೂತ್ರಗಳು ಪ್ರತ್ಯೇಕ ಅಧಿಕರಣಗಳಾಗಬೇಕಿಲ್ಲ. ಭಾಷ್ಯದಲ್ಲಿಯೂ ಕೂಡ ಛಂದಃಸೂತ್ರ-ವನ್ನು ವ್ಯಾಖ್ಯಾನಿಸುವಾಗ 'ಅಗ್ನಿಗಾಯತ್ರ್ಯಾದಿ' ಎಂದು ಅಗ್ನಿಶಬ್ದವನ್ನು ಪ್ರಯೋಗಿಸಿದ್ದಾರೆ. ಆದ್ದರಿಂದ ತತ್ತ್ವಪ್ರದೀಪಕಾರರ ಮತವು ಅತ್ಯಂತ ಸಮಂಜಸವಾಗಿದೆ.

### ಕಠಿಣಪದಾರ್ಥ

ಜ್ಯೋತಿಃಶ್ರುತ್ಯಾ = 'ಅಥ ಯದತಃ ಪರೋದಿವೋ ಜ್ಯೋತಿರ್ದೀಪ್ಯತೇ' ಎಂಬ ಶ್ರುತಿಯಿಂದ; ಏಕತ್ವಾತ್ = ಅಗ್ನಿಸೂಕ್ತ ಹಾಗೂ ಛಾಂದೋಗ್ಯದಲ್ಲಿರುವ ಜ್ಯೋತಿಯು

ಒಂದೇ ಆಗಿರುವುದರಿಂದ; ಪೂರ್ವಾಧಿಕರಣ = ಜ್ಯೋತಿರಧಿಕರಣದ; ಉತ್ತರಾಧಿಕರಣ = ಗಾಯತ್ಯಧಿಕರಣದ; ಪ್ರತ್ಯಭಿಜ್ಞಾಯೋಗಃ = ಒಂದೇ ಎಂಬ ಪ್ರತ್ಯಭಿಜ್ಞೆಯು ಬರುವುದಿಲ್ಲ; ಆಸ್ಮನ್ ಮತೇ = ತತ್ತ್ವಪ್ರದೀಪಕಾರರ ಮತದಲ್ಲಿ; ಆಕಾರಭೇದೇನ = ಸೂಕ್ಷ್ಮಸ್ಥೂಲ ಆಕಾರಭೇದದಿಂದ.

**ಪ್ರಕಾಶಃ** – ಏವಂ ಮತಭೇದಮುಪನ್ಯಸ್ಯ ತತ್ವಪ್ರದೀಪಪಕ್ಷೇ ''ವಿ ಮೇ ಕರ್ಣಾ ಪತಯತಃ'' ಇತ್ಯಗ್ನಿಸೂಕ್ತಗತಸ್ಯೈವ ಸರ್ವತ್ರ ವಿಷಯವಾಕ್ಯತ್ವೇऽನುಪಪತ್ತಿಮಾಶಙ್ಕ್ಯ ಚ ಸಮಾಧತ್ತೇ – **ನ ಚೇತಿ ॥ ಅಭಾವೇನೇತಿ ॥** ''**ಗಾಯತ್ರೀ ವಾ ಇದ ꣳ ಸರ್ವಂ ಭೂತಂ ಯದಿದಂ ಕಿಞ್ಚ**'' ಇತ್ಯಾದಿ ಛಾನ್ದೋಗ್ಯವಾಕ್ಯ ಏವ ಸತ್ತ್ವೇನ ತಸ್ಯ ಛನ್ದಃಪ್ರಭೃತಿಸೂತ್ರೇಷ್ವವಿಷಯತ್ವೇ ತೇಷಾಮಯೋಗ ಇತ್ಯರ್ಥಃ । **'ಜ್ಯೋತಿಶ್ಶ್ರುತ್ಯಾ' ''ಅಥ ಯದತಃ ಪರೋ ದಿವೋ ಜ್ಯೋತಿರ್ದೀಪ್ಯತೇ''** ಇತಿ ಜ್ಯೋತಿಶ್ಶ್ರುತ್ಯಾ ।

**॥ಶಾಖಾನ್ತರೇತಿ॥** ಅಧಿಕರಣಶರೀರಂ ಪ್ರಾಗುಕ್ತಮ್ ಶಾಸ್ತ್ರಯೋನಿಸೂತ್ರೇ । **''ಏಕಂ ವಾ ಸಂಯೋಗರೂಪಚೋದನಾಖ್ಯಾವಿಶೇಷಾತ್''** ಇತಿ ಸಿದ್ಧಾನ್ತಸೂತ್ರೋಪನ್ಯಸ್ತೇನ ಫಲಸಂಯೋಗಾದಿಸಾಧಾರಣಧರ್ಮಕೃತಪ್ರತ್ಯಭಿಜ್ಞಾರೂಪೇಣ ನ್ಯಾಯೇನ ಯಥಾ ಶಾಖಾಭೇದೇऽಪಿ ಅಗ್ನಿಹೋತ್ರಜ್ಯೋತಿಷ್ಟೋಮಾದಿಕರ್ಮಾಭೇದಃ, ತಥಾ ವೇದಭೇದೇऽಪಿ ಶಬ್ದೈಕ್ಯಾದ್ಧರ್ಮೈಕ್ಯಾಜ್ಜ್ಯೋತಿರಭೇದ ಇತ್ಯರ್ಥಃ । ಅಗ್ನಿಸೂಕ್ತಗತಸ್ಯ ಛಾನ್ದೋಗ್ಯಗತಸ್ಯ ಚ ಜ್ಯೋತಿಷ ಏಕತ್ವಮವಶ್ಯಮಭ್ಯುಪೇಯಮ್, ಅನ್ಯಥಾ ಟೀಕಾಕೃತ್ ಪಕ್ಷೇऽಪ್ಯಯುಕ್ತಿರಿತ್ಯಾಹ – **ಅನ್ಯಥೇತಿ ॥** ಉಕ್ತದಿಶೈಕತ್ವಾನಭ್ಯುಪಗತೌ ॥ **ಪೂರ್ವೇತಿ ॥** ಜ್ಯೋತಿರಧಿಕರಣೇತ್ಯರ್ಥಃ । ಅಸ್ತ್ವೇಕತ್ವಂ ಜ್ಯೋತಿಷಃ, ಕಿಂ ತತ ಇತ್ಯತಃ ಪ್ರಾಗುಕ್ತಾನುಪಪತ್ತಿನಿರಾಸಪ್ರಕಾರಮಾಹ – **ತಥಾಚೇತಿ ॥** ನನ್ವೇವಂ ಪೂರ್ವಪಕ್ಷೇ ಅಗ್ನಿಸೂಕ್ತಸ್ಥಂ ಜ್ಯೋತಿರ್ನ ವಿಷ್ಣುಃ, ಅನ್ಯತ್ರನಿರೂಢಜ್ಯೋತಿಃಶ್ರುತೇರಿತಿ ಸ್ವಪ್ರಕರಣಗತಜ್ಯೋತಿಶ್ಶ್ರುತಿರೂಪಪೂರ್ವಪಕ್ಷಯುಕ್ತ್ಯಭಿಧಾನಸಮ್ಭವೇನ ಪ್ರಕರಣಾನ್ತರಗತಜ್ಯೋತಿಷೈಕ್ಯಂ ಪ್ರಸಾಧ್ಯ, ತತ್ರತ್ಯಚ್ಛನ್ದಸ್ತ್ವಾದಿತ್ಯುಕ್ತ್ಯಭಿಧಾನಮಸಙ್ಗತಮ್ ।

ನಚ ಜ್ಯೋತಿಶ್ಶ್ರುತೇರಧಿದೈವಶಬ್ದತ್ವೇ ಅಧಿಭೂತಶಬ್ದತ್ವೇ ವಾ ಪೂರ್ವನ್ಯಾಯೇನ ವಿಷ್ಣುಪರತಯಾ ಸಾವಕಾಶತ್ವೇನ ನ ನಿರವಕಾಶವಿಷ್ಣುಲಿಙ್ಗಾತ್ ಪ್ರಾಬಲ್ಯಮಿತಿ ನ ಸೈವ ಪೂರ್ವಪಕ್ಷಪ್ರಾಪಿಕೇತಿ ವಾಚ್ಯಮ್, ಭಾಷ್ಯಾದ್ಯುಕ್ತದಿಶಾ ಸೂಕ್ತರೂಪನಿರವಕಾಶಪ್ರಕರಣಾನುಗೃಹೀತತಯಾ ಪ್ರಾಬಲ್ಯಾದಿತಿ ಚೇನ್ನ, ವಕ್ಷ್ಯಮಾಣರೀತ್ಯಾ ಪ್ರಕರಣಾನ್ತರಗತಜ್ಯೋತಿಷೋऽಪಿ ವಿಷ್ಣುತ್ವಂ ನಿರ್ಣೇತುಮೇತತ್ಪ್ರಕರಣಗತಪ್ರಾಪಕಾಪರಿತ್ಯಾಗೇನ ಪ್ರಕರಣಾನ್ತರಗತತತ್ತತ್ಪ್ರಾಪಕಾಭಿಧಾನಮುಖೇನೈವಜ್ಞಾತೀಯಕಸರ್ವಗತಜ್ಯೋತಿಷೋ ವಿಷ್ಣುತ್ವಾಕ್ಷೇಪಾಭಿಪ್ರಾಯೇಣಾನ್ಯಗತಪ್ರಾಪಕಾಭಿಧಾನಾತ್ ।

ನ ಚೈವಂ ಛಾನ್ದೋಗ್ಯವಾಕ್ಯಮೇವ ಸರ್ವತ್ರೋದಾಹೃತ್ಯ ತತ್ರತ್ಯಜ್ಯೋತಿಷೋ ವಿಷ್ಣುತ್ವನಿರ್ಣಯೇ ಕೃತೇ ತದೈಕ್ಯಾದಗ್ನಿಸೂಕ್ತಗತಜ್ಯೋತಿಷೋऽಪಿ ತನ್ನಿರ್ಣಯಃ ಸೇತ್ಸ್ಯತೀತಿ ವಾಚ್ಯಮ್, ಅಸ್ಮಿನ್ಪಕ್ಷೇऽಪಿ

सिद्धान्ते छान्दोग्यस्थं ज्योतिर्विष्णुः, अस्यैव ज्योतिषोऽग्निसूक्ते चरणाभिधानात् इति वक्राश्रयणस्य तुल्यत्वात् ।

नन्वस्मिन्पक्षे केवलं सिद्धान्ते चरणरूपैकयुक्त्यभिधानाय प्रकरणान्तरानुसरणं तदर्थं सूत्रं चैकं, तत्वप्रदीपपक्षे च पूर्वोत्तरपक्षयोरनेकयुक्त्यभिधानायान्य-प्रकरणानुसरणं तदर्थ सूत्राणि त्रीणिति गौरवमिति चेन्न, प्रकरणान्तरानुसरणे समाने युक्त्यादिगतैकानेकत्वादेरप्रयोजकत्वात् । प्रधानसूत्रे प्रकरणान्तरानु-सरणापेक्षया गुणसूत्रेष्वेव तदनुसरणस्य न्याय्यत्वाच्च । चरणेन ज्योतिषो विष्णुत्वे पूर्वमभिहितेऽन्यप्रकरणगतप्रापकान्तरावष्टम्भेन पूर्वोक्ताक्षेपरूपशङ्काया अनन्तरमेवो-दयाच्चेति तात्पर्यात् । उक्तं च तत्वप्रदीपे – **''अग्निसूक्तमुदाहृत्य मन्त्रगोचरं विचारमाचरता परमवैदिकेनाचार्येण निखिलोऽपि वेदसमन्वयो विचारितो भवतीति महानयं लाभः''** इति ॥ **एवमिति** ॥ अग्निसूक्तस्थं ज्योतिर्विष्णुरेव, अस्यैव ज्योतिषः छान्दोग्ये भूतादिपादव्यपदेशात् । उपदेशभेदेप्यविरोधादिति द्रष्टव्यमित्यर्थः ।

ननु भवेदेवमनुपपत्तिपरिहारः, यद्युभयगतज्योतिषोरेकत्वं स्यात् । न चैवम्, वाक्यद्वयस्यापि भिन्नार्थपरत्वात् । अन्यथा **'वागेवास्य ज्योतिः' 'अथैष ज्योतिः'** इत्यादावपि ज्योतिश्श्रुत्यैकत्वं स्यादित्याशङ्क्याह – **नचेति** ॥ नन्वेवमप्यग्निसूक्तस्थस्य **''वि मे कर्णा पतयन्तो वि चक्षुः''** इति कर्णचक्षुराद्य-गोचरत्वमुच्यते । तत्र च **''तदेतदृष्टं च श्रुतं च''** इति च्छान्दोग्ये तृतीये दृष्टत्वादिकमुच्यते ततो नैकार्थ्यमित्याशङ्क्याह – **नचेति** ॥

**आकारेति** ॥ शुद्धरूपेणादृष्टत्वादि, विशिष्टरूपेण दृष्टत्वादिकमित्यर्थः । यद्वा – कात्स्न्येनादृष्टत्वादि, एकदेशेन दृष्टत्वादीत्यर्थः । यद्वा सूक्ष्मस्थूलाकारभेदेनेत्यर्थः । ननु कुत एवं कर्णादिविदूरत्वदृष्टत्वादेराकारभेदेनाविरोधं व्युत्पाद्य, अग्निपर्याय-तेजश्शब्दस्य गायत्र्यां श्रवणेन अग्निसूक्तस्थच्छान्दोग्यस्थवाक्ययोरैकार्थ्यं चापाद्य ज्योतिश्श्रुत्या गुहानिहितत्वधर्मेण चानेकत्र श्रुतज्योतिष एकत्वव्युत्पादनेनैकाधि-करण्यसमर्थनक्लेशः, भिन्नविषयतयाऽधिकरणद्वयमेवास्तित्यत, ऐकाधिकरण्ये सूत्रे भाष्ये च ज्ञापकमाह – **एकाधिकरणत्वादेवेति** ॥ **अनुक्त्वेति** ॥ अन्यथा **''आकाश-**

**स्तल्लिङ्गात्'' ''अत एव प्राणः इत्यादाविव गायत्र्यादिसमन्वेतव्यशब्दोपादानं स्यादिति भावः – अग्नीति ॥ अन्यथा गायत्रीपदमेव प्रयुञ्जीतेति भावः ।**

ಏವರಣೆ - ಹೀಗೆ ಮೂರುವಿಧವಾದ ಮತಗಳನ್ನು ಉಪನ್ಯಾಸ ಮಾಡಿ ಮೊದಲು ತತ್ವಪ್ರದೀಪಕಾರರ ಪಕ್ಷವನ್ನು ವಿಮರ್ಶಿಸುತ್ತಿದ್ದಾರೆ. ಇವರ ಪ್ರಕಾರ 'ವಿ ಮೇ ಕರ್ಣಾ ಪತಯತಃ' ಎಂಬ ಅಗ್ನಿಸೂಕ್ತವೇ ಎಲ್ಲಾ ಸೂತ್ರಗಳಿಗೂ ವಿಷಯವಾಕ್ಯವಾಗಿದೆ. ಈ ಸೂಕ್ತವು ಪ್ರತಿಯೊಂದು ಸೂತ್ರದ ವಿಷಯವಾಕ್ಯವಾದಲ್ಲಿ ಬರಬಹುದಾದ ಆನುಪಪತ್ತಿಯನ್ನು ಆಶಂಕಿಸಿ ಸಮಾಧಾನವನ್ನು ನೀಡುವುದಕ್ಕಾಗಿ 'ನಚ' ಇತ್ಯಾದಿ ಗ್ರಂಥವು ಹೊರಟಿದೆ. ಒಂದು ವೇಳೆ ಅಗ್ನಿಸೂಕ್ತವು ವಿಷಯವಾಕ್ಯವಾದರೆ ಚರಣಾಭಧಾನಹೇತುವಷ್ಟೇ ಉಪಪನ್ನವಾಗುತ್ತದೆ. ಮುಂದಿನ ಮೂರು ಸೂತ್ರಗಳಲ್ಲಿ ಹೇಳಿರುವ ಛಂದೋಭಧಾನಾತ್, ಭೂತಾದಿಪಾದವ್ಯಪದೇಶ, ಉಪದೇಶಭೇದಾದಿಗಳು ತಪ್ಪಾಗುತ್ತವೆ. ಏಕೆಂದರೆ ಈ ಮೂರು ಹೇತುಗಳೂ 'ಗಾಯತ್ರೀ ವಾ ಇದಂ ಸರ್ವಂ ಭೂತಂ ಯದಿದಂ ಕಿಂಚ' ಇತ್ಯಾದಿ ಛಾಂದೋಗ್ಯವಾಕ್ಯದಲ್ಲಷ್ಟೇ ಕೇಳಿಸುತ್ತಿವೆ. ವಿಷಯವಾಕ್ಯವೆನಿಸಿದ ಅಗ್ನಿಸೂಕ್ತದಲ್ಲಿ ಕೇಳಿಸುತ್ತಿಲ್ಲ. ಪ್ರಕೃತ ಛಾಂದೋಗ್ಯವಾಕ್ಯವು ಮುಂದಿನ ಮೂರು ಸೂತ್ರಗಳ ವಿಷಯವಾಕ್ಯವಾಗದಿದ್ದರೆ ಸೂತ್ರಗಳಲ್ಲಿ ಹೇಳಿದ ಹೇತುವು ಹೇಗೆ ಕೂಡುತ್ತದೆ? ಎಂದು ತತ್ವಪ್ರದೀಪಕಾರರ ಪಕ್ಷದಲ್ಲಿ ಪ್ರಶ್ನೆ ಬರುತ್ತದೆ.

ಈ ಪ್ರಶ್ನೆಗೆ ಹೀಗೆ ಉತ್ತರ -- ಅಗ್ನಿಸೂಕ್ತದಲ್ಲಿ ಯಾವ ಜ್ಯೋತಿಯು ಹೇಳಲ್ಪಟ್ಟಿದೆಯೋ ಅದೇ ಜ್ಯೋತಿಯು ಛಾಂದೋಗ್ಯದಲ್ಲಿಯೂ ಕೇಳಿಸುತ್ತಿದೆ. ಮತ್ತು ಹೃದಯನಿಹಿತತ್ವವೆಂಬ ಧರ್ಮವು ಎರಡು ಕಡೆಯೂ ಸಮಾನವಾಗಿದೆ. ಇದರಿಂದ ಶಾಖಾಂತರಾಧಿಕರಣನ್ಯಾಯದಂತೆ ಅಗ್ನಿಸೂಕ್ತ ಹಾಗೂ ಛಾಂದೋಗ್ಯವಾಕ್ಯಗಳಲ್ಲಿ ಹೇಳಲ್ಪಟ್ಟವನು ಒಬ್ಬನೇ ಎಂದು ನಿರ್ಣಯಿಸಬಹುದು.

ಶಾಖಾಂತರಾಧಿಕರಣನ್ಯಾಯವನ್ನು ಹಿಂದೆ ಶಾಸ್ತ್ರಯೋನಿಸೂತ್ರದಲ್ಲಿ ವಿವರಿಸಿದ್ದಾಗಿದೆ. 'ಏಕಂ ವಾ ಸಂಯೋಗರೂಪಚೋದನಾಖ್ಯಾವಿಶೇಷಾತ್' ಎಂಬುದು ಶಾಖಾಂತರಾಧಿಕರಣದ ಸಿದ್ಧಾಂತ. ಬೇರೆ ಬೇರೆ ಶಾಖೆಗಳಲ್ಲಿ ಅಗ್ನಿಹೋತ್ರ ಅಥವಾ ಜ್ಯೋತಿಷ್ಟೋಮವೆಂಬ ಕರ್ಮವನ್ನು ವಿಧಿಸಿರುವುದು ಕೆಲವೆಡೆ ಕಾಣುತ್ತದೆ. ಈ ಅಗ್ನಿಹೋತ್ರಾದಿಕರ್ಮಗಳು ಬೇರೆ ಬೇರೆ ಶಾಖೆಗಳಲ್ಲಿ ಹೇಳಿದ್ದು ಒಂದೆಯೋ ಅಥವಾ ಬೇರೆ ಬೇರೆಯೋ? ಎಂಬ ಪ್ರಶ್ನೆ ಬಂದರೆ ಅವುಗಳ ಫಲವನ್ನು ನೋಡಿ ನಿರ್ಣಯಿಸಬೇಕು. ಎರಡೂ ಶಾಖೆಗಳಲ್ಲಿ ಹೇಳಲ್ಪಟ್ಟ ಅಗ್ನಿಹೋತ್ರಾದಿಕರ್ಮಕ್ಕೆ ಸ್ವರ್ಗ ಮೊದಲಾದ ಒಂದೇ ಫಲವು ಹೇಳಲ್ಪಟ್ಟಿದ್ದರಿಂದ ಒಂದೇ ಕರ್ಮವೆನ್ನಬೇಕು. ಹೀಗೆ ಒಂದೇ ಕರ್ಮವೆಂದು ನಿರ್ಣಯಿಸಲು ಫಲಸಂಯೋಗವೇ ಮೊದಲಾದ ಸಾಧಾರಣಧರ್ಮಗಳ ಪ್ರತ್ಯಭಿಜ್ಞೆಯು ಕಾರಣವಾಗಿದೆ. ಅದರಂತೆ ಪ್ರಕೃತದಲ್ಲಿ ಋಗ್ವೇದ ಸಾಮವೇದವೆಂಬ ಬೇರೆ ಬೇರೆ ವೇದಗಳಲ್ಲಿ ಜ್ಯೋತಿಯು ಹೇಳಲ್ಪಟ್ಟಿದ್ದರೂ ಜ್ಯೋತಿಃಶಬ್ದದ ಐಕ್ಯದಿಂದ ಮತ್ತು ಹೃದಯನಿಹಿತತ್ವವೆಂಬ ಧರ್ಮದ ಐಕ್ಯದಿಂದ ಒಬ್ಬನೇ ಜ್ಯೋತಿಯು ಪ್ರತಿಪಾದ್ಯನೆಂದು ಪ್ರತ್ಯಭಿಜ್ಞೆಯಿಂದ ನಿರ್ಣಯಿಸಬಹುದು. ಆದಕಾರಣ ಅಗ್ನಿಸೂಕ್ತದಲ್ಲಿ ಮತ್ತು ಛಾಂದೋಗ್ಯಸೂಕ್ತದಲ್ಲಿ ಹೇಳಲ್ಪಟ್ಟ ಜ್ಯೋತಿಯು ಒಬ್ಬನೇ ಆಗಿದ್ದಾನೆಂದು ಅವಶ್ಯ ಒಪ್ಪಬೇಕು. ಹೀಗೆ ಒಪ್ಪದಿದ್ದರೆ ಟೀಕಾಕಾರರ

ಪಕ್ಷದಲ್ಲಿಯೂ ಅರುಚಿ ತಪ್ಪಿದ್ದಲ್ಲ ಎಂದು ''ಅನ್ಯಥಾ'' ಇತ್ಯಾದಿ ಗ್ರಂಥವು ವಿವರಿಸಿದೆ. ಎರಡೂ ಪ್ರಕರಣಗಳಲ್ಲಿ ಕೇಳಿಸುತ್ತಿರುವ ಜ್ಯೋತಿಯು ಒಬ್ಬನೇ ಆಗಲಿ; ಇದರಿಂದೇನಾಯಿತು? ಎಂಬ ಪ್ರಶ್ನೆಗೆ ತತ್ವಪ್ರದೀಪಕಾರರ ಪಕ್ಷದಲ್ಲಿ ಬಂದಿರುವ ಅನುಪಪತ್ತಿಯು ಪರಿಹಾರವಾಯಿತೆಂದು 'ತಥಾ ಚ' ಇತ್ಯಾದಿ ಗ್ರಂಥವು ಉತ್ತರಿಸಿದೆ. ಅಗ್ನಿಸೂಕ್ತದಲ್ಲಿ ಛಂದೋಭಿಧಾನಾದಿಗಳು ಇಲ್ಲದ ಮಾತ್ರದಿಂದ ಮುಂದಿನ ಸೂತ್ರಗಳು ಅನುಪಪನ್ನವಾಗುವುದಿಲ್ಲ. 'ಛಂದೋಭಿಧಾನಾತ್' ಎಂಬುದಕ್ಕೆ ಹೀಗರ್ಥ -- 'ಜ್ಯೋತಿಗೆ ಛಾಂದೋಗ್ಯದಲ್ಲಿ ಗಾಯತ್ರೀಛಂದಸ್ತ್ವವನ್ನು ಹೇಳಿದ್ದರಿಂದ ಅಗ್ನಿಸೂಕ್ತದಲ್ಲಿ ಹೇಳಲ್ಪಟ್ಟ ಜ್ಯೋತಿಯು ವಿಷ್ಣುವಲ್ಲ' ಎಂದು.

**ಶಂಕೆ** - ತತ್ವಪ್ರದೀಪಕಾರರ ಪಕ್ಷದಲ್ಲಿ 'ಜ್ಯೋತಿರ್ಹೃದಯ ಆಹಿತಂ ಯತ್' ಎಂಬ ಋಕ್ಸಂಹಿತಾವಾಕ್ಯವು ವಿಷಯವಾಕ್ಯ. ಋಕ್ಸಂಹಿತಾ ಹಾಗೂ ಛಾಂದೋಗ್ಯದಲ್ಲಿ ಬಂದಿರುವ ಜ್ಯೋತಿಯು ಒಂದೇ ಆಗಿದೆ. ಆದ್ದರಿಂದ ಛಾಂದೋಗ್ಯದಲ್ಲಿ ಕೇಳಿಸುತ್ತಿರುವ ಜ್ಯೋತಿಯು ಗಾಯತ್ರಿಯಾದಲ್ಲಿ ಋಕ್ಸಂಹಿತಾದಲ್ಲಿ ಬಂದಿರುವ ಜ್ಯೋತಿಯು ಗಾಯತ್ರಿಯೇ ಆಗಬೇಕೆಂದು ಇಲ್ಲಿಯ ತನಕ ಹೇಳಿದ್ದಾಯಿತು. ಆದರೆ ಛಾಂದೋಗ್ಯವಾಕ್ಯವನ್ನು ಆವಲಂಬಿಸದೆ ಸುಲಭವಾಗಿ ಪೂರ್ವಪಕ್ಷ ಮಾಡಬಹುದು. ಅಗ್ನಿಸೂಕ್ತದಲ್ಲಿ ಕೇಳಿಸುತ್ತಿರುವ ಜ್ಯೋತಿಯು ವಿಷ್ಣುವಾಗಲಾರ. ಅಗ್ನಿ ಮೊದಲಾದವರಲ್ಲಿ ರೂಢವಾದ ಜ್ಯೋತಿಃಶ್ರುತಿಯೇ ಇದಕ್ಕೆ ಆಧಾರ. ಅಗ್ನಿಪ್ರಕರಣದಲ್ಲಿರುವ ಜ್ಯೋತಿಃಶ್ರುತಿಯು ಅಗ್ನಿಯನ್ನು ಹೇಳಬೇಕೇ ಹೊರತು ವಿಷ್ಣುವನ್ನಲ್ಲ ಎಂದೇ ಪೂರ್ವಪಕ್ಷ ಮಾಡಲು ಬರುವಾಗ ಬೇರೆ ಪ್ರಕರಣದಲ್ಲಿರುವ ಛಾಂದೋಗ್ಯದ ಜ್ಯೋತಿಯಿಂದ ಏಕ್ಯವನ್ನು ಹೇಳಿ, ಛಾಂದೋಗ್ಯದ ಜ್ಯೋತಿಯು ಛಂದಸ್ಸಾದ್ದರಿಂದ ಅಗ್ನಿಸೂಕ್ತದಲ್ಲಿರುವ ಜ್ಯೋತಿಯು ಛಂದಸ್ಸೇ ಆಗಬೇಕೆಂಬುದು ವಕ್ರಮಾರ್ಗವಲ್ಲವೇ?

**ಸಮಾಧಾನ** - ಕೇವಲ ಜ್ಯೋತಿಃಶ್ರುತಿಯ ಆಧಾರದಿಂದ ಅಗ್ನಿ ಎಂದು ಪೂರ್ವಪಕ್ಷ ಮಾಡುವುದು ಸುಲಭವಲ್ಲ. ಏಕೆಂದರೆ, ಜ್ಯೋತಿಃಶಬ್ದವು ಅಧಿದೈವಶಬ್ದವೋ ಅಥವಾ ಅಧಿಭೂತಶಬ್ದವೋ? ಅಧಿದೈವ ಶಬ್ದವಾದರೆ ಅಂತಃಸ್ಥತ್ವಾಧಿಕರಣ ನ್ಯಾಯದಂತೆ ವಿಷ್ಣುಪರವಾಗುತ್ತದೆ. ಅಧಿಭೂತಶಬ್ದವಾದರೆ ಆಕಾಶಾಧಿಕರಣನ್ಯಾಯದಂತೆ ವಿಷ್ಣುಪರವಾಗುತ್ತದೆ. ಹೀಗೆ ನಿರವಕಾಶವಾದ ವಿಷ್ಣುಲಿಂಗದಿಂದ ವಿಷ್ಣುವನ್ನು ಜ್ಯೋತಿಯೆಂದು ಹೇಳಲು ಬರುವಾಗ ಪೂರ್ವಪಕ್ಷಪ್ರಾಪಕಜ್ಯೋತಿಃಶ್ರುತಿಯು ದುರ್ಬಲವಾಗುತ್ತದೆ.

**ಶಂಕೆ** - ಭಾಷ್ಯ, ತತ್ವಪ್ರಕಾಶಿಕಾ ಹಾಗೂ ಚಂದ್ರಿಕೆಗಳಲ್ಲಿ ಹೇಳುವಂತೆ ಅಗ್ನಿಸೂಕ್ತವೆಂಬ ಪ್ರಕರಣವು ನಿರವಕಾಶವಾಗಿದೆ. ಇದರ ಅನುಗ್ರಹದಿಂದ ಜ್ಯೋತಿಃಶ್ರುತಿಯು ಅಗ್ನಿಯನ್ನು ಪ್ರತಿಪಾದಿಸಬಹುದೆಂದು ಪೂರ್ವಪಕ್ಷ ಮಾಡಬಹುದು. ನಿರವಕಾಶಪ್ರಕರಣದ ಫಲದಿಂದ ಪೂರ್ವಪಕ್ಷಯುಕ್ತಿಯು ಪ್ರಬಲವಾಗಿದೆ-ಯಲ್ಲವೇ?

**ಸಮಾಧಾನ** - ಇದು ತಪ್ಪು. ವಸ್ತುತಃ ಅಗ್ನಿಸೂಕ್ತದಿಂದಷ್ಟೇ ಪೂರ್ವಪಕ್ಷವನ್ನು ಮಾಡಬಹುದು. ಆದರೆ ಸೂತ್ರಗಳು ವಿಶ್ವತೋಮುಖಗಳಾದ್ದರಿಂದ ಅನೇಕಶ್ರುತಿಗಳ ಸಮನ್ವಯವು ಉದ್ದೇಶವಾಗಿರುತ್ತದೆ. ಬೇರೆ ಬೇರೆ ಪ್ರಕರಣದಲ್ಲಿರುವ ಜ್ಯೋತಿಃಶಬ್ದದಿಂದಲೂ ವಿಷ್ಣುವೇ ಪ್ರತಿಪಾದ್ಯನೆಂದು ಪ್ರಕೃತ ತೋರಿಸಬೇಕಾಗಿದೆ. ಆದ್ದರಿಂದ ಈ ಅಗ್ನಿಸೂಕ್ತಪ್ರಕರಣದಲ್ಲಿರುವ ಪೂರ್ವಪಕ್ಷಪ್ರಾಪಕಯುಕ್ತಿಯನ್ನು

ವಿವಕ್ಷಿಸದೆ ಛಾಂದೋಗ್ಯಪ್ರಕರಣದಲ್ಲಿರುವ ಪೂರ್ವಪಕ್ಷಯುಕ್ತಿಯನ್ನು ಉಪಯೋಗಿಸಿಕೊಳ್ಳಲಾಗಿದೆ. ಇದರಿಂದ ಇದೇ ರೀತಿಯಲ್ಲಿರುವ ಸಕಲಶ್ರುತಿಗಳಲ್ಲಿ ಹೇಳಲ್ಪಟ್ಟ ಜ್ಯೋತಿಯು ವಿಷ್ಣುವಲ್ಲವೆಂದು ಆಕ್ಷೇಪ ಮಾಡಿಕೊಳ್ಳಬೇಕು. ಇದಕ್ಕೋಸ್ಕರ ಛಾಂದೋಗ್ಯದಲ್ಲಿರುವ ಪೂರ್ವಪಕ್ಷಯುಕ್ತಿಯನ್ನು ಸೂತ್ರಕಾರರು ಬಳಸಿದ್ದಾರೆ.

ಶಂಕೆ - ಹಾಗಾದರೆ ಛಾಂದೋಗ್ಯವಾಕ್ಯವನ್ನೇ ಪ್ರತಿಯೊಂದು ಸೂತ್ರಗಳಲ್ಲಿ ಉದಾಹರಿಸಿ ಅಲ್ಲಿರುವ ಜ್ಯೋತಿಃಶಬ್ದದಿಂದ ವಿಷ್ಣು ಪ್ರತಿಪಾದ್ಯನಾಗಿದ್ದಾನೆಂದು ನಿರ್ಣಯಿಸಿದರೆ ಸಾಕು. ಆ ವಿಷ್ಣುವೇ ಅಗ್ನಿಸೂಕ್ತದಲ್ಲಿ ಪ್ರತಿಪಾದ್ಯನಾದ್ದರಿಂದ ಅಗ್ನಿಸೂಕ್ತದಲ್ಲಿರುವ ಜ್ಯೋತಿಃಶಬ್ದದಿಂದಲೂ ವಿಷ್ಣುವೇ ಪ್ರತಿಪಾದ್ಯನೆಂದು ಸುಲಭವಾಗಿ ತಿಳಿಯುತ್ತದೆ. ಆದ್ದರಿಂದ ತತ್ತ್ವಪ್ರದೀಪಕಾರರು ಅಗ್ನಿಸೂಕ್ತವನ್ನು ವಿಷಯವಾಕ್ಯವೆಂದು ಹೇಳಿ ಛಾಂದೋಗ್ಯದ ಪೂರ್ವಪಕ್ಷಯುಕ್ತಿಯನ್ನು ಆಧರಿಸುವುದು ಹೇಗೆ ಸರಿ?

ಸಮಾಧಾನ - ಈ ಆಕ್ಷೇಪದಲ್ಲಿಯೂ ಅರ್ಥವಿಲ್ಲ. ಏಕೆಂದರೆ ಛಾಂದೋಗ್ಯದಲ್ಲಿರುವ ಜ್ಯೋತಿಯು ವಿಷ್ಣುವೆನ್ನಲು ಅಗ್ನಿಸೂಕ್ತದಲ್ಲಿರುವ ಚರಣಾಭಿಧಾನವೆಂಬ (ಇಂದ್ರಿಯಗಳಿಗೆ ಗೋಚರನಾಗದಿರುವಿಕೆ ಎಂಬ)ಸಿದ್ಧಾಂತಯುಕ್ತಿಯನ್ನು ಅವಲಂಬಿಸಲೇ ಬೇಕು. ಇಲ್ಲದಿದ್ದರೆ ಮುಂದಿನ ಮೂರು ಸೂಕ್ತಗಳು ಸಮಂಜಸವಾದರೂ ಮೊದಲನೆಯ ಚರಣಾಭಿಧಾನಸೂತ್ರವು ಅನುಪಪನ್ನವಾಗುತ್ತದೆ. ಆದ್ದರಿಂದ ಛಾಂದೋಗ್ಯವನ್ನು ವಿಷಯವಾಕ್ಯವೆಂದು ಹೇಳಿದರೂ ಅಗ್ನಿಸೂಕ್ತದಲ್ಲಿರುವ ಸಿದ್ಧಾಂತಯುಕ್ತಿಯನ್ನು ಅವಲಂಬಿಸಬೇಕೆಂಬ ವಕ್ರಮಾರ್ಗವನ್ನು ನೀವು ಅನುಸರಿಸಬೇಕು.

ಶಂಕೆ - ಅಗ್ನಿಸೂಕ್ತವನ್ನು ವಿಷಯವಾಕ್ಯವೆಂದು ಹೇಳಿದಾಗ (ಸನ್ನ್ಯಾಯರತ್ನಾವಲೀಕಾರರಂತೆ) ಸಿದ್ಧಾಂತಯುಕ್ತಿಗಾಗಿ ಚರಣಾಭಿಧಾನವೆಂಬ ಒಂದೇ ಯುಕ್ತಿಯನ್ನು ಆಶ್ರಯಿಸಬೇಕು. ಅದಕ್ಕೋಸ್ಕರ ಬೇರೆ ಪ್ರಕರಣವನ್ನು ಅನುಸರಿಸಬೇಕು. ಅದಕ್ಕಾಗಿ ಮೊದಲನೆಯ ಸೂತ್ರವನ್ನಷ್ಟೇ ಕಷ್ಟದಿಂದ ಕೂಡಿಸಬೇಕು. ಆದರೆ ತತ್ತ್ವಪ್ರದೀಪಕಾರರ ಪಕ್ಷದಲ್ಲಿ ಅನೇಕ ಪೂರ್ವಪಕ್ಷಯುಕ್ತಿಗಳು ಹಾಗೂ ಅನೇಕ ಸಿದ್ಧಾಂತ-ಯುಕ್ತಿಗಳನ್ನು ಕೂಡಿಸುವುದಕ್ಕಾಗಿ ಬೇರೆ ಪ್ರಕರಣವನ್ನು ಆಶ್ರಯಿಸಬೇಕು. ಅದಕ್ಕೋಸ್ಕರ ಮೂರು ಸೂತ್ರಗಳನ್ನು ಕಷ್ಟದಿಂದ ಹೊಂದಿಸಬೇಕು. ಆದ್ದರಿಂದ ಛಾಂದೋಗ್ಯವಾಕ್ಯವನ್ನು ವಿಷಯವಾಕ್ಯವೆನ್ನುವುದೇ ಸೂಕ್ತವಲ್ಲವೇ?

ಸಮಾಧಾನ - ಪ್ರಕರಣಾಂತರವನ್ನು ಅನುಸರಿಸಬೇಕೆಂಬುದು ಇಬ್ಬರ ಪಕ್ಷದಲ್ಲಿಯೂ ಸಮಾನ. ಹೀಗಿರುವಾಗ ಎಷ್ಟು ಯುಕ್ತಿಗಳನ್ನು ಆಶ್ರಯಿಸಿದ್ದೇವೆಂಬುದು ಗೌಣವಾಗುತ್ತದೆ. ಅಷ್ಟೇ ಅಲ್ಲದೆ ಪ್ರಥಮಸೂತ್ರವು ಪ್ರಧಾನಸೂತ್ರವಾಗಿದೆ. ಉಳಿದ ಮೂರು ಸೂತ್ರಗಳು ಗುಣಸೂತ್ರಗಳಾಗಿವೆ. ಪ್ರಧಾನಸೂತ್ರದಲ್ಲಿ ಯಾವ ಯುಕ್ತಿಯು ಕೇಳಿಸುತ್ತಿದೆಯೋ ಆ ಯುಕ್ತಿಯನ್ನು ಹೇಳುವ ಶ್ರುತಿಯನ್ನೇ ವಿಷಯವಾಕ್ಯವೆನ್ನುವುದು ಅತ್ಯಂತ ಸಮಂಜಸ. ಗುಣಸೂತ್ರದಲ್ಲಿ ಕೇಳಿಸುವ ಯುಕ್ತಿಯನ್ನು ಹೇಳುವ ವಿಷಯವಾಕ್ಯವನ್ನು ಅನುಸರಿಸಬೇಕಾಗಿಲ್ಲ. ಪ್ರಧಾನಸೂತ್ರದಲ್ಲಿ ಪ್ರಕರಣಾಂತರವನ್ನು ಅನುಸರಿಸು-ವುದಕ್ಕಿಂತ ಗುಣಸೂತ್ರಗಳಲ್ಲಿ ಪ್ರಕರಣಾಂತರವನ್ನು ಅನುಸರಿಸುವುದು ನ್ಯಾಯವೇ ಆಗಿದೆ. ಮತ್ತೊಂದು ಪ್ರಬಲ ಕಾರಣ ಚರಣಾಭಿಧಾನವೆಂಬ ಹೇತುವಿನ ಬಲದಿಂದ ವಿಷ್ಣುವು ಜ್ಯೋತಿಯೆಂದು ಮೊದಲನೆಯ

ಸೂತ್ರದಲ್ಲಿ ಹೇಳಿದ್ದಾರೆ. ಇದರಮೇಲೆ ಬರುವ ಪ್ರಶ್ನೆಗೆ ಮುಂದಿನ ಸೂತ್ರಗಳು ಉತ್ತರಿಸುತ್ತಿವೆ. ಬೇರೆ ಪ್ರಕರಣದಲ್ಲಿ ಜ್ಯೋತಿಗೆ ಛಂದಸ್ತ್ವವನ್ನು ಹೇಳಿದ್ದಾರಲ್ಲ? ಇತ್ಯಾದಿ ಪ್ರಶ್ನೆಗಳಿಗೆ ಅಗ್ನಿಸೂಕ್ತದಲ್ಲಿ ಹೇಳಲ್ಪಟ್ಟ ಜ್ಯೋತಿಯೇ ಬೇರೆ ಶ್ರುತಿಗಳಲ್ಲಿ ಹೇಳಲ್ಪಟ್ಟ ಜ್ಯೋತಿಯಾಗಿದ್ದಾನೆಂದು ಸಮರ್ಥಿಸಲು ಮುಂದಿನ ಸೂಕ್ತಗಳು ಸಾರ್ಥಕಗಳಾಗಿವೆ. ಇದನ್ನೇ ತತ್ವಪ್ರದೀಪದಲ್ಲಿ ''ಅಗ್ನಿಸೂಕ್ತಮುದಾಹೃತ್ಯ ಮಂತ್ರಗೋಚರಂ ವಿಚಾರಮಾಚರತಾ ಪರಮವೈದಿಕೇನಾಚಾರ್ಯೇಣ ನಿಖಿಲೋಽಪಿ ವೇದಸಮನ್ವಯೋ ವಿಚಾರಿತೋ ಭವತೀತಿ ಭೂಯಾನಯಂ ಲಾಭಃ' (ಅಗ್ನಿಸೂಕ್ತವನ್ನು ಉದಾಹರಿಸಿ ಮಂತ್ರಾರ್ಥವನ್ನು ವಿಚಾರ ಮಾಡುವ ಪರಮವೈದಿಕರಾದ ಆಚಾರ್ಯರಿಂದ ಸಕಲವೇದಸಮನ್ವಯವನ್ನು ವಿಚಾರ ಮಾಡಲಾಗಿದೆ ಎಂದು ಬಹಳ ಲಾಭವಿದೆ) ಎಂದು ಹೇಳಿದ್ದಾರೆ.

ಅಗ್ನಿಸೂಕ್ತವೇ ವಿಷಯವಾಕ್ಯವಾಗಿದೆ. 'ಛಂದೋಭಿಧಾನಾತ್' ಎಂಬ ಮುಂದಿನ ಸೂತ್ರದ ಪೂರ್ವ-ಪಕ್ಷದ ಭಾಗಕ್ಕೆ ಅರ್ಥವನ್ನು ಇಲ್ಲಿಯ ತನಕ ವಿವರಿಸಿದರು. ಇದರಂತೆ 'ಭೂತಾದಿಪಾದವ್ಯಪದೇಶಾಚ್ಚ' ಎಂಬ ಸೂತ್ರಕ್ಕೆ ಅರ್ಥವನ್ನು ತಿಳಿಯಬೇಕು. ಅಂದರೆ ಅಗ್ನಿಸೂಕ್ತದಲ್ಲಿರುವ ಜ್ಯೋತಿಯು ವಿಷ್ಣುವೇ ಆಗಿದ್ದಾನೆ. ಏಕೆಂದರೆ ಛಾಂದೋಗ್ಯದಲ್ಲಿ ಇದೇ ಜ್ಯೋತಿಗೆ ಭೂತಾದಿಪಾದವ್ಯಪದೇಶವನ್ನು ಹೇಳಿದ್ದರಿಂದ ಎಂದು. 'ಉಪದೇಶಭೇದೇಽಪಿ ಆವಿರೋಧಾತ್' ಎಂಬ ಮುಂದಿನ ಸೂತ್ರದಲ್ಲಿ ಹೇಳಲ್ಪಟ್ಟ ಹೇತುವೂ ಛಾಂದೋಗ್ಯಶ್ರುತಿಯಲ್ಲಿ ಕೇಳಿಸುತ್ತಿರುವುದರಿಂದ ಅಗ್ನಿಸೂಕ್ತದಲ್ಲಿ ಹೇಳಲ್ಪಟ್ಟ ಜ್ಯೋತಿಯು ವಿಷ್ಣುವೆಂದು ನಿರ್ಣಯಿಸಬೇಕು.

ಶಂಕೆ - ತತ್ವಪ್ರದೀಪಕಾರರ ಪಕ್ಷದಲ್ಲಿ ಅನುಪಪತ್ತಿಯನ್ನು ಪರಿಹರಿಸಬಹುದಿತ್ತು. ಒಂದು ವೇಳೆ ಅಗ್ನಿಸೂಕ್ತ ಹಾಗೂ ಛಾಂದೋಗ್ಯದಲ್ಲಿ ಹೇಳಲ್ಪಟ್ಟ ಜ್ಯೋತಿಯು ಒಂದೇ ಆಗಿದ್ದಲ್ಲಿ. ಆದರೆ ಹಾಗಿಲ್ಲ. ಎರಡೂ ವಾಕ್ಯಗಳು ಬೇರೆ ಬೇರೆ ಅರ್ಥವನ್ನೇ ಹೇಳುತ್ತಿವೆ. ಹೀಗೆ ಒಪ್ಪದಿದ್ದರೆ 'ವಾಗೇವಾಸ್ಯ ಜ್ಯೋತಿಃ ಆಥೈಷ ಜ್ಯೋತಿಃ' ಎಂಬಲ್ಲಿಯೂ ಜ್ಯೋತಿಃಶ್ರುತಿಯಿರುವುದರಿಂದ ಆವುಗಳಿಗೂ ಏಕ್ಯವನ್ನು ಅಂಗೀಕರಿಸಬೇಕಾದೀತು.

ಸಮಾಧಾನ - ಈ ಶಂಕೆಗೆ 'ನಚ' ಎಂಬ ವಾಕ್ಯದಿಂದ ಉತ್ತರಿಸಿದ್ದಾರೆ. 'ತೇಜೋ ವೈ ಬ್ರಹ್ಮವರ್ಚಸಂ ಗಾಯತ್ರೀ' ಎಂಬ ಮತ್ತೊಂದು ಶ್ರುತಿಯ ಆಧಾರದಿಂದ ಅಗ್ನಿಶಬ್ದದ ಅರ್ಥವನ್ನೇ ಹೇಳುವ ಜ್ಯೋತಿಃಶಬ್ದವು ಹಾಗೂ ಗಾಯತ್ರೀಶಬ್ದವು ಒಂದೇ ಅರ್ಥವನ್ನು ಹೇಳುತ್ತಿದೆಯೆಂದು ನಿಶ್ಚಯವಾಗುತ್ತದೆ. ಹಾಗಾಗಿ ಅಗ್ನಿಸೂಕ್ತ ಹಾಗೂ ಛಾಂದೋಗ್ಯಸೂಕ್ತಗಳು ಬೇರೆ ಬೇರೆ ಅರ್ಥಗಳನ್ನು ಪ್ರತಿಪಾದಿಸುತ್ತಿಲ್ಲ.

ಶಂಕೆ - ಆದರೂ ಸಹ ಅಗ್ನಿಸೂಕ್ತವು ಛಾಂದೋಗ್ಯದ ಅರ್ಥವನ್ನು ಪ್ರತಿಪಾದಿಸುವುದು ಕಷ್ಟ. ಏಕೆಂದರೆ ಅಗ್ನಿಸೂಕ್ತದಲ್ಲಿ 'ವಿ ಮೇ ಕರ್ಣಾ ಪತಯತೋ ವಿಚಕ್ಷುಃ' ಎಂದು ಕಣ್ಣು ಕಿವಿ ಮೊದಲಾದ ಇಂದ್ರಿಯಗಳಿಗೆ ಜ್ಯೋತಿಯು ಅಗೋಚರವಾಗಿದೆಯೆಂದು ಹೇಳಲಾಗಿದೆ. ಆದರೆ ಛಾಂದೋಗ್ಯದಲ್ಲಿ 'ತದೇತದ್ದೃಷ್ಟಂ ಚ ಶ್ರುತಂ ಚ' ಎಂದು ಜ್ಯೋತಿಯು ಕಣ್ಣು ಮೊದಲಾದ ಇಂದ್ರಿಯಗಳಿಗೆ ಗೋಚರವಾಗುತ್ತದೆಂದು ಹೇಳಲಾಗಿದೆ. ಒಂದೇ ವಸ್ತುವು ವಿರುದ್ಧಧರ್ಮಗಳಿಗೆ ಆಶ್ರಯವಾಗಲು ಹೇಗೆ ಸಾಧ್ಯ ?

ಸಮಾಧಾನ - ಎರಡು ಶ್ರುತಿಗಳಲ್ಲಿರುವ ಜ್ಯೋತಿಃಶಬ್ದದಿಂದ ವಿಷ್ಣುವೇ ಪ್ರತಿಪಾದ್ಯನಾಗಿದ್ದಾನೆ. (ಅಂತಹ ವಿಷ್ಣುವು ಅನಂತಮಹಿಮೋಪೇತನಾದ್ದರಿಂದ ವಿರುದ್ಧಧರ್ಮಗಳಿಗೆ ಆಶ್ರಯನಾಗಬಹುದು). ಶುದ್ಧರೂಪದಿಂದ ಭಗವಂತನು ಇಂದ್ರಿಯಗಳಿಗೆ ಗೋಚರನಾಗಲಾರ. ಆದರೆ ವಿಶಿಷ್ಟರೂಪದಿಂದ ಇಂದ್ರಿಯಗಳಿಗೆ ಗೋಚರನಾಗಬಹುದು. ಅಥವಾ ಸಂಪೂರ್ಣವಾಗಿ ಭಗವಂತನು ಇಂದ್ರಿಯಗಳಿಗೆ ಗೋಚರನಾಗಲಾರನೆಂದು ಅಗ್ನಿಸೂಕ್ತವು ಹೇಳುತ್ತಿದೆ. ಏಕದೇಶದಿಂದ ಭಗವಂತನನ್ನು ತಿಳಿಯಬಹುದೆಂದು ಛಾಂದೋಗ್ಯವು ಹೇಳುತ್ತಿದೆ. ಅಥವಾ, ಭಗವಂತನು ಸೂಕ್ಷ್ಮಸ್ವರೂಪದಿಂದ ತಿಳಿಯಲಾರನೆಂದು ಅಗ್ನಿಸೂಕ್ತ ಹೇಳಿದರೆ, ಸ್ಥೂಲಸ್ವರೂಪದಿಂದ ತಿಳಿಯುತ್ತಾನೆಂದು ಛಾಂದೋಗ್ಯವು ಹೇಳುತ್ತಿದೆ. ಹೀಗೆ ಅನೇಕ ಬಗೆಯಲ್ಲಿ ವಿರೋಧವನ್ನು ಪರಿಹರಿಸಬಹುದು.

ಶಂಕೆ - ನಾಲ್ಕೂ ಸೂತ್ರಗಳು ಒಂದೇ ಅಧಿಕರಣವೆಂದಾಗ ಬಹಳ ಕ್ಲೇಶವಿದೆ. ಕರ್ಣಾದಿವಿದೂರತ್ವ ದೃಷ್ಟತ್ವ ಮೊದಲಾದ ವಿರುದ್ಧಧರ್ಮಗಳನ್ನು ಆಕಾರಭೇದದಿಂದ ಹೊಂದಿಸಬೇಕು. ಮತ್ತು ತೇಜಃಶಬ್ದವು ಅಗ್ನಿಶಬ್ದದ ಪರ್ಯಾಯವಾಗಿದೆ. ಆ ತೇಜಸ್ ಶಬ್ದವೇ ಗಾಯತ್ರಿಯಲ್ಲಿ ಕೇಳಿಸುತ್ತಿರುವುದರಿಂದ ಅಗ್ನಿಸೂಕ್ತ ಹಾಗೂ ಛಾಂದೋಗ್ಯಸೂಕ್ತಗಳು ಒಂದೇ ಅರ್ಥವನ್ನು ಪ್ರತಿಪಾದಿಸುತ್ತಿವೆ ಎಂದು ಹೇಳಬೇಕು. ಜ್ಯೋತಿಃಶ್ರುತಿ ಹಾಗೂ ಗುಹಾನಿಹಿತತ್ವಧರ್ಮಗಳು ಸಮಾನವಾದ್ದರಿಂದ ಅನೇಕ ಕಡೆಯಿರುವ ಜ್ಯೋತಿಯು ಒಂದೇ ವಸ್ತುವಾಗಿದೆಯೆಂದು ಸಾಧಿಸಬೇಕು. ಇಷ್ಟೆಲ್ಲಾ ಕ್ಲೇಶಗಳಿಂದ ಒಂದೇ ಅಧಿಕರಣವೆಂಬ ಆಗ್ರಹವೇಕೆ? ಜ್ಯೋತಿಃಸೂತ್ರವೇ ಬೇರೆ ಅಧಿಕರಣ, ಛಂದಃಸೂತ್ರಾದಿಗಳು ಬೇರೆ ಅಧಿಕರಣವೆಂದು ಸುಲಭವಾಗಿ ಹೇಳಬಹುದು. ಹೀಗೆ ಹೇಳಿದಾಗ ಯಾವ ಕ್ಲೇಶವೂ ಇರುವುದಿಲ್ಲವಲ್ಲವೇ?

ಸಮಾಧಾನ - ಈ ಶಂಕೆಗೆ 'ಏಕಾಧಿಕರಣತ್ವಾದೇವ' ಎಂಬ ಮಾತಿನಿಂದ ಉತ್ತರಿಸಿದ್ದಾರೆ. ಬೇರೆ ಅಧಿಕರಣವೆಂದು ಒಪ್ಪಬಹುದಿತ್ತು. ಆದರೆ ಸೂತ್ರಕಾರರು ಜ್ಯೋತಿಃಸೂತ್ರದಲ್ಲಿ ಮಾಡಿದ ಶಬ್ದಸಮನ್ವಯದ ಸಮರ್ಥನೆಯನ್ನೇ ಮುಂದಿನ ಸೂತ್ರಗಳಲ್ಲಿ ಮಾಡಿದ್ದಾರೆ. ಮತ್ತು ಭಾಷ್ಯಕಾರರೂ ಕೂಡ ನಾಲ್ಕೂ ಸೂತ್ರಗಳು ಒಂದೇ ಶಬ್ದದ ಸಮನ್ವಯವನ್ನು ಮಾಡಿವೆಯೆಂದು ಹೇಳಿದ್ದಾರೆ. ಹೀಗೆ ಸೂತ್ರಕಾರರಿಗೆ ಹಾಗೂ ಭಾಷ್ಯಕಾರರಿಗೆ ಒಂದೇ ಅಧಿಕರಣವೆಂಬ ಅಭಿಪ್ರಾಯವಿರುವುದರಿಂದ ಅನಿವಾರ್ಯವಾಗಿ ಬೇರೆ ಅಧಿಕರಣವಲ್ಲವೆಂದು ಒಪ್ಪಬೇಕು. ಬೇರೆ ಶಬ್ದದ ಸಮನ್ವಯವನ್ನು ಛಂದಃಸೂತ್ರಾದಿಗಳಲ್ಲಿ ಸಮನ್ವಯ ಮಾಡುವುದಾದರೆ 'ಆಕಾಶಸ್ತಲ್ಲಿಂಗಾತ್' 'ಅತ ಏವ ಪ್ರಾಣಃ' ಇತ್ಯಾದಿ ಸೂತ್ರಗಳಲ್ಲಿ ಮಾಡಿದಂತೆ ಗಾಯತ್ರ್ಯಾದಿ ಶಬ್ದಗಳನ್ನು ಸೂತ್ರದಲ್ಲಿ ಉಲ್ಲೇಖಿಸಬೇಕಿತ್ತು. ಆದರೆ ಹಾಗೆ ಉಲ್ಲೇಖಿಸದ ಕಾರಣ ಜ್ಯೋತಿಯೆಂಬ ಒಂದೇ ಶಬ್ದದ ಸಮನ್ವಯವನ್ನು ನಾಲ್ಕೂ ಸೂತ್ರಗಳು ಮಾಡುತ್ತಿವೆ. ಇಷ್ಟು ತತ್ವಪ್ರದೀಪಕಾರರ ಪಕ್ಷ.

**ಗುರುರಾಜೀಯಮ್** – ನನ್ವತ್ರಾಥ ಮತಮನುಪಪನ್ನಮ್ । ತಥಾಹಿ । ತದ್ವಿಷಯತ್ವೇನಾಭಿಮತೇ ಹೃದಯ ಆಹಿತಮಿತಿ ವಾಕ್ಯೇ ಛಂದೋಭಿಧಾನಮೃತಾದಿಪಾದವ್ಯಪದೇಶೋಪದೇಶಭೇದಾನಾಮಭಾವಾತ್ । ಕಿಞ್ಚ ಪೂರ್ವತ್ರಾಗ್ನಿಸೂಕ್ತಮಗ್ನಿಪರಮಿತ್ಯೇವ ಪೂರ್ವಪಕ್ಷಾತ್ ಛಂದಸ್ಸೂತ್ರೇ ಛಾಂದೋಗ್ಯವಾಕ್ಯಂ ಛಂದಃ-ಪರಮಿತ್ಯೇವ ಪೂರ್ವಪಕ್ಷಾತ್ ಪೂರ್ವಪಕ್ಷಯುಕ್ತಿಭೇದಸ್ಯ ವಿದ್ಯಮಾನತ್ವೇನಾಧಿಕರಣಭೇದಸ್ಯೈವ

वक्तव्यत्वेन चतुस्सूत्र्या एकाधिकरणत्वासम्भवात् । किञ्चाग्निसूक्तोक्तकर्णादि-विदूरत्वविरुद्धस्य दृष्टत्वादे- श्छान्दोग्ये प्रतिपादितत्वात्तस्यैकार्थप्रतिपादकत्वानुप-पत्तेरित्याशङ्क्य निराकरोति – **न चेत्यादिना तस्मादाद्यं मतं युक्तमित्यन्तेन – आकारभेदेनेति ॥** कात्स्न्येन दृष्टत्वाद्यभावाददृष्टत्वादिकं किञ्चिद्दर्शनादेर्दृष्टत्वादि-कमित्यर्थः ।

## ಸಾರ

ನಾಲ್ಕು ಸೂತ್ರಗಳು ಸೇರಿ ಜ್ಯೋತಿರಧಿಕರಣವೆನಿಸಿವೆ. ಈ ಅಧಿಕರಣಕ್ಕೆ ಋಗ್ವೇದದ 'ಜ್ಯೋತಿರ್ಹೃದಯ ಆಹಿತಂ ಯತ್' ಎಂಬ ಅಗ್ನಿಸೂಕ್ತವು ವಿಷಯವಾಕ್ಯ. ಇಲ್ಲಿ ಹೇಳಲ್ಪಟ್ಟ ಜ್ಯೋತಿಯೇ ಛಾಂದೋಗ್ಯದಲ್ಲಿಯೂ ಹೇಳಲ್ಪಟ್ಟಿದೆ. ಎರಡೂ ಕಡೆ ಜ್ಯೋತಿಃಶ್ರುತಿ ಹಾಗೂ ಹೃದಯನಿಹಿತತ್ವಧರ್ಮಗಳು ಸಮಾನವಾದ್ದರಿಂದ ಒಂದೇ ಎಂಬ ಪ್ರತ್ಯಭಿಜ್ಞೆ ಬರುತ್ತದೆ. ಸೂತ್ರಕಾರರು ಅಗ್ನಿಸೂಕ್ತದಲ್ಲಿರುವ ಚರಣಾಭಿಧಾನ ಹೇತುವನ್ನು ಮೊದಲು ಹೇಳಿ ಅಗ್ನಿಸೂಕ್ತವೇ ವಿಷಯವಾಕ್ಯವೆಂದು ಸೂಚಿಸಿದ್ದಾರೆ. ಇದರ ಮೇಲೆ ಬರುವ ಆಕ್ಷೇಪಗಳ ಪರಿಹಾರಕ್ಕಾಗಿ ಮುಂದಿನ ಸೂತ್ರಗಳು ಹೊರಟಿವೆ ಹೊರತು ಮತ್ತೊಂದು ಶಬ್ದದ ಸಮನ್ವಯಕ್ಕಾಗಿ ಅಲ್ಲ. ಛಾಂದೋಗ್ಯದಲ್ಲಿ ಜ್ಯೋತಿಯನ್ನು ಗಾಯತ್ರೀಛಂದಸ್ಸೆಂದು ಕರೆದಿರುವುದರಿಂದ ಅಗ್ನಿಸೂಕ್ತದಲ್ಲಿ ಹೇಳಲ್ಪಟ್ಟ ಜ್ಯೋತಿಯು ವಿಷ್ಣುವಲ್ಲವೆಂಬ ಆಕ್ಷೇಪ ಪರಿಹಾರಕ್ಕಾಗಿ ಛಂದೋಭಿಧಾನಸೂತ್ರದ ಅನಿವಾರ್ಯತೆ ಇದೆ. ವಿಷ್ಣುವೇ ಜ್ಯೋತಿಯಾಗಿದ್ದಾನೆಂಬುದನ್ನು ದೃಢಪಡಿಸಲು ಭೂತಾದಿಪಾದವ್ಯಪದೇಶ ಮತ್ತು ಉಪದೇಶಭೇದಾದಿ ಹೇತುಗಳು ಹೊರಟಿವೆ.

ಅಗ್ನಿಸೂಕ್ತದಲ್ಲಿ ಹಾಗೂ ಛಾಂದೋಗ್ಯದಲ್ಲಿ ಹೇಳಲ್ಪಟ್ಟ ತೇಜಸ್ಸು ಹಾಗೂ ಗಾಯತ್ರಿಯು ಒಂದೇ ಹೊರತು ಬೇರೆಯಲ್ಲ. ಈ ವಿಷಯದಲ್ಲಿ 'ತೇಜೋ ವೈ ಬ್ರಹ್ಮವರ್ಚಸಂ ಗಾಯತ್ರೀ' ಎಂಬ ಶ್ರುತಿಯು ಆಧಾರ. ಅಗ್ನಿಸೂಕ್ತದಲ್ಲಿ ಹೇಳಿದ ಕರ್ಣಾದಿವಿದೂರತ್ವಕ್ಕೆ ವಿರುದ್ಧವಾಗಿ ದೃಷ್ಟತ್ವಧರ್ಮವನ್ನು ಛಾಂದೋಗ್ಯವು ಹೇಳಿರಬಹುದು. ಆದರೆ ಭಗವಂತನು ಸಂಪೂರ್ಣ ತಿಳಿಯಲಾರದ ಕಾರಣ ಕರ್ಣಾದಿವಿದೂರನೆಂಬುದು ಅಗ್ನಿಸೂಕ್ತದ ಅಭಿಪ್ರಾಯ. ಏಕದೇಶದಿಂದ ಎಲ್ಲರಿಗೂ ತಿಳಿಯುತ್ತಾನೆಂಬುದು ಛಾಂದೋಗ್ಯದ ಅಭಿಪ್ರಾಯ.

---

## ಸನ್ನ್ಯಾಯರತ್ನಾವಲೀಕಾರರ ಅಭಿಪ್ರಾಯವೂ ಸರಿ

### तात्पर्यचन्द्रिका

**द्वितीयेऽपि च्छान्दोग्ये चरणाभिधानाभावेऽपि उक्तरीत्या वाक्यद्वयोक्तस्य ज्योतिष एकत्वात् 'चरणाभिधानात्' इत्येतत् न व्यधिकरणम् । तथाच 'चरणा-भिधानात्' इत्यस्यायमर्थः – छान्दोग्यस्थं ज्योतिर्विष्णुः, अस्यैव ज्योतिषोऽग्निसूक्ते**

**विचरणाभिधानात् इति । यद्यपि च्छन्दोग्योक्तस्य ब्रह्मत्वे ''यद्वै तद्ब्रह्म'' इत्यादि-श्रुतिलिङ्गानि स्ववाक्यस्थानि सन्ति, तथाऽपि तत्तत्सूक्तस्थनिरवकाशविष्णुलिङ्गैः सावकाशश्रुतिसूक्तबाधेन भिक्षुकपादप्रसरणन्यायेन सर्ववेदानां विष्णौ समन्वयं दर्शयितुं सूत्रकारेण अग्निसूक्तस्थं लिङ्गमुक्तम् । तस्मात् द्वितीयमपि निरवद्यम् ।**

ಅನುವಾದ - ಪದ್ಮನಾಭತೀರ್ಥರ ಅಭಿಪ್ರಾಯದಲ್ಲಿ ತಪ್ಪಿಲ್ಲ. ಛಾಂದೋಗ್ಯದಲ್ಲಿ ಚರಣಾಭಿಧಾನವು ಇಲ್ಲದಿರಬಹುದು. ಆದರೆ ಹೃದಯನಿಹಿತತ್ವಾದಿ ಸಮಾನಧರ್ಮವಿರುವುದರಿಂದ ಛಾಂದೋಗ್ಯ ಹಾಗೂ ಅಗ್ನಿಸೂಕ್ತಗಳಲ್ಲಿ ಹೇಳಲ್ಪಟ್ಟ ಜ್ಯೋತಿಯು ಒಬ್ಬನೇ ಆಗಿದ್ದಾನೆಂಬ ಪ್ರತ್ಯಭಿಜ್ಞೆ ಬರುತ್ತದೆ. ಹಾಗಾಗಿ ಪ್ರಥಮಸೂತ್ರದಲ್ಲಿ ಹೇಳಿದ ಚರಣಾಭಿಧಾನಹೇತುವು ಜ್ಯೋತಿಯಲ್ಲಿಲ್ಲವೆಂದು ವ್ಯಧಿಕರಣವಾಗದು. ಪ್ರಥಮಸೂತ್ರಕ್ಕೆ ಹೀಗರ್ಥ -- ಛಾಂದೋಗ್ಯದಲ್ಲಿರುವ ಜ್ಯೋತಿಯು ವಿಷ್ಣುವೇ ಆಗಿದ್ದಾನೆ. ಈ ಜ್ಯೋತಿಗೆ ಅಗ್ನಿಸೂಕ್ತದಲ್ಲಿ ವಿಚರಣಾಭಿಧಾನವನ್ನು ಹೇಳಿದ್ದರಿಂದ.

ವಸ್ತುತಃ ಛಾಂದೋಗ್ಯದಲ್ಲಿ ಹೇಳಲ್ಪಟ್ಟ ಜ್ಯೋತಿಯು ವಿಷ್ಣುವೆಂದು ಸಮರ್ಥಿಸಲು ಅಗ್ನಿಸೂಕ್ತದ ಆಧಾರವು ಅನಾವಶ್ಯಕ. ಏಕೆಂದರೆ 'ಯದ್ ವೈ ಏತದ್ಬ್ರಹ್ಮ' ಎಂಬ ಶ್ರುತಿಯಲ್ಲಿ ಬ್ರಹ್ಮನ ಅಸಾಧಾರಣವಾದ ಲಿಂಗಗಳು ಛಾಂದೋಗ್ಯದಲ್ಲಿಯೇ ಕೇಳಿಸುತ್ತದೆ. ಆದರೂ ಸೂತ್ರಕಾರರು ಅಗ್ನಿಸೂಕ್ತದಲ್ಲಿ ಹೇಳಿದ ಬ್ರಹ್ಮನ ಲಿಂಗವನ್ನು ಆಶ್ರಯಿಸಲು ಮುಖ್ಯಕಾರಣವಿದೆ. ಆಯಾ ಸೂಕ್ತಗಳಲ್ಲಿರುವ ನಿರವಕಾಶವಿಷ್ಣುಲಿಂಗಗಳಿಂದ ಅಗ್ನಿ ಮೊದಲಾದವರಲ್ಲಿ ಸಾವಕಾಶವಾದ ಶ್ರುತಿಗಳು ಬಾಧಿತವಾಗುತ್ತವೆ. ಪ್ರಧಾನವಾಗಿ ವಿಷ್ಣುವನ್ನೇ ಪ್ರತಿಪಾದಿಸುತ್ತವೆ. ಹೀಗೆ ಭಿಕ್ಷುಕಪಾದಪ್ರಸಾರಣನ್ಯಾಯದಿಂದ ಸಕಲವೇದಗಳಿಗೆ ವಿಷ್ಣುವಿನಲ್ಲಿ ಸಮನ್ವಯವನ್ನು ತೋರಿಸಬೇಕು. ಅದಕ್ಕಾಗಿ ಸೂತ್ರಕಾರರು ಅಗ್ನಿಸೂಕ್ತದಲ್ಲಿರುವ ಲಿಂಗವನ್ನು ಹೇಳಿದ್ದಾರೆ. ಹೀಗೆ ಸನ್ನ್ಯಾಯರತ್ನಾವಲೀಕಾರರ ಅಭಿಪ್ರಾಯವೂ ಅತ್ಯಂತ ನಿರ್ದುಷ್ಟವಾಗಿದೆ.

ಕಠಿಣಪದಾರ್ಥ

ಉಕ್ತರೀತ್ಯಾ = 'ಜ್ಯೋತಿಃಶ್ರುತಿ ಹಾಗೂ ಹೃದಯನಿಹಿತತ್ವಧರ್ಮಗಳಿಂದ ಶಾಖಾಂತರ ಅಧಿಕರಣನ್ಯಾಯದಂತೆ ಜ್ಯೋತಿಯು ಒಬ್ಬನೇ ಆಗಿದ್ದಾನೆಂಬ ಪ್ರತ್ಯಭಿಜ್ಞೆ ಬರುತ್ತದೆ' ಎಂದು ಹಿಂದೆ ಹೇಳಿದಂತೆ; ಸ್ವವಾಕ್ಯಸ್ಥಾನಿ = ಛಾಂದೋಗ್ಯದಲ್ಲಿ ಇರುವ; ಭಿಕ್ಷುಕಪಾದಪ್ರಸಾರಣನ್ಯಾಯೇನ = 'ಭಿಕ್ಷುಕನಾದ ವಾಮನನು ಬಲಿಯಿಂದ ಮೂರು ಹೆಜ್ಜೆಗಳನ್ನು ಸ್ವೀಕರಿಸುತ್ತೇನೆಂಬ ನೆಪದಿಂದ ಮೂರು ಲೋಕಗಳನ್ನೇ ವ್ಯಾಪಿಸಿದ' ಈ ನ್ಯಾಯದಂತೆ.

**ಪ್ರಕಾಶಃ –** नन्वेवमपि सन्न्यायरत्नावलीकृन्मते छान्दोग्यवाक्यस्यैव ज्योतिरादि-सूत्रचतुष्टये विषयत्वात् तत्र छन्दोभिधानादिसम्भवेऽपि चरणशब्दितकर्णादि-

ವಿದೂರತ್ವಾದೇರಭಾವೇನ ಚರಣಾಭಿಧಾನಾದಿತ್ಯಯುಕ್ತಮಿತ್ಯತ ಆಹ – **ದ್ವಿತೀಯೇऽಪೀತಿ ॥** 'ಪಕ್ಷೇ' ಇತಿ ವರ್ತತೇ । ನನ್ವಯುಕ್ತಮೇತತ್, ಛಾನ್ದೋಗ್ಯಗತಜ್ಯೋತಿಷೋ ವಿಷ್ಣುತ್ವೇ ತತ್ರತ್ಯಾನಾಂ **''ತತೋ ಜ್ಯಾಯಾಂಶ್ಚ ಪುರುಷಃ'' ''ಯದ್ವೈ ತದ್ಬ್ರಹ್ಮ'' ''ಯ ಏತಾಮೇವ ಬ್ರಹ್ಮೋಪನಿಷದಂ ವೇದ''** ಇತಿ ಶ್ರುತೀನಾಂ **''ಏತಾಮೇವ ನಾತಿಶೀಯನ್ತೇ''** ಇತಿ ಸರ್ವೋತ್ತಮತ್ವಗಾನತ್ರಾಣಕರ್ತೃತ್ವಭೂತಾದಿಪಾದತ್ವಾದಿಲಿಙ್ಗಾನಾಂ ಚ ತ್ಯಾಗೇನಾನ್ಯಗತಲಿಙ್ಗೋದಾಹರಣೇ ಪ್ರಯೋಜನಾಭಾವಾದಿತ್ಯಾಶಙ್ಕ್ಯಾಹ – **ಯದ್ಯಪೀತಿ ॥** ಏವಂ ಮತದ್ವಯೇ ಏಕೈಕಂ ವಾಕ್ಯಮುದಾಹರಣಮುಪೇತ್ಯ ಸೂತ್ರಾಣಾಂ ಸಾಮಞ್ಜಸ್ಯಮುಕ್ತಮ್ ॥

ವಿವರಣೆ - ತತ್ತ್ವಪ್ರದೀಪಕಾರರ ಪಕ್ಷವು ಸಮಂಜಸವೆಂದು ಈ ಹಿಂದೆ ಸಮರ್ಥಿಸಿದಿರಿ. ಹಾಗಾದರೆ ಸನ್ಯಾಯರತ್ನಾವಲೀಕಾರರ ಅಭಿಪ್ರಾಯವು ತಪ್ಪಾಯಿತು. ಇವರ ಪ್ರಕಾರ ಛಾಂದೋಗ್ಯವಾಕ್ಯವೇ ಜ್ಯೋತಿರಾದಿ ನಾಲ್ಕು ಸೂತ್ರಗಳಿಗೆ ವಿಷಯವಾಗಿದೆ. ಛಾಂದೋಗ್ಯದಲ್ಲಿ ಛಂದೋಭಿಧಾನ, ಭೂತಾದಿಪಾದವ್ಯಪದೇಶ, ಉಪದೇಶಭೇದಗಳೆಂಬ ಹೇತುಗಳನ್ನು ಹೇಳಬಹುದು. ಆದರೆ ವಿಚರಣಾಭಿಧಾನಹೇತುವಿನಿಂದ ತಿಳಿಯುವ ಕರ್ಣಾದಿವಿದೂರತ್ವ ಹೇತುವು ಹೇಳಿಲ್ಲ. ಆದ್ದರಿಂದ ಪ್ರಥಮಸೂತ್ರದಲ್ಲಿ ಸೂತ್ರಕಾರರು ಪ್ರಯೋಗಿಸಿದ ವಿಚರಣಾಭಿಧಾನಹೇತುವನ್ನು ಸನ್ಯಾಯರತ್ನಾವಲೀಕಾರರ ಪಕ್ಷದಲ್ಲಿ ಹೇಗೆ ಕೂಡಿಸುವುದು? ಎಂಬ ಪ್ರಶ್ನೆಗೆ ''ದ್ವಿತೀಯೇऽಪಿ'' ಎಂಬ ಗ್ರಂಥದಿಂದ ಉತ್ತರಿಸಿದ್ದಾರೆ.

ಛಾಂದೋಗ್ಯದಲ್ಲಿರುವ ಜ್ಯೋತಿಯು ವಿಷ್ಣುವೆನ್ನಲು ಅಗ್ನಿಸೂಕ್ತವನ್ನು ಆಧರಿಸಬೇಕಿಲ್ಲ. ಛಾಂದೋಗ್ಯದಲ್ಲಿಯೇ ಅನೇಕ ಹೇತುಗಳಿವೆ. 'ತತೋ ಜ್ಯಾಯಾಂಶ್ಚ ಪುರುಷಃ ಯದ್ವೈ ಏತದ್ ಬ್ರಹ್ಮ ಯ ಏತಾಮೇವ ಬ್ರಹ್ಮೋಪನಿಷದಂ ವೇದ' 'ಏತಾಮೇವ ನಾತಿಶೀಯಂತೇ' ಇತ್ಯಾದಿ ಶ್ರುತಿಗಳು ಸರ್ವೋತ್ತಮತ್ವ, ಗಾನತ್ರಾಣಕರ್ತೃತ್ವ, ಭೂತಾದಿಪಾದತ್ವ ಮೊದಲಾದ ಅಸಾಧಾರಣಧರ್ಮಗಳನ್ನು ವಿಷ್ಣುವಿನಲ್ಲಿ ಹೇಳುತ್ತಿವೆ. ಈ ಎಲ್ಲ ಹೇತುಗಳನ್ನು ಬಿಟ್ಟು ಅಗ್ನಿಸೂಕ್ತದಲ್ಲಿರುವ ಲಿಂಗವನ್ನು ಉದಾಹರಿಸಲು ಕಾರಣವಿಲ್ಲ ಎಂಬ ಶಂಕೆಗೆ 'ಯದ್ಯಪಿ' ಇತ್ಯಾದಿ ಗ್ರಂಥದಿಂದ ಉತ್ತರಿಸಿದ್ದಾರೆ.

ತತ್ತ್ವಪ್ರದೀಪಕಾರರ ಪಕ್ಷದಲ್ಲಿ ಮತ್ತು ಸನ್ಯಾಯರತ್ನಾವಲೀಕಾರರ ಪಕ್ಷದಲ್ಲಿ ನಾಲ್ಕು ಸೂತ್ರಗಳು ಒಂದೇ ಅಧಿಕರಣವೆಂಬ ವಿಚಾರದಲ್ಲಿ ವಿಪ್ರತಿಪತ್ತಿ ಇಲ್ಲ. ಆದರೆ ತತ್ತ್ವಪ್ರದೀಪಕಾರರು ಹೇಳುವಂತೆ ಅಗ್ನಿಸೂಕ್ತವು ವಿಷಯವಾದರೂ ತಪ್ಪಿಲ್ಲ; ಸನ್ಯಾಯರತ್ನಾವಲೀಕಾರರು ಹೇಳುವಂತೆ ಛಾಂದೋಗ್ಯವಾಕ್ಯ ವಿಷಯವಾದರೂ ತಪ್ಪಿಲ್ಲ. ಎರಡೂ ಪಕ್ಷದಲ್ಲಿ ಯಾವುದೇ ಸೂತ್ರಗಳಿಗೆ ಅಪಾರ್ಥವಿಲ್ಲ. ಆದ್ದರಿಂದ ಇಬ್ಬರ ಅಭಿಪ್ರಾಯದಲ್ಲಿಯೂ ದೋಷವಿಲ್ಲ.

ಗುರುರಾಜೀಯಮ್ – ನನು ದ್ವಿತೀಯಂ ಮತಮಯುಕ್ತಮ್ । ತತ್ರ ವಿಷಯವಾಕ್ಯತಯाऽभಿಮತೇ 'ಅಥ ಯದತಃ ಪರೋ ದಿವಃ' ಇತ್ಯತ್ರ ಪ್ರಥಮಸೂತ್ರೋಕ್ತಸ್ಯ ಕರ್ಣಾದಿವಿದೂರತ್ವಸ್ಯಾಶ್ರವಣಾತ್ । ಕಿಞ್ಚ ತತ್ತತ್ಪ್ರಕರಣಸ್ಥಾನಾಮೇವ ಯದ್ವೈ ತದ್ಬ್ರಹ್ಮೇತ್ಯಾದಿಶ್ರುತಿಲಿಙ್ಗಾದೀನಾಂ ಸತ್ತ್ವೇನ ತೇನೈವ

तत्रोक्तस्य ब्रह्मत्वसाधनस्योपपत्त्या सूत्रकारीयं सूक्तान्तरस्थकर्णादिविदूरत्वरूप-लिङ्गग्रहणमनुपपन्नमित्यत आह **द्वितीयेऽपीत्यादिना ॥ उक्तरीत्येति ॥** ज्योति-र्हृदय आहितं यदित्यग्निसूक्तस्थस्यैव ज्योतिषः छान्दोग्ये ज्योतिरुपक्रम्य योऽयमन्तर्हृदय इति हृदयनिहितत्वधर्मेण च शाखान्तराधिकरणन्यायेन प्रत्यभिज्ञाय मानत्वेनैकत्वादित्युक्तरीत्येत्यर्थः ॥ **स्ववाक्यस्थानीति ॥** तथाच स्ववाक्यस्थलिङ्गादिपरिग्रहे लाघवमिति भावः ॥ **भिक्षुकपादेति ॥** भिक्षुकस्य वामनस्य बलिदत्तत्रिपादस्थग्रहणमिषेण सर्वां त्रिलोकीं ग्रहीतुमभिवृद्धीकृत-प्रसारणवदित्यर्थः ।

## ಸಾರ

ತತ್ತ್ವಪ್ರದೀಪಕಾರರಂತೆ ಸನ್ಯಾಯರತ್ನಾವಲೀಕಾರರೂ ಕೂಡ ನಾಲ್ಕೂ ಸೂತ್ರಗಳನ್ನು ಜ್ಯೋತಿರಧಿಕರಣ-ವೆನ್ನುತ್ತಾರೆ. ಆದರೆ ಅಗ್ನಿಸೂಕ್ತವು ವಿಷಯವಲ್ಲ. 'अथ यदतः परो दिवो ज्योतिः' ಎಂಬ ಛಾಂದೋಗ್ಯವೇ ವಿಷಯವಾಕ್ಯ. ಪ್ರಥಮಸೂತ್ರದಲ್ಲಿ ಹೇಳಿದ ವಿಚರಣಾಭಿಧಾನಹೇತುವು ಈ ವಿಷಯವಾಕ್ಯದಲ್ಲಿ ಇಲ್ಲದಿರಬಹುದು. ಆದರೆ ಛಾಂದೋಗ್ಯದಲ್ಲಿ ಪ್ರತಿಪಾದ್ಯನಾದ ಜ್ಯೋತಿಯೇ ಅಗ್ನಿಸೂಕ್ತದಲ್ಲಿ ಪ್ರತಿಪಾದ್ಯ-ನಾಗಿದ್ದಾನೆ. ಹಾಗಾಗಿ ವಿಚರಣಾಭಿಧಾನಹೇತುವಿನಿಂದ ಛಾಂದೋಗ್ಯದ ಜ್ಯೋತಿಯು ವಿಷ್ಣುವೆಂದು ಪ್ರಥಮ-ಸೂತ್ರವು ಪ್ರತಿಪಾದಿಸುತ್ತಿದೆ.

ವಾಸ್ತವಿಕವಾಗಿ ನಿರವಕಾಶವಾದ ಅನೇಕ ವಿಷ್ಣುಲಿಂಗಗಳು ಛಾಂದೋಗ್ಯದಲ್ಲಿಯೇ ಇದೆ. ಅವುಗಳಿಂದಲೇ ಜ್ಯೋತಿಯನ್ನು ವಿಷ್ಣುವೆಂದು ಸಾಧಿಸಬಹುದು. ಅಗ್ನಿಸೂಕ್ತವು ಬೇಕಾಗಿಲ್ಲ. ಆದರೆ ಬೇರೆ ಬೇರೆ ಜ್ಯೋತಿಃಶ್ರುತಿಯಲ್ಲಿರುವ ನಿರವಕಾಶಲಿಂಗಗಳಿಂದ ವಿಷ್ಣುವೇ ಪ್ರತಿಪಾದ್ಯನೆಂದು ಸಾಧಿಸಿದಾಗ ಅನೇಕ ಶ್ರುತಿಗಳ ಸಮನ್ವಯವು ವಿಷ್ಣುವಿನಲ್ಲಿ ಸಿದ್ಧವಾಗುತ್ತದೆ. ವಾಮನನು ಬಲಿಯ ಮೂಲಕ ಮೂರು ಹೆಜ್ಜೆಗಳನ್ನಷ್ಟೇ ಬೇಡಿ, ಅನಂತರ ತ್ರಿವಿಕ್ರಮನಾಗಿ ಸಮಸ್ತ ಜಗತ್ತನ್ನೇ ವ್ಯಾಪಿಸಿದನು. ಇದರಂತೆ ಬೇರೆ ಬೇರೆ ವೇದಗಳಲ್ಲಿರುವ ವಿಷ್ಣುಲಿಂಗಗಳನ್ನು ಉಲ್ಲೇಖಿಸಿದಾಗ ಕ್ರಮವಾಗಿ ತ್ರಿವಿಕ್ರಮನಂತೆ ಸಮಸ್ತ ವೇದದ ಸಮನ್ವಯವು ಸಿದ್ಧವಾಗುತ್ತದೆ. ಹೀಗೆ ಪದ್ಮನಾಭತೀರ್ಥರು ಚಮತ್ಕಾರಮಯವಾಗಿ ಸೂತ್ರಗಳಿಗೆ ವ್ಯಾಖ್ಯಾನಿಸಿದ್ದಾರೆ.

ಇಬ್ಬರ ಮತದಲ್ಲಿ ಎರಡೂ ವಿಷಯವಾಕ್ಯಗಳಾಗಬಹುದು.

### तात्पर्यचन्द्रिका

**यद्वा – मतद्वयेऽपि वाक्यद्वयमप्युदाहरणम् । यथा ह्यग्निसूक्तस्थवाक्ये प्रकरणानुगृहीतश्रुत्या पूर्वःपक्षः, तथा छान्दोग्येऽपि ''गायत्री वा इदं सर्वं'' इत्युपक्रमात्, ''सैषा चतुष्पदा षड्विधा गायत्री'' इति चोपसंहारात् तस्य**

**गायत्रीप्रकरणत्वेन, तदनुगृहीतज्योतिःश्रुत्या पूर्वपक्ष इति पूर्वपक्षयुक्तिसाधारण्यात्, तथाऽग्निसूक्ते निरतिशयवैभवलक्षणचरणेन सिद्धान्तवत्, छान्दोग्येऽपि ''एतामेव नातिशीयन्ते'' इति निरतिशयवैभवरूपेण चरणेन सिद्धान्त इति सिद्धान्तयुक्ति-साधारण्याच्चैकाधिकरणता ।**

**यथाऽऽघाराग्निहोत्राद्यधिकरणेषु 'आघारमाघारयति' 'अग्निहोत्रं जुहोति' इत्याद्युदाहरणभेदेऽपि द्रव्यदेवतालक्षणयागरूपाभावान्नानयोर्यागविधित्वमिति पूर्व-पक्षयुक्तिसाधारण्यात्, मन्त्रवर्णादिना देवतादिलाभान्न रूपाभाव इति सिद्धान्त-युक्तिसाधारण्याच्च एकाधिकरणता, तद्वत् । छन्दःसूत्रे तु छन्दश्शब्दोऽग्नेरप्युपलक्षकः । अत एव ''अग्निगायत्र्यादि'' इति भाष्ये अग्निपदप्रयोगः । ''उपदेशभेदात्'' इति पूर्वपक्षयुक्तिः, 'भूतादिपाद' इति सिद्धान्तयुक्तिश्च च्छान्दोग्यवाक्यमात्रासाधारणी । एवञ्च यथा अर्थवादनये भट्टमत एको विचारः अर्थवादमन्त्रादिसाधारणः, अन्यस्तु अर्थवादमात्रासाधारण इति द्विपर्वा विचारः, तथात्राप्युक्तरीत्या द्विपर्वा विचारः । अत एवास्य तत्त्वप्रदीपे अन्तर्भेदाधिकरणत्वमुक्तमिति दिक् ।**

ಅನುವಾದ - ಅಥವಾ ತತ್ವಪ್ರದೀಪಕಾರರು ಹಾಗು ಸನ್ಯಾಯರತ್ನಾವಲೀಕಾರರು ಇಬ್ಬರಿಗೂ ಎರಡೂ ವಾಕ್ಯಗಳು ವಿಷಯವಾಗುತ್ತವೆನ್ನಬಹುದು. ಅದು ಹೀಗೆ -- ಅಗ್ನಿಸೂಕ್ತದಲ್ಲಿರುವ ವಾಕ್ಯದಲ್ಲಿ ಪ್ರಕರಣಬಲದಿಂದ ಅನುಗೃಹೀತವಾದ ಶ್ರುತಿಯಿಂದ ಪೂರ್ವಪಕ್ಷ ಮಾಡಬಹುದು. ಆದರಂತೆ ಛಾಂದೋಗ್ಯದಲ್ಲಿಯೂ ಪ್ರಕರಣಬಲದಿಂದ ಅನುಗೃಹೀತವಾದ ಜ್ಯೋತಿಃಶ್ರುತಿಯಿಂದಲೇ ಪೂರ್ವಪಕ್ಷ ಮಾಡಬಹುದು. 'ಗಾಯತ್ರೀ ವಾ ಇದಂ ಸರ್ವಮ್' ಎಂದು ಪ್ರಾರಂಭವಾಗಿ 'ಸೈಷಾ ಚತುಷ್ಪದಾ ಷಡ್ವಿಧಾ ಗಾಯತ್ರೀ' ಎಂದು ಮುಕ್ತಾಯವಾಗುವುದರಿಂದ ಛಾಂದೋಗ್ಯವು ಗಾಯತ್ರೀ-ಪ್ರಕರಣವೆಂದು ತಿಳಿಯುತ್ತದೆ. ಹೀಗೆ ಎರಡೂ ವಿಷಯವಾಕ್ಯಗಳಲ್ಲಿ ಪ್ರಕರಣಾನುಗೃಹೀತ-ಪೂರ್ವಪಕ್ಷಯುಕ್ತಿಯು ಸಾಧಾರಣವಾಗಿದೆ.

ಸಿದ್ಧಾಂತಯುಕ್ತಿಯೂ ಸಮಾನವಾಗಿದೆ. ಅಗ್ನಿಸೂಕ್ತದಲ್ಲಿ ಚರಣಶಬ್ದದಿಂದ ನಿರತಿಶಯ-ವೈಭವತ್ವವೆಂಬ ಸಿದ್ಧಾಂತಯುಕ್ತಿಯು ತಿಳಿಯುತ್ತದೆ. ಛಾಂದೋಗ್ಯದಲ್ಲಿಯೂ ಕೂಡ ಚರಣ-ಶಬ್ದದಿಂದ 'ಏತಾಮೇವ ನಾತಿಶೀಯಂತೇ' ಎಂಬ ವಾಕ್ಯವು ನಿರತಿಶಯವೈಭವತ್ವವೆಂಬ ಸಿದ್ಧಾಂತ-ಯುಕ್ತಿಯು ತಿಳಿಯುತ್ತದೆ. ಹೀಗೆ ಎರಡೂ ವಿಷಯವಾಕ್ಯಗಳಲ್ಲಿ ಪೂರ್ವಪಕ್ಷ ಹಾಗೂ ಸಿದ್ಧಾಂತ-ಯುಕ್ತಿಗಳು ಸಾಧಾರಣವಾದ್ದರಿಂದ ಒಂದೇ ಅಧಿಕರಣದಲ್ಲಿ ಎರಡು ವಾಕ್ಯಗಳನ್ನು ವಿಚಾರ ಮಾಡಲಾಗಿದೆ. ಇದು ತಪ್ಪಲ್ಲವೆನ್ನಲು ಪೂರ್ವಮೀಮಾಂಸೆಯ ಸಮ್ಮತಿ ಇದೆ -

ಆಘಾರಾಗ್ನಿಹೋತ್ರವೆಂಬ ಒಂದೇ ಅಧಿಕರಣದಲ್ಲಿ 'ಆಘಾರಮಾಘಾರಯತಿ' 'ಅಗ್ನಿಹೋತ್ರಂ ಜುಹೋತಿ' ಎಂಬ ಅನೇಕ ಉದಾಹರಣವಾಕ್ಯಗಳನ್ನು ವಿಚಾರ ಮಾಡಿದ್ದಾರೆ. ಏಕೆಂದರೆ, ದ್ರವ್ಯ ಹಾಗೂ ದೇವತೆಗಳಿದ್ದರೆ ಮಾತ್ರ ಆ ವಾಕ್ಯವು ಯಾಗ ವಿಧಾಯಕವಾಗುತ್ತದೆ. 'ಆಘಾರಮಾಘಾರಯತಿ' ಎಂಬ ವಾಕ್ಯದಲ್ಲಾಗಲೀ, 'ಅಗ್ನಿಹೋತ್ರಂ ಜುಹೋತಿ' ಎಂಬ ವಾಕ್ಯದಲ್ಲಾಗಲೀ ದ್ರವ್ಯದೇವತೆಗಳು ಹೇಳಲ್ಪಟ್ಟಿಲ್ಲ. ಆದ್ದರಿಂದ ಈ ವಾಕ್ಯಗಳು ಯಾಗವಿಧಾಯಕಗಳಲ್ಲವೆಂಬ ಪೂರ್ವಪಕ್ಷಯುಕ್ತಿಯು ಎರಡೂ ವಿಷಯವಾಕ್ಯಗಳಲ್ಲಿ ಸಮಾನವಾಗಿದೆ. ಮತ್ತು ಸಿದ್ಧಾಂತಯುಕ್ತಿಯೂ ಸಮಾನವಾಗಿದೆ. ಮಂತ್ರವರ್ಣವೇ ದೇವತೆ, ಘೃತವೇ ದ್ರವ್ಯವೆಂಬ ಯಾಗದ ಸ್ವರೂಪವು ಈ ವಾಕ್ಯಗಳಲ್ಲಿಯೂ ತಿಳಿಯುತ್ತದೆ. ಹೀಗೆ ಪೂರ್ವಪಕ್ಷಯುಕ್ತಿ ಸಿದ್ಧಾಂತಯುಕ್ತಿಗಳು ಸಾಧಾರಣವಾದ್ದರಿಂದ ಒಂದೇ ಅಧಿಕರಣವೆಂದು ನಿರ್ಣಯಿಸಿದ್ದಾರೆ. ಅದರಂತೆ ಪ್ರಕೃತದಲ್ಲಿಯೂ ತಿಳಿಯಬೇಕು.

ಛಂದಃಸೂತ್ರದಲ್ಲಿರುವ ಛಂದಸ್ಶಬ್ದವು ಗಾಯತ್ರೀಯ ಜೊತೆಗೆ ಅಗ್ನಿಯನ್ನೂ ಉಪಲಕ್ಷಣಯಾ ತಿಳಿಸುತ್ತಿದೆ. ಆದ್ದರಿಂದಲೇ ಭಾಷ್ಯದಲ್ಲಿ 'ಅಗ್ನಿಗಾಯತ್ರ್ಯಾದಿ' ಎಂದು ಅಗ್ನಿಪದವನ್ನು ಆಚಾರ್ಯರು ಪ್ರಯೋಗಿಸಿದ್ದಾರೆ. ಉಪದೇಶಭೇದಾದಿಪೂರ್ವಪಕ್ಷಯುಕ್ತಿಯು, ಭೂತಾದಿಪಾದವೆಂಬ ಸಿದ್ಧಾಂತಯುಕ್ತಿಯು ಛಾಂದೋಗ್ಯದಲ್ಲಷ್ಟೇ ಅಸಾಧಾರಣವಾಗಿದೆಯೆಂಬ ವ್ಯತ್ಯಾಸವನ್ನು ಗಮನಿಸಬೇಕು.

ಪೂರ್ವಮೀಮಾಂಸೆಯ ಅರ್ಥವಾದಾಧಿಕರಣದಲ್ಲಿ ಅರ್ಥವಾದ, ಮಂತ್ರ, ನಾಮಧೇಯ ಮೊದಲಾದವುಗಳಲ್ಲಿ ಸಾಧಾರಣವಾದ ವಿಚಾರವನ್ನು ಮೊದಲು ಮಾಡಿ, ಅನಂತರ ಅರ್ಥವಾದ ವಾಕ್ಯದಲ್ಲಷ್ಟೇ ಅಸಾಧಾರಣವಾದ ವಿಚಾರವನ್ನು ಮಾಡಿದ್ದಾರೆ. ಅದರಂತೆ ಜ್ಯೋತಿರಧಿಕರಣದಲ್ಲಿಯೂ ದ್ವಿಪರ್ವವಿಚಾರವನ್ನು ತಿಳಿಯಬೇಕು. ಆದ್ದರಿಂದಲೇ ತತ್ವಪ್ರದೀಪದಲ್ಲಿ ಇದನ್ನು ಅಂತರ್ಭೇದಾಧಿಕರಣವೆಂದಿದ್ದಾರೆ. ಇಷ್ಟು ಕೇವಲ ದಿಕ್ಪ್ರದರ್ಶನ.

ಕಠಿಣಪದಾರ್ಥ

ಮತದ್ವಯೇಪಿ = ತತ್ವಪ್ರದೀಪಕಾರರ ಮತ ಹಾಗೂ ಸನ್ಯಾಯರತ್ನಾವಲೀಕಾರರ ಮತಗಳಲ್ಲಿ; ವಾಕ್ಯದ್ವಯಮಪಿ = ಅಗ್ನಿಸೂಕ್ತ ಹಾಗೂ ಛಾಂದೋಗ್ಯ ವಾಕ್ಯಗಳೆರಡೂ; ಪ್ರಕರಣಾನುಗೃಹೀತಶ್ರುತ್ಯಾ = ಪ್ರಕರಣಪ್ರಮಾಣದಿಂದ ಬೆಂಬಲ ಹೊಂದಿದ ಶ್ರುತಿಪ್ರಮಾಣದಿಂದ; ಛಾಂದೋಗ್ಯೇಪಿ = ಈ ಪದಕ್ಕೆ ತದನುಗೃಹೀತಶ್ರುತ್ಯಾ ಎಂಬಲ್ಲಿ ಅನ್ವಯ; ಚರಣೇನ = ಕರ್ಣಾದಿ ಇಂದ್ರಿಯಗಳಿಂದ ಗೋಚರನಾಗಲಾರನೆಂಬ ವಿಚರಣಹೇತುವಿನಿಂದ; ರೂಪಾಭಾವಃ = ಯಾಗಸ್ವರೂಪವು ಸಿದ್ಧವಾಗುವುದಿಲ್ಲ; ಅತ ಏವ = ಸಾಧಾರಣ ಅಸಾಧಾರಣವೆಂಬ ಎರಡು ರೀತಿಯಲ್ಲಿ ವಿಚಾರ ಮಾಡಿದ್ದರಿಂದಲೇ; ದ್ವಿಪರ್ವಾವಿಚಾರಃ = ಎರಡು ಹಂತದ ವಿಚಾರ;

**ಪ್ರಕಾಶಃ** – ಅಧುನಾ, ಮತದ್ವಯೇऽಪಿ ವಾಕ್ಯದ್ವಯಮಪ್ಯುದಾಹರಣಂ, ಪೂರ್ವೋತ್ತರಪಕ್ಷನ್ಯಾಯಸಾಮ್ಯಾಚ್ಚೈಕಾಧಿಕರಣತಾ । ನಹಿ ವಿಷಯಭೇದಮಾತ್ರೇಣಾಧಿಕರಣಭೇದಃ । ಅತೋ – ಯದ್ವಾ ನ

वैयधिकरण्यमित्याह – **यद्वेति** । **छान्दोग्येपीति** ॥ 'तदनुगृहीतश्रुत्या' इत्यन्वयः । तत्र गायत्रीप्रकरणत्वं साधयति – **गायत्री वा इदमित्यादिना** ॥ **चरणेनेति** ॥ 'वि' कर्णादीन्द्रियापरिच्छेद्यत्वरूपविचरणेनेत्यर्थः ॥ **साधारण्यादिति** ॥ 'भूतादि' इति युक्त्यन्तरं तु च्छान्दोग्यमात्रासाधारणमिति वक्ष्यत इति भावः ।

वाक्यभेदेऽपि न्यायसाम्यादैकाधिकरण्ये दृष्टान्तमाह – **यथेति** ॥ अधिकरणशरीरं प्रागुक्तम् समन्वयसूत्रे । द्रव्यदेवते हि यागस्य रूपमुच्यते । तदलाभे सति विधानयोग्यस्वरूपविशेषानवगत्या नानयोर्यागविधित्वमिति ''**दध्ना जुहोति**'' ''**सन्ततमाघारयति**'' इत्यादि वाक्यप्राप्तहोमाधारसमुदायानुवादत्वरूपपूर्वपक्षयुक्तिसाधारण्यात्, ''**अग्निर्ज्योतिर्ज्योतिरग्निस्स्वाहेति सायं जुहोति**'' ''**इन्द्रं ऊर्ध्वोध्वर आघारमाघारयति**'' इति वचनविनियुक्तमन्त्रवर्णात्, ''**दध्ना जुहोति**'' ''**चतुर्गृहीतं वा एतदभूत्**'' इत्यादिना च देवताद्रव्यलाभरूपस्वतन्त्रहोमाधारविधिरिति सिद्धान्तयुक्तिसाधारण्याच्चेत्यर्थः । आदिशब्देन चित्राज्याधिकरणयववराहाधिकरणादेर्ग्रहणम् ।

ननु वाक्यद्वयेऽपि ज्योतिष एव विषयत्वेन ज्योतिस्सूत्रे ज्योतिर्मात्रग्रहणेऽपि च्छन्दस्सूत्रे च्छन्दोमात्रग्रहणं न युक्तम् । न ह्युभयत्र च्छन्द इत्येव पूर्वः पक्षः, किन्तु सूक्ते अग्निरिति, छान्दोग्ये छन्द इतीत्यत आह – **छन्दस्सूत्र इति** ॥ गायत्रीरूपछन्दसि उपदेशभेदादिरूपानुपपत्त्यन्तरं उद्भाव्य समाधातुं तस्य मुखतः कीर्तनमिति भावः । उपलक्षकत्वे ज्ञापकं – **अत एवेति** ॥ नन्वाद्यसूत्रद्वयस्य कथञ्चिद्वाक्यद्वयसाधारण्यसम्भवेऽप्युत्तरसूत्रद्वयस्य न तत्सम्भवति, सूक्ते भूतादिपादव्यपदेशादेरभावादित्यत आह – **उपदेशेति** ॥ यथाऽऽनन्दमयाधिकरणे ''**तद्धेतुव्यपदेशात्**'' इत्यानन्दमयमात्रासाधारणं तद्वदिति भावः ।

मीमांसकसम्मत्या चोक्तमर्थं निष्कृष्याह – **एवञ्चेति** ॥ अर्थवादाधिकरणं प्रागुक्तं आद्याधिकरणे । तत्र ''**आम्नायस्य क्रियार्थत्वादानर्थक्यमतदर्थानाम्**'' इति सूत्रेणाक्रियार्थानामर्थवादमन्त्रनामधेयानां आनर्थक्यादप्रामाण्यमिति पूर्वःपक्षः, ''**विधिना त्वेकवाक्यत्वात् स्तुत्यर्थत्वेन विधीनां स्युः**'' इति सिद्धान्तसूत्रस्थेन तुशब्देन, ''**तुल्यं च साम्प्रदायिकम्**'' इति सूत्रेण वा कृत्स्नस्वाध्याय-

पुरुषार्थपर्यवसाप्यध्ययनविधिमहिम्नाऽर्थवादादीनां सप्रयोजनत्वावसायेन प्रामाण्यमिति सिद्धान्त इति साधारण एको विचारः,

पुनरर्थवादानां द्वाराभावादप्रामाण्यमिति पूर्वःपक्षः, सिद्धान्तसूत्रे स्तुतिग्रहणात् द्वारसम्भवात् प्रामाण्यमित्यसाधारणो अन्यो विचार इति यथा द्विपर्वा विचारः, तथेहाऽपि वाक्यद्वयगतज्योतिश्शब्दार्थो विष्णुरन्यो वेति संशये अग्निच्छन्दस्त्वाभिधानादप्रसिद्धज्योतिर्गायत्रीपदप्रयोगे प्रयोजनाभावान्न विष्णुः किं त्वन्य इति प्राप्ते, उभयत्र चरणशब्दितापरिच्छिन्नवैभवत्वस्याभिधानात् तथोपासनार्थमप्रसिद्धपदप्रयोगस्यापि सम्भवाद् विष्णुरिति सिद्धान्त इत्येको विचारः,

पुनः छान्दोग्यस्थज्योतिर्न ब्रह्म उपदेशभेदादिति प्राप्ते, भूतादिपादव्यपदेशादिना सिद्धान्त इत्यन्यो विचार इति द्विपर्वा विचार इत्यर्थः । 'अत एव' साधारणासाधारणद्विरूपविचारत्वादेवेत्यर्थः । ननु –

**नित्यत्वादेव शब्दानां तत्स्वभावः कथं ततः ।**

इत्यनुव्याख्यानोक्तायाः पूर्वपक्षयुक्तेः ''तादृशत्वाच्च तच्छक्तेः'' इत्युक्तसिद्धान्तयुक्तेश्चाग्निसूक्तस्थज्योतिष्ययोगात् कथमिदमुदाहरणमिति चेन्न, तयोः भूतादिपादव्यपदेशादिवत् गायत्रीवाक्यमात्रासाधारण्येनोपपत्तेः । अत एव द्विपर्वा विचार इत्युक्तम् ।

नन्वथापि ज्योतिस्सूत्रे इदमग्निसूक्तमेव न विष्णुसूक्तमित्यध्यापकप्रसिद्धेरज्ञानमूलत्वादिरूपो न्यायो व्युत्पाद्यः, उत्तरत्रिसूत्र्यामनादिनित्यस्यापीशाधीनत्वादिव्युत्पादको न्याय इति न्यायस्य व्यवस्थितत्वात् विषयस्यापि व्यवस्थाऽधिकरणभेदश्च वाच्य इति चेन्न, अन्तरागर्भिणीन्यायेनोपपत्तेः । अत एवान्तर्भेदाधिकरणत्वमुक्तमित्युक्तम् । एवमन्यदप्यूह्यमिति भावेनोक्तं – दिगिति ॥

ವಿವರಣೆ - ಇಲ್ಲಿಯ ತನಕ ತತ್ವಪ್ರದೀಪಕಾರರಿಗೆ ಅಗ್ನಿಸೂಕ್ತವು ವಿಷಯವಾಕ್ಯ; ಸನ್ಯಾಯರತ್ನಾವಲೀಕಾರರಿಗೆ ಛಾಂದೋಗ್ಯಶ್ರುತಿವಾಕ್ಯವು ವಿಷಯವಾಕ್ಯ. ಇಬ್ಬರ ಅಭಿಪ್ರಾಯದಲ್ಲಿಯೂ ದೋಷವಿಲ್ಲವೆಂಬುದನ್ನು ಸಮರ್ಥಿಸಿದ್ದಾಯಿತು. ಪ್ರಕೃತ ಎರಡೂ ವಾಕ್ಯಗಳು ಇಬ್ಬರ ಪ್ರಕಾರವೂ ವಿಷಯವಾಕ್ಯವಾದರೆ ತಪ್ಪಿಲ್ಲವೆಂಬುದನ್ನು ಸಮರ್ಥಿಸುತ್ತಿದ್ದಾರೆ. ವಿಷಯವಾಕ್ಯಭೇದದಿಂದ ಅಧಿಕರಣಗಳು ಭಿನ್ನವಾಗಬೇಕಲ್ಲವೇ? ಎಂಬ ಶಂಕೆಗೆ ಅವಕಾಶವಿಲ್ಲ. ಪೂರ್ವಪಕ್ಷನ್ಯಾಯ ಹಾಗೂ ಸಿದ್ಧಾಂತನ್ಯಾಯಗಳು

ಯಾವ ಯಾವ ವಾಕ್ಯಗಳಲ್ಲಿ ಸಾಧಾರಣವಾಗಿರುತ್ತವೆಯೋ ಆ ಎಲ್ಲಾ ವಾಕ್ಯಗಳೂ ಒಂದೇ ಅಧಿಕರಣದಲ್ಲಿ ವಿಷಯಗಳಾಗುತ್ತವೆಂಬ ಸೂಕ್ಷ್ಮವನ್ನು ಗಮನಿಸಬೇಕು. ಪೂರ್ವಪಕ್ಷನ್ಯಾಯ ಅಥವಾ ಸಿದ್ಧಾಂತನ್ಯಾಯದಲ್ಲಿ ವೈಷಮ್ಯವಿದ್ದರೆ ಮಾತ್ರ ಅಧಿಕರಣಗಳು ಭಿನ್ನವಾಗುತ್ತವೆ. ಅಗ್ನಿಸೂಕ್ತ ಹಾಗೂ ಛಾಂದೋಗ್ಯವಾಕ್ಯದಲ್ಲಿ ಪೂರ್ವಪಕ್ಷನ್ಯಾಯ ಹಾಗೂ ಸಿದ್ಧಾಂತನ್ಯಾಯಗಳು ಸಮಾನವಾಗಿವೆ. ಇವೆರಡನ್ನೂ ಒಂದೇ ಜ್ಯೋತಿರಧಿಕರಣದಲ್ಲಿ ಸಮನ್ವಯ ಮಾಡಲಾಗಿದೆ. ಹೀಗೆ ಹೇಳಿದಾಗ ಸೂತ್ರದ ಮೇಲೆ ವೈಯ್ಯಧಿಕರಣ್ಯದೋಷವನ್ನು ಆಕ್ಷೇಪಿಸಲಾಗದು. ಈ ವಿಚಾರವನ್ನು 'ಯದ್ವಾ' ಇತ್ಯಾದಿಗ್ರಂಥವು ಸಮರ್ಥಿಸುತ್ತಿದೆ.

ನ್ಯಾಯಗಳು ಸಮಾನವಾದಾಗ ಒಂದೇ ಅಧಿಕರಣವಾಗುತ್ತದೆನ್ನಲು ಪೂರ್ವಮೀಮಾಂಸೆಯ ದೃಷ್ಟಾಂತವಿದೆ.

### ಆಘಾರಾಗ್ನಿಹೋತ್ರಾಧಿಕರಣಮ್ ೧೨(೨/೨/೫)

ಸಮನ್ವಯಾಧಿಕರಣದಲ್ಲಿ ವಿವರಿಸಿದ ಆಘಾರಾಗ್ನಿಹೋತ್ರಾಧಿಕರಣದ ಶರೀರವನ್ನು ಇಲ್ಲಿ ಅನುಸಂಧಾನ ಮಾಡಿಕೊಳ್ಳಬೇಕು. ದ್ರವ್ಯಹಾಗೂ ದೇವತೆಗಳಿದ್ದರಷ್ಟೇ ಯಾಗವೆನಿಸುತ್ತದೆ. ಯಾವ ವಾಕ್ಯದಲ್ಲಿ ದ್ರವ್ಯವನ್ನಾಗಲೀ ದೇವತೆಯನ್ನಾಗಲೀ ಹೇಳಿರುವುದಿಲ್ಲವೋ ಅದು ಯಾಗವಿಧಿಯೆನಿಸದು. ಪ್ರಕೃತ 'ಆಘಾರಮಾಘಾರಯತಿ' ಎಂಬ ವಾಕ್ಯವು ಮತ್ತು 'ಅಗ್ನಿಹೋತ್ರಂ ಜುಹೋತಿ' ಎಂಬ ವಾಕ್ಯವು ದ್ರವ್ಯ, ದೇವತೆಗಳನ್ನು ಹೇಳುತ್ತಿಲ್ಲ. ಹೊರತಾಗಿ 'ದಧ್ನಾ ಜುಹೋತಿ' ಎಂಬ ವಾಕ್ಯದಿಂದ ಪ್ರಾಪ್ತವಾದ ಹೋಮವನ್ನು 'ಅಗ್ನಿಹೋತ್ರಂ ಜುಹೋತಿ' ಎಂಬ ವಾಕ್ಯವು ಅನುವಾದ ಮಾಡುತ್ತಿದೆ. 'ಸಂತತಂ

---

ಭಾಟ್ಟಸಙ್ಗ್ರಹಃ –

**आघाराग्निहोत्रमरूपत्वात् ॥ १३ ॥**
**(संज्ञोपबन्धत्वात् ॥ १४ ॥ अप्रकृतत्वाच्च ॥ १५ ॥ चोदना वा शब्दार्थस्य प्रयोगभूतत्वात्, तत्सन्निधेर्गुणार्थे पुनःश्रुतिः ॥ १६ ॥)**

पूर्ववैषम्येणेह शङ्कनात् प्रत्युदाहरणलक्षणा **सङ्गतिः** । 'आघारमाघारयति' 'अग्निहोत्रं जुहोति' इति वाक्यद्वयं 'ऊर्ध्वमाघारयति' 'ऋजुमाघारयति' 'दध्ना जुहोति' 'पयसा जुहोति' इत्यादिविहितकर्मसमुदायानुवादकमुतापूर्वकर्मविधायकमिति **सन्देहः** । युक्तं पूर्वत्रोपक्रमोपसंहारावगतैकवाक्यतानुरोधेन विष्णवादिवाक्यानामविधायकत्वेनानुवाद्यकर्माभावात् अन्तरालवाक्ये अनुवादकत्वाभाव इति । इह तूर्ध्वादिदध्यादिवाक्यविहितकर्मसमुदायानुवादकत्वं सम्भवतीत्यनुवादकं वाक्यद्वयम् । न चोर्ध्वमित्यादिवाक्यं आघाराग्निहोत्रवाक्यविहितकर्मानुवादेनोर्ध्वत्वादिदध्यादिगुणमात्रविधिपरमिति वाच्यम् । **आघारवाक्यमग्निहोत्रवाक्यं** च **अरूपत्वान्न** विधायकम् । किन्त्वनुवादकमिति । **सिद्धान्तस्तु** दध्यादिवाक्ये गुणविशिष्टकर्मविधाने विशिष्टविधिगौरवेणाग्निहोत्रादिवाक्यविहितकर्मानुवादेन दध्यादि गुणमात्रविधाने लाघवम् । नच रूपाभावादग्निहोत्रादिवाक्यं

ಆಘಾರಯತಿ' ಎಂಬ ವಾಕ್ಯದಿಂದ ಪ್ರಾಪ್ತವಾದ ಆಘಾರಸಮುದಾಯವನ್ನು 'ಆಘಾರಮಾಘಾರಯತಿ' ಎಂಬ ವಾಕ್ಯವು ಅನುವಾದ ಮಾಡುತ್ತಿದೆ. ಹೀಗೆ ಅನುವಾದತ್ವವೆಂಬ ಪೂರ್ವಪಕ್ಷ ಯುಕ್ತಿಯು ಎರಡೂ ವಾಕ್ಯಗಳಲ್ಲಿ ಸಾಧಾರಣವಾಗಿದೆ. 'ಅಗ್ನಿರ್ಜ್ಯೋತಿರಗ್ನಿಃಸ್ವಾಹೇತಿ ಸಾಯಂ ಜುಹೋತಿ ಇಂದ್ರಮ್ ಊರ್ಧ್ವೋದ್ಧರಮಾಘಾರಯತಿ' 'ಆಘಾರಮಾಘಾರಯತಿ' ಎಂಬ ವಾಕ್ಯವು ಮತ್ತು 'ಅಗ್ನಿಹೋತ್ರಂ ಜುಹೋತಿ' ಎಂಬ ವಾಕ್ಯವು ಹೋಮವೆಂಬ ಕರ್ಮವನ್ನು ವಿಧಿಸುತ್ತಿಲ್ಲ. ವಾಕ್ಯವು ಕರ್ಮವನ್ನು ವಿಧಾನ ಮಾಡಬೇಕೆಂದರೆ ದ್ರವ್ಯ, ದೇವತಾವಾಚಕವಾದ ಪದಗಳಿರಬೇಕು. ಪ್ರಕೃತ ಈ ಎರಡೂ ವಾಕ್ಯಗಳಲ್ಲಿ ದ್ರವ್ಯ ಮತ್ತು ದೇವತೆಗಳನ್ನು ಹೇಳುವ ಪದಗಳಿಲ್ಲದ ಕಾರಣ ಅನುವಾದವೆನ್ನಬೇಕೇ ಹೊರತು ವಿಧಿ ಎನ್ನಲಾಗದು. ಆದ್ದರಿಂದ 'ದಧ್ನಾ ಜುಹೋತಿ' ಎಂಬ ವಾಕ್ಯದಲ್ಲಿ ದಧಿರೂಪಗುಣವಿಶಿಷ್ಟವಾದ ಕರ್ಮವು ವಿಹಿತವಾಗಿದೆ. ಅದನ್ನು 'ಅಗ್ನಿಹೋತ್ರಂ ಜುಹೋತಿ' ಎಂಬ ವಾಕ್ಯವು ಅನುವಾದ ಮಾಡುತ್ತಿದೆ. 'ಸಂತತಮಾಘಾರಯತಿ' ಎಂಬ ವಾಕ್ಯವು ಆಘಾರಸಮುದಾಯವಿಶಿಷ್ಟವಾದ ಕರ್ಮವನ್ನು ವಿಧಿಸುತ್ತಿದೆ. ಅದನ್ನು 'ಆಘಾರಮಾಘಾರಯತಿ' ಎಂಬ ವಾಕ್ಯವು ಅನುವಾದ ಮಾಡುತ್ತಿದೆ. ಹೀಗೆ ಎರಡೂ ವಿಷಯವಾಕ್ಯಗಳಲ್ಲಿ ಅನುವಾದತ್ವವೆಂಬ ಪೂರ್ವಪಕ್ಷಯುಕ್ತಿಯು ಸಾಧಾರಣವಾಗಿದೆ.

ಆಪ್ಟೇ ಆಲ್ಲ; ಸಿದ್ಧಾಂತಯುಕ್ತಿಯೂ ಸಾಧಾರಣವಾಗಿದೆ. ಅದು ಹೀಗೆ -- 'ಅಗ್ನಿಹೋತ್ರಂ ಜುಹೋತಿ' ಎಂಬ ವಾಕ್ಯದಿಂದ ದ್ರವ್ಯದೇವತೆಗಳ ಜ್ಞಾನವು ಬಾರದಿದ್ದರೂ ಬೇರೆ ವಾಕ್ಯದಿಂದ ಬರಬಹುದು. 'ದಧ್ನಾ ಜುಹೋತಿ' ಎಂಬ ಮುಂದಿನ ವಾಕ್ಯದಿಂದ ದಧಿ ಎಂಬ ದ್ರವ್ಯದ ಜ್ಞಾನ ಬರುತ್ತದೆ. 'ಅಗ್ನಿರ್ಜ್ಯೋತಿರಗ್ನಿಸ್ವಾಹಾ' ಇತ್ಯಾದಿ ವಾಕ್ಯದಿಂದ ದೇವತೆಯ ಜ್ಞಾನ ಬರುತ್ತದೆ. ಹಾಗಾಗಿ 'ಅಗ್ನಿಹೋತ್ರಂ ಜುಹೋತಿ' ಎಂಬ ವಾಕ್ಯವು ಕರ್ಮವಿಧಾಯಕವಾಗುತ್ತದೆ ಹೊರತು ಅನುವಾದಕವಲ್ಲ. ಅದರಂತೆ 'ಆಘಾರಮಾಘಾರಯತಿ' ಎಂಬ ವಾಕ್ಯವೂ ಕರ್ಮವಿಧಾಯಕವಾಗುತ್ತದೆ. ಈ ವಾಕ್ಯಗಳಿಂದ ವಿಹಿತವಾದ ಕರ್ಮವನ್ನು ಅನುವಾದ ಮಾಡಿ 'ದಧ್ನಾ ಜುಹೋತಿ' 'ಚತುರ್ಗೃಹೀತಂ ವಾ ಏತದಭೂಃ' ಇತ್ಯಾದಿ ವಾಕ್ಯಗಳು ಗುಣವನ್ನಷ್ಟೇ ವಿಧಿಸುತ್ತವೆ. ಹೀಗೆ ದ್ರವ್ಯ ಮತ್ತು ದೇವತೆಗಳ ಸ್ವರೂಪವು ನಿಷ್ಪನ್ನವಾಗುವಿಕೆ ಎಂಬ ಸಿದ್ಧಾಂತಯುಕ್ತಿಯು 'ಆಘಾರಮಾಘಾರಯತಿ' ಎಂಬ ವಾಕ್ಯದಲ್ಲಿ ಮತ್ತು 'ಅಗ್ನಿಹೋತ್ರಂ ಜುಹೋತಿ' ಎಂಬ ವಾಕ್ಯದಲ್ಲಿ ಸಾಧಾರಣವಾಗಿದೆ.

ಆದ್ದರಿಂದ 'ಶ್ರುತಿಯಲ್ಲಿರುವ ಯಾವ ಯಾವ ವಾಕ್ಯಗಳಲ್ಲಿ ಪೂರ್ವಪಕ್ಷ ಹಾಗೂ ಸಿದ್ಧಾಂತ-ನ್ಯಾಯಗಳು ಸಮಾನವಾಗಿದ್ದರೆ ಆವೆಲ್ಲಾ ವಾಕ್ಯಗಳು ಒಂದೇ ಅಧಿಕರಣಕ್ಕೆ ವಿಷಯಗಳಾಗಬಹುದು' ಎಂದು ಈ ಪೂರ್ವಮೀಮಾಂಸೆಯ ದೃಷ್ಟಾಂತದಿಂದ ತಿಳಿಯುತ್ತದೆ. ಇದರಂತೆ ಪ್ರಕೃತ ಜ್ಯೋತಿ-

---

न कर्मविधायकमिति वाच्यम् । दध्यादिवाक्यैर्द्रव्यस्य तत्प्रख्याधिकरणोक्तदिशा मान्त्रवर्णिकदेवतायाश्च सम्भवान्नानुवादकमग्निहोत्रादिवाक्यम् । वाक्यविहितदशकर्मणां देवतैक्यात् दध्यादिद्रव्याणां सहप्रदानं **पूर्वपक्षे** । **सिद्धान्ते** तु विकल्पेनैकैकद्रव्यस्य प्रदानमित्यादि ज्ञेयम् ।

इति पञ्चमामाघारपूर्वताधिकरणम् (सूत्राणि १३-१६)

ರಧಿಕರಣದಲ್ಲಿ ಪೂರ್ವಪಕ್ಷನ್ಯಾಯ ಹಾಗೂ ಸಿದ್ಧಾಂತನ್ಯಾಯಗಳು ಸಮಾನವಾದ್ದರಿಂದ ಅಗ್ನಿಸೂಕ್ತ ಮತ್ತು ಛಾಂದೋಗ್ಯಸೂಕ್ತಗಳು ವಿಷಯಗಳಾಗುತ್ತವೆ.

ಗ್ರಂಥದಲ್ಲಿರುವ ಆದಿಶಬ್ದದಿಂದ ಚಿತ್ರಾಜ್ಯಾಧಿಕರಣ ಹಾಗೂ ಯವವರಾಹಾಧಿಕರಣಗಳನ್ನು ಉದಾಹರಣೆಗಾಗಿ ಸ್ಮರಿಸಿಕೊಳ್ಳಬೇಕು.

ಎರಡು ವಿಷಯವಾಕ್ಯಗಳಲ್ಲಿರುವ ಜ್ಯೋತಿಶಬ್ದದ ವಿಚಾರವನ್ನು ಈ ಅಧಿಕರಣದಲ್ಲಿ ಮಾಡುತ್ತಿರುವುದರಿಂದ ಪ್ರಥಮಸೂತ್ರದಲ್ಲಿ ಜ್ಯೋತಿಃಶಬ್ದದ ಗ್ರಹಣವು ಯುಕ್ತವಾಗಿದೆ. ಆದರೆ ಎರಡನೆಯ ಛಂದಃಸೂತ್ರದಲ್ಲಿ ಜ್ಯೋತಿಶಬ್ದವನ್ನು ಹೇಳದೇ ಛಂದಸ್‌ಶಬ್ದವನ್ನು ಗ್ರಹಣ ಮಾಡಿದ್ದು ತಪ್ಪಲ್ಲವೇ? ಎರಡೂ ವಿಷಯವಾಕ್ಯಗಳಲ್ಲಿ ಛಂದಸ್ ಎಂಬ ಪೂರ್ವಪಕ್ಷವಿದ್ದರೆ ಇದು ಯುಕ್ತವಾಗುತ್ತಿತ್ತು. ಆದರೆ ಅಗ್ನಿಸೂಕ್ತದಲ್ಲಿ ಅಗ್ನಿ ಎಂದೂ, ಛಾಂದೋಗ್ಯದಲ್ಲಿ ಛಂದಸ್ ಎಂದೂ ಪೂರ್ವಪಕ್ಷ ಮಾಡುತ್ತಿರುವುದರಿಂದ ಸೂತ್ರದಲ್ಲಿ ಮಾಡಿದ ಪದಪ್ರಯೋಗವು ಅನುಚಿತವೆನಿಸುತ್ತದೆ ಎಂಬ ಪ್ರಶ್ನೆಗೆ 'ಛಂದಃಸೂತ್ರ ಇತಿ' ಎಂಬ ವಾಕ್ಯವು ಉತ್ತರಿಸುತ್ತಿದೆ. ಛಂದಸ್‌ಶಬ್ದದ ಪ್ರಯೋಗವು ಅಗ್ನಿಶಬ್ದವನ್ನು ಉಪಲಕ್ಷಣಯಾ ತಿಳಿಸುತ್ತಿದೆ. ಅಗ್ನಿಶಬ್ದವನ್ನು ಪ್ರಯೋಗಿಸದೇ ಛಂದಸ್‌ಶಬ್ದವನ್ನು ಪ್ರಯೋಗಿಸಲು ಕಾರಣವೇನೆಂದರೆ, ಉಪದೇಶಭೇದವೇ ಮೊದಲಾದ ಅನುಪಪತ್ತಿಗಳು ಗಾಯತ್ರೀರೂಪಛಂದಸ್ಸಿನಲ್ಲೇ ಕೇಳಿಸುತ್ತಿವೆ ಹೊರತು ಅಗ್ನಿಯಲ್ಲಿ ಕೇಳಿಸುತ್ತಿಲ್ಲ. ಆದ್ದರಿಂದ ಛಂದಸ್ ಶಬ್ದವನ್ನೇ ಪ್ರಯೋಗಿಸಿದ್ದಾರೆ. ಈ ಶಬ್ದವು ಉಪಲಕ್ಷಕವಾಗಿದೆ ಎನ್ನಲು ಭಾಷ್ಯಸಮ್ಮತಿಯನ್ನು 'ಅತ ಏವ' ಎಂಬ ಗ್ರಂಥದಿಂದ ಹೇಳಿದ್ದಾರೆ.

ಮೊದಲೆರಡು ಸೂತ್ರಗಳು ಕಥಂಚಿತ್ ವಾಕ್ಯದ್ವಯಸಾಧಾರಣವಾಗಬಹುದು. ಆದರೆ ಆನಂತರದ ಎರಡು ಸೂತ್ರಗಳಿಗೆ ಛಾಂದೋಗ್ಯವಷ್ಟೇ ವಿಷಯವಾಗುತ್ತದೆ. ಅಗ್ನಿಸೂಕ್ತವು ವಿಷಯವಾಗುವುದಿಲ್ಲ. ಏಕೆಂದರೆ ಅಗ್ನಿಸೂಕ್ತದಲ್ಲಿ ಭೂತಾದಿಪಾದವ್ಯಪದೇಶಾದಿಗಳನ್ನು ಹೇಳಿಲ್ಲ. ಈ ಪ್ರಶ್ನೆಗೆ 'ಉಪದೇಶಭೇದಾದಿ' ಎಂಬ ವಾಕ್ಯದಿಂದ ಉತ್ತರಿಸಿದ್ದಾರೆ. ಆನಂದಮಯಾಧಿಕರಣದಲ್ಲಿ 'ತದ್ಧೇತು ವ್ಯಪದೇಶ' ಎಂಬ ಸೂತ್ರವು ಕೇವಲ ಆನಂದಮಯನಿಗಷ್ಟೇ ಸಂಬಂಧಪಟ್ಟದೆಯೋ? ಅದರಂತೆ ಉಪದೇಶಭೇದಾದಿ ಪೂರ್ವಪಕ್ಷ-ಯುಕ್ತಿ ಭೂತಾದಿಪಾದವೆಂಬ ಸಿದ್ಧಾಂತಯುಕ್ತಿಯು ಛಾಂದೋಗ್ಯವಾಕ್ಯದಲ್ಲಷ್ಟೇ ಸಂಬಂಧಪಟ್ಟದೆ ಎಂದು ತಿಳಿಯಬೇಕು.

ಮೇಲೆ ಹೇಳಿದ ವಿಷಯದಲ್ಲಿ ಪೂರ್ವಮೀಮಾಂಸೆಯ ಸಮ್ಮತಿಯನ್ನು 'ಏವಂ ಚ' ಇತ್ಯಾದಿ ಗ್ರಂಥವು ಉಪಪಾದಿಸುತ್ತಿದೆ.

### ಅರ್ಥವಾದಾಧಿಕರಣಮ್

### 'ಆಮ್ನಾಯಸ್ಯ ಕ್ರಿಯಾರ್ಥತ್ವಾದಾನರ್ಥಕ್ಯಮತದರ್ಥಾನಾಮ್'

ಜಿಜ್ಞಾಸಾಧಿಕರಣದಲ್ಲಿ ಈ ಅಧಿಕರಣಶರೀರವನ್ನು ನಿರೂಪಿಸಲಾಗಿದೆ. ಕಾರ್ಯಬೋಧಕವಲ್ಲದ ಅರ್ಥವಾದ, ಮಂತ್ರ, ನಾಮಧೇಯ ಮೊದಲಾದ ಮಂತ್ರಗಳಿಗೆ ಅರ್ಥವಿಲ್ಲದಿರುವುದರಿಂದ ಅಪ್ರಾಮಾಣ್ಯವನ್ನು ಹೇಳಬೇಕೆಂದು ಪೂರ್ವಪಕ್ಷ. 'ವಿಧಿನಾ ತ್ವೇಕವಾಕ್ಯತ್ವಾತ್ ಸ್ತುತ್ಯರ್ಥತ್ವೇನ ವಿಧೀನಾಂ

ಸ್ಯುಃ' ಎಂಬ ಸೂತ್ರವು ಅಥವಾ 'ತುಲ್ಯಂ ಚ ಸಾಂಪ್ರದಾಯಿಕಮ್' ಎಂಬ ಸೂತ್ರವು ಈ ಪೂರ್ವಪಕ್ಷವನ್ನು ನಿರಾಕರಿಸಿ ಸಿದ್ಧಾಂತ ಮಾಡಿದೆ. 'ಸ್ವಾಧ್ಯಾಯೋ ಅಧ್ಯೇತವ್ಯಃ' ಎಂಬ ವಿಧಿಯಿಂದ ಸಂಪೂರ್ಣ ಸ್ವಾಧ್ಯಾಯದ ಅಧ್ಯಯನವು ವಿಹಿತವಾಗಿದೆ. ಈ ಅಧ್ಯಯನಕ್ಕೆ ಪುರುಷಾರ್ಥವೆಂಬ ಪ್ರಯೋಜನವಿದೆ. ಅದೇ ಸ್ವಾಧ್ಯಾಯದಲ್ಲಿ ಅರ್ಥವಾದವೇ ಮೊದಲಾದ ಮಂತ್ರಗಳು ಇವೆ. ಅಂದರೆ ಅರ್ಥವಾದಾದಿ ಮಂತ್ರಗಳ ಅಧ್ಯಯನದಿಂದಲೂ ಪುರುಷಾರ್ಥವು ದೊರೆಯುತ್ತದೆಂದು ಹೇಳಿದಂತಾಯಿತು. ಹೀಗೆ ಪ್ರಯೋಜನದಿಂದ ಕೂಡಿರುವ ಅರ್ಥವಾದಾದಿ ಮಂತ್ರಗಳಿಗೆ ಪ್ರಾಮಾಣ್ಯವು ಸಿದ್ಧಿಸುತ್ತದೆಂದು ಸಿದ್ಧಾಂತ.

ಹೀಗೆ ಅರ್ಥವಾದಾಧಿಕರಣದಲ್ಲಿ ಅರ್ಥವಾದ, ಮಂತ್ರ, ನಾಮಧೇಯ ಮೊದಲಾದ ಎಲ್ಲಾ ಮಂತ್ರಗಳಲ್ಲಿ ಸಾಧಾರಣವಾಗಿ ಅಪ್ರಾಮಾಣ್ಯವನ್ನು ಶಂಕಿಸಿ ಪ್ರಾಮಾಣ್ಯವನ್ನು ಸ್ಥಾಪಿಸಿದ್ದಾರೆ. ಮುಂದೆ ಅಸಾಧಾರಣವಾಗಿ ಕೇವಲ ಅರ್ಥವಾದವನ್ನಷ್ಟೇ ಉಲ್ಲೇಖಿಸಿ ದ್ವಾರವಿಲ್ಲದ ಕಾರಣ ಅಪ್ರಾಮಾಣ್ಯವನ್ನು ಶಂಕಿಸಿ, ಅಪ್ರಾಮಾಣ್ಯದ ಪೂರ್ವಪಕ್ಷ ಮಾಡಿದ್ದಾರೆ. ಸಿದ್ಧಾಂತಸೂತ್ರದಲ್ಲಿ ಅರ್ಥವಾದ ಮಂತ್ರಗಳು ಸ್ತೋತ್ರಪರವಾದ್ದರಿಂದ ವಿಧಿಯನ್ನು ಆಚರಿಸಲೇಬೇಕೆಂಬುದರಲ್ಲಿ ಪರ್ಯವಸಾನವಾಗುತ್ತವೆಂಬ ದ್ವಾರವನ್ನು ಹೇಳಿದ್ದಾರೆ. ಇದರಿಂದ ಕೇವಲ ಅರ್ಥವಾದ ಮಂತ್ರಗಳಲ್ಲಿ ಅಸಾಧಾರಣವಾಗಿ ಪ್ರಾಮಾಣ್ಯ-ವನ್ನು ಸಮರ್ಥಿಸಿದಂತಾಯಿತು. ಹೀಗೆ ಪೂರ್ವಮೀಮಾಂಸೆಯ ಒಂದೇ ಅರ್ಥವಾದಾಧಿಕರಣವು ಎರಡು ಹಂತದಲ್ಲಿ ಅರ್ಥವಾದ ಮಂತ್ರಗಳನ್ನು ವಿಚಾರ ಮಾಡಿದೆ. ಇದನ್ನು ದ್ವಿಪರ್ವಾವಿಚಾರ ಎನ್ನುತ್ತಾರೆ.

ಇದರಂತೆ ಪ್ರಕೃತದಲ್ಲಿ ಜ್ಯೋತಿರಧಿಕರಣವನ್ನು ತಿಳಿಯಬೇಕು. ಅಗ್ನಿಸೂಕ್ತ ಹಾಗೂ ಛಾಂದೋಗ್ಯದಲ್ಲಿ ಸಾಧಾರಣವಾದ ಜ್ಯೋತಿಃಶಬ್ದವು ವಿಷ್ಣುವನ್ನು ಹೇಳುತ್ತದೋ? ಅಥವಾ ಬೇರೆಯವರನ್ನು ಹೇಳುತ್ತದೋ? ಎಂಬ ಸಂಶಯ ಬಂದಾಗ ಅಗ್ನಿಶಬ್ದ ಹಾಗೂ ಛಂದಸ್‌ಶಬ್ದಗಳ ಪ್ರಯೋಗದಿಂದ ಮತ್ತು ಜ್ಯೋತಿಃಶಬ್ದ ಹಾಗೂ ಗಾಯತ್ರೀಶಬ್ದಗಳು ಪ್ರಸಿದ್ಧವಾದ ಅಗ್ನಿ ಹಾಗೂ ಗಾಯತ್ರೀ ಛಂದಸ್ಸುಗಳನ್ನು ಹೇಳುವುದರಿಂದ ವಿಷ್ಣುವನ್ನು ಹೇಳಲಾರವೆಂದು ಪೂರ್ವಪಕ್ಷ. ಎರಡೂ ಕಡೆ ಚರಣಶಬ್ದದ ಪ್ರಯೋಗದಿಂದ ಅಪರಿಚ್ಛಿನ್ನವೈಭವತ್ವವೆಂಬ ಧರ್ಮವು ತಿಳಿಯುತ್ತದೆ. ಇದು ವಿಷ್ಣುವಿನಲ್ಲಿ ಬರುತ್ತದೆ ಹೊರತು ಅಗ್ನಿ ಮೊದಲಾದವರಲ್ಲಿ ಬರುವುದಿಲ್ಲ. ವಿಷ್ಣುವಿನಲ್ಲಿ ಅಪ್ರಸಿದ್ಧವಾದ ಜ್ಯೋತಿ, ಗಾಯತ್ರೀ ಮೊದಲಾದ ಶಬ್ದಗಳನ್ನೇಕೆ ಪ್ರಯೋಗಿಸಬೇಕು? ಎಂಬ ಶಂಕೆಗೂ ಈಗ ಅವಕಾಶವಿಲ್ಲ.

ಭಗವಂತನನ್ನು ಜ್ಯೋತಿಗಾಯತ್ರೀರೂಪದಲ್ಲಿ ಉಪಾಸನೆ ಮಾಡಬೇಕೆಂದು ತಿಳಿಸಲು ಜ್ಯೋತಿ, ಗಾಯತ್ರೀ ಪದಗಳನ್ನೇ ಪ್ರಯೋಗಿಸಿದ್ದಾರೆ. ಹೀಗೆ ಎರಡೂ ವಾಕ್ಯಗಳಲ್ಲಿ ಸಾಧಾರಣವಾಗಿ ಪೂರ್ವಪಕ್ಷ ಹಾಗೂ ಸಿದ್ಧಾಂತಗಳನ್ನು ಮೊದಲೆರಡು ಸೂತ್ರಗಳು ಮಾಡಿವೆ. ಪುನಃ ಪ್ರಶ್ನೆ ಬರುತ್ತದೆ. ಛಾಂದೋಗ್ಯದಲ್ಲಿರುವ ಜ್ಯೋತಿಯು ಬ್ರಹ್ಮನಾಗಲಾರ. ದಿವಃಪರತ್ವ ಹಾಗೂ ದ್ಯುಸ್ಥತ್ವಗಳ ವಿರೋಧ ಬರುವುದರಿಂದ ಎಂಬ ಪೂರ್ವಪಕ್ಷಕ್ಕೆ ಭೂತಾದಿಪಾದವ್ಯಪದೇಶಾದಿಸೂತ್ರವು ವಿರೋಧವನ್ನು ಪರಿಹರಿಸಿರುವ ಮೂಲಕ ಸಿದ್ಧಾಂತ ಮಾಡಿದೆ. ಹೀಗೆ ಮೊದಲು ಎರಡೂ ವಾಕ್ಯಗಳಲ್ಲಿ ಮೊದಲೆರಡು ಸೂತ್ರಗಳು ಸಾಧಾರಣವಾಗಿ ವಿಚಾರ ಮಾಡಿ, ಅನಂತರದ ಎರಡು ಸೂತ್ರಗಳು ಅಸಾಧಾರಣವಾಗಿ

ಛಾಂದೋಗ್ಯವಾಕ್ಯವನ್ನಷ್ಟೇ ವಿಚಾರ ಮಾಡಿವೆ. ಅರ್ಥವಾದಾಧಿಕರಣದಂತೆ ಇದೂ ಕೂಡ ದ್ವಿಪರ್ವಾ-ವಿಚಾರ (ಎರಡು ಹಂತದ ವಿಚಾರ) ಎನಿಸುತ್ತದೆ.

ಅನುವ್ಯಾಖ್ಯಾನದಲ್ಲಿ 'ನಿತ್ಯತ್ವಾದೇವ ಶಬ್ದಾನಾಂ ತತ್ಸ್ವಭಾವಃ ಕಥಂ ತತಃ?' (ಶಬ್ದಗಳು ನಿತ್ಯವಾದ್ದರಿಂದ ಅವುಗಳ ಸ್ವಭಾವವು ಹೇಗೆ ಭಗವದಧೀನವಾಗುತ್ತವೆ?) ಎಂಬ ಪೂರ್ವಪಕ್ಷಯುಕ್ತಿಯನ್ನು ಹೇಳಿದ್ದಾರೆ. 'ತಾದೃಶತ್ವಾಚ್ಚ ತಚ್ಛಕ್ತೇಃ' (ಭಗವಂತನ ಶಕ್ತಿಯಿಂದ ಅನಾದಿನಿತ್ಯಪದಾರ್ಥಗಳು ಅಧೀನವಾಗುತ್ತವೆ) ಎಂಬ ಸಿದ್ಧಾಂತ ಯುಕ್ತಿಯನ್ನು ಹೇಳಿದ್ದಾರೆ. ಅಗ್ನಿಸೂಕ್ತದಲ್ಲಿರುವ ಜ್ಯೋತಿಃಶಬ್ದದಲ್ಲಿ ಈ ಎರಡೂ ಯುಕ್ತಿಗಳನ್ನು ತೋರಿಸಲು ಸಾಧ್ಯವಿಲ್ಲ. ಹೀಗಿರುವಾಗ ಅಗ್ನಿಸೂಕ್ತವು ಹೇಗೆ ವಿಷಯವಾಕ್ಯವಾಗುತ್ತದೆ.

ಶಂಕೆ - ಈ ಎರಡು ಯುಕ್ತಿಗಳನ್ನು ಜ್ಯೋತಿಃಶಬ್ದದಲ್ಲಿ ಹೇಳಲು ಸಾಧ್ಯವಿಲ್ಲದಿದ್ದರೂ ಗಾಯತ್ರೀ ಶಬ್ದದಲ್ಲಿ ಹೇಳಬಹುದು. ಛಾಂದೋಗ್ಯವಾಕ್ಯದಲ್ಲಷ್ಟೇ ಅಸಾಧಾರಣವಾದ ಪೂರ್ವಪಕ್ಷ ಸಿದ್ಧಾಂತ ಯುಕ್ತಿಗಳನ್ನು ಆಚಾರ್ಯರು ಹೇಳಿದ್ದಾರೆ. ಗ್ರಂಥಕಾರರು ದ್ವಿಪರ್ವಾವಿಚಾರವನ್ನು ಸಮರ್ಥಿಸಿದ್ದರಿಂದ ಈ ಅನುವ್ಯಾಖ್ಯಾನವನ್ನು ವ್ಯಾಖ್ಯಾನಿಸಿದಂತಾಯಿತು.

ಶಂಕೆ - ಹಾಗಾದರೆ ಒಂದೇ ಅಧಿಕರಣವೆನ್ನುವುದು ತಪ್ಪು. ಜ್ಯೋತಿಃಸೂತ್ರದಲ್ಲಿ ಅಗ್ನಿಸೂಕ್ತವು ವಿಷಯವಾಕ್ಯವಾಗಿದೆ. ವಿಷ್ಣುಸೂಕ್ತವಲ್ಲವೆಂಬ ಅಧ್ಯಾಪಕಪ್ರಸಿದ್ಧಿಯು ಅಜ್ಞಾನಮೂಲವಾಗಿದೆಯೆಂದು ಹೇಳಬೇಕು. ಮುಂದಿನ ಮೂರು ಸೂತ್ರಗಳಲ್ಲಿ ಅನಾದಿನಿತ್ಯವಾದ ಪದಾರ್ಥವೂ ಕೂಡ ಈಶಾಧೀನವಾಗಿದೆ ಎಂಬ ನ್ಯಾಯವನ್ನು ಸ್ಥಾಪಿಸಬೇಕೆಂದು ಹೇಳಿದಂತಾಯಿತು. ಹಾಗಾದರೆ ಮೊದಲನೆಯ ಸೂತ್ರದ ವಿಷಯವಾಕ್ಯವೇ ಬೇರೆ; ಮುಂದಿನ ಸೂತ್ರಗಳ ವಿಷಯವಾಕ್ಯವೇ ಬೇರೆ ಎಂದು ಒಪ್ಪಿಕೊಂಡಂತಾಯಿತು. ವಿಷಯವಾಕ್ಯಭೇದವನ್ನು ಒಪ್ಪಿಕೊಳ್ಳುವುದರ ಜೊತೆಗೆ ಅಜ್ಞಾನಮೂಲತ್ವ ಹಾಗೂ ಈಶಾಧೀನತ್ವವೆಂಬ ನ್ಯಾಯಗಳಲ್ಲಿಯೂ ಭೇದವನ್ನು ಒಪ್ಪಿದಂತಾಯಿತು. ವಿಷಯಭೇದ ಹಾಗೂ ನ್ಯಾಯಭೇದಗಳಿರುವುದರಿಂದ ಅಧಿಕರಣಭೇದವನ್ನು ಅನಿವಾರ್ಯವಾಗಿ ಒಪ್ಪಬೇಕಲ್ಲವೇ?

ಸಮಾಧಾನ - ಸೂಕ್ಷ್ಮಾಂಶದಲ್ಲಷ್ಟೇ ನ್ಯಾಯಭೇದವಿದೆ. ಆದ್ದರಿಂದಲೇ ಇದನ್ನು ಅಂತರ್ಭೇದಾಧಿಕರಣವೆಂದು ತತ್ವಪ್ರದೀಪಕಾರರು ಹೇಳಿದ್ದಾರೆ. ಗರ್ಭದಲ್ಲಿ ಮಗುವನ್ನು ಹೊತ್ತ ಗರ್ಭಿಣಿಸ್ತ್ರೀಯಂತೆ ಈ ಜ್ಯೋತಿರಧಿಕರಣವು ನ್ಯಾಯಭೇದವೆಂಬ ಗರ್ಭವನ್ನು ಧರಿಸಿ ಒಂದೇ ಪ್ರಧಾನನ್ಯಾಯವನ್ನು ಹೇಳುತ್ತಿದೆ. ಈ ತರಹದ ಇನ್ನೂ ಕೆಲವು ಅಧಿಕರಣಗಳಲ್ಲಿ ಸೂಕ್ಷ್ಮವ್ಯತ್ಯಾಸವನ್ನು ಶಿಷ್ಯರೇ ಊಹಿಸಿಕೊಳ್ಳಬೇಕು. ಇಷ್ಟು ವಿಚಾರ ಕೇವಲ ದಿಕ್ಪ್ರದರ್ಶನ.

**ಗುರುರಾಜೀಯಮ್** – ನನು ಜ್ಯೋತಿಸ್ಸೂತ್ರೇ ಹೃದಯ ಆಹಿತಮಿತಿ ವಿಷಯವಾಕ್ಯಂ ಛಂದಸ್ಸೂತ್ರೇ ತು ಅಥ ಯದತಃ ಪರ ಇತ್ಯಾದಿವಿಷಯವಾಕ್ಯಮಿತ್ಯಾದ್ಯಮತದ್ವಯಮಯುಕ್ತಮ್ । ಯತ್ರಹಿ ಯನ್ನಿರ್ಣೀಯತೇ ತತ್ರ ತದೇವ ವಿಷಯವಾಕ್ಯಮಿತ್ಯುಚ್ಯತೇ । ನನು ವಿಷಯವಾಕ್ಯಂ ನಾಮ ಕಿಞ್ಚಿಜ್ಜಾತ್ಯಾ ಭಿನ್ನಮಸ್ತಿ । ತಥಾಚ ಜ್ಯೋತಿಸ್ಸೂತ್ರೇ ಹೃದಯ ಆಹಿತಮಿತ್ಯಸ್ಯೈವಾಥ ಯದತಃ ಪರ ಇತ್ಯಾದೇರಪಿ

निर्णेतव्यत्वेन विषयवाक्यत्वात् तत्र हृदय आहितमित्येतदेव विषयवाक्यमित्यनुपपन्नम् । एवं छन्दस्सूत्रे अथ यदतः पर इत्यादेरिव हृदय आहितमित्यादेरपि निर्णेतव्यत्वेन विषयवाक्यत्वात् अथ यदत इत्येतदेव विषयवाक्यमित्यनुपपन्नमित्यस्वरसात्पक्षान्तरमाह – **यद्वेति** ॥ ननु तेजो वै ब्रह्मवर्चसं गायत्रीति श्रुतेर्लक्षणया गौण्या वा वृत्त्या प्रवृत्तेः कथं तद्बलाद् गायत्रीज्योतिषोरभेदः स्यात् । तथा सति ब्रह्मवर्चसशब्दसामानाधिकरण्याद् ब्रह्मवर्चसाभेदोपि गायत्र्या अङ्गीकार्यः स्यात् । किञ्च प्रमेयभेदे शब्दैक्यमात्रेण कथमधिकरणैक्यमित्यतो वाह – **यद्वेति** ॥

नन्वेवं मतद्वयेपि वाक्यद्वयस्य विषयवाक्यत्वे विषयवाक्यभेदेनाधिकरणभेदः स्यादित्यतो न विषयवाक्यभेदमात्रमधिकरणभेदप्रयोजकम् । किन्तु पूर्वपक्षसिद्धान्तयुक्तिभेद एव प्रयोजकः । पूर्वतन्त्र एतत्तन्त्रेच तथैव दर्शनादित्यभिप्रायेणाह – **यथाहीत्यादिना** ॥ ननु छन्दस्सूत्रेऽग्निशब्दाभावात्कथमग्निसूक्तस्य विषयवाक्यत्वमित्यत आह – **छन्दस्सूत्र इति** ॥ **अत एवेति** ॥ छन्दस्सूत्रस्याग्न्युपलक्षकत्वादेवेत्यर्थः । ननु पूर्वपक्षसिद्धान्तयुक्तिसाधारण्यमयुक्तम् । उपदेशभेदादिरूपायाः पूर्वपक्षयुक्तेर्भूतादिपादेति सिद्धान्तयुक्तेः छान्दोग्यवाक्यमात्रसाधारण्यादित्यतः तस्य तन्मात्रसाधारण्यं न दोषः । न चेदं कुत्रापि न दृष्टम् । अस्यामेव मीमांसायामानन्दमयाधिकरणेऽन्नमयादिपञ्चानां ब्रह्मत्वसाधकब्रह्मशब्दाभ्यासादेरिवानन्दमयमात्रस्य ब्रह्मत्वसाधकीभूततद्धेतुव्यपदेशाभिधानादिति स्पष्टत्वादनुपदर्श्य पूर्वमीमांसायामपि दृष्टान्तमस्तीत्याह – **उपदेशभेदादीति** ॥ अर्थवादमन्त्रादीत्यादिपदेन नामधेयसङ्ग्रहः – **अन्यस्त्विति** ॥ अर्थवादानां प्राशस्त्यलक्षणया विधिवाक्यैकवाक्यत्वेन प्रामाण्यमित्यादिरित्यर्थः॥ **द्विपर्वाविचार इति** ॥ विध्यतिरिक्तवेदस्याक्रियार्थत्वादप्रामाण्ये प्राप्ते विध्येकवाक्यत्वेन प्रामाण्यमिति साधारणः । अर्थवादानामभूतार्थत्वेन क्रियार्थत्वं स्तावकत्वेन प्राशस्त्यलक्षणयैकवाक्यत्वमित्यर्थवादमात्रासाधारण इति द्विप्रकारको विचारो यथा तथा ज्योतिर्गायत्र्योर्विष्ण्वन्यत्वेन प्रकारेण साधारणः गायत्रीत्वेन ज्योतिष्ट्वेन चासाधारण इति द्विप्रकारकोऽत्रापि विचार इत्यर्थः।

## ಸಾರ

ತತ್ವಪ್ರದೀಪಕಾರರ ಮತ್ತು ಸನ್ಯಾಯರತ್ನಾವಲೀಕಾರರ ಪ್ರಕಾರ ಅಗ್ನಿಸೂಕ್ತ ಹಾಗೂ ಛಾಂದೋಗ್ಯ-ವಾಕ್ಯಗಳೆರಡೂ ವಿಷಯವಾಕ್ಯಗಳಾಗಬಹುದು. ವಿಷಯವಾಕ್ಯಗಳು ಬೇರೆ ಬೇರೆಯಾದ ಮಾತ್ರದಿಂದ ಅಧಿಕರಣಗಳಲ್ಲಿ ಭೇದವು ಬರಬೇಕಾಗಿಲ್ಲ. ನ್ಯಾಯಭೇದವಿದ್ದರಷ್ಟೇ ಅಧಿಕರಣಭೇದವನ್ನು ಒಪ್ಪಬೇಕು. ಪ್ರಕೃತ ಎರಡೂ ವಿಷಯವಾಕ್ಯಗಳಲ್ಲಿ ಪ್ರಕರಣದ ಬೆಂಬಲ ಪಡೆದ ಶ್ರುತಿಯೆಂಬ ಪೂರ್ವಪಕ್ಷ ನ್ಯಾಯವು ನಿರತಿಶಯವೈಭವತ್ವವೆಂಬ ಸಿದ್ಧಾಂತನ್ಯಾಯವು ಸಮಾನವಾಗಿದೆ. ಪೂರ್ವಮೀಮಾಂಸೆಯ ಆಘಾರಾಗ್ನಿ-ಹೋತ್ರಾದಿಕರಣದಲ್ಲಿ ಅನೇಕವಾಕ್ಯಗಳು ವಿಷಯವಾಕ್ಯಗಳಾಗಿವೆ. ಆದರೆ ದ್ರವ್ಯದೇವತಾರೂಪವಾದ ಯಾಗಸ್ವರೂಪದ ಇಲ್ಲಿರುವಿಕೆಯೆಂಬ ಪೂರ್ವಪಕ್ಷನ್ಯಾಯವು ಮಂತ್ರವರ್ಣಾದಿರೂಪವಾದ ಯಾಗಸ್ವರೂಪದ ನಿಷ್ಪತ್ತಿಯಾಗುವಿಕೆಯೆಂಬ ಸಿದ್ಧಾಂತನ್ಯಾಯವು ಆ ವಿಷಯವಾಕ್ಯಗಳಲ್ಲಿ ಸಮಾನವಾಗಿವೆ. ಆದ್ದರಿಂದ ಒಂದೇ ಅಧಿಕರಣದಲ್ಲಿ ಅವುಗಳನ್ನು ವಿಚಾರ ಮಾಡಿದ್ದಾರೆ. ಹೀಗೆ ಮೀಮಾಂಸಕರಂತೆ ನಾವೂ ಹೇಳಬಹುದು.

ಗಮನಿಸಬೇಕಾದ ಮತ್ತೊಂದು ಸೂಕ್ಷ್ಮವಿಚಾರ -- ಮೊದಲೆರಡು ಸೂತ್ರಗಳಿಗೆ ಮಾತ್ರ ಎರಡೂ ವಿಷಯವಾಕ್ಯಗಳಾಗುತ್ತವೆ. ಅನಂತರದ ಎರಡು ಸೂತ್ರಗಳಿಗೆ ಛಾಂದೋಗ್ಯವಾಕ್ಯವಷ್ಟೇ ವಿಷಯ-ವಾಕ್ಯವಾಗುತ್ತದೆ. ಎರಡು ಹಂತದಲ್ಲಿ ವಿಚಾರಮಾಡುವ ಈ ಪದ್ಧತಿಯನ್ನು ಪೂರ್ವಮೀಮಾಂಸೆಯ ಅರ್ಥವಾದಾಧಿಕರಣದಲ್ಲಿ ನೋಡಬಹುದು. ಇಷ್ಟೆಲ್ಲಾ ಅಭಿಪ್ರಾಯದಿಂದ ತತ್ವಪ್ರದೀಪಕಾರರು ಗರ್ಭಣಿಸ್ತ್ರೀಯಂತೆ ಈ ಅಧಿಕರಣವನ್ನು ಅಂತರ್ಭೇದಾಧಿಕರಣವೆಂದಿದ್ದಾರೆ.

---

### ಟೀಕಾರಾಯರ ಪಕ್ಷವೂ ಸಮಂಜಸ

**ತಾತ್ಪರ್ಯಚನ್ದ್ರಿಕಾ**

**तृतीयेऽपि ''कम्पनात्'' ''शब्दादेव प्रमितः'' इत्यादाविव अधिकरणान्तरत्वेऽपि समन्वेतव्यशब्दान्तरस्य साक्षादनुक्तिर्न विरुद्धा । सूचनं तु प्रकृतेऽपि ''छन्दोऽभिधानात्'' इत्यनेन कृतम् । भाष्येऽग्निपदं तु अन्यत्रप्रसिद्धस्य गायत्री-पदस्य विष्णौ प्रयोगे प्रयोजनमत्र वदता सूत्रकृता पूर्वत्रोत्तरत्र च अग्न्यादिपदस्य विष्णौ प्रयोगे प्रयोजनं सूचितमिति दर्शयितुम्। अन्यथा मतान्तरेऽपि ''अग्निगायत्र्यादि'' इत्यादि पदं व्यर्थं स्यात् ।**

**अनुव्याख्यानन्यायविवरणयोः ''ज्योतिः'' इत्यत्राधिकाशङ्काऽनुक्तिस्तु ''अग्नि-सूक्तस्थत्वात्'' इति भाष्य एवोक्तत्वात्, न तु तस्यैकाधिकरणत्वात् ।**

**''अधिभूताध्यात्माधिदैवगतानामपि शब्दानाम्'' इति न्यायविवरणे ज्योतिरधिकरणस्य पृथगुपाध्यनुक्तिरपि तस्याकाशाधिकरणवदधिभूतगतशब्दविषयत्वं वाऽन्तरधिकरणवदधिदैवगतशब्दविषयत्वं वेत्यभिप्रेत्य, न त्वेकाधिकरणत्वमभिप्रेत्य । सूक्तविषयत्वमेव हि ततोऽस्य विशेषः । इदञ्च मतत्रयं सूत्रयोजनामात्रे भिन्नं, प्रमेये त्वविरुद्धम् । एवमन्यत्राप्यविरोध ऊह्यः ॥**

ಅನುವಾದ - ಮೂರನೆಯ ಟೀಕಾರಾಯರ ಪಕ್ಷದಲ್ಲಿಯೂ ತಪ್ಪಿಲ್ಲ. 'ಛಂದೋಭಿಧಾನಾತ್' ಇತ್ಯಾದಿ ಸೂತ್ರದಲ್ಲಿ ಸಮನ್ವಯ ಮಾಡಬೇಕಾದ ಶಬ್ದವನ್ನು ಹೇಳದ ಕಾರಣ ಒಂದೇ ಅಧಿಕರಣವೆಂಬ ಹಿಂದಿನ ಆಕ್ಷೇಪಕ್ಕೆ ಅವಕಾಶವಿಲ್ಲ. ಪ್ರತಿಯೊಂದು ಅಧಿಕರಣದಲ್ಲಿಯೂ ಸಮನ್ವೇತವ್ಯ-ಶಬ್ದವನ್ನು ಉಲ್ಲೇಖ ಮಾಡಿಯೇ ಇರುತ್ತಾರೆಂಬ ನಿಯಮವಿಲ್ಲ. ಉದಾಹರಣೆ - 'ಕಂಪನಾತ್' ಸೂತ್ರದಲ್ಲಿ ಉಲ್ಲೇಖ ಮಾಡದ ವಜ್ರಶಬ್ದವನ್ನು ಸಮನ್ವಯ ಮಾಡಿದ್ದಾರೆ. 'ಶಬ್ದಾದೇವ ಪ್ರಮಿತಃ' ಎಂಬ ಸೂತ್ರದಲ್ಲಿಯೂ ಉಲ್ಲೇಖ ಮಾಡದ ಈಶಾನಶಬ್ದವನ್ನು ಸಮನ್ವಯ ಮಾಡಿದ್ದಾರೆ. ಆದರಂತೆ ಗಾಯತ್ರೀಶಬ್ದವನ್ನು ಉಲ್ಲೇಖ ಮಾಡದಿದ್ದರೂ ಛಂದಸ್‌ಸೂತ್ರವು ಅದರ ಸಮನ್ವಯವನ್ನು ಮಾಡಬಹುದು.

ಪ್ರಶ್ನೆ - 'ಕಂಪನಾತ್' ಇತ್ಯಾದಿ ಸೂತ್ರಗಳಲ್ಲಿ ನೇರವಾಗಿ ವಜ್ರಶಬ್ದವನ್ನು ಹೇಳದಿದ್ದರೂ ಕಂಪನಶಬ್ದದಿಂದ ವಜ್ರಶಬ್ದಾರ್ಥವನ್ನು ಸೂಚಿಸಿದ್ದಾರಲ್ಲ?

ಉತ್ತರ - ಅಂತಹ ಸೂಚನೆ ಪ್ರಕೃತ ಸೂತ್ರದಲ್ಲಿಯೂ ಇದೆ. ಗಾಯತ್ರೀಶಬ್ದವನ್ನು ಛಂದಸ್ ಶಬ್ದವು ಸ್ಪಷ್ಟವಾಗಿ ಸೂಚಿಸುತ್ತಿರುವುದರಿಂದ ಸಮನ್ವಯ ಮಾಡಬಹುದು.

ಪ್ರಶ್ನೆ - ಜ್ಯೋತಿರಧಿಕರಣವೇ ಬೇರೆ ಗಾಯತ್ರ್ಯಧಿಕರಣವೇ ಬೇರೆ ಎಂಬುದು ಟೀಕಾರಾಯರ ಮತ. ಹಾಗಾದರೆ ಭಾಷ್ಯದಲ್ಲಿ 'ಅಗ್ನಿಗಾಯತ್ರ್ಯಾದಿ' ಇತ್ಯಾದಿ ಪದಪ್ರಯೋಗವನ್ನು ಗಾಯತ್ರ್ಯಧಿಕರಣದಲ್ಲಿ ಮಾಡಿದ್ದು ತಪ್ಪಾಗುತ್ತದೆ. ಅಗ್ನಿಶಬ್ದವನ್ನು ಹಿಂದಿನ ಅಧಿಕರಣದಲ್ಲಿ ಸಮನ್ವಯ ಮಾಡಿದ ಮೇಲೆ ಪುನಃ ಅದರ ಉಲ್ಲೇಖವು ಆನಾವಶ್ಯಕವಲ್ಲವೇ?

ಉತ್ತರ - ಭಾಷ್ಯಕಾರರು ಮಾಡಿದ ಅಗ್ನಿಪದದ ಪ್ರಯೋಗಕ್ಕೆ ಬಹಳ ಅರ್ಥವಿದೆ. ಅದು ಹೀಗೆ -- ಗಾಯತ್ರೀಪದವು ಅನ್ಯತ್ರಪ್ರಸಿದ್ಧವಾಗಿದೆ. ಇದನ್ನು ವಿಷ್ಣುವಿನಲ್ಲಿ ಪ್ರಯೋಗ ಮಾಡುವ ಉದ್ದೇಶವೇನೆಂದರೆ ಗಾಯತ್ರೀರೂಪದಿಂದ ಭಗವಂತನನ್ನು ಉಪಾಸನೆ ಮಾಡಬೇಕೆಂಬುದು. ಅಷ್ಟೇ ಅಲ್ಲದೆ ಹಿಂದಿನ ಮುಂದಿನ ಅಧಿಕರಣಗಳಲ್ಲಿ ಸಮರ್ಥಿಸಿರುವ ಅನ್ಯತ್ರಪ್ರಸಿದ್ಧವಾದ ಅಗ್ನಿ, ಪ್ರಾಣ ಮೊದಲಾದ ರೂಪಗಳಿಂದಲೂ ಭಗವಂತನನ್ನು ಉಪಾಸನೆ ಮಾಡಬೇಕು ಎಂಬ ಪ್ರಯೋಜನವನ್ನು ಸೂತ್ರಕಾರರು 'ಚೇತೋರ್ಪಣನಿಗದಾತ್ ತಥಾ ಹಿ ದರ್ಶನಮ್' ಎಂಬ ಈ ಸೂತ್ರದಿಂದ

ಹೇಳುತ್ತಿದ್ದಾರೆ. ಸೂತ್ರಕಾರರ ಈ ಅಭಿಪ್ರಾಯವನ್ನು ಭಾಷ್ಯಕಾರರು 'ಅಗ್ನಿ'ಶಬ್ದದ ಉಲ್ಲೇಖದಿಂದ ಸೂಚಿಸಿದ್ದಾರೆ.

ಹೀಗೆ ಒಪ್ಪದಿದ್ದರೆ ತತ್ವಪ್ರದೀಪಕಾರಾದಿಗಳ ಮತದವರಿಗೂ ಭಾಷ್ಯವನ್ನು ವ್ಯಾಖ್ಯಾನಿಸುವುದು ಕಷ್ಟ. ಏಕೆಂದರೆ 'ಅಗ್ನಿಗಾಯತ್ರ್ಯಾದಿ' ಎಂಬಲ್ಲಿ ಆದಿಪದವನ್ನು ಆಚಾರ್ಯರು ಹೇಳಿದ್ದಾರೆ. ಅಗ್ನಿ, ಗಾಯತ್ರೀ ಶಬ್ದಗಳನ್ನಷ್ಟೇ ಜ್ಯೋತಿರಧಿಕರಣದಲ್ಲಿ ಸಮನ್ವಯ ಮಾಡುವುದಾದರೆ ಆದಿಶಬ್ದವನ್ನೇಕೆ ಹೇಳಬೇಕು? ಆದಿಪದದ ಸಾರ್ಥಕ್ಯಕ್ಕಾಗಿ ಹಿಂದಿನ ಮುಂದಿನ ಎಲ್ಲಾ ಅಧಿಕರಣಗಳಲ್ಲಿ ಸಮನ್ವಯ ಮಾಡುವ ಅನ್ಯತ್ರಪ್ರಸಿದ್ಧಶಬ್ದಗಳ ಮೂಲಕವಾಗಿ ಭಗವಂತನನ್ನು ಉಪಾಸನೆ ಮಾಡಬೇಕೆಂದು ತಿಳಿಸುವುದಕ್ಕಾಗಿ ಹೇಳಿದ್ದಾರೆಂದು ಹೇಳಬೇಕು.

ಪ್ರಶ್ನೆ - ಜ್ಯೋತಿರಧಿಕರಣವು ಪ್ರತ್ಯೇಕವಾದರೆ ಅನುವ್ಯಾಖ್ಯಾನ ಮತ್ತು ನ್ಯಾಯವಿವರಣಗಳಲ್ಲಿ ಅಭ್ಯಧಿಕಾಶಂಕೆಯನ್ನು ತೋರಿಸಬೇಕಿತ್ತಲ್ಲವೇ?

ಉತ್ತರ - 'ಅಗ್ನಿಸೂಕ್ತಸ್ಥತ್ವಾತ್' ಇತ್ಯಾದಿ ಭಾಷ್ಯದಲ್ಲಿ ಸ್ಪಷ್ಟವಾಗಿ ಅಭ್ಯಧಿಕಾಶಂಕೆಯನ್ನು ಜ್ಯೋತಿರಧಿಕರಣಕ್ಕೆ ಹೇಳಿದ್ದಾರೆ. ಈ ಕಾರಣದಿಂದ ಪುನಃ ಅನುವ್ಯಾಖ್ಯಾನಾದಿಗಳಲ್ಲಿ ಹೇಳಿಲ್ಲವೇ ಹೊರತು, ಜ್ಯೋತಿರಧಿಕರಣ ಗಾಯತ್ರ್ಯಧಿಕರಣಗಳು ಒಂದೇ ಎಂಬಭಿಪ್ರಾಯದಿಂದಲ್ಲ.

ಪ್ರಶ್ನೆ - ನ್ಯಾಯವಿವರಣದಲ್ಲಿ ಪ್ರತಿಯೊಂದು ಅಧಿಕರಣ ಉಪಾಧಿಗಳನ್ನು ನಿಖರವಾಗಿ ನಿರೂಪಿಸಿದ್ದಾರೆ. ಆದರೆ 'ಅಧಿಭೂತಾಧ್ಯಾತ್ಮಾಧಿದೈವಗತಾನಾಮಪಿ ಶಬ್ದಾನಾಮ್' ಎಂಬ ನ್ಯಾಯವಿವರಣದ ಮಾತನ್ನು ಗಮನಿಸಿದಾಗ ಜ್ಯೋತಿರಧಿಕರಣಕ್ಕೆ ಪ್ರತ್ಯೇಕ ಉಪಾಧಿ ಹೇಳಿದ್ದು ಕಾಣಿಸುತ್ತಿಲ್ಲ. ಹಾಗಾಗಿ ಎರಡೂ ಒಂದೇ ಅಧಿಕರಣವೆಂದನ್ನಬೇಕಲ್ಲವೇ?

ಉತ್ತರ - ಉಪಾಧಿ ಹೇಳದಿರಲು ಪ್ರತ್ಯೇಕ ಅಧಿಕರಣವಲ್ಲವೆನ್ನುವುದು ಕಾರಣವಲ್ಲ. ಹೊರತಾಗಿ ಹೇಗೆ ಆಕಾಶಾಧಿಕರಣದಲ್ಲಿ ಅಧಿಭೂತಗತಶಬ್ದವಿಷಯತ್ವವು ಉಪಾಧಿಯಾಗಿದೆಯೋ ಅಂತರಧಿಕರಣದಲ್ಲಿ ಅಧಿದೈವಗತಶಬ್ದವಿಷಯತ್ವವು ಉಪಾಧಿಯಾಗಿದೆಯೋ ಅದರಂತೆ ಈ ಅಧಿಕರಣದಲ್ಲಿಯೂ ಆ ಉಪಾಧಿಗಳೇ ವಿಷಯವಾಗಬಹುದು. ಹಾಗಾದಲ್ಲಿ ಆಕಾಶಾಧಿಕರಣದಿಂದ ಅಥವಾ ಅಂತರಧಿಕರಣದಿಂದ ಪ್ರತ್ಯೇಕತೆ ಬರುವುದಿಲ್ಲವೆಂದು ಶಂಕಿಸಬಾರದು. ಸೂಕ್ತವಿಷಯತ್ವವೇ ಈ ಅಧಿಕರಣದ ಉಪಾಧಿಯಲ್ಲಿರುವ ವಿಶೇಷ.

ಹೀಗೆ ಅಧಿಕರಣಭೇದವಿಚಾರದಲ್ಲಿ ಮೂರು ಮತಗಳಿವೆ. ಸೂತ್ರಗಳನ್ನು ಯಾವ ಅಧಿಕರಣದಲ್ಲಿ ಯೋಜಿಸಬೇಕೆಂಬುದಷ್ಟೇ ವಿವಾದವಿಚಾರ. ಪ್ರಮೇಯವಿಚಾರದಲ್ಲಿ ಯಾರೊಬ್ಬರಿಗೂ ವಿವಾದವಿಲ್ಲ. ಇದರಂತೆ 'ಕಾರಣತ್ವೇನ ಚ ಆಕಾಶಾದಿಷು' ಇತ್ಯಾದಿ ಅಧಿಕರಣಗಳಲ್ಲಿಯೂ ಅವಿರೋಧವಿಲ್ಲವೆಂಬುದನ್ನು ಊಹಿಸಬೇಕು.

ಕಠಿಣಪದಾರ್ಥ -

ತೃತೀಯೇಽಪಿ = ಟೀಕಾರಾಯರ ಪಕ್ಷದಲ್ಲಿಯೂ ಎಂದು ಅನ್ವಯ; ಪ್ರಯೋಜನಂ = ಆಯಾ ಪದಗಳ ಪ್ರವೃತ್ತಿನಿಮಿತ್ತವಾದ ಗುಣಗಳಿಂದ ಉಪಾಸನೆ ಮಾಡಬೇಕೆಂಬ ಪ್ರಯೋಜನವನ್ನು; ಅತ್ರ = ಈ ಜ್ಯೋತಿರಧಿಕರಣದಲ್ಲಿ; ಅಗ್ನ್ಯಾದಿಪದಸ್ಯ = ಅಗ್ನಿ, ಆಕಾಶ, ಪ್ರಾಣ, ಭೂಮ, ಅಕ್ಷರ ಮೊದಲಾದ ಪದಗಳ; ಮತಾಂತರೇ = ತತ್ತ್ವಪ್ರದೀಪಕಾರರ ಮತದಲ್ಲಿ ಹಾಗೂ ಸನ್ನ್ಯಾಯರತ್ನಾವಲೀಕಾರರ ಮತದಲ್ಲಿ; ಅನ್ಯತ್ರಾಪಿ = 'ಕಾರಣತ್ವೇನ ಚ ಆಕಾಶಾದಿಷು' ಇತ್ಯಾದಿ ಅಧಿಕರಣಗಳಲ್ಲಿಯೂ.

**ಪ್ರಕಾಶಃ** – ಏವಂ ಮತದ್ವಯಂ ಸಮರ್ಥ್ಯ ಟೀಕಾಕಾರಮತಂ ಚೋಪಪನ್ನಮಿತ್ಯಾಹ **ತೃತೀಯೇऽಪೀತಿ** ॥ 'ಪಕ್ಷೇ' ಇತಿ ಸಮ್ಬಧ್ಯತೇ । ಯದುಕ್ತಂ ಸಮನ್ವೇತವ್ಯಶಬ್ದಾನುಕ್ತೇಶ್ಚನ್ದಃಪ್ರಭೃತಿಸೂತ್ರತ್ರಯಂ ನ ಭಿನ್ನಾಧಿಕರಣಮಿತಿ, ತತ್ರ ಕಿಂ ಸಾಕ್ಷಾದನುಕ್ತಿರಭಿಪ್ರೇತಾ, ಅರ್ಥಸೂಚನಮಪಿ ವೇತಿ । ಆದ್ಯಃ ಕಲ್ಪೋ ವ್ಯಭಿಚಾರೀತ್ಯಾಹ – **ಕಮ್ಪನಾದಿತಿ** ॥ ತತ್ರ ''ಮಹದ್ಭಯಂ ವಜ್ರಮುದ್ಯತಮ್'' ಇತಿ ವಜ್ರಶಬ್ದಃ ಸಮನ್ವೀಯತೇ । ''ಶಬ್ದಾತ್'' ಇತ್ಯತ್ರೇಶಾನಶಬ್ದಃ । ''ಪತ್ಯಾದಿಶಬ್ದೇಭ್ಯಃ'' ಇತ್ಯತ್ರ ಬ್ರಾಹ್ಮಣಶಬ್ದಃ । ನಚ ತತ್ರ ತೇ ಉಪಾತ್ತಾಃ । ತಥಾऽಪ್ಯಧಿಕರಣಾನ್ತರತ್ವಂ ತತ್ರ ಸಮ್ಮತಮಿತ್ಯರ್ಥಃ ।

ದ್ವಿತೀಯೇ ತ್ವಾಹ – **ಸೂಚನಂ ತ್ವಿತಿ** ॥ ಚನ್ದಃಶಬ್ದೇನ ಗಾಯತ್ರೀಶಬ್ದಸೂಚನಾದಿತಿ ಭಾವಃ । ನನು ತತ್ಸೂತ್ರಭಾಷ್ಯೇ ಗಾಯತ್ರೀಪದಪ್ರಯೋಗಮಾತ್ರೇ ಕರ್ತವ್ಯೇ ''ಅಗ್ನಿರ್ಗಾಯತ್ರ್ಯಾದಿಶಬ್ದಾರ್ಥರೂಪोऽಸಾವಿತಿ ಚೇತोऽರ್ಪಣಾರ್ಥಂ ಹಿ ನಿಗದ್ಯತೇ'' ಇತ್ಯಗ್ನಿಪದೋಪಾದಾನಮಯುಕ್ತಮಿತ್ಯತ ಆಹ – **ಅಗ್ನಿಪದಂ ತ್ವಿತಿ** ॥ **ಪ್ರಯೋಜನಮಿತಿ** ॥ ತತ್ತತ್ಪದಪ್ರವೃತ್ತಿನಿಮಿತ್ತಗುಣವತ್ತಯೋಪಾಸನಾರೂಪಪ್ರಯೋಜನಮಿತ್ಯರ್ಥಃ । **'ಅತ್ರ'** ಅಧಿಕರಣೇ ॥ **ಅಗ್ನ್ಯಾದೀತಿ** ॥ ಅಗ್ನ್ಯಾಕಾಶಪ್ರಾಣಭೂಮಾಕ್ಷರಾದಿಪದಸ್ಯೇತ್ಯರ್ಥಃ । **'ಮತಾನ್ತರೇ'** ಪ್ರಾಗುಪನ್ಯಸ್ತಮತದ್ವಯेऽಪೀತ್ಯರ್ಥಃ।

ನನ್ವಧಿಕರಣಾನ್ತರತ್ವೇ ಪೂರ್ವತ್ರಾಕಾಶಪ್ರಾಣಾಧಿಕರಣಯೋರಿವೋತ್ತರತ್ರ ಚ್ಛನ್ದೋऽಧಿಕರಣ ಇವ ಚ ಜ್ಯೋತಿರಧಿಕರಣेऽಭ್ಯಧಿಕಾಶಙ್ಕೋಕ್ತಿಃ ಸ್ಯಾದಿತ್ಯತ ಆಹ – **ಅನುವ್ಯಾಖ್ಯಾನೇತಿ** ॥ **ಉಕ್ತತ್ವಾದಿತಿ** ॥ ವಿವರಿಷ್ಯತೇ ಚೈತದಿತಿ ಭಾವಃ ।

ನನ್ವಧಿಕರಣೋಪಾಧ್ಯುಕ್ತಿಪರ್ಯಾಲೋಚನಯಾ ಚ ಜ್ಯೋತಿರಾದಿಚತುಸ್ಸೂತ್ರ್ಯಾ ಏಕಾಧಿಕರಣ್ಯಂ ಪ್ರತೀಯತೇ । ಅನ್ಯಥಾ 'ಸೂಕ್ತಗತಾಃ' ಇತ್ಯಪ್ಯುಚ್ಯೇತೇತ್ಯತ ಆಹ – **ಅಧಿಭೂತೇತಿ** ॥ ನನು ತರ್ಹಿ ತೇನೈವ ಗತತ್ವಾತ್ಕಿಮರ್ಥಮೇತದಿತ್ಯತ ಆಹ – **ಸೂಕ್ತೇತಿ** ॥ ನನು ತರ್ಹಿ ಪರಸ್ಪರವಿರುದ್ಧತ್ವಾತ್ ಮತತ್ರಯಸ್ಯಾಪಿ ಪ್ರಾಮಾಣ್ಯಾದ್ವಸ್ತುನಿ ವಿಕಲ್ಪಸ್ಯಾದಿತ್ಯತ ಆಹ – **ಇದಞ್ಚೇತಿ** ॥ **ಏವಮಿತಿ** ॥ ''**ಕಾರಣತ್ವೇನ ಚಾಕಾಶಾದಿಷು**'' ಇತ್ಯಾದಾವಿತ್ಯರ್ಥಃ । ತಥಾಚ ತತ್ರ ವಕ್ಷ್ಯಾಮಃ ।

ವಿವರಣೆ - ತತ್ವಪ್ರದೀಪಕಾರರ ಹಾಗೂ ಸನ್ನ್ಯಾಯರತ್ನಾವಲೀಕಾರರ ಮತವನ್ನು ಇಲ್ಲಿಯ ತನಕ ಸಮರ್ಥಿಸಿದ್ದಾಯಿತು. ಈಗ ಟೀಕಾರಾಯರ ಮತವನ್ನೂ ಕೂಡ 'ತೃತೀಯೇऽಪಿ' ಇತ್ಯಾದಿ ಗ್ರಂಥದಿಂದ ಸಮರ್ಥಿಸುತ್ತಿದ್ದಾರೆ.

ಟೀಕಾರಾಯರ ಮತದ ಮೇಲೆ ಹಿಂದೆ ಹೀಗೆ ಆಕ್ಷೇಪಿಸಲಾಗಿತ್ತು -- 'ಛಂದೋಭಿಧಾನಾತ್' ಇತ್ಯಾದಿ ಮೂರು ಸೂತ್ರಗಳಲ್ಲಿ ಸಮನ್ವಯ ಮಾಡಬೇಕಾದ ಶಬ್ದಗಳನ್ನೇ ಹೇಳಿಲ್ಲ. ಹಾಗಾಗಿ ಗಾಯತ್ರ್ಯಧಿಕರಣವು ಪ್ರತ್ಯೇಕವಲ್ಲ' ಎಂದು. ಈ ಆಕ್ಷೇಪದ ಅಭಿಪ್ರಾಯವೇನು? ಸಮನ್ವಯ ಮಾಡಬೇಕಾದ ಶಬ್ದವನ್ನು ನೇರವಾಗಿ ಉಲ್ಲೇಖಿಸಿಲ್ಲವೆಂದೋ? ಅಥವಾ ಸೂಚನೆಯನ್ನೂ ಮಾಡಿಲ್ಲವೆಂದೋ?

ಪ್ರಥಮಪಕ್ಷದಲ್ಲಿ ವ್ಯಭಿಚಾರದೋಷವನ್ನು 'ಕಂಪನಾತ್' ಎಂಬ ವಾಕ್ಯದಿಂದ ಹೇಳಿದ್ದಾರೆ. ಕಂಪನಾತ್ ಎಂಬ ಸೂತ್ರದಲ್ಲಿ 'ಮಹದ್ಭಯಂ ವಜ್ರಮುದ್ಯತಮ್' ಎಂಬ ಶ್ರುತಿಯಲ್ಲಿರುವ ವಜ್ರಶಬ್ದವನ್ನು ಸಮನ್ವಯ ಮಾಡಿದ್ದಾರೆ. 'ಶಬ್ದಾದೇವ ಪ್ರಮಿತಃ' ಎಂಬ ಸೂತ್ರದಲ್ಲಿ ಈಶಾನಶಬ್ದವನ್ನು ಸಮನ್ವಯ ಮಾಡಿದ್ದಾರೆ. 'ಪತ್ಯಾದಿಶಬ್ದೇಭ್ಯಃ' ಎಂಬ ಸೂತ್ರದಲ್ಲಿ ಬ್ರಾಹ್ಮಣಶಬ್ದವನ್ನು ಸಮನ್ವಯ ಮಾಡಿದ್ದಾರೆ. ಸಮನ್ವಯ ಮಾಡುತ್ತಿರುವ ಶಬ್ದಗಳ ಉಲ್ಲೇಖವು ಈ ಯಾವ ಸೂತ್ರಗಳಲ್ಲಿಯೂ ಕಾಣಿಸುತ್ತಿಲ್ಲ. ಆದರೂ ಕೂಡ ಇವುಗಳನ್ನೆಲ್ಲಾ ಪ್ರತ್ಯೇಕ ಅಧಿಕರಣವೆಂದು ಪರಿಗಣಿಸಿದ್ದಾರೆ. ಇದರಂತೆ ಪ್ರಕೃತದಲ್ಲಿಯೂ ಗಾಯತ್ರೀ-ಶಬ್ದವನ್ನು ಪ್ರತ್ಯೇಕವಾಗಿ ಉಲ್ಲೇಖಿಸಬೇಕಿಲ್ಲ; ಬೇರೆ ಅಧಿಕರಣವಾಗಬಹುದು. ಸೂಚನೆಯನ್ನೂ ಮಾಡಿಲ್ಲವೆಂಬ ಎರಡನೆಯ ಪಕ್ಷಕ್ಕೆ 'ಸೂಚನಂ ತು' ಎಂಬ ವಾಕ್ಯದಿಂದ ಉತ್ತರಿಸಿದ್ದಾರೆ. ಛಂದಸ್ ಶಬ್ದದಿಂದ ಗಾಯತ್ರೀಶಬ್ದವನ್ನು ಸೂಚಿಸಿದ್ದಾರೆಂದು ಅಭಿಪ್ರಾಯ.

ಗಾಯತ್ರ್ಯಧಿಕರಣವು ಪ್ರತ್ಯೇಕವಾದಲ್ಲಿ ಆಲಿರುವ ಸೂತ್ರಭಾಷ್ಯವು ಗಾಯತ್ರೀಪದವನ್ನಷ್ಟೇ ಪ್ರಯೋಗಿಸಬೇಕು. ಆದರೆ 'ಅಗ್ನಿಗಾಯತ್ರ್ಯಾದಿಶಬ್ದಾರ್ಥರೂಪೋऽಸಾವಿತಿ ಚೇತೋರ್ಪಣಾರ್ಥಂ ಹಿ ನಿಗದ್ಯತೇ' ಎಂದು ಅಗ್ನಿಪದವನ್ನು ಪ್ರಯೋಗಿಸಿದೆ. ಅಗ್ನಿಪದವು ಹಿಂದಿನ ಅಧಿಕರಣದಿಂದಲೇ ಸಮನ್ವಯ ಹೊಂದಿರುವಾಗ ಪುನಃ ಅದನ್ನು ಉಲ್ಲೇಖಿಸುವ ಅಗತ್ಯವೇನಿತ್ತು? ಈ ಆಕ್ಷೇಪವನ್ನು 'ಅಗ್ನಿಪದಂ ತು' ಎಂಬ ಗ್ರಂಥವು ಉತ್ತರಿಸಿದೆ.

ಗಾಯತ್ರ್ಯಧಿಕರಣಕ್ಕಿಂತ ಜ್ಯೋತಿರಧಿಕರಣವು ಪ್ರತ್ಯೇಕವಾದಲ್ಲಿ ಆಕಾಶಾಧಿಕರಣ ಪ್ರಾಣಾಧಿಕರಣ-ಗಳಂತೆ ಅಭ್ಯಧಿಕಾಶಂಕೆಯನ್ನು ತೋರಿಸಬೇಕು. ಮುಂದಿನ ಗಾಯತ್ರ್ಯಧಿಕರಣದಲ್ಲಿಯೂ ಅಭ್ಯಧಿಕಾಶಂಕೆ-ಯನ್ನು ತೋರಿಸಿದ್ದಾರೆ. ಹೀಗಿರುವಾಗ ಜ್ಯೋತಿರಧಿಕರಣದಲ್ಲಿ ಮಾತ್ರ ಅಭ್ಯಧಿಕಾಶಂಕೆಯನ್ನು ತೋರಿಸದಿರಲು ಏನು ಕಾರಣ? ಎಂಬ ಶಂಕೆಗೆ 'ಆನುವ್ಯಾಖ್ಯಾನೇ' ಎಂಬ ಗ್ರಂಥದಿಂದ ಉತ್ತರಿಸಿದ್ದಾರೆ. ಅಭ್ಯಧಿಕಾಶಂಕೆಯನ್ನು ಭಾಷ್ಯದಲ್ಲಿ ತೋರಿಸಿದ್ದರಿಂದ ಅನುವ್ಯಾಖ್ಯಾನದಲ್ಲಿ ಪುನಃ ತೋರಿಸಿಲ್ಲ. ಭಾಷ್ಯದಲ್ಲಿ ತೋರಿಸಿರುವ ಅಭ್ಯಧಿಕಾಶಂಕೆಯ ಕ್ರಮವನ್ನು ಮುಂದೆ ವಿವರಿಸುತ್ತೇವೆ.

ಅಧಿಕರಣಗಳ ಉಪಾಧಿಯನ್ನು ಪರ್ಯಾಲೋಚನೆ ಮಾಡಿದಾಗ ಜ್ಯೋತಿ ಮೊದಲಾದ ನಾಲ್ಕೂ ಸೂತ್ರಗಳು ಒಂದೇ ಅಧಿಕರಣವೆಂದು ತೋರುತ್ತದೆ. ಇಲ್ಲದಿದ್ದರೆ ಅಧಿಕರಣಗಳ ಉಪಾಧಿಯನ್ನು

ಉಲ್ಲೇಖಿಸುವಾಗ ನ್ಯಾಯವಿವರಣದಲ್ಲಿ ಸೂಕ್ತಗತಾಃ ಎಂದು ಹೇಳಬೇಕಿತ್ತಲ್ಲವೇ? ಎಂಬ ಪ್ರಶ್ನೆಗೆ 'ಅಧಿಭೂತ' ಎಂಬ ವಾಕ್ಯವು ಉತ್ತರಿಸುತ್ತಿದೆ.

ಆಕಾಶಾಧಿಕರಣಗಳ ಉಪಾಧಿಯನ್ನು ಈ ಜ್ಯೋತಿರಧಿಕರಣದಲ್ಲಿ ಇಟ್ಟುಕೊಳ್ಳುವುದಾದರೆ ಇದರ ಸಮನ್ವಯವು ಆಕಾಶಾದ್ಯಧಿಕರಣಗಳಿಂದಲೇ ಸಿದ್ಧವಾಗುತ್ತದೆ. ಪುನಃ ಈ ಅಧಿಕರಣವನ್ನು ಪ್ರತ್ಯೇಕವಾಗಿ ರಚಿಸಬೇಕಾಗಿಲ್ಲ ಎಂಬ ಪ್ರಶ್ನೆಗೆ 'ಸೂಕ್ತವಿಷಯತ್ವಮೇವ' ಎಂಬ ಗ್ರಂಥವು ವಿವರಿಸಿದೆ.

ಮೇಲೆ ಹೇಳಿದ ಮೂರು ಮತಗಳು ಪರಸ್ಪರ ವಿರುದ್ಧವಾಗಿವೆ. ಗ್ರಂಥಕಾರರು ಸಮರ್ಥಿಸಿದಂತೆ ಪ್ರಮಾಣವೂ ಆಗಿವೆ. ಹಾಗಾದರೆ ಪ್ರತಿಪಾದ್ಯವಾದ ವಸ್ತುವಿನಲ್ಲಿ ವಿಕಲ್ಪವುಂಟಾಗಬೇಕಲ್ಲವೇ? ಎಂಬ ಪ್ರಶ್ನೆಗೆ 'ಇದಂ ಚ' ಎಂಬ ಗ್ರಂಥದಿಂದ ಉತ್ತರಿಸಿದ್ದಾರೆ.

**ಗುರುರಾಜೀಯಮ್** – ನನು ತೃತೀಯಂ ಮತಮನುಪಪನ್ನಮ್ । ಜ್ಯೋತಿಸ್ಸೂತ್ರಂ ಯದಿ ಪೃಥಗಧಿಕರಣಂ ಸ್ಯಾತ್ತದಾ ಛಂದಸ್ಸೂತ್ರೇ ಸಮನ್ವೇತವ್ಯಶಬ್ದೋ ವಕ್ತವ್ಯಸ್ಸ್ಯಾತ್ । ತಥಾಚ ತದನುಕ್ತಿರ್ದೋಷಃ । ಏವಂ ಛಂದಸ್ಸೂತ್ರಭಾಷ್ಯೇ ಅಗ್ನಿಗಾಯತ್ರ್ಯಾದೀತ್ಯತ್ರಾಗ್ನಿಪದಮನುಪಪನ್ನಮ್ । ಜ್ಯೋತಿಃಸೂತ್ರೇ ಆಕಾಶಾದಿಸೂತ್ರಾದಾವಿವಾನುವ್ಯಾಖ್ಯಾನನ್ಯಾಯವಿವರಣಯೋರಧಿಕಾಶಙ್ಕಾ ವಕ್ತವ್ಯಾ । ತಥಾಚ ತದನುಕ್ತಿರ್ದೋಷಃ । ತಥಾ ಜ್ಯೋತಿರಧಿಕರಣೇ ಪೃಥಗುಪಾಧ್ಯನುಕ್ತಿಶ್ಚಾಯುಕ್ತಾ । ತದ್ಬಲಾಚ್ಚತುಸ್ಸೂತ್ರ್ಯಾ ಏಕಾಧಿಕರಣತ್ವಮೇವಾವಗಮ್ಯತ ಇತಿ ತದ್ವಿರುದ್ಧಂ ಟೀಕಾಕಾರಮತಮನುಪಪನ್ನಮೇವೇತ್ಯತಸ್ತತ್ರಾನುಪಪತ್ತೀಃ ಪರಿಹರತಿ – **ತೃತೀಯ ಇತಿ ॥ ಅನ್ಯಥಾ ಮತಾನ್ತರೇಪೀತಿ ॥** ಏತಚ್ಛಾಖ್ಯೋಪಾತ್ತಶಬ್ದಸ್ಯಾತ್ರ ಸಮನ್ವೇತವ್ಯತ್ವನಿಯಮ ಇತ್ಯರ್ಥಃ । ತತ್ರಾದಿಪದೇನಾಪಿ ಸಮನ್ವೇತವ್ಯಶಬ್ದಸಮಕಕ್ಷತಯಾ ಸಾಕ್ಷಾದಸಮನ್ವೇತವ್ಯವಾಕ್ಪೃಥಿವ್ಯಾದಿಶಬ್ದೋಪಾದಾನಸ್ಯಾಸ್ವಾರಸ್ಯೇನ ಮುಖ್ಯತಃ ಸಮನ್ವೇತವ್ಯಪೂರ್ವೋತ್ತರಾಧಿಕರಣಸ್ಥಶಬ್ದಾನಾಮೇವ ಗ್ರಹಣಸ್ಯಾವಶ್ಯಕತ್ವಾದಿತ್ಯರ್ಥಃ ।

ನನು ಯಥಾऽऽಕಾಶಾಧಿಕರಣವದಧಿಭೂತಗತಶಬ್ದವಿಷಯತ್ವಂ ವಾऽನ್ತರಾಧಿಕರಣವದಧಿದೈವಗತಶಬ್ದವಿಷಯತ್ವಂ ವಾ ಯದ್ಯಸ್ಯಾಭ್ಯುಪಗಮ್ಯತೇ ತರ್ಹಿ ತದಧಿಕರಣದ್ವಯಶೇಷತ್ವಾಪತ್ತ್ಯಾऽಧಿಕರಣಾನ್ತರತ್ವಮನುಪಪನ್ನಮಿತ್ಯತ ಆಹ – **ಸೂಕ್ತೇತಿ ॥** ನನು ಯದಿ ಮತತ್ರಯಮಪಿ ಪ್ರಾಮಾಣಿಕಂ ಸ್ಯಾತ್ತರ್ಹಿ ವಸ್ತುನೋ ದ್ವೈರೂಪ್ಯಂ ಸ್ಯಾತ್ । ತಥಾಚ ಕಥಂ ಮತತ್ರಯಮಪಿ ಪ್ರಾಮಾಣಿಕಮಿತ್ಯುಚ್ಯತ ಇತ್ಯತ ಆಹ – **ಇದಞ್ಚೇತಿ ॥**

* * * * *

## ಸಾರ

'ಜ್ಯೋತಿಶ್ಚರಣಾಭಿಧಾನಾತ್' ಎಂಬ ಒಂದೇ ಸೂತ್ರ ಪ್ರತ್ಯೇಕ ಅಧಿಕರಣವೆಂದು ಟೀಕಾರಾಯರ ಪಕ್ಷ. ಹಾಗಾದರೆ ಮುಂದಿನ ಗಾಯತ್ಯಧಿಕರಣದಲ್ಲಿ, ಸಮನ್ವಯ ಮಾಡಬೇಕಾದ ಶಬ್ದವನ್ನು ಉಲ್ಲೇಖಿಸಿಲ್ಲವಲ್ಲ? ಎಂಬ ಗೊಂದಲಕ್ಕೆ ಆವಕಾಶವಿಲ್ಲ. ಸಮನ್ವಯ ಮಾಡಬೇಕಾದ ಶಬ್ದವನ್ನು ಪ್ರತಿಯೊಂದು ಅಧಿಕರಣಗಳಲ್ಲಿ ಸೂತ್ರಕಾರರು ಉಲ್ಲೇಖಿಸುತ್ತಾರೆಂಬ ನಿಯಮವಿಲ್ಲ. ಕಂಪನಾಧಿಕರಣದಲ್ಲಿ ಸಮನ್ವಯ ಮಾಡುವ ವಜ್ರಶಬ್ದವನ್ನು ಉಲ್ಲೇಖಿಸಿದ್ದು ಕಾಣುತ್ತಿಲ್ಲ. ಆದರೆ ವಜ್ರಶಬ್ದದ ಅರ್ಥವನ್ನು ಕಂಪನಶಬ್ದದಿಂದ ಸೂಚಿಸಿದ್ದಾರೆ. ಅದರಂತೆ ಇಲ್ಲಿಯೂ 'ಛಂದೋಭಿಧಾನಾತ್' ಎಂಬುದರಿಂದ ಗಾಯತ್ರೀಶಬ್ದದ ಸಮನ್ವಯವನ್ನು ಸೂಚಿಸಿದ್ದಾರೆ.

ಇಲ್ಲಿ ಬರುವ ಮತ್ತೊಂದು ಪ್ರಶ್ನೆ – 'ಛಂದೋಭಿಧಾನಾತ್' ಇತ್ಯಾದಿ ಮೂರು ಸೂತ್ರಗಳು ಗಾಯತ್ರೀಶಬ್ದದ ಸಮನ್ವಯಕ್ಕೋಸ್ಕರ ಹೊರಟದ್ದೇ ಆದರೆ ಭಾಷ್ಯಕಾರರು ಅಗ್ನಿಗಾಯತ್ಯಾದಿ ಎಂದು ಅಗ್ನಿಶಬ್ದದ ಸಮನ್ವಯವನ್ನು ಹೇಳಿದ್ದು ತಪ್ಪಾಗುತ್ತದಲ್ಲವೇ? ಎಂದು.

ಭಾಷ್ಯಕಾರರ ಮಾತಿನಲ್ಲಿರುವ ಸೂಕ್ಷ್ಮವನ್ನು ಗಮನಿಸಬೇಕು. ಅಗ್ನಿಶಬ್ದದ ಸಮನ್ವಯಕ್ಕೋಸ್ಕರ ಅಗ್ನಿಶಬ್ದವನ್ನು ಉಲ್ಲೇಖಿಸಿಲ್ಲ ಹೊರತಾಗಿ ಅನ್ಯತ್ರಪ್ರಸಿದ್ಧವಾದ ಗಾಯತ್ರೀಶಬ್ದವನ್ನು ಸಮನ್ವಯ ಮಾಡಿದ್ದರಿಂದ ವಿಷ್ಣುವನ್ನು ಗಾಯತ್ರೀರೂಪದಿಂದ ಉಪಾಸನೆ ಮಾಡಬೇಕು. ಇದರಂತೆ ಹಿಂದಿನ ಮುಂದಿನ ಅಧಿಕರಣಗಳಲ್ಲಿ ಮಾಡಿರುವ ಆಯಾಯ ಶಬ್ದಗಳ ಸಮನ್ವಯದ ಉದ್ದೇಶ ಉಪಾಸನೆಗೋಸ್ಕರ. ಇದನ್ನು ತಿಳಿಸುವುದಕ್ಕಾಗಿ ಹಿಂದಿನ ಅಧಿಕರಣದ ಅಗ್ನಿಶಬ್ದವನ್ನು ಉಪಲಕ್ಷಕವಾಗಿ ಉಲ್ಲೇಖಿಸಿದ್ದಾರೆ. ತತ್ವಪ್ರದೀಪಕಾರರು ಹಾಗೂ ಸನ್ಯಾಯರತ್ನಾವಲೀಕಾರರೂ ಕೂಡ ಅಗ್ನಿಗಾಯತ್ಯಾದಿ ಎಂಬಲ್ಲಿರುವ ಆದಿ ಪದದ ಸಾರ್ಥಕ್ಯವನ್ನು ಹೀಗೆಯೇ ಹೇಳಬೇಕಾಗುತ್ತದೆ.

ವಸ್ತುತಃ ಅನುವ್ಯಾಖ್ಯಾನ ನ್ಯಾಯವಿವರಣಗಳಲ್ಲಿ ಜ್ಯೋತಿರಧಿಕರಣಕ್ಕೆ ಪ್ರತ್ಯೇಕವಾದ ಅಧಿಕಾಶಂಕೆಯನ್ನು ತೋರಿಸಿಲ್ಲ. 'ಅಗ್ನಿಸೂಕ್ತಸ್ಥತ್ವಾತ್' ಎಂಬ ಭಾಷ್ಯದಲ್ಲಿಯೇ ಅಧಿಕಾಶಂಕೆಯನ್ನು ತೋರಿಸಿದ್ದರಿಂದ ಪುನಃ ಹೇಳಬೇಕಾಗಿಲ್ಲವೆಂದಷ್ಟೇ ಅಭಿಪ್ರಾಯ ಹೊರತು ಪ್ರತ್ಯೇಕ ಅಧಿಕರಣವೆಂದಲ್ಲ. ಪ್ರತಿಯೊಂದು ಅಧಿಕರಣಗಳ ಉಪಾಧಿಯನ್ನು ಹೇಳುವ ನ್ಯಾಯವಿವರಣೆಯ ಅಭಿಪ್ರಾಯವೂ ಇದೇ ಆಗಿದೆ. -- ಆಕಾಶಾಧಿಕರಣದಂತೆ ಅಧಿಭೂತಶಬ್ದವಿಷಯತ್ವ ಅಥವಾ ಆಂತರಧಿಕರಣದಂತೆ ಅಧಿದೈವಗತಶಬ್ದವಿಷಯತ್ವವು ಉಪಾಧಿಯಾಗುತ್ತದೆಂದು ಅಭಿಪ್ರಾಯ. ಸೂಕ್ತವಿಷಯತ್ವವೆಂಬುದು ಅಧಿಕರಣವೈಲಕ್ಷಣ್ಯಕ್ಕೆ ಕಾರಣವಾಗಿದೆ. ಈ ಮೂರು ಮತಗಳೂ ಸೂತ್ರದ ಯೋಜನೆಯಲ್ಲಷ್ಟೇ ಚರ್ಚಿಸಿವೆ. ಪ್ರಮೇಯವಿಚಾರದಲ್ಲಿ ಚರ್ಚಿಸಿಲ್ಲ. ಮೂವರೂ ಮಹಾಜ್ಞಾನಿಗಳಾದ್ದರಿಂದ ಯಾವ ಪಕ್ಷವನ್ನೂ ಕಡೆಗಾಣಿಸಬಾರದು.

ಸಂಗತಿ

### तात्पर्यचन्द्रिका

**तत्र ज्योतिरधिकरणे सूक्तस्था ज्योतिरादिशब्दा उदाहरणम् । प्राणाधिकरणन्यायागोचरत्वप्रदर्शनेन पूर्वपक्षोत्थानादनन्तरसङ्गतिः ।**

ಅನುವಾದ - ಅಗ್ನಿಸೂಕ್ತದಲ್ಲಿರುವ ಜ್ಯೋತಿರಾದಿಶಬ್ದಗಳು ಜ್ಯೋತಿರಧಿಕರಣದ ವಿಷಯವಾಗಿವೆ. ಪ್ರಾಣಾಧಿಕರಣನ್ಯಾಯವನ್ನು ಆಕ್ಷೇಪಿಸಿ ಜ್ಯೋತಿರಧಿಕರಣದ ಪೂರ್ವಪಕ್ಷವು ಹೊರಟಿದ್ದರಿಂದ ಅನಂತರಸಂಗತಿಯನ್ನು(ಪ್ರತ್ಯುದಾಹರಣಸಂಗತಿಯನ್ನು) ತಿಳಿಯಬೇಕು.

**प्रकाशः** – एवं टीकारीत्या अधिकरणभेदे समर्थिते सति । अन्यत्रानुक्तेः । कस्तर्ह्यस्य विषयोपाधिः, ज्योतिश्शब्दस्य देवतावाचित्वे जडवाचित्वे वाऽन्तराद्यधिकरणन्यायेन गतत्वादित्यत आह – **तत्रेति** ॥ सूक्तगतत्वं विषयतावच्छेदकम् । ज्योतिश्शब्दस्य च वायुवाचिप्राणशब्दसमन्वयेन तज्जन्याग्निवाचित्वेन बुद्धौ सन्निधानादितरोपलक्षकत्वेनोपादानमिति भावः ।

नन्वस्य टीकारीत्या शास्त्राध्यायसङ्गतत्वेऽपि नात्र पादे सङ्गतिः । तथा हि – ज्योतिश्शब्दस्य भूतपरत्वे आकाशाधिकरणन्यायेन, देवतापरत्वेऽन्तरधिकरणन्यायेन, विष्णौ प्रयोगात् ''आकाशोऽर्थान्तरत्वादि'' इत्यादावाकाशशब्दस्येव पूर्वोक्तन्यत्र-प्रसिद्धिभ्यामुभयत्रप्रसिद्धतापत्त्या नात्र समन्वयो युक्तः ।

नच पादान्त्यप्राणाधिकरणे प्राणशब्दस्य पूर्वं समन्वयेऽपि लोकप्रसिद्ध्याऽन्यत्रप्रसिद्धत्ववदिहापि स्यादिति वाच्यम्, तत्र पूर्वपक्षे पूर्वोक्तसमन्वयस्याक्षेपेण तथात्वसम्भवेऽपीह पूर्वोक्ताक्षेपाभावेन तदसम्भवात् ।

नच पूर्वं ज्योतिश्शब्दपर्यायाग्निशब्दस्यैव समन्वयो न ज्योतिश्शब्दस्येति वाच्यम्, 'अत्ता' इत्यधिकरणटीकायामदितिश्रुतेः सावकाशत्वात्तत्ययोगात् । सवित्रादिशब्दसमन्वयमात्रेण तत्पर्यायस्याऽऽदित्यशब्दस्य ''सर्वत्र'' इत्यधिकरणे सावकाशताया वक्ष्यमाणत्वाच्च । अत एवाग्रे वक्ष्यति 'सावकाशाग्निश्रुत्या सावकाश-विष्णुलिङ्गबाधात्' इतीति चेत्सत्यम्, लोकतोऽन्यत्रप्रसिद्धप्रकरणेन ज्योतिर्नाम्नोप्यन्यत्रप्रसिद्धत्वात् । उक्तं हि –

**श्रुत्यादितो लोकतो वाऽपीतरेषु प्रसिद्धता ॥**

इति । न चैवं निरवकाशप्रकरणवशेन अन्यत्रैवप्रसिद्धता स्यात्,

**बलवत् श्रुतिलिङ्गाद्यैरन्येष्वेव प्रसिद्धता ।**

इत्युक्तेरिति वाच्यम्, नाम्नो विष्णावपि सावकाशत्वात् । प्रागुक्तदिशा तत्र विवक्षितबलवत्त्वस्येहाभावाच्च । 'लोकतः' इति टीका तु प्राक् साक्षादसमन्वितत्वात् समन्वितत्वेऽप्याप्याततो लोकप्रसिद्ध्या वा, प्रकरणस्य लोकतः प्रसिद्ध्या परम्परया वा, पूर्वत्रेवात्रान्यप्रसिद्धिबाधकनिरवकाशलिङ्गाभावादिति वा नेया । न चैवं, येन श्रुतेरन्यत्रप्रसिद्धता तदेव प्रागसमन्वितं प्रकरणं "ईक्षतिकर्म" इत्यत्र स्थानमिवेह समन्वीयताम् । पादसङ्गतिस्तु "अन्तः" इत्यादेरिव फलतस्सेत्स्यतीति वाच्यम्, प्राक् नाम्नः समन्वितत्वेन तस्यैवेह बुद्धिस्थत्वात् । नच प्रागपि नामद्वारा तत्तन्नामयुक्तं प्रकरणमर्थात्समन्वितमिति वाच्यम्, नाम्न एव साक्षात् समन्वितत्वेनेहापि धीस्थत्वात् । साक्षादर्थनिष्ठनामद्वारेणैव प्रकरणसमन्वयस्योचितत्वाच्च। स्थानस्यापि सन्नामद्वारेणैव समन्वेष्यमाणत्वाच्च ।

यद्वा – न पूर्वोक्तन्यत्रप्रसिद्धिभ्यामुभयत्रप्रसिद्धता, किन्तु श्रुतिलिङ्गादितौल्येन वा प्रवृत्तिनिमित्तसाम्येन वा सा । न चात्र तथा, येनासङ्गतिः । "आकाशोऽर्थान्तरत्वादि" इत्यत्राकाशशब्दस्य उभयत्रप्रसिद्धत्वं तु पादान्त्यप्राणाधिकरणेऽन्यथैव वक्ष्यत इति । ननु भाष्यरीत्या सङ्गत्याश्रयणे आनन्दमयाधिकरणानन्तर्यप्राप्तेरत्र निवेशो न युक्त इत्यतः पूर्वसङ्गतिमाह – **प्राणेति** ॥ एतच्चाग्रे स्पष्टमिति भावः ॥ **सङ्गतिरिति** ॥ प्रत्युदाहरणरूपेत्यर्थः । उक्तञ्च –

**पूर्वन्यायात्ययो यत्र प्रत्युदाहरणा तु सा ।**

इति । "**यो वेद निहितं गुहायामित्युक्तम्**" इति भाष्यं तु, यद्यग्निसूक्तगतं ज्योतिर्विष्णोरन्यत् तर्हि तन्निष्ठगुहानिहितत्वयुक्तानन्दमयोऽप्यन्यः प्रसज्येतेति पूर्वपक्षे आनन्दमयाधिकरणाक्षेपात्, सिद्धान्ते च तत्समाधानात्सफलोऽयं विचार इति प्रयोजनमात्रपरमिति भावः । एतच्चान्तरधिकरणप्रयोजनसमर्थनरीत्या समर्थनीयम् ।

नन्वेवं यदि ज्योतिर्विष्णोरन्यत्, तर्हि तस्यैव गुहानिहितत्वात् प्रागुक्तान्तस्थत्वमपि तस्यै-वेत्यन्तरधिकरणमप्याक्षेसुं शक्यते । एवञ्च पूर्वोक्ताक्षेपेणोभयत्रप्रसिद्धत्वशङ्काऽपि नोदेष्यति ॥ नच गुहानिहितत्वमन्यदन्तस्थत्वं चान्यदिति वाच्यम्, तस्यापि **'निहितं गुहासु'** इति गुहानिहितत्वरूपत्वादिति तत्रैवोक्तत्वात् ।

ज्योतिषो गुहानिहितत्वात् तस्य च ''यो वेद निहितम्'' इति मन्त्रवर्णे श्रवणात् मान्त्रवर्णिकस्यैवानन्दमयत्वात्साऽपि ज्योतिरित्याक्षेपादस्याक्षेपस्य ऋजुत्वादिति चेन्न,

पूर्वत्र तदधिकरणस्यैवाक्षेपेणेहापि तथात्वस्यैवौचित्यात्, व्यवहिताक्षेपस्या-विशेषात् अन्तर्नयाक्षेपस्याप्यानन्दमयनयाक्षेपपर्यन्तत्वस्यावश्यकत्वाच्च । अन्यथा जिज्ञासाक्षेपपर्यवसानायोगात् । साक्षादेव तदाक्षेपसम्भवे तद्वारा तदाक्षेपस्य वक्तव्यत्वाच्च । न चैवं मनश्चक्षुराद्यगोचरत्वरूपादृश्यत्वश्रवणात् तद्युक्तानन्दमयोऽपि ज्योतिरित्यस्य ऋजुत्वात् तथैवाक्षिप्यतामिति वाच्यम्, अनेकसमभिव्याहारलभ्या-दृश्यत्वमुखाक्षेपापेक्षया एकवाक्यलभ्यसन्निहितगुहास्थत्वमुखेनाक्षेपस्यैव ऋजुत्वा-दिति ॥

ವಿವರಣೆ - ಇಲ್ಲಿಯ ತನಕ ಟೀಕೆಯ ಪ್ರಕಾರ ಜ್ಯೋತಿರಧಿಕರಣವನ್ನು ಪ್ರತ್ಯೇಕವೆಂದು ಸಮರ್ಥಿಸಿದ್ದಾಯಿತು. ಪ್ರಕೃತ ಹಿಂದಿನ ಅಧಿಕರಣದಿಂದ ಜ್ಯೋತಿರಧಿಕರಣವು ಗತಾರ್ಥವಾಗಿಲ್ಲವೆಂದು ಸಮರ್ಥಿಸುತ್ತಿದ್ದಾರೆ.

ಜ್ಯೋತಿರಧಿಕರಣವನ್ನು ಪ್ರತ್ಯೇಕವೆಂದು ಯಾರೂ ಹೇಳಿಲ್ಲ. ಪ್ರತ್ಯೇಕವಾದಲ್ಲಿ ಅಧಿಕರಣದ ವಿಷಯೋಪಾಧಿಯನ್ನು ಹೇಳಬೇಕು. ದೇವತಾವಾಚಿತ್ವವನ್ನು ಜಡವಾಚಿತ್ವವನ್ನು ವಿಷಯೋಪಾಧಿಯೆಂದು ಹೇಳಿದರೆ ಅಂತರಧಿಕರಣ ಮತ್ತು ಆಕಾಶಾಧಿಕರಣಗಳಿಂದ ಗತಾರ್ಥವಾಗುತ್ತದಲ್ಲವೇ? ಎಂಬ ಶಂಕೆಗೆ ಗ್ರಂಥಕಾರರು 'तत्र' ಇತ್ಯಾದಿ ವಾಕ್ಯದಿಂದ ಉತ್ತರಿಸುತ್ತಿದ್ದಾರೆ. ಸೂಕ್ತಗತತ್ವವೇ ಈ ಅಧಿಕರಣದ ಉಪಾಧಿ.

ಇಂದ್ರಸೂಕ್ತ, ಅಗ್ನಿಸೂಕ್ತಗಳೆಂದು ಪ್ರಸಿದ್ಧವಾದ ಸೂಕ್ತಗಳಲ್ಲಿರುವ ಇಂದ್ರ, ಚಂದ್ರ, ಅಗ್ನಿ ಮೊದಲಾದ ದೇವತಾವಾಚಕವಾದ ಶಬ್ದಗಳನ್ನು ಈ ಅಧಿಕರಣದಲ್ಲಿ ಸಮನ್ವಯ ಮಾಡುತ್ತಿದ್ದಾರೆ. ಹಾಗಾದರೆ ಜ್ಯೋತಿಃಶಬ್ದವನ್ನೇ ಏಕೆ ಸಮರ್ಥಿಸಬೇಕು? ಎಂದು ಪ್ರಶ್ನಿಸಬಾರದು. ಆಕಾಶದಿಂದ ವಾಯು, ವಾಯು-ವಿನಿಂದ ಅಗ್ನಿ ಈ ಕ್ರಮದಲ್ಲಿ ಜಗತ್ತಿನ ಸೃಷ್ಟಿಯಾಗುತ್ತದೆ. ಇದನ್ನು ಅನುಸರಿಸಿ ಆಕಾಶಾಧಿಕರಣದಲ್ಲಿ ಆಕಾಶಶಬ್ದವನ್ನು ಸಮನ್ವಯ ಮಾಡಿ ಪ್ರಾಣಾಧಿಕರಣದಲ್ಲಿ ವಾಯುಶಬ್ದವನ್ನು ಸಮನ್ವಯ ಮಾಡಿದ ಮೇಲೆ ಅನಂತರ ಮುಂದೆ ಅಗ್ನಿವಾಚಕಶಬ್ದಗಳೇ ಬುದ್ಧಿಯಲ್ಲಿ ಉಪಸ್ಥಿತವಾಗುತ್ತವೆ. ಆದ್ದರಿಂದ ಬೇರೆ ಶಬ್ದಗಳನ್ನು ಸಮನ್ವಯ ಮಾಡದೇ ಅಗ್ನಿವಾಚಕವಾದ ಜ್ಯೋತಿಃಶಬ್ದವನ್ನೇ ಸಮನ್ವಯ ಮಾಡಿದ್ದಾರೆ. ಇದರಿಂದ ಬೇರೆ ಶಬ್ದಗಳನ್ನು ಉಪಲಕ್ಷಣವಾಗಿ ಸ್ವೀಕರಿಸಬೇಕು.

ಆಕ್ಷೇಪ - ಜ್ಯೋತಿರಧಿಕರಣದಲ್ಲಿ ಅಗ್ನಿವಾಚಕಶಬ್ದವನ್ನು ಬ್ರಹ್ಮಪರವೆಂದು ಹೇಳುತ್ತಿರುವುದರಿಂದ ಶಾಸ್ತ್ರಸಂಗತಿಯನ್ನು, ಸಮನ್ವಯ ಮಾಡುತ್ತಿರುವುದರಿಂದ ಅಧ್ಯಾಯಸಂಗತಿಯನ್ನು ಟೀಕೆಯ ಪ್ರಕಾರ

ಹೇಳಬಹುದು. ಆದರೆ ಪಾದಸಂಗತಿಯನ್ನು ಹೇಳಲಾಗದು. ಅದು ಹೀಗೆ -- 'ಜ್ಯೋತಿಃಶಬ್ದವು ಅಗ್ನಿಯೆಂಬ ಭೂತಪದಾರ್ಥವನ್ನು ಹೇಳುತ್ತದೋ? ಅಥವಾ ಅಗ್ನಿದೇವತೆಯನ್ನು ಹೇಳುತ್ತದೋ? ಭೂತಪರವಾದಲ್ಲಿ ಆಕಾಶಾಧಿಕರಣನ್ಯಾಯದಂತೆ ವಿಷ್ಣುವಿನಲ್ಲಿ ಸಮನ್ವಯವಾಗಿದೆ. ದೇವತಾಪರವಾದರೆ ಅಂತರಧಿಕರಣನ್ಯಾಯದಿಂದ ವಿಷ್ಣುವಿನಲ್ಲಿ ಸಮನ್ವಯವಾಗಿದೆ. ಅಂತೂ ಯಾವುದೇ ಅರ್ಥವನ್ನಿಟ್ಟುಕೊಂಡರೂ ಜ್ಯೋತಿಃಶಬ್ದವು ವಿಷ್ಣುಪರವೆಂಬುದು ಮೊದಲೇ ನಿಶ್ಚಯವಾಗಿದೆ. ಇದರ ಜೊತೆಗೆ ಲೋಕಪ್ರಸಿದ್ಧಿಯಿಂದ ಅನ್ಯಪರವೂ ಆಗಿದೆ. ಆದ್ದರಿಂದ ಜ್ಯೋತಿಶಬ್ದವು ಉಭಯತ್ರಪ್ರಸಿದ್ಧಿಯಾಯಿತು ಹೊರತು ಅನ್ಯತ್ರಪ್ರಸಿದ್ಧವಾಗಲಿಲ್ಲ.

ಉದಾಹರಣೆ - 'ಆಕಾಶೋರ್ಥಾಂತರತ್ವಾದಿವ್ಯಪದೇಶಾತ್' ಎಂಬ ಸೂತ್ರದಲ್ಲಿ ಆಕಾಶಶಬ್ದವನ್ನು ಉಭಯತ್ರಪ್ರಸಿದ್ಧಿಯೆಂದು ಪರಿಗಣಿಸಿದ್ದಾರೆ. ಏಕೆಂದರೆ ಪ್ರಥಮಪಾದದ ಆಕಾಶಾಧಿಕರಣದಲ್ಲಿ ಆಕಾಶಶಬ್ದವು ವಿಷ್ಣುಪರವೆಂದು ಮೊದಲೇ ನಿಶ್ಚಿತವಾಗಿದೆ. ಇದರ ಜೊತೆಗೆ ಅನ್ಯತ್ರಪ್ರಸಿದ್ಧಿಯೂ ಇದೆ. ಆದ್ದರಿಂದ ಉಭಯತ್ರಪ್ರಸಿದ್ಧವಾಗಿದೆಯೆಂದು ಮೂರನೆಯ ಪಾದದಲ್ಲಿ ಈ ಸೂತ್ರವನ್ನು ಉಲ್ಲೇಖಿಸಿದ್ದಾರೆ. ಅದರಂತೆ ಈ ಜ್ಯೋತಿರಧಿಕರಣವನ್ನೂ ಕೂಡ ಮೂರನೆಯ ಪಾದದಲ್ಲಿಯೇ ಹೇಳಬೇಕಲ್ಲವೇ?

ಪಾದಾಂತ್ಯಪ್ರಾಣಾಧಿಕರಣದಲ್ಲಿ ಪ್ರಾಣಶಬ್ದವನ್ನು ಸಮನ್ವಯ ಮಾಡುತ್ತಾರೆ. ವಸ್ತುತಃ ಮೊದಲೇ ಪ್ರಾಣಶಬ್ದವು ಪ್ರಾಣಾಧಿಕರಣ ನ್ಯಾಯದಂತೆ ವಿಷ್ಣುವಿನಲ್ಲಿ ಸಮನ್ವಯ ಹೊಂದಿದೆ. ಲೋಕಪ್ರಸಿದ್ಧಿಯೂ ಇರುವುದರಿಂದ ಪಾದಾಂತ್ಯಪ್ರಾಣಾಧಿಕರಣದಲ್ಲಿ ಸಮನ್ವಯ ಮಾಡುವ ಪ್ರಾಣಶಬ್ದವು ಉಭಯತ್ರಪ್ರಸಿದ್ಧವಾಯಿತು. ಹಾಗಾದಲ್ಲಿ ಪಾದಾಂತ್ಯಪ್ರಾಣಾಧಿಕರಣವನ್ನು ಮೂರನೆಯ ಪಾದದಲ್ಲಿಯೇ ಸೇರಿಸಬೇಕಾದೀತು. ಆದರೂ ಸಹ ಪ್ರಥಮಪಾದದಲ್ಲಿ ನಿವೇಶಿಸಿದಂತೆ ಜ್ಯೋತಿರಧಿಕರಣವನ್ನು ಇಲ್ಲಿಯೇ ಹೇಳಬಹುದು ಎಂದು ಪ್ರಶ್ನಿಸಬಾರದು.

ಪಾದಾಂತ್ಯಪ್ರಾಣಾಧಿಕರಣಕ್ಕೂ ಜ್ಯೋತಿರಧಿಕರಣಕ್ಕೂ ವ್ಯತ್ಯಾಸವಿದೆ. ಪ್ರಾಣಾಧಿಕರಣದಲ್ಲಿ ಮಾಡಿದ ಪ್ರಾಣಶಬ್ದದ ಸಮನ್ವಯವನ್ನು ಆಕ್ಷೇಪಮಾಡಿ ಪಾದಾಂತ್ಯಪ್ರಾಣಾಧಿಕರಣವು ಹೊರಟಿದೆ. ಆದರೆ ಜ್ಯೋತಿರಧಿಕರಣವು ಹಿಂದಿನ ಅಂತರಾದ್ಯಧಿಕರಣಗಳಲ್ಲಿ ಮಾಡಿದ ಸಮನ್ವಯವನ್ನು ಆಕ್ಷೇಪಿಸಿ ಹೊರಟಿಲ್ಲ. ಆದ್ದರಿಂದ ಅಂತಿಮಪ್ರಾಣಾಧಿಕರಣದ ದೃಷ್ಟಾಂತದಂತೆ ಜ್ಯೋತಿರಧಿಕರಣವು ಪ್ರಥಮ-ಪಾದದಲ್ಲಿ ಸೇರಲು ಅರ್ಹವಲ್ಲ.

ಹಿಂದಿನ ಅಂತರಾದ್ಯಧಿಕರಣಗಳಲ್ಲಿ ಜ್ಯೋತಿಃಶಬ್ದದ ಪರ್ಯಾಯವಾದ ಅಗ್ನಿಶಬ್ದವನ್ನಷ್ಟೇ ಸಮನ್ವಯ ಮಾಡಲಾಗಿದೆ ಹೊರತು ಸಾಕ್ಷಾತ್ತಾಗಿ ಜ್ಯೋತಿಃಶಬ್ದವನ್ನು ಸಮನ್ವಯ ಮಾಡಿಲ್ಲ. ಆದ್ದರಿಂದ ಹಿಂದಿನ ಅಧಿಕರಣಗಳಿಂದ ಇದು ಗತಾರ್ಥವಾಗುವುದಿಲ್ಲವೆಂದು ಪ್ರಶ್ನೆಗೂ ಅವಕಾಶವಿಲ್ಲ.

ಹಾಗಾದರೆ ಅತ್ಯತ್ವಾಧಿಕರಣದ ಟೀಕೆಯಲ್ಲಿ ಅದಿತಿಶ್ರುತಿಯನ್ನು ಸಾವಕಾಶವೆಂದಿದ್ದು ತಪ್ಪಾದೀತು. ಅಂತರಧಿಕರಣದ ನ್ಯಾಯದಿಂದ ಅದಿತಿಶಬ್ದವು ವಿಷ್ಣುವಿನಲ್ಲಿ ಸಮನ್ವಯವಾಗಿದೆ ಎಂದು ಮೊದಲೇ ಸಿದ್ಧವಾಗಿದೆ ಎಂಬ ವಿವಕ್ಷೆಯಿದ್ದರೆ ಮಾತ್ರ ಅದಿತಿಶ್ರುತಿಯನ್ನು ಸಾವಕಾಶವೆನ್ನಲು ಸಾಧ್ಯ. ಮತ್ತು

ಅಗ್ನಿಶಬ್ದದ ಸಮನ್ವಯದಿಂದ ಆದರ ಪರ್ಯಾಯಶಬ್ದವೆನಿಸಿದ ಜ್ಯೋತಿಃಶಬ್ದದ ಸಮನ್ವಯವು ಸಿದ್ಧವಾಗುತ್ತದೆ. ಆದ್ದರಿಂದಲೇ ಸರ್ವಗತತ್ವಾಧಿಕರಣದಲ್ಲಿ ಆದಿತ್ಯಶಬ್ದವನ್ನು ಸಾವಕಾಶವೆಂದಿದ್ದಾರೆ. ಹಿಂದಿನ ಅಂತರಧಿಕರಣದಿಂದ ಸವಿತ್ರಾದಿಶಬ್ದಗಳ ಸಮನ್ವಯವು ವಿಷ್ಣುವಿನಲ್ಲಿ ಸಿದ್ಧವಾಗಿದೆ. ಆದರ ಪರ್ಯಾಯ-ಶಬ್ದವಾದ ಆದಿತ್ಯಶಬ್ದದ ಸಮನ್ವಯವೂ ಸಹ ವಿಷ್ಣುವಿನಲ್ಲಿ ಸಿದ್ಧವಾಗಿದೆ ಎಂಬ ಅಭಿಪ್ರಾಯದಿಂದಷ್ಟೇ ಆದಿತ್ಯಶಬ್ದವನ್ನು ಸಾವಕಾಶವೆಂದು ಮುಂದೆ ಹೇಳುತ್ತಾರೆ. ಆದ್ದರಿಂದಲೇ ಗ್ರಂಥಕಾರರು 'ಸಾವಕಾಶಾಗ್ನಿಶ್ರುತ್ಯಾ ಸಾವಕಾಶವಿಷ್ಣುಲಿಂಗಬಾಧಾತ್' (ಸಾವಕಾಶವಾದ ಅಗ್ನಿಶ್ರುತಿಯಿಂದ ಸಾವಕಾಶವಾದ ವಿಷ್ಣುವಿನ ಲಿಂಗವು ಬಾಧಿತವಾಗುವುದರಿಂದ) ಎಂದು ಹೇಳಿದ್ದಾರೆ. ಅಂತರಧಿಕರಣ ನ್ಯಾಯದಿಂದ ಜ್ಯೋತಿಃಶಬ್ದದ ಪರ್ಯಾಯವೆನಿಸಿದ ಅಗ್ನಿಶಬ್ದವು ವಿಷ್ಣುವಿನಲ್ಲಿ ಸಮನ್ವಯವಾಗಿದ್ದರೆ ಮಾತ್ರ ಸಾವಕಾಶಅಗ್ನಿಶ್ರುತ್ಯಾ ಎಂಬ ಪದವು ಅರ್ಥವತ್ತಾಗುತ್ತದೆ.

ಹಾಗಾಗಿ ಜ್ಯೋತಿಃಶಬ್ದವು ವಿಷ್ಣುಪರವೆಂದು ಮೊದಲೇ ಸಿದ್ಧವಾಗಿದೆ. ಅನ್ಯತ್ರಪ್ರಸಿದ್ಧಿಯೂ ಇದೆ. ಹೀಗಿರುವಾಗ ಉಭಯತ್ರಪ್ರಸಿದ್ಧವೆನಿಸುತ್ತದೇ ಹೊರತು ಅನ್ಯತ್ರಪ್ರಸಿದ್ಧವೆನ್ನಿಸುವುದಿಲ್ಲ. ಆದ್ದರಿಂದ ಈ ಅಧಿಕರಣವನ್ನು ಮೂರನೆಯ ಪಾದದಲ್ಲಿ ಹೇಳಬೇಕಲ್ಲವೇ?

ಸಮಾಧಾನ - ಹೌದು. ಆದರೆ ಪಾದಸಂಗತಿಯು ಇಲ್ಲವೆನ್ನಬಾರದು. ಜ್ಯೋತಿರಧಿಕರಣದಲ್ಲಿ ಅನ್ಯತ್ರಪ್ರಸಿದ್ಧವಾದ ಪ್ರಕರಣದ ಬಲದಿಂದ ಜ್ಯೋತಿಃಶಬ್ದವು ಅನ್ಯತ್ರಪ್ರಸಿದ್ಧವೆಂದು ಶಂಕಿಸಲಾಗಿದೆ. ಈ ಸೂಕ್ಷ್ಮವನ್ನು ಸ್ಪಷ್ಟವಾಗಿ ಗಮನಿಸಬೇಕು. ಹಿಂದಿನ ಅಂತರಧಿಕರಣದಲ್ಲಿ ಕೇವಲ ಜ್ಯೋತಿಃಶಬ್ದದ ಸಮನ್ವಯವಷ್ಟೇ ವಿಷ್ಣುವಿನಲ್ಲಿ ಸಿದ್ಧವಾಗಿದೆ. ಆದರೆ ಜ್ಯೋತಿಃಶಬ್ದವಿರುವ ಸಂಪೂರ್ಣಪ್ರಕರಣವು ಆಧ್ಯಾಪಕರ ಪ್ರಸಿದ್ಧಿಯಂತೆ ಅಗ್ನಿಯಲ್ಲಿ ಪ್ರಸಿದ್ಧವಾಗಿದೆ. ಅನ್ಯತ್ರಪ್ರಸಿದ್ಧಿಯ ಲಕ್ಷಣವನ್ನು ಹೀಗೆ ಹೇಳಿದ್ದಾರೆ. 'ಶ್ರುತ್ಯಾದಿತೋ ಲೋಕತೋ ವಾಪೀತರೇಷು ಪ್ರಸಿದ್ಧತಾ'ಎಂದು. ಶ್ರುತಿಯಿಂದ, ಪ್ರಕರಣದಿಂದ ಅಥವಾ ಸ್ಥಾನ ಮೊದಲಾದ ಯಾವುದೇ ಪ್ರಮಾಣಗಳಿಂದ ಲೋಕತಃ ಇತರರಲ್ಲಿ ಪ್ರಸಿದ್ಧವಾಗಿದ್ದರೆ ಅದನ್ನು ಅನ್ಯತ್ರಪ್ರಸಿದ್ಧವೆನ್ನಬಹುದು. ಪ್ರಕೃತ ಜ್ಯೋತಿರಧಿಕರಣದಲ್ಲಿ ಸಮನ್ವಯ ಮಾಡುತ್ತಿರುವ ಶಬ್ದವು ಪ್ರಕರಣಬಲದಿಂದ ಅನ್ಯತ್ರಪ್ರಸಿದ್ಧವೆನಿಸಿದೆ. ಆದ್ದರಿಂದ ಪಾದಸಂಗತಿಯನ್ನು ನೇರವಾಗಿ ಹೇಳಬಹುದು.

ಶಂಕೆ - ಜ್ಯೋತಿಶಬ್ದವಿರುವ ಸಂಪೂರ್ಣ ಪ್ರಕರಣವು ನಿರವಕಾಶವಾಗಿ ಅಗ್ನಿಯನ್ನೇ ಪ್ರತಿಪಾದಿಸುತ್ತಿದೆ ಹೊರತು ವಿಷ್ಣುವನ್ನಲ್ಲವೆಂದು ಹೇಳಿದಿರಿ. ಹಾಗಾದರೆ ಅನ್ಯತ್ಯೈವಪ್ರಸಿದ್ಧವಾಯಿತು ಹೊರತು ಅನ್ಯತ್ರಪ್ರಸಿದ್ಧವೆನ್ನಿಸಲಿಲ್ಲ. ಅನ್ಯತ್ಯೈವಪ್ರಸಿದ್ಧಿಲಕ್ಷಣವನ್ನು ಬಲವತ್‌ಶ್ರುತಿಲಿಂಗಾದ್ಯೈಃ ಅನ್ಯೇಷ್ವೇವ ಪ್ರಸಿದ್ಧತಾ (ಬಲಿಷ್ಠವಾದ ಶ್ರುತಿಲಿಂಗಗಳಿಂದ ಬೇರೆ ಕಡೆಯಷ್ಟೇ ಪ್ರಸಿದ್ಧವಾಗಿರಬೇಕೆಂದು ಹೇಳಲಾಗಿದೆ) ಸಾವಕಾಶವಾದ ಶ್ರುತಿಲಿಂಗಾದಿಗಳಿಂದ ಬೇರೆ ಕಡೆ ಪ್ರಸಿದ್ಧವಾಗಿದ್ದರೆ ಅನ್ಯತ್ರಪ್ರಸಿದ್ಧವೆನ್ನಿಸುತ್ತದೆ. ನಿರವಕಾಶಶ್ರುತಿಲಿಂಗಾದಿಪ್ರಮಾಣಗಳಿಂದ ಬೇರೆಡೆ ಪ್ರಸಿದ್ಧವಾಗಿದ್ದರೆ ಅನ್ಯತ್ಯೈವಪ್ರಸಿದ್ಧವೆನಿಸುತ್ತದೆ. ಪ್ರಕೃತ ಜ್ಯೋತಿಪ್ರಕರಣವು ಅಗ್ನಿಯಲ್ಲಿ ನಿರವಕಾಶವಾಗಿರುವುದರಿಂದ ಅನ್ಯತ್ಯೈವಪ್ರಸಿದ್ಧಶಬ್ದಗಳನ್ನು ಸಮನ್ವಯ ಮಾಡುವ ನಾಲ್ಕನೆಯ ಪಾದದಲ್ಲಿ ಸೇರಬೇಕಲ್ಲವೇ?

ಸಮಾಧಾನ - ಇದು ತಪ್ಪು. ಜ್ಯೋತಿಪ್ರಕರಣವು ಅಗ್ನಿಯಲ್ಲಿ ನಿರವಕಾಶವಾಗಿದ್ದರೂ ಜ್ಯೋತಿಯೆಂಬ ನಾಮವು ವಿಷ್ಣುವಿನಲ್ಲಿ ಸಾವಕಾಶವಾಗಿದೆ. ಅನ್ಯತ್ರೈವಪ್ರಸಿದ್ಧವೆನಿಸಬೇಕಾದರೆ ನಾಮವೂ ಕೂಡ ಸಾವಕಾಶವಾಗಿರಬಾರದು. ದುಃಖೀ, ಬದ್ಧಃ ಇತ್ಯಾದಿ ನಾಮಗಳು ಹೇಗೆ ವಿಷ್ಣುವಿನಲ್ಲಿ ಸಾವಕಾಶವಾಗಿಲ್ಲವೋ ಆದರಂತೆ. ಹಿಂದೆ ಆನಂದಮಯಾಧಿಕರಣದ ಪ್ರಾರಂಭದಲ್ಲಿ ಹೇಳಿದ ಅನ್ಯತ್ರೈವಪ್ರಸಿದ್ಧಿಯ ಲಕ್ಷಣವನ್ನು ಜ್ಯೋತಿಶಬ್ದದ ಸಮನ್ವಯದಲ್ಲಿ ಮಾಡಲಾಗದು.

ಶಂಕೆ - ಜ್ಯೋತಿಪ್ರಕರಣವು ಅನ್ಯತ್ರಪ್ರಸಿದ್ಧಿಯೆಂದು ಹೇಳುತ್ತಿದ್ದೀರಿ. ಆದರೆ ಟೀಕೆಯಲ್ಲಿ 'ಲೋಕತಃ ಅನ್ಯತ್ರಪ್ರಸಿದ್ಧಾನಾಂ ಜ್ಯೋತಿರಾದಿಶಬ್ದಾನಾಂ' ಎಂದು ಜ್ಯೋತಿಶಬ್ದವನ್ನಷ್ಟೇ ಅನ್ಯತ್ರಪ್ರಸಿದ್ಧವೆಂದಿದ್ದಾರೆ. ಈ ಟೀಕೆಯ ವಿರೋಧವನ್ನು ಹೇಗೆ ಪರಿಹರಿಸುತ್ತೀರಿ?

ಸಮಾಧಾನ - ಹಿಂದಿನ ಅಂತರಧಿಕರಣದಲ್ಲಿ ಜ್ಯೋತಿಶಬ್ದದ ಪರ್ಯಾಯವೆನಿಸಿದ ಅಗ್ನಿಶಬ್ದವನ್ನಷ್ಟೇ ಸಮನ್ವಯ ಮಾಡಿದ್ದಾರೆ. ನೇರವಾಗಿ ಜ್ಯೋತಿಶಬ್ದವನ್ನು ಸಮನ್ವಯ ಮಾಡಿಲ್ಲ. ಆದ್ದರಿಂದ ಲೋಕತಃ ಅನ್ಯತ್ರಪ್ರಸಿದ್ಧವೆಂಬ ಟೀಕೆಯ ಮಾತು ತಪ್ಪಾಗುವುದಿಲ್ಲ. ಅಥವಾ ಜ್ಯೋತಿಶಬ್ದವನ್ನೇ ನೇರವಾಗಿ ಸಮನ್ವಯ ಮಾಡಿದ್ದರೂ ಆಪಾತತಃ ಅಗ್ನಿ ಮೊದಲಾದವರಲ್ಲಿ ಲೋಕಪ್ರಸಿದ್ಧಿಯ ವಿವಕ್ಷೆಯಿಂದ ಟೀಕೆಯ ಮಾತು ತಪ್ಪಲ್ಲ. ಅಥವಾ ಜ್ಯೋತಿಶಬ್ದವಿರುವ ಸಂಪೂರ್ಣ ಪ್ರಕರಣವು ಲೋಕತಃ ಅನ್ಯತ್ರಪ್ರಸಿದ್ಧವಾದ್ದರಿಂದ ಆದರಲ್ಲಿ ಸೇರಿರುವ ಜ್ಯೋತಿಃಶಬ್ದವೂ ಸಹ ಅನ್ಯತ್ರಪ್ರಸಿದ್ಧವೇ ಆಗುತ್ತದೆ. ಹೀಗೆ ಪರಂಪರಯಾ ಅನ್ಯತ್ರಪ್ರಸಿದ್ಧಿಯ ವಿವಕ್ಷೆಯು ಟೀಕೆಯ ಮಾತಿನಲ್ಲಿ ಅಡಗಿದೆಯೆಂದು ತಿಳಿಯಬಹುದು. ಅಥವಾ ಹಿಂದಿನ ಪ್ರಾಕಾದ್ಯಧಿಕರಣಗಳಲ್ಲಿ ಅನ್ಯತ್ರಪ್ರಸಿದ್ಧಿಗೆ ಬಾಧಕವಾದ ನಿರವಕಾಶವಿಷ್ಣುಲಿಂಗವನ್ನು ಹೇಳಿದಂತೆ ಇಲ್ಲಿ ಅಂತಹ ನಿರವಕಾಶಲಿಂಗಗಳಿರುವುದಿಲ್ಲ. ಆದ್ದರಿಂದಲೂ ಅನ್ಯತ್ರಪ್ರಸಿದ್ಧವೆಂದು ಹೇಳಿರಬಹುದು.

ಶಂಕೆ - ಹಿಂದಿನ ಅಂತರಧಿಕರಣದಲ್ಲಿ ಕೇವಲ ಜ್ಯೋತಿಶಬ್ದವನ್ನಷ್ಟೇ ಸಮನ್ವಯ ಮಾಡಲಾಗಿದೆ. ಈ ಅಧಿಕರಣದಲ್ಲಿ ಸಂಪೂರ್ಣಜ್ಯೋತಿಪ್ರಕರಣವನ್ನು ಸಮನ್ವಯ ಮಾಡುತ್ತಿದ್ದೇವೆಂದು ಹೇಳಿರಿ. ಪ್ರಕರಣವನ್ನು ಸಮನ್ವಯ ಮಾಡುವುದೇನೂ ತಪ್ಪಲ್ಲ. ಮೂರನೆಯ ಪಾದದಲ್ಲಿರುವ 'ಈಕ್ಷತಿ ಕರ್ಮವ್ಯಪದೇಶಾತ್ ಸಃ' ಎಂಬ ಅಧಿಕರಣದಲ್ಲಿ ಸ್ಥಾನವನ್ನು (ಪ್ರಕರಣಗಳ ಸಮೂಹಸ್ಥಾನ) ಸಮನ್ವಯ ಮಾಡಿದ್ದಾರೆ. ಆದರಂತೆ ಇಲ್ಲಿ ಪ್ರಕರಣವನ್ನು ಸಮನ್ವಯ ಮಾಡಿದರೆ ಏನು ತಪ್ಪು? ನಾಮಾತ್ಮಕಶಬ್ದಗಳ ಸಮನ್ವಯ ಮಾಡುವ ಪಾದದಲ್ಲಿ ಸಂಗತಿಯು ದೊರೆಯಲಾರದೆಂದು ಪ್ರಶ್ನಿಸಬಾರದು. ಅಂತರಧಿಕರಣದಲ್ಲಿ ಲಿಂಗಾತ್ಮಕಶಬ್ದ ಸಮನ್ವಯವನ್ನು ಮಾಡಿದರೂ ಫಲತಃ ಪಾದಸಂಗತಿಯನ್ನು ಹೇಳಿದಂತೆ ಇದಕ್ಕೂ ಕೂಡ ಫಲತಃ ಪಾದಸಂಗತಿಯನ್ನು ಹೇಳಬಹುದಲ್ಲವೇ?

ಸಮಾಧಾನ - ಹಿಂದಿನ ಅಧಿಕರಣಗಳಲ್ಲಿ ನಾಮಾತ್ಮಕಶಬ್ದಗಳ ಸಮನ್ವಯ ಮಾಡಿದ್ದರಿಂದ ಬುದ್ಧಿಯಲ್ಲಿ ನಾಮಾತ್ಮಕಶಬ್ದಗಳ ಸಮನ್ವಯವೇ ಉಪಸ್ಥಿತವಾಗುತ್ತದೆ. ಆದಕ್ಕೆ ವಿರುದ್ಧವಾಗಿ ಬುದ್ಧಿಯಲ್ಲಿ ಸನ್ನಿಹಿತವಾಗದ ಪ್ರಕರಣದ ಸಮನ್ವಯವು ಅನುಚಿತವಾಗುತ್ತದೆ. ನಾಮಾತ್ಮಕಶಬ್ದಗಳ ಸಮನ್ವಯದಿಂದ ಆಯಾಯ ಪ್ರಕರಣಗಳೂ ಸಹ ವಿಷ್ಣುವಿನಲ್ಲಿ ಸಮನ್ವಯವಾಗುತ್ತವೆಂದು ಹಿಂದಿನ ಅಧಿಕರಣಗಳಲ್ಲಿ

ಸಿದ್ಧವಾಗಿದೆ. ಆದ್ದರಿಂದ ಪ್ರಕರಣದ ಸಮನ್ವಯವು ಅನುಚಿತವಲ್ಲವೆಂದು ಪ್ರಶ್ನಿಸಬಾರದು. ಇದು ನಾಮಪಾದವಾದ್ದರಿಂದ ನೇರವಾಗಿ ನಾಮಾತ್ಮಕಶಬ್ದಗಳ ಸಮನ್ವಯವನ್ನೇ ಪ್ರತಿಯೊಂದು ಅಧಿಕರಣಗಳಲ್ಲಿ ಮಾಡಲಾಗಿದೆ ಹೊರತು ಪ್ರಕರಣದ ಸಮನ್ವಯವನ್ನು ನೇರವಾಗಿ ಮಾಡುತ್ತಿಲ್ಲ. ಅದಕ್ಕನುಸಾರಿಯಾಗಿ ಈ ಅಧಿಕರಣದಲ್ಲಿಯೂ ನೇರವಾದ ನಾಮಾತ್ಮಕಶಬ್ದದ ಸಮನ್ವಯವೇ ಬುದ್ಧಿಸ್ಥವಾಗುತ್ತದೆ. ಮತ್ತು ನಾಮಾತ್ಮಕಶಬ್ದಗಳ ಸಮನ್ವಯ ಮೂಲಕವಾಗಿ ಪ್ರಕರಣದ ಸಮನ್ವಯವನ್ನು ಹೇಳುವುದೇ ಸ್ವರಸ ಹೊರತು ಪ್ರಕರಣ ಸಮನ್ವಯ ಮೂಲಕವಾಗಿ ನಾಮಾತ್ಮಕಶಬ್ದಗಳ ಸಮನ್ವಯವನ್ನು ಹೇಳುವುದು ಅನುಚಿತ. 'ಈಕ್ಷತಿ ಕರ್ಮ' ಇತ್ಯಾದಿ ಸೂತ್ರದಲ್ಲಿ ಸ್ಥಾನಸಮನ್ವಯವನ್ನು ಮಾಡಿರಬಹುದು. ಆದರೆ 'ತದೇವ ಸೋಮ್ಯ' ಎಂಬಲ್ಲಿರುವ ತತ್ ಎಂಬ ನಾಮಾತ್ಮಕಶಬ್ದದ ಸಮನ್ವಯಮೂಲಕವಾಗಿಯೇ ನಾಮಸಮನ್ವಯವನ್ನು ಮಾಡಿದ್ದಾರೆ ಎಂಬ ಸೂಕ್ಷ್ಮವನ್ನು ಗಮನಿಸಬೇಕು.

ವಿಚಾರ ಮಾಡಿದರೆ ಆಕ್ಷೇಪದ ತಳವೇ ಸರಿಯಿಲ್ಲ. ಪೂರ್ವೋಕ್ತಿ ಮತ್ತು ಅನ್ಯತ್ರಪ್ರಸಿದ್ಧಿಗಳಿಂದ ಶಬ್ದಗಳು ಉಭಯತ್ರಪ್ರಸಿದ್ಧವೆನಿಸುತ್ತದೆಂದು ಇಷ್ಟೆಲ್ಲಾ ಆಕ್ಷೇಪವನ್ನು ಮಾಡಲಾಗಿದೆ. ಆದರೆ ಯಾವ ಎರಡು ಶಬ್ದಗಳಲ್ಲಿ ಶ್ರುತಿಲಿಂಗ ಮೊದಲಾದ ಪ್ರಮಾಣಗಳು ಸಮಾನವಾಗಿರುತ್ತವೋ ಅಥವಾ ಪ್ರವೃತ್ತಿನಿಮಿತ್ತವು ಸಮಾನವಾಗಿರುತ್ತದೋ ಅಂತಹ ಶಬ್ದಗಳು ಉಭಯತ್ರಪ್ರಸಿದ್ಧವೆನಿಸುತ್ತದೆ. ಪ್ರಕೃತ ಜ್ಯೋತಿಶಬ್ದದಲ್ಲಿ ಶ್ರುತಿಲಿಂಗಾದಿಗಳ ಸಾಮ್ಯವನ್ನಾಗಲೀ ಪ್ರವೃತ್ತಿನಿಮಿತ್ತದ ಸಾಮ್ಯವನ್ನಾಗಲೀ ಹೇಳಲಾಗದ ಕಾರಣ ಉಭಯತ್ರಪ್ರಸಿದ್ಧವಾಗುತ್ತದೆಂಬ ಆಕ್ಷೇಪಕ್ಕೆ ಅವಕಾಶವಿಲ್ಲ. ಹಾಗಾಗಿದ್ದಲ್ಲಿ ಅಸಂಗತಿಯು ಬರುತ್ತಿತ್ತು.

'ಆಕಾಶೋಽರ್ಥಾಂತರತ್ವಾದಿವ್ಯಪದೇಶಃ' ಇತ್ಯಾದಿ ಮೂರನೆಯ ಪಾದದ ಅಧಿಕರಣದಲ್ಲಿ ಆಕಾಶ-ಶಬ್ದವು ಉಭಯತ್ರಪ್ರಸಿದ್ಧವಾಗಲು ಪೂರ್ವೋಕ್ತಿ ಹಾಗೂ ಅನ್ಯತ್ರಪ್ರಸಿದ್ಧಿಗಳು ಕಾರಣವಾಗಿಲ್ಲ. ಪ್ರವೃತ್ತಿ-ನಿಮಿತ್ತಸಾಮ್ಯವೂ ಕಾರಣವಾಗಿಲ್ಲ. ಹೊರತಾಗಿ ವೈ ನಾಮ ಎಂಬ ಶ್ರುತಿಯಲ್ಲಿರುವ ನಿಪಾತದಿಂದ ತೋರುವ ಲೋಕಪ್ರಸಿದ್ಧಿಯೇ ಕಾರಣವಾಗಿದೆಯೆಂದು ಪಾದಾಂತ್ಯಪ್ರಾಣಾಧಿಕರಣದಲ್ಲಿ ಸಮರ್ಥಿಸು-ತ್ತೇವೆ.

ಭಾಷ್ಯದ ಪ್ರಕಾರ ಜ್ಯೋತಿರಧಿಕರಣಕ್ಕೆ ಆನಂದಮಯಾಧಿಕರಣದಿಂದ ಸಂಗತಿಯು ತಿಳಿಯುತ್ತದೆ. ಹೀಗಿರುವಾಗ ಆನಂದಮಯಾಧಿಕರಣದ ಅನಂತರವಷ್ಟೇ ಜ್ಯೋತಿರಧಿಕರಣವನ್ನು ಉಲ್ಲೇಖಿಸುವುದು ಉಚಿತ. ಪ್ರಾಣಾಧಿಕರಣದ ಅನಂತರ ಉಲ್ಲೇಖಿಸಿದ್ದು ತಪ್ಪಲ್ಲವೇ? ಎಂಬ ಪ್ರಶ್ನೆಗೆ ಪ್ರಾಣಾಧಿಕರಣದಿಂದ ಸಂಗತಿಯನ್ನು 'ಪ್ರಾಣಾಧಿಕರಣೇ' ಇತ್ಯಾದಿ ವಾಕ್ಯದಿಂದ ಹೇಳಿದ್ದಾರೆ. ಈ ವಿಷಯವು ಮುಂದೆ ಮತ್ತಷ್ಟು ಸ್ಪಷ್ಟವಾಗುತ್ತದೆ. ಪ್ರಾಣಾಧಿಕರಣದಿಂದ ಜ್ಯೋತಿರಧಿಕರಣಕ್ಕೆ ಪ್ರತ್ಯುದಾಹರಣರೂಪಸಂಗತಿಯನ್ನು ತಿಳಿಯಬೇಕು. 'ಪೂರ್ವನ್ಯಾಯಾತ್ಯತೋ ಯತ್ರ ಪ್ರತ್ಯುದಾಹರಣಾ ತು ಸಾ' (ಹಿಂದಿನ ಅಧಿಕರಣದ ನ್ಯಾಯವನ್ನು ಆಕ್ಷೇಪಿಸಿ ಮುಂದಿನ ಅಧಿಕರಣದಲ್ಲಿ ಸಮರ್ಥಿಸಿದಾಗ ಪ್ರತ್ಯುದಾಹರಣ ಎನಿಸುತ್ತದೆ). ಭಾಷ್ಯದಲ್ಲಿ ಆನಂದಮಯಾಧಿಕರಣದಿಂದ ಸಂಗತಿಯನ್ನು ತೋರಿಸಿಲ್ಲ. 'ಯೋ ವೇದನಿಹಿತಂ ಗುಹಾಯಾಮ್ ಇತ್ಯುಕ್ತಮ್' ಎಂಬ ಭಾಷ್ಯದಲ್ಲಿಈ ಅಧಿಕರಣದ ಪ್ರಯೋಜನವನ್ನು ಆನಂದಮಯಾಧಿ

ಕರಣದಲ್ಲಿ ಪರ್ಯವಸಾನ ಮಾಡಿದ್ದಾರೆ. ಒಂದುವೇಳೆ ಅಗ್ನಿಸೂಕ್ತದಲ್ಲಿರುವ ಜ್ಯೋತಿಯು ವಿಷ್ಣುವಿನಿಂದ ಭಿನ್ನವಾದರೆ ಜ್ಯೋತಿಯಲ್ಲಿ ಶ್ರುತವಾದ ಗುಹಾನಿಹಿತತ್ವವೂ ಕೂಡ ವಿಷ್ಣುವಿನ ಧರ್ಮವಾಗದು. ಗುಹಾನಿಹಿತತ್ವಧರ್ಮದಿಂದ ಯುಕ್ತನಾದ ಆನಂದಮಯನೂ ವಿಷ್ಣುವಾಗಲಾರನೆಂದು ಆನಂದಮಯಾಧಿಕರಣವನ್ನು ಆಕ್ಷೇಪಿಸಿ ಪೂರ್ವಪಕ್ಷ. ಇದನ್ನು ನಿರಾಕರಿಸುವ ಮೂಲಕ ಸಿದ್ಧಾಂತವನ್ನು ಸ್ಥಾಪನೆ ಮಾಡಿದ್ದರಿಂದ ಜ್ಯೋತಿರಧಿಕರಣದಲ್ಲಿ ಮಾಡಿದ ವಿಚಾರವು ಸಾರ್ಥಕವಾಗಿದೆ. ಅಂತರಧಿಕರಣದಲ್ಲಿ ಸಮರ್ಥಿಸಿದಂತೆ ಹೀಗೆ ಪ್ರಯೋಜನವನ್ನು ತಿಳಿದುಕೊಳ್ಳಬೇಕು.

ಆಕ್ಷೇಪ - ಆನಂದಮಯಾಧಿಕರಣವನ್ನು ಆಕ್ಷೇಪಿಸಿ ಪ್ರಯೋಜನವನ್ನು ಹೇಳುವುದಕ್ಕಿಂತ ಅಂತರಧಿಕರಣದ ನ್ಯಾಯವನ್ನು ಆಕ್ಷೇಪಿಸಿ ಪ್ರಯೋಜನ ಹೇಳುವುದು ಹೆಚ್ಚು ಸ್ವರಸ. ಒಂದು ವೇಳೆ ಜ್ಯೋತಿಯು ವಿಷ್ಣುವಿಗಿಂತ ಭಿನ್ನವಾದರೆ ಗುಹಾನಿಹಿತವೂ ಕೂಡ ಅದೇ ಆಗುತ್ತದೆ. ಅಂತಸ್ಥತ್ವವೂ ಅದರಲ್ಲಿಯೇ ಬರಬೇಕು. ಹೀಗೆ ಅಂತರಧಿಕರಣವನ್ನು ಆಕ್ಷೇಪಿಸುವುದು ಸುಲಭ. ಈ ಪಕ್ಷದಲ್ಲಿ ಜ್ಯೋತಿಶಬ್ದವು ಉಭಯತ್ರಪ್ರಸಿದ್ಧ ಎಂಬ ಶಂಕೆಯೇ ಹುಟ್ಟಲು ಸಾಧ್ಯವಿಲ್ಲ. ಯಾವರೀತಿಯಾಗಿ ಪ್ರಾಣಾಧಿ-ಕರಣದಲ್ಲಿ ಹೇಳಿದ ಪ್ರಮೇಯವನ್ನು ಆಕ್ಷೇಪಿಸಿ ಅಂತಿಮಪ್ರಾಣಾಧಿಕರಣವು ಹೊರಟಿದ್ದರಿಂದ ಉಭಯತ್ರಪ್ರಸಿದ್ಧವೆನಿಸದೋ ಅದರಂತೆ ಇದೂ ಕೂಡ ಅಂತರಧಿಕರಣದ ನ್ಯಾಯವನ್ನು ಆಕ್ಷೇಪಿಸಿದ್ದರಿಂದ ಉಭಯತ್ರಪ್ರಸಿದ್ಧವೆನಿಸದು.

ಗುಹಾನಿಹಿತವೇ ಬೇರೆ ಅಂತಸ್ಥವೇ ಬೇರೆ ಎಂದು ಶಂಕಿಸಬಾರದು. ಅಂತಸ್ಥನಲ್ಲಿಯೂ ನಿಹಿತಂ ಗುಹಾಸು ಎಂದು ಗುಹಾನಿಹಿತತ್ವಧರ್ಮವನ್ನು ಅಂತಸ್ಥತ್ವಾಧಿಕರಣದಲ್ಲಿ ಸಮರ್ಥಿಸಲಾಗಿದೆ. ಮತ್ತು ಜ್ಯೋತಿಯು ಗುಹಾನಿಹಿತವಾಗಿದೆ. ಅದನ್ನು 'ಯೋ ವೇದ ನಿಹಿತಂ' ಎಂಬ ಮಂತ್ರವರ್ಣವು ಪ್ರತಿಪಾದಿಸುತ್ತಿದೆ. ಈ ಮಂತ್ರವರ್ಣದಲ್ಲಿ ಪ್ರತಿಪಾದ್ಯವಾದ ವಸ್ತುವೇ ಆನಂದಮಯ ಎನಿಸಿದೆ. ಹಾಗಾಗಿ ಅಂತಹ ಆನಂದಮಯನೇ ಜ್ಯೋತಿಯೆನಿಸಿದ್ದಾನೆ. ಹೀಗೆ ಆಕ್ಷೇಪಮಾಡುವುದು ವಕ್ರಮಾರ್ಗ. ಈ ಮಾರ್ಗಕ್ಕಿಂತ ಗುಹಾನಿಹಿತತ್ವಧರ್ಮದಿಂದ ಕೂಡಿದ ಆನಂದಮಯನನ್ನು ಆಕ್ಷೇಪಿಸುವುದು ಋಜು-ಮಾರ್ಗವಲ್ಲವೇ?

ಸಮಾಧಾನ - ಹಿಂದಿನ ಮೂರು ಅಧಿಕರಣಗಳಲ್ಲಿ ಆನಂದಮಯಾಧಿಕರಣವನ್ನು ಆಕ್ಷೇಪಿಸಿದ್ದರಿಂದ ಈ ಅಧಿಕರಣದಲ್ಲಿಯೂ ಆನಂದಮಯಾಧಿಕರಣದ ಆಕ್ಷೇಪವೇ ಬುದ್ಧಿಸ್ಥವಾಗುತ್ತದೆ. ಅದಕ್ಕನುಸಾರಿಯಾಗಿ ಆನಂದಮಯಾಧಿಕರಣವನ್ನು ಆಕ್ಷೇಪಿಸಿದಾಗ ಬುದ್ಧಿಯಲ್ಲಿ ಕ್ಲೇಶವಿಲ್ಲ. ಮತ್ತು ಆನಂದಮಯಾಧಿಕರಣವನ್ನು ಆಕ್ಷೇಪಿಸಿದಾಗ ವ್ಯವಹಿತವಾಗುತ್ತದೆಂಬ ದೋಷವನ್ನು ಹೇಳಬೇಕು. ಈ ದೋಷವು ಅಂತರಧಿಕರಣದ ಆಕ್ಷೇಪದಲ್ಲಿಯೂ ಸಮಾನ. ಅಷ್ಟೇ ಅಲ್ಲದೆ ಅಂತರಧಿಕರಣದ ನ್ಯಾಯವನ್ನು ಆಕ್ಷೇಪಿಸಿದಾಗ ಮುಂದೆ ಆನಂದಮಯಾಧಿಕರಣನ್ಯಾಯವನ್ನು ಆಕ್ಷೇಪಿಸಲೇಬೇಕಾಗುತ್ತದೆ. ಇಲ್ಲದಿದ್ದರೆ ಬ್ರಹ್ಮಜಿಜ್ಞಾಸೆಯ ಆಕ್ಷೇಪದಲ್ಲಿ ಪರ್ಯವಸಾನವೇ ಆಗುವುದಿಲ್ಲ. ಆದ್ದರಿಂದ ನೇರವಾಗಿ ಆನಂದಮಯಾಧಿಕರಣವನ್ನೇ ಆಕ್ಷೇಪಿಸಲು ಬರುವಾಗ ಅಂತರಧಿಕರಣದ ಮೂಲಕ ಆನಂದಮಯಾಧಿಕರಣವನ್ನು ಆಕ್ಷೇಪಿಸುವುದು ಅನಾವಶ್ಯಕ.

ಶಂಕೆ - 'ವಿ ಮೇ ಕರ್ಣಾ ಪತಯತಃ' ಎಂಬ ವಿಷಯವಾಕ್ಯದಿಂದ ಅದೃಶ್ಯತ್ವಧರ್ಮವು ಕೇಳಿಸುತ್ತಿದೆ. ಈ ಧರ್ಮವು ಜ್ಯೋತಿಯಲ್ಲಿ ಕೇಳಿಸುತ್ತಿರುವಂತೆ ಆನಂದಮಯನಲ್ಲೂ ಕೇಳಿಸುತ್ತಿದೆ. ಆದ್ದರಿಂದ ಆನಂದಮಯನು ಜ್ಯೋತಿಯಾಗುತ್ತಾನೆಂಬ ಆಕ್ಷೇಪವು ಋಜುವಾಗಿದೆ. ಇದನ್ನು ಬಿಟ್ಟು ವಕ್ರವೆನಿಸಿದ ಗುಹಾನಿಹಿತತ್ವವನ್ನು ಆಶ್ರಯಿಸುವುದು ಅನಾವಶ್ಯಕವಲ್ಲವೇ?

ಸಮಾಧಾನ - ಅದೃಶ್ಯತ್ವಧರ್ಮದ ಮೂಲಕವಾಗಿ ಆಕ್ಷೇಪ ಮಾಡುವುದೇನೂ ತಪ್ಪಲ್ಲ. ಆದರೆ ಅದೃಶ್ಯತ್ವಧರ್ಮವನ್ನು 'ವಿ ಮೇ ಕರ್ಣಾ ಪತಯತಃ' ಇತ್ಯಾದಿ ಅನೇಕ ಪದಗಳ ಸಮಭಿವ್ಯಾಹಾರದಿಂದಷ್ಟೇ ತಿಳಿಯಲು ಸಾಧ್ಯ. ಗುಹಾನಿಹಿತತ್ವಧರ್ಮವನ್ನಾದರೂ ಒಂದೇ ವಾಕ್ಯದಿಂದ ತಿಳಿಯಬಹುದು. ಇದು ಸುಲಭ. ಆಷ್ಟೇ ಅಲ್ಲದೆ ಜ್ಯೋತಿಶಬ್ದದ ಪಕ್ಕದಲ್ಲಿಯೇ ಗುಹಾನಿಹಿತತ್ವವು ಕೇಳಿಸುತ್ತಿರುವುದರಿಂದ ಗುಹಾನಿಹಿತತ್ವದ ಮೂಲಕ ಆಕ್ಷೇಪ ಮಾಡುವುದು ಉತ್ತಮಮಾರ್ಗವಾಗಿದೆ.

**ಗುರುರಾಜೀಯಮ್ – ಅನನ್ತರಸಙ್ಗತಿರಿತಿ ।** ಆತಿದೇಶಿಕೀತ್ಯರ್ಥಃ ।

ಸಂಶಯ

## ತಾತ್ಪರ್ಯಚನ್ದ್ರಿಕಾ

**ಅತ್ರ ಜ್ಯೋತಿಃ ಕಿಮಗ್ನಿಃ ಕಿಂ ವಾ ವಿಷ್ಣುಃ ಇತಿ ಚಿನ್ತಾ । ತದರ್ಥಂ ಕಿಂ ಜ್ಯೋತಿಶ್ಶ್ರುತಿಪ್ರಸಿದ್ಧ್ಯನುಸಾರೇಣ ಕರ್ಣಾದಿವಿದೂರತ್ವಲಿಙ್ಗಂ ಬಾಧ್ಯಮುತ ವಿಪರೀತಮಿತಿ । ತದರ್ಥಂ ಕಿಂ ಶ್ರುತ್ಯನುಗ್ರಾಹಕಂ ಸೂಕ್ತಂ ನಿರವಕಾಶಮುತ ಸಾವಕಾಶಮಿತಿ ।**

ಅನುವಾದ - ಈ ಅಧಿಕರಣದಲ್ಲಿ ಜ್ಯೋತಿಯು ಅಗ್ನಿಯೋ ಅಥವಾ ವಿಷ್ಣುವೋ? ಎಂದು ಸಂಶಯ. ಇದಕ್ಕಾಗಿ ಜ್ಯೋತಿಶ್ಶ್ರುತಿಪ್ರಸಿದ್ಧಿಯಂತೆ ಕರ್ಣಾದಿವಿದೂರತ್ವವು ಬಾಧಿತವಾಗುತ್ತದೋ ಅಥವಾ ಲಿಂಗದಿಂದಲೇ ಶ್ರುತಿಯು ಬಾಧಿತವಾಗುತ್ತದೋ? ಇದರ ಪರಿಹಾರಕ್ಕಾಗಿ ಶ್ರುತ್ಯನುಗ್ರಾಹಕವಾದ ಸೂಕ್ತವು ನಿರವಕಾಶವೋ ಅಥವಾ ಸಾವಕಾಶವೋ? ಎಂಬ ಸಂಶಯವು ಪರಿಹಾರವಾಗಬೇಕು.

**ಪ್ರಕಾಶಃ – ಅತ್ರೇತಿ ॥**

**ವಿ ಮೇ ಕರ್ಣಾ ಪತಯತೋ ವಿ ಚಕ್ಷುರ್ವೀ ೩ ದಂ ಜ್ಯೋತಿರ್ಹೃದಯ ಆಹಿತಂ ಯತ್ ।**
**ವಿ ಮೇ ಮನಶ್ಚರತಿ ದೂರ ಆಧೀಃ ಕಿಂ ಸ್ವಿದ್ವಕ್ಷ್ಯಾಮಿ ಕಿಮು ನೂ ಮನಿಷ್ಯೇ ॥**

ಇತ್ಯಗ್ನಿಸೂಕ್ತಾದಿಗತಜ್ಯೋತಿರಾದಿಶಬ್ದೋ ವಿಷಯ ಇತ್ಯರ್ಥಃ ॥ **ಅಗ್ನಿರಿತಿ ॥** ಕೋಟ್ಯನ್ತರಪ್ರಾಪ್ತ್ಯಭಾವಸ್ಯ ವಕ್ಷ್ಯಮಾಣತ್ವಾದಿತಿ ಭಾವಃ ॥ **ವಿಪರೀತಮಿತಿ ॥** ಲಿಙ್ಗಾತ್ ಶ್ರುತಿರ್ಬಾಧ್ಯಾ ಇತ್ಯರ್ಥಃ । ಯದಿ ಸೂಕ್ತಂ ನಿರವಕಾಶಂ, ತದಾ ತದನುಗೃಹೀತಯಾ ಬಲೀಯಸ್ಯಾ ಕೃತ್ಯಾ ಲಿಙ್ಗಸ್ಯ

बाधादग्निरिति पूर्वपक्षे फलम्, यदि सावकाशं तदा दुर्बलया श्रुत्या निरवकाशलिङ्गबाधायोगात् विष्णुरिति सिद्धान्ते फलमिति स्पष्टत्वात् फलफलिभावो नोक्तः ।

द्वावत्र पूर्वपक्षौ । एकस्तावदभ्यधिकाशङ्कां विनैव ज्योतिश्श्रुतिविष्णुलिङ्गयोः पूर्वोत्तरपक्षप्रापकयोस्सावकाशत्वमुपेत्य जात्या बलवत्त्या श्रुत्यैव लिङ्गबाधः, सूक्तस्थत्वं त्वभ्युच्चययुक्तित्वेनोच्यत इति । अन्यस्तु विष्णुलिङ्गस्य निरवकाशत्वमुपेत्य श्रुतिमात्रेण पूर्वपक्षोदयायोगादभ्यधिकाशङ्केति ।

आद्यस्तु टीकानुसारी । अन्त्यस्तु सुधानुसारी । तत्रेयं चिन्तापरम्परा द्वितीयपूर्वपक्षानुरोधेन । आद्यपूर्वपक्षे तु 'उत विपरीतं' इति द्वितीयचिन्ताऽनन्तरं तदर्थं श्रुत्यनुग्राहकमित्यत्र तदर्थं लिङ्गं सावकाशमुत निरवकामिति चिन्ता द्रष्टव्या । यदि सावकाशं तदा श्रुत्या लिङ्गबाधादग्निरिति पूर्वपक्षे फलम्, यदि निरवकाशं तेन सावकाशश्रुतिबाधाद्विष्णुरिति सिद्धान्ते फलं ध्येयम् । अत्र ज्योतिरग्निर्विष्णुर्वा, तदर्थं श्रुत्या लिङ्गं बाध्यं उत लिङ्गात् श्रुतिः, तदर्थं श्रुतिबाधेन मुख्यार्थहानिरुत नेति, तदर्थं ज्योतिश्श्रुतिप्रवृत्तिनिमित्तं विष्णौ न युक्तमुत युक्तमिति, तदर्थं तमोविरोधित्वं प्रवृत्तिनिमित्तमुत प्रकाशत्वादिरूपमिति प्रमेयाश्रिताधिकाशङ्कोपयुक्ता चिन्तापरम्परा स्पष्टैवेति, प्रमाणाश्रिताशङ्कोपयुक्तैव सा प्रदर्शितेति ध्येयम् ।

ವಿವರಣೆ - 'ವಿ ಮೇ ಕರ್ಣಾ ಪತಯತೋ ವಿವಕ್ಷುರ್ವಿಣಿದಂ ಜ್ಯೋತಿರ್ಹೃದಯ ಆಹಿತಂ ಯತ್ । ವಿ ಮೇ ಮನಶ್ಚರತಿ ದೂರ ಆಧೀಃ ಕಿಂ ಸ್ವಿದ್ವಕ್ಷ್ಯಾಮಿ ಕಿಮು ನೂ ಮನಿಷ್ಯೇ' (ನನ್ನ ಹೃದಯದಲ್ಲಿ ಅಡಗಿರುವ ಜ್ಯೋತಿಗೆ ವಿರುದ್ಧವಾಗಿ ನನ್ನ ಕಿವಿ ಮೊದಲಾದ ಇಂದ್ರಿಯಗಳು ಓಡುತ್ತಿವೆ. ಮನಸ್ಸೂ ಕೂಡ ದೂರ ಓಡುತ್ತಿದೆ. ಆದ್ದರಿಂದ ಜ್ಞಾನಿಯಾಗಿದ್ದರೂ ನಾನು ಆದರ ಬಗ್ಗೆ ಏನೆಂದು ಹೇಳಲಿ, ಏನೆಂದು ಮನನ ಮಾಡಲಿ). ಈ ಅಗ್ನಿಸೂಕ್ತದಲ್ಲಿರುವ ಜ್ಯೋತಿ ಮೊದಲಾದ ಶಬ್ದಗಳು ಈ ಅಧಿಕರಣದ ವಿಷಯ.

ಪೂರ್ವಪಕ್ಷದ ಫಲ - ಮೊದಲನೆಯ ಸಂಶಯ ಕೋಟಿಯಲ್ಲಿ ಅಗ್ನಿಯೋ ಅಥವಾ ವಿಷ್ಣುವೋ ? ಎಂದಷ್ಟೇ ಹೇಳಿದ್ದಾರೆ. ವಸ್ತುತಃ ಅಗ್ನಿ ಎಂಬ ಭೂತ ಮತ್ತು ಗ್ರಹನಕ್ಷತ್ರಾದಿಗಳು ಜ್ಯೋತಿಃಶಬ್ದದಿಂದ ಪ್ರತಿಪಾದ್ಯಗಳಾದ್ದರಿಂದ ಇವುಗಳನ್ನು ಸಂಶಯಕೋಟಿಯಲ್ಲಿ ಸೇರಿಸಬಹುದಿತ್ತು. ಆದರೆ ಸಂಶಯಕೋಟಿಯಲ್ಲಿ ಅಗ್ನಿದೇವತೆಯನ್ನು ಬಿಟ್ಟು ಉಳಿದವುಗಳು ಯಾವುದೂ ಸೇರುವುದಿಲ್ಲವೆಂದು ಮುಂದೆ

ಗ್ರಂಥಕಾರರೇ ಉಪಪಾದಿಸುತ್ತಾರೆ. ಒಂದು ವೇಳೆ ಸೂಕ್ತವು ನಿರವಕಾಶವಾದರೆ ನಿರವಕಾಶಸೂಕ್ತದ ಬೆಂಬಲವಿರುವ ಶ್ರುತಿಯು ಬಲಿಷ್ಠವಾಗುತ್ತದೆ. ಇಂತಹ ಶ್ರುತಿಯಿಂದ ಲಿಂಗವು ಬಾಧಿತವಾದಾಗ ಅಗ್ನಿಯು ಜ್ಯೋತಿಯೆನಿಸುತ್ತಾನೆ ಎಂದು

ಸಿದ್ಧಾಂತದ ಫಲ - ಒಂದು ವೇಳೆ ಅಗ್ನಿಸೂಕ್ತವು ಸಾವಕಾಶವಾದರೆ ಅದರ ಬೆಂಬಲವಿಲ್ಲದ ಕಾರಣ ಶ್ರುತಿಯು ದುರ್ಬಲವಾಗುತ್ತದೆ. ಇಂತಹ ಶ್ರುತಿಯಿಂದ ನಿರವಕಾಶಲಿಂಗಕ್ಕೆ ಬಾಧವನ್ನು ಹೇಳಲಾಗದು. ಆವಾಗ ವಿಷ್ಣುವೇ ಜ್ಯೋತಿಯೆನಿಸುತ್ತಾನೆ' ಎಂದು.

ಹೀಗೆ ಫಲ-ಫಲಿಭಾವಗಳು ಸ್ಪಷ್ಟವಾದ್ದರಿಂದ ಗ್ರಂಥಕಾರರು ಉಲ್ಲೇಖಿಸಿಲ್ಲ.

ಈ ಅಧಿಕರಣದಲ್ಲಿ ಎರಡು ಬಗೆಯ ಪೂರ್ವಪಕ್ಷಗಳಿವೆ. (೧) ಅಭ್ಯಧಿಕಾಶಂಕೆಯನ್ನು ಮಾಡದೆಯೂ ಪೂರ್ವಪಕ್ಷವನ್ನು ರಚಿಸಬಹುದು. ಪೂರ್ವಪಕ್ಷಸ್ಥಾಪಕವಾದ ಜ್ಯೋತಿಶ್ರುತಿಯೂ ಸಾವಕಾಶವಾಗಿದೆ ಸಿದ್ಧಾಂತಸ್ಥಾಪಕವಾದ ವಿಷ್ಣುಲಿಂಗವೂ ಸಾವಕಾಶವಾಗಿದೆ. ಸಾವಕಾಶವಾದ ಇವೆರಡರಲ್ಲಿ ಯಾವುದು ಪ್ರಬಲ? ಎಂಬ ಪ್ರಶ್ನೆ ಬಂದರೆ ಶ್ರುತಿಯು ಸ್ವಭಾವತಃ ಬಲಿಷ್ಠವಾಗಿದೆ. ಇಂತಹ ಶ್ರುತಿಯಿಂದ ಲಿಂಗವು ಬಾಧಿತವಾಗುತ್ತದೆ ಎಂದು ಉತ್ತರಿಸಬೇಕು. ಈ ಪಕ್ಷದಲ್ಲಿ ಅಗ್ನಿಸೂಕ್ತವೆಂಬ ಪ್ರಕರಣವು ಅಧಿಕಯುಕ್ತಿಯಾಗಿ ಲಿಂಗವನ್ನು ಉಪೋದ್ಬಲಿಸುತ್ತದೆ. ಇದು ಟೀಕಾನುಸಾರಿ ಪೂರ್ವಪಕ್ಷ.

(೨) ವಿಷ್ಣುಲಿಂಗವನ್ನು ನಿರವಕಾಶವೆಂದು ಒಪ್ಪಿದಾಗ ಕೇವಲ ಶ್ರುತಿಯಿಂದ ಪೂರ್ವಪಕ್ಷ ಮಾಡ-ಲಾಗದು. ಈ ಪಕ್ಷದಲ್ಲಿ ಅಭ್ಯಧಿಕಾಶಂಕೆಯನ್ನು ಅವಶ್ಯವಾಗಿ ಒಪ್ಪಿ ಪೂರ್ವಪಕ್ಷವನ್ನು ರಚಿಸಬೇಕಾಗುತ್ತದೆ. ಇದು ಸುಧೆಗೆ ಅನುಸಾರಿಯಾದ ಪೂರ್ವಪಕ್ಷ.

ಪ್ರಕೃತ ಗ್ರಂಥಕಾರರು ತೋರಿಸಿರುವ ಸಂಶಯಪರಂಪರೆಯು ಎರಡನೆಯ ಸುಧಾನುಸಾರಿ ಪೂರ್ವ-ಪಕ್ಷವನ್ನು ಅನುಸರಿಸಿ ಹೊರಟಿದೆ. ಟೀಕಾನುಸಾರಿಯಾದ ಪೂರ್ವಪಕ್ಷಕ್ಕೆ ಅನುಸಾರಿಯಾದ ಸಂಶಯ-ಪರಂಪರೆಯನ್ನು ಹೀಗೆ ತಿಳಿಯಬೇಕು. (೧) ಜ್ಯೋತಿಯು ಅಗ್ನಿಯೋ ಅಥವಾ ವಿಷ್ಣುವೋ? (೨)ಜ್ಯೋತಿಶ್ರುತಿಯಿಂದ ಲಿಂಗವು ಬಾಧಿತವೋ? ಲಿಂಗದಿಂದ ಶ್ರುತಿಯು ಬಾಧಿತವೋ? (೩)ಲಿಂಗವು ಸಾವಕಾಶವೋ ಅಥವಾ ನಿರವಕಾಶವೋ? ಒಂದುವೇಳೆ ಲಿಂಗವು ಸಾವಕಾಶವಾದರೆ ಶ್ರುತಿಯಿಂದ ಲಿಂಗವು ಬಾಧಿತವಾಗುತ್ತದೆ. ಜ್ಯೋತಿಃಶಬ್ದದಿಂದ ಅಗ್ನಿಯು ಪ್ರತಿಪಾದ್ಯನಾಗುತ್ತಾನೆಂಬುದು ಪೂರ್ವಪಕ್ಷದ ಫಲ. ಒಂದು ವೇಳೆ ಲಿಂಗವು ನಿರವಕಾಶವಾದರೆ ಸಾವಕಾಶವಾದ ಶ್ರುತಿಯು ಲಿಂಗದಿಂದ ಬಾಧಿತ-ವಾಗುತ್ತದೆ. ಆವಾಗ ವಿಷ್ಣುವು ಜ್ಯೋತಿಯೆನಿಸುತ್ತಾನೆಂಬುದು ಸಿದ್ಧಾಂತದ ಫಲ. ಗ್ರಂಥಕಾರರು ತೋರಿಸಿದ ಸಂಶಯಪರಂಪರೆಯು ಪ್ರಮಾಣಾಶ್ರಿತಾಶಂಕೆಗೆ ಉಪಯುಕ್ತವಾಗಿದೆ.

ಪ್ರಮೇಯಾಶ್ರಿತ ಅಭ್ಯಧಿಕಾಶಂಕೆಗೆ ಉಪಯುಕ್ತವಾದ ಸಂಶಯಪರಂಪರೆಯು ಸ್ಪಷ್ಟವಾದ್ದರಿಂದ ಸ್ವತಃ ಊಹಿಸಿಕೊಳ್ಳಬೇಕು. ಅದು ಹೀಗೆ -- (೧) ಶ್ರುತಿಯಲ್ಲಿರುವ ಜ್ಯೋತಿಶಬ್ದದಿಂದ ಅಗ್ನಿಯು ಪ್ರತಿ-ಪಾದ್ಯನೋ ವಿಷ್ಣುವೋ? (೨) ಶ್ರುತಿಯಿಂದ ಲಿಂಗವು ಬಾಧ್ಯವೋ? ಲಿಂಗದಿಂದ ಶ್ರುತಿಯು ಬಾಧ್ಯವೋ? (೩) ಶ್ರುತಿಯು ಬಾಧ್ಯವಾದಾಗ ಮುಖ್ಯಾರ್ಥವನ್ನು ಬಿಡಬೇಕೋ ಅಥವಾ ಇಲ್ಲವೋ?

(೪) ಜ್ಯೋತಿಶ್ಶ್ರುತಿಯ ಪ್ರವೃತ್ತಿನಿಮಿತ್ತವು ವಿಷ್ಣುವಿನಲ್ಲಿ ಕೂಡುವುದಿಲ್ಲವೋ ಅಥವಾ ಕೂಡುತ್ತದೋ? (೫) ತಮೋವಿರೋಧಿತ್ವವು ಪ್ರವೃತ್ತಿನಿಮಿತ್ತವಾಗುತ್ತದೋ ಅಥವಾ ಪ್ರಕಾಶತ್ವಾದಿರೂಪವು ಪ್ರವೃತ್ತಿನಿಮಿತ್ತವಾಗುತ್ತದೋ?' ಎಂದು ತಿಳಿಯಬೇಕು.

## ಸುಧೆಯಲ್ಲಿ ಹಾಗೂ ಟೀಕೆಯಲ್ಲಿ ವಿಭಿನ್ನ ಪೂರ್ವಪಕ್ಷಗಳು

### तात्पर्यचन्द्रिका

**पूर्वपक्षस्तु – युक्तः पूर्वत्र वायुसूक्तस्थस्य प्राणश्रुतिमात्रस्य निरवकाशविष्णुलिङ्गै बाधः । अत्र तु ज्योतिश्श्रुतेः न बाधः, प्रकरणरूपेण सूक्तेन अनुगृहीतत्वात् । यद्यपि ज्योतिश्शब्दः तमोविरोधिमात्रे प्रसिद्धः, तथाऽपि हृदयाहितत्वलिङ्गात्, 'त्वामग्ने तमसि' इत्यग्निशब्दसन्निधानाच्च अग्निपरः, न त्वग्निसूक्तस्थत्वात् ज्योतिश्शब्दोऽग्निपरः, तथात्वे सूक्तस्य अग्निश्रुतिसम्पादकत्वेन श्रुत्यनुग्राहकत्वायोगात् । एतेन – ज्योतिश्शब्दाग्निशब्दौ देवतापरौ चेत् अन्तरधिकरणन्यायेन ब्रह्मपरौ, भूतपरौ चेत् आकाशाधिकरणन्यायेन ब्रह्मपरौ, सावकाशाग्निश्रुतेर्निरवकाशविष्णुलिङ्गैर्बाधात् ।**

**न चाग्निश्रुतिः प्रकरणानुगृहीतेति वाच्यम्, तत्तत्सूक्तस्थाग्न्यादिश्रुतीनां विष्णौ सावकाशत्वे सूक्तानामपि तथात्वात् । सर्वसूक्तानां वैष्णवत्वेऽपि इदमग्निसूक्तं इदं त्वन्यदिति व्यवस्था तु ''अभिव्यक्तेरित्याश्मरथ्यः'' इति वक्ष्यमाणन्यायेन युक्ता । एवञ्च सावकाशसूक्तस्य निरवकाशविष्णुलिङ्गैः सुतरां बाधेन पूर्वपक्षानुदय इति परास्तम् । सावकाशाग्निश्रुत्या सावकाशविष्णुलिङ्गबाधात् ।**

ಅನುವಾದ - ಪೂರ್ವಪಕ್ಷ - ಹಿಂದಿನ ಅಧಿಕರಣದಲ್ಲಿ ವಾಯುಸೂಕ್ತದ ಆಧಾರವಿಲ್ಲದ ಕೇವಲ ಪ್ರಾಣಶ್ರುತಿಗೆ ನಿರವಕಾಶವಿಷ್ಣುಲಿಂಗಗಳಿಂದ ಬಾಧವು ಹೇಳಲ್ಪಟ್ಟಿತ್ತು. ಈ ಅಧಿಕರಣದಲ್ಲಿ ಅದರಂತೆ ಜ್ಯೋತಿಶ್ಶ್ರುತಿಗೆ ಬಾಧವನ್ನು ಹೇಳಲಾಗದು. ಅಗ್ನಿಪ್ರಕರಣವೆಂಬ ಸೂಕ್ತದಿಂದ ಶ್ರುತಿಯು ಉಪೋದ್ಬಲಿತವಾಗಿದೆ.

ವಸ್ತುತಃ ಜ್ಯೋತಿಶಬ್ದವನ್ನು ಅಗ್ನಿಯಲ್ಲಷ್ಟೇ ಅಲ್ಲದೆ ಬೇರೆಡೆಯೂ ಪ್ರಯೋಗಿಸಬಹುದು. ಜ್ಯೋತಿಶಬ್ದವು 'ತಮೋವಿರೋಧಿ' ಎಂಬ ಅರ್ಥದಲ್ಲಷ್ಟೇ ಪ್ರಸಿದ್ಧವಾಗಿದೆ. ಆದ್ದರಿಂದ ಕೇವಲ ಅಗ್ನಿದೇವತೆಯೆಂಬ ಪೂರ್ವಪಕ್ಷವು ತಪ್ಪಲ್ಲವೇ? ಎಂಬ ಪ್ರಶ್ನೆಯು ಸಹಜ. ಆದರೆ ಶ್ರುತಿಯಲ್ಲಿ

'ಹೃದಯಆಹಿತತ್ವ' ಎಂಬ ಧರ್ಮವು ಜ್ಯೋತಿಯಲ್ಲಿ ಕೇಳಿಸುತ್ತಿದೆ. ಇದನ್ನು ತಮೋವಿರೋಧಿಯಾದ ಆದಿತ್ಯಾದಿಗಳಲ್ಲಿ ಹೇಳಲು ಸಾಧ್ಯವಿಲ್ಲ. ಅಷ್ಟೇ ಅಲ್ಲದೆ 'ತ್ವಾಮಗ್ನೇ ತಮಸಿ' ಎಂಬ ಅಗ್ನಿಶಬ್ದದ ಸನ್ನಿಧಾನವೂ ಜ್ಯೋತಿಶ್ರುತಿಗೆ ಇರುತ್ತದೆ. ಹೊರತು ಜ್ಯೋತಿಶಬ್ದವು ಅಗ್ನಿಪ್ರಕರಣದಲ್ಲಿರುವುದರಿಂದ ಅಗ್ನಿಪರವೆಂದು ಹೇಳಬಾರದು. ಹಾಗಾದರೆ ಪ್ರಕರಣವು ಅಗ್ನಿಶ್ರುತಿಸಂಪಾದಕವಾಗುತ್ತದೆ ಹೊರತು ಶ್ರುತಿಗೆ ಅನುಗ್ರಾಹಕವಾಗುವುದಿಲ್ಲ.

ಹೀಗೆ ಹೇಳಿದ್ದರಿಂದ ಮತ್ತೊಂದು ಪ್ರಶ್ನೆಯು ನಿರಾಕೃತವಾಯಿತು. ಪ್ರಶ್ನೆಯು ಹೀಗಿದೆ -- ''ಜ್ಯೋತಿಶಬ್ದ ಹಾಗೂ ಅಗ್ನಿಶಬ್ದಗಳು ದೇವತಾವಾಚಕಗಳೋ ಅಥವಾ ಭೂತವಾಚಕಗಳೋ? ದೇವತಾವಾಚಕವಾದರೆ ಅಂತರಧಿಕರಣನ್ಯಾಯದಿಂದ ಸಕಲದೇವತಾವಾಚಕಪದಗಳು ವಿಷ್ಣುಪರವೆಂದು ನಿರ್ಣಯವಾಗಿದೆ. ಭೂತವಾಚಕಗಳಾದರೆ ಆಕಾಶಾಧಿಕರಣನ್ಯಾಯದಿಂದ ವಿಷ್ಣುಪರವೆಂದು ನಿರ್ಣಯವಾಗಿದೆ. ಏಕೆಂದರೆ ಅಗ್ನಿಶ್ರುತಿಯು ಸಾವಕಾಶವಾದ್ದರಿಂದ ನಿರವಕಾಶವಿಷ್ಣುಲಿಂಗಗಳು ಅದನ್ನು ಬಾಧಿಸುತ್ತವೆ. ಅಗ್ನಿಶ್ರುತಿಯು ಪ್ರಕರಣದ ಅನುಗ್ರಹವನ್ನು ಹೊಂದಿದ್ದರಿಂದ ಬಲಿಷ್ಠವೆಂದು ಆಕ್ಷೇಪಿಸಬಾರದು. ಆಯಾ ಸೂಕ್ತಗಳಲ್ಲಿರುವ ಅಗ್ನ್ಯಾದಿಶ್ರುತಿಗಳು ವಿಷ್ಣುವಿನಲ್ಲಿ ಸಾವಕಾಶವಾದಾಗ ಆಯಾ ಸೂಕ್ತಗಳು ಕೂಡ ಸಾವಕಾಶವೇ ಆಗುತ್ತವೆ. ಹಾಗಾದರೆ ಎಲ್ಲಾ ಸೂಕ್ತಗಳನ್ನೂ ವಿಷ್ಣುಸೂಕ್ತಗಳೆಂದಂತಾಯಿತು, ಆವಾಗ ಇದು ಅಗ್ನಿಸೂಕ್ತ, ಇದು ವಿಷ್ಣುಸೂಕ್ತ ಎಂಬ ವ್ಯವಸ್ಥೆ ಹೇಗೆ? ಎಂಬ ಪ್ರಶ್ನೆಗೂ ಅವಕಾಶವಿಲ್ಲ. 'ಅಭಿವ್ಯಕ್ತೇರಿತ್ಯಾಶ್ಮರಥ್ಯಃ' ಎಂಬ ಸೂತ್ರದಲ್ಲಿ ಹೇಳಿದ ನ್ಯಾಯದಿಂದ ಈ ವ್ಯವಸ್ಥೆಯನ್ನು ಕೂಡಿಸಬಹುದು. ಆದ್ದರಿಂದ ಸಾವಕಾಶವಾದ ಸೂಕ್ತಕ್ಕೆ ನಿರವಕಾಶವಿಷ್ಣುಲಿಂಗಗಳಿಂದ ಬಾಧವನ್ನು ನಿಶ್ಚಯವಾಗಿ ಹೇಳಬಹುದು. ಆದ್ದರಿಂದ ಜ್ಯೋತಿರಧಿಕರಣದ ಪೂರ್ವಪಕ್ಷವೇ ಹುಟ್ಟಲು ಸಾಧ್ಯವಿಲ್ಲ'' ಎಂದು.

ಈ ಪ್ರಶ್ನೆಯು ತಪ್ಪು. ಏಕೆಂದರೆ ಯಾವರೀತಿಯಾಗಿ ಅಗ್ನಿಶ್ರುತಿಯು ಸಾವಕಾಶವಾಗಿದೆಯೋ ಅದರಂತೆ ವಿಷ್ಣುಲಿಂಗಗಳೂ ಸಾವಕಾಶವಾಗಿವೆ. ಎರಡೂ ಸಾವಕಾಶಗಳಾದಾಗ ಸಾವಕಾಶ ಅಗ್ನಿಶ್ರುತಿಯೇ ಪ್ರಬಲವಾಗುತ್ತದೆ. ಸಾವಕಾಶ ಅಗ್ನಿಶ್ರುತಿಯಿಂದ ಸಾವಕಾಶವಿಷ್ಣುಲಿಂಗಕ್ಕೆ ಬಾಧವನ್ನು ಹೇಳಬೇಕು. ಆದ್ದರಿಂದ ಜ್ಯೋತಿರಾದಿಶಬ್ದಗಳಿಂದ ಅಗ್ನಿದೇವತೆಯೇ ಪ್ರತಿಪಾದ್ಯನಾಗುತ್ತಾನೆಂಬ ಪೂರ್ವಪಕ್ಷವನ್ನು ಮಾಡಬಹುದು.

### ಕಠಿಣಪದಾರ್ಥ

ಅವಾಯುಸೂಕ್ತಸ್ಥಸ್ಯ = ವಾಯುಪ್ರಕರಣದಲ್ಲಿ ಇಲ್ಲದ; ತಥಾತ್ವೇ = ಅಗ್ನಿಪ್ರಕರಣದಲ್ಲಿರುವುದರಿಂದ ಜ್ಯೋತಿಃಶಬ್ದವು ಅಗ್ನಿಪರವಾದಲ್ಲಿ; ಏತೇನ = ಸೂಕ್ತಕ್ಕೆ ಶ್ರುತಿಯ ಅನುಗ್ರಹವನ್ನು ಹೇಳಿದ್ದರಿಂದ ಮತ್ತು ನಿರವಕಾಶಲಿಂಗವು ಇಲ್ಲದ್ದರಿಂದ; ಪ್ರಕರಣಾನುಗೃಹೀತ = ಅಗ್ನಿಸೂಕ್ತವೆಂಬ ಪ್ರಕರಣದ ಅನುಗ್ರಹ ಹೊಂದಿದ.

**ಪ್ರಕಾಶಃ** – ಪೂರ್ವನ್ಯಾಯಾವಿಷಯತ್ವಪ್ರದರ್ಶನಪೂರ್ವಂ ದ್ವಿವಿಧಂ ಪೂರ್ವಪಕ್ಷಂ ಸಙ್ಗ್ರಹೇಣ ನಿರ್ದಿಶತಿ – **ಯುಕ್ತ ಇತಿ** ॥ ಅತ್ರೈವಂ ಯೋಜನಾ – ಇದಂ ಜ್ಯೋತಿರಗ್ನಿರೇವ, ನ ವಿಷ್ಣುಃ, ಅಗ್ನೌ ನಿರೂಢಜ್ಯೋತಿಃಶ್ರುತೇಃ । ನಚ ಪೂರ್ವವಜ್ಜಿರವಕಾಶಲಿಙ್ಗೇನ ಜ್ಯೋತಿಃಶ್ರುತಿಬಾಧ ಇತಿ, ಯುಕ್ತಃ ಪೂರ್ವತ್ರ ವಾಯುಸೂಕ್ತಸ್ಥಸ್ಯೇತ್ಯಾದಿ ॥ **ಪ್ರಕರಣೇತಿ** ॥ ಉಪಲಕ್ಷಣಮೇತತ್, ಪೂರ್ವವಜ್ಜಿರವಕಾಶಲಿಙ್ಗಾಭಾವಾದಿತ್ಯಪಿ ಧ್ಯೇಯಮ್ । ''ಸೂಕ್ತೇನಾನುಗೃಹೀತತ್ವಾತ್'' ಇತಿ ಯುಕ್ತಿಃ ಆದ್ಯೇ ಪೂರ್ವಪಕ್ಷೇऽಭ್ಯುಚ್ಚಯತ್ವೇನ, ದ್ವಿತೀಯೇ ತು ಪೂರ್ವಪಕ್ಷೋತ್ಥಾನಾರ್ಥಮುಕ್ತೇತಿ ಧ್ಯೇಯಮ್ । ನನು ಪಕ್ಷದ್ವಯೇऽಪಿ ನ ಸೂಕ್ತಸ್ಯ ಶ್ರುತ್ಯನುಗ್ರಾಹಕತ್ವಂ, ಯಾವತಾ ಶ್ರುತೇಃ ಸವಿತ್ರಾದಿಪರತ್ವತ್ಯಾಜನೇನಾಗ್ನಾದಿಪರತ್ವಸಮ್ಪಾದನ ಏವೋಪಕ್ಷಯಾದಿತ್ಯಾಶಙ್ಕ್ಯಾನುಗ್ರಾಹಕತ್ವಂ ಸಾಧಯತಿ – **ಯದ್ಯಪೀತಿ** ॥ **ಹೃದಯೇತಿ** ॥ ತಚ್ಚ ಜಾಠರಜಾತವೇದಸಿ ಪ್ರಸಿದ್ಧಮಿತಿ ಭಾವಃ ॥ **ತ್ವಾಮಗ್ನ ಇತಿ** ॥

''**ವಿಶ್ವೇದೇವಾ ಅನಮಸ್ಯನ್ಭಿಯಾನಾ ತ್ವಾಮಗ್ನೇ ತಮಸಿ ತಸ್ಥಿವಾಸಮ್**'' ಇತಿ ಶ್ರವಣೇನ ತತ್ಸನ್ನಿಧಾನಾತ್ । ಛಾಗಪಶುನ್ಯಾಯೇನ ವಿಶೇಷಶ್ರುತ್ಯಾ ಸಾಮಾನ್ಯಶ್ರುತೇರರ್ಥೋಪಪತ್ತೇರಿತಿ ಭಾವಃ । ಏವಂ ಸೂಕ್ತಸ್ಯ ಶ್ರುತ್ಯನುಗ್ರಾಹಕತ್ವಂ ಸಮರ್ಥ್ಯ ಇದಾನೀಂ ಪೂರ್ವೇಣ ಗತಾರ್ಥತಯಾ ಪೂರ್ವಪಕ್ಷಾನುದಯಶಙ್ಕಾಪ್ರಕಾರಮನೂದ್ಯ ಸುಧೋಕ್ತದಿಶಾऽಧಿಕಾಶಙ್ಕಯೋತ್ಥಾನಂ ವಕ್ಷ್ಯನ್ ಲಿಙ್ಗಸ್ಯ ನಿರವಕಾಶತ್ವಾಭಾವಾತ್ ಅಧಿಕಾಶಙ್ಕಾಂ ವಿನೈವ ಪೂರ್ವಪಕ್ಷೋದಯ ಇತಿ ಭಾವೇನ ಟೀಕಾಭಿಮತಂ ಪಕ್ಷಂ ತಾವದ್ ವಿಶದಯತಿ – **ಏತೇನೇತ್ಯಾದಿನಾ** ॥ ಸೂಕ್ತಸ್ಯ ಶ್ರುತ್ಯನುಗ್ರಾಹಕತ್ವಕಥನೇನ ನಿರವಕಾಶಲಿಙ್ಗಾಭಾವೇನ ಚೇತ್ಯರ್ಥಃ ॥ **ಅನ್ತರಿತಿ** ॥ ನಿರವಕಾಶಲಿಙ್ಗೇನ ಸಾವಕಾಶದೇವತಾವಾಚಿಶ್ರುತೀನಾಂ ಪ್ರವೃತ್ತಿನಿಮಿತ್ತಸ್ಯಶ್ವರ್ಯಾದೇರ್ಭಗವದ್ಗತತ್ವೋಕ್ತ್ಯಾ ವಿಷ್ಣುವಾಚಿತ್ವಸಾಧನರೂಪನ್ಯಾಯೇನೇತ್ಯರ್ಥಃ ॥ **ಆಕಾಶೇತಿ** ॥ ಅಚೇತನಗತಸ್ಯಾಪಿ ಪ್ರವೃತ್ತಿನಿಮಿತ್ತಸ್ಯ ಭಗವದಧೀನತ್ವಾದಿಸಮರ್ಥನನ್ಯಾಯೇನ ಇತ್ಯರ್ಥಃ । ತಮೇವ ನ್ಯಾಯಮಾಹ – **ಸಾವಕಾಶೇತಿ** ॥ ಜ್ಯೋತಿಃಪದಪ್ರವೃತ್ತಿನಿಮಿತ್ತಸ್ಯ ಭಗವದ್ಗತತ್ವೇನ ತದಧೀನತ್ವೇನ ಚೇತಿ ಭಾವಃ ।

ಶ್ರುತೇರುಜ್ಜೀವಕಮಾಶಙ್ಕ್ಯ ತದಪಿ ಸಾವಕಾಶಮಿತ್ಯಾಹ – **ನಚೇತಿ** ॥ ಸೂಕ್ತರೂಪಪ್ರಕರಣೇತ್ಯರ್ಥಃ । ನನು ಸೂಕ್ತಾನಾಂ ವೈಷ್ಣವತ್ವೇ ಇದಮಗ್ನಿಸೂಕ್ತಮಿದಂ ವಿಷ್ಣುಸೂಕ್ತಮಿತಿ ವ್ಯವಸ್ಥಾನುಪಪತ್ತೇರ್ನಿರವಕಾಶತೇತ್ಯತ ಆಹ – **ಸರ್ವೇತಿ** ॥ **ವಕ್ಷ್ಯಮಾಣೇತಿ** ॥ ವೈಶ್ವಾನರಾಧಿಕರಣೇ ಅಗ್ನ್ಯಾದಿಶಬ್ದಾನಾಂ ವಿಷ್ಣೌ ಮುಖ್ಯತ್ವೇ ತತ್ತತ್ಸೂಕ್ತಾನಾಂ ತತ್ತದ್ವಿದ್ಯಾನಾಂ ಚ ವೈದಿಕಸಿದ್ಧವ್ಯವಸ್ಥಾನುಪಪತ್ತೇರನ್ಯವಾಚಿತ್ವಮೇವೇತಿ ಪ್ರಾಪ್ತೇ, ಅಗ್ನ್ಯಾದಿಸೂಕ್ತಾದಿಭಿರ್ವಿಷ್ಣೂಪಾಸನಾಯಾऽಗ್ನಾದಾವೇವ ವಿಷ್ಣೋರಭಿವ್ಯಕ್ತತ್ವಾದ್ವಾ, ಅಗ್ನ್ಯಾದಿಸೂಕ್ತಾದ್ಯುಪಾಸನಯಾऽಗ್ನಾದಾವೇವ ವಿಷ್ಣೋರನುಸ್ಮರಣೀಯತ್ವಾದ್ವಾ,

**तदुपासकानामग्रादिस्थविष्णुप्राप्तिरूपाद् वा, निमित्तात् सूक्तादिव्यवस्थोपपत्तेः अग्र्यादिशब्दानां विष्णौ मुख्यत्वं, सूक्तादीनां तत्परत्वे व्यवस्था च युज्यत इति सिद्धान्त इति वक्ष्यमाणन्यायेनेत्यर्थः ॥ सुतरामिति ॥ यदि जात्या प्रबलायाः श्रुतेर्बाधस्तदा स्वभावतोऽपि दुर्बलस्य प्रकरणस्य किमु वाच्यं बाध इतीत्यर्थः ।**

ವಿವರಣೆ - ಹಿಂದಿನ ಪ್ರಾಣಾಧಿಕರಣದ ನ್ಯಾಯವನ್ನು ಈ ಅಧಿಕರಣದಲ್ಲಿ ಇಟ್ಟುಕೊಳ್ಳಲಾಗದೆಂದು ತೋರಿಸುವುದಕ್ಕಾಗಿ ಎರಡುಬಗೆಯ ಪೂರ್ವಪಕ್ಷವನ್ನು 'ಯುಕ್ತಃ' ಇತ್ಯಾದಿ ಗ್ರಂಥದಿಂದ ಸಂಗ್ರಹಿಸುತ್ತಿದ್ದಾರೆ. ಈ ವಾಕ್ಯವನ್ನು ಹೀಗೆ ಯೋಜಿಸಿ ಅರ್ಥೈಸಿಕೊಳ್ಳಬೇಕು -- ಶ್ರುತಿಯಲ್ಲಿ ಕೇಳಿಸುತ್ತಿರುವ ಜ್ಯೋತಿಯು ಅಗ್ನಿಯೇ ಹೊರತು ವಿಷ್ಣುವಲ್ಲ. ಅಗ್ನಿಯಲ್ಲಿ ಜ್ಯೋತಿಶ್ರುತಿಯು ರೂಢವಾಗಿರುವುದರಿಂದ. ಹಿಂದಿನ ಪ್ರಾಣಾಧಿಕರಣದಂತೆ ನಿರವಕಾಶಲಿಂಗದಿಂದ ಜ್ಯೋತಿಶ್ರುತಿಯು ಬಾಧಿತವಾಗಬಹುದಲ್ಲವೇ? ಎಂದು ಪ್ರಶ್ನಿಸಬಾರದು. ಹಿಂದಿನ ಅಧಿಕರಣದಲ್ಲಿ ಪ್ರಕರಣದ ಬೆಂಬಲವಿಲ್ಲದ ಕಾರಣ ಪ್ರಾಣಶ್ರುತಿಯು ಲಿಂಗದಿಂದ ಬಾಧಿತವಾಗಿತ್ತು. ಆದರೆ ಈ ಅಧಿಕರಣದಲ್ಲಿ ಅಗ್ನಿಪ್ರಕರಣದ ಬೆಂಬಲವಿರುವುದರಿಂದ ಜ್ಯೋತಿಶ್ರುತಿಗೆ ಲಿಂಗದಿಂದ ಬಾಧವನ್ನು ಹೇಳಲಾಗದು.-- ಎಂದು.

ಗ್ರಂಥದಲ್ಲಿ ಜ್ಯೋತಿಶ್ರುತಿಯು ಬಾಧಿತವಾಗುವುದಿಲ್ಲವೆನ್ನಲು ಪ್ರಕರಣವನ್ನು ಹೇತುವನ್ನಾಗಿ ಹೇಳಿದ್ದಾರೆ. ನಿರವಕಾಶಲಿಂಗವಿಲ್ಲವೆಂಬುದನ್ನು ಕೂಡ ಉಪಲಕ್ಷಣಯಾ ಇಟ್ಟುಕೊಳ್ಳಬೇಕು. ಗ್ರಂಥದಲ್ಲಿ ಹೇಳಿದ 'ಸೂಕ್ತೇನ ಅನುಗೃಹೀತತ್ವಾತ್' ಎಂಬ ಯುಕ್ತಿಯು ಪ್ರಥಮಪೂರ್ವಪಕ್ಷದಲ್ಲಿ ಅಧಿಕಯುಕ್ತಿ ಎನಿಸಿದೆ. ಎರಡನೆಯ ಪೂರ್ವಪಕ್ಷದಲ್ಲಿ ಪೂರ್ವಪಕ್ಷದ ಸ್ಥಾಪನೆಗೋಸ್ಕರ ಹೇಳಲ್ಪಟ್ಟಿದೆ ಎಂದು ತಿಳಿಯಬೇಕು.

ಎರಡೂ ಪಕ್ಷಗಳಲ್ಲಿ ಸೂಕ್ತವು ಶ್ರುತಿಗೆ ಅನುಗ್ರಾಹಕವಾಗುವುದಿಲ್ಲ. ಏಕೆಂದರೆ 'ಶ್ರುತಿಯು ಆದಿತ್ಯಾದಿಗಳನ್ನು ಪ್ರತಿಪಾದಿಸುವುದಿಲ್ಲ ಹೊರತಾಗಿ ಅಗ್ನ್ಯಾದಿದೇವತೆಗಳನ್ನು ಪ್ರತಿಪಾದಿಸುತ್ತದೆ' ಎಂಬುದನ್ನಷ್ಟೇ ಸೂಕ್ತವು ತಿಳಿಸುವುದರಲ್ಲಿ ತಾತ್ಪರ್ಯವನ್ನು ಹೊಂದಿದೆ. ಹೀಗಿರುವಾಗ ಶ್ರುತಿಗೆ ಸೂಕ್ತವು ಹೇಗೆ ಅನುಗ್ರಾಹಕವಾಗುತ್ತದೆ ಎಂಬ ಪ್ರಶ್ನೆ ಬಂದರೆ ಅದನ್ನು ನಿರಾಕರಿಸುವುದಕ್ಕಾಗಿ 'ಯದ್ಯಪಿ' ಇತ್ಯಾದಿ ಗ್ರಂಥವು ಹೊರಟಿದೆ. ಹೃದಯ ಅಹಿತತ್ವಧರ್ಮವನ್ನು ಆದಿತ್ಯಾದಿಗಳಲ್ಲಿ ಹೇಳಲು ಹೇಗೆ ಸಾಧ್ಯವಿಲ್ಲವೋ ಆದರಂತೆ ಅಗ್ನಿಯಲ್ಲಿಯೂ ಹೇಳಲಾಗದೆಂಬ ಶಂಕೆಯು ಬರುತ್ತದೆ. ಆದರೆ ಜಠರಾಗ್ನಿಗೆ ಹೃದಯ-ಸನ್ನಿಧಾನವಿರುವುದರಿಂದ ಹೃದಯಾಹಿತತ್ವಧರ್ಮವನ್ನು ಹೇಳಬಹುದು.

''ವಿಶ್ವೇದೇವಾ ಅನಮಸ್ಯನ್ಭಯಾನಾಸ್ತ್ವಮಗ್ನೇ ತಮಸಿ ತಸ್ಥಿವಾಂಸಮ್' ಎಂದು ಅಗ್ನಿಶಬ್ದದ ಸನ್ನಿಧಾನವು ಜ್ಯೋತಿಯಲ್ಲಿ ಕೇಳಿಸುತ್ತಿದೆ. ಇದನ್ನು ಗ್ರಂಥಕಾರರು 'ತ್ವಾಮಗ್ನೇ' ಎಂಬುದರಿಂದ ಹೇಳಿದ್ದಾರೆ. ಪೂರ್ವಮೀಮಾಂಸೆಯ ಸಾಮಾನ್ಯಪಶುವಿಧಾಯಕಪ್ರಕರಣದಲ್ಲಿ ವಿಶೇಷಶ್ರುತಿಯನ್ನು ಆನುಸರಿಸಿ ಛಾಗಪಶುವನ್ನು ವಿವಕ್ಷಿಸಲಾಗುತ್ತದೆ. ಆದರಂತೆ ಇಲ್ಲಿಯೂ ಸಹ ಸಾಮಾನ್ಯಶ್ರುತಿಯೆನಿಸಿದ ಜ್ಯೋತಿಃ-ಶ್ರುತಿಯನ್ನು ಅಗ್ನಿಶ್ರುತಿಯೆಂಬ ವಿಶೇಷಶ್ರುತಿಯಿಂದ ಅರ್ಥೈಸಿಕೊಳ್ಳಬೇಕು.

ಇಲ್ಲಿಯ ತನಕ ಅಗ್ನಿಸೂಕ್ತವು ಶ್ರುತಿಗೆ ಅನುಗ್ರಾಹಕವಾಗುತ್ತದೆಂಬುದನ್ನು ಸಮರ್ಥಿಸಿದ್ದಾಯಿತು. ಈಗ ಹಿಂದಿನ ಅಧಿಕರಣದಿಂದ ಈ ಅಧಿಕರಣವು ಗತಾರ್ಥವಾಗುತ್ತದೆ; ಆದ್ದರಿಂದ ಪೂರ್ವಪಕ್ಷವೇ ಹುಟ್ಟಲಾರದೆಂಬ ಶಂಕೆಯನ್ನು ಪರಿಹರಿಸುವುದಕ್ಕಾಗಿ ಸುಧೆಯಲ್ಲಿ ಹೇಳಿದ ಅಧಿಕಾಶಂಕೆಯನ್ನು ಮುಂದೆ ತೋರಿಸುವವರಿದ್ದಾರೆ. ಅದಕ್ಕಿಂತ ಮೊದಲು ಲಿಂಗವು ನಿರವಕಾಶವಾಗದ ಕಾರಣ ಅಧಿಕಾಶಂಕೆಯನ್ನು ಮಾಡದೆ ಪೂರ್ವಪಕ್ಷ ಮಾಡಬಹುದೆಂಬ ಟೀಕೆಯ ಅಭಿಪ್ರಾಯವನ್ನು 'ಏತೇನ' ಇತ್ಯಾದಿ ಗ್ರಂಥದಿಂದ ವಿವರಿಸುತ್ತಿದ್ದಾರೆ.

ಅಂತರಧಿಕರಣನ್ಯಾಯೇನ – ನಿರವಕಾಶಲಿಂಗದಿಂದ ದೇವತಾವಾಚಕವಾದ ಸಾವಕಾಶಶ್ರುತಿಗಳು ಬಾಧಿತವಾಗುತ್ತವೆ. ಆದ್ದರಿಂದ ಆಯಾ ಶ್ರುತಿಗಳ ಪ್ರವೃತ್ತಿನಿಮಿತ್ತವೆನಿಸಿದ ಐಶ್ವರ್ಯಾದಿಧರ್ಮಗಳು ಭಗವಂತನಲ್ಲಷ್ಟೇ ಬರುತ್ತವೆ ಹೊರತು ಇಂದ್ರಾದಿಗಳಲ್ಲಿ ಬರುವುದಿಲ್ಲ. ಆದ್ದರಿಂದ ದೇವತಾವಾಚಕವಾದ ಶಬ್ದಗಳೆಲ್ಲವೂ ವಿಷ್ಣುವನ್ನೇ ಪ್ರತಿಪಾದಿಸುತ್ತವೆ. ಇದು ಅಂತರಧಿಕರಣದ ನ್ಯಾಯ.

ಆಕಾಶಾಧಿಕರಣನ್ಯಾಯೇನ – ಅಚೇತನಪದಾರ್ಥಗಳನ್ನು ಪ್ರತಿಪಾದಿಸುವ ಆಕಾಶಾದಿ ಶಬ್ದಗಳ ಪ್ರವೃತ್ತಿನಿಮಿತ್ತವು ಭಗವಂತನ ಅಧೀನವಾಗಿವೆ. ಇದು ಆಕಾಶಾಧಿಕರಣದ ನ್ಯಾಯ.

ಈ ನ್ಯಾಯವನ್ನೇ 'ಸಾವಕಾಶ' ಇತ್ಯಾದಿ ಗ್ರಂಥದಿಂದ ಹೇಳುತ್ತಿದ್ದಾರೆ. ಜ್ಯೋತಿಃ = ಜ್ಯೋತಿ ಎಂಬ ಪದದ ಪ್ರವೃತ್ತಿನಿಮಿತ್ತವು ಭಗವದ್ಗತವಾಗಿದೆ ಮತ್ತು ಭಗವಂತನ ಅಧೀನವಾಗಿದೆ. ಆದ್ದರಿಂದ ಜ್ಯೋತಿಶಬ್ದದಿಂದ ಭಗವಂತನೇ ಪ್ರತಿಪಾದ್ಯನಾಗಿದ್ದಾನೆ. ಶ್ರುತಿಯು ಪ್ರಕರಣದಿಂದ ಉಪೋದ್ಬಲಿತವಾಗಿದೆಯೆಂದು ಶಂಕಿಸಿ, ಪ್ರಕರಣವೂ ಕೂಡ ಸಾವಕಾಶವಾಗಿದೆಯೆಂದು 'ನಚ' ಇತ್ಯಾದಿ ಗ್ರಂಥದಿಂದ ಸಮರ್ಥಿಸುತ್ತಿದ್ದಾರೆ.

ಎಲ್ಲಾ ಸೂಕ್ತಗಳೂ ವಿಷ್ಣುಪರವಾದರೆ 'ಇದು ಅಗ್ನಿಸೂಕ್ತ' 'ಇದು ವಿಷ್ಣುಸೂಕ್ತ' ಎಂಬ ವ್ಯವಸ್ಥೆಯೇ ಕೂಡಲಾರದು; ಆದ್ದರಿಂದ ಸೂಕ್ತಪ್ರಮಾಣವನ್ನು ನಿರವಕಾಶ ಎಂದು ಹೇಳಬೇಕಲ್ಲವೇ? ಎಂಬ ಪ್ರಶ್ನೆಗೆ 'ಸರ್ವಸೂಕ್ತಾನಾಂ' ಎಂಬ ಗ್ರಂಥದಿಂದ ಉತ್ತರಿಸುತ್ತಿದ್ದಾರೆ.

ಪ್ರತಿಯೊಂದು ಸೂಕ್ತಗಳೂ ವಿಷ್ಣುವನ್ನೇ ಪ್ರತಿಪಾದಿಸುತ್ತವೆ. ಆದರೂ ಸಹ ಇದು ಅಗ್ನಿಸೂಕ್ತ, ಇದು ವಿಷ್ಣುಸೂಕ್ತ ಎಂಬ ವ್ಯವಸ್ಥೆಗೆ ಅಡ್ಡಿಯಿಲ್ಲ. ಈ ವಿಚಾರವನ್ನು ವೈಶ್ವಾನರಾಧಿಕರಣದಲ್ಲಿ ಸಮರ್ಥಿಸಿದ್ದಾರೆ. ಅದು ಹೀಗೆ -- ಅಗ್ನ್ಯಾದಿಶಬ್ದಗಳು ವಿಷ್ಣುವಿನಲ್ಲಿ ಮುಖ್ಯವಾದರೆ ಆಯಾ ಸೂಕ್ತಗಳಿಗೆ ಹಾಗೂ ಆಯಾ ವಿದ್ಯೆಗಳಿಗೆ ಅಗ್ನ್ಯಾದಿಸೂಕ್ತವೆಂಬ ವೈದಿಕವ್ಯವಸ್ಥೆಯೇ ತಪ್ಪಾದೀತು. ಅದಕ್ಕೋಸ್ಕರ ಅಗ್ನ್ಯಾದಿಪರತ್ವವನ್ನು ಅಗ್ನ್ಯಾದಿಶಬ್ದಗಳಿಗೆ ಹೇಳಬೇಕೆಂದು ಪೂರ್ವಪಕ್ಷ.

ಈ ಪೂರ್ವಪಕ್ಷವನ್ನು ಮೂರು ಬಗೆಯಲ್ಲಿ ಪರಿಹರಿಸಿದ್ದಾರೆ. (೧) 'ಓಂ॥ಅಭವ್ಯಕ್ತೇರಿತ್ಯಾಶ್ಮರಥ್ಯಃ॥ ಓಂ' ಅಗ್ನಿಮೊದಲಾದ ಸೂಕ್ತಗಳಿಂದ ವಿಷ್ಣುವನ್ನು ಉಪಾಸನೆ ಮಾಡಬೇಕು. ಇದರಿಂದ ಅವುಗಳಲ್ಲಿ ವಿಷ್ಣುವು ಅಭಿವ್ಯಕ್ತನಾಗುತ್ತಾನೆ. ಈ ವಿಚಾರವನ್ನು ತಿಳಿಸುವುದಕ್ಕಾಗಿ ಅಗ್ನ್ಯಾದಿಸೂಕ್ತವೆಂಬ ನಿಯಮವು ಇರುತ್ತದೆ ಎಂದು ಆಶ್ಮರಥ್ಯಾಚಾರ್ಯರ ಅಭಿಪ್ರಾಯ.

(೨) 'ಓಂ॥ಅನುಸ್ಮೃತೇರ್ಬಾದರಿಃ॥ಓಂ' ಅಗ್ನಿಮೊದಲಾದ ಸೂಕ್ತಗಳಿಂದ ಬ್ರಹ್ಮನನ್ನು ಉಪಾಸನೆ ಮಾಡಬೇಕು. ಆ ಸೂಕ್ತಗಳಲ್ಲಿ ಹೇಳಿದ ವಿಶೇಷಣಗಳನ್ನು ಬ್ರಹ್ಮನಲ್ಲಿ ಅನುಸಂಧಾನ ಮಾಡಿದಾಗ ಅಗ್ನಿ ಮುಂತಾದ ಪ್ರತೀಕಗಳಲ್ಲಿ ಬ್ರಹ್ಮನು ಪ್ರಕಟನಾಗುತ್ತಾನೆ. ಆದ್ದರಿಂದ ಅಗ್ನ್ಯಾದಿಸೂಕ್ತವ್ಯವಸ್ಥೆಯು ಉಪಪನ್ನವಾಗುತ್ತದೆ ಎನ್ನುತ್ತಾರೆ ಬಾದರಿ ಆಚಾರ್ಯರು.

(೩) 'ಓಂ॥ಸಂಪತ್ತೇರಿತಿ ಜೈಮಿನಿಸ್ತಥಾ ಹಿ ದರ್ಶಯತಿ॥ಓಂ' ಅಗ್ನಿಸೂಕ್ತದಿಂದ ಭಗವಂತನನ್ನು ಉಪಾಸನೆ ಮಾಡಿದಾಗ ಅಗ್ನಿ ಮೊದಲಾದ ರೂಪಗಳಿಂದ ಭಗವಂತನು ದೊರೆಯುತ್ತಾನೆ. ಈ ವಿಚಾರವನ್ನು ತಿಳಿಸುವುದಕ್ಕಾಗಿ ಸೂಕ್ತವ್ಯವಸ್ಥೆಯು ಸಾರ್ಥಕವೆಂದು ಜೈಮಿನಿಗಳ ಅಭಿಪ್ರಾಯ. ಹೀಗೆ ಮೂರುಬಗೆಯಲ್ಲಿ ಸೂಕ್ತಾದಿವ್ಯವಸ್ಥೆಯನ್ನು ಹೊಂದಿಸಬಹುದು. ಆದ್ದರಿಂದ ಅಗ್ನಿ ಮೊದಲಾದ ಶಬ್ದಗಳಿಂದ ವಿಷ್ಣುವೇ ಮುಖ್ಯವಾಗಿ ಪ್ರತಿಪಾದ್ಯನಾಗುತ್ತಾನೆ ಎಂಬ ಸಿದ್ಧಾಂತವನ್ನು ವೈಶ್ವಾನರಾಧಿಕರಣದಲ್ಲಿಯೇ ವಿವರಿಸುತ್ತೇವೆ.

ಸುತರಾಂ ಬಾಧೇನ -- ಸ್ವಭಾವತಃ ಪ್ರಬಲವಾದ ಶ್ರುತಿಯೇ ಯಾವಾಗ ಬಾಧಿತವಾಗುತ್ತದೋ, ಆವಾಗ ಸ್ವಭಾವತಃ ದುರ್ಬಲವಾದ ಪ್ರಕರಣವು ಬಾಧಿತವಾಗುತ್ತದೆಂದು ಪ್ರತ್ಯೇಕ ಹೇಳಬೇಕೇನು? ಎಂದು ಇದರ ಅರ್ಥ.

**गुरुराजीयम् – नत्वग्निसूक्तस्थत्वादिति ॥** सूक्तं प्रकरणमित्यर्थः । प्रथमोपस्थितशब्दलिङ्गाभ्यामेवाग्निपरत्वे सम्भवति जघन्यप्रकरणप्रतीक्षणायोगादिति भावः । श्रुत्यनुग्राहकत्वायोगात् ॥ तथाच न निरवकाशलिङ्गबाधकत्वं तस्येति शेषः । यावता श्रुतित एव लिङ्गं दुर्बलमित्यादिटीकामवतारयति – **एतेन इत्यादिना ॥ विष्णुलिङ्गैर्बाधादिति ॥** हृद्याहितत्वं विश्वेदेवा अनमस्यन् भियाना इति सर्वदेवोपास्यत्वमित्यादिलिङ्गसाहित्येन सिद्धान्तलिङ्गानां बाहुल्यं ज्ञेयम् ॥ **सुतरां बाधेनेति ॥** बाध्यदौर्बल्यातिशयस्य बाध उपचारोऽयमिति हृदयम् ।

## ಸಾರ

ಎರಡು ಪೂರ್ವಪಕ್ಷಗಳನ್ನು ಸಂಕ್ಷೇಪವಾಗಿ ಹೀಗೆ ಹೇಳಬಹುದು. (೧) ಹಿಂದಿನ ಪ್ರಾಣಾಧಿಕರಣದಲ್ಲಿ ಶ್ರೀಪತಿತ್ವಾದಿಲಿಂಗಗಳು ವಿಷ್ಣುವಿನಲ್ಲಿ ನಿರವಕಾಶಗಳಾಗಿವೆ. ಪ್ರಾಣಶ್ರುತಿಯು ಸಾವಕಾಶವಾದ್ದರಿಂದ ಬಾಧಿತವಾಗುತ್ತದೆಂದು ಸಮರ್ಥಿಸಲಾಯಿತು. ಆದರಂತೆ ಈ ಅಧಿಕರಣದಲ್ಲಿ ಶ್ರುತಿಗೆ ಬಾಧವನ್ನು ಹೇಳಲಾಗದು. ಏಕೆಂದರೆ ಅಗ್ನಿಶ್ರುತಿಗೆ ಅಗ್ನಿಪ್ರಕರಣದ ಬೆಂಬಲವಿದೆ. ಇದು ಸುಧೆಯ ಪೂರ್ವಪಕ್ಷ.

(೨) ಜ್ಯೋತಿಃಶ್ರುತಿ ಹಾಗೂ ವಿಷ್ಣುಲಿಂಗಗಳು ಎರಡೂ ಸಾವಕಾಶವಾಗಿವೆ. ಇವೆರಡರಲ್ಲಿ ಸ್ವಭಾವತಃ ಸಾವಕಾಶಶ್ರುತಿಯೇ ಪ್ರಬಲವೆನಿಸುತ್ತದೆ. ಇಂತಹ ಶ್ರುತಿಯಿಂದ ವಿಷ್ಣುಲಿಂಗವು ಬಾಧಿತವಾಗುತ್ತದೆ. ಇದು ಟೀಕೆಯ ಪೂರ್ವಪಕ್ಷ.

ಸಹಜವಾಗಿ ಇಲ್ಲೊಂದು ಪ್ರಶ್ನೆ ಬರುತ್ತದೆ. ''ಜ್ಯೋತಿಶಬ್ದವು ದೇವತಾಪರವಾದರೆ ಆಂತರಧಿಕರಣ-ನ್ಯಾಯದಿಂದ ವಿಷ್ಣುಪರವೆಂದು ಸಿದ್ಧವಾಗುತ್ತದೆ. ಭೂತಪರವಾದರೆ ಆಕಾಶಾಧಿಕರಣನ್ಯಾಯದಿಂದ ವಿಷ್ಣುಪರವಾಗುತ್ತದೆ. ಹೀಗೆ ಸಾವಕಾಶವಾದ ಜ್ಯೋತಿಶ್ರುತಿಯು ನಿರವಕಾಶವಿಷ್ಣುಲಿಂಗದಿಂದ ಬಾಧಿತ-ವಾಗುತ್ತದಲ್ಲವೇ? ಹೀಗಿರುವಾಗ ಜ್ಯೋತಿರಧಿಕರಣದ ಪೂರ್ವಪಕ್ಷವನ್ನು ಹೇಗೆ ಮಾಡುತ್ತೀರಿ? ಇನ್ನು ಪ್ರಕರಣದ ಬೆಂಬಲವನ್ನು ಜ್ಯೋತಿಶ್ರುತಿಗೆ ಹೇಳಬೇಕು. ಆದರೆ ಶ್ರುತಿಯಂತೆ ಪ್ರಕರಣವೂ ಕೂಡ ಸಾವಕಾಶವಾದಾಗ ಶ್ರುತಿಯನ್ನು ಹೇಗೆ ತಾನೇ ಉಜ್ಜೀವನ ಮಾಡುತ್ತದೆ?'' ಎಂದು. ಈ ಪ್ರಶ್ನೆಗೆ ಇಷ್ಟೇ ಉತ್ತರ -- ಶ್ರುತಿ ಹಾಗೂ ಲಿಂಗಗಳು ಎರಡೂ ಸಾವಕಾಶವಾದಾಗ ಶ್ರುತಿಯೇ ಪ್ರಬಲವಾಗುತ್ತದೆ. ಆದ್ದರಿಂದ ಜ್ಯೋತಿರಧಿಕರಣದ ಪೂರ್ವಪಕ್ಷ ಹೊರಡಲು ಏನೂ ತೊಂದರೆ ಇಲ್ಲ.

---

## ಶ್ರುತಿಲಿಂಗಗಳ ಬಲಾಬಲ ವ್ಯವಸ್ಥೆ

### ತಾತ್ಪರ್ಯಚನ್ದ್ರಿಕಾ

**नन्वेवं सावकाशलिङ्गस्य सावकाशश्रुत्यैव बाधसम्भवात् भाष्ये सूक्तोक्ति-र्व्यर्था । नच ''ज्योतिः'' इति सामान्यश्रुतेरग्निरूपविशेषपर्यवसानार्थं तदुक्तिः, टीकायां ''श्रुतिप्रकरणयोः'' इति द्विवचनस्य, भाष्ये 'अग्निसूक्तस्थत्वाच्च' इति चशब्दस्य चायोगात् । सामान्यश्रुतेः ''त्वामग्ने'' इति विशेषोपस्थापके शब्दे सति प्रकरणाप्रतीक्षणाच्चेति चेन्न, लिङ्गस्यातिशयेन बाधाय सूक्तोक्तेः । अत एवोक्तं टीकायां ''यावता श्रुतित एव लिङ्गं दुर्बलम्'' इति ।**

**निरवकाशं तु विष्णुलिङ्गं नास्ति, गुहानिहितत्वस्य जाठराग्नावपि सम्भवात् । निरतिशयवैभवरूपकर्णादिदूरत्वस्य 'चाग्निश्रुत्यादिबलात्' अग्नावप्युपपत्तेः ।**

**सुधायां तु – ज्योतिरधिकरणे 'अधिकाशङ्का ''अग्निसूक्तस्थत्वात्'' इति भाष्य एव दर्शिता'' इत्युक्तम् तत्र च श्रुतिमात्रेण पूर्वपक्षानुदयात् तदुदयार्थ-मधिकाशङ्कोक्तिरिति नाभिप्रायः, उक्तरीत्या सूक्ताभावेऽपि पूर्वपक्षोदयसम्भवात्, किन्तु पूर्वपक्षदार्ढ्यार्थं तदुक्तिरित्यभिप्रायः ।**

**यद्वा – सुधायां प्राणाद्यधिकरणेषु अधिकाशङ्काप्रदर्शकस्य अनुव्याख्यानस्य ''नन्वेतदपि पूर्वन्यायेन परिहृतं, न सूत्रारम्भं प्रयोजयतीत्यतोऽभ्यधिकाशङ्कं**

**'दर्शयति' इत्यवतारितत्वात्, इहापि पूर्वपक्षोदयार्थमेव भाष्येऽधिकाशङ्कोक्तिरिति सुधाभिप्रायः ।**

ಅನುವಾದ - ಪ್ರಶ್ನೆ - ಲಿಂಗ ಹಾಗೂ ಶ್ರುತಿ ಎರಡೂ ಸಾವಕಾಶಗಳಾದಾಗ ಶ್ರುತಿಯೇ ಬಲಿಷ್ಠವಾಗುತ್ತದೆ. ಲಿಂಗವು ದುರ್ಬಲವಾಗಿ ಬಾಧಿತವಾಗುತ್ತದೆ. ಇಷ್ಟೇ ಹೇಳಲು ಬರುವಾಗ ಭಾಷ್ಯ-ದಲ್ಲಿ ಪ್ರಕರಣವನ್ನು ಉಲ್ಲೇಖಿಸಿದ್ದು ಅನಾವಶ್ಯಕ. ಶ್ರುತಿಯಲ್ಲಿರುವ ಜ್ಯೋತಿಶಬ್ದವು ಅಗ್ನಿಯನ್ನೇ ಪ್ರತಿಪಾದಿಸುತ್ತದೆಂದು ತಿಳಿಯುವುದಿಲ್ಲ. ಸಾಮಾನ್ಯವಾಗಿ ಜ್ಯೋತಿಯೆಂದಷ್ಟೇ ತಿಳಿಯುತ್ತದೆ. ಅಗ್ನಿಯೆಂಬ ವಿಶೇಷಾರ್ಥದಲ್ಲಿ ಪರ್ಯವಸಾನವಾಗುವುದಕ್ಕಾಗಿ ಪ್ರಕರಣವು ಅನಿವಾರ್ಯವೆಂದು ಹೇಳಬಾರದು.

ಏಕೆಂದರೆ ಟೀಕೆಯಲ್ಲಿ 'ಶ್ರುತಿಪ್ರಕರಣಯೋಃ' ಎಂದು ಶ್ರುತಿ ಮತ್ತು ಪ್ರಕರಣಗಳನ್ನು ದ್ವಿವಚನ-ಪ್ರಯೋಗದಿಂದ ಸಮಾನಕಕ್ಷೆಯಲ್ಲಿ ಉಲ್ಲೇಖಿಸಿದ್ದಾರೆ. ಭಾಷ್ಯದಲ್ಲಿಯೂ ಸಹ 'ಅಗ್ನಿಸೂಕ್ತಸ್ಥತ್ವಾಚ್ಚ' ಎಂದು 'ಚ'ಶಬ್ದದಿಂದ ಪ್ರಕರಣಪ್ರಮಾಣವನ್ನು ಸಮಾನಕಕ್ಷೆಯಲ್ಲಿಯೇ ಸೂಚಿಸಿದ್ದಾರೆ. ಒಂದು ವೇಳೆ ಶ್ರುತಿಗೆ ಪ್ರಕರಣವು ಅನುಗ್ರಾಹಕವಾದಲ್ಲಿ ಟೀಕೆಯಲ್ಲಿರುವ ದ್ವಿವಚನಪ್ರಯೋಗವಾಗಲೀ ಭಾಷ್ಯ-ದಲ್ಲಿರುವ ಚಶಬ್ದಪ್ರಯೋಗವಾಗಲೀ ಅಯುಕ್ತವಾಗುತ್ತದೆ. ಸಾಮಾನ್ಯಶ್ರುತಿಗೆ 'ತ್ವಾಮಗ್ನೇ' ಎಂಬ ವಿಶೇಷಶ್ರುತಿಯ ಸನ್ನಿಧಾನದಿಂದಲೇ ಅಗ್ನಿಪರವೆಂದು ತಿಳಿಯಬಹುದು. ಇದಕ್ಕೋಸ್ಕರ ಪ್ರಕರಣದ ನಿರೀಕ್ಷೆಯಿರುವುದಿಲ್ಲ.

ಉತ್ತರ - ವಸ್ತುತಃ ಸಾವಕಾಶಶ್ರುತಿಯಿಂದ ಸಾವಕಾಶಲಿಂಗವು ಬಾಧಿತವಾಗುತ್ತದೆಂಬುದರಲ್ಲಿ ಸಂದೇಹವಿಲ್ಲ. ಆದರೆ ಲಿಂಗವು ಸುತರಾಂ ಬಾಧಿತವಾಗುತ್ತದೆಂದು ತಿಳಿಸಲು ಪ್ರಕರಣದ ಬೆಂಬಲ-ವನ್ನು ಆಶ್ರಯಿಸಿದ್ದಾರೆ. ಆದ್ದರಿಂದಲೇ ಟೀಕೆಯಲ್ಲಿ 'ಯಾವತಾ ಶ್ರುತಿತ ಏವ ಲಿಂಗಂ ದುರ್ಬಲಮ್' (ಲಿಂಗವು ಶ್ರುತಿಯಿಂದ ಬಾಧಿತವೇ ಆಗಿರುವಾಗ) ಇತ್ಯಾದಿ ಮಾತುಗಳು ಹೊರಟಿವೆ.

ಇನ್ನು ಲಿಂಗವು ನಿರವಕಾಶವಾಗಿದ್ದಲ್ಲಿ ವಿಷ್ಣುಪರತ್ವವನ್ನು ನಿಶ್ಚಯಿಸಬಹುದಿತ್ತು. ಆದರೆ ನಿರವಕಾಶವಾದ ವಿಷ್ಣುಲಿಂಗಗಳೇ ಕೇಳಿಸುತ್ತಿಲ್ಲ. ಗುಹಾನಿಹಿತತ್ವ ಲಿಂಗವಾದರೂ ಜಾಠರಾಗ್ನಿಯಲ್ಲಿ ಸಾವಕಾಶವಾಗಿದೆ. ನಿರತಿಶಯವೈಭವವೆಂಬ ಕರ್ಣಾದಿವಿದೂರತ್ವಲಿಂಗವಾದರೂ ಅಗ್ನಿಶ್ರುತಿಯ ಬಲದಿಂದ ಅಗ್ನಿಯಲ್ಲಿಯೂ ಸಾವಕಾಶವಾಗಿದೆ. ಹೀಗೆ ವಿಷ್ಣುಲಿಂಗಗಳೆಲ್ಲವೂ ಸಾವಕಾಶವಾಗಿರುವಾಗ ಜ್ಯೋತಿಶಬ್ದವು ವಿಷ್ಣುವನ್ನು ಪ್ರತಿಪಾದಿಸಲು ಸಾಧ್ಯವಿಲ್ಲ.

ಸುಧೆಯ ಜ್ಯೋತಿರಧಿಕರಣದಲ್ಲಿ 'ಅಧಿಕಾಶಂಕಾ ಅಗ್ನಿಸೂಕ್ತಸ್ಥತ್ವಾದಿತಿ ಭಾಷ್ಯ ಏವ ದರ್ಶಿತಾ' (ಅಗ್ನಿಸೂಕ್ತದಲ್ಲಿರುವಿಕೆ ಎಂಬ ಅಧಿಕಾಶಂಕೆಯು ಭಾಷ್ಯದಲ್ಲಿಯೇ ತೋರಿಸಲಾಗಿದೆ) ಎಂಬ ವಾಕ್ಯವು ಕೇಳಿಸುತ್ತಿದೆ. ಈ ವಾಕ್ಯವು 'ಕೇವಲ ಶ್ರುತಿಯಿಂದ ಪೂರ್ವಪಕ್ಷವು ಹುಟ್ಟುವುದಿಲ್ಲ. ಅದಕ್ಕೋಸ್ಕರ

ಅಧಿಕಾಶಂಕೆಯು ಹೊರಟಿದೆ' ಎಂಬ ಅಭಿಪ್ರಾಯದಿಂದ ಹೊರಟಿಲ್ಲ. ಹೊರತಾಗಿ ಹಿಂದೆ ಹೇಳಿದ ಪ್ರಕಾರ ಪ್ರಕರಣದ ಬೆಂಬಲವಿಲ್ಲದಿದ್ದರೂ ಕೇವಲ ಶ್ರುತಿಯಿಂದ ಪೂರ್ವಪಕ್ಷವು ಹುಟ್ಟುತ್ತದೆ. ಪೂರ್ವಪಕ್ಷದ ದಾರ್ಢ್ಯಕ್ಕಾಗಿ ಅಧಿಕಾಶಂಕೆಯನ್ನು ಮಾಡಿದ್ದಾರೆ.

ಅಥವಾ ಸುಧೆಯಲ್ಲಿ ಹಿಂದಿನ ಪ್ರಾಣಾಧಿಕರಣಗಳಲ್ಲಿ ಅಧಿಕಾಶಂಕೆಯನ್ನು ತೋರಿಸುವ ಅನುವ್ಯಾಖ್ಯಾನಕ್ಕೆ 'ನನ್ವೇತದಪಿ ಪೂರ್ವನ್ಯಾಯೇನ ಪರಿಹೃತಮ್ । ನ ಸೂತ್ರಾರಂಭಂ ಪ್ರಯೋಜಯತೀತ್ಯತೋಽಭ್ಯಧಿಕಾಶಂಕಾಂ ದರ್ಶಯತಿ' (ಹಿಂದಿನ ಅಧಿಕರಣದ ನ್ಯಾಯದಿಂದಲೇ ಈ ಪೂರ್ವಪಕ್ಷವು ಪರಿಹಾರವಾಯಿತು. ಆದ್ದರಿಂದ ಈ ಸೂತ್ರವು ಅನಾರಂಭಣೀಯ ಎಂಬ ಪ್ರಶ್ನೆಗೆ ಅಭ್ಯಧಿಕಾಶಂಕೆಯನ್ನು ತೋರಿಸುತ್ತಿದ್ದಾರೆ.) ಎಂದು ಅವತಾರಿಕೆಯನ್ನು ನೀಡಲಾಗಿದೆ. ಆದರಂತೆ ಇಲ್ಲಿಯೂ ಕೂಡ ಹಿಂದಿನ ಅಧಿಕರಣದ ನ್ಯಾಯದಿಂದ ಗತಾರ್ಥತ್ವವನ್ನು ಪರಿಹರಿಸಲು ಭಾಷ್ಯದಲ್ಲಿ ಅಭ್ಯಧಿಕಾಶಂಕೆಯನ್ನು ತೋರಿಸಿದ್ದಾರೆ ಎಂದು ಸುಧೆಯ ಅಭಿಪ್ರಾಯ.

### ಕಠಿಣಪದಾರ್ಥ

ನನ್ವೇವಂ = ಶ್ರುತಿಹಾಗೂ ಲಿಂಗ ಎರಡೂ ಸಾವಕಾಶವಾದರೆ; ಅತ ಏವ = ಶ್ರುತಿಯಂತೆ ಪ್ರಕರಣವೂ ಸ್ವತಂತ್ರಪ್ರಮಾಣವಾದ್ದರಿಂದಲೇ; ಉಕ್ತರೀತ್ಯಾ = ಸಾವಕಾಶಶ್ರುತಿಯಿಂದ ಸಾವಕಾಶಲಿಂಗವು ಬಾಧಿತವಾಗುತ್ತದೆಂದು ಹಿಂದೆ ಹೇಳಿದಂತೆ.

**ಪ್ರಕಾಶಃ – ನನ್ವೇವಮಿತಿ ॥ ಶ್ರುತಿಲಿಙ್ಗಯೋಃ ಸಾವಕಾಶತ್ವೇ ಸತೀತ್ಯರ್ಥಃ ॥ ನಚೇತಿ ॥ ಪ್ರಕರಣಸ್ಯ ವಿಶೇಷೋಪಸ್ಥಾಪಕತ್ವಾದಿತಿ ಭಾವಃ ॥ ದ್ವಿವಚನಸ್ಯೇತಿ ॥ ಅನ್ಯಥಾ ಸಾವಕಾಶಲಿಙ್ಗಮಾತ್ರಾತ್ ಸಾವಕಾಶಶ್ರುತೇರ್ಬಲವತ್ತ್ವಾದಿತ್ಯೇವ ಬ್ರೂಯಾತ್ । ಪ್ರಕರಣಸ್ಯಾಗ್ನಿಶ್ರುತಿಸಮ್ಪಾದಕತ್ವೇನೋಪಯೋಗಾತ್ತತ್ಸಮತಯಾ ನಿರ್ದೇಶೋ ನ ಸ್ಯಾದಿತ್ಯರ್ಥಃ । ನನು ತಮೋವಿರೋಧಿಮಾತ್ರೇ ಪ್ರಸಿದ್ಧಜ್ಯೋತಿಶ್ಶಬ್ದಸ್ಯಾಗ್ನ್ಯುಪಸ್ಥಾಪಕತ್ವಂ ಕಥಮಿತ್ಯತ ಆಹ – ಸಾಮಾನ್ಯೇತಿ ॥ ಅತ ಏವೇತಿ ॥ ಶ್ರುತಿವತ್ ಸೂಕ್ತಸ್ಯಾಪಿ ಸ್ವತನ್ತ್ರತ್ವಾದೇವ, ಟೀಕಾಯಾಂ ''ನಹಿ ಲಿಙ್ಗಂ ಶ್ರುತಿಪ್ರಕರಣಬಾಧನೇ ಶಕ್ತಂ, ಯಾವತಾ ಶ್ರುತಿತ ಏವ ದುರ್ಬಲಮ್'' ಇತ್ಯುಕ್ತಮ್ । ಅತೋ ಜ್ಞಾಯತೇ ಸೂಕ್ತರೂಪಂ ಪ್ರಕರಣಮತಿಶಯಾರ್ಥಮುಕ್ತಮಿತಿ । ನನು ಲಿಙ್ಗಸ್ಯ ನಿರವಕಾಶತ್ವೇ ಕಥಂ ಶ್ರುತಿತ ಏವ ಬಾಧ ಇತ್ಯತ ಆಹ –ನಿರವಕಾಶಂ ತ್ವಿತಿ ॥ ನಿರತಿಶಯೇತಿ ॥ ಸರ್ವಥಾ ಕರ್ಣಾದಿವಿದೂರತ್ವಸ್ಯ ಕಾಪ್ಯಸಮ್ಭವಾದಿತಿ ಭಾವಃ । ಅಸ್ಮಿನ್ಪಕ್ಷೇ ಸುಧಾವಿರೋಧಮಾಶಙ್ಕ್ಯ ಸಾऽಪಿ ಟೀಕಾನುಸಾರೇಣ ನೇಯೇತಿ ಭಾವೇನ ತತ್ತಾತ್ಪರ್ಯಂ ವಕ್ತುಮಾಹ – ಸುಧಾಯಾಮಿತಿ ॥ ಉಕ್ತೇತಿ ॥ ಸಾವಕಾಶಶ್ರುತ್ಯಾ ಸಾವಕಾಶಲಿಙ್ಗಬಾಧ ಇತ್ಯುಕ್ತರೀತ್ಯೇತ್ಯರ್ಥಃ । ಸುಧಾವಾಕ್ಯಸ್ಯ ಯಥಾ ಶ್ರುತಾರ್ಥಮನುಸೃತ್ಯಾಭ್ಯಧಿಕಾಶಙ್ಕ್ಯಾ ಪಕ್ಷಾನ್ತರಮಾಹ – ಯದ್ವೇತಿ ॥**

ವಿವರಣೆ - 'ಲಿಂಗ ಹಾಗೂ ಶ್ರುತಿ ಎರಡೂ ಸಾವಕಾಶವಾದಾಗ ಶ್ರುತಿಯೇ ಪ್ರಬಲವಾಗುತ್ತದೆ. ಆ ಸಂದರ್ಭದಲ್ಲಿ ಪ್ರಕರಣದ ಅನಿವಾರ್ಯತೆ ಇರುವುದಿಲ್ಲ. ಆದರೆ ಸಾಮಾನ್ಯಶ್ರುತಿಯನ್ನು ವಿಶೇಷಾರ್ಥದಲ್ಲಿ ಪರ್ಯವಸಾನ ಮಾಡುವುದಕ್ಕಾಗಿ ಪ್ರಕರಣದ ಬೆಂಬಲವು ಅನಿವಾರ್ಯವೆಂದು ತೋರುತ್ತದೆ. ಇದನ್ನು ನಿರಾಕರಿಸಲು 'ನಚ ಜ್ಯೋತಿಃ' ಎಂಬ ವಾಕ್ಯವು ಹೊರಟಿದೆ. ಒಂದು ವೇಳೆ ಪ್ರಕರಣವು ಅಗ್ನಿಶ್ರುತಿಸಂಪಾದಕವಾದಲ್ಲಿ ಅಗ್ನಿಶ್ರುತಿಯ ಸಂಪಾದನೆಗೋಸ್ಕರ ಸಾರ್ಥಕವೆಂದು ಹೇಳುವುದಾದರೆ ಶ್ರುತಿಯ ಸಮಾನಕಕ್ಷೆಯಲ್ಲಿ ಪ್ರಕರಣವನ್ನು ಟೀಕೆಯಲ್ಲಿ ಉಲ್ಲೇಖಿಸಿದ್ದು ತಪ್ಪಾದೀತು. ''ಸಾವಕಾಶಲಿಂಗಮಾತ್ರದಿಂದ ಸಾವಕಾಶಶ್ರುತಿಯು ಬಲಿಷ್ಠವಾಗಿದೆ'' ಎಂದಷ್ಟೇ ಟೀಕೆಯಲ್ಲಿ ಹೇಳಿದ್ದರೆ ಸಾಕಾಗಿತ್ತು.

ಜ್ಯೋತಿಶಬ್ದವು ತಮೋವಿರೋಧಿ ಎಂಬರ್ಥದಲ್ಲಷ್ಟೇ ಪ್ರಸಿದ್ಧವಾಗಿದೆ. ಹೀಗಿರುವಾಗ ಕೇವಲ ಅಗ್ನಿಯನ್ನು ಹೇಗೆ ತಿಳಿಸುತ್ತದೆ? ಎಂಬ ಪ್ರಶ್ನೆಗೆ 'ಸಾಮಾನ್ಯಶ್ರುತೇಃ' ಎಂಬ ಗ್ರಂಥದಿಂದ ಉತ್ತರಿಸಿದ್ದಾರೆ.

ಟೀಕೆಯಲ್ಲಿ 'ನ ಹಿ ಲಿಂಗಂ ಶ್ರುತಿಪ್ರಕರಣಬಾಧನೇ ಶಕ್ತಮ್, ಯಾವತಾ ಶ್ರುತಿತ ಏವ ದುರ್ಬಲಂ' (ಲಿಂಗವು ಯಾವಾಗ ಶ್ರುತಿಯಿಂದಲೇ ದುರ್ಬಲವಾಗಿದೆಯೋ ಆವಾಗ ಶ್ರುತಿ ಹಾಗೂ ಪ್ರಕರಣಗಳನ್ನು ಬಾಧಿಸಲು ಹೇಗೆ ಸಮರ್ಥವಾಗುತ್ತದೆ) ಎಂದು ಹೇಳಿದ್ದಾರೆ. ಇದರಿಂದ ಸೂಕ್ತರೂಪವಾದ ಪ್ರಕರಣವು ಲಿಂಗವನ್ನು ಅತಿಶಯವಾಗಿ ಬಾಧಿಸುತ್ತದೆಂದು ತಿಳಿಯುತ್ತದೆ. ಲಿಂಗವು ನಿರವಕಾಶವಾದರೆ ಶ್ರುತಿಯಿಂದ ಬಾಧಿತವಾಗಲು ಸಾಧ್ಯವಿಲ್ಲವಲ್ಲವೇ? ಎಂಬ ಪ್ರಶ್ನೆಗೆ 'ನಿರವಕಾಶಂ ತು' ಎಂಬ ಗ್ರಂಥದಿಂದ ಉತ್ತರಿಸಿದ್ದಾರೆ. ನಿರತಿಶಯವೈಭವವೆಂಬ ಕರ್ಣಾದಿವಿದೂರತ್ವವನ್ನು ಯಥಾಯೋಗ್ಯವಾಗಿ ಅಗ್ನ್ಯಾದಿಗಳಲ್ಲಿಯೂ ಉಪಪಾದಿಸಬಹುದು. ಸರ್ವಥಾ ಕರ್ಣಾದಿವಿದೂರತ್ವವನ್ನಂತೂ ವಿಷ್ಣುವಿನಲ್ಲಿಯೂ ಹೇಳಲು ಸಾಧ್ಯವಿಲ್ಲ. ಈ ಪಕ್ಷದಲ್ಲಿ ಸುಧಾವಿರೋಧವನ್ನು ಆಶಂಕಿಸಿ ಟೀಕೆಗೆ ಅನುಸಾರಿಯಾಗಿ ಸುಧಾವಾಕ್ಯವನ್ನು ಆರ್ಥೈಸಬೇಕೆಂದು 'ಸುಧಾಯಾಮ್' ಇತ್ಯಾದಿವಾಕ್ಯದಿಂದ ಉಪಪಾದಿಸುತ್ತಿದ್ದಾರೆ. ಸುಧಾವಾಕ್ಯಕ್ಕೆ ಯಥಾಶ್ರುತವಾದ ಅರ್ಥವನ್ನು ವಿವಕ್ಷಿಸಿ ಅಭ್ಯಧಿಕಾಶಂಕೆಯಿಂದ ಪೂರ್ವಪಕ್ಷ ಮಾಡಬಹುದೆಂದು ಮತ್ತೊಂದು ಬಗೆಯಲ್ಲಿ 'ಯದ್ವಾ' ಇತ್ಯಾದಿ ಗ್ರಂಥದಿಂದ ವ್ಯಾಖ್ಯಾನಿಸಿದ್ದಾರೆ.

**ಗುರುರಾಜೀಯಮ್** – ननु यदि सावकाशश्रुत्यापि लिङ्गस्य बाधात्पूर्वपक्षस्तर्हि सुधाविरोधः स्यात् । सुधायां ज्योतिरधिकरणे ''अभ्यधिकाशङ्का अग्निसूक्तत्वादिति भाष्ये एव प्रदर्शिते''त्युक्तत्वेन केवलश्रुतिमात्रस्य लिङ्गबाधकत्वाभावस्याभिप्रेतत्वादित्यत आह ॥ सुधायां त्विति ॥ उक्तरीत्येति ॥ सावकाशाग्निश्रुत्या सावकाशविष्णुलिङ्गबाधादि-त्युक्तरीत्येत्यर्थः । नन्वेवमभ्यधिकाशङ्काप्रायपाठत्यागः । पूर्वाधिकरणेषु श्रुतिमात्रेण लिङ्गस्य बाधासम्भवेन तदर्थमभ्यधिकाशङ्काया उक्तत्वादत्र दार्ढ्यार्थं तदुक्तिरित्यङ्गीकारादित्यरुचेराह ॥ यद्वेति ॥

## ಸಾರ

ಲಿಂಗ ಹಾಗೂ ಶ್ರುತಿ ಎರಡೂ ಸಾವಕಾಶಗಳಾದಾಗ ಶ್ರುತಿಯು ಸ್ವಭಾವತಃ ಬಲಿಷ್ಠ; ಲಿಂಗವು ಸ್ವಭಾವತಃ ದುರ್ಬಲ ಎನಿಸುತ್ತದೆ. ಇಷ್ಟೇ ಹೇಳಿದರೆ ಸಾಕು. ಶ್ರುತಿಗೆ ಪ್ರಕರಣದ ಬೆಂಬಲ ಹೇಳುವುದು ಅನಾವಶ್ಯಕ. ಜ್ಯೋತಿಶಬ್ದವು ಅಗ್ನಿಯನ್ನು ಪ್ರತಿಪಾದಿಸುತ್ತದೆಂಬ ವಿಚಾರವು ಹೃದಯಾಹಿತತ್ವಲಿಂಗದಿಂದಾಗಲೀ, ಅಥವಾ ಅಗ್ನಿಶಬ್ದದ ಸನ್ನಿಧಾನದಿಂದಾಗಲೀ ತಿಳಿಯುತ್ತದೆ. ಪ್ರಕರಣವು ::ಕಾಗಿಲ್ಲ. ಆದರೆ ಭಾಷ್ಯದಲ್ಲಿ ಪ್ರಕರಣವನ್ನು ಪ್ರತ್ಯೇಕವಾಗಿ ಉಲ್ಲೇಖಿಸಿದ್ದಾರೆ. ಭಾಷ್ಯದ ಆಂತರ್ಯವನ್ನು ಹೀಗೆ ತಿಳಿಯಬೇಕು -- 'ಶ್ರುತಿಯು ಸ್ವಾಭಾವಿಕವಾಗಿಯೇ ಲಿಂಗವನ್ನು ಬಾಧಿಸುತ್ತದೆ. ಇದರ ಜೊತೆಗೆ ಪ್ರಕರಣದ ಬೆಂಬಲವಿದ್ದಾಗ ನಿಶ್ಚಯವಾಗಿ ಬಾಧಿಸುತ್ತದೆ' ಎಂದು.

ಇನ್ನು ವಿಷ್ಣುವಿನಲ್ಲಿರುವ ಲಿಂಗಗಳು ನಿರವಕಾಶಗಳಾಗಿದ್ದರೂ ಶ್ರುತಿಯಿಂದ ಬಾಧವು ಬರುತ್ತಿರಲಿಲ್ಲ. ಆದರೆ ಗುಹಾನಿಹತತ್ವಲಿಂಗವು ಜಾಠರಾಗ್ನಿಯಲ್ಲಿ ಸಾವಕಾಶವಾಗಿದೆ. ನಿರತಿಶಯವೈಭವತ್ವವನ್ನೂ ಸಹ ಅಗ್ನಿಶ್ರುತಿಯು ಅಗ್ನಿಯಲ್ಲಿ ಸಾವಕಾಶ ಮಾಡಿದೆ. ಹೀಗೆ ಎಲ್ಲಾ ವಿಷ್ಣುಲಿಂಗಗಳೂ ಸಾವಕಾಶಗಳೇ ಆಗಿವೆ.

'ಅಧಿಕಾಶಂಕಾ ಅಗ್ನಿಸೂಕ್ತಸ್ಥತ್ವಾತ್ ಭಾಷ್ಯ ಏವ ದರ್ಶಿತಾ' ಎಂಬ ಸುಧಾವಾಕ್ಯಕ್ಕೆ ಕೇವಲ ಶ್ರುತಿಯಿಂದ ಪೂರ್ವಪಕ್ಷ ಹುಟ್ಟದ ಕಾರಣ ಅಧಿಕಾಶಂಕೆಯು ಹೊರಟದೆ ಎಂದರ್ಥವಲ್ಲ. ಕೇವಲ ಶ್ರುತಿಯಿಂದಲೇ ಪೂರ್ವಪಕ್ಷ ಹುಟ್ಟುತ್ತದೆ; ಆದರ ದಾರ್ಢ್ಯಕ್ಕಾಗಿ ಅಧಿಕಾಶಂಕೆಯ ಪ್ರವೃತ್ತಿಯನ್ನು ತಿಳಿಯಬೇಕು. ಅಥವಾ ಹಿಂದಿನ ಅಧಿಕರಣಗಳಲ್ಲಿ ಅಧಿಕಾಶಂಕೆಯನ್ನು ತೋರಿಸಿದ್ದಾರೆ. ಆದರಂತೆ ಇಲ್ಲಿಯೂ ಪೂರ್ವನ್ಯಾಯದಿಂದ ಗತಾರ್ಥತ್ವವನ್ನು ಪರಿಹರಿಸಲು ಅಧಿಕಾಶಂಕೆಯನ್ನು ತೋರಿಸಿದ್ದಾರೆಂದು ಸುಧೆಯ ಅಭಿಪ್ರಾಯವಾಗಿದೆ.

---

### ಲಿಂಗ ಮತ್ತು ಶ್ರುತಿಗಳೆರಡೂ ಸಾವಕಾಶಗಳು
### (ಸುಧೆಯ ಪೂರ್ವಪಕ್ಷ)

**तात्पर्यचन्द्रिका**

**एवञ्च तत्रेत्थं पूर्वः पक्षः – यद्यपि पूर्वाधिकरणन्यायेन निरवकाशब्रह्मलिङ्गैः सावकाशाग्निश्रुतिबाधः, यद्यपि च सर्वसूक्तानां वैष्णवत्वेऽपि ''अभिव्यक्तेः'' इत्यादिन्यायेन इदमग्निसूक्तं इदं वायुसूक्तमिति व्यवस्था सम्भवति । तथाऽपि इदमग्निसूक्तं, न तु विष्णुसूक्तमिति अध्यापकप्रसिद्धेरयोगात् सूक्तं निरवकाशम् । एवञ्च निरवकाशप्रकरणानुगृहीतश्रुत्या निरवकाशमपि कर्णादिविदूरत्वलिङ्गं बहुवैभवाभिप्रायेण कथञ्चिदग्नावपि नेयम् । निरवकाशत्वमात्रप्रयुक्तस्य लिङ्गगतस्य प्राबल्यस्य श्रुतिगतान्निरवकाशसूक्तसाहित्यश्रुतित्वोभयप्रयुक्तप्राबल्यात् दुर्बलत्वात्**

**ಲಿಙ್ಗೇ ಬಹುತ್ವಪ್ರಯುಕ್ತೇ ಪ್ರಾಬಲ್ಯೇ ಸತ್ಯಪಿ ತಸ್ಯ ಶ್ರುತಿತ್ವರೂಪ-ಸ್ವಭಾವಪ್ರಯುಕ್ತಪ್ರಾಬಲ್ಯಾತ್ ದುರ್ಬಲತ್ವಾತ್ । ಅನ್ತರಧಿಕರಣಸ್ಥೇನ್ದ್ರಾಗ್ನ್ಯಾದಿಶ್ರುತಿಸ್ತು ನ ಸೂಕ್ತಾನುಗೃಹೀತೇತಿ । ಏವಞ್ಚಾತ್ರ ಟೀಕಾಯಾಂ ಪೂರ್ವಪಕ್ಷಹೇತಾಃ ಸೂಕ್ತಸ್ಯ ಸಿದ್ಧಾನ್ತಹೇತೋರ್ಲಿಙ್ಗಸ್ಯ ಚ ಸಾವಕಾಶತ್ವಮಿತಿ ಪೂರ್ವಃ ಪಕ್ಷಃ, ಸುಧಾಯಾಂ ತು ಉಭಯೋರ್ನಿರವಕಾಶತ್ವಮಿತಿ ಭೇದಃ ।**

ಅನುವಾದ - ಆದ್ದರಿಂದ ಸುಧೆಯ ಪ್ರಕಾರ ಪೂರ್ವಪಕ್ಷ ಹೀಗಿದೆ -- ವಸ್ತುತಃ ಹಿಂದಿನ ಅಧಿಕರಣದ ನ್ಯಾಯದಂತೆ ನಿರವಕಾಶಬ್ರಹ್ಮಲಿಂಗಗಳಿಂದ ಸಾವಕಾಶ ಅಗ್ನಿಶ್ರುತಿಯು ಬಾಧಿತವಾಗುತ್ತದೆ. ವಸ್ತುತಃ ಸಕಲಸೂಕ್ತಗಳು ವಿಷ್ಣುಪರ ಎನಿಸಿದರೂ 'ಅಭಿವ್ಯಕ್ತೇರಿತ್ಯಾಶ್ಮರಥ್ಯಃ' ಎಂಬ ಅಧಿಕರಣದಲ್ಲಿ ಹೇಳುವ ನ್ಯಾಯದಂತೆ ಇದು ಅಗ್ನಿಸೂಕ್ತ, ಇದು ವಾಯುಸೂಕ್ತ ಎಂಬ ವ್ಯವಸ್ಥೆಯನ್ನು ಹೇಳಬಹುದು. ಆದರೆ ಇದು ಅಗ್ನಿಸೂಕ್ತ ಹೊರತು ವಿಷ್ಣುಸೂಕ್ತವಲ್ಲವೆಂಬ ಅಧ್ಯಾಪಕಪ್ರಸಿದ್ಧಿಯನ್ನು ಕೂಡಿಸಲು ಸಾಧ್ಯವಿಲ್ಲ. ಈ ಅಧ್ಯಾಪಕಪ್ರಸಿದ್ಧಿಯ ಆಧಾರದಿಂದ ಪ್ರಕರಣವನ್ನು ನಿರವಕಾಶವೆನ್ನಲೇ ಬೇಕು. ಆದ್ದರಿಂದ ನಿರವಕಾಶಪ್ರಕರಣದ ಅನುಗ್ರಹವಿರುವುದರಿಂದ ಶ್ರುತಿಯು ಬಲಿಷ್ಠವಾಗುತ್ತದೆ. ಕರ್ಣಾದಿ ವಿದೂರತ್ವಲಿಂಗಗಳು ನಿರವಕಾಶಗಳಾಗಿದ್ದರೂ ಶ್ರುತಿಯಿಂದ ಬಾಧಿತವಾಗುತ್ತವೆ. ಆದ್ದರಿಂದ ಅಗ್ನಿಯಲ್ಲಿರುವ ವೈಭವವನ್ನು ವಿವಕ್ಷಿಸಿ ಕರ್ಣಾದಿವಿದೂರತ್ವಲಿಂಗವನ್ನು ಹೇಗಾದರೂ ಅಗ್ನಿಯಲ್ಲಿ ಯೋಜಿಸಬೇಕು. ಲಿಂಗದಲ್ಲಿರುವ ಪ್ರಾಬಲ್ಯವು ಕೇವಲ ನಿರವಕಾಶತ್ವಪ್ರಯುಕ್ತವಾಗಿದೆ. ಆದರೆ ಶ್ರುತಿಯಲ್ಲಿರುವ ಪ್ರಾಬಲ್ಯವು ನಿರವಕಾಶಪ್ರಕರಣದ ಬೆಂಬಲ ಹೊಂದಿದೆ. ಮತ್ತು ಶ್ರುತಿತ್ವಪ್ರಯುಕ್ತವಾಗಿಯೂ ಬಲಿಷ್ಠವಾಗಿದೆ. ಹೀಗೆ ಎರಡು ಮುಖಗಳಿಂದ ಬಲಿಷ್ಠವಾದ ಶ್ರುತಿಗಿಂತ ಒಂದು ಮುಖದಿಂದಷ್ಟೇ ಬಲಿಷ್ಠವಾದ ಲಿಂಗವು ದುರ್ಬಲವಾಗುತ್ತದೆ.

ಅನೇಕ ಲಿಂಗಗಳನ್ನು ವಿವಕ್ಷಿಸಿದಾಗ ಬಹುತ್ವಪ್ರಯುಕ್ತವಾಗಿ ಲಿಂಗದಲ್ಲಿ ಪ್ರಾಬಲ್ಯ ಬರುತ್ತದಲ್ಲವೇ? ಎಂದು ಪ್ರಶ್ನಿಸಬಹುದು. ಆದರೆ ಶ್ರುತಿತ್ವಪ್ರಯುಕ್ತವಾಗಿ ಸ್ವಭಾವತಃ ಬಲಿಷ್ಠವಾದ ಶ್ರುತಿಗಿಂತ ಬಹುತ್ವಪ್ರಯುಕ್ತವಾದ ಲಿಂಗವು ದುರ್ಬಲವೆನಿಸುತ್ತದೆ. ಈ ಶಂಕೆಯು ಹಿಂದಿನ ಅಂತರಧಿಕರಣದಿಂದ ಪರಿಹಾರವಾಗುವುದಿಲ್ಲ. ಏಕೆಂದರೆ, ಅಂತರಧಿಕರಣದಲ್ಲಿ ಉಲ್ಲೇಖಿಸಿದ ಅಗ್ನ್ಯಾದಿ-ಶ್ರುತಿಗಳಿಗೆ ಪ್ರಕರಣದ ಅನುಗ್ರಹವಿಲ್ಲ.

ಇದನ್ನು ಗಮನಿಸಬೇಕು. ಟೀಕೆಯ ಪ್ರಕಾರ ಪೂರ್ವಪಕ್ಷಹೇತುವೆನಿಸಿದ ಸೂಕ್ತ(ಪ್ರಕರಣ) ಸಿದ್ಧಾಂತಹೇತುವೆನಿಸಿದ ಲಿಂಗ ಎರಡೂ ಸಾವಕಾಶಗಳೆಂದು ಅಂಗೀಕರಿಸಿ ಪೂರ್ವಪಕ್ಷ ಮಾಡಲಾಗಿದೆ. ಸುಧೆಯಲ್ಲಿ ಎರಡನ್ನೂ ನಿರವಕಾಶಗಳೆಂದು ಅಂಗೀಕರಿಸಿ ಪೂರ್ವಪಕ್ಷ ಮಾಡಲಾಗಿದೆ. ಇಷ್ಟು ಮಾತ್ರ ವ್ಯತ್ಯಾಸ.

ಕಠಿಣಪದಾರ್ಥ

ತತ್ರ = ಸುಧೆಯಲ್ಲಿ; ಕಥಂಚಿತ್ = ತನಗಿಂತ ನೀಚದೇವತೆಗಳಿಗಿಂತ ಬಹುವೈಭವವನ್ನು ಅಗ್ನಿಯಲ್ಲಿ ಉಪಪಾದಿಸಬಹುದು; ನಿರವಕಾಶಸೂಕ್ತಸಾಹಿತ್ಯ... = ನಿರವಕಾಶವೆಂಬುದು ಸೂಕ್ತದಲ್ಲಷ್ಟೇ ವಿಶೇಷಣವಾಗುತ್ತದೆ.

**प्रकाशः** – ननूक्तरीत्या पूर्वेणगतत्वात् कथमधिकाशङ्कावकाश इत्यत आह – **एवञ्चेति ॥ तथाऽपीति ॥** एतेन वैश्वानराधिकरणेन गतार्थताऽपि निरस्ता । एतच्छङ्कानिरासस्य तत्राकृतत्वादिति ॥ **कथञ्चिदिति ॥** स्वावरापेक्षया बहुवैभवसत्त्वादिति भावः । 'निरवकाश' इति सूक्तमात्रविशेषणम् । ननु गुहानिहितत्वकर्णादिविदूरत्वविश्वदेवनियामकत्वादिलिङ्गानां बहुत्वादुभयप्रयुक्तप्राबल्याद् बलवत्त्वं लिङ्गस्येत्यत आह – **लिङ्ग इति ॥**

**द्विविधं बलवत्त्वं च बहुत्वाच्च स्वभावतः ।**
**तयोः स्वभावो बलवानुपजीव्यादिकश्च सः ॥**

इत्युक्तेरिति भावः । इयं च शङ्का न पूर्वाधिकरणेऽस्तीत्याह – **अन्तरिति ॥** टीकाद्वयपूर्वपक्षाशयं निष्कृष्य दर्शयति – **एवञ्चेति ॥**

ವಿವರಣೆ - ಹಿಂದಿನ ಅಧಿಕರಣದ ನ್ಯಾಯದಂತೆ ಈ ಅಧಿಕರಣದ ಪೂರ್ವಪಕ್ಷವು ಪರಿಹಾರವಾಗುವಾಗ ಪುನಃ ಅಧಿಕಾಶಂಕೆಗೆ ಆಸ್ಪದವಿಲ್ಲವೆಂಬ ಶಂಕೆಗೆ 'ಏವಂಚ' ಇತ್ಯಾದಿ ಗ್ರಂಥದಿಂದ ಉತ್ತರಿಸುತ್ತಿದ್ದಾರೆ. 'ತಥಾಪಿ' ಇತ್ಯಾದಿ ವಾಕ್ಯದಿಂದ ವೈಶ್ವಾನರಾಧಿಕರಣದಿಂದ ಬರುವ ಗತಾರ್ಥತ್ವವನ್ನು ಪರಿಹರಿಸಿದ್ದಾರೆ. ಈ ಅಧಿಕರಣದಲ್ಲಿ ಮಾಡುತ್ತಿರುವ ಶಂಕೆಯನ್ನು ವೈಶ್ವಾನರಾಧಿಕರಣದಲ್ಲಿ ಪರಿಹರಿಸಿಲ್ಲ.

ಗುಹಾನಿಹಿತತ್ವ, ಕರ್ಣಾದಿವಿದೂರತ್ವ, ವಿಶ್ವೇದೇವನಿಯಾಮಕತ್ವ ಮೊದಲಾದ ಆನೇಕಲಿಂಗಗಳಿರುವುದರಿಂದ ಬಹುತ್ವಪ್ರಯುಕ್ತವಾದ ಪ್ರಾಬಲ್ಯವನ್ನು ಲಿಂಗಕ್ಕೆ ಹೇಳಬಹುದಲ್ಲವೇ? ಎಂಬ ಪ್ರಶ್ನೆಗೆ 'ಲಿಂಗೇ ಬಹುತ್ವಪ್ರಯುಕ್ತೇ' ಎಂಬ ವಾಕ್ಯದಿಂದ ಉತ್ತರಿಸಿದ್ದಾರೆ.

ದ್ವಿವಿಧಂ ಬಲವತ್ತ್ವಂ ಚ ಬಹುತ್ವಾಚ್ಚ ಸ್ವಭಾವತಃ ।
ತಯೋಃ ಸ್ವಭಾವೋ ಬಲವಾನುಪಜೀವ್ಯಾದಿಕಶ್ಚ ಸಃ ॥ (ವಿ.ತತ್ವನಿರ್ಣಯ ೧ನೇ ಪರಿಚ್ಛೇದ)

(ಎರಡು ಬಗೆಯಲ್ಲಿ ಬಲಿಷ್ಠತೆಯನ್ನು ನಿರೂಪಿಸಬಹುದು -- ಬಹುತ್ವಪ್ರಯುಕ್ತವಾಗಿ ಮತ್ತು ಸ್ವಭಾವಪ್ರಯುಕ್ತವಾಗಿ. ಇವೆರಡರಲ್ಲಿ ಸ್ವಭಾವಪ್ರಯುಕ್ತವಾದದ್ದೇ ಶ್ರೇಷ್ಠವಾಗಿದೆ.)

ಆಚಾರ್ಯರ ಈ ಮಾತನ್ನು ಇಲ್ಲಿ ಸ್ಮರಿಸಿಕೊಳ್ಳಬೇಕು. ಇಲ್ಲಿ ಮಾಡುತ್ತಿರುವ ಶಂಕೆಯು ಹಿಂದಿನ ಅಧಿಕರಣದಿಂದ ಪರಿಹಾರವಾಗಿಲ್ಲವೆಂದು 'ಅಂತರಾಧಿಕರಣಸ್ಥ' ಎಂಬ ವಾಕ್ಯದಿಂದ ಹೇಳಿದ್ದಾರೆ. ಎರಡು ಟೀಕೆಗಳ ಪೂರ್ವಪಕ್ಷದ ಅಭಿಪ್ರಾಯವನ್ನು ನಿಖರವಾಗಿ 'ಏವಂ ಚ' ಎಂಬ ಗ್ರಂಥದಿಂದ ತೋರಿಸಿದ್ದಾರೆ.

**ಗುರುರಾಜೀಯಮ್** – ನನು ತರ್ಹಿ ಕರ್ಣಾದಿವಿದೂರತ್ವಲಿಙ್ಗಸ್ಯ ಕಾ ಗತಿರಿತ್ಯತ ಆಹ – **ಏವಞ್ಚೇತಿ** ॥ ನನು ತರ್ಹ್ಯನ್ತರಧಿಕರಣಸ್ಥೇನ್ದ್ರಾದಿಶ್ರುತೇರಪಿ ಸೂತ್ರಾನುಗೃಹೀತತ್ವೇನ ಪ್ರಬಲತ್ವಾನ್ನ ವಿಷ್ಣುಪರತೇತ್ಯತ ಆಹ – **ಅನ್ತರಧಿಕರಣೇತಿ** ।

## ಸಾರ

ಒಟ್ಟು ಎರಡು ಪೂರ್ವಪಕ್ಷ. ಲಿಂಗ ಹಾಗೂ ಶ್ರುತಿಗಳೆರಡೂ ಸಾವಕಾಶಗಳೇ ಆಗಿವೆ. ಆದರೆ ಶ್ರುತಿಯು ಸ್ವಭಾವತಃ ಬಲಿಷ್ಠವಾಗಿದ್ದರಿಂದ ಪ್ರಬಲವೆನಿಸಿದ ಲಿಂಗವನ್ನು ಬಾಧಿಸುತ್ತದೆ. ಇದು ಸುಧೆಯ ಪೂರ್ವಪಕ್ಷ.

ಲಿಂಗ ಹಾಗೂ ಶ್ರುತಿ ಎರಡೂ ನಿರವಕಾಶಗಳಾಗಿವೆ. ಶ್ರುತಿಗೆ ನಿರವಕಾಶಪ್ರಕರಣದ ಅನುಗ್ರಹವಿದೆ. ಮತ್ತು ಸ್ವಭಾವತಃ ಪ್ರಾಬಲ್ಯವಿದೆ. ಇಂತಹ ಶ್ರುತಿಯಿಂದ ನಿರವಕಾಶಲಿಂಗವೇ ಬಾಧಿತವಾಗುತ್ತದೆ ಎಂದು ಟೀಕೆಯ ಪೂರ್ವಪಕ್ಷ.

ಟೀಕೆಯ ಪೂರ್ವಪಕ್ಷವನ್ನು ಹಿಂದೆ ಉಪಪಾದಿಸಿದ್ದಾಯಿತು. ಇಲ್ಲಿ ಸುಧೆಯ ಪೂರ್ವಪಕ್ಷವನ್ನು ವಿವರಿಸುತ್ತಿದ್ದಾರೆ. -- ಹಿಂದಿನ ಅಧಿಕರಣದ ನ್ಯಾಯದಂತೆ ಸಾವಕಾಶಶ್ರುತಿಗೆ ಬಾಧವನ್ನು ಹೇಳಬಹುದು. ಆದರೆ ಶ್ರುತಿಯು ಯಾವ ಪ್ರಕರಣವನ್ನು ಅವಲಂಬಿಸಿದೆಯೋ ಆ ಪ್ರಕರಣವು ನಿರವಕಾಶವಾಗಿದೆ. ಇದು ಅಗ್ನಿಸೂಕ್ತ ಹೊರತು ವಿಷ್ಣುಸೂಕ್ತವಲ್ಲ ಎಂಬ ಅಧ್ಯಾಪಕಪ್ರಸಿದ್ಧಿಯೇ ನಿರವಕಾಶತ್ವಸಂಪಾದಕವಾಗಿದೆ. ಹೀಗೆ ನಿರವಕಾಶ-ಪ್ರಕರಣದ ಅನುಗ್ರಹವಿರುವುದರಿಂದ ಶ್ರುತಿಯು ಬಲಿಷ್ಠವಾಗುತ್ತದೆ. ಅಷ್ಟೇ ಅಲ್ಲದೆ ಶ್ರುತಿತ್ವಪ್ರಯುಕ್ತವಾಗಿಯೂ ಬಲಿಷ್ಠವಾಗಿದೆ. ಹೀಗೆ ಎರಡು ಮುಖಗಳಿಂದ ಶ್ರುತಿಯು ಅತ್ಯಂತ ಪ್ರಬಲವೆನಿಸಿದೆ. ಆದರೆ ಲಿಂಗವು ಕೇವಲ ನಿರವಕಾಶಪ್ರಯುಕ್ತವಾಗಿ ಪ್ರಬಲವಾಗಿದೆ. ಈ ಲಿಂಗವು ನಿರವಕಾಶಪ್ರಕರಣದ ಅನುಗ್ರಹವಿರುವ ಶ್ರುತಿಯಿಂದ ಬಾಧಿತವಾಗುವುದರಲ್ಲಿ ಸಂದೇಹವಿಲ್ಲ. ಇನ್ನು ದುರ್ಬಲವಾದ ಅನೇಕ ಲಿಂಗಗಳ ಬೆಂಬಲವನ್ನು ಮುಂದಿಡಬಹುದು. ಆದರೆ ಬಲಿಷ್ಠವಾದ ಶ್ರುತಿಯು ಆ ಎಲ್ಲ ಲಿಂಗಗಳನ್ನು ಶಕ್ತಿ ಇಲ್ಲದಂತೆ ಮಾಡುತ್ತದೆ. ನಿರವಕಾಶ-ಪ್ರಕರಣದ ಅನುಗ್ರಹವಿರುವ ಶ್ರುತಿಯಿಂದ ಲಿಂಗವು ಬಾಧಿತವಾಗುತ್ತದೆಂಬ ಈ ಪೂರ್ವಪಕ್ಷವನ್ನು ಹಿಂದಿನ ಮುಂದಿನ ಯಾವುದೇ ಅಧಿಕರಣಗಳಿಂದಲೂ ಪರಿಹರಿಸಲು ಸಾಧ್ಯವಿಲ್ಲದ ಕಾರಣ ಈ ಅಧಿಕರಣದ ಪ್ರವೃತ್ತಿಯು ಅನಿವಾರ್ಯವಾಗಿದೆ.

---

ಟೀಕೆಯ ಪೂರ್ವಪಕ್ಷ ಸುಧೆಗೆ ಅನುಸಾರಿಯಾಗಿದೆ

### ತಾತ್ಪರ್ಯಚನ್ದ್ರಿಕಾ

**ಯದ್ವಾ – ಸುಧಾನುಸಾರೇಣ ಅತ್ರಾಪಿ "ಸಾವಕಾಶಶ್ರುತಿಪ್ರಕರಣಯೋಃ" ಇತಿ ಟೀಕಾಯಾಂ ಸಾವಕಾಶತ್ವಂ ಶ್ರುತೇರೇವ ವಿಶೇಷಣಂ, ನ ತು ಪ್ರಕರಣಸ್ಯ । ಟೀಕಾಯಾಂ ಲಿಙ್ಗಸ್ಯ ಸಾವಕಾಶತ್ವೋಕ್ತಿಶ್ಚ ಕರ್ಣಾದಿವಿದೂರತ್ವಸ್ಯ ನಿರವಕಾಶತ್ವೇऽಪಿ ಗುಹಾನಿಹಿತತ್ವಸ್ಯ**

**सावकाशत्वमभिप्रेत्य वा, स्वतो निरवकाशस्यापि सूक्तानुगृहीत श्रुतिविरोधात् कल्प्यावकाशमभिप्रेत्य वा द्रष्टव्या । लिङ्गस्य श्रुतित एव बाधोक्तिरपि सावकाशलिङ्गाभिप्रायेति । एते च शङ्के प्रमाणाश्रिते ।**

**प्रमेयाश्रिता तु – तमोविरोधित्वस्य ज्योतिश्शब्दप्रवृत्तिनिमित्तस्य सर्वगतत्वेन तमसा सह स्थिते ब्रह्मण्ययोग इति । तत्र यद्यपि ''वैश्वानरो जायमानः'' इति अग्निसूक्ते वैश्वानरश्रुतिः जायमानत्वलिङ्गं चास्ति, तथाऽपि विष्णौ श्रुतेः सावकाशतायाः, वैश्वानराधिकरणे लिङ्गस्य सावकाशतायाश्च द्युभ्वाद्यधिकरणे कण्ठोक्तत्वात् न ताभ्यां पूर्वपक्षितं भाष्यटीकयोः ।**

ಅನುವಾದ - ಅಥವಾ ಟೀಕೆಯ ಪೂರ್ವಪಕ್ಷವು ಸುಧೆಗೆ ಅನುಸಾರಿಯೇ ಆಗಿದೆ. 'ಸಾವಕಾಶ-ಶ್ರುತಿಪ್ರಕರಣಯೋಃ' ಎಂಬ ಟೀಕೆಯಲ್ಲಿ ಸಾವಕಾಶತ್ವವು ಶ್ರುತಿಯಲ್ಲಷ್ಟೇ ವಿಶೇಷಣವಾಗಿದೆ. ಪ್ರಕರಣದಲ್ಲಲ್ಲ. ಅಂದರೆ ಶ್ರುತಿಯು ಸಾವಕಾಶವಾಗಬಹುದು. ಪ್ರಕರಣವು ಸಾವಕಾಶವಾಗಬೇಕಿಲ್ಲ. ಹಾಗಾದರೆ ಟೀಕೆಯಲ್ಲಿ ಲಿಂಗಕ್ಕೆ ಸಾವಕಾಶತ್ವ ಹೇಳಿದ್ದು ತಪ್ಪಲ್ಲವೇ? ಎಂದು ಪ್ರಶ್ನಿಸಬಾರದು. ಟೀಕೆಯಲ್ಲಿರುವ 'ಲಿಂಗವು ಸಾವಕಾಶ' ಎಂಬ ಮಾತಿಗೆ ಕರ್ಣಾದಿವಿದೂರತ್ವವು ಸಾವಕಾಶ ಎಂದರ್ಥವಲ್ಲ. ಗುಹಾನಿಹಿತತ್ವವು ಸಾವಕಾಶ ಎಂದರ್ಥ. ಅಥವಾ ಕರ್ಣಾದಿವಿದೂರತ್ವಲಿಂಗವು ಸ್ವತಃ ನಿರವಕಾಶವಾಗಿರಬಹುದು. ಆದರೆ ನಿರವಕಾಶಪ್ರಕರಣದ ಅನುಗ್ರಹವಿರುವ ಪ್ರಯುಕ್ತ ನಿರತಿಶಯವೈಭವವನ್ನು ಅಗ್ನಿಯಲ್ಲಿ ಸಾವಕಾಶ ಮಾಡಬಹುದು ಎಂದು ತಿಳಿಯಬೇಕು. ಲಿಂಗಕ್ಕೆ ಶ್ರುತಿಯಿಂದ ಹೇಳಿದ ಬಾಧವೆಂದರೆ ಸಾವಕಾಶಲಿಂಗವಷ್ಟೇ ಬಾಧಿತವಾಗುತ್ತದೆಂಬ ಅಭಿಪ್ರಾಯದಿಂದ. ಇಲ್ಲಿಯ ತನಕ ಮಾಡಿದ ಎರಡು ಪೂರ್ವಪಕ್ಷಗಳು ಪ್ರಮಾಣಾಶ್ರಿತವಾದವುಗಳು.

ಪ್ರಮೇಯಾಶ್ರಿತಪೂರ್ವಪಕ್ಷ ಹೀಗಿದೆ -- ತಮೋವಿರೋಧಿತ್ವವು ಜ್ಯೋತಿಶಬ್ದದ ಪ್ರವೃತ್ತಿನಿಮಿತ್ತ. ಸರ್ವಗತನಾದ ಬ್ರಹ್ಮನು ತಮಸ್ಸಿನ ಜೊತೆಗೂ ವಾಸ ಮಾಡುವಾಗ ತಮೋವಿರೋಧಿತ್ವವನ್ನು ಬ್ರಹ್ಮನಲ್ಲಿ ಹೊಂದಿಸಲಾಗದು. ಆದ್ದರಿಂದ ಜ್ಯೋತಿಶಬ್ದವು ಬ್ರಹ್ಮನನ್ನು ಪ್ರತಿಪಾದಿಸಲು ಸಾಧ್ಯವಿಲ್ಲ ಎಂದು.

ವಸ್ತುತಃ ಈ ಪ್ರಮೇಯಾಶ್ರಿತಪೂರ್ವಪಕ್ಷದಲ್ಲಿ ವೈಶ್ವಾನರೋ ಜಾಯಮಾನಃ' ಎಂಬ ಅಗ್ನಿ-ಸೂಕ್ತದಲ್ಲಿರುವ ವೈಶ್ವಾನರಶ್ರುತಿಯನ್ನು ಮತ್ತು ಜಾಯಮಾನತ್ವಲಿಂಗವನ್ನು ಆಧರಿಸಬಹುದು. ಆದರೆ ವೈಶ್ವನರಾಧಿಕರಣದಲ್ಲಿ ಹೇಳುವಂತೆ ಶ್ರುತಿಯು ವಿಷ್ಣುವಿನಲ್ಲಿ ಸಾವಕಾಶವಾಗುತ್ತದೆ. ದ್ಯುಭ್ವಾದ್ಯಧಿ-ಕರಣದಲ್ಲಿ ಜಾಯಮಾನತ್ವಲಿಂಗವೂ ಸಹ ಸಾವಕಾಶವೆಂದು ಕಂಠತಃ ಹೇಳಿದ್ದಾರೆ. ಹಾಗಾಗಿ

ವೈಶ್ವಾನರಶ್ರುತಿಯನ್ನಾಗಲೀ ಜಾಯಮಾನತ್ವಲಿಂಗವನ್ನಾಗಲೀ ಆಧರಿಸಿ ಭಾಷ್ಯ ಹಾಗೂ ಟೀಕೆಗಳಲ್ಲಿ ಪೂರ್ವಪಕ್ಷವನ್ನು ಮಾಡಿಲ್ಲ.

**ಪ್ರಕಾಶಃ** – ಏವಂ ಪೂರ್ವಪಕ್ಷದ್ವಯಂ ಪ್ರಸ್ಥಾನದ್ವಯಾಭಿಮತಮಿತ್ಯುಪಪಾದ್ಯಾಧುನಾ ಟೀಕಾಗ್ರನ್ಥೋऽಪಿ ಲಿಙ್ಗಪ್ರಕರಣಯೋಃ ನಿರವಕಾಶತ್ವಮುಪೇತ್ಯಾಧಿಕಾಶಙ್ಕಯೋತ್ಥಪೂರ್ವಪಕ್ಷಪರೋ ನೇಯಃ, ತಥಾ ಚೈಕ ಏವೋಭಯತ್ರ ಪೂರ್ವಪಕ್ಷ ಇತಿ ಭಾವೇನಾಹ – **ಯಚ್ಚೇತಿ ॥ ಶ್ರುತೇರೇವೇತಿ ॥** ತಥಾ ಚೋಕ್ತದಿಶಾ ಸೂಕ್ತರೂಪಪ್ರಕರಣಂ ನಿರವಕಾಶಮಿತ್ಯಭಿಪ್ರೇತಮಿತಿ ಭಾವಃ ॥ **ಲಿಙ್ಗಸ್ಯೇತಿ ॥** ಅತ ಏವ **''ಜಾಠರಜಾತವೇದಸಿ ಲಿಙ್ಗಸ್ಯಾಪಿ ಸಾವಕಾಶತ್ವಾತ್''** ಇತ್ಯುಕ್ತಮಿತಿ ಭಾವಃ । ಕರ್ಣಾದಿವಿದೂರತ್ವಾದಿಸಾಧಾರಣ್ಯೇನಾಹ – **ಸ್ವತ ಇತಿ ॥ ಏತೇ ಚೇತಿ ॥** ಶ್ರುತಿಸೂಕ್ತಯೋಃ ಲಿಙ್ಗಸ್ಯ ಸಾವಕಾಶತ್ವಮುಪೇತ್ಯೋಕ್ತಾ ನಿರವಕಾಶತ್ವಮುಪೇತ್ಯೋಕ್ತಾ ಚೇತಿ ಶಙ್ಕಾದ್ವಯಮಿತ್ಯರ್ಥಃ ॥ **ಪ್ರಮೇಯೇತಿ ॥** ಇಯಂ ಚ ಪೂರ್ವೋತ್ತರನಯಾನುವ್ಯಾಖ್ಯಾನೇನ ತುಲ್ಯನ್ಯಾಯತಯಾ ಸೂಚಿತಾ । ಭಾಷ್ಯಾದಾವಚಾತುರ್ಯಮಾಶಙ್ಕ್ಯಾಹ – **ತತ್ರೇತಿ ॥**

**ವಿವರಣೆ** – ಇಲ್ಲಿಯ ತನಕ ಸುಧಾ ಹಾಗೂ ಟೀಕೆಗೆ ಅಭಿಮತವಾದ ಎರಡು ವಿಧ ಪೂರ್ವಪಕ್ಷಗಳನ್ನು ಉಪಪಾದಿಸಿದರು. ಟೀಕೆಗೆ ಅನುಸಾರಿಯಾಗಿಯೇ ಸುಧೆಯ ಪೂರ್ವಪಕ್ಷವನ್ನು ಅರ್ಥೈಸಬೇಕೆಂದು ಮೊದಲು ವ್ಯಾಖ್ಯಾನಿಸಿ ಅನಂತರ ಟೀಕೆಯ ಪೂರ್ವಪಕ್ಷವೇ ಬೇರೆ, ಸುಧೆಯ ಪೂರ್ವಪಕ್ಷವೇ ಬೇರೆ; ಯಾವ ಪೂರ್ವಪಕ್ಷವನ್ನು ಆಶ್ರಯಿಸಿದರೂ ಈ ಅಧಿಕರಣವು ಸಾರ್ಥಕವಾಗುತ್ತದೆಂದು ವ್ಯಾಖ್ಯಾನಿಸಿದರು.

ಪ್ರಕೃತ ಸುಧೆಗೆ ಅನುಸಾರಿಯಾಗಿ ಟೀಕೆಯ ಪೂರ್ವಪಕ್ಷವನ್ನು ಭಾವಿಸಬಹುದೆಂದು ವ್ಯಾಖ್ಯಾನಿಸುತ್ತಿದ್ದಾರೆ. ಆದ್ದರಿಂದ ಈ ಅಧಿಕರಣದಲ್ಲಿ ಒಂದೇ ಪೂರ್ವಪಕ್ಷವನ್ನು ಎರಡು ಗ್ರಂಥಗಳಲ್ಲಿ ಹೇಳಿದ್ದಾರೆಂದು 'ಯದ್ವಾ' ಇತ್ಯಾದಿ ಗ್ರಂಥದಿಂದ ಸಮರ್ಥಿಸುತ್ತಿದ್ದಾರೆ. 'ಶ್ರುತೇರೇವ ವಿಶೇಷಣಂ' ಎಂದು ಹೇಳಿದ್ದರಿಂದ ಸೂಕ್ತರೂಪಪ್ರಕರಣಕ್ಕೆ ನಿರವಕಾಶತ್ವವನ್ನು ಒಪ್ಪಿದಂತಾಯಿತು. 'ಲಿಂಗಸ್ಯ ಸಾವಕಾಶತ್ವೋಕ್ತಿಶ್ಚ' ಎಂಬ ಮಾತಿನಿಂದ ಜಾಠರಾಗ್ನಿಯಲ್ಲಿ ಲಿಂಗವನ್ನು ಸಾವಕಾಶ ಮಾಡಿದಂತಾಯಿತು.

ಪ್ರಕರಣದ ಅನುಗ್ರಹವಿರುವ ಶ್ರುತಿ ಹಾಗೂ ಲಿಂಗ ಇವೆರಡನ್ನೂ ಸಾವಕಾಶವೆಂದು ಅಂಗೀಕರಿಸಿ ಮಾಡಿದ ಪೂರ್ವಪಕ್ಷ; ಹಾಗೂ ಎರಡನ್ನೂ ನಿರವಕಾಶವೆಂದು ಅಂಗೀಕರಿಸಿ ಮಾಡಿದ ಪೂರ್ವಪಕ್ಷ; ಈ ಎರಡು ಪೂರ್ವಪಕ್ಷಗಳೂ ಪ್ರಮಾಣಾಶ್ರಿತವಾಗಿವೆ ಎಂದು 'ಏತೇ ಚ' ಎಂಬ ವಾಕ್ಯದಿಂದ ಹೇಳಿದ್ದಾರೆ.

ಪ್ರಮೇಯಾಶ್ರಿತ ಪೂರ್ವಪಕ್ಷವು ಹಿಂದಿನ ಮುಂದಿನ ಅಧಿಕರಣಗಳ ಅನುವ್ಯಾಖ್ಯಾನದ ಸಮಾನನ್ಯಾಯದಿಂದ ಸೂಚಿತವಾಗಿದೆ. ಭಾಷ್ಯದಲ್ಲಿ ಅಚಾತುರ್ಯವನ್ನು ಶಂಕಿಸಿ 'ತತ್ರ' ಎಂಬ ಗ್ರಂಥದಿಂದ ತೋರಿಸಿದ್ದಾರೆ.

**ಗುರುರಾಜೀಯಮ್** – ನನು ಕರ್ಣಾದಿವಿದೂರತ್ವರೂಪಲಿಙ್ಗಸ್ಯ ಸಾವಕಾಶತ್ವಸ್ಯ ಪೂರ್ವಪಕ್ಷಿಣಾಪ್ಯನಙ್ಗೀಕಾರಾತ್ ಸಾವಕಾಶಶ್ರುತ್ಯಾ ನಿರವಕಾಶಲಿಙ್ಗಬಾಧ ಇತಿ ಟೀಕೋಕ್ತಃ

ಪೂರ್ವಪಕ್ಷೋऽನುಪಪನ್ನ ಏವೇತ್ಯರುಚೇರಾಹ – ನನು ಸಾಮಾನ್ಯತಃ ಪ್ರಯುಕ್ತಸ್ಯ ಲಿಙ್ಗಶಬ್ದಸ್ಯ ಗುಹಾನಿಹಿತತ್ವರೂಪಲಿಙ್ಗವಿಶೇಷಪರತ್ವೇ ಲಿಙ್ಗಪದಸ್ಯಾಸ್ವಾರಸ್ಯಂ ಭವತೀತ್ಯತಃ ಪಕ್ಷಾನ್ತರಮಾಹ – ಸ್ವತೋ ನಿರವಕಾಶಸ್ಯಾಪೀತಿ ॥ ನನ್ವೇವಮಪಿ ಯಾವತಾ ಶ್ರುತಿತ ಏವ ಲಿಙ್ಗಂ ದುರ್ಬಲಮಿತಿ ಟೀಕಾವಿರೋಧ ಇತ್ಯತ ಆಹ – ಲಿಙ್ಗಸ್ಯೇತಿ ॥

## ಸಾರ

ಸುಧೆಗೆ ಅನುಸಾರಿಯಾಗಿಯೇ ಟೀಕೆಯ ಪೂರ್ವಪಕ್ಷವನ್ನು ಹೊಂದಿಸಬಹುದು. ಸುಧೆಗೆ ವಿರುದ್ಧವಾಗಿ ಟೀಕೆಯಲ್ಲಿ ಲಿಂಗ ಸಾವಕಾಶ ಎಂಬ ಮಾತು ಕಾಣಿಸುತ್ತದೆ. ಆದರೆ ಕರ್ಣಾದಿವಿದೂರತ್ವಲಿಂಗವು ಸಾವಕಾಶವೆಂದು ಇದರ ಅರ್ಥವಲ್ಲ. ಗುಹಾನಿಹಿತತ್ವವು ಸಾವಕಾಶ ಎಂದರ್ಥ. ಅಥವಾ ಕರ್ಣಾದಿವಿದೂರತ್ವಲಿಂಗವು ಸ್ವತಃ ನಿರವಕಾಶವಾಗಿದ್ದರೂ ನಿರವಕಾಶಪ್ರಕರಣದ ಅನುಗ್ರಹವಿರುವ ಶ್ರುತಿಯ ಬಲದಿಂದ ಕರ್ಣಾದಿವಿದೂರತ್ವವನ್ನು ಅಗ್ನಿಯಲ್ಲಿ ಸಾವಕಾಶ ಮಾಡಬಹುದು. ಹೀಗೆ ಟೀಕೆಯನ್ನು ಅರ್ಥೈಸಿದಾಗ ಸುಧೆಯ ಅಭಿಪ್ರಾಯವನ್ನೇ ಸ್ಪಷ್ಟ-ಪಡಿಸಿದಂತಾಗುತ್ತದೆ.

ಹೀಗೆ ಪ್ರಮಾಣಾಶ್ರಿತಪೂರ್ವಪಕ್ಷವನ್ನು ಎರಡು ಬಗೆಯಲ್ಲಿ ತಿಳಿಯಬೇಕು.

ಪ್ರಮೇಯಾಶ್ರಿತಪೂರ್ವಪಕ್ಷ. ತಮೋವಿರೋಧಿತ್ವವು ಜ್ಯೋತಿಶಬ್ದದ ಪ್ರವೃತ್ತಿನಿಮಿತ್ತವಾಗಿದೆ. ತಮಸ್ಸಿನ ಜೊತೆಯಲ್ಲಿ ವಾಸಮಾಡುವ ಬ್ರಹ್ಮನಲ್ಲಿ ಈ ಪ್ರವೃತ್ತಿನಿಮಿತ್ತವನ್ನು ಕೂಡಿಸಲು ಸಾಧ್ಯವಿಲ್ಲ. ಆದ್ದರಿಂದ ಜ್ಯೋತಿಶಬ್ದದಿಂದ ಅಗ್ನಿಯೇ ಪ್ರತಿಪಾದ್ಯನಾಗುತ್ತಾನೆ; ವಿಷ್ಣುವಲ್ಲ.

---

## ಕರ್ಣಾದಿವಿದೂರತ್ವಲಿಂಗವು ವಿಷ್ಣುವಿನಲ್ಲಿ ಮಾತ್ರ
## (ಸಿದ್ಧಾಂತ)

### ತಾತ್ಪರ್ಯಚನ್ದ್ರಿಕಾ

ಸಿದ್ಧಾನ್ತಸ್ತು ॥

ಕರ್ಣಾದೀನಾಂ ವಿದೂರತ್ವಂ ವಿಷ್ಣೋರನ್ಯತ್ರ ನೈವ ಹಿ ।
ಅಗ್ನೇಸ್ತು ಶ್ರುತಿಸೂಕ್ತಾದಿ ಸಾವಕಾಶಂ ಪರಾತ್ಮನಿ ॥

ಕರ್ಣಾದಿವಿದೂರತ್ವಂ ಹಿ 'ಇಯತ್' ಇತಿ ಪರಿಚ್ಛೇದಾನರ್ಹವೈಭವತ್ವಮ್, ನ ತು ಸರ್ವಥಾ ಕರ್ಣಾದಿ-ವಿದೂರತ್ವಂ, ಕಾಪ್ಯಸಮ್ಭವಾತ್ । ತಚ್ಚ ''ಪರೋ ಮಾತ್ರಯಾ'' ಇತ್ಯಾದಿಭಾಷ್ಯೋಕ್ತಶ್ರುತಿಭಿರ್ನಿರವಕಾಶಮ್ । ನ ಹಿ ''ಅಗ್ನಿರ್ವೈ ದೇವಾನಾಮವಮಃ'' ಇತ್ಯವಮತಯಾ, ''ಭೀಷಾऽಸ್ಮಾದಗ್ನಿಸ್ತಪತಿ''

**ಇತಿ ಸಭಯತಯಾ, 'ಪರಿ ಹ್ಯೇನಂ ಮ್ರಿಯನ್ತೇ ವಿದ್ಯುದ್ಧೃಷ್ಟಿಶ್ಚನ್ದ್ರಮಾ ಆದಿತ್ಯೋऽಗ್ನಿಃ'' ಇತಿ ಮರಣಾದಿಮತ್ತಯಾ ಚ ಶ್ರುತಸ್ಯ ಅನ್ನೇರಪರಿಚ್ಛೇದ್ಯಂ ವೈಭವಮ್ । ಅಗ್ನಿಶ್ರುತ್ಯಾದಿ ತು ''ಅಗ್ನಿನಾऽಗ್ನಿಸ್ಸಮಿಧ್ಯತೇ'' ''ತದ್ದೇವಾ ಜ್ಯೋತಿಷಾಂ ಜ್ಯೋತಿಃ'' ''ನಾರಾಯಣಪರೋ ಜ್ಯೋತಿಃ'' ''ವಿಷ್ಣುರೇವ ಜ್ಯೋತಿಃ'' ''ಅಹಮಗ್ನಿರಹಂ ಹುತಂ'' ''ಜ್ಯೋತಿಷಾಮಪಿ ತಜ್ಜ್ಯೋತಿಃ'' ಇತ್ಯಾದಿ ಶ್ರುತಿಸ್ಮೃತಿಭಿಃ ವಿಷ್ಣೌ ಸಾವಕಾಶಮ್ । ಇದಂ ನ ವಿಷ್ಣುಸೂಕ್ತಮಿತ್ಯಧ್ಯಾಪಕಪ್ರಸಿದ್ಧಿಸ್ತು ''ಧಾನ್ಯಮಸಿ'' ಇತಿ ಮನ್ತ್ರಸ್ಯ ಮಾಂಸಹವಿಷ್ಕಯಾಗೇ ನಿವಿಷ್ಟಸ್ಯ 'ಮಾಂಸಮಸಿ' ಇತ್ಯೂಹೇ ಕರ್ತವ್ಯೇ ''ಮೃಗೋऽಸಿ'' ಇತ್ಯೂಹವತ್ ಪ್ರಸಿದ್ಧವಿಷ್ಣ್ವಾದಿಶಬ್ದಾಭಾವಾದಜ್ಞಾನಮೂಲಾ । ತದುಕ್ತಂ ನ್ಯಾಯವಿವರಣೇ ''ಸನ್ದಿಗ್ಧಶ್ರುತಿಲಿಙ್ಗಾಭ್ಯಾಮಪ್ಯಸನ್ದಿಗ್ಧಯೋಃ ಕೇವಲಯೋರೇವ ಬಲವತ್ತ್ವಾತ್'' ಇತಿ । ಅತ್ರ ಚ ಸನ್ದಿಗ್ಧತ್ವಂ ನಾಮ ಸಾವಕಾಶತ್ವಮ್ ।**

ಅನುವಾದ - ಈ ಅಧಿಕರಣದ ಸಿದ್ಧಾಂತ ಹೀಗಿದೆ.

ಕರ್ಣಾದೀನಾಂ ವಿದೂರತ್ವಂ ವಿಷ್ಣೋರನ್ಯತ್ರ ನೈವ ಹಿ ।
ಅಗ್ನೇಸ್ತು ಶ್ರುತಿಸೂಕ್ತಾದಿ ಸಾವಕಾಶಂ ಪರಾತ್ಮನಿ ॥

ಕರ್ಣಾದಿವಿದೂರತ್ವಲಿಂಗವು ವಿಷ್ಣುವನ್ನು ಬಿಟ್ಟು ಬೇರೆಲ್ಲಿಯೂ ಬರುವುದಿಲ್ಲ. ಅಗ್ನಿವಿಷಯಕವಾದ ಶ್ರುತಿ ಸೂಕ್ತಾದಿಗಳು ಪರಮಾತ್ಮನಲ್ಲಿ ಸಾವಕಾಶವಾಗಿವೆ.

ಇಷ್ಟೇ ಎಂಬ ಪರಿಚ್ಛೇದವಿಲ್ಲದ ವೈಭವವನ್ನು ಕರ್ಣಾದಿವಿದೂರತ್ವಶಬ್ದ ಹೇಳುತ್ತದೆ; ಹೊರತು ಕಿವಿ ಮೊದಲಾದ ಯಾವುದೇ ಇಂದ್ರಿಯಗಳಿಂದ ಸರ್ವಥಾ ತಿಳಿಯಲಾರೆನೆಂದು ಅದರ ಅರ್ಥವಲ್ಲ. ಹಾಗಾದಲ್ಲಿ ಯಾವ ವಸ್ತುವೂ ಕರ್ಣಾದಿವಿದೂರವಾಗದಿರಬೇಕಾದೀತು. ಇಂತಹ ಕರ್ಣಾದಿವಿದೂರತ್ವವು 'ಪರೋ ಮಾತ್ರಯಾ' ಎಂಬ ಭಾಷ್ಯದಲ್ಲಿ ಉದಾಹರಿಸಿದ ಶ್ರುತಿಯಂತೆ ವಿಷ್ಣುವಿನಲ್ಲಿ ನಿರವಕಾಶವಾಗಿದೆ. ಯಾವುದೇ ಕಾರಣದಿಂದಲೂ ಅಗ್ನಿಯಲ್ಲಿ ಇದನ್ನು ಉಪಪಾದಿಸಲಾಗದು. ಏಕೆಂದರೆ 'ಅಗ್ನಿರ್ವೈ ದೇವಾನಾಮವಮಃ' ಎಂಬ ಶ್ರುತಿಯಿಂದ ಅಗ್ನಿಯು ಸ್ವೋತ್ತಮದೇವತೆಗಳಿಗಿಂತ ನೀಚನಾಗಿದ್ದಾನೆ; 'ಭೀಷಾಸ್ಮಾದಗ್ನಿಸ್ತಪತಿ' ಎಂಬ ಶ್ರುತಿಯಂತೆ ಭೀತನಾಗಿದ್ದಾನೆ; 'ಪರಿಹ್ಯೇನಂ ಮ್ರಿಯಂತೇ ವಿದ್ಯುದ್ಧೃಷ್ಟಿಶ್ಚಂದ್ರಮಾ ಆದಿತ್ಯೋಗ್ನಿಃ' ಎಂಬ ಶ್ರುತಿಯಂತೆ ಮರಣಶೀಲನಾಗಿದ್ದಾನೆ. ಹೀಗೆ ಅನೇಕ ದೋಷಗಳಿಂದ ದುಷ್ಟನಾದ ಅಗ್ನಿಯಲ್ಲಿ ಅಪರಿಮಿತವೈಭವವನ್ನು ಹೇಳಲು ಹೇಗೆ ಸಾಧ್ಯ ?

ಆದರೆ ಅಗ್ನಿಶ್ರುತಿಯಾದರೂ ವಿಷ್ಣುವಿನಲ್ಲಿ ಸಾವಕಾಶವಾಗಿದೆ. 'ಅಗ್ನಿನಾಗ್ನಿಃ ಸಮಿಧ್ಯತೇ' 'ತದ್ದೇವಾ ಜ್ಯೋತಿಷಾಂ ಜ್ಯೋತಿಃ' 'ನಾರಾಯಣಪರೋ ಜ್ಯೋತಿಃ' ವಿಷ್ಣುರೇವ ಜ್ಯೋತಿಃ

ಅಹಮಗ್ನಿರಹಂ ಹುತಮ್ । ಜ್ಯೋತಿಷಾಮಪಿ ತಜ್ಜ್ಯೋತಿಃ' ಇತ್ಯಾದಿ ಶ್ರುತಿಸ್ಮೃತಿಗಳು ವಿಷ್ಣುವನ್ನು ಅಗ್ನಿಯೆನ್ನುತ್ತಿವೆ. ಹಾಗಾದರೆ 'ಇದಂ ನ ವಿಷ್ಣುಸೂಕ್ತಮ್ ಕಿಂತು ಅಗ್ನಿಸೂಕ್ತಮೇವ' (ಇದು ವಿಷ್ಣುಸೂಕ್ತವಲ್ಲ; ಅಗ್ನಿಸೂಕ್ತವೇ ಆಗಿದೆ) ಎಂಬ ಅಧ್ಯಾಪಕಪ್ರಸಿದ್ಧಿಯನ್ನು ಹೇಗೆ ಹೊಂದಿಸುವುದು? ಎಂಬ ಶಂಕೆಗೂ ಅವಕಾಶವಿಲ್ಲ. ಈ ಪ್ರಸಿದ್ಧಿಯು ಕೇವಲ ಅಜ್ಞಾನಮೂಲಕವಾಗಿದೆ. ಅಜ್ಞಾನಮೂಲಕವಾದ ಪ್ರಸಿದ್ಧಿಯನ್ನು ಕಡೆಗಾಣಿಸಬೇಕೆನ್ನಲು ಪೂರ್ವಮೀಮಾಂಸೆಯೇ ದೃಷ್ಟಾಂತವಾಗಿದೆ. 'ಧಾನ್ಯಮಸಿ' ಎಂಬ ಮಂತ್ರವನ್ನು ಮಾಂಸಹವಿಷ್ಯಾಗದಲ್ಲಿ ಉಪಯೋಗಿಸಬೇಕು. ಆದರೆ ಧಾನ್ಯಕ್ಕೆ ಮಾಂಸಯಾಗದಲ್ಲಿ ಕೃತ್ಯವಿಲ್ಲದ ಕಾರಣ ಧಾನ್ಯಶಬ್ದವನ್ನು ತೆಗೆದು ಮಾಂಸಶಬ್ದವನ್ನು ಊಹಿಸಿ 'ಮಾಂಸಮಸಿ ಧಿನುಹಿ ದೇವಾನ್' ಎಂದು ಊಹಿಸಬೇಕು. ಒಂದು ವೇಳೆ 'ಮೃಗೋಸಿ' ಎಂದು ಊಹಿಸಿದರೆ ಅದು ಅಜ್ಞಾನಮೂಲಕವಾಗಿದೆಯೆಂದು ಪೂರ್ವಮೀಮಾಂಸೆಯಲ್ಲಿ ಉಪಪಾದಿಸಿದ್ದಾರೆ.

ಈ ವಿಷಯದಲ್ಲಿ ನ್ಯಾಯವಿವರಣದ ಮಾತು ಹೀಗಿದೆ - 'ಸಂದಿಗ್ಧಶ್ರುತಿಲಿಂಗಾಭ್ಯಾಮಪ್ಯಸಂದಿಗ್ಧಯೋಃ ಕೇವಲಯೋರೇವ ಬಲವತ್ತ್ವಾತ್' (ಸಾವಕಾಶಶ್ರುತಿಲಿಂಗಗಳಿಗಿಂತ ನಿರವಕಾಶವಾದ ಕೇವಲ ಶ್ರುತಿಯಾಗಲೀ ಲಿಂಗವಾಗಲೀ ಬಲಿಷ್ಠವಾಗಿದೆ) ಎಂದು. ಇಲ್ಲಿರುವ ಸಂದಿಗ್ಧಶಬ್ದಕ್ಕೆ ಸಾವಕಾಶ ಎಂದರ್ಥ.

### ಕಠಿಣಪದಾರ್ಥ

ಪರಿಚ್ಛೇದಾನರ್ಹವೈಭವತ್ವಮ್ = ಪರಿಮಿತಿ ಇಲ್ಲವೆಂಬ ವೈಭವ ಗುಣವು; ಪರೋಮಾತ್ರಯಾ = ೧.ಇಂದ್ರಿಯಗಳಿಗಿಂತ ಉತ್ತಮನು; ೨.ಪರಿಮಿತಿ ಇಲ್ಲದವನು.; ಅವಮಃ = ನೀಚನು; ಅಸ್ಮಾತ್ ಭೀಷಾ = ವಿಷ್ಣುವಿನ ಭಯದಿಂದ; ಅಗ್ನಿನಾ = ಅಗ್ನಿನಾಮಕ ಪರಮಾತ್ಮನಿಂದ; ಸಮಿಧ್ಯತೇ = ಪ್ರಜ್ವಲಿಸುತ್ತಾನೆ; ಸಂದಿಗ್ಧಶ್ರುತಿಲಿಂಗಾಭ್ಯಾಮ್ = ನಿರವಕಾಶಶ್ರುತಿಲಿಂಗಗಳಿಗಿಂತ; ಕೇವಲಯೋಃ = ಪರಸ್ಪರ ನಿರಪೇಕ್ಷವಾದ ಶ್ರುತಿಲಿಂಗಗಳಿಗಿಂತ.

**ಪ್ರಕಾಶಃ** – ಸಿದ್ಧಾನ್ತಟೀಕಾಂ ವಿವೃಣ್ವನ್ ಪ್ರಮಾಣಾಶ್ರಿತಶಙ್ಕಾದ್ವಯನಿರಾಸಕನ್ಯಾಯೌ ತಾವತ್ ಸಙ್ಗೃಹ್ಣಾಹ – **ಕರ್ಣಾದೀನಾಮಿತಿ** ॥ ಆದ್ಯಾರ್ಧೇನ ಆದ್ಯಪಕ್ಷನಿರಾಸಕೋ ನ್ಯಾಯ ಉಕ್ತಃ, ಉತ್ತರಾರ್ಧೇನ ದ್ವಿತೀಯಪಕ್ಷನಿರಾಸಕ ಇತಿ ಧ್ಯೇಯಮ್ । ಶ್ರುತೇಸ್ತಾವಕಾಶತ್ವಾವಿವಾದೇऽಪಿ ದೃಷ್ಟಾನ್ತತ್ವೇನ ವಾ ಪ್ರಮೇಯಾಶ್ರಿತಶಙ್ಕಾಪಕ್ಷೇ ನಿರವಕಾಶತ್ವಾಭಿಮಾನಾದ್ವಾ ಶ್ರುತ್ಯುಕ್ತಿಃ ।

तथा हि – अग्निसूक्तगतं ज्योतिर्विष्णुरेव, न त्वग्निः, चरणशब्दोक्त-कर्णादिविदूरत्वरूपलिङ्गात् । नच श्रुतिलिङ्गाभ्यां लिङ्गस्य बाधः, तस्य निरवकाशत्वादित्याद्यः । द्वितीयस्तु ज्योतिर्विष्णुरेव, निरवकाशलिङ्गात् । नच निरवकाशसूक्तानुगृहीतया श्रुत्या बाधः, तयोर्भगवति सावकाशत्वादिति ।

ननु कर्णादिविदूरत्वं श्रोत्रमनःप्रभृत्यविषयत्वम् । तच्च ब्रह्मणि न युक्तं, तस्य मनोवृत्तिविषयत्वादित्यतो विष्णौ लिङ्गस्य घटनां तावदाह – **कर्णादीति** ॥ ''अन्यत्र नैवे'' इत्युक्तनिरवकाशतामुपपादयन् पूर्वार्धं विशदयति – **तच्चेति** ॥ हिशब्दोक्तश्रुतीराह – **पर इति** ॥ मीयन्ते अनेन विषया इति मात्रा इन्द्रियगणः, ततः परोऽसीत्यर्थः । यद्वा मात्रायाः मितेः परः, अपरिमितोऽसीत्यर्थः । ''**अग्निर्वै देवानामवमो विष्णुः परमः**'' इति बह्वृचब्राह्मणे स्वोत्तमदेवावमतया ''श्रुतस्य'' इत्यन्वयः । यद्यपि ''**भीषाऽस्मादग्निश्चेन्द्रश्च**'' इत्येव तैत्तिरीयाणां पाठः, तथाऽपि ''**भयादस्याग्निस्तपति**'' इति श्रुत्यन्तरबलात् 'तपति' इत्यध्याहृत्योक्तम् । यद्वा ''**भीषाऽस्मान्**'' इति श्रुतिप्रतीकग्रहणम् । ''**अग्निस्तपति**'' इत्यन्या श्रुतिः । 'अस्माद्भीषा' अस्य भयेनेत्यर्थः ॥ **परीति** ॥ ''**तमेताः परिम्रियन्ते**'' इति बह्वृचब्राह्मणं, ''**म्रियन्ते पञ्चदेवताः**'' इति ऋग्भाष्योक्तेः, 'परिह्वेनं' इत्यर्थानुवादः ।

नन्वेवं श्रुत्यादेरपि निरवकाशत्वे तौल्यमेव स्यादित्यत उत्तरार्धं विशदयति – **अग्नीति** ॥ ''विष्णौ सावकाशं'' इत्यन्वयः ।

**अग्निनाऽग्निस्समिध्यते कविर्गृहपतिर्युवा ।**
**हव्यवाड् जुह्वास्यः ॥**

इत्यत्राग्निसमिन्धकस्य भगवतोऽग्निशब्दवाच्यत्वोक्तेरिति भावः । यद्यप्यत्र 'अग्निना' गार्हपत्येनाहवनीयोऽग्निः समिध्यत इत्यर्थः सम्भवति । उक्तञ्च ऋग्भाष्ये – **अथवाऽऽहवनीयोऽग्निर्मथितेन समिध्यते ।**

इति, तथाऽपि –

**यस्यास्ये हूयते सोऽग्निः परेशेन समिध्यते ।**

इत्युक्तत्वादस्यैव च मुख्यत्वादेतदुदाहृतमिति ध्येयम् । **तद्देवा** इति वाजसनेये –

**यस्मादर्वाक् संवत्सरोऽहोभिः परिवर्तते ।**
**तद्देवा ज्योतिषां ज्योतिरायुर्होपासतेऽमृतम् ॥**

ಇತಿ ಶ್ರುತಸ್ಯ ಜ್ಯೋತಿಷಾಂ ಜ್ಯೋತಿಷ್ಟ್ವಪ್ರದಜ್ಯೋತಿಷೋ ಬ್ರಹ್ಮತ್ವಂ, ಅಮೃತತ್ವಾದಿಲಿಙ್ಗಾತ್ ''ಜ್ಯೋತಿಷೈಕೇಷಾಂ'' ಇತಿ ವಕ್ಷ್ಯಮಾಣದಿಶಾ ಚ ಸಿದ್ಧಮಿತಿ ಭಾವಃ ।

**ನಾರಾಯಣಪರೋ ಜ್ಯೋತಿರಾತ್ಮಾ ನಾರಾಯಣಃ ಪರಃ ।**

ಇತಿ ನಾರಾಯಣೋಪನಿಷದಿ ನಾರಾಯಣ ಏವ ಪರಂ ಜ್ಯೋತಿರಿತಿ ಪರಶಬ್ದಪರ್ಯಾಯಪರಶ್ಶಬ್ದೇನೋತ್ತಮಜ್ಯೋತಿರಿತ್ಯುಕ್ತೇರಿತಿ ಭಾವಃ । 'ವಿಷ್ಣುರೇವ ಜ್ಯೋತಿರ್ವಿಷ್ಣುರೇವ ಬ್ರಹ್ಮ ವಿಷ್ಣುರೇವಾऽऽತ್ಮಾ ವಿಷ್ಣುರೇವ ಬಲಂ ವಿಷ್ಣುರೇವ ಯಶೋ ವಿಷ್ಣುರೇವಾऽऽನನ್ದಃ' ಇತಿ ಚತುರ್ವೇದಶಿಖಾಯಾಂ ಸ್ಪಷ್ಟಮೇವ ಜ್ಯೋತಿಷ್ಟ್ವಂ ವಿಷ್ಣೋಃ । ಸ್ಮೃತಿಮಪ್ಯಾಹ – ಅಹಮಿತಿ ॥

**ಅಹಂ ಕ್ರತುರಹಂ ಯಜ್ಞಃ ಸ್ವಧಾऽಹಮಹಮೌಷಧಮ್ ।**
**ಮನ್ತ್ರೋऽಹಮಹಮೇವಾಜ್ಯಮಹಮಗ್ನಿರಹಂ ಹುತಮ್ ॥**

ಇತಿ ಗೀತಾಯಾಂ ಕೃಷ್ಣೇನ ಸ್ವಸ್ಯಾಗ್ನಿಸ್ವರೂಪಸತ್ತಾನಿಯಾಮಕತ್ವೋಕ್ತ್ಯಾ ಸ್ವಾತ್ಮನೋऽಗ್ನಿಶಬ್ದವಾಚ್ಯತ್ವೋಕ್ತೇಃ । ನ ಚಾತ್ರಾಭೇದ ಉಚ್ಯತೇ, ವಿಶಿಷ್ಟಾಭೇದಸ್ಯ ಬಾಧಾತ್, ಶುದ್ಧೇ ಲಕ್ಷಣಾಪತ್ತೇಃ, ಕ್ರತ್ವಾದಿಜಡಾಭೇದಾಯೋಗಾಚ್ಚೇತಿ ಭಾವಃ । ತಥಾ ತತ್ರೈವ –

**ಜ್ಯೋತಿಷಾಮಪಿ ತಜ್ಜ್ಯೋತಿಸ್ತಮಸಃ ಪರಮುಚ್ಯತೇ ।**

ಇತ್ಯತ್ರ ''ಅನಾದಿಮತ್ಪರಂ ಬ್ರಹ್ಮ'' ಇತಿ ಪೂರ್ವಪ್ರಕೃತಬ್ರಹ್ಮಣ ಏವ, ತಚ್ಛಬ್ದೇನ ಪರಾಮೃಶ್ಯ ಜ್ಯೋತಿಷಾಮಪಿ ಪ್ರಕಾಶನಶಕ್ತಿಪ್ರದತ್ವೇನ ಜ್ಯೋತಿಷ್ಟ್ವೋಕ್ತೇಃ । ಆದಿಪದೇನ ''ತಚ್ಛುಭ್ರಂ ಜ್ಯೋತಿಷಾಂ ಜ್ಯೋತಿಃ'' ಇತ್ಯಾದಿ ಗೃಹ್ಯತೇ । ಸೂಕ್ತಸ್ಯ ನಿರವಕಾಶತ್ವಂ ಪ್ರಾಗುಕ್ತಮ ನ್ಯಾ ಸದೃಷ್ಟಾನ್ತಂ ನಿರಸ್ಯತಿ – ಇದಮಿತಿ ॥

ನವಮೇ ಆದ್ಯಪಾದೇ ''ಗುಣಶಬ್ದಸ್ತಥೇತಿ ಚೇತ್'' ಇತಿ ತ್ರಯೋದಶೇऽಧಿಕರಣೇ ದ್ವಿತೀಯವರ್ಣಕೇ ಚಿನ್ತಿತಂ ಶಾಕ್ಯಾನಾಮಯನಾಖ್ಯೇ ಷಡ್ವಿಂಶತ್ಸಂವತ್ಸರೇ ಸತ್ರೇ ಶ್ರುತಂ ''ಸಂಸ್ಥಿತೇ ಸಂಸ್ಥಿತेऽಹನಿ ಗೃಹಪತಿರ್ಮೃಗಯಾಂ ಯಾತಿ, ಸ ತತ್ರ ಯಾನ್ ಮೃಗಾನ್ ಹನ್ತಿ, ತೇಷಾಂ ತರಸಮಯಾಃ ಪುರೋಡಾಶಾ ಭವನ್ತಿ'' ಇತಿ । ತೇಷು ಮಾಂಸಮಯೇಷು ಪ್ರಕೃತೌ ದೃಷದಿ ಪೇಷಣಾಯ ತಣ್ಡುಲಾನಾಂ ವಿಹಿತಃ ''ಧಾನ್ಯಮಸಿ ಧಿನುಹಿ ದೇವಾನ್'' ಇತಿ ಮನ್ತ್ರಶ್ಚೋದಕೇನ ಪ್ರಾಪ್ತಃ । ಸ ಕಿಮೂಹಿತವ್ಯ ಉತ ನೇತಿ ಸಂಶಯೇ,

ಧಾನ್ಯಶಬ್ದಸ್ಯ ಸತುಷದ್ರವ್ಯವಾಚಿತಯಾ ಪ್ರಕೃತೌ ತಣ್ಡುಲಪ್ರಕಾಶನಾಸಾಮರ್ಥ್ಯೇನಾಸಮವೇತಾರ್ಥತ್ವಾತ್ ಸೌರ್ಯಾಗೇ ''ದೇವಸ್ಯ ತ್ವಾ'' ಇತಿ ಮನ್ತ್ರಗತಸವಿತ್ರಾದಿಶಬ್ದವನ್ನೋಹನೀಯ ಇತಿ ಪ್ರಾಪ್ತೇ,

प्रकृतिविकारमूलया लक्षणया धान्यशब्दस्य तण्डुलप्रकाशकतया प्रकृतौ समवेतार्थत्वात् ''मांसमसि धिनुहि देवान्'' इत्यूहितव्य इति सिद्धान्त इति ॥

अत्र यथा प्रकृतौ लक्षणाया आर्थिकत्वेनाविवक्षितत्वात्स्वाधीने प्रयोगे लक्षणाश्रयणायोगान्न मांसलक्षकतया 'मृगोऽसि' इत्यूहो न्याय्यः, याज्ञिकानां तु तादृशोहाभ्युपगमो यथाऽज्ञानमूलः, तथाऽध्यापकप्रसिद्धिरपि विष्ण्वादिशब्दाभाव-निमित्ताज्ञानमूलेत्यर्थः ।

**केवलयोरिति** ॥ अन्योन्यनिरपेक्षयोः श्रुतिलिङ्गयोरित्यर्थः। कथमिदमुक्तार्थ-संवादीत्यत आह – **अत्र चेति** ॥ असन्दिग्धत्वं च निरवकाशत्वमित्युक्तप्रायम् । उक्तञ्च तट्टीकायां – ''सावकाशेभ्योऽनेकेभ्योऽपि निरवकाशस्यैकस्यैव प्राबल्यात्'' इति । नन्वत्र सावकाशयोः श्रुतिलिङ्गयोरेव निरवकाशेन लिङ्गादिना बाधः प्रतीयते, न तु तादृशयोः श्रुतिप्रकरणयोः, न्यायविवरणटीकायां चास्य वाक्यस्याकाशप्राण-छन्दोऽधिकरणपरतया व्याख्यातत्वात् । तत्र च प्रकरणोपष्टम्भेन पूर्वपक्षाकरणात् कथमुक्तसंवादीति चेन्न, तुल्यन्यायतया वा, श्रुतिप्रकरणोपलक्षणत्वाशयेन वा, कैमुत्यन्यायसिद्धतया वाऽस्योदाहरणादिति ।

ವಿವರಣೆ - ಇಲ್ಲಿಯ ತನಕ ಎರಡು ಬಗೆಯ ಪ್ರಮಾಣಾಶ್ರಿತಪೂರ್ವಪಕ್ಷಗಳನ್ನು ಮತ್ತು ಪ್ರಮೇಯಾಶ್ರಿತ ಪೂರ್ವಪಕ್ಷವನ್ನು ತೋರಿಸಿದ್ದಾಯಿತು.

ಪ್ರಕೃತ ಸಿದ್ಧಾಂತವನ್ನು ಪ್ರಾರಂಭಿಸುತ್ತಿದ್ದಾರೆ. ಮೊದಲು ಸಿದ್ಧಾಂತಟೀಕೆಯನ್ನು ವ್ಯಾಖ್ಯಾನಿಸುವುದಕ್ಕಾಗಿ ಎರಡು ಪ್ರಮಾಣಾಶ್ರಿತಶಂಕೆಗಳನ್ನು ನಿರಾಸಮಾಡುವ ಎರಡು ನ್ಯಾಯಗಳನ್ನು ಶ್ಲೋಕದಲ್ಲಿ ಸಂಗ್ರಹಿಸುತ್ತಿದ್ದಾರೆ. ಶ್ಲೋಕದ ಮೊದಲ ಅರ್ಧದಿಂದ ಕರ್ಣಾದಿವಿದೂರತ್ವಲಿಂಗವು ನಿರವಕಾಶವಾಗಿದೆ ಎಂಬ ನ್ಯಾಯವನ್ನು ಹೇಳಿದ್ದಾರೆ. ಇದರಿಂದ ಮೊದಲ ಪೂರ್ವಪಕ್ಷವು ನಿರಾಕೃತವಾಗುತ್ತದೆ. ಮುಂದಿನ ಅರ್ಧಶ್ಲೋಕದಿಂದ ಅಗ್ನಿಶ್ರುತಿ ಹಾಗೂ ಅಗ್ನಿಪ್ರಕರಣಗಳು ಸಾವಕಾಶವಾಗಿವೆ ಎಂಬ ನ್ಯಾಯವನ್ನು ಹೇಳಿದ್ದಾರೆ. ಇದರಿಂದ ಎರಡನೆಯ ಪೂರ್ವಪಕ್ಷವು ನಿರಾಸವಾಗಿದೆ.

ಗ್ರಂಥಕಾರರು ಶ್ರುತಿ ಹಾಗೂ ಸೂಕ್ತಗಳನ್ನು ಶ್ಲೋಕದಲ್ಲಿ ಸಾವಕಾಶವೆಂದಿದ್ದಾರೆ. ವಸ್ತುತಃ ಸೂಕ್ತವೊಂದಷ್ಟೇ ಸಾವಕಾಶವೆನ್ನಬೇಕು. ಶ್ರುತಿ ಸಾವಕಾಶವೆಂಬ ವಿಷಯದಲ್ಲಿ ಪೂರ್ವಪಕ್ಷಿಗೆ ವಿವಾದವಿಲ್ಲ. ಆದರೂ ಸಹ ಶ್ರುತಿಯು ಹೇಗೆ ಸಾವಕಾಶವೋ ಅದರಂತೆ ಸೂಕ್ತವೂ ಸಹ ಎಂಬ ದೃಷ್ಟಾಂತಕ್ಕಾಗಿ ಶ್ರುತಿಯನ್ನು ಉಲ್ಲೇಖಿಸಿದ್ದಾರೆ. ಅಥವಾ ಪ್ರಮೇಯಾಶ್ರಿತಪೂರ್ವಪಕ್ಷದಲ್ಲಿ ತಮೋ ವಿರೋಧಿತ್ವವು ವಿಷ್ಣುವಿನಲ್ಲಿ ಬರುವುದೇ ಇಲ್ಲವೆಂದು ಶಂಕಿಸಿದ್ದರಿಂದ ಜ್ಯೋತಿಶ್ರುತಿಯು ನಿರವಕಾಶವೆಂದೇ ಪೂರ್ವಪಕ್ಷಿಯು ಅಭಿಮಾನ ಪಡುತ್ತಾನೆ. ಆದರ ನಿರಾಸಕ್ಕಾಗಿಯೂ ಶ್ರುತಿಶಬ್ದವನ್ನು ಉಲ್ಲೇಖಿಸಿದ್ದಾರೆ.

ಶ್ಲೋಕದ ವಿವರ ಹೀಗಿದೆ - ಅಗ್ನಿಸೂಕ್ತದಲ್ಲಿರುವ ಜ್ಯೋತಿಯು ವಿಷ್ಣುವೇ ಆಗಿದ್ದಾನೆ; ಹೊರತು ಅಗ್ನಿಯಲ್ಲ. ಚರಣಶಬ್ದದಿಂದ ಕೇಳಿಸುವ ಕರ್ಣಾದಿವಿದೂರತ್ವಲಿಂಗವೇ ಇದನ್ನು ಸಾಧಿಸುತ್ತದೆ. ಶ್ರುತಿ ಹಾಗೂ ಸೂಕ್ತಗಳಿಂದ ಕರ್ಣಾದಿವಿದೂರತ್ವಲಿಂಗಕ್ಕೆ ಬಾಧವನ್ನು ಹೇಳಲಾಗದು. ಶ್ರುತಿಯು ಸೂಕ್ತಗಳಿಗಿಂತಲೂ ನಿರವಕಾಶವಾದ್ದರಿಂದ ಕರ್ಣಾದಿವಿದೂರತ್ವಲಿಂಗವು ಬಲಿಷ್ಠವಾಗಿದೆ. ಎರಡನೆಯ ಪೂರ್ವಪಕ್ಷದ ನಿರಾಕರಣೆ ಹೀಗಿದೆ -- ಜ್ಯೋತಿಯು ವಿಷ್ಣುವೇ ಆಗಿದ್ದಾನೆ. ಕರ್ಣಾದಿವಿದೂರತ್ವವೆಂಬ ನಿರವಕಾಶಲಿಂಗವು ಇದನ್ನು ಸಾಧಿಸುವುದರಿಂದ. ನಿರವಕಾಶಪ್ರಕರಣದ ಅನುಗ್ರಹವಿರುವ ಶ್ರುತಿಯಿಂದ ನಿರವಕಾಶಲಿಂಗಕ್ಕೆ ಬಾಧವನ್ನು ಹೇಳಲಾಗದು. ಏಕೆಂದರೆ ಶ್ರುತಿ, ಸೂಕ್ತಗಳು ಭಗವಂತನಲ್ಲಿ ಸಾವಕಾಶಗಳಾಗಿವೆ.

ಕರ್ಣಾದಿವಿದೂರತ್ವಶಬ್ದಕ್ಕೆ ಶ್ರೋತ್ರಮನಸ್ಸು ಮೊದಲಾದ ಇಂದ್ರಿಯಗಳಿಗೆ ವಿಷಯವಾಗದಿರುವಿಕೆ ಎಂದರ್ಥ. ಇದು ಬ್ರಹ್ಮನಲ್ಲಿ ಕೂಡುವುದಿಲ್ಲ. ಬ್ರಹ್ಮನು ಮನಸ್ಸಿಗೆ ವಿಷಯನಾದ್ದರಿಂದ. ಆದ್ದರಿಂದ ವಿಷ್ಣುವಿನಲ್ಲಿ ಕರ್ಣಾದಿವಿದೂರತ್ವಲಿಂಗವನ್ನು ಹೇಗೆ ಕೂಡಿಸುತ್ತೀರಿ? ಎಂಬ ಪ್ರಶ್ನೆಗೆ 'ಕರ್ಣಾದಿವಿದೂರತ್ವಂ' ಎಂಬ ಗ್ರಂಥದಿಂದ ವಿವರಿಸುತ್ತಿದ್ದಾರೆ. ಈ ಲಿಂಗವು ವಿಷ್ಣುವನ್ನು ಬಿಟ್ಟು ಬೇರೆ ಯಾರಲ್ಲಿಯೂ ಬರಲಾರದೆಂದು ಪ್ರತಿಪಾದಿಸಲು ಶ್ಲೋಕದ ಪೂರ್ವಾರ್ಧವನ್ನು 'ತಚ್ಚ' ಇತ್ಯಾದಿ ಗ್ರಂಥದಿಂದ ವಿವರಿಸುತ್ತಿದ್ದಾರೆ. ಶ್ಲೋಕದಲ್ಲಿರುವ ಈ ಶಬ್ದದಿಂದ ಸೂಚಿಸಿದ ಶ್ರುತಿಗಳನ್ನು 'ಪರೋ ಮಾತ್ರಯಾ' ಇತ್ಯಾದಿ ಗ್ರಂಥದಿಂದ ತೋರಿಸಿದ್ದಾರೆ. 'ಮೀಯಂತೇ ಅನೇನ ವಿಷಯಾಃ ಇತಿ ಮಾತ್ರಾಃ' (ಯಾವ ಇಂದ್ರಿಯದಿಂದ ವಿಷಯಗಳು ತಿಳಿಯಲ್ಪಡುತ್ತವೋ) ಅಂತಹ ಇಂದ್ರಿಯಗಣಗಳನ್ನು ಮೀರಿದವನು ಎಂದು 'ಪರೋ ಮಾತ್ರಯಾ' ಎಂಬ ಶ್ರುತಿಗೆ ಅರ್ಥ. ಅಂದರೆ ಇಂದ್ರಿಯ ಸಮೂಹಗಳಿಗೆ ವಿಷ್ಣು ಗೋಚರನಾಗಲಾರ ಎಂದು ತಿಳಿಯುತ್ತದೆ. ಅಥವಾ 'ಮಾತ್ರಾ' ಶಬ್ದಕ್ಕೆ 'ಪರಿಮಿತಿ' ಎಂದರ್ಥ. 'ಪರೋ ಮಾತ್ರಯಾ' ಎಂಬುದರಿಂದ ಅಪರಿಮಿತನಾಗಿದ್ದಿ ಎಂಬರ್ಥವು ತಿಳಿಯುತ್ತದೆ.

'ಅಗ್ನಿರ್ವೈ ದೇವಾನಾಮವಮೋ ವಿಷ್ಣುಃ ಪರಮಃ' ಎಂಬ ಬಹ್ವೃಚಬ್ರಾಹ್ಮಣದಲ್ಲಿ ಸ್ವೋತ್ತಮ-ದೇವತೆಗಳಿಗಿಂತ ಅಗ್ನಿಯು ಅಧಮನೆಂದು ಹೇಳಲಾಗಿದೆ. ಗ್ರಂಥಕಾರರು 'ಭೀಷಾಸ್ಮಾದಗ್ನಿಸ್ತಪತಿ' ಎಂಬ ಶ್ರುತಿಯನ್ನು ಉಲ್ಲೇಖಿಸಿದ್ದಾರೆ. ವಸ್ತುತಃ ತೈತ್ತಿರೀಯದಲ್ಲಿ 'ಭೀಷಾಸ್ಮಾದಗ್ನಿಶ್ಚೇಂದ್ರಶ್ಚ' ಎಂಬ ಪಾಠವಿದೆ. ಆದರೆ ಗ್ರಂಥಕಾರರು ಇಲ್ಲಿ 'ತಪತಿ' ಎಂಬ ಶಬ್ದದಿಂದ 'ಭಯಾದಸ್ಮಾಗ್ನಿಸ್ತಪತಿ' ಎಂಬ ಬೇರೆ ಶ್ರುತಿಯಲ್ಲಿರುವ ತಪತಿ ಶಬ್ದವನ್ನು ತೈತ್ತಿರೀಯದಲ್ಲಿ ಅಧ್ಯಾಹಾರ ಮಾಡಿಕೊಳ್ಳಬೇಕೆಂದು ಸೂಚಿಸಿದ್ದಾರೆ.

ಅಥವಾ 'ಭೀಷಾಸ್ಮಾತ್' ಎಂಬುದೇ ಬೇರೆ ಶ್ರುತಿ; 'ಅಗ್ನಿಸ್ತಪತಿ' ಎಂಬುದೇ ಬೇರೆ ಶ್ರುತಿಯೆಂದು ತಿಳಿಯಬೇಕು. ಅಗ್ನಿಯು ವಿಷ್ಣುವಿನಿಂದ ಹೆದರುತ್ತಾನೆಂದು ಇದರ ಅರ್ಥ. 'ತಮೇತಾಃ ಪರಿಮ್ರಿಯಂತೇ' ಎಂಬುದು ಬಹ್ವೃಚಬ್ರಾಹ್ಮಣ. 'ಮ್ರಿಯಂತೇ ಪಂಚದೇವತಾಃ' ಎಂಬ ಋಗ್ಭಾಷ್ಯದ ಮಾತಿನಂತೆ ಗ್ರಂಥಕಾರರು ಹೇಳಿದ 'ಪರಿಹ್ಯೇನಂ ಮ್ರಿಯಂತೇ' ಎಂಬುದು ಬಹ್ವೃಚಬ್ರಾಹ್ಮಣದ ಅರ್ಥಾನುವಾದವಷ್ಟೇ ಆಗಿದೆ; ಹೊರತು ಶ್ರುತಿಯು ಹಾಗಿಲ್ಲ.

ಕರ್ಣಾದಿವಿದೂರತ್ವಲಿಂಗದಂತೆ ಅಗ್ನಿಶ್ರುತಿ ಮೊದಲಾದವೂ ಕೂಡ ನಿರವಕಾಶಗಳಾಗಿವೆ. ಎರಡೂ ನಿರವಕಾಶಗಳಾಗಿ ಸಮಬಲವಾದಾಗ ಲಿಂಗದಿಂದ ಶ್ರುತಿಗೆ ಬಾಧವನ್ನು ಹೇಳಲು ಹೇಗೆ ಸಾಧ್ಯ ? ಎಂಬ

ಪ್ರಶ್ನೆಗೆ ಶ್ಲೋಕದ ಉತ್ತರಾರ್ಧವನ್ನು ವ್ಯಾಖ್ಯಾನಿಸುವ ಮೂಲಕ ಉತ್ತರಿಸುತ್ತಿದ್ದಾರೆ 'ಅಗ್ನಿಶ್ರುತ್ಯಾದಿ' ಇತ್ಯಾದಿ ವಾಕ್ಯದಿಂದ. ಅಗ್ನಿಶ್ರುತ್ಯಾದಿ ತು ಎಂಬ ಪದಕ್ಕೆ ವಿಷ್ಣೌ ಸಾವಕಾಶಮ್ ಎಂಬಲ್ಲಿ ಅನ್ವಯ.

ಅಗ್ನಿನಾಗ್ನಿಃ ಸಮಿಧ್ಯತೇ ಕವಿರ್ಗೃಹಪತಿರ್ಯುವಾ ।
ಹವ್ಯವಾಡ್ ಜುಹ್ವಾಸ್ಯಃ'

ಎಂಬ ಶ್ರುತಿಯಲ್ಲಿ ಅಗ್ನಿಗೆ ತನ್ನಿಂದಲೇ ವೃದ್ಧಿಯನ್ನು ಹೇಳಿದಂತೆ ಕಾಣುತ್ತದೆ. ಆದರೆ ತನ್ನಿಂದಲೇ ತನಗೆ ವೃದ್ಧಿಯು ಹೇಗೆ ಸಾಧ್ಯ ? ಆದ್ದರಿಂದ 'ಅಗ್ನಿನಾ' ಎಂಬ ಪದಕ್ಕೆ ಅಗ್ನಿಯೆಂಬ ಪರಮಾತ್ಮನಿಂದ ಎಂದು ಅರ್ಥೈಸಬೇಕು. ವಸ್ತುತಃ ಋಗ್ಭಾಷ್ಯದಲ್ಲಿ 'ಅಥವಾ ಆಹವನೀಯೋಗ್ನಿರ್ಮಥಿತೇನ ಸಮಿಧ್ಯತೇ' ಎಂದು ಅಗ್ನಿನಾ ಎಂಬ ಪದಕ್ಕೆ ಗಾರ್ಹಪತ್ಯಾಗ್ನಿಯಿಂದ ಆಹವನೀಯಾಗ್ನಿಯು ಅಭಿವೃದ್ಧವಾಗುತ್ತದೆಂದು ಹೇಳಿದ್ದಾರೆ. ಆದರೆ ಅದೇ ಋಗ್ಭಾಷ್ಯದಲ್ಲಿ 'ಯಸ್ಯಾऽಸ್ಯೇ ಹೂಯತೇ ಸೋಗ್ನಿಃ ಪರೇಶೇನ ಸಮಿಧ್ಯತೇ' ಎಂದು ಭಗವಂತನಿಂದ ಅಗ್ನಿಯ ಅಭಿವೃದ್ಧಿಯನ್ನು ಕೂಡ ಹೇಳಿದ್ದಾರೆ. ಈ ಎರಡೂ ಅರ್ಥಗಳಲ್ಲಿ 'ಯಸ್ಯಾऽಸ್ಯೇ' ಎಂಬ ಅರ್ಥವೇ ಮುಖ್ಯವಾದ್ದರಿಂದ ಅಗ್ನಿಶಬ್ದದಿಂದ ಪರಮಾತ್ಮನು ವಾಚ್ಯನೆನ್ನಲು ಗ್ರಂಥಕಾರರು 'ಅಗ್ನಿನಾಗ್ನಿಃ ಸಮಿಧ್ಯತೇ' ಎಂಬುದನ್ನು ಉದಾಹರಿಸಿದ್ದಾರೆ.

'ಯಸ್ಯಾದ್ಯರ್ವಾಕ್ ಸಂವತ್ಸರೋऽಹೋಭಿಃ ಪರಿವರ್ತತೇ ತದ್ದೇವಾ ಜ್ಯೋತಿಷಾಂ ಜ್ಯೋತಿರಾಯು-ರ್ಹೋಪಾಸತೇऽಮೃತಮ್' (ಯಾವನ ವಶದಲ್ಲಿ ಈ ಸಂವತ್ಸರವು ಅಹೋರಾತ್ರಿಗಳಿಂದ ಪರಿವರ್ತನೆಯಾಗುತ್ತಿದೆಯೋ ಅಂತಹ ಜ್ಯೋತಿಗಳಿಗೂ ಜ್ಯೋತಿಯಾದ ಬ್ರಹ್ಮನನ್ನು ದೇವತೆಗಳು ಅಮೃತ ಎಂದು ಉಪಾಸಿಸುತ್ತಾರೆ) ಈ ವಾಜಸನೇಯಶ್ರುತಿಯಲ್ಲಿ ದೇವೋಪಾಸ್ಯತ್ವ ಹಾಗೂ ಅಮೃತತ್ವ ಮೊದಲಾದ ಲಿಂಗಗಳನ್ನು ಹೇಳಿದ್ದರಿಂದ ಬ್ರಹ್ಮನೇ ಜ್ಯೋತಿಶಬ್ದದಿಂದ ಪ್ರತಿಪಾದ್ಯನೆಂದು ತಿಳಿಯುತ್ತದೆ. ಮತ್ತು ನಾಲ್ಕನೆಯ ಪಾದದ 'ನ ಸಂಖ್ಯೋಪಸಂಗ್ರಹಾತ್' 'ಜ್ಯೋತಿಷೈಕೇಷಾಮ್' ಇತ್ಯಾದಿ ಸೂತ್ರಗಳಲ್ಲಿ ಜ್ಯೋತಿಶಬ್ದದಿಂದ ಪರಮಾತ್ಮನೇ ಪ್ರತಿಪಾದ್ಯನೆಂದು ಸ್ಪಷ್ಟವಾಗಿ ನಿರ್ಣಯಿಸಲಾಗಿದೆ.

'ನಾರಾಯಣಪರೋ ಜ್ಯೋತಿರಾತ್ಮಾ ನಾರಾಯಣಃ ಪರಃ' ಎಂದು ನಾರಾಯಣೋಪನಿಷತ್ತಿನಲ್ಲಿ ನಾರಾಯಣನೇ ಪರಂಜ್ಯೋತಿ (ಉತ್ತಮಜ್ಯೋತಿ) ಎಂದು ತಿಳಿಯುತ್ತದೆ. ಈ ಶ್ರುತಿಯಲ್ಲಿ ವಸ್ತುತಃ ಜ್ಯೋತಿಶಬ್ದ ನಪುಂಸಕಲಿಂಗವಾದ್ದರಿಂದ ಪರಂಜ್ಯೋತಿಃ ಎಂದು ಹೇಳಬೇಕು. ಆದರೆ 'ಪೃ ಪಾಲನಪೂರಣಯೋಃ' ಎಂಬ ಧಾತುವಿನ ಮೇಲೆ ಅಸುನ್ ಪ್ರತ್ಯಯ ಬಂದಾಗ 'ಪರಸ್' ಎಂದು ಸಕಾರಾಂತಪ್ರಾತಿಪದಿಕವಾಗುತ್ತದೆ. ಆದ್ದರಿಂದ ಪರಃ ಎಂಬುದೂ ಸಹ ನಪುಂಸಕಲಿಂಗವೇ ಹೊರತು ಪುಲ್ಲಿಂಗಶಬ್ದವಲ್ಲ.

'ವಿಷ್ಣುರೇವ ಜ್ಯೋತಿರ್ವಿಷ್ಣುರೇವ ಬ್ರಹ್ಮ ವಿಷ್ಣುರೇವಾತ್ಮಾ ವಿಷ್ಣುರೇವ ಬಲಂ ವಿಷ್ಣುರೇವ ಯಶೋ ವಿಷ್ಣುರೇವಾನಂದಃ' ಹೀಗೆ ಚತುರ್ವೇದಶಿಖೆಯಲ್ಲಿ ಅವಧಾರಣಪೂರ್ವಕವಾಗಿ ವಿಷ್ಣುವೇ ಜ್ಯೋತಿ-ಯೆಂದು ಸ್ಪಷ್ಟವಾಗಿ ತಿಳಿಯುತ್ತಿದೆ. ವಿಷ್ಣುವು ಜ್ಯೋತಿಯೆನ್ನಲು ಕೇವಲ ಶ್ರುತಿಗಳಷ್ಟೇ ಅಲ್ಲ ಸ್ಮೃತಿಯೂ ಪ್ರಮಾಣವಾಗಿದೆ.

ಅಹಂ ಕ್ರತುರಹಂ ಯಜ್ಞಃ ಸ್ವಧಾऽಹಮಹಮೌಷಧಮ್ ।
ಮಂತ್ರೋಹಮಹಮೇವಾಜ್ಯಮಹಮಗ್ನಿರಹಂ ಹುತಮ್ ॥

ಹೀಗೆ ಗೀತೆಯಲ್ಲಿ ಕೃಷ್ಣನು ಅಗ್ನಿಯ ಸ್ವರೂಪಕ್ಕೂ ಮತ್ತು ಅಗ್ನಿಯ ಇರುವಿಕೆಗೂ ತನ್ನನ್ನು ನಿಯಾಮಕನೆಂದು ಹೇಳಿದ್ದಾನೆ. ಆದ್ದರಿಂದಲೇ ತನ್ನನ್ನು ಅಗ್ನಿಶಬ್ದವಾಚ್ಯನೆಂದೂ ಸಹ ತಿಳಿಸಿದ್ದಾನೆ. ಗೀತೆಯ ಈ ಶ್ಲೋಕಕ್ಕೆ ಅಗ್ನಿನಿಯಾಮಕತ್ವ ಎಂಬ ಅರ್ಥವನ್ನು ಹೇಳಬೇಕು ಹೊರತು; ಅಗ್ನಿಗೂ ಹಾಗೂ ಪರಮಾತ್ಮನಿಗೂ ಅಭೇದವನ್ನು ಹೇಳಬಾರದು. ಅಭೇದವನ್ನು ಹೇಳುವುದಾದರೆ ವಿಶಿಷ್ಟನಾದ ಅಗ್ನಿಗೂ ವಿಶಿಷ್ಟನಾದ ಕೃಷ್ಣನಿಗೂ ಅಭೇದವನ್ನು ಹೇಳಿದಂತಾಯಿತು. ಈ ಅಭೇದವನ್ನು ಅದ್ವೈತಿಗಳೇ ಒಪ್ಪಲಾರರು.

ಇನ್ನು ಇಬ್ಬರಲ್ಲಿರುವ ಚಿನ್ಮಾತ್ರಕೃಷ್ಣೇ ಅಭೇದವನ್ನು ಹೇಳಬೇಕು. ಹಾಗಾದಲ್ಲಿ ಲಕ್ಷಣಾ ಮಾಡಬೇಕಾಗುತ್ತದೆ. ಒಂದು ವೇಳೆ ಅಗ್ನಿಶಬ್ದಕ್ಕೆ ಲಕ್ಷಣಾ ಮಾಡಿದರೂ ಸಹ ಕ್ರತು ಮೊದಲಾದ ಜಡಪದಾರ್ಥಗಳಿಗೆ ಲಕ್ಷಣಾ ಮಾಡಿಯೂ ಕೂಡ ಅಭೇದವನ್ನು ಹೇಳಲು ಸಾಧ್ಯವಿಲ್ಲ. ಇದರಂತೆ ಗೀತೆಯಲ್ಲಿಯೇ 'ಜ್ಯೋತಿಷಾಮಪಿ ತಜ್ಜ್ಯೋತಿಃ ತಮಸಃ ಪರಮುಚ್ಯತೇ' ಎಂಬ ಮತ್ತೊಂದು ಮಾತು ಕೇಳಿಸುತ್ತಿದೆ. ಇಲ್ಲಿರುವ ತತ್‌ಶಬ್ದದಿಂದ 'ಅನಾದಿಮತ್ಪರಂ ಬ್ರಹ್ಮ' ಎಂಬ ಪೂರ್ವಪ್ರಕೃತನಾದ ಬ್ರಹ್ಮನನ್ನು ಪರಾಮರ್ಶ ಮಾಡಬೇಕು. ಆವಾಗ ಸಕಲಜ್ಯೋತಿಗಳಿಗೂ ಪ್ರಕಾಶನಶಕ್ತಿಯನ್ನು ನೀಡುವವನಾದ್ದರಿಂದ ವಿಷ್ಣುವು ಜ್ಯೋತಿಯೆನಿಸುತ್ತಾನೆ. ಗ್ರಂಥದಲ್ಲಿರುವ ಆದಿಪದದಿಂದ 'ತಚ್ಛುಭ್ರಂ ಜ್ಯೋತಿಷಾಂ ಜ್ಯೋತಿಃ' ಇತ್ಯಾದಿ ಶ್ರುತಿಸ್ಮೃತಿಗಳನ್ನು ವಿವಕ್ಷಿಸಬೇಕು.

ಪೂರ್ವಪಕ್ಷ ಮಾಡುವ ಸಂದರ್ಭದಲ್ಲಿ ಅಗ್ನಿಪ್ರಕರಣವನ್ನು ನಿರವಕಾಶವೆಂದಿದ್ದರು. ಅದನ್ನು ಅನುವಾದ ಮಾಡಿ ದೃಷ್ಟಾಂತದ ಮೂಲಕ 'ಇದಂ' ಇತ್ಯಾದಿ ಗ್ರಂಥದಿಂದ ನಿರಾಕರಿಸುತ್ತಿದ್ದಾರೆ.

### ಧಾನ್ಯಶಬ್ದಸ್ಯೋಹಾಧಿಕರಣಮ್

ಸೂತ್ರ : ಗುಣಶಬ್ದಸ್ತಥೇತಿ ಚೇತ್[೨] (೯/೧/೨೩)

೨೬ವರ್ಷಗಳ ಕಾಲ ಶಾಕ್ಯಾನಾಮಯನ ಎಂಬ ಸತ್ರವನ್ನು ಆಚರಿಸಬೇಕು. ಆ ಸಂದರ್ಭದಲ್ಲಿ 'ಸಂಸ್ಥಿತೇ ಸಂಸ್ಥಿತೇऽಹನಿ ಗೃಹಪತಿರ್ಮೃಗಯಾಂ ಯಾತಿ । ಸ ತತ್ರ ಯಾನ್ ಮೃಗಾನ್ ಹಂತಿ ತೇಷಾಂ ತರಸಮಯಾಃ ಪುರೋಡಾಶಾಃ' ಎಂಬ ವಿಧಿಯು ಕೇಳಿಸುತ್ತಿದೆ. ಪ್ರತಿಯೊಂದು ದಿವಸದ ಯಾಗಗಳು ಮುಗಿದ ಮೇಲೆ ಯಜಮಾನನು ಬೇಟೆಗಾಗಿ ಹೋಗಬೇಕು. ಅಲ್ಲಿ ಯಾವ ಮೃಗವನ್ನು ಕೊಲ್ಲುತ್ತಾನೋ ಆ ಮೃಗದ ಮಾಂಸವೇ ಮರುದಿವಸದ ಯಾಗಕ್ಕೆ ಪುರೋಡಾಶ ಎಂದು ಈ ಶ್ರುತಿಯ ಅರ್ಥ. ಈ

ಭಾಟ್ಟಸಙ್ಗಹಃ –

**ಗುಣಶಬ್ದಸ್ತಥೇತಿ ಚೇತ್ ॥ ೩೭ ॥ (ನ ಸಮವಯಾತ್ ॥ ೩೮ ॥)**

**ವರ್ಣಕಾನ್ತರನ್ತು,** ದರ್ಶಪೂರ್ಣಮಾಸಯೋಃ ''ಧಾನ್ಯಮಸಿ ಧಿನುಹಿ ದೇವಾನ್'' ಇತಿ ದೃಷದಿ ತಣ್ಡುಲಾಧಿವಪನಾರ್ಥಮನ್ತ್ರೇ, ತಣ್ಡುಲೇಷು ವಿನಿಯುಜ್ಯಮಾನೋ ಧಾನ್ಯಶಬ್ದಃ ಕಿಂ ಸಮವೇತಪ್ರಕಾಶನಾರ್ಥಃ, ಉತಾಸಮವೇತಾರ್ಥಕ ಇತಿ **ಸನ್ದೇಹೇ,** ಧಾನ್ಯಶಬ್ದಸ್ಯ ಸತ್ತುಷಪ್ಲವಾಚಿತಯಾ ವಿತುಷೀಭೂತತಣ್ಡುಲಪ್ರಕಾಶನೇ

ಯಾಗದ ಪ್ರಕೃತಿಯಾಗದಲ್ಲಿ ಕಲ್ಲಿನ ಮೇಲೆ ತಂಡುಲಗಳನ್ನು ಹಾಕಿ, 'ಧಾನ್ಯಮಸಿ ಧಿನುಹಿ ದೇವಾನ್' ಎಂಬ ಮಂತ್ರದಿಂದ ಕುಟ್ಟಬೇಕು. ಈ ಮಂತ್ರವು ವಿಕೃತಿಯಾಗದಲ್ಲಿಯೂ ಚೋದಕಪ್ರಮಾಣ(ಪ್ರಕೃತಿವತ್ ವಿಕೃತಿಃ ಕರ್ತವ್ಯಾ)ದಿಂದ ಪ್ರಾಪ್ತವಾಗಿದೆ. ಈ ಸಂದರ್ಭದಲ್ಲಿ ಬರುವ ಸಂಶಯ ಹೀಗಿದೆ. ಧಾನ್ಯಶಬ್ದವನ್ನು ತೆಗೆದು ಮಾಂಸಶಬ್ದವನ್ನು ಊಹಿಸಬೇಕೋ ಬೇಡವೋ? ಎಂದು.

ಪೂರ್ವಪಕ್ಷ - ಧಾನ್ಯಶಬ್ದವು ಭತ್ತವನ್ನು ಹೇಳುತ್ತದೆ ಹೊರತು ಅಕ್ಕಿಯನ್ನು ಹೇಳುವುದಿಲ್ಲ. ಆದ್ದರಿಂದ ಪ್ರಕೃತಿಯಾಗದಲ್ಲಿ ಉಪಯೋಗಿಸುವ ಧಾನ್ಯಮಸಿ ಎಂಬ ವಾಕ್ಯಕ್ಕೆ (ತಂಡುಲ = ಅಕ್ಕಿ) ತಂಡುಲಪ್ರಕಾಶನಸಾಮರ್ಥ್ಯವು ಇರುವುದಿಲ್ಲ. ಯಾಗದಲ್ಲಿ ಉಪಯೋಗಿಸಲ್ಪಡುವಂತಹದ್ದು ಅಕ್ಕಿ ಹೊರತು ಧಾನ್ಯವಲ್ಲ. ಆದರೆ ಮಂತ್ರವು ಭತ್ತವನ್ನು ಹೇಳುತ್ತಿದೆ. ಆದ್ದರಿಂದ ಪ್ರಕೃತಿಯಾಗದಲ್ಲಿ ಧಾನ್ಯಶಬ್ದಕ್ಕೆ ಕೃತ್ಯವಿಲ್ಲ. ಪ್ರಕೃತಿಯಾಗದಲ್ಲಿಯೇ ಕೃತ್ಯವಿಲ್ಲದಿರುವಾಗ ವಿಕೃತಿಯಾಗದಲ್ಲಿ ಧಾನ್ಯಶಬ್ದದ ಬದಲು ಮಾಂಸಶಬ್ದವನ್ನು ಊಹಿಸುವ ಅವಶ್ಯಕತೆ ಇಲ್ಲ. ಪ್ರಕೃತಿಯಾಗದಲ್ಲಿ ಧಾನ್ಯಶಬ್ದವು ಹೇಗೆ ಸಂಬಂಧಪಟ್ಟ ಅರ್ಥವಿಲ್ಲದ ಪದವಾಗಿದೆಯೋ, ಆದರಂತೆ ವಿಕೃತಿಯಾಗದಲ್ಲಿರುವ ಧಾನ್ಯಶಬ್ದವೂ ಸಹ ಸಂಬಂಧಪಡದ ಅರ್ಥವುಳ್ಳದ್ದಾದರೆ ಏನು ತಪ್ಪು? ಸೌರಯಾಗದಲ್ಲಿ 'ದೇವಸ್ಯ ತ್ವಾ ಸವಿತುಃ' ಎಂಬಲ್ಲಿರುವ ಸವಿತ್ರಾದಿಶಬ್ದವನ್ನು ಸಂಬಂಧಪಡದ ಕಾರಣ ಹೇಗೆ ಊಹಿಸುವುದಿಲ್ಲವೋ ಅದರಂತೆ ಇಲ್ಲಿಯೂ ಸಹ ಮಾಂಸಶಬ್ದವನ್ನು ಊಹಿಸಬೇಕಿಲ್ಲ.

---

शक्त्यभावात्सवित्रादिशब्दवदसमवेतार्थः सन्नदृष्टार्थोऽयं मन्त्र इति **प्राप्ते सिद्धान्तः,** मन्त्राधिकरणोक्तदिशा मन्त्रपदानां **दृष्टार्थत्वादिह** च धान्यपदस्य तण्डुलप्रकृतिभूत-सतुषद्रव्यवाचिनोऽपि लक्षणया तद्विकृतिभूततण्डुलप्रकाशकत्वसम्भवात् ''शालयो भुज्यन्ते'' इति लोकेऽपि लाक्षणिकप्रयोगदर्शनात्समवेतार्थ एवायं धान्यशब्दो नादृष्टार्थ इति । तथा च **सूत्रम्, गुणशब्दस्तथेति चेन्न समवायादिति । गुणशब्दो** धान्यशब्दः **तथा** सवित्रादिशब्दवददृष्टार्थ **इति चेन्नेत्येवमर्थो** ध्येयः । **फलं तु,** षट्त्रिंशदाब्दिके शाक्यानामयनाख्ये सत्रे –

''संस्थिते संस्थितेऽहनि गृहपतिर्मृगयां याति । तत्र यान् हन्ति तेषां तरसमयाः सवनीयाः पुरोडाशाः'' इति श्रुते मृगायाप्रयुक्तगृहपतिहतमृगमांसमये सवनीये हविषि दृषदि हविरधिवपनार्थतया चोदकप्राप्तोऽयं मन्त्रः **पूर्वपक्षे** यथाश्रुत एव पठितव्योऽदृष्टार्थत्वात् । **सिद्धान्ते तु,** प्रकृतौ दृष्टार्थत्वाद्विकृतावपि दृष्टार्थत्वाय ''मांसमसि'' इत्यूहितव्य इति । नच प्रकृतियागे धान्यपदेन लक्षणया तण्डुलप्रकाशनं दृष्टमितीह विकृतावपि मांसमये हविषि तत्प्रकृतिभूतमृगवाचिपदप्रक्षेपेण ''मृगोसि'' इत्येवं लक्षणया मांसहविःप्रकाशनं कार्यमिति वाच्यम् । प्रकृतियागे धान्यपदे लक्षणाश्रयणस्याऽर्थिकत्वेन तत्रातात्पर्यादर्थिकस्य चोदकेन विकृतापप्रापणात् ।

इति त्रयोदशं तण्डुलावापमन्त्रे धान्यशब्दस्योहाधिकरणम् (सूत्रे ३६-३)

ಸಿದ್ಧಾಂತ - ಪ್ರಕೃತಿಯಾಗದಲ್ಲಿ ಧಾನ್ಯಶಬ್ದಕ್ಕೆ ಭತ್ತವೆಂಬ ಅರ್ಥವನ್ನು ವಿವಕ್ಷಿಸಿದಲ್ಲಿ ಅಸಂಗತಾರ್ಥ-ವಾಗುತ್ತದೆ. ಆದರೆ ಅಕ್ಕಿ ಎಂಬರ್ಥದಲ್ಲಿ ಲಕ್ಷಣಾ ಮಾಡುವುದರಿಂದ ಧಾನ್ಯಶಬ್ದಕ್ಕೆ ತಂಡುಲಪ್ರಕಾಶನ ಸಾಮರ್ಥ್ಯವು ಇದ್ದೇ ಇರುತ್ತದೆ. ಆದ್ದರಿಂದ ಪ್ರಕೃತಿಯಾಗದಲ್ಲಿ ಉಪಯೋಗಿಸುವ ಧಾನ್ಯಶಬ್ದವು ಸಂಬಂಧವಿಲ್ಲದ ಅರ್ಥವನ್ನು ಹೇಳುತ್ತಿಲ್ಲ. ಯಜ್ಞಕ್ಕೆ ಉಪಯೋಗವಾಗುವ ಅಕ್ಕಿ ಎಂಬ ಅರ್ಥವನ್ನೇ ಹೇಳುತ್ತಿದೆ. ಹೀಗಿರುವಾಗ ವಿಕೃತಿಯಾಗದಲ್ಲಿಯೂ ಸಂಬಂಧಪಡುವ ಅರ್ಥವುಳ್ಳ ಪದವನ್ನೇ ಹೇಳಬೇಕು. ಅದಕ್ಕಾಗಿ ಧಾನ್ಯಪದವನ್ನು ತೆಗೆದು 'ಮಾಂಸಮಾ ಧಿನುಹಿ ದೇವಾನ್' ಎಂದು ಮಾಂಸಪದವನ್ನು ಊಹಿಸಬೇಕು.

ಕೆಲವು ಯಾಜ್ಞಿಕರು ಹೀಗನ್ನುತ್ತಾರೆ. ಪ್ರಕೃತಿಯಾಗದಲ್ಲಿ ಉಪಯೋಗಿಸುವ ಧಾನ್ಯಶಬ್ದವು ಲಕ್ಷಣಾರ್ಥವುಳ್ಳದ್ದಾಗಿದೆ. ಅದಕ್ಕನುಸಾರಿಯಾಗಿ ವಿಕೃತಿಯಾಗದಲ್ಲಿ ಉಪಯೋಗಿಸುವ ಪದವು ಕೂಡ ಲಕ್ಷಣಾರ್ಥಕವೇ ಆಗಬೇಕು. ಅಂದರೆ 'ಮೃಗೋಸಿ' ಎಂದು ಊಹಿಸಬೇಕು. ಧಾನ್ಯಶಬ್ದಕ್ಕೆ ಅಕ್ಕಿಯಲ್ಲಿ ಲಕ್ಷಣಾ ಮಾಡಿದಂತೆ ಮೃಗಶಬ್ದಕ್ಕೆ ಮಾಂಸದಲ್ಲಿ ಲಕ್ಷಣಾ ಮಾಡಬೇಕು' ಎಂದು. ಇವರ ವಾದ ಸರಿಯಲ್ಲ. ಅಪೌರುಷೇಯ ವೇದದಲ್ಲಿ ಆರ್ಥಿಕಾರ್ಥವನ್ನು ವಿವಕ್ಷಿಸುವುದು ಅನಿವಾರ್ಯ. ಆದರೆ ಸ್ವಾಧೀನವಾದ ಊಹಪ್ರಯೋಗದಲ್ಲಿ ಕಾರಣವಿಲ್ಲದೇ ಲಕ್ಷಣಾವನ್ನು ಆಶ್ರಯಿಸುವುದು ತಪ್ಪಾಗುತ್ತದೆ. ಯಾವ ಯಾಜ್ಞಿಕರು ಹೀಗೆ ಊಹೆಯನ್ನು ಅಂಗೀಕರಿಸುತ್ತಾರೋ ಅದು ಕೇವಲ ಅವರ ಅಜ್ಞಾನಮೂಲಕವಾದದ್ದು. ಇದರಂತೆ ಪ್ರಕೃತದಲ್ಲಿ ಇದು ಅಗ್ನಿಸೂಕ್ತ ಹೊರತು ವಿಷ್ಣುಸೂಕ್ತವಲ್ಲ ಎಂಬ ಅಧ್ಯಾಪಕಪ್ರಸಿದ್ಧಿಯೂ ಕೂಡ ಕೇವಲ ಅಜ್ಞಾನಮೂಲಕವಾದದ್ದೇ ಹೊರತು ಯಥಾರ್ಥವಲ್ಲ.

ನ್ಯಾಯವಿವರಣದ ಮಾತು ಗ್ರಂಥಕಾರರು ನಿರೂಪಿಸಿದ ಪ್ರಮೇಯಕ್ಕೆ ಸಂವಾದಿಯಾಗಿದೆಯೆಂದು 'ಅತ್ರ ಚ' ಇತ್ಯಾದಿ ಗ್ರಂಥದಿಂದ ನಿರೂಪಿಸಿದ್ದಾರೆ. ನ್ಯಾಯವಿವರಣದ ಟೀಕೆಯಲ್ಲಿ 'ಸಾವಕಾಶೇಭ್ಯೋಽನೇಕೇಭ್ಯೋಪಿ ನಿರವಕಾಶಸ್ಯೈಕಸ್ಯೈವ ಪ್ರಾಬಲ್ಯಾತ್' (ಅನೇಕ ಸಾವಕಾಶಶ್ರುತಿ ಲಿಂಗಗಳಿಗಿಂತ ಒಂದು ನಿರವಕಾಶವೇ ಪ್ರಬಲ) ಎಂದು ಹೇಳಿದ್ದಾರೆ.

ಪ್ರಶ್ನೆ - ನ್ಯಾಯವಿವರಣದ ಈ ಮಾತು ಪ್ರಕೃತ ಅಸಂಗತವಾಗಿದೆ. ಸಾವಕಾಶವಾದ ಶ್ರುತಿಲಿಂಗಗಳು ನಿರವಕಾಶಲಿಂಗದಿಂದ ಬಾಧಿತವಾಗುತ್ತದೆಂದು ನ್ಯಾಯವಿವರಣದ ಅಭಿಪ್ರಾಯ. ಆದರೆ ಸಾವಕಾಶಶ್ರುತಿ-ಪ್ರಕರಣಗಳು ನಿರವಕಾಶಲಿಂಗದಿಂದ ಬಾಧಿತವಾಗುತ್ತದೆಂಬುದು ಈ ಅಧಿಕರಣದ ಸಿದ್ಧಾಂತನ್ಯಾಯ. ಹೀಗೆ ವಿರುದ್ಧವಾದ ನ್ಯಾಯವಿವರಣದ ಮಾತನ್ನು ಇಲ್ಲಿ ಉಲ್ಲೇಖಿಸುವುದು ಅನುಚಿತ. ಅಷ್ಟೇ ಅಲ್ಲದೆ ನ್ಯಾಯವಿವರಣದ ಟೀಕೆಯು ಈ ಮಾತನ್ನು ಆಕಾಶ, ಪ್ರಾಣ, ಗಾಯತ್ರ್ಯಧಿಕರಣದ ಪರವಾಗಿ ವ್ಯಾಖ್ಯಾನಿಸಿದ್ದಾರೆ. ನೀವು ಜ್ಯೋತಿರಧಿಕರಣದಲ್ಲಿ ಉಲ್ಲೇಖಿಸುತ್ತಿರುವುದು ತಪ್ಪಾಗುತ್ತದಲ್ಲವೆ?

ಉತ್ತರ - ನಿರವಕಾಶಲಿಂಗವು ಸಾವಕಾಶಶ್ರುತಿಲಿಂಗಗಳನ್ನು ಬಾಧಿಸಿದಂತೆ ಸಾವಕಾಶಪ್ರಕರಣವೂ ಸಹ ಶ್ರುತಿಗಳನ್ನು ಬಾಧಿಸುತ್ತದೆಂದು ಸಮಾನನ್ಯಾಯದಿಂದ ತಿಳಿಯಬಹುದು. ಅಥವಾ ನ್ಯಾಯವಿವರಣದ ಮಾತು ಶ್ರುತಿಪ್ರಕರಣಗಳನ್ನು ಉಪಲಕ್ಷಣಯಾ ಸೂಚಿಸಿದೆಂದು ತಿಳಿಯಬಹುದು. ಅಥವಾ ಸಾವಕಾಶ-ಶ್ರುತಿಲಿಂಗಗಳಿಗಿಂತಲೂ ಸಾವಕಾಶಶ್ರುತಿಪ್ರಕರಣಗಳು ದುರ್ಬಲವಾಗಿವೆ. ಸಾವಕಾಶಶ್ರುತಿಲಿಂಗಗಳನ್ನೇ

ನಿರವಕಾಶಲಿಂಗವು ಬಾಧಿಸಿದಾಗ ಸಾವಕಾಶಶ್ರುತಿಪ್ರಕರಣಗಳನ್ನು ಬಾಧಿಸಿಯೇ ತೀರುತ್ತದೆಂದು ಕೈಮುತ್ಯನ್ಯಾಯದಿಂದ ಸಿದ್ಧವಾಗುತ್ತದೆ. ಹೀಗೆ ಮೂರು ದೃಷ್ಟಿಯಿಂದ ಗ್ರಂಥಕಾರರು ನ್ಯಾಯವಿವರಣದ ಮಾತನ್ನು ಸಂವಾದಿಯಾಗಿ ಉಲ್ಲೇಖಿಸಿದ್ದಾರೆ.

**ಗುರುರಾಜೀಯಮ್ – 'ನಿರತಿಶಯವೈಭವರೂಪಕರ್ಣಾದಿವಿದೂರತ್ವಸ್ಯಾಗ್ನಿಶ್ರುತ್ಯಾದಿಬಲಾದಗ್ನಾವप्युपपत्तेः' इति परोक्तं लिङ्गानां सावकाशत्वमग्निश्रुत्यादेः सावकाशत्वं प्रदर्शयन् परिहरति – कर्णादीनामिति ॥ अग्निर्वै देवानामवम इतीति ॥ यद्यप्यत्र परैर्न तारतम्यपरतयाव्याख्यातन्तथापिप्रतीयमानस्यबाधकाभावे परित्यागस्यातिप्रसंजकत्वाद्यथाश्रुति ग्राह्यमेव । अग्नौ सर्वे देवा विलीयन्त इति श्रुत्यन्तरानुसारेणाग्निनीचानां सर्वेषामपि देवानामग्र्यधीन सत्ताकत्वेनाग्निपदेनैवोपादानसम्भवेन देवानामवम इति निर्धारणोपपत्तेरिति भावः ॥ तपतीति ॥ वातः पवते सूर्य उदेतीत्यादौ तत्तद्योग्यक्रियाया इव भीषास्मादग्निरित्यत्र योग्यक्रियाया अनुक्तया भयादस्याग्निस्तपतीत्यादि श्रुत्यन्तरानुसारेण योग्यश्रौतपदाध्याहारः कृत इति भावः । अग्निश्रुत्यादि त्वित्यत्रादिपदेन वैश्वानरं रथ्यमध्वराणां यज्ञस्य केतुं जनयन्त देवाः । आसन्ना पात्रं जनयन्त देवा इत्यादिलिङ्गानि ग्राह्याणि ॥ अग्निनाग्निरिति ॥ एतत्पादस्य दृश्वग्निदेवताकत्वात्तृतीयान्तनिर्दिष्टोऽन्यः प्रथमान्तनिर्दिष्टो विष्णुः । प्रकरणस्य निरवकाशत्वात् तदनुगृहीत श्रुत्या लिङ्गबाधोऽस्त्विति तत्यतः प्रकरणमपि विष्णुपरत्वेन सावकाशमित्याह – इदमिति ॥ अज्ञानमूलेति ॥**

## ಸಾರ

ಈ ಅಧಿಕರಣದ ಸಿದ್ಧಾಂತ : ಕರ್ಣಾದಿವಿದೂರತ್ವಲಿಂಗವು ವಿಷ್ಣುವಿನಲ್ಲಿ ನಿರವಕಾಶವಾಗಿದೆಯೆಂದು 'ಪರೋ ಮಾತ್ರಯಾ' ಇತ್ಯಾದಿ ಶ್ರುತಿಗಳು ಸಾಧಿಸುತ್ತಿವೆ. ಅಪರಿಮಿತಗುಣಗಳಿದ್ದು ಯಾವುದೇ ದೋಷವಿಲ್ಲದ ವ್ಯಕ್ತಿಯಲ್ಲಷ್ಟೇ ಕರ್ಣಾದಿ ವಿದೂರತ್ವವನ್ನು ಹೇಳಲು ಸಾಧ್ಯ. ಭಯ ಮರಣ ಮೊದಲಾದ ದೋಷಗಳಿಂದ ಕೂಡಿದ ಅಧಮನಾದ ಅಗ್ನಿದೇವತೆಯಲ್ಲಿ ಕರ್ಣಾದಿವಿದೂರತ್ವವನ್ನು ಹೇಳಲು ಹೇಗೆ ತಾನೆ ಸಾಧ್ಯ ? ಹೀಗೆ ಯಾವುದೇ ಕಾರಣದಿಂದಲೂ ವಿಷ್ಣುವನ್ನು ಬಿಟ್ಟು ಅಗ್ನಿದೇವತೆಯಲ್ಲಿ ಕರ್ಣಾದಿವಿದೂರತ್ವವನ್ನು ಹೇಳಲಾಗದು. ಆದ್ದರಿಂದ ಕರ್ಣಾದಿವಿದೂರತ್ವ- ಲಿಂಗವು ಅಗ್ನಿಯಲ್ಲಿ ಸಾವಕಾಶವಾಗಿದೆಯೆಂಬ ಪೂರ್ವಪಕ್ಷವು ನಿರಾಕೃತವಾಯಿತು.

ಇನ್ನು ಅಗ್ನಿಪ್ರಕರಣ ಹಾಗೂ ಶ್ರುತಿಗಳು ನಿರವಕಾಶವೆಂಬ ಪೂರ್ವಪಕ್ಷವು ಸರಿಯಲ್ಲ. ಹತ್ತಾರು ಶ್ರುತಿಸ್ಮೃತಿಗಳು ವಿಷ್ಣುವನ್ನೇ 'ಅಗ್ನಿ, ಜ್ಯೋತಿ' ಎಂದು ಸಾರಿ ಹೇಳುತ್ತಿರುವಾಗ ಈ ಶಬ್ದಗಳು ಅಗ್ನಿದೇವತೆಯಲ್ಲಿ

ನಿರವಕಾಶಗಳಾಗುವುದಿಲ್ಲ. 'ಇದು ಅಗ್ನಿಸೂಕ್ತವೇ ಹೊರತು ವಿಷ್ಣುಸೂಕ್ತವಲ್ಲ' ಎಂದು ಕೆಲವು ಅಧ್ಯಾಪಕರು ಹೇಳಿದರೆ ಅದು ಕೇವಲ ಅವರ ಅಜ್ಞಾನ ಹೊರತು ಯಥಾರ್ಥಸಂಗತಿಯಲ್ಲ.

---

## ನಿರವಕಾಶಬ್ರಹ್ಮಲಿಂಗದ ಸಾಮರ್ಥ್ಯ

### ತಾತ್ಪರ್ಯಚನ್ದ್ರಿಕಾ

**ಏವಂ ಸೂಕ್ತಾನ್ತರೇಷ್ವಪಿ ದ್ರಷ್ಟವ್ಯಮ್ । ತಥಾಹಿ – ಐನ್ದ್ರೇ ''ನ ತ್ವಾವಾಂ ಇನ್ದ್ರ ಕಶ್ಚನ ನ ಜಾತೋ ನ ಜನಿಷ್ಯತೇ'' ಇತಿ, ತಥಾ ''ಈಶಾನಮಸ್ಯ ಜಗತಃ ಸ್ವರ್ದೃಶಮೀಶಾನಮಿನ್ದ್ರ ತಸ್ಥುಷಃ'' ಇತಿ, ತಥಾ ''ಸಮುದ್ರೇ'' ಅನ್ತಶ್ಶಯತ'' ಇತಿ, ತಥಾ ಬಾರ್ಹಸ್ಪತ್ಯೇ ''ವಿಶ್ವೇಷಾಮಿಜ್ಜನಿತಾ ಬ್ರಹ್ಮಣಾಮಸಿ'' ಇತಿ, ತಥಾ ಸೌರೇ ''ಸೂರ್ಯ ಆತ್ಮಾ ಜಗತಸ್ತಸ್ಥುಷಶ್ಚ'' ಇತಿ, ತಥಾ ವಾರುಣೇ ''ಯೋ ವಿಶ್ವಸ್ಯ ಜಗತೋ ದೇವ ಈಶ'' ಇತಿ, ತಥಾ ವಿಶ್ವಕರ್ಮಸೂಕ್ತೇ ''ವಿಶ್ವತಶ್ಚಕ್ಷುಃ'' ''ಯೋ ನಃ ಪಿತಾ ಜನಿತಾ'' ಇತ್ಯಾದೀನಿ ಬ್ರಹ್ಮಲಿಙ್ಗಾನಿ ಸನ್ತಿ । ಕಿಞ್ಚ ಸೌರೇ ''ಯೇನಾ ಪಾವಕ ಚಕ್ಷಸಾ ಭುರಣ್ಯನ್ತಂ ಜನಾಁ ಅನು । ತ್ವಂ ವರುಣ ಪಶ್ಯಸಿ'' ಇತಿ ಸೂರ್ಯಸ್ಯ ಪಾವಕವರುಣಾದಿಶಬ್ದೈಃ ಸಮ್ಬೋಧನಮ್, ತಥಾ ವಾರುಣೇ – ''ಅಥಾ ವಯಮಾದಿತ್ಯ'' ಇತಿ ವರುಣಸ್ಯ ಆದಿತ್ಯಾದಿಶಬ್ದೈಃ ಸಮ್ಬೋಧನಮ್, ತಥಾ ಆಗ್ನೇಯೇ – ''ತ್ವಮಗ್ನ ಇನ್ದ್ರೋ ವೃಷಭಃ ಸತಾಮಸಿ ತ್ವಂ ವಿಷ್ಣುರುರುಗಾಯೋ ನಮಸ್ಯಃ'' ಇತ್ಯಗ್ನಿಂ ಸಮ್ಬೋಧ್ಯ ತತ್ರೇನ್ದ್ರವಿಷ್ಣ್ವಾದಿಶಬ್ದಪ್ರಯೋಗಃ ತತ್ತತ್ಸೂಕ್ತಾನಾಂ ಸರ್ವಶಬ್ದವಾಚ್ಯಬ್ರಹ್ಮಪರತ್ವೇ ಯುಕ್ತಃ, ನಾನ್ಯಥಾ । ಯದಿ ಚ ಇನ್ದ್ರಾದಾವೇವ ಬ್ರಹ್ಮಲಿಙ್ಗೋಕ್ತಿಃ ಸ್ತುತ್ಯರ್ಥಾ, ತರ್ಹ್ಯಾಕಾಶಪ್ರಾಣಾದಾವಪಿ ಬ್ರಹ್ಮಲಿಙ್ಗೋಕ್ತಿಸ್ತದರ್ಥಾ ಸ್ಯಾದಿತಿ ದಿಕ್ ।**

ಅನುವಾದ - ನಿರವಕಾಶಬ್ರಹ್ಮಲಿಂಗದ ಬಲದಿಂದ ಅಗ್ನಿಸೂಕ್ತವು ಹೇಗೆ ವಿಷ್ಣುಪರವಾಗುತ್ತದೋ, ಅದರಂತೆ ಬೇರೆ ಸೂಕ್ತಗಳಲ್ಲಿಯೂ ತಿಳಿಯಬೇಕು. ಅದು ಹೀಗೆ --

ಐಂದ್ರಸೂಕ್ತ - 'ನತ್ವಾವಾಂ ಇಂದ್ರ ಕಶ್ಚನ ನ ಜಾತೋ ನ ಜನಿಷ್ಯತೇ' (ಎಲೈ ಇಂದ್ರನೇ! ನಿನಗೆ ಸರಿಸಮಾನನಾದವನು ಹಿಂದೆ ಬಂದಿಲ್ಲ; ಈಗ ಇಲ್ಲ, ಮುಂದೆಯೂ ಬರುವುದಿಲ್ಲ). ಅದರಂತೆ 'ಈಶಾನಮಸ್ಯ ಜಗತಃ ಸ್ವರ್ದೃಶಮೀಶಾನಮಿಂದ್ರ ತಸ್ಥುಷಃ' (ಸ್ವತಂತ್ರಜ್ಞಾನವುಳ್ಳ ಚರಾಚರಜಗತ್ತಿಗೆ ಒಡೆಯನಾದ ಎಲೈ ಇಂದ್ರನೇ); ಮತ್ತು 'ಸಮುದ್ರೇ ಅಂತಃಶಯತೇ' (ಸಮುದ್ರದ ಮಧ್ಯದಲ್ಲಿ ಮಲಗಿದ್ದಾನೆ) ಈ ಐಂದ್ರಸೂಕ್ತಗಳಲ್ಲಿ ನಿರವಕಾಶಬ್ರಹ್ಮಲಿಂಗಗಳು ಕೇಳಿಸುತ್ತಿವೆ.

ಬೃಹಸ್ಪತಿಸೂಕ್ತ - 'ವಿಶ್ವೇಷಾಮಿಜ್ಜನಿತಾ ಬ್ರಹ್ಮಣಾಮಸಿ' (ಅನೇಕ ಚತುರ್ಮುಖಬ್ರಹ್ಮರನ್ನು ನೀನು ಹುಟ್ಟಿಸುತ್ತಿ);

ಸೂರ್ಯಸೂಕ್ತ - 'ಸೂರ್ಯ ಆತ್ಮಾ ಜಗತಸ್ತಸ್ಥುಷಶ್ಚ' (ಚರಾಚರಜಗತ್ತಿಗೆ ನೀನು ಸ್ವಾಮಿಯಾಗಿದ್ದಿ);

ವರುಣಸೂಕ್ತ - 'ಯೋ ವಿಶ್ವಸ್ಯ ಜಗತೋ ದೇವ ಈಶಃ' (ಸಮಸ್ತ ಜಗತ್ತಿಗೆ ಯಾರು ಒಡೆಯನಾಗಿದ್ದಾನೋ);

ವಿಶ್ವಕರ್ಮಸೂಕ್ತ - 'ವಿಶ್ವತಶ್ಚಕ್ಷುಃ ಯೋ ನಃ ಪಿತಾ ಜನಿತಾ' (ಎಲ್ಲವನ್ನು ತಿಳಿದವನು, ಎಲ್ಲರಿಗೂ ಜನಕನು) - ಈ ಎಲ್ಲ ಸೂಕ್ತಗಳಲ್ಲಿಯೂ ಅನೇಕ ನಿರವಕಾಶಬ್ರಹ್ಮಲಿಂಗಗಳು ಕೇಳಿಸುತ್ತಿವೆ.

ಅಷ್ಟೇ ಅಲ್ಲದೆ ಸೂರ್ಯಸೂಕ್ತದಲ್ಲಿ 'ಯೇನಾ ಪಾವಕ ಚಕ್ಷಸಾ ಭುರಣ್ಯಂ ತಂ ಜನಾಂ ಅನು । ತ್ವಂ ವರುಣ ಪಶ್ಯಸಿ' ಎಂದು ಪಾವಕ ವರುಣ ಮೊದಲಾದ ಬೇರೆ ಶಬ್ದಗಳಿಂದ ಸೂರ್ಯನನ್ನು ಸಂಬೋಧಿಸಲಾಗಿದೆ. ಇದರಂತೆ ವರುಣಸೂಕ್ತದಲ್ಲಿ 'ಅಥಾ ವಯಮಾದಿತ್ಯೇ' ಎಂದು ವರುಣನನ್ನು ಆದಿತ್ಯಶಬ್ದದಿಂದ ಸಂಬೋಧಿಸಲಾಗಿದೆ.

ಅಗ್ನಿಸೂಕ್ತದಲ್ಲಿ 'ತ್ವಮಗ್ನ ಇಂದ್ರೋ ವೃಷಭಂ ಸತಾಮಸಿ ತ್ವಂ ವಿಷ್ಣುರುರುಗಾಯೋ ನಮಸ್ಯ' ಎಂದು, ಇಂದ್ರ ವಿಷ್ಣು ಮೊದಲಾದ ಶಬ್ದಗಳನ್ನು ಅಗ್ನಿಯಲ್ಲಿ ಪ್ರಯೋಗಿಸಲಾಗಿದೆ.

ಒಂದು ವೇಳೆ ಆಯಾ ಸೂಕ್ತಗಳು ಆಯಾ ದೇವತೆಗಳನ್ನಷ್ಟೇ ಪ್ರತಿಪಾದಿಸುವುದಾದರೆ ಇತರ ದೇವತಾವಾಚಕಗಳಾದ ಪದಗಳ ಸಂಬೋಧನೆಯು ತಪ್ಪಾಗುತ್ತದೆ. ಈ ಎಲ್ಲ ಸೂಕ್ತಗಳೂ ಬ್ರಹ್ಮಪರವೆಂದು ಹೇಳಿದಾಗ ಸರ್ವಶಬ್ದವಾಚ್ಯನಾದ ಬ್ರಹ್ಮನಲ್ಲಿ ಸಂಬೋಧನೆ ಎಂದು ಕೂಡಿಸಲು ಸಾಧ್ಯ. ಇನ್ನು ಇಂದ್ರಾದಿಗಳಲ್ಲಿ ಹೇಳಿದ ಬ್ರಹ್ಮಲಿಂಗಗಳನ್ನು ಸ್ತೋತ್ರಕ್ಕೋಸ್ಕರವೆಂದು ಹೇಳಬೇಕು. ಹಾಗಾದಲ್ಲಿ ಆಕಾಶಪ್ರಾಣಾದಿಗಳಲ್ಲಿ ಹೇಳಿದ ಪರೋವರೀಯಸ್ತ್ವಾದಿ ಲಿಂಗಗಳನ್ನೂ ಸಹ ಜಡವಾದ ಆಕಾಶಾದಿಗಳಲ್ಲಿ ಹೇಳಬೇಕಾದೀತು. ಇಷ್ಟು ವಿಚಾರ ಕೇವಲ ದಿಕ್ಪ್ರದರ್ಶನ.

**ಪ್ರಕಾಶಃ** – ಸೂತ್ರೇ ಅಗ್ನಿಸೂಕ್ತಸ್ಯಸ್ಯೋಪಲಕ್ಷಣತ್ವೇನೋಪಾದಾನಾತ್ ಸರ್ವತ್ರಾಯಂ ನ್ಯಾಯೋऽನುಸನ್ಧೇಯ ಇತಿ ವದಂಸ್ತತ್ಪ್ರಕಾರಂ ಕ್ವಚಿತ್ಕ್ವಚಿದ್ದರ್ಶಯತಿ – ಏವಮಿತಿ ॥ ಐನ್ದ್ರೇ ಸೂಕ್ತ ಇತ್ಯರ್ಥಃ । ಆದ್ಯಾಷ್ಟಕಗತೇ ಐನ್ದ್ರೇ **''ನತ್ವಾವಾँ ಇನ್ದ್ರ ಕಶ್ಚನ ನ ಜಾತೋ ನ ಜನಿಷ್ಯತೇऽತಿ ವಿಶ್ವಂ ವವಕ್ಷಿಥ''** ಇತ್ಯತ್ರ ಹೇ ಇನ್ದ್ರ 'ಕಶ್ಚನ ಕೋऽಪಿ 'ತ್ವಾವಾನ್ ತ್ವತ್ಸದೃಶಃ ನಾಸ್ತಿ ನಾಸೀನ್ನ ಜನಿಷ್ಯತೇ ವಿಶ್ವಮತಿ ವವಕ್ಷಿಥ ತ್ವಮೇವ ಭರ್ತಾऽಸೀತ ಅಸದೃಶತ್ವವಿಶ್ವಭರ್ತೃತ್ವಾದಿಕಂ ಶ್ರುತಮ್ । ತಥಾ ಪಞ್ಚಮಾಷ್ಟಕಗತೇ ಐನ್ದ್ರೇ **''ಅಭಿತ್ವಾ ಶೂರ ನೋ ನುಮೋऽದುಗ್ಧಾ ಇವ ಧೇನವಃ । ಈಶಾನಮಸ್ಯ''** ಇತ್ಯತ್ರ ಜಙ್ಗಮಸ್ಯ ಚ ಸ್ಥಾವರಸ್ಯ ಚ ಅಸ್ಯ ವಿಶ್ವಸ್ಯೇಶಾನಂ ತ್ವಾ ತ್ವಾಂ ವೇದವಾಚ ಇವ ಪುನಃ ಪುನಃ ಸ್ತುಮ ಇತಿ ಜಗನ್ನಿಯಾಮಕತ್ವಂ, **''ನ ತ್ವಾವಾँ ಅನ್ಯೋ ದಿವ್ಯೋ ನ ಪಾರ್ಥಿವೋ ನ ಜಾತೋ ನ ಜನಿಷ್ಯತೇ''** ಇತಿ ಹೇ ಮಘವನ್ ದ್ಯುಸ್ಥೋ ವಾ ಪೃಥಿವೀಸ್ಥೋ ವಾ ಜಾತೋ ಜನಿಷ್ಯಮಾಣೋ

वाऽन्यस्त्वत्सदृशो नेत्यसदृशत्वं च श्रुतम् । तथा ''समुन्द्रे अन्तः शयते उद्रा वज्रो अभीवृतः ।'' इति षष्ठाष्टकगतैन्द्रे अष्टमाष्टकस्थे च ''समुद्रे अन्तः कवयो विचक्षते'' इति समुद्रशायित्वं श्रुतम् । एतानि च ब्रह्मलिङ्गतया प्रसिद्धानीति भावः ॥ तथेति ॥

**देवाश्चित्ते असुर्य प्रचेतसो बृहस्पते यज्ञियं भागमानशुः ।**
**उस्रा इव सूर्यो ज्योतिषामहो विश्वेषामिज्जनिता ब्रह्मणामसि ॥**

इत्यत्र हे बृहस्पते प्रकृष्टज्ञानिनो देवा अपि ते प्रसादात् यज्ञभागं प्राप्नुवन्ति । त्वं च भूतभविष्यद्वर्तमानचतुर्मुखब्रह्मणां जनयिताऽसीति ब्रह्मजनकत्वादिकं श्रुतम् । तच्च विष्णोरन्यत्र न युक्तमिति भावः ।

॥ सौर इति ॥ आद्याष्टकाष्टमाध्यायगते सौरे –

**चित्रं देवानामुदगादनीकं चक्षुर्मित्रस्य वरुणस्याग्नेः ।**
**आप्रा द्यावापृथिवी अन्तरिक्षं सूर्य आत्मा ।**

इत्यत्र स्थावरजङ्गमात्मकविश्वस्वामित्वं श्रुतम् । तच्च नान्यलिङ्गम् । न चात्रात्मशब्दः स्वरूपपरः, षष्ठ्या औपचारिकत्वप्रसङ्गादिति भावः ॥ य इति ॥ पञ्चमाष्टके –

**यो वर्धन ओषधीनां यो अपां यो विश्वस्य जगतो देव ईशे ।**

इति विश्वेश्वरत्वं श्रुतम् । तच्च ''एष सर्वेश्वरः'' इत्यादिना ब्रह्मणि प्रसिद्धम् । ''विश्वतश्चक्षुरुत विश्वतो मुखः'' इत्यादिकं च –

**सर्वतः पाणिपादं तत्सर्वतोऽक्षिशिरोमुखम् ।**

इत्यादिना विष्णौ प्रसिद्धम् । जगज्जनकत्वं च ''यतो वा इमानि भूतानि'' इत्यादिना प्रसिद्धम् ॥ सन्तीति ॥ तथा च निरवकाशब्रह्मलिङ्गैः सावकाशश्रुतिप्रकरणयोः बाध इति भावः । सूत्रे निरवकाशलिङ्गोक्तिरुपलक्षणं, अन्यत्रान्यवाचिपदप्रयोगानुपपत्त्या च विष्णुपरता ग्राह्येत्याह – किञ्चेति ॥ सौर इति ॥ चतुर्थाध्यायगतसौर इत्यर्थः ॥ अथावयमिति ॥ आद्याष्टकगते वारुणसूक्ते

ಸೂರ್ಯಸೂಕ್ತ - 'ಸೂರ್ಯ ಆತ್ಮಾ ಜಗತಸ್ತಸ್ಥುಷಶ್ಚ' (ಚರಾಚರಜಗತ್ತಿಗೆ ನೀನು ಸ್ವಾಮಿಯಾಗಿದ್ದಿ);

ವರುಣಸೂಕ್ತ - 'ಯೋ ವಿಶ್ವಸ್ಯ ಜಗತೋ ದೇವ ಈಶಃ' (ಸಮಸ್ತ ಜಗತ್ತಿಗೆ ಯಾರು ಒಡೆಯನಾಗಿದ್ದಾನೋ);

ವಿಶ್ವಕರ್ಮಸೂಕ್ತ - 'ವಿಶ್ವತಶ್ಚಕ್ಷುಃ ಯೋ ನಃ ಪಿತಾ ಜನಿತಾ' (ಎಲ್ಲವನ್ನು ತಿಳಿದವನು, ಎಲ್ಲರಿಗೂ ಜನಕನು) - ಈ ಎಲ್ಲ ಸೂಕ್ತಗಳಲ್ಲಿಯೂ ಅನೇಕ ನಿರವಕಾಶಬ್ರಹ್ಮಲಿಂಗಗಳು ಕೇಳಿಸುತ್ತಿವೆ.

ಆಪ್ಟೇ ಅಲ್ಲದೆ ಸೂರ್ಯಸೂಕ್ತದಲ್ಲಿ 'ಯೇನಾ ಪಾವಕ ಚಕ್ಷಸಾ ಭುರಣ್ಯಂ ತಂ ಜನಾಂ ಅನು । ತ್ವಂ ವರುಣ ಪಶ್ಯಸಿ' ಎಂದು ಪಾವಕ ವರುಣ ಮೊದಲಾದ ಬೇರೆ ಶಬ್ದಗಳಿಂದ ಸೂರ್ಯನನ್ನು ಸಂಬೋಧಿಸಲಾಗಿದೆ. ಇದರಂತೆ ವರುಣಸೂಕ್ತದಲ್ಲಿ 'ಅಥಾ ವಯಮಾದಿತ್ಯೇ' ಎಂದು ವರುಣನನ್ನು ಆದಿತ್ಯಶಬ್ದದಿಂದ ಸಂಬೋಧಿಸಲಾಗಿದೆ.

ಆಗ್ನಿಸೂಕ್ತದಲ್ಲಿ 'ತ್ವಮಗ್ನ ಇಂದ್ರೋ ವೃಷಭಂ ಸತಾಮಸಿ ತ್ವಂ ವಿಷ್ಣುರುರುಗಾಯೋ ನಮಸ್ಯ' ಎಂದು, ಇಂದ್ರ ವಿಷ್ಣು ಮೊದಲಾದ ಶಬ್ದಗಳನ್ನು ಅಗ್ನಿಯಲ್ಲಿ ಪ್ರಯೋಗಿಸಲಾಗಿದೆ.

ಒಂದು ವೇಳೆ ಆಯಾ ಸೂಕ್ತಗಳು ಆಯಾ ದೇವತೆಗಳನ್ನಷ್ಟೇ ಪ್ರತಿಪಾದಿಸುವುದಾದರೆ ಇತರ ದೇವತಾವಾಚಕಗಳಾದ ಪದಗಳ ಸಂಬೋಧನೆಯು ತಪ್ಪಾಗುತ್ತದೆ. ಈ ಎಲ್ಲ ಸೂಕ್ತಗಳೂ ಬ್ರಹ್ಮಪರವೆಂದು ಹೇಳಿದಾಗ ಸರ್ವಶಬ್ದವಾಚ್ಯನಾದ ಬ್ರಹ್ಮನಲ್ಲಿ ಸಂಬೋಧನೆ ಎಂದು ಕೂಡಿಸಲು ಸಾಧ್ಯ. ಇನ್ನು ಇಂದ್ರಾದಿಗಳಲ್ಲಿ ಹೇಳಿದ ಬ್ರಹ್ಮಲಿಂಗಗಳನ್ನು ಸ್ತೋತ್ರಕ್ಕೋಸ್ಕರವೆಂದು ಹೇಳಬೇಕು. ಹಾಗಾದಲ್ಲಿ ಆಕಾಶಪ್ರಾಣಾದಿಗಳಲ್ಲಿ ಹೇಳಿದ ಪರೋವರೀಯಸ್ತ್ವಾದಿ ಲಿಂಗಗಳನ್ನೂ ಸಹ ಜಡವಾದ ಆಕಾಶಾದಿಗಳಲ್ಲಿ ಹೇಳಬೇಕಾದೀತು. ಇಷ್ಟು ವಿಚಾರ ಕೇವಲ ದಿಕ್ಪ್ರದರ್ಶನ.

**प्रकाशः – सूत्रे अग्निसूक्तस्थस्योपलक्षणत्वेनोपादानात् सर्वत्रायं न्यायोऽनुसन्धेय इति वदंस्तत्प्रकारं क्वचित्क्वचिद्दर्शयति – एवमिति ॥ ऐन्द्रे सूक्त इत्यर्थः । आद्याष्टकगते ऐन्द्रे ''नत्वावाँ इन्द्र कश्चन न जातो न जनिष्यतेऽति विश्वं ववक्षिथ'' इत्यत्र हे इन्द्र 'कश्चन कोऽपि 'त्वावान् त्वत्सदृशः नास्ति नासीत्न जनिष्यते विश्वमति ववक्षिथ त्वमेव भर्ताऽसीत असदृशत्वविश्वभर्तृत्वादिकं श्रुतम् । तथा पञ्चमाष्टकगते ऐन्द्रे ''अभित्वा शूर नो नुमोऽदुग्धा इव धेनवः । ईशानमस्य'' इत्यत्र जङ्गमस्य च स्थावरस्य च अस्य विश्वस्येशानं त्वा त्वां वेदवाच इव पुनः पुनः स्तुम इति जगन्नियामकत्वं, ''न त्वावाँ अन्यो दिव्यो न पार्थिवो न जातो न जनिष्यते'' इति हे मघवन् द्युस्थो वा पृथिवीस्थो वा जातो जनिष्यमाणो**

वाऽन्यस्त्वत्सदृशो नेत्यसदृशत्वं च श्रुतम् । तथा ''समुन्द्रे अन्तः शयते उद्रा वज्रो अभीवृतः ।'' इति षष्ठाष्टकगतैन्द्रे अष्टमाष्टकस्थे च ''समुद्रे अन्तः कवयो विचक्षते'' इति समुद्रशायित्वं श्रुतम् । एतानि च ब्रह्मलिङ्गतया प्रसिद्धानीति भावः ॥ तथेति ॥

**देवाश्चित्ते असुर्य प्रचेतसो बृहस्पते यज्ञियं भागमानशुः ।**
**उस्रा इव सूर्यो ज्योतिषामहो विश्वेषामिज्जनिता ब्रह्मणामसि ॥**

इत्यत्र हे बृहस्पते प्रकृष्टज्ञानिनो देवा अपि ते प्रसादात् यज्ञभागं प्राप्नुवन्ति । त्वं च भूतभविष्यद्वर्तमानचतुर्मुखब्रह्मणां जनयिताऽसीति ब्रह्म-जनकत्वादिकं श्रुतम् । तच्च विष्णोरन्यत्र न युक्तमिति भावः ।

॥ सौर इति ॥ आद्याष्टकाष्टमाध्यायगते सौरे –

**चित्रं देवानामुदगादनीकं चक्षुर्मित्रस्य वरुणस्याग्नेः ।**
**आप्रा द्यावापृथिवी अन्तरिक्षं सूर्य आत्मा ।**

इत्यत्र स्थावरजङ्गमात्मकविश्वस्वामित्वं श्रुतम् । तच्च नान्यलिङ्गम् । न चात्रात्मशब्दः स्वरूपपरः, षष्ठ्या औपचारिकत्वप्रसङ्गादिति भावः ॥ य इति ॥ पञ्चमाष्टके –

**यो वर्धन ओषधीनां यो अपां यो विश्वस्य जगतो देव ईशे ।**

इति विश्वेश्वरत्वं श्रुतम् । तच्च ''एष सर्वेश्वरः'' इत्यादिना ब्रह्मणि प्रसिद्धम् । ''विश्वतश्चक्षुरुत विश्वतो मुखः'' इत्यादिकं च –

**सर्वतः पाणिपादं तत्सर्वतोऽक्षिशिरोमुखम् ।**

इत्यादिना विष्णौ प्रसिद्धम् । जगज्जनकत्वं च ''यतो वा इमानि भूतानि'' इत्यादिना प्रसिद्धम् ॥ सन्तीति ॥ तथा च निरवकाशब्रह्मलिङ्गैः सावकाश-श्रुतिप्रकरणयोः बाध इति भावः । सूत्रे निरवकाशलिङ्गोक्तिरुपलक्षणं, अन्यत्रान्यवाचिपदप्रयोगानुपपत्त्या च विष्णुपरता ग्राह्येत्याह – किञ्चेति ॥ सौर इति ॥ चतुर्थाध्यायगतसौर इत्यर्थः ॥ अथावयमिति ॥ आद्याष्टकगते वारुणसूक्ते

**''ಆದಿತ್ಯ ವ್ರತೇ ತವಾನಾಗಸೋ ಅದಿತಯೇ ಸ್ಯಾಮ''** ಇತ್ಯಾದಿತ್ಯಶಬ್ದಸಮ್ಬೋಧನಮಿತ್ಯರ್ಥಃ ॥ **ನಾನ್ಯಥೇತಿ ॥** ತಥಾತ್ವೇ ನಾನಾದೇವತಾಪ್ರಾಪಕಶ್ರುತಿಸದ್ಭಾವೇನೈಕವಾಕ್ಯತಾಭಙ್ಗ – ಇತಿ ಭಾವಃ ।

ಸೂಕ್ತಗತಬ್ರಹ್ಮಲಿಙ್ಗಾನಾಮನ್ಯಥಾಸಿದ್ಧಿಮಾಶಙ್ಕ್ಯ ನಿರಸ್ಯತಿ – **ಯದಿ ಚೇತಿ ॥** 'ಲಿಙ್ಗ' ಇತ್ಯುಪಲಕ್ಷಣಂ ಪಾವಕಾದಿಶಬ್ದೋಕ್ತಿರಪಿ ಧ್ಯೇಯಾ । ತಥಾ ಚಾಕಾಶಾದ್ಯಧಿಕರಣಾನಾರಮ್ಭಃ ಸ್ಯಾದಿತಿ ಭಾವಃ । ಏತೇನೋಪಾಸನಾರ್ಥಂ ತದುಕ್ತಿರಿತಿ ಪರಾಸ್ತಮ್ । **ಅಸದುಪಾಸನಾಯಾ ನಿಷಿದ್ಧತ್ವಾಚ್ಚೇತಿ** । ನನ್ವಿನ್ದ್ರಾದೀನಾಮನ್ಯೋನ್ಯಂ ಬ್ರಹ್ಮಣಾ ಚಾಭೇದಾತ್ ತತ್ರ ಬ್ರಹ್ಮಲಿಙ್ಗೋಕ್ತಿಃ ಪಾವಕಾದಿಶಬ್ದೋಕ್ತಿಶ್ಚ ಯುಕ್ತಾ । ಅತ ಏವ **''ತ್ವಮಗ್ನ ಇನ್ದ್ರೋ ವೃಷಭಃ''** ಇತ್ಯಾದಿ ಚ ಯುಜ್ಯತ ಇತಿ ಚೇನ್ನ, ವಿಶಿಷ್ಟಾಭೇದಸ್ಯ ಬಾಧಿತತ್ವಾತ್ । ವಿಶೇಷ್ಯಮಾತ್ರೈಕ್ಯೇ ಲಕ್ಷಣಾಪತ್ತೇಶ್ಚ । ಆಕಾಶಾದಾವಪಿ ತಥಾತ್ವಾಪತ್ತೇಶ್ಚ । **'ಯಮಿನ್ದ್ರಮಾಹುಃ'** ಇತ್ಯಾದಿವಿರೋಧಾಚ್ಚ, ತತ್ರ ಭೇದೋಕ್ತೇರನ್ತರಧಿಕರಣೇ ದರ್ಶಿತತ್ವಾತ್ । ''ಪೃಥಕ್'' ಇತ್ಯತ್ರಾಭೇದಸ್ಯ ನಿರಸಿಷ್ಯಮಾಣತ್ವಾಚ್ಚ ।

ನಚ ವಾಚ್ಯಂ ಲಿಙ್ಗಾನಾಂ ಸ್ವಾವರನಿಯಾಮಕತ್ವಾದಿನಾ ಸಙ್ಕೋಚ ಇತಿ, ಬಾಧಕಾಭಾವಾತ್ । ನಚ ಪಾವಕಾದಿಶಬ್ದಾನಾಂ ಯೋಗೇನ ಸೂರ್ಯಾದೌ ವೃತ್ತಿರವಿರುದ್ಧೇತಿ ವಾಚ್ಯಂ, ರೂಢೇರ್ಬಲವತ್ತ್ವಾತ್, ನಿಯಾಮಕಾಭಾವೇನ ವೈಪರೀತ್ಯಸ್ಯಾಪಿ ಸಮ್ಭವಾತ್ । ತದೇತದಭಿಪ್ರೇತ್ಯೋಕ್ತಂ – ದಿಗಿತಿ । ಯದ್ವಾ – ಸೂಕ್ತಾನ್ತರೇಷ್ವಪ್ಯೇವಂ ನಿರವಕಾಶಬ್ರಹ್ಮಲಿಙ್ಗಾದೀನಿ ದ್ರಷ್ಟವ್ಯಾನೀತಿ ಭಾವೇನೋಕ್ತಂ – ದಿಗಿತಿ ।

ವಿವರಣೆ - ಸೂತ್ರದಲ್ಲಿ ನಿರವಕಾಶಬ್ರಹ್ಮಲಿಂಗದಿಂದ ಅಗ್ನಿಸೂಕ್ತವು ವಿಷ್ಣುಪರವೆಂದು ಹೇಳಬೇಕೆಂದಿದ್ದಾರೆ. ಇದು ಕೇವಲ ಉಪಲಕ್ಷಣ. ಬೇರೆ ದೇವತೆಗಳ ಸೂಕ್ತಗಳಲ್ಲಿಯೂ ಈ ನ್ಯಾಯವನ್ನು ಅನುಸಂಧಾನ ಮಾಡಬೇಕೆಂದು ಕೆಲವು ಸೂಕ್ತಗಳನ್ನು ಪ್ರಕೃತ ಉದಾಹರಿಸುತ್ತಿದ್ದಾರೆ.

'ನತ್ವಾವಾಂ ಇಂದ್ರ ಕಶ್ಚನ ನ ಜಾತೋ ನ ಜನಿಷ್ಯತೇऽತಿ ವಿಶ್ವಂ ವವಕ್ಷಿಥ' (ಋಗ್ವೇದಪ್ರಥಮಾಷ್ಟಕ) ಹೇ ಇಂದ್ರ - ಎಲೈ ಇಂದ್ರನೇ ಕಶ್ಚನ = ಯಾರೂ ಸಹ, ತ್ವಾವಾಂ = ನಿನಗೆ ಸದೃಶನಾದವನು ನ ಜಾತಃ = ಹುಟ್ಟಿಲ್ಲ, ನ ಜನಿಷ್ಯತೇ = ಮುಂದೆ ಹುಟ್ಟುವುದೂ ಇಲ್ಲ. ವಿಶ್ವಮತಿ ವವಕ್ಷಿಥ = ಸಮಗ್ರವಿಶ್ವಕ್ಕೆ ನೀನೇ ಒಡೆಯನಾಗಿದ್ದಿ. ಈ ವಾಕ್ಯದಿಂದ ಅಸದೃಶತ್ವ ಮತ್ತು ವಿಶ್ವಭರ್ತೃತ್ವವೆಂಬ ಎರಡು ನಿರವಕಾಶ ಲಿಂಗಗಳು ಶ್ರುತವಾಗಿವೆ.

'ಅಭಿ ತ್ವಾ ಶೂರ ನೋ ನುಮೋऽದುಗ್ಧಾ ಇವ ಧೇನವಃ । ಈಶಾನಮಸ್ಯ ಜಗತಃ ಸ್ವರ್ದೃಶಮೀಶಾನಮಿನ್ದ್ರ ತಸ್ಥುಷಃ' (ಋಗ್ವೇದ ಐದನೇ ಅಷ್ಟಕ) ಸ್ವರ್ದೃಶಂ = ಸ್ವತಂತ್ರಜ್ಞಾನವುಳ್ಳ, ಜಗತಃ ಈಶಾನಂ = ಜಂಗಮಜಗತ್ತಿಗೆ ಸ್ವಾಮಿಯಾದ, ತಸ್ಥುಷಃ ಈಶಾನಂ = ಸ್ಥಾವರ ಪ್ರಪಂಚಕ್ಕೆ ಸ್ವಾಮಿಯಾದ, ತ್ವಾ = ನಿನ್ನನ್ನು, ಅದುಗ್ಧಾಃ ಧೇನವಃ ಇವ = ವೇದಮಾತೆಯಂತೆ, ಅಭಿ = ಮತ್ತೆ ಮತ್ತೆ, ನಃ = ನಾವು, ನುಮಃ = ಸ್ತೋತ್ರಮಾಡುತ್ತೇವೆ. ಈ ಶ್ರುತಿಯಿಂದ ಜಗನ್ನಿಯಾಮಕತ್ವವೆಂಬ ನಿರವಕಾಶ ಗುಣವು ಬ್ರಹ್ಮನಲ್ಲಿ ತಿಳಿಯುತ್ತದೆ.

'ನ ತ್ವಾ ವಾಂ ಅನ್ಯೋ ದಿವ್ಯೋ ನ ಪಾರ್ಥಿವೋ ನ ಜಾತೋ ನ ಜನಿಷ್ಯತೇ' ಹೇ ಮಘವನ್ = ಎಲೈ ಇಂದ್ರನೇ! ದಿವ್ಯಃ = ದ್ಯುಲೋಕದಲ್ಲಿ, ಪಾರ್ಥಿವಃ = ಪೃಥಿವಿಯಲ್ಲಿ, ಅನ್ಯಃ = ನಿನಗಿಂತ ಬೇರೆಯಾದ, ತ್ವಾವಾಂ = ನಿನಗೆ ಸದೃಶನಾದವನು, ನ ಜಾತಃ = ಹುಟ್ಟಿಲ್ಲ, ನ ಜನಿಷ್ಯತೇ = ಮುಂದೆ ಹುಟ್ಟುವುದೂ ಇಲ್ಲ.

ಮತ್ತು 'ಸಮುದ್ರೇऽಂತಃಶಯತ ಉಂದಾ ವಜ್ರೋ ಅಭೀವೃತಃ' (ಆರನೇ ಅಷ್ಟಕ); 'ಸಮುದ್ರೇऽಂತಃ ಕವಯೋ ವಿಚಕ್ಷತೇ' (೮ನೇ ಅಷ್ಟಕ) ಈ ಶ್ರುತಿಗಳಲ್ಲಿ ಸಮುದ್ರಶಾಯಿತ್ವವೆಂಬ ನಿರವಕಾಶಲಿಂಗವು ಶ್ರುತವಾಗಿದೆ. ಇವೆಲ್ಲವೂ ಬ್ರಹ್ಮಲಿಂಗವೆಂಬುದು ಪ್ರಸಿದ್ಧ.

ಬೃಹಸ್ಪತಿ ಸೂಕ್ತದಲ್ಲಿಯೂ ನಿರವಕಾಶಬ್ರಹ್ಮಲಿಂಗಗಳು ಕೇಳಿಸುತ್ತಿವೆ. 'ದೇವಾಶ್ಚಿತ್ತೇ ಅಸುರ್ಯ-ಪ್ರಚೇತಸೋ ಬೃಹಸ್ಪತೇ ಯಜ್ಞಿಯಂ ಭಾಗಮಾನಶುಃ । ಉಸ್ರಾ ಇವ ಸೂರ್ಯೋ ಜ್ಯೋತಿಷಾ ಮಹೋವಿಶ್ವೇಷಾಮಿಜ್ಜನಿತಾ ಬ್ರಹ್ಮಣಾಮಸಿ' ಪ್ರಚೇತಸಃ ದೇವಾಶ್ಚಿತ್ = ಪ್ರಕೃಷ್ಟಜ್ಞಾನವುಳ್ಳ ದೇವತೆ-ಗಳೂ ಕೂಡ, ತೇ = ನಿನ್ನ ಪ್ರಸಾದದಿಂದ, ಯಜ್ಞಿಯಂ ಭಾಗಂ ಆನಶುಃ = ಯಜ್ಞಭಾಗವನ್ನು ಹೊಂದಿದ್ದಾರೆ. ನೀನಾದರೋ ವಿಶ್ವೇಷಾಮ್ ಬ್ರಹ್ಮಣಾಂ ಜನಿತಾಮಸಿ = ಹಿಂದಿನ ಈಗಿನ ಮುಂದಿನ ಎಲ್ಲಾ ಚತುರ್ಮುಖಬ್ರಹ್ಮರಿಗೆ ಜನಕನಾಗಿದ್ದಿ. ಈ ಶ್ರುತಿಯಲ್ಲಿ ತಿಳಿಯುತ್ತಿರುವ ಚತುರ್ಮುಖಬ್ರಹ್ಮ-ಜನಕತ್ವವು ಬೇರೆ ದೇವತೆಗಳಲ್ಲಿ ಕೂಡುವುದಿಲ್ಲ.

ಸೂರ್ಯಸೂಕ್ತದಲ್ಲಿಯೂ ನಿರವಕಾಶಬ್ರಹ್ಮಲಿಂಗವು ಕೇಳಿಸುತ್ತಿದೆ. 'ಚಿತ್ರಂ ದೇವಾನಾಮುದ-ಗಾದನೀಕಂ ಚಕ್ಷುರ್ಮಿತ್ರಸ್ಯ ವರುಣಸ್ಯಾಗ್ನೇಃ । ಆಪ್ರಾ ದ್ಯಾವಾ ಪೃಥಿವೀ ಅಂತರಿಕ್ಷಂ ಸೂರ್ಯ ಆತ್ಮಾ ಜಗತಸ್ತಸ್ಥುಷಃ' ದೇವಾನಾಮನೀಕಂ = ಸೂರ್ಯಮಂಡಲವು ಎಲ್ಲ ದೇವತೆಗಳಿಗೆ ವಾಸಸ್ಥಾನ. ಇಂತಹ ಸೂರ್ಯಮಂಡಲವು, ಉದಗಾತ್ = ಉದಯವಾಗಿದೆ. ಮಿತ್ರಸ್ಯ = ಮಿತ್ರನ, ವರುಣಸ್ಯ = ವರುಣನ, ಅಗ್ನೇಃ = ಅಗ್ನಿಯ, ಚಕ್ಷುಃ = ಕಣ್ಣಿಗೆ ನಿಯಾಮಕ, ದ್ಯಾವಾಪೃಥಿವೀ = ದ್ಯುಲೋಕ ಪೃಥಿವಿಲೋಕಗಳನ್ನು, ಅಂತರಿಕ್ಷಂ = ಅಂತರಿಕ್ಷವನ್ನು, ಆಪ್ರಾಃ = ಚೆನ್ನಾಗಿ ವ್ಯಾಪಿಸಿದ್ದಿ. ಸೂರ್ಯ = ಎಲೈ ಸೂರ್ಯನೇ, ಜಗತಃ ತಸ್ಥುಷಃ = ಸ್ಥಾವರಜಂಗಮವೆಂಬ ವಿಶ್ವಕ್ಕೆ, ಆತ್ಮಾ = ಸ್ವಾಮಿಯಾಗಿದ್ದಿ. ಈ ಶ್ರುತಿಯಲ್ಲಿ ಕೇಳಿಸುತ್ತಿರುವ ಸ್ಥಾವರಜಂಗಮಾತ್ಮಕವಿಶ್ವಸ್ವಾಮಿತ್ವಲಿಂಗವು ಇತರ ದೇವತೆಗಳಲ್ಲಿ ಬರಲು ಸಾಧ್ಯವಿಲ್ಲ. ಇಲ್ಲಿರುವ ಆತ್ಮಶಬ್ದಕ್ಕೆ ಸ್ವರೂಪವೆಂದಷ್ಟೇ ಅರ್ಥೈಸಿದರೆ ಜಗತಃ ಎಂಬಲ್ಲಿರುವ ಷಷ್ಠಿಪ್ರಯೋಗವು ಗೌಣವಾಗುತ್ತದೆ.

ವಿಶ್ವಕರ್ಮಸೂಕ್ತದಲ್ಲಿಯೂ ನಿರವಕಾಶಬ್ರಹ್ಮಲಿಂಗವಿದೆ. 'ಯೋ ವರ್ಧನ ಓಷಧೀನಾಂ ಯೋ ಅಪಾಂ ಯೋ ವಿಶ್ವಸ್ಯ ಜಗತೋ ದೇವ ಈಶೇ' ಈ ಶ್ರುತಿಯಿಂದ ವಿಶ್ವೇಶ್ವರತ್ವಲಿಂಗವು ತಿಳಿಯುತ್ತಿದೆ. ಈ ಲಿಂಗವು 'ಏಷ ಸರ್ವೇಶ್ವರಃ' ಇತ್ಯಾದಿ ಪ್ರಮಾಣದ ಆಧಾರದಂತೆ ಬ್ರಹ್ಮನಲ್ಲಷ್ಟೇ ಪ್ರಸಿದ್ಧವಾಗಿದೆ. 'ವಿಶ್ವತಶ್ಚಕ್ಷುರುತ ವಿಶ್ವತೋ ಮುಖಮ್' ಎಂಬಲ್ಲಿ ಹೇಳಿದ ಲಿಂಗವು 'ಸರ್ವತಃ ಪಾಣಿಪಾದಂ ತತ್ ಸರ್ವತೋಕ್ಷಿಶಿರೋಮುಖಮ್' ಎಂಬ ವಚನದಂತೆ ವಿಷ್ಣುವಿನಲ್ಲಷ್ಟೇ ಪ್ರಸಿದ್ಧವಾಗಿದೆ. ಜಗಜ್ಜನಕತ್ವವೆಂಬ ಲಿಂಗವು 'ಯತೋ ವಾ ಇಮಾನಿ ಭೂತಾನಿ' ಎಂಬ ಶ್ರುತಿಯಂತೆ ಬ್ರಹ್ಮನಲ್ಲಿ ಪ್ರಸಿದ್ಧವಾಗಿದೆ ಎಂದು

ತಿಳಿಯಬೇಕು. ಈ ನಿರವಕಾಶಬ್ರಹ್ಮಲಿಂಗಗಳಿಂದ ಸಾವಕಾಶಶ್ರುತಿಪ್ರಕರಣಗಳು ಬಾಧಿತವಾಗುತ್ತವೆಂದು ಗ್ರಂಥಕಾರರು 'ಸಂತಿ' ಎಂಬ ಪದದಿಂದ ಹೇಳಿದ್ದಾರೆ.

ಸೂತ್ರದಲ್ಲಿ ಹೇಳಿದ ನಿರವಕಾಶಲಿಂಗವು ಉಪಲಕ್ಷಣವಾಗಿದೆ. ಬೇರೆ ಶ್ರುತಿಗಳಲ್ಲಿ ಕೇಳಿಸುತ್ತಿರುವ ಬೇರೆ ದೇವತೆಗಳ ಸಂಬೋಧನೆಯು ವಿಷ್ಣುಪರತ್ವವನ್ನು ಹೇಳಿದಾಗ ಮಾತ್ರ ಉಪಪನ್ನವಾಗಲು ಸಾಧ್ಯವೆಂದು 'ಕಿಂಚ' ಇತ್ಯಾದಿ ಗ್ರಂಥದಿಂದ ವಿವರಿಸುತ್ತಿದ್ದಾರೆ. ಸೂರ್ಯಸೂಕ್ತವು ಚತುರ್ಥಾಧ್ಯಾಯದಲ್ಲಿ ಪ್ರಸಕ್ತವಾಗಿದೆ. ಮೊದಲನೆಯ ಅಷ್ಟಕದಲ್ಲಿರುವ ವರುಣಸೂಕ್ತದಲ್ಲಿ 'ಆದಿತ್ಯ ವ್ರತೇ ತವಾನಾಗಸೋ-ದಿತಯೇ ಸ್ಯಾಮ' ಎಂದು ಆದಿತ್ಯಶಬ್ದದಿಂದ ಸಂಬೋಧಿಸಲಾಗಿದೆ. ಈ ಸಂಬೋಧನೆಗಳನ್ನು ವಿಷ್ಣು-ಪರತ್ವವನ್ನು ಒಪ್ಪದೇ ಹೊಂದಿಸಲು ಸಾಧ್ಯವಿಲ್ಲ. ಹಾಗಾದಲ್ಲಿ ಒಂದೇ ಸೂಕ್ತವು ಅನೇಕ ದೇವತೆಗಳನ್ನು ಪ್ರತಿಪಾದಿಸಿದಂತಾಗಿ ಏಕವಾಕ್ಯತ್ವಕ್ಕೆ ಭಂಗ ಬರುತ್ತದೆ.

ಆಯಾ ಸೂಕ್ತದಲ್ಲಿರುವ ಬ್ರಹ್ಮಲಿಂಗಗಳಿಗೆ ಅನ್ಯಥಾಸಿದ್ಧಿಯನ್ನು ಶಂಕಿಸಿ 'ಯದಿ ಚ' ಇತ್ಯಾದಿ ಗ್ರಂಥದಿಂದ ನಿರಾಕರಿಸಿದ್ದಾರೆ. ಗ್ರಂಥದಲ್ಲಿರುವ ಲಿಂಗಶಬ್ದವು ಕೇವಲ ಉಪಲಕ್ಷಣ. ಪಾವಕಾದಿ ಶ್ರುತಿ-ಗಳನ್ನೂ ವಿವಕ್ಷಿಸಬೇಕು. ಒಂದು ವೇಳೆ ಪರೋವರೀಯಸ್ತ್ವಾದಿ ಲಿಂಗಗಳನ್ನು ಆಕಾಶಾದಿಗಳಲ್ಲಿ ಹೇಳಿದರೆ ಆಕಾಶಾಧಿಕರಣದ ಆರಂಭವೇ ವ್ಯರ್ಥವಾಗುತ್ತದೆ. ಹೀಗೆ ಹೇಳಿದ್ದರಿಂದ ಜಡವಾದ ಆಕಾಶಾದಿಗಳಲ್ಲಿ ಪರೋವರೀಯಸ್ತ್ವಾದಿಗಳನ್ನು ಉಪಾಸನೆಗೋಸ್ಕರ ಹೇಳಿದ್ದಾರೆ ಎಂಬ ಆಕ್ಷೇಪವು ಪರಿಹಾರವಾಯಿತು. ಉಪಾಸನೆಗೋಸ್ಕರ ಆ ಲಿಂಗಗಳನ್ನು ಹೇಳುವುದಾದರೆ ಆಕಾಶಾಧಿಕರಣ ಏಕೆ ಬೇಕು? ಮತ್ತು ಅಸದುಪಾಸನೆಯು ನಿಷಿದ್ಧವಾಗಿದೆ.

ಪ್ರಶ್ನೆ - ಇಂದ್ರವರುಣ ಮೊದಲಾದ ದೇವತೆಗಳು ಪರಸ್ಪರವಾಗಿ ಬ್ರಹ್ಮನಿಂದ ಅಭಿನ್ನರಾಗಿದ್ದಾರೆ. ಆದ್ದರಿಂದ ಬ್ರಹ್ಮನ ಲಿಂಗವನ್ನು ಮತ್ತು ಪಾವಕಾದಿಶಬ್ದಗಳನ್ನು ಇಂದ್ರಾದಿಸೂಕ್ತಗಳಲ್ಲಿ ಹೇಳಿದ್ದು ತಪ್ಪಲ್ಲ. ಆದ್ದರಿಂದಲೇ 'ತ್ವಮಗ್ನೇ ಇಂದ್ರೋ ವೃಷಭ' ಇತ್ಯಾದಿಪ್ರಯೋಗಗಳು ಉಪಪನ್ನವಾಗುತ್ತವೆ.

ಉತ್ತರ - ವಿಶಿಷ್ಟಪದಾರ್ಥಗಳಿಗೆ ಅಭೇದವನ್ನು ಅದ್ವೈತಿಗಳೇ ಒಪ್ಪಿಲ್ಲ. ಕೇವಲ ಚಿನ್ಮಾತ್ರಗಳಿಗೆ ಅಭೇದವನ್ನು ಹೇಳಿದರೆ ಲಕ್ಷಣಾಪ್ರಸಂಗ ಬರುತ್ತದೆ. ಮತ್ತು ಆಕಾಶಾದಿಗಳಲ್ಲಿಯೂ ಹಾಗೆ ಅಭೇದವನ್ನು ಒಪ್ಪಬೇಕಾಗುತ್ತದೆ. 'ಯಮಿಂದ್ರಮಾಹುಃ' ಇತ್ಯಾದಿ ವಚನಗಳ ವಿರೋಧವೂ ತಪ್ಪಿದ್ದಲ್ಲ. 'ಯಮಿಂದ್ರಮಾಹುಃ' ಎಂಬ ಶ್ರುತಿಯು ಭೇದಪರವಾಗಿದೆಯೆಂದು ಅಂತರಧಿಕರಣದಲ್ಲಿ ಸಮರ್ಥಿಸಿ-ದ್ದೇವೆ. ಮುಂದೆ ಪೃಥಗುಪದೇಶಾಧಿಕರಣದಲ್ಲಿ ಅಭೇದವನ್ನು ಸಹ ನಿರಾಕರಿಸುತ್ತೇವೆ.

ಆಗ್ನಿಶ್ರುತಿಗಳಲ್ಲಿರುವ ಬ್ರಹ್ಮಲಿಂಗಗಳನ್ನು ತನಗಿಂತ ನೀಚದೇವತೆಗಳಿಗೆ ನಿಯಾಮಕರಾದ್ದರಿಂದ ಆಯಾಯ ದೇವತೆಗಳಲ್ಲಿ ಸಂಕೋಚ ಮಾಡಬಹುದಲ್ಲವೇ? ಎಂದು ಶಂಕಿಸಬಾರದು. ಯಾವುದೇ ಬಾಧಕವಿಲ್ಲದೆ ಸಂಕೋಚಮಾಡಲು ಕಾರಣವಿಲ್ಲ. ಪಾವಕಾದಿಶಬ್ದಗಳಿಗೆ ಯೋಗವೃತ್ತಿಯಿಂದ ಸೂರ್ಯಾ-ದಿಗಳಲ್ಲಿ ಪ್ರಯೋಗವನ್ನು ಮಾಡಬಹುದಲ್ಲವೇ? ಎಂದೂ ಸಹ ಪ್ರಶ್ನಿಸಬಾರದು. ಯೋಗಕ್ಕಿಂತ ರೂಢಿಯು ಪ್ರಬಲವಾದ್ದರಿಂದ ಪಾವಕಾದಿಶಬ್ದಗಳು ವಿಷ್ಣುವನ್ನೇ ಹೇಳುತ್ತವೆ. ವಿನಿಗಮಕವಿಲ್ಲದ ಕಾರಣ ಯೋಗವೇ ಪ್ರಬಲವೆನ್ನಲಾಗದು. ಇಷ್ಟೆಲ್ಲಾ ಅಭಿಪ್ರಾಯದಿಂದ ಗ್ರಂಥಕಾರರು 'ದಿಕ್'ಪದವನ್ನು

ಪ್ರಯೋಗಿಸಿದ್ದಾರೆ. ಅಥವಾ ನಿರವಕಾಶಬ್ರಹ್ಮಲಿಂಗಗಳಿರುವ ಕೆಲವು ಸೂಕ್ತವನ್ನಷ್ಟೇ ಇಲ್ಲಿ ಉಲ್ಲೇಖಿಸಿದ್ದಾರೆ. ಇದರಂತೆ ಇನ್ನೂ ಸಾವಿರಾರು ಸೂಕ್ತಗಳನ್ನು ಸ್ವತಃ ಊಹಿಸಿಕೊಳ್ಳಬೇಕೆಂದು ದಿಕ್ ಪದವನ್ನು ಪ್ರಯೋಗಿಸಿದ್ದಾರೆ.

**ಗುರುರಾಜೀಯಮ್ –** प्रकृतौ सतुषशालिवाचिधान्यशब्दस्य वितुषव्रीहिषु लाक्षणिकत्वादार्थिकलक्षणा रचनातिदेश इति ज्ञानाभावमूला यथा मृगोसीति मन्त्रोहविषयिणी पूर्वपक्षिप्रसिद्धिः तथाग्न्यादिसूक्तेषु विष्णुसूक्तत्वाज्ञानमूलोक्त-प्रसिद्धिरित्यर्थः ॥ **न्यायविवरण इति ॥** अत्तृत्वाधिकरणस्थमिदं समानन्यायत्वा-दत्रापि सिंहावलोकनन्यायेन परावृत्तमिति भावः ॥ **ईशानमिति ॥** लिङ्गापेक्षया वाक्यस्य जघन्यत्वात् नत्वावाँ अन्यो दिव्यो न पार्थिवो न जातो न जनिष्यत इति वाक्यानुपादानम् ॥ **न युक्तमिति ॥** नपुंसकमनपुंसकेनै कवच्चास्यान्य-तरस्याम् इत्येकशेष एकवद्भावश्चेति ज्ञेयम् । युक्त इत्यपि क्वचित्पाठः ॥ **यदि चेति ॥** आकाशप्राणाद्यधिकरणवैषम्येण पूर्वपक्षयतेष्टापत्तेर्वक्तुमशक्यत्वादित्यर्थः ।

## ಸಾರ

ಅಗ್ನಿಸೂಕ್ತವಾಗಿದ್ದರೂ ಸಹ ಕರ್ಣಾದಿವಿದೂರತ್ವ ಮೊದಲಾದ ನಿರವಕಾಶಲಿಂಗಬಲದಿಂದ ವಿಷ್ಣುಪರವೇ ಆಗುತ್ತದೆ. ಈ ನ್ಯಾಯವು ಅಗ್ನಿಸೂಕ್ತದಲ್ಲಷ್ಟೇ ಅಲ್ಲ. ಇಂದ್ರ ಬೃಹಸ್ಪತಿ ಸೂರ್ಯ ವರುಣ ವಿಶ್ವಕರ್ಮ ಮೊದಲಾದವರ ಸೂಕ್ತಗಳಲ್ಲಿಯೂ ಅನ್ವಯಿಸುತ್ತದೆ. ಮತ್ತು ಸೌರಸೂಕ್ತದಲ್ಲಿ ಪಾವಕವರುಣ ಮೊದಲಾದ ಬೇರೆ ಬೇರೆ ದೇವತೆಗಳನ್ನು ಸಂಬೋಧನೆ ಮಾಡುವ ಶಬ್ದಗಳಿವೆ. ವರುಣಸೂಕ್ತದಲ್ಲಿ ಆದಿತ್ಯ ಎಂದಿದೆ. ಅಗ್ನಿಸೂಕ್ತದಲ್ಲಿ ಇಂದ್ರ ಎಂದಿದೆ. ಹೀಗೆ ಆಯಾಯ ದೇವತೆಗಳನ್ನು ಹೇಳುವ ಸೂಕ್ತಗಳಲ್ಲಿ ಬೇರೆ ದೇವತೆಗಳನ್ನು ಸಂಬೋಧಿಸುವ ಪದಗಳು ಬಹಳಷ್ಟು ಕಾಣಿಸುತ್ತವೆ. ಆದ್ದರಿಂದ ನಿರವಕಾಶಬ್ರಹ್ಮಲಿಂಗಗಳಿರುವ ಸೂಕ್ತಗಳೆಲ್ಲವೂ ವಿಷ್ಣುವನ್ನಷ್ಟೇ ಪ್ರತಿಪಾದಿಸುತ್ತವೆ ಎಂದು ಒಪ್ಪಿದಾಗ ಮಾತ್ರ ಈ ಅನುಪಪತ್ತಿಯು ಪರಿಹಾರವಾಗಲು ಸಾಧ್ಯ.

ಈ ಸೂಕ್ತಗಳಲ್ಲಿರುವ ಬ್ರಹ್ಮಲಿಂಗಗಳು ಕೇವಲ ಸ್ತೋತ್ರಪರವೆಂದು ಕೆಲವರ ಅಭಿಪ್ರಾಯ. ಹಾಗಾದಲ್ಲಿ ಆಕಾಶಪ್ರಾಣಾದಿಗಳಲ್ಲಿ ಹೇಳಿದ ಪರೋವರೀಯಸ್ತ್ವಾದಿ ಲಿಂಗಗಳೂ ಸಹ ಸ್ತೋತ್ರಪರವೆಂದಾಗಿ ಬ್ರಹ್ಮಲಿಂಗಗಳೇ ಆಗದಿರಬೇಕಾದೀತು? ಆವಾಗ ಆಕಾಶಾದ್ಯಧಿಕರಣಗಳು ಹೊರಟದ್ದೇ ವ್ಯರ್ಥವಾಗಬೇಕಾದೀತು.

### ವಿಭಿನ್ನ ಸಿದ್ಧಾಂತಗಳಿಂದ ಪುನರುಕ್ತಿ ಪರಿಹಾರ

**ತಾತ್ಪರ್ಯಚನ್ದ್ರಿಕಾ**

**न चैवमत्रत्यसिद्धान्तेनैव अन्तरधिकरणादिपूर्वपक्षाणां कैमुत्यन्यायहतत्वात् तत्रत्यसिद्धान्तन्यायव्युत्पादनं व्यर्थम्, स्वतो बलवतोऽपि सावकाशस्य स्वतो**

**दुर्बलेनापि निरवकाशेन बाध इत्यन्तरधिकरणन्यायेन विनाऽत्रत्यसिद्धान्तस्यैवासिद्धेः । अत्र आकाशाद्यधिकरणेषु च अधिकाशङ्कानिरासकन्याय एव हि व्युत्पाद्यः, न त्वन्तरधिकरणन्यायः । ''ज्योतिर्दर्शनात्'' इत्यत्र त्वग्निसूक्तस्थस्यापि ज्योतिषो म्रियमाणत्वादिलिङ्गैर्जीवत्वे शङ्किते, लिङ्गानि ब्रह्मपरोपक्रमोपसंहारमध्यस्थत्वादन्तर्भावितण्यन्तानीति वक्ष्यत इति न तेनाप्यस्य पुनरुक्तिः ।**

ಅನುವಾದ - ಈ ಅಧಿಕರಣದ ಸಿದ್ಧಾಂತನ್ಯಾಯದಿಂದಲೇ ಅಂತರಧಿಕರಣ ಮೊದಲಾದವುಗಳ ಪೂರ್ವಪಕ್ಷಗಳು ಕೈಮುತ್ಯನ್ಯಾಯದಿಂದ ಪರಿಹಾರವಾಗುತ್ತವೆ. ಪುನಃ ಅಂತರಾದ್ಯಧಿಕರಣಗಳಲ್ಲಿ ಸಿದ್ಧಾಂತನ್ಯಾಯವನ್ನು ವ್ಯುತ್ಪಾದನೆ ಮಾಡುವುದು ಅನಾವಶ್ಯಕವಲ್ಲವೇ? ಎಂದು ಪ್ರಶ್ನಿಸಬಾರದು. ಸಾವಕಾಶವಾದ 'ಶ್ರುತಿಲಿಂಗಗಳು ಸ್ವಭಾವತಃ ಪ್ರಬಲವಾಗಿದ್ದರೂ ಸ್ವಭಾವತಃ ದುರ್ಬಲವಾಗಿದ್ದರೂ ನಿರವಕಾಶಶ್ರುತಿಲಿಂಗಗಳಿಂದ ಬಾಧಿತವಾಗುತ್ತವೆ' ಎಂದು ಅಂತರಧಿಕರಣದ ಸಿದ್ಧಾಂತನ್ಯಾಯ. ಈ ನ್ಯಾಯವನ್ನು ಆಶ್ರಯಿಸಿ ಜ್ಯೋತಿರಧಿಕರಣದ ಸಿದ್ಧಾಂತವು ಹೊರಟಿದೆ. ಒಂದು ವೇಳೆ ಅಂತರಧಿಕರಣದ ನ್ಯಾಯವೇ ಬೇಡವೆಂದು ಶಂಕಿಸುವುದಾದರೆ ಈ ಅಧಿಕರಣದ ಸಿದ್ಧಾಂತವು ಸ್ಥಾಪನೆಯಾಗುವುದಿಲ್ಲ. ಮತ್ತು ಈ ಅಧಿಕರಣದಲ್ಲಿ ಆಕಾಶಾದ್ಯಧಿಕರಣಗಳಲ್ಲಿ ಹೇಳಿದ ಸಿದ್ಧಾಂತನ್ಯಾಯದ ಮೇಲೆ ಅಭ್ಯಧಿಕಾಶಂಕೆಯನ್ನು ಮಾಡಿ ನಿರಾಸಮಾಡಲಾಗಿದೆ. ಹಾಗಾಗಿ ಅಭ್ಯಧಿಕಾಶಂಕೆಯನ್ನು ನಿರಾಕರಿಸುವ ನ್ಯಾಯವನ್ನು ಇಲ್ಲಿ ಹೇಳಬೇಕೇ ಹೊರತು ಅಂತರಾದ್ಯಧಿಕರಣಗಳ ನ್ಯಾಯವನ್ನು ಹೇಳುವುದು ಅಪ್ರಸ್ತುತ.

ಈ ಜ್ಯೋತಿರಧಿಕರಣಕ್ಕೆ ಮೂರನೆಯ ಪಾದದಲ್ಲಿ ಬರುವ ಜ್ಯೋತಿರುಪಕ್ರಮಾಧಿಕರಣದಿಂದ ಪುನರುಕ್ತಿ ಬರುತ್ತದೆ. ಏಕೆಂದರೆ ಆ ಅಧಿಕರಣದಲ್ಲಿಯೂ ಸಹ ಜ್ಯೋತಿಶಬ್ದವನ್ನು ವಿಷ್ಣುವಿನಲ್ಲಿ ಸಮನ್ವಯ ಮಾಡಿದ್ದಾರಲ್ಲವೆ? ಎಂದು ಶಂಕಿಸಬಾರದು. ಮೂರನೆಯ ಪಾದದಲ್ಲಿ 'ಜ್ಯೋತಿರ್ದರ್ಶನಾತ್' ಎಂದು ಜ್ಯೋತಿರುಪಕ್ರಮಾಧಿಕರಣವು ಪ್ರಸಕ್ತವಾಗುತ್ತದೆ. ಆ ಅಧಿಕರಣದಲ್ಲಿ ಅಗ್ನಿಸೂಕ್ತದಲ್ಲಿರುವ ಜ್ಯೋತಿಶಬ್ದವು ಮರಣಶೀಲತ್ವ ಮೊದಲಾದ ಲಿಂಗಗಳಿಂದ ಜೀವಪ್ರತಿಪಾದಕವಾಗಿದೆಯೆಂದು ಶಂಕಿಸಿದ್ದಾರೆ. ಬ್ರಹ್ಮನನ್ನು ಪ್ರತಿಪಾದಿಸುವ ಉಪಕ್ರಮ ಹಾಗೂ ಉಪಸಂಹಾರಗಳ ಮಧ್ಯದಲ್ಲಿ ಮರಣಶೀಲತ್ವ ಮೊದಲಾದ ಜೀವಲಿಂಗಗಳು ಕೇಳಿಸುತ್ತಿರುವುದರಿಂದ ಪರಮಾತ್ಮನು ಜೀವನಿಗೆ ಮರಣಾದಿಗಳನ್ನು ನೀಡುತ್ತಾನೆ (ಅಂತರ್ಭಾವಿತ ಣಿಚ್) ಎಂಬರ್ಥವನ್ನು ವಿವಕ್ಷಿಸಿ ಮ್ರಿಯಮಾಣತ್ವಾದಿಲಿಂಗಗಳನ್ನು ಪರಮಾತ್ಮನಲ್ಲಿಯೇ ಹೇಳಬೇಕು ಎಂಬ ಸಿದ್ಧಾಂತವನ್ನು ಸ್ಥಾಪಿಸಿದ್ದಾರೆ. ಹೀಗೆ ಜ್ಯೋತಿರಧಿಕರಣದ ಶರೀರಕ್ಕೂ ಜ್ಯೋತಿರುಪಕ್ರಮಾಧಿಕರಣದ ಶರೀರಕ್ಕೂ ವೈಲಕ್ಷಣ್ಯ -ವಿರುವುದರಿಂದ ಪುನರುಕ್ತಿಗೆ ಅವಕಾಶವಿಲ್ಲ.

ಕಠಿಣಪದಾರ್ಥ

ಅತ್ರತ್ಯಸಿದ್ಧಾಂತೇನ - ಪ್ರಕರಣದ ಅನುಗ್ರಹವಿರುವ ಶ್ರುತಿಯು ನಿರವಕಾಶಲಿಂಗದಿಂದ ಬಾಧಿತವಾಗುತ್ತದೆಂಬ ಸಿದ್ಧಾಂತದಿಂದ; ತತ್ರತ್ಯಸಿದ್ಧಾಂತನ್ಯಾಯ - ಕೇವಲ ಸಾವಕಾಶಶ್ರುತಿಯು ನಿರವಕಾಶಲಿಂಗದಿಂದ ಬಾಧಿತವಾಗುತ್ತದೆಂಬ ಅಂತರಧಿಕರಣದ ಸಿದ್ಧಾಂತನ್ಯಾಯ. ಅತ್ರತ್ಯಸಿದ್ಧಾಂತಸ್ಯೈವ = ಜ್ಯೋತಿರಧಿಕರಣದ ಸಿದ್ಧಾಂತವೇ; ತೇನಾಪಿ = ಜ್ಯೋತಿರುಪಕ್ರಮಾಧಿಕರಣದಿಂದಲೂ;

**ಪ್ರಕಾಶಃ** – ननु यत्रत्र सूक्तानुगृहीताया अपि श्रुतेर्निरवकाशलिङ्गेन बाधः तदा तदननुगृहीताया इन्द्राकाशादिश्रुतेः सुतरां बाधेन पूर्वन्यायवैयर्थ्यमित्याशङ्क्या-न्तरधिकरणोपजीवनेनास्य प्रवृत्तेः न दोष इत्याह – **नचेति ॥ स्वत इति ॥** जात्येत्यर्थः ।

ननु यदि तेनैव न्यायेनात्रत्यसिद्धान्तः, तर्हि व्युत्पाद्यन्यायभेदाभावान्नैतदारम्भः सम्भवतीत्यत आह – **अत्रेति ॥** यद्वा स न्यायोऽत्रैवोच्यतामत आह – **अत्रेति ॥** न्यायद्वयस्यैकत्र व्युत्पादनायोगात्, अन्यथा अधिकरणभेदो न स्यादिति भावः । ननु तर्हि स एवात्र व्युत्पाद्यतामिति चेन्न, एतदभ्यधिकाशङ्कायाः निरासकन्यायस्य क्वचित्कर्तव्यत्वात् ।

नन्वेवमपि ''ज्योतिर्दर्शनात्'' इत्यनेन पुनरुक्तिः, तत्राग्निसूक्तगतस्यापि ज्योतिषो विष्णुत्वमाक्षिप्य समाधानादित्यत आह – **ज्योतिरिति ॥ अग्नि-सूक्तस्थस्येति ॥**

ननु तत्र वाजसनेयगतं ज्योतिरुदाहियते, नत्वग्निसूक्तगतमिति चेदित्थमाशयः – अग्निसूक्तस्थं ज्योतिर्न विष्णुरस्यैव वाजसनेये म्रियमाणत्वादिश्रवणादिति । तत्र ''**योऽयं विज्ञानमयः प्राणेषु हृद्यन्तर्ज्योतिः**'' इति ज्योतिः किं जीव उत विष्णुरिति संशये, ''**स समानः सन्नुभौ लोकावनुसञ्चरति स वा अयं पुरुषो जायमानः शरीरमभिसम्पद्यमानः पाप्मभिः संसृज्यते स उत्क्रामन् म्रियमाणः**'' इत्यादिजीवलिङ्गाज्जीव इति प्रागुक्ताग्निसूक्तस्थमपि ज्योतिर्जीव एवेति प्राप्ते, ज्योतिश्शब्दस्य ''**हृद्यन्तर्ज्योतिः**'' इत्यात्मप्रश्नोत्तरोपक्रमे ''**सुप्त इत्यत्रायं पुरुषः स्वयं ज्योतिः**'' इत्युपसंहारे च श्रुतत्वात् आत्मप्रश्नोत्तरोपक्रमोपसंहाराभ्यां च विष्णुपरत्वेन निर्णीतवाक्यमध्यस्थतया जीवलिङ्गानां मारकत्वाद्यर्थकतया

**कथञ्चिन्नेयत्वात् इदं ज्योतिर्विष्णुरेवेत्यग्निसूक्तस्थमपि तथेति सिद्धान्त उच्यते, न निरवकाशलिङ्गेन सावकाशबाधन्यायव्युत्पादनं सूक्तगतत्वाधिकाशङ्कानिरासक-न्यायव्युत्पादनं वा क्रियते, येन पुनरुक्तिस्स्यादित्यर्थः ।**

ವಿವರಣೆ - ಶಂಕೆ - ಪ್ರಕರಣದ ಅನುಗ್ರಹವಿರುವ ಶ್ರುತಿಯೂ ಸಹ ನಿರವಕಾಶಲಿಂಗದಿಂದ ಬಾಧಿತವಾಗುತ್ತದೆಂಬುದು ಈ ಅಧಿಕರಣದ ಸಿದ್ಧಾಂತನ್ಯಾಯ. ಹಾಗಾದರೆ ಪ್ರಕರಣದ ಅನುಗ್ರಹವಿಲ್ಲದ ಇಂದ್ರ, ಆಕಾಶಾದಿಶ್ರುತಿಗಳು ನಿರವಕಾಶಲಿಂಗಗಳಿಂದ ಸುತರಾಂ ಬಾಧಿತವಾಗುತ್ತವೆಂದು ಕೈಮುತ್ಯ-ನ್ಯಾಯದಿಂದ ಸಿದ್ಧವಾಗುತ್ತದೆ. ಹೀಗಿರುವಾಗ ನಿರವಕಾಶಲಿಂಗಗಳಿಂದ ಕೇವಲ ಶ್ರುತಿಗಳು ಬಾಧಿತ-ವಾಗುತ್ತವೆಂಬ ಹಿಂದಿನ ಅಂತರಾದ್ಯಧಿಕರಣನ್ಯಾಯಗಳೆಲ್ಲ ವ್ಯರ್ಥವಲ್ಲವೆ?

ಸಮಾಧಾನ - ಇದು ತಪ್ಪು. ಅಂತರಧಿಕರಣದ ನ್ಯಾಯವನ್ನೇ ಉಪಜೀವಿಸಿ ಈ ಅಧಿಕರಣವು ಹೊರಟಿರುವಾಗ ಅಂತರಧಿಕರಣನ್ಯಾಯವನ್ನೇ ನಿಷೇಧಿಸಲು ಸಾಧ್ಯವಿಲ್ಲ.

ಶಂಕೆ - ಅಂತರಧಿಕರಣದ ನ್ಯಾಯವನ್ನು ಅವಲಂಬಿಸಿ ಈ ಅಧಿಕರಣದ ಸಿದ್ಧಾಂತವು ಹೊರಟರೆ ಒಂದೇ ನ್ಯಾಯವನ್ನೇ ಹೇಳಿದಂತಾಯಿತು. ಆವಾಗ ಅಂತರಧಿಕರಣವು ಸಾರ್ಥಕವಾದರೂ ಜ್ಯೋತಿರಧಿ-ಕರಣವು ವ್ಯರ್ಥವಾಗುತ್ತದಲ್ಲವೇ?

ಸಮಾಧಾನ - ಈ ಪ್ರಶ್ನೆಗೆ ಗ್ರಂಥಕಾರರು 'अत्र' ಇತ್ಯಾದಿ ಗ್ರಂಥದಿಂದ ಉತ್ತರಿಸಿದ್ದಾರೆ. ಆಕಾಶಾದ್ಯಧಿಕರಣಗಳ ಸಿದ್ಧಾಂತನ್ಯಾಯದ ಮೇಲೆ ಬರುವ ಆಧಿಕಾಶಂಕೆಯನ್ನು ಈ ಅಧಿಕರಣದ ನ್ಯಾಯವು ಪರಿಹರಿಸುತ್ತದೆ ಹೊರತು ಅಂತರಧಿಕರಣದ ನ್ಯಾಯವು ಇದನ್ನು ಪರಿಹರಿಸುವುದಿಲ್ಲ. ಆದ್ದರಿಂದ ಈ ಅಧಿಕರಣವು ವ್ಯರ್ಥವಲ್ಲ. ಅಥವಾ ಅಂತರಧಿಕರಣದ ನ್ಯಾಯವನ್ನು ಇಲ್ಲಿಯೂ ಹೇಳ-ಬಹುದಲ್ಲವೇ? ಎಂಬ ಪ್ರಶ್ನೆಗೂ 'अत्र' ಇತ್ಯಾದಿವಾಕ್ಯದಿಂದಲೇ ಉತ್ತರಿಸಿದ್ದಾರೆ. ಒಂದು ಅಧಿಕರಣದಲ್ಲಿ ಎರಡು ನ್ಯಾಯಗಳನ್ನು ಹೇಳಲು ಸಾಧ್ಯವಿಲ್ಲ. ಹಾಗಾದರೆ ಅಧಿಕರಣಭೇದವೇ ವ್ಯರ್ಥವಾಗುತ್ತದೆಂದು ಅಭಿಪ್ರಾಯ.

ಶಂಕೆ - ಹಾಗಾದರೆ ಎರಡು ನ್ಯಾಯಗಳನ್ನು ಈ ಅಧಿಕರಣದಲ್ಲಿ ಹೇಳುವುದು ಬೇಡ. ಅಂತರಧಿ ಕರಣದ ನ್ಯಾಯವನ್ನಷ್ಟೇ ಈ ಅಧಿಕರಣದಲ್ಲಿ ನಿರೂಪಿಸಿದರೆ ಸಾಕಲ್ಲವೇ?

ಸಮಾಧಾನ - ಈಗಾಗಲೇ ಹೇಳಿದಂತೆ ಆಕಾಶಾಧಿಕರಣಗಳ ಆಭ್ಯಧಿಕಾಶಂಕೆಯನ್ನು ನಿರಾಕರಿಸಲು ಈ ಅಧಿಕರಣದ ನ್ಯಾಯವನ್ನು ಎಲ್ಲಾದರೂ ಹೇಳಲೇಬೇಕು. ಮುಂದೆಲ್ಲೋ ಹೇಳುವುದಕ್ಕಿಂತ ಪ್ರಸಕ್ತಿ ಬಂದಾಗ ಹೇಳುವುದು ಸೂಕ್ತವೆಂದು ಈ ಅಧಿಕರಣ ಹೊರಟಿದೆ. ಆದ್ದರಿಂದ ಅಂತರಧಿಕರಣದ ನ್ಯಾಯವೂ ವ್ಯರ್ಥವಲ್ಲ. ಜ್ಯೋತಿರಧಿಕರಣದ ನ್ಯಾಯವೂ ವ್ಯರ್ಥವಲ್ಲ.

ಶಂಕೆ - 'ಜ್ಯೋತಿರ್ದರ್ಶನಾತ್' ಎಂಬ ಮೂರನೆಯ ಪಾದದಲ್ಲಿ ಬರುವ ಜ್ಯೋತಿರುಪ-ಕ್ರಮಾಧಿಕರಣದಿಂದ ಪುನರುಕ್ತಿ ಬರುತ್ತದೆ.

ಸಮಾಧಾನ - ಆ ಅಧಿಕರಣದಲ್ಲಿ ಅಗ್ನಿಸೂಕ್ತದಲ್ಲಿರುವ ಜ್ಯೋತಿಯು ಜೀವನೆಂದು ಆಕ್ಷೇಪಿಸಿ ಸಮಾಧಾನವನ್ನು ಹೇಳಿದ್ದಾರೆ. ಈ ಪ್ರಶ್ನೆಗೆ ಗ್ರಂಥಕಾರರು 'ಜ್ಯೋತಿರ್ದರ್ಶನಾತ್' ಇತ್ಯಾದಿ ಗ್ರಂಥದಿಂದ ಉತ್ತರಿಸುತ್ತಿದ್ದಾರೆ. ಈ ಅಧಿಕರಣದ ಶರೀರಕ್ಕಿಂತ ವಿಭಿನ್ನವಾದ ಅಧಿಕರಣಶರೀರವು 'ಜ್ಯೋತಿರ್ದರ್ಶನಾತ್' ಎಂಬಲ್ಲಿ ಕಾಣಿಸುತ್ತಿರುವುದರಿಂದ ಪುನರುಕ್ತಿಗೆ ಅವಕಾಶವಿಲ್ಲ.

ಶಂಕೆ - ಜ್ಯೋತಿರುಪಕ್ರಮಾಧಿಕರಣದಲ್ಲಿ ಬೃಹದಾರಣ್ಯಕ(ವಾಜಸನೇಯ)ದಲ್ಲಿರುವ ಜ್ಯೋತಿಶ್ರುತಿಯನ್ನು ಉದಾಹರಿಸಿದ್ದಾರೆ ಹೊರತು ಅಗ್ನಿಸೂಕ್ತದಲ್ಲಿರುವ ಜ್ಯೋತಿಶ್ರುತಿಯನ್ನು ಉದಾಹರಿಸಿಲ್ಲ. ಹೀಗಿರುವಾಗ ಗ್ರಂಥಕಾರರು 'ಅಗ್ನಿಸೂಕ್ತಸ್ಥಾಪಿ' ಎಂಬ ಮಾತನ್ನು ಹೇಗೆ ಹೇಳಿದರು?

ಸಮಾಧಾನ - ಜ್ಯೋತಿರುಪಕ್ರಮಾಧಿಕರಣದ ಅಭಿಪ್ರಾಯ ಹೀಗಿದೆ - ಅಗ್ನಿಸೂಕ್ತದಲ್ಲಿರುವ ಜ್ಯೋತಿಯು ವಿಷ್ಣುವಲ್ಲ. ಇದೇ ಜ್ಯೋತಿಗೆ ಬೃಹದಾರಣ್ಯಕದಲ್ಲಿ ಮ್ರಿಯಮಾಣತ್ವಲಿಂಗವನ್ನು ಹೇಳಿದ್ದರಿಂದ. ಜ್ಯೋತಿರುಪಕ್ರಮಾಧಿಕರಣದ ಅಧಿಕರಣಶರೀರ ಹೀಗಿದೆ -

'ಯೋಽಯಂ ವಿಜ್ಞಾನಮಯಃ ಪ್ರಾಣೇಷು ಹೃದ್ಯಂತರ್ಜ್ಯೋತಿ' ಈ ಶ್ರುತಿಯಲ್ಲಿರುವ ಜ್ಯೋತಿಯು ಜೀವನೋ ಆಥವಾ ವಿಷ್ಣುವೋ? ಎಂದು ಸಂಶಯ. 'ಸ ಸಮಾನಃ ಸನ್ನುಭೌ ಲೋಕಾವನುಸಂಚರಂತಿ ಸ ವಾ ಅಯಂ ಪುರುಷೋ ಜಾಯಮಾನಃ ಶರೀರಮಭಿಸಂಪದ್ಯಮಾನಃ ಪಾಪ್ಮಭಿಃ ಸಂಸೃಜ್ಯತೇ ಸ ಉತ್ಕ್ರಮನ್ ಮ್ರಿಯಮಾಣಃ' ಈ ಶ್ರುತಿಯಲ್ಲಿ ಹುಟ್ಟುವಿಕೆ, ಪಾಪಸಂಪಾದನೆ ಮಾಡುವಿಕೆ, ಸಂಚಾರ ಮಾಡುವಿಕೆ, ಸಾಯುವಿಕೆ ಮೊದಲಾದ ಅನೇಕ ಜೀವಲಿಂಗಗಳು ಕೇಳಿಸುತ್ತಿವೆ. ಆದ್ದರಿಂದ ಜೀವನೇ ಮೊದಲು ಹೇಳಿದ ಅಗ್ನಿಸೂಕ್ತದಿಂದಲೂ ಪ್ರತಿಪಾದ್ಯನಾಗುತ್ತಾನೆ. ವಿಷ್ಣುವಲ್ಲವೆಂದು ಪೂರ್ವಪಕ್ಷ.

ಬೃಹದಾರಣ್ಯಕವನ್ನು ಸರಿಯಾಗಿ ಗಮನಿಸಿದಾಗ ಜ್ಯೋತಿಶಬ್ದದಿಂದ ವಿಷ್ಣುವೇ ಪ್ರತಿಪಾದ್ಯನೆಂದು ನಿರ್ಣಯವಾಗುತ್ತದೆ. ಏಕೆಂದರೆ ಜನಕರಾಜರ ಪ್ರಶ್ನೆಗೆ ಯಾಜ್ಞವಲ್ಕ್ಯರು ಉತ್ತರಿಸುವಾಗ 'ಹೃದ್ಯಂತಃ-ಜ್ಯೋತಿಃ' ಎಂಬ ಆತ್ಮವಿಷಯಕಪ್ರಶ್ನೋತ್ತರದ ಉಪಕ್ರಮದಲ್ಲಿ ಮತ್ತು 'ಅತ್ರಾಯಂ ಪುರುಷಃ ಸ್ವಯಂ ಜ್ಯೋತಿಃ' ಎಂಬ ಉಪಸಂಹಾರದಲ್ಲಿಯೂ ವಿಷ್ಣುವೇ ಪ್ರತಿಪಾದ್ಯನಾಗಿದ್ದಾನೆ. ಆತ್ಮಕುರಿತಾದ ಪ್ರಶ್ನೆಗೆ ಉಪಕ್ರಮ ಉಪಸಂಹಾರಗಳಲ್ಲಿ ವಿಷ್ಣುವೇ ಪ್ರತಿಪಾದ್ಯನೆಂದು ಅನಿವಾರ್ಯವಾಗಿ ಒಪ್ಪಬೇಕು. ಹೀಗೆ ನಿರ್ಣಯವಾದ ಉಪಕ್ರಮ ಉಪಸಂಹಾರಗಳ ಮಧ್ಯದಲ್ಲಿ ಮ್ರಿಯಮಾಣತ್ವ ಮೊದಲಾದ ಜೀವಲಿಂಗಗಳು ಕೇಳಿಸಿದರೂ ಸಹ ಅವುಗಳನ್ನು ಕಥಂಚಿತ್ ವಿಷ್ಣುವಿನಲ್ಲಿಯೇ ಸಮನ್ವಯ ಮಾಡಬೇಕು. ವಸ್ತುತಃ ವಿಷ್ಣುವು ಮರಣಶೀಲನೂ ಅಲ್ಲ. ಜನನಶೀಲನೂ ಅಲ್ಲ. ಆದರೆ ಸಕಲ ಜೀವರಿಗೆ ಮರಣಜನನಾದಿಗಳನ್ನು ನೀಡುವುದರಿಂದ ಅವನಲ್ಲಿ ಮ್ರಿಯಮಾಣತ್ವ, ಜಾಯಮಾನತ್ವ ಮೊದಲಾದ ಲಿಂಗಗಳು ಬರುತ್ತವೆ. ಆದ್ದರಿಂದ ಬೃಹದಾರಣ್ಯಕದಲ್ಲಿರುವ ಜ್ಯೋತಿಯು ಯಾವಾಗ ವಿಷ್ಣುವೆಂದು ನಿರ್ಣಯವಾಗುತ್ತದೋ ಆದರಿಂದಲೇ ಅಗ್ನಿಸೂಕ್ತದಲ್ಲಿರುವ ಜ್ಯೋತಿಯೂ ಸಹ ವಿಷ್ಣುವೇ ಎಂದು ನಿರ್ಣಯವಾಗುತ್ತದೆ. ಹೀಗೆ ಜ್ಯೋತಿರುಪಕ್ರಮಾಧಿಕರಣದ ಸಿದ್ಧಾಂತವನ್ನು ಮಾಡಿದ್ದಾರೆ. ಹೊರತು ನಿರವಕಾಶಲಿಂಗದಿಂದ ಸಾವಕಾಶವು ಬಾಧಿತವಾಗುತ್ತದೆಂದು ಸಮರ್ಥನೆ ಮಾಡಿಲ್ಲ. ಅಥವಾ ಪ್ರಕರಣದ ಅನುಗ್ರಹವಿರುವುದರಿಂದ ಶ್ರುತಿಯು ಬಲಿಷ್ಠವಲ್ಲವೇ ಎಂಬ ಅಧಿಕಾಶಂಕೆಯ ಪರಿಹಾರನ್ಯಾಯವನ್ನು ಅಲ್ಲಿ ಹೇಳಿಲ್ಲ. ಒಂದು ವೇಳೆ ಈ ನ್ಯಾಯವನ್ನು ಹೇಳಿದ್ದಲ್ಲಿ ಪುನರುಕ್ತಿಯು ಬರುತ್ತಿತ್ತು.

ಗುರುರಾಜೀಯಮ್ – ತರ್ಹ್ಯನ್ತರಧಿಕರಣಾದಿನಾ ತ್ವಿದಂ ಗತಾರ್ಥಂ ಸ್ಯಾತ್ । ತತ್ಸಿದ್ಧಾನ್ತವ್ಯಪದೇಶಸ್ಯೈವಾತ್ರ ಸಿದ್ಧಾನ್ತವ್ಯವಸ್ಥಾಪಕತ್ವಾದಿತ್ಯತ ಆಹ – ಅತ್ರೇತಿ ॥

## ಸಾರ

ನಿರವಕಾಶಲಿಂಗದಿಂದ ಪ್ರಕರಣಾನುಗ್ರಹವಿರುವ ಶ್ರುತಿಯು ಸಹ ಬಾಧಿತವಾಗುತ್ತದೆಂಬುದು ಈ ಅಧಿಕರಣದ ಸಿದ್ಧಾಂತನ್ಯಾಯ. ಈ ನ್ಯಾಯದಿಂದಲೇ ಆಂತರಧಿಕರಣದ ಪೂರ್ವಪಕ್ಷವೂ ಸಹ ನಿರಾಕೃತವಾಗುತ್ತದೆ. ಪುನಃ ಆಂತರಧಿಕರಣದ ಸಿದ್ಧಾಂತನ್ಯಾಯವು ಅನಾವಶ್ಯಕವಲ್ಲವೇ? ಎಂಬ ಪ್ರಶ್ನೆಗೆ ಹೀಗೆ ಉತ್ತರ -- ಆಂತರಧಿಕರಣದ ನ್ಯಾಯವನ್ನು ಆವಲಂಬಿಸಿಯೇ ಈ ಅಧಿಕರಣವು ಹೊರಟಿದೆ. ಈ ಅಧಿಕರಣವು ಪುನಃ ತನಗೆ ಆಶ್ರಯವಾದ ಆಂತರಧಿಕರಣವನ್ನೇ ಅಲ್ಲಗಳೆಯಲು ಸಾಧ್ಯವಿಲ್ಲ.

ಮೂರನೆಯ ಪಾದದ ಜ್ಯೋತಿರುಪಕ್ರಮಾಧಿಕರಣದಿಂದ ಈ ಅಧಿಕರಣದಿಂದ ಪುನರುಕ್ತಿ ಬರುತ್ತದೆಂದು ಮತ್ತೊಂದು ಪ್ರಶ್ನೆ. ಆದರೆ ಬೃಹದಾರಣ್ಯಕದಲ್ಲಿ ಬರುವ ಉಪಕ್ರಮ ಉಪಸಂಹಾರಗಳು ವಿಷ್ಣುಪರವಾದ್ದರಿಂದ ಜೀವಲಿಂಗವೆನಿಸಿದ ಮ್ರಿಯಮಾಣತ್ವಾದಿಗಳು ಕಥಂಚಿತ್ ವಿಷ್ಣುವಿನಲ್ಲಿ ಯೋಜನೆ ಮಾಡಬೇಕೆಂಬುದು ಜ್ಯೋತಿರುಪಕ್ರಮಾಧಿಕರಣದ ಸಿದ್ಧಾಂತನ್ಯಾಯ. ನಿರವಕಾಶಲಿಂಗದಿಂದ ಸಾವಕಾಶವು ಬಾಧಿತವಾಗುತ್ತದೆಂಬುದು ಈ ಅಧಿಕರಣದ ಸಿದ್ಧಾಂತನ್ಯಾಯ. ಹೀಗೆ ಎರಡೂ ಅಧಿಕರಣದ ಸಿದ್ಧಾಂತನ್ಯಾಯಗಳು ವಿಭಿನ್ನವಾಗಿರುವಾಗ ಪುನರುಕ್ತಿಗೆ ಅವಕಾಶವಿಲ್ಲ.

---

### ಸೂತ್ರಪದದ ಸ್ವಾರಸ್ಯ

**तात्पर्यचन्द्रिका**

**ज्योतिश्शब्दप्रवृत्तिनिमित्तं च प्रकाशत्वं चित्प्रकाशरूपे ब्रह्मण्यप्यस्ति । यद्यप्यत्र वाक्यशेषे ''विश्वे देवा अनमस्यन् भियानाः'' इति सर्वदेवोपास्यत्वादिकमपि निरवकाशं विष्णुलिङ्गमस्ति । तथाऽपि कर्णादिविदूरत्ववत् विषयवाक्य एव अश्रुतत्वादपरिच्छेद्यवैभवान्तर्भूतत्वाच्च न सूत्रकारादिभिः पृथगुक्तम् ।**

**यद्यप्यत्र ज्योतिः प्रति कर्णादीनां विरुद्धचरणरूपं कर्णादिविदूरत्वं वक्तुञ्च ''विचारणाभिधानात्'' इति सूत्रयितव्यम्, तथाप्युपसर्गस्य द्योतकत्वमात्रं धातोरेव तु विचरणाभिधायकत्वमिति प्रदर्शनार्थं, सूत्रस्य श्रुत्यनुगमप्रदर्शनार्थं च 'चरणाभिधानात्' इत्युक्तम् । 'विचरणाभिधानात्' इत्युक्तौ हि श्रुतौ 'वि' इत्यनेन**

**'चरति' इत्यस्य 'मे मनः' इति पदद्वयव्यवहितत्वात् श्रुत्यनुगमो न ज्ञायेत । तस्माद् 'विष्णुरेवेदं ज्योतिः' इति ॥ टीकाक्षरार्थस्तु स्पष्टः ॥**

**॥ इति श्रीब्रह्मण्यतीर्थपूज्यश्रीपादशिष्यव्यासतीर्थविरचिता तात्पर्यचन्द्रिकायाम् ज्योतिरधिकरणं सम्पूर्णम् ॥**

ಅನುವಾದ - ಜ್ಯೋತಿಶಬ್ದದ ಪ್ರವೃತ್ತಿನಿಮಿತ್ತ ಪ್ರಕಾಶತ್ವ. ಇದು ಚಿತ್‌ಪ್ರಕಾಶರೂಪನಾದ ಬ್ರಹ್ಮನಲ್ಲಿ ಸಹಜವಾಗಿ ಬರುತ್ತದೆ.

ವಸ್ತುತಃ ಸೂತ್ರಕಾರರು ಕರ್ಣಾದಿವಿದೂರತ್ವಲಿಂಗವನ್ನೇ ಹೇಳಬೇಕಾಗಿರಲಿಲ್ಲ. ಏಕೆಂದರೆ ವಿಷಯವಾಕ್ಯದ ಕೊನೆಯಲ್ಲಿ 'ವಿಶ್ವೇದೇವಾ ಅನಮಸ್ಯನ್ ಭಯಾನಾಃ' ಎಂದು ಸರ್ವದೇವೋಪಾಸ್ಯತ್ವವೇ ಮೊದಲಾದ ಅನೇಕ ನಿರವಕಾಶವಿಷ್ಣುಲಿಂಗಗಳು ಕೇಳಿಸುತ್ತಿವೆ. ಆದರೂ ಕರ್ಣಾದಿವಿದೂರತ್ವವನ್ನೇ ಉಲ್ಲೇಖಿಸಲು ಪ್ರಧಾನಕಾರಣವಿದೆ. ವಿಷಯವಾಕ್ಯದಲ್ಲಿಯೇ ಕರ್ಣಾದಿವಿದೂರತ್ವವು ಕೇಳಿಸುತ್ತಿರುವಂತೆ ಸರ್ವದೇವೋಪಾಸ್ಯತ್ವಾದಿಗಳು ಕೇಳಿಸುತ್ತಿಲ್ಲ. ಮತ್ತು ಅಪರಿಮಿತವೈಭವ ಎಂಬ ಗುಣವು ಕರ್ಣಾದಿವಿದೂರತ್ವಲಿಂಗದಿಂದ ಸಿದ್ಧವಾಗುತ್ತದೆ. ಇದರಲ್ಲಿಯೇ ಸರ್ವದೇವೋಪಾಸ್ಯತ್ವವೇ ಮೊದಲಾದ ಎಲ್ಲ ಧರ್ಮಗಳೂ ಅಂತರ್ಭೂತವಾದ್ದರಿಂದ ಸೂತ್ರಕಾರರು ಬೇರೆ ನಿರವಕಾಶಲಿಂಗಗಳನ್ನು ಪ್ರತ್ಯೇಕವಾಗಿ ಹೇಳಿಲ್ಲ.

ಸೂತ್ರಕಾರರು 'ವಿಚರಣಾಭಿಧಾನಾತ್' ಎಂದು ಹೇಳಬೇಕಿತ್ತಲ್ಲವೇ? ಏಕೆಂದರೆ ಜ್ಯೋತಿ ಎನಿಸಿದ ಪರಮಾತ್ಮನಿಂದ ಕಿವಿ ಮೊದಲಾದ ಇಂದ್ರಿಯಗಳು ವಿರುದ್ಧವಾಗಿ ಹೊರಟಿವೆ. ಈ ಅರ್ಥವು ತಿಳಿಯಬೇಕೆಂದರೆ ವಿಚರಣಾಭಿಧಾನಾತ್ ಎಂಬ ಹೇತುವನ್ನೇ ಹೇಳಬೇಕು ಹೊರತು, ಇದಕ್ಕೆ ವಿರುದ್ಧಾರ್ಥವನ್ನು ಹೇಳುವ 'ಚರಣಾಭಿಧಾನಾತ್' ಎಂದು ಹೇಳಬಾರದಲ್ಲವೇ? ಈ ಪ್ರಶ್ನೆಗೂ ಅವಕಾಶವಿಲ್ಲ. 'ವಿ' ಎಂಬ ಉಪಸರ್ಗವು ವಿರುದ್ಧಗಮನ ಎಂಬ ಅರ್ಥಕ್ಕೆ ಕೇವಲ ದ್ಯೋತಕ ಹೊರತು ವಾಚಕವಲ್ಲ. ಧಾತುವೇ ವಿರುದ್ಧಗಮನವನ್ನು ಹೇಳುತ್ತದೆ. ಉಪಸರ್ಗವು ಕೇವಲ ಆದನ್ನು ದ್ಯೋತನ ಮಾಡುತ್ತದೆ. ಇದನ್ನು ತಿಳಿಸಲು ಸೂತ್ರಕಾರರು 'ವಿ' ಉಪಸರ್ಗವನ್ನು ಪ್ರಯೋಗಿಸಿಲ್ಲ. ಅಥವಾ ಶ್ರುತಿಯ ಅನುಗಮವನ್ನು ಸೂತ್ರಕ್ಕೆ ಪ್ರದರ್ಶಿಸುವುದಕ್ಕಾಗಿ ಸೂತ್ರಕಾರರು ಚರಣಾಭಿಧಾನಾತ್ ಎಂದಿದ್ದಾರೆ. ಒಂದು ವೇಳೆ ವಿಚರಣಾಭಿಧಾನಾತ್ ಎಂದು ಹೇಳಿದರೆ ಶ್ರುತಿಯಲ್ಲಿ 'ವಿ' ಎಂಬ ಉಪಸರ್ಗಕ್ಕೂ 'ಚರತಿ' ಎಂಬ ಧಾತುವಿಗೂ ಮಧ್ಯದಲ್ಲಿ 'ಮೇ ಮನಃ' ಎಂಬ ಎರಡು ಪದಗಳು ವ್ಯವಹಿತವಾದ್ದರಿಂದ ಶ್ರುತ್ಯನುಗಮವು ತಿಳಿಯುತ್ತಿರಲಿಲ್ಲ. ಆದ್ದರಿಂದ ಸೂತ್ರಕಾರರು ಚರಣಾಭಿಧಾನಾತ್ ಎಂದು ಹೇಳಿದ್ದು ತಪ್ಪಲ್ಲ. ಹೀಗೆ ಈ ಅಧಿಕರಣದಲ್ಲಿ ಸ್ಥಾಪಿಸಿದ ಸಿದ್ಧಾಂತನ್ಯಾಯದಿಂದ ಜ್ಯೋತಿಶಬ್ದದಿಂದ ವಿಷ್ಣುವೇ ಪ್ರತಿಪಾದ್ಯನಾಗುತ್ತಾನೆ.

ಈ ಅಧಿಕರಣದ ಟೀಕೆಯಲ್ಲಿರುವ ಕಠಿಣಪದಾರ್ಥಗಳು ಸ್ಪಷ್ಟವಾಗಿರುವುದರಿಂದ ಪ್ರತ್ಯೇಕವಾಗಿ ಹೇಳಿಲ್ಲ.

ಶ್ರೀಮದ್ ವ್ಯಾಸತೀರ್ಥಗುರುಗಳಿಂದ ವಿರಚಿತವಾದ ತಾತ್ಪರ್ಯಚಂದ್ರಿಕೆಯ ಕನ್ನಡಾನುವಾದದಲ್ಲಿ
ಜ್ಯೋತಿರಧಿಕರಣವು ಸಂಪೂರ್ಣವಾಯಿತು.

* * * *

**ಪ್ರಕಾಶಃ** – ಏವಂ ಪ್ರಮಾಣಾಶ್ರಿತಾಶಙ್ಕಾಂ ನಿರವಕಾಶಲಿಙ್ಗರೂಪಪ್ರಮಾಣೋಪದರ್ಶನೇನ ನಿರಸ್ಯೇದಾನೀಂ ಪ್ರಮೇಯಾಶ್ರಿತಾಶಙ್ಕಾಂ ''**ಸ್ವಯಂ ಜ್ಯೋತಿಷ್ಟ್ವಾದ್ಭಗವತಃ**'' ಇತಿ ಪಞ್ಚಮಗೀತಾ-ಭಾಷ್ಯೋಕ್ತದಿಶಾ ಶಬ್ದಪ್ರವೃತ್ತಿಹೇತುನಿರೂಪಣೇನ ನಿರಸ್ಯತಿ – **ಜ್ಯೋತಿರಿತಿ** ॥ **ಪ್ರಕಾಶತ್ವಮಿತಿ** ॥ ತಮೋವಿರೋಧಿತ್ವಸ್ಯ ಗುರುತ್ವಾದಿತಿ ಭಾವಃ । ನನು ಯದ್ಯತ್ರೇದಂ ವಿಷಯವಾಕ್ಯಂ ಸ್ಯಾತ್ ತರ್ಹಿ ಸ್ಪಷ್ಟಲಿಙ್ಗತ್ಯಾಗೇನ ಕರ್ಣಾದಿವಿದೂರತ್ವಪ್ರತ್ಯಾಯನಾಯ ಚರಣೋಕ್ತಿರಯುಕ್ತೇತ್ಯಾಶಙ್ಕ್ಯಾಹ – **ಯದ್ಯಪೀತಿ** ॥ ವಿಚರಣೇನಾಪರಿಚ್ಛೇದ್ಯವೈಭವಸ್ಯೈವಾಭಿಪ್ರೇತತ್ವೇನೋಕ್ತತ್ವಾತ್ ತೈನೈವ ಸಙ್ಗೃಹೀತತ್ವಾಚ್ಚೇತ್ಯಾಹ – **ಅಪರಿಚ್ಛೇದ್ಯೇತಿ** ॥ ನನ್ವೇವಮಪಿ 'ವಿಚರಣಾಭಿಧಾನಾತ್' ಇತಿ ವಾಚ್ಯಂ, ಪ್ರತಿಪತ್ತಿಲಾಘವಾದಿತ್ಯಾಶಙ್ಕಾಮನೂದ್ಯ ನಿರಸ್ಯತಿ – **ಯದ್ಯಪೀತಿ** ॥ ನನು ತರ್ಕತಾಣ್ಡವೇ ಉಪಸರ್ಗಾಣಾಂ ದ್ಯೋತಕತ್ವಂ ಪೂರ್ವಪಕ್ಷೀಕೃತ್ಯ ವಾಚಕತ್ವಸ್ಯ ಸಮರ್ಥನಾತ್ ಕಥಂ ದ್ಯೋತಕತ್ವೋಕ್ತಿಃ । ನಚ ತತ್ಪರರೀತ್ಯೇತಿ ವಾಚ್ಯಂ,

**ಸಮಿತಿ ಹ್ಯುಪಸರ್ಗೇಣ ಪರಮುಖ್ಯಾರ್ಥತೋಚ್ಯತೇ । ಇತಿ,**
**ಉಪಸರ್ಜ್ಜನಂ ಚೈವ ದ್ವಿತೀಯೋದ್ದೇಶಿತಂ ಪ್ರತಿ ।**
**ಅತಿಕ್ರಮಂ ವದನ್ತಂ ತಮುಪಶಬ್ದೋ ನಿವಾರಯೇತ್ ॥**

ಇತಿ ಚ ಭಗವತ್ಪಾದೋಕ್ತೇರುದಾಹೃತತ್ವಾತ್ । ಯುಕ್ತಿಯುಕ್ತತಯೋಪಪಾದನೇನಾಭಿಪ್ರೇತತ್ವಾವಗಮಾಚ್ಚ ಇತಿ ಚೇತ್ಸತ್ಯಂ, ಅಭ್ಯುಪೇತ್ಯವಾದೇನ ವಾ ಪರರೀತ್ಯಾ ವೇಯಮುಕ್ತಿಃ । ಅತ ಏವ ಪಕ್ಷಾನ್ತರಮುಕ್ತ್ವಾ ತಮುಪಪಾದಯತಿ – **ಸೂತ್ರಸ್ಯೇತಿ** ॥ ಅಧಿಕರಣಾರ್ಥಮುಪಸಂಹರತಿ – **ತಸ್ಮಾತ್** । ನಿರವಕಾಶ-ಲಿಙ್ಗಸ್ಯ ಪ್ರವೃತ್ತಿನಿಮಿತ್ತಸ್ಯ ಚ ಭಗವತಿ ಸತ್ವಾತ್ ವಿಷ್ಣುರೇವೇದಂ ಜ್ಯೋತಿರಿತಿ ॥

**ಇತಿ ಶ್ರೀಮದ್ರಾಘವೇನ್ದ್ರತೀರ್ಥವಿರಚಿತಚನ್ದ್ರಿಕಾಪ್ರಕಾಶ ಜ್ಯೋತಿರಧಿಕರಣಂ ಸಮ್ಪೂರ್ಣಮ್ ॥**

ವಿವರಣೆ - ಇಲ್ಲಿಯ ತನಕ ಪ್ರಮಾಣಾಶ್ರಿತಶಂಕೆಯನ್ನು ನಿರವಕಾಶಲಿಂಗವೆಂಬ ಪ್ರಮಾಣವನ್ನು ತೋರಿಸುವ ಮೂಲಕ ನಿರಾಕರಿಸಿದ್ದಾಯಿತು. ಈಗ ಪ್ರಮೇಯಾಶ್ರಿತ ಶಂಕೆಯನ್ನು ನಿರಾಕರಿಸುತ್ತಿದ್ದಾರೆ.

ಐದನೆಯ ಅಧ್ಯಾಯದ ಗೀತಾಭಾಷ್ಯದಲ್ಲಿ 'ಸ್ವಯಂ ಜ್ಯೋತಿಷ್ಟ್ವಾದ್ ಭಗವತಃ' (ಭಗವಂತನು ಸ್ವಯಂ ಜ್ಯೋತಿರೂಪನಾಗಿದ್ದಾನೆ) ಇತ್ಯಾದಿಯಾಗಿ ಹೇಳಿದಂತೆ ಜ್ಯೋತಿಶಬ್ದದ ಪ್ರವೃತ್ತಿನಿಮಿತ್ತವು ಯಾವುದೆಂದು ನಿರೂಪಿಸಿ ಪ್ರಮೇಯಾಶ್ರಿತಶಂಕೆಯನ್ನು 'ಜ್ಯೋತಿರಿತ್ಯಾದಿ ಗ್ರಂಥದಿಂದ ನಿರಾಕರಿಸಿದ್ದಾರೆ. ಪ್ರಕಾಶತ್ವವೇ ಜ್ಯೋತಿಶಬ್ದದ ಪ್ರವೃತ್ತಿನಿಮಿತ್ತ. ಇದನ್ನು ಬಿಟ್ಟು ತಮೋವಿರೋಧಿತ್ವವನ್ನು ಪ್ರವೃತ್ತಿ ನಿಮಿತ್ತವೆಂದರೆ ಗೌರವ ಬರುತ್ತದೆ.

'ವಿ ಮೇ ಕರ್ಣಾ ಪತಯತಃ' ಎಂಬುದೇ ಈ ಅಧಿಕರಣದ ವಿಷಯವಾಕ್ಯವಾದರೆ ಸ್ವಪ್ನ ಬ್ರಹ್ಮಲಿಂಗಗಳನ್ನು ಬಿಟ್ಟು ಕಠಿಣವಾದ ಕರ್ಣಾದಿವಿದೂರತ್ವಲಿಂಗವನ್ನು ತಿಳಿಸುವ ಚರಣಶಬ್ದವನ್ನು ಸೂತ್ರಕಾರರು ಹೇಳಿದ್ದು ತಪ್ಪಲ್ಲವೇ? ಎಂಬ ಪ್ರಶ್ನೆಗೆ 'ಯದ್ಯಪಿ' ಇತ್ಯಾದಿ ಗ್ರಂಥದಿಂದ ಉತ್ತರಿಸುತ್ತಿದ್ದಾರೆ. ಕರ್ಣಾದಿವಿದೂರತ್ವಲಿಂಗದಿಂದ ಅಪರಿಚ್ಛಿನ್ನವೈಭವವು ತಿಳಿಯುವುದರಿಂದ ವಿಷಯವಾಕ್ಯದಲ್ಲಿರುವ ಉಳಿದೆಲ್ಲ ಲಿಂಗಗಳನ್ನು ಸಂಗ್ರಹಿಸಿದಂತಾಯಿತು. ಇದನ್ನು 'ಅಪರಿಚ್ಛೇದ್ಯ' ಇತ್ಯಾದಿ ವಾಕ್ಯದಿಂದ ಹೇಳಿದ್ದಾರೆ.

ವಸ್ತುತಃ ಸೂತ್ರಕಾರರು ವಿಚರಣಾಭಿಧಾನಾತ್ ಎಂದೇ ಹೇಳಬೇಕಲ್ಲವೇ? ಹೀಗೆ ಹೇಳಿದಾಗ ಸುಲಭವಾಗಿ ಅರ್ಥವಾಗುತ್ತದೆ ಎಂಬ ಶಂಕೆಗೆ 'ಯದ್ಯಪಿ' ಇತ್ಯಾದಿ ಗ್ರಂಥದಿಂದ ಉತ್ತರಿಸಿದ್ದಾರೆ.

ಪ್ರಶ್ನೆ - ಗ್ರಂಥಕಾರರು ಉಪಸರ್ಗವು ದ್ಯೋತಕವೆಂದು ಇಲ್ಲಿ ಹೇಳಿದ್ದಾರೆ. ಆದರೆ ತರ್ಕತಾಂಡವದಲ್ಲಿ ಉಪಸರ್ಗಗಳು ದ್ಯೋತಕವೆಂದು ಪೂರ್ವಪಕ್ಷ ಮಾಡಿ ವಾಚಕಗಳೆಂದು ಸಿದ್ಧಾಂತ ಮಾಡಿದ್ದಾರೆ. ಹೀಗಿರುವಾಗ ತರ್ಕತಾಂಡವಕ್ಕೆ ವಿರುದ್ಧವಾಗಿ ಇಲ್ಲಿ ಹೇಳಿದ ಮಾತು ತಪ್ಪಲ್ಲವೇ? ಇನ್ನು ತರ್ಕತಾಂಡವದ ಮಾತನ್ನು ಪರವಾದಿಗಳಂತೆ ಹೇಳಿದ್ದೆಂದು ಹೇಳಬೇಕು. ಆದರೆ ಅಲ್ಲಿ ಕೇವಲ ವಾಚಕವೆಂದಷ್ಟೇ ಹೇಳದೆ ಆಚಾರ್ಯರ ಮಾತುಗಳನ್ನು ಪ್ರಮಾಣವನ್ನಾಗಿ ನೀಡಿದ್ದಾರೆ. - 'ಸಮಿತಿ ಹ್ಯುಪಸರ್ಗೇಣ ಪರಮುಖ್ಯಾರ್ಥತೋಚ್ಯತೇ' (ಸಂ ಎಂಬ ಉಪಸರ್ಗವು ಪರಮಮುಖ್ಯವೃತ್ತಿಯನ್ನು ಹೇಳುತ್ತದೆ) ಇಲ್ಲಿ 'ಉಚ್ಯತೇ' ಎಂಬ ಪದದಿಂದ ಉಪಸರ್ಗಕ್ಕೆ ವಾಚಕತ್ವವನ್ನು ಒಪ್ಪಿದ್ದಾರೆ. ಮತ್ತು ಆನಂದಮಯಾಧಿಕರಣದಲ್ಲಿ

ಉಪಸಂಕ್ರಮಣಂ ಚೈವ ದ್ವಿತೀಯೋದ್ದೇಶಿತಂ ಪ್ರತಿ।
ಅತಿಕ್ರಮಂ ವದಂತಂ ತಮುಪಶಬ್ದೋ ನಿವಾರಯೇತ್ ॥

ಉಪನಿಷತ್ತಿನಲ್ಲಿ ಬರುವ ಉಪಸಂಕ್ರಾಮತಿ ಇತ್ಯಾದಿ ಶಬ್ದಗಳು ಉಪಸಂಕ್ರಮಣವನ್ನೇ ಹೇಳುತ್ತಿವೆ. ಇತರರು ಅತಿಕ್ರಮಣ ಅರ್ಥವನ್ನು ಹೇಳಿದರೆ ಉಪ ಎಂಬ ಉಪಸರ್ಗವೇ ಅವರ ವಾದವನ್ನು ನಾಶ ಮಾಡುತ್ತದೆ. ಇಲ್ಲಿ ಉಪ ಎಂಬ ಉಪಸರ್ಗಕ್ಕೆ ವಾಚಕತ್ವವನ್ನು ಒಪ್ಪಿದ್ದಾರೆ. ಹೀಗೆ ತರ್ಕತಾಂಡವದಲ್ಲಿ ಆಚಾರ್ಯರ ಮಾತುಗಳನ್ನಷ್ಟೇ ಪ್ರಮಾಣವನ್ನಾಗಿ ನೀಡದೆ ಯುಕ್ತಿಯುಕ್ತವಾಗಿ ಉಪಸರ್ಗಗಳು ವಾಚಕಗಳಾಗಿವೆ ಎಂದು ಸಮರ್ಥಿಸಿದ್ದಾರೆ.

ಉತ್ತರ - ಹೌದು ತರ್ಕತಾಂಡವದಲ್ಲಿ ಹೇಳಿದಂತೆ ಉಪಸರ್ಗಗಳೆಲ್ಲವೂ ವಾಚಕಗಳೇ ಆಗಿವೆ ಹೊರತು ದ್ಯೋತಕಗಳಲ್ಲ. ಇಲ್ಲಿ ಗ್ರಂಥಕಾರರು ಪರರೀತ್ಯಾ ಹೇಳಿದ್ದಾರೆಂದು ತಿಳಿಯಬೇಕು. ಹೀಗೆ ಈ

ಪಕ್ಷವು ಅಸ್ವರಸವಾದ್ದರಿಂದಲೇ ಮತ್ತೊಂದು ಪಕ್ಷವನ್ನು ಗ್ರಂಥಕಾರರು 'ಸೂತ್ರಸ್ಯ' ಇತ್ಯಾದಿ ವಾಕ್ಯದಿಂದ ಹೇಳಿದ್ದಾರೆ. ಒಂದು ವೇಳೆ ಉಪಸರ್ಗಗಳು ದ್ಯೋತಕವೇ ಆಗಿದ್ದಲ್ಲಿ ಈ ಮತ್ತೊಂದು ಪಕ್ಷವನ್ನು ಹೇಳುವ ಅವಶ್ಯಕತೆ ಇರಲಿಲ್ಲ.

ಜ್ಯೋತಿರಧಿಕರಣದ ಉಪಸಂಹಾರವನ್ನು 'ತಸ್ಮಾತ್' ಇತ್ಯಾದಿ ಗ್ರಂಥದಿಂದ ಮಾಡುತ್ತಿದ್ದಾರೆ. ಆದ್ದರಿಂದ ನಿರವಕಾಶಲಿಂಗದ ಪ್ರವೃತ್ತಿನಿಮಿತ್ತವು ಭಗವಂತನಲ್ಲಿ ಸಿದ್ಧವಾದ್ದರಿಂದ ವಿಷ್ಣುವೇ ಜ್ಯೋತಿಯೆನಿಸಿದ್ದಾನೆ.

ಶ್ರೀರಾಘವೇಂದ್ರತೀರ್ಥರಿಂದ ರಚಿತವಾದ ಚಂದ್ರಿಕಾ ಪ್ರಕಾಶ ಟಪ್ಪಣಿಯ ಕನ್ನಡಾನುವಾದದಲ್ಲಿ
ಜ್ಯೋತಿರಧಿಕರಣವು ಸಮಾಪ್ತವಾಯಿತು.

**ಗುರುರಾಜೀಯಮ್** – ಪ್ರಮೇಯಾಶ್ರಿತಾಂ ಶಙ್ಕಾಂ ಪರಿಹರತಿ – **ಜ್ಯೋತಿಶ್ಶಬ್ದೇತಿ** ॥ ತಮೋವಿರೋಧಿತ್ವಾಪೇಕ್ಷಯಾ ಪ್ರಕಾಶತ್ವಸ್ಯ ಲಘುತ್ವಾತ್ತದುಪಪಾದಕತಾಯಾಃ ಆವಶ್ಯಕತ್ವಾ-ಚ್ಚೈತಜ್ಜ್ಯೋತಿಃಪದಪ್ರವೃತ್ತಿನಿಮಿತ್ತಂ ವಾಚ್ಯಮಿತಿ ಭಾವಃ ।

ತಮಸಾ ಸಹಾಸ್ಥಿತತ್ವಂ ಪ್ರಕಾಶಸ್ಯಾಪ್ಯಯುಕ್ತಮಿತ್ಯತ ಉಕ್ತಂ **ಚಿತ್ಪ್ರಕಾಶೇತಿ** ॥ ತಸ್ಯ ಚ ಬಾಹ್ಯತಮಃಸ್ಥಿತತ್ವಂ ಯುಕ್ತಮೇವ । ಅನ್ಯಥಾ ತ್ವಾಮಗ್ನೇ ತಮಸಿ ತಸ್ಥಿವಾಂಸ-ಮಿತ್ಯುಕ್ತ್ವಾದಗ್ನಾವಪಿ ಪ್ರಕಾಶತ್ವಂ ನ ಸ್ಯಾತ್ । ಹೃದಯ ಆಹಿತಮಿತ್ಯುಕ್ತ್ವಾದನ್ತರ್ಬಹಿಶ್ಚ ಸ್ಯಾದಿತಿ ಭಾವಃ ।

ನನು ಕರ್ಣಾದಿವಿದೂರತ್ವಂ ನ ಯಥಾಶ್ರುತಂ ಲಿಙ್ಗಮ್ । ತಸ್ಯ ಕರ್ಣಾದ್ಯಗೋಚರತ್ವರೂಪತ್ವೇನಾ-ಸಮ್ಭವಿತ್ವಾತ್ । ತದುಪಲಕ್ಷಿತಮಿಯದಿತಿ ಪರಿಚ್ಛೇದಾನರ್ಹವೈಭವತ್ವಮೇವ ಲಿಙ್ಗಂ ವಾಚ್ಯಮ್ । ತಚ್ಚಾನುಪಪನ್ನಮ್ । ವಾಕ್ಯಶೇಷೋಕ್ತಸ್ಯ ಸರ್ವದೇವೋಪಾಸ್ಯತ್ವಸ್ಯೈವ ಯಥಾಶ್ರುತಸ್ಯ ಲಿಙ್ಗತ್ವ-ಸಮ್ಭವಾತ್ । ತತ್ಸಮ್ಭವೇ ಚೋಪಲಕ್ಷಿತಾನುಸರಣಸ್ಯಾನೌಚಿತ್ಯಾದಿತ್ಯಾಶಙ್ಕತೇ – **ಯದ್ಯಪೀತಿ** ॥ **ಯದ್ಯಪ್ಯತ್ರೇ- ತ್ಯಾದಿ** ॥ ಅತ್ರ ಶ್ರುತೌ ಪತಯತ ಇತ್ಯಾದಾವುಕ್ತತ್ವಾತ್ಪತನಾಭಿಧಾನಾದಿತಿ ವಕ್ತವ್ಯೇಪಿ ಕರ್ಣಾದ್ಯಪೇಕ್ಷಯಾ ಮನಸೋ ಬಹುವ್ಯಾಪ್ತೇರಭಿಮಾನಿಶ್ರೋತ್ತಮತ್ವಾತ್ತನ್ಮುಖ್ಯತ್ವದ್ಯೋತನಾಯ ತತ್ಸಹಪಠಿತಚರಣಸ್ಯೈವ ನಿರ್ದೇಶಃ । ಏವಂ ಚ ಶ್ರುತೌ ಮನೋಗಮ್ಯತ್ವಾಭಾವಃ ಕರ್ಣಾದಿ-ಗೋಚರತ್ವಾಭಾವೇ ಹೇತುತ್ವೇನೋಚ್ಯತೇ ।

ಯದ್ವಾ ಮನೋದೂರತ್ವೋಕ್ತ್ಯಾ ಕೈಮುತ್ಯನ್ಯಾಯೇನ ಲಬ್ಧಮೇವ ಕರ್ಣಾದಿವಿದೂರತ್ವಂ ಸ್ಪಷ್ಟ-ಮುಚ್ಯತೇ । ಅತ ಏವ ಕಿಂಸ್ವಿದ್ವಕ್ಷ್ಯಾಮೀತ್ಯನುಕ್ತವಾಕ್ಕಾರ್ಯಾಕ್ಷೇಪಃ । ಕರ್ಣಾದಿಗ್ರಹಣಸ್ಯೋಪ-

ಲಕ್ಷಣತ್ವಾದಿತ್ಯುಕ್ತಂ ಭವತಿ ॥ **उपसर्गस्येति** ॥ यद्यप्युपसर्गा अपि वाचका एवेति सिद्धान्तः तथापि परमतानुवादोऽयमित्यदोषः ॥

**इति श्रीकेशवभट्टारकेण विरचितायां भावदीपिकायां**
**ज्योतिरधिकरणं सम्पूर्णम् ॥**

## ಸಾರ

ಪ್ರಕಾಶತ್ವವು ಜ್ಯೋತಿಶಬ್ದದ ಪ್ರವೃತ್ತಿನಿಮಿತ್ತವಾದ್ದರಿಂದ ಪ್ರಮೇಯಾಶ್ರಿತ ಪೂರ್ವಪಕ್ಷಕ್ಕೆ ಅವಕಾಶವಿಲ್ಲ.

ಸೂತ್ರಕಾರರು ಕರ್ಣಾದಿವಿದೂರತ್ವಲಿಂಗವನ್ನೇ ಉಲ್ಲೇಖಿಸಲು ಕಾರಣವೇನೆಂದರೆ ವಿಷಯವಾಕ್ಯದಲ್ಲಿ ಸ್ಪಷ್ಟವಾಗಿ ಕೇಳಿಸುತ್ತಿದೆ ಎಂದು. ಮತ್ತು ಉಳಿದೆಲ್ಲ ಲಿಂಗಗಳು ಅಪರಿಮಿತವೈಭವದಲ್ಲಿಯೇ ಸೇರಿಹೋಗಿವೆ ಎಂದು. ವಸ್ತುತಃ ಸೂತ್ರಕಾರರು ವಿಚರಣಾಭಿಧಾನಾತ್ ಎಂದೇ ಹೇಳಬೇಕು. ಆದರೆ ಶ್ರುತಿಯಲ್ಲಿ ಈ ಶಬ್ದವು ದೂರದಲ್ಲಿದ್ದು ಚರಣಾಭಿಧಾನ 'ಶಬ್ದವು' ಎಂದಷ್ಟೇ ಕೇಳಿಸುತ್ತಿದೆ. ಆದರ ಅನುಗಮಕ್ಕಾಗಿ 'ಚರಣಾಭಿಧಾನಾತ್' ಎಂದಿದ್ದಾರೆ. ಜ್ಯೋತಿಶಬ್ದದ ಪ್ರವೃತ್ತಿನಿಮಿತ್ತವು ಮುಖ್ಯವಾಗಿ ಭಗವಂತನಲ್ಲಿಯೇ ಬರುವುದರಿಂದ ಭಗವಂತನೇ ಜ್ಯೋತಿಮೊದಲಾದ ಶಬ್ದಗಳಿಂದ ಪ್ರತಿಪಾದ್ಯನಾಗಿದ್ದಾನೆ.

* * *

ಇಲ್ಲಿಗೆ ಚಂದ್ರಿಕಾಸಾರದಲ್ಲಿ ಜ್ಯೋತಿರಧಿಕರಣವು ಸಮಾಪ್ತವಾಯಿತು

॥ ಶ್ರೀಮದ್ಧೇಶಾರ್ಪಣಮಸ್ತು ॥

# ೦೧೦-ಜ್ಯೋತಿರಧಿಕರಣ

ಭಾಗ -೩

ನ್ಯಾಯವಿವರಣ, ನ್ಯಾಯವಿವರಣಟೀಕಾ,
ಅಣುಭಾಷ್ಯ, ತತ್ವಮಂಜರೀ,
ತಂತ್ರದೀಪಿಕಾ, ನ್ಯಾಯಮುಕ್ತಾವಳಿಃ,
ಸೂತ್ರಾರ್ಥರತ್ನಾವಳಿಃ

श्रीमदानन्दतीर्थभगवत्पादाचार्यविरचितम्

# अणुभाष्यम्

## ज्योतिधिकरणम्

**अणुभाष्यम् –**

**प्रणेता ज्योतिरित्याद्यैः प्रसिद्धैरन्यवस्तुषु ।**
**उच्यते विष्णुरेवैकः सर्वैः सर्वगुणत्वतः ॥**

ಎಲ್ಲರ ಅಂತರ್ಯಾಮಿಯು. ಅವಕಾಶಪ್ರದನಾದ್ದರಿಂದ ಆಕಾಶನೂ ಸಕಲಕ್ಕೂ ಪ್ರೇರಕನೂ, ಜ್ಯೋತಿಯೂ ಆಗಿದ್ದಾನಾದ್ದರಿಂದ ಈ ಶಬ್ದಗಳಿಂದೆಲ್ಲಾ ಪ್ರತಿಪಾದ್ಯನಾಗಿದ್ದಾನೆ. ಬೇರೆ ವಸ್ತುಗಳಲ್ಲಿ ಪ್ರಸಿದ್ಧವಾದ ಎಲ್ಲಾ ಶಬ್ದಗಳಿಂದ ವಿಷ್ಣು ಒಬ್ಬನೇ ಪ್ರಸಿದ್ಧನಾಗಿದ್ದಾನೆ. ಏಕೆಂದರೆ ಎಲ್ಲಾ ಶಬ್ದಗಳು ಹೇಳುವ ಗುಣಗಳು ಅವನಲ್ಲಿ ಮಾತ್ರ ಇರುವುದರಿಂದ.

* * * *

श्री राघवेन्द्रतीर्थविरचिता

# तत्वमञ्जरी

## ज्योतिधिकरणम्

नन्वथापि पूर्णानन्दो विष्णुरिति न युक्तम् । 'यो वेद निहितं गुहायां' इत्यानन्दमयधर्मस्य गुहानिहितत्वस्य 'ज्योतिर्हृदय आहितं यत्' इति श्रुतौ ज्योतिष्युक्तेः । ज्योतिःशब्दस्य त्वामग्न इत्यग्निसाहचर्येणाग्निसूक्तस्थत्वेन चाग्नि-परत्वात् । नहि द्वयोः स्वातन्त्र्येण सर्वप्रेरकत्वादिना हृदयगुहास्थत्वं युक्तमित्यत आह – ॐ ज्योतिश्चरणाभिधानादिति ॥

ಆನಂದಮಯಾಧಿಕರಣದಲ್ಲಿ ವಿಷ್ಣುವೇ ಪೂರ್ಣಾನಂದನೆಂದು ಹೇಳಿದ್ದಾರೆ. ಇದು ಸರಿಯಲ್ಲ. ಏಕೆಂದರೆ 'ಯೋ ವೇದ ನಿಹಿತಂ ಗುಹಾಯಾಮ್' ಎಂಬ ಶ್ರುತಿಯಲ್ಲಿ ಆನಂದಮಯನ ಧರ್ಮವೆನಿಸಿದ

ಗುಹಾನಿಹಿತತ್ವವನ್ನು ಜ್ಯೋತಿರ್ಹೃದಯ ಆಹಿತಂ ಯತ್' ಎಂಬಲ್ಲಿ ಜ್ಯೋತಿಗೂ ಸಹ ಹೇಳಿದ್ದಾರೆ. ಆದರೆ ಜ್ಯೋತಿಃಶಬ್ದವು ವಿಷ್ಣುವನ್ನು ಪ್ರತಿಪಾದಿಸುವುದಿಲ್ಲ. ಹೊರತಾಗಿ 'ತ್ವಾಮಗ್ನೇ' ಇತ್ಯಾದಿ ಅಗ್ನಿಶ್ರುತಿಯ ಸಾಹಚರ್ಯದಿಂದ ಅಗ್ನಿಯನ್ನೇ ಪ್ರತಿಪಾದಿಸುತ್ತದೆ. ಅಗ್ನಿಸೂಕ್ತವೆಂಬ ಪ್ರಕರಣವೇ ಈ ವಿಷಯದಲ್ಲಿ ಪ್ರಮಾಣವಾಗಿದೆ. ಅಗ್ನಿ ಮತ್ತು ವಿಷ್ಣು ಇಬ್ಬರೂ ಸಹ ಗುಹಾನಿಹಿತರಾಗಿದ್ದು ಸ್ವತಂತ್ರವಾಗಿ ಸರ್ವಪ್ರಾಣಿಪ್ರೇರಕರಾಗಿದ್ದಾರೆಂದು ಕಲ್ಪಿಸಬಾರದೆಂದು ತಿಳಿಸಲು 'ಜ್ಯೋತಿಶ್ಚರಣಾಭಿಧಾನಾತ್' ಎಂಬ ಸೂತ್ರವು ಹೊರಟಿದೆ.

**ತದರ್ಥೋ – ಜ್ಯೋತಿರಿತ್ಯಾದ್ಯೈಃ ಪ್ರಸಿದ್ಧೈರನ್ಯವಸ್ತುಷು ॥ ಉಚ್ಯತೇ ವಿಷ್ಣುರೇವೈಕಃ ಸರ್ವೈಃ ಸರ್ವಗುಣತ್ವತಃ ॥** ಜ್ಯೋತಿರಿತ್ಯಾದ್ಯೈಃ ಸರ್ವಸೂಕ್ತಗತೈರನ್ಯವಸ್ತುಷು ಪ್ರಸಿದ್ಧೈಃ ಸರ್ವಶಬ್ದೈರೇಕೋ ವಿಷ್ಣುರೇವೋಚ್ಯತೇ । ನತ್ವಗ್ನ್ಯಾದಿಃ । ಕುತಃ **ಸರ್ವಗುಣತ್ವತಃ** । ಕರ್ಣಚಕ್ಷುರ್ಮನೋವಿದ್ಧೂರತ್ವೋತ್ಕ್ರ್ಷ-ಮಿಪ್ರೇತಾಪರಿಚ್ಛಿನ್ನವೈಭವರೂಪಸರ್ವಗುಣತ್ವಾದಿತ್ಯರ್ಥಃ । ಕೇನ ನಿಮಿತ್ತೇನೇತ್ಯತೋऽಪಿ – ಸರ್ವ-ಗುಣತ್ವತಃ । 'ಸ್ವಯಂ ಜ್ಯೋತಿಷ್ಟಾದ್ಭಗವತ' ಇತಿ ಪಞ್ಚಮಗೀತಾಭಾಷ್ಯೋಕ್ತದಿಶಾ ಪ್ರಕಾಶ-ರೂಪತ್ವಾದಿರೂಪಜ್ಯೋತಿರಾದಿತಚ್ಛಬ್ದಪ್ರವೃತ್ತಿನಿಮಿತ್ತಸರ್ವಗುಣತ್ವಾದನ್ಯಗತಂ ಪ್ರತಿ ಸ್ವಾತನ್ತ್ರ್ಯಾಚ್ಚ ಇತ್ಯರ್ಥಃ ॥೧೦॥

ಈ ಸೂತ್ರದ ಅರ್ಥವನ್ನೇ ಶ್ರೀಮದಾನಂದತೀರ್ಥರು - ಎಂದು ಹೇಳಿದ್ದಾರೆ. ಸಕಲಸೂಕ್ತಗಳಲ್ಲಿರುವ ಜ್ಯೋತಿಮೊದಲಾದ ಶಬ್ದಗಳಿಂದ ವಿಷ್ಣುವೇ ಪರಮಮುಖ್ಯವೃತ್ತಿಯಿಂದ ಪ್ರತಿಪಾದ್ಯನಾಗಿದ್ದಾನೆ. ಹೊರತು ಅಗ್ನ್ಯಾದಿಗಳಲ್ಲ. ಏಕೆಂದರೆ ವಿಷ್ಣುವು ಸಕಲಗುಣಪೂರ್ಣನಾಗಿದ್ದಾನೆ. ಈ ಶ್ರುತಿಯಲ್ಲಿ ಕೇಳಿಸುತ್ತಿರುವ ಕರ್ಣ, ಚಕ್ಷುಸ್ಸು, ಮನಸ್ಸು ಮೊದಲಾದ ಇಂದ್ರಿಯಗಳಿಂದ ವಿದೂರತ್ವವನ್ನು ಜ್ಯೋತಿಗೆ ಹೇಳಲಾಗಿದೆ. ಇದರಿಂದ ಅಪರಿಚ್ಛಿನ್ನ ವೈಭವವು ಸೂಚಿತವಾಗಿದೆ. ಇಂತಹ ಗುಣಗಳೆಲ್ಲವೂ ವಿಷ್ಣುವಿನಲ್ಲೇ ಹೊಂದುತ್ತವೆ. ಯಾವಕಾರಣಕ್ಕಾಗಿ ಇವುಗಳನ್ನು ವಿಷ್ಣುವಿನಲ್ಲಿ ಸಾಧಿಸುತ್ತೀರಿ? ಎಂಬ ಪ್ರಶ್ನೆಗೂ ಸಹ ''ಸರ್ವಗುಣತ್ವತಃ'' ಎಂದೇ ಉತ್ತರ. ಐದನೆಯ ಅಧ್ಯಾಯದ ಗೀತಾಭಾಷ್ಯದಲ್ಲಿ 'ಸ್ವಯಂ ಜ್ಯೋತಿಷ್ಟ್ವಾದ್ ಭಗವತಃ' ಎಂಬುದಾಗಿ ವಿಷ್ಣುವಿಗೆ ಪ್ರಕಾಶರೂಪತ್ವವನ್ನು ಹೇಳಿದ್ದಾರೆ. ಈ ಪ್ರಕಾಶರೂಪತ್ವವೇ ಜ್ಯೋತಿಃಶಬ್ದದ ಪ್ರವೃತ್ತಿನಿಮಿತ್ತವಾಗಿದೆ. ಅಷ್ಟೇ ಅಲ್ಲದೆ ಅಗ್ನ್ಯಾದಿಗಳಲ್ಲಿರುವ ಪ್ರಕಾಶತ್ವಾದಿಗಳಿಗೂ ವಿಷ್ಣುವೇ ಸ್ವತಂತ್ರ-ನಾಗಿದ್ದಾನೆ. ಈ ಎಲ್ಲ ಕಾರಣಗಳಿಂದ ಜ್ಯೋತಿಃಶಬ್ದದಿಂದ ವಿಷ್ಣುವೇ ಪ್ರತಿಪಾದ್ಯನೆಂದು ನಿರ್ಣಯ-ವಾಯಿತು.

॥ಇಲ್ಲಿಗೆ ಶ್ರೀರಾಘವೇಂದ್ರಯತಿಗಳಿಂದ ವಿರಚಿತವಾದ ತತ್ವಮಂಜರಿಯಲ್ಲಿ
ಜ್ಯೋತಿರಧಿಕರಣದ ಕನ್ನಡಾನುವಾದವು ಮುಗಿಯಿತು॥

॥ श्रीः ॥

श्रीराघवेन्द्रतीर्थविरचिता

# तन्त्रदीपिका

## ज्योतिरधिकरणम्

॥ ॐ ज्योतिश्चरणाभिधानात् ॐ ॥ १-१-२४

अत्र नये सूक्तगताशेषनामसमन्वय उच्यते । प्रकाशवाचित्वेन प्राधान्याद्वा पूर्वाक्षेपकहृदयाहितत्वयुक्ततया वाऽन्योपलक्षणत्वेन ज्योतिष उक्तिः । ''ज्योतिर्हृदय आहितम्'' इति सूक्तोक्तं ज्योतिः तत्तु ब्रह्मैव । न त्वग्निसूक्तगत्वादिनाऽग्निः । ''वि मे कर्णा पतयतः'' इत्यादिना कर्णादीनां विचरणाभिधानात् । कर्णादिसर्वेन्द्रियविदूरत्वादित्यर्थः । अपरिच्छिन्नवैभवादिति यावत् । विचरणेति वाच्ये चरणेत्युक्तिरुपसर्गस्य द्योतकत्वमात्राद्वा वि मे मनश्चरतीति श्रुत्यनुगमार्था वेति ॥ १० ॥

ಈ ಅಧಿಕರಣದಲ್ಲಿ ಸೂಕ್ತಗಳಲ್ಲಿರುವ ಎಲ್ಲ ನಾಮಾತ್ಮಕಶಬ್ದಗಳ ಸಮನ್ವಯವನ್ನು ಹೇಳುತ್ತಿದ್ದಾರೆ. ಜ್ಯೋತಿಃಶಬ್ದವು ಪ್ರಕಾಶವಾಚಿಯಾದ್ದರಿಂದ ಪ್ರಧಾನವಾಗಿದೆ. ಅಥವಾ ಪೂರ್ವಪಕ್ಷಯುಕ್ತಿಯೆನಿಸಿದ ಹೃದಯಾಹಿತತ್ವ ಎಂಬ ಲಿಂಗದಿಂದ ಕೂಡಿರುವುದರಿಂದಲೂ ಪ್ರಧಾನವಾಗಿದೆ. ಆದ್ದರಿಂದ ಸೂತ್ರದಲ್ಲಿ ಪ್ರಧಾನವಾಗಿ ಜ್ಯೋತಿಃಶಬ್ದವನ್ನು ಸ್ವೀಕರಿಸಿ ಉಳಿದ ಶಬ್ದಗಳನ್ನು ಉಪಲಕ್ಷಣಯಾ ಹೇಳುತ್ತಿದ್ದಾರೆ.

ಸೂತ್ರಾರ್ಥ ಹೀಗಿದೆ — 'ಜ್ಯೋತಿಃ = 'ಜ್ಯೋತಿರ್ಹೃದಯ ಆಹಿತಂ' ಎಂಬ ಸೂಕ್ತದಲ್ಲಿರುವ ಜ್ಯೋತಿಸ್ಸು, ತತ್ತು = ಬ್ರಹ್ಮನೇ ಆಗಿದ್ದಾನೆ. ಹೊರತು ಅಗ್ನಿಸೂಕ್ತವೆಂಬ ಪ್ರಕರಣದಿಂದ ಪ್ರಾಪ್ತವಾಗಿದೆಯೆಂದು ಅಗ್ನಿಯು ಜ್ಯೋತಿಃಶಬ್ದವಾಚ್ಯವಲ್ಲ. ಏಕೆಂದರೆ ಚರಣಾಭಿಧಾನಾತ್ = 'ವಿ ಮೇ ಕರ್ಣಾ ಪತಯತಃ' ಇತ್ಯಾದಿಯಾಗಿ ಕರ್ಣಾದಿ ಇಂದ್ರಿಯಗಳಿಗೆ ವಿದೂರನಾಗಿರುವಿಕೆಯನ್ನು ಹೇಳಿರುವುದರಿಂದ. ಅಂದರೆ ಕರ್ಣಾದಿಸಕಲೇಂದ್ರಿಯಗಳಿಗೆ ವಿದೂರನಾಗಿರುವಿಕೆ ಎಂಬ ಲಿಂಗದಿಂದ ಎಂದರ್ಥ. 'ಅಪರಿಚ್ಛಿನ್ನವೈಭವದಿಂದ' ಎಂದು ಇದರ ತಾತ್ಪರ್ಯ. ವಸ್ತುತಃ ಸೂತ್ರದಲ್ಲಿ ಶ್ರುತ್ಯನುಗುಣವಾಗಿ ವಿಚರಣ ಎಂದೇ ಹೇಳಬೇಕಿತ್ತು. ಆದರೆ ಚರಣ ಎಂದು ಏಕೆ ಹೇಳಿದ್ದೆಂದರೆ ಉಪಸರ್ಗಗಳು ಅರ್ಥಕ್ಕೆ ಕೇವಲ ದ್ಯೋತಕವಾಗಿರುತ್ತವೆ ಹೊರತು ವಾಚಕವಾಗಿರುವುದಿಲ್ಲ ಎಂಬ ಪ್ರಮೇಯವನ್ನು ತಿಳಿಸುವುದಕ್ಕಾಗಿ. ಅಥವಾ 'ಮೇ ಮನಶ್ಚರತಿ' ಎಂಬ ಶ್ರುತಿಯ ಅನುಗುಣ್ಯಕ್ಕೋಸ್ಕರ 'ವಿ' ಉಪಸರ್ಗವನ್ನು ಹೇಳಿರುವುದಿಲ್ಲ.

श्रीराघवेन्द्रयतिकृता

# न्यायमुक्तावलिः

## ज्योतिरधिकरणम्

॥ ॐ ज्योतिश्चरणाभिधानात् ॐ ॥ १० ॥

पूर्ववैषम्येण पूर्वपक्षोत्थानात्प्रत्युदाहरणरूपा वा श्रौतक्रमाद्वा सङ्गतिः ।

**वि मे कर्णा पतयतो वि चक्षुर्वीदं ज्योतिर्हृदय आहितं यत् । वि मे मनश्चरति दूर आधीः किंस्विद्वक्ष्यामीत्यग्निसूक्ते** (ऋ. ६-९-६) श्रुतं ज्योतिः किमग्निः उत विष्णुरिति सन्देहः ।

अग्निरिति पूर्वः पक्षः । ज्योतिःश्रुतेरग्नौ रूढत्वात् तस्य तमोविरोधिमात्र-वाचित्वेऽपि हृदयगुहानिहितत्वलिङ्गेन त्वामग्ने प्रे इति तमसीत्यग्निशब्दसान्निध्याच्च अन्यत्रास्यायोगात् । नच पूर्ववदनवकाशलिङ्गेन श्रुतिबाधात् नास्योत्थितिरिति वाच्यम् । वैषम्यात् । प्राणश्रुतेर्वायुसूक्तानुग्रहात् अस्यास्तु प्रकरणरूपेणाग्निसूक्तेन अनुगृहीतत्वात् । नच श्रुतेर्भूतपरत्वे आकाशनयन्यायेन देवतापरत्वे च अन्तर्नयन्यायेन विष्णौ सावकाशत्वात् तस्यास्तथात्वे तद्युक्तसूक्तस्यापि तथात्वात् निरवकाशलिङ्गेन तयोर्बाध इति वाच्यम् । गुहास्थत्वादिलिङ्गस्यापि सावकाशतया ताभ्यां तद्बाधात् । सूक्तस्य वैष्णवत्वे इदमग्निसूक्तं इदं वायुसूक्तमित्यादिव्यवस्थाया ''अभिव्यक्तेः'' (ब्र.सू. १-२-२९) इत्यादिन्यायसिद्धत्वेऽपि इदमग्निसूक्तं न विष्णुसूक्तमिति लोकप्रसिद्ध्ययोगेन सूक्तस्य निरवकाशत्वाच्चेति ॥

ಹಿಂದಿನ ಅಧಿಕರಣದಿಂದ ವಿಲಕ್ಷಣವಾದ ಪೂರ್ವಪಕ್ಷವನ್ನು ಈ ಅಧಿಕರಣದಲ್ಲಿ ಮಾಡಲಾಗಿದೆ. ಆದ್ದರಿಂದ ಪ್ರತ್ಯುದಾಹರಣೆ ಎಂಬ ಸಂಗತಿಯನ್ನು ಅಥವಾ ಶ್ರುತಿಕ್ರಮಕ್ಕೆ ಅನುಸಾರಿಯಾದ ಸಂಗತಿಯನ್ನು ಈ ಅಧಿಕರಣಕ್ಕೆ ತಿಳಿಯಬೇಕು.

'ವಿಮೇ ಕರ್ಣಾ ಪತಯತೋ ವಿಚಕ್ಷುರ್ವೀದಂ ಜ್ಯೋತಿರ್ಹೃದಯ ಆಹಿತಂ ಯತ್ । ವಿಮೇ ಮನಶ್ಚರತಿ ದೂರ ಆಧೀಃ ಕಿಂಸ್ವಿದ್ ವಕ್ಷ್ಯಾಮಿ' ಎಂಬ ಅಗ್ನಿಸೂಕ್ತವು ಈ ಅಧಿಕರಣದ ವಿಷಯವಾಕ್ಯವಾಗಿದೆ. ಈ ವಾಕ್ಯದಲ್ಲಿ ಕೇಳಿಸುತ್ತಿರುವ ಜ್ಯೋತಿಯು ಅಗ್ನಿಪರವೋ ಅಥವಾ ವಿಷ್ಣುಪರವೋ ಎಂದು ಸಂದೇಹ.

ಅಗ್ನಿ ಎಂದು ಪೂರ್ವಪಕ್ಷ. ಏಕೆಂದರೆ ಲೋಕದಲ್ಲಿ ಅಗ್ನಿಯಲ್ಲಿಯೇ ಜ್ಯೋತಿಃಶಬ್ದವನ್ನು ಪ್ರಯೋಗಿಸುತ್ತಾರೆ. ತಮೋವಿರೋಧಿ ಎಂಬರ್ಥದಲ್ಲೇ ಜ್ಯೋತಿಃಶಬ್ದವು ಪ್ರಸಿದ್ಧವಾಗಿದೆ. ಮತ್ತು ಹೃದಯಗುಹಾನಿಹಿತತ್ವ ಎಂಬ ಲಿಂಗದಿಂದ 'ತ್ವಾಮಗ್ನೇ ತಮಸಿ' ಎಂಬ ಅಗ್ನಿಶ್ರುತಿಯ ಸಾನ್ನಿಧ್ಯದಿಂದ ಅಗ್ನಿಯನ್ನು ಬಿಟ್ಟು ಬೇರೆಡೆ ಜ್ಯೋತಿಃಶಬ್ದವನ್ನು ಪ್ರಯೋಗಿಸಲು ಸಾಧ್ಯವಿಲ್ಲ. ಹಿಂದಿನ ಅಧಿಕರಣದಲ್ಲಿ ಹೇಳಿದಂತೆ ನಿರವಕಾಶಲಿಂಗದ ಬಲದಿಂದ ಜ್ಯೋತಿಃಶ್ರುತಿಯು ಬಾಧಿತವಾಗುವುದರಿಂದ ಅಗ್ನಿಯನ್ನು ಜ್ಯೋತಿಯೆಂದು ಹೇಳಲು ಸಾಧ್ಯವಿಲ್ಲವಲ್ಲವೇ? ಎಂದು ಶಂಕಿಸಬಾರದು. ಹಿಂದಿನ ಅಧಿಕರಣಕ್ಕೂ ಈ ಅಧಿಕರಣಕ್ಕೂ ವ್ಯತ್ಯಾಸವಿದೆ. ಹಿಂದಿನ ಅಧಿಕರಣದಲ್ಲಿ ಪ್ರಾಣಶ್ರುತಿಗೆ ವಾಯುಪ್ರಕರಣದ ಅನುಗ್ರಹವು ಇರಲಿಲ್ಲ. ಆದರೆ ಜ್ಯೋತಿಃಶ್ರುತಿಗೆ ಅಗ್ನಿಪ್ರಕರಣದ ಅನುಗ್ರಹವಿದೆ.

ಜ್ಯೋತಿಶ್ರುತಿಯು ಅಗ್ನಿಪರವೆಂದು ಹೇಳಿದಾಗ ಭೂತಪದಾರ್ಥವಾದ ಅಗ್ನಿಯನ್ನು ಪ್ರತಿಪಾದಿಸಬೇಕೋ ಅಥವಾ ಅಗ್ನಿದೇವತೆಯನ್ನು ಪ್ರತಿಪಾದಿಸಬೇಕೋ? ಭೌತಿಕಾಗ್ನಿಯನ್ನು ಪ್ರತಿಪಾದಿಸಿದರೆ ಆಕಾಶಾಧಿಕರಣದ ನ್ಯಾಯದಂತೆ ವಿಷ್ಣುವಿನಲ್ಲಿ ಸಾವಕಾಶವಾಗುತ್ತದೆ. ಅಗ್ನಿದೇವತಾಪರವಾದರೆ ಆಂತರಧಿಕರಣದ ನ್ಯಾಯದಂತೆ ವಿಷ್ಣುವಿನಲ್ಲಿ ಸಾವಕಾಶವಾಗುತ್ತದೆ. ಹೀಗೆ ಜ್ಯೋತಿಃಶಬ್ದವು ವಿಷ್ಣುವಿನಲ್ಲಿ ಸಾವಕಾಶವಾಗುವುದರಿಂದ ಇದರಿಂದ ಕೂಡಿರುವ ಅಗ್ನಿಪ್ರಕರಣವೂ ಸಹ ಸಾವಕಾಶವೇ ಆಗುತ್ತದೆ. ಆದ್ದರಿಂದ ನಿರವಕಾಶವಿಷ್ಣುವಿನ ಲಿಂಗದಿಂದ ಜ್ಯೋತಿಃಶ್ರುತಿಯನ್ನು ಹಾಗೂ ಅಗ್ನಿಪ್ರಕರಣವನ್ನು ಬಾಧಿಸಬಹುದಲ್ಲವೇ?

ಈ ಶಂಕೆಯೂ ಸಹ ತಪ್ಪು. ವಿಷ್ಣುವಿನ ಲಿಂಗವೆನಿಸಿದ ಗುಹಾಸ್ಥತ್ವವೇ ಮೊದಲಾದವೂ ಸಹ ಅಗ್ನಿಮೊದಲಾದವರಲ್ಲಿ ಸಾವಕಾಶವಾಗಿದೆ. ಆದ್ದರಿಂದ ಅಗ್ನಿಶ್ರುತಿ ಹಾಗೂ ಅಗ್ನಿಪ್ರಕರಣಗಳಿಂದಲೇ ವಿಷ್ಣುವಿನ ಲಿಂಗಗಳು ಬಾಧಿತವಾಗುತ್ತವೆ. ಮತ್ತು ಒಂದು ವೇಳೆ ಅಗ್ನಿಪ್ರಕರಣವು ವಿಷ್ಣುಪರವಾದರೆ ಇದು ಅಗ್ನಿ ಸೂಕ್ತ, ಇದು ವಾಯುಸೂಕ್ತ ಇತ್ಯಾದಿ ವ್ಯವಸ್ಥೆಯೇ ತಪ್ಪಾದೀತು. ಏಕೆಂದರೆ ಎಲ್ಲಾ ಸೂಕ್ತಗಳೂ ವಿಷ್ಣುಪರವಾದರೆ ಪ್ರತಿಯೊಂದು ಸೂಕ್ತಗಳನ್ನು ವಿಷ್ಣುಸೂಕ್ತವೆಂದೇ ಕರೆಯಬೇಕಲ್ಲವೆ? ಇನ್ನು 'ಅಭಿವ್ಯಕ್ತೇಃ' ಎಂಬ ಸೂತ್ರದಿಂದ ಈ ಶಂಕೆಗೆ ಅಗ್ನಿಪರತ್ವವನ್ನು ಹೇಳಬಹುದೆಂದು ನೀವು ಉತ್ತರಿಸಬಹುದು. ಆದರೆ ಇದು ಅಗ್ನಿಸೂಕ್ತ ಹೊರತು ವಿಷ್ಣುಸೂಕ್ತವಲ್ಲ ಎಂಬ ಲೋಕಪ್ರಸಿದ್ಧಿಗೆ ನಿಮ್ಮಲ್ಲಿ ಏನು ಉತ್ತರ? ಈ ಕಾರಣದಿಂದ ಅಗ್ನಿಸೂಕ್ತವು ಕೇವಲ ಅಗ್ನಿಯನ್ನೇ ಪ್ರತಿಪಾದಿಸುತ್ತದೆ ಹೊರತು, ವಿಷ್ಣುವನ್ನು ಪ್ರತಿಪಾದಿಸುವುದಿಲ್ಲವೆಂಬುದಾಗಿ ನಿರವಕಾಶವಾಗಿದೆ. ಆದ್ದರಿಂದ ಜ್ಯೋತಿಃಶಬ್ದದಿಂದ ಅಗ್ನಿಯೇ ಪ್ರತಿಪಾದ್ಯನೆಂದು ಪೂರ್ವಪಕ್ಷ.

सिद्धान्तस्तु ॥ वि मे कर्णा पतयत इत्यादिनोक्तापरिच्छिन्नवैभवत्वरूपस्य कर्णादिविदूरत्वलिङ्गस्य परोमात्रयेतिश्रुत्या विष्णवेकनिष्ठत्वेनान्यत्रानवकाशत्वात् प्रकाशत्वरूपज्योतिःपदप्रवृत्तिनिमित्तस्य विष्णौ सत्त्वात् । अन्यगतस्य तदधीनत्वात् तद्देवा ज्योतिषां ज्योतिः (बृ. ६-४-१६) इत्यादौ प्रयोगाच्च । तस्य च ज्योतिःपदस्य ज्योतिषैकेषामिति (ब्र.सू. १-४-१४) वक्ष्यमाणदिशा वैष्णवत्वात् ।

विष्णुसूक्तं नेति प्रसिद्धेरज्ञानमूलत्वेन तयोः सावकाशयोः निरवाकाशलिङ्गेन बाधात् । योगरूढिभ्यां ज्योतिःपदवाच्यो विष्णुरेव सूक्तं च तत्परमिति ।

फलन्तु हृदय आहितत्वमुखेन यो वेद निहितं गुहायाम् इत्युक्तानन्दमया-क्षेपस्तत्समाधिश्चेति ॥ १० ॥

'ಏ ಮೇ ಕರ್ಣಾ ಪತಯತಃ' ಇತ್ಯಾದಿ ಶ್ರುತಿಯಿಂದ ಅಪರಿಚ್ಛಿನ್ನವೈಭವತ್ವವೆಂಬ ಕರ್ಣಾದಿ-ವಿದೂರತ್ವಲಿಂಗವು ಕೇಳಿಸುತ್ತಿದೆ. ಈ ಲಿಂಗವು 'ಪರೋ ಮಾತ್ರಯಾ' ಎಂಬ ಶ್ರುತಿ ಹೇಳುವಂತೆ ಕೇವಲ ವಿಷ್ಣುವಿನಲ್ಲಿ ಇರುತ್ತದೆ. ಹೊರತು ಬೇರೆಯವರಲ್ಲಿ ಇರಲು ಸಾಧ್ಯವಿಲ್ಲ. ಆದ್ದರಿಂದ ಪ್ರಕಾಶತ್ವವೆಂಬ ಜ್ಯೋತಿಃಶಬ್ದದ ಪ್ರವೃತ್ತಿನಿಮಿತ್ತವು ವಿಷ್ಣುವಿನಲ್ಲಿಯೇ ಇರುತ್ತದೆ. ಅಗ್ನಿ ಮೊದಲಾದವರಲ್ಲಿ ಇದೇ ಪ್ರಕಾಶತ್ವವು ಭಗವದಧೀನವಾಗಿದೆ ಎಂಬುದಾಗಿ 'ತದ್ದೇವಾ ಜ್ಯೋತಿಷಾಂ ಜ್ಯೋತಿಃ' ಇತ್ಯಾದಿಯಾಗಿ ಬೃಹದಾರಣ್ಯಕದಲ್ಲಿ ಹೇಳಲ್ಪಟ್ಟಿದೆ. ಇಂತಹ ಜ್ಯೋತಿಃಶಬ್ದವು 'ಜ್ಯೋತಿಷೈಕೇಷಾಮ್' ಎಂಬ ಸೂತ್ರದ ಪ್ರಕಾರ ವಿಷ್ಣುಪರವೆಂದು ಸಿದ್ಧವಾಗಿದೆ.

ಇದು ಅಗ್ನಿಸೂಕ್ತವೇ ಆಗಿದೆ; ವಿಷ್ಣುಸೂಕ್ತವಲ್ಲವೆಂಬ ಲೋಕಪ್ರಸಿದ್ಧಿಯು ಅಜ್ಞಾನಮೂಲಕವಾದ್ದರಿಂದ ದುರ್ಬಲವಾಗಿದೆ. ಆದ್ದರಿಂದ ಸಾವಕಾಶವಾದ ಪ್ರಕರಣ ಹಾಗೂ ಶ್ರುತಿಗಳನ್ನು ನಿರವಕಾಶಲಿಂಗದಿಂದ ಬಾಧಿಸಬಹುದು. ಯೋಗ ಹಾಗೂ ರೂಢಿಗಳಿಂದ ಜ್ಯೋತಿಃಶಬ್ದದಿಂದ ಪ್ರತಿಪಾದ್ಯನಾದವನು ವಿಷ್ಣುವೇ ಆಗಿದ್ದಾನಾದ್ದರಿಂದ ಅಗ್ನಿಪ್ರಕರಣದಿಂದಲೂ ಅವನೇ ಪ್ರತಿಪಾದ್ಯನಾಗಿದ್ದಾನೆ.

ಹೃದಯ ಆಹಿತತ್ವವೆಂಬ ಧರ್ಮದ ಮೂಲಕ 'ಯೋ ವೇದ ನಿಹಿತಂ ಗುಹಾಯಾಮ್' ಎಂಬುದಾಗಿ ಹೇಳಲ್ಪಟ್ಟ ಆನಂದಮಯನ ಆಕ್ಷೇಪವೇ ಪೂರ್ವಪಕ್ಷದ ಫಲ; ಆದರ ಪರಿಹಾರವೇ ಸಿದ್ಧಾಂತದ ಫಲ ಎಂದು ತಿಳಿಯಬೇಕು.

* * * * *

# सूत्रार्थरत्नावलिः

(अत्र तत्तत्सूक्तगताशेषशब्दोपलक्षकस्य लोकतोऽन्यत्रप्रसिद्धस्य ज्योतिर्नाम्नो ब्रह्मणि समन्वयः क्रियते)

ॐ॥ ज्योतिश्चरणाभिधानात् ॥ॐ

नन्वग्निरेवेदं ज्योतिः । तस्य सूक्तस्याग्निसूक्तत्वात् (ऋ ६/९/६) । न च लिङ्गात् प्रकरणस्य दुर्बलत्वेन गुहानिहितत्वलिङ्गात्(तै.उ.२/१) प्रकरणबाधः । ज्योतिःश्रुतेरग्नौनिरूढत्वात् । विष्णौ तदभावात् । नच लिङ्गस्य निरवकाशत्वेन श्रुतिप्रकरणबाधकत्वमिति वाच्यम् । लिङ्गस्यापि जाठरजातवेदसि सावकाशत्वात् । लिङ्गस्य निरवकाशत्वेऽपि तस्यैकविधमेव प्राबल्यम् । श्रुतिप्रकरणयोस्त्वनेकप्रयुक्तप्राबल्यात् । श्रुतेश्च स्वाभावत्वप्रयुक्तप्राबल्यमपि श्रुतिप्रकरणाभ्यामेव लिङ्गस्य बाधो युक्तः । अतो ज्योतिषोऽग्नित्वमिति प्राप्ते, सूत्रमाह –

ॐ॥ ज्योतिश्चरणाभिधानात् ॥ॐ अस्यार्थः – ज्योतिः ज्योतिःशब्दवाच्यं ब्रह्मैव न त्वन्यत् । कुतः? चरणाभिधानात् कर्णादीनां विचरणाभिधानात् । ज्योतिषः साकल्येन कर्णादिविदूरत्वश्रवणादित्यर्थः (ऋ ७/९८/१) ।

एवंच कर्णादिविदूरत्वाख्यविष्णुलिङ्गात् । बहुत्वस्वभावबलवत्त्वरूपोभयविधप्राबल्यादपि निरवकाशत्वप्राबल्यस्य बलवत्त्वेन लिङ्गेन श्रुतिप्रकरणबाधोपपत्तेः । महायोगविद्वद्रूढिसद्भावेन श्रुतेर्विष्णावेव मुख्यत्वात् । अतो विष्णुरेवेदं ज्योतिस्तस्यैव गुहानिहितत्वं चेति सिद्धम् ॥

॥ इति सूत्रार्थरत्नावळ्यां ज्योतिरधिकरणं सम्पूर्णम् ॥

॥ इति परिपूर्णचन्द्रिकायां ज्योतिरधिकरणम् सम्पूर्णम् ॥
॥ श्रीमध्वेशार्पणमस्तु ॥

- - - - - -

# ೦೧೧-ಗಾಯತ್ರ್ಯಧಿಕರಣ

ಭಾಗ -೧

ಬ್ರಹ್ಮಸೂತ್ರ, ಸೂತ್ರದೀಪಿಕಾ, ಬ್ರಹ್ಮಸೂತ್ರಭಾಷ್ಯ, ಭಾಷ್ಯದೀಪಿಕಾ,
ಸತ್ತರ್ಕದೀಪಾವಳೀ, ತತ್ವಪ್ರಕಾಶಿಕಾ,
ಭಾವದೀಪ, ವಾಕ್ಯಾರ್ಥಮಂಜರೀ

**॥ಶ್ರೀಹನುಮದ್ಭೀಮಮಧ್ವಾನ್ತರ್ಗತರಾಮಕೃಷ್ಣವೇದವ್ಯಾಸಾತ್ಮಕಲಕ್ಷ್ಮೀಹಯಗ್ರೀವಾಯ ನಮಃ ॥**

॥ ಶ್ರೀಗುರುಭ್ಯೋ ನಮಃ ॥

ದೇವದೇವೋತ್ತಮ ದೇವತಾಸಾರ್ವಭೌಮ

ಅಖಿಲಾಂಡಕೋಟಿಬ್ರಹ್ಮಾಂಡನಾಯಕ,ಚತುರ್ದಶಲೋಕಗುರುಗಳಾದ

ಶ್ರೀವೇದವ್ಯಾಸದೇವರಿಂದ ಅನುಗ್ರಹಿಸಲ್ಪಟ್ಟ

# ಬ್ರಹ್ಮಮೀಮಾಂಸಾಶಾಸ್ತ್ರ

## ॥ ೧೧. अथ छन्दोभिधानाधिकरणम् ॥

## (ಗಾಯತ್ರ್ಯಧಿಕರಣಮ್)

**ಸೂ - ॐ ॥ छन्दोऽभिधानान्नेति चेन्न तथा चेतोऽर्पणनिगदात् तथा हि दर्शनम् ॥ॐ॥ ೨೫ ॥**

ಛಾಂದೋಗ್ಯದಲ್ಲಿರುವ ಗಾಯತ್ರೀಶಬ್ದದಿಂದ ಇಪ್ಪತ್ತನಾಲ್ಕು ಅಕ್ಷರವೆಂಬ ಛಂದಸ್ಸೇ ಪ್ರತಿಪಾದ್ಯವಾಗುತ್ತದೆ ಹೊರತು ವಿಷ್ಣುವಲ್ಲ. ಹೀಗೆ ಹೇಳಬಾರದು. ಏಕೆಂದರೆ, ಮನಸ್ಸಿನಲ್ಲಿ ಭಗವಂತನನ್ನು ಗಾಯತ್ರೀ ಎಂದು ಉಪಾಸನೆ ಮಾಡುವುದಕ್ಕಾಗಿ ಶ್ರುತಿಯಲ್ಲಿ 'ಗಾಯತಿ ತ್ರಾಯತಿ ಚ' ಎಂದು ಗಾನತ್ರಾಣಕರ್ತೃತ್ವವನ್ನು ವಿಷ್ಣುವಿಗೆ ಹೇಳಲಾಗಿದೆ.

ಶ್ರೀಜಗನ್ನಾಥಯತಿಗಳಿಂದ ರಚಿಸಲ್ಪಟ್ಟ

## ಸೂತ್ರದೀಪಿಕಾ

**ಸೂತ್ರದೀಪಿಕಾ** – छन्दोभिधानात् ननु छन्दोगश्रुतिस्थगायत्रीपदेन चतुर्विंशत्यक्षरात्मकछन्दतः प्रतिपादनात् गायत्रीशब्दवाच्यो विष्णुर्नेति चेन्न ।

कुतः? तथाहि दर्शनं हि - यस्मात्, तथा - गानत्राणकर्तृत्वनिमित्तेन दर्शनम् विष्णोः, गायत्रीशब्दवाच्यत्वप्रतिपादिका 'गायति त्रायति च' इति श्रुतिरस्ति । तस्मात् व्यर्थं गायत्रीपदेन विष्णोरभिधानमित्यत उक्तम् – तथेत्यादि ।

तथा चेतोर्पणनिगदात् विष्णोः तथा गायत्र्यादिशब्दप्रवृत्तिनिमित्तवत्वेन चेतसि = अर्पणाय उपासनाय निगदात् = श्रुतौ प्रतिपादनादित्यर्थः । तथा च न वैय्यर्थ्यमिति भावः ।

ಛಂದೋಭಿಧಾನಾತ್ = ಛಾಂದೋಗ್ಯಶ್ರುತಿಯಲ್ಲಿ ಗಾಯತ್ರೀಪದದಿಂದ ಇಪ್ಪತ್ತನಾಲ್ಕು ಅಕ್ಷರರೂಪವಾದ ಛಂದಸ್ಸು ಪ್ರತಿಪಾದಿತವಾಗಿದೆ. ಆದ್ದರಿಂದ ಗಾಯತ್ರೀಶಬ್ದದಿಂದ ವಿಷ್ಣುವು ಪ್ರತಿಪಾದ್ಯನಾಗಲಾರ.

ಇದು ತಪ್ಪು. ಏಕೆಂದರೆ, ತಥಾ ಹಿ ದರ್ಶನಂ ಹಿ =ಯಾವ ಕಾರಣದಿಂದ ಗಾನತ್ರಾಣಕರ್ತೃತ್ವವೆಂಬ ನಿಮಿತ್ತದಿಂದ ವಿಷ್ಣುವಿನಲ್ಲಿ ಗಾಯತ್ರಿಶಬ್ದವಾಚ್ಯತ್ವವನ್ನು ಸಮರ್ಥಿಸುವ 'ಗಾಯತಿ ತ್ರಾಯತಿ ಚ' ಎಂಬ ಶ್ರುತಿಯು ಇರುತ್ತದೆ.

ಆದ್ದರಿಂದ ಗಾಯತ್ರೀಶಬ್ದದಿಂದ ವಿಷ್ಣುವನ್ನೇಕೆ ಪ್ರತಿಪಾದಿಸಬೇಕು ಎಂದರೆ, ತಥಾ ಚೇತೋರ್ಪಣನಿಗದಾತ್ = ವಿಷ್ಣುವಿನಲ್ಲಿ ಗಾನತ್ರಾಣಕರ್ತೃತ್ವವೆಂಬ ಧರ್ಮವಿದೆಯೆಂದು ಮನಸ್ಸಿನಲ್ಲಿ ಉಪಾಸನೆ ಮಾಡುವುದಕ್ಕಾಗಿ ಶ್ರುತಿಯು ವಿಷ್ಣುವನ್ನು ಗಾಯತ್ರಿ ಎನ್ನುತ್ತಿದೆ. ಆದ್ದರಿಂದ ಗಾಯತ್ರೀಪದಸಮನ್ವಯವು ವ್ಯರ್ಥವಲ್ಲ.

---

**श्रीमदानन्दतीर्थभगवत्पादाचार्यविरचित-**

# ब्रह्मसूत्रभाष्यम्

# ११.छन्दोभिधानाधिकरणम्

## (गायत्र्यधिकरणम्)

### ಜ್ಯೋತಿಯೇ ಗಾಯತ್ರಿಯೆಂದು ಆಕ್ಷೇಪ

**भाष्यम् – 'अथ यदतः परो दिवो ज्योतिर्दीप्यते' (छां. ३-१३-७.) इत्युक्तस्य ज्योतिषः 'गायत्री वा इदꣳ सर्वम्' (छां. ३-१२. १.) इति गायत्र्या समारम्भः कृतः ॥ तस्मान्न विष्णुः –**

> ಪ್ರಸಿದ್ಧವಾದ ಸ್ವರ್ಗಲೋಕಕ್ಕಿಂತ ಎತ್ತರದಲ್ಲಿ ಜ್ಯೋತಿಯು ಹೊಳೆಯುತ್ತಿದೆ. ಈ ಮಂತ್ರದಿಂದ ಪ್ರತಿಪಾದ್ಯವಾದ ಜ್ಯೋತಿಯು ಛಾಂದೋಗ್ಯೋಪನಿಷತ್ತಿನ ಉಪಕ್ರಮದಲ್ಲಿ ಗಾಯತ್ರಿಯ ಜೊತೆಗೆ ಪ್ರತಿಪಾದಿಸಲ್ಪಟ್ಟಿದೆ. ಆದ್ದರಿಂದ ಗಾಯತ್ರೀಪದವು ಜ್ಯೋತಿಯನ್ನೇ ಪ್ರತಿಪಾದಿಸುತ್ತದೆ ಹೊರತು, ವಿಷ್ಣುವಲ್ಲ.

ಭಾಷ್ಯದೀಪಿಕಾ – सू - ॐ ॥ छन्दोऽभिधानान्नेति चेन्न तथा चेतोऽर्पणनिगदात् तथा हि दर्शनम् ॥ ॐ ॥ २५ ॥ अत्राधिकरणे अधिवेदगतगायत्र्याद्यशेषशब्दसमन्वयः क्रियते । सङ्गत्यादिजिज्ञासाजननाय सूत्रमेवाऽदौ पठति – छन्द इति ॥ अत्र छन्द इत्यावर्तते । तच्च व्यस्तं समस्तं च । तथा च 'छन्दोऽभिधानात्' 'गायत्री वा इदम्' इति वाक्यस्थगायत्रीशब्देन चतुर्विंशत्यक्षरमन्त्रविशेषात्मकछन्दसः प्रतिपादनात्, तच्छब्दस्य तत्र रूढत्वात्, गायत्रीशब्दवाच्यो न विष्णुः, किन्तु छन्द एव । यतो गायत्री न

ಪ್ರತಿಪದಾರ್ಥ -- ಈ ಅಧಿಕರಣದಲ್ಲಿ ಅಧಿವೇದಗತವಾದ ಗಾಯತ್ರೀ ಮೊದಲಾದ ಎಲ್ಲ ಶಬ್ದಗಳ ಸಮನ್ವಯವನ್ನು ಮಾಡಲು ಹೊರಟಿದ್ದಾರೆ. ಮೊದಲು ಸಂಗತಿ ಪೂರ್ವಪಕ್ಷ ಮೊದಲಾದವುಗಳನ್ನು ಸೂಚಿಸುವವರಾಗಿ ಸೂತ್ರದಲ್ಲಿರುವ ಪೂರ್ವಪಕ್ಷಾಂಶವನ್ನು ವ್ಯಾಖ್ಯಾನಿಸುತ್ತಿದ್ದಾರೆ.

ಅಥ = ಅನಂತರ, ಯದತಃ = ಯಾವ ಪ್ರಸಿದ್ಧವಾದ, ದಿವಃ = ಸ್ವರ್ಗಲೋಕಕ್ಕಿಂತಲೂ, ಪರಃ = ಮೇಲಿರುವ, ಜ್ಯೋತಿಃ = ಜ್ಯೋತಿಯು, ದೀಪ್ಯತೇ = ಪ್ರಕಾಶಿಸುತ್ತಿದೆ, ಇತಿ = ಹೀಗೆ, ಉಕ್ತಸ್ಯ = ಪ್ರತಿಪಾದ್ಯವಾದ, ಜ್ಯೋತಿಷಃ = ಜ್ಯೋತಿಗೆ, 'ಗಾಯತ್ರೀ ವಾ ಇದಂ ಸರ್ವಮ್' = ಗಾಯತ್ರೀ ವಾ ಇದಂ ಸರ್ವಮ್ ಎಂಬ ಛಾಂದೋಗ್ಯೋಪನಿಷತ್ತಿನಲ್ಲಿ, ಗಾಯತ್ರ್ಯಾಃ = ಗಾಯತ್ರಿಯೊಂದಿಗೆ, ಸಮಾರಂಭಃ = ಉಪಕ್ರಮವು, ಕೃತಃ = ಮಾಡಲ್ಪಟ್ಟಿದೆ. ತಸ್ಮಾತ್ = ಆ ಕಾರಣದಿಂದ, ನ ವಿಷ್ಣುಃ = ಗಾಯತ್ರೀಪದದಿಂದ ವಿಷ್ಣುವು ಪ್ರತಿಪಾದ್ಯನಾಗಲಾರ.

---

विष्णुः, अपि तु छन्दः, अतो ज्योतिरपि न विष्णुः किन्तु छन्दः । कुतः ? 'छन्दोऽभिधानात्' छन्दसा गायत्र्या तदैक्याभिप्रायेण ज्योतिषोऽभिधानाद् उपक्रमादिति चेत् – न, विष्णुरेव ज्योतिः । कुतः? 'निगदात्' गायत्रीपदेन विष्णोरेवाभिधानात् । गायत्र्यादिपदैर्विष्णोरेवाभिधानं च न तदभेदविधानार्थं, किन्तु तथोपासनार्थमेवेत्याह – तथेति ॥ 'तथा' गायत्र्यादिशब्दार्थगुणस्वरूपत्वेन 'चेतसो' मनसः 'अर्पणाय' ब्रह्मण्याधानायोपासनार्थमेव विष्णोर्निगदादित्यर्थः । उपासनेत्यनुक्त्वाचेतोर्पणेत्युक्ति-रुपासनास्वरूपकथनार्था । अनेन प्रसिद्धगायत्र्यादिपदेन विष्णोरभिधानं व्यर्थमिति शङ्का परिहृता ।

ननु भवेद् गायत्रीशब्दवाच्यत्वेन विष्णोर्ज्योतिश्शब्दवाच्यत्वसाधनम्, यदि गायत्री-शब्दवाच्यत्वं विष्णोः प्रमितं स्यात् । तदेव कुत इत्यत आह – तथा हीति ॥ 'हि' यस्मात् 'तथा' गानत्राणकर्तृत्वनिमित्तेन विष्णोर्गायत्रीशब्दवाच्यत्वसाधकं 'दर्शनं' दृश्यते ज्ञायतेऽर्थो ययेति व्युत्पत्त्या 'गायति च त्रायति च' (शाखान्तरम्) इत्यादिरूपा श्रुतिरस्ति तस्मादिति सूत्रार्थः ।

श्रुत्यादिसङ्गतिविषयवाक्यविषयसंशयपूर्वपक्षतत्फलानि सूचयन् सूत्रे पूर्वपक्षांशं व्याचष्टे – अथेति ॥ उक्तस्येत्यावर्त्यते । तथा च 'हृदय आहितं यत्' इति गुहानिहितत्वेन यदुक्तं तस्यैव 'ज्योतिषः' पुनः 'अथ यदतः परो दिवो ज्योतिर्दीप्यते विश्वतः पृष्ठेषु सर्वतः पृष्ठेषु अनुत्तमेषूत्तमेषु लोकेषु । इदं वाव तद्यदिदमस्मिन्नन्तःपुरुषे ज्योतिः' इति छान्दोग्येऽप्युक्तस्य 'गायत्र्या' इत्थम्भूतलक्षणे तृतीया । गायत्रीत्वेन तद्रूपतया 'समारम्भः' पाठः कृतः । कुतोऽयं विज्ञायते यतो 'गायत्री वा इदं सर्वं वाग् वै गायत्री वाग्वा इदं सर्वम्' इति वाक्ये 'गायत्र्या' गायत्रीशब्देन तदैक्यतात्पर्येण

**तत्वप्रकाशिका –**

**अत्र सूत्रमेवादौ पठति – छन्दोऽभिधानादिति ॥ लोकतोऽन्यत्रप्रसिद्धगायत्री-नाम्नोऽत्र हरौ समन्वयसमर्थनादस्ति शास्त्रादिसङ्गतिः ।**

---

'समारम्भः' उपक्रमः कृतः, अत इति योजना । ततः किमित्यत आह – तस्मादिति ॥ इदं चाऽवर्तते । ज्योतिर्गायत्रीति च शेषः । छन्द इति चानुषज्यते । तथा च यस्माद् गायत्र्या समारम्भः कृतः, स च यस्मादनुपसञ्जातविरोधित्वेन बलवान्, तस्मादिदं ज्योतिर्गायत्र्येव भवेत् । सा च गायत्री वर्णसमावेशलक्षणमन्त्रात्मकछन्द एव भवेत्, न विष्णुः । कुतः? तस्माद् गायत्रीशब्दस्य छन्दस्येव रूढत्वाद्वाक्त्वाभिधानाच्चेति योजना ॥

अनेन 'गायत्री वा इदं सर्वम्' इति पूर्ववाक्यस्थगायत्रीशब्दस्य विष्ण्वन्यपरत्वे तत एवोत्तरवाक्यस्थज्योतिषो विष्ण्वन्यत्वापत्त्या तत एव अग्निसूक्तगतज्योतिषोऽपि तदन्यत्वमेव भवेत् । अत एवाऽनन्दमयत्वमप्यन्यस्यैव भवेन्न विष्णोरिति पूर्वोक्ताक्षेपेण एतदधिकरणोत्थानात् पूर्वेणास्याऽक्षेपिकी सङ्गतिः ॥

एवं गायत्री विषयः । किं छन्दोविशेषः उत विष्णुरिति सन्देहः । तथा गायत्री छन्दोविशेष एव भवेत्; तच्छब्दस्य तत्र रूढत्वादिति सयुक्तिकः पूर्वपक्षः । तथा तस्माद् ज्योतिरपि छन्द एवेति तस्यैव गुहानिहितत्वमानन्दमयत्वं चेति पूर्वपक्षफलं च सूचितं भवति । अत्र पूर्वपक्षे गायत्र्यादिशब्दाः मन्त्रपराः, सर्वमपि वाक्यं तन्माहात्म्यपरतया योजनीयम् ॥

सिद्धान्ते तु 'अथ' इत्यादेरयमर्थः – भगवन्माहात्म्यान्तरारम्भेऽथशब्दः 'यत्' श्वेतद्वीपानन्तासनवैकुण्ठगतं नारायणवासुदेववैकुण्ठाख्यं रूपत्रयं तत् 'अतः' एतस्माद् विवक्षितात् बुद्धिस्थात् 'दिवः परः' परं तदपेक्षयोच्चस्थानस्थितमित्यर्थः । 'ज्योतिः' तेजोमयं एवम्भूतं तत् 'विश्वतः पृष्ठेषु'

**'पृथिव्यां ब्रह्मणो मेरौ वैजयन्तेऽन्तरिक्षगम् ।**
**तृतीयं सत्यलोके च सदनं त्रिविधं मतम् ॥'**

इति वचनादन्तरिक्षगवैजयन्तमेरुसत्यलोकगतेभ्यो ब्रह्मसदनेभ्यः क्रमेणोच्चेषु 'सर्वतः पृष्ठेषु' अन्तरिक्षपृथिवीस्वरात्मकलोकेभ्यः क्रमेणोच्चेषु 'अनुत्तमेषु' न विद्यते उत्तमो लोको येभ्यस्तेषु प्रत्यवरेष्विति वा । 'उत्तमेषु' स्वयमेवोत्तमेषु 'लोकेषु' श्वेतद्वीपानन्तासनवैकुण्ठेषु 'दीप्यते' प्रकाशते 'तत्' दीप्यमानं तेजः 'इदं वाव' इदं खलु । इदं च किम्? 'यदिदमस्मिन् पुरुषे' हृदये 'अन्तर्ज्योतिः' तच्छब्दितं ब्रह्मास्ति तत्तेनैकीभूतमित्यर्थः । यो गायत्रीनामा गायत्रीसंस्थः स्त्रीरूपो हयशीर्षाख्यो भगवान्

**श्रुत्यादिसङ्गतिविषयवाक्यविषयसंशयपूर्वपक्षतत्फलानि सूचयन् सूत्रं व्याचष्टे – अथेति ॥ हृदयनिहितं ज्योतिर्विष्णुरित्यभिहितं तच्च ज्योतिश्छन्दोगश्रुतौ श्रूयते । 'अथ यदतःपरो दिवो ज्योतिर्दीप्यते विश्वतः पृष्ठेषु सर्वतः पृष्ठेष्वनुत्तमेषूत्तमेषु लोकेष्विदं वाव तद्यदिदमस्मिन्पुरुषे ज्योतिः' इति । एतच्च गायत्रीत्वेन पठ्यते । 'गायत्री वा इदं सर्वं भूतं यदिदं किञ्च वाग्वै गायत्री वाग्वा इदं सर्वम्' इत्युपक्रमात् । इयं च गायत्री यदा विष्णोरन्यास्यात् तदा इदं ज्योतिश्च सा स्यादिति गायत्री-निर्णयोऽत्रावश्यापेक्षितः ।**

**सा गायत्री विषयः । किं विष्णुरुत च्छन्दोविशेषः? इति सन्देहः । ज्योतिःश्रुतिर्लोकप्रसिद्धिश्च सन्देहबीजम् ।**

ಈ ಅಧಿಕರಣದಲ್ಲಿ ಭಾಷ್ಯಕಾರರು ಸೂತ್ರವನ್ನೇ ಮೊದಲು ಹೇಳುತ್ತಿದ್ದಾರೆ. ''ಛಂದೋಭಿಧಾನಾತ್'' ಇತ್ಯಾದಿಯಾಗಿ. ಲೋಕದಲ್ಲಿ ಅನ್ಯತ್ರಪ್ರಸಿದ್ಧವಾದ(ಛಂದಸ್ಸಿನಲ್ಲಿ) 'ಗಾಯತ್ರೀ ಎಂಬ ನಾಮಾತ್ಮಕಶಬ್ದವನ್ನು ಶ್ರೀಹರಿಯಲ್ಲಿ ಸಮನ್ವಯ ಮಾಡುವುದರಿಂದ ಈ ಅಧಿಕರಣಕ್ಕೆ ಶಾಸ್ತ್ರಸಂಗತಿ, ಅಧ್ಯಾಯಸಂಗತಿ, ಪಾದಸಂಗತಿಗಳು ಇರುತ್ತವೆ.

ಇನ್ನು ಶ್ರುತಿಸಂಗತಿ, ಅಧಿಕರಣಸಂಗತಿ, ವಿಷಯವಾಕ್ಯ, ವಿಷಯ, ಸಂಶಯ, ಪೂರ್ವಪಕ್ಷ, ಪೂರ್ವಪಕ್ಷದ ಫಲ ಇವುಗಳನ್ನು ಭಾಷ್ಯಕಾರರು ಸೂಚನೆ ಮಾಡುತ್ತಾ ಸೂತ್ರವನ್ನು ''ಅಥ'' ಇತ್ಯಾದಿಗ್ರಂಥದಿಂದ ವ್ಯಾಖ್ಯಾನಿಸುತ್ತಿದ್ದಾರೆ. 'ಹೃದಯದಲ್ಲಿ ನೆಲೆಸಿರುವ ಜ್ಯೋತಿಯು ವಿಷ್ಣುವೇ ಆಗಿದ್ದಾನೆಂದು ಹಿಂದಿನ ಅಧಿಕರಣದಲ್ಲಿ ಸಮರ್ಥಿಸಿದ್ದಾಯಿತು. ಆದರೆ ಆ ಜ್ಯೋತಿಯೇ ಛಾಂದೋಗ್ಯಶ್ರುತಿಯಲ್ಲಿ ಹೀಗೆ ಪ್ರತಿಪಾದ್ಯನಾಗಿದ್ದಾನೆ.

''ಅಥ ಯದತಃ ಪರೋ ದಿವೋ ಜ್ಯೋತಿರ್ದೀಪ್ಯತೇ ವಿಶ್ವತಃ ಪೃಷ್ಠೇಷು ಸರ್ವತಃ ಪೃಷ್ಠೇಷ್ವನುತ್ತಮೇಷೂತ್ತಮೇಷು ಲೋಕೇಷ್ವಿದಂ ವಾವ ತದ್ಯದಿದಮಸ್ಮಿನ್ ಪುರುಷೇ ಜ್ಯೋತಿಃ''

---

ತದಿದಂ ಪ್ರಥಮಂ ರೂಪಮಿತ್ಯಾಶಯೇನ ತಸ್ಯ ದ್ವಿತೀಯಂ ರೂಪಂ ವಕ್ತುಂ ಗಾಯತ್ರೀತ್ಯಾದಿವಾಕ್ಯಂ ಪ್ರವೃತ್ತಮ್ । 'ಯದಿದಂ ಕಿಞ್ಚ ಭೂತಂ' ಪೂರ್ಣಂ ಮತ್ಸ್ಯಾದ್ಯವತಾರರೂಪಂ ಯಚ್ಚ 'ಸರ್ವಂ' ಸರ್ವಾನ್ತಃಸ್ಥಿತಂ ರೂಪಂ ತತ್ಸರ್ವಂ 'ಗಾಯತ್ರೀ' ಗಾಯತ್ರೀನಾಮಾ ಭಗವಾನೇವ । ವೈ ಪ್ರಸಿದ್ಧಮ್ । ತಸ್ಯೈವ ತೃತೀಯಂ ರೂಪಮಾಹ – ವಾಗಿತಿ ॥ ಗಾಯತ್ರೀನಾಮಾ ಭಗವಾನ್ 'ವಾಗ್ ವೈ' ವಾಙ್ನಾಮಕೋ ವಿಷ್ಣುರೇವ । ಕುತೋऽಸ್ಯ ವಿಷ್ಣುತ್ವಮಿತ್ಯತಸ್ತಲ್ಲಕ್ಷಣಯೋಗಾದಿತ್ಯಾಹ – ವಾಗ್ ವಾ ಇತಿ ॥ 'ಇದಂ ಸರ್ವಂ ಭೂತಂ' ಪ್ರಾಣಿಜಾತಂ 'ವಾಗ್ ವೈ' ವಾಙ್ನಾಮಕ- ಭಗವದಧೀನಮೇವ । ಅತಃ ಸರ್ವಸ್ವಾಮಿತ್ವಾದ್ ವಾಚೋ ವಿಷ್ಣುತ್ವಮಿತಿ ॥

(ದ್ಯುಲೋಕಕ್ಕಿಂತ ಮೇಲೆ ಶ್ವೇತದ್ವೀಪ ಅನಂತಾಸನ ವೈಕುಂಠಗಳೆಂಬ ಮೂರು ಪರಮಾತ್ಮನ ಸ್ಥಾನಗಳಿರುತ್ತವೆ. ಆ ಸ್ಥಾನಗಳಲ್ಲಿರುವ ಜ್ಯೋತಿಯು ತೇಜೋಮಯವಾಗಿದೆ. ಮತ್ತು ಮೇರು-ಪರ್ವತ, ವೈಜಯಂತ, ಸತ್ಯಲೋಕವೆಂಬ ಬ್ರಹ್ಮನ ಸ್ಥಾನಗಳಿಗಿಂತ ಕ್ರಮವಾಗಿ ಎತ್ತರದಲ್ಲಿವೆ. ಭೂರ್ಲೋಕ ಭುವರ್ಲೋಕ ಸ್ವರ್ಗಲೋಕ ಮೊದಲಾದವುಗಳಿಗಿಂತಲೂ ಎತ್ತರದಲ್ಲಿವೆ. ಈ ಮೂರು ಸ್ಥಾನಗಳಿಗಿಂತ ಉತ್ತಮವಾದ ಲೋಕ ಮತ್ತೊಂದಿರುವುದಿಲ್ಲ. ಇಂತಹ ಅನಂತಾಸನಾದಿ ಮೂರು ಸ್ಥಾನಗಳಲ್ಲಿ ಯಾವುದು ಜಾಜ್ವಲ್ಯಮಾನವಾಗಿದೆಯೋ ಆ ವಸ್ತುವೇ ಸರ್ವಲೋಕಗಳಲ್ಲಿ ಪ್ರಕಾಶಿಸುವ ತೇಜೋಮಯವಾಗಿದೆ. ಮತ್ತು ಪುರುಷರ ಹೃದಯಾಕಾಶದಲ್ಲಿಯೂ ಪ್ರಕಾಶಿಸುವ ಜ್ಯೋತಿಯೆನಿಸಿದೆ)

ಹೀಗೆ ಛಾಂದೋಗ್ಯೋಪನಿಷತ್ತಿನಲ್ಲಿ ಜ್ಯೋತಿಯು ಗಾಯತ್ರೀಯೆಂದು ಪಠಿತವಾಗಿದೆ. ಏಕೆಂದರೆ 'ಗಾಯತ್ರೀ ವಾ ಇದಂ ಸರ್ವಂ ಭೂತಂ ಯದಿದಂ ಕಿಂಚ ವಾಗ್ ವೈ ಗಾಯತ್ರೀ ವಾಗ್ ವಾ ಇದಂ ಸರ್ವಮ್' ಎಂಬುದಾಗಿ ಈ ಪ್ರಕರಣದ ಪ್ರಾರಂಭದಲ್ಲಿ ಗಾಯತ್ರೀಯು ಪ್ರಸಕ್ತವಾಗಿದೆ. ಈ ಗಾಯತ್ರೀಯು ಒಂದು ವೇಳೆ ವಿಷ್ಣುವಿಗಿಂತ ಭಿನ್ನವಾದಲ್ಲಿ ಆವಾಗ ಈ ಜ್ಯೋತಿಯೂ ಸಹ ಗಾಯತ್ರಿಯೇ ಆಗಬೇಕು. ಆದ್ದರಿಂದ ಮೊದಲು ಗಾಯತ್ರೀಶಬ್ದಪ್ರತಿಪಾದ್ಯವಾದ ವಸ್ತು ಯಾವುದು? ಎಂಬುದನ್ನು ಅವಶ್ಯವಾಗಿ ನಿರ್ಣಯಿಸಬೇಕು.

ಈ ಅಧಿಕರಣದಲ್ಲಿ ಗಾಯತ್ರೀಯೆ ವಿಷಯವಾಗಿದೆ. ಗಾಯತ್ರೀಶಬ್ದದಿಂದ ಪ್ರತಿಪಾದ್ಯನಾದವನು ವಿಷ್ಣುವೋ? ಅಥವಾ ಛಂದೋವಿಶೇಷವೋ ಎಂದು ಸಂದೇಹ. ಛಾಂದೋಗ್ಯದಲ್ಲಿರುವ ಜ್ಯೋತಿಃ-ಶಬ್ದವು ಹಾಗೂ ಲೋಕಪ್ರಸಿದ್ಧಿಯೂ ಸಂದೇಹಕ್ಕೆ ಕಾರಣವಾಗಿದೆ.

**(ತತ್ವ-) तत्र गायत्री छन्दोविशेष एवेति पूर्वः पक्षः । गायत्रीशब्दस्य तत्रैव रुढत्वात् । वाग्वै गायत्रीति वाक्त्वविधानाच्च । न च ज्योतिःश्रुत्या गायत्र्यादि-श्रुतिबाधः । श्रुतेः श्रुतिबाधकत्वायोगात् । न च सावकाशत्वादिना बाध्यबाधक-भावः । गायात्र्यां 'तेजो वै ब्रह्मवर्चसं गायत्री' इति ज्योतिःशब्दानतिभिन्नार्थ-तेजःशब्दश्रवणेन ज्योतिःश्रुतेरेव सावकाशत्वात् ।**

**न च गायत्रीश्रुतिर्विष्णाववकाशवतीरूढेरभावात् । योगस्य चामुख्यवृत्तित्वात् । न च गायत्री भगवदधीनत्वेन तस्मिन्नेव तच्छतेर्मुख्यत्वमिति वाच्यम् । गायत्र्या वेदविशेषत्वेन नित्यत्वात् । नित्यस्य च पराधीनताऽयोगात् । तस्मात् गायत्री न विष्णुरपि तु छन्दोविशेष एव ततश्चेदं ज्योतिरानन्दमयश्च नासाविति भावः ।**

ಪೂರ್ವಪಕ್ಷ -- ಗಾಯತ್ರೀಯು ಛಂದೋವಿಶೇಷವೆಂದೇ ಪೂರ್ವಪಕ್ಷ. ಏಕೆಂದರೆ, ಛಂದೋವಿಶೇಷದಲ್ಲೇ ಗಾಯತ್ರೀಶಬ್ದವು ರೂಢವಾಗಿದೆ. ಮತ್ತು 'ವಾಗ್ ವೈ ಗಾಯತ್ರೀ' ಎಂಬುದಾಗಿ ಗಾಯತ್ರೀಯು ಶಬ್ದರೂಪವಾಗಿದೆ ಎಂದು ಶ್ರುತಿಯೇ ಹೇಳಿದೆ. ಇನ್ನು ಜ್ಯೋತಿಃಶ್ರುತಿಯಿಂದ ಗಾಯತ್ರೀಶ್ರುತಿಗೆ ಬಾಧವನ್ನು ಹೇಳಬೇಕು. ಆದರೆ ಒಂದು ಶ್ರುತಿಯು ಮತ್ತೊಂದು ಶ್ರುತಿಗೆ ಬಾಧಕವಾಗಿದ್ದು ಎಲ್ಲಿಯೂ ಕಂಡಿಲ್ಲ. ಪರಸ್ಪರ ಎರಡು ಶ್ರುತಿಗಳಲ್ಲಿ ಒಂದು ಶ್ರುತಿಯು ಸಾವಕಾಶವಾಗಿದ್ದಲ್ಲಿ ಮತ್ತೊಂದು ನಿರವಕಾಶಶ್ರುತಿಯಿಂದ ಬಾಧವನ್ನು ಹೇಳಬಹುದು. ಆದರೆ ಪ್ರಕೃತ ಗಾಯತ್ರೀಶ್ರುತಿಗೆ ಸಾವಕಾಶತ್ವವನ್ನೇ ಹೇಳಲಾಗದು. ಹೊರತಾಗಿ ಜ್ಯೋತಿಃಶ್ರುತಿಯೇ ಸಾವಕಾಶವಾಗಿದೆ. ಏಕೆಂದರೆ 'ತೇಜೋ ವೈ ಬ್ರಹ್ಮವರ್ಚಸಂ ಗಾಯತ್ರೀ' ಎಂಬುದಾಗಿ ಗಾಯತ್ರ್ಯರ್ಥದಲ್ಲಿ ತೇಜಸ್ಶಬ್ದವು ಪಠಿತವಾಗಿದೆ. ಈ ಶ್ರುತಿಯಲ್ಲಿ ತೇಜಃಶಬ್ದವು ಕೇಳಿಸುತ್ತಿದ್ದರೂ, ಜ್ಯೋತಿಃಶಬ್ದದ ಅರ್ಥದಲ್ಲಿಯೇ ಪಠಿತವಾದ್ದರಿಂದ ತೇಜಸ್ಸು ಜ್ಯೋತಿಯೆನಿಸಿದೆ.

ಇದರಂತೆ ಗಾಯತ್ರೀಶಬ್ದವು ವಿಷ್ಣುವಿನಲ್ಲಿ ಸಾವಕಾಶವೆಂದು ಹೇಳಲಾಗದು. ಏಕೆಂದರೆ ವಿಷ್ಣುವಿನಲ್ಲಿ ಗಾಯತ್ರೀಶಬ್ದಕ್ಕೆ ರೂಢಿಯು ಇರುವುದಿಲ್ಲ. ಯೋಗವಿದ್ದರೂ ಸಹ ಅಮುಖ್ಯವೃತ್ತಿಯಾಗುತ್ತದೆ.

ಇನ್ನು ಗಾಯತ್ರೀಯೆಂಬ ಛಂದೋವಿಶೇಷವು ಭಗವಂತನ ಆಧೀನವಾದ್ದರಿಂದ ಭಗವಂತನಲ್ಲಿಯೇ ಗಾಯತ್ರೀಶಬ್ದದ ಮುಖ್ಯಾರ್ಥವು ಕೂಡುತ್ತದೆ ಎಂದೂ ಸಹ ಹೇಳಲಾಗದು. ಏಕೆಂದರೆ ಗಾಯತ್ರೀ ಎಂಬುದು ವೇದವಿಶೇಷವಾದ್ದರಿಂದ ನಿತ್ಯವಾಗಿದೆ. ಯಾವುದೇ ನಿತ್ಯಪದಾರ್ಥಗಳಿಗೆ ಅಸ್ವಾತಂತ್ರ್ಯವಿರುವುದಿಲ್ಲ.

ಈ ಎಲ್ಲ ಕಾರಣಗಳಿಂದ ಗಾಯತ್ರೀ ಎಂದರೆ ಛಂದೋವಿಶೇಷವೇ ಆಗುತ್ತದೆ ಹೊರತು; ವಿಷ್ಣುವಲ್ಲ. ಆದ್ದರಿಂದ ಜ್ಯೋತಿಯಾಗಲೀ, ಆನಂದಮಯನಾಗಲೀ ವಿಷ್ಣುವಾಗಲು ಸಾಧ್ಯವಿಲ್ಲ. ಎಂದು ಅಭಿಪ್ರಾಯ.

ಭಾವದೀಪಃ – ಓಂ ಛನ್ದೋಭಿಧಾನಾತ್ ನೇತಿ ಚೇನ್ನ ತಥಾ ಚೇತೋऽರ್ಪಣನಿಗದಾತ್ ತಥಾ ಹಿ ದರ್ಶನಮ್ ಓಂ ॥ **ಅನ್ಯತ್ರೇತಿ ॥ 'ವರ್ಣಸಮಾವೇಶರೂಪಮನ್ತ್ರೇ'** ಇತ್ಯರ್ಥಃ । ಅಧ್ಯಾಹಾರೇಣ ಭಾಷ್ಯಸ್ಯೋಕ್ತಾರ್ಥಸೂಚಕತ್ವಂ ವ್ಯನಕ್ತಿ – **ಹೃದಯೇತಿ ॥ ಛನ್ದೋಗೇತಿ ॥** ತೃತೀಯೇऽಧ್ಯಾಯೇ ಜ್ಯೋತಿರಿತಿ ಶ್ರೂಯತ ಇತ್ಯನ್ವಯಃ । ಸೌತ್ರಪದಾನಾಮ್ ಅರ್ಥೋऽಗ್ರೇ ವ್ಯಕ್ತಃ ಇತಿ **'ಗಾಯತ್ರ್ಯಾ ಸಮಾರಮ್ಭಃ ಕೃತಃ ತಸ್ಮಾತ್'** ಇತ್ಯನ್ತಭಾಷ್ಯಸ್ಯಾರ್ಥ ಇತ್ಯುಪಕ್ರಮಾದಿತಿ ॥

**'ವಿಷ್ಣುಃ'** ಇತ್ಯಸ್ಯ ತಾತ್ಪರ್ಯಮಾಹ – **ಇಯಂ ಚೇತಿ ॥ ಇದಮಿತಿ ॥** ಪುರುಷೇ ಜ್ಯೋತಿರಿತ್ಯುಕ್ತಂ ಪೂರ್ವೋಕ್ತಜ್ಯೋತಿಶ್ಚೇತ್ಯರ್ಥಃ । ಏತೇನ ಭಾಷ್ಯೇऽಸ್ಮಿನ್ನರ್ಥೇ ಜ್ಯೋತಿಶ್ಚೇತಿ ಶೇಷ ಇತಿ ಭಾವಃ । ಇತಿ

**पूर्वाक्षेपसङ्गतिसद्भावाद् गायत्रीनिर्णयोऽवश्यापेक्षित इत्यर्थः* । एतेन सङ्गतिफलं सूचयन् इति विवृतम् । वाग् इत्याद्यंशोक्तिरुत्तरार्था ।**

ಓಂ ಛಂದೋಭಿಧಾನಾತ್ ॥ ಟೀಕೆಯಲ್ಲಿ ''ಅನ್ಯತ್ರಪ್ರಸಿದ್ಧ'' ಎಂದು ಹೇಳಿದ್ದಾರೆ. ಅಂದರೆ ಗಾಯತ್ರೀ ಎಂಬ ನಾಮವು ವರ್ಣಸಮಾವೇಶರೂಪವಾದ ಮಂತ್ರದಲ್ಲಿ ಪ್ರಸಿದ್ಧವಾಗಿದೆ ಎಂದರ್ಥ. ಅಧ್ಯಾಹಾರ ಮಾಡುವ ಮೂಲಕವಾಗಿ ಭಾಷ್ಯಕ್ಕೆ ಟೀಕೆಯಲ್ಲಿದೆ ಹೇಳಿದ ಅರ್ಥವು ಸೂಕ್ತವೆಂದು ವ್ಯಾಖ್ಯಾನಿಸುತ್ತಿದ್ದಾರೆ ''ಹೃದಯ'' ಇತ್ಯಾದಿ ವಾಕ್ಯದಿಂದ. ''ಛಂದೋಗ'' ಛಂದೋಗಶ್ರುತಿಯೆಂದರೆ ಛಾಂದೋಗ್ಯದ ಮೂರನೆಯ ಅಧ್ಯಾಯದಲ್ಲಿ 'ಜ್ಯೋತಿಯು' ಎಂಬುದಾಗಿ ಕೇಳಿಸುತ್ತಿದೆ ಎಂದನ್ವಯ. ಸೂತ್ರದಲ್ಲಿರುವ ಪದಗಳ ಅರ್ಥವು ಮುಂದೆ ಸ್ಪಷ್ಟವಾಗುತ್ತದೆ. ಆದ್ದರಿಂದ 'ಗಾಯತ್ರ್ಯಾ ಸಮಾರಂಭಃ ಕೃತಃ' ಎಂಬುದರಿಂದ ಪ್ರಾರಂಭಿಸಿ 'ತಸ್ಮಾತ್' ಎಂಬಲ್ಲಿಯ ತನಕ ಇರುವ ಭಾಷ್ಯದ ಅರ್ಥವನ್ನು ''ಇತ್ಯುಪಕ್ರಮಾತ್'' ಇತ್ಯಾದಿಯಾಗಿ ವ್ಯಾಖ್ಯಾನಿಸಿದ್ದಾರೆ. 'ವಿಷ್ಣುಃ' ಎಂಬುದರ ತಾತ್ಪರ್ಯವನ್ನು ''ಇಯಂ ಚ'' ಇತ್ಯಾದಿ ಟೀಕೆಯಲ್ಲಿ ಹೇಳಿದ್ದಾರೆ. ''ಇದಂ ಜ್ಯೋತಿಶ್ಚ'' ಎಂಬ ಟೀಕೆಯ ಮಾತಿಗೆ 'ಪುರುಷೇ ಜ್ಯೋತಿಃ' ಎಂಬುದಾಗಿ ಹೇಳಿದ್ದನ್ನು ಮತ್ತು ಹಿಂದೆ ಹೇಳಿದ ಜ್ಯೋತಿಯನ್ನೂ ಸಹ ವಿವಕ್ಷಿಸಬೇಕು. ಹೀಗೆ ಹೇಳಿದ್ದರಿಂದ ಭಾಷ್ಯದಲ್ಲಿ 'ಜ್ಯೋತಿಶ್ಚ' ಎಂಬುದನ್ನು ಈ ಅರ್ಥದಲ್ಲಿ ಶೇಷಪೂರ್ಣಮಾಡಿಕೊಳ್ಳಬೇಕೆಂದು ತಿಳಿಯುತ್ತದೆ. ಹೀಗೆ ಹಿಂದಿನ ಅಧಿಕರಣದ ಸಿದ್ಧಾಂತದ ಮೇಲೆ ಆಕ್ಷೇಪವು ಬರುವುದರಿಂದ ಗಾಯತ್ರೀಶಬ್ದದ ಅರ್ಥನಿರ್ಣಯವನ್ನು ಅವಶ್ಯವಾಗಿ ಮಾಡಬೇಕು. ಇದರಿಂದ ಈ ಅಧಿಕರಣಕ್ಕೆ ಸಂಗತಿ ಹಾಗೂ ಫಲಗಳನ್ನು ಸೂಚಿಸಿದ್ದಾರೆಂದು ವಿವರಿಸಿದಂತಾಯಿತು. ''ವಾಗ್'' ಇತ್ಯಾದಿ ಅಂಶವನ್ನು ಉತ್ತರ ನೀಡುವುದಕ್ಕಾಗಿ ಉಲ್ಲೇಖಿಸಿದ್ದಾರೆ.

**(भा)'छन्दोभिधानात् नेति चेत्' इति सौत्रशङ्काभागविवरणपरतयाऽपि भाष्यं व्यनक्ति – तत्र गायत्रीति ॥ न विष्णुरिति ॥ भाष्ये 'गायत्री'ति पदस्येति शेषमुपेत्यान्वयमुखेनार्थकल्पनं कृत्वा, 'तस्मात्' इति हेत्वंशं व्याचष्टे – रूढत्वादिति ॥ पूर्वपक्षदार्ढ्याय 'कथं प्रसिद्धबहुलशब्दानामन्यथार्थता'**

* अत्र गायत्री किं छन्दः, उत विष्णुरिति चिन्ता । तदर्थं गायत्रीश्रुतिर्गानत्राणकर्तृत्वादि विष्णुप्रापकबाधिका उत तद्बाध्या इति । तदर्थं सा श्रुतिस्तदुपोद्बलकत्वेनाभिमतम् 'अमृतं दिवि' इति 'परो दिवः' इत्युपदेशभेदविरोधादिकं च किं निरवकाशमुत सावकाशमिति । तदर्थं गायत्र्यादिशब्दप्रवृत्तिकारणं द्युस्थितत्वद्युपरत्वादिकं च हरेर्न सम्भवत्युत सम्भवतीति । तदर्थं हरेरनादिपदार्थतत्स्वभावनियामकत्वं द्युस्थितत्वद्युपरत्वोपदेशाविरोधापादकादिकं नास्त्युतास्तीति । तदर्थं तत्र तत्कल्पकत्वेनाभिमतस्य भूतादिपादत्वलिङ्गादेः विष्वेकनिष्ठत्वरूपनिरवकाशत्वे च प्रमाणं नास्त्युतास्तीति ।

– भावबोधः ।

**ಇತ್ಯನುಭಾಷ್ಯೋಕ್ತಿಲಬ್ಧಮಪಿ ಹೇತುಂ ತಸ್ಮಾದಿತ್ಯತ್ಯಸ್ಯಾರ್ಥತ್ವೇನೋಪೆತ್ಯಾಹ – ವಾಗ್ವಾ ಇತಿ ॥ ಜ್ಯೋತಿಃಶ್ರುತೇರ್ವಿಷ್ಣುಪರತ್ವಸ್ಯ ಪೂರ್ವಮುಕ್ತತ್ವೇನ ತದ್ವಿರೋಧಾನ್ನಾತ್ರ ಪೂರ್ವಪಕ್ಷೋದಯ ಇತ್ಯಾಶಙ್ಕಾಂ ನಿರಾಹ – ನ ಚ ಜ್ಯೋತಿಃಶ್ರುತ್ಯೇತಿ ॥ 'ತಸ್ಮಾತ್' ಇತ್ಯಸ್ಯಾರ್ಥಾನ್ತರಮಪ್ಯಾಹ – ಜ್ಯೋತಿಃಶ್ರುತೇರೇವ ಸಾವಕಾಶತ್ವಾದಿತಿ ॥ ಗಾಯತ್ರೀಶ್ರುತೇರ್ನಿರವಕಾಶತ್ವಾತ್ಇತ್ಯಪ್ಯರ್ಥಮುಪೇತ್ಯ ನಿರವಕಾಶತ್ವಮುಪಪಾದಯತಿ – ನ ಚ ಗಾಯತ್ರೀಶ್ರುತಿರಿತಿ ॥ ಯೋಗಸ್ಯೇತಿ ॥** ಗಾನತ್ರಾಣಕರ್ತೃತ್ವರೂಪಸ್ಯೇತ್ಯರ್ಥಃ ।.

ಛಂದೋಭಿಧಾನಾತ್ ನೇತಿ ಚೇತ್ ಎಂಬ ಸೂತ್ರದಲ್ಲಿರುವ ಶಂಕಾಭಾಗದ ವಿವರಣಪರವಾಗಿ ಭಾಷ್ಯವನ್ನು ''ತತ್ರ ಗಾಯತ್ರಿ'' ಇತ್ಯಾದಿಯಾಗಿ ವ್ಯಾಖ್ಯಾನಿಸುತ್ತಿದ್ದಾರೆ. ''ನ ವಿಷ್ಣುಃ'' ಎಂಬ ಸಾಧ್ಯಕ್ಕೆ ರೂಢತ್ವಾತ್ ಎಂಬುದು ಹೇತುವಾಗಿದೆ. ಭಾಷ್ಯದಲ್ಲಿ 'ಗಾಯತ್ರೀ' ಎಂಬ ಪದವನ್ನು ಶೇಷಪೂರಣೆ ಮಾಡಿಕೊಂಡು ಅನ್ವಯಿಸಿ ಅರ್ಥವನ್ನು ಹೇಳಬೇಕು. ತಸ್ಮಾತ್ ಎಂಬುದರಿಂದ ದೊರೆಯುವ ಹೇತ್ವಂಶವನ್ನು ''ರೂಢತ್ವಾತ್'' ಇತ್ಯಾದಿಯಾಗಿ ವ್ಯಾಖ್ಯಾನಿಸುತ್ತಿದ್ದಾರೆ. 'ಕಥಂ ಬಹುಲಶಬ್ದಾನಾಮನ್ಯಥಾರ್ಥತಾ' 'ಬಹುಲವಾದ ಶಬ್ದಗಳಿಗೆ ಅನ್ಯಥಾ ಅರ್ಥವನ್ನು ಹೇಗೆ ಮಾಡುತ್ತೀರಿ?' ಎಂಬುದಾಗಿ ಅನುವ್ಯಾಖ್ಯಾನದಲ್ಲಿ ಪೂರ್ವಪಕ್ಷವನ್ನು ಸ್ಪಷ್ಟಪಡಿಸಿದ್ದಾರೆ. ಆದರೂ ಸಹ ಮತ್ತಷ್ಟು ಪೂರ್ವಪಕ್ಷವನ್ನು ಬಲಪಡಿಸುವುದಕ್ಕಾಗಿ ಹೇತುವನ್ನು ''ವಾಗ್ವಾ'' ಇತ್ಯಾದಿ ಟೀಕೆಯಿಂದ ಹೇಳುತ್ತಿದ್ದಾರೆ.

ಜ್ಯೋತಿಃಶ್ರುತಿಯು ವಿಷ್ಣುಪರವಾಗಿದೆಯೆಂದು ಹಿಂದಿನ ಅಧಿಕರಣದಲ್ಲಿ ಹೇಳಿದ್ದರಿಂದ ಈ ಅಧಿಕರಣದಲ್ಲಿ ಪೂರ್ವಪಕ್ಷವೇ ಹುಟ್ಟುವುದಿಲ್ಲವಲ್ಲವೇ? ಎಂಬ ಶಂಕೆಯನ್ನು ''ನ ಚ ಜ್ಯೋತಿಃಶ್ರುತ್ಯಾ'' ಇತ್ಯಾದಿವಾಕ್ಯದಿಂದ ನಿರಾಕರಿಸುತ್ತಿದ್ದಾರೆ. 'ತಸ್ಮಾನ್ನ ವಿಷ್ಣುಃ' ಎಂಬ ಭಾಷ್ಯದ ಮಾತಿಗೆ ಮತ್ತೊಂದು ಬಗೆಯ ವ್ಯಾಖ್ಯಾನವನ್ನು ''ಜ್ಯೋತಿಃಶ್ರುತೇರೇವ ಸಾವಕಾಶತ್ವಾತ್'' ಎಂಬುದಾಗಿ ಮಾಡುತ್ತಿದ್ದಾರೆ. 'ಗಾಯತ್ರೀ ಶ್ರುತಿಗೆ ನಿರವಕಾಶತ್ವವಿರುವುದರಿಂದ' ಎಂದು ಇದರ ಅರ್ಥ. ಹೀಗೆ ಅಂಗೀಕರಿಸಿ ಗಾಯತ್ರೀಶ್ರುತಿಗೆ ನಿರವಕಾಶತ್ವವನ್ನು ''ನಚ ಗಾಯತ್ರೀ'' ಇತ್ಯಾದಿ ಟೀಕೆಯಿಂದ ಉಪಪಾದಿಸುತ್ತಿದ್ದಾರೆ. ''ಯೋಗಸ್ಯ'' ಎಂಬ ಪದಕ್ಕೆ ಗಾನತ್ರಾಣಕರ್ತೃತ್ವರೂಪವಾದ ಯೋಗಕ್ಕೆ ಎಂದರ್ಥ.

(ಭಾ) ಪ್ರಮಾಣಾಶ್ರಿತಚೋದ್ಯಮುಕ್ತ್ವಾ ಪ್ರಮೇಯಾಶ್ರಿತಮಪಿ ತತ್ **'ನಿತ್ಯತ್ವಾದೇವ ಶಬ್ದಾನಾಂ ತತ್ಸ್ವಭಾವಃ ಕಥಂ ತತಃ'*** ಇತ್ಯನುಭಾಷ್ಯೋಕ್ತಂ ಶಙ್ಕಾಪೂರ್ವಮಾಹ – **ನ ಚ ಗಾಯತ್ರ್ಯಾ ಇತಿ ॥ 'ಸ್ವಾತನ್ತ್ರ್ಯಂ ತತ್ರ ಮುಖ್ಯಂ ಸ್ಯಾತ್' ಇತ್ಯುಕ್ತೇರಾಹ – ಮುಖ್ಯತ್ವಮಿತಿ ॥** ಗಾಯತ್ರೀಪದಪ್ರವೃತ್ತಿನಿಮಿತ್ತಸ್ಯ ಗಾಯತ್ರೀಸ್ವಭಾವತ್ವಾತ್ ತಸ್ಯಾ ಈಶಾಧೀನತ್ವೇನ ಪ್ರವೃತ್ತಿನಿಮಿತ್ತಸ್ಯಾಪಿ ತಥಾತ್ವಮಿತಿ ಪ್ರವೃತ್ತಿನಿಮಿತ್ತಸ್ಯೇಶಾಧೀನತ್ವಾದೌ ಯುಕ್ತಿಸೂಚನಾಯ ಗಾಯತ್ರ್ಯಾ ಇತ್ಯೇವೋಕ್ತಮ್ । 'ತಸ್ಮಾತ್' ಇತ್ಯಸ್ಯಾರ್ಥಾನ್ತರಂ 'ಗಾಯತ್ರ್ಯಾ ನಿತ್ಯತ್ವಾತ್' ಇತಿ । **ನಿತ್ಯಸ್ಯ ಚೇತಿ ॥** 'ಅನಾದೇಃ' ಇತ್ಯಪಿ ಧ್ಯೇಯಮ್ । ಜನ್ಯಭೂತಾಕಾಶಸ್ವಭಾವಸ್ಯ ವಿವರತ್ವಾದೇಃ ಪದಪ್ರವೃತ್ತಿನಿಮಿತ್ತಸ್ಯ ಧರ್ಮಿಣಾ ಸಹ ಜನ್ಯತ್ವೇನೇಶಾಧೀನತ್ವೇऽಪಿ ಅನಾದಿನಿತ್ಯೇ ತದಭಾವಾದಿತಿ ಭಾವಃ । ಏತೇನ

'अधिवेदगतानामपि शब्दानां नित्यत्वे विद्यमानेऽपि' इति न्यायविवरणांशो व्याख्यातः ।

इदं चोपलक्षणम् । 'गायति त्रायति च' इति वाक्यशेषोक्तं यदर्थाभिधान-रूपगानकर्तृत्वं यच्चाध्येतॄणां पापाद् रक्षकत्वरूपत्राणकर्तृत्वं तस्यापि गायत्री-स्वभावत्वेनेश्वरगतत्वाभावाच्च - इत्यपि ध्येयम् । एवं च गायत्रीवागादिनिरूढ-निरवकाशश्रुतिबलादन्यदपि विष्णुलिङ्गं गायत्र्यामेव योज्यमिति भावेनोक्तार्थं सर्वं भाष्यारूढं कुर्वन्, 'तस्मान्न विष्णुः' इति भाष्यमनूद्य फलितार्थं चाह तस्मादिति ॥ रूढत्वाद् वाक्त्वविधानात् ज्योतिःश्रुतेः गायत्र्यां सावकाशत्वात् गायत्रीश्रुतेः विष्णावनवकाशात् गायत्रीप्रवृत्तिनिमित्तस्येशानधीनत्वात् ईशगतत्वाभावाच्च इत्युक्तसर्वहेतुपरामर्शः । बुद्धिस्थाशेषार्थपरामर्शित्वात् तच्छब्दस्य प्रागुक्ताशेषार्थस्य भाष्यकर्तृबुद्धिस्थत्वादिति भावः ।

'विष्णुर्न चेन्नैरर्थ्यक्यं गायत्रीशब्दस्य स्यात्' इत्यतः छन्दोविशेष एव इति फलितोक्तिः ।

इदं ज्योतिरिति ॥ हृदयाहितत्वयुक्तम् । एतच्छान्दोग्यस्थं पूर्वोक्तमग्निसूक्तस्थं चेत्यर्थः ।

एतेन तस्मादुक्तहेतुसमुदायान्न विष्णुर्गायत्री तस्माद् गायत्र्यैक्याज्ज्योति-रादिशब्दवाच्यश्च न विष्णुरिति गायत्रीज्योतिःपदाध्याहारेण चावृत्त्या च भाष्यार्थो दर्शितः । नासाविति ॥ अपि तु छन्दोविशेष एवेत्यनुषङ्गः । तस्यानन्दमयत्वं चाभिमानिद्वारेति भावः । एतेन पूर्वपक्षफलानि सूचयन्नित्यंशो विवृतः ।

ಪ್ರಮಾಣಾಶ್ರಿತವಾದ ಪೂರ್ವಪಕ್ಷವನ್ನು ತೋರಿಸಿದ್ದಾಯಿತು. ಈಗ ಪ್ರಮೇಯಾಶ್ರಿತವಾದ ಪೂರ್ವ-ಪಕ್ಷವನ್ನು ತೋರಿಸುವವರಾಗಿ 'ನಿತ್ಯತ್ವಾದೇವ ಶಬ್ದಾನಾಂ ತತ್ಸ್ವಭಾವಃ ಕಥಂ ತತಃ' ಎಂಬ ಅನು-ವ್ಯಾಖ್ಯಾನವನ್ನು ಮನಸ್ಸಿನಲ್ಲಿಟ್ಟುಕೊಂಡು ''ನಚ ಗಾಯತ್ರ್ಯಾ'' ಇತ್ಯಾದಿ ವಾಕ್ಯದಿಂದ ಶಂಕಿಸುತ್ತಿದ್ದಾರೆ. 'ಸ್ವಾತಂತ್ರ್ಯಂ ತತ್ರ ಮುಖ್ಯಂ ಸ್ಯಾತ್' ಎಂಬ ಪ್ರಮಾಣದಂತೆ ಶ್ರುತಿಯು ವಿಷ್ಣುವಿನಲ್ಲಿ ಮುಖ್ಯವಾಗಿದೆ-ಯೆಂದು ''ಮುಖ್ಯತ್ವಂ'' ಎಂಬ ಪದವು ಹೇಳುತ್ತಿದೆ. ಗಾಯತ್ರೀ ಪದದ ಪ್ರವೃತ್ತಿನಿಮಿತ್ತವು ಗಾಯತ್ರಿ-ಯಲ್ಲಿ ಸ್ವಾಭಾವಿಕವಾಗಿದೆ. ಆದರೆ ಅದು ಈಶಾಧೀನವಾಗಿರುವುದರಿಂದ ಭಗವಂತನೇ ಮುಖ್ಯವಾಗಿ ಗಾಯತ್ರೀ ಎನಿಸುತ್ತಾನೆ ಎಂಬ ಯುಕ್ತಿಯನ್ನು ಸೂಚಿಸುವುದಕ್ಕಾಗಿ 'ಗಾಯತ್ರ್ಯಾಃ' ಎಂದಷ್ಟೇ ಹೇಳಿದ್ದಾರೆ.

'ತಸ್ಮಾನ್ನ ವಿಷ್ಣುಃ' ಎಂಬ ಭಾಷ್ಯಕ್ಕೆ ಮತ್ತೊಂದು ಬಗೆಯ ಅರ್ಥವನ್ನು ''ಗಾಯತ್ರ್ಯಾಃ ನಿತ್ಯತ್ವಾತ್'' ಎಂಬುದರಿಂದ ಹೇಳಿದ್ದಾರೆ. ''ನಿತ್ಯಸ್ಯ ಚ'' ಎಂದರೆ ನಿತ್ಯಸ್ಯ ಎಂಬುದರ ಜೊತೆಗೆ ಆನಾದಿಯಾದ್ದರಿಂದ ಎಂಬುದನ್ನೂ ಸಹ ವಿವಕ್ಷಿಸಬೇಕು. ಹುಟ್ಟುವ ಸ್ವಭಾವವುಳ್ಳ ಆಕಾಶದ ಸ್ವಭಾವವು ವಿವರತ್ವವಾಗಿದೆ. ಇದೇ ಆಕಾಶಶಬ್ದದ ಪ್ರವೃತ್ತಿನಿಮಿತ್ತವೂ ಆಗಿದೆ. ಧರ್ಮಿಯಾದ ಆಕಾಶವು ಹುಟ್ಟದಾಗ ವಿವರತ್ವವೂ ಸಹ ಹುಟ್ಟುತ್ತದೆ. ಆದ್ದರಿಂದ ಇದನ್ನು ಈಶಾಧೀನವೆಂದು ಹೇಳಬಹುದು. ಅಂದರೆ ಆನಾದಿನಿತ್ಯವಾದ ವೇದ-ವಿಶೇಷವೆನಿಸಿದ ಗಾಯತ್ರಿಗೆ ಹುಟ್ಟುವ ಸ್ವಭಾವವೇ ಇಲ್ಲದ ಕಾರಣ ಇದರ ಪ್ರವೃತ್ತಿನಿಮಿತ್ತವನ್ನು ಈಶಾಧೀನವೆಂದು ಹೇಳಲಾಗದು. ಹೀಗೆ ಹೇಳಿದ್ದರಿಂದ 'ಅಧಿವೇದಗತಾನಾಮಪಿ ಶಬ್ದಾನಾಂ ನಿತ್ಯತ್ವೇ ವಿದ್ಯಮಾನೇऽಪಿ' ಎಂಬ ನ್ಯಾಯವಿವರಣದ ಮಾತನ್ನು ವ್ಯಾಖ್ಯಾನಿಸಿದಂತಾಯಿತು. ಉಪಲಕ್ಷಣಯಾ ಇದನ್ನು ತಿಳಿಯಬೇಕು. 'ಗಾಯತಿ ತ್ರಾಯತಿ ಚ' ಎಂಬ ವಾಕ್ಯಶೇಷವು ಹೇಳುವಂತೆ ಅರ್ಥವನ್ನು ಪ್ರತಿಪಾದಿಸುವಿಕೆಯೆಂಬ ಗಾನಕರ್ತೃತ್ವ, ಹಾಗೂ ಅಧ್ಯಯನ ಮಾಡುವವರ ಪಾಪಾದ್ರಕ್ಷಕತ್ವವೆಂಬ ತ್ರಾಣಕರ್ತೃತ್ವ ಇವುಗಳೂ ಸಹ ಗಾಯತ್ರೀಶಬ್ದದ ಪ್ರವೃತ್ತಿನಿಮಿತ್ತಗಳಾಗಿವೆ. ಇವುಗಳು ಗಾಯತ್ರೀಸ್ವಭಾವವಾದ್ದರಿಂದ ಭಗವಂತನಲ್ಲಿ ಬರಲು ಸಾಧ್ಯವಿಲ್ಲವೆಂದು ತಿಳಿಯಬೇಕು.

ಗಾಯತ್ರೀ ವಾಕ್ ಮೊದಲಾದ ಶಬ್ದಗಳು ಗಾಯತ್ರೀಛಂದಸ್ಸಿನಲ್ಲಿ ನಿರೂಢವಾಗಿವೆ. ಆದ್ದರಿಂದ ನಿರವಕಾಶಶ್ರುತಿಯು ಪ್ರಮಾಣವಾಗಿದೆ ಎಂದು ಹೇಳಿದಂತಾಗುತ್ತದೆ. ಇದರ ಬಲದಿಂದ ವಿಷ್ಣುವು ಗಾಯತ್ರೀಶಬ್ದವೆನ್ನಲು ಯಾವ ಲಿಂಗಗಳಿವೆಯೋ ಅವುಗಳನ್ನು ಕಥಂಚಿತ್ ಗಾಯತ್ರಿಯಲ್ಲಿಯೇ ಸಮನ್ವಯ ಮಾಡಬೇಕಾಗುತ್ತದೆ. ಈ ಅಭಿಪ್ರಾಯವನ್ನು ಮನಸ್ಸಿನಲ್ಲಿಟ್ಟುಕೊಂಡು ತಾವು ಹೇಳಿದ ಅರ್ಥವನ್ನೆಲ್ಲಾ ಭಾಷ್ಯದಲ್ಲಿ ಸಮನ್ವಯ ಮಾಡುತ್ತಿದ್ದಾರೆ. 'ತಸ್ಮಾನ್ನ ವಿಷ್ಣುಃ' ಎಂಬ ಭಾಷ್ಯವನ್ನು ಅನುವಾದ ಮಾಡುತ್ತಾ ಇದರ ಫಲಿತಾರ್ಥವನ್ನು ''ತಸ್ಮಾತ್'' ಇತ್ಯಾದಿ ವಾಕ್ಯದಿಂದ ನಿರೂಪಿಸುತ್ತಿದ್ದಾರೆ. ಟೀಕೆಯಲ್ಲಿರುವ ತಸ್ಮಾತ್ ಎಂಬ ಪದದ ಅರ್ಥ ಹೀಗಿದೆ. ಗಾಯತ್ರೀಶಬ್ದವು ಛಂದೋವಿಶೇಷದಲ್ಲಿ ರೂಢವಾದ್ದರಿಂದ, ವಾಕ್ತ್ವವನ್ನು ವಿಧಾನ ಮಾಡಿದ್ದರಿಂದ, ಜ್ಯೋತಿಃಶ್ರುತಿಯು ಗಾಯತ್ರಿಯಲ್ಲಿ ಸಾವಕಾಶ-ವಾದ್ದರಿಂದ, ಗಾಯತ್ರೀಶ್ರುತಿಗೆ ವಿಷ್ಣುವಿನಲ್ಲಿ ಅವಕಾಶವಿಲ್ಲದ್ದರಿಂದ, ಗಾಯತ್ರೀಪದಪ್ರವೃತ್ತಿನಿಮಿತ್ತವು ಈಶಾಧೀನವಾಗುವುದಿಲ್ಲ ಮತ್ತು ಈಶಗತವೂ ಆಗುವುದಿಲ್ಲ. ಇತ್ಯಾದಿಯಾಗಿ ಪೂರ್ವಪಕ್ಷದಲ್ಲಿ ಹೇಳಲ್ಪಟ್ಟ ಎಲ್ಲ ಹೇತುಗಳನ್ನು 'ತಸ್ಮಾತ್' ಎಂಬ ಪದದಿಂದ ವಿವಕ್ಷಿಸಬೇಕು. ಏಕೆಂದರೆ ತತ್‌ಶಬ್ದವು ಬುದ್ಧಿಯಲ್ಲಿರುವ ಎಲ್ಲಾ ಅರ್ಥವನ್ನು ಪರಾಮರ್ಶಿಸುತ್ತದೆ. ಈ ಅರ್ಥಗಳೆಲ್ಲವೂ ಭಾಷ್ಯಕಾರರ ಬುದ್ಧಿಯಲ್ಲಿರುವುದರಿಂದ ತಸ್ಮಾತ್ ಎಂಬ ಪದದಿಂದ ಇಷ್ಟು ಅರ್ಥಗಳನ್ನು ಪರಾಮರ್ಶಿಸಬಹುದೆಂದು ಅಭಿಪ್ರಾಯ.

ಒಂದು ವೇಳೆ ವಿಷ್ಣುವು ಗಾಯತ್ರೀಶಬ್ದದಿಂದ ಪ್ರತಿಪಾದ್ಯನಾಗದಿದ್ದರೆ ಆವಾಗ ಗಾಯತ್ರೀಪದವು ನಿರರ್ಥಕವಾಗುತ್ತದಲ್ಲವೇ? ಎಂಬ ಸಂಶಯಕ್ಕೆ ಅವಕಾಶವಿಲ್ಲ. ಛಂದೋವಿಶೇಷವನ್ನು ಗಾಯತ್ರೀಶಬ್ದವು ಪ್ರತಿಪಾದಿಸುವುದರಿಂದ ಸಾರ್ಥಕವಾಗಿದೆಯೆಂಬುದು ಫಲಿತಾರ್ಥ.

''ಇದಂ ಜ್ಯೋತಿಃ'' ಎಂಬಲ್ಲಿ ಹೇಳಲ್ಪಟ್ಟ ಜ್ಯೋತಿಯು ಹೃದಯದಲ್ಲಿರುವಿಕೆಯೆಂಬ ಧರ್ಮವನ್ನು ಒಳಗೊಂಡಿದೆ. ಈ ಜ್ಯೋತಿಯು ಛಾಂದೋಗ್ಯದಲ್ಲಿರುವ ಪೂರ್ವೋಕ್ತವಾದ ಅಗ್ನಿಸೂಕ್ತದಲ್ಲಿರುವುದೆಂದು ತಿಳಿಯಬೇಕು. ಹೀಗೆ ಹೇಳಿದ್ದರಿಂದ ತಸ್ಮಾತ್ ನ ವಿಷ್ಣುಃ ಗಾಯತ್ರೀ = ಹಿಂದೆ ಹೇಳಿದ ಅನೇಕ

ಹೇತುಗಳಿಂದ ವಿಷ್ಣುವು ಗಾಯತ್ರೀಶಬ್ದಪ್ರತಿಪಾದ್ಯನಾಗುವುದಿಲ್ಲ ಎಂದು ಗಾಯತ್ರೀಪದವನ್ನು ಭಾಷ್ಯದಲ್ಲಿ ಅಧ್ಯಾಹಾರ ಮಾಡಿಕೊಳ್ಳಬೇಕು. ಮತ್ತು ತಸ್ಮಾತ್ = ಜ್ಯೋತಿಯು ಗಾಯತ್ರಿಯಿಂದ ಅಭಿನ್ನವಾದ್ದರಿಂದ ವಿಷ್ಣುವು, ನ ಜ್ಯೋತಿಃ = ಜ್ಯೋತಿಶಬ್ದದಿಂದಲೂ ವಿಷ್ಣುವು ಪ್ರತಿಪಾದ್ಯನಾಗುವುದಿಲ್ಲ ಎಂಬುದಾಗಿ ಜ್ಯೋತಿಃಶಬ್ದವನ್ನು ಅಧ್ಯಾಹಾರ ಮಾಡಿಕೊಳ್ಳಬೇಕು. ಮತ್ತು 'ತಸ್ಮಾತ್ ನ ವಿಷ್ಣುಃ' ಎಂಬ ಪದಗಳನ್ನು ಆವೃತ್ತಿಮಾಡಿಕೊಳ್ಳಬೇಕೆಂದು ಭಾಷ್ಯಾರ್ಥವನ್ನು ತೋರಿಸಿದಂತಾಯಿತು. ''ನಾಸೌ'' ಎಂದು ಹೇಳಿದ್ದರಿಂದ 'ಅಪಿ ತು ಛಂದೋವಿಶೇಷ ಏವ' ಎಂಬುದನ್ನು ಅನುಷಂಗ ಮಾಡಬೇಕು. ಛಂದೋವಿಶೇಷವು ಜಡವಾದ್ದರಿಂದ ಆನಂದಮಯತ್ವವನ್ನು ವಸ್ತುತಃ ಹೇಳಲಾಗದು. ಆದರೂ ಸಹ ಅಭಿಮಾನಿದೇವತೆಯಲ್ಲಿ ಹೇಳಬಹುದು. ಇದರಿಂದ 'ಪೂರ್ವಪಕ್ಷಫಲಾನಿ ಸೂಚಯನ್' ಎಂಬ ಹಿಂದಿನ ಮಾತಿಗೆ ಛಂದೋವಿಶೇಷವೇ ಆನಂದಮಯನೆಂಬುದು ಪೂರ್ವಪಕ್ಷದ ಫಲವಾಗಿದೆ ಎಂದು ವ್ಯಾಖ್ಯಾನಿಸಿದಂತಾಯಿತು.

## ಉಪಾಸನೆಗಾಗಿ ಅನೇಕಶಬ್ದಗಳ ಸಮನ್ವಯ

**ಭಾಷ್ಯಮ್ – ಇತಿ ಚೇತ್ - ನ, ತಥಾ ಚೇತೋऽರ್ಪಣಾರ್ಥಂ ಹಿ ನಿಗದ್ಯತೇ । ಅಗ್ನಿಗಾಯತ್ರ್ಯಾದಿ-ಶಬ್ದಾರ್ಥರೂಪೋऽಸಾವಿತಿ ಚೇತೋऽರ್ಪಣಾರ್ಥಂ ಹಿ ನಿಗದ್ಯತೇ ।**

ಹೀಗೆ ಹೇಳುವುದು ತಪ್ಪು. ವಿಷ್ಣುವನ್ನು ಮನಸ್ಸಿನಲ್ಲಿ ಹೇಗೆ ಉಪಾಸನೆ ಮಾಡಬೇಕೆಂಬುದನ್ನು ತಿಳಿಸುವುದಕ್ಕಾಗಿ ಉಪನಿಷತ್ತು ಹಾಗೆ ಹೇಳಿದೆ. ಅಂತಹ ವಿಷ್ಣುವು ಅಗ್ನಿ ಗಾಯತ್ರೀ ಮೊದಲಾದ ಶಬ್ದಗಳಿಂದ ಪ್ರತಿಪಾದ್ಯವಾದ ಗುಣಗಳುಳ್ಳವನು ಎಂದು ಉಪಾಸನೆ ಮಾಡುವುದಕ್ಕಾಗಿ ಉಪನಿಷತ್ತು ಅನೇಕಶಬ್ದಗಳಿಂದ ವಿಷ್ಣುವನ್ನು ಹೇಳುತ್ತಿದೆ.

---

ಭಾಷ್ಯದೀಪಿಕಾ – ಸಿದ್ಧಾನ್ತಸೂತ್ರಾಂಶಮನುಕರೋತಿ – ನೇತಿ ॥ ನಿಗದ್ಯತ ಇತ್ಯತ್ರಾಪಿ ಸಮ್ಬಧ್ಯತೇ । ತಥಾ ಚ ಜ್ಯೋತಿಃಶಬ್ದವಾಚ್ಯೋ ವಿಷ್ಣುರ್ನೇತಿ ನ, ಕಿನ್ತು ಜ್ಯೋತಿಃಶಬ್ದೇನ ವಿಷ್ಣುರೇವ ನಿಗದ್ಯತ ಇತ್ಯರ್ಥಃ । ಕುತ ಇತ್ಯತೋ ನಿಗದಾದಿತಿ ಹೇತುಂ ಯೋಜಯತಿ – ಹಿ ನಿಗದ್ಯತ ಇತಿ ॥ ಗಾಯತ್ರೀಶಬ್ದೇನೇತಿ ಶೇಷಃ । ತಥಾ ಚ 'ಹಿ' ಯಸ್ಮಾದ್ ಗಾಯತ್ರೀಶಬ್ದೇನಾಪಿ ವಿಷ್ಣುರೇವ 'ನಿಗದ್ಯತೇ' ಅಧೀಯತೇ ತಸ್ಮಾದಿತ್ಯರ್ಥಃ ॥ ವಿಷ್ಣೋರ್ಗಾಯತ್ರ್ಯಾದಿಶಬ್ದೈರಭಿಧಾನಂ ಚ ನ ತದಭೇದವಿಧಾನಾರ್ಥಂ, ಕಿನ್ತು ತಥೋಪಾಸನಾರ್ಥಮೇವೇತ್ಯಾಹ – ತಥೇತಿ ॥ ಚೇತೋऽರ್ಪಣೇತ್ಯುಕ್ತಿಪ್ರಯೋಜನಂ ಪೂರ್ವವತ್ । ಭಾಷ್ಯತ್ವಜ್ಞಾಪನಾಯ ತಥೇತ್ಯಾದಿಸ್ವಪದಾನಿ ತಥಾಶಬ್ದಾರ್ಥಕಥನೇನ ವಿವೃಣೋತಿ - ಅಗ್ನೀತಿ ॥ ಅತ್ರ ಜ್ಯೋತಿಶ್ಚಾಪಲಕ್ಷಕಾಗ್ನಿಪದಂ ಜ್ಯೋತಿಷ್ಟ್ವಸೂತ್ರಸ್ಯ ಭಿನ್ನಾಧಿಕರಣತ್ವಪಕ್ಷೇऽನ್ಯತ್ರ ಪ್ರಸಿದ್ಧಸ್ಯ ಗಾಯತ್ರೀಪದಸ್ಯ ವಿಷ್ಣೌ ಪ್ರಯೋಗೇ ಪ್ರಯೋಜನಮತ್ರ ವದತಾ ಸೂತ್ರಕೃತಾ ಪೂರ್ವತ್ರೋತ್ತರತ್ರ ಚಾಗ್ನ್ಯಾದಿಪದಸ್ಯ ವಿಷ್ಣೌ ಪ್ರಯೋಗೇ ಪ್ರಯೋಜನಂ ಸೂಚಿತಮಿತಿ ದರ್ಶಯಿತುಮ್ । ನ ಚ ಗಾಯತ್ರ್ಯಾದಿಪದಾಭ್ಯಾಮೇವ ಗಾಯತ್ರೀಪದಸಮನ್ವಯಫಲಸ್ಯ ಪೂರ್ವತ್ರೋತ್ತರತ್ರ ಚೋಕ್ತಸಮನ್ವಯಫಲಸ್ಯ ಚ ಸೂಚನಸಮ್ಭವಾದಗ್ನಿಪದಂ ವ್ಯರ್ಥಮಿತಿ ವಾಚ್ಯಮ್ । ಫಲೀಭೂತಸಮನ್ವಯ-ವಿಷಯತ್ವೇನಾಸ್ಯಾಪ್ಯವಶ್ಯೋಪಾದೇಯತ್ವಾತ್ । ಸಮಾನಪ್ರಕರಣಸ್ಥ-ವಾಗಾದಿಗ್ರಾಹಕತ್ವೇನಾऽದಿಶಬ್ದಸ್ಯ-

ಪ್ರತಿಪದಾರ್ಥ– ಸಿದ್ಧಾಂತ ಹೀಗಿದೆ— ತಥಾ = ಗಾಯತ್ರೀ ಮೊದಲಾದ ಶಬ್ದಗಳಿಂದ, ಚೇತಃ = ಮನಸ್ಸಿಗೆ, ಆರ್ಪಣಾರ್ಥಂ ಹಿ = ಉಪಾಸನೆಮಾಡಲು ಅನುಕೂಲವಾಗಲು, ನಿಗದ್ಯತೇ = ಹಾಗೆ ಹೇಳಲ್ಪಟ್ಟದೆ. ಅಸೌ = ಈ ವಿಷ್ಣುವು, ಅಗ್ನಿಗಾಯತ್ರ್ಯಾದಿ = ಅಗ್ನಿಗಾಯತ್ರೀಮೊದಲಾದ, ಶಬ್ದಾರ್ಥರೂಪಃ= ಶಬ್ದಪ್ರತಿಪಾದ್ಯವಾದ ಗುಣಗಳುಳ್ಳವನು, ಇತಿ = ಈ ಪ್ರಕಾರವಾಗಿ, ಚೇತಃ = ಮನಸ್ಸಿನಲ್ಲಿ, ಆರ್ಪಣಾರ್ಥಂ ಹಿ = ಉಪಾಸನೆ ಮಾಡುವ ಸಲುವಾಗಿ, ನಿಗದ್ಯತೇ = ಹೇಳಲ್ಪಟ್ಟದೆ.

**तत्वप्रकाशिका – सिद्धान्तयत् सूत्रांशमनुकरोति – नेति ॥ स्वपदानि वर्णयति – अग्नीति ॥ अत्र गायत्रीशब्देन विष्णुरेव निगद्यते । तस्माज्ज्योतिःशब्देनापि स एव निगद्यते । ततश्च स एवाऽऽनन्दमयः । न च गायत्र्यादिशब्दैरुच्यते तदभेदविधानार्थं किन्तु गायत्र्यादिशब्दार्थगुणस्वरुपत्वेनोपासनार्थमेवेतिभावः । आदिपदेन वाचो ग्रहणम् । अधिकरणान्तरेप्येतन्न्यायस्यानुसन्धेयत्वं च हिशब्देन सूचयति (सन्धेयत्वं च सूचयति) ।**

ಈ ಪೂರ್ವಪಕ್ಷವನ್ನು ನಿರಾಕರಿಸುವ ಸಿದ್ಧಾಂತದ ರಚನೆಗಾಗಿ ಸೂತ್ರದ ಏಕದೇಶವನ್ನು ಆಳವಡಿಸಿಕೊಂಡು ಭಾಷ್ಯಕಾರರು "ನ" ಇತ್ಯಾದಿಯಾಗಿ ವ್ಯಾಖ್ಯಾನಿಸುತ್ತಿದ್ದಾರೆ. ತಾವು ಹೇಳಿದ ಪದಗಳನ್ನೇ "ಅಗ್ನಿ" ಇತ್ಯಾದಿಯಾಗಿ ವ್ಯಾಖ್ಯಾನಿಸುತ್ತಿದ್ದಾರೆ. ಛಾಂದೋಗ್ಯಶ್ರುತಿಯಲ್ಲಿರುವ

---

अप्यावश्यकत्वात् । अवश्यापेक्षिताभ्यामुभाभ्यामप्यानन्दमयाद्यधिकरणेषूत्तरत्र चोक्तप्रयोजनस्यापि सूचनसम्भवादुभयमप्यावश्यकम् । ज्योतिरित्यादिचतुःसूत्र्या एकाधिकरणत्वपक्षे तु साक्षात् समन्वेतव्यशब्दत्वेनैव शब्दद्वयोपादानं, न तु फलत्वेनाग्निशब्दस्याधिकरणान्तरेऽप्येतन्न्यायसूचनं त्वादिशब्देनैव, न तूभाभ्याम् । भिन्नजातीयानेकशब्दग्रहणार्थं शब्दद्वयोत्तरादिपदम् । अत एव तत्त्वप्रदीपे आदिशब्दस्योभयत्रान्वयं प्रथमादिशब्देन तेजःशब्दानां द्वितीयेन छन्दश्शब्दानां च ग्रहणमभिप्रेत्य 'अग्न्यादितेजःशब्दानां गायत्र्यादिछन्दश्शब्दानां च' इत्युक्तम् ॥

केचित्तु भाष्यगतहिशब्दः 'ज्ञानार्थमथ ध्यानार्थम्' इति प्रमाणप्रसिद्धिद्योतकः, अधिकरणान्तरेऽप्यस्य न्यायस्यानुसन्धेयत्वज्ञापकश्चेत्याहुः । चेतोऽर्पणार्थमिति सावधारणम् । तथा च 'असौ' भगवानग्निगायत्र्यादिशब्दैरग्निगायत्र्यादि-शब्दार्थगुणस्वरूप इति । तत्र 'चेतोऽर्पणार्थं' बुद्ध्यवतारणार्थम् उपासनार्थमेव निगद्यते, न तदभेदविधानार्थमित्यर्थः । इतीत्यन्तेन तथाशब्दार्थ उक्तः । अनेनाप्रसिद्धगायत्र्यादिपदेन विष्णोरभिधानस्य वैयर्थ्यशङ्का परिहृता ॥

ಗಾಯತ್ರೀಶಬ್ದದಿಂದ ವಿಷ್ಣುವೇ ಪ್ರತಿಪಾದ್ಯನಾಗಿದ್ದಾನೆ. ಆದ್ದರಿಂದ ಜ್ಯೋತಿಃಶಬ್ದದಿಂದಲೂ ವಿಷ್ಣುವೇ ಪ್ರತಿಪಾದ್ಯನಾಗುತ್ತಾನೆ. ಆದ್ದರಿಂದ ಅವನೇ ಆನಂದಮಯನೂ ಆಗುತ್ತಾನೆ.

ಗಾಯತ್ರೀಮೊದಲಾದ ಶಬ್ದಗಳ ಅರ್ಥ ವಿಷ್ಣುವೇ ಆಗಿದ್ದಾನೆಂಬುದರ ತಾತ್ಪರ್ಯವೇನೆಂದರೆ, ಛಂದೋವಿಶೇಷಾದಿಗಳಿಗೂ ವಿಷ್ಣುವಿಗೂ ಅಭೇದವನ್ನು ತಿಳಿಯಬೇಕೆಂದಲ್ಲ. ಹೊರತಾಗಿ ಗಾಯತ್ರೀಶಬ್ದದಿಂದ ಯಾವ ಗುಣಸ್ವರೂಪವು ತಿಳಿಯುತ್ತದೋ ಅಂತಹ ಗುಣಗಳಿಂದ ವಿಷ್ಣುವು ಪೂರ್ಣನಾಗಿದ್ದಾನೆಂದು ಉಪಾಸನೆ ಮಾಡುವುದಕ್ಕಾಗಿ ಹೇಳುತ್ತಿದ್ದಾರೆಂದು ತಿಳಿಯಬೇಕು.

ಸುವರ್ಣಾತ್ಮಕವಾದ ಈ ಬ್ರಹ್ಮಾಂಡವೆಂಬ ಕೋಶವು ರಜೋಗುಣದಿಂದ ಉಪಲಕ್ಷಿತವಾದ ಉದಕಾದಿಗಳಿಂದ (ನೀರು ಮೊದಲಾದ ಪಂಚಭೂತಗಳಿಂದ) ಸುತ್ತುವರೆಯಲ್ಪಟ್ಟಿದೆ. ಬ್ರಹ್ಮದೇವರ ಶರೀರಭೂತವಾಗಿದೆ. ದೇವತೆಗಳ ಸಂಪತ್ತಿಗೆ ಪೆಟ್ಟಿಗೆಯಂತಿದೆ. ಮುಕ್ತಜೀವರಿಂದ ಪರಿಪೂರ್ಣವಾಗಿದೆ. ಇಂತಹ ವಿಶ್ವವು ಆರು ಇಂದ್ರಿಯಗಳಲ್ಲಿ ವಿಷಯಗಳನ್ನು ಹೋಮಿಸುವ ವಿಷ್ಣುವಿನ ಏಕದೇಶಪರಿಮಾಣವುಳ್ಳದ್ದಾಗಿದೆಯೆಂದು ಪುರುಷಸೂಕ್ತಾದಿ ಆಗಮಗಳಲ್ಲಿ ಪಾದಶಬ್ದದಿಂದ ಹೇಳಲ್ಪಟ್ಟಿದೆ. ಏಕೆಂದರೆ ವಿಶ್ವವು ಪರಮಾತ್ಮನ ಸಾಮರ್ಥ್ಯದ ನಾಲ್ಕನೆಯ ಒಂದಂಶದ ಸಾಮರ್ಥ್ಯವನ್ನೂ ಹೊಂದಿಲ್ಲವಷ್ಟೇ ಎಂದು ಆರ್ಥ ಹೇಳಲ್ಪಟ್ಟಿದೆ.

ಭಾವದೀಪಃ – 'भिन्नं च' इत्यन्तभाष्यग्रहणाय 'सुवर्णमिति' इति प्रतीकमनुपादाय 'सुवर्णमित्यादि' इत्युक्तम् । 'शङ्काबीजं विघटयन्नुक्तशङ्कानिरासकं पाद' इत्यादिवाक्यं तावद् व्याचष्टे – **नायमिति ॥ भिन्नमेवेति ॥** 'भाष्ये भिन्नं चेति चोऽवधारणे' इति भावः । 'विश्वम्' इति शेषः । **'एकदेशपरिमितम्' इत्यस्यार्थः – तत्पादेति ॥** 'विष्णुपादे'त्यर्थः । 'पाद इति' इत्यस्यार्थः – **पादतयेति ॥** 'उच्यते' इति शेषः । 'अतः' इति फलोक्तिः ।

तर्हि भाष्ये 'पादपरिमितः' इत्यनुक्त्वा 'एकदेशः' इति कस्मादुक्तम्? इत्यतः तद् व्यावर्त्यमाह – **तर्हीति ॥** तत्र हेतुतया 'पाद इत्येकदेशपरिमितिम्' इत्येतदेव

तच्चतुर्थांशपरिमितं भिन्नं च ततश्चैत्रबलमिति । एवमिहापि शक्तिविवक्षया विष्णुशक्त्येकदेशपरिमितशक्तिर्मुक्तामुक्तविश्वसमुदाय इत्यभिप्रायः । – **तत्त्वप्रदीपिका**

–– ''यतो नवावरणोपेतब्रह्माण्डकोशाख्या सा देवानां वसुधानी सत्यकैलासस्वर्गादिलोकस्थितदेववसुनिधानयोग्या मञ्जूषा षड्ढोतुरनन्तजीवानां षडिन्द्रियेषु तत्तद्विषयसमर्पकस्य वैराग्यसम्पत्तौ सत्यां षडिन्द्रियेषु विषयहोतुर्वा विष्णोः पादं पादत्वं चतुर्भागसाम्यम् आ ईषदपि न विवित्से किल न लेभे किल । एकैक जीवषडिन्द्रियेषु विषयहोमेऽप्यसमर्थब्रह्मादीनाम् अनन्तांशसाम्यस्याप्यसम्भवेन चतुर्भागसाम्यं तु सुतरां न सम्भवतीति सूचनाय षड्ढोतुरिति विशेषणम् । अतस्तां देवानां वसुधानीं षड्ढोतुर्विष्णोः कलामनन्तांशेषु चैकांशस्याप्येकदेशपरिमितामाचक्षते ज्ञानिनः'' इति श्रुत्यर्थमभिप्रेत्याह – सौवर्णमित्यादिना ॥ – **गुर्वर्थदीपिका**

––** प्रकारान्तरेण पादमित्येतद्व्याख्याति – यतः सा चतुर्भागसाम्यमिति ॥ अनेन पादमिति भावप्रधानमित्युक्तं भवति । अनेन पादमिति भावप्रधानमित्युक्तं भवति । 'पुरुषसूक्ताद्याः कलामेव पादपदेनाचक्षते' इत्यत्र हेतुरुच्यत इति भावः । – **भावबोधः**

**ವಾಕ್ಯಂ ವ್ಯಾಚಷ್ಟೇ – ಯತೋऽತ್ರೇತಿ ॥ 'ಪಾದೋऽಸ್ಯೇತಿ ಶ್ರುತೌ' ಇತ್ಯರ್ಥಃ । 'ವಿರಾಜಮ್' ಇತ್ಯಸ್ಯಾರ್ಥೌ 'ಬ್ರಹ್ಮಣಃ ಶರೀರಮ್' ಇತಿ । ಅಮೃತಸ್ಯ = ಮುಕ್ತೇಃ । ಕಲಾಂ = ಏಕದೇಶಪರಿಮಿತಾಮ್ । 'ಪಾದ'ಪದಸ್ಯಾऽऽವೃತ್ತ್ಯಾ 'ತಾಂ ಕಲಾಂ ಪಾದಮಾಚಕ್ಷತ' ಇತ್ಯಸ್ಯ ಪರ್ಯವಸಿತಾರ್ಥೆ ವದನ್ ಕರ್ತ್ರಾಕಾಙ್ಕ್ಷಾಂ ಪೂರಯತಿ – ಪಾದೇತಿ ॥ 'ಸೇ'ತಿ ಶೇಷಃ । 'ಕಲಾ' ಇತ್ಯರ್ಥಃ । 'ಪಾದಮ್' ಇತ್ಯಸ್ಯಾರ್ಥಃ 'ಚತುರ್ಭಾಗಸಾಮ್ಯಮ್' ಇತಿ । ವಕ್ಷ್ಯತಿ ಚ ಸೂತ್ರಕಾರ ಏವ 'ಬುದ್ಧ್ಯರ್ಥಃ ಪಾದವತ್' ಇತಿ ತೃತೀಯೇऽಧ್ಯಾಯೇ 'ಪಾದ ಇತ್ಯುಕ್ತಿರ್ಬುದ್ಧ್ಯಾರೋಹಾರ್ಥಾ' ಇತಿ ।**

'ಭೂಮಾ ಚ' ಎಂಬಲ್ಲಿಯ ತನಕ ಇರುವ ಭಾಷ್ಯವನ್ನು ಸಂಗ್ರಹಿಸುವುದಕ್ಕಾಗಿ 'ಸುವರ್ಣಂ' ಎಂದಷ್ಟೇ ಪ್ರತೀಕವನ್ನು ಸ್ವೀಕರಿಸಿದೆ ಸುವರ್ಣಮಿತ್ಯಾದಿ ಎಂಬ ಪ್ರತೀಕವನ್ನು ಸ್ವೀಕರಿಸಿದ್ದಾರೆ. ಸಂಶಯಕ್ಕೆ ಕಾರಣವಾದದ್ದನ್ನು ನಿರಾಕರಿಸುತ್ತಾ ಹಿಂದಿನ ಶಂಕೆಯನ್ನು ಪರಿಹರಿಸುವ ಉದ್ದೇಶದಿಂದ ಭಾಷ್ಯದ ಪಾದ ಇತ್ಯಾದಿ ವಾಕ್ಯವನ್ನು ''ನಾಯಮ್'' ಇತ್ಯಾದಿಯಾಗಿ ವ್ಯಾಖ್ಯಾನಿಸುತ್ತಿದ್ದಾರೆ. ಟೀಕೆಯಲ್ಲಿ ''ಭೂಮೇವ'' ಎಂದು ಹೇಳಿದ್ದರಿಂದ 'ಭೂಮಾ ಚ' ಎಂಬ ಭಾಷ್ಯದಲ್ಲಿರುವ ಚಕಾರಕ್ಕೆ ಅವಧಾರಣಾರ್ಥವನ್ನು ಹೇಳಿದಂತಾಗುತ್ತದೆ. 'ವಿಶ್ವಮ್' ಎಂಬುದನ್ನು ಇಲ್ಲಿ ಶೇಷಪೂರಣೆ ಮಾಡಿಕೊಳ್ಳಬೇಕು. 'ಏಕದೇಶಪರಿಮಿತಮ್' ಎಂಬುದರ ಅರ್ಥವನ್ನು ''ತತ್ಪಾದ'' ಎಂಬುದಾಗಿ ಹೇಳಿದ್ದಾರೆ. ವಿಷ್ಣುವಿನ ಪಾದ ಎಂದರ್ಥ. 'ಪಾದ' ಎಂಬುದರ ಅರ್ಥವನ್ನೇ ''ಪಾದತಯಾ'' ಎಂದಿದ್ದಾರೆ. ಇಲ್ಲಿ 'ಉಚ್ಯತೇ' ಎಂಬುದನ್ನು ಶೇಷಪೂರಣ ಮಾಡಿಕೊಳ್ಳಬೇಕು. 'ಅತಃ' ಎಂಬುದರಿಂದ ಫಲವನ್ನು ಹೇಳಿದ್ದಾರೆ.

ಈ ಅರ್ಥವನ್ನು ವಿವಕ್ಷಿಸುವುದಾದಲ್ಲಿ ಭಾಷ್ಯದಲ್ಲಿ 'ಪಾದಪರಿಮಿತಂ' ಎಂದೇ ಹೇಳಬೇಕಿತ್ತು. ಏಕದೇಶಪರಿಮಿತಂ ಎಂದು ಹೇಗೆ ಹೇಳಿದರು ಎಂಬ ಪ್ರಶ್ನೆಗೆ ಉತ್ತರಿಸುವವರಾಗಿ, ಇದರಿಂದ ವ್ಯಾವರ್ತ್ಯವಾದದ್ದನ್ನು ''ತರ್ಹಿ'' ಎಂಬ ಟೀಕಾಮಾತಿನಿಂದ ಹೇಳುತ್ತಿದ್ದಾರೆ. ಈ ವಿಷಯದಲ್ಲಿ ಕಾರಣವನ್ನು ನೀಡುತ್ತಾ 'ಪಾದ ಇತ್ಯೇಕದೇಶಪರಿಮಿತಂ' ಎಂಬ ವಾಕ್ಯವನ್ನೇ ''ಯತಃ ಅತ್ರ'' ಎಂಬ ಟೀಕಾವಾಕ್ಯದಿಂದ ವ್ಯಾಖ್ಯಾನಿಸಿದ್ದಾರೆ. ಅತ್ರ ಎಂಬ ಪದಕ್ಕೆ 'ಪಾದೋऽಸ್ಯ' ಎಂಬ ಶ್ರುತಿಯಲ್ಲಿ ಎಂದರ್ಥ. 'ವಿರಾಜಮ್' ಎಂಬ ಪದಕ್ಕೆ ಬ್ರಹ್ಮಣಃ ಶರೀರಮ್ ಎಂದರ್ಥ. 'ಅಮೃತಸ್ಯ' ಎಂಬ ಪದಕ್ಕೆ ಮುಕ್ತರಿಂದ ಎಂದರ್ಥ. ಕಲಾಂ ಎಂದರೆ ಏಕದೇಶಪರಿಮಿತವಾದದ್ದನ್ನು ಎಂದರ್ಥ. ಪಾದ ಎಂಬ ಪದವನ್ನು ಆವೃತ್ತಿಮಾಡಿಕೊಂಡು 'ತಾಂ ಕಲಾಂ ಪಾದಮಾಚಕ್ಷತೇ' ಎಂಬುದರ ಪರ್ಯವಸಿತಾರ್ಥವನ್ನು ಹೇಳುತ್ತಾ ಕರ್ತ್ರಾಕಾಂಕ್ಷೆಯನ್ನು ''ಪಾದ'' ಇತ್ಯಾದಿಯಾಗಿ ಪರಿಹರಿಸುತ್ತಿದ್ದಾರೆ. 'ಸಾ' ಎಂಬುದನ್ನು ಶೇಷಪೂರಣೆಮಾಡಿಕೊಳ್ಳಬೇಕು. ಕಲಾ ಎಂದು ಇದರರ್ಥ. 'ಪಾದಮ್' ಎಂಬುದರ ಅರ್ಥವೇ ಚತುರ್ಭಾಗಸಾಮ್ಯಮ್ ಎಂಬುದು.

ಸೂತ್ರಕಾರರೂ ಸಹ 'ಬುದ್ಧ್ಯರ್ಥಃ ಪಾದವತ್' ಎಂಬ ಮೂರನೆಯ ಅಧ್ಯಾಯದ ಸೂತ್ರದಲ್ಲಿ ಪಾದ ಎಂಬ ಮಾತು ಬುದ್ಧಿಯ ಆರೂಢಕ್ಕಾಗಿ ಎಂದು ಹೇಳಿದ್ದಾರೆ. ಅಂದರೆ ನಮಗೆ ಬರುವ ಆನಂದವು ದುಃಖಮಿಶ್ರಿತವಾಗಿದೆ. ಮತ್ತು ಭೌತಿಕವಾಗಿದೆ. ಇದೇ ಆನಂದಪದವನ್ನು ಭಗವಂತನ ಆನಂದದಲ್ಲಿ ಪ್ರಯೋಗಿಸುವುದು ತಪ್ಪಲ್ಲವೇ? ಎಂಬ ಪ್ರಶ್ನೆಗೆ ಸೂತ್ರಕಾರರು 'ಬುದ್ಧ್ಯರ್ಥಃ ಪಾದವತ್' ಎಂದು

ಉತ್ತರಿಸಿದ್ದಾರೆ. ಮಣ್ಣಿನಲ್ಲಿ ಹೆಜ್ಜೆಯ ಗುರುತನ್ನು ನೋಡಿ ಪಾದ ಎಂಬ ವ್ಯವಹಾರವಿದೆ. ವಸ್ತುತಃ ಪಾದವೇ ಬೇರೆ, ಹೆಜ್ಜೆಯ ಗುರುತೇ ಬೇರೆ. ಆದರಂತೆ ನಮ್ಮ ಆನಂದಕ್ಕಿಂತ ಭಗವಂತನ ಆನಂದವು ಅತ್ಯಂತ ವಿಲಕ್ಷಣವಾಗಿದ್ದರೂ ನಮಗೆ ಅರ್ಥವಾಗುವುದಕ್ಕೋಸ್ಕರ (ಬುದ್ಧ್ಯಾರೂಢಕ್ಕಾಗಿ) ಆನಂದ ಎಂಬ ಪದವನ್ನು ವ್ಯವಹರಿಸಲಾಗಿದೆ. ಆದರಂತೆ ಪ್ರಕೃತದಲ್ಲಿ ಚತುರ್ಭಾಗಸಾಮ್ಯಮ್ ಎಂಬರ್ಥವನ್ನು ಹೇಳುತ್ತಿದ್ದಾರೆ. ಇದನ್ನು ಕೇವಲ ಬುದ್ಧ್ಯಾರೂಢಕ್ಕಾಗಿ ಹೇಳಿದ್ದಾರೆಂದು ತಿಳಿಯಬೇಕು ಹೊರತು ಶಬ್ದದ ಅರ್ಥವಲ್ಲ.

## ಪುರುಷಸೂಕ್ತಪ್ರತಿಪಾದ್ಯನೇ ಗಾಯತ್ರೀ

**ಭಾಷ್ಯಮ್ – ಸ ಹಿ ಪುರುಷಸೂಕ್ತಾಭಿಧೇಯಃ ।**

**'ಯಜ್ಞೇನ ಯಜ್ಞಮಯಜನ್ತ' (ತೈ.ಆ. ೩-೧೨.) ಇತಿ ಯಜ್ಞಶಬ್ದಾತ್ ।**

**'ಯಜ್ಞೋ ವಿಷ್ಣುರ್ದೇವತಾ' (ಶ್ರುತ್ಯನ್ತರಮ್.) ಇತಿ ಹಿ ಶ್ರುತಿಃ ।**

**'ತಸ್ಮಿನ್ ಕಾಲೇ ಮಹಾರಾಜ ರಾಮ ಏವಾಭಿಧೀಯತೇ ।**
**ಯಥಾ ಹಿ ಪೌರುಷೇ ಸೂಕ್ತೇ ವಿಷ್ಣುರೇವಾಭಿಧೀಯತೇ ॥' ಇತಿ ಚ ಸ್ಕಾನ್ದೇ ॥**

ಭಾಷ್ಯಾರ್ಥ -- ಇಂತಹ ಪರಮಾತ್ಮನು ಪುರುಷಸೂಕ್ತದಿಂದ ಪ್ರತಿಪಾದ್ಯನಾಗಿದ್ದಾನೆ. ಏಕೆಂದರೆ ಪುರುಷಸೂಕ್ತದ ಕೊನೆಯಲ್ಲಿ 'ಯಜ್ಞೇನ ಯಜ್ಞಮಯಜಂತ' ಎಂಬುದಾಗಿ ಯಜ್ಞಶಬ್ದವಿದೆ. ಯಜ್ಞಶಬ್ದಕ್ಕೆ ವಿಷ್ಣುದೇವತೆ ಎಂಬರ್ಥವನ್ನು ಶ್ರುತಿಯೇ ಹೇಳಿದೆ. ಮತ್ತು 'ಯಾವ ರೀತಿಯಾಗಿ ಪುರುಷಸೂಕ್ತವು ವಿಷ್ಣುವನ್ನು ಪ್ರತಿಪಾದಿಸುತ್ತದೋ; ಆದರಂತೆ ತ್ರೇತಾಯುಗದಲ್ಲಿ ಎಲ್ಲೆಡೆಯೂ ರಾಮನೇ ಮಹಾರಾಜನೆಂಬುದಾಗಿ ಕೇಳಿಬರುತ್ತಿದ್ದಾನೆ' ಎಂಬುದಾಗಿ ಸ್ಕಾಂದಪುರಾಣವು ಹೇಳಿದೆ. ಇದರಿಂದ ಗಾಯತ್ರೀ ಜ್ಯೋತಿ ಮೊದಲಾದ ಶಬ್ದಗಳಿಂದ ವಿಷ್ಣುವೇ ವಾಚ್ಯನೆಂದು ಸಿದ್ಧವಾಗುತ್ತದೆ.

---

ಭಾಷ್ಯದೀಪಿಕಾ – स्यादेतदेवं यदि 'तावान्' इत्यस्यामृचि विष्णुरभिधीयते इत्यत्र प्रमाणं स्यात्, तदेव नास्ति, अतो लिङ्गमन्यनिष्ठं भविष्यतीत्यतः सौत्रचशब्देन भूतादिपादत्वस्य विष्णुलिङ्गत्वे साध्ये पुरुषसूक्तोक्तत्वादिति यदनुमानं सूचितं तस्याप्रयोजकत्वमाशङ्क्य परिहरति – स हीति ॥ 'हि' यस्मात् 'सः' विष्णुरेव 'पुरुषसूक्ताभिधेयः' तत्प्रतिपाद्यः तस्मात् स एव पुरुषसूक्तोक्तभूतादिपादोऽपीति योजना । अन्यथा भूतादिपादत्वस्य विष्णुधर्मत्वाभावे पुरुषसूक्तप्रतिपाद्यत्वं न स्यादिति भावः । यद्वा – गायत्र्या विष्णुत्वे साध्ये सूत्रे भिन्नक्रमेणान्वितचशब्द-सूचितयुक्त्यन्तरमाह – स हीति ॥ अस्य तस्माद् गायत्री विष्णुरेवेति प्रधान-

ಪ್ರತಿಪದಾರ್ಥ - 'ತಾವಾನಸ್ಯ' ಎಂಬ ಶ್ರುತಿಯಿಂದ ವಿಷ್ಣುವೇ ಪ್ರತಿಪಾದ್ಯನೆನ್ನಲು ಪುರುಷಸೂಕ್ತ ಪ್ರತಿಪಾದ್ಯತ್ವವನ್ನು ಸಮರ್ಥಿಸುತ್ತಿದ್ದಾರೆ.

ಸ ಹಿ = ಅಂತಹ ವಿಷ್ಣುವೇ, ಪುರುಷಸೂಕ್ತಾಭಿಧೇಯಃ= ಪುರುಷಸೂಕ್ತದಿಂದ ಪ್ರತಿಪಾದ್ಯನಾದವನು, ಯಜ್ಞೇನ = ಸತ್ಕರ್ಮಗಳಿಂದ, ಯಜ್ಞಂ = ಯಜ್ಞನಾಮಕನಾದ ವಿಷ್ಣುವನ್ನು, ಆಯಜಂತ = ಪೂಜಿಸಿದರು. ಇತಿ = ಹೀಗೆ, ಯಜ್ಞಶಬ್ದಾತ್ = ಯಜ್ಞಶಬ್ದದ ಬಲದಿಂದ (ವಿಷ್ಣುವೇ ಯಜ್ಞಶಬ್ದವಾಚ್ಯನಾಗಿದ್ದಾನೆ).

---

प्रतिज्ञावाक्येनान्वयः । चतुष्पदेत्युक्तगायत्रीचतुष्पादत्वस्य पुरुषसूक्तमन्त्रेणोपपादनात् तत्प्रतिपाद्यत्वे तदुपपाद्यगायत्रीशब्दार्थताऽपि तस्यैव प्राप्नोतीति भावः ॥

पुरुषसूक्तोक्तस्य विष्णुत्वं कुत इत्यत आह – यज्ञेनेति ॥ देवाः 'यज्ञेन' ज्ञानकर्मात्मकेन रुद्राख्यपशुना वा 'यज्ञं' विष्णुम् 'अयजन्त' अपूजयन्निति श्रुत्यर्थः । इति यज्ञशब्दादिति ॥ इति वाक्ये यज्ञशब्दश्रवणादित्यर्थः ॥

यज्ञशब्दः कथं विष्णुत्वनिश्चायक इत्यतो विद्वद्रूढ्येत्याह – यज्ञ इति ॥ 'हि' यतः यज्ञ इति पदेन विष्ण्वाख्या देवतोच्यत इत्यर्थः । यद्यपि 'यज्ञो वै विष्णुः' इत्यध्वर्यूणां श्रुतिः । तथाऽपि श्रुत्यन्तरमिदमित्यदोषः ॥

ननु पुरुषसूक्तं न विष्णुप्रकरणं, किन्त्वन्यप्रकरणमेव । न च यज्ञश्रुतिविरोधः । पशुरूपान्यप्रकरणे तदन्यविष्णुश्रुतेरयोगादिति वाच्यम् । तस्याः प्रासङ्गिकत्वसम्भवात् । न च तत एव भूतादिपादत्वस्य विष्णुलिङ्गत्वनिश्चयः । तथाऽप्यसिद्धिः । 'पादोऽस्य विश्वा भूतानि' इति श्रुतेर्भूतादिपादे यज्ञश्रुतेरभावादित्यतः पुरुषसूक्तोक्तस्य विष्णुत्वे स्मृतिं चाऽह – तस्मिन्निति ॥ महाराजेति कस्यचित् सम्बोधनं रामविशेषणं वा । तथात्वे दीर्घः स्यात् । तथा च हे महाराज 'तस्मिन्' त्रेतायुगे सर्वैः पुरुषनामभी राम एवाभिधीयत इत्यर्थः ॥

अत एवांशाधिकरणे -

**'नक्षत्रमानगणितं त्रयोदशसहस्रकम् ।**
**ब्रह्मलोकसमं चक्रे समस्तं क्षितिमण्डलम् ॥**
**रामोराम इति ह्याख्या सर्वेषामभवत् तदा ।**
**सर्वो राममयो लोको यदा रामस्त्वपालयत् ॥'**

इति स्कान्द इत्युक्तं तत्त्वप्रदीपे ॥

अत्र दृष्टान्तमाह – यथेति ॥ यथा कृत्स्ने पौरुषे सूक्ते विष्णुरेव न त्वन्यः । पशुः नरः प्रासङ्गिकतयाऽभिधीयत इत्यर्थः । अनेन सिद्धस्यैव दृष्टान्तत्वात् पुरुषसूक्तस्य विष्णुपरत्वं सिद्धमिति भावः । स्कान्द इत्यनन्तरं एतदुक्तमिति शेषः । अस्य स हीति पूर्ववाक्येनान्वयः ॥

ಯಜ್ಞಃ = ಯಜ್ಞಶಬ್ದವು, ವಿಷ್ಣುರ್ದೇವತಾ = ವಿಷ್ಣುವೆಂಬ ದೇವತಾವಾಚಕವಾಗಿದೆ, ಇತಿ = ಹೀಗೆ, ಶ್ರುತೇಃ ಹಿ = ಶ್ರುತಿಯು ಪ್ರಸಿದ್ಧವಷ್ಟೇ.

ಯಥಾ = ಹೇಗೆ, ಪೌರುಷೇ ಸೂಕ್ತೇ = ಪುರುಷಸೂಕ್ತದಲ್ಲಿ, ವಿಷ್ಣುರೇವ = ವಿಷ್ಣುವೊಬ್ಬನೇ, ಅಭಿಧೀಯತೇ = ಪ್ರತಿಪಾದ್ಯನಾಗಿದ್ದಾನೋ, ತಥಾ = ಹಾಗೆ, ತಸ್ಮಿನ್ ಕಾಲೇ = ಆ ತ್ರೇತಾಯುಗದಲ್ಲಿ, ರಾಮಃ ಏವ = ಶ್ರೀರಾಮಚಂದ್ರನೇ, ಮಹಾರಾಜಃ = ಮಹಾರಾಜನೆಂದು, ಅಭಿಧೀಯತೇ = ಕರೆಸಿಕೊಳ್ಳುತ್ತಾನೆ, ಇತಿ ಚ = ಹೀಗೆಯೂ ಸ್ಕಾಂದೇ = ಸ್ಕಾಂದಪುರಾಣದಲ್ಲಿ ಹೇಳಲ್ಪಟ್ಟಿದೆ.

**तत्वप्रकाशिका – न केवलं भूतादिपादत्वस्य विष्णावेवोपपत्तेस्तल्लिङ्गित्वं किन्तु पुरुषसूक्तोक्तत्वाच्च* । भूतादिपादत्वस्य पुरुषसूक्तोक्तत्वेऽपि कुतो (विष्णु-लिङ्गत्व)विष्णोर्लिङ्गत्वमित्यत आह – स हीति ॥ यज्ञशब्दः कथं तन्निश्चायक इत्यत आह – यज्ञ इति ॥ अन्यप्रकरणेऽप्यन्यश्रुतिः प्रासङ्गिकीयं भवतु । भूतादि-पादे तदभावादित्यतोऽत्र स्मृतिं चाऽऽह – तस्मिन्निति ॥ किञ्च पुरुषसूक्तोक्तत्वं गायत्र्या विष्णुत्व एव वा पृथग्युक्तिः समर्थ्यते – स हीति ॥२६॥**

ಭೂತಾದಿಪಾದತ್ವವು ವಿಷ್ಣುವಿನಲ್ಲಿ ಮಾತ್ರ ಉಪಪನ್ನವಾಗುತ್ತದೆಂಬ ಅಭಿಪ್ರಾಯದಿಂದ ಅದನ್ನು ವಿಷ್ಣುಲಿಂಗವೆಂದು ಹೇಳಿದ್ದಲ್ಲ. ಹೊರತಾಗಿ ಪುರುಷಸೂಕ್ತದಲ್ಲಿಯೂ ಹಾಗೆಯೇ ಹೇಳಲ್ಪಟ್ಟಿದೆ. ಪುರುಷಸೂಕ್ತದಲ್ಲಿ ಹೇಳಿದ ಮಾತ್ರದಿಂದ ಅದು ವಿಷ್ಣುಲಿಂಗವೆಂದು ಹೇಗೆ ನಿಶ್ಚಯಿಸುತ್ತೀರಿ ಎಂಬ ಪ್ರಶ್ನೆಗೆ ''ಸ ಹಿ'' ಎಂಬ ವಾಕ್ಯದಿಂದ ಉತ್ತರಿಸುತ್ತಿದ್ದಾರೆ. ಯಜ್ಞಶಬ್ದವು ವಿಷ್ಣುತ್ವವನ್ನು ಹೇಗೆ

* किन्तु पुरुषसूक्तोक्तत्वाच्चेति । अनेन सौत्रश्चशब्दः प्रकारान्तरेण व्याख्यातो भवति । विष्णुत्व एव वा पृथग्युक्तिरिति । गायत्रीशब्दवाच्ये 'एतावानस्य महिमा' इत्यादिना पुरुषसूक्तमन्त्रोदाहरणात् पुरुषसूक्तप्रतिपाद्यश्च यतो विष्णुरेवेति भाष्याभिप्राय इत्यर्थः । अनेन 'एतावानस्य महिमा अतो ज्यायांश्च पूरुषः' इत्यादिशब्दसहितलिङ्गैश्चेति न्यायविवरणमुक्तार्थं भवति । अक्षरयोजना तु – तावानस्य महिमा इत्यत्र पुरुषशब्द आदिपदेन 'यद्वै ततमेव ब्रह्मोपनिषदं वेद' इति ब्रह्मशब्द एतत् सहितलिङ्गैर्लिङ्गानि च भूतादिपादत्वं पुरुषसूक्तोक्तत्वमेव नातिशीयन्ते इति सर्वोत्तमत्वम् इत्यादीनि । अत एव 'बाहुल्यात् श्रुतिलिङ्गयोः' इत्यनुव्याख्यानं तथैव सुधायां व्याख्यातम् । अत्राप्यनन्यथासिद्धत्वं ग्राह्यम् । 'अनन्यथासिद्धलिङ्गैः' इत्युक्तगानत्राणकर्तृत्वलिङ्गेन शब्दसहितलिङ्गैश्च भगवद्विषयत्वमेव अधिगतगायत्रीशब्दस्येति । अनेन न्यायविवरण-वाक्येन सूत्रगतः 'च'शब्दो न केवलं प्रागुक्तगानत्राणकर्तृत्वसमुच्चयार्थः, किन्तु सर्वोत्तमत्वलिङ्गपुरुषब्रह्मशब्दसमुच्चयार्थश्चेत्युक्तं भवतीति भावः । – (भावबोधः)

ನಿಶ್ಚಯಿಸುತ್ತಿದೆ ಎಂಬ ಪ್ರಶ್ನೆಗೆ ''ಯಜ್ಞ'' ಎಂಬ ವಾಕ್ಯದಿಂದ ಉತ್ತರಿಸುತ್ತಿದ್ದಾರೆ. ಪುರುಷಪಶು-ಪರವಾದ ಪುರುಷಸೂಕ್ತದಲ್ಲಿ ವಿಷ್ಣುಪರಶ್ರುತಿಯು ಪ್ರಾಸಂಗಿಕವಾಗಿ ಬಂದಿದೆಯೆಂದು ಹೇಳೋಣ. ಆದ್ದರಿಂದ ಭೂತಾದಿಪಾದತ್ವವು ವಿಷ್ಣುವಿಗೆ ಸಂಬಂಧಿಸಿದ ಧರ್ಮವಲ್ಲವೆಂಬ ಶಂಕೆಗೆ ಸ್ಮೃತಿಯನ್ನು ಉದಾಹರಿಸಿ ಉತ್ತರಿಸುತ್ತಿದ್ದಾರೆ ''ತಸ್ಮಿನ್'' ಇತ್ಯಾದಿಯಾಗಿ. ಅಥವಾ ಪುರುಷಸೂಕ್ತದಲ್ಲಿ ಹೇಳಲ್ಪಟ್ಟ ಯುಕ್ತಿಯು ಗಾಯತ್ರಿಗೆ ವಿಷ್ಣುತ್ವಸಮರ್ಥಕವೇ ಆಗಿದೆಯೆಂದು ''ಸಹಿ ಪುರುಷಸೂಕ್ತಾಭಿಧೇಯಃ'' ಎಂಬುದರಿಂದ ಹೇಳಿದ್ದಾರೆ.

**ಭಾವದೀಪಃ – ಸೌತ್ರಚಶಬ್ದಸ್ಯಾರ್ಥಾನ್ತರಮುಪೇತ್ಯ 'ಸ ಹಿ' ಇತ್ಯಾದಿಭಾಷ್ಯಂ ಪ್ರವೃತ್ತಮಿತಿ ಭಾವೇನ ಆಹ – ನ ಕೇವಲಮಿತಿ ॥**

**ಅನ್ಯೇತಿ ॥ 'ಪುರುಷಪಶುಪ್ರಕರಣೇ' ಇತ್ಯರ್ಥಃ । ಯಥಾ ಷಟ್ಪ್ರಶ್ನೇ ಪ್ರಾಣಪ್ರಕರಣೇ 'ಹೃದಿ ಹ್ಯೇಷ ಆತ್ಮಾ' ಇತಿ ಜೀವಶ್ರುತಿಃ । ಯಥಾ ವಾ ಕಾಣ್ವಶ್ರುತೌ 'ನೈವೇಹ ಕಿಞ್ಚನ' ಇತಿ ಮೃತ್ಯುಪ್ರಕರಣೇ, 'ಸ ಏವ ಪ್ರಾಣಸ್ತ್ರೇಧಾ ವಿಹಿತಃ' ಇತಿ ಪ್ರಾಣಶ್ರುತಿಸ್ತಥೇತಿ ಭಾವಃ । ಪೃಥಗುಕ್ತಿರಿತಿ ॥ – ನ ಕೇವಲಂ ಭೂತಾದಿಪಾದವ್ಯಪದೇಶಾತ್ ಕಿನ್ತು ಗಾಯತ್ರ್ಯಾ ಪ್ರತಿಜ್ಞಾತಚತುಷ್ಪಾದತ್ವಸ್ಯ ಪುರುಷಸೂಕ್ತಮನ್ತ್ರೇಣೋಪಾದಾನೇನ ಪುರುಷಸೂಕ್ತೋಕ್ತತ್ವಾಚ್ಚ ಏವಂ ಗಾಯತ್ರೀ ವಿಷ್ಣುರಿತಿ ಭಾವೇನ ತಸ್ಯ ವಿಷ್ಣುಪರತ್ವಸಮರ್ಥನಪರಂ 'ಸ ಹಿ' ಇತಿ ಭಾಷ್ಯಮ್ - ಇತ್ಯರ್ಥಃ ॥೨೬॥**

ಸೂತ್ರದಲ್ಲಿರುವ ಚಶಬ್ದಕ್ಕೆ ಮತ್ತೊಂದು ಅರ್ಥವನ್ನು ವಿವಕ್ಷಿಸಿ 'ಸಹಿ' ಇತ್ಯಾದಿ ಭಾಷ್ಯವು ಹೊರಟಿದೆ ಎಂಬ ಅಭಿಪ್ರಾಯದಿಂದ ''ನ ಕೇವಲಮ್'' ಇತ್ಯಾದಿ ವಾಕ್ಯವು ಹೊರಟಿದೆ. ''ಅನ್ಯ'' ಎಂದರೆ ಪುರುಷಪಶುಪ್ರಕರಣದಲ್ಲಿ ಎಂದರ್ಥ. ಯಾವ ರೀತಿಯಾಗಿ ಷಟ್ಪ್ರಶ್ನದಲ್ಲಿ ಬರುವ ಪ್ರಾಣಪ್ರಕರಣದಲ್ಲಿ 'ಹೃದಿ ಹ್ಯೇಷ ಆತ್ಮಾ' ಎಂಬ ಜೀವಶ್ರುತಿಯು ಕೇಳಿಸುತ್ತಿದೆಯೋ ಅಥವಾ ಕಾಣ್ವಶ್ರುತಿಯಲ್ಲಿ ಪ್ರಸಕ್ತವಾಗುವ 'ನೈವೇಹ ಕಿಂಚನ' ಎಂಬ ಮೃತ್ಯುಪ್ರಕರಣದಲ್ಲಿ 'ಸ ಏವ ಪ್ರಾಣಸ್ತ್ರೇಧಾ ವಿಹಿತಃ' ಎಂಬ ಪ್ರಾಣಶ್ರುತಿಯು ಕೇಳಿಸುತ್ತಿದೆಯೋ ಅದರಂತೆ ಎಂದು ತಿಳಿಯಬೇಕು.

ಟೀಕೆಯಲ್ಲಿ ''ಪೃಥಗ್ ಯುಕ್ತಿಃ'' ಎಂದಿದ್ದಾರೆ. ಕೇವಲ ಭೂತಾದಿಪಾದವ್ಯಪದೇಶವೆಂಬ ಲಿಂಗದಿಂದಷ್ಟೇ ವಿಷ್ಣುವು ಗಾಯತ್ರಿ ಎನಿಸುವುದಿಲ್ಲ. ಹೊರತಾಗಿ ಗಾಯತ್ರಿಯ ಜೊತೆಗೆ ಪ್ರತಿಜ್ಞೆಮಾಡಲ್ಪಟ್ಟ ಚತುಷ್ಪಾದತ್ವವು ಪುರುಷಸೂಕ್ತಮಂತ್ರದಿಂದ ಸಮರ್ಥಿತವಾದ್ದರಿಂದಲೂ ಸಹ ಗಾಯತ್ರಿಯು ವಿಷ್ಣುವೇ ಆಗಿದ್ದಾನೆ ಎಂಬ ಅಭಿಪ್ರಾಯದಿಂದ ಗಾಯತ್ರಿಗೆ ವಿಷ್ಣುತ್ವವನ್ನು ಸಮರ್ಥಿಸಲು 'ಸಹಿ' ಎಂಬ ಭಾಷ್ಯವು ಹೊರಟಿದೆಯೆಂದು ಇದರ ಅರ್ಥ.

**ವಾಕ್ಯಾರ್ಥಮಞ್ಜರೀ – ॐ ಭೂತಾದಿಪಾದವ್ಯಪದೇಶೋಪಪತ್ತಶ್ಚೈವಮ್ ॐ ॥ ಏವಂ ಗಾಯತ್ರೀ ಬ್ರಹ್ಮೈವ । 'ಪಾದೋऽಸ್ಯ ಸರ್ವಾ ಭೂತಾನಿ ತ್ರಿಪಾದಸ್ಯಾಮೃತಂ ದಿವಿ' ಇತಿ ಗಾಯತ್ರೀಧರ್ಮತಯಾ ವ್ಯಪದಿಷ್ಟಜೀವಾಮೃತಾಖ್ಯಸ್ವರೂಪಸ್ಯಾಂಶಕತ್ವಸ್ಯ ತಸ್ಮಿನ್ನೇವೋಪಪತ್ತೇರಿತ್ಯರ್ಥಃ ॥ ಸೈಷೇತಿ ॥**

ಸೈಷಾ ಷಡ್ವಿಧಾ ಗಾಯತ್ರೀ ಭೂತವಾಕ್ ಪೃಥಿವೀ ಶರೀರಹೃದಯಭೇದೇನ ಷಡ್ಧಾ ಗಾಯತ್ರೀ ಚತುಷ್ಪದಾ ಭೂತಮೂರ್ತಿತ್ರಯಾಖ್ಯಾಂಶವತೀತ್ಯರ್ಥಃ । ವ್ಯಪದಿಶ್ಯ ವಿಹಿತ್ವಾ । ತತ್ರೈವ ಚತುಷ್ಪಾದತ್ವ ಏವ ॥ **ತದೇತದಿತಿ** ॥ ತದೇತದ್ ಭಗವತಶ್ಚತುಷ್ಪಾದತ್ವಂ ಋಚಾ ಮನ್ತ್ರಾನ್ತರೇಣ ಅಭಿ ಕಥಮೇತದಿತಿ ಶಙ್ಕಾಮಭಿ ತದುತ್ತರತ್ವೇನೇತಿ ಯಾವತ್ । ಅನು ಆನುಕೂಲ್ಯೇನೋಕ್ತಮಿತ್ಯರ್ಥಃ । ಜ್ಯಾಯಾನ್ ಅಧಿಕಮಹಿಮಾಭೂತಾನಿ ಜೀವಾಃ । ಪಾದತ್ರಯಂ ನಾರಾಯಣವಾಸದೇವವೈಕುಣ್ಠಾಖ್ಯಮ್ । ದಿವಿ ಅನನ್ತಾಸಙ್ಖ್ಯೇತದ್ಬೀಪವೈಕುಣ್ಠೇಷು । ಪಾದತ್ರಯಸ್ಯೇಶ ಭೂತಾನಾಮಪಿ ಸ್ವರೂಪಾಂಶತ್ವಮುಚ್ಯತ ಇತಿ ಭ್ರಾನ್ತಃ ಶಙ್ಕತೇ – **ನನ್ವಿತಿ** ॥ ಭಿನ್ನಂ ಚೇತ್ಯನ್ತಗ್ರಹಣಾಯಸುವರ್ಣಮಿತ್ಯಾದೀತ್ಯಾದಿಶಬ್ದಃ । ಭಾಷ್ಯಮಾಕಾङ್ಕ್ಷಾಕ್ರಮೇಣ ಯೋಜಯತಿ – **ನಾಯಮಿತಿ** ॥ **ವಿಶ್ವಚತುಷ್ಟಯಸಮ ಇತಿ** ॥ ವಿಶ್ವಬಲ-ಚತುಷ್ಟಸಾಮರ್ಥ್ಯವಾನಿತ್ಯರ್ಥಃ । ಸಾ ಕಲಾ । ಉತ್ತರಭಾಷ್ಯಂ ಸङ್ಗಮಯಿತುಮಾಹ – **ನ ಕೇವಲ-ಮಿತಿ** ॥ ತದಭಾವಾದ್ ಯಜ್ಞಶ್ರುತ್ಯಭಾವಾತ್ । ಅಧ್ಯಾಹಾರೇ ಗೌರವಾತ್ಪ್ರಕಾರಾನ್ತರಮಾಹ – **ಪುರುಷಸೂಕ್ತೇತಿ** ॥ ಪೃಥಗ್ ಭೂತಾದಿಪಾದತ್ವಾಪೇಕ್ಷಯಾ ॥

ಶ್ರೀವೇದವ್ಯಾಸಪ್ರಣೀತ ಬ್ರಹ್ಮಮೀಮಾಂಸಾಶಾಸ್ತ್ರ

**ಸೂ - ಓಂ ॥ ಉಪದೇಶಭೇದಾನ್ನೇತಿ ಚೇನ್ನೋಭಯಸ್ಮಿನ್ನಪ್ಯವಿರೋಧಾತ್ ॥ ಓಂ ॥ ೨೪ ॥**

ಸೂತ್ರಾರ್ಥ – ಗಾಯತ್ರೀಯು ದಿವಿಸ್ಥತತ್ವವಾಗಿದೆ; ಜ್ಯೋತಿಯು ದಿವಃಪರವಾಗಿದೆ. ಹೀಗಿರುವಾಗ ಗಾಯತ್ರೀ ಹಾಗೂ ಜ್ಯೋತಿಗೆ ಅಭೇದವನ್ನು ಹೇಳಲು ಹೇಗೆ ಸಾಧ್ಯ? ಎಂಬ ಶಂಕೆಯು ತಪ್ಪು. ಮೂರು ಅಥವಾ ಏಳು ಲೋಕಗಳ ವಿವಕ್ಷೆಯಿಂದ ಈ ವಿರೋಧವನ್ನು ಪರಿಹರಿಸಬಹುದು. ಆದ್ದರಿಂದ ಗಾಯತ್ರೀ ಹಾಗೂ ಜ್ಯೋತಿಯು ಒಬ್ಬನೇ ವಿಷ್ಣುವಾಗಬಹುದು.

**ಸೂತ್ರದೀಪಿಕಾ** – ಉಪದೇಶಭೇದಾತ್ ಗಾಯತ್ರೀಜ್ಯೋತಿಷೋಃ ಶ್ರುಸ್ಥತ್ವ'ತ್ರಿಪಾದಸ್ಯಾಮೃತಂ ದಿವಿ' ದಿವಃಪರತ್ವ'ಪರೋ ದಿವಃ'ರೂಪವಿರುದ್ಧಧರ್ಮಬೋಧಕಶ್ರುತಿಭೇದಾತ್ ನೇತಿ ಚೇತ್, ತದ್ ದ್ವಯಂ ವಿಷ್ಣ್ವಾಖ್ಯಮೇಕಂ ವಸ್ತು ನ ಕಿನ್ತು ಭಿನ್ನಮೇವೇತಿ ಚೇನ್ನ । ಕುತಃ? ಉಭಯಸ್ಮಿನ್ ಶ್ರುತಿವಾಕ್ಯೇऽಪಿ ಏಕಸ್ಯ ಪ್ರತಿಪಾದ್ಯತ್ವೇऽಪಿ ಅವಿರೋಧಾತ್ । ತ್ರಿಸಪ್ತಲೋಕವಿವಕ್ಷಯಾ ವಿರೋಧಾಭಾವಾದಿತ್ಯರ್ಥಃ ॥

ಉಪದೇಶಭೇದಾತ್ = ಗಾಯತ್ರಿಗೆ 'ತ್ರಿಪಾದಸ್ಯಾಮೃತಂ ದಿವಿ' ಎಂದು ದಿವಿಸ್ಥತತ್ವವನ್ನು, 'ಪರೋ ದಿವಃ' ಎಂಬುದಾಗಿ ಜ್ಯೋತಿಗೆ ದಿವಃಪರತ್ವವನ್ನು ಶ್ರುತಿಯು ಹೇಳುತ್ತಿದೆ. ಇವೆರಡೂ ವಿರುದ್ಧಧರ್ಮಗಳಾದ್ದರಿಂದ ಗಾಯತ್ರೀ ಮತ್ತು ಜ್ಯೋತಿ ಎರಡೂ ವಿಷ್ಣು ಎಂಬ ಒಂದೇ ವಸ್ತು ಆಗಲಾರವು. ನ = ಇದು ಸರಿಯಲ್ಲ; ಏಕೆಂದರೆ ಉಭಯಸ್ಮಿನ್ನಪಿ = ಶ್ರುತಿಯ ಎರಡು ವಿಧ ಹೇಳಿಕೆಗಳಲ್ಲಿ ಅವಿರೋಧಾತ್ = ವಿರೋಧವಿರುವುದಿಲ್ಲ, ಲೋಕಗಳನ್ನು ಮೂರು ಅಥವಾ ಏಳುವಿಧವಾಗಿ ವಿವಕ್ಷಿಸಿದಾಗ ವಿರೋಧಕ್ಕೆ ಅವಕಾಶವಿಲ್ಲ. ಗಾಯತ್ರೀ ಮತ್ತು ಜ್ಯೋತಿಯು ಒಬ್ಬನೇ ಆಗಬಹುದು.

ವಿರುದ್ಧಾರ್ಥವುಳ್ಳ ಎರಡು ವಿಭಕ್ತಿಗಳು ಒಬ್ಬನನ್ನೇ ಹೇಳಲಾರವು.

**ಭಾಷ್ಯಮ್ – 'ತ್ರಿಪಾದस्यामृतं दिवि' (छां. ३-१२-६.) इति पूर्वोपदेशः । 'परो दिवः' (छां. ३-१३-७.) इति पञ्चम्यन्तः पश्चिमः । तस्मान्नेकं वस्त्वत्रोच्यते इति चेत् —**

ಗಾಯತ್ರಿಯ ಮೂರುಪಾದಗಳು ದ್ಯುಲೋಕದಲ್ಲಿವೆ ಎಂದು ಮೊದಲು ಹೇಳಿ ಆನಂತರ ಜ್ಯೋತಿಯು ದ್ಯುಲೋಕಕ್ಕಿಂತ ಮೇಲಿದೆ ಎಂದು ಪಂಚಮೀವಿಭಕ್ತ್ಯಂತವಾದ ಪದದಿಂದ ಹೇಳಲ್ಪಟ್ಟಿದೆ. ಆದ್ದರಿಂದ ಎರಡೂ ಶಬ್ದಗಳಿಂದ ಒಂದೇ ವಸ್ತುವು ಪ್ರತಿಪಾದ್ಯವಾಗಲು ಸಾಧ್ಯವಿಲ್ಲ.

ಪ್ರತಿಪದಾರ್ಥ -- ಹಿಂದಿನ ಸೂತ್ರದಲ್ಲಿರುವ ಸಿದ್ಧಾಂತಾಂಶವನ್ನು ಆಕ್ಷೇಪಿಸಿ ಸಮಾಧಾನವನ್ನು ಹೇಳುತ್ತಿದ್ದಾರೆ.

ತ್ರಿಪಾದಸ್ಯ = ಮೂರು ಪಾದಗಳುಳ್ಳ, ಅಮೃತಂ = ನಾಶರಹಿತವಾದ ಸ್ಥಾನವು, ದಿವಿ = ದ್ಯುಲೋಕದಲ್ಲಿದೆ. ಇತಿ = ಹೀಗೆ, (ಸಪ್ತಮೀವಿಭಕ್ತ್ಯಂತವಾಗಿ) ಪೂರ್ವೋಪದೇಶಃ = ಮೊದಲು ಹೇಳಲ್ಪಟ್ಟಿದೆ.

ದಿವಃ = ದ್ಯುಲೋಕಕ್ಕಿಂತ, ಪರಃ = ಮೇಲ್ಭಾಗದಲ್ಲಿದೆ, ಇತಿ = ಎಂದು, ಪಂಚಮ್ಯಂತಃ = ಪಂಚಮೀವಿಭಕ್ತ್ಯಂತವಾಗಿ, ಪಶ್ಚಿಮಃ = ಆನಂತರ ಹೇಳಲ್ಪಟ್ಟಿದೆ. ತಸ್ಮಾತ್ = ಆದ್ದರಿಂದ, ಏಕಂ ವಸ್ತು = ಒಂದೇ ವಿಷ್ಣುವೆಂಬ ವಸ್ತುವು, ಅತ್ರ = ಈ ಪುರುಷಸೂಕ್ತದಲ್ಲಿ, ನ ಉಚ್ಯತೇ = ಪ್ರತಿಪಾದ್ಯವಾಗುವುದಿಲ್ಲ.

---

**ಭಾಷ್ಯದೀಪಿಕಾ** – उक्तमाक्षिप्य समादधत् सूत्रमुपन्यस्यति – उपदेशेति ॥ 'उपदेशयोः' सप्तमीपञ्चमीयुतवाक्ययोः 'उपदेशेन' गायत्रीज्योतिषोः द्युस्थत्वदिवःपरत्वरूप-विरुद्धधर्मोक्त्या 'भेदात्' विरोधान्न द्वयोर्विष्ण्वाख्यम् एकं वस्तु प्रतिपाद्यं, किन्तु भिन्नमेवेति चेत् न, किन्तु 'उभयस्मिन्' उभयत्राप्युपदेशे एकमेव प्रतिपाद्यं, कथम्? अविरोधात् । त्रिसप्तलोकापेक्षया सप्तमीपञ्चम्योः एकार्थत्वेन विरोधाभावादिति सूत्रयोजनामभिप्रयन्नाक्षेपांशं तावद् व्याचष्टे – त्रिपादिति ॥ 'पूर्वोपदेशः' पूर्वोक्तिः । 'पश्चिमः' पश्चात्तनः उत्तर उपदेशस्तद्भिन्नोऽस्तीति शेषः । विरोधस्फोरणाय पञ्चम्यन्त इत्याद्युक्तिः । उपक्रमगतस्य प्राबल्योपपादनाय पूर्व इत्युक्तिः । ततः किमित्यत आह – तस्मादिति ॥ यस्मादेवं भिन्नोपदेशद्वयमस्ति तस्मादत्रोपदेशद्वये गायत्रीज्योतिश्शब्दाभ्यां नैकं वस्तु विष्ण्वाख्यमुच्यते । कुतः? यतोऽत्र 'नैकम्' अनेकं वस्तु द्युस्थत्वदिवःपरत्वरूपं धर्मद्वयमुच्यते । किन्त्वत्र 'नैकम्' अनेकं वस्तुद्वयमुच्यत इति योजना ॥

**तत्वप्रकाशिका – उक्तमाक्षिप्य समादधत् सूत्रमुपन्यस्याक्षेपांशं तावद्-व्याचष्टे – उपदेशेति ॥ यदुक्तं गायत्री ज्योतिश्च विष्णुरिति तद्भवेद्यदि गायत्री-ज्योतिःप्रसङ्गयोरेकं वस्तूच्यते । न चैवम् । 'त्रिपादस्यामृतं दिवि' इति गायत्र्या द्यु(पद)स्थितत्वोक्त्या परो दिव इति ज्योतिषो दिवःपरत्वोक्त्या विरोधान्नैकं वस्त्वत्रोच्यते । अथ कथमुभयोः विष्णुत्वाध्यवसाय इत्यर्थः ।**

ಹಿಂದಿನ ಸೂತ್ರದಲ್ಲಿ ಪರಮಾತ್ಮನು ಗಾಯತ್ರೀಶಬ್ದವಾಚ್ಯನೆಂದು ಸಮರ್ಥಿಸಲಾಯಿತು. ಆದನ್ನು ಆಕ್ಷೇಪಿಸಿ ಸಮಾಧಾನವನ್ನು ಹೇಳುವ ಸೂತ್ರವನ್ನು ಉಪನ್ಯಾಸಮಾಡುತ್ತಾ, ಸೂತ್ರದಲ್ಲಿರುವ ಆಕ್ಷೇಪದ ಭಾಗವನ್ನು ''ಉಪದೇಶ'' ಇತ್ಯಾದಿ ವಾಕ್ಯದಿಂದ ವ್ಯಾಖ್ಯಾನಿಸುತ್ತಿದ್ದಾರೆ.

ಗಾಯತ್ರೀ ಮತ್ತು ಜ್ಯೋತಿಶಬ್ದಗಳಿಂದ ವಿಷ್ಣುವೇ ಪ್ರತಿಪಾದ್ಯನೆಂದು ಏನು ಹೇಳಲ್ಪಟ್ಟಿತೋ ಅದು ಗಾಯತ್ರೀ ಮತ್ತು ಜ್ಯೋತಿಪ್ರಕರಣಗಳು ಒಂದೇ ವಸ್ತುವನ್ನು ಹೇಳುವುದಾದಲ್ಲಿ ಮಾತ್ರ ಅದು ಕೂಡುತ್ತದೆ. ಆದರೆ ಗಾಯತ್ರೀ ಜ್ಯೋತಿಪ್ರಕರಣಗಳು ಒಂದೇ ವಸ್ತುವನ್ನು ಪ್ರತಿಪಾದಿಸುತ್ತಿಲ್ಲ. ಏಕೆಂದರೆ 'ತ್ರಿಪಾದಸ್ಯಾಮೃತಂ ದಿವಿ' ಎಂಬ ಶ್ರುತಿಯಲ್ಲಿ ಗಾಯತ್ರಿಯು ದ್ಯುಲೋಕದಲ್ಲಿರುತ್ತದೆಂದು ಹೇಳಿ, 'ಪರೋ ದಿವಃ' ಎಂಬ ಶ್ರುತಿಯಲ್ಲಿ ದ್ಯುಲೋಕದ ಮೇಲ್ಭಾಗದಲ್ಲಿ ಜ್ಯೋತಿಯು ಇರುತ್ತದೆಂದು ಹೇಳಲಾಗಿದೆ. ಹೀಗೆ ಎರಡರ ಸ್ಥಾನವೂ ಭಿನ್ನಭಿನ್ನವಾದದ್ದರಿಂದ ಜ್ಯೋತಿ ಮತ್ತು ಗಾಯತ್ರೀಪದಗಳು ಒಂದೇ ವಸ್ತುವನ್ನು ಹೇಳಲಾರವು. ಆದ್ದರಿಂದ ಈ ಎರಡು ಶಬ್ದಗಳಿಂದ ವಿಷ್ಣುವೇ ಪ್ರತಿಪಾದ್ಯನೆಂಬ ನಿರ್ಣಯವನ್ನು ಹೇಗೆ ಮಾಡುತ್ತೀರಿ? ಎಂದು ಆಕ್ಷೇಪ ಭಾಗದ ಸೂತ್ರಾರ್ಥ.

**भावदीपः – ॐ उपदेशभेदात् नेति चेन्न उभयस्मिन्नप्यविरोधात् ॐ ॥२७॥**

**'उक्तमाक्षिप्य' इत्युक्तं व्यञ्जयन् भाष्यं व्याचष्टे – यदुक्तमिति ॥**

'ಉಕ್ತಮಾಕ್ಷಿಪ್ಯ' ಎಂಬ ತಮ್ಮ ಮಾತನ್ನೇ ಸ್ಪಷ್ಟ ಪಡಿಸುತ್ತಾ ಭಾಷ್ಯವನ್ನು 'ಯದುಕ್ತಂ' ಇತ್ಯಾದಿ ವಾಕ್ಯದಿಂದ ವ್ಯಾಖ್ಯಾನಿಸುತ್ತಿದ್ದಾರೆ.

ಮೂರು ಹಾಗೂ ಏಳುಲೋಕಗಳ ವಿವಕ್ಷೆಯಿಂದ ವಿರೋಧಪರಿಹಾರ

**भाष्यम् – न, त्रिसप्तलोकापेक्षया उभयस्मिन्नप्यविरोधात् ॥**

**॥ इति श्रीमदानन्दतीर्थभगवत्पादाचार्यविरचितब्रह्मसूत्रभाष्ये**

**छन्दोऽभिधानाधिकरणम् ॥ ११ ॥**

ಇದು ತಪ್ಪು, ಮೂರು ಹಾಗೂ ಏಳು ಲೋಕಗಳೆಂಬ ಬೇರೆ ಬೇರೆ ವಿವಕ್ಷೆಯಿಂದ ಎರಡು ವಿಧಪ್ರಯೋಗಗಳಲ್ಲಿರುವ ವಿರೋಧವನ್ನು ಪರಿಹರಿಸಬಹುದು. ಆದ್ದರಿಂದ ಗಾಯತ್ರೀಶಬ್ದಪ್ರತಿಪಾದ್ಯನಾದವನು ಮತ್ತು ಜ್ಯೋತಿಶಬ್ದಪ್ರತಿಪಾದ್ಯನಾದವನು ವಿಷ್ಣುವೇ ಆಗುತ್ತಾನೆ.

ಪ್ರತಿಪದಾರ್ಥ -- ಇತಿ ಚೇನ್ನ = ಇದು ತಪ್ಪು; ತ್ರಿಸಪ್ತಲೋಕಾಪೇಕ್ಷಯಾ = ಮೂರು ಲೋಕ, ಹಾಗೂ ಏಳು ಲೋಕಗಳೆಂಬ ಉದ್ದೇಶದಿಂದ, ಉಭಯಸ್ಮಿನ್ನಪಿ = ಎರಡೂ ವಿಧಪ್ರಯೋಗಗಳಲ್ಲಿ, ಅವಿರೋಧಾತ್ = ವಿರೋಧವಿರುವುದಿಲ್ಲ. ಆದ್ದರಿಂದ ಪುರುಷೇ = ಪುರುಷಸೂಕ್ತಪ್ರತಿಪಾದ್ಯನಾದ ವಿಷ್ಣುವೇ ಗಾಯತ್ರೀಶಬ್ದಪ್ರತಿಪಾದ್ಯನಾಗಿದ್ದಾನೆಂದು ನಿರ್ಣಯವಾಯಿತು.

---

ಭಾಷ್ಯದೀಪಿಕಾ – ಸಿದ್ಧಾನ್ತಯತ್ ಸೂತ್ರಾಂಶಂ ವ್ಯಾಚಷ್ಟೇ – ನೇತಿ ॥ ನಾತ್ರ ವಸ್ತುದ್ವಯಮುಚ್ಯತೇ ಇತ್ಯರ್ಥಃ । ಕಿಂತ್ವಿತಿ ಶೇಷಃ, ಏಕಂ ವಸ್ತೂಚ್ಯತ ಇತ್ಯನುಷಜ್ಯತೇ । ಉಭಯಸ್ಮಿನ್ನಿತಿ ಸಾಧ್ಯಾನ್ತರ್ಗತಮ್ । ಅಪಿಶಬ್ದೋ ನ ಕೇವಲಮೇಕತ್ರ, ಕಿನ್ತ್ವುಭಯತ್ರಾಪೀತಿ ಸಮುಚ್ಚಯೇ । ತಥಾ ಚ ಕಿನ್ತ್ವುಭಯಸ್ಮಿನ್ನಪ್ಯುಪದೇಶೇ ಏಕಮೇವ ವಿಷ್ಣ್ವಾಖ್ಯಂ ವಸ್ತೂಚ್ಯತ ಇತಿ ಯೋಜನಾ । ವಿರೋಧಾತ್ ಕಥಮೇತದ್ ಯುಜ್ಯತೇ ಇತ್ಯತ ಆಹ - ತ್ರಿಸಪ್ತಲೋಕಾಪೇಕ್ಷಯೇತಿ ॥ ತ್ರಿಲೋಕವಿವಕ್ಷಯಾ ಸಪ್ತಲೋಕವಿವಕ್ಷಯಾ ಚ 'ಅವಿರೋಧಾತ್' ಉಭಯತ್ರಾಪ್ಯೇಕವಸ್ತ್ವಭಿಧಾನೇ ವಿರೋಧಾಭಾವಾದಿತ್ಯರ್ಥಃ ॥

ಅಯಂ ಭಾವಃ – ಯದಾ ಭೂರ್ಭುವಸ್ಸ್ವರಿತಿ ಲೋಕತ್ರಯವಿವಕ್ಷಾ, ತದಾ ಲಕ್ಷಯೋಜನೋಚ್ಛ್ರಿತಾನ್ತರಿಕ್ಷಾಖ್ಯಭುವ ಉಪರಿತನಸ್ಯ ಸರ್ವಸ್ಯಾಪಿ ದ್ಯುತ್ವಾತ್ ಶ್ವೇತದ್ವೀಪಾನನ್ತಾಸನವೈಕುಂಠಾನಾಂ ಚಾನ್ತರಿಕ್ಷಾದುಪರಿತನತ್ವಾತ್, ತತ್ರತ್ಯಂ ನಾರಾಯಣವಾಸುದೇವವೈಕುಂಠಾಖ್ಯಂ ತ್ರಿಪಾಚ್ಛಬ್ದೋಕ್ತಂ ರೂಪತ್ರಯಂ ದಿವಿ ತಿಷ್ಠತೀತ್ಯುಚ್ಯತ ಇತಿ ನ ಸಪ್ತಮ್ಯನ್ತೋಪದೇಶವಿರೋಧಃ । ನ ಚ –

**'ಪೃಥಿವೀಸ್ಥೇಷು ಸರ್ವೋಚ್ಚೋ ಲೋಕೋऽನನ್ತಾಸನಾತ್ಮಕಃ ।**
**ಅನ್ತರಿಕ್ಷಾತ್ಮಕೇಭ್ಯಶ್ಚ ಶ್ವೇತದ್ವೀಪಸ್ಥಿತೋ ಹರಿಃ ॥'**

ಇತ್ಯುಕ್ತೇರನನ್ತಾಸನಸ್ಯ ನಾನ್ತರಿಕ್ಷಾದುಪರಿತನತೇತಿ ಶಙ್ಕ್ಯಮ್ । ತಸ್ಯ ಪೃಥಿವೀಸ್ಥತ್ವೇऽಪಿ ಬಹುಲಕ್ಷಯೋಜನೋಚ್ಛ್ರಿತತ್ವೇನೈಕಲಕ್ಷಯೋಜನೋಚ್ಛ್ರಿತಾನ್ತರಿಕ್ಷಾದುಪರಿತನತ್ವೋಪಪತ್ತೇಃ । ಸರ್ವಪೃಥಿವೀಸ್ಥೋಚ್ಚತ್ವೋಕ್ತ್ಯಾ ತು ನ ಪೃಥಿವೀಸ್ಥಾನ್ಯೋಚ್ಚತ್ವಯೋಗೋ ವ್ಯಾವರ್ತ್ಯತೇ । ಕಿನ್ತು ಪೃಥಿವೀಸ್ಥೋಚ್ಚತ್ವಾಯೋಗಃ । ಯದಾ ತು ಭೂರ್ಭುವಸ್ಸ್ವರ್ಮಹರ್ಜನಸ್ತಪಸ್ಸತ್ಯಮಿತಿ ಸಪ್ತಲೋಕವಿವಕ್ಷಾ ತದೇನ್ದ್ರಸದನಸ್ಯ ದ್ಯುತ್ವಾತ್, ತದುಚ್ಚಸ್ಯಾಪ್ಯುಪರಿಸ್ಥಿತತ್ವೇನ ತತ್ಸಜಾತೀಯಸ್ಯ ವೈಕುಂಠಸ್ಯ ದಿವಃ ಪರತ್ವಮ್ ॥

**'ಪೃಥಿವ್ಯಾಂ ದ್ಯೌರ್ಮಹಾಮೇರುರಾಕಾಶೇ ಸೂರ್ಯಮಣ್ಡಲಮ್ ।**
**ದಿವೀನ್ದ್ರಸದನಂ ಚೈವ ತತ್ಪರೇ ತು ದಿವಃ ಪರೇ ॥'**

ಇತಿ ಸ್ಮೃತೇರ್ಮೇರೋರಪಿ ದ್ಯುತ್ವಾತ್ ತದುಚ್ಚಸ್ಯ ಭೂಸ್ಪೃಷ್ಟತ್ವೇನ ತತ್ಸಜಾತೀಯಸ್ಯಾನನ್ತಾಸನಸ್ಯಾಪಿ ದಿವಃ ಪರತಾ । ಏವಂ ಸೂರ್ಯಮಣ್ಡಲಸ್ಯಾಪಿ ದ್ಯುತ್ವಾತ್ ತದುಚ್ಚಸ್ಯೋಪರಿಸ್ಥತ್ವೇನ ತತ್ಸಜಾತೀಯಸ್ಯ ಭೂಮೇಃ

तत्वप्रकाशिका – सिद्धान्तयत्सूत्रांशं व्याचष्टे – नेति ॥ नात्र वस्तुद्वयमुच्यते येनोभयोर्विष्णुत्वाभावः किन्तूभयत्राप्येकमेव । विवक्षाभेदेन सप्तमीपञ्चम्योरेकार्थत्वेन विरोधाभावात् । तथा हि । भूर्भुवःसुव(स्व)रिति लोकत्रयाभिप्रायेण लक्षयोजनोच्छ्रितान्तरिक्षोपरितनश्वेतद्वीपानन्तासनवैकुण्ठानां द्युत्त्वात् तद्गतरुपत्रयं दिवीत्युच्यते ।

सप्तलोकापेक्षया इन्द्रसदनस्य द्युत्वाद्वैकुण्ठस्य दिवःपरत्वम् । मेरोरपि द्युत्त्वात्तत्परानन्तासनस्य दिवःपरत्वम् । सूर्यमण्डलस्यापि द्युत्वेन तदुत्तरश्वेतद्वीपस्य दिवःपरत्वम् । तत्रस्थमूर्तित्रयस्य दिवःपरत्वं च युज्यते । अत उभयथोपदेशेऽपि विरोधाभावादुभयत्राप्येकमेव विष्ण्वाख्यं वस्तूच्यत इति भावः ।

एवं पृथिव्यन्तरिक्षस्वरात्मकसर्वलोकेभ्यः क्रमेणानन्तासनादीनामुच्चत्वेन सर्वतः पृष्टत्वं तथा मेरुवैजयन्तसत्यलोकेभ्यो ब्रह्मसदनेभ्यस्तेषां क्रमेणोच्चत्वात् विश्वतः पृष्टत्वं च ज्ञातव्यम् । तस्माद् गायत्री विष्णुरेव स एव ज्योतिरानन्दमयश्चेति सिद्धम् ॥ २७ ॥ ॥ इति तत्वप्रकाशिकायां गायत्र्यधिकरणम् ॥

---

किञ्चिदन्तरितस्य स्वर्गसमोन्नतस्य श्वेतद्वीपस्यापि दिवः परत्वमस्तीति न पञ्चम्यन्तोपदेशविरोधोऽपीति । द्युपरत्वं च सम्भावितसजातीयद्युपरत्वमिति न यावत्त्वयत्किञ्चित्त्वमुखेन दूषणावकाशः । वैकुण्ठस्य स्वर्गलोकात् परत्वेनैव दिवः परत्वसिद्धावपि तस्य 'सर्वतः पृष्ठेषु' इत्यनेनैव उक्तत्वात् स्वर्गत्यागेनेन्द्रसदनस्य द्युत्वोक्तिः । न च लोकत्रयविवक्षयैवानन्तासनादीनामपि मेर्वादिपरत्वेन दिवः परत्वस्यापि सिद्धेः सप्तलोकविवक्षा व्यर्थेति वाच्यम् । तथा सति वैकुण्ठस्यापि द्युशब्दार्थनिविष्टत्वेन तस्य सर्वद्युपरत्वासिद्ध्यापत्त्या 'द्यात्मकेभ्यश्च सर्वेभ्यो वैकुण्ठश्चोच्च उच्यते' इति प्रमाणविरोधापातात् ॥

छान्दोग्यभाष्ये तु –

'अनन्तशयनं चैव तथाऽनन्तासनं हरेः ।
बहुलक्षोच्छ्रिते नित्ये विमाने संस्थितं यतः ।
चित्प्रकृत्यात्मनि यतो दिवीति कथितं श्रुतौ ॥'

इति प्रमाणबलेन चित्प्रकृत्यात्मकानन्तासनश्वेतद्वीपवैकुण्ठाख्यस्थानत्रये सप्तम्यन्तो द्युशब्दो द्योतमानत्वनिमित्तेन यौगिकः, स्वर्गादौ तु रूढ इति उपदेशयोरविरोध इति प्रकारान्तरेण विरोधपरिहारः कृतः ॥ ११ ॥

ಸಿದ್ಧಾಂತಮಾಡುವುದಕ್ಕಾಗಿ ಸೂತ್ರದಲ್ಲಿರುವ ಸಿದ್ಧಾಂತಭಾಗವನ್ನು ''ನ'' ಎಂಬ ವಾಕ್ಯಾಂಶದಿಂದ ವ್ಯಾಖ್ಯಾನಿಸುತ್ತಿದ್ದಾರೆ.

ಇಲ್ಲಿ ಎರಡು ವಸ್ತುಗಳು ಪ್ರತಿಪಾದ್ಯಗಳಾಗಿಲ್ಲ. ಹಾಗಾಗಿದ್ದಲ್ಲಿ ವಿಷ್ಣುವಾಚಕವಲ್ಲವೆಂದು ಹೇಳಬಹುದಿತ್ತು. ಹೊರತಾಗಿ ಎರಡೂ ಕಡೆ ಒಂದೇ ವಸ್ತುವು ಪ್ರತಿಪಾದ್ಯವಾಗಿದೆ. ಬೇರೆ ಬೇರೆ ವಿವಕ್ಷೆಗಳಿಂದ ಸಪ್ತಮೀ ಹಾಗೂ ಪಂಚಮೀ ವಿಭಕ್ತಿಗಳಿಗೆ ಒಂದೇ ಅರ್ಥವನ್ನು ಹೇಳಬಹುದಾದ್ದರಿಂದ ವಿರೋಧವಿರುವುದಿಲ್ಲ. ಅದು ಹೀಗೆ — 'ಭೂರ್ಲೋಕ ಭುವರ್ಲೋಕ ಸ್ವರ್ಲೋಕ' ಎಂಬುದಾಗಿ ಸಮಗ್ರಬ್ರಹ್ಮಾಂಡವನ್ನು ಮೂರುಲೋಕಗಳೆಂದು ವಿವಕ್ಷಿಸಬೇಕು. ಆವಾಗ ಲಕ್ಷ-ಯೋಜನಕ್ಕಿಂತ ಎತ್ತರದಲ್ಲಿರುವ ಅಂತರಿಕ್ಷಲೋಕಕ್ಕಿಂತಲೂ ಮೇಲಿರುವ ಶ್ವೇತದ್ವೀಪ, ಆನಂತಾಸನ ಮತ್ತು ವೈಕುಂಠಲೋಕಗಳು ದ್ಯುಲೋಕಗಳೆನಿಸುತ್ತವೆ. ಅವುಗಳಲ್ಲಿರುವ ಭಗವಂತನ ನಾರಾಯಣ, ವಾಸುದೇವ, ವೈಕುಂಠವೆಂಬ ಮೂರು ರೂಪಗಳು 'ದಿವಿಸ್ಥಿತ' ಎನಿಸುತ್ತವೆ.

ಸಮಗ್ರಬ್ರಹ್ಮಾಂಡವನ್ನು ಸಪ್ತಲೋಕಾತ್ಮಕವಾಗಿ ವಿವಕ್ಷಿಸಿದಾಗ, ಇಂದ್ರಸದನವೇ ದ್ಯುಲೋಕವಾಗುತ್ತದೆ. ವೈಕುಂಠವು 'ದಿವಃಪರ' ವಾಗುತ್ತದೆ. ಮೇರು ಪರ್ವತವೂ ಸಹ ದ್ಯುಲೋಕವಾದ್ದರಿಂದ ಅದರ ಮೇಲಿರುವ ಆನಂತಾಸನವು ದಿವಃಪರವೇ ಆಗುತ್ತದೆ ಮತ್ತು ಸೂರ್ಯಮಂಡಲವು ದ್ಯುಲೋಕವಾದ್ದರಿಂದ ಅದರ ಮೇಲಿರುವ ಶ್ವೇತದ್ವೀಪವು ದಿವಃಪರವೇ ಆಗುತ್ತದೆ. ಒಟ್ಟಾರೆ ಈ ಮೂರು ಸ್ಥಳಗಳಲ್ಲಿರುವ ಪರಮಾತ್ಮನ ರೂಪಗಳಿಗೆ ದಿವಃಪರತ್ವವು ಯುಕ್ತವಾಗುತ್ತದೆ. ಆದ್ದರಿಂದ ಶ್ರುತಿಯಲ್ಲಿ ಎರಡು ಬಗೆಯಲ್ಲಿ ಗಾಯತ್ರೀ ಮತ್ತು ಜ್ಯೋತಿಗಳನ್ನು ಉಪದೇಶಿಸಿದ್ದರೂ ವಿರೋಧವು ಬರುವುದಿಲ್ಲ. ಎರಡೂ ಕಡೆಯೂ ವಿಷ್ಣು ಎಂಬ ಒಂದೇ ವಸ್ತುವು ಪ್ರತಿಪಾದ್ಯವಾಗಿದೆ ಎಂದು ತಿಳಿಯಬೇಕು.

ಇದೇ ರೀತಿಯಾಗಿ ಸೂತ್ರದಲ್ಲಿ ಪೃಥಿವೀ, ಅಂತರಿಕ್ಷ, ಸ್ವರ್ಗ ಸ್ವರೂಪವಾದ ಎಲ್ಲ ಲೋಕಗಳಿಗಿಂತ ಕ್ರಮವಾಗಿ ಆನಂತಾಸನಾದಿಗಳಿಗೆ ಉಚ್ಚತ್ವವನ್ನು ಹೇಳಬೇಕು. ಆದ್ದರಿಂದ ಆನಂತಾಸನಾದಿಗಳು ಎಲ್ಲಕ್ಕಿಂತ ಎತ್ತರದಲ್ಲಿವೆ. ಆದರಂತೆ ಮೇರುಪರ್ವತ, ವೈಜಯಂತ, ಸತ್ಯಲೋಕ ಮೊದಲಾದ ಬ್ರಹ್ಮಸದನಗಳಿಗಿಂತ ಆನಂತಾಸನಾದಿಗಳಿಗೆ ಕ್ರಮವಾಗಿ ಉಚ್ಚತ್ವವನ್ನು ಹೇಳಬೇಕು. ಆದ್ದರಿಂದಲೇ ಅವುಗಳು ಎಲ್ಲಕ್ಕಿಂತ ಎತ್ತರದಲ್ಲಿವೆ ಎಂದು ತಿಳಿಯಬೇಕು. ಈ ಎಲ್ಲ ಕಾರಣಗಳಿಂದ ಗಾಯತ್ರೀ-ಶಬ್ದದಿಂದ ವಿಷ್ಣುವೇ ಪ್ರತಿಪಾದ್ಯನಾಗಿದ್ದಾನೆ. ಅವನೇ ಜ್ಯೋತಿಶಬ್ದದಿಂದಲೂ ಪ್ರತಿಪಾದ್ಯನಾಗಿದ್ದಾನೆ ಆನಂದಮಯನೂ ಸಹ ಆಗಿದ್ದಾನೆಂದು ನಿರ್ಣಯವಾಯಿತು.

॥ಇಲ್ಲಿಗೆ ತತ್ತ್ವಪ್ರಕಾಶಿಕೆಯ ಕನ್ನಡಾನುವಾದದಲ್ಲಿ ಗಾಯತ್ರ್ಯಧಿಕರಣವು ಮುಗಿಯಿತು ॥

* * * *

**ಭಾವದೀಪಃ** – 'ಉಭಯಸ್ಮಿನ್' ಇತ್ಯೇತದ್ 'ಉಭಯತ್ರ' ಇತ್ಯುಕ್ತಮ್ । ತದ್ವ್ಯನಕ್ತಿ – **ಸಪ್ತಮೀತಿ** ॥ ಸಪ್ತಮ್ಯನ್ತಪಞ್ಚಮ್ಯನ್ತಪದಘಟಿತವಾಕ್ಯಯೋರಿತ್ಯರ್ಥಃ ।

**ಲೋಕತ್ರಯವಿವಕ್ಷಾಯಾಂ ಪರತೋ ಲಕ್ಷಯೋಜನಾತ್ ।**
**ಸರ್ವೆ ದ್ಯೌರಿತಿ ವಿಜ್ಞೇಯಂ ತತಸ್ತೇ ದಿವಿ ಸಂಸ್ಥಿತಾಃ ।**
**ದಿವಃಪರಶ್ಚ ಭಗವಾನ್ ಸಪ್ತಲೋಕವಿವಕ್ಷಯಾ ॥**

ಇತಿ ಛಾನ್ದೋಗ್ಯಭಾಷ್ಯದಿಶಾ ವ್ಯಾಚಷ್ಟೇ – **ಭೂರಿತಿ** ॥ **ದ್ಯುತ್ವಾದಿತಿ** ॥ ನನು ದ್ವಿತೀಯಸ್ಕನ್ಧತಾತ್ಪರ್ಯೇ ಷಷ್ಠಾಧ್ಯಾಯೇ –

**ಅನನ್ತಾಸನವೈಕುಣ್ಠನಾರಾಯಣಪುರಾಣಿ ತು ।**
**ತ್ರೀಣಿ ಧಾಮಾನಿ ವಿಷ್ಣೋರ್ವೈ ತ್ರಿಲೋಕಾದ್ ಬಹಿರೇವ ಹಿ ॥**

ಇತಿ ಕಥಂ ಬಾಹ್ಯತ್ವೋಕ್ತಿಃ । ಉಚ್ಯತೇ । 'ಭುವಃ ಸ್ವರ್ಗಶ್ಚ ಕೋಟ್ಯೈವ ಯೋಜನಾನಾಂ ಪ್ರವಿಸ್ತೃತೌ' ಇತ್ಯುಕ್ತೇಃ । ತತೋ ಬಹಿರ್ದೇಶಸ್ಥತ್ವೇನೇತಿ । ವಿಸ್ತೃತಮೇತತ್ ಚನ್ದ್ರಿಕಾಪ್ರಕಾಶೇ । **ಸಪ್ತೇತಿ** ॥ ಭೂರ್ಭುವಃಸುವರ್ಮಹರ್ಜನಸ್ತಪಃಸತ್ಯಮಿತಿ ಸಪ್ತೇತ್ಯರ್ಥಃ । **ದ್ಯುತ್ವಾದೀತಿ** ॥

**ಪೃಥಿವ್ಯಾಂ ದ್ಯೌರ್ಮಹಾಮೇರುರಾಕಾಶೇ ಸೂರ್ಯಮಣ್ಡಲಮ್ ।**
**ದಿವೀನ್ದ್ರಸದನಂ ಚೈವ ತತ್ಪರೇ ತು ದಿವಃ ಪರಃ ॥**

ಇತಿ ತದ್ಭಾಷ್ಯೋಕ್ತೇರಿತಿ ಭಾವಃ । ತ್ರಿಲೋಕವಿವಕ್ಷಾಯಾಂ ಮೇರ್ವಾದಿಪರತ್ವೇನ ದ್ಯುಪರತ್ವಸಿದ್ಧಾವಪಿ ವೈಕುಣ್ಠಸ್ಯ ಸರ್ವದ್ಯುಪರತ್ವಸಿದ್ಧಯೇ ಸಪ್ತಲೋಕವಿವಕ್ಷೋಕ್ತಿಃ । 'ದ್ಯಾತ್ಮಕೇಭ್ಯಶ್ಚ ಸರ್ವೇಭ್ಯೋ ವೈಕುಣ್ಠಶ್ಚೋಚ್ಚ ಉಚ್ಯತೇ' ಇತಿ ತದ್ಭಾಷ್ಯೋಕ್ತಿಃ । ವಿಶೇಷಸ್ತು ಚನ್ದ್ರಿಕಾಯಾಮ್ ।

ಸರ್ವತಃ ಪೃಷ್ಠವಿಶ್ವತಃ ಪೃಷ್ಠಪದಯೋರಪೌನರುಕ್ತ್ಯಾಯ ತದ್ಭಾಷ್ಯಾನುರೋಧೇನಾರ್ಥಭೇದಮಾಹ – **ಏವಮಿತಿ** ॥ **ತಸ್ಮಾದಿತಿ** ॥ ಗಾನತ್ರಾಣಕರ್ತೃತ್ವಾದಿನಿರವಕಾಶಭಗವಲ್ಲಿಙ್ಗಾನಾಂ ಭಾವಾತ್ । ಗಾಯತ್ರೀಪದಯೋಗರೂಢ್ಯೋರ್ವಿಷ್ಣೌ ಭಾವಾಚ್ಚೇತ್ಯರ್ಥಃ । ಅಧಿವೇದಗತೋಷ್ಣಿಗ್ಬೃಹತ್ಯನುಷ್ಟುಬಾದ್ಯಶೇಷನಾಮೋಪಲಕ್ಷಕಗಾಯತ್ರೀಶಬ್ದವಾಚ್ಯ ಇತಿ ಪ್ರತಿಜ್ಞಾರ್ಥೋ ಧ್ಯೇಯಃ । ಸೂತ್ರೇ ಗಾಯತ್ರೀನಾಮ್ನಃ ಸಾಕ್ಷಾದನುಪಾದಾನಾತ್ ಟೀಕಾಯಾಮೇವಮನುಕ್ತಿಃ । ಉಕ್ತಂ ಚ ತತ್ವಪ್ರದೀಪೇ – **'ಸರ್ವಾಧಿ(*ಜ್ಯೋತಿಷಾಧಿ)ವೇದೋಪಲಕ್ಷಣಾರ್ಥೋ ಗಾಯತ್ರೀಶಬ್ದಃ'** ಇತಿ ವಿಷ್ಣೌ ಗಾಯತ್ರೀತ್ಯಾದಿಕಲಿಙ್ಗಂ ತು 'ಪ್ರಕೃತಿಶ್ಚ' ಇತಿ ವಕ್ಷ್ಯಮಾಣನ್ಯಾಯೇನೋಪಪದ್ಯತ ಇತಿ ಭಾವಃ ॥

**स एवेति ॥** 'तस्मात्' इत्यनुवर्तते । तस्य च गायत्रीज्योतिषोरेकार्थत्वेन द्युःस्थत्वदिवःपरत्वविरोधाभावादिति सर्वसूत्रार्थोपसंहारः । ज्योतिरिति ॥ अत्रत्यं पूर्वोक्तसूक्तस्थं चेत्यर्थः । सूक्तस्थस्य चक्षुराद्यगोचरत्वोक्तावपि इह दृष्टत्वश्रुतत्वोक्तिः सुधोक्तदिशा अधिष्ठानादिद्वारोपपन्नेति भावः । 'आनन्दमयश्च' इति फलोक्तिः(*) ।

यदत्राह कश्चिद्रामानुजीयः – छन्दःसूत्रे चेदिति शङ्काश्रवणान्नाधिकरणान्तरमुचितम्- इति । तन्न । 'भोक्त्रापत्तेरविभागश्च' इत्यादौ त्वयापि तथात्वोपगमात् ।

यदपि तथाशब्दस्य छन्दःसाधर्म्यमेवार्थः स्वरसो न गायत्रीशब्दार्थत्वरूपोऽर्थ इति, तदपि न त्वदर्थस्य चन्द्रिकायां निरासात् । **'तथा हि दर्शनम्'** इति सूत्रे शेषोक्तिपरत्वेन तथाशब्दस्वारस्यस्य टीकायां व्यक्तत्वाच्च । 'निगदात्'इति पाठोऽपपाठः । 'निगमात्' इत्येव सुपाठ इति प्रजल्पनं तवार्वाचीनस्य निर्बीजम् । 'चेतोर्पणाय निगद' इति विग्रहो न युक्तः । प्रकृतिविकारभावाभावादित्यप्यबद्धम् । **सिद्धे शब्दार्थसम्बन्धे लोकतोऽर्थप्रयुक्ते शास्त्रेण धर्मनियमः** इत्यत्र महाभाष्ये पस्पशाग्रन्थे **'धर्माय नियम'** इति विग्रहस्य दर्शितत्वात् ।

यदपि 'तथाहि दर्शनम्' इत्यस्य लिङ्गोक्तिपरत्वे लिङ्गादित्येव निर्देशः स्यादिति, तदपि न । **'बाहुल्यात् श्रुतिलिङ्गयोः'** इत्यनुभाष्यसुधादावुक्तदिशा **'अतो ज्यायांश्च पूरुषः' 'यद्वै तद् ब्रह्म' 'एतामेव ब्रह्मोपनिषदम्'** इत्यादिब्रह्मशब्दादिप्रदर्शकानेकवाक्योपादानाय गायत्रीपदप्रवृत्तिनिमित्तप्रदर्शनाय च 'तथा हि दर्शनम्' इति निर्देशात् । लिङ्गात् इत्यादिनिर्देशे च तदलाभात् ।

यदपि गायत्र्या विष्णुत्वे चतुष्पदा इत्ययुक्तम्, टावृचीत्युक्तत्वादिति, तदपि न । बहुश्रुतिलिङ्गादिबलेन विष्णुत्वे सिद्धे शब्दनिर्वाहस्य कथञ्चित् कार्यत्वात् ।

(*) तथाचायं सूत्रार्थः । गायत्री ज्योतिश्च द्युस्थत्वदिवःपरत्वरूपोपदेशभेदात् तद्ब्रह्म नेति चेन्न । उभयस्मिन्नप्युपदेशे विवक्षाभेदेनाविरोधादिति ।

अत्राद्ये उपक्रमवाक्योक्तत्वेन समन्वीयमानशब्दप्रवृत्तिनिमित्तत्वेन च प्राधान्याद् गानत्राणकर्तृत्वरूपस्वपक्षसाधकोक्तिः । द्वितीये संवादितयोदाहृतमन्त्रोक्तलिङ्गोक्तिः । तृतीये बाधकोद्धार इति सूत्रक्रमः ॥ – वाक्यार्थमुक्तावली ।

'पादोन्यतरस्याम्' इत्यत्र ङीबभावपक्षे हलन्ताद्वेति टापि सति पदादेशे चतुष्पदेत्युपपत्तेः । एवमन्यदपि तदीयं दुर्वचनं दूरीकार्यम् ॥२७॥अ.११॥

'ಉಭಯಸ್ಮಿನ್' ಎಂಬ ಪದದ ಅರ್ಥವನ್ನೇ ಉಭಯತ್ರ ಎಂದಿದ್ದಾರೆ. ಆದನ್ನೇ 'ಸಪ್ತಮೀ ಪಂಚಮ್ಯೋಃ' ಇತ್ಯಾದಿವಾಕ್ಯದಿಂದ ವ್ಯಾಖ್ಯಾನಿಸುತ್ತಿದ್ದಾರೆ. ಅಂದರೆ ಸಪ್ತಮ್ಯಂತವಾದ ಮತ್ತು ಪಂಚಮ್ಯಂತವಾದ ಪದಗಳಿಂದ ಘಟಿತವಾದ ವಾಕ್ಯಗಳಿಗೆ ಎಂದರ್ಥ.

लोकत्रयविवक्षायाम् परतोः लक्षयोजनात् ।
सर्वं द्यौरिति विज्ञेयं ततस्तें दिवि संस्थिताः ।
दिवः परश्च भगवान् सप्तलोकविवक्षया ॥

'ತ್ರಿಲೋಕಗಳನ್ನಾಗಿ ವಿವಕ್ಷಿಸಿದಾಗ ಪೃಥಿವೀಲೋಕಕ್ಕಿಂತ ಲಕ್ಷಯೋಜನದ ಮೇಲೆ ದ್ಯುಲೋಕವಿದೆ. ಅಲ್ಲಿರುವ ರೂಪವು ದಿವಿಸ್ಥಿತವೆನಿಸುತ್ತದೆ. ಸಪ್ತಲೋಕವಿವಕ್ಷೆಯಿಂದ ಅಲ್ಲಿರುವ ರೂಪಗಳೇ ದಿವಃಪರ ಎನಿಸುತ್ತವೆ' ಹೀಗೆ ಛಾಂದೋಗ್ಯಭಾಷ್ಯದ ಪ್ರಕಾರ ''ಭೂಃ'' ಇತ್ಯಾದಿ ಟೀಕೆಯಿಂದ ವ್ಯಾಖ್ಯಾನಿಸುತ್ತಿದ್ದಾರೆ.

''ದ್ಯುತ್ವಾತ್'' ಎಂಬ ಟೀಕೆಯ ಅಭಿಪ್ರಾಯ ಹೀಗಿದೆ. ದ್ವಿತೀಯಸ್ಕಂಧತಾತ್ಪರ್ಯದ ಆರನೆಯ ಅಧ್ಯಾಯದಲ್ಲಿ ಹೀಗೆ ಹೇಳಿದ್ದಾರೆ.

'अनंतासनवैकुंठनारायणपुराणि तु ।
त्रीणि धामानि विष्णोर्वै त्रिलोकाद् बहिरेव हि ॥

'ಆನಂತಾಸನ ವೈಕುಂಠ ಮತ್ತು ಶ್ವೇತದ್ವೀಪಗಳು ಶ್ರೀಹರಿಯ ವಾಸಸ್ಥಾನಗಳೆನಿಸಿವೆ. ಇವುಗಳೆಲ್ಲವೂ ಮೂರು ಲೋಕಗಳಿಗಿಂತ ಹೊರಗಡೆ ಇರುವಂತಹವು.' ಹೀಗೆ ಹೇಳಿದ್ದರಿಂದ ಆನಂತಾಸನವು ದಿವಃಪರವೆಂದು ಹೇಗೆ ಹೇಳಿದಿರಿ ಎಂದು ಶಂಕಿಸಬಾರದು. ಏಕೆಂದರೆ ''ಭುವಃ ಸ್ವರ್ಗಶ್ಚ ಕೋಟ್ಯೈವ ಯೋಜನಾನಾಂ ಪ್ರವಿಸ್ಮೃತೌ' 'ಭುವಃಲೋಕ ಹಾಗೂ ಸ್ವರ್ಗಲೋಕಗಳು ಕೋಟಿಯೋಜನದಷ್ಟು ವಿಸ್ಮೃತವಾಗಿವೆ'ಯೆಂದು ಹೇಳಿದ್ದರಿಂದ ಆದಕ್ಕಿಂತಲೂ ಹೊರಗಡೆ ಇರುತ್ತವೆಂದು ತಿಳಿಯಬೇಕು. ಹೆಚ್ಚಿನ ವಿಚಾರವನ್ನು ಚಂದ್ರಿಕಾಪ್ರಕಾಶದಲ್ಲಿ ತಿಳಿಯಬೇಕು.

''ಸಪ್ತ'' ಸಪ್ತಲೋಕಗಳೆಂದರೆ ಭೂರ್ಲೋಕ, ಭುವರ್ಲೋಕ, ಸ್ವರ್ಲೋಕ, ಮಹರ್ಲೋಕ, ಜನೋಲೋಕ, ತಪೋಲೋಕ ಸತ್ಯಲೋಕ ಎಂದರ್ಥ. ಟೀಕೆಯಲ್ಲಿ ''ದ್ಯುತ್ವಾತ್'' ಎಂದಿದೆ. ಇದರ ಅರ್ಥ ಹೀಗಿದೆ —

पृथिव्याम् द्यौर्महामेरुराकाशे सूर्यमंडलम् ।
दिवीन्द्रसदनं चैव तत्परे तु दिवः परः ॥

ಮೇರುಪರ್ವತವು ಪೃಥಿವೀಲೋಕದ ದ್ಯುಲೋಕವೆನಿಸಿದೆ. ಆದರ ಮೇಲ್ಭಾಗದಲ್ಲಿ ಆನಂತಾಸನವಿದೆ. ಆನಂತಾಸನದಲ್ಲಿರುವ ಜ್ಯೋತಿಯು ದಿವಃಪರವೆನಿಸುತ್ತದೆ. ಅಂತರಿಕ್ಷಲೋಕದಲ್ಲಿ ಸೂರ್ಯಮಂಡಲವು

ದ್ಯುಲೋಕ. ಆದರ ಮೇಲೆಶ್ವೇತದ್ವೀಪವಿದೆ. ಶ್ವೇತದ್ವೀಪದಲ್ಲಿರುವ ರೂಪವೂ ಸಹ ದಿವಃಪರವೆನಿಸುತ್ತದೆ. ಸ್ವರ್ಗಲೋಕದಲ್ಲಿರುವ ಇಂದ್ರನ ಅರಮನೆಯು ದ್ಯುಲೋಕ. ಆದರ ಮೇಲೆ ವೈಕುಂಠವಿದೆ. ಅಲ್ಲಿರುವ ರೂಪವೂ ಸಹ ದಿವಃಪರವೆನಿಸುತ್ತದೆ. ಹೀಗೆ ಮೂರೂ ರೂಪಗಳಿಗೆ ದಿವಃಪರತ್ವವನ್ನು ತಿಳಿಯಬೇಕು. ತ್ರಿಲೋಕಗಳೆಂದು ವಿವಕ್ಷಿಸಿದಾಗ ಮೇರು ಪರ್ವತದ ಮೇಲ್ಭಾಗದಲ್ಲಿದ್ದಾಗಲೂ ದ್ಯುಪರತ್ವವು ಸಿದ್ಧವಾಗುತ್ತದೆ. ಆದರೂ ಸಹ ವೈಕುಂಠಕ್ಕೆ ಸಕಲ ದ್ಯುಲೋಕಗಳಿಗಿಂತ ಪರತ್ವವು ಸಿದ್ಧವಾಗುವುದಕ್ಕಾಗಿ ಸಪ್ತಲೋಕಗಳನ್ನು ವಿವಕ್ಷಿಸಿದ್ದಾರೆ. 'ದ್ಯ್ವಾತ್ಮಕೇಭ್ಯಶ್ಚ ಸರ್ವೇಭ್ಯೋ ವೈಕುಂಠಶ್ಚೋಚ್ಚ ಉಚ್ಯತೇ' ಎಂಬ ಭಾಷ್ಯದ ಮಾತೇ ಇದಕ್ಕೆ ಆಧಾರ. ವಿಶೇಷವಿಚಾರವನ್ನು ಚಂದ್ರಿಕೆಯಲ್ಲಿ ತಿಳಿಯಬೇಕು.

'ಸರ್ವತಃ ಪೃಷ್ಠ, ವಿಶ್ವತಃ ಪೃಷ್ಠ' ಪದಗಳಿಗೆ ಪುನರುಕ್ತಿಯನ್ನು ತಿಳಿಯಬಾರದೆನ್ನಲು ಉಪನಿಷದ್ಭಾಷ್ಯಕ್ಕೆ ಅನುಸಾರಿಯಾದ ಅರ್ಥವನ್ನು ''ಏವಮ್'' ಇತ್ಯಾದಿವಾಕ್ಯದಿಂದ ನಿರೂಪಿಸುತ್ತಿದ್ದಾರೆ. ತಸ್ಮಾತ್ ಎಂದರೆ 'ಗಾನತ್ರಾಣಕರ್ತೃತ್ವಾದಿರೂಪವಾದ ನಿರವಕಾಶ ಭಗವಲ್ಲಿಂಗಗಳಿರುವುದರಿಂದ' ಎಂದರ್ಥ. ಇದರ ಜೊತೆಗೆ ಗಾಯತ್ರೀಪದದ ಯೋಗ ಹಾಗೂ ರೂಢಿಗಳು ವಿಷ್ಣುವಿನಲ್ಲಿ ಇರುವುದರಿಂದಲೂ ಎಂದು ತಿಳಿಯಬೇಕು.

ಅಧಿವೇದಗತವಾದ ಎಲ್ಲಾ ಶಬ್ದಗಳನ್ನು ಈ ಅಧಿಕರಣದಲ್ಲಿ ಸಮನ್ವಯ ಮಾಡಲಾಗಿದೆ. ಗಾಯತ್ರೀಶಬ್ದವು ಇದಕ್ಕೆ ಕೇವಲ ಉಪಲಕ್ಷಕ. ಆದ್ದರಿಂದ 'ಉಷ್ಣಿಕ್, ಬೃಹತೀ, ಅನುಷ್ಟುಪ್, ಮೊದಲಾದ ಶಬ್ದವಾಚ್ಯತ್ವವನ್ನು ತಿಳಿಯಬೇಕು. ಸೂತ್ರದಲ್ಲಿ ಗಾಯತ್ರೀಪದವನ್ನು ನೇರವಾಗಿ ಉಲ್ಲೇಖಿಸಿಲ್ಲ. ಆದ್ದರಿಂದಲೇ ಟೀಕೆಯಲ್ಲಿಯೂ ಸಹ ಇದನ್ನು ಅನುಸರಿಸಿ ಉಲ್ಲೇಖಿಸಿಲ್ಲ. ಇದನ್ನೇ ತತ್ತ್ವಪ್ರದೀಪದಲ್ಲಿ 'ಸರ್ವಾಧಿವೇದೋಪಲಕ್ಷಣಾರ್ಥೋ ಗಾಯತ್ರೀಶಬ್ದಃ' 'ಅಧಿವೇದಗತವಾದ ಸಕಲಶಬ್ದಗಳಿಗೆ ಉಪಲಕ್ಷಕವಾಗಿ ಗಾಯತ್ರೀಶಬ್ದವು ಹೇಳಲ್ಪಟ್ಟಿದೆ' ಎಂದು ಹೇಳಿದ್ದಾರೆ.

ಸ್ತ್ರೀಲಿಂಗವಾದ ಗಾಯತ್ರೀಪದದ ಸಮನ್ವಯವನ್ನು ವಿಷ್ಣುವಿನಲ್ಲಿ ಹೇಗೆ ತಾನೆ ಮಾಡುತ್ತೀರಿ? ಎಂಬ ಪ್ರಶ್ನೆಗೆ ''ಪ್ರಕೃತಿಶ್ಚ'' ಎಂಬ ಮುಂದೆ ಹೇಳಲಿರುವ ಸೂತ್ರದ ನ್ಯಾಯದಂತೆ ಉತ್ತರವನ್ನು ತಿಳಿಯಬೇಕು. 'ಸ ಏವ' ಎಂಬ ಟೀಕಾಮಾತಿನ ನಂತರ ತಸ್ಮಾತ್ ಎಂಬ ಪದವನ್ನು ಅನುವೃತ್ತಿಮಾಡಬೇಕು. ಗಾಯತ್ರೀಹಾಗೂ ಜ್ಯೋತಿಃಶಬ್ದಗಳು ಏಕಾರ್ಥವಾದ್ದರಿಂದ ದ್ಯುಸ್ಥತ್ವಕ್ಕೆ ಹಾಗೂ ದಿವಃಪರತ್ವಕ್ಕೆ ಪರಸ್ಪರವಿರೋಧ ಬರುವುದಿಲ್ಲವೆಂದು ತಿಳಿದು ಸಕಲಸೂತ್ರಗಳ ಅರ್ಥವನ್ನು ''ಜ್ಯೋತಿಃ'' ಎಂಬುದಾಗಿ ಉಪಸಂಹಾರ ಮಾಡುತ್ತಿದ್ದಾರೆ. ಈ ವಿಷಯವಾಕ್ಯದಲ್ಲಿ ಹಾಗೂ ಹಿಂದಿನ ಅಧಿಕರಣದ ವಿಷಯವಾಕ್ಯದಲ್ಲಿಯೂ ಹೇಳಲ್ಪಟ್ಟ ಜ್ಯೋತಿಯು ಎಂದರ್ಥ. ಸೂಕ್ತದಲ್ಲಿ ಪ್ರತಿಪಾದ್ಯನಾದವನಿಗೆ ಚಕ್ಷುರಾದ್ಯಗೋಚರತ್ವವನ್ನು ಹೇಳಲಾಗಿದೆ. ಆದರೆ ಪ್ರಕೃತ ವಿಷಯವಾಕ್ಯದಲ್ಲಿ ದೃಷ್ಟತ್ವ ಶ್ರುತತ್ವಗಳು ಅವನಲ್ಲಿ ಕೇಳಿಸುತ್ತಿವೆ. ಇವುಗಳ ವಿರೋಧವನ್ನು ಸುಧೆಯಲ್ಲಿ ಹೇಳಿದ ಪ್ರಕಾರ 'ಅಧಿಷ್ಠಾನದ್ವಾರಾ' ಪರಿಹರಿಸಬೇಕು. 'ಆನಂದಮಯಶ್ಚ' ಎಂದು ಹೇಳಿದ್ದು ಅಧಿಕರಣದ ಫಲರೂಪವಾಗಿದೆ.

ಈ ಅಧಿಕರಣದ ವಿಷಯದಲ್ಲಿ ರಾಮಾನುಜರಲ್ಲೊಬ್ಬನು ಹೀಗೆನ್ನುತ್ತಾನೆ. ''ಛಂದಃ ಸೂತ್ರದಲ್ಲಿ 'ಚೇತ್' ಎಂಬುದಾಗಿ ಶಂಕೆಯು ಕೇಳಿಸುತ್ತಿರುವುದರಿಂದ ಮತ್ತೊಂದು ಅಧಿಕರಣವೆಂದು ಹೇಳುವುದು

ಉಚಿತವಲ್ಲ' ಎಂದು. ಇದು ತಪ್ಪು. 'ಭೋಕ್ತ್ರಾಪತ್ತೇರವಿಭಾಗಶ್ಚೇತ್ ಸ್ಯಾಲ್ಲೋಕವತ್' ಇತ್ಯಾದಿ ಸೂತ್ರದಲ್ಲಿ ನೀವೇ ಈ ನ್ಯಾಯವನ್ನು ಒಪ್ಪಿಲ್ಲ. ಇನ್ನು ''ತಥಾ ಶಬ್ದಕ್ಕೆ ಸದೃಶವಾದ ಛಂದಸ್ಸು ಎಂಬರ್ಥವೇ ಸ್ವರಸ, ಹೊರತು ಗಾಯತ್ರೀಶಬ್ದಾರ್ಥತ್ವ ಎಂಬರ್ಥವು ಸ್ವರಸವಲ್ಲ'' ಎಂದು ಹೇಳಿದ್ದರ ನಿರಾಕರಣೆಯನ್ನು ಚಂದ್ರಿಕೆಯಲ್ಲಿ ಮಾಡಿದ್ದಾರೆ. 'ತಥಾ ಹಿ ದರ್ಶನಮ್' ಎಂಬ ಸೂತ್ರದಲ್ಲಿ ಶೇಷೋಕ್ತಿಯ ಮೂಲಕ ತಥಾಶಬ್ದಕ್ಕೆ ಸ್ವರಸವಾದ ಅರ್ಥವನ್ನು ಟೀಕೆಯಲ್ಲಿ ಸ್ಪಷ್ಟಪಡಿಸಲಾಗಿದೆ. ಅಷ್ಟೇ ಅಲ್ಲದೆ ರಾಮಾನುಜರು 'ನಿಗಮಾತ್' ಎಂಬ ಪಾಠವನ್ನು ಸಾಧುವೆಂದು ಒಪ್ಪಿ ನಿಗದಾದ್ ಎಂಬ ಪಾಠವನ್ನು ಅಪಪಾಠವೆನ್ನುತ್ತಾರೆ. ಇದೂ ಸಹ ಹುರುಳಿಲ್ಲದ ಮಾತು.

'ಚೇತೋರ್ಪಣಾಯ ನಿಗದಃ' ಎಂಬ ವಿಗ್ರಹವೂ ಸಹ ಅಯುಕ್ತವಾಗಿದೆ. ಪ್ರಕೃತಿವಿಕಾರಭಾವ ಇದ್ದಲ್ಲಿ ಮಾತ್ರ ಈ ರೀತಿಯಾದ ವಿಗ್ರಹವನ್ನು ಮಾಡಬಹುದು. ಆದರೆ ಅಂತಹ ಪ್ರಕೃತಿವಿಕಾರಭಾವವನ್ನು ಇಲ್ಲಿ ಹೇಳಲಾಗದು'' ಎಂಬ ಅವರ ವಾದವೂ ಸಹ ತಪ್ಪು. ಏಕೆಂದರೆ ಶಬ್ದಾರ್ಥಸಂಬಂಧವು ಸಿದ್ಧವಾದ ಮೇಲೆ ಲೋಕದಲ್ಲಿ ಅಂತಹ ಅರ್ಥದಲ್ಲಿ ಶಬ್ದವನ್ನು ಪ್ರಯೋಗಿಸಿದ ಮೇಲೆ ಹೀಗೆ ವಿಗ್ರಹ ಹೇಳುವುದು ತಪ್ಪಲ್ಲ. ಏಕೆಂದರೆ 'ಶಾಸ್ತ್ರೇಣ ಧರ್ಮನಿಯಮಃ' ಎಂಬಲ್ಲಿ ಮಹಾಭಾಷ್ಯದ ಪಸ್ಪಶಗ್ರಂಥವು ಧರ್ಮಾಯ ನಿಯಮಃ ಎಂಬ ವಿಗ್ರಹವನ್ನು ಅಂಗೀಕರಿಸಿದೆ.

ಇನ್ನು 'ತಥಾಹಿ ದರ್ಶನಮ್' ಎಂಬುದಕ್ಕೆ ಲಿಂಗಾರ್ಥಕವೆಂದು ವ್ಯಾಖ್ಯಾನಿಸುವುದಾದರೆ 'ಲಿಂಗಾತ್' ಎಂದೇ ಹೇಳಬೇಕು ಎಂಬ ವಾದವೂ ಸಹ ತಪ್ಪು. ಏಕೆಂದರೆ 'ಬಾಹುಲ್ಯಾತ್ ಶ್ರುತಿಲಿಂಗಯೋಃ' ಎಂಬ ಅನುವ್ಯಾಖ್ಯಾನದ ಹಾಗೂ ಸುಧೆಯ ಪ್ರಕಾರ ಹಿಂದೆ ಹೇಳಿದಂತೆ 'ಅತೋ ಜ್ಯಾಯಾಂಶ್ಚ ಪುರುಷಃ' 'ಯದ್ ವೈ ತದ್ ಬ್ರಹ್ಮ' 'ಏತಾಮೇವ ಬ್ರಹ್ಮೋಪನಿಷದಮ್' ಇತ್ಯಾದಿಯಾಗಿ ಬ್ರಹ್ಮಶಬ್ದಾದಿ-ಪ್ರದರ್ಶಕವಾದ ಅನೇಕ ವಾಕ್ಯಗಳನ್ನು ವಿಷಯವಾಕ್ಯವನ್ನಾಗಿ ತಿಳಿಸಬೇಕಾಗಿದೆ. ಮತ್ತು ಗಾಯತ್ರೀಪದದ ಪ್ರವೃತ್ತಿನಿಮಿತ್ತವನ್ನೂ ಸಹ ತೋರಿಸಬೇಕಾಗಿದೆ. ಆದಕ್ಕೋಸ್ಕರ 'ತಥಾಹಿ ದರ್ಶನಮ್' ಎಂದು ನಿರ್ದೇಶಿಸಿದ್ದಾರೆ. 'ಲಿಂಗಾತ್' ಎಂದಷ್ಟೇ ಸೂತ್ರದಲ್ಲಿ ನಿರ್ದೇಶಿಸಿದರೆ ಈ ವಿಚಾರವು ತಿಳಿಯವುದಿಲ್ಲ.

ಇದರಂತೆ ''ಗಾಯತ್ರಿಯು ವಿಷ್ಣುವಾದಲ್ಲಿ ಚತುಷ್ಪದಾ ಎಂಬ ಪ್ರಯೋಗವು ತಪ್ಪಾಗುತ್ತದೆ. ಏಕೆಂದರೆ ಟಾಬ್ಭಚಿ ಎಂಬ ಸೂತ್ರದಲ್ಲಿ ಛಂದೋ ವಾಚಕವಾದ ಶಬ್ದವಾದರೆ ಮಾತ್ರ ಟಾಪ್ ಪ್ರತ್ಯಯವನ್ನು ಹೇಳಿದ್ದಾರೆ.'' ಎಂಬೀ ವಾದವೂ ಸಹ ತಪ್ಪು. ಏಕೆಂದರೆ ಅನೇಕ ಶ್ರುತಿ ಹಾಗೂ ಲಿಂಗಗಳ ಬಲದಿಂದ ಗಾಯತ್ರೀಪದದಿಂದ ವಿಷ್ಣುವೇ ಪ್ರತಿಪಾದ್ಯನೆಂದು ನಿರ್ಣಯವಾದ ಮೇಲೆ ಚತುಷ್ಪದಾ ಎಂಬ ಶಬ್ದವನ್ನು ಹೇಗಾದರೂ ನಿರ್ವಹಿಸಬೇಕಾಗುತ್ತದೆ.

'ಪಾದೋನ್ಯತರಸ್ಯಾಮ್' ಎಂಬ ಸೂತ್ರದಲ್ಲಿ ಜ್ಞಪ್ ಪ್ರತ್ಯಯ ಬಾರದ ಪಕ್ಷದಲ್ಲಿ 'ಹಲಂತಾದ್ ವಾ' ಎಂಬ ಸೂತ್ರದಿಂದ ಟಾಪ್ ಪ್ರತ್ಯವನ್ನು ಹೇಳಿದ್ದಾರೆ. ಅನಂತರ ಪದಾದೇಶ ಬಂದರೆ ಚತುಷ್ಪದಾ ಎಂಬ ರೂಪವು ನಿಷ್ಪನ್ನವಾಗುತ್ತದೆ. ಇಂತಹ ಇನ್ನೂ ಅನೇಕ ಅವರ ದುರ್ವಚನಗಳನ್ನು ದೂರೀಕರಿಸ-ಬೇಕು.

॥ಇಲ್ಲಿಗೆ ಭಾವದೀಪದಲ್ಲಿ ಗಾಯತ್ರ್ಯಧಿಕರಣದ ಕನ್ನಡಾನುವಾದವು ಮುಗಿಯಿತು॥

ವಾಕ್ಯಾರ್ಥಮಞ್ಜರಿ – ॐ उपदेशभेदान्नेति चेन्नोभयस्मिन्नप्यविरोधात् ॐ ॥ गायत्रीज्योतिश्चद्युस्थत्वदिवः परत्वविरुद्धधर्मोपदेशात् तद्वयं ब्रह्माख्यैकवस्त्वनुपपन्नमिति चेत्र । विवक्षाभेदेनोभयथोपदेशोपपत्त्या विरोधाभावादित्यर्थः । प्रसङ्गयोः प्रकरणयोः ॥ **विरोधादिति** ॥ द्युस्थत्वदिवः परत्वयोरेकत्र विरोधादित्यर्थः । सप्तमी पञ्चम्योस्तद्घटितवाक्ययोः न ब्रह्माख्यैकं वस्तु इति लोकत्रयविवक्षायां परतो लक्षयोजनात् ।

**सर्वं द्यौरिति विज्ञेयं ततस्ते दिवि संस्थिताः ।**
**दिवः परश्च भगवान् सप्तलोकविवक्षया ॥**

इति प्रमाणानुसारेणाह – **भूरिति** ॥ अन्तरिक्षस्य द्युत्वलाभाय लक्षयोजनोच्छ्रितत्वोक्तिः ॥ **सप्तेति** ॥ भूः भुवः स्वः महः जनः तपः सत्यमिति सप्तेत्यर्थः ।

**पृथिव्यां द्यौर्महामेरुराकाशे सूर्यमण्डलम् ।**
**दिवीन्द्रसदनं चैव तत्परे तु दिवः परः ॥**

इति प्रमाणानुसारेणाह – **इन्द्रसदनस्येत्यादि** ॥ अत्र लोकविवक्षायामपि मेर्वादिपरत्वेन दिवः परत्वसिद्धावपि वैकुण्ठस्य दिवःपरत्वसिद्धये सप्तलोकविवक्षोक्तिः । विशेषस्तु चन्दिद्रकाभाव-बोधयोर्द्रष्टव्यः । पौनरुक्तिवारणाय सर्वतः पृष्ठविश्वतःपृष्ठशब्दौ व्याचष्टे – **एवमिति** ॥

**पृथिवीस्थेषु सर्वोच्चो लोकोऽनन्तासनात्मकः ।**
**अन्तरिक्षात्मकेभ्यश्च श्वेतद्वीपस्थितो हरिः ॥**
**द्व्यात्मकेभ्यश्च सर्वेभ्यो वैकुण्ठश्चोच्च उच्यते ॥**

इत्युक्तेरिति भावः ॥

**पृथिव्यां ब्रह्मणो मेरौ जयन्तं त्वन्तरिक्षगम् ।**
**तृतीयं सत्यलोकं च सदनं त्रिविधं स्मृतम् ॥**
**तेभ्योऽनन्तासनाद्या यत् परतो विश्वतः परः ॥**

इति प्रमाणानुसारेणाह – **तथेति** ॥

**॥ इति वाक्यार्थमञ्जर्यां गायत्र्यधिकरणम् ॥**

## सत्तर्कदीपावळिः

**ॐ ॥ छन्दोभिधानात् नेति चेन्न तथा चेतोऽर्पणनिगदात् तथा हि दर्शनम् ॐ ॥२९॥**

**'अथ यदतः परो दिवो ज्योतिर्दीप्यते विश्वतः पृष्टेष्वनुत्तमेषु लोकेषु इदं वा व तयदिदमस्मिन्नन्तःपुरुषे ज्योतिः' इति श्रुत्यन्तरादपि विष्णुरेव मुख्यज्योतिः । इदमेवाक्षिप्य समर्थयत् सूत्रमुपन्यस्य व्याचष्टे – छन्दोभिधानादित्यादिना ॥**

**नच वाच्यं 'गायत्री वा इदं सर्वम्' इति गायत्रीछन्दःप्रारम्भात् नात्र ज्योतिःशब्दार्थो विष्णुरिति । 'गायति त्रायति च तस्माद् गायत्रीनाम' इति गायत्रीशब्दस्य विष्णुपरत्वश्रुतेः 'सर्वच्छन्दोभिधो ह्येषः' इति पुराणवचनाच्चेत्यर्थः । 'सैषा चतुष्पदा' इत्युक्त्वा, तदेतदृचाभ्युक्तम् । 'पादोऽस्य सर्वा भूतानि' इति श्रुतेश्च ॥**

'ಅಥ ಯದತಃ ಪರೋ ದಿವೋ ಜ್ಯೋತಿರ್ದೀಪ್ಯತೇ ವಿಶ್ವತಃ ಪೃಷ್ಟೇಷ್ವನುತ್ತಮೇಷು ಲೋಕೇಷು ಇದಂ ವಾ ವ ತದ್ಯದಿದಮಸ್ಮಿನ್ ಆಂತಃಪುರುಷೇ ಜ್ಯೋತಿಃ' ಎಂಬ ಮತ್ತೊಂದು ಶ್ರುತಿಪ್ರಮಾಣದ ಬಲದಿಂದಲೂ ವಿಷ್ಣುವೇ ಜ್ಯೋತಿಃಶಬ್ದದಿಂದ ಮುಖ್ಯಪ್ರತಿಪಾದ್ಯನು. ಈ ವಿಷಯವನ್ನು ಆಕ್ಷೇಪಿಸಿ ಉತ್ತರಿಸುವುದಕ್ಕಾಗಿ ಸೂತ್ರವನ್ನು ಅನುವಾದ ಮಾಡಿ ವ್ಯಾಖ್ಯಾನಿಸುತ್ತಿದ್ದಾರೆ ''ಛಂದೋಭಿಧಾನಾತ್'' ಇತ್ಯಾದಿಯಾಗಿ.

'ಗಾಯತ್ರೀ ವಾ ಇದಂ ಸರ್ವಮ್' ಎಂಬುದಾಗಿ ಪ್ರಾರಂಭದಲ್ಲಿ ಗಾಯತ್ರೀಛಂದಸ್ಸಿನ ಪ್ರಸ್ತಾಪವಿದೆ. ಆದ್ದರಿಂದ 'ಅಥ ಯದತಃ' ಇತ್ಯಾದಿ ವಾಕ್ಯದಲ್ಲಿ ಪ್ರತಿಪಾದ್ಯವಾದ ಜ್ಯೋತಿಸ್ಸು ವಿಷ್ಣುವಲ್ಲ.

ಈ ಶಂಕೆಯು ಸರಿಯಲ್ಲ. ಏಕೆಂದರೆ 'ಗಾಯತಿ ಚ ತ್ರಾಯತಿ ಚ ತಸ್ಮಾದ್ ಗಾಯತ್ರೀ ನಾಮ' ಗಾನತ್ರಾಣಕರ್ತೃವಾದ್ದರಿಂದ ವಿಷ್ಣುವೇ ಗಾಯತ್ರೀ ಎನಿಸಿದ್ದಾನೆ ಎಂಬುದಾಗಿ ಗಾಯತ್ರೀಶಬ್ದವು ವಿಷ್ಣುಪರವೆಂದು ಶ್ರುತಿ ಹೇಳುತ್ತಿದೆ. ಮತ್ತು 'ಸರ್ವಚ್ಛಂದೋಭಿಧೋ ಹ್ಯೇಷಃ' ಎಂಬ ಪುರಾಣದ ಮಾತಿನಿಂದಲೂ ಸಹ ಗಾಯತ್ರೀಶಬ್ದಾರ್ಥನಾದವನು ವಿಷ್ಣುವೆಂದು ತಿಳಿಯುತ್ತದೆ. 'ಸೈಷಾ ಚತುಷ್ಪದಾ' ಎಂದು ಪ್ರಾರಂಭಿಸಿ 'ತದೇತದ್ ಋಚಾಭ್ಯುಕ್ತಂ' ಎಂಬುದಾಗಿ ಇವನ ನಾಲ್ಕುರೂಪಗಳು ಋಗ್ವೇದದಲ್ಲಿರುವ ಪುರುಷಸೂಕ್ತದಲ್ಲಿ ನಿರೂಪಿತವಾಗಿವೆ ಎಂದು ಹೇಳಲಾಗಿದೆ. 'ಪಾದೋಸ್ಯ ಸರ್ವಾ ಭೂತಾನಿ' ಎಂಬುದಾಗಿ ಸಕಲಭೂತಗಳಲ್ಲಿ ಅವನ ಒಂದು ರೂಪವನ್ನು ವರ್ಣಿಸಿದೆ. ಇದರಿಂದಲೂ ಗಾಯತ್ರಿಯು ವಿಷ್ಣುವೆಂದು ನಿರ್ಣಯವಾಗುತ್ತದೆ.

**ॐ ॥ ಭೂತಾದಿಪಾದವ್ಯಪದೇಶೋಪಪತ್ತೇಶ್ಚೈವಮ್ ॥ॐ॥೨೬॥**

**'ಗಾಯತ್ರೀಶಬ್ದೋ ವಿಷ್ಣುಪರಃ' ಇತ್ಯೇತತ್ ಪ್ರತಿಪಾದಯತ್ ಸೂತ್ರಮುಪನ್ಯಸ್ಯ ವ್ಯಾಚಷ್ಟೇ – ಭೂತಾನೀತ್ಯಾದಿನಾ ॥ ನ ಹಿ ಚತುರ್ವಿಂಶತ್ಯಕ್ಷರಾ ಗಾಯತ್ರೀ ಏವಂವಿಧಪಾದವತೀ । ನ ಚ ವಿಷ್ಣೋರಪಿ ಸರ್ವಭೂತಾನಿ ನ ಪಾದ ಇತಿ ವಾಚ್ಯಮ್ । 'ಯಜ್ಞದತ್ತಚತುರ್ಥಾಂಶೋऽಯಂ ಬಲಪರಿಮಾಣೇ ದೇವದತ್ತಃ' ಇತಿವತ್ ವಿಷ್ಣೋರತ್ಯನ್ತಭಿನ್ನೇಷ್ವೇವ ಸರ್ವಭೂತೇಷು ಚತುರ್ಥಾಂಶಪರಿಮಿತಾಭಿಪ್ರಾಯೇಣ ಪಾದಶಬ್ದೋಪಪತ್ತೇಃ । ಅತ್ಯಲ್ಪತ್ವೋಪಲಕ್ಷಣಂ ಪಾದಶಬ್ದಃ ।**

'ಗಾಯತ್ರೀಶಬ್ದೋ ವಿಷ್ಣುಪರಃ' ಗಾಯತ್ರೀಶಬ್ದವು ವಿಷ್ಣುಪರವಾಗಿದೆ ಎಂಬುದನ್ನು ಸ್ವತಃ ಪ್ರತಿಪಾದಿಸುತ್ತಾ ಸೂತ್ರವನ್ನು ಅನುವಾದ ಮಾಡಿ ವ್ಯಾಖ್ಯಾನಿಸುತ್ತಿದ್ದಾರೆ ''ಭೂತಾನಿ'' ಇತ್ಯಾದಿನಾ. ಇಪ್ಪತ್ತನಾಲ್ಕು ಅಕ್ಷರಗಳಿಂದ ಕೂಡಿದ ಗಾಯತ್ರೀಛಂದಸ್ಸು ಇಂತಹ ಪಾದವನ್ನು ಹೊಂದಲು ಸಾಧ್ಯವಿಲ್ಲ. ವಿಷ್ಣುವಿಗೂ ಸಹ ಸಕಲಭೂತಗಳು ಪಾದವಾಗಲು ಸಾಧ್ಯವಿಲ್ಲವಲ್ಲವೇ? ಎಂದು ಶಂಕಿಸಬಾರದು. 'ಯಜ್ಞದತ್ತನ ಬಲದ ನಾಲ್ಕನೆಯ ಒಂದಂಶದ ಬಲವು ದೇವದತ್ತನಿಗೆ ಇದೆ' ಎಂಬಂತೆ ಅತ್ಯಂತ ಭಿನ್ನವಾದ ಪದಾರ್ಥದಲ್ಲಿಯೂ ಸಹ ಪಾದಶಬ್ದವನ್ನು ಪ್ರಯೋಗಿಸಬಹುದು. ಸಕಲಭೂತಗಳು ವಿಷ್ಣುವಿಗಿಂತ ಅತ್ಯಂತಭಿನ್ನವಾಗಿವೆ. ವಿಷ್ಣುವಿನ ನಾಲ್ಕನೆ ಒಂದಂಶದಷ್ಟು ಪರಿಮಿತಿಯನ್ನು ಹೊಂದಿವೆ ಎಂಬಭಿಪ್ರಾಯದಿಂದ ಹೀಗೆ ಪಾದಶಬ್ದವನ್ನು ಶ್ರುತಿಯು ಪ್ರಯೋಗಿಸಿದೆ. ಚತುರ್ಥಾಂಶವೆಂದರೆ ಅತ್ಯಂತ ಅಲ್ಪವಾದದ್ದೆಂದು ಉಪಲಕ್ಷಣಯಾ ತಿಳಿಯಬೇಕಾದ ವಿಚಾರ.

**ತಥಾಹಿ ಶ್ರುತ್ಯನ್ತರಮ್ 'ಅಮೃತಸ್ಯ ಪೂರ್ಣಾ ತಾಸು ಕಲಾಂ ವಿಚಕ್ಷತೇ । ಪಾದಷಡ್ಧೋತುರ್ನ ಕಿಲಾವಿವಿತ್ಸೇ' ಇತಿ ಷಡ್ಧೋತುರಿನ್ದ್ರಿಯೈಃ ಸಾರಾದನಕರ್ತುಃ ವಿಷ್ಣೋರಿದಂ ಸುವರ್ಣಕಾಶಾರೂಪಂ ಮುಕ್ತಾಮುಕ್ತಜೀವಸಹಿತಂ ಸುವರ್ಣಂ ಬ್ರಹ್ಮಾಣ್ಡಂ ಕಲಾಂ ವಿಚಕ್ಷತೇ ಕವಯಃ ಯತोऽಸೌ ಸುವರ್ಣಕೋಶಃ ಪಾದಂ ನ ವಿವಿತ್ಸ ಇತಿ, ಪಾದಸಾಮ್ಯಂ ನ ಲಭತೇ ಇತ್ಯರ್ಥಃ ।**

ಈ ವಿಚಾರದಲ್ಲಿ ಮತ್ತೊಂದು ಶ್ರುತಿಯು ಪ್ರಮಾಣವಾಗಿದೆ. 'ಅಮೃತಸ್ಯ ಪೂರ್ಣಾ೦ ತಾಸು ಕಲಾಂ ವಿಚಕ್ಷತೇ । ಪಾದಷಡ್ಧೋತುರ್ನ ಕಿಲಾವಿವಿತ್ಸೇ' ಷಡ್ಧೋತುಃ = ಷಟ್ ಪಂಚಬಾಹ್ಯೇಂದ್ರಿಯ -ಗಳು ಮತ್ತು ಮನಸ್ಸೆಂಬ ಒಳಗಿನ ಇಂದ್ರಿಯ. ಈ ಆರು ಇಂದ್ರಿಯಗಳಿಗೆ ಹೋತುಃ = ಪದಾರ್ಥ-ಗಳನ್ನು ಒದಗಿಸುವ ಇಂದ್ರಿಯಗಳಿಂದ ಸಾರಭಾಗವನ್ನಷ್ಟೇ ತಿನ್ನುವ ವಿಷ್ಣುವಿಗೆ ಸುವರ್ಣಾಕಾಶ-ರೂಪವಾದ ಮುಕ್ತಾಮುಕ್ತಜೀವರಿಂದ ಕೂಡಿದ ಬಂಗಾರಮಯವಾದ ಬ್ರಹ್ಮಾಂಡವನ್ನು ಸ್ವಲ್ಪಮಾತ್ರ ಜ್ಞಾನಿಗಳು ತಿಳಿಯುತ್ತಾರೆ. ಆದ್ದರಿಂದ ಸುವರ್ಣಕೋಶವೆನಿಸಿದ ಬ್ರಹ್ಮಾಂಡವು ಪರಮಾತ್ಮನ ಪಾದ-ಸಾಮ್ಯವನ್ನೂ ಸಹ ಹೊಂದಲಾರದು.

**ನಚ 'ಪಾದೋऽಸ್ಯ' ಇತಿ ಮನ್ತ್ರೋऽನ್ಯಪರಃ ಶಙ್ಕನೀಯಃ ಪುರುಷಸೂಕ್ತಗತತ್ವಾತ್ । 'ಯಜ್ಞೇನ ಯಜ್ಞಮಯಜನ್ತ' ಇತಿ ವಾಕ್ಯಶೇಷಾತ್ ಪುರುಷಸೂಕ್ತೇ ವಿಷ್ಣುರೇವಾಭಿಧೀಯತ ಇತಿ ಜ್ಞಾಯತೇ । ದೇವಾಃ ಯಜ್ಞಂ ವಿಷ್ಣುಮಯಜನ್ತೇತ್ಯರ್ಥಃ । 'ಯಜ್ಞೋ ವೈ ವಿಷ್ಣುಃ' ಇತಿ ಶ್ರುತೇಃ । 'ಯಜ್ಞೋ ಯಜ್ಞಪತಿರ್ಯಜ್ವಾ' ಇತಿ ಸ್ಮೃತೇಶ್ಚ ।**

'ಪಾದೋऽಸ್ಯ' ಎಂಬ ಮಂತ್ರವು ವಿಷ್ಣುವನ್ನು ಪ್ರತಿಪಾದಿಸದೆ ಅನ್ಯರನ್ನು ಪ್ರತಿಪಾದಿಸುತ್ತದೆ ಎಂದು ಶಂಕಿಸಬಾರದು. ಪುರುಷಸೂಕ್ತವು ಕೇವಲ ವಿಷ್ಣುಪರವಾದ್ದರಿಂದ ಆದರಲ್ಲಿರುವ ಪಾದೋಸ್ಯ ಎಂಬ ಮಂತ್ರವೂ ಸಹ ವಿಷ್ಣುಪರವೇ ಆಗುತ್ತದೆ. 'ಯಜ್ಞೇನ ಯಜ್ಞಮಯಜಂತ' ಎಂಬ ವಾಕ್ಯಶೇಷದ ಬಲದಿಂದ ಪುರುಷಸೂಕ್ತದಲ್ಲಿ ವಿಷ್ಣುವೇ ಪ್ರತಿಪಾದ್ಯನೆಂದು ತಿಳಿಯುತ್ತದೆ. ದೇವತೆಗಳು ಯಜ್ಞನಾಮಕನಾದ ವಿಷ್ಣುವನ್ನು ಆರಾಧಿಸಿದರು ಎಂದಿದರ ಅರ್ಥ. ಏಕೆಂದರೆ 'ಯಜ್ಞೋ ವೈ ವಿಷ್ಣುಃ' ಎಂಬುದಾಗಿ ವಿಷ್ಣುವಿಗೆ ಯಜ್ಞನೆಂಬ ಹೆಸರಿದೆ.

'ಯಜ್ಞೋ ಯಜ್ಞಪತಿರ್ಯಜ್ವಾ' ಎಂಬುದಾಗಿ ವಿಷ್ಣುಸಹಸ್ರನಾಮವೂ ಸಹ ವಿಷ್ಣುವನ್ನು ಯಜ್ಞ ಎಂದಿದೆ.

**ನಚ ವಾಚ್ಯಮ್ 'ಅಥ ಯದತಃ ಪರಃ' ಇತ್ಯುಕ್ತತ್ವಾತ್ ಸ್ವರ್ಗಾದಿಲೋಕಾತ್ ಪರತೋ ವೈಕುಣ್ಠೇ ದೀಪ್ಯಮಾನಾ ಜ್ಯೋತಿಃಶಬ್ದಾರ್ಥಾದ್ ವಿಷ್ಣೋರನ್ಯದೇವ 'ಪಾದೋऽಸ್ಯ ಸರ್ವಾ ಭೂತಾನಿ ತ್ರಿಪಾದಸ್ಯಾಮೃತಂ ದಿವಿ' ಇತ್ಯತ್ರ ಸ್ವರ್ಗಸ್ಥತ್ವೇನೋಚ್ಯತ ಇತಿ ।**

**ದಿವೀತಿಶಬ್ದಸ್ಯ ದ್ಯೋತಮಾನತ್ವಯೋಗೇನ ವೈಕುಣ್ಠಪರತ್ವಾತ್ ।**

**ಅತ ಏವ ಕ್ವಚಿತ್ ಸಪ್ತಲೋಕಾಪೇಕ್ಷಯಾ 'ದಿವಃ ಪರಃ' ಇತಿ; ತ್ರಿಲೋಕಾಪೇಕ್ಷಯಾ 'ದಿವಿ' ಇತ್ಯುಪದೇಶೋ ಯುಜ್ಯತೇ ।**

'ಅಥ ಯದತಃ ಪರಃ' ಎಂದು ಹೇಳಿದ್ದರಿಂದ ಸ್ವರ್ಗಲೋಕಕ್ಕಿಂತ ಮೇಲಿರುವ ವೈಕುಂಠದಲ್ಲಿ ಬೆಳಗುತ್ತಿರುವ ಜ್ಯೋತಿಯು ವಿಷ್ಣುವಿಗಿಂತ ಭಿನ್ನವೇ ಆಗಬೇಕು. ಏಕೆಂದರೆ, 'ಪಾದೋಸ್ಯ ಸರ್ವಾ

ಭೂತಾನಿ ಎಂಬಲ್ಲಿ ಸ್ವರ್ಗದಲ್ಲಿ ಭಗವಂತನಿದ್ದಾನೆಂದು ಹೇಳಲಾಗಿದೆ. 'ದಿವಿ' ಎಂಬ ಶಬ್ದವು 'ದ್ಯೋತಮಾನ'ವೆಂಬ ಅರ್ಥವನ್ನು ತಿಳಿಸುವುದರಿಂದ ವೈಕುಂಠಪರವಾಗಿದೆ.

ಆದ್ದರಿಂದಲೇ ಕೆಲವೆಡೆ ಸಪ್ತಲೋಕಾಪೇಕ್ಷೆಯಿಂದ 'ದಿವಃ ಪರಃ' ಎಂದಿದೆ. ಮೂರು ಲೋಕಗಳ ಅಭಿಪ್ರಾಯದಿಂದ ದಿವಿ ಎಂದು ಪ್ರಯೋಗಿಸಿದೆ.

**ॐ ॥ उपदेशभेदान्नेति चेन्न उभयस्मिन्नप्यविरोधात् ॐ ॥**

**इदमेव प्रतिपादयत् सूत्रमुपन्यस्य व्याचष्टे – उपदेशेत्यादिना ॥**

**अतोऽत्र ज्योतिःशब्दार्थो विष्णुरिति सिद्धम् ।**

**॥इति श्रीपद्मनाभतीर्थविरचिता सत्तर्कदीपावळ्यां गायत्र्यधिकरणम् ॥**

'दिवः परत्व' ಹಾಗೂ 'ದಿವಿಸ್ಥಿತತ್ವ'ವನ್ನು ಪ್ರತಿಪಾದನೆ ಮಾಡುವುದಕ್ಕಾಗಿ ಸೂತ್ರವನ್ನು ಅನುವಾದ ಮಾಡಿ ವ್ಯಾಖ್ಯಾನಿಸುತ್ತಿದ್ದಾರೆ. ''ಉಪದೇಶ'' ಇತ್ಯಾದಿಯಾಗಿ.

ಈ ಸೂತ್ರದ ಬಲದಿಂದ ವಿಷ್ಣುವೇ ಜ್ಯೋತಿಃಶಬ್ದಾರ್ಥನೆಂದು ನಿರ್ಣಯವಾಗುತ್ತದೆ.

॥ಇಲ್ಲಿಗೆ ಶ್ರೀಪದ್ಮನಾಭತೀರ್ಥರಿಂದ ರಚಿತವಾದ ಸತ್ತರ್ಕದೀಪಾವಳಿಯ ಕನ್ನಡಾನುವಾದದಲ್ಲಿ
ಗಾಯತ್ರ್ಯಧಿಕರಣವು ಮುಗಿಯಿತು ॥

# ೦೧೧-ಗಾಯತ್ರ್ಯಧಿಕರಣ

ಭಾಗ -೨

ತಾತ್ಪರ್ಯಚಂದ್ರಿಕಾ, ಪ್ರಕಾಶ, ಗುರುರಾಜೀಯ,
ಭಾಟ್ಟಸಂಗ್ರಹ, ಶಂಕರಭಾಷ್ಯ, ಭಾಮತೀ,
ಶ್ರೀಭಾಷ್ಯ, ಶ್ರುತಪ್ರಕಾಶ ಇವುಗಳ ಆಯ್ದ ಭಾಗಗಳು

॥ ಶ್ರೀಲಕ್ಷ್ಮೀಹಯಗ್ರೀವೋ ವಿಜಯತೇತಮಾಮ್ ॥

॥ ಶ್ರೀಮದ್ಗುರಾಜೋ ವಿಜಯತೇತರಾಮ್ ॥

॥ ಶ್ರೀಗುರುಭ್ಯೋ ನಮಃ ॥

# ಗಾಯತ್ರ್ಯಧಿಕರಣದ ಸಾರ

ಗಾಯತ್ರೀ, ಉಷ್ಣಿಕ್ ಬೃಹತೀ ಮೊದಲಾದ ಛಂದೋವಾಚಕಪದಗಳನ್ನು ಈ ಅಧಿಕರಣದಲ್ಲಿ ಸಮನ್ವಯ ಮಾಡಲಾಗಿದೆ. ಸುಧೆಯ ಪ್ರಕಾರ 'ಅಥ ಯದತಃ' ಎಂಬ ಶ್ರುತಿಯು ವಿಷಯವಾಕ್ಯ. 'ಗಾಯತ್ರೀ ವಾ' ಎಂಬ ವಾಕ್ಯವು ಟೀಕೆಯಪ್ರಕಾರ ವಿಷಯವಾಕ್ಯ. ಆದ್ದರಿಂದ ಜ್ಯೋತಿರಧಿಕರಣದಲ್ಲಿ ಅಗ್ನಿಸೂಕ್ತದಲ್ಲಿರುವ ಜ್ಯೋತಿಯನ್ನು ಅಗ್ನಿಯಲ್ಲಿ ಪ್ರತಿಪಾದಿಸಿ ಈ ಅಧಿಕರಣದಲ್ಲಿ ಛಾಂದೋಗ್ಯದಲ್ಲಿರುವ ಜ್ಯೋತಿಯನ್ನು ಅಗ್ನಿಯಲ್ಲವೆಂದು ಸುಧೆಯು ನಿರಾಸ ಮಾಡುತ್ತಿದೆ. ಆದರೆ ಟೀಕೆಯು ಹಿಂದಿನ ಅಧಿಕರಣದಲ್ಲಿ ಅಗ್ನಿಸೂಕ್ತದ ಜ್ಯೋತಿಯನ್ನು ಅಗ್ನಿಯಲ್ಲವೆಂದು ನಿರಾಸ ಮಾಡಿ ಈ ಛಾಂದೋಗ್ಯದ ಗಾಯತ್ರಿಯನ್ನು ಛಂದಸ್ಸಲ್ಲವೆಂದು ನಿರಾಸ ಮಾಡುತ್ತಿದೆ.

ಸುಧೆಯ ಪ್ರಕಾರ ಎರಡು ಪೂರ್ವಪಕ್ಷ. (೧)ಛಾಂದೋಗ್ಯದಲ್ಲಿರುವ ಜ್ಯೋತಿಯು ಗಾಯತ್ರಿಯಾದ್ದರಿಂದ ಅಗ್ನಿಸೂಕ್ತದಲ್ಲಿರುವ ಜ್ಯೋತಿಯು ಕೂಡ ಗಾಯತ್ರಿಯೇ ಆಗಬೇಕು. (೨) ಅಗ್ನಿಸೂಕ್ತದಲ್ಲಿರುವ ಜ್ಯೋತಿಯು ನಿರವಕಾಶ ಲಿಂಗಬಲದಿಂದ ವಿಷ್ಣುವಾಗಲಿ. ಆದರೆ ನಿರವಕಾಶಲಿಂಗಗಳು ಕೇಳಿಸದ ಕಾರಣ ಛಾಂದೋಗ್ಯದಲ್ಲಿರುವ ಜ್ಯೋತಿಯು ವಿಷ್ಣುವಲ್ಲ.

ಇಲ್ಲಿ ಮೊದಲ ಪೂರ್ವಪಕ್ಷ ಹಿಂದಿನ ಜ್ಯೋತಿರಧಿಕರಣವನ್ನು ಆಕ್ಷೇಪಿಸುತ್ತಿದೆ. ಆದರೆ ಎರಡನೆಯ ಪೂರ್ವಪಕ್ಷ ಜನಾಧ್ಯಧಿಕರಣವನ್ನು ಅಥವಾ ಆನಂದಮಯಾಧಿಕರಣವನ್ನು ಆಕ್ಷೇಪಿಸುತ್ತಿದೆ.

ಟೀಕೆಯ ಪ್ರಕಾರ ಮೂರು ಪೂರ್ವಪಕ್ಷ. (೧) ಗಾಯತ್ರೀಛಂದಸ್ಸನ್ನು ಹೇಳುವ ಉಪಕ್ರಮದ ಬಲದಿಂದ ಛಾಂದೋಗ್ಯದ ಜ್ಯೋತಿಯು ಛಂದಸ್ಸೇ ಆಗಿದೆ. (೨) ಅಗ್ನಿಸೂಕ್ತದಲ್ಲಿರುವ ಅಗ್ನಿಯು ವಿಷ್ಣುವಾಗಲಿ, ಆದರೆ ಛಾಂದೋಗ್ಯದ ಛಂದಸ್ಸು ವಿಷ್ಣುವಲ್ಲ. (೩) ನಿರ್ಣೀತಜ್ಯೋತಿಶ್ರುತಿಯ ಆಧಾರದಿಂದ ಛಾಂದೋಗ್ಯದ ಜ್ಯೋತಿಯು ವಿಷ್ಣುವಾಗಬಹುದು. ಆದರೆ ಅಂತಹ ಶ್ರುತಿಯಲ್ಲದ ಕಾರಣ ಗಾಯತ್ರಿಯು ವಿಷ್ಣುವಲ್ಲ.

ಇಲ್ಲಿ ಒಟ್ಟು ಐದು ಪೂರ್ವಪಕ್ಷಗಳು. ಇವುಗಳಲ್ಲಿ ಒಂದನ್ನು ಮಾತ್ರ ಟೀಕೆಯಲ್ಲಿ ಹೇಳಿದ್ದಾರೆ. ಉಳಿದೆಲ್ಲವನ್ನೂ ಸುಧೆಯಲ್ಲಿ ಹೇಳಿದ್ದಾರೆ.

ಒಟ್ಟು ಪ್ರಮಾಣಾಶ್ರಿತಪೂರ್ವಪಕ್ಷಗಳು ನಾಲ್ಕು.

೧. ವಿಷ್ಣುವಿನಲ್ಲಷ್ಟೇ ಪ್ರಸಿದ್ಧವಾದ ಅನೇಕ ಶಬ್ದಗಳಿರುವಾಗ ಅನ್ಯತ್ರಪ್ರಸಿದ್ಧವಾದ ಗಾಯತ್ರೀ ಮೊದಲಾದ ಶಬ್ದಗಳನ್ನು ವಿಷ್ಣುವಿನಲ್ಲಿ ಪ್ರಯೋಗಿಸಲು ಪ್ರಯೋಜನವಿಲ್ಲ.

೨. ಅಗ್ನಿಸೂಕ್ತದಲ್ಲಿರುವ ಜ್ಯೋತಿಯು ವಿಷ್ಣುವೆನ್ನಲು ಬಾಧಕವಿಲ್ಲ. ಪ್ರಕೃತ ಗಾಯತ್ರಿಯನ್ನು ವಿಷ್ಣು ಎನ್ನಲು ದಿವಃಪರತ್ವ ದಿವಃಸ್ಥಿತತ್ವ ಎಂಬ ಉಪದೇಶಭೇದದ ವಿರೋಧವಿದೆ.

೩. ಅಗ್ನಿಸೂಕ್ತದಲ್ಲಿರುವ ಜ್ಯೋತಿ ವಿಷ್ಣುವೆನ್ನಲು ಕರ್ಣಾದಿವಿದೂರತ್ವ ಲಿಂಗವಿದೆ. ಅದಕ್ಕೆ ವಿರುದ್ಧವಾದ ದೃಷ್ಟಶ್ರುತತ್ವಾದಿಗಳು ಗಾಯತ್ರಿಯಲ್ಲಿ ಕೇಳಿಸುತ್ತಿರುವುದರಿಂದ ಗಾಯತ್ರಿಯು ವಿಷ್ಣುವಲ್ಲ.

೪. ಒಂದು ಜ್ಯೋತಿಶ್ರುತಿಗೆ ಬಾಧ ಹೇಳುವುದು ಕಷ್ಟವಲ್ಲ. ಗಾಯತ್ರೀ,ವಾಕ್, ಪೃಥಿವೀ ಮೊದಲಾದ ಅನೇಕ ಶ್ರುತಿಗಳಿಗೆ ಬಾಧ ಹೇಳುವುದು ಬಹಳ ಕಷ್ಟ.

ಪ್ರಮೇಯಾಶ್ರಿತಪೂರ್ವಪಕ್ಷ - ಹಿಂದಿನ ಅಧಿಕರಣಗಳಲ್ಲಿ ಸಮನ್ವಯ ಮಾಡಿದ ಆಕಾಶ, ಜ್ಯೋತಿ ಮೊದಲಾದ ಶಬ್ದಗಳ ಪ್ರವೃತ್ತಿನಿಮಿತ್ತಗಳು ಜನ್ಯವಾಗಿವೆ. ಅವುಗಳ ಹುಟ್ಟಗೆ ಭಗವಂತನು ಸ್ವಾಮಿಯೆಂದು ಒಪ್ಪುವುದು ಅನಿವಾರ್ಯ. ಆದರೆ ಈ ಅಧಿಕರಣದಲ್ಲಿ ಸಮನ್ವಯ ಮಾಡುತ್ತಿರುವ ಗಾಯತ್ರೀಶಬ್ದದ ಪ್ರವೃತ್ತಿ-ನಿಮಿತ್ತವು ಅನಾದಿ ಸ್ವಭಾವವೆನಿಸಿದೆ. ಅನಾದಿಧರ್ಮಕ್ಕೆ ಮತ್ತೊಬ್ಬರ ಅಪೇಕ್ಷೆ ಇಲ್ಲ. ಆದ್ದರಿಂದ ಸ್ವಾಮಿತ್ವವೆಂಬ ಪ್ರವೃತ್ತಿನಿಮಿತ್ತದಿಂದ ಭಗವಂತನು ಆಕಾಶಾದಿಶಬ್ದಗಳಿಂದ ಪ್ರತಿಪಾದ್ಯನಾಗಬಹುದೇ ಹೊರತು; ಗಾಯತ್ರೀ-ಶಬ್ದದಿಂದ ಪ್ರತಿಪಾದ್ಯನಾಗಲಾರ.

ಕ್ರಮವಿಶಿಷ್ಟವಾದ ವರ್ಣಗಳೇ ವೇದ. ಕ್ರಮವು ಕೃತಕವಾದ್ದರಿಂದ ವೇದವೂ ಕೃತಕ. ತತ್ವನಿರ್ಣಯ ಟೀಕೆ-ಯಲ್ಲಿ 'ನ ಹಿ ವಯಂ ವೇದಸ್ಯ ಕೂಟಸ್ಥನಿತ್ಯತಾಂ ಬ್ರೂಮಃ' ಎಂಬುದಾಗಿ ಇದನ್ನು ಸ್ಪಷ್ಟಪಡಿಸಿದ್ದಾರೆ.

ಇದು ತಪ್ಪು. ಕ್ರಮ ಅನಿತ್ಯವಾದಲ್ಲಿ ವೇದವು ಕೃತಕವಾಗಬಹುದು. ಆದರೆ ತತ್ವಸಂಖ್ಯಾನಟೀಕೆಯಲ್ಲಿ ಕ್ರಮಕ್ಕೆ ನಿತ್ಯತ್ವವನ್ನು ಹೇಳಿದ್ದಾರೆ. ಈಶ್ವರಬುದ್ಧಿ ಉಪಾಧಿಯಿಂದ ಕೂಡಿದ ಕ್ರಮವು ಕೃತಕವಲ್ಲ. ಹಾಗಾದರೆ ತತ್ವನಿರ್ಣಯ ಟೀಕೆಯಲ್ಲಿ ಕೂಟಸ್ಥನಿತ್ಯತ್ವವನ್ನು ಏಕೆ ನಿಷೇಧಿಸಿದ್ದಾರೆ ? ಎಂದರೆ ನಮ್ಮ ಬುದ್ಧ್ಯುಪಾಧಿ ಘಟಿತವಾದ ಕ್ರಮವು ಉಚ್ಚಾರಣಾಧೀನವಾದ್ದರಿಂದ ಜನ್ಯವಾಗಿದೆ. ವರ್ಣಗಳಿಗೆ ದೈಶಿಕ ಅಥವಾ ಕಾಲಿಕಕ್ರಮ-ವನ್ನಂತೂ ಹೇಳಲು ಸಾಧ್ಯವಿಲ್ಲ. ಬೌದ್ಧಿಕವಾಗಿ ಹೇಳಬೇಕು. ನಮ್ಮ ಬುದ್ಧಿಯಲ್ಲಿರುವ ಕ್ರಮವು ಅನಿತ್ಯವೆಂದು ತತ್ವನಿರ್ಣಯಟೀಕೆಯ ಅಭಿಪ್ರಾಯ. ಈಶ್ವರಬುದ್ಧಿಯಲ್ಲಿರುವ ಕ್ರಮವು ನಿತ್ಯವೆಂದು ತತ್ವಸಂಖ್ಯಾನಟೀಕೆಯ ಅಭಿಪ್ರಾಯ.

ಇಲ್ಲಿ ಸಹಜವಾಗಿ ಬರುವ ಪ್ರಶ್ನೆ ಹೀಗಿದೆ - ಈಶ್ವರಬುದ್ಧಿಯಲ್ಲಿ ವೇದವು ವಿಕಪ್ರಕಾರವಾಗಿರುವುದ-ರಿಂದಷ್ಟೇ ಅಪೌರುಷೇಯವೆಂದಾದರೆ ಪುರಾಣಾದಿಗಳೂ ಅಪೌರುಷೇಯವಾಗಬೇಕಲ್ಲವೆ? ಸರ್ವಜ್ಞನಾದ ಈಶ್ವರನ ಬುದ್ಧಿಯಲ್ಲಿ ಎಲ್ಲ ಪುರಾಣಗಳು ಎಲ್ಲಾ ಕಾಲದಲ್ಲಿಯೂ ವಿಕಪ್ರಕಾರವೇ ಆಗಿರುತ್ತದಲ್ಲವೇ? ಎಂಬ ಪ್ರಶ್ನೆಗೆ ಹೀಗೆ ಉತ್ತರಿಸಬೇಕು. ಪ್ರತಿಯೊಂದು ಕಲ್ಪಗಳಲ್ಲಿಯೂ ಭಾಗವತಾದಿಪುರಾಣಗಳ ಆನುಪೂರ್ವಿಯನ್ನು ವ್ಯತ್ಯಾಸಮಾಡಿ ಭಗವಂತನು ಉಪದೇಶಿಸುತ್ತಾನೆ. ಆದರೆ ವೇದದ ಆನುಪೂರ್ವಿಯನ್ನು ಯಾವಕಲ್ಪದಲ್ಲಿಯೂ ವ್ಯತ್ಯಾಸ ಮಾಡುವುದಿಲ್ಲ. ಮತ್ತು ಈ ಕಲ್ಪದಲ್ಲಿ ಉಪದೇಶ ಮಾಡಿದ ಪುರಾಣವನ್ನು ವರ್ತಮಾನಕಾಲವಿಶಿಷ್ಟವಾಗಿ ಭಗವಂತನು ತಿಳಿದಿದ್ದಾನೆ. ಹಿಂದಿನ ಕಲ್ಪಗಳ ಪುರಾಣಾದಿಗಳನ್ನು ಅಧಿತಕಾಲವಿಶಿಷ್ಟವಾಗಿ ತಿಳಿದಿದ್ದಾನೆ. ಈ ಕಾರಣದಿಂದಷ್ಟೇ ಪುರಾಣಗಳು ಪೌರುಷೇಯ ಎನಿಸುತ್ತವೆ. ಆದರೆ ವೇದವನ್ನು ಪ್ರತಿಕಲ್ಪಗಳಲ್ಲಿಯೂ ವರ್ತ-ಮಾನಕಾಲವಿಷಯಕವಾಗಿಯೇ ತಿಳಿಯುತ್ತಾನಾದ್ದರಿಂದ ವೇದವು ಅಪೌರುಷೇಯವೆನಿಸುತ್ತದೆ.

ಐದು ಪೂರ್ವಪಕ್ಷಗಳ ಮಧ್ಯದಲ್ಲಿ ಮೊದಲನೆಯ ಶಂಕೆಯು 'ಚೇತೋರ್ಪಣನಿಗದಾತ್' ಎಂಬ ಸೂತ್ರದಲ್ಲಿ ಪ್ರಯೋಜನವನ್ನು ಹೇಳುವ ಮೂಲಕ ಪರಿಹರಿಸಲಾಗಿದೆ. ಎರಡು ಹಾಗೂ ಮೂರನೆಯ ಪೂರ್ವಪಕ್ಷಗಳನ್ನು 'ಉಭಯಸ್ಮಿನ್ ಅಪ್ಯವಿರೋಧಾತ್' ಎಂಬ ಸೂತ್ರದಿಂದ ಪರಿಹರಿಸಿದ್ದಾರೆ.

ನಾಲ್ಕನೆಯ ಪೂರ್ವಪಕ್ಷವನ್ನು 'ಬಾಹುಲ್ಯಾತ್ ಶ್ರುತಿಲಿಂಗಯೋಃ' ಎಂಬ ಅನುವ್ಯಾಖ್ಯಾನದಲ್ಲಿ ಮತ್ತು 'ಜ್ಯಾಯಾಂಶ್ಚ ಪುರುಷ ಇತ್ಯಾದಿಶಬ್ದಸಹಿತಲಿಂಗೈಶ್ಚ' ಎಂಬ ನ್ಯಾಯವಿವರಣದಲ್ಲಿ ಪರಿಹರಿಸಿದ್ದಾರೆ.

ಐದನೆಯ ಪ್ರಮೇಯಾಶ್ರಿತಶಂಕೆಯು 'ತಾದೃಶತ್ವಾತ್ ತು ತಚ್ಛಕ್ತೇಃ' ಎಂಬ ಅನುವ್ಯಾಖ್ಯಾನದಲ್ಲಿ ಪರಿಹರಿಸಲ್ಪಟ್ಟಿದೆ.

ಅನಾದಿಯಾದ ಮಾತ್ರದಿಂದ ಮತ್ತೊಂದರ ಅಧೀನವಾಗಬಾರದೆಂದೇನಿಲ್ಲ. ವೈಶೇಷಿಕರು ಅನಾದಿ ಗಗನ ಪರಿಮಾಣವನ್ನು ಗಗನಾಧೀನ ಎಂದಿದ್ದಾರೆ. ಅನಾದಿ ಅಜ್ಞಾನಸಂಬಂಧವನ್ನು ಅದ್ವೈತಿಗಳು ಅಜ್ಞಾನಾಧೀನ ಎನ್ನುತ್ತಾರೆ. ಪ್ರಾಭಾಕರರೂ ಸಹ ಅನಾದಿ ದುಃಖಪ್ರಾಗಭಾವವನ್ನು ಜ್ಞಾನಾಧೀನ ಎಂದಿದ್ದಾರೆ. ಆದರಂತೆ ಅನಾದಿಯಾದ ಗಾಯತ್ರೀರೂಪವೇದವು ಭಗವದಧೀನವೆಂದು ನಾವು ಹೇಳಿದರೆ ಏನು ತಪ್ಪು? ಇಷ್ಟು ಮಾತ್ರ ವ್ಯತ್ಯಾಸ. ಸಾದಿಪದಾರ್ಥವು ಉತ್ಪತ್ತಿ ಹಾಗೂ ಸ್ಥಿತಿವಿಷಯದಲ್ಲಿ ಭಗವದಧೀನವಾಗಿರುತ್ತದೆ. ಅನಾದಿಪದಾರ್ಥವು ಸ್ಥಿತಿವಿಷಯದಲ್ಲಷ್ಟೇ ಭಗವದಧೀನವಾಗಿರುತ್ತದೆ.

ಭಗವಂತನು ಕರ್ತುಂ ಅಕರ್ತುಂ ಅನ್ಯಥಾಕರ್ತುಂ ಸಮರ್ಥನಾಗಿದ್ದಾನೆ. ಅವನು ಇಚ್ಛೆ ಪಟ್ಟರೆ ಏನನ್ನು ಬೇಕಾದರೂ ಮಾಡಬಲ್ಲ. ಅವ್ಯಾಕೃತಾಕಾಶವಿಲ್ಲದ ಜಗತ್ತನ್ನೇ ಸೃಷ್ಟಿ ಮಾಡಬಲ್ಲ. ಪ್ರಕೃತಿ ಮೊದಲಾದವುಗಳನ್ನು ಉಪಯೋಗಿಸದೆಯೂ ಜಗತ್ತನ್ನು ಸೃಷ್ಟಿಸಬಲ್ಲ. ಆದರೆ ತಾನೇ ಮಾಡಿಕೊಂಡ ನಿಯಮವನ್ನು ದಾಟಿ ಇಂತಹ ಸಂಕಲ್ಪಗಳನ್ನು ಮಾಡಲಾರ. ಆದ್ದರಿಂದ ಅನಾದಿಪದಾರ್ಥಗಳೆಲ್ಲವೂ ಸಂಪೂರ್ಣವಾಗಿ ಭಗವದಧೀನಗಳೇ ಆಗಿವೆ. ಭಗವಂತನ ಇಚ್ಛೆಯು ಅನಾದಿಯಾದ್ದರಿಂದ ವಿರೋಧಕ್ಕೆ ಅವಕಾಶವಿಲ್ಲ.

ಇಲ್ಲಿಯ ತನಕ ನಮ್ಮ ಪ್ರಕಾರ ಸೂತ್ರಗಳನ್ನು ವ್ಯಾಖ್ಯಾನಿಸಿದಂತಾಯಿತು. ಈಗ ಅದ್ವೈತಿಗಳ ಮತ್ತು ರಾಮಾನುಜರ ಸೂತ್ರವ್ಯಾಖ್ಯಾನವನ್ನು ಅನುವಾದ ಮಾಡಿ ನಿರಾಕರಿಸುತ್ತಿದ್ದಾರೆ. ಕ್ರಮವಾಗಿ ಒಂದೊಂದೇ ಸೂತ್ರಾರ್ಥವನ್ನು ನಿರಾಕರಿಸಲು ಮೊದಲು ಜ್ಯೋತಿಸೂತ್ರಾರ್ಥವನ್ನು ಅನುವಾದ ಮಾಡಿದ್ದಾರೆ. ನಾಲ್ಕೂ ಸೂತ್ರಗಳು ಒಂದೇ ಅಧಿಕರಣ. ಜ್ಯೋತಿಸೂತ್ರದಲ್ಲಿರುವ ಚರಣಾಭಿಧಾನಶಬ್ದಕ್ಕೆ ಪಾದಾಭಿಧಾನ ಎಂದರ್ಥ. 'ಪಾದೋಸ್ಯ ಸರ್ವಾ ಭೂತಾನಿ ತ್ರಿಪಾದಸ್ಯಾಮೃತಂ ದಿವಿ' ಎಂಬ ಛಾಂದೋಗ್ಯವು ಇದನ್ನು ವಿವರಿಸಿದೆ. ಇಷ್ಟು ಇವರ ಅಭಿಪ್ರಾಯ.

ಇವರ ಸೂತ್ರವ್ಯಾಖ್ಯಾನ ಸರಿಯಿಲ್ಲ. ಹಾಗಾದಲ್ಲಿ ಪಾದಶಬ್ದವನ್ನೇ ಜ್ಯೋತಿಸೂತ್ರದಲ್ಲಿ ಹೇಳಬೇಕಿತ್ತು. ಇದರಿಂದ ಸೂತ್ರವು ಲಘುವಾಗುತ್ತದೆ ಮತ್ತು ಶ್ರುತಿಯ ಅನುಗಮವನ್ನೂ ಹೊಂದುತ್ತದೆ. ನಮ್ಮ ವಿಷಯವಾಕ್ಯವನ್ನು ವಿವಕ್ಷಿಸಿದಾಗ 'ಹೃದಯ ಆಹಿತಂ ಯತ್' ಎಂದು ಗುಹಾನಿಹಿತತ್ವವು ಕೇಳಿಸುತ್ತಿದೆ. ಇದರಿಂದ ಆನಂದಮಯಾಧಿಕರಣವನ್ನು ಆಕ್ಷೇಪಿಸಿದಂತಾಗಿ ಸಂಗತಿಯನ್ನು ಸುಲಭವಾಗಿ ಹೇಳಬಹುದು. ಮತ್ತು 'ಪಾದೋಸ್ಯ ವಿಶ್ವಾ ಭೂತಾನಿ' ಎಂಬ ಹಿಂದಿನ ವಾಕ್ಯದಲ್ಲಿ ಹೇಳಿದ ಪಾದಾಭಿಧಾನವನ್ನೇ ಜ್ಯೋತಿರ್ವಾಕ್ಯ ಹೇಳುತ್ತಿದೆ. ಭೂತಾದಿಸೂತ್ರವು ಇದನ್ನೇ ಹೇಳುತ್ತಿರುವಾಗ ಜ್ಯೋತಿಸೂತ್ರವು ಪುನರುಕ್ತವಾಗುತ್ತದೆ. 'ತ್ರಿಪಾದಸ್ಯಾಮೃತಂ ದಿವಿ' ಎಂಬಲ್ಲಿ ಸರ್ವಭೂತಗಳು ಒಂದು ಪಾದ. ಅಮೃತವಾದವು ಉಳಿದ ಮೂರು ಪಾದಗಳೆಂದು ಜ್ಯೋತಿಸೂತ್ರದ ವಿಷಯವಾಕ್ಯದಲ್ಲಿ ಕೇಳಿಸುತ್ತಿದೆ. ಆದರೆ ಭೂತಾದಿಸೂತ್ರದ ವಿಷಯವಾಕ್ಯವೆನಿಸಿದ ಬ್ರಾಹ್ಮಣದಲ್ಲಿ ಭೂತ, ಪೃಥಿವೀ ಶರೀರ, ಹೃದಯಗಳನ್ನು ಪಾದಗಳೆನ್ನಲಾಗಿದೆ. ಆದ್ದರಿಂದ ಪುನರುಕ್ತಿಗೆ ಅವಕಾಶವಿಲ್ಲ ಎನ್ನಬಾರದು. ಏಕೆಂದರೆ ಚರಣಾಭಿಧಾನಶಬ್ದಕ್ಕೆ ಸರ್ವಭೂತ ಮತ್ತು ಅಮೃತಗಳ ಪಾದವೆಂಬ ಅರ್ಥವನ್ನು ಚರಣಾಭಿಧಾನಶಬ್ದ ಹೇಳಿದ ಮೇಲೆ ಭೂತ ಪೃಥಿವೀ ಮೊದಲಾದ ಅರ್ಥವನ್ನು ಚರಣಾಭಿಧಾನ ಶಬ್ದಕ್ಕೆ ಹೇಳಿದರೆ ಏನು ತೊಂದರೆ? ಅಷ್ಟೆ ಅಲ್ಲದೆ ಚರಣಾಭಿಧಾನಶಬ್ದದಿಂದಲೇ ಸರ್ವಾತ್ಮಕತ್ವವು ತಿಳಿಯುವಾಗ ಪುನಃ ತದೇಕದೇಶವಾದ ಭೂತಪೃಥಿವ್ಯಾದಿಗಳಿಗೆ ತದಾತ್ಮಕತ್ವ ಹೇಳುವುದರಲ್ಲಿ ಅರ್ಥವಿಲ್ಲ.

ಅದ್ವೈತಿಗಳಿಗೆ ಚತುಷ್ಪದಾ ಎಂಬ ಶ್ರುತಿಯನ್ನು ವ್ಯಾಖ್ಯಾನಿಸಲು ಸಾಧ್ಯವಿಲ್ಲ. ಭೂತಾದಿ ನಾಲ್ಕು ಪದಾರ್ಥಗಳು ಬ್ರಹ್ಮನ ಪಾದಗಳಾಗಿವೆ ಎಂದು ವ್ಯಾಖ್ಯಾನಿಸಬೇಕು. ಆದರೆ ಶ್ರುತಿಯಲ್ಲಿ ಈ ಹಿಂದೆ ಆರು ಪದಾರ್ಥಗಳು ಪ್ರಸಕ್ತವಾಗಿರುವಾಗ ವಾಕ್, ಪ್ರಾಣಗಳನ್ನು ಬಿಟ್ಟು ನಾಲ್ಕನ್ನು ಮಾತ್ರ ಬ್ರಹ್ಮನ ಪಾದಗಳೆನ್ನುವುದು ತಪ್ಪಲ್ಲವೇ? ಇನ್ನು ಆರಲ್ಲಿ ವಾಕ್, ಪ್ರಾಣಗಳನ್ನು ಬಿಟ್ಟು ನಾಲ್ಕನ್ನು ಮಾತ್ರ ಶ್ರುತಿಯು ಚತುಷ್ಪದಾ ಎಂದಿದೆ ಎನ್ನಬಹುದು. ಆದರೆ ಈ ಪಕ್ಷದಲ್ಲಿ ವಾಕ್ ಪ್ರಾಣಗಳಿಗೆ ಬ್ರಹ್ಮಾತ್ಮಕತ್ವವನ್ನು ಹೇಳಿದಂತಾಗುವುದಿಲ್ಲ. ಆದ್ದರಿಂದ ಶ್ರುತಿಯು ಭಗವಂತನ ಆರುರೂಪಗಳನ್ನು ಅನುವಾದ ಮಾಡಿ ಬೇರೆ ನಾಲ್ಕು ರೂಪಗಳನ್ನು 'ಚತುಷ್ಪದಾ' ಎಂಬ ಪದದಿಂದ ವರ್ಣಿಸಿದೆ ಎಂದು ಹೇಳಬೇಕು.

ನಮ್ಮ ಮತದಲ್ಲಿ 'ಸೈಷಾ ಚತುಷ್ಪದಾ ಷಡ್ವಿಧಾ' ಎಂಬ ಶ್ರುತಿ ಭಗವಂತನ ರೂಪಗಳನ್ನು ಹೇಳುತ್ತಿದೆ. ಸಕಲಜೀವರಾಶಿ ಭಗವಂತನ ಭಿನ್ನಾಂಶವೆಂದು 'ಪಾದೋಸ್ಯ ಸರ್ವಾ ಭೂತಾನಿ' ಎಂಬ ವಾಕ್ಯ ಹೇಳುತ್ತಿದೆ. ತ್ರಿಪಾದಸ್ಯಾಮೃತಂ ದಿವಿ' ಎಂಬ ವಾಕ್ಯ ನಾರಾಯಣ ವಾಸುದೇವ ವೈಕುಂಠ ಎಂಬ ಮೂರು ಸ್ವರೂಪಾಂಶಗಳನ್ನು ಹೇಳುತ್ತಿದೆ. ಮೊದಲನೆಯ ರೂಪ ಜಗತ್ತಿನಲ್ಲಿ ಉಳಿದ ಮೂರು ರೂಪಗಳು ಶ್ವೇತದ್ವೀಪ, ಅನಂತಾಸನ, ವೈಕುಂಠಗಳಲ್ಲಿ ಇರುತ್ತವೆ. ಒಟ್ಟು ಈ ನಾಲ್ಕು ರೂಪಗಳನ್ನು ಚತುಷ್ಪದಾ ಎಂಬ ಪದವು ಬಣ್ಣಿಸಿದೆ.

೧. ಗಾಯತ್ರಿಯಲ್ಲಿರುವ ಸ್ತ್ರೀರೂಪ; ೨. ಮತ್ಸ್ಯಾದಿರೂಪ; ೩. ವಾಕ್‌ನಲ್ಲಿರುವ ಹಯಗ್ರೀವ ಸ್ತ್ರೀರೂಪ; ೪. ಪೃಥಿವಿಯಲ್ಲಿರುವ ಸ್ತ್ರೀರೂಪ; ೫. ಜೀವರಲ್ಲಿರುವ ಶರೀರರೂಪ; ೬. ಹೃದಯದಲ್ಲಿರುವ ಹೃದಯರೂಪ. ಭಗವಂತನ ಈ ಆರುರೂಪಗಳನ್ನು ಷಡ್ವಿಧಾ ಎಂಬ ಪದವು ವರ್ಣಿಸಿದೆ.

ಜ್ಯೋತಿಸೂತ್ರಕ್ಕೆ ಮತ್ತು ಮೂರನೆಯ ಭೂತಾದಿಸೂತ್ರಕ್ಕೆ ಪರರು ಮಾಡಿದ ವ್ಯಾಖ್ಯಾನವನ್ನು ಇಲ್ಲಿಯ ತನಕ ವಿಮರ್ಶಿಸಿದ್ದಾಯಿತು. ಗಾಯತ್ರಿ ಎಂಬ ಅಧಿಷ್ಠಾನದಲ್ಲಿ ಬ್ರಹ್ಮನನ್ನು ಉಪಾಸನೆ ಮಾಡಬೇಕೆಂದು ತಿಳಿಸಲು ಎರಡನೆಯ ಸೂತ್ರವು ಹೊರಟಿದೆ ಎಂಬ ಅವರ ವ್ಯಾಖ್ಯಾನವನ್ನು ಪ್ರತ್ಯೇಕವಾಗಿ ನಿರಾಕರಿಸಬೇಕಿಲ್ಲ. ಅನೇಕ ಸ್ಥಳಗಳಲ್ಲಿ ಬ್ರಹ್ಮನು ಆರೋಪಾಧಿಷ್ಠಾನನಾಗುವುದಿಲ್ಲ ಎಂಬ ನಿರಾಕರಣೆಯಿಂದಲೇ ಪರರ ದ್ವಿತೀಯಸೂತ್ರದ ವ್ಯಾಖ್ಯಾನವು ನಿರಾಕೃತವಾಗಿದೆ. ಪ್ರಕೃತ ನಾಲ್ಕನೆಯ 'ಉಭಯಸ್ಮಿನ್ನಪ್ಯವಿರೋಧಾತ್' ಎಂಬ ಪರರ ಸೂತ್ರವ್ಯಾಖ್ಯಾನವನ್ನು ವಿಮರ್ಶಿಸಲಾಗಿದೆ.

ಜ್ಯೋತಿಯಲ್ಲಿ ಕೇಳಿಸುತ್ತಿರುವ ದಿವಃಪರತ್ವ ಮತ್ತು ದಿವಿಸ್ಥಿತತ್ವವನ್ನು ಪ್ರಮಾಣದ ಆಧಾರದಿಂದ ನಾವು ಭಗವಂತನಲ್ಲಿ ಸಮರ್ಥಿಸುತ್ತೇವೆ. ಆದರೆ ಅದ್ವೈತಿಗಳು ಉದಾಹರಣೆಯ ಮೂಲಕ ಪರಿಹರಿಸಲು ಪ್ರಯತ್ನಿಸಿದ್ದಾರೆ -- ಪಕ್ಷಿಯು ಮರದ ತುದಿಯಲ್ಲಿ ಕುಳಿತಿರುವಾಗ 'ಮರದ ತುದಿಯಲ್ಲಿ ಪಕ್ಷಿ' ಎಂಬ ಪ್ರಯೋಗವಿದ್ದಂತೆ; 'ಮರದ ತುದಿಯ ಆಚೆ ಪಕ್ಷಿ' ಎಂಬ ಪ್ರಯೋಗವನ್ನೂ ಲೋಕದಲ್ಲಿ ಕಾಣುತ್ತೇವೆ. ಇದರಂತೆ ಜ್ಯೋತಿಯು ದ್ಯುಲೋಕದಲ್ಲಿ ಇದ್ದಾಗ ದಿವಿಸ್ಥಿತನೆಂಬ ಪ್ರಯೋಗವಿದೆ. ಆದರೂ ದಿವಃಪರಃ ಎಂದು ಪ್ರಯೋಗಿಸಬಹುದು. ಮತ್ತು ಪಕ್ಷಿಯು ಮರದ ತುದಿಯ ಆಚೆ ಹಾರುತ್ತಿರುವಾಗ 'ಮರದ ತುದಿಯ ಆಚೆ ಪಕ್ಷಿ' ಎಂಬ ಪ್ರಯೋಗವಿದ್ದಂತೆ 'ಮರದ ತುದಿಯಲ್ಲಿ ಪಕ್ಷಿ' ಎಂಬ ಪ್ರಯೋಗವು ಕಾಣಿಸುತ್ತದೆ. ಇದರಂತೆ ಬ್ರಹ್ಮನು ದಿವಃಪರನಾಗಿದ್ದರೂ ದಿವಿಸ್ಥಿತನೆಂದು ಪ್ರಯೋಗಿಸಬಹುದು.

ಇದು ಅದ್ವೈತಿಗಳ ವಾದ. ಆಂತೂ ಬ್ರಹ್ಮನು ದ್ಯುಲೋಕದ ಒಳಗಿದ್ದಾನೋ, ಹೊರಗಿದ್ದಾನೋ ಎಂಬುದನ್ನು ಇವರು ಸ್ಪಷ್ಟ ಪಡಿಸಲೇ ಇಲ್ಲ. ಮತ್ತು ದ್ಯುಲೋಕದ ಸಂಬಂಧವಿರುವಾಗ ಅಥವಾ ಇಲ್ಲದಿರುವಾಗ

ಎರಡು ವಿಧಪ್ರಯೋಗಗಳನ್ನು ಮುಖ್ಯವೆಂದು ಆದ್ವೈತಿಗಳಿಗೆ ಸಮರ್ಥಿಸಲಾಗದು. ಉದಾಹರಣೆ ನೀಡಿದಂತೆ ಒಂದು ಪ್ರಯೋಗವನ್ನಷ್ಟೇ ಮುಖ್ಯವೆಂದು ಹೇಳಿ ಮತ್ತೊಂದು ಪ್ರಯೋಗವನ್ನು ಅಮುಖ್ಯವೆನ್ನಬೇಕು. ಆದರೆ ಶ್ರುತಿಗೆ ಅಮುಖ್ಯಾರ್ಥ ಮಾಡುವುದು ಸರಿಯಲ್ಲ.

ಭಾಮತಿಯ ಸಮರ್ಥನೆ -- ಪಕ್ಷಿ ಮರದ ಮೇಲೆ ಕುಳಿತಾಗ ಮರಕ್ಕೆ ಪಕ್ಷಿಯ ಕಾಲುಗಳಷ್ಟೇ ಸಂಬಂಧವಾಗಿರುತ್ತವೆ. ಹೊಟ್ಟೆ, ಕತ್ತು ಮೊದಲಾದ ಭಾಗಗಳು ಸಂಬಂಧ ಹೊಂದಿರುವುದಿಲ್ಲ. ಸಂಬಂಧ ಹೊಂದಿರುವ ಕಾಲನ್ನು ವಿವಕ್ಷಿಸಿ 'ಮರದಲ್ಲಿ ಪಕ್ಷಿ' ಎಂಬ ಪ್ರಯೋಗವು ಸಾಧುವಾಗಿದೆ; ಸಂಬಂಧ ಹೊಂದಿರದ ಹೊಟ್ಟೆ ಕತ್ತು ಮೊದಲಾದವುಗಳನ್ನು ವಿವಕ್ಷಿಸಿ 'ಮರದ ತುದಿಯ ಆಚೆ ಪಕ್ಷಿ' ಎಂಬ ಪ್ರಯೋಗವು ಸಾಧುವಾಗುತ್ತದೆ. ಇದರಂತೆ ದ್ಯುಲೋಕದಲ್ಲಿ ಸಂಬಂಧ ಹೊಂದಿರುವ ಬ್ರಹ್ಮನ ಅವಯವವನ್ನು ವಿವಕ್ಷಿಸಿ ದಿವಿಸ್ಥಿತನೆಂಬ ಪ್ರಯೋಗವು ಸಾಧುವಾಗಿದೆ. ಸಂಬಂಧಪಡದ ಅವಯವವನ್ನು ವಿವಕ್ಷಿಸಿ ದಿವಃಪರತ್ವವೆಂಬ ಪ್ರಯೋಗವು ಸಾಧುವಾಗಿದೆ.

ಭಾಮತಿಯ ಈ ವಿಚಾರ ಅತ್ಯಂತ ಬಾಲಿಶ. ಸ್ವತಃ ತಾವೇ ಬ್ರಹ್ಮನನ್ನು ನಿರವಯವನೆಂದು ಒಪ್ಪಿ ಈಗ ಅವಯವವನ್ನು ಹೇಳುವುದು ಅನುಚಿತ. ಮತ್ತು ವಸ್ತುಸ್ಥಿತಿಯನ್ನು ಅರ್ಥಮಾಡಿಕೊಳ್ಳದೇ ಸ್ವಕಪೋಲಕಲ್ಪಿತವಾದ ಇಂತಹ ವ್ಯಾಖ್ಯಾನವು ಅತ್ಯಂತ ಕ್ಲಿಷ್ಟಕರ. ಅಷ್ಟೇ ಅಲ್ಲದೆ ಶ್ರುತಿಗೆ ಮುಖ್ಯಾರ್ಥವನ್ನು ಹೇಳಲು ಬರುವಾಗ ಲಕ್ಷಣಾ ಮಾಡುವುದು ಅನಾವಶ್ಯಕ. ದಿವಃಪರತ್ವ ಮತ್ತು ದಿವಿಸ್ಥಿತತ್ವವನ್ನು ಸಮರ್ಥಿಸುವ ಸ್ಮೃತಿವಿರೋಧವು ಇವರಿಗೆ ತಪ್ಪಿದ್ದಲ್ಲ.

ರಾಮಾನುಜರು ಆದ್ವೈತಿಗಳಂತೆ ಶ್ರುತಿಗೆ ಲಕ್ಷಣಾ ಮಾಡುವುದಿಲ್ಲ. ದಿವಿ ಮತ್ತು ದಿವಃ ಎಂಬಲ್ಲಿರುವ ಸಪ್ತಮೀ ಹಾಗೂ ಪಂಚಮೀ ವಿಭಕ್ತಿಗಳು ಮುಖ್ಯಾರ್ಥವನ್ನೇ ಪ್ರತಿಪಾದಿಸುತ್ತವೆ. ಆದರೆ ಸಪ್ತಮೀ ವಿಭಕ್ತಿಯು ಸಾವಕಾಶವಾಗಿದೆ; ಪಂಚಮಿಯು ನಿರವಕಾಶವಾಗಿದೆ. ನಿರವಕಾಶಾನುಸಾರಿಯಾಗಿ ಸಾವಕಾಶವನ್ನು ವ್ಯಾಖ್ಯಾನಿಸಬೇಕು. ಆದ್ದರಿಂದ ದಿವಃಪರಃ ಎಂಬುದೇ ವಸ್ತುಸ್ಥಿತಿ. ದಿವಿ ಎಂಬುದಕ್ಕೆ ದಿವಃ ಉಪರಿ ಎಂದರ್ಥ. ಹೀಗೆ ಹೇಳುವ ರಾಮಾನುಜರಿಗೆ ಆದ್ವೈತಿಗಳಿಗೆ ಬರುವಷ್ಟು ದೊಡ್ಡ ದೋಷ ಬಾರದಿದ್ದರೂ, ದೋಷವು ತಪ್ಪಿದ್ದಲ್ಲ. ಎರಡು ವೃತ್ತಿತ್ತಿಗಳಲ್ಲಿ ಒಂದಕ್ಕೆ ಅಮುಖ್ಯಾರ್ಥವನ್ನು ಇವರು ಹೇಳಲೇ ಬೇಕಾಗುತ್ತದೆ. ನಾವಾದರೆ ದ್ಯುಶಬ್ದಕ್ಕೆ ಅನೇಕಾರ್ಥವನ್ನು ಹೇಳಿದ್ದೇವೆ.

ಆದರೆ ರಾಮಾನುಜರು ಒಂದೇ ಅರ್ಥವನ್ನು ಹೇಳುತ್ತಾರೆ. 'ದೇವದತ್ತನಿಗೆ ಮನೆಯು ಆಧಾರವಾಗಬೇಕಾದರೆ ಮನೆಯ ಒಳಗೋ, ಹೊರಗಿನ ಜಗಲಿಯಲ್ಲೋ, ಅಥವಾ ಮಹಡಿಯ ಮೇಲೋ ಅಥವಾ ಕೆಳಗೋ ಎಲ್ಲಾದರೂ ಒಂದು ಮನೆಯ ಭಾಗದಲ್ಲಿ ದೇವದತ್ತನು ಇರಲೇಬೇಕು. ಮನೆಯಿಂದ ದೇವದತ್ತನು ತುಂಬಾ ದೂರ ಹೋದಾಗ ದೇವದತ್ತನಿಗೆ ಮನೆಯು ಆಧಾರವಾಗುವುದಿಲ್ಲ; ಹೊರತು ಅವಧಿಯಾಗುತ್ತದೆ. ಆವಾಗ ಆಧಾರಾರ್ಥದಲ್ಲಿ ಸಪ್ತಮೀಯನ್ನು ಪ್ರಯೋಗಿಸಲಾಗದು.

ಪ್ರಕೃತ ಜ್ಯೋತಿಯೆಂಬ ಬ್ರಹ್ಮನು ದ್ಯುಲೋಕದ ಯಾವ ಭಾಗದಲ್ಲಿಯೂ ಇಲ್ಲದೆ ಮೇಲಿನ ಲೋಕದಲ್ಲಿದ್ದರೆ ದಿವಿಸ್ಥಿತಃ ಎಂಬ ಸಪ್ತಮ್ಯಂತಪ್ರಯೋಗವನ್ನು ಮುಖ್ಯವಾಗಿ ಮಾಡಲು ಸಾಧ್ಯವಿಲ್ಲ. ಇದರಂತೆ ಪಂಚಮಿಯು ಕೇವಲ ಅವಧಿತ್ವವನ್ನೇ ಹೇಳುತ್ತದೆ. ಹೀಗಿರುವಾಗ ಪಕ್ಷಿಯು ವೃಕ್ಷದಲ್ಲಿ ಕುಳಿತಾಗ 'ವೃಕ್ಷಾತ್ ಪರತ್ರ ಶ್ಯೇನಃ' ಎಂಬ ಪ್ರಯೋಗವನ್ನು ಅಮುಖ್ಯಾರ್ಥವೆಂದು ಹೇಳಲೇಬೇಕಾಗುತ್ತದೆ.

'ಉಪದೇಶಭೇದಾತ್' ಎಂಬ ಸೂತ್ರಕ್ಕೆ ಸಿದ್ಧಾಂತದ ಪ್ರಕಾರ ವ್ಯಾಖ್ಯಾನ. ಛಾಂದೋಗ್ಯೋಪನಿಷತ್ತಿನ ಗಾಯತ್ರೀಪ್ರಕರಣದಲ್ಲಿ 'ತ್ರಿಪಾದಸ್ಯಾಮೃತಂ ದಿವಿ' ಎಂದು ಗಾಯತ್ರಿಯು ದ್ಯುಲೋಕದಲ್ಲಿದೆ ಎನ್ನಲಾಗಿದೆ. ಮುಂದಿನ ಜ್ಯೋತಿಪ್ರಕರಣದಲ್ಲಿ 'ಅಥ ಯದತಃ ಪರೋ ದಿವೋ ಜ್ಯೋತಿರ್ದೀಪ್ಯತೇ' ಎಂದು ದ್ಯುಲೋಕಕ್ಕಿಂತ ಮೇಲೆ ಜ್ಯೋತಿಯು ಇದೆ ಎನ್ನಲಾಗಿದೆ. ದಿವಿ ಎಂಬಲ್ಲಿ ಸಪ್ತಮೀ ವಿಭಕ್ತಿ ಇರುವುದರಿಂದ ದ್ಯುಲೋಕದಲ್ಲಿ ಎಂದರ್ಥ. ದಿವಃ ಎಂಬಲ್ಲಿ ಪಂಚಮೀ ವಿಭಕ್ತಿ ಇರುವುದರಿಂದ ದ್ಯುಲೋಕಕ್ಕಿಂತ ಮೇಲ್ಭಾಗದಲ್ಲಿ ಎಂದರ್ಥ. ಜ್ಯೋತಿ ಹಾಗೂ ಗಾಯತ್ರೀ ಎರಡೂ ಒಂದೇ ಆದಲ್ಲಿ ಒಂದೇ ವಸ್ತು ದ್ಯುಲೋಕದಲ್ಲಿ ಹಾಗೂ ಅದಕ್ಕಿಂತ ಮೇಲಿನ ಲೋಕದಲ್ಲಿ ಇರಲು ಹೇಗೆ ತಾನೆ ಸಾಧ್ಯ ? ಈ ಕಾರಣದಿಂದ ದ್ಯುಲೋಕದಲ್ಲಿರುವ ಗಾಯತ್ರಿಯೇ ಬೇರೆ ಆದರ ಮೇಲಿನ ಲೋಕದಲ್ಲಿರುವ ಜ್ಯೋತಿಯೇ ಬೇರೆ ಎನ್ನಬೇಕು. ಈ ಪೂರ್ವಪಕ್ಷವನ್ನು 'ಉಪದೇಶ-ಭೇದಾತ್' ಎಂಬ ಪದದಿಂದ ತೋರಿಸಿದ್ದಾರೆ.

'ಉಭಯಸ್ಮಿನ್ನಪ್ಯವಿರೋಧಾತ್' ಎಂಬ ಸೂತ್ರಭಾಗದಿಂದ ತಿಳಿಯುವ ಸಿದ್ಧಾಂತ. ಎರಡು ಬಗೆಯಲ್ಲಿ ಸಮಸ್ತಲೋಕಗಳನ್ನು ವಿಭಾಗಿಸಬಹುದು. ೧. ತ್ರಿಲೋಕ; ೨. ಸಪ್ತಲೋಕ ಎಂದು. 'ಭೂಃ ಭುವಃ ಸ್ವಃ' ಎಂದು ಮೂರು ವಿಭಾಗ ಮಾಡಿದಾಗ ಸಮಸ್ತ ಹದಿನಾಲ್ಕುಲೋಕಗಳು ಈ ಮೂರರಲ್ಲೇ ಸೇರುತ್ತವೆ. ಈ ಪಕ್ಷದಲ್ಲಿ ನಾವು ವಾಸಿಸುತ್ತಿರುವ ಲೋಕವು ಭೂಲೋಕ. ಇದಕ್ಕಿಂತ ಒಂದು ಲಕ್ಷಯೋಜನ ಮೇಲೆ ಅಂತರಿಕ್ಷಲೋಕ. ಆದರ ಮೇಲಿರುವುದೆಲ್ಲಾ ದ್ಯುಲೋಕ. ಶ್ವೇತದ್ವೀಪ ಅನಂತಾಸನ ಹಾಗೂ ವೈಕುಂಠಲೋಕಗಳು ಒಂದು ಲಕ್ಷಯೋಜನಕ್ಕಿಂತ ಮೇಲಿರುವುದರಿಂದ ಅವೆಲ್ಲವೂ ದ್ಯುಲೋಕವೆನಿಸಿವೆ. ಆ ಲೋಕಗಳಲ್ಲಿರುವ ಭಗವಂತನ ರೂಪಗಳು ದ್ಯುಲೋಕದಲ್ಲಿವೆ ಎನಿಸುತ್ತವೆ. ಹೀಗೆ ತ್ರಿಲೋಕವಿವಕ್ಷೆಯಿಂದ ದಿವಿಸ್ಥಿತತ್ವವನ್ನು ಹೊಂದಿಸಬೇಕು.

ಸಪ್ತಲೋಕವಿವಕ್ಷೆಯಿಂದ ದಿವಃಪರತ್ವವನ್ನು ಹೊಂದಿಸಬೇಕು. ಭೂಃ, ಭುವಃ, ಸ್ವಃ, ಮಹಃ, ಜನಃ, ತಪಃ, ಸತ್ಯಮ್ ಎಂದು ಲೋಕಗಳನ್ನು ಏಳು ವಿಭಾಗ ಮಾಡಬಹುದು. ಮೇರು ಪರ್ವತವು ಪೃಥಿವೀಲೋಕದ ದ್ಯುಲೋಕ. ಆದರ ಮೇಲ್ಭಾಗದಲ್ಲಿ ಆನಂತಾಸನ. ಅಂತರಿಕ್ಷಲೋಕದಲ್ಲಿ ಸೂರ್ಯಮಂಡಲವು ದ್ಯುಲೋಕ. ಆದರ ಮೇಲ್ಭಾಗದಲ್ಲಿ ಶ್ವೇತದ್ವೀಪ. ಸ್ವರ್ಗಲೋಕದಲ್ಲಿ ಇಂದ್ರನ ಅರಮನೆ ದ್ಯುಲೋಕ. ಆದರ ಮೇಲ್ಭಾಗದಲ್ಲಿ ವೈಕುಂಠಲೋಕ. ಹೀಗೆ ಅನಂತಾಸನಾದಿಗಳಿಗೆ ದಿವಃಪರತ್ವವನ್ನು ಕ್ರಮವಾಗಿ ಹೊಂದಿಸಬೇಕು. ಹೀಗೆ ಹೇಳಿದಾಗ ದಿವಿಸ್ಥಿತತ್ವ ಹಾಗೂ ದಿವಃಪರತ್ವಗಳಿಗೆ ವಿರೋಧ ಬರುವುದಿಲ್ಲ.

ವಸ್ತುತಃ ಸಪ್ತಲೋಕದ ಅಪೇಕ್ಷೆ ಇಲ್ಲ. ತ್ರಿಲೋಕಗಳೆಂಬ ವಿಭಾಗದಿಂದಲೂ ದಿವಃಪರತ್ವವನ್ನು ಹೊಂದಿಸಬಹುದು. ಆದರೆ ಸಪ್ತಲೋಕವನ್ನು ವಿವಕ್ಷಿಸಿದ್ದಕ್ಕೆ ಹೆಚ್ಚಿನ ಪ್ರಯೋಜನವಿದೆ. ವೈಕುಂಠಲೋಕವು ಮೇರು, ಸೂರ್ಯಮಂಡಲ, ಇಂದ್ರಸದನಗಳೆಂಬ ಪ್ರಸಿದ್ಧವಾದ ಮೂರು ದ್ಯುಲೋಕಗಳಿಗಿಂತ ಎತ್ತರದಲ್ಲಿದೆ ಎಂದಷ್ಟೇ ಅಲ್ಲದೆ ಸ್ವರ್ಗಲೋಕಕ್ಕಿಂತಲೂ ಎತ್ತರದಲ್ಲಿದೆ ಎಂದು ಸಿದ್ಧವಾಗಬೇಕಾಗಿದೆ. ಇದಕ್ಕೋಸ್ಕರ ಸಪ್ತಲೋಕದ ವಿಭಾಗವು ಸಾರ್ಥಕ.

ದ್ಯುಶಬ್ದಕ್ಕೆ ಅನೇಕಾರ್ಥ ಹೇಳುವುದು ಸರಿಯೇ? ಎಂಬುದು ಮುಂದಿನ ವಿಚಾರ. ಒಂದೇ ಪ್ರಕರಣ-ದಲ್ಲಿದ್ದರೂ ಅನೇಕಾರ್ಥಹೇಳುವುದು ತಪ್ಪಲ್ಲ. ಚೈತ್ರನು ಗ್ರಾಮದ ಹತ್ತಿರದ ಉದ್ಯಾನದಲ್ಲಿದ್ದಾಗ 'ಗ್ರಾಮ-ದಲ್ಲಿದ್ದಾನೆ' ಎಂಬ ಪ್ರಯೋಗವಿದೆ. ಮತ್ತು 'ಗ್ರಾಮದ ಹೊರಗಿದ್ದಾನೆ' ಎಂಬ ಪ್ರಯೋಗವೂ ಇದೆ. ಗ್ರಾಮದಲ್ಲಿದ್ದಾನೆ ಎಂದು ಹೇಳಿದಾಗ ಗ್ರಾಮಶಬ್ದಕ್ಕೆ ಉದ್ಯಾನವನ ಎಂದರ್ಥ. ಆದೇ ಗ್ರಾಮಶಬ್ದಕ್ಕೆ ಗ್ರಾಮದ ಹೊರಗಿದ್ದಾನೆಂಬ ಪ್ರಯೋಗದಲ್ಲಿ ಜನರ ವಾಸಸ್ಥಳ ಎಂದರ್ಥ. ಹೀಗೆ ಒಂದೇ ಗ್ರಾಮಶಬ್ದಕ್ಕೆ

ಅನೇಕಾರ್ಥವಿರುವುದು ಲೋಕದಲ್ಲಿ ಕಂಡಿದೆ. ಆದರಂತೆ ಇಲ್ಲಿಯೂ ದ್ಯುಶಬ್ದಕ್ಕೆ ಅನೇಕಾರ್ಥ ಹೇಳಿದರೆ ಏನು ತಪ್ಪು?

'ಸರ್ವತಃ ಪೃಷ್ಠೇಷು' ಎಂಬ ಶ್ರುತಿಯು ಅನಂತಾಸನಾದಿಗಳು ಪೃಥಿವ್ಯಾದಿಗಳಿಗಿಂತ ಮೇಲಿವೆ ಎನ್ನುತ್ತಿದೆ. ಆದೇ ಶ್ರುತಿ ಮುಂದೆ ವಿಶ್ವತಃಪೃಷ್ಠೇಷು ಎಂದು ಬ್ರಹ್ಮದೇವರ ಮೂರು ಆರಮನೆಗಳಿಗಿಂತ ಅನಂತಾಸನಾದಿಗಳು ಮೇಲಿವೆ ಎನ್ನುತ್ತಿವೆ. ಅಥವಾ ದ್ಯುಶಬ್ದಕ್ಕೆ ಯೌಗಿಕಾರ್ಥ ಹಾಗೂ ರೂಢ್ಯರ್ಥಗಳನ್ನು ವಿವಕ್ಷಿಸಿ ಅನೇಕಾರ್ಥತ್ವ-ದೋಷವನ್ನು ಪರಿಹರಿಸಬಹುದು. ಶ್ವೇತದ್ವೀಪಾದಿಗಳು ಚಿತ್ಪ್ರಕೃತಿಯ ಸ್ವರೂಪವಾದ್ದರಿಂದ ಕಂಗೊಳಿಸುತ್ತಿವೆ. ಆದ್ದರಿಂದಲೇ ದ್ಯು ಎನಿಸಿವೆ. ಈ ಯೌಗಿಕಾರ್ಥವನ್ನು ದಿವಿ ಎಂಬಲ್ಲಿರುವ ದ್ಯುಶಬ್ದವು ಹೇಳಿದೆ. 'ದಿವಃ' ಎಂಬಲ್ಲಿ -ರುವ ದ್ಯುಶಬ್ದವು ಸ್ವರ್ಗಾದಿಗಳಲ್ಲಿ ಮೇಲೆ ಹೇಳಿದ ಪ್ರಕಾರ ರೂಢವಾಗಿದೆ. ಆದ್ದರಿಂದ ಸಪ್ತಲೋಕವಿವಕ್ಷೆಯಲ್ಲಿ ದ್ಯುಶಬ್ದಕ್ಕೆ ಅನೇಕಾರ್ಥವನ್ನು ಹೇಳಿದಂತಾಗುವುದಿಲ್ಲ.

ತ್ರಿಪಾತ್‌ಶಬ್ದಕ್ಕೆ ಅದ್ವೈತಿಗಳ ವ್ಯಾಖ್ಯಾನ. ''ಜೀವನು ಜಾಗ್ರದವಸ್ಥೆಯಲ್ಲಿ ಶರೀರದ ಬಾಹ್ಯಾಕಾಶದಲ್ಲಿ-ರುತ್ತಾನೆ. ಸ್ವಪ್ನದಲ್ಲಿ ಶರೀರದ ಮಧ್ಯಾಕಾಶದಲ್ಲಿರುತ್ತಾನೆ. ಸುಷುಪ್ತಿಯಲ್ಲಿ ಹೃದಯಾಕಾಶದಲ್ಲಿರುತ್ತಾನೆ. ಈ ಮೂರು ಅವಸ್ಥೆಗಳಿಂದ ಕೂಡಿದ ಜೀವನು ತ್ರಿಪಾತ್ ಎನಿಸುತ್ತಾನೆ. ಜೀವನಿರುವ ಆಕಾಶಾದಿಗಳು ದ್ಯು ಎನಿಸುತ್ತವೆ -- ಎಂದು.

ಇದು ಸರಿಯಲ್ಲ. ಮಾಂಡೂಕ್ಯಶ್ರುತಿಯಂತೆ ಜೀವನು ಜಾಗ್ರದಾದ್ಯವಸ್ಥೆಗಳಲ್ಲಿ ಬಲಗಣ್ಣು ಮೊದಲಾದೆಡೆ ಇರುತ್ತಾನೆ. ಹೊರತು ಬಾಹ್ಯಾಕಾಶಗಳಲ್ಲಿ ಇರುತ್ತಾನೆ ಎನ್ನಲು ಯಾವುದೇ ಪ್ರಮಾಣಗಳಿಲ್ಲ. ಮತ್ತು ದಿವಿಸ್ಥಿತತ್ವ ಮತ್ತು ದಿವಃಪರತ್ವಪ್ರತಿಪಾದಕ ಶ್ರುತಿಗಳು ಒಬ್ಬನನ್ನೇ ಹೇಳುತ್ತವೆಂದು ಅದ್ವೈತಿಗಳು ಒಪ್ಪಿದ್ದಾರೆ. ಆದ್ದರಿಂದ 'ತ್ರಿಪಾದಸ್ಯ' ಎಂಬ ಶ್ರುತಿಯು ಜೀವನನ್ನು ಪ್ರತಿಪಾದಿಸಿದರೆ 'ಅಥ ಯದತಃ' ಎಂಬ ಶ್ರುತಿಯಿಂದಲೂ ಜೀವನೇ ಪ್ರತಿಪಾದ್ಯನಾದರೆ ಜೀವನೇ ಜ್ಯೋತಿಯಾಗಬೇಕಾಗುತ್ತದೆ. ಬ್ರಹ್ಮನು ಜ್ಯೋತಿಯೆಂಬ ಸಿದ್ಧಾಂತಕ್ಕೆ ಧಕ್ಕೆ ಬರುತ್ತದೆ.

ಅದ್ವೈತಿಗಳು 'ವಿಶ್ವತಃ ಪೃಷ್ಠೇಷು' ಎಂಬ ಶ್ರುತಿಯಲ್ಲಿರುವ ವಿಶ್ವಶಬ್ದದ ಅರ್ಥವನ್ನು ಮೊಟಕು-ಗೊಳಿಸಿದ್ದಾರೆ. ಆದ್ದರಿಂದ 'ವಿಶ್ವತಃ' ಅಥವಾ 'ಸರ್ವತಃ' ಎಂಬ ಎರಡು ಪದಗಳಲ್ಲಿ ಒಂದನ್ನು ವ್ಯರ್ಥವೆಂದು ತಾವೇ ಒಪ್ಪಿಕೊಂಡಂತಾಗಿದೆ. ಈ ವೈಯ್ಯರ್ಥ್ಯದೋಷವು ರಾಮಾನುಜರಿಗೂ ತಪ್ಪಿದ್ದಲ್ಲ. ರಾಮಾನುಜರು ವಿಶ್ವಶಬ್ದಕ್ಕೆ ಕಾರ್ಯವೆಂದು ಸರ್ವಶಬ್ದಕ್ಕೆ ಕಾರಣವೆಂದು ಅರ್ಥೈಸುತ್ತಾರೆ.

ಇವರ ವಾದದಲ್ಲಿಯೂ ಹುರುಳಿಲ್ಲ. ಏಕೆಂದರೆ 'ಸ ಇದಂ ಸರ್ವಮಸೃಜತ' ಎಂಬಲ್ಲಿ ಸರ್ವಶಬ್ದವನ್ನು ಕಾರ್ಯವೆಂಬರ್ಥದಲ್ಲಿ ಪ್ರಯೋಗಿಸಲಾಗಿದೆ. 'ಪರಿಶೇಷಾತ್' ವಿಶ್ವಶಬ್ದವು ಕಾರಣಪರವಾಗುತ್ತದೆ; ಇದಕ್ಕೆ ವಿರುದ್ಧವಾಗಿ ರಾಮಾನುಜರಿಗೆ ಅರ್ಥೈಸಲಾಗದು. ಮತ್ತು ವಿಶ್ವಶಬ್ದಕ್ಕೆ ಕಾರ್ಯವೆಂಬರ್ಥವನ್ನು ಹೇಳಿದರೆ ವಿಶ್ವತಃ ಪರಮಾನ್ನಿತ್ಯಂ ಎಂಬಲ್ಲಿಯೂ ಕೇವಲ ಕಾರ್ಯವೆಂದೇ ವ್ಯಾಖ್ಯಾನಿಸಬೇಕಾದೀತು. ಹೀಗೆ ವಿಚಾರಮಾಡಿದಾಗ ಶ್ರುತಿಸೂತ್ರಗಳಿಗೆ ಪರರು ಮಾಡಿದ ವ್ಯಾಖ್ಯಾನವು ಅತ್ಯಂತ ಹೇಯವೆಂದು ತಿಳಿಯುತ್ತದೆ. ಬುಭುತ್ಸುಗಳು ನಿರ್ದುಷ್ಟವಾದ ಆಚಾರ್ಯರ ಭಾಷ್ಯದಿಂದಲೇ ಶ್ರುತಿಸೂತ್ರಗಳ ಅರ್ಥವನ್ನು ತಿಳಿದುಕೊಳ್ಳಬೇಕು.

* * * * *

ಶ್ರೀಬ್ರಹ್ಮಣ್ಯತೀರ್ಥಶ್ರೀಪಾದಶಿಷ್ಯವ್ಯಾಸತೀರ್ಥವಿರಚಿತಾ

# ತಾತ್ಪರ್ಯಚಂದ್ರಿಕಾ

## अथ गायत्र्यधिकरणम्
## (छन्दोऽभिधानाधिकरणम्)

ವಿಷಯವಾಕ್ಯದ ಜಿಜ್ಞಾಸೆ

**ॐ छन्दोऽभिधानान्नेति चेन्न तथा चेतोऽर्पणनिगदात्तथा हि दर्शनम् ॐ ॥**
**अत्राधिवेदगता गायत्र्यादिशब्दा उदाहरणम् । अत्र विषयवाक्यं ''अथ यदतः परो दिवो ज्योतिः'' इति च्छान्दोग्यस्थं ज्योतिर्वाक्यमित्येकं मतम् । मतान्तरं तु ''गायत्री वा इदं ꣳ सर्वं'' इति तत्स्थं गायत्रीवाक्यमिति ।**

**अत्राद्यमतं – ''अथ यदतः परो दिव इति वाक्योक्ते ज्योतिषि सन्देहः किं ब्रह्म उतान्यत्'' इति सुधोक्तम् । द्वितीयं त्वत्र टीकायां सुधायां चोक्तम् ।**

**अत्राद्ये मते ज्योतिरधिकरणे अग्निसूक्तस्थस्य ज्योतिषोऽग्नित्वनिरासः, अत्र तु छान्दोग्यस्थस्य ज्योतिषः छन्दस्त्वनिरासः । द्वितीये तु ज्योतिरधिकरणे अग्निसूक्तस्थस्य ज्योतिषोऽग्नित्वनिरासः, अत्र तु च्छान्दोग्यस्थायाः गायत्र्याः छन्दस्त्वनिरास इति भेदः ।**

**आद्ये, भाष्ये गायत्रीवाक्योपादानं गायत्रीशब्दरूपपूर्वपक्षबीजप्रदर्शनार्थम् । द्वितीये, भाष्ये ज्योतिर्वाक्योपादानं पूर्वपक्षे ज्योतिरधिकरणाक्षेपप्रदर्शनार्थम् ।**

ಅನುವಾದ - ಈ ಅಧಿಕರಣದಲ್ಲಿ ಅಧಿವೇದಗತವಾದ ಗಾಯತ್ರೀ ಮೊದಲಾದ ಛಂದೋವಾಚಕಶಬ್ದಗಳು ಉದಾಹರಣೆಯಾಗಿವೆ. 'ಅಥ ಯದತಃ ಪರೋ ದಿವೋ ಜ್ಯೋತಿಃ' ಎಂಬ ಛಾಂದೋಗ್ಯದಲ್ಲಿರುವ ಜ್ಯೋತಿಯು ವಿಷಯವಾಕ್ಯವೆಂದು ಒಂದು ಮತ. 'ಗಾಯತ್ರೀ ವಾ ಇದಂ ಸರ್ವಮ್' ಎಂಬಲ್ಲಿರುವ ಗಾಯತ್ರೀವಾಕ್ಯವೆಂದು ಮತ್ತೊಂದು ಮತ.

ಮೊದಲ ಮತದಲ್ಲಿ 'ಅಥ ಯದತಃ ಪರೋ ದಿವಃ' ಎಂಬ ವಾಕ್ಯದಲ್ಲಿ ಹೇಳಲ್ಪಟ್ಟ ಜ್ಯೋತಿಯು ಸಂದೇಹಕ್ಕೆ ವಿಷಯವಾಗಿದೆ. ಬ್ರಹ್ಮನೋ ಅಥವಾ ಬೇರೆಯೋ ಎಂದು? ಇದು ಸುಧೆಯ ಪಕ್ಷ. ಎರಡನೆಯ ಪಕ್ಷವು ಟೀಕೆಗೆ ಮತ್ತು ಸುಧೆಗೆ ಸಮ್ಮತವಾಗಿದೆ.

ಮೊದಲ ಮತದಲ್ಲಿ ಜ್ಯೋತಿರಧಿಕರಣದಲ್ಲಿ ಅಗ್ನಿಸೂಕ್ತದಲ್ಲಿರುವ ಜ್ಯೋತಿಯು ಅಗ್ನಿಯೆಂದು ನಿರಾಕರಿಸಿದ್ದಾಯಿತು. ಈ ಅಧಿಕರಣದಲ್ಲಿ ಛಾಂದೋಗ್ಯದಲ್ಲಿರುವ ಜ್ಯೋತಿಯನ್ನು ಛಂದಸ್ಸೆಂದು ನಿರಾಕರಿಸುತ್ತಿದ್ದಾರೆ. ಎರಡನೆಯ ಮತದಲ್ಲಿ ಜ್ಯೋತಿರಧಿಕರಣದಲ್ಲಿ ಅಗ್ನಿಸೂಕ್ತದ ಜ್ಯೋತಿಯನ್ನು ಅಗ್ನಿಯೆಂದು ನಿರಾಸಮಾಡಿ ಈ ಅಧಿಕರಣದಲ್ಲಿ ಛಾಂದೋಗ್ಯದಲ್ಲಿರುವ ಗಾಯತ್ರಿಯನ್ನು ಛಂದಸ್ಸೆಂದು ನಿರಾಕರಿಸುತ್ತಿದ್ದಾರೆ. ಎರಡು ಮತಗಳಲ್ಲಿರುವ ಈ ವೈಲಕ್ಷಣ್ಯವನ್ನು ಗಮನಿಸಬೇಕು.

ಮೊದಲ ಮತದ ಪ್ರಕಾರ ಭಾಷ್ಯದಲ್ಲಿ ಗಾಯತ್ರೀವಾಕ್ಯವನ್ನು ಉದಾಹರಿಸಿದ್ದು ವ್ಯರ್ಥವಲ್ಲ. 'ಗಾಯತ್ರೀ ವಾ' ಎಂಬ ಉಪಕ್ರಮದ ಬಲದಿಂದ ಜ್ಯೋತಿಯು ಗಾಯತ್ರಿಯನ್ನೇ ಪ್ರತಿಪಾದಿಸುತ್ತದೆಂಬ ಪೂರ್ವಪಕ್ಷಬೀಜವನ್ನು ತೋರಿಸುವುದಕ್ಕಾಗಿ ಗಾಯತ್ರೀವಾಕ್ಯದ ಉಲ್ಲೇಖವು ಸಾರ್ಥಕವಾಗಿದೆ. ಎರಡನೆಯ ಮತದ ಪ್ರಕಾರ ಭಾಷ್ಯದಲ್ಲಿ ಜ್ಯೋತಿವಾಕ್ಯವನ್ನು ಉದಾಹರಿಸಿದ್ದು ತಪ್ಪಲ್ಲ. ಈ ಅಧಿಕರಣದ ಪೂರ್ವಪಕ್ಷದಲ್ಲಿ ಜ್ಯೋತಿರಧಿಕರಣದ ಆಕ್ಷೇಪವನ್ನು ತೋರಿಸುವುದಕ್ಕಾಗಿ ಅದು ಸಾರ್ಥಕವಾಗಿದೆ.

### ಕಠಿಣಪದಾರ್ಥ

ಅತ್ರ = ಜ್ಯೋತಿರಧಿಕರಣದಲ್ಲಿ; ಅಧಿವೇದಗತಾಃ = ವೇದಕ್ಕೆ ಸಂಬಂಧಪಟ್ಟ ಗಾಯತ್ರ್ಯಾದಿ ಶಬ್ದಾಃ = ಗಾಯತ್ರೀ, ಉಷ್ಣಿಕ್, ಬೃಹತೀ ಮೊದಲಾದ ಶಬ್ದಗಳು, ಆದ್ಯೇ ಮತೇ = ಜ್ಯೋತಿರ್ವಾಕ್ಯಮತದಲ್ಲಿ; ದ್ವಿತೀಯೇ ತು = ಗಾಯತ್ರೀವಾಕ್ಯಪಕ್ಷದಲ್ಲಿ; ಆದ್ಯೇ = ಸುಧಾಕಾರರ ಪಕ್ಷದಲ್ಲಿ; ಪೂರ್ವಪಕ್ಷಬೀಜಪ್ರದರ್ಶನಾರ್ಥಂ = ಗಾಯತ್ರೀ ವಾ ಎಂಬ ಉಪಕ್ರಮದಿಂದ ಪ್ರಾರಂಭವಾಗಿದೆಯೆಂಬ ಪೂರ್ವಪಕ್ಷದ ಕಾರಣವನ್ನು ತೋರಿಸುವುದಕ್ಕಾಗಿ; ದ್ವಿತೀಯೇ = ಟೀಕಾಕಾರರ ಪಕ್ಷದಲ್ಲಿ;

**ಪ್ರಕಾಶಃ – ॐ ಛನ್ದೋಭಿಧಾನಾನ್ನೇತಿ ಚೇನ್ನ** ತಥಾ ಚೇತೋऽರ್ಪಣನಿಗದಾತ್ತಥಾಹಿ ದರ್ಶನಮ್ ॐ ॥ ಟೀಕಾಯಾಮನುಕ್ತೇಃ ''**ಅಧಿವೇದಗತಾನಾಂ**'' ಇತಿ ನ್ಯಾಯವಿವರಣಂ ಹೃದಿ ಕೃತ್ವಾ ಏತದಧಿಕರಣೋಪಾಧಿಮಾಹ – **ಅತ್ರೇತಿ** ॥ 'ಗಾಯತ್ರ್ಯುಷ್ಣಿಕ್ ಬೃಹತೀ' ಇತ್ಯಾದಿಶಬ್ದಾ ಇತ್ಯರ್ಥಃ । ನನ್ವೇವಂ ಸೂತ್ರೇ ಗಾಯತ್ರೀಶಬ್ದಮಾತ್ರಾಸಾಧಾರಣಭೂತಾದಿಪದವ್ಯಪದೇಶಾದ್ಯುಕ್ತ್ಯನುಪಪತ್ತೇಃ ಸ ಏವೋದಾಹರಣಮಿತಿ ಜ್ಞಾಯತ ಇತಿ ಚೇನ್ನ, ವೇದಮಾತುಸ್ತ್ರೈವರ್ಣಿಕದ್ವಿತೀಯಜನ್ಮಜನನ್ಯಾ ಗಾಯತ್ರ್ಯಾಃ ಪ್ರಾಧಾನ್ಯೇನ ತನ್ಮಾತ್ರ ಏವೇತರೋಪಲಕ್ಷಣತಯಾ ಸೂಚನಾತ್ । ಅತ ಏವ 'ಸರ್ವಸಾಧಾರಣ್ಯಾಯ ಛನ್ದಃ' ಇತ್ಯಸೂತ್ರಯತ್ । ಅನ್ಯಥಾ 'ಗಾಯತ್ರ್ಯಭಿಧಾನಾತ್' ಇತ್ಯೇವ ಬ್ರೂಯಾತ್ । ಯದ್ಯಪ್ಯತ್ರ ವಕ್ಷ್ಯಮಾಣದಿಶಾ ಆಕಾಶಾದಿಶಬ್ದಾ ಅಪ್ಯುದಾಹರಣಮ್ । ತಥಾऽಪಿ ತೇಷಾಮಧಿಕರಣಾನ್ತರವಿಷಯಾಣಾಂ ಸತಾಮಾಕಾರಾನ್ತರೇಣಾತ್ರ ವಿಷಯತ್ವಂ, ಗಾಯತ್ರ್ಯಾದಿಶಬ್ದಾನಾಂ ತು ಸರ್ವಾಕಾರೇಣಾಪೀತಿ ವಿಶೇಷಾದೇವಮುಕ್ತಮಿತಿ ಧ್ಯೇಯಮ್ । ಅತ್ರ ಪೂರ್ವಸಙ್ಗತಿಂ ವಕ್ತುಂ ಪ್ರಸ್ಥಾನದ್ವಯಂ ಸಙ್ಗಲ್ಯ ಟೀಕಾಕೃದುಕ್ತಾನ್ಪಕ್ಷಾನ್

ಭಾಷ್ಯಾನುಗುಣೋಪಪತ್ತೀಃ ಪ್ರದರ್ಶಯನ್ವಿವೇಚಯತಿ – **ಅತ್ರೇತಿ** ॥ 'ತತ್‌ಸ್ಥಂ' ಛಾನ್ದೋಗ್ಯಸ್ಥಮ್ । 'ಅತ್ರ' ಇತ್ಯಸ್ಯ ವಿವರಣಂ – **ಟೀಕಾಯಾಮಿತಿ** । ''ಗಾಯತ್ರೀ ವಾ ಇದꣳ ಸರ್ವಂ ಭೂತಂ ಯದಿದಂ ಕಿಞ್ಚ'' ಇತ್ಯುದಾಹೃತತ್ವಾದಿತಿ ಭಾವಃ ॥ **ಸುಧಾಯಾಮಿತಿ** ॥ ''ಛನ್ದೋಗಾಃ ಪಠನ್ತಿ ಗಾಯತ್ರೀ ವಾ ಇದಂ ಸರ್ವಂ ಭೂತಂ'' ಇತ್ಯಾದಿ । ತತ್ರ ಸಂಶಯಃ ''ಕಿಂ ಗಾಯತ್ರೀ ಬ್ರಹ್ಮ ಕಿಂ ವಾ ವರ್ಣಸಮಾವೇಶಲಕ್ಷಣೋ ಮನ್ತ್ರಃ'' ಇತ್ಯಾದಿನೇತ್ಯರ್ಥಃ । ನನ್ವಿದಂ ವಾ ತದ್ವಾ, ಫಲವಿಶೇಷಾಭಾವಾದ್ಯರ್ಥೌ ವಿಕಲ್ಪ ಇತ್ಯತ ಆಹ – **ಅತ್ರೇತಿ** ॥ 'ಆದ್ಯೇ' ಜ್ಯೋತಿರ್ವಾಕ್ಯಪಕ್ಷೇ ಇತ್ಯರ್ಥಃ ॥ **ದ್ವಿತೀಯ ಇತಿ** ॥ ಗಾಯತ್ರೀವಾಕ್ಯಪಕ್ಷೇ । ಅತ್ರೋಕ್ತಪಕ್ಷದ್ವಯೇ – ''**ಅಥ ಯದತಃ ಪರೋ ದಿವೋ ಜ್ಯೋತಿರ್ದೀಪ್ಯತೇ** ಇತ್ಯುಕ್ತಸ್ಯ ಜ್ಯೋತಿಷೋ **'ಗಾಯತ್ರೀ ವಾ ಇದಂ ꣳ ಸರ್ವಮ್'** ಇತಿ ಗಾಯತ್ರ್ಯಾ ಸಮಾರಮ್ಭಃ ಕೃತಃ'' ಇತಿ ಭಾಷ್ಯಮನುಗುಣಯತಿ – **ಆದ್ಯ ಇತಿ** ॥ **ಸ್ಪಷ್ಟಯಿಷ್ಯತೇ ಚೈತದಗ್ರ ಇತಿ ಭಾವಃ** ।

ವಿವರಣೆ - ಅಧಿವೇದಗತಶಬ್ದಗಳ ಸಮನ್ವಯವನ್ನು ಗಾಯತ್ರ್ಯಧಿಕರಣದಲ್ಲಿ ಮಾಡುತ್ತಿದ್ದಾರೆ. ಇದನ್ನು ಟೀಕೆಯಲ್ಲಿ ಹೇಳದಿದ್ದರೂ ನ್ಯಾಯವಿವರಣದಲ್ಲಿ ಹೇಳಿದ್ದರಿಂದ ಗ್ರಂಥಕಾರರು ಈ ಅಧಿಕರಣದ ಉಪಾಧಿಯನ್ನು 'ಅಧಿವೇದಗತಾನಾಮ್' ಎಂದು ಹೇಳಿದ್ದಾರೆ. ಅಂದರೆ ಈ ಅಧಿಕರಣದಲ್ಲಿ ಗಾಯತ್ರೀ, ಉಷ್ಣಿಕ್, ಬೃಹತೀ ಮೊದಲಾದ ಅನೇಕ ಛಂದೋವಾಚಕಶಬ್ದಗಳನ್ನು ಸಮನ್ವಯ ಮಾಡುತ್ತಿದ್ದಾರೆಂದು ಅಭಿಪ್ರಾಯ.

ಶಂಕೆ - ಗಾಯತ್ರೀಶಬ್ದದ ಜೊತೆಗೆ ಉಷ್ಣಿಕ್ ಮೊದಲಾದ ಶಬ್ದಗಳ ಸಮನ್ವಯವನ್ನು ಮಾಡುತ್ತಿರುವುದು ಸರಿಯಲ್ಲ. ಸೂತ್ರದಲ್ಲಿ ಗಾಯತ್ರೀಶಬ್ದದಲ್ಲಷ್ಟೇ ಅಸಾಧಾರಣವಾದ ಭೂತಾದಿಪಾದ-ವ್ಯಪದೇಶವನ್ನು ಹೇಳಿದ್ದಾರೆ. ಇದನ್ನು ಉಷ್ಣಿಕಾದಿಗಳಲ್ಲಿ ಹೇಳಲಾಗದು. ಆದ್ದರಿಂದ ಗಾಯತ್ರೀಶಬ್ದವಷ್ಟೇ ಉದಾಹರಣೆಯಾಗುತ್ತದೆ. ಉಷ್ಣಿಕಾದಿಶಬ್ದಗಳಲ್ಲ.

ಸಮಾಧಾನ - ಇದು ತಪ್ಪು. ವೇದಮಾತೆಯಾದ ಗಾಯತ್ರಿಯು ಮೂರು ವರ್ಣದವರಿಗೆ ಎರಡನೆಯ ಜನ್ಮವನ್ನು ನೀಡುವ ತಾಯಿಯಾಗಿದ್ದಾಳೆ. ಹೀಗೆ ಅನೇಕ ಛಂದಸ್ಸುಗಳ ಮಧ್ಯದಲ್ಲಿ ಗಾಯತ್ರಿ-ಯು ಪ್ರಧಾನವಾದ್ದರಿಂದ ತತ್ಸಾಧಕವಾದ ಲಿಂಗವನ್ನಷ್ಟೇ ಸೂತ್ರಕಾರರು ಉಪಲಕ್ಷಣಯಾ ಹೇಳಿದ್ದಾರೆ. ಎಲ್ಲಾ ಛಂದೋವಾಚಕಶಬ್ದಗಳನ್ನು ಸಮನ್ವಯ ಮಾಡಬೇಕೆಂಬ ಉದ್ದೇಶವಿರುವುದರಿಂದಲೇ ಸೂತ್ರ-ಕಾರರು ಸರ್ವಸಾಧಾರಣವಾದ 'ಛಂದಃ' ಎಂಬ ಪದವನ್ನು ಉಲ್ಲೇಖಿಸಿದ್ದಾರೆ. ಇಲ್ಲದಿದ್ದರೆ 'ಗಾಯತ್ರ್ಯಭಿ-ಧಾನಾತ್' ಎಂದೇ ಹೇಳಬಹುದಿತ್ತಲ್ಲವೇ.

ಈ ಅಧಿಕರಣದಲ್ಲಿ ನಿತ್ಯಪದಾರ್ಥಗಳ ಸ್ವಭಾವವನ್ನು ಹೇಳುವ ಶಬ್ದಗಳನ್ನು ಸಮನ್ವಯ ಮಾಡುತ್ತಿದ್ದಾರೆ. ಇದರ ಪ್ರಕಾರ ಆಕಾಶಾದಿಶಬ್ದಗಳ ಸಮನ್ವಯವೂ ಸಹ ಈ ಅಧಿಕರಣದಿಂದ ಸಿದ್ಧವಾಗುತ್ತದೆ. ಇಷ್ಟು ಮಾತ್ರದಿಂದ ಆಕಾಶಾದ್ಯಧಿಕರಣಗಳಿಗೆ ವೈಯ್ಯರ್ಥ್ಯವನ್ನು ಹೇಳಬಾರದು. ಬೇರೆ ಬೇರೆ ಪ್ರಕಾರದಿಂದ ಆಕಾಶಾದಿಶಬ್ದಗಳು ಬೇರೆ ಅಧಿಕರಣದಿಂದಲೂ ಸಮನ್ವಯವಾಗುತ್ತವೆ. ಆದರೆ

ಗಾಯತ್ರೀ ಮೊದಲಾದ ಛಂದೋವಾಚಕಶಬ್ದಗಳು ಸಕಲಪ್ರಕಾರಗಳಿಂದ ಈ ಅಧಿಕರಣದಲ್ಲಷ್ಟೇ ಸಮನ್ವಯವಾಗುತ್ತವೆ. ಆದ್ದರಿಂದ ಆಕಾಶಾದಿಶಬ್ದಗಳನ್ನು ಉದಾಹರಿಸದೇ ಗಾಯತ್ರ್ಯಾದಿ ಶಬ್ದಗಳನ್ನಷ್ಟೇ ಉದಾಹರಿಸಿದ್ದಾರೆ.

ಈ ಅಧಿಕರಣಕ್ಕೆ ಹಿಂದಿನ ಅಧಿಕರಣದಿಂದ ಸಂಗತಿಯನ್ನು ಹೇಳಲು ಸುಧಾ ಹಾಗೂ ಟೀಕೆಗಳನ್ನು ಸಂಗ್ರಹಿಸಿ ಟೀಕಾಕಾರರೇ ಹೇಳಿದ ಪಕ್ಷಗಳನ್ನು ಭಾಷ್ಯಕ್ಕೆ ಅನುಗುಣವಾದ ಯುಕ್ತಿಯನ್ನು ಹೇಳುವ ಮೂಲಕ ವಿವೇಚನೆಯನ್ನು 'ಅತ್ರ' ಇತ್ಯಾದಿ ಗ್ರಂಥದಿಂದ ನಡೆಸಿದ್ದಾರೆ. ಅತ್ರ ಎಂಬುದರ ವಿವರಣೆಯನ್ನೇ 'ಟೀಕಾಯಾಂ' ಎಂಬ ಗ್ರಂಥದಿಂದ ಮಾಡುತ್ತಿದ್ದಾರೆ. ಟೀಕೆಯಲ್ಲಿ ಕೇವಲ 'ಗಾಯತ್ರೀ ವಾ ಇದಂ ಸರ್ವಂ ಭೂತಂ ಯದಿದಂ ಕಿಂಚ' ಎಂಬ ಒಂದೇ ವಾಕ್ಯವನ್ನು ಉದಾಹರಿಸಿದ್ದಾರೆ. ಆದರೆ ಸುಧೆಯಲ್ಲಿ 'ಛಂದೋಗಾಃ ಪಠಂತಿ ಗಾಯತ್ರೀ ವಾ ಇದಂ ಸರ್ವಂ' ಮತ್ತು 'ಅಥ ಯದತಃ' ಎಂಬ ಎರಡು ವಿಷಯವಾಕ್ಯಗಳನ್ನು ಉದಾಹರಿಸಿದ್ದಾರೆ. ಇಲ್ಲಿ ಬರುವ ಸಂಶಯ ಹೀಗಿದೆ -- ಗಾಯತ್ರೀಶಬ್ದದಿಂದ ಬ್ರಹ್ಮನು ಪ್ರತಿಪಾದ್ಯನಾಗುತ್ತಾನೋ ಅಥವಾ 'ತತ್ಸವಿತುರ್ವರೇಣ್ಯಂ' ಇತ್ಯಾದಿ ವರ್ಣಸಮಾವೇಶ-ರೂಪವಾದ ಮಂತ್ರವು ಪ್ರತಿಪಾದ್ಯವಾಗುತ್ತದೋ? ಎಂದು ಸುಧೆಯ ಆರ್ಥ.

ಈ ಅಧಿಕರಣಕ್ಕೆ ಎರಡು ವಿಷಯವಾಕ್ಯಗಳನ್ನು ಹೇಳುತ್ತಿದ್ದೀರಿ. ಈ ವಾಕ್ಯವನ್ನೋ ಅಥವಾ ಆ ವಾಕ್ಯವನ್ನೋ ಹೇಳಲು ವಿಶೇಷಪ್ರಯೋಜನವಿಲ್ಲ. ಎರಡರಲ್ಲಿ ಯಾವುದೊಂದನ್ನೂ ಹೇಳಬಹುದೆಂಬ ವಿಕಲ್ಪವು ವ್ಯರ್ಥವಲ್ಲವೇ? ಎಂಬ ಪ್ರಶ್ನೆಗೆ 'ಅತ್ರ ಆದ್ಯೇ ಮತೇ' ಎಂಬುದರಿಂದ ಉತ್ತರಿಸುತ್ತಿದ್ದಾರೆ. 'ಆದ್ಯೇ ಮತೇ' ಎಂದರೆ ಜ್ಯೋತಿರ್ವಾಕ್ಯಪಕ್ಷದಲ್ಲಿ ಎಂದರ್ಥ. ದ್ವಿತೀಯ ಮತೇ ಎಂದರೆ ಗಾಯತ್ರೀ-ವಾಕ್ಯಪಕ್ಷದಲ್ಲಿ ಎಂದರ್ಥ.

ಎರಡೂ ಪಕ್ಷಗಳು 'ಅಥ ಯದತಃ ಪರೋ ದಿವೋ ಜ್ಯೋತಿರ್ದೀಪ್ಯತ ಇತ್ಯುಕ್ತಸ್ಯ ಜ್ಯೋತಿಷೋ ಗಾಯತ್ರೀ ವಾ ಇದಂ ಸರ್ವಮಿತಿ ಗಾಯತ್ರ್ಯಾ ಸಮಾರಂಭಃ ಕೃತಃ' ಎಂಬ ಭಾಷ್ಯಕ್ಕೆ ಅನುಗುಣವಾಗಿದೆ ಎಂದು 'ಆದ್ಯೇ' ಎಂಬ ಗ್ರಂಥದಿಂದ ತೋರಿಸುತ್ತಿದ್ದಾರೆ. ಈ ವಿಚಾರವನ್ನು ಮುಂದೆ ಸ್ಪಷ್ಟ ಪಡಿಸುತ್ತೇವೆ.

**ಗುರುರಾಜೀಯಮ್ – ॐ ಛನ್ದೋಭಿಧಾನಾನ್ನೇತಿ ಚೇನ್ನ ತಥಾ ಚೇತೋರ್ಪಣನಿಗದಾತ್ತಥಾಹಿ ದರ್ಶನಂ ॐ ॥ ಸಙ್ಗತಿಕಥನಸೌಕರ್ಯಾಯ ಮತಭೇದಮಾಹ – ಅತ್ರೇತಿ ॥ ಮತದ್ವಯೇऽಪಿ ಫಲಭೇದಮಾಹ – ಅತ್ರಾಥ ಇತಿ ॥ ನನ್ವಾದ್ಯೇ ಮತೇ ಭಾಷ್ಯೇ ಗಾಯತ್ರೀಪದೋಪಾದಾನಮನರ್ಥಕಮಿತ್ಯತ ಆಹ – ಆಥ ಇತಿ ॥ ದ್ವಿತೀಯೇ ಮತೇ ಜ್ಯೋತಿರ್ವಾಕ್ಯೋಪಾದಾನಸ್ಯ ಪ್ರಯೋಜನಮಾಹ – ದ್ವಿತೀಯ ಇತಿ ॥**

## ಸಾರ

ಗಾಯತ್ರೀ, ಉಷ್ಣಿಕ್ ಬೃಹತೀ ಮೊದಲಾದ ಛಂದೋವಾಚಕಪದಗಳನ್ನು ಈ ಅಧಿಕರಣದಲ್ಲಿ ಸಮನ್ವಯ ಮಾಡಲಾಗಿದೆ. ಸುಧೆಯ ಪ್ರಕಾರ 'ಅಥ ಯದತಃ' ಎಂಬ ಶ್ರುತಿಯು ವಿಷಯವಾಕ್ಯ. 'ಗಾಯತ್ರೀ ವಾ' ಎಂಬ

ವಾಕ್ಯವು ಟೀಕೆಯಪ್ರಕಾರ ವಿಷಯವಾಕ್ಯ. ಆದ್ದರಿಂದ ಜ್ಯೋತಿರಧಿಕರಣದಲ್ಲಿ ಅಗ್ನಿಸೂಕ್ತದಲ್ಲಿರುವ ಜ್ಯೋತಿಯನ್ನು ಅಗ್ನಿಯಲ್ಲಿ ಪ್ರತಿಪಾದಿಸಿ ಈ ಅಧಿಕರಣದಲ್ಲಿ ಛಾಂದೋಗ್ಯದಲ್ಲಿರುವ ಜ್ಯೋತಿಯನ್ನು ಅಗ್ನಿಯಲ್ಲವೆಂದು ಸುಧೆಯು ನಿರಾಸ ಮಾಡುತ್ತಿದೆ. ಆದರೆ ಟೀಕೆಯು ಹಿಂದಿನ ಅಧಿಕರಣದಲ್ಲಿ ಅಗ್ನಿಸೂಕ್ತದ ಜ್ಯೋತಿಯನ್ನು ಅಗ್ನಿಯಲ್ಲವೆಂದು ನಿರಾಸ ಮಾಡಿ ಈ ಛಾಂದೋಗ್ಯದ ಗಾಯತ್ರಿಯನ್ನು ಛಂದಸ್ಸಲ್ಲವೆಂದು ನಿರಾಸ ಮಾಡುತ್ತಿದೆ.

---

## ನ್ಯಾಯಸುಧೆ ಹಾಗೂ ಟೀಕೆಗಳಲ್ಲಿರುವ ಐದು ಪೂರ್ವಪಕ್ಷಗಳು

### ತಾತ್ಪರ್ಯಚನ್ದ್ರಿಕಾ

ಆಚೇऽಪಿ, ಚ್ಛಾನ್ದೋಗ್ಯಸ್ಥಜ್ಯೋತಿಷಃ ''ಗಾಯತ್ರೀ ವೈ'' ಇತ್ಯುಪಕ್ರಮೇಣ ಗಾಯತ್ರೀತ್ವಾದಗ್ನಿ-ಸೂಕ್ತಸ್ಥಮಪಿ ಗಾಯತ್ರೀತ್ಯೇಕಃ ಪೂರ್ವಃ ಪಕ್ಷಃ । ಅಪರಸ್ತು ಅಸ್ತ್ವಗ್ನಿಸೂಕ್ತಸ್ಥಂ ಜ್ಯೋತಿಃ ಕರ್ಣಾದಿ-ವಿದೂರತ್ವಾದ್ವಿಷ್ಣುಃ, ಛಾನ್ದೋಗ್ಯಸ್ಥಂ ತು ''ತದೇತದೃಚಾ ಽಭ್ಯನೂಕ್ತಂ'' ''ತದೇತದೃಚಾ ಽಪ್ಯುಕ್ತಂ'' ಇತಿ ತದ್ವಿರುದ್ಧದೃಷ್ಟಶ್ರುತತ್ವಾದಿ-ಶ್ರವಣಾತ್ ನ ವಿಷ್ಣುರಿತಿ ।

ನ ಚೈವಂ ಸತಿ ಪೂರ್ವಪಕ್ಷೇ ಪೂರ್ವಸಿದ್ಧಾನ್ತಾನಾಕ್ಷೇಪಾದಫಲೇಯಂ ಚಿನ್ತಾ, ಜ್ಯೋತಿಷೋ ಗಾಯತ್ರೀತ್ವೇ ''ಇಯಂ ವಾ ವ ಸಾ ಯೇಯಂ ಪೃಥಿವೀ'' ಇತಿ ಗಾಯತ್ರ್ಯಭಿನ್ನತ್ವೇನೋಕ್ತಾಯಾಂ ಪೃಥಿವ್ಯಾಂ ''ಅಸ್ಯಾಂ ಹೀದಂ ಸರ್ವಂ ಪ್ರತಿಷ್ಠಿತಂ'' ಇತ್ಯುಕ್ತಸ್ಯಸ್ಥಿತಿಹೇತುತ್ವಾದೇರಪಿ ತದ್ಧರ್ಮತ್ವಾಪತ್ತ್ಯಾ ಜನ್ಮಾದಿಸೂತ್ರಾಕ್ಷೇಪಾತ್ । ''ಯೋऽಯಮನ್ತರ್ಹೃದಯೇ'' ಇತಿ ಛಾನ್ದೋಗ್ಯಸ್ಥೇ ಜ್ಯೋತಿಷಿ ಆನನ್ದಮಯಧರ್ಮಭೂತಹೃದಯನಿಹಿತತ್ವ-ಶ್ರವಣೇನ ಜ್ಯೋತಿರಧಿಕರಣಮನಾಕ್ಷಿಪ್ಯೈವ ಆನನ್ದಮಯಾಧಿಕರಣಾಕ್ಷೇಪಾಚ್ಚ ।

ದ್ವಿತೀಯೇऽಪಿ, ಗಾಯತ್ರ್ಯಾಃ ಛನ್ದಸ್ತ್ವೇ ತಾಮುಪಕ್ರಮ್ಯ ಛಾನ್ದೋಗ್ಯೇ ಉಕ್ತಸ್ಯ ಜ್ಯೋತಿಷೋऽಪಿ ಚ್ಛನ್ದಸ್ತ್ವಾದಗ್ನಿಸೂಕ್ತಸ್ಥಮಪಿ ಛನ್ದ ಇತ್ಯೇಕಃ ಪೂರ್ವಃ ಪಕ್ಷಃ । ಅನ್ಯಸ್ತು- ಉಕ್ತರೀತ್ಯಾऽಗ್ನಿ-ಸೂಕ್ತಸ್ಥಸ್ಯ ವಿಷ್ಣುತ್ವೇऽಪಿ ಚ್ಛಾನ್ದೋಗ್ಯಸ್ಥಂ ಛನ್ದ ಏವೇತಿ ।

ಅಪರಸ್ತು – ಚ್ಛಾನ್ದೋಗ್ಯಸ್ಥಸ್ಯಾಪಿ ಜ್ಯೋತಿಷೋ ಜ್ಯೋತಿರಧಿಕರಣೇ ವಿಷ್ಣೌ ನಿರ್ಣೀತ-ಜ್ಯೋತಿಃಶ್ರುತ್ಯಾ ವಿಷ್ಣುತ್ವೇऽಪಿ ಗಾಯತ್ರೀ ನ ವಿಷ್ಣುಃ, ತತ್ರ ತತ್ ಶ್ರುತೇರಭಾವಾದಿತಿ ।

ಅತ್ರಾಪಿ ಪ್ರಥಮದ್ವಿತೀಯೋರಾದ್ಯೋऽತ್ರ ಟೀಕಾಯಾಮುಕ್ತಃ । ಆಚೇऽಪಿ ಪ್ರಥಮದ್ವಿತೀಯೌ (ದ್ವಿತೀಯೇ ಪ್ರಥಮोऽತ್ರ ಟೀಕಾಯಾನುಕ್ತಃ । ಪ್ರಥಮೇ ದ್ವಿತೀಯಃ ।) ದ್ವಿತೀಯೇ ದ್ವಿತೀಯತೃತೀಯೌ ಚ ಸುಧಾಯಾಮ್ ।

ಅ(ತ)ತ್ರ ಮತದ್ವಯेऽಪಿ ಆಚೇ ಪೂರ್ವಪಕ್ಷೇ ಪೂರ್ವಸಿದ್ಧಾನ್ತಾಕ್ಷೇಪಾದಾಕ್ಷೇಪಿಕೀ

**अवान्तरसङ्गतिः स्फुटा । आद्ये द्वितीये, द्वितीयस्य द्वितीयतृतीययोस्तु पूर्वपक्षयोः पूर्वाधिकरणवैषम्यप्रदर्शनाय तदुपजीवित्वादवान्तरसङ्गतिः ।**

ಅನುವಾದ - ಸುಧೆಯ ಪ್ರಕಾರ ಎರಡು ಪೂರ್ವಪಕ್ಷಗಳು - ಛಾಂದೋಗ್ಯದಲ್ಲಿರುವ ಜ್ಯೋತಿಯು ಗಾಯತ್ರೀ ವಾ' ಎಂಬ ಉಪಕ್ರಮದಿಂದ ಕೂಡಿದ್ದರಿಂದ ಗಾಯತ್ರಿ ಎನಿಸಿದೆ. ಆದ್ದರಿಂದ ಅಗ್ನಿಸೂಕ್ತದಲ್ಲಿರುವ ಜ್ಯೋತಿಯೂ ಸಹ ಗಾಯತ್ರಿಯೇ ಆಗಬೇಕು, ಇದು ಪ್ರಥಮಪೂರ್ವಪಕ್ಷ.

ಎರಡನೆಯ ಪೂರ್ವಪಕ್ಷ ಹೀಗಿದೆ - ಅಗ್ನಿಸೂಕ್ತದಲ್ಲಿರುವ ಜ್ಯೋತಿಯು ಕರ್ಣಾದಿವಿದೂರತ್ವ ಲಿಂಗವಿರುವುದರಿಂದ ವಿಷ್ಣುವೆನಿಸಲಿ; ಆದರೆ ಛಾಂದೋಗ್ಯದಲ್ಲಿ ಕರ್ಣಾದಿವಿದೂರತ್ವಕ್ಕೆ ವಿರುದ್ಧವಾಗಿ 'ತದೇತದ್ದೃಷ್ಟಂ ಚ ಶ್ರುತಂ ಚೆ' ಎಂದು ಇಂದ್ರಿಯವಿಷಯತ್ವವು ಶ್ರುತವಾದ್ದರಿಂದ ಛಾಂದೋಗ್ಯದ ಜ್ಯೋತಿಯು ವಿಷ್ಣುವಲ್ಲ ಎಂದು. ಎರಡನೆಯ ಈ ಪೂರ್ವಪಕ್ಷವು ಹಿಂದಿನ ಅಧಿಕರಣದ ಸಿದ್ಧಾಂತವನ್ನು ಆಕ್ಷೇಪಿಸದ ಕಾರಣ ವ್ಯರ್ಥವೆಂದು ಹೇಳಬಾರದು. ಹಿಂದಿನ ಅಧಿಕರಣದ ಸಿದ್ಧಾಂತವನ್ನೇ ಆಕ್ಷೇಪಿಸಬೇಕೆಂದೇನಿಲ್ಲ. ಜನ್ಮಾದಿ ಸೂತ್ರದ ಸಿದ್ಧಾಂತವನ್ನು ನೇರವಾಗಿ ಆಕ್ಷೇಪಿಸುತ್ತಿದೆ. ಅದು ಹೀಗೆ - ಜ್ಯೋತಿಯೇ ಗಾಯತ್ರಿಯಾದರೆ 'ಇಯಂ ವಾವ ಸಾ ಯೇಯಂ ಪೃಥಿವೀ' ಎಂಬ ಶ್ರುತಿಯು ಗಾಯತ್ರಿಯನ್ನು ಪೃಥಿವೀ ಸ್ವರೂಪವೆನ್ನುತ್ತಿದೆ. ಈ ಪೃಥಿವಿಗೆ ಮತ್ತೊಂದು ಶ್ರುತಿಯು 'ಅಸ್ಯಾಂ ಹೀದಂ ಸರ್ವಂ ಪ್ರತಿಷ್ಠಿತಮ್' ಎಂದು ಸ್ಥಿತಿಹೇತುತ್ವವನ್ನು ಹೇಳುತ್ತಿದೆ. ಆದ್ದರಿಂದ ಸ್ಥಿತಿಹೇತುತ್ವವು ಗಾಯತ್ರಿಯ ಧರ್ಮವೆಂದಂತಾಯಿತು. ಇದರಿಂದ ಬ್ರಹ್ಮನಲ್ಲಿ ಹೇಳಿದ ಜನ್ಮಾಧಿಕರಣದ ಸ್ಥಿತಿಹೇತುತ್ವವನ್ನು ಆಕ್ಷೇಪಿಸಿದಂತಾಯಿತು. ಅಥವಾ 'ಯೋऽಯಮಂತರ್ಹೃದಯೇ' ಎಂದು ಛಾಂದೋಗ್ಯದ ಜ್ಯೋತಿಗೆ ಆನಂದಮಯನ ಧರ್ಮವಾದ ಹೃದಯನಿಹಿತತ್ವವು ಹೇಳಲ್ಪಟ್ಟಿದೆ. ಆದ್ದರಿಂದ ಜ್ಯೋತಿರಧಿಕರಣವನ್ನು ಆಕ್ಷೇಪ ಮಾಡದೆ ನೇರವಾಗಿ ಆನಂದಮಯಾಧಿಕರಣವನ್ನು ಆಕ್ಷೇಪಿಸಿದಂತಾಯಿತು.

ಎರಡನೆಯ ಪಕ್ಷದಲ್ಲಿ ಮೂರು ಪೂರ್ವಪಕ್ಷಗಳು - ಗಾಯತ್ರಿಯು ಛಂದಸ್ಸಾದರೆ ಗಾಯತ್ರಿಯ ಉಪಕ್ರಮದಿಂದ ಛಾಂದೋಗ್ಯದಲ್ಲಿ ಹೇಳಲ್ಪಟ್ಟ ಜ್ಯೋತಿಗೆ ಛಂದಸ್ತ್ವವನ್ನು ಹೇಳಿದಂತಾಯಿತು. ಆದ್ದರಿಂದ ಅಗ್ನಿಸೂಕ್ತದಲ್ಲಿರುವ ಜ್ಯೋತಿಯೂ ಸಹ ಛಂದಸ್ಸೇ ಆಗುತ್ತದೆಂಬುದು ಮೊದಲ ಪೂರ್ವಪಕ್ಷ. ಮತ್ತೊಂದು ಹಿಂದೆ ಹೇಳಿದಂತೆ ಅಗ್ನಿಸೂಕ್ತದಲ್ಲಿರುವ ಜ್ಯೋತಿಯು ವಿಷ್ಣುವಾದರೂ ಛಾಂದೋಗ್ಯದಲ್ಲಿರುವ ಜ್ಯೋತಿಯು ಛಂದಸ್ಸೇ ಆಗುತ್ತದೆಂಬುದು. ಮೂರನೆಯ ಪೂರ್ವಪಕ್ಷ - ಛಾಂದೋಗ್ಯದಲ್ಲಿರುವ ಜ್ಯೋತಿಯು ನಿರ್ಣೀತ ಜ್ಯೋತಿಶ್ರುತಿಯ ಆಧಾರದಿಂದ ಜ್ಯೋತಿರಧಿಕರಣದಲ್ಲಿ ಹೇಳಿದಂತೆ ವಿಷ್ಣುವೆನಿಸಲಿ. ಆದರೆ ಅಂತಹ ಶ್ರುತಿಯ ಬೆಂಬಲವಿಲ್ಲದ ಗಾಯತ್ರಿಯು ವಿಷ್ಣುವಾಗಲಾರದು ಎಂದು.

ಒಟ್ಟು ಐದು ಪೂರ್ವಪಕ್ಷವನ್ನು ಇಲ್ಲಿ ಹೇಳಿದ್ದಾರೆ. ಇವುಗಳ ಮಧ್ಯ ಎರಡನೆಯ ಪಕ್ಷದ ಮೊದಲ ಪೂರ್ವಪಕ್ಷವು ಟೀಕೆಯಲ್ಲಿ ಉಕ್ತವಾಗಿದೆ. ಪ್ರಥಮಪಕ್ಷದ ಎರಡು ಪೂರ್ವಪಕ್ಷಗಳು; ಎರಡನೆಯ ಪಕ್ಷದ ಎರಡು ಹಾಗೂ ಮೂರನೆಯ ಪೂರ್ವಪಕ್ಷಗಳು ಸುಧೆಯಲ್ಲಿ ಉಕ್ತವಾಗಿವೆ. ಎರಡೂ ಮತಗಳಲ್ಲಿಯೂ ಮೊದಲ ಪೂರ್ವಪಕ್ಷದಲ್ಲಿ ಹಿಂದಿನ ಅಧಿಕರಣದ ಸಿದ್ಧಾಂತವನ್ನು ಆಕ್ಷೇಪಿಸಿದ್ದರಿಂದ ಆಕ್ಷೇಪಿಕೀ ಎಂಬ ಅವಾಂತರಸಂಗತಿಯು ಶ್ರುತವಾಗಿದೆ. ಪ್ರಥಮಪಕ್ಷದ ಎರಡನೆಯ ಪೂರ್ವಪಕ್ಷ ಹಾಗೂ ದ್ವಿತೀಯಪಕ್ಷದ ಎರಡು ಮೂರನೆಯ ಪೂರ್ವಪಕ್ಷಗಳು ಹಿಂದಿನ ಅಧಿಕರಣದಿಂದ ವೈಷಮ್ಯವನ್ನು ತೋರಿಸಲು ಹಿಂದಿನ ಅಧಿಕರಣವನ್ನು ಉಪಜೀವಿಸಿವೆ. ಈ ಕಾರಣದಿಂದ ಅವಾಂತರ ಸಂಗತಿಯನ್ನು ತಿಳಿಯಬೇಕು.

ಕಠಿಣಪದಾರ್ಥ

ಅಗ್ನಿಸೂಕ್ತಸ್ಥಮಪಿ = ಅಗ್ನಿಸೂಕ್ತದಲ್ಲಿರುವ ಜ್ಯೋತಿಯೂ ಕೂಡ, ಇಯಂ = ಗಾಯತ್ರಿಯು, ಅಸ್ಮಾಂ = ಪೃಥಿವಿಯಲ್ಲಿ, ತದ್ಧರ್ಮ್ಮತ್ವಾದಸ್ಯ = ಗಾಯತ್ರಿಯ ಧರ್ಮವಾಗುವುದೆಂದು; ತತ್‌ಶ್ರುತೇಃ = ವಿಷ್ಣುವಿನಲ್ಲಿ ನಿರ್ಣಯವಾದ ಶ್ರುತಿಯು; ಅತ್ರಾಪಿ = ಐದು ಪೂರ್ವಪಕ್ಷಗಳ ಮಧ್ಯದಲ್ಲಿ; ಉಪಜೀವಿತ್ವಾದವಾಂತರಸಂಗತಿಃ = ಉಪಜೀವ್ಯ ಉಪಜೀವಕಭಾವ ಎಂಬ ಸಂಗತಿಯು;

**ಪ್ರಕಾಶಃ** – ಏವಂ ವೈಕಲ್ಪಿಕೋದಾಹರಣಮುಕ್ತ್ವಾ, ಇದಾನೀಂ ಜ್ಯೋತಿರ್ವಾಕ್ಯೋದಾಹರಣಪಕ್ಷೇ ಸುಧಾऽಭಿಮತಪೂರ್ವಪಕ್ಷದ್ವಯಮಾಹ – **ಆದ್ಯೇಪೀತಿ** ॥ ಉದಾಹರಣಭೇದಸಮುಚ್ಚಯಾರ್ಥೋऽಪಿಶಬ್ದಃ ।

॥ **ಅಗ್ನಿಸೂಕ್ತಸ್ಥಮಪೀತಿ** ॥ ಜ್ಯೋತಿಃಶ್ರುತ್ಯಾ ಹೃದಯಸ್ಥತ್ವಲಿಙ್ಗೇನ ಜ್ಯೋತಿರ್ದ್ವಯಸ್ಯೈಕ್ಯಪ್ರತ್ಯಭಿಜ್ಞಾನಾತ್ ದೃಷ್ಟತ್ವಾದಿವಿರುದ್ಧಧರ್ಮಸ್ಯಾऽऽಕಾರಭೇದಾದಿನೋಪಪತ್ತೇರಿತಿ ಭಾವಃ ।

ದ್ವಿತೀಯಪೂರ್ವಪಕ್ಷೇऽನುಪಪತ್ತಿಂ ಪ್ರಕಾಶ್ಯ ಸಮಾಧತ್ತೇ – **ನ ಚೈವಮಿತಿ** ॥ ಅಗ್ನಿಸೂಕ್ತಸ್ಥ-ಜ್ಯೋತಿಷೋ ವಿಷ್ಣುತ್ವಮುಪೇತ್ಯ ಪೂರ್ವಪಕ್ಷಕರಣೇ ಸತೀತ್ಯರ್ಥಃ ॥ **ತದ್ಧರ್ಮತ್ವೇತಿ** ॥ ಗಾಯತ್ರೀ-ಧರ್ಮತ್ವಾಪತ್ತ್ಯೇತ್ಯರ್ಥಃ । ಪೂರ್ವಾಧಿಕರಣಾಕ್ಷೇಪಸ್ಯಾಪಿ ವ್ಯವಹಿತಜಿಜ್ಞಾಸಾಸೂತ್ರಾಕ್ಷೇಪಪರ್ಯನ್ತತ್ವಾದಿತಿ ಭಾವಃ । ನನು ಪೂರ್ವೋತ್ತರಾಧಿಕರಣಾನಾಮ್ ಆನನ್ದಮಯಾಕ್ಷೇಪಪೂರ್ವಂ ಜಿಜ್ಞಾಸಾಸೂತ್ರಾಕ್ಷೇಪಕತ್ವೇನ ಪ್ರವೃತ್ತತ್ವಾತ್ಕಥಮಸ್ಯ ತತೋ ವಿಲಕ್ಷಣಸ್ಯ ತನ್ಮಧ್ಯೇ ನಿವೇಶ ಇತ್ಯತಃ ಪಕ್ಷಾನ್ತರಮಾಹ – **ಯೋऽಯಮಿತಿ** ॥ ಯದ್ಯಪಿ **'ಯೋ ವೇದ ನಿಹಿತಂ ಗುಹಾಯಾಂ'** ಇತಿ ಮನ್ತ್ರವರ್ಣ ಏವಾಯಂ ಧರ್ಮಃ ಶ್ರುತಃ, ನ ತ್ವಾನನ್ದಮಯೇ, ತಥಾऽಪಿ ಮನ್ತ್ರವರ್ಣೋಕ್ತಸ್ಯೈವ ಆನನ್ದಮಯಶಬ್ದೇನೋಚ್ಯಮಾನತ್ವಾದಿತಿ ಭಾವಃ ।

ಜ್ಯೋತಿರ್ವಾಕ್ಯಪಕ್ಷೇ ಪೂರ್ವಪಕ್ಷದ್ವಯಮುಕ್ತ್ವಾ, ಗಾಯತ್ರೀವಾಕ್ಯಪಕ್ಷೇ ಪೂರ್ವಪಕ್ಷತ್ರಯಮಾಹ – **ದ್ವಿತೀಯೇऽಪೀತಿ** ॥ **ಉಕ್ತರೀತ್ಯೇತಿ** ॥ ಕರ್ಣಾದಿವಿದೂರತ್ವಾತ್ ತಸ್ಯ ವಿಷ್ಣುತ್ವೇऽಪಿ ''ದೃಷ್ಟಞ್ಚ ಶ್ರುತಂ

ಚ'' ಇತಿ ತದ್ವಿರುದ್ಧದೃಷ್ಟತ್ವಾದಿಶ್ರವಣಾತ್ ಛಾನ್ದೋಗ್ಯಸ್ಥಂ ನ ವಿಷ್ಣುರಿತ್ಯುಕ್ತದಿಶೇತ್ಯರ್ಥಃ । ಅಸ್ಮಿನ್ಪಕ್ಷೇ ವಕ್ಷ್ಯಮಾಣಪಕ್ಷೇ ಚ ಸಪ್ರಯೋಜನತ್ವಂ ಪೂರ್ವವದನುಸನ್ಧೇಯಮ್ ॥ ತತ್ ಶ್ರುತೇರಿತಿ ॥ ಜ್ಯೋತಿಃ ಶ್ರುತಿಶ್ರೋಪದೇಶಭೇದೇನ ಭಿನ್ನಪ್ರಕರಣತ್ವಾನ್ನ ಗಾಯತ್ರ್ಯಾಂ ಶ್ರುತೇತಿ ಭಾವಃ ।

ಉಕ್ತ ಪಞ್ಚಪಕ್ಷಾನ್ ಸಂವಾದಯತಿ – **ಅತ್ರಾಪೀತಿ** ॥ ಪಞ್ಚಪಕ್ಷಮಧ್ಯೇऽಪೀತ್ಯರ್ಥಃ । **ಆದ್ಯೇऽಪಿ ಪ್ರಥಮದ್ವಿತೀಯಾವಿತಿ** । ಯದ್ಯಪಿ ''ಅಥ ವಾ ಅತ್ರಾಪಿ ಅಥ ಯದತಃ ಪರೋ ದಿವಃ'' ಇತಿ ವಾಕ್ಯೋಕ್ತಜ್ಯೋತಿಷಿ ಸನ್ದೇಹಃ । ಕಿಂ ಬ್ರಹ್ಮೋತಾನ್ಯದಿತಿ, ಉಪಕ್ರಮೇ ಗಾಯತ್ರೀಶಬ್ದಶ್ರವಣಾತ್ ಅನ್ಯದಿತಿ ಪ್ರಾಪ್ತಮ್'' ಇತ್ಯೇವ ಸುಧಾವಾಕ್ಯಂ, ನ ತು ದ್ವೇಧಾ ತತ್ರ ಪೂರ್ವಪಕ್ಷೋಪಪಾದನಮಸ್ತಿ, ತಥाऽಪಿ ಪೂರ್ವಾಕ್ಷೇಪೇಣ ಪೂರ್ವವೈಷಮ್ಯೇಣ ಚ ಯೋಜಯಿತುಂ ಶಕ್ಯತ್ವಾದೇವಮುಕ್ತಮ್ । ತಥಾಚ ತದ್ವಾಕ್ಯಂ ದ್ವೇಧಾ ಯೋಜನೀಯಮಿತ್ಯುಕ್ತಂ ಭವತಿ ॥ **ದ್ವಿತೀಯ ಇತಿ** ॥ ಏತೌ ಚ ಸುಧಾಯಾಂ ಕಣ್ಠೋಕ್ತಾವಿತಿ ಧ್ಯೇಯಮ್ ।

ಏವಂ ಪಕ್ಷಾನ್ವಿವಿಚ್ಯೇದಾನೀಂ ಸಙ್ಗತಿಮಾಹ – **ಅತ್ರೇತಿ** ॥ ಜ್ಯೋತಿರ್ವಾಕ್ಯಪಕ್ಷೇ ಗಾಯತ್ರೀ-ವಾಕ್ಯಪಕ್ಷೇ ಚೇತ್ಯರ್ಥಃ । **ತದುಪಜೀತ್ವಾದಿತಿ** । ಉಪಜೀವ್ಯೋಪಜೀವಕಭಾವ ಇತ್ಯುಕ್ತಂ ಭವತಿ ।

ವಿವರಣೆ - 'ಅಥ ಯದತಃ' ಎಂಬುದು ಈ ಅಧಿಕರಣದ ವಿಷಯವಾಕ್ಯವಾಗಬಹುದು. ಅಥವಾ 'ಗಾಯತ್ರೀ ವಾ ಇದಂ ಸರ್ವಂ' ಎಂಬುದು ವಿಷಯವಾಕ್ಯವಾಗಬಹುದೆಂದು ವಿಕಲ್ಪವನ್ನು ಇದುವರೆಗೂ ಹೇಳಿದರು. ಪ್ರಕೃತ 'ಅಥ ಯದತಃ' ಎಂಬ ಜ್ಯೋತಿರ್ವಾಕ್ಯವು ವಿಷಯವಾಕ್ಯವೆಂದು ವಿವಕ್ಷಿಸಿ ಸುಧೆಗೆ ಅಭಿಮತವಾದ ಎರಡು ಪೂರ್ವಪಕ್ಷಗಳನ್ನು 'ಆದ್ಯೇಽಪಿ' ಇತ್ಯಾದಿ ಗ್ರಂಥದಿಂದ ಸಮರ್ಥಿಸುತ್ತಿದ್ದಾರೆ. ವಿಷಯವಾಕ್ಯಗಳಲ್ಲಿರುವ ವೈಲಕ್ಷಣ್ಯವನ್ನು ತಿಳಿಸುವುದಕ್ಕಾಗಿಯೇ 'ಆದ್ಯೇಽಪಿ' ಎಂಬಲ್ಲಿ ಗ್ರಂಥಕಾರರು ಅಪಿಶಬ್ದವನ್ನು ಉಲ್ಲೇಖಿಸಿದ್ದಾರೆ.

ಜ್ಯೋತಿಶ್ರುತಿಯಿಂದ ಹಾಗೂ ಹೃದಯಸ್ಥತ್ವಲಿಂಗದಿಂದ ಎರಡೂ ಜ್ಯೋತಿಗಳು ಒಂದೇ ಎಂಬ ಪ್ರತ್ಯಭಿಜ್ಞಾನ ಬರುತ್ತದೆ. ಛಾಂದೋಗ್ಯದಲ್ಲಿ ಕರ್ಣಾದಿವಿದೂರತ್ವಕ್ಕಿಂತ ವಿರುದ್ಧವಾದ ದೃಷ್ಟತ್ವಾದಿಗಳನ್ನು ಹೇಳಿದ್ದಾರಲ್ಲ? ಎಂಬ ಶಂಕೆಗೆ ಅವಕಾಶವಿಲ್ಲ. ಒಂದೇ ಜ್ಯೋತಿಯು ಸಾಮಾನ್ಯಾಕಾರದಿಂದ ದೃಷ್ಟವೂ, ವಿಶೇಷಾಕಾರದಿಂದ ಕರ್ಣಾದಿವಿದೂರವೂ ಆಗಬಹುದೆಂದು ಅಗ್ನಿಸೂಕ್ತಸ್ಥಮಪಿ ಎಂಬ ಗ್ರಂಥದಿಂದ ತಿಳಿಸಿದ್ದಾರೆ.

ಎರಡನೆಯ ಪೂರ್ವಪಕ್ಷದಲ್ಲಿರುವ ಅನುಪಪತ್ತಿಯನ್ನು ತೋರಿಸಿ 'ನಚೈವಂ' ಎಂಬ ಗ್ರಂಥದಿಂದ ಉತ್ತರಿಸಿದ್ದಾರೆ. ಅಗ್ನಿಸೂಕ್ತದಲ್ಲಿರುವ ಜ್ಯೋತಿಗೆ ವಿಷ್ಣುತ್ವವನ್ನು ಅಂಗೀಕರಿಸಿ ಪೂರ್ವಪಕ್ಷ ಮಾಡಿದರೆ ಬರುವ ಸಮಸ್ಯೆಯನ್ನು ಈ ವಾಕ್ಯದಿಂದ ಪರಿಹರಿಸಿದ್ದಾರೆ.

ಹಿಂದಿನ ಅಧಿಕರಣದ ಸಿದ್ಧಾಂತವನ್ನೇ ಆಕ್ಷೇಪಿಸಬೇಕೆಂದೇನಿಲ್ಲ. ಹಾಗೆ ಆಕ್ಷೇಪ ಮಾಡಿದರೂ ಸಹ ದೂರದಲ್ಲಿರುವ ಜಿಜ್ಞಾಸಾಸೂತ್ರದ ನ್ಯಾಯದ ತನಕ ಆಕ್ಷೇಪವನ್ನು ಮಾಡಲೇ ಬೇಕು. ಆದ್ದರಿಂದ

ನೇರವಾಗಿ ಆನಂದಮಯಾಧಿಕರಣ ನ್ಯಾಯವನ್ನು ಜನ್ಮಾದಿಸೂತ್ರದ ನ್ಯಾಯವನ್ನು ಆಕ್ಷೇಪಿಸುವುದು ತಪ್ಪಾಗುವುದಿಲ್ಲ.

ಹಿಂದಿನ ಅಧಿಕರಣಗಳಲ್ಲಿ ಆನಂದಮಯನನ್ನು ಆಕ್ಷೇಪಿಸುವ ಮೂಲಕವಾಗಿ ಜಿಜ್ಞಾಸಾಸೂತ್ರವನ್ನು ಆಕ್ಷೇಪಿಸಲಾಗಿದೆ. ಆದರೆ ಈ ಅಧಿಕರಣದಲ್ಲಿ ನೇರವಾಗಿ ಜನ್ಮಾಧಿಕರಣವನ್ನೇ ಆಕ್ಷೇಪಿಸುತ್ತಿದ್ದೀರಿ. ಹೀಗಿರು -ವಾಗ ಹಿಂದಿನ ಮುಂದಿನ ಅಧಿಕರಣಗಳ ಮಧ್ಯದಲ್ಲಿ ಈ ಅಧಿಕರಣದ ಪ್ರವೇಶವು ಅನುಚಿತವಲ್ಲವೇ? ಎಂಬ ಪ್ರಶ್ನೆಯನ್ನು ಪರಿಹರಿಸಲು 'ಯೋಽಯಂ' ಎಂಬ ಮತ್ತೊಂದು ಪಕ್ಷವನ್ನು ಆಶ್ರಯಿಸಿದ್ದಾರೆ.

ವಸ್ತುತಃ 'ಯೋ ವೇದ ನಿಹಿತಂ ಗುಹಾಯಾಮ್' ಎಂದು ಮಂತ್ರವರ್ಣದಲ್ಲಿಯೇ ಹೃದಯ-ನಿಹಿತತ್ವವು ಶ್ರುತವಾಗಿದೆ; ಹೊರತು ಆನಂದಮಯನಲ್ಲಿ ಅಲ್ಲ. ಆದರೂ ಸಹ ಮಂತ್ರವರ್ಣದಿಂದ ಪ್ರತಿಪಾದ್ಯನಾದವನೇ ಆನಂದಮಯಶಬ್ದದಿಂದ ಪ್ರತಿಪಾದ್ಯನಾಗಿದ್ದಾನೆ. ಆದ್ದರಿಂದ ಆನಂದಮಯನಿಗೂ ಹೃದಯನಿಹಿತತ್ವವು ಹೇಳಿದಂತಾಗುತ್ತದೆ.

ಜ್ಯೋತಿಶ್ರುತಿಯು ವಿಷಯವಾಕ್ಯವೆಂಬ ಪಕ್ಷದಲ್ಲಿ ಎರಡು ಪೂರ್ವಪಕ್ಷಗಳನ್ನು ತೋರಿಸಿ, ಗಾಯತ್ರೀ-ಶ್ರುತಿಯು ವಿಷಯವಾಕ್ಯವೆಂಬ ಎರಡನೆಯ ಪಕ್ಷದಲ್ಲಿ ಮೂರು ಪೂರ್ವಪಕ್ಷಗಳನ್ನು 'ದ್ವಿತೀಯೇಽಪಿ' ಇತ್ಯಾದಿ ಗ್ರಂಥದಿಂದ ತೋರಿಸುತ್ತಿದ್ದಾರೆ. 'ಉಕ್ತರೀತ್ಯಾ' ಎಂಬ ಗ್ರಂಥದ ಅಭಿಪ್ರಾಯ ಹೀಗಿದೆ. -- 'ಅಗ್ನಿಸೂಕ್ತದಲ್ಲಿರುವ ಜ್ಯೋತಿಗೆ ಕರ್ಣಾದಿವಿದೂರತ್ವಲಿಂಗಗಳು ಕೇಳಿಸುತ್ತಿರುವುದರಿಂದ ವಿಷ್ಣುವಾಗಲಿ. ಆದರೆ ಛಾಂದೋಗ್ಯದಲ್ಲಿರುವ ಜ್ಯೋತಿಗೆ 'ದೃಷ್ಟಂ ಚ ಶ್ರುತಂ ಚ' ಎಂದು ಕರ್ಣಾದಿವಿದೂರತ್ವಕ್ಕೆ ವಿರುದ್ಧವಾದ ಲಿಂಗಗಳು ಕೇಳಿಸುತ್ತಿವೆ. ಆದ್ದರಿಂದ ಛಾಂದೋಗ್ಯದ ಜ್ಯೋತಿಯು ವಿಷ್ಣುವಾಗಲಾರದು ಎಂದು ಹಿಂದೆ ಹೇಳಿದ್ದರು. ಆದರಂತೆ ಇಲ್ಲಿ ತಿಳಿಯಬೇಕು. ಈ ಪಕ್ಷದಲ್ಲಿ ಮತ್ತು ಮುಂದೆ ಹೇಳುವ ಪಕ್ಷದಲ್ಲಿ ಸಾಫಲ್ಯವನ್ನು ಹಿಂದೆ ಹೇಳಿದಂತೆ ತಿಳಿಯಬೇಕು. ಅಂದರೆ ಜನ್ಮಾಧಿಕರಣದ ನ್ಯಾಯವನ್ನು ಆಕ್ಷೇಪಿಸುತ್ತಿರುವುದರಿಂದ ಸಾರ್ಥಕವಾಗಿದೆ ಎಂದು.

ಜ್ಯೋತಿಶ್ರುತಿಯೇ ಬೇರೆ ಪ್ರಕರಣದಲ್ಲಿದೆ. ಗಾಯತ್ರೀಶ್ರುತಿಯೇ ಬೇರೆ ಪ್ರಕರಣದಲ್ಲಿದೆ. ದಿವಃಪರತ್ವವನ್ನು ಜ್ಯೋತಿಃಪ್ರಕರಣದಲ್ಲಿ ಹೇಳಲಾಗಿದೆ. ಇದಕ್ಕೆ ವಿರುದ್ಧವಾಗಿ ದಿವಿಸ್ಥಿತತ್ವವನ್ನು ಗಾಯತ್ರೀ ಪ್ರಕರಣದಲ್ಲಿ ಹೇಳಲಾಗಿದೆ. ಹೀಗೆ ಉಪದೇಶಭೇದವಿರುವುದರಿಂದ ಛಾಂದೋಗ್ಯದಲ್ಲಿರುವ ಜ್ಯೋತಿಯು ವಿಷ್ಣುವಾದರೂ ಗಾಯತ್ರೀಶಬ್ದವು ವಿಷ್ಣುವನ್ನು ಪ್ರತಿಪಾದಿಸಲಾರದು ಎಂದು 'ತತ್ ಶ್ರುತೇಃ' ಎಂಬ ಮಾತಿನ ಅಭಿಪ್ರಾಯ.

ಒಟ್ಟು ಐದು ಪೂರ್ವಪಕ್ಷಗಳನ್ನು ಹೇಳಿದಂತಾಯಿತು. ಇವುಗಳಿಗೆಲ್ಲಾ ಸಂವಾದವನ್ನು 'ಅತ್ರಾಪಿ' ಇತ್ಯಾದಿ ಗ್ರಂಥದಿಂದ ತೋರಿಸುತ್ತಿದ್ದಾರೆ. ವಸ್ತುತಃ 'ಅಥವಾ ಅತ್ರಾಪಿ ಅಥ ಯದತಃ ಪರೋ ದಿವಃ' ಎಂಬ ವಾಕ್ಯದಲ್ಲಿ ಹೇಳಲ್ಪಟ್ಟ ಜ್ಯೋತಿಯಲ್ಲಿ ಸಂದೇಹ ಬರುತ್ತದೆ. ಬ್ರಹ್ಮನೋ ಅಥವಾ ಬೇರೆಯೋ? ಎಂದು. ಉಪಕ್ರಮದಲ್ಲಿ ಗಾಯತ್ರೀಶಬ್ದವು ಶ್ರುತವಾದ್ದರಿಂದ ಬೇರೆ ಎಂದು ಪೂರ್ವಪಕ್ಷ. ಸುಧೆಯಲ್ಲಿ ಇಷ್ಟು ಮಾತ್ರ ಕಾಣಿಸುತ್ತದೆ; ಹೊರತು ಪೂರ್ವಾಧಿಕರಣವನ್ನು ಆಕ್ಷೇಪಿಸಿ ಅಥವಾ ಒಪ್ಪಿಕೊಂಡು ಪೂರ್ವಪಕ್ಷ ಮಾಡಬೇಕೆಂದೇನೂ ತೋರುವುದಿಲ್ಲ. ಆದರೂ ಹಿಂದಿನ ಅಧಿಕರಣದ ಆಕ್ಷೇಪವನ್ನು ಮತ್ತು

ವೈಷಮ್ಯವನ್ನು ತೋರಿಸಲು ಬರುತ್ತದೆಂದು ಹೀಗೆ ಗ್ರಂಥಕಾರರು ಹೇಳಿದ್ದಾರೆ. ಆದ್ದರಿಂದ ಎರಡು ಬಗೆಯಲ್ಲಿ ಸುಧೆಯ ವಾಕ್ಯವನ್ನು ಯೋಜಿಸಬೇಕೆಂದು ಹೇಳಿದಂತಾಯಿತು. ಎರಡನೆಯ ಪಕ್ಷದ ಎರಡು ಹಾಗೂ ಮೂರನೆಯ ಪೂರ್ವಪಕ್ಷಗಳು ಸುಧೆಯಲ್ಲಿ ಕಂಠತಃ ಹೇಳಲ್ಪಟ್ಟಿವೆ.

ಇಲ್ಲಿಯ ತನಕ ಎಲ್ಲಾ ಪೂರ್ವಪಕ್ಷಗಳನ್ನು ವಿವೇಚನೆ ಮಾಡಿದ್ದಾಯಿತು. ಈಗ ಈ ಅಧಿಕರಣಕ್ಕೆರುವ ಸಂಗತಿಯನ್ನು 'ಅತ್ರ' ಇತ್ಯಾದಿ ಗ್ರಂಥದಿಂದ ತೋರಿಸುತ್ತಿದ್ದಾರೆ. ಹಿಂದಿನ ಅಧಿಕರಣದ ವೈಷಮ್ಯವನ್ನು ತೋರಿಸುವಾಗ ಈ ಅಧಿಕರಣವು ಅದನ್ನು ಉಪಜೀವಿಸಿದಂತಾಯಿತು. ಆದ್ದರಿಂದ ಉಪಜೀವ್ಯ-ಉಪಜೀವಕಭಾವವೆಂಬ ಅವಾಂತರಸಂಗತಿಯು ತಿಳಿಯುತ್ತದೆ.

**ಗುರುರಾಜೀಯಮ್** – ಅತ್ರಾಧಮತಾನುಸಾರೇಣ ಪೂರ್ವಪಕ್ಷಮಾಹ – **ಆಧೇಪೀತಿ ॥ ದ್ವಿತೀಯ ಇತಿ ॥** ಗಾಯತ್ರೀವಾಕ್ಯಂ ವಿಷಯವಾಕ್ಯಮಿತಿ ಮತ ಇತ್ಯರ್ಥಃ । ಅನ್ಯಸ್ತ್ವಿತ್ಯಾದಿಪಕ್ಷದ್ವಯೇ ಜ್ಯೋತಿರ್ವಾಕ್ಯೋಪಾದಾನಂ ತು ಪೂರ್ವಾಧಿಕರಣವೈಷಮ್ಯಂ ಪ್ರದರ್ಶಯಿತುಮಿತಿ ಜ್ಞಾತವ್ಯಮ್ ॥ **ಅತ್ರಾಪಿ ಇತಿ ॥** ಅಥ ಯದತಃ ಪರೋ ದಿವೋ ಜ್ಯೋತಿರಿತಿ ಛಾನ್ದೋಗ್ಯಸ್ಥಂ ವಿಷಯವಾಕ್ಯಮಿತಿ ಪ್ರಥಮ-ಪಕ್ಷಸ್ಯ ಯ ಆದ್ಯಃ ಛಾನ್ದೋಗ್ಯಸ್ಥಜ್ಯೋತಿಷೋ ಗಾಯತ್ರೀ ವೇತ್ಯುಪಕ್ರಮೇಣ ಗಾಯತ್ರೀತ್ವಾದಗ್ನಿ-ಸೂಕ್ತಸ್ಥಮಪಿ ಗಾಯತ್ರೀತಿ ಪೂರ್ವಃಪಕ್ಷಃ । ಇಯಂ ಚ ಗಾಯತ್ರೀ ಯದಿ ವಿಷ್ಣೋರನನ್ಯಾ ಸ್ಯಾತ್ತದೇದಂ ಜ್ಯೋತಿಶ್ಚ ಸಾ ಸ್ಯಾದಿತಿ ಗಾಯತ್ರೀನಿರ್ಣಯೋऽವಶ್ಯಾಪೇಕ್ಷಿತ ಇತಿ ಸಙ್ಗತಿಟೀಕಾಯಾಮುಕ್ತಃ ಗಾಯತ್ರೀವಾ ಇದಂ ಸರ್ವಮಿತಿ ವಿಷಯವಾಕ್ಯಮಿತಿ ದ್ವಿತೀಯಮತಸ್ಯ ಯೋऽಯಮಾದ್ಯಃ ಗಾಯತ್ರ್ಯಾಃ ಛನ್ದಸ್ತ್ವಾತ್ತಾಮುಪಕ್ರಮ್ಯ ಛಾನ್ದೋಗ್ಯ ಉಕ್ತಸ್ಯ ಜ್ಯೋತಿಷೋಪಿ ಛನ್ದಸ್ತ್ವಾದಗ್ನಿಸೂಕ್ತಸ್ಥಮಪಿ ಛನ್ದ ಇತಿ ಪೂರ್ವಃ ಪಕ್ಷಃ ತಸ್ಮಾದ್ಗಾಯತ್ರೀ ನ ವಿಷ್ಣುಃ ಅಪಿ ತು ಛನ್ದೋವಿಶೇಷ ಏವ ತಥಾಚೇದಂ ಜ್ಯೋತಿರಾನನ್ದಮಯಶ್ಚ ನಾಸಾವಿತಿ ಪೂರ್ವಪಕ್ಷೋಪಸಂಹಾರಟೀಕಾಯಾಮುಕ್ತ ಇತಿ ಭಾವಃ ॥ **ಪ್ರಥಮೇ ದ್ವಿತೀಯ ಇತಿ ॥** ಅಥ ಯದತ ಇತ್ಯೇತದ್ವಿಷಯವಾಕ್ಯಮಿತಿ ಮತೇ ಅಸ್ತ್ವಗ್ನಿಸೂಕ್ತಸ್ಥಂ ಜ್ಯೋತಿಃ ಕರ್ಣಾದಿವಿದೂರತ್ವಾದ್ವಿಷ್ಣುರಿತ್ಯಾದಿನೋಕ್ತೋ ಯೋ ದ್ವಿತೀಯಃ ಪಕ್ಷಃ ಸ ಇತ್ಯರ್ಥಃ ॥ **ದ್ವಿತೀಯ ಇತಿ ॥** ಗಾಯತ್ರೀ ವೇತ್ಯೇತದ್ವಿಷಯವಾಕ್ಯಮಿತಿ ದ್ವಿತೀಯ ಇತ್ಯರ್ಥಃ । ದ್ವಿತೀಯತೃತೀಯೌ ಕರ್ಣಾದಿವಿದೂರತ್ವಾದಿರೂಪವಿಷ್ಣುಲಿಙ್ಗಸದ್ಭಾವಾದಗ್ನಿಸೂಕ್ತಸ್ಥಜ್ಯೋತಿಷೋऽಗ್ನಿತ್ವೇಪಿ ಛಾನ್ದೋಗ್ಯೇ ಕರ್ಣಾದಿವಿದೂರತ್ವಾದಿರೂಪಲಿಙ್ಗಾಶ್ರವಣಾಚ್ಛಾನ್ದೋಗ್ಯಸ್ಥಂ ಛನ್ದ ಏವೇತಿ ದ್ವಿತೀಯಃ, ಛಾನ್ದೋಗ್ಯಸ್ಥಸ್ಯಾಪಿ ಜ್ಯೋತಿಷೋ ಜ್ಯೋತಿರಧಿಕರಣೇ ವಿಷ್ಣೌ ನಿರ್ಣೀತಜ್ಯೋತಿಃಶ್ರುತ್ಯಾ ವಿಷ್ಣೌ ನಿರ್ಣೀತತ್ವೇಪಿ ಗಾಯತ್ರೀ ನ ವಿಷ್ಣುಸ್ತತ್ರ ತತ್ ಶ್ರುತೇರಭಾವಾದಿತಿ ತೃತೀಯಶ್ಚೇತ್ಯರ್ಥಃ । ಯದರ್ಥಂ ಮತಭೇದ ಉಪಪಾದಿತಸ್ತದಿದಾನೀಮಾಹ – **ತತ್ರ ಮತದ್ವಯೇಪೀತ್ಯಾದಿನಾ ॥**

## ಸಾರ

ಸುಧೆಯ ಪ್ರಕಾರ ಎರಡು ಪೂರ್ವಪಕ್ಷ. (೧)ಛಾಂದೋಗ್ಯದಲ್ಲಿರುವ ಜ್ಯೋತಿಯು ಗಾಯತ್ರಿ-ಯಾದ್ದರಿಂದ ಅಗ್ನಿಸೂಕ್ತದಲ್ಲಿರುವ ಜ್ಯೋತಿಯು ಕೂಡ ಗಾಯತ್ರಿಯೇ ಆಗಬೇಕು. (೨) ಅಗ್ನಿಸೂಕ್ತದಲ್ಲಿರುವ ಜ್ಯೋತಿಯು ನಿರವಕಾಶ ಲಿಂಗಬಲದಿಂದ ವಿಷ್ಣುವಾಗಲಿ. ಆದರೆ ನಿರವಕಾಶಲಿಂಗಗಳು ಕೇಳಿಸದ ಕಾರಣ ಛಾಂದೋಗ್ಯದಲ್ಲಿರುವ ಜ್ಯೋತಿಯು ವಿಷ್ಣುವಲ್ಲ.

ಇಲ್ಲಿ ಮೊದಲ ಪೂರ್ವಪಕ್ಷ ಹಿಂದಿನ ಜ್ಯೋತಿರಧಿಕರಣವನ್ನು ಆಕ್ಷೇಪಿಸುತ್ತಿದೆ. ಆದರೆ ಎರಡನೆಯ ಪೂರ್ವಪಕ್ಷ ಜನ್ಯಾಧಿಕರಣವನ್ನು ಅಥವಾ ಆನಂದಮಯಾಧಿಕರಣವನ್ನು ಆಕ್ಷೇಪಿಸುತ್ತಿದೆ.

ಟೀಕೆಯ ಪ್ರಕಾರ ಮೂರು ಪೂರ್ವಪಕ್ಷ. (೧) ಗಾಯತ್ರೀಛಂದಸ್ಸನ್ನು ಹೇಳುವ ಉಪಕ್ರಮದ ಬಲದಿಂದ ಛಾಂದೋಗ್ಯದ ಜ್ಯೋತಿಯು ಛಂದಸ್ಸೇ ಆಗಿದೆ. (೨) ಅಗ್ನಿಸೂಕ್ತದಲ್ಲಿರುವ ಅಗ್ನಿಯು ವಿಷ್ಣುವಾಗಲಿ, ಆದರೆ ಛಾಂದೋಗ್ಯದ ಛಂದಸ್ಸು ವಿಷ್ಣುವಲ್ಲ. (೩)ನಿರ್ಣೀತಜ್ಯೋತಿಶ್ರುತಿಯ ಆಧಾರದಿಂದ ಛಾಂದೋಗ್ಯದ ಜ್ಯೋತಿಯು ವಿಷ್ಣುವಾಗಬಹುದು. ಆದರೆ ಅಂತಹ ಶ್ರುತಿಯಿಲ್ಲದ ಕಾರಣ ಗಾಯತ್ರಿಯು ವಿಷ್ಣುವಲ್ಲ.

ಇಲ್ಲಿ ಒಟ್ಟು ಐದು ಪೂರ್ವಪಕ್ಷಗಳು. ಇವುಗಳಲ್ಲಿ ಒಂದನ್ನು ಮಾತ್ರ ಟೀಕೆಯಲ್ಲಿ ಹೇಳಿದ್ದಾರೆ. ಉಳಿದೆಲ್ಲವನ್ನೂ ಸುಧೆಯಲ್ಲಿ ಹೇಳಿದ್ದಾರೆ.

---

### ಸಂಶಯ ಪರಂಪರೆ

**ತಾತ್ಪರ್ಯಚಂದ್ರಿಕಾ**

**अत्र गायत्री किं छन्दः किं वा विष्णुरिति चिन्ता । तदर्थं किं गायत्री श्रुति-प्रसिद्ध्यनुसारेण भूतपादत्वादिविष्णुलिङ्गं बाध्यम् किं वा विपरीतमिति । तदर्थं प्रसिद्धिबाधे किं श्रुतेर्मुख्यत्वभङ्ग उत नेति । तदर्थं गायत्रीशब्दप्रवृत्तिनिमित्तं ब्रह्मणि नास्ति उतास्ति इति । तदर्थं किमनादिस्वभाव ईशानधीन उत तदधीन इति । तथा ब्रह्मपक्षे 'दिवि' 'दिवः' इति उपदेशभेदः किं न युक्त उत युक्त इति ।**

ಅನುವಾದ - ಈ ಅಧಿಕರಣದ ಸಂಶಯಪರಂಪರೆ ಹೀಗಿದೆ -

೧. ಗಾಯತ್ರೀಯು ಛಂದಸ್ಸೋ ಅಥವಾ ವಿಷ್ಣುವೋ?

೨. ಅದಕ್ಕಾಗಿ ಗಾಯತ್ರೀಶ್ರುತಿಪ್ರಸಿದ್ಧಿಯಂತೆ ಭೂತಪಾದತ್ವಾದಿ ವಿಷ್ಣುಲಿಂಗಗಳು ಬಾಧ್ಯ-ವಾಗುತ್ತವೋ ಅಥವಾ ವಿಷ್ಣುಲಿಂಗದಿಂದ ಗಾಯತ್ರೀಶ್ರುತಿಯು ಬಾಧ್ಯವಾಗುತ್ತದೋ?

೩. ಆದಕ್ಕಾಗಿ ಪ್ರಸಿದ್ಧಿಗೆ ಬಾಧ ಹೇಳಿದರೆ ಶ್ರುತಿಯ ಮುಖ್ಯಾರ್ಥಕ್ಕೆ ಭಂಗ ಬರುತ್ತದೋ ಇಲ್ಲವೋ?

೪. ಆದಕ್ಕಾಗಿ ಗಾಯತ್ರೀಶಬ್ದದ ಪ್ರವೃತ್ತಿನಿಮಿತ್ತವು ಬ್ರಹ್ಮನಲ್ಲಿ ಬರುವುದಿಲ್ಲವೋ ಅಥವಾ ಬರುತ್ತದೋ?

೫. ಆದಕ್ಕಾಗಿ ಅನಾದಿಸ್ವಭಾವವು ವಿಷ್ಣುವಿನ ಅಧೀನವಲ್ಲವೋ ಅಥವಾ ಅಧೀನವೋ? ಎಂದು.

೬. ಇದರಂತೆ ಬ್ರಹ್ಮಪಕ್ಷದಲ್ಲಿ ದಿವಿ ಮತ್ತು ದಿವಃ ಎಂಬ ಉಪದೇಶಭೇದವು ಯುಕ್ತವಲ್ಲವೋ ಅಥವಾ ಯುಕ್ತವೋ? ಎಂದು ಮತ್ತೊಂದು ಸಂದೇಹ.

### ಕಠಿಣಪದಾರ್ಥ

ಅತ್ರ = ಛಾಂದೋಗ್ಯದ ವಿಷಯವಾಕ್ಯದಲ್ಲಿ; ಛಂದಃ = ತತ್ಸವಿತುರ್ವರೇಣ್ಯಂ ಎಂಬ ವರ್ಣಸಮಾವೇಶವಾದ ಮಂತ್ರವು; ಕಿಂ ವಾ ವಿಪರೀತಂ = ಲಿಂಗದಿಂದ ಶ್ರುತಿಯು ಬಾಧಿತವಾಗುತ್ತದೋ,

**ಪ್ರಕಾಶಃ** – ವಿಷಯಸಂಶಯಟೀಕಾ ವ್ಯನಕ್ತಿ – ಅತ್ರೇತಿ ॥ ಛಾನ್ದೋಗ್ಯೇ ತೃತೀಯೇऽಧ್ಯಾಯೇ ''ಗಾಯತ್ರೀ ವಾ ಇದꣳಸರ್ವಂ ಭೂತಂ ಯದಿದಂ ಕಿಞ್ಚ । ವಾಗ್ವೈ ಗಾಯತ್ರೀ । ವಾಗ್ವಾ ಇದꣳಸರ್ವಂ ಭೂತಂ ಗಾಯತಿ ಚ ತ್ರಾಯತಿ ಚ । ಯಾ ವೈ ಸಾ ಗಾಯತ್ರೀ । ಇಯಂ ವಾ ವ ಸಾ ಯೇಯಂ ಪೃಥಿವೀ । ಅಸ್ಯಾಂ ಹಿ ಇದಂ ಸರ್ವಂ ಭೂತಂ ಪ್ರತಿಷ್ಠಿತಂ, ಏತಾಮೇವ ನಾತಿಶೀಯನ್ತೇ । ಯಾ ವೈ ಸಾ ಪೃಥಿವೀ । ಇಯಂ ವಾವ ಸಾ ಯದಿದಮಸ್ಮಿನ್ ಪುರುಷೇ ಶರೀರಮ್ । ಅಸ್ಮಿನ್ ಹೀ ಮೇ ಪ್ರಾಣಾಃ ಪ್ರತಿಷ್ಠಿತಾಃ । ಏತದೇವ ನಾತಿಶೀಯನ್ತೇ । ಯದ್ಧೈತತ್ ಪುರುಷೇ ಶರೀರಂ, ಇದಂ ವಾವ ತತ್ । ಯದಿದಮಸ್ಮಿನ್ನನ್ತಃ ಪುರುಷೇ ಹೃದಯಂ, ಅಸ್ಮಿನ್ ಹೀ ಇಮೇ ಪ್ರಾಣಾಃ ಪ್ರತಿಷ್ಠಿತಾಃ । ಏತದೇವ ನಾತಿಶೀಯನ್ತೇ । ಸೈಷಾ ಚತುಷ್ಪದಾ ಷಡ್ವಿಧಾ ಗಾಯತ್ರೀ । ತದೇತದೃಚಾऽಭ್ಯನೂಕ್ತಂ –

**ತಾವಾನಸ್ಯ ಮಹಿಮಾ ತತೋ ಜ್ಯಾಯಾꣳಶ್ಚ ಪೂರುಷಃ ।**
**ಪಾದೋऽಸ್ಯ ಸರ್ವಾ ಭೂತಾನಿ ತ್ರಿಪಾದಸ್ಯಾಮೃತಂ ದಿವಿ ।**

ಇತಿ । ಯದ್ಧೈತದ್ಬ್ರಹ್ಮ ಇತಿದಂ ವಾವ ತದ್ । ಯೋऽಯಂ ಬಹಿರ್ಧಾ ಪುರುಷಾದಾಕಾಶಃ ಯೋ ವೈ ಸ ಬಹಿರ್ಧಾ ಪುರುಬಾದಾಕಾಶಃ ಅಯಂ ವವ ಸಃ ಯೋऽಯಮನ್ತಃ ಪುರುಷಃ । ಆಕಾಶಃ । ಯೌ ವೈ ಸೋऽನ್ತಃ ಪುರುಷ ಆಕಾಶಃ ಅಯಂ ವಾವ ಸಃ । ಯೋऽಯಮನ್ತರ್ಹೃದಯ ಆಕಾಶಃ ಯೋ ವೈ ಸೋऽನ್ತರ್ಹೃದಯ ಆಕಾಶಃ ತದೇತತ್ ಪೂರ್ಣಮಪ್ರವೃರ್ತಿ । ಪೂರ್ಣಮಪ್ರವೃತ್ತಿನೀಂ ಶ್ರಿಯಂ ಲಭತೇ ಯ ಏವಂ ವೇದ'' ಇತ್ಯಾದ್ಯುತ್ತ್ವಾऽऽಮ್ನಾಯತೇ, ''ಅಥ ಯದತಃ ಪರೋ ದಿವೋ ಜ್ಯೋತಿರ್ದೀಪ್ಯತೇ ಸರ್ವತಃ ವಿಶ್ವತಃ ಪೃಷ್ಠೇಷು ಸರ್ವಶಃ ಪೃಷ್ಠೇಷು ಅನುತ್ತಮಷು

**उत्तमेषु लोकेषु । इदं वाव तद् । यदिदमस्मिन्नन्तः पुरुषे ज्योतिः तस्यैषा दृष्टिः । यत्रैतदस्मिन् शरीरे संस्पर्शेनोष्णिमानं विजानाति । तस्यैषा श्रुतिः । यत्र एतत् कर्णावपिगृह्य निनदमिव न दधथुरिव अग्नेरिव प्रज्वलत उपशृणोति । तदेतत् दृष्टं च श्रुतं चेत्युपासीत । चक्षुष्यः श्रुतो भवति य एवं वेद य एवं वेद''** इति । तत्रत्या गायत्री विषय इत्यर्थः । छन्द इति ॥ वर्णसमावेशलक्षणो मन्त्र इत्यर्थः ॥ भूतेति ॥ गानत्राणकर्तृत्वस्य प्रवृत्तिनिमित्तानतिरेकात् 'भूतपादत्वादि' इत्युक्तम् । किं वेति ॥ लिङ्गात् श्रुतिर्बाध्येत्यर्थः । अर्थप्रतिपादकत्वरूपगानकर्तृत्वस्य गायत्रीशब्दप्रवृत्ति-निमित्तस्य ब्रह्मण्ययुक्ततया वा, तद्गतत्वे सत्यप्यनादिस्वभावनियामकत्व-रूपमहागुणलाभाय वा, अणुभाष्यदिशा तत्प्रति स्वातन्त्र्यमेव वक्तव्यमित्यभिप्रेत्य 'अनधीन उत तदधीनः' इत्युक्तम् । यद्यनधीनस्तदा प्रवृत्तिनिमित्तं ब्रह्मणि नेति प्रसिद्धिबाधे मुख्यत्वभङ्गात् गायत्री छन्द एवेति पूर्वपक्षे फलं, सिद्धान्ते तु विपरीतमिति स्पष्टत्वात्फलफलिभावो नोक्तः । एवमनुव्याख्यानोक्तप्रमेयाश्रिता-भ्यधिकाशङ्केपयुक्तचिन्तापरम्परामत्त्वा, सूत्रसूचितप्रमाणाश्रितशङ्केपयुक्तामाह – तथेति ॥ गायत्री किं छन्द उत ब्रह्मेति चिन्ता । तदर्थं ब्रह्मपक्षे गायत्रीज्योतिषोरेकप्रकरणस्थत्वेनैक्यात् 'दिवि' 'दिवः' इत्युपदेशभेदः किं न युक्त उत युक्त इति । तदर्थं सप्तमीपञ्चम्यौ विरुद्धे उत विवक्षाभेदेन अविरुद्धे इति द्रष्टव्यमित्यर्थः । उपलक्षणमेतत्, ब्रह्मपक्षे प्रसिद्धपदत्यागेनाप्रसिद्धगायत्रीपदप्रयोगे प्रयोजनं नास्त्युतास्तीत्यपि ध्येयम् ।

ವಿವರಣೆ - ಈ ಅಧಿಕರಣದ ವಿಷಯ ಹಾಗೂ ಸಂಶಯಗಳನ್ನು ಹೇಳುವ ಟೀಕೆಯನ್ನು ಆತ್ರ ಇತ್ಯಾದಿ ಗ್ರಂಥದಿಂದ ವ್ಯಾಖ್ಯಾನಿಸುತ್ತಿದ್ದಾರೆ.

ಛಾಂದೋಗ್ಯದ ತೃತೀಯಾಧ್ಯಾಯದಲ್ಲಿ ಬರುವ ವಿಷಯವಾಕ್ಯ ಹೀಗಿದೆ --

> ಗಾಯತ್ರೀ ವಾ ಇದಂ ಸರ್ವಂ ಭೂತಂ ಯದಿದಂ ಕಿಂಚ, ವಾಗ್ವೈ ಗಾಯತ್ರೀ, ವಾಗ್ವಾ ಇದಂ ಸರ್ವಂ ಭೂತಂ ಗಾಯತಿ ಚ ತ್ರಾಯತಿ ಚ ॥ ೧ ॥

ಗಾಯತ್ರಿಯಲ್ಲಿರುವ, ಗಾಯತ್ರೀನಾಮಕವಾದ, ಪ್ರಸಿದ್ಧವಾದ ಹಯಶೀರ್ಷ ಎಂಬ ಸ್ತ್ರೀರೂಪವು ಗಾಯತ್ರೀನಾಮಕ ಭಗವಂತನ ಮೊದಲನೆಯರೂಪ. ಪರಿಪೂರ್ಣವಾದ ಮತ್ಸ್ಯಾದಿರೂಪ ಮತ್ತು ಸರ್ವಾಂತರ್ಯಾಮಿರೂಪವೆಲ್ಲವೂ ಗಾಯತ್ರೀನಾಮಕ ಭಗವಂತನ ಎರಡನೇ ರೂಪವೇ ಆಗಿದೆ. ಗಾಯತ್ರೀನಾಮಕನಾದ ಭಗವಂತನೇ ಮಾತುಗಳಲ್ಲಿರುವ ವಾಕ್‌ನಾಮಕ ಸ್ತ್ರೀರೂಪ. ಇದು ಹಯಶೀರ್ಷ

ಎಂಬ ರೂಪಕ್ಕಿಂತ ಬೇರೆಯಲ್ಲ. ವಾಕ್‌ನಾಮಕನು ಭಗವಂತನೇ. ಏಕೆಂದರೆ ಎಲ್ಲ ಜಗತ್ತೂ ಮಾತಿನಿಂದಲೇ ಪ್ರವೃತ್ತಿ ಮಾಡುತ್ತದೆ. ಹೀಗೆ ಸರ್ವಪ್ರವರ್ತಕತ್ವ ಭಗವಂತನದೇ ಲಕ್ಷಣ. ಗಾಯತ್ರಿ-ಯಲ್ಲಿರುವ ಭಗವಂತನ ಹಯಶಿರ್ಷರೂಪವೇ ವೇದಗಳನ್ನು ಪ್ರಥಮತಃ ಉಪದೇಶಮಾಡಿ, ಎಲ್ಲರನ್ನೂ ರಕ್ಷಣೆ ಮಾಡುವಂತಹದಾದ್ದರಿಂದ ಆ ರೂಪಕ್ಕೆ ಗಾಯತ್ರೀ ಎಂದು ಹೆಸರು ಯುಕ್ತವೆ.

**ಯಾ ವೈ ಸಾ ಗಾಯತ್ರೀ ಇಯಂ ವಾವ ಸಾ ಯೇಯಂ ಪೃಥಿವೀ, ಅಸ್ಯಾಂ ಹಿ ಇದಂ ಸರ್ವಂ ಭೂತಂ ಪ್ರತಿಷ್ಠಿತಮ್, ಏತಾಮೇವ ನಾತಿಶೀಯಂತೇ ॥ ೨ ॥**

ಪೃಥಿವಿಯಲ್ಲಿರುವ ಪೃಥಿವೀನಾಮಕನಾದ, ಹಳದಿ ಬಣ್ಣದ ಸ್ತ್ರೀರೂಪಿಯಾದ ಭಗವಂತನೂ ಗಾಯತ್ರೀನಾಮಕ ಭಗವಂತನೇ ಆಗಿದ್ದಾನೆ. ಏಕೆಂದರೆ, ಪೃಥಿವೀ ಸಂಸ್ಥನಾದ ಸ್ತ್ರೀರೂಪಿಯಾದ ಭಗವಂತನಲ್ಲಿಯೇ ಎಲ್ಲ ಜಗತ್ತೂ ಆಶ್ರಯ ಪಡೆದಿದೆ. ಮತ್ತು ಆವನನ್ನು ಯಾರೂ ಮೀರುವುದಿಲ್ಲ.

**ಯಾ ವೈ ಸಾ ಪೃಥಿವೀ ಇಯಂ ವಾವ ಸಾ ಯದಿದಮಸ್ಮಿನ್ ಪುರುಷೇ ಶರೀರಮ್, ಅಸ್ಮಿನ್ ಹೀಮೇ ಪ್ರಾಣಾಃ ಪ್ರತಿಷ್ಠಿತಾಃ, ಏತದೇವ ನಾತಿಶೀಯಂತೇ ॥ ೩ ॥**

ಜೀವರೊಳಗಿದ್ದು ಶರೀರನಾಮಕನಾದ ವಿಷ್ಣುವೂ ಪ್ರಸಿದ್ಧನಾದ ಪೃಥಿವೀನಾಮಕ ವಿಷ್ಣುವೇ ಆಗಿದ್ದಾನೆ. ಏಕೆಂದರೆ ಜೀವರೊಳಗಿರುವ ಶರೀರನಾಮಕನಾದ ವಿಷ್ಣುವಿನಲ್ಲೇ ಪ್ರಾಣಾದಿ ವಾಯುಗಳೂ ಹಾಗೂ ಇಂದ್ರಿಯಗಳೂ ಆಶ್ರಿತವಾಗಿವೆ. ಮತ್ತು ಈ ರೂಪವನ್ನು ಯಾರೂ ಮೀರುವುದಿಲ್ಲ.

**ಯದ್ವೈತತ್ ಪುರುಷೇ ಶರೀರಂ ಇದಂ ವಾವ ತತ್ ಯದಿದಮಸ್ಮಿನ್ನಂತಃ ಪುರುಷೇ ಹೃದಯಮ್, ಅಸ್ಮಿನ್ ಹಿ ಇಮೇ ಪ್ರಾಣಾಃ ಪ್ರತಿಷ್ಠಿತಾ, ಏತದೇವ ನಾತಿಶೀಯಂತೇ ॥ ೪ ॥**

ಜೀವನು ಹೃದಯದಲ್ಲಿದ್ದು ಹೃದಯನಾಮಕನಾಗಿರುವವನೂ ಜೀವರಲ್ಲಿ ಶರೀರನಾಮಕನಾಗಿರುವ ಭಗವಂತನೇ. ಏಕೆಂದರೆ ಪ್ರಾಣಾದಿಗಳೂ ಮತ್ತು ಸಕಲೇಂದ್ರಿಯಗಳೂ ಹೃದಯಲ್ಲಿರುವ ಈ ರೂಪನ್ನೇ ಆಶ್ರಯಿಸಿವೆ. ಮತ್ತು ಇದನ್ನು ಯಾರೂ ಮೀರಲಾರರು.

**ಸೈಷಾ ಚತುಷ್ಪದಾ ಷಡ್ವಿಧಾ ಗಾಯತ್ರೀ**

ಹೀಗೆ ಆರುವಿಧವಾದ ರೂಪಉಳ್ಳ ಗಾಯತ್ರೀನಾಮಕ ಪರಮಾತ್ಮನು ನಾಲ್ಕುಪಾದ ಉಳ್ಳವನೂ ಆಗಿದ್ದಾನೆ.

**ತದೇತದೃಚಾಭ್ಯನೂಕ್ತಮ್ ॥ ೫ ॥ ತಾವಾನಸ್ಯ ಮಹಿಮಾ ತತೋ ಜ್ಯಾಯಾಂಶ್ಚ ಪೂರುಷಃ ।**
**ಪಾದೋಽಸ್ಯ ಸರ್ವಾ ಭೂತಾನಿ ತ್ರಿಪಾದಸ್ಯಾಮೃತಂ ದಿವಿ ಇತಿ ॥ ೬ ॥**

ಗಾಯತ್ರೀನಾಮಕ ಭಗವಂತನು ನಾಲ್ಕುಪಾದಗಳುಳ್ಳವನೆಂದು ಈ ಋಚೆಯಲ್ಲಿ ಹೇಳಿದೆ - ಹಿಂದೆ ಹೇಳಿದ ಸಹಸ್ರಶೀರ್ಷತ್ವಾದಿಗಳೆಲ್ಲವೂ ಈ ಭಗವಂತನ ಮಹಿಮೆ. ಆವನ ಮಹಿಮೆ ಅಷ್ಟೇ ಅಲ್ಲ. ಆದ-ಕ್ಕಿಂತಲೂ ಅಧಿಕ ಮಹಿಮೆ ಉಳ್ಳವನು ಭಗವಂತ. ಎಲ್ಲ ಜೀವರೂ ಭಗವಂತನ ಭಿನ್ನವಾದ ಒಂದು ಅಂಶ ಮಾತ್ರ. ಸ್ವರೂಪಭೂತವಾದ ಮೂರು ಅಂಶಗಳು ನಾರಾಯಣ ವಾಸುದೇವ ವೈಕುಂಠನಾಮಕ-ವಾದವುಗಳು ದ್ಯುಲೋಕದಲ್ಲಿ ಅಂದರೆ, ಶ್ವೇತದ್ವೀಪ ಅನಂತಾಸನ ವೈಕುಂಠಲೋಕಗಳಲ್ಲಿವೆ.

ಯದ್ವೈ ತದ್ಬ್ರಹ್ಮ ಇತೀದಂ ವಾವ ತದ್ ಯೋಽಯಂ ಬಹಿರ್ಧಾ ಪುರುಷಾದಾಕಾಶಃ ಯೋ ವೈ ಸ ಬಹಿರ್ಧಾ ಪುರುಷಾದಾಕಾಶಃ ॥ ೭ ॥

ಅಯಂ ವಾವ ಸ ಯೋಽಯಮಂತಃ ಪುರುಷ ಆಕಾಶೋ ಯೋ ವೈ ಸೋಽಂತಃ ಪುರುಷ ಆಕಾಶಃ ॥ ೮ ॥

ಅಯಂ ವಾವ ಸ ಯೋಽಯಮಂತರ್ಹೃದಯ ಆಕಾಶಃ ಯೋ ವೈ ಸೋಽಂತರ್ಹೃದಯ ಆಕಾಶಃ ತದೇತತ್ ಪೂರ್ಣಮಪ್ರವರ್ತಿ ಪೂರ್ಣಾಮಪ್ರವರ್ತಿನೀಂ ಶ್ರಿಯಂ ಲಭೇತ ಯ ಏವಂ ವೇದ ॥೯॥೧೨ ॥

ದೇಹದ ಹೊರಗೂ ಒಳಗೂ ವ್ಯಾಪ್ತವಾದ ಬ್ರಹ್ಮನಾಮಕ ರೂಪವು ಗಾಯತ್ರೀನಾಮಕ ಭಗವಂತನ ಮೊದಲನೆಯ ಪಾದ. ಈ ಸರ್ವತ್ರವ್ಯಾಪ್ತವಾದ ರೂಪವೇ ಜೀವಸ್ವರೂಪದ ಹೊರಗೆ ಜಡಹೃದಯದಲ್ಲಿ ಪ್ರಕಾಶಮಾನವಾದ್ದರಿಂದ ಆಕಾಶನಾಮಕವಾಗಿದೆ. ಇದು ಎರಡನೆಯ ಪಾದ.

ಜೀವಸ್ವರೂಪದ ಹೊರಗೆ ಜಡಹೃದಯದಲ್ಲಿ ಪ್ರಕಾಶಮಾನವಾಗಿರುವ ಈ ರೂಪವೇ ಜೀವರೊಳಗೆ ವ್ಯಾಪಿಸಿಕೊಂಡಿರುವ ಪ್ರಕಾಶಮಾನವಾದ ರೂಪವಾಗಿದೆ. ಇದು ಮೂರನೆಯ ಪಾದ.

ಜೀವರೊಳಗೆ ವ್ಯಾಪ್ತವಾದ, ಆಕಾಶನಾಮಕವಾದ ಈ ರೂಪವೇ ಜೀವಸ್ವರೂಪಹೃದಯದಲ್ಲಿರುವ ಪ್ರಕಾಶಮಾನವಾದ ರೂಪವಾಗಿದೆ. ಇದು ನಾಲ್ಕನೆಯ ಪಾದ.

ಜೀವಸ್ವರೂಪಹೃದಯದಲ್ಲಿರುವ ಆಕಾಶನಾಮಕವಾದ ಈ ರೂಪವು ದೇಶ, ಕಾಲ, ಗುಣಗಳಿಂದ ಪೂರ್ಣ ಮತ್ತು ಇನ್ನೊಬ್ಬರಿಗೆ ಆಧೀನವಾಗಿ ಪ್ರವೃತ್ತಿ ಉಳ್ಳದ್ದಲ್ಲ. ಯಾರು ಈ ವಿದ್ಯೆಯನ್ನು ತಿಳಿಯುತ್ತಾನೋ ಅವನು, ಅಂದರೆ ಮುಖ್ಯವಾಗಿ ಚತುರ್ಮುಖಬ್ರಹ್ಮನು, ವಿಷ್ಣುವ್ಯತಿರಿಕ್ತರಿಗೆ ಆಧೀನವಲ್ಲದ, ತನ್ನ ಯೋಗ್ಯತಾನುಸಾರ ಪೂರ್ಣವಾದ ಸಂಪತ್ತನ್ನು ಸಂಸಾರದಲ್ಲಿಯೂ, ಮುಕ್ತಿಯಲ್ಲಿಯೂ ಹೊಂದುತ್ತಾನೆ. ಇತರರು ತಮ್ಮ ಯೋಗ್ಯತಾನುಸಾರವಾಗಿ ಸಂಪತ್ತನ್ನು ಹೊಂದುತ್ತಾರೆ.

ಮತ್ತು

'ಅಥ ಯದತಃ ಪರೋ ದಿವೋ ಜ್ಯೋತಿರ್ದೀಪ್ಯತೇ ವಿಶ್ವತಃ ಪೃಷ್ಠೇಷು ಸರ್ವತಃ ಪೃಷ್ಠೇಷು ಅನುತ್ತಮೇಷು ಉತ್ತಮೇಷು ಲೋಕೇಷು ಇದಂ ವಾವ ತದ್ ಯದಿದಮಸ್ಮಿನ್ನಂತಃ ಪುರುಷೇ ಜ್ಯೋತಿಃ ತಸ್ಯೈಷಾ ದೃಷ್ಟಿಃ ॥ ೭ ॥ ಯತ್ತೈತದಸ್ಮಿನ್ ಶರೀರೇ ಸಂಸ್ಪರ್ಶೇನೋಷ್ಣಿಮಾನಂ ವಿಜಾನಾತಿ ತಸ್ಯೈಷಾ ಶ್ರುತಿಃ। ಯತ್ರ ಏತತ್ ಕರ್ಣಾವಪಿಗೃಹ್ಯ ನಿನದಮಿವ ನದಥುರಿವ ಅಗ್ನೇರಿವ ಪ್ರಜ್ವಲತ ಉಪಶ್ರುಣೋತಿ ತದೇತದ್‌ದೃಷ್ಟಂ ಚ ಶ್ರುತಂ ಚೇತ್ಯುಪಾಸೀತ ಚಕ್ಷುಷ್ಯಃ ಶ್ರುತೋ ಭವತಿ ಯ ಏವಂ ವೇದ ಯ ಏವಂ ವೇದ ॥ ೮ ॥ ೧೩ ॥''

---

ಉಪನಿಷತ್ತಿನ ಈ ಅರ್ಥ ಸಿದ್ಧಾಂತಕ್ಕೆ ಅನುಗುಣವಾಗಿದೆ. ಸಂಶಯದ ಸಂದರ್ಭದಲ್ಲಾಗಲೀ, ಪೂರ್ವಪಕ್ಷದ ಸಂದರ್ಭದಲ್ಲಾಗಲೀ ಈ ಅರ್ಥವನ್ನು ತಿಳಿಯಬಾರದು. ಓದುಗರ ಅನುಕೂಲಕ್ಕಾಗಷ್ಟೇ ಈ ಅರ್ಥವನ್ನು ಇಲ್ಲಿ ನೀಡಲಾಗಿದೆ.

ಎಂಬ ರೂಪಕ್ಕಿಂತ ಬೇರೆಯಲ್ಲ. ವಾಕ್‌ನಾಮಕನು ಭಗವಂತನೇ. ಏಕೆಂದರೆ ಎಲ್ಲ ಜಗತ್ತೂ ಮಾತಿನಿಂದಲೇ ಪ್ರವೃತ್ತಿ ಮಾಡುತ್ತದೆ. ಹೀಗೆ ಸರ್ವಪ್ರವರ್ತಕತ್ವ ಭಗವಂತನದೇ ಲಕ್ಷಣ. ಗಾಯತ್ರಿಯಲ್ಲಿರುವ ಭಗವಂತನ ಹಯಶಿರ್ಷರೂಪವೇ ವೇದಗಳನ್ನು ಪ್ರಥಮತಃ ಉಪದೇಶಮಾಡಿ, ಎಲ್ಲರನ್ನೂ ರಕ್ಷಣೆ ಮಾಡುವಂತಹದಾದ್ದರಿಂದ ಆ ರೂಪಕ್ಕೆ ಗಾಯತ್ರೀ ಎಂದು ಹೆಸರು ಯುಕ್ತವೆ.

ಯಾ ವೈ ಸಾ ಗಾಯತ್ರೀ ಇಯಂ ವಾವ ಸಾ ಯೇಯಂ ಪೃಥಿವೀ, ಅಸ್ಯಾಂ ಹಿ ಇದಂ ಸರ್ವಂ ಭೂತಂ ಪ್ರತಿಷ್ಠಿತಮ್, ಏತಾಮೇವ ನಾತಿಶೀಯಂತೇ ॥ ೨ ॥

ಪೃಥಿವಿಯಲ್ಲಿರುವ ಪೃಥಿವೀನಾಮಕನಾದ, ಹಳದಿ ಬಣ್ಣದ ಸ್ತ್ರೀರೂಪಿಯಾದ ಭಗವಂತನೂ ಗಾಯತ್ರೀನಾಮಕ ಭಗವಂತನೇ ಆಗಿದ್ದಾನೆ. ಏಕೆಂದರೆ, ಪೃಥಿವೀ ಸಂಸ್ಥನಾದ ಸ್ತ್ರೀರೂಪಿಯಾದ ಭಗವಂತನಲ್ಲಿಯೇ ಎಲ್ಲ ಜಗತ್ತೂ ಆಶ್ರಯ ಪಡೆದಿದೆ. ಮತ್ತು ಅವನನ್ನು ಯಾರೂ ಮೀರುವುದಿಲ್ಲ.

ಯಾ ವೈ ಸಾ ಪೃಥಿವೀ ಇಯಂ ವಾವ ಸಾ ಯದಿದಮಸ್ಮಿನ್ ಪುರುಷೇ ಶರೀರಮ್, ಅಸ್ಮಿನ್ ಹೀಮೇ ಪ್ರಾಣಾಃ ಪ್ರತಿಷ್ಠಿತಾಃ, ಏತದೇವ ನಾತಿಶೀಯಂತೇ ॥ ೩ ॥

ಜೀವರೊಳಗಿದ್ದು ಶರೀರನಾಮಕನಾದ ವಿಷ್ಣುವೂ ಪ್ರಸಿದ್ಧನಾದ ಪೃಥಿವೀನಾಮಕ ವಿಷ್ಣುವೇ ಆಗಿದ್ದಾನೆ. ಏಕೆಂದರೆ ಜೀವರೊಳಗಿರುವ ಶರೀರನಾಮಕನಾದ ವಿಷ್ಣುವಿನಲ್ಲೇ ಪ್ರಾಣಾದಿ ವಾಯುಗಳೂ ಹಾಗೂ ಇಂದ್ರಿಯಗಳೂ ಆಶ್ರಿತವಾಗಿವೆ. ಮತ್ತು ಈ ರೂಪವನ್ನು ಯಾರೂ ಮೀರುವುದಿಲ್ಲ.

ಯದ್ವೈತತ್ ಪುರುಷೇ ಶರೀರಂ ಇದಂ ವಾವ ತತ್ ಯದಿದಮಸ್ಮಿನ್ನಂತಃ ಪುರುಷೇ ಹೃದಯಮ್, ಅಸ್ಮಿನ್ ಹಿ ಇಮೇ ಪ್ರಾಣಾಃ ಪ್ರತಿಷ್ಠಿತಾ, ಏತದೇವ ನಾತಿಶೀಯಂತೇ ॥ ೪ ॥

ಜೀವನು ಹೃದಯದಲ್ಲಿದ್ದು ಹೃದಯನಾಮಕನಾಗಿರುವವನೂ ಜೀವರಲ್ಲಿ ಶರೀರನಾಮಕನಾಗಿರುವ ಭಗವಂತನೇ. ಏಕೆಂದರೆ ಪ್ರಾಣಾದಿಗಳೂ ಮತ್ತು ಸಕಲೇಂದ್ರಿಯಗಳೂ ಹೃದಯಲ್ಲಿರುವ ಈ ರೂಪನ್ನೇ ಆಶ್ರಯಿಸಿವೆ. ಮತ್ತು ಇದನ್ನು ಯಾರೂ ಮೀರಲಾರರು.

ಸೈಷಾ ಚತುಷ್ಪದಾ ಷಡ್ವಿಧಾ ಗಾಯತ್ರೀ

ಹೀಗೆ ಆರುವಿಧವಾದ ರೂಪಉಳ್ಳ ಗಾಯತ್ರೀನಾಮಕ ಪರಮಾತ್ಮನು ನಾಲ್ಕುಪಾದ ಉಳ್ಳವನೂ ಆಗಿದ್ದಾನೆ.

ತದೇತದೃಚಾಭ್ಯನೂಕ್ತಮ್ ॥ ೫ ॥ ತಾವಾನಸ್ಯ ಮಹಿಮಾ ತತೋ ಜ್ಯಾಯಾಂಶ್ಚ ಪೂರುಷಃ ।
ಪಾದೋಽಸ್ಯ ಸರ್ವಾ ಭೂತಾನಿ ತ್ರಿಪಾದಸ್ಯಾಮೃತಂ ದಿವಿ ಇತಿ ॥ ೬ ॥

ಗಾಯತ್ರೀನಾಮಕ ಭಗವಂತನು ನಾಲ್ಕುಪಾದಗಳುಳ್ಳವನೆಂದು ಈ ಋಚೆಯಲ್ಲಿ ಹೇಳಿದೆ - ಹಿಂದೆ ಹೇಳಿದ ಸಹಸ್ರಶೀರ್ಷತ್ವಾದಿಗಳೆಲ್ಲವೂ ಈ ಭಗವಂತನ ಮಹಿಮೆ. ಅವನ ಮಹಿಮೆ ಅಷ್ಟೇ ಅಲ್ಲ. ಅದಕ್ಕಿಂತಲೂ ಅಧಿಕ ಮಹಿಮೆ ಉಳ್ಳವನು ಭಗವಂತ. ಎಲ್ಲ ಜೀವರೂ ಭಗವಂತನ ಭಿನ್ನವಾದ ಒಂದು ಅಂಶ ಮಾತ್ರ. ಸ್ವರೂಪಭೂತವಾದ ಮೂರು ಅಂಶಗಳು ನಾರಾಯಣ ವಾಸುದೇವ ವೈಕುಂಠನಾಮಕವಾದವುಗಳು ದ್ಯುಲೋಕದಲ್ಲಿ ಅಂದರೆ, ಶ್ವೇತದ್ವೀಪ ಅನಂತಾಸನ ವೈಕುಂಠಲೋಕಗಳಲ್ಲಿವೆ.

ಯದ್ವೈ ತದ್ಬ್ರಹ್ಮ ಇತೀದಂ ವಾವ ತದ್ ಯೋಽಯಂ ಬಹಿರ್ಧಾ ಪುರುಷಾದಾಕಾಶಃ ಯೋ ವೈ ಸ ಬಹಿರ್ಧಾ ಪುರುಷಾದಾಕಾಶಃ ॥ ೭ ॥

ಅಯಂ ವಾವ ಸ ಯೋಽಯಮಂತಃ ಪುರುಷ ಆಕಾಶೋ ಯೋ ವೈ ಸೋಽಂತಃ ಪುರುಷ ಆಕಾಶಃ ॥ ೮ ॥

ಅಯಂ ವಾವ ಸ ಯೋಽಯಮಂತರ್ಹೃದಯ ಆಕಾಶಃ ಯೋ ವೈ ಸೋಽಂತರ್ಹೃದಯ ಆಕಾಶಃ ತದೇತತ್ ಪೂರ್ಣಮಪ್ರವರ್ತಿ ಪೂರ್ಣಮಪ್ರವರ್ತಿನೀಂ ಶ್ರಿಯಂ ಲಭೇತ ಯ ಏವಂ ವೇದ ॥೯॥೧೨ ॥

ದೇಹದ ಹೊರಗೂ ಒಳಗೂ ವ್ಯಾಪ್ತವಾದ ಬ್ರಹ್ಮನಾಮಕ ರೂಪವು ಗಾಯತ್ರೀನಾಮಕ ಭಗವಂತನ ಮೊದಲನೆಯ ಪಾದ. ಈ ಸರ್ವತ್ರವ್ಯಾಪ್ತವಾದ ರೂಪವೇ ಜೀವಸ್ವರೂಪದ ಹೊರಗೆ ಜಡಹೃದಯದಲ್ಲಿ ಪ್ರಕಾಶಮಾನವಾದ್ದರಿಂದ ಆಕಾಶನಾಮಕವಾಗಿದೆ. ಇದು ಎರಡನೆಯ ಪಾದ.

ಜೀವಸ್ವರೂಪದ ಹೊರಗೆ ಜಡಹೃದಯದಲ್ಲಿ ಪ್ರಕಾಶಮಾನವಾಗಿರುವ ಈ ರೂಪವೇ ಜೀವರೊಳಗೆ ವ್ಯಾಪಿಸಿಕೊಂಡಿರುವ ಪ್ರಕಾಶಮಾನವಾದ ರೂಪವಾಗಿದೆ. ಇದು ಮೂರನೆಯ ಪಾದ.

ಜೀವರೊಳಗೆ ವ್ಯಾಪ್ತವಾದ, ಆಕಾಶನಾಮಕವಾದ ಈ ರೂಪವೇ ಜೀವಸ್ವರೂಪಹೃದಯದಲ್ಲಿರುವ ಪ್ರಕಾಶಮಾನವಾದ ರೂಪವಾಗಿದೆ. ಇದು ನಾಲ್ಕನೆಯ ಪಾದ.

ಜೀವಸ್ವರೂಪಹೃದಯದಲ್ಲಿರುವ ಆಕಾಶನಾಮಕವಾದ ಈ ರೂಪವು ದೇಶ, ಕಾಲ, ಗುಣಗಳಿಂದ ಪೂರ್ಣ ಮತ್ತು ಇನ್ನೊಬ್ಬರಿಗೆ ಅಧೀನವಾಗಿ ಪ್ರವೃತ್ತಿ ಉಳ್ಳದ್ದಲ್ಲ. ಯಾರು ಈ ವಿದ್ಯೆಯನ್ನು ತಿಳಿಯುತ್ತಾನೋ ಅವನು, ಅಂದರೆ ಮುಖ್ಯವಾಗಿ ಚತುರ್ಮುಖಬ್ರಹ್ಮನು, ವಿಷ್ಣುವ್ಯತಿರಿಕ್ತರಿಗೆ ಅಧೀನವಲ್ಲದ, ತನ್ನ ಯೋಗ್ಯತಾನುಸಾರ ಪೂರ್ಣವಾದ ಸಂಪತ್ತನ್ನು ಸಂಸಾರದಲ್ಲಿಯೂ, ಮುಕ್ತಿಯಲ್ಲಿಯೂ ಹೊಂದುತ್ತಾನೆ. ಇತರರು ತಮ್ಮ ಯೋಗ್ಯತಾನುಸಾರವಾಗಿ ಸಂಪತ್ತನ್ನು ಹೊಂದುತ್ತಾರೆ.

ಮತ್ತು

'ಅಥ ಯದತಃ ಪರೋ ದಿವೋ ಜ್ಯೋತಿರ್ದೀಪ್ಯತೇ ವಿಶ್ವತಃ ಪೃಷ್ಠೇಷು ಸರ್ವತಃ ಪೃಷ್ಠೇಷು ಅನುತ್ತಮೇಷು ಉತ್ತಮೇಷು ಲೋಕೇಷು ಇದಂ ವಾವ ತದ್ ಯದಿದಮಸ್ಮಿನ್ನಂತಃ ಪುರುಷೇ ಜ್ಯೋತಿಃ ತಸ್ಯೈಷಾ ದೃಷ್ಟಿಃ ॥ ೭ ॥ ಯತ್ರೈತದಸ್ಮಿನ್ ಶರೀರೇ ಸಂಸ್ಪರ್ಶನೋಷ್ಣಿಮಾನಂ ವಿಜಾನಾತಿ ತಸ್ಯೈಷಾ ಶ್ರುತಿಃ । ಯತ್ರ ಏತತ್ ಕರ್ಣಾವಪಿಗೃಹ್ಯ ನಿನದಮಿವ ನದಥುರಿವ ಅಗ್ನೇರಿವ ಪ್ರಜ್ವಲತ ಉಪಶ್ರುಣೋತಿ ತದೇತದ್‌ದೃಷ್ಟಂ ಚ ಶ್ರುತಂ ಚೇತ್ಯುಪಾಸೀತ ಚಕ್ಷುಷ್ಯಃ ಶ್ರುತೋ ಭವತಿ ಯ ಏವಂ ವೇದ ಯ ಏವಂ ವೇದ ॥ ೮ ॥ ೧೩ ॥''

---

ಉಪನಿಷತ್ತಿನ ಈ ಅರ್ಥ ಸಿದ್ಧಾಂತಕ್ಕೆ ಅನುಗುಣವಾಗಿದೆ. ಸಂಶಯದ ಸಂದರ್ಭದಲ್ಲಾಗಲೀ, ಪೂರ್ವಪಕ್ಷದ ಸಂದರ್ಭದಲ್ಲಾಗಲೀ ಈ ಅರ್ಥವನ್ನು ತಿಳಿಯಬಾರದು. ಓದುಗರ ಅನುಕೂಲಕ್ಕಾಗಷ್ಟೇ ಈ ಅರ್ಥವನ್ನು ಇಲ್ಲಿ ನೀಡಲಾಗಿದೆ.

ನಾರಾಯಣ, ವಾಸುದೇವ, ವೈಕುಂಠ ಎಂಬ ರೂಪತ್ರಯಉಳ್ಳ ಭಗವಂತನು ದ್ಯುಲೋಕಗಳಗಿಂತ ಮೇಲೆ ಶ್ವೇತದ್ವೀಪ, ಅನಂತಾಸನ, ವೈಕುಂಠಗಳಲ್ಲಿ ಜ್ಯೋತಿರ್ಮಯನಾಗಿ ವಿರಾಜಮಾನನಾಗಿದ್ದಾನೆ. ಎಲ್ಲ ಬ್ರಹ್ಮಲೋಕಗಳಿಗಿಂತಲೂ, ಎತ್ತರದಲ್ಲಿ ಸರ್ವಲೋಕಗಳಿಗಿಂತಲೂ ಎತ್ತರದಲ್ಲಿರುವ ಉತ್ತಮವಾದ ಲೋಕಗಳಲ್ಲಿಯೂ ಕೆಳಗಿನ ಲೋಕಗಳಲ್ಲಿಯೂ ಇರುವವನು, ಜೀವರ ಹೃದಯದಲ್ಲಿ ಜ್ಯೋತಿರ್ಮಯ-ನಾಗಿರುವ ಪರಮಾತ್ಮನೇ ಆಗಿದ್ದಾನೆ. ಹೃದಯದಲ್ಲಿ ಜ್ಯೋತಿರೂಪ ಭಗವಂತನಿದ್ದಾನೆಂಬುದಕ್ಕೆ ಈ ಮುಂದೆ ಹೇಳುವ ಅನುಭವವೇ ಪ್ರಮಾಣ -

ದೇಹದಲ್ಲಿ ಮುಟ್ಟಿದಾಗ ಉಷ್ಣಸ್ಪರ್ಶದ ಅನುಭವ ಉಂಟಾಗುತ್ತದೆ. ಇದೇ ಹೃದಯಾಂತರ್ಗತ ಭಗವಂತನ ವಿಷಯದಲ್ಲಿ ಪ್ರಮಾಣ, ಹೃದಯದಲ್ಲಿರುವ ಭಗವಂತನ ವಿಷಯದಲ್ಲಿ ಶರೀರದೊಳಗಿರುವ ಪ್ರಾಣದೇವರಿಂದ ಮಾಡಲ್ಪಡುವ ಸ್ತುತಿರೂಪವಾದ ಶಬ್ದವೂ ಪ್ರಮಾಣವಾಗಿದೆ. ಜೀವರು ತಮ್ಮೆರಡೂ ಕಿವಿಗಳನ್ನು ಮುಚ್ಚಿಕೊಂಡಾಗ ಸಮುದ್ರಘೋಷದಂತೆ, ಮೇಘನಾದದಂತೆ, ಪ್ರಜ್ವಲಿಸುವ ಅಗ್ನಿಯ ಘೋಷದಂತೆ ಧ್ವನಿಯನ್ನು ಕೇಳುತ್ತಾರೆ. ಇದೇ ಪ್ರಾಣದೇವರು ಮಾಡುವ ಸ್ತೋತ್ರ ರೂಪವಾದ ಶಬ್ದ. ಆ ಭಗವಂತನನ್ನು ಈ ರೀತಿಯಾಗಿ ಪ್ರತ್ಯಾಕ್ಷಾನುಭವ ಮತ್ತು ಶಬ್ದಶ್ರವಣರೂಪ ಪ್ರಮಾಣಸಿದ್ಧ ಎಂದೂ ಉಪಾಸನೆ ಮಾಡಬೇಕು. ಯಾರು ಹೀಗೆ ತಿಳಿದು ಉಪಾಸನೆ ಮಾಡುತ್ತಾರೋ ಅವರು, ಮುಕ್ತಿಯಲ್ಲಿ ದಿವ್ಯ ಚಕ್ಷುಸ್ಸುಳ್ಳವರೂ ಕೀರ್ತಿವಂತರೂ ಆಗುತ್ತಾರೆ.

ಇಲ್ಲಿ ಕೇಳಿಸುತ್ತಿರುವ ಗಾಯತ್ರಿಯೇ ಈ ಅಧಿಕರಣದ ವಿಷಯ. ಗ್ರಂಥಕಾರರು ವಿಕಲ್ಪ ಮಾಡುವಾಗ 'ಭೂತಪಾದತ್ವಾದಿ ವಿಷ್ಣುಲಿಂಗಮ್' ಎಂದು ಹೇಳಿದ್ದಾರೆ. ವಸ್ತುತಃ ಗಾಯತ್ರೀಶಬ್ದದ ಪ್ರವೃತ್ತಿನಿಮಿತ್ತ ಗಾನತ್ರಾಣಕರ್ತೃತ್ವ. ಇದನ್ನೇ ಹೇಳಬೇಕಿತ್ತಲ್ಲವೇ? ಎಂಬ ಪ್ರಶ್ನೆ ಸಹಜ. ಆದರೆ ಭೂತಪಾದತ್ವವು ಗಾನತ್ರಾಣಕರ್ತೃತ್ವದಲ್ಲೇ ಪರ್ಯವಸಾನವಾಗುವುದರಿಂದ ಹೀಗೆ ಹೇಳಿದ್ದು ತಪ್ಪಲ್ಲ.

ಶಂಕೆ - 'ಅನಾದಿಸ್ವಭಾವಃ ಈಶಾನಧೀನಃ ಉತಾಧೀನಃ?' ಎಂದು ಗ್ರಂಥಕಾರರು ಸ್ವಾತಂತ್ರ್ಯಧರ್ಮ-ವನ್ನು ವಿಕಲ್ಪಿಸಿದ್ದಾರೆ. ಇದರಂತೆ ತದ್ಗತತ್ವವನ್ನೂ ವಿಕಲ್ಪಿಸಬೇಕಿತ್ತು. ಭಗವಂತನಲ್ಲಿರುವ ಶಬ್ದಗಳಿಗೆ ಸ್ವಾತಂತ್ರ್ಯದಂತೆ ತದ್ಗತತ್ವವೂ ಪ್ರವೃತ್ತಿನಿಮಿತ್ತವಾಗುತ್ತದೆ. ಆದ್ದರಿಂದ ತದ್ಗತತ್ವವನ್ನು ಹೇಳದಿರುವುದು ತಪ್ಪಲ್ಲವೇ?

ಸಮಾಧಾನ - ಇಲ್ಲಿ ತದ್ಗತತ್ವವನ್ನು ವಿವಕ್ಷಿಸದಿರಲು ಎರಡು ಕಾರಣಗಳಿವೆ. ಗಾಯತ್ರೀಶಬ್ದಕ್ಕೆ ತ್ರಾಣಕರ್ತೃತ್ವವು ಪ್ರವೃತ್ತಿನಿಮಿತ್ತವಾದಂತೆ ಗಾನಕರ್ತೃತ್ವವೂ ಪ್ರವೃತ್ತಿನಿಮಿತ್ತವಾಗಿದೆ. ಭಗವಂತನು ಸಕಲ ರಕ್ಷಕನಾದ್ದರಿಂದ ತ್ರಾಣಕರ್ತೃತ್ವವನ್ನು ಸುಲಭವಾಗಿ ಹೇಳಬಹುದು. ಆದರೆ ಗಾನಕರ್ತೃತ್ವವನ್ನು ಹೇಳಲು ಸಾಧ್ಯವಿಲ್ಲ. ಗಾನಕರ್ತೃತ್ವವೆಂದರೆ ಅರ್ಥಪ್ರತಿಪಾದಕತ್ವ ಎಂದರ್ಥ. ಅರ್ಥಪ್ರತಿಪಾದನೆ ಮಾಡುವಿಕೆಯು ಶಬ್ದಧರ್ಮವೇ ಹೊರತು ವ್ಯಕ್ತಿಯ ಧರ್ಮವಾಗುವುದಿಲ್ಲ. ಒಂದು ವೇಳೆ ತದ್ಗತತ್ವವನ್ನು ವಿವಕ್ಷಿಸಿದಲ್ಲಿ ಈ ಅರ್ಥಪ್ರತಿಪಾದಕತ್ವವೆಂಬ ಗಾನಕರ್ತೃತ್ವವು ಬ್ರಹ್ಮನಲ್ಲಿ ಅಯುಕ್ತವಾಗುತ್ತಿತ್ತು. ಈ ಕಾರಣಕ್ಕಾಗಿ ಗ್ರಂಥಕಾರರು ಸ್ವಾತಂತ್ರ್ಯವನ್ನಷ್ಟೇ ಉಲ್ಲೇಖಿಸಿದ್ದಾರೆ. ಭಗವಂತನಲ್ಲಿ ಅರ್ಥಪ್ರತಿಪಾದಕತ್ವವಿಲ್ಲದಿದ್ದರೂ ಅರ್ಥಪ್ರತಿಪಾದಕಶಬ್ದಗಳಿಗೆ ಸ್ವಾಮಿಯಾದ್ದರಿಂದ ಸ್ವಾಮಿತ್ವವನ್ನು ಹೇಳಬಹುದು. ಅಥವಾ ಅರ್ಥ-

ಪ್ರತಿಪಾದಕತ್ವವು ಸಕಲಶಬ್ದಾಂತರ್ಗತನಾದ ಭಗವಂತನಲ್ಲಿಯೂ ಇದೆ ಎಂದು ಇಟ್ಟುಕೊಳ್ಳೋಣ. ಆದರೂ ಸ್ವಾಮಿತ್ವವನ್ನಷ್ಟೇ ಉಲ್ಲೇಖಿಸಲು ಮತ್ತೊಂದು ಕಾರಣವಿದೆ. ಗಾಯತ್ರೀಶಬ್ದದ ಪ್ರವೃತ್ತಿನಿಮಿತ್ತವು ಅನಾದಿಸ್ವಭಾವವಾಗಿದೆ. ಇಂತಹ ಅನಾದಿಸ್ವಭಾವಪ್ರವೃತ್ತಿನಿಮಿತ್ತಗಳಿಗೂ ಭಗವಂತನು ಸ್ವಾಮಿಯಾಗಿದ್ದಾನೆಂಬ ಮಹಾಗುಣವನ್ನು ಪ್ರತಿಪಾದಿಸಬೇಕಾಗಿದೆ. ಆದಕ್ಕೋಸ್ಕರ ಅನುಭಾಷ್ಯದಲ್ಲಿ ಹೇಳಿದಂತೆ ಸ್ವಾತಂತ್ರ್ಯವನ್ನಷ್ಟೇ ಗ್ರಂಥಕಾರರು ವಿಕಲ್ಪಿಸಿ ತದ್ಗತತ್ವವನ್ನು ವಿಕಲ್ಪಿಸಿಲ್ಲ.

ಪೂರ್ವಪಕ್ಷದ ಫಲಫಲಿಭಾವ - ಒಂದು ವೇಳೆ ಅನಾದಿಸ್ವಭಾವವು ಭಗವಂತನ ಅಧೀನವಾಗದಿದ್ದರೆ ಆವಾಗ ಗಾಯತ್ರೀಶಬ್ದದ ಪ್ರವೃತ್ತಿನಿಮಿತ್ತವು ಬ್ರಹ್ಮನಲ್ಲಿ ಬರುವುದಿಲ್ಲ. ಆವಾಗ ಪ್ರಸಿದ್ಧಿಗೆ ಬಾಧ ಬರುವುದರಿಂದ ಶ್ರುತಿಯ ಮುಖ್ಯಾರ್ಥವನ್ನು ಬಿಟ್ಟು ಛಂದಸ್ಸು ಗಾಯತ್ರೀಶಬ್ದಪ್ರತಿಪಾದ್ಯವೆಂದು ನಿರ್ಣಯವಾಗುತ್ತದೆ.

ಸಿದ್ಧಾಂತದ ಫಲಫಲಿಭಾವ - ಒಂದು ವೇಳೆ ಅನಾದಿಸ್ವಭಾವವು ಭಗವಂತನ ಅಧೀನವಾದರೆ ಗಾಯತ್ರೀಶಬ್ದದ ಪ್ರವೃತ್ತಿನಿಮಿತ್ತವು ಬ್ರಹ್ಮನಲ್ಲಿ ಉಪಪನ್ನವಾಗುತ್ತದೆ. ಆವಾಗ ಪ್ರಸಿದ್ಧಿಗೆ ಬಾಧವುಬಾರದ ಕಾರಣ ಶ್ರುತಿಯ ಮುಖ್ಯಾರ್ಥಕ್ಕೆ ಭಂಗ ಬರುವುದಿಲ್ಲ. ಭೂತಪಾದತ್ವಾದಿವಿಷ್ಣುಲಿಂಗಗಳಿಂದ ಗಾಯತ್ರೀ-ಶ್ರುತಿಯು ಬಾಧ್ಯವಾಗುತ್ತದೆ. ಗಾಯತ್ರೀಶಬ್ದದಿಂದ ವಿಷ್ಣುವೇ ವಾಚ್ಯನೆಂದು ನಿರ್ಣಯವಾಗುತ್ತದೆ.

ಇಲ್ಲಿಯ ತನಕ ಅನುವ್ಯಾಖ್ಯಾನದಲ್ಲಿ ಹೇಳಿದ ಪ್ರಮೇಯಾಶ್ರಿತವಾದ ಅಭ್ಯಧಿಕಾಶಂಕೆಗೆ ಉಪಯುಕ್ತವಾಗುವಂತೆ ಸಂಶಯಪರಂಪರೆಯನ್ನು ಹೇಳಿದ್ದಾಯಿತು. ಪ್ರಕೃತ ಸೂತ್ರದಿಂದ ಸೂಚಿತವಾದ ಪ್ರಮಾಣಾಶ್ರಿತವಾದ ಅಭ್ಯಧಿಕಾಶಂಕೆಗೆ ಉಪಯುಕ್ತವಾದ ಸಂಶಯಕೋಟಿಯನ್ನು 'ತಥಾ' ಎಂಬ ಗ್ರಂಥದಿಂದ ತೋರಿಸುತ್ತಿದ್ದಾರೆ.

ಆದು ಹೀಗೆ -- (೧) ಗಾಯತ್ರೀಶಬ್ದವು ಛಂದಸ್ಸನ್ನು ಹೇಳುತ್ತದೋ ಅಥವಾ ಬ್ರಹ್ಮನನ್ನೋ? (೨) ಆದಕ್ಕಾಗಿ ಬ್ರಹ್ಮಪಕ್ಷದಲ್ಲಿ ಗಾಯತ್ರೀ ಹಾಗೂ ಜ್ಯೋತಿಶಬ್ದಗಳು ಒಂದೇ ಪ್ರಕರಣದಲ್ಲಿರುವುದರಿಂದ ಒಬ್ಬನನ್ನೇ ಪ್ರತಿಪಾದಿಸುತ್ತವೆ. ಆವಾಗ ದಿವಿಸ್ಥಿತತ್ವ ಮತ್ತು ದಿವಃಪರತ್ವ (ದ್ಯುಲೋಕದಲ್ಲಿ ಇರುವಿಕೆ; ದ್ಯುಲೋಕವನ್ನು ದಾಟಿ ಇರುವಿಕೆ) ಎಂಬ ಉಪದೇಶಭೇದವು ತಪ್ಪಾಗುತ್ತದೋ ಇಲ್ಲವೋ? (೩) ಆದಕ್ಕಾಗಿ ದಿವಿ ಮತ್ತು ದಿವಃ ಎಂಬ ಸಪ್ತಮೀ ಪಂಚಮೀ ವಿಭಕ್ತಿಗಳು ವಿರುದ್ಧವಾಗಿವೆಯೋ ಅಥವಾ ವಿವಕ್ಷಾಭೇದದಿಂದ ವಿರೋಧವನ್ನು ಪರಿಹರಿಸಬಹುದೋ? ಎಂದು ಸಂಶಯಪರಂಪರೆಯನ್ನು ತಿಳಿಯಬೇಕು. ಉಪಲಕ್ಷಣಯಾ ತಿಳಿಯಬೇಕಾದ ಮತ್ತೊಂದು ಸಂಶಯ. ಬ್ರಹ್ಮಪಕ್ಷದಲ್ಲಿ ಪ್ರಸಿದ್ಧಪದವನ್ನು ಬಿಟ್ಟು ಅಪ್ರಸಿದ್ಧವಾದ ಗಾಯತ್ರೀಪದವನ್ನು ಪ್ರಯೋಗಿಸಲು ಪ್ರಯೋಜನವಿದೆಯೋ ಇಲ್ಲವೋ ಎಂದು. ಇಲ್ಲಿಗೆ ಸಂಶಯವಿಚಾರವು ಮುಗಿಯಿತು.

**गुरुराजीयम् – तदर्थं किमनादिस्वभाव इति ॥ इयं चिन्तापूर्वचिन्तार्था ॥ तथा ब्रह्मपक्ष इति ॥ अत्र ब्रह्मपक्ष इत्युक्त्या इयं चिन्ता प्रथमचिन्तार्थेत्युक्ता भवति ॥**

## ನಾಲ್ಕು ವಿಧ ಪ್ರಮಾಣಾಶ್ರಿತ ಪೂರ್ವಪಕ್ಷಗಳು

**तात्पर्यचन्द्रिका**

यद्यपि पूर्वत्र निरवकाशलिङ्गैः सावकाशज्योतिश्श्रुतिबाधः उक्तः, अत्र ''यद्वैतत् ब्रह्म'' इत्यादिश्रुत्यनुगृहीतैः भूतपादत्वादिनिरवकाशलिङ्गैः सुतरां सावकाशऽ गायत्र्यादि श्रुतिबाध इति पूर्वपक्षानुदयः । तथाऽप्यधिकाशङ्क्या तदुदयः ।

शङ्का तु – 'विष्णौ प्रसिद्धेषु शब्देषु सत्स्वन्यत्रप्रसिद्धगायत्र्यादिशब्दप्रयोगे प्रयोजनं न' इत्येका । इयञ्च 'चेतोऽर्पणनिगदात्' इति सूत्रे सिद्धान्ते प्रयोजनोक्त्या सूचिता । आकाशादिशब्दसाधारणी चेयम् । गायत्रीशब्दे अनुपपत्त्यन्तरसद्भावात् स उदाहृतः । अत एव ''अग्निगायत्र्यादि'' इति भाष्ये आदिपदप्रयोगो युक्तः, ''अधिकरणान्तरेऽप्येतन्न्यायस्यानुसन्धेयत्वं च सूचयति'' इति टीका चोपपन्ना । असाधारणी त्वन्यायुक्त अग्निसूक्तस्थज्योतिषो विष्णुत्वं, उपदेशभेदाभावात्, इह तु 'दिवः' इति पञ्चम्युपदेशस्थस्य ज्योतिश्श्रुत्या विष्णुत्वेऽपि 'दिवि' ति तद्विरुद्धसप्तम्युपदेशस्थगायत्र्या न विष्णुत्वमिति ।

अपरा तु – अग्निसूक्तस्थज्योतिर्निष्ठकर्णादिविदूरत्वविरुद्धदृष्टश्रुतत्वाद्युपदेशात् नेदं ज्योतिर्विष्णुः, ततश्च गायत्र्यपि न विष्णुरिति । इदञ्च शङ्काद्वयं ''उपदेश-भेदात्'' इति सूत्रे कण्ठोक्तम् । अपरा तु – एकस्या वह्निश्रुतेरन्यत्रप्रसिद्धिबाधेऽपि गायत्रीवाक्पृथिव्याद्यनेकशब्दानामन्यत्रप्रसिद्धिबाधो न युक्तः, अन्तरधिकरणे इन्द्रादिबहुश्रुतीनामन्यत्रप्रसिद्धिबाधस्तु अन्यत्रप्रसिद्धान्तस्थत्वमुखेन युक्तः, न चेह तथामुखमस्तीति । इयञ्च – 'कथं प्रसिद्धबहुलशब्दानामन्यथार्थता' इत्यनुव्याख्याने उक्ता । एताश्च प्रमाणाश्रिताः ।

ಅನುವಾದ - ವಸ್ತುತಃ ಹಿಂದಿನ ಅಧಿಕರಣದಲ್ಲಿ ನಿರವಕಾಶಲಿಂಗಗಳಿಂದ ಸಾವಕಾಶಜ್ಯೋತಿ-ಶ್ರುತಿಗೆ ಬಾಧವನ್ನು ಹೇಳಿದ್ದಾಗಿದೆ. ಈ ಅಧಿಕರಣದಲ್ಲಿ 'ಯದ್ವೈತದ್ಬ್ರಹ್ಮ' ಇತ್ಯಾದಿ ಶ್ರುತಿಯ ಅನು-ಗ್ರಹವನ್ನು ಹೊಂದಿರುವ ಭೂತಪಾದತ್ವಾದಿ ನಿರವಕಾಶಲಿಂಗಗಳಿಂದ ಸಾವಕಾಶ ಗಾಯತ್ರೀಶ್ರುತಿಗೆ ಬಾಧವನ್ನು ಹೇಳಲಾಗಿದೆ. ಈ ಬಾಧವು ಹಿಂದಿನ ಅಧಿಕರಣದ ನ್ಯಾಯದಿಂದಲೇ ಸುತರಾಂ ಸಿದ್ಧವಾಗುವಾಗ ಪುನಃ ಈ ಅಧಿಕರಣದ ಪೂರ್ವಪಕ್ಷವೇ ಹುಟ್ಟುವುದಿಲ್ಲ. ಆದರೂ ಸಹ ಅಧಿಕಾ-ಶಂಕೆಯಿರುವುದರಿಂದ ಪೂರ್ವಪಕ್ಷವು ಹುಟ್ಟುತ್ತದೆ.

ಅಧಿಕಾಶಂಕೆ ಹೀಗಿದೆ - ವಿಷ್ಣುವಿನಲ್ಲಿ ಪ್ರಸಿದ್ಧವಾದ ಶಬ್ದಗಳಿರುವಾಗ ಅನ್ಯತ್ರಪ್ರಸಿದ್ಧವಾದ ಗಾಯತ್ರ್ಯಾದಿ ಶಬ್ದಗಳನ್ನು ವಿಷ್ಣುವಿನಲ್ಲಿ ಪ್ರಯೋಗಿಸಲು ಪ್ರಯೋಜನವಿಲ್ಲ. ಇದು ಮೊದಲನೆಯ ಅಧಿಕಾಶಂಕೆ. ಇದನ್ನು 'ಚೇತೋರ್ಪಣನಿಗದಾತ್' ಎಂಬ ಸೂತ್ರದ ಸಿದ್ಧಾಂತದಲ್ಲಿ ಪ್ರಯೋಜನವನ್ನು ಹೇಳುವ ಮಾತಿನಿಂದ ಸೂಚಿಸಿದ್ದಾರೆ. ವಸ್ತುತಃ ಈ ಶಂಕೆಯು ಆಕಾಶಾದಿಶಬ್ದಸಾಧಾರಣವಾಗಿದೆ. ಆದರೆ ಗಾಯತ್ರೀಶಬ್ದದಲ್ಲಿ ಹೆಚ್ಚಿನ ಅನುಪಪತ್ತಿ ಕಾಣುವುದರಿಂದ ಗಾಯತ್ರೀಶಬ್ದವನ್ನು ಉದಾಹರಿಸಿದ್ದಾರೆ. ಆದ್ದರಿಂದಲೇ ಭಾಷ್ಯದಲ್ಲಿ ಅಗ್ನಿಗಾಯತ್ರ್ಯಾದಿ ಎಂದು ಆದಿಶಬ್ದವನ್ನು ಪ್ರಯೋಗಿಸಿದ್ದು ಸಮಂಜಸವಾಗಿದೆ. ಮತ್ತು 'ಅಧಿಕರಣಾಂತರೇಪ್ಯೇತನ್ನ್ಯಾಯಸ್ಯಾನುಸಂಧೇಯತ್ವಂ ಚ ಸೂಚಯತಿ' (ಬೇರೆ ಅಧಿಕರಣಗಳಲ್ಲಿಯೂ ಈ ನ್ಯಾಯವನ್ನು ಅನುಸಂಧಾನ ಮಾಡಬೇಕೆಂದು ಸೂಚಿಸಿದ್ದಾರೆ) ಎಂಬ ಟೀಕೆಯು ಸಮಂಜಸವಾಗುತ್ತದೆ. ಗಾಯತ್ರೀಶಬ್ದದಲ್ಲಷ್ಟೇ ಅಸಾಧಾರಣವಾದ ಅಧಿಕಾಶಂಕೆ ಮತ್ತೊಂದಿದೆ. ಅಗ್ನಿಸೂಕ್ತದಲ್ಲಿರುವ ಜ್ಯೋತಿಯು ವಿಷ್ಣುವಾಗಬಹುದು. ಉಪದೇಶಭೇದವು ಕೇಳಿಸದ ಕಾರಣ. ಆದರೆ ಛಾಂದೋಗ್ಯದಲ್ಲಿ 'ದಿವಃ' ಎಂಬ ಪಂಚಮ್ಯುಪದೇಶದ ಜ್ಯೋತಿಶ್ರುತಿಯಿಂದ ವಿಷ್ಣುವು ಪ್ರತಿಪಾದ್ಯನಾಗಬಹುದು; ಇದಕ್ಕೆ ವಿರುದ್ಧವಾದ 'ದಿವಿ' ಎಂಬ ಸಪ್ತಮ್ಯುಪದೇಶದ ಗಾಯತ್ರಿಶ್ರುತಿಯಿಂದ ವಿಷ್ಣುವು ಪ್ರತಿಪಾದ್ಯನಾಗುವುದಿಲ್ಲ.

ಮೂರನೆಯ ಅಧಿಕಾಶಂಕೆಯು ಹೀಗೆ - ಅಗ್ನಿಸೂಕ್ತದಲ್ಲಿರುವ ಜ್ಯೋತಿಗೆ ಕರ್ಣಾದಿವಿದೂರತ್ವ ಲಿಂಗಗಳು ಕೇಳಿಸುತ್ತಿವೆ. ಅದಕ್ಕೆ ವಿರುದ್ಧವಾಗಿ ದೃಷ್ಟಶ್ರುತತ್ವಾದ್ಯುಪದೇಶಗಳು ಛಾಂದೋಗ್ಯದಲ್ಲಿ ಕೇಳಿಸುತ್ತಿರುವುದರಿಂದ ಛಾಂದೋಗ್ಯದ ಜ್ಯೋತಿಯು ವಿಷ್ಣುವಲ್ಲ. ಆದ್ದರಿಂದಲೇ ಗಾಯತ್ರಿಯೂ ವಿಷ್ಣುವಲ್ಲ. ಈ ಎರಡು ಶಂಕೆಗಳನ್ನು ಸೂತ್ರಕಾರರು 'ಉಪದೇಶಭೇದಾತ್' ಎಂದು ಕಂಠತಃ ಹೇಳಿದ್ದಾರೆ.

ನಾಲ್ಕನೆಯ ಅಧಿಕಾಶಂಕೆ - ಅಗ್ನಿಶ್ರುತಿಯು ಒಂದೇ ಆಗಿರುವುದರಿಂದ ಅನ್ಯತ್ರಪ್ರಸಿದ್ಧಿಗೆ ಬಾಧವು ಬರಬಹುದು. ಆದರೆ ಗಾಯತ್ರೀ, ವಾಕ್, ಪೃಥಿವೀ ಮೊದಲಾದ ಅನೇಕಶ್ರುತಿಗಳ ಅನ್ಯತ್ರಪ್ರಸಿದ್ಧಿಗೆ ಬಾಧ ಹೇಳುವುದು ಸುಲಭವಲ್ಲ. ಅಂತರಧಿಕರಣನ್ಯಾಯದಿಂದ ಇದು ಗತಾರ್ಥವಲ್ಲ. ಅಂತರಧಿಕರಣದಲ್ಲಿ ಇಂದ್ರ ಮೊದಲಾದ ಅನೇಕಶ್ರುತಿಗಳ ಅನ್ಯತ್ರಪ್ರಸಿದ್ಧಿಗೆ ಬಾಧವನ್ನು ಹೇಳಲಾಗಿತ್ತು. ಆದರೆ ಅಂತಃಸ್ಥನಲ್ಲಿ ಬ್ರಹ್ಮಾಂಡವೀರ್ಯತ್ವಾದಿಗಳು ಕೇಳಿಸಿದ್ದರಿಂದ ಅಂತಃಸ್ಥನು ವಿಷ್ಣುವಾಗುತ್ತಾನೆ. ಇದರ ಬಲದಿಂದ ಇಂದ್ರಾದಿಶ್ರುತಿಗಳು ವಿಷ್ಣುಪರವಾಗುತ್ತದೆಂದು ಅಂತಃಸ್ಥತ್ವಮುಖದಿಂದ ಅನ್ಯತ್ರಪ್ರಸಿದ್ಧಿಗೆ ಬಾಧವನ್ನು ಹೇಳಿದ್ದರು. ಅಂತಹ ಮುಖವನ್ನು ಈ ಅಧಿಕರಣದಲ್ಲಿ ಹೇಳಲಾಗದು. ಈ ಅಧಿಕಾಶಂಕೆಯನ್ನು ಅನುವ್ಯಾಖ್ಯಾನದಲ್ಲಿ 'ಕಥಂ ಪ್ರಸಿದ್ಧಬಹುಲಶಬ್ದಾನಾಮನ್ಯಥಾರ್ಥತಾ' (ಗಾಯತ್ರೀ, ವಾಕ್, ಪೃಥಿವೀ ಮೊದಲಾದ ಅನೇಕಶಬ್ದಗಳಿಗೆ ಬೇರೆ ಅರ್ಥವನ್ನು ಹೇಗೆ ಹೇಳುತ್ತೀರಿ?) ಎಂಬ ಅನುವ್ಯಾಖ್ಯಾನದಲ್ಲಿ ಹೇಳಲ್ಪಟ್ಟಿದೆ. ಇಲ್ಲಿ ಹೇಳಲ್ಪಟ್ಟ ನಾಲ್ಕೂ ಪೂರ್ವಪಕ್ಷಗಳು ಪ್ರಮಾಣಾಶ್ರಿತವಾದವುಗಳು.

ಕಠಿಣಪದಾರ್ಥ

ಪೂರ್ವತ್ರ = ಹಿಂದಿನ ಅಧಿಕರಣದಲ್ಲಿ; ತದುದಯಃ = ಪೂರ್ವಪಕ್ಷದ ಉದಯವು; ಅನುಪಪತ್ಯಂತರಸದ್ಭಾವಾತ್ = ಉಪದೇಶಭೇದಾದಿರೂಪವಾದ ಹೆಚ್ಚಿನ ಅನುಪಪತ್ತಿ ಇರುವುದರಿಂದ; ಸಃ = ಗಾಯತ್ರೀಶ್ರುತಿಯು; ಅಸಾಧಾರಣೇ = ಗಾಯತ್ರೀಶ್ರುತಿಯಲ್ಲಷ್ಟೇ ಇರುವ; ಅನ್ಯತ್ರಪ್ರಸಿದ್ಧಿಬಾಧಃ = ವಿಷ್ಣುವನ್ನು ಬಿಟ್ಟು ಬೇರೆಡೆ ಇರುವ ಪ್ರಸಿದ್ಧಿಯ ಬಾಧವು, ಏತಾಃ = ಈ ನಾಲ್ಕು ಪೂರ್ವಪಕ್ಷಗಳು.

**ಪ್ರಕಾಶಃ – ಅತ್ರೈವಂ ಪೂರ್ವಪಕ್ಷಕ್ರಮಃ ಇಯಂ ಗಾಯತ್ರೀ ಛಂದ ಏವ, ನ ವಿಷ್ಣುಃ, ಗಾಯತ್ರೀ-ಶಬ್ದಸ್ಯ ತತ್ರೈವ ರೂಢತ್ವಾದಿತಿ ಟೀಕಾಯಾಂ ದರ್ಶಿತಃ । ಅತ್ರ ಪೂರ್ವಪಕ್ಷಾಪ್ರಾಪಕಮಾಶಙ್ಕ್ಯಾಹ – ಯದ್ಯಪೀತಿ ॥ 'ಯದ್ವೈತದ್ಬ್ರಹ್ಮ' 'ಏತಾಮೇವ ಬ್ರಹ್ಮೋಪನಿಷದಂ' ಇತಿ ಬ್ರಹ್ಮಶ್ರುತ್ಯನುಗೃಹೀತೈರಿತ್ಯರ್ಥಃ ॥ ಅನುಪಪತ್ತ್ಯನ್ತರೇತಿ ॥ ಉಪದೇಶಭೇದಾದಿರೂಪೇತ್ಯರ್ಥಃ । ಆನನ್ದಮಯಶಬ್ದವದಿತಿ ಭಾವಃ । ಗಾಯತ್ರೀಜ್ಯೋತಿಷೋರ್ಭಿನ್ನಪ್ರಕರಣಸ್ಥತ್ವಮುಪೇತ್ಯೈಕಾಂ ಶಙ್ಕಾಮುತ್ತ್ವಾ, ಏಕಪ್ರಕರಣಸ್ಥತ್ವಮಾಶ್ರಿತ್ಯ ಪಕ್ಷಾನ್ತರಮಾಹ – ಅಪರಾ ತ್ವಿತಿ ॥ ತತಶ್ಚೇತಿ ॥ ತೇಜೋ ವೈ ಬ್ರಹ್ಮವರ್ಚಸಂ ಗಾಯತ್ರೀ ಇತಿ ಜ್ಯೋತಿಶ್ಶಬ್ದಪರ್ಯಾಯಸ್ಯ ತೇಜಶ್ಶಬ್ದಸ್ಯ ತತ್ರ ದರ್ಶನಾತ್ ಗಾಯತ್ರ್ಯೇವ ಜ್ಯೋತಿರಪೀತಿ ಭಾವಃ ॥ ಕಣ್ಠೋಕ್ತಮಿತಿ ॥ ಉಪದೇಶಭೇದಶಬ್ದಸ್ಯ ಯಥಾ 'ದಿವಿ' 'ದಿವಃ' ಇತಿ ಭೇದವ್ಯಪದೇಶೋऽರ್ಥಃ, ತಥಾದೃಷ್ಟಶ್ರುತತ್ವಾದಿಭೇದವ್ಯಪದೇಶೋऽप್ಯರ್ಥ ಇತಿ ವಕ್ಷ್ಯಮಾಣತ್ವಾದಿತಿ ಭಾವಃ ॥ ಅನೇಕೇತಿ ॥ ''ಗಾಯತ್ರೀ ವಾ ಇದಂ ಸರ್ವಂ ವಾಗ್ವೈ ಗಾಯತ್ರೀ ಇಯಂ ವಾವ ಸಾ ಯೇಯಂ ಪೃಥಿವೀ'' ಇತ್ಯಾದ್ಯನೇಕ-ಶಬ್ದಾನಾಮಿತ್ಯರ್ಥಃ ।**

ನನು ''ಇದಂ ಸರ್ವಂ'' ಇತ್ಯುಕ್ತಸರ್ವಾತ್ಮಕತ್ವಸ್ಯ ಗಾಯತ್ರ್ಯಾಮನುಪಪತ್ತೇರ್ಬಹುಬಾಧೋऽಪಿ ನ್ಯಾಯ್ಯ ಇತಿ ಚೇದ್ಬ್ರಹ್ಮಪಕ್ಷೇऽಪಿ ತಸ್ಯಾಸ್ತುಲ್ಯತ್ವಾದಿತಿ । ನಚ ವಾಚ್ಯಂ ಅತ್ರೈವ ಶ್ರುತಿಬಾಹುಲ್ಯೇನ ಪೂರ್ವಪಕ್ಷೇಣ ಸಿದ್ಧಾನ್ತೇ ಸತ್ಯುತ್ತರಾಧಿಕರಣಪೂರ್ವಪಕ್ಷಾನುತ್ಥಿತಿರಿತಿ, ಏತಚ್ಛಙ್ಕಾಯಾಸ್ತತ್ರೈವ ನಿರ-ಸಿಷ್ಯಮಾಣತ್ವಾತ್ ಇತಿ ಭಾವಃ । ನನ್ವೇವಮಪ್ಯನ್ತರಧಿಕರಣೇ ಸಮುದ್ರಶಾಯಿತ್ವಲಿಙ್ಗೇನೇನ್ದ್ರ-ಬೃಹಸ್ಪತ್ಯಾದಿಬಹುಶ್ರುತಿಬಾಧಸ್ಯೋಕ್ತತ್ವಾತ್ ಕಥಮೇತತ್ಪಕ್ಷೋತ್ಥಿತಿರಿತ್ಯತ ಆಹ – ಅನ್ತರಿತಿ ॥

ವಿವರಣೆ - ಈ ಅಧಿಕರಣದ ಪೂರ್ವಪಕ್ಷ. ಶ್ರುತಿಯಲ್ಲಿರುವ ಗಾಯತ್ರಿಯು ಛಂದಸ್ಸು ಹೊರತು ವಿಷ್ಣುವಲ್ಲ. ಲೋಕದಲ್ಲಿ ಎಲ್ಲರೂ ಛಂದಸ್ಸಿನಲ್ಲೇ ಗಾಯತ್ರೀಶಬ್ದವನ್ನು ಪ್ರಯೋಗಿಸುತ್ತಾರೆ. ಹೀಗೆ ಟೀಕೆಯಲ್ಲಿ ಹೇಳಿದ್ದಾರೆ. ಪ್ರಕೃತ ಗ್ರಂಥಕಾರರು 'ಯದ್ಯಪಿ' ಇತ್ಯಾದಿ ಗ್ರಂಥದಿಂದ ಪೂರ್ವಪಕ್ಷ ಕಾರಣವನ್ನು ಆಶಂಕಿಸುತ್ತಿದ್ದಾರೆ. 'ಯದ್ವೈತದ್ಬ್ರಹ್ಮ ಏತಾಮೇವ ಬ್ರಹ್ಮೋಪನಿಷದಮ್' ಎಂಬ ಬ್ರಹ್ಮಶ್ರುತಿಯಿಂದ ಅನುಗ್ರಹ ಹೊಂದಿದ ಭೂತಪಾದತ್ವಾದಿ ನಿರವಕಾಶವಿಷ್ಣುಲಿಂಗಗಳಿಂದ ಸಾವಕಾಶ ಗಾಯತ್ರೀಶ್ರುತಿಯು ಸುತರಾಂ ಬಾಧಿತವಾಗುತ್ತದೆಂದು ಅಭಿಪ್ರಾಯ.

ಈ ಅಧಿಕರಣಕ್ಕೆ ಆಕಾಶಾದಿಶ್ರುತಿಗಳೂ ವಿಷಯವಾಗಿವೆ. ಆದರೆ ಗಾಯತ್ರೀಶ್ರುತಿಯನ್ನೇ ವಿಶೇಷವಾಗಿ ಉಲ್ಲೇಖಿಸಲು ಕಾರಣವೇನೆಂದರೆ ದಿವಿಸ್ಥಿತತ್ವ ಮತ್ತು ದಿವಃಪರತ್ವವೆಂಬ ಉಪದೇಶಭೇದದ ಹೆಚ್ಚಿನ ಶಂಕೆ ಇರುವುದರಿಂದ. ಯಾವರೀತಿಯಾಗಿ ಆನಂದಮಯಾಧಿಕರಣದಲ್ಲಿ 'ಬ್ರಹ್ಮಪುಚ್ಛಂ ಪ್ರತಿಷ್ಠಾ' ಎಂದಿರುವುದರಿಂದ ಅನ್ನಮಯಾದಿಗಳನ್ನು ಬಿಟ್ಟು ಆನಂದಮಯಶಬ್ದವನ್ನೇ ಉಲ್ಲೇಖಿಸಿದ್ದಾರೋ ಆದರಂತೆ ಇಲ್ಲಿಯೂ ತಿಳಿಯಬೇಕು.

ಗಾಯತ್ರೀ ಹಾಗೂ ಜ್ಯೋತಿಶಬ್ದಗಳು ಬೇರೆ ಬೇರೆ ಪ್ರಕರಣಗಳಲ್ಲಿವೆಯೆಂದು ಆಂಗೀಕರಿಸಿ ಒಂದು ಪೂರ್ವಪಕ್ಷವನ್ನು ತೋರಿಸಿದರು. ಎರಡೂ ಸಹ ಒಂದೇ ಪ್ರಕರಣದಲ್ಲಿವೆಯೆಂದು ಆಂಗೀಕರಿಸಿ ಮತ್ತೊಂದು ಪೂರ್ವಪಕ್ಷವನ್ನು 'ಅಪರಾ ತು' ಎಂಬ ಗ್ರಂಥದಿಂದ ತೋರಿಸುತ್ತಿದ್ದಾರೆ. 'ತತಶ್ಚ' ಎಂಬ ಗ್ರಂಥದ ಅಭಿಪ್ರಾಯ ಹೀಗಿದೆ. 'ತೇಜೋ ವೈ ಬ್ರಹ್ಮವರ್ಚಸಂ ಗಾಯತ್ರೀ' ಎಂಬಲ್ಲಿ ಜ್ಯೋತಿಶಬ್ದವು ಇಲ್ಲದಿದ್ದರೂ ಜ್ಯೋತಿಶಬ್ದಕ್ಕೆ ಪರ್ಯಾಯ ಪದವೆನಿಸಿದ ತೇಜಸ್‌ಶಬ್ದವಿದೆ. ಆದ್ದರಿಂದ ಗಾಯತ್ರಿಯನ್ನು ಜ್ಯೋತಿಯೆಂದು ಹೇಳಬಹುದು.

ಮೊದಲಿನ ಈ ಎರಡು ಪೂರ್ವಪಕ್ಷಗಳನ್ನು ಸೂಕ್ತಕಾರರು 'ಉಪದೇಶಭೇದಾತ್' ಎಂದು ಕಂಠತಃ ಹೇಳಿದ್ದಾರೆ. ಉಪದೇಶಭೇದಶಬ್ದಕ್ಕೆ 'ದಿವಿ ಮತ್ತು ದಿವಃ' ಎಂಬ ಭೇದವ್ಯಪದೇಶವು ಅರ್ಥ. ಇದರಂತೆ ದೃಷ್ಟಶ್ರುತತ್ವವೆಂಬ ಭೇದವ್ಯಪದೇಶಾರ್ಥವನ್ನು ಮುಂದೆ ಹೇಳುತ್ತಾರೆ. ಇದರಿಂದ ಎರಡು ಪೂರ್ವಪಕ್ಷಗಳನ್ನು ಕಂಠತಃ ಹೇಳಿದಂತಾಯಿತು. ಗ್ರಂಥದಲ್ಲಿ 'ಅನೇಕಶಬ್ದಾನಾಂ' ಎಂದು ಹೇಳಿದ್ದಾರೆ. ಆದಕ್ಕೆ ಹೀಗರ್ಥ -- 'ಗಾಯತ್ರೀ ವಾ ಇದಂ ಸರ್ವಂ ವಾಗ್ವೈ ಗಾಯತ್ರೀ ಇಯಂ ವಾವ ಸಾ ಯೇಯಂ ಪೃಥಿವೀ' ಎಂದು ಗಾಯತ್ರೀ, ವಾಕ್, ಪೃಥಿವೀ ಮೊದಲಾದ ಅನೇಕಶಬ್ದಗಳನ್ನು ಹೇಳಿದ್ದಾರೆ.

ಇನ್ನು ಹಿಂದಿನ ಅಧಿಕರಣದಲ್ಲಿ ಕೇವಲ ಒಂದು ಶ್ರುತಿಗೆ ಬಾಧವನ್ನು ಹೇಳಿದ್ದು ತಪ್ಪಲ್ಲ. ಆದರೆ ಗಾಯತ್ರೀ ವಾಕ್ ಮೊದಲಾದ ಅನೇಕಶ್ರುತಿಗಳಿಗೆ ಇಲ್ಲಿ ಬಾಧವನ್ನು ಹೇಳುತ್ತಿರುವುದು ತಪ್ಪು. ಗಾಯತ್ರೀ ಶ್ರುತಿಯಲ್ಲಿ 'ಇದಂ ಸರ್ವಂ' ಎಂದು ಗಾಯತ್ರಿಗೆ ಸರ್ವಾತ್ಮಕತ್ವವು ಯುಕ್ತವಾಗಿದೆ. ಘಂಟೋರೂಪ-ಗಾಯತ್ರಿಗೆ ಸರ್ವಾತ್ಮಕತ್ವವು ಅಸಂಗತವಲ್ಲವೇ? ಅದಕ್ಕೋಸ್ಕರ ಬಹುಬಾಧವನ್ನು ಹೇಳುವುದು ಸಂಗತವಾಗಿದೆಯೆಂದು ಉತ್ತರಿಸಬೇಕು. ಆದರೆ ಬ್ರಹ್ಮಪಕ್ಷದಲ್ಲಿಯೂ ಸಹ ಸರ್ವಾತ್ಮಕತ್ವವನ್ನು ಹೇಳಲು ಹೇಗೆ ಸಾಧ್ಯವೆಂಬ ಪ್ರಶ್ನೆ ಸಾಧಾರಣವಾಗಿದೆ. ಆದ್ದರಿಂದ ಬಹುಬಾಧ ಹೇಳುವುದು ಅನ್ಯಾಯವೆಂದು 'ಪ್ರಸಿದ್ಧಿಬಾಧೋ ನ ಯುಕ್ತಃ' ಎಂಬ ಗ್ರಂಥದಿಂದ ಹೇಳಿದ್ದಾರೆ.

ಶಂಕೆ - ಈ ಅಧಿಕರಣದಲ್ಲಿ ಅನೇಕ ಶ್ರುತಿಗಳ ಆಧಾರದಿಂದ ಪೂರ್ವಪಕ್ಷ ಮಾಡಿ ಸಿದ್ಧಾಂತ ಮಾಡಲಾಗಿದೆ. ಹಾಗಾದರೆ ಮುಂದಿನ ಪಾದಾಂತ್ಯಪ್ರಾಣಾಧಿಕರಣದ ಪೂರ್ವಪಕ್ಷವೇ ಹುಟ್ಟಲು ಸಾಧ್ಯವಿಲ್ಲ. ಏಕೆಂದರೆ ಇಲ್ಲಿ ಹೇಳುತ್ತಿರುವ ಪೂರ್ವಪಕ್ಷ ಆ ಅಧಿಕರಣದ ಪೂರ್ವಪಕ್ಷವಾಗಿದೆ.

ಸಮಾಧಾನ - ಪಾದಾಂತ್ಯಪ್ರಾಣಾಧಿಕರಣದಲ್ಲಿ ಪೂರ್ವಪಕ್ಷ ಹುಟ್ಟುತ್ತದೋ ಇಲ್ಲವೋ? ಎಂಬ ವಿಚಾರವು ಪ್ರಕೃತ ಅನುಪಯುಕ್ತ. ಆಲ್ಲಿ ಪೂರ್ವಪಕ್ಷ ಹುಟ್ಟುವುದಿಲ್ಲವೆಂಬ ಶಂಕೆಯನ್ನು ಅಲ್ಲಿಯೇ ನಿರಾಕರಿಸುತ್ತೇವೆ.

ಹಾಗಿದ್ದರೂ ಕೂಡ ಅಂತರಧಿಕರಣದಲ್ಲಿಯೇ ಸಮುದ್ರಶಾಯಿತ್ವವೆಂಬ ನಿರವಕಾಶಲಿಂಗದಿಂದ ಇಂದ್ರ ಬೃಹಸ್ಪತಿ ಮೊದಲಾದ ಅನೇಕ ಶ್ರುತಿಗಳಿಗೆ ಬಾಧವನ್ನು ಹೇಳಿದ್ದಾಗಿದೆ. ಪುನಃ ಈ ಅಧಿಕರಣದಲ್ಲಿ ಅದನ್ನೇ ಸಮರ್ಥಿಸಿದರೆ ಗತಾರ್ಥತ್ವಬರುತ್ತದೆಂಬ ಶಂಕೆಗೆ 'ಅಂತರಧಿಕರಣೇ' ಎಂಬಿತ್ಯಾದಿ ಗ್ರಂಥದಿಂದ ಉತ್ತರಿಸಿದ್ದಾರೆ.

**ಗುರುರಾಜೀಯಮ್ – ಆಕಾಶಾದೀತಿ ॥** ನ ಚೈವಮಭ್ಯಧಿಕಾಶಙ್ಕಾತ್ವಾನುಪಪತ್ತಿಃ । ಪೂರ್ವಮನುದ್ಧೃತತ್ವಮಾತ್ರೇಣ ತದುಪಪತ್ತೇಃ ॥ ಅತ ಏವೇತಿ ॥ ಚೇತೋರ್ಪಣನಿಗದಾದಿತ್ಯೇತನ್ನಿವರ್ತ್ಯಾಶಙ್ಕಾಯಾ ಆಕಾಶಾದಿಶಬ್ದಸಾಧಾರಣತ್ವಾದೇವೇತ್ಯರ್ಥಃ । ಗಾಯತ್ರೀವಾಕ್‌ಪೃಥಿವ್ಯಾದೀತ್ಯತ್ರಾದಿಪದೇನ ಶರೀರಹೃದಯಯೋರ್ಗ್ರಹಣಮ್ । ಅನ್ತಃಸ್ಥತ್ವಮುಖೇನ ಯುಕ್ತ ಇತಿ ॥ ಯದ್ಯಪ್ಯತ್ರಾನ್ಯೈಃ ಸ್ತುವತ ಇತ್ಯಾದಾವಿವಾನ್ಯತ್ರಪ್ರಸಿದ್ಧಮುಖಂ ನಾವಶ್ಯಕಂ ತಥಾऽಪಿ ತತ್ರ ಸಿದ್ಧಾನ್ತಹೇತುವಿಶೇಷಸದ್ಭಾವಾನ್ಮುಖಾನಪೇಕ್ಷಾಯಾಮಪಿ ಪ್ರಕೃತೇ ತದಭಾವಾತ್ಪುನಃ ಶಙ್ಕೋತ್ಥಾನಮಿತಿ ದ್ರಷ್ಟವ್ಯಮ್ ।

## ಸಾರ

ಒಟ್ಟು ಪ್ರಮಾಣಾಶ್ರಿತಪೂರ್ವಪಕ್ಷಗಳು ನಾಲ್ಕು.

೧. ವಿಷ್ಣುವಿನಲ್ಲಷ್ಟೇ ಪ್ರಸಿದ್ಧವಾದ ಅನೇಕ ಶಬ್ದಗಳಿರುವಾಗ ಅನ್ಯತ್ರಪ್ರಸಿದ್ಧವಾದ ಗಾಯತ್ರೀ ಮೊದಲಾದ ಶಬ್ದಗಳನ್ನು ವಿಷ್ಣುವಿನಲ್ಲಿ ಪ್ರಯೋಗಿಸಲು ಪ್ರಯೋಜನವಿಲ್ಲ.

೨. ಅಗ್ನಿಸೂಕ್ತದಲ್ಲಿರುವ ಜ್ಯೋತಿಯು ವಿಷ್ಣುವೆನ್ನಲು ಬಾಧಕವಿಲ್ಲ. ಪ್ರಕೃತ ಗಾಯತ್ರಿಯನ್ನು ವಿಷ್ಣು ಎನ್ನಲು ದಿವಃಪರತ್ವ ದಿವಃಸ್ಥಿತತ್ವ ಎಂಬ ಉಪದೇಶಭೇದದ ವಿರೋಧವಿದೆ.

೩. ಅಗ್ನಿಸೂಕ್ತದಲ್ಲಿರುವ ಜ್ಯೋತಿ ವಿಷ್ಣುವೆನ್ನಲು ಕರ್ಣಾದಿವಿದೂರತ್ವ ಲಿಂಗವಿದೆ. ಅದಕ್ಕೆ ವಿರುದ್ಧವಾದ ದೃಷ್ಟಶ್ರುತತ್ವಾದಿಗಳು ಗಾಯತ್ರಿಯಲ್ಲಿ ಕೇಳಿಸುತ್ತಿರುವುದರಿಂದ ಗಾಯತ್ರಿಯು ವಿಷ್ಣುವಲ್ಲ.

೪. ಒಂದು ಜ್ಯೋತಿಶ್ರುತಿಗೆ ಬಾಧ ಹೇಳುವುದು ಕಷ್ಟವಲ್ಲ. ಗಾಯತ್ರೀ,ವಾಕ್, ಪೃಥಿವೀ ಮೊದಲಾದ ಅನೇಕ ಶ್ರುತಿಗಳಿಗೆ ಬಾಧ ಹೇಳುವುದು ಬಹಳ ಕಷ್ಟ.

### ಪ್ರಮೇಯಾಶ್ರಿತ ಪೂರ್ವಪಕ್ಷ

**ತಾತ್ಪರ್ಯಚನ್ದ್ರಿಕಾ**

**ಪ್ರಮೇಯಾಶ್ರಿತಾ ತು – ಯುಕ್ತಮಾಕಾಶಾಧಿಕರಣೋಕ್ತಂ ಜನ್ಯಭೂತಾಕಾಶಸ್ವಭಾವಸ್ಯ ವಿವರತ್ವಾದೇ, ಜ್ಯೋತಿಶ್ಶಬ್ದಪ್ರವೃತ್ತಿನಿಮಿತ್ತಸ್ಯ ಚೇಶಾಧೀನತ್ವಮ್, ಧರ್ಮಿಣಾ ಸಹ ಜನ್ಯತ್ವಾತ್, ಗಾಯತ್ರೀರೂಪವೇದಸ್ಯ ತು ಅನಾದಿತ್ವಾತ್ ತತ್ಸ್ವಭಾವಸ್ಯ ಗಾನತ್ರಾಣಕರ್ತೃತ್ವಾದಿರೂಪಪ್ರವೃತ್ತಿನಿಮಿತ್ತಸ್ಯ ನೇಶಾಧೀನತ್ವಮಿತಿ ।**

ಅನುವಾದ - ಪ್ರಮೇಯಾಶ್ರಿತ ಪೂರ್ವಪಕ್ಷ ಹೀಗಿದೆ - ಹಿಂದಿನ ಆಕಾಶಾದ್ಯಧಿಕರಣಗಳಲ್ಲಿ ಹೇಳಲ್ಪಟ್ಟ ಜನ್ಯವಾದ ಭೂತಕಾಶದ ಸ್ವಭಾವವೆನಿಸಿದ ವಿವರತ್ವಾದಿಗಳು ಭಗವಂತನ ಅಧೀನಗಳಾಗಬಹುದು. ಇದರಂತೆ ಜ್ಯೋತಿಶಬ್ದದ ಪ್ರವೃತ್ತಿನಿಮಿತ್ತವೂ ಸಹ ಭಗವಂತನ ಅಧೀನವಾಗಬಹುದು. ಧರ್ಮಿಯು ಹುಟ್ಟಿದಾಗ ಅದರ ಸ್ವಭಾವಧರ್ಮವೂ ಸಹ ಹುಟ್ಟುತ್ತದೆ. ಅದಕ್ಕಾಗಿ ಭಗವಂತನ ಅಪೇಕ್ಷೆ ಇದೆ. ಆದರೆ ಗಾಯತ್ರೀರೂಪವಾದ ವೇದವು ಅನಾದಿಯಾದ್ದರಿಂದ ಅದರ ಸ್ವಭಾವವು ಭಗವದಧೀನವಾಗುವುದಿಲ್ಲ. ಗಾಯತ್ರೀಶಬ್ದದ ಪ್ರವೃತ್ತಿನಿಮಿತ್ತ ಗಾನತ್ರಾಣಕರ್ತೃತ್ವ. ಇದು ನಿತ್ಯವಾದ್ದರಿಂದ ಭಗವಂತನನ್ನು ಅಪೇಕ್ಷಿಸುವುದಿಲ್ಲ. ಆದ್ದರಿಂದ ಗಾಯತ್ರೀಶಬ್ದವು ಸ್ವಾಮಿತ್ವವೆಂಬ ಪ್ರವೃತ್ತಿನಿಮಿತ್ತದಿಂದ ಭಗವಂತನನ್ನು ಪ್ರತಿಪಾದಿಸುವುದಿಲ್ಲ; ಹೊರತು ಗಾಯತ್ರೀಛಂದಸ್ಸನ್ನೇ ಪ್ರತಿಪಾದಿಸುತ್ತದೆ.

### ಕಠಿಣಪದಾರ್ಥ

ಜ್ಯೋತಿಶಬ್ದಪ್ರವೃತ್ತಿನಿಮಿತ್ತಸ್ಯ = ಪ್ರಕಾಶತ್ವಕ್ಕೆ; ಗಾನಕರ್ತೃತ್ವಮ್ = ಅರ್ಥಪ್ರತಿಪಾದಕತ್ವ;
ತ್ರಾಣಕರ್ತೃತ್ವ = ಅಧ್ಯಯನ ಮಾಡುವವರಿಗೆ ಪಾಪದಿಂದ ರಕ್ಷಿಸುವಿಕೆ.

**प्रकाशः – ''कथं प्रसिद्ध'' इत्युत्तरार्धोक्तामाशङ्कां स्फुटीकृत्य, ''नित्यत्वादेव शब्दस्य'' इति पूर्वार्धोक्तां शङ्कां विशदयति – प्रमेयेति ॥ जन्येति ॥ भूत-प्रकरणादिना तत्र भूताकाशस्यैव पूर्वपक्षितत्वात्तस्य च ''आत्मन आकाशः सम्भूतः'' इति जन्यत्वावगमादिति भावः ॥ ज्योतिश्शब्देति ॥ प्रकाशत्वत्वादेरित्यर्थः । धर्मिणो जन्यत्वे तद्धर्मस्यापि तथात्वादिति भावः। गानकर्तृत्वमर्थप्रतिपादकत्वम् । त्राणकर्तृत्वं चाध्येतॄणां पापेभ्यो रक्षकत्वम् । तच्च तत्स्वभावः । स्वभावश्च अनादित्वान्न जन्यते, अतो न तदधीनमित्यर्थः । ईशगतत्वं त्वशक्यशङ्कमिति भावः । तस्माच्छब्दप्रवृत्तिनिमित्ताभावात्प्रसिद्धिबाधे मुख्यत्वहानेर्गायत्री न विष्णुः, किन्तु च्छन्द एव इति पूर्वपक्षशेषः ।**

ಅನುವಾದ - ಅನುವ್ಯಾಖ್ಯಾನದ 'कथं प्रसिद्धबाधुलशब्दानां अन्यथार्थता' ಎಂಬ ಉತ್ತರಾರ್ಧದಲ್ಲಿ ಹೇಳಿದ ಪೂರ್ವಪಕ್ಷವನ್ನು ಇಲ್ಲಿಯ ತನಕ ವಿವರಿಸಿ ಈಗ 'नित्यत्वादेव शब्दस्य' ಎಂಬ ಪೂರ್ವಾರ್ಧದಲ್ಲಿ ಹೇಳಿದ ಶಂಕೆಯನ್ನು 'प्रमेयाश्रिता तु' ಇತ್ಯಾದಿ ಗ್ರಂಥದಿಂದ ವಿವರಿಸುತ್ತಿದ್ದಾರೆ. ಆಕಾಶಾಧಿಕರಣದಲ್ಲಿ ಪ್ರಸಕ್ತವಾದ ಆಕಾಶವು ಭೂತಾಕಾಶವೆಂದೇ ಪೂರ್ವಪಕ್ಷ ಮಾಡಿದ್ದಾರೆ. ಅಂತಹ ಭೂತಾಕಾಶವು 'आत्मनः आकाशः संभूतः' ಎಂಬ ಶ್ರುತಿಯಿಂದ ಜನ್ಯವೆಂದು ತಿಳಿಯುತ್ತದೆ. ಜನ್ಯವಾದ ಆಕಾಶದಲ್ಲಿರುವ ವಿವರತ್ವವೂ ಸಹ ಜನ್ಯವೇ ಆಗುತ್ತದೆಂದು ಅಭಿಪ್ರಾಯ. ಧರ್ಮಿಯು ಜನ್ಯವಾದರೆ ಧರ್ಮವು ಜನ್ಯವಾಗಬೇಕೆಂದು ನಿಯಮ. ಗಾನತ್ರಾಣಕರ್ತೃತ್ವವು ಅನಾದಿಸ್ವಭಾವವಾದ್ದರಿಂದ ಜನ್ಯವಲ್ಲ.

ಜನ್ಯವಲ್ಲದ ಕಾರಣ ಭಗವದಧೀನವೂ ಆಲ್ಲ. ಆದ್ದರಿಂದ ಸ್ವಾತಂತ್ರ್ಯಪ್ರವೃತ್ತಿನಿಮಿತ್ತವನ್ನು ವಿವಕ್ಷಿಸಿ ಗಾಯತ್ರೀಶಬ್ದಸಮನ್ವಯವನ್ನು ಭಗವಂತನಲ್ಲಿ ಮಾಡಲಾಗದು. ತದ್ಗತತ್ವವೆಂಬ ಪ್ರವೃತ್ತಿನಿಮಿತ್ತವಂತೂ ಭಗವಂತನಲ್ಲಿ ಶಂಕಿಸಲು ಸಾಧ್ಯವೇ ಇಲ್ಲ. ಆದ್ದರಿಂದ ಶಬ್ದಪ್ರವೃತ್ತಿನಿಮಿತ್ತವೇ ಭಗವಂತನಲ್ಲಿ ಬಾರದ ಕಾರಣ ಛಂದಸ್ಸಿನಲ್ಲಿರುವ ಪ್ರಸಿದ್ಧಿಗೆ ಬಾಧವನ್ನು ಹೇಳಿದರೆ ಶ್ರುತಿಯ ಮುಖ್ಯಾರ್ಥಕ್ಕೆ ಭಂಗ ಬರುತ್ತದೆ. ಆದ್ದರಿಂದ ಗಾಯತ್ರಿಯು ವಿಷ್ಣುವಲ್ಲ. ಹೊರತು ಛಂದಸ್ಸೇ ಆಗಿದೆ.

## ಸಾರ

ಪ್ರಮೇಯಾಶ್ರಿತಪೂರ್ವಪಕ್ಷ - ಹಿಂದಿನ ಅಧಿಕರಣಗಳಲ್ಲಿ ಸಮನ್ವಯ ಮಾಡಿದ ಆಕಾಶ, ಜ್ಯೋತಿ ಮೊದಲಾದ ಶಬ್ದಗಳ ಪ್ರವೃತ್ತಿನಿಮಿತ್ತಗಳು ಜನ್ಯವಾಗಿವೆ. ಅವುಗಳ ಹುಟ್ಟಿಗೆ ಭಗವಂತನು ಸ್ವಾಮಿಯೆಂದು ಒಪ್ಪುವುದು ಅನಿವಾರ್ಯ. ಆದರೆ ಈ ಅಧಿಕರಣದಲ್ಲಿ ಸಮನ್ವಯ ಮಾಡುತ್ತಿರುವ ಗಾಯತ್ರೀಶಬ್ದದ ಪ್ರವೃತ್ತಿನಿಮಿತ್ತವು ಅನಾದಿ ಸ್ವಭಾವವೆನಿಸಿದೆ. ಅನಾದಿಧರ್ಮಕ್ಕೆ ಮತ್ತೊಬ್ಬರ ಅಪೇಕ್ಷೆ ಇಲ್ಲ. ಆದ್ದರಿಂದ ಸ್ವಾಮಿತ್ವವೆಂಬ ಪ್ರವೃತ್ತಿನಿಮಿತ್ತದಿಂದ ಭಗವಂತನು ಆಕಾಶಾದಿಶಬ್ದಗಳಿಂದ ಪ್ರತಿಪಾದ್ಯನಾಗಬಹುದೇ ಹೊರತು; ಗಾಯತ್ರೀಶಬ್ದದಿಂದ ಪ್ರತಿಪಾದ್ಯನಾಗಲಾರ.

---

### ವೇದಾಪೌರುಷೇಯತ್ವವಿಚಾರ

### ತಾತ್ಪರ್ಯಚನ್ದ್ರಿಕಾ

**ನನು ಕೃತಕಕ್ರಮವಿಶಿಷ್ಟವರ್ಣಾತ್ಮಕಸ್ಯ ವೇದಸ್ಯ ನಾನಾದಿತ್ವಮ್ । ಉಕ್ತಂ ಹಿ ವಿಷ್ಣು-ತತ್ವನಿರ್ಣಯಟೀಕಾಯಾಂ ''ನ ಹಿ ವಯಂ ವೇದಸ್ಯ ಕೂಟಸ್ಥನಿತ್ಯತಾಂ ಬ್ರೂಮಃ'' ಇತಿ, ''ಕ್ರಮಸ್ಯ ಕೃತಕತ್ವೇऽಪಿ'' ಇತಿ ಚೇತಿ ಚೇತ್ ಮೈವಮ್, ತತ್ತ್ವಸಙ್ಖ್ಯಾನಟೀಕಾಯಾಂ ''ನಿತ್ಯತ್ವಂ ನಾಮ ಕೂಟಸ್ಥತಯಾ ಆದ್ಯನ್ತಶೂನ್ಯತ್ವಮ್ । ತಚ್ಚ ವೇದಾನಾಮ್ ''ನಿತ್ಯಾ ವೇದಾಃ ಸಮಸ್ತಾಶ್ಚ'' ಇತ್ಯಾದಿಪ್ರಮಾಣಸಿದ್ಧಮ್'' ಇತ್ಯುಕ್ತತ್ವಾತ್ । ಯುಕ್ತಶ್ಚೈತತ್, ಕ್ರಮಸ್ಯ ಸದೇಶ್ವರಬುದ್ಧಿಸ್ಥತ್ವಾತ್ । ಅತ ಏವೋಕ್ತಂ ವಿಷ್ಣುತತ್ವನಿರ್ಣಯೇ ''ಸರ್ವಜ್ಞತ್ವೇನೇಶ್ವರಸ್ಯ ತದ್ಬುದ್ಧೌ ಸರ್ವದಾ ಪ್ರತೀಯಮಾನತ್ವಾತ್'' ಇತಿ । ತಟ್ಟೀಕಾಯಾಂ ಕೌಟಸ್ಥ್ಯನಿಷೇಧಸ್ತು ಅಸ್ಮದಾದೀನ್ ಪ್ರತಿ ಪ್ರಮಾಪಕತ್ವೋಪಯುಕ್ತಸ್ಯ ಅಸ್ಮದಾದಿ-ಬುದ್ಧಿಸ್ಥಸ್ಯ ಕ್ರಮಸ್ಯೋಚ್ಚಾರಣಾದ್ಯಧೀನತ್ವೇನ ಕೃತಕತ್ವಾತ್ । ಕೃತ್ವಾಚಿನ್ತಯಾ ವಾ ಅನಾದಿತ್ವೋಕ್ತಿಃ, ಕ್ರಮಸ್ಯಾನನ್ಯಾಧೀನತ್ವಾತ್ । ಇಯಞ್ಚ –**

**ನಿತ್ಯತ್ವಾದೇವ ಶಬ್ದಾನಾಂ ತತ್ಸ್ವಭಾವಃ ಕಥಂ ಹರೇಃ ।**
**ಇತ್ಯನುವ್ಯಾಖ್ಯಾನೇ ದರ್ಶಿತಾ ।**

ಅನುವಾದ - ಪ್ರಶ್ನೆ - ವೇದವು ಅನಾದಿಯಲ್ಲ. ಕ್ರಮವಿಶಿಷ್ಟವಾದ ವರ್ಣಗಳೇ ವೇದ. ಕ್ರಮವು ಕೃತಕವಾದ್ದರಿಂದ ವೇದವು ಕೃತಕವೇ ಆಗಬೇಕು. ಇದನ್ನೇ ವಿಷ್ಣುತತ್ವನಿರ್ಣಯಟೀಕೆಯಲ್ಲಿ 'ನ ಹಿ ವಯಂ ವೇದಸ್ಯ ಕೂಟಸ್ಥನಿತ್ಯತಾಂ ಬ್ರೂಮಃ' (ನಾವು ವೇದಕ್ಕೆ ಕೂಟಸ್ಥನಿತ್ಯತ್ವವನ್ನು ಹೇಳುವುದಿಲ್ಲ) ಎಂದು ಮತ್ತು 'ಕ್ರಮಸ್ಯ ಕೃತಕತ್ವೇಪಿ' (ಕ್ರಮವು ಕೃತಕವಾದರೂ) ಎಂದು ಹೇಳಿದ್ದಾರೆ. ಹೀಗಿರುವಾಗ ಗಾಯತ್ರೀರೂಪವಾದ ವೇದವು ಅನಾದಿಯಾದ್ದರಿಂದ ಈಶಾಧೀನವಲ್ಲವೆಂಬ ಪೂರ್ವಪಕ್ಷವನ್ನು ಹೇಗೆ ಮಾಡುತ್ತೀರಿ?

ಉತ್ತರ - ಕ್ರಮವು ನಿತ್ಯವಾದ್ದರಿಂದ ವೇದವು ನಿತ್ಯವೇ ಆಗಿದೆ. ತತ್ವಸಂಖ್ಯಾನಟೀಕೆಯಲ್ಲಿ 'ನಿತ್ಯತ್ವಂ ನಾಮ ಕೂಟಸ್ಥತಯಾ ಆದ್ಯಂತಶೂನ್ಯತ್ವಮ್ । ತಚ್ಚ ವೇದಾನಾಂ 'ನಿತ್ಯಾ ವೇದಾಃ ಸಮಸ್ತಾಶ್ಚ' ಇತ್ಯಾದಿಪ್ರಮಾಣಸಿದ್ಧಮ್' (ನಿತ್ಯಶಬ್ದಕ್ಕೆ ಕೂಟಸ್ಥವಾಗಿ ಆದ್ಯಂತವಿಲ್ಲದಿರುವಿಕೆ ಎಂದರ್ಥ. 'ನಿತ್ಯಾ ವೇದಾಃ ಸಮಸ್ತಾಶ್ಚ' ಎಂಬ ಪ್ರಮಾಣದಂತೆ ಇಂತಹ ನಿತ್ಯತ್ವವು ವೇದಗಳಲ್ಲಿ ಸಿದ್ಧವಾಗಿದೆ) ಎಂದು ಹೇಳಿದ್ದಾರೆ. ಇದು ಯುಕ್ತವೇ ಆಗಿದೆ. ಏಕೆಂದರೆ ಈಶ್ವರಬುದ್ಧಿಯಲ್ಲಿ ಕ್ರಮವು ನಿರಂತರವಾಗಿ ಇರುತ್ತದೆ. ಆದ್ದರಿಂದಲೇ ವಿಷ್ಣುತತ್ವನಿರ್ಣಯದಲ್ಲಿ ಶ್ರೀಮದಾಚಾರ್ಯರು 'ಸರ್ವಜ್ಞತ್ವಾದೀಶ್ವರಸ್ಯ ತದ್ಬುದ್ಧೌ ಸರ್ವದಾ ಪ್ರತೀಯಮಾನತ್ವಾತ್' (ಸರ್ವಜ್ಞನಾದ ಈಶ್ವರನ ಬುದ್ಧಿಯಲ್ಲಿ ವೇದಗಳು ನಿರಂತರ ಪ್ರತೀಯಮಾನವಾಗಿರುತ್ತವೆ) ಎಂದು ಹೇಳಿದ್ದಾರೆ. ಮತ್ತು ಆ ವಾಕ್ಯದ ಟೀಕೆಯಲ್ಲಿ 'ಕೌಟಸ್ಥನಿಷೇಧಸ್ತು ಅಸ್ಮದಾದೀನ್ ಪ್ರತಿ ಪ್ರಮಾಪಕತ್ವೋಪಯುಕ್ತಸ್ಯಾಸ್ಮದಾದಿಬುದ್ಧಿಸ್ಥಸ್ಯ ಕ್ರಮಸ್ಯೋಚ್ಚಾರಣಾದ್ಯಧೀನತ್ವೇನ ಕೃತಕತ್ವಾತ್ । ಕೂಟಸ್ಥನಿತ್ಯತ್ವವನ್ನು ನಿಷೇಧಿಸಿದ ಕಾರಣವೇನೆಂದರೆ ನಮ್ಮನ್ನು ಕುರಿತು ಯಥಾರ್ಥಜ್ಞಾನವನ್ನು ಹುಟ್ಟಿಸಲು ವೇದವನ್ನು ಉಚ್ಚಾರ ಮಾಡಬೇಕು. ಉಚ್ಚಾರ ಮಾಡಬೇಕಾದರೆ ನಮ್ಮ ಬುದ್ಧಿಯಲ್ಲಿ ವೇದವು ಕ್ರಮವಾಗಿ ಗೋಚರಿಸಬೇಕು. ಆದ್ದರಿಂದ ನಮ್ಮ ಬುದ್ಧಿಯಲ್ಲಿರುವ ಕ್ರಮವು ಉಚ್ಚಾರಣೆಯ ಅಧೀನವಾಗಿ ಕೃತಕವಾಗುತ್ತದೆ. ಅಥವಾ ಪ್ರಕೃತ ಗಾಯತ್ರೀರೂಪವೇದಕ್ಕೆ ಅನಾದಿತ್ವವನ್ನು ಪೂರ್ವಪಕ್ಷಿಯ ಅಭಿಪ್ರಾಯವನ್ನು ಅಂಗೀಕರಿಸಿ ಹೇಳಲಾಗಿದೆ. ಏಕೆಂದರೆ ಕ್ರಮವು ಯಾರ ಅಧೀನವೂ ಅಲ್ಲ. ಈ ಪ್ರಮೇಯಾಶ್ರಿತ-ಪೂರ್ವಪಕ್ಷವನ್ನು 'ನಿತ್ಯತ್ವಾದೇವ ಶಬ್ದಾನಾಂ ತತ್ಸ್ವಭಾವಃ ಕಥಂ ಹರೇಃ' (ಶಬ್ದಗಳು ನಿತ್ಯವಾದ್ದರಿಂದ ಅನಾದಿಸ್ವಭಾವ ಹೇಗೆ ಭಗವದಧೀನವಾಗುತ್ತವೆ?' ಎಂಬ ಅನುವ್ಯಾಖ್ಯಾನದಲ್ಲಿ ತೋರಿಸಿದ್ದಾರೆ.

### ಕಠಿಣಪದಾರ್ಥ

ಕ್ರಮಸ್ಯ = ಅಂಶಪೂರ್ವೀರೂಪ ಕ್ರಮಕ್ಕೆ, ಏತತ್ = ಅನಾದಿತ್ವವು, ತದ್ಬುದ್ಧೌ = ಈಶ್ವರನ ಮನಸ್ಸಿನಲ್ಲಿ; ತಟ್ಟೀಕಾಯಾಮ್ = ಹಿಂದೆ ಹೇಳಿದ ವಿಷ್ಣುತತ್ವನಿರ್ಣಯಟೀಕೆಯಲ್ಲಿ; ಕೃತ್ವಾಚಿಂತಯಾ = ಪೂರ್ವಪಕ್ಷಕಾರರ ಅಭಿಪ್ರಾಯವನ್ನು ಅಂಗೀಕರಿಸಿ. ಅನಾದಿತ್ವೋಕ್ತಿಃ = ಬುದ್ಧಿಘಟಿತವಾಗದ ಆತ್ಮಾದಿ ಸಾಧಾರಣವಾದ ಅನಾದಿತ್ವವಚನವು. ನಿತ್ಯತ್ವಾದೇವ = ಅನಾದಿಯಾದ್ದರಿಂದಲೇ,

**प्रकाशः** – ननु यदुक्तं वेदस्यानादित्वात्तत्स्वभावो नेशाधीन इति, तदयुक्तम्,

**नित्या वेदाः समस्ताश्च शाश्वता विष्णुबुद्धिगाः ।**

इति प्रमाणव्याख्याऽवसरे तत्वनिर्णयटीकायां – ''**वर्णास्तावन्नित्यत्वात् सर्वगतत्वाच्च स्वतः क्रमशून्याः । नच क्रमेण विना पदवाक्यभावः, नापि तदन्तरेण प्रामाण्यम् । अतः क्रमः पौरुषेय एवास्थेयः । तत्कथं वेदस्यापौरुषेयत्वम्**'' इत्याशङ्क्य ''**न हि वयं वेदस्य कूटस्थनित्यतां ब्रूमः । किन्तु शब्दतोऽर्थतश्च सर्वदैकप्रकारतामेव । ततश्च क्रमस्य कृतकत्वेऽपि पुरुषाभिप्रायप्रवेशेऽपि स्वतन्त्रस्य वक्तुरभावात् अपौरुषेयत्वमुपपद्यते**'' इत्यनेन सादित्वोक्तेः । अङ्गीकृतं चेद्भाट्टैरपि –

**यत्नतः प्रतिषेध्या नः पुरुषाणां स्वतन्त्रता ।**

इत्युक्तेरित्याशङ्क्य वाक्यान्तरानुसारेणास्याभिप्रायं व्यञ्जयन् अनादित्वमुपपादयति – **नन्विति ॥ कृतकक्रमेति ॥** नित्यत्वात्सर्वगतत्वाच्च वर्णानां स्वतः क्रमाभावादिति भावः ॥ **तत्वसङ्ख्यानेति ॥**

**नित्या वेदाः पुराणाद्याः कालः प्रकृतिरेव च ।**
**नित्यानित्यम् ।**

इत्यस्य व्याख्याऽवसरे । ननु व्यामिश्रोक्तौ सत्यामपि कथमनादित्वनिर्णय इत्यत आह – **युक्तमिति ॥** 'एतत्' अनादित्वम् । स्वतः क्रमशून्यानां वर्णानां क्रमस्य बुद्धिघटितत्वेऽपि ईश्वरबुद्धेरनादिनित्यत्वेन तद्घटितत्वादनादित्वोपपत्तेरिति भावः ।

'तद्बुद्धौ' तन्मनसि । 'तट्टीकायां' प्रागुक्ततत्त्वनिर्णयटीकायामित्यर्थः । प्रलयेऽविच्छेदायावश्यवक्तव्यानादिनित्यभगवद्बुद्धिघटितक्रमवत्तामपेक्ष्य क्वचित् कूटस्थनित्यत्वमुक्तम् । तादृशस्येतरप्रमाजनकत्वाभावात्तदतर्थमुच्चरणघटितस्यैव तस्य वक्तव्यत्वात् उच्चारणस्य चानादिनित्यत्वाभावात् कूटस्थता नेति क्वचिदुक्तमित्यर्थः । उक्तञ्च सुधायां वियत्पादे – ''**नियत- विशिष्टानुपूर्वीविशिष्टत्वेनार्थावबोधशक्त्याविर्भावो जनि**'' इति ॥ आदिपदेनेश्वरोऽपि गृह्यते, तदुच्चारणघटितस्यापि तथात्वात् । अत एव 'बुद्धिस्थत्वात्' इति, 'तद्बुद्धौ' इत्येवोक्तम् । उक्तञ्च

**ತರ್ಕತಾಂಡವೇ ''ಆಧುನಿಕಾಧ್ಯಾಪಕೇನ ಸ್ವಬುದ್ಧಿಸ್ಥಪೂರ್ವಪೂರ್ವದಿವಸೀಯಕ್ರಮಾನುಸಾರೇಣ ಉತ್ತರೋತ್ತರ-ದಿವಸೇಷ್ವಿವ ಈಶ್ವರೇಣಾಪಿ ಸ್ವಬುದ್ಧಿಸ್ಥಪ್ರವಾಹಾನಾದಿಪೂರ್ವಪೂರ್ವಕಲ್ಪೀಯಕ್ರಮಾನುಸಾರೇಣೈವ ಉತ್ತರೋತ್ತರ-ಕಲ್ಪೇಷ್ವಪಿ ವೇದಸ್ಯ ಉಚ್ಚಾರಿತತ್ವೇನ''** ಇತ್ಯಾದಿ । ಯದಿ ಚ

**ಜ್ಞಾನಂ ನಿತ್ಯಂ ಕ್ರಿಯಾ ನಿತ್ಯಾ ಬಲಂ ಶಕ್ತಿಃ ಪರಾತ್ಮನಃ ।**

ಇತ್ಯನುವ್ಯಾಖ್ಯಾನಾನುರೋಧಾತ್ ಭಗವತ್ಕ್ರಿಯಾಣಾಂ ಅನಾದಿನಿತ್ಯತಾ, ತದಾ ತದ್ಘಟಿತಸ್ಯಾಪಿ ಕೌಟಸ್ಥ್ಯಂ ಧ್ಯೇಯಮ್ । ನನು ಯದೀಶ್ವರಬುದ್ಧಿಘಟಿತತಯಾ ಕ್ರಮಸ್ಯಾನಾದಿತ್ವಂ, ತರ್ಹ್ಯಾಗತಮೀಶ್ವರಾ-ಧೀನಸ್ವಭಾವತ್ವಂ ವೇದಸ್ಯ । ನ ಹಿ ಯೋ ಯದ್ಬುದ್ಧ್ಯಧೀನಃ ಸ ನ ತದಧೀನ ಇತಿ ಸಮ್ಭವತಿ, ವರ್ಣಾನಾಮನ್ಯಥಾ ಕ್ರಮೇಣಾಪ್ಯನುಸನ್ಧಾತುಂ ಶಕ್ಯತ್ವಾದಿತ್ಯತ ಆಹ – **ಕೃತ್ವಾಚಿನ್ತಯೇತಿ** ॥ ಬುದ್ಧಿಘಟಿತತ್ವಂ ವಿನಾ ವೇದಸ್ಯಾನಾದಿತ್ವಾಭಾऽವೇಪ್ಯನಾದಿತ್ವಂ ಸಿದ್ಧವತ್ಕೃತ್ಯೇಶಾಧೀನತ್ವಮಾಶಙ್ಕ್ಯ, ತಾದೃಶಸ್ಯಾಪೀಶಾಧೀನತ್ವೋಕ್ತೌ ವೇದೇ ಫಲಾಭಾವೇऽಪಿ ತಾದೃಶಜೀವಾತ್ಮಾ-ದೇರೀಶಾಧೀನತ್ವಂ ಸಿಧ್ಯತಿ ಫಲಮಿತಿ ನ ವೈಯರ್ಥ್ಯಮಿತಿ ಭಾವಃ । 'ಅನಾದಿತ್ವೋಕ್ತಿಃ' ಬುದ್ಧ್ಯಘಟಿತಾತ್ಮಾದಿ-ಸಾಧಾರಣಾನಾದಿತ್ವೋಕ್ತಿಃ । ಏತೇನಾನುವ್ಯಾಖ್ಯಾನೇ **'ನಿತ್ಯತ್ವಾತ್'** ಇತ್ಯನೇನಾನಾದಿತ್ವಂ ವಿವ-ಕ್ಷಿತಮಿತ್ಯುಕ್ತಂ ಭವತಿ ॥

ವಿವರಣೆ - ಶಂಕೆ - ವೇದವು ಅನಾದಿಯಾದ್ದರಿಂದ ಅನಾದಿಸ್ವಭಾವವು ಭಗವದಧೀನವಲ್ಲವೆಂಬ ಪ್ರಮೇಯಾಶ್ರಿತ ಪೂರ್ವಪಕ್ಷವು ತಪ್ಪು. ಏಕೆಂದರೆ ವಿಷ್ಣುತತ್ವನಿರ್ಣಯ ಟೀಕೆಯಲ್ಲಿ ವೇದವನ್ನು ಅನಾದಿಯಲ್ಲವೆಂದಿದ್ದಾರೆ. 'ನಿತ್ಯಾ ವೇದಾ ಸಮಸ್ತಾಶ್ಚ ಶಾಶ್ವತಾಃ ವಿಷ್ಣುಬುದ್ಧಿಗಾಃ' ಎಂಬ ಪ್ರಮಾಣವನ್ನು ವ್ಯಾಖ್ಯಾನ ಮಾಡುವಾಗ ಟೀಕೆಯ ಮಾತು ಹೀಗಿದೆ -- 'ವರ್ಣಾಸ್ತಾವನ್ನಿತ್ಯತ್ವಾತ್ ಸರ್ವಗತತ್ವಾಚ್ಚ ಸ್ವತಃ ಕ್ರಮಶೂನ್ಯಾಃ । ನ ಚ ಕ್ರಮೇಣ ವಿನಾ ಪದವಾಕ್ಯಭಾವಃ । ನಾಪಿ ತದಂತರೇಣ ಪ್ರಾಮಾಣ್ಯಮ್ । ಅತಃ ಕ್ರಮಃ ಪೌರುಷೇಯ ಏವಾಸ್ಥೇಯಃ । ತತ್ ಕಥಂ ವೇದಸ್ಯಾಪೌರುಷೇಯತ್ವಮ್?' ( ಆಕಾರಾದಿ ವರ್ಣಗಳು ನಿತ್ಯವಾಗಿವೆ ಮತ್ತು ಎಲ್ಲೆಡೆ ವ್ಯಾಪ್ತವಾಗಿವೆ. ವ್ಯಾಪ್ತವಾದ ಆಕಾರಾದಿವರ್ಣಗಳಿಗೆ ಅನು-ಪೂರ್ವೀರೂಪವಾದ ಕ್ರಮವನ್ನು ಹೇಳಲು ಸಾಧ್ಯವಿಲ್ಲ. ಕ್ರಮವಿಲ್ಲದೆ ಪದವಾಗಲೀ ವಾಕ್ಯವಾಗಲೀ ರಚನೆಯಾಗುವುದಿಲ್ಲ. ಪದವಾಕ್ಯಗಳಿಲ್ಲದೆ ಪ್ರಾಮಾಣ್ಯವು ಕೂಡುವುದಿಲ್ಲ. ಹಾಗಾಗಿ ಕ್ರಮವು ಪೌರುಷೇಯವಾಯಿತು. ಹೀಗಿರುವಾಗ 'ಅಗ್ನಿಮೀಳೇ ಪುರೋಹಿತಂ' ಇತ್ಯಾದಿಕ್ರಮರೂಪವಾದ ವೇದಕ್ಕೆ ಅಪೌರುಷೇಯತ್ವವನ್ನು ಹೇಗೆ ಹೇಳುತ್ತೀರಿ?) ಎಂದು. ಹೀಗೆ ಶಂಕಿಸಿ ಟೀಕೆಯಲ್ಲಿಯೇ ಉತ್ತರಿಸಿದ್ದಾರೆ. 'ನ ಹಿ ವೇದಸ್ಯ ಕೂಟಸ್ಥನಿತ್ಯತಾಂ ಬ್ರೂಮಃ । ಕಿಂತು ಶಬ್ದತೋऽರ್ಥತಶ್ಚ ಸರ್ವದೈಕಪ್ರಕಾರತಾಮೇವ । ತತಶ್ಚ ಕ್ರಮಸ್ಯ ಕೃತಕತ್ವೇऽಪಿ ಪುರುಷಾಭಿಪ್ರಾಯಪ್ರವೇಶೇऽಪಿ ಸ್ವತಂತ್ರವಕ್ತುರಭಾವಾದಪೌರುಷೇಯತ್ವ-ಮುಪಪದ್ಯತೇ' (ನಾವು ವೇದಗಳಿಗೆ ಆಕಾಶಾದಿಗಳಂತೆ ಕೂಟಸ್ಥನಿತ್ಯತ್ವವನ್ನು ಹೇಳುವುದಿಲ್ಲ. ಹೊರತು ಶಬ್ದದಿಂದ ಮತ್ತು ಅರ್ಥದಿಂದ ಎಲ್ಲಾ ಕಾಲದಲ್ಲಿಯೂ ಒಂದೇ ರೀತಿಯಾಗಿರುತ್ತವೆಂದು ಹೇಳುತ್ತೇವೆ.

ಆದ್ದರಿಂದ ಕ್ರಮವು ಕೃತಕವಾದರೂ ಅಪೌರುಷೇಯತ್ವಕ್ಕೆ ಭಂಗವಿಲ್ಲ. ವಸ್ತುತಃ ಉಚ್ಚಾರಣಾದಿಗಳು ಮಾಡಬೇಕಾದರೆ ಪುರುಷನ ಅಧೀನವಾಗಿವೆ. ಆದರೆ ಸ್ವತಂತ್ರವಾಗಿ ರಚನೆ ಮಾಡಿ ವೇದವನ್ನು ಉಚ್ಚಾರಮಾಡದ ಕಾರಣದಿಂದಷ್ಟೇ ಅಪೌರುಷೇಯವೆನಿಸಿದೆ.) ಎಂದು. ಈ ಟೀಕಾವಾಕ್ಯದಿಂದ ವೇದಕ್ಕೆ ಅಪೌರುಷೇಯತ್ವವನ್ನು ಸಮರ್ಥಿಸಿದ್ದಾರೆ ಹೊರತು ಕ್ರಮಕ್ಕೆ ಕೃತಕತ್ವವನ್ನು ಹೇಳಿದ್ದರಿಂದ ಅನಾದಿತ್ವವನ್ನು ಸಮರ್ಥಿಸಿಲ್ಲ; ಹೊರತಾಗಿ ಸಾದಿತ್ವವನ್ನೇ ಹೇಳಿದ್ದಾರೆ. ವೇದಕ್ಕೆ ಪರಮಪ್ರಾಮಾಣ್ಯವನ್ನು ಒಪ್ಪುವ ಭಾಟ್ಟರಿಗೂ ಇದು ಸಮ್ಮತವಾಗಿದೆ. 'ಯತ್ನತಃ ಪ್ರತಿಷೇಧ್ಯಾ ನಃ ಪುರುಷಾಣಾಂ ಸ್ವತಂತ್ರತಾ' (ಪುರುಷರು ಸ್ವತಂತ್ರವಾಗಿ ವೇದವನ್ನು ರಚಿಸಿ ಉಚ್ಚಾರಣೆ ಮಾಡುವುದಿಲ್ಲ. ಆದ್ದರಿಂದ ಅಪೌರುಷೇಯವೆನಿಸಿದೆ) ಎಂದು. ಹೀಗಿರುವಾಗ ಗಾಯತ್ರೀರೂಪವೇದಕ್ಕೆ ಗ್ರಂಥಕಾರರು ಅನಾದಿತ್ವವನ್ನು ಹೇಗೆ ಹೇಳಿದರು?

ಸಮಾಧಾನ - ತತ್ವನಿರ್ಣಯಟೀಕೆಯ ಅಭಿಪ್ರಾಯವನ್ನು ತಿಳಿಯಬೇಕೆಂದರೆ ತತ್ವಸಂಖ್ಯಾನ-ಟೀಕೆಯನ್ನು ನೋಡಬೇಕು. 'ತತ್ವಸಂಖ್ಯಾನಟೀಕೆಯಲ್ಲಿ ಅನಾದಿತ್ವವನ್ನು ಹೇಳಿದ್ದರಿಂದ ತತ್ವನಿರ್ಣಯ ಟೀಕೆಯಲ್ಲಿಯೂ ಆದನ್ನೇ ಹೇಳಿದ್ದಾರೆ. 'ನಿತ್ಯಾ ವೇದಾಃ ಪುರಾಣಾದ್ಯಾಃ ಕಾಲಪ್ರಕೃತಿರೇವ ಚ । ನಿತ್ಯಾನಿತ್ಯಮ್...' ಎಂಬ ಆಚಾರ್ಯರ ಮಾತನ್ನು ವ್ಯಾಖ್ಯಾನಿಸುವಾಗ ತತ್ವಸಂಖ್ಯಾನಟೀಕೆಯಲ್ಲಿ ಅನಾದಿತ್ವವನ್ನು ಸ್ಪಷ್ಟವಾಗಿ ಹೇಳಿದ್ದಾರೆ. ಎರಡೂ ಟೀಕೆಗಳಿಗೆ ಮೇಲ್ನೋಟದಿಂದ ವಿರೋಧ ಕಾಣಿಸುತ್ತಿರುವುದರಿಂದ ತತ್ವಸಂಖ್ಯಾನಟೀಕೆಯ ಅಭಿಪ್ರಾಯವೇ ಸರಿಯೆಂದು ಹೇಗೆ ನಿರ್ಣಯಿಸುವುದು? ಎಂಬ ಪ್ರಶ್ನೆಗೆ 'ಯುಕ್ತಮ್' ಎಂಬ ಗ್ರಂಥದಿಂದ ಉತ್ತರಿಸಿದ್ದಾರೆ. ವರ್ಣಗಳಿಗೆ ಸ್ವಾಭಾವಿಕವಾಗಿ ಕ್ರಮವಿಲ್ಲ. ಬುದ್ಧಿಯೆಂಬ ಉಪಾಧಿಯಿಂದಷ್ಟೇ ಆನುಪೂರ್ವೀರೂಪವಾದ ಕ್ರಮವನ್ನು ಹೇಳಬೇಕು. ನಮ್ಮ ಬುದ್ಧಿಯಲ್ಲಿರುವ ಕ್ರಮವು ಕ್ಷಣಿಕವಾದರೂ ಸರ್ವಜ್ಞನಾದ ಈಶ್ವರನ ಬುದ್ಧಿಯಲ್ಲಿರುವ ಕ್ರಮವು ಅನಾದಿನಿತ್ಯವಾಗಿದೆ. ಆದ್ದರಿಂದ ಈಶ್ವರಬುದ್ಧಿಘಟಿತವಾದ್ದರಿಂದ ಕ್ರಮಕ್ಕೆ ಅನಾದಿತ್ವವನ್ನು ಹೇಳುವುದು ಕಷ್ಟವಲ್ಲ.

ಪ್ರಲಯಕಾಲದಲ್ಲಿ ವೇದೋಪದೇಶದ ಪರಂಪರೆಗೆ ವಿಚ್ಛೇದವನ್ನಂತೂ ಹೇಳಲೇಬೇಕು. ಪುರುಷರ ವೇದೋಚ್ಚಾರಣೆಯು ಅನಾದಿನಿತ್ಯವಲ್ಲ. ಈ ಎರಡು ಕಾರಣದಿಂದಷ್ಟೇ ವೇದಕ್ಕೆ ಕೂಟಸ್ಥನಿತ್ಯತ್ವವು ಇಲ್ಲವೆಂದು ತತ್ವನಿರ್ಣಯಟೀಕೆಯಲ್ಲಿ ಹೇಳಿದ್ದಾರೆ. ಸುಧೆಯ ವಿಯದಧಿಕರಣದಲ್ಲಿ ಇದನ್ನು ಸಮ್ಮತಿಸಿದ್ದಾರೆ. 'ನಿಯತವಿಶಿಷ್ಟಾನುಪೂರ್ವ್ಯವಿಶಿಷ್ಟತ್ವೇನಾರ್ಥಾವಬೋಧಶಕ್ಯಾSSವಿರ್ಭಾವೋ ಜನಿಃ' ('ಅಗ್ನಿಮೀಳೇ ಪುರೋಹಿತಂ' ಎಂಬುದಾಗಿ ನಿಯಮೇನ ವಿಶಿಷ್ಟವಾದ ಆನುಪೂರ್ವಿಯಿಂದ ಕೂಡಿದ್ದರಿಂದ ಅರ್ಥಜ್ಞಾನವನ್ನು ವೇದವು ಹುಟ್ಟಿಸುತ್ತದೆ. ಈ ರೂಪದಿಂದ ವೇದಕ್ಕೆ ಉತ್ಪತ್ತಿ ಇದೆ).

ಗ್ರಂಥದಲ್ಲಿ 'ಅಸ್ಮದಾದಿ ಬುದ್ಧಿಸ್ಥಸ್ಯ' ಎಂಬಲ್ಲಿರುವ ಆದಿಪದದಿಂದ ಈಶ್ವರನನ್ನೂ ಇಟ್ಟುಕೊಳ್ಳಬೇಕು. ನಾವು ಮಾಡುವ ಉಚ್ಚಾರಣೆ ಮಾತ್ರ ಅನಿತ್ಯವಲ್ಲ ಈಶ್ವರನ ಉಚ್ಚಾರಣೆಯೂ ಅನಿತ್ಯವಾಗಿದೆ. ಆದ್ದರಿಂದಲೇ ಹಿಂದೆ ಗ್ರಂಥದಲ್ಲಿ ಉಚ್ಚಾರಣಶಬ್ದವನ್ನು ಸೇರಿಸದೆ ಕೇವಲ 'ಬುದ್ಧಿಸ್ಥತ್ವಾತ್' ಮತ್ತು 'ತದ್ಬುದ್ಧೌ' ಎಂದಷ್ಟೇ ಹೇಳಿದ್ದಾರೆ. ಅಂದರೆ ಭಗವಂತನ ಬುದ್ಧಿಯಲ್ಲಿರುವ ಕ್ರಮರೂಪವಾದ ವೇದಗಳು ನಿತ್ಯವೇ ಆಗಿವೆ. ಆದರೆ ಅದೇ ವೇದವನ್ನು ಉಚ್ಚರಿಸಿದಾಗ ಉಚ್ಚಾರಣಘಟಿತವಾದ ವೇದವು

ಅನಿತ್ಯವಾಗುತ್ತದೆ. ಆದ್ದರಿಂದ ಇಲ್ಲಿ ಅತ್ಯಂತ ಸ್ಪಷ್ಟವಾಗಿ ಹೀಗೆ ತಿಳಿಯಬೇಕು. ''ಕ್ರಮವು ಎರಡು ವಿಧ - ಒಂದು ಈಶ್ವರಬುದ್ಧಿಘಟಿತ; ಮತ್ತೊಂದು ಉಚ್ಚಾರಣಾಘಟಿತ. ಈಶ್ವರಬುದ್ಧಿಘಟಿತವಾದ ಕ್ರಮವು ಅನಾದಿ; ಉಚ್ಚಾರಣೆಘಟಿತವಾದ ಕ್ರಮವು ಸಾದಿ.'' ಎಂದು.

ಇದನ್ನು ತರ್ಕತಾಂಡವದಲ್ಲಿ ಹೀಗೆ ಹೇಳಿದ್ದಾರೆ - ಅಧುನಿಕಾಧ್ಯಾಪಕೇನ ಸ್ವಬುದ್ಧಿಸ್ಥಪೂರ್ವಪೂರ್ವ-ದಿವಸೀಯಕ್ರಮಾನುಸಾರೇಣೈವೋತ್ತರೋತ್ತರದಿವಸೇಷ್ವಪಿ ಈಶ್ವರೇಣಾಪಿ ಸ್ವಬುದ್ಧಿಸ್ಥಪ್ರವಾಹಾನಾದಿಪೂರ್ವ ಪೂರ್ವಕಲ್ಪೀಯಕ್ರಮಾನುಸಾರೇಣೈವೋತ್ತರೋತ್ತರಕಲ್ಪೇಷ್ವಪಿ ವೇದಸ್ಯೋಚ್ಚಾರಿತತ್ವೇನ' (ಆಧುನಿಕ ಅಧ್ಯಾಪಕರು ವೇದವನ್ನು ಹಿಂದಿನ ಹಿಂದಿನ ದಿವಸಗಳಲ್ಲಿ ಯಾವ ಆನುಪೂರ್ವಿಕ್ರಮದಿಂದ ಉಚ್ಚಾರ ಮಾಡಿರುತ್ತಾರೋ ಮುಂದಿನ ದಿವಸಗಳಲ್ಲಿಯೂ ಅದೇ ಆನುಪೂರ್ವಿಕ್ರಮದಿಂದಲೇ ಉಚ್ಚಾರ ಮಾಡುತ್ತಾರೆ. ಇದರಂತೆ ಭಗವಂತನೂ ಸಹ ತನ್ನ ಬುದ್ಧಿಯಲ್ಲಿರುವ ವೇದವನ್ನು ಪ್ರವಾಹತಃ ಆನಾದಿ-ಯಾದ ಹಿಂದಿನ ಹಿಂದಿನ ಕಲ್ಪಗಳಲ್ಲಿ ಯಾವ ಆನುಪೂರ್ವಿಕ್ರಮದಿಂದ ಉಚ್ಚರಿಸುತ್ತಾನೋ ಮುಂದಿನ ಮುಂದಿನ ಕಲ್ಪಗಳಲ್ಲಿಯೂ ಅದೇ ಆನುಪೂರ್ವಿಕ್ರಮದಿಂದ ಉಚ್ಚಾರ ಮಾಡುತ್ತಾನೆ. ಆದ್ದರಿಂದ ವೇದವು ಅಪೌರುಷೇಯ) ಎಂದು.

ಈಗಾಗಲೇ ಹೇಳಿದಂತೆ ಭಗವಂತನ ಉಚ್ಚಾರಣಾಘಟಿತವಾದ ಕ್ರಮವೂ ಅನಿತ್ಯವಾಗಿದೆ. ಒಂದು ವೇಳೆ 'ಜ್ಞಾನಂ ನಿತ್ಯಂ ಕ್ರಿಯಾ ನಿತ್ಯಾ ಬಲಂ ಶಕ್ತಿಃ ಪರಾತ್ಮನಃ' ಎಂಬ ಆನುವ್ಯಾಖ್ಯಾನದಂತೆ ಭಗವಂತನ ಪ್ರತಿಯೊಂದು ಕ್ರಿಯೆಗಳಿಗೆ ಅನಾದಿನಿತ್ಯತ್ವವನ್ನು ಹೇಳಿದರೆ ಉಚ್ಚಾರಣೆ ಎಂಬ ಕ್ರಿಯೆಗೂ ಅನಾದಿನಿತ್ಯತ್ವವನ್ನು ಹೇಳಿದಂತಾಯಿತು. ಆವಾಗ ಭಗವದುಚ್ಚಾರಣಾಘಟಿತವಾದ ಕ್ರಮಕ್ಕೆ ಅನಿತ್ಯತ್ವವನ್ನು ಹೇಳಲು ಸಾಧ್ಯವಿಲ್ಲ; ಹೊರತು ಕೂಟಸ್ಥನಿತ್ಯತ್ವವನ್ನೇ ಹೇಳಬೇಕು.

ಒಂದು ವೇಳೆ ಈಶ್ವರಬುದ್ಧಿಘಟಿತವಾದ ಕ್ರಮಕ್ಕೆ ಅನಾದಿತ್ವವನ್ನು ಹೇಳಿದರೆ ಅನಾದಿವೇದಕ್ಕೆ ಈಶ್ವರಾಧೀನಸ್ವಭಾವತ್ವವನ್ನು ಹೇಳಿದಂತಾಯಿತು. ಯಾವುದು ಯಾರ ಬುದ್ಧಿಯ ಅಧೀನವೋ, ಅದು ಅವನ ಅಧೀನವಲ್ಲ ಎಂದು ಹೇಳಲಾಗದು. ಆದ್ದರಿಂದ ಅನಾದಿಸ್ವಭಾವವು ಭಗವದಧೀನವಲ್ಲವೆಂಬ ಪೂರ್ವಪಕ್ಷವು ತಪ್ಪಲ್ಲವೇ? ಎಂಬ ಪ್ರಶ್ನೆಗೆ ಗ್ರಂಥಕಾರರು 'ಕೃತ್ವಾಚಿಂತಯಾ' ಎಂಬ ಗ್ರಂಥದಿಂದ ಉತ್ತರಿಸಿದ್ದಾರೆ. ವಸ್ತುತಃ ವೇದವು ಭಗವದಧೀನವೇ ಆಗಿದೆ. ಆದರೆ ಪೂರ್ವಪಕ್ಷಿಯ ಪ್ರಕಾರ ಇಲ್ಲಿ ಪ್ರಮೇಯಾಶ್ರಿತಪೂರ್ವಪಕ್ಷವನ್ನು ಮಾಡಿದ್ದಾರೆಂದು ತಿಳಿಯಬೇಕು. ಬುದ್ಧಿಘಟಿತತ್ವವಿಲ್ಲದೆ ವೇದಕ್ಕೆ ಅನಾದಿತ್ವವನ್ನು ಹೇಳಲು ಸಾಧ್ಯವಿಲ್ಲ. ಆದರೂ ಕೂಡ ವೇದವು ಅನಾದಿಯಾಗಿದೆಯೆಂದು ಅಂಗೀಕರಿಸಿ, ಈಶಾಧೀನವಲ್ಲವೆಂದು ಶಂಕಿಸಿದ್ದಾರೆ. ವಸ್ತುತಃ ವೇದವು ಅನಾದಿಯೆಂದು ಸಿದ್ಧವಾಗುವ ಸಮಯದಲ್ಲಿಯೇ ಈಶಾಧೀನವೆಂದೇ ಸಿದ್ಧವಾಗುತ್ತದೆ. ಇಂತಹ ವೇದವು ಈಶಾಧೀನವಲ್ಲವೆಂದು ಪೂರ್ವಪಕ್ಷ ಮಾಡುವುದರಲ್ಲಿ ಅರ್ಥವೇ ಇಲ್ಲ. ಆದರೆ ವೇದದಂತೆ ಕೂಟಸ್ಥನಿತ್ಯವಾದ ಜೀವರೇ ಮೊದಲಾದ ಪದಾರ್ಥಗಳು ಅನಾದಿಯಾದ್ದರಿಂದ ಭಗವದಧೀನವಾಗುವುದು ಬೇಡ ಎಂದು ಶಂಕಿಸಬಹುದು. ಈ ಅಭಿಪ್ರಾಯವನ್ನು ವಿವಕ್ಷಿಸಿದಾಗ ಅನಾದಿಸ್ವಭಾವವು ಭಗವದಧೀನವಲ್ಲವೆಂದು ಹೇಳಿದ್ದು ಅರ್ಥಪೂರ್ಣ-ವಾಗುತ್ತದೆ. ಈ ಸೂಕ್ಷ್ಮವನ್ನು ಗಮನಿಸಬೇಕು.

**गुरुराजीयम्** – तत्वसङ्ख्यानतत्वनिर्णयटीकयोर्विरोधं परिहर्तुं शङ्कते – **नन्विति** ॥ अत्र क्रमो नाम क्रमिकबुद्धिगोचरत्वम् । ईश्वरबुद्धेः सर्वविषयसमूहालम्बनत्वेपि वेदस्य प्रमापकत्वसिद्धयेऽभिव्यक्तिविशेषेण क्रमस्याप्यावश्यकत्वम् । वर्णमात्रे प्रयोगप्रत्यययोरभावात् । क्रमस्य च सर्वगतनित्यवर्णे स्वतो देशतः कालतश्चायोगादिति भावः । अत एवोक्तं तत्वनिर्णये वर्णादयस्तत्क्रमात्मको वेदश्च नित्य एवेति सिद्धमिति – **मैवमिति** ॥ नच तत्वसङ्ख्याने वेदशब्देन वर्णमात्रग्रहणम् । उदाहृतप्रमाणविरोधात् । पौराणवर्णानामप्यविशिष्टत्वेन पृथङ्नित्यानित्यकोटौ निवेशायोगाच्च । पुराणपदेन तद्वाक्यात्मकग्रन्थस्यैवोक्तौ ऋगादिपदवाच्यग्रन्थस्यैव प्राधान्येन तदादित्वेन ग्रहणस्यैवौचित्याच्च । वाचा विरूपनित्यया । नित्यया अनित्यया स्तौमीत्यादिविशेषवाक्यविरोधाच्च । नित्या वर्णाः समस्तशः तथावेदाः समस्ताश्च तथाऽव्याकृतमम्बरमिति तत्वसङ्ख्यानटीकानियामकवायुपुराणादिप्रमाणविरोधाच्च इति ज्ञेयम् । टीकावाक्यत्वाविशेषाद्विरोधशङ्कायां विष्णुतत्वनिर्णयटीकानुरोधेन तत्वसङ्ख्यानटीकैव कुतो न व्याख्येयेत्यतः प्रमाणमुक्त्वा युक्तोऽयुक्तश्च यद्यर्थ इत्यनुव्याख्यानोक्तं च न्यायमाह – **युक्तं चैतदिति** ॥

न चेश्वरबुद्धिस्थत्वाविशेषात्पुराणानामप्यपौरुषेयत्वापत्तिः । कल्पभेदेन क्रमव्यत्यासमात्रेणापौरुषेयत्वाभावस्य पुराणानि तदर्थानीत्यादौ समर्थितत्वात् । तर्ह्याप्तवाक्यस्याप्रामाण्यमेव प्राप्तमित्यत आह – **तट्टीकायामिति** ॥ ननु सर्गे सर्गेऽमुनैवैत इति पुराणवाक्योक्तप्रत्यभिज्ञापरामर्शकस्य प्रत्यभिज्ञाविरोधस्योक्तत्वादित्याचार्यवाक्यस्य व्याख्यानावसरे नच सादृश्यादेव त एवेत्युक्तम् । तथासत्यपौरुषेयत्वसिद्धेर्दुर्निवारत्वादित्युत्तरटीकायां कथमीश्वरीयक्रमस्यैव कृतकत्वाभ्युपगम इत्यत आह – **कृत्वाचिन्तया वेति** ॥ अनादिभूतस्यापीश्वरबुद्धिविषयीभूतवेदक्रमस्योत्पत्त्यङ्गीकारेऽपि पुराणादिव्यावृत्तमपौरुषेयत्वमक्षतमित्यभ्युपगमवादेनेत्यर्थः । अत एवोक्तं उपलक्षणं चैतत् । जन्मादिवाक्यगतिकथनविरोधाचेत्यपि द्रष्टव्यमिति । तर्हि कृत्वाचिन्तापक्षेऽत्र पूर्वपक्षेऽनादित्वोक्त्ययोगात् आकाशाधिकरणादभ्यधिकाशङ्कोत्थानायोगादेतदधिकरणवैयर्थ्यमित्यत आह – **अनादित्वोक्तिरिति** ॥ कृतकस्यापि पूर्वतनक्रमव्यत्यासेन

क्रमान्तरस्य केनाप्यकरणात्तदनधीनत्वम् । तावतापि पूर्वपक्षोदयसम्भवादिति भावः । एवञ्च तत्वसङ्ख्यानटीकाया निरवकाशत्वेन तदनुसारेण तत्वनिर्णय-टीकाया व्याख्येयत्वान्न तत्वनिर्णयटीकानुसारेण वेदस्य कृतकत्वसिद्धिः । तथाच वेदस्यानादित्वात्तत्स्वभावस्य गानत्राणकर्तृत्वादिरूपस्य प्रवृत्तिनिमित्तस्य नेशाधीनत्वमित्युपपादितम् । इदानीं तु मास्तु तस्यानादित्वम् । न चैवमनादि-स्वभावत्वोक्तयनुत्पत्तिरिति वाच्यम् । अनादित्वाभावेप्यनादित्वाभ्युपगमेन कृत्वाचिन्तयानादित्वोक्तिसम्भवात् । नच कृत्वाचिन्तयानादित्वोक्तेः प्रयोजना-भावेन कृत्वाचिन्तायाः एवानुपपत्तिरिति वाच्यम् । अनादिस्वभावनियामकत्व-रूपमहागुणसिद्ध्यर्थ्यमनादिस्वभावनिमित्तकशब्दान्तरसमन्वये न्यायः फलिष्यतीति प्रदर्शनार्थत्वेन तस्यावश्यकत्वात् । यथाकाशाधिकरणेऽवकाशप्रदत्वस्या- चेतन-स्वभावत्वाभावेपि सिद्धान्ते तस्येशतन्त्रत्वसमर्थनं स्वभावनियामकत्वरूप-महागुणसिद्ध्यर्थं स्वभावनिमित्तकशब्दान्तरसमन्वये फलिष्यतीति कृत्वाचिन्तया तथेदमपीति मनसि निधाय वा पक्षान्तरमाह – **कृत्वाचिन्तया वेति ॥** कृत्वाचिन्तया वाऽनादित्वोक्तिरित्येकं वाक्यम् । अनादित्वाभावे तथा व्यपदेशे नियामकमाह – **अनन्याधीनत्वादिति ॥** स्वतन्त्रपुरुषापूर्वकत्वादित्यर्थः ।

## ಸಾರ

ಕ್ರಮವಿಶಿಷ್ಟವಾದ ವರ್ಣಗಳೇ ವೇದ. ಕ್ರಮವು ಕೃತಕವಾದ್ದರಿಂದ ವೇದವೂ ಕೃತಕ. ತತ್ವನಿರ್ಣಯ ಟೀಕೆಯಲ್ಲಿ 'ನ ಹಿ ವಯಂ ವೇದಸ್ಯ ಕೂಟಸ್ಥನಿತ್ಯತಾಂ ಬ್ರೂಮಃ' ಎಂಬುದಾಗಿ ಇದನ್ನು ಸ್ಪಷ್ಟಪಡಿಸಿದ್ದಾರೆ.

ಇದು ತಪ್ಪು. ಕ್ರಮ ಅನಿತ್ಯವಾದಲ್ಲಿ ವೇದವು ಕೃತಕವಾಗಬಹುದು. ಆದರೆ ತತ್ವಸಂಖ್ಯಾನಟೀಕೆಯಲ್ಲಿ ಕ್ರಮಕ್ಕೆ ನಿತ್ಯತ್ವವನ್ನು ಹೇಳಿದ್ದಾರೆ. ಈಶ್ವರಬುದ್ಧಿ ಉಪಾಧಿಯಿಂದ ಕೂಡಿದ ಕ್ರಮವು ಕೃತಕವಲ್ಲ. ಹಾಗಾದರೆ ತತ್ವನಿರ್ಣಯ ಟೀಕೆಯಲ್ಲಿ ಕೂಟಸ್ಥನಿತ್ಯತ್ವವನ್ನು ಏಕೆ ನಿಷೇಧಿಸಿದ್ದಾರೆ ? ಎಂದರೆ ನಮ್ಮ ಬುದ್ಧ್ಯುಪಾಧಿಘಟಿತ-ವಾದ ಕ್ರಮವು ಉಚ್ಚಾರಣಾಧೀನವಾದ್ದರಿಂದ ಜನ್ಯವಾಗಿದೆ. ವರ್ಣಗಳಿಗೆ ದೈಶಿಕ ಅಥವಾ ಕಾಲಿಕಕ್ರಮವನ್ನಂತೂ ಹೇಳಲು ಸಾಧ್ಯವಿಲ್ಲ. ಬೌದ್ಧಿಕವಾಗಿ ಹೇಳಬೇಕು. ನಮ್ಮ ಬುದ್ಧಿಯಲ್ಲಿರುವ ಕ್ರಮವು ಅನಿತ್ಯವೆಂದು ತತ್ವನಿರ್ಣಯಟೀಕೆಯ ಅಭಿಪ್ರಾಯ. ಈಶ್ವರಬುದ್ಧಿಯಲ್ಲಿರುವ ಕ್ರಮವು ನಿತ್ಯವೆಂದು ತತ್ವಸಂಖ್ಯಾನಟೀಕೆಯ ಅಭಿಪ್ರಾಯ. ಇಲ್ಲಿ ಸಹಜವಾಗಿ ಬರುವ ಪ್ರಶ್ನೆ ಹೀಗಿದೆ - ಈಶ್ವರಬುದ್ಧಿಯಲ್ಲಿ ವೇದವು ಏಕಪ್ರಕಾರವಾಗಿರು-ವುದರಿಂದಷ್ಟೇ ಅಪೌರುಷೇಯವೆಂದಾದರೆ ಪುರಾಣಾದಿಗಳೂ ಅಪೌರುಷೇಯವಾಗಬೇಕಲ್ಲವೆ? ಸರ್ವಜ್ಞನಾದ ಈಶ್ವರನ ಬುದ್ಧಿಯಲ್ಲಿ ಎಲ್ಲ ಪುರಾಣಗಳು ಎಲ್ಲಾ ಕಾಲದಲ್ಲಿಯೂ ಏಕಪ್ರಕಾರವೇ ಆಗಿರುತ್ತದಲ್ಲವೇ? ಎಂಬ

ಪ್ರಶ್ನೆಗೆ ಹೀಗೆ ಉತ್ತರಿಸಬೇಕು. ಪ್ರತಿಯೊಂದು ಕಲ್ಪಗಳಲ್ಲಿಯೂ ಭಾಗವತಾದಿಪುರಾಣಗಳ ಆನುಪೂರ್ವಿಯನ್ನು ವ್ಯತ್ಯಾಸಮಾಡಿ ಭಗವಂತನು ಉಪದೇಶಿಸುತ್ತಾನೆ. ಆದರೆ ವೇದದ ಆನುಪೂರ್ವಿಯನ್ನು ಯಾವಕಲ್ಪದಲ್ಲಿಯೂ ವ್ಯತ್ಯಾಸ ಮಾಡುವುದಿಲ್ಲ. ಮತ್ತು ಈ ಕಲ್ಪದಲ್ಲಿ ಉಪದೇಶ ಮಾಡಿದ ಪುರಾಣವನ್ನು ವರ್ತಮಾನಕಾಲವಿಶಿಷ್ಟವಾಗಿ ಭಗವಂತನು ತಿಳಿದಿದ್ದಾನೆ. ಹಿಂದಿನ ಕಲ್ಪಗಳ ಪುರಾಣಾದಿಗಳನ್ನು ಅಧೀತಕಾಲವಿಶಿಷ್ಟವಾಗಿ ತಿಳಿದಿದ್ದಾನೆ. ಈ ಕಾರಣದಿಂದಷ್ಟೇ ಪುರಾಣಗಳು ಪೌರುಷೇಯ ಎನಿಸುತ್ತವೆ. ಆದರೆ ವೇದವನ್ನು ಪ್ರತಿಕಲ್ಪಗಳಲ್ಲಿಯೂ ವರ್ತಮಾನಕಾಲವಿಷಯಕವಾಗಿಯೇ ತಿಳಿಯುತ್ತಾನಾದ್ದರಿಂದ ವೇದವು ಅಪೌರುಷೇಯವೆನಿಸುತ್ತದೆ.

---

## ಐದು ಪೂರ್ವಪಕ್ಷಗಳ ನಿರಾಕರಣೆ

**तात्पर्यचन्द्रिका**

तत्राद्या शङ्का ''चेतोऽर्पणनिगदात्'' इति सूत्रे प्रयोजनोक्त्या परिहृता । द्वितीयतृतीये तु ''उभयस्मिन्नप्यविरोधात्'' इत्यनेन परिहृते । तथा तस्य यथा विवक्षाभेदेन सप्तमीपञ्चम्यौ न विरुद्धे इत्यर्थः, तथा आकारभेदेन कर्णादिविदूरत्व-दृष्टत्वादिके न विरुद्धे इत्यप्यर्थोपपत्तेः । चतुर्थी तु – ''बाहुल्यात् श्रुतिलिङ्गयोः'' इत्यनुव्याख्याने; '' 'ज्यायाꣳश्च पुरुषः'' इत्यादिशब्दसहितलिङ्गैश्च' इत्यादि न्याय-विवरणे च परिहृता ।

अयं भावः – ''अतो ज्यायाꣳश्च पुरुषः'' यद्वै तद्ब्रह्म'' ''एत मेव ब्रह्मोपनिषदम्'' इत्यादिश्रुतीनां गानत्राणकर्तृत्वं भूतादिपादत्वं, ''एतामेव नातिशीयन्ते'' इति सर्वोत्तमत्वमित्यादिलिङ्गानां च बाहुल्यादनेकेषामपि शब्दानां प्रसिद्धार्थत्यागः । पुरुषशब्दो हि ''स वा अयं पुरुषः सर्वासु पूर्षु पुरि शयो नैनेन किञ्चनानावृतं'' इत्यत्र सर्वान्तर्यामित्वं पुरुषत्वमित्युक्तेः, तथा ''पुरुषो ह वै नारायणः'' ''सहस्रशीर्षा पुरुषः सहस्राक्षः सहस्रपात्'' इति ''एष ह्येवाचिन्त्यः, परः परमो हरिः पुरुषः परः परमात्मा अजो ब्रह्म नारायणः प्रभुः'' इत्यादि श्रुतेः,

यथा हि पौरुषे सूक्ते विष्णुरेवाभिधीयते ।

इत्यादिस्मृतेश्च पुरुषोत्तमे मुख्य इति । पञ्चमी तु – ''तादृशत्वात्तु तच्छक्तेः'' इत्यनुव्याख्याने परिहृता ।

ಅನುವಾದ - ಐದು ಪೂರ್ವಪಕ್ಷಗಳ ಮಧ್ಯದಲ್ಲಿ ಮೊದಲನೆಯ ಶಂಕೆಯು 'ಚೇತೋರ್ಪಣ-ನಿಗದಾತ್' ಎಂಬ ಸೂತ್ರದಲ್ಲಿ ಪ್ರಯೋಜನವನ್ನು ಹೇಳುವ ಮೂಲಕ ಪರಿಹರಿಸಲಾಗಿದೆ. ಎರಡು ಹಾಗೂ ಮೂರನೆಯ ಪೂರ್ವಪಕ್ಷಗಳನ್ನು 'ಉಭಯಸ್ಮಿನ್ ಅಪ್ಯವಿರೋಧಾತ್' ಎಂಬ ಸೂತ್ರದಿಂದ ಪರಿಹರಿಸಿದ್ದಾರೆ. ಈ ಸೂತ್ರಕ್ಕೆ ಯಾವರೀತಿಯಾಗಿ ವಿವಕ್ಷಾಭೇದದಿಂದ ದಿವಿ ಮತ್ತು ದಿವಃ ಎಂಬ ಸಪ್ತಮೀ ಪಂಚಮೀ ವಿಭಕ್ತಿಗಳು ವಿರುದ್ಧವಾಗುವುದಿಲ್ಲವೆಂಬ ಅರ್ಥವನ್ನು ಹೇಳುತ್ತೇವೋ ಅದರಂತೆ ಕರ್ಣಾದಿವಿದೂರತ್ವವು ಮತ್ತು ದೃಷ್ಟತ್ವಶ್ರುತತ್ವಾದಿಗಳು ಆಕಾರಭೇದದಿಂದ ವಿರುದ್ಧವಾಗುವುದಿಲ್ಲವೆಂಬ ಅರ್ಥವನ್ನು ಸೂತ್ರಕ್ಕೆ ಹೇಳಬೇಕು. ನಾಲ್ಕನೆಯ ಪೂರ್ವಪಕ್ಷವನ್ನು 'ಬಾಹುಲ್ಯಾತ್ ಶ್ರುತಿಲಿಂಗಯೋಃ' ಎಂಬ ಅನುವ್ಯಾಖ್ಯಾನದಲ್ಲಿ ಮತ್ತು 'ಜ್ಯಾಯಾಂಶ್ಚ ಪುರುಷ ಇತ್ಯಾದಿಶಬ್ದಸಹಿತ-ಲಿಂಗೈಶ್ಚ' ಎಂಬ ನ್ಯಾಯವಿವರಣದಲ್ಲಿ ಪರಿಹರಿಸಿದ್ದಾರೆ.

ಒಟ್ಟು ಅಭಿಪ್ರಾಯ ಹೀಗಿದೆ - 'ಅತೋ ಜ್ಯಾಯಾಂಶ್ಚ ಪುರುಷಃ, ಯದ್ವೈತದ್ಬ್ರಹ್ಮ, ಏತಾಮೇವ ಬ್ರಹ್ಮೋಪನಿಷದಮ್' ಇತ್ಯಾದಿ ಅನೇಕ ಶ್ರುತಿಗಳು ಭಗವಂತನಲ್ಲಿ ಪ್ರಸಿದ್ಧವಾಗಿವೆ. ಮತ್ತು ಗಾನತ್ರಾಣ- ಕರ್ತೃತ್ವ, ಭೂತಾದಿಪಾದತ್ವ, 'ಏತಾಮೇವ ನಾತಿಶೀಯಂತೇ' ಎಂಬ ಸರ್ವೋತ್ತಮತ್ವ ಮೊದಲಾದ ಲಿಂಗಗಳು ವಿಷ್ಣುವಿನಲ್ಲಿ ಬಹಳವಾಗಿ ಪ್ರಸಿದ್ಧವಾಗಿವೆ. ಹೀಗೆ ಅನೇಕಶ್ರುತಿಗಳು ಮತ್ತು ಅನೇಕ ಲಿಂಗಗಳು ಭಗವಂತನಲ್ಲಿ ಪ್ರಸಿದ್ಧವಾಗಿವೆ. ಇವುಗಳ ಪ್ರಸಿದ್ಧಾರ್ಥವನ್ನು ಬಿಡಬೇಕಾಗುತ್ತದೆ. ಪುರುಷಶಬ್ದವಾದರೋ ಭಗವಂತನನ್ನೇ ಪ್ರತಿಪಾದಿಸುತ್ತಿದೆ. 'ಸ ವಾ ಅಯಂ ಪುರುಷಃ ಸರ್ವಾಸು ಪೂರ್ಷು ನೈನೇನ ಕಿಂಚನಾನಾವೃತಮ್' ಎಂಬಲ್ಲಿ ಪುರುಷನನ್ನು ಸರ್ವಾಂತರ್ಯಾಮಿ ಎನ್ನಲಾಗಿದೆ. ಮತ್ತು 'ಪುರುಷೋ ಹ ವೈ ನಾರಾಯಣಃ, ಸಹಸ್ರಶೀರ್ಷಾ ಪುರುಷಃ ಸಹಸ್ರಾಕ್ಷಃ ಸಹಸ್ರಪಾತ್, ಇತ್ಯೇಷ ಹ್ಯೇವಾಚಂತ್ಯಃ ಪರಃ ಪರಮೋ ಹರಿಃ ಪುರುಷಃ ಪರಃ ಪರಮಾತ್ಮಾಜ್ಞೋ ಬ್ರಹ್ಮ ನಾರಾಯಣಃ ಪ್ರಭುಃ' ಎಂಬ ಶ್ರುತಿಗಳಲ್ಲಿ ನಾರಾಯಣನನ್ನೇ ಸ್ಪಷ್ಟವಾಗಿ ಪುರುಷ ಎನ್ನಲಾಗಿದೆ. 'ಯಥಾ ಹಿ ಪೌರುಷೇ ಸೂಕ್ತೇ ವಿಷ್ಣೂರೇವಾಭಿಧೀಯತೇ' ಎಂಬ ಶ್ರುತಿಯಲ್ಲಿ ಪುರುಷೋತ್ತಮನಲ್ಲೇ ಮುಖ್ಯವೆಂದು ತಿಳಿಯುತ್ತದೆ.

ಐದನೆಯ ಪ್ರಮೇಯಾಶ್ರಿತಶಂಕೆಯು 'ತಾದೃಶತ್ವಾತ್ ತು ತಚ್ಛಕ್ತೇಃ' ಎಂಬ ಅನುವ್ಯಾಖ್ಯಾನದಲ್ಲಿ ಪರಿಹರಿಸಲ್ಪಟ್ಟಿದೆ.

### ಕಠಿಣಪದಾರ್ಥ

ವಿವಕ್ಷಾಭೇದೇನ = ಮೂರುಲೋಕ ಮತ್ತು ಏಳುಲೋಕಗಳ ವಿವಕ್ಷೆಯಿಂದ, ಆಕಾರಭೇದೇನ = ದೇಶಕಾಲಗುಣಾದಿಗಳಿಂದ ಅಪರಿಚ್ಛಿನ್ನನಾಗಿದ್ದಾನೆಂಬ ಆಕಾರಭೇದದಿಂದ; ಅನುವ್ಯಾಖ್ಯಾನೇ = ಗಾಯತ್ರೀ, ವಾಕ್ ಮೊದಲಾದ ಅನೇಕಶ್ರುತಿಗಳ ಬಲದಿಂದ ಅನುವ್ಯಾಖ್ಯಾನದಲ್ಲಿ ಹೇಳಿದ.

**प्रकाशः** – किं तदुक्तशङ्कानिरासकमित्यतस्तदर्शयन् सिद्धान्तयति – **तत्रेति** ॥ वेदोपदेष्टृत्वपातृत्वरूपगानत्राणकर्तृत्वादिरूपगायत्र्यादिशब्दार्थगुणस्वरूपत्वेन चेतोऽर्पणार्थमेव तादृशशब्दैर्निगद्यमानत्वादित्युपासनारूपप्रयोजनोक्त्वेत्यर्थः द्वितीयशङ्कापरिहारस्य भाष्यादिदिशोपलम्भेऽपि तृतीयाया अस्मिन् सूत्रेऽदर्शनात् स्वयमेवाह – **तस्येति** ॥ त्रिसप्तलोकविवक्षाभेदेनेत्यर्थः । स्पष्टयिष्यते चैतदग्र इति भावः ॥ **आकारेति** ॥ देशकालगुणाद्यपरिच्छिन्नत्वेनाकारेण कर्णादिविदूरत्वम्, अकात्स्न्र्येन दृष्टत्वादिकम् ।

यद्वा केवलरूपेण कर्णादिविदूरत्वम् किञ्चिदधिष्ठानाधिष्ठितत्वादिरूपेण दृष्टत्वादिकमित्यर्थः । उक्तञ्च सुधायां – **''नच ज्योतिषो ब्रह्मत्वे दृष्टत्वाद्यनुपपत्तिः, यतस्तदधिष्ठानद्वारा कर्णादिविदूरस्यैव हरेरुपपद्यते''** इति ॥ **चतुर्थीति** ॥ गायत्रीवागादिबहुश्रुतिबलेनानुव्याख्यानोक्तेत्यर्थः।

**कथं प्रसिद्धबहुलशब्दानामन्यथार्थता ।**
**इति चेत्तद्धरेरेव बाहुल्यात् श्रुतिलिङ्गयोः**
**तादृशत्वाच्च तच्छक्तेः..... ।**

इत्यनुव्याख्याने, **''तावानस्य महिमा ततो ज्यायांश्च''** इत्यादि न्यायविवरणे चेत्यर्थः । ननु पूर्वोत्तरपक्षयोः श्रुतिबाहुल्यसाम्ये कथं निर्णय इत्यतः, श्रुतिसाम्येऽपि लिङ्गानामधिक्यान्निर्णयः स्यादिति भावेन श्रुतिलिङ्गबाहुल्यं दर्शयन्नाह – **अयं भाव इति** ॥ **गानेति** ॥ **''गायति च त्रायति च''** इत्युक्तमित्यर्थः । **''सैषा चतुष्पदा षड्विधा गायत्री''** इति गायत्र्याः प्रागुक्तषड्विधत्वमनूद्य, चतुष्पदत्वं व्यपदिश्य, तत्रैव पुरुषसूक्तमन्त्रः संवादायोदाहृतः ।

**तावानस्य महिमा ततो ज्यायांश्च पुरुषः ।**
**पादोऽस्य सर्वा भूतानि त्रिपादस्यामृतं दिवि ॥**

इति । अत्रोक्तभूतादिपादत्वमित्यर्थः । 'एतां' गायत्रीम् । ब्रह्मशब्दस्य जन्मादिसूत्रादौ, लिङ्गानां च भाष्यादौ विष्णौ मुख्यत्वस्य साधितत्वात् पुरुषशब्दस्य तत्साधयति – **पुरुषशब्दो हीति** ॥ पुरुषोत्तमे मुख्यः इत्यन्वयः । एतेन भाष्यटीकयोर्लिङ्गस्य निरवकाशत्वेन सिद्धान्तकरणमुपलक्षणमिति सूचितम् ।

**''स वा अयं'' इति श्रुतिः अष्टमे गीताभाष्यटीकायां व्याख्याता । पञ्चमी त्विति ॥ 'नित्यत्वादेव' इत्यनुव्याख्यानोक्ता ।**

ವಿವರಣೆ - ಇಲ್ಲಿಯ ತನಕ ನಾಲ್ಕು ಬಗೆಯ ಪ್ರಮಾಣಾಶ್ರಿತಪೂರ್ವಪಕ್ಷಗಳನ್ನು ಒಂದು ಬಗೆಯ ಪ್ರಮೇಯಾಶ್ರಿತ ಪೂರ್ವಪಕ್ಷವನ್ನು ಸಮರ್ಥಿಸಿದರು. ಪ್ರಕೃತ ಆ ಪೂರ್ವಪಕ್ಷಗಳ ವ್ಯಾಖ್ಯೇಯಗಳನ್ನು ತೋರಿಸುತ್ತಾ ಸಿದ್ಧಾಂತ ಮಾಡುತ್ತಿದ್ದಾರೆ. ವಿಷ್ಣುವಿನಲ್ಲಷ್ಟೇ ಪ್ರಸಿದ್ಧವಾದ ಅನೇಕ ಶಬ್ದಗಳಿರುವಾಗ ಅನ್ಯತ್ರಪ್ರಸಿದ್ಧವಾದ ಗಾಯತ್ರೀ ಮೊದಲಾದ ಶಬ್ದಗಳನ್ನು ವಿಷ್ಣುವಿನಲ್ಲಿ ಏಕೆ ಹೇಳಬೇಕು? ಎಂಬುದು ಮೊದಲನೆಯ ಪೂರ್ವಪಕ್ಷ. ಅನೇಕ ಮುಖಗಳಿಂದ ಭಗವಂತನನ್ನು ಉಪಾಸನೆ ಮಾಡಬೇಕು. ಭಗವಂತನು ವೇದೋಪದೇಷ್ಟವಾದ್ದರಿಂದ ಗಾನಕರ್ತ ಎನಿಸಿದ್ದಾನೆ. ಸಕಲನಿಯಾಮಕನಾದ್ದರಿಂದ ತ್ರಾಣಕರ್ತ ಎನಿಸಿದ್ದಾನೆ. ಹೀಗೆ ಗಾಯತ್ರೀಶಬ್ದದಿಂದ ತಿಳಿಯುವ ಗುಣಗಳನ್ನು ಭಗವಂತನಲ್ಲಿ ಉಪಾಸನೆ ಗೈಯ್ಯಬೇಕು. ಇದಕ್ಕಾಗಿ ಗಾಯತ್ರೀಶಬ್ದದ ಸಮನ್ವಯವನ್ನು ಅವಶ್ಯ ಮಾಡಬೇಕೆಂದು ತಿಳಿಸಲು ಈ ಅಧಿಕರಣದಲ್ಲಿ ಗಾಯತ್ರೀ ಮೊದಲಾದ ಶಬ್ದಗಳನ್ನು ಸಮನ್ವಯ ಮಾಡಲಾಗಿದೆ. ಈ ಶಬ್ದಗಳ ಸಮನ್ವಯವು ಉಪಾಸನೆಗೋಸ್ಕರ ಸಾರ್ಥಕವೆಂದು ಸೂತ್ರಕಾರರು 'ಚೇತೋರ್ಪಣನಿಗದಾತ್' ಎಂಬ ಸೂತ್ರದಿಂದ ಹೇಳಿದ್ದಾರೆ. ಇದರಿಂದ ಮೊದಲನೆಯ ಪೂರ್ವಪಕ್ಷವು ಪರಿಹಾರವಾಯಿತು.

ಅಗ್ನಿಸೂಕ್ತದಲ್ಲಿರುವ ಜ್ಯೋತಿಯು ವಿಷ್ಣುವೆನ್ನಲು ಬಾಧಕವಿಲ್ಲ. ಆದರೆ ದಿವಃಪರತ್ವ ದಿವಃಸ್ಥಿತತ್ವ ಎಂಬ ಉಪದೇಶಭೇದದ ಬಾಧಕವಿರುವುದರಿಂದ ಗಾಯತ್ರಿಯು ವಿಷ್ಣುವಲ್ಲವೆಂಬುದು ಎರಡನೆಯ ಪೂರ್ವಪಕ್ಷ. ಇದನ್ನು ಸೂತ್ರಕಾರರು 'ಉಭಯಸಿದ್ಧಪ್ಯವಿರೋಧಾತ್' ಎಂಬ ಸೂತ್ರದಿಂದ ಪರಿಹರಿಸಿದ್ದಾರೆ. ಮೂರುಲೋಕಗಳ ವಿವಕ್ಷೆಯಿಂದ ಭಗವಂತನಲ್ಲಿ ದಿವಃಪರತ್ವವು ಸಪ್ತಲೋಕಗಳ ವಿವಕ್ಷೆಯಿಂದ ದಿವಿಃಸ್ಥಿತತ್ವವು ಭಗವಂತನಲ್ಲಿ ಬರುತ್ತದೆ. ಈ ವಿಚಾರವನ್ನು ಮುಂದೆ ಸ್ಪಷ್ಟಪಡಿಸುತ್ತಾರೆ. ಹೀಗೆ ಉಪದೇಶಭೇದದ ವಿರೋಧವಿಲ್ಲದ ಕಾರಣ ಭಗವಂತನು ಗಾಯತ್ರಿ ಎನಿಸುತ್ತಾನೆ. ಆದ್ದರಿಂದ ಎರಡನೆಯ ಪೂರ್ವಪಕ್ಷವು ಇದರಿಂದ ನಿರಾಕೃತವಾಯಿತು.

ಅಗ್ನಿಸೂಕ್ತದಲ್ಲಿರುವ ಜ್ಯೋತಿಯು ವಿಷ್ಣುವೆನ್ನಲು ಕರ್ಣಾದಿವಿದೂರತ್ವವೆಂಬ ಲಿಂಗವಿದೆ. ಆದಕ್ಕೆ ವಿರುದ್ಧವಾದ ದೃಷ್ಟಶ್ರುತತ್ವಾದಿಲಿಂಗಗಳು ಗಾಯತ್ರಿಯಲ್ಲಿ ಕೇಳಿಸುತ್ತಿರುವುದರಿಂದ ಗಾಯತ್ರಿಯು ವಿಷ್ಣುವಲ್ಲ ಎಂಬುದು ಮೂರನೆಯ ಪೂರ್ವಪಕ್ಷ. ಈ ಪೂರ್ವಪಕ್ಷವೂ ಸಹ 'ಉಭಯಸಿದ್ಧಪ್ಯವಿರೋಧಾತ್' ಎಂಬ ಸೂತ್ರದಿಂದಲೇ ಪರಿಹಾರವಾಗಿದೆ. ಆದರೆ ಸ್ಪಷ್ಟವಾಗಿ ತಿಳಿಯದ ಕಾರಣ ಗ್ರಂಥಕಾರರೇ 'ತಸ್ಯ' ಎಂಬ ವಾಕ್ಯದಿಂದ ವಿವರಿಸಿದ್ದಾರೆ. ದೇಶಕಾಲಗುಣಾದಿಗಳಿಂದ ಭಗವಂತನು ಅಪರಿಚ್ಛಿನ್ನನಾಗಿ ಕರ್ಣಾದಿವಿದೂರನೆನಿಸಿದ್ದಾನೆ. ಏಕದೇಶದಿಂದ ತಿಳಿಯುತ್ತಾನಾದ್ದರಿಂದ ದೃಷ್ಟನೂ ಶ್ರುತನೂ ಆಗಿದ್ದಾನೆ. ಅಥವಾ ಮೂಲರೂಪದಿಂದ ಕರ್ಣಾದಿವಿದೂರನಾಗಿದ್ದಾನೆ. ವಾಯುದೇವರೇ ಮೊದಲಾದ ಅಧಿಷ್ಠಾನಗಳಲ್ಲಿ ಅಧಿಷ್ಠಿತನಾಗಿ ದೃಷ್ಟನಾಗಿದ್ದಾನೆ. ಇದನ್ನೇ ಸುಧೆಯಲ್ಲಿ 'ನ ಚ ಜ್ಯೋತಿಷೋ ಬ್ರಹತ್ವೇ ದೃಷ್ಟತ್ವಾದ್ಯನುಪಪತ್ತಿಃ । ಯತಸ್ತದಧಿಷ್ಠಾನದ್ವಾರಾ ಕರ್ಣಾದಿವಿದೂರಸ್ಯೈವ ಹರೇರುಪಪದ್ಯತೇ'

(ಜ್ಯೋತಿಯು ಬ್ರಹ್ಮನಾದರೆ ದೃಷ್ಟತ್ವಾದಿಗಳ ಅನುಪಪತ್ತಿ ಬರುತ್ತದೆ ಎನ್ನಬಾರದು. ಕರ್ಣಾದಿವಿದೂರನಾಗಿದ್ದರೂ ಅಧಿಷ್ಠಾನದ ಮೂಲಕ ಶ್ರೀಹರಿಯು ದೃಷ್ಟನಾಗಿದ್ದಾನೆ.) ಹೀಗೆ ಉಪದೇಶಭೇದಸೂತ್ರದಿಂದಲೇ ಮೂರನೆಯ ಪೂರ್ವಪಕ್ಷನಿರಾಸವನ್ನು ತಿಳಿಯಬೇಕು.

ನಾಲ್ಕನೆಯ ಪೂರ್ವಪಕ್ಷವು ಅನುವ್ಯಾಖ್ಯಾನ ನ್ಯಾಯವಿವರಣಗಳಲ್ಲಿ ಪರಿಹರಿಸಲ್ಪಟ್ಟಿದೆ. ಅದು ಹೀಗೆ

ಕಥಂ ಪ್ರಸಿದ್ಧಬಹುಲಶಬ್ದಾನಾಮನ್ಯಥಾರ್ಥತಾ ।
ಇತಿ ಚೇತ್ ತದ್ಧರೇರೇವ ಬಾಹುಲ್ಯಾತ್ ಶ್ರುತಿಲಿಂಗಯೋಃ ॥
ತಾದೃಶತ್ವಾಚ್ಚ ತಚ್ಛಕ್ತೇಃ .....

(ಗಾಯತ್ರ್ಯಾದಿಗಳಲ್ಲಿ ಪ್ರಸಿದ್ಧವಾದ ಅನೇಕಶಬ್ದಗಳಿಗೆ ಅನ್ಯಾರ್ಥವನ್ನು/ಹರಿಪರತ್ವವನ್ನು ಹೇಗೆ ಕಲ್ಪಿಸುವುದು ಎಂದರೆ ಬಹಳವಾದ ಶ್ರುತಿಲಿಂಗಗಳ ಬಲದಿಂದ ಹರಿಪರತ್ವವನ್ನು ಹೇಳಬಹುದು) ಹೀಗೆ ಅನುವ್ಯಾಖ್ಯಾನದಲ್ಲಿ ಹೇಳಿದ್ದಾರೆ. ಮತ್ತು ನ್ಯಾಯವಿವರಣದಲ್ಲಿ 'ತಾವಾನಸ್ಯ ಮಹಿಮಾ ತತೋ ಜ್ಯಾಯಾಂಶ್ಚ' ಇತ್ಯಾದಿಯಾಗಿ ಹೇಳಿದ್ದಾರೆ. ಅಂದರೆ ಪೂರ್ವಪಕ್ಷಪ್ರಾಪಕವಾಗಿ ಅನೇಕ ಶ್ರುತಿಗಳಿರುವಂತೆ ಸಿದ್ಧಾಂತಸ್ಥಾಪಕವಾಗಿಯೂ ಅನೇಕಶ್ರುತಿಗಳಿವೆ ಎಂದು ಅಭಿಪ್ರಾಯ.

ಪೂರ್ವಪಕ್ಷ ಹಾಗೂ ಸಿದ್ಧಾಂತಗಳಲ್ಲಿ ಬಹುಶ್ರುತಿಗಳು ಸಮಾನವಾಗಿವೆ. ಹಾಗಾದರೆ ಇದರಿಂದ ನಿರ್ಣಯ ಹೇಗೆ ಆಗುತ್ತದೆ? ಎಂಬ ಪ್ರಶ್ನೆಗೆ ಎರಡೂ ಪಕ್ಷಗಳಲ್ಲಿ ಶ್ರುತಿಯು ಸಮಾನವಾಗಿದ್ದರೂ ಸಿದ್ಧಾಂತದಲ್ಲಿ ಅಧಿಕ ಲಿಂಗಗಳಿರುವುದರಿಂದ ನಿರ್ಣಯಿಸಬಹುದೆಂಬ ಅಭಿಪ್ರಾಯದಿಂದ 'ಅಯಂ ಭಾವಃ' ಎಂಬ ಗ್ರಂಥವು ಹೊರಟಿದೆ. ಅಂದರೆ ಶ್ರುತಿಲಿಂಗಗಳು ಬಹಳವಾಗಿವೆ ಎಂದಷ್ಟೇ ಅನುವ್ಯಾಖ್ಯಾನದಲ್ಲಿ ಕಾಣಿಸುತ್ತಿದೆ. ಇದಕ್ಕೆ ಸಿದ್ಧಾಂತದಲ್ಲಿ ಪೂರ್ವಪಕ್ಷಕ್ಕಿಂತ ಅಧಿಕವಾದ ಲಿಂಗಗಳಿವೆ ಎಂದರ್ಥ. ವಿಷ್ಣುಲಿಂಗಗಳು ಹೀಗಿವೆ - ಗಾನಕರ್ತೃತ್ವ, ತ್ರಾಣಕರ್ತೃತ್ವ, ಭೂತಾದಿಪಾದತ್ವ ಮತ್ತು ಸರ್ವೋತ್ತಮತ್ವ ಮೊದಲಾದವುಗಳು. 'ಸೈಷಾ ಚತುಷ್ಪದಾ ಷಡ್ವಿಧಾ ಗಾಯತ್ರೀ' ಎಂದು ಮೊದಲು ಷಡ್ವಿಧತ್ವವನ್ನು ಗಾಯತ್ರಿಗೆ ಅನುವಾದ ಮಾಡಿ ಅನಂತರ ಚತುಷ್ಪದತ್ವವನ್ನು ಶ್ರುತಿಯು ಹೇಳಿದೆ. ಆ ಚತುಷ್ಪದವೇ ಪುರುಷವೆಂದು ತಿಳಿಸಲು ಪುರುಷಸೂಕ್ತಮಂತ್ರದ ಸಂವಾದಿಯನ್ನು 'ತಾವಾನಸ್ಯ ಮಹಿಮಾ ತತೋ ಜ್ಯಾಯಾಂಶ್ಚ ಪುರುಷಃ । ಪಾದೋऽಸ್ಯ ಸರ್ವಾ ಭೂತಾನಿ ತ್ರಿಪಾದಸ್ಯಾಮೃತಂ ದಿವಿ' ಎಂಬ ಶ್ರುತಿಯು ಹೇಳಿದೆ. ಇದರಿಂದ ಭೂತಾದಿಪಾದತ್ವಲಿಂಗವನ್ನು ಹೇಳಿದಂತಾಯಿತು. ಅಂದರೆ ಬ್ರಹ್ಮಾದಿಸಕಲಭೂತಗಳು ಭಗವಂತನ ಒಂದು ಅಂಶ. ಉಳಿದ ಮೂರು ಅಂಶಗಳು ಅನಂತಾಸನ ಶ್ವೇತದ್ವೀಪ ವೈಕುಂಠಗಳಲ್ಲಿವೆ. ಹೀಗೆ ಭೂತಾದಿಪಾದತ್ವಲಿಂಗವನ್ನು ಸಮರ್ಥಿಸಲು ಪುರುಷಸೂಕ್ತಾದಿಗಳನ್ನು ಉಲ್ಲೇಖಿಸಿದ್ದಾರೆ. ಈ ಶ್ರುತಿಗಳಲ್ಲಿರುವ ಬ್ರಹ್ಮಶಬ್ದವು ಜನ್ಮಾದಿಸೂತ್ರಗಳಲ್ಲಿ ಹೇಳಿದ ಲಿಂಗ ಬಲದಿಂದ ವಿಷ್ಣುವಿನಲ್ಲಿ ಮುಖ್ಯವೆಂದು ತಿಳಿಯುತ್ತದೆ. ಆದರೆ ಪುರುಷಶಬ್ದವು ವಿಷ್ಣುವಿನಲ್ಲಿ ಮುಖ್ಯವೆಂದು ಸಮರ್ಥಿಸಲು 'ಪುರುಷಶಬ್ದೋ ಹಿ' ಎಂಬ ಗ್ರಂಥವು ಹೊರಟಿದೆ. ಅಂದರೆ ಗ್ರಂಥಕಾರರು ಪುರುಷಶಬ್ದಕ್ಕೆ ಮಾತ್ರ ವಿಷ್ಣುಪರತ್ವವನ್ನು ಸಮರ್ಥಿಸುತ್ತಿದ್ದಾರೆ. ಹೀಗೆ ಹೇಳಿದ್ದರಿಂದ ಭಾಷ್ಯಹಾಗೂ ಟೀಕೆಗಳಲ್ಲಿ ಹೇಳಿದ ಸಿದ್ಧಾಂತಸ್ಥಾಪಕವಾದ ನಿರವಕಾಶಲಿಂಗವು ಉಪಲಕ್ಷಣವೆಂದು ಸೂಚಿಸಿದಂತಾಯಿತು. 'ಸ ವಾ ಅಯಮ್' ಎಂಬ ಶ್ರುತಿಯನ್ನು ಎಂಟನೆಯ ಅಧ್ಯಾಯದ ಗೀತಾಭಾಷ್ಯದ ಟೀಕೆಯಲ್ಲಿ ವ್ಯಾಖ್ಯಾನಿಸಿದ್ದಾರೆ.

**ಗುರುರಾಜೀಯಮ್ – ತತ್ರಾದ್ಯೇತಿ ॥** ವಿಷ್ಣೌ ಪ್ರಸಿದ್ಧನಾರಾಯಣಾದಿಶಬ್ದಪರಿತ್ಯಾಗೇನಾನ್ಯತ್ರಪ್ರಸಿದ್ಧಗಾಯತ್ರ್ಯಾದಿಶಬ್ದಪ್ರಯೋಗೇ ಪ್ರಯೋಜನಂ ವಾಚ್ಯಮಿತ್ಯಾದ್ಯಾಶಙ್ಕೇತ್ಯರ್ಥಃ ॥ **ದ್ವಿತೀಯತೃತೀಯೇ ಇತಿ ॥** ಯುಕ್ತಮಗ್ನಿಸೂಕ್ತಸ್ಥಜ್ಯೋತಿಷೋ ವಿಷ್ಣುತ್ವಮ್ । ಉಪದೇಶಭೇದಾಭಾವಾತ್ । ಇಹ ತು ದಿವ ಇತಿ ಪಞ್ಚಮ್ಯುಪದೇಶಸ್ಥಸ್ಯ ಜ್ಯೋತಿಃಶ್ರುತ್ಯಾ ವಿಷ್ಣುತ್ವೇಪಿ ದಿವೀತಿ ತದ್ವಿರುದ್ಧಸಪ್ತಮ್ಯುಪದೇಶಸ್ಥಗಾಯತ್ರ್ಯಾ ನ ವಿಷ್ಣುತ್ವಮಿತಿ ದ್ವಿತೀಯಾ । ಅಗ್ನಿಸೂಕ್ತಸ್ಥಜ್ಯೋತಿರ್ನಿಷ್ಕರ್ಣಾದಿವಿದೂರತ್ವವಿರುದ್ಧದೃಷ್ಟತ್ವಾದ್ಯುಪದೇಶಾನ್ನೇದಂ ಜ್ಯೋತಿರ್ವಿಷ್ಣುಸ್ತತಶ್ಚ ಗಾಯತ್ರ್ಯಪಿ ನ ವಿಷ್ಣುರಿತಿ ತೃತೀಯಾ ಶಙ್ಕೇತಿ ದ್ವಿತೀಯತೃತೀಯೇ ಇತ್ಯರ್ಥಃ ।

ನನೂಭಯಸ್ಮಿನ್ನಪ್ಯವಿರೋಧಾದಿತ್ಯನೇನ ದ್ವಿತೀಯಶಙ್ಕಾನಿರಾಸಸಮ್ಭವೇಪಿ ಕಥಂ ತೃತೀಯಶಙ್ಕಾನಿರಾಸಃ । ತ್ರಿಸಪ್ತಲೋಕಾಪೇಕ್ಷಯೋಭಯಸ್ಮಿನ್ನವಿರೋಧೇನ ತನ್ನಿರಾಸಾಸಮ್ಭವಾದಿತ್ಯತ ಆಹ – **ತಸ್ಯೇತಿ ॥ ಚತುರ್ಥೀ ತ್ವಿತಿ ॥** ಏಕಸ್ಯಾ ವಹ್ನಿಶ್ರುತೇರನ್ಯತ್ರಪ್ರಸಿದ್ಧಿಬಾಧೇಪೀತ್ಯಾದಿನೋಕ್ತೇತ್ಯರ್ಥಃ । ಜ್ಯಾಯಾಂಶ್ಚ ಪುರುಷ ಇತ್ಯಾದಿಶಬ್ದಸನ್ನಿಹಿತಲಿಙ್ಗೈಶ್ಚೇತ್ಯತ್ರಾದಿಶಬ್ದಸಙ್ಗ್ರಾಹ್ಯಂ ವದನ್ನೇವ ಸೂತ್ರೇ ಭೂತಾದೀತಿ ಸಾಕ್ಷಾಲ್ಲಿಙ್ಗಸ್ಯೋಕ್ತತ್ವೇನ ನ್ಯಾಯವಿವರಣೇऽನುಕ್ತಮಪಿ ಲಿಙ್ಗಬಾಹುಲ್ಯಂ ದರ್ಶಯನ್ನೇವ ಪುರುಷಶ್ರುತೇರ್ನಿರವಕಾಶತ್ವಂ ದರ್ಶಯತಿ – **ಅಯಂ ಭಾವ ಇತಿ ॥ ಪಞ್ಚಮೀ ತ್ವಿತಿ ॥**

## ಸಾರ

ಐದು ಪೂರ್ವಪಕ್ಷಗಳ ಮಧ್ಯದಲ್ಲಿ ಮೊದಲನೆಯ ಶಂಕೆಯು 'ಚೇತೋರ್ಪಣನಿಗದಾತ್' ಎಂಬ ಸೂತ್ರದಲ್ಲಿ ಪ್ರಯೋಜನವನ್ನು ಹೇಳುವ ಮೂಲಕ ಪರಿಹರಿಸಲಾಗಿದೆ.

ಎರಡು ಹಾಗೂ ಮೂರನೆಯ ಪೂರ್ವಪಕ್ಷಗಳನ್ನು 'ಉಭಯಸ್ಮಿನ್ ಅಪ್ಯವಿರೋಧಾತ್' ಎಂಬ ಸೂತ್ರದಿಂದ ಪರಿಹರಿಸಿದ್ದಾರೆ.

ನಾಲ್ಕನೆಯ ಪೂರ್ವಪಕ್ಷವನ್ನು 'ಬಾಹುಲ್ಯಾತ್ ಶ್ರುತಿಲಿಂಗಯೋಃ' ಎಂಬ ಅನುವ್ಯಾಖ್ಯಾನದಲ್ಲಿ ಮತ್ತು 'ಜ್ಯಾಯಾಂಶ್ಚ ಪುರುಷ ಇತ್ಯಾದಿಶಬ್ದಸಹಿತಲಿಂಗೈಶ್ಚ' ಎಂಬ ನ್ಯಾಯವಿವರಣದಲ್ಲಿ ಪರಿಹರಿಸಿದ್ದಾರೆ.

ಐದನೆಯ ಪ್ರಮೇಯಾಶ್ರಿತಶಂಕೆಯು 'ತಾದೃಶತ್ವಾತ್ ತು ತಚ್ಛಕ್ತೇಃ' ಎಂಬ ಅನುವ್ಯಾಖ್ಯಾನದಲ್ಲಿ ಪರಿಹರಿಸಲ್ಪಟ್ಟಿದೆ.

ಅನಾದಿಯೂ ಭಗವದಧೀನ

**तात्पर्यचन्द्रिका**

**अयं भावः –**

**अनादीनां गुणादीनां यथागुण्यादितन्त्रता ।**
**तथाऽनादिश्रुतेरस्तु क्षेमायेश्वरतन्त्रता ॥**

**यथा वैशेषिकादिमते गगनादिपरिमाणादीनां अनादिनित्यानामपि स्वाश्रय-गगनाद्यधीनता, यथा वाऽद्वैतिमते अनादेरात्माज्ञानसम्बन्धस्य जीवब्रह्मविभागादेश्च सम्बन्ध्यज्ञानाद्यधीनता, यथा वा प्राभाकरमते दुःखप्रागभावस्य मोक्षस्य ज्ञानाधीनता, यथा वा मतान्तरे दुरितप्रागभावस्य निषिद्धाकरणाधीनता, तथा गायत्र्यास्तत्पदप्रवृत्तिनिमित्तस्य चोत्पत्त्यभावेऽपि स्थितौ विष्ण्वधीनता ।**

**किञ्च – सादेरपि उत्पत्तावन्यापेक्षायामपि तदनन्तरं स्थितावनादितो न विशेषः । तत्र च सादिर्न केवलमुत्पत्तावीशतन्त्रः किन्तु स्थितावपीति ''प्रकृतै-तावत्त्वं हि प्रतिषेधति ततो ब्रवीति च भूयः'' इत्यत्र वक्ष्यमाणत्वा-दनादेरुत्पत्त्यभावेन तत्रान्यानपेक्षायामपि स्थितावीशापेक्षा किं न स्यात् । दृश्यते हि योगे अन्यापेक्षस्य पराधीनत्ववत् क्षेमेऽपि तदपेक्षस्य तदधीनता ।**

ಅನುವಾದ - ಇದನ್ನು ತಿಳಿಯಬೇಕು -

ಅನಾದೀನಾಂ ಗುಣಾದೀನಾಂ ಯಥಾಗುಣ್ಯಾದಿತಂತ್ರತಾ ।
ತಥಾಽನಾದಿಶ್ರುತೇರಸ್ತು ಕ್ಷೇಮಾಯೇಶ್ವರತಂತ್ರತಾ ॥

ಅನಾದಿಯಾದ ಗುಣಗಳು ಹೇಗೆ ಗುಣಿಗಳ ಅಧೀನವಾಗಿವೆಯೋ ಅದರಂತೆ ಅನಾದಿಶ್ರುತಿಯು ಸಹ ತನ್ನ ಕ್ಷೇಮಕ್ಕಾಗಿ ಭಗವದಧೀನವಾಗಲಿ.

ಯಾವರೀತಿಯಾಗಿ ವೈಶೇಷಿಕಮತದಲ್ಲಿ ಗಗನಪರಿಮಾಣಾದಿಗಳು ಅನಾದಿನಿತ್ಯವಾಗಿದ್ದರೂ ತನಗೆ ಆಶ್ರಯವಾದ ಗಗನಾದಿಗಳ ಅಧೀನವಾಗಿದೆಯೋ, ಅಥವಾ ಅದ್ವೈತಿಗಳ ಮತದಲ್ಲಿ ಆತ್ಮ ಅಜ್ಞಾನಸಂಬಂಧವು ಅನಾದಿಯಾಗಿದ್ದರೂ ಸಂಬಂಧಿಯಾದ ಆತ್ಮನ ಅಧೀನವಾಗಿದೆಯೋ ಮತ್ತು ಜೀವಬ್ರಹ್ಮವಿಭಾಗವು ಅನಾದಿಯಾಗಿದ್ದರೂ ಅಜ್ಞಾನದ ಅಧೀನವಾಗಿದೆಯೋ, ಅಥವಾ ಪ್ರಾಭಾಕರ ಮತದಲ್ಲಿ ಅನಾದಿ ದುಃಖಪ್ರಾಗಭಾವವೆಂಬ ಮೋಕ್ಷವು ಜ್ಞಾನದ ಅಧೀನವಾಗಿದೆಯೋ, ಅಥವಾ

ಅವರಲ್ಲೇ ಕೆಲವರು ಹೇಳುವ ಅನಾದಿಯಾದ ದುರಿತಪ್ರಾಗಭಾವವು ಅನಿಷಿದ್ಧಾಚರಣೆಯ ಅಧೀನವೋ ಅದರಂತೆ ಗಾಯತ್ರಿಯು ಮತ್ತು ಅದರ ಪ್ರವೃತ್ತಿನಿಮಿತ್ತವು ಅನಾದಿಯಾಗಿದ್ದರೂ ಸ್ಥಿತಿಯಲ್ಲಿ ಭಗವಂತನ ಅಧೀನವಾಗಬಹುದು.

ಮತ್ತು ಸಾದಿಪದಾರ್ಥಕ್ಕೆ ಉತ್ಪತ್ತಿಯಾಗಲು ಮತ್ತೊಂದರ ಅಪೇಕ್ಷೆ ಇದೆ. ಉತ್ಪತ್ತಿಯಾದ ಮೇಲೆ ಅನಾದಿ ಪದಾರ್ಥದಂತೆ ಅದರ ಸ್ಥಿತಿಗೆ ಮತ್ತೊಂದರ ಅಧೀನವಾಗಿರುವಿಕೆಯು ಇದ್ದೇ ಇರುತ್ತದೆ. ಈ ವಿಷಯದಲ್ಲಿ ಅಧೀನವಾಗಿರುವಿಕೆಯೆಂಬುದು ಸಾದಿಪದಾರ್ಥಕ್ಕೂ ಅನಾದಿಪದಾರ್ಥಕ್ಕೂ ಸಮಾನ. ಸಾದಿಪದಾರ್ಥವು ಕೇವಲ ಉತ್ಪತ್ತಿಯಲ್ಲಷ್ಟೇ ಭಗವದಧೀನವಲ್ಲ ಸ್ಥಿತಿಯಲ್ಲಿಯೂ ಭಗವದಧೀನವಾಗಿದೆ ಎಂಬುದನ್ನು 'ಪ್ರಕೃತೈಕಾವತ್ವಂ ಹಿ ಪ್ರತಿಷೇಧತಿ' ಎಂಬ ಸೂತ್ರದಲ್ಲಿ ಮುಂದೆ ಸಮರ್ಥಿಸುತ್ತಾರೆ. ಅನಾದಿಪದಾರ್ಥಕ್ಕೆ ಉತ್ಪತ್ತಿಯಿಲ್ಲದ ಕಾರಣ ಉತ್ಪತ್ತಿವಿಷಯದಲ್ಲಿ ಭಗವಂತನ ಅಪೇಕ್ಷೆ ಇಲ್ಲ. ಆದರೆ ಸ್ಥಿತಿವಿಷಯದಲ್ಲೇಕೆ ಭಗವದಧೀನವಾಗಬಾರದು? ಲೋಕದಲ್ಲಿ ಇದು ಕಂಡಿದೆ. ಅಪ್ರಾಪ್ತಪ್ರಾಪ್ತಿಗೆ (ಹುಟ್ಟುವಿಕೆಗೆ) ಅನ್ಯಾಪೇಕ್ಷೆ ಇರುವುದರಿಂದ ಪರಾಧೀನತ್ವವಿದ್ದಂತೆ ಪ್ರಾಪ್ತಪ್ರಾಪ್ತಿಗೂ(ಸ್ಥಿತಿಗೆ) ಅನ್ಯಾಪೇಕ್ಷೆ ಇರುವುದರಿಂದ ತದಧೀನತ್ವ ಬಂದೇ ಬರುತ್ತದೆ.

**ಪ್ರಕಾಶಃ** – ನನ್ವನಾದೇರನ್ಯಾಧೀನತ್ವಂ ಕಾಪ್ಯನುಪಲಮ್ಭಾದಸಮ್ಭಾವಿತಮಿತ್ಯತಃ,

**सत्ताप्रधानपुरुषशक्तीनां च प्रतीतयः ।**
**प्रवृत्तयश्च ताः सर्वा नित्यं नित्यात्मना यतः ।**
**तथा नित्यतया नित्यं नित्यशक्त्या स्वयेश्वरः ।**
**नियामयति नित्यश्च ।**

ಇತಿ ಸಾಙ್ಖ್ಯಾಧಿಕರಣಾನುವ್ಯಾಖ್ಯಾಂ ಹೃದಿ ಕೃತ್ವಾऽऽಹ – **ಅಯಂ ಭಾವ ಇತಿ ॥** 'ಗುಣಾದೀನಾಂ' ಪರಿಮಾಣಜಾತ್ಯಾದಿಧರ್ಮಾಣಾಮ್ । **ದೃಷ್ಟಾನ್ತವಿವರಣಪೂರ್ವಂ ದಾರ್ಷ್ಟಾನ್ತಿಕಂ ವಿಶದಯತಿ – ಯಥೇತಿ ॥** ಅಧೀನತ್ವೇ ಹೇತುಃ – **ಸ್ವಾಶ್ರಯೇತಿ ।** ಆಶ್ರಿತೇ ಆಶ್ರಯಾಧೀನತ್ವಸ್ಯ ಲೋಕ ಉಪಲಮ್ಭಾತ್ । **ಅನಾದೇರಿತಿ ॥**

**जीवो ब्रह्म विशुद्धा चिच्छेदस्तस्यास्तयोर्द्वयोः ।**
**अविद्या तच्चितोर्योगः षडस्माकमनादयः ॥**

ಇತ್ಯುಕ್ತೇರಿತಿ ಭಾವಃ ॥ **ಅಜ್ಞಾನಾದ್ಯಧೀನತೇತಿ ॥** ಅನ್ಯಥಾ ತನ್ನಿವೃತ್ತಾವಪಿ ತನ್ನಿವೃತ್ತಿರ್ನ ಸ್ಯಾದಿತಿ ಭಾವಃ ॥ **ಜ್ಞಾನೇತಿ ॥** ಜ್ಞಾನೇನ ದುಃಖಪ್ರಾಗಭಾವಸ್ಯೋತ್ತರಸಮಯಸಮ್ಬನ್ಧರೂಪಪರಿಪಾಲನಂ ಕ್ರಿಯತ ಇತಿ ತೈರುಚ್ಯಮಾನತ್ವಾದಿತಿ ಭಾವಃ । ಏವಂ ದುರಿತಪ್ರಾಗಭಾವೇऽಪಿ ಧ್ಯೇಯಮ್ ।

ननूत्पाद्यत्वातिरेकेण तदधीनत्वस्यान्यस्याभावात् कथमनादेरन्याधीनता । न च अनाद्यत्वमेव तदिति वाच्यम्, अनादेर्नाशाभावस्य स्वत एव सिद्धत्वाऽन्यानपेक्षणात् । न हि मतान्तरसिद्धदृष्टान्तमात्रेणानुपपन्नोऽप्यर्थस्सिध्यति, अपि तु सम्भावितमेवेत्यत आह – **किञ्चेति ॥ प्रकृतैतावत्त्वमिति ॥** तृतीयेऽध्याये द्वितीयपादे **''प्रकृतैतावत्त्वं हि प्रतिषेधति ततो ब्रवीति च भूयः''** इत्यत्र जगत्पालनं विष्णोर्युक्तमयुक्तं वेति सन्देहे, विष्णोस्सृष्टिसंहारकर्तृत्वात्सत्यां च सृष्टौ यावत्संहारं अवस्थितेः स्वत एव सिद्धेः, संहर्तुस्संहारातिरिक्तव्यापारस्यैव रक्षारूपस्यायोगान्न पालनं युक्तमिति प्राप्ते, **''नैतावत् परो अन्यदस्त्युक्षा स द्यावा पृथिवी बिभर्ति''** इति श्रुतौ नैतावत् इति प्रकृतस्य सृष्ट्यादिकर्तृत्वस्य तावन्मात्रत्वं निषिध्य ततोऽधिकस्य पालनस्यापीश्वरे वर्णनात् सृष्टिसंहारकर्तुरपि पालकत्वव्यापारो युक्त इति सिद्धान्त इति वक्ष्यमाणत्वात् जन्यवस्तुनि स्थितौ यथा भगवन्नियतता तथाऽत्रापीत्यर्थः । ननु नैतावताऽन्याधीनतेत्यत आह – **दृश्यते हीति ॥** भृत्यादौ राजाद्यधीनतायाः प्रसिद्धत्वादिति भावः ।

ವಿವರಣೆ - ಅನಾದಿಪದಾರ್ಥವು ಅನ್ಯಾಧೀನವಾಗಿರುವುದು ಎಲ್ಲಿಯೂ ಕಂಡಿಲ್ಲದ ಕಾರಣ ಅಸಂಭಾವಿತವಾಗಿದೆ ಎಂಬ ಪ್ರಶ್ನೆಗೆ ಸಾಂಖ್ಯಾಧಿಕರಣ ಅನುವ್ಯಾಖ್ಯಾನದಿಂದ ಉತ್ತರಿಸುತ್ತಿದ್ದಾರೆ.

ಸತ್ತಾಪ್ರಧಾನಪುರುಷಶಕ್ತೀನಾಂ ಚ ಪ್ರತೀತಯಃ।
ಪ್ರವೃತ್ತಯಶ್ಚ ತಾಃ ಸರ್ವಾ ನಿತ್ಯಂ ನಿತ್ಯಾತ್ಮನಾ ಯತಃ।
ತಥಾऽನಿತ್ಯತಯಾऽನಿತ್ಯಂ ನಿತ್ಯಶಕ್ತ್ಯಾಸ್ವಯೇಶ್ವರಃ॥
ನಿಯಾಮಯತಿ ನಿತ್ಯಂ ಚ .....

ಪ್ರಕೃತಿ, ಪುರುಷ ಇವರಲ್ಲಿರುವ ಶಕ್ತಿ ಮತ್ತು ಸ್ವರೂಪ ಹಾಗೂ ಪ್ರಮಾವಿಷಯತ್ವ ಆಯಾ ಪ್ರವೃತ್ತಿಗಳು ಇವುಗಳೆಲ್ಲವೂ ಭಗವಂತನ ಅಧೀನವಾಗಿವೆ. ಯಾವ ರೀತಿಯಾಗಿ ಅನಿತ್ಯಪದಾರ್ಥಗಳು ನಿಯಮ್ಯವಾಗಿವೆಯೋ; ಅದರಂತೆ ನಿತ್ಯಪದಾರ್ಥಗಳೂ ನಿಯಮ್ಯವಾಗಿವೆ. ಆದ್ದರಿಂದ ಭಗವಂತನೇ ಸ್ವತಂತ್ರ. 'ನ ಋತೇ ತ್ವತ್ಕ್ರಿಯತೇ ಎಂಬ ಶ್ರುತಿಯ ಪ್ರಮಾಣದಿಂದ ನಿತ್ಯಶಕ್ತಿಯುಳ್ಳ ಭಗವಂತನು ಎಲ್ಲವನ್ನೂ ನಿಯಮನ ಮಾಡುತ್ತಾನೆ.

ದೃಷ್ಟಾಂತವನ್ನು ವಿವರಿಸುವ ಮೂಲಕ ದಾರ್ಷ್ಟಾಂತಿಕವನ್ನು 'ಯಥಾ' ಎಂಬ ಗ್ರಂಥದಿಂದ ವಿವರಿಸುತ್ತಿದ್ದಾರೆ. ಗಗನದ ಅಧೀನವಾಗಿದೆ ಎನ್ನಲು ಕಾರಣವನ್ನು 'ಸ್ವಾಶ್ರಯ' ಎಂಬ ಪದವು ಸೂಚಿಸುತ್ತಿದೆ. ಆಶ್ರಿತವಾದ ಪದಾರ್ಥವು ಆಶ್ರಯದ ಅಧೀನವೆಂಬುದು ಶ್ಲೋಕದಲ್ಲಿ ಕಂಡಿರುವ ನಿಯಮ. ಆದ್ವೈತಿಗಳು ಅಜ್ಞಾನಸಂಬಂಧವನ್ನು ಅನಾದಿ ಎಂದಿದ್ದಾರೆ.

ಜೀವೋ ಬ್ರಹ್ಮ ವಿಶುದ್ಧಾ ಚಿದ್ಭೇದಸ್ತಸ್ಯಾಸ್ತಯೋರ್ದ್ವಯೋಃ।
ಅವಿದ್ಯಾ ತಚ್ಚಿತೋರ್ಯೋಗಃ ಷಡಸ್ಮಾಕಮನಾದಯಃ॥

(೧) ಜೀವ (೨) ಬ್ರಹ್ಮ (೩) ಶುದ್ಧಚೈತನ್ಯ (೪) ಶುದ್ಧಚೈತನ್ಯ ಹಾಗೂ ಜೀವಬ್ರಹ್ಮರಿಗೆ ಇರುವ ಭೇದ (೫) ಅಜ್ಞಾನ (೬) ಅಜ್ಞಾನ ಚೈತನ್ಯಗಳ ಸಂಬಂಧ ಹೀಗೆ ಒಟ್ಟು ಆರು ಅನಾದಿಪದಾರ್ಥಗಳು.

ಒಂದು ವೇಳೆ ಅಜ್ಞಾನವು ಸಂಬಂಧಿಯ ಅಧೀನವಾಗದಿದ್ದರೆ ಅಜ್ಞಾನನಿವೃತ್ತಿಯಾದರೂ ಅವುಗಳ ಭೇದವು ನಿವೃತ್ತಿಯಾಗದಿರಬೇಕಾದೀತು.

ಪ್ರಾಭಾಕರರು ದುಃಖಪ್ರಾಗಭಾವವನ್ನೇ ಮೋಕ್ಷ ಎನ್ನುತ್ತಾರೆ. ಅಂದರೆ ತತ್ವಜ್ಞಾನವು ದೃಢವಾದಾಗ ಹಿಂದಿನ ದುಃಖಗಳೆಲ್ಲವೂ ಪರಿಹಾರವಾಗುತ್ತದೆ. ಮುಂದೆ ದುಃಖಗಳು ಬಾರದ ಕಾರಣ ದುಃಖ-ಪ್ರಾಗಭಾವವಷ್ಟೇ ಉಳಿಯುತ್ತದೆ. ಜ್ಞಾನವು ದುಃಖಪ್ರಾಗಭಾವವನ್ನು ಚಾಲನೆ ಮಾಡುತ್ತದೆ ಎಂದು. (ಮೀಮಾಂಸಕರು ಕರ್ಮದಿಂದ ಮೋಕ್ಷವೆನ್ನುತ್ತಾರೆ. ಇಲ್ಲಿ ಹೇಳಿದ ಜ್ಞಾನದಿಂದ ಮೋಕ್ಷವೆಂಬ ಮಾತನ್ನು ಹೇಗೆಂದು ವಿಚಾರ ಮಾಡಬೇಕು.) ಇದರಂತೆ ದುರಿತಪ್ರಾಗಭಾವದಲ್ಲಿಯೂ ತಿಳಿಯಬೇಕು.

ತದಧೀನತ್ವಶಬ್ದಕ್ಕೆ ಉತ್ಪಾದ್ಯ ಎಂದರ್ಥ. ಹೀಗಿರುವಾಗ ಅನಾದಿಪದಾರ್ಥಕ್ಕೆ ಅನ್ಯಾಧೀನತ್ವವನ್ನು ಹೇಳಲು ಹೇಗೆ ಸಾಧ್ಯ? ನಾಶವಾಗುವುದಿಲ್ಲವೆಂಬ ಕಾರಣದಿಂದ ಅನ್ಯಾಧೀನ ಎನ್ನಬಾರದು. ಅನಾದಿಪದಾರ್ಥಕ್ಕೆ ನಾಶಾಭಾವವು ಸ್ವತಃಸಿದ್ಧವಾಗಿದೆ. ಕೇವಲ ಬೇರೆ ಬೇರೆ ಮತದವರ ದೃಷ್ಟಾಂತಗಳನ್ನು ನೀಡಿದ ಮಾತ್ರದಿಂದ ಅನುಪಪನ್ನವಾದ ಅರ್ಥವು ಸಿದ್ಧವಾಗುವುದಿಲ್ಲ. ಹೊರತು ಸಂಭಾವಿತವಾದ ಅರ್ಥವಷ್ಟೇ ಪ್ರಮಾಣದಿಂದ ಸಿದ್ಧವಾಗುತ್ತದಲ್ಲವೇ? ಎಂಬ ಪ್ರಶ್ನೆಗೆ 'ಕಿಂಚ' ಎಂಬ ಗ್ರಂಥದಿಂದ ಉತ್ತರಿಸಿದ್ದಾರೆ. ಅನಾದಿಪದಾರ್ಥವು ಸ್ಥಿತಿವಿಷಯದಲ್ಲಿ ಭಗವದಧೀನವಾಗುತ್ತದೆಂದು ಸೂತ್ರಕಾರರು ಸಮರ್ಥಿಸಿದ್ದಾರೆ. ಅದು ಹೀಗೆ -

'ಪ್ರಕೃತೈತಾವತ್ತ್ವಂ ಹಿ ಪ್ರತಿಷೇಧತಿ ತತೋ ಬ್ರವೀತಿ ಚ ಭೂಯಃ' (೩/೨/೨೨)

ಜಗತ್ಪಾಲನವು ವಿಷ್ಣುವಿಗೆ ಯುಕ್ತವಾಗುತ್ತದೋ ಇಲ್ಲವೋ? ಎಂದು ಸಂದೇಹ. ವಿಷ್ಣುವೇ ಸೃಷ್ಟಿ ಹಾಗೂ ಸಂಹಾರಕರ್ತನಾಗಿದ್ದಾನೆ. ಪದಾರ್ಥಗಳನ್ನು ಸೃಷ್ಟಿಮಾಡಿ ಎಲ್ಲಿಯ ತನಕ ಆವನು ಸಂಹಾರ ಮಾಡುವುದಿಲ್ಲವೋ ಅಲ್ಲಿಯ ತನಕ ಆ ಪದಾರ್ಥಗಳು ಸ್ವತಃ (ಭಗವದಧೀನವಾಗದೆ) ಇರುತ್ತವೆ. ಹೀಗಿರುವಾಗ ಸಂಹಾರಕ್ಕಿಂತ ಅತಿರಿಕ್ತವ್ಯಾಪಾರವೆನಿಸಿದ ರಕ್ಷಣೆಯನ್ನು ಒಪ್ಪುವ ಅವಶ್ಯಕತೆ ಇಲ್ಲ. ಆದ್ದರಿಂದ ಸೃಷ್ಟಿಸಂಹಾರಗಳು ಭಗವಂತನ ಅಧೀನಗಳಾದಂತೆ ಸ್ಥಿತಿಯು ಭಗವದಧೀನವಾಗುವುದಿಲ್ಲವೆಂದು ಪೂರ್ವಪಕ್ಷ.

ಸಿದ್ಧಾಂತ - ''ಈಶ್ವರನು ಜಗತ್ತಿನ ಸೃಷ್ಟಿಸಂಹಾರಗಳನ್ನು ಮಾಡಿದಂತೆ ಪಾಲನೆಯನ್ನೂ ಮಾಡುತ್ತಾನೆ. 'ನೈತಾವದೇನಾಪರೋ ಅನ್ಯದಸ್ಯುಕ್ಷಾ ಸ ದ್ಯಾವಾಪೃಥಿವೀ ಬಿಭರ್ತಿ' ಭಗವಂತನು ಜಗತ್ತಿನ ಸೃಷ್ಟಿ ಸಂಹಾರಗಳನ್ನು ಮಾತ್ರ ಮಾಡುವುದಿಲ್ಲ. ಭಕ್ತರ ಅಭೀಷ್ಟಗಳನ್ನು ನೆರವೇರಿಸುತ್ತ ಜಗತ್ತಿನ ಪಾಲನೆಯನ್ನೂ ಮಾಡುತ್ತಾನೆ ಎಂದು ಈ ಶ್ರುತಿಯು ಕೇವಲ ಸೃಷ್ಟಿಸಂಹಾರಕರ್ತೃತ್ವವನ್ನು ನಿಷೇಧಿಸಿದೆ. ಆದ್ದರಿಂದ

ಅನ್ನಾದಿಗಳನ್ನು ಪ್ರತಿನಿತ್ಯ ನೀಡುವ ಮೂಲಕ ಪಾಲನವೆಂಬ ವ್ಯಾಪಾರವನ್ನು ಭಗವಂತನಲ್ಲಿ ಹೇಳಲೇ ಬೇಕು'' ಎಂದು. ಆದ್ದರಿಂದ ಜನ್ಯಪದಾರ್ಥಗಳ ಸ್ಥಿತಿಗೆ ಭಗವಂತನು ನಿಯಾಮಕನಾದಂತೆ ಅನಾದಿ-ಪದಾರ್ಥಗಳ ಸ್ಥಿತಿಗೂ ಭಗವಂತನು ನಿಯಾಮಕನಾಗಿದ್ದಾನೆ.

ಕೇವಲ ಇಷ್ಟರಿಂದ ಅನಾದಿಪದಾರ್ಥಕ್ಕೆ ಅನ್ಯಾಧೀನತ್ವವು ಸಿದ್ಧವಾಗುವುದಿಲ್ಲವಲ್ಲ? ಎಂಬ ಪ್ರಶ್ನೆಗೆ 'ದೃಶ್ಯತೇ ಹಿ' ಎಂಬ ಗ್ರಂಥದಿಂದ ಉತ್ತರಿಸಿದ್ದಾರೆ. ಭೃತ್ಯರು ರಾಜನ ಅಧೀನರಾಗುವ ಅವಶ್ಯಕತೆ ಇಲ್ಲ. ಆದರೂ ಅನ್ನಪಾನಾದಿಗಳಿಗೆ ರಾಜನ ಅಧೀನವಾಗಿರುವುದು ಕಂಡಿದೆ.

**ಗುರುರಾಜೀಯಮ್** – ಸ್ವಾಶ್ರಯೇತಿ ಹೇತುಗರ್ಭವಿಶೇಷಣಮ್ । ಅತ್ರ ಗುಣಾದೀನಾಂ ಗುಣ್ಯಾಶ್ರಿತತ್ವಾತ್ ಸ್ಥಿತೌ ಜ್ಞಪ್ತಿವಿಶೇಷೇ ಚ ಗುಣ್ಯಾದ್ಯಧೀನತ್ವಂ ವಿವಕ್ಷಿತಮಿತಿ ಜ್ಞಾತವ್ಯಮ್ । ಅನಾದಿನೋಪಿ ಭಗವದಧೀನತ್ವಂ ತತ್ತದ್ಭಾದಿಸಿದ್ಧದೃಷ್ಟಾನ್ತಪ್ರದರ್ಶನೇನೋಪಪಾದ್ಯಪ್ರಕೃತೈತಾವತ್ವಂ ಹೀತ್ಯಾದಿವಕ್ಷ್ಯಮಾಣನ್ಯಾಯೇನಾಪಿ ತದುಪಪಾದಯನ್ ತನ್ಯಾಯಂ ಪ್ರಕೃತೇ ಸಙ್ಗಮಯತಿ – **ಕಿಞ್ಚೇತಿ** ॥ ತತ್ತದ್ಭಾದಿಸಿದ್ಧಸಮಯಸಿದ್ಧಂ ದೃಷ್ಟಾನ್ತಮುಕ್ತ್ವಾ ಲೌಕಿಕದೃಷ್ಟಾನ್ತಮಪ್ಯಾಹ – **ದೃಶ್ಯತೇಹೀತಿ** ॥

## ಸಾರ

ಅನಾದಿಯಾದ ಮಾತ್ರದಿಂದ ಮತ್ತೊಂದರ ಅಧೀನವಾಗಬಾರದೆಂದೇನಿಲ್ಲ. ವೈಶೇಷಿಕರು ಅನಾದಿ ಗಗನ ಪರಿಮಾಣವನ್ನು ಗಗನಾಧೀನ ಎಂದಿದ್ದಾರೆ. ಅನಾದಿ ಅಜ್ಞಾನಸಂಬಂಧವನ್ನು ಅದ್ವೈತಿಗಳು ಅಜ್ಞಾನಾಧೀನ ಎನ್ನುತ್ತಾರೆ. ಪ್ರಾಭಾಕರರೂ ಸಹ ಅನಾದಿ ದುಃಖಪ್ರಾಗಭಾವವನ್ನು ಜ್ಞಾನಾಧೀನ ಎಂದಿದ್ದಾರೆ. ಆದರಂತೆ ಅನಾದಿಯಾದ ಗಾಯತ್ರೀರೂಪವೇದವು ಭಗವದಧೀನವೆಂದು ನಾವು ಹೇಳಿದರೆ ಏನು ತಪ್ಪು? ಇಷ್ಟು ಮಾತ್ರ ವ್ಯತ್ಯಾಸ. ಸಾದಿಪದಾರ್ಥವು ಉತ್ಪತ್ತಿ ಹಾಗೂ ಸ್ಥಿತಿವಿಷಯದಲ್ಲಿ ಭಗವದಧೀನವಾಗಿರುತ್ತದೆ. ಅನಾದಿಪದಾರ್ಥವು ಸ್ಥಿತಿವಿಷಯದಲ್ಲಷ್ಟೇ ಭಗವದಧೀನವಾಗಿರುತ್ತದೆ.

### ಈಶ್ವರನು ಅನ್ಯಥಾಕರ್ತುಂ ಸಮರ್ಥ

**ತಾತ್ಪರ್ಯಚನ್ದ್ರಿಕಾ**

**ಕಿಞ್ಚ –**

**ಅಕರ್ತುಮನ್ಯಥಾಕರ್ತುಂ ಕರ್ತುಂ ಚಾಸ್ತೀಶ್ವರಸ್ಯ ಯತ್ ।**
**ಸಾಮರ್ಥ್ಯಂ ತೇನ ತತ್ತನ್ತ್ರಮನಾದ್ಯಪಿ ಚ ಸಾದಿವತ್ ॥**

**ಈಶ್ವರೋ ಹಿ ಸರ್ವತ್ರಾಪ್ರತಿಹತಶಕ್ತಿತ್ವಾತ್ ಘಟೇನೇವ ಅವ್ಯಾಕೃತಾಕಾಶಾದಿನಾऽಪಿ ರಹಿತಮತೀತಾದಿಕಾಲಂ ಕರ್ತುಂ ಶಕ್ನೋತಿ । ಸಙ್ಕಲ್ಪಾಭಾವಾತ್ತು ತದಕರಣಮ್ । ತದಭಾವಶ್ಚ**

**कार्योन्नेयः । नच शक्त्यभावादेव तदुपपत्तिः, ''स्वभावजीवकर्माणि'' इत्यादिटीको-दाहृतश्रुत्यादिविरोधादैश्वर्यविरोधाच्च । तथाचानादीशेच्छाधीना अनादिस्वभावता कथमीशतन्त्रताविरोधिनी । स्वभावमात्रस्येशाधीनताऽऽकाशाधिकरणे उक्ता, अत्र त्वनादेरपीति भेदः । पराधीनविशेषावाप्तिलक्षणोत्पत्तिरीशादन्यस्य सर्वस्यापीति वियत्पादे वक्ष्यते, अत्र तु प्रागसतस्सता सम्बन्धरूपोत्पत्तिरहितानामपि स्वरूपसत्तेशाधीनेत्युक्तमित्यविरोधः ।**

ಅನುವಾದ -ಅಕರ್ತುಂ ಅನ್ಯಥಾಕರ್ತುಂ ಕರ್ತುಂ ಚಾಸ್ತೀಶ್ವರಸ್ಯ ಯತ್ ।
ಸಾಮರ್ಥ್ಯಂ ತೇನ ತತ್ ತಂತ್ರಮನಾದ್ಯಪಿ ಚ ಸಾದಿವತ್ ॥

ಈಶ್ವರನು ಕರ್ತುಂ ಅಕರ್ತುಂ ಅನ್ಯಥಾಕರ್ತುಂ ಸಮರ್ಥನಾಗಿದ್ದಾನೆ. ಆದ ಕಾರಣ ಅನಾದಿ-ಪದಾರ್ಥಗಳೂ ಸಹ ಸಾದಿಪದಾರ್ಥದಂತೆ ಭಗವದಧೀನಗಳಾಗಿವೆ.

ಈಶ್ವರನು ಎಲ್ಲೆಡೆ ಅಪ್ರತಿಹತಶಕ್ತಿಯುಳ್ಳವನು. ಆದ್ದರಿಂದ ಘಟವಿಲ್ಲದ ಕಾಲವಿದ್ದಂತೆ ಅನಾದಿ-ಪದಾರ್ಥಗಳೆನಿಸಿದ ಅವ್ಯಾಕೃತಾಕಾಶಾದಿಗಳು ಇಲ್ಲದ ಆತೀತಾದಿಕಾಲವನ್ನು ಸೃಷ್ಟಿಮಾಡಲು ಅವನು ಸಮರ್ಥನು. ಆದರೆ ಅಂತಹ ಸೃಷ್ಟಿಯು ಭಗವಂತನ ಸಂಕಲ್ಪಾಧೀನವಾಗಿದೆ. ಸಂಕಲ್ಪ ಮಾಡದ ಕಾರಣ ಅಂತಹಸ್ಥಿತಿಯನ್ನು ನಾವು ಜಗತ್ತಿನಲ್ಲಿ ಕಾಣಲು ಸಾಧ್ಯವಿಲ್ಲ. ಅವನಿಗೆ ಆ ರೀತಿಯ ಸಂಕಲ್ಪ ಇಲ್ಲವೆನ್ನುವುದನ್ನು ಕಾರ್ಯದಿಂದ ತಿಳಿಯಬೇಕು. ಹೊರತು ಶಕ್ತಿಯಿಲ್ಲವೆಂದು ತಿಳಿಯಬಾರದು. ಒಂದು ವೇಳೆ ಭಗವಂತನಿಗೆ ಅನ್ಯಥಾಕರ್ತುಂ ಶಕ್ತಿಯನ್ನು ಅಲ್ಲಗಳೆದರೆ 'ಸ್ವಭಾವಜೀವಕರ್ಮಾಣಿ' ಇತ್ಯಾದಿ ಟೀಕೆಯಲ್ಲಿ ಉದಾಹರಿಸಿದ ಅನೇಕ ಶ್ರುತಿಗಳ ವಿರೋಧ ಬರುತ್ತದೆ. ಮತ್ತು ಅವನಲ್ಲಿರುವ ಐಶ್ವರ್ಯಕ್ಕೂ ಧಕ್ಕೆ ಬರುತ್ತದೆ. ಆದ್ದರಿಂದ ಅನಾದಿಸ್ವಭಾವವು ಅನಾದಿಯಾದ ಭಗವದಿಚ್ಛಾಧೀನವೆಂದು ಹೇಳಿದರೆ ಭಗವನ್ನಿಯಮ್ಯತ್ವದ ವಿರೋಧವು ಹೇಗೆ ಬರುತ್ತದೆ?

ಕೇವಲ ಸ್ವಭಾವಮಾತ್ರವು ಭಗವದಧೀನವೆಂದು ಆಕಾಶಾಧಿಕರಣದಲ್ಲಿ ಹೇಳಿದ್ದಾರೆ. ಈ ಅಧಿಕರಣದಲ್ಲಿ ಅನಾದಿಪದಾರ್ಥಗಳ ಸ್ವಭಾವವೂ ಈಶಾಧೀನವೆಂದು ಸಮರ್ಥಿಸುತ್ತಿರುವುದರಿಂದ ಪುನರುಕ್ತಿಗೆ ಅವಕಾಶವಿಲ್ಲ. ಪರಾಧೀನವಿಶೇಷಾವಾಪ್ತಿರೂಪವಾದ ಉತ್ಪತ್ತಿಯನ್ನು ಭಗವಂತನನ್ನು ಬಿಟ್ಟು ಸಕಲಪದಾರ್ಥಗಳಿಗೆ ವಿಯದಧಿಕರಣದಲ್ಲಿ ಸಮರ್ಥಿಸಿದ್ದಾರೆ. ಆದರ ವಿರೋಧವು ಇಲ್ಲಿ ಬರುವುದಿಲ್ಲ. ಏಕೆಂದರೆ ಮೊದಲು ಅಸತ್ತಾದ ಪದಾರ್ಥಕ್ಕೆ ಸತ್ತಾಸಂಬಂಧವನ್ನು ಹೇಳಿದರೆ ಉತ್ಪತ್ತಿ ಎನಿಸುತ್ತದೆ. ಇದು ಘಟಪಟಾದಿಗಳಲ್ಲಿ ಇರುವ ಉತ್ಪತ್ತಿ. ಇಂತಹ ಉತ್ಪತ್ತಿ ಇಲ್ಲದ ಅನಾದಿ-ಪದಾರ್ಥಗಳ ಸತ್ತಾವು ಈಶಾಧೀನವೆಂದು ಇಲ್ಲಿ ಹೇಳುತ್ತಿದ್ದಾರೆ. ಆದ್ದರಿಂದ ವಿರೋಧಕ್ಕೆ ಅವಕಾಶವಿಲ್ಲ.

**प्रकाशः** – ननु यद्यनाद्यपीशाधीनं, तर्हि कदाचित्तद्राहित्यमपि कुर्यात् । घटराहित्यमिव, न चैवं, अतो न तदधीनमित्यतः —

**शक्तोऽपि ह्यन्यथा कर्तुं स्वेच्छानियमतो हरिः ।**
**कारणैर्नियतैरेव करोतीदं जगत्सदा ॥**

इति तदनन्यत्वनयानुभाष्यसूचितं समाधिमाह – **किञ्चेति** ॥ विष्टिगृहीता ईश्वरप्रेरिता वाऽनिष्टमप्यकृत्वा नैवस्थातुमीशते । नच भगवांस्तथेति 'कर्तुं शक्तोऽपि' इत्युक्तम् ॥ 'ईश्वरो हि' इति अन्यथेश्वरत्वभङ्ग इति सूचयति । वक्ष्यते च "**आत्मनि चैवं विचित्राश्च हि**" इत्यत्र युक्तिपादे विचित्राप्रतिहतशक्तिमत्त्वमिति भावः । 'तदभावः' सङ्कल्पाभावः । ननु सिद्धायां शक्तौ सङ्कल्पाभावनिमित्तं तदकरणं, सैव कुतः सिद्धेत्याशङ्क्याह – **नचेति** ॥

**स्वभावजीवकर्माणि द्रव्यं कालः श्रुतिः क्रिया ।**
**यत्प्रसादादिमे सन्ति न सन्ति यदुपेक्षया ॥**

इति तदनन्यत्वनयानुव्याख्यानोक्तश्रुत्यादिविरोधादित्यर्थः । एतेन "**तादृशत्वाच्च तच्छक्तेः**" इत्यस्य नित्यानित्यस्वभावसर्वविषयकत्वादीश्वरशक्तेरित्यर्थ उक्तो भवति । ननु घटादिवदनाद्यप्यस्मदाद्यधीनं किं न स्यादित्यत आह – **तथाचेति** ॥ अस्मदादावनीश्वरभावादिति भावः ।

नन्वाकाशाधिकरण आकाशोपलक्षितसर्वस्वभावस्येशाधीनत्वोक्तेर्गतार्थमेतदित्यत आह – **स्वभावेति** ॥ साद्यनादिसाधारण्येनेत्यर्थः । नन्वनादिस्वभावस्येशाधीनत्वे कैमुत्यन्यायहततया नाकाशाधिकरणपूर्वपक्षोदय इति चेन्न, सामान्यतोऽचेतन-स्वभावस्येशाधीनत्वोक्तावेव विशेषविचारावसरात् । आकाशादिपदप्रवृत्तिनिमित्त-सद्भावोपपादनेन आकाशादिशब्दमुख्यार्थत्वोक्त्यर्थतया तत्सार्थक्यादिति ।

ननु द्वितीयस्य तृतीयपादे "**न वियदश्रुतेः**" इत्यादावाकाशाख्यवियदुत्पत्तिमत्त्र वेति सन्देहे, "**अनादिर्वा अयमाकाशः**" "**अनन्तोऽयमाकाशः**" "**आकाशवत् सर्वगतश्च नित्यः**" इत्यादिश्रुतिषु अनादित्वश्रवणात् उक्तानेकश्रुतिविरोधेन सम्भूतवाक्यस्य प्रामाण्यायोगात् अनुत्पत्तिमदिति प्राप्ते, "**स इदं सर्वमसृजत**"

**''आकाशः सम्भूतः''** इत्याद्युत्पत्तिश्रुतिबाहुल्यादनुत्पत्तिश्रुत्यभावाच्चानादित्वश्रुतेश्चिरन्तनत्वाद्यभिप्रायेण भाक्तत्वसम्भवादुत्पत्तिमद्वियदित्यादिन्यायैः अनादेरपि सर्वस्योत्पत्तेर्वक्ष्यमाणत्वादजन्यत्वाङ्गीकारेणेह पूर्वोत्तरपक्षौ तद्विरुद्धावित्यत आह – **पराधीनेति ॥ ''असम्भवस्तु सतोऽनुपपत्तेः''** इत्यधिकरणं हृदि कृत्वाऽऽह – **ईशादिति ॥ प्रागसतः सत्ता इति ॥** न्यायरीत्यैतत् । सिद्धान्ते तु कार्यात्मना असतः कारणात्मना सतो घटादेः यस्सत्तासम्बन्धः पृथ्वाकारताद्यवस्थाविशेषाप्तिः तद्रूपोत्पत्तिरहितानामित्यर्थः । 'सत्ता' सत्त्वमित्यर्थः, न तु जातिः ।

ಒಂದು ವೇಳೆ ಆನಾದಿಪದಾರ್ಥವು ಈಶ್ವರನ ಅಧೀನವಾಗುವುದಾದರೆ ಆ ಆನಾದಿಪದಾರ್ಥವನ್ನು ಬಿಟ್ಟು ಜಗತ್ತನ್ನು ಭಗವಂತನು ಸೃಷ್ಟಿ ಮಾಡಲಿ. ಹೇಗೆ ಸಾದಿಯಾದ ಘಟವಿಲ್ಲದ ಕಾಲವಿರುತ್ತದೋ ಅದರಂತೆ ಆನಾದಿಪದಾರ್ಥವಿಲ್ಲದ ಕಾಲವೂ ಇರಲಿ. ಆದರೆ ಲೋಕದಲ್ಲಿ ಹೀಗೆ ಕಂಡಿಲ್ಲ.

ಆದ್ದರಿಂದ ಆನಾದಿಪದಾರ್ಥವು ಭಗವದಧೀನವಲ್ಲ ಎಂಬ ಪ್ರಶ್ನೆಗೆ 'ಕಿಂಚ' ಇತ್ಯಾದಿ ಗ್ರಂಥದಿಂದ ಉತ್ತರಿಸುತ್ತಿದ್ದಾರೆ.

ಶಕ್ತೋಽಪಿ ಹ್ಯನಥಾಕರ್ತುಂ ಸ್ವೇಚ್ಛಾನಿಯಮತೋ ಹರಿಃ।
ಕಾರಣೈರ್ನಿಯತೈರೇವ ಕರೋತೀದಂ ಜಗತ್ಸದಾ ॥

ಭಗವಂತನು ಅನ್ಯಥಾಕರ್ತುಂ ಸಮರ್ಥನಾಗಿದ್ದಾನೆ. ಆದರೂ ತನ್ನ ಇಚ್ಛಾನುಸಾರಿಯಾದ ನಿಯಮದಂತೆ ನಿಯತವಾದ ಕಾರಣಗಳಿಂದಲೇ ಜಗತ್ತನ್ನು ಯಾವಾಗಲೂ ಸೃಷ್ಟಿಮಾಡುತ್ತಾನೆ. ಹೀಗೆ ತದನನ್ಯತ್ವಾಧಿಕರಣದ ಅನುವ್ಯಾಖ್ಯಾನದಲ್ಲಿ ಹೇಳಿದ್ದಾರೆ. ಇದರಿಂದ ಸೂಚಿತವಾದ ಸಮಾಧಾನವನ್ನು ಪ್ರಕೃತ ಗ್ರಂಥಕಾರರು ವಿವರಿಸಿದ್ದಾರೆ. ಭಗವಂತನು ಕರ್ತುಂ ಅಕರ್ತುಂ ಅನ್ಯಥಾಕರ್ತುಂ ಸಮರ್ಥನು. ನಮ್ಮಲ್ಲಿ ಈ ಮೂರೂ ಗುಣಗಳೂ ಇರುವುದಿಲ್ಲ. ವಸ್ತುತಃ ನಾವು ಅಕರ್ತುಂ ಸಮರ್ಥರು ಎಂದನಿಸುತ್ತದೆ. ಆದರೆ ಭೂತಪ್ರೇತಗಳು ಆವಿಷ್ಟವಾದಾಗ ಅನಿಷ್ಟವಾದದ್ದನ್ನು ನಮ್ಮಿಂದ ಮಾಡದಿರಲು ಸಾಧ್ಯವಿಲ್ಲ. ಅಥವಾ ಈಶ್ವರನ ಪ್ರೇರಣೆಗೆ ಒಳಗಾಗಿ ಕೆಲವೊಂದು ಕೆಲಸಗಳನ್ನು ಮಾಡಲು ಇಷ್ಟವಿಲ್ಲದಿದ್ದರೂ ನಾವು ಮಾಡುತ್ತಿರುವುದು ಕಂಡಿದೆ. ಆದರೆ ಭಗವಂತನಿಗೆ ಹೀಗಲ್ಲ. ಆದ್ದರಿಂದ ಅಕರ್ತುಂ ಸಾಮರ್ಥ್ಯವು ನಮ್ಮಲ್ಲಿ ಇಲ್ಲ ಭಗವಂತನಲ್ಲಿ ಮಾತ್ರ ಇದೆ ಎಂದು ತಿಳಿಯಬೇಕು. ಈಶ್ವರನು ಅವ್ಯಾಕೃತಾಕಾಶವಿಲ್ಲದ ಜಗತ್ತನ್ನು ಸೃಷ್ಟಿಮಾಡುವ ಸಾಮರ್ಥ್ಯ ಹೊಂದಿದ್ದಾನೆ. ಹೀಗೆ ಒಪ್ಪದಿದ್ದರೆ ಅವನಲ್ಲಿ ಈಶ್ವರತ್ವವೇ ಭಂಗವಾಗುತ್ತದೆ. ಈ ವಿಷಯವನ್ನು 'ಆತ್ಮನಿ ಚೈವಂ ವಿಚಿತ್ರಾಶ್ಚ ಹಿ' ಎಂಬ ಯುಕ್ತಿಪಾದದಲ್ಲಿ ವಿಚಿತ್ರವಾದ ಅಪ್ರತಿಹತಶಕ್ತಿಯನ್ನು ಸಮರ್ಥಿಸಿದ್ದಾರೆ. ಭಗವಂತನಲ್ಲಿ ಇಂತಹ ಶಕ್ತಿಯು ಸಿದ್ಧವಾದರೂ ಸಂಕಲ್ಪವಿಲ್ಲದ ಕಾರಣ ಅಂತಹ ಕೆಲಸಗಳು ಜಗತ್ತಿನಲ್ಲಿ ನಡೆದಿಲ್ಲ. ಈ ವಿಚಾರಕ್ಕೆ ಏನು ಪ್ರಮಾಣ? ಎಂಬ ಪ್ರಶ್ನೆಗೆ 'ನಚ' ಎಂಬ ಗ್ರಂಥದಿಂದ ಉತ್ತರಿಸಿದ್ದಾರೆ.

ಸ್ವಭಾವಜೀವಕರ್ಮಾಣಿ ದ್ರವ್ಯಂ ಕಾಲಃ ಶ್ರುತಿಃ ಕ್ರಿಯಾ ।
ಯತ್ಪ್ರಸಾದಾದಿಮೇ ಸಂತಿ ನ ಸಂತಿ ಯದುಪೇಕ್ಷಯಾ ॥

(ಜೀವರ ಸ್ವಭಾವ ಮತ್ತು ಕರ್ಮಗಳು, ದ್ರವ್ಯ, ಕಾಲ, ಶ್ರುತಿ, ಕ್ರಿಯಾ ಇವುಗಳೆಲ್ಲ ಭಗವಂತನ ಅನುಗ್ರಹದಿಂದಷ್ಟೇ ಇರುತ್ತವೆ. ಭಗವಂತನು ಉಪೇಕ್ಷಿಸಿದರೆ ಎಲ್ಲವೂ ನಾಶವಾಗುತ್ತವೆ.) ಎಂದು ಅನನ್ಯತ್ವಾಧಿಕರಣದ ಅನುವ್ಯಾಖ್ಯಾನದಲ್ಲಿ ಉಲ್ಲೇಖಿಸಿದ ಈ ಶ್ರುತಿಯಿಂದ ಭಗವಂತನ ಸಂಕಲ್ಪದಂತೆ ಜಗತ್ತಿನ ಸ್ಥಿತಿಗತಿಗಳು ಇರುತ್ತವೆಂದು ತಿಳಿಯುತ್ತದೆ. ಹೀಗೆ ಹೇಳಿದ್ದರಿಂದ 'ತಾದೃಶತ್ವಾಚ್ಚ ತಚ್ಛಕ್ತೇಃ' ಎಂಬ ಅನುವ್ಯಾಖ್ಯಾನದ ಮಾತಿಗೆ ನಿತ್ಯಾನಿತ್ಯಪದಾರ್ಥಗಳ ಸ್ವಭಾವವು ಭಗವದಧೀನವಾದ್ದರಿಂದ ಈಶ್ವರ ಶಕ್ತಿಗೆ ಸಕಲಪದಾರ್ಥಗಳು ವಿಷಯವಾಗಿವೆ ಎಂಬ ಅರ್ಥವನ್ನು ಹೇಳಿದಂತಾಯಿತು.

ಸಾದಿಯಾದ ಘಟಾದಿಗಳು ನಮ್ಮ ಅಧೀನವಾದಂತೆ ಅನಾದಿಪದಾರ್ಥಗಳೇಕೆ ನಮ್ಮ ಅಧೀನವಾಗುವುದಿಲ್ಲ? ಎಂಬ ಪ್ರಶ್ನೆಗೆ 'ತಥಾ ಚ' ಎಂಬ ಗ್ರಂಥದಿಂದ ಉತ್ತರಿಸಿದ್ದಾರೆ. ನಮ್ಮಲ್ಲಿ ನಿಯಮನ ಶಕ್ತಿಯು ಇಲ್ಲದ ಕಾರಣ ಅನಾದಿಪದಾರ್ಥಗಳು ನಮ್ಮ ಅಧೀನವಾಗುವುದಿಲ್ಲವೆಂದು ಅಭಿಪ್ರಾಯ.

ಈ ಅಧಿಕರಣದಲ್ಲಿ ಅನಾದಿಪದಾರ್ಥಗಳೆಲ್ಲವೂ ಭಗವದಧೀನವೆಂದು ಹೇಳುತ್ತಿದ್ದೀರಿ. ಹಾಗಾದರೆ ಆಕಾಶಾಧಿಕರಣದಲ್ಲಿಯೂ ಅನಾದಿಪದಾರ್ಥಗಳಿಗೆ ಭಗವದಧೀನತ್ವವನ್ನು ಹೇಳಿದ್ದರಿಂದ ಪುನರುಕ್ತಿ ಬರುತ್ತದಲ್ಲವೇ? ಎಂಬ ಪ್ರಶ್ನೆಗೆ 'ಸ್ವಭಾವಮಾತ್ರಸ್ಯ' ಎಂಬ ಗ್ರಂಥದಿಂದ ಉತ್ತರಿಸಿದ್ದಾರೆ. ಆಕಾಶಾಧಿಕರಣದಲ್ಲಿ ಸಾದಿ ಮತ್ತುಅನಾದಿ ಸಕಲಪದಾರ್ಥಗಳ ಸ್ವಭಾವಕ್ಕೆ ಭಗವದಧೀನತ್ವವನ್ನು ಹೇಳಿದ್ದಾರೆ. ಈ ಅಧಿಕರಣದಲ್ಲಿ ಕೇವಲ ಅನಾದಿಪದಾರ್ಥಗಳಿಗೆ ಭಗವದಧೀನತ್ವವನ್ನು ಹೇಳುತ್ತಿರುವುದರಿಂದ ಪುನರುಕ್ತಿ ಇಲ್ಲ. ಅನಾದಿಪದಾರ್ಥವು ಈಶಾಧೀನವಾದಾಗ ಕೈಮುತ್ಯನ್ಯಾಯದಿಂದ ಸಾದಿಪದಾರ್ಥಕ್ಕೂ ಈಶ್ವರಾಧೀನತ್ವವು ಸಿದ್ಧವಾಗುತ್ತದೆ. ಆದ್ದರಿಂದ ಆಕಾಶಾಧಿಕರಣದ ಪೂರ್ವಪಕ್ಷವೇ ಹುಟ್ಟಲು ಸಾಧ್ಯವಿಲ್ಲವಲ್ಲವೆ? ಎಂದು ಶಂಕಿಸಬಾರದು. ಸಕಲಪದಾರ್ಥಗಳೂ ಭಗವದಧೀನವೆಂದು ಸಾಮಾನ್ಯವಾಗಿ ತಿಳಿದಮೇಲಷ್ಟೆ ವಿಶೇಷವಿಚಾರವು ಪ್ರಾಪ್ತವಾಗುತ್ತದೆ. ಇದನ್ನು ವಿವಕ್ಷಿಸಿದಾಗ ಆಕಾಶಾಧಿಕರಣವು ವ್ಯರ್ಥವಲ್ಲ. ಆಕಾಶಪದದ ಪ್ರವೃತ್ತಿನಿಮಿತ್ತವು ಭಗವಂತನಲ್ಲಿ ಉಪಪನ್ನವಾಗುವುದರಿಂದ ಆಕಾಶಪದದ ಮುಖ್ಯಾರ್ಥವನ್ನು ಭಗವಂತನಲ್ಲಿ ಸಮನ್ವಯ ಮಾಡಿದಂತಾಗುತ್ತದೆ. ಆದ್ದರಿಂದ ಆಕಾಶಾಧಿಕರಣದ ಪೂರ್ವಪಕ್ಷಕ್ಕೆ ವೈಯ್ಯರ್ಥ್ಯವಿಲ್ಲ.

ಈ ಅಧಿಕರಣದಲ್ಲಿ ಆಕಾಶಾದಿಪದಾರ್ಥಗಳಿಗೆ ನಿತ್ಯತ್ವವನ್ನು ಸಮರ್ಥಿಸುತ್ತಿದ್ದೀರಿ. ಹಾಗಾದರೆ ವಿಯದಧಿಕರಣದಿಂದ ವಿರೋಧ ಬರುತ್ತದೆ. ಏಕೆಂದರೆ ವಿಯದಧಿಕರಣದಲ್ಲಿ ಪ್ರತಿಯೊಂದು ಪದಾರ್ಥಗಳಿಗೂ ಉತ್ಪತ್ತಿಯನ್ನು ಸಮರ್ಥಿಸಿದ್ದಾರೆ. ಅದು ಹೀಗೆ 'ನ ವಿಯದಶ್ರುತೇಃ'(೨/೩/೧) ಆಕಾಶಕ್ಕೆ ಉತ್ಪತ್ತಿ ಇದೆಯೋ ಇಲ್ಲವೋ? ಎಂದು ಸಂಶಯ. 'ಆನಾದಿರ್ವಾऽಯಮಾಕಾಶಃ, ಅನಂತೋऽಯಮಾಕಾಶಃ, ಆಕಾಶವತ್ ಸರ್ವಗತಶ್ಚ ನಿತ್ಯಃ' ಇತ್ಯಾದಿ ಅನೇಕ ಶ್ರುತಿಗಳಲ್ಲಿ ಆಕಾಶಕ್ಕೆ ಅನಾದಿತ್ವವು ಕೇಳಿಸುತ್ತಿದೆ. ಆದ್ದರಿಂದ 'ಆತ್ಮನಃ ಆಕಾಶಃ ಸಂಭೂತಃ' ಎಂದು ಆಕಾಶಕ್ಕೆ ಉತ್ಪತ್ತಿಯನ್ನು ಹೇಳುವ ವಾಕ್ಯಕ್ಕೆ ಪ್ರಾಮಾಣ್ಯವಿರುವುದಿಲ್ಲವೆಂದು ಪೂರ್ವಪಕ್ಷ. 'ಸ ಇದಂ ಸರ್ವಮಸೃಜತ, ಆಕಾಶಃ

ಸಂಭೂತಃ' ಇತ್ಯಾದಿ ಅನೇಕಶ್ರುತಿಗಳು ಆಕಾಶಕ್ಕೆ ಉತ್ಪತ್ತಿಯನ್ನು ಹೇಳುತ್ತಿರುವುದರಿಂದ ಮತ್ತು ಉತ್ಪತ್ತಿ ಇಲ್ಲವೆಂದು ಹೇಳುವ ವಾಕ್ಯ ಇಲ್ಲದಿರುವುದರಿಂದ ಆಕಾಶಕ್ಕೆ ಉತ್ಪತ್ತಿ ಇದೆ.

ಹಾಗಾದರೆ ಅನಾದಿತ್ವಶ್ರುತಿಗೆ ವಿರೋಧ ಬರುತ್ತದಲ್ಲವೆ? ಎಂದರೆ 'ಚಿರಕಾಲವಿರುತ್ತದೆ' ಎಂಬ ಅರ್ಥದಲ್ಲಿ ಆ ಶ್ರುತಿಗಳಿಗೆ ಗೌಣಾರ್ಥವನ್ನು ಹೇಳಬೇಕು. ಹೀಗೆ ವಿಯದಧಿಕರಣದಲ್ಲಿ ಅನಾದಿ-ಸಕಲಪದಾರ್ಥಗಳಿಗೆ ಜನ್ಯತ್ವವನ್ನು ಒಪ್ಪಿದ್ದಾರೆ. ಅದಕ್ಕೆ ವಿರುದ್ಧವಾದ ಪೂರ್ವಪಕ್ಷ ಸಿದ್ಧಾಂತಗಳನ್ನು ಇಲ್ಲಿ ಹೇಳುತ್ತಿರುವುದು ತಪ್ಪಾಗುತ್ತದಲ್ಲವೆ? ಎಂಬ ಪ್ರಶ್ನೆಗೆ ಗ್ರಂಥಕಾರರು 'ಪರಾಧೀನ' ಎಂಬ ವಾಕ್ಯದಿಂದ ಉತ್ತರಿಸಿದ್ದಾರೆ.

'ಅಸಂಭವಸ್ತು ಸತೋऽನುಪಪತ್ತೇಃ' ಎಂಬ ಅಧಿಕರಣದಲ್ಲಿ ಪರಮಾತ್ಮನಿಗೆ ಉತ್ಪತ್ತಿಯು ಅನುಪಪನ್ನವಾಗಿದೆ ಎಂದು ಹೇಳಿದ್ದಾರೆ. ಇದನ್ನು ಮನಸ್ಸಿನಲ್ಲಿಟ್ಟುಕೊಂಡು 'ಈಶಾದನ್ಯಸ್ಯ' ಎಂಬ ಪದವನ್ನು ಪ್ರಯೋಗಿಸಿದ್ದಾರೆ. 'ಪ್ರಾಗಸತಃ ಸತ್ತಾ' ಎಂದು ಹೇಳಿದ್ದು ತಾರ್ಕಿಕಮತದಂತೆ. ವಸ್ತುತಃ ಸಿದ್ಧಾಂತದಲ್ಲಿ ಅಸತ್ಕಾರ್ಯವನ್ನು ಒಪ್ಪಿಲ್ಲ. ಹೊರತು ಕಾರಣಾತ್ಮನಾ ಸತ್ ಆಗಿರುವ ಘಟವು ಕಾರ್ಯಾತ್ಮನಾ ಅಸತ್ತಾಗಿರುತ್ತದೆ. ಇದಕ್ಕೆ ಪೃಥುಬುಧ್ನೋದರಾದ್ಯಾಕಾರತ್ವ ಎಂಬ ಅವಸ್ಥಾವಿಶೇಷವು ಪ್ರಾಪ್ತವಾದಾಗ ಘಟತ್ವ ರೂಪವನ್ನು ತಾಳುತ್ತದೆ. ಅಂದರೆ ಘಟವು ಹುಟ್ಟುವ ಮೊದಲು ಮೃದಾದಿ ಕಾರಣರೂಪದಲ್ಲಿ ಸತ್ತಾಗಿರುತ್ತದೆ. ಪೃಥುಬುಧ್ನೋದರಾದ್ಯಾಕಾರತ್ವರೂಪದಿಂದ ಅಸತ್ತಾಗಿರುತ್ತದೆ. ಹೀಗೆ ಸದಸತ್ಕಾರ್ಯವನ್ನು ನಾವು ಒಪ್ಪಿದ್ದೇವೆ.

ಗ್ರಂಥದಲ್ಲಿರುವ ಸತ್ತಾ ಶಬ್ದವು ಸತ್ವವೆಂಬ ಧರ್ಮವನ್ನು ಹೇಳುತ್ತಿದೆ ಹೊರತು; ತಾರ್ಕಿಕರ ಸತ್ತಾ-ಜಾತಿಯನ್ನು ಹೇಳುತ್ತಿಲ್ಲ.

**गुरुराजीयम् – वस्तुस्वभावादनादेरपि नियम्यत्वं पूर्वमुक्तम् । इदानीं नियामकस्वभावाच्च तदुपपत्तिरित्याह – किञ्चेति ॥ कर्तुमकर्तुमन्यथाकर्तुं चेति सम्बन्धः ।**

## ಸಾರ

ಭಗವಂತನು ಕರ್ತುಂ ಅಕರ್ತುಂ ಅನ್ಯಥಾಕರ್ತುಂ ಸಮರ್ಥನಾಗಿದ್ದಾನೆ. ಅವನು ಇಚ್ಛೆ ಪಟ್ಟರೆ ಏನನ್ನು ಬೇಕಾದರೂ ಮಾಡಬಲ್ಲ. ಅವ್ಯಾಕೃತಾಕಾಶವಿಲ್ಲದ ಜಗತ್ತನ್ನೇ ಸೃಷ್ಟಿ ಮಾಡಬಲ್ಲ. ಪ್ರಕೃತಿ ಮೊದಲಾದವುಗಳನ್ನು ಉಪಯೋಗಿಸದೆಯೂ ಜಗತ್ತನ್ನು ಸೃಷ್ಟಿಸಬಲ್ಲ. ಆದರೆ ತಾನೇ ಮಾಡಿಕೊಂಡ ನಿಯಮವನ್ನು ದಾಟ ಇಂತಹ ಸಂಕಲ್ಪಗಳನ್ನು ಮಾಡಲಾರ. ಆದ್ದರಿಂದ ಅನಾದಿಪದಾರ್ಥಗಳೆಲ್ಲವೂ ಸಂಪೂರ್ಣವಾಗಿ ಭಗವದಧೀನಗಳೇ ಆಗಿವೆ. ಭಗವಂತನ ಇಚ್ಛೆಯು ಅನಾದಿಯಾದ್ದರಿಂದ ವಿರೋಧಕ್ಕೆ ಅವಕಾಶವಿಲ್ಲ.

## ಪ್ರಕೃತ ಸ್ವಾತಂತ್ರ್ಯವೆಂಬ ಪ್ರವೃತ್ತಿನಿಮಿತ್ತವೇ ಸಾಕು

**ತಾತ್ಪರ್ಯಚನ್ದ್ರಿಕಾ**

**ಯದ್ಯಪ್ಯನಾದಿಸ್ವಭಾವಸ್ಯೇಶಾಧೀನತಾಮನತ್ತ್ವಾऽಪಿ, ಗಾಯತ್ರೀಶಬ್ದಪ್ರವೃತ್ತಿನಿಮಿತ್ತಸ್ಯ ಗಾನತ್ರಾಣಕರ್ತೃತ್ವಸ್ಯ ವೇದೋಪದೇಷ್ಟರಿ ರಕ್ಷಕೇ ಚ ವಿಷ್ಣಾವೇವ ಸಮ್ಭವೇನ ತಸ್ಯ ವಿಷ್ಣುಪರತಾ ವಕ್ತುಂ ಶಕ್ಯಾ । ನಚ ಯೋಗಾದ್ರೂಢೇಃ ಪ್ರಾಬಲ್ಯಾದ್ರೂಢಿಬಾಧಕಮಹಾಯೋಗಾಯೇಶಾಧೀನತ್ವೋಕ್ತಿಃ, ''ಗಾಯತಿ ಚ ತ್ರಾಯತಿ ಚ'' ಇತಿ ಶ್ರುತ್ಯುಕ್ತತ್ವಾನ್ನಿರವಕಾಶವಿಷ್ಣುಲಿಙ್ಗಾನುಗ್ರಹಾಚ್ಚ ರೂಢಿತ್ಯಾಗೇನ ಯೋಗಸ್ಯೈವ ಗ್ರಾಹ್ಯತ್ವಾತ್ । ಭಾಷ್ಯೇ ವಿಷ್ಣೌ ಪೌರಾಣಿಕರೂಢೇರುಕ್ತತ್ವಾಚ್ಚ ।**

**ತಥಾऽಪಿ ಯಥಾ ''ವ್ರೀಹೀನವಹನ್ತಿ'' ಇತ್ಯತ್ರ ದ್ವಿತೀಯಾಶ್ರುತಿಮತನ್ತ್ರೀಕೃತ್ಯ ಅವಘಾತಾದೇರ್ಲಿಙ್ಗಾತ್ ವ್ರೀಹಿಶೇಷತೋಕ್ತಾ ದ್ವಿತೀಯೇ, ತಥಾऽತ್ರಾಪಿ ತದ್ಗತತ್ವಮತನ್ತ್ರೀಕೃತ್ಯ ಚ್ಛನ್ದೋಗತಸ್ಯ ಪ್ರವೃತ್ತಿನಿಮಿತ್ತಸ್ಯ ವಿಷ್ಣ್ವಧೀನತ್ವೇನ ಶ್ರುತೇರ್ವಿಷ್ಣಾವೇವ ಮಹಾಯೋಗೇನ ಪರಮಮುಖ್ಯತ್ವಮಿತಿ ಪ್ರದರ್ಶನಾರ್ಥಮ್, ಅನಾದಿಸ್ವಭಾವನಿಯಾಮಕಶಕ್ತಿರೂಪಮಹಾಗುಣಸಿದ್ಧ್ಯರ್ಥಂ, ವಿಷ್ಣಾವಸಮ್ಭವದನಾದಿಪ್ರವೃತ್ತಿನಿಮಿತ್ತಕಶಬ್ದಸಮನ್ವಯಾರ್ಥಂ ಚೇಶಾಧೀನತೋಕ್ತಾ । ತಸ್ಮಾದ್ವಿಷ್ಣುರೇವ ಅಧಿವೇದಗತ -ಗಾಯತ್ರ್ಯಾದಿಶಬ್ದವಾಚ್ಯ ಇತಿ ॥**

**ಸೂತ್ರಕ್ರಮಸ್ತು – ಆಚೇ ಉಪಕ್ರಮಸ್ಥಹೇತೂಕ್ತಿಃ । ದ್ವಿತೀಯೇ ತು ಉಪಸಂಹಾರೋದಾಹೃತಮನ್ತ್ರಸ್ಥಹೇತೂಕ್ತಿಃ, ತೃತೀಯೇ ಬಾಧಕೋದ್ಧಾರ ಇತಿ ॥**

ಅನುವಾದ - ಪ್ರಶ್ನೆ - ವಸ್ತುತಃ ಸ್ವಾತಂತ್ರ್ಯನಿಮಿತ್ತವೆಂಬ ಪ್ರವೃತ್ತಿನಿಮಿತ್ತವನ್ನು ಒಪ್ಪಿ ಅನಾದಿಸ್ವಭಾವವು ಈಶಾಧೀನವೆಂದು ಹೇಳಬೇಕಾಗಿಲ್ಲ. ಈಶಾಧೀನವೆಂದು ಹೇಳದಿದ್ದರೂ ಗಾಯತ್ರೀಶಬ್ದದ ಪ್ರವೃತ್ತಿನಿಮಿತ್ತವೆನಿಸಿದ ಗಾನಕರ್ತೃತ್ವವು ವೇದೋಪದೇಶಕನಾದ್ದರಿಂದ ವಿಷ್ಣುವಿನಲ್ಲೇ ಬರುತ್ತದೆ. ತ್ರಾಣಕರ್ತೃತ್ವವು ಸಹ ರಕ್ಷಕನಾದ್ದರಿಂದ ವಿಷ್ಣುವಿನಲ್ಲೇ ಬರುತ್ತದೆ. ಆದ್ದರಿಂದ ತದ್ಗತತ್ವವೆಂಬ ಪ್ರವೃತ್ತಿನಿಮಿತ್ತದಿಂದಲೇ ವಿಷ್ಣುಪರತ್ವವನ್ನು ಹೇಳಲು ಬರುವಾಗ ಸ್ವಾತಂತ್ರ್ಯಪ್ರವೃತ್ತಿನಿಮಿತ್ತದಿಂದ ವಿಷ್ಣುಪರತ್ವವನ್ನು ಹೇಳಬೇಕಾಗಿಲ್ಲ.

ಇನ್ನು 'ಯೋಗಾದ್ರೂಢೇರ್ಬಲೀಯಸಿ' ಎಂಬ ನ್ಯಾಯದಂತೆ ಯೋಗಕ್ಕಿಂತ ರೂಢಿಯು ಪ್ರಬಲವಾದಾಗ ಗಾಯತ್ರೀಶಬ್ದದಿಂದ ಛಂದಸ್ಸೇ ಪ್ರತಿಪಾದ್ಯವಾಗಬೇಕಾಗುತ್ತದೆ. ಈ ನಿಯಮವನ್ನು ಬಾಧಿಸಬೇಕೆಂದರೆ ಮಹಾಯೋಗಕ್ಕಾಗಿ ಸ್ವಾತಂತ್ರ್ಯವೆಂಬ ಪ್ರವೃತ್ತಿನಿಮಿತ್ತವನ್ನೇ ವಿಷ್ಣುವಿನಲ್ಲಿ ಹೇಳಬೇಕು ಎಂದು ಶಂಕಿಸಬಾರದು. ಏಕೆಂದರೆ ತದ್ಗತತ್ವವೆಂಬ ಯೋಗಾರ್ಥವನ್ನು ಸ್ವೀಕರಿಸಬಹುದೆನ್ನಲು

'ಗಾಯತಿ ಚ ತ್ರಾಯತಿ ಚ' ಎಂಬ ಶ್ರುತಿಪ್ರಮಾಣವಿದೆ. ನಿರವಕಾಶವಿಷ್ಣುಲಿಂಗದ ಅನುಗ್ರಹವಿರುವುದರಿಂದ ರೂಢಿಯನ್ನು ಬಿಟ್ಟು ಯೋಗಾರ್ಥವನ್ನೇ ಸ್ವೀಕರಿಸಬೇಕು. ಅಂದರೆ 'ಯೋಗಾದ್ರೂಢೇರ್ಬಲೀಯಸಿ' ಎಂಬ ನಿಯಮಕ್ಕೆ ವಿರುದ್ಧವಾಗಿ ತದ್ಗತತ್ವವೆಂಬ ಯೋಗಾರ್ಥವನ್ನು ಸ್ವೀಕರಿಸಬಹುದು. ಆಪ್ಪೆ ಅಲ್ಲದೆ ಭಾಷ್ಯದಲ್ಲಿ ಗಾಯತ್ರೀಶಬ್ದದ ಪೌರಾಣಿಕರೂಢಿಯನ್ನು ವಿಷ್ಣುವಿನಲ್ಲಿ ಹೇಳಿದ್ದಾರೆ. ಆದ್ದರಿಂದ 'ಯೋಗಾದ್ರೂಢೇರ್ಬಲೀಯಸಿ' ಎಂಬ ನಿಯಮವನ್ನು ಅನುಸರಿಸಿ ಛಂದೋಪರತ್ವವನ್ನು ಹೇಳಲು ಬರುವುದಿಲ್ಲ ಆದ್ದರಿಂದ ತದ್ಗತತ್ವವನ್ನು ವಿವಕ್ಷಿಸಿ ವಿಷ್ಣುವಿನಲ್ಲಿ ಗಾಯತ್ರೀಶಬ್ದಪ್ರತಿಪಾದ್ಯತ್ವವನ್ನು ಹೇಳಲು ಬರುವಾಗ ಸ್ವಾಮಿತ್ವವೆಂಬ ಪ್ರವೃತ್ತಿನಿಮಿತ್ತವನ್ನು ಆಶ್ರಯಿಸಿದ್ದು ತಪ್ಪಲ್ಲವೆ?

ಉತ್ತರ - ತದ್ಗತತ್ವವನ್ನು ಬಿಟ್ಟು ಸ್ವಾತಂತ್ರ್ಯವನ್ನೇ ಹೇಳಲು ಎರಡು ಮುಖ್ಯಕಾರಣಗಳಿವೆ. ಅದು ಹೀಗೆ.

(೧) ಯಾವ ರೀತಿಯಾಗಿ 'ವ್ರೀಹೀನವಹಂತಿ' ಎಂಬಲ್ಲಿ ದ್ವಿತೀಯಾಶ್ರುತಿಯನ್ನು ಬಿಟ್ಟು ಅವಘಾತವೆಂಬ ಲಿಂಗದಿಂದ ವ್ರೀಹಿಗೆ ಶೇಷತ್ವವನ್ನು ಪೂರ್ವಮೀಮಾಂಸೆಯ ದ್ವಿತೀಯಾಧ್ಯಾಯದಲ್ಲಿ ಹೇಗೆ ಹೇಳಿದ್ದಾರೋ, ಅದರಂತೆ ಇಲ್ಲಿಯೂ ತದ್ಗತತ್ವಪ್ರವೃತ್ತಿನಿಮಿತ್ತವನ್ನು ಬಿಟ್ಟು ಛಂದಸ್ಸಿನಲ್ಲಿರುವ ಪ್ರವೃತ್ತಿನಿಮಿತ್ತವನ್ನು ವಿಷ್ಣುವಿನ ಅಧೀನವೆಂದು ಸಮರ್ಥಿಸಲು ಸ್ವಾತಂತ್ರ್ಯವೆಂಬ ಪ್ರವೃತ್ತಿನಿಮಿತ್ತವನ್ನು ಆಶ್ರಯಿಸಿದ್ದಾರೆ. ಇದರಿಂದ ಶ್ರುತಿಗೆ ವಿಷ್ಣುವಿನಲ್ಲಿ ಮಹಾಯೋಗದಿಂದ ಪರಮಮುಖ್ಯತ್ವವು ಸಿದ್ಧವಾಗುತ್ತದೆ ಏಕೆಂದರೆ ಸ್ವಾತಂತ್ರ್ಯ ಮತ್ತು ತದ್ಗತತ್ವಗಳಲ್ಲಿ ಸ್ವಾತಂತ್ರ್ಯವು ಮುಖ್ಯವಾಗಿದೆ.

ಮತ್ತು (೨) ವಿಷ್ಣುವಿನಲ್ಲಿ ಅನಾದಿಸ್ವಭಾವನಿಯಾಮಕಶಕ್ತಿ ಎಂಬ ಮಹಾಗುಣದ ಸಿದ್ಧಿಯೂ ಸ್ವಾತಂತ್ರ್ಯವೆಂಬ ಪ್ರವೃತ್ತಿನಿಮಿತ್ತದಿಂದ ಸಿದ್ಧವಾಗಬೇಕಾಗಿದೆ. ಆದಕ್ಕಾಗಿ ವಿಷ್ಣುವಿನಲ್ಲಿ ಅಸಂಭಾವಿತವಾದ ಪ್ರಧಾನ ಮೊದಲಾದ ಶಬ್ದಗಳ ಸಮನ್ವಯವನ್ನು ಮಾಡಬೇಕು. ಇಂತಹ ಶಬ್ದಗಳ ಸಮನ್ವಯದಿಂದ ಅನಾದಿಸ್ವಭಾವನಿಯಾಮಕಶಕ್ತಿ ಎಂಬ ಮಹಾಗುಣವು ವಿಷ್ಣುವಿನಲ್ಲಿ ಸಿದ್ಧವಾಗುತ್ತದೆ.

ಈ ಎರಡು ಪ್ರಧಾನಕಾರಣಗಳಿರುವುದರಿಂದ ಅಧಿವೇದಗತವಾದ ಗಾಯತ್ರೀ ಮೊದಲಾದ ಶಬ್ದವಾಚ್ಯತ್ವವನ್ನು ಸ್ವಾತಂತ್ರ್ಯವೆಂಬ ಪ್ರವೃತ್ತಿನಿಮಿತ್ತದಿಂದಲೇ ಸಮನ್ವಯ ಮಾಡಿದ್ದಾರೆ. ತದ್ಗತತ್ವವನ್ನು ಆಶ್ರಯಿಸಿಲ್ಲ.

ಸಿದ್ಧಾಂತದಲ್ಲಿ ಸೂತ್ರಕ್ರಮ - ಛಂದೋಭಿಧಾನಾತ್ ಎಂಬ ಮೊದಲನೆಯ ಸೂತ್ರದಲ್ಲಿ 'ಗಾಯತಿ ಚ ತ್ರಾಯತಿ ಚ' ಎಂಬ ಉಪಕ್ರಮವಾಕ್ಯದ ಹೇತುವನ್ನು ಹೇಳಿದ್ದಾರೆ. ಭೂತಾದಿಪಾದ ಇತ್ಯಾದಿ ಎರಡನೆಯ ಸೂತ್ರದಲ್ಲಿ 'ಪಾದೋಸ್ಯ ವಿಶ್ವಾ' ಎಂಬ ಪುರುಷಸೂಕ್ತದಲ್ಲಿನ ಉಪಸಂಹಾರದಲ್ಲಿನ

ಹೇತುವನ್ನು ಹೇಳಿದ್ದಾರೆ. 'ಉಪದೇಶಭೇದ' ಎಂಬ ಮೂರನೆಯ ಸೂತ್ರದಲ್ಲಿ ಶ್ರುತಿಯಲ್ಲಿರುವ ಬಾಧಕವನ್ನು ಪರಿಹರಿಸಿದ್ದಾರೆ.

**ಪ್ರಕಾಶಃ** – ಅತ್ರ ಭಾಷ್ಯಾದೌ ಪ್ರಯತ್ನೇನಾನಾದೇರನ್ಯಾಧೀನತಾಸಮರ್ಥನಸ್ಯಾನೌಚಿತ್ಯಮಾಶಙ್ಕ್ಯಾಭಿಪ್ರಾಯೋಕ್ತ್ವಾ ನಿರಸ್ಯತಿ – **ಯದ್ಯಪೀತಿ ॥ ವೇದೋಪದೇಶ್ಟರೀತಿ ॥** ''ಗಾಯತಿ ತ್ರಾಯತಿ ಚ'' ಇತಿ ಶ್ರುತ್ಯುಕ್ತಯೋಗಾನುಗತಿಸೂಚನಮೇತತ್ । **ವಿಷ್ಣಾವೇವೇತಿ ॥** ನ ಹಿ ತಜ್ಜಡೇ ಅಕರ್ತರಿ ಮುಖ್ಯತೋ ಯುಜ್ಯತ ಇತ್ಯೇವಕಾರಃ । ನನು ನೈವಂ ಶಙ್ಕ್ಯಂ, ಗಾಯತ್ರೀಶಬ್ದಸ್ಯ ಚ್ಛನ್ದಸಿ ರೂಢತ್ವೇನ ಯೋಗಮಾತ್ರೇಣಾಪಹಾರಾಯೋಗಾತ್, ತದ್ಬಾಧಕಮಹಾಯೋಗಾಯ ''ಸ್ವಾತನ್ತ್ರ್ಯಂ ತತ್ರ ಮುಖ್ಯಂ ಸ್ಯಾತ್'' ಇತ್ಯುಕ್ತದಿಶೇಶಾಧೀನತ್ವೋಕ್ತಿರಿತ್ಯಾಶಙ್ಕ್ಯ ನಿರಸ್ಯತಿ – **ನಚೇತಿ ॥**

**ಶ್ರುತ್ಯುಕ್ತತ್ವಾದಿತಿ ॥** ''ಆಜ್ಯೈಃ ಸ್ತುವತೇ'' ಇತ್ಯಾದೌ ''ಯದಾಜಿಮೀಯುಸ್ತದಾಜ್ಯಾನಾಮಾಜ್ಯತ್ವಂ'' ಇತಿ ಶ್ರೌತಯೋಗೇನ ರೂಢಿತ್ಯಾಗಸ್ಯ ದೃಷ್ಟತ್ವೇನ ಕೇವಲಯೋಗಾಪೇಕ್ಷಯಾ ಶ್ರೌತಯೋಗಸ್ಯ ಬಲವತ್ತ್ವಾದನ್ಯಥಾ ತಸ್ಯ ವ್ಯರ್ಥತಾಪತ್ತೇಃ । ''**ಕಮ್ಪನಾತ್**'' ಇತ್ಯತ್ರ ಸ್ಮಾರ್ತಯೋಗಸ್ಯಾಪಿ ರೂಢಿಬಾಧಕತಾಯಾಃ ವಕ್ಷ್ಯಮಾಣತ್ವಾಚ್ಚೇತಿ ಭಾವಃ । ಪ್ರಾಗುಕ್ತಲಿಙ್ಗಾನುಗೃಹೀತತ್ವಾಚ್ಚ ಪ್ರಾಬಲ್ಯಂ ಯೋಗಸ್ಯೇತ್ಯಾಹ – **ನಿರವಕಾಶೇತಿ ॥ ಪೌರಾಣಿಕೇತಿ ॥**

**ಸರ್ವಚ್ಛನ್ದೋऽಭಿಧೋ ಹ್ಯೇಷ ಸರ್ವವೇದಾಭಿಧೋ ಹ್ಯಸೌ ।**

ಇತ್ಯಾದಿನಾ ಪುರಾಣಸಿದ್ಧರೂಢೇರಿತ್ಯರ್ಥಃ – **ಯಥೇತಿ ॥**

ದ್ವಿತೀಯಾಧ್ಯಾಯಾದ್ಯಪಾದೇ ''ತಾನಿ ದ್ವೈಧಂ ಗುಣಪ್ರಧಾನಭೂತಾನಿ'' ಇತಿ ಚತುರ್ಥೇऽಧಿಕರಣೇ ''ವ್ರೀಹೀನವಹನ್ತಿ'' ಇತ್ಯತ್ರಾವಘಾತಾದಪೂರ್ವಮಸ್ತ್ಯುತ ನೇತಿ ಸಂಶಯೇ, ವಾಕ್ಯಸಾಫಲ್ಯಾವಶ್ಯಮಪೂರ್ವೇ ಕಲ್ಪ್ಯೇ ಭಾವಾರ್ಥಾಧಿಕರಣನ್ಯಾಯೇನ ಧಾತ್ವರ್ಥಾದೇವ ಕಲ್ಪನಂ ನ್ಯಾಯ್ಯಮಿತ್ಯವಘಾತಾದಸ್ತ್ಯಪೂರ್ವಂ, ವ್ರೀಹಯಸ್ತು ತದರ್ಥಾ ಇತಿ ಪ್ರಾಪ್ತೇ, ಅವಘಾತಸಾಮರ್ಥ್ಯಪರ್ಯಾಲೋಚನಯಾ ತುಷವಿಮೋಕದ್ವಾರಾ ಪುರೋಡಾಶನಿರ್ವರ್ತನರೂಪದೃಷ್ಟಪ್ರಯೋಜನಲಾಭೇನಾಪೂರ್ವಸ್ಯೈವಾಕಲ್ಪ್ಯತ್ವಾತ್ ದೃಷ್ಟಾನುನಿಷ್ಪಾದಿನೋ ನಿಯಮಾದೃಷ್ಟಸ್ಯ ಸ್ವೀಕಾರೇಣ ವಾಕ್ಯಾವೈಯ್ಯರ್ಥ್ಯಾತ್ ವ್ರೀಹ್ಯರ್ಥೋऽವಘಾತ ಇತಿ ಸಿದ್ಧಾನ್ತಿತಮ್ । ತತ್ರ ಯಥಾ 'ವ್ರೀಹೀನ್' ಇತಿ ಶೇಷಿತ್ವಬೋಧಿನ್ಯಾಂ ಶ್ರುತೌ ಸತ್ಯಾಮಪಿ ತದನಾದರೇಣ ಸಾಮರ್ಥ್ಯಪರ್ಯಾಲೋಚನಯೈವಾವಘಾತಸ್ಯ ವ್ರೀಹಿಶೇಷತೋಕ್ತಾ, ತಥाऽತ್ರಾಪೀತ್ಯರ್ಥಃ ।

ನನು ತತ್ರ ''ಸಕ್ತೂನ್ ಜುಹಾತಿ'' ಇತ್ಯಾದೌ ದ್ವಿತೀಯಾಯಾ ವ್ಯಭಿಚಾರಿತ್ವಾದನಾದರಣಂ ತಸ್ಯಾ ಇತ್ಯತಃ, ತರ್ಹ್ಯತ್ರಾಪಿ ಪ್ರಯೋಜನವಿಶೇಷಲಾಭಾಯ ತದನಾದರಣಮಿತ್ಯಾಹ – **ಮಹಾಯೋಗೇನೇತಿ ॥**

**स्वातन्त्र्यं तद्गतत्वं च शब्दवृत्तेर्हि कारणम् ।**
**स्वातन्त्र्यं तत्र मुख्यं स्यात् ..... ॥**

ದ್ಯುಶಬ್ದದ ಪ್ರಾತಿಪದಿಕಾರ್ಥ ದ್ಯುಲೋಕ. ಸೈಷಾ ಚತುಷ್ಪದಾ ಎಂಬಲ್ಲಿ ಕೇಳಿಸಿದ ಗಾಯತ್ರಿಯಲ್ಲಿ ಈ ದ್ಯುಲೋಕದ ಸಂಬಂಧವು ಕೇಳಿಸುತ್ತಿದೆ. ಅಷ್ಟೇ ಅಲ್ಲದೆ 'ತ್ರಿಪಾದಸ್ಯಾಮೃತಂ ದಿವಿ' ಎಂಬಲ್ಲಿ ಕೇಳಿಸುತ್ತಿರುವ ಜ್ಯೋತಿಯಲ್ಲಿಯೂ ದ್ಯುಲೋಕದ ಸಂಬಂಧವು ಕೇಳಿಸುತ್ತಿದೆ. ಆದರೆ 'ಅಥ ಯದತಃ' ಎಂಬಲ್ಲಿ ದಿವಃ ಎಂದು ಪಂಚಮೀ ವಿಭಕ್ತಿ ಇದೆ. 'ತ್ರಿಪಾದಸ್ಯಾಮೃತಂ ದಿವಿ' ಎಂಬಲ್ಲಿ ಸಪ್ತಮೀ ವಿಭಕ್ತಿ ಇದೆ. ಹೀಗೆ ದ್ಯುಶಬ್ದದ ಪ್ರಾತಿಪದಿಕಾರ್ಥವು ವಿರುದ್ಧವಿಭಕ್ತಿಗಳಿಂದ ಕೂಡಿದೆ. ವಿರುದ್ಧವಿಭಕ್ತಿಗಳಿಂದ ಕೂಡಿದ್ದರಿಂದ ದ್ಯುಶಬ್ದದ ಪ್ರಾತಿಪದಿಕಾರ್ಥದ ಸಂಬಂಧವನ್ನು ಹೊಂದಿದ ಗಾಯತ್ರೀ ಮತ್ತು ಜ್ಯೋತಿಗಳಿಗೆ ಅಭೇದವನ್ನು ಹೇಳಲು ಸಾಧ್ಯವಿಲ್ಲ. ಆದರೆ ಆದ್ವೈತಿಗಳು ಅಭೇದವನ್ನು ಇಲ್ಲಿ ಹೇಗೆ ಹೇಳಿದ್ದಾರೆಂಬುದೇ ಪ್ರಶ್ನೆ. ಅಷ್ಟೇ ಅಲ್ಲದೆ ಎಲ್ಲಿ ವಿರುದ್ಧವಿಭಕ್ತಿಗಳಿಲ್ಲದೆ ಸಮಾನವಾಗಿ ಚತುಃಸಂಖ್ಯಾ ಕೇಳಿಸುತ್ತಿದೆಯೋ ಅಂತಹ ಸ್ಥಳದಲ್ಲಿ ಐಕ್ಯವನ್ನು ಹೇಳಬಹುದು. ಆದರೆ ಆದ್ವೈತಿಗಳು ಮಂತ್ರವಾಕ್ಯದಲ್ಲಿ ಹೇಳಿದ ಪಾದವೇ ಬೇರೆ ಬ್ರಾಹ್ಮಣವಾಕ್ಯದಲ್ಲಿ ಹೇಳಿದ ಪಾದವೇ ಬೇರೆ ಎಂದು ಅಲ್ಲಿ ಭೇದವನ್ನು ಹೇಳಿದ್ದಾರೆ. ಆದ್ವೈತಿಗಳ ಈ ನಿಲುವು ಮತ್ತಷ್ಟು ಗೊಂದಲಕ್ಕೆ ಕಾರಣವಾಗಿದೆ.

**ಗುರುರಾಜೀಯಮ್** – ಅತ್ರ ಹಿ ಪಾದಶಬ್ದೇನ ತದಾತ್ಮಕತ್ವಂ ವಿವಕ್ಷ್ಯತೇ ಕಿಂ ವೋಪಾಸನಾರ್ಥಂ ಚರಣತ್ವಾರೋಪೋ ವಾ । ನಾದ್ಯ ಇತ್ಯಾಹ – **ಪಾದಶಬ್ದೇನೇತಿ** ॥ ದ್ವಿತೀಯಂ ನಿರಾಕರೋತಿ – **ಉಪಾಸನಾರ್ಥಮಿತಿ** ॥ **ಅನ್ಯಥೇತಿ** ॥ ಷಾಡ್ವಿಧ್ಯಮನೂದ್ಯ ಚತುಷ್ಪಾತ್ತ್ವವಿಧಾನ ಇತ್ಯರ್ಥಃ ।

## ಸಾರ

ಅದ್ವೈತಿಗಳಿಗೆ ಚತುಷ್ಪದಾ ಎಂಬ ಶ್ರುತಿಯನ್ನು ವ್ಯಾಖ್ಯಾನಿಸಲು ಸಾಧ್ಯವಿಲ್ಲ. ಭೂತಾದಿ ನಾಲ್ಕು ಪದಾರ್ಥಗಳು ಬ್ರಹ್ಮನ ಪಾದಗಳಾಗಿವೆ ಎಂದು ವ್ಯಾಖ್ಯಾನಿಸಬೇಕು. ಆದರೆ ಶ್ರುತಿಯಲ್ಲಿ ಈ ಹಿಂದೆ ಆರು ಪದಾರ್ಥಗಳು ಪ್ರಸಕ್ತವಾಗಿರುವಾಗ ವಾಕ್, ಪ್ರಾಣಗಳನ್ನು ಬಿಟ್ಟು ನಾಲ್ಕನ್ನು ಮಾತ್ರ ಬ್ರಹ್ಮನ ಪಾದಗಳೆನ್ನುವುದು ತಪ್ಪಲ್ಲವೇ? ಇನ್ನು ಆರಲ್ಲಿ ವಾಕ್, ಪ್ರಾಣಗಳನ್ನು ಬಿಟ್ಟು ನಾಲ್ಕನ್ನು ಮಾತ್ರ ಶ್ರುತಿಯು ಚತುಷ್ಪದಾ ಎಂದಿದೆ ಎನ್ನಬಹುದು. ಆದರೆ ಈ ಪಕ್ಷದಲ್ಲಿ ವಾಕ್ ಪ್ರಾಣಗಳಿಗೆ ಬ್ರಹ್ಮಾತ್ಮಕತ್ವವನ್ನು ಹೇಳಿದಂತಾಗುವುದಿಲ್ಲ. ಆದ್ದರಿಂದ ಶ್ರುತಿಯು ಭಗವಂತನ ಆರುರೂಪಗಳನ್ನು ಅನುವಾದ ಮಾಡಿ ಬೇರೆ ನಾಲ್ಕು ರೂಪಗಳನ್ನು 'ಚತುಷ್ಪದಾ' ಎಂಬ ಪದದಿಂದ ವರ್ಣಿಸಿದೆ ಎಂದು ಹೇಳಬೇಕು.

---

## ಸ್ವಮತದಲ್ಲಿ ಶ್ರುತ್ಯರ್ಥ

### तात्पर्यचन्द्रिका

**अस्माकं मते षाड्विध्यं तु ''गायत्र्यां संस्थितो विष्णुः'' इत्यादि छान्दोग्यभाष्यात् ज्ञेयम् । तस्मान्मान्त्रवर्णिकादन्यस्य पादाभिधानस्य अभावात्तस्य च 'चरणाभिधानात्' इत्यनेनैवोक्तत्वात् परमते भूतादिसूत्रवैयर्थ्यम् । अस्माकं पक्षे 'भूतादि' इत्यत्रादिशब्दस्तु ''अमृतं दिवि'' इत्युक्तामृताख्यस्वरूपपरः ।**

ಅನುವಾದ - ನಮ್ಮ ಮತದಲ್ಲಿ ಶ್ರುತಿಯಲ್ಲಿರುವ 'ಷಡ್ವಿಧಾ' ಎಂಬ ಪದವು ಭಗವಂತನ ಆರುವಿಧರೂಪಗಳನ್ನು ಹೇಳುತ್ತಿದೆ. ಈ ಶ್ರುತಿಯನ್ನು ಆಚಾರ್ಯರು 'ಗಾಯತ್ರ್ಯಾಂ ಸಂಸ್ಥಿತೋ ವಿಷ್ಣುಃ' ಎಂದು ಛಾಂದೋಗ್ಯಭಾಷ್ಯದಲ್ಲಿ ವ್ಯಾಖ್ಯಾನಿಸಿದ್ದಾರೆ. ಅದನ್ನು ಇಲ್ಲಿ ತಿಳಿಯಬೇಕು. ಮಂತ್ರವರ್ಣದಲ್ಲಿ ಪ್ರತಿಪಾದಿಸಿದ ಪಾದಾಭಿಧಾನಕ್ಕಿಂತ ಬೇರೆಯಾದ ಚರಣಾಭಿಧಾನವು ಇರುವುದಿಲ್ಲ. ಎಂದು ಇದುವರೆಗೂ ಹೇಳಿದಂತೆ ಪರಮತದಲ್ಲಿ ಭೂತಾದಿಸೂತ್ರವು ವ್ಯರ್ಥವಾಗಿದೆ. ನಮ್ಮ ಪಕ್ಷದಲ್ಲಿ ಭೂತಾದಿ ಎಂಬ ಸೂತ್ರದಲ್ಲಿರುವ ಆದಿಶಬ್ದವು 'ಅಮೃತಂ ದಿವಿ' ಎಂಬಲ್ಲಿ ಹೇಳಿದ ಭಗವಂತನ ಅಮೃತರೂಪಗಳನ್ನು ಹೇಳುತ್ತಿದೆ.

**प्रकाशः** – ननु भवन्मतेऽपि भूतानां पादत्वेन निर्देशात् कथं षाड्विध्यं, यदि विधान्तर्गतानामपि भूतानां पृथक्कृत्य पादत्वमुच्यते सममेतन्ममापीत्यत आह – **अस्माकमिति ॥**

**गायत्र्यां संस्थितो विष्णुः स्त्रीरूपः सूर्यसप्रभः ।**
**द्वितीयश्चैव मत्स्यादिर्भूतनामाऽवतारगः ॥**
**तृतीयो वाचि संस्थः स स्त्रीरूपो हयशीर्षकः ।**
**चतुर्थः पृथिवीसंस्थः स्त्रीरूपः पीतवर्णकः ॥**
**जीवस्यान्तर्गतो व्याप्यः शरीरमितिनामकः ।**
**पञ्चमस्तद्धृदिस्थस्तु षष्ठो हृदयनामकः ॥**
**गायत्रीनामको विष्णुरेवं षड्विध उच्यते ।**

इत्यादिभाष्यात् 'पादोऽस्य सर्वा भूतानि' इति भूतशब्दितजीवानां चतुष्पादान्तर्भावेऽपि ''भूतं यदिदं किञ्च'' इति षड्विधान्तर्भूतं मत्स्याद्यवताररूपमेवेति ज्ञेयमित्यर्थः । ''किञ्च चतुष्पदा'' इत्यादिनोक्तमुपसंहरति – **तस्मादिति ॥**

ननु परमते 'भूतादि' इत्यादिपदेन पृथिवीशरीरहृदयानां ग्रहणेन तस्य सार्थक्यं, भवन्मते तु 'भूतपादव्यपदेशात्' इत्येतावता ''पादोऽस्य'' इत्युक्तभूतपादत्वग्रहसम्भवादादिपदं व्यर्थमित्यत आह – **अस्माकमिति ॥**

स्यादेवं, यदि भूतपादत्वमेवात्र विवक्षितं स्यात्, न चैवम्, किन्तु भूतशब्दितविश्वपादत्वमिवामृतशब्दितनारायणवासुदेववैकुण्ठाख्यस्वरूपत्रयपादत्वमपि विवक्षित्वा 'चतुष्पदा' इत्युक्तचतुष्पदत्वस्य वक्तव्यत्वात्, 'भूतं' विश्वमादिर्यस्य रूपत्रयस्य तद्भूतादि, भूतं स्वरूपत्रयं चेति यावत्, तत्पाद इति व्यपदेशोपपत्तेरित्यर्थसम्भवान्न वैयर्थ्यमित्यर्थः ।

ವಿವರಣೆ - ಇಲ್ಲಿಯ ತನಕ ಅದ್ವೈತಮತದ ಪ್ರಕಾರ ಷಡ್ವಿಧತ್ವವು ಅನುಪಪನ್ನವಾಗುತ್ತದೆಂದು ಸಮರ್ಥಿಸಿದ್ದಾಯಿತು. ಪ್ರಕೃತ ನಮ್ಮಮತದಲ್ಲಿಯೂ ಸಹ ಭೂತಗಳನ್ನು ಪಾದಗಳೆಂದು ನಿರ್ದೇಶಿಸಿದ್ದರಿಂದ ಷಡ್ವಿಧತ್ವವು ಹೇಗೆ ಕೂಡುತ್ತದೆ? ಒಂದು ವೇಳೆ ಪಾದಸ್ವರೂಪದಲ್ಲಿ ಸೇರಿದ ಸಮಸ್ತಭೂತಗಳನ್ನು ಆರು ಬಗೆಯಲ್ಲಿ ವಿಭಾಗಿಸಿ ಪಾದತ್ವವನ್ನು ಹೇಳುವುದಾದರೆ ಅದ್ವೈತಿಗಳು ಹಾಗೆಯೇ ಉತ್ತರಿಸಬಹುದಲ್ಲವೇ? ಎಂಬ ಪ್ರಶ್ನೆಗೆ 'ಅಸ್ಮಾಕಂ ಮತೇ' ಎಂಬುದರಿಂದ ಉತ್ತರಿಸುತ್ತಿದ್ದಾರೆ.

ಗಾಯತ್ರ್ಯಾಂ ಸಂಸ್ಥಿತೋ ವಿಷ್ಣುಃ ಸ್ತ್ರೀರೂಪಃ ಸೂರ್ಯಸಪ್ರಭಃ।
ದ್ವಿತೀಯಶ್ಚೈವ ಮತ್ಸ್ಯಾದಿರ್ಭೂತನಾಮಾऽವತಾರಗಃ॥
ತೃತೀಯೋ ವಾಚಿ ಸಂಸ್ಥಃ ಸ ಸ್ತ್ರೀರೂಪೋ ಹಯಶೀರ್ಷಕಃ।

ಚತುರ್ಥಃ ಪೃಥಿವೀಸಂಸ್ಥಃ ಸ್ತ್ರೀರೂಪಃ ಪೀತವರ್ಣಕಃ ॥
ಜೀವಸ್ಯಾಂತರ್ಗತೋ ವ್ಯಾಪ್ಯಃ ಶರೀರಮಿತಿ ನಾಮಕಃ ।
ಪಂಚಮಸ್ತದ್ಧೃದಿಸ್ಥಸ್ತು ಷಷ್ಠೋ ಹೃದಯನಾಮಕಃ ।
ಗಾಯತ್ರೀನಾಮಕೋ ವಿಷ್ಣುರೇವಂ ಷಡ್ವಿಧ ಉಚ್ಯತೇ ॥

(ಗಾಯತ್ರೀಪ್ರತಿಪಾದ್ಯನಾದ್ದರಿಂದ ಗಾಯತ್ರಿ ಎನಿಸಿದ ವಿಷ್ಣುವು ಸ್ತ್ರೀರೂಪಿಯಾಗಿದ್ದಾನೆ. ಸೂರ್ಯನಂತೆ ಪ್ರಕಾಶಿಸುತ್ತಾನೆ. ಇದು ಅವನ ಮೊದಲನೆಯ ರೂಪ. ಭೂತನಾಮಕನಾದ ಮತ್ಸ್ಯಾದಿ ಅವತಾರರೂಪವು ಭಗವಂತನ ಎರಡನೆಯ ರೂಪ. ಮಾತುಗಳಲ್ಲಿರುವ ಹಯಗ್ರೀವ ಎಂಬ ಸ್ತ್ರೀರೂಪವು ಮೂರನೆಯ ರೂಪ. ಪೃಥ್ವಿಯಲ್ಲಿರುವ ಪೀತವರ್ಣದ ಸ್ತ್ರೀರೂಪವು ನಾಲ್ಕನೆಯದ್ದು. ಜೀವರೊಳಗೆ ವ್ಯಾಪ್ತವಾಗಿ ಶರೀರ ಎನಿಸುವ ರೂಪ ಐದನೆಯದ್ದು. ಜೀವರ ಹೃದಯದಲ್ಲಿ ಹೃದಯ ಎಂಬ ರೂಪವು ಆರನೆಯದು. ಹೀಗೆ ಗಾಯತ್ರೀನಾಮಕನಾದ ವಿಷ್ಣು ಆರು ರೂಪಗಳನ್ನು ಹೊಂದಿದ್ದಾನೆ.)

ಹೀಗೆ ಆಚಾರ್ಯರು ಭಾಷ್ಯದಲ್ಲಿ ಹೇಳಿದಂತೆ 'ಷಡ್ವಿಧಾ ಗಾಯತ್ರೀ' ಎಂಬ ಶ್ರುತಿಗೆ ಭಗವಂತನ ಆರುವಿಧರೂಪಗಳೆಂಬ ಅರ್ಥವನ್ನು ತಿಳಿಯಬೇಕು. ಆದ್ದರಿಂದ 'ಪಾದೋಸ್ಯ ಸರ್ವಾ ಭೂತಾನಿ' ಎಂಬಲ್ಲಿ ಭೂತಶಬ್ದದಿಂದ ಜೀವರು ಚತುಷ್ಪಾದದಲ್ಲಿ ಅಂತರ್ಭಾವ ಹೊಂದುತ್ತಾರೆ. ಆದರೂ 'ಭೂತಂ ಯದಿದಂ ಕಿಂಚ' ಎಂಬಲ್ಲಿ ಹೇಳಿದ ಷಡ್ವಿಧರೂಪಗಳೆಂದರೆ ಮತ್ಸ್ಯಾದಿ ಅವತಾರಗಳೇ ಆಗಿವೆ ಎಂದು ಭಾಷ್ಯದ ಈ ಮಾತಿನಿಂದ ತಿಳಿಯುತ್ತದೆ. 'ಕಿಂಚ ಚತುಷ್ಪದಾ' ಇತ್ಯಾದಿ ಗ್ರಂಥದಿಂದ ಪ್ರಾರಂಭಿಸಿದ ವಿಚಾರವನ್ನು 'ತಸ್ಮಾತ್' ಎಂಬುದರಿಂದ ಉಪಸಂಹಾರ ಮಾಡುತ್ತಿದ್ದಾರೆ.

ಪರಮತದಲ್ಲಿ 'ಭೂತಾದಿ' ಎಂಬ ಸೂತ್ರದಲ್ಲಿರುವ ಆದಿಪದದಿಂದ ಪೃಥಿವಿ, ಶರೀರ, ಹೃದಯಗಳನ್ನು ವಿವಕ್ಷಿಸಿದ್ದಾರೆ. ಆದ್ದರಿಂದ ಅವರ ಮತದಲ್ಲಿ ಆದಿಪದವು ಸಾರ್ಥಕವಾಗುತ್ತದೆ. ಆದರೆ ನಿಮ್ಮ ಮತದಲ್ಲಿ ಆದಿಪದವನ್ನು ಹೇಳದೇ 'ಭೂತಪಾದವ್ಯಪದೇಶಾತ್' ಎಂದಷ್ಟೇ ಹೇಳಿದರೂ 'ಪಾದೋಸ್ಯ' ಎಂಬ ಶ್ರುತಿಯಲ್ಲಿ ಹೇಳಲ್ಪಟ್ಟ ಭೂತಪಾದತ್ವವನ್ನು ಸ್ವೀಕರಿಸಲು ಬರುತ್ತದೆ. ಹೀಗಿರುವಾಗ ನಿಮ್ಮ ಮತದಲ್ಲಿ ಆದಿಪದವು ವ್ಯರ್ಥವಲ್ಲವೇ? ಎಂಬ ಪ್ರಶ್ನೆಗೆ ''ಅಸ್ಮಾಕಂ ಪಕ್ಷೇ'' ಎಂಬುದರಿಂದ ಉತ್ತರಿಸುತ್ತಿದ್ದಾರೆ.

ಒಂದುವೇಳೆ ಭೂತಪಾದತ್ವವಷ್ಟೇ ವಿವಕ್ಷಿತವಾಗಿದ್ದಲ್ಲಿ ಆದಿಪದವು ವ್ಯರ್ಥವಾಗುತ್ತಿತ್ತು. ಆದರೆ ಹಾಗಿಲ್ಲ. ಭೂತಶಬ್ದದಿಂದ ವಿಶ್ವಪಾದತ್ವವು ಹೇಗೆ ವಿವಕ್ಷಿತವಾಗಿದೆಯೋ, ಅದರಂತೆ ಅಮೃತಶಬ್ದದಿಂದ ನಾರಾಯಣ, ವಾಸುದೇವ, ವೈಕುಂಠ ಎಂಬ ಸ್ವರೂಪಾಂಶವೆನಿಸಿದ ಪಾದಗಳು ವಿವಕ್ಷಿತವಾಗಿವೆ. ಈ ನಾಲ್ಕನ್ನೂ ಪಾದಗಳಿಂದ ವಿವಕ್ಷಿಸಿದಾಗ ಮಾತ್ರ ಚತುಷ್ಪದತ್ವವನ್ನು ಅರ್ಥಮಾಡಿಕೊಳ್ಳಬಹುದು. ಆದ್ದರಿಂದ ಇಲ್ಲಿ ಭೂತಾದಿಪಾದಶಬ್ದಕ್ಕೆ ಆತದ್ಗುಣಸಂವಿಜ್ಞಾನಬಹುವ್ರೀಹಿಯನ್ನು ಮಾಡಬೇಕು. 'ಭೂತಂ ಆದಿಃ ಯಸ್ಯ ತತ್' (ವಿಶ್ವವೇ ಆದಿಯಾಗಿ ಉಳ್ಳದ್ದು) ಎಂದರೆ ಭಗವಂತನ ರೂಪತ್ರಯಗಳು ಎಂದರ್ಥ. ಇಂತಹ ನಾಲ್ಕುವಿಧ ಪಾದಗಳನ್ನು ವ್ಯಪದೇಶ ಮಾಡಿದ್ದರಿಂದ ಎಂದು ಭೂತಾದಿಪಾದವ್ಯಪದೇಶಸೂತ್ರದ ಅರ್ಥ. ಆದ್ದರಿಂದ ಆದಿಪದವು ಸಾರ್ಥಕವಾಗಿದೆ.

**ಗುರುರಾಜೀಯಮ್ – ಭವನ್ಮತೇಪಿ ಷಾಡ್ವಿಧ್ಯಾನುಪಪತ್ತಿರಿತ್ಯತ ಆಹ – ಅಸ್ಮಾಕಮಿತಿ ॥**

## ಸಾರ

ನಮ್ಮ ಮತದಲ್ಲಿ 'ಸೈಷಾ ಚತುಷ್ಪದಾ ಷಡ್ವಿಧಾ' ಎಂಬ ಶ್ರುತಿ ಭಗವಂತನ ರೂಪಗಳನ್ನು ಹೇಳುತ್ತಿದೆ. ಸಕಲಜೀವರಾಶಿ ಭಗವಂತನ ಭಿನ್ನಾಂಶವೆಂದು 'ಪಾದೋಸ್ಯ ಸರ್ವಾ ಭೂತಾನಿ' ಎಂಬ ವಾಕ್ಯ ಹೇಳುತ್ತಿದೆ. ತ್ರಿಪಾದಸ್ಯಾಮೃತಂ ದಿವಿ' ಎಂಬ ವಾಕ್ಯ ನಾರಾಯಣ ವಾಸುದೇವ ವೈಕುಂಠ ಎಂಬ ಮೂರು ಸ್ವರೂಪಾಂಶಗಳನ್ನು ಹೇಳುತ್ತಿದೆ. ಮೊದಲನೆಯ ರೂಪ ಜಗತ್ತಿನಲ್ಲಿ ಉಳಿದ ಮೂರು ರೂಪಗಳು ಶ್ವೇತದ್ವೀಪ, ಅನಂತಾಸನ, ವೈಕುಂಠಗಳಲ್ಲಿ ಇರುತ್ತವೆ. ಒಟ್ಟು ಈ ನಾಲ್ಕು ರೂಪಗಳನ್ನು ಚತುಷ್ಪದಾ ಎಂಬ ಪದವು ಬಣ್ಣಿಸಿದೆ.

೧. ಗಾಯತ್ರಿಯಲ್ಲಿರುವ ಸ್ತ್ರೀರೂಪ; ೨. ಮತ್ಸ್ಯಾದಿರೂಪ; ೩. ವಾಕ್‌ನಲ್ಲಿರುವ ಹಯಗ್ರೀವಸ್ತ್ರೀರೂಪ; ೪. ಪೃಥಿವಿಯಲ್ಲಿರುವ ಸ್ತ್ರೀರೂಪ; ೫. ಜೀವರಲ್ಲಿರುವ ಶರೀರರೂಪ; ೬. ಹೃದಯದಲ್ಲಿರುವ ಹೃದಯರೂಪ. ಭಗವಂತನ ಈ ಆರುರೂಪಗಳನ್ನು ಷಡ್ವಿಧಾ ಎಂಬ ಪದವು ವರ್ಣಿಸಿದೆ.

---

## 'ಪಾದೋಽಸ್ಯ' ಶ್ರುತ್ಯರ್ಥ

### ತಾತ್ಪರ್ಯಚಂದ್ರಿಕಾ

**ನಚಾತ್ರ ಪಾದಮುದ್ದಿಶ್ಯ ವಿಶ್ವಭೂತವಿಧಿಃ, ಯೇನ ಪಾದೈಕತ್ವಮುದ್ದೇಶ್ಯವಿಶೇಷಣತ್ವಾತ್ ''ಗ್ರಹಂ ಸಮ್ಮಾರ್ಷ್ಟಿ'' ಇತ್ಯತ್ರ ಗ್ರಹಗತೈಕತ್ವವದವಿವಕ್ಷಿತಮಿತಿ ಚತುಷ್ಪದತ್ವಂ ನ ಸಿದ್ಧ್ಯೇತ್, ಕಿನ್ತು ವಿಶ್ವಭೂತೋದ್ದೇಶೇನ ಪಾದವಿಧಿಃ, ಪಾದಾನಾಮೇವ ಜಿಜ್ಞಾಸಿತತ್ವಾತ್ । ಅತ ಏವ ಟೀಕಾಯಾಂ ''ಸರ್ವಾಣಿ ಭೂತಾನ್ಯಸ್ಯೈಕಃ ಪಾದಃ'' ಇತಿ ಪಾದವಿಧಾನಂ ದರ್ಶಿತಮ್ । ತಥಾಚ ''ಪಶುನಾ ಯಜೇತ'' ಇತ್ಯತ್ರ ಪಶ್ವೇಕತ್ವವದ್ವಿಧೇಯಗತತ್ವಾತ್ ಪಾದೈಕತ್ವಂ ವಿವಕ್ಷಿತಮ್ ।**

ಶಂಕೆ - 'ಪಾದೋಸ್ಯ ಸರ್ವಾ ಭೂತಾನಿ' ಎಂಬಲ್ಲಿ ಪಾದವನ್ನು ಉದ್ದೇಶಿಸಿ ವಿಶ್ವಭೂತವನ್ನು (ಸಮಸ್ತಜೀವಪ್ರಪಂಚ) ವಿಧಿಸಲಾಗಿದೆ. ಆವಾಗ ವಿಶ್ವಭೂತಗಳನ್ನು ಪರಮಾತ್ಮನ ಏಕಪಾದವೆಂದು ಹೇಳಲಾಗದು.

ಉತ್ತರ - 'ಗ್ರಹಂ ಸಮ್ಮಾರ್ಷ್ಟಿ' ಎಂಬಲ್ಲಿ ಸಮ್ಮಾರ್ಜನವು ವಿಧೇಯ; ಗ್ರಹವು ಉದ್ದೇಶ್ಯವಾಗಿದೆ. ಗ್ರಹ ಎಂಬಲ್ಲಿರುವ ಏಕವಚನವು ಉದ್ದೇಶ್ಯಗತವಿಶೇಷಣವಾದ್ದರಿಂದ ಇದು ವಿವಕ್ಷಿತವಲ್ಲ. ಆದರಂತೆ ಪ್ರಕೃತದಲ್ಲಿ ಪಾದವನ್ನು ಉದ್ದೇಶಿಸಿ ಭೂತವನ್ನು ವಿಧಾನ ಮಾಡುವುದಾದರೆ ಪಾದಃ ಎಂಬಲ್ಲಿರುವ

ಉದ್ದೇಶ್ಯವಿಶೇಷಣವಾದ ಏಕವಚನವು ವಿವಕ್ಷಿತವಾಗದಿರಬೇಕಾದೀತು. ಆವಾಗ ವಿಶ್ವಭೂತಗಳು ಅನೇಕವಿರುವುದರಿಂದ ಪಾದಗಳು ಅನೇಕವೆಂದಾಗಿ ಒಂದು ಪಾದ ಎಂದು ಹೇಳಿದ್ದೇ ತಪ್ಪಾಗುತ್ತದೆ. ಆದ್ದರಿಂದ ಪಾದವನ್ನು ಉದ್ದೇಶವೆನ್ನದೆ ವಿಧೇಯವೆಂದು ಹೇಳಬೇಕು. ಆವಾಗ ಪಾದದಲ್ಲಿ ವಿಶೇಷಣವಾದ ಏಕವಚನವು ವಿಧೇಯಗತ ವಿಶೇಷಣವಾಗುತ್ತದೆ. ಉದ್ದೇಶ್ಯಗತವಿಶೇಷಣವು ವಿವಕ್ಷಿತವಾಗದಿದ್ದರೂ ವಿಧೇಯಗತವಿಶೇಷಣವು ವಿವಕ್ಷಿತವಾಗಿಹುದು. ಆವಾಗ ಎಲ್ಲಾ ಭೂತಗಳನ್ನು ಸೇರಿಸಿ ಒಂದು ಪಾದವೆಂದು ಹೇಳುವುದು ತಪ್ಪಾಗುವುದಿಲ್ಲ. ಆದ್ದರಿಂದಲೇ ಟೀಕೆಯಲ್ಲಿ 'सर्वाणि भूतानि अस्य एकः पादः' ಎಂದು ಪಾದವನ್ನೇ ವಿಧೇಯವೆಂದಿದ್ದಾರೆ. 'पशुना यजेत' ಎಂಬಲ್ಲಿ ಏಕವಚನವು ವಿಧೇಯಗತವಾಗಿದೆ. ಆದ್ದರಿಂದ ಏಕತ್ವವು ಪಶುವಿನ ಧರ್ಮವೆಂದಾಗಿ ಅದು ಹೇಗೆ ವಿವಕ್ಷಿತವಾಗುತ್ತದೋ ಅದರಂತೆ ಇಲ್ಲಿಯೂ ಪಾದೈಕತ್ವವು ವಿವಕ್ಷಿತವಾಗುತ್ತದೆ.

**प्रकाशः** – ननु मन्त्रे भूतानां बहुत्वेन पादबहुत्वापत्त्या भूतानामेकपादत्वं रूपत्रयस्य त्रिपादत्वमित्यस्यासिद्धिरित्यत आह – नचात्रेति ॥

**ग्रहं सम्मार्ष्टीत्यत्रेति** ॥ तृतीयेऽध्याये ''एकत्वयुक्तमेकस्य श्रुतिसंयोगात्'' इत्याद्यपादीयसप्तमाधिकरणे ''ग्रहं सम्मार्ष्टि'' इत्युदाहृत्य किमेकस्य सम्मार्गः किं वा सर्वेषामिति सन्देहे, उपादेयगताया इवोद्देश्यगताया अपि सङ्ख्यायाः श्रुतिबलेन विवक्षितत्वादेकस्यैवेति पूर्वपक्षयित्वा, किमेकत्वस्योद्देश्यत्वेन विवक्षोत विधेयत्वेन, आद्ये 'ग्रहं सम्मार्ष्टि' एकञ्च सम्मार्ष्टि'' इति प्रत्युद्देश्यं वाक्यपरिसमाप्तेर्वाक्यभेदात्, द्वितीयेऽपि सम्मार्गस्यापि विधेयत्वात्, ग्रहं सम्मृज्यात् स च एकः' इति वाक्यभेदात् । सम्मार्गक्रियाकर्मत्वस्यैकत्वस्य च प्रत्ययार्थतया युगपत्सम्बन्धेनोद्देश्यविशेषणत्वात्, शेषिविभक्तिनिर्दिष्टत्वेन विधेयसम्मार्गविशेषणत्वाभावेनैकत्वस्य विवक्षाऽयोगात् । ''ग्रहैर्यजेत'' इत्युक्तानां सर्वेषां सम्मार्ग इति सिद्धान्तितम् ।

तत्र यथा ग्रहैकत्वमविवक्षितं, न तथा प्रकृत इत्यर्थः ॥ **पादानामिति** ॥ ''**सैषा चतुष्पदा**'' इत्युक्त्वा के चत्वारः पादा इति जिज्ञासोत्पादात्, तन्निवृत्तये मन्त्रोदाहरणात्, ''ब्रह्मविदाप्नोति परं'' इत्यत्र किं तद्ब्रह्म कीदृशं च तद्वेदनं, का च तत्प्राप्तिरिति जिज्ञासानिवृत्त्यर्थं ''तदेषाभ्युक्ता'' इति मन्त्रोदाहरणवदिति भावः ॥

**पशुनेति** ॥ चतुर्थे ''तत्रैकत्वमयज्ञाङ्गमर्थस्य गुणभूतत्वात्'' इत्याद्यपादीयपञ्चमाधिकरणे ''पशुना यजेत'' इत्युदाहृत्य किमेकत्वमयज्ञाङ्गमविवक्षितं, किं वा

यज्ञाङ्गं विवक्षितमिति सन्दिह्य, समानपदश्रुत्या पश्वङ्गत्वावगमाद्वाक्यलभ्य-पदान्तरोपात्तयागाङ्गत्वायोगात्, अयज्ञाङ्गमेकत्वमविवक्षितमिति पूर्वपक्षयित्वा, एकप्रत्ययोपात्तेन प्रातिपदिकार्थादपि सन्निहितेन प्रधानभूतेन कारकेणावरुद्धमेकत्वं प्रातिपदिकार्थं पशुमनादृत्य क्रियाङ्गमवगम्यमानं वाक्यसमर्पितेन क्रियाविशेषेण सम्बद्धं पश्चादरुणैकहायनीन्यायेन पशुना विशेषणत्वेनार्थात्सम्बध्यते । तादर्थ्यं तु यज्ञं प्रत्येवेति विवक्षितमेकत्वमिति सिद्धान्तितम् ।

ವಿವರಣೆ - ಭೂತಗಳು ಅನಂತವಾಗಿರುವಾಗ ಪಾದಗಳು ಅನಂತವಾಗಬೇಕಲ್ಲವೇ? ಹೀಗಿರುವಾಗ ಭೂತವು ಏಕಪಾದವೆಂದು ಹೇಗೆ ಹೇಳಿದಿರಿ? ಮತ್ತು ಭಗವಂತನ ಮೂರು ರೂಪಗಳು ಭಗವಂತನ ಸ್ವರೂಪವಾಗಿರುವಾಗ ಪಾದಗಳೆಂದು ಹೇಗೆ ಹೇಳಿದಿರಿ? ಎಂಬ ಪ್ರಶ್ನೆಗೆ 'ನ ಚಾತ್ರ' ಎಂಬ ಗ್ರಂಥದಿಂದ ಉತ್ತರಿಸಿದ್ದಾರೆ.

'ಗ್ರಹಸಮ್ಮಾರ್ಜನಾಧಿಕರಣಮ್'
ಏಕತ್ವಯುಕ್ತಮೇಕಸ್ಯ ಶ್ರುತಿಸಂಯೋಗಾತ್ (೩/೧/೭)

ಜ್ಯೋತಿಷ್ಟೋಮಪ್ರಕರಣದಲ್ಲಿ ದಶಾಪವಿತ್ರೇಣ ಗ್ರಹಂ ಸಮ್ಮಾರ್ಷ್ಟಿ ಎಂಬ ವಾಕ್ಯವು ಕೇಳಿಸುತ್ತಿದೆ. ಒಂದು ಗ್ರಹವನ್ನು ಸಮ್ಮಾರ್ಜನ ಮಾಡಬೇಕೋ ಅಥವಾ ಎಲ್ಲಾ ಗ್ರಹಗಳನ್ನು ಸಮ್ಮಾರ್ಜನೆ ಮಾಡಬೇಕೋ? ಅಂದರೆ ಗ್ರಹಂ ಎಂಬಲ್ಲಿರುವ ಏಕ ವಚನಕ್ಕೆ ಏಕತ್ವವು ವಿವಕ್ಷಿತವೋ ಅಲ್ಲವೋ ಎಂದು ಸಂದೇಹ ಎಂದು ಸಂಶಯ.

ಪೂರ್ವಪಕ್ಷ - ಒಂದೇ ಗ್ರಹವನ್ನು ಸಮ್ಮಾರ್ಜನೆ ಮಾಡಬೇಕು. ವಿಧೇಯದಲ್ಲಿರುವ ಶಂಕೆಯು ವಿವಕ್ಷಿತವಾದಂತೆ ಉದ್ದೇಶ್ಯದಲ್ಲಿರುವ ಶಂಕೆಯೂ ಸಹ ವಿವಕ್ಷಿತವಾಗಬಹುದು. ಪ್ರಕೃತ ಗ್ರಹ ಎಂಬ ಉದ್ದೇಶ್ಯದಲ್ಲಿ ಏಕತ್ವಸಂಖ್ಯೆಯು ವಿವಕ್ಷಿತವಾದ್ದರಿಂದ ಒಂದೇ ಗ್ರಹವನ್ನು ಸಮ್ಮಾರ್ಜನೆ ಮಾಡಬೇಕು.

---

भाट्टसङ्ग्रहः –

**अथ सप्तमं ग्रहसम्मार्जनाधिकरणम् (सूत्राणि १३-१५)**
**एकत्वयुक्तमेकस्य श्रुतिसंयोगात् ॥ १३ ॥**
**(सर्वेषां वा लक्षणत्वादविशिष्टं हि लक्षणम् ॥ १४ ॥**
**चोदिते तु परार्थत्वाद्यथाश्रुति प्रतीयेत ॥ १५ ॥)**

अत्र पूर्वसिद्धान्तन्यायेन शङ्कनादापवादिकी **सङ्गतिः** । ज्योतिष्टोमे श्रूयते 'दशापवित्रेण ग्रहं सम्मार्ष्टि' इति । **दशापवित्रं** नाम कम्बळखण्डमित्येके । वासःखण्डमित्यपरे । तत्र ग्रहमित्यत्रैकवचनोक्तमेकत्वं विवक्षितं न वेति **सन्देहः** । पूर्वत्राऽरुण्यगुणेन परिच्छिन्नस्य द्रव्यस्य क्रयसाधनत्वमिव इहाप्येकत्वसङ्कचारूपगुणेन परिच्छिन्नस्य ग्रहस्य सम्मार्ग-कर्मत्वमवगम्यमानं न हातुं शक्यम् । **'तत्रैकत्वमयज्ञाङ्गमर्थस्य गुणभूतत्वात्'**

ಸಿದ್ಧಾಂತ - ಇದು ತಪ್ಪು. ಎಲ್ಲಾ ಗ್ರಹಗಳನ್ನು ಸಮ್ಮಾರ್ಜನೆ ಮಾಡಬೇಕೇ ಹೊರತು ಒಂದೇ ಗ್ರಹವನ್ನಲ್ಲ. ಏಕೆಂದರೆ ಏಕತ್ವಸಂಖ್ಯೆಯನ್ನು ಉದ್ದೇಶವೆಂದು ವಿವಕ್ಷಿಸುತ್ತೀರೋ ಅಥವಾ ವಿಧೇಯ-ವೆಂದೋ? ಉದ್ದೇಶವೆಂಬ ಪಕ್ಷದಲ್ಲಿ 'ಗ್ರಹಂ ಸಮ್ಮಾರ್ಷ್ಟಿ' 'ಏಕಂ ಚ ಸಮ್ಮಾರ್ಷ್ಟಿ' ಎಂದಂತಾಗುತ್ತದೆ. ಆಂದರೆ ಗ್ರಹಂ ಸಮ್ಮಾರ್ಷ್ಟಿ ಎಂಬುದೇ ಬೇರೆಯ ವಾಕ್ಯ. 'ಏಕಂ ಸಮ್ಮಾರ್ಷ್ಟಿ' ಎಂಬುದೇ ಬೇರೆ ವಾಕ್ಯ. ಉದ್ದೇಶ್ಯಗಳು ಅನೇಕವಾದಾಗ ವಾಕ್ಯಗಳು ಅನೇಕವಾಗುತ್ತವೆ. (ರಾಮಃ ಗುಣಪೂರ್ಣಃ ಕೃಷ್ಣಶ್ಚ ಎಂಬ ವಾಕ್ಯದಲ್ಲಿ ರಾಮ ಹಾಗೂ ಕೃಷ್ಣರೆಂಬ ಎರಡು ಉದ್ದೇಶ್ಯಗಳಿರುವುದರಿಂದ ರಾಮಃ ಗುಣಪೂರ್ಣಃ ಎಂಬುದೇ ಬೇರೆ ವಾಕ್ಯ, ಕೃಷ್ಣಶ್ಚ ಗುಣಪೂರ್ಣಃ ಎಂಬುದೇ ಬೇರೆವಾಕ್ಯ.)

ಇನ್ನು ಏಕತ್ವಸಂಖ್ಯೆಯು ವಿಧೇಯವೆಂಬ ಎರಡನೆಯ ಪಕ್ಷವನ್ನು ಹೇಳಬೇಕು. ಆವಾಗ ಗ್ರಹವನ್ನು ಉದ್ದೇಶಿಸಿ ಸಮ್ಮಾರ್ಜನವನ್ನು ವಿಧಾನ ಮಾಡಿದಂತಾಗುತ್ತದೆ. ಆ ಸಮ್ಮಾರ್ಜನವನ್ನು ಒಂದು ಗ್ರಹದಲ್ಲಷ್ಟೇ ಮಾಡಬೇಕೆಂದು ಏಕತ್ವವನ್ನು ವಿಧಿಸಿದರೆ ವಿಧೇಯಭೇದದಿಂದ ವಾಕ್ಯಭೇದದೋಷವು ಬಂದೇ ಬರುತ್ತದೆ. 'ಗ್ರಹಂ ಸಮ್ಮೃಜ್ಯಾತ್, ಸ ಚ ಏಕಃ' ಎಂದಂತಾಗುತ್ತದೆ. ಮತ್ತು 'ಗ್ರಹಂ' ಎಂಬುದು ದ್ವಿತೀಯಾವಿಭಕ್ತಿ ಏಕವಚನ. ಇಲ್ಲಿರುವ ಅಮ್ ಪ್ರತ್ಯಯಕ್ಕೆ ಎರಡು ಅರ್ಥ. (೧) ಕರ್ಮತ್ವ (೨) ಏಕತ್ವ ಎಂದು. ಈ ಕರ್ಮತ್ವ ಹಾಗೂ ಏಕತ್ವಗಳು ಒಂದೇ ಪ್ರತ್ಯಯದ ಅರ್ಥಗಳಾದ್ದರಿಂದ ಎರಡೂ ಸಹ ಉದ್ದೇಶವಾದ ಗ್ರಹದಲ್ಲಿ ಯುಗಪತ್ ಅನ್ವಯ ಹೊಂದುತ್ತವೆ. ಹೀಗಿರುವಾಗ ಏಕತ್ವವನ್ನು ಮಾತ್ರ ಉದ್ದೇಶ್ಯದಲ್ಲಿ ಅನ್ವಯವನ್ನು ಮಾಡದೆ ವಿಧೇಯದಲ್ಲಿ ಅನ್ವಯ ಮಾಡಲು ಸಾಧ್ಯವಿಲ್ಲ.

ಮತ್ತು ಮೀಮಾಂಸಕರು ಒಪ್ಪಿರುವಂತೆ ಗ್ರಹಂ ಎಂಬಲ್ಲಿರುವ ದ್ವಿತೀಯಾವಿಭಕ್ತಿಯೇ ಶೇಷಿತ್ವಕ್ಕೆ ಗಮಕವಾಗಿದೆ. ಆವಾಗ ಗ್ರಹವೇ ಶೇಷಿಯಾಗಿ ಸಮ್ಮಾರ್ಜನವು ಶೇಷವಾಗುತ್ತದೆ. ಶೇಷಿತ್ವಗಮಕವಾದ ದ್ವಿತೀಯಾವಿಭಕ್ತಿಯಿಂದ ನಿರ್ದಿಷ್ಟವಾದ ಏಕತ್ವಕ್ಕೆ ವಿಶೇಷಣತ್ವವು ಕೂಡುವುದಿಲ್ಲ. ಹೀಗೆ ಏಕತ್ವವು

---

(೪-೧-೧೧) ಇತಿ ಚತುರ್ಥಾऽಧ್ಯಪಾದೇ ಪಞ್ಚಮನಯೇ ವಕ್ಷ್ಯಮಾಣದಿಶಾ 'ಪಶುನಾ ಯಜೇತ' ಇತ್ಯತ್ರ ಉಪಾದೇಯಾಗತಪಶ್ವೇಕತ್ವಸ್ಯೇವೋದ್ದೇಶ್ಯಗತಗ್ರಹೈಕತ್ವಸ್ಯಾಪಿ ವಿವಕ್ಷಿತತ್ವಾದೇಕಸ್ಯೈವ ಸಮ್ಮಾರ್ಗಶಬ್ದಿತಂ ಶೋಧನಂ, ನಸರ್ವಗ್ರಹಾಣಾಮಿತಿ **ಪ್ರಾಪ್ತಮ್ । ತದುಕ್ತಂ ಸೂತ್ರೇ, ಏಕತ್ವಯುಕ್ತಮೇಕತ್ವಸಮಭಿವ್ಯಾಹೃತಂ ಕರ್ಮ ಏಕಸ್ಯೈವ ಸ್ಯಾತ್** । ಕುತಃ? **ಶ್ರುತಿಸಂಯೋಗಾತ್** ದ್ವಿತೀಯಾಶ್ರುತ್ಯಾ ಏಕೇನೈವ ಸಂಯೋಗಾದಿತಿ । ಗ್ರಹಸ್ಯ ಸಮ್ಮಾರ್ಗಂ ಪ್ರತಿ ಗುಣತ್ವೇ ಹಿ ಪ್ರತಿಗುಣಂ ಪ್ರಧಾನाऽವೃತ್ತೇಃ ಪ್ರಯೋಜನಾಭಾವಾನ್ನ ಸರ್ವತ್ರ ಸಮ್ಮಾರ್ಗಃ ಸ್ಯಾತ್ । ನ ಚೈವಮ್ । ದ್ವಿತೀಯಾಶ್ರುತ್ಯಾ ಗ್ರಹಸ್ಯ ಸಮ್ಮಾರ್ಗಂ ಪ್ರತಿ ಪ್ರಾಧಾನ್ಯಾವಗಮೇನ 'ಪ್ರತಿಪ್ರಧಾನಂ ಗುಣಸ್ಯाऽವೃತ್ತಿಃ' ಇತಿ ನ್ಯಾಯೇನ 'ಯಾವನ್ತೋ ಗ್ರಹಾಃ ಸೋಮೇ ತಾವತ್ಸು ಸಮ್ಮಾರ್ಗಃ' ಇತಿ ನಿಶ್ಚಯೇ ಸತಿ, ಗ್ರಹೇ ಇಯತ್ತಾಪರಿಚ್ಛೇದಕಸ್ಯಾನಾಕಾಙ್ಕಿತತ್ವಾತ್ತತ್ಪರಿಚ್ಛೇದಕೈಕತ್ವಸಙ್ಖ್ಯಾ ನ ವಿವಕ್ಷಿತಾ । ವಿವಕ್ಷಾಪಕ್ಷೇ ಚ 'ಗ್ರಹಂ ಸಮ್ಮೃಜ್ಯಾತ್, ಸ ಚೈಕः' ಇತಿ ವಾಕ್ಯಭೇದಾऽಪತ್ತೇಃ । ಪಶೋಸ್ತು ಯಾಗಂ ಪ್ರತಿ ಗುಣತ್ವಾದಸ್ತಿ ತತ್ರ 'ಕಿಯತಾ ಪಶುನಾ' ಇತಿ ಪರಿಚ್ಛೇದಕಾऽಕಾಙ್ಕೇತಿ ವೈಷಮ್ಯಾದೇಕತ್ವಸ್ಯ ತತ್ರ ವಿವಕ್ಷಾಯಾಮಪಿ ನಾತ್ರ ತಥೇತಿ 'ಸರ್ವಗ್ರಹೇಷು ಸಮ್ಮಾರ್ಗಃ' ಇತಿ **ಸಿದ್ಧಾನ್ತಃ । ಫಲನ್ತು** ಏಕತ್ರಾನೇಕತ್ರ ಸಮ್ಮಾರ್ಗಃ **ಪೂರ್ವೋತ್ತರಪಕ್ಷಯೋಃ** ಇತಿ ವ್ಯಕ್ತಮ್ ।

ಉದ್ದೇಶವಾದರೂ ವಾಕ್ಯಭೇದದೋಷ ಬರುತ್ತದೆ. ವಿಧೇಯವಾದರೂ ವಾಕ್ಯಭೇದದೋಷ ಬರುತ್ತದೆ. ಆದ್ದರಿಂದ ಏಕತ್ವವನ್ನು ವಿವಕ್ಷಿಸುವುದೇ ತಪ್ಪು. ಆವಾಗ ಯಾಗದಲ್ಲಿ ಎಲ್ಲಾ ಗ್ರಹಗಳಿಗೂ ಸಮ್ಮಾರ್ಜನ ಮಾಡಬೇಕೆಂದು ನಿರ್ಣಯವಾಗುತ್ತದೆ.

ಆದರಂತೆ ಪ್ರಕೃತ 'ಪಾದೋಸ್ಯ ಸರ್ವಾ ಭೂತಾನಿ' ಎಂಬಲ್ಲಿ ಪಾದವು ಉದ್ದೇಶ್ಯವಾದರೆ ಉದ್ದೇಶ್ಯ-ವಿಶೇಷಣವಾದ ಏಕತ್ವವು ಅವಿವಕ್ಷಿತವಾಗುತ್ತದೆ. ಹೊರತಾಗಿ 'ವಿಶ್ವಾ ಭೂತಾನಿ' ಎಂಬಲ್ಲಿರುವ ಬಹು-ವಚನವು ವಿವಕ್ಷಿತವಾಗಿ ಬಹುಪಾದತ್ವವು ಭೂತಗಳಿಗೆ ಬರುತ್ತದೆ. ಏಕಪಾದತ್ವವು ಬರುವುದಿಲ್ಲವೆಂದು ಆಕ್ಷೇಪ.

ಈ ಆಕ್ಷೇಪವು ಪರಿಹಾರವಾಗಬೇಕೆಂದರೆ ಪಾದವನ್ನು ಉದ್ದೇಶವೆನ್ನಬಾರದು. ಹೊರತಾಗಿ ವಿಶ್ವಭೂತವನ್ನು ಉದ್ದೇಶಿಸಿ ಪಾದವನ್ನು ವಿಧಿಸಬೇಕು. ಆವಾಗ ಪೂರ್ವಮೀಮಾಂಸೆಯ ದೃಷ್ಟಾಂತದಂತೆ ಏಕಪಾದತ್ವವನ್ನು ಹೇಳಲಾಗದೆಂದು ಆಕ್ಷೇಪಿಸಲು ಸಾಧ್ಯವಿಲ್ಲ. ಪಾದವನ್ನೇಕೆ ವಿಧಾನ ಮಾಡಬೇಕು? ಎಂಬ ಪ್ರಶ್ನೆ ಸಹಜ. ಆದರೆ ಸೈಷಾ ಚತುಷ್ಪದಾ ಎಂಬ ಶ್ರುತಿಯನ್ನು ನೋಡಿದಾಗ ಪಾದವಿಷಯಕ-ಜಿಜ್ಞಾಸೆಯು ಹುಟ್ಟುತ್ತದೆ.

ಉದಾಹರಣೆ -- 'ಬ್ರಹ್ಮವಿದಾಪ್ನೋತಿ ಪರಮ್' (ಬ್ರಹ್ಮನನ್ನು ತಿಳಿದವನು ಮೋಕ್ಷವನ್ನು ಹೊಂದು-ತ್ತಾನೆ) ಎಂಬ ವಾಕ್ಯವನ್ನು ಕೇಳಿದಾಗ 'ಕಿಂ ತದ್‌ಬ್ರಹ್ಮ?' (ಆ ಬ್ರಹ್ಮನು ಯಾರು?) 'ಕೀದೃಶಂ ಚ ತದ್ವೇದನಮ್' ಅವನನ್ನು ತಿಳಿಯುವ ಬಗೆ ಹೇಗೆ? 'ಕಾ ಚ ತತ್ಪ್ರಾಪ್ತಿಃ?'(ಮೋಕ್ಷ ಎಂದರೆ ಏನು?) ಇತ್ಯಾದಿ ಹಲವು ಜಿಜ್ಞಾಸೆಗಳು ಹುಟ್ಟುತ್ತವೆ. ಇದರ ಪರಿಹಾರಕ್ಕಾಗಿ 'ತದೇಷಾಭ್ಯುಕ್ತಾ' ಇತ್ಯಾದಿ ಮುಂದಿನ ಶ್ರುತಿಗಳು ಹೊರಟಿವೆ. ಇದರಂತೆ ಪ್ರಕೃತ 'ಸೈಷಾ ಚತುಷ್ಪದಾ' ಭಗವಂತನು ನಾಲ್ಕುರೂಪಗಳುಳ್ಳವನು ಎಂಬ ವಾಕ್ಯವನ್ನು ನೋಡಿದಾಗ ಪಾದವಿಷಯಕ ಜಿಜ್ಞಾಸೆಯೇ ಹುಟ್ಟುತ್ತದೆ ಹೊರತು ವಿಶ್ವಭೂತಗಳ ಜಿಜ್ಞಾಸೆಯು ಹುಟ್ಟುವುದಿಲ್ಲ. ಆದ್ದರಿಂದ ವಿಶ್ವಭೂತವು ಉದ್ದೇಶ್ಯ, ಪಾದವು ವಿಧೇಯವೆಂದು ಹೇಳಬೇಕು.

ಪಶ್ವೇಕತ್ವಾದೇರ್ವಿವಕ್ಷಾಧಿಕರಣಮ್
ತತ್ಪೈಕತ್ವಮಯಜ್ಞಾಂಗಮರ್ಥಸ್ಯ ಗುಣಭೂತತ್ವಾತ್ (೪/೧/೫)

'ಪಶುನಾ ಯಜೇತ' ಎಂಬ ಶ್ರುತಿಯಲ್ಲಿ ಪಶುನಾ ಎಂಬ ಪದವು ತೃತೀಯಾವಿಭಕ್ತಿ ಏಕವಚನ. ತೃತೀಯಾವಿಭಕ್ತಿಯಿಂದ ಪಶು ಯಜ್ಞಕ್ಕೆ ಶೇಷವೆಂದು ತಿಳಿಯುತ್ತದೆ.

ಭಾಟ್ಟಸಙ್ಗಹಃ –

**ತತ್ರೈಕತ್ವಮಯಜ್ಞಾಙ್ಗಮರ್ಥಸ್ಯ ಗುಣಭೂತತ್ವಾತ್ ॥ ೧೧ ॥**
**(ಏಕಶ್ರುತಿತ್ವಾಚ ॥ ೧೨ ॥ ಪ್ರತೀಯತ ಇತಿ ಚೇತ್ ॥ ೧೩ ॥ ನಾಶಬ್ದಂ ತತ್ಪ್ರಮಾಣತ್ವಾತ್ಪೂರ್ವವತ್**
**॥೧೪॥ ಶಬ್ದವತ್ತೂಪಲಭ್ಯತೇ, ತದಾಗಮೇ ಹಿ ತದ್ದೃಶ್ಯತೇ, ತಸ್ಯ ಜ್ಞಾನಂ ಹಿ ಯಥಾಽನ್ಯೇಷಾಮ್ ॥ ೧೫ ॥**
**ತದ್ವಚ್ಚ ಲಿಙ್ಗದರ್ಶನಮ್ ॥ ೧೬ ॥)**

ಆದರೆ ಏಕವಚನದಿಂದ ತಿಳಿಯುವ ಏಕತ್ವವು ಯಜ್ಞಕ್ಕೆ ಅಂಗವೆಂದು ವಿವಕ್ಷಿತವೋ ಅಲ್ಲವೋ? ಎಂದು ಸಂದೇಹ.

ಪೂರ್ವಪಕ್ಷ - 'ಪಶುನಾ' ಎಂಬ ಒಂದೇ ಪದದಿಂದ ಪಶು ಹಾಗೂ ಏಕತ್ವಗಳೆರಡೂ ಹೇಳಲ್ಪಟ್ಟವೆ. ಆವಾಗ ಸಮಾನಪದಶ್ರುತಿಯ ಬಲದಿಂದ ಏಕತ್ವವು ಪಶುವಿಗೆ ಅಂಗವಾಗುತ್ತದೆ ಹೊರತು ಯಜ್ಞಕ್ಕೆ ಅಂಗವಾಗುವುದಿಲ್ಲ. ಯಜ್ಞವು ಬೇರೆ ಪದದಿಂದ ಪ್ರತಿಪಾದ್ಯವಾದ್ದರಿಂದ ಅದರಲ್ಲಿ ಆನ್ವಯವನ್ನು ಹೊಂದುವುದಿಲ್ಲ. ಅಂದರೆ, ಯಜ್ಞದಲ್ಲಿ ಒಂದೇ ಪಶುವನ್ನು ಹೋಮಿಸಬೇಕೆಂದು ಅರ್ಥವಲ್ಲ. ಅನೇಕ ಪಶುಗಳನ್ನು ಹೋಮಿಸಬಹುದು. ವಸ್ತುತಃ ಪದಗಳ ಸಮಭಿವ್ಯಾಹಾರರೂಪವಾದ ವಾಕ್ಯದ ಬಲದಿಂದ ಪಶುವಿನಲ್ಲಿರುವ ಏಕತ್ವವು ಯಜ್ಞಕ್ಕೆ ಅಂಗವೆಂದು ತಿಳಿಯಬಹುದು. ಆದರೆ ಏಕವಾಕ್ಯಶ್ರುತಿಗಿಂತ ಏಕಪದಶ್ರುತಿಯು ಅಂತರಂಗವಾಗಿದೆ (ಬಲಿಷ್ಠವಾಗಿದೆ.). ಏಕಪದಶ್ರುತಿಯಂತೆ ಏಕತ್ವವು ಪಶುವಿನಲ್ಲೇ ಅನ್ವಿತವಾಗುತ್ತದೆ. ಆದ್ದರಿಂದ ಪಶುನಾ ಎಂಬಲ್ಲಿರುವ ಏಕತ್ವವು ಯಜ್ಞಾಂಗವೆಂದು ವಿವಕ್ಷಿತವಲ್ಲ.

ಸಿದ್ಧಾಂತ - ಏಕವಾಕ್ಯಶ್ರುತಿಗಿಂತ ಏಕಪದಶ್ರುತಿಯು ಬಲಿಷ್ಠವಾಗಿರಬಹುದು. ಆದರೆ ಏಕಪದ-ಶ್ರುತಿಗಿಂತಲೂ ಏಕಪ್ರತ್ಯಯಶ್ರುತಿಯು ಮತ್ತಷ್ಟು ಬಲಿಷ್ಠವಾಗಿದೆ. ಪಶುನಾ ಎಂಬಲ್ಲಿರುವ ಟಾಪ್‌ಪ್ರತ್ಯಯಕ್ಕೆ

**पूर्वन्यायेन शङ्कनात्सङ्गतिः ।** 'अग्नीषोमीयं पशुमालभेत' इति, तथा 'अनड्वाहौ युनक्ति' इति, तथा अश्वमेधे ''वसन्ताय कपिञ्जलानालभेत'' इत्यादौ विभक्त्यभिहितैकत्वद्वित्वादिसङ्ख्या विवक्षितोत नेति **सन्देहे, नेति प्राप्तम् ।** कुतः? यज्ञाङ्गत्वे हि विवक्षिता भवेत् । न ह्येषा सङ्ख्या यज्ञाङ्गम् । पशुमित्येकपदश्रुत्या 'पशुरेकः' इति पश्वङ्गत्वावगमात् । आलभेतेति पदान्तरोपात्तालम्भनशब्दित-यज्ञाङ्गत्वं पदान्तरसमभिव्याहाररूपवाक्यादवसेयम् । वाक्यञ्च श्रुतितो दुर्बलम् । अत उत्पत्ति-शिष्टगुणविरोधात् स्फ्यादीनामिवैकपदश्रुत्यवगतपश्वङ्गत्वविरोधेन क्रत्वनङ्गत्वात्, एकत्वादिसङ्ख्याया अविवक्षितत्वेऽपि क्रतोरवैगुण्यान्न विवक्षिता । तदाह **सूत्रे, तत्र** 'पशुना यजेत' इत्यादौ **एकत्वादिसङ्ख्या न यज्ञाङ्गम् । अर्थस्य** पशोर्**गुणभूतत्वात्** सङ्ख्याया इति । **सिद्धान्तस्तु,** पशुनेत्यत्र **नाशब्दरूपतृतीयाविभक्तिश्रुत्या** करण-कारकमेकत्वसङ्ख्या चोच्येते । तत्रैकत्वं प्रातिपदिकसमभि व्याहाररूपपदश्रुतितो बलवद्विभक्तिश्रुत्यवगतसन्निहितकारकेणावरुद्धं सत् कारकेण सह शीघ्रमालम्भनरूपक्रियया पदान्तरोपात्तयाऽप्यङ्गतयाऽन्वेतीत्येकत्वमपि यज्ञाङ्गं सत् अमूर्ततया न साक्षात्क्रिया-निष्पादकमित्यारुण्यादिवत्पशुरूपद्रव्यपरिच्छेदद्वारा तन्निष्पादकं स्यादिति यज्ञाङ्गतया विवक्षितैव सङ्ख्या । अन्यथा क्रतुवैगुण्यापत्तेः । एवं अनड्वाहावित्यादावपि द्वित्व-बहुत्वयोर्विवक्षा ध्येया । **फलन्तु,** पशुनेत्यत्रैकत्वस्याविवक्षायामप्येकस्यैव लाघवात् प्रयोगसिद्धया तत्र फलभेदाभावेऽपि द्वित्वादिश्रवणस्थले द्वयोर्बहूनां वाऽनुष्ठानसिद्धिरिति ज्ञेयम् ।

ಏಕತ್ವ, ಕರಣಕಾರಕತ್ವ ಎಂದು ಎರಡರ್ಥ. ಇವೆರಡರಲ್ಲಿ ಏಕತ್ವವು ಪ್ರಾತಿಪದಿಕಾರ್ಥವಾದ ಪಶುವಿನ ಜೊತೆ ಅನ್ವಯ ಹೊಂದುವ ಮೊದಲೇ ಕರಣತ್ವದ ಜೊತೆಗೆ ಅನ್ವಿತವಾಗಿದೆ. ಏಕೆಂದರೆ, ಕರಣತ್ವವು ಪ್ರತ್ಯಯದ ಅರ್ಥವೇ ಆಗಿರುವುದರಿಂದ. ಆದ್ದರಿಂದ ಏಕತ್ವವು ಪಶುವಿನಲ್ಲಿ ಅನ್ವಿತವಾಗುವುದಿಲ್ಲವೆನ್ನಲು ಮೂರು ಕಾರಣವಿದೆ.

(೧) ಒಂದೇ ಪ್ರತ್ಯಯದಿಂದ ತಿಳಿಯುವ ಕರಣತ್ವದಲ್ಲಿಯೇ ಅನ್ವಯ ಹೊಂದುತ್ತದೆ.

(೨) ಪ್ರಾತಿಪದಿಕಾರ್ಥಕ್ಕಿಂತ ಕರಣತ್ವವು ಹತ್ತಿರವಿದೆ.

(೩) ಪ್ರಾತಿಪದಿಕಕ್ಕಿಂತ ಪ್ರಧಾನವಾದ ಕಾರಕದಲ್ಲಿ ಸಂಬಂಧವನ್ನು ಹೊಂದಿದೆ.

ಈ ಮೂರು ಕಾರಣಗಳಿಂದ ಪ್ರಾತಿಪದಿಕಾರ್ಥವೆನಿಸಿದ ಪಶುವನ್ನು ತಿರಸ್ಕರಿಸಿ ಕರಣತ್ವದಲ್ಲಿಯೇ ಏಕತ್ವವು ಅನ್ವಯ ಹೊಂದುತ್ತದೆ. ಕರಣ ಎಂದರೆ ಕ್ರಿಯಾ ಇರಲೇ ಬೇಕು. ಆ ಕ್ರಿಯೆಯು ಯಾವುದೆಂದು ತಿಳಿಸಲು 'ಯಜೇತ' ಎಂಬ ಮುಂದಿನ ಪದವಿದೆ. ಆದ್ದರಿಂದ ಏಕತ್ವವು ಕರಣತ್ವದ ಜೊತೆಗೆ ಅನ್ವಯ ಹೊಂದಿ ಕ್ರಿಯಾಂಗವಾಗುತ್ತದೆ.

ಉದಾಹರಣೆ -- 'ಆರುಣಯಾ ಏಕಹಾಯನ್ಯಾ ಪಿಂಗಾಕ್ಷ್ಯಾ ಗವಾ ಸೋಮಂ ಕ್ರೀಣಾತಿ' ಎಂಬ ವಾಕ್ಯದಲ್ಲಿ ಮೊದಲು 'ಗವಾ ಕ್ರೀಣಾತಿ' ಎಂದು ಸೋಮಕ್ರೀಣಕ್ಕೆ ಹಸು ಅಂಗವೆಂದು ತಿಳಿಯುತ್ತದೆ. ಅನಂತರ ಏಕಹಾಯನತ್ವಾದಿಗಳು ಕ್ರಮವಾಗಿ ಗೋವಿನಲ್ಲಿ ಅನ್ವಯ ಹೊಂದುತ್ತವೆ. ಆದರಂತೆ ಪ್ರಕೃತ 'ಪಶುನಾ ಯಜೇತ' ಎಂಬಲ್ಲಿ ಏಕತ್ವವು ಮೊದಲು ಕರಣದ ಜೊತೆಗೆ ಅನ್ವಯ ಹೊಂದಿ ಕ್ರಿಯಾಂಗವೆನಿಸುತ್ತದೆ. ಅನಂತರ ಯಾಗಕ್ರಿಯಾದಲ್ಲಿ ಅನ್ವಿತವಾಗುತ್ತದೆ. ಅನಂತರ ಪಶುವಿನ ಜೊತೆ ಅನ್ವಯ ಹೊಂದುತ್ತದೆ. ಆದ್ದರಿಂದ ಪಶುನಾ ಎಂಬಲ್ಲಿರುವ ಏಕತ್ವವು ಯಜ್ಞಾಂಗವೆಂದು ವಿವಕ್ಷಿತವಾಗಿದೆ. ಪಶುವಿಗೆ ಅಂಗವಾಗಿದ್ದರೆ ಅನೇಕಪಶುಗಳನ್ನು ಹೋಮಿಸಬಹುದಿತ್ತು. ಯಜ್ಞಕ್ಕೆ ಅಂಗವಾಗಿರುವುದರಿಂದ ಒಂದೇ ಪಶುವನ್ನು ಹೋಮಿಸಬೇಕು ಇಷ್ಟು ಸಿದ್ಧಾಂತ.

ಇಲ್ಲಿ ಹೇಗೆ ಪಶು ವಿಧೇಯವಾದ್ದರಿಂದ ವಿಧೇಯಗತಏಕತ್ವವು ವಿವಕ್ಷಿತವಾಗಿದೆಯೋ ಅದರಂತೆ ಪ್ರಕೃತ ಪಾದವು ವಿಧೇಯವಾದ್ದರಿಂದ ಇಲ್ಲಿರುವ ಏಕತ್ವವು ವಿವಕ್ಷಿತವಾಗುತ್ತದೆ. ಆದ್ದರಿಂದ ಉದ್ದೇಶದಲ್ಲಿರುವ ಏಕತ್ವವು ಗ್ರಹಸಮ್ಮಾರ್ಜನಾಧಿಕರಣದಂತೆ ವಿವಕ್ಷಿತವಾಗುವುದಿಲ್ಲ. ಆದರೆ ವಿಧೇಯದಲ್ಲಿರುವ ಏಕತ್ವವು ಪಶ್ವೇಕತ್ವಾದೇರ್ವಿವಕ್ಷಾಧಿಕರಣದಂತೆ ವಿವಕ್ಷಿತವಾಗಬಹುದು.

**ಗುರುರಾಜೀಯಮ್** – ತದ್ದೇಶ್ಯವಿಶೇಷಣತ್ವಾದಿತಿ ॥ ನನು ನೋದ್ದೇಶ್ಯವಿಶೇಷಣತ್ವಮವಿವಕ್ಷಾಯಾಂ ನಿಮಿತ್ತಂ ಅಗ್ನೀನಾದಧೀತೇತ್ಯಾದೌ ಬಹುತ್ವಸ್ಯೋದ್ದೇಶ್ಯವಿಶೇಷಣತ್ವೇಪಿ ವಿವಕ್ಷಾದರ್ಶನಾದಿತಿ ಚೇನ್ನ । ನಿರ್ಜ್ಞಾತವಿಶೇಷಣತ್ವಾದಿತ್ಯತ್ರ ತಾತ್ಪರ್ಯಾತ್ । ತದರ್ಥಸ್ತು ನಿರ್ಜ್ಞಾತಸ್ಯ ವಿಶೇಷಣತ್ವಮಿತಿ । ತಥಾಚ ಬಹುತ್ವೇನ ನಿಶ್ಚಿತಸ್ಯ ಗ್ರಹಸ್ಯ ವಿಶೇಷಣಮೇಕತ್ವಂ ನ ವಿವಕ್ಷಿತಮಿತಿ ಭಾವಃ ॥ **ಪಾದಾನಾಮೇವ ಜಿಜ್ಞಾಸಿತತ್ವಾದಿತಿ**॥ ವಿಶೇಷಣಜಿಜ್ಞಾಸಾಯಾ ಏವ

तद्विवक्षाहेतुत्वात्तस्याश्च तन्निश्चयतद्विपरीतनिश्चयान्यतरेण निरासे विशेषणविवक्षा नास्तीत्याशयः ।

## ಸಾರ

'ಪಾದೋಸ್ಯ' ಎಂಬ ಮಂತ್ರವಾಕ್ಯದಲ್ಲಿ ಎಲ್ಲ ಪಾದಗಳನ್ನು ಏಕಪಾದ ಎನ್ನಲಾಗಿದೆ. ಇಲ್ಲಿ ಭೂತಗಳು ಅನಂತವಾಗಿರುವುದರಿಂದ ಪಾದಗಳು ಅನಂತವಾಗಬೇಕಲ್ಲವೇ? ಎಂಬ ಪ್ರಶ್ನೆ ಸಹಜ. ಆದರೆ ಪಾದವನ್ನು ಉದ್ದೇಶಿಸಿ ವಿಶ್ವಭೂತವನ್ನು ವಿಧಾನ ಮಾಡುತ್ತಿಲ್ಲ. ಹಾಗೆ ಮಾಡಿದ್ದಲ್ಲಿ ಉದ್ದೇಶವಿಶೇಷಣವಾದ ಏಕತ್ವಕ್ಕೆ ಉದ್ದೇಶದಲ್ಲಿ ಅನ್ವಯ ಒಪ್ಪದ ಕಾರಣ ಅನೇಕ ಪಾದಗಳಾಗುತ್ತವೆಂದು ಆಕ್ಷೇಪಿಸಬಹುದಿತ್ತು. ಹೊರತಾಗಿ ವಿಶ್ವಭೂತಗಳನ್ನು ಉದ್ದೇಶಿಸಿ ಪಾದವನ್ನು ವಿಧಿಸಲಾಗಿದೆ. ವಿಧೇಯವಿಶೇಷಣವಾದ ಏಕತ್ವಕ್ಕೆ ವಿಧೇಯದಲ್ಲಿ ಅನ್ವಯವನ್ನು ಎಲ್ಲರೂ ಒಪ್ಪಿದ್ದಾರೆ. ಆದ್ದರಿಂದ ಎಲ್ಲ ಭೂತಗಳು ಸೇರಿ ಒಂದೇ ಪಾದ ಎನಿಸುತ್ತವೆ.

---

### ಪೂರ್ವಮೀಮಾಂಸೆಯ ದೃಷ್ಟಾಂತ

**ತಾತ್ಪರ್ಯಚಂದ್ರಿಕಾ**

**यथा च ''पौर्णमास्यां पौर्णमास्या यजेत'' इत्यादौ सप्तम्यन्तः पौर्णमास्यादिशब्दः काले मुख्यः, तृतीयान्तस्तु तत्सम्बन्धिनि कर्मण्यमुख्यः, तथा ''त्रिपात्'' इत्यत्र पादशब्दः स्वरूपांशे मुख्यः, ''पादोऽस्य'' इत्यत्र भिन्नांशे त्वमुख्य इति न कश्चिद्दोषः ।**

ಅನುವಾದ - 'ತ್ರಿಪಾದಸ್ಯಾಮೃತಂ ದಿವಿ' ಎಂಬಲ್ಲಿ ಸ್ವರೂಪಾಂಶವು ಹೇಳಲ್ಪಟ್ಟದೆ. ಪಾದೋಸ್ಯ ಎಂಬಲ್ಲಿ ಪಾದಶಬ್ದವು ಭಿನ್ನಾಂಶವನ್ನು ಹೇಳುತ್ತಿದೆ. ಭಿನ್ನಾಂಶವಾಚಕವಾದ ಈ ಪಾದಶಬ್ದವು ಅಮುಖ್ಯವಾಗಿದೆ. ಸ್ವರೂಪಾಂಶದಲ್ಲಿ ಹೇಳಲ್ಪಟ್ಟ ಪಾದಶಬ್ದವು ಮುಖ್ಯವಾಗಿದೆ. ಉದಾಹರಣೆ : - 'ಪೌರ್ಣಮಾಸ್ಯಾಂ ಪೌರ್ಣಮಾಸ್ಯಾ ಯಜೇತ' ಎಂಬಲ್ಲಿ ಸಪ್ತಮೀ ವಿಭಕ್ಯಂತವಾದ ಪೌರ್ಣಮಾಸ್ಯಾಂ ಎಂಬ ಶಬ್ದವು ಹುಣ್ಣಿಮೆ ಎಂಬ ಕಾಲದಲ್ಲಿ ಮುಖ್ಯವಾಗಿದೆ. 'ಪೌರ್ಣಮಾಸ್ಯಾ' ಎಂಬ ತೃತೀಯಾಂತಶಬ್ದವು ಹುಣ್ಣಿಮೆ ಎಂಬ ಕಾಲಕ್ಕೆ ಸಂಬಂಧಿಸಿದ ಕರ್ಮದಲ್ಲಿ ಅಮುಖ್ಯವಾಗಿದೆ. ಆದರಂತೆ 'ತ್ರಿಪಾತ್' ಎಂಬಲ್ಲಿರುವ ಪಾದಶಬ್ದವು ಸ್ವರೂಪಾಂಶದಲ್ಲಿ ಮುಖ್ಯವಾಗಿದೆ. 'ಪಾದೋऽಸ್ಯ' ಎಂಬಲ್ಲಿರುವ ಪಾದಶಬ್ದವು ಭಿನ್ನಾಂಶದಲ್ಲಿ ಅಮುಖ್ಯವಾಗಿದೆ ಎಂದು ಹೇಳಿದಾಗ ಯಾವುದೇ ದೋಷವಿಲ್ಲ.

**ಪ್ರಕಾಶಃ** – ಅತ್ರ ಯಥಾಪಶೋರ್ವಿಧೇಯತ್ವೇನ ತದ್ಗತಮೇಕತ್ವಂ ವಿವಕ್ಷಿತಂ, ತಥಾ ಪಾದೈಕತ್ವಮಪೀತ್ಯರ್ಥಃ ।

ನನ್ವಥಾಪಿ ಭೂತಭಿನ್ನೇ ವಿಷ್ಣೌ ಭೂತಶಬ್ದಿತವಿಶ್ವಾತ್ಮಕತ್ವಾಯೋಗೇನ ಭೂತಪಾದತ್ವಾಯೋಗಃ । ನಚ ವಾಚ್ಯಂ 'ಚೈತ್ರಸ್ಯ ಚತುರ್ಭಾಗಬಲೋ ಮೈತ್ರಃ' ಇತಿ ವತ್ ಭಿನ್ನಮೇವ ವಿಶ್ವಂ ತತ್ಪಾದಪರಿಮಿತ-ಸಾಮರ್ಥ್ಯಾಶಯೇನ ಪಾದತಯೋಚ್ಯತೇ, ನ ತು ಮುಖ್ಯಸ್ವರೂಪಾಭಿಪ್ರಾಯೇಣೇತಿ । ಸೂತ್ರೇ ಸಕೃತ್ ಶ್ರುತಸ್ಯ ಶ್ರುತೌ ಚೈಕತ್ರ ಶ್ರುತಸ್ಯ ಪಾದಶಬ್ದಸ್ಯ ಭೂತೇಷ್ವಮುಖ್ಯತಾ, ಅಮೃತಾಖ್ಯಸ್ವಸ್ವರೂಪತ್ರಯೇ ಚ ಮುಖ್ಯತೇತ್ಯಸ್ಯಾದೃಷ್ಟಚರತ್ವಾದಿತ್ಯತ ಆಹ – **ಯಥಾಚೇತಿ** ॥

ಏಕಾದಶೇ ''**ಇಷ್ಟಿರಾಜಸೂಯಚಾತುರ್ಮಾಸ್ಯೇಷ್ವೈಕಕರ್ಮ್ಯಾದಜ್ಞಾನಾಂ ತನ್ತ್ರಭಾವಃ ಸ್ಯಾತ್**'' ಇತಿ ದ್ವಿತೀಯಪಾದೀಯ-ದ್ವಿತೀಯಾಧಿಕರಣೇ ದರ್ಶಪೂರ್ಣಮಾಸಯೋರ್ವಿಭಜ್ಯ ಪರ್ವದ್ವಯೇ ಪ್ರಯುಜ್ಯಮಾನಯೋಃ ಕಿಮಜ್ಞಾನಿ ತನ್ತ್ರಮುತ ಆವರ್ತೇರನ್ನಿತಿ ಸನ್ದಿಹ್ಯ ಏಕಫಲತ್ವಾತ್ ಷಣ್ಣಾಮಪಿ ಯಾಗಾನಾಂ ಏಕೋಪಕ್ರಮಾವಸಾನತ್ವಾವಗಮಾತ್ ಸಕೃದನುಷ್ಠಿತಾನ್ಯಜ್ಞಾನಿ ಸರ್ವೇಷಾಮುಪಕುರ್ವನ್ತೀತಿ ಪೂರ್ವಪಕ್ಷ-ಯಿತ್ವಾ, ಷಣ್ಣಾಮೇಕಫಲತ್ವೇನ ಪ್ರಯೋಗೈಕ್ಯಾವಗಮೇऽಪಿ, ವಾಚನಿಕಕಾಲಭೇದೇನ ಪ್ರಯೋಗಭೇದೋ ಭವತಿ । ''**ಪೌರ್ಣಮಾಸ್ಯಾಂ ಪೌರ್ಣಮಾಸ್ಯಾ ಯಜೇತ**'' ''**ಅಮಾವಾಸ್ಯಾಯಾಮಮಾವಾಸ್ಯಯಾ ಯಜೇತ**'' ಇತಿ ವಚನಾಭ್ಯಾಂ ಹಿ ಪೌರ್ಣಮಾಸ್ಯಮಾವಾಸ್ಯಾಕರಣಕಃ ಫಲಾರ್ಥೋ ವ್ಯಾಪಾರಃ ಪ್ರತ್ಯಯವಾಚ್ಯಃ । ತದಙ್ಗತ್ವೇನ ಪೌರ್ಣಮಾಸ್ಯಮಾವಾಸ್ಯಾಕಾಲೌ ವಿಧೀಯೇತೇ । ತೇನಾಙ್ಗಾನಾಮಪಿ ತತ್ರ ತತ್ಕರಣ-ಫಲಕ್ರಿಯಾನ್ತರ್ಗತಾನಾಂ ತತ್ಕಾಲತಾ ವಿಹಿತಾ ಭವತಿ । ಅತಃ ಪ್ರತಿಕ್ರಮಮಙ್ಗಾನ್ಯಾವರ್ತೇರನ್ನಿತಿ ಸಿದ್ಧಾನ್ತಿತಮ್ ।

ಅತ್ರತ್ಯನ್ಯಾಯೇನ ಯಥಾ ಸಪ್ತಮ್ಯನ್ತಃ ಪೌರ್ಣಮಾಸ್ಯಾದಿಶಬ್ದಃ ಕಾಲೇ ಮುಖ್ಯಃ, ತೃತೀಯಾನ್ತಸ್ತು ತತ್ಸಮ್ಬನ್ಧಿನಿ ಗೌಣಃ, ತಥಾ ಪ್ರಕೃತೇऽಪೀತ್ಯರ್ಥಃ । ಏವಂ ''ಪ್ರಥಮಯೋಃ'' ಇತ್ಯತ್ರ ಪ್ರಥಮಾ-ಶಬ್ದೇನ ಪ್ರಥಮಾದ್ವಿತೀಯಯೋರಿವ ಸೂತ್ರೇ ಪಾದಶಬ್ದೇನ ಮುಖ್ಯಾಮುಖ್ಯಯೋರ್ಗ್ರಹ ಇತಿ ಜ್ಞೇಯಮ್ ॥ ಏವಮಾದ್ಯತೃತೀಯಸೂತ್ರಾರ್ಥೌ ಮತದ್ವಯಾಭಿಮತೌ ದೂಷಿತೌ ।

ಯತ್ತು ''**ಚೇತೋऽರ್ಪಣನಿಗದಾತ್**'' ಇತಿ ದ್ವಿತೀಯಸ್ಯ ಪರಕೀಯಂ ವ್ಯಾಖ್ಯಾನಂ – ಗಾಯತ್ರ್ಯಧಿಷ್ಠಾನೇ ಬ್ರಹ್ಮಣಿ ಛನ್ದೋದ್ವಾರಾ ಚಿತ್ತಸಮಾಧಾನಾಯ ''**ಗಾಯತ್ರೀ ವಾ ಇದಂ ಸರ್ವಂ**'' ಇತಿ ಬ್ರಾಹ್ಮಣವಾಕ್ಯೇನ ಸರ್ವಾತ್ಮಕತ್ವಂ ನಿಗದ್ಯತ ಇತಿ, ತತ್ತು ತತ್ರ ತತ್ರ ಬ್ರಹ್ಮಣ ಆರೋಪಾ-ಧಿಷ್ಠಾನತ್ವಾದಿನಿರಾಸನ್ಯಾಯೇನ ನಿರಸ್ತಮ್ ।

ವಿವರಣೆ - ಶಂಕೆ - ವಿಷ್ಣುವು ಸಕಲಭೂತಗಳಿಗಿಂತ ಭಿನ್ನನಾಗಿದ್ದಾನೆ. ಆದ್ದರಿಂದ ಪಾದೋಸ್ಯ ಎಂಬ ಶ್ರುತಿಯು ಸಕಲಭೂತಸ್ವರೂಪವೆಂಬ ಭೂತಪಾದತ್ವವನ್ನು ವಿಷ್ಣುವಿನಲ್ಲಿ ಹೇಗೆ ತಾನೆ ಹೇಳುತ್ತದೆ? ನೀವು ಹೀಗೆ ಇಲ್ಲಿ ಉತ್ತರಿಸಬಹುದು - 'ಚೈತ್ರಸ್ಯ ಚತುರ್ಭಾಗಬಲಃ ಮೈತ್ರಃ' (ಚೈತ್ರನ ನಾಲ್ಕನೆಯ ಒಂದಂಶದಷ್ಟೇ ಶಕ್ತಿಯು ಮೈತ್ರನಿಗಿದೆ) ಎಂಬ ಪ್ರಯೋಗದಲ್ಲಿ ಮೈತ್ರನು ಚೈತ್ರನಿಗಿಂತ ಭಿನ್ನನೇ ಆಗಿದ್ದಾನೆ. ಆದರೂ ಚೈತ್ರನ ಒಂದಂಶನಾಗಿದ್ದಾನೆ ಎಂಬ ಪ್ರಯೋಗಿಸುವುದು ಕಂಡಿದೆ. ಆದರಂತೆ ಸಕಲಭೂತಗಳು ವಿಷ್ಣುವಿಗಿಂತ ಭಿನ್ನವಾಗಿದ್ದರೂ ಭಗವಂತನ ಸಾಮರ್ಥ್ಯದ ಮುಂದೆ ಏಕದೇಶವಾದ್ದರಿಂದ ಪಾದಶಬ್ದವನ್ನು ಪ್ರಯೋಗಿಸಬಹುದು. ಹೊರತು ಸಕಲಭೂತಗಳು ಭಗವದಾತ್ಮಕ ಎಂಬ ಅಭಿಪ್ರಾಯದಿಂದಲ್ಲ. ಎಂದು. ಇದು ಸರಿಯಲ್ಲ. ಸೂತ್ರದಲ್ಲಿ ಹಾಗೂ ಶ್ರುತಿಯಲ್ಲಿ ಪಾದಶಬ್ದವು ಒಮ್ಮೆ ಮಾತ್ರ ಕೇಳಿಸುತ್ತಿದೆ. ಒಂದೇ ಬಾರಿ ಕೇಳಿಸುತ್ತಿರುವ ಪಾದಶಬ್ದಕ್ಕೆ ಸಕಲಭೂತಗಳಲ್ಲಿ ಅಮುಖ್ಯಪ್ರಯೋಗವೆಂದು, ಅಮೃತ-ಮಯರೂಪಗಳಲ್ಲಿ ಮುಖ್ಯಪ್ರಯೋಗವೆಂದು ಹೇಳಲು ಸಾಧ್ಯವಿಲ್ಲ. ಒಂದು ಬಾರಿ ಶ್ರುತವಾದ ಶಬ್ದಕ್ಕೆ ಒಂದರ್ಥದಲ್ಲಿ ಮುಖ್ಯಪ್ರಯೋಗವೆಂದು ಮತ್ತೊಂದರ್ಥದಲ್ಲಿ ಅಮುಖ್ಯಪ್ರಯೋಗವೆಂದು ಲೋಕದಲ್ಲಿ ಎಲ್ಲಿಯೂ ಕಂಡಿಲ್ಲ. ಹೀಗಿರುವಾಗ ಭಗವಂತನ ನಾಲ್ಕುವಿಧರೂಪಪರವಾಗಿ ಮಂತ್ರವನ್ನು ಹೇಗೆ ವ್ಯಾಖ್ಯಾನಿಸುತ್ತೀರಿ?

ಸಮಾಧಾನ - ನೀವು ಹೇಳಿದಂತೆ ನಿಯಮವಿಲ್ಲ. ಪೂರ್ವಮೀಮಾಂಸೆಯಲ್ಲಿ 'ಪೌರ್ಣಮಾಸ್ಯಾ' ಎಂಬ ಒಂದೇ ಶಬ್ದಕ್ಕೆ ಕಾಲ ಎಂಬರ್ಥದಲ್ಲಿ ಮುಖ್ಯಪ್ರಯೋಗವು ಕರ್ಮ ಎಂಬರ್ಥದಲ್ಲಿ ಅಮುಖ್ಯಪ್ರಯೋಗವು ಕಂಡಿದೆ.

## ಪೂರ್ವಮೀಮಾಂಸಾಧಿಕರಣ
## ದರ್ಶಪೂರ್ಣಮಾಸೇಷ್ಟಿಪ್ರಭೃತಿಷು ಸಂಘಭೇದೇನ ಅಂಗಾನಾಂ ಭೇದೇನ
## ಅನುಷ್ಠಾನಾಧಿಕರಣಮ್ --

ಇಷ್ಟಿರಾಜಸೂಯಚಾತುರ್ಮಾಸ್ಯೇಷ್ವೈಕಕರ್ಮ್ಯಾದಂಗಾನಾಂ ತಂತ್ರಭಾವಃ ಸ್ಯಾತ್ ।
(೧೧/೨/೨)

ಹುಣ್ಣಿಮೆ ಹಾಗೂ ಅಮಾವಾಸ್ಯೆಗಳಲ್ಲಿ ಮೂರು ಮೂರು ಯಾಗಗಳನ್ನು ಅನುಷ್ಠಾನ ಮಾಡಬೇಕು. ಒಟ್ಟು ಆರು ಯಾಗಗಳನ್ನು ಎರಡು ಪರ್ವಗಳಲ್ಲಿ ಸಂಪೂರ್ಣಗೊಳಿಸಿದಾಗ ದರ್ಶಪೂರ್ಣಮಾಸಯಾಗವು ಪರಿಪೂರ್ಣವಾಗುತ್ತದೆ. ಈ ದರ್ಶಪೂರ್ಣಮಾಸ ಯಾಗದಲ್ಲಿ ಪ್ರಯಾಜ್ಯಾದಿ ಅನೇಕ ಅಂಗಯಾಗಗಳನ್ನು ವಿಧಿಸಿದ್ದಾರೆ. ಈ ಅಂಗಯಾಗಗಳನ್ನು ಒಂದು ಪರ್ವದಲ್ಲಿ ಆಚರಿಸಿದರೆ ಸಾಕೋ ಆಥವಾ ಎರಡೂ ಪರ್ವಗಳಲ್ಲಿ ಪ್ರತ್ಯೇಕವಾಗಿ ಆಚರಿಸಬೇಕೋ? ಎಂದು ಸಂದೇಹ.

ಪೂರ್ವಪಕ್ಷ - ಆರೂ ಯಾಗಗಳನ್ನು ಒಂದೇ ಫಲಕ್ಕಾಗಿ ವಿಧಾನ ಮಾಡಲಾಗಿದೆ. ಆದ್ದರಿಂದ ಆರೂ ಯಾಗಗಳ ಉಪಕ್ರಮ ಹಾಗೂ ಉಪಸಂಹಾರಗಳು ಒಂದೇ ಹೊರತು ಬೇರೆಯಲ್ಲ. ಆದ್ದರಿಂದ ಪ್ರಾತಃಸವನದಲ್ಲಿ ಆರಂಭಿಸಿದ ಕರ್ಮವು ತೃತೀಯಸವನದಲ್ಲಿ ಪರ್ಯವಸಾನವಾಗುವಂತೆ ಪೌರ್ಣ-

ಮಾಸಿಯಲ್ಲಿ ಆರಂಭಿಸಿದ ಸಕಲಕರ್ಮಗಳು ಅಮಾವಾಸ್ಯಾ ಯಾಗದಲ್ಲಿ ಸಮಾಪ್ತವಾಗುತ್ತವೆ. ಪೌರ್ಣಮಾಸ್ಯಯಾಗದ ನಿಷ್ಪತ್ತಿಗಾಗಿ ಆಚರಿಸಲ್ಪಟ್ಟ ಸಕಲ ಪ್ರಯಾಜಾದಿ ಅಂಗಗಳು ಅಮಾವಾಸ್ಯಾ ಯಾಗದ ನಿಷ್ಪತ್ತಿಗೂ ಕಾರಣವಾಗುತ್ತದೆ. ಆದ್ದರಿಂದ ಪ್ರಯಾಜಾದಿ ಅಂಗಗಳನ್ನು ಒಮ್ಮೆ ಅನುಷ್ಠಾನ ಮಾಡಿದರೆ ಸಾಕು ಎರಡು ಬಾರಿ ಅನುಷ್ಠಾನ ಮಾಡಬೇಕಿಲ್ಲ.

---

ಭಾಟ್ಟಸಙ್ಗ್ರಹಃ –

**अथ द्वितीयं दर्शपूर्णमासेष्टिप्रभृतिषु सङ्घभेदेनाङ्गानां भेदेनानुष्ठानाधिकरणम्**
**इष्टिराजसूयचातुर्मास्येष्वैककर्म्यादङ्गानां तन्त्रभावः स्यात् ॥ ११ ॥**
**कालभेदान्नेति चेत् ॥ १२ ॥ नैकदेशत्वात्पशुवत् ॥ १३ ॥ अपि वा कर्मपृथक्त्वात्तेषां**
**तन्त्रविधानात्साङ्गानामुपदेशः स्यात् ॥ १४ ॥ तथा चान्यार्थदर्शनम् ॥ १५ ॥**
**तदङ्वयवेषु स्यात् ॥ १६ ॥ पशौ तु चोदनैकत्वात्तन्त्रस्य विप्रकर्षः स्यात् ॥ १७ ॥)**

पूर्वोक्तैकफलानां षण्णामङ्गतन्त्रत्वमिहापोद्यत इति सङ्गति । दर्शपूर्णमासयोरुत्पत्तिवाक्यावगतकालानुरोधाद्विभज्य पर्वद्वये प्रयुज्यमानयोरङ्गानि तन्त्रम्, उत प्रतित्रिकमावर्तेरन्निति सन्देहे, ''दर्शपूर्णमासाभ्यां स्वर्गकामो यजेत'' इत्यनेन विवक्षितसाहित्यानां षण्णामपि यागानामेकस्मिन् फले विधानात्सहैव प्रयोक्तव्या इति तेषां षण्णामेवोपक्रमोपसंहारत्वम् । तथा च प्रातःसवन आरब्धस्तृतीयसवन इव पौर्णमास्यामारब्धं सर्वं प्रधानममावास्यायां समाप्यते । तेन पौर्णमास्यां क्रियमाणमप्यङ्गजातं सर्वार्थं भवतीति तन्त्रम् । साहित्यविधिवशाद्युगपदेव षण्णामपि प्रयोगः कार्यतया प्राप्तोऽपि ''यदाग्नेयोऽष्टाकपालोऽमावास्यायां पौर्णमास्यां चाच्युतो भवति'' इति वचनाद्विप्रकृष्यते । न तावताऽङ्गानामावृत्तिः । एवं ''राजसूयेन स्वाराज्यकामो यजेत'' इत्येकफलार्थानामनुमत्यादीष्टीनां पवित्रादिसोमयागानां च प्रयोगस्य कालभेदेपि ''बार्हस्पत्यश्चरुर्ब्रह्मणो गृहे । ऐन्द्र एकादशकपालो राजन्यस्य गृहे । आदित्यश्चरुर्महिष्या गृहे'' इति वचनादेशभेदेऽप्यङ्गानि तन्त्रम् । तथा ''चातुर्मास्यैः स्वर्गकामो यजेत'' इत्येकप्रयोगवचनेनैकफलार्थे विनियुक्तानां वैश्वदेववरुणप्रघाससामकेधशुनासीरीयाख्यानां चतुर्णां पर्वणां ''वसन्ते वैश्वदेवेन यजेत । वर्षासु वरुणप्रघासैर्यजेत । हेमन्ते साकमेधैर्यजेत'' इत्यादिवचनात्कालभेदेन प्रयोगविप्रकर्षेऽप्यङ्गानां तन्त्रतेति । तदाह **सूत्रे, इष्टिराजसूयेत्यादि । व्यक्तोऽर्थः । ऐककर्म्यात्** एकफलत्वादित्यर्थः । **सिद्धान्तस्तु,** ''पौर्णमास्यां पौर्णमास्या यजेत'' इति वाक्ये पौर्णमासी-संज्ञकाग्नेयादियागत्रयकरणको यः फलार्थस्साङ्गप्रत्ययवाच्यव्यापारस्तदङ्गत्वेन पौर्णमासीकालो विधीयत इत्यङ्गानामपि यागकरणकफलक्रियान्तर्गतानां तत्कालतैव विहिता भवति । एवमेव ''अमावास्यायाममावस्यया यजेत'' इत्यत्राप्यमावस्याशब्दितयागत्रयकरणकफलार्थव्यापारेऽमावास्या-

ಸಿದ್ಧಾಂತ - ಆರೂ ಯಾಗಗಳಿಗೆ ಒಂದೇ ಫಲವಿರುವುದರಿಂದ ಪ್ರಯೋಗದಲ್ಲಿ ಐಕ್ಯವು ತಿಳಿಯುತ್ತದೆ. ಆದರೆ ಹುಣ್ಣಿಮೆ ಮತ್ತು ಅಮಾವಾಸ್ಯೆ ಎಂಬ ಕಾಲಗಳಲ್ಲಿ ಭೇದವಿರುವುದರಿಂದ ಪ್ರಯಾಜಾದಿ ಅಂಗಗಳು ಭಿನ್ನ ಭಿನ್ನವಾಗುತ್ತವೆ. 'ಪೌರ್ಣಮಾಸ್ಯಾಂ ಪೌರ್ಣಮಾಸ್ಯಾ ಯಜೇತ' ಎಂಬ ವಾಕ್ಯದಲ್ಲಿ ಪೌರ್ಣಮಾಸಿ ಎಂಬ ಹೆಸರುಳ್ಳ ಆಗ್ನೇಯಾದಿ ಮೂರು ಯಾಗಗಳನ್ನು ವಿಧಿಸಲಾಗಿದೆ. ಈ ಆಗ್ನೇಯಾದಿ ಮೂರು ಯಾಗಗಳನ್ನು ಹುಣ್ಣಿಮೆ ಎಂಬ ಕಾಲದಲ್ಲಿ ವಿಧಾನ ಮಾಡಲಾಗಿದೆ. ಇದರಂತೆ ಅಮಾವಾಸ್ಯಾಯಾಂ ಅಮಾವಾಸ್ಯಯಾ ಯಜೇತ' ಎಂಬ ವಾಕ್ಯದಲ್ಲಿ ಅಮಾವಾಸ್ಯಾ ಎಂದು ಹೆಸರುಳ್ಳ ಮೂರು ಯಾಗಗಳನ್ನು ಅಮಾವಾಸ್ಯೆ ಎಂಬ ಕಾಲದಲ್ಲಿ ವಿಧಿಸಲಾಗಿದೆ. ಇಲ್ಲಿಯ ಪೌರ್ಣಮಾಸ್ಯಾ ಮತ್ತು ಅಮಾವಾಸ್ಯಾ ಎಂಬ ಶಬ್ದಗಳು ಕಾಲವನ್ನು ಕರಣವೆಂದು ಹೇಳುತ್ತಿವೆ. ಈ ಕಾಲವನ್ನೇ ಕರಣವಾಗಿವುಳ್ಳ ಧನಾರ್ಥವ್ಯಾಪಾರವು ಪ್ರತ್ಯಯವಾಚ್ಯವಾಗಿದೆ. ಯಜೇತ ಎಂಬಲ್ಲಿ ಲಿಙ್‌ಪ್ರತ್ಯಯಕ್ಕೆ ಭಾವನಾ ಎಂದರ್ಥ. ಸ್ವರ್ಗಸಾಧನವಾದ ಭಾವನಾ ಎಂಬ ವ್ಯಾಪಾರವೇ ಲಿಙ್‌ಪ್ರತ್ಯಯದಿಂದ ವಾಚ್ಯವಾಗಿದೆ ಎಂದರ್ಥ.

ಪ್ರಕೃತ ಪೌರ್ಣಮಾಸ್ಯಾ ಯಜೇತ ಎಂದು ಹೇಳಿದಾಗ 'ಪೌರ್ಣಮಾಸ್ಯಾಕರಣಕೇನ ಯಾಗಂ ಭಾವಯೇತ್' ಎಂದರ್ಥವಾಗುತ್ತದೆ. ಪೌರ್ಣಮಾಸ್ಯಾ ಎಂಬ ಕರ್ಮವು ಭಾವನಾದಲ್ಲಿ ಕರಣ ಆಗಿದೆ. ಕಾಲವು ಅಂಗತ್ವೇನ ವಿಹಿತವಾಗಿದೆ. ಅಂದರೆ ಪೌರ್ಣಮಾಸ್ಯಾಕರ್ಮಕ್ಕೆ ಹುಣ್ಣಿಮೆ ಎಂಬ ಕಾಲವನ್ನು ಅಮಾವಾಸ್ಯಾ ಎಂಬ ಕರ್ಮಕ್ಕೆ ಅಮಾವಾಸ್ಯಾ ಎಂಬ ಕಾಲವನ್ನು ಈ ವಾಕ್ಯವು ವಿಧಿಸಿದೆ ಎಂದರ್ಥ. ಇದರಿಂದ ಪೌರ್ಣಮಾಸ್ಯಾ ಕರ್ಮಕ್ಕೆ ಅಂಗವಾದ ಪ್ರಯಾಜಾದಿ ಅಂಗಗಳಿಗೂ ಹುಣ್ಣಿಮೆ ಎಂಬ ಕಾಲವನ್ನೇ ವಿಧಿಸಿದಂತಾಯಿತು. ಅಂದರೆ ಯಾವ ಹುಣ್ಣಿಮೆ ಎಂಬ ಕಾಲದಲ್ಲಿ ಆಗ್ನೇಯಾದಿ ಮೂರು ಪೌರ್ಣಮಾಸ್ಯಾದಿ ಯಾಗಗಳನ್ನು ಆಚರಿಸುತ್ತೇವೋ ಅದೇ ಕಾಲದಲ್ಲಿ ಪ್ರಯಾಜಾದಿ ಅಂಗಗಳನ್ನು ಆಚರಿಸಬೇಕು. ಪೌರ್ಣಮಾಸ್ಯಾ ಯಾಗಕರಣಕಫಲಕ್ರಿಯೆಯೆಂಬ ಭಾವನಾದಲ್ಲಿ ಪ್ರಯಾಜಾದಿ ಅಂಗಗಳು ಅಂತರ್ಗತವಾದ್ದರಿಂದ ಕಾಲವಿಧಿಯು ಅಂಗಗಳಿಗೂ ಹೇಳಿದಂತಾಯಿತು.

ಒಟ್ಟು ಅಭಿಪ್ರಾಯ - ಆಗ್ನೇಯಾದಿ ಮೂರು ಪೌರ್ಣಮಾಸಿಯಾಗಗಳನ್ನು ಆಚರಿಸುವಾಗಲೂ ಈ ಪ್ರಯಾಜಾದಿ ಅಂಗಯಾಗಗಳನ್ನು ಅನುಷ್ಠಾನ ಮಾಡಬೇಕು. ಅಮಾವಾಸ್ಯಾ ಎಂಬ ಮೂರು ಯಾಗಗಳನ್ನು ಆಚರಿಸುವಾಗಲೂ ಪ್ರಯಾಜಾದಿ ಅಂಗಯಾಗಗಳನ್ನು ಅನುಷ್ಠಾನ ಮಾಡಬೇಕು. ಹೀಗೆ ಅಂಗಗಳನ್ನು ಪ್ರತ್ಯೇಕವಾಗಿ ಎರಡು ಪರ್ವಗಳಲ್ಲಿ ಅನುಷ್ಠಾನ ಮಾಡಬೇಕು.

---

कालो विधीयत इति दर्शयागकरणकफलार्थक्रियायामन्तर्गतानामङ्गानां तत्कालतैवोक्तः भवतीति द्वयोरपि कालयोरङ्गानामावृत्तिः । नच यथा पशुप्रयोगे ''वपया प्रातस्सवने प्रचरन्ति । पुरोडाशेन माध्यन्दिने । अङ्गैस्तृतीयसवने'' इति विप्रकृष्टमाणेऽपि नाङ्गानामावृत्तिस्तथाऽत्र किं न स्यादिति शङ्क्यम् । पशौ प्रातर्वपामात्रस्य माध्यन्दिने पुरोडाशमात्रस्य तृतीयसवने हृदयाद्यङ्गमात्रस्य चोदनात् । अत्र पुनः प्रधानकालभेदस्य चोदनेन वैषम्यात् । एवञ्च राजसूये चातुर्मास्येषु च देशकालभेदेऽप्यङ्गावृत्तिर्ध्येयेति ।

इति द्वितीयं दर्शपूर्णमासेष्टिप्रभृतिषु सङ्गभेदेनाङ्गानां भेदेनानुष्ठानाधिकरणम्

ಪ್ರಕೃತ 'ಪೌರ್ಣಮಾಸ್ಯಾಂ ಪೌರ್ಣಮಾಸ್ಯಾ ಯಜೇತ' ಎಂಬ ವಾಕ್ಯದಲ್ಲಿ ಸಪ್ತಮ್ಯಂತವಾದ ಪೌರ್ಣಮಾಸ್ಯಾಂ ಎಂಬ ಶಬ್ದವು ಹುಣ್ಣಿಮೆ ಎಂಬ ಕಾಲದಲ್ಲಿ ಮುಖ್ಯಾರ್ಥವುಳ್ಳದ್ದಾಗಿದೆ. ತೃತೀಯಾಂತವಾದ 'ಪೌರ್ಣಮಾಸ್ಯಾ' ಎಂಬ ಶಬ್ದವು ಕಾಲಸಂಬಂಧಿಯಾದ ಕರ್ಮದಲ್ಲಿ ಗೌಣಾರ್ಥವುಳ್ಳದ್ದಾಗಿದೆ. ಇದರಂತೆ 'ತ್ರಿಪಾತ್' ಎಂಬಲ್ಲಿರುವ ಪಾದಶಬ್ದವು ಭಗವಂತನ ಸ್ವರೂಪಾಂಶದಲ್ಲಿ ಮುಖ್ಯವಾಗಿದೆ. 'ಪಾದೋಸ್ಯ' ಎಂಬಲ್ಲಿ ಭಿನ್ನಾಂಶದಲ್ಲಿ ಅಮುಖ್ಯವಾಗಿದೆ. ಆದ್ದರಿಂದ ಒಂದೇ ಪಾದಶಬ್ದವು ಮುಖ್ಯ ಹಾಗೂ ಅಮುಖ್ಯಾರ್ಥಗಳನ್ನು ಹೇಳಬಹುದು.

ಇದನ್ನು ವ್ಯಾಕರಣವೂ ಸಮರ್ಥಿಸುತ್ತದೆ. 'ಪ್ರಥಮಯೋಃ ಪೂರ್ವಸವರ್ಣಃ' (೬/೧/೧೦೨) ಎಂಬಲ್ಲಿರುವ ಪ್ರಥಮಾಶಬ್ದಕ್ಕೆ ಪ್ರಥಮಾವಿಭಕ್ತಿ ಮತ್ತು ದ್ವಿತೀಯಾವಿಭಕ್ತಿಗಳಿಗೆ ಎಂದರ್ಥ. ಅಂದರೆ ಒಂದೇ ಪ್ರಥಮಶಬ್ದವು ಪ್ರಥಮಾವಿಭಕ್ತಿಯನ್ನು ಮುಖ್ಯವಾಗಿ ಹೇಳುತ್ತಿದೆ. ದ್ವಿತೀಯಾವಿಭಕ್ತಿಯನ್ನು ಅಮುಖ್ಯವಾಗಿ ಹೇಳುತ್ತಿದೆ. ಆದರಂತೆ ಪಾದಶಬ್ದವೂ ಸಹ ಮುಖ್ಯ ಹಾಗೂ ಅಮುಖ್ಯಾರ್ಥಗಳನ್ನು ಹೇಳಬಹುದು.

ಇಲ್ಲಿಯತನಕ 'ಜ್ಯೋತಿಶ್ಚರಣಾಭಿಧಾನಾತ್' ಎಂಬ ಮೊದಲನೆಯ ಸೂತ್ರವನ್ನು ಮತ್ತು 'ಭೂತಾದಿಪಾದವ್ಯಪದೇಶಾಚ್ಚ' ಎಂಬ ಮೂರನೆಯ ಸೂತ್ರವನ್ನು ನಿರಾಕರಿಸಿದ್ದಾಯಿತು.

**ಗುರುರಾಜೀಯಮ್ – ಪರರೀತ್ಯಾ ಪಾದಶಬ್ದಸ್ಯೈಕಾರ್ಥತ್ವೇ ಸಮ್ಭವತ್ಯನೇಕಾರ್ಥತ್ವಮನ್ಯಾಯ್ಯಮಿತ್ಯಾಹ – ಯಥಾ ಚೇತಿ ॥ ಮುಖ್ಯಾರ್ಥಾನೇಕತ್ವಂ ನಾಸ್ತ್ಯೇವ ಮುಖ್ಯಾಮುಖ್ಯೋಭಯಾರ್ಥತ್ವಂ ದೃಷ್ಟತ್ವಾನ್ನ ವಿರುದ್ಧಮಿತಿ ಭಾವಃ । ನ ಚೋಕ್ತಸ್ಥಲೇ ತೃತೀಯಾಸಪ್ತಮ್ಯುಕ್ತಕರಣಾಧಿಕರಣತ್ವಯೋರಿವಾರ್ಥಭೇದಕಲ್ಪಕಸ್ಯ ಪ್ರಕೃತೇऽಭಾವ ಇತಿ ವಾಚ್ಯಮ್ । ಅಮೃತತ್ವೋಕ್ತಿ ಏವ ಶ್ರುತ್ಯರ್ಥಾಭ್ಯಾಂ ವಿನಾಶಭಾವಾಭಾವಯೋರರ್ಥಭೇದಕಲ್ಪಕಯೋರ್ಲಾಭಾದಿತಿ ಭಾವಃ ।**

## ಅದ್ವೈತಿಗಳ ನಾಲ್ಕನೇ ಸೂತ್ರ ವ್ಯಾಖ್ಯಾನ ವಿಮರ್ಶೆ

### ತಾತ್ಪರ್ಯಚನ್ದ್ರಿಕಾ

**ಯಚ್ಚ ''ಉಭಯಸ್ಮಿನ್ನಪ್ಯವಿರೋಧಾತ್'' ಇತ್ಯಸ್ಯ ಪರಕೀಯಂ ವ್ಯಾಖ್ಯಾನಮ್ –''ಯಥಾ ವೃಕ್ಷಾಗ್ರಸಮ್ಬದ್ಧೋऽಪಿ ಶ್ಯೇನಃ 'ವೃಕ್ಷಾಗ್ರೇ ಶ್ಯೇನಃ, ವೃಕ್ಷಾಗ್ರಾತ್ ಪರತಃ ಶ್ಯೇನಃ' ಇತಿ ಚ ವ್ಯಪದಿಶ್ಯತೇ, ತಥಾ ದಿವ್ಯೇವ ಸತ್ ಬ್ರಹ್ಮ 'ದಿವಃ ಪರಂ' ಇತ್ಯಪ್ಯುಚ್ಯತೇ । ಯಥಾ ವಾ ವೃಕ್ಷಾಗ್ರೇಣಾಸಮ್ಬದ್ಧೋऽಪಿ ಶ್ಯೇನಃ 'ವೃಕ್ಷಾಗ್ರಾತ್ಪರತ್ರ ಶ್ಯೇನಃ, ವೃಕ್ಷಾಗ್ರೇ ಶ್ಯೇನಃ' ಇತಿ ಚ ಉಚ್ಯತೇ, ಏವಂ ದಿವಃ ಪರಮಪಿ ಬ್ರಹ್ಮ 'ದಿವಿ' ಇತ್ಯಪ್ಯುಚ್ಯತ ಇತಿ, ತದಪಿ ನ । ಯಸ್ಯ ವೃಕ್ಷಾಗ್ರಸ್ಯ ಯಂ ಪ್ರತಿ ಮುಖ್ಯಮಾಧಾರತ್ವಂ ಅವಧಿತ್ವಂ ವಾ, ತಸ್ಯೈವ ತಂ ಪ್ರತ್ಯೇವಾಮುಖ್ಯಸ್ಯಾವಧಿತ್ವಸ್ಯವಾಧಾರತ್ವಸ್ಯ ವಾ ವಿವಕ್ಷಾಯಾಂ' 'ವೃಕ್ಷಾಗ್ರಾತ್ ಪರತ್ರ ಶ್ಯೇನಃ' ಇತ್ಯಾದಿಪ್ರಯೋಗಾಭಾವೇನ ದೃಷ್ಟಾನ್ತಾಸಿದ್ಧೇಃ ॥**

**ಅತ್ರ ಭಾಮತ್ಯಾಮುಕ್ತಮ್ – ಯದಾऽऽಧಾರತ್ವಂ ಮುಖ್ಯಂ, ತದಾ 'ವೃಕ್ಷಾಗ್ರಾತ್' ಇತ್ಯತ್ರ ಶ್ಯೇನ-ಶಬ್ದೋ ವೃಕ್ಷಾಗ್ರಲಗ್ನಶ್ಯೇನಾವಯವಾದುಪರಿತನಶ್ಯೇನಾವಯವಾವಚ್ಛಿನ್ನಶ್ಯೇನಾವಯವಿಲಕ್ಷಕಃ । ಅಗ್ರ-ಶಬ್ದೋ ವಾ ಅಗ್ರಾದರ್ವಾಗ್ಭಾಗಲಕ್ಷಕಃ । ಯದಾ ತ್ವವಧಿತ್ವಂ ಮುಖ್ಯಂ, ತದಾ 'ಅಗ್ರೇ' ಇತ್ಯತ್ರ ಸಪ್ತಮೀ ಸಾಮೀಪ್ಯಂ ಲಕ್ಷಯತಿ । ಏವಂ ದಾರ್ಷ್ಟಾನ್ತಿಕೇऽಪಿ ಜ್ಯೋತಿಶ್ಶಬ್ದೋ ವಾ 'ದಿವಃ' ಇತ್ಯತ್ರ ದ್ಯುಪ್ರಾತಿ-ಪದಿಕಂ ವಾ 'ದಿವಿ' ಇತ್ಯತ್ರ ಸಪ್ತಮೀ ವಾ ಲಾಕ್ಷಣಿಕೀತಿ, ತನ್ನ, ಜ್ಯೋತಿಷೋ ಬ್ರಹ್ಮಣೋ ನಿರವಯವತ್ವಾತ್ । ಲಕ್ಷಣಾದಿಪ್ರಸಙ್ಗಾತ್ । ''ಪೃಥಿವ್ಯಾಂ ಚೌರ್ಮಹಾಮೇರುಃ'' ಇತ್ಯಾದಿಸ್ಮೃತಿ-ವಿರೋಧಾಚ್ಚ ॥**

ಅನುವಾದ - 'ಉಭಯಸ್ಮಿನ್ನಪ್ಯವಿರೋಧಾತ್' ಎಂಬ ನಾಲ್ಕನೆಯ ಸೂತ್ರಕ್ಕೆ ಪರರ ವ್ಯಾಖ್ಯಾನ ಹೀಗಿದೆ - ದಿವಿಸ್ಥಿತತ್ವ ಮತ್ತು ದಿವಃಪರತ್ವಗಳನ್ನು ಒಬ್ಬನೇ ವಿಷ್ಣುವಿನಲ್ಲಿ ಶ್ರುತಿಯು ಹೇಳುತ್ತಿದೆ. ಈ ವಿರೋಧವನ್ನು ನಾವು ಪ್ರಮಾಣದ ಆಧಾರದಿಂದ ಪರಿಹರಿಸಿದ್ದೇವೆ. ಆದರೆ ಅದ್ವೈತಿಗಳು ದೃಷ್ಟಾಂತದ ಮೂಲಕ ಪರಿಹರಿಸಲು ಪ್ರಯತ್ನಿಸಿದ್ದಾರೆ. ಅದು ಹೀಗೆ -- 'ಶ್ಯೇನ'ಪಕ್ಷಿಯು ಮರದ ತುದಿಯಲ್ಲಿ ಕುಳಿತಿರುವಾಗ 'ಮರದ ತುದಿಯಲ್ಲಿ ಹದ್ದು' (ವೃಕ್ಷಾಗ್ರೇ ಶ್ಯೇನಃ) ಎಂದು ಪ್ರಯೋಗಿಸು-ತ್ತಾರೆ. ಅಥವಾ 'ಮರದ ಮೇಲೆ ಹದ್ದು' (ವೃಕ್ಷಾಗ್ರಾತ್ ಪರತ್ರ ಶ್ಯೇನಃ) ಎಂದೂ ಸಹ ಪ್ರಯೋಗಿ-ಸುತ್ತಾರೆ. ಅದರಂತೆ ಬ್ರಹ್ಮನು ದಿವಿಸ್ಥಿತನೇ ಆಗಿದ್ದಾನೆ. ಆದರೂ ತ್ರಿಲೋಕಕ್ಕಿಂತ ಮೇಲಿದ್ದಾನೆ (ದಿವಃಪರನಾಗಿದ್ದಾನೆ) ಎಂದು ಪ್ರಯೋಗಿಸಿದರೆ ಏನು ತಪ್ಪು?

ಅಥವಾ 'ಶ್ಯೇನಪಕ್ಷಿಯು ಮರದ ಮೇಲೆ ಕುಳಿತುಕೊಳ್ಳದೇ ಹಾರುತ್ತಿರುವಾಗ 'ಮರದ ಮೇಲೆ ಹದ್ದು' (ವೃಕ್ಷಾಗ್ರಾತ್ ಪರತ್ರ ಶ್ಯೇನಃ) ಎಂದು ಹೇಗೆ ಪ್ರಯೋಗಿಸುತ್ತಾರೋ ಆದರಂತೆ 'ಮರದ ತುದಿಯಲ್ಲಿ ಹದ್ದು' ಎಂದೂ ಸಹ ಪ್ರಯೋಗಿಸುತ್ತಾರೆ. ಇದರಂತೆ ಪ್ರಕೃತ ಬ್ರಹ್ಮನು ದಿವಃಪರನಾಗಿ-ದ್ದರೂ ದಿವಿಸ್ಥಿತನೆಂದು ಪ್ರಯೋಗಿಸಬಹುದು.' ಎಂದು ಅದ್ವೈತಿಗಳ ವಾದ.

ಇದು ತಪ್ಪು. ಅದ್ವೈತಿಗಳು ನೀಡಿದ ದೃಷ್ಟಾಂತವು ವಿಷಮವಾಗಿದೆ. ಶ್ಯೇನಪಕ್ಷಿಯು ಮರದ ತುದಿಯಲ್ಲಿ ಕುಳಿತಿರುವಾಗ (ವೃಕ್ಷಾಗ್ರದ ಸಂಬಂಧವನ್ನು ಹೊಂದಿರುವಾಗ) ಆಧಾರತ್ವವು ಮುಖ್ಯ-ವಾಗುತ್ತದೆ. ಆವಾಗ 'ವೃಕ್ಷಾಗ್ರೇ ಶ್ಯೇನಃ' ಎಂಬ ಪ್ರಯೋಗವು ಮುಖ್ಯಪ್ರಯೋಗವಾಗುತ್ತದೆ. ಆದರೆ ಆಧಾರತ್ವವು ಮುಖ್ಯವಾದಾಗ ಅವಧಿತ್ವವು ಅಮುಖ್ಯವಾಗಿರುತ್ತದೆ. ಆದ್ದರಿಂದ 'ವೃಕ್ಷಾಗ್ರಾತ್ ಪರತ್ರ ಶ್ಯೇನಃ' ಎಂಬ ಪ್ರಯೋಗವು ಅಮುಖ್ಯಾವಧಿತ್ವವಿವಕ್ಷೆಯಿಂದ ಅಮುಖ್ಯಪ್ರಯೋಗವಾಗುತ್ತದೆ. ವೃಕ್ಷಾಗ್ರದಲ್ಲಿ ಶ್ಯೇನಪಕ್ಷಿಯು ಸಂಬಂಧವನ್ನು ಹೊಂದದೇ ಇರುವಾಗ ಅವಧಿತ್ವವು ಮುಖ್ಯವಾಗುತ್ತದೆ. ಆಧಾರತ್ವವು ಅಮುಖ್ಯವಾಗುತ್ತದೆ. ಅವಧಿತ್ವವು ಮುಖ್ಯವಾದ್ದರಿಂದ 'ವೃಕ್ಷಾಗ್ರಾತ್ ಪರತ್ರ ಶ್ಯೇನಃ' ಎಂಬ ಪ್ರಯೋಗವು ಮುಖ್ಯವೆನಿಸಿ 'ವೃಕ್ಷಾಗ್ರೇ ಶ್ಯೇನಃ' ಎಂಬ ಪ್ರಯೋಗವು ಅಮುಖ್ಯವೆನಿಸುತ್ತದೆ.

ಆದರೆ ಯಾವಪಕ್ಷದಲ್ಲಿ ಆಧಾರತ್ವವು ಮುಖ್ಯವಾಗಿರುತ್ತದೋ ಆವಾಗಲೇ ಅವಧಿತ್ವವನ್ನು ಮುಖ್ಯವಾಗಿ ವಿವಕ್ಷಿಸಿ 'ವೃಕ್ಷಾಗ್ರಾತ್ ಪರತ್ರ ಶ್ಯೇನಃ' ಎಂಬ ಮುಖ್ಯಪ್ರಯೋಗವು ಲೋಕದಲ್ಲಿ ಎಲ್ಲಿಯೂ ಕಂಡಿಲ್ಲ.

ಆಥವಾ ಅವಧಿತ್ವವು ಮುಖ್ಯವಾಗಿರುವಾಗ ಪಕ್ಷದಲ್ಲಿ ಪುನಃ ಆಧಾರತ್ವವನ್ನು ಮುಖ್ಯವೆಂದು ಪರಿಗಣಿಸಿ 'ವೃಕ್ಷಾಗ್ರೇ ಶ್ಯೇನಃ' ಎಂದು ಪ್ರಯೋಗಿಸುವುದೂ ಸಹ ಎಲ್ಲಿಯೂ ಕಂಡಿಲ್ಲ. ಅಂದರೆ ನೀವು ನೀಡಿದ ದೃಷ್ಟಾಂತದಲ್ಲಿ ಒಂದು ಪ್ರಯೋಗ ಮುಖ್ಯವೆಂದೂ, ಮತ್ತೊಂದು ಪ್ರಯೋಗ ಅಮುಖ್ಯವೆಂದೂ ನಿರ್ಣಯವಾಗುತ್ತದೆ. ಆದರೆ ಪ್ರಕೃತ ಬ್ರಹ್ಮನಲ್ಲಿ ದಿವಿಸ್ಥಿತತ್ವ ಮತ್ತು ದಿವಃ-ಪರತ್ವವೆಂಬ ಎರಡೂ ಪ್ರಯೋಗಗಳನ್ನು ಏಕಕಾಲದಲ್ಲಿ ಮುಖ್ಯವೆನ್ನುತ್ತಿದ್ದೀರಿ. ಇದು ಸರಿಯಲ್ಲ.

ಇಲ್ಲಿ ಭಾಮತಿ ಹೀಗೆ ಹೇಳಿದೆ - ಆಧಾರತ್ವವು ಮುಖ್ಯವಾದಾಗ ಶ್ಯೇನಶಬ್ದಕ್ಕೆ ಅಥವಾ ಅಗ್ರಶಬ್ದಕ್ಕೆ ಲಕ್ಷಣಾ ಮಾಡಬೇಕು. ಪಕ್ಷಿಯು ವೃಕ್ಷದಲ್ಲಿ ಸಂಬಂಧವನ್ನು ಹೊಂದಿದಾಗ ಆಧಾರತ್ವವು ಮುಖ್ಯವಾದ್ದರಿಂದ 'ವೃಕ್ಷಾಗ್ರೇ ಶ್ಯೇನಃ' ಎಂಬ ಪ್ರಯೋಗವು ಮುಖ್ಯಪ್ರಯೋಗವೆನಿಸುತ್ತದೆ. ಆದರೆ 'ವೃಕ್ಷಾಗ್ರಾತ್ ಪರತ್ರ ಶ್ಯೇನಃ' ಎಂಬುದು ಅಮುಖ್ಯಪ್ರಯೋಗ. ಇಲ್ಲಿ ವೃಕ್ಷದ ತುದಿಯಲ್ಲಿ ಪಕ್ಷಿಯ ಕಾಲುಗಳಷ್ಟೇ ಸಂಬಂಧವನ್ನು ಹೊಂದಿವೆ. ಪಕ್ಷಿಯ ಹೊಟ್ಟೆ ಕತ್ತು ಮೊದಲಾದವು ಸಂಬಂಧವನ್ನು ಹೊಂದಿಲ್ಲ. ಆದ್ದರಿಂದ ಉದರಾದಿ ಅವಯವಾಚ್ಛಿನ್ನವಾದ ಶ್ಯೇನಅವಯವಿಯಲ್ಲಿ ಶ್ಯೇನಶಬ್ದಕ್ಕೆ ಲಕ್ಷಣಾ ಮಾಡಬೇಕು. (ಶ್ಯೇನಅವಯವಿಯು ವೃಕ್ಷಸಂಬಂಧವನ್ನು ಹೊಂದಿದ ಶ್ಯೇನಪಕ್ಷಿಯ ಪಾದಾದ್ಯವಚ್ಛಿನ್ನವೂ ಆಗಿದೆ; ವೃಕ್ಷಸಂಬಂಧವನ್ನು ಹೊಂದದ ಉದರಾದ್ಯವಯವಾವಚ್ಛಿನ್ನವೂ ಆಗಿದೆ. ಇಲ್ಲಿ ಉದರಾದ್ಯವಯವಾವಚ್ಛಿನ್ನವಾದ ಶ್ಯೇನ ಅವಯವಿಯಲ್ಲಿ ಲಕ್ಷಣಾ ಮಾಡಬೇಕು).

ಆಥವಾ 'ವೃಕ್ಷಾಗ್ರಾತ್' ಎಂಬಲ್ಲಿರುವ ಅಗ್ರಶಬ್ದಕ್ಕೆ ಮರದ ಅಗ್ರಭಾಗಕ್ಕಿಂತ ಕೆಳಗಿನ ಭಾಗದಲ್ಲಿ ಲಕ್ಷಣಾ ಮಾಡಬೇಕು. ಆವಾಗ ಮರದಿಂದಾಚೆ ಹಕ್ಕಿಯಿದೆ ಎಂದಾದರೆ ಮರದ ಮೇಲಿದೆ ಎಂದೂ ಅರ್ಥವಾಗುತ್ತದೆ.

ಅವಧಿತ್ವವು ಮುಖ್ಯವಾದಾಗ 'ವೃಕ್ಷಾಗ್ರಾತ್ ಪರತ್ರ ಶ್ಯೇನಃ' ಎಂಬುದು ಮುಖ್ಯಪ್ರಯೋಗ-ವಾಗಿದೆ. ಆದರೆ 'ವೃಕ್ಷಾಗ್ರೇ ಶ್ಯೇನಃ' ಎಂಬುದು ಅಮುಖ್ಯಪ್ರಯೋಗವಾಗುತ್ತದೆ. 'ವೃಕ್ಷಾಗ್ರೇ' ಎಂಬಲ್ಲಿರುವ ಅಗ್ರಶಬ್ದದ ಸಪ್ತಮೀವಿಭಕ್ತಿಗೆ ಸಾಮೀಪ್ಯದಲ್ಲಿ ಲಕ್ಷಣಾ ಮಾಡಬೇಕು. ಆವಾಗ ಪಕ್ಷಿಯು ಮರದಿಂದ ಆಚೆ ಹಾರುತ್ತಿದ್ದರೂ ಪಕ್ಷಿಯ ಹತ್ತಿರ ಮರದ ತುದಿ ಇರುವುದರಿಂದ 'ವೃಕ್ಷಾಗ್ರೇ ಶ್ಯೇನಃ' ಎಂಬ ಪ್ರಯೋಗವು ಸಾಧ್ಯವಾಗುತ್ತದೆ.

ಇದರಂತೆ 'ದಿವಃಪರಃ' 'ದಿವಿಸ್ಥಿತಃ' ಎಂಬ ದಾರ್ಷ್ಟಾಂತಿಕದಲ್ಲಿಯೂ ತಿಳಿಯಬೇಕು. ಆಧಾರತ್ವ-ವನ್ನು ಮುಖ್ಯವೆಂದು ಪರಿಗಣಿಸಿದಾಗ 'ದಿವಃಪರಃ ಜ್ಯೋತಿಃ' ಎಂಬುದು ಅಮುಖ್ಯಪ್ರಯೋಗ-

ವಾಗುತ್ತದೆ. ಆವಾಗ ದ್ಯುಶಬ್ದಕ್ಕೆ ಅಥವಾ ಜ್ಯೋತಿಶಬ್ದಕ್ಕೆ ಲಕ್ಷಣಾ ಮಾಡಬೇಕು. ದ್ಯುಲೋಕ ಅಸಂಬಂಧಿಯಾದ ಬ್ರಹ್ಮನ ಯಾವ ಅವಯವ ಇದೆಯೋ ತದವಚ್ಛಿನ್ನ ಬ್ರಹ್ಮನ ಅವಯವಿಯಲ್ಲಿ ಜ್ಯೋತಿಶಬ್ದಕ್ಕೆ ಲಕ್ಷಣಾ. ಅಥವಾ ದ್ಯುಲೋಕದ ಕೆಳಗಿನ ಲೋಕದಲ್ಲಿ ದ್ಯುಶಬ್ದಕ್ಕೆ ಲಕ್ಷಣಾ ಹೀಗೆ ಮಾಡಿದಾಗ ಬ್ರಹ್ಮನು ದಿವಿಸ್ಥಿತನಾಗಿದ್ದರೂ ಲಾಕ್ಷಣಿಕಪ್ರಯೋಗದಿಂದ 'ದಿವಃಪರಃ' ಎನ್ನಲಬಹುದು. ಅವಧಿತ್ವವು ಮುಖ್ಯವೆಂದು ವಿವಕ್ಷಿತವಾದಾಗ 'ದಿವಿಸ್ಥಿತಃ' ಎಂಬಲ್ಲಿರುವ ದ್ಯುಶಬ್ದದ ಸಪ್ತಮಿಗೆ ಸಾಮೀಪ್ಯದಲ್ಲಿ ಲಕ್ಷಣಾ ಮಾಡಬೇಕು. ದ್ಯುಲೋಕದ ಸಮೀಪದಲ್ಲಿ ಬ್ರಹ್ಮನಿದ್ದಾನೆಂದು ಅರ್ಥ. ಇಷ್ಟು ಭಾಮತಿಯ ವ್ಯಾಖ್ಯಾನ.

ಈ ವಾದದಲ್ಲಿ ಹುರುಳಿಲ್ಲ. ಜ್ಯೋತಿಸ್ವರೂಪನಾದ ಬ್ರಹ್ಮನನ್ನು ನಿರವಯವಿಯೆಂದು ಸ್ವತಃ ತಾವೇ ಒಪ್ಪಿ ಈಗ ಬ್ರಹ್ಮನಿಗೆ ಅವಯವ ಅವಯವಿಭಾವವನ್ನು ಹೇಳಿದರೆ ಅಪಸಿದ್ಧಾಂತ ಬರುತ್ತದೆ. ಮತ್ತು ಶಕ್ತಿವೃತ್ತಿಯಿಂದಲೇ ಸುಲಭವಾಗಿ ಶ್ರುತಿಯನ್ನು ವ್ಯಾಖ್ಯಾನಿಸಲು ಬರುವಾಗ ಲಕ್ಷಣಾ ಮಾಡುವುದು ತಪ್ಪಾಗುತ್ತದೆ. ಮತ್ತು 'ಪೃಥಿವ್ಯಾಂ ದ್ಯೌರ್ಮಹಾಮೇರುಃ' ಎಂಬ ಸ್ಮೃತಿಯು ದಿವಃ-ಪರತ್ವ ಮತ್ತು ದಿವಿಸ್ಥಿತತ್ವವನ್ನು ಅತ್ಯಂತ ಸ್ಪಷ್ಟವಾಗಿ ವ್ಯಾಖ್ಯಾನಿಸಿದೆ. ಈ ಪ್ರಮಾಣದ ವಿರೋಧವೂ ಸಹ ಅದ್ವೈತಿಗಳಿಗೆ ತಪ್ಪಿದ್ದಲ್ಲ.

### ಕಠಿಣಪದಾರ್ಥ

ಯದಾ = ವೃಕ್ಷಾಗ್ರದ ಸಂಬಂಧವನ್ನು ಹೊಂದಿರುವ ದಶೆಯಲ್ಲಿ; ಉಪರಿತನ = ವೃಕ್ಷಾಗ್ರದ ಸಂಬಂಧವನ್ನು ಹೊಂದದ; ಅಗ್ರಶಬ್ದೋ ವಾ = ವೃಕ್ಷದ ತುದಿಗಿಂತ ಕೆಳಗಿನ ಭಾಗದಲ್ಲಿ ಶ್ಯೇನಪಕ್ಷಿಯ ಸಂಬಂಧವಿಲ್ಲದ ಕಾರಣ 'ಅಗ್ರಾತ್ ಪರತಃ' ಎಂಬುದಕ್ಕೆ ವೃಕ್ಷದ ತುದಿಗಿಂತ ಕೆಳಗಿನ ಭಾಗ ಯಾವುದಿದೆಯೋ ಅದಕ್ಕಿಂತ ಮೇಲಿನ ಭಾಗದಲ್ಲಿ ಎಂದರ್ಥ; ಯದಾತು = ಸಂಬಂಧ ಇಲ್ಲದೆ ಮರದ ಆಚೆ ಸಂಚರಿಸುವ ದಶೆಯಲ್ಲಿ; ಜ್ಯೋತಿಶಬ್ದಃ = ದ್ಯುಲೋಕಸಂಬಂಧಿಯಾದ ಜ್ಯೋತಿಯನಿಸಿದ ಬ್ರಹ್ಮನ ಯಾವ ಅವಯವವಿದೆಯೋ ಅದಕ್ಕಿಂತ ಮೇಲಿನ ಅವಯವಾವಚ್ಛಿನ್ನವಾದ ಅವಯವಿಯಲ್ಲಿ ಜ್ಯೋತಿಶಬ್ದಕ್ಕೆ ಲಕ್ಷಣಾ ಮಾಡಬೇಕು; ದ್ಯುಪ್ರಾತಿಪದಿಕಂ ವಾ = ಬಾಹ್ಯವಾದ ದ್ಯುಲೋಕಭಾವಕ್ಕಿಂತ ಬೇರೆಯಾದ ಶರೀರದ ಹೃದಯದಲ್ಲಿರುವ ದ್ಯು ಎಂಬ ಭಾಗದಲ್ಲಿ ದ್ಯುಶಬ್ದಕ್ಕೆ ಲಕ್ಷಣಾ ಮಾಡಬೇಕು. ದಿವಿಸ್ಥಿತತ್ವಕ್ಕೆ ಮುಖ್ಯತ್ವವನ್ನು ಅಂಗೀಕರಿಸಿ ಲಕ್ಷಣಾ ಮಾಡಿದ್ದಾಯಿತು. ದಿವಃಪರತ್ವವನ್ನು ಮುಖ್ಯವೆಂದು ಪರಿಗಣಿಸಿ ದಿವಿ ಎಂಬ ವಾಕ್ಯದಿಂದ ವಿವರಿಸಿದ್ದಾರೆ. ದಿವಿಶಬ್ದಕ್ಕೆ ದ್ಯುಲೋಕದ ಸಾಮೀಪ್ಯದಲ್ಲಿ ಲಕ್ಷಣಾ;

**ಪ್ರಕಾಶಃ** – ಯದಪಿ ''तथा हि दर्शनं'' इत्यस्योभयोर्व्याख्यानं – अन्यत्रापीत्थं दर्शनमिति, तत्र, अस्मद्गीत्या विषयवाक्यगतहेतूक्तिपरत्वसम्भवे अन्यथा व्याख्यानायोगादित्यादिदूषणं स्पष्टं मत्वा, चतुर्थसूत्रव्याख्यानं परमते तावदनूद्य

**निरस्यति – यच्चेति ॥ दिविष्ठत्वमुपेत्य तत्परत्वमुपपाद्येदानीं तत्परत्वमुपेत्य तत्स्थत्वमुपपादयति – यथा वेति ॥**

सप्तमीपञ्चम्यर्थयोराधारत्वावधित्वयोर्द्वयोरपि मुख्यत्वायोगादेकस्य मुख्यत्वेऽन्यस्यामुख्यत्वात्, श्रुतौ च मुख्यार्थस्यैव ग्राह्यत्वात् वैषम्येण दृष्टान्तायोग इति भावेन यथाश्रुतभाष्यं निरस्यति – **तदपि नेति ॥** भाष्याभिप्रायविवरणमनूद्य निरस्यति – **अत्रेति ॥ यदेति ॥** वृक्षाग्रसम्बन्धितादशायामित्यर्थः ॥ **उपरितनेति ॥** तद्भागस्याग्रसम्बन्धित्वादिति भावः ॥ **अग्रशब्दो वेति ॥** अग्रार्वाग्भागे श्येनसम्बन्धाभावेन 'आग्रात् परतः' इत्यस्य अग्रार्वाग्भागात् परत इत्यर्थ इति भावः ॥ **यदा त्विति ॥** असम्बन्धेनाग्रोपरि सञ्चरणदशायामित्यर्थः ॥ **ज्योतिश्शब्द इति ॥** द्युसम्बन्धिज्योतिरवयवादुपरितनावयवावच्छिन्नावयविलक्षक इत्यर्थः ॥ **द्युप्रातिपदिकं वेति ॥** बाह्यद्युभागातिरिक्तशारीरहार्दद्युभागस्य लक्षकमित्यर्थः । एवञ्च हार्दद्युभागस्थस्य ब्रह्मणो बाह्यद्युभागात् परतोऽवस्थानमुपपन्नमिति भावः ।

दिविष्ठत्वं मुख्यमुपेत्य लक्षकत्वमुक्तं, दिवः परत्वस्य मुख्यत्वपक्षे आह – **दिवीति ॥** सामीप्यं लक्षयतीत्यर्थः । **ज्योतिश्शब्दस्य लक्षकत्वे दोषमाह – ज्योतिष इति ॥** पक्षत्रयसाधारणदोषमाह – **लक्षणेति ॥** भङ्गचन्तराभावादेवमाश्रीयत इत्यत आह – **पृथिव्यामिति ॥**

**पृथिव्यां चौर्महामेरुराकाशे सूर्यमण्डलम् ।**
**दिवीन्द्रसदनं चैव तत्परे तु दिवःपरे ॥**

इति छान्दोग्यभाष्योदाहृतस्मृत्या द्युशब्दार्थस्याक्षादिशब्दार्थवदनेकत्वेनाधारत्वावधित्व योर्मुख्ययोरेव सम्भवादिति भावः ।

ವಿವರಣೆ - ಅದ್ವೈತಿಗಳ ಎರಡನೆಯ ಸೂತ್ರವ್ಯಾಖ್ಯಾನವೂ ಸರಿಯಲ್ಲ. 'ಚೇತೋರ್ಪಣನಿಗದಾತ್' ಎಂಬ ಶಬ್ದಕ್ಕೆ 'ಗಾಯತ್ರೀ' ಎಂಬ ಅಧಿಷ್ಠಾನದಲ್ಲಿ ಬ್ರಹ್ಮನನ್ನು ಛಂದಸ್ಸೆಂದು ಉಪಾಸನೆ ಮಾಡಬೇಕು. ಆದಕ್ಕಾಗಿ 'ಗಾಯತ್ರೀ ವಾ ಇದಂ ಸರ್ವಮ್' ಎಂಬ ಬ್ರಾಹ್ಮಣವಾಕ್ಯವು ಗಾಯತ್ರಿಗೆ ಸರ್ವಾತ್ಮಕತ್ವವನ್ನು ಹೇಳುತ್ತಿದೆ. ಹೀಗೆ ಎರಡನೆಯ ಸೂತ್ರವನ್ನು ವ್ಯಾಖ್ಯಾನಿಸುತ್ತಾರೆ. ಆದರೆ ಬ್ರಹ್ಮನು ಆರೋಪಾಧಿಷ್ಠಾನನಾಗಿದ್ದಾನೆಂಬ ವಿಚಾರವನ್ನು ಅನೇಕಬಾರಿ ನಾವು ನಿರಾಕರಿಸಿದ್ದೇವೆ. ಆದರಿಂದಲೇ ಇವರ ವ್ಯಾಖ್ಯಾನವು ನಿರಾಕೃತವಾಯಿತು.

ಮತ್ತು 'ತಥಾಹಿ ದರ್ಶನಮ್' ಎಂಬ ಸೂತ್ರಭಾಗಕ್ಕೆ ರಾಮಾನುಜರು ಹಾಗೂ ಆದ್ವೈತಿಗಳು ಬೇರೆಕಡೆಯೂ ಹೀಗೆಂದು ದೃಷ್ಟಾಂತಪರವಾಗಿ ವ್ಯಾಖ್ಯಾನಿಸುತ್ತಾರೆ. ಇದೂ ಸಹ ಸರಿಯಲ್ಲ. ''ವಿಷಯವಾಕ್ಯದಲ್ಲಿರುವ 'ಗಾಯತಿ ಚ ತ್ರಾಯತಿ ಚ' ಎಂಬ ಗಾನತ್ರಾಣಕರ್ತೃತ್ವಹೇತುವನ್ನು 'ತಥಾ ಹಿ ದರ್ಶನಮ್' ಎಂಬ ಸೂತ್ರಭಾಗವು ಸಮರ್ಥಿಸುತ್ತಿದೆ'' ಎಂಬ ನಮ್ಮ ವ್ಯಾಖ್ಯಾನವೇ ನಿರ್ದುಷ್ಟವಾಗಿದೆ. ಇದನ್ನು ಬಿಟ್ಟು ಬೇರೆ ರೀತಿ ವ್ಯಾಖ್ಯಾನ ಮಾಡುವುದು ಅಯುಕ್ತವಾಗಿದೆ. ಆದ್ದರಿಂದ ಅವರ ಎರಡನೆಯ ಸೂತ್ರವ್ಯಾಖ್ಯಾನವು ಸರಿಯಲ್ಲ. ಹೀಗೆ ಪ್ರಾರಂಭದ ಮೂರು ಸೂತ್ರಗಳ ಪರರ ವ್ಯಾಖ್ಯಾನವು ಅಸಾಧುವೆಂದು ಸಮರ್ಥಿಸಿದ್ದಾಯಿತು.

ಪ್ರಕೃತ ಪರರು ಮಾಡಿದ 'ಉಪದೇಶಭೇದಾತ್ ನೇತಿ ಚೇನ್ನ ಉಭಯಸ್ಮಿನ್ನಪ್ಯವಿರೋಧಾತ್' ಎಂಬ ನಾಲ್ಕನೆಯ ಸೂತ್ರದ ವ್ಯಾಖ್ಯಾನವನ್ನು 'ಯತ್ತು' ಇತ್ಯಾದಿ ಗ್ರಂಥದಿಂದ ಅನುವಾದ ಮಾಡಿ ನಿರಾಕರಣೆ ಮಾಡುತ್ತಿದ್ದಾರೆ. ದಿವಿಸ್ಥಿತತ್ವನ್ನು ಅಂಗೀಕರಿಸಿ ದಿವಃಪರತ್ವವನ್ನು ಸಮರ್ಥಿಸಿದ್ದಾಯಿತು. ದಿವಃಪರತ್ವವನ್ನು ಅಂಗೀಕರಿಸಿ ದಿವಿಸ್ಥಿತತ್ವಪರತ್ವವನ್ನು 'ಯಥಾ ವಾ' ಎಂಬ ಗ್ರಂಥದಿಂದ ಸಮರ್ಥಿಸುತ್ತಿದ್ದಾರೆ.

ಯಥಾಶ್ರುತವಾದ ಶಾಂಕರಭಾಷ್ಯವನ್ನು 'ತದಪಿ ನ' ಎಂಬ ಗ್ರಂಥದಿಂದ ನಿರಾಕರಿಸುತ್ತಿದ್ದಾರೆ. ಸಪ್ತಮೀ ವಿಭಕ್ತಿಯು ಆಧಾರತ್ವವನ್ನು ಪಂಚಮೀ ವಿಭಕ್ತಿಯು ಅವಧಿತ್ವವನ್ನು ಹೇಳುತ್ತದೆ. ವಿಕಕಾಲದಲ್ಲಿ ಎರಡನ್ನೂ ಮುಖ್ಯವೆಂದು ಪರಿಗಣಿಸಲಾಗದು. ಆಧಾರತ್ವ ಮತ್ತು ಅವಧಿತ್ವಗಳಲ್ಲಿ ಒಂದು ಮುಖ್ಯವಾದಾಗ ಮತ್ತೊಂದು ಅಮುಖ್ಯವಾಗುತ್ತದೆ. ಆದ್ದರಿಂದ ದೃಷ್ಟಾಂತದಲ್ಲಿ ಒಂದು ಮುಖ್ಯಪ್ರಯೋಗ ಮತ್ತೊಂದು ಅಮುಖ್ಯಪ್ರಯೋಗವಾಗಿದೆ. ಆದರೆ ಶ್ರುತಿಯು ಮುಖ್ಯಾರ್ಥವನ್ನಷ್ಟೇ ಹೇಳುತ್ತದೆ ಹೊರತು ಅಮುಖ್ಯಾರ್ಥವನ್ನು ಹೇಳುವುದಿಲ್ಲ. ಹೀಗೆ ದೃಷ್ಟಾಂತವು ವಿಷಮವಾದ್ದರಿಂದ ದಿವಃಪರತ್ವ ಮತ್ತು ದಿವಿಸ್ಥಿತತ್ವವನ್ನು ಸಮರ್ಥಿಸಲು ಸಾಧ್ಯವಿಲ್ಲವೆಂದು ಗ್ರಂಥಕಾರರು ಇಲ್ಲಿ ಸಮರ್ಥಿಸಿದ್ದಾರೆ.

ಶಾಂಕರಭಾಷ್ಯದ ಅಭಿಪ್ರಾಯವನ್ನು ವ್ಯಾಖ್ಯಾನಿಸುವ ಭಾಮತೀಮತವನ್ನು ಅನುವಾದ ಮಾಡಿ 'ಅತ್ರ' ಎಂಬ ಗ್ರಂಥದಿಂದ ನಿರಾಕರಿಸುತ್ತಿದ್ದಾರೆ.

ಭಾಮತಿಯ ಈ ವಾದವನ್ನು 'ತನ್ನ' ಎಂದು ನಿರಾಕರಿಸಿದ್ದಾರೆ. ಜ್ಯೋತಿಶಬ್ದಕ್ಕೆ ಲಕ್ಷಣಾ ಮಾಡಿದಾಗ ಬರುವ ದೋಷವನ್ನು 'ಜ್ಯೋತಿಷಃ' ಎಂಬ ಪದದಿಂದ ಸಮರ್ಥಿಸಿದ್ದಾರೆ. ಮೂರೂ ಪದಗಳಿಗೆ ಲಕ್ಷಣಾ ಮಾಡಿದಾಗ ಬರುವಂತಹ ಸಾಧಾರಣದೋಷವನ್ನು 'ಲಕ್ಷಣಾದಿಪ್ರಸಂಗಾತ್' ಎಂದು ಹೇಳಿದ್ದಾರೆ. ಬೇರೆ ಗತಿಯಿಲ್ಲದೆ ಹೀಗೆ ಲಕ್ಷಣಾ ಮಾಡಬೇಕೆಂದು ಉತ್ತರಿಸಿದರೆ 'ಪೃಥಿವ್ಯಾಮ್' ಎಂಬ ವಾಕ್ಯದಿಂದ ಗತ್ಯಂತರವನ್ನು ಹೇಳಿದ್ದಾರೆ.

ಪೃಥಿವ್ಯಾಂ ದ್ಯೌರ್ಮಹಾಮೇರುರಾಕಾಶೇ ಸೂರ್ಯಮಂಡಲಮ್ ।
ದಿವೀಂದ್ರಸದನಂ ಚೈವ ತತ್ತದೇ ತು ದಿವಃಪರೇ ॥

(ಮೇರುಪರ್ವತವು ಪೃಥಿವೀಲೋಕದ ದ್ಯುಲೋಕವೆನಿಸಿದೆ. ಇದರ ಮೇಲ್ಭಾಗದಲ್ಲಿ ಅನಂತಾಸನವಿದೆ. ಆದ್ದರಿಂದ ಅನಂತಾಸನದಲ್ಲಿರುವ ಜ್ಯೋತಿಯು ದಿವಃಪರವೆನಿಸುತ್ತದೆ. ಅಂತರಿಕ್ಷಲೋಕದಲ್ಲಿ

ಸೂರ್ಯಮಂಡಲವು ದ್ಯುಲೋಕ. ಅದರ ಮೇಲೆ ಶ್ವೇತದ್ವೀಪವಿದೆ. ಶ್ವೇತದ್ವೀಪದಲ್ಲಿರುವ ರೂಪವೂ ಸಹ ಹೀಗೆ ದಿವಃಪರ ಎನಿಸಿದೆ. ಸ್ವರ್ಗಲೋಕದಲ್ಲಿ ಇಂದ್ರನ ಅರಮನೆಯು ದ್ಯುಲೋಕ. ಅದರ ಮೇಲೆ ವೈಕುಂಠವಿದೆ. ಅಲ್ಲಿರುವ ರೂಪವು ದಿವಃಪರವೆನಿಸುತ್ತದೆ. ಹೀಗೆ ಮೂರೂ ರೂಪಗಳಿಗೂ ದಿವಃಪರತ್ವವನ್ನು ತಿಳಿಯಬೇಕು.)

ಹೀಗೆ ಛಾಂದೋಗ್ಯಭಾಷ್ಯದಲ್ಲಿ ಉದಾಹರಿಸಿದ ಸ್ಮೃತಿಯು ದ್ಯುಶಬ್ದಕ್ಕೆ ಅನೇಕ ಅರ್ಥವನ್ನು ಹೇಳಿದೆ. ಅಕ್ಷ ಎಂಬ ಶಬ್ದಕ್ಕೆ ಹೇಗೆ ಅನೇಕಾರ್ಥಗಳಿದೆಯೋ ಅದರಂತೆ ದ್ಯುಶಬ್ದಕ್ಕೂ ಅನೇಕಾರ್ಥವಿದೆ. ಆದ್ದರಿಂದ ಅಧಾರತ್ವ ಮತ್ತು ಅವಧಿತ್ವಗಳಿಗೆ ಮುಖ್ಯಪ್ರಯೋಗವನ್ನೇ ಹೇಳಬಹುದು - ಎಂದು ಅಭಿಪ್ರಾಯ.

## ಸಾರ

ಜ್ಯೋತಿಸೂತ್ರಕ್ಕೆ ಮತ್ತು ಮೂರನೆಯ ಭೂತಾದಿಸೂತ್ರಕ್ಕೆ ಪರರು ಮಾಡಿದ ವ್ಯಾಖ್ಯಾನವನ್ನು ಇಲ್ಲಿಯ ತನಕ ವಿಮರ್ಶಿಸಿದ್ದಾಯಿತು. ಗಾಯತ್ರಿ ಎಂಬ ಅಧಿಷ್ಠಾನದಲ್ಲಿ ಬ್ರಹ್ಮನನ್ನು ಉಪಾಸನೆ ಮಾಡಬೇಕೆಂದು ತಿಳಿಸಲು ಎರಡನೆಯ ಸೂತ್ರವು ಹೊರಟದೆ ಎಂಬ ಅವರ ವ್ಯಾಖ್ಯಾನವನ್ನು ಪ್ರತ್ಯೇಕವಾಗಿ ನಿರಾಕರಿಸಬೇಕಿಲ್ಲ. ಅನೇಕ ಸ್ಥಳಗಳಲ್ಲಿ ಬ್ರಹ್ಮನು ಆರೋಪಾಧಿಷ್ಠಾನನಾಗುವುದಿಲ್ಲ ಎಂಬ ನಿರಾಕರಣೆಯಿಂದಲೇ ಪರರ ದ್ವಿತೀಯಸೂತ್ರದ ವ್ಯಾಖ್ಯಾನವು ನಿರಾಕೃತವಾಗಿದೆ. ಪ್ರಕೃತ ನಾಲ್ಕನೆಯ 'ಉಭಯಸಿನ್ನಪ್ಯವಿರೋಧಾತ್' ಎಂಬ ಪರರ ಸೂತ್ರ-ವ್ಯಾಖ್ಯಾನವನ್ನು ವಿಮರ್ಶಿಸಲಾಗಿದೆ.

ಜ್ಯೋತಿಯಲ್ಲಿ ಕೇಳಿಸುತ್ತಿರುವ ದಿವಃಪರತ್ವ ಮತ್ತು ದಿವಿಸ್ಥಿತತ್ವವನ್ನು ಪ್ರಮಾಣದ ಆಧಾರದಿಂದ ನಾವು ಭಗವಂತನಲ್ಲಿ ಸಮರ್ಥಿಸುತ್ತೇವೆ. ಆದರೆ ಅದ್ವೈತಿಗಳು ಉದಾಹರಣೆಯ ಮೂಲಕ ಪರಿಹರಿಸಲು ಪ್ರಯತ್ನಿಸಿದ್ದಾರೆ -- ಪಕ್ಷಿಯು ಮರದ ತುದಿಯಲ್ಲಿ ಕುಳಿತಿರುವಾಗ 'ಮರದ ತುದಿಯಲ್ಲಿ ಪಕ್ಷಿ' ಎಂಬ ಪ್ರಯೋಗವಿದ್ದಂತೆ; 'ಮರದ ತುದಿಯ ಆಚೆ ಪಕ್ಷಿ' ಎಂಬ ಪ್ರಯೋಗವನ್ನೂ ಲೋಕದಲ್ಲಿ ಕಾಣುತ್ತೇವೆ. ಇದರಂತೆ ಜ್ಯೋತಿಯು ದ್ಯುಲೋಕದಲ್ಲಿ ಇದ್ದಾಗ ದಿವಿಸ್ಥಿತನೆಂಬ ಪ್ರಯೋಗವಿದೆ. ಆದರೂ ದಿವಃಪರಃ ಎಂದು ಪ್ರಯೋಗಿಸಬಹುದು. ಮತ್ತು ಪಕ್ಷಿಯು ಮರದ ತುದಿಯ ಆಚೆ ಹಾರುತ್ತಿರುವಾಗ 'ಮರದ ತುದಿಯ ಆಚೆ ಪಕ್ಷಿ' ಎಂಬ ಪ್ರಯೋಗವಿದ್ದಂತೆ 'ಮರದ ತುದಿಯಲ್ಲಿ ಪಕ್ಷಿ' ಎಂಬ ಪ್ರಯೋಗವು ಕಾಣಿಸುತ್ತದೆ. ಇದರಂತೆ ಬ್ರಹ್ಮನು ದಿವಃಪರನಾಗಿದ್ದರೂ ದಿವಿಸ್ಥಿತನೆಂದು ಪ್ರಯೋಗಿಸಬಹುದು.

ಇದು ಅದ್ವೈತಿಗಳ ವಾದ. ಅಂತೂ ಬ್ರಹ್ಮನು ದ್ಯುಲೋಕದ ಒಳಗಿದ್ದಾನೋ, ಹೊರಗಿದ್ದಾನೋ ಎಂಬುದನ್ನು ಇವರು ಸ್ಪಷ್ಟ ಪಡಿಸಲೇ ಇಲ್ಲ. ಮತ್ತು ದ್ಯುಲೋಕದ ಸಂಬಂಧವಿರುವಾಗ ಅಥವಾ ಇಲ್ಲದಿರುವಾಗ ಎರಡು ವಿಧಪ್ರಯೋಗಗಳನ್ನು ಮುಖ್ಯವೆಂದು ಅದ್ವೈತಿಗಳಿಗೆ ಸಮರ್ಥಿಸಲಾಗದು. ಉದಾಹರಣೆ ನೀಡಿದಂತೆ ಒಂದು ಪ್ರಯೋಗವನ್ನಷ್ಟೇ ಮುಖ್ಯವೆಂದು ಹೇಳಿ ಮತ್ತೊಂದು ಪ್ರಯೋಗವನ್ನು ಅಮುಖ್ಯವೆನ್ನಬೇಕು. ಆದರೆ ಶ್ರುತಿಗೆ ಅಮುಖ್ಯಾರ್ಥ ಮಾಡುವುದು ಸರಿಯಲ್ಲ.

ಭಾಮತಿಯ ಸಮರ್ಥನೆ -- ಪಕ್ಷಿ ಮರದ ಮೇಲೆ ಕುಳಿತಾಗ ಮರಕ್ಕೆ ಪಕ್ಷಿಯ ಕಾಲುಗಳಷ್ಟೇ ಸಂಬಂಧವಾಗಿರುತ್ತವೆ. ಹೊಟ್ಟೆ, ಕತ್ತು ಮೊದಲಾದ ಭಾಗಗಳು ಸಂಬಂಧ ಹೊಂದಿರುವುದಿಲ್ಲ. ಸಂಬಂಧ ಹೊಂದಿರುವ

ಕಾಲನ್ನು ವಿವಕ್ಷಿಸಿ 'ಮರದಲ್ಲಿ ಪಕ್ಷಿ' ಎಂಬ ಪ್ರಯೋಗವು ಸಾಧುವಾಗಿದೆ; ಸಂಬಂಧ ಹೊಂದಿರದ ಹೊಟ್ಟೆ ಕತ್ತು ಮೊದಲಾದವುಗಳನ್ನು ವಿವಕ್ಷಿಸಿ 'ಮರದ ತುದಿಯ ಆಚೆ ಪಕ್ಷಿ' ಎಂಬ ಪ್ರಯೋಗವು ಸಾಧುವಾಗುತ್ತದೆ. ಇದರಂತೆ ದ್ಯುಲೋಕದಲ್ಲಿ ಸಂಬಂಧ ಹೊಂದಿರುವ ಬ್ರಹ್ಮನ ಅವಯವವನ್ನು ವಿವಕ್ಷಿಸಿ ದಿವಿಸ್ಥಿತನೆಂಬ ಪ್ರಯೋಗವು ಸಾಧುವಾಗಿದೆ. ಸಂಬಂಧಪಡದ ಅವಯವವನ್ನು ವಿವಕ್ಷಿಸಿ ದಿವಃಪರತ್ವವೆಂಬ ಪ್ರಯೋಗವು ಸಾಧುವಾಗಿದೆ.

ಭಾಮತಿಯ ಈ ವಿಚಾರ ಅತ್ಯಂತ ಬಾಲಿಶ. ಸ್ವತಃ ತಾವೇ ಬ್ರಹ್ಮನನ್ನು ನಿರವಯವನೆಂದು ಒಪ್ಪಿ ಈಗ ಅವಯವವನ್ನು ಹೇಳುವುದು ಅನುಚಿತ. ಮತ್ತು ವಸ್ತುಸ್ಥಿತಿಯನ್ನು ಅರ್ಥಮಾಡಿಕೊಳ್ಳದೇ ಸ್ವಕಪೋಲಕಲ್ಪಿತವಾದ ಇಂತಹ ವ್ಯಾಖ್ಯಾನವು ಅತ್ಯಂತ ಕ್ಲಿಷ್ಟಕರ. ಅಷ್ಟೇ ಅಲ್ಲದೆ ಶ್ರುತಿಗೆ ಮುಖ್ಯಾರ್ಥವನ್ನು ಹೇಳಲು ಬರುವಾಗ ಲಕ್ಷಣಾ ಮಾಡುವುದು ಅನಾವಶ್ಯಕ. ದಿವಃಪರತ್ವ ಮತ್ತು ದಿವಿಸ್ಥಿತತ್ವವನ್ನು ಸಮರ್ಥಿಸುವ ಸ್ಮೃತಿವಿರೋಧವು ಇವರಿಗೆ ತಪ್ಪಿದ್ದಲ್ಲ.

---

## ರಾಮಾನುಜರ ನಾಲ್ಕನೇ ಸೂತ್ರ ವಿಮರ್ಶೆ

### ತಾತ್ಪರ್ಯಚನ್ದ್ರಿಕಾ

**केचित्तु – सप्तमी अन्तर्बहिरधरोर्ध्वभागस्थितिसाधारणी, प्रासादस्यान्तरधर-भागस्थिते इव बहिरूर्ध्वभागावस्थितेऽपि वस्तुनि 'प्रासादे वर्तते' इति प्रयोगात् । पञ्चमी तूपरिस्थित्यसाधारणी । अत उभाभ्यां स्थानविशेषात् उपरिस्थितिरेव विवक्षितेत्युभे अपि मुख्यार्थे एवेत्याहुः ।**

**तन्न, उभयत्रापि द्युशब्दस्यैकार्थत्वे द्वयोरपि मुख्यार्थत्वायोगात् । सप्तमी ह्याधारत्वे । परन्तु तदाधारत्वमधरान्तर्भागाभ्यामिवोर्ध्वबहिर्भागाभ्यामप्यवच्छिद्यते, न त्ववयविनोऽवधित्वे सप्तमी । नहि वृक्षात् परतो भ्रमन् श्येनो 'वृक्षेऽस्ति' इत्युच्यते । पञ्चमी त्ववधित्व एव, न त्वाधारत्वे । न ह्यूर्ध्वभागावच्छिन्नेऽपि वृक्षे वसन् 'वृक्षात् परतः' इत्युच्यते, किन्तु 'वृक्षस्योर्ध्वभागे' इति । तस्मात् ''त्रिसप्तलोकापेक्षया'' इति भाष्योक्त एव परिहारः साधुः ।**

ಅನುವಾದ - ರಾಮಾನುಜರ ವಾದ - ಸಪ್ತಮೀವಿಭಕ್ತಿಯು ಒಳಗೆ, ಹೊರಗೆ, ಕೆಳಗೆ, ಮೇಲೆ ಎಂಬರ್ಥಗಳಲ್ಲಿ ಸಾಧಾರಣವಾಗಿದೆ. ದೇವದತ್ತನು ಮಹಡಿಯ ಒಳಗೆ ಅಥವಾ ಕೆಳಗೆ ಇದ್ದಾಗ 'ಮಹಡಿಯಲ್ಲಿ ದೇವದತ್ತನಿದ್ದಾನೆ' ಎಂಬ ಪ್ರಯೋಗವು ಕಾಣಿಸುತ್ತದೆ. ಇದರಂತೆ ಮಹಡಿಯ ಹೊರಗೆ ಅಥವಾ ಮೇಲೆ ಇದ್ದಾಗಲೂ 'ಮಹಡಿಯಲ್ಲಿ ದೇವದತ್ತನಿದ್ದಾನೆ' ಎಂಬ ಪ್ರಯೋಗವು

ಇರುತ್ತದೆ. ಪಂಚಮೀ ವಿಭಕ್ತಿಯಾದರೋ ಮೇಲೆ ಎಂಬರ್ಥದಲ್ಲಷ್ಟೇ ಅಸಾಧಾರಣವಾಗಿದೆ. ಈ ದೃಷ್ಟಾಂತದಂತೆ 'ದಿವಿಸ್ಥಿತಃ' ಮತ್ತು 'ದಿವಃಪರಃ' ಎಂಬ ಎರಡೂ ಪ್ರಯೋಗಗಳು ಮುಖ್ಯಾರ್ಥ-ವುಳ್ಳವುಗಳೇ ಆಗಿವೆ. ಈ ಸಪ್ತಮೀ ಮತ್ತು ಪಂಚಮೀವಿಭಕ್ತಿಗಳಲ್ಲಿ ಪಂಚಮೀವಿಭಕ್ತಿಯೇ ವಸ್ತು-ಸ್ಥಿತಿಯನ್ನು ಹೇಳುತ್ತಿದೆ. ಅಂದರೆ ಜ್ಯೋತಿಯು ದಿವಃಪರನೇ ಆಗಿದ್ದಾನೆ. ದಿವಿ ಎಂಬ ಸಪ್ತಮ್ಯಂತ-ಪದಕ್ಕೆ ದ್ಯುಲೋಕದ ಮೇಲ್ಭಾಗದಲ್ಲಿ ಎಂದು ಅರ್ಥೈಸಬೇಕು.

ಇದು ತಪ್ಪು. ಏನೇ ಆದರೂ ಒಂದು ವಿಭಕ್ತಿಗೆ ಅಮುಖ್ಯಾರ್ಥವನ್ನು ಒಪ್ಪಿದಂತೆ ಆಯಿತು. 'ದಿವಃ ಪರಃ ಮತ್ತು ದಿವಿ ಸ್ಥಿತಃ' ಎಂದು ಎರಡೂ ಕಡೆ ಇರುವ ದ್ಯುಶಬ್ದಕ್ಕೆ ಒಂದೇ ಅರ್ಥವನ್ನು ಹೇಳುತ್ತೀರಿ. ಎರಡೂ ಕಡೆ ಇರುವ ದ್ಯುಶಬ್ದಕ್ಕೆ ಮುಖ್ಯಾರ್ಥವನ್ನು ಹೇಳಲು ಸಾಧ್ಯವಿಲ್ಲ. ಅದು ಹೀಗೆ -- ಸಪ್ತಮಿಯು ಆಧಾರತ್ವವನ್ನು ಹೇಳುತ್ತದೆ. ಆದರೆ ಆ ಆಧಾರತ್ವವು ಅಧರಭಾಗದಿಂದ ಮತ್ತು ಅಂತರ್ಭಾಗದಿಂದ ಅವಚ್ಛಿನ್ನವಾದಂತೆ (ವಿಶಿಷ್ಟವಾದಂತೆ) ಊರ್ಧ್ವಭಾಗ ಮತ್ತು ಬಹಿ-ರ್ಭಾಗಗಳಿಂದಲೂ ಅವಚ್ಛಿನ್ನವಾಗುತ್ತದೆ. ಆದ್ದರಿಂದ ಸಪ್ತಮೀವಿಭಕ್ತಿಯನ್ನು ಪ್ರಯೋಗಿಸಬೇಕೆಂದರೆ ಒಳಗೆ, ಕೆಳಗೆ, ಮೇಲೆ, ಹೊರಗೆ ಯಾವುದಾದರೂ ಒಂದು ಸ್ಥಳದಲ್ಲಿ ಸಂಬಂಧವನ್ನು ಹೊಂದಿರಲೇ ಬೇಕು ಹೊರತು ಸಂಬಂಧವನ್ನು ಹೊಂದದೆ ದೂರದಲ್ಲಿದ್ದಾಗ ಆಧಾರಪದಾರ್ಥಕ್ಕೆ ಅವಧಿತ್ವವು ಬರುತ್ತದೆ ಹೊರತು ಆಧಾರತ್ವವು ಬರುವುದಿಲ್ಲ. ಆವಾಗ ಸಪ್ತಮೀವಿಭಕ್ತಿಯನ್ನು ಪ್ರಯೋಗಿಸಲು ಸಾಧ್ಯವಿಲ್ಲ. ಮರದ ಆಚೆ ಪಕ್ಷಿಯು ಹಾರುತ್ತಿರುವಾಗ 'ಮರದಲ್ಲಿ ಹಕ್ಕಿಯಿದೆ' ಎಂದು ಯಾರೂ ಹೇಳುವುದಿಲ್ಲ. ಇನ್ನು ಪಂಚಮೀವಿಭಕ್ತಿಯು ಅವಧಿತ್ವವನ್ನಷ್ಟೇ ಹೇಳುತ್ತದೆ; ಹೊರತು ಆಧಾರತ್ವ-ವನ್ನು ಹೇಳುವುದಿಲ್ಲ. ಪಕ್ಷಿಯು ಮರದ ತುದಿಯಲ್ಲಿ ಸಂಬಂಧವನ್ನು ಹೊಂದಿರುವಾಗ 'ಮರದ ಆಚೆ ಪಕ್ಷಿ' ಎಂದು ಯಾರೂ ಪ್ರಯೋಗಿಸುವುದಿಲ್ಲ; ಹೊರತು ಮರದ ತುದಿಯಲ್ಲಿ ಪಕ್ಷಿ ಎಂದೇ ಪ್ರಯೋಗಿಸುತ್ತಾರೆ. ಆದ್ದರಿಂದ 'ತ್ರಿಸಪ್ತಲೋಕಾಪೇಕ್ಷಯಾ' ಎಂಬ ಭಾಷ್ಯದಲ್ಲಿ ಹೇಳಿದ ಹಾಗೆ ಮೂರು ಲೋಕಗಳನ್ನು ವಿವಕ್ಷಿಸಿ ಅಥವಾ ಏಳು ಲೋಕಗಳನ್ನು ವಿವಕ್ಷಿಸಿ ದಿವಃಪರತ್ವ ಮತ್ತು ದಿವಿಸ್ಥಿತತ್ವಗಳನ್ನು ಹೊಂದಿಸಬೇಕು. ಈ ಪರಿಹಾರ ಬಿಟ್ಟು ಬೇರೆ ಮಾರ್ಗವಿಲ್ಲ.

**प्रकाशः** – उक्तदोषाप्रसङ्गान्मतान्तरं पृथगनूद्य निरस्यति – **केचित्त्विति** ॥ तदेव दर्शयति – **प्रासादस्येति** ॥ अन्तर्भागे अधरभागे स्थिते इत्यर्थः । बहिरूर्ध्वभागयोः स्थितेऽपीति ध्येयम् । किमतो यद्येवमित्यतोऽसाधारण-पञ्चम्यनुसारेण साधारणसप्तमी नेया, ततश्च द्वयोर्मुख्यार्थलाभ इत्याह – अत इति ॥ उक्तमेव विवेचयति – **सप्तमीति** ॥ **अवयविन इति** ॥ अन्तर्बहिरावयवयव-विशिष्टस्येत्यर्थः । सप्तम्या अमुख्यार्थत्वं प्रदर्श्य पञ्चम्यास्तदर्शयति – **पञ्चमीति** ॥ उच्यते' मुख्यवृत्त्या कथ्यत इत्यर्थः ।

ಎತೇನ ಯತ್ಕೇನಚಿತ್ಪ್ರಲಪಿತಂ, ''ಯದತಃ ಪರೊ ದಿವಃ'' ಇತಿ ವಾಕ್ಯೇ ಜ್ಯೋತಿಶ್ಶಿವಃ ತದನ್ಯೊ ವೇತಿ ಸನ್ದೇಹೇ, ದ್ಯುಶಬ್ದಸ್ಯಾऽऽಕಾಶವಾಚಿತ್ವಾತ್ತಸ್ಯ ಚ ದೇಹಬಾಹ್ಯಭೂತಾಕಾಶರೂಪಸ್ಯ ವಾऽನ್ತರಿಕ್ಷಲೋಕರೂಪಸ್ಯ ವಾ ವಿವಕ್ಷಿತತ್ವೇನ ತತ ಊರ್ಧ್ವವರ್ತೀ ಸೂರ್ಯೊ ವಾ 'ಅನ್ತಃ ಪುರುಷೇ ಜ್ಯೋತಿಃ'' ಇತಿ ಪುರುಷಾನ್ತರ್ವರ್ತಿತಯಾ ಜಾಠರಾಗ್ನಿರ್ವೇತಿ ಪ್ರಾಪ್ತೇ, ''ಪಾದೋಸ್ಯ ಸರ್ವಾ ಭೂತಾನಿ'' ಇತಿ ಸರ್ವಭೂತಪಾದಾಭಿಧಾನಾತ್, ತಸ್ಯ ಚ ಪರಿಚ್ಛಿನ್ನಗಾಯತ್ರ್ಯಾಮಯೊಗಾಚ್ಛಿವ ಏವೇತಿ ಸಿದ್ಧಾನ್ತ ಇತಿ ॥ ಉಪದೇಶಭೇದಾದೇರ್ಭಾಮತ್ಯುಕ್ತ ಏವ ಪರಿಹಾರಃ । ತದುಕ್ತಂ –

**ಜ್ಯೋತಿಃ ಪೂಷಾ ದಿವೊऽಭ್ರಾದ್ಭವತಿ ಹಿ ಪರತೊ ಜಾಠರೈಕ್ಯೊಪದೇಶಾತ್**
**ವಹ್ನಿರ್ವಾ ತನ್ನ ಶಮ್ಭುಶ್ಚರಣಕಥನತಃ ತತ್ರ ಹೇತೊರಸಿದ್ಧೇಃ ।**

ಇತ್ಯಾದಿ, ತನ್ನಿರಸ್ತಂ, ಉದಾಹರಣಾಯೊಗಸ್ಯ ಚರಣಪದಾಯೊಗಸ್ಯ ಚೊಕ್ತತ್ವಾತ್ । ಉಪದೇಶಭೇದಾದಿಪರಿಹಾರಸ್ಯ ಭಾಮತೀಮತೊಕ್ತದೊಷೇಣೈವ ದುಷ್ಟತ್ವಾತ್ । ''ಪೌನರುಕ್ತ್ಯಂ ಪರಮತೇ'' ಇತ್ಯಾದಿದೊಷಸಾಮ್ಯಾಚ್ಚ । ವಾಗಾದೇರಪಿ ಪ್ರಕೃತತ್ವೇನ ಭೂತಾದಿಚತುಷ್ಪಾತ್ತ್ವಾಯೊಗಸ್ಯೊಕ್ತತ್ವಾಚ್ಚ ॥

ಯದತ್ರೊಕ್ತಂ ಶಿವಾರ್ಕಮಣಿದೀಪಿಕಾಯಾಂ – ''ನದ್ಯಾಂ ಘೊಷಃ'' ಇತ್ಯುಕ್ತ್ವನನ್ತರಂ ಗಮ್ಭೀರಾಯಾಮಿತಿ ವಿಶೇಷಣೇ ತಾದೃಶನದೀಸಮ್ಬನ್ಧಿತ್ವೇನ ನದೀಶಬ್ದಸ್ತೀರಪರಃ । ಏವಂ ''ಗಾಯತ್ರೀ ವಾ ಇದಂ ಸರ್ವಂ ಭೂತಂ'' ಇತ್ಯುಕ್ತ್ವನನ್ತರಂ ''ವಾಗ್ವೈ ಗಾಯತ್ರೀ'' ಇತಿ ವಿಶೇಷಣೇ ವಾಗ್ರೂಪಗಾಯತ್ರ್ಯಾತ್ಮಕತ್ವಂ ಭೂತಸ್ಯ ಲಭ್ಯತ ಇತಿ ನ ತಸ್ಯಾಃ ಪಾರ್ಥಕ್ಯಮಿತಿ, ತನ್ನ, ಏವಮಪಿ ಪ್ರಾಣೇನ ಸಹ ಪಞ್ಚಪಾದತ್ವಾನಿರಾಸಾತ್ । ಕಿಞ್ಚೈವಂ ಸತಿ ಷಾಡ್ವಿಧ್ಯಾನುಪಪತ್ತಿಃ, ವಾಕ್ತ್ವಸ್ಯ ಗಾಯತ್ರೀವಿಶೇಷಣತ್ವಾತ್ ।

ಯದತ್ರೊಕ್ತಂ – **ಪೃಥಿವ್ಯಾಂ ಸರ್ವಭೂತಪ್ರತಿಷ್ಠಾತ್ವಂ ಸರ್ವಭೂತಾನತಿವರ್ತನೀಯತ್ವಮಿತಿ ದ್ವೇ ವಿಧೇ, ಶರೀರಹೃದಯಯೊರ್ಯೇ ಪ್ರಾಣಪ್ರತಿಷ್ಠಾತ್ವತದನತಿ ವರ್ತನೀಯತ್ವೇ, ತಯೊರಾಶ್ರಯಭೇದೇನ ಚತುಷ್ಪೇನ ಷಾಡ್ವಿಧ್ಯೊಪಪತ್ತಿಃ**– ಇತ್ಯಾದಿ ತದಪಿ ನ, ಭೂತಾದಿರೂಪೇಣ ಷಾಡ್ವಿಧ್ಯಸಮ್ಭವೇ ಕ್ಲೇಶಾಯೊಗಾತ್ । ಏಕಸ್ಯೈವ ಧರ್ಮಸ್ಯ ಧರ್ಮಿಭೇದೇನ ವಿಧಾನ್ತರತ್ವೇ ಅತಿಪ್ರಸಙ್ಗಾಚ್ಚ । ''ಗಾಯತ್ರ್ಯಾ ಸಂಸ್ಥಿತೊ ವಿಷ್ಣುಃ'' ಇತ್ಯಾದಿಸ್ಮೃತಿವಿರೊಧಾಚ್ಚ । ಕಿಞ್ಚ –

**ನಾರಾಯಣಪರೊ ಜ್ಯೊತಿರಾತ್ಮಾ ನಾರಾಯಣಃ ಪರಃ ।**

''ವಿಷ್ಣುರೇವ ಜ್ಯೋತಿ; ರ್ವಿಷ್ಣುರೇವ ಬ್ರಹ್ಮ'' ''ಅಹಮಗ್ನಿರಹಂ ಹುತಮ್'' ಇತ್ಯಾದಿ ಶ್ರುತಿಸ್ಮೃತಿವಿರೊಧಾಚ್ಚ ।

**यदिदं परितः पूर्णं मत्स्यकूर्मादिरूपकम् ।**

ಇತ್ಯಾದಿ ಛಾಂದೋಗ್ಯಭಾಷ್ಯೋದಾಹೃತೈತದ್ವಚಾಖ್ಯಾನರೂಪಸ್ಮೃತಿವಿರೋಧಾಚ್ಚ । ಪುರುಷಸೂಕ್ತಗತ-ಮನ್ತ್ರೋದಾಹರಣವಿರೋಧಾಚ್ಚ ।

ಯದಪಿ – ಪುರುಷಸೂಕ್ತಸ್ಯ ಶಿವಪರತ್ವಕಲ್ಪನಂ, ತದಪಿ ನ, ''यज्ञो वै विष्णुः'' ಇತ್ಯಾದಿ ಶ್ರುತಿಸಿದ್ಧಯಜ್ಞನಾಮವಿರೋಧಾತ್ । ಲಕ್ಷ್ಮೀಪತಿತ್ವಲಿಙ್ಗವಿರೋಧಾತ್ । ಚನ್ದ್ರಿಕೋಕ್ತದಿಶಾ ವಿಷ್ಣ್ವೇಕನಿಷ್ಠಪುರುಷಶ್ರುತಿವಿರೋಧಾತ್ । ''तस्माद्विराडजायत'' ಇತ್ಯುಕ್ತಚತುರ್ಮುಖಜನಕತ್ವ-ಲಿಙ್ಗಸ್ಯ ವಿಷ್ಣಾವೇವ ಪ್ರಸಿದ್ಧ್ಯಾ ತದ್ವಿರೋಧಾಚ್ಚ ।

**तस्मिन् काले महाराज राम एवाभिधीयते ।**
**यथा हि पौरुषे सूक्ते विष्णुरेवाभिधीयते ॥**

ಇತಿ ಸ್ಕಾನ್ದವಚನವಿರೋಧಾಚ್ಚೇತಿ ।

**सुदर्शनाख्यं स्वास्त्रं तु प्रायुङ्क्त दयितं त्रिपात् ॥**

ಇತಿ ಭಾಗವತವಿರೋಧಾಚ್ಚ । ಕಥಂ ತರ್ಹ್ಯುಪದೇಶಭೇದಪರಿಹಾರ ಇತ್ಯತ ಆಹ – ತಸ್ಮಾದಿತಿ ॥

ವಿವರಣೆ - ಇಲ್ಲಿಯ ತನಕ ಆದ್ವೈತವಾದವನ್ನು ನಿರಾಕರಿಸಿದ್ದಾಯಿತು. ಆದ್ವೈತಿಗಳಿಗೆ ಬರುವ ದೋಷವು ರಾಮಾನುಜರಿಗೆ ಬರುವುದಿಲ್ಲವಾದ್ದರಿಂದ ಪ್ರತ್ಯೇಕವಾಗಿ ರಾಮಾನುಜಮತವನ್ನು ಅನುವಾದ ಮಾಡಿ 'ಕೇಚಿತ್ತು,' ಇತ್ಯಾದಿ ಗ್ರಂಥದಿಂದ ನಿರಾಕರಿಸುತ್ತಿದ್ದಾರೆ. 'ಪ್ರಾಸಾದಸ್ಯ' ಎಂಬ ವಾಕ್ಯದಿಂದ ರಾಮಾನುಜಮತವನ್ನು ವಿವರಿಸುತ್ತಿದ್ದಾರೆ. ಅಂತರ್ಭಾಗದಲ್ಲಿ ಮತ್ತು ಅಧರಭಾಗದಲ್ಲಿರುವ ಎಂದರ್ಥ. ಆದರಂತೆ ಹೊರಗಿನ ಭಾಗ ಮತ್ತು ಊರ್ಧ್ವಭಾಗದಲ್ಲಿರುವ ಎಂಬರ್ಥವನ್ನು ತಿಳಿಯಬೇಕು. ಇದರಿಂದ ಏನು ತಿಳಿಯುತ್ತದೆಂದರೆ ನಿರವಕಾಶಪಂಚಮೀವಿಭಕ್ತಿಗೆ ಅನುಸಾರವಾಗಿ ಸಾವಕಾಶವಾದ ಸಪ್ತಮೀ ವಿಭಕ್ತಿಯನ್ನು ಅರ್ಥೈಸಬೇಕು. ಆದ್ದರಿಂದ ಸಪ್ತಮೀ ಹಾಗೂ ಪಂಚಮೀವಿಭಕ್ತಿಗಳು ಮುಖ್ಯಾರ್ಥವನ್ನೇ ಹೇಳುತ್ತವೆ. 'ಉಭಯತ್ರಾಪಿ' ಎಂಬ ವಾಕ್ಯದಿಂದ ಹೇಳಿದ ದೋಷವನ್ನೇ 'ಸಪ್ತಮೀ ಹಿ' ಎಂಬ ವಾಕ್ಯದಿಂದ ವಿವರಿಸಿದ್ದಾರೆ. ಎಲ್ಲಾ ಅವಯವಗಳಿಂದ ವಿಶಿಷ್ಟವಾದ ಅವಯವಿಯು ಅವಧಿಯಾದಾಗ ಆಧಾರತ್ವವನ್ನು ಹೇಳಲು ಸಾಧ್ಯವಿಲ್ಲ ಎಂದರ್ಥ. ಸಪ್ತಮೀವಿಭಕ್ತಿಗೆ ಅಮುಖ್ಯಾರ್ಥವನ್ನು ತೋರಿಸಿ ಪಂಚಮಿಗೆ ಆಧಾರತ್ವವನ್ನು ವಿವಕ್ಷಿಸುವುದಾದರೆ ಪಂಚಮಿಯು ಅಮುಖ್ಯಾರ್ಥವಾಗುತ್ತದೆಂದು 'ಪಂಚಮಿ' ಎಂಬ ವಾಕ್ಯದಿಂದ ತೋರಿಸುತ್ತಿದ್ದಾರೆ. 'ಉಚ್ಯತೇ' ಎಂದರೆ ಮುಖ್ಯವೃತ್ತಿಯಿಂದ ಹೇಳ-ಲ್ಪಡುತ್ತದೆ ಎಂದರ್ಥ.

'' 'ಯದತಃ ಪರೋ ದಿವಃ' ಎಂಬ ವಾಕ್ಯದಲ್ಲಿರುವ ಜ್ಯೋತಿಯು ಶಿವನೋ ಅಥವಾ ಬೇರೆಯೋ ಎಂದು ಸಂದೇಹ. ದ್ಯುಶಬ್ದವು ಆಕಾಶದಲ್ಲಿ ಪ್ರಸಿದ್ಧಿಯಾಗಿದೆ. ಆದ್ದರಿಂದ ದೇಹಕ್ಕಿಂತ ಬಾಹ್ಯವಾದ

ಭೂತಾಕಾಶವನ್ನು ಅಥವಾ ಅಂತರಿಕ್ಷಲೋಕವನ್ನು ವಿವಕ್ಷಿಸಬೇಕು. ಆವಾಗ ದಿವಃಪರಃ ಎಂದರೆ ಸೂರ್ಯ ಎಂದರ್ಥವಾಯಿತು. ಆದ್ದರಿಂದ ಸೂರ್ಯನೇ ಜ್ಯೋತಿ; ಅಥವಾ 'ಪುರುಷನ ಒಳಗಡೆ ಇರುವ ಜಾಠರಾಗ್ನಿಯು ಜ್ಯೋತಿಯೆನಿಸಿದೆ'. ಆದ್ದರಿಂದ ದಿವಃಪರಃನಾದವನು ಸೂರ್ಯ; ದಿವಿಸ್ಥಿತವಾದದ್ದು ಜಾಠರಾಗ್ನಿ ಎಂದು ಪೂರ್ವಪಕ್ಷ.

ಸಿದ್ಧಾಂತ - 'ಪಾದೋಸ್ಯ ಸರ್ವಾ ಭೂತಾನಿ' ಎಂದು ಶ್ರುತಿಯು ಸರ್ವಭೂತಗಳನ್ನು ಜ್ಯೋತಿಯ ಪಾದವೆಂದು ಹೇಳಿದೆ. ಇದನ್ನು ಪರಿಚ್ಛಿನ್ನವಾದ ಗಾಯತ್ರಿಯಲ್ಲಿ ಹೇಳಲು ಸಾಧ್ಯವಿಲ್ಲ. ಆದ್ದರಿಂದ ಶಿವನೇ ಜ್ಯೋತಿಯೆನಿಸಿದ್ದಾನೆ''. ಉಪದೇಶಭೇದಾದಿಗಳಿಗೆ ಭಾಮತಿಯಲ್ಲಿ ಹೇಳಿದ ಪರಿಹಾರವನ್ನೇ ತಿಳಿಯಬೇಕು.

'ಜ್ಯೋತಿಃ ಪೂಷಾ ದಿವೋಽಭ್ರಾತ್ ಭವತಿ ಹಿ ಪರತೋ ಜಾಠರೈಕ್ಯೋಪದೇಶಾತ್ ।
ವಹ್ನಿರ್ವಾ ತನ್ನ ಶಂಭುಶ್ಚರಣಕಥನತಸ್ತತ್ರ ಹೇತೋರಸಿದ್ಧಾ ॥'

(ಅಂತರಿಕ್ಷದಿಂದ ಮೇಲಿರುವ ಸೂರ್ಯನೇ ಜ್ಯೋತಿಯಾಗಿದ್ದಾನೆ. ಅಥವಾ ಜಾಠರಾಗ್ನಿಯಿಂದ ಐಕ್ಯವಿರುವ ವಹ್ನಿಯು ಜ್ಯೋತಿಯೆನಿಸಿದೆ ಎಂದು ಹೇಳಬಾರದು. ಏಕೆಂದರೆ ಶ್ರುತಿಯಲ್ಲಿ ಸರ್ವಭೂತಗಳನ್ನು ಪಾದವೆಂದು ಹೇಳಿದ್ದರಿಂದ ಈ ಹೇತುವು ಸೂರ್ಯನಲ್ಲಿ ಅಥವಾ ಅಗ್ನಿಯಲ್ಲಿ ಬರುವುದಿಲ್ಲ. ಆದ್ದರಿಂದ ಶಿವನೇ ಜ್ಯೋತಿಯೆನಿಸಿದ್ದಾನೆ) ಹೀಗೆ ಶೈವರು ವಾದಿಸುತ್ತಾರೆ.

ಇವರ ವಾದದಲ್ಲಿಯೂ ಹುರುಳಿಲ್ಲ. ಅದ್ವೈತಿಗಳಿಗೆ ಮತ್ತು ರಾಮಾನುಜರಿಗೆ ಹೇಳಿದಂತೆ ಈ ವಿಷಯವಾಕ್ಯದ ಉದಾಹರಣೆಯು ಇವರ ಮತದಲ್ಲಿಯೂ ಅಸ್ವರಸವಾಗಿದೆ. ಮತ್ತು ಚರಣಶಬ್ದಕ್ಕೆ ಪಾದವೆಂದು ಅರ್ಥೈಸುವುದಾದರೆ ಭೂತಾದಿಸೂತ್ರದಿಂದಲೇ ಆ ವಿಷಯವು ತಿಳಿಯುವಾಗ ಚರಣಪದವು ವ್ಯರ್ಥವಾಗುತ್ತದೆ. ಚರಣಾಭಧಾನವೇ ಬೇರೆ ಪಾದಾಭಧಾನವೇ ಬೇರೆ ಎಂದು ಪರಿಹಾರ ಹೇಳುವುದಾದರೆ ಆದನ್ನು ಸಹ ಈ ಹಿಂದೆ ನಿರಾಕರಿಸಿದ್ದಾಯಿತು. ಮತ್ತು ದಿವಿಸ್ಥಿತತ್ವ ಮತ್ತು ದಿವಃಪರತ್ವವೆಂಬಲ್ಲಿರುವ ವಿರೋಧದ ಪರಿಹಾರವನ್ನು ಭಾಮತಿಮತದ ನಿರಾಕರಣೆಯಿಂದಲೇ ನಿರಾಕರಿಸಿದ್ದಾಯಿತು. ಈ ಹಿಂದೆ 'ಪೌನರುಕ್ತ್ಯಂ ಪರಮತೇ' ಎಂಬ ಶ್ಲೋಕದಲ್ಲಿ ಹೇಳಿದ ದೋಷವು ಇವರಿಗೂ ಸಮಾನವಾಗಿದೆ. ಅಷ್ಟೇ ಅಲ್ಲದೆ ವಾಕ್ ಮತ್ತು ಪ್ರಾಣಗಳನ್ನು ಸೇರಿಸಿ ಆರು ಪಾದಗಳನ್ನು ಹೇಳಬೇಕಿತ್ತು. ನಾಲ್ಕು ಪಾದಗಳೆಂದು ಹೇಳಿದ್ದು ತಪ್ಪು. ನಾಲ್ಕನ್ನೇ ಹೇಳಲು ಕಾರಣವನ್ನು ಶಿವಾರ್ಕಮಣಿದೀಪಿಕೆಯಲ್ಲಿ ಉತ್ತರಿಸಲು ಪ್ರಯತ್ನಿಸಿದ್ದಾರೆ. '' 'ನದ್ಯಾಂ ಘೋಷಃ' ಎಂದು ಹೇಳಿದ ಅನಂತರ 'ಗಂಭೀರಾಯಾಂ' ಎಂದು ವಿಶೇಷಣವನ್ನು ನೀಡಿದರೆ; ಗಂಭೀರಶಬ್ದವು ನದಿಯಲ್ಲಿ ವಿಶೇಷಣವಾಗುತ್ತದೆ. ತೀರದಲ್ಲಲ್ಲ. ಆವಾಗ ಗಂಭೀರವಾದ ನದಿಯ ತೀರದಲ್ಲಿ ಘೋಷವೆಂದು ಅರ್ಥವಾಗುತ್ತದೆ. ಇದರಂತೆ ಪ್ರಕೃತ 'ಗಾಯತ್ರೀ ವಾ ಇದಂ ಸರ್ವಂ ಭೂತಂ' ಎಂದು ಸರ್ವಭೂತಗಳನ್ನು ಗಾಯತ್ರೀಸ್ವರೂಪವೆಂದು ಮೊದಲು ಹೇಳಿ, ಅನಂತರ 'ವಾಗ್ವೈ ಗಾಯತ್ರೀ' ಎಂಬ ವಿಶೇಷಣವನ್ನು ನೀಡಿದರೆ ಭೂತಕ್ಕೆ ವಾಗ್ರೂಪಗಾಯತ್ರಿಸ್ವರೂಪವನ್ನು ಹೇಳಿದಂತಾಯಿತು. ಈ ಪಕ್ಷದಲ್ಲಿ ವಾಕ್ ಎಂಬುದನ್ನು ಪ್ರತ್ಯೇಕವೆಂದು ಹೇಳಿದಂತಾಗುವುದಿಲ್ಲ. ಆದ್ದರಿಂದ ಚತುಷ್ಪಾದವೆಂದು ಹೇಳಬಹುದು'' ಎಂದು.

ಇದು ತಪ್ಪು. ಏನೇ ಆದರೂ ಪಂಚಪಾದತ್ವದೋಷವು ತಪ್ಪಿದ್ದಲ್ಲ. ಆಂದರೆ ಗಾಯತ್ರಿಯನ್ನು ವಾಗ್ರೂಪವೆಂದು ಸಮರ್ಥಿಸಿದಿರಿ. ಆದರೆ ಪ್ರಾಣರೂಪವೆಂದು ಸಮರ್ಥಿಸಲು ಆಧಾರವಿಲ್ಲ. ಆದ್ದರಿಂದ ಷಟ್ಪಾದಗಳಾಗದಿದ್ದರೂ ಪಂಚಪಾದಗಳಾಗಬೇಕಾದೀತು ಎಂಬ ದೋಷವು ಬಂದೇ ಬರುತ್ತದೆ. ಮತ್ತು ಶ್ರುತಿಯಲ್ಲಿ ಷಡ್ವಿಧ ಎಂಬ ಪದವಿದೆ. ಇದನ್ನು ಹೇಗೆ ಕೂಡಿಸುತ್ತೀರಿ? ವಾಕ್ ಎಂಬುದನ್ನು ಗಾಯತ್ರಿಗೆ ವಿಶೇಷಣ ಮಾಡಿದ್ದರಿಂದ ಷಡ್ವಿಧತ್ವವನ್ನು ಹೇಳಲು ಸಾಧ್ಯವಿಲ್ಲವಲ್ಲವೇ?

ಷಡ್ವಿಧತ್ವವನ್ನು ಹೀಗೆ ವ್ಯಾಖ್ಯಾನಿಸುತ್ತಾರೆ.

'ಪೃಥಿವ್ಯಾಂ ಸರ್ವಭೂತಪ್ರತಿಷ್ಠಾತ್ವಂ ಸರ್ವಭೂತಾನತಿವರ್ತನೀಯತ್ವಮಿತಿ ದ್ವೇ ವಿಧೇ ಶರೀರಹೃದಯಯೋರ್ಯೇ ಪ್ರಾಣಾಪ್ರತಿಷ್ಠಾತ್ವತದನತಿ ವರ್ತನೀಯತ್ವೇ ತಯೋರಾಶ್ರಯಭೇದೇನ ಚತುಷ್ಟ್ವೇನ ಷಾಡ್ವಿಧ್ಯೋಪಪತ್ತಿಃ' (ಪೃಥಿವಿಯಲ್ಲಿ ಸರ್ವಭೂತಪ್ರತಿಷ್ಠಾತ್ವ ಮತ್ತು ಸರ್ವಭೂತಾನತಿವರ್ತನೀಯತ್ವ ಎಂಬ ಎರಡು ವಿಧ ಧರ್ಮಗಳಿವೆ. ಶರೀರ ಹಾಗೂ ಹೃದಯಗಳಲ್ಲಿ ಪ್ರಾಣಪ್ರತಿಷ್ಠಾತ್ವ ಪ್ರಾಣಅನತಿವರ್ತನೀಯತ್ವ ಎಂಬ ಎರಡು ಧರ್ಮಗಳು ಪ್ರತ್ಯೇಕವಾಗಿವೆ. ಪೃಥಿವಿಯಲ್ಲಿ ಎರಡು ಧರ್ಮಗಳು; ಶರೀರದಲ್ಲಿ ಎರಡು ಧರ್ಮಗಳು; ಹೃದಯದಲ್ಲಿ ಎರಡು ಧರ್ಮಗಳು ಹೀಗೆ ಒಟ್ಟು ಆರು ಧರ್ಮಗಳನ್ನು ಹೇಳಿದಂತಾಯಿತು. ವಸ್ತುತಃ ಶರೀರ ಹಾಗೂ ಹೃದಯಗಳಲ್ಲಿ ಪ್ರಾಣಪ್ರತಿಷ್ಠಾತ್ವ ಮತ್ತು ಪ್ರಾಣಅನತಿವರ್ತನೀಯತ್ವ ಎಂಬ ಒಂದೇ ಧರ್ಮಗಳು ಇದ್ದರೂ ಆಶ್ರಯಭೇದದಿಂದ ಧರ್ಮಗಳಿಗೂ ಭೇದವನ್ನು ಹೇಳಬೇಕು. ಈ ಆರು ಧರ್ಮಗಳನ್ನೇ ಶ್ರುತಿಯು ಷಡ್ವಿಧ ಎನ್ನುತ್ತಿದೆ. ಆದ್ದರಿಂದ ಷಾಡ್ವಿಧ್ಯದ ಅನುಪಪತ್ತಿಯು ಶೈವರಿಗೆ ಬರುವುದಿಲ್ಲ) ಎಂದು ಶೈವರು ಷಡ್ವಿಧತ್ವವನ್ನು ಸಮರ್ಥಿಸಿಕೊಳ್ಳುತ್ತಾರೆ.

ಇದೂ ಸಹ ಸರಿಯಲ್ಲ. ಭೂತ, ಪೃಥಿವ್ಯಾದಿ ರೂಪಗಳಿಂದಲೇ ಷಡ್ವಿಧತ್ವವನ್ನು ಹೇಳಲು ಬರುವಾಗ ಧರ್ಮಗಳನ್ನು ವಿವಕ್ಷಿಸಿ ಷಡ್ವಿಧತ್ವವನ್ನು ಸಮರ್ಥಿಸುವುದು ಅತ್ಯಂತ ಕ್ಲೇಶಕರ. ಮತ್ತು ಶರೀರ ಹಾಗೂ ಹೃದಯಗಳಲ್ಲಿ ಧರ್ಮಿಭೇದೇನ ಧರ್ಮಗಳಿಗೆ ಭೇದವನ್ನು ಹೇಳಿದಿರಿ. ಹಾಗಾದರೆ ಶರೀರ ಹೃದಯಗಳು ಅನಂತವಾಗಿರುವುದರಿಂದ ಅನಂತಧರ್ಮಗಳನ್ನು ಒಪ್ಪಬೇಕಾದೀತೆಂಬ ಅತಿಪ್ರಸಂಗ ಬರುತ್ತದೆ. ಅಷ್ಟೇ ಅಲ್ಲದೆ 'ಗಾಯತ್ರ್ಯಾಂ ಸಂಸ್ಥಿತೋ ವಿಷ್ಣುಃ' ಎಂಬ ಸ್ಮೃತಿವಿರೋಧವೂ ಬರುತ್ತದೆ.

ಶಿವನನ್ನು ಜ್ಯೋತಿಯೆಂದು ಹೇಳುತ್ತಿದ್ದೀರಿ. ಆದರೆ ನಾರಾಯಣನೇ ಜ್ಯೋತಿಯೆನ್ನಲು ಅನೇಕ ಶ್ರುತಿ-ಸ್ಮೃತಿಗಳು ಪ್ರಮಾಣಗಳಾಗಿವೆ. 'ನಾರಾಯಣಪರೋ ಜ್ಯೋತಿರಾತ್ಮಾ ನಾರಾಯಣಃ ಪರಃ' 'ವಿಷ್ಣುರೇವ ಜ್ಯೋತಿರ್ವಿಷ್ಣುರೇವ ಬ್ರಹ್ಮ', 'ಅಹಮಗ್ನಿರಹಂ ಹುತಮ್' ಹೀಗೆ ಶ್ರುತಿಸ್ಮೃತಿಗಳು ನಾರಾಯಣಪರವಾಗಿವೆ. 'ಯದಿದಂ ಪರಿತಃ ಪೂರ್ಣಂ ಮತ್ಸ್ಯಕೂರ್ಮಾದಿರೂಪಕಮ್' ಎಂಬ ಛಾಂದೋಗ್ಯಭಾಷ್ಯದಲ್ಲಿ ಉದಾಹರಿಸಿದ ಷಡ್ವಿಧತ್ವವನ್ನು ವ್ಯಾಖ್ಯಾನಿಸುವ ಸ್ಮೃತಿವಿರೋಧವೂ ಬರುತ್ತದೆ. ಛಾಂದೋಗ್ಯದಲ್ಲಿ ಸಂವಾದಿಯಾಗಿ ಉದಾಹರಿಸಿದ ಪುರುಷಸೂಕ್ತಮಂತ್ರದ ವಿರೋಧವೂ ಬರುತ್ತದೆ.

ಪುರುಷಸೂಕ್ತವನ್ನು ಶಿವಪರವೆಂದು ಶೈವರ ಮತ್ತೊಂದು ವಾದವಿದೆ. ಅದೂ ಸರಿಯಲ್ಲ. 'ಯಜ್ಞೋ ವೈ ವಿಷ್ಣುಃ' ಎಂಬಲ್ಲಿ ವಿಷ್ಣುವು ಯಜ್ಞರೂಪನೆಂದು ತಿಳಿಯುತ್ತದೆ. ಈ ಯಜ್ಞನೇ ಪುರುಷಸೂಕ್ತಪ್ರತಿಪಾದ್ಯ ಹೊರತು ಯಜ್ಞನೆನಿಸದ ಶಿವನಲ್ಲ. ಶ್ರುತಿಯಲ್ಲಿ ಕೇಳಿಸುತ್ತಿರುವ ಲಕ್ಷ್ಮೀಪತಿತ್ವಲಿಂಗದ ವಿರೋಧವು

ತಪ್ಪಿದ್ದಲ್ಲ. ಗ್ರಂಥದಲ್ಲಿ ಹೇಳಿದಂತೆ ಕೇವಲವಿಷ್ಣುನಿಷ್ಠವಾದ ಪುರುಷಶ್ರುತಿಯ ವಿರೋಧವೂ ಶೈವರಿಗೆ ಬರುತ್ತದೆ. 'ತಸ್ಮಾದ್ ವಿರಾಡಜಾಯತ' ಎಂಬ ಪುರುಷಸೂಕ್ತವು ಚತುರ್ಮುಖಜನಕತ್ವಲಿಂಗವನ್ನು ವಿಷ್ಣುವಿನಲ್ಲೇ ಹೇಳಿದೆ. ಕೇವಲ ವಿಷ್ಣುನಿಷ್ಠವಾದ ಈ ಲಿಂಗದ ವಿರೋಧವು ಬರುತ್ತದೆ.

ತಸ್ಮಿನ್ ಕಾಲೇ ಮಹಾರಾಜ ರಾಮ ಏವಾಭೀಧೀಯತೇ।
ಯಥಾ ಹಿ ಪೌರುಷೇ ಸೂಕ್ತೇ ವಿಷ್ಣುರೇವಾಭಿಧೀಯತೇ ॥ (ಸ್ಕಾಂದವಚನ)

ಸಮಗ್ರಪುರುಷಸೂಕ್ತವು ಏಕಕಂಠದಿಂದ ವಿಷ್ಣುವನ್ನು ಹೊಗಳುವಂತೆ ರಾಮರಾಜ್ಯದಲ್ಲಿ ಎಲ್ಲ ಪ್ರಜೆಗಳೂ ಏಕಕಂಠದಿಂದ ರಾಮನನ್ನೇ ಹೊಗಳುತ್ತಿದ್ದರು.) ಈ ಸ್ಕಾಂದವಚನದಲ್ಲಿ ಪುರುಷಸೂಕ್ತವನ್ನು ದೃಷ್ಟಾಂತವಾಗಿ ನೀಡಬೇಕೆಂದರೆ ಪುರುಷಸೂಕ್ತಪ್ರತಿಪಾದ್ಯನು ವಿಷ್ಣುವೆಂದು ಮೊದಲೇ ತೀರ್ಮಾನವಾಗಿರಬೇಕು. 'ಸುದರ್ಶನಾಖ್ಯಂ ಸ್ವಾಸ್ತ್ರಂ ತು ಪ್ರಾಯುಂಕ್ತ ದಯಿತಂ ತ್ರಿಪಾತ್' (ತ್ರಿಪಾತ್ ಎನಿಸಿದ ವಿಷ್ಣುವು ಸುದರ್ಶನವೆಂಬ ತನ್ನ ಆಸ್ತ್ರವನ್ನು ಪ್ರಯೋಗಿಸಿದನು) ಎಂಬ ಭಾಗವತದ ವಿರೋಧವು ಬರುತ್ತದೆ.

ಪರರ ಸಿದ್ಧಾಂತದ ಪ್ರಕಾರ ಉಪದೇಶಪರಿಹಾರವು ತಪ್ಪಾದಲ್ಲಿ ನಿಮ್ಮ ಸಿದ್ಧಾಂತದಲ್ಲಿ ಏನು ಪರಿಹಾರ? ಎಂಬ ಪ್ರಶ್ನೆಗೆ 'ತಸ್ಮಾತ್' ಎಂಬುದರಿಂದ ಉತ್ತರಿಸಿದ್ದಾರೆ.

**गुरुराजीयम् –** नन्वेवमुक्तरीत्या परिहारासम्भवात्कथमत्र परिहार इत्यत आह – **तस्मादिति ।**

## ಸಾರ

ರಾಮಾನುಜರು ಅದ್ವೈತಿಗಳಂತೆ ಶ್ರುತಿಗೆ ಲಕ್ಷಣಾ ಮಾಡುವುದಿಲ್ಲ. ದಿವಿ ಮತ್ತು ದಿವಃ ಎಂಬಲ್ಲಿರುವ ಸಪ್ತಮೀ ಹಾಗೂ ಪಂಚಮೀ ವಿಭಕ್ತಿಗಳು ಮುಖ್ಯಾರ್ಥವನ್ನೇ ಪ್ರತಿಪಾದಿಸುತ್ತವೆ. ಆದರೆ ಸಪ್ತಮೀ ವಿಭಕ್ತಿಯು ಸಾವಕಾಶವಾಗಿದೆ; ಪಂಚಮಿಯು ನಿರವಕಾಶವಾಗಿದೆ. ನಿರವಕಾಶಾನುಸಾರಿಯಾಗಿ ಸಾವಕಾಶವನ್ನು ವ್ಯಾಖ್ಯಾನಿಸಬೇಕು. ಆದ್ದರಿಂದ ದಿವಃಪರಃ ಎಂಬುದೇ ವಸ್ತುಸ್ಥಿತಿ. ದಿವಿ ಎಂಬುದಕ್ಕೆ ದಿವಃ ಉಪರಿ ಎಂದರ್ಥ. ಹೀಗೆ ಹೇಳುವ ರಾಮಾನುಜರಿಗೆ ಅದ್ವೈತಿಗಳಿಗೆ ಬರುವಷ್ಟು ದೊಡ್ಡ ದೋಷ ಬಾರದಿದ್ದರೂ, ದೋಷವು ತಪ್ಪಿದ್ದಲ್ಲ. ಎರಡು ವ್ಯುತ್ಪತ್ತಿಗಳಲ್ಲಿ ಒಂದಕ್ಕೆ ಅಮುಖ್ಯಾರ್ಥವನ್ನು ಇವರು ಹೇಳಲೇ ಬೇಕಾಗುತ್ತದೆ. ನಾವಾದರೆ ದ್ಯುಶಬ್ದಕ್ಕೆ ಅನೇಕಾರ್ಥವನ್ನು ಹೇಳಿದ್ದೇವೆ.

ಆದರೆ ರಾಮಾನುಜರು ಒಂದೇ ಅರ್ಥವನ್ನು ಹೇಳುತ್ತಾರೆ. 'ದೇವದತ್ತನಿಗೆ ಮನೆಯು ಆಧಾರವಾಗಬೇಕಾದರೆ ಮನೆಯ ಒಳಗೋ, ಹೊರಗಿನ ಜಗಲಿಯಲ್ಲೋ, ಅಥವಾ ಮಹಡಿಯ ಮೇಲೋ ಅಥವಾ ಕೆಳಗೋ ಎಲ್ಲಾದರೂ ಒಂದು ಮನೆಯ ಭಾಗದಲ್ಲಿ ದೇವದತ್ತನು ಇರಲೇಬೇಕು. ಮನೆಯಿಂದ ದೇವದತ್ತನು ತುಂಬಾ ದೂರ ಹೋದಾಗ ದೇವದತ್ತನಿಗೆ ಮನೆಯು ಆಧಾರವಾಗುವುದಿಲ್ಲ; ಹೊರತು ಅವಧಿಯಾಗುತ್ತದೆ. ಆವಾಗ ಆಧಾರಾರ್ಥದಲ್ಲಿ ಸಪ್ತಮೀಯನ್ನು ಪ್ರಯೋಗಿಸಲಾಗದು.

ಪ್ರಕೃತ ಜ್ಯೋತಿಯಂಬ ಬ್ರಹ್ಮನು ದ್ಯುಲೋಕದ ಯಾವ ಭಾಗದಲ್ಲಿಯೂ ಇಲ್ಲದೆ ಮೇಲಿನ ಲೋಕದಲ್ಲಿದ್ದರೆ ದಿವಿಸ್ಥಿತಃ ಎಂಬ ಸಪ್ತಮ್ಯಂತಪ್ರಯೋಗವನ್ನು ಮುಖ್ಯವಾಗಿ ಮಾಡಲು ಸಾಧ್ಯವಿಲ್ಲ. ಇದರಂತೆ ಪಂಚಮಿಯು ಕೇವಲ ಅವಧಿತ್ವವನ್ನೇ ಹೇಳುತ್ತದೆ. ಹೀಗಿರುವಾಗ ಪಕ್ಷಿಯು ವೃಕ್ಷದಲ್ಲಿ ಕುಳಿತಾಗ 'ವೃಕ್ಷಾತ್ ಪರತ್ರ ಶ್ಯೇನಃ' ಎಂಬ ಪ್ರಯೋಗವನ್ನು ಅಮುಖ್ಯಾರ್ಥವೆಂದು ಹೇಳಲೇಬೇಕಾಗುತ್ತದೆ.

---

## ಸ್ವಮತದಲ್ಲಿ ನಾಲ್ಕನೇ ಸೂತ್ರವ್ಯಾಖ್ಯಾನ

**ತಾತ್ಪರ್ಯಚಂದ್ರಿಕಾ**

**ಭಾಷ್ಯೇ ಹ್ಯೇವಮಭಿಪ್ರೇತಮ್ – ಯದಾ ಭೂರ್ಭುವಸ್ಸ್ವರಿತಿ ಲೋಕತ್ರಯವಿವಕ್ಷಾ, ತದಾ ಲಕ್ಷಯೋಜನೋಚ್ಛ್ರಿತಾನ್ತರಿಕ್ಷಲೋಕಾದುಪರಿತನಸ್ಯ ಸರ್ವಸ್ಯಾಪಿ ದ್ಯುತ್ವಾತ್ ಶ್ವೇತದ್ವೀಪಾನನ್ತಾಸನ-ವೈಕುಣ್ಠಾನಾಂ ಚಾನ್ತರಿಕ್ಷಾದುಪರಿತನತ್ವಾತ್ ತತ್ರತ್ಯಂ ನಾರಾಯಣವಾಸುದೇವವೈಕುಣ್ಠಾಖ್ಯಂ ತ್ರಿಪಾತ್ಸಂಜ್ಞಂ ರೂಪತ್ರಯಂ 'ದಿವಿ' ಇತ್ಯುಚ್ಯತೇ । ನಚ –**

**ಪೃಥಿವೀಸ್ಥೇಷು ಸರ್ವೋಚ್ಚೋ ಲೋಕೋऽನನ್ತಾಸನಾತ್ಮಕಃ ।**

**ಇತ್ಯುಕ್ತತ್ವಾದನನ್ತಾಸನಸ್ಯ ನಾನ್ತರಿಕ್ಷಾದುಪರಿತನತೇತಿ ಶಙ್ಕ್ಯಂ, ತಸ್ಯ ಪೃಥಿವೀಸ್ಥತ್ವೇಪಿ ಬಹುಲಕ್ಷಯೋಜನೋಚ್ಛ್ರಿತತ್ವೇನ ಏಕಲಕ್ಷಯೋಜನೋಚ್ಛ್ರಿತಾನ್ತರಿಕ್ಷಾದುಪರಿತನತ್ವೋಪಪತ್ತೇಃ । ಸರ್ವ-ಪೃಥಿವೀಸ್ಥೋಚ್ಚತ್ವೋಕ್ತ್ಯಾ ತು ನಾನ್ಯಯೋಗೋ ವ್ಯಾವರ್ತ್ಯತೇ । ಕಿನ್ತ್ವಯೋಗಃ । ಯದಾ ತು ಭೂರ್ಭುವಸ್ಸ್ವರ್ಮಹರ್ಜನಸ್ತಪಸ್ಸತ್ಯಮಿತಿ ಸಪ್ತಲೋಕವಿವಕ್ಷಾ, ತದಾ ಇನ್ದ್ರಸದನಸ್ಯ ದ್ಯುತ್ವಾತ್ತತ್ಪರಸ್ಯ ವೈಕುಣ್ಠಸ್ಯ ದಿವಃ ಪರತ್ವಂ,**

**ಪೃಥಿವ್ಯಾಂ ಚೌರ್ಮಹಾಮೇರುರಾಕಾಶೇ ಸೂರ್ಯಮಣ್ಡಲಮ್ ।**
**ದಿವೀನ್ದ್ರಸದನಂ ಚೈವ ತತ್ಪರೇ ತು ದಿವಃಪರೇ ॥**

**ಇತಿ ಸ್ಮೃತೇರ್ಮೇರೋರಪಿ ದ್ಯುತ್ವಾತ್ತತ್ಪರಸ್ಯಾನನ್ತಾಸನಸ್ಯಾಪಿ ದಿವಃಪರತಾ, ಸೂರ್ಯ-ಮಣ್ಡಲಸ್ಯಾಪಿ ದ್ಯುತ್ವಾತ್ ತತ್ಪರಸ್ಯ ಶ್ವೇತದ್ವೀಪಸ್ಯಾಪಿ ದಿವಃ ಪರತ್ವಮ್ ।**

ಅನುವಾದ - ನಮ್ಮ ಭಾಷ್ಯದಲ್ಲಿ ಉಪದೇಶಭೇದಪರಿಹಾರವು ಹೀಗಿದೆ -- ಸಮಗ್ರ ಬ್ರಹ್ಮಾಂಡವನ್ನು ಎರಡು ವಿಧದಲ್ಲಿ ವಿಭಾಗಿಸಬಹುದು. ೧. ತ್ರಿಲೋಕ; ೨. ಸಪ್ತಲೋಕ ಎಂದು. "ಭೂಃ, ಭುವಃ, ಸ್ವಃ' ಎಂದು ತ್ರಿಲೋಕವಿಭಾಗ. ಈ ಮೂರು ಲೋಕಗಳಲ್ಲಿಯೇ ಹದಿನಾಲ್ಕು ಲೋಕಗಳು ಸೇರುತ್ತವೆ. ಈ ಪಕ್ಷದಲ್ಲಿ ಭೂಲೋಕವೆಂದರೆ ನಾವು ವಾಸ ಮಾಡುವ ಲೋಕ.

ಇದಕ್ಕಿಂತ ಮೇಲೆ ಒಂದು ಲಕ್ಷಯೋಜನ ವಿಸ್ತಾರದ ಅಂತರಿಕ್ಷಲೋಕವಿದೆ. ಅದರ ಮೇಲಿರುವುದೆಲ್ಲಾ ದ್ಯುಲೋಕ. ಶ್ವೇತದ್ವೀಪ, ಅನಂತಾಸನ, ವೈಕುಂಠಗಳು ಅಂತರಿಕ್ಷಕ್ಕಿಂತಲೂ ಮೇಲ್ಭಾಗದಲ್ಲಿವೆ. ಆದ್ದರಿಂದ ಈ ಮೂರು ವಿಷ್ಣುಧಾಮಗಳು ದಿವಿಸ್ಥಿತಗಳಾದವು. ಈ ವಿಷ್ಣುಧಾಮಗಳಲ್ಲಿರುವ ನಾರಾಯಣ, ವಾಸುದೇವ, ವೈಕುಂಠ ಎಂಬ ಮೂರು ಭಗವಂತನ ರೂಪಗಳು ಸಹ ದ್ಯುಲೋಕದಲ್ಲಿವೆ ಎಂದಂತಾಯಿತು.

ಶಂಕೆ - 'ಪೃಥಿವೀಸ್ಥೇಷು ಸರ್ವೋಚ್ಚೋ ಲೋಕೋऽನಂತಾಸನಾತ್ಮಕಃ' (ಅನಂತಾಸನವು ಪೃಥಿವಿಯಲ್ಲಿರುವ ಶ್ರೇಷ್ಠಲೋಕವಾಗಿದೆ) ಎಂಬ ವಚನದಂತೆ ಅನಂತಾಸನವು ಪೃಥಿವಿಯಲ್ಲೇ ಇದೆ. ಹೀಗಿರುವಾಗ ಅಂತರಿಕ್ಷಕ್ಕಿಂತ ಮೇಲ್ಭಾಗದಲ್ಲಿ ಅನಂತಾಸನವಿದೆಯೆಂದು ಹೇಗೆ ಹೇಳಿದಿರಿ?

ಸಮಾಧಾನ - ಅನಂತಾಸನವು ಪೃಥಿವಿಯಲ್ಲಿ ಇದ್ದರೂ ಸಹ ಅನೇಕಲಕ್ಷಯೋಜನ ಮೇಲೆ ಇದೆ. ಆದ್ದರಿಂದ 'ಒಂದು ಲಕ್ಷಯೋಜನದಷ್ಟು ವಿಸ್ತಾರವಿರುವ ಅಂತರಿಕ್ಷಕ್ಕಿಂತ ಮೇಲೆ ಅನಂತಾಸನವಿದೆ' ಎಂದದ್ದು ತಪ್ಪಲ್ಲ. 'ಪೃಥಿವೀಸ್ಥೇಷು ಸರ್ವೋಚ್ಚಃ' ಎಂಬಲ್ಲಿ 'ಪೃಥ್ವೀಸ್ಥೇಷ್ವೇವ ಸರ್ವೋಚ್ಚಃ' ಎಂಬ ಅನ್ಯಯೋಗವ್ಯವಚ್ಛೇದವನ್ನು ವಿವಕ್ಷಿಸಿದರೆ ಪೃಥಿವೀಸ್ಥಾನಗಳಿಗಿಂತ ಅನಂತಾಸನವು ಮೇಲಿದೆ ಎಂದಂತಾಯಿತು; ಹೊರತು ಅಂತರಿಕ್ಷಕ್ಕಿಂತ ಮೇಲಿದೆ ಎಂದು ತಿಳಿಯುವುದಿಲ್ಲ. ಅದಕ್ಕೋಸ್ಕರ ಅನ್ಯಯೋಗವ್ಯವಚ್ಛೇದವನ್ನು ಹೇಳದೇ ಅಯೋಗವ್ಯವಚ್ಛೇದವನ್ನು ಹೇಳಬೇಕು. 'ಪೃಥಿವೀಸ್ಥೇಷು ಸರ್ವೋಚ್ಚಃ ಏವ' ಎಂದು ಹೇಳಿದಾಗ ಪೃಥಿವಿಯಲ್ಲಿರುವ ಎಲ್ಲ ಲೋಕಗಳಿಗಿಂತ ಅನಂತಾಸನವು ಸರ್ವೋಚ್ಚವೇ ಆಗಿದೆ ಎಂದಂತಾಯಿತು. ಹೊರತು ಅಂತರಿಕ್ಷಕ್ಕಿಂತ ಮೇಲಿಲ್ಲವೆಂದು ಹೇಳಿದಂತಾಗುವುದಿಲ್ಲ.

ಇನ್ನು 'ಭೂಃ, ಭುವಃ, ಸ್ವಃ, ಮಹಃ, ಜನಃ, ತಪಃ, ಸತ್ಯಮ್' ಎಂದು ಲೋಕಗಳನ್ನು ಏಳು ವಿಭಾಗ ಮಾಡುವುದಾದರೆ ಇಂದ್ರನ ಅರಮನೆಯು ದ್ಯುಲೋಕವೆನಿಸುತ್ತದೆ. ಅದರ ಮೇಲ್ಭಾಗದಲ್ಲಿರುವ ವೈಕುಂಠವು ದಿವಃಪರವಾಗುತ್ತದೆ. ಅದು ಹೀಗೆ --

ಪೃಥಿವ್ಯಾಂ ದ್ಯೌರ್ಮಹಾಮೇರುರಾಕಾಶೇ ಸೂರ್ಯಮಂಡಲಮ್ ।
ದಿವೀಂದ್ರಸದನಂ ಚೈವ ತತ್ಪರೇ ತು ದಿವಃಪರೇ ॥

(ಮೇರುಪರ್ವತವು ಪೃಥಿವೀಲೋಕದ ದ್ಯುಲೋಕವೆನಿಸಿದೆ. ಇದರ ಮೇಲ್ಭಾಗದಲ್ಲಿ ಅನಂತಾಸನವಿದೆ. ಆದ್ದರಿಂದ ಅನಂತಾಸನದಲ್ಲಿರುವ ಜ್ಯೋತಿಯು ದಿವಃಪರವೆನಿಸುತ್ತದೆ. ಅಂತರಿಕ್ಷಲೋಕದಲ್ಲಿ ಸೂರ್ಯಮಂಡಲವು ದ್ಯುಲೋಕ. ಅದರ ಮೇಲೆ ಶ್ವೇತದ್ವೀಪವಿದೆ. ಶ್ವೇತದ್ವೀಪದಲ್ಲಿರುವ ರೂಪವೂ ಸಹ ಹೀಗೆ ದಿವಃಪರ ಎನಿಸಿದೆ. ಸ್ವರ್ಗಲೋಕದಲ್ಲಿ ಇಂದ್ರನ ಅರಮನೆಯು ದ್ಯುಲೋಕ. ಅದರ ಮೇಲೆ ವೈಕುಂಠವಿದೆ. ಅಲ್ಲಿರುವ ರೂಪವು ದಿವಃಪರವೆನಿಸುತ್ತದೆ. ಹೀಗೆ ಮೂರೂ ರೂಪಗಳಿಗೂ ದಿವಃಪರತ್ವವನ್ನು ತಿಳಿಯಬೇಕು.)

ಈ ಸ್ಮೃತಿಯಂತೆ ಮೇರುಪರ್ವತವು ಕೂಡ ದ್ಯು ಎನಿಸಿದೆ. ಅದರ ಮೇಲಿರುವ ಅನಂತಾಸನವು ದಿವಃಪರವಾಗುತ್ತದೆ. ಪೃಥ್ವಿಮಂಡಲವು ದ್ಯು. ಆದ್ದರಿಂದ ಅದರ ಮೇಲಿರುವ ಶ್ವೇತದ್ವೀಪವು ದಿವಃಪರವಾಗುತ್ತದೆ.

**ಪ್ರಕಾಶಃ – ಭಾಷ್ಯೇऽಸ್ಪಷ್ಟತ್ವಾತ್ –**

**ಲೋಕತ್ರಯವಿವಕ್ಷಾಯಾಂ ಪರತೋ ಲಕ್ಷಯೋಜನಾತ್ ।**
**ಸರ್ವೆ ಚೋರಿತಿ ವಿಜ್ಞೇಯಂ ತತಸ್ತೇ ದಿವಿ ಸಂಸ್ಥಿತಾಃ ।**
**ದಿವಃ ಪರಶ್ಚ ಭಗವಾನ್ ಸಪ್ತಲೋಕವಿವಕ್ಷಯಾ ॥**

ಇತಿ ಛಾಂದೋಗ್ಯಭಾಷ್ಯಾನುರೋಧೇನ ಟೀಕೋಕ್ತಮಾಶಯಂ ಪ್ರತೀತಾನುಪಪತ್ತಿನಿರಾಸೇನ ವಿಶದಯತಿ – **ಭಾಷ್ಯ ಇತಿ** ॥ ಅಧಸ್ತನಾನಾಮತಲಾದೀನಾಮುಪರಿತನಾನಾಂ ಮಹರಾದೀನಾಂ ಭೂಸ್ವರ್ಗ್ರಹಣೇನ ಗೃಹೀತತ್ವಾದಿತಿ ಭಾವಃ ।

**ಸ್ವರೂಪಪಾದಾ ವಿಷ್ಣೋಸ್ತು ತ್ರಯೋ ಹಿ ದಿವಿ ಸಂಸ್ಥಿತಾಃ ।**
**ನಾರಾಯಣೋ ವಾಸುದೇವೋ ವೈಕುಂಠ ಇತಿ ತೇ ತ್ರಯಃ ॥**

ಇತಿ ಸ್ಮೃತ್ಯನುರೋಧೇನಾಹ – **ನಾರಾಯಣೇತಿ** ॥ ಟೀಕಾದಾವನ್ತರಿಕ್ಷಸ್ಯ ಲಕ್ಷಯೋಜನತ್ವವಿಶೇಷಣತ್ವೋಕ್ತೇಃ ಕೃತ್ಯಂ ವಕ್ತುಂ ಚೋದಯತಿ – **ನಚೇತಿ** ॥ ಸರ್ವೇಷು ಲೋಕೇಷ್ವಿತಿ ಸರ್ವೋಚ್ಚಃ, ಸರ್ವೇಷು ಲೋಕೇಷ್ವಿತ್ಯತಃ, 'ಪೃಥಿವೀಸ್ಥೇಷು' ಇತಿ ಯೋಜನಾ ।

**ಬಹುಲಕ್ಷೋಚ್ಛ್ರಿತೇ ನಿತ್ಯೇ ವಿಮಾನೇ ಸಂಸ್ಥಿತಂ ಯತಃ ।**

ಇತಿ ತದ್ಭಾಷ್ಯೋಕ್ತಸ್ಮೃತ್ಯನುಸಾರೇಣಾಹ **ಬಹ್ವಿತಿ** ॥ ಉಕ್ತಾಚ್ಚ ದ್ವಿತೀಯಸ್ಕನ್ಧತಾತ್ಪರ್ಯೇ ಷಷ್ಠೇ –

**ಅನನ್ತಾಸನವೈಕುಂಠನಾರಾಯಣಪುರಾಣಿ ತು ।**
**ಬಹುಲಕ್ಷೋಚ್ಛ್ರಿತೇಷ್ವೇಷು ಸ ವಸತ್ಯಮೃತೋ ಹರಿಃ ॥**

ಇತಿ ॥ ನನು ಪೃಥಿವೀಸ್ಥೋಚ್ಚತ್ವೋಕ್ತ್ಯಾ ನಾನ್ಯೋಚ್ಚತ್ವಂ ಲಭ್ಯತೇ, ಅತಃ ಕಿಮೇವಮಿತ್ಯತ ಆಹ – **ಸರ್ವೇತಿ** ॥ 'ಅನ್ಯಯೋಗಃ' ಅನ್ಯೋಚ್ಚತ್ವಯೋಗಃ ॥ **ಅಯೋಗ ಇತಿ** ॥ ಪೃಥಿವೀಸ್ಥೇಷು ಸರ್ವೇಷ್ವಪಿ ಏವೇತ್ಯಯೋಗ ಇತ್ಯರ್ಥಃ । ಪಕ್ಷಾನ್ತರಂ ವಿಶದಯತಿ – **ಯದೇತಿ** ॥ ಅಧಸ್ತನಾನಾಂ ಅತಲವಿತಲಸುತಲತಲಾತಲ-ಮಹಾತಲರಸಾತಲಪಾತಾಲಾನಾಂ ಭೂರ್ಗ್ರಹಣೇನ ಗ್ರಹಣಾದಿತಿ ಭಾವಃ ।

ವಿವರಣೆ - ಭಾಷ್ಯದಲ್ಲಿ ಸ್ಪಷ್ಟವಾಗಿ ತಿಳಿಯುವುದಿಲ್ಲ. ಆದಕ್ಕಾಗಿ ಛಾಂದೋಗ್ಯಭಾಷ್ಯವನ್ನು ಅನುಸರಿಸಿ ಪ್ರಕೃತ ಗ್ರಂಥಕಾರರು ವ್ಯಾಖ್ಯಾನಿಸುತ್ತಿದ್ದಾರೆ. ಮತ್ತು ಟೀಕೆಯನ್ನು ನೋಡಿದಾಗ ಆಪಾತತಃ ಬರುವ

ಅನುಪಪತ್ತಿಯನ್ನೂ ಸಹ 'ಭಾಷ್ಯ' ಇತ್ಯಾದಿ ಗ್ರಂಥದಿಂದ ಪರಿಹರಿಸುತ್ತಿದ್ದಾರೆ. ಛಾಂದೋಗ್ಯಭಾಷ್ಯ ಹೀಗಿದೆ --

'..... ಪರತಃ ಲಕ್ಷಯೋಜನಾತ್ ।
ಸರ್ವಂ ದ್ಯೌರಿತಿ ವಿಜ್ಞೇಯಂ ತತಸ್ತೇ ದಿವಿ ಸಂಸ್ಥಿತಾಃ ।
ದಿವಃ ಪರಶ್ಚ ಭಗವಾನ್ ಸಪ್ತಲೋಕವಿವಕ್ಷಯಾ ॥

(ಪೃಥಿವೀಲೋಕಕ್ಕಿಂತ ಲಕ್ಷಯೋಜನದ ಮೇಲೆ ದ್ಯುಲೋಕವಿದೆ. ಅಲ್ಲಿರುವ ರೂಪವು ದಿವಿಸ್ಥಿತ ವಾಗುತ್ತದೆ. ಸಪ್ತಲೋಕವಿವಕ್ಷೆಯಿಂದ ಅಲ್ಲಿರುವ ರೂಪಗಳೇ ದಿವಃಪರ ಎನಿಸುತ್ತವೆ.) ಎಂದು. ಮೂರು ಲೋಕಗಳನ್ನಾಗಿ ವಿಭಾಗ ಮಾಡಿದಾಗ ಕೆಳಗಿರುವ ಅತಲಾದಿಲೋಕಗಳು ಭೂಲೋಕವೆನಿಸುತ್ತವೆ. ಮೇಲಿರುವ ಮಹರ್ಲೋಕಗಳು ಸ್ವಃ ಎನಿಸುತ್ತವೆ.

'ಸ್ವರೂಪಪಾದಾ ವಿಷ್ಣೋಸ್ತು ತ್ರಯೋ ಹಿ ದಿವಿ ಸಂಸ್ಥಿತಾಃ ।
ನಾರಾಯಣೋ ವಾಸುದೇವೋ ವೈಕುಂಠೋ ಇತಿ ತೇ ತ್ರಯಃ ॥

(ನಾರಾಯಣ ವಾಸುದೇವ ವೈಕುಂಠ ಎಂಬ ಮೂರು ವಿಷ್ಣುವಿನ ಸ್ವರೂಪಾಂಶಗಳು ದ್ಯುಲೋಕದಲ್ಲಿ ಇರುತ್ತವೆ). ಈಸ್ಮೃತಿಗೆ ಅನುಸಾರಿಯಾಗಿ 'ನಾರಾಯಣವಾಸುದೇವ' ಇತ್ಯಾದಿ ಗ್ರಂಥವು ಹೊರಟಿದೆ. ಟೀಕೆಯಲ್ಲಿ ಅಂತರಿಕ್ಷಲೋಕವನ್ನು ಲಕ್ಷಯೋಜನವಿಸ್ತಾರವೆಂದು ಹೇಳಿದ್ದಾರೆ. ಲಕ್ಷಯೋಜನಪದದ ಸಾರ್ಥಕ್ಯವನ್ನು ತೋರಿಸಲು 'ನಚ' ಎಂಬ ಗ್ರಂಥವು ಹೊರಟಿದೆ. 'ಎಲ್ಲ ಲೋಕಗಳಲ್ಲಿ ಉಚ್ಚವಾದದ್ದು ಸರ್ವೋಚ್ಚ ಎನಿಸುತ್ತದೆ. ಎಲ್ಲ ಲೋಕವೆಂದರೆ ಯಾವುದು? ಎಂಬ ಪ್ರಶ್ನೆಗೆ ಪೃಥಿವಿಯಲ್ಲಿ ಅನೇಕ-ಲೋಕಗಳಿವೆ; ಆ ಎಲ್ಲ ಲೋಕಗಳಿಗಿಂತ ಉಚ್ಚಸ್ಥಾನದಲ್ಲಿದೆ' ಎಂದರ್ಥ. 'ಬಹುಲಕ್ಷೋಚ್ಛ್ರಿತೇ ನಿತ್ಯೇ ವಿಮಾನೇ ಸಂಸ್ಥಿತಂ ಯತಃ' (ಅನೇಕಲಕ್ಷಯೋಜನದೂರದಲ್ಲಿ ವಿಮಾನರೂಪವಾದ ಅನಂತಾಸನವಿದೆ. ಆದರಲ್ಲಿ ವಾಸುದೇವ ಎಂಬ ರೂಪವಿದೆ) ಈ ಸ್ಮೃತಿಯನ್ನು ಭಾಷ್ಯದಲ್ಲಿ ಉದಾಹರಿಸಿದ್ದಾರೆ. ಅದನ್ನು ಪ್ರಕೃತ ಗ್ರಂಥಕಾರರು 'ಬಹುಲಕ್ಷಯೋಜನ' ಎಂದು ವ್ಯಾಖ್ಯಾನಿಸುತ್ತಿದ್ದಾರೆ.

ಅನಂತಾಸನವೈಕುಂಠನಾರಾಯಣಪುರಾಣೆ ತು ।
ಬಹುಲಕ್ಷೋಚ್ಛ್ರಿತೇಷ್ವೇಷು ಸ ವಸತ್ಯಮೃತೋ ಹರಿಃ ॥ (ಭಾಗ.ತಾ. ೨/೬)

(ಅನಂತಾಸನವೈಕುಂಠಶ್ವೇತದ್ವೀಪಗಳು ಪೃಥಿವಿಗಿಂತ ಅನೇಕಲಕ್ಷಯೋಜನ ಮೇಲಿವೆ. ಅವುಗಳಲ್ಲಿ ಅಮೃತಮಯನಾದ ಹರಿಯು ವಾಸಿಸುತ್ತಾನೆ.)

'ಪೃಥಿವೀಸ್ಥೇಷು ಸರ್ವೇಷು' ಎಂಬುದರಿಂದ 'ಅನಂತಾಸನವು ಪೃಥಿವಿಗಿಂತ ಮೇಲಿದೆ' ಎಂದಷ್ಟೇ ತಿಳಿಯುತ್ತದೆ ಹೊರತು ಅಂತರಿಕ್ಷಕ್ಕಿಂತ ಮೇಲಿದೆ ಎಂದು ತಿಳಿಯುವುದಿಲ್ಲ ಎಂಬ ಪ್ರಶ್ನೆಗೆ 'ಸರ್ವ' ಎಂಬ ಗ್ರಂಥದಿಂದ ಉತ್ತರಿಸಿದ್ದಾರೆ. ಇಲ್ಲಿ ಅನ್ಯಯೋಗವ್ಯವಚ್ಛೇದವನ್ನು ಮಾಡಿಲ್ಲ. ಅಂದರೆ ಇಲ್ಲಿ 'ಬೇರೆ ಲೋಕಗಳಿಗಿಂತ ಮೇಲಿಲ್ಲ'ವೆಂಬ ಅನ್ಯಯೋಗವ್ಯವಚ್ಛೇದವನ್ನು ಮಾಡಿಲ್ಲ. ಹೊರತು 'ಪೃಥಿವಿಯಲ್ಲಿರುವ ಎಲ್ಲ ಲೋಕಗಳಿಗಿಂತ ಮೇಲೆ ಇದ್ದೇ ಇದೆ' ಎಂಬ ಅಯೋಗವ್ಯವಚ್ಛೇದವನ್ನು ಮಾಡಲಾಗಿದೆ. ಮೂರು ಲೋಕಗಳ ವಿವಕ್ಷೆಯಿಂದ ದಿವಿಸ್ಥಿತತ್ವ ಮತ್ತು ದಿವಃಪರತ್ವದ ವಿರೋಧವನ್ನು ಪರಿಹರಿಸಿದ್ದಾಯಿತು.

'ಯದಾ ತು' ಎಂಬ ಗ್ರಂಥದಿಂದ ಸಪ್ತಲೋಕಗಳೆಂದು ವಿಭಾಗ ಮಾಡಿದರೂ ಉಪದೇಶಭೇದದ ವಿರೋಧವಿಲ್ಲವೆಂದು ಸಮರ್ಥಿಸುತ್ತಾರೆ. ಅತಲ, ವಿತಲ, ಸುತಲ, ತಲಾತಲ, ರಸಾತಲ, ಮಹಾತಲ, ಪಾತಾಳ ಇವುಗಳನ್ನು ಭೂಲೋಕದಲ್ಲಿ ಸೇರಿಸಬೇಕು.

**ಗುರುರಾಜೀಯಮ್ – तर्ह्यसाधारण्येन पृथिवीस्थोच्चत्वोक्तिरयुक्तेत्यत आह – सर्वपृथिवीस्थेति ॥ सप्तलोकविवक्षायां दिवःपरत्वमुपपादयति ॥ यदा त्विति ॥ तथाप्यनन्तासनस्य दिवःपरत्वं कथमित्यतः स्मृत्यनुसारेण तदाह – पृथिव्यामिति ॥ श्वेतद्वीपस्य तदुपपादयति – सूर्यमण्डलस्येति ॥**

## ಸಾರ

'ಉಪದೇಶಭೇದಾತ್' ಎಂಬ ಸೂತ್ರಕ್ಕೆ ಸಿದ್ಧಾಂತದ ಪ್ರಕಾರ ವ್ಯಾಖ್ಯಾನ. ಛಾಂದೋಗ್ಯೋಪನಿಷತ್ತಿನ ಗಾಯತ್ರೀಪ್ರಕರಣದಲ್ಲಿ 'ತ್ರಿಪಾದಸ್ಯಾಮೃತಂ ದಿವಿ' ಎಂದು ಗಾಯತ್ರಿಯು ದ್ಯುಲೋಕದಲ್ಲಿದೆ ಎನ್ನಲಾಗಿದೆ. ಮುಂದಿನ ಜ್ಯೋತಿಪ್ರಕರಣದಲ್ಲಿ 'ಅಥ ಯದತಃ ಪರೋ ದಿವೋ ಜ್ಯೋತಿರ್ದೀಪ್ಯತೇ' ಎಂದು ದ್ಯುಲೋಕಕ್ಕಿಂತ ಮೇಲೆ ಜ್ಯೋತಿಯು ಇದೆ ಎನ್ನಲಾಗಿದೆ. ದಿವಿ ಎಂಬಲ್ಲಿ ಸಪ್ತಮೀ ವಿಭಕ್ತಿ ಇರುವುದರಿಂದ ದ್ಯುಲೋಕದಲ್ಲಿ ಎಂದರ್ಥ. ದಿವಃ ಎಂಬಲ್ಲಿ ಪಂಚಮೀ ವಿಭಕ್ತಿ ಇರುವುದರಿಂದ ದ್ಯುಲೋಕಕ್ಕಿಂತ ಮೇಲ್ಭಾಗದಲ್ಲಿ ಎಂದರ್ಥ. ಜ್ಯೋತಿ ಹಾಗೂ ಗಾಯತ್ರೀ ಎರಡೂ ಒಂದೇ ಆದಲ್ಲಿ ಒಂದೇ ವಸ್ತು ದ್ಯುಲೋಕದಲ್ಲಿ ಹಾಗೂ ಆದಕ್ಕಿಂತ ಮೇಲಿನ ಲೋಕದಲ್ಲಿ ಇರಲು ಹೇಗೆ ತಾನೆ ಸಾಧ್ಯ ? ಈ ಕಾರಣದಿಂದ ದ್ಯುಲೋಕದಲ್ಲಿರುವ ಗಾಯತ್ರಿಯೇ ಬೇರೆ ಆದರ ಮೇಲಿನ ಲೋಕದಲ್ಲಿರುವ ಜ್ಯೋತಿಯೇ ಬೇರೆ ಎನ್ನಬೇಕು. ಈ ಪೂರ್ವಪಕ್ಷವನ್ನು 'ಉಪದೇಶಭೇದಾತ್' ಎಂಬ ಪದದಿಂದ ತೋರಿಸಿದ್ದಾರೆ.

'ಉಭಯಸ್ಮಿನ್ನಪ್ಯವಿರೋಧಾತ್' ಎಂಬ ಸೂತ್ರಭಾಗದಿಂದ ತಿಳಿಯುವ ಸಿದ್ಧಾಂತ. ಎರಡು ಬಗೆಯಲ್ಲಿ ಸಮಸ್ತಲೋಕಗಳನ್ನು ವಿಭಾಗಿಸಬಹುದು. ೧. ತ್ರಿಲೋಕ; ೨. ಸಪ್ತಲೋಕ ಎಂದು. 'ಭೂಃ ಭುವಃ ಸ್ವಃ' ಎಂದು ಮೂರು ವಿಭಾಗ ಮಾಡಿದಾಗ ಸಮಸ್ತ ಹದಿನಾಲ್ಕುಲೋಕಗಳು ಈ ಮೂರರಲ್ಲೇ ಸೇರುತ್ತವೆ. ಈ ಪಕ್ಷದಲ್ಲಿ ನಾವು ವಾಸಿಸುತ್ತಿರುವ ಲೋಕವು ಭೂಲೋಕ. ಇದಕ್ಕಿಂತ ಒಂದು ಲಕ್ಷಯೋಜನ ಮೇಲೆ ಅಂತರಿಕ್ಷಲೋಕ. ಆದರ ಮೇಲಿರುವುದೆಲ್ಲಾ ದ್ಯುಲೋಕ. ಶ್ವೇತದ್ವೀಪ ಅನಂತಾಸನ ಹಾಗೂ ವೈಕುಂಠಲೋಕಗಳು ಒಂದು ಲಕ್ಷಯೋಜನಕ್ಕಿಂತ ಮೇಲಿರುವುದರಿಂದ ಅವೆಲ್ಲವೂ ದ್ಯುಲೋಕವೆನಿಸಿವೆ. ಆ ಲೋಕಗಳಲ್ಲಿರುವ ಭಗವಂತನ ರೂಪಗಳು ದ್ಯುಲೋಕದಲ್ಲಿವೆ ಎನಿಸುತ್ತವೆ. ಹೀಗೆ ತ್ರಿಲೋಕವಿವಕ್ಷೆಯಿಂದ ದಿವಿಸ್ಥಿತತ್ವವನ್ನು ಹೊಂದಿಸಬೇಕು.

ಸಪ್ತಲೋಕವಿವಕ್ಷೆಯಿಂದ ದಿವಃಪರತ್ವವನ್ನು ಹೊಂದಿಸಬೇಕು. ಭೂಃ, ಭುವಃ, ಸ್ವಃ, ಮಹಃ, ಜನಃ, ತಪಃ, ಸತ್ಯಮ್ ಎಂದು ಲೋಕಗಳನ್ನು ಏಳು ವಿಭಾಗ ಮಾಡಬಹುದು. ಮೇರು ಪರ್ವತವು ಪೃಥಿವೀಲೋಕದ ದ್ಯುಲೋಕ. ಆದರ ಮೇಲ್ಭಾಗದಲ್ಲಿ ಅನಂತಾಸನ. ಅಂತರಿಕ್ಷಲೋಕದಲ್ಲಿ ಸೂರ್ಯಮಂಡಲವು ದ್ಯುಲೋಕ. ಆದರ ಮೇಲ್ಭಾಗದಲ್ಲಿ ಶ್ವೇತದ್ವೀಪ. ಸ್ವರ್ಗಲೋಕದಲ್ಲಿ ಇಂದ್ರನ ಅರಮನೆ ದ್ಯುಲೋಕ. ಆದರ ಮೇಲ್ಭಾಗದಲ್ಲಿ ವೈಕುಂಠಲೋಕ. ಹೀಗೆ ಅನಂತಾಸನಾದಿಗಳಿಗೆ ದಿವಃಪರತ್ವವನ್ನು ಕ್ರಮವಾಗಿ ಹೊಂದಿಸಬೇಕು. ಹೀಗೆ ಹೇಳಿದಾಗ ದಿವಿಸ್ಥಿತತ್ವ ಹಾಗೂ ದಿವಃಪರತ್ವಗಳಿಗೆ ವಿರೋಧ ಬರುವುದಿಲ್ಲ.

**तात्पर्यचन्द्रिका**

अत्र यद्यपि लोकत्रयविवक्षायामप्यनन्तासनादीनां मेर्वादिपरत्वेन दिवः परत्वसिद्धिः, स्वर्गलोकात्परत्वं अनन्तासनश्वेतद्वीपयोर्नास्ति,

यावानुच्चः स्वर्गलोकस्तावानुच्चतया स च ।
श्वेतद्वीपो दिविष्ठोऽतः .....॥ इत्यादेः ।

तथाऽपि वैकुण्ठस्य सर्वद्युपरत्वसिद्धये सप्तलोकविवक्षोक्तिः । तदुक्तम् –

द्व्यात्मकेभ्यश्च सर्वेभ्यो वैकुण्ठश्चोच्च उच्यते ।

इति । एवञ्च यथा 'चैत्रो ग्रामेऽस्ति' इत्युक्त्वा 'स ग्रामाद्बहिः' इत्युक्ते आद्ये प्रयोगे ग्रामशब्दः अरण्यादिसहिते वर्तते, द्वितीये तु वाटपरिक्षेपे । तदुक्तं महाभाष्ये ''ग्रामशब्दोऽयं बह्वर्थः । आस्ति वाटपरिक्षेपे वर्तते । तद्यथा 'ग्रामं प्रविष्टः' इति । अस्ति सारण्यके सस्थण्डिलके वर्तते । तद्यथा 'ग्रामो लब्धः' इतीति । तथा प्रकृतेऽपि द्युशब्दोऽनेकार्थः । अनेकार्थत्वं च अक्षादिशब्दवत् वृद्धव्यवहारादिना सर्वत्र मुख्यत्वेन वा, एकत्र मुख्यत्वेऽप्यन्यत्र अमुख्यत्वेन वेति । ''अन्याय्यँ चानेकार्थत्वं'' इति न्यायस्य नायं विषयः । सर्वतः पृष्ठत्वं अनन्तासनादीनां यथासम्भवं पृथिव्यादिलोकोच्चत्वं, विश्वतः पृष्ठत्वं च मेरुवैजयन्तसत्यलोकरूप-चतुर्मुखस्थानादुच्चत्वमिति टीकायामेवोक्तम् । इदञ्च –

पृथिव्यां ब्रह्मणो मेरुर्जयन्तं त्वन्तरिक्षगम् ।
तृतीयं सत्यलोके च सदनं त्रिविधं स्मृतम् ।
तेभ्योऽनन्तासनाद्या यत् परतो विश्वतः परे ॥

इत्यादिवाक्यादवगन्तव्यम् । अत्र यद्यपि वैकुण्ठस्य स्वर्गलोकात्परत्वेनैव दिवः परत्वसिद्धिः, तथाऽपि तस्य ''सर्वतः पृष्ठेषु'' इत्यनेनैवोक्तत्वात् 'दिवः परः'' इत्यस्य वैयर्थ्यं माभूत् इतीन्द्रसदनस्य द्युत्वोक्तिः ।

**ಯದ್ವಾ – ಚಿತ್ಪ್ರಕೃತ್ಯಾತ್ಮಕತ್ವೇನ ದ್ಯೋತಮಾನೇ ಸ್ಥಾನತ್ರಯೇ ಸಪ್ತಮ್ಯನ್ತೋ ದ್ಯುಶಬ್ದೋ ಯೌಗಿಕಃ, ಪಞ್ಚಮ್ಯನ್ತಸ್ತು ಸ್ವರ್ಗಾದೌ ರೂಢ ಇತ್ಯವಿರೋಧಃ । ಅಯಞ್ಚ ಸೂತ್ರಾವಿರೋಧಶಬ್ದಾರ್ಥ ಇತಿ ದ್ರಷ್ಟವ್ಯಮ್ । ಅಯಞ್ಚ ಪರಿಹಾರಃ –**

**ಬಹುಲಕ್ಷೋಚ್ಯತೇ ನಿತ್ಯಂ ವಿಮಾನೇ ಸಂಸ್ಥಿತಂ ಯತಃ ।**
**ಚಿತ್ಪ್ರಕೃತ್ಯಾತ್ಮನಿ ತತೋ ದಿವೀತಿ ಕಥಿತಂ ಶ್ರುತೌ ॥**

**ಇತಿ ಛಾನ್ದೋಗ್ಯಭಾಷ್ಯೇ ಸೂಚಿತಃ ।**

ಅನುವಾದ - ವಸ್ತುತಃ ಹಿಂದೆ ಹೇಳಿದಂತೆ ಯೋಜನೆ ಮಾಡಿದರೆ ಸಪ್ತಲೋಕದ ಅಪೇಕ್ಷೆ ಇರುವುದಿಲ್ಲ. ತ್ರಿಲೋಕಗಳನ್ನು ತೆಗೆದುಕೊಂಡರೂ ದಿವಃಪರತ್ವವನ್ನು ಹೇಳಬಹುದು. ಅನಂತಾಸನ, ಶ್ವೇತದ್ವೀಪಾದಿಗಳು ಮೇರು ಮೊದಲಾದ ದ್ಯುಲೋಕಗಳಿಗಿಂತ ಮೇಲಿರುವುದರಿಂದ ದಿವಃಪರ-ಗಳಾಗಿವೆ. ಸ್ವರ್ಗಲೋಕಕ್ಕಿಂತ ಮೇಲಂತೂ ಅನಂತಾಸನ ಮತ್ತು ಶ್ವೇತದ್ವೀಪಗಳು ಇರುವುದಿಲ್ಲ. ಏಕೆಂದರೆ 'ಯಾವಾನುಚ್ಚಃ ಸ್ವರ್ಗಲೋಕಸ್ತಾವಾನುಚ್ಚತಯಾ ಸ ಚ । ಶ್ವೇತದ್ವೀಪೋ ದಿವಿಷ್ಠೋಽತ' (ಸ್ವರ್ಗಲೋಕವು ಎಷ್ಟು ಎತ್ತರವಿದೆಯೋ ದಿವಿಸ್ಥಿತವಾದ ಶ್ವೇತದ್ವೀಪವು ಅಷ್ಟೇ ಎತ್ತರದಲ್ಲಿದೆ) ಎಂಬ ಪ್ರಮಾಣದಂತೆ.

ಆದರೆ ಹೀಗೆ ಸಪ್ತಲೋಕವನ್ನು ವಿವಕ್ಷಿಸಿದಾಗ ಮೂರು ದ್ಯುಲೋಕಗಳಿಂದ ಮಾತ್ರವಲ್ಲದೆ ಸ್ವರ್ಗಕ್ಕಿಂತಲೂ ಎತ್ತರದಲ್ಲಿ ವೈಕುಂಠಲೋಕವಿದೆ ಎಂದು ಸಿದ್ಧವಾಗುತ್ತದೆ. ಇದನ್ನು 'ದ್ವ್ಯುತ್ಕೃಷ್ಟಭ್ಯಶ್ಚ ಸರ್ವೇಭ್ಯೋ ವೈಕುಂಠಶ್ಚೋಚ್ಚ ಉಚ್ಯತೇ' (ಶ್ವೇತದ್ವೀಪ ಹಾಗೂ ಅನಂತಾಸನಗಳಿಗಿಂತ ವೈಕುಂಠವು ಎತ್ತರದಲ್ಲಿದೆ ಎಂದು ಹೇಳಿದೆ.) ಎಂಬಂತೆ ವೈಕುಂಠವು ಎಲ್ಲಕ್ಕಿಂತ ಎತ್ತರದಲ್ಲಿದೆ. ಈ ಪ್ರಯೋಜನ-ಕ್ಕಾಗಿ ಸಪ್ತಲೋಕವಿವಕ್ಷೆಯನ್ನು ಅನುಸರಿಸಲಾಗಿದೆ.

ದ್ಯುಶಬ್ದಕ್ಕೆ ಹೀಗೆ ಅನೇಕಾರ್ಥ ಹೇಳುವುದು ತಪ್ಪಲ್ಲ. ಉದಾ -- 'ಚೈತ್ರಃ ಗ್ರಾಮೇ ಅಸ್ತಿ' (ಚೈತ್ರನು ಗ್ರಾಮದಲ್ಲಿದ್ದಾನೆ) ಎಂದು ಹೇಳಿ; 'ಸಃ ಗ್ರಾಮಾದ್ಬಹಿಃ' ಅವನು ಗ್ರಾಮದ ಹೊರಗಿದ್ದಾನೆ ಎಂದು ಹೇಳಿದಾಗ, ಮೊದಲ ಪ್ರಯೋಗದಲ್ಲಿ ಗ್ರಾಮಶಬ್ದಕ್ಕೆ 'ಅರಣ್ಯದಿಂದ ಕೂಡಿದ ಗ್ರಾಮ' ಎಂದರ್ಥ. ಎರಡನೆ ಪ್ರಯೋಗದಲ್ಲಿ 'ವಾಟಪರಿಕ್ಷೇಪ' (ಜನಗಳು ವಾಸಮಾಡುವ ಸ್ಥಳ) ಎಂದರ್ಥ. ಏಕೆಂದರೆ ಚೈತ್ರನು ಊರಿನ ಹತ್ತಿರದ ಅರಣ್ಯದಲ್ಲಿದ್ದಾಗ ಗ್ರಾಮದಲ್ಲಿದ್ದಾನೆಂಬ ಪ್ರಯೋಗವಿದೆ. ಮತ್ತು ಗ್ರಾಮದ ಹೊರಗಿದ್ದಾನೆಂಬ ಪ್ರಯೋಗವೂ ಇದೆ. ಇಲ್ಲಿ ಎರಡೂ ಪ್ರಯೋಗಗಳಲ್ಲಿರುವ ಗ್ರಾಮಶಬ್ದಕ್ಕೆ ಅರಣ್ಯಸಹಿತಗ್ರಾಮದಲ್ಲಿ ಮತ್ತು ವಾಸಸ್ಥಳವುಳ್ಳ ಗ್ರಾಮದಲ್ಲಿ ಮುಖ್ಯಪ್ರಯೋಗವೇ ಕಂಡಿದೆ. ಮಹಾಭಾಷ್ಯದಲ್ಲಿಯೂ ಇದನ್ನು ಹೇಳಿದ್ದಾರೆ. 'ಗ್ರಾಮಶಬ್ದೋಯಂ ಬಹ್ವರ್ಥಃ । ಅಸ್ತಿ ವಾಟಪರಿಕ್ಷೇಪೇ ವರ್ತತೇ । ತದ್ಯಥಾ ಗ್ರಾಮಂ ಪ್ರವಿಷ್ಟ ಇತಿ । ಅಸ್ತಿ ಸಾರಣ್ಯಕೇ ಸ ಸ್ಥಂಡಿಲಕೇ

ವರ್ತತೇ । ತದ್ಯಥಾ ಗ್ರಾಮೋ ಲಬ್ಧಃ' ಎಂದು. ('ಗ್ರಾಮವನ್ನು ಪ್ರವೇಶಿಸಿದನು' ಎಂಬಲ್ಲಿ ಗ್ರಾಮ-ಶಬ್ದಕ್ಕೆ ವಾಟಪರಿಕ್ಷೇಪ ಎಂದರ್ಥ. 'ಗ್ರಾಮವು ಸಿಕ್ಕಿತು' ಎಂಬಲ್ಲಿ ಗ್ರಾಮಶಬ್ದಕ್ಕೆ ಗ್ರಾಮದ ಹತ್ತಿರದ ಅರಣ್ಯಪ್ರದೇಶ ಎಂದರ್ಥ. ಹೀಗೆ ಗ್ರಾಮಶಬ್ದವು ಅನೇಕಾರ್ಥ ಉಳ್ಳದ್ದಾಗಿದೆ).

ಇದರಂತೆ ಪ್ರಕೃತ ದ್ಯುಶಬ್ದವು ಅನೇಕಾರ್ಥವುಳ್ಳದ್ದಾಗಿದೆ. ಹೇಗೆ ಅಕ್ಷಾದಿಶಬ್ದವು ಹಿರಿಯರ ವ್ಯವಹಾರದಂತೆ ಎಲ್ಲಾ ಅರ್ಥಗಳಲ್ಲಿಯೂ ಮುಖ್ಯವಾಗಿದೆಯೋ ಅದರಂತೆ ದ್ಯುಶಬ್ದವೂ ಎಲ್ಲಾ ಅರ್ಥಗಳಲ್ಲಿಯೂ ಮುಖ್ಯವಾಗಿದೆ. ಅಥವಾ ಒಂದರ್ಥದಲ್ಲಿ ಮುಖ್ಯವೆಂದು ಉಳಿದ ಅರ್ಥಗಳಲ್ಲಿ ಅಮುಖ್ಯವೆಂದು ಹೇಳಿದರೂ ತಪ್ಪಿಲ್ಲ. 'ಅನ್ಯಾಯ್ಯಂ ಚಾನೇಕಾರ್ಥತ್ವಮ್' ಅನೇಕಾರ್ಥ ಹೇಳು-ವುದು ಅನ್ಯಾಯ ಎಂಬ ನ್ಯಾಯಕ್ಕೆ ಇದು ವಿಷಯವಲ್ಲ.

'ಸರ್ವತಃ ಪೃಷ್ಠೇಷು, ವಿಶ್ವತಃ ಪೃಷ್ಠೇಷು' ಎಂಬ ಶ್ರುತಿಗೆ ಹೀಗೆ ಅರ್ಥ. ಸರ್ವತಃ ಪೃಷ್ಠೇಷು ಎಂದರೆ ಹಿಂದೆ ಹೇಳಿದಂತೆ ಅನಂತಾಸನಾದಿಗಳು ಪೃಥಿವ್ಯಾದಿಲೋಕಗಳಿಗಿಂತ ಎತ್ತರದಲ್ಲಿವೆ ಎಂದರ್ಥ (ಪೃಷ್ಠ = ಮೇಲೆ). 'ವಿಶ್ವತಃ ಪೃಷ್ಠೇಷು' ಎಂದರೆ 'ಮೇರುವೈಜಯಂತಸತ್ಯಲೋಕ ಎಂಬ ಮೂರು ಬ್ರಹ್ಮದೇವರ ಸದನಗಳಿಗಿಂತ ಶ್ವೇತದ್ವೀಪಾದಿಗಳು ಎತ್ತರದಲ್ಲಿವೆ' ಎಂದರ್ಥ. ಇದನ್ನೆಲ್ಲಾ ಟೀಕೆಯಲ್ಲಿಯೇ ಹೇಳಿದ್ದಾರೆ.

'ಪೃಥಿವ್ಯಾಂ ಬ್ರಹ್ಮಣೋ ಮೇರುರ್ಜಯಂತಂ ತ್ವಂತರಿಕ್ಷಗಮ್ ।
ತೃತೀಯಂ ಸತ್ಯಲೋಕೇ ಚ ಸದನಂ ತ್ರಿವಿಧಂ ಸ್ಮೃತಮ್ ।
ತೇಭ್ಯೋಽನಂತಾಸನಾದ್ಯಾ ಯತ್ಪರತೋ ವಿಶ್ವತಃ ಪರಃ ॥

(ಪೃಥಿವಿಯಲ್ಲಿ ಮೇರುಲೋಕ ಬ್ರಹ್ಮದೇವರ ಸದನ; ಇದರ ಮೇಲೆ ಶ್ವೇತದ್ವೀಪ; ಅಂತರಿಕ್ಷದಲ್ಲಿ ವೈಜಯಂತ ಎಂಬುದು ಬ್ರಹ್ಮದೇವರ ಸದನ; ಇದರ ಮೇಲೆ ಅನಂತಾಸನ; ಸತ್ಯಲೋಕದಲ್ಲಿ ಮೂರನೆಯ ಬ್ರಹ್ಮದೇವರ ಸದನ; ಇದರ ಮೇಲೆ ವೈಕುಂಠ. ಆದ್ದರಿಂದ ಶ್ವೇತದ್ವೀಪಾದಿಗಳು ವಿಶ್ವತಃ ಪರಃ ಎನಿಸುತ್ತವೆ.) ಇತ್ಯಾದಿ ಪ್ರಮಾಣಗಳ ಆಧಾರದಿಂದ ವಿಶ್ವತಃ ಪೃಷ್ಠೇಷು ಎಂಬುದರ ಅರ್ಥವನ್ನು ತಿಳಿಯಬೇಕು.

ಈ ಹಿಂದೆ ಇಂದ್ರಸದನಕ್ಕಿಂತ ವೈಕುಂಠವು ಮೇಲ್ಭಾಗದಲ್ಲಿದೆಯೆಂದು ಹೇಳಲಾಯಿತು. ಆದರೆ ಸ್ವರ್ಗಲೋಕಕ್ಕಿಂತ ಮೇಲಿದೆಯೆಂದು ಹೇಳಿದರೆ ಸಾಕು. ಇಷ್ಟರಿಂದಲೇ ವೈಕುಂಠಕ್ಕೆ ದಿವಃಪರತ್ವವು ಸಿದ್ಧವಾಗುತ್ತದೆ. ಇಂದ್ರಸದನಕ್ಕಿಂತ ಮೇಲಿದೆಯೆಂದು ಹೇಳುವ ಅವಶ್ಯಕತೆ ಇಲ್ಲ. ಆದರೂ ಕೂಡ 'ಸರ್ವತಃ ಪೃಷ್ಠೇಷು' ಎಂಬ ವಾಕ್ಯದಿಂದಲೇ ಸ್ವರ್ಗಲೋಕಕ್ಕಿಂತ ಮೇಲಿರುವಿಕೆಯನ್ನು ಹೇಳಿದ ಮೇಲೆ ಪುನಃ 'ದಿವಃ ಪರಃ' ಎಂಬ ಹೇಳಿಕೆಯು ವ್ಯರ್ಥವಾಗಬೇಕಾದೀತು. ಆದ್ದರಿಂದ ಸರ್ವತಃ ಪೃಷ್ಠೇಷು ಎಂಬ ಮಾತಿನಿಂದ ಸ್ವರ್ಗಲೋಕದಿಂದ ಮೇಲ್ಭಾಗದಲ್ಲಿರುವಿಕೆಯನ್ನು; 'ದಿವಃ ಪರಃ' ಎಂಬುದರಿಂದ ಇಂದ್ರಸದನಕ್ಕಿಂತ ಮೇಲಿರುವಿಕೆಯನ್ನು ತಿಳಿಯಬೇಕು.

ಅಥವಾ ದ್ಯುಶಬ್ದಕ್ಕೆ ಹೀಗೆ ಅರ್ಥ. ಶ್ವೇತದ್ವೀಪ, ಅನಂತಾಸನ, ವೈಕುಂಠ ಈ ಮೂರೂ ಲೋಕಗಳು ಲಕ್ಷ್ಮ್ಯಾತ್ಮಕವಾಗಿ ಹೊಳೆಯುತ್ತಿವೆ. 'ಹೊಳೆಯುವಿಕೆ'(ದ್ಯೋತಮಾನ) ಎಂಬರ್ಥದಲ್ಲಿ ದ್ಯುಶಬ್ದವು ಯೌಗಿಕವಾಗಿವೆ. ಆದ್ದರಿಂದ ದಿವಿ ಎಂಬಲ್ಲಿರುವ ದ್ಯುಶಬ್ದದಿಂದ ಯೌಗಿಕಾರ್ಥವನ್ನು ವಿವಕ್ಷಿಸಬೇಕು. ದಿವಃ ಎಂಬಲ್ಲಿರುವ ದ್ಯುಶಬ್ದಕ್ಕೆ ಸ್ವರ್ಗಾದಿಗಳಲ್ಲಿ ರೂಢ್ಯರ್ಥವನ್ನು ತಿಳಿಯಬೇಕು. ಹೀಗೆ ಎರಡೂ ಕಡೆ ಇರುವ ದ್ಯುಶಬ್ದಗಳು ಯೋಗ ಹಾಗೂ ರೂಢಿಯೆಂಬ ಭಿನ್ನವೃತ್ತಿಗಳಿಂದ ಅರ್ಥವನ್ನು ಪ್ರತಿಪಾದಿಸುತ್ತಿರುವುದರಿಂದ ವಿರೋಧವಿಲ್ಲ. ಇದೂ ಸಹ ಸೂತ್ರದಲ್ಲಿರುವ ಅವಿರೋಧಶಬ್ದದ ಅರ್ಥ. ಈ ಬಗೆಯ ಪರಿಹಾರವು ಛಾಂದೋಗ್ಯಭಾಷ್ಯದಲ್ಲಿ ಸೂಚಿಸಲ್ಪಟ್ಟಿದೆ.

ಬಹುಲಕ್ಷೋಚ್ಛ್ರಿತೇ ನಿತ್ಯೇ ವಿಮಾನೇ ಸಂಸ್ಥಿತಂ ಯತಃ।
ಚಿತ್ಸ್ವತ್ಯಾತ್ಮನಿ ತತೋ ದಿವೀತಿ ಕಥಿತಂ ಶ್ರುತೌ ॥

(ಅನೇಕಲಕ್ಷಯೋಜನದ ಮೇಲಿರುವ ವಿಮಾನರೂಪದ ಶ್ವೇತದ್ವೀಪವು ಲಕ್ಷ್ಮ್ಯಾತ್ಮರೂಪವಾಗಿದೆ. ಈ ಶ್ವೇತದ್ವೀಪದಲ್ಲಿ ಭಗವಂತನು ಸ್ಥಿತನಾದ್ದರಿಂದ ಶ್ರುತಿಯು ದಿವಿಸ್ಥಿತಃ ಎಂದು ಹೇಳಿದೆ.) ಎಂದು.

**ಪ್ರಕಾಶಃ** – ಸಪ್ತಲೋಕವಿವಕ್ಷಾಮಾಕ್ಷಿಪ್ಯ ಸಮಾಧತ್ತೇ – **ಅತ್ರೇತಿ ॥ ಅನನ್ತೇತಿ ॥** ಅನನ್ತಾಸನಶ್ವೇತ- ದ್ವೀಪವೈಕುಂಠಾನಾಂ ಮೇರುಸೂರ್ಯಮಣ್ಡಲೇನ್ದ್ರಸದನೇಭ್ಯಃ ಪರತ್ವೇನೇತ್ಯರ್ಥಃ । ನನು ತ್ರಯಾಣಾಂ ದ್ಯುತ್ವೇನ ಪ್ರಸಿದ್ಧಸ್ವರ್ಗಾದ್ಯುಚ್ಚತ್ವಸಿದ್ಧಯೈ ಸಪ್ತಲೋಕವಿವಕ್ಷಾऽಸ್ತು, ತ್ರಿತ್ವವಿವಕ್ಷಾಯಾಂ ಸ್ವರಾದೇರನ್ತರಿಕ್ಷಾದುಪರಿತನಸ್ಯ ಸರ್ವಸ್ಯ ದ್ಯುತ್ವೇನ ಸ್ವರ್ಗಾತ್ಪರತ್ವಾಸಿದ್ಧೇರಿತ್ಯತೊ ವೈಕುಂಠಸ್ಯ ತತ್ಸಮ್ಭವೇऽಪಿ ನಾನ್ಯಯೋಸ್ತದ್ಯುಜ್ಯತ ಇತ್ಯಾಹ – **ಸ್ವರ್ಗೇತಿ ॥** ಯಾತು ದ್ವಿತೀಯಸ್ಕನ್ಧತಾತ್ಪರ್ಯೇ ಷಷ್ಠೇ –

**ಅನನ್ತಾಸನವೈಕುಂಠನಾರಾಯಣಪುರಾಣಿ ತು ।**
**ತ್ರೀಣಿ ಧಾಮಾನಿ ವೈ ವಿಷ್ಣೋಸ್ತ್ರೈಲೋಕ್ಯಾದ್ಬಹಿರೇವ ಹಿ ॥**

ಇತಿ ಬಾಹ್ಯತ್ವೋಕ್ತಿಃ, ಸಾ ವೈಕುಂಠಾಶಯಾ, ಅಲೌಕಿಕತ್ವಾಶಯಾ ವಾ, ಸ್ವರ್ಗಲೋಕಸ್ಯೇನ್ದ್ರ-ಸದನಾದರ್ವಾಗ್ಭಾಗವಿವಕ್ಷಾಶಯಾ ವಾ । ವಸ್ತುತಸ್ತು –

**ಭುವಃ ಸ್ವರ್ಗಶ್ಚ ಕೋಟ್ಯೈವ ಯೋಜನಾನಾಂ ಪ್ರವಿಸ್ತೃತೌ ।**

ಇತ್ಯುಕ್ತಾನ್ತರಿಕ್ಷಸ್ವರ್ಗಲೋಕಯೋಃ ಕೋಟಿಯೋಜನವಿಸ್ತೀರ್ಣತ್ವೇನ ತತೋ ಬಾಹ್ಯಪ್ರದೇಶ-ಸ್ಥಿತತ್ವಾತ್ ಶ್ವೇತದ್ವೀಪಾದೇಃ, ತಥಾ ಭೂಮ್ಯಾ ಅನೇಕಕೋಟಿವಿಸ್ತೀರ್ಣತ್ವೇನ ಕ್ಷೀರಸಮುದ್ರಾದಿಸ್ಥ-ಶ್ವೇತದ್ವೀಪಾದೇರ್ಭೂಲೋಕಸ್ಥತ್ವೇऽಪಿ ತಮತಿಕ್ರಮ್ಯಾನೇಕಲಕ್ಷಯೋಜನೋಚ್ಛ್ರಿತತ್ವೇನ ತತೋऽಪಿ ಬಾಹ್ಯತ್ವ -ಮಿತಿ ತ್ರೈಲೋಕ್ಯಾದ್ಬಾಹ್ಯತ್ವಂ ಧ್ಯೇಯಮ್, ನನು ಸ್ವರ್ಗಾದಪ್ಯುಚ್ಚತ್ವೇನೇತಿ ನ ವಿರೋಧಃ ।

ಯದ್ವಾ,''ಸರ್ವತಃ ಪೃಷ್ಠೇಷು'' ಇತ್ಯಾದಾವಿವಾನನ್ತಾಸನಶ್ವೇತದ್ವೀಪವೈಕುಂಠಾನಾಂ ಕ್ರಮಾತ್ ಭೂರ್ಭುವಃ-ಸುವರ್ಲೋಕೇಭ್ಯಃ ಉಚ್ಚತ್ವೇನ ತ್ರಿಲೋಕಾದ್ಬಾಹ್ಯತ್ವಮಿತ್ಯವಿರೋಧಃ ।

ನನ್ವೇವಂ ದ್ಯುಶಬ್ದಸ್ಯಾನೇಕಾರ್ಥತ್ವೇऽಪ್ಯೇಕಸ್ಮಿನ್ನೇವ ಪ್ರಕರಣೇ ನಾನಾರ್ಥತ್ವಂ ನ ದೃಷ್ಟಚರಮಿತ್ಯತ ಆಹ – **ಏವಞ್ಚೇತಿ ॥ ತದುಕ್ತಮಿತಿ ॥** ಆದ್ಯಪಾದೇ ''ಹಲೋऽನನ್ತರಾಸ್ಸಂಯೋಗಃ'' ಇತಿ ಸೂತ್ರೇ । 'ವಾಟಪರಿಕ್ಷೇಪೇ ವರ್ತತ ಯಶ್ಶಬ್ದಸ್ಸೋऽಸ್ತಿ' ಇತ್ಯಾದಿಯೋಜನಾ । ನನು ನಿರರ್ಥಕಪ್ರಯೋಗಾಯೋಗಾದೇಕಾರ್ಥಕತ್ವೇ ವಕ್ತವ್ಯೇ ಅರ್ಥಾನ್ತರಕಲ್ಪನಮನ್ಯಾಯ್ಯಮಿತ್ಯತ ಆಹ **ಅನೇಕಾರ್ಥತ್ವಂ ಚೇತಿ ॥ ನಾಯಮಿತಿ ॥** ಯತ್ರಾನೇಕಾರ್ಥಕತ್ವೇನ ಮಾನಂ, ತತ್ರೈವಾಯಂ ನ್ಯಾಯಃ । ಅತ್ರ ತು ಪೌರಾಣಿಕಪ್ರಸಿದ್ಧೇಃ ಸತ್ವಾನ್ನೈವಮಿತ್ಯರ್ಥಃ । ಅತ ಏವೋಕ್ತಂ ಸುಧಾಯಾಂ ವೈಶೇಷಿಕಾಧಿಕರಣೇ – ''ಯತ್ರ ಹ್ಯೇಕಸ್ಮಿನ್ನರ್ಥೇ ವ್ಯವಸ್ಥಿತೇ ವೃಥೈವಾರ್ಥಾನ್ತರಾಙ್ಗೀಕಾರಃ, ತತ್ರೈವಾನೇಕಾರ್ಥತ್ವಮನ್ಯಾಯ್ಯಮ್'' ಇತಿ ।

ತರ್ಹಿ ''ಸರ್ವತಃ ಪೃಷ್ಠೇಷು ವಿಶ್ವತಃ ಪೃಷ್ಠೇಷು'' ಇತ್ಯಸ್ಯ ಪೌನರುಕ್ತ್ಯಮಿತ್ಯತೋऽರ್ಥಭೇದಂ ಟೀಕೋಕ್ತಂ ವಿಶದಯತಿ – **ಸರ್ವತ ಇತಿ ॥ ಯಥಾಸಮ್ಭವಮಿತಿ ॥** ಪೃಥಿವೀಲೋಕಾದುಚ್ಚತ್ವಮನನ್ತಾಸನಸ್ಯ, ಅನ್ತರಿಕ್ಷಾದುಚ್ಚತ್ವಂ ಶ್ವೇತದ್ವೀಪಸ್ಯ, ಸ್ವರ್ಗಾದುಚ್ಚತ್ವಂ ವೈಕುಂಠಸ್ಯೇತ್ಯರ್ಥಃ ॥ **ಚತುರ್ಮುಖಸ್ಥಾನಾದಿತಿ ॥** ಕ್ರಮೇಣಾನನ್ತಾಸನಾದೀನಾಮಿತಿ ಭಾವಃ । ಅನೇನ ಪೃಷ್ಠಶಬ್ದಸ್ಯೋಚ್ಚತ್ವಮರ್ಥ ಇತ್ಯುಕ್ತಂ ಭವತಿ ॥ **ಇತ್ಯಾದಿವಾಕ್ಯಾದಿತಿ ॥** ಆದಿಪದೇನ –

**ಪೃಥಿವೀಸ್ಥೇಷು ಸರ್ವೋಚ್ಚೋ ಲೋಕೋऽನನ್ತಾಸನಾತ್ಮಕಃ ।**
**ಅನ್ತರಿಕ್ಷಾತ್ಮಕೇಭ್ಯಶ್ಚ ಶ್ವೇತದ್ವೀಪೇ ಸ್ಥಿತೋ ಹರಿಃ ।**
**ದ್ಯ್ವಾತ್ಮಕೇಭ್ಯಶ್ಚ ಸರ್ವೇಭ್ಯೋ ವೈಕುಂಠಶ್ಚೋಚ್ಚ ಉಚ್ಯತೇ ॥**

ಇತ್ಯಸ್ಯ ಗ್ರಹಣಮ್ । ಟೀಕೋಕ್ತಂ ವೈಕುಂಠಸ್ಯೇನ್ದ್ರಸದನಾತ್ಪರತ್ವಮಾಕ್ಷಿಪ್ಯ ಸಮಾಧತ್ತೇ **ಅತ್ರೇತಿ ॥** ಏಕಸ್ಯ ಶಬ್ದಸ್ಯಾಕ್ಷಾದಿಶಬ್ದವದನೇಕತ್ರ ರೂಢ್ಯಙ್ಗೀಕಾರೇ ಹಿ ನಾನಾರ್ಥತ್ವಂ, ಏಕತ್ರ ರೂಢಸ್ಯೈವ ಯೋಗವೃತ್ತ್ಯಾऽರ್ಥಾನ್ತರಸ್ವೀಕಾರೇ ನಾನೇಕಾರ್ಥತ್ವಮತಃ 'ಅನ್ಯಾಯ್ಯಂ ಚಾನೇಕಾರ್ಥತ್ವಂ' ಇತ್ಯಸ್ಯ ನಾಯಂ ವಿಷಯ ಇತಿ ಭಾವೇನ ಪಕ್ಷಾನ್ತರಮಾಹ – **ಯದ್ವೇತಿ ॥**

ಯದ್ವಾ ಛಾನ್ದೋಗ್ಯಭಾಷ್ಯೋಕ್ತಮನ್ಯದಪಿ ಸೂತ್ರಾರೂಢಂ ಕರ್ತುಮಾಹ – **ಯದ್ವೇತಿ ॥ ಅವಿರೋಧ ಇತಿ ॥** ಯೋಗರೂಢಿಭ್ಯಾಂ ದ್ಯುಶಬ್ದಸ್ಯ ಭಿನ್ನಾರ್ಥತ್ವೇನ ದ್ಯುಸ್ಥತ್ವದಿವಃಪರತ್ವವಿರೋಧೋ ನೇತ್ಯರ್ಥಃ ।

ವಿವರಣೆ - ಸಪ್ತಲೋಕಗಳನ್ನು ವಿವಕ್ಷಿಸಿದಾಗ ಬರುವ ತೊಂದರೆಯನ್ನು ಆಕ್ಷೇಪಿಸಿ 'ಅತ್ರ' ಇತ್ಯಾದಿ ಗ್ರಂಥದಿಂದ ಸಮಾಧಾನ ಮಾಡುತ್ತಿದ್ದಾರೆ. ಉಪದೇಶಭೇದದ ವಿರೋಧವನ್ನು ಮೂರು ಲೋಕದ ವಿವಕ್ಷೆಯಿಂದ ಪರಿಹರಿಸಿದ್ದಾಯಿತು.

ಪ್ರಕೃತ ಸಪ್ತಲೋಕವಿವಕ್ಷೆಯಿಂದ ಪರಿಹರಿಸುತ್ತಿದ್ದಾರೆ. ತ್ರಿಲೋಕವೆಂದು ವಿಭಾಗಿಸಿದಾಗ ಅಂತರಿಕ್ಷಲೋಕ, ಅಂತರಿಕ್ಷದ ಕೆಳಗಿನ ಲೋಕ, ಅಂತರಿಕ್ಷದ ಮೇಲಿನ ಲೋಕ ಎಂದು ವಿಭಾಗ. ಹೀಗೆ ವಿಭಾಗಿಸಿದಾಗ ಅಂತರಿಕ್ಷದ ಮೇಲಿನ ಲೋಕಗಳೆಲ್ಲವೂ ದ್ಯುಎನಿಸುತ್ತವೆ. ಆದ್ದರಿಂದ ವೈಕುಂಠವೂ ಸಹ ದಿವಿಸ್ಥಿತವೇ ಆಗುತ್ತದೆ ಹೊರತು ದಿವಃಪರ ಆಗುವುದಿಲ್ಲ. ದಿವಃಪರತ್ವವನ್ನು ಸಮರ್ಥಿಸುವುದಕ್ಕಾಗಿಯೇ ಸಪ್ತಲೋಕಗಳ ವಿಭಾಗವನ್ನು ಅನುಸರಿಸಲಾಗಿದೆ. ಈ ಪಕ್ಷದಲ್ಲಿ ಮೇರು, ಸೂರ್ಯಮಂಡಲ, ಇಂದ್ರ ಸದನ ಮೂರು ದ್ಯುಲೋಕಗಳೆನಿಸಿವೆ. ಈ ಎಲ್ಲ ದ್ಯುಲೋಕಗಳಿಗಿಂತ ವೈಕುಂಠವು ಮೇಲಿದೆಯೆಂದು ಹೇಳಿದಂತಾಗುತ್ತದೆ.

ಪ್ರಸಿದ್ಧವಾದ ಸ್ವರ್ಗಕ್ಕಿಂತ ವೈಕುಂಠಲೋಕವು ಮೇಲಿದೆಯೆಂದು ತಿಳಿಸುವುದಕ್ಕಾಗಿ ಸಪ್ತಲೋಕದ ವಿವಕ್ಷೆಯು ಇರಲಿ. ಆದರೆ ವೈಕುಂಠಕ್ಕಷ್ಟೇ ಸ್ವರ್ಗಾದ್ಯುತ್ತಮತ್ವವನ್ನು ಹೇಳಿದಂತಾಗುತ್ತದೆ. ಹೊರತು ಅನಂತಾಸನ ಶ್ವೇತದ್ವೀಪಗಳಿಗೆ ಸ್ವರ್ಗಾದ್ಯುತ್ತಮತ್ವವನ್ನು ಹೇಳಿದಂತಾಗುವುದಿಲ್ಲವಲ್ಲವೆ? ಎಂಬ ಪ್ರಶ್ನೆಗೆ 'ಸ್ವರ್ಗಲೋಕಾದ್' ಎಂಬ ವಾಕ್ಯದಿಂದ ಉತ್ತರಿಸಿದ್ದಾರೆ. ಅನಂತಾಸನ ಮತ್ತು ಶ್ವೇತದ್ವೀಪಗಳು ಸ್ವರ್ಗಕ್ಕಿಂತ ಮೇಲೆ ಇಲ್ಲದ ಕಾರಣ ಸ್ವರ್ಗಾದ್ಯುತ್ತಮತ್ವವನ್ನು ಹೇಳುವ ಅವಶ್ಯಕತೆ ಇಲ್ಲ.

ಅನಂತಾಸನವೈಕುಂಠನಾರಾಯಣಪುರಾಣಿ ತು।
ತ್ರೀಣಿ ಧಾಮಾನಿ ವೈ ವಿಷ್ಣೋಸ್ತ್ರೈಲೋಕ್ಯಾದ್ಬಹಿರೇವ ಹಿ॥

(ಅನಂತಾಸನ ಶ್ವೇತದ್ವೀಪ ವೈಕುಂಠಗಳೆಂಬ ಮೂರು ವಿಷ್ಣುವಿನ ಮನೆಗಳು ತ್ರಿಲೋಕಗಳಿಗಿಂತ ಹೊರಗಿವೆಯಷ್ಟೇ.) ಹೀಗೆ ದ್ವಿತೀಯಸ್ಕಂಧದ ಆರನೇ ಅಧ್ಯಾಯದ ತಾತ್ಪರ್ಯದಲ್ಲಿ ಅನಂತಾಸನಾದಿಗಳಿಗೆ ಸ್ವರ್ಗಾದಿ ಲೋಕಗಳಿಗಿಂತ ಬಾಹ್ಯತ್ವವನ್ನು ಹೇಳಲಾಗಿದೆ. ಆದರೆ ನೀವು ವೈಕುಂಠವನ್ನು ಸ್ವರ್ಗಕ್ಕಿಂತ ಮೇಲೆಂದು ಹೇಳುತ್ತಿದ್ದೀರಿ. ಹಾಗಾದಲ್ಲಿ ಭಾಗವತದ ವಿರೋಧ ಬರುತ್ತದಲ್ಲವೇ? ಎಂಬ ಪ್ರಶ್ನೆಗೆ ಮೂರು ಬಗೆಯಲ್ಲಿ ಉತ್ತರಿಸಬಹುದು.

೧. ಈ ಶ್ಲೋಕವು ವೈಕುಂಠಮಾತ್ರ ಮೂರು ಲೋಕಗಳಿಗಿಂತ ಮೇಲಿರುವುದರಿಂದ ಬಹಿಃ ಎಂದು ಹೇಳಿದೆ. ಹೊರತು ಶ್ವೇತದ್ವೀಪ ಅನಂತಾಸನಗಳ ಬಗ್ಗೆ ಇದು ಏನನ್ನೂ ಹೇಳುತ್ತಿಲ್ಲ.

೨. ಮೂರುಲೋಕಗಳಿಗಿಂತ ಅನಂತಾಸನಾದಿಗಳು ವಿಲಕ್ಷಣಗಳಾಗಿವೆ. ಮೂರು ಲೋಕಗಳು ಲೌಕಿಕವೆಂದು ಅನಂತಾಸನಾದಿಗಳು ಅಲೌಕಿಕವೆಂದು ಅಭಿಪ್ರಾಯ. ಈ ವಿವಕ್ಷೆಯಿಂದ ಬಹಿಃ ಎಂದಿದ್ದಾರೆ.

೩. ವೈಕುಂಠವು ಎಲ್ಲ ಲೋಕಕ್ಕಿಂತ ಮೇಲಿರುವುದರಿಂದ ಉಪರಿತನತ್ವೇನ ಬಹಿಷ್ಟ್ವವು ವೈಕುಂಠಕ್ಕೆ ಬರುತ್ತದೆ. ಶ್ವೇತದ್ವೀಪ ಹಾಗೂ ಅನಂತಾಸನಗಳು ಭೂಲೋಕ ಹಾಗೂ ಅಂತರಿಕ್ಷಲೋಕಗಳಿಗಿಂತ ಮೇಲಿದ್ದರೂ ಸ್ವರ್ಗಕ್ಕಿಂತ ಮೇಲಿರುವುದಿಲ್ಲ. ಇಂದ್ರಸದನಕ್ಕಿಂತ ಅರ್ವಾಕ್ ಭಾಗದಲ್ಲಿದೆ. ಆದ್ದರಿಂದಲೂ ತ್ರೈಲೋಕ್ಯಬಹಿಷ್ಟ್ವವನ್ನು ಶ್ವೇತದ್ವೀಪ ಅನಂತಾಸನಗಳಿಗೆ ಹೇಳಬಹುದು.

ವಸ್ತುತಃ 'ಭುವಃ ಸ್ವರ್ಗಶ್ಚ ಕೋಟ್ಯೈವ ಯೋಜನಾನಾಂ ಪ್ರವಿಸ್ಯತೌ' (ಅಂತರಿಕ್ಷ ಹಾಗೂ ಸ್ವರ್ಗಲೋಕಗಳು ಒಂದು ಕೋಟಿಯೋಜನದಷ್ಟು ವಿಸ್ತೀರ್ಣವಾಗಿವೆ.). ಇದಕ್ಕಿಂತ ಹೊರಗಡೆ ಇರುವ

ಶ್ವೇತದ್ವೀಪವು ತ್ರಿಲೋಕಬಾಹ್ಯವೆನಿಸುತ್ತದೆ. ಅಥವಾ ಭೂಮಿಯು ಅನೇಕಕೋಟಿ ವಿಸ್ತೀರ್ಣವಾಗಿದೆ (ಸಪ್ತದ್ವೀಪ, ಸಪ್ತಸಮುದ್ರಗಳನ್ನು ಸೇರಿ ಭೂಮಿಯು ಏಳು ಕೋಟಿಯೋಜನದಷ್ಟು ವಿಸ್ತಾರವಾಗಿದೆ). ಈ ಭೂಮಿಯಲ್ಲಿಯೇ ಕ್ಷೀರಸಮುದ್ರವಿದೆ. ಅದರಲ್ಲಿ ಶ್ವೇತದ್ವೀಪವಿರುವುದರಿಂದ ಶ್ವೇತದ್ವೀಪವು ಭೂಲೋಕ ಸ್ಥಿತವೇ ಆಗಿದೆ. ಭೂಲೋಕದಲ್ಲೇ ಇದ್ದರೂ ಸಹ ಅನೇಕಲಕ್ಷ ಯೋಜನಗಳಷ್ಟು ದೂರದಲ್ಲಿರುವುದರಿಂದ ತ್ರಿಲೋಕಬಾಹ್ಯವೆನಿಸುತ್ತದೆ. ಹೊರತು ಸ್ವರ್ಗಕ್ಕಿಂತ ಶ್ವೇತದ್ವೀಪ ಅನಂತಾಸನಗಳು ಮೇಲಿವೆ ಎಂದು ಇದರ ಅರ್ಥವಲ್ಲ.

ಅಥವಾ 'ಸರ್ವತಃ ಪೃಷ್ಠೇಷು' ಎಂಬ ಶ್ರುತಿಗೆ ಮುಂದೆ ವ್ಯಾಖ್ಯಾನಿಸುವಂತೆ ಅನಂತಾಸನ, ಶ್ವೇತ-ದ್ವೀಪ, ವೈಕುಂಠಗಳು ಕ್ರಮವಾಗಿ ಭೂಃ ಭುವಃ ಸ್ವಃ ಎಂಬ ಲೋಕಗಳಿಗಿಂತ ಮೇಲಿರುವುದರಿಂದ ತ್ರಿಲೋಕಬಾಹ್ಯತ್ವವನ್ನು ತಿಳಿಯಬಹುದು. ಆದ್ದರಿಂದ ಸ್ವರ್ಗಕ್ಕಿಂತ ಉಚ್ಚತ್ವವನ್ನು ಹೇಳದ ಕಾರಣ ವಿರೋಧಕ್ಕೆ ಅವಕಾಶವಿಲ್ಲ.

ಸಪ್ತಲೋಕವನ್ನು ವಿವಕ್ಷಿಸಿದಾಗ ದ್ಯುಶಬ್ದಕ್ಕೆ ಅನೇಕಾರ್ಥವನ್ನು ಹೇಳಿದಿರಿ. ಆದರೆ ಒಂದೇ ಪ್ರಕರಣದಲ್ಲಿರುವ ಶಬ್ದಕ್ಕೆ ಅನೇಕಾರ್ಥವನ್ನು ಹೇಳುವುದು ಎಲ್ಲಿಯೂ ಕಂಡಿಲ್ಲವೆಂಬ ಪ್ರಶ್ನೆಗೆ 'ಏವಂ ಚ' ಎಂಬ ವಾಕ್ಯದಿಂದ ಉತ್ತರಿಸಿದ್ದಾರೆ.

'ಹಲೋನಂತರಾಃ ಸಂಯೋಗಃ' ಎಂಬ ಸೂತ್ರಕ್ಕೆ ವ್ಯಾಖ್ಯಾನ ಮಾಡುತ್ತಾ ಮಹಾಭಾಷ್ಯದಲ್ಲಿ ಒಂದೇ ಪ್ರಕರಣದಲ್ಲಿರುವ ಗ್ರಾಮಶಬ್ದಕ್ಕೆ ಅನೇಕಾರ್ಥವನ್ನು ಸಮರ್ಥಿಸಿದ್ದಾರೆ. ಮೂಲದಲ್ಲಿ 'ಅಸ್ತಿ ವಾಟಪರಿಕ್ಷೇಪೇ ವರ್ತತೇ' ಎಂಬ ವಾಕ್ಯವಿದೆ. 'ಅಸ್ತಿ, ವರ್ತತೇ' ಎಂಬ ಎರಡು ಕ್ರಿಯಾಪದಗಳಿಗೆ ಹೀಗರ್ಥ. ಯಾವಶಬ್ದವು ವಾಟಪರಿಕ್ಷೇಪವಾಚಕವೋ ಆ ಶಬ್ದವು ಲೋಕದ ವ್ಯವಹಾರದಲ್ಲಿದೆ ಎಂದು. ('ವಾಟಪರಿಕ್ಷೇಪೇ ಯಃ ಶಬ್ದಃ ವರ್ತತೇ ಸಃ ಅಸ್ತಿ' ಎಂದು ಅನ್ವಯ)

'ಒಂದು ಶಬ್ದಕ್ಕೆ ಕೇವಲ ಒಂದು ಅರ್ಥವನ್ನು ಹೇಳಬೇಕು. ಇಲ್ಲದಿದ್ದರೆ ನಿರರ್ಥಕತ್ವದೋಷಕ್ಕೆ ಅವಕಾಶವಿದೆ ಹೊರತು ಅನೇಕಾರ್ಥವನ್ನು ಒಪ್ಪುವ ಅವಶ್ಯಕತೆ ಇಲ್ಲ. ಒಂದೇ ಶಬ್ದಕ್ಕೆ ಅನೇಕಾರ್ಥ ಹೇಳುವುದು ನ್ಯಾಯವಿರುದ್ಧವಾಗಿದೆ' ಎಂಬ ಪ್ರಶ್ನೆಗೆ 'ಅನೇಕಾರ್ಥತ್ವಂ ಚ' ಎಂಬ ವಾಕ್ಯದಿಂದ ಉತ್ತರಿಸಿದ್ದಾರೆ. ಯಾವ ಸಂದರ್ಭಕ್ಕೆ ಅನೇಕಾರ್ಥವನ್ನು ಒಪ್ಪಲು ಪ್ರಮಾಣವಿರುವುದಿಲ್ಲವೋ ಅಲ್ಲಷ್ಟೇ ಈ ನಿಯಮವು ಸಂಬಂಧಪಡುತ್ತದೆ. ಪ್ರಕೃತ ದ್ಯುಶಬ್ದಕ್ಕೆ ಅನೇಕಾರ್ಥವನ್ನು ಒಪ್ಪಬೇಕೆನ್ನಲು ಪುರಾಣದ ಆಧಾರವಿದೆ. ಆದ್ದರಿಂದಲೇ ನ್ಯಾಯಸುಧೆಯ ವೈಶೇಷಿಕಾಧಿಕರಣದಲ್ಲಿ 'ಯತ್ರ ಹಿ ಏಕಸ್ಮಿನ್ನರ್ಥೇ ವ್ಯವಸ್ಥಿತೇ ವೃದ್ಧ್ಯವಾರ್ಧಾಂತರಾಂಗೀಕಾರಸ್ತತ್ಸ್ಯಾನೇಕಾರ್ಥತ್ವಮನ್ಯಾಯ್ಯಃ' (ಒಂದೇ ಅರ್ಥವು ವ್ಯವಸ್ಥಿತವಾಗಿ-ರಬೇಕಾದರೆ ವ್ಯರ್ಥವಾಗಿ ಅನೇಕಾರ್ಥವನ್ನು ಅಂಗೀಕರಿಸುವುದು ಅನ್ಯಾಯ) ಎಂಬ ಮಾತಿದೆ. 'ಸರ್ವತಃ ಪೃಷ್ಠೇಷು ವಿಶ್ವತಃ ಪೃಷ್ಠೇಷು' ಎಂಬ ಶ್ರುತ್ಯರ್ಥವನ್ನು 'ಸರ್ವತಃ' ಎಂಬ ವಾಕ್ಯದಿಂದ ವಿವರಿಸಿದ್ದಾರೆ. ವಸ್ತುತಃ 'ಸರ್ವತಃ ಪೃಷ್ಠೇಷು' ಎಂಬರ್ಥವನ್ನೇ 'ವಿಶ್ವತಃ ಪೃಷ್ಠೇಷು' ಎಂಬುದು ಹೇಳುತ್ತಿರುವುದರಿಂದ ಪುನರುಕ್ತಿಯು ಕಾಣಿಸುತ್ತದೆ. ಆದರೆ ಈ ಎರಡೂ ಶಬ್ದಗಳಿಗಿರುವ ಅರ್ಥವೈಲಕ್ಷಣ್ಯವನ್ನು ಟೀಕೆಯಲ್ಲಿ ತೋರಿಸಿದ್ದಾರೆ. ಆದನ್ನೇ ಇಲ್ಲಿ ಗ್ರಂಥಕಾರರು ವಿವರಿಸಿದ್ದಾರೆಂದು ತಿಳಿಯಬೇಕು. 'ಯಥಾಸಂಭವಂ'

ಪ್ರಕೃತ ಸಪ್ತಲೋಕವಿವಕ್ಷೆಯಿಂದ ಪರಿಹರಿಸುತ್ತಿದ್ದಾರೆ. ತ್ರಿಲೋಕವೆಂದು ವಿಭಾಗಿಸಿದಾಗ ಅಂತರಿಕ್ಷಲೋಕ, ಅಂತರಿಕ್ಷದ ಕೆಳಗಿನ ಲೋಕ, ಅಂತರಿಕ್ಷದ ಮೇಲಿನ ಲೋಕ ಎಂದು ವಿಭಾಗ. ಹೀಗೆ ವಿಭಾಗಿಸಿದಾಗ ಅಂತರಿಕ್ಷದ ಮೇಲಿನ ಲೋಕಗಳೆಲ್ಲವೂ ದ್ಯುಎನಿಸುತ್ತವೆ. ಆದ್ದರಿಂದ ವೈಕುಂಠವೂ ಸಹ ದಿವಿಸ್ಥಿತವೇ ಆಗುತ್ತದೆ ಹೊರತು ದಿವಃಪರ ಆಗುವುದಿಲ್ಲ. ದಿವಃಪರತ್ವವನ್ನು ಸಮರ್ಥಿಸುವುದಕ್ಕಾಗಿಯೇ ಸಪ್ತಲೋಕಗಳ ವಿಭಾಗವನ್ನು ಅನುಸರಿಸಲಾಗಿದೆ. ಈ ಪಕ್ಷದಲ್ಲಿ ಮೇರು, ಸೂರ್ಯಮಂಡಲ, ಇಂದ್ರ ಸದನ ಮೂರು ದ್ಯುಲೋಕಗಳೆನಿಸಿವೆ. ಈ ಎಲ್ಲ ದ್ಯುಲೋಕಗಳಿಗಿಂತ ವೈಕುಂಠವು ಮೇಲಿದೆಯೆಂದು ಹೇಳಿದಂತಾಗುತ್ತದೆ.

ಪ್ರಸಿದ್ಧವಾದ ಸ್ವರ್ಗಕ್ಕಿಂತ ವೈಕುಂಠಲೋಕವು ಮೇಲಿದೆಯೆಂದು ತಿಳಿಸುವುದಕ್ಕಾಗಿ ಸಪ್ತಲೋಕದ ವಿವಕ್ಷೆಯು ಇರಲಿ. ಆದರೆ ವೈಕುಂಠಕ್ಕಷ್ಟೇ ಸ್ವರ್ಗಾದ್ಯುತ್ತಮತ್ವವನ್ನು ಹೇಳಿದಂತಾಗುತ್ತದೆ. ಹೊರತು ಅನಂತಾಸನ ಶ್ವೇತದ್ವೀಪಗಳಿಗೆ ಸ್ವರ್ಗಾದ್ಯುತ್ತಮತ್ವವನ್ನು ಹೇಳಿದಂತಾಗುವುದಿಲ್ಲವಲ್ಲವೆ? ಎಂಬ ಪ್ರಶ್ನೆಗೆ 'ಸ್ವರ್ಗಲೋಕಾದ್' ಎಂಬ ವಾಕ್ಯದಿಂದ ಉತ್ತರಿಸಿದ್ದಾರೆ. ಅನಂತಾಸನ ಮತ್ತು ಶ್ವೇತದ್ವೀಪಗಳು ಸ್ವರ್ಗಕ್ಕಿಂತ ಮೇಲೆ ಇಲ್ಲದ ಕಾರಣ ಸ್ವರ್ಗಾದ್ಯುತ್ತಮತ್ವವನ್ನು ಹೇಳುವ ಅವಶ್ಯಕತೆ ಇಲ್ಲ.

ಅನಂತಾಸನವೈಕುಂಠನಾರಾಯಣಪುರಾಣಿ ತು।
ತ್ರೀಣಿ ಧಾಮಾನಿ ವೈ ವಿಷ್ಣೋಸ್ತ್ರೈಲೋಕ್ಯಾದ್ಬಹಿರೇವ ಹಿ ॥

(ಅನಂತಾಸನ ಶ್ವೇತದ್ವೀಪ ವೈಕುಂಠಗಳೆಂಬ ಮೂರು ವಿಷ್ಣುವಿನ ಮನೆಗಳು ತ್ರಿಲೋಕಗಳಿಗಿಂತ ಹೊರಗಿವೆಯಷ್ಟೇ.) ಹೀಗೆ ದ್ವಿತೀಯಸ್ಕಂಧದ ಆರನೇ ಅಧ್ಯಾಯದ ತಾತ್ಪರ್ಯದಲ್ಲಿ ಅನಂತಾಸನಾದಿಗಳಿಗೆ ಸ್ವರ್ಗಾದಿ ಲೋಕಗಳಿಗಿಂತ ಬಾಹ್ಯತ್ವವನ್ನು ಹೇಳಲಾಗಿದೆ. ಆದರೆ ನೀವು ವೈಕುಂಠವನ್ನು ಸ್ವರ್ಗಕ್ಕಿಂತ ಮೇಲೆಂದು ಹೇಳುತ್ತಿದ್ದೀರಿ. ಹಾಗಾದಲ್ಲಿ ಭಾಗವತದ ವಿರೋಧ ಬರುತ್ತದಲ್ಲವೇ? ಎಂಬ ಪ್ರಶ್ನೆಗೆ ಮೂರು ಬಗೆಯಲ್ಲಿ ಉತ್ತರಿಸಬಹುದು.

೧. ಈ ಶ್ಲೋಕವು ವೈಕುಂಠಮಾತ್ರ ಮೂರು ಲೋಕಗಳಿಗಿಂತ ಮೇಲಿರುವುದರಿಂದ ಬಹಿಃ ಎಂದು ಹೇಳಿದೆ. ಹೊರತು ಶ್ವೇತದ್ವೀಪ ಅನಂತಾಸನಗಳ ಬಗ್ಗೆ ಇದು ಏನನ್ನೂ ಹೇಳುತ್ತಿಲ್ಲ.

೨. ಮೂರುಲೋಕಗಳಿಗಿಂತ ಅನಂತಾಸನಾದಿಗಳು ವಿಲಕ್ಷಣಗಳಾಗಿವೆ. ಮೂರು ಲೋಕಗಳು ಲೌಕಿಕವೆಂದು ಅನಂತಾಸನಾದಿಗಳು ಅಲೌಕಿಕವೆಂದು ಅಭಿಪ್ರಾಯ. ಈ ವಿವಕ್ಷೆಯಿಂದ ಬಹಿಃ ಎಂದಿದ್ದಾರೆ.

೩. ವೈಕುಂಠವು ಎಲ್ಲ ಲೋಕಕ್ಕಿಂತ ಮೇಲಿರುವುದರಿಂದ ಉಪರಿತನತ್ವೇನ ಬಹಿಷ್ಟ್ವವು ವೈಕುಂಠಕ್ಕೆ ಬರುತ್ತದೆ. ಶ್ವೇತದ್ವೀಪ ಹಾಗೂ ಅನಂತಾಸನಗಳು ಭೂಲೋಕ ಹಾಗೂ ಅಂತರಿಕ್ಷಲೋಕಗಳಿಗಿಂತ ಮೇಲಿದ್ದರೂ ಸ್ವರ್ಗಕ್ಕಿಂತ ಮೇಲಿರುವುದಿಲ್ಲ. ಇಂದ್ರಸದನಕ್ಕಿಂತ ಅರ್ವಾಕ್ ಭಾಗದಲ್ಲಿದೆ. ಆದ್ದರಿಂದಲೂ ತ್ರೈಲೋಕ್ಯಬಹಿಷ್ಟ್ವವನ್ನು ಶ್ವೇತದ್ವೀಪ ಅನಂತಾಸನಗಳಿಗೆ ಹೇಳಬಹುದು.

ವಸ್ತುತಃ 'ಭುವಃ ಸ್ವರ್ಗಶ್ಚ ಕೋಟ್ಯೈವ ಯೋಜನಾನಾಂ ಪ್ರವಿಸ್ತೃತಾ' (ಅಂತರಿಕ್ಷ ಹಾಗೂ ಸ್ವರ್ಗಲೋಕಗಳು ಒಂದು ಕೋಟಿಯೋಜನದಷ್ಟು ವಿಸ್ತೀರ್ಣವಾಗಿವೆ.). ಇದಕ್ಕಿಂತ ಹೊರಗಡೆ ಇರುವ

ಶ್ವೇತದ್ವೀಪವು ತ್ರಿಲೋಕಬಾಹ್ಯವೆನಿಸುತ್ತದೆ. ಅಥವಾ ಭೂಮಿಯು ಅನೇಕಕೋಟಿ ವಿಸ್ತೀರ್ಣವಾಗಿದೆ (ಸಪ್ತದ್ವೀಪ, ಸಪ್ತಸಮುದ್ರಗಳನ್ನು ಸೇರಿ ಭೂಮಿಯು ಏಳು ಕೋಟಿಯೋಜನದಷ್ಟು ವಿಸ್ತಾರವಾಗಿದೆ). ಈ ಭೂಮಿಯಲ್ಲಿಯೇ ಕ್ಷೀರಸಮುದ್ರವಿದೆ. ಆದರಲ್ಲಿ ಶ್ವೇತದ್ವೀಪವಿರುವುದರಿಂದ ಶ್ವೇತದ್ವೀಪವು ಭೂಲೋಕ ಸ್ಥಿತವೇ ಆಗಿದೆ. ಭೂಲೋಕದಲ್ಲೇ ಇದ್ದರೂ ಸಹ ಅನೇಕಲಕ್ಷ ಯೋಜನಗಳಷ್ಟು ದೂರದಲ್ಲಿರುವುದರಿಂದ ತ್ರಿಲೋಕಬಾಹ್ಯವೆನಿಸುತ್ತದೆ. ಹೊರತು ಸ್ವರ್ಗಕ್ಕಿಂತ ಶ್ವೇತದ್ವೀಪ ಅನಂತಾಸನಗಳು ಮೇಲಿವೆ ಎಂದು ಇದರ ಅರ್ಥವಲ್ಲ.

ಅಥವಾ 'ಸರ್ವತಃ ಪೃಷ್ಠೇಷು' ಎಂಬ ಶ್ರುತಿಗೆ ಮುಂದೆ ವ್ಯಾಖ್ಯಾನಿಸುವಂತೆ ಅನಂತಾಸನ, ಶ್ವೇತ-ದ್ವೀಪ, ವೈಕುಂಠಗಳು ಕ್ರಮವಾಗಿ ಭೂಃ ಭುವಃ ಸ್ವಃ ಎಂಬ ಲೋಕಗಳಿಗಿಂತ ಮೇಲಿರುವುದರಿಂದ ತ್ರಿಲೋಕಬಾಹ್ಯತ್ವವನ್ನು ತಿಳಿಯಬಹುದು. ಆದ್ದರಿಂದ ಸ್ವರ್ಗಕ್ಕಿಂತ ಉಚ್ಚತ್ವವನ್ನು ಹೇಳದ ಕಾರಣ ವಿರೋಧಕ್ಕೆ ಅವಕಾಶವಿಲ್ಲ.

ಸಪ್ತಲೋಕವನ್ನು ವಿವಕ್ಷಿಸಿದಾಗ ದ್ಯುಶಬ್ದಕ್ಕೆ ಅನೇಕಾರ್ಥವನ್ನು ಹೇಳಿದಿರಿ. ಆದರೆ ಒಂದೇ ಪ್ರಕರಣದಲ್ಲಿರುವ ಶಬ್ದಕ್ಕೆ ಅನೇಕಾರ್ಥವನ್ನು ಹೇಳುವುದು ಎಲ್ಲಿಯೂ ಕಂಡಿಲ್ಲವೆಂಬ ಪ್ರಶ್ನೆಗೆ 'ಏವಂ ಚ' ಎಂಬ ವಾಕ್ಯದಿಂದ ಉತ್ತರಿಸಿದ್ದಾರೆ.

'ಹಲೋನಂತರಾಃ ಸಂಯೋಗಃ' ಎಂಬ ಸೂತ್ರಕ್ಕೆ ವ್ಯಾಖ್ಯಾನ ಮಾಡುತ್ತಾ ಮಹಾಭಾಷ್ಯದಲ್ಲಿ ಒಂದೇ ಪ್ರಕರಣದಲ್ಲಿರುವ ಗ್ರಾಮಶಬ್ದಕ್ಕೆ ಅನೇಕಾರ್ಥವನ್ನು ಸಮರ್ಥಿಸಿದ್ದಾರೆ. ಮೂಲದಲ್ಲಿ 'ಅಸ್ತಿ ವಾಟಪರಿಕ್ಷೇಪೇ ವರ್ತತೇ' ಎಂಬ ವಾಕ್ಯವಿದೆ. 'ಅಸ್ತಿ, ವರ್ತತೇ' ಎಂಬ ಎರಡು ಕ್ರಿಯಾಪದಗಳಿಗೆ ಹೀಗರ್ಥ. ಯಾವಶಬ್ದವು ವಾಟಪರಿಕ್ಷೇಪವಾಚಕವೋ ಆ ಶಬ್ದವು ಲೋಕದ ವ್ಯವಹಾರದಲ್ಲಿದೆ ಎಂದು. ('ವಾಟಪರಿಕ್ಷೇಪೇ ಯಃ ಶಬ್ದಃ ವರ್ತತೇ ಸಃ ಅಸ್ತಿ' ಎಂದು ಅನ್ವಯ)

'ಒಂದು ಶಬ್ದಕ್ಕೆ ಕೇವಲ ಒಂದು ಅರ್ಥವನ್ನು ಹೇಳಬೇಕು. ಇಲ್ಲದಿದ್ದರೆ ನಿರರ್ಥಕತ್ವದೋಷಕ್ಕೆ ಅವಕಾಶವಿದೆ ಹೊರತು ಅನೇಕಾರ್ಥವನ್ನು ಒಪ್ಪುವ ಅವಶ್ಯಕತೆ ಇಲ್ಲ. ಒಂದೇ ಶಬ್ದಕ್ಕೆ ಅನೇಕಾರ್ಥ ಹೇಳುವುದು ನ್ಯಾಯವಿರುದ್ಧವಾಗಿದೆ' ಎಂಬ ಪ್ರಶ್ನೆಗೆ 'ಅನೇಕಾರ್ಥತ್ವಂ ಚ' ಎಂಬ ವಾಕ್ಯದಿಂದ ಉತ್ತರಿಸಿದ್ದಾರೆ. ಯಾವ ಸಂದರ್ಭಕ್ಕೆ ಅನೇಕಾರ್ಥವನ್ನು ಒಪ್ಪಲು ಪ್ರಮಾಣವಿರುವುದಿಲ್ಲವೋ ಅಲ್ಲಷ್ಟೇ ಈ ನಿಯಮವು ಸಂಬಂಧಪಡುತ್ತದೆ. ಪ್ರಕೃತ ದ್ಯುಶಬ್ದಕ್ಕೆ ಅನೇಕಾರ್ಥವನ್ನು ಒಪ್ಪಬೇಕೆನ್ನಲು ಪುರಾಣದ ಆಧಾರವಿದೆ. ಆದ್ದರಿಂದಲೇ ನ್ಯಾಯಸುಧೆಯ ವೈಶೇಷಿಕಾಧಿಕರಣದಲ್ಲಿ 'ಯತ್ರ ಹಿ ಏಕಸ್ಮಿನ್ನರ್ಥೇ ವ್ಯವಸ್ಥಿತೇ ವೃಥೈವಾರ್ಥಾಂತರಾಂಗೀಕಾರಸ್ತತ್ರೈವಾನೇಕಾರ್ಥತ್ವಮನ್ಯಾಯ್ಯಃ' (ಒಂದೇ ಅರ್ಥವು ವ್ಯವಸ್ಥಿತವಾಗಿ-ರಬೇಕಾದರೆ ವ್ಯರ್ಥವಾಗಿ ಅನೇಕಾರ್ಥವನ್ನು ಅಂಗೀಕರಿಸುವುದು ಅನ್ಯಾಯ) ಎಂಬ ಮಾತಿದೆ. 'ಸರ್ವತಃ ಪೃಷ್ಠೇಷು ವಿಶ್ವತಃ ಪೃಷ್ಠೇಷು' ಎಂಬ ಶ್ರುತ್ಯರ್ಥವನ್ನು 'ಸರ್ವತಃ' ಎಂಬ ವಾಕ್ಯದಿಂದ ವಿವರಿಸಿದ್ದಾರೆ. ವಸ್ತುತಃ 'ಸರ್ವತಃ ಪೃಷ್ಠೇಷು' ಎಂಬರ್ಥವನ್ನೇ 'ವಿಶ್ವತಃ ಪೃಷ್ಠೇಷು' ಎಂಬುದು ಹೇಳುತ್ತಿರುವುದರಿಂದ ಪುನರುಕ್ತಿಯು ಕಾಣಿಸುತ್ತದೆ. ಆದರೆ ಈ ಎರಡೂ ಶಬ್ದಗಳಿಗಿರುವ ಅರ್ಥವೈಲಕ್ಷಣ್ಯವನ್ನು ಟೀಕೆಯಲ್ಲಿ ತೋರಿಸಿದ್ದಾರೆ. ಅದನ್ನೇ ಇಲ್ಲಿ ಗ್ರಂಥಕಾರರು ವಿವರಿಸಿದ್ದಾರೆಂದು ತಿಳಿಯಬೇಕು. 'ಯಥಾಸಂಭವಂ'

ಎಂಬುವುದರ ಅರ್ಥ - 'ಪೃಥಿವಿಲೋಕಕ್ಕಿಂತ ಅನಂತಾಸನವು ಮೇಲಿದೆ; ಅಂತರಿಕ್ಷಕ್ಕಿಂತ ಶ್ವೇತದ್ವೀಪವು ಮೇಲಿದೆ; ಸ್ವರ್ಗಕ್ಕಿಂತ ವೈಕುಂಠವು ಮೇಲಿದೆ' ಎಂದು. ಬ್ರಹ್ಮದೇವರ ಮೂರು ಸದನಗಳಿಗಿಂತ ಕ್ರಮವಾಗಿ ಅನಂತಾಸನಾದಿಗಳು ಮೇಲಿವೆ ಎಂದು 'ಚತುರ್ಮುಖಿಸ್ಥಾನಾತ್' ಎಂಬ ಪದವು ಹೇಳುತ್ತಿದೆ. ಶ್ರುತಿಯಲ್ಲಿರುವ ಪೃಷ್ಠಶಬ್ದಕ್ಕೆ ಉಪರಿತನ ಎಂದರ್ಥ. 'ಇತ್ಯಾದಿವಾಕ್ಯಾತ್' ಎಂಬಲ್ಲಿರುವ ಆದಿಪದದಿಂದ ಕೆಳಗಿನ ಪ್ರಮಾಣವನ್ನು ತಿಳಿಯಬೇಕು.

ಪೃಥಿವೀಸ್ಥೇಷು ಸರ್ವೋಚ್ಚೋ ಲೋಕೋಽನಂತಾಸನಾತ್ಮಕಃ।
ಆಂತರಿಕ್ಷಾತ್ಮಕೇಭ್ಯಶ್ಚ ಶ್ವೇತದ್ವೀಪೇ ಸ್ಥಿತೋ ಹರಿಃ।
ದ್ಯ್ವಾತ್ಮಕೇಭ್ಯ ಸರ್ವೇಭ್ಯೋ ವೈಕುಂಠಶ್ಚೋಚ್ಚ ಉಚ್ಯತೇ ॥

ಪೃಥಿವಿಯಲ್ಲಿರುವ ಎಲ್ಲ ಲೋಕಗಳಿಗಿಂತ ಅನಂತಾಸನವು ಎತ್ತರದಲ್ಲಿದೆ. ಆಂತರಿಕ್ಷದಲ್ಲಿರುವ ಎಲ್ಲ ಲೋಕಗಳಿಗಿಂತ ಶ್ವೇತದ್ವೀಪದಲ್ಲಿರುವ ಹರಿಯು ಎತ್ತರದಲ್ಲಿದ್ದಾನೆ. (ಆಂತರಿಕ್ಷವೆಂಬುದು ಒಂದು ಪ್ರತ್ಯೇಕಲೋಕ. ಇದನ್ನು ಭುವರ್ಲೋಕ ಎಂದು ಕರೆಯುತ್ತಾರೆ.) ಈ ಶ್ವೇತದ್ವೀಪ ಹಾಗೂ ಅನಂತಾಸನಗಳಿಗಿಂತಲೂ ವೈಕುಂಠವು ಇನ್ನೂ ಎತ್ತರದಲ್ಲಿದೆ. ಟೀಕೆಯಲ್ಲಿ ಇಂದ್ರಸದನಕ್ಕಿಂತ ವೈಕುಂಠಕ್ಕೆ ಉಚ್ಚತ್ವವನ್ನು ಹೇಳಿದ್ದಾರೆ. ಅದನ್ನು ಆಕ್ಷೇಪಿಸಿ ಸಮಾಧಾನವನ್ನು 'ಅತ್ರ' ಇತ್ಯಾದಿ ವಾಕ್ಯದಿಂದ ಮಾಡುತ್ತಿದ್ದಾರೆ.

ಒಂದು ಶಬ್ದಕ್ಕೆ ಅನೇಕ ಅರ್ಥಗಳಲ್ಲಿ ಅಕ್ಷಾದಿಶಬ್ದದಂತೆ ರೂಢಿಯನ್ನು ಅಂಗೀಕರಿಸಿದರೆ ನಾನಾರ್ಥತ್ವವು ಬರುತ್ತದೆ. ಆದರೆ ಒಂದು ಅರ್ಥದಲ್ಲಿ ರೂಢಿಯನ್ನು ಮತ್ತೊಂದು ಅರ್ಥದಲ್ಲಿ ಯೋಗವನ್ನು ಅಂಗೀಕರಿಸಿದರೆ ನಾನಾರ್ಥತ್ವವು ಬರುವುದಿಲ್ಲ. ಆಗ 'ಅನೇಕಾರ್ಥತ್ವಂ ಅನ್ಯಾಯ್ಯಮ್' ಎಂಬ ನಿಯಮದ ವಿರೋಧಕ್ಕೂ ಅವಕಾಶವಿಲ್ಲ ಎಂಬ ಅಭಿಪ್ರಾಯದಿಂದ ಮತ್ತೊಂದು ಪಕ್ಷವನ್ನು 'ಯದ್ವಾ' ಎಂಬ ಗ್ರಂಥದಿಂದ ಹೇಳಿದ್ದಾರೆ. ಅಥವಾ ಛಾಂದೋಗ್ಯಭಾಷ್ಯದಲ್ಲಿ ಹೇಳಿದ ಮತ್ತೊಂದು ಅರ್ಥವನ್ನು 'ದ್ಯು'ಶಬ್ದಕ್ಕೆ ಹೇಳುವವರಾಗಿ ಸೂತ್ರಾರೂಢವನ್ನು ಮಾಡುತ್ತಿದ್ದಾರೆ 'ಯದ್ವಾ' ಇತ್ಯಾದಿ-ಗ್ರಂಥದಿಂದ. ಯೋಗ ಹಾಗೂ ರೂಢಿಯೆಂಬ ಬೇರೆ ಬೇರೆ ವೃತ್ತಿಗಳಿಂದ ದ್ಯುಶಬ್ದಕ್ಕೆ ಅನೇಕಾರ್ಥತ್ವವನ್ನು ಹೇಳಿದ್ದರಿಂದ ದ್ಯುಸ್ಥತ್ವ ಮತ್ತು ದಿವಃಪರತ್ವಗಳಿಗೆ ವಿರೋಧಗಳು ಇಲ್ಲವೆಂದು 'ಅವಿರೋಧ' ಎಂಬ ಶಬ್ದದಿಂದ ಹೇಳಿದ್ದಾರೆ.

**ಗುರುರಾಜೀಯಮ್** – ನನು ಸಪ್ತಲೋಕವಿವಕ್ಷಾಕರಣಮಯುಕ್ತಮ್ । ದಿವಃಪರತ್ವಸ್ಯ ಲೋಕತ್ರಯವಿವಕ್ಷಯಾಪಿ ಸಂಭವಾದಿತ್ಯತ ಆಹ – **ಅತ್ರ ಯದ್ಯಪೀತಿ** ॥ ನನ್ವನನ್ತಾಸನ-ಶ್ವೇತದ್ವೀಪಯೋಃ ಸ್ವರ್ಗಲೋಕಾತ್ಪರತ್ವಸಿದ್ಧ್ಯರ್ಥೆ ಸಪ್ತಲೋಕವಿವಕ್ಷೇತ್ಯಾಹ – **ಸ್ವರ್ಗಲೋಕಾದಿತಿ** ॥ **ಯಾವಾನಿತಿ** ॥ ಸ್ವರ್ಗಲೋಕೋ ಯಾವಾನುಚ್ಚಃ ತಚ್ಚತಯಾ ತಾವಾನ್ ಶ್ವೇತದ್ವೀಪೋ ವರ್ತತೇ । ಅತಃ ಸ ದಿವಿಷ್ಠ ಇತ್ಯರ್ಥಃ ॥ **ಸರ್ವದ್ಯುಪರತ್ವಸಿದ್ಧ್ಯ ಇತಿ** ॥ ಇನ್ದ್ರಸದನಮೇರುಸೂರ್ಯಮಣ್ಡಲರೂಪ-ಸರ್ವದ್ಯುಪರತ್ವಸಿದ್ಧ್ಯ ಇತ್ಯರ್ಥಃ । ಅನ್ಯಥಾ ಲೋಕತ್ರಯವಿವಿಕ್ಷಾಯಾಂ ಮೇರ್ವಾದೇರ್ದ್ಯುತ್ವಸ್ಯಾ-ವಿವಕ್ಷಿತತ್ವಾತ್ತತ್ಪರತ್ವಂ ನ ಸಿದ್ಧ್ಯೇದಿತ್ಯರ್ಥಃ । ವೈಕುಂಠಸ್ಯ ಸರ್ವದ್ಯುಪರತ್ವೇ ಪ್ರಮಾಣಮಾಹ –

**तदुक्तमिति ॥ नन्वेवं द्युशब्दस्यानेकार्थत्वं स्यात् । लोकत्रयविवक्षापक्षेऽन्तरिक्षो-परितनसर्वलोकपरत्वस्यसप्तलोकविवक्षापक्षे मेरुसूर्यमण्डलेन्द्रसदनपरत्वस्य स्वीकृतत्वादित्यत आह – एवञ्चेति ॥ अस्ति वाटपरिक्षेपे वर्तत इत्यादौ यो वाटपरिक्षेपे वर्तते स एको ग्रामशब्दोस्तीत्यर्थः।**

## ಸಾರ

ವಸ್ತುತಃ ಸಪ್ತಲೋಕದ ಆಪೇಕ್ಷೆ ಇಲ್ಲ. ತ್ರಿಲೋಕಗಳೆಂಬ ವಿಭಾಗದಿಂದಲೂ ದಿವಃಪರತ್ವವನ್ನು ಹೊಂದಿಸಬಹುದು. ಆದರೆ ಸಪ್ತಲೋಕವನ್ನು ವಿವಕ್ಷಿಸಿದ್ದಕ್ಕೆ ಹೆಚ್ಚಿನ ಪ್ರಯೋಜನವಿದೆ. ವೈಕುಂಠಲೋಕವು ಮೇರು, ಸೂರ್ಯಮಂಡಲ, ಇಂದ್ರಸದನಗಳೆಂಬ ಪ್ರಸಿದ್ಧವಾದ ಮೂರು ದ್ಯುಲೋಕಗಳಿಗಿಂತ ಎತ್ತರದಲ್ಲಿದೆ ಎಂದಷ್ಟೇ ಅಲ್ಲದೆ ಸ್ವರ್ಗಲೋಕಕ್ಕಿಂತಲೂ ಎತ್ತರದಲ್ಲಿದೆ ಎಂದು ಸಿದ್ಧವಾಗಬೇಕಾಗಿದೆ. ಇದಕ್ಕೋಸ್ಕರ ಸಪ್ತಲೋಕದ ವಿಭಾಗವು ಸಾರ್ಥಕ.

ದ್ಯುಶಬ್ದಕ್ಕೆ ಅನೇಕಾರ್ಥ ಹೇಳುವುದು ಸರಿಯೇ? ಎಂಬುದು ಮುಂದಿನ ವಿಚಾರ. ಒಂದೇ ಪ್ರಕರಣ-ದಲ್ಲಿದ್ದರೂ ಅನೇಕಾರ್ಥಹೇಳುವುದು ತಪ್ಪಲ್ಲ. ಚೈತ್ರನು ಗ್ರಾಮದ ಹತ್ತಿರದ ಉದ್ಯಾನದಲ್ಲಿದ್ದಾಗ 'ಗ್ರಾಮದಲ್ಲಿ-ದ್ದಾನೆ' ಎಂಬ ಪ್ರಯೋಗವಿದೆ. ಮತ್ತು 'ಗ್ರಾಮದ ಹೊರಗಿದ್ದಾನೆ' ಎಂಬ ಪ್ರಯೋಗವೂ ಇದೆ. ಗ್ರಾಮದಲ್ಲಿದ್ದಾನೆ ಎಂದು ಹೇಳಿದಾಗ ಗ್ರಾಮಶಬ್ದಕ್ಕೆ ಉದ್ಯಾನವನ ಎಂದರ್ಥ. ಅದೇ ಗ್ರಾಮಶಬ್ದಕ್ಕೆ ಗ್ರಾಮದ ಹೊರಗಿದ್ದಾನೆಂಬ ಪ್ರಯೋಗದಲ್ಲಿ ಜನರ ವಾಸಸ್ಥಳ ಎಂದರ್ಥ. ಹೀಗೆ ಒಂದೇ ಗ್ರಾಮಶಬ್ದಕ್ಕೆ ಅನೇಕಾರ್ಥವಿರುವುದು ಲೋಕದಲ್ಲಿ ಕಂಡಿದೆ. ಆದರಂತೆ ಇಲ್ಲಿಯೂ ದ್ಯುಶಬ್ದಕ್ಕೆ ಅನೇಕಾರ್ಥ ಹೇಳಿದರೆ ಏನು ತಪ್ಪು?

'ಸರ್ವತಃ ಪೃಷ್ಠೇಷು' ಎಂಬ ಶ್ರುತಿಯು ಅನಂತಾಸನಾದಿಗಳು ಪೃಥಿವ್ಯಾದಿಗಳಿಗಿಂತ ಮೇಲಿವೆ ಎನ್ನುತ್ತಿದೆ. ಅದೇ ಶ್ರುತಿ ಮುಂದೆ ವಿಶ್ವತಃಪೃಷ್ಠೇಷು ಎಂದು ಬ್ರಹ್ಮದೇವರ ಮೂರು ಆರಮನೆಗಳಿಗಿಂತ ಅನಂತಾಸನಾದಿಗಳು ಮೇಲಿವೆ ಎನ್ನುತ್ತಿವೆ. ಅಥವಾ ದ್ಯುಶಬ್ದಕ್ಕೆ ಯೌಗಿಕಾರ್ಥ ಹಾಗೂ ರೂಢ್ಯರ್ಥಗಳನ್ನು ವಿವಕ್ಷಿಸಿ ಅನೇಕಾರ್ಥತ್ವದೋಷವನ್ನು ಪರಿಹರಿಸಬಹುದು. ಶ್ವೇತದ್ವೀಪಾದಿಗಳು ಚಿತ್ಪ್ರಕೃತಿಯ ಸ್ವರೂಪವಾದ್ದರಿಂದ ಕಂಗೊಳಿಸುತ್ತಿವೆ. ಆದ್ದರಿಂದಲೇ ದ್ಯು ಎನಿಸಿವೆ. ಈ ಯೌಗಿಕಾರ್ಥವನ್ನು ದಿವಿ ಎಂಬಲ್ಲಿರುವ ದ್ಯುಶಬ್ದವು ಹೇಳಿದೆ. 'ದಿವಃ' ಎಂಬಲ್ಲಿರುವ ದ್ಯುಶಬ್ದವು ಸ್ವರ್ಗಾದಿಗಳಲ್ಲಿ ಮೇಲೆ ಹೇಳಿದ ಪ್ರಕಾರ ರೂಢವಾಗಿದೆ. ಆದ್ದರಿಂದ ಸಪ್ತಲೋಕವಿವಕ್ಷೆಯಲ್ಲಿ ದ್ಯುಶಬ್ದಕ್ಕೆ ಅನೇಕಾರ್ಥವನ್ನು ಹೇಳಿದಂತಾಗುವುದಿಲ್ಲ.

### 'ತ್ರಿಪಾದಸ್ಯ' ಎಂಬ ಶ್ರುತ್ಯರ್ಥ ವಿಮರ್ಶೆ

### ತಾತ್ಪರ್ಯಚಂದ್ರಿಕಾ

**यच्चोक्तं परैः – जागरिते हि जीवस्य शरीरबाह्याकाशः स्थानं, स्वप्ने तु तन्मध्याकाशः, सुप्तौ तु हृदयाकाशः । तथा चावस्थात्रयविशिष्टो जीवः त्रिपात्,**

ಉಕ್ತತ್ರಿವಿಧಾಕಾಶಂ ಚ ಯುಶಬ್ದಾರ್ಥ ಇತಿ, ತನ್ನ, ಜಾಗ್ರದಾದ್ಯವಸ್ಥಾವತೊ ವಿಶ್ವಾದಿಶಬ್ದವಾಚ್ಯಸ್ಯ 'ದಕ್ಷಿಣಾಕ್ಷಿಮುಖೇ ವಿಶ್ವೊ ಮನಸ್ಯನ್ತಸ್ತು ತೈಜಸಃ' ಇತ್ಯಾದಿಶ್ರುತ್ಯಾ ಸ್ಥಾನಾನ್ತರೊಕ್ತೇಃ । ಜಾಗರಾದೌ ಜೀವಸ್ಯ ಬಾಹ್ಯಾದಿಪದಾರ್ಥಭೊಗೆಽಪಿ ''ಹೃದಿ ಹ್ಯೆಷ ಆತ್ಮಾ'' ಇತಿ ಶ್ರುತ್ಯಾ ಹೃದಯಸ್ಥಸ್ಯ ಜೀವಸ್ಯ ಬಾಹ್ಯಾಕಾಶಾದಿಸ್ಥಾನತ್ವೇ ಮಾನಾಭಾವಾಚ್ಚ । ಜೀವೇ ಅಮೃತತ್ವಸ್ಯ ಅಸಮ್ಭವಾಚ್ಚ । 'ದಿವಿ' 'ದಿವಃ' ಇತಿ ವಾಕ್ಯಯೊರೈಕಾರ್ಥ್ಯಸ್ಯ ಸಮ್ಮತತ್ವೇನ 'ದಿವಃ' ಇತಿ ವಾಕ್ಯೊಕ್ತಸ್ಯ ಜ್ಯೊತಿಷೊಽಪಿ ಜೀವತ್ವಾಪತ್ತ್ಯಾ ಬ್ರಹ್ಮತ್ವಸಿದ್ಧಾನ್ತಹಾನೇಶ್ಚ । ''ತ್ರಿಪಾದ್ಊರ್ಧ್ವ ಉದೈತ್ ಪುರುಷಃ'' ಇತ್ಯಾದಿ ಶ್ರುತೌ –

ಸುದರ್ಶನಾಖ್ಯಂ ಸ್ವಾಸ್ತ್ರಂ ತು ಪ್ರಾಯುಙ್ಕ್ತ ದಯಿತಂ ತ್ರಿಪಾತ್ ।

ಇತಿ ಭಾಗವತೇ ಚ ಭಗವತ್ಯೇವ ತ್ರಿಪಾಚ್ಛಬ್ದಪ್ರಯೊಗಾಚ್ಚ । ಯಚ್ಚೊಕ್ತಂ ಪರೈಃ – ''ವಿಶ್ವತಃ ಪೃಷ್ಠೇಷು'' ಇತ್ಯತ್ರ ವಿಶ್ವಶಬ್ದೊ ಸಙ್ಕುಚಿತವೃತ್ತಿರಿತಿ ದರ್ಶಯಿತುಂ ''ಸರ್ವತಃ ಪೃಷ್ಠೇಷು'' ಇತ್ಯುಕ್ತಮಿತಿ, ತತ್ರ ವ್ಯಕ್ತಮೇಕಸ್ಯ ವೈಯರ್ಥ್ಯಮ್ ।

ಅನುವಾದ - ತ್ರಿಪಾತ್ ಶಬ್ದಕ್ಕೆ ಆದ್ವೈತಿಗಳ ವ್ಯಾಖ್ಯಾನ - ''ಜೀವನು ಜಾಗ್ರದವಸ್ಥೆಯಲ್ಲಿ ಶರೀರದ ಬಾಹ್ಯಾಕಾಶದಲ್ಲಿ ಇರುತ್ತಾನೆ. ಸ್ವಪ್ನಕಾಲದಲ್ಲಿ ಶರೀರ ಮಧ್ಯಾಕಾಶದಲ್ಲಿ ಇರುತ್ತಾನೆ. ಸುಷುಪ್ತಿ-ಕಾಲದಲ್ಲಿ ಹೃದಯಾಕಾಶದಲ್ಲಿರುತ್ತಾನೆ. ಹೀಗೆ ಮೂರು ಅವಸ್ಥೆಗಳಿಂದ ವಿಶಿಷ್ಟನಾದ ಜೀವನೇ 'ತ್ರಿಪಾತ್' ಎನಿಸಿದ್ದಾನೆ. ಜೀವನ ಸ್ಥಾನವಾದ ಮೂರುವಿಧ ಆಕಾಶಗಳೇ ದ್ಯುಶಬ್ದದ ಅರ್ಥಗಳಾಗಿವೆ'' ಎಂದು.

ಇದು ತಪ್ಪು. ಜೀವನಿಗೆ ಹೇಳಿದ ಸ್ಥಾನಗಳು ಇದಲ್ಲ. ಜಾಗ್ರದವಸ್ಥೆಯಲ್ಲಿ ಬಲಗಣ್ಣು, ಸ್ವಪ್ನಕಾಲ-ದಲ್ಲಿ ಕಂಠ, ಸುಷುಪ್ತಿಯಲ್ಲಿ ಹೃದಯ. ಇವು ಸ್ಥಾನಗಳೆಂದು 'ದಕ್ಷಿಣಾಕ್ಷಿಮುಖೇ ವಿಶ್ವೋ ಮನಸ್ಯಂತಸ್ತು ತೈಜಸಃ' ಎಂಬ ಶ್ರುತಿಯಲ್ಲಿ ಹೇಳಲಾಗಿದೆ. (ವಸ್ತುತಃ ವಿಶ್ವಾದಿರೂಪಿ ಭಗವಂತನು ಬಲಗಣ್ಣು ಮೊದಲಾದವುಗಳಲ್ಲಿ ವಾಸಿಸುತ್ತಾನೆ. ಆದರೆ ಜೀವನನ್ನೇ ವಿಶ್ವಾದಿಶಬ್ದವಾಚ್ಯನೆಂದು ಪರರಂತೆ ಒಪ್ಪಿ ಇಲ್ಲಿ ಆಕ್ಷೇಪಿಸಿದ್ದಾರೆ).

ಮತ್ತು ಆದ್ವೈತಿಗಳು ಹೇಳಿದ ಸ್ಥಾನವಿಷಯದಲ್ಲಿ ಪ್ರಮಾಣವಿಲ್ಲ. ಜಾಗ್ರತ್ಕಾಲದಲ್ಲಿ ಜೀವನು ಬಾಹ್ಯಪದಾರ್ಥಗಳನ್ನು ಭೋಗಿಸಿದರೂ 'ಹೃದಿ ಹ್ಯೇಷ ಆತ್ಮಾ' ಎಂಬ ಶ್ರುತಿಯಂತೆ ಹೃದಯದಲ್ಲೇ ಇರುತ್ತಾನೆ ಹೊರತು ಶರೀರದ ಬಾಹ್ಯಾಕಾಶದಲ್ಲಿರುತ್ತಾನೆನ್ನಲು ಆಧಾರವಿಲ್ಲ. ಮತ್ತು ಆದೇ ಶ್ರುತಿಯಲ್ಲಿ ಕೇಳಿಸುತ್ತಿರುವ ಅಮೃತತ್ವವು ಪರಮಾತ್ಮನ ಧರ್ಮವಾಗಿದೆ ಹೊರತು ಜೀವನ ಧರ್ಮವಲ್ಲ.

ಹಿಂದೆ ಹೇಳಿದಂತೆ 'ದಿವಿ, ದಿವಃ' ಎಂಬ ಎರಡು ವಾಕ್ಯಗಳು ಒಬ್ಬನನ್ನೇ ಹೇಳುತ್ತಿವೆ ಎಂದು ಆದ್ವೈತಿಗಳ ವಾದ. ಹಾಗಾದರೆ 'ತ್ರಿಪಾದಸ್ಯಾಮೃತಂ ದಿವಿ' ಎಂಬ ವಾಕ್ಯವು ಜೀವಪರವಾದಲ್ಲಿ 'ಅಥ ಯದತಃ' ಎಂಬ ವಾಕ್ಯದಲ್ಲಿ ಪ್ರತಿಪಾದ್ಯನಾದ ಜ್ಯೋತಿಯು ಜೀವನೇ ಆಗಬೇಕಾದೀತು. ಆವಾಗ ಜ್ಯೋತಿಯು ಬ್ರಹ್ಮನೆಂದು ಸಿದ್ಧಾಂತ ಮಾಡಿದ್ದಕ್ಕೆ ಹಾನಿ ಉಂಟಾಗುತ್ತದೆ. 'ತ್ರಿಪಾದೂರ್ಧ್ವ ಉದೈತ್ಪುರುಷಃ' ಎಂಬ ಶ್ರುತಿಯಲ್ಲಿ ಪರಮಾತ್ಮನಲ್ಲಷ್ಟೇ ಪ್ರಸಿದ್ಧವಾದ ಪುರುಷಶಬ್ದದ ಜೊತೆಗೆ 'ತ್ರಿಪಾತ್' ಎಂಬ ಪದವನ್ನು ಬಳಸಲಾಗಿದೆ. ಆದ್ದರಿಂದ ತ್ರಿಪಾತ್‌ಶಬ್ದವು ಭಗವಂತನನ್ನೇ ಪ್ರತಿಪಾದಿಸಬೇಕು. ಭಾಗವತದಲ್ಲಿಯೂ 'ಸುದರ್ಶನಾಖ್ಯಂ ಸ್ವಾಸ್ತ್ರಂ ತು ಪ್ರಾಯುಂಕ್ತ ದಯಿತಂ ತ್ರಿಪಾತ್' (ತ್ರಿಪಾತ್ ಎನಿಸಿದ ಭಗವಂತನು ತನ್ನ ಸುದರ್ಶನವೆಂಬ ಅಸ್ತ್ರವನ್ನು ಪ್ರಯೋಗಿಸಿದನು) ಎಂಬಲ್ಲಿ ಭಗವಂತನಲ್ಲಿಯೇ ತ್ರಿಪಾತ್‌ಶಬ್ದವನ್ನು ಬಳಸಲಾಗಿದೆ.

ಇನ್ನು ಆದ್ವೈತಿಗಳು 'ವಿಶ್ವತಃ ಪೃಷ್ಠೇಷು' ಎಂಬುದಕ್ಕೆ ಹೀಗೆ ವ್ಯಾಖ್ಯಾನಿಸುತ್ತಾರೆ - ''ವಿಶ್ವತಃ ಪೃಷ್ಠೇಷು ಎಂಬಲ್ಲಿರುವ ವಿಶ್ವಶಬ್ದದ ಅರ್ಥವನ್ನು ಸಂಕೋಚಮಾಡಬೇಕೆಂದು ತಿಳಿಸಲು ಸರ್ವತಃ ಪೃಷ್ಠೇಷು ಎನ್ನಲಾಗಿದೆ''. ಎಂದು. ಈ ವ್ಯಾಖ್ಯಾನದಲ್ಲಿ 'ವಿಶ್ವತಃ ಸರ್ವತಃ' ಎಂಬ ಎರಡು ಪದಗಳಲ್ಲಿ ಒಂದು ವ್ಯರ್ಥವಾಗುತ್ತದೆ.

**ಪ್ರಕಾಶಃ – ತ್ರಿಪಾಚ್ಛಬ್ದೇನ ನಾರಾಯಣಾದಿರೂಪತ್ರಯಮಿತಿ ಭಾಷ್ಯಾದೌ ವ್ಯಾಖ್ಯಾತಮ್ । ತತ್ರ ಪರೋಕ್ತಮನೂದ್ಯ ನಿರಸ್ಯತಿ – ಯಚ್ಚೇತಿ ॥ ವಿಶ್ವಾದೇರ್ಜಾಗ್ರದಾದ್ಯವಸ್ಥಾವಜ್ಜೀವತ್ವಂ ಪರರೀತ್ಯೋಪೇತ್ಯ ಪ್ರಕೃತಪ್ರಮೇಯಂ ದೂಷಯತಿ – ಜಾಗ್ರದಿತಿ ॥ 'ಶ್ರುತ್ಯಾ' ಮಂತ್ರಕಶ್ರುತ್ಯಾ ॥ ಹೃದಿ ಹೀತಿ ॥ ದ್ವಿತೀಯೇ ''ಅವಸ್ಥಿತಿವೈಶೇಷ್ಯಾದಿತಿ ಚೇನ್ನಾಭ್ಯುಪಗಮಾದ್ಧೃದಿ ಹಿ'' ಇತಿ ಸೂತ್ರೋಪಾತ್ತಷಷ್ಠ್ಯಪ್ರಶ್ರುತ್ಯೇತ್ಯರ್ಥಃ । ಯತ್ತು ತೃತೀಯೇ ''ಮುಗ್ಧೇऽರ್ಧಸಂಪತ್ತಿಃ ಪರಿಶೇಷಾತ್'' ಇತ್ಯಸ್ಯ ಭಾಷ್ಯೇ –**

**ಹೃದಯಸ್ಥಾತ್ಪರಾಜೀವೋ ದೂರಸ್ಥೋ ಜಾಗ್ರದೇಷ್ಯತಿ ।**
**ಸಮೀಪಸ್ಥಸ್ತಥಾ ಸ್ವಪ್ನಂ ..... ॥**

ಇತ್ಯಾದಿಸ್ಮೃತ್ಯಾ ಜೀವಸ್ಯ ಹೃದಯಾದನ್ಯತ್ರಾಕ್ಷ್ಯಾದೌ ಸ್ಥಿತಿಕಥನಂ, ತತ್ತು ಸನ್ನಿಧಿವಿಶೇಷಾಭಿಪ್ರಾಯಮ್ । ಯಥೋಕ್ತಮೈತರೇಯಭಾಷ್ಯೇ ದ್ವಿತೀಯेऽಧ್ಯಾಯೇ – ''ಹೃದಿ ಸ್ಥಿತಮೇವ ಹಿ ತಸ್ಯ ಸ್ವರೂಪಂ, ಜಾಗಾರಿತೇऽಪ್ಯಕ್ಷಾದಿಷು ವಿಶೇಷಸನ್ನಿಹಿತಂ ಭವತಿ । ದೀಪಪ್ರಕಾಶವತ್'' ಇತ್ಯಾದಿ । ಅತ ಏವೋಕ್ತಂ – **'ಬಾಹ್ಯಾಕಾಶಾದಿಸ್ಥಾನತ್ವೇ'** ಇತಿ ॥ **ಅಮೃತತ್ವಸ್ಯೇತಿ** ॥ ''ತ್ರಿಪಾದಸ್ಯಾಮೃತಂ ದಿವಿ'' ಇತ್ಯುಕ್ತಸ್ಯೇತ್ಯರ್ಥಃ । ''ವಿಶ್ವತಃಪೃಷ್ಠೇಷು'' ಇತ್ಯಾದ್ಯನ್ಯಥಾ ಸ್ವಯಂ ವ್ಯಾಖ್ಯಾಯ, ತತ್ರ ಪರೋಕ್ತಂ ನಿರಸ್ಯತಿ ॥

ವಿವರಣೆ - 'ತ್ರಿಪಾದಸ್ಯಾಮೃತಂ ದಿವಿ' ಎಂಬಲ್ಲಿರುವ ತ್ರಿಪಾತ್ ಶಬ್ದವು ನಾರಾಯಣ, ವಾಸುದೇವ, ವೈಕುಂಠವೆಂಬ ಮೂರು ರೂಪಗಳನ್ನು ಪ್ರತಿಪಾದಿಸುತ್ತದೆಂದು ಭಾಷ್ಯಾದಿಗಳಲ್ಲಿ ವ್ಯಾಖ್ಯಾನಿಸಿದ್ದಾರೆ. ಈ 'ತ್ರಿಪಾತ್' ಶಬ್ದಕ್ಕೆ ಅದ್ವೈತಿಗಳ ವ್ಯಾಖ್ಯಾನವನ್ನು ಅನುವಾದ ಮಾಡಿ, 'ಯಚ್ಚ' ಇತ್ಯಾದಿ ಗ್ರಂಥದಿಂದ ನಿರಾಸ ಮಾಡುತ್ತಿದ್ದಾರೆ. ಜಾಗ್ರದಾದ್ಯವಸ್ಥೆಗಳಲ್ಲಿ ಭಗವಂತನು ವಿಶ್ವಾದಿರೂಪದಿಂದ ಕಣ್ಣು ಮೊದಲಾದವುಗಳಲ್ಲಿ ಇರುತ್ತಾನೆ. ಆದರೆ ಪ್ರಕೃತ ಗ್ರಂಥಕಾರರು ಅದ್ವೈತಿಗಳ ಸಿದ್ಧಾಂತದಂತೆ ಜೀವನನ್ನೇ ವಿಶ್ವಾದಿಗಳೆಂದು ವಿವಕ್ಷಿಸಿ, ಅದ್ವೈತಿಗಳ ಪ್ರಮೇಯವನ್ನು ದೂಷಿಸುತ್ತಿದ್ದಾರೆ 'ಜಾಗ್ರತ್' ಇತ್ಯಾದಿ ವಾಕ್ಯದಿಂದ. ಮಾಂಡೂಕ್ಯಶ್ರುತಿಯಲ್ಲಿ ಇದರ ವಿವರಣೆ ಇದೆ. ಜೀವನು ಹೃದಯದಲ್ಲಷ್ಟೇ ಇರುತ್ತಾನೆ ಹೊರತು, ಶರೀರದ ಬೇರೆ ಯಾವ ಸ್ಥಾನದಲ್ಲಿಯೂ ಇರಲಾರ. 'ಅವಸ್ಥಿತಿವೈಶೇಷ್ಯಾದಿತಿ ಚೇನ್ನಾಭ್ಯುಪಗಮಾದ್ಧೃದಿ ಹಿ' ಎಂಬ ಸೂತ್ರದಲ್ಲಿ ಉದಾಹರಿಸಿದ ಷಟ್ಪಶ್ನೆಯು ಇದನ್ನು ಹೇಳಿದೆ. ಹಾಗಾದರೆ ಮೂರನೆ ಅಧ್ಯಾಯದ 'ಮುಗ್ಧೇऽರ್ಧಸಂಪತ್ತಿಃ ಪರಿಶೇಷಾತ್' ಎಂಬ ಸೂತ್ರಭಾಷ್ಯದಲ್ಲಿ ಅವಸ್ಥಾಭೇದದಿಂದ ಜೀವನ ಸ್ಥಾನವು ಭಿನ್ನವೆಂದು ಹೇಳಿದ್ದು ಹೇಗೆ ಸರಿಯಾಗುತ್ತದೆ?

**'ಹೃದಯಸ್ಥಾತ್ ಪರಾಜ್ಜೀವೋ ದೂರಸ್ಥೋ ಜಾಗ್ರದೇಷ್ಯತಿ।**
**ಸಮೀಪಸ್ಥಸ್ತಥಾ ಸ್ವಪ್ನಮ್...'**

'ಜೀವನು ಹೃದಯಭಾಗದಿಂದ ದೂರ ಹೋದಾಗ (ಕಣ್ಣಿಗೆ ಹೋದಾಗ) ಜಾಗ್ರತನಾಗುತ್ತಾನೆ. ಸ್ವಲ್ಪಹತ್ತಿರ ಬಂದಾಗ(ಕಂಠಕ್ಕೆ) ಸ್ವಪ್ನವನ್ನು ಕಾಣುತ್ತಾನೆ.' ಎಂಬ ಸ್ಮೃತಿಯಂತೆ ಜೀವನಿಗೆ ಹೃದಯಸ್ಥಾನವನ್ನು ಬಿಟ್ಟು ಆಕ್ಷಿಮೊದಲಾದ ಸ್ಥಾನಗಳು ಇಲ್ಲಿ ಹೇಳಲ್ಪಟ್ಟಿವೆ. ಆದರೆ ಕೇವಲ ಸಾನ್ನಿಧ್ಯದ ವಿವಕ್ಷೆಯಿಂದಷ್ಟೇ ಕಣ್ಣುಮೊದಲಾದ ಸ್ಥಾನಗಳು ಹೇಳಲ್ಪಟ್ಟಿವೆ ಹೊರತು ಜೀವನು ಹೃದಯದಲ್ಲಿ ನಿಲ್ಲದೆ ಸಂಪೂರ್ಣವಾಗಿ ಕಣ್ಣಿಗೆ ಹೋಗುತ್ತಾನೆಂದು ಅಭಿಪ್ರಾಯವಲ್ಲ. ಏತರೇಯಭಾಷ್ಯದ ಎರಡನೆಯ ಅಧ್ಯಾಯದಲ್ಲಿ ಇದನ್ನು ಸಮ್ಮತಿಸಿದ್ದಾರೆ. 'ಹೃದಿಸ್ಥಮೇವ ಹಿ ತಸ್ಯ ರೂಪಮ್ । ಜಾಗರಿತೇऽಪ್ಯಕ್ಷಾದಿಷು ವಿಶೇಷಸನ್ನಿಹಿತಂ ಭವತಿ । ದೀಪಪ್ರಕಾಶವತ್' (ವಸ್ತುತಃ ಜೀವನು ಹೃದಯದಲ್ಲೇ ಇರುತ್ತಾನೆ. ಆದರೆ ಜಾಗ್ರತ್ಕಾಲದಲ್ಲಿ ಪ್ರಕಾಶರೂಪದಿಂದ ಕಣ್ಣಿನಲ್ಲಿ ಸನ್ನಿಹಿತನಾಗುತ್ತಾನೆ) ಎಂದು. ಹೀಗೆ ಬೇರೆ ಸ್ಥಾನದಲ್ಲಿ ಜೀವನು ಪ್ರಕಾಶರೂಪದಿಂದ ಇರುತ್ತಾನೆ. (ಸಾಂಶಜೀವರು ಅಂಶರೂಪದಿಂದ ಕಣ್ಣು ಮೊದಲಾದವುಗಳಲ್ಲಿ ಇರುತ್ತಾರೆ. ನಿರಂಶಜೀವರು ಪ್ರಕಾಶರೂಪದಿಂದ ಇರುತ್ತಾರೆ). ಬೇರೆ ಸ್ಥಾನದಲ್ಲಿ ಜೀವನು ಪ್ರಕಾಶರೂಪದಿಂದ ಇರುತ್ತಾನಾದ್ದರಿಂದಲೇ ಅದ್ವೈತಿಗಳನ್ನು ನಿರಾಕರಿಸುವಾಗ ಬೇರೆ ಸ್ಥಾನದಲ್ಲಿ ಜೀವನು ಇರಲಾರ ಎಂದು ಹೇಳಿಲ್ಲ. ಹೊರತು ಅದ್ವೈತಿಗಳು ನಿರ್ದೇಶಿಸಿ ಬಾಹ್ಯಾಕಾಶ ಮೊದಲಾದ ಸ್ಥಾನಗಳಲ್ಲಿ ಇಲ್ಲವೆಂದಷ್ಟೇ ನಿರಾಕರಿಸಿದ್ದಾರೆ. ಆದ್ದರಿಂದಲೇ 'ಬಾಹ್ಯಾಕಾಶಾದಿಸ್ಥಾನತ್ವೇ ಮಾನಾಭಾವಾತ್' ಎಂದು ಹೇಳಿದ್ದಾರೆ.

'ತ್ರಿಪಾದಸ್ಯಾಮೃತಂ ದಿವಿ' ಎಂಬ ಶ್ರುತಿಯಲ್ಲಿ ತ್ರಿಪಾತ್ ಶಬ್ದದಿಂದ ಪ್ರತಿಪಾದ್ಯನಾದವನಿಗೆ ಅಮೃತತ್ವಧರ್ಮವು ಹೇಳಲ್ಪಟ್ಟಿದೆ. ಮರಣಶೀಲನಾದ ಜೀವನಲ್ಲಿ ಈ ಧರ್ಮವು ಸರ್ವಥಾ ಕೂಡುವುದಿಲ್ಲ. ಇನ್ನು ಅದ್ವೈತಿಗಳು 'ವಿಶ್ವತಃ ಪೃಷ್ಠೇಷು' ಎಂಬ ಶ್ರುತಿಯನ್ನು ಅನ್ಯಥಾ ವ್ಯಾಖ್ಯಾನಿಸುತ್ತಾರೆ. ಅದನ್ನು 'ಯಚ್ಚ' ಎಂಬ ಗ್ರಂಥದಿಂದ ಅನುವಾದ ಮಾಡಿ ನಿರಾಕರಿಸಿದ್ದಾರೆ.

## ಸಾರ

ತ್ರಿಪಾತ್‌ಶಬ್ದಕ್ಕೆ ಆದ್ವೈತಿಗಳ ವ್ಯಾಖ್ಯಾನ. ''ಜೀವನು ಜಾಗ್ರದವಸ್ಥೆಯಲ್ಲಿ ಶರೀರದ ಬಾಹ್ಯಾಕಾಶದಲ್ಲಿರುತ್ತಾನೆ. ಸ್ವಪ್ನದಲ್ಲಿ ಶರೀರದ ಮಧ್ಯಾಕಾಶದಲ್ಲಿರುತ್ತಾನೆ. ಸುಷುಪ್ತಿಯಲ್ಲಿ ಹೃದಯಾಕಾಶದಲ್ಲಿರುತ್ತಾನೆ. ಈ ಮೂರು ಅವಸ್ಥೆಗಳಿಂದ ಕೂಡಿದ ಜೀವನು ತ್ರಿಪಾತ್ ಎನಿಸುತ್ತಾನೆ. ಜೀವನಿರುವ ಆಕಾಶಾದಿಗಳು ದ್ಯು ಎನಿಸುತ್ತವೆ -- ಎಂದು.

ಇದು ಸರಿಯಲ್ಲ. ಮಾಂಡೂಕ್ಯಶ್ರುತಿಯಂತೆ ಜೀವನು ಜಾಗ್ರದಾದ್ಯವಸ್ಥೆಗಳಲ್ಲಿ ಬಲಗಣ್ಣು ಮೊದಲಾದೆಡೆ ಇರುತ್ತಾನೆ. ಹೊರತು ಬಾಹ್ಯಾಕಾಶಗಳಲ್ಲಿ ಇರುತ್ತಾನೆ ಎನ್ನಲು ಯಾವುದೇ ಪ್ರಮಾಣಗಳಿಲ್ಲ. ಮತ್ತು ದಿವಿಸ್ಥಿತತ್ವ ಮತ್ತು ದಿವಃಪರತ್ವಪ್ರತಿಪಾದಕ ಶ್ರುತಿಗಳು ಒಬ್ಬನನ್ನೇ ಹೇಳುತ್ತವೆಂದು ಆದ್ವೈತಿಗಳು ಒಪ್ಪಿದ್ದಾರೆ. ಆದ್ದರಿಂದ 'ತ್ರಿಪಾದಸ್ಯ' ಎಂಬ ಶ್ರುತಿಯು ಜೀವನನ್ನು ಪ್ರತಿಪಾದಿಸಿದರೆ 'ಅಥ ಯದತಃ' ಎಂಬ ಶ್ರುತಿಯಿಂದಲೂ ಜೀವನೇ ಪ್ರತಿಪಾದ್ಯನಾದರೆ ಜೀವನೇ ಜ್ಯೋತಿಯಾಗಬೇಕಾಗುತ್ತದೆ. ಬ್ರಹ್ಮನು ಜ್ಯೋತಿಯೆಂಬ ಸಿದ್ಧಾಂತಕ್ಕೆ ಧಕ್ಕೆ ಬರುತ್ತದೆ.

---

### ರಾಮಾನುಜರ ವ್ಯಾಖ್ಯಾನದಲ್ಲಿ ಅಸ್ವಾರಸ್ಯ

**ತಾತ್ಪರ್ಯಚನ್ದ್ರಿಕಾ**

**केचित्तु – ''तथाक्षरात्सम्भवतीह विश्वम्'' इति श्रुतौ विश्वशब्दः कार्ये प्रयुक्त इति अत्रापि तत्परः, सर्वशब्दस्तु परिशेषात् कारणपर इत्याहुः । तदपि न, ''स इदꣳसर्वमसृजत'' इत्यादौ सर्वशब्दः कार्ये प्रयुक्त इति तत्परः, परिशेषाद्विश्वशब्दः कारणपर इति प्रसङ्गात् । ''सम्भवतीह विश्वम्'' इत्यत्र च सम्भवति पदसन्निधानेनैव विश्वशब्दः कार्यपरो न तु स्वतः । अन्यथा –**

**विश्वतः परमां नित्यं, विश्वात्मानं परायणम् ।**

**इत्यादावपि कार्यमात्रपरः स्यात् । तस्मात् श्रुतिसूत्रयोरन्योक्तार्थस्यायुक्तत्वात् भाष्योक्त एवार्थ इति ॥**

**टीकाक्षरार्थस्तु – आदिपदेन वाचो ग्रहणमिति ॥ ''वाग्वै गायत्री'' इति श्रुतौ वाक् शब्दार्थगुणवत्तयोपासनार्थं विष्णुर्वागित्युक्तः । तथाच वात्त्वमपि न विष्णुत्वबाधकमिति दर्शयितुं भाष्य आदिपदमित्यर्थः ॥ अनुसन्धेयत्वं च**

**ಸೂಚಯತೀತಿ ॥ 'ಆದಿಪದಂ' ಇತ್ಯನುಷಙ್ಗಃ ॥ ಆದಿಪದೇನ ''ಯಾ ವೈ ಸಾ ಗಾಯತ್ರೀ'' ಇತಿ ॥ ''ಯಾ ವೈ ಸಾ'' ಇತ್ಯಾದಿನಾ ಗಾಯತ್ರ್ಯಾಃ ಪೃಥಿವ್ಯಭೇದಮುಕ್ತ್ವಾ ''ಅಸ್ಯಾಂ ಹೀದಂ ಸರ್ವಂ ಪ್ರತಿಷ್ಠಿತಮ್'' ಇತಿ ಪೃಥಿವ್ಯಾಃ ಸರ್ವಾಧಾರತ್ವಮುಕ್ತಮ್ । ತಚ್ಚ ವಿಷ್ಣೋರೇವ ಗಾಯತ್ರೀಪೃಥಿವ್ಯಾದಿಶಬ್ದಾರ್ಥತ್ವೇ ಯುಕ್ತಮ್, ನಾನ್ಯಥೇತ್ಯರ್ಥಃ ॥**

## ॥ ಇತಿ ಶ್ರೀಬ್ರಹ್ಮಣ್ಯತೀರ್ಥಪೂಜ್ಯಶ್ರೀಪಾದಶಿಷ್ಯವ್ಯಾಸತೀರ್ಥವಿರಚಿತಾ ತಾತ್ಪರ್ಯಚನ್ದ್ರಿಕಾಯಾಂ ಗಾಯತ್ರ್ಯಧಿಕರಣಂ ಸಮ್ಪೂರ್ಣಮ್ ॥೧೧॥

ಅನುವಾದ - ರಾಮಾನುಜರು 'ವಿಶ್ವತಃ ಪೃಷ್ಠೇಷು' ಎಂಬ ಶ್ರುತಿಯನ್ನು ಹೀಗೆ ವ್ಯಾಖ್ಯಾನಿಸುತ್ತಾರೆ - 'ತಥಾಕ್ಷರಾತ್ ಸಂಭವತೀಹ ವಿಶ್ವಮ್' ಈ ಶ್ರುತಿಯಲ್ಲಿ ವಿಶ್ವಶಬ್ದವು ಕಾರ್ಯ ಎಂಬರ್ಥವನ್ನು ಹೇಳುತ್ತದೆ. ಪರಿಶೇಷದಿಂದ ಸರ್ವಶಬ್ದವು ಕಾರಣವನ್ನು ಹೇಳುತ್ತದೆ. ಆದ್ದರಿಂದ ಜ್ಯೋತಿಯು ಕಾರ್ಯಕಾರಣಪ್ರಪಂಚಕ್ಕಿಂತ ಮೇಲಿದ್ದಾನೆಂದು ಶ್ರುತಿಯ ಅರ್ಥ. ಇದು ಸರಿಯಲ್ಲ. ಸರ್ವಶಬ್ದವು ಕಾರಣಪರವೆಂದು ಹೇಳಿದ್ದಾರೆ. ಆದರೆ 'ಸ ಇದಂ ಸರ್ವಮಸೃಜತ' ಎಂಬಲ್ಲಿ ಕಾರ್ಯ ಎಂಬ ಅರ್ಥದಲ್ಲಿ ಸರ್ವಶಬ್ದವನ್ನು ಪ್ರಯೋಗಿಸಲಾಗಿದೆ. ಪರಿಶೇಷದಿಂದ ವಿಶ್ವಶಬ್ದವು ಕಾರಣಪರವಾಗುತ್ತದೆ. ಹೀಗೆ ನಾವು ಆಪಾದಿಸಿದರೆ ನಿಮ್ಮಲ್ಲಿ ಉತ್ತರವಿಲ್ಲ. ಮತ್ತು 'ಸಂಭವತೀಹ ವಿಶ್ವಮ್' ಎಂಬಲ್ಲಿರುವ ಸಂಭವತಿ ಎಂಬ ಪದದ ಸನ್ನಿಧಾನದಿಂದಷ್ಟೇ ವಿಶ್ವಶಬ್ದವು ಕಾರ್ಯಪರವಾಗಿದೆ. ಸಹಜವಾಗಿ ಅಲ್ಲ. ಹೀಗೆ ಹೇಳದಿದ್ದರೆ 'ವಿಶ್ವತಃ ಪರಮಾನ್ನಿತ್ಯಮ್, ವಿಶ್ವಾತ್ಮಾನಂ ಪರಾಯಣಂ' ಇತ್ಯಾದಿ ಸ್ಥಳಗಳಲ್ಲಿಯೂ ವಿಶ್ವಶಬ್ದವು ಕೇವಲ ಕಾರ್ಯಪರವಾಗಬೇಕಾದೀತು.

ಇಲ್ಲಿಯ ತನಕ ಪ್ರತಿಪಾದಿಸಿದಂತೆ ಶ್ರುತಿ ಹಾಗೂ ಸೂತ್ರಗಳಿಗೆ ಪರರು ಮಾಡುವ ವ್ಯಾಖ್ಯಾನವು ಅತ್ಯಂತ ಅಯುಕ್ತವಾಗಿದೆ. ಆದ್ದರಿಂದ ಭಾಷ್ಯದಲ್ಲಿ ಮಾಡಿದ ವ್ಯಾಖ್ಯಾನವೇ ಸಮಂಜಸವಾದ್ದರಿಂದ ಗ್ರಾಹ್ಯವಾಗಿದೆ.

ಟೀಕೆಯ ಕಠಿಣಪದಾರ್ಥ -- ಆದಿಪದೇನ ವಾಚೋ ಗ್ರಹಣಮ್॥ ಭಾಷ್ಯದಲ್ಲಿ ಅಗ್ನಿಗಾಯತ್ರ್ಯಾದಿ ಎಂದಿದೆ. ಇಲ್ಲಿರುವ ಆದಿಪದದಿಂದ ವಾಕ್ ಎಂಬುದನ್ನು ಇಟ್ಟುಕೊಳ್ಳಬೇಕು. ವಾಕ್ ಶಬ್ದವನ್ನು ವಿಷ್ಣುವಿನಲ್ಲಿ ಸಮನ್ವಯ ಮಾಡುವ ಉದ್ದೇಶವೇನೆಂದರೆ ವಾಕ್‌ಶಬ್ದದಿಂದ ತಿಳಿಯುವ ಗುಣದ ಮೂಲಕ ಭಗವಂತನನ್ನು ಉಪಾಸನೆ ಮಾಡಬೇಕು ಅದಕ್ಕಾಗಿ 'ವಾಗ್ವೈ ಗಾಯತ್ರೀ' ಎಂಬ ಶ್ರುತಿಯು ಗಾಯತ್ರಿಯನ್ನು ವಾಕ್ ಎನ್ನುತ್ತಿದೆ. ಆದ್ದರಿಂದ ವಾಕ್ಶಬ್ದವೂ ಕೂಡ ಜ್ಯೋತಿಯು ವಿಷ್ಣುವಲ್ಲ ಎನ್ನಲು ಬಾಧಕವಲ್ಲ. ಒಂದು ವೇಳೆ ಆದಿ ಪದದಿಂದ ವಾಕನ್ನು ತೆಗೆದುಕೊಳ್ಳದಿದ್ದರೆ ಅಗ್ನಿಗಾಯತ್ರೀಶಬ್ದಗಳು ವಿಷ್ಣುವನ್ನು ಪ್ರತಿಪಾದಿಸಿದರೂ ವಾಕ್‌ಶಬ್ದವು ವಿಷ್ಣುವನ್ನು ಪ್ರತಿಪಾದಿಸದ ಕಾರಣ ವಿಷ್ಣುವನ್ನು ಜ್ಯೋತಿಯೆಂದು ಪ್ರತಿಪಾದಿಸಲು ಆಗುತ್ತಿರಲಿಲ್ಲ.

ಅನುಸಂಧೇಯತ್ವಂ ಚ ಸೂಚಯತಿ ॥ ಆದಿಪದಂ ಎಂಬ ಕರ್ತೃವಾಚಕಪದವನ್ನು ಅನುಷಂಗ ಮಾಡಿ ಅನ್ವಯ ತಿಳಿಯಬೇಕು.

ಆದಿಪದೇನ ಯಾ ವೈ ಸಾ ಗಾಯತ್ರಿ ॥ 'ಯಾ ವೈ ಸಾ' ಎಂಬ ಶ್ರುತಿಯಲ್ಲಿ ಗಾಯತ್ರಿಗೆ ಪೃಥಿವಿಯಿಂದ ಅಭೇದವನ್ನು ಹೇಳಲಾಗಿದೆ. ಪುನಃ 'ಅಸ್ಯಾಂ ಹೀದಂ ಸರ್ವಂ ಪ್ರತಿಷ್ಠಿತಮ್' ಎಂಬಲ್ಲಿ ಪೃಥಿವಿಯನ್ನು ಸರ್ವಾಧಾರ ಎನ್ನಲಾಗಿದೆ. ವಿಷ್ಣುವು ಗಾಯತ್ರೀಪೃಥಿವಿ ಮೊದಲಾದ ಶಬ್ದಗಳಿಂದ ಪ್ರತಿಪಾದ್ಯನಾದರೆ ಮಾತ್ರ ಈ ಸರ್ವಾಧಾರತ್ವವು ಯುಕ್ತವಾಗುತ್ತದೆ. ವಿಷ್ಣುವು ಪ್ರತಿಪಾದ್ಯನಾಗದಿದ್ದರೆ ಅನುಪಪನ್ನವಾಗುತ್ತದೆಂದು ಅರ್ಥ.

ಇಲ್ಲಿಗೆ ತಾತ್ಪರ್ಯಚಂದ್ರಿಕೆಯ ಕನ್ನಡಾನುವಾದದಲ್ಲಿ
ಗಾಯತ್ರ್ಯಧಿಕರಣವು ಸಂಪೂರ್ಣವಾಯಿತು.

**ಪ್ರಕಾಶಃ – यच्चेति ॥ इति प्रसङ्गादिति ॥** तथाचोभयमुभयत्र ग्राह्यमित्येकस्य वैयर्थ्यमेवेत्यर्थः । नन्वेवं कथं विश्वशब्दस्य कार्ये प्रयोग इत्यत आह – **सम्भवतीति ॥** 'परमां' परमश्रासौ अश्च तमित्यर्थः । छन्दस्सूत्रसिद्धान्तटीकायां **'आदिपदेन वाचोग्रहणं'** इत्येतद्दुर्गमत्वात्सुगमयति – **आदिपदेनेति ॥ ''अधिकरणान्तरेऽप्येतन्न्यायस्यानुसन्धेयत्वं च सूचयति''** इत्यत्र कर्त्राकाङ्क्षायामादिपदेनेति प्रकृतं प्राक्तनं विपरिणामेन सम्बन्धनीयमित्याह – **आदिपदमिति ॥** आदिपदेन **''या वै सा गायत्री इयं वा सा येयं पृथिवी''** इत्यादेः सङ्ग्रह इत्येतत्तात्पर्यमस्फुटत्वादाह – **या वै सेति ॥** शिष्टं स्पष्टीकृतमुपन्यासमुखेनेति ॥

**इति श्रीमत्सर्वतन्त्रस्वतन्त्रसुधीन्द्रतीर्थगुरुपादशिष्यराघवेन्द्रयतिकृते चन्द्रिकाप्रकाशे गायत्र्यधिकरणं सम्पूर्णम् ॥११॥**

ವಿವರಣೆ - ರಾಮಾನುಜರು ವಿಶ್ವಶಬ್ದಕ್ಕೆ ಕಾರ್ಯವೆಂಬ ಅರ್ಥವನ್ನು ಹೇಳಿ, ಪರಿಶೇಷದಿಂದ ಕಾರಣವೆಂಬ ಅರ್ಥವನ್ನು ಹೇಳಿದರೆ, 'ಸ ಇದಂ ಸರ್ವಮಸೃಜತ' ಎಂಬ ಶ್ರುತಿಯಲ್ಲಿ ಕಾರ್ಯದಲ್ಲಿ ಸರ್ವಶಬ್ದವನ್ನು ಪ್ರಯೋಗಿಸಿದ್ದರಿಂದ ಪರಿಶೇಷದಿಂದ ವಿಶ್ವಶಬ್ದವು ಕಾರಣಪರವಾಗುತ್ತದೆ. ಆವಾಗ ವಿಶ್ವ ಹಾಗೂ ಸರ್ವಶಬ್ದಗಳಿಗೆ ಎರಡೂ ಅರ್ಥಗಳನ್ನು ಹೇಳಿದಂತಾಗಿ ಒಂದು ಶಬ್ದಕ್ಕೆ ವೈಯ್ಯರ್ಥ್ಯವು ತಪ್ಪಿದ್ದಲ್ಲ. ಹಾಗಾದರೆ ವಿಶ್ವಶಬ್ದಕ್ಕೆ ಕಾರ್ಯವೆಂಬ ಅರ್ಥದಲ್ಲಿ ಪ್ರಯೋಗವು ಕಾಣಿಸುತ್ತಿದೆಯಲ್ಲಾ? ಎಂಬ ಪ್ರಶ್ನೆಗೆ 'ಸಂಭವತಿ' ಎಂಬ ಗ್ರಂಥದಿಂದ ಉತ್ತರಿಸುತ್ತಿದ್ದಾರೆ. ಪರಮಾತ್ ಎಂಬ ಶಬ್ದಕ್ಕೆ ಪರಮಶ್ಚಾಸೌ ಅಶ್ಚ ಪರಮಃ, ತಸ್ಮಾತ್ ಪರಮಾತ್ ಎಂದು ವಿಗ್ರಹ. ಶ್ರೇಷ್ಠನಾದ ಭಗವಂತನು ಎಂದರ್ಥ.

ಛಂದಸೂತ್ರದ ಸಿದ್ಧಾಂತಟೀಕೆಯಲ್ಲಿ ಆದಿಪದದಿಂದ ವಾಕನ್ನು ವಿವಕ್ಷಿಸುತ್ತಿದ್ದಾರೆ. ಇದರ ಆಂತರ್ಯ ಗೂಢವಾದ್ದರಿಂದ 'ಆದಿಪದೇನ' ಎಂಬ ಗ್ರಂಥದಿಂದ ಅದನ್ನು ವ್ಯಾಖ್ಯಾನಿಸಿದ್ದಾರೆ. 'ಅಧಿಕರಣಾಂತರೇ-ಪ್ಯೇತನ್ನ್ಯಾಯಸ್ಯಾನುಸಂಧೇಯತ್ವಂ ಸೂಚಯತಿ' (ಬೇರೆ ಅಧಿಕರಣದಲ್ಲಿಯೂ ಈ ನ್ಯಾಯವನ್ನು ಅನುಸಂಧಾನಮಾಡಬೇಕೆಂದು ಸೂಚಿಸುತ್ತಿದೆ) ಎಂಬ ಟೀಕೆಯಲ್ಲಿ ಕರ್ತೃವಾಚಕಪದವೇ ಕಾಣಿಸುತ್ತಿಲ್ಲ. ಅದನ್ನು ಗ್ರಂಥಕಾರರು 'ಆದಿಪದಮ್' ಎಂದು ಹೇಳಿದ್ದಾರೆ. ವಸ್ತುತಃ ಹಿಂದೆ ಪ್ರಸಕ್ತವಾಗಿದ್ದರೆ ಮಾತ್ರ ಅನುಷಂಗ ಮಾಡಲು ಸಾಧ್ಯ. ಹಿಂದೆ ಆದಿಪದಂ ಎಂಬುದು ಪ್ರಸಕ್ತವಾಗಿಲ್ಲ. ಆದರೆ ಆದಿಪದೇನ ಎಂಬ ಪದವು ಪ್ರಸಕ್ತವಾಗಿದೆ. ಆದನ್ನು ಆದಿಪದಂ ಎಂದು ವಿಪರಿಣಾಮ ಮಾಡಿ ಇಲ್ಲಿ ಅನುಷಂಗ ಮಾಡಬೇಕು.

''ಆದಿಪದೇನ 'ಯಾ ವೈ ಸಾ ಗಾಯತ್ರೀ ಇಯಂ ವಾವ ಸಾ ಯೇಯಂ ಪೃಥಿವೀ' ಇತ್ಯಾದೇಃ ಸಂಗ್ರಹಃ'' (ಆದಿಪದದಿಂದ 'ಯಾ ವೈ' ಇತ್ಯಾದಿಯನ್ನು ಸಂಗ್ರಹಿಸಬೇಕು) ಎಂದು ಟೀಕೆಯಲ್ಲಿದ್ದೆ. ಇದರ ಅರ್ಥವು ಅಸ್ಪಷ್ಟವಾದ್ದರಿಂದ 'ಯಾ ವೈ ಸಾ' ಎಂಬ ಗ್ರಂಥದಿಂದ ವ್ಯಾಖ್ಯಾನಿಸಿದ್ದಾರೆ. ಉಳಿದ ಕಠಿಣ-ಪದಗಳ ಅರ್ಥವನ್ನು ಉಪನ್ಯಾಸಮುಖದಿಂದಲೇ ಸ್ಪಷ್ಟಪಡಿಸಿದ್ದಾರೆ.

ಇಲ್ಲಿಗೆ ಶ್ರೀರಾಘವೇಂದ್ರತೀರ್ಥಶ್ರೀಪಾದರಿಂದ ವಿರಚಿತವಾದ ಪ್ರಕಾಶಟಿಪ್ಪಣಿಯ
ಕನ್ನಡಾನುವಾದದಲ್ಲಿ ಗಾಯತ್ರ್ಯಧಿಕರಣವು ಮುಕ್ತಾಯವಾಯಿತು.

* * * * * * *

**ಗುರುರಾಜೀಯಮ್ – ವಾಗ್ವೈ ಗಾಯತ್ರೀತಿ ಶ್ರುತಾವಿತಿ ॥** ಗಾಯತ್ರೀಶಬ್ದವದ್ಗಾಕ್ಶಬ್ದಸ್ಯ ಸಾಕ್ಷಾತ್ಪರಪಕ್ಷಸಾಧಕತ್ವಾತ್ ಪೃಥಿವ್ಯಾದಿಶಬ್ದವದ್ವಿಷ್ಣುಲಿಙ್ಗೋಪೇತತ್ವಾಭಾವೇನ ಛನ್ದಸ್ತ್ವೇ ತದ್ಬಾಧಕತ್ವಾಭಾವಾಚ್ಚ ಸಮನ್ವೇತವ್ಯಶಬ್ದಸಮಕಕ್ಷತಯೋಪಾದಾನಮ್ ॥ ಅತ ಏವ ಪೃಥಿವ್ಯಾದಿ-ಶಬ್ದಾನಾಮಪ್ಯುಪಾದಾನಮತ್ರ ಸಮ್ಭವದಪ್ಯುಲ್ಲಙ್ಘ್ಯಾಗ್ರಮಾದಿಪದೇನ ಕೃತಮಿತಿ ಜ್ಞೇಯಮ್ । **ಆದಿಪದಮಿತ್ಯನುಷಙ್ಗ** ಇತಿ ॥ ಇದಂ ಚಾಧಿಕರಣಾನ್ತರೇಽಪ್ಯೇತನ್ಯಾಯಸ್ಯಾನುಸನ್ಧೇಯತ್ವಂ ಚ ಸೂಚಯತೀತ್ಯೇತತ್ಪಾಠಾಭಿಪ್ರಾಯೇಣ । ತೇನ ಹಿಶಬ್ದೇನೈವಾಸ್ಯಾರ್ಥಸ್ಯಾಭಿಧಾನಾದಾದಿಪದಾನುಷಙ್ಗೋ-ऽನರ್ಥಕ ಇತಿ ಚೋದ್ಯಂ ಪರಿಹೃತಂ ಭವತಿ । ಚಶಬ್ದರಹಿತಹಿಶಬ್ದೇನೇತ್ಯೇತಚ್ಚಿರಸ್ಕಪಾಠಸ್ಯ ಭಾವಬೋಧ ಉಪಾದಾನಾನ್ನ ವಿರೋಧಃ । ಏವಂ ಚಾತ್ರ ಪಾಠೇ ಚೇತೋರ್ಪಣಾರ್ಥೆ ಹೀತಿ ಭಾಷ್ಯಗತ-ಹಿಶಬ್ದೋ ನೇತಿ ಪ್ರತಿಜ್ಞಾರ್ಥೆ ಪ್ರತಿ ಚೇತೋರ್ಪಣನಿಗದಾದಿತಿ ಸೌತ್ರಪಞ್ಚಮ್ಯುಕ್ತಹೇತುತ್ವವಾಚಿ । ತಥಾಹೀತಿಶಬ್ದಸ್ತು ಭಾಷ್ಯೋದಾಹೃತಸ್ಮೃತಿದ್ಯೋತಕ ಇತಿ ದ್ರಷ್ಟವ್ಯಮ್ । **ಆದಿಪದೇನೇತಿ ॥** ಸರ್ವಲೋಕಾಭಿಧೋ ಹ್ಯೇಷ ಇತಿ ಭಾಷ್ಯೋದಾಹೃತಸ್ಮೃತ್ಯನುರೋಧೇನಾಪಿ ಪೃಥಿವ್ಯಾದೇಃ ಪೃಥಗ್ಗ್ರಹಣಮಿತಿ ದ್ರಷ್ಟವ್ಯಮ್ ॥ ಶ ॥

॥ ಇತಿ ವಾಕ್ಯಾರ್ಥಮಞ್ಜರ್ಯಾಂ ಗಾಯತ್ರ್ಯಧಿಕರಣಂ ಸಮ್ಪೂರ್ಣಮ್ ॥

## ಸಾರ

ಅದ್ವೈತಿಗಳು 'ವಿಶ್ವತಃ ಪೃಷ್ಠೇಷು' ಎಂಬ ಶ್ರುತಿಯಲ್ಲಿರುವ ವಿಶ್ವಶಬ್ದದ ಅರ್ಥವನ್ನು ಮೊಟಕು-ಗೊಳಿಸಿದ್ದಾರೆ. ಆದ್ದರಿಂದ 'ವಿಶ್ವತಃ' ಅಥವಾ 'ಸರ್ವತಃ' ಎಂಬ ಎರಡು ಪದಗಳಲ್ಲಿ ಒಂದನ್ನು ವ್ಯರ್ಥವೆಂದು ತಾವೇ ಒಪ್ಪಿಕೊಂಡಂತಾಗಿದೆ. ಈ ವೈಯ್ಯರ್ಥ್ಯದೋಷವು ರಾಮಾನುಜರಿಗೂ ತಪ್ಪಿದ್ದಲ್ಲ. ರಾಮಾನುಜರು ವಿಶ್ವಶಬ್ದಕ್ಕೆ ಕಾರ್ಯವೆಂದು ಸರ್ವಶಬ್ದಕ್ಕೆ ಕಾರಣವೆಂದು ಅರ್ಥೈಸುತ್ತಾರೆ.

ಇವರ ವಾದದಲ್ಲಿಯೂ ಹುರುಳಿಲ್ಲ. ಏಕೆಂದರೆ 'ಸ ಇದಂ ಸರ್ವಮಸೃಜತ' ಎಂಬಲ್ಲಿ ಸರ್ವಶಬ್ದವನ್ನು ಕಾರ್ಯವೆಂಬರ್ಥದಲ್ಲಿ ಪ್ರಯೋಗಿಸಲಾಗಿದೆ. 'ಪರಿಶೇಷಾತ್' ವಿಶ್ವಶಬ್ದವು ಕಾರಣಪರವಾಗುತ್ತದೆ; ಇದಕ್ಕೆ ವಿರುದ್ಧವಾಗಿ ರಾಮಾನುಜರಿಗೆ ಅರ್ಥೈಸಲಾಗದು. ಮತ್ತು ವಿಶ್ವಶಬ್ದಕ್ಕೆ ಕಾರ್ಯವೆಂಬರ್ಥವನ್ನು ಹೇಳಿದರೆ ವಿಶ್ವತಃ ಪರಮಾನ್ನಿತ್ಯಂ ಎಂಬಲ್ಲಿಯೂ ಕೇವಲ ಕಾರ್ಯವೆಂದೇ ವ್ಯಾಖ್ಯಾನಿಸಬೇಕಾದೀತು. ಹೀಗೆ ವಿಚಾರಮಾಡಿದಾಗ ಶ್ರುತಿಸೂತ್ರಗಳಿಗೆ ಪರರು ಮಾಡಿದ ವ್ಯಾಖ್ಯಾನವು ಅತ್ಯಂತ ಹೇಯವೆಂದು ತಿಳಿಯುತ್ತದೆ. ಬುಭುತ್ಸುಗಳು ನಿರ್ದುಷ್ಟವಾದ ಆಚಾರ್ಯರ ಭಾಷ್ಯದಿಂದಲೇ ಶ್ರುತಿಸೂತ್ರಗಳ ಅರ್ಥವನ್ನು ತಿಳಿದುಕೊಳ್ಳಬೇಕು.

ಇಲ್ಲಿಗೆ ತಾತ್ಪರ್ಯಚಂದ್ರಿಕಾ ಸಾರದಲ್ಲಿ ಗಾಯತ್ರ್ಯಧಿಕರಣವು ಮುಗಿಯಿತು

॥ಶ್ರೀಕೃಷ್ಣಾರ್ಪಣಮಸ್ತು॥

# ೦೧೧-ಗಾಯತ್ರ್ಯಧಿಕರಣ

ಭಾಗ -೩

ನ್ಯಾಯವಿವರಣ, ನ್ಯಾಯವಿವರಣಟೀಕಾ,
ಅಣುಭಾಷ್ಯ, ತತ್ವಮಂಜರೀ,
ತಂತ್ರದೀಪಿಕಾ, ನ್ಯಾಯಮುಕ್ತಾವಳಿಃ,
ಸೂತ್ರಾರ್ಥರತ್ನಾವಳಿಃ

# ನ್ಯಾಯವಿವರಣಮ್
## ಶ್ರೀ ಜಯತೀರ್ಥವಿರಚಿತಾ ನ್ಯಾಯವಿವರಣಪಞ್ಜಿಕಾ

**ನ್ಯಾಯವಿವರಣಮ್ – ಅಧಿಭೂತಾऽಧ್ಯಾತ್ಮಾऽಧಿವೇದಗತಾನಾಮಪಿ ಶಬ್ದಾನಾಮಚೇತನತ್ವ-ಜೀವಾನ್ವಯವ್ಯತಿರೇಕಿತ್ವನಿತ್ಯತ್ವೇಷು ವಿದ್ಯಮಾನೇಷ್ವಪಿ ಭಗವದ್ ವಿಷಯತ್ವಮೇವಾऽನನ್ಯಥಾಸಿದ್ಧಲಿಙ್ಗೈಃ ॥**

ಭೂತಪದಾರ್ಥಗಳಲ್ಲಿ ಪ್ರಸಿದ್ಧವಾದ ಆಕಾಶ, ಪೃಥ್ವಿ ಮೊದಲಾದ ಅಧಿಭೂತಶಬ್ದಗಳು, ಇಂದ್ರಿಯ ಪ್ರಾಣ ಶರೀರ ಮೊದಲಾದವುಗಳಲ್ಲಿ ಪ್ರಸಿದ್ಧವಾದ ಚಕ್ಷುರಾದಿ ಅಧ್ಯಾತ್ಮ(ಆಧ್ಯಾತ್ಮಿಕ)ಶಬ್ದಗಳು, ವೇದ-ಗಳಲ್ಲಿ ಪ್ರಸಿದ್ಧವಾದ ಗಾಯತ್ರೀ, ಉಷ್ಣಿಕ್ ಮೊದಲಾದ ಅಧಿವೇದಗತಶಬ್ದಗಳಿಗೆ ಅಚೇತನತ್ವ, ಜೀವಾನ್ವಯವ್ಯತಿರೇಕವತ್ವ, ನಿತ್ಯತ್ವಗಳು ಕ್ರಮವಾಗಿ ಪೂರ್ವಪಕ್ಷನ್ಯಾಯಗಳಾಗಿವೆ. ಈ ಪೂರ್ವಪಕ್ಷ-ನ್ಯಾಯಗಳಂತೆ ಅಚೇತನಾದಿಪದಾರ್ಥಗಳೇ ಪ್ರತಿಪಾದ್ಯಗಳಾಗುತ್ತವೆ ಹೊರತು ವಿಷ್ಣುವಲ್ಲವೆಂದು ಪೂರ್ವಪಕ್ಷ ಪ್ರಾಪ್ತವಾಗುತ್ತದೆ.

ಆದರೆ ಪರೋವರೀಯಸ್ತ್ವ, ಶ್ರೀಲಕ್ಷ್ಮೀಪತಿತ್ವ, ಗಾನತ್ರಾಣಕರ್ತೃತ್ವ ಮೊದಲಾದವು ಕ್ರಮವಾಗಿ ಸಿದ್ಧಾಂತಲಿಂಗಗಳೆನಿಸಿವೆ. ಈ ಲಿಂಗಗಳು ವಿಷ್ಣುವಿನಲ್ಲಿ ಅನನ್ಯಥಾಸಿದ್ಧಗಳಾಗಿವೆ. ಆದ್ದರಿಂದ ಆಕಾಶ, ಪ್ರಾಣ, ಗಾಯತ್ರೀ ಮೊದಲಾದ ಶಬ್ದಗಳಿಂದ ವಿಷ್ಣುವೇ ಮುಖ್ಯವಾಗಿ ಪ್ರತಿಪಾದ್ಯನಾಗುತ್ತಾನೆ.

**'ಏತಾವಾನಸ್ಯ ಮಹಿಮಾ ತತೋ ಜ್ಯಾಯಾಂಶ್ಚ ಪುರುಷಃ' ಇತ್ಯಾದಿಶಬ್ದಸಹಿತಲಿಙ್ಗೈಶ್ಚ । ಸನ್ದಿಗ್ಧಶ್ರುತಿಲಿಙ್ಗಾಭ್ಯಾಮ್ ಉಕ್ತಾಭ್ಯಾಮಪಿ ಅಸನ್ದಿಗ್ಧಯೋಃ ಕೇವಲಯೋರಪಿ ಬಲವತ್ವಾತ್ ॥**

'ಏತಾವಾನಸ್ಯ ಮಹಿಮಾ ತತೋ ಜ್ಯಾಯಾಂಶ್ಚ ಪುರುಷಃ' ಇತ್ಯಾದಿ ಪುರುಷಸೂಕ್ತದಲ್ಲಿ ಹೇಳಲ್ಪಟ್ಟ ಶ್ರುತಿಸಹಿತವಾದ ಲಿಂಗದಿಂದಲೂ ಸಹ ಗಾಯತ್ರ್ಯಾದಿಶಬ್ದಗಳಿಂದ ವಿಷ್ಣುವೇ ಪ್ರತಿಪಾದ್ಯನಾಗುತ್ತಾನೆ. ಆಕಾಶಪ್ರಾಣಗಾಯತ್ರೀಶ್ರುತಿಗಳು ಆಕಾಶಾದಿಭೂತವಾಚಕಗಳೂ ಆಗಿವೆ; ಭಗವದ್ವಾಚಕಗಳೂ ಆಗಿವೆ. ಆದ್ದರಿಂದ ಸಂದಿಗ್ಧವೆನಿಸಿವೆ. ಆದರಂತೆ ಅಚೇತನತ್ವಾದಿಲಿಂಗಗಳೂ ಸಹ ಸಂದಿಗ್ಧಗಳೇ ಆಗಿವೆ. ಹೀಗೆ ಪೂರ್ವಪಕ್ಷದಲ್ಲಿ ಹೇಳಲ್ಪಟ್ಟ ಶ್ರುತಿಲಿಂಗಗಳು ಸಂದಿಗ್ಧಗಳಾದ್ದರಿಂದ ದುರ್ಬಲಗಳಾಗಿವೆ. ಆದರೆ ಪರೋವರೀಯಸ್ತ್ವಾದಿಲಿಂಗಗಳು ಪುರುಷಸೂಕ್ತ ಮೊದಲಾದ ಶ್ರುತಿಗಳು ವಿಷ್ಣುವನ್ನು ಮಾತ್ರ ಪ್ರತಿ-ಪಾದಿಸುವವುಗಳಾದ್ದರಿಂದ ಅಸಂದಿಗ್ಧಗಳಾಗಿವೆ. ಸಂದಿಗ್ಧವಾದ ಶ್ರುತಿಲಿಂಗಗಳಿಗಿಂತಲೂ ಅಸಂದಿಗ್ಧವಾದ ಕೇವಲ ಶ್ರುತಿಲಿಂಗಗಳಿಗೂ ಪ್ರಾಬಲ್ಯವಿರುತ್ತದೆ. ಅಂದರೆ ಸಾವಕಾಶವಾದ ಅನೇಕಶ್ರುತಿಲಿಂಗಗಳಿಗಿಂತಲೂ ನಿರವಕಾಶವಾದ ಒಂದೇ ಶ್ರುತಿ, ಅಥವಾ ಒಂದೇ ಲಿಂಗವು ಪ್ರಬಲವಾಗಿರುತ್ತದೆಂದು ಅಭಿಪ್ರಾಯ.

**ನ್ಯಾಯವಿವರಣಪಞ್ಜಿಕಾ – ॐ ಆಕಾಶಸ್ತಲ್ಲಿಙ್ಗಾತ್ ॐ ॥ ॐ ಅತ ಏವ ಪ್ರಾಣಃ ॐ ॥ ॐ ಜ್ಯೋತಿಶ್ಚರಣಾऽಭಿಧಾನಾತ್ ॐ ॥ ॐ ಛನ್ದೋऽಭಿಧಾನಾನ್ನೇತಿ ಚೇನ್ನ, ತಥಾ**

चेतोऽर्पणनिगदात्तथा हि दर्शनम् ॐ ॥ एतानि चत्वार्यतिदेशाधिकरणानि । अत्र, पूर्वपक्षेऽधिकाऽऽशङ्का दर्शनीया । ज्योतिरधिकरणे तु, भाष्यादेव साधिता, यदाह – ''अग्निसूक्तत्वा''दिति । अतस्तद्विहायाऽन्यत्र भाष्याऽऽद्यनवगताऽधिकाशङ्काप्रदर्शनेन लाघवायैकोक्त्या न्यायविवरणं क्रियते ।

ಓಂ ಆಕಾಶಸ್ತಲ್ಲಿಂಗಾತ್ ಓಂ । ಓಂ ಆತ ಏವ ಪ್ರಾಣಃ ಓಂ । ಓಂ ಜ್ಯೋತಿಶ್ಚರಣಾಭಿಧಾನಾತ್ ಓಂ । ಓಂ ಛಂದೋಽಭಿಧಾನಾನ್ನೇತಿ ಚೇನ್ನ ತಥಾ ಚೇತೋಽರ್ಪಣನಿಗದಾತ್ ತಥಾ ಹಿ ದರ್ಶನಮ್ ಓಂ ॥ ಈ ನಾಲ್ಕೂ ಅತಿದೇಶಾಧಿಕರಣಗಳೆನಿಸಿವೆ.

ಈ ನಾಲ್ಕರ ಪೂರ್ವಪಕ್ಷದಲ್ಲಿ ಅಧಿಕಾಶಂಕೆಯನ್ನು ತೋರಿಸಬೇಕು. ಹಿಂದಿನ ಅಧಿಕರಣದ ಸಿದ್ಧಾಂತನ್ಯಾಯವನ್ನೇ ಈ ನಾಲ್ಕು ಅಧಿಕರಣಗಳಲ್ಲಿ ಅತಿದೇಶ ಮಾಡಬೇಕು. ಆದ್ದರಿಂದ ಪೂರ್ವಪಕ್ಷದಲ್ಲಿ ಅಧಿಕಾಶಂಕೆಯನ್ನು ತೋರಿಸಿದರೆ ಸಾಕು. ಆದರೆ ಜ್ಯೋತಿರಧಿಕರಣದ ಪೂರ್ವಪಕ್ಷನ್ಯಾಯವನ್ನು ಭಾಷ್ಯ-ದಲ್ಲಿಯೇ 'ಅಗ್ನಿಸೂಕ್ತಸ್ಥತ್ವಾತ್' ಎಂದು ಹೇಳಿದ್ದಾರೆ. ಆದ್ದರಿಂದ ಜ್ಯೋತಿರಧಿಕರಣದ ಪೂರ್ವಪಕ್ಷ-ನ್ಯಾಯವನ್ನು ಬಿಟ್ಟು, ಭಾಷ್ಯದಿಂದ ತಿಳಿಯದ ಉಳಿದ ಮೂರು ಅಧಿಕರಣಗಳ ಅಧಿಕಾಶಂಕೆಯನ್ನು ತೋರಿಸಲು ಹೊರಟಿದ್ದಾರೆ. ಪ್ರತ್ಯೇಕವಾಗಿ ತೋರಿಸುವುದಕ್ಕಿಂತ ಒಟ್ಟಿಗೆ ತೋರಿಸುವುದರಲ್ಲಿ ಲಾಘವವಿದೆ ಎಂದಭಿಪ್ರಾಯದಿಂದ ಒಂದೇ ಮಾತಿನಲ್ಲಿ ನ್ಯಾಯವಿವರಣಕಾರರು ನಾಲ್ಕು ಅಧಿಕರಣಗಳನ್ನು ಜೋಡಿಸಿದ್ದಾರೆ.

**न्यायविवरणपञ्जिका** – तत्र तावत्, आकाशो भूताकाश एव भवेत् । आकाशशब्दस्य, तत्र योगरूढिभ्यां प्रवृत्तत्वात् । नच पूर्ववत्सावकाशत्वादिन्यायः भगवद्विषयस्य निरवकाशप्रमाणस्याऽभावात् । नाऽपि मुख्यत्वाऽऽदिन्यायः; इन्द्राऽऽदयो हि चेतनाः परमैश्वर्याऽऽदिशब्दगतया आगन्तुकया वर्षणादिकया चेष्टया प्रवृत्तिनिमित्तेनेन्द्रादिशब्दवाच्याः । सम्भवति चेतनानां चेष्टानां परायत्तत्वं, राजपुरुषादिषु दर्शनात् । आकाशस्त्वचेतनः; तदीयं चाऽऽकाशशब्दप्रवृत्ति-निमित्तमवकाशत्वाऽऽदिकं स्वभाव एव; नत्वागन्तुकम् । तत्कथं पराऽधीनं स्या-दिति ॥ तथा, प्राणोऽपि मुख्यप्राण एव; प्राणशब्दस्य तत्र प्रसिद्धेः । नच निरवकाशत्वं बाधकमस्ति, नाऽपि प्राणशब्दप्रवृत्तिनिमित्तस्य भगवदधीनत्वम्; यद्धि यत्र न सम्भवति तत्तत्र दृश्यमानमन्याऽधीनं कल्प्यते । सम्भवति च तन्मुख्ये, जीवनस्य तदन्वयव्यतिरेकाऽनुविधायित्वात् । तत्प्रमाणकत्वाच्च हेतुहेतुमद् भावस्येति ॥

एवं, गायत्र्यपि वेदविशेष एव । तच्छब्दस्य तत्र प्रसिद्धत्वात्, बाधकाऽभावाच्च । नच गायत्रीशब्दप्रवृत्तिनिमित्तस्य वाचकत्वाऽपरपर्यायस्य गानस्याऽन्याऽधीनता सम्भवति; येन मुख्याऽमुख्यन्यायाऽवकाशः । वाचकत्वस्य शब्दस्वभावत्वात् । आगन्तुकस्यैव पराऽधीनत्वात् । न चाऽऽकाशन्यायः; तस्योत्पत्तिमतोऽवकाशत्वसहितस्यैव पराऽयत्तत्वोपपत्त्या तदुपपत्तेः । वेदस्य तु नित्यत्वेनाऽनादित्वात् । न चाकाशो नित्यः, भूताकाशस्य तत्र पूर्वपक्षितत्वात् । तच्च, ''सर्वाणि ह वा इमानि भूतानि'' इति भूतोत्पत्तिस्थितिलयकारणत्वभूतज्यायस्त्वलिङ्गादवगम्यते । भूतानि च महाभूतान्येव; ''अस्य लोकस्य का गतिरित्याकाश इति होवाच'' इत्युक्तपृथिवीगतित्वोपपादनार्थत्वादिति ॥

ನ್ಯಾಯವಿವರಣದ ವಾಕ್ಯ ಹೀಗಿದೆ -- ಆಕಾಶಶಬ್ದವು ಭೂತಾಕಾಶವನ್ನೇ ಪ್ರತಿಪಾದಿಸುತ್ತದೆ. ಏಕೆಂದರೆ ಭೂತಾಕಾಶದಲ್ಲಿ ಯೋಗ ಹಾಗೂ ರೂಢಿ ಎರಡೂ ಸಹ ಪ್ರಸಿದ್ಧವಾಗಿದೆ. ಹಿಂದಿನ ಅಧಿಕರಣದ ಸಾವಕಾಶತ್ವಾದಿನ್ಯಾಯವನ್ನು ಇಲ್ಲಿ ಅನ್ವಯಿಸಲಾಗದು. ಏಕೆಂದರೆ ಭಗವದ್ವಿಷಯಕವಾದ ನಿರವಕಾಶ-ಪ್ರಮಾಣ ಕಾಣಸುತ್ತಿಲ್ಲ. ಇನ್ನು ಭಗವಂತನಲ್ಲಿ ಮುಖ್ಯವಾಚ್ಯತ್ವವನ್ನು ಇತರ ಪದಾರ್ಥಗಳಿಗೆ ಅಮುಖ್ಯ-ವಾಚ್ಯತ್ವವನ್ನು ಹೇಳಬೇಕು. ಆದರೆ ಇಂದ್ರಾದಿ ಚೇತನರಲ್ಲಿ ಪರಮೈಶ್ವರ್ಯವೆಂಬ ಇಂದ್ರಶಬ್ದದ ಪ್ರವೃತ್ತಿನಿಮಿತ್ತವು ಸ್ಫುಟವಾಗಿ ಕಾಣಸುತ್ತಿದೆ. ಆಗಂತುಕವಾದ ಮಳೆ ಸುರಿಸುವಿಕೆ ಮೊದಲಾದ ಚೇಷ್ಟೆಗಳಿಂದ ಪರಮೈಶ್ವರ್ಯವೆಂಬ ಪ್ರವೃತ್ತಿನಿಮಿತ್ತವು ದೇವೇಂದ್ರನಲ್ಲಿದೆ. ಅಂತಹ ದೇವೇಂದ್ರನೇ ಇಂದ್ರಶಬ್ದವಾಚ್ಯ-ನಾಗುತ್ತಾನೆ.

ಚೇತನನಲ್ಲಿರುವ ಚೇಷ್ಟೆಯು ಪರಾಧೀನವಾಗಬಹುದು. ರಾಜಪುರುಷಾದಿಗಳಲ್ಲಿ ಹಾಗೆ ಪರಾಧೀನ-ವಾಗಿರುವಿಕೆಯು ಕಂಡಿದೆ. ಆದರೆ ಅಚೇತನವಾದ ಆಕಾಶದಲ್ಲಿರುವ ಆಕಾಶತ್ವವೆಂಬ ಪ್ರವೃತ್ತಿನಿಮಿತ್ತವು ಭಗವದಧೀನವೆಂದು ಹೇಳಲಾಗದು. ಏಕೆಂದರೆ, ಸ್ವಾಭಾವಿಕವಾಗಿಯೇ ಭೂತಾಕಾಶದಲ್ಲಿ ಅವಕಾಶವಿ-ರುವುದು ಸಿದ್ಧವಾಗಿದೆ. ಹೊರತು ಆಗಂತುಕವಾಗಿ ಇರುವುದಿಲ್ಲ. ಹೀಗಿರುವಾಗ ಪರಾಧೀನವೆಂದು ಹೇಗೆ ಹೇಳುತ್ತೀರಿ? ಆದ್ದರಿಂದ ಆಕಾಶಶಬ್ದದಿಂದ ಭೂತಾಕಾಶವೇ ಪ್ರಸಿದ್ಧವಾಗಬೇಕು.

ಇದರಂತೆ ಪ್ರಾಣಶಬ್ದದಿಂದಲೂ ಮುಖ್ಯಪ್ರಾಣನೇ ಪ್ರತಿಪಾದ್ಯನಾಗುತ್ತಾನೆ. ಏಕೆಂದರೆ ಪ್ರಾಣಶಬ್ದದ ರೂಢಿಯು ಮುಖ್ಯಪ್ರಾಣನಲ್ಲಿ ಪ್ರಸಿದ್ಧವಾಗಿದೆ. ನಿರವಕಾಶತ್ವವೆಂಬ ಬಾಧಕವನ್ನೂ ಸಹ ಇಲ್ಲಿ ಹೇಳಲಾಗದು. ಮತ್ತು ಪ್ರಾಣಶಬ್ದ ಪ್ರವೃತ್ತಿನಿಮಿತ್ತವು ಭಗವದಧೀನವೂ ಅಲ್ಲ. ಏಕೆಂದರೆ, 'ಯಾವುದು ಎಲ್ಲಿ ಕೂಡುವುದಿಲ್ಲವೋ ಅದನ್ನು ಆಲ್ಲಿ ಅನ್ಯಾಧೀನವೆಂದು ಕಲ್ಪಿಸಬೇಕು' ಎಂಬ ವ್ಯಾಪ್ತಿಯಂತೆ ಪ್ರಾಣಶಬ್ದಪ್ರವೃತ್ತಿನಿಮಿತ್ತವೆನಿಸಿದ ಜೀವನಹೇತುತ್ವವು ಮುಖ್ಯಪ್ರಾಣನಲ್ಲಿ ಕೂಡದಿದ್ದರೆ ಮಾತ್ರ ವಿಷ್ಣುವಿನ ಅಧೀನವೆಂದು ಒಪ್ಪಬೇಕಾಗುತ್ತದೆ. ಆದರೆ ಮುಖ್ಯಪ್ರಾಣನಲ್ಲಿ ಜೀವನಹೇತುತ್ವವು ಕೂಡುತ್ತಿರುವಾಗ

ವಿಷ್ಣುವಿನಲ್ಲಿ ಒಪ್ಪಲು ಸಾಧ್ಯವಿಲ್ಲ. ಹೀಗೆ ಅನ್ವಯವ್ಯತಿರೇಕಾನುವಿಧಾಯಿತ್ವವೆಂಬ ಪ್ರಮಾಣದಿಂದ ಕೂಡಿರುವುದರಿಂದ ಹೇತುಹೇತುಮದ್ಭಾವವು ಸಪ್ರಮಾಣವಾಗುತ್ತದೆ. ಆದ್ದರಿಂದ ಪ್ರಾಣಶಬ್ದದಿಂದ ಮುಖ್ಯಪ್ರಾಣನೇ ಪ್ರತಿಪಾದ್ಯನು.

ಇದರಂತೆ ಗಾಯತ್ರೀಶಬ್ದವೂ ಸಹ ವೇದವಿಶೇಷವಾದ ಗಾಯತ್ರೀಛಂದಸ್ಸನ್ನೇ ಹೇಳುತ್ತದೆ. ಏಕೆಂದರೆ ಗಾಯತ್ರೀಶಬ್ದವು ಆಲ್ಲಿಯೇ ಹೆಚ್ಚು ಪ್ರಸಿದ್ಧ. ಮತ್ತು ಆ ಅರ್ಥದಲ್ಲಿ ಯಾವುದೇ ಬಾಧಕವೂ ಇರುವುದಿಲ್ಲ. ಗಾಯತ್ರೀಶಬ್ದಪ್ರವೃತ್ತಿನಿಮಿತ್ತವೆನಿಸಿದ ವಾಚಕತ್ವವನ್ನೇ ಗಾನ ಎನ್ನುತ್ತಾರೆ. ಇದು ಅನ್ಯಾಧೀನವಾಗುವುದಿಲ್ಲ. ಹಾಗಾಗಿದ್ದಲ್ಲಿ ಮುಖ್ಯಾಮುಖ್ಯನ್ಯಾಯವನ್ನು ಅನುಸರಿಸಬಹುದಿತ್ತು. ಏಕೆ ಅನ್ಯಾಧೀನವಾಗುವುದಿಲ್ಲವೆಂದರೆ ವಾಚಕತ್ವವು ಶಬ್ದದ ಸ್ವಾಭಾವಿಕಗುಣ. ಆಗಂತುಕವಾದದ್ದಷ್ಟೇ ಅನ್ಯಾಧೀನವಾಗುತ್ತದೆ. ಆಕಾಶಾಧಿಕರಣ-ನ್ಯಾಯದಿಂದಲೂ ಅನ್ಯಾಧೀನವೆನ್ನಲಾಗದು. ಭೂತಾಕಾಶಕ್ಕೆ ಉತ್ಪತ್ತಿ ಇರುವುದರಿಂದ ಅವಕಾಶತ್ವದಿಂದ ಕೂಡಿರುವ ಆಕಾಶಕ್ಕೆ ಅನ್ಯಾಧೀನತ್ವವನ್ನು ಹೇಳಬಹುದು. ಆದರೆ ವೇದವು ನಿತ್ಯವಾದ್ದರಿಂದ ಅನಾದಿಯಾಗಿದೆ. ಆದರೆ ಆಕಾಶವು ನಿತ್ಯವಾಗಿಲ್ಲ. ಆದ್ದರಿಂದ ಅನಾದಿಯೂ ಆಗುವುದಿಲ್ಲ. ಭೂತವಾದ ಆಕಾಶವು ಪೂರ್ವಪಕ್ಷಕ್ಕೆ ವಿಷಯವಾಗಿದೆ. ಈ ವಿಷಯವು 'ಸರ್ವಾಣಿ ಹ ವಾ ಇಮಾನಿ ಭೂತಾನಿ' ಎಂಬ ಶ್ರುತಿಯಿಂದ 'ಭೂತೋತ್ಪತ್ತಿಸ್ಥಿತಿಲಯಕಾರಣತ್ವ' ಮತ್ತು 'ಭೂತಜ್ಯಾಯಸ್ತ್ವ' ಎಂಬ ಲಿಂಗದಿಂದ ತಿಳಿಯುತ್ತಿದೆ. ಭೂತವೆಂದರೆ ಮಹಾಭೂತವೆಂದೇ ಅರ್ಥ. ಏಕೆಂದರೆ 'ಅಸ್ಯ ಲೋಕಸ್ಯ ಕಾ ಗತಿಃ। ಆಕಾಶ ಇತಿ ಹೋವಾಚ' ಎಂಬುದಾಗಿ ಪೃಥಿವಿಯ ಆಶ್ರಯವನ್ನು ಪ್ರಶ್ನಿಸಿದಾಗ ಆಕಾಶವೆಂದು ಉತ್ತರಿಸಿದ್ದಾರೆ.

(ಟೀ) ಏವಂ ಪ್ರಾಪ್ತೇ, ಪ್ರತಿವಿಧತ್ತೇ – **ಅಧಿಭೂತೇತಿ** ॥ ಅತ್ರ, ಭೂತಾऽऽಕಾಶ-ಮುಖ್ಯಪ್ರಾಣಚ್ಛಂದೋವಿಶೇಷೇತಿ ವಕ್ತವ್ಯೇ, ಅಧಿಭೂತೇತ್ಯಾದಿವಚನಮಾಕಾಶಾದಿಶಬ್ದಾಃ ಸೌತ್ರಾಃ, ಸಜಾತೀಯೋಪಲಕ್ಷಣಪರಾ ಇತ್ಯಸ್ಯ ಜ್ಞಾಪನಾರ್ಥಮ್ । ಏತತ್, ಅಧಿಕರಣಾऽನ್ತರೇऽಪಿ ಸಮಾನಮ್ । ತತ್ರಾऽಕಾಶಶಬ್ದೋऽಧಿಭೂತಗತಾನಾಂ ಪೃಥಿವ್ಯಾದಿಶಬ್ದಾನಾಮುಪಲಕ್ಷಕಃ; ಪ್ರಾಣಶಬ್ದೋऽಧ್ಯಾತ್ಮ-ಗತಾನಾಂ ಚಕ್ಷುರಾದಿಶಬ್ದಾನಾಮ್, ಗಾಯತ್ರೀಶಬ್ದೋऽಧಿವೇದಗತಾನಾಮುಷ್ಣಿಗಾದಿಶಬ್ದಾನಾಮ್ ।

ಅತ್ರ, ವಿಭಕ್ತ್ಯರ್ಥೇऽಧಿಕರಣತ್ವಮಾತ್ರೇऽವ್ಯಯಂ ಸಮಸ್ತಮ್ । ತತಶ್ಚಾऽಧಿಭೂತಂ, ಭೂತೇಷು ಇತ್ಯರ್ಥಃ । ಆತ್ಮಶಬ್ದಶ್ಚೇನ್ದ್ರಿಯಪ್ರಾಣಶರೀರವಚನಃ । ಅಧ್ಯಾತ್ಮಮಾತ್ಮನೀತ್ಯರ್ಥಃ । ವೇದಶಬ್ದೇನ ಸಾವಾನ್ತರಭೇದಾ ಜಗತ್ಯಾದಯ ಉಚ್ಯನ್ತೇ । ಅಧಿವೇದಂ ವೇದೇಷ್ವಿತ್ಯರ್ಥಃ । ಸರ್ವತ್ರ ವಿಷಯಸಪ್ತಮೀ । ಗತಾನಾಮವಗತಾನಾಂ, ಪ್ರಸಿದ್ಧಾನಾಮ್ । ಅವ್ಯಯೀಭಾವಶ್ಚಾದ್ವನ್ದ್ವಗರ್ಭಃ ಸಪ್ತಮೀಸಮಾಸಃ ।

ಅಥ ವಾऽಧಿಕರ್ತವ್ಯಪ್ರಧಾನೇऽಧಿಕರಣೇऽಧಿಶಬ್ದಃ । ತಥಾ ಚಾऽಧಿಭೂತಂ, ಭೂತೇಷು ವರ್ತಮಾನಃ । ಏವಮುತ್ತರತ್ರ । ಏತಚ್ಚ ಶಬ್ದಾನಾಂ ವಿಶೇಷಣಮ್ । ಅವ್ಯಯೀಭಾವಶ್ಚಾದ್ವನ್ದ್ವಗರ್ಭಃ ಕರ್ಮಧಾರಯಶ್ಚ ಸಮಾಸಃ ।

ಯದ್ವಾ, ಅಧಿಭೂತಾऽऽದಿಶಬ್ದೈರಾಕಾಶಾದೀನ್ಯುಚ್ಯನ್ತೇ । ಸಮುದಾಯೈಕದೇಶಾऽಶ್ರಯಣೇನಾऽ-

धिकरणाऽधिकर्तव्यतोपपत्तेः । 'गत'शब्दश्च प्राप्त्यर्थो विषयीकारिपरः । अव्ययीभावद्वन्द्वगर्भो द्वितीयासमासः ।

अचेतनत्वादीनां त्रयाणां यथासङ्ख्यं सम्बन्धः । आकाशप्राणगायत्रीणामिति शेषः । जीवो जीवनं, तस्यान्वयव्यतिरेकौ । स्वाऽन्वयव्यतिरेकाभ्यां तत्करत्वमिति यावत् ।

अनन्यथासिद्धलिङ्गैः, परोवरीयस्त्वश्रीलक्ष्मीपतित्वगानत्राणकर्तृत्वाऽऽद्यैर्निश्चीयत इति वाक्यशेषः ।

गायत्र्यधिकरणेऽधिकमपि प्रमाणमाह – **तावानस्येति** ॥ पुरुषश्रुतिसहितपुरुषसूक्तोक्तत्वभूतपादत्वाऽऽदिलिङ्गैश्चेत्यर्थः । न केवलं लिङ्गैः, श्रुत्या चेति भावः । अत्राऽप्यनन्यथासिद्धत्वं ग्राह्यम् । तथाऽपि कथं निर्णय इत्यत आह – **सन्दिग्धेति** ॥ आकाशप्राणगायत्रीश्रुतयस्तावत्, परमेश्वरेऽपि वाचकत्वशक्तियुक्तत्वेन, अत्र किम्परा इति सन्दिग्धाः, अचेतनत्वादीनि च लिङ्गानि, अनुव्याख्यानोक्तरीत्या न मुख्याऽमुख्यन्यायविघातायाऽलमिति सन्दिग्धान्युच्यन्ते । परोवरीयस्त्वलिङ्गानि, पुरुषश्रुतिश्चेत्येतानि भगवदेकनिष्ठत्वादसन्दिग्धानि । सावकाशेभ्योऽनेकेभ्योऽपि निरवकाशस्यैकस्यैव प्राबल्यान्निरवकाशद्वितीयश्रुतिसहितस्य सुतरां बलवत्त्वात् । मुख्याऽमुख्यन्यायस्याऽप्यनपाकृत्वाद्युक्तो निर्णयः । एतेनाऽनन्यथासिद्धेत्युक्तस्य प्रयोजनं दर्शितम् । केवलयोः, श्रुतिलिङ्गयोः ॥ ८-९-१०-११ ॥

॥ इति श्रीजयतीर्थभिक्षुविरचितायां न्यायविवरणपञ्जिकायाम्
आकाशप्राणज्योतिगायत्र्यधिकरणानि ॥

ಹೀಗೆ ಆಕಾಶ, ಪ್ರಾಣ ಮತ್ತು ಗಾಯತ್ರೀಶಬ್ದಗಳಿಂದ ಭೂತಾಕಾಶ, ಮುಖ್ಯಪ್ರಾಣ, ಛಂದೋವಿಶೇಷಗಳೇ ಪ್ರತಿಪಾದ್ಯವಾಗುತ್ತವೆಂದು ಪೂರ್ವಪಕ್ಷ. ಈ ಪೂರ್ವಪಕ್ಷವನ್ನು ನಿರಾಕರಿಸುವುದಕ್ಕಾಗಿ "ಅಧಿಭೂತ"ವೆಂಬ ನ್ಯಾಯವಿವರಣವಾಕ್ಯವು ಹೊರಟಿದೆ. ವಸ್ತುತಃ ನ್ಯಾಯವಿವರಣದಲ್ಲಿ ಭೂತಾಕಾಶ, ಮುಖ್ಯಪ್ರಾಣ, ಛಂದೋವಿಶೇಷವೆಂದು ಹೇಳಬೇಕಿತ್ತು. ಆದರೆ ಶ್ರೀಮದಾಚಾರ್ಯರು ಅಧಿಭೂತ, ಅಧ್ಯಾತ್ಮ, ಅಧಿವೇದ ಎಂದು ಹೇಳಿದ್ದಾರೆ. ಇದಕ್ಕೆ ಕಾರಣವೇನೆಂದರೆ, ಸೂತ್ರದಲ್ಲಿರುವ ಆಕಾಶಾದಿಶಬ್ದಗಳಿಂದ ಸಜಾತೀಯವಾದ ಬೇರೆ ಶಬ್ದಗಳನ್ನೂ ಸಹ ಉಪಲಕ್ಷಣಯಾ ವಿವಕ್ಷಿಸಬೇಕೆಂದು ತಿಳಿಸುವುದು. ಈ ವಿಷಯವನ್ನು ಬೇರೆ ಅಧಿಕರಣಗಳಲ್ಲಿಯೂ ತಿಳಿಯಬೇಕು. ಆದ್ದರಿಂದ ಸೂತ್ರದಲ್ಲಿರುವ

ಆಕಾಶಶಬ್ದದಿಂದ ಅಧಿಭೂತಗತವಾದ ಪೃಥ್ವಿ, ಆಪ್ ಮೊದಲಾದ ಶಬ್ದಗಳನ್ನು ಉಪಲಕ್ಷಣಯಾ ಇಟ್ಟುಕೊಳ್ಳಬೇಕು. ಅದರಂತೆ ಪ್ರಾಣಶಬ್ದದಿಂದ ಅಧ್ಯಾತ್ಮಗತವಾದ ಚಕ್ಷುರಾದಿ ಶಬ್ದಗಳನ್ನು, ಗಾಯತ್ರೀಶಬ್ದದಿಂದ ಅಧಿವೇದಗತವಾದ ಉಷ್ಣಿಕ್, ಅನುಷ್ಟುಪ್ ಮೊದಲಾದ ಛಂದಸ್ಸುಗಳನ್ನು ಉಪಲಕ್ಷಣಯಾ ಇಟ್ಟುಕೊಳ್ಳಬೇಕು.

ಇಲ್ಲಿ ಅಧಿಭೂತ ಇತ್ಯಾದಿಶಬ್ದಗಳು ವಿಭಕ್ತ್ಯರ್ಥವಾದ ಅಧಿಕರಣಮಾತ್ರದಲ್ಲಿ ಇರುವ ಅವ್ಯಯವೆನಿಸಿದೆ. ಆದ್ದರಿಂದ ಅಧಿಭೂತಂ ಎಂದರೆ, ಭೂತೇಷು (ಭೂತಗಳಲ್ಲಿ) ಎಂದಷ್ಟೇ ಅರ್ಥ. ಆತ್ಮಶಬ್ದದಿಂದ ಇಂದ್ರಿಯ ಪ್ರಾಣ ಶರೀರಗಳನ್ನು ವಿವಕ್ಷಿಸಬೇಕು. ವಿಭಕ್ತ್ಯರ್ಥಪ್ರತಿನಿರೂಪಕವಾದ ಅಧ್ಯಾತ್ಮಪದಕ್ಕೆ ಆತ್ಮನಿ ಆತ್ಮನಲ್ಲಿ ಎಂದರ್ಥ. ವೇದಶಬ್ದದಿಂದ ಅವಾಂತರಭೇದವೆನಿಸಿದ ಜಗತಿ ಮೊದಲಾದ ಛಂದಸ್ಸುಗಳನ್ನು ವಿವಕ್ಷಿಸಬೇಕು. ಅಧಿವೇದ ಎಂಬ ಪದಕ್ಕೂ ಹಿಂದಿನಂತೆ ವೇದೇಷು(ವೇದಗಳಲ್ಲಿ) ಎಂದರ್ಥ. ಮೂರೂ ಕಡೆಯಲ್ಲಿಯೂ ವಿಷಯಾರ್ಥದಲ್ಲಿ ಸಪ್ತಮಿಯು ಇರುತ್ತದೆ. 'ಗತಾನಾಂ' ಎಂಬ ಪದಕ್ಕೆ 'ಅವಗತಾನಾಂ' ಎಂದರೆ 'ಪ್ರಸಿದ್ಧವಾದ' ಎಂದರ್ಥ. 'ಅಧಿಭೂತಅಧ್ಯಾತ್ಮಅಧಿವೇದಗತಾನಾಂ' ಎಂಬ ಪದದಲ್ಲಿ ಅವ್ಯಯೀಭಾವ ದ್ವಂದ್ವಗಳಿಂದ ಗರ್ಭಿತವಾದ ಸಪ್ತಮೀ ಸಮಾಸವನ್ನು ಮಾಡಬೇಕು. ಅದು ಹೀಗೆ— ಭೂತೇಷು ಅಧಿಭೂತಂ, ಆತ್ಮನಿ ಅಧ್ಯಾತ್ಮಮ್, ವೇದೇಷು ಅಧಿವೇದಂ (ಅವ್ಯಯೀಭಾವ) ಅಧಿಭೂತಂ ಚ ಅಧ್ಯಾತ್ಮಂ ಚ ಅಧಿವೇದಂ ಚ ಅಧಿಭೂತಅಧ್ಯಾತ್ಮಅಧಿವೇದಾನಿ.(ದ್ವಂದ್ವ) ಅಧಿಭೂತಅಧ್ಯಾತ್ಮಅಧಿವೇದೇಷು ಗತಃ ಅಧಿಭೂತಅಧ್ಯಾತ್ಮಅಧಿವೇದಗತಾಃ, ತೇಷಾಂ ಅಧಿಭೂತಅಧ್ಯಾತ್ಮಅಧಿವೇದಗತಾನಾಂ (ಸಪ್ತಮೀ ತತ್ಪುರುಷ) ಎಂದು.

ಅಥವಾ, ಅಧಿ ಎಂಬ ಶಬ್ದವು ಅಧಿಕರ್ತವ್ಯಪ್ರಧಾನವಾದ (ಆಧೇಯವಾದ) ಅಧಿಕರಣ ಎಂಬರ್ಥದಲ್ಲಿದೆ. ಆವಾಗ ಅಧಿಭೂತಂ ಎಂದರೆ 'ಭೂತಗಳಲ್ಲಿ ಇರುವ' ಎಂದರ್ಥ. ಇದರಂತೆ ಅಧ್ಯಾತ್ಮ ಎಂದರೆ 'ಆತ್ಮನಲ್ಲಿ ಇರುವ', ಅಧಿವೇದ ಎಂದರೆ 'ವೇದಗಳಲ್ಲಿ ಇರುವ' ಎಂದರ್ಥ. ಇವುಗಳು ಶಬ್ದಾನಾಂ ಎಂಬಲ್ಲಿ ವಿಶೇಷಣಗಳಾಗಿವೆ. ಈ ಪಕ್ಷದಲ್ಲಿ ಅವ್ಯಯೀಭಾವ ದ್ವಂದ್ವಗಳಿಂದ ಗರ್ಭಿತವಾದ ಕರ್ಮಧಾರಯಸಮಾಸವನ್ನು ಮಾಡಬೇಕು -- ಭೂತೇಷು ವರ್ತಮಾನಮ್ ಅಧಿಭೂತಮ್, ಆತ್ಮನಿ ವರ್ತಮಾನಂ ಅಧ್ಯಾತ್ಮಮ್, ವೇದೇಷು ವರ್ತಮಾನಮ್ ಅಧಿವೇದಮ್. ಅಧಿಭೂತಂ ಚ ಅಧ್ಯಾತ್ಮಂ ಚ ಅಧಿವೇದಂ ಚ ಅಧಿಭೂತಅಧ್ಯಾತ್ಮಅಧಿವೇದಾನಿ. ಅಧಿಭೂತಅಧ್ಯಾತ್ಮಅಧಿವೇದಾನಿ ಚ ತೇ ಗತಾನಿ ಚ ಅಧಿಭೂತಅಧ್ಯಾತ್ಮಅಧಿವೇದಗತಾನಿ ತೇಷಾಂ ಅಧಿಭೂತಅಧ್ಯಾತ್ಮಅಧಿವೇದಗತಾನಾಂ ಎಂದು ಸಮಾಸ.

ಅಥವಾ ಅಧಿಭೂತ ಮೊದಲಾದ ಶಬ್ದಗಳಿಂದ ಆಕಾಶಾದಿಗಳು ಪ್ರತಿಪಾದ್ಯಗಳಾಗಿವೆ. ಸಮುದಾಯದ ಏಕದೇಶವನ್ನು ಆಶ್ರಯಿಸಿದಾಗ ಅಧಿಕರಣಾರ್ಥದಲ್ಲಿ ಅಧಿಕರ್ತವ್ಯತ್ವವು ಉಪಪನ್ನವಾಗುತ್ತದೆ. ಗತಶಬ್ದವು 'ಪ್ರಾಪ್ತಿ' ಎಂಬರ್ಥದಲ್ಲಿದೆ. ವಿಷಯೀಕರಿಸುವಿಕೆ ಎಂದರ್ಥ. ಈ ಪಕ್ಷದಲ್ಲಿ ಅವ್ಯಯೀಭಾವದ್ವಂದ್ವಗಳಿಂದ ಗರ್ಭಿತವಾದ ದ್ವಿತೀಯಾತತ್ಪುರುಷಸಮಾಸವನ್ನು ಮಾಡಬೇಕು. ಅಧಿಭೂತ ಎಂದರೆ 'ಭೂತಗಳ ಸಮುದಾಯದ ಏಕದೇಶವಾದದ್ದು ಆಕಾಶ' ಎಂದರ್ಥ; ಅಧ್ಯಾತ್ಮ ಎಂದರೆ 'ಆತ್ಮನಿಗೆ ಸಂಬಂಧಿಸಿದ

ಪದಾರ್ಥಗಳ ಮಧ್ಯದಲ್ಲಿ ಏಕದೇಶವಾದ ಪ್ರಾಣ' ಎಂದರ್ಥ; ಅಧಿವೇದ ಎಂದರೆ 'ಜಗತೀ ಮೊದಲಾದ ಅನೇಕ ಛಂದಸ್ಸುಗಳ ಸಮುದಾಯದಲ್ಲಿ ಏಕದೇಶವಾದ ಗಾಯತ್ರೀ' ಎಂದರ್ಥ. ಇವುಗಳನ್ನು ವಿಷಯೀಕರಿಸುವ ಶಬ್ದಗಳೆಂದು ತಿಳಿಯಬೇಕು. ಸಮಾಸ ಹೀಗೆ -- ಭೂತೇಷು ವರ್ತಮಾನಃ ಅಧಿಭೂತಮ್, ಆತ್ಮಸು ವರ್ತಮಾನಃ ಅಧ್ಯಾತ್ಮಮ್, ವೇದೇಷು ವರ್ತಮಾನಃ ಅಧಿವೇದಮ್. ಅಧಿಭೂತಂ ಚ ಅಧ್ಯಾತ್ಮಂ ಚ ಅಧಿವೇದಂ ಚ ಅಧಿಭೂತಅಧ್ಯಾತ್ಮಅಧಿವೇದಾನಿ. ಅಧಿಭೂತಅಧ್ಯಾತ್ಮ-ಅಧಿವೇದಾನಿ ಗತಾಃ ಅಧಿಭೂತಾಅಧ್ಯಾತ್ಮಅಧಿವೇದಗತಾಃ ತೇಷಾಂ ಅಧಿಭೂತಅಧ್ಯಾತ್ಮಅಧಿವೇದಗತಾನಾಂ ಎಂದು.

ಅನನ್ಯಥಾಸಿದ್ಧವಾದ ಲಿಂಗಗಳೆಂದರೆ ಪರೋವರೀಯಸ್ತ್ವ, ಶ್ರೀಲಕ್ಷ್ಮೀಪತಿತ್ವ, ಗಾನತ್ರಾಣಕರ್ತೃತ್ವ ಮೊದಲಾದವುಗಳೆಂದರ್ಥ. ಇವುಗಳಿಂದ ವಿಷ್ಣುವೆಂದು ನಿರ್ಣಯಿಸುತ್ತೇವೆ ಎಂದು ವಾಕ್ಯವನ್ನು ಪೂರ್ತಿಮಾಡಬೇಕು. ಗಾಯತ್ರ್ಯಧಿಕರಣದಲ್ಲಿ ಅಧಿಕವಾದ ಸಿದ್ಧಾಂತಲಿಂಗವನ್ನು ಹೇಳುತ್ತಿದ್ದಾರೆ. ''ಏತಾವಾನಸ್ಯ'' ಇತ್ಯಾದಿಯಾಗಿ. ಪುರುಷಶಬ್ದದಿಂದ ಕೂಡಿರುವ ಪುರುಷಸೂಕ್ತೋಕ್ತತ್ವ ಮತ್ತು ಭೂತಪಾದತ್ವ ಮೊದಲಾದ ಲಿಂಗಗಳಿಂದ ಎಂದರ್ಥ. ಕೇವಲ ಲಿಂಗಗಳಿಂದಷ್ಟೇ ಅಲ್ಲದೆ ಶ್ರುತಿಯಿಂದಲೂ ಸಹ ಎಂದು ತಿಳಿಯಬೇಕು. ಅಂದರೆ ಅನನ್ಯಥಾಸಿದ್ಧವಾದ ಲಿಂಗ ಹಾಗೂ ಶ್ರುತಿಗಳಿಂದ ಎಂದರ್ಥ. ಆದರೂ ಹೇಗೆ ನಿರ್ಣಯಿಸುವುದು? ಎಂದರೆ ''ಸಂದಿಗ್ಧ'' ಎಂಬ ವಾಕ್ಯದಿಂದ ಉತ್ತರಿಸಿದ್ದಾರೆ. ಆಕಾಶ, ಪ್ರಾಣ, ಗಾಯತ್ರೀಶ್ರುತಿಗಳು ಪರಮೇಶ್ವರನಲ್ಲಿಯೂ ಸಹ ವಾಚಕತ್ವಶಕ್ತಿಯನ್ನು ಹೊಂದಿವೆ. ಹೀಗಿರುವಾಗ ಶ್ರುತಿಗಳು ಉಭಯಪ್ರತಿಪಾದಕಗಳಾಗುವುದರಿಂದ ಇದನ್ನೆ ಪ್ರತಿಪಾದಿಸುತ್ತವೆಂದು ನಿರ್ಣಯಿಸಲಾಗದು. ಹೀಗೆ ಶ್ರುತಿಗಳು ಸಂದಿಗ್ಧವಾದಂತೆ ಅಚೇತನತ್ವಾದಿಲಿಂಗಗಳೂ ಸಹ ಸಂದಿಗ್ಧವಾಗಿವೆ. ಅನುವ್ಯಾಖ್ಯಾನದಲ್ಲಿ ಹೇಳಿದಂತೆ ಮುಖ್ಯಾಮುಖ್ಯನ್ಯಾಯವನ್ನು ತಿರಸ್ಕರಿಸಲು ಇವುಗಳಿಗೆ ಸಾಮರ್ಥ್ಯವಿಲ್ಲವೆಂದು ತಿಳಿಸಲು ''ಸಂದಿಗ್ಧಾನಿ'' ಎಂದು ಹೇಳಿದ್ದಾರೆ. ಆದರೆ ಪರೋವರೀಯಸ್ತ್ವ ಮೊದಲಾದ ಲಿಂಗಗಳು ಪುರುಷಶ್ರುತಿಗಳು ಭಗವನ್ನಿಷ್ಠವಾದ್ದರಿಂದ ಅಸಂದಿಗ್ಧಗಳಾಗಿವೆ. ಅನೇಕವಾದ ಸಾವಕಾಶಶ್ರುತಿಲಿಂಗಗಳಿಗಿಂತ ನಿರವಕಾಶವಾದ ಶ್ರುತಿ ಅಥವಾ ಲಿಂಗ ಒಂದೇ ಆಗಿದ್ದರೂ ಪ್ರಬಲವಾಗಿರುತ್ತದೆ. ಹೀಗೆ ಹೇಳಿದಾಗ ಮುಖ್ಯಾ-ಮುಖ್ಯನ್ಯಾಯವನ್ನು ತಿರಸ್ಕರಿಸಿದಂತೆಯೂ ಆಗುವುದಿಲ್ಲವಾದ್ದರಿಂದ ಸಿದ್ಧಾಂತನಿರ್ಣಯವು ಸುಲಭ-ವಾಗುತ್ತದೆ. ಹೀಗೆ ಹೇಳಿದ್ದರಿಂದ ಅನನ್ಯಥಾಸಿದ್ಧ ಎಂಬ ಮಾತಿಗೆ ಪ್ರಯೋಜನವನ್ನು ತೋರಿಸಿದಂತಾಯಿತು. ಕೇವಲಯೋಃ ಎಂಬ ಪದಕ್ಕೆ ಶ್ರುತಿಲಿಂಗಗಳು ಎಂದರ್ಥ.

॥ಇಲ್ಲಿಗೆ ಶ್ರೀಜಯತೀರ್ಥಪೂಜ್ಯಚರಣರಿಂದ ವಿರಚಿತವಾದ ನ್ಯಾಯವಿವರಣಟೀಕೆಯಲ್ಲಿ

ಆಕಾಶ,ಪ್ರಾಣ,ಜ್ಯೋತಿ,ಗಾಯತ್ರ್ಯಧಿಕರಣಗಳು ಮುಗಿದವು॥

श्रीमदानन्दतीर्थभगवत्पादाचार्यविरचितम्
अणुभाष्यम्;
श्रीमद्राघवेन्द्रतीर्थविरचिततत्वमञ्जर्या समेतम्

# गायत्र्यधिकरणम्

नन्वग्निसूक्तस्थं ज्योतिर्विष्णुरित्ययुक्तम् । अस्यैव ज्योतिषः 'अथ यदतः परो दिवो ज्योतिर्दीप्यते' इति छान्दोग्ये तृतीयेऽध्याये श्रवणात्तस्य च **'गायत्री वा इदं सर्व'मित्युपक्रमेण गायत्रीत्वात्** । नहि तस्यापि विष्णुत्वे गायत्रीवागाद्यन्यत्रप्रसिद्धशब्दोक्तौ प्रयोजनमस्ति । ज्योतिःशब्दप्रस्तुते **'तेजो वै ब्रह्मवर्चसं गायत्री'** इति तत्पर्यायस्य तेजःशब्दस्योक्तेः । अत उक्तमयुक्तमित्यतः प्राप्तम् । **छन्दोऽभिधानादित्यादिसूत्रत्रयम्** ॥

ಹಿಂದಿನ ಜ್ಯೋತಿರಧಿಕರಣದಲ್ಲಿ ಅಗ್ನಿಸೂಕ್ತದಲ್ಲಿರುವ ಜ್ಯೋತಿಯು ವಿಷ್ಣುವೆಂದು ಪ್ರತಿಪಾದಿಸಲಾಯಿತು. ಆದರೆ ಇದು ಸರಿಯಲ್ಲ. ಏಕೆಂದರೆ 'ಅಥ ಯದತಃ ಪರೋ ದಿವೋ ಜ್ಯೋತಿರ್ದೀಪ್ಯತೇ' ಇತ್ಯಾದಿಯಾಗಿ ಛಾಂದೋಗ್ಯದ ಮೂರನೆಯ ಅಧ್ಯಾಯದಲ್ಲಿ ಜ್ಯೋತಿಶಬ್ದವು ಪ್ರಸಕ್ತವಾಗಿದೆ. ಇಂತಹ ಜ್ಯೋತಿಶಬ್ದವನ್ನು 'ಗಾಯತ್ರೀ ವಾ ಇದಂ ಸರ್ವಮ್' ಎಂಬ ಉಪಕ್ರಮದ ಬಲದಿಂದ ಗಾಯತ್ರೀ ಎಂದು ಹೇಳಬಹುದು. ಉಪಕ್ರಮದಲ್ಲಿರುವ ಗಾಯತ್ರೀಶಬ್ದವೂ ಸಹ ವಿಷ್ಣುವಾಚಕವೇ ಆಗಲಿ ಎಂದು ಹೇಳುವುದಾದರೆ ಗಾಯತ್ರೀ ವಾಕ್ ಮೊದಲಾದ ಅನ್ಯತ್ರಪ್ರಸಿದ್ಧಶಬ್ದಗಳಿಗೆ ಪ್ರಯೋಜನವೇ ಇಲ್ಲದಂತಾಗುತ್ತದೆ. 'ತೇಜೋ ವೈ ಬ್ರಹ್ಮವರ್ಚಸಂ ಗಾಯತ್ರೀ' ಎಂಬುದಾಗಿ ಜ್ಯೋತಿಶಬ್ದವು ಪ್ರಸ್ತುತವಾದಾಗ ಜ್ಯೋತಿಶಬ್ದದ ಪರ್ಯಾಯಪದವಾದ ತೇಜಸ್‌ಶಬ್ದವನ್ನು ಹೇಳಿದ್ದಾರೆ. ಆದ್ದರಿಂದ ಈ ಜ್ಯೋತಿಸ್‌ಶಬ್ದವು ವಿಷ್ಣುವಾಚಕವಲ್ಲವೆಂಬುವ ಶಂಕೆಯನ್ನು ಪರಿಹರಿಸುವುದಕ್ಕಾಗಿ ''ಛಂದೋಭಿಧಾನಾತ್'' ಇತ್ಯಾದಿಯಾದ ಮೂರು ಸೂತ್ರಗಳು ಹೊರಟಿವೆ.

तस्याप्यर्थो ज्योतिरित्याद्यैरिति । अग्न्यादिसूक्तोपनिषद्गतज्योतिः तत्सहश्रुतगायत्रीप्रभृतिभिश्चाधिवेदगतैरन्यवस्तुषु प्रसिद्धैः सर्वैः शब्दैरेको विष्णुरेवोच्यते । न तु छन्दोविशेषादिः । कुतः सर्वगुणत्वतः ।

'गायति च त्रायति च' इति 'एतामेव नातिशीयन्ते' 'पादोऽस्य सर्वा भूतानि त्रिपादस्यासृतं दिवी'त्यादिनोक्तैतत्प्रकरणस्थसर्ववेदोच्चारणाखिलपालनरूपगानत्राण-

**कर्तृत्वसर्वोत्तमत्वभूतादिपादत्वादिसर्वगुणत्वादित्यर्थः । केन निमित्तेन? सर्व-गुणत्वतः । गायत्रीवागाद्यधिदैवगततत्तच्छब्दप्रवृत्तिनिमित्तवत्त्वादन्यगतं प्रवृत्तिहेतुं प्रति स्वातन्त्र्याच्चेत्यर्थः ।**

ಗಾಯತ್ರೀಶಬ್ದದ ಅರ್ಥವನ್ನೇ ಅಣುಭಾಷ್ಯದಲ್ಲಿ ''ಜ್ಯೋತಿರಿತ್ಯಾದ್ಯೈಃ ಉಚ್ಯತೇ'' ಎಂದು ಹೇಳಿದ್ದಾರೆ. ಅಗ್ನಿ ಮೊದಲಾದ ಸೂಕ್ತಗಳಲ್ಲಿ ಮತ್ತು ಉಪನಿಷತ್ತುಗಳಲ್ಲಿ ಪ್ರಸಕ್ತವಾದ ಜ್ಯೋತಿಸ್‌ಶಬ್ದವು ಹಾಗೂ ಆದರೊಡನೆ ಕೇಳಿಸುತ್ತಿರುವ ಗಾಯತ್ರೀಮೊದಲಾದ ಶಬ್ದಗಳು ಮತ್ತು ಅಧಿವೇದಗತವಾದ ಅನ್ಯಪದಾರ್ಥಗಳಲ್ಲಿ ಪ್ರಸಿದ್ಧವಾದ ಸಕಲಶಬ್ದಗಳೂ ಸಹ ಒಬ್ಬನೇ ವಿಷ್ಣುವನ್ನು ಪರಮಮುಖ್ಯವೃತ್ತಿಯಿಂದ ಪ್ರತಿಪಾದಿಸುತ್ತವೆ ಹೊರತು ಛಂದಸ್ಸು ಮೊದಲಾದವುಗಳನ್ನು ಪ್ರತಿಪಾದಿಸುವುದಿಲ್ಲ. ಏಕೆಂದರೆ ಸಕಲಗುಣಪೂರ್ಣನಾದ್ದರಿಂದ.

'ಗಾಯತಿ ಚ ತ್ರಾಯತಿ ಚ' 'ಏತಾವೇವ ನಾತಿಶೀಯಂತೇ' 'ಪಾದೋಸ್ಯ ಸರ್ವಾ ಭೂತಾನಿ ತ್ರಿಪಾದಸ್ಯಾಮೃತಂ ದಿವಿ' ಇವೇ ಮೊದಲಾದ ಶ್ರುತಿಗಳಲ್ಲಿ ಈ ಪ್ರಕರಣದಲ್ಲಿರುವ ಸರ್ವವೇದೋ-ಚ್ಚಾರಣತ್ವವೆಂಬ ಗಾನಕರ್ತೃತ್ವ, ಅಖಿಲಪಾಲನವೆಂಬ ತ್ರಾಣಕರ್ತೃತ್ವ, ಸರ್ವೋತ್ತಮತ್ವ, ಭೂತಾದಿಪಾದತ್ವ ಮೊದಲಾದ ಸಕಲಗುಣಗಳು ವಿಷ್ಣುವಿನಲ್ಲೇ ಇರುತ್ತವೆ. ಯಾವ ಕಾರಣವೆಂಬ ಪ್ರಶ್ನೆಗೆ ''ಸರ್ವಗುಣತ್ವತಃ'' ಎಂದು ಉತ್ತರಿಸಿದ್ದಾರೆ. ಅಂದರೆ ಅಧಿವೇದಗತವಾದ ಗಾಯತ್ರೀ, ವಾಕ್‌ಮೊದಲಾದ ಸಕಲಶಬ್ದಗಳ ಪ್ರವೃತ್ತಿನಿಮಿತ್ತಗಳೆಲ್ಲವೂ ವಿಷ್ಣುವಿನಲ್ಲೇ ಮುಖ್ಯವಾಗಿರುತ್ತವೆ. ಮತ್ತು ಬೇರೆಡೆ ಇರುವ ಧರ್ಮಗಳು ವಿಷ್ಣುವಿನ ಅಧೀನವೂ ಆಗಿವೆ.

**तेनैव 'अत्र सर्वनयेष्वपीन्द्राकाशप्राणज्योतिर्गायत्रीवागित्यादिशब्दानां विष्ण्वर्थत्वे विष्णौ लोकतो प्रसिद्धानाम् अन्यत्ररूढानां श्रुतिषु प्रयोगे प्रयोजनं नास्ति' इत्यपि निरस्तम् । यतः तत्तच्छब्दप्रवृत्तिनिमित्तगुणवत्त्वात् निमित्ततादृश-सर्वगुणलाभार्थमिति यावत् । सर्वैः गुणिसामान्याधिदैवाधिभूताध्यात्मगत-सूक्तस्थाधिवेदगतैः शब्दैः विष्णुरेवोच्यते ।**

ಹೀಗೆ ಹೇಳಿದ್ದರಿಂದಲೇ ''ಈ ಪಾದದ ಎಲ್ಲ ಅಧಿಕರಣಗಳಲ್ಲಿ ಇಂದ್ರ, ಆಕಾಶ, ಪ್ರಾಣ, ಜ್ಯೋತಿಸ್, ಗಾಯತ್ರೀ, ವಾಕ್ ಮೊದಲಾದ ಶಬ್ದಗಳು ವಿಷ್ಣುವಿನಲ್ಲೇ ಪ್ರಸಿದ್ಧವಾಗಿವೆಯೆಂದು ಹೇಳಿದಂತಾಯಿತು. ಹಾಗೆ ಹೇಳಿದರೆ ಲೋಕದಲ್ಲಿ ಅನ್ಯತ್ರಪ್ರಸಿದ್ಧವಾದ ಮತ್ತು ಅನ್ಯತ್ರರೂಢವಾದ ಶಬ್ದಗಳನ್ನು ಶ್ರುತಿಯಲ್ಲಿ ವಿಷ್ಣುಪರವಾಗಿ ಪ್ರಯೋಗಿಸುವುದಕ್ಕೆ ಪ್ರಯೋಜನವೇ ಇರುವುದಿಲ್ಲ'' ಎಂಬ ಶಂಕೆಯು ನಿರಸ್ತವಾಯಿತು. ಏಕೆಂದರೆ ಆಯಾಯ ಶಬ್ದಗಳ ಪ್ರವೃತ್ತಿನಿಮಿತ್ತವೆನಿಸಿದ ಗುಣಗಳು ವಿಷ್ಣುವಿನಲ್ಲಿವೆ ಎಂದು ಸಿದ್ಧವಾಗುವುದೇ ಈ ಸಮನ್ವಯದ ಪ್ರಯೋಜನವಾಗಿದೆ. ಅಣುಭಾಷ್ಯದಲ್ಲಿರುವ ಸರ್ವೈಃ ಎಂಬ ಪದಕ್ಕೆ

ಗುಣಸಾಮಾನ್ಯವಾಚಕವಾದ ಆಧಿದೈವಿಕ, ಆಧಿಭೌತಿಕ, ಆಧ್ಯಾತ್ಮಿಕಶಬ್ದಗಳಿಂದ ವಿಷ್ಣುವೇ ಪ್ರತಿಪಾದ್ಯನಾಗುತ್ತಾನೆ.

**ನ ಚ ಗುಣಲಾಭೋ ವ್ಯರ್ಥ ಇತ್ಯಪಿ ಶಙ್ಕ್ಯಮ್ ॥ ಸರ್ವಗುಣತ್ವತಃ ॥ ಆದ್ಯಸೂತ್ರಾಭಿಮತ-ಬ್ರಹ್ಮಶಬ್ದೋಕ್ತಪ್ರಧಾನಲಕ್ಷಣಭೂತಸಮಸ್ತಗುಣವತ್ತ್ವಸಿದ್ಧ್ಯರ್ಥತ್ವಾತ್ । ಅಧಿಕಾರಿಣಾಂ ಸ್ವಯೋಗ್ಯ-ಗುಣಪೂರ್ತಯೇ ಉಪಾಸನಾರ್ಥತ್ವಾಚ್ಚ ।**

ವಿಷ್ಣುವಿನಲ್ಲಿ ಗುಣಗಳನ್ನು ಸಮನ್ವಯಮಾಡುವುದೇ ವ್ಯರ್ಥವೆಂದು ಶಂಕಿಸಬಾರದೆಂದು ಸರ್ವಗುಣತ್ವತಃ ಎಂಬುದರಿಂದ ಹೇಳಿದ್ದಾರೆ. ಜಿಜ್ಞಾಸಾಸೂತ್ರದಲ್ಲಿ ಅಭಿಮತವಾದ ಬ್ರಹ್ಮಶಬ್ದದಿಂದ ಸಕಲಗುಣಪರಿಪೂರ್ಣತ್ವವು ಬ್ರಹ್ಮನ ಲಕ್ಷಣವೆಂದು ಹೇಳಿದ್ದಾರೆ. ಅದನ್ನು ಸಮರ್ಥಿಸುವುದಕ್ಕಾಗಿ ಮತ್ತು ಆಯಾಯ ಅಧಿಕಾರಿಗಳು ತಮ್ಮ ಯೋಗ್ಯತೆಗೆ ಅನುಗುಣವಾದ ಗುಣಗಳನ್ನು ಪೂರ್ಣವಾಗಿ ಹೊಂದುವುದಕ್ಕಾಗಿ, ಉಪಾಸನೆಗೋಸ್ಕರವೂ ಸಹ ಹೀಗೆ ಅನೇಕಗುಣಗಳ ಸಮನ್ವಯವನ್ನು ಮಾಡುತ್ತಿದ್ದಾರೆ.

**ನನು ಚ 'ಉಪಕ್ರಮಸ್ಥಗಾಯತ್ರೀಶಬ್ದೇನ ತದುಪರಿಶ್ರುತಜ್ಯೋತಿಃಪದೇನ ಚ ವಿಷ್ಣುರೇಕ ಏವೋಚ್ಯತ ಇತ್ಯಯುಕ್ತಮ್ । 'ತ್ರಿಪಾದಸ್ಯಾಮೃತಂ ದಿವಿ' ಇತಿ 'ದಿವಃ ಪರೋ ಜ್ಯೋತಿ'ರಿತಿ ದ್ಯುಸ್ಥತ್ವ-ದಿವಃಪರತ್ವಯೋರುಕ್ತ್ವಾ ತಯೋರ್ಭಿನ್ನತ್ವಾತ್- ಇತಿ ನ ಶಙ್ಕ್ಯಮ್ ॥ ಸರ್ವಗುಣತ್ವತಃ ॥ ವಿಷ್ಣೋರೇಕಸ್ಯೈವ ದ್ಯುಸ್ಥತ್ವದಿವಃಪರತ್ವಗುಣವತ್ತ್ವಾದಿತ್ಯರ್ಥಃ ।**

'ಉಪಕ್ರಮದಲ್ಲಿ ಗಾಯತ್ರೀಶಬ್ದವಿರುವುದರಿಂದ ಅದರ ಮುಂದಿರುವ ಜ್ಯೋತಿಃ ಎಂಬ ಪದದಿಂದಲೂ ವಿಷ್ಣುವೊಬ್ಬನೇ ಪ್ರತಿಪಾದ್ಯನಾಗುತ್ತಾನೆಂಬುದು ತಪ್ಪು. ಏಕೆಂದರೆ, 'ತ್ರಿಪಾದಸ್ಯಾಮೃತಂ ದಿವಿ' ಎಂಬುದಾಗಿ ದಿವಿಸ್ಥಿತತ್ವವನ್ನು ಹೇಳಿ, 'ದಿವಃಪರೋ ಜ್ಯೋತಿಃ' ಎಂಬುದಾಗಿ ದಿವಃಪರತ್ವವನ್ನು ಹೇಳಲಾಗಿದೆ. ಇವೆರಡೂ ವಿರುದ್ಧಗಳಾದ್ದರಿಂದ ಒಬ್ಬನೇ ವಿಷ್ಣುವನ್ನು ಗಾಯತ್ರೀ ಹಾಗೂ ಜ್ಯೋತಿ ಎಂಬ ಎರಡೂ ಶಬ್ದಗಳಿಂದ ಪ್ರತಿಪಾದ್ಯನೆನ್ನಲಾಗದು. ಈ ಶಂಕೆಯು ತಪ್ಪೆಂದು ಸರ್ವಗುಣತ್ವತಃ ಎಂಬುದರಿಂದಲೇ ಉತ್ತರಿಸಿದ್ದಾರೆ. ಏಕೆಂದರೆ ಒಬ್ಬನೇ ವಿಷ್ಣುವು ಭಿನ್ನವಾದ ವಿವಕ್ಷೆಯಿಂದ ದ್ಯುಸ್ಥನೂ ಆಗುತ್ತಾನೆ. ದಿವಃಪರನೂ ಆಗುತ್ತಾನೆಂದರ್ಥ.

ತ್ರಿಲೋಕವಿವಕ್ಷಾಯಾಂ ಲಕ್ಷಯೋಜನೋನ್ನತಾನ್ತರಿಕ್ಷಾದುಪರಿಸ್ಥಿತಾನಾಮ್ ಅನನ್ತಾಸನಶ್ವೇತ ದ್ವೀಪ-ವೈಕುಣ್ಠಾನಾಂ ದ್ಯುತ್ವೇನ ತತ್ರ ಸ್ಥಿತವಾಸುದೇವನಾರಾಯಣವೈಕುಣ್ಠಾಖ್ಯವಿಷ್ಣುರೂಪಾಣಾಂ ದ್ಯುಸ್ಥತ್ವಸ್ಯ –

**'ಪೃಥಿವ್ಯಾಂ ಯೌರ್ಮಹಾಮೇರುರಾಕಾಶೇ ಸೂರ್ಯಮಣ್ಡಲಮ್ ।**
**ದಿವೀನ್ದ್ರಸದನಂ ಚೈವ ತತ್ಪರೇ ತು ದಿವಃ ಪರೇ'**

ಇತಿ ಸ್ಮೃತ್ಯಾ ಕ್ರಮಾನ್ಮೇರ್ವಾದಿಭ್ಯ ಉನ್ನತೇಷ್ವನನ್ತಾಸನಾದಿಷು ಸ್ಥಿತಾನಾಂ ದಿವಃ ಪರತ್ವಸ್ಯ ಚ

**ಸಮ್ಭವಾತ್ । ನನ್ವೇವಮಪಿ 'ದ್ಯ್ವಾತ್ಮಕೇಭ್ಯಶ್ಚ ಸರ್ವೇಭ್ಯೋ ವೈಕುಂಠಶ್ಚೋಚ್ಚ ಉಚ್ಯತೇ' ಇತ್ಯುಕ್ತ-ಸ್ವರ್ಗಾದಿಸರ್ವದ್ಯುಪರತ್ವಂ ವೈಕುಂಠಸ್ಯೇ ನೋಕ್ತಂ ಸ್ಯಾದಿತಿ ಚೇತ್ತರ್ಹಿ ಸಪ್ತಲೋಕವಿವಕ್ಷಯಾ ದ್ಯುಪರತ್ವ-ಮಸ್ತು । ಏವಞ್ಚ ಸರ್ವದ್ಯುಪರತ್ವಸಿದ್ಧಿಃ । ತಥಾಽಗ್ನಿಸೂಕ್ತಸ್ಥಂ ಛಾನ್ದೋಗ್ಯಸ್ಥಂ ಚ ಜ್ಯೋತಿರ್ವಿಷ್ಣುರೇಕ ಏವೇತ್ಯಪಿ ಸಮಾಹಿತಂ ಬೋಧ್ಯಮ್ ॥**

ಮೂರು ಲೋಕಗಳನ್ನಾಗಿ ವಿವಕ್ಷಿಸಿದಾಗ ಲಕ್ಷಯೋಜನದಷ್ಟು ಎತ್ತರದಲ್ಲಿರುವ ಅಂತರಿಕ್ಷದ ಮೇಲಿನ ಅನಂತಾಸನ ಶ್ವೇತದ್ವೀಪ ವೈಕುಂಠಗಳು ದ್ಯುಲೋಕಗಳಾಗುತ್ತವೆ. ಅಲ್ಲಿರುವ ವಾಸುದೇವ, ನಾರಾಯಣ ಮತ್ತು ವೈಕುಂಠಗಳೆಂಬ ವಿಷ್ಣುವಿನ ರೂಪಗಳು ದ್ಯುಸ್ಥಗಳಾಗುತ್ತವೆ.

'ಪೃಥಿವ್ಯಾಂ ದ್ಯೌರ್ಮಹಾಮೇರುರಾಕಾಶೇ ಸೂರ್ಯಮಂಡಲಮ್ ।
ದಿವೀಂದ್ರಸದನಂ ಚೈವ ತತ್ಪರೇ ತು ದಿವಃ ಪರೇ ॥'

ಎಂಬ ಸ್ಮೃತಿಯಂತೆ ಕ್ರಮವಾಗಿ ಮೇರು ಮೊದಲಾದ ಪರ್ವತಗಳಿಗಿಂತ ಮೇಲೆ ಅನಂತಾಸನಾದಿಗಳು ಇರುತ್ತವೆ. ಅಲ್ಲಿರುವ ರೂಪಗಳು ದಿವಃಪರವೆನಿಸುತ್ತವೆ.

ಆದರೂ ಸಹ 'ದ್ಯ್ವಾತ್ಮಕೇಭ್ಯಶ್ಚ ಸರ್ವೇಭ್ಯೋ ವೈಕುಂಠಶ್ಚೋಚ್ಚ ಉಚ್ಯತೇ' ಇತ್ಯಾದಿಯಾಗಿ ಹೇಳಲ್ಪಟ್ಟ ಸ್ವರ್ಗಾದಿ ಸಕಲ ದ್ಯುಲೋಕಗಳಿಗಿಂತ ಉತ್ತಮತ್ವವನ್ನು ವೈಕುಂಠದಲ್ಲಿರುವ ರೂಪಕ್ಕೆ ಹೇಳಿದಂತಾಗ-ಲಿಲ್ಲವಲ್ಲ?. ಈ ಪ್ರಶ್ನೆಗೂ ಅವಕಾಶವಿಲ್ಲ. ಸಪ್ತಲೋಕದ ವಿವಕ್ಷೆಯನ್ನು ಹೊಂದಿದರೆ ದಿವಃಪರತ್ವವನ್ನು ವೈಕುಂಠದಲ್ಲಿರುವ ರೂಪಕ್ಕೂ ಸಹ ಹೇಳಬಹುದು. ಆದ್ದರಿಂದ ಸಕಲದ್ಯುಲೋಕಗಳ ಪರತ್ವವು ಸಿದ್ಧ-ವಾಗುತ್ತದೆ. ಇದರಂತೆ ಅಗ್ನಿಸೂಕ್ತದಲ್ಲಿರುವ ಹಾಗೂ ಛಾಂದೋಗ್ಯದಲ್ಲಿರುವ ಜ್ಯೋತಿಯು ವಿಷ್ಣುವೊಬ್ಬನೇ ಆಗಿದ್ದಾನೆಂದು ಸಮಾಧಾನವನ್ನು ಹೇಳಿದಂತಾಯಿತು.

**॥ ಸರ್ವಗುಣತ್ವತಃ ॥ ಕರ್ಣಾದಿವಿದ್ಧರತ್ವದ್ಗ್ರಷ್ಟೃತ್ವಶ್ರೋತ್ರತ್ವಾದಿಸರ್ವಗುಣತ್ವಾದಿತ್ಯರ್ಥಃ । ಸೂತ್ರೇ ಶ್ರುತಕರ್ಣಾದಿವಿದ್ಧರತ್ವಗುಣೇऽಪಿ ಹರೌ ಛಾನ್ದೋಗ್ಯೇ ''ತದೇತದ್ಗೃಷ್ಟಂ ಚ ಶ್ರುತಂ ಚ'' ಇತ್ಯುಕ್ತದೃಷ್ಟತ್ವಾದೇಃ ಸುಧೋಕ್ತದಿಶಾ ಅಧಿಷ್ಠಾನದ್ವಾರೋಪಪತ್ತೇರಿತಿ ।**

ಸರ್ವಗುಣತ್ವತಃ ಎಂಬ ಮಾತಿಗೆ ಮತ್ತೊಂದು ಬಗೆಯ ವ್ಯಾಖ್ಯಾನ. ಕರ್ಣಾದಿವಿದ್ಧರತ್ವ, ದೃಷ್ಟೃತ್ವ, ಶ್ರೋತ್ರತ್ವ ಮೊದಲಾದ ಗುಣಗಳಿರುವುದರಿಂದ ಎಂದರ್ಥ. ವಸ್ತುತಃ ಸೂತ್ರದಲ್ಲಿ ಕರ್ಣಾದಿ-ವಿದ್ಧರತ್ವವೆಂಬ ಗುಣವಷ್ಟೇ ಹರಿಯಲ್ಲಿ ಕೇಳಿಸುತ್ತಿದೆ. ಆದರೆ ಛಾಂದೋಗ್ಯದಲ್ಲಿ 'ತದೇತದ್ ದೃಷ್ಟಂ ಚ ಶ್ರುತಂ ಚ' ಇತ್ಯಾದಿಯಾಗಿ ದೃಷ್ಟತ್ವಾದಿ ಧರ್ಮಗಳೂ ಸಹ ಹೇಳಲ್ಪಟ್ಟಿವೆ. ಈ ಎಲ್ಲ ಧರ್ಮಗಳೂ ವಿಷ್ಣು-ವಿನಲ್ಲಿದ್ದರೂ ಪರಸ್ಪರವಿರೋಧಕ್ಕೆ ಅವಕಾಶವಿಲ್ಲ. ಅಧಿಷ್ಠಾನದ ಮೂಲಕ ವಿರೋಧವು ಪರಿಹಾರ-ವಾಗುತ್ತದೆ. ಈ ವಿಷಯವು ಸುಧೆಯಲ್ಲಿ ಹೇಳಲ್ಪಟ್ಟಿದೆ.

ತತ್ತ್ವಮಂಜರಿಯಲ್ಲಿ ಗಾಯತ್ರ್ಯಧಿಕರಣದ ಕನ್ನಡಾನುವಾದವು ಮುಗಿಯಿತು.

श्री राघवेन्द्रतीर्थविरचिता

# तन्त्रदीपिका

## गायत्र्यधिकरणम्

॥ ॐ छन्दोऽभिधानान्नेति चेन्न तथा चेतोर्पणनिगदात्तथा हि दर्शनम् ॐ ॥

अत्र नयेऽधिवेदगतगायत्र्याद्यशेषछन्दोनामसमन्वयं ब्रूते । प्राधान्यादन्योपलक्षणत्वेन गायत्र्याः सूचनेनोपादानम् ।

छन्द इत्यावृत्तिः । ''गायत्री वा इदं सर्वम्'' इत्युक्तगायत्री छन्दः स्यात् । कुतः? गायत्रीपदेन छन्दसोऽभिधानात् । तच्छब्दस्य तत्र रूढत्वादिति यावत् । न ब्रह्मेति चेत् ।

न । कुतः? तथा हि दर्शनम् । दर्शनं श्रुतिः । ''गायति त्रायति च'' इति गानत्राणकर्तृत्वादिलिङ्गबोधकश्रुतिर्हि यतोऽत इत्यर्थः । अप्रसिद्धपदेन ब्रह्मणो निर्देशो किं प्रयोजनमत उक्तं - तथेति । गानादिकर्तृत्वगुणविशिष्टतया चेतस्यर्पणायोपासनायेत्यर्थः । निगदात् ''गायत्री वा इदं सर्वम्'' इति कथनादित्यर्थः । चेतोर्पणेत्युक्तिरुपासनास्वरूपोक्त्यर्था । एवं नयान्तरे अप्रसिद्धशब्दोक्तिकृत्यं बोध्यम् । सुधायां तु ''परो दिवो ज्योतिः'' इत्युक्तं ज्योतिश्छन्द एव । न विष्णुः । ''गायत्री वा'' इत्युपक्रमे गायत्रीरूपछन्दसोऽभिधानादिति चेदित्यपि शङ्कार्थः । गानत्राणकर्तृत्वाद्गायत्री ब्रह्मेति ज्योतिरपि ब्रह्मेति परिहारोऽभिमतः ॥

ಈ ಅಧಿಕರಣದಲ್ಲಿ ವೇದಕ್ಕೆ ಸಂಬಂಧಿಸಿದ ಗಾಯತ್ರೀ ಮೊದಲಾದ ಛಂದೋವಾಚಕವಾದ ಎಲ್ಲ ವಿಧವಾದ ನಾಮಾತ್ಮಕಶಬ್ದಗಳ ಸಮನ್ವಯವನ್ನು ಮಾಡುತ್ತಿದ್ದಾರೆ. ಇಲ್ಲಿರುವ ಗಾಯತ್ರೀಛಂದಸ್ಸು ಇತರ ಛಂದಸ್ಸುಗಳಿಗೆ ಉಪಲಕ್ಷಣವಾಗಿದೆ. ಸಕಲವಿಧಛಂದಸ್ಸುಗಳಲ್ಲಿ ಗಾಯತ್ರಿಗೆ ಪ್ರಾಧಾನ್ಯವಿರುವುದರಿಂದ ಗಾಯತ್ರಿಯನ್ನೇ ಪ್ರಧಾನವಾಗಿ ಸ್ವೀಕರಿಸಿ ಉಳಿದ ಛಂದಸ್ಸುಗಳನ್ನು ಅಪ್ರಧಾನವಾಗಿ ಉಪಲಕ್ಷಣಯಾ ಸ್ವೀಕರಿಸಿದ್ದಾರೆ.

ಸೂತ್ರದಲ್ಲಿ ಛಂದಃ ಎಂಬ ಪದವನ್ನು ಎರಡು ಬಾರಿ ಇಟ್ಟುಕೊಳ್ಳಬೇಕು. ಛಂದಃ = 'ಗಾಯತ್ರೀ ವಾ ಇದಂ ಸರ್ವಮ್' ಎಂಬ ಶ್ರುತಿಯಲ್ಲಿ ಕೇಳಿಸುತ್ತಿರುವ ಗಾಯತ್ರಿಯು ಛಂದಸ್ಸಾಗುತ್ತದೆ. ಏಕೆಂದರೆ ಅಭಿಧಾನಾತ್ = ಗಾಯತ್ರೀಪದದಿಂದ ಛಂದಸ್ಸೇ ಪ್ರತಿಪಾದ್ಯವಾಗಬೇಕಲ್ಲವೇ? ಏಕೆಂದರೆ ಗಾಯತ್ರೀಶಬ್ದಕ್ಕೆ

ಛಂದಸ್ಸಿನಲ್ಲಿ ಲೋಕರೂಢಿ ಇದೆ. ನ = ಆದ್ದರಿಂದ ಗಾಯತ್ರಿಯು ಬ್ರಹ್ಮನಾಗುವುದಿಲ್ಲ. (ಎಂದು ಪೂರ್ವಪಕ್ಷ)

ನ = ಇದು ತಪ್ಪು. ಏಕೆಂದರೆ, ತಥಾ ಹಿ ದರ್ಶನಮ್ = ದರ್ಶನ ಶಬ್ದಕ್ಕೆ ಶ್ರುತಿ ಎಂದರ್ಥ. 'ಗಾಯತಿ ಚ ತ್ರಾಯತಿ ಚ' ಎಂಬುದಾಗಿ ಗಾನಕರ್ತೃತ್ವ ಹಾಗೂ ತ್ರಾಣಕರ್ತೃತ್ವ ಮೊದಲಾದ ಬ್ರಹ್ಮಲಿಂಗವನ್ನು ಪ್ರತಿಪಾದಿಸುವ ಶ್ರುತಿಗಳು ಯಾವ ಕಾರಣದಿಂದ ಇವೆಯೋ ಆ ಕಾರಣದಿಂದ ಬ್ರಹ್ಮನೇ ಗಾಯತ್ರಿ ಎನಿಸುತ್ತಾನೆ. ಅಪ್ರಸಿದ್ಧವಾದ ಗಾಯತ್ರೀ ಇತ್ಯಾದಿ ಪದಗಳಿಂದ ಬ್ರಹ್ಮನನ್ನು ನಿರ್ದೇಶಿಸುವುದರ ಪ್ರಯೋಜನವೇನು? ಎಂಬ ಪ್ರಶ್ನೆಗೆ ಸೂತ್ರದಲ್ಲಿ ''ತಥಾ'' ಎಂದು ಹೇಳಿದ್ದಾರೆ. ಗಾನಕರ್ತೃತ್ವ ಮೊದಲಾದ ಗುಣವಿಶಿಷ್ಟನಾದವನು ಬ್ರಹ್ಮನಾಗಿದ್ದಾನೆ ಎಂಬುದು ಚೇತಸೇ ಅರ್ಪಣಾಯ = ಉಪಾಸನೆಗೋಸ್ಕರ ಎಂದರ್ಥ. 'ಗಾಯತ್ರೀ ವಾ ಇದಂ ಸರ್ವಮ್' ಎಂದು ಹೇಳಿರುವುದರಿಂದ ಎಂದರ್ಥ.

ಚೇತೋರ್ಪಣವೆಂದು ಹೇಳಿದ್ದು ಉಪಾಸನೆಯ ಸ್ವರೂಪವನ್ನು ಹೇಳುವುದಕ್ಕಾಗಿ. ಹೀಗೆ ಬೇರೆ ಅಧಿಕರಣಗಳಲ್ಲಿಯೂ ಅಪ್ರಸಿದ್ಧವಾದ ಶಬ್ದಗಳ ಸಮನ್ವಯ ಮಾಡುವುದರ ಪ್ರಯೋಜನವನ್ನು ತಿಳಿಯಬೇಕು. ಇಷ್ಟು ಸೂತ್ರಾರ್ಥ.

ಸುಧೆಯ ಪ್ರಕಾರ ಸೂತ್ರವ್ಯಾಖ್ಯಾನ -- 'ಪರೋ ದಿವೋ ಜ್ಯೋತಿಃ' ಎಂಬಲ್ಲಿ ಹೇಳಲ್ಪಟ್ಟ ಜ್ಯೋತಿಸ್ಸು ಛಂದಸ್ಸೇ ಹೊರತು ವಿಷ್ಣುವಲ್ಲ. ಏಕೆಂದರೆ ಉಪಕ್ರಮವಾಕ್ಯದಲ್ಲಿ 'ಗಾಯತ್ರೀ ವಾ' ಎಂಬುದಾಗಿ ಗಾಯತ್ರೀರೂಪವಾದ ಛಂದಸ್ಸನ್ನು ಹೇಳಿರುವುದರಿಂದ ಎಂಬುದು ಶಂಕೆಯ ಅಭಿಪ್ರಾಯ. ಗಾನತ್ರಾಣ-ಕರ್ತೃವಾದ್ದರಿಂದ ಬ್ರಹ್ಮನೇ ಗಾಯತ್ರೀ ಎನಿಸಿದ್ದಾನೆ. ಜ್ಯೋತಿಸ್ಸೂ ಸಹ ಬ್ರಹ್ಮನೇ ಆಗಿದ್ದಾನೆ ಎಂಬುದು ಸಿದ್ಧಾಂತದ ಅಭಿಪ್ರಾಯ.

**ಇತಶ್ಚ ಗಾಯತ್ರೀ ಬ್ರಹ್ಮೇತ್ಯಾಹ -**

**॥ ತೈ ಭೂತಾದಿಪಾದವ್ಯಪದೇಶೋಪಪತ್ತೇಶ್ಚೈವಮ್ ತೈ ॥ ೧-೧-೨೬**

ಭೂತಂ ವಿಶ್ವಮಾದಿರ್ಯಸ್ಯಾಮೃತಸ್ಯಾಮೃತಾಖ್ಯಸ್ವರೂಪಸ್ಯ ತದ್ಭೂತಾದಿ । ಭೂತಾದಿ ಚಾಸೌ ಪಾದಶ್ಚ । ತಸ್ಯ ವ್ಯಪದೇಶಃ । ಏವಂ ''ಪಾದೋऽಸ್ಯ ಸರ್ವಾ ಭೂತಾನಿ ತ್ರಿಪಾದಸ್ಯಾಮೃತಂ ದಿವಿ'' ಇತ್ಯೇವಂ ಭೂತಾಮೃತರೂಪಪಾದವ್ಯಪದೇಶೋಪಪತ್ತೇಶ್ಚೈವಂ ಗಾಯತ್ರೀ ಬ್ರಹ್ಮೈವೇತ್ಯರ್ಥಃ । ಏವಮಿತ್ಯಸ್ಯಾವೃತ್ತಿಃ । ತತ್ರಾಘಂ ''ತ್ರಯಾಣಾಮೇವ ಚೈವಮ್'' ಇತ್ಯತ್ರೈವ ಪ್ರಕಾರಾರ್ಥಕಮ್ ।

''ಚತುಷ್ಪದಾ ಗಾಯತ್ರೀ'' ಇತ್ಯುಕ್ತ್ವಾ ತದ್ವಿವರಣಾಯ ಸಮ್ಮತಿತ್ವೇನೋಪನಿಷದುದಾಹೃದೆ ''ತಾವಾನ್'' ಇತಿ ಮನ್ತ್ರೇऽಸ್ಯ ಪುರುಷಸ್ಯ ''ಸರ್ವಾಣಿ ಭೂತಾನಿ'' ಇತ್ಯೇಕಃ ಪಾದಃ । ಅಮೃತಾಖ್ಯಂ ವೈಕುಣ್ಠಾದಿಸ್ಥಿತರೂಪತ್ರಯಂ ತ್ರಿಪಾತ್ ಪಾದತ್ರಯಮಿತಿ ಭೂತಾದಿಪಾದಚತುಷ್ಟಯವತ್ತ್ವಮುಕ್ತಮ್ । ತಚ್ಚ ನ ಛನ್ದಸಿ ಯುಕ್ತಮಿತಿ ಭಾವಃ । ''ಪುರುಷಸೂಕ್ತೋಕ್ತತ್ವಾಚ್ಚ'' ಇತ್ಯನುಕ್ತಸಮುಚ್ಚಯೇ ವಾ ಚಃ । ''ತ್ರೇ

**प्रथमयोः'' इत्यत्र प्रथमाद्वितीययोः प्रथमाशब्द इव पादशब्दः अमृताख्यस्वरूपांशे मुख्यो भूतेष्वमुख्य इति बोध्यम् ॥**

ಮತ್ತೊಂದು ಕಾರಣದಿಂದಲೂ ಗಾಯತ್ರಿಯು ಬ್ರಹ್ಮನೆಂದು ಮುಂದಿನ ಸೂತ್ರ ಪ್ರತಿಪಾದಿಸುತ್ತದೆ.

''ಭೂತಾದಿಪಾದವ್ಯಪದೇಶೋಪಪತ್ತೇಶ್ಚೈವಮ್''

ಭೂತ ಎಂದರೆ ವಿಶ್ವವು ಯಾವ ಅಮೃತಕ್ಕೆ, ಆದರೆ ಅಮೃತವೆಂಬ ಸ್ವರೂಪಕ್ಕೆ ಆವಿಯಾಗಿದೆಯೋ ಆ ಅಮೃತವೆಂಬ ಸ್ವರೂಪವು ಭೂತಾದಿ ಎನಿಸುತ್ತದೆ. ಭೂತಾದಿಯಾಗಿರುವ ಪಾದವೇ ಭೂತಾದಿ ಪಾದ ಎನಿಸುತ್ತದೆ. ಆದರ ವ್ಯಪದೇಶವೇ ಭೂತಾದಿಪಾದವ್ಯಪದೇಶ ಎನಿಸುತ್ತದೆ. ಏವಂ = 'ಪಾದೋಸ್ಯ ವಿಶ್ವಾ ಭೂತಾನಿ ತ್ರಿಪಾದಸ್ಯಾಮೃತಂ ದಿವಿ' ಎಂಬುದಾಗಿ ಭೂತಾಮೃತಸ್ವರೂಪವಾದ ಪಾದವ್ಯಪದೇಶವು ಉಪಪನ್ನವಾಗುವುದರಿಂದ, ಏವಂ = ಹಿಂದೆ ಹೇಳಲ್ಪಟ್ಟ ಗಾಯತ್ರಿಯು ಬ್ರಹ್ಮವೇ ಆಗಿದೆ ಎಂದರ್ಥ. ಸೂತ್ರದಲ್ಲಿ ಏವಂ ಎಂಬ ಪದವನ್ನು ಆವೃತ್ತಿಮಾಡಿಕೊಳ್ಳಬೇಕು. ಮೊದಲನೆಯ ಏವಂ ಎಂಬ ಪದಕ್ಕೆ 'ತ್ರಯಾಣಾಮೇವ ಚೈವಮ್' ಎಂಬಲ್ಲಿ ಹೇಗೆ ಪ್ರಕಾರವೆಂಬರ್ಥವಿದೆಯೋ ಅದರಂತೆ ಇಲ್ಲಿಯೂ ಪ್ರಕಾರವೆಂಬ ಅರ್ಥವನ್ನು ಹೇಳಬೇಕು.

ಸೂತ್ರಾರ್ಥ -- 'ಚತುಷ್ಪದಾ ಗಾಯತ್ರೀ ಎಂದು ಹೇಳಿ ಅದನ್ನು ವಿವರಿಸುವುದಕ್ಕಾಗಿ ಸಮೃತಿರೂಪದಲ್ಲಿ ಉಪನಿಷತ್ತು ಉದಾಹರಿಸುವ ತಾವಾನ್ ಎಂಬ ಮಂತ್ರದಲ್ಲಿ ಈ ಪುರುಷನಿಗೆ ಸರ್ವಾಣಿ ಭೂತಾನಿ ಎಂದು ಸಕಲಭೂತಗಳು ಒಂದು ಪಾದವಾಗಿದೆ. ಅಮೃತವೆಂದು ಕರೆಯಲ್ಪಡುವ ಶ್ವೇತದ್ವೀಪ, ಅನಂತಾಸನ, ವೈಕುಂಠವೆಂಬ ಮೂರುಸ್ಥಳಗಳಲ್ಲಿ ಮೂರು ರೂಪಗಳಿವೆ. ಈ ಮೂರು ರೂಪಗಳನ್ನು ತ್ರಿಪಾತ್ ಎಂಬುದಾಗಿ ಮೂರು ಪಾದಗಳೆಂದು ಬಣ್ಣಿಸಲಾಗಿದೆ. ಸಕಲಭೂತಗಳನ್ನು ಸೇರಿಸಿದರೆ ನಾಲ್ಕು ಪಾದಗಳಾಗುತ್ತವೆ. ಈ ಚತುಷ್ಪದತ್ವವು ಛಂದಸ್ಸಿನಲ್ಲಿ ಕೂಡುವುದಿಲ್ಲವೆಂದು ಅಭಿಪ್ರಾಯ.

ಅಥವಾ ಪುರುಷಸೂಕ್ತದಲ್ಲಿ ಪ್ರತಿಪಾದ್ಯವಾದ್ದರಿಂದಲೂ ಗಾಯತ್ರಿಯು ಬ್ರಹ್ಮನೇ ಆಗಿದ್ದಾನೆ. ಇಲ್ಲಿರುವ ಚಶಬ್ದವು ಅನುಕ್ತವಾದ ಯುಕ್ತಿಸಮುಚ್ಚಯವನ್ನು ಸೂಚಿಸಿದೆ.

ಜ್ಞೋ ಪ್ರಥಮಯೋಃ ಎಂಬ ಪಾಣಿನಿಸೂತ್ರದಲ್ಲಿ ಪ್ರಥಮಾವಿಭಕ್ತಿ ಹಾಗೂ ದ್ವಿತೀಯಾವಿಭಕ್ತಿಗಳನ್ನು ತಿಳಿಸುವ ಪ್ರಥಮಾಶಬ್ದವು ಪ್ರಥಮಾವಿಭಕ್ತಿಯಲ್ಲಿ ಮುಖ್ಯವಾಗಿದ್ದು, ದ್ವಿತೀಯಾದಿ ವಿಭಕ್ತಿಗಳಲ್ಲಿ ಹೇಗೆ ಅಮುಖ್ಯವಾಗಿರುತ್ತದೋ ಅದರಂತೆ ಪ್ರಕೃತ ಸೂತ್ರದಲ್ಲಿರುವ ಪಾದಶಬ್ದವು ಅಮೃತವೆಂಬ ಸ್ವರೂಪದಲ್ಲಿ ಮುಖ್ಯವಾಗಿದ್ದು ಭೂತಗಳಲ್ಲಿ ಅಮುಖ್ಯವಾಗಿದೆ ಎಂದು ತಿಳಿಯಬೇಕು.

ತತ್ಕಮಾಕ್ಷಿಪ್ಯ ಸಮಾಧತ್ತೇ -

**॥ ॐ उपदेशभेदान्नेति चेन्नोभयस्मिन्नप्यविरोधात् ॐ ॥ ೧-೧-೨೪**

गायत्रीज्योतिषोर्द्युस्थत्वदिवःपरत्वरूपोपदेशभेदात् तद्ब्रह्मेयं ब्रह्माख्यमेकं वस्त्वि-

ತ್ಯುಕ್ತಂ ನ ಯುಕ್ತಮಿತಿ ಚೇನ್ನ । ಉಭಯಸ್ಮಿನ್ನಪ್ಯುಪದೇಶೇ ವಿರೋಧಾಭಾವಾದಿತ್ಯರ್ಥಃ । ತ್ರಿಸಪ್ತ-ಲೋಕಾಪೇಕ್ಷಯೋಪಪತ್ತೇರಿತಿ ಭಾವಃ ।

ಭೂರ್ಭುವಃ ಸ್ವರಿತಿ ತ್ರಿಲೋಕಾಪೇಕ್ಷಾಯಾಂ ಭುವರ್ಲೋಕಾದೂರ್ಧ್ವಸ್ಯ ಸರ್ವಸ್ಯ ದ್ಯುತ್ವಾದನನ್ತಾಸನ-ಶ್ವೇತದ್ವೀಪವೈಕುಣ್ಠಸ್ಥಾನಾಂ ದ್ಯುಸ್ಥತ್ವಾತ್ । ಭೂರ್ಭುವಃಸ್ವರ್ಮಹರ್ಜನಸ್ತಪಃಸತ್ಯಮಿತಿ ಸಪ್ತಲೋಕ-ವಿವಕ್ಷಾಯಾಂ ಮೇರುಸೂರ್ಯಮಣ್ಡಲೇನ್ದ್ರಸದನಾನಾಂ –

> ''ಪೃಥಿವ್ಯಾಂ ಭೌಮಹಾಮೇರುರಾಕಾಶೇ ಸೂರ್ಯಮಣ್ಡಲಮ್ ।
> ದಿವೀನ್ದ್ರಸದನಂ ಚೈವ ತತ್ಪರೇ ತು ದಿವಃಪರೇ''

ಇತಿ ಸ್ಮೃತ್ಯಾ ದ್ಯುತ್ವಾತ್ ಕ್ರಮಾತ್ತತ್ಪರಾನನ್ತಾಸನಾದಿಸ್ಥಾನಾಂ ದ್ಯುಪರತ್ವಾದಿತಿ ಭಾವಃ ।

ಲೋಕತ್ರಯಪಕ್ಷೇಪ್ಯುಕ್ತದಿಶಾ ದ್ಯುಪರತ್ವಸಿದ್ಧಾವಪಿ ವೈಕುಣ್ಠಸ್ಯ ಸರ್ವದ್ಯುಪರತ್ವಸಿದ್ಧ್ಯರ್ಥಂ ಸಪ್ತ-ಲೋಕಪಕ್ಷೋಕ್ತಿಃ । ''ದ್ವ್ಯಾತ್ಮಕೇಭ್ಯಶ್ಚ ಸರ್ವೇಭ್ಯೋ ವೈಕುಣ್ಠಶ್ಚೋಚ್ಚ ಉಚ್ಯತೇ'' ಇತ್ಯುಕ್ತೇಃ ।

ಚನ್ದ್ರಿಕಾಯಾಂ ತು - ಅಗ್ನಿಸೂಕ್ತಸ್ಥಚ್ಛಾನ್ದೋಗ್ಯಸ್ಥಜೋತಿಷೋರ್ನೈಕಾರ್ಥತ್ವಂ ಕರ್ಣಾದಿವಿದೂರತ್ವ-ದೃಷ್ಟಶ್ರುತತ್ವಾದ್ಯುಪದೇಶಭೇದಾದಿತಿ ಚೇನ್ನ । ಉಭಯಸ್ಮಿನ್ನಪ್ಯುಪದೇಶೇ ಆಕಾರಭೇದೇನಾವಿರೋಧಾತ್- ಇತಿ ವೃತ್ಯನ್ತರಮುಕ್ತಮ್ ॥ ೧೧ ॥

ಇಲ್ಲಿಯ ತನಕ ಹೇಳಿದ ಪ್ರಮೇಯವನ್ನು ಆಕ್ಷೇಪಿಸಿ ಸಮಾಧಾನವನ್ನು ನೀಡುತ್ತಿದ್ದಾರೆ. ''ಓಂ ಉಪದೇಶಭೇದಾತ್ ನೇತಿ ಚೇನ್ನ ಉಭಯಸ್ಮಿನ್ನಪ್ಯವಿರೋಧಾತ್ ಓಂ'' ಎಂಬುದಾಗಿ.

ಸೂತ್ರಾರ್ಥ -- ಉಪದೇಶಭೇದಾತ್ = ಗಾಯತ್ರಿಯು ದ್ಯುಲೋಕದಲ್ಲಿದೆ; ಜ್ಯೋತಿಸ್ಸು ದ್ಯುಲೋಕ-ದಿಂದ ಮೇಲಿನ ಭಾಗದಲ್ಲಿದೆ. ಹೀಗೆ ವಿಭಿನ್ನವಾದ ಪ್ರಕಾರದಲ್ಲಿ ಉಪದೇಶವನ್ನು ಮಾಡಿದ್ದರಿಂದ ನ = ಎರಡೂ ಪದಾರ್ಥಗಳು ಬ್ರಹ್ಮನೆಂಬ ಒಂದೇ ವಸ್ತುವಾಗಲು ಸಾಧ್ಯವಿಲ್ಲ.

ಇತಿ ಚೇನ್ನ = ಈ ಆಕ್ಷೇಪವು ತಪ್ಪು. ಉಭಯಸ್ಮಿನ್ನಪ್ಯವಿರೋಧಾತ್ = ಎರಡು ವಿಧ ಉಪದೇಶಗಳಲ್ಲಿ ವಿರೋಧವಿಲ್ಲದಿರುವುದರಿಂದ ಎಂದರ್ಥ. ಮೂರು ಲೋಕ ಹಾಗೂ ಏಳು ಲೋಕಗಳೆಂಬ ವಿಭಿನ್ನವಾದ ದೃಷ್ಟಿಕೋಣದಿಂದ ದ್ಯುಸ್ಥತ್ವ ಹಾಗೂ ದಿವಃಪರತ್ವಗಳು ಉಪಪನ್ನವಾಗುತ್ತವೆ ತಿಳಿಯಬೇಕು.

ಭೂಃ, ಭುವಃ ಮತ್ತು ಸ್ವಃ ಎಂಬ ಮೂರು ಲೋಕಗಳ ವಿವಕ್ಷೆಯಿಂದ ಭುವರ್ಲೋಕದ ಮೇಲಿರುವುದೆಲ್ಲವೂ ದ್ಯುಲೋಕವೆನಿಸುತ್ತದೆ. ಆವಾಗ ಅನಂತಾಸನ, ಶ್ವೇತದ್ವೀಪ ಹಾಗೂ ವೈಕುಂಠಗಳ-ಲ್ಲಿರುವ ರೂಪಗಳು ದ್ಯುಲೋಕದಲ್ಲಿರುವ ರೂಪಗಳೆಂದೆನಿಸುತ್ತವೆ. ಭೂಃ, ಭುವಃ, ಸ್ವಃ, ಮಹಃ, ಜನಃ, ತಪಃ, ಸತ್ಯಮ್ ಎಂಬುದಾಗಿ ಏಳುಲೋಕಗಳನ್ನಾಗಿ ಪರಿಗಣಿಸಿದಾಗ -

ಪೃಥಿವ್ಯಾಂ ದ್ಯೌರ್ಮಹಾಮೇರುರಾಕಾಶೇ ಸೂರ್ಯಮಂಡಲಮ್ ।
ದಿವೀಂದ್ರಸದನಂ ಚೈವ ತತ್ತರೇ ತು ದಿವಃಪರೇ ॥

ಪೃಥಿವಿಯಲ್ಲಿ ಮೇರುಪರ್ವತವು ದ್ಯುಲೋಕವೆನಿಸಿದೆ. ಆಕಾಶದಲ್ಲಿ ಸೂರ್ಯಮಂಡಲವು ದ್ಯುಲೋಕವೆನಿಸಿದೆ. ಸ್ವರ್ಗದಲ್ಲಿ ಇಂದ್ರನ ಆರಮನೆಯು ದ್ಯುಲೋಕವೆನಿಸಿದೆ. ಇವುಗಳಿಗಿಂತ ಮೇಲಿರುವುದೆಲ್ಲವೂ ದಿವಃಪರವೆನಿಸುತ್ತದೆ. -- ಈ ಸೃತಿಯಂತೆ ಮೇರುಪರ್ವತ, ಸೂರ್ಯಮಂಡಲ ಹಾಗೂ ಇಂದ್ರನ ಆರಮನೆಗಳು ದ್ಯುಲೋಕಗಳಾಗಿವೆ. ಕ್ರಮವಾಗಿ ಈ ಮೂರು ದ್ಯುಲೋಕಗಳ ಮೇಲೆ ಇರುವ ಅನಂತಾಸನ, ಶ್ವೇತದ್ವೀಪ, ವೈಕುಂಠಗಳು ದಿವಃಪರವೆನ್ನಿಸುತ್ತವೆಂದು ತಿಳಿಯಬೇಕು.

ವಸ್ತುತಃ ಲೋಕತ್ರಯಪಕ್ಷದಲ್ಲಿ ಹಿಂದೆ ಹೇಳಿದಂತೆ ಅನಂತಾಸನಕ್ಕೆ ದಿವಃಪರತ್ವವು ಸಿದ್ಧವಾದರೂ ಸಹ ವೈಕುಂಠವು ಸಕಲವಿಧ ದ್ಯುಲೋಕಗಳಿಗಿಂತ ಮೇಲಿದೆಯೆಂದು ತಿಳಿಯುವುದಿಲ್ಲ. ಆದಕ್ಕೋಸ್ಕರ ಸಪ್ತಲೋಕಪಕ್ಷವನ್ನು ಹೇಳಿದ್ದಾರೆ. 'ದ್ಯ್ವಾತ್ಮಕೇಭ್ಯಃ ಸರ್ವೇಭ್ಯೋ ವೈಕುಂಠಸ್ಯೋಚ್ಚ ಉಚ್ಯತೇ' ಎಂಬ ಪ್ರಮಾಣದಿಂದ ವೈಕುಂಠಲೋಕವು ಸಕಲ ದ್ಯುಲೋಕಗಳಿಗಿಂತಲೂ ಮೇಲಿದೆಯೆಂದು ನಿರ್ಣಯವಾಗಿದೆ.

ಚಂದ್ರಿಕೆಯ ಪ್ರಕಾರ ವ್ಯಾಖ್ಯಾನ -- ಅಗ್ನಿಸೂಕ್ತದಲ್ಲಿರುವ ಜ್ಯೋತಿಸ್‌ಶಬ್ದವು, ಛಾಂದೋಗ್ಯದಲ್ಲಿರುವ ಜ್ಯೋತಿಸ್‌ಶಬ್ದವು ಒಂದೇ ಅರ್ಥವನ್ನು ಹೇಳುತ್ತಿಲ್ಲ. ಏಕೆಂದರೆ, ಅಗ್ನಿಸೂಕ್ತದಲ್ಲಿರುವ ಜ್ಯೋತಿಸ್ಸಿನಲ್ಲಿ ಕರ್ಣಾದಿವಿದೂರತ್ವಗಳು ಕೇಳಿಸುತ್ತಿವೆ. ಆದರೆ ಛಾಂದೋಗ್ಯದಲ್ಲಿರುವ ಜ್ಯೋತಿಸ್ಸಿನಲ್ಲಿ ದೃಷ್ಟತ್ವ, ಶ್ರುತತ್ವ ಮೊದಲಾದ ಧರ್ಮಗಳು ಕೇಳಿಸುತ್ತಿವೆ. ಹೀಗೆ ಉಪದೇಶಭೇದವಿರುವುದರಿಂದ ಜ್ಯೋತಿಸ್ಸನ್ನು ಬ್ರಹ್ಮನೆಂದು ನಿರ್ಣಯಿಸಲಾಗದು. ಇದು ತಪ್ಪು. ಎರಡು ವಿಧ ಉಪದೇಶಗಳಲ್ಲಿಯೂ ಆಕಾರಭೇದವಿರುವುದರಿಂದ ವಿರೋಧವಿಲ್ಲ. ಹೀಗೆ ಮತ್ತೊಂದು ರೀತಿಯಲ್ಲಿ ಸೂತ್ರವನ್ನು ಚಂದ್ರಿಕೆಯಲ್ಲಿ ವ್ಯಾಖ್ಯಾನಿಸಿದ್ದಾರೆ.

ಇಲ್ಲಿಗೆ ಶ್ರೀರಾಘವೇಂದ್ರತೀರ್ಥರಿಂದ ರಚಿತವಾದ ತಂತ್ರದೀಪಿಕಾದ
ಕನ್ನಡಾನುವಾದದಲ್ಲಿ ಗಾಯತ್ಯಧಿಕರಣವು ಮುಗಿಯಿತು.

श्रीराघवेन्द्रयतिकृता

# न्यायमुक्तावलिः

## अन्तःस्थत्वाधिकरणम्

॥ ॐ छन्दोऽभिधानान्नेति चेन्न तथा चेतोऽर्पणनिगदात्तथा हि दर्शनम् ॐ ॥

पूर्वसिद्धान्ताक्षेपेण वा पूर्ववैषम्येण वा पूर्वपक्षप्रवृत्तेः सङ्गतिः । छान्दोग्ये तृतीयेऽध्याये ''गायत्री वा इदꣳ सर्वं भूतं यदिदं किञ्च वाग्वै गायत्री'' इति श्रुता गायत्री किं वर्णसमावेशरूपच्छन्दः उत विष्णुरिति सन्देहः । छन्दोविशेष इति पूर्वः पक्षः ।

गायत्रीशब्दस्य तत्र रूढत्वात् । नच विष्णुलिङ्गैः पूर्वत्रेवात्रापि श्रुतिबाधः स्यादिति शङ्क्यम् । विष्णौ प्रसिद्धशब्दत्यागेन अप्रसिद्धगायत्रीपदप्रयोगे प्रयोजनाभावात् । पूर्वत्रैकज्योतिःश्रुतिर्लिङ्गेनान्यत्र प्रसिद्धिबाधेऽपि इह ''वाग्वै गायत्री'' ''येयं पृथिवी'' इति वाक्पृथिव्याद्यनेकश्रुतिबाधायोगात् विष्णौ गायत्रीपदस्य रूढेरभावात् योगस्य चामुख्यत्वात् गायत्र्याः वेदविशेषत्वेन नित्यतया ईशाधीनत्वस्यायोगेन तदधीनत्वन्यायस्याप्यनवतारात् । अत एव प्राग्विष्णुवाचितया निर्णीतज्योतिःश्रुतेः अत्रोत्तरवाक्ये ''अथ यदतः परो दिवो ज्योतिर्दीप्यते'' इति श्रवणात्तद्बलेन प्राक्श्रुता गायत्री विष्णुरिति निरस्तम् । तया बहुश्रुतिबाधायोगात् ''तेजो वै ब्रह्मवर्चसं गायत्री'' इति ज्योतिःपर्यायतोजःशब्दस्य गायत्र्यां प्रयोगेण तत्रैव सावकाशत्वाच्च । तद्बलेन प्राचीनज्योतिषोऽपि गायत्रीत्वस्यैव न्यायत्वात् ।

ಹಿಂದಿನ ಅಧಿಕರಣದ ಸಿದ್ಧಾಂತವನ್ನು ಆಕ್ಷೇಪಿಸುತ್ತಿರುವುದರಿಂದ ಅಥವಾ ಹಿಂದಿನ ಅಧಿಕರಣಕ್ಕಿಂತ ವಿಲಕ್ಷಣವಾಗಿ ಪೂರ್ವಪಕ್ಷವು ಹೊರಟಿರುವುದರಿಂದ ಸಂಗತಿಯು ದೊರೆಯುತ್ತದೆ.

ಛಾಂದೋಗ್ಯದ ಮೂರನೆಯ ಅಧ್ಯಾಯದಲ್ಲಿ 'ಗಾಯತ್ರೀ ವಾ ಇದಂ ಸರ್ವಂ ಭೂತಂ ಯದಿದಂ ಕಿಂಚ ವಾಗ್ವೈ ಗಾಯತ್ರೀ' ಎಂಬಲ್ಲಿ ಕೇಳಿಸುತ್ತಿರುವ ಗಾಯತ್ರೀಶಬ್ದವು ವರ್ಣಸಮಾವೇಶರೂಪವಾದ ಛಂದಸ್ಸನ್ನು ಹೇಳುತ್ತದೋ, ಅಥವಾ ವಿಷ್ಣುವನ್ನು ಹೇಳುತ್ತದೋ ಎಂದು ಸಂದೇಹ. ಛಂದೋವಿಶೇಷವನ್ನೇ ಹೇಳುತ್ತದೆಂದು ಪೂರ್ವಪಕ್ಷ. ಛಂದೋವಿಶೇಷದಲ್ಲಿಯೇ ಗಾಯತ್ರೀಶಬ್ದವು ರೂಢವಾದ್ದರಿಂದ. ವಿಷ್ಣುಲಿಂಗಗಳಿಂದ ಹಿಂದಿನ ಅಧಿಕರಣದಂತೆ ಈ ಗಾಯತ್ರೀಶಬ್ದವೂ ಸಹ ಬಾಧಿತವಾಗಬಹುದಲ್ಲವೇ? ಎಂದು

ಶಂಕಿಸಬಾರದು. ಏಕೆಂದರೆ, ವಿಷ್ಣುವಿನಲ್ಲಿ ಪ್ರಸಿದ್ಧವಾದ ನಾರಾಯಣ ಮೊದಲಾದ ಶಬ್ದಗಳನ್ನು ಪರಿತ್ಯಾಗ-ಮಾಡಿ ಅಪ್ರಸಿದ್ಧವಾದ ಗಾಯತ್ರೀಪದವನ್ನು ಪ್ರಯೋಗಿಸುವುದರಲ್ಲಿ ಯಾವುದೇ ಪ್ರಯೋಜನವಿಲ್ಲ. ಮತ್ತು ಹಿಂದಿನ ಅಧಿಕರಣದಲ್ಲಿ ಒಂದು ಜ್ಯೋತಿಸ್‌ಶ್ರುತಿಯು ವಿಷ್ಣುವಿನ ಲಿಂಗದಿಂದ ಅನ್ಯತ್ರಪ್ರಸಿದ್ಧವಾಗಿದೆ ಎಂಬುದಕ್ಕೆ ಬಾಧದೋಷವನ್ನು ಹೇಳಲಾಗಿತ್ತು. ಆದರೆ ಈ ಅಧಿಕರಣದಲ್ಲಿ ವಾಗ್ವೈ ಗಾಯತ್ರೀ' 'ಯೇಯಂ ಪೃಥಿವೀ' ಇತ್ಯಾದಿಯಾಗಿ ವಾಕ್ ಪೃಥಿವೀ ಮೊದಲಾದ ಅನೇಕಶ್ರುತಿಗಳು ಲಿಂಗದಿಂದ ಬಾಧಿತವಾಗಲಾರವು. ಆದ್ದರಿಂದ ವಿಷ್ಣುವಿನಲ್ಲಿ ಗಾಯತ್ರೀಪದದ ರೂಢಿಯೂ ಇಲ್ಲದ ಕಾರಣ ಯೋಗವನ್ನು ಹೇಳಬೇಕಾಗುತ್ತದೆ. ರೂಢಿಗಿಂತ ಯೋಗವು ಅಮುಖ್ಯವಾದ್ದರಿಂದ ಗಾಯತ್ರೀಶಬ್ದವು ಲೋಕರೂಢಿಯಂತೆ ವೇದವಿಶೇಷವನ್ನೇ ಪ್ರತಿಪಾದಿಸುತ್ತದೆ. ಅಂತಹ ವೇದವಿಶೇಷವಾದರೋ ನಿತ್ಯವಾದ್ದರಿಂದ ಈಶ್ವರಾಧೀನವೂ ಆಗುವುದಿಲ್ಲ. ಆದ್ದರಿಂದ ತದಧೀನತ್ವನ್ಯಾಯವನ್ನು ಅನುಸರಿಸಿ ವಿಷ್ಣುವಿನಲ್ಲಿ ಗಾಯತ್ರೀಶಬ್ದವನ್ನು ಸಮನ್ವಯಮಾಡಲಾಗದು. ಆದ್ದರಿಂದಲೇ ಹಿಂದೆ ವಿಷ್ಣುವಾಚೆ ಎಂದು ನಿರ್ಣಯಿಸಲ್ಪಟ್ಟ ಜ್ಯೋತಿಃಶ್ರುತಿಯಿರುವುದರಿಂದ ಇಲ್ಲಿನ ಉತ್ತರವಾಕ್ಯದಲ್ಲಿ 'ಅಥ ಯದತಃ ಪರೋ ದಿವೋ ಜ್ಯೋತಿರ್ದೀಪ್ಯತೇ' ಎಂದು ಕೇಳಿಸುತ್ತಿರುವುದರಿಂದ ಜ್ಯೋತಿಃಶ್ರುತಿಯ ಆಧಾರದಿಂದ ಗಾಯತ್ರೀಯು ಸಹ ವಿಷ್ಣುವೇ ಆಗಿದ್ದಾನೆ ಎಂಬ ಆಕ್ಷೇಪವನ್ನು ನಿರಾಕರಿಸಿದಂತಾಯಿತು. ಏಕೆಂದರೆ ಒಂದು ಜ್ಯೋತಿಃಶ್ರುತಿಯಿಂದ ಅನೇಕ ಗಾಯತ್ರೀ-ಶ್ರುತಿಗಳನ್ನು ಬಾಧಿಸಲಾಗದು. ಅಷ್ಟೇ ಅಲ್ಲದೇ 'ತೇಜೋ ವೈ ಬ್ರಹ್ಮವರ್ಚಸಂ ಗಾಯತ್ರೀ' ಎಂಬುದಾಗಿ ಜ್ಯೋತಿಃ ಎಂಬುದರ ಪರ್ಯಾಯ ಪದವೆನಿಸಿದ ತೇಜಸ್‌ಶಬ್ದವನ್ನು ಗಾಯತ್ರಿಯಲ್ಲಿ ಪ್ರಯೋಗಿಸಿದ್ದರಿಂದ ತೇಜಸ್‌ಶಬ್ದವೇ ಛಂದೋವಿಶೇಷದಲ್ಲಿ ಸಾವಕಾಶವಾಗಿದೆ. ಇದರ ಬಲದಿಂದ ಹಿಂದಿನ ಅಧಿಕರಣದಲ್ಲಿ ನಿರ್ಣಯಿಸಲ್ಪಟ್ಟ ಜ್ಯೋತಿಯೂ ಸಹ ಗಾಯತ್ರಿಯೇ ಆಗಬೇಕು.

**यद्वा विष्णुत्वेऽप्यग्रेतनज्योतिषः त्रिपादस्यामृतं दिवीति गायत्र्याद्यस्थत्वोक्त्या दिवःपरत्वेनोक्तज्योतिषो गायत्रीतोऽन्यत्वात् प्राक्तनस्य ज्योतिषः कर्णादिविदूरत्वेन विष्णुत्वेऽपि अत्रत्यस्य तदेतदृष्टं च श्रुतं चेति तद्विरुद्धदृष्टत्वादिश्रवणेनाविष्णुत्वात् न तया ज्योतिःश्रुत्या गायत्री विष्णुरिति ॥**

ಅಥವಾ ಹಿಂದಿನ ಜ್ಯೋತಿಯು ವಿಷ್ಣುವೆಂದು ಹೇಳಿದರೂ, ಇಲ್ಲಿ ಕೇಳಿಸುತ್ತಿರುವ ಜ್ಯೋತಿಯು ವಿಷ್ಣುವಾಗುವುದಿಲ್ಲ; ಏಕೆಂದರೆ 'ತ್ರಿಪಾದಸ್ಯಾಮೃತಂ ದಿವಿ' ಎಂಬುದಾಗಿ ಗಾಯತ್ರಿಯನ್ನು ದ್ಯುಲೋಕಲ್ಲಿದೆ ಎನ್ನಲಾಗಿದೆ. ಆದರೆ ಹಿಂದಿನ ಅಧಿಕರಣದಲ್ಲಿ ಹೇಳಲ್ಪಟ್ಟ ಗಾಯತ್ರಿಯು ದಿವಃಪರವಾದ್ದರಿಂದ ಬೇರೆಯೇ ಆಗಿದೆ. ಆದ್ದರಿಂದ ಕರ್ಣಾದಿ ವಿದೂರತ್ವ ಲಿಂಗದಿಂದ ಹಿಂದಿನ ಅಧಿಕರಣದ ಜ್ಯೋತಿಯು ವಿಷ್ಣುವಾಗಲಿ; ಆದರೆ ಇಲ್ಲಿರುವ ಜ್ಯೋತಿಯು 'ತದೇತದ್ ದೃಷ್ಟಂ ಚ ಶ್ರುತಂ ಚ' ಎಂಬ ಶ್ರುತಿಗೆ ಅನುಗುಣವಾಗಿ ಕರ್ಣಾದಿವಿದೂರತ್ವಧರ್ಮಕ್ಕೆ ವಿರುದ್ಧವಾದ ದೃಷ್ಟತ್ವ, ಶ್ರುತತ್ವ ಮೊದಲಾದ ಧರ್ಮಗಳನ್ನು ಹೊಂದಿರುವುದರಿಂದ ವಿಷ್ಣುವಾಗದೆ ಛಂದಸ್ಸೇ ಆಗುತ್ತದೆ. ಆದ್ದರಿಂದ ಇಂತಹ ಜ್ಯೋತಿಃಶ್ರುತಿಯಿಂದ ಗಾಯತ್ರೀಶಬ್ದಪ್ರತಿಪಾದ್ಯನಾದವನು ವಿಷ್ಣುವೆಂದು ನಿರ್ಣಯಿಸಲಾಗದು.

**ಸಿದ್ಧಾನ್ತಸ್ತು ॥ ''ತತೋ ಜ್ಯಾಯಾಂಶ್ಚ ಪುರುಷಃ'' ''ಯದ್ವೈ ತದ್ಬ್ರಹ್ಮ'' ''ಏತಾಮೇವಂ ಬ್ರಹ್ಮೋಪನಿಷದಂ ವೇದ'' ಇತಿ ಪುರುಷಬ್ರಹ್ಮಾದಿಶ್ರುತೀನಾಂ ಗಾಯತಿ ಚ ತ್ರಾಯತಿ ಚೇತ್ಯುಕ್ತಾಶೇಷವೇದೋಚ್ಚಾರಣಾಖ್ಯಾ-ಗಾನತ್ರಾಣಕರ್ತೃತ್ವಸ್ಯ ಪಾದೋऽಸ್ಯ ವಿಶ್ವಾ ಭೂತಾನೀತ್ಯಾದಿನೋಕ್ತಭೂತಾದಿಪಾದತ್ವಸ್ಯ ಏತಾಮೇವ ನಾತಿಶೀಯನ್ತ ಇತ್ಯುಕ್ತಸರ್ವೋತ್ತಮತ್ವಾದೇರ್ಲಿಙ್ಗಸ್ಯ ಚ ಬಾಹುಲ್ಯಾತ್, ತತ್ಪದಪ್ರವೃತ್ತಿನಿಮಿತ್ತ-ಗುಣವತ್ತಯೋಪಾಸನಾರ್ಥಮಪ್ರಸಿದ್ಧಪದಪ್ರಯೋಗೋಪಪತ್ತೇಃ ।**

**ಬಹುಭಿಃ ಶ್ರುತಿರ್ಲಿಙ್ಗಬಹೂನಾಂ ಶಬ್ದಾನಾಂ ಪ್ರಸಿದ್ಧಾರ್ಥತ್ಯಾಗಸಮ್ಭವಾತ್ । ಗಾಯತಿ ಚ ತ್ರಾಯತಿಚೇತ್ಯುಕ್ತ್ಯಾऽಙ್ಗರೂಢಿತೋ ಬಲವತಾ ಶ್ರೌತಯೋಗೇನ ಅನಾದಿಗುಣಾದೀನಾಂ ಗುಣ್ಯಾದ್ಯಧೀನತ್ವಮಿವ ಸ್ವಭಾವಜೀವಕರ್ಮಾಣೀತ್ಯಾದಿಶ್ರುತ್ಯಪೇಕ್ಷಯಾऽನಾದಿನಿತ್ಯಸ್ಯಾಪಿ ಈಶಾಧೀನತ್ವಸಮ್ಭವೇನ ತದಧೀನ-ತ್ವನ್ಯಾಯಾಚ್ಚ । ಮಹಾಯೋಗೇನ ಸರ್ವಚ್ಛನ್ದೋಭಿಧೋ ಹ್ಯೇಷ ಇತಿ ಪೌರಾಣಿಕರೂಢ್ಯಾ ಚ ಗಾಯತ್ರೀ ವಿಷ್ಣುರಿತ್ಯಗ್ರೇತನಂ ಪ್ರಾಕ್ತನಂ ಚ ಜ್ಯೋತಿಃ ಸ ಏವ ।**

**ದ್ಯುಸ್ಥತ್ವದಿವಃಪರತ್ವಾದೃಶ್ಯತ್ವದೃಷ್ಟತ್ವಾದ್ಯುಪದೇಶಭೇದಸ್ಯ ತ್ರಿಸಪ್ತಲೋಕವಿವಕ್ಷಯಾ ಆಕಾಶಭೇದೇನ ಚೋಪಪತ್ತೇರಿತಿ ॥ ಫಲೇ ತು ಪ್ರಾಚೀನಜ್ಯೋತಿಷೋ ವಿಷ್ಣುತ್ವಾಕ್ಷೇಪತತ್ಸಮಾಧೀ ವಾ, ಅಸ್ಯಾಂ ಹೀದಂ ಸರ್ವಂ ಪ್ರತಿಷ್ಠಿತಮಿತ್ಯುಕ್ತಸ್ಥಿತಿಹೇತುತ್ವಮುಖೇನ ಜನ್ಮಾದಿಸೂತ್ರಾಕ್ಷೇಪತತ್ಸಮಾಧೀ ವೇತಿ ॥ ೧೧ ॥**

''ತತೋ ಜ್ಯಾಯಾಂಶ್ಚ ಪುರುಷಃ'' 'ಯದ್ವೈ ತದ್ಬ್ರಹ್ಮ,' 'ಏತಾಮೇವ ಬ್ರಹ್ಮೋಪನಿಷದಂ ವೇದ' ಇವೇ ಮೊದಲಾದ ವಿಷ್ಣುವಿನಲ್ಲೇ ಪ್ರಸಿದ್ಧವಾದ ಪುರುಷ, ಬ್ರಹ್ಮ ಮೊದಲಾದ ಶ್ರುತಿಗಳು ಕೇಳಿಸುತ್ತಿವೆ. ಮತ್ತು 'ಗಾಯತಿ ಚ ತ್ರಾಯತಿ ಚ' ಎಂಬುದರಿಂದ ಹೇಳಲ್ಪಟ್ಟ ಸಕಲವೇದೋಚ್ಚಾರಣೆಯೆಂಬ ಗಾನಕರ್ತೃತ್ವ, ಹಾಗೂ ತ್ರಾಣಕರ್ತೃತ್ವಗಳೂ ಸಹ ವಿಷ್ಣುವಿನ ಧರ್ಮಗಳೇ ಆಗಿವೆ. 'ಪಾದೋಸ್ಯ ವಿಶ್ವಾ ಭೂತಾನಿ' ಎಂಬ ಪುರುಷಸೂಕ್ತದಿಂದ ಹೇಳಲ್ಪಟ್ಟ ಭೂತಾದಿಪಾದತ್ವವು ವಿಷ್ಣುವಿನ ಧರ್ಮವೇ ಆಗಿದೆ. 'ಏತಾಮೇವ ನಾತಿಶೀಯಂತೇ' ಎಂಬಲ್ಲಿ ಹೇಳಲ್ಪಟ್ಟ ಸರ್ವೋತ್ತಮತ್ವವೂ ಸಹ ವಿಷ್ಣುವಿನ ಲಿಂಗವೇ ಆಗಿದೆ. ಹೀಗೆ ಅನೇಕಶ್ರುತಿಗಳು ಹಾಗೂ ಅನೇಕ ಲಿಂಗಗಳೂ ವಿಷ್ಣುವಿನಲ್ಲಿರುವುದರಿಂದ ವಿಷ್ಣುವೇ ಗಾಯತ್ರೀ-ಪದವಾಚ್ಯನಾಗುತ್ತಾನೆ. ಹಾಗಾದರೆ ಅಪ್ರಸಿದ್ಧಪದವನ್ನೇಕೆ ಪ್ರಯೋಗಿಸಿದ್ದಾರೆ ಎಂದು ಶಂಕಿಸಬಾರದು. ಗಾಯತ್ರೀಪದದ ಪ್ರವೃತ್ತಿನಿಮಿತ್ತವೆನಿಸಿದ ಗಾನತ್ರಾಣಕರ್ತೃತ್ವವೆಂಬ ಗುಣವನ್ನು ಭಗವಂತನಲ್ಲಿ ಉಪಾಸನೆ ಮಾಡಬೇಕು. ಈ ದೃಷ್ಟಿಯಿಂದ ಅಪ್ರಸಿದ್ಧಶಬ್ದಗಳ ಸಮನ್ವಯವು ಯುಕ್ತವಾಗುತ್ತದೆ.

ಹೀಗೆ ಅನೇಕ ಶ್ರುತಿ ಹಾಗೂ ಲಿಂಗಗಳ ಬಲದಿಂದ ಛಂದೋವಿಶೇಷವೆಂಬ ಪ್ರಸಿದ್ಧಾರ್ಥವನ್ನು ಬಿಡಬೇಕಾಗುತ್ತದೆ. 'ಗಾಯತಿ ಚ ತ್ರಾಯತಿ ಚ' ಎಂದು ಹೇಳಿದ್ದರಿಂದ ಯೋಗವೃತ್ತಿಯನ್ನು ಶ್ರುತಿಯಿಂದ ತೋರಿಸಿದಂತಾಯಿತು. ಇಂತಹ ಶ್ರೌತಯೋಗವು ಅಜ್ಞರೂಢಿಗಿಂತ ಬಲಿಷ್ಠವಾಗಿದೆ. ಮತ್ತು ಅನಾದಿಯಾದ ಗುಣಗಳು ಗುಣಿಯ ಅಧೀನವಾಗುವಂತೆ ವೇದವಿಶೇಷವೆನಿಸಿದ ಗಾಯತ್ರೀಯು ಸಹ ವಿಷ್ಣುವಿನ

ಅಧೀನವಾಗಬಹುದು. 'ಸ್ವಭಾವಜೀವಕರ್ಮಾಣಿ' ಎಂಬ ಶ್ರುತಿಯೂ ಸಹ ಅನಾದಿಪದಾರ್ಥಕ್ಕೆ ಈಶಾಧೀನತ್ವವನ್ನು ಹೇಳುತ್ತಿದೆ. ಆದ್ದರಿಂದ ತದಧೀನತ್ವನ್ಯಾಯವನ್ನು ಅನುಸರಿಸಿ ಗಾಯತ್ರೀಶಬ್ದವನ್ನು ವಿಷ್ಣುವಿನಲ್ಲಿ ಸಮನ್ವಯಮಾಡಬಹುದು. ಅಷ್ಟೇ ಅಲ್ಲದೆ ಮಹಾಯೋಗವೃತ್ತಿ ಹಾಗೂ 'ಸರ್ವಚ್ಛಂದೋ-ಭಿಧೋ ಹ್ಯೇಷಃ' ಎಂಬ ಪೌರಾಣಿಕರೂಢಿ ಇವೆರಡರ ಬಲದಿಂದ ಗಾಯತ್ರೀಯು ವಿಷ್ಣುವೆಂದು ನಿರ್ಣಯವಾಗುತ್ತದೆ. ಆದ್ದರಿಂದ ಮುಂದಿನ ವಾಕ್ಯದಲ್ಲಿರುವ ಹಾಗೂ ಹಿಂದಿನ ವಾಕ್ಯದಲ್ಲಿರುವ ಜ್ಯೋತಿಯು ವಿಷ್ಣುವೆಂದು ನಿರ್ಣಯವಾಗುತ್ತದೆ.

ಹಾಗಾದರೆ ದ್ಯುಸ್ಥತ್ವ ಹಾಗೂ ದಿವಃಪರತ್ವಗಳ ವಿರೋಧ ಹಾಗೂ ಅದೃಶ್ಯತ್ವ ಹಾಗೂ ದೃಶ್ಯತ್ವ ಎಂಬ ಉಪದೇಶಭೇದವನ್ನು ಹೇಗೆ ಕೂಡಿಸುವುದು? ಎಂದರೆ ಲೋಕತ್ರಯವಿವಕ್ಷೆಯಿಂದ ಮತ್ತು ಸಪ್ತಲೋಕವಿವಕ್ಷೆಯಿಂದ; ಅಥವಾ ಆಕಾಶದಲ್ಲಿರುವ ಭೇದದಿಂದ ಇವುಗಳ ವಿರೋಧವನ್ನು ಪರಿಹರಿಸ-ಬಹುದು.

ಪೂರ್ವಪಕ್ಷಸಿದ್ಧಾಂತಗಳ ಫಲ ಹೀಗಿದೆ— ಹಿಂದಿನ ಅಧಿಕರಣದ ಜ್ಯೋತಿಯು ವಿಷ್ಣುವಾಗು-ವುದಿಲ್ಲವೆಂಬ ಆಕ್ಷೇಪವು ಪೂರ್ವಪಕ್ಷದ ಫಲ ಅದರ ಸಮಾಧಾನವು ಸಿದ್ಧಾಂತದ ಫಲ. ಅಥವಾ 'ಅಸ್ಯಾಂ ಹೀದಂ ಸರ್ವಂ ಪ್ರತಿಷ್ಠಿತಮ್' ಎಂಬಲ್ಲಿ ಹೇಳಲ್ಪಟ್ಟ ಸ್ಥಿತಿಹೇತುತ್ವಮೂಲಕವಾಗಿ ಜನ್ಮಾದಿಸೂತ್ರವನ್ನು ಆಕ್ಷೇಪಿಸುವುದು ಪೂರ್ವಪಕ್ಷದ ಫಲ; ಅದರ ಸಮಾಧಾನವು ಸಿದ್ಧಾಂತದ ಫಲ.

॥ ಇಲ್ಲಿಗೆ ಶ್ರೀರಾಘವೇಂದ್ರತೀರ್ಥರಿಂದ ರಚಿತವಾದ ನ್ಯಾಯಮುಕ್ತಾವಳಿಯ ಕನ್ನಡಾನುವಾದದಲ್ಲಿ

ಗಾಯತ್ರ್ಯಧಿಕರಣವು ಮುಗಿಯಿತು ॥

# सूत्रार्थरत्नावलिः

(अत्राधिवेदगतगायत्र्याद्यशेषशब्दसमन्वयः क्रियते)

**ॐ ॥ छन्दोभिधानात् नेति चेन्न तथा चेतोऽर्पणनिगदात्**
**तथा हि दर्शनम् ॐ ॥२५॥**

ननु गायत्री छन्द एव । तच्छब्दस्य तत्रैव रूढत्वात् । 'वाग् वै गायत्री' (छां.३/१२/१) इति वाक्यविधानात् । नच गायत्र्या भगवदधीनत्वेन गायत्रीशब्दस्तत्रैव मुख्य इति वाच्यम् । गायत्र्या वेदविशेषत्वात् नित्यत्वेन पराधीनत्वाभावात् । अतो गायत्री छन्दोविशेष एव – इति प्राप्ते, सूत्रं पठति –

ॐ ॥ छन्दोभिधानात् नेति चेन्न तथा चेतोऽर्पणनिगदात् तथा हि दर्शनम् ॐ ॥ अस्यार्थः – छन्दोभिधानात् । ननु छन्दोगश्रुतिस्थगायत्रीपदेन चतुर्विंशत्यक्षरात्मक-छन्दसः प्रतिपादनात् गायत्रीशब्दवाच्यो विष्णुर्नेति चेन्न । कुतः? तथाहि दर्शनम् । हि यस्मात् । तथा गानत्राणकर्तृत्वनिमित्तेन । दर्शनम् - विष्णोः गायत्री-शब्दवाच्यत्वप्रतिपादिका (छां३/१२/१) श्रुतिरस्ति । तस्माद् व्यर्थं गायत्रीपदेन विष्णोरभिधानमित्यत उक्तम् – तथेत्यादि । तथा चेतोर्पणनिगदात् विष्णोस्तथा गायत्र्यादिशब्दप्रवृत्तिनिमित्तवत्त्वेन चेतसि अर्पणाय उपासनाय । निगदात् श्रुतौ प्रतिपादनात् इत्यर्थः । तथा च न वैय्यर्थ्यमिति भावः ।

एवंच गानत्राणकर्तृत्वलिङ्गात् । नच लिङ्गस्य निरवकाशत्वायोगेन श्रुतिबाधायोगः । गायत्रीश्रुतेः पौराणिकरूढ्या श्रुत्युक्तयोगेन च तत्र मुख्यत्वात् । स्वभावेति वचनाद् गायत्र्या भगवदधीनत्वात् गायत्रीशब्दवाच्यो विष्णुरेवेति सिद्धम् ।

* * *

**ॐ ॥ भूतादिपादव्यपदेशोपपत्तेश्चैवम् ॥ॐ॥२६॥**

हेत्वन्तरेणापि गायत्र्या विष्णुत्वं साधयत् सूत्रमुपन्यस्यति – भूतादिपादव्यप-देशोपपत्तेश्चैवमिति ॥

अस्यार्थः – एवम् इत्यस्यावृत्तिः । एवं गायत्रीशब्दवाच्यं ब्रह्मेत्येवमेव युक्तम् ।

कुतः? एवं भूतादिपादव्यपदेशोपपत्तेः । 'पादोऽस्य विश्वा भूतानि त्रिपादस्यामृतं दिवि' (छां ३/१२/६) इति एवंरूपभूतामृतांशवत्वोक्तेश्च । तस्य च विष्णावेवोपपत्तेः अन्यत्रानुपपत्तेश्चेत्यर्थः ।

एवंच छान्दोग्ये 'सैषा चतुष्पदा' (छां.३/१२/५) इति वाक्येन गायत्रीनामकस्य भगवतः प्रागुक्तगायत्रीभूतवाक्पृथिवीशरीरहृदयलक्षणषड्विधत्वम् अनूद्यांशचतुष्टयरूपवत्त्वरूपं चतुष्पादत्वं विधाय स्वोक्तार्थ एव पुरुषसूक्तमन्त्रः समाख्यारूपत्वेनोदाहृतः । भगवतश्चतुष्पादत्वं ऋङ्मन्त्रेण स्पष्टमानुकूल्येनोक्तम् । नच गायत्र्यामिव भूतभिन्नत्वेन विष्णावपि भूतपादत्वोक्तिरनुपपन्ना । 'सुवर्णकोशम्'(तै.आ.३/१९) इति श्रुतेः । नच पुरुषसूक्तं न विष्णुप्रकरणमिति वाच्यम् । 'तस्मिन् काले महाराज' (स्कान्दे) इति स्मृत्या तत्प्रकरणस्य विष्णुत्वनिश्चयात् । अतो गायत्रीशब्दवाच्यो विष्णुरेवेति सिद्धम् ॥

***

**ॐ ॥ उपदेशभेदान्नेति चेन्न उभयस्मिन्नप्यविरोधात् ॐ ॥०२७॥**

ननु गायत्रीज्योतिप्रकरणयोरुपदेशभेदेन भिन्नार्थत्वात् इत्यादिना उक्तमाक्षिप्य समादधत् सूत्रमाह –

ॐ ॥ उपदेशभेदान्नेति चेन्न उभयस्मिन्नप्यविरोधात् ॐ ॥ अस्यार्थः – उपदेशभेदात् गायत्रीज्योतिषोः द्युस्थत्व(छां.३/१२/६) दिवःपरत्व(छां.३।१३।७)-रूपविरुद्धधर्मबोधकश्रुतिभेदान्नेति चेत् तद्द्वयं विष्ण्वाख्यमेकं वस्तु न किन्तु भिन्नमेवेति चेन्न । कुतः? उभयस्मिन् श्रुतिवाक्येऽपि एकस्य प्रतिपाद्यत्वेऽपि अविरोधात् त्रिसप्तलोकविवक्षया विरोधाभावादित्यर्थः ।

एवं च विवक्षाभेदेनैकस्यैव द्युस्थत्वदिवःपरत्वयोः सम्भवेन भिन्नार्थत्वाभावात् । अतो गायत्री विष्णुरेवेति सिद्धम् ॥

**॥ इति सूत्रार्थरत्नावळ्यां गायत्र्यधिकरणम् ॥**

॥ಪರಿಪೂರ್ಣಚಂದ್ರಿಕೆಯಲ್ಲಿ ಗಾಯತ್ರ್ಯಧಿಕರಣವು ಮುಗಿಯಿತು॥

॥ ಶ್ರೀಮದ್ವೇಶಾರ್ಪಣಮಸ್ತು ॥

# ೦೧೨- ಅಂತಿಮಪ್ರಾಣಾಧಿಕರಣ

## ಭಾಗ - ೧

## ಬ್ರಹ್ಮಸೂತ್ರಭಾಷ್ಯ, ತತ್ವಪ್ರಕಾಶಿಕಾ, ಭಾವದೀಪ, ವಾಕ್ಯಾರ್ಥಮಂಜರೀ

॥ ಶ್ರೀಗುರುಭ್ಯೋ ನಮಃ ॥

ದೇವದೇವೋತ್ತಮ ದೇವತಾಸಾರ್ವಭೌಮ
ಅಖಿಲಾಂಡಕೋಟಿಬ್ರಹ್ಮಾಂಡನಾಯಕ, ಚತುರ್ದಶಲೋಕಗುರುಗಳಾದ
ಶ್ರೀವೇದವ್ಯಾಸದೇವರಿಂದ ಅನುಗ್ರಹಿಸಲ್ಪಟ್ಟ

ಬ್ರಹ್ಮಮೀಮಾಂಸಾಶಾಸ್ತ್ರ

# ಅಂತಿಮಪ್ರಾಣಾಧಿಕರಣ

**॥ ॐ प्राणस्तथानुगमात् ॐ॥**

ಸೂತ್ರಾರ್ಥ – ತೈತ್ತಿರೀಯಶ್ರುತಿಯಂತೆ ಐತರೇಯಶ್ರುತಿಯಲ್ಲಿರುವ ಪ್ರಾಣಶಬ್ದವೂ ಸಹ ದೇವೋಪಾಸ್ಯತ್ವವೇ ಮೊದಲಾದ ವಿಷ್ಣುಲಿಂಗಗಳಿರುವುದರಿಂದ ವಿಷ್ಣುವನ್ನೇ ಪ್ರತಿಪಾದಿಸುತ್ತದೆ.

ಶ್ರೀಜಗನ್ನಾಥಯತಿಗಳಿಂದ ರಚಿಸಲ್ಪಟ್ಟ ಸೂತ್ರದೀಪಿಕಾ

**ಸೂತ್ರದೀಪಿಕಾ** – तथा 'तद्वै त्वम्' इति तैत्तिरीयोक्तप्राणवत् 'ता वा एताः' इति ऐतरेयोक्तप्राणोऽपि विष्णुरेव । कुतः? अनुगमात् । देवतोपास्यत्वादिविष्णुलिङ्गब्रह्मशब्दानाम् असकृच्छ्रवणादित्यर्थः ।

ತಥಾ = ತೈತ್ತಿರೀಯೋಪನಿಷತ್ತಿನಲ್ಲಿರುವ 'ತದ್ವೈ ತ್ವಂ ಪ್ರಾಣಃ' ಎಂಬ ಶ್ರುತಿಯಲ್ಲಿರುವ ಪ್ರಾಣಶಬ್ದದಂತೆ 'ತಾ ವಾ ಏತಾಃ' ಎಂಬ ತೈತ್ತಿರೀಯದಲ್ಲಿರುವ ಪ್ರಾಣನೂ ಸಹ, ತತ್ತು = ವಿಷ್ಣುವೇ ಆಗುತ್ತಾನೆ. ಏಕೆಂದರೆ, ಅನುಗಮಾತ್ = ದೇವೋಪಾಸ್ಯತ್ವವೇ ಮೊದಲಾದ ವಿಷ್ಣುಲಿಂಗಗಳು ಅನೇಕಬಾರಿ ಕೇಳಿಸುತ್ತಿರುವುದರಿಂದ.

* * * *

श्रीमदानन्दतीर्थभगवत्पादाचार्यविरचित-

# ब्रह्मसूत्रभाष्यम्

## ।। पादान्त्यप्राणाधिकरणम् ।।

ತೈತ್ತಿರೀಯಪ್ರಾಣನು ವಿಷ್ಣುವಾಗಲಿ; ಐತರೇಯಪ್ರಾಣನು ವಿಷ್ಣುವಲ್ಲ

## ।। १२. अथ पादान्त्यप्राणाधिकरणम् ।।

**भाष्यम् – प्राणो विष्णुरित्युक्तम् । तत्र 'ता वा एताः शीर्षञ्छ्रियः श्रिताश्चक्षुः श्रोत्रं मनो वाक् प्राणः' (ऐ.आ. २-१-४.) इत्यत्र प्राणस्य विष्णुत्वं न युज्यते । इन्द्रियैः सहाभिधानादिति ।**

ಹಿಂದಿನ ಪ್ರಾಣಾಧಿಕರಣದಲ್ಲಿ ಪ್ರಾಣಶಬ್ದವಾಚ್ಯನಾದವನು ವಿಷ್ಣು ಎಂದು ಸಮರ್ಥಿಸಲಾಯಿತು. ಆದರೆ 'ತಾ ವಾ ಏತಾಃ ಶೀರ್ಷನ್ ಶ್ರಿಯಃ ಶ್ರಿತಾಶ್ಚಕ್ಷುಃ ಶ್ರೋತ್ರಂ ಮನೋ ವಾಕ್ ಪ್ರಾಣಃ' ಎಂಬ ಐತರೇಯಶ್ರುತಿಯಲ್ಲಿ ಹೇಳಲ್ಪಟ್ಟ ಪ್ರಾಣನು ವಿಷ್ಣುವೆಂದು ಹೇಳಲಾಗದು. ಏಕೆಂದರೆ ಇಂದ್ರಿಯಗಳ ಜೊತೆಗೆ ಪ್ರಾಣನನ್ನು ಉಲ್ಲೇಖಿಸಿದ್ದರಿಂದ.

ಭಾಷ್ಯದೀಪಿಕಾ – ಅತ್ರಾಧಿಕರಣೇ ಲೋಕತೋऽನ್ಯತ್ರ ಪ್ರಸಿದ್ಧಪ್ರಾಣನಾಮ್ನೋ ವಿಷ್ಣೌ ಸಮನ್ವಯಃ ಪ್ರತಿಪಾದ್ಯತೇ । ಶ್ರುತ್ಯಾದಿಸಙ್ಗತಿವಿಷಯವಾಕ್ಯವಿಷಯಸಂಶಯಸಯುಕ್ತಿಕಪೂರ್ವಪಕ್ಷಾನ್ ದರ್ಶಯತಿ ಪ್ರಾಣ ಇತಿ ॥ ಆದ್ಯಪ್ರಾಣಾಧಿಕರಣೇ 'ತದ್ವೈ ತ್ವಮ್' (ತೈ.ಆ.೩-೧೪.) ಇತಿ ವಾಕ್ಯೋಕ್ತಪ್ರಾಣೋ ವಿಷ್ಣುರಿತ್ಯುಕ್ತಮಿತ್ಯರ್ಥಃ । ತತಃ ಕಿಮಿತ್ಯತ ಆಹ – ತತ್ರೇತಿ ॥ ಉಕ್ತಮಿತ್ಯನುಷಜ್ಯತೇ । ತಸ್ಯಾऽವೃತ್ತಿವಿಪರಿಣಾಮೌ । ಏವಂ ತತ್ರೇತ್ಯಪ್ಯಾವರ್ತನೀಯಮ್ । ತಥಾ ಚ 'ತತ್ರ' ತದ್ವೈ ತ್ವಮಿತಿ ವಾಕ್ಯೇ ಉಕ್ತಸ್ಯ ಪ್ರಾಣಸ್ಯ ವಿಷ್ಣುತ್ವಂ ನ ವಿದ್ಯತೇ ನ ಯುಜ್ಯತೇ । ಕುತಃ? ಯತಸ್ತತ್ರ 'ತದ್ವೈ ತ್ವಮ್' ಇತಿ ವಾಕ್ಯೋಕ್ತಪ್ರಾಣವಿಷಯೇ 'ಉಕ್ತೇ' ಶ್ರುತೇ 'ತಾ ವಾ ಏತಾಃ' ಇತ್ಯೈತರೇಯವಾಕ್ಯೇ ಉಕ್ತಸ್ಯ ಶ್ರುತಸ್ಯ ಪ್ರಾಣಸ್ಯ ವಿಷ್ಣುತ್ವಂ ನ ವಿದ್ಯತ ಇತಿ ಯೋಜನಾ । ಕುತೋ ನ ವಿದ್ಯತ ಇತ್ಯತ ಆಹ – ಇನ್ದ್ರಿಯೈಃ ಸಹಾಭಿಧಾನಾದಿತಿ ॥ ಇನ್ದ್ರಿಯೈಃ ಸಹ ಪಠಿತತ್ವಾದ್ ಇನ್ದ್ರಿಯಗಣೇ ಗಣಿತತ್ವಾದಿತ್ಯರ್ಥಃ । ಅನೇನೈತರೇಯಪ್ರಾಣಸ್ಯ ವಿಷ್ಣ್ವನ್ಯತ್ವಾಕ್ಷೇಪಮುಖೇನ ಪ್ರಾಚೀನತೈತ್ತಿರೀಯೋಕ್ತಪ್ರಾಣಸ್ಯಾಪ್ಯನ್ಯತ್ವಾಕ್ಷೇಪಾತ್ ತೇನಾಸ್ಯಾऽಕ್ಷೇಪಿಕೀ ಸಙ್ಗತಿರುಕ್ತಾ ಭವತಿ ।

ಐತರೇಯಪ್ರಾಣಾಖ್ಯೋ ವಿಷಯಃ । ಪ್ರಾಣೋऽನ್ಯ ಉತ ವಿಷ್ಣುರಿತಿ ಸಂಶಯಶ್ಚ ಸೂಚಿತಃ । ತಥಾ ವಾಖ್ವಾದಿರನ್ಯ ಏವೇತಿ ಪೂರ್ವಪಕ್ಷಃ । ಇನ್ದ್ರಿಯಗಣೇ ಗಣಿತತ್ವಾಖ್ಯತತ್ಸಾಧಕಲಿಙ್ಗಂ ಚ ಸೂಚಿತಮ್ । 'ತಾ ವಾ ಏತಾಃ' ಇತ್ಯೇತಚ್ಚ ಚತುರ್ಮುಖಶಿರಸಿ ಶಿರಶ್ಶಬ್ದಪ್ರವೃತ್ತಿನಿಮಿತ್ತಕಥನಾಯ ಪ್ರವೃತ್ತಮ್ । ವೈಶಬ್ದಃ ಪ್ರಸಿದ್ಧೌ ।

ಪ್ರತಿಪದಾರ್ಥ - ಈ ಅಧಿಕರಣದಲ್ಲಿ ಲೋಕತಃ ಅನ್ಯತ್ರಪ್ರಸಿದ್ಧವಾದ ಪ್ರಾಣ ಎಂಬ ನಾಮಾತ್ಮಕಶಬ್ದವನ್ನು ವಿಷ್ಣುವಿನಲ್ಲಿ ಸಮರ್ಥಿಸುತ್ತಿದ್ದಾರೆ. ಶ್ರುತಿ ಮೊದಲಾದ ಸಂಗತಿಗಳನ್ನು ವಿಷಯವಾಕ್ಯ, ವಿಷಯ, ಸಂಶಯ ಸಯುಕ್ತಿಕವಾದ ಪೂರ್ವಪಕ್ಷ ಮೊದಲಾದವುಗಳನ್ನು ತೋರಿಸುತ್ತಿದ್ದಾರೆ. ಪ್ರಾಣಃ = ಕೈತ್ತಿರೀಯದಲ್ಲಿ ಕೇಳಿಸುತ್ತಿರುವ ಪ್ರಾಣನು, ವಿಷ್ಣುಃ = ವಿಷ್ಣುವೇ, ಇತಿ = ಆಗಿದ್ದಾನೆಂದು, ಉಕ್ತಮ್ = ಹೇಳಲ್ಪಟ್ಟತು. ಆದರೆ ತತ್ರ = ಐತರೇಯಶ್ರುತಿಯಲ್ಲಿ, ತಾ ವಾಃ = ಅವುಗಳಾದರೋ, ಚಕ್ಷುಃ = ಕಣ್ಣು, ಶ್ರೋತ್ರಂ = ಕಿವಿಯು, ಮನಃ = ಮನಸ್ಸು, ವಾಕ್ = ವಾಗಿಂದ್ರಿಯವು, ಪ್ರಾಣಃ = ಪ್ರಾಣವು, ಏತಾಃ = ಇವುಗಳೇ, ಶೀರ್ಷನ್ = ತಲೆಯಲ್ಲಿ, ಶ್ರಿತಾಃ = ಆಶ್ರಯಿಸಿ ಕೊಂಡಿವೆ. ಮತ್ತು ಶ್ರಿಯಃ = ಭೂಷಣಗಳಾಗಿವೆ. ಇತ್ಯತ್ರ = ಈ ವಿಷಯವಾಕ್ಯದಲ್ಲಿ. ಪ್ರಾಣಸ್ಯ = ಪ್ರಾಣನಿಗೆ, ವಿಷ್ಣುತ್ವಂ = ವಿಷ್ಣುತ್ವವು, ನ ವಿದ್ಯತೇ = ಬರುವುದಿಲ್ಲ. ಏಕೆಂದರೆ, ಇಂದ್ರಿಯೈಃ = ಇಂದ್ರಿಯಗಳಿಂದ, ಸಹ = ಕೂಡಿಕೊಂಡು, ಆಭಿಧಾನಾತ್ = ಪ್ರಾಣನನ್ನು ಹೇಳಿದ್ದರಿಂದ, ಇತಿ = ಹೀಗೆ ಆಕ್ಷೇಪಿಸಿದರೆ.

**तत्वप्रकाशिका – अत्र लोकतोऽन्यत्रप्रसिद्धप्राणनाम्नो विष्णौ समन्वयप्रतिपादनादस्ति शास्त्रादिसङ्गतिः । श्रुत्यादिसङ्गतिविषयवाक्यविषयसंशयसयुक्तिकपूर्वपक्षान् दर्शयति – प्राण इति ॥**

ಈ ಅಧಿಕರಣದಲ್ಲಿ ಲೋಕತಃ ಅನ್ಯತ್ರಪ್ರಸಿದ್ಧವಾದ 'ಪ್ರಾಣ' ಎಂಬ ನಾಮಾತ್ಮಕಶಬ್ದವನ್ನು ವಿಷ್ಣುವಿನಲ್ಲಿ ಸಮನ್ವಯ ಮಾಡುತ್ತಿರುವುದರಿಂದ ಶಾಸ್ತ್ರ, ಅಧ್ಯಾಯ, ಪಾದಸಂಗತಿಗಳಿರುತ್ತವೆ. ಶ್ರುತ್ಯಾದಿಸಂಗತಿಗಳು, ವಿಷಯವಾಕ್ಯ, ವಿಷಯ, ಸಂಶಯ ಮತ್ತು ಸಯುಕ್ತಿಕವಾದ ಪೂರ್ವಪಕ್ಷಗಳನ್ನು ''ಪ್ರಾಣ'' ಇತ್ಯಾದಿಗ್ರಂಥದಿಂದ ಭಾಷ್ಯಕಾರರು ತೋರಿಸುತ್ತಿದ್ದಾರೆ.

**'तद्वै त्वं प्राणः' इत्युक्तः प्राणो विष्णुरित्युक्तम् । ऐतरेयके च 'कश्चित्ता वा एताः' इत्यारभ्य बहुषु स्थलेषु प्राणः श्रूयते । तस्य विष्णोरन्यत्वे प्राचीनोऽप्यन्य इति शङ्का स्यादित्ययमवश्यं विचार्यः । स प्राणोऽत्र विषयः । किं विष्णुरुतान्य इति सन्देहः ।**

'तद्वै त्वं प्राणः' ಎಂಬ ಶ್ರುತಿಯಲ್ಲಿರುವ ಪ್ರಾಣಶಬ್ದಾರ್ಥನು ವಿಷ್ಣುವೇ ಆಗಿದ್ದಾನೆ. ಐತರೇಯಬ್ರಾಹ್ಮಣದಲ್ಲಿ 'ಕಶ್ಚಿತ್ತಾ ವಾ ಏತಾಃ' ಎಂಬುದಾಗಿ ಪ್ರಾರಂಭಿಸಿ ಅನೇಕ ಸ್ಥಳಗಳಲ್ಲಿ 'ಪ್ರಾಣಃ'

---

तथा च यतः 'ता एताः' चक्षुः श्रोत्रं मनोवाक्प्राण इत्येतच्छब्दवाच्यास्तदभिमानिन्यो देवताः । 'शीर्षन्' शीर्ष्णि शिरःसञ्ज्ञिकमूर्ध्नि श्रिताः । अत एव श्रयणाच्छ्रिय इति सिद्धान्ते श्रुत्यर्थः । अनेन चक्षुरादिभिः श्रितत्वं शिरःपदप्रवृत्तिनिमित्तमित्युक्तं भवति । पूर्वपक्षी तु प्राणशब्दमन्यमात्रपरं मन्यते ।

ಎಂಬ ಪದವು ಕೇಳಿಸುತ್ತಿದೆ. ಈ ಪದವು ವಿಷ್ಣುವಿಗಿಂತ ಭಿನ್ನವಾದ ವಸ್ತುವನ್ನು ಪ್ರತಿಪಾದಿಸಿದರೆ ಹಿಂದಿನ ಪ್ರಾಣಾಧಿಕರಣದಲ್ಲಿ ಪ್ರತಿಪಾದ್ಯವಾದ ಪ್ರಾಣವೂ ಸಹ ವಿಷ್ಣುಭಿನ್ನವೇ ಆಗುತ್ತದೆ. ಆದ್ದರಿಂದ ಐತರೇಯ ಬ್ರಾಹ್ಮಣದಲ್ಲಿರುವ ಈ ಪ್ರಾಣಶಬ್ದಾರ್ಥವನ್ನು ಅವಶ್ಯವಾಗಿ ನಿರ್ಣಯಿಸಬೇಕು. ಆದ್ದರಿಂದ ಈ ಪ್ರಾಣವೇ ಇಲ್ಲಿ ವಿಷಯವಾಗಿದೆ. ಈ ಪ್ರಾಣಶಬ್ದದಿಂದ ಪ್ರತಿಪಾದ್ಯನಾದವನು ವಿಷ್ಣುವೋ, ಅಥವಾ ಬೇರೆಯವರೋ ಎಂದು ಸಂಶಯ.

**(ತ) ಪೂರ್ವೋಕ್ತನ್ಯಾಯೋऽನ್ಯತ್ರಪ್ರಸಿದ್ಧಿಶ್ಚ ಸನ್ದೇಹಬೀಜಮ್ । ತತ್ರ ನ ಪ್ರಾಣೋ ವಿಷ್ಣುಃ ಕಿನ್ತು ವಾಯ್ವಾದಿರೇವೇತಿ ಪೂರ್ವಃ ಪಕ್ಷಃ । ಏತತ್ಪ್ರಾಣಸ್ಯೇನ್ದ್ರಿಯಗಣೇ ಗಣಿತತ್ವಾತ್ । ನ ಚೈತಲ್ಲಿಙ್ಗಂ ವಿಷ್ಣಾವವಕಾಶಂ ಲಭತೇ । ಉಪಪದ್ಯತೇ ಚ ಮುಖ್ಯಪ್ರಾಣಾದಿಷು ಅತಸ್ತೇಷಾಮನ್ಯತಮಸ್ಯ ಏತತ್ಪ್ರಾಣತ್ವಾತ್ ಪ್ರಾಚೀನಪ್ರಾಣ ಆನನ್ದಮಯೋऽಪ್ಯನ್ಯ ಏವೇತಿ ಭಾವಃ ।**

(ಪೂರ್ವಪಕ್ಷ) ಹಿಂದಿನ ಪ್ರಾಣಾಧಿಕರಣದಲ್ಲಿ ಹೇಳಲ್ಪಟ್ಟ ಸಿದ್ಧಾಂತನ್ಯಾಯವು ಮತ್ತು ಲೋಕತಃ ಅನ್ಯತ್ರಪ್ರಸಿದ್ಧಿಯು ಸಂದೇಹಬೀಜವಾಗಿದೆ. ಈ ಪ್ರಾಣನು ವಿಷ್ಣುವಲ್ಲ ಹೊರತಾಗಿ ವಾಯ್ವಾದಿಗಳೇ ಆಗಿದ್ದಾರೆಂದು ಪೂರ್ವಪಕ್ಷ. ಏಕೆಂದರೆ ಪ್ರಸಕ್ತವಾದ ಶ್ರುತಿಯಲ್ಲಿ ಪ್ರಾಣನನ್ನು ಇಂದ್ರಿಯಗಳ ಸಮೂಹದಲ್ಲಿ ಹೇಳಲಾಗಿದೆ. ಈ ಲಿಂಗವು ವಿಷ್ಣುವಿನಲ್ಲಿ ಸಂಭವಿಸುವುದಿಲ್ಲ. ಆದರೆ ಮುಖ್ಯಪ್ರಾಣಾದಿಗಳಲ್ಲಿ ಯುಕ್ತವಾಗುತ್ತದೆ. ಆದ್ದರಿಂದ ವಾಯ್ವಾದಿಗಳ ಮಧ್ಯದಲ್ಲಿ ಯಾರಾದರೊಬ್ಬರು ಈ ಪ್ರಾಣರೆನಿಸುತ್ತಾರೆ. ಆದ್ದರಿಂದ ಹಿಂದಿನ ಪ್ರಾಣಾಧಿಕರಣದಲ್ಲಿ 'ತದ್ವೃ ತ್ವಂ ಪ್ರಾಣಃ' ಎಂಬ ಶ್ರುತಿಯಲ್ಲಿ ಪ್ರತಿಪಾದಿಸಲ್ಪಟ್ಟ ಪ್ರಾಣಶಬ್ದವಾಚ್ಯನು ಮತ್ತು ಆನಂದಮಯಶಬ್ದವಾಚ್ಯನು ಬೇರೆಯವರೇ ಆಗಬೇಕೆಂದು ಅಭಿಪ್ರಾಯ.

ಭಾವದೀಪಃ – ॐ ಪ್ರಾಣಸ್ತಥಾನುಗಮಾತ್ ॐ ॥ ಅನ್ಯತ್ರಪ್ರಸಿದ್ಧೇತಿ ॥ ಯದ್ಯಪಿ 'ಆಕಾಶೋऽರ್ಥಾನ್ತರತ್ವಾತ್' ಇತ್ಯತ್ರ ಆಕಾಶಶಬ್ದಸ್ಯೇವ ಪ್ರಾಣಶಬ್ದಸ್ಯಾಪಿ 'ಅತ ಏವ ಪ್ರಾಣಃ' ಇತ್ಯತ್ರೋಕ್ತನ್ಯಾಯೇನ ವಿಷ್ಣಾವಪಿ ಪ್ರಯೋಗಾದುಭಯತ್ರಪ್ರಸಿದ್ಧತಾ ಭಾತಿ । ತಥಾಪಿ ಪ್ರಾಚೀನ-ಪ್ರಾಣಸ್ಯಾಪ್ಯತ್ರ ಪೂರ್ವಪಕ್ಷೇ ವಿಷ್ಣುತ್ವಾಕ್ಷೇಪೇಣ ತತ್ರ ವಿಷ್ಣೌ ಪ್ರಯೋಗಸ್ಯಾಸಮ್ಪ್ರತಿಪತ್ತೇಃ 'ಲೋಕತೋऽ-ನ್ಯತ್ರಪ್ರಸಿದ್ಧಃ' ಇತ್ಯುಕ್ತಮ್ । ಶೇಷಂ ಪೂರ್ವವತ್ ।

'ಸಙ್ಗತಿ' ಇತ್ಯುಕ್ತ್ಯೈವ ಫಲಮಪಿ ಲಬ್ಧಮಿತಿ 'ಪೂರ್ವಪಕ್ಷತತ್ಫಲಾನಿ' ಇತ್ಯನುಕ್ತ್ವಾ 'ಪೂರ್ವಪಕ್ಷಾನಿ' ಇತ್ಯೇವೋಕ್ತಮ್ । ಇತ್ಯನ್ತಭಾಷ್ಯಂ ಸಙ್ಗತಿಪರತ್ವೇನ ತಾವದಾಕಾಙ್ಕಿತಪೂರ್ತ್ಯಾ ವ್ಯಾಚಷ್ಟೇ – ತದ್ವೈ ತ್ವಮಿತಿ ॥ 'ಇತ್ಯತ್ರ' ಇತ್ಯಸ್ಯಾರ್ಥೌ 'ಬಹುಸ್ಥಲೇಷು' ಇತಿ । ಭಾಷ್ಯೇ 'ತಾ' ಇತಿ ಪ್ರತೀಕಗ್ರಹಣಮಿತಿ ಭಾವೇನ 'ಆರಭ್ಯ' ಇತ್ಯುಕ್ತಮ್ । 'ಪ್ರಾಣಃ ಶ್ರೂಯತೇ' ಇತ್ಯುಕ್ತ್ಯಾ ಭಾಷ್ಯೇ 'ಶ್ರುತಸ್ಯ ಪ್ರಾಣಸ್ಯ' ಇತಿ ಶ್ರುತಪದಶೇಷಃ ಸೂಚಿತಃ । 'ಪ್ರಾಣಸ್ಯ' ಇತ್ಯಾದೇರರ್ಥಃ 'ತಸ್ಯ' ಇತಿ ।

**अन्यत्व इति ॥** 'वक्ष्यमाणयुक्त्या वाय्वादित्वे' इत्यर्थः । 'उक्तम्' इत्यन्तस्य तात्पर्यं 'प्राचीनोऽपि' इति । **शङ्केति ॥** अत्र प्रबलानेकान्यप्रापकसत्त्वेन प्राणस्यान्यत्वनिश्चयेऽपि न प्राचीनस्य स युक्तः । तत्र प्रबलान्यलिङ्गानामभावात् प्रत्युत श्रीपतित्वादिविपरीतलिङ्गमेव अस्तीति शङ्कित्येवोक्तम् । तावता प्राचीन-निर्णयाक्षेपमात्रेण फलवत्त्वसम्भवात् । **इत्ययमिति ॥** इति सङ्गतिसम्भवादित्यर्थः । **पूर्वोक्तन्याय इति ॥** 'महायोगविद्वद्रूढिसत्त्वात् विष्णुवाची प्राणशब्दः' इत्युक्तन्याय इत्यर्थः ।

तदेव भाष्यं पूर्वपक्षादिपरतयापि व्यनक्ति – **तत्रेत्यादिना ॥** 'प्राणस्य विष्णुत्वं न युज्यते' इत्यस्यार्थः 'तत्र न प्राणो विष्णुः' इति । एवं सन्देहे सतीत्यर्थः । 'विष्णुर्न चेन्निरर्थकः प्राणशब्दः स्यात्' इत्यत उक्तम् – **किन्तु वाय्वादिरेवेति ॥** 'वाय्विन्द्रजीवाः' इत्यर्थः । **'इन्द्रियैः'** इत्यादिभाष्यार्थमाह – **एतदिति ॥** अत एव भाष्ये चक्षुः श्रोत्रं मनो वागित्यंश उदाहृतः । **न चैतदिति ॥** नीचैः चक्षुरादिभिः सह गणितत्वस्य सर्वोत्तमेऽनुपपत्तेरिति भावः ।

**उपपद्यत इति ॥** मुख्यस्य **'सर्वेन्द्रियस्वामित्वादिन्द्रस्य हस्ताधिष्ठातुरिन्द्रियत्वात् जीवस्य च इन्द्रियजन्यफलाश्रयत्वात्'** इति सुधोक्तदिशेति भावः । एतेन सिद्धान्ते श्रुतिलिङ्गबाहुल्येऽपि तेषामेकेनापि निरवकाशेन वाय्वादावेव सावकाशयितव्यत्वं 'तयोः स्वभावो बलवान्' इत्युक्तेरिति सूचितम् । एवं सिद्धेऽपि पूर्वपक्षेऽनुभाष्यादौ श्रुतिलिङ्गबाहुल्योक्तिः पूर्वपक्षदार्ढ्यायेति भाष्याभिप्राय इति भावः ।

**अत इति ॥** 'निरवकाशलिङ्गात्' इत्यर्थः । यद्वा 'अतः' इत्यस्य व्याख्या 'तेषाम्' इत्यादि । 'प्राणो विष्णुरित्युक्तम्' इत्यस्य तात्पर्यं 'प्राचीनप्राणः' इति । अन्य इत्यन्वयः । सन्देहे उपसंहारे चान्य इत्युक्त्या तेषामन्यतमोऽयमेवेत्यनिर्णयेऽ-प्यन्यत्वेनावधारणं सम्भवतीति न सन्देहात् पूर्वपक्षस्याविशेष इति भावः । 'अन्य एव' इत्यवधारणं तु प्रकृतप्राणबुद्ध्या न तु प्राचीनप्राणबुद्ध्या । तस्य विष्ण्वेक-निष्ठश्रीपतित्वादिलिङ्गेनान्य एवेति निर्णयायोगात् । प्रागुक्तशङ्कापदविरोधाच्च ।

यद्वा, वक्ष्यमाणदिशा प्राणसंवादोत्क्रमणप्रवेशादीनां बहुत्वात् श्रुत्यनुगृहीतत्वात्

साक्षात् प्राणविशेषणत्वाच्च । श्रीपतित्वादिलिङ्गानां तु वैपरीत्यात् तत्राप्यन्य एवेति निर्धारणं युक्तम् । पूर्वं शङ्केत्युक्तिः अभ्युपगमवादेन इति भावः ॥

ಟೀಕೆಯಲ್ಲಿ ''ಅನ್ಯತ್ರಪ್ರಸಿದ್ಧ' ಎಂಬ ಅಂಶದಿಂದ ಈ ಅಭಿಪ್ರಾಯವನ್ನು ವಿವಕ್ಷಿಸಿದ್ದಾರೆ—

ಶಂಕೆ - ವಸ್ತುತಃ 'ಆಕಾಶೋऽರ್ಥಾಂತರತ್ವಾತ್' ಎಂಬ ಮೂರನೆಯ ಪಾದದಲ್ಲಿ ಸಮನ್ವಯ ಮಾಡುವ ಆಕಾಶಶಬ್ದವು ಯಾವ ರೀತಿಯಾಗಿ ಉಭಯತ್ರಪ್ರಸಿದ್ಧವಾಗಿದೆಯೋ ಆದರಂತೆ ಇಲ್ಲಿ ಸಮನ್ವಯ ಮಾಡುತ್ತಿರುವ ಪ್ರಾಣಶಬ್ದವೂ ಸಹ ಉಭಯತ್ರ ಪ್ರಸಿದ್ಧವೇ ಆಗಬೇಕು. ಏಕೆಂದರೆ, ಈಗಾಗಲೇ 'ಆತ ಏವ ಪ್ರಾಣಃ' ಎಂಬ ಸೂತ್ರದಿಂದ ಕೆಲವು ಪ್ರಾಣಶಬ್ದಗಳನ್ನು ವಿಷ್ಣುವಿನಲ್ಲಿ ಸಮನ್ವಯವನ್ನು ಮಾಡಿದ್ದಾಗಿದೆ. ಲೋಕಪ್ರಸಿದ್ಧಿಯಂತೂ ಮುಖ್ಯವಾಯುವಿನಲ್ಲಿದ್ದೆ. ಆದ್ದರಿಂದ ಪ್ರಾಣಶಬ್ದವು ಉಭಯತ್ರಪ್ರಸಿದ್ಧವಾಗಿರುವುದರಿಂದ ಈ ಅಧಿಕರಣವನ್ನು ಮೂರನೆಯ ಪಾದದಲ್ಲಿ ಹೇಳಬೇಕಲ್ಲವೇ?

ಸಮಾಧಾನ - ಹೌದು. ಆದರೆ ಹಿಂದಿನ ಪ್ರಾಣಾಧಿಕರಣದಲ್ಲಿ ವಿಷಯನಾದ ಪ್ರಾಣನನ್ನೂ ಸಹ ವಿಷ್ಣುವಲ್ಲವೆಂದು ಇಲ್ಲಿ ಪೂರ್ವಪಕ್ಷ ಮಾಡುತ್ತಿರುವುದರಿಂದ ಹಿಂದಿನ ಅಧಿಕರಣದಲ್ಲಿ ಕೆಲವು ಪ್ರಾಣಶಬ್ದಗಳನ್ನು ವಿಷ್ಣುವಿನಲ್ಲಿ ಪೂರ್ವಪಕ್ಷಿಯು ಅಂಗೀಕರಿಸಿಲ್ಲ. ಹಾಗಾಗಿ ಉಭಯತ್ರಪ್ರಸಿದ್ಧವೆಂದು ಹೇಳಲಾಗದು. ಈ ದೃಷ್ಟಿಯಿಂದ ಟೀಕೆಯಲ್ಲಿ ''ಲೋಕತಃ ಅನ್ಯತ್ರಪ್ರಸಿದ್ಧ'' ಎಂಬ ಅರ್ಥಪೂರ್ಣವಾದ ಮಾತನ್ನು ಹೇಳಿದ್ದಾರೆ. ಉಳಿದದ್ದನ್ನು ಹಿಂದಿನಂತೆ ತಿಳಿಯಬೇಕು.

ಟೀಕೆಯಲ್ಲಿ ''ಶಾಸ್ತ್ರಾದಿಸಂಗತಿಃ'' ಎಂಬುದಾಗಿ ಸಂಗತಿಯನ್ನು ಹೇಳಿದ್ದರಿಂದಲೇ ಫಲವನ್ನೂ ಸಹ ಹೇಳಿದಂತಾಯಿತು. ಆದ್ದರಿಂದಲೇ ಮುಂದಿನ ವಾಕ್ಯದಲ್ಲಿ 'ಪೂರ್ವಪಕ್ಷತತ್ಫಲಾನ್' ಎಂದು ಹೇಳದೆ ಕೇವಲ ''ಪೂರ್ವಪಕ್ಷಾನ್'' ಎಂದಷ್ಟೇ ಹೇಳಿದ್ದಾರೆ.

''ಪ್ರಾಣೋ ವಿಷ್ಣುಃ'' ಎಂಬ ಭಾಷ್ಯದಿಂದ ಪ್ರಾರಂಭಿಸಿ ''ಇಂದ್ರಿಯೈಃ ಸಹಾಭಿಧಾನಾದಿತಿ'' ಎಂಬಲ್ಲಿಯ ತನಕ ಇರುವ ಭಾಷ್ಯವು ಸಂಗತಿಪರವಾದ್ದರಿಂದ ಆಕಾಂಕ್ಷೆಯನ್ನು ಪರಿಹರಿಸುತ್ತದೆಂಬ ದೃಷ್ಟಿಯಿಂದ ''ತದ್ವೈ ತ್ವಂ'' ಇತ್ಯಾದಿ ಟೀಕೆಯಿಂದ ವ್ಯಾಖ್ಯಾನಿಸುತ್ತಿದ್ದಾರೆ. ಭಾಷ್ಯದಲ್ಲಿರುವ ''ಇತ್ಯತ್ರ'' ಎಂಬ ಪದದ ಅರ್ಥವನ್ನೇ ಟೀಕೆಯಲ್ಲಿ ''ಬಹುಸ್ಥಲೇಷು'' ಎಂದು ಹೇಳಿದ್ದಾರೆ. ಭಾಷ್ಯದಲ್ಲಿ 'ತಾ ವಾ ಏತಾಃ' ಎಂಬುದು ಐತರೇಯಾರಣ್ಯಕದ ಪ್ರತೀಕಗ್ರಹಣವಾಗಿದೆ ಹೊರತು ಸಂಪೂರ್ಣ ಶ್ರುತಿಯನ್ನು ಉಲ್ಲೇಖಿಸಿಲ್ಲ. ಆದ್ದರಿಂದ ಶಿಷ್ಯರು ಇಷ್ಟನ್ನೇ ವಿಷಯವಾಕ್ಯವೆಂದು ಪರಿಗಣಿಸಬಾರದು ಎಂಬ ವಿವಕ್ಷೆಯಿಂದ ಟೀಕೆಯಲ್ಲಿ ''ಆರಭ್ಯ'' ಎಂಬುದಾಗಿ ಅರ್ಥಪೂರ್ಣವಾಗಿ ಹೇಳಿದ್ದಾರೆ.

''ಪ್ರಾಣಃ ಶ್ರೂಯತೇ'' ಎಂಬ ಟೀಕೆಯಲ್ಲಿ 'ಶ್ರೂಯತೇ' ಎಂಬ ಪದವನ್ನು ಬಳಸಿದ್ದರಿಂದ ಭಾಷ್ಯದಲ್ಲಿ 'ಪ್ರಾಣಸ್ಯ' ಎಂಬ ಪದದ ಜೊತೆಗೆ 'ಶ್ರುತಸ್ಯ' ಎಂಬ ಪದವನ್ನು ಶೇಷಪೂರಣಮಾಡಿಕೊಳ್ಳಬೇಕೆಂದು ಸೂಚಿಸಿದ್ದಾರೆ. 'ಪ್ರಾಣಸ್ಯ' ಇತ್ಯಾದಿ ಭಾಷ್ಯದ ಅರ್ಥವನ್ನೇ ಟೀಕೆಯಲ್ಲಿ ''ತಸ್ಯ ವಿಷ್ಣೋಃ'' ಎಂಬ ವಾಕ್ಯದಿಂದ ಹೇಳುತ್ತಿದ್ದಾರೆ.

''ಅನ್ಯತ್ವೇ'' ಎಂಬ ಟೀಕೆಯಲ್ಲಿರುವ ಪದಕ್ಕೆ 'ಮುಂದೆ ಹೇಳುವ ಯುಕ್ತಿಯಿಂದ ವಾಯು ಮೊದಲಾದವರು ಪ್ರಾಣಶಬ್ದವಾಚ್ಯರೆಂದು ಹೇಳಿದರೆ' ಎಂದರ್ಥ. ''ಪ್ರಾಚೀನೋಽಪಿ'' ಎಂಬ ಪದದಿಂದ 'ವಿಷ್ಣುರಿತ್ಯುಕ್ತಮ್' ಎಂಬ ಹಿಂದಿನ ವಾಕ್ಯದ ತಾತ್ಪರ್ಯವನ್ನು ವಿವಕ್ಷಿಸಿದ್ದಾರೆ. ''ಶಂಕಾ'' ಎಂಬ ಟೀಕಾಭಾಗದ ತಾತ್ಪರ್ಯ ಹೀಗಿದೆ— ಈ ಅಧಿಕರಣದಲ್ಲಿ ಸಮನ್ವಯ ಮಾಡುತ್ತಿರುವ ಪ್ರಾಣಶಬ್ದದಿಂದ ಮುಖ್ಯವಾಯು ಮೊದಲಾದವರೇ ಪ್ರತಿಪಾದ್ಯರಾಗಲಿ. ಏಕೆಂದರೆ ನಿರವಕಾಶವಾದ ಅನೇಕಲಿಂಗಗಳು ಮುಖ್ಯವಾಯು ಮೊದಲಾದವರಲ್ಲಿ ಪ್ರಸಿದ್ಧವಾಗಿವೆ. ಆದರೆ ಹಿಂದಿನ ಪ್ರಾಣಾಧಿಕರಣದಲ್ಲಿ ಮಾತ್ರ ಮುಖ್ಯವಾಯು ಮೊದಲಾದವರು ಪ್ರತಿಪಾದ್ಯರಾಗುವುದು ಬೇಡ. ಏಕೆಂದರೆ ಪ್ರಬಲವಾದ ಲಿಂಗಗಳು ಅಲ್ಲಿ ಕೇಳಿಸುತ್ತಿಲ್ಲ. ಹೊರತಾಗಿ ವಿಷ್ಣುವೇ ಪ್ರಾಣಶಬ್ದವಾಚ್ಯನೆನ್ನಲು ಬೇಕಾಗಿರುವ ವಿಪರೀತವಾಗಿ ಶ್ರೀಪತಿತ್ವವೇ ಮೊದಲಾದ ಲಿಂಗಗಳೇ ಕೇಳಿಸುತ್ತಿವೆ. ಆದ್ದರಿಂದಲೇ ಇಲ್ಲಿ ಶಂಕಾ ಎಂಬ ಪದವನ್ನಷ್ಟೇ ಬಳಸಿದ್ದಾರೆ. ಅಂದರೆ ಹಿಂದಿನ ಪ್ರಾಣಾಧಿಕರಣದ ನಿರ್ಣಯವನ್ನಷ್ಟೇ ಇಲ್ಲಿ ಆಕ್ಷೇಪಿಸಲಾಗಿದೆ. ಆದ್ದರಿಂದ ಇದೇ ಪೂರ್ವಪಕ್ಷದ ಫಲವಾಗಿದೆ ಎಂದು ಹೇಳಬಹುದು.

''ಇತ್ಯಯಂ'' ಎಂಬ ಪದಕ್ಕೆ 'ಸಂಗತಿಯು ಕೂಡುವುದರಿಂದ' ಎಂದರ್ಥ. ''ಪೂರ್ವೋಕ್ತನ್ಯಾಯಃ' ಎಂಬ ಪದಕ್ಕೆ 'ಮಹಾಯೋಗ ಹಾಗೂ ವಿದ್ವದ್‌ರೂಢಿಗಳಿರುವುದರಿಂದ ಪ್ರಾಣಶಬ್ದವು ವಿಷ್ಣುವನ್ನು ಪ್ರತಿಪಾದಿಸುತ್ತದೆ ಎಂಬ ಹಿಂದಿನ ನ್ಯಾಯವು' ಎಂದರ್ಥ.

ಹೀಗೆ ಸಂಗತಿಪರವಾಗಿ ವ್ಯಾಖ್ಯಾನಿಸಿದ ಭಾಷ್ಯವನ್ನು ಪೂರ್ವಪಕ್ಷಪರವಾಗಿಯೂ ವ್ಯಾಖ್ಯಾನಿಸಲು ''ತತ್ರ'' ಇತ್ಯಾದಿ ಟೀಕಾವಾಕ್ಯವು ಹೊರಟಿದೆ. ಭಾಷ್ಯದಲ್ಲಿರುವ 'ಪ್ರಾಣಸ್ಯ ವಿಷ್ಣುತ್ವಂ ನ ಯುಜ್ಯತೇ' ಎಂಬುದರ ಅರ್ಥವನ್ನೇ ಟೀಕೆಯಲ್ಲಿ ''ತತ್ರ ನ ಪ್ರಾಣೋ ವಿಷ್ಣುಃ'' ಎಂದು ಹೇಳಿದ್ದಾರೆ. ಹೀಗೆ ಸಂದೇಹ ಬಂದಾಗ ಎಂದು ಅಭಿಪ್ರಾಯ.

ಒಂದು ವೇಳೆ ಪ್ರಾಣಶಬ್ದದಿಂದ ವಿಷ್ಣುವು ಪ್ರತಿಪಾದ್ಯನಾಗದಿದ್ದರೆ ಪ್ರಾಣಶಬ್ದಕ್ಕೆ ಅರ್ಥವೇ ಇಲ್ಲವೆಂದಾಯಿತಲ್ಲವೇ? ಎಂಬ ಶಂಕೆಗೆ ''ಕಂತು ವಾಯ್ವಾದಿರೇವ'' ಎಂದು ಉತ್ತರಿಸಿದ್ದಾರೆ. ಮುಖ್ಯವಾಯು, ದೇವೇಂದ್ರ ಹಾಗೂ ಜೀವರು ಪ್ರಾಣಶಬ್ದದಿಂದ ವಾಚ್ಯರಾಗುತ್ತಾರೆಂದು ವಾಯ್ವಾದಿ ಎಂಬ ಪದದ ಅಭಿಪ್ರಾಯ.

'ಇಂದ್ರಿಯೈಃ ಸಹಾಭಿಧಾನಾತ್' ಇತ್ಯಾದಿ ಭಾಷ್ಯದ ಮುಂದಿನ ವಾಕ್ಯಗಳ ಅರ್ಥವನ್ನು ''ಏತತ್ ಪ್ರಾಣಸ್ಯ'' ಇತ್ಯಾದಿ ಟೀಕೆಯಿಂದ ಹೇಳುತ್ತಿದ್ದಾರೆ. ಇಂದ್ರಿಯಗಳ ಸಮೂಹದಲ್ಲಿ ಪ್ರಾಣಶಬ್ದವನ್ನು ಶ್ರುತಿಯು ಹೇಳುತ್ತಿರುವುದರಿಂದಲೇ ಭಾಷ್ಯದಲ್ಲಿ 'ಚಕ್ಷುಃ ಶ್ರೋತ್ರಂ ಮನೋ ವಾಕ್' ಎಂಬಂಶವನ್ನು ಉದಾಹರಿಸಿದ್ದಾರೆ. ''ನ ಚೈತತ್'' ಎಂಬ ಟೀಕೆಗೆ 'ನೀಚರಾದ ಚಕ್ಷುರಾದಿ ಇಂದ್ರಿಯಗಳ ಜೊತೆಗೆ ಸರ್ವೋತ್ತಮನಾದ ವಿಷ್ಣುವನ್ನು ಪರಿಗಣಿಸುವುದು ಅನುಪಪನ್ನವಾಗಿದೆ' ಎಂದು ಅಭಿಪ್ರಾಯ.

''ಉಪಪದ್ಯತೇ ಚ'' ಎಂದರೆ ಹೀಗರ್ಥ– 'ಮುಖ್ಯಸ್ಯ ಸರ್ವೇಂದ್ರಿಯಸ್ವಾಮಿತ್ವಾದಿಂದ್ರಸ್ಯ ಹಸ್ತಾಧಿಷ್ಠಾತುರಿಂದ್ರಿಯತ್ವಾತ್ ಜೀವಸ್ಯ ಚ ಇಂದ್ರಿಯಜನ್ಯಫಲಾಶ್ರಯತ್ವಾತ್' (ಮುಖ್ಯವಾಯುವು

ಸರ್ವೇಂದ್ರಿಯಗಳಿಗೆ ಸ್ವಾಮಿಯಾಗಿದ್ದಾನೆ. ದೇವೇಂದ್ರನು ಹಸ್ತಕ್ಕೆ ಅಧಿಷ್ಠಾನನಾದ್ದರಿಂದ ಇಂದ್ರಿಯನೆನಿಸಿದ್ದಾನೆ. ಜೀವನು ಇಂದ್ರಿಯಜನ್ಯವಾದ ಫಲಕ್ಕೆ ಆಶ್ರಯನಾಗಿದ್ದಾನೆ) ಎಂದು ಸುಧೆಯಲ್ಲಿ ಹೇಳಿದ್ದನ್ನು ಇಲ್ಲಿ ಸ್ಮರಿಸಿಕೊಳ್ಳಬೇಕು. ಹೀಗೆ ಹೇಳಿದ್ದರಿಂದ ಸಿದ್ಧಾಂತದಲ್ಲಿ ಅನೇಕವಾದ ಶ್ರುತಿಲಿಂಗಗಳನ್ನು ಆಧಾರವಾಗಿ ಹೇಳಿದ್ದರೂ ವಾಯ್ವಾದಿಗಳಲ್ಲಿ ಹೇಳುತ್ತಿರುವ ಲಿಂಗವು ನಿರವಕಾಶವಾದ್ದರಿಂದ ಆ ಎಲ್ಲ ಶ್ರುತಿಲಿಂಗಗಳನ್ನು ವಾಯ್ವಾದಿಗಳಲ್ಲಿಯೇ ಸಾವಕಾಶಮಾಡಬೇಕು 'ತಯೋಃ ಸ್ವಭಾವೋ ಬಲವಾನ್' ಎಂಬ ವಾಕ್ಯದಿಂದ ನಿರವಕಾಶಕ್ಕೆ ಪ್ರಾಬಲ್ಯವನ್ನು ಹೇಳಿದ್ದರಿಂದ. ಇತ್ಯಾದಿವಿಷಯವನ್ನು ''ಉಪಪದ್ಯತೇ ಚ'' ಎಂಬುದರಿಂದ ಸೂಚಿಸಿದ್ದಾರೆ. ಹೀಗೆ ಪೂರ್ವಪಕ್ಷವು ಸಿದ್ಧವಾದ ಮೇಲೆ ಅನುವ್ಯಾಖ್ಯಾನದಲ್ಲಿ ಅನೇಕಶ್ರುತಿಲಿಂಗಗಳನ್ನು ಹೇಳಿದ್ದು ಪೂರ್ವಪಕ್ಷದ ದಾರ್ಢ್ಯಕ್ಕೋಸ್ಕರವೆಂದು ಭಾಷ್ಯದ ಅಭಿಪ್ರಾಯ.

''ಅತ ಇತಿ'' ಟೀಕೆಯಲ್ಲಿರುವ ಅತ ಎಂಬ ಪದಕ್ಕೆ 'ನಿರವಕಾಶತ್ವಲಿಂಗದಿಂದ' ಎಂದರ್ಥ. ಅಥವಾ ಭಾಷ್ಯದಲ್ಲಿರುವ ಅತಃ ಎಂಬುದರ ವ್ಯಾಖ್ಯಾನವನ್ನು ''ತೇಷಾಮನ್ಯತಮಸ್ಯ'' ಇತ್ಯಾದಿ ಟೀಕೆಯಿಂದ ಮಾಡಿದ್ದಾರೆ. 'ಪ್ರಾಣೋ ವಿಷ್ಣುರಿತ್ಯುಕ್ತಮ್' ಎಂಬ ಭಾಷ್ಯದ ಅಭಿಪ್ರಾಯವನ್ನು ''ಪ್ರಾಚೀನಪ್ರಾಣಃ'' ಎಂಬುದರಿಂದ ವಿವಕ್ಷಿಸಿದ್ದಾರೆ. ''ಅನ್ಯಃ'' ಎಂಬಲ್ಲಿ ಇದಕ್ಕೆ ಅನ್ವಯ. ಆವಾಗ 'ಪ್ರಾಚೀನಪ್ರಾಣಃ ಅನ್ಯಃ' ಎಂದಂತಾಗುತ್ತದೆ.

ಸಂದೇಹದಲ್ಲಿ ಮತ್ತು (ಪೂರ್ವಪಕ್ಷದ) ಉಪಸಂಹಾರದಲ್ಲಿ 'ಅನ್ಯಃ' ಎಂಬ ಪದವನ್ನು ಬಳಸಿದ್ದರಿಂದ ಒಂದು ಪ್ರಮೇಯವನ್ನು ತಿಳಿಸಿದ್ದಾರೆ. ಅದು ಹೀಗೆ — ಮುಖ್ಯವಾಯು, ಇಂದ್ರ ಹಾಗೂ ಜೀವ ಈ ಮೂವರಲ್ಲಿ ಇವರೇ ಪ್ರಾಣಶಬ್ದವಾಚ್ಯರೆಂಬ ನಿರ್ಣಯವಿಲ್ಲದ ಕಾರಣ ಪೂರ್ವಪಕ್ಷದ ನಿರ್ಣಯವನ್ನು ಹೇಗೆ ಮಾಡುತ್ತೀರಿ? ಎಂದು ಪ್ರಶ್ನೆ ಬಂದರೆ ವಿಷ್ಣುವನ್ನು ಬಿಟ್ಟು ಉಳಿದವರೇ ಪ್ರಾಣಶಬ್ದವಾಚ್ಯರೆಂಬ ವಿಷಯದಲ್ಲಿ ನಿರ್ಣಯವನ್ನು ಮಾಡಬಹುದಾದ್ದರಿಂದ ಸಂದೇಹಕ್ಕೂ ಪೂರ್ವಪಕ್ಷಕ್ಕೂ ವ್ಯತ್ಯಾಸವಿಲ್ಲ ಎಂಬ ಶಂಕೆಯನ್ನು ಮಾಡಲಾಗದು – ಎಂದು.

''ಅನ್ಯ ಏವ'' ಎಂಬುದಾಗಿ ಅವಧಾರಣವನ್ನು ಈ ಅಧಿಕರಣದ ಪ್ರಾಣನನ್ನು ವಿವಕ್ಷಿಸಿ ಮಾಡಿದ್ದೇ ಹೊರತು ಹಿಂದಿನ ಪ್ರಾಣಾಧಿಕರಣದ ಪ್ರಾಣನನ್ನು ವಿವಕ್ಷಿಸಿ ಮಾಡಿದ್ದಲ್ಲ. ಏಕೆಂದರೆ, ಕೇವಲ ವಿಷ್ಣುವಿನಲ್ಲಿರುವ ಶ್ರೀಪತಿತ್ವ ಮೊದಲಾದ ಲಿಂಗಗಳಿರುವುದರಿಂದ ಹಿಂದಿನ ಪ್ರಾಣನನ್ನು ಅನ್ಯ ಏವ ಎಂಬುದಾಗಿ ಅವಧಾರಣಮಾಡಲು ಸಾಧ್ಯವಿಲ್ಲ. ಹಾಗೆ ಮಾಡಿದರೆ ಹಿಂದೆ ಹೇಳಿದ ಶಂಕಾಪದದಿಂದ ವಿರೋಧ ಬರುತ್ತದೆ.

ಅಥವಾ ಮುಂದೆ ಹೇಳುವ ಪ್ರಕಾರ ಪ್ರಾಣಸಂವಾದ, ದೇಹದಲ್ಲಿ ಮಾಡುವ ಉತ್ಕ್ರಮಣ ಹಾಗೂ ಪ್ರವೇಶಗಳು ಮುಂತಾದ ಲಿಂಗಗಳಲ್ಲಿ ಬಹುತ್ವವಿದೆ, ಶ್ರುತ್ಯನುಗ್ರಹವಿದೆ; ಮತ್ತು ಸಾಕ್ಷಾತ್ ಪ್ರಾಣನಲ್ಲಿ ವಿಶೇಷಣಗಳಾಗಿವೆ. ಆದರೆ ವಿಷ್ಣುವಿನಲ್ಲಿ ಕೇಳಿಸುತ್ತಿರುವ ಶ್ರೀಪತಿತ್ವ ಮೊದಲಾದ ಲಿಂಗಗಳಲ್ಲಿ ಬಹುತ್ವ, ಶ್ರುತ್ಯನುಗೃಹೀತತ್ವ ಹಾಗೂ ಸಾಕ್ಷಾತ್ ವಿಶೇಷಣತ್ವ ಮೊದಲಾದ ಯಾವುದೇ ಧರ್ಮಗಳು ಇರುವುದಿಲ್ಲ. ಆದ್ದರಿಂದ ಹಿಂದಿನ ಪ್ರಾಣನನ್ನೂ ಸಹ 'ಅನ್ಯ ಏವ' ಎಂಬುದಾಗಿ ನಿರ್ಧಾರವಾಗಿ ಪೂರ್ವಪಕ್ಷ

ಮಾಡಬಹುದು. ಈ ಪಕ್ಷದಲ್ಲಿರುವ ಟೀಕೆಯಲ್ಲಿರುವ ಹಿಂದಿನ ಶಂಕಾ ಎಂಬ ಪದವು ಅಭ್ಯುಪಗಮವಾದದಿಂದ ಹೇಳಲ್ಪಟ್ಟದೆ ಹೊರತು, ಸ್ವಮತದಿಂದಲ್ಲ ಎಂದು ತಿಳಿಯಬೇಕು.

## ವಿಷ್ಣುವಿನ ಲಿಂಗಗಳಿಂದ ವಿಷ್ಣುವೇ ಪ್ರಾಣನು

**ಭಾಷ್ಯಮ್ – अत आह –**

**ಸೂ - ॐ ॥ प्राणस्तथाऽनुगमात् ॥ ॐ॥ ೨೮ ॥**

**'तं देवाः प्राणयन्त' (ऐ.आ. २-१-५.) 'स एषोऽसुः स एष प्राणः' (ऐ.आ. २-१-५.) 'प्राण ऋच इत्येव विद्यात्' (ऐ.आ.२-२-२.) 'तदयं प्राणोऽधितिष्ठति' (ऐ.आ.२-३-८.) इत्याद्यनुगमात् । अत्रापि प्राणो विष्णुरेव ।**

ಅದಕ್ಕಾಗಿ ಸೂತ್ರಕಾರರು ಹೇಳುತ್ತಾರೆ 'ಪ್ರಾಣಃ ತಥಾನುಗಮಾತ್' ಎಂದು.

'ದೇವತೆಗಳು ಆ ಪ್ರಾಣನನ್ನು ಶಿಷ್ಯರಿಗೆ ಉಪದೇಶಿಸಿದರು' 'ಆ ಪರಮಾತ್ಮನೇ ಅಸು ಎನಿಸಿದ್ದಾನೆ ಮತ್ತು ಪ್ರಾಣನೆನಿಸಿದ್ದಾನೆ' 'ಶ್ರುತಿಗಳು ಪ್ರಾಣನೆಂದೇ ತಿಳಿಸುತ್ತವೆ' 'ಈ ಪ್ರಾಣನೇ ದೇಹರಥದಲ್ಲಿ ಕುಳಿತಿದ್ದಾನೆ' ಹೀಗೆ ವಿಷ್ಣುವಿನಲ್ಲಿರುವ ಅನೇಕ ಧರ್ಮಗಳು ಕೇಳಿಸುತ್ತಿರುವುದರಿಂದ ಐತರೇಯಶ್ರುತಿಯಲ್ಲಿ ಹೇಳಲ್ಪಟ್ಟ ಪ್ರಾಣನು ವಿಷ್ಣುವೇ ಆಗಿದ್ದಾನೆ.

**ಭಾಷ್ಯದೀಪಿಕಾ** – सिद्धान्तयत्सूत्रमवतारयति – अत इति ॥ यतः पूर्वपक्षः प्राप्तः अत उत्तरं सूत्रमाह भगवान् बादरायण इत्यर्थः ।

ಸೂತ್ರಂ ಪಠಿತ್ವಾ ತತ್ರಾನುಗಮಾದಿತಿ ಹೇತ್ವಂಶಂ ಶ್ರುತ್ಯುದಾಹರಣೇನ ವ್ಯಾಚಷ್ಟೇ ಪ್ರಾಣ ಇತಿ ॥ ಇತ್ಯಾದೀತಿ ॥ ಏವಮಾದಿವಾಕ್ಯೋಕ್ತಾನಾಂ ದೇವತೋಪದೇಶ್ಯತ್ವಾದಿಲಿಙ್ಗಾನಾಮತ್ರಾಸ್ಮಿನ್ ಪ್ರಕರಣೇ ಬಹುಷು ಸ್ಥಲೇಷು 'ಅನುಗಮಾತ್' ಅನುವೃತ್ತೇರಭ್ಯಾಸಾದಿತ್ಯರ್ಥಃ । ಆದಿಪದೇನ 'ಪ್ರಾಣೋ ಹ್ಯೇಷ ಯ ಏಷ ತಪತಿ' ಇತಿ ಸೂರ್ಯಮಂಡಲಸ್ಥತ್ವ-ಪ್ರತಿಪಾದಕವಾಕ್ಯಂ ಗೃಹ್ಯತೇ । ತಥಾ 'ಸರ್ವಾಣಿ ಭೂತಾನ್ಯಾಪಿಪೀಲಿಕಾಭ್ಯಃ ಪ್ರಾಣೇನ ಬೃಹತ್ಯಾ ವಿಷ್ಟಬ್ಧಾನಿ' ಇತ್ಯಾದಿ ವಾಕ್ಯಂ ಚ ಗೃಹ್ಯತೇ ।

ಸೌತ್ರಂ ತಥಾಶಬ್ದಂ ವ್ಯಾಚಷ್ಟೇ – ಅತ್ರಾಪೀತಿ ॥ ಶ್ರುತ ಇತಿ ಶೇಷಃ । ನ ಕೇವಲಂ 'ತದ್ವೈ ತ್ವಮ್' ಇತ್ಯತ್ರ, ಕಿನ್ತ್ವೈತರೇಯೇऽಪೀತಿ ಸಮುಚ್ಚಯೇऽಪಿಶಬ್ದಃ । ಸೂತ್ರೇ ಅನುವೃತ್ತಸ್ಯ ತತ್ತ್ವಿತ್ಯಸ್ಯಾರ್ಥಮಾಹ – ವಿಷ್ಣುರೇವೇತಿ ॥ ಅನೇನ ಯಥಾ 'ತದ್ ವೈ ತ್ವಮ್' ಇತಿ ಶ್ರುತ್ಯುಕ್ತಪ್ರಾಣೋ ವಿಷ್ಣುಃ ತಥೈತರೇಯೋಕ್ತೋऽಪಿ ವಿಷ್ಣುರೇವ, ನ ತ್ವನ್ಯಃ । ಕುತಃ? ವಿಷ್ಣುಲಿಙ್ಗಾನಾಂ ದೇವತೋಪದೇಶ್ಯತ್ವಾದಿನಾಮಸ್ಮಿನ್ ಪ್ರಕರಣೇ 'ಅನುಗಮಾತ್' ಅನುವೃತ್ತೇ-ರಭ್ಯಾಸಾದಿತಿ ಸೂತ್ರಾರ್ಥ ಉಕ್ತೋ ಭವತಿ । ಐತರೇಯೇ 'ತಂ ದೇವಾಃ ಪ್ರಾಣಯನ್ತ' ಇತಿ ಏಕಖಣ್ಡಸ್ಥಂ ವಾಕ್ಯಮ್ । 'ತಂ' ನಾರಾಯಣಂ ವಾಯುಂ ಚ ದೇವಾಃ 'ಪ್ರಾಣಯನ್ತ' ಪ್ರಕರ್ಷೇಣ ಶಿಷ್ಯಪ್ರಶಿಷ್ಯಾದಿಷು ನೀತವನ್ತಃ ಉಪದಿದಿಶುರಿತ್ಯರ್ಥಃ । ಅನೇನ ವಿಷ್ಣೋಃ ಸರ್ವದೇವೋಪಾಸ್ಯತ್ವಮುಕ್ತಂ ಭವತಿ । 'ಸ ಏಷೋऽಸುಃ ಸ ಏಷ ಪ್ರಾಣಃ

ಪ್ರತಿಪದಾರ್ಥ - ಸಿದ್ಧಾಂತವನ್ನು ಸಮರ್ಥಿಸುವ ಸೂತ್ರವನ್ನು ವ್ಯಾಖ್ಯಾನಿಸುತ್ತಿದ್ದಾರೆ. ಅತಃ = ಯಾವ ಕಾರಣದಿಂದ ಪೂರ್ವಪಕ್ಷವು ಪ್ರಾಪ್ತವಾಗಿದೆಯೋ ಆ ಕಾರಣದಿಂದ, ಆಹ = ಮುಂದಿನ ಸೂತ್ರವನ್ನು 'ಪ್ರಾಣಸ್ತಥಾನುಗಮಾತ್' ಎಂದು ಹೇಳುತ್ತಿದ್ದಾರೆ. ಏತರೇಯದಲ್ಲಿ ಹೀಗೆ ಕೇಳಿಸುತ್ತಿದೆ. ತಂ = ಪ್ರಾಣನನ್ನು, ದೇವಾಃ = ದೇವತೆಗಳು, ಪ್ರಾಣಿಯಂತ = ಶಿಷ್ಯರಿಗೆ ಉಪದೇಶಿಸಿದರು. ಮತ್ತೊಂದೆಡೆ ಹೀಗಿದೆ ಏಷಃ = ಈ ಪ್ರಾಣನು, ಅಸುಃ = ದೋಷನಾಶಕನಾದ್ದರಿಂದ ಅಸು ಎನಿಸಿದ್ದಾನೆ, ಏಷಃ = ಇವನೇ,

---

स एष भूतिः' इत्याद्यन्यखण्डगतं वाक्यम् । अनेन भूतित्वादिना देवाद्युपास्यत्वमुच्यते । 'स एषः' भगवान् दुष्टनिरसनादसुः प्रकृष्टानन्दरूपत्वात् प्राणः देवानां भूतिशब्दितज्ञानाद्यैश्वर्य-प्रदत्वादसुराणाम् अज्ञानाद्यनैश्वर्यहेतुत्वाच्च भूत्यभूतिशब्दवाच्य इत्यर्थः । तत्रैव 'ता वा एताः सर्वा ऋचः सर्वे वेदाः सर्वे घोषा एकैव व्याहृतिः प्राण एव । प्राण ऋच इत्येव विद्यात्' इति अन्यद् वाक्यम् । अत्र प्राणस्य सर्ववेदोक्तत्वमुच्यते । यास्ताः एताः सर्वा ऋचस्तासां 'एकैव व्याहृतिः' एकमेव व्याहर्तव्यं प्रतिपाद्यम् । तच्च किम्? प्राणो विष्णुरेव ।

किञ्च ये सर्वे वेदाः तेषामपि प्राण एव प्रतिपाद्यः। अपि च ये समुद्रादिघोषाः तेषामपि, किमु वेदानाम् । तत्र ऋचस्तु विशेषत इन्द्रादिनामवतो विष्णोर्गुणान् अल्पज्ञाना- मपि प्रकाशयन्तीति, प्राणे नारायणे तद्विषया एव 'विद्यात्' तत्प्रतिपादिका एवेति जानीयादित्यर्थः ।

ऐतरेयभाष्ये तु – प्रथमप्राणपदमपि विषयसप्तम्यन्ततया व्याहृतिशब्दं च व्याहरणपरतया व्याख्याय एकमेव व्याहरणं निर्दोषगुणपूर्तिवाचकत्वादेकप्रकारमेव नामेत्यर्थ उक्तः । तत्त्वप्रदीपेऽप्ययमेवोक्तः। 'अथ देवरथः तस्य वागुद्धिः श्रोत्रे पक्षसी चक्षुषी युक्ते मनः सङ्गृहीता तदयं प्राणोऽधितिष्ठति' इति वाक्यान्तरम् । अत्र प्राणस्य देहरथत्वमुच्यते । प्रमेयान्तरकथनारम्भार्थोऽथशब्दः । उच्यत इति शेषः। तथा च देवस्य विष्णोः वायोः अध्यात्ममधिदैवतं च रथ उच्यते इत्यर्थः । तस्याध्यात्मं देहाख्यरथस्य 'वाक्' वागाख्या उमा उद्धिः धारणरज्जुरूपा अधिदैवं विष्णुरथस्य प्रसिद्धस्यन्दनस्य च नागाकारोमा उद्धिः 'श्रोत्रे' दक्षवामपार्श्वगतचन्द्रतद्भार्ये 'पक्षसी' पार्श्वयुक्ताश्वौ अन्यत्राश्वरूपौ पार्श्वयोर्युक्तौ 'चक्षुषी' उभयपार्श्वगतसूर्यतद्भार्ये च 'युक्ते' अग्रतो नियुक्ताश्वौ 'मनः' मनोऽभिमानी रुद्रः 'सङ्गृहीता' सारथिः । एवम् अधिदैवं प्रसिद्धस्यन्दनस्यापि रुद्रः सारथिः । स चासावयं च तदयमित्येकं पदम् । तत्त्वप्रदीपरीत्या भिन्नपदत्वेऽपि तदिति रथतयोक्तं शरीरं परामृश्यते । लिङ्गव्यत्ययेन तं रथमिति वा । अयं प्राणो विष्णुः वायुश्चाधितिष्ठतीत्यर्थः । लिङ्गेन पूर्वपक्षिते कथं तेनैव सिद्धान्त इत्याशङ्कानुदयाय लिङ्गबाहुल्योक्तिः ।

यदा बहुत्वनिरवकाशत्वाख्यप्रकारद्वयेनापि दुर्बललिङ्गस्योभयथाप्रबललिङ्गतो बाध-सम्भवेन तैनैव प्राणस्य विष्णुत्वसिद्धिः, तदा किमु वाच्यं निरवकाशब्रह्मशब्दाभ्यासादिति भावेनानुगमपदं प्रकारान्तरेण व्याचष्टे - ब्रह्मेति ॥

ಪ್ರಾಣಃ = ಉತ್ಕೃಷ್ಟ ಆನಂದರೂಪನಾದ್ದರಿಂದ ಪ್ರಾಣ ಎನಿಸಿದ್ದಾನೆ. ಮತ್ತೊಂದಡೆ ಹೀಗಿದೆ ಋಚಃ = ಶ್ರುತಿಗಳು, ಪ್ರಾಣಃ ಇತ್ಯೇವ = ಪ್ರಾಣನೆಂದೇ, ವಿದ್ಯಾತ್ = ಪರಮಾತ್ಮನನ್ನು ತಿಳಿಸುತ್ತವೆ. ಇನ್ನೊಂದು ಕಡೆ ತದಯಂ ಪ್ರಾಣಃ = ಅಂತಹ ಈ ಪ್ರಾಣನೇ, ಅಧಿತಿಷ್ಠತಿ = ದೇಹದಲ್ಲಿ ನೆಲೆಸಿದ್ದಾನೆ. ಇತ್ಯಾದಿ = ಈ ರೀತಿಯಾಗಿ, ಅನುಗಮಾತ್ = ಅನೇಕಬಾರಿ ವಿಷ್ಣುಧರ್ಮಗಳು ಕೇಳಿಸುತ್ತಿರುವುದರಿಂದ. ಅತ್ರಾಪಿ = ಈ ಐತರೇಯದಲ್ಲಿಯೂ, ಪ್ರಾಣಃ = ಪ್ರಾಣಶಬ್ದವಾಚ್ಯನಾದವನು, ವಿಷ್ಣುರೇವ = ವಿಷ್ಣುವೇ ಹೊರತು ವಾಯುವಲ್ಲ.

**तत्वप्रकाशिका – सिद्धान्तयत्सूत्रमवतार्य व्याचष्टे – अत इति ॥ 'तद्वै त्वं प्राणः' इति श्रुताविवात्रापि श्रुतः प्राणो विष्णुरेव । विष्णुलिङ्गानां देवतोपास्यत्वादीनामस्मिन्प्राणेऽनुगमादनुवृत्तेरभ्यासादित्यर्थः ।**

ಸಿದ್ಧಾಂತಮಾಡಲು ಸೂತ್ರಕ್ಕೆ ಅವತಾರಿಕೆ ನೀಡಿ ''ಅತಃ'' ಎಂದು ವ್ಯಾಖ್ಯಾನಿಸುತ್ತಿದ್ದಾರೆ. 'ತದ್ವೈ ತ್ವಂ ಪ್ರಾಣಃ' ಎಂಬ ಶ್ರುತಿಯಲ್ಲಿ ಪ್ರಾಣ ಎಂದರೆ ವಿಷ್ಣುವೆಂದು ಹೇಗೆ ನಿರ್ಣಯಿಸಲಾಯಿತೋ ಆದರಂತೆ ಐತರೇಯಶ್ರುತಿಯಲ್ಲಿ ಶ್ರುತನಾದ ಪ್ರಾಣನೂ ಸಹ ವಿಷ್ಣುವೇ ಆಗಿದ್ದಾನೆ. ಏಕೆಂದರೆ ಈ ಪ್ರಕರಣದಲ್ಲಿ ವಿಷ್ಣುವಿನ ಅಸಾಧಾರಣಧರ್ಮವಾದ ದೇವತೋಪಾಸ್ಯತ್ವಾದಿಗಳು ಈ ಪ್ರಾಣನಲ್ಲಿ ಅನುವೃತ್ತವಾಗಿವೆ. ಅಂದರೆ ಅನೇಕಬಾರಿ ಹೇಳಲ್ಪಟ್ಟಿವೆ ಎಂದರ್ಥ.

**तथाशब्दः समुच्चयार्थोऽतोत्रापीत्याह – तं देवाः प्राणायन्तेति ॥ तं प्राणं देवाः शिष्यादिषु सम्यक् नीतवन्तः । 'स एषोऽसुः स एष प्राणः स एष भूतिश्चाभूतिश्च तं भूतिरिति देवा उपासाञ्चक्रिरे' इति प्राणस्य भूतित्वेन देवोपास्यत्वमुच्यते । 'ता वा एताः सर्वा ऋचः सर्वे वेदाः सर्वे घोषा एकैव व्याहृतिः प्राण एव प्राण ऋच इत्येव विद्यात्' इति तस्य सर्ववेदोक्तत्वमुच्यते ।**

ಸೂತ್ರದಲ್ಲಿರುವ ತಥಾಶಬ್ದವು ಸಮುಚ್ಚಯಾರ್ಥದಲ್ಲಿದೆ. ಆದ್ದರಿಂದಲೇ ಭಾಷ್ಯಕಾರರು 'ಅತೋ ಅತ್ರಾಪಿ' ಎಂದು ಇಲ್ಲಿಯೂ ಸಹ ಹೇಳಿದ್ದಾರೆ. ''ತಂ ದೇವಾಃ ಪ್ರಾಣಯಂತ'' ಎಂಬ ಶ್ರುತಿಗೆ ಹೀಗೆ ಅರ್ಥ. ತಂ = ಆ ಪ್ರಾಣನನ್ನು, ದೇವಾಃ = ದೇವತೆಗಳು, ಪ್ರಾಣಯಂತ = ತಮ್ಮ ಶಿಷ್ಯರಿಗೆ ಶ್ರೇಷ್ಠತ್ವೇನ

---

ಅಸ್ಮಿನ್ ಪ್ರಕರಣೇ 'ಏತದ್ಬ್ರಹ್ಮ' (ಐ.ಆ. ೨-೧-೧.) 'ಬ್ರಹ್ಮಣೋ ಲೋಕಃ' (ಐ.ಆ. ೨-೧-೩.) 'ಬ್ರಹ್ಮೇಮಂ ಪುರುಷಮ್' (ಐ.ಆ. ೨-೧-೪.) 'ಉದರಂ ಬ್ರಹ್ಮೇತ್ಯಾಚಕ್ಷತೇ' (ಐ.ಆ.೨-೧-೪.) 'ಅ ಇತಿ ಬ್ರಹ್ಮ' (ಐ.ಆ. ೨-೩-೮.) ಇತ್ಯಾದಿನಿರವಕಾಶಬ್ರಹ್ಮಶಬ್ದಾಭ್ಯಾಸಾಚ್ಚೇತ್ಯರ್ಥಃ । ಏತದ್ ವಿಷ್ಣುಸ್ವರೂಪಂ ಬ್ರಹ್ಮ ಗುಣಪೂರ್ಣಮ್ । ಅಯಂ ಜೀವೋ ಬ್ರಹ್ಮಣಃ ಪರಸ್ಯಾऽಶ್ರಯಃ । ಇಮಂ ಪುರುಷಂ ಚತುರ್ಮುಖಂ ಪರಬ್ರಹ್ಮ ಪ್ರಾಪಯತ । ವಾಯುರ್ಯತ್ರ ಸ್ಥಿತ ಉರ್ವೇವ ಗರಣಂ ಸ್ತವನಂ ಚಕ್ರೇ ತತ್ಸ್ಥಾನಮುದರಂ ತದ್ಗತಮಿತ್ಯರ್ಥಃ ।

ಉಪದೇಶಿಸಿದರು. 'ಸ ಏಷೋಽಸುಃ ಸ ಏಷ ಪ್ರಾಣಃ ಸ ಏಷ ಭೂತಿಶ್ಚಾಭೂತಿಶ್ಚ ತಂ ಭೂತಿರಿತಿ ದೇವಾ ಉಪಸಾಂಚಕ್ರಿರೇ' ಆ ಪ್ರಾಣನು ಅಸು = ಶತ್ರುನಾಶಕನು, ಆ ಪ್ರಾಣನು ಶ್ರೇಷ್ಠನು, ಆ ಪ್ರಾಣನು ದೇವತೆಗಳಿಗೆ ಐಶ್ವರ್ಯಪ್ರದನು, ದೈತ್ಯರಿಗೆ ಅಜ್ಞಾನಪ್ರದನು, ಇಂತಹ ಪ್ರಾಣನನ್ನು ದೇವತೆಗಳು ಭೂತಿ ಎಂದು ಉಪಾಸನೆ ಮಾಡಿದರು'' ಎಂದು. ಹೀಗೆ ಶ್ರುತಿಯಲ್ಲಿ ಪ್ರಾಣನಿಗೆ ಭೂತಿತ್ವೇನ ದೇವತೋಪಾಸ್ಯತ್ವವು ಹೇಳಲ್ಪಟ್ಟಿದೆ.

'ತಾ ವಾ ಏತಾಃ ಸರ್ವಾ ಋಚಃ ಸರ್ವೇ ವೇದಾಃ ಸರ್ವೇ ಘೋಷಾಃ ಏಕೈವ ವ್ಯಾಹೃತಿಃ ಪ್ರಾಣ ಏವ ಪ್ರಾಣ ಋಚ ಇತ್ಯೇವ ವಿದ್ಯಾತ್' (ಯಾವ, ಸರ್ವ ಋಕ್ಕುಗಳು ಎಲ್ಲಾ ವೇದಗಳು ಎಲ್ಲಾ ಧ್ವನಿಗಳು ಒಬ್ಬನೇ ಪ್ರಾಣನೆಂಬ ಪರಮಾತ್ಮನನ್ನು ಪ್ರತಿಪಾದಿಸುತ್ತಿವೆಯೆಂದು ತಿಳಿಯಬೇಕು) ಹೀಗೆ ಪ್ರಾಣನಿಗೆ ಸರ್ವವೇದಪ್ರತಿಪಾದ್ಯತ್ವವು ಹೇಳಲ್ಪಟ್ಟಿದೆ.

**'ಅಥ ದೇವರಥಸ್ತಸ್ಯ ವಾಗುದ್ಧಿಃ ಶ್ರೋತ್ರೇ ಪಕ್ಷಸೀ ಚಕ್ಷುಷೀ ಯುಕ್ತೇ ಮನಃ ಸಙ್ಗೃಹೀತಾ ತದಯಂ ಪ್ರಾಙೋಽಧಿತಿಷ್ಠತಿ' ಇತಿ ತ(ಸ್ಯೈವ ದೇಹ)ಸ್ಯ ದೇಹರಥತ್ವಮುಚ್ಯತೇ । ಸ ಚಾಸಾವಯಂ ಚೇತಿ ತದಯಮ್ । ತದಿತಿ ರಥತಯೋಕ್ತಂ ಶರೀರಂ ವಾ । ಲಿಙ್ಗವ್ಯತ್ಯಯೋ ವಾ । ಲಿಙ್ಗೇನ ಪೂರ್ವಪಕ್ಷಿತೇ ಕಥಂ ತೇನೈವ ಸಿದ್ಧಾನ್ತ ಇತ್ಯಾಶಙ್ಕಾನುದಯಾಯ ಲಿಙ್ಗಬಾಹುಲ್ಯೋಕ್ತಿಃ । ಬಾಹುಲ್ಯಸ್ಯಾಪಿ ಪ್ರಾಬಲ್ಯಹೇತುತ್ವಾತ್ । ಯದಾಹುಃ 'ದ್ವಿವಿಧಂ ಬಲವತ್ತ್ವಂ ಚ ಬಹುತ್ವಾಚ್ಚ ಸ್ವಭಾವತಃ' ಇತಿ ।**

'ಅಥ ದೇವರಥಸ್ಯಸ್ಯ ವಾಗುದ್ಧಿಃ ಶ್ರೋತ್ರೇ ಪಕ್ಷಸೀ ಚಕ್ಷುಷೀ ಯುಕ್ತೇ ಮನಃ ಸಂಗೃಹೀತಾ ತದಯಂ ಪ್ರಾಙೋಽಧಿತಿಷ್ಠತಿ' ಅನಂತರ ವಿಷ್ಣುವಿನ ರಥ ಯಾವುದೆಂದು ಹೇಳುತ್ತಾರೆ. ಆ ವಿಷ್ಣುದೇವನ ರಥಕ್ಕೆ ವಾಗಭಿಮಾನಿಯಾದ ಉಮಾದೇವಿಯು ಹಗ್ಗ, ಚಂದ್ರ ಮತ್ತು ಅವನ ಪತ್ನಿಯು ಎರಡು ಪಾರ್ಶ್ವಗಳಲ್ಲಿರುವ ಕುದುರೆಗಳು, ಸೂರ್ಯ ಮತ್ತು ಅವನ ಪತ್ನಿಯು ಮುಂದಿರುವ ಕುದುರೆಗಳು, ಮನೋಭಿಮಾನಿಯಾದ ರುದ್ರನು ಸಾರಥಿಯು, ಪ್ರಾಣನಾಮಕನಾದ ಪರಮಾತ್ಮನೇ ರಥದಲ್ಲಿ ಕುಳಿತಿದ್ದಾನೆ. ಹೀಗೆ ಶ್ರುತಿಯಲ್ಲಿ ಪ್ರಾಣನಿಗೆ ದೇಹವು ರಥವಾಗಿದೆಯೆಂದು ಹೇಳಲ್ಪಟ್ಟಿದೆ. 'ತದಯಂ' ಎಂದರೆ 'ಸಚಾಸೌ ಅಯಮ್' ಎಂದು ವಿವಕ್ಷಿಸಬೇಕು. ಏಕೆಂದರೆ, ಪ್ರಾಣ ಅಥವಾ ರಥ-ಶಬ್ದಗಳು ಪುಲ್ಲಿಂಗದಲ್ಲಿವೆ. ಆದರೆ ಭಾಷ್ಯದಲ್ಲಿ ನಪುಂಸಕಲಿಂಗದ ತತ್‌ಶಬ್ದವನ್ನು ಪ್ರಯೋಗಿಸಿದ್ದಾರೆ. ಆದ್ದರಿಂದ ಕರ್ಮಧಾರಯಸಮಾಸ ಮಾಡಿದಾಗ ಈ ಸಮಸ್ಯೆ ಪರಿಹಾರವಾಗುತ್ತದೆ. ಅಥವಾ ತತ್-ಶಬ್ದದಿಂದ ರಥರೂಪದಿಂದ ಹೇಳಿದ ಶರೀರವನ್ನು ತೆಗೆದುಕೊಳ್ಳಬೇಕು. ಶರೀರಶಬ್ದವು ನಪುಂಸಕ-ಲಿಂಗವಾದ್ದರಿಂದ ಸಮಸ್ಯೆಯಿಲ್ಲ. ಅಥವಾ ಶ್ರೌತಪ್ರಯೋಗವಾದ್ದರಿಂದ ಲಿಂಗವ್ಯತ್ಯಾಸವಿಲ್ಲವೆಂದು ತಿಳಿಯಬೇಕು.

ಇಂದ್ರಿಯಗಣಪಠಿತತ್ವ ಎಂಬ ಲಿಂಗದಿಂದ ಮುಖ್ಯಪ್ರಾಣನೇ ಪ್ರಾಣಶಬ್ದವಾಚ್ಯನೆಂದು ಪೂರ್ವಪಕ್ಷ ಮಾಡಲಾಯಿತು. ಇದನ್ನು ದೇವೋಪಾಸ್ಯತ್ವ, ಸರ್ವವೇದೋಕ್ತತ್ವ, ದೇಹರಥಿತ್ವವೇ ಮೊದಲಾದ

ಲಿಂಗಗಳಿಂದಲೇ ನಿರಾಸ ಮಾಡಲು ಹೇಗೆ ಸಾಧ್ಯ? ಎಂಬ ಶಂಕೆಗೆ ಉತ್ತರ ನೀಡಲು ಲಿಂಗ-ಬಾಹುಲ್ಯವನ್ನು ಹೇಳಿದ್ದಾರೆ. ಏಕೆಂದರೆ ಲಿಂಗಬಾಹುಲ್ಯವೂ ಸಹ ಪ್ರಾಬಲ್ಯಕ್ಕೆ ಕಾರಣವಾಗಿದೆ. ಪ್ರಾಬಲ್ಯವು ಎರಡು ವಿಧವೆಂದು ಹೇಳಿದ್ದಾರೆ. 'ದ್ವಿವಿಧಂ ಬಲವತ್ವಂ ಚ ಬಹುತ್ವಾಚ್ಚ ಸ್ವಭಾವತಃ' (ಸ್ವಭಾವದಿಂದ ಬಾಹುಲ್ಯದಿಂದ ಲಿಂಗವು ಪ್ರಬಲವಾಗುತ್ತದೆ ಎಂದು).

**(ತ) ನನು ಸೈದ್ಧಾನ್ತಿಕಲಿಙ್ಗತೋऽಪಿ ಪೂರ್ವಪಕ್ಷಲಿಙ್ಗಮೇವ ಬಲವತ್ । ನಿರವಕಾಶತ್ವಾತ್ । ಬಾಹುಲ್ಯೇನ ಬಲವತೋऽಪಿ ಸ್ವಭಾವಬಲಿನಃ ಪ್ರಾಬಲ್ಯಾತ್ । ಯತ ಆಹುಃ । 'ತಯೋಃ ಸ್ವಭಾವೋ ಬಲವಾನ್ ಉಪಜೀವ್ಯಾದಿಕಶ್ಚ ಸಃ' । ಇತಿ ।**

ಶಂಕೆ -- ಸಿದ್ಧಾಂತಪ್ರಾಪಕವಾದ ದೇಹೋಪಾಸ್ಯತ್ವ ಮೊದಲಾದ ಲಿಂಗಗಳಿಗಿಂತ ಪೂರ್ವಪಕ್ಷ-ಪ್ರಾಪಕವಾದ ಇಂದ್ರಿಯಗಣಪಠಿತತ್ವ ಲಿಂಗವೇ ಪ್ರಬಲವಾಗಿದೆ. ಏಕೆಂದರೆ ನಿರವಕಾಶವಾದ್ದರಿಂದ. ಬಹುತ್ವಪ್ರಯುಕ್ತವಾಗಿ ಪ್ರಬಲವಾಗುವುದಕ್ಕಿಂತ ಸ್ವಭಾವತಃ ಪ್ರಬಲವಾಗುವುದೇ ಶ್ರೇಷ್ಠ. ಈ ವಿಷಯದಲ್ಲಿ 'ತಯೋಃ ಸ್ವಭಾವೋ ಬಲವಾನ್ ಉಪಜೀವ್ಯಾದಿಕಶ್ಚ ಸಃ' ಸ್ವಭಾವತ್ವ ಮತ್ತು ಬಹುತ್ವಗಳ ಮಧ್ಯದಲ್ಲಿ ಸ್ವಭಾವವೇ ಶ್ರೇಷ್ಠವೆಂದು ಜ್ಞಾನಿಗಳ ಮಾತು ಸಮ್ಮತವಾಗಿದೆ. ಸ್ವಭಾವವೆಂದರೆ ಉಪಜೀವ್ಯಾದಿಗಳನ್ನು ತೆಗೆದುಕೊಳ್ಳಬೇಕು. ಆದ್ದರಿಂದ ದೇವೋಪಾಸ್ಯತ್ವವೇ ಮೊದಲಾದ ಅನೇಕಲಿಂಗಗಳಿಂದ ವಿಷ್ಣುವೇ ಪ್ರಾಣಶಬ್ದವಾಚ್ಯನೆಂದು ಹೇಗೆ ನಿರ್ಣಯಿಸುತ್ತೀರಿ?

ಸಮಾಧಾನ - ಇದು ತಪ್ಪು. ಸಿದ್ಧಾಂತಲಿಂಗಗಳೂ ಸಹ ಅನನ್ಯಥಾಸಿದ್ಧವಾದ್ದರಿಂದ ನಿರವಕಾಶ-ಗಳಾಗಿವೆ. ಆದ್ದರಿಂದ ಬಹುತ್ವಪ್ರಯುಕ್ತವಾಗಿ ಮತ್ತು ಸ್ವಭಾವಪ್ರಯುಕ್ತವಾಗಿ ಎರಡು ವಿಧದಿಂದಲೂ ಸಿದ್ಧಾಂತಲಿಂಗಗಳಿಗೆ ಪ್ರಾಬಲ್ಯವಿರುವುದರಿಂದ ಒಂದೇ ಪೂರ್ವಪಕ್ಷಯುಕ್ತಿಯು ದುರ್ಬಲವಾಗುತ್ತದೆ.

**ಭಾವದೀಪಃ – ಅತ ಇತೀತಿ ॥** 'ಅತೋऽನ್ಯಪ್ರಾಪ್ತಿಸದ್ಭಾವಾದಾಹ ಪ್ರಾಣಸ್ಯ ವಿಷ್ಣುತ್ವಂ ಸೂತ್ರಕಾರಃ' ಇತ್ಯರ್ಥೋ ಭಾಷ್ಯಸ್ಯ ಪ್ರಾಗುಕ್ತದಿಶಾ ಸುಜ್ಞಾನ ಇತಿ ನೋಕ್ತಃ । ಏವಮಗ್ರೇऽಪಿ । ಸೌತ್ರಪ್ರತಿಜ್ಞಾಹೇತ್ವೋರರ್ಥೋಕ್ತಿಪರಭಾಷ್ಯಂ ವ್ಯುತ್ಕ್ರಮೇಣ ವ್ಯಾಖ್ಯಾತಿ – **ತದ್ಧಿ ತ್ವಮಿತಿ ॥** ಅಪಿಪದಾರ್ಥವ್ಯಕ್ತಿರಿಯಮ್ । 'ವಿಷ್ಣುಮೇವ' ಇತ್ಯಾದಿವಕ್ಷ್ಯಮಾಣಸ್ಮೃತ್ಯನುರೋಧೇನ ಲಿಙ್ಗಾನಿ ನಿಷ್ಕರ್ಷಯತಿ ತಂ ದೇವಾ ಇತಿ ॥ ಲಿಙ್ಗಸ್ಯ ಪ್ರಾಣಸ್ಥತಾಭಿವ್ಯಕ್ತ್ಯಾ 'ಏತಂ ಪ್ರಾಣಮ್' ಇತಿ ವ್ಯಾಖ್ಯಾ

'ತಸ್ಮಾತ್ಶ್ರುತ್ವಾ ಪರಂ ಬ್ರಹ್ಮ ದೇವಾ ನಾರಾಯಣಾಭಿಧಮ್ ।
ಶಿಷ್ಯಪ್ರಶಿಷ್ಯಾದಿಷು ಚ ತೇऽನಯನ್ ವಾಯುನೋದಿತಮ್ ॥

ಇತಿ ತಜ್ಜಾಷ್ಯೋಕ್ತೇರಾಹ – **ಶಿಷ್ಯೇತಿ ॥** ಪ್ರೇತ್ಯಸ್ಯಾರ್ಥಃ ಸಮ್ಯಗಿತಿ । **ಪ್ರಾಣಸ್ಯ ಭೂತಿತ್ವೇನೇತಿ ॥** ಭಾಷ್ಯೇ 'ತಂ ಭೂತಿರಿತಿ ದೇವಾಃ' ಇತ್ಯೇವ ವಾಚ್ಯೇ 'ಸ ಏಷोऽಸುಃ ಸಪ್ರಾಣಃ' ಇತಿ

पूर्वांशोक्तिः 'तम्' इति परामृश्यमानं दर्शयितुमिति सूचितम् । 'ता वा एताः' इति श्रुत्यर्थं तु 'ज्योतिरुपक्रमात्' इत्यत्र वक्ष्यति । भाष्ये 'प्राणऋच इत्येव विद्यात्' इत्यंशोक्तिरपि ऋचस्तु विशेषत इन्द्रादिनामवतो विष्णोर्गुणानल्पज्ञानिनामपि प्रकाशयन्तीति प्राणो नारायण एवेति विद्यात् इति तद्भाष्योक्तदिशा ऋचां तन्निष्ठत्वात् तदारण्यकस्यापि तन्निष्ठत्वस्य द्योतनायेत्याहुः ।

'तदयम्' इति तच्छब्दपरामृष्टं दर्शयितुं पूर्वांशमाह – **अथ देवरथ इति** ॥ देवस्य विष्णो रथः देवरथः वाग्देवतोमोद्धरणहेतुरज्जुः । श्रोत्रदेवते चन्द्ररोहिण्यौ पार्श्वस्थाश्वौ चक्षुर्देवते सूर्यतद्भार्ये युगवाहकपुरःस्थितावश्वौ । मनो रुद्रः सङ्गृहीता प्रागुक्ताया उद्धेरित्यर्थः ।

**स चासाविति** ॥ सुप्सुपेति समासः । तेन लिङ्गोपपत्तिरिति भावः । कर्मकारकलाभाय भिन्नं पदं मत्वाऽऽह – **तदितीति** ॥ **'विष्णुर्वायुश्च तं रथं प्रकृष्टानन्दरूपत्वात् प्राणाख्यावधितिष्ठत'** इत्यैतरेयभाष्योक्तेस्तदित्यस्य तमित्यर्थं मत्वा आह – **लिङ्गव्यत्ययो वेति** ॥

**.....बाहुल्ये श्रुतिलिङ्गयोः ।**
**अन्यस्य मुख्यवाच्यत्वं न .....**

इत्यनुव्याख्यानुरोधेन तात्पर्यमाह **लिङ्गेनेति** ॥ **'इन्द्रियैः सहाभिधानात्'** इत्युक्तलिङ्गेनेत्यर्थः । **लिङ्गबाहुल्येति** ॥ एतल्लिङ्गानामेवोक्तिस्तु वक्ष्यमाणस्मृतिगृहीतत्वादिति भावः । **यदाहुरिति** ॥ विष्णुतत्वनिर्णयोक्तब्रह्मतर्कवचनकर्तार इत्यर्थः ।

**तयोरिति** ॥ पूर्वोक्तस्य उत्तरार्धमेतत् । आदिपदेन निरवकाशत्वग्रहः ।

"ಅತ ಇತಿ" ಎಂಬ ಟೀಕೆಯಲ್ಲಿರುವ ಪ್ರತೀಕಕ್ಕೆ ಹೀಗರ್ಥ-- ಹೀಗೆ ಅನ್ಯಪ್ರಾಪಕವಾದ ಲಿಂಗಗಳು ಕೇಳಿಸುತ್ತಿರುವುದರಿಂದ ಸೂತ್ರಕಾರರು ಪ್ರಾಣನಿಗೆ ವಿಷ್ಣುತ್ವವನ್ನು ಸಮರ್ಥಿಸುತ್ತಿದ್ದಾರೆ.ಎಂಬುದಾಗಿ ಹಿಂದೆ ಹೇಳಿದ ಪ್ರಕಾರ ಭಾಷ್ಯಕ್ಕೆ ಅರ್ಥವನ್ನು ತಿಳಿಯಬೇಕು. ಆದ್ದರಿಂದ ಇಲ್ಲಿ ಪ್ರತ್ಯೇಕವಾಗಿ ಹೇಳಿಲ್ಲ. ಮುಂದಿನ ಗ್ರಂಥದಲ್ಲೂ ಇದನ್ನು ಅನುಸಂಧಾನ ಮಾಡಿಕೊಳ್ಳಬೇಕು. ಸೂತ್ರದಲ್ಲಿರುವ ಪ್ರತಿಜ್ಞಾ ಹಾಗೂ ಹೇತುಗಳ ಅರ್ಥವನ್ನು ಹೇಳುವ ಭಾಷ್ಯವನ್ನು ವ್ಯುತ್ಕ್ರಮವಾಗಿ ವ್ಯಾಖ್ಯಾನಿಸುತ್ತಿದ್ದಾರೆ "ತದ್ವೈ ತ್ವಂ" ಇತ್ಯಾದಿಯಾಗಿ. ಭಾಷ್ಯದಲ್ಲಿರುವ 'ಅಪಿ' ಪದಾರ್ಥದ ಅಭಿಪ್ರಾಯವೇ ಇದಾಗಿದೆ.

'ವಿಷ್ಣುಮೇವ' ಇತ್ಯಾದಿಯಾಗಿ ಮುಂದೆ ಹೇಳುವ ಸ್ಥಿತಿಯನ್ನು ಅನುಸರಿಸಿ ಲಿಂಗಗಳನ್ನು ನಿಷ್ಕರ್ಷೆ ಮಾಡುತ್ತಿದ್ದಾರೆ ''ತಂ ದೇವಾಃ'' ಎಂಬುದಾಗಿ. ಲಿಂಗವು ಪ್ರಾಣನಲ್ಲಿದೆಯೆಂದು ಮೇಲ್ನೋಟಕ್ಕೆ ತೋರುವುದರಿಂದ 'ಏತಂ ಪ್ರಾಣಂ' ಎಂಬುದಾಗಿ ಶ್ರುತಿಯನ್ನು ವ್ಯಾಖ್ಯಾನಿಸುತ್ತಿದ್ದಾರೆ.

**ತಸ್ಮಾತ್ ಶ್ರುತ್ವಾ ಪರಂ ಬ್ರಹ್ಮ ದೇವಾ ನಾರಾಯಣಾಭಿಧಮ್ ।**
**ಶಿಷ್ಯಪ್ರಶಿಷ್ಯಾದಿಷು ಚ ತೇऽನಯನ್ ವಾಯುನೋದಿತಮ್ ॥**

ಆದ್ದರಿಂದ ದೇವತೆಗಳು ನಾರಾಯಣನೆಂಬ ಪರಬ್ರಹ್ಮನ ಬಗ್ಗೆ ಕೇಳಿದರು; ವಾಯುದೇವರಿಂದ ತಿಳಿದಿದ್ದನ್ನು ಶಿಷ್ಯಪ್ರಶಿಷ್ಯಾದಿಗಳಿಗೆ ಉಪದೇಶಿಸಿದರು.

ಹೀಗೆ ಐತರೇಯೋಪನಿಷತ್ತಿನ ಭಾಷ್ಯದಲ್ಲಿ ಹೇಳಿದ್ದರಿಂದ ಟೀಕೆಯಲ್ಲಿ ''ಶಿಷ್ಯಾದಿಷು'' ಎಂದು ಹೇಳಿದ್ದಾರೆ. ಪ್ರಾಣಯಂತ ಎಂಬಲ್ಲಿರುವ 'ಪ್ರ' ಉಪಸರ್ಗದ ಅರ್ಥವನ್ನು 'ಸಮ್ಯಕ್' ಎಂದು ಹೇಳಿದ್ದಾರೆ. ''ಪ್ರಾಣಸ್ಯ ಭೂತಿತ್ವೇನ'' ಎಂದು ಟೀಕೆಯಲ್ಲಿದೆ. ವಸ್ತುತಃ 'ತಂ ಭೂತಿಃ ದೇವಾಃ' ಎಂದು ಹೇಳಿದರೆ ಸಾಕಾಗುತ್ತಿತ್ತು. 'ಏಷೋऽಸುಃ ಸ ಏಷ ಪ್ರಾಣಃ' ಎಂಬುದಾಗಿ ಹಿಂದಿನ ವಾಕ್ಯವನ್ನು ಹೇಳುವ ಅವಶ್ಯಕತೆ ಇರಲಿಲ್ಲ. ಆದರೆ 'ತಮ್' ಎಂಬುದರಿಂದ ಯಾರನ್ನು ಪರಾಮರ್ಶಿಸಬೇಕೆಂಬುದನ್ನು ತಿಳಿಸಲು ಹಿಂದಿನ ವಾಕ್ಯದಲ್ಲಿ ಪ್ರಕೃತನಾದ ಪ್ರಾಣನನ್ನು ಉಲ್ಲೇಖಿಸಿದ್ದಾರೆ. 'ತಾ ವಾ ಏತಾಃ ಸರ್ವಾ ಋಚಃ' ಇತ್ಯಾದಿ ಶ್ರುತಿಯ ಅರ್ಥವನ್ನು ಮೂರನೆಯ ಪಾದದ ಜ್ಯೋತಿರುಪಕ್ರಮಾತ್ ಎಂಬ ಸೂತ್ರದಲ್ಲಿ ವಿವರಿಸುವವರಿದ್ದಾರೆ.

ಭಾಷ್ಯದಲ್ಲಿ 'ಪ್ರಾಣ ಋಚ ಇತ್ಯೇವ ವಿದ್ಯಾತ್' ಎಂಬಂಶವನ್ನು ಏಕೆ ಹೇಳಿದ್ದಾರೆಂದರೆ ಇಂದ್ರಾದಿಗಳ ಹೆಸರನ್ನು ಹೇಳುವ ಋಕ್ಕುಗಳೂ ಸಹ ವಿಷ್ಣುವಿನ ಗುಣಗಳನ್ನೇ ಹೇಳಲು ಹೊರಟಿವೆ. ಹೀಗೆ ಆಲಙ್ಕಾನಿಗಳಿಗೂ ಸಹ ಸಕಲಶಬ್ದಗಳಿಂದ ನಾರಾಯಣನೇ ವಾಚ್ಯನೆಂದು ತಿಳಿಸುವುದಕ್ಕಾಗಿ ಐತರೇಯಭಾಷ್ಯದ ಪ್ರಕಾರ ಎಲ್ಲಾ ಋಕ್ಕುಗಳೂ ಭಗವನ್ನಿಷ್ಠವಾದ್ದರಿಂದ ಅದರ ಆರಣ್ಯಕವಾದ ಐತರೇಯವೂ ಸಹ ಭಗವಂತನನ್ನೇ ಪ್ರತಿಪಾದಿಸುತ್ತದೆಂಬ ಸ್ವಾರಸ್ಯ ಇದರಲ್ಲಡಗಿದೆಯೆಂದು ಕೆಲವರು ವ್ಯಾಖ್ಯಾನಿಸುತ್ತಾರೆ.

ಭಾಷ್ಯದಲ್ಲಿ 'ತದಯಂ ಪ್ರಾಣೋऽಧಿಷ್ಠಿತಿ' ಎಂದಿದೆ. ಇಲ್ಲಿರುವ ತತ್‌ಶಬ್ದದಿಂದ ಯಾವುದನ್ನು ಪರಾಮರ್ಶಿಸಬೇಕೆಂಬುದನ್ನು ತಿಳಿಸಲು ಅದರ ಹಿಂದಿನ ವಾಕ್ಯವನ್ನು ಟೀಕೆಯಲ್ಲಿ ''ಅಥ ದೇವರಥಃ'' ಇತ್ಯಾದಿಯಾಗಿ ಉಲ್ಲೇಖಿಸಿದ್ದಾರೆ. ಆದ್ದರಿಂದ ತತ್‌ಶಬ್ದಕ್ಕೆ ದೇಹವೆಂಬ ರಥ ಎಂಬರ್ಥವು ತಿಳಿಯುತ್ತದೆ. ದೇವರಥಃ = ವಿಷ್ಣುವಿನ ರಥಕ್ಕೆ, ವಾಗುದ್ಧಿಃ = ವಾಗ್ದೇವತೆಯಾದ ಉಮಾದೇವಿಯು ಎಳೆಯುವ ಹಗ್ಗವಾಗಿದ್ದಾಳೆ. ಶ್ರೋತ್ರೇ = ಶ್ರೋತ್ರಾಭಿಮಾನಿಗಳಾದ ಚಂದ್ರ ಹಾಗೂ ರೋಹಿಣಿಯರು, ಪಕ್ಷಿಣೀ = ಎರಡೂ ಬದಿಯಲ್ಲಿರುವ ಕುದುರೆಗಳು, ಚಕ್ಷುಷೀ ಯುಕ್ತೇ = ಚಕ್ಷುರಭಿಮಾನಿದೇವತೆಗಳಾದ ಸೂರ್ಯ ಮತ್ತು ಅವನ ಹೆಂಡತಿ ಸಂಜ್ಞಾದೇವಿಯು ಮಧ್ಯದಲ್ಲಿರುವ ಎರಡು ಕುದುರೆಗಳು, ಮನಃ = ಮನೋಭಿಮಾನಿಯಾದ ರುದ್ರದೇವರು, ಸಂಗೃಹೀತಾಃ = ಇವರೆಲ್ಲರನ್ನೂ ಮುನ್ನಡೆಸುವ ಸಾರಥಿಯು. ಹೀಗೆ ಶುತ್ಯರ್ಥ.

ತದಯಂ ಎಂಬ ಶಬ್ದಕ್ಕೆ 'ಸ ಚ ಅಯಂ ಚ ತದಯಮ್' ಎಂದು ವಿಗ್ರಹ. ಪುಲ್ಲಿಂಗವಾದ ರಥಶಬ್ದವನ್ನು ನಪುಂಸಕಲಿಂಗದಲ್ಲಿರುವ ತತ್‌ಶಬ್ದದಿಂದ ಪರಾಮರ್ಶಿಸುವುದು ಕಷ್ಟ. ಆದ್ದರಿಂದ ''ಸ ಚಾಸೌ ಅಯಂ ಚ'' ಎಂದು ಸಮಾಸ ಮಾಡಬೇಕು. 'ಸುಪ್‌ಸುಪಾ' ಎಂಬುವುದರಿಂದ ಹೀಗೆ ಸಮಾಸ ಮಾಡಬಹುದು. ಇದರಿಂದ ಲಿಂಗವ್ಯತ್ಯಾಸದೋಷವು ಬರುವುದಿಲ್ಲ. ಅಥವಾ ತತ್‌ಶಬ್ದದಿಂದ ರಥವೆಂದು ಹೇಳಲ್ಪಟ್ಟ ಶರೀರವನ್ನು ಪರಾಮರ್ಶಿಸಬೇಕು. ರಥಶಬ್ದವು ಪುಲ್ಲಿಂಗವಾದರೂ ಶರೀರಶಬ್ದವು ನಪುಂಸಕಲಿಂಗದಲ್ಲಿರುವುದರಿಂದ ದೋಷವಿಲ್ಲ. ಹೀಗೆ ಹೇಳಿದಾಗ ಕರ್ಮಕಾರಕಲಾಭವು ಆಗುತ್ತದೆ.

ಅಥವಾ 'ತತ್' ಎಂಬ ಪದಕ್ಕೆ ತಮ್ ಎಂದು ಅರ್ಥೈಸಬಹುದು. ಏಕೆಂದರೆ ಐತರೇಯಭಾಷ್ಯದಲ್ಲಿ 'ವಿಷ್ಣುರ್ವಾಯುಶ್ಚ ತಂ ರಥಂ ಪ್ರಕೃಷ್ಟಾನಂದರೂಪತ್ವಾತ್ ಪ್ರಾಣಾಖ್ಯಾವಧಿತಿಷ್ಠತಃ' ಎಂಬುದಾಗಿ ತದಯಂ ಎಂಬುದಕ್ಕೆ ತಂ ರಥಂ ಎಂದು ಅರ್ಥೈಸಿದ್ದಾರೆ. ಈ ಅಭಿಪ್ರಾಯದಿಂದ ''ಲಿಂಗವ್ಯತ್ಯಯೋ ವಾ'' ಎಂದು ಟೀಕೆಯಲ್ಲಿ ಹೇಳಿದ್ದಾರೆ.

'..... ಬಾಹುಲ್ಯೇ ಶ್ರುತಿಲಿಂಗಯೋಃ।
ಅನ್ಯಸ್ಯ ಮುಖ್ಯವಾಚ್ಯತ್ವಂ ನ .....'

ಎಂಬ ಅನುವ್ಯಾಖ್ಯಾನಕ್ಕೆ ಅನುಸಾರಿಯಾದ ತಾತ್ಪರ್ಯವನ್ನು ''ಲಿಂಗೇನ ಪೂರ್ವಪಕ್ಷಿತೇ'' ಇತ್ಯಾದಿ ಟೀಕೆಯಿಂದ ಹೇಳುತ್ತಿದ್ದಾರೆ. 'ಇಂದ್ರಿಯೈಃ ಸಹಾಭಧಾನಾತ್' (ಇಂದ್ರಿಯಗಳ ಜೊತೆಗೆ ಹೇಳಲ್ಪಟ್ಟ) ಎಂಬ ಲಿಂಗದಿಂದ ಎಂದರ್ಥ. ''ಲಿಂಗಬಾಹುಲ್ಯೋಕ್ತಿಃ'' ಎಂದು ಟೀಕೆಯಲ್ಲಿದೆ. ವಿಷ್ಣುವಿನಲ್ಲಿ ಹೇಳಲ್ಪಟ್ಟ ಬಹುಲಿಂಗಗಳಿಗೆ ಮುಂದೆ ಉದಾಹರಿಸುವ ಸ್ಮೃತಿಗಳ ಅನುಗ್ರಹವಿದೆ ಎಂದು ಇದರಿಂದ ತಿಳಿಸಿದ್ದಾರೆ. 'ಯದಾಹುಃ' ಎಂದರೆ ವಿಷ್ಣುತತ್ವನಿರ್ಣಯದಲ್ಲಿ ಉದಾಹರಿಸಲ್ಪಟ್ಟ ಬ್ರಹ್ಮತರ್ಕಕರ್ತೃಗಳು ಹೇಳಿದ್ದಾರೆಂದರ್ಥ.

'ದ್ವಿವಿಧಂ ಬಲವತ್ತ್ವಂ ಚ' ಎಂಬುದಾಗಿ ಹಿಂದೆ ಹೇಳಿದ ಶ್ಲೋಕದ ಉತ್ತರಾರ್ಧವನ್ನೇ ''ತಯೋಃ ಸ್ವಭಾವೋ'' ಎಂಬುದಾಗಿ ಹೇಳಿದ್ದಾರೆ. ''ಉಪಜೀವ್ಯಾದಿಕಃ'' ಎಂಬಲ್ಲಿರುವ ಆದಿಪದದಿಂದ ನಿರವಕಾಶತ್ವವನ್ನು ಗ್ರಹಿಸಬೇಕು.

## ಬ್ರಹ್ಮಶಬ್ದದ ಅನುಗಮ

**ಭಾಷ್ಯಮ್ — 'ವಿಷ್ಣುಮೇವಾನಯನ್ ದೇವಾ ವಿಷ್ಣುಂ ಭೂತಿಮುಪಾಸತೇ।**
**ಸ ಏವ ಸರ್ವವೇದೋಕ್ತಸ್ತದ್ರಥೋ ದೇಹ ಉಚ್ಯತೇ ॥' ಇತಿ ಸ್ಕಾಂದೇ।**
**ಬ್ರಹ್ಮಶಬ್ದಾನುಗಮಾಚ್ಚ ॥೧೨॥**

'ದೇವತೆಗಳು ವಿಷ್ಣುವನ್ನೇ ಶಿಷ್ಯರಿಗೆ ಪ್ರಾಣನೆಂದು ಉಪದೇಶಿಸಿದರು. ವಿಷ್ಣುವನ್ನೇ ಐಶ್ವರ್ಯಪ್ರದನನ್ನಾಗಿ ತಿಳಿದು ಪೂಜಿಸಿದರು. ಅಂತಹ ವಿಷ್ಣುವೇ ಸರ್ವವೇದಪ್ರತಿಪಾದ್ಯನು. ಈ ದೇಹವು ಅವನ ರಥವೇ ಆಗಿದೆ' ಎಂದು ಸ್ಕಾಂದಪುರಾಣದಲ್ಲಿ ಹೇಳಲ್ಪಟ್ಟಿದೆ.

ಗುಣಪೂರ್ಣತ್ವವನ್ನು ಹೇಳುವ ಬ್ರಹ್ಮಶಬ್ದವು ಅನೇಕ ಬಾರಿ ಕೇಳಿಸುತ್ತಿರುವುದರಿಂದಲೂ ಪ್ರಾಣಶಬ್ದವಾಚ್ಯನು ವಿಷ್ಣುವೇ ಆಗಿದ್ದಾನೆ.

ಪ್ರತಿಪದಾರ್ಥ - ಸಿದ್ಧಾಂತಲಿಂಗಗಳು ಅನೇಕವಿರಬಹುದು. ಆದರೆ ಪೂರ್ವಪಕ್ಷ-ಲಿಂಗವು ನಿರವಕಾಶವಾಗಿ ಬಲಿಷ್ಠವಾಗಿದೆಯಲ್ಲವೇ? ಎಂಬ ಪ್ರಶ್ನೆಗೆ ಉತ್ತರಿಸುವುದಕ್ಕಾಗಿ ಸಿದ್ಧಾಂತಲಿಂಗದಲ್ಲಿಯೂ ನಿರವಕಾಶತ್ವವನ್ನು ಸಮರ್ಥಿಸಲು ಸ್ಮೃತಿಯನ್ನು ಉಲ್ಲೇಖಿಸುತ್ತಿದ್ದಾರೆ. ವಿಷ್ಣುಮೇವ = ವಿಷ್ಣುವನ್ನೇ, ದೇವಾಃ = ದೇವತೆಗಳು, ಆನಯನ್ = ಶಿಷ್ಯರಿಗೆ ಪ್ರಾಣನೆಂದು ಉಪದೇಶಿಸಿದರು. ವಿಷ್ಣುಂ = ಅಂತಹ ವಿಷ್ಣುವನ್ನೇ, ಭೂತಿಂ = ಐಶ್ವರ್ಯವ್ರದನನ್ನಾಗಿ, ಉಪಾಸತೇ = ತಿಳಿದು ಆರಾಧಿಸಿದರು. ಸ ಏವ = ಅಂತಹ ವಿಷ್ಣುವೇ, ಸರ್ವವೇದೋಕ್ತಃ = ಸಕಲವೇದ- ಪ್ರತಿಪಾದ್ಯನು. ದೇಹಃ = ದೇಹವು, ತದ್ರಥಃ = ಅವನ ರಥವೆಂದು, ಉಚ್ಯತೇ = ಹೇಳಲ್ಪಟ್ಟಿದೆ. ಇತಿ = ಈ ರೀತಿಯಾಗಿ, ಸ್ಕಾಂದೇ = ಸ್ಕಾಂದಪುರಾಣದಲ್ಲಿ ಹೇಳಿದ್ದಾರೆ. ಬ್ರಹ್ಮಶಬ್ದಾನುಗಮಾಚ್ಚ = ಗುಣಪೂರ್ಣವೆಂಬ ಅರ್ಥದಲ್ಲಿರುವ ಬ್ರಹ್ಮಶಬ್ದವು ಅನೇಕಬಾರಿ ಕೇಳಿಸುತ್ತಿರುವುದರಿಂದಲೂ ಪ್ರಾಣಶಬ್ದವಾಚ್ಯನು ವಿಷ್ಣುವೇ ಆಗಿದ್ದಾನೆ.

**तत्वप्रकाशिका – अतः कथं तैर्विष्णुत्वनिश्चय इत्यतो लिङ्गानामनन्यथासिद्धतां च स्मृत्या साधयति – विष्णुमेवेति ॥ एकप्रकारेण प्रबलात्प्रकारद्वयेनापि प्रबलस्याधिक्येन निर्णयोपपत्तिरिति भावः । अभ्युपेत्य चेदमुदितम् । यावता प्राणैः**

---

**भाष्यदीपिका–** ननु बाहुल्येन बलवतः सैद्धान्तिकलिङ्गादपि पूर्ववाद्युक्तलिङ्गमेव बलवत् । निरवकाशत्वेन स्वभावतो बलवत्त्वात् । न चाविशेषेणानिर्णयः, बाहुल्येन बलवतोऽपि स्वभावबलिनः प्राबल्यात् । यदाहुः –

**'द्विविधं बलवत्त्वं च बहुत्वाच्च स्वभावतः ।**
**'तयोः स्वभावो बलवान् उपजीव्यादिकश्च सः ॥'**

इति । अतः कथं तैर्विष्णुत्वनिश्चय इत्यतो देवतोपदेश्यत्वादिलिङ्गानां निरवकाशत्वमपि स्मृत्या साधयति – विष्णुमिति ॥ देवाः विष्णुमेव प्राधान्येन शिष्यादिषु ज्ञानसम्प्रदायप्रवर्तनेन 'आनयन्' उपादिशन् । भूतिमुद्दिश्य विष्णुमेवोपासते । भूतिमिति विधेयविशेषणं वा । तथा च विष्णुं भूतिं भूतिर्ज्ञानाद्यैश्वर्यरूप इत्युपासत इत्यर्थः । 'सः' विष्णुर्मुख्यवाच्यतयेति शेषः, तेनैवकारोपपत्तिः । 'तद्रथः' विष्णोरेव रथः । अत्रैवकारस्य द्विर्ग्रहणात् सर्वत्रानुषङ्गः सूचितः । तेन सर्वलिङ्गानामपि निरवकाशत्वमुक्तं भवति । स्कान्दे इत्यनन्तरं लिङ्गानामनन्यथासिद्धत्वमुक्तमिति वाक्यशेषः । तथा चैकप्रकारेण प्रबलात् पूर्वपक्षिलिङ्गात् प्रकारद्वयेनापि प्रबलस्य सैद्धान्तिकलिङ्गस्याऽधिक्येन निर्णयोपपत्तिरिति भावः । अभ्युपेत्य चेदमुदितम् । वस्तुतस्तु पूर्वपक्षिलिङ्गस्य न निरवकाशत्वेनापि प्राबल्यमस्ति, प्राणैः सहगणितत्वस्यान्तर्यामिनिष्ठतासम्भवात् ।

**सह गणितत्वस्यान्तर्यामितनष्टता सेत्स्यति । यदा प्रकारद्वयेनापि दुर्बललिङ्गस्यो-भयथा प्रबललिङ्गतो बाधसम्भवेन प्राणस्य विष्णुत्वसिद्धिस्तदा किं वाच्यमेतद् ब्रह्मशब्दाभ्यासादिति भावेनानुगमपदं प्रकारान्तरेण व्याचष्टे – ब्रह्मेति ॥ २८ ॥**

ಈ ವಿಷಯವನ್ನು ಸ್ಮೃತಿಯಿಂದ ''ವಿಷ್ಣುಮೇವ'' ಇತ್ಯಾದಿವಾಕ್ಯದಿಂದ ಸಾಧಿಸುತ್ತಿದ್ದಾರೆ.

ಒಂದು ಪ್ರಕಾರದಿಂದ ಪ್ರಬಲವಾಗಿರುವ ಲಿಂಗಕ್ಕಿಂತ ಎರಡು ಪ್ರಕಾರ ಪ್ರಬಲವಾಗಿರುವ ಲಿಂಗವೇ ಶ್ರೇಷ್ಠ. ಪ್ರಕೃತ ಸಿದ್ಧಾಂತಯುಕ್ತಿಗೆ ನಿರವಕಾಶತ್ವ ಮತ್ತು ಬಹುತ್ವವೆಂಬ ಎರಡು ಪ್ರಕಾರದಿಂದ ಶ್ರೇಷ್ಠತ್ವವಿದೆ. ವಸ್ತುತಃ ಪೂರ್ವಪಕ್ಷಯುಕ್ತಿಗೆ ನಿರವಕಾಶತ್ವವನ್ನು ಅವನ ಮಾತನ್ನು ಒಪ್ಪಿ ಹೇಳಿದ್ದು. ವಿಚಾರ ಮಾಡಿದರೆ ಪೂರ್ವಪಕ್ಷಯುಕ್ತಿಗೆ ನಿರವಕಾಶತ್ವವೇ ಇರುವುದಿಲ್ಲ. ಏಕೆಂದರೆ ಸರ್ವಾಂತರ್ಯಾಮಿಯಾದ ಪರಮಾತ್ಮನಲ್ಲಿ ಇಂದ್ರಿಯಗಣಪತಿತತ್ವವೆಂಬ ಪೂರ್ವಪಕ್ಷಯುಕ್ತಿಯು ಸುಲಭವಾಗಿ ಕೂಡುತ್ತದೆ. ಹೀಗೆ ನಿರವಕಾಶತ್ವ ಮತ್ತು ಬಹುತ್ವ ಎಂಬ ಎರಡು ಪ್ರಕಾರದಿಂದಲೂ ಇಂದ್ರಿಯಗಣಪತಿತತ್ವವೆಂಬ ಪೂರ್ವಪಕ್ಷಯುಕ್ತಿಯು ದುರ್ಬಲವಾಗಿರುವಾಗ ಎರಡೂ ಪ್ರಕಾರದಿಂದಲೂ ಪ್ರಬಲವಾದ ದೇವೋಪಾಸ್ಯತ್ವವೇ ಮೊದಲಾದ ಲಿಂಗಗಳಿಂದ ಬಾಧಿತವಾಗುತ್ತದೆ. ಈ ಕಾರಣದಿಂದ ಪ್ರಾಣಶಬ್ದವಾಚ್ಯನಾದವನು ವಿಷ್ಣುವೇ ಎಂದು ನಿರ್ಣಯವಾಗುತ್ತದೆ. ಹೀಗೆ ನಿರ್ಣಯವಾದ ಮೇಲೆ 'ಏತದ್ ಬ್ರಹ್ಮ' 'ಬ್ರಹ್ಮಣೋ ಲೋಕಃ' ಬ್ರಹ್ಮೇಮಂ ಪುರುಷಮ್' 'ಉದರಂ ಬ್ರಹ್ಮ' ಇತ್ಯಾದಿ ಸ್ಥಳಗಳಲ್ಲಿ ನಿರವಕಾಶವಾದ ಬ್ರಹ್ಮಶಬ್ದದ ಅನುಗಮವಿರುವುದರಿಂದ (ಬ್ರಹ್ಮಶಬ್ದದ ಅಭ್ಯಾಸವಿರುವುದರಿಂದ) ವಿಷ್ಣುವೇ ಪ್ರಾಣಶಬ್ದವಾಚ್ಯನೆಂದು ಸುಸ್ಪಷ್ಟವಾಗುತ್ತದೆ. ಈ ಅಭಿಪ್ರಾಯದಿಂದಲೇ ಸೂತ್ರದಲ್ಲಿರುವ ಅನುಗಮಪದವನ್ನು ಭಾಷ್ಯಕಾರರು ''ಬ್ರಹ್ಮಶಬ್ದಾನುಗಮಾಚ್ಚ'' ಎಂಬುದಾಗಿ ಮತ್ತೊಂದು ಪ್ರಕಾರದಿಂದ ವ್ಯಾಖ್ಯಾನಿಸಿದ್ದಾರೆ.

**भावदीपः – अनन्यथासिद्धतां चेति ॥** न केवलं बाहुल्यमिति चार्थः । स्मृता-ववधारणोक्त्यैतल्लाभ इति भावेन विष्णुमेवेत्यन्तप्रतीकोक्तिः । कथं तावतोक्तशङ्का-निरासः? इत्यतः तात्पर्यमाह – **एकेति ॥** निरवकाशत्वप्रकारेणेत्यर्थः । **प्रकार-द्वयेनेति ॥** बहुत्वनिरवकाशत्वरूपप्रकारद्वयेनेत्यर्थः ।

..... अत्रगस्य हि ।
विष्णोरेव तु लिङ्गानि प्राणस्थानि तु सर्वशः ॥ इत्याद्यनुभाष्ये ।

नच **'अनन्यथा सिद्धत्वम् अन्यश्रुतिलिङ्गादेः'** इत्यादि न्यायविवरणे च शास्त्र-दृष्टिसूत्रदिशा सावकाशत्वोक्तेः तदनुरोधेन भाष्यभावमाह – **अभ्युपेत्य चेति*** ॥ इन्द्रियैः सह गणितत्वरूपपूर्वपक्षलिङ्गस्य निरवकाशत्वमभ्युपेत्येदं विष्णुलिङ्गानां

**ಬಾಹುಲ್ಯಂ ನಿರವಕಾಶತ್ವಂ ಚೇತ್ಯರ್ಥಃ । ಅನ್ಯಥಾ ಏಕಸ್ಯ ನಿರವಕಾಶತ್ವೋಕ್ತೌ ವಾ ತದನುಕ್ತಾವಪಿ ಸಾವಕಾಶಲಿಙ್ಗಬಾಹುಲ್ಯೇನ ವಾ ಸಾವಕಾಶೈಕಲಿಙ್ಗಬಾಧಕಸಮ್ಭವಾತ್ ತದ್ ಬಾಹುಲ್ಯಂ ತನ್ನಿರವಕಾಶತ್ವಂ ಚ ನ ವಾಚ್ಯಮಿತಿ ಭಾವಃ । ಯಾವತಾ 'ಯತಃ' ಇತ್ಯರ್ಥಃ ।**

**ಭಾಷ್ಯೇ 'ಪೂರ್ವಮೇವೇತ್ಯಾದಿಶ್ರುತಿಲಿಙ್ಗಾನುಗಮಾತ್' ಇತ್ಯನುಕ್ತ್ವಾ, ಪೃಥಗ್ 'ಬ್ರಹ್ಮಶಬ್ದಾನುಗಮಾಚ್ಚ' ಇತ್ಯುಕ್ತಿರಭ್ಯುಚ್ಚಯತ್ವಾಭಿಪ್ರಾಯೇಣೇತಿ ಮತ್ವಾ, ಆಹ – ಯದ್ವಾ ಪ್ರಕಾರದ್ವಯೇನೇತಿ ॥ ಏಕತ್ವಸಾವಕಾಶತ್ವರೂಪಪ್ರಕಾರದ್ವಯೇನೇತ್ಯರ್ಥಃ । ಏತೇನಾನ್ಯತ್ರೋಕ್ತದಿಶಾ ಪೂರ್ವಪಕ್ಷೇ ಶ್ರುತ್ಯಾದಿಬಾಹುಲ್ಯೇऽಪಿ ತೇಷಾಂ ಸಾವಕಾಶತ್ವಾತ್ ನಿರವಕಾಶಾನೇಕಶ್ರುತ್ಯಾದಿಭಿಃ ಬಾಧ ಇತ್ಯಪಿ ಸೂಚಿತಂ ಧ್ಯೇಯಮ್ । ತೇಷಾಂ ಸಾವಕಾಶತ್ವಂ ಚಾಗ್ರೇ ವ್ಯಕ್ತಮ್ ॥೨೮॥**

''ಅನನ್ಯಥಾ ಸಿದ್ಧತ್ವಾಂ ಚ'' ಎಂಬಲ್ಲಿರುವ 'ಚ'ಪದಕ್ಕೆ 'ಬಾಹುಲ್ಯವಷ್ಟೇ ಅಲ್ಲ' ಎಂದರ್ಥ. ಸ್ಮೃತಿಯಲ್ಲಿ ನಿಶ್ಚಯಾರ್ಥದಲ್ಲಿ ಅವಧಾರಣವನ್ನು ಹೇಳಿದ್ದರಿಂದ ವಿಷ್ಣುವೇ ಪ್ರಾಣಶಬ್ದವಾಚ್ಯನೆಂಬುದು ತಿಳಿಯುತ್ತಿದೆ. ಅದಕ್ಕೋಸ್ಕರ ಟೀಕೆಯಲ್ಲಿ ''ವಿಷ್ಣುಮೇವ'' ಎಂಬುದಾಗಿ ಪ್ರತೀಕಗ್ರಹಣವನ್ನು ಮಾಡಿದ್ದಾರೆ. ಇಲ್ಲದಿದ್ದರೆ 'ವಿಷ್ಣುಮಿತಿ' ಎಂದಷ್ಟೇ ಸಾಕಾಗುತ್ತಿತ್ತು. ಇಷ್ಟನ್ನು ಹೇಳಿದ ಮಾತ್ರದಿಂದ ಹಿಂದಿನ ಪೂರ್ವಪಕ್ಷಗಳೆಲ್ಲವೂ ಹೇಗೆ ಪರಿಹಾರವಾಗುತ್ತವೆ? ಎಂದು ಪ್ರಶ್ನಿಸಿದರೆ ಅದಕ್ಕೆ ಉತ್ತರ ನೀಡುವುದಕ್ಕಾಗಿ ''ಏಕಪ್ರಕಾರೇಣ'' ಎಂಬುದಾಗಿ ಹೇಳುತ್ತಿದ್ದಾರೆ. 'ಏಕಪ್ರಕಾರೇಣ' ಎಂದರೆ ನಿರವಕಾಶತ್ವಪ್ರಕಾರದಿಂದ ಎಂದರ್ಥ. ''ಪ್ರಕಾರದ್ವಯೇನ'' ಎಂದರೆ ಬಹುತ್ವ ಹಾಗೂ ನಿರವಕಾಶತ್ವರೂಪ ಎಂಬ ಎರಡು ಪ್ರಕಾರಗಳಿಂದ ಎಂದರ್ಥ.

..... ಅತ್ರಗಸ್ಯ ಹಿ ।
ವಿಷ್ಣೋರೇವ ತು ಲಿಂಗಾನಿ ಪ್ರಾಣಸ್ಥಾನಿ ತು ಸರ್ವಶಃ ॥

ಇತ್ಯಾದಿಯಾಗಿ ಅನುವ್ಯಾಖ್ಯಾನದಲ್ಲಿ ''ನ ಚ ಅನನ್ಯಥಾಸಿದ್ಧತ್ವಮ್ ಅನ್ಯಶ್ರುತಿಲಿಂಗಾದೇಃ' ಇತ್ಯಾದಿಯಾಗಿ ನ್ಯಾಯವಿವರಣದಲ್ಲಿ ಮತ್ತು ಶಾಸ್ತ್ರದೃಷ್ಟಿಸೂತ್ರದಲ್ಲಿ ಹೇಳುವಂತೆ ಮುಖ್ಯವಾಯುವಿನ ಲಿಂಗಗಳೆಲ್ಲವೂ ಸಾವಕಾಶಗಳಾಗಿವೆ. ಅದಕ್ಕನುಸಾರಿಯಾಗಿ ಭಾಷ್ಯದ ಅಭಿಪ್ರಾಯವನ್ನು ''ಅಭ್ಯುಪೇತ್ಯ ಚ'' ಇತ್ಯಾದಿ ಟೀಕೆಯಿಂದ ವಿವರಿಸುತ್ತಿದ್ದಾರೆ. 'ಇಂದ್ರಿಯೈಃ ಸಹಗಣಿತತ್ವ' ಎಂಬ ಪೂರ್ವಪಕ್ಷದ ಲಿಂಗಕ್ಕೆ ನಿರವಕಾಶತ್ವವನ್ನು ಅಂಗೀಕರಿಸಿ ಈ ವಿಷ್ಣುಲಿಂಗಗಳಿಗೆ ಬಾಹುಲ್ಯ ಮತ್ತು ನಿರವಕಾಶತ್ವವನ್ನು ಅಂಗೀಕರಿಸಿ ಇಲ್ಲಿಯ ತನಕ ಹೇಳಿದ್ದು ಎಂದರ್ಥ. ಇಲ್ಲದಿದ್ದರೆ ಒಂದಕ್ಕೆ ನಿರವಕಾಶತ್ವವನ್ನು ಹೇಳಿದಾಗ, ಅಥವಾ ನಿರವಕಾಶತ್ವವನ್ನು ಹೇಳದಿದ್ದರೂ ಅನೇಕ ಸಾವಕಾಶವಾದ ಲಿಂಗಗಳಿಂದಲೇ ಒಂದು ಸಾವಕಾಶಲಿಂಗಕ್ಕೆ ಬಾಧವನ್ನು ಹೇಳಬಹುದಾದ್ದರಿಂದ ಬಾಹುಲ್ಯವನ್ನು ಹಾಗೂ ನಿರವಕಾಶತ್ವ ಎರಡನ್ನೂ ಹೇಳುವ ಅವಶ್ಯಕತೆ ಇರಲಿಲ್ಲ. ನಿರವಕಾಶತ್ವವನ್ನು ಬಾಹುಲ್ಯವನ್ನು ಹೇಳಿದ್ದರೆ ಸಾಕಾಗುತ್ತಿತ್ತು.

---

(*) ಪೂರ್ವಪಕ್ಷಪ್ರಾಪಕಶ್ರುತ್ಯಾದೀನಾಮಪಿ ಬಾಹುಲ್ಯಾತ್ ತೇಷಾಮಪಿ ಪ್ರಕಾರದ್ವಯೇನ ಪ್ರಾಬಲ್ಯಮ್ ಇತಿ, ಅತ ಆಹ – ಅಭ್ಯುಪೇತ್ಯೇತಿ ॥ ಇದಂ ನಿರವಕಾಶತ್ವಮ್ । ಯದ್ವಾ, ಉಭಯೋರ್ನಿರವಕಾಶತ್ವಂ ವಿರುದ್ಧಮ್ ಇತಿ, ಅತ ಆಹ – ಅಭ್ಯುಪೇತ್ಯೇತಿ ॥ – (ಭಾವಬೋಧಃ)

''ಯಾವತಾ'' ಎಂಬ ಪದಕ್ಕೆ 'ಯತಃ' ಎಂದರ್ಥ. ಭಾಷ್ಯದಲ್ಲಿ 'ಶ್ರುತಿಲಿಂಗಾನುಗಮಾತ್' ಎಂದು ಹೇಳದೆ 'ಬ್ರಹ್ಮಶಬ್ದಾನುಗಮಾತ್ ಚ' ಎಂದು ಏಕೆ ಹೇಳಿದ್ದಾರೆಂದರೆ ಶ್ರುತಿಲಿಂಗಗಳ ಜೊತೆಗೆ ಬ್ರಹ್ಮಶಬ್ದಾನುಗಮವು ಹೆಚ್ಚಿನ ಯುಕ್ತಿಯಾಗಿದೆ ಎಂಬುದನ್ನು ತಿಳಿಸುವುದಕ್ಕಾಗಿ. ಇದನ್ನೇ ಟೀಕೆಯಲ್ಲಿ ''ಯದಾ ಪ್ರಕಾರದ್ವಯೇನ'' ಎಂಬುದಾಗಿ ವ್ಯಾಖ್ಯಾನಿಸಿದ್ದಾರೆ. ''ಪ್ರಕಾರದ್ವಯೇನ'' ಎಂದರೆ ಏಕತ್ವ ಮತ್ತು ಸಾವಕಾಶತ್ವ ಎಂಬ ಪ್ರಕಾರದ್ವಯದಿಂದ ಎಂದರ್ಥ.

ಹೀಗೆ ಹೇಳಿದ್ದರಿಂದ ಬೇರೆಡೆ ಹೇಳಿದ ಮತ್ತೊಂದು ಯುಕ್ತಿಯನ್ನು ಸೂಚಿಸಿದಂತಾಯಿತು. ಅನೇಕ ಶ್ರುತಿಗಳಿದ್ದರೂ ಅವೆಲ್ಲವೂ ಸಾವಕಾಶವಾದ್ದರಿಂದ ನಿರವಕಾಶವಾದ ಬಹುಶ್ರುತಿಗಳಿಂದ ಅವುಗಳು ಬಾಧಿತ-ಗಳಾಗುತ್ತವೆ ಎಂಬುದನ್ನೂ ತಿಳಿಯಬೇಕು. ಪೂರ್ವಪಕ್ಷಶ್ರುತಿಗಳಿಗೆ ಸಾವಕಾಶತ್ವವು ಈ ಮುಂದೆ ತಿಳಿಯುತ್ತದೆ.

**ವಾಕ್ಯಾರ್ಥಮಞ್ಜರಿ – तावा एता इति ॥ 'ता एताः श्रियः शीर्षं शिरः श्रिताः आश्रिताः । कास्ताः श्रिय इत्यत उक्तम् – चक्षुरित्यादि ॥ प्राचीनप्राण इति ॥** ननु श्रीपतित्वादिना तत्रत्य प्राणस्य विष्णुत्वात् कथमेतत्? इति चेत् । अत्रत्यलिङ्गानां वक्ष्यमाणरीत्या बलवत्त्वेन तद्विरुद्धश्रीपतित्वादीनामन्यथा योज्यत्वान्न तैर्विष्णुत्व-निश्चय इति भावः । पूर्वोक्तन्यायः महायोगविद्वद्रूढिसत्वात् प्राणशब्दो विष्णुवाचक इति न्यायः । 'वाय्वादिरेव' इत्यादिशब्देन इन्द्रजीवयोर्ग्रहणम् । न **चैतदिति ॥** सर्वोत्तमस्य चक्षुरादिभिः, सहपाठायोगादिति भावः । उपपद्यत चेति ॥ मुख्यप्राणस्येन्द्रियस्वामित्वादिन्द्रस्य हस्तेन्द्रियाधिष्ठितत्वाज्जीवस्येन्द्रियफलभोक्तृत्वा-दिति भावः ।

**ॐ प्राणस्तथानुगमात् ॐ ॥** यथा 'तद्वै त्वं प्राणः' इत्ययं प्राणो विष्णुः तथैतरेये श्रुतः प्राणोपि विष्णुरेव । ब्रह्मशब्दादेवोपास्यत्वादि तत् श्रुतिलिङ्गाना-मस्मिन् प्रकरणेऽनुगमात् अनुवृत्तेरभ्यासादित्यर्थः । नीतवन्तः 'उपदिदिशुः' इति यावत् । 'स एष भगवान् दैत्यनिरसनादसु नामा स एष प्रकृष्टानन्दत्वात् प्राणः सतां ज्ञानैश्वर्यादि भूतिदातृत्वाद् भूतिः असतामज्ञानाद्यनैश्वर्यदातृत्वादभूतिः तं भगवन्तं देवा भूतित्वोपासनां चक्रिरे' इत्यर्थः । तावा इति ॥ 'ऋगादयः सर्वस्मिन् प्राणे परमात्मविषये एकैव व्याहृतिर्व्याहरणम् । एकमेव नाम निर्देषगुणपूर्तिवाचित्वादेक-प्रकारत्वम् । ऋचः विशेषेण प्राणपरा इति विजानीयात्' इत्यैतरेयभाष्योक्तदिशार्थः ।

ಟೀಕಾಕಾರಸ್ತು – 'प्राण एव' इत्यत्र प्राणशब्दस्य प्रथमान्तत्वमङ्गीकृत्य 'यास्ता एताः सर्वा ऋचस्तासामेकैव व्याहृतिरेकमेव व्याहरणं तच्च प्रतिपाद्यं प्राण

एव । किं च ये सर्वे वेदास्तेषामपीश्वर एव प्रतिपाद्यः किमु ऋचाम् । अपि च ये समुद्रादि घोषास्तेषामपीश्वर एव प्रतिपाद्यः किमु वेदानाम्? ऋचस्तु विशेषेण प्राणप्रतिपादका इति जानीयात्' इति 'ज्योतिरुपक्रमात्' इत्युत्तरत्र व्याकरिष्यन्ति ।

'अथ देवरथः' इति देवाधीनो देहाख्यरथ उच्यते । तस्य देवरथस्य वाक् तदभिमानी उमा उद्धारणरज्जुः । श्रोत्रे तदभिमानि चन्द्रतद्धार्ये पक्षसी पार्श्व-नियुक्ताश्वौ । चक्षुषी तदभिमानिसूर्यतद्धार्ये युक्ते अग्रतो नियुक्ताश्वौ । मनः मनोभिमानी रुद्रः सङ्गृहीता रथयन्ता प्राणस्तादृशं रथमधितिष्ठतीत्यर्थः । रथप्राण-शब्दयोः पुल्लिङ्गत्वात् तदिति परामर्शानुपपत्तिरित्यत आह – स चासाविति ॥ आहुः ब्रह्मतर्के । सः स्वभाव उपजीव्यत्वनिरवकाशत्वादिरूप इत्यर्थः । अनन्यथासिद्धतां निरवकाशत्वम् अभ्युपेत्य पूर्वपक्षलिङ्गस्य निरवकाशत्वम् । अन्तर्यामीति ॥ वाय्वादीनामिन्द्रियैः सहगणितत्वे तदन्तर्यामिणोऽपि तैः सहगणितत्वमिति भावः । प्रकारद्वयेन ॥ एकत्वसावकाशत्वाभ्याम् ॥

**॥ इति श्रीशर्कराश्रीनिवासाचार्यविरचिता वाक्यार्थमञ्जर्यां प्राणाधिकरणम् ॥**

## ಬ್ರಹ್ಮಮೀಮಾಂಸಾಶಾಸ್ತ್ರ

**सू - ॐ ॥ न वक्तुरात्मोपदेशादिति**
**चेदध्यात्मसम्बन्धभूमा ह्यस्मिन् ॥ ॐ ॥ २९ ॥**

ಸೂತ್ರಾರ್ಥ - ಬೃಹತೀಸಹಸ್ರವನ್ನು ಪಠಿಸುತ್ತಿರುವ ವಿಶ್ವಾಮಿತ್ರ ಋಷಿಯನ್ನು ಕುರಿತು ದೇವೇಂದ್ರನು 'ಪ್ರಾಣೋ ವಾ ಅಹಮಸ್ಮಿ' ಎಂಬುದಾಗಿ ಎಂಬುದಾಗಿ ತನ್ನನ್ನೇ ಪ್ರಾಣನೆಂದು ಉಪದೇಶಿಸಿದ್ದಾನೆ. ಆದ್ದರಿಂದ ಪ್ರಾಣಶಬ್ದದಿಂದ ದೇವೇಂದ್ರನೇ ವಾಚ್ಯನು. ಇದು ತಪ್ಪು. ದೇವೇಂದ್ರನಲ್ಲಿ ಪರಮಾತ್ಮನ ಅತಿಶಯವಾದ ಸಾನ್ನಿಧ್ಯ ಇರುವುದರಿಂದ ದೇವೇಂದ್ರನು ತನ್ನಲ್ಲಿರುವ ಭಗವಂತನನ್ನು ಉದ್ದೇಶಿಸಿ ಅಹಂ ಪ್ರಾಣಃ ಎಂದು ಉಪದೇಶಿಸಿದ್ದಾನೆ. ಆದ್ದರಿಂದ ವಿಷ್ಣುವೇ ಪ್ರಾಣಶಬ್ದವಾಚ್ಯನು.

## ಸೂತ್ರದೀಪಿಕಾ

सू.दी. – द्वितीयार्थे षष्ठी । वक्तुः – बृहतीसहस्रवक्तारं विश्वामित्रं प्रति इन्द्रेणाऽत्मोपदेशात् । आत्मनः स्वस्य प्राणतयोपदेशाद् 'इन्द्र एवायं प्राणः न विष्णुः' इति चेत्, 'न'

ಇತಿ ಶೇಷಃ । ತಸ್ಯಾಽವೃತ್ತಿಃ । 'ಅನುಗಮಾತ್' ಇತ್ಯನುವರ್ತತೇ । ತಥಾಚ ಪ್ರಾಗುಕ್ತಾನುಗಮಹೇತೋಃ ನೇನ್ದ್ರಃ ಪ್ರಾಣಃ । ತಥಾ ಸತ್ಯುಪದೇಶವಿರೋಧ ಇತ್ಯಪಿ ನ । ಕುತಃ? ಯಸ್ಮಾತ್ ಅಸ್ಮಿನ್ ಪ್ರಕರಣೇ ಭಗವತಃ ಅಧ್ಯಾತ್ಮಸಮ್ಬನ್ಧಭೂಮಾ ಇನ್ದ್ರವಿಶ್ವಾಮಿತ್ರಾದಿರೂಪಬಹುದೇಹಸಮ್ಬನ್ಧಃ ಉಕ್ತೋಽಸ್ತಿ ತಸ್ಮಾದಿತ್ಯರ್ಥಃ । ಯದ್ವಾ ಹಿ ಯಸ್ಮಾತ್ ಅಸ್ಮಿನ್ ಇನ್ದ್ರೇ । ಅಧ್ಯಾತ್ಮಸಮ್ಬನ್ಧಭೂಮಾ । ಅಧಿ ಅಧಿಕಸ್ಯಾಽತ್ಮನಃ ಸಮ್ಬನ್ಧಸ್ಯಾಽವೇಶಸ್ಯ ಭೂಮಾ ಬಾಹುಲ್ಯಂ ವಿದ್ಯತೇ ಯಸ್ಮಾದಿತ್ಯರ್ಥಃ ॥

ವಕ್ತುಃ = ಬೃಹತೀಸಹಸ್ರವನ್ನು ಹೇಳುವ ವಿಶ್ವಾಮಿತ್ರನನ್ನು ಕುರಿತು (ದ್ವಿತೀಯಾರ್ಥದಲ್ಲಿ ಷಷ್ಠೀ ಪ್ರಯೋಗವಿದೆ). ಆತ್ಮೋಪದೇಶಾತ್ = 'ಪ್ರಾಣೋ ವಾ ಅಹಮಸ್ಮಿ' ಎಂಬುದಾಗಿ ದೇವೇಂದ್ರನು ಇಂದ್ರನಿಗೆ ಉಪದೇಶಿಸಿದ್ದರಿಂದ. ತನ್ನನ್ನು ಪ್ರಾಣನೆಂದು ಉಪದೇಶಿಸಿದ್ದರಿಂದ 'ಇಂದ್ರನೇ ಪ್ರಾಣನು ಹೊರತು ವಿಷ್ಣುವಲ್ಲ' ಹೀಗೆ ಹೇಳಿದರೆ; ನ(= ಆಲ್ಲ) ಎಂಬುದನ್ನು ಸೇರಿಸಿಕೊಳ್ಳಬೇಕು. 'ಅನುಗಮಾತ್' ಎಂಬುದನ್ನೂ ಸಹ ಹಿಂದಿನ ಸೂತ್ರದಿಂದ ಅನುವೃತ್ತಿಮಾಡಿಕೊಳ್ಳಬೇಕು. ಆದ್ದರಿಂದ ಹಿಂದೆ ಹೇಳಿದ ಅನುಗಮವೆಂಬ ಹೇತುವಿನಿಂದಲೂ ಇಂದ್ರನು ಪ್ರಾಣನಾಗುವುದಿಲ್ಲ. ಹಾಗಾದರೆ ಉಪದೇಶವಿರೋಧ ಬರುತ್ತದಲ್ಲವೇ? ಎಂಬುದೂ ಸಹ ತಪ್ಪು. ಏಕೆಂದರೆ, ಯಾವ ಕಾರಣದಿಂದ ಈ ಪ್ರಕರಣದಲ್ಲಿ ಪರಮಾತ್ಮನಿಗೆ 'ಅಧ್ಯಾತ್ಮಸಂಬಂಧಭೂಮಾ' ಇಂದ್ರ ವಿಶ್ವಾಮಿತ್ರ ಮೊದಲಾದ ಅನೇಕ ದೇಹಗಳ ಸಂಬಂಧವು ಹೇಳಲ್ಪಟ್ಟಿದೆಯೋ ಆ ಕಾರಣದಿಂದ ಎಂದರ್ಥ. ಅಥವಾ ಹಿ = ಯಾವ ಕಾರಣದಿಂದ ಅಸ್ಮಿನ್ = ದೇವೇಂದ್ರನಲ್ಲಿ, ಅಧ್ಯಾತ್ಮಸಂಬಂಧಭೂಮಾ = ಪರಮಾತ್ಮನ ಅತಿಶಯವಾದ ಆವೇಶವಿದೆಯೋ ಆ ಕಾರಣದಿಂದ ಎಂದರ್ಥ.

## ಇಂದ್ರನು ಪ್ರಾಣನೆಂದು ಪೂರ್ವಪಕ್ಷ

**ಭಾಷ್ಯಮ್ - ॐ ॥ ನ ವಕ್ತುರಾತ್ಮೋಪದೇಶಾದಿತಿ ಚೇದಧ್ಯಾತ್ಮ-**
**ಸಮ್ಬನ್ಧಭೂಮಾ ಹ್ಯಸ್ಮಿನ್ ॥ ॐ ॥ ೨೯ ॥**

**'ಪ್ರಾಣೋ ವಾ ಅಹಮಸ್ಮ್ಯೃಷೇ'** (ಐ.ಆ.೨-೨-೩.) **ಇತಿ ವಕ್ತುರಾತ್ಮೋಪದೇಶಾದಿನ್ದ್ರ ಏವೇತಿ ಚೇತ್ -**

ಬೃಹತೀಸಹಸ್ರವನ್ನು ಹೇಳುತ್ತಿರುವ ವಿಶ್ವಾಮಿತ್ರನನ್ನು ಕುರಿತು ದೇವೇಂದ್ರನು 'ನಾನೇ ಪ್ರಾಣನು ಎಂದು ಉಪದೇಶಿಸಿದ್ದಾನೆ. ಆದ್ದರಿಂದ ದೇವೇಂದ್ರನೇ ಪ್ರಾಣನಾಗಿದ್ದಾನೆ. (ಎಂದು ಪ್ರಾಪ್ತವಾದರೆ)

---

**ಭಾಷ್ಯದೀಪಿಕಾ** – ಉಕ್ತಮಾಕ್ಷಿಪ್ಯ ಸಮಾದಧತ್ಸೂತ್ರ ಪಠಿತ್ವಾಽಽಕ್ಷೇಪಾಂಶ ತಾವದ್ ವ್ಯಾಚಷ್ಟೇ – ನೇತಿ ॥ ಪ್ರಾಣ ಇತ್ಯನುವರ್ತತೇ । ತಥಾ ಚ ಪ್ರಾಣೋ ವಿಷ್ಣುರಿತಿ ನ ಯುಕ್ತಮ್ । ಕುತಃ? 'ಪ್ರಾಣೋ ವಾ ಅಹಮಸ್ಮ್ಯೃಷೇ' ಇತಿ ವಾಕ್ಯೇನ ಬೃಹತೀಸಹಸ್ರವಕ್ತುರ್ವಿಶ್ವಾಮಿತ್ರಸ್ಯೇನ್ದ್ರೇಣ ಪ್ರಾಣತಯಾ ಆತ್ಮನಃ ಸ್ವಸ್ಯೈವೋಪದೇಶಾದಿತ್ಯರ್ಥಃ । ಪ್ರಾಣ ಇನ್ದ್ರ ಏವೇತಿ ಫಲೋಕ್ತಿಃ । ನ ತೂಕ್ತಹೇತೋಃ ಸಾಧ್ಯೋಕ್ತಿಃ ।

'ಪ್ರಾಣೋ ವಾऽಹಮಸ್ಮ್ಯೃಷೇ' ಇತಿ ವಾಕ್ಯಂ ತು 'ತಮಿನ್ದ್ರ ಉವಾಚ ಋಷೇ ಪ್ರಿಯಂ ವೈ ಮೇ ಧಾಮೋಪಾಗಾಃ ವರಂ ತೇ ದದಾಮೀತಿ । ಸ ಹೋವಾಚ ತ್ವಾಮೇವ ಜಾನೀಯಾಮಿತಿ । ತಮಿನ್ದ್ರ ಉವಾಚ' ಇತಿ ಪೂರ್ವವಾಕ್ಯೇನ ಸಹ

ಪ್ರತಿಪದಾರ್ಥ— ಹಿಂದೆ ಹೇಳಿದ ಪ್ರಮೇಯವನ್ನು ಆಕ್ಷೇಪಿಸಿ ಸಮಾಧಾನವನ್ನು ನೀಡುವ ಸೂತ್ರವನ್ನು ಪಠಿಸುತ್ತಾ ಮೊದಲು ಆಕ್ಷೇಪಭಾಗವನ್ನು ವ್ಯಾಖ್ಯಾನಿಸುತ್ತಿದ್ದಾರೆ. ಋಷೇ = ಎಲೈ ವಿಶ್ವಾಮಿತ್ರ ಋಷಿಯೇ! ಪ್ರಾಣೋ ವಾ = ಪ್ರಾಣನಾದರೋ, ಅಹಮಸ್ಮಿ = ನಾನೇ ಆಗಿದ್ದಾನೆ. ಇತಿ = ಹೀಗೆ, ವಕ್ತುಃ = ಬೃಹತೀಸಹಸ್ರವನ್ನು ಹೇಳುವ ವಿಶ್ವಾಮಿತ್ರ ಋಷಿಯನ್ನು ಕುರಿತು, ಆತ್ಮೋಪದೇಶಾತ್ = ತನ್ನ ಬಗ್ಗೆ ಹೇಳಿಕೊಂಡಿದ್ದರಿಂದ, ಇಂದ್ರ ಏವ = ಇಂದ್ರನೇ ಪ್ರಾಣನಾಗಿದ್ದಾನೆ, ಇತಿ ಚೇತ್ = ಹೀಗೆ ಹೇಳಿದರೆ.

**ತತ್ತ್ವಪ್ರಕಾಶಿಕಾ –**

**ಉಕ್ತಮಾಕ್ಷಿಪ್ಯ ಸಮಾದಧತ್ಸೂತ್ರಂ ಪಠಿತ್ವಾऽऽಕ್ಷೇಪಾಂಶಂ ತಾವದ್ ವ್ಯಾಚಷ್ಟೇ – ನೇತಿ ॥ ಯದುಕ್ತಂ 'ವಿಷ್ಣುರಯಂ ಪ್ರಾಣಃ' ಇತಿ ತದಯುಕ್ತಮ್ । 'ತಮಿನ್ದ್ರ ಉವಾಚ ಋಷೇ ಪ್ರಿಯಂ ವೈ ಮೇ ಧಾಮೋಪಾಗಾವರಂ ತೇ ದದಾಮೀತಿ । ಸ ಹೋವಾಚ । ತ್ವಾಮೇವ ಜಾನೀಯಾಮಿತಿ । ತಮಿನ್ದ್ರ ಉವಾಚ । ಪ್ರಾಣೋ ವಾ ಅಹಮಸ್ಮ್ಯೃಷೇ' ಇತಿ ಬೃಹತೀಸಹಸ್ರವಕ್ತುರ್ವಿಶ್ವಾಮಿತ್ರಸ್ಯೇನ್ದ್ರೇಣ ಪ್ರಾಣತಯಾ ಆತ್ಮೋಪದೇಶಾತ್ । ನ ಚಾಯಮಿನ್ದ್ರೋऽಪಿ ವಿಷ್ಣುಃ । ಪ್ರಸಿದ್ಧಸ್ಯೈವ 'ಇನ್ದ್ರೋ ವೈ ವೃತ್ರಂ ಹತ್ವಾ' ಇತ್ಯಾದೌ ಮಹಾವ್ರತಯಜ್ಞೇ ಯಜಮಾನತ್ವೇನ ಪ್ರಕೃತತ್ವಾತ್ । ನ ಚಾಸ್ಯೋಪದೇಶಸ್ಯ ಸಾವಕಾಶತ್ವಂ (ವಾ) ಚಾಸ್ತಿ । ಅತ ಇನ್ದ್ರ ಏವಾಯಂ ಪ್ರಾಣ ಇತ್ಯಾಶಯಃ ।**

ಪ್ರಾಣಶಬ್ದದಿಂದ ವಿಷ್ಣುವೇ ವಾಚ್ಯನೆಂದು ಹಿಂದಿನ ಸೂತ್ರದಲ್ಲಿ ಹೇಳಿದ್ದಾಯಿತು. ಆದರ ಮೇಲೆ ಬರುವ ಆಕ್ಷೇಪವನ್ನು ನಿರಾಕರಿಸುವುದಕ್ಕೋಸ್ಕರ ಸೂತ್ರವನ್ನೇ ಪಠಿಸಿ ಮೊದಲು ಆಕ್ಷೇಪಾಂಶವನ್ನು ವ್ಯಾಖ್ಯಾನಿಸುತ್ತಿದ್ದಾರೆ. ''ನ ವಕ್ತುಃ' ಇತ್ಯಾದಿಯಾಗಿ.

---

ವ್ಯಾಖ್ಯೇಯಮ್ । ತತ್ಪ್ರಕಾರಸ್ತು - 'ತಂ' ವಿಶ್ವಾಮಿತ್ರಂ 'ಇನ್ದ್ರಃ' ತದನ್ತಃಸ್ಥೋ ಭಗವಾನುವಾಚ । ಕಿಮಿತಿ ? ಹೇ ಋಷೇ ! ಮೇ ಪ್ರಿಯಂ ಧಾಮೋಪಾಗಾಃ ಪ್ರಾಪ್ತೋಹಿ । ತೇ ವರಂ ದದಾಮೀತಿ । ವೈಶಬ್ದೋऽವಧಾರಣೇ ಪ್ರಸಿದ್ಧೌ ವಾ । ಏವಂ ತ್ರಿವಾರಂ ಶಂಸನೇನ ಧಾಮಶಬ್ದಿತಸಾಲೋಕ್ಯಪ್ರಾಪ್ತಿಭಗವತ್ಪುರಪ್ರಾಪ್ತಿಸಾಧನಭಗವತ್ಪ್ರಸಾದಂ ಪ್ರಾಪ್ತಃ 'ಸಃ' ವಿಶ್ವಾಮಿತ್ರಃ ಇನ್ದ್ರಾವಿಷ್ಟೇನ ಹರಿಣಾ ವರಂ ತೇ ದದಾನೀತಿ ಪುನರುಕ್ತಃ ಸನ್ ಉವಾಚ । ಕಿಮಿತಿ? ತ್ವಾಂ ಸಾಮಾನ್ಯತಃ ಪೂರ್ವಮ್ ಅಹಂ ಜಾನೇ । ಅಧುನಾ ಕೀದೃಶಸ್ತ್ವಮಿತಿ ವಿಶೇಷತೋ ಜಾನೀಯಾಮಿತಿ । ಏವಮುಕ್ತಃ 'ಇನ್ದ್ರಃ' ತದನ್ತರ್ಗತೋ ಹರಿಃ ಋಷಿಂ ಪ್ರತ್ಯುವಾಚ । ಕಿಮಿತಿ? ಹೇ ಋಷೇ! ಅಹಂ ಪ್ರಕೃಷ್ಟಾನನ್ದರೂಪತ್ವಾತ್ ಪ್ರಾಣಶಬ್ದವಾಚ್ಯೋಽಸ್ಮೀತಿ । ಅತ್ರ ವಾಕ್ಯಸಮನ್ವಯಪಕ್ಷೇऽಸ್ಮದಾದಿಷ್ವಪದೇಶು ವಿಹಿತಾನಾಮಸ್ಮೀತ್ಯಾದಿತಿಙನ್ತಪದಾನಾಂ ತದ್ಧತ್ತೇಃ ಸುಲಭತ್ವಾದಿತಿ ತತ್ತ್ವನಿರ್ಣಯಟೀಕಾರೀತ್ಯಾ ಅಹಮಿತೀನ್ದ್ರಾನ್ತಃಸ್ಥೇನ ಹರಿಣಾ ಸ್ವಾತ್ಮನೋ ನಿರ್ದೇಶಾದಸ್ಮೀತಿ ಉತ್ತಮಪುರುಷೋಪಪತ್ತಿಃ । ಪೂರ್ವಪಕ್ಷಿರೀತ್ಯಾ ಶ್ರುತ್ಯರ್ಥಸ್ತು ಸ್ಪಷ್ಟಃ । ಅಹಂ ಪ್ರಾಣೋऽಸ್ಮೀತಿ ಪದಾನಾಮಹೇಯತ್ವಪ್ರಕೃಷ್ಟಾನನ್ದತ್ವಸಂಹರ್ತೃತ್ವಜ್ಞಾತೃತ್ವನಿಮಿತ್ತೈಃ ಭಗವತಿ ಸಮನ್ವಯಪಕ್ಷೇ ತು ನ ತದನುಪಪತ್ತಿರಿತಿ ಧ್ಯೇಯಮ್ ।

ಹಿಂದಿನ ಸೂತ್ರದಲ್ಲಿ ವಿಷ್ಣುವೇ ಪ್ರಾಣನೆಂದು ಹೇಳಿದ್ದು ತಪ್ಪು. ಏಕೆಂದರೆ 'ತಮಿಂದ್ರ ಉವಾಚ ಋಷೇ ಪ್ರಿಯಂ ವೈ ಮೇ ಧಾಮೋಪಾಗಾ ವರಂ ತೇ ದದಾಮೀತಿ । ಸ ಹೋವಾಚ । ತ್ವಾಮೇವ ಜಾನೀಯಾಮಿತಿ । ತಮಿಂದ್ರ ಉವಾಚ । ಪ್ರಾಣೋ ವಾ ಅಹಮಸ್ಮ್ಯೃಷೇ' ('ಎಲೈ ವಿಶ್ವಾಮಿತ್ರ ಋಷಿಯೇ! ಪ್ರಿಯವಾದ ನನ್ನ ಸ್ಥಾನವನ್ನು ಕುರಿತು ನೀನು ಬಾ. ನಿನಗೆ ಇಷ್ಟವಾದ ವರವನ್ನು ಕೊಡುತ್ತೇನೆ'. ಆವಾಗ ವಿಶ್ವಾಮಿತ್ರ ಋಷಿಯು ಹೇಳುತ್ತಾರೆ. 'ನಿನ್ನನ್ನೇ ತಿಳಿಯಲು ಬಯಸುತ್ತೇನೆ'. ಆವಾಗ ದೇವೇಂದ್ರನು ಹೇಳುತ್ತಾನೆ 'ಋಷಿಯೇ ನಾನೇ ಪ್ರಾಣನಿದ್ದೇನೆ') ಎಂಬುದಾಗಿ ಬೃಹತೀಛಂದಸ್ಸಿನಲ್ಲಿರುವ ಸಾವಿರ ಋಙ್ಮಂತ್ರಗಳನ್ನು ಪಠಿಸುತ್ತಿರುವ ವಿಶ್ವಾಮಿತ್ರ ಋಷಿಯನ್ನು ಕುರಿತು ದೇವೇಂದ್ರನು ತನ್ನನ್ನು ಪ್ರಾಣನೆಂದು ಉಪದೇಶಿಸಿದ್ದಾನೆ.

ಈ ಶ್ರುತಿಯಲ್ಲಿ ಕೇಳಿಸುತ್ತಿರುವ ಇಂದ್ರಶಬ್ದಕ್ಕೆ ವಿಷ್ಣುವೆಂದು ಅರ್ಥವಲ್ಲ. ಏಕೆಂದರೆ, ಪ್ರಸಿದ್ಧನಾದ ದೇವೇಂದ್ರನೇ 'ಇಂದ್ರೋ ವೈ ವೃತ್ರಂ ಹತ್ವಾ' ಎಂಬುದಾಗಿ ಮಹಾವ್ರತವೆಂಬ ಯಜ್ಞದಲ್ಲಿ ಯಜಮಾನನಾಗಿ ಪ್ರಕೃತನಾಗಿದ್ದಾನೆ. ಇಂದ್ರನ ಈ ಮಾತನ್ನು ಸಾವಕಾಶ ಮಾಡಲು ಬರುವುದಿಲ್ಲ. ಆದ್ದರಿಂದ ಪ್ರಾಣನೆಂದರೆ ಇಂದ್ರನೇ ಆಗಿದ್ದಾನೆ ಎಂದು ಭಾಷ್ಯದ ಅಭಿಪ್ರಾಯ.

**ಭಾವದೀಪಃ – ॐ ॥ ನ ವಕ್ತುರಾತ್ಮೋಪದೇಶಾದಿತಿ ಚೇದಧ್ಯಾತ್ಮಸಂಬಂಧಭೂಮಾ ಹ್ಯಸ್ಮಿನ್ ॥ॐ ತದಯುಕ್ತಮಿತಿ ॥ ತೇನ ಸೂತ್ರೇ 'ಪ್ರಾಣೋ ವಿಷ್ಣುಃ' ಇತ್ಯನುವರ್ತ್ಯ ನಞಾऽನ್ವಯಃ ಕಾರ್ಯಃ । 'ಇನ್ದ್ರ ಏವ' ಇತಿ ಭಾಷ್ಯಂ ಫಲಿತಾರ್ಥಮಿತಿ ಭಾವಃ । ಇನ್ದ್ರಸ್ಯ ಪ್ರಾಣತ್ವೇನೋಪದೇಶೇ ಅಸಾಙ್ಗತ್ಯನಿರಾಸಾಯ ತಸ್ಯೇನ್ದ್ರವಾಕ್ಯಸ್ಫೋರಣಾಯ ಚ ಪೂರ್ವವಾಕ್ಯಮಾಹ – ತಮಿತಿ ॥ 'ತಮ್' ವಿಶ್ವಾಮಿತ್ರಮ್ । 'ಪ್ರಿಯಂ ಧಾಮ'* ಸ್ವಲೋಕಮ್ ಉಪಾಗಾಃ ಪ್ರಾಪ್ತೋऽಭೂಃ । ಶಕ್ರಶಂಸನೇನ ಧಾಮಪ್ರಾಪ್ತಿಹೇತುಪ್ರಸಾದಂ ಲಬ್ಧವಾನಭೂಃ ಇತ್ಯರ್ಥಃ । 'ಅನನ್ಯಥಾಸಿದ್ಧತ್ವಮನ್ಯಶ್ರುತಿಲಿಙ್ಗಾದೇಃ' ಇತಿ ನ್ಯಾಯವಿವರಣೋಕ್ತಮಿನ್ದ್ರಶ್ರುತೇರ್ನಿರವಕಾಶತ್ವಮ್ 'ಇನ್ದ್ರ ಏವ' ಇತಿ ಭಾಷ್ಯೇ ಅವಧಾರಣಸೂಚಿತಮಾಹ – ನ ಚಾಯಮಿತಿ ॥ ನ ಚಾಸ್ಯೇತಿ ಚ ॥ ಸಾವಕಾಶತ್ವಂ ಚೇತಿ ॥ ಸಾವಕಾಶತ್ವಂ ಹಿ ವಿರೋಚನಂ ಪ್ರತಿ ವಿರಿಞ್ಚೇನೇವೇನ್ದ್ರೇಣ, ವಿಶ್ವಾಮಿತ್ರಂ ಪ್ರತಿ 'ಪ್ರಾಣೋ ವाऽಹಮ್' ಇತಿ ವಞ್ಚನಾರ್ಥಮುಕ್ತತ್ವೇನ ವಾ ವಾಸ್ತವತ್ವೇऽಪಿ ಅನ್ತರ್ಯಾಮ್ಯಪೇಕ್ಷಯಾ ವಾ । ನಾಯಃ । 'ವಕ್ತುಃ' ಇತ್ಯುಕ್ತೇರ್ವಿಶಿಷ್ಟಶಾಕ್ತಶಂಸಿತುರ್ವಿಶ್ವಾಮಿತ್ರಸ್ಯ ನೇನ್ದ್ರोऽನ್ಯಥೋಪದೇಷ್ಟುಮರ್ಹತಿ - ಇತಿ ಸುಧೋಕ್ತ್ಯಾ ಬೃಹತೀಸಹಸ್ರವಕ್ತುರ್ವಿಶ್ವಾಮಿತ್ರಸ್ಯೇನ್ದ್ರೇಣ ವಞ್ಚನಕರಣಾಯೋಗಾತ್ । ನಾನ್ತ್ಯಃ 'ಮञ್ಚಾಃ ಕ್ರೋಶನ್ತಿ' ಇತ್ಯತ್ರ ಮञ್ಚಪದಸ್ಯ ಮञ್ಚಸ್ಥಪುರುಷೇಷ್ವಿವ ಲಕ್ಷಣಾಪ್ರಸಙ್ಗಾತ್ । ನ ಚ ಮುಖ್ಯೇ ಸಮ್ಭವತಿ ಸಾ ಯುಕ್ತೇತಿ ಭಾವಃ ।**

ಓಂ ನ ವಕ್ತುರಾತ್ಮೋಪದೇಶಾದಿತಿ ಚೇದಧ್ಯಾತ್ಮಸಂಬಂಧಭೂಮಾ ಹ್ಯಸ್ಮಿನ್ ಓಂ ॥ ''ತದಯುಕ್ತಂ'' ಎಂದು ಟೀಕೆಯಲ್ಲಿದೆ. ಹೀಗೆ ಹೇಳಿದ್ದರಿಂದ ಸೂತ್ರದಲ್ಲಿ 'ನ' ಎಂಬುದರ ಜೊತೆಗೆ 'ಪ್ರಾಣೋ ವಿಷ್ಣುಃ'

ಎಂಬುದನ್ನು ಅನುವೃತ್ತಿ ಮಾಡಿಕೊಳ್ಳಬೇಕೆಂದು ತಿಳಿಯುತ್ತದೆ. ಇದರಿಂದ 'ಇಂದ್ರ ಏವ' ಎಂಬ ಭಾಷ್ಯವು ಫಲಿತಾರ್ಥವಾಯಿತು. 'ಇಂದ್ರನಲ್ಲಿ ಪ್ರಾಣತ್ವದ ಉಪದೇಶವು ಅಸಂಗತವಾಗಿದೆ' ಎಂಬ ಶಂಕೆಯನ್ನು ಪರಿಹರಿಸಲು ಮತ್ತು 'ಅದು ಇಂದ್ರನ ವಾಕ್ಯವೇ ಆಗಿದೆ' ಎಂಬುದನ್ನು ಪ್ರಕಟಪಡಿಸಲು ಹಿಂದಿನ ವಾಕ್ಯವನ್ನು ''ತಮಿಂದ್ರ ಉವಾಚ'' ಇತ್ಯಾದಿಯಾಗಿ ಉಲ್ಲೇಖಿಸುತ್ತಿದ್ದಾರೆ. 'ತಂ' = ಆ ವಿಶ್ವಾಮಿತ್ರನನ್ನು ಕುರಿತು, ಇಂದ್ರಃ = ದೇವೇಂದ್ರನು, ಉವಾಚ = ಹೇಳಿದನು, ಋಷೇ = ಎಲೈ ವಿಶ್ವಾಮಿತ್ರ ಋಷಿಯೇ, ಮೇ = ನನ್ನ, ಪ್ರಿಯಂ ಧಾಮ = ಪ್ರಿಯವಾದ ಸ್ವರ್ಗಲೋಕವನ್ನು, ಉಪಾಗಾಃ = ಹೊಂದಿರುವಿ*. ಶಸ್ತ್ರಮಂತ್ರಗಳಿಂದ ಪ್ರಶಂಸೆಯನ್ನು ಮಾಡಿದ್ದರಿಂದ ನನ್ನ ಮನೆಯನ್ನು ಹೊಂದುವಿಕೆಗೆ ಬೇಕಾದ ಪ್ರಸಾದವನ್ನು ಹೊಂದಿದ್ದೀ ಎಂದರ್ಥ.

'ಅನನ್ಯಥಾಸಿದ್ಧತ್ವಮ್ ಆನ್ಯಶ್ರುತಿಲಿಂಗಾದೇಃ' ಎಂದು ನ್ಯಾಯವಿವರಣದಲ್ಲಿ ಹೇಳಿದಂತೆ ಇಂದ್ರಶ್ರುತಿಗೆ ನಿರವಕಾಶತ್ವವಿದೆ ಎಂದು 'ಇಂದ್ರ ಏವ' ಎಂಬ ಭಾಷ್ಯವು ಸೂಚಿಸಿದೆ. ಅದನ್ನೇ ''ನ ಚ'' ಎಂಬ ಟೀಕೆಯಿಂದ ವ್ಯಾಖ್ಯಾನಿಸುತ್ತಿದ್ದಾರೆ. ''ನ ಚಾಸ್ಯ ಉಪದೇಶಸ್ಯ'' ಎಂಬ ವಾಕ್ಯದಿಂದಲೂ ವ್ಯಾಖ್ಯಾನಿಸಿದ್ದಾರೆ.

''ಸಾವಕಾಶತ್ವಂ ವಾ'' ವಿರೋಚನನನ್ನು ಕುರಿತು ಬ್ರಹ್ಮದೇವರು ವಂಚನೆಗೋಸ್ಕರ ಉಪದೇಶ ಮಾಡಿದರು. ಆದರಂತೆ ವಿಶ್ವಾಮಿತ್ರ ಋಷಿಯನ್ನು ಕುರಿತು ದೇವೇಂದ್ರನೂ ಸಹ 'ಪ್ರಾಣೋ ವಾऽಹಂ' ಎಂಬುದಾಗಿ ವಂಚನೆಗೋಸ್ಕರ ಉಪದೇಶಿಸಿದ್ದಾನೋ ಅಥವಾ ವಂಚನೆಗೋಸ್ಕರ ಉಪದೇಶಿಸಿಲ್ಲವೆಂದರೆ ಅಂತರ್ಯಾಮಿಯ ಅಪೇಕ್ಷೆಯಿಂದ ಉಪದೇಶಿಸಿದ್ದಾನೋ? ಮೊದಲನೆಯ ಪಕ್ಷ ತಪ್ಪು. 'ವಕ್ತುಃ' ಎಂದು ಹೇಳಿದ್ದರಿಂದ ವಿಶಿಷ್ಟವಾದ ಶಸ್ತ್ರಮಂತ್ರಗಳಿಂದ ಪ್ರಶಂಸಿಸುತ್ತಿರುವ ವಿಶ್ವಾಮಿತ್ರ ಋಷಿಗೆ ದೇವೇಂದ್ರನು ಮೋಸಮಾಡಿ ಉಪದೇಶಿಸಲು ಸಾಧ್ಯವಿಲ್ಲ ('ವಕ್ತುರಿತ್ಯುಕ್ತೇಃ ವಿಶಿಷ್ಟಶಸ್ತ್ರಶಂಸಿತುರ್ವಿಶ್ವಾಮಿತ್ರಸ್ಯ ನೇಂದ್ರೋ-ऽನ್ಯಥೋಪದೇಷ್ಟುಮರ್ಹತಿ') ಎಂದು ಸುಧೆಯಲ್ಲಿ ಹೇಳಿದಂತೆ ಬೃಹತೀಸಹಸ್ರವನ್ನು ಪಠಿಸಿದ ವಿಶ್ವಾಮಿತ್ರನಿಗೆ ದೇವೇಂದ್ರನು ಮೋಸಮಾಡಲು ಸಾಧ್ಯವಿಲ್ಲ. ಎರಡನೆಯ ಪಕ್ಷವೂ ತಪ್ಪು. ಅಹಂ ಪದಕ್ಕೆ ಅಂತರ್ಯಾಮಿ ಎಂಬರ್ಥವನ್ನು ಹೇಳಿದರೆ 'ಮಂಚಾಃ ಕ್ರೋಶಂತಿ' ಎಂಬಲ್ಲಿ ಮಂಚಪದಕ್ಕೆ ಮಂಚದಲ್ಲಿರುವ ಪುರುಷರಲ್ಲಿ ಲಕ್ಷಣಾ ಮಾಡಿದಂತೆ ಲಕ್ಷಣಾ ಮಾಡುವ ಪ್ರಸಂಗ ಬರುತ್ತದೆ. ಮುಖ್ಯಾರ್ಥವನ್ನೇ ಹೇಳಲು ಬರುವಾಗ ಅಮುಖ್ಯಾರ್ಥವನ್ನು ಸ್ವೀಕರಿಸಲು ಬಾರದು ಎಂದಿದರ ಅಭಿಪ್ರಾಯ.

## ದೇವೇಂದ್ರನಲ್ಲಿ ವಿಷ್ಣುವಿನ ಸನ್ನಿಧಾನ

**ಭಾಷ್ಯಮ್ – ನ, 'ಪ್ರಾಣಸ್ತ್ವಂ ಪ್ರಾಣಃ ಸರ್ವಾಣಿ ಭೂತಾನಿ' (ಐ.ಆ.೨-೨-೩) ಇತಿ ವಹ್ನ್ಯಾತ್ಮಸಮ್ಬನ್ಧೋ ಹ್ಯತ್ರ ವಿಧೀಯತೇ ॥ ೨೯ ॥**

---

(*) 'ಪ್ರಿಯಂ ವೈ ಮೇ ಧಾಮೋಪಾಗಾ' ಇತ್ಯತ್ರ ಧಾಮಪದೇನ ಭಗವತ್ಸನ್ನಿಧಾನಪಾತ್ರ ಬೃಹತೀಸಹಸ್ರಮುಚ್ಯತೇ । ಉಪಾಗಾಃ ಉಪಪನ್ನತಯाऽऽಗಾಃ ಗಾನಮಕರೋದಿತ್ಯರ್ಥಃ । 'ತ್ವಾಮೇವ ಜಾನೀಯಾಮ್' ಇತಿ ಪ್ರಾರ್ಥಿತತ್ವಾದಸ್ಯೋಪದೇಶಸ್ಯೇನ್ದ್ರಿಯೈಃ ಸಹ ಗಣನಸ್ಯ ನಾನ್ತರ್ಯಾಮಿವಿಷಯತ್ವಮಿತಿ ಭಾವೇನೋಕ್ತಮ್ – ನ ಚಾಸ್ಯೋಪದೇಶಸ್ಯೇತಿ ॥ – ಗುರ್ವರ್ಥದೀಪಿಕಾ ।

ಇದು ತಪ್ಪು; ಏಕೆಂದರೆ, 'ನೀನು ಪ್ರಾಣನು, ಸಕಲಭೂತಗಳೂ ಪ್ರಾಣವೇ' ಎಂಬುದಾಗಿ ಅನೇಕ ದೇಹಗಳಲ್ಲಿ ಪ್ರಾಣನಿಗೆ ಅಂತರ್ಯಾಮಿತ್ವವು ಹೇಳಲ್ಪಟ್ಟಿದೆ.

ಪ್ರತಿಪದಾರ್ಥ - ಪೂರ್ವಾಕ್ಷೇಪವನ್ನು ನಿರಾಕರಿಸುತ್ತಾ, ಸಿದ್ಧಾಂತಭಾಗವನ್ನು ವ್ಯಾಖ್ಯಾನಿಸುತ್ತಿದ್ದಾರೆ. ನ = 'ಇಂದ್ರನೇ ಪ್ರಾಣನು' ಎಂದು ಹೇಳಿದ್ದು ತಪ್ಪು. ಏಕೆಂದರೆ, ಅತ್ರ = ಇದೇ ಏತರೇಯೋಪನಿಷತ್ತಿನಲ್ಲಿ, ತ್ವಂ = ನೀನು, ಪ್ರಾಣಃ = ಪ್ರಾಣನು, ಸರ್ವಾಣಿ ಭೂತಾನಿ = ಸಕಲ ಜೀವರಾಶಿಗಳು, ಪ್ರಾಣಃ = ಪ್ರಾಣವು. ಇತಿ = ಈ ಪ್ರಕಾರವಾಗಿ, ಬಹ್ವಧ್ಯಾತ್ಮಸಂಬಂಧಃ = ಅನೇಕ ದೇಹಗಳಲ್ಲಿ ಅಂತರ್ಯಾಮಿ-ಯಾಗಿರುವಿಕೆಯೆಂಬ ಸಂಬಂಧವು, ವಿದ್ಯತೇ ಹಿ = ಇರುತ್ತದಷ್ಟೇ.

**ಭಾಷ್ಯದೀಪಿಕಾ** – ನಞಧ್ಯಾಹಾರೇಣ ಸಿದ್ಧಾನ್ತಾಂಶಂ ವ್ಯಾಚಷ್ಟೇ - ನೇತಿ ॥ ಅನುಗಮಾದಿತ್ಯನುವರ್ತತೇ । ನೇತ್ಯಾವರ್ತತೇ । ಹಿಶಬ್ದೋ ಯತ ಇತ್ಯರ್ಥೇ । ಅಸ್ಯೋಕ್ತಮಿತಿ ಶೇಷಃ । ತಥಾ ಚೇತ್ಯಂ ತತ್ತ್ವಪ್ರದೀಪಟೀಕೋಕ್ತಾ ಯೋಜನಾ ನಾಯಂ ಪ್ರಾಣ ಇನ್ದ್ರಃ, ಕಿನ್ತು ವಿಷ್ಣುರೇವ । ಕುತಃ? 'ಅನುಗಮಾತ್' ಪ್ರಾಗುಕ್ತಪ್ರಬಲತಮಲಿಙ್ಗಾದೇಃ । ತಥಾ ಸತ್ಯುಪದೇಶವಿರೋಧ ಇತಿ ಚೇತ್ - ನ, ಕುತಃ? ಯತೋऽತ್ರ ಪ್ರಕರಣೇ ಸ್ವಸ್ಥಿತಸ್ಯೈವ ಪ್ರಥಮಂ 'ಪ್ರಾಣೋ ವಾ ಅಹಮಸ್ಮ್ಯೃಷೇ' ಇತಿ ವಾಕ್ಯೇನ ಪರಮಾತ್ಮತ್ವಮುಕ್ತಮಿನ್ದ್ರೇಣ । ತರ್ಹ್ಯೌಕ್ತಿವಿರೋಧ ಇತ್ಯಪಿ ನ । ಯತೋऽತ್ರ ತಸ್ಯೈವ ಪ್ರಾಣಾಖ್ಯಪರಮಾತ್ಮನಃ 'ಪ್ರಾಣಸ್ತ್ವಂ ಪ್ರಾಣಃ ಸರ್ವಾಣಿ ಭೂತಾನಿ' ಇತ್ಯೇವಮಾದಿವಾಕ್ಯೇನ 'ಬಹ್ವಧ್ಯಾತ್ಮಸಮ್ಬನ್ಧಃ' ಇನ್ದ್ರಾದಿಜೀವರೂಪಬಹುದೇಹಸಮ್ಬನ್ಧಃ ಸರ್ವಗತತ್ವಮೇವ ಋಷಿಂ ಪ್ರತಿ ಇನ್ದ್ರೇಣೋಕ್ತಂ 'ವಿದ್ಯತೇ' ಅಸ್ತಿ ನತ್ವೈಕ್ಯಮತ ಇತಿ । ಸೂತ್ರೋಕ್ತಸಮ್ಬನ್ಧಬಾಹುಲ್ಯಂ ಸಮ್ಬನ್ಧಿನಿ ಪರ್ಯವಸ್ಯತೀತ್ಯಾಶಯೇನ ಬಹ್ವಿತ್ಯುಕ್ತಮ್ । ಭೂಮಶಬ್ದಸ್ಯ ಭಾವವಾಚಿತ್ವೇऽಪಿ ಭಾವಭವಿತ್ರೋರಭೇದಾದ್ ಭವಿತರಿ ಪ್ರಯೋಗಃ । ಸೂತ್ರೇ ತು ಪರನಿಪಾತ ಆರ್ಷಃ ।

ಅಥವಾ – ಅಧಿಕಶ್ವಾಸಾವಾತ್ಮಾ ಚಾಧ್ಯಾತ್ಮಾ ತಸ್ಯ ಸಮ್ಬನ್ಧಃ ಬಹುಶ್ವಾಸಾವಧ್ಯಾತ್ಮಸಮ್ಬನ್ಧಶ್ಚೇತಿ ವಿಗ್ರಹಃ । ತಥಾ ಚ 'ಹಿ' ಯತಃ 'ಅತ್ರ' ಇನ್ದ್ರೇ 'ಬಹ್ವಃ' ಬಹುಲಃ ಪರಮಾತ್ಮಸಮ್ಬನ್ಧಃ ಸನ್ನಿಧಿವಿಶೇಷೋ ವಿದ್ಯತ ಇತ್ಯರ್ಥಃ । ವಿದ್ಯತ ಇತ್ಯನನ್ತರಂ ತದಪೇಕ್ಷಯಾऽಯಮ್ ಉಪದೇಶೋ ನ ಸ್ವಾಪೇಕ್ಷಯೇತಿ ಶೇಷಃ । ತಥಾಚೇನ್ದ್ರೇ ತಾತ್ಕಾಲಿಕೇಶ್ವರಸನ್ನಿಧಾನವಿಶೇಷಾಭಿಪ್ರಾಯಾ 'ಪ್ರಾಣೋ ವಾ ಅಹಮ್' ಇತ್ಯುಕ್ತಿಃ, ನ ಸ್ವಾಪೇಕ್ಷಯೇತಿ ನೋಪದೇಶವಿರೋಧ ಇತಿ ಭಾವಃ । ಕುತೋ ನ ಸ್ವಾಪೇಕ್ಷಯೇತ್ಯತಃ ಪ್ರಾಣಸ್ತ್ವಮಿತ್ಯಾಹ । ಯೋಜನಾ ತು - ಹಿ ಯಸ್ಮಾತ್ 'ಪ್ರಾಣಸ್ತ್ವಮ್' ಇತ್ಯಾದಿವಾಕ್ಯೇನಾಸ್ಯ ಪ್ರಾಣಸ್ಯ 'ಬಹ್ವಧ್ಯಾತ್ಮಸಮ್ಬನ್ಧಃ' ಅಧ್ಯಾತ್ಮತ್ವೇನಾನ್ತರ್ಯಾಮಿತ್ವೇನ ಇನ್ದ್ರಾದಿರೂಪಬಹುದೇಹಸಮ್ಬನ್ಧಃ ಸರ್ವಗತತ್ವಮುಕ್ತಂ ವಿದ್ಯತೇ । ನ ಚೈತದತ್ರ ಜೀವವಿಶೇಷೇನ್ದ್ರೇ ವಿದ್ಯತೇ ಯುಜ್ಯತೇ । ತಸ್ಮಾದಿತಿ ॥ ಪ್ರಥಮಪಕ್ಷೇ 'ಯಸ್ಯಾऽತ್ಮಾ ಶರೀರಮ್' (ಮಾಧ್ಯನ್ದಿನ) ಇತಿ ಶ್ರುತೇರಿನ್ದ್ರಾದೀನಾಂ ವಿಷ್ಣುದೇಹತ್ವಾದೈಕ್ಯವ್ಯಪದೇಶಃ ಶರೀರಶರೀರಿಭಾವನಿಬನ್ಧನ ಇತಿ ಜ್ಞಾಪನಾಯಾಧ್ಯಾತ್ಮೇತ್ಯುಕ್ತಿಃ । ಅನೇನ ಬೃಹತೀಸಹಸ್ರವಕ್ತುರ್ವಿಶ್ವಾಮಿತ್ರಸ್ಯ ತಂ ಪ್ರತೀನ್ದ್ರೇಣ ಪ್ರಾಣತಯಾऽಮೋಪದೇಶಾದಯಂ ಪ್ರಾಣೋ ನ ವಿಷ್ಣುಃ, ಕಿನ್ತು ಇನ್ದ್ರ ಏವೇತಿ ಚೇತ್ - ನೇನ್ದ್ರೋऽಯಂ ಪ್ರಾಣಃ, ಕಿನ್ತು ವಿಷ್ಣುರೇವ । ಕುತಃ? ಅನುಗಮಾತ್ ಪ್ರಾಗುಕ್ತಬಲತಮ-ಲಿಙ್ಗಾದೇಃ । ನ ಚೋಪದೇಶವಿರೋಧಃ । ಯತೋऽಯಮಿನ್ದ್ರಗತಾಧ್ಯಾತ್ಮವಿಷಯ ಏವ । ಕುತಃ? ಹಿ ಯಸ್ಮಾದಸ್ಮಿನ್ ಪ್ರಕರಣೇऽಧ್ಯಾತ್ಮಸಮ್ಬನ್ಧಭೂಮಾ । ಅತ್ರಾಧ್ಯಾತ್ಮಸಮ್ಬನ್ಧಶಬ್ದೇನಾऽತ್ಮಾಧಿಕಾರೇ ವರ್ತಮಾನಮಿತಿ । ಅಧಿ-

**ತತ್ವಪ್ರಕಾಶಿಕಾ – ನನ್ವಧ್ಯಾಹಾರೇಣ ಸಿದ್ಧಾನ್ತಾಂಶಂ ವ್ಯಾಚಷ್ಟೇ – ನೇತಿ ॥ ನೇನ್ದ್ರೋऽಯಂ ಪ್ರಾಣಃ ಕಿನ್ತು ವಿಷ್ಣುರೇವ । ಪ್ರಾಗುಕ್ತಪ್ರಬಲತಮಲಿಙ್ಗಾದೇಃ । ಉಪದೇಶವಿರೋಧ ಇತಿ ಚೇತ್ । ಭವೇದಯಂ ವಿರೋಧೋ ಯದ್ಯತ್ರೇನ್ದ್ರೇಣ ಪ್ರಾಣತಯाऽऽತ್ಮೋಪದೇಶಃ ಕ್ರಿಯೇತ । ನೈತದಸ್ತಿ । ಯತोऽಸ್ಮಿನ್ಪ್ರಕರಣೇ ಸ್ವಸ್ಥಿತಸ್ಯ ಪ್ರಾಣೋ ವಾ ಅಹಮಸ್ಮೀತಿ ಪರಮಾತ್ಮತ್ವಮುಕ್ತ್ವಾ ತಸ್ಯೈವ ಪ್ರಾಣಾಖ್ಯಪರಮಾತ್ಮನಃ 'ಪ್ರಾಣಸ್ತ್ವಂ ಪ್ರಾಣೋ ಸರ್ವಾಣಿ ಭೂತಾನಿ' ಇತ್ಯಾದಿನಾ ಬಹುದೇಹಸಮ್ಬನ್ಧಃ ಸರ್ವಗತತ್ವಮೇವೇನ್ದ್ರೇಣೋಕ್ತಂ ವಿದ್ಯತ ಇತ್ಯರ್ಥಃ । ಅಥರ್ವೇನ್ದ್ರೇ ಬಹುಪರಮಾತ್ಮಸಮ್ಬನ್ಧೋ ವಿದ್ಯತೇ ತದಪೇಕ್ಷಯೈವಾಯಮುಪದೇಶೋ ನ ಸ್ವಾಪೇಕ್ಷಯಾ । ಕುತಃ? 'ಪ್ರಾಣಸ್ತ್ವಮ್' ಇತ್ಯಾದಿನಾಸ್ಯ ಪ್ರಾಣಸಾಧ್ಯಾತ್ಮತ್ವೇನಾನ್ತರ್ಯಾಮಿತ್ವೇನ ಸರ್ವಗತತ್ವೋಕ್ತೇಃ ವಿದ್ಯಮಾನತ್ವಾತ್ । ನ ಚೈತದಿನ್ದ್ರೇ ಜೀವವಿಶೇಷೇ ಯುಕ್ತಮಿತ್ಯರ್ಥಃ । ಅನ್ಯಥಾ ತ್ವಾಮೇವ ಜಾನೀಯಾಮಿತಿ ಜ್ಞಾತಪೂರ್ವೇನ್ದ್ರಸ್ಯ ಮುನೇಃ ಪ್ರಶ್ನಸ್ಯೈವಾಸಮ್ಭವಾತ್ । ಸಮ್ಭವೇ ವಾ ಪ್ರಾಣಸ್ತ್ವಮ್ ಇತ್ಯಾದಿಪರಿಹಾರವಾಕ್ಯಾಸङ್ಗತೇಶ್ಚ । ಅಸ್ಮತ್ಪಕ್ಷೇ ತು (*)ತೇಜೋಬಾಹುಲ್ಯಾತ್ ಇನ್ದ್ರೇऽನ್ಯोऽಪಿ ವರ್ತತೇ । ಕोऽಸೌ ವಿಷ್ಣುश्चेತ್ ಸ ಚ ಕೀದೃಶ ಇತ್ಯಭಿಪ್ರಾಯದ್ವಯೇನ ಪ್ರಶ್ನೇ ಸತಿ ಕಸ್ತ್ವಯೀತಿ ಪ್ರಶ್ನಸ್ಯ ಪ್ರಾಣೌ ವाऽಹಮಿತಿ ಪರಿಹಾರಃ । ಕೀದೃಶोऽಸಾವಿತ್ಯಸ್ಯೋತ್ತರತಯोತ್ತರವಾಕ್ಯಯೋಜನೋಪಪತ್ತೇರಿತಿ ॥ ೨೯ ॥**

'ನ' ಎಂಬುದನ್ನು ಅಧ್ಯಾಹಾರ ಮಾಡಿಕೊಂಡು ಸಿದ್ಧಾಂತಾಂಶವನ್ನು ಭಾಷ್ಯಕಾರರು ''ನ'' ಇತ್ಯಾದಿಯಾಗಿ ವ್ಯಾಖ್ಯಾನಿಸುತ್ತಿದ್ದಾರೆ. ಈ ಪ್ರಾಣನು ದೇವೇಂದ್ರನಲ್ಲ; ಹೊರತಾಗಿ ವಿಷ್ಣುವೇ ಆಗಿದ್ದಾನೆ. ಏಕೆಂದರೆ, ವಿಷ್ಣುವೆಂಬರ್ಥದಲ್ಲಿ ದೇವೋಪಾಸ್ಯತ್ವವೇ ಮೊದಲಾದ ಅತ್ಯಂತಪ್ರಬಲವಾದ ಲಿಂಗಗಳನ್ನು ಈ ಹಿಂದೆ ಹೇಳಲಾಗಿದೆ. ಹಾಗಾದರೆ ಉಪದೇಶದ ವಿರೋಧ ಬರುತ್ತದಲ್ಲವೇ? ಎಂದು ಪ್ರಶ್ನಿಸಬಾರದು. ಒಂದು ವೇಳೆ ದೇವೇಂದ್ರನೇ ಸ್ವತಃ ತನ್ನನ್ನು ಪ್ರಾಣನೆಂದು ಉಪದೇಶಮಾಡಿದ್ದರೆ ವಿರೋಧಕ್ಕೆ ಅವಕಾಶವಿತ್ತು. ಆದರೆ ಹಾಗೆ ಮಾಡಿಲ್ಲ. ಏಕೆಂದರೆ, ಈ ಪ್ರಕರಣದಲ್ಲಿ ತನ್ನ ಒಳಗಿರುವ

---

ಶ್ಚಾಸೌ ಆತ್ಮಾ ಚೇತಿ ದೇಹಃ ಪರಮಾತ್ಮಾ ಚोच्यತೇ । ತಥಾ ಚ ಯಸ್ಮಾದಧ್ಯಾತ್ಮನो ವಿಷ್ಣೋರಿನ್ದ್ರ-ವಿಶ್ವಾಮಿತ್ರಾದಿದೇಹಸಮ್ಬನ್ಧ ಉಕ್ತोऽಸ್ತಿ ತಸ್ಮಾತ್ ।

ಅಥವಾ – ಹಿ ಯಸ್ಮಾದ್ ಅಸ್ಮಿನ್ನಿನ್ದ್ರೇ ಅಧ್ಯಾತ್ಮಸಮ್ಬನ್ಧಭೂಮಾ – ಅಧಿರೀಶ್ವರೇ ಅಧಿಕಸ್ಯಾऽತ್ಮನಃ ಪರಮಾತ್ಮನಃ ಸಮ್ಬನ್ಧಸ್ಯಾऽವೇಶಸ್ಯ ಭೂಮಾ ಬಾಹುಲ್ಯಂ ವಿದ್ಯತೇ ತಸ್ಮಾದುಪದೇಶಸ್ಯ ಸನ್ನಿಹಿತಪರಮಾತ್ಮ-ವಿಷಯತ್ವೋಪಪತ್ತೇರಿತಿ ಭಾವಃ । ತದಪಿ ಕುತಃ? ಹಿ ಯಸ್ಮಾತ್ ಅಸ್ಮಿನ್ ಪ್ರಕರಣೇऽಧ್ಯಾತ್ಮಸಮ್ಬನ್ಧ-ಭೂಮोಕ್ತಃ ತಸ್ಮಾದಿತಿ ಸೂತ್ರಾರ್ಥ ಉಕ್ತो ಭವತಿ ।

(*) 'ಸರ್ವಥಾऽऽಜ್ಞಾತಸ್ಯಾಪಿ ಪ್ರಜ್ಞಾಯोಗಾತ್' ಇತಿ ಭಾವೇನोಕ್ತಮ್ – ತೇಜोಬಾಹುಲ್ಯಾದಿತಿ ॥
– ಗುರ್ವರ್ಥದೀಪಿಕಾ ।

ಪರಮಾತ್ಮನನ್ನು ವಿವಕ್ಷಿಸಿ 'ಪ್ರಾಣೋ ವಾ ಅಹಮಸ್ಮಿ' ಎಂಬುದಾಗಿ ಹೇಳುತ್ತಿದ್ದಾನೆ. ಅಂತಹ ಪ್ರಾಣನೆಂಬ ಪರಮಾತ್ಮನಿಗೆ 'ಪ್ರಾಣಸ್ತ್ವಂ ಪ್ರಾಣಃ ಸರ್ವಾಣಿ ಭೂತಾನಿ' ಎಲ್ಲರಿಗೂ ನೀನೇ ಪ್ರಾಣನಾಗಿದ್ದೀ ಇತ್ಯಾದಿಯಾಗಿ ಅನೇಕ ದೇಹಗಳ ಸಂಬಂಧವನ್ನು ಹೇಳಲಾಗಿದೆ. ಮತ್ತು ಸರ್ವಗತತ್ವವನ್ನೂ ಸಹ ದೇವೇಂದ್ರನು ಹೇಳಿದ್ದಾನೆ ಎಂದರ್ಥ.

ಅಥವಾ ದೇವೇಂದ್ರನಲ್ಲಿ ಪರಮಾತ್ಮನ ವಿಶೇಷಸನ್ನಿಧಾನವಿದೆ. ಅದನ್ನು ವಿವಕ್ಷಿಸಿ ದೇವೇಂದ್ರನು ಹೀಗೆ ಉಪದೇಶಿಸಿದ್ದಾನೆ. ಹೊರತು ತನ್ನನ್ನು ಉದ್ದೇಶಿಸಿ ಉಪದೇಶಿಸಿಲ್ಲ. ಏಕೆಂದರೆ, 'ಪ್ರಾಣಸ್ತ್ವಮ್' ಇತ್ಯಾದಿಯಾಗಿ ಈ ಪ್ರಾಣನಿಗೆ ಅಧ್ಯಾತ್ಮಸಂಬಂಧದಿಂದ ಮತ್ತು ಅಂತರ್ಯಾಮಿತ್ವದಿಂದ ಸರ್ವಗತತ್ವವನ್ನು ಹೇಳುವ ವಚನಗಳಿರುವುದರಿಂದ ಎಂದು ತಿಳಿಯಬೇಕು. ಇಲ್ಲಿ ಹೇಳಲ್ಪಟ್ಟ ಸರ್ವಗತತ್ವವು ಜೀವವಿಶೇಷನಾದ ದೇವೇಂದ್ರನಲ್ಲಿ ಯುಕ್ತವಾಗುವುದಿಲ್ಲವೆಂದರ್ಥ. ಇಲ್ಲದಿದ್ದರೆ 'ತ್ವಾಮೇವ ಜಾನೀಯಾಮ್' (ನಿನ್ನನ್ನೇ ತಿಳಿಯುತ್ತೇನೆ) ಎಂದು ವಿಶ್ವಾಮಿತ್ರ ಋಷಿಯು ಏಕೆ ಪ್ರಶ್ನಿಸುತ್ತಿದ್ದರು. ಮೊದಲೇ ದೇವೇಂದ್ರನನ್ನು ಅವರು ತಿಳಿದಿದ್ದಾರಲ್ಲವೇ? ಒಂದು ವೇಳೆ ದೇವೇಂದ್ರನನ್ನು ತಿಳಿಯಬೇಕೆಂದೇ ಅವರು ಪ್ರಶ್ನಿಸಿದ್ದರೆ 'ಪ್ರಾಣಸ್ತ್ವಮ್' ಇತ್ಯಾದಿಯಾಗಿ ಇಂದ್ರನಿಗೆ ನೀಡುವ ಉತ್ತರವಾಕ್ಯವು ಅಸಂಗತವಾಗುತ್ತದೆ.

ನಮ್ಮ ಪಕ್ಷದಲ್ಲಾದರೋ ವಿಶೇಷವಾದ ತೇಜಸ್ಸು ದೇವೇಂದ್ರನಲ್ಲಿರುವುದರಿಂದ ಆ ತೇಜಸ್ಸನ್ನು ಗಮನಿಸಿದ ವಿಶ್ವಾಮಿತ್ರ ಋಷಿಯು ಈ ದೇವೇಂದ್ರನಲ್ಲಿ ಮತ್ತೊಬ್ಬನಿರಬಹುದು. ಅವನು ಯಾರು? ಎಂಬ ಗೊಂದಲದಿಂದ; ಒಂದು ವೇಳೆ ವಿಷ್ಣುವೇ ಇರುವವನಾದಲ್ಲಿ ಅವನ ಮಹಿಮೆಯೇನು? ಎಂಬುದಾಗಿ ಎರಡು ವಿಧದ ಅಭಿಪ್ರಾಯದಿಂದ 'ತ್ವಾಮೇವ ಜಾನೀಯಾಮ್' ಎಂದು ಪ್ರಶ್ನಿಸಿದ್ದಾರೆ. ನಿನ್ನಲ್ಲಿ ಯಾರಿದ್ದಾರೆ? ಎಂಬ ಪ್ರಶ್ನೆಗೆ 'ಪ್ರಾಣೋ ವಾ ಅಹಮ್' ಎಂದು ಉತ್ತರ ನೀಡಿದ್ದಾನೆ. ಪರಮಾತ್ಮನ ಮಹಿಮೆಯೇನು? ಎಂಬ ಪ್ರಶ್ನೆಗೆ ಮುಂದಿನ ವಾಕ್ಯಗಳಿಂದ ಉತ್ತರಿಸಿದ್ದಾನೆ. ಹೀಗೆ ಶ್ರುತಿವಾಕ್ಯಗಳನ್ನು ಯೋಜನಮಾಡಿ ಅರ್ಥೈಸಿಕೊಳ್ಳಬೇಕು.

**ಭಾವದೀಪಃ** – 'ನ ಪ್ರಾಣೋ ವಿಷ್ಣುಃ, ಕಿನ್ತ್ವಿನ್ದ್ರ ಏವ ಆತ್ಮೋಪದೇಶಾತ್' ಇತಿ ಶಙ್ಕಾಯಾಃ ಸೂತ್ರಶೇಷೇಣ ನ ಸಾಕ್ಷಾದುತ್ತರಂ ಲಗತಿ, ಇತ್ಯತಃ ತದುತ್ತರತ್ವೇನ 'ಇತಿ ಚೇನ್ನ' ಇತ್ಯನನ್ತರಂ ಪೂರ್ವಸೂತ್ರಾತ್ 'ಅನುಗಮಾತ್' ಇತಿ ಹೇತುಮನುವರ್ತ್ಯ, ಅರ್ಥಮಾಹ – **ನೇನ್ದ್ರೋऽಯಮಿತಿ** ॥ ಬಹುತ್ವ-ನಿರವಕಾಶತ್ವಾದೇಃ ಸತ್ವಾತ್ **ಪ್ರಬಲತಮ** ಇತ್ಯುಕ್ತಮ್ । ಸೂತ್ರೇ ಅಧ್ಯಾಹೃತ್ಯ ವಾ ಅನುವೃತ್ತ್ಯ ವಾ ಉಕ್ತಸ್ಯ ಭಾಷ್ಯಸ್ಥನಞಃ 'ಪ್ರಾಣೋ ನೇನ್ದ್ರಃ ಕಿನ್ತು ವಿಷ್ಣುರೇವ ಅನುಗಮಾತ್' ಇತ್ಯೇಕोऽರ್ಥ ಉಕ್ತಃ । 'ಉಪದೇಶ ವಿರೋಧೋ ನ' ಇತ್ಯರ್ಥಾನ್ತರಂ ಚೋಕ್ತ್ವಾ, ತತ್ರ ಹೇತುತ್ವೇನ ಸೂತ್ರಖಣ್ಡಭಾಷ್ಯಸ್ಯಾರ್ಥಮಾಹ – **ನೈತದಸ್ತಿ ಇತ್ಯಾದಿನಾ** ॥ 'ಹಿ'ಶಬ್ದಾರ್ಥೌ 'ಯತಃ' ಇತಿ । 'ಅಸ್ಮಿನ್' ಇತಿ ಸೌತ್ರಪದಾನುವಾದಃ 'ಅತ್ರ' ಇತಿ ಭಾಷ್ಯಸ್ಥಪದಂ ಚ ವಿವೃತಂ ಧ್ಯೇಯಮ್ । 'ಪ್ರಾಣಸ್ತ್ವಮ್' ಇತ್ಯತ ಪೂರ್ವಂ ಕಿಞ್ಚಿದ್ಭು-

**ಪಸ್ಕರೋತಿ – ಸ್ವಸ್ಥಿತಸ್ಯೇತಿ ॥ 'ಅಧ್ಯಾತ್ಮಸಮ್ಬನ್ಧಭೂಮಾ' ಇತ್ಯಸ್ಯ ಪ್ರತಿಪದಂ ಭಾಷ್ಯೇ 'ಬಹ್ವಿ'ತ್ಯಾದಿ । ತಸ್ಯಾರ್ಥಃ 'ಬಹುದೇಹ' ಇತಿ । ದೇಹಾ ಇವ ದೇಹಾಃ ಇನ್ದ್ರವಿಶ್ವಾಮಿತ್ರಾದಿಚೇತನಾಃ ತತ್ಸಮ್ಬನ್ಧಃ । ಫಲಿತಾರ್ಥಮಾಹ – ಸರ್ವಗತತ್ವಮೇವೇತಿ ॥ ಏತೇನ ಸೂತ್ರೇ ಅಧಿಕಾತ್ಮನಃ ಪರಮಾತ್ಮನಃ ಅಧ್ಯಾತ್ಮಸಮ್ಬನ್ಧಭೂಮಾ ದೇಹಸಮ್ಬನ್ಧಬಾಹುಲ್ಯಮ್ ಇತ್ಯರ್ಥಃ ಸೂಚಿತಃ ।**

'ಪ್ರಾಣಶಬ್ದದಿಂದ ವಿಷ್ಣುವು ಪ್ರತಿಪಾದ್ಯನಲ್ಲ. ಹೊರತಾಗಿ ಆತ್ಮೋಪದೇಶವಿರುವುದರಿಂದ ದೇವೇಂದ್ರನೇ ಪ್ರತಿಪಾದ್ಯನು' ಎಂಬ ಶಂಕೆಗೆ ಸೂತ್ರಶೇಷದಿಂದ ನೇರವಾಗಿ ಉತ್ತರವು ದೊರೆಯುತ್ತಿಲ್ಲವಲ್ಲವೇ? ಎಂಬ ಪ್ರಶ್ನೆಗೆ ಉತ್ತರ ನೀಡುವುದಕ್ಕಾಗಿ ''ಇತಿ ಚೇನ್ನ'' ಎಂಬ ಪದದ ಮುಂದೆ ಹಿಂದಿನ ಸೂತ್ರದಲ್ಲಿ ಹೇಳಲ್ಪಟ್ಟ 'ಅನುಗಮಾತ್' ಎಂಬುದನ್ನು ಅನುವೃತ್ತಿ ಮಾಡಿಕೊಳ್ಳಬೇಕು. ಆವಾಗ ಸೂತ್ರದಲ್ಲಿಯೇ ನೇರವಾಗಿ ಉತ್ತರಿಸಿದಂತಾಗುತ್ತದೆಂದು ಟೀಕೆಯಲ್ಲಿ ''ನೇಂದ್ರೋಯಂ'' ಎಂಬ ವಾಕ್ಯದಿಂದ ವಿವರಿಸಿದ್ದಾರೆ.

ಬಹುತ್ವ ಹಾಗೂ ನಿರವಕಾಶತ್ವಗಳಿರುವುದರಿಂದ ವಿಷ್ಣುವಿನ ಲಿಂಗಗಳು ಪ್ರಬಲತಮವಾಗಿದೆಯೆಂದು ಸಮರ್ಥಿಸಿದ್ದಾಗಿದೆ. ಸೂತ್ರದಲ್ಲಿ ಭಾಷ್ಯದಲ್ಲಿರುವ ''ನ'' ಎಂಬ ಪದವನ್ನು ಅಧ್ಯಾಹಾರ ಮಾಡಿಕೊಂಡು ಅಥವಾ ಅನುವೃತ್ತಿ ಮಾಡಿಕೊಂಡು ಪ್ರಾಣನು ಇಂದ್ರನಲ್ಲ; ಹೊರತಾಗಿ ವಿಷ್ಣುವೇ ಆಗಿದ್ದಾನೆ ಬ್ರಹ್ಮಶಬ್ದದ ಅನುಗಮವಿರುವುದರಿಂದ ಎಂದು ಒಂದರ್ಥವನ್ನು ತಿಳಿಸಿದಂತಾಯಿತು. 'ಉಪದೇಶವಿರೋಧವು ಇರುವುದಿಲ್ಲ' ಎಂಬ ಮತ್ತೊಂದು ಅರ್ಥವನ್ನು ಹೇಳಿದಂತಾಯಿತು. ಈ ವಿಷಯದಲ್ಲಿ ಕಾರಣವನ್ನು ನೀಡುವುದಕ್ಕಾಗಿ ಸೂತ್ರದ ಒಂದು ಭಾಗಕ್ಕೆ ವ್ಯಾಖ್ಯಾನಿಸಿ ಭಾಷ್ಯವನ್ನು ''ನೈತದಸ್ತಿ'' ಎಂಬುದರಿಂದ ವ್ಯಾಖ್ಯಾನಿಸುತ್ತಿದ್ದಾರೆ. 'ಹಿ'ಶಬ್ದಕ್ಕೆ 'ಯತಃ' ಎಂದರ್ಥ. ಸೂತ್ರದಲ್ಲಿರುವ 'ಅಸ್ಮಿನ್' ಎಂಬ ಪದವನ್ನು ಅನುವಾದ ಮಾಡಿ, 'ಅತ್ರ' ಎಂಬ ಭಾಷ್ಯದಲ್ಲಿರುವ ಪದವನ್ನು ವಿವರಿಸಿದ್ದಾರೆ ಎಂದು ತಿಳಿಯಬೇಕು.

'ಪ್ರಾಣಸ್ತ್ವಮ್' ಎಂಬ ಶ್ರುತಿಗಿಂತ ಮೊದಲು ಕೆಲವು ಅಂಶವನ್ನು ಅವಗಾಹನೆಗಾಗಿ ''ಸ್ವಸ್ಥಿತಸ್ಯ'' ಎಂಬುದಾಗಿ ಹೇಳುತ್ತಿದ್ದಾರೆ. ''ಅಧ್ಯಾತ್ಮಸಂಬಂಧಭೂಮಾ' ಎಂಬ ಸೂತ್ರದಲ್ಲಿರುವ ಪದಕ್ಕೆ ಪ್ರತಿಯಾಗಿ ಭಾಷ್ಯದಲ್ಲಿ 'ಬಹ್ವಧ್ಯಾತ್ಮಸಂಬಂಧಃ' ಎಂಬುದಾಗಿ ಹೇಳಿದ್ದಾರೆ. ಟೀಕೆಯಲ್ಲಿ 'ಬಹುದೇಹಸಂಬಂಧ' ಎಂದದರರ್ಥವನ್ನು ಹೇಳಿದ್ದಾರೆ. ದೇಹದಂತಿರುವವರು ಇಂದ್ರವಿಶ್ವಾಮಿತ್ರ ಮೊದಲಾದ ಚೇತನರು. ಅವರ ಸಂಬಂಧವು ವಿಷ್ಣುವಿಗೆ ಇದೆ ಎಂದರ್ಥ. ಫಲಿತಾರ್ಥವನ್ನು 'ಸರ್ವಗತತ್ವಮೇವ' ಇತ್ಯಾದಿ ವಾಕ್ಯದಿಂದ ಹೇಳಿದ್ದಾರೆ. ಹೀಗೆ ಹೇಳಿದ್ದರಿಂದ ಅಧಿಕಾತ್ಮನಾದ ಪರಮಾತ್ಮನಿಗೆ ಅಧ್ಯಾತ್ಮಸಂಬಂಧಭೂಮಾ = ದೇಹಸಂಬಂಧಬಾಹುಲ್ಯ ಎಂಬರ್ಥವನ್ನು ಸೂಚಿಸಿದಂತಾಯಿತು.

ಭಾವದೀಪಃ – 'ಅಧ್ಯಾತ್ಮಸಮ್ಬನ್ಧಶಬ್ದೇನಾವೇಶೋ ಹಿ ವಿಷ್ಣೋರಿನ್ದ್ರೇ ವಿವಕ್ಷಿತಃ ಇತಿ, ಅಧಿಕಾತ್ಮನಃ ಪರಮಾತ್ಮನಃ ಸಮ್ಬನ್ಧೋ ಹಿ ಅಧ್ಯಾತ್ಮಸಮ್ಬನ್ಧಃ ಇತಿ' ಚೇತರೇಯಭಾಷ್ಯದಿಶಾ 'ಬಹ್ವಿ'ತ್ಯಾದಿಭಾಷ್ಯಮನ್ಯಥಾऽಪಿ ವ್ಯಾಚಷ್ಟೇ – ಅಥವೇತಿ ॥ 'ಅಸ್ಮಿನ್' ಇತಿ ಸೂತ್ರಸ್ಥಸ್ಯ

प्रतिपदं भाष्ये 'अत्र' इति । तदनुवादेन अर्थोक्तिः अत्र 'इन्द्रे' इति । तत्र हेतुतयापि तदेव समग्रभाष्यं योजयति – कुत इति ॥ 'अध्यात्मत्वेन आत्मनो जीवानधिकृत्य वर्तमानत्वेन अन्तर्यामित्वेन' इति यावत् । फलितार्थः – सर्वगततयेति ॥

अन्तर्यामित्वेनोक्तेर्विद्यमानत्वमेव कुतः यज्जीवविशेषे न युक्तम्? इत्यतः 'इन्द्रं तु जानात्येव विश्वामित्रः' इत्यैतरेयभाष्योक्तं विपक्षे बाधकं तावदाह – अन्यथेति ॥ 'स्वापेक्षयोपदेशपक्षे' इत्यर्थः । एतदर्थं च प्राक् टीकायां वाक्यशेषोद्धार इति भावः । 'विशेषज्ञानार्थमस्तु प्रश्नः' इत्यतः सम्भवे वा इति पूर्वपक्षेऽपि विश्वामित्रादेः प्राणत्वाभावादिति भावः । सूत्रे 'भूम'पदं द्वितीयव्याख्यानपरं ध्येयम् ।

'ಬಹ್ವಧ್ಯಾತ್ಮಸಂಬಂಧ' ಎಂಬ ಭಾಷ್ಯಕ್ಕೆ ಮತ್ತೊಂದು ಬಗೆಯ ಅರ್ಥ — ವಿಷ್ಣುವಿನ ಆವೇಶವು ದೇವೇಂದ್ರನಲ್ಲಿರುವುದರಿಂದ ಅಧಿಕಾತ್ಮನೆನಿಸಿದ ಪರಮಾತ್ಮನ ಸಂಬಂಧವು ದೇವೇಂದ್ರನಿಗಿದೆ. ಹೀಗೆ ಐತರೇಯಭಾಷ್ಯದಲ್ಲಿ ಹೇಳಿದ ಪ್ರಕಾರ "ಅಥವಾ" ಎಂಬುದಾಗಿ ಮತ್ತೊಂದು ಬಗೆಯಲ್ಲಿ ವ್ಯಾಖ್ಯಾನಿಸುತ್ತಿದ್ದಾರೆ. 'ಅಸ್ಮಿನ್' ಎಂಬ ಸೂತ್ರದಲ್ಲಿರುವ ಪದಕ್ಕೆ ಪ್ರತಿಯಾದ ಪದವನ್ನು ಭಾಷ್ಯದಲ್ಲಿ 'ಅತ್ರ' ಎಂದು ಹೇಳಿದ್ದಾರೆ. ಭಾಷ್ಯದಲ್ಲಿ ಹೇಳಿದ ಅತ್ರ ಎಂಬ ಪದದ ಅರ್ಥವನ್ನು ಟೀಕೆಯಲ್ಲಿ "ಇಂದ್ರೇ" ಎಂಬುದಾಗಿ ಬರೆದಿದ್ದಾರೆ. ಈ ವಿಷಯದಲ್ಲಿ ಹೇತುತ್ವವನ್ನು ಸಮರ್ಥನೆ ಮಾಡುತ್ತಾ ಆದೇ ಸಮಗ್ರವಾದ ಭಾಷ್ಯವನ್ನು ಯೋಜನೆ ಮಾಡುತ್ತಿದ್ದಾರೆ "ಕುತಃ" ಇತ್ಯಾದಿಯಾಗಿ. ಟೀಕೆಯಲ್ಲಿರುವ "ಅಧ್ಯಾತ್ಮತ್ವೇನ" ಎಂಬ ಪದಕ್ಕೆ ಜೀವನನ್ನು ಕುರಿತು ಹೊರಟಿರುವ ಎಂದರ್ಥ. ಅಂತರ್ಯಾಮಿತ್ವ ಎಂಬುದು ಒಟ್ಟಿನ ತಾತ್ಪರ್ಯ. ಫಲಿತವಾದ ಅರ್ಥವನ್ನು "ಸರ್ವಗತತಯಾ" ಎಂಬುದಾಗಿ ಹೇಳಿದ್ದಾರೆ.

ಆಂತರ್ಯಾಮಿತ್ವವಾಗಲೀ ಸರ್ವಗತತ್ವವಾಗಲೀ ಜೀವವಿಶೇಷನಾದ ದೇವೇಂದ್ರನಲ್ಲಿ ಹೇಳಲು ಸಾಧ್ಯವಿಲ್ಲ. ಏಕೆಂದರೆ 'ಇಂದ್ರಂ ತು ಜಾನಾತ್ಯೇವ ವಿಶ್ವಾಮಿತ್ರಃ' (ಇಂದ್ರನನ್ನು ವಿಶ್ವಾಮಿತ್ರರು ಈಗಾಗಲೇ ತಿಳಿದಿದ್ದಾರೆ) ಎಂಬ ಐತರೇಯಭಾಷ್ಯದಲ್ಲಿ ಹೇಳಲ್ಪಟ್ಟ ವಿಪಕ್ಷೇ ಬಾಧಕತರ್ಕವನ್ನು "ಅನ್ಯಥಾ" ಇತ್ಯಾದಿವಾಕ್ಯದಿಂದ ಹೇಳುತ್ತಿದ್ದಾರೆ. 'ಅನ್ಯಥಾ' ಎಂಬ ಪದಕ್ಕೆ 'ತನ್ನನ್ನೇ ಉಪದೇಶಮಾಡಿದ ಪಕ್ಷದಲ್ಲಿ' ಎಂದರ್ಥ. ಇದನ್ನು ತಿಳಿಸುವುದಕ್ಕೋಸ್ಕರವೇ ಹಿಂದೆ ಟೀಕೆಯಲ್ಲಿ ಶ್ರುತಿಯ ವಾಕ್ಯಶೇಷವನ್ನು ಉದ್ಧರಿಸಿದ್ದಾರೆಂಬುದನ್ನು ಗಮನಿಸಬೇಕು. ಇಂದ್ರನ ಬಗ್ಗೆ ವಿಶೇಷಜ್ಞಾನವನ್ನು ಹೊಂದುವುದಕ್ಕಾಗಿ ವಿಶ್ವಾಮಿತ್ರ ಋಷಿಯು ಪ್ರಶ್ನಿಸಿರಬಹುದಲ್ಲವೇ? ಎಂದು ಪ್ರಶ್ನಿಸಿದರೆ ಹಾಗೆ ಒಪ್ಪಿದರೂ ಸಹ ಪೂರ್ವಪಕ್ಷದಲ್ಲಿ ವಿಶ್ವಾಮಿತ್ರಾದಿಗಳಿಗೆ ಪ್ರಾಣತ್ವವು ಬರಲು ಸಾಧ್ಯವಿಲ್ಲ. ಸೂತ್ರದಲ್ಲಿರುವ ಭೂಮ ಎಂಬ ಪದವು ಎರಡನೆಯ ವ್ಯಾಖ್ಯಾನವನ್ನು ಸೂಚಿಸಿದೆ.

भा.दी. – अत्र 'प्राणस्यान्तर्यामित्वेनोक्तिः' इत्येतत् न केवलं विपक्षे बाधकात् ज्ञायते, किन्तु वाक्ययोजनासामञ्जस्याच्च ज्ञायते इति- भावेनाह – अस्मत्पक्षे तु

ಇತಿ ॥ ಯದ್ವಾ, 'ಅಯಂ ಚ ದೋಷೋ ಭವತಾಮಪಿ ಸಮಃ' ಇತ್ಯತ ಆಹ – **ಅಸ್ಮತ್ಪಕ್ಷೇ ತು ಇತಿ ॥ ಅಹಮಿತೀತಿ ॥** ತರ್ಹಿ ಪ್ರಾಣೋ ವಾ ಮಯಿ ಅಸ್ತೀತಿ ಸ್ಯಾದಿತಿ ತು ನಿರಸಿಷ್ಯತ ಇತಿ ಭಾವಃ । **ಉತ್ತರ ಇತಿ ॥** 'ಪ್ರಾಣಸ್ತ್ವಮ್' ಇತ್ಯಾದಿರಿತ್ಯರ್ಥಃ । ಅತ್ರ ಯದ್ಯಪಿ ಐತರೇಯಭಾಷ್ಯೇ –

**ತ್ವಾಂ ಜಾನೀಯಾಮಿತಿ ಪ್ರಶ್ನಂ ವಿಶ್ವಾಮಿತ್ರಸ್ಯ ಕುರ್ವತಃ ।**
**ಅಭಿಪ್ರಾಯದ್ವಯಂ ಹ್ಯಸ್ತಿ ಶಕ್ರಾವಿಷ್ಟೋ ನ ಚಾಪರಃ ।**
**ಹರೇತಿ ತು ಮೇ ತರ್ಕಸ್ತೇಜೋಬಾಹುಲ್ಯತೋऽಜನಿ ।**
**ತಸ್ಯ ತರ್ಕಸ್ಯ ಸತ್ಯತ್ವಂ ಜ್ಞಾತವ್ಯಂ ಪ್ರಥಮಂ ಮಮ ।**
**ದ್ವಿತೀಯಂ ಯದಿ ವಿಷ್ಣುಃ ಸ್ಯಾತ್ ಜ್ಞಾತವ್ಯೋ ಮೇ ವಿಶೇಷತಃ ।**
**ಇತ್ಯಭಿಪ್ರಾಯಮಸ್ಯೈವ ಜ್ಞಾತ್ವಾ ವಿಷ್ಣುಃ ಸನಾತನಃ ।**
**ಅಭಿಪ್ರಾಯದ್ವಯಸ್ಯಾಪಿ ಪರಿಹಾರಂ ಹರಿರ್ದದೌ ।**
**ಪ್ರಾಣೋ ವाऽಹಮಿತ್ಯಾದಿನಾಮಸನ್ದರ್ಭಮುಕ್ತವಾನ್ ।**
**ವಿಶೇಷಜ್ಞಾನಸಿದ್ಧ್ಯರ್ಥಂ ನಾಸ್ಮಾ ಮುಕ್ತಿಃ ಪರಾತ್ಮನಃ ।**
**ಇನ್ದ್ರಾವಿಷ್ಟಃ ಕोऽಯಮಿತಿ ಶಙ್ಕಾನುತ್ಯರ್ಥಮೇವ ಚ ।**
**ತಪನ್ನೇವಾಸ್ಮೀತ್ಯವದ್ ತಪನ್ತಂ ವೇದ ಸोऽಪಿ ಚ ॥**

ಇತಿ । ತಥಾ 'ಅಹೇಯತ್ವಾದಹಂ ನಾಮಾಸ್ಮಿ, ಅಸನಾನ್ ಮನುತೇರಪಿ' ಇತ್ಯಾದಿಸ್ಮೃತೌ ।

ವಿಪಕ್ಷೇ ಬಾಧಕತರ್ಕವಿರುವುದರಿಂದ ಪ್ರಾಣನಲ್ಲಿ ಅಂತರ್ಯಾಮಿತ್ವವನ್ನು ಹೇಳಿದ್ದಷ್ಟೇ ಅಲ್ಲ ಹೊರತಾಗಿ ವಾಕ್ಯಯೋಜನೆಯಲ್ಲಿ ಅಸಾಮಂಜಸ್ಯವು ಬರುತ್ತದೆ. ಈ ಅಭಿಪ್ರಾಯದಿಂದ 'ಅಸ್ಮತ್‌ಪಕ್ಷೇ' ಎಂಬ ಟೀಕೆಯು ಹೊರಟಿದೆ. ಅಥವಾ ನಮಗೆ ಹೇಳಿದ ದೋಷ ನಿಮಗೂ ಸಮಾನವಲ್ಲವೇ? ಎಂಬ ಪ್ರಶ್ನೆಗೆ ''ಅಸ್ಮತ್‌ಪಕ್ಷೇ'' ಇತ್ಯಾದಿ ವಾಕ್ಯದಿಂದ ಉತ್ತರಿಸಿದ್ದಾರೆ. ''ಪ್ರಾಣೋ ವಾ ಅಹಮಿತಿ ಪರಿಹಾರಃ'' ಎಂದು ಟೀಕೆಯಲ್ಲಿದೆ. ಇಲ್ಲಿರುವ ಅಹಂ ಶಬ್ದದ ಅಭಿಪ್ರಾಯ ಹೀಗಿದೆ -- ಹಾಗಾದರೆ 'ಪ್ರಾಣೋ ವಾ ಮಯಿ ಅಸ್ತಿ' ಎಂದು ದೇವೇಂದ್ರನು ಹೇಳಬೇಕಿತ್ತಲ್ಲವೇ? ಎಂಬ ಪ್ರಶ್ನೆಗೆ ಅವಕಾಶವಿಲ್ಲ. ಈ ಮುಂದೆ ಇದನ್ನು ನಿರಾಕರಿಸುತ್ತೇವೆ -- ಎಂದು. ''ಉತ್ತರವಾಕ್ಯ''ವೆಂದರೆ 'ಪ್ರಾಣಸ್ತ್ವಮ್' ಇತ್ಯಾದಿ ವಾಕ್ಯವೆಂದರ್ಥ.

— 'ಅಹಂ ತ್ವಮ್' ಆದಿಶಬ್ದಾನಾಮನ್ತರ್ಯಾಮಿಣಿ ವೃತ್ತೇರ್ದರ್ಶಿತತ್ವಾತ್ । 'ಸಪ್ತಸು ಪ್ರಥಮಾ' ಇತಿ ಸೂತ್ರಾಚ್ಚ । ತಥಾ ಚ ಬ್ರಹ್ಮಾण್ಡೇ –

**ಯಾವಜ್ಜ್ಞಾನೇನ ಮೋಕ್ಷಃ ಸ್ಯಾತ್ ತಾವಜ್ಜ್ಞಾತ್ವाऽಪಿ ಕೌಶಿಕಃ ।**
**ಅಧಿಕಜ್ಞಾನಲಬ್ಧ್ಯರ್ಥಂ ಮೋಕ್ಷेऽಧಿಕಸುಖಾಪ್ತಯೇ ।**
**ಜಾನೀಯಾಂ ತ್ವಾಮಿತಿ ಪ್ರಾಹ ತಸ್ಮಾ ಆಹ ಸ ಕೇಶವಃ ।**

ಪ್ರಶ್ನೆ - ಪ್ರಾಣೋ ವಾ ಅಹಮಸ್ಮಿ ಇತ್ಯಾದಿ ಪ್ರಕರಣವನ್ನು ಶ್ರುತಿಗೆ ಸೂತ್ರ, ಭಾಷ್ಯಗಳಲ್ಲಿ ಬೇರೆ ಬೇರೆ ಅಭಿಪ್ರಾಯದಿಂದ ವ್ಯಾಖ್ಯಾನಿಸಿರುವುದು ಕಾಣುತ್ತಿದೆ. ಏಕೆಂದರೆ, ಐತರೇಯಭಾಷ್ಯದಲ್ಲಿ ಶ್ರೀಮದಾಚಾರ್ಯರು ಈ ಪ್ರಕರಣವನ್ನು ಹೀಗೆ ವ್ಯಾಖ್ಯಾನಿಸಿದ್ದಾರೆ.

ತ್ವಾ ಜಾನೀಯಾಮಿತಿ ಪ್ರಶ್ನಂ ವಿಶ್ವಾಮಿತ್ರಸ್ಯ ಕುರ್ವತಃ।
ಅಭಿಪ್ರಾಯದ್ವಯಂ ಹ್ಯಸ್ತಿ ಶಕ್ರಾವಿಷ್ಣೋ ನ ಚಾಪರಃ।

ನಿನ್ನನ್ನು ನಾನು ತಿಳಿಯಬೇಕೆಂದು ಅಪೇಕ್ಷಿಸುವ ವಿಶ್ವಾಮಿತ್ರಋಷಿಗೆ ಎರಡು ಅಭಿಪ್ರಾಯವಿದೆ. ಇಂದ್ರನಲ್ಲಿ ಆವೇಶವನ್ನು ಹೊಂದಿದವನು ಬೇರೆ ಯಾರೂ ಅಲ್ಲ.

ಹರೇರಿತಿ ತು ಮೇ ತರ್ಕಸ್ತೇಜೋಬಾಹುಲ್ಯತೋऽಜನಿ।
ತಸ್ಯ ತರ್ಕಸ್ಯ ಸತ್ಯತ್ವಂ ಜ್ಞಾತವ್ಯಂ ಪ್ರಥಮಂ ಮಯಾ।

ದೇವೇಂದ್ರನಲ್ಲಿ ವಿಶೇಷವಾದ ತೇಜಸ್ಸು ಕಾಣಿಸುತ್ತಿರುವುದರಿಂದ ಹರಿಯೇ ಇಂದ್ರನಲ್ಲಿ ಇದ್ದಾನೆಂದು ನನಗೆ ಊಹೆ ಉಂಟಾಗಿದೆ. ಈ ಊಹೆಯಲ್ಲಿ ಸತ್ಯತೆಯನ್ನು ನಾನು ಮೊದಲು ತಿಳಿಯಬೇಕು.

ದ್ವಿತೀಯಂ ಯದಿ ವಿಷ್ಣುಃ ಸ್ಯಾಜ್ಜ್ಞಾತವ್ಯೋ ಮೇ ವಿಶೇಷತಃ।
ಇತ್ಯಭಿಪ್ರಾಯಮಸ್ಯೈವ ಜ್ಞಾತ್ವಾ ವಿಷ್ಣುಃ ಸನಾತನಃ।
ಅಭಿಪ್ರಾಯದ್ವಯಸ್ಯಾಪಿ ಪರಿಹಾರಂ ಹರಿರ್ದದೌ॥

ಎರಡನೆಯದಾಗಿ ಇಂದ್ರನಲ್ಲಿ ಆವೇಶವನ್ನು ಹೊಂದಿದವನು ವಿಷ್ಣುವೇ ಆಗಿದ್ದರೆ ಅಂತಹ ವಿಷ್ಣುವನ್ನು

---

**ಇನ್ದ್ರಾವಿಷ್ಟಃ ಪ್ರಾಣನಾಮ ತಥಾऽನ್ಯಾಶ್ಚಾಭಿಧಾಃ ಪ್ರಭುಃ।**
**ಪ್ರಕೃಷ್ಟಾನನ್ದರೂಪತ್ವಾತ್ ಪ್ರಾಣ ಇತ್ಯಭಿಧೀಯತೇ।**
**ಅಹೇಯತ್ವಾದಹಂ ನಾಮಾऽಸ್ಮ್ಯಸನಾನ್ ಮನುತೇರಪಿ।**
**ತತೋ ವೇತ್ತೇತಿ ಚ ತ್ವಂ ಸ ಪೂರ್ಣತ್ವಾತ್ ಸರ್ವನಾಮಕಃ।**
**ಸರ್ವಾಣಿ ಬಹುರೂಪತ್ವಾತ್ ಸರ್ವರೂಪೇಷು ಪೂರ್ತಿತಃ।**
**ಪ್ರಭೂತತ್ವಾತ್ ಭೂತನಾಮಾ ಸರ್ವರೂಪಪ್ರಭೂತತಃ।**
**ಬಹುರೂಪಃ ಸ ಭೂತಾನೀತ್ಯುಕ್ತೋ ವಿಷ್ಣುಃ ಸನಾತನಃ।**
**ಸರ್ವೈಶ್ವರ್ಯಸ್ವರೂಪತ್ವಾದೇಷ ಇತ್ಯಭಿಧೀಯತೇ।**
**ಸ ಏವ ಸೂರ್ಯಸಂಸ್ಥಃ ಸನ್ ಲೋಕಾನ್ ತಪತಿ ಕೇಶವಃ॥**

ಇತ್ಯಾದಿ ಮಹೈತರೇಯೋಪನಿಷದ್ಭಾಷ್ಯೇऽಪಿ ಭಗವಾನ್ ಭಾಷ್ಯಕೃದೇವಾನಯೋರರ್ಥವಿಶೇಷಂ ಸ್ಪಷ್ಟೀಚಕಾರ।

ಅಧ್ಯಾತ್ಮಸಮ್ಬನ್ಧಶಬ್ದೇನಾऽವೇಶೋ ಹಿ ವಿಷ್ಣೋರಿನ್ದ್ರೇ ವಿವಕ್ಷಿತೋ ಭಗವತಾ । ಅನ್ಯೇಷ್ವಪಿ ಅನ್ತರ್ಯಾಮಿರೂಪೇಣ ಸಮ್ಬನ್ಧोऽಸ್ತ್ಯೇವ । ಅಸ್ಮಿನ್ನಿನ್ದ್ರೇ ತು ವಿಶೇಷಃ ತಾತ್ಕಾಲಿಕಃ । ಅಧಿಕಾತ್ಮನಃ ಪರಮಾತ್ಮನಃ ಸಮ್ಬನ್ಧೋ ಹಿ ಅಧ್ಯಾತ್ಮಸಮ್ಬನ್ಧಃ । ನ ಹಿ ಸ್ವಾತ್ಮನಃ ಸ್ವಸ್ಯ ಸಮ್ಬನ್ಧೋ ಭವತಿ । ಯದಿ 'ಅಧ್ಯಾತ್ಮಮತ್ರೋಚ್ಯತೇ' ಇತಿ ವಿವಕ್ಷಿತಂ ತರ್ಹಿ 'ಅಧ್ಯಾತ್ಮಭೂಮಾ' ಇತ್ಯೇವ ಸ್ಯಾತ್ । ಸಮ್ಬನ್ಧಶಬ್ದೋ ವ್ಯರ್ಥಃ । ತಸ್ಮಾತ್ ಇನ್ದ್ರಾದಿಜೀವೇಭ್ಯೋ ವಿಷ್ಣೋರ್ಭೇದ ಏವಾತ್ರ ಭಗವತೋ ವಿವಕ್ಷಿತಃ । – (ತತ್ವಪ್ರದೀಪಿಕಾ)

ನಾನು ವಿಶೇಷವಾಗಿ ತಿಳಿಯಬೇಕು. ವಿಶ್ವಾಮಿತ್ರ ಋಷಿಯ ಈ ಎರಡು ವಿಧದ ಅಭಿಪ್ರಾಯವನ್ನು ತಿಳಿದು ಸಕಲಸಂಶಯ ಪರಿಹಾರಕನಾದ ಭಗವಂತನು ಎರಡು ವಿಧ ಅಭಿಪ್ರಾಯಕ್ಕೂ ಸರಿಯಾದ ಪರಿಹಾರವನ್ನು ನೀಡಿದ್ದಾನೆ.

ಪ್ರಾಣೋ ವಾऽಹಮಿತ್ಯಾದಿ ನಾಮಸಂದರ್ಭಮುಕ್ತವಾನ್ ।
ವಿಶೇಷಜ್ಞಾನಸಿದ್ಧ್ಯರ್ಥಂ ನಾಮ್ನಾ ಮುಕ್ತಃ ಪರಾತ್ಮನಃ ॥

ವಿಶೇಷವಾದ ತತ್ತ್ವಜ್ಞಾನದ ಸಿದ್ಧಿಗಾಗಿ 'ಪ್ರಾಣೋ ವಾऽಹಮಸ್ಮಿ' ಮುಂತಾದ ನಾಮಗಳನ್ನು ಬಣ್ಣಿಸಿದ್ದಾನೆ. ವಿಷ್ಣುಸಹಸ್ರನಾಮ ಮುಂತಾದ ಬೇರೆಡೆಗಳಲ್ಲಿಯೂ ಇದಕ್ಕೋಸ್ಕರವೇ ಅನೇಕ ನಾಮಗಳನ್ನು ಹೇಳಿದ್ದು ಕಂಡಿದೆ.

ಇಂದ್ರಾವಿಷ್ಟಃ ಕೋऽಯಮಿತಿ ಶಂಕಾನುತ್ಪತ್ತ್ಯರ್ಥಮೇವ ಚ ।
ತಪನ್ನೇವಾಸ್ಮೀತ್ಯವದತ್ ತಪಂತಂ ವೇದ ಸೋऽಪಿ ಹಿ ॥
(ನಾರಾಯಣಂ ಸೂರ್ಯಗತಂ ಗಾಯತ್ರ್ಯೋಪಾಸಕೋ ಹಿ ಸಃ)

ಇಂದ್ರನಲ್ಲಿ ಆವೇಶವನ್ನು ಹೊಂದಿದವನು ಯಾರು? ಎಂಬ ಶಂಕೆಯ ಪರಿಹಾರಕ್ಕಾಗಿ 'ತಪನ್ನೇವಾಸ್ಮಿ' ತಾಪವನ್ನುಂಟು ಮಾಡುವ ನಾನೇ ಇಂದ್ರನಲ್ಲಿ ಆವಿಷ್ಟನಾಗಿದ್ದೇನೆಂದು ಹೇಳಿಕೊಂಡಿದ್ದಾನೆ. ಸೂರ್ಯಮಂಡಲದಲ್ಲಿದ್ದು ನಾರಾಯಣ ರೂಪದಿಂದ ಲೋಕಕ್ಕೆ ಶಾಖನೀಡುವವನೆಂಬುದು ವಿಶ್ವಾಮಿತ್ರ ಋಷಿಗೆ ತಿಳಿದೇ ಇದೆ. ಏಕೆಂದರೆ ಗಾಯತ್ರೀಮಂತ್ರದ್ರಷ್ಟಾರನಾಗಿ ಸೂರ್ಯಮಂಡಲದಲ್ಲಿ ಅಂತರ್ಗತನಾದ ನಾರಾಯಣನನ್ನು ವಿಶ್ವಾಮಿತ್ರ ಋಷಿಯ ಉಪಾಸನೆ ಪ್ರಸಿದ್ಧವೇ ಆಗಿದೆ.

**ಭಾವದೀಪಃ** – ನಚ 'ಪ್ರಾಣೋ ವಾ ಅಹಮಸ್ಮ್ಯೃಷೇ' ಇತ್ಯಾದಾವಸ್ಮ್ಯಾದಿಶಬ್ದಃ ಅಸ್ಮಚ್ಛಬ್ದಾರ್ಥಃ ಇತ್ಯಾದಿವಾಕ್ಯೇಷು ಚಾರ್ಥಪರ್ಯಾಲೋಚನಯಾ 'ಪ್ರಾಣೋऽಹಮಸ್ಮ್ಯಾದಿಶಬ್ದಾನಾಂ ವಿಷ್ಣುನಾಮತ್ವಮುಪೇತ್ಯ ಕೀದೃಶ ಇತಿ ಪ್ರಶ್ನಸ್ಯಾಯಂ ಪರಿಹಾರಃ । 'ಕೋऽಯಮ್' ಇತಿ ಪ್ರಶ್ನಸ್ಯ 'ತಪನ್ನೇವಾಸ್ಮಿ' ಇತ್ಯಯಂ ಪರಿಹಾರ ಇತ್ಯುಕ್ತಂ ಭಾತಿ; ನತು 'ಅಸ್ಮಿ' ಇತ್ಯಸ್ಯ ತಿಙಂತತ್ವಮುಪೇತ್ಯ ।

ಯತ್ ತು ಐತರೇಯಭಾಷ್ಯೇ ಪ್ರಥಮಾಧ್ಯಾಯೇ ಆಹ 'ಮಹಿದಾಸ ಐತರೇಯಃ' ಇತಿ ತು ಸರ್ವಸ್ಯೈವ ವಚನಸ್ಯ ತದೀಯತ್ವಪ್ರದರ್ಶನಾರ್ಥಮ್ । ನತು ಸನ್ನಿಹಿತಸ್ಯೈವ । 'ಯಥೇನ್ದ್ರ ಕುತ್ಸ' ಇತ್ಯಾದಿ । ಯಥಾ 'ಪೂರ್ವೆ ತು ಬಾದರಾಯಣೋ ಹೇತುವ್ಯಪದೇಶಾತ್ ಇತ್ಯಾದಿ' ಇತಿ ಮುನಿತ್ವೋಕ್ತಿಭಾಷಣಮ್, ತತ್ ತು ಪ್ರಸಿದ್ಧಸ್ಯಾಪಿ ಮುನಿತ್ವಸ್ಯ ಸ್ಮಾರಣಾರ್ಥಂ ಶ್ರುತಾವುಕ್ತೇರಾವಶ್ಯಕತ್ವೇನ ಮುನಿತ್ವಸ್ಯಾಭಿಪ್ರೇತತ್ವಾಭಿಪ್ರಾಯಮ್ । ಅತ ಏವ ಟೀಕಾಯಾಂ **'ಮುನಿತಯೈವ'** ಇತ್ಯವಧಾರಣಮ್ ।

'ಏತದ್ಧ ಸ್ಮ ವೈ ತದ್ವಿದಾನಾಹ ಹಿರಣ್ಯದನ್ ಬೈದಃ' ಎಂಬಂತೆ ಮಹಿದಾಸನೂ ಸಹ ಋಷಿಯೆಂದು ಏಕೆ ಹೇಳಬಾರದು? ಎಂಬ ಪ್ರಶ್ನೆಗೆ ''ನಹಿ ಮಹಿದಾಸಃ'' ಎಂದು ಉತ್ತರಿಸಿದ್ದಾರೆ. ''ವೈಯ್ಯರ್ಥ್ಯಾದೇವ'' ಎಂಬುದಕ್ಕೆ ಹೀಗರ್ಥ. ಈ ಉಪನಿಷತ್ತಿಗೆ ಐತರೇಯ ಎಂದೇ ಹೆಸರು. ಈ ಹೆಸರಿನಿಂದಲೇ ಇತರಾದೇವಿಯ ಮಗನಾದ ಮಹಿದಾಸನು ಋಷಿಯೆಂದು ಸುಲಭವಾಗಿ ತಿಳಿಯುತ್ತದೆ. ಪುನಃ ಪ್ರತ್ಯೇಕವಾಗಿ ಮಹಿದಾಸನನ್ನು ಋಷಿಯೆಂದು ಹೇಳುವ ಅವಶ್ಯಕತೆ ಇಲ್ಲ ಎಂದು. ಹೆಚ್ಚಿನ ಅರ್ಥಗಳನ್ನು ತಾತ್ಪರ್ಯಚಂದ್ರಿಕೆಯಲ್ಲಿ ಹೇಳಿದ್ದಾರೆ.

ಐತರೇಯಭಾಷ್ಯದ ಪ್ರಥಮಾಧ್ಯಾಯದಲ್ಲಿ ಮಹಿದಾಸಃ ಐತರೇಯಃ ಎಂದು ಹೇಳಿದ್ದು ಎಂದರೆ ಸಕಲ ಮಾತುಗಳು ಮಹಿದಾಸನದ್ದೇ ಹೊರತು ಬೇರೆಯವರದ್ದಲ್ಲ ಎಂದು ತಿಳಿಸಲು ಮಾತ್ರ ಹೊರತು ಹತ್ತಿರದಲ್ಲಿರುವ ಪ್ರಕರಣವನ್ನು ಮಾತ್ರ ಮಹಿದಾಸನು ಉಪದೇಶಿಸಿದ್ದಾನೆಂದು ಅರ್ಥವಲ್ಲ. 'ಯಥೇಂದ್ರ ಕುತ್ಸಃ' ಎಂಬುದು. ಯಾವ ರೀತಿಯಾಗಿ 'ಪೂರ್ವಂ ತು ಬಾದರಾಯಣೋ ಹೇತುವ್ಯಪದೇಶಾತ್' ಎಂಬ ಸೂತ್ರದಲ್ಲಿ 'ಬಾದರಾಯಣ ಋಷಿಗಳು ಹೇಳಿದ್ದಾರೆ' ಎಂದರೆ ಈ ವಿಷಯವನ್ನು ಹೇಳಿದ್ದಾರೆಂದಷ್ಟೇ ಅಲ್ಲ ಹೊರತು ಪ್ರಸಿದ್ಧವಾದ ಮಾತು ವೇದವ್ಯಾಸರಿಂದ ಹೇಳಲ್ಪಟ್ಟಿದೆ ಎಂಬುದನ್ನು ತಿಳಿಸಲು ಮಾತ್ರ. ಆದರಂತೆ ಪ್ರಕೃತದಲ್ಲಿಯೂ ತಿಳಿಯಬೇಕು. ಆದ್ದರಿಂದಲೇ ಟೀಕೆಯಲ್ಲಿ 'ಮುನಿತಯೈವ' ಎಂಬಲ್ಲಿ ಅವಧಾರಣಾರ್ಥದಲ್ಲಿರುವ ಏವಕಾರವನ್ನು ಹೇಳಿದ್ದಾರೆ.

---

— ಮುನಿತಯೈವೇತಿ ॥ ಏತದ್ಧ ಸ್ಮ ವೈ ತದ್ವಿದ್ವಾನಾಹ ಹಿರಣ್ಯದನ್ ಬೈದಃ' ಇತ್ಯಾದಿವತ್ ಮುನಿತಯೈವೋಚ್ಯತೇ ನೋಪಾಸ್ಯತಯಾ ಇತ್ಯರ್ಥಃ । ಮುನಿತ್ವಂ ತ್ವಸ್ಯಾ ಉಪನಿಷದ ಐತರೇಯಸಂಜ್ಞಯೈವ ಸುಜ್ಞಾತತ್ವೇನ ಪುನಸ್ತತ್ಕಥನವೈಯರ್ಥ್ಯಾದಿತ್ಯರ್ಥಃ । ಯದ್ವಾನೃಷಿಮಾತ್ರತ್ವೇ ಮಹಿದಾಸಸ್ಯ 'ಇತಃ ಪ್ರದಾನಾಹ್ಯೇತ ಇತಃ ಸಮ್ಭೃತಾ' ಇತಿ ದೇವತಾಪದಪ್ರಾಪಕತ್ವಾದೀನಾಮುಪಾಸ್ಯಬ್ರಹ್ಮಧರ್ಮಾಣಾಮುಕ್ತಿನೈಷ್ಫಲ್ಯಾದಿತ್ಯರ್ಥಃ । ಯದ್ವಾ, 'ಮುನಿತಯೈವೋಚ್ಯತೇ ನೋಪಾಸ್ತ್ಯರ್ಥಮ್' ಇತ್ಯುಕ್ತಮ್ । ಉಪಾಸ್ತ್ಯರ್ಥೆ ವಿನಾ ಮುನಿತಯೋಕ್ತೇಃ ವೈಯ್ಯರ್ಥ್ಯಾತ್ । ಹಯಗ್ರೀವಾದೀನಾಮಪಿ ಮುನಿತಯೋಪಾಸ್ತ್ಯರ್ಥಮೇವ 'ತದುಕ್ತಮೃಷಿಣಾ' ಇತ್ಯಾದೌ ತತ್ರ ತತ್ರೋಕ್ತೇಃ । ಹಿರಣ್ಯದನ್ ಬೈದಾದೀನಾಂ ಮುನಿತಯಾ ಸ್ಮರ್ತವ್ಯತ್ವೇಪ್ಯಭಗವತ್ವಾನ್ನ ಪ್ರತಿಪಾದ್ಯತಯೋಪಾಸ್ಯತ್ವಂ, ಮಹಿದಾಸಸ್ಯ ತು ವಾಚ್ಯವಕ್ತೃತ್ವಸ್ವರೂಪೇಣೇತಿ ಭೇದ ಇತಿ ಭಾವಃ । – (ವಾಕ್ಯಾರ್ಥಮುಕ್ತಾವಲಿ)

ಮೂರುಬಗೆಯ ಅಧಿಕಾರಿಗಳಿಗಾಗಿ ಮೂರು ಉಪಾಸನೆ

**ಭಾಷ್ಯಮ್– ತತ್ತದುಪಾಸನಾಯೋಗ್ಯತಯಾ ಚ ಪುರುಷಾಣಾಮ್ । 'ಕೇಷಾಂಚಿತ್ ಸರ್ವಗತ್ವೇನ ಕೇಷಾಶ್ಚಿದ್ಧೃದಯೇ ಹರಿಃ । ಕೇಷಾಶ್ಚಿದ್ ಬಹಿರೇವಾಸಾವುಪಾಸ್ಯಃ ಪುರುಷೋತ್ತಮಃ ॥' ಇತಿ ಬ್ರಾಹ್ಮೇ ॥**

**'ಅಗ್ನೌ ಕ್ರಿಯಾವತಾಂ ವಿಷ್ಣುರ್ಯೋಗಿನಾಂ ಹೃದಯೇ ಹರಿಃ । ಪ್ರತಿಮಾಸ್ವಪ್ರಬುದ್ಧಾನಾಂ ಸರ್ವತ್ರ ವಿದಿತಾತ್ಮನಾಮ್ ॥' ಇತಿ ಚ ॥ ॥ ೩೧ ॥**

**॥ ಇತಿ ಪಾದಾನ್ತ್ಯಪ್ರಾಣಾಧಿಕರಣಮ್ ॥**

**॥ ಇತಿ ಶ್ರೀಮದಾನನ್ದತೀರ್ಥಭಗವತ್ಪಾದಾಚಾರ್ಯವಿರಚಿತೇ**
**ಶ್ರೀಮದ್ಬ್ರಹ್ಮಸೂತ್ರಭಾಷ್ಯೇ ಪ್ರಥಮಾಧ್ಯಾಯಸ್ಯ ಪ್ರಥಮಃ ಪಾದಃ ॥**

ಮೂರು ವಿಧವಾದ ಉಪಾಸನೆಗೆ ಯೋಗ್ಯರಾದ ಅಧಿಕಾರಿಗಳು ಭಿನ್ನ ಭಿನ್ನ ರಾಗಿದ್ದಾರೆ. ಶ್ರೇಷ್ಠರಿಯು ದೇವತೆಗಳಿಗೆ ವ್ಯಾಪ್ತನೆಂದು ಉಪಾಸ್ಯನಾಗಿದ್ದಾನೆ. ಋಷಿಗಂಧರ್ವಾದಿಗಳಿಗೆ ಹೃದಯದಲ್ಲಿ, ಮನುಷ್ಯೋತ್ತಮರಿಗೆ ಬಾಹ್ಯರೂಪದಿಂದ ಉಪಾಸ್ಯನಾಗಿದ್ದಾನೆ. ಹೀಗೆ ಬ್ರಹ್ಮಾಂಡಪುರಾಣದಲ್ಲಿ ಹೇಳಲ್ಪಟ್ಟಿದೆ.

ಮತ್ತು 'ಯಜ್ಞಾದಿ ಕರ್ಮಾನುಷ್ಠಾನಶೀಲರಿಗೆ ಅಗ್ನಿಯಲ್ಲಿ, ಯೋಗಿಗಳಿಗೆ ಹೃದಯದಲ್ಲಿ, ಅಜ್ಞಾನಿಗಳಿಗೆ ಪ್ರತಿಮೆಯಲ್ಲಿ ಪರಮಾತ್ಮನು ಉಪಾಸ್ಯನಾಗಿದ್ದಾನೆಂದೂ ಸಹ ಹೇಳಲ್ಪಟ್ಟಿದೆ.

---

**ಭಾಷ್ಯದೀಪಿಕಾ** – ನನ್ವೇಕವಿಧೋಪಾಸನಯಾ ಸರ್ವೇಷಾಂ ಬ್ರಹ್ಮಾಪರೋಕ್ಷಸಮ್ಭವಾತ್ ಕಿಮುಪಾಸಾತ್ರೈವಿಧ್ಯೇನ ಇತ್ಯತಃ ಪ್ರವೃತ್ತಂ 'ತದ್ಯೋಗಾತ್' ಇತಿ ಸೂತ್ರಶೇಷಂ ವ್ಯಾಚಷ್ಟೇ – ತತ್ತದಿತಿ ॥ ಉಪಾಸನೇತ್ಯನೇನ ಪುರುಷಾಣಾಮಿತ್ಯನೇನ ಚ ತದಿತ್ಯಸ್ಯಾऽವೃತ್ತಿಃ ಸೂಚಿತಾ । ಚಃ ಸಮುಚ್ಚಯೇ । ತಥಾ ಚ ತೇಷಾಂ ಪುರುಷಾಣಾಂ ಮನುಷ್ಯರ್ಷಿಗನ್ಧರ್ವದೇವಾಖ್ಯಾಧಿಕಾರಿಣಾಂ ತೇಷು ತ್ರಿವಿಧೋಪಾಸನೇಷು ಮಧ್ಯೇ ತತ್ತದುಪಾಸನೇ ಯಥಾಕ್ರಮಂ ಬಹಿರನ್ತರ್ವಾಸ್ಸಿರೂಪೈಕೈಕೋಪಾಸನ ಏವ ಯೋಗ್ಯತಯಾ ಯೋಗ್ಯತ್ವೇನ ಹೇತುನೇತ್ಯರ್ಥಃ । ಅಸ್ಯೋಪಾಸಾತ್ರೈವಿಧ್ಯಾದಿತ್ಯನೇನಾನ್ವಯಃ । ತಥಾ ಚಾನೇಕವಿಧೋಪಾಸ್ತಿಯೋಗ್ಯತಾವತಾಮಧಿಕಾರಿಣಾಂ ನೈಕವಿಧೋಪಾಸನಯಾ ಬ್ರಹ್ಮಜ್ಞಾನಮಿತಿ ತತ್ರೈವಿಧ್ಯಮಾವಶ್ಯಕಮಿತಿ ಭಾವಃ ।

ಪುರುಷಾಣಾಮುಕ್ತಾನೇಕವಿಧೋಪಾಸನಯೋಗ್ಯತಾ ಕುತೋ ಜ್ಞಾಯತ ಇತ್ಯತಃ ಕರ್ತೃವಿಶೇಷಾನನುಪಾದಾಯ ಸಾಮಾನ್ಯತಃ ಉಪಾಸಕತ್ರೈವಿಧ್ಯಪ್ರತಿಪಾದಿಕಾಂ ಸ್ಮೃತಿಂ ಪಠತಿ – ಕೇಷಾಶ್ಚಿದಿತಿ ॥ 'ಪುರುಷೋತ್ತಮೋ' ಹರಿಃ 'ಕೇಷಾಶ್ಚಿತ್' ದೇವಾನಾಂ ದೇವೈಃ ಸರ್ವಗತತ್ವೇನ ಪ್ರಕಾರೇಣೋಪಾಸ್ಯಃ । 'ಕೇಷಾಶ್ಚಿತ್' ಋಷಿಗನ್ಧರ್ವಾದೀನಾಂ 'ಹೃದಯೇ' ಸ್ವಸ್ವಹೃದಯಾಕಾಶೇ ಉಪಾಸ್ಯಃ । 'ಕೇಷಾಶ್ಚಿತ್' ಮನುಷ್ಯೋತ್ತಮಾನಾಂ ತು ಬಹಿರೇವೋಪಾಸ್ಯ ಇತ್ಯರ್ಥಃ । ಪ್ರಾಚುರ್ಯಾದೇವಮುಕ್ತಿಃ । ಇತಿ ಬ್ರಾಹ್ಮ ಇತ್ಯಸ್ಯ ತತ್ತದುಪಾಸನಯೋಗ್ಯತಯಾ ತದ್ವಿಶಿಷ್ಟತ್ವೇನ ಪುರುಷಾಣಾಮಾಶ್ರಿತತ್ವಾದುಕ್ತತ್ವಾದಿತಿ ಪೂರ್ವೇಣಾನ್ವಯಃ ।

ಪ್ರತಿಪದಾರ್ಥ - ಒಂದು ಪ್ರಕಾರದ ಉಪಾಸನೆಯಿಂದಲೇ ಎಲ್ಲರಿಗೂ ಅಪರೋಕ್ಷವಾಗುತ್ತದೆ. ಹೀಗಿರುವಾಗ ಮೂರು ಬಗೆಯ ಉಪಾಸನೆಯನ್ನು ಹೇಳಲು ಏನು ಕಾರಣ? ಎಂಬ ಪ್ರಶ್ನೆಗೆ ಉತ್ತರಿಸುತ್ತಿದ್ದಾರೆ. ಪುರುಷಾಣಾಂ = ಸಾಧಕರಿಗೆ, ತತ್ತದುಪಾಸನಾಯೋಗ್ಯತಯಾ ಚ = ಅವರವರು ಮಾಡಬೇಕಾದ ಉಪಾಸನಾ ಯೋಗ್ಯತೆಗೆ ಅನುಸಾರಿಯಾಗಿ, ಸ ಹಿ = ಶ್ರೀಹರಿಯು, ಕೇಷಾಂಚಿತ್ = ಕೆಲವು ದೇವತೆಗಳಿಗೆ, ಸರ್ವಗತತ್ವೇನ = ಎಲ್ಲೆಡೆ ವ್ಯಾಪ್ತನಾಗಿ, ಕೇಷಾಂಚಿತ್ = ಇನ್ನು ಕೆಲವು ಋಷಿಗಳಿಗೆ, ಹೃದಯೇ = ತಮ್ಮ ತಮ್ಮ ಹೃದಯಕಮಲದಲ್ಲಿ, ಕೇಷಾಂಚಿತ್ = ಮತ್ತು ಕೆಲವರಾದ ಮನುಷ್ಯೋತ್ತಮರಿಗೆ, ಬಹಿಃ = ರಾಮಕೃಷ್ಣಾದಿ ಅವತಾರರೂಪಗಳಿಂದ, ಪುರುಷೋತ್ತಮಃ = ಪುರುಷಶ್ರೇಷ್ಠನಾದ ಅಸೌ = ಈ ಪರಮಾತ್ಮನು, ಉಪಾಸ್ಯಃ = ಮೂರು ಬಗೆಯಲ್ಲಿ ಉಪಾಸ್ಯನಾಗಿದ್ದಾನೆ, ಇತಿ = ಹೀಗೆ, ಬ್ರಾಹ್ಮೇ = ಬ್ರಹ್ಮಾಂಡಪುರಾಣದಲ್ಲಿ ಹೇಳಲಾಗಿದೆ.

---

ಅತ್ರೈವಾಧಿಕರಣೆ ಕರ್ತೃವಿಶೇಷಪ್ರತಿಪಾದಕಂ ವಿಶೇಷಪ್ರಮಾಣಮಾಹ – ಅಗ್ನಾವಿತಿ ॥ ವಿಷ್ಣುಃ 'ಕ್ರಿಯಾವತಾಂ' ಯಜ್ಞಾದಿಕ್ರಿಯಾನುಷ್ಠಾತೃಣಾಮ್ 'ಅಗ್ನೌ' ಗಾರ್ಹಪತ್ಯಾದಾವುಪಾಸ್ಯಃ ಹರಿಃ । 'ಯೋಗಿನಾಮ್' ಋಷೀಣಾಂ ಹೃದಯೇ ಉಪಾಸ್ಯಃ । 'ಅಪ್ರಬುದ್ಧಾನಾಂ' ಮಂದಮತೀನಾಮತ್ಯಲ್ಪಪ್ರತಿಭಾನಾಂ ಮನುಷ್ಯೋತ್ತಮಾನಾಂ 'ಪ್ರತಿಮಾಸು' ಕೃಷ್ಣರಾಮಾದಿವಿಗ್ರಹೇಷು ಉಪಾಸ್ಯಃ । 'ವಿದಿತಾತ್ಮನಾಂ' ವಿಶೇಷತೋ ಜ್ಞಾತಭಗವದ್ಭಾವಾನಾಮ್ ಅಶ್ರುತಪ್ರತಿಭಾನಾಂ ದೇವಾನಾಂ ತು 'ಸರ್ವತ್ರ' ಸರ್ವಸ್ಥಾನೇಷ್ವಪಾಸ್ಯ ಇತ್ಯರ್ಥಃ । ಅತ್ರಾಗ್ನೌ ಪ್ರತಿಮಾಸ್ವಿತಿ ವಾಕ್ಯದ್ವಯೇನ ಬಹಿರ್ಮಾತ್ರೋಪಾಸನೋಪಲಕ್ಷ್ಯತೇ । ಅತ ಏವ ಸ್ಥಾನದ್ವಯೋಕ್ತಿಃ । ಯಥಾಶ್ರುತೇ ಸೂರ್ಯಾದೌ ವಿಷ್ಣೂಪಾಸ್ತೇರ್ಬಹಿರುಪಾಸ್ತಿತ್ವಂ ನ ಸ್ಯಾತ್ । ಯೋಗಿನಾಮಿತ್ಯನೇನಾನ್ತರುಪಾಸ್ತಿರುಕ್ತಾ ।

'ಋಷಯೋऽನ್ತಃಪ್ರಕಾಶಾಃ' ಇತಿ ಶ್ರುತೇಃ । ಸರ್ವತ್ರೇತಿ ಸರ್ವಗತೋಪಾಸ್ತಿರಿತಿ ಜ್ಞಾತವ್ಯಮ್ । ನ ಚಾತ್ರ 'ಯೇಷಾಂ ಬಹಿರುಪಾಸನೇನ ಮೋಕ್ಷಸ್ತೇಷಾಮಪಿ ಹೃದುಪಾಸನಂ ಕಿಞ್ಚಿತ್ಕಾರ್ಯಮೇವ' ಇತಿ ಬೃಹದ್ಭಾಷ್ಯೇಣ 'ಭಗವಾನ್ ಬಿಮ್ಬದರ್ಶನೇನೈನಂ ಮೋಚಯತಿ' ಇತಿ ನ್ಯಾಯವಿವರಣೇನ ಚ ವಿರೋಧಃ ಶಙ್ಕ್ಯಃ । ಅಗ್ನಾವಿತಿ ವಾಕ್ಯೇऽನ್ಯನಿಷೇಧಾಭಾವೇನ ಬಿಮ್ಬಶಬ್ದಿತಸ್ವಸ್ವಯೋಗ್ಯಾತ್ಮಾಪರೋಕ್ಷಾರ್ಥಂ ಹೃದುಪಾಸನಸ್ಯಾಪಿ ಸರ್ವೈಃ ಕಾರ್ಯತ್ವಾಭ್ಯುಪಗಮಾತ್ । ಮೋಚಕಯೋಗ್ಯಾಪರೋಕ್ಷದ್ವಾರಭೂತಾ ವತಾರಾದ್ಯಪರೋಕ್ಷಸಾಧನೋಪಾಸನಾಯಾ ಏವ ತೈಸ್ತೈಃ ಪ್ರಾಚುರ್ಯೇಣ ಪ್ರಕರಣಸ್ಯಾಗ್ನಾವಿತಿ ವಾಕ್ಯೇನ ವ್ಯವಸ್ಥಯಾ ಪ್ರತಿಪಾದನಾಚ್ಚ । ಇತಿ ಚೇತಿ ॥ ಚಃ ಸಮುಚ್ಚಯೇ । ವಚನದ್ವಯಸ್ಯಾಪ್ಯೇಕಾರ್ಥಸಾಧಕತ್ವಾದಸ್ಯಾಪಿ ಬ್ರಾಹ್ಮೇ ಆಶ್ರಿತತ್ವಾದಿತಿ ಪೂರ್ವೇಣಾನ್ವಯಃ । ತತ್ತದುಪಾಸನಯೋಗ್ಯತಾವತ್ತ್ವೇನ ಪುರುಷವಿಶೇಷಾಣಾಮುಕ್ತತ್ವಾದಿತಿ ತದರ್ಥಃ । ಅತೋ ನ ತದ್ಯೋಗಾದಿತಿ ಹೇತ್ವಸಿದ್ಧಿಃ ಶಙ್ಕೇತಿ ಭಾವಃ ।

ಅನೇನ ನಾತ್ರೋಕ್ತಪ್ರಾಣೋ ವಿಷ್ಣುಃ, ಕಿನ್ತು ಜೀವಮುಖ್ಯಪ್ರಾಣಾವೇವ । ಕುತಃ ? 'ಜೀವಮುಖ್ಯಪ್ರಾಣಲಿಙ್ಗಾತ್' ಶತಾಯುಷ್ಟ್ವರೂಪಜೀವಲಿಙ್ಗಸ್ಯ ಪ್ರಾಣಸಂವಾದಾದಿರೂಪಮುಖ್ಯಪ್ರಾಣಲಿಙ್ಗಸ್ಯ ಚೇಹ ಶ್ರವಣಾದಿತಿ ಚೇತ್ – ನ, ವಿಷ್ಣುರೇವಾಯಂ ಪ್ರಾಣಃ, ನ ಜೀವಾದಿಃ । ಕುತಃ ? 'ಅನುಗಮಾತ್' ಹೇತೋರೇವ, ನ ಚಾನ್ಯಶ್ರುತಿಲಿಙ್ಗವಿರೋಧಃ । ಉಕ್ತರೀತ್ಯಾ 'ತದ್ಯೋಗಾತ್' ತೇಷಾಮನ್ತರ್ಯಾಮಿವಿಷಯತ್ವೋಪಪತ್ತೇಃ । ಯತಃ ಶಾಸ್ತ್ರದೃಷ್ಟ್ಯಾऽಯಮ್ ಉಪದೇಶ ಇತಿ ವಾ । ಕಿಮರ್ಥಮತ್ರಾನ್ತರ್ಯಾಮಿಕಥನಮಿತಿ ಚೇತ್, ಅನ್ತರುಪಾಸ್ತ್ಯರ್ಥಮಿತಿ

ಮತ್ತು ಕ್ರಿಯಾವತಾಂ = ಯಜ್ಞಕರ್ಮಾನುಷ್ಠಾನಶೀಲರಿಗೆ, ಅಗ್ನೌ = ಅಗ್ನಿಯಲ್ಲಿ, ವಿಷ್ಣುಃ = ಪರಮಾತ್ಮನು, ಯೋಗಿನಾಂ = ಯೋಗಿಗಳಿಗೆ, ಹೃದಯೇ = ತಮ್ಮ ಹೃದಯ-ಕಮಲದಲ್ಲಿ, ಹರಿಃ = ಶ್ರೀಹರಿಯು, ಉಪಾಸ್ಯಃ = ಉಪಾಸನೆ ಮಾಡಲು ಅರ್ಹನಾಗಿದ್ದಾನೆ. ಅಪ್ರಬುದ್ಧಾನಾಮ್ = ಅಜ್ಞಾನಿಗಳಿಗೆ, ಪ್ರತಿಮಾಸು = ಪ್ರತಿಮೆಗಳಲ್ಲಿ, ಉಪಾಸ್ಯಃ = ಉಪಾಸನೆ ಮಾಡಲು ಅರ್ಹನಾಗಿದ್ದಾನೆ. ಇತಿ ಚ = ಈ ಬಗೆಯಲ್ಲಿಯೂ ಉಪಾಸನಾ ವೈವಿಧ್ಯ ಇರುವುದರಿಂದ, ವಿಷ್ಣುವೇ ಪ್ರಾಣಶಬ್ದವಾಚ್ಯನೆಂದು ಸಿದ್ಧವಾಯಿತು.

**(ತತ್ವ) नन्वेकविधोपासनया (सर्वेषां) ब्रह्मापरेक्षसम्भवात् किमुपासात्रैविध्येन इत्यतः सूत्रशेषं व्याचष्टे – तत्तदिति ॥ नैकविधोपासनया सर्वेषां ब्रह्मज्ञानम् । अन्तरादिविविधोपासनायोग्यत्वादित्यर्थः । कुतः पुरुषाणामुक्तानेकविधोपास्तियोग्यतेत्यत आह – केषाञ्चिदिति ॥ अत्रैव विशेषप्रमाणमाह – अग्नाविति ॥ अग्नौ प्रतिमास्विति बहिरुपासनोपलक्षणम् । अतोऽन्यलिङ्गानां तदन्तर्यामिविवक्षयोपपत्तेर्विष्णुरेवायं प्राण आनन्दमयश्चेति युक्ता तज्जिज्ञासेति सिद्धम् ॥३१॥**

**॥इति श्रीजयतीर्थभिक्षुविरचितायां तत्त्वप्रकाशिकायां पादान्त्यप्राणाधिकरणम् ॥**

**प्रथमोऽध्यायस्य प्रथमपादः सम्पूर्णम्**

ಒಂದೇ ಪ್ರಕಾರವಾಗಿ ಬ್ರಹ್ಮನನ್ನು ಉಪಾಸನೆ ಮಾಡಿದರೆ ಸಾಕು ಅಪರೋಕ್ಷವಾಗುತ್ತದೆ. ಹೀಗಿರುವಾಗ ಮೂರುವಿಧ ಉಪಾಸನೆಯನ್ನು ಏಕೆ ಹೇಳಿದರು? ಎಂಬ ಪ್ರಶ್ನೆಗೆ ಸೂತ್ರಶೇಷವನ್ನು ಬ್ರೂಮಃ । ನ ಚೋಪಾಸನೇऽವಾನ್ತರಭೇದಾಭಾವಃ । 'ಉಪಾಸಾತ್ರೈವಿಧ್ಯಾತ್' ಅನ್ತರಾದಿಭೇದೇನ ಭಗವದುಪಾಸನಸ್ಯ ತ್ರಿವಿಧತ್ವಾತ್ । ನ ಚ ತಥಾऽಪಿ ಕಥನಮಯುಕ್ತಮ್ । ವಾಸ್ತವತ್ರೈವಿಧ್ಯಸ್ಯೇಹಾನುಕ್ತಸ್ಯ ಕಥನಾಪ್ರಯೋಜಕತ್ವಾದಿತಿ ವಾಚ್ಯಮ್ । 'ಇಹ' ಪ್ರಕರಣೇ ತತ್ರೈವಿಧ್ಯಸ್ಯಾऽಶ್ರಿತತ್ವಾದುಕ್ತತ್ವಾತ್ । ನ ಚೈಕವಿಧೋಪಾಸನಯಾ ಸರ್ವೇಷಾಂ ಬ್ರಹ್ಮಾಪರೋಕ್ಷಸಮ್ಭವಾತ್ ಕಿಮುಪಾಸಾತ್ರೈವಿಧ್ಯೇನೇತಿ ವಾಚ್ಯಮ್ । 'ತದ್ಯೋಗಾತ್' ತೇಷಾಂ ಪುರುಷಾಣಾಂ ತಸ್ಮಿನ್ ತದುಪಾಸನ ಏವ ಯೋಗ್ಯತ್ವಾತ್ । ಅನೇಕವಿಧೋಪಾಸ್ತಿಯೋಗ್ಯತಾವತಾಂ ಚ ಪುರುಷಾಣಾಮೇಕವಿಧೋಪಾಸನಯಾऽಪರೋಕ್ಷಾಸಮ್ಭವೇನ ಯೋಗ್ಯತಾಭೇದಾದುಪಾಸಾತ್ರೈವಿಧ್ಯಸ್ಯಾऽವಶ್ಯಕತ್ವಾದಿತಿ ಸೂತ್ರಾರ್ಥ ಉಕ್ತೋ ಭವತಿ । ನ ಚ ವಿವಾದಕರ್ತೃತ್ವಲಿಙ್ಗಸ್ಯಾನ್ತರ್ಯಾಮಿವಿಷಯತ್ವೇ 'ಉದಾಸೀನೌ ಚ ತಾವಾಸ್ತಾಂ ಕೇಶವಶ್ರಾಜ್ಞಸಮ್ಭವಃ' ಇತಿ ವಚನವಿರೋಧಃ ಶಙ್ಕ್ಯಃ । ತಸ್ಯಾನ್ತರ್ಯಾಮಿವಿಷಯಭಿನ್ನಬಾಹ್ಯರೂಪವಿಷಯತ್ವಾತ್ । ಅತೋऽನ್ಯಲಿಙ್ಗಾನಾಂ ತತ್ತದನ್ತರ್ಯಾಮಿವಿಷಯತ್ವೋಪಪತ್ತೇಃ ತದ್ವಿರೋಧಾಭಾವಾತ್ । ವಿಷ್ಣುರೇವಾಯಂ ಪ್ರಾಣಃ ಆನನ್ದಮಯಶ್ಚೇತಿ ಯುಕ್ತಾ ತಜ್ಜಿಜ್ಞಾಸೇತಿ ಸಿದ್ಧಮ್ । ॥ ಇತಿ ಪಾದಾನ್ತ್ಯಪ್ರಾಣಾಧಿಕರಣಮ್ ॥

**॥ ಇತಿ ಶ್ರೀಮತ್ಪರಮಹಂಸಪರಿವ್ರಾಜಕಾಚಾರ್ಯಾಣಾಂ ಸರ್ವತನ್ತ್ರಸ್ವತನ್ತ್ರಾಣಾಂ ಶ್ರೀಮದ್ರಘುನಾಥತೀರ್ಥಪೂಜ್ಯಪಾದಾನಾಂ ಶಿಷ್ಯೇಣ ಶ್ರೀಮಜ್ಜಗನ್ನಾಥಯತಿನಾ ಕೃತಾಯಾಂ ಶ್ರೀಮದ್ಬ್ರಹ್ಮಸೂತ್ರಭಾಷ್ಯದೀಪಿಕಾಯಾಂ ಪ್ರಥಮಾಧ್ಯಾಯಸ್ಯ ಪ್ರಥಮಃ ಪಾದಃ ॥**

''ತತ್ತತ್'' ಎಂಬುದಾಗಿ ವ್ಯಾಖ್ಯಾನಿಸುತ್ತಿದ್ದಾರೆ. ಒಂದೇ ವಿಧವಾದ ಉಪಾಸನೆಯಿಂದ ಎಲ್ಲರಿಗೂ ಅಪರೋಕ್ಷವಾಗುವುದಿಲ್ಲ. ಅಂತರುಪಾಸನೆ ಮೊದಲಾದ ವಿಭಿನ್ನವಾದ ಉಪಾಸನೆಗಳಿಂದ ವಿಭಿನ್ನ ಯೋಗ್ಯತೆಯುಳ್ಳ ಪುರುಷರಿಗೆ ಅಪರೋಕ್ಷವಾಗುತ್ತದೆಂದು ತಿಳಿಸಲು ''ಕೇಷಾಂಚಿತ್'' ಎಂಬ ವಾಕ್ಯವು ಹೊರಟಿದೆ. ಈ ವಿಷಯದಲ್ಲಿ ವಿಶೇಷಪ್ರಮಾಣವನ್ನು ''ಅಗ್ನೌ'' ಎಂಬುದರಿಂದ ಹೇಳುತ್ತಿದ್ದಾರೆ. 'ಅಗ್ನೌ ಪ್ರತಿಮಾಸು' ಎಂಬುದು ಬಹಿರುಪಾಸನೆಗೆ ಉಪಲಕ್ಷಣವಾಗಿದೆ. ಆದ್ದರಿಂದ ಅಂತರ್ಯಾಮಿ ವಿವಕ್ಷೆಯಿಂದ ಅನ್ಯಲಿಂಗಗಳು ಉಪಪನ್ನವಾಗುತ್ತವೆ. ಹಾಗಾಗಿ ವಿಷ್ಣುವೇ ಪ್ರಾಣಶಬ್ದವಾಚ್ಯನು. ಅವನೇ ಆನಂದಮಯನು. ಅವನ ಜಿಜ್ಞಾಸೆಯು ಅವಶ್ಯಕರ್ತವ್ಯವಾಗಿದೆಯೆಂದು ನಿರ್ಣಯವಾಯಿತು.

ಇಲ್ಲಿಗೆ ತತ್ತ್ವಪ್ರಕಾಶಿಕೆಯ ಕನ್ನಡಾನುವಾದದಲ್ಲಿ ಅಂತಿಮಪ್ರಾಣಾಧಿಕರಣವು ಮುಗಿಯಿತು.

**ಭಾವದೀಪಃ – 'तत्' इति परामृष्टमाह – अन्तरादीति ॥ विशेषेति ॥** उपासके अधिष्ठाने च विशेषोक्तेरिति भावः । नन्वत्र उपासनाचतुष्टयमुच्यते बहिरुपासनं च नोच्यत इत्यत आह – **अग्नाविति ॥** भाष्योक्तस्मृतौ 'बहिरेव' इति, 'अग्नौ' इति, 'प्रतिमासु' इति चोक्तिर्बाहुल्याभिप्राया । द्वितीये बृहद्भाष्ये 'येषां बहिरुपासनेन मोक्षस्तेषां हृद्युपासनं किञ्चित् कर्तव्यमेव' इत्युक्तेः अत्र मिथ्योपास्तेः 'न प्रतीके न हि सः' इति चतुर्थाद्यपादे निरसिष्यमाणत्वात् ।

'ततमम्' इति व्याप्तत्वेनोक्तस्य शरीरहृदयस्थितेः, ब्रह्माण्डस्य सर्षपान्तः-स्थितेरिव अवास्तवत्वात् त्रैविध्यमयुक्तम्- इति तु उत्तराधिकरणे 'व्योमवत्' इति समाधास्यते इति भावः ।

ತತ್‌ಶಬ್ದದಿಂದ ಪರಾಮರ್ಶಿಸಿದ್ದನ್ನು ''ಅಂತರಾದಿವಿವಿಧೋಪಾಸನಾ'' ಇತ್ಯಾದಿಯಾಗಿ ಹೇಳಿದ್ದಾರೆ. ''ವಿಶೇಷಪ್ರಮಾಣಮಾಹ'' ಎಂದರೆ ಉಪಾಸಕನಲ್ಲಿ ಮತ್ತು ಅಧಿಷ್ಠಾನದಲ್ಲಿ ವಿಶೇಷವಾದ ಪ್ರಮಾಣವನ್ನು ಹೇಳುತ್ತಿದ್ದಾರೆಂದರ್ಥ. ಇಲ್ಲಿ ನಾಲ್ಕುವಿಧ ಉಪಾಸನೆಯನ್ನು ಹೇಳುತ್ತಿದ್ದಾರೆ. ಮತ್ತು ಬಹಿರುಪಾಸನೆಯನ್ನು ಹೇಳುತ್ತಿಲ್ಲವಲ್ಲ? ಎಂಬ ಪ್ರಶ್ನೆಗೆ ''ಅಗ್ನೌ ಪ್ರತಿಮಾಸು'' ಎಂಬ ಟೀಕೆಯು ಹೊರಟಿದೆ. ಭಾಷ್ಯದಲ್ಲಿ ಹೇಳಲ್ಪಟ್ಟ ಸ್ಮೃತಿಯಲ್ಲಿ 'ಬಹಿರೇವ' 'ಅಗ್ನೌ ಪ್ರತಿಮಾಸು' ಎಂಬ ಮಾತುಗಳು ಬಹಳವಾದ ಉಪಾಸನೆಯ ಅಭಿಪ್ರಾಯದಿಂದ ಇರುತ್ತವೆ. ಏಕೆಂದರೆ ದ್ವಿತೀಯಾಧ್ಯಾಯದ ಬೃಹದಾರಣ್ಯಕಭಾಷ್ಯದಲ್ಲಿ ಯಾರು ಬಹಿರುಪಾಸನೆಯಿಂದ ಮೋಕ್ಷವನ್ನು ಹೊಂದುತ್ತಾರೋ, ಅವರೂ ಸಹ ಸ್ವಲ್ಪವಾದರೂ ಹೃದಯಲ್ಲಿ ಉಪಾಸನೆ ಮಾಡಬೇಕೆಂದು ಹೇಳಿದ್ದಾರೆ. ಮಿಥ್ಯೋಪಾಸನೆಯನ್ತೇ ಇಲ್ಲಿ ಹೇಳಿರಬಹುದಲ್ಲವೆ? ಎಂಬ ಪ್ರಶ್ನೆಗೆ ಚತುರ್ಥಾಧ್ಯಾಯದ ಮೊದಲನೆಯ ಪಾದದಲ್ಲಿರುವ 'ನ ಪ್ರತೀಕೇ ನ ಹಿ ಸಃ' ಎಂಬ ಸೂತ್ರದಲ್ಲಿ ಮಿಥ್ಯೋಪಾಸನೆಯನ್ನು ನಿರಾಕರಿಸಿದ್ದಾರೆ.

'ತತಮಮ್' ಎಂದು ಎಲ್ಲೆಡೆ ವ್ಯಾಪ್ತನಾಗಿದ್ದಾನೆಂದು ಹೇಳಿದ್ದರಿಂದ ಕೇವಲ ಶರೀರ ಹಾಗೂ ಹೃದಯದಲ್ಲಿದ್ದಾನೆಂದು ಹೇಳಲು ಸಾಧ್ಯವಿಲ್ಲ. ಹಾಗೆ ಹೇಳಿದರೆ ಸಾಸುವೆಕಾಳಿನ ಒಳಗೆ ಬ್ರಹ್ಮಾಂಡವು ಇದೆಯೆಂದು ಹೇಳಿದಂತಾಗುತ್ತದೆ. ಇದು ಅವಾಸ್ತವವಾದ್ದರಿಂದ ಉಪಾಸನೆಯಲ್ಲಿ ಮೂರು ಬಗೆಯನ್ನು ಹೇಗೆ ಹೇಳುತ್ತೀರಿ? ಎಂಬ ಪ್ರಶ್ನೆ ತಪ್ಪು. ಮುಂದಿನ ಅಧಿಕರಣದಲ್ಲಿ 'ವ್ಯೋಮವತ್' ಎಂಬುದರಿಂದ ಇದಕ್ಕೆ ಉತ್ತರಿಸುತ್ತೇವೆ.

**ಭಾ.ದೀ. – 'अन्यगतलिङ्गादीनां तदन्तर्गतभगवदपेक्षया युक्तेः'** इति न्याय-विवरणोक्तेः सबीजतां दर्शयन् अधिकरणार्थं फलोक्त्योपसंहरति – अत इति ॥ 'निरवकाशानेकश्रुतिलिङ्गाभ्यासात्' इति 'अनुगमात्' इत्यस्यार्थः । 'अन्यगत-लिङ्गानाम्' इत्युपलक्षणम् । 'प्राणो वा अहमस्मि इत्युपदेशस्यापि' इत्यपि ध्येयम् । अयं च 'न वक्तुः' इत्यादिसूत्रत्रयार्थः ।

'प्राणस्तथा' इति प्रतिज्ञांशार्थमाह – **विष्णुरेवायं प्राण इति** ॥ 'बलवदन्य-प्रापकलिङ्गोपेताशेषनामोपलक्षकः' इत्यपि ध्येयम् । 'आनन्दमयश्च' इति फलोक्तिः । 'प्राचीनप्राणद्वारा' इति भावः । **'तज्जिज्ञासा'**= विष्णुजिज्ञासा ।

यत् तु 'प्राणोस्मि प्रज्ञात्माऽहं ममायुरमृतमुपास्व' इति कौषीतकब्राह्मण-वाक्यमेव अत्रोदाहार्यं न तु ऐतरेयवाक्यम् । तत्र 'प्राणस्त्वम्' 'प्राणः सर्वाणि भूतानि' इति सर्वात्मकरूपब्रह्मलिङ्गस्य श्रवणेन सन्देहादेरयोगात् - इति । तत्तु चन्द्रिकाप्रकाशे निरस्तं बोध्यम् ॥३१॥

**॥ इति श्रीमद्राघवेन्द्रयतिकृते तत्त्वप्रकाशिकाभावदीपे प्रथमाध्यायस्य प्रथमपादः॥**

'ಅನ್ಯಗತಲಿಂಗಾದೀನಾಂ ತದಂತರ್ಗತಭಗವದಪೇಕ್ಷಯಾ ಯುಕ್ತೇಃ' (ಬೇರೆಯವರಲ್ಲಿರುವ ಲಿಂಗಾದಿಗಳನ್ನು ಅವರ ಅಂತರ್ಗತನಾದ ಭಗವಂತನಲ್ಲಿ ಕೂಡಿಸಬೇಕು) ಎಂದು ನ್ಯಾಯವಿವರಣದಲ್ಲಿ ಹೇಳಿದಂತೆ ಇದಕ್ಕೆ ಕಾರಣವನ್ನು ತೋರಿಸುತ್ತಾ ಅಧಿಕರಣದ ಪ್ರಮೇಯವನ್ನು ಫಲವನ್ನು ಹೇಳುವ ಮೂಲಕ ''ಅತಃ'' ಇತ್ಯಾದಿಯಾಗಿ ಉಪಸಂಹಾರವನ್ನು ಮಾಡುತ್ತಿದ್ದಾರೆ. 'ಅನುಗಮಾತ್' ಎಂಬ ಪದದ ಅರ್ಥವನ್ನು ''ನಿರವಕಾಶಾನೇಕಶ್ರುತಿಲಿಂಗಅಭ್ಯಾಸಾತ್'' ಎಂದು ಹೇಳಿದ್ದಾರೆ. 'ಅನ್ಯಗತಲಿಂಗಾನಾಮ್' ಎಂಬುದು ಕೇವಲ ಉಪಲಕ್ಷಣ. 'ಪ್ರಾಣೋ ವಾ ಅಹಮಸ್ಮಿ' ಎಂಬ ಉಪದೇಶವಾಕ್ಯವನ್ನು ಇಲ್ಲಿ ವಿವಕ್ಷಿಸಬೇಕು. ಈ ವಿಚಾರವು 'ನ ವಕ್ತುಃ' ಇತ್ಯಾದಿ ಮೂರು ಸೂತ್ರಗಳ ಅಭಿಪ್ರಾಯವಾಗಿದೆ.

'ಪ್ರಾಣಸ್ತಥಾ' ಎಂಬ ಸೂತ್ರದ ಪ್ರತಿಜ್ಞಾಭಾಗದ ಅರ್ಥವನ್ನು ''ವಿಷ್ಣುರೇವಾಯಂ ಪ್ರಾಣಃ'' ಎಂಬುದಾಗಿ ಹೇಳಿದ್ದಾರೆ. ಬಲಿಷ್ಠವಾದ ಅನ್ಯಪ್ರಾಪಕವಾದ ಲಿಂಗಗಳಿಂದ ಕೂಡಿದ ಸಕಲ ನಾಮಗಳನ್ನು

ಉಪಲಕ್ಷಣವಾಗಿ ಸ್ವೀಕರಿಸಬೇಕು. 'ಆನಂದಮಯಃ ಚ' ಎಂಬುದಾಗಿ ಅಧಿಕರಣಕ್ಕೆ ಫಲವನ್ನು ಹೇಳಿದ್ದಾರೆ. ಈ ಅಧಿಕರಣದಿಂದ ಐತರೇಯಭಾಷ್ಯದಲ್ಲಿ ಶ್ರುತನಾದ ಪ್ರಾಣನು ವಿಷ್ಣುವೆಂದು ನಿರ್ಣಯವಾದರೆ ತೈತ್ತಿರೀಯಭಾಷ್ಯದಲ್ಲಿ ಕೇಳಿಸುತ್ತಿರುವ ಪ್ರಾಣನೂ ಸಹ ವಿಷ್ಣುವೆಂದು ನಿರ್ಣಯವಾಗುತ್ತದೆ. ಇದರಿಂದ ಆನಂದಮಯನೂ ಸಹ ವಿಷ್ಣುವೇ ಎಂದು ನಿರ್ಣಯವಾಗುತ್ತದೆ. ಆದ್ದರಿಂದ ವಿಷ್ಣುವಿನ ಜಿಜ್ಞಾಸೆಯು ಅವಶ್ಯ ಆಚರಿಸಬೇಕಾಗಿದೆ ಎಂಬ ಪರಮಪ್ರಮೇಯವು ನಿರ್ಣಯವಾಗುತ್ತದೆ.

ಕೆಲವರು 'ಪ್ರಾಣೋಸ್ಮಿ ಪ್ರಜ್ಞಾತ್ಮಾಹಂ ಮಮಾಯುರಮೃತಮುಪಾಸ್ವ' ಎಂಬ ಕೌಷೀತಕೀಬ್ರಾಹ್ಮಣದ ವಾಕ್ಯವನ್ನೇ ಈ ಅಧಿಕರಣ ವಿಷಯವಾಕ್ಯವನ್ನಾಗಿ ಪರಿಗಣಿಸುತ್ತಾರೆ. ಹೊರತು ಐತರೇಯವಾಕ್ಯವನ್ನು ವಿಷಯವಾಕ್ಯವನ್ನಾಗಿ ಪರಿಗಣಿಸುವುದಿಲ್ಲ. ಆದರೆ 'ಪ್ರಾಣೋಽಸ್ಮಿ ಪ್ರಜ್ಞಾತ್ಮಾ' ಎಂಬಲ್ಲಿ 'ಪ್ರಾಣಸ್ತ್ವಂ ಸರ್ವಾಣಿ ಭೂತಾನಿ' ಎಂಬುದಾಗಿ ಸರ್ವಾತ್ಮಕತ್ವವೆಂಬ ಬ್ರಹ್ಮನ ಲಿಂಗವು ಸ್ಪಷ್ಟವಾಗಿ ಕೇಳಿಸುತ್ತಿರುವುದರಿಂದ ಸಂದೇಹಕ್ಕೆ ಅವಕಾಶವೇ ಇರುವುದಿಲ್ಲ. ಇದನ್ನು ಚಂದ್ರಿಕಾಪ್ರಕಾಶದಲ್ಲಿ ಸಂಪೂರ್ಣವಾಗಿ ನಿರಾಕರಿಸಲಾಗಿದೆ.

ಇಲ್ಲಿಗೆ ಭಾವದೀಪದ ಕನ್ನಡಾನುವಾದದಲ್ಲಿ ಅಂತಿಮಪ್ರಾಣಾಧಿಕರಣವು ಮುಗಿಯಿತು.

## वाक्यार्थमञ्जरी

ॐ जीवमुख्यप्राणलिङ्गान्नेति चेन्नोपासात्रैविध्यादाश्रितत्वादिह तद् योगात् ॐ ॥ शतायुष्ट्वादिजीवलिङ्गात् प्राणसंवादादिमुख्यप्राणलिङ्गाच्च न प्राणो विष्णुरिति चेन्न । यस्माज्जीवमुख्यप्राणलिङ्गोपदेशोऽन्तर्याम्यपेक्षयैव युक्त इति पूर्वसूत्रावृत्त्या योज्यम् । किमर्थमन्तर्याम्युक्तिरित्यत उक्तम् – उपासेति ॥ अन्तर्यामित्वेन बहिश्चेति भेदेन ब्रह्मोपासनायास्त्रैविध्यात् । त्रैविध्यस्य चेह प्रकरणे – स एवेत्यादिना ॥ आश्रितत्वादुक्तत्वादित्यर्थः । एकयैवोपासनयालं किं त्रैविध्येनेत्यत उक्तम् – तद्योगादिति ॥ तस्याधिकारित्रैविध्यस्याधिकारिभेदेन योगाद्युक्तत्वादित्यर्थः । 'तावन्ति' इत्यादिश्रुतौ शतायुष्ट्वस्य प्राणनिष्ठतयानुक्तत्वादाह – एष इममिति ॥ एष इमं लोकं ब्रह्मादिशरीरम् । पुरुषरूपेणान्तर्यामिरूपेण अभ्यार्चत् प्रविवेश । तदेव कार्यलिङ्गेन दर्शयति – य एष आदित्ये स्थित्वा तपतीति ॥ एतच्छब्दार्थं वदन्नेव दार्ढ्यायोक्तमेव पुनराह – प्राण इति ॥ तत् = शरीरम् । कः प्राण इत्यत उक्तम् – प्राणो ह्येष य एष तपतीति ॥ यस्मादयं प्राणस्तं देहं शतं वर्षाणि अभ्यार्चत्, प्रविश्य स्थितः । तस्मात्पुरुषायुषः आयूंषि शतं वर्षाणीति प्रसिद्धानि भवन्तीत्यर्थः । बृहतीसहस्रवर्णानां सहस्राणि यावन्ति षट्त्रिंशतिसङ्ख्याकानि तावन्ति सहस्राणि शतसंवत्सस्याह्नां भवन्तीत्यर्थः ॥ ता इति ॥ ताश्चक्षुरादिश्रियोऽहं श्रेष्ठोऽस्म्यहं श्रेष्ठोऽस्मीत्येवं कलहमकुर्वन्तेत्यर्थः ॥ प्राण इति ॥ प्राणो मुख्यवायुः

विराड्देहादुत्क्रान्त प्राण उत्क्रान्ते सति तच्छरीरं पतितं प्राणः पुनस्तच्छरीरं प्रविवेश । प्राणे प्राप्ते सति तच्छरीरमुत्थितमित्यर्थः ॥ **प्राणो वंश इति** ॥ प्राणो मुख्यवायुर्वंशः सर्वाश्रय इति स्थविरः शाकल्यमुनिराह । तद् यथा तृणादि-निर्मितगृहस्य प्रधानवेणावावान्तवेणवः सम्यक् स्थापिता आश्रिताः एवमस्मिन् प्राणे चक्षुरादीन्द्रियाणि शरीरं तदभिमान्यात्मा जीव इत्येते सर्वे समाहिताः इत्यर्थः ॥ **अथेति** ॥ प्राणाः इन्द्रियाभिमानिदेवाः अहं श्रेयसी श्रेयानित्यर्थे, कलहमकुर्वन्तेति छन्दोगवाक्यार्थः । एतल्लिङ्गानां निरवकाशत्वमैतरेयभायोदाहृतस्मृत्या दर्शयति – **उदासीनाविति** ॥ ननु,

**प्राणं विना नच ब्रह्मा तं विना प्राण एव च ।**
**अन्योन्यापाश्रयाच्छक्तौ स्थातुमन्ये कुतस्ततः ॥**

इति बृहद्भाष्ये प्राणं विना ब्रह्मणोऽनवस्थानोक्त्या कथं प्राण उत्क्रान्ते तस्मिन् शरीरे ब्रह्मण औदासीन्येनावस्थानमिति चेदुच्यते ।

**अंशेन सुप्तो ब्रह्मा तु अंशेन निरगात्पुनः .**
**स्वदेहाद्वायुसहितो विष्णुना च जगत्प्रभुः ॥**

इति तृतीयस्कन्धतात्पर्यानुसारेणांशेन निर्गतत्वेऽप्यंशेन देहस्थितस्य निर्व्यापाररूपौदासीन्याङ्गीकारात् ॥ **भगवद्विषयतयेति** ॥ बाह्यरूपेणौदासीन्योपपत्ते-रिति भावः । लिङ्गं ज्ञापकं मस्तकसीमानं शिरोमध्यभागम् । स प्राणः ॥ **अन्तःस्थ इति** ॥ तं प्रपदाभ्यां प्रापद्यतेत्यादिना प्रपदाभ्यां प्रविष्टो नारायण इत्यर्थः । एतमित्यस्यार्थः – **प्राप्तमिति** ॥ इण् गतावित्यस्माद् धातोः सुषुम्नया हृदयं प्राप्त-वासुदेवमात्मानं स्वात्मस्वरूपं ततमम् अतिशयेन व्याप्तं ब्रह्म पूर्णमपश्यदित्यर्थः । तकारस्य व्याप्त्यर्थत्वात् तमपश्चातिशयार्थत्वात् ततममित्येतत्ततममित्यर्थकमिति भावः । **बहिरुपास्त्यर्थमिति** ॥ तस्य बहिष्ठमूर्तित्वादिति भावः ॥ **नोपासनार्थमिति** ॥ उपासनापदश्रवणादिति भावः । एतद्धस्म वै तद् विद्वानाह हिरण्यदन्वैद इत्यादिवन्महिदासोऽपि ऋषितयोच्यतां नोपासनार्थमित्यत आह – नहीति ॥ एतदुपनिषद ऐतरेयसञ्ज्ञयैवेतरापुत्रस्य महिदासस्य ऋषित्वसिद्धया तदुक्ति-नैष्फल्यादित्यर्थः ॥ **विशेषप्रमाणमिति** ॥ पूर्वन्तु केषाञ्चिदित्येवोक्तत्वात् सामान्य-प्रमाणमिति भावः । नन्वत्रोपासनाचतुष्टयमुच्यते बहिरुपासनं च नोच्यत इत्यत आह – **अज्ञावि**ति ॥ ॥ **इति वाक्यार्थमञ्जर्यां प्रथमाध्यायस्य प्रथमपादः** ॥

**ऐतरेये श्रूयते 'ता वा एताः शीर्षन् श्रियः श्रिताश्चक्षुः श्रोत्रं मनो वाक्प्राणः' इति । तत्र पूर्वं विष्णुविषयत्वेनोदितः प्राणशब्दः श्रूयमाणो विचार्यते किंविषयोऽयमिति । तत्र तावदयं प्राणो मुख्यप्राणो भवितुमर्हति न विष्णुः इन्द्रियपङ्क्तिगणितत्वात् ।**

ಐತರೇಯದಲ್ಲಿ ತಾವಾ ಏತಾಃ ಇತ್ಯಾದಿಯಾಗಿ ಕೇಳಿಸುತ್ತಿದೆ. ಈ ಶ್ರುತಿಯಲ್ಲಿ ಹಿಂದೆ ಹೇಳಿದಂತೆ ವಿಷ್ಣುವಿಷಯಕವಾದ ಪ್ರಾಣಶಬ್ದವು ಸಹ ಕೇಳಿಸುತ್ತಿರುವುದರಿಂದ ಯಾರನ್ನು ಮುಖ್ಯಪ್ರತಿಪಾದಿಸುತ್ತದೆಂದು ಸ್ಪಷ್ಟವಾಗಿ ತಿಳಿಯುವುದಿಲ್ಲ. ಹೀಗಿರುವಾಗ ಇಲ್ಲಿರುವ ಪ್ರಾಣಶಬ್ದವು ಮುಖ್ಯಪ್ರಾಣನನ್ನೇ ಪ್ರತಿಪಾದಿಸುತ್ತದೆ ಹೊರತು ವಿಷ್ಣುವನ್ನಲ್ಲ. ಏಕೆಂದರೆ ಇಂದ್ರಿಯಗಳ ಸಮೂಹದಲ್ಲಿ ಪ್ರಾಣಶಬ್ದವು ಉಲ್ಲೇಖಿತವಾದ್ದರಿಂದ.

**सू - ॐ ॥ प्राणस्तथाऽनुगमात् ॥ ॐ॥ २८ ॥**

**यथेन्द्रियपङ्क्तिगणितं चक्षुः न विष्णुरित्येतत् पक्षं प्रतिक्षिपत् सूत्रमुपन्यस्य व्याचष्टे – प्राणस्तथेत्यादिना ॥ अयमर्थः – परमात्मासाधारणधर्मयुक्तत्वेन अभ्यस्यमानत्वादत्र प्राणो विष्णुरेव । तथाहि । 'तं देवा प्राणयन्त' इत्यनेन तस्य प्रकृतस्य प्राणस्य सर्वब्रह्मादिदेवैः सर्वलोकेष्वानीतत्वमाहात्म्यस्थानेन प्रकृतत्वऽ मुच्यते ।**

ಇಂದ್ರಿಯಗಳ ಸಾಲಿನಲ್ಲಿ ಪರಿಗಣಿಸಲ್ಪಟ್ಟ ಚಕ್ಷುಸ್ಸು ವಿಷ್ಣುವಾಗುವುದಿಲ್ಲವೆಂಬ ಪಕ್ಷವನ್ನು ನಿರಾಕರಿಸುವಂತಹ ಸೂತ್ರವನ್ನು ಉಪನ್ಯಾಸಮಾಡಿ ವ್ಯಾಖ್ಯಾನಿಸುತ್ತಿದ್ದಾರೆ. ''ಪ್ರಾಣಸ್ತಥಾ'' ಇತ್ಯಾದಿಯಾಗಿ. ಒಟ್ಟು ಅಭಿಪ್ರಾಯ— ಪರಮಾತ್ಮನ ಅಸಾಧಾರಣಧರ್ಮದಿಂದ ಈ ಶ್ರುತಿಯು ಕೂಡಿರುವುದರಿಂದ, ಅನೇಕಬಾರಿ ಆ ಧರ್ಮಗಳು ಕೇಳಿಸುತ್ತಿರುವುದರಿಂದ ಪ್ರಾಣಶಬ್ದವಾಚ್ಯನಾದವನು ವಿಷ್ಣುವೇ ಆಗಿದ್ದಾನೆ. ಅದು ಹೀಗೆ 'ತಂ ದೇವಾಃ ಪ್ರಾಣಯಂತ' ಎಂಬುದರಿಂದ ಪ್ರಕೃತನಾದ ಪ್ರಾಣನಿಗೆ ಸಕಲಬ್ರಹ್ಮಾದಿ ದೇವತೆಗಳಿಂದ ಎಲ್ಲಾ ಲೋಕಗಳಲ್ಲಿ ಕರೆಯುವಿಕೆಯೆಂಬ ಮಾಹಾತ್ಮ್ಯೆಯನ್ನು ಹೇಳಿದ್ದರಿಂದ ಪ್ರಕೃತನಾಗಿದ್ದಾನೆ.

**'स एषोऽसुः स एषः प्राणः तं भूतिरिति देवा उपासाञ्चक्रिरे' इत्यन्तेन तस्यैव प्राणस्यैश्वर्यवतः पद्मजादिदेवैरुपास्यत्वमुच्यते । 'स एषोऽसुः स एष प्राणः सर्वे वेदा**

**सर्वे घोषाः एकैव व्याहृतिः प्राण एव प्राण ऋच इत्येव विद्यात्' इत्यनेन सर्वे वेदाः प्राणे प्राणस्यैव व्याहृतिः । परस्परविरोधशून्यतया प्रतिपादिका । ऋचः तस्य विशेषेण प्रतिपादिका इत्युच्यन्ते ।**

'स एषोऽसुः ... उपसाञ्चक्रिरे' ಎಂಬಲ್ಲಿಯ ತನಕ ಅಂತಹ ಪ್ರಾಣನೇ ಐಶ್ವರ್ಯ-ಶಾಲಿಗಳಾದ ಬ್ರಹ್ಮಾದಿ ದೇವತೆಗಳಿಂದ ಉಪಾಸ್ಯನಾಗಿದ್ದಾನೆಂದು ಹೇಳಲಾಗಿದೆ. 'स एषोऽसुः स एष प्राणः सर्वे वेदा सर्वे घोषाः एकैव व्याहृतिः प्राण एव प्राण ऋच इत्येव विद्यात्' ಎಂಬಲ್ಲಿಯ ತನಕ ಸಕಲ ವೇದಗಳು ಪ್ರಾಣನನ್ನು ಪ್ರತಿಪಾದಿಸುತ್ತವೆಂದು ತಿಳಿಯುತ್ತದೆ. ಪ್ರಾಣನನ್ನೇ ಕರೆಯುತ್ತವೆ. ಪರಸ್ಪರ ವಿರೋಧ ಬಾರದಂತೆ ಒಬ್ಬನೇ ಪ್ರಾಣನನ್ನು ಪ್ರತಿಪಾದಿಸುತ್ತಿವೆ. ಋಕ್ ಎಂಬುದು ಪ್ರಾಣನಲ್ಲಿ ವಿಶೇಷಣವಾದ್ದರಿಂದ ಋಗಾದಿವೇದಗಳು ಅವನನ್ನೆ ಪ್ರತಿಪಾದಿಸು-ತ್ತವೆಂದು ತಿಳಿಯಬೇಕು.

**'अथ देवरथस्तस्य वागुद्धिः श्रोत्रे पक्षसी चक्षुषी युक्ते मनः सङ्गृहीता तदयं प्राणोऽधितिष्ठन्ति' इत्यनेन वागादिभिः रथोपकरणत्वेन कल्पितैर्युक्तस्य देहाख्यस्य शरीरस्य मुख्याधिष्ठाता प्राण इत्युच्यते । तथा च स्कान्दवचनं 'विष्णुमेवानयन्' इति । 'अयं पुरुषो ब्रह्मणो लोकः । तत्प्रपदाभ्यां प्रापद्यत ब्रह्मेमम्' इत्यादिब्रह्मशब्दाभ्यासादपि एतद्विद्याप्रतिपाद्यो विष्णुरिति ज्ञायते ।**

'अथ देवरथस्य वागुद्धिः श्रोत्रे पक्षसी चक्षुषी युक्ते मनः संगृहीता तदयं प्राणोऽधितिष्ठति' ಎಂಬುದರಿಂದ ವಾಗಾದಿ ಇಂದ್ರಿಯಗಳನ್ನು ರಥಕ್ಕೆ ಉಪಕರಣಗಳೆಂದು ಕಲ್ಪಿಸಿದ್ದರಿಂದ ಅಂತಹ ಇಂದ್ರಿಯಗಳಿಂದ ಕೂಡಿರುವ ದೇಹವೆಂಬ ಶರೀರಕ್ಕೆ ಮುಖ್ಯಪ್ರೇರಕನು ಪ್ರಾಣನೇ ಆಗಿದ್ದಾನೆಂದು ಹೇಳಲಾಗಿದೆ. ಆದ್ದರಿಂದಲೇ ಸ್ಕಾಂದಪುರಾಣವು 'ವಿಷ್ಣುಮೇವಾನಯನ್' ಎಂದು ಹೇಳಲಾಗಿದೆ. ಮತ್ತು 'अयंपुरुषो ब्रह्मणो लोकः । तत् प्रपदाभ्यां प्रापद्यते ब्रह्मेमम्' ಎಂಬಲ್ಲಿ ಅನೇಕಬಾರಿ ಬ್ರಹ್ಮಶಬ್ದವು ಕೇಳಿಸುತ್ತಿರು-ವುದರಿಂದ ಈ ವಿದ್ಯೆಯಿಂದ ಪ್ರತಿಪಾದ್ಯನಾದವನು ವಿಷ್ಣುವೇ ಆಗಿದ್ದಾನೆಂದು ತಿಳಿಯುತ್ತದೆ.

**तस्मात् इक्ष्वाकुवंशराजावलीगणितदाशरथिरामवत् इन्द्रियगणगणितोप्ययं प्राणो विष्णुरेवेति युक्तम् । नच वाच्यं 'तमिन्द्र उवाच प्राणो वा अहमस्मि ऋषे' इति वचनाद् अत्रेन्द्र एव प्राणशब्दार्थो विवक्षित इति । 'प्राणस्त्वं प्राणः सर्वाणि भूतानि प्राणो ह्येष य एष तपति' इति सर्वान्तर्यामित्वेन प्राणव्यपदेशात् ।**

ಆದ್ದರಿಂದ ಇಕ್ಷ್ವಾಕುವಂಶದ ರಾಜರ ಸಾಲಿನಲ್ಲಿ ಸರ್ವೋತ್ತಮನಾದ 'ದಾಶರಥಿ'ಯಾದ ಶ್ರೀರಾಮನನ್ನು ಹೇಗೆ ಹೇಳುತ್ತಾರೋ ಆದರಂತೆ ಇಂದ್ರಿಯಗಳ ಸಮೂಹದಲ್ಲಿ ಎಣಿಸಲ್ಪಟ್ಟಿದ್ದರೂ ಸಹ ಪ್ರಾಣನು ವಿಷ್ಣುವೇ ಆಗಿದ್ದಾನೆಂದು ಹೇಳಬಹುದು.

'ತಮಿಂದ್ರೋ ಉವಾಚ ಪ್ರಾಣೋ ವಾ ಅಹಮಸ್ಮಿ ಋಷೇ' ಎಂಬ ಮಾತಿನ ಆಧಾರದಿಂದ ದೇವೇಂದ್ರನೇ ಪ್ರಾಣನೆಂದೇಕೆ ವಿವಕ್ಷಿಸಬಾರದು ಎಂಬ ಪ್ರಶ್ನೆ ಅಸಾಧುವಾಗಿದೆ. 'ಪ್ರಾಣಸ್ತ್ವಂ ಪ್ರಾಣಃ ಸರ್ವಾಣಿ ಭೂತಾನಿ ಪ್ರಾಣೋ ಹ್ಯೇಷ ಯ ಏಷ ತಪತಿ' ಎಂಬುದಾಗಿ ಪ್ರಾಣನನ್ನು ಸರ್ವಾಂತರ್ಯಾಮಿಯೆಂದು ಹೇಳಿದ್ದರಿಂದ ದೇವೇಂದ್ರನು ಪ್ರಾಣನಾಗಲಾರ.

**ಸೂ - ॐ ॥ ನ ವಕ್ತುರಾತ್ಮೋಪದೇಶಾದಿತಿ ಚೇದಧ್ಯಾತ್ಮಸಮ್ಬನ್ಧಭೂಮಾ ಹ್ಯಸ್ಮಿನ್ ॥ ॐ ॥ ೨೯ ॥**

**'ನ ಹೀನ್ದ್ರಸ್ಯ ಜೀವವಿಶೇಷಸ್ಯ ಸರ್ವಾನ್ತರ್ಯಾಮಿತ್ವಂ ಯುಜ್ಯತೇ' ಇತ್ಯೇತತ್ ಪ್ರತಿಪಾದಯತ್ ಸೂತ್ರಮುಪನ್ಯಸ್ಯ ವ್ಯಾಚಷ್ಟೇ – ನ ವಕ್ತುರಿತ್ಯಾದಿನಾ ॥ ನನು 'ಪ್ರಾಣೋ ವಾ ಅಹಮಸ್ಮಿ' ಇತ್ಯಾದಿಭಿರಭೇದಃ ಪ್ರಾಣಸ್ಯೋಚ್ಯತೇ, ನ ತು ತದನ್ತರ್ಯಾಮಿತ್ವಮ್ ಇತಿ ಚೇತ್; ಮೈವಮ್ । 'ಅನ್ತಃ-ಪ್ರವಿಷ್ಟಃ ಶಾಸ್ತಾ ಜನಾನಾಮ್' 'ಯ ಆತ್ಮಾನಮನ್ತರೋ ಯಮಯತಿ' ಇತ್ಯಾದಿಶ್ರುತಿವಿರೋಧಾತ್ । ಪ್ರಾಣೋऽಹಮ್ ಇತಿ ವ್ಯಪದೇಶಾತ್ ಇನ್ದ್ರಸ್ಯ ಪ್ರಾಣತ್ವೇ 'ಗ್ರಹೋऽಹಮ್' ಇತಿ ವ್ಯಪದೇಶಾತ್ ಗ್ರಹಾವಿಷ್ಟಪುರುಷಸ್ಯಾಪಿ ಗ್ರಹತ್ವಪ್ರಸಙ್ಗಃ । ಅತಃ ಸಿಂಹವೇಷಧಾರಿಣಿ ನಟೇ ಸಿಂಹೋ ಜಾತೋ ನಟಃ ಇತಿವತ್ ಸರ್ವಾಧಿಷ್ಠಾತ್ರಾ ಪ್ರಾಣಶಬ್ದವಾಚ್ಯೇನ ವಿಷ್ಣುನಾ ಇನ್ದ್ರಾದ್ಯಭೇದವ್ಯಪದೇಶೋ ನಾನುಪಪನ್ನಃ । ತಥಾ ಚ ಪಾದ್ಮವಚನಮ್ 'ತತ್ತನ್ನಾಮ್ನಾ' ಇತಿ ।**

**ದೃಷ್ಟಶ್ಚಾನ್ತರ್ಯಾಮಿವಿಷಯತಯಾ ಅಹಂಶಬ್ದಃ, ಶ್ರುತ್ಯನ್ತರೇ 'ತದ್ಧೈತತ್ ಪಶ್ಯನ್ ಋಷಿರ್ವಾಮದೇವಃ ಪ್ರತಿಪೇದೇ । ಅಹಂ ಮನುರಭವಂ ಸೂರ್ಯಶ್ಚ' ಇತ್ಯಾದೌ ವಾಮದೇವಸ್ಯಾಹಂ ಮನುಸೂರ್ಯಾದಿತ್ವಂ ದೇವದತ್ತಸ್ಯೇವ ವಿರುದ್ಧಮೇವ । ಅತೋ ವಾಮದೇವಾದ್ಯಹೇಯತಯಾ ಅಹಂನಾಮಕೋ ಮನುಸೂರ್ಯನಿಯಮನಾದಿಯೋಗೇನ ಮನು-ಸೂರ್ಯಾದಿಶಬ್ದಾರ್ಥಃ । ತಥಾ ಚ ಪಾದ್ಮವಚನಮ್ 'ಸರ್ವಗತತ್ವಾದನನ್ತಸ್ಯ ಸ ಏವಾಹಮವಸ್ಥಿತಃ' ಇತಿ ॥**

ಜೀವವಿಶೇಷನಾದ ದೇವೇಂದ್ರನಿಗೆ ಸರ್ವಾಂತರ್ಯಾಮಿತ್ವವು ಕೂಡುವುದಿಲ್ಲ ಎಂಬುದನ್ನು ಪ್ರತಿಪಾದಿಸುವ ಸೂತ್ರವನ್ನು ಉಪನ್ಯಾಸಮಾಡಿ ವ್ಯಾಖ್ಯಾನಿಸುತ್ತಿದ್ದಾರೆ ''ನವಕ್ತುಃ'' ಇತ್ಯಾದಿಯಾಗಿ. ಪ್ರಾಣೋ ವಾ ಅಹಮಸ್ಮಿ ಇತ್ಯಾದಿ ವಾಕ್ಯಗಳಿಂದ ಪ್ರಾಣನಿಗೆ ಅಭೇದವು ಹೇಳಲ್ಪಟ್ಟಿದೆ ಹೊರತು, ಜೀವವಿಶೇಷನಿಂದ ಅಭೇದವು ಹೇಳಲ್ಪಟ್ಟಿಲ್ಲವಲ್ಲ ಎಂದು ಪ್ರಶ್ನಿಸಬಾರದು. 'ಅಂತಃಪ್ರವಿಷ್ಟಃ ಶಾಸ್ತಾ

ಜನಾನಾಮ್' 'ಯ ಆತ್ಮನಮಂತರೋ ಯಮಯತಿ' ಇತ್ಯಾದಿ ಶ್ರುತಿಗಳ ವಿರೋಧ ಬರುತ್ತದೆ. 'ಪ್ರಾಣೋಽಹಂ' ಎಂದು ಹೇಳಿದ ಮಾತ್ರಕ್ಕೆ ಇಂದ್ರನು ಪ್ರಾಣನಾಗುವುದಾದರೆ 'ಗ್ರಹೋಽಹಂ' ಎಂದು ಹೇಳುವ ಗ್ರಹಾವಿಷ್ಟನಾದ ಪುರುಷನೂ ಸಹ ಗ್ರಹ ಎಂದೇ ಆಗಬೇಕಾದೀತು. ಆದ್ದರಿಂದ ಸಿಂಹವೇಷವನ್ನು ಧರಿಸಿದ ನಟನನ್ನು ಕುರಿತು ನಟನು ಸಿಂಹನೇ ಆದನು ಎಂದು ಜನರು ಹೇಗೆ ಪ್ರಯೋಗಿಸುತ್ತಾರೋ ಆದರಂತೆ ಎಲ್ಲರ ಒಳಗೆ ನಿಯಾಮಕನಾಗಿ ಪ್ರವೇಶಿಸಿದ ಪ್ರಾಣಶಬ್ದವಾಚ್ಯನಾದ ವಿಷ್ಣುವಿಗೆ ಇಂದ್ರಾದಿಗಳೇ ಆದನೆಂಬ ಪ್ರಯೋಗವು ಅನುಪಪನ್ನವಲ್ಲ. ಆದ್ದರಿಂದಲೇ ಪದ್ಮಪುರಾಣದಲ್ಲಿ 'ತತ್ತನ್ನಾಮ್ನೋಚ್ಯತೇ' ಎಂಬುದಾಗಿ ಸಕಲಹೆಸರುಗಳು ಭಗವಂತನೆಂದು ಹೇಳಲಾಗಿದೆ.

ಆಂತರ್ಯಾಮಿವಿಷಯಕವಾಗಿ ಅಹಂಶಬ್ದವನ್ನು ಪ್ರಯೋಗಿಸುವುದು ಬೇರೆ ಶ್ರುತಿಯಲ್ಲಿ ಕಂಡಿದೆ— 'ತದ್ಧೈತತ್ ಪಶ್ಯನ್ ಋಷಿರ್ವಾಮದೇವಃ ಪ್ರತಿಪೇದೇ । ಅಹಂ ಮನುರಭವಂ ಸೂರ್ಯಶ್ಚ' ಇತ್ಯಾದಿ ಸ್ಥಳಗಳಲ್ಲಿ ವಾಮದೇವ ಋಷಿಯು 'ಅಹಂ ಮನುಃ' ಹೇಳಿದ್ದಾರೆ. ವಾಮದೇವ ಋಷಿಗೆ ಮನು ಮತ್ತು ಸೂರ್ಯನಿಂದ ಅಭೇದವನ್ನು ಹೇಳುವುದು ದೇವದತ್ತನಿಂದ ಅಭೇದವನ್ನು ಹೇಳುವುದು ಹೇಗೆ ವಿರುದ್ಧವೋ ಆದರಂತೆ ವಿರುದ್ಧವಾಗಿದೆ. ಆದ್ದರಿಂದಲೇ ಪದ್ಮಪುರಾಣದಲ್ಲಿ 'ಸರ್ವಗತತ್ವಾದನಂತಸ್ಯ ಸ ಏವಾಹಮವಸ್ಥಿತಃ' 'ಸರ್ವಗತನಾದ್ದರಿಂದ ನಾನೇ ಅಹಂ ಎನಿಸುತ್ತೇನೆ' ಎಂಬ ಮಾತು ಪ್ರಯುಕ್ತವಾಗಿದೆ.

**ॐ॥ ಶಾಸ್ತ್ರದೃಷ್ಟ್ಯಾ ತೂಪದೇಶೋ ವಾಮದೇವವತ್ ॥ ॐ ॥೩೦॥**

**ಏತತ್ ಪ್ರತಿಪಾದಯತ್ ಸೂತ್ರಮುಪನ್ಯಸ್ಯ ವ್ಯಾಚಷ್ಟೇ – ಶಾಸ್ತ್ರೇತ್ಯಾದಿನಾ ॥**

**ಸೂ - ॐ ॥ ಜೀವಮುಖ್ಯಪ್ರಾಣಲಿಙ್ಗಾನ್ನೇತಿ ಚೇನ್ನೋಪಾಸಾ- ತ್ರೈವಿಧ್ಯಾದಾಶ್ರಿತತ್ವಾದಿಹ ತದ್ಯೋಗಾತ್ ॥ ॐ ॥ ೩೧ ॥**

ನನು ಜೀವೋಽತ್ರ ಪ್ರಾಣೋ ಭವಿತುಮರ್ಹತಿ । 'ಏಷ ಇಮಂ ಲೋಕಮಭ್ಯಾರ್ಚತ್ ಪುರುಷರೂಪೇಣ ಯ ಏಷ ತಪತಿ ತಂ ಶತಂ ವರ್ಷಾಣ್ಯಭ್ಯಾರ್ಚತ್ । ತಸ್ಮಾತ್ ಶತಂ ವರ್ಷಾಣಿ ಪುರುಷಾಯುಷೋ ಭವನ್ತಿ' ಇತಿ ಪ್ರಸ್ತುತಸ್ಯ ಪ್ರಾಣಸ್ಯ ಶತವರ್ಷಾಯುಷ್ಟ್ವಶ್ರವಣಾತ್ । ಇದಮೇವ ಶತಾಯುಷ್ಟ್ವಂ ಜೀವಲಿಙ್ಗಮನುಸನ್ಧೀಯತೇ । 'ತಸ್ಯ ಹ ವಾ ಏತಸ್ಯ ಬೃಹತೀಸಹಸ್ರಸ್ಯ ಸಮ್ಪನ್ನಸ್ಯ ಷಟ್ತ್ರಿಂಶತಮಕ್ಷರಾಣಾಂ ಸಹಸ್ರಾಣಿ ಭವನ್ತಿ ಶತಸಂವತ್ಸರಸ್ಯಾಹ್ನಾಂ ಸಹಸ್ರಾಣಿ ಭವನ್ತಿ' ಇತಿ । ಮುಖ್ಯಪ್ರಾಣೋ ವಾತ್ರ ಪ್ರಾಣಶಬ್ದೇನ ಪ್ರತಿಪಾದ್ಯಃ ಸ್ಯಾತ್ । 'ತಾ ಅಹಿಂಸನ್ತ ಅಹಮುತ್ಕ್ರಮ್ಯಮಸ್ಮೀತಿ, ತಮಬ್ರುವನ್ । ಹನ್ತಾಸ್ಮಾಚ್ಛರೀರಾತ್ ಉತ್ಕ್ರಾಮಾಮ ತಯಸ್ಮಿನ್ನುತ್ಕ್ರಾನ್ತ ಇದಂ ಶರೀರಂ ಪತ್ಸ್ಯತಿ ತದುಕ್ಥಂ ಭವಿಷ್ಯತಿ' ಇತ್ಯಾದಿನಾ ಪ್ರಸ್ತುತಸ್ಯ ಪ್ರಾಣಸ್ಯೇನ್ದ್ರಿಯೈಃ ಸಂವಾದಶರೀರೋತ್ಕ್ರಮಣಾದಿಶ್ರವಣಾತ್ । ಇದಂ ಚ ಮುಖ್ಯಪ್ರಾಣಲಿಙ್ಗತ್ವೇನ ಪ್ರಸಿದ್ಧಂ

**श्रुत्यन्तरे 'अथ ह प्राणा अहं श्रेयांसि व्यूदिरे अहं श्रेयानस्मि' इत्यादावित्याशङ्कां परिहरत् सूत्रमुपन्यस्य व्याचष्टे – जीवेत्यादिना ॥**

ಹಿಂದೆ ಹೇಳಿದ ವಿಷಯವನ್ನೇ ಪ್ರತಿಪಾದಿಸುತ್ತಾ ಸೂತ್ರವನ್ನು ಉಪನ್ಯಾಸಮಾಡಿ ವ್ಯಾಖ್ಯಾನಿಸುತ್ತಿದ್ದಾರೆ ''ಶಾಸ್ತ್ರದೃಷ್ಟ್ಯಾ'' ಇತ್ಯಾದಿಯಾಗಿ. ಜೀವನೇ ಇಲ್ಲಿ ಪ್ರಾಣನಾಗಬಹುದಲ್ಲವೇ? ಏಕೆಂದರೆ 'ಏಷ ಇಮಂ ಲೋಕಮಭ್ಯಾರ್ಚತ್ ಪುರುಷರೂಪೇಣ ...' ಎಂಬುದಾಗಿ ಪ್ರಸ್ತುತನಾದ ಪ್ರಾಣನಿಗೆ ನೂರು ವರ್ಷ ಆಯುಷ್ಯವು ಕೇಳಿಸುತ್ತಿದೆ. ನೂರು ವರ್ಷ ಬದುಕುವಿಕೆ ಎಂಬುದು ಜೀವನ ಲಿಂಗವೆನಿಸಿದೆ.

ಅಥವಾ 'ತಸ್ಯ ಹ ವಾ ....' ಎಂಬ ಶ್ರುತಿಯಂತೆ ಮುಖ್ಯಪ್ರಾಣನೂ ಸಹ ಪ್ರಾಣಶಬ್ದದಿಂದ ಪ್ರತಿಪಾದ್ಯನಾಗಬಹುದು. ಏಕೆಂದರೆ 'ತಾ ಆಹಿಂಸಂತ .....' ಇತ್ಯಾದಿಯಾಗಿ ಪ್ರಸ್ತುತನಾದ ಪ್ರಾಣನಿಗೆ ಇಂದ್ರಿಯಾಭಿಮಾನಿ ದೇವತೆಗಳಿಂದ ಸಂವಾದವು ಹೇಳಲ್ಪಟ್ಟಿದೆ. ಮತ್ತು ಶರೀರದ ಉತ್ಕ್ರಮಣ ಪ್ರವೇಶಗಳಿಂದ ದೇಹೋತ್ಥಾನ ದೇಹೋಚ್ಚುತಿಗಳೆಂಬ ಲಿಂಗಗಳು ಕೇಳಿಸುತ್ತಿವೆ. ಇವೆಲ್ಲವೂ ಸಹ ಮುಖ್ಯಪ್ರಾಣನ ಲಿಂಗಗಳೇ ಆಗಿವೆ ಎಂದು ಬೇರೆ ಶ್ರುತಿಯಿಂದ ನಿರ್ಣಯವಾಗಿದೆ. 'ಅಥ ಹ ಪ್ರಾಣಾಃ ...' ಎಂಬಲ್ಲಿ ಸ್ಪಷ್ಟವಾಗಿ ಮುಖ್ಯಪ್ರಾಣನ ಲಿಂಗಗಳು ಕೇಳಿಸುತ್ತಿವೆ. ಆದ್ದರಿಂದ ಮುಖ್ಯಪ್ರಾಣನೇ ಪ್ರಾಣಶಬ್ದವಾಚ್ಯನಾಗಬಹುದಲ್ಲವೇ? ಎಂಬ ಆಶಂಕೆಯನ್ನು ಪರಿಹರಿಸುವುದಕ್ಕಾಗಿ ಸೂತ್ರವನ್ನು ಉಪನ್ಯಾಸಮಾಡಿ ವ್ಯಾಖ್ಯಾನಿಸುತ್ತಿದ್ದಾರೆ. ''ಜೀವ'' ಇತ್ಯಾದಿಯಾಗಿ.

**यज्जीवादिलिङ्गमुक्तं तज्जीवमुख्यप्राणान्तर्यामिणि विष्ण्वावेवोपपद्यते । तस्य नित्यस्याप्यस्मिन् सन्देहे शतवर्षावस्थानसम्भवात् मुख्यप्राणद्वारा इन्द्रियसंवाद-शरीरोत्क्रमणादिसम्भवात् । अतो जीवान्तर्यामित्वेन स्थितो विष्णुरेव प्राण-शब्दाभिधेयो न जीवादिः प्रतिपाद्यते । 'स एतमेव सीमानं विदर्यैतया द्वारा प्रापद्यते' इत्यादिना अत्र जीवान्तर्यामिरूपेण अवताररूपेण सर्वगतरूपेण भगवान् विष्णुः तत्तद्रूपोपासकयोग्यताभेदात् इत्यर्थः ।**

**इति श्रीमदानन्दतीर्थभगवत्पादाचार्यविरचितश्रीमद्ब्रह्मसूत्रभाष्यटीकायां श्रीपद्मनाभतीर्थभट्टारकविरचितायां सत्तर्कदीपावळ्यां प्रथमाध्यायस्य प्रथमपादः**

ಜೀವ ಹಾಗೂ ಮುಖ್ಯಪ್ರಾಣನ ಲಿಂಗಗಳೆಲ್ಲವೂ ಜೀವ ಹಾಗೂ ಮುಖ್ಯಪ್ರಾಣರ ಅಂತರ್ಯಾಮಿಯಾದ ವಿಷ್ಣುವಿನಲ್ಲೇ ಉಪಪನ್ನವಾಗುತ್ತವೆ. ಪರಮಾತ್ಮನು ನಿತ್ಯನಾಗಿದ್ದರೂ ಈ ದೇಹದಲ್ಲಿ ನೂರು ವರ್ಷಗಳ ಕಾಲ ಇರುತ್ತಾನಾದ್ದರಿಂದ ಮುಖ್ಯಪ್ರಾಣನ ಮೂಲಕ ಇಂದ್ರಿಯ

ಸಂವಾದ ಶರೀರೋತ್ಪಮಣಾದಿ ಲಿಂಗಗಳೂ ಸಹ ಪರಮಾತ್ಮನಲ್ಲೇ ಕೂಡುತ್ತವೆ. ಆದ್ದರಿಂದ ಜೀವಾದಿಗಳ ಅಂತರ್ಯಾಮಿಯಾಗಿ ನೆಲೆಸಿರುವ ವಿಷ್ಣುವೇ ಪ್ರಾಣಶಬ್ದವಾಚ್ಯನಾಗಿದ್ದಾನೆ. ಹೊರತು ಜೀವಾದಿಗಳಲ್ಲ. 'ಸ ಏತಮೇವ ಸೀಮಾನಂ ವಿದಾರ್ಯೈತಯಾ ದ್ವಾರಾ ಪ್ರಾಪದ್ಯತೇ' ಇತ್ಯಾದಿಯಾಗಿ ಜೀವಾಂತರ್ಯಾಮಿರೂಪದಿಂದ ಅವತಾರರೂಪದಿಂದ ಮತ್ತು ಸರ್ವಗತರೂಪದಿಂದ ಎಲ್ಲೆಡೆ ನೆಲೆಸಿರುವವನು ಭಗವಂತನೇ ಆಗಿದ್ದಾನೆ. ಹೀಗೆ ಭಿನ್ನ ಭಿನ್ನ ಸ್ಥಳಗಳಲ್ಲಿ ಆಯಾ ರೂಪಗಳಿಂದ ಉಪಾಸಕರ ಯೋಗ್ಯತಾಭೇದದಿಂದ ಉಪಾಸನೆ ಮಾಡುವುದಕ್ಕಾಗಿ ಭಗವಂತನ ರೂಪಗಳನ್ನು ವರ್ಣಿಸಲಾಗಿದೆ.

ಇಲ್ಲಿಗೆ ಸತ್ತರ್ಕದೀಪಾವಳಿಯ ಕನ್ನಡಾನುವಾದದಲ್ಲಿ ಅಂತಿಮಪ್ರಾಕಾಧಿಕರಣವು ಮುಗಿಯಿತು.

॥ ಶ್ರೀಮದ್ಭೇಶಾರ್ಪಣಮಸ್ತು ॥

# ೦೧೨- ಅಂತಿಮಪ್ರಾಣಾಧಿಕರಣ

## ಭಾಗ - ೨

ತಾತ್ಪರ್ಯಚಂದ್ರಿಕಾ, ಪ್ರಕಾಶ, ಗುರುರಾಜೀಯ,
ಭಾಟ್ಟಸಂಗ್ರಹ, ಶಂಕರಭಾಷ್ಯ, ಭಾಮತೀ, ವಿವರಣ,
ಶ್ರೀಭಾಷ್ಯ, ಶ್ರುತಪ್ರಕಾಶ ಇವುಗಳ ಆಯ್ದ ಭಾಗಗಳು

ಸಂವಾದ ಶರೀರೋತ್ಕ್ರಮಣಾದಿ ಲಿಂಗಗಳೂ ಸಹ ಪರಮಾತ್ಮನಲ್ಲೇ ಕೂಡುತ್ತವೆ. ಆದ್ದರಿಂದ ಜೀವಾದಿಗಳ ಅಂತರ್ಯಾಮಿಯಾಗಿ ನೆಲೆಸಿರುವ ವಿಷ್ಣುವೇ ಪ್ರಾಣಶಬ್ದವಾಚ್ಯನಾಗಿದ್ದಾನೆ. ಹೊರತು ಜೀವಾದಿಗಳಲ್ಲ. 'ಸ ಏತಮೇವ ಸೀಮಾನಂ ವಿದಾರ್ಯೈತಯಾ ದ್ವಾರಾ ಪ್ರಾಪದ್ಯತೇ' ಇತ್ಯಾದಿಯಾಗಿ ಜೀವಾಂತರ್ಯಾಮಿರೂಪದಿಂದ ಅವತಾರರೂಪದಿಂದ ಮತ್ತು ಸರ್ವಗತರೂಪದಿಂದ ಎಲ್ಲೆಡೆ ನೆಲೆಸಿರುವವನು ಭಗವಂತನೇ ಆಗಿದ್ದಾನೆ. ಹೀಗೆ ಭಿನ್ನ ಭಿನ್ನ ಸ್ಥಳಗಳಲ್ಲಿ ಆಯಾ ರೂಪಗಳಿಂದ ಉಪಾಸಕರ ಯೋಗ್ಯತಾಭೇದದಿಂದ ಉಪಾಸನೆ ಮಾಡುವುದಕ್ಕಾಗಿ ಭಗವಂತನ ರೂಪಗಳನ್ನು ವರ್ಣಿಸಲಾಗಿದೆ.

ಇಲ್ಲಿಗೆ ಸತ್ತರ್ಕದೀಪಾವಳಿಯ ಕನ್ನಡಾನುವಾದದಲ್ಲಿ ಅಂತಿಮಪ್ರಾಕಾಧಿಕರಣವು ಮುಗಿಯಿತು.

॥ ಶ್ರೀಮದ್ಧೇಶಾರ್ಪಣಮಸ್ತು ॥

# ೦೧೨- ಅಂತಿಮಪ್ರಾಣಾಧಿಕರಣ

## ಭಾಗ - ೨

ತಾತ್ಪರ್ಯಚಂದ್ರಿಕಾ, ಪ್ರಕಾಶ, ಗುರುರಾಜೀಯ,
ಭಾಟ್ಟಸಂಗ್ರಹ, ಶಂಕರಭಾಷ್ಯ, ಭಾಮತೀ, ವಿವರಣ,
ಶ್ರೀಭಾಷ್ಯ, ಶ್ರುತಪ್ರಕಾಶ ಇವುಗಳ ಆಯ್ದ ಭಾಗಗಳು

॥ ಶ್ರೀಲಕ್ಷ್ಮೀಹಯಗ್ರೀವೋ ವಿಜಯತೇತಮಾಮ್ ॥
॥ ಶ್ರೀಮಧ್ವರಾಜೋ ವಿಜಯತೇತರಾಮ್ ॥
॥ ಶ್ರೀಗುರುಭ್ಯೋ ನಮಃ ॥

## ಸಂಶಯ ಹಾಗು ಸಂಗತಿ ಪ್ರದರ್ಶನ

ಶ್ರುತಿಲಿಂಗಬಾಹುಲ್ಯವು ಗಾಯತ್ರ್ಯಧಿಕರಣದ ಸಿದ್ಧಾಂತನ್ಯಾಯ. ಆ ನ್ಯಾಯದಿಂದಲೇ ಈ ಅಧಿಕರಣದ ಪೂರ್ವಪಕ್ಷ ಹೊರಟಿದ್ದರಿಂದ ಆಪವಾದಿಕೀ ಸಂಗತಿಯನ್ನು ತಿಳಿಯಬೇಕು.

ವಾಯುಶ್ರುತಿ ಮೊದಲಾದವು ನಿರವಕಾಶವಾದ್ದರಿಂದ ವಾಯುಶ್ರುತಿಗಳಿಗೆ ಅನುಸಾರಿಯಾಗಿ ವಿಷ್ಣುಶ್ರುತಿ-ಗಳನ್ನು ಅರ್ಥೈಸಬೇಕು. ಆವಾಗ ಮುಖ್ಯವಾಯುವೇ ಪ್ರಾಣನಾಗುತ್ತಾನೆಂಬುದು ಪೂರ್ವಪಕ್ಷದ ಗುರಿ. ವಿಷ್ಣುಶ್ರುತಿ ನಿರವಕಾಶವಾದ್ದರಿಂದ ವಿಷ್ಣುಶ್ರುತಿಗೆ ಅನುಸಾರಿಯಾಗಿ ವಾಯುಶ್ರುತಿಯನ್ನು ಅರ್ಥೈಸಬೇಕು. ಆವಾಗ ವಿಷ್ಣುವೇ ಪ್ರಾಣಶಬ್ದವಾಚ್ಯನಾಗುತ್ತಾನೆಂಬುದು ಸಿದ್ಧಾಂತದ ಗುರಿ.

ಈ ಪಾದಾಂತ್ಯಪ್ರಾಣಾಧಿಕರಣವು ಗತಾರ್ಥವಾಗಿದೆಯೆಂದು ದೀರ್ಘವಾಗಿ ಆಕ್ಷೇಪಿಸಲಾಗಿದೆ.

ಹಿಂದಿನ ಪ್ರಾಣಾಧಿಕರಣದಲ್ಲಿ ತೈತ್ತಿರೀಯದಲ್ಲಿರುವ ಪ್ರಾಣಶಬ್ದವು ವಾಯುಪರವಲ್ಲವೆಂದು ಹೇಳಿದರು. ಇಲ್ಲಿ ಐತರೇಯಪ್ರಾಣನು ಇಂದ್ರನಾಗಲೀ ಜೀವನಾಗಲೀ ಅಲ್ಲವೆಂದು ಹೇಳುತ್ತಿದ್ದಾರೆ. ಹೀಗಿರುವಾಗ ಗತಾರ್ಥತ್ವ-ವನ್ನು ಹೇಗೆ ಹೇಳುತ್ತೀರಿ?

ಈ ಅಧಿಕರಣದಲ್ಲಿಯೂ ಸಹ ಪ್ರಾಣಶಬ್ದವು ವಾಯುಪರ ಅಲ್ಲವೆಂದೇ ಹೇಳಬೇಕು ಹೊರತು ಇಂದ್ರ ಅಥವಾ ಜೀವಪರವಲ್ಲ ಎಂಬುದು ಮುಖ್ಯವಲ್ಲ. ಇಲ್ಲದಿದ್ದರೆ ಸೂತ್ರದಲ್ಲಿರುವ ಮುಖ್ಯಪ್ರಾಣಪದವು ತಪ್ಪಾಗುತ್ತದೆ. ಆದ್ದರಿಂದ ಗತಾರ್ಥತ್ವವು ಬಂದೇ ಬರುತ್ತದೆ.

ಗಾಯತ್ರ್ಯಧಿಕರಣದಲ್ಲಿಯೂ ಸಹ 'ಗಾಯತ್ರೀ ವಾ ಇದಂ ಸರ್ವಂ ವಾಗ್ವೈ ಗಾಯತ್ರೀ ಸೈಷಾ ಷಡ್ವಿಧಾ ಗಾಯತ್ರೀ' ಎಂಬ ಏಕವಿಷಯಕವಾದ ಶ್ರುತಿಯು ಕೇಳಿಸುತ್ತಿದೆ. ಮತ್ತು ಆಕಾಶಾಧಿಕರಣದ ವಿಷಯವಾಕ್ಯದಲ್ಲಂತೂ ಒಂದೇ ಆಕಾಶಶ್ರುತಿಯು ಅನೇಕಬಾರಿ ಕೇಳಿಸುತ್ತಿದೆ. ಆದ್ದರಿಂದ ಪ್ರಾಣಾಧಿಕರಣದಿಂದ ಗತಾರ್ಥತ್ವವನ್ನು ಪರಿಹರಿಸಲು ಹೊರಟರೆ ಗಾಯತ್ರ್ಯಧಿಕರಣದಿಂದಲೋ ಅಥವಾ ಆಕಾಶಾಧಿಕರಣದಿಂದಲೋ ಗತಾರ್ಥತ್ವವು ಬಂದೇ ಬರುತ್ತದೆ.

ಆಕಾಶಾದ್ಯಧಿಕರಣಗಳಲ್ಲಿ ಶ್ರುತಿಲಿಂಗಬಾಹುಲ್ಯಪ್ರಯುಕ್ತವಾದ ಪೂರ್ವಪಕ್ಷವನ್ನು ಮಾಡಿಲ್ಲ. ಆದ್ದರಿಂದ ಈ ಅಧಿಕರಣದಲ್ಲಿ ಶ್ರುತಿಲಿಂಗಬಾಹುಲ್ಯಪ್ರಯುಕ್ತವಾದ ಪೂರ್ವಪಕ್ಷವು ಹುಟ್ಟಬಹುದು. ಆದ್ದರಿಂದಲೇ ಅನು-ವ್ಯಾಖ್ಯಾನದಲ್ಲಿ 'ಬಾಹುಲ್ಯಾತ್ ಶ್ರುತಿಲಿಂಗಯೋಃ' ಎಂದು ಹೇಳಿದ್ದಾರೆ. ಈ ಅಧಿಕರಣದ ಭಾಷ್ಯ ಹಾಗೂ ಟೀಕೆಗಳಲ್ಲಿ ವಸ್ತುತಃ ಲಿಂಗವನ್ನಷ್ಟೇ ಹೇಳಿರಬಹುದು. ಆದರೆ ಅದು ಕೇವಲ ಪೂರ್ವಪಕ್ಷದ ಉಪಕ್ರಮ ಮಾತ್ರ. ಮುಂದೆ ಬಾಹುಲ್ಯವನ್ನು ಹೇಳಬಹುದೆಂದು ಆದರ ಅಭಿಪ್ರಾಯ. ಆದ್ದರಿಂದ ಈ ಅಧಿಕರಣವು ಗತಾರ್ಥವಲ್ಲ.

ಇಂದ್ರಪ್ರಾಣಾದಿ ಲಿಂಗಗಳನ್ನು ಅವಲಂಬಿಸಿ, ಈ ಅಧಿಕರಣದಲ್ಲಿ ಪೂರ್ವಪಕ್ಷ ಮಾಡುತ್ತಿದ್ದಾರೆ. ಈ ರೀತಿಯಾದ ಪೂರ್ವಪಕ್ಷವು ಸರಿಯೇ? ಎಂದು ವಿಮರ್ಶಿಸಬೇಕು. ಏಕೆಂದರೆ ವಿಷ್ಣುವಿನಲ್ಲಿ ಈಗಾಗಲೇ ಪ್ರಸಿದ್ಧವಾದ ಬ್ರಹ್ಮ ಮೊದಲಾದ ನಾಮಧೇಯಗಳಿವೆ. ಇವುಗಳನ್ನು ಅನುಸರಿಸಿ ಇಂದ್ರಪ್ರಾಣಾದಿಲಿಂಗಗಳೂ ಸಹ ವಿಷ್ಣುವಿನಲ್ಲೇ ಬರುತ್ತವೆ. ಸಂಶಯಕ್ಕೆ ಅವಕಾಶವೇ ಇರುವುದಿಲ್ಲ. ಏಕೆಂದರೆ ಪೂರ್ವಮೀಮಾಂಸಾಕಾರರೂ ಸಹ ಇಂತಹ

ತೀರ್ಮಾನಗಳನ್ನು ತೆಗೆದುಕೊಂಡಿದ್ದಾರೆ. ಉದಾಹರಣೆ :- 'ದರ್ಶಪೂರ್ಣಮಾಸಾಭ್ಯಾಂ ಯಜೇತ' ಎಂಬ ಶ್ರುತಿಯಲ್ಲಿ 'ದರ್ಶಪೂರ್ಣಮಾಸ' ಎಂಬ ಹೆಸರು ಕೇಳಿಸುತ್ತಿದೆ. ಈ ಶ್ರುತಿಯನ್ನು ಕೇಳುವ ಮೊದಲೇ ವಿದ್ವದ್‌ವಾಕ್ಯದಿಂದ ದರ್ಶಪೂರ್ಣಮಾಸ ಶಬ್ದದ ಪರಿಚಯವಾಗಿದೆ. ಹಾಗಾಗಿ 'ಯಜೇತ' ಎಂಬಲ್ಲಿರುವ 'ಯಜ್' ಧಾತುವಿಗೆ ದರ್ಶಮಾಸದ ಮೂರು ಯಾಗಗಳು ಪೂರ್ಣಮಾಸದ ಮೂರು ಯಾಗಗಳು ಮಾತ್ರ ಅರ್ಥವೆನ್ನಬೇಕೆ ಹೊರತು, ಸಕಲ ಯಾಗಗಳನ್ನು ಅರ್ಥವೆಂದು ಹೇಳಬಾರದು. ಒಟ್ಟಾರೆ 'ದರ್ಶಪೂರ್ಣಮಾಸ'ವೆಂಬ ನಾಮಧೇಯವನ್ನು ಅನುಸರಿಸಿ 'ಯಜ್' ಧಾತುವಿನ ಅರ್ಥವನ್ನು ಸಾವಕಾಶಮಾಡಿದ್ದು ಕಂಡಿದೆ. ಹೀಗೆ ಒಪ್ಪದಿದ್ದರೆ 'ರಾಜಸೂಯೇನ ಯಜೇತ' ಎಂಬಲ್ಲಿಯೂ 'ಯಜ್' ಧಾತುವಿಗೆ ಅರ್ಥಸಂಕೋಚ ಮಾಡುವ ಪ್ರಸಂಗ ಬರುತ್ತದೆ. ಆದ್ದರಿಂದ ಬ್ರಹ್ಮನೆಂಬ ನಾಮಧೇಯವನ್ನು ಅನುಸರಿಸಿ ಇಂದ್ರಪ್ರಾಣಾದಿ ಲಿಂಗಗಳನ್ನು ವಿಷ್ಣುವಿನಲ್ಲಿ ಸಾವಕಾಶ ಮಾಡಬೇಕಾಗುತ್ತದೆ. ಆದ್ದರಿಂದ ಇಂದ್ರಪ್ರಾಣಾದಿ ಲಿಂಗಗಳನ್ನು ವಿವಕ್ಷಿಸಿ ಪೂರ್ವಪಕ್ಷವನ್ನು ನೀವು ಹೇಗೆ ರಚಿಸುತ್ತೀರಿ?

ಪ್ರಾಣಶಬ್ದದಿಂದ ಇಂದ್ರನಾಗಲಿ, ಮುಖ್ಯಪ್ರಾಣನಾಗಲಿ ಅಥವಾ ಜೀವನಾಗಲಿ ವಾಚ್ಯರಾಗಬಹುದು. ಇವರೆಲ್ಲೆಲ್ಲಾ ಪ್ರಸಿದ್ಧವಾದ ಲಿಂಗಗಳು ಹಾಗೂ ಶ್ರುತಿಗಳು ನಿರವಕಾಶಗಳಾದ್ದರಿಂದ ಪೂರ್ವಪಕ್ಷವು ಹುಟ್ಟುತ್ತದೆ.

ದೇವೇಂದ್ರನಲ್ಲಿ ವೃತ್ರಹಂತೃತ್ವ, ಮಹಾವ್ರತಯಾಜಿತ್ವ ಮೊದಲಾದ ಅಸಾಧಾರಣ ಧರ್ಮಗಳಿವೆ. ಮತ್ತು 'ಪ್ರಾಣೋ ವಾ ಅಹಂ' ಎಂಬ ಶ್ರುತಿಯೂ ಪ್ರಸಿದ್ಧವಾಗಿವೆ. ಇವುಗಳನ್ನು ವಿಷ್ಣುವಿನಲ್ಲಿ ಸಮನ್ವಯ ಮಾಡಲು ಸಾಧ್ಯವಿಲ್ಲ. ಅಂತರ್ಯಾಮಿ ವಿವಕ್ಷೆಯಿಂದ ಇವುಗಳನ್ನು ವಿಷ್ಣುವಿನಲ್ಲಿ ಹೇಳಬಹುದೆಂಬ ಒಂದು ಅವಕಾಶವಿದೆ. ಆದರೆ ಒಂದು ವೇಳೆ 'ಅಹಂ' ಶಬ್ದಕ್ಕೆ 'ಅಂತರ್ಯಾಮಿ' ಎಂಬರ್ಥವನ್ನು ಹೇಳಿದರೆ ವಿಷ್ಣುವೇ ಸ್ವತಃ ಯಾವ ವಾಕ್ಯಗಳಲ್ಲಿ 'ಅಹಂ' ಶಬ್ದವನ್ನು ಪ್ರಯೋಗಿಸಿದ್ದಾನೋ ಅಂತಹ ಸ್ಥಳಗಳಲ್ಲಿಯೂ ವಿಷ್ಣುವಿನ ಅಂತರ್ಯಾಮಿ ಯಾರೋ ಒಬ್ಬನನ್ನು ಹೇಳಬೇಕಾಗುವ ಪ್ರಸಂಗ ಬರುತ್ತದೆ. ಆದ್ದರಿಂದ ಇಂದ್ರನಲ್ಲಿ ಪ್ರಸಿದ್ಧವಾದ ಲಿಂಗಗಳನ್ನು ಮತ್ತು ಶ್ರುತಿಗಳನ್ನು ವಿಷ್ಣುವಿನಲ್ಲಿ ಸಾವಕಾಶ ಮಾಡಲು ಸಾಧ್ಯವಿಲ್ಲ.

ಅಥವಾ ವಾಯುವೇ ಪ್ರಾಣಶಬ್ದವಾಚ್ಯನು. ಏಕೆಂದರೆ ಚಕ್ಷುರಾದಿ ಇಂದ್ರಿಯಗಳ ಅಥವಾ ಇಂದ್ರಿಯಾಭಿಮಾನಿ ದೇವತೆಗಳ ಮಧ್ಯದಲ್ಲಿ ಈ ಪ್ರಾಣಶಬ್ದವು ಹೇಳಲ್ಪಟ್ಟಿದೆ. ಚಕ್ಷುರಾದಿಗಳೆಲ್ಲವೂ ಅಪ್ರಧಾನಾದಿಗಳಾದ್ದರಿಂದ ಅವುಗಳ ಮಧ್ಯದಲ್ಲಿ ಪಠಿತವಾದ ಪ್ರಾಣವೂ ಅಪ್ರಧಾನವೇ ಆಗಬೇಕು. ಹೊರತು ಪ್ರಧಾನವಾದ ಬ್ರಹ್ಮನು ಪ್ರಾಣಶಬ್ದವಾಚ್ಯನಾಗುವುದಿಲ್ಲ. ಈ ವಿಷಯವು ಸಾಹಚರ್ಯ ಪ್ರಮಾಣದಿಂದ ಸಿದ್ಧವಾಗಿದೆ. ಸಾಹಚರ್ಯವನ್ನು ಪ್ರಮಾಣವೆಂಬುದಾಗಿ ಪೂರ್ವಮೀಮಾಂಸಕರು ಮತ್ತು ವೈಯಾಕರಣರು ಒಪ್ಪಿಕೊಂಡಿದ್ದಾರೆ.

ಇಂದ್ರಿಯಾಭಿಮಾನಿ ದೇವತೆಗಳು ಪರಸ್ಪರ ಕಲಹ ಮಾಡುವ ಸಂದರ್ಭದಲ್ಲಿ ಪ್ರಾಣ ಶಬ್ದವು ಹೇಳಲ್ಪಟ್ಟಿದೆ. ಅತ್ಯಂತ ನಿಕೃಷ್ಟರಾದ ಇಂದ್ರಿಯಾಭಿಮಾನಿ ದೇವತೆಗಳ ಜೊತೆಗೆ ಸರ್ವೋತ್ಕೃಷ್ಟನಾದ ಬ್ರಹ್ಮನು ಕಲಹ ಮಾಡಲು ಸಾಧ್ಯವಿಲ್ಲದ ಕಾರಣ ಬ್ರಹ್ಮನು ಪ್ರಾಣಶಬ್ದ ವಾಚ್ಯನಾಗಲಾರ.

ಜೀವನ ಲಿಂಗವೂ ಸಹ ನಿರವಕಾಶವಾಗಿದೆ. 'ಶತಸಂವತ್ಸರತ್ವ' ಎಂಬ ಲಿಂಗವು ಜೀವನಲ್ಲಿ ಶ್ರುತವಾಗಿವೆ. ಈ ಲಿಂಗವು ಜೀವನನ್ನು ಬಿಟ್ಟು ಬೇರೆ ಯಾರಲ್ಲಿಯೂ ಬರುವುದಿಲ್ಲ. ವಸ್ತುತಃ ಜೀವನನ್ನು ಹೇಳುವ ಪ್ರಕರಣದಲ್ಲಿ ಪ್ರಾಣಶಬ್ದವಿರುವುದಿಲ್ಲ. ಆದರೂ 'ಪ್ರಾಣೋ ವಾ ತದಭ್ಯರ್ಚತ್' ಎಂಬಲ್ಲಿ ತತ್ ಶಬ್ದದಿಂದ ಪ್ರಕೃತನಾದ ಪ್ರಾಣನನ್ನು ಪರಾಮರ್ಶಿಸಲು ಬರುತ್ತದೆ. ಜೀವನಲ್ಲಿರುವ ಶತಸಂವತ್ಸರತ್ವ ಎಂಬ ಲಿಂಗವನ್ನು ಅಂತರ್ಯಾಮಿ ವಿವಕ್ಷೆಯಿಂದ ಪರಮಾತ್ಮನಲ್ಲಿ ಸಮನ್ವಯ ಮಾಡಬಾರದು. ಹಾಗಾದಲ್ಲಿ ಜೀವನಲ್ಲಿರುವ ಸಂಸಾರವನ್ನು

ಪರಮಾತ್ಮನಲ್ಲಿಯೇ ಸಮನ್ವಯ ಮಾಡಬೇಕಾದ ಪ್ರಸಂಗ ಬರುತ್ತದೆ. ಆದ್ದರಿಂದ ಜೀವನ ಲಿಂಗವನ್ನು ವಿಷ್ಣುವಿನಲ್ಲಿ ಸಾವಕಾಶ ಮಾಡಲಾಗದು. ಆದರೆ ವಿಷ್ಣುವಿನ ಬಗ್ಗೆ ಹೇಳಲ್ಪಟ್ಟ ವಾಕ್ಯಗಳನ್ನು ಜೀವನಲ್ಲಿ ಸಾವಕಾಶ ಮಾಡಬಹುದು.

ಆದ್ದರಿಂದ ಜೀವನಾಗಲೀ, ಮುಖ್ಯವಾಯುವಾಗಲೀ ಅಥವಾ ದೇವೇಂದ್ರನೇ ಆಗಲಿ ಪ್ರಾಣಶಬ್ದದಿಂದ ವಾಚ್ಯರಾಗುತ್ತಾರೆಂಬ ಪೂರ್ವಪಕ್ಷವು ದೃಢವಾಯಿತು.

ಶ್ರೀಮದಾಚಾರ್ಯರು ಹಿಂದಿನ ಪ್ರಾಣಾಧಿಕರಣದ ಸಿದ್ಧಾಂತದ ಆಕ್ಷೇಪವೇ ಈ ಅಧಿಕರಣದ ಪೂರ್ವಪಕ್ಷದ ಫಲವೆಂದು ಹೇಳಿದ್ದಾರೆ. ಇದು ಸರಿಯೋ ಅಲ್ಲವೋ? ಎಂಬುದರ ಬಗ್ಗೆ ಈಗ ವಿಚಾರ ನಡೆದಿದೆ. ಈ ಅಧಿಕರಣದಲ್ಲಿ ನಿರವಕಾಶವಾದ ಶ್ರುತಿಲಿಂಗಬಾಹುಲ್ಯವಿರುವುದರಿಂದ ಐತರೇಯದಲ್ಲಿ ಹೇಳಲ್ಪಟ್ಟ ಪ್ರಾಣನು ವಿಷ್ಣುವಲ್ಲ ಹೊರತು ಇಂದ್ರಾದಿಗಳೆಂದೇ ಪೂರ್ವಪಕ್ಷ ಮಾಡಲಾಯಿತು. ಇದರಿಂದಾಗಿ ಹಿಂದಿನ ಪ್ರಾಣಾಧಿಕರಣದಲ್ಲಿ ಹೇಳಲ್ಪಟ್ಟ ಪ್ರಾಣನೂ ಸಹ ಪರಮಾತ್ಮನಾಗಲಾರ ಎಂದು ಹೇಗೆ ಹೇಳಲು ಸಾಧ್ಯ ? ಏಕೆಂದರೆ ಶ್ರೀಪತಿತ್ವ ಮೊದಲಾದ ಲಿಂಗಗಳ ಬಲದಿಂದ ಹಿಂದಿನ ಅಧಿಕರಣದಲ್ಲಿ ತೈತ್ತಿರೀಯದಲ್ಲಿ ಹೇಳಲ್ಪಟ್ಟ ಪ್ರಾಣನು ವಿಷ್ಣುವೆಂದು ನಿರ್ಣಯವಾಗಿದೆ. ಇಲ್ಲಿ ಹೇಳಲ್ಪಟ್ಟ ಪೂರ್ವಪಕ್ಷಯುಕ್ತಿಯು ಹಿಂದಿನ ಅಧಿಕರಣದ ಪ್ರಾಣನಲ್ಲಿ ಬರುವುದಿಲ್ಲ. ಆದ್ದರಿಂದ ಶ್ರೀಮದಾಚಾರ್ಯರ ಮಾತಿಗೆ ಏನು ಅರ್ಥ?

ಶ್ರೀಮದಾಚಾರ್ಯರ 'ಪ್ರಾಚೀನೋऽಪ್ಯನ್ಯಃ' ಎಂಬ ಮಾತಿನ ಬಗ್ಗೆ ಆಕ್ಷೇಪ ಮಾಡಿದ್ದೂ ತಪ್ಪು. ಅಂತಿಮ-ಪ್ರಾಣಾಧಿಕರಣದಲ್ಲಿ ಪ್ರಾಣಶಬ್ದದಿಂದ ದೇವೇಂದ್ರಾದಿಗಳು ಪ್ರತಿಪಾದ್ಯರೆನ್ನಲು ವಿಶೇಷಲಿಂಗವಿದೆ. ಆದರೆ ಪ್ರಾಣಾಧಿಕರಣದಲ್ಲಿ ಪ್ರಾಣಶಬ್ದವಾಚ್ಯನು ದೇವೇಂದ್ರನೆನ್ನಲು ವಿಶೇಷಲಿಂಗವಿರುವುದಿಲ್ಲ. ಆದರೂ ಸಹ ಈ ಅಧಿಕರಣದಲ್ಲಿ ವಿಶೇಷಲಿಂಗದ ಬಲದಿಂದ ದೇವೇಂದ್ರನು ಪ್ರಾಣಶಬ್ದವಾಚ್ಯನೆಂದು ನಿರ್ಣಯವಾದ ಮೇಲೆ ಹಿಂದಿನ ಪ್ರಾಣಾಧಿಕರಣದ ಪ್ರಾಣನೂ ಸಹ ದೇವೇಂದ್ರನೆಂದೇ ನಿರ್ಣಯವಾಗುತ್ತದೆ. ಇದಕ್ಕೆ ವಿಶೇಷಕಾರಣ ಬೇಕಾಗಿಲ್ಲ.

ಪೂರ್ವಮೀಮಾಂಸಕರಿಗೂ ಭಾಟ್ಟರಿಗೂ ಈ ವಿಷಯ ಸಮ್ಮತವಾಗಿವೆ. 'ಸ್ವರ್ಗಕಾಮೋ ಯಜೇತ' ಎಂಬಲ್ಲಿರುವ 'ಲಿಙ್' ಪ್ರತ್ಯಯವು ಅಪೂರ್ವವೆಂಬ ಕಾರ್ಯವನ್ನು ಹೇಳುತ್ತದೆ. ಇದಕ್ಕೆ 'ಸ್ವರ್ಗಕಾಮಃ' ಎಂಬ ಪ್ರಯೋಗವೇ ಕಾರಣವಾಗಿದೆ. ಆದರೆ 'ಸಂಧ್ಯಾಮುಪಾಸೀತ' ಎಂಬಲ್ಲಿ ಫಲಕಾಮಿ ವಾಚಕವಾದ ಪದ ಇರುವುದಿಲ್ಲ. ಆದರೂ 'ಏಕತ್ರ ನಿರ್ಣೀತಃ ಶಾಸ್ತ್ರಾರ್ಥಃ ಸರ್ವತ್ರ' ಎಂಬ ನ್ಯಾಯವನ್ನು ಅನುಸರಿಸಿ 'ಉಪಾಸೀತ' ಎಂಬಲ್ಲಿರುವ 'ಲಿಙ್' ಪ್ರತ್ಯಯವೂ ಸಹ ಅಪೂರ್ವವೆಂಬ ಕಾರ್ಯತ್ವವನ್ನೇ ಹೇಳುತ್ತದೆ.

ಇದರಂತೆ ಭಾಟ್ಟರು ಯವಮಯಾಧಿಕರಣದಲ್ಲಿ 'ಯವ' ಶಬ್ದಕ್ಕೆ ವಾಕ್ಯಶೇಷದ ಬಲದಿಂದ ದೀರ್ಘ-ಶೂಕವಿಶಿಷ್ಟವಾದ ಧಾನ್ಯವಿಶೇಷವೆಂಬ ಅರ್ಥವನ್ನು ಅಂಗೀಕರಿಸಿದ್ದಾರೆ. ಆದರೆ ಎಲ್ಲಿ ವಾಕ್ಯಶೇಷವಿರುವುದಿಲ್ಲವೋ ಅಲ್ಲಿಯೂ ಸಹ ದೀರ್ಘಶೂಕವಿಶಿಷ್ಟವಾದ ಧಾನ್ಯವೆಂಬ ಅರ್ಥವನ್ನೇ ಅಂಗೀಕರಿಸಿದ್ದಾರೆ. 'ಏಕತ್ರ ನಿರ್ಣೀತಃ ಶಾಸ್ತ್ರಾರ್ಥಃ ಸರ್ವತ್ರ' ಎಂಬ ನ್ಯಾಯವೇ ಇದಕ್ಕೂ ಕಾರಣ. ಇದರಂತೆ ಪ್ರಕೃತ ಐತರೇಯದಲ್ಲಿರುವ ಪ್ರಾಣಶಬ್ದವಾಚ್ಯನು ಇಂದ್ರಾದಿಗಳೆನ್ನಲು ಅನೇಕ ನಿರವಕಾಶಲಿಂಗಗಳಿರುತ್ತವೆ. ಆದರೆ ತೈತ್ತಿರೀಯದಲ್ಲಿರುವ ಪ್ರಾಣನು ಇಂದ್ರಾದಿಗಳೆನ್ನಲು ಅಂತಹ ನಿರವಕಾಶಲಿಂಗಗಳಿರುವುದಿಲ್ಲ. ಆದ್ದರಿಂದ 'ಏಕತ್ರ ನಿರ್ಣೀತಃ ಶಾಸ್ತ್ರಾರ್ಥಃ ಸರ್ವತ್ರ' ಎಂಬ ನ್ಯಾಯವನ್ನು ಅನುಸರಿಸಿ ಶ್ರೀಮದಾಚಾರ್ಯರ ಮಾತನ್ನು ಅರ್ಥಮಾಡಿಕೊಳ್ಳಬೇಕು.

'ಏಕತ್ರ ನಿರ್ಣೀತಃ ಶಾಸ್ತ್ರಾರ್ಥಃ ಸರ್ವತ್ರ' ಎಂಬ ನ್ಯಾಯವನ್ನು ನಿರ್ಣಯಿಸಿ ಶ್ರೀಮದಾಚಾರ್ಯರ ಪೂರ್ವಪಕ್ಷ ಫಲದ ಮಾತನ್ನು ಸಮರ್ಥಿಸಿದಿರಿ. ಆದರೆ ಇದು ಅಯುಕ್ತವಾಗಿದೆ. ಈ ಅಧಿಕರಣದಲ್ಲಿ ನಿರವಕಾಶವಾದ ಇಂದ್ರಾದಿ ಲಿಂಗಗಳಿರುವುದರಿಂದ ಅಮುಖ್ಯವೃತ್ತಿಯಿಂದ ಇಂದ್ರಾದಿಪರತ್ವವನ್ನು ಪ್ರಾಣಶಬ್ದಕ್ಕೆ ಒಪ್ಪೋಣ. ಹಿಂದಿನ

ಪ್ರಾಣಾಧಿಕರಣದಲ್ಲಿ ಮುಖ್ಯವೃತ್ತಿಯಿಂದಲೇ ವಿಷ್ಣುಪರತ್ವವನ್ನು ಒಪ್ಪೋಣ. ಹೀಗೆ ಒಪ್ಪಿದಾಗ ಈ ಅಧಿಕರಣದ ಪೂರ್ವಪಕ್ಷಕ್ಕೆ ಹಿಂದಿನ ಅಧಿಕರಣದ ಸಿದ್ಧಾಂತವನ್ನು ಆಕ್ಷೇಪಿಸುವುದನ್ನು ಫಲವೆಂದು ಹೇಳಲು ಸಾಧ್ಯ ?

ಈ ಪ್ರಶ್ನೆಯೂ ಸಹ ತಪ್ಪು. ಏಕೆಂದರೆ ಐತರೇಯದ ಪ್ರಾಣಶಬ್ದಕ್ಕೆ ಇಂದ್ರಾದಿಗಳಲ್ಲಿ ಅಮುಖ್ಯವೃತ್ತಿಯನ್ನು ಏಕೆ ಹೇಳುತ್ತಿದ್ದೀರಿ. ಮುಖ್ಯವೃತ್ತಿಯನ್ನು ಒಪ್ಪಲು ಬಾಧಕವಿದ್ದರೇ ಮಾತ್ರ ಅಮುಖ್ಯವೃತ್ತಿಯನ್ನು ಹೇಳಬೇಕು. ವಿಷ್ಣುವಿನಲ್ಲಿ ಪ್ರಾಣಶಬ್ದವು ಮುಖ್ಯವಾಗಿರುವಿಕೆಯನ್ನು ಬಾಧಕವೆಂದು ಹೇಳಲಾಗದು. ಈ ಪ್ರಮೇಯವೂ ಹಿಂದಿನ ಪ್ರಾಣಾಧಿಕರಣದ ಸಿದ್ಧಾಂತವಾಗಿದೆ. ಆದನ್ನೇ ನಾವು ಪ್ರಕೃತ ಆಕ್ಷೇಪಿಸುತ್ತಿದ್ದೇವೆ.

ಇನ್ನು ಇಂದ್ರಾದಿಗಳಲ್ಲಿ ಯೋಗರೂಢಿಯ ಅಸತ್ವವನ್ನು ಬಾಧಕವೆಂದು ಹೇಳಬೇಕು. ಆದರೆ ಪ್ರಣೇತೃತ್ವ-ವೆಂಬ ಯೋಗವನ್ನು ದೇವೇಂದ್ರನಲ್ಲಿ ಹೇಳಬಹುದು. ರೂಢಿಯನ್ನು ಮುಖ್ಯಪ್ರಾಣನಲ್ಲಿ ಹೇಳಬಹುದು. ಆದ್ದರಿಂದ ಇಂದ್ರಾದಿಗಳಲ್ಲಿರುವ ಯೋಗರೂಢಿಯ ಅಸತ್ವವನ್ನು ಬಾಧಕವೆಂದು ಹೇಳಲು ಹೇಗೆ ಸಾಧ್ಯ. ವಿಷ್ಣುವಿನಲ್ಲಿ ವಿದ್ವದ್ರೂಢಿ ಹಾಗು ಮಹಾಯೋಗಗಳನ್ನೇ ಬಾಧಕವೆಂದು ಅಂತಿಮವಾಗಿ ಹೇಳಲು ಸಾಧ್ಯ. ಆದರೆ ಯಾವ ಪೂರ್ವಪಕ್ಷಿಯು ವೇದದಲ್ಲಿರುವ ಎಲ್ಲಾ ಪ್ರಾಣಶಬ್ದಗಳಿಗೆ ವಿಷ್ಣುಪರತ್ವವನ್ನು ಅಂಗೀಕರಿಸದೆ ಕೇವಲ ಇಂದ್ರಾದಿ ವಾಚಕತ್ವವನ್ನು ಆಕ್ಷೇಪಿಸುತ್ತಿದ್ದಾನೋ ಅಂತಹ ಪೂರ್ವಪಕ್ಷಿಯು ವಿಷ್ಣುವಿನಲ್ಲಿ ವಿದ್ವದ್ರೂಢಿಯನ್ನೂ ಸಹ ಒಪ್ಪಲಾರ. ವಿದ್ವದ್ರೂಢಿಯನ್ನು ಒಪ್ಪಿದರೆ ಮಾತ್ರ ಮಹಾಯೋಗವನ್ನು ವಿಷ್ಣುವಿನಲ್ಲಿ ಹೇಳಬಹುದು. ಆದ್ದರಿಂದ ಶ್ರೀಮದಾಚಾರ್ಯರ ಆಕ್ಷೇಪದ ಪೂರ್ವಪಕ್ಷದ ಫಲಕಥನ ಮಾತಿನಲ್ಲಿ ಯಾವುದೇ ದೋಷವಿಲ್ಲ.

ಈ ಅಧಿಕರಣದಲ್ಲಿ ಪ್ರಾಣಶಬ್ದವು ಇಂದ್ರನಲ್ಲಿ ಮುಖ್ಯವಾಗಿದೆ. ಹಿಂದಿನ ಅಧಿಕರಣದಲ್ಲಿ ವಿಷ್ಣುವಿನಲ್ಲಿ ಗೌಣವಾಗಿದೆ ಎಂದು ಹೇಳಬಹುದಲ್ಲವೇ? ಎಂಬ ಶಂಕೆಗೂ ಈಗ ಅವಕಾಶವಿಲ್ಲ. ಸಿದ್ಧಾಂತಿಯಾದವನಿಗೆ ಇದು ಅಭಿಮತವೇ ಆಗಿಲ್ಲ. ಆದರಂತೆ ಇಂದ್ರ ಹಾಗೂ ವಿಷ್ಣು ಇಬ್ಬರಲ್ಲಿಯೂ ಮುಖ್ಯಾರ್ಥವನ್ನು ಹೇಳೋಣವೇ? ಎಂಬ ಶಂಕೆಯನ್ನು ಈಗ ನಿರಾಕರಿಸಿದಂತಾಯಿತು.

ಬೇರೆ ಮಾರ್ಗವಿಲ್ಲದಾಗ ಮಾತ್ರ ಒಂದೇ ಶಬ್ದಕ್ಕೆ ಅನೇಕಾರ್ಥವನ್ನು ಹೇಳಬಹುದು. ಆದರೆ ಏನೂ ತೊಂದರೆಯಿಲ್ಲದಿದ್ದಾಗ ಎರಡರ್ಥ ಹೇಳುವುದು ತಪ್ಪಾಗುತ್ತದೆ. ಐತರೇಯದಲ್ಲಿ ಮುಖ್ಯವೃತ್ತಿಯಿಂದ ದೇವೇಂದ್ರನು ಪ್ರತಿಪಾದ್ಯನು. ತೈತ್ತಿರೀಯದಲ್ಲಿ ವಿಷ್ಣು ಗೌಣವೃತ್ತಿಯಿಂದ ಪ್ರತಿಪಾದ್ಯನು ಎಂಬ ಶಂಕೆಯೂ ಸಹ ತಪ್ಪು.

ಬಾಧಕವಿದ್ದಾಗ ಮಾತ್ರ ಮುಖ್ಯಾರ್ಥವನ್ನು ಬಿಟ್ಟು ಗೌಣವೃತ್ತಿಯನ್ನು ಆಶ್ರಯಿಸಬೇಕು. ಆದರೆ ಇಂದ್ರಶಬ್ದಕ್ಕೆ ವಿಷ್ಣುಪರತ್ವವನ್ನು ಒಪ್ಪಿದಾಗ ಯಾವುದೇ ಬಾಧಕಗಳಿರುವುದಿಲ್ಲ. ಆದ್ದರಿಂದ ಯಾವುದೇ ಪ್ರಕಾರದಿಂದಲೂ ಈ ಅಧಿಕರಣದ ಪೂರ್ವಪಕ್ಷದ ಫಲವನ್ನು ಹೇಳಿದ್ದು ಅಸಾಧುವೆಂದು ಶಂಕಿಸಲಾಗದು.

ಹಿಂದಿನ ಪ್ರಾಣಾಧಿಕರಣದಲ್ಲಿ ವಿಷ್ಣುವಿನಲ್ಲಿ ಅಸಾಧಾರಣವಾದ ಶ್ರೀಪತಿತ್ವ ಮೊದಲಾದ ಲಿಂಗಗಳಿಂದ ಪ್ರಾಣಶಬ್ದಕ್ಕೆ ವಿಷ್ಣುಪರತ್ವವನ್ನು ಸಮರ್ಥಿಸಿದ್ದಾಗಿದೆ. ಆದರ ಬಲದಿಂದಲೇ ಇಲ್ಲಿಯೂ ಸಹ ವಿಷ್ಣುಪರತ್ವವನ್ನು ಹೇಳಲು ಬರುವಾಗ ಪೂರ್ವಪಕ್ಷದ ಆಕ್ಷೇಪದ ಫಲವನ್ನು ಶ್ರೀಮದಾಚಾರ್ಯರು ಹೇಳಿದ್ದು ಹೇಗೆ ಸರಿ? ಎಂಬ ಅಂತಿಮವಾದ ವಿಕಲ್ಪಕ್ಕೂ ಈಗ ಅವಕಾಶವಿಲ್ಲ. ಏಕೆಂದರೆ ಈ ಅಧಿಕರಣದಲ್ಲಿ ಹೇಳುತ್ತಿರುವ ಲಿಂಗಗಳಲ್ಲಿ ಬಹುತ್ವ, ಶ್ರುತ್ಯನುಗೃಹೀತತ್ವ, ಸಾಕ್ಷಾದ್‌ಪ್ರಾಣವಿಶೇಷಣತ್ವ ಮೊದಲಾದ ಧರ್ಮಗಳಿವೆ, ಆದರೆ ಹಿಂದಿನ ಪ್ರಾಣಾಧಿಕರಣದಲ್ಲಿ ಹೇಳಲ್ಪಟ್ಟ ಶ್ರೀಪತಿತ್ವಾದಿ ಲಿಂಗಗಳಲ್ಲಿ ಈ ಯಾವಧರ್ಮಗಳೂ ಇರುವುದಿಲ್ಲ. ಆದ್ದರಿಂದ ಹಿಂದಿನ ಅಧಿಕರಣದ ಸಿದ್ಧಾಂತಯುಕ್ತಿಯಿಂದ ಈ ಅಧಿಕರಣದ ಪೂರ್ವಪಕ್ಷವು ಪರಿಹಾರವಾಗುವುದಿಲ್ಲ.

ಅಥವಾ ಅಲ್ಲಿಯೂ ಸಹ ಬ್ರಹ್ಮನ ಲಿಂಗಗಳಲ್ಲಿ ಬಹುತ್ವಾದಿಗಳು ಇವೆಯೆಂದು ವಿವಕ್ಷಿಸಿದರೂ ತಪ್ಪಲ್ಲ. ಈ ಅಧಿಕರಣದಲ್ಲಿ ಪ್ರಾಣಶಬ್ದವು ಇಂದ್ರಾದಿಪರವಾಗಿದೆ ಎಂದು ಪೂರ್ವಪಕ್ಷ ಮಾಡಿದಾಗ ಹಿಂದಿನ ಅಧಿಕರಣದ ಪ್ರಾಣನು ವಿಷ್ಣುವೋ ಅಥವಾ ಇಂದ್ರಾದಿಗಳೋ? ಎಂಬ ಸಂಶಯವಂತೂ ಬಂದೇ ಬರುತ್ತದೆ. ಆವಾಗ ವಿಷ್ಣುವೊಬ್ಬನೇ ಪ್ರಾಣಶಬ್ದವಾಚ್ಯನೆಂಬ ಅವಧಾರಣವೂ ಕೂಡುವುದಿಲ್ಲ. ಈ ಅವಧಾರಣವನ್ನು ಮಾತ್ರ ಶ್ರೀಮದಾಚಾರ್ಯರು ಇಲ್ಲಿ ಪೂರ್ವಪಕ್ಷಫಲವನ್ನಾಗಿ ಆಕ್ಷೇಪಿಸಿದ್ದಾರೆಂದು ಭಾವಿಸಬೇಕು.

ಹಿಂದಿನ ಪ್ರಾಣಾಧಿಕರಣದಲ್ಲಿ ಪ್ರಾಣಶಬ್ದದಿಂದ ವಿಷ್ಣು ವಾಚ್ಯನಾಗುತ್ತಾನೆಂಬ ಸಂಶಯ ಬರುವುದೇ ಈ ಅಧಿಕರಣದ ಪೂರ್ವಪಕ್ಷಫಲ. ಹಿಂದಿನ ಪ್ರಾಣಾಧಿಕರಣದಲ್ಲಿ ವಿಷ್ಣುವೇ ಪ್ರಾಣಶಬ್ದವಾಚ್ಯನೆಂಬ ನಿರ್ಣಯವೇ ಈ ಅಧಿಕರಣದ ಸಿದ್ಧಾಂತಫಲ.

ಈ ಎರಡೂ ಅಧಿಕರಣಗಳಲ್ಲಿ ವಿಷ್ಣುವೇ ಪ್ರಾಣಶಬ್ದವಾಚ್ಯನೆಂದು ನಿರ್ಣಯಿಸಲಾಗಿದೆ. ಎರಡೂ ಅಧಿಕರಣಗಳ ಸಿದ್ಧಾಂತನ್ಯಾಯವು ಒಂದೇ ಆಗಿರುವಾಗ ಬೇರೆ ಬೇರೆ ಅಧಿಕರಣವನ್ನಾಗಿ ಏಕೆ ಪರಿಗಣಿಸಿದ್ದಾರೆಂದು ಗೊಂದಲವಾಗುತ್ತದೆ. ಈ ಎರಡೂ ಅಧಿಕರಣಗಳ ಪರಮಸಿದ್ಧಾಂತಗಳು ಒಂದೇ ಆಗಿದ್ದರೂ ಅವಾಂತರನಿರ್ಣಯಗಳಲ್ಲಿ ವ್ಯತ್ಯಾಸವಿದೆ. ಹಿಂದಿನ ಪ್ರಾಣಾಧಿಕರಣದಲ್ಲಿ ಜೀವನಹೇತುತ್ವವನ್ನು ವಿಷ್ಣುವಿನಲ್ಲಿ ಸಮರ್ಥಿಸುವುದು ಅವಾಂತರಪ್ರಯೋಜನವಾಗಿತ್ತು. ಈ ಅಧಿಕರಣದಲ್ಲಿ ಪ್ರಸಿದ್ಧಲಿಂಗಗಳಿಗೆ ಅಂತರ್ಯಾಮಿಗತತ್ವವನ್ನು ಸಮರ್ಥಿಸುವುದು ಪ್ರಯೋಜನವಾಗಿದೆ. ಈ ಅವಾಂತರನಿರ್ಣಯಕ್ಕೋಸ್ಕರ ಅನೇಕ ಅಧಿಕರಣಗಳನ್ನು ಒಪ್ಪಬಹುದೆಂದು ಪ್ರಾಭಾಕರರು ಹಾಗೂ ಭಾಟ್ಟರು ತಮ್ಮ ಗ್ರಂಥಗಳಲ್ಲಿ ಸಮರ್ಥಿಸಿಕೊಂಡಿದ್ದಾರೆ. ಆದ್ದರಿಂದ ಪ್ರಕೃತ ಒಂದು ಪಾದದಲ್ಲಿ ಎರಡು ಪ್ರಾಣಾಧಿಕರಣಗಳನ್ನು ಹೇಳಿದ್ದು ತಪ್ಪಾಗುವುದಿಲ್ಲ.

ಈ ಅಧಿಕರಣದಲ್ಲಿ ಸಮನ್ವಯ ಮಾಡುತ್ತಿರುವ ಪ್ರಾಣಶಬ್ದವು ಉಭಯತ್ರಪ್ರಸಿದ್ಧವಾಗಬೇಕು, ಏಕೆಂದರೆ ಹಿಂದಿನ ಪ್ರಾಣಾಧಿಕರಣದಲ್ಲಿ ಕೆಲವು ವಾಕ್ಯಗಳಲ್ಲಿರುವ ಪ್ರಾಣಶಬ್ದಗಳನ್ನು ವಿಷ್ಣುವಿನಲ್ಲಿ ಸಮನ್ವಯ ಮಾಡಲಾಗಿದೆ. ಆದರೆ ಲೋಕಪ್ರಸಿದ್ಧಿಯು ಮುಖ್ಯವಾಯುವಿನಲ್ಲಿದೆ. ಹೀಗೆ ಪ್ರಾಣಶಬ್ದವು ಉಭಯತ್ರಪ್ರಸಿದ್ಧವಾಗುತ್ತದೆ. ಆದ್ದರಿಂದ ಈ ಅಧಿಕರಣವನ್ನು ಮೂರನೇ ಪಾದದಲ್ಲಿ ಸೇರಿಸಬೇಕಲ್ಲವೇ?

ಈ ಗೊಂದಲವನ್ನು ಪರಿಹಾರ ಮಾಡುವುದಕ್ಕಾಗಿಯೇ ಶ್ರೀಮದಾಚಾರ್ಯರು ಹಿಂದಿನ ಪ್ರಾಣಾಧಿಕರಣದ ಪ್ರಮೇಯವನ್ನು ಪೂರ್ವಪಕ್ಷಫಲವನ್ನಾಗಿ ಆಕ್ಷೇಪಿಸಿದ್ದಾರೆ. ಹಾಗೆ ಆಕ್ಷೇಪಿಸಿದ್ದರಿಂದ ಪ್ರಾಣಶಬ್ದಕ್ಕೆ ವಿಷ್ಣುಪರತ್ವವು ಇದುವರೆಗೂ ನಿರ್ಣಯವಾಗಿಲ್ಲವೆಂದಂತಾಯಿತು. ಹಾಗಾಗಿ ಈ ಅಧಿಕರಣದಲ್ಲಿ ಸಮನ್ವಯ ಮಾಡುತ್ತಿರುವ ಪ್ರಾಣಶಬ್ದವು ಲೋಕಪ್ರಸಿದ್ಧಿಯಂತೆ ಅನ್ಯತ್ರಪ್ರಸಿದ್ಧವಾಗುತ್ತದೆ ಹೊರತು ಉಭಯತ್ರಪ್ರಸಿದ್ಧವಾಗುವುದಿಲ್ಲ. ಮೂರನೇ ಪಾದದಲ್ಲಿ ಆಕಾಶಶಬ್ದವನ್ನು ಉಭಯತ್ರಪ್ರಸಿದ್ಧವೆಂದು ಪರಿಗಣಿಸಿದ್ದಾರೆ. ಏಕೆಂದರೆ ಆ ಅಧಿಕರಣದ ಟೀಕೆಯಲ್ಲಿ ಪ್ರಥಮಪಾದದಲ್ಲಿ ಉಕ್ತವಾದ ಆಕಾಶಶಬ್ದವನ್ನು ಆಕ್ಷೇಪಮಾಡಿಯೇ ಇಲ್ಲ. ಹೊರತಾಗಿ ದ್ಯುಭ್ವಾದ್ಯಧಿಕರಣದ ಪ್ರಮೇಯವನ್ನಷ್ಟೇ ಆಕ್ಷೇಪಿಸಿದ್ದಾರೆ. ಆದ್ದರಿಂದ ಆಕಾಶಶಬ್ದವು ಉಭಯತ್ರಪ್ರಸಿದ್ಧವಾಗಿದೆಯೆಂದು ನಿರ್ಣಯಿಸಿದ್ದಾರೆ. ಈ ವ್ಯತ್ಯಾಸವನ್ನು ಅವಶ್ಯ ಗಮನಿಸಬೇಕು.

''ಹಿಂದಿನ ಅಧಿಕರಣದ ಸಿದ್ಧಾಂತ ಪ್ರಮೇಯವನ್ನು ಆಕ್ಷೇಪ ಮಾಡಿದ್ದರೆ ಅನ್ಯತ್ರಪ್ರಸಿದ್ಧವಾಗುತ್ತದೆ. ಹಿಂದಿನ ಅಧಿಕರಣದ ಪ್ರಮೇಯವನ್ನು ಆಕ್ಷೇಪ ಮಾಡದಿದ್ದರೆ ಉಭಯತ್ರಪ್ರಸಿದ್ಧ ಎನಿಸುತ್ತದೆ'' ಎಂಬ ವ್ಯಾಪ್ತಿಯನ್ನು ಹೇಳಿದಂತಾಯಿತು.

ವಸ್ತುತಃ ಮೂರನೇ ಪಾದದಲ್ಲಿರುವ 'ಜ್ಯೋತಿರ್ದರ್ಶನಾತ್' ಎಂಬ ಸೂತ್ರದಲ್ಲಿ ಪ್ರಥಮಪಾದದಲ್ಲಿರುವ ಜ್ಯೋತಿರಧಿಕರಣದಲ್ಲಿರುವ ಪ್ರಮೇಯವನ್ನು ಆಕ್ಷೇಪಿಸಿಲ್ಲ. ಆದ್ದರಿಂದ ಅನ್ಯತ್ರಪ್ರಸಿದ್ಧವಾಗಬೇಕೆಂಬ ಸಂಶಯವು

ಬರುತ್ತದೆ. ಆದರೆ ಜ್ಯೋತಿಶಬ್ದದಿಂದ ಅಗ್ನಿ ಎಂಬ ಪೂರ್ವಪಕ್ಷವನ್ನು ಮೂರನೇ ಪಾದದಲ್ಲಿ ಮಾಡಿಯೇ ಇಲ್ಲ. ಪ್ರಥಮಪಾದದಲ್ಲಿ ಅಗ್ನಿ ಎಂದು ಪೂರ್ವಪಕ್ಷ ಮಾಡಲಾಗಿದೆ. ಆದ್ದರಿಂದ ಎರಡೂ ಅಧಿಕರಣಗಳಲ್ಲಿ ಜ್ಯೋತಿಶಬ್ದವು ಸಮಾನವಾಗಿದ್ದರೂ ಬೇರೆ ಬೇರೆ ಅರ್ಥಗಳಲ್ಲಿ ಜ್ಯೋತಿಶಬ್ದವು ಪ್ರಯುಕ್ತವಾಗಿದೆ. ಪ್ರಥಮ ಪಾದದಲ್ಲಿ ಅಗ್ನಿಯೆಂದು ಪೂರ್ವಪಕ್ಷ ಮಾಡಿದರೆ, ತೃತೀಯಪಾದದಲ್ಲಿ ಜೀವನೆಂದು ಪೂರ್ವಪಕ್ಷ ಮಾಡಲಾಗಿದೆ. ಆದ್ದರಿಂದ ಹಿಂದಿನ ಅಧಿಕರಣದ ಪ್ರಮೇಯವನ್ನು ಹೇಗೆ ತಾನೇ ಆಕ್ಷೇಪಿಸಲು ಸಾಧ್ಯವಾಗುತ್ತದೆ.

ಹಾಗಾದರೆ ನಾಲ್ಕನೇ ಪಾದದಲ್ಲಿ ಆಕಾಶ ಹಾಗೂ ಜ್ಯೋತಿಶಬ್ದದ ಸಮನ್ವಯವನ್ನು ಮಾಡಿದ್ದಾರೆ. ಆದರೆ ಹಿಂದಿನ ಅಧಿಕರಣದ ಪ್ರಮೇಯವನ್ನು ಅಲ್ಲಿಯೂ ಸಹ ಆಕ್ಷೇಪಿಸಿಲ್ಲ. ಆದ್ದರಿಂದ ಆ ಶಬ್ದಗಳು ಉಭಯತ್ರಪ್ರಸಿದ್ಧ-ವಾಗಬೇಕಲ್ಲವೆ? ಎಂದು ಪ್ರಶ್ನೆ ಬರುತ್ತದೆ. ಇದೂ ಸಹ ತಪ್ಪು. ಒಂದು ವೇಳೆ 'ಕಾರಣತ್ವೇನ' ಎಂಬ ಸೂತ್ರದಲ್ಲಿ 'ಜ್ಯೋತಿರುಪಕ್ರಮಾತ್' ಎಂಬ ಸೂತ್ರದಲ್ಲಿ ಕೇವಲ ಆಕಾಶ ಹಾಗೂ ಜ್ಯೋತಿಶಬ್ದಗಳ ಸಮನ್ವಯವು ವಿವಕ್ಷಿತ-ವಾಗಿದ್ದಲ್ಲಿ, ನಿಮ್ಮ ಆಕ್ಷೇಪವನ್ನು ಒಪ್ಪಬಹುದಿತ್ತು. ಆದರೆ ಯಾಗವಾಚಕವಾದ ಮತ್ತು ಕಾಲವಾಚಕವಾದ ಅನೇಕ ಶಬ್ದಗಳ ಸಮನ್ವಯಗಳನ್ನು ಆ ಅಧಿಕರಣಗಳಲ್ಲಿ ಮಾಡುತ್ತಿದ್ದಾರೆ. ಕೇವಲ ಲೋಕಪ್ರಸಿದ್ಧಿ ಹಾಗೂ ಪೂರ್ವೋಕ್ತಿಗಳು ಇದ್ದರೆ ಮಾತ್ರ ಉಭಯತ್ರಪ್ರಸಿದ್ಧವೆನ್ನಬೇಕು.

ಅಥವಾ ಲೋಕದಿಂದ ಅನ್ಯತ್ರಪ್ರಸಿದ್ಧವಾಗಿದ್ದರೆ ಮಾತ್ರ ಅನ್ಯತ್ರಪ್ರಸಿದ್ಧ ಎನಿಸುತ್ತದೆ. ಮೂರನೇ ಪಾದದಲ್ಲಿರುವ ಆಕಾಶಶಬ್ದವು ಏಕೆ ಉಭಯತ್ರಪ್ರಸಿದ್ಧವೆಂದರೆ, 'ವೈ ನಾಮ' ಎಂಬ ಶ್ರುತಿಯಲ್ಲಿರುವ ನಿಪಾತದಿಂದ ಪ್ರಸಿದ್ಧಾಕಾಶ ಎಂಬರ್ಥವು ತಿಳಿಯುತ್ತದೆ. ಇದರಿಂದ 'ಅಪ್ರಸಿದ್ಧಾಕಾಶಾ' ಎಂಬ ಮತ್ತೊಂದು ಪದಾರ್ಥವನ್ನು ಪೂರ್ವಪಕ್ಷಿಯು ಒಪ್ಪಿದ್ದಾನೆಂದು ಸಿದ್ಧವಾಗುತ್ತದೆ. ಈ ಕಾರಣದಿಂದಷ್ಟೇ 'ಆಕಾಶ' ಶಬ್ದವು ಉಭಯತ್ರಪ್ರಸಿದ್ಧವಾಗಿದೆ.

ಸಿದ್ಧಾಂತ ಸ್ಥಾಪನೆ ಹೀಗಿದೆ - ಪೂರ್ವಪಕ್ಷದಲ್ಲಿ ಎಷ್ಟು ನಿರವಕಾಶಯುಕ್ತಿಗಳನ್ನು ಹೇಳಿದರೋ ಅದಕ್ಕಿಂತಲೂ ನಿರವಕಾಶವಾದ ಅನೇಕ ಲಿಂಗಗಳು ವಿಷ್ಣುವಿನಲ್ಲೇ ಶ್ರುತವಾಗಿವೆ. ಐತರೇಯದ ಪ್ರಾರಂಭದಿಂದಲೂ ವಿಷ್ಣುವಿನ ಅನೇಕ ಅಸಾಧಾರಣ ಲಿಂಗಗಳೇ ಕೇಳಿಸುತ್ತಿವೆ - ದೇವೋಪಾಸ್ಯತ್ವ, ಸೂರ್ಯಮಂಡಲಸ್ಥತ್ವ, ಸರ್ವಂತ-ರ್ಯಾಮಿತ್ವ, ಸರ್ವವ್ಯಾಪಿತ್ವ. ಈ ಲಿಂಗಗಳೆಲ್ಲವೂ ಶ್ರುತಿಸ್ಮೃತಿಗಳ ಆಧಾರದಿಂದ ವಿಷ್ಣುವಿನಲ್ಲಿಯೇ ಇದೆಯೆಂದು ನಿರ್ಣಯವಾಗಿದೆ.

ಪರಕೀಯರು ಉದಾಹರಿಸಿದ ಶ್ರುತಿವಾಕ್ಯವು ಸಾವಕಾಶವಾಗಿದೆ. ''ಪ್ರಾಣೋವಾ ಅಹಂ'' ಎಂಬಲ್ಲಿರುವ 'ಅಹಂ' ಶಬ್ದವು ಅಂತರ್ಯಾಮಿಯಾದ ವಿಷ್ಣುವನ್ನೇ ಹೇಳುತ್ತದೆ. ಸಕಲ ಪದಾರ್ಥಗಳ ಅಂತರ್ಯಾಮಿಯಾದ್ದರಿಂದ ಒಬ್ಬನೇ ವಿಷ್ಣುವು 'ಏಷೋಽಹಂ ತ್ವಂ ಅಸೌ' ಇತ್ಯಾದಿ ಸರ್ವನಾಮಶಬ್ದಗಳಿಂದ ಪ್ರತಿಪಾದ್ಯನಾಗಿದ್ದಾನೆ. 'ಅಹಂ ಮನುಃ' ಎನ್ನುವ ದೃಷ್ಟಾಂತದಲ್ಲಿಯೂ ಐಕ್ಯವನ್ನು ಹೇಳಲಾಗದು. ವಿಶಿಷ್ಟನಾದ ವಾಮದೇವನಿಗೆ ವಿಶಿಷ್ಟನಾದ ಮನ್ವಾದಿಗಳಿಂದ ಐಕ್ಯವು ಕೂಡುವುದಿಲ್ಲ. ದಾರ್ಷ್ಟಾಂತಿಕದಲ್ಲಿಯೂ ಸಹ ಚಿನ್ಮಾತ್ರದಲ್ಲಿ ಲಕ್ಷಣಾ ಮಾಡಿದರೆ ಪ್ರಾಣನು ಬ್ರಹ್ಮನಲ್ಲವೆಂಬ ಪೂರ್ವಪಕ್ಷವೇ ಕೂಡುವುದಿಲ್ಲ. ಮತ್ತು ಭೂಮಿಪ್ರಧಾನಾದಿಧರ್ಮಗಳೂ ಸಹ ಚಿನ್ಮಾತ್ರನಲ್ಲಿ ಕೂಡುವುದಿಲ್ಲ. ಆದ್ದರಿಂದ ಇಂದ್ರಶಬ್ದಕ್ಕೆ ದೇವೇಂದ್ರನೆಂದೇ ಅರ್ಥವನ್ನಿಟ್ಟುಕೊಂಡು 'ಅಹಂ' ಶಬ್ದಕ್ಕೆ 'ಅಂತರ್ಯಾಮಿ' ಎಂಬರ್ಥವನ್ನು ಹೇಳಬೇಕು.

ಲೋಕದಲ್ಲಿ 'ನಾನು' ಎಂಬರ್ಥದಲ್ಲಿ 'ಅಹಂ' ಶಬ್ದವನ್ನು ಪ್ರಯೋಗಿಸುತ್ತೇವೆ. ಆದರೆ ನಿಜವಾಗಿಯೂ 'ಅಹಂ' ಶಬ್ದದ ಯೋಗ ಮತ್ತು ರೂಢಿಗಳು ವಿಷ್ಣುವಿನಲ್ಲಿಯೇ ಇರುತ್ತವೆ. 'ಅ ಇತಿ ಬ್ರಹ್ಮ' ಇತ್ಯಾದಿ ಶ್ರುತಿಗಳಲ್ಲಿ 'ಅಹಂ' ಶಬ್ದದ ರೂಢಿ ವಿಷ್ಣುವಿನಲ್ಲಿ ಪ್ರಸಿದ್ಧವಾಗಿವೆ. ಮತ್ತು 'ಅಹೇಯತ್ವಾದಹಂ ನಾಮಾ' ಇತ್ಯಾದಿ ಶ್ರುತಿಗಳಂತೆ

ಭಗವಂತನು ಅಹೇಯನಾದ್ದರಿಂದ 'ಅಹಂ' ಶಬ್ದದಿಂದ ವಾಚ್ಯನಾಗಿದ್ದಾನೆ. ಆದರೆ 'ಪ್ರಾಣೋವಾ ಅಹಂ ಅಸ್ಮಿ' ಎಂಬಲ್ಲಿ 'ಅಹಂ' ಪದದಿಂದ ವಿಷ್ಣುವನ್ನು ನೇರವಾಗಿ ವಿವಕ್ಷಿಸಿಲ್ಲ. 'ಅಂತರ್ಯಾಮಿ' ರೂಪವನ್ನು ವಿವಕ್ಷಿಸಲಾಗಿದೆ. 'ಅಸ್ಮಿ' ಎಂಬ ಉತ್ತಮಪುರುಷಪದಪ್ರಯೋಗವೇ ಈ ಅರ್ಥವನ್ನು ಸ್ವೀಕರಿಸಲು ಕಾರಣ.

ಜೀವಪ್ರಾಪಕವಾದ ಲಿಂಗಗಳೂ ಸಹ ಸಾವಕಾಶವಾಗಿವೆ. ಏಕೆಂದರೆ ಜೀವನ ಶರೀರದಲ್ಲಿ ನೂರು ವರ್ಷಗಳ ಕಾಲ ಪ್ರಾಣನು ಇರುತ್ತಾನೆಂಬುದು ಜೀವನ ಲಿಂಗವಲ್ಲ; ಹೊರತು ಅದಕ್ಕೂ ಕಾರಣವಾದ ಶತಾಯುಷ್ಟ್ವ ಎಂಬುದು ಜೀವನ ಲಿಂಗವಾಗಿದೆ. ಆದರೆ ಈ ಲಿಂಗವು ಮುಖ್ಯಪ್ರಾಣನಲ್ಲಿ ಕೇಳಿಸುತ್ತಿಲ್ಲ. ಆದ್ದರಿಂದ ಇಂದ್ರಪ್ರಾಪಕವಾದ ಲಿಂಗಗಳು, ಮುಖ್ಯವಾಯುಪ್ರಾಪಕವಾದ ಲಿಂಗಗಳು, ಜೀವಪ್ರಾಪಕವಾದ ಲಿಂಗಗಳೆಲ್ಲವೂ ಸಾವಕಾಶಗಳೇ ಆಗಿವೆ. ಆದರೆ ವಿಷ್ಣುವಿನ ಲಿಂಗಗಳೆಲ್ಲವೂ ನಿರವಕಾಶಗಳಾದ್ದರಿಂದ ಭಗವಂತನೇ ಏತರೇಯದಲ್ಲಿರುವ ಪ್ರಾಣಶಬ್ದದಿಂದ ವಾಚ್ಯನಾಗಿದ್ದಾನೆ. ಇಲ್ಲಿಗೆ ನಮ್ಮ ಪ್ರಕಾರ ಸಿದ್ಧಾಂತ ಸ್ಥಾಪನೆಯು ಮುಕ್ತಾಯವಾಯಿತು.

ಸೂತ್ರಗಳ ವಿನ್ಯಾಸ ಕ್ರಮ ಹೀಗಿದೆ - ಪ್ರಥಮಸೂತ್ರದಲ್ಲಿ ಪ್ರಾಣಶಬ್ದವು ವಿಷ್ಣುವನ್ನೇ ಪ್ರತಿಪಾದಿಸುತ್ತವೆ ಎನ್ನಲು ಸ್ವಪಕ್ಷಸಾಧಕಯುಕ್ತಿಗಳನ್ನು ಹೇಳಿದ್ದಾರೆ. ಎರಡನೆಯ ಸೂತ್ರದಲ್ಲಿ 'ಪ್ರಾಣೋವಾ ಅಹಂ' ಎಂಬಲ್ಲಿ 'ಅಹಂ' ಶಬ್ದವನ್ನು ಏಕೆ ಪ್ರಯೋಗಿಸಿದರು? ಎಂಬ ಬಾಧಕವನ್ನು ಪರಿಹರಿಸಿದ್ದಾರೆ. ಹಾಗಾದರೆ 'ಮಯಿ ಪ್ರಾಣಃ' ಎಂದು ಹೇಳಬೇಕಿತ್ತಲ್ಲವೇ? 'ಅಹಂ ಪ್ರಾಣ' ಎಂದು ಹೇಗೆ ಹೇಳಿದರು? ಎಂಬ ಪ್ರಶ್ನೆಗೆ ಅಂತರ್ಯಾಮಿಯನ್ನು ವಿವಕ್ಷಿಸಿ 'ಅಹಂ' ಎಂಬ ಪ್ರಯೋಗವು ಸಾಧುವಾಗಿದೆ ಎಂದು ಮೂರನೆ ಸೂತ್ರದಲ್ಲಿ ಸಮರ್ಥಿಸಿದ್ದಾರೆ. ಹಾಗಾದರೆ ನೇರವಾಗಿ ಪರಮಾತ್ಮನನ್ನೇ ಹೇಳದೆ ಅಂತರ್ಯಾಮಿರೂಪದಿಂದ ಪರಮಾತ್ಮನನ್ನು ಏಕೆ ಹೇಳಿದಿರಿ? ಎಂಬ ಪ್ರಶ್ನೆಗೆ ನಾಲ್ಕನೇ ಸೂತ್ರವು ಉತ್ತರಿಸಿದೆ. ಹೀಗೆ ಸೂತ್ರಗಳ ವಿನ್ಯಾಸಕ್ರಮ ಅತ್ಯಂತ ಅರ್ಥಪೂರ್ಣವಾಗಿದೆ.

ಆದ್ವೈತಿಗಳೂ ಸಹ ನಮ್ಮಂತೆ ಪ್ರಾಣಶಬ್ದ ಸಮನ್ವಯಕ್ಕೋಸ್ಕರವೇ ಈ ಅಧಿಕರಣವು ಹೊರಟಿದೆ ಎಂದು ಹೇಳುತ್ತಾರೆ. ಆದರೆ ನಮ್ಮಂತೆ ಅವರು 'ಮನೋವಾಕ್‌ಪ್ರಾಣಃ' ಇತ್ಯಾದಿ ಏತರೇಯ ಶ್ರುತಿಯಲ್ಲಿರುವ ಪ್ರಾಣಶಬ್ದದ ಸಮನ್ವಯವನ್ನು ಹೇಳಲಾರರು. ಹೊರತಾಗಿ ಕೌಶೀತಕೀ ಬ್ರಾಹ್ಮಣೋಪನಿಷತ್ತಿನಲ್ಲಿರುವ 'ಪ್ರಾಣೋಽಸ್ಮಿ ಪ್ರಜ್ಞಾತ್ಮಾ' ಎಂಬಲ್ಲಿರುವ ಪ್ರಾಣಶಬ್ದದ ಸಮನ್ವಯವನ್ನು ಹೇಳಲು ಹೊರಟಿದ್ದಾರೆ.

ಪೂರ್ವಪಕ್ಷ - ಇಂದ್ರ ಹಾಗೂ ಪ್ರತರ್ದನ ರಾಜನಿಗೆ ನಡೆಯುವ ಸಂವಾದ ಮಧ್ಯದಲ್ಲಿ ಈ ವಿಷಯವಾಕ್ಯವು ಪ್ರಸಕ್ತವಾಗುತ್ತದೆ. ಪ್ರತರ್ದನರಾಜನನ್ನು ಕುರಿತು ಇಂದ್ರನು 'ಪ್ರಾಣೋಽಸ್ಮಿ ಪ್ರಜ್ಞಾತ್ಮಾ,' 'ಮಾಮೇವ ವಿಜಾನೀಹಿ' ಎಂದು ಉಪದೇಶಿಸುತ್ತಾನೆ. ಈ ವಾಕ್ಯವನ್ನು ನೋಡಿದಾಗ ತನ್ನನ್ನೇ ಪ್ರಾಣನೆಂದು ದೇವೇಂದ್ರನು ಹೇಳಿಕೊಂಡಿದ್ದರಿಂದ ದೇವೇಂದ್ರನೇ ಪ್ರಾಣಶಬ್ದವಾಚ್ಯನೆಂದು ತಿಳಿಯುತ್ತದೆ. ಅಥವಾ ಪ್ರಾಣಶಬ್ದವಿರುವ ಆ ಪ್ರಕರಣದಲ್ಲಿ ಮತ್ತೊಂದು ವಾಕ್ಯವಿದೆ. ''ಅಥ ಪ್ರಾಣ ಏವ ಪ್ರಜ್ಞಾತ್ಮಾ ಇದಂ ಶರೀರಂ ಪರಿಗೃಹ್ಯೋತ್ಥಾಪಯತಿ'' ಎಂದು ಶರೀರಧಾರಣೆಗೆ ಕಾರಣನಾದ, ವಾಯುವಿನ ಬಗ್ಗೆ ಹೇಳಲಾಗಿದೆ. ಆದ್ದರಿಂದ ವಾಯುವೇ ಪ್ರಾಣಶಬ್ದವಾಚ್ಯನಾಗಬಹುದು. ಅಥವಾ 'ವಕ್ತಾರಂ ವಿದ್ಯಾತ್' ಎಂಬ ವಾಕ್ಯ ಹೇಳುವಂತೆ ವಕ್ಕೃತ್ವ ಧರ್ಮವಿರುವ ಜೀವನೂ ಸಹ ಪ್ರಾಣಶಬ್ದವಾಚ್ಯನಾಗಬಹುದು. ಏನೇ ಆದರೂ ಬ್ರಹ್ಮನು ಪ್ರಾಣಶಬ್ದವಾಚ್ಯನೆಂದು ಸಮರ್ಥಿಸುವುದು ಕಷ್ಟ.

ಸಿದ್ಧಾಂತ - ಪ್ರಾಣಶಬ್ದವಾಚ್ಯನಾದವನು ಬ್ರಹ್ಮನೇ ಆಗಿದ್ದಾನೆ. ಏಕೆಂದರೆ ಇಂದ್ರ ಪ್ರತರ್ದನರ ಸಂವಾದವು ಪ್ರಾರಂಭವಾಗುವಾಗ ಪ್ರತರ್ದನನು ಇಂದ್ರನನ್ನು ಕುರಿತು 'ಯಂ ತ್ವಂ ಮನುಷ್ಯಾಯ ಹಿತತಮಂ ಮನ್ಯಸೇ' ಎಂದು ಮನುಷ್ಯರಿಗೆ ಹಿತವಾದದ್ದನ್ನೇ ಹೇಳು ಎಂದು ಪ್ರಾರ್ಥಿಸಿದ್ದಾರೆ. ಮನುಷ್ಯರಿಗೆ ಹಿತವಾದದ್ದು ಬ್ರಹ್ಮಜ್ಞಾನವೇ ಹೊರತು ದೇವೇಂದ್ರನ ಜ್ಞಾನವಲ್ಲ. ಆದ್ದರಿಂದ ದೇವೇಂದ್ರನು ಬ್ರಹ್ಮನನ್ನು ಉಪದೇಶಿಸಬೇಕು ಹೊರತು, ತನ್ನ ಬಗ್ಗೆ ಅಲ್ಲ

ಮತ್ತು ಪ್ರಕರಣದ ಕೊನೆಯಲ್ಲೂ 'ಆನಂದೋಽಜರಃ' ಇತ್ಯಾದಿಯಾಗಿ ಬ್ರಹ್ಮನ ಲಿಂಗಗಳೇ ಬಹಳಷ್ಟು ಕೇಳಿಸುತ್ತಿವೆ. ಹೀಗೆ ಉಪಕ್ರಮೋಪಸಂಹಾರಗಳ ಬಲದಿಂದ ಸಂಪೂರ್ಣ ಪ್ರಕರಣವು ಬ್ರಹ್ಮಪರವೆಂದು ಸ್ಪಷ್ಟವಾಗುತ್ತದೆ. ಆದ್ದರಿಂದ ಪ್ರಾಣಶಬ್ದವಾಚ್ಯನಾದವನು ಪರಬ್ರಹ್ಮನೇ ಆಗಿದ್ದಾನೆ. ಭಾಮತಿಯಲ್ಲಿ ಶಂಕರಭಾಷ್ಯದಲ್ಲಿರುವ ಪೂರ್ವಪಕ್ಷವನ್ನೇ ಆಕ್ಷೇಪಿಸಿ ಸಿದ್ಧಾಂತವನ್ನು ಸಮರ್ಥಿಸಲಾಗಿದೆ.

ಹೀಗೆ ಶಂಕರಭಾಷ್ಯದಲ್ಲಿ ಈ ಅಧಿಕರಣವನ್ನು ನಿರೂಪಿಸಿದ್ದಾರೆ. ಆದರೆ ಈ ಅಧಿಕರಣಕ್ಕೆ ನಾವು 'ಅಂತಿಮಪ್ರಾಣಾಧಿಕರಣ' ಎಂಬ ಹೆಸರನ್ನು ಇಟ್ಟರೆ, ಆದ್ವೈತಿಗಳು 'ಪ್ರತರ್ದನಾಧಿಕರಣ'ವೆಂಬ ಹೆಸರನ್ನಿಟ್ಟದ್ದು ಗಮನಿಸಬೇಕಾದ ಅಂಶ.

ಆದ್ವೈತಿಗಳು ರಚಿಸಿದ ಅಧಿಕರಣಶರೀರವು ಸಮಂಜಸವಲ್ಲ. ಏಕೆಂದರೆ ಇಂದ್ರ ಪ್ರತರ್ದನರ ಸಂವಾದ ಪ್ರಕರಣದಲ್ಲಿ ಪ್ರಾಪ್ತವಾದ ಯಾವುದೇ ಧರ್ಮಗಳು ನಿರ್ವಿಶೇಷ ಬ್ರಹ್ಮನಲ್ಲಿ ಇರುವುದಿಲ್ಲ.

ಶ್ರುತಿಯು ಬ್ರಹ್ಮನನ್ನು ಹಿತತಮ ಎಂದು ಹೇಳಿದೆ. ಇದರರ್ಥ ಏನು? ಪರಮಪುರುಷಾರ್ಥವೆನಿಸಿದ ಮೋಕ್ಷವನ್ನು ನೀಡುತ್ತಾನಾದ್ದರಿಂದ ಬ್ರಹ್ಮನನ್ನು ಹಿತತಮನೆನ್ನಬೇಕು. ಆದರೆ ಜ್ಞಾನದಿಂದಲೇ ಅಜ್ಞಾನನಿವೃತ್ತಿ ಎಂಬ ಮೋಕ್ಷವು ಸಾಧ್ಯವೆಂದು ಆದ್ವೈತಿಗಳು ಒಪ್ಪಿದ್ದಾರೆ. ಈಗ ಬ್ರಹ್ಮನನ್ನು ಅಜ್ಞಾನಿವರ್ತಕನೆಂದು ಹೇಳಿದರೆ ಅಪಸಿದ್ಧಾಂತ ಬರುತ್ತದೆ.

ಇನ್ನು ಪರಮಪುರುಷಾರ್ಥಸ್ವರೂಪನಾದ್ದರಿಂದ ಬ್ರಹ್ಮನನ್ನು ಹಿತತಮನೆನ್ನಬೇಕು. ಈ ಪರಮಪುರುಷಾರ್ಥ-ಸ್ವರೂಪನು ಶುದ್ಧಬ್ರಹ್ಮನೇ ಆಗಬೇಕು ಹೊರತು ವಿಶಿಷ್ಟಬ್ರಹ್ಮನಾಗುವುದಿಲ್ಲ. ಹೀಗೆ ಶುದ್ಧಬ್ರಹ್ಮನು ಹಿತತಮನಾಗುವುದಾದರೆ ವಿಶಿಷ್ಟಬ್ರಹ್ಮನನ್ನು ಕುರಿತು ಹಿತತಮನೆಂದು ಹೇಳಲಾಗದು. ಏಕೆಂದರೆ ಮೋಕ್ಷಾವಸ್ಥೆಯಲ್ಲಿ ವಿಶಿಷ್ಟಬ್ರಹ್ಮನೇ ಇರಲಾರ. ತನಗೆ ತಾನೇ ಹಿತತಮನೆಂದು ಹೇಳಬೇಕು. ಆವಾಗ ಅಖಂಡಸ್ವರೂಪನಾದ ಶುದ್ಧಬ್ರಹ್ಮನಲ್ಲಿ ''ಹಿತ, ಹಿತತಮ'' ಎಂಬ ವಿಭಾಗವನ್ನು ಮಾಡಿದಂತಾಗುತ್ತದೆ. ಇದರಿಂದ ಆದ್ವೈತ ಹಾನಿಯಾಗುತ್ತದೆ. ಮತ್ತು ಶುದ್ಧಬ್ರಹ್ಮ-ನಲ್ಲಿ ಹಿತತಮತ್ವವೆಂಬ ವಿಶೇಷಧರ್ಮವನ್ನು ಒಪ್ಪಬೇಕಾದರೆ, ಮೊದಲು ಹಿತತ್ವವೆಂಬ ಸಾಮಾನ್ಯಧರ್ಮವನ್ನು ಒಪ್ಪಿರಬೇಕು. ಇದರಿಂದಲೂ ಆದ್ವೈತ ಹಾನಿಯಾಗುತ್ತದೆ. ಈ ಎಲ್ಲಾ ಕಾರಣಗಳಿಂದ ಹಿತತಮತ್ವವನ್ನಂತು ಬ್ರಹ್ಮನ ಲಿಂಗವೆಂದು ಹೇಳಲಾಗದು. ಹೀಗಿರುವಾಗ ಸಂಪೂರ್ಣ ಪ್ರಕರಣವನ್ನು ಬ್ರಹ್ಮಪರವೆಂದು ಸಮರ್ಥಿಸಲು ಹೇಗೆ ಸಾಧ್ಯ ?

ಎಷ್ಟೇ ಪ್ರಯತ್ನಪಟ್ಟರೂ ಹಿತತಮತ್ವವನ್ನು ಬ್ರಹ್ಮನ ಲಿಂಗವೆಂದು ಸಮರ್ಥಿಸಲು ಆದ್ವೈತಿಗಳು ಎಡವಿ ಬಿದ್ದರು. ಅಮೃತನೆಂಬ ಉಪಾಸನೆಗೆ ಬ್ರಹ್ಮನು ವಿಷಯನಾಗಿದ್ದಾನಾದ್ದರಿಂದ, ಅಮೃತತ್ವಪ್ರಕಾರಕ ಉಪಾಸನಾ-ಕರ್ಮತ್ವವನ್ನು ಬ್ರಹ್ಮನ ಲಿಂಗವೆಂದು ಹೇಳಲು ಪ್ರಯತ್ನಿಸುತ್ತಾರೆ. ಆದರೆ ಈ ಧರ್ಮವು ಇಂದ್ರಾದಿ ಇತರ ಯಾವುದೇ ದೇವತೆಗಳಲ್ಲಿಯೂ ಹೇಳಬಹುದು. ಏಕೆಂದರೆ ಅಮೃತರಾಗಿದ್ದರೆ ಮಾತ್ರ ಉಪಾಸನೆ ಮಾಡಬೇಕೆಂದೇನೂ ನಿಯಮವಿಲ್ಲ. ಉಪಾಸನೆಗೆ ಯಾವುದು ವಿಷಯವೋ ಅದು ಅಸತ್ಕಾಗಿರುತ್ತದೆಂದು ಆದ್ವೈತಿಗಳ ಸಿದ್ಧಾಂತ.

ಮತ್ತು ಬ್ರಹ್ಮನ ಜ್ಞಾನವನ್ನು ಹೊಂದುವುದರಿಂದ ಪುಣ್ಯಪಾಪಾದಿಕರ್ಮಗಳ ಲೇಪವು ಉಂಟಾಗದ ಕಾರಣ ''ಸರ್ವಕರ್ಮಾಲೇಪಹೇತುಜ್ಞಾನವಿಷಯತ್ವ'' ಎಂಬುದನ್ನು ಬ್ರಹ್ಮನ ಲಿಂಗವೆಂದು ಹೇಳಬಹುದು. ಆದರೆ ಶುದ್ಧ-ಬ್ರಹ್ಮನಲ್ಲಿ ಯಾವುದೇ ರೀತಿಯ ಕ್ರಿಯೆಯೇ ಇರಲಾರದ ಕಾರಣ ಈ ಧರ್ಮವು ಬರುವುದಿಲ್ಲ. ವಿಶಿಷ್ಟಬ್ರಹ್ಮನ ಜ್ಞಾನದಿಂದ ಪುಣ್ಯಪಾಪಾದಿಲೇಪಗಳು ಉಂಟಾಗುವುದಿಲ್ಲವೆಂದು ಆದ್ವೈತಿಗಳೇ ಒಪ್ಪಿಲ್ಲ. ಹೀಗೆ ಯಾವುದೇ ಧರ್ಮಗಳನ್ನು ಆದ್ವೈತಿಗಳು ಸಮರ್ಥಿಸಲು ಹೊರಟರೂ ಜಯಗಳಿಸಲು ಅವರಿಂದಾಗದು. ಏಕೆಂದರೆ

ಶುದ್ಧಬ್ರಹ್ಮನಲ್ಲಂತೂ ಯಾವುದೇ ಧರ್ಮಗಳಿರುವುದಿಲ್ಲ. ವಿಶಿಷ್ಟಬ್ರಹ್ಮನಲ್ಲಿ ಆ ಧರ್ಮವನ್ನು ಹೇಳುವುದರಿಂದ ಅವರ ಇಷ್ಟವೇ ಸಿದ್ಧವಾಗುವುದಿಲ್ಲ. ಆದ್ದರಿಂದ ಈ ಅಧಿಕರಣವು ಏಕೆ ಹೊರಟಿದೆ ! ಎಂಬುದೇ ಆದ್ವೈತಿಗಳಿಗೆ ಅರ್ಥವಾಗಿಲ್ಲ.

ಆಶ್ಚರ್ಯವೆಂದರೆ ಅಭೇದಸಮರ್ಥನೆಯನ್ನೇ ಗುರಿಯನ್ನಾಗಿಸಿಕೊಂಡ ಆದ್ವೈತಿಗಳು ಈ ಅಧಿಕರಣದಲ್ಲಿ ಸ್ಪಷ್ಟವಾಗಿ ಜೀವಬ್ರಹ್ಮರ ಭೇದವನ್ನೇ ಹೇಳಿಬಿಟ್ಟಿದ್ದಾರೆ.

ಆದ್ವೈತಿಗಳಂತೆ ರಾಮಾನುಜರೂ ಸಹ ಪ್ರತರ್ದನವಿದ್ಯೆಯಲ್ಲಿರುವ 'ಪ್ರಾಣೋಽಸ್ಮಿ ಪ್ರಜ್ಞಾತ್ಮಾ' ಎಂಬುದನ್ನೇ ವಿಷಯವಾಕ್ಯವನ್ನಾಗಿ ಹೇಳುತ್ತಾರೆ. ಆದರೆ ಆದ್ವೈತಿಗಳು ಜೀವ, ಇಂದ್ರ ಮತ್ತು ವಾಯು ಈ ಮೂವರು ಪ್ರಾಣಶಬ್ದವಾಚ್ಯರೆಂದು ಪೂರ್ವಪಕ್ಷ ಮಾಡಿದ್ದರೂ ಇವರು ಕೇವಲ ದೇವೇಂದ್ರನನ್ನೇ ಪ್ರಾಣಶಬ್ದವಾಚ್ಯನೆಂದು ಪೂರ್ವಪಕ್ಷ ಮಾಡುತ್ತಿದ್ದಾರೆ. ಈ ಪ್ರಕರಣದಲ್ಲಿರುವ ಜೀವಲಿಂಗ ಹಾಗೂ ಪ್ರಾಣಲಿಂಗಗಳನ್ನು ದೇವೇಂದ್ರನಲ್ಲಿಯೇ ಪರ್ಯವಸಾನಮಾಡಿ ಪೂರ್ವಪಕ್ಷವನ್ನು ದೃಢಗೊಳಿಸುತ್ತಾರೆ. ಮತ್ತು ಆದ್ವೈತಿಗಳು ಹೇಳುವಂತೆ 'ಆನಂದೋಽ-ಜರೋಽಮೃತಃ' ಎಂಬ ಅನೇಕ ಬ್ರಹ್ಮಲಿಂಗಗಳು ಕೇಳಿಸುತ್ತಿರುವುದರಿಂದ ಬ್ರಹ್ಮನೇ ಪ್ರಕರಣ ಪ್ರತಿಪಾದ್ಯನೆಂದು ಸಿದ್ಧಾಂತ ಮಾಡಿದ್ದಾರೆ.

ರಾಮಾನುಜ ಮತದಲ್ಲಿ ಪ್ರಾಣಶಬ್ದವಾಚ್ಯನಾದವನು ಇಂದ್ರನೇ ಆಗಿದ್ದಾನೆಂದು ಪೂರ್ವಪಕ್ಷ ಮಾಡಲಾಗಿದೆ. ಹಾಗಾದಲ್ಲಿ 'ಜೀವಮುಖ್ಯಪ್ರಾಣಲಿಂಗಾತ್' ಎಂಬ ಸೂತ್ರದಲ್ಲಿರುವ ಜೀವಪದಕ್ಕೆ ಅಸ್ವಾರಸ್ಯವನ್ನು ಹೇಳಿ-ದಂತಾಗುತ್ತದೆ. ಒಂದುವೇಳೆ ಇಂದ್ರನೆಂಬ ಜೀವ ವಿಶೇಷಪರತ್ವವನ್ನು ಅಂಗೀಕರಿಸಿದರೆ ''ನ ವಕ್ತುರಾತ್ಮೋ-ಪದೇಶಾತ್'' ಎಂಬ ಸೂತ್ರವೇ ವ್ಯರ್ಥವಾಗುತ್ತದೆ. ಏಕೆಂದರೆ ನಾನೇ ಪ್ರಾಣನೆಂಬ ಇಂದ್ರನ ವಾಕ್ಯವು ಜೀವಲಿಂಗ-ವಾಗಿದೆ. ಆದ್ದರಿಂದ 'ಜೀವಮುಖ್ಯಪ್ರಾಣಲಿಂಗಾತ್' ಎಂಬ ಸೂತ್ರದಿಂದಲೇ ಇದು ಸಂಗ್ರಹವಾಗುತ್ತದೆ. ಪುನಃ ''ಆತ್ಮೋಪದೇಶಾತ್'' ಎಂಬ ಸೂತ್ರದಿಂದ ಆಕ್ಷೇಪ ಹಾಗೂ ಸಮಾಧಾನಗಳು ಬೇಕಾಗಿರುವುದಿಲ್ಲ.

ಆದರೆ ನಮ್ಮ ಮತದಲ್ಲಿ ಈ ದೋಷವಿಲ್ಲ. ''ಶತಾಯುಷ್ಟ್ವ'' (ನೂರುವರ್ಷದ ಜೀವನ) ಎಂಬ ಲಿಂಗವು ಮರಣವಿಲ್ಲದ ಇಂದ್ರನಲ್ಲಿ ಸುತರಾಂ ಬರುವುದಿಲ್ಲ. ಆದ್ದರಿಂದ ಪ್ರತ್ಯೇಕ ಸೂತ್ರದ ಅನಿವಾರ್ಯತೆ ಇದೆ.

ಆದ್ವೈತಿಗಳ ಎರಡನೇ ಸೂತ್ರ ವ್ಯಾಖ್ಯಾನ - 'ಪ್ರಾಣೋಽಸ್ಮಿ ಪ್ರಜ್ಞಾತ್ಮಾ' ಎಂಬುದಾಗಿ ಇಂದ್ರನು ತನ್ನ ಉಪದೇಶ ಮಾಡುತ್ತಿರುವುದರಿಂದ ಪ್ರಾಣನು ಬ್ರಹ್ಮನಲ್ಲವೆಂದು ಪೂರ್ವಪಕ್ಷ.

ಇಂದ್ರ ಪ್ರತರ್ದನ ಸಂವಾದ ಪ್ರಕರಣದಲ್ಲಿ ಕೇಳಿಸುತ್ತಿರುವ ಧರ್ಮಗಳೆಲ್ಲವು ಶುದ್ಧಾತ್ಮನದ್ದೇ ಆಗಿವೆ. ಸಂಸಾರಿಯಾದ ಇಂದ್ರನಲ್ಲಿ ಆ ಧರ್ಮಗಳು ಅಸಂಭಾವಿತಗಳಾದ್ದರಿಂದ ಶುದ್ಧಾತ್ಮನೇ ಪ್ರಾಣಶಬ್ದವಾಚ್ಯನೆಂದು ಸಿದ್ಧಾಂತ.

ಆದ್ವೈತಿಗಳಿಗೆ ಎರಡನೆಯ ಸೂತ್ರದಲ್ಲಿ 'ವಕ್ತುಃ' ಎಂಬ ಪದದ ಸಾರ್ಥಕ್ಯವನ್ನು ಸಮರ್ಥಿಸಲಾಗದು. ಸೂತ್ರದಲ್ಲಿರುವ 'ಆತ್ಮೋಪದೇಶಾತ್' ಎಂಬ ಪದಕ್ಕೆ ವಕ್ತೃವು ಆತ್ಮನ ಬಗ್ಗೆ ಉಪದೇಶ ಮಾಡುತ್ತಿದ್ದಾನೆಂಬ ಅರ್ಥವು ಸುಲಭವಾಗಿ ತಿಳಿಯುತ್ತದೆ. ಪುನಃ ಪ್ರತ್ಯೇಕವಾಗಿ ವಕ್ತುಃ ಎಂದು ಹೇಳಬೇಕಾಗಿಲ್ಲ. 'ಆತ್ಮೋಪದೇಶ' ಪದಕ್ಕೆ ಸ್ವಾತ್ಮೋಪದೇಶ ಎಂಬರ್ಥವನ್ನು ಮಾಡಲು ವಕ್ತೃಪದವು ಬೇಕಾಗುತ್ತದೆಂದು ಆದ್ವೈತಿಗಳು ಹೇಳಿಕೊಳ್ಳಬಹುದು. ಆದರೆ ವಕ್ತೃ ಪದವಿಲ್ಲದಿದ್ದರೂ ಈ ಅರ್ಥ ತಿಳಿಯುವಾಗ 'ವಕ್ತೃ' ಪದವು ಏಕೆಂದು ಯಾರಿಗೂ ಮನವರಿಕೆ-ಯಾಗುವುದಿಲ್ಲ.

ನಮ್ಮಲ್ಲಿ ಈ ದೋಷವಿಲ್ಲ. 'ವಕ್ತುಃ' ಎಂಬ ಪದವೇ ಬೇರೆ ವ್ಯಕ್ತಿಯನ್ನು ಹೇಳುತ್ತಿದೆ. 'ಆತ್ಮೋಪದೇಶ' ಎಂಬ ಪದವೇ ಬೇರೆ ವ್ಯಕ್ತಿಯನ್ನು ಹೇಳುತ್ತಿದೆ. ಬ್ರಹತೀಸಹಸ್ರವನ್ನು ಪಠಿಸುವ ವಿಶ್ವಾಮಿತ್ರನಿಗೆ ಎಂಬರ್ಥವನ್ನು ಹೇಳಲು ವಕ್ಯಪದವು ಬೇಕಾಗುತ್ತದೆ. ಈ ಪದದ ಅಂತರಂಗದಲ್ಲಿ ಇಂದ್ರನು ವಿಶ್ವಾಮಿತ್ರನಿಗೆ ಸುಳ್ಳು ಹೇಳಲಾರ ಎಂಬ ಅರ್ಥವು ಗರ್ಭಿತವಾಗಿದೆ. ಆದ್ದರಿಂದ 'ವಕ್ತುಃ' ಎಂಬ ಪದವು ಅತ್ಯಂತ ಅನಿವಾರ್ಯ.

ಪರಮಾತ್ಮನಲ್ಲೇ ಅಸಾಧಾರಣವಾದ ಅನೇಕ ಧರ್ಮಗಳ ಸಂಬಂಧವನ್ನು ಈ ಪ್ರಕರಣವು ಹೇಳುತ್ತಿದೆ. ಆದ್ದರಿಂದ ಪ್ರಾಣನೇ ಬ್ರಹ್ಮನೆಂದು ರಾಮಾನುಜರು 'ನ ವಕ್ತುಃ' ಎಂಬ ಸೂತ್ರವನ್ನು ವ್ಯಾಖ್ಯಾನಿಸುತ್ತಾರೆ.

ಅದ್ವೈತಿಗಳಿಗೆ ಬಂದ ದೋಷವು ಇವರಿಗೂ ಬರುತ್ತದೆ. ಪೂರ್ವಪಕ್ಷ ಯುಕ್ತಿಯನ್ನು ಪರಿಹರಿಸದೆ ಸಿದ್ಧಾಂತಯುಕ್ತಿಯನ್ನೇ ನೇರವಾಗಿ ಹೇಳುವುದು ತಪ್ಪಲ್ಲವೇ? ಮತ್ತು ಸೂತ್ರದಲ್ಲಿ ಸಂಬಂಧಪದವಿಲ್ಲದೆ ಕೇವಲ 'ಅಧ್ಯಾತ್ಮ ಭೂಮಾ' ಎಂಬುದರಿಂದಲೇ ರಾಮಾನುಜರ ಅಭಿಪ್ರಾಯವು ಪೂರ್ಣವಾಗುವಾಗ ಸಂಬಂಧಪದವು ವ್ಯರ್ಥವಾಗಿದೆ. ಮತ್ತು ಸೂತ್ರದಲ್ಲಿ 'ಭೂಮಾ' ಎಂಬ ಪದವನ್ನು ಪ್ರಯೋಗಿಸಿದ್ದರಿಂದಲೇ ಪ್ರಥಮಸೂತ್ರದಲ್ಲಿ ಹೇಳಲ್ಪಟ್ಟ ಹಿತತಮತ್ವಾದಿ ಧರ್ಮಗಳನ್ನು ವಿವಕ್ಷಿಸಲು ಬರುವುದರಿಂದ ಕೇವಲ ಎರಡನೆಯ ಸೂತ್ರವು ಸಾಕಾಗುತ್ತದೆ.

ಅದ್ವೈತಿಗಳ ಮೂರನೇ ಸೂತ್ರ ವ್ಯಾಖ್ಯಾನ ಹೀಗಿದೆ - ಉಪದೇಶಃ = ಇಂದ್ರನು ಮಾಡಿದ ಮಾಮೇವ ವಿಜಾನೀಹಿ ಎಂಬ ಉಪದೇಶವು, ವಾಮದೇವವತ್ = ವಾಮದೇವಋಷಿಗಳು ತನ್ನನ್ನೇ ಮನು ಮತ್ತು ಸೂರ್ಯ ಎಂದು ಉಪದೇಶಿಸಿದಂತೆ, ಇಂದ್ರನು ತನ್ನಲ್ಲಿರುವ ಬ್ರಹತ್ವವನ್ನು ಶಾಸ್ತ್ರಾದ್ಯಪ್ಯಾ = ಶಾಸ್ತ್ರಾಧ್ಯಯನದಿಂದ ತಿಳಿದಿದ್ದಾನೆ. ಈ ರೀತಿಯಾದ ಸೂತ್ರವ್ಯಾಖ್ಯಾನದಿಂದ ಬ್ರಹ್ಮೈಕ್ಯವನ್ನು ತಿಳಿದು ಇಂದ್ರನು ನಾನೇ ಪ್ರಾಣಶಬ್ದ-ವಾಚ್ಯನೆಂದು ಹೇಳಿಕೊಂಡಿದ್ದಾನೆ.

ಅದ್ವೈತಿಗಳ ಈ ವ್ಯಾಖ್ಯಾನ ಸರಿಯಲ್ಲ. ಏಕೆಂದರೆ 'ಮಾಮೇವ ವಿಜಾನೀಹಿ' ಎಂಬಲ್ಲಿರುವ 'ಮಾಂ' ಎಂಬ ಪದವು ಅಂತಃಕರಣವಿಶಿಷ್ಟನಾದ ಆತ್ಮನನ್ನು ಹೇಳುತ್ತಿದೆ. ಈ ಆತ್ಮಕ್ಕೆ ಬ್ರಹ್ಮನ ಅಭೇದವೂ ಯುಕ್ತವಲ್ಲ. ಇನ್ನು ಚಿನ್ಮಾತ್ರದಲ್ಲಿ ಲಕ್ಷಣಾ ಮಾಡಿದರೂ ಸಹ ಜ್ಞಾನಕರ್ಮತ್ವವನ್ನು ಚಿನ್ಮಾತ್ರನಿಗೆ ಹೇಳಿದಂತಾಗುತ್ತದೆ. ಯಾವುದೇ ಧರ್ಮಗಳಿಲ್ಲದ ಸಕಲಕಾರಕಶಕ್ತಿಗಳಿಂದ ದೂರನಾದ ಚಿನ್ಮಾತ್ರದಲ್ಲಿ ಜ್ಞಾನಕರ್ಮತ್ವವನ್ನಾದರೂ ಹೇಗೆ ತಾನೇ ಒಪ್ಪಿಯಾರು?

ಸೂತ್ರದಲ್ಲಿರುವ ಶಾಸ್ತ್ರಶಬ್ದಕ್ಕೆ ವೇದ ಎಂಬರ್ಥವನ್ನು ಅದ್ವೈತಿಗಳು ಹೇಳುತ್ತಾರೆ. ಆದರೆ ನಾವು ಅಂತರ್ಯಾಮಿ ಎಂಬರ್ಥವನ್ನು ಹೇಳುತ್ತೇವೆ. ಅದ್ವೈತಿಗಳು ವೇದ ಎಂಬರ್ಥದಲ್ಲಿ ಶಾಸ್ತ್ರಶಬ್ದಕ್ಕೆ ರೂಢಿಯನ್ನು ಹೇಳಿದರೆ, ನಾವು ಅಂತರ್ಯಾಮಿ ಎಂಬರ್ಥದಲ್ಲಿ ಯೋಗಾರ್ಥವನ್ನು ಹೇಳುತ್ತೇವೆ. ಇಲ್ಲಿ ಸಹಜವಾಗಿ ಪ್ರಶ್ನೆ ಹೀಗಿದೆ - .ಎಲ್ಲೆಡೆ ಯೋಗಕ್ಕಿಂತ ರೂಢಿಯೇ ಪ್ರಬಲವಾದ್ದರಿಂದ ಇಲ್ಲಿ ಮಾತ್ರ ದ್ವೈತಿಗಳು ಯೋಗವನ್ನು ಹೇಗೆ ಆಶ್ರಯಿಸಿದ್ದಾರೆ ಎಂದು? ಈ ಪ್ರಶ್ನೆಯನ್ನು ಸ್ವಲ್ಪ ಆಳವಾಗಿ ವಿಚಾರ ಮಾಡಬೇಕು. ಏಕೆಂದರೆ ಯಾವುದೇ ಶಬ್ದಗಳನ್ನು ಸ್ವೀಕರಿಸಿದಾಗ ಮೊದಲು ಯೋಗಾರ್ಥವನ್ನು ಹೇಳಲು ಪ್ರಯತ್ನಿಸಬೇಕು. ಸಾಧ್ಯವಾಗದಿದ್ದಾಗ ಮಾತ್ರ ರೂಢಿಯನ್ನು ಆಶ್ರಯಿಸಬೇಕು. 'ವಾಜಿಕರಣ' ಎಂಬುದು ಒಂದು ವೃಕ್ಷದ ಹೆಸರು. ಕುದುರೆ ಕವಿಯಂತಹ ಕವಿಗಳು ಈ ವೃಕ್ಷಕ್ಕೆ ಎಂದೂ ಸಹ ಬರಲು ಸಾಧ್ಯವಿಲ್ಲದ ಕಾರಣ. ಯೋಗಾರ್ಥವನ್ನು ಹೇಳಲು ಸಾಧ್ಯವಾಗದು. ಆದ್ದರಿಂದ ಇಲ್ಲಿ ರೂಢಿಯನ್ನು ಆಶ್ರಯಿಸುವುದು ಅನಿವಾರ್ಯವಾಗುತ್ತದೆ. ಶ್ಲೋಕವಾರ್ತಿಕಾರನೂ ಸಮ್ಮತಿಸಿದ್ದಾನೆ. ಆದರೆ ಪ್ರಕೃತ ಶಾಸ್ತ್ರಶಬ್ದಕ್ಕೆ ಯೋಗಾರ್ಥವನ್ನು ಸ್ವೀಕರಿಸಲು ಬಾರದಂತಹ ಪರಿಸ್ಥಿತಿ ಇಲ್ಲ. ನಿಜವಾದ ಶಾಸ್ತ್ರಶಬ್ದದ ಯೋಗಾರ್ಥವು ಮುಖ್ಯವಾಗಿ ಪರಮಾತ್ಮನೇ ಆಗಿದ್ದಾನೆ. ಒಂದು ವೇಳೆ ರೂಢಿಯನ್ನು ನೀವು ಸ್ವೀಕರಿಸುವುದಾದರೆ, ವೇದಕ್ಕಿಂತ ಬೇರೆ

ಶಾಸ್ತ್ರಗಳಲ್ಲಿಯೇ ಶಾಸ್ತ್ರಶಬ್ದದ ರೂಢಿಯು ಲೋಕದಲ್ಲಿರುತ್ತದೆ. ಮತ್ತು ಯೋಗಾರ್ಥವನ್ನು ಇಲ್ಲಿ ಸ್ವೀಕರಿಸುವುದರಿಂದ ನೇರವಾಗಿ ಅರ್ಥವನ್ನು ತಿಳಿದಂತಾಗುತ್ತದೆಂಬ ಮಹಾಲಾಭವು ಇದೆ. ಆದ್ದರಿಂದ ಹಿತವನ್ನು ಮತ್ತು ಅಹಿತವನ್ನು ಶಾಸನ ಮಾಡುವ ಭಗವಂತನೇ ನಿಜವಾದ ಶಾಸ್ತ್ರಶಬ್ದದ ಅರ್ಥವಾಗಿದ್ದಾನೆ. ಇಂತಹ ಪರಮಾತ್ಮನನ್ನು ವಿವಕ್ಷಿಸಿ ದೇವೇಂದ್ರನು 'ಮಾಮೇವ ವಿಜಾನೀಹಿ' ಎಂಬ ಶಬ್ದವನ್ನು ಪ್ರಯೋಗಿಸಿದ್ದಾನೆ.

ಹಾಗಾದಲ್ಲಿ ಅಂತರ್ಯಾಮಿ ಪಕ್ಷವನ್ನು ಸ್ವೀಕರಿಸಿದರೆ, ಯೋಗಾರ್ಥವನ್ನು ಹೇಗೆ ಹೇಳುತ್ತೀರಿ ? ಎಂಬ ಶಂಕೆಗೆ ಭಗವದ್ಧರ್ಮ ಎಂಬ ವಾಕ್ಯದಿಂದ ಉತ್ತರಿಸಿದ್ದಾರೆ. ಭಗವಂತನು ಉಪೇಂದ್ರರೂಪವನ್ನು ಸ್ವೀಕರಿಸಿ ಬಲಿಚಕ್ರವರ್ತಿಯ ಸಾಮ್ರಾಜ್ಯವನ್ನು ಇಂದ್ರನಿಗೆ ನೀಡಿದನೆಂಬ ಭಗವತಾದಿಗ್ರಂಥಗಳ ಪ್ರಸಿದ್ಧಿಯನ್ನು 'ಹಿ' ಶಬ್ದದಿಂದ ತೋರಿಸಿದ್ದಾರೆ.

ಅದ್ವೈತಿಗಳ ಕೊನೆಯ ಸೂತ್ರ ವ್ಯಾಖ್ಯಾನ ಹೀಗಿದೆ - ಪ್ರಾಣಶಬ್ದವಿರುವ ಪ್ರಕರಣದಲ್ಲಿ ಪ್ರಾಣ, ಜೀವ, ಬ್ರಹ್ಮ ಮೂವರ ಲಿಂಗಗಳೂ ಕೇಳಿಸುತ್ತಿರುವುದರಿಂದ, ಪ್ರಾಣಶಬ್ದದಿಂದ ಮೂವರು ಪ್ರತಿಪಾದ್ಯರಾಗುತ್ತಾರೆಂದು ಪೂರ್ವಪಕ್ಷಮಾಡಿ ಉಪಕ್ರಮ ಉಪಸಂಹಾರಗಳಲ್ಲಿ ಬ್ರಹ್ಮನ ಪ್ರಸ್ತಾಪವಿರುವುದರಿಂದ ಬ್ರಹ್ಮನೇ ಪ್ರಾಣಶಬ್ದವಾಚ್ಯನೆಂದು ಸಿದ್ಧಾಂತ ಮಾಡಿದ್ದಾರೆ. ಒಂದು ವೇಳೆ ಮೂವರ ಉಪಾಸನೆಯನ್ನು ಒಪ್ಪಿದರೆ ಉಪಸನಾತ್ಯೈವಿಧ್ಯ ದೋಷವು ಬರುತ್ತದೆಂಬ ಯುಕ್ತಿಯನ್ನು ಹೇಳಿದ್ದಾರೆ.

ಇವರ ಈ ವ್ಯಾಖ್ಯಾನದಲ್ಲಿಯೂ ಹುರುಳಿಲ್ಲ. ಸೂತ್ರದಲ್ಲಿ ಪ್ರಸಂಗಶಬ್ದವೇ ಕಾಣಿಸುತ್ತಿಲ್ಲ. ಆದ್ದರಿಂದ ಉಪಾಸನಾತ್ಯೈವಿಧ್ಯವನ್ನು ದೋಷವೆಂದು ಆಕ್ಷೇಪಿಸಲಾಗದು. ಹಾಗೆ ಆಕ್ಷೇಪಿಸುವುದು ಪೂರ್ವಪಕ್ಷಿಗೆ ಅನಿಷ್ಟವಲ್ಲ.

ಇಷ್ಟಾಪತ್ತಿಯೆಂಬ ದೊಡ್ಡದೋಷವನ್ನು ಪರಿಹರಿಸಿಕೊಳ್ಳಲು, ಶಂಕರಭಾಷ್ಯದಲ್ಲಿಲ್ಲದ ಬೇರೆ ಅರ್ಥವನ್ನೇ ವಾಚಸ್ಪತಿಯು ಸಮರ್ಥಿಸಲು ಪ್ರಯತ್ನಿಸಿದೆ. ಇಂದ್ರಪ್ರತರ್ದನರ ಸಂವಾದಪ್ರಕರಣವು ಕೇವಲ ಬ್ರಹ್ಮಪರವಾಗಿದೆಯೆಂದು ಉಪಕ್ರಮ ಉಪಸಂಹಾರಗಳಿಂದ ತಿಳಿಯುತ್ತಿದೆ. ಒಂದು ವೇಳೆ ಜೀವ ಪ್ರಾಣಪರತ್ವಾದಿಗಳನ್ನು ಅಂಗೀಕರಿಸಿದಲ್ಲಿ ಕೇವಲ ಬ್ರಹ್ಮಪರತ್ವವೆಂಬ ಏಕವಾಕ್ಯತ್ವವು ಭಗ್ನವಾಗಿ ವಾಕ್ಯಭೇದದೋಷ ಬರುತ್ತದೆ. ಹೀಗೆ ಪೂರ್ವಪಕ್ಷಿಯನ್ನು ಕುರಿತು ನಾವು ಆಕ್ಷೇಪಿಸುತ್ತೇವೆ. ಪೂರ್ವಪಕ್ಷಿಗೆ ವಾಕ್ಯಭೇದವು ಇಷ್ಟವಾಗದ ಕಾರಣ ಇಷ್ಟಾಪತ್ತಿಯೆಂದು ಉತ್ತರಿಸಲಾರ.

ಭಾಮತಿಯ ಈ ನಿಲುವು ಸರಿಯಿಲ್ಲ. ಏಕೆಂದರೆ ಸ್ವತಃ ಅದ್ವೈತಿಗಳೇ ಪ್ರಾಣಪ್ರಕರಣವು ಸಂಪೂರ್ಣ ಬ್ರಹ್ಮನನ್ನು ಪ್ರತಿಪಾದಿಸಿದರೂ ಕೆಲವು ವಾಕ್ಯಗಳಿಗೆ ಅನ್ಯಪರತ್ವವನ್ನು ಒಪ್ಪಿದ್ದಾರೆ. 'ಯೋ ವೈ ಪ್ರಾಣಃ' ಇತ್ಯಾದಿ ಶ್ರುತಿಯಲ್ಲಿ ಬುದ್ಧಿಪ್ರಾಣಪರತ್ವವನ್ನು ಒಪ್ಪಿರುವುದು ಸ್ಪಷ್ಟವಾಗಿ ಕಾಣಿಸುತ್ತದೆ. ಆದರಂತೆ ಪ್ರಕೃತದಲ್ಲಿಯೂ ಏಕವಾಕ್ಯತ್ವವಿದ್ದರೂ ಇಂದ್ರಪ್ರಾಣಾದಿಪರತ್ವವನ್ನು ವಾಕ್ಯದ ಏಕದೇಶಕ್ಕೆ ಒಪ್ಪುವುದರಲ್ಲಿ ಏನೂ ತಪ್ಪಿಲ್ಲ. ಆದ್ದರಿಂದ ಇವರು ಹೇಳಿದ ಯುಕ್ತಿಯಿಂದ ಪೂರ್ವಪಕ್ಷಿಯ ನಿರಾಕರಣೆಯೇ ಆಗಲಾರದು.

ಮತ್ತು ಅದ್ವೈತಿಗಳು ಸೂತ್ರದಲ್ಲಿರುವ 'ಆಶ್ರಿತತ್ವಾತ್' ಎಂಬ ಪದಕ್ಕೆ ಪ್ರಕೃತವಾದ ತ್ರೈವಿಧ್ಯದಲ್ಲಿ ಅನ್ವಯಮಾಡದೆ ಅಧ್ಯಾಹೃತವಾದ ಬ್ರಹ್ಮಪರತ್ವದಲ್ಲಿ ಅನ್ವಯ ಮಾಡುತ್ತಾರೆ. 'ತದ್ಯೋಗಾತ್' ಎಂಬ ಪದಕ್ಕೂ ವ್ಯಾಖ್ಯಾನಿಸುತ್ತಾ ಸನ್ನಿಹಿತವಾದ ತ್ರೈವಿಧ್ಯಪರತ್ವವನ್ನು ಬಿಟ್ಟು ಸನ್ನಿಹಿತವಲ್ಲದ ಬ್ರಹ್ಮಲಿಂಗಪರತ್ವವನ್ನು ಹೇಳುತ್ತಾರೆ. ಇದೆಲ್ಲವೂ ಅತ್ಯಂತ ಬಾಲಿಶವಾದ ವ್ಯಾಖ್ಯಾನವಾಗಿದೆ.

ಪ್ರಾಚೀನವೃತ್ತಿಕಾರರು ಅದ್ವೈತಮತಕ್ಕಿಂತ ವಿಭಿನ್ನವಾಗಿ ಅಂತಿಮಸೂತ್ರವನ್ನು ವ್ಯಾಖ್ಯಾನಿಸಲು ಪ್ರಯತ್ನಿಸಿದ್ದಾರೆ. ಸಮಗ್ರವಾದ ಇಂದ್ರಪ್ರತರ್ದನಸಂವಾದವು ಬ್ರಹ್ಮನನ್ನೇ ಪ್ರತಿಪಾದಿಸುತ್ತದೆ. ಮಧ್ಯದಲ್ಲಿ ಕೇಳಿಸುತ್ತಿರುವ

ಪ್ರಾಣನ ಲಿಂಗಗಳಾಗಲೀ, ಜೀವನ ಲಿಂಗಗಳಾಗಲೀ, ಪ್ರಾಣನನ್ನು ಅಥವಾ ಜೀವನನ್ನು ಪ್ರತಿಪಾದಿಸಲಾರವು; ಹೊರತಾಗಿ ಬ್ರಹ್ಮನನ್ನೇ ಆಯಾ ಧರ್ಮಗಳಿಂದ ಉಪಾಸನೆ ಮಾಡಬೇಕೆಂದು ಹೇಳಲು ಹೊರಟಿವೆ. ಆದ್ದರಿಂದ ವಾಕ್ಯಭೇದಪ್ರಸಂಗದೋಷವಿಲ್ಲವೆಂದು ಇವರ ವಾದ. ಇದು ತಪ್ಪು.

ಏಕೆಂದರೆ, ಜೀವಪ್ರಾಣಾದಿಗಳಲ್ಲಿರುವ ಧರ್ಮದಿಂದ ಬ್ರಹ್ಮನನ್ನು ಉಪಾಸನೆ ಮಾಡುವುದಾದರೆ, ಬ್ರಹ್ಮನಲ್ಲಿರುವ ಧರ್ಮಗಳಿಂದಲೇ ಜೀವನನ್ನು, ಪ್ರಾಣನನ್ನು ಏಕೆ ಉಪಾಸನೆ ಮಾಡಬಾರದು? ಎಂಬ ಆಕ್ಷೇಪಕ್ಕೆ ಇವರಿಂದ ಉತ್ತರಿಸಲಾಗದು. ಭಾಮತಿಕಾರನೂ ಸಹ ಈ ಮತವನ್ನು ನಿರಾಕರಿಸಿದ್ದಾನೆ. ಆದರೆ ಗ್ರಂಥಕಾರರು ಇಲ್ಲಿ ಹೇಳುತ್ತಿರುವ ದೋಷವನ್ನು ಅಲ್ಲಿ ಹೇಳಿಲ್ಲ.

ರಾಮಾನುಜರು ಕೌಷೀತಕಿ ಸೂತ್ರವನ್ನು ಹೀಗೆ ವ್ಯಾಖ್ಯಾನಿಸುತ್ತಾರೆ. ಇಂದ್ರಪ್ರತರ್ದನರ ಸಂವಾದ-ಪ್ರಕರಣದಲ್ಲಿ ಸಂಪೂರ್ಣವಾಗಿ ಬ್ರಹ್ಮನೇ ಪ್ರತಿಪಾದ್ಯನು. ಅಂತಹ ಒಬ್ಬನೇ ಬ್ರಹ್ಮನನ್ನು ಚಿದ್ವಿಶಿಷ್ಟನಾಗಿ ಅಚಿದ್ವಿಶಿಷ್ಟನಾಗಿ ಮತ್ತು ಸ್ವರೂಪತಃ ಮೂರುಬಗೆಯಲ್ಲಿ ಉಪಾಸನೆ ಮಾಡಬೇಕು. ಚಿದ್ವಿಶಿಷ್ಟನೆಂದರೆ ಜೀವನೇ ಶರೀರವಾಗಿ ಉಳ್ಳವನು ಎಂದರ್ಥ. ಅಚಿದ್ವಿವಿಶಿಷ್ಟನೆಂದರೆ ಜಡವಾದ ಪ್ರಾಣಾದಿಗಳು ಶರೀರವಾಗಿ ಉಳ್ಳವನು ಎಂದರ್ಥ. ಹೀಗೆ ಹೇಳಿದಾಗ ಚಿತ್ ಅಚಿತ್ ಪದಾರ್ಥಗಳೆಂಬ ಶರೀರಗಳೆಂಬ ಧರ್ಮಗಳೆಲ್ಲವೂ ಬ್ರಹ್ಮನಲ್ಲಿಯೇ ಬರುತ್ತವೆ. ಆದ್ದರಿಂದ ಈ ಪ್ರಕರಣದಲ್ಲಿ ಜೀವನಾಗಲೀ ಪ್ರಾಣನಾಗಲೀ ಪ್ರತಿಪಾದ್ಯರೇ ಆಗಲಾರರು. 'ಸತ್ಯಂ ಜ್ಞಾನಂ ಅನಂತಂ ಬ್ರಹ್ಮ' ಇತ್ಯಾದಿ ಸ್ಥಳದಲ್ಲಿಯೂ ಹೀಗೆಯೇ ವ್ಯಾಖ್ಯಾನ ಮಾಡುವುದು ಕಂಡಿದ್ದರಿಂದ ಇಲ್ಲಿ ನಾವು ಮಾಡುತ್ತಿರುವ ವ್ಯಾಖ್ಯಾನವು ತಪ್ಪಾಗುವುದಿಲ್ಲವೆಂದು.

* * * * *

ಶ್ರೀಬ್ರಹ್ಮಣ್ಯತೀರ್ಥಶ್ರೀಪಾದಶಿಷ್ಯವ್ಯಾಸತೀರ್ಥವಿರಚಿತಾ

# ತಾತ್ಪರ್ಯಚಂದ್ರಿಕಾ

## अथ पादान्त्यप्राणाधिकरणम्

ಸಂಶಯ ಹಾಗು ಸಂಗತಿ ಪ್ರದರ್ಶನ

**॥ ॐ प्राणस्तथाऽनुगमात् ॐ ॥ अत्र श्रुतिलिङ्गवाहुल्येन गायत्र्यधिकरण-सिद्धान्तन्यायेन पूर्वपक्षप्रवृत्तेरनन्तरसङ्गतिः ।**

**अत्र प्राणः किं मुख्यवाय्वादिः किं वा विष्णुः? इति चिन्ता । तदर्थं किं वाय्वादिश्रुत्याद्यनुसारेण विष्णुश्रुत्यादि नेयं उत विपरीतम्? इति । तदर्थं किं वाय्वादिश्रुत्यादिकं निरवकाशम् विष्णुश्रुत्यादिकन्तु सावकाशमुत विपरीतम्? इति ।**

ಅನುವಾದ - ॥ ॐ ಪ್ರಾಣಸ್ತಥಾನುಗಮಾತ್ ॐ ॥ ಶ್ರುತಿಲಿಂಗಬಾಹುಲ್ಯವು ಹಿಂದಿನ ಗಾಯತ್ರ್ಯಧಿಕರಣದ ಸಿದ್ಧಾಂತನ್ಯಾಯ. ಅದೇ ನ್ಯಾಯದಿಂದಲೇ ಈ ಅಧಿಕರಣದ ಪೂರ್ವಪಕ್ಷವು ಹೊರಟಿರುವುದರಿಂದ ಅನಂತರಸಂಗತಿ ಇದೆ.

ಇಲ್ಲಿ ೧. ಪ್ರಾಣವು ಮುಖ್ಯವಾಯುವೋ ಅಥವಾ ವಿಷ್ಣುವೋ? ಎಂದು ಸಂಶಯ.

೨. ಅದಕ್ಕಾಗಿ ವಾಯುಶ್ರುತಿಗೆ ಅನುಸಾರಿಯಾಗಿ ವಿಷ್ಣುಶ್ರುತಿಯನ್ನು ವ್ಯಾಖ್ಯಾನಿಸಬೇಕೋ ಅಥವಾ ವಿಷ್ಣುಶ್ರುತಿಗೆ ಅನುಸಾರಿಯಾಗಿ ವಾಯುಸ್ತುತಿಯನ್ನು ವ್ಯಾಖ್ಯಾನಿಸಬೇಕೋ?

೩. ಅದಕ್ಕಾಗಿ ವಾಯುಶ್ರುತ್ಯಾದಿಗಳು ನಿರವಕಾಶ, ವಿಷ್ಣುಶ್ರುತ್ಯಾದಿಗಳು ಸಾವಕಾಶವೆಂದೋ ಅಥವಾ ವಿಷ್ಣುಶ್ರುತ್ಯಾದಿಗಳು ನಿರವಕಾಶ ವಾಯುಶ್ರುತ್ಯಾದಿಗಳು ಸಾವಕಾಶವೆಂದೋ? ಎಂದು ಸಂಶಯಕೋಟಿ.

**ಪ್ರಕಾಶಃ –** ॥ ॐ प्राणस्तथाऽनुगमात् ॐ ॥ ನನ್ವಿದಮೇತದಧಿಕರಣಭಾಷ್ಯದಿಶಾ ಪೂರ್ವಪ್ರಾಣಾಧಿಕರಣಸಙ್ಗತಂ ಭಾತಿ, ತದಯುಕ್ತಮಿವ, ತಥಾತ್ವೇ ತದಾನನ್ತರ್ಯಸ್ಯೈವ ಪ್ರಾಪೇರಿತ್ಯತಃ, ಸುಧೋಕ್ತದಿಶಾ ಗಾಯತ್ರ್ಯಧಿಕರಣೇನ ಸಙ್ಗತಿ ಲಾಭಾದತ್ರ ನಿವೇಶ ಇತಿ ಭಾವೇನಾಹ – **अत्रेति ॥ सङ्गतिरिति ॥** ಆಪವಾದಿಕೀತ್ಯರ್ಥಃ ।

''पूर्वसिद्धान्ततो यत्र पूर्वपक्षः प्रवर्तते ।
तत्रापवादिकी..... ॥'' इत्यादेः ।

**यद्वा** – पूर्वसिद्धान्तोपजीवनादुपजीव्योपजीवकवरूपेत्यर्थः । एतेन अन्यप्रापक-श्रुतिलिङ्गबाहुल्योपेताः शब्दा उदाहरणमिति सूचितं, सूत्रस्योपलक्षणार्थत्वादिति ध्येयम् । एतच्चाग्रे स्फुटीभविष्यति । भाष्यं तु ''मनो वाक्प्राणः'' इत्यत्र प्राणो विष्णोरन्यश्चेत्तदा प्राक्तनोऽप्यन्य इति शङ्का स्यादिति तस्य विष्णुत्वावधारणार्थत्वात् सफलेयं चिन्तेति प्रयोजनपरं व्याख्येयमिति भावः ।

यद्यपि ''सर्वे वेदाः'' इति सर्ववेदप्रतिपाद्यत्वस्याप्यन्यनिष्ठत्वेन शास्त्रयोनित्व-मप्यन्यस्येति शङ्कासमाधानमपि प्रयोजनमिति शक्यं वक्तुं भाति । तथाऽपि तस्याऽऽनन्दमयाधिकरणानाक्षेपकत्वात् तदाक्षेपायैवमुक्तम्, समन्वीयमानप्राणशब्द-मुखाक्षेपस्य ततोऽप्यन्तरङ्गत्वाच्चेति ध्येयम् । समर्थयिष्यते चैतत्प्रयोजनम्॥

**अत्रेति ॥** ऐतरेयके ''ता एताः शीर्षच्छियः श्रिताश्चक्षुः श्रोत्रं मनो वाक् प्राणः'' इत्यारभ्य बहुषु स्थलेषु श्रुत, प्राणो विषय इत्यर्थः । आदिपदेनेन्द्रो जीवश्च ग्राह्यः। वाय्वादीति ॥ वक्ष्यमाणवाय्विन्द्रजीवप्रापकश्रुतिलिङ्गानुसारेणेत्यर्थः ॥ **विष्णु-श्रुतीति ॥** ''ब्रह्मेमं पुरुषं'' इति ब्रह्मशब्दादीत्यर्थः । अत्र फलफलिभावः स्फुटः ।

ವಿವರಣೆ - ಪಾದಾಂತ್ಯಪ್ರಾಣಾಧಿಕರಣವು ಪ್ರಾರಂಭವಾಗುತ್ತಿದೆ. ಗ್ರಂಥಕಾರರು ಗಾಯತ್ರ್ಯ-ಧಿಕರಣದಿಂದ ಸಂಗತಿಯನ್ನು ತೋರಿಸಿದ್ದಾರೆ. ಆದರೆ ಈ ಅಧಿಕರಣದ ಭಾಷ್ಯದಲ್ಲಿ ಹಿಂದಿನ ಪ್ರಾಣಾಧಿ-ಕರಣದಿಂದ ಸಂಗತಿಯನ್ನು ತೋರಿಸಿದಂತೆ ಇದೆ. ಇದು ತಪ್ಪು. ಪ್ರಾಣಾಧಿಕರಣದಿಂದ ಸಂಗತಿಯನ್ನು ತೋರಿಸುವುದಾದಲ್ಲಿ ಪ್ರಾಣಾಧಿಕರಣದ ನಂತರವೇ ಈ ಅಧಿಕರಣವು ಇರಬೇಕಿತ್ತೆಂದು ಸುಧೆಯಲ್ಲಿ ಹೇಳಿದ್ದಾರೆ. ಆದ್ದರಿಂದ ಗಾಯತ್ರ್ಯಧಿಕರಣದಿಂದಲೇ ಸಂಗತಿಯನ್ನು ತೋರಿಸಬೇಕು. ಇದನ್ನು ಗ್ರಂಥಕಾರರು 'ಅತ್ರ' ಇತ್ಯಾದಿ ಗ್ರಂಥದಿಂದ ಪ್ರತಿಪಾದಿಸಿದ್ದಾರೆ. ಗಾಯತ್ರ್ಯಧಿಕರಣದಿಂದ ಈ ಅಧಿಕರಣಕ್ಕೆ ಅಪವಾದಿಕೀಸಂಗತಿಯನ್ನು ತಿಳಿಯಬೇಕು.

ಪೂರ್ವಸಿದ್ಧಾಂತತೋ ಯತ್ರ ಪೂರ್ವಪಕ್ಷಃ ಪ್ರವರ್ತತೇ।
ತತ್ರಾಪವಾದಿಕೀ ....॥

ಹಿಂದಿನ ಸಿದ್ಧಾಂತನ್ಯಾಯವನ್ನವಲಂಬಿಸಿ ಪೂರ್ವಪಕ್ಷ ಮಾಡಿದರೆ ಅಪವಾದಿಕೀಸಂಗತಿ ಎನಿಸುತ್ತದೆ. ಅಥವಾ ಹಿಂದಿನ ಅಧಿಕರಣದ ಸಿದ್ಧಾಂತನ್ಯಾಯವನ್ನು ಉಪಜೀವಿಸಿ ಈ ಅಧಿಕರಣದ ಪೂರ್ವಪಕ್ಷವು

ಹೊರಟಿದ್ದರಿಂದ ಉಪಜೀವ್ಯಉಪಜೀವಕತ್ವಭಾವಸಂಗತಿಯನ್ನು ಹೇಳಬಹುದು. ಹೀಗೆ ಸಂಗತಿಯನ್ನು ಗ್ರಂಥದಿಂದ ತೋರಿಸಿದ್ದರಿಂದ ಅನ್ಯಪ್ರಾಪಕಶ್ರುತಿಲಿಂಗಬಾಹುಲ್ಯೋಪೇತಶಬ್ದಗಳು ಈ ಅಧಿಕರಣದ ವಿಷಯವಾಕ್ಯಗಳೆಂದು ಸೂಚಿಸಿದ್ದಾರೆ. ಸೂತ್ರದಲ್ಲಿ ಹೇಳಿರುವ ಜೀವಮುಖ್ಯಪ್ರಾಣಲಿಂಗಗಳು ಕೇವಲ ಉಪಲಕ್ಷಣವಷ್ಟೇ. ಈ ವಿಚಾರವು ಮುಂದೆ ಸ್ಪಷ್ಟವಾಗುತ್ತದೆ.

ಗಾಯತ್ಯಧಿಕರಣದಿಂದ ಸಂಗತಿಯನ್ನು ತೋರಿಸುವುದಾದರೆ ಭಾಷ್ಯದಲ್ಲಿ ಪ್ರಾಣಾಧಿಕರಣದಿಂದ ಸಂಗತಿಯನ್ನು ತೋರಿಸಿದ್ದಾರಲ್ಲ? ಎಂಬ ಪ್ರಶ್ನೆಗೆ ಹೀಗೆ ಉತ್ತರ - 'ಮನೋವಾಕ್‌ಪ್ರಾಣಃ' ಎಂಬಲ್ಲಿ ಪ್ರಾಣಶಬ್ದದಿಂದ ವಿಷ್ಣುವಿಗಿಂತ ಬೇರೆಯವರು ಪ್ರತಿಪಾದ್ಯರಾದರೆ ಆವಾಗ ಹಿಂದಿನ ಪ್ರಾಣಾಧಿ-ಕರಣದಲ್ಲಿಯೂ ವಿಷ್ಣು ಪ್ರತಿಪಾದ್ಯನಾಗಲಾರ ಎಂಬ ಶಂಕೆ ಬರುತ್ತದೆ. ಈ ಅಧಿಕರಣದಲ್ಲಿ ಮನೋವಾಕ್‌ಪ್ರಾಣ ಎಂಬಲ್ಲಿರುವ ಪ್ರಾಣಶಬ್ದದಿಂದ ವಿಷ್ಣುವೇ ಪ್ರತಿಪಾದ್ಯನೆಂದು ನಿರ್ಣಯವಾದಾಗ ಹಿಂದಿನ ಪ್ರಾಣಾಧಿಕರಣದ 'ತದ್ವೈತ್ವಂ ಪ್ರಾಣಃ' ಎಂಬ ವಿಷಯವಾಕ್ಯದಿಂದಲೂ ವಿಷ್ಣುವೇ ಪ್ರತಿಪಾದ್ಯನೆಂದು ನಿರ್ಣಯವಾಗುತ್ತದೆ. ಈ ರೀತಿಯಾಗಿ ಪ್ರಾಣಾಧಿಕರಣದಿಂದ ಪ್ರಯೋಜನವನ್ನಷ್ಟೇ ತೋರಿಸಲು ಭಾಷ್ಯದ ಮಾತು ಹೊರಟಿದೆ ಹೊರತು ಸಂಗತಿಗಾಗಿ ಅಲ್ಲ.

ವಸ್ತುತಃ 'ಮನೋವಾಕ್‌ಪ್ರಾಣಃ' ಎಂಬಲ್ಲಿರುವ ಪ್ರಾಣಶಬ್ದದಿಂದ ವಿಷ್ಣುವು ಪ್ರತಿಪಾದ್ಯನಾಗದಿದ್ದರೆ ಅಲ್ಲೇ 'ಸರ್ವೇ ವೇದಾಃ' ಎಂದು ಕೇಳಿಸುತ್ತಿರುವ ಸರ್ವವೇದಪ್ರತಿಪಾದ್ಯತ್ವವೂ ಸಹ ವಿಷ್ಣುವಿನಲ್ಲಿ ಬರುವುದಿಲ್ಲ. ಆದ್ದರಿಂದ ಈ ಅಧಿಕರಣಕ್ಕೆ ನೇರವಾಗಿ ಶಾಸ್ತ್ರಯೋನಿತ್ವಾಧಿಕರಣವನ್ನು ಆಕ್ಷೇಪಿಸಿ ಸಮಾಧಾನವನ್ನು ಹೇಳಬಹುದು. ಆದ್ದರಿಂದ ಪ್ರಾಣಾಧಿಕರಣದಿಂದ ಪ್ರಯೋಜನವನ್ನು ತೋರಿಸಿದಂತೆ ಶಾಸ್ತ್ರಯೋನಿತ್ವಾಧಿಕರಣದಿಂದಲೂ ಪ್ರಯೋಜನವನ್ನು ತೋರಿಸಬಹುದು. ಆದರೆ ಇದು ಸರಿಯಲ್ಲ. ಈ ಪಾದದಲ್ಲಿರುವ ಪ್ರತಿಯೊಂದು ಅಧಿಕರಣಗಳಿಗೆ ಆನಂದಮಯಾಧಿಕರಣವನ್ನು ಆಕ್ಷೇಪಿಸುವ ಮೂಲಕವೇ ಪ್ರಯೋಜನವನ್ನು ತೋರಿಸಿದ್ದಾರೆ. ಇಲ್ಲಿಯ ತನಕ ಪ್ರತಿಯೊಂದು ಅಧಿಕರಣಗಳಲ್ಲಿಯೂ ಆನಂದಮಯಾಧಿಕರಣದಿಂದ ಸಾರ್ಥಕ್ಯವನ್ನು ತೋರಿಸಿ, ಈ ಅಧಿಕರಣಕ್ಕೆ ಮಾತ್ರ ಶಾಸ್ತ್ರಯೋನಿತ್ವಾಧಿ ಕರಣ- ದಿಂದ ಪ್ರಯೋಜವನ್ನು ತೋರಿಸುವುದು ತಪ್ಪಾಗುತ್ತದೆ. ಆದ್ದರಿಂದ ಭಾಷ್ಯದಲ್ಲಿ ಪ್ರಾಣಾಧಿ ಕರಣದಿಂದಲೇ ಪ್ರಯೋಜನವನ್ನು ತೋರಿಸಿದ್ದಾರೆ. ಪ್ರಾಣಾಧಿಕರಣದಲ್ಲಾದರೋ ಆನಂದಮಯಾಧಿ ಕರಣದಿಂದ ಪ್ರಯೋಜನವನ್ನು ತೋರಿಸಿದ್ದರಿಂದ ಸಮಂಜಸವಾಗಿದೆ. ಮತ್ತು 'ಮನೋವಾಕ್‌ಪ್ರಾಣ' ಎಂಬಲ್ಲಿರುವ ಪ್ರಾಣನು ವಿಷ್ಣುವಲ್ಲವೆಂದರೆ 'ಅತ ಏವ ಪ್ರಾಣಃ' ಎಂಬಲ್ಲಿರುವ ಪ್ರಾಣನು ವಿಷ್ಣುವಲ್ಲವೆಂದು ಹೇಳುವುದು ಸುಲಭ (ಅಂತರಂಗವಾಗಿದೆ). ಅದನ್ನು ಬಿಟ್ಟು ಈ ಪ್ರಾಣ ವಿಷ್ಣುವಲ್ಲವೆಂದರೆ ಈ ಪ್ರಾಣನಲ್ಲಿ ಕೇಳಿಸುತ್ತಿರುವ ಸರ್ವವೇದಪ್ರತಿಪಾದ್ಯತ್ವಧರ್ಮವು ವಿಷ್ಣುವಿನಲ್ಲಿ ಬರುವುದಿಲ್ಲವೆನ್ನುವುದು ಕಠಿಣವಾಗಿದೆ. ಈ ಅಧಿಕರಣದ ಪ್ರಯೋಜನವನ್ನು ಸ್ವತಃ ಗ್ರಂಥಕಾರರೇ 'ಅತ್ರ' ಎಂಬ ಗ್ರಂಥದಿಂದ ತೋರಿಸಿದ್ದಾರೆ.

ಏತರೇಯೋಪನಿಷತ್ತಿನಲ್ಲಿ 'ತಾ ಏತಾಃ ಶೀರ್ಷಂಚ್ಛ್ರಯಃ ಶ್ರಿತಾಶ್ಚಕ್ಷುಶ್ರೋತ್ರಂ ಮನೋವಾಕ್ ಪ್ರಾಣಃ' ಎಂಬುದರಿಂದ ಪ್ರಾರಂಭಿಸಿ ಅನೇಕ ಸ್ಥಳಗಳಲ್ಲಿ ಪ್ರಾಣಶಬ್ದವು ಕೇಳಿಸುತ್ತಿದೆ. 'ಮುಖ್ಯವಾಯ್ವಾದಿಃ' ಎಂಬಲ್ಲಿರುವ ಆದಿಶಬ್ದದಿಂದ ಜೀವನನ್ನು ತೆಗೆದುಕೊಳ್ಳಬೇಕು. 'ವಾಯ್ವಾದಿಶ್ರುತ್ಯಾದಿಕಂ' ಎಂಬ ಪದಕ್ಕೆ

ಮುಂದೆ ಹೇಳುವ ಇಂದ್ರಜೀವ ಮೊದಲಾದವರನ್ನು ಸಮರ್ಥಿಸುವ ಶ್ರುತಿಲಿಂಗಗಳಿಗೆ ಅನುಸಾರಿಯಾಗಿ ಎಂದರ್ಥ. 'ವಿಷ್ಣುಶ್ರುತ್ಯಾದಿಕಂ' ಎಂಬಲ್ಲಿ 'ಬ್ರಹ್ಮೈಮಂ ಪುರುಷಂ' ಎಂಬ ಶ್ರುತಿಯನ್ನು ವಿವಕ್ಷಿಸಬೇಕು.

ಪೂರ್ವಪಕ್ಷದ ಫಲಫಲಿಭಾವ - ಒಂದು ವೇಳೆ ವಾಯುಶ್ರುತಿ ಮೊದಲಾದವುಗಳು ನಿರವಕಾಶವಾಗಿ ವಿಷ್ಣುಶ್ರುತಿಗಳು ಸಾವಕಾಶವಾದರೆ ವಾಯುಶ್ರುತಿ ಮೊದಲಾದವುಗಳಿಗೆ ಅನುಸಾರಿಯಾಗಿ ವಿಷ್ಣುಶ್ರುತಿಗಳನ್ನು ಅರ್ಥೈಸಬೇಕು. ಆವಾಗ ಮುಖ್ಯವಾಯುವೇ ಪ್ರಾಣನೆನಿಸುತ್ತಾನೆ.

ಸಿದ್ಧಾಂತದ ಫಲಫಲಿಭಾವ - ಒಂದು ವೇಳೆ ವಿಷ್ಣುಶ್ರುತಿಗಳು ನಿರವಕಾಶವಾಗಿ ವಾಯುಶ್ರುತಿ ಮೊದಲಾದವುಗಳು ಸಾವಕಾಶವಾದಲ್ಲಿ ವಿಷ್ಣುಶ್ರುತಿಗಳಿಗೆ ಅನುಸಾರಿಯಾಗಿ ವಾಯುಶ್ರುತಿ ಮೊದಲಾದವನ್ನು ಅರ್ಥೈಸಬೇಕು. ಆವಾಗ ವಿಷ್ಣುವೇ ಪ್ರಾಣನಾಗುತ್ತಾನೆ. ಈ ಫಲಫಲಿಭಾವವು ಸ್ಪಷ್ಟವಾದ್ದರಿಂದ ಪ್ರತ್ಯೇಕವಾಗಿ ಹೇಳಿಲ್ಲ.

**ಗುರುರಾಜೀಯಮ್ – ॥ ॐ ಪ್ರಾಣಸ್ತಥಾನುಗಮಾತ್ ॥**

**ಸಾರ**

ಶ್ರುತಿಲಿಂಗಬಾಹುಲ್ಯವು ಗಾಯತ್ರ್ಯಧಿಕರಣದ ಸಿದ್ಧಾಂತನ್ಯಾಯ. ಆ ನ್ಯಾಯದಿಂದಲೇ ಈ ಅಧಿಕರಣದ ಪೂರ್ವಪಕ್ಷ ಹೊರಟಿದ್ದರಿಂದ ಆಪಾದಿಕೀ ಸಂಗತಿಯನ್ನು ತಿಳಿಯಬೇಕು.

ವಾಯುಶ್ರುತಿ ಮೊದಲಾದವು ನಿರವಕಾಶವಾದ್ದರಿಂದ ವಾಯುಶ್ರುತಿಗಳಿಗೆ ಅನುಸಾರಿಯಾಗಿ ವಿಷ್ಣು-ಶ್ರುತಿಗಳನ್ನು ಅರ್ಥೈಸಬೇಕು. ಆವಾಗ ಮುಖ್ಯವಾಯುವೇ ಪ್ರಾಣನಾಗುತ್ತಾನೆಂಬುದು ಪೂರ್ವಪಕ್ಷದ ಗುರಿ. ವಿಷ್ಣುಶ್ರುತಿ ನಿರವಕಾಶವಾದ್ದರಿಂದ ವಿಷ್ಣುಶ್ರುತಿಗೆ ಅನುಸಾರಿಯಾಗಿ ವಾಯುಶ್ರುತಿಯನ್ನು ಅರ್ಥೈಸಬೇಕು. ಆವಾಗ ವಿಷ್ಣುವೇ ಪ್ರಾಣಶಬ್ದವಾಚ್ಯನಾಗುತ್ತಾನೆಂಬುದು ಸಿದ್ಧಾಂತದ ಗುರಿ.

* * * *

## ಪುನರುಕ್ತಿಪರಿಹಾರ

### ತಾತ್ಪರ್ಯಚನ್ದ್ರಿಕಾ

**ನನು ''अत एव प्राणः'' इत्यनेन गतार्थमिदम् । नच पूर्वत्र प्राणशब्दो वायुपरो नेत्युक्तं, इह त्विन्द्रजीवपरो नेत्युच्यते इति भेदः, इह सूत्रे मुख्यप्राणपदायोगात् । नच पूर्वत्र वायुपरत्वस्यैव निरासः, इह तु इन्द्रजीववायुपरत्वानामिति भेदः, अस्य बहुविषयस्य तेनागतार्थत्वेऽप्यनेन तस्याल्पविषयस्य गतार्थत्वात् । निरासक-न्यायभेदं विना निरसनीयभेदमात्रेणाधिकरणभेदासिद्धेश्च ।**

**नच पूर्वत्र प्रसिद्धयबलम्बेन श्रुत्या पूर्वपक्षे लिङ्गैः सिद्धान्तः, अत्र तु लिङ्गैः पूर्वपक्षे श्रुतिलिङ्गाभ्यां सिद्धान्तः । अत एव तत्र पूर्वपक्षे भाष्ये 'प्रसिद्धेः' इत्युक्तम्,**

**ಅತ್ರ ತು ಸೂತ್ರೇ 'ಲಿಙ್ಗಾತ್' ಇತ್ಯುಕ್ತಮಿತಿ ವಾಚ್ಯಮ್, ಶ್ರುತ್ಯಾ ಪ್ರಾಪ್ತಸ್ಯ ಪೂರ್ವಪಕ್ಷಸ್ಯ ಲಿಙ್ಗಮಾತ್ರೇಣ ಬಾಧಿತಸ್ಯ ಪುನರ್ವಿರೋಧಿಶ್ರುತಿಲಿಙ್ಗಬಾಧೇನ ಲಿಙ್ಗೈರುಜ್ಜೀವನಾಸಮ್ಭವಾತ್ ।**

**ನಚ ಶ್ರುತಿಬಾಹುಲ್ಯಾದುಜ್ಜೀವನಂ, ತದ್ಬಾಹುಲ್ಯಪ್ರಾಪ್ತಸ್ಯಾಪಿ ಪೂರ್ವಪಕ್ಷಸ್ಯ ಗಾಯತ್ರ್ಯಧಿಕರಣೇ ನಿರಾಸಾತ್ । ನಚ ತತ್ರ ಗಾಯತ್ರೀವಾಕ್ಪೃಥಿವ್ಯಾದಿಶ್ರುತಯೋ ಭಿನ್ನವಿಷಯಾಃ, ಅತ್ರ ತು ''ಚಕ್ಷುಃ ಶ್ರೋತ್ರಂ ಮನೋವಾಕ್ ಪ್ರಾಣಃ । ತತ್ಪ್ರಾಣೇ ಪ್ರಪನ್ನ ಉದತಿಷ್ಠತ್ ಸ ಏಷ ಪ್ರಾಣಃ'' ಇತ್ಯಾದಾವೇಕೈವ ಪ್ರಾಣಾದಿಶ್ರುತಿರಾವೃತ್ತೇತಿ ವಾಚ್ಯಮ್, ತತ್ರಾಪಿ ''ಗಾಯತ್ರೀ ವಾ ಇದಂ ಸರ್ವಂ ಭೂತಂ ಗಾಯತ್ರೀ ಸೈಷಾ ಷಡ್ವಿಧಾ ಗಾಯತ್ರೀ'' ಇತಿ ಶ್ರವಣಾತ್ ।**

**ಆಕಾಶಾಧಿಕರಣವಿಷಯವಾಕ್ಯೇ ಆಕಾಶಶ್ರುತೇರೇವಾವೃತ್ತೇಶ್ಚ ।**

ಅನುವಾದ - ಈ ಅಧಿಕರಣವು 'ಅತ ಏವ ಪ್ರಾಣಃ' ಎಂಬ ಅಧಿಕರಣದಿಂದ ಗತಾರ್ಥವಾಗಿದೆ.

ಪ್ರಶ್ನೆ - ಹಿಂದಿನ ಪ್ರಾಣಾಧಿಕರಣದಲ್ಲಿ ತೈತ್ತಿರೀಯದಲ್ಲಿರುವ ಪ್ರಾಣಶಬ್ದವು ವಾಯುಪರ-ವಲ್ಲವೆಂದು ಹೇಳಿದರು. ಇಲ್ಲಿ ಐತರೇಯಪ್ರಾಣನು ಇಂದ್ರನಾಗಲೀ ಜೀವನಾಗಲೀ ಅಲ್ಲವೆಂದು ಹೇಳುತ್ತಿದ್ದಾರೆ. ಹೀಗಿರುವಾಗ ಗತಾರ್ಥತ್ವವನ್ನು ಹೇಗೆ ಹೇಳುತ್ತೀರಿ?

ಉತ್ತರ - ಈ ಅಧಿಕರಣದಲ್ಲಿಯೂ ಸಹ ಪ್ರಾಣಶಬ್ದವು ವಾಯುಪರ ಅಲ್ಲವೆಂದೇ ಹೇಳಬೇಕು ಹೊರತು ಇಂದ್ರ ಅಥವಾ ಜೀವಪರವಲ್ಲ ಎಂಬುದು ಮುಖ್ಯವಲ್ಲ. ಇಲ್ಲದಿದ್ದರೆ ಸೂತ್ರದಲ್ಲಿರುವ ಮುಖ್ಯಪ್ರಾಣಪದವು ತಪ್ಪಾಗುತ್ತದೆ. ಆದ್ದರಿಂದ ಗತಾರ್ಥತ್ವವು ಬಂದೇ ಬರುತ್ತದೆ.

ಪ್ರಶ್ನೆ - ಹಿಂದಿನ ಅಧಿಕರಣದಲ್ಲಿ ಕೇವಲ ವಾಯುಪರತ್ವವನ್ನು ನಿರಾಸ ಮಾಡಲಾಗಿದೆ. ಈ ಅಧಿಕರಣದಲ್ಲಿ ಇಂದ್ರ, ಜೀವ, ವಾಯುಪರವಲ್ಲವೆಂದು ನಿರಾಸ ಮಾಡಲಾಗಿದೆ. ಹೀಗೆ ವೈಲಕ್ಷಣ್ಯವನ್ನು ಹೇಳುತ್ತೇವೆ.

ಉತ್ತರ - ಹಾಗಾದಲ್ಲಿ ಬಹುವಿಷಯಕವಾದ ಈ ಅಧಿಕರಣಕ್ಕೆ ಹಿಂದಿನ ಪ್ರಾಣಾಧಿಕರಣದಿಂದ ಗತಾರ್ಥತ್ವ ಬಾರದಿದ್ದರೂ ಈ ಅಧಿಕರಣದಿಂದ ಅಲ್ಪವಿಷಯಕವಾದ ಹಿಂದಿನ ಪ್ರಾಣಾಧಿಕರಣಕ್ಕೆ ಗತಾರ್ಥತ್ವವು ಬಂದೇ ಬರುತ್ತದೆ. ಅಂದರೆ ಪ್ರಾಣಶಬ್ದವು ಇಂದ್ರ, ಜೀವ, ವಾಯು ಯಾರನ್ನೂ ಹೇಳುವುದಿಲ್ಲವೆಂದು ಈ ಅಧಿಕರಣದಲ್ಲಿ ತೀರ್ಮಾನವಾದ ಮೇಲೆ ಪುನಃ ಪ್ರತ್ಯೇಕವಾಗಿ ಹಿಂದಿನ ಪ್ರಾಣಾಧಿಕರಣದಲ್ಲಿ ಪ್ರಾಣಶಬ್ದವು ವಾಯುಪರವಲ್ಲವೆಂದು ಹೇಳುವುದರಲ್ಲಿ ಅರ್ಥವಿಲ್ಲ. ಮತ್ತು ಪೂರ್ವಪಕ್ಷವನ್ನು ನಿರಾಸಮಾಡುವ ನ್ಯಾಯಗಳಲ್ಲಿ ಭೇದವಿದ್ದರೆ ಮಾತ್ರ ಅಧಿಕರಣಭೇದವು ಯುಕ್ತವಾಗುತ್ತದೆ ಹೊರತು ನಿರಸನೀಯವಾದ ಪೂರ್ವಪಕ್ಷಗಳಲ್ಲಿ ಭೇದವಿದ್ದ ಮಾತ್ರದಿಂದ ಅಧಿಕರಣಗಳಲ್ಲಿ ಭೇದವು ಕೂಡುವುದಿಲ್ಲ.

ಪ್ರಶ್ನೆ - ಹಿಂದಿನ ಪ್ರಾಣಾಧಿಕರಣದಲ್ಲಿ ಲೋಕಪ್ರಸಿದ್ಧಿಯನ್ನು ಅವಲಂಬಿಸಿ ಶ್ರುತಿಯಿಂದ ಪೂರ್ವಪಕ್ಷವು ಪ್ರಾಪ್ತವಾದಾಗ ಲಿಂಗಗಳಿಂದ ಸಿದ್ಧಾಂತ ಮಾಡಲಾಗಿತ್ತು. ಆದರೆ ಈ ಅಧಿಕರಣದಲ್ಲಿ ಲಿಂಗಗಳಿಂದ ಪೂರ್ವಪಕ್ಷವು ಪ್ರಾಪ್ತವಾದಾಗ ಶ್ರುತಿಲಿಂಗಗಳಿಂದ ಸಿದ್ಧಾಂತವನ್ನು ಮಾಡಲಾಗಿದೆ. ಆದ್ದರಿಂದಲೇ ಆ ಅಧಿಕರಣದ ಪೂರ್ವಪಕ್ಷದ ಭಾಷ್ಯದಲ್ಲಿ 'ಪ್ರಸಿದ್ಧೇಃ' ಎಂದಿದ್ದಾರೆ. ಈ ಅಧಿಕರಣದ ಸೂತ್ರದಲ್ಲಿ 'ಲಿಂಗಾತ್' ಎಂದಿದ್ದಾರೆ.

ಉತ್ತರ - ಹಾಗಾದಲ್ಲಿ ಈ ಅಧಿಕರಣದ ಪೂರ್ವಪಕ್ಷವೇ ಹುಟ್ಟಲು ಸಾಧ್ಯವಿಲ್ಲ. ಏಕೆಂದರೆ, ಶ್ರುತಿಯಿಂದ ಪ್ರಾಪ್ತವಾದ ಪೂರ್ವಪಕ್ಷವನ್ನು ಕೇವಲ ಲಿಂಗದಿಂದ ಹಿಂದೆ ನಿರಾಕರಿಸಿದ್ದಾಯಿತು. ಪುನಃ ಇದನ್ನು ವಿರೋಧಿಸುವ ಶ್ರುತಿಲಿಂಗಗಳನ್ನು ಬಾಧಿಸಿ ಕೇವಲ ಲಿಂಗದಿಂದ ಪೂರ್ವಪಕ್ಷವನ್ನು ಸ್ಥಾಪಿಸಲು ಸಾಧ್ಯವಿಲ್ಲ.

ಪ್ರಶ್ನೆ - ಲಿಂಗದಿಂದ ಪೂರ್ವಪಕ್ಷವು ಸ್ಥಾಪಿತವಾಗದಿದ್ದರೂ ಶ್ರುತಿಬಾಹುಲ್ಯಪ್ರಯುಕ್ತವಾಗಿ ಪೂರ್ವಪಕ್ಷವು ಹುಟ್ಟಬಹುದಲ್ಲವೇ?

ಉತ್ತರ - ಶ್ರುತಿಬಾಹುಲ್ಯಪ್ರಯುಕ್ತವಾದ ಪೂರ್ವಪಕ್ಷವನ್ನು ಗಾಯತ್ರ್ಯಧಿಕರಣದಲ್ಲೇ ನಿರಾಕರಿಸಿದ್ದಾಯಿತು. ಅದಕ್ಕೋಸ್ಕರ ಈ ಅಧಿಕರಣದ ಅನಿವಾರ್ಯತೆ ಇಲ್ಲ.

ಪ್ರಶ್ನೆ - ಗಾಯತ್ರ್ಯಧಿಕರಣದಲ್ಲಿ ಭಿನ್ನ ಭಿನ್ನ ವಿಷಯಕವಾದ ಗಾಯತ್ರೀ ವಾಕ್ ಪೃಥಿವೀ ಮೊದಲಾದ ಶ್ರುತಿಗಳಿಂದ ಪೂರ್ವಪಕ್ಷವು ಪ್ರಾಪ್ತವಾಗಿದೆ. ಆದರೆ ಈ ಅಧಿಕರಣದಲ್ಲಿ 'ಚಕ್ಷುಃಶ್ರೋತ್ರಂ ಮನೋವಾಕ್ ಪ್ರಾಣಃ । ತತ್ಪ್ರಾಣೇ ಪ್ರಪನ್ನ ಉದತಿಷ್ಠತ್ ಸ ಏಷ ಪ್ರಾಣಃ' ಇತ್ಯಾದಿಯಾಗಿ ಏಕವಿಷಯಕವಾದ ಒಂದೇ ಪ್ರಾಣಶ್ರುತಿಯು ಅನೇಕಬಾರಿ ಕೇಳಿಸುತ್ತಿದೆ. ಬಹುವಿಷಯಕಶ್ರುತಿಯಿಂದ ಪ್ರಾಪ್ತವಾದ ಪೂರ್ವಪಕ್ಷದ ನಿರಾಸಕ್ಕಾಗಿ ಗಾಯತ್ರ್ಯಧಿಕರಣವು ಹೊರಟಿದೆ. ಏಕವಿಷಯಕಶ್ರುತಿಯಿಂದ ಪ್ರಾಪ್ತವಾದ ಪೂರ್ವಪಕ್ಷದ ನಿರಾಸಕ್ಕಾಗಿ ಈ ಅಧಿಕರಣ ಹೊರಟಿದೆ.

ಉತ್ತರ - ಹಾಗೇನಿಲ್ಲ. ಗಾಯತ್ರ್ಯಧಿಕರಣದಲ್ಲಿಯೂ ಸಹ 'ಗಾಯತ್ರೀ ವಾ ಇದಂ ಸರ್ವಂ ವಾಗ್ವೈ ಗಾಯತ್ರೀ ಸೈಷಾ ಷಡ್ವಿಧಾ ಗಾಯತ್ರೀ' ಎಂಬ ಏಕವಿಷಯಕವಾದ ಶ್ರುತಿಯು ಕೇಳಿಸುತ್ತಿದೆ. ಮತ್ತು ಆಕಾಶಾಧಿಕರಣದ ವಿಷಯವಾಕ್ಯದಲ್ಲಂತೂ ಒಂದೇ ಆಕಾಶಶ್ರುತಿಯು ಅನೇಕಬಾರಿ ಕೇಳಿಸುತ್ತಿದೆ. ಆದ್ದರಿಂದ ಪ್ರಾಣಾಧಿಕರಣದಿಂದ ಗತಾರ್ಥತ್ವವನ್ನು ಪರಿಹರಿಸಲು ಹೊರಟರೆ ಗಾಯತ್ರ್ಯಧಿಕರಣದಿಂದಲೋ ಅಥವಾ ಆಕಾಶಾಧಿಕರಣದಿಂದಲೋ ಗತಾರ್ಥತ್ವವು ಬಂದೇ ಬರುತ್ತದೆ.

**ಪ್ರಕಾಶಃ – ''ನನು ಗತಾರ್ಥಮಿದಮಧಿಕರಣಂ, ಸರ್ವಾಸಾಂ ಪ್ರಾಣವಿದ್ಯಾನಾಂ ''ಅತ ಏವ ಪ್ರಾಣಃ'' ಇತ್ಯನೇನೈವ ಭಗವದ್ವಿಷಯತಾಯಾಸ್ಸಮರ್ಥಿತತ್ವಾತ್'' ಇತಿ ನ್ಯಾಯವಿವರಣಟೀಕಾಂ ವಿವರಿತ್ರು-ಮಾಕ್ಷಿಪತಿ – ನನ್ವಿತಿ ॥ ಪ್ರಾಣಶಬ್ದಸ್ಯ ವಿಷ್ಣೌ ತತ್ರೈವ ಮುಖ್ಯತ್ವಸಾಧನಾದಿತಿ ಭಾವಃ ।**

नच वाच्यं तत्र ''तद्वै त्वं प्राणः'' इत्येतदुदाहरणमत्र तु ''ता वा एताः'' इत्यादीति, उदाहरणभेदेनाधिकरणभेदेऽतिप्रसङ्गादित्युक्तत्वात् । नन्वथाऽपि निरसनीयभेदाद्वा पूर्वपक्षप्रापकन्यायभेदाद्वा भेदो भविष्यतीत्यतो निरसनीयभेदं तावदाशङ्क्य निरस्यति – **नचेति** ॥

'इह' अधिकरणे ''जीवमुख्यप्राणलिङ्गात्'' इति सूत्रे इत्यर्थः ॥ **निरासकन्यायेति** ॥ अन्यथाऽऽनन्दमयाधिकरणादावनेकत्वप्रसङ्ग इति भावः । अस्तु तर्हि प्रापकभेदाद्भेद इति चेन्न, तत् श्रुतिमात्रमुत लिङ्गमात्रं, वा ब्रह्मश्रुतिलिङ्गयोरपि भावात् ।

अथ तद्बाहुल्यमिति चेत्तत्किं लिङ्गबाहुल्यं उत श्रुतिबाहुल्यमथ श्रुतिलिङ्ग-बाहुल्यमिति विकल्प्याद्यमाशङ्क्य निरस्यति – **नचेति** ॥ 'लिङ्गैः' श्रीपतित्वादि-लिङ्गैः॥ **लिङ्गैरिति** ॥ प्राणसंवादादिभिः । सौत्रैकवचनं समुदायाशयमिति भावः ॥ **श्रुतीति** ॥ ब्रह्मश्रुत्या सर्वदेवोपदेश्यत्वादिलिङ्गेन च बाधेनेत्यर्थः । द्वितीयमाशङ्क्य निरस्यति – **नचेति** ॥ **तद्बाहुल्यप्राप्तस्येति** ॥

**कथं प्रसिद्धबहुलशब्दानामन्यथार्थता ।**

इत्युक्तेरिति भावः । ननु तत्र श्रुतिबाहुल्यप्राप्तस्य विष्णुश्रुतिलिङ्गबाहुल्येन निरासः,''बाहुल्यात् श्रुतिलिङ्गयोः'' इत्यनुव्याख्यानोक्तेरिति चेत्, इहापि सिद्धान्ते श्रुतिलिङ्गबाहुल्यसत्त्वादिति तात्पर्यात् । पूर्ववैषम्यमाशङ्क्य तौल्यमाह – **नचेति** ॥

**स एष इति** । ''स एषोऽसुः स एष प्राणः स एष भूः'' इति वाक्यमुपादत्ते । ननु न गायत्र्यधिकरणे श्रुत्या वृत्तिप्रयुक्तपूर्वपक्षस्य निरासः, आकाशाधिकरण एव तस्य निरासात् । अन्यथा पौनरुक्त्यापत्तेः । अत एव प्राक्, गायत्रीवाक्पृथिव्यादिश्रुतय एव दर्शिताः, सुधायां च ''गायत्री वा इदꣳ सर्वं वाग्वै गायत्री'' इत्यादयः **प्रसिद्धा बहवश्शब्दाः श्रूयन्त**'' इत्युक्तम्, टीकायां च ''**वात्त्वविधानाच्च**'' इत्युक्तमिति न गायत्र्यधिकरणेन पौनरुक्त्यमित्यतः तर्ह्याकाशाधिकरणेन तत्स्यादित्याह **आकाशेति** ॥ श्रुत्यभ्यासप्राप्तस्यापि तत्रैव निरासान्न तेनेह पूर्वपक्षोदय इति भावः । ननु तत्र निरवकाशत्वपरत्वबहुत्वप्रयुक्तप्राबल्यैर्लिङ्गैर्निरासः ।

ಉಕ್ತಂಚ –

**द्वाभ्यामावृत्तिजातिभ्यामेव हि प्रबला श्रुतिः ।**
**अगतित्वपरत्वानेकत्वैर्लिङ्गानि तु त्रिभिः ॥**

ಇತಿ । ನ ಚೇಹ ಲಿಙ್ಗಾನಿ ತಾದೃಶಾನಿ, ವಕ್ಷ್ಯಮಾಣದಿಶಾ ಬಾಹುಲ್ಯಾದೌ ಸತ್ಯಪಿ ಪರತ್ವಾಯೋಗಾದಿತಿ ಚೇತ್, ಬಹುತ್ವೇನ ಪ್ರಬಲಾನಾಂ ಲಿಙ್ಗಾನಾಂ ಜಾತ್ಯಾ ಬಹುತ್ವೇನ ಚ ಪ್ರಬಲ-ವೈಷ್ಣವಶ್ರುತಿಯುಕ್ತತ್ವೇನ ಸುತರಾಂ ತದ್ವಿರೋಧಿತ್ವಾತ್ ।

ಯದ್ವಾ – ತತ್ರಾಪಿ ನಿರವಕಾಶತ್ವಾದಿಪ್ರಯುಕ್ತಪ್ರಾಬಲ್ಯಮಾಶ್ರಿತ್ಯೈವ ಶ್ರುತ್ಯಾವೃತ್ತಿಪ್ರಾಪ್ತಸ್ಯ ನಿರಾಸಃ । ಪರತ್ವಂ ತು ವಾಸ್ತವಮಭಿಪ್ರೇತ್ಯ ವಾ, ಅನುಪಸಞ್ಜಾತವಿರೋಧಿತ್ವೇನಾಕಾಶಶ್ರುತೇಃ ಪ್ರಾಬಲ್ಯಶಙ್ಕಾಯಾಂ ತನ್ನಿರಾಸಾಯ ''ಪ್ರಥಮೇऽಶ್ರವಣಾತ್'' ಇತಿ ವಕ್ಷ್ಯಮಾಣನ್ಯಾಯೇನ ಪರತ್ವಸ್ಯ ಪ್ರಾಬಲ್ಯಹೇತುತ್ವಮಭಿಪ್ರೇತ್ಯ ವೇತಿ ತಾತ್ಪರ್ಯಾತ್ । ಅತ್ರಾಪಿ ಕೇಷಾಞ್ಚಿತ್ಪರತ್ವಸಮ್ಭವಾಚ್ಚೇತಿ ।

ವಿವರಣೆ - ಈ ಪಾದಾಂತ್ಯಪ್ರಾಣಾಧಿಕರಣವು ಗತಾರ್ಥವಾಗಿದೆಯೆಂದು ದೀರ್ಘವಾಗಿ ಆಕ್ಷೇಪಿಸಲಾಗಿದೆ. 'ನನು ಗತಾರ್ಥಮಿದಮಧಿಕರಣಮ್ । ಸರ್ವಾಸಾಂ ಪ್ರಾಣವಿದ್ಯಾನಾಂ ''ಅತ ಏವ ಪ್ರಾಣಃ'' ಇತ್ಯನೇನೈವ ಭಗವದ್ವಿಷಯತಾಯಾಃ ಸಮರ್ಥಿತತ್ವಾತ್' (ಈ ಅಧಿಕರಣವು ಗತಾರ್ಥವಾಗಿದೆ. ಎಲ್ಲಾ ಪ್ರಾಣಶ್ರುತಿಗಳಿಗೆ 'ಅತ ಏವ ಪ್ರಾಣಃ' ಎಂಬ ಅಧಿಕರಣದಲ್ಲಿಯೇ ಭಗವದ್ವಿಷಯಕವನ್ನು ಸಮರ್ಥಿಸಿದ್ದರಿಂದ) ಎಂಬ ನ್ಯಾಯವಿವರಣದ ಟೀಕೆಯನ್ನು ವ್ಯಾಖ್ಯಾನ ಮಾಡುವುದಕ್ಕಾಗಿ ''ನನು'' ಇತ್ಯಾದಿ ಗ್ರಂಥದಿಂದ ಆಕ್ಷೇಪಿಸುತ್ತಿದ್ದಾರೆ. ಪ್ರಾಣಾಧಿಕರಣದಲ್ಲಿ ಪ್ರಾಣಶಬ್ದವನ್ನು ವಿಷ್ಣುವಿನಲ್ಲಿ ಮುಖ್ಯವಾಗಿ ಸಮರ್ಥನೆ ಮಾಡಿದ್ದರಿಂದ ಗತಾರ್ಥತ್ವವು ಬರುತ್ತದೆಂದು ಆಕ್ಷೇಪಕಾರರ ಅಭಿಪ್ರಾಯ.

ಪ್ರಾಣಾಧಿಕರಣದಲ್ಲಿ 'ತದ್ವೈತ್ಪಂ ಪ್ರಾಣಃ' ಎಂಬುದು ವಿಷಯವಾಕ್ಯ; ಈ ಅಧಿಕರಣದಲ್ಲಿ 'ತಾ ವಾ ಏತಾ ಶೀರ್ಷನ್' ಎಂಬುದು ವಿಷಯವಾಕ್ಯ. ಹೀಗೆ ವಿಷಯವಾಕ್ಯದಲ್ಲಿ ಭೇದವಿರುವುದರಿಂದ ಅಧಿಕರಣ-ಭೇದವನ್ನು ಹೇಳುತ್ತೇವೆಂದು ಪ್ರಶ್ನಿಸಬಾರದು. ವಿಷಯವಾಕ್ಯಭೇದದಿಂದ ಅಧಿಕರಣವು ಭಿನ್ನಭಿನ್ನವಾಗು-ವುದಾದರೆ ವಿಷಯವಾಕ್ಯಗಳು ಅನಂತವಾದ್ದರಿಂದ ಅಧಿಕರಣಗಳೂ ಅನಂತವಾಗ- ಬೇಕಾಗುತ್ತದೆಂಬ ಅತಿಪ್ರಸಂಗ ಬರುತ್ತದೆ.

ಇನ್ನು ಪೂರ್ವಪಕ್ಷವು ಭಿನ್ನವಾದ್ದರಿಂದ ಅಥವಾ ಪೂರ್ವಪಕ್ಷಪ್ರಾಪಕನ್ಯಾಯವು ಭಿನ್ನವಾದ್ದರಿಂದ ಅಧಿಕರಣಭೇದವನ್ನು ಹೇಳಬೇಕು? ಇದೂ ಸಹ ತಪ್ಪೆಂದು 'ನಚ' ಎಂಬ ಗ್ರಂಥದಿಂದ ಸಮರ್ಥಿಸಿದ್ದಾರೆ. 'ಇಹಾಧಿಕರಣೇ' ಎಂಬ ಮಾತಿಗೆ 'ಜೀವಮುಖ್ಯಪ್ರಾಣಲಿಂಗಾತ್' ಎಂಬ ಸೂತ್ರದಲ್ಲಿ ಎಂದರ್ಥ. ಸಿದ್ಧಾಂತ-ನ್ಯಾಯದ ಭೇದದಿಂದಷ್ಟೇ ಅಧಿಕರಣಭೇದವನ್ನು ಹೇಳಬೇಕು. ಇಲ್ಲದಿದ್ದರೆ ಆನಂದಮಯಾದ್ಯಧಿಕರಣ-ಗಳಲ್ಲಿ ಅನೇಕಪೂರ್ವಪಕ್ಷಗಳಿರುವುದರಿಂದ ಅನೇಕ ಅಧಿಕರಣಗಳಾಗಬೇಕಾದೀತು.

ಹಾಗಾದರೆ ಪೂರ್ವಪಕ್ಷಭೇದದಿಂದ ಅಧಿಕರಣವು ಭಿನ್ನವಾಗುವುದು ಬೇಡ. ಪೂರ್ವಪಕ್ಷಪ್ರಾಪಕ-ನ್ಯಾಯದಲ್ಲಿ ಭೇದವಿರುವುದರಿಂದ ಅಧಿಕರಣವು ಭಿನ್ನವಾಗಲಿ ಎಂದು ಪ್ರಶ್ನಿಸಬಾರದು. ಪೂರ್ವ-ಪಕ್ಷಪ್ರಾಪಕನ್ಯಾಯವೆಂದರೆ ಯಾವುದು? ಕೇವಲ ಶ್ರುತಿಯೋ ಅಥವಾ ಕೇವಲ ಲಿಂಗವೋ? ಎರಡನ್ನೂ ಹೇಳಲಾಗದು. ಏಕೆಂದರೆ ಸಿದ್ಧಾಂತಸ್ಥಾಪಕವಾದ ಬ್ರಹ್ಮಶ್ರುತಿ ಹಾಗೂ ಬ್ರಹ್ಮಲಿಂಗಗಳು ಸಮಾನವಾಗಿವೆ.

ಇನ್ನು ಆವುಗಳ ಬಹುತ್ವವನ್ನು ಪೂರ್ವಪಕ್ಷಪ್ರಾಪಕವೆನ್ನಬೇಕು. ಆವಾಗ ಲಿಂಗಬಾಹುಲ್ಯವು ಪೂರ್ವಪಕ್ಷಪ್ರಾಪಕವೋ ಅಥವಾ ಶ್ರುತಿಬಾಹುಲ್ಯವು ಪೂರ್ವಪಕ್ಷಪ್ರಾಪಕವೋ? ಎಂಬ ಪ್ರಶ್ನೆ ಬರುತ್ತದೆ. ಮೊದಲನೆಯ ಪಕ್ಷವನ್ನು ಶಂಕಿಸಿ 'ನಚ' ಎಂಬ ಗ್ರಂಥದಿಂದ ನಿರಾಕರಿಸಿದ್ದಾರೆ. 'ಲಿಂಗೈಃ' ಎಂಬ ಪದಕ್ಕೆ ಶ್ರೀಪತಿತ್ವಲಿಂಗಗಳಿಂದ ಎಂದರ್ಥ. 'ಲಿಂಗೈಃ ಪೂರ್ವಪಕ್ಷೇ' ಎಂಬಲ್ಲಿರುವ 'ಲಿಂಗೈಃ' ಎಂಬ ಪದಕ್ಕೆ ಪ್ರಾಣಸಂಮಾದಾದಿ ಲಿಂಗಗಳೆಂದರ್ಥ. ವಸ್ತುತಃ ಸೂತ್ರದಲ್ಲಿಯೂ ಬಹುವಚನಾಂತವಾದ ಲಿಂಗಶಬ್ದವನ್ನೇ ಪ್ರಯೋಗಿಸಬೇಕಿತ್ತು. ಆದರೆ 'ಸಮುದಾಯೇ ಏಕವಚನಂ' ಎಂದು ವಿವಕ್ಷಿಸಿದಾಗ ದೋಷವಿಲ್ಲ. 'ಶ್ರುತಿ-ಲಿಂಗಬಾಧೇನ' ಎಂದು ಗ್ರಂಥದಲ್ಲಿದೆ. ಇದಕ್ಕೆ 'ಬ್ರಹ್ಮಶ್ರುತಿಯಿಂದ ಹಾಗೂ ಸರ್ವದೇವೋಪದೇಶ್ಯತ್ವಾದಿ ಲಿಂಗಗಳಿಂದ ಬಾಧಬರುವುದರಿಂದ' ಎಂದರ್ಥ.

ಶ್ರುತಿಬಾಹುಲ್ಯವು ಪೂರ್ವಪಕ್ಷಪ್ರಾಪಕವೆಂಬ ಎರಡನೆಯ ಪಕ್ಷವನ್ನು ಆಶಂಕಿಸಿ 'ನಚ ಶ್ರುತಿ' ಎಂಬ ಗ್ರಂಥದಿಂದ ನಿರಾಕರಿಸುತ್ತಿದ್ದಾರೆ. 'ಕಥಂ ಪ್ರಸಿದ್ಧಬಹುಲಶಬ್ದಾನಾಂ ಅನ್ಯಥಾರ್ಥತಾ' (ಪ್ರಸಿದ್ಧವಾದ ಬಹುಲಶಬ್ದಗಳ ಪ್ರಯೋಗದಿಂದ ಹೇಗೆ ತಾನೆ ಅನ್ಯಾರ್ಥವಾಗುತ್ತದೆ?) ಎಂಬ ಆಚಾರ್ಯರ (ಅನು-ವ್ಯಾಖ್ಯಾನದ) ಮಾತನ್ನು 'ತದ್ಬಾಹುಲ್ಯಪ್ರಾಪ್ತಸ್ಯ' ಎಂಬ ಪದದಿಂದ ಉಲ್ಲೇಖಿಸಿದ್ದಾರೆ. ಗಾಯತ್ರ್ಯಧಿಕರಣ-ದಲ್ಲಿ ಬಹಳಶ್ರುತಿಗಳಿಂದ ಪ್ರಾಪ್ತವಾದ ಪೂರ್ವಪಕ್ಷವನ್ನು 'ಬಾಹುಲ್ಯಾತ್ ಶ್ರುತಿಲಿಂಗಯೋಃ' ಎಂಬ ಅನುವ್ಯಾಖ್ಯಾನದ ಮಾತಿನಂತೆ, ವಿಷ್ಣುಪರವಾದ ಬಹಳಶ್ರುತಿಲಿಂಗಗಳಿಂದ ನಿರಾಕರಿಸಲಾಗಿದೆ ಎಂದು ಶಂಕಿಸಿದರೆ, ಈ ಅಧಿಕರಣದ ಸಿದ್ಧಾಂತದಲ್ಲಿಯೂ ಬಹಳವಾದ ಶ್ರುತಿಲಿಂಗಗಳನ್ನು ಉಲ್ಲೇಖಿಸಲಾಗಿದೆ ಎಂದು ಈ ವಾಕ್ಯದ ತಾತ್ಪರ್ಯ.

ಹಿಂದಿನ ಗಾಯತ್ರೀಪ್ರಕರಣದಿಂದ ಈ ಅಧಿಕರಣಕ್ಕೆ ವೈಷಮ್ಯವನ್ನು ಆಶಂಕಿಸಿ 'ನಚ' ಎಂಬ ಗ್ರಂಥದಿಂದ ನಿರಾಕರಿಸಿದ್ದಾರೆ. 'ಸ ಏಷ ಪ್ರಾಣಃ' ಎಂಬುದರಿಂದ 'ಸ ಏಷೋಸುಃ ಸ ಏಷ ಪ್ರಾಣಃ ಸ ಏಷ ಭೂಃ' ಎಂಬ ವಾಕ್ಯವನ್ನು ಸ್ವೀಕರಿಸಿದ್ದಾರೆ.

''ಗಾಯತ್ರ್ಯಧಿಕರಣದಲ್ಲಿ ಒಂದೇ ಶ್ರುತಿಯ ಆವೃತ್ತಿಯಿಂದ ಹುಟ್ಟಿದ ಪೂರ್ವಪಕ್ಷವನ್ನು ನಿರಾಕರಿಸಿಲ್ಲ. ಆದರೆ ಆಕಾಶಾಧಿಕರಣದಲ್ಲಿ ಅದನ್ನು ನಿರಾಕರಿಸಿದ್ದಾರೆ. ಹೀಗೆ ಹೇಳದಿದ್ದರೆ ಆಕಾಶಾಧಿಕರಣದಿಂದ ಗಾಯತ್ರ್ಯಧಿಕರಣಕ್ಕೆ ಪುನರುಕ್ತಿ ಬರುತ್ತಿತ್ತು. ಆದ್ದರಿಂದಲೇ ಹಿಂದೆ ಬಹುವಿಷಯಕವಾದ ಗಾಯತ್ರೀ-ವಾಕ್‌ಪೃಥಿವ್ಯಾದಿಶ್ರುತಿಗಳನ್ನು ಉಲ್ಲೇಖಿಸಿದ್ದರು. ಸುಧೆಯಲ್ಲಿಯೂ 'ಗಾಯತ್ರೀ ವಾ ಇದಂ ಸರ್ವಂ ವಾಗ್ವೈ ಗಾಯತ್ರೀತ್ಯಾದಯಃ ಪ್ರಸಿದ್ಧಾಃ ಬಹವಃ ಶಬ್ದಾಃ ಶ್ರೂಯಂತೇ' (ಗಾಯತ್ರೀ ವಾ ಇದಂ ಸರ್ವಂ ವಾಗ್ವೈ ಗಾಯತ್ರೀ ಇತ್ಯಾದಿಯಾಗಿ ಪ್ರಸಿದ್ಧವಾದ ಅನೇಕಶಬ್ದಗಳು ಕೇಳಿಸುತ್ತಿವೆ') ಎಂದು ಹೇಳಿದ್ದಾರೆ. ಟೀಕೆಯಲ್ಲಿಯೂ 'ವಾಕ್ತ್ವವಿಧಾನಾಚ್ಚ' ಎಂಬ ಮಾತಿನಿಂದ ಇದನ್ನೇ ಹೇಳಿದ್ದಾರೆ. ಆದ್ದರಿಂದ

ಗಾಯತ್ರ್ಯಧಿಕರಣದಿಂದ ಪುನರುಕ್ತಿಯನ್ನು ಈ ಅಧಿಕರಣಕ್ಕೆ ಹೇಳಲಾಗದು'' ಎಂದು ಪ್ರಶ್ನಿಸಿದರೆ ಆಕಾಶಾಧಿಕರಣದಿಂದ ಪುನರುಕ್ತಿ ಬರುತ್ತದೆಂದು 'ಆಕಾಶ' ಎಂಬ ಗ್ರಂಥದಿಂದ ಹೇಳುತ್ತಿದ್ದಾರೆ. ಆಕಾಶಾಧಿಕರಣದಲ್ಲಿ ಶ್ರುತಿಯ ಆವೃತ್ತಿಯಿಂದ ಪ್ರಾಪ್ತವಾದ ಪೂರ್ವಪಕ್ಷವನ್ನು ನಿರಾಕರಿಸಿದ ಮೇಲೆ ಪುನಃ ಇಲ್ಲಿ ಅದೇ ಪೂರ್ವಪಕ್ಷವನ್ನು ಇಲ್ಲಿ ಮಾಡಲು ಸಾಧ್ಯವಿಲ್ಲವೆಂದು ಅಭಿಪ್ರಾಯ.

ಶಂಕೆ - ಆಕಾಶಾಧಿಕರಣದಿಂದ ಗತಾರ್ಥತ್ವದೋಷವನ್ನು ಗ್ರಂಥಕಾರರು ಹೇಳಿದ್ದು ಸರಿಯಲ್ಲ. ಏಕೆಂದರೆ ಆಕಾಶಾಧಿಕರಣದಲ್ಲಿ ನಿರವಕಾಶತ್ವ, ಪರತ್ವ, ಬಹುತ್ವಪ್ರಯುಕ್ತವಾಗಿ ಪ್ರಬಲವಾದ ಅನೇಕ ಲಿಂಗಗಳಿಂದ ಪೂರ್ವಪಕ್ಷವನ್ನು ನಿರಾಕರಿಸಿದ್ದಾರೆ. ಇದನ್ನೇ

ದ್ವಾಭ್ಯಾಮಾವೃತ್ತಿಜಾತಾಭ್ಯಾಮೇವ ಹಿ ಪ್ರಬಲಾ ಶ್ರುತಿಃ॥
ಆಗತಿತ್ವಪರತ್ವಾನೇಕತ್ವೈರ್ಲಿಂಗಂ ನ ತು ತ್ರಿಭಿಃ॥

(ಬಹುತ್ವಪ್ರಯುಕ್ತವಾಗಿ ಮತ್ತು ಸ್ವಾಭಾವಿಕವಾಗಿ ಶ್ರುತಿಯು ಬಲಿಷ್ಠವಾಗಿದೆ. ಆದರೂ ಸಹ ನಿರವಕಾಶತ್ವ, ಪರತ್ವ, ಬಹುತ್ವಪ್ರಯುಕ್ತವಾದ ಲಿಂಗದಿಂದ ಬಾಧಿತವಾಗುತ್ತದೆ. ಶ್ರುತಿಯಲ್ಲಿ ಇಂತಹ ಪ್ರಾಬಲ್ಯವಿಲ್ಲ) ಎಂದು ಹೇಳಿದೆ. ಆದರೆ ಈ ಅಧಿಕರಣದಲ್ಲಿ ಹೇಳುವ ಲಿಂಗಗಳಲ್ಲಿ ಇಂತಹ ಪ್ರಾಬಲ್ಯವಿಲ್ಲ. ಮುಂದೆ ಹೇಳುವಂತೆ ನಿರವಕಾಶತ್ವ ಬಹುತ್ವಗಳು ಲಿಂಗದಲ್ಲಿ ಇರಬಹುದು. ಆದರೆ ಪರತ್ವವು ಇಲ್ಲದ ಕಾರಣ ಆಕಾಶಾಧಿಕರಣದ ಲಿಂಗಕ್ಕೂ ಈ ಅಧಿಕರಣದ ಲಿಂಗಕ್ಕೂ ವ್ಯತ್ಯಾಸವಿದೆ. ಹೀಗಿರುವಾಗ ಗ್ರಂಥಕಾರರು ಗತಾರ್ಥತ್ವವನ್ನು ಹೇಳಿದ್ದು ಹೇಗೆ ಸರಿ?

ಸಮಾಧಾನ - ಆಕಾಶಾಧಿಕರಣದಲ್ಲಿ ಉಲ್ಲೇಖಿಸಿದ ಲಿಂಗವು ಬಹುತ್ವೇನ ಪರತ್ವೇನ ನಿರವಕಾಶತ್ವೇನ ಪ್ರಬಲವಾಗಿದ್ದರೂ ಜಾತ್ಯಾ ದುರ್ಬಲವಾಗಿದೆ. ಹೀಗೆ ಜಾತ್ಯಾ ದುರ್ಬಲವಾದ ಲಿಂಗದಿಂದಲೇ ಪೂರ್ವಪಕ್ಷವನ್ನು ನಿರಾಕರಿಸಿದ ಮೇಲೆ ಈ ಅಧಿಕರಣದಲ್ಲಿ ಉಲ್ಲೇಖಿಸುತ್ತಿರುವ ಲಿಂಗದಲ್ಲಿ ಜಾತ್ಯಾಪ್ರಾಬಲ್ಯವೂ ಇದೆ. ಅಂದರೆ ನಿರವಕಾಶತ್ವ, ಬಹುತ್ವಪ್ರಯುಕ್ತವಾಗಿ ಪ್ರಬಲವಾದಂತೆ ವೈಷ್ಣವಶ್ರುತಿಗಳಿಂದ ಕೂಡಿದ್ದರಿಂದ ಸ್ವಭಾವದಿಂದಲೂ ಬಲಿಷ್ಠವಾಗಿದೆ. ಇಂತಹ ಲಿಂಗಗಳಿಂದ ಪೂರ್ವಪಕ್ಷವು ನಿರಾಸವಾಗುತ್ತದೆಂಬುದರಲ್ಲಿ ಸಂಶಯವಿಲ್ಲ. ಅಥವಾ ಪ್ರಾಣಾಧಿಕರಣದಲ್ಲಿ ಪರತ್ವಪ್ರಯುಕ್ತವಾದ ಪ್ರಾಬಲ್ಯವನ್ನು ಲಿಂಗಕ್ಕೆ ಹೇಳುವುದರಲ್ಲಿ ತಾತ್ಪರ್ಯವಿಲ್ಲ. ಕೇವಲ ನಿರವಕಾಶತ್ವ ಹಾಗೂ ಬಹುತ್ವಪ್ರಯುಕ್ತವಾದ ಲಿಂಗವಷ್ಟೇ ಅಭಿಪ್ರೇತವಾಗಿದೆ. ವಸ್ತುಸ್ಥಿತಿಯನ್ನಷ್ಟೇ ಅನುಸರಿಸಿ ಪರತ್ವವನ್ನು ಹೇಳಲಾಗಿದೆ. ಅಥವಾ ಆಕಾಶಶ್ರುತಿಯು ಅನುಪಸಂಜಾತವಿರೋಧಿಯಾದ್ದರಿಂದ (ಉಪಕ್ರಮದಲ್ಲಿರುವುದರಿಂದ) ಪ್ರಬಲವಾಗಿದೆಯೆಂದು ಶಂಕಿಸಿದರೆ ಅದರ ಪರಿಹಾರಕ್ಕಾಗಿ ಪರತ್ವವನ್ನು ಹೇಳಿದ್ದಾರೆ. ಮುಂದೆ 'ಪ್ರಥಮೇ ಶ್ರವಣಾತ್' ಎಂಬ ಸೂತ್ರದಲ್ಲಿ ಉಪಕ್ರಮಕ್ಕಿಂತಲೂ ಉಪಸಂಹಾರವೇ ಪ್ರಬಲವೆಂದು ಸಮರ್ಥಿಸುತ್ತಾರೆ. ಅದರ ಪ್ರಕಾರ ಉಪಸಂಹಾರವು ಪ್ರಬಲವೆಂದು ತಿಳಿಸಲು ಇಲ್ಲಿ ಪರತ್ವವನ್ನು ಪ್ರಾಬಲ್ಯಹೇತುವನ್ನಾಗಿ ಪರಿಗಣಿಸಿದ್ದಾರೆ. ಆದ್ದರಿಂದ ಉಪಸಂಹಾರಪ್ರಾಬಲ್ಯವನ್ನು ತಿಳಿಸುವುದರಲ್ಲಷ್ಟೇ ಪರತ್ವಶಬ್ದದ ತಾತ್ಪರ್ಯ. ಅಥವಾ ಇಲ್ಲಿಯೂ ಸಹ ಕೆಲವು ವಾಕ್ಯಗಳಿಗೆ ಪರತ್ವವನ್ನು ಹೇಳಬಹುದು. ಆದ್ದರಿಂದ ಆಕಾಶಾಧಿಕರಣದಲ್ಲಿ ಹೇಳಿದ ಲಿಂಗಗಳಿಗೂ ಇಲ್ಲಿ ಹೇಳುತ್ತಿರುವ ಲಿಂಗಗಳಿಗೂ ಯಾವ ವ್ಯತ್ಯಾಸವೂ ಇಲ್ಲ.

**ಗುರುರಾಜೀಯಮ್ – ದ್ವಿಧಾ ಗಾಯತ್ರ್ಯಧಿಕರಣೇ ನಿರಾಸಾದಿತಿ । ಏಕಸ್ಯಾಃ ವಹ್ನಿಶ್ರುತೇರನ್ಯತ್ರಪ್ರಸಿದ್ಧಿಬಾಧೇಪಿ ಗಾಯತ್ರೀವಾಕ್ಪೃಥಿವ್ಯಾದ್ಯನೇಕಶಬ್ದಾನಾಮನ್ಯತ್ರಪ್ರಸಿದ್ಧಿಬಾಧೋऽಯುಕ್ತ ಇತಿ ಶ್ರುತಿಬಾಹುಲ್ಯಪ್ರಾಪ್ತಸ್ಯ ಪೂರ್ವಪಕ್ಷಸ್ಯ ತತ್ತಚ್ಛಬ್ದವಾಚ್ಯತ್ವೇನೋಪಾಸನಾರ್ಥಮಿತ್ಯೇಕಃ ಪ್ರಕಾರಃ । ದ್ವಿತೀಯಸ್ತು ತತೋ ಜ್ಯಾಯಾಂಶ್ಚ ಪುರುಷಃ ಯದ್ವೈ ತದ್ಬ್ರಹ್ಮ ಏತಾಮೇವ ಬ್ರಹ್ಮೋಪನಿಷದಂ ವೇದೇತ್ಯಾದಿಶ್ರುತೀನಾಂ ಗಾನತ್ರಾಣಕರ್ತೃತ್ವಂ ಭೂತಾದಿಪಾದತ್ವಂ ಏತಾಮೇವ ನಾತಿಶೀಯನ್ತೇ ಇತಿ ಸರ್ವೋತ್ತಮತ್ವಮಿತ್ಯಾದಿ-ಲಿಙ್ಗಾನಾಂ ಬಾಹುಲ್ಯಾದನೇಕೇಷಾಮಪಿ ಶಬ್ದಾನಾಂ ಪ್ರಸಿದ್ಧಾರ್ಥತ್ಯಾಗಃ ಇತ್ಯೇವಂ ಪ್ರಕಾರದ್ವಯೇನ ಗಾಯತ್ರ್ಯಧಿಕರಣೇ ನಿರಾಸಾದಿತ್ಯರ್ಥಃ ।**

## ಸಾರ

ಈ ಪಾದಾಂತ್ಯಪ್ರಾಣಾಧಿಕರಣವು ಗತಾರ್ಥವಾಗಿದೆಯೆಂದು ದೀರ್ಘವಾಗಿ ಆಕ್ಷೇಪಿಸಲಾಗಿದೆ.

ಹಿಂದಿನ ಪ್ರಾಣಾಧಿಕರಣದಲ್ಲಿ ತೈತ್ತಿರೀಯದಲ್ಲಿರುವ ಪ್ರಾಣಶಬ್ದವು ವಾಯುಪರವಲ್ಲವೆಂದು ಹೇಳಿದರು. ಇಲ್ಲಿ ಐತರೇಯಪ್ರಾಣನು ಇಂದ್ರನಾಗಲೀ ಜೀವನಾಗಲೀ ಅಲ್ಲವೆಂದು ಹೇಳುತ್ತಿದ್ದಾರೆ. ಹೀಗಿರುವಾಗ ಗತಾರ್ಥತ್ವವನ್ನು ಹೇಗೆ ಹೇಳುತ್ತೀರಿ?

ಈ ಅಧಿಕರಣದಲ್ಲಿಯೂ ಸಹ ಪ್ರಾಣಶಬ್ದವು ವಾಯುಪರ ಅಲ್ಲವೆಂದೇ ಹೇಳಬೇಕು ಹೊರತು ಇಂದ್ರ ಅಥವಾ ಜೀವಪರವಲ್ಲ ಎಂಬುದು ಮುಖ್ಯವಲ್ಲ. ಇಲ್ಲದಿದ್ದರೆ ಸೂತ್ರದಲ್ಲಿರುವ ಮುಖ್ಯಪ್ರಾಣಪದವು ತಪ್ಪಾಗುತ್ತದೆ. ಆದ್ದರಿಂದ ಗತಾರ್ಥತ್ವವು ಬಂದೇ ಬರುತ್ತದೆ.

ಗಾಯತ್ರ್ಯಧಿಕರಣದಲ್ಲಿಯೂ ಸಹ 'ಗಾಯತ್ರೀ ವಾ ಇದಂ ಸರ್ವಂ ವಾಗ್ವೈ ಗಾಯತ್ರೀ ಸೈಷಾ ಷಡ್ವಿಧಾ ಗಾಯತ್ರೀ' ಎಂಬ ಏಕವಿಷಯಕವಾದ ಶ್ರುತಿಯು ಕೇಳಿಸುತ್ತಿದೆ. ಮತ್ತು ಆಕಾಶಾಧಿಕರಣದ ವಿಷಯ-ವಾಕ್ಯದಲ್ಲಂತೂ ಒಂದೇ ಆಕಾಶಶ್ರುತಿಯು ಅನೇಕಬಾರಿ ಕೇಳಿಸುತ್ತಿದೆ. ಆದ್ದರಿಂದ ಪ್ರಾಣಾಧಿಕರಣದಿಂದ ಗತಾರ್ಥತ್ವವನ್ನು ಪರಿಹರಿಸಲು ಹೊರಟರೆ ಗಾಯತ್ರ್ಯಧಿಕರಣದಿಂದಲೋ ಅಥವಾ ಆಕಾಶಾಧಿಕರಣ-ದಿಂದಲೋ ಗತಾರ್ಥತ್ವವು ಬಂದೇ ಬರುತ್ತದೆ.

* * * *

## ಮತ್ತೊಂದು ಬಗೆಯಲ್ಲಿ ಪುನರುಕ್ತಿ ಪರಿಹಾರ

### ತಾತ್ಪರ್ಯಚನ್ದ್ರಿಕಾ

**ನಚ ಶ್ರುತಿಲಿಙ್ಗಬಾಹುಲ್ಯಾದುಜ್ಜೀವನಮ್, ಅತ ಏವಾನುವ್ಯಾಖ್ಯಾನೇ "ಬಾಹುಲ್ಯಾತ್ ಶ್ರುತಿಲಿಙ್ಗಯೋಃ" ಇತ್ಯುಕ್ತಮ್ ।**

**ಇಹ ಭಾಷ್ಯೇ ಟೀಕಾಯಾಂ ಚ ಲಿಙ್ಗಮಾತ್ರೋಕ್ತಿಃ ಪೂರ್ವಪಕ್ಷೋಪಕ್ರಮಮಾತ್ರಮಿತಿ ವಾಚ್ಯಮ್,**

**ಇನ್ದ್ರೇ ''ಇನ್ದ್ರಸ್ಯ ಪ್ರಿಯಂ ಧಾಮೋಪೇಯಾಯ ತಮಿನ್ದ್ರ ಉವಾಚ ಪ್ರಾಣೋ ವಾ ಅಹಮಸ್ಮಿ'' ಇತ್ಯಾದಿಶ್ರುತೀನಾಂ ಮಹಾವ್ರತಯಾಜಿತ್ವಾದಿಲಿಙ್ಗಾನಾಂ ಮುಖ್ಯಪ್ರಾಣೇ ಪ್ರಾಣಾದಿಶ್ರುತೀನಾಂ ''ತಾ ಅಹಿಂಸನ್ತ'' ಇತಿ ಪ್ರಾಣಸಂವಾದಾದಿಲಿಙ್ಗಾನಾಂ,**

**ಜೀವೇ ''ಪುರುಷರೂಪೇಣ ಯ ಏಷ ತಪತಿ ಸ ಏಷ ಪುರುಷಃ ಸಮುದ್ರಃ'' ಇತ್ಯಾದಿಶ್ರುತೀನಾಂ ''ತಾವನ್ತಿ ಶತಸಂವತ್ಸರಸ್ಯಾಹ್ನಾಂ ಸಹಸ್ರಾಣಿ ಭವನ್ತಿ'' ಇತಿ ಶತಸಂವತ್ಸರತ್ವಾದಿಲಿಙ್ಗಾನಾಂ ಚ ಬಾಹುಲ್ಯೇऽಪಿ, ಇನ್ದ್ರಾದಿಶ್ರುತೇಃ ''ಅನ್ತಃ'' ಇತ್ಯತ್ರ, ಪ್ರಾಣಶ್ರುತೇಶ್ಚ ''ಅತ ಏವ ಪ್ರಾಣಃ'' ಇತ್ಯತ್ರ, ಪುರುಷಶ್ರುತೇಶ್ಚ ಗಾಯತ್ರ್ಯಧಿಕರಣೇ ಸಾವಕಾಶಿತತ್ವೇನ, ಲಿಙ್ಗಾನಾಂ ಚ ವಿಷ್ಣೌ ಪ್ರವೃತ್ತಪ್ರಬಲ-ಶ್ರುತ್ಯನುಸಾರೇಣ ಅನ್ತರಧಿಕರಣಪೂರ್ವಪಕ್ಷೋಕ್ತಾನಾಮಪಾನ್ನೇತೃತ್ವಾದಿಲಿಙ್ಗಾನಾಮಿವ ವಿಷ್ಣೌ ಪ್ರವರ್ತನೀಯತ್ವೇನ ಸಮ್ಭಾವಿತಾವಕಾಶತಯಾ ಬಹುವಿಷ್ಣುಶ್ರುತಿಬಾಧಕತ್ವಾಯೋಗಾತ್ ।**

ಅನುವಾದ - ಪ್ರಶ್ನೆ - ಹಿಂದಿನ ಆಕಾಶಾದ್ಯಧಿಕರಣಗಳಲ್ಲಿ ಶ್ರುತಿಲಿಂಗಬಾಹುಲ್ಯಪ್ರಯುಕ್ತವಾದ ಪೂರ್ವಪಕ್ಷವನ್ನು ಮಾಡಿಲ್ಲ. ಆದ್ದರಿಂದ ಈ ಅಧಿಕರಣದಲ್ಲಿ ಶ್ರುತಿಲಿಂಗಬಾಹುಲ್ಯಪ್ರಯುಕ್ತವಾದ ಪೂರ್ವಪಕ್ಷವು ಹುಟ್ಟಬಹುದು. ಆದ್ದರಿಂದಲೇ ಅನುವ್ಯಾಖ್ಯಾನದಲ್ಲಿ 'ಬಾಹುಲ್ಯಾತ್ ಶ್ರುತಿ-ಲಿಂಗಯೋಃ' ಎಂದು ಹೇಳಿದ್ದಾರೆ. ಈ ಅಧಿಕರಣದ ಭಾಷ್ಯ ಹಾಗೂ ಟೀಕೆಗಳಲ್ಲಿ ವಸ್ತುತಃ ಲಿಂಗವನ್ನಷ್ಟೇ ಹೇಳಿರಬಹುದು. ಆದರೆ ಅದು ಕೇವಲ ಪೂರ್ವಪಕ್ಷದ ಉಪಕ್ರಮ ಮಾತ್ರ. ಮುಂದೆ ಬಾಹುಲ್ಯವನ್ನು ಹೇಳಬಹುದೆಂದು ಅದರ ಅಭಿಪ್ರಾಯ. ಆದ್ದರಿಂದ ಈ ಅಧಿಕರಣವು ಗತಾರ್ಥವಲ್ಲ.

ಉತ್ತರ - ನೀವು ಹೇಳುತ್ತಿರುವ ಶ್ರುತಿಲಿಂಗಬಾಹುಲ್ಯವು ವಿಷ್ಣುವಿನಲ್ಲಿ ಸಾವಕಾಶವಾದ್ದರಿಂದ ಪೂರ್ವಪಕ್ಷಪ್ರಾಪಕವಾಗುವುದಿಲ್ಲ. ಅದು ಹೀಗೆ --

ಇಂದ್ರನಲ್ಲಿ ಶ್ರುತವಾದ 'ಇಂದ್ರಸ್ಯ ಪ್ರಿಯಂ ಧಾಮೋಪೇಯಾಯ ತಮಿಂದ್ರ ಉವಾಚ ಪ್ರಾಣೋ ವಾ ಅಹಮಸ್ಮಿ' ಇತ್ಯಾದಿ ಶ್ರುತಿಗಳು ಮತ್ತು ಮಹಾವ್ರತಯಾಜತ್ವ ಮೊದಲಾದ ಲಿಂಗಗಳು ಸಾವಕಾಶವಾಗಿವೆ. ಇದರಂತೆ ಮುಖ್ಯಪ್ರಾಣನಲ್ಲಿ ಕೇಳಿಸುತ್ತಿರುವ ಪ್ರಾಣಶ್ರುತಿಗಳು ಹಾಗೂ 'ತಾ ಅಹಿಂಸಂತ' ಎಂಬ ಪ್ರಾಣಸಂವಾದಾದಿ ಲಿಂಗಗಳು;

ಜೀವನಲ್ಲಿ ಕೇಳಿಸುತ್ತಿರುವ 'ಪುರುಷರೂಪೇಣ ಯ ಏಷ ತಪತಿ ಸ ಏಷ ಪುರುಷಃ ಸಮುದ್ರಃ' ಇತ್ಯಾದಿಶ್ರುತಿಗಳು 'ತಾವಂತಿ ಶತಸಂವತ್ಸರಸ್ಯಾಹ್ನಾಂ ಸಹಸ್ರಾಣಿ ಭವಂತಿ' ಎಂಬ ಶತಸಂವತ್ಸರತ್ವಾದಿ ಲಿಂಗಗಳು ಬಹಳವಾಗಿರಬಹುದು. ಆದರೂ ಸಹ ಇಂದ್ರಾದಿಶ್ರುತಿಗಳು ಸಾವಕಾಶವೆಂದು ಅಂತರಧಿಕರಣದಲ್ಲಿ; ಪ್ರಾಣಶ್ರುತಿಗಳು ಸಾವಕಾಶವೆಂದು 'ಅತ ಏವ ಪ್ರಾಣಃ' ಎಂಬ ಅಧಿಕರಣದಲ್ಲಿ; ಪುರುಷಶ್ರುತಿಯು ಸಾವಕಾಶವೆಂದು ಗಾಯತ್ರ್ಯಧಿಕರಣದಲ್ಲಿ ಸಮರ್ಥಿಸಿದ್ದಾಗಿದೆ. ಮತ್ತು ಎಲ್ಲ ಲಿಂಗಗಳು ವಿಷ್ಣುವಿನಲ್ಲಿ ಸಾವಕಾಶವಾಗಿವೆ ಎಂದು ಅಂತರಧಿಕರಣದಲ್ಲಿ ಹೇಳಿದ್ದಾಗಿದೆ. ವಿಷ್ಣುವಿನಲ್ಲಿ

**ಗುರುರಾಜೀಯಮ್** – ದ್ವಿಧಾ ಗಾಯತ್ರ್ಯಧಿಕರಣೇ ನಿರಾಸಾದಿತಿ । ಏಕಸ್ಯಾಃ ವಹ್ನಿಶ್ರುತೇರನ್ಯತ್ರಪ್ರಸಿದ್ಧಿಬಾಧೇಪಿ ಗಾಯತ್ರೀವಾಕ್ಪೃಥಿವ್ಯಾದ್ಯನೇಕಶಬ್ದಾನಾಮನ್ಯತ್ರಪ್ರಸಿದ್ಧಿಬಾಧೋऽಯುಕ್ತ ಇತಿ ಶ್ರುತಿಬಾಹುಲ್ಯಪ್ರಾಪ್ತಸ್ಯ ಪೂರ್ವಪಕ್ಷಸ್ಯ ತತ್ತಚ್ಛಬ್ದವಾಚ್ಯತ್ವೇನೋಪಾಸನಾರ್ಥಮಿತ್ಯೇಕಃ ಪ್ರಕಾರಃ । ದ್ವಿತೀಯಸ್ತು ತತೋ ಜ್ಯಾಯಾಂಶ್ಚ ಪುರುಷಃ ಯದ್ವೈ ತದ್ಬ್ರಹ್ಮ ಏತಾಮೇವ ಬ್ರಹ್ಮೋಪನಿಷದಂ ವೇದೇತ್ಯಾದಿಶ್ರುತೀನಾಂ ಗಾನತ್ರಾಣಕರ್ತೃತ್ವಂ ಭೂತಾದಿಪಾದತ್ವಂ ಏತಾಮೇವ ನಾತಿಶೀಯನ್ತೇ ಇತಿ ಸರ್ವೋತ್ತಮತ್ವಮಿತ್ಯಾದಿ-ಲಿಙ್ಗಾನಾಂ ಬಾಹುಲ್ಯಾದನೇಕೇಷಾಮಪಿ ಶಬ್ದಾನಾಂ ಪ್ರಸಿದ್ಧಾರ್ಥತ್ಯಾಗಃ ಇತ್ಯೇವಂ ಪ್ರಕಾರದ್ವಯೇನ ಗಾಯತ್ರ್ಯಧಿಕರಣೇ ನಿರಾಸಾದಿತ್ಯರ್ಥಃ ।

## ಸಾರ

ಈ ಪಾದಾಂತ್ಯಪ್ರಾಣಾಧಿಕರಣವು ಗತಾರ್ಥವಾಗಿದೆಯೆಂದು ದೀರ್ಘವಾಗಿ ಆಕ್ಷೇಪಿಸಲಾಗಿದೆ.

ಹಿಂದಿನ ಪ್ರಾಣಾಧಿಕರಣದಲ್ಲಿ ತೈತ್ತಿರೀಯದಲ್ಲಿರುವ ಪ್ರಾಣಶಬ್ದವು ವಾಯುಪರವಲ್ಲವೆಂದು ಹೇಳಿದರು. ಇಲ್ಲಿ ಐತರೇಯಪ್ರಾಣನು ಇಂದ್ರನಾಗಲೀ ಜೀವನಾಗಲೀ ಅಲ್ಲವೆಂದು ಹೇಳುತ್ತಿದ್ದಾರೆ. ಹೀಗಿರುವಾಗ ಗತಾರ್ಥತ್ವವನ್ನು ಹೇಗೆ ಹೇಳುತ್ತೀರಿ?

ಈ ಅಧಿಕರಣದಲ್ಲಿಯೂ ಸಹ ಪ್ರಾಣಶಬ್ದವು ವಾಯುಪರ ಅಲ್ಲವೆಂದೇ ಹೇಳಬೇಕು ಹೊರತು ಇಂದ್ರ ಅಥವಾ ಜೀವಪರವಲ್ಲ ಎಂಬುದು ಮುಖ್ಯವಲ್ಲ. ಇಲ್ಲದಿದ್ದರೆ ಸೂತ್ರದಲ್ಲಿರುವ ಮುಖ್ಯಪ್ರಾಣಪದವು ತಪ್ಪಾಗುತ್ತದೆ. ಆದ್ದರಿಂದ ಗತಾರ್ಥತ್ವವು ಬಂದೇ ಬರುತ್ತದೆ.

ಗಾಯತ್ರ್ಯಧಿಕರಣದಲ್ಲಿಯೂ ಸಹ 'ಗಾಯತ್ರೀ ವಾ ಇದಂ ಸರ್ವಂ ವಾಗ್ವೈ ಗಾಯತ್ರೀ ಸೈಷಾ ಷಡ್ವಿಧಾ ಗಾಯತ್ರೀ' ಎಂಬ ಏಕವಿಷಯಕವಾದ ಶ್ರುತಿಯು ಕೇಳಿಸುತ್ತಿದೆ. ಮತ್ತು ಆಕಾಶಾಧಿಕರಣದ ವಿಷಯ-ವಾಕ್ಯದಲ್ಲಂತೂ ಒಂದೇ ಆಕಾಶಶ್ರುತಿಯು ಅನೇಕಬಾರಿ ಕೇಳಿಸುತ್ತಿದೆ. ಆದ್ದರಿಂದ ಪ್ರಾಣಾಧಿಕರಣದಿಂದ ಗತಾರ್ಥತ್ವವನ್ನು ಪರಿಹರಿಸಲು ಹೊರಟರೆ ಗಾಯತ್ರ್ಯಧಿಕರಣದಿಂದಲೋ ಅಥವಾ ಆಕಾಶಾಧಿಕರಣ-ದಿಂದಲೋ ಗತಾರ್ಥತ್ವವು ಬಂದೇ ಬರುತ್ತದೆ.

* * * *

## ಮತ್ತೊಂದು ಬಗೆಯಲ್ಲಿ ಪುನರುಕ್ತಿ ಪರಿಹಾರ

### ತಾತ್ಪರ್ಯಚನ್ದ್ರಿಕಾ

**ನಚ ಶ್ರುತಿಲಿಙ್ಗಬಾಹುಲ್ಯಾದುಜ್ಜೀವನಮ್, ಅತ ಏವಾನುವ್ಯಾಖ್ಯಾನೇ ''ಬಾಹುಲ್ಯಾತ್ ಶ್ರುತಿಲಿಙ್ಗಯೋಃ'' ಇತ್ಯುಕ್ತಮ್ ।**

**ಇಹ ಭಾಷ್ಯೇ ಟೀಕಾಯಾಂ ಚ ಲಿಙ್ಗಮಾತ್ರೋಕ್ತಿಃ ಪೂರ್ವಪಕ್ಷೋಪಕ್ರಮಮಾತ್ರಮಿತಿ ವಾಚ್ಯಮ್,**

**ಇನ್ದ್ರೇ ''ಇನ್ದ್ರಸ್ಯ ಪ್ರಿಯಂ ಧಾಮೋಪೇಯಾಯ ತಮಿನ್ದ್ರ ಉವಾಚ ಪ್ರಾಣೋ ವಾ ಅಹಮಸ್ಮಿ'' ಇತ್ಯಾದಿಶ್ರುತೀನಾಂ ಮಹಾವ್ರತಯಾಜಿತ್ವಾದಿಲಿಙ್ಗಾನಾಂ ಮುಖ್ಯಪ್ರಾಣೇ ಪ್ರಾಣಾದಿಶ್ರುತೀನಾಂ ''ತಾ ಅಹಿಂಸನ್ತ'' ಇತಿ ಪ್ರಾಣಸಂವಾದಾದಿಲಿಙ್ಗಾನಾಂ,**

**ಜೀವೇ ''ಪುರುಷರೂಪೇಣ ಯ ಏಷ ತಪತಿ ಸ ಏಷ ಪುರುಷಃ ಸಮುದ್ರಃ'' ಇತ್ಯಾದಿಶ್ರುತೀನಾಂ ''ತಾವನ್ತಿ ಶತಸಂವತ್ಸರಸ್ಯಾಹ್ನಾಂ ಸಹಸ್ರಾಣಿ ಭವನ್ತಿ'' ಇತಿ ಶತಸಂವತ್ಸರತ್ವಾದಿಲಿಙ್ಗಾನಾಂ ಚ ಬಾಹುಲ್ಯೇऽಪಿ, ಇನ್ದ್ರಾದಿಶ್ರುತೇಃ ''ಅನ್ತಃ'' ಇತ್ಯತ್ರ, ಪ್ರಾಣಶ್ರುತೇಶ್ಚ ''ಅತ ಏವ ಪ್ರಾಣಃ'' ಇತ್ಯತ್ರ, ಪುರುಷಶ್ರುತೇಶ್ಚ ಗಾಯತ್ರ್ಯಧಿಕರಣೇ ಸಾವಕಾಶಿತತ್ವೇನ, ಲಿಙ್ಗಾನಾಂ ಚ ವಿಷ್ಣೌ ಪ್ರವೃತ್ತಪ್ರಬಲ-ಶ್ರುತ್ಯನುಸಾರೇಣ ಅನ್ತರಧಿಕರಣಪೂರ್ವಪಕ್ಷೋಕ್ತಾನಾಮಪಾನೇತೃತ್ವಾದಿಲಿಙ್ಗಾನಾಮಿವ ವಿಷ್ಣೌ ಪ್ರವರ್ತನೀಯತ್ವೇನ ಸಮ್ಭಾವಿತಾವಕಾಶತಯಾ ಬಹುವಿಷ್ಣುಶ್ರುತಿಬಾಧಕತ್ವಾಯೋಗಾತ್ ।**

ಅನುವಾದ - ಪ್ರಶ್ನೆ - ಹಿಂದಿನ ಆಕಾಶಾದ್ಯಧಿಕರಣಗಳಲ್ಲಿ ಶ್ರುತಿಲಿಂಗಬಾಹುಲ್ಯಪ್ರಯುಕ್ತವಾದ ಪೂರ್ವಪಕ್ಷವನ್ನು ಮಾಡಿಲ್ಲ. ಆದ್ದರಿಂದ ಈ ಅಧಿಕರಣದಲ್ಲಿ ಶ್ರುತಿಲಿಂಗಬಾಹುಲ್ಯಪ್ರಯುಕ್ತವಾದ ಪೂರ್ವಪಕ್ಷವು ಹುಟ್ಟಬಹುದು. ಆದ್ದರಿಂದಲೇ ಅನುವ್ಯಾಖ್ಯಾನದಲ್ಲಿ 'ಬಾಹುಲ್ಯಾತ್ ಶ್ರುತಿ-ಲಿಂಗಯೋಃ' ಎಂದು ಹೇಳಿದ್ದಾರೆ. ಈ ಅಧಿಕರಣದ ಭಾಷ್ಯ ಹಾಗೂ ಟೀಕೆಗಳಲ್ಲಿ ವಸ್ತುತಃ ಲಿಂಗವನ್ನಷ್ಟೇ ಹೇಳಿರಬಹುದು. ಆದರೆ ಅದು ಕೇವಲ ಪೂರ್ವಪಕ್ಷದ ಉಪಕ್ರಮ ಮಾತ್ರ. ಮುಂದೆ ಬಾಹುಲ್ಯವನ್ನು ಹೇಳಬಹುದೆಂದು ಅದರ ಅಭಿಪ್ರಾಯ. ಆದ್ದರಿಂದ ಈ ಅಧಿಕರಣವು ಗತಾರ್ಥವಲ್ಲ.

ಉತ್ತರ - ನೀವು ಹೇಳುತ್ತಿರುವ ಶ್ರುತಿಲಿಂಗಬಾಹುಲ್ಯವು ವಿಷ್ಣುವಿನಲ್ಲಿ ಸಾವಕಾಶವಾದ್ದರಿಂದ ಪೂರ್ವಪಕ್ಷಪ್ರಾಪಕವಾಗುವುದಿಲ್ಲ. ಅದು ಹೀಗೆ --

ಇಂದ್ರನಲ್ಲಿ ಶ್ರುತವಾದ 'ಇಂದ್ರಸ್ಯ ಪ್ರಿಯಂ ಧಾಮೋಪೇಯಾಯ ತಮಿಂದ್ರ ಉವಾಚ ಪ್ರಾಣೋ ವಾ ಅಹಮಸ್ಮಿ' ಇತ್ಯಾದಿ ಶ್ರುತಿಗಳು ಮತ್ತು ಮಹಾವ್ರತಯಾಜತ್ವ ಮೊದಲಾದ ಲಿಂಗಗಳು ಸಾವಕಾಶವಾಗಿವೆ. ಇದರಂತೆ ಮುಖ್ಯಪ್ರಾಣನಲ್ಲಿ ಕೇಳಿಸುತ್ತಿರುವ ಪ್ರಾಣಶ್ರುತಿಗಳು ಹಾಗೂ 'ತಾ ಅಹಿಂಸಂತ' ಎಂಬ ಪ್ರಾಣಸಂವಾದಾದಿ ಲಿಂಗಗಳು;

ಜೀವನಲ್ಲಿ ಕೇಳಿಸುತ್ತಿರುವ 'ಪುರುಷರೂಪೇಣ ಯ ಏಷ ತಪತಿ ಸ ಏಷ ಪುರುಷಃ ಸಮುದ್ರಃ' ಇತ್ಯಾದಿಶ್ರುತಿಗಳು 'ತಾವಂತಿ ಶತಸಂವತ್ಸರಸ್ಯಾಹ್ನಾಂ ಸಹಸ್ರಾಣಿ ಭವಂತಿ' ಎಂಬ ಶತಸಂವತ್ಸರತ್ವಾದಿ ಲಿಂಗಗಳು ಬಹಳವಾಗಿರಬಹುದು. ಆದರೂ ಸಹ ಇಂದ್ರಾದಿಶ್ರುತಿಗಳು ಸಾವಕಾಶವೆಂದು ಅಂತರಧಿಕರಣದಲ್ಲಿ; ಪ್ರಾಣಶ್ರುತಿಗಳು ಸಾವಕಾಶವೆಂದು 'ಅತ ಏವ ಪ್ರಾಣಃ' ಎಂಬ ಅಧಿಕರಣದಲ್ಲಿ; ಪುರುಷಶ್ರುತಿಯು ಸಾವಕಾಶವೆಂದು ಗಾಯತ್ರ್ಯಧಿಕರಣದಲ್ಲಿ ಸಮರ್ಥಿಸಿದ್ದಾಗಿದೆ. ಮತ್ತು ಎಲ್ಲ ಲಿಂಗಗಳು ವಿಷ್ಣುವಿನಲ್ಲಿ ಸಾವಕಾಶವಾಗಿವೆ ಎಂದು ಅಂತರಧಿಕರಣದಲ್ಲಿ ಹೇಳಿದ್ದಾಗಿದೆ. ವಿಷ್ಣುವಿನಲ್ಲಿ

ಪ್ರಸಿದ್ಧವಾದ ಬ್ರಹ್ಮಶ್ರುತಿಗಳಿಗೆ ಅನುಸಾರಿಯಾಗಿ ಲಿಂಗಗಳನ್ನು ಸಮನ್ವಯ ಮಾಡಬೇಕೆಂದು ಹೇಳಿದ್ದಾರೆ. ಪೂರ್ವಪಕ್ಷದಲ್ಲಿ ಹೇಳಲ್ಪಟ್ಟ ಆಪಾಂನೇತೃತ್ವಾದಿ ಲಿಂಗಗಳಂತೆ ಈ ಲಿಂಗಗಳನ್ನೂ ಸಹ ವಿಷ್ಣುವಿನಲ್ಲಿ ಸಮನ್ವಯ ಮಾಡಬೇಕೆಂದು ಅಂತರಧಿಕರಣದ ನ್ಯಾಯದಿಂದ ತಿಳಿಯುತ್ತದೆ. ಆದ್ದರಿಂದ ಬಹಳವಾದ ವಿಷ್ಣುಶ್ರುತಿಗಳನ್ನು ಬಾಧಿಸಲು ಇಲ್ಲಿ ಹೇಳುತ್ತಿರುವ ಪೂರ್ವಪಕ್ಷಲಿಂಗಕ್ಕೆ ಸಾಮರ್ಥ್ಯವಿಲ್ಲ.

**ಪ್ರಕಾಶಃ** – **ತೃತೀಯಮಾಶಙ್ಕ್ಯ ನಿರಸ್ಯತಿ – ನಚೇತಿ ॥** 'ತಜ್ಜೀವನಂ ಪೂರ್ವಪಕ್ಷಸ್ಯ' ಇತ್ಯನುಷಙ್ಗಃ । **'ಇನ್ದ್ರಿಯೈಸ್ಸಹಾಭಿಧಾನಾತ್'** ಇತಿ ಭಾಷ್ಯೇಣ **'ಏತತ್ಪ್ರಾಣಸ್ಯೇನ್ದ್ರಿಯಗಣೇ ಗಣಿತತ್ವಾತ್'** ಇತಿ ಟೀಕಯಾ ಚೈತದ್ವಿರುದ್ಧಮಿತ್ಯತ ಆಹ – **ಇಹೇತಿ ॥** ತ್ವದಭಿಮತಶ್ರುತ್ಯಾದೀನಾಂ ವಿಷ್ಣೌ ಸಾವಕಾಶತ್ವಾನ್ನ ತದ್ಬಾಹುಲ್ಯಮಪಿ ಪೂರ್ವಪಕ್ಷಪ್ರಾಪಕಮಿತಿ ಭಾವೇನೇನ್ದ್ರಮುಖ್ಯಜೀವಶ್ರುತ್ಯಾದಿಬಾಹುಲ್ಯಂ ಸ್ಫುಟಯನ್ನಾಹ – **ಇನ್ದ್ರ ಇತ್ಯಾದಿ ॥ ವಿಷಯಸಪ್ತಮ್ಯ ಇಮಾಃ ॥ ಮಹಾವ್ರತಯಾಜಿತ್ವಾದೀತಿ॥ ''ಇನ್ದ್ರೋ ವೈ ವೃತ್ರಂ ಹತ್ವಾ ಮಹಾನಭವತ್''** ಇತ್ಯಾದಿವಾಕ್ಯೋಕ್ತಮಹಾವ್ರತಯಾಜಿತ್ವಾದೀನಾಂ ಗ್ರಹಃ ॥ **ಪ್ರಾಣಸಂವಾದಾದೀತಿ ॥** ಚಕ್ಷುರಾದಿಸಹಪಾಠೋತ್ಕ್ರಮಣಪ್ರವೇಶತನ್ನಿಮಿತ್ತದೇಹಪಾತೋತ್ಥಾನಾದಿರಾದಿಪದಾರ್ಥಃ ॥ **ಇತ್ಯಾದೀತಿ ॥ ''ಸ ಏಷ ಪುರುಷಃ ಪಞ್ಚವಿಧಃ''** ಇತ್ಯಾದಿರಾದಿಪದಾರ್ಥಃ॥ **ಶತಸಂವತ್ಸರತ್ವಾದೀತಿ ॥ ''ಪ್ರಾಣೋ ವಂಶ ಇತಿ ವಿದ್ಯಾತ್''** ಇತ್ಯುಕ್ತಪ್ರಾಣವಂಶತ್ವಾದಿರಾದಿ-ಪದಾರ್ಥಃ ॥ **ವಿಷ್ಣೌ ಪ್ರವೃತ್ತೇತಿ ॥** ವಿಷ್ಣೌ ಪ್ರಸಿದ್ಧಬ್ರಹ್ಮಶಬ್ದಾದಿಶ್ರುತ್ಯನುಸಾರೇಣೇತ್ಯರ್ಥಃ । ಯದ್ಯಪ್ಯಗ್ನೇತೃತ್ವಮಿತಿ ವಕ್ತವ್ಯಂ, ತಥಾऽಪಿ ಶ್ರುತ್ಯನುವಾದಾಯೈವಮುಕ್ತಮ್ ॥ **ಬಹುವಿಷ್ಣುಶ್ರುತೀತಿ ॥** ಬ್ರಹ್ಮಾದಿಶ್ರುತೇರತ್ರ ಬಹುಧಾ ಆವೃತ್ತತ್ವಾದಿತಿ ಭಾವಃ ।

ವಿವರಣೆ - ಶ್ರುತಿಲಿಂಗಬಾಹುಲ್ಯವೆಂಬ ಪೂರ್ವಪಕ್ಷನ್ಯಾಯವು ಭಿನ್ನವಾದ್ದರಿಂದ ಈ ಅಧಿಕರಣಕ್ಕೆ ಗತಾರ್ಥತ್ವ ಬರುವುದಿಲ್ಲವೆಂಬ ಮೂರನೆಯ ಪಕ್ಷವನ್ನು 'ನಚ' ಎಂಬ ಗ್ರಂಥದಿಂದ ನಿರಾಕರಿಸುತ್ತಿದ್ದಾರೆ.

'ಉಜ್ಜೀವನಮ್' ಎಂದರೆ ಪೂರ್ವಪಕ್ಷದ ಉಜ್ಜೀವನ ಎಂದರ್ಥ. 'ಇಂದ್ರಿಯೈಃ ಸಹಾಭಿಧಾನಾತ್' ಎಂಬ ಭಾಷ್ಯಕ್ಕೆ ಮತ್ತು 'ಏತತ್ ಪ್ರಾಣಸ್ಯೇಂದ್ರಿಯಗಣೇ ಗಣಿತತ್ವಾತ್' ಎಂಬ ಟೀಕೆಗೆ ನೀವು ಹೇಳಿದ ಪೂರ್ವಪಕ್ಷವು ವಿರುದ್ಧವಾಗಿದೆ ಎಂಬ ಪ್ರಶ್ನೆಗೆ 'ಇಹ' ಎಂಬ ಗ್ರಂಥದಿಂದ ಉತ್ತರಿಸಿದ್ದಾರೆ. ಶ್ರುತಿಲಿಂಗಬಾಹುಲ್ಯವು ವಿಷ್ಣುವಿನಲ್ಲಿ ಸಾವಕಾಶವಾದ್ದರಿಂದ ಪೂರ್ವಪಕ್ಷಪ್ರಾಪಕವಾಗುವುದಿಲ್ಲ. ಇದನ್ನು ಸಮರ್ಥಿಸಲು ಮೊದಲು ಇಂದ್ರ, ಪ್ರಾಣ, ಜೀವ ಮೊದಲಾದವರಲ್ಲಿ ಶ್ರುತಿಲಿಂಗಬಾಹುಲ್ಯವಿದೆ ಎಂದು ಮೊದಲು ಸ್ಪಷ್ಟಪಡಿಸಬೇಕು. ಅದಕ್ಕೋಸ್ಕರ 'ಇಂದ್ರ' ಇತ್ಯಾದಿ ಗ್ರಂಥವು ಹೊರಟಿದೆ. ಇಂದ್ರೇ, ಜೀವೇ, ಮುಖ್ಯಪ್ರಾಣೇ ಎಂಬಲ್ಲಿರುವ ಸಪ್ತಮೀವಿಭಕ್ತಿಗೆ ಇಂದ್ರವಿಷಯದಲ್ಲಿ ಇತ್ಯಾದಿಯಾಗಿ ಎಂದರ್ಥ. 'ಮಹಾವ್ರತಯಾಜಿತ್ವಾತ್' ಎಂಬ ಶಬ್ದದಿಂದ 'ಇಂದ್ರೋ ವೈ ವೃತ್ರಂ ಹತ್ವಾ ಮಹಾನಭವತ್' ಎಂಬಲ್ಲಿರುವ ಮಹಾವ್ರತಯಾಜಿತ್ವಲಿಂಗವನ್ನು ಇಟ್ಟುಕೊಳ್ಳಬೇಕು. (ಇಂದ್ರದೇವರು ವೃತ್ರಾಸುರನನ್ನು ಸಂಹಾರ ಮಾಡಿದ ಮೇಲೆ ಬ್ರಹ್ಮಹತ್ಯಾಪರಿಹಾರಕ್ಕಾಗಿ 'ಮಹಾವ್ರತ' ಎಂಬ ಯಾಗವನ್ನು ಕೈಗೊಳ್ಳುತ್ತಾರೆ. ಆದ್ದರಿಂದ

ಮಹಾವ್ರತಯಾಜಿತ್ವವೆಂಬ ಧರ್ಮವು ಇಂದ್ರದೇವರಲ್ಲಿದೆ). 'ಪ್ರಾಣಸಂವಾದಾದಿ' ಎಂಬಲ್ಲಿರುವ ಆದಿಪದಕ್ಕೆ ಚಕ್ಷುರಾದಿಗಳ ಜೊತೆಗೆ ಪಠಿತವಾದ ಉತ್ಕ್ರಮಣ ಮತ್ತು ಪ್ರವೇಶ ಇವುಗಳ ನಿಮಿತ್ತದಿಂದ ದೇಹದ ಪತನ ಮತ್ತು ದೇಹದ ಉತ್ಥಾನವನ್ನು ವಿವಕ್ಷಿಸಬೇಕು. 'ಇತ್ಯಾದಿಶ್ರುತೀನಾಂ' ಎಂಬಲ್ಲಿರುವ ಆದಿಪದದಿಂದ 'ಸ ಏಷ ಪುನಃ ಪಂಚವಿಧಃ' ಎಂಬ ಶ್ರುತಿಯನ್ನು ವಿವಕ್ಷಿಸಬೇಕು. 'ಶತಸಂವತ್ಸರಾದಿ' ಎಂಬಲ್ಲಿರುವ ಆದಿಪದದಿಂದ 'ಪ್ರಾಣೋ ವಂಶ ಇತಿ ವಿದ್ಮಾತ್' ಎಂಬ ಪ್ರಾಣವಂಶತ್ವಲಿಂಗಗಳನ್ನು ವಿವಕ್ಷಿಸಬೇಕು. 'ವಿಷ್ಣೌ ಪ್ರವೃತ್ತಪ್ರಬಲಶ್ರುತ್ಯನುಸಾರೇಣ' ಎಂಬ ಪದಕ್ಕೆ ವಿಷ್ಣುವಿನಲ್ಲಿ ಪ್ರಸಿದ್ಧವಾದ ಬ್ರಹ್ಮಶ್ರುತಿಗಳಿಗೆ ಅನುಸಾರಿಯಾಗಿ ಎಂದರ್ಥ.

'ಆಪಾಂ ನೇತೃತ್ವಾದಿ' ಎಂದು ಗ್ರಂಥಕಾರರು ಪ್ರಯೋಗಿಸಿದ್ದಾರೆ. ವಸ್ತುತಃ ಆಪಾಂ ನೇತಾ = ಅಮ್ಮೇತಾ, ಅಮ್ಮೇತುಃ ಭಾವಃ ಅಮ್ಮೇತೃತ್ವಮ್ ಎಂದು ಹೇಳಬೇಕಿತ್ತು. ಆದರೆ ಶ್ರುತಿಯಲ್ಲಿ ಆಪಾಂ ನೇತಾರಂ ಎಂದಿರುವುದರಿಂದ ಆದರ ಅನುಗಮಕ್ಕಾಗಿ ಹೀಗೆ ಹೇಳಿದ್ದಾರೆ. 'ಬಹುವಿಷ್ಣುಶ್ರುತಿಬಾಧಕತ್ವಾಯೋಗಾತ್' ಎಂಬ ಪದಕ್ಕೆ 'ಬ್ರಹ್ಮಾದಿಶ್ರುತಿಗಳು ಇಲ್ಲಿ ಬಹಳವಾಗಿ ಕೇಳಿಸುತ್ತಿವೆ. ಇವುಗಳನ್ನು ಬಾಧಿಸಲು ಸಾವಕಾಶಶ್ರುತಿಲಿಂಗಗಳಿಗೆ ಸಾಧ್ಯವಿಲ್ಲ ಎಂದರ್ಥ.

## ಸಾರ

ಆಕಾಶಾದ್ಯಧಿಕರಣಗಳಲ್ಲಿ ಶ್ರುತಿಲಿಂಗಬಾಹುಲ್ಯಪ್ರಯುಕ್ತವಾದ ಪೂರ್ವಪಕ್ಷವನ್ನು ಮಾಡಿಲ್ಲ. ಆದ್ದರಿಂದ ಈ ಅಧಿಕರಣದಲ್ಲಿ ಶ್ರುತಿಲಿಂಗಬಾಹುಲ್ಯಪ್ರಯುಕ್ತವಾದ ಪೂರ್ವಪಕ್ಷವು ಹುಟ್ಟಬಹುದು. ಆದ್ದರಿಂದಲೇ ಅನುವ್ಯಾಖ್ಯಾನದಲ್ಲಿ 'ಬಾಹುಲ್ಯಾತ್ ಶ್ರುತಿಲಿಂಗಯೋಃ' ಎಂದು ಹೇಳಿದ್ದಾರೆ. ಈ ಅಧಿಕರಣದ ಭಾಷ್ಯ ಹಾಗೂ ಟೀಕೆಗಳಲ್ಲಿ ವಸ್ತುತಃ ಲಿಂಗವನ್ನಷ್ಟೇ ಹೇಳಿರಬಹುದು. ಆದರೆ ಅದು ಕೇವಲ ಪೂರ್ವಪಕ್ಷದ ಉಪಕ್ರಮ ಮಾತ್ರ. ಮುಂದೆ ಬಾಹುಲ್ಯವನ್ನು ಹೇಳಬಹುದೆಂದು ಅದರ ಅಭಿಪ್ರಾಯ. ಆದ್ದರಿಂದ ಈ ಅಧಿಕರಣವು ಗತಾರ್ಥವಲ್ಲ.

* * * *

## ನಾಮಧೇಯವನ್ನು ಅನುಸರಿಸಿ ಲಿಂಗಗಳನ್ನು ಅರ್ಥೈಸಬೇಕು
## (ಪೂರ್ವಪಕ್ಷವೇ ಹುಟ್ಟುವುದಿಲ್ಲ)

ತಾತ್ಪರ್ಯಚನ್ದ್ರಿಕಾ

**ದೃಷ್ಟಂ ಹಿ ''ದರ್ಶಪೂರ್ಣಮಾಸಾಭ್ಯಾಂ ಯಜೇತ'' ಇತ್ಯಾದೌ ಯಜೇಃ ಪ್ರವೃತ್ತದರ್ಶಪೂರ್ಣಮಾಸನಾಮಾನುಸಾರೇಣ ಷಡ್ಯಾಗಮಾತ್ರಪರತ್ವಮ್ । ಅನ್ಯಥಾ ರಾಜಸೂಯಯಜೇರಿವ ಸನ್ನಿಹಿತಸರ್ವಯಾಗಪರತಾ ಸ್ಯಾತ್ । ಸನ್ತಿ ಚ ವಿಷ್ಣೌ ಪ್ರವೃತ್ತಾಃ ''ಬ್ರಹ್ಮೇಮಂ ಪುರುಷಂ'' ಇತಿ ಬ್ರಹ್ಮಶಬ್ದಾದ್ಯಾಃ ಶ್ರುತಯಃ । ನ ಚೇನ್ದ್ರಶ್ರುತ್ಯಾದಿಕಂ ಪಶ್ಯನ್ ಪೂರ್ವಪಕ್ಷೀ ತತ್ಸನ್ನಿಹಿತಂ ವಿಷ್ಣುಶ್ರುತ್ಯಾದಿಕಂ ನ ಪಶ್ಯತೀತಿ ಯುಕ್ತಮ್ । ಉಕ್ತಂ ಚಾನನ್ದಮಯಾಧಿಕರಣೇ ಬ್ರಹ್ಮಶಬ್ದಸ್ಯ ವಿಷ್ಣೌ ಮುಖ್ಯತ್ವಮ್ ಇತಿ ಚೇತ್, ಮೈವಂ,**

ಅನುವಾದ - ಬ್ರಹ್ಮನಾಮವನ್ನು ಅವಲಂಬಿಸಿ ಲಿಂಗಸಮನ್ವಯ ಮಾಡಬೇಕು. ವಿಷ್ಣುವಿನಲ್ಲಿ ಪ್ರಸಿದ್ಧವಾದ ಬ್ರಹ್ಮ ಮೊದಲಾದ ನಾಮಗಳನ್ನು ಅನುಸರಿಸಿ ಲಿಂಗಗಳನ್ನು ಸಮನ್ವಯ ಮಾಡಬೇಕು. ಈ ವಿಷಯದಲ್ಲಿ ಪೂರ್ವಮೀಮಾಂಸೆಯ ದೃಷ್ಟಾಂತವು ಕಂಡಿದೆ -

'ದರ್ಶಪೂರ್ಣಮಾಸಾಭ್ಯಾಂ ಯಜೇತ' ಇತ್ಯಾದಿ ಸ್ಥಳದಲ್ಲಿ ದರ್ಶಪೂರ್ಣಮಾಸ ಎಂಬ ಯಾಗದ ನಾಮವು ಕೇಳಿಸುತ್ತಿದೆ. ಈ ನಾಮಕ್ಕೆ ಅನುಸಾರಿಯಾಗಿ 'ಯಜ್' ಧಾತುವಿಗೆ ಕೇವಲ ಆರು ಯಾಗಗಳೆಂದು ಅರ್ಥೈಸಬೇಕು. ಒಂದು ವೇಳೆ ನಾಮವನ್ನು ಅನುಸರಿಸಿ ಹೀಗೆ ವ್ಯಾಖ್ಯಾನ ಮಾಡದಿದ್ದಲ್ಲಿ, 'ರಾಜಸೂಯೇನ ಯಜೇತ' ಎಂಬಲ್ಲಿ ಯಾವರೀತಿಯಾಗಿ ಸನ್ನಿಹಿತವಾದ ಸಕಲ ಯಾಗಗಳನ್ನು ಯಾಗಶಬ್ದವು ಹೇಳುತ್ತದೋ ಆದರಂತೆ ಇಲ್ಲಿಯೂ ಸಹ ಯಜ್‌ಧಾತು ಎಲ್ಲಾ ಯಾಗಗಳನ್ನು ಹೇಳಬೇಕಾದೀತು.

ಪ್ರಕೃತ 'ಬ್ರಹ್ಮೇಮಂ ಪುರುಷಂ' ಇತ್ಯಾದಿಯಾಗಿ ಬ್ರಹ್ಮ ಮೊದಲಾದ ಶಬ್ದಗಳು ವಿಷ್ಣುವಿನಲ್ಲೇ ಅಸಾಧಾರಣವಾಗಿ ಪ್ರವೃತ್ತವಾಗಿವೆ. ಇದಕ್ಕೆ ಅನುಸರಿಯಾಗಿ ಉಳಿದ ಲಿಂಗಗಳನ್ನು ಅರ್ಥೈಸಬೇಕು. ವಿಷ್ಣುವಿನಲ್ಲಿ ಪ್ರಸಿದ್ಧವಾದ ನಾಮಧೇಯಗಳನ್ನು ಗಮನಿಸದವನು, ಪೂರ್ವಪಕ್ಷವನ್ನು ಮಾಡಬಹುದಲ್ಲವೇ? ಎಂದು ಪ್ರಶ್ನಿಸಬಾರದು. ಯಾವ ಪೂರ್ವಪಕ್ಷಿಯೂ ಇಂದ್ರಶ್ರುತ್ಯಾದಿಗಳನ್ನು ನೋಡುತ್ತಾನೋ ಅಂತಹವನು ಹತ್ತಿರದಲ್ಲಿರುವ ವಿಷ್ಣುಶ್ರುತ್ಯಾದಿಗಳನ್ನು ನೋಡುವುದಿಲ್ಲ ಎನ್ನುವುದು ಅಯುಕ್ತ.

ಬ್ರಹ್ಮ ಮೊದಲಾದ ಶಬ್ದಗಳು ವಿಷ್ಣುವಿನಲ್ಲಿ ಅಪ್ರಸಿದ್ಧವೆನ್ನಬಾರದು. ಏಕೆಂದರೆ ಈಗಾಗಲೇ ಆನಂದಮಯಾಧಿಕರಣದಲ್ಲಿ ವಿಷ್ಣುವಿನಲ್ಲಿ ಬ್ರಹ್ಮಶಬ್ದವು ಮುಖ್ಯವಾಗಿದೆಯೆಂದು ಸಮರ್ಥಿಸಿದ್ದಾಗಿದೆ.

ಕಠಿಣಪದಾರ್ಥ

ಪ್ರವೃತ್ತ = ವಿದ್ವದ್‌ವಾಕ್ಯದಿಂದ ಪ್ರಸಿದ್ಧವಾದ, ಅನ್ಯಥಾ = ಪ್ರಸಿದ್ಧವಾದ ದರ್ಶಪೂರ್ಣಮಾಸ ಎಂಬ ನಾಮಧೇಯವನ್ನು ಅನುಸರಿಸಿ ಯಜ್‌ಧಾತುವಿಗೆ ಆರುಯಾಗಗಳೆಂದು ಅರ್ಥೈಸದಿದ್ದಲ್ಲಿ, ಸನ್ನಿಹತಸರ್ವಯಾಗಪರತಃ = ಹತ್ತಿರದಲ್ಲಿರುವ ಪ್ರಯಾಜಾದಿ ಸಕಲ ಯಾಗಪರತ್ವವೂ.

**ಪ್ರಕಾಶಃ – ದೃಷ್ಟಂ ಹೀತಿ ॥ ಚತುರ್ಥೇऽಧ್ಯಾಯೇ ''ದರ್ಶಪೂರ್ಣಮಾಸಯೋರಿಜ್ಯಾಪ್ರಾಧಾನ್ಯಮವಿಶೇಷಾತ್'' ಇತಿ ತುರೀಯಪಾದೀಯೈಕಾದಶಾಧಿಕರಣೇ ದರ್ಶಪೂರ್ಣಮಾಸಯೋಃ ಕಿಂ ಸರ್ವೇಷಾಂ ಯಾಗಾನಾಂ ಪ್ರಾಧಾನ್ಯಮುತಾऽऽಗ್ನೇಯಾದೀನಾಮೇವ ಕಾಲಯೋಗಿನಾಂ ಪ್ರಾಧಾನ್ಯಂ ಇತರೇಷಾಂ ಪ್ರಯಾಜಾದೀನಾಮಙ್ಗತ್ವಮಿತಿ ಸನ್ದಿಹ್ಯ, 'ದರ್ಶಪೌರ್ಣಮಾಸಾಭ್ಯಾಂ' ಇತಿ ನಾಮಧೇಯಸ್ಯ ತ್ವಾಖ್ಯಾತಾನುಸಾರಿತ್ವಾದಾಖ್ಯಾತೇನ ಚಾವಿಶೇಷೇಣ ಸನ್ನಿಹಿತಸರ್ವಯಾಗಾನ್ ಪರಾಮೃಶ್ಯ ''ದರ್ಶಪೌರ್ಣಮಾಸಾಭ್ಯಾಂ ಸ್ವರ್ಗಕಾಮೋ ಯಜೇತ'' ಇತಿ ಫಲೇ ವಿನಿಯೋಗಾತ್ಸರ್ವೇಷಾಂ ಪ್ರಾಧಾನ್ಯಮಿತಿ ಪೂರ್ವಪಕ್ಷಯಿತ್ವಾ,**

अप्रसिद्धार्थस्य नामधेयस्याऽऽख्यातपारतन्त्र्येपि प्रसिद्धार्थस्य स्वातन्त्र्यात् 'दर्शपूर्णमासाभ्याम्' इत्यस्य षड्यागानामुत्पत्तौ कालयोगाद्विद्वद्वाक्यद्वयेन च त्रिकद्वयसम्पादनाच्च प्रकृतिप्रत्ययार्थप्रसिद्धया प्रसिद्धार्थत्वादाख्यातस्यैव नामपारतन्त्र्यात् षण्णामेव प्राधान्यं, समिदादीनां तु तदङ्गत्वमिति सिद्धान्तितम् ।

अत्र यथा फलवाक्यस्थयजेर्विद्वद्वाक्यप्रसिद्धदर्शपौर्णमासनामानुसारेण षड्यागमात्रपरत्वं, यथा वा ''इन्द्रं मित्रं'' इत्यादिश्रुतिप्रसिद्धेन्द्रादिश्रुत्यनुसारेण ''अपां नेतारं'' इत्यादिलिङ्गानां विष्णुनिष्ठत्वं, तथा ''ब्रह्मशब्दः परे विष्णौ'' इत्यादिवाक्यप्रसिद्धब्रह्मशब्दानुसारेण प्राणसंवादादिलिङ्गानां विष्णौ'' प्रवर्तयितुं शक्यत्वेन न तैः पूर्वपक्षोदय इत्यर्थः ।

ವಿವರಣೆ -

''दर्शपूर्णमासयोरिज्याप्रधानत्वमविशेषात्'' (೪-೪-೧೧)

ಪೂರ್ವಮೀಮಾಂಸೆಯ ಈ ಅಧಿಕರಣದಲ್ಲಿ ದರ್ಶಪೂರ್ಣಮಾಸಗಳಲ್ಲಿ ಎಲ್ಲಾ ಯಾಗಗಳು ಪ್ರಧಾನವಾಗಿವೆಯೋ ಅಥವಾ ಹುಣ್ಣಿಮೆ ಅಮಾವಾಸ್ಯೆಗಳೆಂಬ ಕಾಲಕ್ಕೆ ಸಂಬಂಧಿಸಿದ ಆರು ಯಾಗಗಳು ಮಾತ್ರ ಪ್ರಧಾನವಾಗಿ ಉಳಿದ ಪ್ರಯಾಜಾದಿ ಅಂಗಗಳಾಗಿವೆಯೋ ? ಎಂದು ಸಂದೇಹ.

---

**भाट्टसङ्ग्रहः –**

**दर्शपूर्णमासयोरिज्याप्राधान्यमविशेषात् ॥ २८ ॥**

अत्रापि पूर्वन्यायेन शङ्कनात्**सङ्गतिः** । दर्शपूर्णमासयोराधाराज्यभागप्रयाजानुयाजादयः कालसंयोगरहिताः केचन पठिताः । आग्नेयादयः षड्यागाः ''यदाग्नेयोष्टाकपालोऽमावास्यायाम्'' इत्यादिना कालसंयोगेन चोदिताः । तत्र किं सर्वेषां फलसम्बन्धेन प्राधान्यमुत कालयोगिनामेव । अन्येषां तदङ्गत्वमिति **सन्देहः** । **पूर्वपक्षस्तु,** ''दर्शपूर्णमासाभ्यां स्वर्गकामो यजेत'' इति फलवाक्यगतयजिना यागसामान्यवाचिना प्राकरणिकानामाधारादीनामाग्नेयादीनाञ्च यागानामनुवादेन फलसम्बन्धो बोध्यते राजसूयेऽन्योन्यविलक्षणेष्टिपशुसोमानां यजिनाऽनुवादेन फलान्वयो यथा बोध्यते । तथैव पादादावुक्तेः । तद्वत् द्विवचनान्तनामधेयमपि राजसूयपदस्येवाख्यातपरतन्त्रत्वात्तद्वदेव प्राकरणिकसर्वपरम् । अव्युत्पन्नप्रातिपदिकं द्विवचनानन्तप्रतिरूपकं नेयम् । पूर्वत्र प्रथमश्रुतषष्ठीस्वारस्यस्येव ''दर्शपूर्णमासाभ्यां'' इति प्रथमश्रुतद्विवचनस्वारस्यस्य त्यागसम्भवात् । तस्मात् सर्वेषां प्राधान्यम् । तदाह **सूत्रे, दर्शपूर्णमासयोरिज्यानां** सर्वयागानां **प्राधान्यम्** । फलवाक्यस्थयजिना सर्वेषा**मविशेषेण** फलसम्बन्ध**बोधना**दिति । **सिद्धान्तस्तु,** राजसूयादिनामधेय-

ಪೂರ್ವಪಕ್ಷ - ಎಲ್ಲಾ ಯಾಗಗಳು ಪ್ರಧಾನವೇ ಆಗಿವೆ. ಏಕೆಂದರೆ 'ಯಜೇತ' ಎಂಬಲ್ಲಿರುವ ಆಖ್ಯಾತವೇ ಪ್ರಧಾನವಾಗಿವೆ. ಈ ಆಖ್ಯಾತವನ್ನು 'ದರ್ಶಪೂರ್ಣಮಾಸಾಭ್ಯಾಂ' ಎಂಬ ನಾಮಧೇಯವು ಅನುಸರಿಸಿ ಅರ್ಥವನ್ನು ಹೇಳುತ್ತಿದೆ. ಆಖ್ಯಾತವಾದರೂ ಯಾವುದೇ ವಿಶೇಷಣದಿಂದ ಯುಕ್ತವಾಗದ ಕಾರಣ ಸನ್ನಿಹಿತವಾದ ಎಲ್ಲಾ ಯಾಗಗಳನ್ನು ಪರಾಮರ್ಶಿಸಿ 'ದರ್ಶಪೂರ್ಣಮಾಸಾಭ್ಯಾಂ ಸ್ವರ್ಗಕಾಮೋ ಯಜೇತ' ಎಂಬುದಾಗಿ ಫಲದಲ್ಲಿ ವಿನಿಯೋಗ ಮಾಡುತ್ತಿದೆ. ಆದ್ದರಿಂದ ಎಲ್ಲಾ ಯಾಗಗಳೂ ಸಹ ಪ್ರಧಾನವೇ ಆಗಿವೆ.

ಸಿದ್ಧಾಂತ - ನೀವು ಹೇಳಿದ್ದು ಸರಿಯಲ್ಲ. ಅಪ್ರಸಿದ್ಧಾರ್ಥವನ್ನು ಹೊಂದಿರುವ ನಾಮಧೇಯವು ಆಖ್ಯಾತವನ್ನು ಅನುಸರಿಸಬಹುದು. ಆದರೆ ಪ್ರಸಿದ್ಧಾರ್ಥವುಳ್ಳ ನಾಮಧೇಯವು ಸ್ವತಂತ್ರವಾಗಿ ಅರ್ಥವನ್ನು ಹೇಳುತ್ತದೆ. ಪ್ರಕೃತ 'ದರ್ಶಪೂರ್ಣಾಮಾಸಾಭ್ಯಾಂ' ಎಂಬ ನಾಮಧೇಯವು ಪ್ರಸಿದ್ಧವಾದ ಅರ್ಥವನ್ನು ಹೊಂದಿದೆ. ಏಕೆಂದರೆ ಆರು ಯಾಗಗಳು 'ದರ್ಶ' ಹಾಗೂ 'ಪೂರ್ಣಮಾಸ'ವೆಂಬ ಕಾಲಕ್ಕೆ ಸಂಬಂಧಪಟ್ಟಿವೆ. ಆದ್ದರಿಂದ ಇಂತಹ ಆರು ಯಾಗಗಳು 'ಯ ಏವಂ ವಿದ್ವಾನ್ ಅಮಾವಾಸ್ಯಾಯಾಂ ಯಜತೇ ಏವಂ ವಿದ್ವಾನ್ ಪೂರ್ಣಮಾಸ್ಯಾಂ ಯಜತೇ' ಎಂಬುದಾಗಿ ಎರಡು ವಿದ್ವದ್‌ವಾಕ್ಯಗಳಿಂದ ಮೂರರ ಎರಡು ಗುಂಪನ್ನು ಹೊಂದಿವೆ. ಆದಕಾರಣ ದರ್ಶಪೂರ್ಣಮಾಸವೆಂಬ ಪ್ರಕೃತ್ಯರ್ಥವು 'ದ್ವಿತ್ವ' ಎಂಬ ಪ್ರತ್ಯಯಾರ್ಥವು ಪ್ರಸಿದ್ಧವಾದ್ದರಿಂದ 'ಯಜೇತ' ಎಂಬಲ್ಲಿರುವ ಆಖ್ಯಾತಪ್ರತ್ಯಯವೇ ದರ್ಶಪೂರ್ಣಮಾಸವೆಂಬ ನಾಮಧೇಯವನ್ನು ಅನುಸರಿಸುತ್ತದೆ ಹೊರತು, ಆಖ್ಯಾತವನ್ನು ನಾಮಧೇಯವು ಅನುಸರಿಸುವುದಿಲ್ಲ. ಹಾಗಾಗಿ ಆರು ಯಾಗಗಳೇ ಪ್ರಧಾನವಾದವು. ಉಳಿದ ಸಮಿದಾದಿ ಯಾಗಗಳು ಅಂಗಗಳು.

ಪೂರ್ವಮೀಮಾಂಸೆಯ ಈ ಅಧಿಕರಣದಲ್ಲಿ 'ದರ್ಶಪೂರ್ಣಮಾಸಾಭ್ಯಾಂ ಸ್ವರ್ಗಕಾಮೋ ಯಜೇತ' ಎಂಬ ಫಲವಾಕ್ಯದಲ್ಲಿರುವ ಯಜ್‌ಧಾತುವಿಗೆ ವಿದ್ವದ್‌ವಾಕ್ಯದಿಂದ ಪ್ರಸಿದ್ಧವಾದ ದರ್ಶಪೂರ್ಣಮಾಸ ಎಂಬ ನಾಮಧೇಯಕ್ಕೆ ಅನುಸಾರಿಯಾಗಿ ಕೇವಲ ಆರು ಯಾಗಗಳೆಂದು ನಿರ್ಣಯಿಸಲಾಯಿತು. ಮತ್ತು ಹಿಂದೆ

---

मिवाप्रसिद्धार्थकं यन्नाम तद्वचाख्यातपरतन्त्रम् । इदं तु नामधेयं प्रसिद्धार्थकम् । प्रातिपादिकस्य प्रवृत्तिहेतुविचारे कालसंयुक्ताग्नेयादिपरताभ्वसायात् । द्विवचनस्यापि विद्वद्वाक्यसिद्धत्रिकत्रिकसमुदायाभिप्रायकत्वात् । अतः षड्यागानां समुदायद्वये प्रसिद्धं सदिदं नामधेयं सामन्याविषयमपि यजिं स्वविषये षड्यागमात्रेऽवस्थापयितुं शक्नोतीति षण्णमेव प्राधान्यम् । अन्येषां प्रकरणात्तदङ्गत्वमिति। तदाह **सूत्रे ॥ अपि वा अङ्गानि कानिचिदित्यादि ॥ फलन्तु,** प्रयाजादीनां विकृतिषु नातिदेशः **पूर्वपक्षे** । प्रधानत्वात् । **सिद्धान्ते तु** अङ्गत्वादतिदेशः । **प्रकरणं तु पौर्णमास्यां रूपवाचनादिति** द्वितीयाध्यायद्वितीयपादीयनयेन ''य एवं विद्वान्'' इत्यादिविद्वद्वाक्यद्वयं फलवाक्योपात्तद्विवचानन्तप्रातिपदिकप्रसिद्ध्यर्थं कालयोगनिमित्तेन आग्नेयादित्रिकत्रिकसमुदायद्वयानुवादकमित्युक्त्या षण्णामेव प्राधान्यमन्येषां तदङ्गत्वमिति सिद्धावप्युक्तदिशा सर्वप्राधान्यमस्त्विति पूर्वोक्ताक्षेपेणेह पूर्वपक्षप्रवृत्तिरित्याहुः ।

ಅಂತರಧಿಕರಣದಲ್ಲಿ ಹೇಳಿದ ''ಇಂದ್ರಂ ಮಿತ್ರಂ'' ಇತ್ಯಾದಿ ಶ್ರುತಿಪ್ರಸಿದ್ಧವಾದ ಇಂದ್ರಾದಿ ಶಬ್ದಗಳಿಗೆ ಅನುಸಾರಿಯಾಗಿ 'ಅಪಾಂ ನೇತಾರಂ' ಇತ್ಯಾದಿ ಲಿಂಗಗಳನ್ನು ವಿಷ್ಣುಪರವೆಂದು ಸಮರ್ಥಿಸಿದರು. ಈ ಎರಡುವಿಧ ದೃಷ್ಟಾಂತಗಳಂತೆ ಪ್ರಕೃತ 'ಬ್ರಹ್ಮಶಬ್ದಃ ಪರೇ ವಿಷ್ಣೌ' ಇತ್ಯಾದಿ ವಾಕ್ಯದಿಂದ ಪ್ರಸಿದ್ಧವಾದ ಬ್ರಹ್ಮಶಬ್ದಕ್ಕೆ ಅನುಸಾರಿಯಾಗಿ ಪ್ರಾಣಸಂವಾದಾದಿ ಲಿಂಗಗಳನ್ನು ವಿಷ್ಣುವಿನಲ್ಲಿ ಸಮರ್ಥಿಸಬೇಕು. ಹೀಗಿರುವಾಗ ಪ್ರಾಣಸಂವಾದಾದಿ ಲಿಂಗಗಳಿಂದಲೇ ಪೂರ್ವಪಕ್ಷವು ಹುಟ್ಟಲು ಸಾಧ್ಯವಿಲ್ಲ.

**ಪ್ರಕಾಶಃ – ಪ್ರವೃತ್ತನಾಮಾನುರೋಧೇನ ಸಙ್ಕೋಚಾನಙ್ಗೀಕಾರೇ ಬಾಧಕಮಾಹ – ಅನ್ಯಥೇತಿ ॥** ತತ್ರೈವ ''ಪ್ರಕರಣಶಬ್ದಸಾಮಾನ್ಯಾಚ್ಚೋದನಾನಾಮನಙ್ಗತ್ವಮ್'' ಇತಿ ಚತುರ್ಥಪಾದೀಯಾಧಾಧಿಕರಣೇ ಅನುಮತ್ಯಾದೀನಿ ವಿದೇವನಾದೀನಿ ಚ ಯಾಗಾಯಾಗಕರ್ಮಾಣಿ ಪ್ರಕೃತ್ಯಾ ಶ್ರುತಂ ''ರಾಜಾ ರಾಜಸೂಯೇನ ಸ್ವಾರಾಜ್ಯಕಾಮೋ ಯಜೇತ'' ಇತಿ ವಾಕ್ಯಮುದಾಹೃತ್ಯ, ಕಿಮನುಮತ್ಯಾದೀನಾಂ ಯಾಗಾನಾಂ ವಿದೇವನಾದೀನಾಮಯಾಗಾನಾಂ ಚ ಫಲಸಮ್ಬನ್ಧೇನ ಪ್ರಾಧಾನ್ಯಮುತ ಯಾಗಾನಾಮೇವೇತಿ ಸನ್ದಿಹ್ಯ,

ರಾಜಸೂಯಶಬ್ದಸ್ಯ ಪ್ರಸಿದ್ಧಾರ್ಥತ್ವೇऽಪಿ ತೃತೀಯಾನ್ತತಯಾ ಫಲಸಾಧನಪರತ್ವಾವಗಮಾತ್ ಪ್ರಕೃತಾನಾಂ ಫಲಾಪೇಕ್ಷಾಣಾಂ ಯಾಗಾಯಾಗರೂಪಾಣಾಂ ಕರ್ಮಣಾಂ ನಾಮಧೇಯತ್ವಾವಗಮಾತ್ ಯಜೇಶ್ಚ ಛತ್ರಿನ್ಯಾಯೇನ ತೇಷಾಮೇವ ಪರಾಮರ್ಶಕತ್ವೋಪಪತ್ತೇಃ ಸರ್ವೇಷಾಂ ಪ್ರಾಧಾನ್ಯಮಿತಿ ಪೂರ್ವಪಕ್ಷಯಿತ್ವಾ,

ಭಾವಾರ್ಥಾಧಿಕರಣನ್ಯಾಯೇನ ಧಾತ್ವರ್ಥಸ್ಯೈವ ಫಲಸಮ್ಬನ್ಧಾನ್ನಾಮಾರ್ಥಸ್ಯಾತಥಾತ್ವಾತ್ ಯಜೇಶ್ಚ ಯಾಗಮಾತ್ರವಚನಾತ್ತತ್ಸಾಮಾನಾಧಿಕರಣ್ಯೇನ ರಾಜಸೂಯಶಬ್ದಸ್ಯಾಪಿ ತನ್ನಾಮತ್ವಾವಗಮಾತ್ತೇಷಾಮೇವ ಫಲಸಮ್ಬನ್ಧಾತ್ತತ್ಪ್ರಾಧಾನ್ಯಂ, ವಿದೇವನಾದೀನಾಂ ತು ''ಫಲವತ್ಸನ್ನಿಧಾವಫಲಂ ತದಙ್ಗಮ್'' ಇತಿ ನ್ಯಾಯೇನ ತದಙ್ಗತ್ವಮಿತಿ ಸಿದ್ಧಾನ್ತಿತಮ್ ।

ತತ್ರ ಯಥಾ ಯಜೇಃ ಪ್ರಕೃತಸರ್ವಯಾಗಪರತಾ, ತಥಾ ಪ್ರಕೃತೇऽಪಿ ಸ್ಯಾದಿತ್ಯರ್ಥಃ । ನನ್ವಸ್ತ್ವನ್ಯತ್ರ ಪ್ರವೃತ್ತನಾಮಾನುಸಾರೇಣ ಸಙ್ಕೋಚಃ, ಪ್ರಕೃತೇ ಕಿಮಿತ್ಯತ ಆಹ – **ಸನ್ತಿ ಚೇತಿ ॥**

ವಿವರಣೆ - ಪ್ರಸಿದ್ಧವಾದ ನಾಮಾತ್ಮಕ ಶಬ್ದವನ್ನು ಅನುಸರಿಸಿ ಆಖ್ಯಾತಕ್ಕೆ ಸಂಕೋಚವನ್ನು ಮಾಡದಿದ್ದಲ್ಲಿ ಬಾಧಕವನ್ನು 'ಅನ್ಯಥಾ' ಇತ್ಯಾದಿ ವಾಕ್ಯದಿಂದ ಹೇಳುತ್ತಿದ್ದಾರೆ.

''ಪ್ರಕರಣಶಬ್ದಸಾಮಾನ್ಯಾಚ್ಚೋದನಾನಾಮನಂಗತ್ವಂ'' (೪-೪-೧)[೧]

ಪೂರ್ವಮೀಮಾಂಸೆಯ ಈ ಅಧಿಕರಣದಲ್ಲಿ ಹೀಗೆ ವಿಚಾರ ಮಾಡಿದ್ದಾರೆ - ಅನುಮತಿ ಮೊದಲಾದ ಯಾಗಕರ್ಮಗಳು, ವಿದೇವನ ಮೊದಲಾದ ಅಯಾಗ ಕರ್ಮಗಳು ಪ್ರಕೃತವಾದಾಗ ''ರಾಜಾ ರಾಜಸೂಯೇನ ಸ್ವಾರಾಜ್ಯಕಾಮೋ ಯಜೇತ'' ಎಂಬ ವಾಕ್ಯವು ಹೊರಟಿದೆ. ಈ ವಾಕ್ಯವನ್ನು ನೋಡಿದಾಗ ಅನುಮತಿ ಮೊದಲಾದ ಯಾಗಗಳು ಹಾಗೂ ವಿದೇವನ ಮೊದಲಾದ ಅಯಾಗಕರ್ಮಗಳು

ಸ್ವಾರಾಜ್ಯಪ್ರಾಪ್ತಿಯೆಂಬ ಫಲಸಂಬಂಧವನ್ನು ಹೊಂದಿ ಪ್ರಧಾನವಾಗುತ್ತವೋ ಅಥವಾ ಕೇವಲ ಯಾಗಕರ್ಮದಲ್ಲಷ್ಟೇ ಫಲಸಂಬಂಧವನ್ನು ಹೊಂದಿ ಪ್ರಧಾನವಾಗುತ್ತವೋ? ಎಂದು ಸಂದೇಹ.

---

**೧. ಭಾಟ್ಟಸಙ್ಗಹಃ – ಪ್ರಕರಣಶಬ್ದಸಾಮಾನ್ಯಾಚೋದನಾನಾಮನಙ್ಗತ್ವಮ್ ॥ ೧ ॥**

**(ಅಪಿ ವಾऽङ್ಗಮನಿಜ್ಯಾಃ ಸ್ಯುಸ್ತತೋ ವಿಶಿಷ್ಟತ್ವಾತ್ ॥ ೨ ॥)**

ರಾಜಸೂಯಪ್ರಕರಣೇ ಅನೇಕೇಷ್ಟಿಪಶುಸೋಮದರ್ವೀಹೋಮರೂಪಾಶ್ಚತುರ್ವಿಧಾ ಯಾಗಾಃ ಶ್ರುತಾಃ । ''ಅನುಮತ್ಯೈ ಪುರೋಡಾಶಮಷ್ಟಾದಶಕಪಾಲಂ ನಿರ್ವಪತಿ'' ''ನೇಕ್ಋತಮೇಕಕಪಾಲಮ್'' ''ಆದಿತ್ಯಂ ಚರುಂ ನಿರ್ವಪತಿ'', ''ಅಗ್ನಾವೈಷ್ಣವಮೇಕಾದಶಕಪಾಲಮ್'' ಇತ್ಯಾದಯ ಇಷ್ಟಯಃ । ''ಆದಿತ್ಯಾಂ ಸಹ್ಯಾಂ ಗರ್ಭಿಣೀಮಾಲಭೇತ'' ''ಮಾರುತೀಂ ಪೃಶ್ನಿಮ್'' ''ಪೃಷ್ಠೌಹೀಮಶ್ವಿನ್ಯಾಮ್'' ಇತ್ಯಾದಯಃ ಪಶುಯಾಗಾಃ । **ಸಹ್ಯಾ** ಗಲಸ್ತನಯುಕ್ತೇತ್ಯರ್ಥಃ । ತಸ್ಯಾ ಅದಿತಿರ್ದೇವತಾ । **ಪೃಶ್ನಿರಲ್ಪತನುಃ** । ತಸ್ಯಾ ಮಾರುತೋ ದೇವತಾ । ಯಾವತಾ ವಯಸಾ ಪೃಷ್ಠೇ ಭಾರಂ ವೋಢುಂ ಶಕ್ನೋತಿ ತಾವದ್ವಯಸ್ಕಾ **ಪೃಷ್ಠೌಹೀ** ತ್ರಿವರ್ಷೇತ್ಯರ್ಥಃ । ತಸ್ಯಾ ಅಶ್ವಿನೌ ದೇವತಾ । ಏವಮಭಿಷೇಚನೀಯದಶಪೇಯಾದಯಃ ಸೋಮಯಾಗಾಃ । ''ವಲ್ಮೀಕವಪಾಯಾಂ ಹೋಮಃ'' ಇತ್ಯಾದಯೋ ದರ್ವೀಹೋಮಾಶ್ಚ । ತಥಾ ''ಅಕ್ಷೈರ್ದೀವ್ಯತಿ, ರಾಜನ್ಯಂ ಜಿನಾತಿ, ಶೌನಃಶೇಪಮಾಖ್ಯಾಪಯತಿ'' ಇತಿ ವಿದೇವನರಾಜನ್ಯಜಯಶುನಃಶೇಪಾಖ್ಯಾನಾದಯೋऽಯಾಗರೂಪಾಃ ಪದಾರ್ಥಾಃ ಶ್ರುತಾಃ । ಏವಂ ಶ್ರುತಯಾಗಾಯಾಗಸಮುದಾಯಂ ಪ್ರಕೃತ್ಯ ''ರಾಜಾ ರಾಜಸೂಯೇನ ಸ್ವಾರಾಜ್ಯಕಾಮೋ ಯಜೇತ'' ಇತಿ ಶ್ರೂಯತೇ । ತತ್ರ **ಸನ್ದೇಹಃ**, ಕಿಮನುಮತ್ಯಾದಯೋ ಯಾಗಾಃ ವಿದೇವನಾದಯಶ್ಚಾಯಾಗಾಃ ಸರ್ವೇಪಿ ಫಲವಾಕ್ಯೇನ ಸಾಕ್ಷಾತ್ಫಲೇ ವಿನಿಯುಕ್ತತಯಾ ಸಮಪ್ರಧಾನಾಃ ಸನ್ತಃ ಫಲೇನೈವ ಪ್ರಯುಜ್ಯನ್ತೇ । ಕಿಂ ವಾ ಯಾಗಾ ಏವ ತಥಾ । ಅಯಾಗಾಸ್ತು ಕ್ರತ್ವರ್ಥಾಸ್ಸನ್ತಃ ಕ್ರದ್ದ್ವಾರಾ ಫಲೇ ವಿನಿಯುಜ್ಯನ್ತ ಇತಿ । **ಪೂರ್ವಪಕ್ಷಸ್ತು**, ಫಲವಾಕ್ಯಸ್ಥರಾಜಸೂಯಶಬ್ದಸ್ಯಾಪ್ರಸಿದ್ಧಾರ್ಥತ್ವೇಪಿ ತೃತೀಯಾನ್ತತಯಾ ಫಲಸಾಧನತ್ವೇನ ನಿರ್ಣೀತತ್ವಾತ್ ಫಲಾಪೇಕ್ಷಾಣಾಂ ಸನ್ನಿಹಿತಾನಾಂ ಯಾಗಾಯಾಗರೂಪಾಣಾಂ ಸರ್ವೇಷಾಂ ನಾಮತ್ವಾಧ್ಯವಸಾಯಾತ್ ಯಜೇತೇತ್ಯನೇನ ಛತ್ರಿನ್ಯಾಯೇನ ಯಾಗಾಯಾಗಸಮುದಾಯರೂಪೇಣ ''ರಾಜಸೂಯನಾಮಕೇನ ಯಾಗಾಯಾಗಸಮುದಾಯೇನ ಸ್ವಾರಾಜ್ಯಂ ಭಾವಯೇತ್'' ಇತಿ ಫಲವಾಕ್ಯೇನ ಸರ್ವೇಷಾಂ ಫಲಸಮ್ಬನ್ಧಾವಗಮಾತ್ ಸರ್ವೇಪಿ ಸಮಪ್ರಧಾನಾಃ ಸನ್ತಃ ಫಲೇನೈವ ಪ್ರಯುಜ್ಯನ್ತ ಇತಿ । **ತದಾಹ ಸೂತ್ರೇ, ಪ್ರಕರಣಸ್ಯ** ಫಲಾಕಾಙ್ಕ್ಷಾಯಾಃ **ಶಬ್ದಸ್ಯ** ರಾಜಸೂಯಾಮಧೇಯಸ್ಯ ಚ **ಸಾಮಾನ್ಯಾಚೋದನಾನಾಮಿಜ್ಯಾನಿಜ್ಯಾಚೋದನಾನಾಮನ್ಯೋನ್ಯಮನಙ್ಗತ್ವಮಿತಿ । ಸಿದ್ಧಾನ್ತಸ್ತು**, ಭಾವಾರ್ಥನಯೇ ಧಾತ್ವರ್ಥದೇವಾಪೂರ್ವದ್ವಾರಾ ಫಲಮಿತ್ಯುಕ್ತತ್ವಾದಿಹಾಪಿ ಧಾತ್ವರ್ಥದೇವ ಭಾವನಾದ್ವಾರಾ ಫಲಸ್ಯ ವಾಚ್ಯತ್ವಾತ್, ಧಾತೋಶ್ಚ ಮುಖ್ಯವೃತ್ತ್ಯಾ ಸನ್ನಿಹಿತಯಾಗಮಾತ್ರಪರತ್ವಸಮ್ಭವೇ ಲಕ್ಷಣಾಶ್ರಯಣಾಯೋಗಾತ್, ನಾಮಧೇಯಸ್ಯಾಪಿ ಯಜಿಸಾಮಾನಾಧಿಕರಣ್ಯೇನ ಯಾಗಮಾತ್ರನಾಮತ್ವಾತ್ ಯಾಗಾನಾಮೇವ ಫಲಸಾಧನತ್ವಮ್ । ಅನ್ಯೇಷಾನ್ತು ಫಲವದಫಲನ್ಯಾಯೇನ ಫಲವದಙ್ಗತ್ವಮಿತಿ ಯಾಗಾನಾಮೇವ ಪ್ರಯೋಜ್ಯತ್ವಂ ನ ವಿದೇವನಾದೀನಾಂ ಇತಿ ।

ತಥಾ ಚ **ಸೂತ್ರಮ್, ಅಪಿ ವಾऽङ್ಗಮನಿಜ್ಯಾಃ ಸ್ಯುಃ** ಇತಿ । **ಫಲನ್ತು**, ಅವೇಷ್ಟಿನಾಮಕೇಷ್ಟೇರ್ಬಹಿಃ ಪ್ರಯೋಗೇ ವಿದೇಬನಾದೇರನನುಷ್ಠಾನಂ **ಪೂರ್ವಪಕ್ಷೇ** । ಪ್ರಧಾನತ್ವೇನ ಅವೇಷ್ಟ್ಯಙ್ಗತ್ವಾಭಾವಾತ್ । **ಸಿದ್ಧಾನ್ತೇ ತು** ಅಙ್ಗತ್ವಾದನುಷ್ಠಾನಮಿತಿ ॥

ಪೂರ್ವಪಕ್ಷ - ಇಲ್ಲಿರುವ ರಾಜಸೂಯ ಶಬ್ದವು ಅಪ್ರಸಿದ್ಧಾರ್ಥವಾಗಿದೆ. ಯಾವರೀತಿಯಾಗಿ 'ದರ್ಶಮಾಸಪೂರ್ಣಮಾಸ'ವೆಂಬ ಪದವು ವಿದ್ವದ್ವಾಕ್ಯದಿಂದ ಮೊದಲೇ ಪ್ರಸಿದ್ಧವಾಗಿತ್ತೋ ಆದರಂತೆ ಇಲ್ಲಿರುವ 'ರಾಜಸೂಯ' ಶಬ್ದವು ಮೊದಲು ಪ್ರಸಿದ್ಧವಾಗಿಲ್ಲ. ಇದೇ ಮೊದಲಬಾರಿಗೆ ಪರಿಚಯವಾಗುತ್ತಿರುವ ಕಾರಣ ಅಪ್ರಸಿದ್ಧಾರ್ಥವೆನಿಸಿದೆ. ಆದರೂ ಸಹ 'ರಾಜಸೂಯ' ಎಂಬಲ್ಲಿರುವ ತೃತೀಯಾವಿಭಕ್ತಿಯಿಂದ ಫಲಸಾಧನವಾಗಿದೆಯೆಂದು ತಿಳಿಯುತ್ತದೆ. ಆದ್ದರಿಂದ 'ರಾಜಸೂಯ' ಎಂಬುದು ಯಾವುದೋ ಒಂದು ಯಾಗದ ನಾಮಧೇಯವೆಂದು ತಿಳಿಯುತ್ತದೆ. ಯಾವುದರ ನಾಮಧೇಯವೆಂದು ಹೇಳಬೇಕೆಂದರೆ ಅಲ್ಲಿ ಪ್ರಕೃತವಾದ ಫಲವನ್ನು ಅಪೇಕ್ಷಿಸುವ ಯಾಗಕರ್ಮ ಅಯಾಗಕರ್ಮವೆಂಬ ಎಲ್ಲದರ ನಾಮಧೇಯವೂ ಆಗಿದೆಯೆಂದು ತಿಳಿಯುತ್ತದೆ. ಏಕೆಂದರೆ ಈ ವಾಕ್ಯದಲ್ಲಿ ಮಾತ್ರ ಫಲವನ್ನು ಹೇಳಲಾಗಿದೆ. ವಿದೇವನಾದಿಗಳನ್ನು ಹೇಳುವ ವಾಕ್ಯದಲ್ಲಿ ಫಲವನ್ನು ಹೇಳಿರುವುದಿಲ್ಲ. ಆದ್ದರಿಂದ ಫಲಾಂಕ್ಷೆಯು ಎಲ್ಲಾ ಕರ್ಮಗಳಲ್ಲಿಯೂ ಪ್ರಾಪ್ತವಾಗಿದೆ. ಆ ಎಲ್ಲ ಕರ್ಮಗಳಿಗೆ 'ಸ್ವರಾಜ್ಯಕಾಮೋ ಯಜೇತ' ಎಂಬುದರಲ್ಲಿಯೇ ಅನ್ವಯ ಮಾಡಬೇಕಾಗುತ್ತದೆ. ಆದ್ದರಿಂದ ಯಾಗಕರ್ಮ ಅಯಾಗಕರ್ಮ ಎಲ್ಲದಕ್ಕೂ 'ರಾಜಸೂಯ' ಎಂಬುದೇ ನಾಮಧೇಯವಾಗುತ್ತದೆ.

'ರಾಜಸೂಯ' ಎಂಬ ಪದವು ಯಾಗಕರ್ಮ ಅಯಾಗಕರ್ಮ ಎಲ್ಲದಕ್ಕೂ ನಾಮಧೇಯವಾದಲ್ಲಿ 'ಯಜೇತ' ಎಂಬಲ್ಲಿರುವ 'ಯಜ್' ಧಾತ್ವರ್ಥ ತಪ್ಪಾಗುತ್ತದಲ್ಲವೇ?

ಈ ಪ್ರಶ್ನೆಗೆ ಅವಕಾಶವಿಲ್ಲ. ಏಕೆಂದರೆ ಯಾಗಕರ್ಮಗಳಷ್ಟೇ ಯಜ್ ಧಾತುವಿನ ಅರ್ಥಗಳು. ವಿದೇವನ ಮೊದಲಾದ ಅಯಾಗಕರ್ಮಗಳು ಯಜ್ ಧಾತುವಿನ ಅರ್ಥಗಳಲ್ಲ. ಆದರೂ ಸಹ ಭತ್ರಿನ್ಯಾಯದಿಂದ ವಿದೇವನಾದಿಕರ್ಮಗಳನ್ನು ಪರಾಮರ್ಶಿಸಬಹುದು. ಒಟ್ಟಾರೆ ಯಾಗಕರ್ಮ ಅಯಾಗಕರ್ಮ ಎಲ್ಲದಕ್ಕೂ ಸ್ವಾರಾಜ್ಯಪ್ರಾಪ್ತಿ ಎಂಬ ಫಲವಿರುವುದರಿಂದ ಎಲ್ಲಾ ಕರ್ಮಗಳು ಪ್ರಧಾನವಾಗಿವೇ ಆಗಿವೆ.

ಸಿದ್ಧಾಂತ - 'ಯಜ್' ಧಾತುವೇ ಪ್ರಧಾನವಾಗಿದೆ. 'ಯಜ್' ಧಾತುವು ಭಾವನಾವನ್ನು ಹೇಳುತ್ತದೆ. ಭಾವನಾಕ್ಕೆ ಫಲವೇ ಭಾವ್ಯವಾಗಿರುತ್ತದೆ. ಭಾವ್ಯಕ್ಕೆ ಧಾತ್ವರ್ಥವೇ ಸಾಧನವಾಗಿರುತ್ತದೆ. ಆದ್ದರಿಂದ 'ಯಜೇತ' ಎಂಬ ಪದಕ್ಕೆ 'ಯಾಗೇನ ಫಲಂ ಭಾವಯೇತ್' ಎಂದರ್ಥವಾಗುತ್ತದೆ. ಇದರಿಂದ ಧಾತ್ವರ್ಥವೇ ಫಲಸಾಧನವೆಂದು ನಿರ್ಣಯವಾಗುತ್ತದೆ. ಈ ವಿಷಯವನ್ನು ಭಾವಾರ್ಥಾಧಿಕರಣವು ನಿರ್ಣಯಿಸಿದೆ. ಈ ಭಾವಾರ್ಥಾಧಿಕರಣದ ನ್ಯಾಯವನ್ನು ಇಲ್ಲಿಯೂ ಅನುಸಂಧಾನ ಮಾಡಿಕೊಳ್ಳಬೇಕು.

'ರಾಜಸೂಯೇನ ಸ್ವಾರಾಜ್ಯಕಾಮೋ ಯಜೇತ' ಎಂಬಲ್ಲಿ 'ಯಜೇತ' ಎಂದು ಕೇಳಿಸುತ್ತಿದೆ. ಇಲ್ಲಿರುವ 'ಲಿಜ್' ಪ್ರತ್ಯಯಕ್ಕೆ 'ಸ್ವಾರಾಜ್ಯಂ ಭಾವಯೇತ್' ಎಂದರ್ಥ. 'ಕೇನ ಭಾವಯೇತ್' ಎಂದು ಆಕಾಂಕ್ಷೆ ಬಂದರೆ 'ಯಾಗೇನ ಭಾವಯೇತ್' ಎಂದು ಉತ್ತರಿಸಬೇಕು. ಆದ್ದರಿಂದ ಧಾತ್ವರ್ಥಕ್ಕೇನೆ ಫಲಸಾಧನತ್ವವೂ ತಿಳಿಯುತ್ತದೆ. ಹೊರತು ನಾಮಧೇಯಕ್ಕೆ ಫಲಸಾಧನತ್ವ ತಿಳಿಯುವುದಿಲ್ಲ. ನಾಮಧೇಯವು ಕೇವಲ ಧಾತ್ವರ್ಥದಲ್ಲಿ ವಿಶೇಷಣವಾಗಿ ಫಲಸಾಧನವಾಗಬಹುದು. ನೇರವಾಗಿ ಫಲಸಾಧನ ಆಗುವುದಿಲ್ಲ. 'ಯಜ್' ಧಾತುವು ಕೇವಲ ಯಾಗವನ್ನಷ್ಟೇ ಹೇಳುತ್ತಿದೆ. ಆ ಯಾಗದ ಸಾಮಾನಾಧಿಕರಣ್ಯವು ರಾಜಸೂಯ ಶಬ್ದಕ್ಕೆ ಇರುವುದರಿಂದ ರಾಜಸೂಯಯಾಗದಿಂದ ಎಂದು ಅರ್ಥವಾಗುತ್ತದೆ. ಆದ್ದರಿಂದ ರಾಜಸೂಯ ಶಬ್ದವು

ಕೇವಲ ಯಾಗಗಳಿಗಷ್ಟೇ ನಾಮಧೇಯವಾಗುತ್ತದೆ ಹೊರತು. ಅಯಾಗಕರ್ಮಗಳಿಗೆ ನಾಮಧೇಯವಾಗುವುದಿಲ್ಲ. ಏಕೆಂದರೆ ಯಾಗಗಳಿಗಷ್ಟೇ ಫಲಸಂಬಂಧವು ಕೇಳಿಸುತ್ತಿರುವುದರಿಂದ ಪ್ರಧಾನಸಾಧನವಾಗಿವೆ. ವಿದೇವನಾದಿಗಳಿಗಾದರೂ ಫಲಸಂಬಂಧವಿಲ್ಲದ ಕಾರಣ ಅಪ್ರಧಾನವಾಗಿವೆ. ಆದರೆ 'ಫಲವತ್ಸನ್ನಿಧಾವಫಲಂ ತದಂಗಂ' ಎಂಬ ನ್ಯಾಯದಂತೆ ಫಲವುಳ್ಳ ರಾಜಸೂಯಾದಿ ಯಾಗಗಳ ಸನ್ನಿಧಾನವಿರುವುದರಿಂದ ಅವುಗಳಿಗೆ ಅಂಗವಾಗುತ್ತವೆ. ಆದ್ದರಿಂದ ಅನುಮತ್ಯಾದಿ ಎಲ್ಲಾ ರಾಜಸೂಯಾಗಾದಿ ಯಾಗಗಳಿಗೆ ವಿದೇವನಾದಿ ಕ್ರೀಡೆಗಳು ಅಂಗಗಳಾಗಿವೆ. ವಿದೇವನಾದಿ ಕ್ರೀಡೆಗಳು ಫಲೋಪಕಾರವಾದ ಅಂಗಗಳಾಗಿವೆ.

ಪೂರ್ವಮೀಮಾಂಸೆಯ ಈ ಅಧಿಕರಣದಲ್ಲಿ 'ಯಜ್' ಧಾತುವಿಗೆ ಅಯಾಗಕರ್ಮವೆನಿಸಿದ ವಿದೇವನಾದಿಗಳನ್ನು ಬಿಟ್ಟು, ಸಕಲ ಯಾಗಗಳೆಂಬ ಅರ್ಥಗಳನ್ನು ಹೇಗೆ ಮಾಡಿದ್ದಾರೋ, ಅದರಂತೆ ಪ್ರಕೃತದಲ್ಲಿಯೂ ತಿಳಿಯಬೇಕು. ಅಂದರೆ ಪ್ರಸಿದ್ಧವಾದ ನಾಮಧೇಯವನ್ನು ಅನುಸರಿಸಿ ಅರ್ಥೈಸದಿದ್ದಲ್ಲಿ 'ದರ್ಶಪೂರ್ಣಮಾಸಾಭ್ಯಾಂ ಯಜೇತ' ಎಂಬಲ್ಲಿಯೂ ಸಹ ಆರು ಯಾಗಗಳನ್ನಷ್ಟೇ ವಿವಕ್ಷಿಸದೆ ಸಕಲ ಯಾಗಗಳನ್ನು 'ಯಜ್' ಧಾತುವಿನಿಂದ ವಿವಕ್ಷಿಸಬೇಕಾದೀತು.

ಪ್ರಶ್ನೆ - ಬೇರೆಡೆ ಪ್ರಸಿದ್ಧವಾದ ನಾಮಧೇಯವನ್ನು ಅನುಸರಿಸಿ 'ಯಜ್' ಧಾತುವಿನ ಅರ್ಥವನ್ನು ಸಂಕೋಚ ಮಾಡಬೇಕೆಂದು ಹೇಳಿದಿರಿ. ಇದರಿಂದ ಪ್ರಕೃತದಲ್ಲಿ ಏನು ಹೇಳಿದಂತಾಯಿತು?

ಉತ್ತರ - ಈ ಪ್ರಶ್ನೆಗೆ 'ಸಂತಿ ಚ' ಎಂಬ ವಾಕ್ಯದಿಂದ ಉತ್ತರಿಸುತ್ತಿದ್ದಾರೆ. ಪ್ರಕೃತ ವಿಷ್ಣುವಿನಲ್ಲಿಯೇ ಪ್ರಸಿದ್ಧವಾದ ನಾಮಧೇಯವನ್ನು ಅನುಸರಿಸಿ ಇಂದ್ರಾದಿ ಲಿಂಗಗಳನ್ನು ವಿಷ್ಣುವಿನಲ್ಲಿ ಸಮನ್ವಯ ಮಾಡಬೇಕು. ಆದ್ದರಿಂದ ಇಂದ್ರಪ್ರಾಣಾದಿ ಲಿಂಗಗಳನ್ನು ಅನುಸರಿಸಿ ಪೂರ್ವಪಕ್ಷವೇ ಹುಟ್ಟುವುದಿಲ್ಲವೆಂದು ತಿಳಿಯಬೇಕು.

**प्रकाशः–** ननु विष्णुश्रुत्यज्ञानेन पूर्वपक्षः किं न स्यादित्यत आह – **नचेति ॥** ननु ब्रह्मश्रुत्यादेः विष्णौ प्रवृत्तत्वमेवाद्याप्यसिद्धं, येन तद्बलादुक्तं युक्तं स्यादित्यत आह – **उक्तञ्चेति ॥** ननु जन्माधिकरण एव ब्रह्मशब्दस्य विष्णौ मुख्यत्वमुक्तम् । अत एवाऽऽनन्दमयाधिकरणे ब्रह्मशब्दं पूर्वपक्षबाधकमाशङ्क्य समाधानमुक्तमिति चेत्सत्यं, जन्माधिकरणे स्वयं समर्थितत्वेऽपि भाष्यादौ तत्रानुक्तेरत्र तूक्तेस्तदभिप्रायेण एवमभिधानात् ।

ವಿಷ್ಣುಶ್ರುತಿಯನ್ನು ಗಮನಿಸದವನು ಪೂರ್ವಪಕ್ಷವನ್ನು ಮಾಡಬಹುದಲ್ಲವೇ? ಎಂಬ ಪ್ರಶ್ನೆಗೆ 'ನಚ' ಗ್ರಂಥದಿಂದ ಉತ್ತರಿಸಿದ್ದಾರೆ. ಬ್ರಹ್ಮಶ್ರುತಿಯು ವಿಷ್ಣುವಿನಲ್ಲಿ ಪ್ರಸಿದ್ಧವಾಗಿದೆಯೆಂದು ಇಲ್ಲಿಯತನಕವೂ ನಿರ್ಣಯವಾಗಿದ್ದಲ್ಲಿ ಪೂರ್ವಪಕ್ಷವು ಅಯುಕ್ತವಾಗುತ್ತಿತ್ತಲ್ಲವೇ? ಎಂಬ ಪ್ರಶ್ನೆಗೆ 'ಉಕ್ತಂ ಚ' ಎಂಬ ವಾಕ್ಯದಿಂದ ಉತ್ತರಿಸಿದ್ದಾರೆ.

ಪ್ರಶ್ನೆ - ಜನ್ಮಾಧಿಕರಣದಲ್ಲಿಯೇ ಬ್ರಹ್ಮಶಬ್ದವು ವಿಷ್ಣುವಿನಲ್ಲಿ ಮುಖ್ಯವಾಗಿದೆಯೆಂದು ಹೇಳಲಾಗಿದೆ. ಆನಂದಮಯಾಧಿಕರಣದಲ್ಲಿ ಬ್ರಹ್ಮಶಬ್ದವನ್ನು ಪೂರ್ವಪಕ್ಷಬಾಧಕವನ್ನಾಗಿ ಆಶಂಕಿಸಿ ಸಮಾಧಾನವನ್ನು ಹೇಳಿದ್ದಾರೆ. ಆದರೆ ನೀವು ಆನಂದಮಯಾಧಿಕರಣದಲ್ಲಿ ಬ್ರಹ್ಮಶಬ್ದವು ವಿಷ್ಣುವಿನಲ್ಲಿ ಸಮರ್ಥಿತವಾಗಿದೆ ಎಂದು ಹೇಳುತ್ತಿದ್ದೀರಿ. ಇದು ತಪ್ಪಲ್ಲವೇ?

ಉತ್ತರ - ಹೌದು, ಗ್ರಂಥಕಾರರು ತಾತ್ಪರ್ಯಚಂದ್ರಿಕೆಯ ಜನ್ಮಾಧಿಕರಣದಲ್ಲಿ ಬ್ರಹ್ಮಶಬ್ದವನ್ನು ಸಮರ್ಥಿಸಿದ್ದಾರೆ. ಹೊರತು ಭಾಷ್ಯಕಾರರಾಗಲೀ ಟೀಕಾಕಾರರಾಗಲಿ ಜನ್ಮಾಧಿಕರಣದಲ್ಲಿ ಸಮರ್ಥಿಸಿಲ್ಲ ಹೊರತಾಗಿ ಆನಂದಮಯಾಧಿಕರಣದಲ್ಲಿ ಸಮರ್ಥಿಸಿದ್ದಾರೆ. ಭಾಷ್ಯ ಟೀಕೆಗಳ ಅಭಿಪ್ರಾಯದಿಂದ ಪ್ರಕೃತ ಗ್ರಂಥಕಾರರು ಆನಂದಮಯಾಧಿಕರಣೇ ಎಂದು ಹೇಳಿದ್ದಾರೆ.

**ಗುರುರಾಜೀಯಮ್ – ಅನ್ಯಥೇತಿ ॥ ಆಗ್ನೇಯಾದಿಷಡ್ಕೇ ಪ್ರವೃತ್ತದರ್ಶಪೂರ್ಣಮಾಸಾನುಸಾರೇಣ ಯಜೇಃ ಷಡ್ಯಾಗಪರತ್ವಾಭಾವ ಇತ್ಯರ್ಥಃ । ನಚಾಸ್ತು ಸನ್ನಿಹಿತಯಾಗಪರತ್ವಮಿತಿ ವಾಚ್ಯಮ್ । ತಥಾ ಸತಿ ಪ್ರಯಾಜಾದಿಸರ್ವಯಾಗಪರತ್ವಾಪತ್ತ್ಯಾ ಕರಣೇತಿಕರ್ತವ್ಯತಾಭೇದೋ ನ ಸ್ಯಾತ್ ।**

## ಸಾರ

ಇಂದ್ರಪ್ರಾಣಾದಿ ಲಿಂಗಗಳನ್ನು ಅವಲಂಬಿಸಿ, ಈ ಆಧಿಕರಣದಲ್ಲಿ ಪೂರ್ವಪಕ್ಷ ಮಾಡುತ್ತಿದ್ದಾರೆ. ಈರೀತಿಯಾದ ಪೂರ್ವಪಕ್ಷವು ಸರಿಯೇ? ಎಂದು ವಿಮರ್ಶಿಸಬೇಕು. ಏಕೆಂದರೆ ವಿಷ್ಣುವಿನಲ್ಲಿ ಈಗಾಗಲೇ ಪ್ರಸಿದ್ಧವಾದ ಬ್ರಹ್ಮ ಮೊದಲಾದ ನಾಮಧೇಯಗಳಿವೆ. ಇವುಗಳನ್ನು ಅನುಸರಿಸಿ ಇಂದ್ರಪ್ರಾಣಾದಿಲಿಂಗಗಳೂ ಸಹ ವಿಷ್ಣುವಿನಲ್ಲೇ ಬರುತ್ತವೆ. ಸಂಶಯಕ್ಕೆ ಅವಕಾಶವೇ ಇರುವುದಿಲ್ಲ. ಏಕೆಂದರೆ ಪೂರ್ವಮೀಮಾಂಸಾಕಾರರೂ ಸಹ ಇಂತಹ ತೀರ್ಮಾನಗಳನ್ನು ತೆಗೆದುಕೊಂಡಿದ್ದಾರೆ. ಉದಾಹರಣೆ :- 'ದರ್ಶಪೂರ್ಣಮಾಸಾಭ್ಯಾಂ ಯಜೇತ' ಎಂಬ ಶ್ರುತಿಯಲ್ಲಿ 'ದರ್ಶಪೂರ್ಣಮಾಸ' ಎಂಬ ಹೆಸರು ಕೇಳಿಸುತ್ತಿದೆ. ಈ ಶ್ರುತಿಯನ್ನು ಕೇಳುವ ಮೊದಲೇ ವಿದ್ವದ್‌ವಾಕ್ಯದಿಂದ ದರ್ಶಪೂರ್ಣಮಾಸ ಶಬ್ದದ ಪರಿಚಯವಾಗಿದೆ. ಹಾಗಾಗಿ 'ಯಜೇತ' ಎಂಬಲ್ಲಿರುವ 'ಯಜ್' ಧಾತುವಿಗೆ ದರ್ಶಮಾಸದ ಮೂರು ಯಾಗಗಳು ಪೂರ್ಣಮಾಸದ ಮೂರು ಯಾಗಗಳು ಮಾತ್ರ ಅರ್ಥವನ್ನಬೇಕೆ ಹೊರತು, ಸಕಲ ಯಾಗಗಳನ್ನು ಅರ್ಥವೆಂದು ಹೇಳಬಾರದು. ಒಟ್ಟಾರೆ 'ದರ್ಶಪೂರ್ಣಮಾಸ'ವೆಂಬ ನಾಮಧೇಯವನ್ನು ಅನುಸರಿಸಿ 'ಯಜ್' ಧಾತುವಿನ ಅರ್ಥವನ್ನು ಸಾವಕಾಶಮಾಡಿದ್ದು ಕಂಡಿದೆ. ಹೀಗೆ ಒಪ್ಪದಿದ್ದರೆ 'ರಾಜಸೂಯೇನ ಯಜೇತ' ಎಂಬಲ್ಲಿಯೂ 'ಯಜ್' ಧಾತುವಿಗೆ ಅರ್ಥಸಂಕೋಚ ಮಾಡುವ ಪ್ರಸಂಗ ಬರುತ್ತದೆ. ಆದ್ದರಿಂದ ಬ್ರಹ್ಮನೆಂಬ ನಾಮಧೇಯವನ್ನು ಅನುಸರಿಸಿ ಇಂದ್ರಪ್ರಾಣಾದಿ ಲಿಂಗಗಳನ್ನು ವಿಷ್ಣುವಿನಲ್ಲಿ ಸಾವಕಾಶ ಮಾಡಬೇಕಾಗುತ್ತದೆ. ಆದ್ದರಿಂದ ಇಂದ್ರಪ್ರಾಣಾದಿ ಲಿಂಗಗಳನ್ನು ವಿವಕ್ಷಿಸಿ ಪೂರ್ವಪಕ್ಷವನ್ನು ನೀವು ಹೇಗೆ ರಚಿಸುತ್ತೀರಿ?

* * * *

## ದೇವೇಂದ್ರನೇ ಪ್ರಾಣಶಬ್ದವಾಚ್ಯನೆಂದು ಪೂರ್ವಪಕ್ಷ

ತಾತ್ಪರ್ಯಚಂದ್ರಿಕಾ

**ಇನ್ದ್ರಾದಿಲಿಙ್ಗಾದೀನಾಂ ವಿಷ್ಣೌ ಪ್ರವರ್ತಯಿತುಮಪ್ಯಶಕ್ಯತ್ವೇನ ಪೂರ್ವಪಕ್ಷೋದಯಾತ್ । ತಥಾ ಹಿ – ''ಇನ್ದ್ರೋ ವೈ ವೃತ್ರಂ ಹತ್ವಾ ಮಹಾನಭವತ್ ಯನ್ಮಹಾನಭವತ್ತನ್ಮಹಾವ್ರತಮಭವತ್' ಇತ್ಯಾದೌ ಯೋ ವೃತ್ರಹನ್ತಾ ಇನ್ದ್ರೋ ಮಹಾವ್ರತಯಜಮಾನಃ ಪ್ರಕೃತಃ, ಸ ಏವ ''ತಮಿನ್ದ್ರ ಉವಾಚ ಪ್ರಾಣೋ ವಾ ಅಹಂ'' ಇತಿ ತತ್ರಾಪೀನ್ದ್ರಶಬ್ದೇನೋಚ್ಯತೇ । ನಚ ವೃತ್ರಹನ್ತೃತ್ವಮಹಾವ್ರತಯಜಮಾನತ್ವಾದಿಕಂ ಬ್ರಹ್ಮಣಿ ಯುಕ್ತಮ್ । ನಾಪಿ ''ಪ್ರಾಣೋ ವಾ ಅಹಮ್'' ಇತಿ ಪ್ರಸಿದ್ಧೇನ್ದ್ರೇ ಪ್ರಯುಕ್ತೋಽಹಂಶಬ್ದೋ ವಿಷ್ಣೌ ಯುಕ್ತಃ । ನಚ 'ಅಹಂ' ಇತ್ಯಸ್ಯ ಮಯೀತ್ಯರ್ಥಃ, ಬಿಭಕ್ತಿವ್ಯತ್ಯಯಪ್ರಸಙ್ಗಾತ್ । ಅನ್ತರ್ಯಾಮಿಪರತ್ವೇ ಚ ಲಕ್ಷಣಾ ಸ್ಯಾತ್ । ನ ಚಾಹಂಶಬ್ದಃ ಸ್ವಪ್ರಯೋಕ್ತ್ರನ್ತರ್ಯಾಮಿಣ್ಯೇವ ಮುಖ್ಯಃ, ''ತದಾತ್ಮಾನಮೇವಾವೇದಹಂ ಬ್ರಹ್ಮಾಸ್ಮಿ'' । ''ಅಹಂ ಕೃತ್ಸ್ನಸ್ಯ ಜಗತಃ'' ಇತ್ಯಾದಾವೀಶ್ವರಪ್ರಯುಕ್ತಾಹಂಶಬ್ದಸ್ಯ ಅಮುಖ್ಯಾರ್ಥತ್ವಪ್ರಸಙ್ಗಾತ್ ।**

ಅನುವಾದ - ಇಂದ್ರಪ್ರಾಣಾದಿಲಿಂಗಗಳನ್ನು ವಿಷ್ಣುವಿನಲ್ಲಿ ಸಮರ್ಥಿಸಲು ಸಾಧ್ಯವೇ ಇಲ್ಲ. ಆದ್ದರಿಂದ ಪೂರ್ವಪಕ್ಷವು ಹುಟ್ಟಬಹುದು. ಅದು ಹೀಗೆ -

ಇಂದ್ರೋ ವೈ ವೃತ್ರಂ ಹತ್ವಾ ಮಹಾನಭವತ್ ।
ಯನ್ಮಹಾನಭವತ್ತನ್ಮಹಾವ್ರತಮಭವತ್ ॥

ಇಂದ್ರನು ವೃತ್ರಾಸುರರನ್ನು ಕೊಂದು ದೊಡ್ಡ ವ್ಯಕ್ತಿಯಾಗಿ 'ಮಹಾವ್ರತ' ಎನಿಸಿದನು. ಇತ್ಯಾದಿಯಾಗಿ ವೃತ್ರಾಸುರ ಸಂಹಾರಕನಾದ ದೇವೇಂದ್ರನು 'ಮಹಾವ್ರತ' ಯಾಗಕ್ಕೆ ಯಜಮಾನನಾಗಿ ಪ್ರಕೃತನಾಗಿದ್ದಾನೆ. ಈ ದೇವೇಂದ್ರನೇ ''ತಮಿಂದ್ರ ಉವಾಚ ಪ್ರಾಣೋ ವಾ ಅಹಂ'' ಎಂಬಲ್ಲಿಯು ಇಂದ್ರಶಬ್ದದಿಂದ ಪ್ರಕೃತನಾಗಿದ್ದಾನೆ. ಇಲ್ಲಿರುವ 'ವೃತ್ರಂ ಹತ್ವಾ' ಎಂಬ ಲಿಂಗವಾಗಲಿ 'ಮಹಾನಭವತ್' ಎಂಬ ಲಿಂಗವಾಗಲಿ ಬ್ರಹ್ಮನಲ್ಲಿ ಸರ್ವಥಾ ಬರುವುದಿಲ್ಲ.

ಇದರಂತೆ 'ಪ್ರಾಣೋವಾ ಅಹಂ' ಎಂಬ ಶ್ರುತಿಯಲ್ಲಿ ದೇವೇಂದ್ರನ ವಿಷಯದಲ್ಲಿ ಪ್ರಯೋಗಿಸಲ್ಪಟ್ಟ 'ಅಹಂ' ಶಬ್ದವು ವಿಷ್ಣುವಿನಲ್ಲಿ ಸರ್ವಥಾ ಕೂಡುವುದಿಲ್ಲ. 'ಅಹಂ' ಶಬ್ದಕ್ಕೆ ಮಯಿ (ದೇವೇಂದ್ರನಲ್ಲಿ) ಎಂಬರ್ಥವನ್ನು ಮಾಡಿದರೆ ವಿಭಕ್ತಿವ್ಯತ್ಯಾಸ ಎಂಬ ದೋಷವು ಬರುತ್ತದೆ. ಇನ್ನು ಅಂತರ್ಯಾಮಿ ಎಂಬರ್ಥವನ್ನು ಮಾಡಿದರೆ ಲಕ್ಷಣಾಪ್ರಸಂಗದೋಷವು ಬರುತ್ತದೆ.

ಶಂಕೆ - ಅಹಂ ಶಬ್ದವು ಶಬ್ದಪ್ರಯೋಗ ಮಾಡುತ್ತಿರುವವನ ಅಂತರ್ಯಾಮಿಯಲ್ಲಿ ಮುಖ್ಯವಾಗಿದೆ ಎಂದು ಹೇಳಬಾರದು. ಹಾಗೇ ಹೇಳಿದರೆ 'ತದಾತ್ಮಾನಮೇವಾವೇದಹಂ ಬ್ರಹ್ಮಾಸ್ಮಿ,' ಇತ್ಯಾದಿ ಸ್ಥಳಗಳಲ್ಲಿ ಈಶ್ವರನಲ್ಲಿ ಪ್ರಯೋಗಿಸಲ್ಪಟ್ಟ 'ಅಹಂ' ಶಬ್ದಕ್ಕೂ ಸಹ ಅಂತರ್ಯಾಮಿ ಎಂಬರ್ಥವನ್ನು ಮಾಡಬೇಕಾದೀತು. ಆದ್ದರಿಂದ ದೇವೇಂದ್ರನಲ್ಲಿ ಇಂದ್ರ ಹಾಗೂ ಶ್ರುತಿಗಳು ನಿರವಕಾಶಗಳಾಗಿ ದೇವೇಂದ್ರನೇ ಪ್ರಾಣಶಬ್ದವಾಚ್ಯನೆಂದು ಪೂರ್ವಪಕ್ಷವು ಹುಟ್ಟಬಹುದು.

ಕಠಿಣಪದಾರ್ಥ

ಮಹಾವ್ರತಂ = ಮಹಾವ್ರತವೆಂಬ ಯಾಗವನ್ನು, ಪ್ರಯುಕ್ತಃ = ಪ್ರಯೋಗಿಸಲ್ಪಟ್ಟ, ಸ್ವಪ್ರಯೋಕ್ಷ್ಯ = ಅಹಂ ಶಬ್ದವನ್ನು ಪ್ರಯೋಗಿಸುವವನಲ್ಲಿ, ಲಕ್ಷಣಾ ಸ್ಯಾತ್ = ಅಹಂ ಶಬ್ದಕ್ಕೆ ಲಕ್ಷಣಾಪ್ರಸಂಗದೋಷ ಬರಬೇಕಾದೀತು.

**ಪ್ರಕಾಶಃ – ಏವಂ ನ್ಯಾಯವಿವರಣಟೀಕಾಗತಾಕ್ಷೇಪಾಂಶಂ ಪ್ರಪಞ್ಚ, ''ವಿದ್ಯಾವಿಶೇಷೇ ಅಧಿಕಾಶಙ್ಕಯಾ ಪುನಃ ಪ್ರತ್ಯವಸ್ಥಾನಾತ್'' ಇತಿ ಸಮಾಧಾನಾಂಶಂ ವಿವೃಣ್ವನ್ ಪೂರ್ವಪಕ್ಷಮುಜ್ಜೀವಯತಿ – ಮೈವಮಿತ್ಯಾದಿನಾ ॥ ಅಪಿಪದೇನ ಸ್ವರಸತಃ ಪ್ರವೃತ್ತಿರ್ನಾಸ್ತ್ಯೇವ, ಬಲಾದಪಿ ಪ್ರವೃತ್ತಿರ್ನೋಪಪದ್ಯತ ಇತ್ಯಾಚಷ್ಟೇ । ಸೂತ್ರೇ ''ನ ವಕ್ತುಃ'' ಇತೀನ್ದ್ರಸ್ಯ, ''ಜೀವಮುಖ್ಯಪ್ರಾಣಲಿಙ್ಗಾತ್'' ಇತಿ ತಯೋಶ್ಚ ಪೂರ್ವಪಕ್ಷಿತತ್ವಾದಿನ್ದ್ರಪ್ರಾಪಕಂ ತಾವದಾಹ – ಇನ್ದ್ರ ಇತಿ ॥ ಉದಾಹರಿಷ್ಯಮಾಣನ್ಯಾಯವಿವರಣೇ ಅನ್ಯಲಿಙ್ಗೇನ ಶ್ರುತ್ಯುಜ್ಜೀವನಸ್ಯ ಸೂಚಿತತ್ವಾತ್ತಥೈವಾಹ – ಸ ಏವೇತಿ ॥ ಅನ್ಯಸ್ಯ ತತ್ರ ಯಜಮಾನತ್ವೇ ಶಸ್ತ್ರಶಂಸಿತಾರಂ ವಿಶ್ವಾಮಿತ್ರಂ ಪ್ರತಿ ಅನೇನ ''ಪ್ರಾಣೋ ವಾ ಅಹಂ'' ಇತ್ಯುಪದೇಶರೂಪವರದಾನಾಯೋಗಾದಿತಿ ಭಾವಃ ।**

**ಅಸ್ತ್ವೇವಂ, ಕಿಂ ತತ ಇತ್ಯತ ಆಹ – ನಚೇತಿ ॥ ಪುರಾಣಾದಾವಿನ್ದ್ರಸ್ಯೈವ ತಥಾತ್ವಪ್ರಸಿದ್ಧೇರಿತಿ ಭಾವಃ । ಏತೇನ ''ನ ವಕ್ತುಃ'' ಇತಿ ಸೂತ್ರಪೂರ್ವಪಕ್ಷಾಂಶಟೀಕಾ ವಿವೃತಾ । ''ನ ಚಾಸ್ಯೋಪದೇಶಸ್ಯ ಸಾವಕಾಶತ್ವಂ ವಾऽಸ್ತಿ'' ಇತಿ ಟೀಕಾವಾಕ್ಯಂ ವಿವೃಣ್ವನ್ ಶ್ರುತಿರಪಿ ನಿರವಕಾಶೇತ್ಯಾಹ – ನಾಪೀತಿ ॥**

ವಿವರಣೆ - ಇಲ್ಲಿಯ ತನಕ ನ್ಯಾಯವಿವರಣಾಟೀಕೆಯಲ್ಲಿರುವ ಆಕ್ಷೇಪಾಂಶವನ್ನೇ ವಿವರಿಸಿದರು. ಮುಂದೆಯೂ ವಿದ್ಯಾವಿಶೇಷೇऽಧಿಕಾಶಂಕಯಾ ಪುನಃ ಪ್ರತ್ಯವಸ್ಥಾನಾತ್'' (ನಿರವಕಾಶಲಿಂಗದಿಂದ ಪೂರ್ವಪಕ್ಷವು ಹುಟ್ಟಬಹುದು ಎಂಬ ನ್ಯಾಯವಿವರಣದ ಸಮಾಧಾನದ ವಾಕ್ಯವನ್ನೇ ವಿವರಿಸುತ್ತಾ ಪೂರ್ವಪಕ್ಷವನ್ನು ಉಜ್ಜೀವನಗೊಳಿಸುತ್ತಿದ್ದಾರೆ. ''ಮೈವಂ'' ಇತ್ಯಾದಿಯಾಗಿ.

ಗ್ರಂಥದಲ್ಲಿ 'ಪ್ರವರ್ತಯಿತುಮಪಿ' ಎಂಬ 'ಅಪಿ' ಪದದಿಂದ ಸ್ವಾಭಾವಿಕವಾಗಿ ವಿಷ್ಣುವಿನಲ್ಲಿಯೂ ಇಂದ್ರಲಿಂಗಗಳು ಇರುವುದಿಲ್ಲ. ಬಲಾತ್ಕಾರದಿಂದಲೂ ಇರುವುದಿಲ್ಲವೆಂದು ಹೇಳಿದ್ದಾರೆ. ಸೂತ್ರದಲ್ಲಿ 'ನ ವಕ್ತುರಾತ್ಮೋಪದೇಶಾತ್' ಎಂಬುದರಿಂದ ಇಂದ್ರನನ್ನು 'ಜೀವಮುಖ್ಯಪ್ರಾಣಲಿಂಗಾತ್' ಎಂಬುದರಿಂದ ಜೀವ ಹಾಗೂ ಮುಖ್ಯಪ್ರಾಣರನ್ನು ಪೂರ್ವಪಕ್ಷಕ್ಕೆ ವಿಷಯವಾಗಿ ಹೇಳಿದ್ದಾರೆ. ಅದಕ್ಕನುಸಾರಿಯಾಗಿ ಇಲ್ಲಿಯೂ ಗ್ರಂಥಕಾರರು ಮೊದಲು ಇಂದ್ರಪಾಪಕವಾದ ಪೂರ್ವಪಕ್ಷವನ್ನೇ 'ಇಂದ್ರೋ ವೈ' ಇತ್ಯಾದಿ ವಾಕ್ಯದಿಂದ ಮಾಡುತ್ತಿದ್ದಾರೆ. ಅನ್ಯಲಿಂಗದಿಂದ ಶ್ರುತಿಯನ್ನು ಉಜ್ಜೀವನ ಮಾಡಬೇಕೆಂಬ ವಿಷಯದಲ್ಲಿ ಮುಂದೆ ಗ್ರಂಥಕಾರರು ನ್ಯಾಯವಿವರಣದ ಮಾತನ್ನು ಉಲ್ಲೇಖಿಸುತ್ತಾರೆ. ಅದರಂತೆ ಪ್ರಕೃತ 'ಸ ಏವ' ಇತ್ಯಾದಿ ವಾಕ್ಯದಿಂದ ಪೂರ್ವಪಕ್ಷವನ್ನು ಸಮರ್ಥಿಸುತ್ತಿದ್ದಾರೆ.

'ತಮಿಂದ್ರ ಉವಾಚ' ಎಂಬಲ್ಲಿ ಒಂದು ವೇಳೆ ವಿಷ್ಣು ಇಂದ್ರಶಬ್ದದಿಂದ ಪ್ರತಿಪಾದ್ಯನಾಗಿ ಯಜಮಾನನಾಗುವುದಿಲ್ಲ. ಏಕೆಂದರೆ ಶಸ್ತ್ರವನ್ನು ಶಂಸನ ಮಾಡುವ ಋತ್ವಿಕ್ ಎನಿಸಿದ ವಿಶ್ವಾಮಿತ್ರನನ್ನು ಕುರಿತು ''ಪ್ರಾಣೋ ವಾ ಅಹಂ'' ಇತ್ಯಾದಿಯಾಗಿ ದೇವೇಂದ್ರನು ಉಪದೇಶ ಎಂಬ ವರವನ್ನು ನೀಡುತ್ತಾನೆ. ವಿಷ್ಣುವು ಯಜಮಾನನಾದಲ್ಲಿ ಈ ವರಪ್ರದಾನವು ತಪ್ಪಾಗುತ್ತದೆಂದು ಅಭಿಪ್ರಾಯ. ಆದರೂ ಸಹ ವಿಷ್ಣುವೇ ಪ್ರತಿಪಾದ್ಯನಾಗಲಿ ಎಂಬ ಪ್ರಶ್ನೆಗೆ 'ನಚ' ಇತ್ಯಾದಿ ವಾಕ್ಯದಿಂದ ಉತ್ತರಿಸುತ್ತಿದ್ದಾರೆ. ಪುರಾಣಾದಿಗಳಲ್ಲಿ ದೇವೇಂದ್ರನಲ್ಲಿಯೇ ಇಂದ್ರಶಬ್ದವು ಪ್ರಸಿದ್ಧವಾಗಿದೆಯೆಂದು ಇದರ ಅಭಿಪ್ರಾಯ.

ಹೀಗೆ ಹೇಳಿದ್ದರಿಂದ 'ನ ವಕ್ಯುಃ' ಎಂಬ ಸೂತ್ರದ ಪೂರ್ವಪಕ್ಷಭಾಗದ ಟೀಕೆಯನ್ನು ವ್ಯಾಖ್ಯಾನಿಸಿದಂತಾಯಿತು. ಮುಂದೆ 'ನ ಚಾಸ್ಯೋಪದೇಶಸ್ಯ ಸಾವಕಾಶತ್ವಂ ವಾऽಸ್ತಿ' ಇಂದ್ರನ ಉಪದೇಶಕ್ಕೆ ಸಾವಕಾಶವನ್ನು ಹೇಳಬಾರದು ಎಂಬ ಟೀಕೆಯ ವಾಕ್ಯವನ್ನು ವ್ಯಾಖ್ಯಾನಿಸುವವರಾಗಿ ಇಂದ್ರಶ್ರುತಿಯು ನಿರವಕಾಶವಾಗಿದೆಯೆಂದು 'ನಾಪಿ' ಇತ್ಯಾದಿ ವಾಕ್ಯದಿಂದ ಹೇಳುತ್ತಿದ್ದಾರೆ.

**ಪ್ರಕಾಶಃ** – ವಿಷ್ಣೌ ಯೋಗೋ ಹಿ ಚತುರ್ಥಾ, ತದಭೇದೇನ ವಾ, ಭೇದೇऽಪಿ ವಿಭಕ್ತಿವಿಪರಿಣಾಮೇನ ಮಯಿ ಪ್ರಾಣोऽಸ್ತೀತ್ಯರ್ಥಕಥನೇನ ವಾ, ಮಚ್ಚಸ್ಥಪುರುಷಾಭಿಪ್ರಾಯೇಣ ಮಚ್ಚಾಃ ಕ್ರೋಶನ್ತೀತಿವತ್ ಸ್ವಾನ್ತರ್ಯಾಮ್ಯಭಿಪ್ರಾಯೇಣ ಲಕ್ಷಣಯಾ ವಾ, ಅನ್ತರ್ಯಾಮಿಣಿ ಮುಖ್ಯತ್ವೇನ ವಾ ?

ನಾದ್ಯः, ಅನ್ತರಧಿಕರಣೇ ಇನ್ದ್ರಾದ್ಯಭೇದಸ್ಯ ನಿರಸ್ತತ್ವಾತ್ । ''ಪೃಥಕ್'' ಇತ್ಯತ್ರ ನಿರಸಿಷ್ಯಮಾಣತ್ವಾಚ್ಚ ದ್ವಿತೀಯಂ ನಿರಸ್ಯತಿ **ನಚೇತಿ** ॥ 'ಅಸ್ಮಿ' ಇತ್ಯಸ್ಯಾಸ್ತೀತ್ಯರ್ಥ ಇತ್ಯಪಿ ಗ್ರಾಹ್ಯಮ್ ॥ **ವಿಭಕ್ತೀತಿ** ॥ ಇನ್ದ್ರಪರತ್ವೇನೋಪಪತ್ತೌ ವ್ಯತ್ಯಯಾದೇರಯೋಗಾದಿತಿ ಭಾವಃ । ತೃತೀಯಂ ನಿರಸ್ಯತಿ – **ಅನ್ತರ್ಯಾಮೀತಿ** ॥ ಚತುರ್ಥಮಾಶಙ್ಕ್ಯಾಹ – **ನಚೇತಿ** ॥ ''ಬ್ರಹ್ಮ ವಾ ಇದಮಗ್ರ ಆಸೀತ್'' ಇತಿ ಪ್ರಕೃತಂ ಬ್ರಹ್ಮ 'ತತ್' ಇತಿ ಪರಾಮೃಶ್ಯತೇ । ಅಹಂ ಬ್ರಹ್ಮಾಸ್ಮೀತ್ಯವೇದಿತ್ಯರ್ಥः।

**ಅಹಂ ಕೃತ್ಸ್ನಸ್ಯ ಜಗತः ಪ್ರಭವः ಪ್ರಲಯಸ್ತಥಾ ।**
**ಮತ್ತः ಪರತರಂ ನಾನ್ಯತ್ಕಿಞ್ಚಿದಸ್ತಿ ಧನಞ್ಜಯ ।**
**ವಿಷ್ಟಭ್ಯಾಹಮಿದಂ ಕೃತ್ಸ್ನಂ ಏಕಾಂಶೇನ ಸ್ಥಿತೋ ಜಗತ್ ॥**

ಇತ್ಯಾದೌ ಭಗವತ್ಪ್ರಯುಕ್ತಾಹಂಶಬ್ದಸ್ಯಾಪಿ ತದನ್ತರ್ಯಾಮಿಬೋಧಕತ್ವಪ್ರಸಙ್ಗ ಇತ್ಯರ್ಥः । ಏತೇನ ''ಪ್ರಾಣೋ ವಾ ಅಹಮಸ್ಮ್ಯೃಷೇ'' ಇತಿ ಶ್ರುತಿः' ಇತಿ ಸುಧಾವಾಕ್ಯಂ ಚ ವಿವೃತಮ್ ।

ವಿಷ್ಣುವಿನಲ್ಲಿ ಇಂದ್ರಾದಿಶಬ್ದಗಳ ಯೋಗಗಳನ್ನು ನಾಲ್ಕು ಬಗೆಯಲ್ಲಿ ಹೇಳಬಹುದು -

೧) ಇಂದ್ರಾದಿಗಳಿಗೂ ವಿಷ್ಣುವಿಗೂ ಅಭೇದ ಇರುವುದರಿಂದ.

೨) ಭೇದವಿದ್ದರೂ 'ಅಹಂ'ಶಬ್ದವನ್ನು 'ಮಯಿ' ಎಂದು ವಿಭಕ್ತಿವಿಪರಿಣಾಮ ಮಾಡುವುದರಿಂದ.

೩) ಮಂಚದಲ್ಲಿರುವ ಪುರುಷರನ್ನು ವಿವಕ್ಷಿಸಿ 'ಮಂಚಾಃ ಕ್ರೋಶಂತಿ' ಎಂದು ಹೇಳುವಂತೆ ತನ್ನ ಅಂತರ್ಯಾಮಿಯನ್ನು ವಿವಕ್ಷಿಸಿ ಇಂದ್ರಶಬ್ದಕ್ಕೆ ವಿಷ್ಣುವಿನಲ್ಲಿ ಲಕ್ಷಣಾ ಮಾಡುವುದರಿಂದ.

೪) ಅಂತರ್ಯಾಮಿಯಲ್ಲಿ ಇಂದ್ರಶಬ್ದಕ್ಕೆ ಮುಖ್ಯಾರ್ಥವನ್ನು ಹೇಳುವುದರಿಂದ ಇಂದ್ರಾದಿ ಶಬ್ದಗಳ ಪ್ರತಿಪಾದ್ಯತ್ವವನ್ನು ವಿಷ್ಣುವಿನಲ್ಲೇ ಸಮರ್ಥಿಸಬಹುದು.

ಇವುಗಳಲ್ಲಿ ಮೊದಲನೇ ಪಕ್ಷವು ತಪ್ಪು. ಏಕೆಂದರೆ ಅಂತರಧಿಕರಣದಲ್ಲಿ ಇಂದ್ರಾದಿಗಳಿಗೂ ವಿಷ್ಣುವಿಗೆ ಆಭೇದವಿಲ್ಲವೆಂದು ಸಮರ್ಥಿಸಿದ್ದಾಗಿದೆ. ಮುಂದೆಯೂ ಸಹ ಪೃಥಗುಪದೇಶಾತ್ ಎಂಬಲ್ಲಿ ನಿರಾಕರಿಸುತ್ತಾರೆ. ಎರಡನೆಯ ಪಕ್ಷವನ್ನು 'ನಚ' ಇತ್ಯಾದಿ ವಾಕ್ಯದಿಂದ ನಿರಾಕರಿಸಿದ್ದಾರೆ. 'ಅಸ್ಮಿ' ಎಂಬುದಕ್ಕೆ 'ಅಸ್ತಿ' ಎಂಬರ್ಥವನ್ನೂ ಸ್ವೀಕರಿಸಬೇಕು. 'ಅಹಂ' ಶಬ್ದಕ್ಕೆ ದೇವೇಂದ್ರ ಎಂಬರ್ಥವನ್ನು ಹೇಳಿದಾಗ 'ಮಯಿ' ಎಂದು ವಿಭಕ್ತಿಯನ್ನು ವ್ಯತ್ಯಾಸ ಮಾಡಬೇಕಾಗಿಲ್ಲ. ಮೂರನೆಯ ಪಕ್ಷವನ್ನು 'ಅಂತರ್ಯಾಮಿ' ಎಂಬ ವಾಕ್ಯದಿಂದ ನಿರಾಕರಿಸುತ್ತಿದ್ದಾರೆ. ಅಂದರೆ ಲಕ್ಷಣಾ ಮಾಡುವುದೇ ತಪ್ಪೆಂದು ಅಭಿಪ್ರಾಯ. ನಾಲ್ಕನೆಯ ಪಕ್ಷವನ್ನು 'ನಚ' ಎಂಬ ವಾಕ್ಯದಿಂದ ನಿರಾಕರಿಸಿದ್ದಾರೆ.

'ಬ್ರಹ್ಮವೇದಮಗ್ರ ಆಸೀತ್' ಎಂಬಲ್ಲಿ ಪ್ರಸಕ್ತನಾದ ಬ್ರಹ್ಮನನ್ನೇ 'ತದಾತ್ಮಾಂ' ಎಂಬಲ್ಲಿರುವ 'ತತ್' ಶಬ್ದದಿಂದ ಪರಾಮರ್ಶಿಸಲಾಗಿದೆ. ಒಂದು ವೇಳೆ 'ಅಹಂ' ಶಬ್ದಕ್ಕೆ 'ಅಂತರ್ಯಾಮಿ' ಎಂಬರ್ಥದಲ್ಲಿ ಮುಖ್ಯತ್ವವನ್ನು ಹೇಳಿದರೆ -

ಅಹಂ ಕೃತ್ಸ್ನಸ್ಯ ಜಗತಃ ಪ್ರಭವಃ ಪ್ರಲಯಸ್ತಥಾ।
ಮತ್ತಃ ಪರತರಂ ನಾನ್ಯತ್ಕಿಂಚಿದಸ್ತಿ ಧನಂಜಯ।
ವಿಷ್ಟಭ್ಯಾಹಮಿದಂ ಕೃತ್ಸ್ನಂ ಏಕಾಂಶೇನ ಸ್ಥಿತೋ ಜಗತ್ ॥

ಇತ್ಯಾದಿ ಸ್ಥಳಗಳಲ್ಲಿ ಭಗವಂತನಿಂದಲೇ ಪ್ರಯೋಗಿಸಲ್ಪಟ್ಟ 'ಅಹಂ' ಶಬ್ದಕ್ಕೂ ಸಹ ಅಂತರ್ಯಾಮಿ ಎಂಬರ್ಥವನ್ನು ಮಾಡುವ ಪ್ರಸಂಗ ಬರುತ್ತದೆ. ಹೀಗೆ ಹೇಳಿದ್ದರಿಂದ 'ಪ್ರಾಣೋ ವಾ ಅಹಮಸ್ಮ್ಯಹೇ' ಇತಿ ಶ್ರುತಿಃ' ಎಂಬ ಸುಧಾವಾಕ್ಯವನ್ನು ವ್ಯಾಖ್ಯಾನಿಸಿದಂತಾಯಿತು.

**ಗುರ್ವರಾಜೀಯಮ್** – ನನು ಚ ದೃಷ್ಟಾನ್ತದಾರ್ಷ್ಟಾನ್ತಿಕಯೋರ್ವೈಷಮ್ಯಮ್ । ದೃಷ್ಟಾನ್ತೇ ಹ್ಯಾಗ್ನೇಯಾದಿ-ಯಾಗಷಟ್ಕಪ್ರಸಿದ್ಧಾಯಾ ದರ್ಶಪೂರ್ಣಮಾಸಶ್ರುತೇಃ ಸತ್ತ್ವೇನ ತದನುಸಾರೇಣ ಯಜೇಃ ಷಡ್ಯಾಗಮಾತ್ರಪರತ್ವವತ್ ಪ್ರಕೃತೇ ವಿಷ್ಣೌ ಪ್ರವೃತ್ತಪ್ರಬಲಶ್ರುತ್ಯಭಾವೇನ ತದನುಸಾರೇಣ ಲಿಙ್ಗಾನಾಂ ವಿಷ್ಣುಪರತಾಯಾ ಅಸಮ್ಭವಾ-ದಿತ್ಯತ ಆಹ – ತತ್ರೇತಿ ॥

ಸಾರ

ಪ್ರಾಣಶಬ್ದದಿಂದ ಇಂದ್ರನಾಗಲಿ, ಮುಖ್ಯಪ್ರಾಣನಾಗಲಿ ಅಥವಾ ಜೀವನಾಗಲಿ ವಾಚ್ಯರಾಗಬಹುದು. ಇವರಲ್ಲೆಲ್ಲಾ ಪ್ರಸಿದ್ಧವಾದ ಲಿಂಗಗಳು ಹಾಗೂ ಶ್ರುತಿಗಳು ನಿರವಕಾಶಗಳಾದ್ದರಿಂದ ಪೂರ್ವಪಕ್ಷವು ಹುಟ್ಟುತ್ತದೆ.

'ತಮಿಂದ್ರ ಉವಾಚ' ಎಂಬಲ್ಲಿ ಒಂದು ವೇಳೆ ವಿಷ್ಣು ಇಂದ್ರಶಬ್ದದಿಂದ ಪ್ರತಿಪಾದ್ಯನಾಗಿ ಯಜಮಾನನಾಗುವುದಿಲ್ಲ. ಏಕೆಂದರೆ ಶಸ್ತ್ರವನ್ನು ಶಂಸನ ಮಾಡುವ ಋತ್ವಿಕ್ ಎನಿಸಿದ ವಿಶ್ವಾಮಿತ್ರನನ್ನು ಕುರಿತು ''ಪ್ರಾಕೋ ವಾ ಅಹಂ'' ಇತ್ಯಾದಿಯಾಗಿ ದೇವೇಂದ್ರನು ಉಪದೇಶ ಎಂಬ ವರವನ್ನು ನೀಡುತ್ತಾನೆ. ವಿಷ್ಣುವು ಯಜಮಾನನಾದಲ್ಲಿ ಈ ವರಪ್ರದಾನವು ತಪ್ಪಾಗುತ್ತದೆಂದು ಅಭಿಪ್ರಾಯ. ಆದರೂ ಸಹ ವಿಷ್ಣುವೇ ಪ್ರತಿಪಾದ್ಯನಾಗಲಿ ಎಂಬ ಪ್ರಶ್ನೆಗೆ 'ನಚ' ಇತ್ಯಾದಿ ವಾಕ್ಯದಿಂದ ಉತ್ತರಿಸುತ್ತಿದ್ದಾರೆ. ಪುರಾಣಾದಿಗಳಲ್ಲಿ ದೇವೇಂದ್ರನಲ್ಲಿಯೇ ಇಂದ್ರಶಬ್ದವು ಪ್ರಸಿದ್ಧವಾಗಿದೆಯೆಂದು ಇದರ ಅಭಿಪ್ರಾಯ.

ಹೀಗೆ ಹೇಳಿದ್ದರಿಂದ 'ನ ವಕ್ಯುಃ' ಎಂಬ ಸೂತ್ರದ ಪೂರ್ವಪಕ್ಷಭಾಗದ ಟೀಕೆಯನ್ನು ವ್ಯಾಖ್ಯಾನಿಸಿದಂತಾಯಿತು. ಮುಂದೆ 'ನ ಚಾಸ್ಯೋಪದೇಶಸ್ಯ ಸಾವಕಾಶತ್ವಂ ವಾऽಸ್ತಿ' ಇಂದ್ರನ ಉಪದೇಶಕ್ಕೆ ಸಾವಕಾಶವನ್ನು ಹೇಳಬಾರದು ಎಂಬ ಟೀಕೆಯ ವಾಕ್ಯವನ್ನು ವ್ಯಾಖ್ಯಾನಿಸುವವರಾಗಿ ಇಂದ್ರಶ್ರುತಿಯು ನಿರವಕಾಶವಾಗಿದೆಯೆಂದು 'ನಾಪಿ' ಇತ್ಯಾದಿ ವಾಕ್ಯದಿಂದ ಹೇಳುತ್ತಿದ್ದಾರೆ.

**ಪ್ರಕಾಶಃ** – **ವಿಷ್ಣೌ ಯೋಗೋ ಹಿ ಚತುರ್ಥಾ, ತದಭೇದೇನ ವಾ, ಭೇದೇऽಪಿ ವಿಭಕ್ತಿವಿಪರಿಣಾಮೇನ ಮಯಿ ಪ್ರಾಣೋऽಸ್ತೀತ್ಯರ್ಥಕಥನೇನ ವಾ, ಮಚ್ಚಸ್ಥಪುರುಷಾಭಿಪ್ರಾಯೇಣ ಮಚ್ಚಾಃ ಕ್ರೋಶನ್ತೀತಿವತ್ ಸ್ವಾನ್ತರ್ಯಾಮ್ಯಭಿಪ್ರಾಯೇಣ ಲಕ್ಷಣಯಾ ವಾ, ಅನ್ತರ್ಯಾಮಿಣಿ ಮುಖ್ಯತ್ವೇನ ವಾ ?**

ನಾದ್ಯಃ, ಅನ್ತರಧಿಕರಣೇ ಇನ್ದ್ರಾದ್ಯಭೇದಸ್ಯ ನಿರಸ್ತತ್ವಾತ್ । ''ಪೃಥಕ್'' ಇತ್ಯತ್ರ ನಿರಸಿಷ್ಯಮಾಣತ್ವಾಚ್ಚ **ದ್ವಿತೀಯಂ ನಿರಸ್ಯತಿ ನಚೇತಿ ॥** 'ಅಸ್ಮಿ' ಇತ್ಯಸ್ಯಾಸ್ತೀತ್ಯರ್ಥ ಇತ್ಯಪಿ ಗ್ರಾಹ್ಯಮ್ ॥ **ವಿಭಕ್ತೀತಿ ॥** ಇನ್ದ್ರಪರತ್ವೇನೋಪಪತ್ತೌ ವ್ಯತ್ಯಯಾದೇರಯೋಗಾದಿತಿ ಭಾವಃ । ತೃತೀಯಂ ನಿರಸ್ಯತಿ – **ಅನ್ತರ್ಯಾಮೀತಿ ॥** ಚತುರ್ಥಮಾಶಙ್ಕ್ಯಾಹ – **ನಚೇತಿ ॥** ''ಬ್ರಹ್ಮ ವಾ ಇದಮಗ್ರ ಆಸೀತ್'' ಇತಿ ಪ್ರಕೃತಂ ಬ್ರಹ್ಮ 'ತತ್' ಇತಿ ಪರಾಮೃಶ್ಯತೇ । ಅಹಂ ಬ್ರಹ್ಮಾಸ್ಮೀತ್ಯವೇದಿತ್ಯರ್ಥಃ।

**ಅಹಂ ಕೃತ್ಸ್ನಸ್ಯ ಜಗತಃ ಪ್ರಭವಃ ಪ್ರಲಯಸ್ತಥಾ ।**
**ಮತ್ತಃ ಪರತರಂ ನಾನ್ಯತ್ಕಿಞ್ಚಿದಸ್ತಿ ಧನಞ್ಜಯ ।**
**ವಿಷ್ಟಭ್ಯಾಹಮಿದಂ ಕೃತ್ಸ್ನಂ ಏಕಾಂಶೇನ ಸ್ಥಿತೋ ಜಗತ್ ॥**

ಇತ್ಯಾದೌ ಭಗವತ್ಪ್ರಯುಕ್ತಾಹಂಶಬ್ದಸ್ಯಾಪಿ ತದನ್ತರ್ಯಾಮಿಬೋಧಕತ್ವಪ್ರಸಙ್ಗ ಇತ್ಯರ್ಥಃ । ಏತೇನ ''ಪ್ರಾಣೋ ವಾ ಅಹಮಸ್ಮ್ಯಮೃಷೇ'' ಇತಿ ಶ್ರುತಿಃ' ಇತಿ ಸುಧಾವಾಕ್ಯಂ ಚ ವಿವೃತಮ್ ।

ವಿಷ್ಣುವಿನಲ್ಲಿ ಇಂದ್ರಾದಿಶಬ್ದಗಳ ಯೋಗಗಳನ್ನು ನಾಲ್ಕು ಬಗೆಯಲ್ಲಿ ಹೇಳಬಹುದು -

೧) ಇಂದ್ರಾದಿಗಳಿಗೂ ವಿಷ್ಣುವಿಗೂ ಅಭೇದ ಇರುವುದರಿಂದ.

೨) ಭೇದವಿದ್ದರೂ 'ಅಹಂ'ಶಬ್ದವನ್ನು 'ಮಯಿ' ಎಂದು ವಿಭಕ್ತಿವಿಪರಿಣಾಮ ಮಾಡುವುದರಿಂದ.

೩) ಮಂಚದಲ್ಲಿರುವ ಪುರುಷರನ್ನು ವಿವಕ್ಷಿಸಿ 'ಮಂಚಾಃ ಕ್ರೋಶಂತಿ' ಎಂದು ಹೇಳುವಂತೆ ತನ್ನ ಅಂತರ್ಯಾಮಿಯನ್ನು ವಿವಕ್ಷಿಸಿ ಇಂದ್ರಶಬ್ದಕ್ಕೆ ವಿಷ್ಣುವಿನಲ್ಲಿ ಲಕ್ಷಣಾ ಮಾಡುವುದರಿಂದ.

೪) ಅಂತರ್ಯಾಮಿಯಲ್ಲಿ ಇಂದ್ರಶಬ್ದಕ್ಕೆ ಮುಖ್ಯಾರ್ಥವನ್ನು ಹೇಳುವುದರಿಂದ ಇಂದ್ರಾದಿ ಶಬ್ದಗಳ ಪ್ರತಿಪಾದ್ಯತ್ವವನ್ನು ವಿಷ್ಣುವಿನಲ್ಲೇ ಸಮರ್ಥಿಸಬಹುದು.

ಇವುಗಳಲ್ಲಿ ಮೊದಲನೇ ಪಕ್ಷವು ತಪ್ಪು. ಏಕೆಂದರೆ ಅಂತರಧಿಕರಣದಲ್ಲಿ ಇಂದ್ರಾದಿಗಳಿಗೂ ವಿಷ್ಣುವಿಗೆ ಅಭೇದವಿಲ್ಲವೆಂದು ಸಮರ್ಥಿಸಿದ್ದಾಗಿದೆ. ಮುಂದೆಯೂ ಸಹ ಪೃಥಗುಪದೇಶಾತ್ ಎಂಬಲ್ಲಿ ನಿರಾಕರಿಸುತ್ತಾರೆ. ಎರಡನೆಯ ಪಕ್ಷವನ್ನು 'ನಚ' ಇತ್ಯಾದಿ ವಾಕ್ಯದಿಂದ ನಿರಾಕರಿಸಿದ್ದಾರೆ. 'ಅಸ್ಮಿ' ಎಂಬುದಕ್ಕೆ 'ಅಸ್ತಿ' ಎಂಬರ್ಥವನ್ನೂ ಸ್ವೀಕರಿಸಬೇಕು. 'ಅಹಂ' ಶಬ್ದಕ್ಕೆ ದೇವೇಂದ್ರ ಎಂಬರ್ಥವನ್ನು ಹೇಳಿದಾಗ 'ಮಯಿ' ಎಂದು ವಿಭಕ್ತಿಯನ್ನು ವ್ಯತ್ಯಾಸ ಮಾಡಬೇಕಾಗಿಲ್ಲ. ಮೂರನೆಯ ಪಕ್ಷವನ್ನು 'ಅಂತರ್ಯಾಮಿ' ಎಂಬ ವಾಕ್ಯದಿಂದ ನಿರಾಕರಿಸುತ್ತಿದ್ದಾರೆ. ಅಂದರೆ ಲಕ್ಷಣಾ ಮಾಡುವುದೇ ತಪ್ಪೆಂದು ಅಭಿಪ್ರಾಯ. ನಾಲ್ಕನೆಯ ಪಕ್ಷವನ್ನು 'ನಚ' ಎಂಬ ವಾಕ್ಯದಿಂದ ನಿರಾಕರಿಸಿದ್ದಾರೆ.

'ಬ್ರಹ್ಮವೇದಮಗ್ರ ಆಸೀತ್' ಎಂಬಲ್ಲಿ ಪ್ರಸಕ್ತನಾದ ಬ್ರಹ್ಮನನ್ನೇ 'ತದಾತ್ಮಾಂ' ಎಂಬಲ್ಲಿರುವ 'ತತ್' ಶಬ್ದದಿಂದ ಪರಾಮರ್ಶಿಸಲಾಗಿದೆ. ಒಂದು ವೇಳೆ 'ಅಹಂ' ಶಬ್ದಕ್ಕೆ 'ಅಂತರ್ಯಾಮಿ' ಎಂಬರ್ಥದಲ್ಲಿ ಮುಖ್ಯತ್ವವನ್ನು ಹೇಳಿದರೆ -

ಅಹಂ ಕೃತ್ಸ್ನಸ್ಯ ಜಗತಃ ಪ್ರಭವಃ ಪ್ರಲಯಸ್ತಥಾ।
ಮತ್ತಃ ಪರತರಂ ನಾನ್ಯತ್ಕಿಂಚಿದಸ್ತಿ ಧನಂಜಯ।
ವಿಷ್ಟಭ್ಯಾಹಮಿದಂ ಕೃತ್ಸ್ನಂ ಏಕಾಂಶೇನ ಸ್ಥಿತೋ ಜಗತ್ ॥

ಇತ್ಯಾದಿ ಸ್ಥಳಗಳಲ್ಲಿ ಭಗವಂತನಿಂದಲೇ ಪ್ರಯೋಗಿಸಲ್ಪಟ್ಟ 'ಅಹಂ' ಶಬ್ದಕ್ಕೂ ಸಹ ಅಂತರ್ಯಾಮಿ ಎಂಬರ್ಥವನ್ನು ಮಾಡುವ ಪ್ರಸಂಗ ಬರುತ್ತದೆ. ಹೀಗೆ ಹೇಳಿದ್ದರಿಂದ 'ಪ್ರಾಣೋ ವಾ ಅಹಮಸ್ಮ್ಯಷೇ' ಇತಿ ಶ್ರುತಿಃ' ಎಂಬ ಸುಧಾವಾಕ್ಯವನ್ನು ವ್ಯಾಖ್ಯಾನಿಸಿದಂತಾಯಿತು.

**ಗುರುರಾಜೀಯಮ್ – ನನು ಚ ದೃಷ್ಟಾನ್ತದಾರ್ಷ್ಟಾನ್ತಿಕಯೋರ್ವೈಷಮ್ಯಮ್ । ದೃಷ್ಟಾನ್ತೇ ಹ್ಯಾಗ್ನೇಯಾದಿ-ಯಾಗಷಟ್ಕಪ್ರಸಿದ್ಧಾಯಾ ದರ್ಶಪೂರ್ಣಮಾಸಶ್ರುತೇಃ ಸತ್ತ್ವೇನ ತದನುಸಾರೇಣ ಯಜೇಃ ಷಡ್ಯಾಗಮಾತ್ರಪರತ್ವವತ್ ಪ್ರಕೃತೇ ವಿಷ್ಣೌ ಪ್ರವೃತ್ತಪ್ರಬಲಶ್ರುತ್ಯಭಾವೇನ ತದನುಸಾರೇಣ ಲಿಙ್ಗಾನಾಂ ವಿಷ್ಣುಪರತಾಯಾ ಅಸಮ್ಭವಾ-ದಿತ್ಯತ ಆಹ – ತತ್ತಚ್ಚೇತಿ ॥**

ಸಾರ

ಪ್ರಾಣಶಬ್ದದಿಂದ ಇಂದ್ರನಾಗಲಿ, ಮುಖ್ಯಪ್ರಾಣನಾಗಲಿ ಅಥವಾ ಜೀವನಾಗಲಿ ವಾಚ್ಯರಾಗಬಹುದು. ಇವರಲ್ಲೆಲ್ಲಾ ಪ್ರಸಿದ್ಧವಾದ ಲಿಂಗಗಳು ಹಾಗೂ ಶ್ರುತಿಗಳು ನಿರವಕಾಶಗಳಾದ್ದರಿಂದ ಪೂರ್ವಪಕ್ಷವು ಹುಟ್ಟುತ್ತದೆ.

ದೇವೇಂದ್ರನಲ್ಲಿ ವೃತ್ರಹಂತೃತ್ವ, ಮಹಾವ್ರತಯಾಜತ್ವ ಮೊದಲಾದ ಅಸಾಧಾರಣ ಧರ್ಮಗಳಿವೆ. ಮತ್ತು 'ಪ್ರಾಣೋ ವಾ ಅಹಂ' ಎಂಬ ಶ್ರುತಿಯೂ ಪ್ರಸಿದ್ಧವಾಗಿವೆ. ಇವುಗಳನ್ನು ವಿಷ್ಣುವಿನಲ್ಲಿ ಸಮನ್ವಯ ಮಾಡಲು ಸಾಧ್ಯವಿಲ್ಲ. ಅಂತರ್ಯಾಮಿ ವಿವಕ್ಷೆಯಿಂದ ಇವುಗಳನ್ನು ವಿಷ್ಣುವಿನಲ್ಲಿ ಹೇಳಬಹುದೆಂಬ ಒಂದು ಅವಕಾಶವಿದೆ. ಆದರೆ ಒಂದು ವೇಳೆ 'ಅಹಂ' ಶಬ್ದಕ್ಕೆ 'ಅಂತರ್ಯಾಮಿ' ಎಂಬರ್ಥವನ್ನು ಹೇಳಿದರೆ ವಿಷ್ಣುವೇ ಸ್ವತಃ ಯಾವ ವಾಕ್ಯಗಳಲ್ಲಿ 'ಅಹಂ' ಶಬ್ದವನ್ನು ಪ್ರಯೋಗಿಸಿದ್ದಾನೋ ಅಂತಹ ಸ್ಥಳಗಳಲ್ಲಿಯೂ ವಿಷ್ಣುವಿನ ಅಂತರ್ಯಾಮಿ ಯಾರೋ ಒಬ್ಬನನ್ನು ಹೇಳಬೇಕಾಗುವ ಪ್ರಸಂಗ ಬರುತ್ತದೆ. ಆದ್ದರಿಂದ ಇಂದ್ರನಲ್ಲಿ ಪ್ರಸಿದ್ಧವಾದ ಲಿಂಗಗಳನ್ನು ಮತ್ತು ಶ್ರುತಿಗಳನ್ನು ವಿಷ್ಣುವಿನಲ್ಲಿ ಸಾವಕಾಶ ಮಾಡಲು ಸಾಧ್ಯವಿಲ್ಲ.

* * * *

## ಮುಖ್ಯವಾಯುವೇ ಪ್ರಾಣಶಬ್ದವಾಚ್ಯನೆಂದು ಪೂರ್ವಪಕ್ಷ

### ತಾತ್ಪರ್ಯಚಂದ್ರಿಕಾ

**यथा च ''वत्समालभेत'' इत्यत्र आलम्भनं गुणकर्मभूतगोदोहनादि-साहचर्यात् गुणकर्म, तथा प्राणोऽप्यप्रधानचक्षुरादि साहचर्यादप्रधानभूतः, नतु प्रधानभूतं ब्रह्म । चक्षुरादिभिश्चातिनिकृष्टैः सर्वोत्कृष्टस्य ब्रह्मणः कलहोऽप्ययुक्तः ।**

ಅನುವಾದ - ಪ್ರಾಣಶಬ್ದದಿಂದ ಮುಖ್ಯವಾಯುವು ಪ್ರತಿಪಾದ್ಯವೆಂಬ ಪೂರ್ವಪಕ್ಷವು ಹುಟ್ಟಬಹುದು. ಯಾವ ರೀತಿಯಾಗಿ ''ವತ್ಸಮಾಲಭೇತ'' ಎಂಬಲ್ಲಿ ಆಲಂಭನವು ಗುಣಕರ್ಮಭೂತವಾದ ಗೋದೋಹನಾದಿ ಸಾಹಚರ್ಯದಿಂದ ಗುಣಕರ್ಮವನ್ನೇ ಹೇಳುತ್ತದೋ ಆದರಂತೆ ''ಪ್ರಾಣೋ ವಾ ಅಹಂ'' ಎಂಬಲ್ಲಿರುವ ಪ್ರಾಣಶಬ್ದವೂ ಸಹ ಚಕ್ಷುರಿಂದ್ರಿಯಾದಿಸಾಹಚರ್ಯದಿಂದ ಅಪ್ರಧಾನವಾದ ಪ್ರಾಣವಾಯುವನ್ನೇ ಹೇಳುತ್ತದೆ ಹೊರತು ಪ್ರಧಾನಭೂತನಾದ ಬ್ರಹ್ಮನನ್ನು ಹೇಳುವುದಿಲ್ಲ. ಅತ್ಯಂತ ನಿಕೃಷ್ಟವಾದ ಚಕ್ಷುರಿಂದ್ರಿಯದ ಜೊತೆಗೆ ಪರಬ್ರಹ್ಮನ ಕಲಹವು ಅಯುಕ್ತವಾಗುತ್ತದೆ.

ಅತ್ಯಂತ ನಿಕೃಷ್ಟವಾದ ಚಕ್ಷುರಾದಿಇಂದ್ರಿಯಗಳ ಜೊತೆಗೆ ಅತ್ಯಂತಶ್ರೇಷ್ಠನಾದ ಪರಮಾತ್ಮನು ಕಲಹ ಮಾಡಲು ಸಾಧ್ಯವಿಲ್ಲ. ಆದ್ದರಿಂದಲೂ ಪ್ರಾಣಶಬ್ದದಿಂದ ಬ್ರಹ್ಮನನ್ನು ಪ್ರತಿಪಾದ್ಯನೆನ್ನಬಾರದು. ಹೊರತಾಗಿ ಮುಖ್ಯವಾಯುವೇ ಪ್ರತಿಪಾದ್ಯನೆನ್ನಬೇಕು.

**ಪ್ರಕಾಶಃ** – **एवमिन्द्रप्रापकश्रुतिलिङ्गयोर्निरवकाशत्वेनेन्द्रप्राप्तिमुक्त्वा वायुप्राप्तिं दृष्टान्तपूर्वमाह – यथा चेत्यादिना ॥ प्राणशब्दस्य विष्णुवायुसाधारणस्य साहचर्य-मात्रात्कथमवधारणमित्यत उक्तम् – यथा च वत्समिति ॥**

ದ್ವಿತೀಯೇ ''ವಿಶಯೇ ಪ್ರಾಯದರ್ಶನಾತ್'' ಇತಿ ತೃತೀಯಪಾದೀಯಷಷ್ಠಾಧಿಕರಣೇ ಅಗ್ನಿಹೋತ್ರಗೋದೋಹಾಧಿಕಾರೇ ''ವತ್ಸಮಾಲಭೇತ'' ಇತಿ ಶ್ರುತಂ ವಾಕ್ಯಮುದಾಹೃತ್ಯ 'ಆಲಭೇತ' ಇತಿ ಯಾಗವಿಧಿಃ

ಉತ ಸಂಸ್ಕಾರವಿಧಿರಿತಿ ವಿಶಯೇ, ''ವಾಯವ್ಯಂ ಶ್ವೇತಮಾಲಭೇತ'' ಇತ್ಯಾದಾವಿವಾಸತ್ಯಪಿ ದೇವತಾಸಂಯೋಗೇ ಪ್ರಾಣಿದ್ರವ್ಯಾಲಮ್ಭತ್ವಸಾಮಾನ್ಯಾದ್ಯಾಗವಿಧಿರಿತಿ ಪೂರ್ವಪಕ್ಷಯಿತ್ವಾ, ಆಲಮ್ಭಸ್ಯ ಸ್ಪರ್ಶಮಾತ್ರತ್ವಾತ್ತಸ್ಯ ಚ ಲೋಕೇऽಪಿ ದೃಷ್ಟತ್ವೇನ ಯಾಗಂ ವಿನಾऽನುಪಪತ್ತ್ಯಭಾವಾತ್ ಗುಣಕರ್ಮಭೂತ-ಗೋದೋಹಪ್ರಾಯಪಾಠದರ್ಶನಾದ್ಗುತ್ಸಸಂಸ್ಕಾರಾಖ್ಯಂ ಗುಣಕರ್ಮೈವ ಚೋದಿತ ಇತಿ ಸಿದ್ಧಾನ್ತಿತಮ್ ।

ತದ್ವದತ್ರಾऽಪಿ ಪ್ರಾಣೋ ವಿಷ್ಣುರನ್ಯೋ ವೇತಿ ವಿಶಯೇ, ಚಕ್ಷುರಾದಿಪ್ರಾಯಪಾಠಾದಪ್ರಧಾನೋ ಮುಖ್ಯಪ್ರಾಣ ಏವ ಭವೇದಿತ್ಯರ್ಥಃ । ಅತ ಏವ ವೈಯಾಕರಣೈಸ್ಸಾಹಚರ್ಯಂ ಧರ್ಮಗ್ರಾಹಕಮಿತಿ ವದದ್ಭಿಃ ''ಸರ್ತಿಶಾಸ್ತ್ಯರ್ತಿಭ್ಯಶ್ಚ'' ಇತ್ಯತ್ರ ಪರಸ್ಮೈಪದಿಸಾಹಚರ್ಯಾಚ್ಛಾಸ್ತೇಃ ಪರಸ್ಮೈಪದಿನ ಏವ ಗ್ರಹಣ-ಮಿತ್ಯುಕ್ತಮ್ । ಅಪ್ರಧಾನಪ್ರಧಾನಪದೇ ಹೇತುಗರ್ಭೇ । ಏತೇನ ''ಏತತ್ಪ್ರಾಣಸ್ಯೇನ್ದ್ರಿಯಗಣೇ ಗಣಿತತ್ವಾತ್'' ದಿತಿ ಟೀಕಾ ವಿವೃತಾ ।

**ಚಕ್ಷುರಾದಿಭಿರಿತಿ ॥** ''ತಾ ಅಹಿಂಸನ್ತ । ಅಹಮುಕ್ಥಮಸ್ಮ್ಯಹಮುಕ್ಥಮಸ್ಮಿ'' ಇತ್ಯಾದಿನೋಕ್ತ ಇತ್ಯರ್ಥಃ ।

ವಿವರಣೆ - ಇಲ್ಲಿಯ ತನಕ ಇಂದ್ರಾದಿ ಪ್ರಾಪಕವಾದ ಶ್ರುತಿಲಿಂಗಗಳಿಗೆ ನಿರವಕಾಶತ್ವವನ್ನು ಸಮರ್ಥಿಸಿ ಪೂರ್ವಪಕ್ಷವನ್ನು ಮಾಡಿದ್ದಾಯಿತು. ಮುಂದೆ ವಾಯುಪ್ರಾಪಕವಾದ ಶ್ರುತಿಲಿಂಗಗಳನ್ನು ನಿರವಕಾಶಗಳೆಂದು ಸಮರ್ಥಿಸುವುದಕ್ಕಾಗಿ ದೃಷ್ಟಾಂತವನ್ನು 'ಯಥಾ ಚ' ಇತ್ಯಾದಿ ವಾಕ್ಯದಿಂದ ಹೇಳುತ್ತಿದ್ದಾರೆ.

ಪ್ರಾಣಶಬ್ದವು ವಿಷ್ಣು ಹಾಗೂ ವಾಯು ಇಬ್ಬರಲ್ಲಿಯೂ ಸಾಧಾರಣವಾಗಿ ಪ್ರಸಿದ್ಧವಾಗಿವೆ. ಹೀಗಿರುವಾಗ ಕೇವಲ ಸಾಹಚರ್ಯದಿಂದ ವಾಯುವೇ ಪ್ರಾಣಶಬ್ದವಾಚ್ಯನೆಂದು ಹೇಗೆ ನಿರ್ಣಯಿಸುತ್ತೀರಿ? ಎಂಬ ಪ್ರಶ್ನೆಗೆ 'ಯಥಾ ಚ' ಎಂಬ ವಾಕ್ಯದಿಂದ ಪೂರ್ವಮೀಮಾಂಸೆಯ ದೃಷ್ಟಾಂತವನ್ನು ನೀಡುತ್ತಿದ್ದಾರೆ.

ವಿಶಯೇ ಪ್ರಾಯದರ್ಶನಾತ್ (೨-೩-೬)

ಅಗ್ನಿಹೋತ್ರಪ್ರಸಂಗದಲ್ಲಿ ಗೋದೋಹನವನ್ನು ಮಾಡಬೇಕು. ಆ ಸಂದರ್ಭದಲ್ಲಿ ವತ್ಸಮಾಲಭೇತ ಎಂಬ ವಾಕ್ಯವು ಶ್ರುತವಾಗಿದೆ. ಇಲ್ಲಿ ಕೇಳಿಸುತ್ತಿರುವ ಆಲಭೇತ ಎಂಬ ಪದವು ಯಾಗವನ್ನು ವಿಧಿಸುತ್ತಿದೆಯೋ? ಅಥವಾ ಸಂಸ್ಕಾರವನ್ನು ವಿಧಿಸುತ್ತಿದೆಯೋ? ಎಂದು ಸಂಶಯ.

ಪೂರ್ವಪಕ್ಷ - 'ಆಲಭೇತ' ಎಂಬ ಪದವು ಸಂಸ್ಕಾರ ವಿಧಾಯಕವಾಗಿದೆ. 'ವಾಯವ್ಯಂ ಶ್ವೇತ-ಮಾಲಭೇತ' ಎಂಬಲ್ಲಿಯೂ 'ಆಲಭೇತ' ಎಂಬ ಪದವಿದೆ. ಆಲ್ಲಿರುವ 'ಆಲಭೇತ' ಎಂಬ ಪದವು ವಾಯುದೇವತಾಕವಾದ ಯಾಗವನ್ನು ವಿಧಿಸುತ್ತಿದೆ. ಆದರಂತೆ ಇಲ್ಲಿಯೂ 'ಆಲಭೇತ' ಎಂಬ ಪದವು ಯಾಗವಿಧಾಯಕವೇ ಆಗಬೇಕು. ಒಂದು ಮಾತ್ರ ವ್ಯತ್ಯಾಸ - ಅಲ್ಲಿ ವಾಯು ಎಂಬ ದೇವತಾವಾಚಕ ಪದವಿದೆ. ಇಲ್ಲಿ ಅಂತಹ ಪದ ಕೇಳಿಸುತ್ತಿಲ್ಲ. ಆದರೆ ಪ್ರಾಣದ್ರವ್ಯದ ಆಲಂಭನವು ಎರಡೂ ಕಡೆ ಸಮಾನವಾದ್ದರಿಂದ ಯಾಗವಿಧಾಯಕವೆಂದು ಹೇಳಬಹುದು.

ಅಂತಿಮಪ್ರಾಣಾಧಿಕರಣ-(೧೧೧೨)

ಸಿದ್ಧಾಂತ - 'ವತ್ಸಮಾಲಭೇತ' ಎಂಬಲ್ಲಿರುವ ಆಲಂಭ ಶಬ್ದವು ಕೇವಲ ಕರುವಿನ ಸ್ಪರ್ಶವನ್ನಷ್ಟೇ ಹೇಳುತ್ತಿದೆ. ಕರುವನ್ನು ಪ್ರೀತಿಯಿಂದ ಮುಟ್ಟುವುದು ಲೋಕದಲ್ಲಿಯೂ ಕಂಡಿರುತ್ತದೆ. ಆದ್ದರಿಂದ ಯಾಗವಿಧಾಯಕವೆಂದು ಒಪ್ಪದಿದ್ದರೆ 'ವತ್ಸಮಾಲಭೇತ' ಎಂಬ ವಾಕ್ಯವೇ ಅನುಪಪನ್ನವಾಗುತ್ತದೆಂಬ ಸ್ಥಿತಿಯಿಲ್ಲ. ಆದ್ದರಿಂದ ಗೋದೋಹ (ಹಾಲು ಕರೆಯುವಿಕೆ ಎಂಬ) ಗುಣಕರ್ಮದ ಸಾಹಚರ್ಯವು ಆಲಂಭನಕ್ಕಿರುತ್ತದೆ. ಹಾಲು ಕರೆಯುವಿಕೆ ಎಂಬುದು ಸಂಸ್ಕಾರವಾದಂತೆ ಕರುವನ್ನು ಸ್ಪರ್ಶಿಸುವುದೂ ಗುಣಕರ್ಮವೆಂಬ ಸಂಸ್ಕಾರರೂಪವೇ ಆಗಿದೆ. ಆದ್ದರಿಂದ ಅಗ್ನಿಹೋತ್ರ ಪ್ರಕರಣದಲ್ಲಿ ಹಾಲನ್ನು ಕರೆಯುವಾಗ ಕರುವಿಗೆ ಹಾಲನ್ನು ಕುಡಿಸುವ ಮೂಲಕ ಸಂಸ್ಕಾರ ಮಾಡಬೇಕೆಂದು ತಿಳಿಯಬೇಕು.

ಪೂರ್ವಮೀಮಾಂಸೆಯ ಈ ಅಧಿಕರಣದಲ್ಲಿ ಗುಣಕರ್ಮಭೂತವಾದ ಗೋದೋಹನದ ಸಾಹಚರ್ಯವು ಆಲಂಭನಕ್ಕಿರುವುದರಿಂದ ಆಲಂಭನವೂ ಸಹ ಗುಣಕರ್ಮವಾಗಿದೆ ಎಂದು ನಿರ್ಣಯಿಸಲಾಗಿದೆ. ಇದರಿಂದ ಮೀಮಾಂಸಕರು ಸಾಹಚರ್ಯವನ್ನು ಪ್ರಮಾಣವೆಂಬುದಾಗಿ ಅಂಗೀಕರಿಸಿದ್ದಾರೆ ಆದರಂತೆ ಪ್ರಕೃತದಲ್ಲಿಯೂ ಪ್ರಾಣಶಬ್ದವಾಚ್ಯನಾದವನು ವಿಷ್ಣುವೋ? ಅಥವಾ ಬೇರೆಯವರೋ? ಎಂದು ಸಂಶಯ ಬಂದಾಗ ಅಪ್ರಧಾನರಾದ ಚಕ್ಷುರಾದಿ ಇಂದ್ರಿಯಗಳ ಜೊತೆಗೆ ಪ್ರಾಣಪದವನ್ನು ಹೇಳಿದ್ದರಿಂದ ಅಪ್ರಧಾನವಾದ ಮುಖ್ಯವಾಯುವೇ ಸಾಹಚರ್ಯಪ್ರಮಾಣದಿಂದ ಸ್ವೀಕರಿಸಬೇಕೆಂದು ತಿಳಿಯುತ್ತದೆ.

ಮೀಮಾಂಸಕರು ಮಾತ್ರವಲ್ಲ ವೈಯ್ಯಾಕರಣರೂ ಸಹ ಸಾಹಚರ್ಯವನ್ನು ಪ್ರಮಾಣವೆಂದು ಅಂಗೀಕರಿಸಿದ್ದಾರೆ - 'ಸರ್ತಿಶಾಸ್ತ್ಯರ್ತಿಭ್ಯಶ್ಚ' ಎಂಬ ಸೂತ್ರದಲ್ಲಿ 'ಸೃಗತೌ' ಮತ್ತು 'ಋಗತೌ' ಈ ಎರಡು ಧಾತುಗಳು ಪರಸ್ಮೈಪದಿಯಲ್ಲಿರುತ್ತವೆ. ಈ ಎರಡು ಧಾತುಗಳ ಸಾಹಚರ್ಯ 'ಸಾಮು ಅನುಶಿಷ್ಠೌ' ಎಂಬ ಧಾತುವಿಗಿರುವುದರಿಂದ ಅದೂ ಸಹ 'ಪರಸ್ಮೈಪದಿ' ಆಗುತ್ತದೆಂದು ನಿರ್ಣಯಿಸಿದ್ದಾರೆ. ಇದರಂತೆ ಪ್ರಕೃತದಲ್ಲಿಯೂ ಅಪ್ರಧಾನದ ಜೊತೆಗೆ ಪಠಿತವಾದದ್ದೂ ಅಪ್ರಧಾನವೇ ಆಗುತ್ತದೆಂದು ತಿಳಿಯಬೇಕು. ಹೀಗೆ ಹೇಳಿದ್ದರಿಂದ "ಏತತ್ಪ್ರಾಣಸ್ಯೇಂದ್ರಿಯಗಣೇ ಗಣಿತತ್ವಾತ್" ಇಂದ್ರಿಯಗಳ ಸಮೂಹದಲ್ಲಿ ಈ ಪ್ರಾಣವು ಎಣಿಸಲ್ಪಟ್ಟಿದೆ ಎಂಬ ಟೀಕೆಯನ್ನು ವ್ಯಾಖ್ಯಾನಿಸಿದಂತಾಯಿತು.

"ತಾ ಅಹಿಂಸಂತ। ಅಹಮುಕ್ಥಮಸ್ಮ್ಯಹಮುಕ್ಥಮಸ್ಮಿ" ಇತ್ಯಾದಿಯಾಗಿ ಇಂದ್ರಿಯಾದಿಭಿಮಾನಿ ದೇವತೆಗಳು ಕಲಹ ಮಾಡುತ್ತಿದ್ದಾರೆಂದು ತಿಳಿಯಬೇಕು.

## ಸಾರ

ಅಥವಾ ವಾಯುವೇ ಪ್ರಾಣಶಬ್ದವಾಚ್ಯನು. ಏಕೆಂದರೆ ಚಕ್ಷುರಾದಿ ಇಂದ್ರಿಯಗಳ ಅಥವಾ ಇಂದ್ರಿಯಾಭಿಮಾನಿ ದೇವತೆಗಳ ಮಧ್ಯದಲ್ಲಿ ಈ ಪ್ರಾಣಶಬ್ದವು ಹೇಳಲ್ಪಟ್ಟಿದೆ. ಚಕ್ಷುರಾದಿಗಳೆಲ್ಲವೂ ಅಪ್ರಧಾನಾದಿಗಳಾದ್ದರಿಂದ ಅವುಗಳ ಮಧ್ಯದಲ್ಲಿ ಪಠಿತವಾದ ಪ್ರಾಣವೂ ಅಪ್ರಧಾನವೇ ಆಗಬೇಕು. ಹೊರತು ಪ್ರಧಾನವಾದ ಬ್ರಹ್ಮನು ಪ್ರಾಣಶಬ್ದವಾಚ್ಯನಾಗುವುದಿಲ್ಲ. ಈ ವಿಷಯವು ಸಾಹಚರ್ಯ ಪ್ರಮಾಣದಿಂದ ಸಿದ್ಧವಾಗಿದೆ. ಸಾಹಚರ್ಯವನ್ನು ಪ್ರಮಾಣವೆಂಬುದಾಗಿ ಪೂರ್ವಮೀಮಾಂಸಕರು ಮತ್ತು ವೈಯಾಕರಣರು ಒಪ್ಪಿಕೊಂಡಿದ್ದಾರೆ.

ಇಂದ್ರಿಯಾಭಿಮಾನಿ ದೇವತೆಗಳು ಪರಸ್ಪರ ಕಲಹ ಮಾಡುವ ಸಂದರ್ಭದಲ್ಲಿ ಪ್ರಾಣ ಶಬ್ದವು ಹೇಳಲ್ಪಟ್ಟದೆ. ಅತ್ಯಂತ ನಿಕೃಷ್ಟರಾದ ಇಂದ್ರಿಯಾಭಿಮಾನಿ ದೇವತೆಗಳ ಜೊತೆಗೆ ಸರ್ವೋತ್ಕೃಷ್ಟನಾದ ಬ್ರಹ್ಮನು ಕಲಹ ಮಾಡಲು ಸಾಧ್ಯವಿಲ್ಲದ ಕಾರಣ ಬ್ರಹ್ಮನು ಪ್ರಾಣಶಬ್ದ ವಾಚ್ಯನಾಗಲಾರ.

* * * *

## ಜೀವನೇ ಪ್ರಾಣಶಬ್ದವಾಚ್ಯನೆಂದು ಪೂರ್ವಪಕ್ಷ

ತಾತ್ಪರ್ಯಚಂದ್ರಿಕಾ

**शतसंवत्सरत्वं तु जीवादन्यत्र न युक्तमेव ।**

**यद्यपि ''तावन्ति शतसंवत्सरस्याह्नां सहस्राणि भवन्ति'' इत्यत्र शतसंवत्सरत्वं प्राणनिष्ठं न भाति, बृहतीसहस्रवर्णानां शतसंवत्सरस्याह्नां च षट्त्रिंशत्सहस्रत्वेन सङ्ख्यासाम्यस्यैवोक्तेः । तथाऽपि ''तं शतं वर्षाण्यभ्यार्चत् तावन्ति'' इत्यत्र ''प्राणो वाव तदभ्यार्चत्'' इति प्रकृतस्य प्राणस्यान्वयात् ''तावन्ति'' इत्यत्रापि तस्यैवान्वयः । अत एव टीकायां ''प्राणो वाव तदभ्यार्चत्'' इत्यादि पूर्ववाक्यं पठितम् ।**

**नच तदन्तर्यामिणि लिङ्गानां सावकाशता, दुःखित्वादेरपि प्रसङ्गात् । अपांनेतृत्वादिलिङ्गानामप्यन्तर्यामिगतता अत्रत्यसिद्धान्ताधीना । नच स्वातन्त्र्यादेवेश्वरे प्राणशब्दः, सति विरोधिश्रुत्यादौ तदयोगात् । नहि 'दरिद्रो भृत्यो जयी' इत्यत्र राज्ञि जयिशब्दः । तदेतदभिप्रेत्योक्तं टीकायाम् ''न चैतल्लिङ्गं विष्णाववकाशं लभते'' इति । अन्विष्याप्यवकाशं न लभत इत्यर्थः । अन्यथा 'न चैतल्लिङ्गं सावकाशम्' इत्येवावक्ष्यत् । विष्णुश्रुत्यादिकं तु इन्द्रादौ गौणम् ।**

ಅನುವಾದ - ಶತಸಂವತ್ಸರತ್ವ (ನೂರುವರ್ಷಗಳ ಜೀವನ) ಎಂಬ ಲಿಂಗವು ಜೀವನನ್ನು ಬಿಟ್ಟು ಬೇರೆಯವರಲ್ಲಿ ಬರುವುದೇ ಇಲ್ಲ. ಆದ್ದರಿಂದ ಜೀವನ ಲಿಂಗವೂ ಸಹ ನಿರವಕಾಶವಾದ್ದರಿಂದ ಜೀವನೇ ಪ್ರಾಣಶಬ್ದವಾಚ್ಯನು.

ವಸ್ತುತಸ್ತು ಜೀವನು ಪ್ರಾಣಶಬ್ದವಾಚ್ಯನೆನ್ನಬೇಕಾದರೆ ಶತಸಂವತ್ಸರತ್ವವು ಪ್ರಾಣನಲ್ಲಿ ಕೇಳಿಸಬೇಕು. ಆದರೆ ''ತಾವಂತಿ ಶತಸಂವತ್ಸರಸ್ಯಾಹ್ನಾಂ ಸಹಸ್ರಾಣಿ ಭವಂತಿ'' ಎಂಬಲ್ಲಿ ಶತಸಂವತ್ಸರತ್ವವು ಪ್ರಾಣನಲ್ಲಿ ಕೇಳಿಸುತ್ತಲೇ ಇಲ್ಲ. ಕೇವಲ ಬೃಹತೀಸಹಸ್ರದ ಅಕ್ಷರಗಳು ಮತ್ತು ನೂರು ವರ್ಷದ

ಹಗಲುಗಳು ಎರಡೂ ಸಹ ಮೂವತ್ತಾರು ಸಾವಿರ ಸಂಖ್ಯೆಯಿಂದ ಕೂಡಿವೆ ಎಂಬುದಾಗಿ ಶಂಕಾ-ಸಾಮ್ಯವಷ್ಟೇ ಕೇಳಿ ಸುತ್ತಿದೆ. ಆದರೂ ''ತಂ ಶತಂ ವರ್ಷಾಣ್ಯಭ್ಯಾರ್ಚತ್'' ಎಂಬುದಾಗಿ ಶತರ್ಚಿ ಶಬ್ದದ ಅರ್ಥವನ್ನು ವ್ಯಾಖ್ಯಾನಿಸುವ ಪ್ರಸಂಗದಲ್ಲಿ ''ಪ್ರಾಣೋ ವಾವ ತದಭ್ಯಾರ್ಚತ್'' ಎಂಬುದಾಗಿ ಪ್ರಾಣನು ಪ್ರಕೃತನಾಗಿದ್ದಾನೆ. ಈ ಪ್ರಾಣನನ್ನೇ 'ತಾವಂತಿ' ಎಂಬಲ್ಲಿಯೂ ಅನ್ವಯ ಮಾಡಬೇಕು. ಆದ್ದರಿಂದಲೇ ಟೀಕೆಯಲ್ಲಿ 'ಪ್ರಾಣೋ ವಾವ ತದಭ್ಯಾರ್ಚತ್' ಎಂಬ ಹಿಂದಿನ ವಾಕ್ಯವು ಪಠಿತವಾಗಿದೆ.

ಜೀವನ ಅಂತರ್ಯಾಮಿಯಲ್ಲಿ ಶತಸಂವತ್ಸರತ್ವ ಎಂಬ ಲಿಂಗವು ಸಾವಕಾಶವಾಗಬಹುದಲ್ಲವೇ? ಎಂದು ಶಂಕಿಸಬಾರದು. ಹಾಗಾದಲ್ಲಿ ಜೀವನಲ್ಲಿರುವ ದುಃಖಿತ್ವವೂ ಸಹ ಅಂತರ್ಯಾಮಿಯಲ್ಲಿಯೇ ಬರಬೇಕಾಗುವ ಪ್ರಸಂಗ ಬರುತ್ತದೆ. ಹಾಗಾದರೆ ಹಿಂದಿನ ಅಧಿಕರಣದಲ್ಲಿ ಅಪಾಂ ನೇತೃತ್ವಾದಿ-ಲಿಂಗಗಳನ್ನು ಅಂತರ್ಯಾಮಿಪರವಾಗಿ ಅರ್ಥೈಸಿದ್ದು ತಪ್ಪಾಗುತ್ತದಲ್ಲವೆ? ಎಂದು ಶಂಕಿಸಬಾರದು. ಈ ಅಧಿಕರಣದ ಸಿದ್ಧಾಂತವನ್ನು ಅಪೇಕ್ಷಿಸಿಯೇ ಹಿಂದಿನ ಅಧಿಕರಣದ ಅಂತರ್ಯಾಮಿಪರತ್ವ ಎಂಬ ಯುಕ್ತಿಯು ಸಿದ್ಧವಾಗುತ್ತದೆ.

ಸ್ವಾತಂತ್ರ್ಯವೆಂಬ ಪ್ರವೃತ್ತಿನಿಮಿತ್ತವನ್ನು ಅಪೇಕ್ಷಿಸಿ ಬ್ರಹ್ಮನು ಪ್ರಾಣಶಬ್ದವಾಚ್ಯನಾಗಬಹುದಲ್ಲವೇ? ಎಂದು ಪ್ರಶ್ನಿಸಬಾರದು. ವಿರೋಧಿಶ್ರುತಿ ಇದ್ದಾಗ ಹಾಗೆ ಅರ್ಥೈಸಲು ಸಾಧ್ಯವಿಲ್ಲ. 'ದರಿದ್ರೋ ಭೃತ್ಯೋ ಜಯೀ' ಎಂಬ ಶಬ್ದವನ್ನು ಪ್ರಯೋಗಿಸಿದಾಗ, ಭೃತ್ಯನು ಗೆದ್ದನೆಂದೇ ಹೇಳಬೇಕು. ನಿಯಾಮಕನಾದ ರಾಜನು ಗೆದ್ದನು ಎಂದು ಸರ್ವಥಾ ಹೇಳಬಾರದು. ಏಕೆಂದರೆ ರಾಜನಲ್ಲಿ ದಾರಿದ್ರ್ಯವಾಗಲಿ ಭೃತ್ಯತ್ವವಾಗಲಿ ಇರುವುದಿಲ್ಲ. ಈ ಅಭಿಪ್ರಾಯದಿಂದಲೇ ಟೀಕೆಯಲ್ಲಿ ''ನ ಚೈತಲ್ಲಿಂಗಂ ವಿಷ್ಣುವವಕಾಶಂ ಲಭತೇ'' ಜೀವನ ಲಿಂಗವು ವಿಷ್ಣುವಿನಲ್ಲಿ ಅವಕಾಶವನ್ನು ಹೊಂದುವುದಿಲ್ಲ ಎಂದು ಹೇಳಿದ್ದಾರೆ. ಅಂದರೆ ಹುಡುಕಿ ಪ್ರಯತ್ನ ಪಟ್ಟರೂ ಅವಕಾಶವು ದೊರೆಯುವುದಿಲ್ಲವೆಂದು ಅರ್ಥ. ಇಲ್ಲದಿದ್ದಲ್ಲಿ 'ನ ಚೈತಲ್ಲಿಂಗಂ ಸಾವಕಾಶಂ' ಎಂದೇ ಹೇಳುತ್ತಿದ್ದರು. 'ಲಭತೇ' ಎಂಬ ಪದವನ್ನು ಪ್ರಯೋಗಿಸುತ್ತಿರಲಿಲ್ಲ.

ಜೀವಾದಿಪರವಾದಾಗ ವಿಷ್ಣುಶ್ರುತಿಗಳ ವಿರೋಧವೂ ಬರುವುದಿಲ್ಲ. ಏಕೆಂದರೆ ವಿಷ್ಣುಶ್ರುತಿಗಳಿಗೆ ಇಂದ್ರಾದಿ ಜೀವರಲ್ಲಿ ಗೌಣಾರ್ಥವನ್ನು ಮಾಡಲು ಬರುತ್ತದೆ. ಆದ್ದರಿಂದ ಜೀವನಾಗಲೀ ಮುಖ್ಯವಾಯುವಾಗಲೀ ಅಥವಾ ದೇವೇಂದ್ರನಾಗಲೀ ಪ್ರಾಣಶಬ್ದದಿಂದ ವಾಚ್ಯರಾಗಿದ್ದಾರೆಂಬ ಪೂರ್ವಪಕ್ಷವನ್ನು ಮಾಡಬಹುದು.

### ಕಠಿಪದಾರ್ಥ

ಶತಸಂವತ್ಸರತ್ವಮ್ = ನೂರು ವರ್ಷದ ಬದುಕು, ವರ್ಣಾನಾಂ = ಸ್ವರವ್ಯಂಜನರೂಪವಾದ ವರ್ಣಗಳ, ಷಟ್‌ತ್ರಿಂಶತ್ಸಹಸ್ರತ್ವೇನ = ಮೂವತ್ತಾರು ಸಾವಿರವಾಗ್ತರಿಂದ, ತಸ್ಯೇವ = ಪ್ರಾಣಶಬ್ದಕ್ಕೇನೇ, ಆತಏವ = ಪ್ರಕೃತನಾದ ಪ್ರಾಣನಿಗೆ ಅಲ್ಲಿ ಅನ್ವಯ ಹೇಳಿದ್ದರಿಂದಲೇ, ಅಭ್ಯಾರ್ಚತ್ = ಪೂಜಿಸಿದನು, ದುಃಖಿತ್ವಾತ್ = ದುಃಖದ ಸಂಬಂಧ ಅಜ್ಞಾನದ ಸಂಬಂಧಗಳೂ ಸಹ, ಅತ್ರತ್ಯ = ಈ ಅಧಿಕರಣದ,

ತದಯೋಗಾತ್ = ಸ್ವಾತಂತ್ರ್ಯವು ಪ್ರವೃತ್ತಿನಿಮಿತ್ತವಾಗದು, ಗೌಣಂ = ತನಗಿಂತ ಅವರರನ್ನು ವಿವಕ್ಷಿಸಿ ಪೂರ್ಣರಾಗಿದ್ದಾರೆಂಬ ಗೌಣಾರ್ಥವನ್ನು

**ಪ್ರಕಾಶಃ – ಏವಮಿನ್ದ್ರವಾಯುಪ್ರಾಪ್ತಿಮುಕ್ತ್ವಾ, ಜೀವಪ್ರಾಪ್ತಿಂ ಚ ತಲ್ಲಿಙ್ಗಪ್ರಾಬಲ್ಯೋಕ್ತ್ಯಾ ವಕ್ತಿ – ಶತಸಂವತ್ಸರತ್ವಂ ತ್ವಿತಿ ॥ ''ಏಷ ಇಮಂ ಲೋಕಮಭ್ಯಾರ್ಚತ್ ಪುರುಷರೂಪೇಣ ಯ ಏಷ ತಪತಿ ಪ್ರಾಣೋ ವಾವ ತದಭ್ಯಾರ್ಚತ್ ಪ್ರಾಣೋ ಹ್ಯೇಷ ಯ ಏಷ ತಪತಿ ತಂ ಶತಂ ವರ್ಷಾಣ್ಯಭ್ಯಾರ್ಚತ್ । ತಸ್ಮಾಚ್ಛತಂ ವರ್ಷಾಣಿ ಪುರುಷಾಯುಷೋ ಭವನ್ತಿ'' ಇತಿ ವಾಕ್ಯೋಕ್ತಂ ಶತಾಯುಷ್ಟ್ವಂ ''ಶತಾಯುಃ ಪುರುಷಃ'' ಇತ್ಯಾದಿಶ್ರುತೇಃ ಜೀವ ಏವ ಯುಕ್ತಮಿತ್ಯರ್ಥಃ । ಅತ್ರ ಭಾಷ್ಯೇ 'ತಾವನ್ತಿ' ಇತಿ ವಾಕ್ಯೋಕ್ತಾವಪಿ ಟೀಕಾಯಾಂ ಪೂರ್ವವಾಕ್ಯಮುಕ್ತ್ವಾ ''ಪ್ರಾಣಸ್ಯೋಕ್ತಶತಾಯುಷ್ಟ್ವಸ್ಯೋಪರ್ಯಪಿ 'ತಾವನ್ತಿ' ಇತ್ಯಾದಿನಾ ಬಹುಸ್ಥಲೇಷು ಅನುಸನ್ಧಾನಾತ್'' ಇಯುಕ್ತಮ್ । ತದಭಿಪ್ರಾಯಂ ಶಙ್ಕಪೂರ್ವಂ ವ್ಯನಕ್ತಿ – ಯದ್ಯಪೀತಿ ॥**

ವಿವರಣೆ - ಇಲ್ಲಿಯ ತನಕ ದೇವೇಂದ್ರನಾಗಲೀ ಮುಖ್ಯವಾಯುವಾಗಲೀ ಪ್ರಾಣಶಬ್ದದಿಂದ ವಾಚ್ಯರಾಗುತ್ತಾರೆಂಬ ಪೂರ್ವಪಕ್ಷವನ್ನು ಸಮರ್ಥಿಸಿದ್ದಾಯಿತು. ಪ್ರಕೃತ ಜೀವನು ಪ್ರಾಣಶಬ್ದವಾಚ್ಯನಾಗಬಹುದಾದ್ದರಿಂದ ಪೂರ್ವಪಕ್ಷವನ್ನು ಸಮರ್ಥಿಸಲು ಜೀವಪ್ರಾಪಕಲಿಂಗಕ್ಕೆ ನಿರವಕಾಶತ್ವ ಪ್ರಯುಕ್ತವಾದ ಪ್ರಾಬಲ್ಯವನ್ನು ಸಮರ್ಥಿಸಲು ಹೊರಟಿದ್ದಾರೆ. 'ಶತಸಂವತ್ಸರತ್ವಂ ತು' ಇತ್ಯಾದಿಯಾಗಿ.

'ಏಷ ಇಮಂ ಲೋಕಮಭ್ಯಾರ್ಚತ್ ಪುರುಷರೂಪೇಣ ಯ ಏಷ ತಪತಿ ಪ್ರಾಣೋ ವಾವ ತದಭ್ಯಾರ್ಚತ್ ಪ್ರಾಣೋ ಹ್ಯೇಷ ಯ ಏಷ ತಪತಿ ತಂ ಶತಂ ವರ್ಷಾಣ್ಯಭ್ಯಾರ್ಚತ್ । ತಸ್ಮಾಚ್ಛತಂ ವರ್ಷಾಣಿ ಪುರುಷಾಯುಷೋ ಭವಂತಿ' ಈ ವಾಕ್ಯದಲ್ಲಿ ಹೇಳಲ್ಪಟ್ಟ ಶತಾಯುಷ್ಟ್ವಂ ಎಂಬ ಧರ್ಮವು ''ಶತಾಯುಃ ಪುರುಷಃ'' ಎಂಬ ಶ್ರುತಿಗೆ ಅನುಗುಣವಾಗಿ ಜೀವನಲ್ಲಿಯೇ ಯುಕ್ತವಾಗುತ್ತದೆ.

ಈ ಪ್ರಸಂಗದ ಭಾಷ್ಯದಲ್ಲಿ 'ತಾವಂತಿ' ಎಂಬ ವಾಕ್ಯವನ್ನಷ್ಟೇ ಹೇಳಿದ್ದಾರೆ. ಆದರೆ ಟೀಕೆಯಲ್ಲಿ 'ತಾವಂತಿ' ಎಂಬ ಹಿಂದಿನ ವಾಕ್ಯವನ್ನು ಹೇಳಿ ''ಪ್ರಾಣಸ್ಯೋಕ್ತಶತಾಯುಷ್ಟ್ವಸ್ಯೋಪರ್ಯಪಿ ತಾವಂತಿ ಇತ್ಯಾದಿನಾ ಬಹುಸ್ಥಲೇಷು ಅನುಸಂಧಾನಾತ್'' ಪ್ರಾಣನಲ್ಲಿ ಹೇಳಲ್ಪಟ್ಟ ಶತಾಯುಷ್ಟ್ವವು ಮುಂದೆಯೂ 'ತಾವಂತಿ' ಇತ್ಯಾದಿ ಅನೇಕ ಸ್ಥಳಗಳಲ್ಲಿ ಅನುಸಂಧಾನ ಮಾಡಿಕೊಳ್ಳಬೇಕು ಎಂದು ಹೇಳಲ್ಪಟ್ಟಿದೆ. ಟೀಕೆಯ ಅಭಿಪ್ರಾಯವನ್ನು ಏನೆಂದು ತಿಳಿಯಲು ಶಂಕೆಯನ್ನು ಮಾಡಿಕೊಂಡು 'ಯದ್ಯಪಿ' ಇತ್ಯಾದಿ ವಾಕ್ಯದಿಂದ ವ್ಯಾಖ್ಯಾನಿಸುತ್ತಿದ್ದಾರೆ.

**ಪ್ರಕಾಶಃ – ''ತಸ್ಯ ಹ ವಾ ಏತಸ್ಯ ಬೃಹತೀಸಹಸ್ರಸ್ಯ ಸಮ್ಪನ್ನಸ್ಯ ಷಟ್ತ್ರಿಂಶತಮಕ್ಷರಾಣಾಂ ಸಹಸ್ರಾಣಿ ಭವನ್ತಿ ತಾವನ್ತಿ ಶತಸಂವತ್ಸರಸ್ಯಾಹ್ನಾಂ ಸಹಸ್ರಾಣಿ ಭವನ್ತಿ'' ಇತ್ಯತ್ರ ಪ್ರಾಣಶ್ರುತೇರಭಾವೇನ ಪ್ರಾಣಗತತಯಾऽಪ್ರತೀತೇಃ ಕಥಂ ಪ್ರಾಣಶಬ್ದಸ್ಯ ಜೀವಾರ್ಥಕತ್ವಂ ಸ್ಯಾದಿತಿ ಭಾವಃ । 'ವರ್ಣಾನಾಂ' ಸ್ವರವ್ಯಞ್ಜನರೂಪಾಣಾಮ್ । ತಸ್ಯೈವಾನ್ವಯ ಇತಿ ॥**

''तस्य ह वा एतस्य बृहतीसहस्रस्य संपन्नस्य षट्त्रिंशतमक्षराणाम् सहस्राणि भवंति तावंति शतसंवत्सरस्यायुष्टं सहस्राणि भवंति'' ಎಂಬಲ್ಲಿ ಪ್ರಾಣಶಬ್ದವೇ ಕೇಳಿಸುತ್ತಿಲ್ಲ. ಆದ್ದರಿಂದ ಶತಾಯುಷ್ಟ್ವವು ಪ್ರಾಣನಲ್ಲಿದೆಯೆಂದು ತಿಳಿಯಲು ಸಾಧ್ಯವಿಲ್ಲ. ಹೀಗಿರುವಾಗ, ಜೀವನು ಪ್ರಾಣಶಬ್ದವಾಚ್ಯನೆಂದು ಹೇಗೆ ಹೇಳುತ್ತೀರಿ ಎಂದು 'यद्यपि' ಇತ್ಯಾದಿ ಗ್ರಂಥದ ಅಭಿಪ್ರಾಯ. ಗ್ರಂಥದಲ್ಲಿರುವ 'वर्णानाम्' ಎಂಬ ಪದದಿಂದ ಸ್ವರವ್ಯಂಜನಾದಿಗಳೆಲ್ಲವನ್ನೂ ಸ್ವೀಕರಿಸಬೇಕು.

'तस्य एव अन्वयः' ಎನ್ನುವ ಅಭಿಪ್ರಾಯವು ಹೀಗಿದೆ - ಪ್ರಾಣನಿಗೆ ಯಾವ ಶತಸಂವತ್ಸರತ್ವವು ಹೇಳಲ್ಪಟ್ಟಿದೆಯೋ ಆದರ ಹಗಲುಗಳು ಎಂದು.

**प्रकाशः** – तथाच प्राणस्य यच्छतसंवत्सरं, तस्याह्नामित्यर्थ इति भावः । 'अत एव' प्रकृतस्य तत्रान्वयादेवेत्यर्थः ।

ननूक्तमत्राग्नेतृत्वादिवल्लिङ्गानि सावकाशानीति तत्राह– **नचेति** ॥ यदि जीवधर्माणामन्तर्यामिगतत्वमुच्यते तर्हि दुःखाज्ञानसमवायादिरूपः सर्वोऽपि संसारस्तत्रैव स्यात् । तथाच जीववदल्पशक्तित्वापत्त्याऽन्तर्यामित्वमपि तस्य न स्यादित्यर्थः । कथं तर्ह्यग्नेतृत्वं सावकाशितमित्यतोऽत्रत्यन्यायेनैवेत्याह – **अपामिति** ॥ ''तदधीनत्वादर्थवत्'' इति न्यायविषयत्वमाशङ्क्याह – **नचेति** ॥ **गौणमिति** ॥ स्वावरापेक्षया पूर्णत्वाद्ब्रह्मादिशब्दवत्त्वमित्यर्थः ।

ಹಿಂದಿನ ಅಧಿಕರಣದಲ್ಲಿ 'अपाम नेतृत्व' ಮೊದಲಾದ ಲಿಂಗಗಳನ್ನು ವಿಷ್ಣುವಿನಲ್ಲಿ ಸಾವಕಾಶ ಮಾಡಿದ್ದೇವಲ್ಲ? ಎಂಬ ಪ್ರಶ್ನೆಗೆ 'नच' ಎಂಬ ವಾಕ್ಯದಿಂದ ಉತ್ತರಿಸುತ್ತಿದ್ದಾರೆ.

ಒಂದು ವೇಳೆ ಜೀವನ ಧರ್ಮಗಳನ್ನು ಅಂತರ್ಯಾಮಿಯಲ್ಲಿ ಸಮರ್ಥಿಸುವುದಾದರೆ ಆವಾಗ ಜೀವನಲ್ಲಿರುವ ದುಃಖಸಂಬಂಧ ಮತ್ತು ಅಜ್ಞಾನದ ಸಂಬಂಧ ಮೊದಲಾದ ಸಕಲ ಸಂಸಾರವನ್ನು ವಿಷ್ಣುವಿನಲ್ಲಿಯೇ ಹೇಳಬೇಕಾದೀತು. ಆವಾಗ ಜೀವನಂತೆ ವಿಷ್ಣುವೂ ಸಹ ಅಲ್ಪಶಕ್ತವುಳ್ಳವನಾಗಿ ಅಂತರ್ಯಾಮಿಯತ್ವವೇ ಅವನಿಗೆ ಕೂಡದಿರಬೇಕಾದೀತು ಎಂದು ಅಭಿಪ್ರಾಯ. ಹಾಗಾದರೆ 'अपाम नेतृत्व'ವನ್ನು ಹೇಗೆ ಸಾವಕಾಶ ಮಾಡಿದರು? ಎಂಬ ಪ್ರಶ್ನೆಗೆ 'अपाम' ಎಂಬ ವಾಕ್ಯದಿಂದ ಉತ್ತರಿಸಿದ್ದಾರೆ.

'तदधीनत्वादर्थवत्' ಎಂಬ ಸೂತ್ರದಲ್ಲಿ ಹೇಳಲ್ಪಟ್ಟ ನ್ಯಾಯವನ್ನನುಸರಿಸಿ 'नच' ಎಂಬ ವಾಕ್ಯದಿಂದ ಆಕ್ಷೇಪಿಸಿದ್ದಾರೆ. 'गौणम्' ಎಂದರೆ ತನಗಿಂತ ನೀಚರಾದವರನ್ನು ವಿವಕ್ಷಿಸಿ ಇಂದ್ರಾದಿಗಳಲ್ಲಿಯೂ ಪೂರ್ಣತ್ವವಾಚಕವಾದ ಬ್ರಹ್ಮಾದಿಶಬ್ದಗಳನ್ನು ಸಮನ್ವಯ ಮಾಡಬಹುದು ಎಂದರ್ಥ.

**प्रकाशः** – नन्विन्द्रादिषु निर्धारित एक एव प्राण इति पूर्वः पक्षः, अनिर्धारितो यः कश्चिदिति वा, सर्वेपीति वा?

**नाद्यः, अनेकप्रापकसत्त्वेन निर्धारणायोगात् ।**
**न द्वितीयः, निर्धारणाभावे पूर्वपक्षस्य सन्देहादविशेषापातात् ।**
**न तृतीयः, वाक्यभेदेनासम्भवात् ।**

ಇಲ್ಲಿಯ ತನಕ ಇಂದ್ರ, ಪ್ರಾಣ ಹಾಗೂ ಜೀವ ಮೂವರು ಪ್ರಾಣಶಬ್ದವಾಚ್ಯರೆಂದು ಪ್ರತ್ಯೇಕ ಪ್ರತ್ಯೇಕವಾಗಿ ಪೂರ್ವಪಕ್ಷ ಮಾಡಲಾಯಿತು. ಇದರ ಅಭಿಪ್ರಾಯವೇನು? ಈ ಮೂವರಲ್ಲಿ ಒಬ್ಬರು ಮಾತ್ರ ಪ್ರಾಣಶಬ್ದವಾಚ್ಯರೆಂದೋ? ಅಥವಾ ಮೂವರಲ್ಲಿ ಯಾರು ಬೇಕಾದರೂ ಪ್ರಾಣಶಬ್ದವಾಚ್ಯರಾಗಬಹುದೆಂದೋ? ಅಥವಾ ಮೂವರೂ ಸಹ ಪ್ರಾಣಶಬ್ದವಾಚ್ಯರೆಂದೋ?

ಮೊದಲನೇ ಪಕ್ಷವು ಸರಿಯಲ್ಲ. ಒಬ್ಬನನ್ನೇ ಪ್ರಾಣಶಬ್ದವಾಚ್ಯನೆಂದು ನಿರ್ಧರಿಸಲಾಗದು. ಮೂವರಲ್ಲಿಯೂ ಪ್ರತ್ಯೇಕವಾಗಿ ನಿರವಕಾಶಲಿಂಗಗಳಿರುತ್ತವೆ.

ಎರಡನೆಯ ಪಕ್ಷವೂ ತಪ್ಪು. ನಿರ್ಧಾರವಾಗಿ ಹೇಳದೆ ಯಾರಾದರೂ ಪ್ರಾಣಶಬ್ದವಾಚ್ಯರಾಗಬಹುದೆಂದು ಅಭಿಪ್ರಾಯಪಟ್ಟರೆ ಪೂರ್ವಪಕ್ಷವು ಸಂಶಯರೂಪವಾಗುತ್ತದೆ. ಸಂಶಯಕ್ಕೂ ಪೂರ್ವಪಕ್ಷವು ವ್ಯತ್ಯಾಸವೇ ಇಲ್ಲದಂತಾಗುತ್ತದೆ.

ಮೂರನೇ ಪಕ್ಷವೂ ತಪ್ಪು. ಎಲ್ಲರೂ ಪ್ರಾಣಶಬ್ದವಾಚ್ಯರಾದಲ್ಲಿ ವಾಕ್ಯಭೇದಪ್ರಸಂಗದಿಂದ ಅಸಂಭವದೋಷ ಬರುತ್ತದೆ.

**प्रकाशः** – इति चेत् अत्राहुः – प्राणादिप्रापकलिङ्गापेक्षया इन्द्रप्रापकश्रुतिलिङ्गानां प्राबल्योपपत्तेः, इन्द्रस्य हस्ताधिष्ठातुरिन्द्रियत्वेनेन्द्रियगणे गणितत्वस्य, तैस्सह कलहस्य चोपपत्तेः । अत एवैतल्लिङ्गस्य त्रितयसाधारण्यमुक्तं सुधायाम् । शतायुष्ट्वस्यापि तथैव कथञ्चिद्योज्यत्वात् 'इन्द्र एव' इत्यवधारणोपपत्तेः ।

मुख्य एव वाऽस्तु । मुख्यप्राणलिङ्गानां उपक्रमे ''प्राणो वंशः'' इत्यन्ते च श्रवणेन बलवत्त्वात् । प्राणश्रुतेश्च मुख्ये लोकतः प्रसिद्धाया बहुधा श्रवणेन तद्बलेन इन्द्रादिप्रापकाणां मुख्ये कथञ्चिन्नेयत्वात् । जीव एव वाऽस्तु, शतायुष्ट्वस्य चात्राभ्यस्यमानत्वेन बलवत्त्वात् । इन्द्रियजन्यफलाश्रये तत्सहपाठादेरपि सम्भवादिन्द्रश्रुत्यादेः कथञ्चिन्नेयत्वादिति ।

ಈ ಪ್ರಶ್ನೆಗೆ ಕೆಲವರ ಉತ್ತರ ಹೀಗಿದೆ - ಪ್ರಥಮ ಪಕ್ಷವನ್ನು ಒಪ್ಪಬಹುದು. ದೇವೇಂದ್ರನೇ ಪ್ರಾಣಶಬ್ದವಾಚ್ಯನೆಂದು ನಿರ್ಧಾರವಾಗಿ ಹೇಳಲು ಯಾವ ಆತಂಕವೂ ಇಲ್ಲ. ಏಕೆಂದರೆ ಮುಖ್ಯ ವಾಯುವಿನಲ್ಲಿ ಪ್ರಸಿದ್ಧವಾಗಿರುವ ಲಿಂಗಕ್ಕಿಂತ ದೇವೇಂದ್ರನಲ್ಲಿ ಪ್ರಸಿದ್ಧವಾದ ಲಿಂಗವು ಪ್ರಬಲವಾಗಿದೆ. ಏಕೆಂದರೆ ಹಸ್ತಕ್ಕೆ ಅಧಿಷ್ಠಾನನಾದ್ದರಿಂದ ಇಂದ್ರನು ಇಂದ್ರಿಯನೆನಿಸುತ್ತಾನೆ. ಆದ್ದರಿಂದ ಇಂದ್ರಿಯಗಳ

ಸಮೂಹದಲ್ಲಿ ಎಣಿಸಲ್ಪಡುವಿಕೆಯೂ ಮತ್ತು ಅವರ ಜೊತೆಗೆ ಜಗಳವಾಡುವಿಕೆಯೂ ಇಂದ್ರನಲ್ಲಿ ಉಪಪನ್ನವಾಗುತ್ತದೆ. ಆದ್ದರಿಂದಲೇ ಈ ಲಿಂಗವು ಮೂವರಲ್ಲಿಯೂ ಸಮಾನವಾಗಿದೆಯೆಂದು ಸುಧೆಯಲ್ಲಿ ಹೇಳಿದ್ದಾರೆ.

ಇದರಂತೆ 'ಶತಾಯುಷ್ಟ್ವ' ಎಂಬ ಜೀವನ ಲಿಂಗವೂ ಸಹ ದೇವೇಂದ್ರನಲ್ಲಿ ಕಥಂಚಿತ್ ಸಮನ್ವಯ ಮಾಡಬಹುದು. ಆದ್ದರಿಂದ ದೇವೇಂದ್ರನೇ ಪ್ರಾಣಶಬ್ದವಾಚ್ಯನೆಂಬ ಅವಧಾರಣವನ್ನು ಮಾಡಲು ಸಾಧ್ಯವಿದೆ.

ಅಥವಾ ಮುಖ್ಯವಾಯು ಪ್ರಾಣಶಬ್ದವಾಚ್ಯನೆಂದು ನಿರ್ಧಾರ ಮಾಡಬಹುದು. ಏಕೆಂದರೆ ಉಪಕ್ರಮ ಮತ್ತು ಉಪಸಂಹಾರಗಳಲ್ಲಿ ಮುಖ್ಯಪ್ರಾಣನ ಲಿಂಗಗಳೇ ಕೇಳಿಸುತ್ತಿರುವುದರಿಂದ ಬಲಿಷ್ಠವಾಗಿವೆ. ಲೋಕದಲ್ಲಿಯೂ ಪ್ರಾಣಶ್ರುತಿಯು ಮುಖ್ಯಪ್ರಾಣನಲ್ಲಿಯೇ ಪ್ರಸಿದ್ಧವಾಗಿದೆ. ಆದ್ದರಿಂದ ಇಂದ್ರಾದಿ ಪ್ರಾಪಕ ಲಿಂಗಗಳೆಲ್ಲವನ್ನು ಮುಖ್ಯಪ್ರಾಣನಲ್ಲಿಯೇ ಕಥಂಚಿತ್ ಸಮನ್ವಯ ಮಾಡಬೇಕು.

ಅಥವಾ ಜೀವನೇ ಪ್ರಾಣಶಬ್ದವಾಚ್ಯನೆಂದು ನಿರ್ಧಾರ ಮಾಡಬಹುದು. ಶತಾಯುಷ್ಟ್ವವನ್ನು ಅನೇಕ ಬಾರಿ ಹೇಳಿದ್ದರಿಂದ ಪ್ರಬಲವಾಗಿದೆ. ಇಂದ್ರಿಯಜನ್ಯನಾದ ಫಲಕ್ಕೆ ಆಶ್ರಯನಾದ್ದರಿಂದ ಮತ್ತು ಸಹಪಠಿತನಾದ್ದರಿಂದ ಇಂದ್ರಾದಿಶ್ರುತಿಗಳನ್ನು ಕಥಂಚಿತ್ ಜೀವನಲ್ಲಿ ಸಮನ್ವಯ ಮಾಡಬಹುದು. ಹೀಗೆ ಮೂವರಲ್ಲಿಯೂ ನಿರ್ಧಾರಿತವಾದ ಪೂರ್ವಪಕ್ಷವನ್ನೇ ಮಾಡಲು ಬರುತ್ತದೆ.

**ಪ್ರಕಾಶಃ** – द्वितीयपक्षोऽपि युक्त एव, अन्यप्रापकाणामुक्तदिशा बलवत्त्वनिश्चयेन विष्णोरन्यत्वावधारणोपपत्तेः । विशिष्टावधारणस्य व्यर्थत्वात् । अत एव टीकायां विष्णुरन्योवेति संशयो दर्शितः, ''तेषामन्यतमस्य'' इत्यप्युक्तम् ।

ಅಥವಾ ಅನಿರ್ಧಾರಿತವಾದ ದ್ವಿತೀಯಪಕ್ಷವನ್ನೇ ಒಪ್ಪಬಹುದು. ಹಾಗಾದರೆ ಅನೇಕರಲ್ಲಿ ಪ್ರಾಪಕವಾದ ಲಿಂಗಗಳಿರುವುದರಿಂದ ಪೂರ್ವಪಕ್ಷದಲ್ಲಿ ದಾರ್ಢ್ಯವೇ ಬರುವುದಿಲ್ಲ? ಎಂಬ ಶಂಕೆಗೆ ಅಸ್ಪದವಿಲ್ಲ. ಹಿಂದೆ ಹೇಳಿದ ಪ್ರಕಾರ ಅನ್ಯಪ್ರಾಪಕಲಿಂಗಗಳು ಬಲಿಷ್ಠವಾಗಿವೆ. ಆದ್ದರಿಂದ ವಿಷ್ಣುವಿಗಿಂತ ಭಿನ್ನರಾದವರೇ ಪ್ರಾಣಶಬ್ದವಾಚ್ಯರೆಂದು ನಿರ್ಧಾರವಾಗಿ ಹೇಳಬಹುದು. ಒಬ್ಬನೇ ವ್ಯಕ್ತಿಯನ್ನು ನಿರ್ಧಾರಮಾಡಿ ಹೇಳುವ ಅವಶ್ಯಕತೆ ಇಲ್ಲ. ಆದ್ದರಿಂದಲೇ ಟೀಕೆಯಲ್ಲಿ 'ವಿಷ್ಣುರನ್ಯೋ ವಾ' ಎಂದು ಸಾಧಾರಣವಾದ ಸಂಶಯವನ್ನು ತೋರಿಸಿದ್ದಾರೆ. 'ತೇಷಾಮನ್ಯತಮಸ್ಯ' 'ಅವರಲ್ಲಿ ಯಾರಾದರೂ ಒಬ್ಬರು' ಎಂಬುದಾಗಿಯೂ ಹೇಳಿದ್ದಾರೆ.

**ಪ್ರಕಾಶಃ** – तृतीयो वाऽस्तु, त्रयाणां प्रापकसद्भावेन सर्वत्र मुख्यतया त्रितयपरत्वं वा, आद्यन्तयोर्लिङ्गदर्शनेन मुख्यस्यैवेदं महाप्रकरणं, तन्मध्ये ''एष इमं लोकम्'' इत्यारभ्य जीवावान्तरप्रकरणं; तन्मध्ये ''विश्वामित्रं'' इत्यादीन्द्रप्रकरणमिति वा, कस्यचिन्मुख्यप्राणपरत्वं, कस्यचिज्जीवपरत्वं, कस्यचिदिन्द्रपरत्वमिति विभागेन वा त्रितयपरत्वोपपत्तेः । नच ''अर्थैकत्वादेकं वाक्यं'' इत्यादेर्नानार्थकत्वे

**वाक्यभेददोषः, न्यायप्राप्तत्वेन सह्यत्वात् । उक्तञ्च सुधायां – ''नच वाक्यभेदो दोषः, अनन्यगतिकतया प्राप्तत्वात्'' इति ।**

ಅಥವಾ ಎಲ್ಲರೂ ಪ್ರಾಣಶಬ್ದವಾಚ್ಯರೆಂಬ ಮೂರನೇ ಪಕ್ಷವನ್ನೇ ಒಪ್ಪೋಣ. ಮೂವರಲ್ಲಿಯೂ ಸಮಾನವಾಗಿ ನಿರವಕಾಶಲಿಂಗಗಳಿರುವುದರಿಂದ ಮೂವರೂ ಪ್ರಾಣಶಬ್ದವಾಚ್ಯರಾಗುತ್ತಾರೆ. ಅದು ಹೀಗೆ ಆದ್ಯಂತಗಳಲ್ಲಿ ಮುಖ್ಯವಾಯುವಿನ ಲಿಂಗವೇ ಕೇಳಿಸುತ್ತಿರುವುದರಿಂದ ಮಹಾಪ್ರಕರಣವು ಮುಖ್ಯಪ್ರಾಣನನ್ನು ಹೇಳುತ್ತದೆ. ಆದರೆ ಮಧ್ಯದಲ್ಲಿ ''ಏಷ ಇಮಂ ಲೋಕಂ'' ಎಂದು ಪ್ರಾರಂಭವಾಗಿ ಅವಾಂತರಪ್ರಕರಣವು ಜೀವನನ್ನು ಹೇಳುತ್ತಿದೆ. ಆದರ ಮಧ್ಯದಲ್ಲಿ 'ವಿಶ್ವಾಮಿತ್ರಂ' ಇತ್ಯಾದಿಯಾಗಿ ಕೆಲವು ವಾಕ್ಯಗಳು ದೇವೇಂದ್ರನನ್ನು ಹೇಳುತ್ತಿವೆ. ಆದ್ದರಿಂದ ಕೆಲವು ಭಾಗ ಮುಖ್ಯಪ್ರಾಣಪರವಾಗಿದೆ. ಕೆಲವು ಭಾಗ ಜೀವಪರವಾಗಿದೆ. ಇನ್ನು ಕೆಲವು ಭಾಗ ಇಂದ್ರಪರವಾಗಿದೆ ಎಂದು ವಿಭಾಗ ಮಾಡಬಹುದು.

ಹಾಗಾದರೆ ''ಅರ್ಥೈಕತ್ವಾದೇಕಂ ವಾಕ್ಯಂ'' ಇತ್ಯಾದಿಯಾಗಿ ನಾನಾರ್ಥ ಮಾಡುವುದಾದರೆ ವಾಕ್ಯಭೇದದೋಷ ಬರುತ್ತದೆಂದು ಶಂಕಿಸಬಾರದು. ನ್ಯಾಯಪ್ರಾಪ್ತವಾದ್ದರಿಂದ ವಾಕ್ಯಭೇದದೋಷವನ್ನು ಸಹಿಸಿಕೊಳ್ಳಬೇಕು. ಇದಕ್ಕೆ ಸುಧೆಯ ಸಮ್ಮತಿಯೂ ಇದೆ - 'ನಚ ವಾಕ್ಯಭೇದೋ ದೋಷಃ, ಅನನ್ಯಗತಿಕತಯಾ ಪ್ರಾಪ್ತತ್ವಾತ್' ವಾಕ್ಯಭೇದವೂ ದೋಷವಲ್ಲ, ಬೇರೆ ಮಾರ್ಗವಿಲ್ಲದೇ ಪ್ರಾಪ್ತವಾದ್ದರಿಂದ ಎಂದು.

**प्रकाशः** – अत्रोक्तपक्षत्रये तृतीय एवाभिमत इति भाति, सूत्रे त्रयस्याऽपि पूर्वपक्षित्वात्, टीकादौ त्रितयप्रापकस्यापि निरवकाशत्वोक्तेः, वाक्यभेदाङ्गीकाराच्चेति । ननु तर्ह्यनेकप्रापकसत्त्वात् सर्वानुग्रहार्थमिन्द्रादीनां विष्ण्वभेदमेवाशङ्क्य समाधानं कुतो न क्रियते, वाक्यभेददोषस्याप्यभावादिति चेन्न, भेदस्यासूत्रितत्वात् । अन्तरधिकरण एवेन्द्रादिदेवतैक्यस्य निरासात् । उक्तरीत्याऽन्यप्रापकाणां बलवत्त्वात्, विष्णुप्रापकाणां तदभावाभिमानात् । तौल्याभावेनाभेदकल्पकोभयान्यथानुपपत्तेरभावाच्चेति ।

ವಿಚಾರ ಮಾಡಿದರೆ ಮೂರು ಪಕ್ಷಗಳಲ್ಲಿ ಮೂರನೇ ಪಕ್ಷವೇ ಆಭಿಮತವೆಂದು ನಮಗೆ ತೋರುತ್ತದೆ. ಸೂತ್ರದಲ್ಲಂತೂ ಮೂರೂ ಪಕ್ಷಗಳನ್ನು ಪೂರ್ವಪಕ್ಷವಿಷಯವನ್ನಾಗಿ ಸ್ವೀಕರಿಸಿದ್ದಾರೆ. ಟೀಕೆಯಲ್ಲಿ ಮೂವರಲ್ಲಿಯೂ ನಿರವಕಾಶಲಿಂಗಗಳನ್ನು ಸಮರ್ಥಿಸಿದ್ದಾರೆ. ವಾಕ್ಯಭೇದದೋಷವನ್ನು ಸಹಿಸಿಕೊಂಡಿದ್ದಾರೆ.

ಅನೇಕರಲ್ಲಿ ಸಾಧಾರಣವಾದ ಲಿಂಗಗಳಿರುವುದರಿಂದ ಎಲ್ಲಾ ವಾಕ್ಯಗಳನ್ನು ಹೊಂದಿಸುವುದಕ್ಕಾಗಿ ಇಂದ್ರಾದಿಗಳಿಗೂ ವಿಷ್ಣುವಿಗೂ ಅಭೇದವನ್ನು ಒಪ್ಪಿಯೇ ಏಕೆ ಸಮಾಧಾನ ಮಾಡಬಾರದು. ಹೀಗೆ ಮಾಡಿದಾಗ ವಾಕ್ಯಭೇದದೋಷಕ್ಕೂ ಅವಕಾಶವಿರುವುದಿಲ್ಲವಲ್ಲವೇ? ಎಂದು ಪ್ರಶ್ನಿಸಬಾರದು. ಅಭೇದವು ಸೂತ್ರಕಾರರಿಗೆ ಸಮ್ಮತವಾಗಿಲ್ಲ. ಆದ್ದರಿಂದ ಸರ್ವಥಾ ಅಭೇದ ಪಕ್ಷವನ್ನು ಅಂಗೀಕರಿಸಬಾರದು. ಮತ್ತು ಹಿಂದಿನ ಅಂತರಧಿಕರಣದಲ್ಲಿಯೇ ಇಂದ್ರಾದಿದೇವತೆಗಳಿಂದ ಐಕ್ಯವನ್ನು ನಿರಾಸ ಮಾಡಿದ್ದಾಗಿದೆ. ಮತ್ತು ಈ

ಹಿಂದೆ ಹೇಳಿದಂತೆ ಅನ್ಯಪ್ರಾಪಕವಾದ ಲಿಂಗಗಳೇ ಬಲಿಷ್ಠವಾಗಿವೆ. ವಿಷ್ಣುಪ್ರಾಪಕವಾದ ಲಿಂಗಗಳು ದುರ್ಬಲವಾಗಿವೆಯೆಂದು ಪೂರ್ವಪಕ್ಷಕಾರನು ಸಮರ್ಥಿಸಿದ್ದಾನೆ. ಆದ್ದರಿಂದ ವಿಷ್ಣುವಿನ ಲಿಂಗಗಳಿಗೆ ಹಾಗೂ ಅನ್ಯರ ಲಿಂಗಗಳಿಗೆ ತೌಲ್ಯವೇ ಇರುವುದಿಲ್ಲ. ಆದ್ದರಿಂದ ಉಭಯಾನ್ಯಥಾನುಪಪತ್ತಿಯೆಂಬ ಆಭೇದ ಕಲ್ಪಕ ಪಕ್ಷವು ನಿರ್ಣಯವಾಗುವುದಿಲ್ಲ.

**ಗುರುರಾಜೀಯಮ್** – ಅಪಾಂ ನೇತೃತ್ವಾದಿಲಿಙ್ಗಾನಾಮಪೀತಿ ॥ ತಥಾಚಾನ್ತರ್ಯಾಮಿಪರನ್ಯಾಯಸ್ಯ ತತ್ರಾಪ್ಯುತ್ಪಾದನಾನ್ನ ತೇನಾಸ್ಯ ಗತಾರ್ಥತೇತಿ ಭಾವಃ ।

### ಸಾರ

ಜೀವನ ಲಿಂಗವೂ ಸಹ ನಿರವಕಾಶವಾಗಿದೆ. 'ಶತಸಂವತ್ಸರತ್ವ' ಎಂಬ ಲಿಂಗವು ಜೀವನಲ್ಲಿ ಶ್ರುತವಾಗಿವೆ. ಈ ಲಿಂಗವು ಜೀವನನ್ನು ಬಿಟ್ಟು ಬೇರೆ ಯಾರಲ್ಲಿಯೂ ಬರುವುದಿಲ್ಲ. ವಸ್ತುತಃ ಜೀವನನ್ನು ಹೇಳುವ ಪ್ರಕರಣದಲ್ಲಿ ಪ್ರಾಣಶಬ್ದವಿರುವುದಿಲ್ಲ. ಆದರೂ 'ಪ್ರಾಣೋ ವಾ ತದಭ್ಯಾರ್ಚತ್' ಎಂಬಲ್ಲಿ ತತ್ ಶಬ್ದದಿಂದ ಪ್ರಕೃತನಾದ ಪ್ರಾಣನನ್ನು ಪರಾಮರ್ಶಿಸಲು ಬರುತ್ತದೆ. ಜೀವನಲ್ಲಿರುವ ಶತಸಂವತ್ಸರತ್ವ ಎಂಬ ಲಿಂಗವನ್ನು ಆಂತರ್ಯಾಮಿ ವಿವಕ್ಷೆಯಿಂದ ಪರಮಾತ್ಮನಲ್ಲಿ ಸಮನ್ವಯ ಮಾಡಬಾರದು. ಹಾಗಾದಲ್ಲಿ ಜೀವನಲ್ಲಿರುವ ಸಂಸಾರವನ್ನು ಪರಮಾತ್ಮನಲ್ಲಿಯೇ ಸಮನ್ವಯ ಮಾಡಬೇಕಾದ ಪ್ರಸಂಗ ಬರುತ್ತದೆ. ಆದ್ದರಿಂದ ಜೀವನ ಲಿಂಗವನ್ನು ವಿಷ್ಣುವಿನಲ್ಲಿ ಸಾವಕಾಶ ಮಾಡಲಾಗದು. ಆದರೆ ವಿಷ್ಣುವಿನ ಬಗ್ಗೆ ಹೇಳಲ್ಪಟ್ಟ ವಾಕ್ಯಗಳನ್ನು ಜೀವನಲ್ಲಿ ಸಾವಕಾಶ ಮಾಡಬಹುದು.

ಆದ್ದರಿಂದ ಜೀವನಾಗಲೀ, ಮುಖ್ಯವಾಯುವಾಗಲೀ ಅಥವಾ ದೇವೇಂದ್ರನೇ ಆಗಲಿ ಪ್ರಾಣಶಬ್ದದಿಂದ ವಾಚ್ಯರಾಗುತ್ತಾರೆಂಬ ಪೂರ್ವಪಕ್ಷವು ದೃಢವಾಯಿತು.

* * * *

## 'ಪ್ರಾಚೀನೋಽಪ್ಯನ್ಯಃ' ಎಂಬ ಶ್ರೀಮದಾಚಾರ್ಯರ ಮಾತಿಗೆ ಏನು ಅರ್ಥ?

ತಾತ್ಪರ್ಯಚನ್ದ್ರಿಕಾ

**ನನ್ವಥಾಪಿ ''ಪ್ರಾಚೀನೋऽಪ್ಯನ್ಯಃ'' ಇತಿ ಪ್ರಯೋಜನೋಕ್ತಿರ್ಯುಕ್ತಾ, ಆಕಾಶಾಧಿಕರಣೇ ಪೂರ್ವಪಕ್ಷಬೀಜಭೂತಾಯಾ ಭೂತೇ ಪ್ರಸಿದ್ಧೇರ್ವಾಕ್ಯದ್ವಯೇऽಪಿ ತುಲ್ಯತಯಾ ''ಆಕಾಶಃ'' ಇತಿ ವಾಕ್ಯೇ ಭೂತಪರತ್ವೇ ''ಯದೇಷಃ'' ಇತಿ ವಾಕ್ಯೇऽಪಿ ತತ್ಪರತ್ವಮಿತಿ ಪ್ರಯೋಜನಸಮ್ಭವೇऽಪಿ, ಅತ್ರ ಪ್ರಾಚೀನಪೂರ್ವಪಕ್ಷಾದತ್ರತ್ಯಪೂರ್ವಪಕ್ಷೇ ಪ್ರಾಣಸ್ಯಾವಿಷ್ಣುತ್ವೇ ಯೋ ವಿಶೇಷಹೇತ್ವಃ, ತದಭಾವಾದೇವ ಪ್ರಾಚೀನಪ್ರಾಣಸ್ಯ ತತ್ರತ್ಯಸಿದ್ಧಾನ್ತನ್ಯಾಯೇನ ವಿಷ್ಣುತ್ವೋಪಪತ್ತೇಃ,**

ಅನುವಾದ - ಶ್ರೀಮದಾಚಾರ್ಯರು ಭಾಷ್ಯದಲ್ಲಿ ''ಪ್ರಾಚೀನೋऽಪ್ಯನ್ಯಃ'' ಎಂಬುದಾಗಿ ಪೂರ್ವಪಕ್ಷದ ಪ್ರಯೋಜನವನ್ನು ಹಿಂದಿನ ಪ್ರಾಣಾಧಿಕರಣಕ್ಕೆ ಸಂಬಂಧಪಟ್ಟಂತೆ ಹೇಳಿದ್ದಾರೆ. ಇದು ಅಯುಕ್ತವಾಗಿದೆ. ಹಿಂದಿನ ಆಕಾಶಾಧಿಕರಣದಲ್ಲಿ ಭೂತಪ್ರಸಿದ್ಧಿ ಎಂಬುದು ಪೂರ್ವಪಕ್ಷ ಬೀಜ-

ವಾಗಿತ್ತು. ಆದು 'ಯದೇಷ ಆಕಾಶ' ಎಂಬ ವಾಕ್ಯದಲ್ಲಿಯೂ 'ಆಕಾಶ ಇತಿ ಹೋವಾಚ' ಎಂಬ ವಾಕ್ಯದಲ್ಲಿಯೂ ಸಮಾನವಾಗಿದೆ. ಆದ್ದರಿಂದ 'ಆಕಾಶ ಇತಿ ಹೋವಾಚ' ಎಂಬ ವಾಕ್ಯವೂ ಭೂತಕಾಶಪರವಾದಲ್ಲಿ 'ಯದೇಷ ಆಕಾಶ' ಎಂಬ ವಾಕ್ಯವೂ ಸಹ ಭೂತಾಕಾಶಪರವೇ ಆಗುತ್ತದೆ. ಆದ್ದರಿಂದ ಹಿಂದಿನ ಪ್ರಾಣಾಧಿಕರಣದಲ್ಲಿ ಆಕಾಶಾಧಿಕರಣದ ಪ್ರಯೋಜನವೂ ಸಮಂಜಸವಾಗುತ್ತದೆ. ಆದರೆ ಪ್ರಕೃತ ಹಾಗೆ ಹೇಳಲಾಗದು. ಏಕೆಂದರೆ ಪೂರ್ವಪಕ್ಷದ ಬೀಜವು ಹಿಂದಿನ ಪ್ರಾಣಾಧಿಕರಣದಲ್ಲಿ ಈ ಅಧಿಕರಣದಲ್ಲಿ ಸಮಾನವಾಗಿರುವುದಿಲ್ಲ. ಹಿಂದಿನ ಪೂರ್ವಪಕ್ಷಕ್ಕಿಂತ ಈ ಅಧಿಕರಣದ ಪೂರ್ವಪಕ್ಷದಲ್ಲಿ ಪ್ರಾಣವು ವಿಷ್ಣುಪರವಲ್ಲವೆನ್ನಲು ವಿಶೇಷ ಹೇತುವಿದೆ. ಆದರೆ ಈ ವಿಶೇಷ ಹೇತುವು 'ತದ್ವೈತ್ವಂ ಪ್ರಾಣಃ' ಎಂಬಲ್ಲಿ ಇರುವುದಿಲ್ಲ. ಆದ್ದರಿಂದಲೇ ಹಿಂದಿನ ಪ್ರಾಣಾಧಿಕರಣದ ಸಿದ್ಧಾಂತದಿಂದ ವಿಷ್ಣುವು ಅಲ್ಲಿ ಪ್ರಾಣಶಬ್ದದಿಂದ ವಾಚ್ಯನಾಗಬಹುದು.

ಹೀಗಿರುವಾಗ ಶ್ರೀಮದಾಚಾರ್ಯರು ಈ ಅಧಿಕರಣದಲ್ಲಿ ವಿಷ್ಣುವು ಪ್ರಾಣಶಬ್ದವಾಚ್ಯನೆಂದು ಸಿದ್ಧನಾಗದಿದ್ದರೆ ಹಿಂದಿನ ಪ್ರಾಣಾಧಿಕರಣದಿಂದಲೂ ವಿಷ್ಣುವು ಪ್ರಾಣಶಬ್ದವಾಚ್ಯನೆಂದು ಸಿದ್ಧನಾಗಲಾರ. ಎಂದು ಪೂರ್ವಪಕ್ಷದ ಪ್ರಯೋಜವನ್ನು ಹೇಗೆ ಹೇಳಿದರು.

### ಕಠಿಣಪದಾರ್ಥ

ಪ್ರಾಚೀನೋಽಪಿ = ಹಿಂದಿನ ಪ್ರಾಣಾಧಿಕರಣದಲ್ಲಿ ಹೇಳಲ್ಪಟ್ಟರುವ ಪ್ರಾಣನೂ ಸಹ, ಪ್ರಯೋಜನೋಕ್ತಃ = ಪೂರ್ವಪಕ್ಷಪ್ರಯೋಜನದ ಮಾತು. ವಾಕ್ಯದ್ವಯೇಪಿ = ''ಆಕಾಶ ಇತಿ ಹೋವಾಚ'' ''ಯದೇಷ ಆಕಾಶ'' ಎಂಬೆರಡು ವಾಕ್ಯಗಳಲ್ಲಿಯೂ, ತತ್ಪರತ್ವಮ್ = ಭೂತಪರತ್ವವು, ವಿಶೇಷಹೇತುಃ = ನಿರವಕಾಶವಾದ ಶ್ರುತಿಲಿಂಗಬಾಹುಲ್ಯವೆಂಬ ಅಸಾಧಾರಣವಾದ ಪೂರ್ವಪಕ್ಷ ಹೇತುವು, ತತ್ಪತ್ಯಸಿದ್ಧಾಂತನ್ಯಾಯೇನ = ನಿರವಕಾಶವಾದ ಶ್ರೀಪತಿತ್ವಾದಿ ಲಿಂಗವೆಂಬ ಸಿದ್ಧಾಂತ ನ್ಯಾಯದಿಂದ.

**ಪ್ರಕಾಶಃ** – ಏವಂ ಪೂರ್ವಪಕ್ಷೋತ್ಥಾನಂ ನಿರವಕಾಶಪ್ರಾಪಕೋಕ್ತ್ವಾ ಸಮರ್ಥ್ಯೇದಾನೀಂ ಯಜ್ಞಾಖ್ಯಕಾರೋಕ್ತಂ 'ಅಯಂ ಪ್ರಾಣೋಽನ್ಯಶ್ಚೇತ್' ''ತದ್ವೈ ತ್ವಂ ಪ್ರಾಣಃ'' ಇತ್ಯುಕ್ತೋಽಪ್ಯನ್ಯಃ ಸ್ಯಾತ್ ಇತಿ ಪೂರ್ವೋಕ್ತಾಕ್ಷೇಪಃ ಪೂರ್ವಪಕ್ಷೇ ಫಲಂ, ಸಿದ್ಧಾನ್ತೇ ಚ ತತ್ಸಮಾಧಾನಮ್' ಇತಿ, ತತ್ರ ಪೂರ್ವಪಕ್ಷೇ ಪ್ರಯೋಜನೋಕ್ತಿಂ ಸಮರ್ಥಯಿತುಮಾಕ್ಷಿಪತಿ – **ನನ್ವಿತಿ** ॥

ನನು ಯಥಾ ''ಆಕಾಶ ಇತಿ ಹೋವಾಚ'' ಇತ್ಯತ್ರ ಆಕಾಶಸ್ಯ ಭೂತತ್ವೇ ''ಯದೇಷ ಆಕಾಶಃ'' ಇತಿ ನಿರ್ಣೀತಬ್ರಹ್ಮಪ್ರಕರಣಗತಸ್ಯಾಪ್ಯಾಕಾಶಸ್ಯಾನ್ಯತ್ವಂ ಪೂರ್ವಪಕ್ಷಫಲಂ, ತಥಾಽತ್ರ ಕಿಂ ನ ಸ್ಯಾದಿತ್ಯತ ಆಹ **ಆಕಾಶೇತಿ** ॥ **ಯ ಇತಿ** ॥ ನಿರವಕಾಶಶ್ರುತಿಲಿಙ್ಗಬಾಹುಲ್ಯರೂಪಃ ॥ **ತತ್ರತ್ಯೇತಿ** ॥ ನಿರವಕಾಶಶ್ರೀಪತಿತ್ವಾದಿಲಿಙ್ಗೇನೇತ್ಯರ್ಥಃ ।

ವಿವರಣೆ - ಇಲ್ಲಿಯತನಕ ನಿರವಕಾಶಪ್ರಾಪಕವಾದ ಯುಕ್ತಿಗಳಿಂದ ಪೂರ್ವಪಕ್ಷವನ್ನು ಸಮರ್ಥಿಸಿದರು. ಪ್ರಕೃತ ಭಾಷ್ಯಕಾರರು ಹೇಳಿದ ''ಈ ಅಧಿಕರಣದಲ್ಲಿ ಹೇಳಲ್ಪಟ್ಟ ಪ್ರಾಣನು ವಿಷ್ಣುವಿಗಿಂತ ಭಿನ್ನನಾದರೆ ಹಿಂದಿನ

ಅಧಿಕರಣದಲ್ಲಿ ಹೇಳಲ್ಪಟ್ಟ ಪ್ರಾಣನೂ ವಿಷ್ಣುವಿಗಿಂತ ಭಿನ್ನ ಆಗುತ್ತಾನೆ'' ಎಂಬ ಹಿಂದಿನ ಅಧಿಕರಣದ ಸಿದ್ಧಾಂತವನ್ನು ಆಕ್ಷೇಪಿಸುವುದು ಪೂರ್ವಪಕ್ಷದ ಫಲ, ಅದನ್ನು ಸಮಾಧಾನ ಮಾಡುವುದು ಸಿದ್ಧಾಂತದ ಫಲ'' ಎಂಬ ಪೂರ್ವಪಕ್ಷದ ಪ್ರಯೋಜನವನ್ನು ಸಮನ್ವಯ ಮಾಡುತ್ತಿದ್ದಾರೆ ಅದಕ್ಕಾಗಿ 'ನನು' ಇತ್ಯಾದಿ ವಾಕ್ಯದಿಂದ ಆಕ್ಷೇಪಿಸುತ್ತಿದ್ದಾರೆ.

ಯಾವ ರೀತಿಯಾಗ 'ಆಕಾಶ ಇತಿ ಹೋವಾಚ' ಎಂಬಲ್ಲಿ ಆಕಾಶವು ಭೂತಪರವಾದರೆ 'ತದ್ದೇತುಪದೇಶಾಚ್ಚ' ಎಂಬ ಸೂತ್ರದಲ್ಲಿ ಹೇಳಲ್ಪಟ್ಟ 'ಯದೇಷ ಆಕಾಶ' ಎಂಬ ಶ್ರುತಿಯಲ್ಲಿರುವ ಆಕಾಶವೂ ಸಹ ಭೂತಪರವೇ ಆಗುತ್ತದೆಂಬುದಾಗಿ ಆಕಾಶಾಧಿಕರಣದಲ್ಲಿ ಪೂರ್ವಪಕ್ಷ ಫಲವನ್ನು ಹೇಳಿದ್ದಾರೆ. ಆದರಂತೆ ಇಲ್ಲಿಯೂ ಸಹ ಹೇಳಲು ಬರುವಾಗ ಶ್ರೀಮದಾಚಾರ್ಯರ ಮಾತು ಸಮಂಜಸವಾಗಿದೆಯಲ್ಲವೇ? ಎಂಬ ಪ್ರಶ್ನೆಗೆ 'ಆಕಾಶಾಧಿಕರಣೇ' ಎಂಬ ವಾಕ್ಯದಿಂದ ಉತ್ತರಿಸುತ್ತಿದ್ದಾರೆ.

## ಸಾರ

ಶ್ರೀಮದಾಚಾರ್ಯರು ಹಿಂದಿನ ಪ್ರಾಣಾಧಿಕರಣದ ಸಿದ್ಧಾಂತದ ಆಕ್ಷೇಪವೇ ಈ ಅಧಿಕರಣದ ಪೂರ್ವಪಕ್ಷದ ಫಲವೆಂದು ಹೇಳಿದ್ದಾರೆ. ಇದು ಸರಿಯೋ ಅಲ್ಲವೋ? ಎಂಬುದರ ಬಗ್ಗೆ ಈಗ ವಿಚಾರ ನಡೆದಿದೆ. ಈ ಅಧಿಕರಣದಲ್ಲಿ ನಿರವಕಾಶವಾದ ಶ್ರುತಿಲಿಂಗಬಾಹುಲ್ಯವಿರುವುದರಿಂದ ಇತರೇಯದಲ್ಲಿ ಹೇಳಲ್ಪಟ್ಟ ಪ್ರಾಣನು ವಿಷ್ಣುವಲ್ಲ ಹೊರತು ಇಂದ್ರಾದಿಗಳೆಂದೇ ಪೂರ್ವಪಕ್ಷ ಮಾಡಲಾಯಿತು. ಇದರಿಂದಾಗಿ ಹಿಂದಿನ ಪ್ರಾಣಾಧಿಕರಣದಲ್ಲಿ ಹೇಳಲ್ಪಟ್ಟ ಪ್ರಾಣನೂ ಸಹ ಪರಮಾತ್ಮನಾಗಲಾರ ಎಂದು ಹೇಗೆ ಹೇಳಲು ಸಾಧ್ಯ ? ಏಕೆಂದರೆ ಶ್ರೀಪತಿತ್ವ ಮೊದಲಾದ ಲಿಂಗಗಳ ಬಲದಿಂದ ಹಿಂದಿನ ಅಧಿಕರಣದಲ್ಲಿ ತೈತ್ತಿರೀಯದಲ್ಲಿ ಹೇಳಲ್ಪಟ್ಟ ಪ್ರಾಣನು ವಿಷ್ಣುವೆಂದು ನಿರ್ಣಯವಾಗಿದೆ. ಇಲ್ಲಿ ಹೇಳಲ್ಪಟ್ಟ ಪೂರ್ವಪಕ್ಷಯುಕ್ತಿಯು ಹಿಂದಿನ ಅಧಿಕರಣದ ಪ್ರಾಣನಲ್ಲಿ ಬರುವುದಿಲ್ಲ. ಆದ್ದರಿಂದ ಶ್ರೀಮದಾಚಾರ್ಯರ ಮಾತಿಗೆ ಏನು ಅರ್ಥ?

* * * *

### ಶ್ರೀಮದಾಚಾರ್ಯರ ಮಾತಿಗೆ ಏಕತ್ರ ನಿರ್ನೀತಶಾಸ್ತ್ರಾರ್ಥಃ ಸರ್ವತ್ರ ಎಂದರ್ಥ

ತಾತ್ಪರ್ಯಚನ್ದ್ರಿಕಾ

**ಇತಿ ಚೇತ್, ಮೈವಮ್, ಯಥಾ ಪ್ರಾಭಾಕರಮತೇ ಕಾಮಿನಿಯೋಜ್ಯಾನ್ವಯಬಲಾಲ್ಲಿಙಾದೇಃ ಸ್ಥಾಯಿಕಾರ್ಯಾರ್ಥತ್ವೇ ನಿಶ್ಚಿತೇ ತದನ್ವಯಶೂನ್ಯೇಽಪಿ ನಿತ್ಯಾಧಿಕಾರೇ ತದರ್ಥತಾ, ಯಥಾ ವಾ ಮತಾನ್ತರೇ ವಾಕ್ಯಶೇಷೇಣ ಕಚಿದ್ವಾದಿಶಬ್ದಾನಾಂ ದೀರ್ಘಶ್ರುತ್ಯರ್ಥತ್ವೇ ನಿಶ್ಚಿತೇ ಅನ್ಯತ್ರಾಪಿ ತದರ್ಥತಾ, ತಥಾऽತ್ರ ಇನ್ದ್ರಾದಿಲಿಙ್ಗಾತ್ ಪ್ರಾಣಶಬ್ದಸ್ಯೇನ್ದ್ರಾದ್ಯರ್ಥತ್ವೇ ನಿರ್ಣೀತೇ ''ತದ್ವೈ ತ್ವಂ ಪ್ರಾಣಃ'' ಇತ್ಯತ್ರಾಪಿ ತದರ್ಥತ್ವಾತ್।**

ಅನುವಾದ - ಈ ಆಕ್ಷೇಪವೂ ತಪ್ಪು.

ಪ್ರಭಾಕರ ಮತದ ದೃಷ್ಟಾಂತ - 'ಸ್ವರ್ಗಕಾಮೋ ಯಜೇತ' ಎಂಬಲ್ಲಿರುವ ಲಿಙ್ ಪ್ರತ್ಯಯಕ್ಕೆ ಕ್ಷಣಿಕವಾದ ಯಾಗಕಾರ್ಯ ಎಂದರ್ಥವಲ್ಲ. ಸ್ವರ್ಗಪರ್ಯಂತವಾಗಿ ಸ್ಥಾಯಿಯಾದ ಅಪೂರ್ವ-ಕಾರ್ಯ ಎಂಬರ್ಥವನ್ನು ಹೇಳಬೇಕು. ಇದಕ್ಕೆ ಕಾರಣವೇನೆಂದರೆ 'ಕಾಮಿನಿಯೋಜ್ಯಾನ್ವಯ'. ಅಂದರೆ ಇದಕ್ಕೆ ಯಾರು ನಿಯೋಜ್ಯನು (ಅಧಿಕಾರಿ) ಎಂದರೆ ಸ್ವರ್ಗಕಾಮಿಯಾದವನು ಅಧಿಕಾರಿಯು. ಇವನ ಅನ್ವಯವನ್ನು ಹೇಳಿದ್ದರಿಂದ ಲಿಂಗಾದಿಗಳು ಸ್ಥಾಯಿಕಾರ್ಯವನ್ನೇ ಹೇಳುತ್ತವೆ. ಹೀಗೆ ನಿರ್ಣಯವಾದ ಮೇಲೆ 'ಅಹರಹಃ ಸಂಧ್ಯಾಮುಪಾಸೀತ'' ಎಂಬಲ್ಲಿರುವ 'ಲಿಙ್' ಪ್ರತ್ಯಯಕ್ಕೆ ಏನರ್ಥ? ಎಂಬ ಸಂಶಯ ಬರುತ್ತದೆ. ಸಂಶಯವನ್ನು ಪರಿಹರಿಸಿಕೊಳ್ಳಲು ಕಾಮಿನಿಯೋಜ್ಯದ ಅನ್ವಯವು ಕಾಣಿಸುವುದಿಲ್ಲ. ಆದರೆ 'ಲಿಙ್ತ್ವ' ಎಂಬ ಸಮಾನಧರ್ಮವಿರುವುದರಿಂದ ಅಪೂರ್ವವೆಂಬ ಸ್ಥಾಯಿಕಾರ್ಯವನ್ನೇ ಅರ್ಥವೆಂದು ಹೇಳಬೇಕು.

ಭಾಟ್ಟಮತದ ದೃಷ್ಟಾಂತ - ''ಯವಮಯಶ್ಚರುರ್ಭವತಿ'' ಎಂಬಲ್ಲಿರುವ 'ಯವ' ಶಬ್ದಕ್ಕೆ ಏನು ಅರ್ಥ? ಎಂಬ ಸಂಶಯ ಬಂದಾಗ ''ಯತ್ರಾನ್ಯಾ ಓಷಧಯಃ'' ಎಂಬ ವಾಕ್ಯಶೇಷದ ಬಲದಿಂದ ಕೆಲವು ವಾಕ್ಯಗಳಲ್ಲಿರುವ ಯವಾದಿ ಶಬ್ದಗಳಿಗೆ ದೀರ್ಘಶೂಕವಿಶಿಷ್ಟವಾದ ಧಾನ್ಯವಿಶೇಷವೇ ಅರ್ಥ-ವೆಂದು ನಿರ್ಣಯವಾಗುತ್ತದೆ. ಆದರಂತೆ ಬೇರೆಡೆ ಇರುವ ಯವಾದಿಶಬ್ದಗಳಿಗೂ ವಾಕ್ಯಶೇಷದ ಬೆಂಬಲವಿಲ್ಲದಿದ್ದರೂ ದೀರ್ಘಶೂಕವಿಶಿಷ್ಟವಾದ ಧಾನ್ಯವಿಶೇಷವೆಂದೇ ಅರ್ಥೈಸಬೇಕು.

ಇದರಂತೆ ಇಂದ್ರಾದಿಲಿಂಗಗಳಿರುವುದರಿಂದ ಪ್ರಾಣಶಬ್ದವು ಇಂದ್ರಾದಿಪರವೆಂದು ಇಲ್ಲಿ ನಿರ್ಣಯವಾದ ಮೇಲೆ 'ತದ್ವೈತ್ವಂ ಪ್ರಾಣಃ' ಎಂಬಲ್ಲಿಯೂ ಇಂದ್ರಾದಿಗಳೇ ಪ್ರತಿಪಾದ್ಯರಾಗಬೇಕು.

### ಕಠಿಣಪದಾರ್ಥ

ಕಾಮಿನಿಯೋಜ್ಯಬಲಾತ್ = ಸ್ವರ್ಗಕಾಮಿಯಅಧಿಕಾರಿಯ ಅನ್ವಯದ ಬಲದಿಂದ, ಸ್ಥಾಯಿಕಾರ್ಯಾರ್ಥತ್ವೇ = ಫಲಪರ್ಯಂತವಾಗಿ ಉಳಿಯುವ ಅಪೂರ್ವ ಕಾರ್ಯವನ್ನೇ ಅರ್ಥವೆಂದು, ತದನ್ವಯ ಶೂನ್ಯೇಪಿ = ಕಾಮನಾವುಳ್ಳ ಅಧಿಕಾರಿಯ ಅನ್ವಯವು ಇಲ್ಲದ್ದಿದರೂ, ನಿತ್ಯಾಧಿಕಾರೇ = ನಿತ್ಯಕರ್ಮಗಳಲ್ಲಿ, ಮತಾಂತರೇ = ಭಾಟ್ಟರ ಮತದಲ್ಲಿ, ತದರ್ಥತ್ವಾತ್ = ಇಂದ್ರಾದಿ ಪರವಾಗುತ್ತದೆ.

**ಪ್ರಕಾಶಃ** – 'एकत्र निर्णीतशास्त्रार्थः सर्वत्र' इति न्यायादत्रत्य-स्यान्यत्वेऽन्यत्रापि तथा भवितव्यमित्येतत्सदृष्टान्तमाह – **यथेति** ॥ ''स्वर्गकामो यजेत'' इत्यादौ स्वर्गकामं नियोज्यं प्रति क्रिया लिङादिशब्देन कार्यतया बोधयितु-मशक्या । कामी हि काम्यादन्यत्काम्यान्यव्यवहितसाधनमेव कार्यतयाऽवैति, नतु व्यवहितसाधनम् । क्रिया चास्थायित्वेन काम्यव्यवहितत्वात् न कामिनियोज्या-न्वययोग्या । तृप्तिकामस्य व्यवहितसाधने पाके कार्यताधीस्तु न तृप्तिकामितया, किन्तु तृप्तिसाधनौदनकामितयैव, अन्यथा सिद्धान्नस्यापि तृप्तिकामस्य व्यवहितसाधने पाके कार्यताधीस्यात् ।

अतः फलपर्यन्तस्थाय्यपूर्वमेव लिङा कार्यत्वेन बोध्यमित्यपूर्वं लिङ्वाच्यमिति कामाधिकारे नियोज्यान्वयसामर्थ्याल्लिङादेः स्थाय्यपूर्वशब्दितकार्यार्थत्वे निश्चिते ''अहरहः सन्ध्यामुपासीत'' इत्यादौ नित्ये कर्मणि काम्याश्रवणेन नियोज्यान्वय-शून्येऽपि 'एकत्र निर्णीतः शास्त्रार्थः परत्र' इति तत्रापि तथैवाङ्गीकृतं, तद्वदित्यर्थः ॥ यथावेति ॥ 'मतान्तरे' भट्टादिमते । यववराहाधिकरणमुक्तं जन्माधिकरणे । ''यवमयश्चरुर्भवति'' इत्यादौ ''यत्रान्या ओषधयो म्लायन्ते एते मोदमाना इवोत्तिष्ठन्ति'' इति वाक्यशेषादीर्घशूकाद्यर्थत्वे निश्चिते, 'यवान् पच यवैर्यज' इत्यादौ यथा तदर्थत्वं, तद्वदित्यर्थः।

ವಿವರಣೆ - ಇಲ್ಲಿಯ ತನಕ ಮಾಡಿದ ಆಕ್ಷೇಪವೂ ಅಸಮಂಜಸವಾಗಿದೆ. ಏಕೆಂದರೆ ''ಏಕತ್ರ ನಿರ್ಣೀತಶ್ಶಾಸ್ತ್ರಾರ್ಥಃ ಸರ್ವತ್ರ'' ಒಂದು ಕಡೆ ನಿರ್ಣಯಿಸಲ್ಪಟ್ಟ ಶಾಸ್ತ್ರಾರ್ಥವು ಎಲ್ಲೆಡೆ ನಿರ್ಣಯವಾಗುತ್ತದೆ ಎಂಬ ನ್ಯಾಯದಂತೆ ನಿರ್ಣಯಿಸಲ್ಪಟ್ಟ ನ್ಯಾಯವು ಹಿಂದಿನ ಪ್ರಾಣಾಧಿಕರಣದಲ್ಲಿಯೂ ಸಂಬಂಧಪಡುತ್ತದೆ. ಇಲ್ಲಿ ಉದಾಹರಿಸುತ್ತಿರುವ ಪ್ರಾಣವು ವಿಷ್ಣುವಾಗದಿದ್ದಲ್ಲಿ, ಹಿಂದಿನ ಅಧಿಕರಣದಲ್ಲಿರುವ ಪ್ರಾಣನು ವಿಷ್ಣು ಆಗಲಾರ ಈ ವಿಷಯದಲ್ಲಿ 'ಯಥಾ' ಇತ್ಯಾದಿ ವಾಕ್ಯದಿಂದ ದೃಷ್ಟಾಂತವನ್ನು ನೀಡುತ್ತಿದ್ದಾರೆ.

'ಸ್ವರ್ಗಕಾಮೋ ಯಜೇತ' ಇತ್ಯಾದಿ ಸ್ಥಳದಲ್ಲಿ ಸ್ವರ್ಗಕಾಮಿಯು ಅಧಿಕಾರಿಯಾಗಿದ್ದಾನೆ. ಇಂತಹ ಅಧಿಕಾರಿಯನ್ನು ಕುರಿತು 'ಲಿಙ್' ಪ್ರತ್ಯಯವು ಕಾರ್ಯವನ್ನು ಬೋಧಿಸುತ್ತಿದೆ. ಯಾಗಾದಿ ಕ್ರಿಯೆಯನ್ನು ಕಾರ್ಯತ್ವೇನ 'ಲಿಙ್' ಪ್ರತ್ಯಯವು ತಿಳಿಸುತ್ತಿದೆ ಎಂದು ಹೇಳಬಾರದು. ಏಕೆಂದರೆ ಸ್ವಾಮಿಯಾದ ಪುರುಷನು ಫಲವನ್ನು ಅಪೇಕ್ಷಿಸುತ್ತಾನೆ. ಮತ್ತು ಅಂತಹ ಫಲಕ್ಕೆ ಅವ್ಯವಹಿತ ಸಾಧನವನ್ನು ಅಪೇಕ್ಷಿಸುತ್ತಾನೆ. ವ್ಯವಹಿತ ಸಾಧನವನ್ನು ಅಪೇಕ್ಷಿಸುವುದಿಲ್ಲ. ಪ್ರಕೃತ ಸ್ವರ್ಗಕಾಮಿಯು ಕಾಮ್ಯವಾದ ಸ್ವರ್ಗವನ್ನು ಅಪೇಕ್ಷಿಸುತ್ತಾನೆ. ಸ್ವರ್ಗಕ್ಕೆ ಅವ್ಯವಹಿತ ಸಾಧನವೆನಿಸಿದ ಅಪೂರ್ವವನ್ನು ಅಪೇಕ್ಷಿಸುತ್ತಾನೆ ಹೊರತು ಯಾಗ ಕ್ರಿಯೆಯನ್ನು ಅಪೇಕ್ಷಿಸುವುದಿಲ್ಲ. ಏಕೆಂದರೆ ಯಾಗಕ್ರಿಯೆಯು ವ್ಯವಹಿತವಾಗಿದೆ ಮತ್ತು ಕ್ಷಣಿಕವಾಗಿದೆ. ಆದ್ದರಿಂದ ಯಾಗಕ್ರಿಯೆಯನ್ನು ಕಾರ್ಯತ್ವೇನ ತಿಳಿಸಲು 'ಲಿಙ್' ಪ್ರತ್ಯಯಕ್ಕೆ ಸಾಮರ್ಥ್ಯವಿಲ್ಲ; ಹೊರತು ಅವ್ಯವಹಿತ ಸಾಧನವಾದ ಮತ್ತು ಸ್ಥಾಯಿಯಾದ ಅಪೂರ್ವ ಎಂಬ ಕಾರ್ಯವನ್ನೇ 'ಲಿಙ್' ಪ್ರತ್ಯಯವು ಬೋಧಿಸಬೇಕು. ಆದ್ದರಿಂದ ಕಾಮಿನಿಯೋಜ್ಯಾನ್ವಯಕ್ಕೆ ಯೋಗ್ಯವಾದದ್ದು ಅಪೂರ್ವಕಾರ್ಯವೇ ಆಗುತ್ತದೆ ಹೊರತು ಯಾಗಕ್ರಿಯೆ ಆಗುವುದಿಲ್ಲ.

ಆಕ್ಷೇಪ - ಕಾಮಿಯಾದ ಪುರುಷನು ಅವ್ಯವಹಿತಸಾಧನವನ್ನೇ ಅಪೇಕ್ಷಿಸಬೇಕಾಗಿಲ್ಲ. ಏಕೆಂದರೆ ಲೋಕದಲ್ಲಿ ಒಬ್ಬನಿಗೆ ಹೊಟ್ಟೆ ತುಂಬಬೇಕು ಎಂಬ ಆಪೇಕ್ಷೆ ಇರುತ್ತದೆ. ಅಂತಹ ಪುರುಷನು ಅಡುಗೆ ಮಾಡಲು ಪ್ರವೃತ್ತನಾಗುತ್ತಾನೆ. ಇಲ್ಲಿ ತೃಪ್ತಿಗೆ ಅಡುಗೆ ಮಾಡುವಿಕೆಯು (ಪಾಕಕ್ರಿಯೆಯು) ವ್ಯವಹಿತ-ಸಾಧನವಾಗಿದೆ. ತೃಪ್ತಿಗೆ ಅವ್ಯವಹಿತ ಸಾಧನವಾದದ್ದು ಭೋಜನ. ಭೋಜನಕ್ಕೆ ಸಾಧನವಾದದ್ದು ಪಾಕಕ್ರಿಯೆ. ಆದರೆ ಲೋಕದಲ್ಲಿ ವ್ಯವಹಿತಸಾಧನವಾದ ಪಾಕಕ್ರಿಯೆಯಲ್ಲಿ ಪ್ರವೃತ್ತಿಯು ಕಂಡಿದೆಯಲ್ಲ?

ಸಮಾಧಾನ - ತೃಪ್ತಿಕಾಮಿಯಾದ ಪುರುಷನು ವ್ಯವಹಿತಸಾಧನವಾದ ಪಾಕದಲ್ಲಿ ಪ್ರವೃತ್ತಿ ಮಾಡುವುದು ಪಾಕವೇ ತೃಪ್ತಿಸಾಧನವೆಂಬ ಅಭಿಪ್ರಾಯದಿಂದಲ್ಲ. ತೃಪ್ತಿಯ ಸಾಧನವಾದ ಅನ್ನವನ್ನು ಅಪೇಕ್ಷಿಸಿ ಪಾಕಕ್ರಿಯೆಯಲ್ಲಿ ಪ್ರವೃತ್ತಿ ಮಾಡಿದ್ದಾನೆ. ಮೊದಲು ತೃಪ್ತಿಯಲ್ಲಿ ಅಪೇಕ್ಷೆ ಉಂಟಾಯಿತು. ಅನಂತರ ತೃಪ್ತಿಗೆ ಸಾಧನವಾದ ಭೋಜನದಲ್ಲಿ ಅಪೇಕ್ಷೆ ಉಂಟಾಯಿತು. ಅದಕ್ಕಾಗಿ ಪಾಕಕ್ರಿಯೆಯಲ್ಲಿ ಪ್ರವೃತ್ತಿಯನ್ನು ಮಾಡಿದ್ದಾನೆ. ಒಟ್ಟಾರೆ ತೃಪ್ತಿಗೆ ಅವ್ಯವಹಿತ ಸಾಧನವಾದದ್ದು ಭೋಜನ. ವ್ಯವಹಿತ ಸಾಧನವಾದದ್ದು ಪಾಕಕ್ರಿಯೆ. ವ್ಯವಹಿತ ಸಾಧನವಾದ ಪಾಕದಲ್ಲಿ ತೃಪ್ತಿಕಾಮನಾದಿಂದ ಕಾರ್ಯತ್ವ ಬುದ್ಧಿಯು ಹುಟ್ಟರು-ವುದಿಲ್ಲ. ಹೊರತಾಗಿ ತೃಪ್ತಿಗೆ ಸಾಧನವಾದ, ಅನ್ನಕಾಮನಾದಿಂದ ಕಾರ್ಯತ್ವ ಬುದ್ಧಿಯು ಹುಟ್ಟರುತ್ತದೆ. ಹೀಗೆ ಒಪ್ಪದಿದ್ದರೆ ಅನ್ನವು ಸಿದ್ಧವಾಗಿರುವಾಗ ತೃಪ್ತಾಮನೆ ಹುಟ್ಟದರೆ ಅಲ್ಲಿಯೂ ವ್ಯವಹಿತಸಾಧನವಾದ ಪಾಕಕ್ರಿಯೆಯಲ್ಲಿಯೇ ಕಾರ್ಯತ್ವಬುದ್ಧಿಯು ಬರಬೇಕಾದೀತು.

ಆದ್ದರಿಂದ ಫಲಪರ್ಯಂತವಾಗಿ ಇರುವ ಅಪೂರ್ವವನ್ನೇ 'ಲಿಜ್' ಪ್ರತ್ಯಯವು ತಿಳಿಸುತ್ತದೆಂದು ಒಪ್ಪಬೇಕು. ಹೀಗೆ ನಿಶ್ಚಯವಾದ ಮೇಲೆ 'ಅಹರಹಃ ಸಂಧ್ಯಾಮುಪಾಸೀತ' ಇತ್ಯಾದಿ ನಿತ್ಯಕರ್ಮಗಳಲ್ಲಿ ಫಲಕಾಮನೆಯು ಕೇಳಿಸದ ಕಾರಣ ನಿಯೋಜ್ಯದ ಅನ್ವಯ ಇರುವುದಿಲ್ಲ. ಆದರೂ ಸಹ ''ಏಕತ್ರ ನಿರ್ಣೀತಃ ಶಾಸ್ತ್ರಾರ್ಥಃ ಪರತ್ರ'' ಎಂಬ ನ್ಯಾಯದಂತೆ 'ಲಿಜ್' ಪ್ರತ್ಯಯಕ್ಕೆ ಅಪೂರ್ವವೆಂಬ ಅರ್ಥವನ್ನೇ ಹೇಳಬೇಕು.

ಹೀಗೆ ಪೂರ್ವಮೀಮಾಂಸಕರು ನಿರ್ಣಯಿಸಿದ್ದಾರೆ. ಇದರಂತೆ ಪ್ರಕೃತ ಐತರೇಯಶ್ರುತಿಯಲ್ಲಿ ಪ್ರಸಕ್ತನಾದ ಪ್ರಾಣನು ಇಂದ್ರಾದಿಗಳೆಂದು ಸಿದ್ಧವಾದರೆ ತೈತ್ತಿರೀಯದಲ್ಲಿರುವ ಪ್ರಾಣನೂ ಸಹ ಇಂದ್ರಾದಿಗಳೇ ಆಗುತ್ತಾರೆ.

ಈ ವಿಷಯದಲ್ಲಿ ಭಾಟ್ಟರ ಸಮ್ಮತಿಯೂ ಇದೆ. ಯವವರಾಹಾಧಿಕರಣದಲ್ಲಿ ಭಾಟ್ಟರು ಈ ನ್ಯಾಯವನ್ನು ಅನುಸರಿಸಿದ್ದಾರೆ. ಜನ್ಯಾಧಿಕರಣದಲ್ಲಿ ವಿವರಿಸಿದ ಯವವರಾಹಾಧಿಕರಣವನ್ನು ಇಲ್ಲಿ ಅನುಸಂಧಾನ ಮಾಡಿಕೊಳ್ಳಬೇಕು. ''ಯವಮಯಶ್ಚರುರ್ಭವತಿ'' ಎಂಬಲ್ಲಿ ಶ್ರುತವಾದ ಯವಶಬ್ದವು ಯಾವ ಧಾನ್ಯವಿಶೇಷವನ್ನು ಹೇಳುತ್ತದೆಂದು ತಿಳಿಯುವುದಿಲ್ಲ. ಆ ಸಂದರ್ಭದಲ್ಲಿ ''ಯತ್ರಾನ್ಯಾ ಓಷಧಯೋ ಮ್ಲಾಯಂತೇ ಏತೇ ಮೋದಮಾನಾ ಇವೋತ್ತಿಷ್ಠಂತಿ'' ಎಂಬ ವಾಕ್ಯಶೇಷದ ಬಲದಿಂದ ಯವಶಬ್ದವು ದೀರ್ಘಶೂಕವಿಶಿಷ್ಟವಾದ ಧಾನ್ಯವಿಶೇಷವನ್ನು ಹೇಳುತ್ತದೆಂದು ನಿರ್ಣಯವಾಗುತ್ತದೆ. ತದನಂತರ 'ಯವಾನ್ ಪಚ ಯವೈರ್ಯಜ' ಎಂಬ ವಾಕ್ಯಗಳಲ್ಲಿರುವ 'ಯವ' ಶಬ್ದವು 'ಏಕತ್ರ 'ನಿರ್ಣೀತಃ ಶಾಸ್ತ್ರಾರ್ಥಃ ಪರತ್ರ' ಎಂಬ ನ್ಯಾಯವನ್ನು ಅನುಸರಿಸಿ ದೀರ್ಘಶೂಕವಿಶಿಷ್ಟವಾದ ಧ್ಯಾನವಿಶೇಷವನ್ನು ಹೇಳುತ್ತದೆ. ವಸ್ತುತಃ 'ಯವಾನ್ ಪಚ' ಇತ್ಯಾದಿ ಸ್ಥಳಗಳಲ್ಲಿ ವಾಕ್ಯಶೇಷ ಇರುವುದಿಲ್ಲ. ಆದರೂ ಸಹ ಒಮ್ಮೆ ನಿರ್ಣಯವಾದ ಶಾಸ್ತ್ರಾರ್ಥವನ್ನು ಎಲ್ಲೆಡೆ ಇಟ್ಟುಕೊಳ್ಳಬಹುದೆಂಬ ಅಭಿಪ್ರಾಯದಿಂದ ಭಾಟ್ಟರು ಹೀಗೆ ಅರ್ಥೈಸಿದ್ದಾರೆ. ಇದರಂತೆ ಪ್ರಕೃತದಲ್ಲಿಯೂ ಒಮ್ಮೆ ಪ್ರಾಣಶಬ್ದದಿಂದ ಇಂದ್ರಾದಿಗಳು ಪ್ರತಿಪಾದ್ಯರಾದಲ್ಲಿ ಬೇರೆ ಸ್ಥಳಗಳಲ್ಲಿ ಇಂದ್ರಾದಿ ಲಿಂಗಗಳಿಲ್ಲದಿದ್ದರೂ ಪ್ರಾಣಶಬ್ದದಿಂದ ಇಂದ್ರಾದಿಗಳೇ ಪ್ರತಿಪಾದ್ಯರಾಗುತ್ತಾರೆಂದು ಶ್ರೀಮದಾಚಾರ್ಯರ ಅಭಿಪ್ರಾಯ.

**ಗುರುರಾಜೀಯಮ್ – ಕಾಮಿನಿಯೋಜ್ಯೇತಿ ॥** ಕಾಮೀಚಾಸೌ ನಿಯೋಜ್ಯಶ್ಚೇತಿ ಕರ್ಮಧಾರಯಃ । ಮತಾನ್ತರೇ ಭಟ್ಟಮತ ಇತ್ಯರ್ಥಃ ।

## ಸಾರ

ಶ್ರೀಮದಾಚಾರ್ಯರ 'ಪ್ರಾಚೀನೋಽಪ್ಯನ್ಯಃ' ಎಂಬ ಮಾತಿನ ಬಗ್ಗೆ ಆಕ್ಷೇಪ ಮಾಡಿದ್ದೂ ತಪ್ಪು. ಅಂತಿಮ-ಪ್ರಾಣಾಧಿಕರಣದಲ್ಲಿ ಪ್ರಾಣಶಬ್ದದಿಂದ ದೇವೇಂದ್ರಾದಿಗಳು ಪ್ರತಿಪಾದ್ಯರೆನ್ನಲು ವಿಶೇಷಲಿಂಗವಿದೆ. ಆದರೆ ಪ್ರಾಣಾಧಿಕರಣದಲ್ಲಿ ಪ್ರಾಣಶಬ್ದವಾಚ್ಯನು ದೇವೇಂದ್ರನೆನ್ನಲು ವಿಶೇಷಲಿಂಗವಿರುವುದಿಲ್ಲ. ಆದರೂ ಸಹ ಈ ಅಧಿಕರಣದಲ್ಲಿ ವಿಶೇಷಲಿಂಗದ ಬಲದಿಂದ ದೇವೇಂದ್ರನು ಪ್ರಾಣಶಬ್ದವಾಚ್ಯನೆಂದು ನಿರ್ಣಯವಾದ ಮೇಲೆ ಹಿಂದಿನ ಪ್ರಾಣಾಧಿಕರಣದ ಪ್ರಾಣನೂ ಸಹ ದೇವೇಂದ್ರನೆಂದೇ ನಿರ್ಣಯವಾಗುತ್ತದೆ. ಇದಕ್ಕೆ ವಿಶೇಷಕಾರಣ ಬೇಕಾಗಿಲ್ಲ.

ಪೂರ್ವಮೀಮಾಂಸಕರಿಗೂ ಭಾಟ್ಟರಿಗೂ ಈ ವಿಷಯ ಸಮ್ಮತವಾಗಿವೆ. 'ಸ್ವರ್ಗಕಾಮೋ ಯಜೇತ' ಎಂಬಲ್ಲಿರುವ 'ಲಿಙ್' ಪ್ರತ್ಯಯವು ಅಪೂರ್ವವೆಂಬ ಕಾರ್ಯವನ್ನು ಹೇಳುತ್ತದೆ. ಇದಕ್ಕೆ 'ಸ್ವರ್ಗಕಾಮಃ' ಎಂಬ ಪ್ರಯೋಗವೇ ಕಾರಣವಾಗಿದೆ. ಆದರೆ 'ಸಂಧ್ಯಾಮುಪಾಸೀತ' ಎಂಬಲ್ಲಿ ಫಲಕಾಮಿ ವಾಚಕವಾದ ಪದ ಇರುವುದಿಲ್ಲ. ಆದರೂ 'ಏಕತ್ರ ನಿರ್ಣೀತಃ ಶಾಸ್ತ್ರಾರ್ಥಃ ಸರ್ವತ್ರ' ಎಂಬ ನ್ಯಾಯವನ್ನು ಅನುಸರಿಸಿ 'ಉಪಾಸೀತ' ಎಂಬಲ್ಲಿರುವ 'ಲಿಙ್' ಪ್ರತ್ಯಯವೂ ಸಹ ಅಪೂರ್ವವೆಂಬ ಕಾರ್ಯತ್ವವನ್ನೇ ಹೇಳುತ್ತದೆ.

ಇದರಂತೆ ಭಾಟ್ಟರು ಯವಮಯಾಧಿಕರಣದಲ್ಲಿ 'ಯವ' ಶಬ್ದಕ್ಕೆ ವಾಕ್ಯಶೇಷದ ಬಲದಿಂದ ದೀರ್ಘ-ಶೂಕವಿಶಿಷ್ಟವಾದ ಧಾನ್ಯವಿಶೇಷವೆಂಬ ಅರ್ಥವನ್ನು ಅಂಗೀಕರಿಸಿದ್ದಾರೆ. ಆದರೆ ಎಲ್ಲಿ ವಾಕ್ಯಶೇಷವಿರುವುದಿಲ್ಲವೋ ಅಲ್ಲಿಯೂ ಸಹ ದೀರ್ಘಶೂಕವಿಶಿಷ್ಟವಾದ ಧಾನ್ಯವೆಂಬ ಅರ್ಥವನ್ನೇ ಅಂಗೀಕರಿಸಿದ್ದಾರೆ. 'ಏಕತ್ರ ನಿರ್ಣೀತಃ ಶಾಸ್ತ್ರಾರ್ಥಃ ಸರ್ವತ್ರ' ಎಂಬ ನ್ಯಾಯವೇ ಇದಕ್ಕೂ ಕಾರಣ. ಇದರಂತೆ ಪ್ರಕೃತ ಐತರೇಯದಲ್ಲಿರುವ ಪ್ರಾಣಶಬ್ದವಾಚ್ಯನು ಇಂದ್ರಾದಿಗಳೆನ್ನಲು ಅನೇಕ ನಿರವಕಾಶಲಿಂಗಗಳಿರುತ್ತವೆ. ಆದರೆ ತೈತ್ತಿರೀಯದಲ್ಲಿರುವ ಪ್ರಾಣನು ಇಂದ್ರಾದಿಗಳೆನ್ನಲು ಅಂತಹ ನಿರವಕಾಶಲಿಂಗಗಳಿರುವುದಿಲ್ಲ. ಆದ್ದರಿಂದ 'ಏಕತ್ರ ನಿರ್ಣೀತಃ ಶಾಸ್ತ್ರಾರ್ಥಃ ಸರ್ವತ್ರ' ಎಂಬ ನ್ಯಾಯವನ್ನು ಅನುಸರಿಸಿ ಶ್ರೀಮದಾಚಾರ್ಯರ ಮಾತನ್ನು ಅರ್ಥಮಾಡಿಕೊಳ್ಳಬೇಕು.

* * * *

## ಇಲ್ಲಿ ಇಂದ್ರ ಪ್ರಾಣಾದಿಗಳು ಅಮುಖ್ಯವಾಗಿ ಪ್ರತಿಪಾದ್ಯರೆಂಬ ಪಕ್ಷ ತಪ್ಪು

### तात्पर्यचन्द्रिका

**न चात्रामुख्यवृत्त्या इन्द्रादिपरत्वेऽपि तल्लिङ्गोपपत्तिः, ''तद्वै त्वं प्राणः'' इत्यत्र तु मुख्यवृत्त्या विष्णुपरताऽस्त्विति वाच्यम्, अत्रेन्द्रादौ मुख्यत्वे बाधकाभावात् । नच विष्णौ मुख्यत्वमेव बाधकम्, तस्याद्याप्यसिद्धेः । इन्द्रादौ योगसम्भवात् ।**

**मुख्यप्राणे रूढेरपि सत्त्वाच्च । पूर्वपक्षे सर्वत्रापि वैदिकप्रयोगे प्राणशब्दस्येन्द्रादिपरत्वेन विष्णौ विद्वद्रूढेः तद्व्याप्यमहायोगस्य चाभावाच्च ।**

ಆಕ್ಷೇಪ - ಐತರೇಯದಲ್ಲಿ ಕೇಳಿಸುತ್ತಿರುವ ಪ್ರಾಣಶಬ್ದವು ಅಮುಖ್ಯವೃತ್ತಿಯಿಂದ ಇಂದ್ರಾದಿಗಳನ್ನು ಪ್ರತಿಪಾದಿಸುತ್ತಿದೆ. ಹೀಗೆ ಹೇಳಿದಾಗಲೂ ಲಿಂಗಗಳನ್ನು ಇಂದ್ರಾದಿಗಳಲ್ಲಿ ಕೂಡಿಸಬಹುದು. ''ತದ್ವೈ ತ್ವಂ ಪ್ರಾಣಃ'' ಎಂಬಲ್ಲಿ ಕೇಳಿಸುತ್ತಿರುವ ಪ್ರಾಣ ಶಬ್ದವು ವಿಷ್ಣುಪರವಾಗಬಹುದು. ಹೀಗೆ ಈ ಅಧಿಕರಣದಲ್ಲಿ ಅಮುಖ್ಯವೃತ್ತಿಯಿಂದ ಇಂದ್ರಾದಿಪರತ್ವವನ್ನು ಹಿಂದಿನ ಪ್ರಾಣಾಧಿಕರಣದಲ್ಲಿ ಮುಖ್ಯವೃತ್ತಿಯಿಂದ ವಿಷ್ಣುಪರತ್ವವನ್ನು ಒಪ್ಪಿದಾಗ ''ಏಕತ್ರ ನಿರ್ಣೀತಃ ಶಾಸ್ತ್ರಾರ್ಥಃ ಸರ್ವತ್ರ'' ಎಂಬ ನ್ಯಾಯದಿಂದಲೂ ವಿರೋಧ ಬರುವುದಿಲ್ಲ.

ಸಮಾಧಾನ - ಐತರೇಯದಲ್ಲಿರುವ ಪ್ರಾಣಶಬ್ದವು ಅಮುಖ್ಯವೃತ್ತಿಯಿಂದ ಇಂದ್ರಾದಿಗಳನು ಪ್ರತಿಪಾದಿಸುತ್ತದೆಂದು ಹೇಳಬೇಕಾದರೆ, ಮುಖ್ಯವೃತ್ತಿಯಲ್ಲಿ ಬಾಧಕವಿರಬೇಕು. ಆದರೆ ಇಂದ್ರಾದಿಗಳಲ್ಲಿ ಪ್ರಾಣಶಬ್ದವು ಮುಖ್ಯವೃತ್ತಿಯಿಂದ ಇರುತ್ತದೆನ್ನಲು ಯಾವುದೇ ಬಾಧಕವಿರುವುದಿಲ್ಲ. ವಿಷ್ಣುವಿನಲ್ಲಿ ಮುಖ್ಯವೃತ್ತಿಯಿಂದ ಇರುವುದೇ ಬಾಧಕವೆನ್ನಬೇಕು. ಆದರೆ ಈ ವಿಷಯವು ಇದುವರೆಗೂ ಸಿದ್ಧವಾಗಿಲ್ಲ. ಮತ್ತು ಇಂದ್ರಾದಿಗಳಲ್ಲಿ ಯೋಗಾರ್ಥವನ್ನು ಹೇಳಬಹುದು. ಮುಖ್ಯಪ್ರಾಣನಲ್ಲಂತೂ ಯೋಗ ಹಾಗೂ ರೂಢಿ ಎರಡೂ ಇರುತ್ತವೆ. ಆದ್ದರಿಂದ ಮುಖ್ಯಾರ್ಥಗಳನ್ನೇ ಇಂದ್ರಾದಿಗಳಲ್ಲಿ ಹೇಳಬಹುದು.

ಮತ್ತು ವೇದದಲ್ಲಿರುವ ಎಲ್ಲಾ ಪ್ರಾಣಶಬ್ದಗಳೂ ಇಂದ್ರಾದಿ ಪರವಾಗಿದೆ ಎಂದು ಪೂರ್ವಪಕ್ಷ ಮಾಡುವ ಸಂದರ್ಭದಲ್ಲಿ ವಿಷ್ಣುವಿನಲ್ಲಿ ವಿದ್ವದ್ರೂಢಿಯನ್ನೂ ಸಹ ಒಪ್ಪಲಾಗದು. ವಿದ್ವದ್ಪ್ರಯೋಗದ ಬಾಹುಲ್ಯದಿಂದಷ್ಟೇ ವಿದ್ವದ್ರೂಢಿಯನ್ನು ಹೇಳಲು ಸಾಧ್ಯ . ವಿದ್ವದ್ರೂಢಿ ಇಲ್ಲದ್ದರಿಂದಲೇ ವಿದ್ವದ್ರೂಢಿಯಿಂದ ಅವಿನಾಭೂತವಾದ ಮಹಾಯೋಗವೂ ಸಹ ವಿಷ್ಣುವಿನಲ್ಲಿ ಬರುವುದಿಲ್ಲ. ಆದ್ದರಿಂದ ಇಂದ್ರಾದಿಗಳಲ್ಲಿ ಪ್ರಾಣಶಬ್ದವೂ ಇದೆ ಎಂದರೆ ಮುಖ್ಯವೃತ್ತಿಯಿಂದಲೇ ಇದೆ ಎಂದರ್ಥ. ಆದ್ದರಿಂದ ಈ ಅಧಿಕರಣದಲ್ಲಿ ಅಮುಖ್ಯವೃತ್ತಿಯಿಂದ ಇಂದ್ರಾದಿಗಳು ಪ್ರತಿಪಾದ್ಯರಾಗಿದ್ದಾರೆ. ಹಿಂದಿನ ಪ್ರಾಣಾಧಿಕರಣದಲ್ಲಿ ಮುಖ್ಯವೃತ್ತಿಯಿಂದ ವಿಷ್ಣುವು ಪ್ರತಿಪಾದ್ಯನಾಗಿದ್ದಾನೆಂಬ ಪಕ್ಷವು ಅಯುಕ್ತವಾಗಿದೆ.

ಕಠಿಣಪದಾರ್ಥ

ತಲ್ಲಿಂಗೋಪಪತ್ತಿಃ = ಲಿಂಗಗಳನ್ನು ಇಂದ್ರಾದಿ ಪರವೆಂದು ಕೂಡಿಸಬಹುದು, ಮುಖ್ಯತ್ವೇ = ಮುಖ್ಯತ್ವವನ್ನು ಸ್ವೀಕರಿಸಲು, ತಸ್ಯ = ಹಿಂದಿನ ಪ್ರಾಣಾಧಿಕರಣದಲ್ಲಿ ವಿಷ್ಣುವಿನಲ್ಲಿ ನಿರ್ಣಯಿಸಿದ ಮುಖ್ಯವೃತ್ತಿತ್ವವು, ಯೋಗಸಂಭವಾತ್ = ಪ್ರಣೇತೃತ್ವವೆಂಬ ಧರ್ಮವು ಬರುವುದರಿಂದ, ಸರ್ವತ್ರ = 'ಪ್ರಾಣಸ್ಯ ಪ್ರಾಣಃ' ಇತ್ಯಾದಿ ಸ್ಥಳಗಳಲ್ಲಿ, ತದ್ವಾಪ್ಯ = ವಿದ್ವದ್ರೂಢಿಯಿಂದ ವ್ಯಾಪ್ಯವಾದ,

**प्रकाशः** – ननु 'एकत्र निर्णीतः' इत्यस्यानुसरणेऽपि न प्रयोजनोक्तिर्युज्यते, ऐतरेयके यथा वाय्वादि त्रितयप्रापकसत्त्वेन त्रितयपरत्वमुपेयते, तथा विष्णुलिङ्गादेरपि सत्त्वेन तत्परत्वस्यापि सम्भवात्तत्रान्तर्नये अभेदनिरासने विष्णोरिन्द्रादिना ऐक्यायोगेऽपि चतुर्थपादीयोदाहरणेषु ''अव्यक्तात्पुरुषः परः'' इत्यादिषु मुख्यतो विष्णुपरत्वममुख्यतोऽन्यपरत्वमङ्गीकृतं, अन्यथा तारतम्याद्यसिद्धेः,

तद्वदत्रापि मुख्यतो विष्णुपरत्वेऽप्यमुख्यवृत्त्येन्द्रादिपरत्वाङ्गीकारमात्रेणापि इन्द्रादिलिङ्गाद्युपपत्तेः प्राक्तनस्याऽपि मुख्यतो विष्णुपरत्वस्य वा, इन्द्रादिलिङ्गानां बलवत्त्वेनात्र मुख्यत इन्द्रादिपरत्वेऽप्यमुख्यवृत्त्या विष्णुपरत्वेन पूर्वतनस्याप्यमुख्यतो विष्णुपरत्वस्य वा, विष्णुतदन्यप्रापकसत्त्वाविशेषेण मुख्यवृत्त्या उभयपरत्वस्यात्रैतरेयके सम्भवेन प्राचीनस्यापि मुख्यत उभयपरत्वस्य वा, ऐतरेयगतस्य प्राणस्य मुख्यवृत्त्येन्द्रादिपरत्वेऽपि तैत्तिरीयगतस्य मासाग्निहोत्रे अग्निहोत्रशब्दस्येव गौण्या वृत्त्या विष्णुपरत्वस्य वा, पूर्वत्र श्रीपतित्वादिविष्णुलिङ्गेन विष्ण्वर्थत्वस्य निश्चितत्वेनात्रापि तदर्थत्वापत्त्या वैपरीत्यस्यैव वा सम्भवेन पञ्चधा विष्णुपरत्वाक्षेपायोगादित्याशङ्क्याद्यं तावन्निरस्यति – **नचात्रेति** ॥ ऐतरेयक इत्यर्थः ॥

ವಿವರಣೆ - 'ಏಕತ್ರ ನಿರ್ಣೀತಃ ಶಾಸ್ತ್ರಾರ್ಥಃ ಸರ್ವತ್ರ' ಎಂಬ ನ್ಯಾಯವನ್ನು ಅನುಸರಿಸಿದರೂ ಶ್ರೀಮದಾಚಾರ್ಯರ ಮಾತು ಸರಿ ಹೊಂದುವುದಿಲ್ಲ. ಐತರೇಯಶ್ರುತಿಯಲ್ಲಿ 'ಮುಖ್ಯವಾಯು' ಮೊದಲಾದ ಮೂವರ ಲಿಂಗಗಳು ಕೇಳಿಸುತ್ತಿರುವುದರಿಂದ ತ್ರಿತಯಪರತ್ವವನ್ನು ಒಪ್ಪಿಕೊಳ್ಳಬೇಕು. ಅದರಂತೆ ವಿಷ್ಣುಲಿಂಗಾದಿಗಳು ಕೇಳಿಸುತ್ತಿರುವುದರಿಂದ ವಿಷ್ಣುಪರತ್ವವನ್ನೂ ಸಹ ಒಪ್ಪಬೇಕು. ಇಬ್ಬರಿಗೂ ಐಕ್ಯವನ್ನು ಒಪ್ಪಿದರೆ ಈ ಸಮಸ್ಯೆ ಪರಿಹಾರವಾಗಬಹುದು. ಆದರೆ ಜೀವಬ್ರಹ್ಮರ ಅಭೇದವನ್ನು ಅಂತರ್ಯಾಮ್ಯಧಿಕರಣದಲ್ಲಿ ನಿರಾಸ ಮಾಡಲಾಗಿದೆ. ಇನ್ನು ಚತುರ್ಥಪಾದದಲ್ಲಿ ಉದಾಹರಿಸುವ 'ಅವ್ಯಕ್ತಾತ್ಪುರುಷಃ ಪರಃ' ಇತ್ಯಾದಿ ಸ್ಥಳಗಳಲ್ಲಿ ವ್ಯಾಖ್ಯಾನಿಸುವಂತೆ ಇಲ್ಲಿಯೂ ತಿಳಿಯಬಹುದು. ಅವ್ಯಕ್ತಾದಿಶಬ್ದಗಳಿಂದ ವಿಷ್ಣುವು ಪರಮಮುಖ್ಯವೃತ್ತಿಯಿಂದ ವಾಚ್ಯನಾಗುತ್ತಾನೆ. ಅಮುಖ್ಯವೃತ್ತಿಯಿಂದ ಉಳಿದವರೂ ವಾಚ್ಯರಾಗುತ್ತಾರೆಂದು ಒಪ್ಪಬೇಕು. ಇಲ್ಲದಿದ್ದರೆ ತಾರತಮ್ಯವೇ ಅಸಿದ್ಧವಾದೀತು. ಹೀಗೆ ಚತುರ್ಥಪಾದದಲ್ಲಿ ಹೇಳಿದ್ದಾರೆ. ಅದರಂತೆ ಪ್ರಕೃತದಲ್ಲಿಯೂ ಮುಖ್ಯವೃತ್ತಿಯಿಂದ ಪ್ರಾಣಶಬ್ದವು ವಿಷ್ಣುವನ್ನು ಪ್ರತಿಪಾದಿಸಿದರೂ ಅಮುಖ್ಯವೃತ್ತಿಯಿಂದ ಇಂದ್ರಾದಿಗಳನ್ನೂ ಪ್ರತಿಪಾದಿಸುತ್ತದೆಂದು ಅಂಗೀಕರಿಸಬಹುದು. ಹೀಗೆ ಹೇಳಿದಾಗಲೂ ಶ್ರುತಿಗಳಲ್ಲಿ ಪ್ರಸಿದ್ಧವಾದ ಲಿಂಗಗಳು ಇಂದ್ರಾದಿಗಳಲ್ಲಿ ಉಪಪನ್ನವೇ ಆಗುತ್ತವೆ. ಹಿಂದಿನ ಪ್ರಾಣಾಧಿಕರಣದಲ್ಲಿಯೂ ಮುಖ್ಯವೃತ್ತಿಯಿಂದ ವಿಷ್ಣುವೇ ವಾಚ್ಯನಾಗಿದ್ದಾನೆ.

ಅಥವಾ ಇಂದ್ರಾದಿಲಿಂಗಗಳು ಬಲಿಷ್ಠವಾಗಿರುವುದರಿಂದ ಪ್ರಾಣಶಬ್ದಕ್ಕೆ ಇಂದ್ರಾದಿಪರತ್ವವನ್ನು ಈ ಅಧಿಕರಣದಲ್ಲಿ ಸಮರ್ಥಿಸುವುದು ಅನಿವಾರ್ಯ. ಆದರೆ ಹಿಂದಿನ ಅಧಿಕರಣದಲ್ಲಿ ಪ್ರಾಣಾದಿಶಬ್ದಗಳಿಂದ ವಿಷ್ಣುವು ಅಮುಖ್ಯವೃತ್ತಿಯಿಂದ ಪ್ರತಿಪಾದ್ಯನಾಗಿದ್ದಾನೆಂದು ಹೇಳಬಹುದು.

ಅಥವಾ ವಿಷ್ಣು ಹಾಗೂ ತದನ್ಯಪ್ರಾಪಕವಾದ ಧರ್ಮಗಳೂ ಎರಡೂ ಕಡೆ ಸಮಾನವಾಗಿರುವುದರಿಂದ ಏತರೇಯದಲ್ಲಿರುವ ಪ್ರಾಣಶಬ್ದದಿಂದ ಇಬ್ಬರೂ ಪ್ರತಿಪಾದ್ಯರಾಗುತ್ತಾರೆ. ಆದ್ದರಿಂದ ಹಿಂದಿನ ಪ್ರಾಣಾಧಿಕರಣದಲ್ಲಿರುವ ಪ್ರಾಣಶಬ್ದದಿಂದಲೂ ಇಬ್ಬರೂ ಮುಖ್ಯಪ್ರತಿಪಾದ್ಯರಾಗಿದ್ದಾರೆಂದು ಹೇಳಬಹುದು.

ಅಥವಾ ಏತರೇಯದಲ್ಲಿರುವ ಪ್ರಾಣಶಬ್ದವು ಮುಖ್ಯವೃತ್ತಿಯಿಂದ ಇಂದ್ರಾದಿಗಳನ್ನು ಪ್ರತಿಪಾದಿಸಿದರೂ ತೈತ್ತಿರೀಯದಲ್ಲಿರುವ ಪ್ರಾಣಶಬ್ದವು ಮಾಸಾಗ್ನಿಹೋತ್ರದಲ್ಲಿ ಬಳಸುವ ಅಗ್ನಿಹೋತ್ರ ಶಬ್ದದಂತೆ ಗೌಣೀವೃತ್ತಿಯಿಂದ ವಿಷ್ಣುಪರವಾಗುತ್ತದೆಂದು ಹೇಳಬಹುದು.

ಅಥವಾ ಹಿಂದಿನ ಪ್ರಾಣಾಧಿಕರಣದಲ್ಲಿ ಶ್ರೀಪತಿತ್ವ ಮೊದಲಾದ ವಿಷ್ಣುಲಿಂಗಗಳಿರುವುದರಿಂದ ವಿಷ್ಣುವೇ ಪ್ರಾಣಶಬ್ದವಾಚ್ಯನೆಂದು ನಿರ್ಣಯ ಮಾಡಲಾಗಿದೆ. ಅದರಂತೆ ಇಲ್ಲಿಯೂ ಸಹ ಪ್ರಾಣಶಬ್ದದಿಂದ ವಿಷ್ಣುವೇ ಮುಖ್ಯವಾಗಿ ಪ್ರತಿಪಾದ್ಯನಾಗಬಹುದು.

ಹೀಗೆ ಐದು ಬಗೆಯಲ್ಲಿ ವಿಷ್ಣುಪರತ್ವದ ಆಕ್ಷೇಪವನ್ನು ಮಾಡಿದ್ದು ತಪ್ಪೆಂದು ತಿಳಿಯುತ್ತದೆ. ಆದ್ದರಿಂದ ಶ್ರೀಮದಾಚಾರ್ಯರ ಮಾತಿಗೆ ಏನು ಅರ್ಥ? ಎಂಬ ಗೊಂದಲವು ಹಾಗೆಯೇ ಉಳಿಯಿತು.

**ಪ್ರಕಾಶಃ – ಬಾಧಕಾಭಾವಾದಿತಿ ॥** ''ಅವ್ಯಕ್ತಾತ್ಪುರುಷಃ ಪರಃ'' ಇತ್ಯಾದೌ ಅನ್ಯಸ್ಯ ಮುಖ್ಯತ್ವೇ ಬಾಧಕಂ ವಕ್ಷ್ಯತ ಇತಿ ಭಾವಃ । ನನು ಪ್ರಾಗುಕ್ತರೀತ್ಯಾ ಪ್ರಾಣಶಬ್ದಸ್ಯ ವಿಷ್ಣೌ ಮುಖ್ಯತ್ವಂ ವಾ, ಇನ್ದ್ರಾದೌ ಯೋಗರೂಢಯೋರಸತ್ತ್ವಂ ವಾ, ವಿಷ್ಣೌ ಪ್ರಯೋಗಬಾಹುಲ್ಯಲಬ್ಧವಿದ್ವದ್ಬೂಢಿಮಹಾಯೋಗಸತ್ತ್ವಂ ವಾ ಬಾಧಕಮಿತ್ಯಾಶಙ್ಕ್ಯ ಕ್ರಮೇಣ ನಿರಸ್ಯತಿ – **ನಚೇತಿ ॥ ಅಥಾಪೀತಿ ॥** ಪ್ರಾಗುಕ್ತಸ್ಯಾಪೀಹಾಕ್ಷೇಪಾದಿತಿ ಭಾವಃ ।

**ಯೋಗೇತಿ ॥** ಪ್ರಣೇತೃತ್ವಾದೇಃ ಖಣ್ಡಿತೈಶ್ವರ್ಯಯುತೇऽಪಿ ಸತ್ತ್ವಾದಿತಿ ಭಾವಃ ॥ **ಸರ್ವತ್ರೇತಿ ॥** ''ಪ್ರಾಣಸ್ಯ ಪ್ರಾಣಃ'' ಪ್ರಾಣ ಏವಾಕರಣಃ' ಇತ್ಯಾದೈ ॥ **ತದ್ವಚ್ಚಾಪ್ಯೇತಿ ॥**

**ವಿದ್ವದ್ಬೂಢಿರ್ವೈದಿಕಾ ಸ್ಯಾತ್ ಸಾ ಯೋಗಾದೇವ ಲಭ್ಯತೇ ।**

ಇತ್ಯುಕ್ತೇರಿತಿ ಭಾವಃ ।

'ಅವ್ಯಕ್ತಾತ್ ಪುರುಷಃ ಪರಃ' ಇತ್ಯಾದಿ ಸ್ಥಳಗಳಲ್ಲಿ ಪ್ರಕೃತ್ಯಾದಿಗಳಲ್ಲಿ ಅವ್ಯಕ್ತಕ್ಕೆ ಮುಖ್ಯಾರ್ಥವನ್ನು ಸ್ವೀಕರಿಸಲು ಬಾಧಕವನ್ನು ಹೇಳುತ್ತಾರೆ. ಆದರೆ ಪ್ರಕೃತ ಇಂದ್ರಾದಿಶಬ್ದಗಳಿಗೆ ದೇವೇಂದ್ರಾದಿಗಳಲ್ಲಿ ಮುಖ್ಯಾರ್ಥತ್ವವನ್ನು ಹೇಳಲು ಅಂತಹ ಬಾಧಕವೇನೂ ಇರುವುದಿಲ್ಲ.

ಆಕ್ಷೇಪ - ಇಲ್ಲಿಯೂ ಬಾಧಕವಿದೆ. ಹಿಂದೆ ಹೇಳಿದ ಪ್ರಕಾರ ಪ್ರಾಣಶಬ್ದವು ವಿಷ್ಣುವಿನಲ್ಲಿ ಮುಖ್ಯವಾಗಿರುವಿಕೆಯೇ ಬಾಧಕವಾಗಿದೆ. ಅಥವಾ ಇಂದ್ರಾದಿಗಳಲ್ಲಿ ಪ್ರಾಣಶಬ್ದದ ಯೋಗವಾಗಲೀ, ರೂಢಿಯಾಗಲೀ ಇಲ್ಲದಿರುವುದಿಲ್ಲವಿಕೆಯೂ ಬಾಧಕವಾಗಿದೆ. ಅಥವಾ ವಿಷ್ಣುವಿನಲ್ಲಿ ಪ್ರಯೋಗ-ಬಾಹುಲ್ಯದಿಂದ ತಿಳಿಯುವ ವಿದ್ವದ್ರೂಢಿ ಮತ್ತು ಮಹಾಯೋಗಗಳು ಬಾಧಕವಾಗಿವೆ. ಆದ್ದರಿಂದ ಇಂದ್ರಾದಿಗಳಲ್ಲಿ ಮುಖ್ಯಾರ್ಥವನ್ನು ಹೇಳಲು ಸಾಧ್ಯವಿಲ್ಲ.

ಸಮಾಧಾನ - ಮೂರುವಿಧ ಬಾಧಕಗಳಲ್ಲಿ ಮೊದಲನೇ ಬಾಧಕವನ್ನು 'ನಚ ವಿಷ್ಣೌ' ಎಂಬ ವಾಕ್ಯದಿಂದ ನಿರಾಕರಿಸಿದ್ದಾರೆ. ಹಿಂದಿನ ಪ್ರಾಕಾಧಿಕರಣದಲ್ಲಿ ವಿಷ್ಣುವಿನಲ್ಲಿ ಸಮರ್ಥಿಸಲ್ಪಟ್ಟ ಮುಖ್ಯತ್ವವನ್ನು ಈಗ ಆಕ್ಷೇಪಿಸುತ್ತಿರುವುದರಿಂದ ಅದನ್ನು ಬಾಧಕವೆಂದು ಪರಿಗಣಿಸಲಾಗದು. ಇದರಂತೆಯೇ ಇಂದ್ರಾದಿಗಳಲ್ಲಿ ಪ್ರಾಣಶಬ್ದದ ಯೋಗ ಹಾಗೂ ರೂಢಿಗಳ ಇಲ್ಲದಿರುವಿಕೆಯನ್ನು ಬಾಧಕವೆಂದು ಹೇಳಲಾಗದು. ಏಕೆಂದರೆ ಇಂದ್ರನಲ್ಲಿ ಸ್ವಲ್ಪ ಐಶ್ವರ್ಯವಿದ್ದರೂ ಅಷ್ಟನ್ನೇ ವಿವಕ್ಷಿಸಿ 'ಪ್ರಣೇತೃತ್ವ' ಎಂಬ ಪ್ರಾಣಶಬ್ದದ ಪ್ರವೃತ್ತಿನಿಮಿತ್ತವನ್ನು ಹೇಳಲು ಬರುತ್ತದೆ. ಆದ್ದರಿಂದ ಪ್ರಾಣಶಬ್ದದ ಯೋಗವೃತ್ತಿಯನ್ನು ದೇವೇಂದ್ರನಲ್ಲಿ ಹೇಳಬಹುದು. ಮುಖ್ಯಪ್ರಾಣನಲ್ಲಂತೂ ರೂಢಿಯೇ ಇರುತ್ತದೆ. ಇನ್ನು ವಿಷ್ಣುವಿನಲ್ಲಿರುವ ವಿದ್ವದ್ರೂಢಿ ಮಹಾಯೋಗಗಳನ್ನು ಬಾಧಕವೆಂದು ಹೇಳಬೇಕು. ಆದರೆ ವೇದದಲ್ಲಿರುವ ಎಲ್ಲಾ ಪ್ರಾಣಶಬ್ದಗಳಿಗೂ ಇಂದ್ರಾದಿಪರತ್ವವನ್ನು ಪೂರ್ವಪಕ್ಷಿಯು ಆಕ್ಷೇಪಿಸುತ್ತಿರುವಾಗ ಪ್ರಯೋಗಬಾಹುಲ್ಯವೆಂಬ ವಿದ್ವದ್ರೂಢಿಯನ್ನೇ ಹೇಳಲಾಗದು. ''ವಿದ್ವದ್ರೂಢಿರ್ವೈದಿಕಾ ಸ್ಯಾತ್ ಸಾ ಯೋಗಾದೇವ ಲಭ್ಯತೇ'' ಎಂಬ ಮಾತಿನಂತೆ ವಿದ್ವದ್ರೂಢಿಯೆಂಬ ವ್ಯಾಪಕ ಇಲ್ಲದಿದ್ದಾಗ ತದ್ವ್ಯಾಪ್ಯವಾದ ಮಹಾಯೋಗವೂ ಸಹ ಬರುವುದಿಲ್ಲ.

**ಗುರ್ವರಾಜೀಯಮ್ – ವಿಷ್ಣೌ ಮುಖ್ಯತ್ವಂ ಬಾಧಕಮಿತಿ ವದನ್ಪ್ರಷ್ಟವ್ಯಃ । ಇನ್ದ್ರಾದೌ ಪ್ರಾಣಶಬ್ದಸ್ಯ ಲಾಕ್ಷಣಿಕತ್ವೇನ ಯೋಗರೂಢ್ಯೋರಭಾವಾದ್ಬಹ್ವಣಿ ಚ ರೂಢಿಯೋಗಯೋಃ ಸತ್ತ್ವಾನ್ನ ತತ್ರ ಮುಖ್ಯತ್ವಮಿತಿ ವಾ ಕಿಂ ತೇನ್ದ್ರಾದೌ ರೂಢಿಯೋಗಯೋಸ್ಸದ್ಭಾವೇಪಿ ವಿಷ್ಣೌ ವಿದ್ವದ್ರೂಢಿ-ಮಹಾಯೋಗಯೋಸ್ಸದ್ಭಾವೇನ ತತ್ರ ಮುಖ್ಯತ್ವಮಿತಿ ವಾ । ನಾದ್ಯ ಇತ್ಯಾಹ – ಇನ್ದ್ರಾದಾವಿತ್ಯಾದಿ ॥ ನ ದ್ವಿತೀಯ ಇತ್ಯಾಹ – ಪೂರ್ವಪಕ್ಷ ಇತಿ ॥**

ಸಾರ

'ಏಕತ್ರ ನಿರ್ಣೀತಃ ಶಾಸ್ತ್ರಾರ್ಥಃ ಸರ್ವತ್ರ' ಎಂಬ ನ್ಯಾಯವನ್ನು ನಿರ್ಣಯಿಸಿ ಶ್ರೀಮದಾಚಾರ್ಯರ ಪೂರ್ವಪಕ್ಷ ಫಲದ ಮಾತನ್ನು ಸಮರ್ಥಿಸಿದರಿ. ಆದರೆ ಇದು ಅಯುಕ್ತವಾಗಿದೆ. ಈ ಅಧಿಕರಣದಲ್ಲಿ ನಿರವಕಾಶವಾದ ಇಂದ್ರಾದಿ ಲಿಂಗಗಳಿರುವುದರಿಂದ ಅಮುಖ್ಯವೃತ್ತಿಯಿಂದ ಇಂದ್ರಾದಿಪರತ್ವವನ್ನು ಪ್ರಾಣಶಬ್ದಕ್ಕೆ ಒಪ್ಪೋಣ. ಹಿಂದಿನ ಪ್ರಾಕಾಧಿಕರಣದಲ್ಲಿ ಮುಖ್ಯವೃತ್ತಿಯಿಂದಲೇ ವಿಷ್ಣುಪರತ್ವವನ್ನು ಒಪ್ಪೋಣ. ಹೀಗೆ ಒಪ್ಪಿದಾಗ ಈ ಅಧಿಕರಣದ ಪೂರ್ವಪಕ್ಷಕ್ಕೆ ಹಿಂದಿನ ಅಧಿಕರಣದ ಸಿದ್ಧಾಂತವನ್ನು ಆಕ್ಷೇಪಿಸುವುದನ್ನು ಫಲವೆಂದು ಹೇಳಲು ಸಾಧ್ಯ ?

ಈ ಪ್ರಶ್ನೆಯೂ ಸಹ ತಪ್ಪು. ಏಕೆಂದರೆ ಐತರೇಯದ ಪ್ರಾಣಶಬ್ದಕ್ಕೆ ಇಂದ್ರಾದಿಗಳಲ್ಲಿ ಅಮುಖ್ಯವೃತ್ತಿಯನ್ನು ಏಕೆ ಹೇಳುತ್ತಿದ್ದೀರಿ. ಮುಖ್ಯವೃತ್ತಿಯನ್ನು ಒಪ್ಪಲು ಬಾಧಕವಿದ್ದರೇ ಮಾತ್ರ ಅಮುಖ್ಯವೃತ್ತಿಯನ್ನು ಹೇಳಬೇಕು. ವಿಷ್ಣುವಿನಲ್ಲಿ ಪ್ರಾಣಶಬ್ದವು ಮುಖ್ಯವಾಗಿರುವಿಕೆಯನ್ನು ಬಾಧಕವೆಂದು ಹೇಳಲಾಗದು. ಈ ಪ್ರಮೇಯವೂ ಹಿಂದಿನ ಪ್ರಾಣಾಧಿಕರಣದ ಸಿದ್ಧಾಂತವಾಗಿದೆ. ಆದನ್ನೇ ನಾವು ಪ್ರಕೃತ ಆಕ್ಷೇಪಿಸುತ್ತಿದ್ದೇವೆ.

ಇನ್ನು ಇಂದ್ರಾದಿಗಳಲ್ಲಿ ಯೋಗರೂಢಿಯ ಅಸತ್ವವನ್ನು ಬಾಧಕವೆಂದು ಹೇಳಬೇಕು. ಆದರೆ ಪ್ರಣೇತೃತ್ವವೆಂಬ ಯೋಗವನ್ನು ದೇವೇಂದ್ರನಲ್ಲಿ ಹೇಳಬಹುದು. ರೂಢಿಯನ್ನು ಮುಖ್ಯಪ್ರಾಣನಲ್ಲಿ ಹೇಳಬಹುದು. ಆದ್ದರಿಂದ ಇಂದ್ರಾದಿಗಳಲ್ಲಿರುವ ಯೋಗರೂಢಿಯ ಅಸತ್ವವನ್ನು ಬಾಧಕವೆಂದು ಹೇಳಲು ಹೇಗೆ ಸಾಧ್ಯ. ವಿಷ್ಣುವಿನಲ್ಲಿ ವಿದ್ವದ್ರೂಢಿ ಹಾಗು ಮಹಾಯೋಗಗಳನ್ನೇ ಬಾಧಕವೆಂದು ಅಂತಿಮವಾಗಿ ಹೇಳಲು ಸಾಧ್ಯ. ಆದರೆ ಯಾವ ಪೂರ್ವಪಕ್ಷಿಯು ವೇದದಲ್ಲಿರುವ ಎಲ್ಲಾ ಪ್ರಾಣಶಬ್ದಗಳಿಗೆ ವಿಷ್ಣುಪರತ್ವವನ್ನು ಅಂಗೀಕರಿಸದೆ ಕೇವಲ ಇಂದ್ರಾದಿ ವಾಚಕತ್ವವನ್ನು ಆಕ್ಷೇಪಿಸುತ್ತಿದ್ದಾನೋ ಅಂತಹ ಪೂರ್ವಪಕ್ಷಿಯು ವಿಷ್ಣುವಿನಲ್ಲಿ ವಿದ್ವದ್ರೂಢಿಯನ್ನೂ ಸಹ ಒಪ್ಪಲಾರ. ವಿದ್ವದ್ರೂಢಿಯನ್ನು ಒಪ್ಪಿದರೆ ಮಾತ್ರ ಮಹಾಯೋಗವನ್ನು ವಿಷ್ಣುವಿನಲ್ಲಿ ಹೇಳಬಹುದು. ಆದ್ದರಿಂದ ಶ್ರೀಮದಾಚಾರ್ಯರ ಆಕ್ಷೇಪದ ಪೂರ್ವಪಕ್ಷದ ಫಲಕಥನ ಮಾತಿನಲ್ಲಿ ಯಾವುದೇ ದೋಷವಿಲ್ಲ.

* * * *

## ಹಲವು ವಿಕಲ್ಪಗಳ ನಿರಾಸ

तात्पर्यचन्द्रिका

**न चात्र मुख्यवृत्त्या इन्द्रादिपरत्वेऽपि पूर्वत्रामुख्यवृत्त्या विष्णुपरता सिद्धान्तिनेष्यते । न चेन्द्रादौ विष्णौ च मुख्यता सत्यां गतावनेकार्थत्वस्या-न्याय्यत्वात् । नच वाक्यद्वयस्थप्राणशब्दस्य मुख्यवृत्त्यैकार्थत्वे पूर्वपक्षिणं प्रति बाधकमस्ति, येन मासाग्निहोत्रे अग्निहोत्रशब्दस्येव, तत्र विष्णौ प्राणशब्दस्य गौणता स्यात् । अत एव चानुव्याख्याने पूर्वपक्षे ''अन्यस्य मुख्यवाच्यत्वम्'' इत्युक्तम् ।**

ಆಕ್ಷೇಪ - ಈ ಅಧಿಕರಣದಲ್ಲಿ ಬಲಿಷ್ಠವಾದ ಇಂದ್ರಾದಿಲಿಂಗಗಳಿರುವುದರಿಂದ ಪ್ರಾಣಶಬ್ದಕ್ಕೆ ಮುಖ್ಯವಾಗಿ ಇಂದ್ರಪರತ್ವವು ಸಿದ್ಧವಾಗುತ್ತದೆ; ಅಮುಖ್ಯವೃತ್ತಿಯಿಂದ ವಿಷ್ಣುಪರತ್ವವೂ ಸಿದ್ಧವಾಗುತ್ತದೆ. ಆದ್ದರಿಂದ ಹಿಂದಿನ ಅಧಿಕರಣದಲ್ಲಿ ಪ್ರಾಣಶಬ್ದದಿಂದಲೂ ವಿಷ್ಣು ಅಮುಖ್ಯವಾಗಿಯೇ ಪ್ರತಿ-ಪಾದ್ಯನಾಗುತ್ತಾನಲ್ಲವೇ?

ಸಮಾಧಾನ - ಈ ಅಧಿಕರಣದಲ್ಲಿ ಮುಖ್ಯವೃತ್ತಿಯಿಂದ ಇಂದ್ರಾದಿಪರತ್ವವನ್ನು ಒಪ್ಪಿ ಅಮುಖ್ಯ-ವೃತ್ತಿಯಿಂದ ವಿಷ್ಣುಪರತ್ವವನ್ನು ಪೂರ್ವಪಕ್ಷ ಮಾಡಿದರೂ ಸಹ ಹಿಂದಿನ ಅಧಿಕರಣದಲ್ಲಿ ಅಮುಖ್ಯವೃತ್ತಿಯಿಂದ ವಿಷ್ಣುಪರತ್ವವೆಂಬುದನ್ನು ಸಿದ್ಧಾಂತಿಯೇ ಒಪ್ಪಲಾರ.

ಆಕ್ಷೇಪ - ಇಂದ್ರಾದಿಗಳು ಮತ್ತು ವಿಷ್ಣು ಇಬ್ಬರಲ್ಲಿಯೂ ಪ್ರಾಣಶಬ್ದವು ಮುಖ್ಯವೃತ್ತಿಯಿಂದಲೇ ಇದೆಯೆಂದು ಹೇಳಬಹುದಲ್ಲವೇ?

ಸಮಾಧಾನ - ಬೇರೆ ಗತಿಯಿಲ್ಲದಾಗ ಮಾತ್ರ ಒಂದೇ ಶಬ್ದಕ್ಕೆ ಅನೇಕಾರ್ಥವನ್ನು ಹೇಳಬಹುದು. ಆದರೆ ಬೇರೆ ಗತಿ ಇದ್ದಾಗ ಹೀಗೆ ಅನೇಕಾರ್ಥ ಹೇಳುವುದು ಅನ್ಯಾಯವಾಗುತ್ತದೆ.

ಆಕ್ಷೇಪ - ಈ ಅಧಿಕರಣದಲ್ಲಿ ಮುಖ್ಯವೃತ್ತಿಯಿಂದ ಇಂದ್ರಾದಿಪರತ್ವವನ್ನು ಒಪ್ಪಿದರೂ ಹಿಂದಿನ ಅಧಿಕರಣದಲ್ಲಿ ಗೌಣೀವೃತ್ತಿಯಿಂದ ವಿಷ್ಣುಪರತ್ವವನ್ನು ಒಪ್ಪಬಹುದಲ್ಲವೇ?

ಸಮಾಧಾನ - ಐತರೇಯ ಹಾಗೂ ತೈತ್ತಿರೀಯ ಎರಡೂ ವಾಕ್ಯಗಳಲ್ಲಿರುವ ಪ್ರಾಣಶಬ್ದಕ್ಕೆ ಮುಖ್ಯವೃತ್ತಿಯಿಂದ ಒಂದೇ ಅರ್ಥವನ್ನು ಹೇಳಲು ಬರುವಾಗ ತೈತ್ತಿರೀಯದಲ್ಲಿರುವ ಪ್ರಾಣಶಬ್ದಕ್ಕೆ ಗೌಣಾರ್ಥವನ್ನು ಹೇಳುವುದು ತಪ್ಪಾಗುತ್ತದೆ. ಮುಖ್ಯಾರ್ಥದಲ್ಲಿ ಬಾಧಕವಿದ್ದರೆ ಮಾತ್ರ ಗೌಣಾರ್ಥವನ್ನು ಸ್ವೀಕರಿಸಬೇಕು. ಬಾಧಕ ಇದ್ದಿದ್ದರೆ 'ಮಾಸಂ ಅಗ್ನಿಹೋತ್ರಂ ಜುಹೋತಿ' ಎಂಬಲ್ಲಿ ಅಗ್ನಿಹೋತ್ರಶಬ್ದಕ್ಕೆ 'ಮಾಸಂ' ಎಂಬ ಬಾಧಕವಿರುವುದರಿಂದ ಗೌಣಾರ್ಥವನ್ನು ಮಾಡುವಂತೆ ಇಲ್ಲಿಯೂ ಸಹ ವಿಷ್ಣುವಿನಲ್ಲಿ ಪ್ರಾಣಶಬ್ದಕ್ಕೆ ಗೌಣಾರ್ಥವನ್ನು ಮಾಡಬಹುದಿತ್ತು. ಆದರೆ ಅಂತಹ ಬಾಧಕವೇನೂ ಕಾಣಿಸುತ್ತಿಲ್ಲ. ಆದ್ದರಿಂದಲೇ ಅನುವ್ಯಾಖ್ಯಾನದ ಪೂರ್ವಪಕ್ಷದಲ್ಲಿ 'ಅನ್ಯಸ್ಯ ಮುಖ್ಯವಾಚ್ಯತ್ವಂ' ಎಂದು ಹೇಳಿದ್ದಾರೆ.

ಕಠಿಣಪದಾರ್ಥ

ಅತ್ರ = ಐತರೇಯದಲ್ಲಿ, ಪೂರ್ವತ್ರ = ತೈತ್ತಿರೀಯದಲ್ಲಿ, ಸತ್ಯಾಂಗತೌ = ಒಂದೇ ಅರ್ಥವನ್ನು ಹೇಳಲು ಬರುವಾಗ, ವಾಕ್ಯದ್ವಯಶ್ಚ = ಐತರೇಯ ಹಾಗೂ ತೈತ್ತಿರೀಯ ವಾಕ್ಯಗಳಲ್ಲಿರುವ, ಅತ ಏವ = ಎರಡೂ ವಾಕ್ಯಗಳಲ್ಲಿರುವ ಪ್ರಾಣಶಬ್ದಕ್ಕೆ ಒಂದೇ ಅರ್ಥವನ್ನು ಹೇಳಿದಾಗ ಬಾಧಕವಿಲ್ಲದಿರುವುದರಿಂದಲೇ.

**प्रकाशः – द्वितीयं पक्षं निरस्यति – न चात्रेति ॥** ऐतरेये मुख्यवृत्त्येन्द्रादिपरत्वेऽप्यमुख्यतो विष्णुपरत्वाङ्गीकारेण प्राचीनस्य तथात्वं सिद्धान्तिनोऽनभिमतमित्यर्थः ।

ವಿವರಣೆ - ಬಲಿಷ್ಠವಾದ ಲಿಂಗಗಳ ಬಲದಿಂದ ಪ್ರಾಣಶಬ್ದಕ್ಕೆ ಮುಖ್ಯವಾಗಿ ಇಂದ್ರಾದಿಪರತ್ವವನ್ನು ಈ ಅಧಿಕರಣದಲ್ಲಿ ಹೇಳಿ ಹಿಂದಿನ ಅಧಿಕರಣದಲ್ಲಿ ಅಮುಖ್ಯವೃತ್ತಿಯಿಂದ ವಿಷ್ಣುಪರತ್ವವನ್ನು ಒಪ್ಪೋಣವೆಂಬ ಎರಡನೇ ಪಕ್ಷವನ್ನು 'ನ ಚಾತ್ರೇ' ಇತ್ಯಾದಿ ವಾಕ್ಯದಿಂದ ನಿರಾಕರಿಸುತ್ತಿದ್ದಾರೆ. ಐತರೇಯದಲ್ಲಿ ಮುಖ್ಯವೃತ್ತಿಯಿಂದ ಇಂದ್ರಾದಿ ಪರತ್ವವನ್ನು ಒಪ್ಪಿದರೂ ಅಮುಖ್ಯವೃತ್ತಿಯಿಂದ ವಿಷ್ಣುಪರತ್ವವನ್ನು ಒಪ್ಪಲಾಗಿದೆ. ಆದ್ದರಿಂದಲೇ ಹಿಂದಿನ ಅಧಿಕರಣದಲ್ಲಿಯೂ ಅಮುಖ್ಯವೃತ್ತಿಯಿಂದ ವಿಷ್ಣುಪರತ್ವವನ್ನು ಒಪ್ಪೋಣವೆಂಬುದು ಸಿದ್ಧಾಂತಿಗೆ ಅಭಿಮತವಾಗಿರುವುದಿಲ್ಲವೆಂದು ಅಭಿಪ್ರಾಯ.

**ಪ್ರಕಾಶಃ – तृतीयं निरस्यति – नचेन्द्रादाविति ॥ अस्य प्राक्तनस्य चेत्यर्थः । ननु 'राजा कुवलयोल्लासि' इत्यादाविव किं न स्यादित्यत आह – नचेति ॥ तत्र वक्तृविक्षादिविरोध इव प्रकृते बाधकाभावादिति भावः ।**

ಪ್ರಾಣಶಬ್ದವು ಮುಖ್ಯವೃತ್ತಿಯಿಂದ ದೇವೇಂದ್ರ ಹಾಗೂ ವಿಷ್ಣು ಇಬ್ಬರನ್ನೂ ಪ್ರತಿಪಾದಿಸುತ್ತದೆಂಬ ಮೂರನೇ ಪಕ್ಷವನ್ನು 'ನಚ ಇಂದ್ರಾದೌ' ಎಂಬ ವಾಕ್ಯದಿಂದ ನಿರಾಕರಿಸುತ್ತಿದ್ದಾರೆ.

ಶಂಕೆ - ''ರಾಜಾ ಕುವಲಯೋಲ್ಲಾಸಿ'' ಎಂಬುದಕ್ಕೆ ರಾಜನು ಕುವಲಯ ಎಂಬ ಹೂಗಳಿಂದ ಶೋಭಾಯಮಾನವಾಗಿದ್ದಾನೆಂಬುದು ಒಂದು ಅರ್ಥ. ಅಥವಾ ಕುವಲಯದಿಂದ (ಕು = ಭೂ, ವಲಯ = ಮಂಡಲ) ಶೋಭಿತನಾಗಿದ್ದಾನೆಂಬುದು ಮತ್ತೊಂದು ಅರ್ಥ. ಹೀಗೆ 'ಕುವಲಯೋಲ್ಲಾಸಿ' ಎಂಬ ಒಂದೇ ಪದಕ್ಕೆ ಎರಡು ಅರ್ಥವನ್ನು ಹೇಳುವಂತೆ ಇಲ್ಲಿಯೂ ಸಹ 'ಪ್ರಾಣ'ಶಬ್ದಕ್ಕೆ 'ವಿಷ್ಣು' ಹಾಗೂ 'ಇಂದ್ರ' ಎಂಬ ಎರಡು ಅರ್ಥವನ್ನು ಏಕೆ ಹೇಳಬಾರದು?

ಸಮಾಧಾನ - ಈ ಶಂಕೆಗೆ 'ನಚ ವಾಕ್ಯದ್ವಯಶ್ಚ' ಎಂಬ ವಾಕ್ಯದಿಂದ ಉತ್ತರಿಸಿದ್ದಾರೆ. ವಕ್ತೃವಿನ ವಿವಕ್ಷೆಯನ್ನು ಅನುಸರಿಸಿ ಶಬ್ದಗಳಿಗೆ ಅರ್ಥವನ್ನು ತಿಳಿಯಬೇಕು. 'ಕುವಲಯೋಲ್ಲಾಸಿ' ಎಂಬಲ್ಲಿ ಎರಡೂ ಬಗೆಯ ಅರ್ಥವೂ ವಕ್ತೃವಿಗೆ ವಿವಕ್ಷಿತವಾದ್ದರಿಂದ ಹಾಗೇ ಎರಡು ಅರ್ಥವನ್ನು ಹೇಳುವುದು ಅನಿವಾರ್ಯ. ಇಲ್ಲದಿದ್ದರೆ ವಕ್ಯವಿವಕ್ಷೆಯ ವಿರೋಧವು ಬರುತ್ತದೆ. ಆದರೆ ಪ್ರಕೃತ ಪ್ರಾಣಶಬ್ದಕ್ಕೆ ಎರಡು ಅರ್ಥವನ್ನು ಹೇಳದಿದ್ದರೆ ವಕ್ಯವಿವಕ್ಷಾವಿರೋಧವೆಂಬ ಬಾಧಕ ಇರುವುದಿಲ್ಲ ಎಂದು ಈ ಮಾತಿನ ಆಂತರ್ಯ. (''ನಚ ವಾಕ್ಯದ್ವಯಶ್ಚ'' ಇತ್ಯಾದಿ ವಾಕ್ಯಕ್ಕೆ ಇದು ಒಂದು ಬಗೆಯ ವ್ಯಾಖ್ಯಾನ; ಮತ್ತೊಂದು ಬಗೆಯ ವ್ಯಾಖ್ಯಾನವನ್ನು ಮುಂದೆ ಮಾಡುತ್ತಿದ್ದಾರೆ.)

**ಪ್ರಕಾಶಃ – यद्वाऽस्य मुख्यवृत्त्येन्द्रादिपरत्वेऽपि गौण्या वृत्त्या प्राचीनो विष्णुस्स्यादिति चतुर्थं पक्षं दृष्टान्तवैषम्योक्त्याऽपाकरोति – नच वाक्येति ॥ ऐतरेयतैत्तिरीयस्थेत्यर्थः ।**

सप्तमे उक्तं ''क्रियाभिधानं तत् श्रुतावन्यत्र विधिप्रदेशः स्यात्'' इति तृतीय-पादीयाद्याधिकरणे कुण्डपायिनामयने श्रुतं ''मासमग्निहोत्रं जुहोति'' इति वाक्य-मुदाहृत्य, किमग्निहोत्रशब्दो नैयमिकाग्निहोत्रधर्माणामतिदेशको नेति संशये, उभयत्रापि जुहोति सामानाधिकरण्येन निर्देशाविशेषात् नामधेयत्वेन मुख्यत्वान्न धर्माणामतिदेशक इति प्राप्ते,

एकत्र मुख्यत्वेऽन्यत्र गौणत्वेनाप्युपपत्तावुभयत्र शक्तिकल्पनस्यान्याय्यत्वात्, नित्याग्निहोत्रे अग्नये होत्रमस्मिन्निति प्रवृत्तिनिमित्तसम्भवेन नैयमिके मुख्यत्वादन्यत्र

तत्सादृश्यविधित्सया गौण इति तद्धर्मातिदेशक इति सिद्धान्तितम् । तत्र यथा नैयमिकमासाग्निहोत्रयोः प्रकरणभेदेन भेदस्य द्वितीये निश्चितत्वान्मासाग्निहोत्रे प्रवृत्तिनिमित्ताभावेनानेकार्थस्यान्याय्यत्वेन च बाधकेन गौणत्वमुक्तम् । नच तथाऽत्र किञ्चिद्बाधकमस्ति, प्रत्युतैकार्थत्वं अमुख्यवृत्तिकत्वं चाश्रितं भवतीत्यर्थः ॥

अत एवेति ॥ वाक्यद्वयस्थप्राणशब्दस्य मुख्यवृत्त्यैकार्थत्वे बाधकाभावादेव

..... बाहुल्यात् श्रुतिलिङ्गयोः ।
अन्यस्य मुख्यवाच्यत्वमिति तन्नात्रगस्य हि ।

इत्युक्तमित्यर्थः । इदमाद्यपक्षेऽपि ज्ञापकतया योज्यम् ।

ವಿವರಣೆ - ಈ ಅಧಿಕರಣದಲ್ಲಿ ಮುಖ್ಯವೃತ್ತಿಯಿಂದ ಪ್ರಾಣಶಬ್ದವೂ ಇಂದ್ರಾದಿ ಪರವಾದರೂ ಹಿಂದಿನ ಅಧಿಕರಣದಲ್ಲಿ ಗೌಣೀವೃತ್ತಿಯಿಂದ ವಿಷ್ಣುಪರವಾಗಬಹುದು ಎಂಬ ನಾಲ್ಕನೆಯ ಪಕ್ಷವನ್ನು ನಿರಾಕರಿಸಲು 'ನಚ' ಎಂಬ ನಾಲ್ಕನೇ ಪಕ್ಷವನ್ನು ''ನಚ ವಾಕ್ಯದ್ವಯಶ್ಚ'' ಎಂಬ ಮಾತಿನಿಂದಲೇ ನಿರಾಕರಿಸುತ್ತಿದ್ದಾರೆ. ನೀವು ನೀಡಿದ ಪೂರ್ವಮೀಮಾಂಸಾ ದೃಷ್ಟಾಂತವೇ ವಿಷಮವಾಗಿದೆ. ಅದು ಹೀಗೆ -

ಕ್ರಿಯಾಭಿಧಾನಂ ತತ್ ಶ್ರುತಾವನ್ಯತ್ರ ವಿಧಿಪ್ರದೇಶಸ್ಯಾತ್ (೭-೩-೧)

ಈ ಅಧಿಕರಣದಲ್ಲಿ ಮಾಡಿದ ವಿಚಾರ ಹೀಗಿದೆ - ಕುಂಡಪಾಯಿನ ಎಂಬ ಸತ್ರ ವಿಶೇಷದಲ್ಲಿ 'ಮಾಸಮಗ್ನಿಹೋತ್ರಂ ಜುಹೋತಿ' ಎಂಬ ವಾಕ್ಯವು ಶ್ರುತವಾಗಿದೆ. ನಿತ್ಯಾಗ್ನಿಹೋತ್ರದಲ್ಲಿ ಪ್ರಯೋಗಿಸುವ ಅಗ್ನಿಹೋತ್ರ ಶಬ್ದವನ್ನು ಮಾಸಾಗ್ನಿಹೋತ್ರದಲ್ಲಿ ಬಳಸಿದ್ದಾರೆ. ಇದರಿಂದ ಇಲ್ಲಿರುವ ಅಗ್ನಿಹೋತ್ರ ಶಬ್ದವು ನಿತ್ಯಾಗ್ನಿಹೋತ್ರದ ಧರ್ಮಗಳನ್ನು ಅತಿದೇಶ ಮಾಡುತ್ತಿದೆಯೋ ಇಲ್ಲವೋ? ಎಂದು ಸಂಶಯ.

ಪೂರ್ವಪಕ್ಷ - ಅತಿದೇಶವನ್ನು ಮಾಡಬೇಕಾಗಿಲ್ಲ. ನಿತ್ಯಾಗ್ನಿಹೋತ್ರಪ್ರಕರಣದಲ್ಲಿಯೂ 'ಅಗ್ನಿಹೋತ್ರಂ ಜುಹೋತಿ' ಎಂಬುದಾಗಿ 'ಜುಹೋತಿ' ಎಂಬ ಪದವನ್ನು ಬಳಸಿದ್ದಾರೆ. ಮಾಸಾಗ್ನಿಹೋತ್ರ ಪ್ರಕರಣದಲ್ಲಿಯೂ 'ಮಾಸಂ ಅಗ್ನಿಹೋತ್ರಂ ಜುಹೋತಿ' ಎಂಬುದಾಗಿ 'ಜುಹೋತಿ' ಎಂಬ ಪದವನ್ನು ಬಳಸಿದ್ದಾರೆ. ಹೀಗೆ ಎರಡೂ ಕಡೆಯೂ 'ಜುಹೋತಿ' ಪದವು ಸಮಾನವಾಗಿ ಶ್ರುತವಾಗಿದೆ. 'ಸಾಮಾನಾಧಿಕರಣ್ಯೇನ ಜುಹೋತಿ' ಪದವನ್ನು ನಿರ್ದೇಶಿಸಿದ್ದರಿಂದ ನಿತ್ಯಾಗ್ನಿಹೋತ್ರಕ್ಕೂ ಮತ್ತು ಮಾಸಾಗ್ನಿಹೋತ್ರಕ್ಕೂ ಅಗ್ನಿಹೋತ್ರಪದವು ಸಾಮಧೇಯವಾಗಿದೆ. ಆದ್ದರಿಂದ ಎರಡೂಕಡೆ ಶಬ್ದವು ಮುಖ್ಯವಾಗಿಯೇ ಇರುವುದರಿಂದ ಧರ್ಮಗಳ ಅತಿದೇಶವನ್ನು ಮಾಡುವ ಅವಶ್ಯಕತೆ ಇಲ್ಲ. ಗೌಣೀವೃತ್ತಿಯನ್ನು ಆಶ್ರಯಿಸಿದರೆ ಮಾತ್ರ ಅತಿದೇಶವನ್ನು ಮಾಡಬೇಕಾಗುತ್ತದೆ. ಉದಾಹರಣೆ - 'ಸಿಂಹೋ ದೇವದತ್ತಃ' ಎಂದು ಗೌಣವಾಗಿ ಏಕೆ ಪ್ರಯೋಗಿಸುವುದೆಂದರೆ ಸಿಂಹದಲ್ಲಿರುವ ಶೌರ್ಯಾದಿಗುಣಗಳನ್ನು ದೇವದತ್ತನಲ್ಲಿ ಅತಿದೇಶ ಮಾಡುವುದಕ್ಕಾಗಿ. ಅದರಂತೆ ಇಲ್ಲಿಯೂ ಅಗ್ನಿಹೋತ್ರಶಬ್ದವು ಗೌಣವಾಗಿದ್ದಲ್ಲಿ ಅತಿದೇಶ ಮಾಡುವ ಅವಶ್ಯಕತೆ ಇರುತ್ತಿತ್ತು.

ಸಿದ್ಧಾಂತ - ಅಗ್ನಿಹೋತ್ರಶಬ್ದಕ್ಕೆ ನಿತ್ಯಾಗ್ನಿಹೋತ್ರ ಮತ್ತು ಮಾಸಾಗ್ನಿಹೋತ್ರದಲ್ಲಿ ಶಕ್ತಿಕಲ್ಪನೆ ಮಾಡುವುದು ಅನ್ಯಾಯ. ಒಂದು ಅರ್ಥದಲ್ಲಿ ಮುಖ್ಯಾರ್ಥವನ್ನು ಹೇಳಿ, ಇನ್ನೊಂದು ಅರ್ಥದಲ್ಲಿ ಗೌಣಾರ್ಥವನ್ನು ಹೇಳಲು ಬರುವಾಗ ಎರಡೂ ಕಡೆ ಶಕ್ತಿಯನ್ನು ಏಕೆ ಕಲ್ಪಿಸಬೇಕು? ಮತ್ತು ನಿತ್ಯಾಗ್ನಿಹೋತ್ರದಲ್ಲಿ 'ಅಗ್ನಯೇ ಹೋತ್ರಂ ಅಸ್ಮಿನ್' ಎಂಬುದಾಗಿ ಅಗ್ನಿಹೋತ್ರ ಶಬ್ದದ ಪ್ರವೃತ್ತಿನಿಮಿತ್ತವು ನಿತ್ಯಾಗ್ನಿಹೋತ್ರದಲ್ಲಿಯೇ ಅಗ್ನಿಹೋತ್ರಶಬ್ದಕ್ಕೆ ಮುಖ್ಯಾರ್ಥವನ್ನು ಮಾಡಬೇಕು. ಮಾಸಾಗ್ನಿಹೋತ್ರದಲ್ಲಿ ಅಮುಖ್ಯವೃತ್ತಿಯನ್ನೇ ಹೇಳಬೇಕು. ಹಾಗಾದರೆ ಗೌಣೀವೃತ್ತಿಯನ್ನು ಏಕೆ ಮಾಡಬೇಕು? ಎಂದು ಪ್ರಶ್ನೆ ಬರಬಹುದು. ನಿತ್ಯಾಗ್ನಿಹೋತ್ರವನ್ನು ಹೇಗೆ ಆಚರಿಸುತ್ತೇವೋ ಆದರಂತೆ ಮಾಸಾಗ್ನಿಹೋತ್ರವನ್ನು ಆಚರಿಸಬೇಕು. ಆಂದರೆ ನಿತ್ಯಾಗ್ನಿಹೋತ್ರದಲ್ಲಿರುವ ಧರ್ಮಗಳನ್ನು ಅತಿದೇಶ ಮಾಡುವುದಕ್ಕೋಸ್ಕರ ಹೀಗೆ ಗೌಣಪ್ರಯೋಗವನ್ನು ಅನೇಕ ಕಡೆ ಮಾಡುತ್ತಾರೆ.

ನಿತ್ಯಾಗ್ನಿಹೋತ್ರ ಮತ್ತು ಮಾಸಾಗ್ನಿಹೋತ್ರ ಇವುಗಳ ಪ್ರಕರಣ ಭಿನ್ನಭಿನ್ನವಾದ್ದರಿಂದ ಇವುಗಳಿಗೂ ಪರಸ್ಪರ ಭೇದವಿದೆಯೆಂದು ಎರಡನೆಯ ಅಧ್ಯಾಯದಲ್ಲಿ ನಿಶ್ಚಯ ಮಾಡಿದ್ದಾಗಿದೆ. ಆದ್ದರಿಂದ ಮಾಸಾಗ್ನಿಹೋತ್ರದಲ್ಲಿ ಪ್ರವೃತ್ತಿನಿಮಿತ್ತವು ಇಲ್ಲದ ಕಾರಣ ಮತ್ತು ಅನೇಕ ಅರ್ಥಗಳನ್ನು ಕಲ್ಪಿಸುವುದು ಅನ್ಯಾಯವಾದ್ದರಿಂದ ಗೌಣಾರ್ಥವನ್ನು ಮಾಡಬೇಕು. ಹೀಗೆ ಪ್ರವೃತ್ತಿನಿಮಿತ್ತಾಭಾವ ಮತ್ತು ಅನೇಕಾರ್ಥಸ್ಯ ಅನ್ಯಾಯತ್ವ ಎಂಬೆರಡು ಬಾಧಕಗಳಿರುವುದರಿಂದ ಗೌಣಾರ್ಥವನ್ನು ಹೇಗೆ ಮಾಡುತ್ತೇವೋ; ಆದರಂತೆ ಪ್ರಕೃತ ಪ್ರಾಣಶಬ್ದಕ್ಕೆ ವಿಷ್ಣುವಿನಲ್ಲಿ ಗೌಣಾರ್ಥವನ್ನು ಹೇಳಲು ಯಾವುದೇ ಬಾಧಕಗಳಿರುವುದಿಲ್ಲ. ಹೊರತಾಗಿ ಏಕಾರ್ಥತ್ವ ಮತ್ತು ಮುಖ್ಯವೃತ್ತಿತ್ವವೇ ಇರುತ್ತದೆ.

ಹೀಗೆ ಎರಡು ವಾಕ್ಯಗಳಲ್ಲಿರುವ ಪ್ರಾಣ ಎಂಬ ಶಬ್ದಕ್ಕೆ ಮುಖ್ಯವೃತ್ತಿಯಿಂದ ಒಂದೇ ಅರ್ಥವನ್ನು ಹೇಳಲು ಏನೂ ಬಾಧಕವಿಲ್ಲದ್ದರಿಂದಲೇ ಶ್ರೀಮದಾಚಾರ್ಯರು ಅನುವ್ಯಾಖ್ಯಾನದಲ್ಲಿ "ಬಾಹುಲ್ಯಾತ್ ಶ್ರುತಿಲಿಂಗಯೋಃ। ಅನ್ಯಸ್ಯ ಮುಖ್ಯವಾಚ್ಯತ್ವಂ ಇತಿ ತನ್ಮಾತ್ರಗಸ್ಯ ಹಿ" ಎಂದು ಹೇಳಿದ್ದಾರೆ. ಆಚಾರ್ಯರ ಈ ಮಾತನ್ನು ಪೂರ್ವಪಕ್ಷದಲ್ಲಿಯೂ ಅನುಸಂಧಾನ ಮಾಡಿಕೊಳ್ಳಬೇಕು.

ಗುರುರಾಜೀಯಮ್ – ಸಿದ್ಧಾನ್ತಿನೇತಿ ಹೇತುಗರ್ಭವಿಶೇಷಣಮ್ । ತಥಾತ್ವೇ ತದುಕ್ತಗುಣಾಲಾಭೇನ ಸಮನ್ವಯಕಥನವೈಯರ್ಥ್ಯ ಸ್ಯಾದಿತಿ ಭಾವಃ । ಯಾವಜ್ಜೀವಕಾಗ್ನಿಹೋತ್ರೇऽಗ್ನಿಹೋತ್ರಶಬ್ದಸ್ಯ ಮುಖ್ಯತ್ವೇಪಿ ಮಾಸಾಗ್ನಿಹೋತ್ರೇऽಮುಖ್ಯತ್ವವತ್ ಪ್ರಾಣಶಬ್ದಸ್ಯಾಪಿ ಮುಖ್ಯಪ್ರಾಣೇ ಮುಖ್ಯತ್ವೇಪಿ ವಿಷ್ಣಾವಮುಖ್ಯತ್ವ-ಸ್ಯೈವ ನ್ಯಾಯ್ಯತ್ವಾತ್ಕಥಮನೇಕಾರ್ಥತ್ವಮನ್ಯಾಯ್ಯಮಿತ್ಯತೊ ವೈಷಮ್ಯೇಣ ಪರಿಹರತಿ – ನಚೇತಿ ॥ ತತ್ರ ತಚ್ಛೈತ್ವಂ ಪ್ರಾಣ ಇತ್ಯತ್ರೇತ್ಯರ್ಥಃ ।

## ಸಾರ

ಈ ಅಧಿಕರಣದಲ್ಲಿ ಪ್ರಾಣಶಬ್ದವು ಇಂದ್ರನಲ್ಲಿ ಮುಖ್ಯವಾಗಿದೆ. ಹಿಂದಿನ ಅಧಿಕರಣದಲ್ಲಿ ವಿಷ್ಣುವಿನಲ್ಲಿ ಗೌಣವಾಗಿದೆ ಎಂದು ಹೇಳಬಹುದಲ್ಲವೇ? ಎಂಬ ಶಂಕೆಗೂ ಈಗ ಅವಕಾಶವಿಲ್ಲ. ಸಿದ್ಧಾಂತಿಯಾದವನಿಗೆ ಇದು

ಅಭಿಮತವೇ ಆಗಿಲ್ಲ. ಆದರಂತೆ ಇಂದ್ರ ಹಾಗೂ ವಿಷ್ಣು ಇಬ್ಬರಲ್ಲಿಯೂ ಮುಖ್ಯಾರ್ಥವನ್ನು ಹೇಳೋಣವೇ? ಎಂಬ ಶಂಕೆಯನ್ನು ಈಗ ನಿರಾಕರಿಸಿದಂತಾಯಿತು.

ಬೇರೆ ಮಾರ್ಗವಿಲ್ಲದಾಗ ಮಾತ್ರ ಒಂದೇ ಶಬ್ದಕ್ಕೆ ಅನೇಕಾರ್ಥವನ್ನು ಹೇಳಬಹುದು. ಆದರೆ ಏನೂ ತೊಂದರೆಯಿಲ್ಲದಿದ್ದಾಗ ಎರಡರ್ಥ ಹೇಳುವುದು ತಪ್ಪಾಗುತ್ತದೆ. ಐತರೇಯದಲ್ಲಿ ಮುಖ್ಯವೃತ್ತಿಯಿಂದ ದೇವೇಂದ್ರನು ಪ್ರತಿಪಾದ್ಯನು. ತೈತ್ತಿರೀಯದಲ್ಲಿ ವಿಷ್ಣು ಗೌಣವೃತ್ತಿಯಿಂದ ಪ್ರತಿಪಾದ್ಯನು ಎಂಬ ಶಂಕೆಯೂ ಸಹ ತಪ್ಪು.

ಬಾಧಕವಿದ್ದಾಗ ಮಾತ್ರ ಮುಖ್ಯಾರ್ಥವನ್ನು ಬಿಟ್ಟು ಗೌಣವೃತ್ತಿಯನ್ನು ಆಶ್ರಯಿಸಬೇಕು. ಆದರೆ ಇಂದ್ರಶಬ್ದಕ್ಕೆ ವಿಷ್ಣುಪರತ್ವವನ್ನು ಒಪ್ಪಿದಾಗ ಯಾವುದೇ ಬಾಧಕಗಳಿರುವುದಿಲ್ಲ. ಆದ್ದರಿಂದ ಯಾವುದೇ ಪ್ರಕಾರದಿಂದಲೂ ಈ ಅಧಿಕರಣದ ಪೂರ್ವಪಕ್ಷದ ಫಲವನ್ನು ಹೇಳಿದ್ದು ಅಸಾಧುವೆಂದು ಶಂಕಿಸಲಾಗದು.

* * * *

## ಪೂರ್ವಪಕ್ಷದ ಫಲಸಮರ್ಥನೆ

ತಾತ್ಪರ್ಯಚನ್ದ್ರಿಕಾ

**नच तत्र श्रीपतित्वादिलिङ्गात् प्राणशब्दस्य विष्ण्वर्थत्वे निश्चितेऽत्रापि तदर्थतेति विपरीतं किं न स्यादिति शङ्क्यम्, प्राणसंवादोत्क्रमणप्रवेशादीनां बहुत्वात्, श्रुत्यनुगृहीतत्वात्, साक्षात्प्राणविशेषणत्वश्रवणाच्च । श्रीपतित्वादिलिङ्गानां तु वैपरीत्यात् । पूर्वस्याविष्णुत्वशङ्कामात्रेण विष्णुत्वनिश्चयाक्षेपसम्भवात् । अत एव टीकायां शङ्कपदप्रयोगः । अन्यथा ''प्राचीनप्राणोऽप्यन्य एव स्यात्'' ।**

ಶಂಕೆ - ಹಿಂದಿನ ಪ್ರಾಣಾಧಿಕರಣದಲ್ಲಿ ಶ್ರೀಪತಿತ್ವ ಮೊದಲಾದ ಲಿಂಗಗಳ ಬಲದಿಂದ ಪ್ರಾಣಶಬ್ದವು ವಿಷ್ಣುಪರವೆಂದು ನಿರ್ಣಯವಾಯಿತು. ಆದರ ಬಲದಿಂದ ಈ ಅಧಿಕರಣದಲ್ಲಿಯೂ ಸಹ ಪ್ರಾಣಶಬ್ದವು ವಿಷ್ಣುಪರವೆಂದು ವಿಪರೀತವಾಗಿ ಏಕೆ ಹೇಳಬಾರದು?

ಸಮಾಧಾನ : ಹೀಗೆ ಶಂಕಿಸಬಾರದು. ಇಲ್ಲಿ ಹೇಳುತ್ತಿರುವ ಲಿಂಗಗಳು ಬಲಿಷ್ಠವಾಗಿವೆ. ಏಕೆಂದರೆ ಪ್ರಾಣಸಂವಾದ, ಉತ್ಕ್ರಮಣಪ್ರವೇಶ, ಮಹಾವ್ರತಯಾಜಿತ್ವ ಹೀಗೆ ಅನೇಕ ಲಿಂಗಗಳು ಮುಖ್ಯ-ವಾಯುವಿನಲ್ಲಿ ಪ್ರಸಿದ್ಧವಾಗಿವೆ. ಇವುಗಳಿಗೆ ಶ್ರುತಿಯ ಅನುಗ್ರಹವೂ ಇದೆ. ಅಷ್ಟೇ ಅಲ್ಲದೆ ಈ ಎಲ್ಲಾ ಲಿಂಗಗಳು ನೇರವಾಗಿ ಪ್ರಾಣನಲ್ಲಿಯೇ ವಿಶೇಷಣವಾಗಿ ಕೇಳಿಸುತ್ತಿವೆ. ಆದರೆ ಹಿಂದಿನ ಪ್ರಾಣಾಧಿ-ಕರಣದಲ್ಲಿ ಹೇಳಲ್ಪಟ್ಟ ಶ್ರೀಪತಿತ್ವಾದಿಲಿಂಗಾದಿಗಳಲ್ಲಿ ಬಹುತ್ವ, ಶ್ರುತ್ಯನುಗೃಹೀತತ್ವ, ಸಾಕ್ಷಾತ್ ಪ್ರಾಣವಿಶೇಷಣತ್ವ ಮೊದಲಾದವುಗಳಲ್ಲಿ ಯಾವುದೇ ಒಂದೂ ಸಹ ಇರುವುದಿಲ್ಲ.

ಆದ್ದರಿಂದ ಹಿಂದಿನ ಅಧಿಕರಣದ ಪ್ರಾಣಶಬ್ದದಿಂದ ವಿಷ್ಣುವೂ ಪ್ರತಿಪಾದ್ಯನಾಗಲಾರ ಎಂದು ಶಂಕಿಸುವುದರಿಂದಷ್ಟೇ ವಿಷ್ಣುತ್ವ ನಿಶ್ಚಯವನ್ನು ಆಕ್ಷೇಪಿಸಿದಂತಾಗುತ್ತದೆ. ಆದ್ದರಿಂದಲೇ ಟೀಕೆಯಲ್ಲಿ

'ಶಂಕಾ' ಎಂಬ ಪದವನ್ನು ಪ್ರಯೋಗಿಸಿದ್ದಾರೆ. ಇಲ್ಲದಿದ್ದಲ್ಲಿ ಮುಂದಿನ ಅಧಿಕರಣದಲ್ಲಿ ''ಪ್ರಾಚೀನ-ಪ್ರಾಣೋऽಪ್ಯನ್ಯ ಏವ ಸ್ಯಾತ್ । ಏಕಪ್ರಕರಣಾತ್ವಾತ್'' ಎಂಬ ಟೀಕೆಯಲ್ಲಿ 'ಏವ' ಕಾರವನ್ನು ಹೇಳುವಂತೆ ಇಲ್ಲಿಯೂ ಸಹ 'ಏವ'ಕಾರವನ್ನು ಬಳಸಬೇಕಿತ್ತು.

ಕಠಿಣಪದಾರ್ಥ

ತತ್ರ = ಹಿಂದಿನ ಪ್ರಾಣಾಧಿಕರಣದಲ್ಲಿ, ಅತ್ರಾಪಿ = ಈ ಅಧಿಕರಣ- ದಲ್ಲಿಯೂ, ತದರ್ಥತಾ = ವಿಷ್ಣುಪರತ್ವವು, ಶ್ರುತ್ಯನುಗ್ರಹೀತತ್ವಾತ್ = ಇಂದ್ರನು ಪ್ರಯೋಗಿಸುವ ಅಹಂ ಎಂಬ ಶ್ರುತಿಯ ಅನುಗ್ರಹವಿರುವುದರಿಂದ, ವೈಪರೀತ್ಯಾತ್ = ಬಹುತ್ವಾದಿಗಳು ಇರುವುದಿಲ್ಲವೆಂಬ ವೈಪರೀತ್ಯದಿಂದ, ಅನ್ಯಥಾ = ಶಂಕಾಪದವನ್ನು ಸಂಶಯವು ಬರುತ್ತದೆಂಬ ಅಭಿಪ್ರಾಯವು ಇಲ್ಲದಿದ್ದಲ್ಲಿ.

**ಪ್ರಕಾಶಃ – ಪಞ್ಚಮಂ ಪಕ್ಷಮನೂದ್ಯ ನಿರಸ್ಯತಿ – ನಚ ತತ್ರೇತಿ ॥ ಪ್ರಾಣೇತಿ ॥ ''ಅಹಮುಕ್ಥಮಸ್ಮಿ''** ಇತಿ ಪ್ರಾಣಶಬ್ದಿತೇನ್ದ್ರಿಯೈಸ್ಸಂವಾದಃ, **''ತತ್ಪ್ರಾಣೇ ಉತ್ಕ್ರಾನ್ತೇऽಪಥತ, ತತ್ಪ್ರಾಣೇ ಪ್ರಪನ್ನ ಉದತಿಷ್ಠತ್''** ಇತ್ಯುತ್ಕ್ರಮಣಪ್ರವೇಶೌ ತನ್ನಿಮಿತ್ತದೇಹಪಾತೋತ್ಥಾನಶತಸಂವತ್ಸರತ್ವಪ್ರಾಣವಂಶತ್ವಾದೀನಾಮಿತ್ಯರ್ಥಃ ॥ **ಶ್ರುತೀತಿ ॥** ಇನ್ದ್ರೇಣ **ಪ್ರಯುಕ್ತಾಹಮಾದಿಶ್ರುತೀತ್ಯರ್ಥಃ ॥ ವೈಪರೀತ್ಯಾದಿತಿ ॥** ಅಬಹುತ್ವಾತ್, ಪ್ರಾಣಶ್ರುತೇಃ ಸನ್ದಿಗ್ಧತ್ವೇನಾನುಗ್ರಾಹಕಶ್ರುತ್ಯನ್ತರಾಭಾವಾತ್, **''ಅಜ್ಞಸ್ಸಮ್ಭೂತಃ''** ಇತ್ಯನುವಾಕಾನ್ತರಗತತ್ವೇನ ಸಾಕ್ಷಾದಶ್ರವಣಾದಿತ್ಯರ್ಥಃ । ನನು ತತ್ರಾಪಿ – **ತಮೇವ ಮೃತ್ಯುಮಮೃತಂ ತಮಾಹುಸ್ತಂ ಭರ್ತಾರಂ ತಮು ಗೋತ್ತಾರಮಾಹುಃ । 'ಯಸ್ತದ್ವೇದ' 'ಬ್ರಹ್ಮಣೈಷ ರಮತೇ' 'ಹ್ರೀಶ್ಚ ತೇ ಲಕ್ಷ್ಮೀಶ್ಚ ಪತ್ನ್ಯೌ'** ಇತ್ಯಾದಿನಾಮಪಿ ಬಹೂನಾಂ ಬ್ರಹ್ಮಲಿಙ್ಗಾನಾಂ ಸತ್ತ್ವಾತ್, **'ಹರಿಂ ಹರನ್ತಮನುಯನ್ತಿ ದೇವಾಃ'** ಇತಿ ಹರಿಶ್ರುತ್ಯಾऽನುಗೃಹೀತತ್ವಾತ್, ಅಮೃತತ್ವಾದೀನಾಂ ತದ್ವಿಶೇಷಣತ್ವಶ್ರವಣಾಚ್ಚ ಕಥಂ ವೈಪರೀತ್ಯಮಿತಿ ಚೇತ್ಸತ್ಯಂ, ಭಾಷ್ಯೋಕ್ತಶ್ರೀಪತಿತ್ವಾದಿಸ್ಪಷ್ಟಲಿಙ್ಗಾಭಿಪ್ರಾಯೇಣೈವಮುಕ್ತಿಃ, ತಸ್ಯ ಚೋಕ್ತವೈಪರೀತ್ಯಸಮ್ಭವಾದಿತಿ ।

ಯದ್ವಾ – ಏತದರುಚ್ಯೈವ ಟೀಕೋಕ್ತಂ ಪಕ್ಷಾನ್ತರಮಾಹ – **ಪೂರ್ವಸ್ಯೇತಿ ॥** ಮाऽಸ್ತು ನಾಮ ಪ್ರಾಚೀನोऽಪೀನ್ದ್ರಾದಿರೇವೇತ್ಯವಧಾರಣಂ, ತಥाऽप್ಯತ್ರತ್ಯಪ್ರಾಣಶಬ್ದಸ್ಯೇನ್ದ್ರಾದಿತ್ವೇ ಪ್ರಾಚೀನोऽಪೀನ್ದ್ರಾದಿರ್ವಾ ವಿಷ್ಣುರ್ವೇತಿ ಸಂಶಯಸಮ್ಭವಾತ್ ತನ್ಮಾತ್ರೇಣ ವಿಷ್ಣುರೇವೇತ್ಯವಧಾರಣಾಕ್ಷೇಪಸಮ್ಭವಾದಿತ್ಯರ್ಥಃ । **ಶङ್ಕೇತಿ** । ತಸ್ಯ ವಿಷ್ಣೋರನ್ಯತ್ವೇ ಪ್ರಾಚೀನोऽಪ್ಯನ್ಯ ಇತಿ ಶಙ್ಕಾ ಸ್ಯಾದಿತಿ ಶಙ್ಕಾಪದಪ್ರಯೋಗ ಇತ್ಯರ್ಥಃ । ಜ್ಞಾಪಕತ್ವಂ ವ್ಯನಕ್ತಿ – **ಅನ್ಯಥೇತಿ ॥**

ವಿವರಣೆ - ಹಿಂದಿನ ಪ್ರಾಣಾಧಿಕರಣದಲ್ಲಿ ಶ್ರೀಪತಿತ್ವ ಮೊದಲಾದ ವಿಷ್ಣುಲಿಂಗಗಳಿಂದ ವಿಷ್ಣುಪರತ್ವವು ನಿಶ್ಚಿತವಾದ್ದರಿಂದ ಇಲ್ಲಿಯೂ ಸಹ ವಿಷ್ಣುಪರತ್ವವನ್ನೇ ಹೇಳಬೇಕೆಂಬ ಐದನೇ ಪಕ್ಷವನ್ನು ಅನುವಾದ ಮಾಡಿ ನಿರಾಸ ಮಾಡುತ್ತಿದ್ದಾರೆ 'ನಚ ತತ್ರ' ಇತ್ಯಾದಿಯಾಗಿ.

''ಅಹಮುಕ್ಥಮಸ್ಮಿ'' ಎಂಬಲ್ಲಿ ಪ್ರಾಣಶಬ್ದದಿಂದ ಪ್ರತಿಪಾದ್ಯವಾದ ಇಂದ್ರಿಯಗಳಿಂದ ಸಂವಾದವು ಕೇಳಿಸುತ್ತಿದೆ. ''ತತ್ಪ್ರಾಣೇ ಉತ್ಕ್ರಾಂತೇऽಪದ್ಯತ, ತತ್ಪ್ರಾಣೇ ಪ್ರಪನ್ನ ಉದತಿಷ್ಠತ್'' ಎಂಬಲ್ಲಿ ಪ್ರಾಣನ ಉತ್ಕ್ರಮಣ ಹಾಗೂ ಪ್ರವೇಶಗಳು ತನ್ನಿಮಿತ್ತಿಕವಾಗಿ ದೇಹದ ಬೀಳುವಿಕೆ ಮತ್ತು ಏಳುವಿಕೆಗಳು ಕೇಳಿಸುತ್ತಿವೆ. ಆದರಂತೆ ಶತಸಂವತ್ಸರತ್ವ ಪ್ರಾಣವಂಶತ್ವಾದಿ ಧರ್ಮಗಳೂ ಸಹ ಕೇಳಿಸುತ್ತಿವೆ. ಹೀಗೆ ಅನೇಕ ಧರ್ಮಗಳು ಇರುವುದಲ್ಲದೇ ಶ್ರುತ್ಯನುಗ್ರಹವೂ ಇದೆ. ಅಂದರೆ ಇಂದ್ರನಿಂದ ಪ್ರಯೋಗಿಸಲ್ಪಟ್ಟ 'ಅಹಂ' ಎಂಬ ಶ್ರುತಿಯು 'ಅಸ್ಮಿ' ಎಂಬ ಉತ್ತಮಪುರುಷಶ್ರುತಿಯೂ ಅನುಗ್ರಾಹಕವಾಗಿದೆ ಎಂದರ್ಥ. ಆದರೆ ಹಿಂದಿನ ಪ್ರಾಣಾಧಿಕರಣದಲ್ಲಿ ಹೇಳಲ್ಪಟ್ಟ ಲಿಂಗಗಳೂ ಅನೇಕವಾಗಿರುವುದಿಲ್ಲ, ಮತ್ತು ಪ್ರಾಣಶ್ರುತಿಯು ಸಂದಿಗ್ಧವಾಗಿರುವುದರಿಂದ ಅದಕ್ಕೆ ಅನುಗ್ರಾಹಕವಾಗಿ ಮತ್ತೊಂದು ಶ್ರುತಿಯೂ ಇರುವುದಿಲ್ಲ. ಅಷ್ಟೇ ಅಲ್ಲದೆ 'ಅದ್ಭ್ಯಸ್ಸಂಭೂತಃ' ಎಂಬ ಮತ್ತೊಂದು ಅನುವಾಕದಲ್ಲಿ ಶ್ರೀಪತಿತ್ವಾದಿಲಿಂಗಗಳಿರುವುದರಿಂದ ನೇರವಾಗಿ ಪ್ರಾಣನಲ್ಲಿ ವಿಶೇಷಣವೂ ಆಗಿರುವುದಿಲ್ಲ ಎಂಬ ವೈಪರೀತ್ಯವನ್ನು ಗಮನಿಸಬೇಕು.

ಶಂಕೆ - ವೈಪರೀತ್ಯವನ್ನು ಹೇಗೆ ಹೇಳುತ್ತೀರಿ? ಏಕೆಂದರೆ ಅಲ್ಲಿಯೂ ''ತಮೇವ ಮೃತ್ಯುಮಮೃತಂ ತಮಾಹುಸ್ತಂ ಭರ್ತಾರಂ ತಮು ಗೋಪ್ತಾರಮಾಹುಃ । ''ಯಸ್ತದ್ವೇದ'' ''ಬ್ರಹ್ಮಣೈಷ ರಮತೇ'' । ''ಶ್ರೀಶ್ಚ ತೇ ಲಕ್ಷ್ಮೀಶ್ಚ ಪತ್ನ್ಯೌ'' ಇತ್ಯಾದಿಯಾಗಿ ಅಮೃತತ್ವ, ಭರ್ತೃತ್ವ, ಗೋಪ್ತೃತ್ವ ಮೊದಲಾದ ಅನೇಕ ಬ್ರಹ್ಮನ ಲಿಂಗಗಳು ಕೇಳಿಸುತ್ತಿವೆ. ಮತ್ತು 'ಹರಿಂ ಹರಂತಮನುಯಾಂತಿ ದೇವಾಃ' ಎಂಬಲ್ಲಿ ಹರಿಶ್ರುತಿಯು ಅನುಗ್ರಾಹಕವಾಗಿ ಶ್ರುತವಾಗಿದೆ. ಅಷ್ಟೇ ಅಲ್ಲದೆ ಶ್ರೀಪತಿತ್ವ ಲಿಂಗವು ಪ್ರಾಣನಲ್ಲಿ ನೇರವಾಗಿ ವಿಶೇಷಣವಾಗದಿದ್ದರೂ ಅಮೃತತ್ವ ಮೊದಲಾದ ಲಿಂಗಗಳು ಪ್ರಾಣನಲ್ಲಿ ನೇರವಾಗಿ ವಿಶೇಷಣವಾಗಿ ಕೇಳಿಸುತ್ತಿವೆ. ಹೀಗಿರುವಾಗ ವೈಪರೀತ್ಯವನ್ನು ನೀವು ಹೇಗೆ ಹೇಳುತ್ತೀರಿ?

ಸಮಾಧಾನ - ಹೌದು, ಆದರೆ ಭಾಷ್ಯದಲ್ಲಿ ಹೇಳಲ್ಪಟ್ಟ ಶ್ರೀಪತಿತ್ವ ಮೊದಲಾದ ಸ್ಪಷ್ಟವಾದ ಬ್ರಹ್ಮಲಿಂಗಗಳನ್ನು ವಿವಕ್ಷಿಸಿ ಗ್ರಂಥಕಾರರು ಹೀಗೆ ಹೇಳಿದ್ದಾರೆ - ಅಂದರೆ ನೀವು ಹೇಳಿದಂತೆ ಅಮೃತತ್ವ ಮೊದಲಾದ ಲಿಂಗಗಳಲ್ಲಿ ಬಹುತ್ವ ಸಾಕ್ಷಾದ್‌ವಿಶೇಷಣತ್ವಾದಿಗಳು ಇರಬಹುದು. ಆದರೆ ಭಾಷ್ಯದಲ್ಲಿ ಹೇಳಲ್ಪಟ್ಟ ಶ್ರೀಪತಿತ್ವಾದಿಲಿಂಗಗಳಿಗೆ ಬಹುತ್ವವಾಗಲಿ ಸಾಕ್ಷಾದ್‌ವಿಶೇಷಣತ್ವಾದಿಗಳಾಗಲಿ ಇರುವುದಿಲ್ಲವಾದ್ದರಿಂದ ವೈಪರೀತ್ಯವನ್ನು ಹೇಳಬಹುದು. ಅಮೃತತ್ವ ಮೊದಲಾದ ಲಿಂಗಗಳು ಇಂದ್ರಾದಿಗಳಲ್ಲಿಯೂ ಹೇಳಲು ಬರಬಹುದಾದ್ದರಿಂದ ಅವುಗಳು ಅಸ್ಪಷ್ಟ ಬ್ರಹ್ಮಲಿಂಗಗಳೆಂಬ ಸೂಕ್ಷ್ಮವನ್ನು ಗಮನಿಸಬೇಕು.

ಅಥವಾ ಒಟ್ಟಾರೆ ಬ್ರಹ್ಮಲಿಂಗಗಳಿಗೆ ಬಹುತ್ವಾದಿಗಳಿಲ್ಲವೆಂಬ ವೈಪರೀತ್ಯವನ್ನು ಹೇಳಲು ಬರುವುದಿಲ್ಲ ಎಂಬ ಅಸ್ವಾರಸ್ಯವಿರುವುದರಿಂದಲೇ ಗ್ರಂಥಕಾರರು ಟೀಕೆಯಲ್ಲಿ ಹೇಳಿದ ಮತ್ತೊಂದು ಪಕ್ಷವನ್ನು 'ಪೂರ್ವಸ್ಯ' ಇತ್ಯಾದಿ ವಾಕ್ಯದಿಂದ ಹೇಳುತ್ತಿದ್ದಾರೆ. ಈ ವಾಕ್ಯದ ಅಭಿಪ್ರಾಯ ಹೀಗಿದೆ - ಹಿಂದಿನ ಅಧಿಕರಣದ ಪ್ರಾಣನು ಇಂದ್ರಾದಿಗಳೇ ಆಗಿದ್ದಾರೆಂಬ ಅವಧಾರಣವೂ ಬೇಡ. ಆದರೆ ಈ ಅಧಿಕರಣದಲ್ಲಿ ಪ್ರಾಣಶಬ್ದ ಇಂದ್ರಾದಿಪರವೆಂದು ಹೇಳಿದಾಗ ಹಿಂದಿನ ಅಧಿಕರಣದ ಪ್ರಾಣನು

ಇಂದ್ರಾದಿಗಳೋ? ಅಥವಾ ವಿಷ್ಣುವೋ? ಎಂಬ ಸಂಶಯ ಬರುತ್ತದೆ. ತನ್ಮಾತ್ರದಿಂದ ''ವಿಷ್ಣುರೇವ'' ಎಂಬ ಅವಧಾರಣವನ್ನು ಆಕ್ಷೇಪಿಸಬಹುದೆಂದು ಅಭಿಪ್ರಾಯ. ಆದ್ದರಿಂದಲೇ ಟೀಕೆಯಲ್ಲಿ ''ತಸ್ಯ ವಿಷ್ಣೋರನ್ಯತ್ವೇ ಪ್ರಾಚೀನೋಽಪ್ಯನ್ಯ ಇತಿ ಶಂಕಾ ಸ್ಯಾತ್'' ಎಂಬುದಾಗಿ ಶಂಕಾಪದವನ್ನು ಬಳಸಿದ್ದಾರೆ. ಇಲ್ಲದಿದ್ದಲ್ಲಿ 'ಅನ್ಯೈವಸ್ಯಾತ್' ಎಂದು ಹೇಳುತ್ತಿದ್ದರು.

**ಗುರುರಾಜೀಯಮ್ – ವೈಪರೀತ್ಯಾದಿತಿ ॥ ಬಹುತ್ವಾಭಾವಾತ್ ಶ್ರುತ್ಯನನುಗೃಹೀತತ್ವಾತ್ ಸಾಕ್ಷಾದ್ ವಿಷ್ಣುವಿಶೇಷಣತ್ವಾಶ್ರವಣಾಚ್ಚೇತಿ ವಿಪರೀತತ್ವಾದಿತ್ಯರ್ಥಃ । ಅಸ್ತು ವಾऽತ್ರತ್ಯಪ್ರಾಣಶಬ್ದಸ್ಯ ಮುಖ್ಯಪ್ರಾಣಪರತ್ವೇ ತದ್ವೈತ್ವಮಿತ್ಯತ್ರಾಪಿ ಪ್ರಾಣಸ್ಯ ಮುಖ್ಯತ್ವಮೇವೇತಿವತ್ ತದ್ವೈತ್ವಮಿತ್ಯತ್ರ ಶ್ರೀಪತಿತ್ವಾದಿಲಿಙ್ಗೇನ ಪ್ರಾಣಶಬ್ದಸ್ಯ ವಿಷ್ಣುಪರತ್ವ ಐತರೇಯೇऽಪಿ ಪ್ರಾಣಶಬ್ದಸ್ಯ ವಿಷ್ಣುಪರತ್ವಮಿತಿ ವೈಪರೀತ್ಯಮ್ । ತಥಾಪಿ ನ ದೋಷಃ । ನ ಚೈವಂ ಪೂರ್ವೋಕ್ತಃ ಪ್ರಾಣೋ ಮುಖ್ಯ ಏವೇತ್ಯಾಕ್ಷೇಪಾನುಪಪತ್ತಿಃ । ಶಙ್ಕಮಾತ್ರೇಣಾಪಿ ವಿಷ್ಣುಪರತ್ವನಿಶ್ಚಯಾಕ್ಷೇಪಸಮ್ಭವಾದಿತ್ಯಾಹ – ಪೂರ್ವಸ್ಯೇತಿ ॥**

**ಯದ್ವಾ – ಅನುವಾಕಾದ್ವಯಸ್ಯೋಕ್ತರೀತ್ಯೈಕವಾಕ್ಯತ್ವಾಚ್ಚಿಙ್ಗಾನಾಮಪಿ ನಿರವಕಾಶತ್ವಾತ್ ಕಥಂ-ವೈಪರೀತ್ಯಮಿತ್ಯಾಶಙ್ಕ್ಯಾಭ್ಯುಪಗಮವಾದೇನಾಹ – ಪೂರ್ವಸ್ಯೇತಿ ॥ ಟೀಕಾಯಾಮಿತಿ ॥ ತಸ್ಯ ವಿಷ್ಣೋರನ್ಯತ್ವೇ ಪ್ರಾಚೀನೋಪ್ಯನ್ಯ ಇತಿ ಶಙ್ಕಾ ಸ್ಯಾದಿತಿ ಸಙ್ಗತಿಟೀಕಾಯಾಮಿತ್ಯರ್ಥಃ ।**

## ಸಾರ

ಹಿಂದಿನ ಪ್ರಾಣಾಧಿಕರಣದಲ್ಲಿ ವಿಷ್ಣುವಿನಲ್ಲಿ ಅಸಾಧಾರಣವಾದ ಶ್ರೀಪತಿತ್ವ ಮೊದಲಾದ ಲಿಂಗಗಳಿಂದ ಪ್ರಾಣಶಬ್ದಕ್ಕೆ ವಿಷ್ಣುಪರತ್ವವನ್ನು ಸಮರ್ಥಿಸಿದ್ದಾಗಿದೆ. ಆದರ ಬಲದಿಂದಲೇ ಇಲ್ಲಿಯೂ ಸಹ ವಿಷ್ಣುಪರತ್ವವನ್ನು ಹೇಳಲು ಬರುವಾಗ ಪೂರ್ವಪಕ್ಷದ ಆಕ್ಷೇಪದ ಫಲವನ್ನು ಶ್ರೀಮದಾಚಾರ್ಯರು ಹೇಳಿದ್ದು ಹೇಗೆ ಸರಿ? ಎಂಬ ಆಂತಿಮವಾದ ವಿಕಲ್ಪಕ್ಕೂ ಈಗ ಅವಕಾಶವಿಲ್ಲ. ಏಕೆಂದರೆ ಈ ಅಧಿಕರಣದಲ್ಲಿ ಹೇಳುತ್ತಿರುವ ಲಿಂಗಗಳಲ್ಲಿ ಬಹುತ್ವ, ಶ್ರುತ್ಯನುಗೃಹೀತತ್ವ, ಸಾಕ್ಷಾದ್‌ಪ್ರಾಣವಿಶೇಷಣತ್ವ ಮೊದಲಾದ ಧರ್ಮಗಳಿವೆ, ಆದರೆ ಹಿಂದಿನ ಪ್ರಾಣಾಧಿಕರಣದಲ್ಲಿ ಹೇಳಲ್ಪಟ್ಟ ಶ್ರೀಪತಿತ್ವಾದಿ ಲಿಂಗಗಳಲ್ಲಿ ಈ ಯಾವಧರ್ಮಗಳೂ ಇರುವುದಿಲ್ಲ. ಆದ್ದರಿಂದ ಹಿಂದಿನ ಅಧಿಕರಣದ ಸಿದ್ಧಾಂತಯುಕ್ತಿಯಿಂದ ಈ ಅಧಿಕರಣದ ಪೂರ್ವಪಕ್ಷವು ಪರಿಹಾರವಾಗುವುದಿಲ್ಲ.

ಅಥವಾ ಅಲ್ಲಿಯೂ ಸಹ ಬ್ರಹ್ಮನ ಲಿಂಗಗಳಲ್ಲಿ ಬಹುತ್ವಾದಿಗಳು ಇವೆಯೆಂದು ವಿವಕ್ಷಿಸಿದರೂ ತಪ್ಪಿಲ್ಲ. ಈ ಅಧಿಕರಣದಲ್ಲಿ ಪ್ರಾಣಶಬ್ದವು ಇಂದ್ರಾದಿಪರವಾಗಿದೆ ಎಂದು ಪೂರ್ವಪಕ್ಷ ಮಾಡಿದಾಗ ಹಿಂದಿನ ಅಧಿಕರಣದ ಪ್ರಾಣನು ವಿಷ್ಣುವೋ ಅಥವಾ ಇಂದ್ರಾದಿಗಳೋ? ಎಂಬ ಸಂಶಯವಂತೂ ಬಂದೇ ಬರುತ್ತದೆ. ಆವಾಗ ವಿಷ್ಣುವೊಬ್ಬನೇ ಪ್ರಾಣಶಬ್ದವಾಚ್ಯನೆಂಬ ಅವಧಾರಣವೂ ಕೂಡುವುದಿಲ್ಲ. ಈ ಅವಧಾರಣವನ್ನು ಮಾತ್ರ ಶ್ರೀಮದಾಚಾರ್ಯರು ಇಲ್ಲಿ ಪೂರ್ವಪಕ್ಷಫಲವನ್ನಾಗಿ ಆಕ್ಷೇಪಿಸಿದ್ದಾರೆಂದು ಭಾವಿಸಬೇಕು.

* * * *

## ಸಿದ್ಧಾಂತದ ಫಲಸಮರ್ಥನೆ

तात्पर्यचन्द्रिका

**एकप्रकरणत्वात् इत्युत्तराधिकरणप्रयोजनटीकायामिव अत्रापि 'अन्य एव स्यात्' इत्यवक्ष्यत् । एकस्य निर्णयस्य अनेकन्यायसाध्यत्वेऽपि निर्णयविरोधित्तत्पूर्वपक्षन्यायाभासनिरासकन्यायसाध्यावान्तरनिर्णयभेदश्च युक्तः, यथा प्राभाकरमते चोदनाप्रामाण्यनिर्णयस्य आद्याध्यायमात्रसाध्यत्वेऽपि अवान्तरनिर्णयभेदादधिकरणभेदः, यथा वा मतान्तरे ''ऊर्जं पशूनाप्नोति ''न स पापं श्लोकं शृणोति'' इत्यादेरर्थवादत्वनिर्णयस्य औदुम्बराधिकरणपर्णमय्यधिकरणसाध्यत्वेऽप्यवान्तरनिर्णयभेदादधिकरणभेदस्तद्वत् । तस्मात्प्रयोजनोक्तिर्युक्ता । एवमन्यत्राऽपि पूर्वोक्ताक्षेपेण प्रयोजनोक्तिरुपपाद्या ।**

ಸಿದ್ಧಾಂತದ ಫಲ - ವಿಷ್ಣುವೇ ಪ್ರಾಣಶಬ್ದದಿಂದ ವಾಚ್ಯನೆಂಬ ಒಂದು ನಿರ್ಣಯವು ಅನೇಕ ನ್ಯಾಯದಿಂದ ಸಿದ್ಧವಾಗುತ್ತದೆ. ಆದರೂ ಸಹ ನಿರ್ಣಯಕ್ಕೆ ವಿರೋಧಿಯಾದ ಆಯಾ ಪೂರ್ವಪಕ್ಷ ನ್ಯಾಯಾಭಾಸಗಳನ್ನು ನಿರಾಸ ಮಾಡುವ ಅನೇಕ ಸಿದ್ಧಾಂತ ನ್ಯಾಯಗಳೆಂಬ ಅವಾಂತರ ನಿರ್ಣಯದ ಭೇದದಿಂದ ಅಧಿಕರಣಭೇದವು ಯುಕ್ತವಾಗುತ್ತದೆ.

ಉದಾಹರಣೆ - ಪ್ರಾಭಾಕರ ಮತದಲ್ಲಿ ಚೋದನಪ್ರಾಮಾಣ್ಯವನ್ನು ಮೊದಲನೆಯ ಅಧ್ಯಾಯವು ಸಂಪೂರ್ಣವಾಗಿ ಸಾಧಿಸುತ್ತದೆ. ಆದರೂ ಸಹ ಅವಾಂತರವಾದ ಸಿದ್ಧಾಂತ ನಿರ್ಣಯಗಳಲ್ಲಿ ಭೇದವಿರುವುದರಿಂದ ಅಧಿಕರಣಗಳ ಭೇದವನ್ನು ಒಪ್ಪಿದ್ದಾರೆ.

ಭಾಟ್ಟಮತದ ಉದಾಹರಣೆ - ''ಊರ್ಜಂ ಪಶೂನಾಪ್ನೋತಿ'' ''ನ ಸ ಪಾಪಂ ಶ್ಲೋಕಂ ಶೃಣೋತಿ'' ಎಂಬುದಕ್ಕೆ ಅರ್ಥವಾದತ್ವವನ್ನು ನಿರ್ಣಯಿಸುತ್ತಾರೆ. ಈ ನಿರ್ಣಯವು ಔದುಂಬರಾಧಿಕರಣ ಮತ್ತು ಪರ್ಣಮಯ್ಯಧಿಕರಣದಿಂದ ಸಾಧ್ಯವಾಗಿದೆ. ಆದರೂ ಸಹ ಅವಾಂತರನಿರ್ಣಯದಲ್ಲಿ ಭೇದವಿರುವುದರಿಂದ ಅಧಿಕರಣಭೇದವನ್ನು ಒಪ್ಪಿದ್ದಾರೆ. ಹಾಗಾಗಿ ಪೂರ್ವಪಕ್ಷ ಹಾಗೂ ಸಿದ್ಧಾಂತಗಳ ಪ್ರಯೋಜನವನ್ನು ಹೇಳಿದ್ದು ಯುಕ್ತವೇ ಆಗಿದೆ. ಇದರಂತೆ ಬೇರೆ ಅಧಿಕರಣಗಳಲ್ಲಿಯೂ ಹಿಂದಿನ ಅಧಿ-ಕರಣದ ಸಿದ್ಧಾಂತದ ನ್ಯಾಯವನ್ನು ಆಕ್ಷೇಪಿಸಿ ಪ್ರಯೋಜನವನ್ನು ಹೇಳಿದಾಗ ಈ ಅಭಿಪ್ರಾಯವನ್ನೇ ಅಲ್ಲಿಯೂ ತಿಳಿಯಬೇಕು.

ಕಠಿಣಪದಾರ್ಥ

ಏಕಸ್ಯ ನಿರ್ಣಯಸ್ಯ = ವಿಷ್ಣುವೇ ಪ್ರಾಣಶಬ್ದವಾಚ್ಯನೆಂಬ ನಿರ್ಣಯಕ್ಕೆ, ಅವಾಂತರ ನಿರ್ಣಯಭೇದಾತ್ = ಜೀವನಹೇತುತ್ವ ಮತ್ತು ಅನ್ಯಗತತ್ವೇನಪ್ರಸಿದ್ಧ ಲಿಂಗಗಳಿಗೆ

ಅಂತರ್ಯಾಮಿಗತತ್ವ ಮೊದಲಾದ ಅವಾಂತರನಿರ್ಣಯಗಳಲ್ಲಿ ಭೇದವಿರುವುದರಿಂದ, ಊರ್ಜಂ = ಭೋಗಿಸಲು ಯೋಗ್ಯವಾದ, ಪಾಪಂ ಶ್ಲೋಕಂ = ಕೆಟ್ಟ ಕೀರ್ತಿಯನ್ನು, ನ ಶ್ರುಣೋತಿ = ಕೇಳುವುದಿಲ್ಲ, ಅನ್ಯತ್ರಾಪಿ = ಬೇರೆ ಅಧಿಕರಣಗಳಲ್ಲಿಯೂ

**ಪ್ರಕಾಶಃ – ನನ್ವೇವಂ ''ತದ್ವೈ ತ್ವಂ ಪ್ರಾಣಃ'' ಇತ್ಯತ್ರ ಪ್ರಾಣೋ ವಿಷ್ಣುರನ್ಯೋ ವೇತಿ ಸಂಶಯಸ್ಯಾತ್ರತ್ಯಸಿದ್ಧಾನ್ತನ್ಯಾಯೇನೋತ್ಪನ್ನನಿರ್ಣಯೇನೈವ ನಿರಾಸಸಮ್ಭವೇನ ತತ್ರತ್ಯಸಿದ್ಧಾನ್ತೋ ವ್ಯರ್ಥಃ । ಅತೋ ನ ತಸ್ಯ ವಿಷ್ಣುತ್ವಾವಧಾರಣಮೇತತ್ಸಿದ್ಧಾನ್ತಫಲಂ ಭವಿತುಮರ್ಹತೀತ್ಯತಃ ಸಿದ್ಧಾನ್ತಪ್ರಯೋಜನಂ ಚ ಸಾಧಯತಿ – ಏಕಸ್ಯೇತಿ ॥ ಅವಾನ್ತರಾನೇರ್ಣಯೇತಿ ॥ ಪ್ರಾಣಪದಪ್ರವೃತ್ತಿನಿಮಿತ್ತಸ್ಯ ಜೀವನಹೇತುತ್ವಸ್ಯ ವಿಷ್ಣುಗತತ್ವನಿರ್ಣಯಸ್ತತ್ರತ್ಯನ್ಯಾಯಸಾಧ್ಯಃ, ಅನ್ಯಗತತ್ವೇನ ಪ್ರಸಿದ್ಧಲಿಙ್ಗಾನಾಂ ಅನ್ತರ್ಯಾಮಿಗತತ್ವನಿರ್ಣಯೋऽತ್ರತ್ಯನ್ಯಾಯಸಾಧ್ಯಃ, ಉಭಾಭ್ಯಾಂ ಸರ್ವತ್ರ ಪ್ರಾಣಶಬ್ದಾರ್ಥೋ ವಿಷ್ಣುರೇವೇತಿ ನಿರ್ಣಯಃ ಸಾಧ್ಯ ಇತ್ಯರ್ಥಃ ॥ ಯಥಾ ಪ್ರಾಭಾಕರಮತ ಇತಿ ॥**

ವಿವರಣೆ - ಇಲ್ಲಿಯ ತನಕ ಪೂರ್ವಪಕ್ಷದ ಫಲವನ್ನು ಸಾಧಿಸಿದ್ದಾಯಿತು. ಹಿಂದಿನ ಪ್ರಾಣಾಧಿಕರಣದ ಸಿದ್ಧಾಂತವನ್ನು ಆಕ್ಷೇಪಿಸುವುದು ಪೂರ್ವಪಕ್ಷದ ಫಲವಾದಂತೆ ಆದಕ್ಕೆ ಸಮಾಧಾನ ಹೇಳುವುದು ಸಿದ್ಧಾಂತದ ಫಲವಾಗಿದೆ.

ಶಂಕೆ - ''ತದ್ವೈ ತ್ವಂ ಪ್ರಾಣಃ'' ಎಂಬಲ್ಲಿ ಪ್ರಾಣಶಬ್ದವಾಚ್ಯನಾದವನು ವಿಷ್ಣುವೋ ಅಥವಾ ಬೇರೆಯವನೋ? ಎಂಬ ಸಂಶಯವನ್ನು ಈ ಅಧಿಕರಣದ ಸಿದ್ಧಾಂತ ನ್ಯಾಯದಿಂದಲೇ ಪರಿಹರಿಸಲು ಬರುವಾಗ ಹಿಂದಿನ ಪ್ರಾಣಾಧಿಕರಣದ ಸಿದ್ಧಾಂತವು ವ್ಯರ್ಥವಲ್ಲವೇ? ಆದ್ದರಿಂದ ಹಿಂದಿನ ಪ್ರಾಣಾಧಿಕರಣದ ವಿಷ್ಣುತ್ವಾವಧಾರಣೆ ಎಂಬ ಸಿದ್ಧಾಂತ ಸ್ಥಾಪನೆಯು ಈ ಅಧಿಕರಣದ ಸಿದ್ಧಾಂತ ಫಲವಾಗಲು ಸಾಧ್ಯವಿಲ್ಲ.

ಸಮಾಧಾನ - ಈ ಶಂಕೆಯನ್ನು ಪರಿಹರಿಸಲು ಸಿದ್ಧಾಂತಪ್ರಯೋಜನವನ್ನು ಸಾಧಿಸುತ್ತಿದ್ದಾರೆ 'ಏಕಸ್ಯ' ಇತ್ಯಾದಿ ವಾಕ್ಯದಿಂದ. ವಿಷ್ಣುವೇ ಪ್ರಾಣಶಬ್ದವಾಚ್ಯನೆಂಬುದು ಮಹಾಸಿದ್ಧಾಂತ. ಈ ಸಿದ್ಧಾಂತವು ಎರಡು ಅಧಿಕರಣಗಳಿಂದಲೇ ಸಿದ್ಧವಾಗುತ್ತದೆ. ಆದರೆ ಅವಾಂತರ ಸಿದ್ಧಾಂತದ ನಿರ್ಣಯಗಳು ಮಾತ್ರ ಭಿನ್ನಭಿನ್ನವಾಗಿವೆ. ಪ್ರಾಣಪದಪ್ರವೃತ್ತಿನಿಮಿತ್ತವಾದ ಜೀವನಹೇತುತ್ವವು ವಿಷ್ಣುವಿನಲ್ಲೇ ಇದೆ ಎಂಬ ನಿರ್ಣಯವು ಹಿಂದಿನ ಪ್ರಾಣಾಧಿಕರಣದ ಸಿದ್ಧಾಂತನ್ಯಾಯದಿಂದ ಸಾಧ್ಯವಾಗಿದೆ. ಅನ್ಯಗತತ್ವೇನ ಪ್ರಸಿದ್ಧವಾದ ಲಿಂಗಗಳನ್ನು ಅಂತರ್ಯಾಮಿಗತವೆಂಬ ನಿರ್ಣಯವು ಈ ಅಧಿಕರಣದ ಸಿದ್ಧಾಂತ ನ್ಯಾಯದಿಂದ ಸಾಧ್ಯವಾಗಿದೆ. ಈ ಅವಾಂತರ ನಿರ್ಣಯಗಳ ಸ್ಥಾಪನೆಗಾಗಿ ಬೇರೆ ಬೇರೆ ಅಧಿಕರಣಗಳು ಹೊರಟಿವೆ. ಆದರೆ ಎರಡೂ ಅಧಿಕರಣಗಳಿಗೆ ಪ್ರಾಣಶಬ್ದದಿಂದ ವಿಷ್ಣುವೇ ವಾಚ್ಯನೆಂಬುದು ಪರಮನಿರ್ಣಯವಾಗಿದೆ. ಈ ವಿಷಯದಲ್ಲಿ ಪ್ರಾಭಾಕರಮತದ ಹಾಗೂ ಭಾಟ್ಟಮತದ ಉದಾಹರಣೆಯನ್ನು ನೀಡುತ್ತಿದ್ದಾರೆ 'ಯಥಾ ಪ್ರಾಭಾಕರಮತೇ' ಇತ್ಯಾದಿಯಾಗಿ.

**ಪ್ರಕಾಶಃ** – ಭಟ್ಟಮತೇ ಶ್ರುತಿಸ್ಮೃತ್ಯಾದಿಸಾಧಾರಣ್ಯೇನ ಧರ್ಮಪ್ರಮಾಣವಿಚಾರಃ ಆದ್ಯಾಧ್ಯಾಯಸ್ಯಾರ್ಥಃ, ಪ್ರಾಭಾಕರಮತೇ ಚೋದನಾಪ್ರಾಮಾಣ್ಯಮಾತ್ರವಿಚಾರ ಇತಿ ವ್ಯವಸ್ಥಾ । ತತ್ರ ''ಚೋದನಾಲಕ್ಷಣೋऽರ್ಥೋ ಧರ್ಮಃ'' ಇತ್ಯುಕ್ತಚೋದನಾಪ್ರಾಮಾಣ್ಯ ನಿರ್ಣಯಸ್ಯಾಧ್ಯಾಯಾರ್ಥತ್ವೇऽಪ್ಯರ್ಥವಾದಾಧಿಕರಣೇ ಸಾಪೇಕ್ಷತ್ವಮೂಲಕಾಪ್ರಾಮಾಣ್ಯಶಙ್ಕಾನಿರಾಸಪೂರ್ವಕಃ ಪ್ರಾಮಾಣ್ಯನಿರ್ಣಯಃ ವಿಧಿವನ್ನಿಗದಾಧಿಕರಣೇ ತು ಏಕೇನ ವಾಕ್ಯೇನ ಔದುಮ್ಬರತ್ವಸಮ್ಬನ್ಧಫಲಸಮ್ಬನ್ಧರೂಪಸಮ್ಬನ್ಧದ್ವಯವಿಧಾನಾಶಕ್ತಿಮೂಲಕಾಪ್ರಾಮಾಣ್ಯಶಙ್ಕಾನಿರಾಸಪೂರ್ವಕಸ್ತನ್ನಿರ್ಣಯ ಇತ್ಯವಾನ್ತರನಿರ್ಣಯಭೇದಾದ್ಯಥाऽधಿಕರಣಭೇದಸ್ತಥೇತ್ಯರ್ಥಃ॥

ಪೂರ್ವಮೀಮಾಂಸೆಯ ಪ್ರಥಮಾಧ್ಯಾಯವು ಶ್ರುತಿಸ್ಮೃತಿಸಾಧಾರಣವಾದ ಧರ್ಮಪ್ರಾಮಾಣ್ಯವನ್ನು ವಿಚಾರ ಮಾಡುತ್ತಿದೆಯೆಂದು ಭಾಟ್ಟರು ಹೇಳುತ್ತಾರೆ. ಆದರೆ ಪ್ರಾಭಾಕರರು ಕೇವಲ ಚೋದನಪ್ರಮಾಣ್ಯ ವಿಚಾರವನ್ನು ಮಾಡುತ್ತಿದೆಯೆನ್ನುತ್ತಾರೆ. ಹೀಗೆ ಪ್ರಾಭಾಕರಮತವು ಭಾಟ್ಟಮತಕ್ಕಿಂತ ವಿಲಕ್ಷಣವಾದ್ದರಿಂದ ಗ್ರಂಥಕಾರರು 'ಪ್ರಭಾಕರಮತೇ' ಎಂದು ಹೇಳಿದ್ದಾರೆ.

'ಚೋದನಾಲಕ್ಷಣೋऽರ್ಥೋ ಧರ್ಮಃ' ಎಂಬಲ್ಲಿ ಹೇಳಿದ ಚೋದನಾಪ್ರಾಮಾಣ್ಯನಿರ್ಣಯವು ಸಂಪೂರ್ಣ ಪ್ರಥಮಾಧ್ಯಾಯದ ಉದ್ದೇಶವಾಗಿದೆ. ಆದರೂ ಸಹ ಅರ್ಥವಾದಾಧಿಕರಣದಲ್ಲಿ ಸಾಪೇಕ್ಷತ್ವ ಮೂಲಕವಾದ ಅಪ್ರಾಮಾಣ್ಯಶಂಕೆಯನ್ನು ನಿರಾಸ ಮಾಡುವ ಮೂಲಕ ಪ್ರಾಮಾಣ್ಯವನ್ನು ನಿರ್ಣಯಿಸಿದ್ದಾರೆ. ವಾಯುದೇವತೆಯು ಕ್ಷಿಪ್ರವಾಗಿ ಫಲವನ್ನು ಕೊಡುತ್ತಾನಾದ್ದರಿಂದ ವಾಯುದೇವತಾಕಾಯಾಗವನ್ನು ಮಾಡಿರಿ ಎಂದು ಹೇಳಿದಾಗ ಹೇತುಸಾಪೇಕ್ಷತ್ವೇನ ಅಪ್ರಾಮಾಣ್ಯ ಶಂಕೆಯನ್ನು ಅರ್ಥವಾದಾಧಿಕರಣದಲ್ಲಿ ಮಾಡಿದ್ದಾರೆ. ಆದರೆ ವಿಧಿವನ್ನಿಗದಾಧಿಕರಣದಲ್ಲಿ ಇದೇ ಸಿದ್ಧಾಂತ ನ್ಯಾಯವು ಇರುವುದಿಲ್ಲ. ಹೊರತಾಗಿ ''ಔದುಂಬರಮಯಃ ಯೂಪೋ ಭವತಿ'' ಎಂಬ ಒಂದೇ ವಾಕ್ಯದಿಂದ ಔದುಂಬರತ್ವ ಸಂಬಂಧವನ್ನು ಹೇಳುತ್ತಿದ್ದಾರೆ. ಮತ್ತು ಫಲಸಂಬಂಧವನ್ನು ಹೇಳುತ್ತಿದ್ದಾರೆ. ಒಂದೇ ವಾಕ್ಯ ಎರಡೂ ಅರ್ಥವನ್ನು ಹೇಳಿದರೆ ವಾಕ್ಯದ್ವಯದೋಷ ಬರುವುದರಿಂದ ಅಪ್ರಾಮಾಣ್ಯಶಂಕೆ ಬರುತ್ತದೆ. ಈ ಶಂಕೆಯನ್ನು ನಿರಾಕರಿಸುವ ಮೂಲಕವಾಗಿ ''ಔದುಂಬರೋ ಯೂಪೋ ಭವತಿ'' ಎಂಬ ವಾಕ್ಯಕ್ಕೆ ಪ್ರಾಮಾಣ್ಯವನ್ನು ನಿರ್ಣಯಿಸುತ್ತಾರೆ. ಹೀಗೆ ಅವಾಂತರ ನಿರ್ಣಯಗಳಲ್ಲಿ ಭೇದವಿರುವುದರಿಂದ ಅಧಿಕರಣ ಭೇದವನ್ನು ಪ್ರಾಭಾಕರರು ಒಪ್ಪಿದ್ದಾರೆ. ಆದರಂತೆ ಪ್ರಕೃತದಲ್ಲಿಯೂ ಎರಡೂ ಪ್ರಾಣಾಧಿಕರಣಗಳಿಗೆ ಭೇದವನ್ನು ಹೇಳಬಹುದು.

**ಪ್ರಕಾಶಃ – ಯಥಾ ವೇತಿ ॥** ಭಟ್ಟಮತ ಇತ್ಯರ್ಥಃ । ಆದ್ಯೇ ''ವಿಧಿರ್ವಾ ಸ್ಯಾದಪೂರ್ವತ್ವಾದ್ಭಾದಮಾತ್ರಂ ह्यनर्थकम्'' ಇತಿ ದ್ವಿತೀಯಪಾದೀಯದ್ವಿತೀಯಾಧಿಕರಣೇ ''ಔದುಮ್ಬರೋ ಯೂಪೋ ಭವತ್ಯೂರ್ವಾ ಉದುಮ್ಬರಃ ಊರ್ಕ್ ಪಶವಃ ಊರ್ಜೈವಾಸ್ಮಾ ಊರ್ಜಂ ಪಶೂನಾಪ್ನೋತಿ ಊರ್ಜೋऽವರುಧ್ಯೈ'' ಇತಿ ವಾಕ್ಯಮುದಾಹೃತ್ಯ 'ಊರ್ಜೋऽವರುಧ್ಯೈ' ಇತ್ಯೇತದೌದುಮ್ಬರತಾಯಾಃ ಫಲಸಮರ್ಪಕಮುತಾರ್ಥವಾದ ಇತಿ ಸಂಶಯೇ, ''ಊರ್ಜೋऽವರುಧ್ಯೈ'' ಇತಿ ತಾದರ್ಥ್ಯೇ ಚತುರ್ಥೀ ಶ್ರುತ್ಯೋರ್ಕ್ತಾನ್ವಿತಾನಾಂ ಪಶೂನಾಂ ಸಾಧ್ಯತ್ವಾವಗಮಾತ್ಸಾಧ್ಯಸ್ಯ

साधनापेक्षत्वात्सन्निहितमौदुम्बरत्वमसत्यपि विधौ साधनमेवेति फलसमर्पकमेतदिति प्राप्ते,

विध्यभावे उदुम्बरताभवनाक्षिप्तभावनां प्रति सन्निहितत्वेन तस्या एव भाव्यत्वात्फलस्य विप्रकृष्टत्वेनाभाव्यत्वात्तस्यार्थवादत्वमुपेत्यैव विधेरुन्नेयत्वेनार्थवाद एव, न फलसमर्पकं ''उर्जोऽवरुध्यै'' इत्येतदिति सिद्धान्तितम् ।

''विधिर्वा स्यादपूर्वत्वाद्वादमात्रं हृनर्थकं'' (೧-೨-೨)

''ಔದುಂಬರೋ ಯೂಪೋ ಭವತಿ ಊರ್ವಾ ಉದುಂಬರಃ । ಊರ್ಕ್ ಪಶ್ವಃ । ಊರ್ಜೈವಾಸ್ಮಾ ಊರ್ಜಂ ಪಶೂನಾಪ್ನೋತ್ಯೂರ್ಜೋವರುದ್ಧ್ಯೈ'' ಋತ್ವಿಕ್ ಆದವನು ಉದುಂಬರ ವೃಕ್ಷದ (ಹತ್ತಿ ಗಿಡದ) ಯೂಪ ಸ್ತಂಭವನ್ನು ಯಜ್ಞವೇದಿಕೆಯಲ್ಲಿ ಸ್ಥಾಪಿಸಬೇಕು. ಊರ್ಕ್ ಎಂದರೆ ಭೋಗ್ಯವಸ್ತು ವಿಶೇಷ ಎಂದರ್ಥ. ಉದುಂಬರ ವೃಕ್ಷವೂ ಸಹ ಭೋಗ್ಯ ವಸ್ತು ವಿಶೇಷವೇ ಆಗಿದೆ. ಉದುಂಬರ ವೃಕ್ಷದಂತೆ ಪಶುಗಳೂ ಸಹ ಊರ್ಕ್ ಎನಿಸುತ್ತವೆ. ಊರ್ಕ್ ಎನಿಸಿದ ಉದುಂಬರ ಯೂಪಸ್ತಂಭವನ್ನಾಗಿ ಮಾಡಿದಾಗ ಊರ್ಕ್ ಎನಿಸಿದ ಅನೇಕ ಪಶುಗಳನ್ನು ಯಜಮಾನನು ಹೊಂದುತ್ತಾನೆ. ಆದ್ದರಿಂದ ಅನೇಕ ಪಶುಗಳೆಂಬ ಸಂಪತ್ತನ್ನು ಹೊಂದುವುದಕ್ಕಾಗಿ ಔದುಂಬರ ವೃಕ್ಷದ ಯೂಪವನ್ನೇ ಸ್ಥಾಪಿಸಬೇಕು ಎಂದು ಈ ವಾಕ್ಯದ ಅಭಿಪ್ರಾಯ.

---

**विधिर्वा स्यादपूर्वत्वाद्वादमात्रं ॥ १ ॥**

**(लोकवदिति चेत् ॥ २० ॥ न पूर्वत्वात् ॥ २१ ॥ उक्तन्तु वाक्यशेषत्वम् ॥ २२ ॥ विधिश्चानर्थकः कचित्, तस्मात्स्तुतिः प्रतीयेत, तत्सामान्यादितरेषु तथात्वम् ॥ २३ ॥ प्रकरणे सम्भवन्नपकर्षो न कल्पयेत, विध्यानर्थक्यं हि तं प्रति ॥ २४ ॥ विधौ च वाक्यभेदः स्यात् ॥ २५ ॥)**

पूर्वाक्ताऽक्षेपेण पूर्वपक्षप्रवृत्तेराक्षेपिकी **सङ्गतिः** । 'औदुम्बरो यूपरो भवति, ऊर्वा उदुम्बरः, ऊर्क्पश्वः, ऊर्जैवासा उर्जं पशूनाप्नोति, ऊर्जोऽवरुद्धयै' इति वैकृतपशुप्रकरणे श्रुतं वाक्यं **विषयः** । ऊर्क्शब्देनात्यन्तसारभूतः सूक्ष्मोऽन्नरस उच्यते । उदुम्बररूपया ऊर्जा यजमानार्थं अध्वर्युः पशुरूपां ऊर्जमाप्नोति । ततो यूपस्यौदुम्बरत्वमूर्जः सम्पादनाय भवतीत्यर्थः । तत्र ''ऊर्जोऽवरुद्धचा'' इति वाक्यं औदुम्बरत्वरूपसाधनं प्रति फल-समर्पकमुत आप्नोतीत्यन्तवाक्यवदयमप्यर्थवादः इति **सन्देहः** । **पूर्वपक्षस्तु** यदुक्तं पूर्वत्र सर्वार्थवादानां प्राशस्त्यरूपार्थसमर्पणेन विधेयस्तुत्या विध्येकवाक्यत्वं तदयुक्तम् । 'ऊर्जोऽवरूद्धचा' इत्येवमादेः फलसमर्पकत्वसम्भवात् । नच फलवचनस्य लक्षणया स्तावकत्वं युक्तम् । स्वर्गकामादिपदस्यापि तथात्वापत्तेरिति । **सिद्धान्तस्तु** विहितस्य

ಈ ವಾಕ್ಯದಲ್ಲಿರುವ ''ಊರ್ಜೋವರುದ್ಧೈ'' ಎಂಬುದರ ವಿಷಯದಲ್ಲಿ ಸಂಶಯ ಬರುತ್ತದೆ. ಉದುಂಬರ ವೃಕ್ಷಕ್ಕೆ ಫಲಸಮರ್ಪಕವಾಗಿ ಈ ವಾಕ್ಯವು ಹೊರಟಿದೆಯೋ ಅಥವಾ ಊರ್ಜ್ವಾ ಉದುಂಬರಃ, ಊರ್ಕ್ ಪಾರ್ಶ್ವಃ ಎಂಬುದು ಹೇಗೆ ಅರ್ಥವಾದವೋ ಅದರಂತೆ ಊರ್ಜೋವರುದ್ಧೈ ಎಂಬುದೂ ಸಹ ಅರ್ಥವಾದವೋ? ಎಂದು ಸಂಶಯ.

ಪೂರ್ವಪಕ್ಷ - ಊರ್ಜೋವರುದ್ಧೈ ಎಂಬುದು ಫಲಸಮರ್ಪಕವಾಗಿದೆ. ಏಕೆಂದರೆ ಈ ವಾಕ್ಯದಲ್ಲಿ 'ಪಶುಕಾಮಃ' ಇತ್ಯಾದಿ ಪದಗಳು ಕಾಣಿಸುವುದಿಲ್ಲ. ಆದರೆ ತಾದಾರ್ಥ್ಯವಿಷಯಕವಾದ ಚತುರ್ಥೀ ಶ್ರುತಿಯು ಕೇಳಿಸುತ್ತಿದೆ. ಇದರಿಂದ ಊರ್ಕ್ಶಬ್ದಗಳಿಂದ ಪ್ರತಿಪಾದಿತವಾದ ಪಶುಗಳು ಸಾಧ್ಯವೆಂದು ತಿಳಿಯಿತು. ಸಾಧ್ಯವು ಸಾಧನವನ್ನು ಅಪೇಕ್ಷಿಸುವುದರಿಂದ ಸಾಧನದ ಆಕಾಂಕ್ಷೆ ಬರುತ್ತದೆ. ಆವಾಗ ಸನ್ನಿಹಿತವಾದ ಔದುಂಬರತ್ವವನ್ನೇ ಸಾಧನವೆಂದು ಹೇಳಬೇಕು. ವಸ್ತುತಃ ವಿಧಿಪ್ರತ್ಯಯವಿದ್ದರೆ ಮಾತ್ರ ಸಾಧನವೆನ್ನಬೇಕು. ಆದರೂ ಸಹ ಪ್ರಕೃತ ಸಾಧ್ಯಕ್ಕೆ ಸಾಧನಾಕಾಂಕ್ಷೆ ಇರುವುದರಿಂದ ಔದುಂಬರತ್ವವನ್ನು ಸಾಧನವೆನ್ನಬಹುದು. ಆದ್ದರಿಂದ ಊರ್ಜೋವರುದ್ಧೈ ಎಂಬುದು ಫಲಸಮರ್ಪಕವೇ ಆಗಿದೆ.

ಸಿದ್ಧಾಂತ - ಊರ್ಜೋವರುದ್ಧೈ ಎಂಬುದು ಅರ್ಥವಾದವಾಗಿದೆ. ಏಕೆಂದರೆ ಈ ವಾಕ್ಯದಲ್ಲಿ ವಿಧಿಯು ಕೇಳಿಸುತ್ತಿಲ್ಲ. 'ಔದುಂಬರೋ ಯೂಪೋ ಭವತಿ' ಎಂದಷ್ಟೇ ಇದೆ ಹೊರತು 'ಭವೇತ್' ಎಂದಾಗಲೀ, 'ಕುರ್ಯಾತ್' ಎಂದಾಗಲೀ, ವಿಧಾನವನ್ನು ಮಾಡಿರುವುದಿಲ್ಲ. ಒಂದುವೇಳೆ ಹಾಗೆ ವಿಧಾನ ಮಾಡಿದ್ದಲ್ಲಿ ಔದುಂಬರತ್ವವನ್ನು ಸಾಧನವೆನ್ನಬಹುದಿತ್ತು. ಇಲ್ಲಿ ಕೇವಲ ಭವತಿ ಎಂಬುದರಿಂದ ಭವನವನ್ನು ಹೇಳಿದ್ದಾರೆ. ಭವನದಿಂದ ಭಾವನಾವು ಆಕ್ಷಿಪ್ತವಾಗುತ್ತದೆ. ಹೊರತಾಗಿ ನೇರವಾಗಿ ಭಾವನಾವಾಚಕವಾದ 'ಲಿಙ್ಲೋಟ್' ಪ್ರತ್ಯಯಗಳು ಇಲ್ಲಿ ಇರುವುದಿಲ್ಲ. ಆಕ್ಷಿಪ್ತವಾದ ಈ ಭಾವನಾಕ್ಕೆ ಭಾವ್ಯವಾದದ್ದು ಯಾವುದು? ಎಂಬ ಪ್ರಶ್ನೆ ಬಂದರೆ ಪಶುಪ್ರಾಪ್ತಿಯೆಂಬ ಫಲವು ದೂರದಲ್ಲಿರುವುದರಿಂದ ಭಾವನಾದಿಂದ ಆಕ್ಷಿಪ್ತವಾಗುವುದಿಲ್ಲ ಹೊರತಾಗಿ ಯೂಪದ ಔದುಂಬರತ್ವವು ಸನ್ನಿಹಿತವಾದ್ದರಿಂದ ಭಾವ್ಯವಾಗುತ್ತದೆ. ಮತ್ತು ಇಲ್ಲಿ ವಿಧಿಯು ಇರದ ಕಾರಣ ಅರ್ಥವಾದದಿಂದಲೇ ಸಾಧನಸ್ಯೇದಂ ಫಲಸಮರ್ಪಕಂ ವಾಚ್ಯಮ್ । ನ ಚೌದುಮ್ಬರತಾಯಾ ವಿಧಿರಸ್ತಿ । ವಿಧಿಪ್ರತ್ಯಯಸ್ಯಾಶ್ರವಣಾತ್ । ನಚ ಫಲವಚನಪೂರ್ವಮರ್ಥವಾದತ್ವೇನ 'ಭವತಿ' ಇತ್ಯಸ್ಯ ಲೇಟ್ತ್ವರೂಪವಿಧಿತ್ವಂ ಕಲ್ಪಯಿತ್ವಾ, ವಿಹಿತೌದುಮ್ಬರತ್ವರೂಪಸಾಧನಂ ಪ್ರತಿ ಫಲಸಮರ್ಪಕಂ ಭವತ್ವಿತಿ ಯುಕ್ತಮ್ । ಆವೃತ್ತಿರೂಪವಾಕ್ಯಭೇದಪ್ರಸಙ್ಗಾತ್ । ಆಪ್ತೋತ್ಪನ್ತಾರ್ಥವಾದೇನ ವಿಧಿತ್ವಮುನ್ನೀಯ ತತ್ರ ಫಲಾರ್ಪಕಮಿತ್ಯೇದಪಿ ಗೌರವಾದಯುಕ್ತಮ್ । ಕಾಮಪದರಹಿತಮೇವಮಾದಿವಾಕ್ಯಂ ಫಲಾರ್ಪಣಶಕ್ತಂ ನೇತಿ **ದ್ರವ್ಯಗುಣಸಂಸ್ಕಾರಕರ್ಮಸು** ಇತಿ ಚತುರ್ಥೇ ಪರ್ಣಮಧ್ಯಧಿಕರಣೇ ವಕ್ಷ್ಯಮಾಣತ್ವಾಚ್ಚಾಯಮಪ್ಯರ್ಥವಾದ ಏವೇತಿ । **ಫಲನ್ತು** ಪೂರ್ವೋಕ್ತಾರ್ಥಸಮರ್ಥನಂ ವ್ಯಕ್ತಮ್ । **ಸೂತ್ರಾರ್ಥಸ್ತು, ವಾ** ಶಬ್ದೋऽವಧಾರಣೇ । ಊರ್ಕ್ಪ್ರಾಪ್ತಿರೂಪಫಲೇ ಔದುಮ್ಬರತ್ವಾಖ್ಯಸಾಧನವಿಧಿರೇವ ಸ್ಯಾತ್ । ಕುತಃ **ಅಪೂರ್ವತ್ವಾತ್** । ಏವಂ ಹಿ ಅಪೂರ್ವಾರ್ಥೋ ವಿಹಿತೋ ಭವತಿ । ಅನ್ಯಥಾ ಸ್ತುತಿ-**ವಾದಮಾತ್ರಮನರ್ಥಕಮಾಶ್ರಿತಂ ಸ್ಯಾದಿತಿ** ॥ ೧೯ ॥

ಇತಿ ದ್ವಿತೀಯಂ ವಿಧಿವನ್ನಿಗದಾಧಿಕರಣಮ್ ॥ (ಸೂತ್ರಾಣಿ ೧೯-೨೯)

ವಿಧಿಯನ್ನು ಉನ್ನಯನ ಮಾಡಬೇಕಾಗುತ್ತದೆ. ಆದ್ದರಿಂದ ಊರ್ಜೋವರುದ್ಧೈ ಎಂಬುದನ್ನು ಅರ್ಥವಾದವೆಂದು ಅನಿವಾರ್ಯವಾಗಿ ಒಪ್ಪಬೇಕು. ಇಲ್ಲದಿದ್ದರೆ, ವಿಧಿಯನ್ನು ಉನ್ನಯನ ಮಾಡಲು ಸಾಧ್ಯವಾಗದು.

**ಪ್ರಕಾಶಃ** – ತಥಾ ಚತುರ್ಥೆ *''ದ್ರವ್ಯಸಂಸ್ಕಾರಕರ್ಮಸು ಪರಾರ್ಥತ್ವಾತ್ ಫಲಶ್ರುತಿರರ್ಥವಾದಃ''* ಇತಿ ತೃತೀಯಪಾದೀಯಾಧಿಕರಣೇ *''ಯಸ್ಯ ಪರ್ಣಮಯೀ ಜುರ್ಭವತಿ ನ ಸ ಪಾಪಂ ಶ್ಲೋಕಂ ಶೃಣೋತಿ''* ಇತ್ಯುದಾಹೃತ್ಯ, ಪರ್ಣಮಯೀತ್ವಂ ಕ್ರತ್ವರ್ಥಮುತ ಪುರುಷಾರ್ಥಮಥೋಭಯಾರ್ಥಮಿತಿ ಸನ್ದಿಹ್ಯ, ಫಲಶ್ರವಣಾತ್ ಪುರುಷಾರ್ಥಮೇವ, ಯದ್ವಾ – ಕ್ರತ್ವರ್ಥಜಹದ್ದೇಶೇನ ವಿಧಾನಾತ್ ಕ್ರತ್ವರ್ಥಂ, ಫಲಶ್ರವಣಾತ್ ಪುರುಷಾರ್ಥಂ ಚೇತಿ ದಧ್ಯಾದಿವದುಭಯಾರ್ಥಮಿತಿ ದ್ವೈಧಾ ಪೂರ್ವಪಕ್ಷಯಿತ್ವಾ, ಸಂಯೋಗಪೃಥಕ್ತ್ವಾಭಾವೇನ ದಧ್ಯಾದಿವದುಭಯಾರ್ಥತ್ವಾಭಾವಾತ್ ಶೃಣೋತಿ' ಇತಿ ವರ್ತಮಾನಾಪದೇಶೇನ ಅಪಾಪಶ್ಲೋಕಶ್ರವಣಸ್ಯ ಸಾಧ್ಯತ್ವಾಪ್ರತೀತೇಃ ಪುರುಷಾರ್ಥತ್ವಸ್ಯಾಪ್ಯಯೋಗಾತ್ ಕ್ರತ್ವರ್ಥಮೇವ, ಆಪಾಪಶ್ಲೋಕಾಶ್ರವಣಂ ತ್ವರ್ಥವಾದ ಇತಿ ಸಿದ್ಧಾನ್ತಿತಮ್ ।

''ದ್ರವ್ಯಸಂಸ್ಕಾರಕರ್ಮಸು ಪರಾರ್ಥತ್ವಾತ್ ಫಲಶ್ರುತಿರರ್ಥವಾದಃ ಸ್ಯಾತ್'' (೪-೩-೧)[೧]

ಈ ಅಧಿಕರಣದಲ್ಲಿ ಮಾಡಿದ ವಿಚಾರ ಹೀಗಿದೆ. ಯಾವ ಯಜಮಾನನಿಗೆ ಹಂಸಮುಖದಲ್ಲಿರುವ 'ಜುಹೂ' ಎಂಬುದು ಪರ್ಣಮಯವಾಗಿರುತ್ತದೋ ಆಂತಹ ಯಜಮಾನನು ಕೆಟ್ಟ ಕೀರ್ತಿಯನ್ನು ಎಂದೂ ಕೇಳುವುದಿಲ್ಲ ಎಂಬುದಾಗಿ ಅಪಕೀರ್ತಿಯ ಅಭಾವವನ್ನು ಫಲವನ್ನಾಗಿ ಹೇಳಿದ್ದಾರೆ.

ಈ ವಾಕ್ಯವನ್ನು ನೋಡಿದಾಗ 'ಜುಹೂ' ಎಂಬ ಯಜ್ಞಸಾಧನಕ್ಕೆ ಹೇಳಿದ ಪರ್ಣಮಯತ್ವವು ಕ್ರತುವಿಗೋಸ್ಕರ ಹೇಳಲ್ಪಟ್ಟಿದೆಯೋ? ಅಥವಾ ಪುರುಷಾರ್ಥಕ್ಕೋಸ್ಕರ ಹೇಳಲ್ಪಟ್ಟಿದೆಯೋ? ಅಥವಾ ಎರಡೂ ಪ್ರಯೋಜನಕ್ಕೋಸ್ಕರ ಹೇಳಲ್ಪಟ್ಟಿದೆಯೋ? ಎಂದು ಸಂದೇಹ.

ಪೂರ್ವಪಕ್ಷ - ಫಲವು ಸ್ಪಷ್ಟವಾಗಿ ಕೇಳಿಸುತ್ತಿರುವುದರಿಂದ ಅಪಕೀರ್ತಿಯ ಅಭಾವವೆಂಬ ಪುರುಷಾರ್ಥವೇ ಇದರ ಫಲವೆಂದು ಮೊದಲನೆಯ ಪೂರ್ವಪಕ್ಷ. ಅಥವಾ ಕ್ರತುವಿಗೋಸ್ಕರ ಹೇಳಲ್ಪಟ್ಟ ಜುಹೂವನ್ನು ಅನುವಾದ ಮಾಡಿ ಪರ್ಣಮಯತ್ವವನ್ನು ವಿಧಿಸುತ್ತಿರುವುದರಿಂದ ಪರ್ಣಮಯತ್ವವು ಜುಹೂವಿಗೆ ಶೇಷವಾಯಿತು. ಆದ್ದರಿಂದ ಜುಹೂ ಎಂಬುದು ಹೇಗೆ ಕ್ರತು ಪ್ರಯೋಜನವುಳ್ಳದ್ದೋ ಪರ್ಣಮಯತ್ವವೂ ಸಹ ಕ್ರತುಪ್ರಯೋಜನವುಳ್ಳದ್ದೇ ಆಗಿದೆ. ಆದ್ದರಿಂದ ಪರ್ಣಮಯತ್ವವು ಕ್ರತ್ವತ್ವರ್ಥಕವಾಗಿದೆ. ಫಲವು ಸ್ಪಷ್ಟವಾಗಿ ಕೇಳಿಸುತ್ತಿರುವುದರಿಂದ ಪುರುಷಾರ್ಥಕ್ಕೋಸ್ಕರವೂ ಪರ್ಣಮಯತ್ವವೂ ಹೇಳಲ್ಪಟ್ಟಿದೆ ಎಂದಾಯಿತು. ಉದಾಹರಣೆ - 'ದಧ್ನಾ ಇಂದ್ರಿಯಕಾಮಸ್ಯ ಜುಹುಯಾತ್' ಎಂಬಲ್ಲಿ 'ದಧ್ನಾ ಜುಹುಯಾತ್' ಎಂದು ಹೇಳಿದ್ದರಿಂದ 'ದಧಿ' ಎಂಬುದು ಕ್ರತುಪ್ರಯೋಜನವುಳ್ಳದ್ದೆಂದು ತಿಳಿಯುತ್ತದೆ. ಇಂದ್ರಿಯಕಾಮಸ್ಯ ಎಂದು ಹೇಳಿದ್ದರಿಂದ

ಪುರುಷಾರ್ಥಪ್ರಯೋಜನವುಳ್ಳದ್ದೂ ಆಯಿತು. ಹೀಗೆ ಒಂದೇ ದಧಿಯು ಕ್ರತುಪ್ರಯೋಜನವುಳ್ಳದ್ದೂ, ಪುರುಷಾರ್ಥಪ್ರಯೋಜನವುಳ್ಳದ್ದೂ ಹೇಗೆ ಆಗಿದೆಯೋ ಅದರಂತೆ ಇಲ್ಲಿಯೂ ಸಹ ಪರ್ಣಮಯತ್ವವು ಎರಡುವಿಧ ಪ್ರಯೋಜನವುಳ್ಳದ್ದಾಗಬಹುದು.

---

**೧.ಭಾಟ್ಟಸಙ್ಗಹಃ – ದ್ರವ್ಯಸಂಸ್ಕಾರಕರ್ಮಸು ಪರಾರ್ಥತ್ವಾತ್ಫಲಶ್ರುತಿರರ್ಥವಾದಃ ಸ್ಯಾತ್ ॥ ೧ ॥**
**(ಉತ್ಪತ್ತೇಶ್ಚಾತತ್ಪ್ರಧಾನನ್ತವಾತ್ ॥ ೨ ॥ ಫಲನ್ತು ತತ್ಪ್ರಧಾನಾಯಾಮ್ ॥ ೩ ॥)**

''ಯಸ್ಯ ಪರ್ಣಮಯೀ ಜುಹೂರ್ಭವತಿ ನ ಸ ಪಾಪಂ ಶ್ಲೋಕಂ ಶೃಣೋತಿ'' ಇತ್ಯನಾರಭ್ಯ ಶ್ರೂಯತೇ । ತಥಾ ಜ್ಯೋತಿಷ್ಟೋಮೇ ''ಯದಾಂಕ್ತೇ ಚಕ್ಷುರೇವ ಭ್ರಾತೃವ್ಯಸ್ಯ ವೃಂಕ್ತೇ'' ಇತಿ, ತಥಾ ''ಯತ್ಪ್ರಯಾಜಾನೂಯಾಜಾ ಇಜ್ಯನ್ತೇ, ವರ್ಮ ವಾ ಏತದ್ಯಜ್ಞಾಯ ಕ್ರಿಯತೇ, ವರ್ಮ ಯಜಮಾನಾಯ, ಭ್ರಾತೃವ್ಯಾರ್ಭಿಭೂತ್ಯಾ'' ಇತಿ ಚ । ತತ್ರ ಜುಹ್ವಾಃ ಪರ್ಣಮಯತ್ವಂ, **ಯಶ್ಚಾಞ್ಜನರೂಪಚಕ್ಷುಃಸಂಸ್ಕಾರಃ, ಯಚ್ಚ** ಪ್ರಾಯಾಜಾನುಯಾಜರೂಪಂ ವರ್ಮ ತತ್ತ್ರಿತಯಂ ಕಿಂ ಪುರುಷಾರ್ಥತ್ವೇನ ವಿಧೀಯತೇ, ಅಥ ಕ್ರತ್ವರ್ಥತ್ವೇನ, ಉತೋಭಯಾರ್ಥತ್ವೇನೇತಿ **ಸನ್ದೇಹಃ । ಪೂರ್ವಪಕ್ಷಸ್ತು,** ಪಾಪ-ಶ್ಲೋಕಶ್ರವಣರಾಹಿತ್ಯಾದಿಫಲಶ್ರವಣಾತ್ ಪುರುಷಾರ್ಥತಯಾ ವಿಧೀಯತೇ । 'ಯಸ್ಯ ಪಥ್ಯಮಶ್ನನ್ ಭವತಿ, ಸ ಕಲ್ಪೋ ಭವತಿ' ಇತಿ ಲೋಕೇ ವರ್ತಮಾನಾಪದೇಶಸ್ಯಾಪಿ ಫಲಪ್ರತಿಪಾದಕತ್ವದರ್ಶನಾದಿತ್ಯೇಕಃ । ಫಲಸಂಯೋಗಾತ್ಫಲಾರ್ಥತ್ವೇऽಪಿ ಕ್ರತ್ವರ್ಥಾ ಯಾ ಜುಹೂಸ್ತದುದ್ದೇಶೇನ ವಿಧೀಯಮಾನಸ್ಯ ಪರ್ಣಮಯತ್ವಸ್ಯ ಕ್ರತ್ವರ್ಥತಾಪಿ ಸ್ಯಾದಿತಿ ದಧ್ಯಾದಿವದುಭಯಾರ್ಥಂ ಪರ್ಣಮಯತ್ವವಿಧಾನಮ್ । ತಥಾ ಸಂಸ್ಕಾರಕರ್ಮಣೋರಪಿ ಜ್ಯೋತಿಷ್ಟೋಮಾದಿಪ್ರಕರಣೇನ ಕ್ರತ್ವರ್ಥತಾಪಿ ಪ್ರಾಪ್ತೇತ್ಯುಭಯಸ್ಯಾಪ್ಯುಭಯಾರ್ಥಂ ವಿಧಾನಮಿತ್ಯನ್ಯಃ । **ಸಿದ್ಧಾನ್ತಸ್ತು,** ಯುಕ್ತಂ ದಧ್ನ ಉಭಯಾರ್ಥತ್ವಮ್ । ''ದಧ್ನಾ ಜುಹೋತಿ'' ಇತಿ, ''ದಧ್ನೇನ್ದ್ರಿಯಕಾಮಸ್ಯ ಜುಹುಯಾತ್'' ಇತಿ ಕ್ರತುಸಂಯೋಗಸ್ಯ ಫಲಸಂಯೋಗಸ್ಯ ಪೃಥಗ್ವಾಕ್ಯತ್ವಯೋಕ್ತತ್ವೇನ ಸಂಯೋಗಪೃಥಕ್ತ್ವನ್ಯಾಯಾತ್ ಇಹ ತ್ವೇಕಂ ವಾಕ್ಯಮ್ । ತಸ್ಯ ಕ್ರತುಸಮ್ಬನ್ಧಫಲಸಮ್ಬನ್ಧರೂಪೋಭಯಪರತ್ವೇ ವಾಕ್ಯಭೇದಃ ಸ್ಯಾತ್ । ನಚ ಕ್ರತ್ವರ್ಥಾಪ್ಯಣಯನಾಶ್ರಿತಗೋದೋಹನಂ ಯಥಾ ಫಲಾಯ ವಿಧೀಯತೇ ತಥಾ ಕ್ರತ್ವರ್ಥಜುಹ್ವಾದ್ಯಾಶ್ರಿತಪರ್ಣತಾದಿಕಂ ಫಲಾಯ ವಿಧೀಯತಾಮಿತಿ ವಾಚ್ಯಮ್ । ತತ್ರ ಪಶುಕಾಮಸ್ಯೇತಿ ಕಾಮಪದಶ್ರವಣೇನ ಪಶೋಃ ಫಲತ್ವಪ್ರತೀತ್ಯಾ ಗೋದೋಹನಸ್ಯ ಫಲಾರ್ಥತ್ವೇಪೀಹ 'ನ ಶೃಣೋತಿ' । 'ವೃಂಕ್ತೇ' 'ವರ್ಮ ಕ್ರಿಯತೇ' ಇತಿ ವರ್ತಮಾನನಿರ್ದೇಶೇನ ಸಾಧ್ಯತ್ವಾಪ್ರತೀತ್ಯಾ ಪಾಪಶ್ಲೋಕಶ್ರವಣರಾಹಿತ್ಯಾದೇಃ ಫಲತ್ವಾಪ್ರತೀತೇಃ । ಏವಮುಕ್ತದಿಶಾ ಕ್ರತ್ವರ್ಥಾನಾಂ ಪರ್ಣತಾದೀನಾಂ ಕ್ರತುನಿಷ್ಪಾದನದ್ವಾರಾ ಕ್ರತುಫಲೇನೈವ ಫಲವತ್ತ್ವೇನ ಫಲಾಕಾಙ್ಕ್ಷಾವಿರಹಾದ್ರಾತ್ರಿಸತ್ರನ್ಯಾಯೇನ 'ಯಃ ಅಪಾಪಶ್ಲೋಕಶ್ರವಣಾದಿಕಾಮಃ ಸ ಪರ್ಣತಾದಿಕಂ ಕುರ್ಯಾತ್' ಇತಿ ವಿಪರಿಣಾಮೇನಾರ್ಥವಾದಸ್ಯ ಫಲಪರತಾ-ಕಲ್ಪನಮಪ್ಯಯುಕ್ತಮರ್ಥವಾದ ಏವ ಸರ್ವೋಪೀತಿ । ತದಾಹ **ಸೂತ್ರೇ, ದ್ರವ್ಯಸಂಸ್ಕಾರಕರ್ಮಸು** ಜುಹೂಪ್ರಕೃತಿ-ಭೂತಪರ್ಣರೂಪದ್ರವ್ಯಾಞ್ಜನರೂಪಸಂಸ್ಕಾರಪ್ರಯಾಜಾನುಯಾಜರೂಪಕರ್ಮಸು **ಫಲಶ್ರುತಿರರ್ಥವಾದಃ** । ಕುತಃ? **ಪರಾ-ರ್ಥತ್ವಾತ್** ಕ್ರತ್ವರ್ಥತ್ವಾತ್ । ಕ್ರತ್ವರ್ಥತ್ಯಾ ಕ್ರತುಫಲೇನೈವ ಫಲವತ್ತ್ವೇನ ಫಲಾಕಾಙ್ಕ್ಷಾವಿಧುರತ್ವಾದಿತಿ । **ಫಲನ್ತು,** ನ ಫಲಾರ್ಥಂ ಪರ್ಣತಾದಿವಿಧಾನಮಿತಿ ಕ್ರತ್ವರ್ಥತಯೈವ ತದನುಷ್ಠಾನಮಿತಿ ।

ಇತಿ ಪ್ರಥಮಂ ದ್ರವ್ಯಸಂಸ್ಕಾರಕರ್ಮಣಾಂ ಕ್ರತ್ವರ್ಥತಾಧಿಕರಣಮ್ (ಸೂತ್ರಾಣಿ ೧-೩)

ಸಿದ್ಧಾಂತ - ಪರ್ಣಮಯತ್ವವು ಪುರುಷಾರ್ಥವುಳ್ಳದ್ದೂ ಅಲ್ಲ, ಉಭಯಾರ್ಥವುಳ್ಳದ್ದೂ ಅಲ್ಲ ಹೊರತಾಗಿ ಕೇವಲ ಕ್ರತ್ವರ್ಥವುಳ್ಳದ್ದು. ಏಕೆಂದರೆ ದಧ್ಯಾದಿಗಳಲ್ಲಿ ಕ್ರತುಸಂಯೋಗ ಕ್ರತ್ವರ್ಥಗಳಿರುವುದರಿಂದ ಉಭಯರ್ಥಗಳಾಗಬಹುದು. ಆದರೆ ಪರ್ಣಮಯತ್ವದಲ್ಲಿ ಕ್ರತು ಸಂಯೋಗ ಕ್ರತ್ವರ್ಥಗಳು ಇಲ್ಲದಿರುವುದರಿಂದ ಉಭಯಾರ್ಥವನ್ನು ಹೇಳಲಾಗದು. ಅಂದರೆ 'ದಧ್ನಾಜುಹೋತಿ' ಎಂಬುದೇ ಬೇರೆ ವಾಕ್ಯವಾಗಿದೆ. 'ದಧ್ನಾ ಇಂದ್ರಿಯಕಾಮಸ್ಯ ಜುಹುಯಾತ್' ಎಂಬುದೇ ಬೇರೆ ವಾಕ್ಯವಾಗಿದೆ. 'ದಧ್ನಾ ಜುಹೋತಿ' ಎಂಬ ವಾಕ್ಯವು ಕ್ರತ್ವರ್ಥವನ್ನು ಹೇಳುತ್ತಿದೆ. 'ದಧ್ನಾ ಇಂದ್ರಿಯಕಾಮಸ್ಯ ಜುಹುಯಾತ್' ಎಂಬ ವಾಕ್ಯವು ಪುರುಷಾರ್ಥತ್ವವನ್ನು ಹೇಳುತ್ತಿದೆ. ಆದ್ದರಿಂದ ಫಲಸಂಯೋಗವನ್ನು ಮತ್ತು ಕ್ರತುಸಂಯೋಗವನ್ನು ಪ್ರತ್ಯೇಕ ಪ್ರತ್ಯೇಕವಾಗಿ ಹೇಳಿದ್ದರಿಂದ 'ದಧಿ' ಎಂಬುದು ಉಭಯಾರ್ಥವಾಗುತ್ತದೆ. ಆದರೆ ಪ್ರಕೃತ ಪರ್ಣಮಯತ್ವವನ್ನು ಬೇರೆ ಬೇರೆ ವಾಕ್ಯಗಳಲ್ಲಿ ಹೇಳಿರುವುದಿಲ್ಲ, ಕ್ರತುಸಂಯೋಗ ಮತ್ತು ಫಲಸಂಯೋಗವನ್ನು 'ಯಸ್ಯ ಪರ್ಣಮಯೀ' ಎಂಬ ಒಂದೇ ವಾಕ್ಯದಲ್ಲಿಯೇ ಹೇಳಲಾಗಿದೆ. ಆದ್ದರಿಂದ ಸಂಯೋಗ ಮತ್ತು ಕ್ರತ್ವರ್ಥತ್ವವು ಪರ್ಣಯತ್ವದಲ್ಲಿ ಇರುವುದಿಲ್ಲವೆಂದು ತಿಳಿಯಬೇಕು. ಆದ್ದರಿಂದ ಉಭಯಾರ್ಥವೆಂಬ ಎರಡನೆಯ ಪೂರ್ವಪಕ್ಷವು ನಿರಾಕೃತವಾಯಿತು.

ಪುರುಷಾರ್ಥಕ್ಕೋಸ್ಕರ ಪರ್ಣಮಯತ್ವವು ಹೇಳಲ್ಪಟ್ಟದೆ ಎಂಬ ಪ್ರಥಮಪೂರ್ವಪಕ್ಷವೂ ಸರಿಯಿಲ್ಲ. ಏಕೆಂದರೆ 'ಶ್ಯಹೋತಿ' ಎಂಬುದಾಗಿ ವರ್ತಮಾನ ಪ್ರಯೋಗವನ್ನು ಮಾಡಲಾಗಿದೆ. ಆದ್ದರಿಂದ ಆಪಾಪ ಶ್ಲೋಕಶ್ರವಣಕ್ಕೆ ಸಾಧ್ಯತ್ವ ಪ್ರತೀತಿಯು ಬರುತ್ತಿಲ್ಲ. ಒಂದು ವೇಳೆ ಭವಿಷ್ಯದರ್ಥದಲ್ಲಿ ಪ್ರಯೋಗಿಸಿದ್ದರೆ. ಸಾಧ್ಯತ್ವದ ಪ್ರತೀತಿ ಬರುತ್ತಿತ್ತು. ಆದ್ದರಿಂದ ಕೇವಲ ಪುರುಷಾರ್ಥವನ್ನೇ ಪ್ರಯೋಜನವೆಂದು ಹೇಳಲಾಗದು. ಕೇವಲ ಕ್ರತ್ವರ್ಥವೆಂದೇ ಹೇಳಬೇಕು. ಆಪಾಪಶ್ಲೋಕಶ್ರವಣವನ್ನು ಏಕೆ ಹೇಳಿದ್ದೆಂದರೆ, ಅರ್ಥವಾದಕ್ಕೋಸ್ಕರವೆಂದು ತಿಳಿಯಬೇಕು.

**ಪ್ರಕಾಶಃ – ಅತ್ರೋಭಯತ್ರಾಪಿ 'ಊರ್ಜೋऽವರುಧ್ಯೈ' 'ನ ಸ ಪಾಪಂ' ಇತಿ ಅನಯೋರರ್ಥವಾದತ್ವನಿರ್ಣಯಾವಿಶೇಷೆऽप्यौದುಮ್ಬರಾಧಿಕರಣೇ ತದುಮ್ಬರತಾಯಾಃ ವಿಧ್ಯಭಾವೇನ ಸಾಧನತ್ವಾಭಾವಮೂಲಕೋऽर्थವಾದತ್ವನಿರ್ಣಯಃ ಪರ್ಣಮಧ್ಯಧಿಕರಣೇ ತು ಅಪಾಪಶ್ಲೋಕಶ್ರವಣಸ್ಯ ವರ್ತಮಾನಾಪದೇಶೇನ ಸಾಧ್ಯತ್ವಾಭಾವಮೂಲಕ ಇತಿ ಅವಾನ್ತರನಿರ್ಣಯಭೇದಾಧಿಕರಣಭೇದಸ್ತಥೇತ್ಯರ್ಥಃ ।**

ಈ ಎರಡು ಅಧಿಕರಣಗಳಲ್ಲಿ ಊರ್ಜೋऽವರುದ್ಧೈ ಎಂಬುದನ್ನು ಅರ್ಥವಾದವೆಂದು ನಿರ್ಣಯಿಸಿದ್ದಾರೆ. ಅದರಂತೆ ''ನ ಸ ಪಾಪಂ'' ಎಂಬುದನ್ನು ಸಹ ಅರ್ಥವಾದವೆಂದು ನಿರ್ಣಯಿಸಿದ್ದಾರೆ. ಹೀಗೆ ಎರಡೂ ಸಿದ್ಧಾಂತ ನ್ಯಾಯಗಳಲ್ಲಿ ಅರ್ಥವಾದತ್ವನಿರ್ಣಯವು ಸಮಾನವಾಗಿದೆ. ಆದರೂ ಸಹ ಅವಾಂತರ ನ್ಯಾಯಗಳಲ್ಲಿ ಭೇದವಿದೆ. ಔದುಂಬರಾಧಿಕರಣದಲ್ಲಿ ಔದುಂಬರತ್ವಕ್ಕೆ ವಿಧಿಯು ಕೇಳಿಸುತ್ತಿಲ್ಲ. ಆದ್ದರಿಂದ ಸಾಧನತ್ವವೆಂದು ಹೇಳಲಾಗದು. ಸಾಧನತ್ವಾಭಾವದ ಮೂಲಕವಾಗಿ ಅರ್ಥವಾದತ್ವವನ್ನು ನಿರ್ಣಯಿಸಿದ್ದಾರೆ. ಆದರೆ ಪರ್ಣಮಯ್ಯಧಿಕರಣದಲ್ಲಿ 'ಆಪಾಪಶ್ಲೋಕ'ಶ್ರವಣಕ್ಕೆ ವರ್ತಮಾನಪ್ರಯೋಗ ಮಾಡಿದ್ದರಿಂದ ಸಾಧ್ಯತ್ವಪ್ರತೀತಿಯೇ ಇಲ್ಲದ ಕಾರಣ ಅರ್ಥವಾದತ್ವವನ್ನು ನಿರ್ಣಯಿಸಲಾಗಿದೆ. ಹೀಗೆ ಅವಾಂತರ ನಿರ್ಣಯಗಳಲ್ಲಿ ಭೇದವಿರುವುದರಿಂದ, ಅಧಿಕರಣಭೇದವನ್ನು ತಿಳಿಯಬೇಕು.

ಅದೇ ರೀತಿಯಾಗಿ ಪ್ರಕೃತ ಪ್ರಾಣಶಬ್ದದಿಂದ ವಿಷ್ಣುವೇ ಪ್ರತಿಪಾದ್ಯನು. ಎಂಬುದು ಎರಡೂ ಪ್ರಾಣಾಧಿ-ಕರಣಗಳ ಪರಮನಿರ್ಣಯವಾಗಿದೆ. ಆದರೆ ಜೀವನಹೇತುತ್ವ ಪ್ರಸಿದ್ಧಲಿಂಗಗಳ ಅಂತರ್ಯಾಮಿಗತತ್ವ ಮೊದಲಾದ ಅವಾಂತರ ನಿರ್ಣಯಗಳಲ್ಲಿ ಭೇದವಿರುವುದರಿಂದ ಅಧಿಕರಣಗಳು ಭಿನ್ನಭಿನ್ನವಾಗುತ್ತವೆ.

**ಪ್ರಕಾಶಃ – 'ಊರ್ಜಂ ಪಶ್ನಾಪ್ನೋತಿ' ಇತ್ಯೇತತ್ 'ಊರ್ಜೋऽವರುಧ್ಯೈ' ಇತ್ಯಸ್ಯೋಪಲಕ್ಷಣಾರ್ಥಮ್ । ಯದ್ವಾ – ಭಾಷ್ಯವಾರ್ತಿಕಾದೌ ಶಾಖಾನ್ತರವಾಕ್ಯೋಕ್ತ್ಯಾ ವಿಚಾರಕರಣೇऽಪಿ ಪ್ರಸಿದ್ಧಶಾಖಾಯಾಮಾ-ಪ್ನೋತೀತ್ಯನ್ತವಾಕ್ಯಶ್ರವಣೇನ ತಸ್ಯ ಶ್ರಣೋತೀತ್ಯನ್ತವಾಕ್ಯೇನ ತುಲ್ಯವಿಚಾರತ್ವಮಾವಶ್ಯಕಮಿತಿ ದರ್ಶಯಿತುಮಾಪ್ನೋತೀತ್ಯನ್ತಮುಕ್ತಮ್ । ಆಕ್ಷಿಪತಿ ಪ್ರಯೋಜನೋಕ್ತಿಮುಪಪಾದ್ಯೋಪಸಂಹರತಿ ತಸ್ಮಾದಿತಿ ॥ ಅನ್ಯತ್ರಾಪೀತಿ ॥ ಅನ್ತರಾಧಿಕರಣೇಷ್ವಿತ್ಯರ್ಥಃ ॥ ಉಪಪಾದಿತಂ ಚೈತತ್ತತ್ರ ತತ್ರ, ಉಪಪಾದ-ಯಿಷ್ಯತೇ ಚೋತ್ತರತ್ರಾऽಪಿ ।**

ಗ್ರಂಥಕಾರರು ಮೂಲದಲ್ಲಿ ''ಊರ್ಜಂ ಪಶೂನಾಪ್ನೋತಿ'' ಎಂದು ಏಕೆ ಉಲ್ಲೇಖಿಸಿದರು; ''ಊರ್ಜೋऽವರುದ್ಧೈ' ಎಂದು ಹೇಳಬೇಕಿತ್ತಲ್ಲವೇ ? ಎಂದು ಪ್ರಶ್ನೆ ಬರುತ್ತದೆ. ಆದರೆ 'ಊರ್ಜೋऽವರುದ್ಧೈ' ಎಂಬುದನ್ನು ಸಂಗ್ರಹಿಸುವುದಕ್ಕಾಗಿ ಉಪಲಕ್ಷಣಯಾ 'ಊರ್ಜಂ ಪಶೂನಾಪ್ನೋತಿ' ಎಂದು ಉಲ್ಲೇಖಿಸಿದ್ದಾರೆಂದು ತಿಳಿಯಬೇಕು. ಅಥವಾ ಭಾಷ್ಯ ಮತ್ತು ವಾರ್ತಿಕಗಳಲ್ಲಿ ಅಪ್ರಸಿದ್ಧವಾದ ಬೇರೆ ಶಾಖೆಗಳಲ್ಲಿರುವ 'ಊರ್ಜೋऽವರುದ್ಧೈ' ಎಂಬ ವಾಕ್ಯವನ್ನು ವಿಚಾರ ಮಾಡಿದ್ದಾರೆ ಪ್ರಸಿದ್ಧಶಾಖೆಯಲ್ಲಿ 'ಊರ್ಜೋऽವರುದ್ಧೈ' ಎಂದು ಕೇಳಿಸುತ್ತಲೇ ಇಲ್ಲ. ಒಂದು ವೇಳೆ 'ಊರ್ಜೋऽವರುದ್ಧೈ' ಎಂಬುದನ್ನು ಸ್ವೀಕರಿಸದಿದ್ದಲ್ಲಿ, 'ಪಶೂನಾಪ್ನೋತಿ' ಎಂದಷ್ಟೇ ಹೇಳಿದಂತಾಗುತ್ತಿತ್ತು. ಆವಾಗ ಈ ವಾಕ್ಯಕ್ಕೂ 'ನಚ ಪಾಪಂ ಶ್ಲೋಕಂ ಶೃಣೋತಿ' ಎಂಬ ವಾಕ್ಯಕ್ಕೂ ಏನೂ ವೈತ್ಯಾಸವಿಲ್ಲದೆ ಎರಡನ್ನೂ ಹೇಳಿದ್ದು ವ್ಯರ್ಥವಾಗುತ್ತಿತ್ತು. ಹೆಚ್ಚಿನ ವಿಚಾರವನ್ನು ತಿಳಿಸುವುದಕ್ಕಾಗಿ ಗ್ರಂಥಕಾರರು 'ಆಪ್ನೋತಿ' ಎಂಬಲ್ಲಿಯ ತನಕ ವಾಕ್ಯವನ್ನು ಹೇಳಿದ್ದಾರೆ.

ಇಲ್ಲಿಯ ತನಕ ಆಕ್ಷಿಪ್ತವಾದ ಪ್ರಯೋಜನೋಕ್ತಿಯನ್ನು ಉಪಪಾದನೆ ಮಾಡಿ 'ತಸ್ಮಾದ್' ಇತ್ಯಾದಿಯಾಗಿ ಉಪಸಂಹಾರ ಮಾಡುತ್ತಿದ್ದಾರೆ. ಇಲ್ಲಿಯತನಕ ಸಮರ್ಥಿಸಿದಂತೆ ಪೂರ್ವಪಕ್ಷ ಹಾಗೂ ಸಿದ್ಧಾಂತಫಲಗಳನ್ನು ಬೇರೆ ಅಧಿಕರಣಗಳಲ್ಲಿಯೂ ತಿಳಿಯಬೇಕು. ಇದರ ಬಗ್ಗೆ ಈ ಹಿಂದೆ ಕೆಲವೆಡೆ ತೋರಿಸಿದ್ದಾಗಿದೆ. ಮುಂದೆಯೂ ಸಹ ತೋರಿಸಲಾಗುತ್ತದೆ.

**ಗುರುರಾಜೀಯಮ್** - ನನು ಅತ ಏವ ಪ್ರಾಣಃ ಪ್ರಾಣಸ್ತಥಾನುಗಮಾದಿತ್ಯಧಿಕರಣದ್ವಯೇನ ಪ್ರಾಣಸ್ಯ ವಿಷ್ಣುತ್ವಂ ನಿರ್ಣೇಯಮ್ । ತಚ್ಚೈಕಮೇವೇತಿ ಕಥಮಧಿಕರಣಭೇದಃ । ನಚ ನಿರ್ಣೇಯಸ್ಯೈಕತ್ವೇಪಿ ನ್ಯಾಯಭೇದಾದ್ಭೇದಃ । ನಿರ್ಣಯಸ್ಯಾನೇಕನ್ಯಾಯಸಾಧ್ಯತ್ವಮಾತ್ರೇಣಾಧಿಕರಣಭೇದೇ ಆನನ್ದಮಯಸ್ಯ ಬ್ರಹ್ಮತ್ವನಿರ್ಣಯಸ್ಯ ಬ್ರಹ್ಮಶಬ್ದಾಭ್ಯಾಸತದ್ಧೇತುಲ್ಯಪದೇಶಮಾನ್ತರವರ್ಣಿಕಗಾನಾದಿರೂಪಾನೇಕನ್ಯಾಯ-ಸಾಧ್ಯತ್ವೇನ ತತ್ರಾಪ್ಯಧಿಕರಣಭೇದಃ ಸ್ಯಾದಿತ್ಯತ ಆಹ – **ಏಕಸ್ಯೇತಿ** ॥ ಅತ್ರೈವ ಪೂರ್ವತನ್ತ್ರ-ಸಮ್ಪ್ರತಿಪನ್ನದೃಷ್ಟಾನ್ತಮಾಹ – **ಯಥೇತಿ** ॥

ಸಾರ

ಹಿಂದಿನ ಪ್ರಾಣಾಧಿಕರಣದಲ್ಲಿ ಪ್ರಾಣಶಬ್ದದಿಂದ ವಿಷ್ಣು ವಾಚ್ಯನಾಗುತ್ತಾನೆಂಬ ಸಂಶಯ ಬರುವುದೇ ಈ ಅಧಿಕರಣದ ಪೂರ್ವಪಕ್ಷಫಲ. ಹಿಂದಿನ ಪ್ರಾಣಾಧಿಕರಣದಲ್ಲಿ ವಿಷ್ಣುವೇ ಪ್ರಾಣಶಬ್ದವಾಚ್ಯನೆಂಬ ನಿರ್ಣಯವೇ ಈ ಅಧಿಕರಣದ ಸಿದ್ಧಾಂತಫಲ.

ಈ ಎರಡೂ ಅಧಿಕರಣಗಳಲ್ಲಿ ವಿಷ್ಣುವೇ ಪ್ರಾಣಶಬ್ದವಾಚ್ಯನೆಂದು ನಿರ್ಣಯಿಸಲಾಗಿದೆ. ಎರಡೂ ಅಧಿಕರಣಗಳ ಸಿದ್ಧಾಂತನ್ಯಾಯವು ಒಂದೇ ಆಗಿರುವಾಗ ಬೇರೆ ಬೇರೆ ಅಧಿಕರಣವನ್ನಾಗಿ ಏಕೆ ಪರಿಗಣಿಸಿದ್ದಾರೆಂದು ಗೊಂದಲವಾಗುತ್ತದೆ. ಈ ಎರಡೂ ಅಧಿಕರಣಗಳ ಪರಮಸಿದ್ಧಾಂತಗಳು ಒಂದೇ ಆಗಿದ್ದರೂ ಅವಾಂತರ ನಿರ್ಣಯಗಳಲ್ಲಿ ವ್ಯತ್ಯಾಸವಿದೆ. ಹಿಂದಿನ ಪ್ರಾಣಾಧಿಕರಣದಲ್ಲಿ ಜೀವನಹೇತುತ್ವವನ್ನು ವಿಷ್ಣುವಿನಲ್ಲಿ ಸಮರ್ಥಿಸುವುದು ಅವಾಂತರಪ್ರಯೋಜನವಾಗಿತ್ತು. ಈ ಅಧಿಕರಣದಲ್ಲಿ ಪ್ರಸಿದ್ಧಲಿಂಗಗಳಿಗೆ ಅಂತರ್ಯಾಮಿಗತತ್ವವನ್ನು ಸಮರ್ಥಿಸುವುದು ಪ್ರಯೋಜನವಾಗಿದೆ. ಈ ಅವಾಂತರನಿರ್ಣಯಕ್ಕೋಸ್ಕರ ಅನೇಕ ಅಧಿಕರಣಗಳನ್ನು ಒಪ್ಪಬಹುದೆಂದು ಪ್ರಾಭಾಕರರು ಹಾಗೂ ಭಾಟ್ಟರು ತಮ್ಮ ಗ್ರಂಥಗಳಲ್ಲಿ ಸಮರ್ಥಿಸಿಕೊಂಡಿದ್ದಾರೆ. ಆದ್ದರಿಂದ ಪ್ರಕೃತ ಒಂದು ಪಾದದಲ್ಲಿ ಎರಡು ಪ್ರಾಕಾಧಿಕರಣಗಳನ್ನು ಹೇಳಿದ್ದು ತಪ್ಪಾಗುವುದಿಲ್ಲ.

* * * *

## ಪಾದಸಂಗತಿಯ ಅನುಪಪತ್ತಿಪರಿಹಾರ

ತಾತ್ಪರ್ಯಚಂದ್ರಿಕಾ

**ಏವಞ್ಚ ''अत एव प्राणः'' इत्यत्र तैत्तिरीयस्थप्राणशब्दसमन्वये उक्तेऽपि अत्र पूर्वपक्षे ऐतरेयवाक्यस्थप्राणस्याविष्णुत्वेन तैत्तिरीयस्थस्यापि विष्णुत्वाक्षेपादुभयत्रप्रसिद्धत्वाभावः प्राणशब्दस्य । ''आकाशोऽर्थान्तरत्वादिव्यपदेशात्'' इत्यत्र तु 'आकाशस्तल्लिङ्गात्' इत्यत्रोक्तस्य 'आकाश इति होवाच' इति वाक्यस्थाकाशशब्दो ब्रह्मपर इत्यस्यानाक्षेपादुभयत्रप्रसिद्धत्वम् । अत एव तत्र टीकायां पादान्तरस्थं 'तल्लिङ्गात्' इत्यधिकरणं अनाक्षिप्य एकपादस्थद्युभ्वाद्यधिकरणमेव आक्षिप्तम् ।**

ಅನುವಾದ - ಪಾದಸಂಗತಿಯ ಅನುಪಪತ್ತಿಯ ಪರಿಹಾರ ಹೀಗಿದೆ - 'अत एव प्राणः' ಎಂಬಲ್ಲಿ ತೈತ್ತಿರೀಯದಲ್ಲಿರುವ ಪ್ರಾಣಶಬ್ದಸಮನ್ವಯವನ್ನು ವಿಷ್ಣುವಿನಲ್ಲಿ ಸಮನ್ವಯ ಮಾಡಿದರೂ ಈ ಅಧಿಕರಣದ ಪೂರ್ವಪಕ್ಷದಲ್ಲಿ ಐತರೇಯವಾಕ್ಯದಲ್ಲಿರುವ ಪ್ರಾಣನಿಗೆ ಅವಿಷ್ಣುತ್ವವನ್ನು ಹೇಳಿದ್ದರಿಂದ ತೈತ್ತಿರೀಯದಲ್ಲಿರುವ ಪ್ರಾಣನು ವಿಷ್ಣು ಆಗುವುದಿಲ್ಲ ಎಂದು ಆಕ್ಷೇಪಿಸಿದಂತಾಯಿತು. ಇದರಿಂದ ಪ್ರಾಣಶಬ್ದಕ್ಕೆ ಉಭಯತ್ರಪ್ರಸಿದ್ಧತ್ವವನ್ನು ಅಲ್ಲಗಳೆದಂತಾಯಿತು. ಉಭಯತ್ರಪ್ರಸಿದ್ಧವಾಗಿದ್ದಲ್ಲಿ ಈ ಅಧಿ-

ಕರಣವು ತೃತೀಯಪಾದದಲ್ಲಿ ಸೇರಬೇಕಾಗಿತ್ತು. ''ಆಕಾಶೋऽರ್ಥಾಂತರತ್ವಾದಿವ್ಯಪದೇಶಾತ್'' ಎಂಬ ಮೂರನೇ ಪಾದದಲ್ಲಿ ಬರುವ ಸೂತ್ರದಲ್ಲಿ ''ಆಕಾಶಾಸ್ತಲ್ಲಿಂಗಾತ್'' ಎಂಬ ಸೂತ್ರದಲ್ಲಿ ಹೇಳಲ್ಪಟ್ಟ ''ಆಕಾಶ ಇತಿ ಹೋವಾಚ'' ಎಂಬ ವಾಕ್ಯದಲ್ಲಿರುವ 'ಆಕಾಶ' ಎಂಬ ಶಬ್ದವು ಬ್ರಹ್ಮಪರವಾಗಿದೆ ಎಂಬುದನ್ನು ಆಕ್ಷೇಪ ಮಾಡದ ಕಾರಣ ಆಕಾಶಶಬ್ದವು ಉಭಯತ್ರಪ್ರಸಿದ್ಧಿ ಎನಿಸಿದೆ. ಆದ್ದರಿಂದಲೇ ಆ ಅಧಿಕರಣದ ಟೀಕೆಯಲ್ಲಿ ಬೇರೆ ಪಾದದಲ್ಲಿರುವ 'ತಲ್ಲಿಂಗಾತ್' ಎಂಬುದನ್ನು ಆಕ್ಷೇಪ ಮಾಡದೇ ಆದೇ ಪಾದದ ದ್ಯುಭ್ವಾದ್ಯಧಿಕರಣದಲ್ಲಿ ಹೇಳಲ್ಪಟ್ಟ ಪ್ರಮೇಯವನ್ನೇ ಆಕ್ಷೇಪಿಸಲಾಗಿದೆ. ಆದ್ದರಿಂದ ಪ್ರಕೃತ ಹಿಂದಿನ ಅಧಿಕರಣದ ಪ್ರಾಣಶಬ್ದವನ್ನು ಆಕ್ಷೇಪಿಸಿದ್ದರಿಂದ ಉಭಯತ್ರಪ್ರಸಿದ್ಧಿಯೆಂದು ಹೇಳಲಾಗದು.

**प्रकाशः** – नन्वन्यदेव किञ्चित्प्रयोजनमुच्यतां, किं पूर्वोक्तप्राणाक्षेपोपपादनक्लेशेनेत्यतोऽवश्यं चैतत्, अन्यथा तृतीयपादे समन्वीयमानाकाशशब्दस्येव पूर्वोक्तन्यायान्यत्रप्रसिद्धिभ्यां प्राणशब्दस्योभयत्रप्रसिद्धत्वापत्त्याऽस्याधिकरणस्यैतत् पादासङ्गत्यापत्तेरित्याह – **एवञ्चेति** ॥ यद्वा – प्रयोजनोक्तिं समर्थ्येदानीं पूर्वोक्त्वन्यत्रप्रसिद्धिभ्याम् आकाशशब्द इवात्राप्युभयत्रप्रसिद्धत्वापत्त्याऽत्रासङ्गतिमाशङ्क्य पादसङ्गतिं साधयति – **एवञ्चेति** ॥ एवमाक्षेपे उभयत्रसिद्धता नेत्येतद्व्यतिरेकमुखेनाह – **आकाश इति** ॥ **अत एवेति** ॥ उभयत्रप्रसिद्धार्थत्वलाभादेवेत्यर्थः । अन्यथाऽयमाकाशोऽन्यश्चेत्प्रागुक्तोऽप्यन्यस्यादित्येवोच्येत, 'स च विष्णोरितरश्चेत् सर्वाधारत्वमप्यन्यस्य प्रसज्यतै' इति नोच्येतेति भावः । 'पादान्तर' इति, 'एक' इति च हेत्वन्तरम् ।

**ವಿವರಣೆ** - ಪೂರ್ವಪಕ್ಷದ ಫಲವನ್ನು ಹೇಳುವಾಗ ಹಿಂದಿನ ಪ್ರಾಣಾಧಿಕರಣದಲ್ಲಿ ವಿಷ್ಣು ಪ್ರಾಣಶಬ್ದದಿಂದ ಪ್ರತಿಪಾದ್ಯನಲ್ಲ ಎಂಬುದಾಗಿ ಫಲವನ್ನು ಹೇಳಿದರು. ಹೀಗೆಯೇ ಏಕೆ ಹೇಳಬೇಕು? ಎಂದರೆ ಒಂದುವೇಳೆ ಹಿಂದಿನ ಅಧಿಕರಣದ ಪ್ರಾಣನನ್ನು ಆಕ್ಷೇಪ ಮಾಡದಿದ್ದಲ್ಲಿ ಪೂರ್ವೋಕ್ತನ್ಯಾಯದಿಂದ ಮತ್ತು ಅನ್ಯತ್ರಪ್ರಸಿದ್ಧಿಗಳಿಂದ ಆಕಾಶಶಬ್ದದಂತೆ ಈ ಅಧಿಕರಣದಲ್ಲಿ ಸಮನ್ವಯ ಮಾಡುತ್ತಿರುವ ಪ್ರಾಣಶಬ್ದವು ಉಭಯತ್ರಪ್ರಸಿದ್ಧವಾಗುತ್ತಿತ್ತು. ಉಭಯತ್ರಪ್ರಸಿದ್ಧವಾಗಿದ್ದಲ್ಲಿ ಅಂತಿಮಪ್ರಾಣಾಧಿಕರಣಕ್ಕೆ ಈ ಪಾದದಲ್ಲಿ ಅಂತರ್ಭಾವವೇ ಕೂಡುತ್ತಿರಲಿಲ್ಲ; ಮೂರನೇ ಪಾದದಲ್ಲಿ ಸೇರಬೇಕಾಗುವ ಪ್ರಸಂಗ ಬರುತ್ತಿತ್ತು. ಅದಕ್ಕೋಸ್ಕರ 'अत एव प्राणः' ಎಂಬಲ್ಲಿ ಹೇಳುವ ಪ್ರಾಣನಿಗೆ ವಿಷ್ಣುತ್ವವನ್ನು ಆಕ್ಷೇಪ ಮಾಡಲೇಬೇಕೆಂದು 'ಏವಂಚ' ಇತ್ಯಾದಿ ವಾಕ್ಯದಿಂದ ಸಮರ್ಥಿಸುತ್ತಿದ್ದಾರೆ.

ಅಥವಾ 'ಏವಂಚ' ಇತ್ಯಾದಿ ವಾಕ್ಯಕ್ಕೆ ಮತ್ತೊಂದು ರೀತಿಯಲ್ಲಿ ಅವತಾರಿಕೆಯನ್ನು ತಿಳಿಯಬೇಕು. ಇಲ್ಲಿಯತನಕ ಭಾಷ್ಯದಲ್ಲಿ ಹೇಳಿದ ಪೂರ್ವಪಕ್ಷದ ಪ್ರಯೋಜನದ ಉಕ್ತಿಯನ್ನು ಸಮರ್ಥಿಸಿದರು.

ಪ್ರಕೃತ ಪೂರ್ವೋಕ್ತಿ ಹಾಗೂ ಅನ್ಯತ್ರಪ್ರಸಿದ್ಧಿಯಿಂದ ಪ್ರಾಣಶಬ್ದಕ್ಕೆ ಉಭಯತ್ರಪ್ರಸಿದ್ಧಿ ಬರುವುದರಿಂದ ಈ ಅಧಿಕರಣದಲ್ಲಿ ಪ್ರಾಣಶಬ್ದದ ಸಮನ್ವಯವು ಅಸಂಗತವಾಗುತ್ತದೆಂದು ಆಶಂಕಿಸಿ ಪಾದಸಂಗತಿಯನ್ನು 'ಏವಂಚ' ಇತ್ಯಾದಿಯಾಗಿ ಸಾಧಿಸುತ್ತಿದ್ದಾರೆ. ಹೀಗೆ ಆಕ್ಷೇಪ ಮಾಡಿದರೆ ಉಭಯತ್ರಪ್ರಸಿದ್ಧಿಯು ಬರುವುದಿಲ್ಲವೆಂಬ ವ್ಯತಿರೇಕಮುಖದಿಂದ 'ಆಕಾಶ' ಇತ್ಯಾದಿ ವಾಕ್ಯದಲ್ಲಿ ಉಪಪಾದಿಸುತ್ತಿದ್ದಾರೆ. ಅಂದರೆ ಎಲ್ಲಿ ಪೂರ್ವಾಧಿಕರಣವನ್ನು ಆಕ್ಷೇಪ ಮಾಡಿರುತ್ತಾರೋ, ಅಲ್ಲಿ ಉಭಯತ್ರಪ್ರಸಿದ್ಧತ್ವವು ಇರುವುದಿಲ್ಲ. ಎಲ್ಲಿ ಪೂರ್ವಾಧಿಕರಣದ ಪ್ರಮೇಯವನ್ನು ಆಕ್ಷೇಪ ಮಾಡಿರುವುದಿಲ್ಲವೋ ಅಲ್ಲಿ ಉಭಯತ್ರಪ್ರಸಿದ್ಧತ್ವವು ಇರುತ್ತದೆಂಬ ವ್ಯಾಪ್ತಿಯನ್ನು ಹೇಳಿದಂತಾಯಿತು.

ಆಕಾಶಪದಕ್ಕೆ ಉಭಯತ್ರಪ್ರಸಿದ್ಧತ್ವ ಬರಬೇಕೆಂಬ ಕಾರಣದಿಂದಲೇ ಮೂರನೇ ಪಾದದ ಆಕಾಶಾಧಿಕರಣದಲ್ಲಿ ಪ್ರಥಮಪಾದದಲ್ಲಿ ಬರುವ ಆಕಾಶಾಧಿಕರಣದ ಪ್ರಮೇಯವನ್ನು ಆಕ್ಷೇಪ ಮಾಡಿರುವುದಿಲ್ಲ. ಈ ವ್ಯಾಪ್ತಿಯನ್ನು ಒಪ್ಪದಿದ್ದರೆ ಮೂರನೇ ಪಾದದ ಆಕಾಶಾಧಿಕರಣದಲ್ಲಿಯೂ ಪ್ರಥಮಪಾದದ ಆಕಾಶಾಧಿಕರಣದ ಪ್ರಮೇಯವನ್ನು ಆಕ್ಷೇಪಿಸುತ್ತಿದ್ದರು. ''ಸ ಚ ವಿಷ್ಣೋರಿತರಶ್ಚೇತ್ ಸರ್ವಾಧಾರತ್ವಮಪ್ಯನ್ಯಸ್ಯ ಪ್ರಸಜ್ಯತೇ'' ಆಕಾಶಶಬ್ದದಿಂದ ವಿಷ್ಣುವು ಪ್ರತಿಪಾದ್ಯನಾಗದಿದ್ದರೆ ದ್ಯುಭ್ವಾದ್ಯಧಿಕರಣದಲ್ಲಿ ಹೇಳಲ್ಪಟ್ಟ ಸರ್ವಾಧಾರತ್ವವೂ ಸಹ ವಿಷ್ಣುವಿಗೆ ಬರುವುದಿಲ್ಲವೆಂದು ಟೀಕೆಯಲ್ಲಿ ಹೇಳುತ್ತಿರಲಿಲ್ಲ; ಹೊರತಾಗಿ ಪ್ರಥಮಪಾದದ ಆಕಾಶಾಧಿಕರಣವನ್ನೇ ಆಕ್ಷೇಪಿಸುತ್ತಿದ್ದರು.

ಗ್ರಂಥದಲ್ಲಿರುವ 'ಪಾದಾಂತರ' ಎಂಬ ಪದವು ಹಾಗೂ 'ಏಕ' ಎಂಬ ಪದವು ಹೇತ್ವಂತರವೆಂದು ತಿಳಿಸುತ್ತಿದೆ.

**गुरुराजीयम्** – ननु ''तद्धै त्वं प्राणः' इत्यत्र प्राणस्य विष्णुत्वमङ्गीकृत्यैतरेयेऽन्यलिङ्गेनान्यपरत्वमित्येवं पूर्वपक्षसम्भवे किमर्थं तदाक्षेपो वर्ण्यत इत्यत आह – **एवञ्चेत्यादि** ॥ अन्यथोभयत्रप्रसिद्धचापत्त्या पादासङ्गत्यापातादिति भावः ।

## ಸಾರ

ಈ ಅಧಿಕರಣದಲ್ಲಿ ಸಮನ್ವಯ ಮಾಡುತ್ತಿರುವ ಪ್ರಾಣಶಬ್ದವು ಉಭಯತ್ರಪ್ರಸಿದ್ಧವಾಗಬೇಕು, ಏಕೆಂದರೆ ಹಿಂದಿನ ಪ್ರಾಣಾಧಿಕರಣದಲ್ಲಿ ಕೆಲವು ವಾಕ್ಯಗಳಲ್ಲಿರುವ ಪ್ರಾಣಶಬ್ದಗಳನ್ನು ವಿಷ್ಣುವಿನಲ್ಲಿ ಸಮನ್ವಯ ಮಾಡಲಾಗಿದೆ. ಆದರೆ ಲೋಕಪ್ರಸಿದ್ಧಿಯು ಮುಖ್ಯವಾಯುವಿನಲ್ಲಿದೆ. ಹೀಗೆ ಪ್ರಾಣಶಬ್ದವು ಉಭಯತ್ರಪ್ರಸಿದ್ಧವಾಗುತ್ತದೆ. ಆದ್ದರಿಂದ ಈ ಅಧಿಕರಣವನ್ನು ಮೂರನೇ ಪಾದದಲ್ಲಿ ಸೇರಿಸಬೇಕಲ್ಲವೇ?

ಈ ಗೊಂದಲವನ್ನು ಪರಿಹಾರ ಮಾಡುವುದಕ್ಕಾಗಿಯೇ ಶ್ರೀಮದಾಚಾರ್ಯರು ಹಿಂದಿನ ಪ್ರಾಣಾಧಿಕರಣದ ಪ್ರಮೇಯವನ್ನು ಪೂರ್ವಪಕ್ಷಫಲವನ್ನಾಗಿ ಆಕ್ಷೇಪಿಸಿದ್ದಾರೆ. ಹಾಗೆ ಆಕ್ಷೇಪಿಸಿದ್ದರಿಂದ ಪ್ರಾಣಶಬ್ದಕ್ಕೆ ವಿಷ್ಣುಪರತ್ವವು ಇದುವರೆಗೂ ನಿರ್ಣಯವಾಗಿಲ್ಲವೆಂದಂತಾಯಿತು. ಹಾಗಾಗಿ ಈ ಅಧಿಕರಣದಲ್ಲಿ ಸಮನ್ವಯ ಮಾಡುತ್ತಿರುವ ಪ್ರಾಣಶಬ್ದವು ಲೋಕಪ್ರಸಿದ್ಧಿಯಂತೆ ಅನ್ಯತ್ರಪ್ರಸಿದ್ಧವಾಗುತ್ತದೆ ಹೊರತು

ಉಭಯತ್ರಪ್ರಸಿದ್ಧವಾಗುವುದಿಲ್ಲ. ಮೂರನೇ ಪಾದದಲ್ಲಿ ಆಕಾಶಶಬ್ದವನ್ನು ಉಭಯತ್ರಪ್ರಸಿದ್ಧವೆಂದು ಪರಿಗಣಿಸಿದ್ದಾರೆ. ಏಕೆಂದರೆ ಆ ಅಧಿಕರಣದ ಟೀಕೆಯಲ್ಲಿ ಪ್ರಥಮಪಾದದಲ್ಲಿ ಉಕ್ತವಾದ ಆಕಾಶಶಬ್ದವನ್ನು ಆಕ್ಷೇಪಮಾಡಿಯೇ ಇಲ್ಲ. ಹೊರತಾಗಿ ದ್ಯುಭ್ವಾದ್ಯಧಿಕರಣದ ಪ್ರಮೇಯವನ್ನಷ್ಟೇ ಆಕ್ಷೇಪಿಸಿದ್ದಾರೆ. ಆದ್ದರಿಂದ ಆಕಾಶಶಬ್ದವು ಉಭಯತ್ರಪ್ರಸಿದ್ಧವಾಗಿದೆಯೆಂದು ನಿರ್ಣಯಿಸಿದ್ದಾರೆ. ಈ ವ್ಯತ್ಯಾಸವನ್ನು ಅವಶ್ಯ ಗಮನಿಸಬೇಕು.

* * * *

## ಅನ್ಯತ್ರಪ್ರಸಿದ್ಧ ಹಾಗೂ ಉಭಯತ್ರಪ್ರಸಿದ್ಧ ಶಬ್ದಗಳ ಲಕ್ಷಣ ನಿರೂಪಣೆ (ಪೂರ್ವಪಕ್ಷದ ಮುಕ್ತಾಯ)

ತಾತ್ಪರ್ಯಚನ್ದ್ರಿಕಾ

**ನನ್ವೇವಂ ಸತಿ ''ಜ್ಯೋತಿರ್ದರ್ಶನಾತ್'' ಇತ್ಯತ್ರ ಟೀಕಾಯಾಂ – ''ತಚ್ಚ ಜ್ಯೋತಿರ್ಯದಿ ವಿಷ್ಣೋರನ್ಯತ್ತದಾ ''ಜ್ಯೋತಿಶ್ಚರಣಾಭಿಧಾನಾತ್'' ಇತಿ ಪೂರ್ವೋಕ್ತಮಪ್ಯನ್ಯತ್ಸ್ಯಾತ್ ಇತ್ಯುಕ್ತತ್ವಾತ್ ಅಗ್ನಿಸೂಕ್ತೇऽಪಿ ಜ್ಯೋತಿಶ್ಶಬ್ದಸ್ಯ ಪೂರ್ವಪಕ್ಷೇ ವಿಷ್ಣುಪರತ್ವಾಭಾವಾದುಭಯತ್ರಪ್ರಸಿದ್ಧತ್ವಾಭಾವಾತ್ತಸ್ಯ ತೃತೀಯಪಾದಸಙ್ಗತಿರ್ನ ಸ್ಯಾದಿತಿ ಚೇತ್, ಮೈವಮ್, ನ ಹಿ ''ಜ್ಯೋತಿರ್ದರ್ಶನಾತ್'' ಇತ್ಯತ್ರ ಜ್ಯೋತಿರ್ವಹ್ನಿರಿತಿ ಪೂರ್ವಪಕ್ಷಃ, ಯೇನ ವಹ್ನೌ ಪ್ರಸಿದ್ಧೇಃ ಸ್ವತಃ ಸಿದ್ಧತ್ವೇನಾನ್ಯತ್ರಪ್ರಸಿದ್ಧತಾ, ಉಭಯತ್ರಪ್ರಸಿದ್ಧತಾ ತು ಕ್ವಚಿದ್ವಿಷ್ಣುಪರತ್ವೇನ ಸಾಧ್ಯಾ ಸ್ಯಾತ್ । ಕಿನ್ತು ಜೀವ ಇತಿ ಪೂರ್ವಪಕ್ಷಃ । ನಚ ಜೀವೇ ಸ್ವತಃ ಪ್ರಸಿದ್ಧಿರಸ್ತಿ । ಜ್ಞಾನಾತ್ಮಕತ್ವಾತ್ತು ಜೀವೇ ಪ್ರವೃತ್ತಿಃ । ತಚ್ಚ ಜೀವವದೀಶ್ವರೇऽಪ್ಯಸ್ತೀತಿ ಉಭಯತ್ರಪ್ರಸಿದ್ಧತಾ ''ಜ್ಯೋತಿರ್ದರ್ಶನಾತ್'' ಇತ್ಯತ್ರ ।**

**''ಜ್ಯೋತಿಶ್ಚರಣ'' ಇತ್ಯತ್ರ ತು ವಹ್ನಿರಿತಿ ಪೂರ್ವಪಕ್ಷಿತತ್ವಾದನ್ಯತ್ರಪ್ರಸಿದ್ಧತಾ । ''ಕಾರಣತ್ವೇನ'' ಇತ್ಯತ್ರ ''ಜ್ಯೋತಿರುಪಕ್ರಮಾತ್'' ಇತ್ಯತ್ರ ಚ ಪೂರ್ವಪಕ್ಷೇ ಪೂರ್ವೋಕ್ತಾಯಾ ಆಕಾಶ-ಜ್ಯೋತಿಶ್ಶಬ್ದಯೋರ್ವಿಷ್ಣುಪರತಾಯಾ ಅನಾಕ್ಷೇपेऽपಿ, ತತ್ರ ಪ್ರಾಗನುಕ್ತಸಮನ್ವಯಸ್ಯಾವಾನ್ತರ-ಕಾರಣತ್ವರೂಪಸ್ಯ ಲಿಙ್ಗಸ್ಯ ಔಷಧ್ಯಾದಿನಾಮ್ನೋ ಜ್ಯೋತಿಷ್ಟೋಮವಸನ್ತಾದಿಶಬ್ದಸ್ಯ ಚ ಸಮನ್ವಯೋಕ್ತೇರ್ನ ತಯೋರುಭಯತ್ರಪ್ರಸಿದ್ಧಪಾದಾನ್ತರ್ಭಾವಪ್ರಸಙ್ಗಃ ।**

**ಯದ್ವಾ – ಪ್ರಾಣಾದಿಶಬ್ದಾನಾಂ ಪ್ರಾಕ್ ಸಮನ್ವಯೋಕ್ತಾವಪಿ ಲೋಕಸಿದ್ಧ್ಯಾ ಅನ್ಯತ್ರಪ್ರಸಿದ್ಧ್ಯಾ ಅನ್ಯತ್ರಪ್ರಸಿದ್ಧತಾ । 'ಆಕಾಶोऽರ್ಥಾನ್ತರ' ಇತ್ಯತ್ರ ತ್ವಾಕಾಶಶಬ್ದಸ್ಯ ನ ಪೂರ್ವಂ ಸಮನ್ವಯೋಕ್ತ್ಯಾ ಉಭಯತ್ರಪ್ರಸಿದ್ಧತಾ, ಕಿನ್ತು 'ವೈ ನಾಮ' ಇತಿ ನಿಪಾತದ್ಯೋತಿತಪ್ರಸಿದ್ಧಿವ್ಯಾವರ್ತ್ಯತ್ವೇನ**

**पूर्वपक्षिणाऽप्यप्रसिद्धस्य ब्रह्मरूपस्याकाशशब्दवाच्यस्याङ्गीकृतत्वेनेति ज्ञेयम् । तस्मात् पादसङ्गतिः पूर्वपक्षोदयश्च ॥**

ಆಕ್ಷೇಪ - ಹಿಂದಿನ ಅಧಿಕರಣದ ಪ್ರಮೇಯವನ್ನು ಆಕ್ಷೇಪಿಸಿದರೆ ಅನ್ಯತ್ರಪ್ರಸಿದ್ಧವಾಗುತ್ತದೆಂದು ಹೇಳಿದಿರಿ; ಹಾಗಾದರೆ 'ಜ್ಯೋತಿರ್ದರ್ಶನಾತ್' ಎಂಬ ಅಧಿಕರಣವನ್ನು ಮೂರನೇ ಪಾದದಲ್ಲಿ ಸೇರಿಸಿದ್ದೇ ತಪ್ಪಾಗುತ್ತದೆ. ಏಕೆಂದರೆ ಆ ಸೂತ್ರದ ಟೀಕೆಯಲ್ಲಿ ಒಂದು ವೇಳೆ ಜ್ಯೋತಿಯು ವಿಷ್ಣುವಿಗಿಂತ ಭಿನ್ನವಾದಲ್ಲಿ, 'ಜ್ಯೋತಿಶ್ಚರಣಾಭಿಧಾನಾತ್ ಎಂಬ ಪ್ರಥಮ ಪಾದದಲ್ಲಿ ಹೇಳಲ್ಪಟ್ಟ ಜ್ಯೋತಿಯೂ ಸಹ ವಿಷ್ಣುವಿಗಿಂತ ಭಿನ್ನವೇ ಆಗುತ್ತದೆಂದು ಹೇಳಿದ್ದಾರೆ. ಆದ್ದರಿಂದ ಪ್ರಥಮಪಾದದ ಜ್ಯೋತಿರಧಿಕರಣಕ್ಕೆ ವಿಷಯಭೂತವಾದ ಅಗ್ನಿಸೂಕ್ತದಲ್ಲಿರುವ ಜ್ಯೋತಿಶಬ್ದಕ್ಕೆ ವಿಷ್ಣುಪರತ್ವವನ್ನು ಬಿಟ್ಟಂತಾಯಿತು. ಆದ್ದರಿಂದ ಮೂರನೇ ಪಾದದಲ್ಲಿ ಸಮನ್ವಯ ಮಾಡುತ್ತಿರುವ ಜ್ಯೋತಿಶಬ್ದಕ್ಕೆ ಉಭಯತ್ರ-ಪ್ರಸಿದ್ಧತ್ವವನ್ನು ಸಮರ್ಥಿಸಲು ಬರುವುದಿಲ್ಲ. ತೃತೀಯಪಾದದಿಂದ ಸಂಗತಿಯೂ ಸಹ ದೊರೆಯು-ವುದಿಲ್ಲ.

ಸಮಾಧಾನ - ನೀವು ಹೇಳಿದ್ದನ್ನು ಒಪ್ಪಬಹುದಿತ್ತು. 'ಜ್ಯೋತಿರ್ದರ್ಶನಾತ್' ಎಂಬ ಶಬ್ದದಲ್ಲಿ 'ಜ್ಯೋತಿ'ಶಬ್ದಕ್ಕೆ 'ವಹ್ನಿ' ಎಂದು ಪೂರ್ವಪಕ್ಷ ಮಾಡಿದ್ದರೆ ಆವಾಗ ವಹ್ನಿಯೆಂಬ ಅರ್ಥದಲ್ಲಿ ಜ್ಯೋತಿಶಬ್ದಕ್ಕೆ ಲೋಕಪ್ರಸಿದ್ಧಿ ಇರುವುದರಿಂದ ಅನ್ಯತ್ರಪ್ರಸಿದ್ಧ ಎನಿಸುತ್ತಿತ್ತು. ಮತ್ತು ಕೆಲವು ವಾಕ್ಯಗಳಿಗೆ ವಿಷ್ಣುಪರತ್ವವನ್ನು ಒಪ್ಪುವ ಮೂಲಕ ಉಭಯತ್ರಪ್ರಸಿದ್ಧತ್ವವನ್ನು ಸಮರ್ಥಿಸುವ ಅವಶ್ಯಕತೆ ಇರುತ್ತಿತ್ತು. ಆದರೆ ಮೂರನೇ ಪಾದದ ಜ್ಯೋತಿರಧಿಕರಣದಲ್ಲಿ 'ವಹ್ನಿ' ಎಂಬುದಾಗಿ ಪೂರ್ವ-ಪಕ್ಷವನ್ನೇ ಮಾಡಿರುವುದಿಲ್ಲ. 'ಜೀವ' ಎಂದು ಪೂರ್ವಪಕ್ಷ ಮಾಡಲಾಗಿದೆ. ಅಂತಹ ಜೀವನಲ್ಲಿ ಜ್ಯೋತಿಶಬ್ದಕ್ಕೆ ಲೋಕಪ್ರಸಿದ್ಧಿ ಇರುವುದಿಲ್ಲ; ಹೊರತಾಗಿ ಜ್ಞಾನಾತ್ಮಕತ್ವ ಎಂಬ ಪ್ರವೃತ್ತಿ ನಿಮಿತ್ತವನ್ನು ಅಪೇಕ್ಷಿಸಿ ಜೀವನಲ್ಲಿ ಜ್ಯೋತಿಶಬ್ದವು ಪ್ರವೃತ್ತವಾಗಿದೆ. ಇಂತಹ ಜ್ಞಾನಾತ್ಮಕತ್ವ ಎಂಬ ಪ್ರವೃತ್ತಿನಿಮಿತ್ತವು ಜೀವನಲ್ಲಿ ಹೇಗೆ ಇದೆಯೋ, ಅದರಂತೆ ಈಶ್ವರನಲ್ಲಿಯೂ ಸಹ ಇರುತ್ತದೆ. ಆದ್ದರಿಂದ ಜ್ಯೋತಿಶಬ್ದವು ಜೀವನಲ್ಲಿ ಹಾಗೂ ವಿಷ್ಣುವಿನಲ್ಲಿ ಪ್ರಸಿದ್ಧವಾಗಿದೆ ಎಂದಂತಾಯಿತು. ಈ ವಿವಕ್ಷೆಯಿಂದ ವಿಷ್ಣುಶಬ್ದಕ್ಕೆ ಉಭಯತ್ರಪ್ರಸಿದ್ಧತ್ವವನ್ನು ಜ್ಯೋತಿರ್ದರ್ಶನಾತ್ ಎಂಬ ಸೂತ್ರದಲ್ಲಿ ಸಮರ್ಥಿಸಿದ್ದಾರೆ.

'ಜ್ಯೋತಿಶ್ಚರಣ' ಇತ್ಯಾದಿ ಪ್ರಥಮಪಾದದಲ್ಲಿರುವ ಸೂತ್ರದಲ್ಲಾದರೂ 'ವಹ್ನಿ' ಎಂಬರ್ಥದಲ್ಲಿ ಪೂರ್ವಪಕ್ಷವನ್ನು ಮಾಡಿದ್ದರಿಂದ ಅನ್ಯತ್ರಪ್ರಸಿದ್ಧತ್ವವು ಬರುತ್ತದೆ.

ಆಕ್ಷೇಪ - ಹಾಗಾದರೆ 'ಕಾರಣತ್ವೇನ' ಎಂಬ ಸೂತ್ರದ ಮತ್ತು 'ಜ್ಯೋತಿರುಪಕ್ರಮಾತ್' ಎಂಬ ಸೂತ್ರದ ಪೂರ್ವಪಕ್ಷದಲ್ಲಿ ಹಿಂದೆ ಹೇಳಿದ 'ಆಕಾಶ' ಹಾಗೂ 'ಜ್ಯೋತಿ'ಶಬ್ದಗಳಿಗೆ ವಿಷ್ಣುಪರತ್ವವನ್ನು ಆಕ್ಷೇಪಿಸುತ್ತಿಲ್ಲ. ಆದ್ದರಿಂದ ನಾಲ್ಕನೇ ಪಾದದ ಈ ಎರಡು ಅಧಿಕರಣಗಳು ಉಭಯತ್ರಪ್ರಸಿದ್ಧವೆನಿಸಿ ಮೂರನೇ ಪಾದದಲ್ಲಿ ಸೇರಬೇಕಾದೀತಲ್ಲವೆ?

ಉಭಯತ್ರಪ್ರಸಿದ್ಧವಾಗುವುದಿಲ್ಲ. ಮೂರನೇ ಪಾದದಲ್ಲಿ ಆಕಾಶಶಬ್ದವನ್ನು ಉಭಯತ್ರಪ್ರಸಿದ್ಧವೆಂದು ಪರಿಗಣಿಸಿದ್ದಾರೆ. ಏಕೆಂದರೆ ಆ ಅಧಿಕರಣದ ಟೀಕೆಯಲ್ಲಿ ಪ್ರಥಮಪಾದದಲ್ಲಿ ಉಕ್ತವಾದ ಆಕಾಶಶಬ್ದವನ್ನು ಆಕ್ಷೇಪಮಾಡಿಯೇ ಇಲ್ಲ. ಹೊರತಾಗಿ ದ್ಯುಭ್ವಾದ್ಯಧಿಕರಣದ ಪ್ರಮೇಯವನ್ನಷ್ಟೇ ಆಕ್ಷೇಪಿಸಿದ್ದಾರೆ. ಆದ್ದರಿಂದ ಆಕಾಶಶಬ್ದವು ಉಭಯತ್ರಪ್ರಸಿದ್ಧವಾಗಿದೆಯೆಂದು ನಿರ್ಣಯಿಸಿದ್ದಾರೆ. ಈ ವ್ಯತ್ಯಾಸವನ್ನು ಅವಶ್ಯ ಗಮನಿಸಬೇಕು.

* * * *

## ಅನ್ಯತ್ರಪ್ರಸಿದ್ಧ ಹಾಗೂ ಉಭಯತ್ರಪ್ರಸಿದ್ಧ ಶಬ್ದಗಳ ಲಕ್ಷಣ ನಿರೂಪಣೆ (ಪೂರ್ವಪಕ್ಷದ ಮುಕ್ತಾಯ)

ತಾತ್ಪರ್ಯಚನ್ದ್ರಿಕಾ

**ನನ್ವೇವಂ ಸತಿ ''ಜ್ಯೋತಿರ್ದರ್ಶನಾತ್'' ಇತ್ಯತ್ರ ಟೀಕಾಯಾಂ – ''ತಚ್ಚ ಜ್ಯೋತಿರ್ಯದಿ ವಿಷ್ಣೋರನ್ಯತ್ತದಾ ''ಜ್ಯೋತಿಶ್ಚರಣಾಭಿಧಾನಾತ್'' ಇತಿ ಪೂರ್ವೋಕ್ತಮಪ್ಯನ್ಯತ್ಸ್ಯಾತ್ ಇತ್ಯುಕ್ತತ್ವಾತ್ ಅಗ್ನಿಸೂಕ್ತೇऽಪಿ ಜ್ಯೋತಿಃಶಬ್ದಸ್ಯ ಪೂರ್ವಪಕ್ಷೇ ವಿಷ್ಣುಪರತ್ವಾಭಾವಾದುಭಯತ್ರಪ್ರಸಿದ್ಧತ್ವಾಭಾವಾತ್ತಸ್ಯ ತೃತೀಯಪಾದಸಙ್ಗತಿರ್ನ ಸ್ಯಾದಿತಿ ಚೇತ್, ಮೈವಮ್, ನ ಹಿ ''ಜ್ಯೋತಿರ್ದರ್ಶನಾತ್'' ಇತ್ಯತ್ರ ಜ್ಯೋತಿರ್ವಹ್ನಿರಿತಿ ಪೂರ್ವಪಕ್ಷಃ, ಯೇನ ವಹ್ನೌ ಪ್ರಸಿದ್ಧೇಃ ಸ್ವತಃ ಸಿದ್ಧತ್ವೇನಾನ್ಯತ್ರಪ್ರಸಿದ್ಧತಾ, ಉಭಯತ್ರಪ್ರಸಿದ್ಧತಾ ತು ಕ್ವಚಿದ್ವಿಷ್ಣುಪರತ್ವೇನ ಸಾಧ್ಯಾ ಸ್ಯಾತ್ । ಕಿನ್ತು ಜೀವ ಇತಿ ಪೂರ್ವಪಕ್ಷಃ । ನಚ ಜೀವೇ ಸ್ವತಃ ಪ್ರಸಿದ್ಧಿರಸ್ತಿ । ಜ್ಞಾನಾತ್ಮಕತ್ವಾತ್ತು ಜೀವೇ ಪ್ರವೃತ್ತಿಃ । ತಚ್ಚ ಜೀವವದೀಶ್ವರೇऽಪ್ಯಸ್ತೀತಿ ಉಭಯತ್ರಪ್ರಸಿದ್ಧತಾ ''ಜ್ಯೋತಿರ್ದರ್ಶನಾತ್'' ಇತ್ಯತ್ರ ।**

**''ಜ್ಯೋತಿಶ್ಚರಣ'' ಇತ್ಯತ್ರ ತು ವಹ್ನಿರಿತಿ ಪೂರ್ವಪಕ್ಷಿತತ್ವಾದನ್ಯತ್ರಪ್ರಸಿದ್ಧತಾ । ''ಕಾರಣತ್ವೇನ'' ಇತ್ಯತ್ರ ''ಜ್ಯೋತಿರುಪಕ್ರಮಾತ್'' ಇತ್ಯತ್ರ ಚ ಪೂರ್ವಪಕ್ಷೇ ಪೂರ್ವೋಕ್ತಾಯಾ ಆಕಾಶ-ಜ್ಯೋತಿಃಶಬ್ದಯೋರ್ವಿಷ್ಣುಪರತಾಯಾ ಅನಾಕ್ಷೇपेऽಪಿ, ತತ್ರ ಪ್ರಾಗನುಕ್ತಸಮನ್ವಯಸ್ಯಾವಾನ್ತರ-ಕಾರಣತ್ವರೂಪಸ್ಯ ಲಿಙ್ಗಸ್ಯ ಔಷಧ್ಯಾದಿನಾಮ್ನೋ ಜ್ಯೋತಿಷ್ಟೋಮವಸನ್ತಾದಿಶಬ್ದಸ್ಯ ಚ ಸಮನ್ವಯೋಕ್ತೇರ್ನ ತಯೋರುಭಯತ್ರಪ್ರಸಿದ್ಧಪಾದಾನ್ತರ್ಭಾವಪ್ರಸಙ್ಗಃ ।**

**ಯದ್ವಾ – ಪ್ರಾಣಾದಿಶಬ್ದಾನಾಂ ಪ್ರಾಕ್ ಸಮನ್ವಯೋಕ್ತಾವಪಿ ಲೋಕಸಿದ್ಧ್ಯಾ ಅನ್ಯತ್ರಪ್ರಸಿದ್ಧ್ಯಾ ಅನ್ಯತ್ರಪ್ರಸಿದ್ಧತಾ । 'ಆಕಾಶोऽರ್ಥान्तर' ಇತ್ಯತ್ರ ತ್ವಾಕಾಶಶಬ್ದಸ್ಯ ನ ಪೂರ್ವಂ ಸಮನ್ವಯೋಕ್ತ್ಯಾ ಉಭಯತ್ರಪ್ರಸಿದ್ಧತಾ, ಕಿನ್ತು 'ವೈ ನಾಮ' ಇತಿ ನಿಪಾತದ್ಯೋತಿತಪ್ರಸಿದ್ಧಿವ್ಯಾವರ್ತ್ಯತ್ವೇನ**

**पूर्वपक्षिणाऽप्यप्रसिद्धस्य ब्रह्मरूपस्याकाशशब्दवाच्यस्याङ्गीकृतत्वेनेति ज्ञेयम् । तस्मात् पादसङ्गतिः पूर्वपक्षोदयश्च ॥**

ಆಕ್ಷೇಪ - ಹಿಂದಿನ ಅಧಿಕರಣದ ಪ್ರಮೇಯವನ್ನು ಆಕ್ಷೇಪಿಸಿದರೆ ಅನ್ಯತ್ರಪ್ರಸಿದ್ಧವಾಗುತ್ತದೆಂದು ಹೇಳಿದಿರಿ; ಹಾಗಾದರೆ 'ಜ್ಯೋತಿರ್ದರ್ಶನಾತ್' ಎಂಬ ಅಧಿಕರಣವನ್ನು ಮೂರನೇ ಪಾದದಲ್ಲಿ ಸೇರಿಸಿದ್ದೇ ತಪ್ಪಾಗುತ್ತದೆ. ಏಕೆಂದರೆ ಆ ಸೂತ್ರದ ಟೀಕೆಯಲ್ಲಿ ಒಂದು ವೇಳೆ ಜ್ಯೋತಿಯು ವಿಷ್ಣುವಿಗಿಂತ ಭಿನ್ನವಾದಲ್ಲಿ, 'ಜ್ಯೋತಿಶ್ಚರಣಾಭಿಧಾನಾತ್' ಎಂಬ ಪ್ರಥಮ ಪಾದದಲ್ಲಿ ಹೇಳಲ್ಪಟ್ಟ ಜ್ಯೋತಿಯೂ ಸಹ ವಿಷ್ಣುವಿಗಿಂತ ಭಿನ್ನವೇ ಆಗುತ್ತದೆಂದು ಹೇಳಿದ್ದಾರೆ. ಆದ್ದರಿಂದ ಪ್ರಥಮಪಾದದ ಜ್ಯೋತಿರಧಿಕರಣಕ್ಕೆ ವಿಷಯಭೂತವಾದ ಅಗ್ನಿಸೂಕ್ತದಲ್ಲಿರುವ ಜ್ಯೋತಿಶಬ್ದಕ್ಕೆ ವಿಷ್ಣುಪರತ್ವವನ್ನು ಬಿಟ್ಟಂತಾಯಿತು. ಆದ್ದರಿಂದ ಮೂರನೇ ಪಾದದಲ್ಲಿ ಸಮನ್ವಯ ಮಾಡುತ್ತಿರುವ ಜ್ಯೋತಿಶಬ್ದಕ್ಕೆ ಉಭಯತ್ರ-ಪ್ರಸಿದ್ಧತ್ವವನ್ನು ಸಮರ್ಥಿಸಲು ಬರುವುದಿಲ್ಲ. ತೃತೀಯಪಾದದಿಂದ ಸಂಗತಿಯೂ ಸಹ ದೊರೆಯು-ವುದಿಲ್ಲ.

ಸಮಾಧಾನ - ನೀವು ಹೇಳಿದ್ದನ್ನು ಒಪ್ಪಬಹುದಿತ್ತು. 'ಜ್ಯೋತಿರ್ದರ್ಶನಾತ್' ಎಂಬ ಶಬ್ದದಲ್ಲಿ 'ಜ್ಯೋತಿ'ಶಬ್ದಕ್ಕೆ 'ವಹ್ನಿ' ಎಂದು ಪೂರ್ವಪಕ್ಷ ಮಾಡಿದ್ದರೆ ಆವಾಗ ವಹ್ನಿಯೆಂಬ ಅರ್ಥದಲ್ಲಿ ಜ್ಯೋತಿಶಬ್ದಕ್ಕೆ ಲೋಕಪ್ರಸಿದ್ಧಿ ಇರುವುದರಿಂದ ಅನ್ಯತ್ರಪ್ರಸಿದ್ಧ ಎನಿಸುತ್ತಿತ್ತು. ಮತ್ತು ಕೆಲವು ವಾಕ್ಯಗಳಿಗೆ ವಿಷ್ಣುಪರತ್ವವನ್ನು ಒಪ್ಪುವ ಮೂಲಕ ಉಭಯತ್ರಪ್ರಸಿದ್ಧತ್ವವನ್ನು ಸಮರ್ಥಿಸುವ ಅವಶ್ಯಕತೆ ಇರುತ್ತಿತ್ತು. ಆದರೆ ಮೂರನೇ ಪಾದದ ಜ್ಯೋತಿರಧಿಕರಣದಲ್ಲಿ 'ವಹ್ನಿ' ಎಂಬುದಾಗಿ ಪೂರ್ವ-ಪಕ್ಷವನ್ನೇ ಮಾಡಿರುವುದಿಲ್ಲ. 'ಜೀವ' ಎಂದು ಪೂರ್ವಪಕ್ಷ ಮಾಡಲಾಗಿದೆ. ಅಂತಹ ಜೀವನಲ್ಲಿ ಜ್ಯೋತಿಶಬ್ದಕ್ಕೆ ಲೋಕಪ್ರಸಿದ್ಧಿ ಇರುವುದಿಲ್ಲ; ಹೊರತಾಗಿ ಜ್ಞಾನಾತ್ಕಕತ್ವ ಎಂಬ ಪ್ರವೃತ್ತಿ ನಿಮಿತ್ತವನ್ನು ಅಪೇಕ್ಷಿಸಿ ಜೀವನಲ್ಲಿ ಜ್ಯೋತಿಶಬ್ದವು ಪ್ರವೃತ್ತವಾಗಿದೆ. ಇಂತಹ ಜ್ಞಾನಾತ್ಕಕತ್ವ ಎಂಬ ಪ್ರವೃತ್ತಿನಿಮಿತ್ತವು ಜೀವನಲ್ಲಿ ಹೇಗೆ ಇದೆಯೋ, ಅದರಂತೆ ಈಶ್ವರನಲ್ಲಿಯೂ ಸಹ ಇರುತ್ತದೆ. ಆದ್ದರಿಂದ ಜ್ಯೋತಿಶಬ್ದವು ಜೀವನಲ್ಲಿ ಹಾಗೂ ವಿಷ್ಣುವಿನಲ್ಲಿ ಪ್ರಸಿದ್ಧವಾಗಿದೆ ಎಂದಂತಾಯಿತು. ಈ ವಿವಕ್ಷೆಯಿಂದ ವಿಷ್ಣುಶಬ್ದಕ್ಕೆ ಉಭಯತ್ರಪ್ರಸಿದ್ಧತ್ವವನ್ನು ಜ್ಯೋತಿರ್ದರ್ಶನಾತ್ ಎಂಬ ಸೂತ್ರದಲ್ಲಿ ಸಮರ್ಥಿಸಿದ್ದಾರೆ.

'ಜ್ಯೋತಿಶ್ಚರಣ' ಇತ್ಯಾದಿ ಪ್ರಥಮಪಾದದಲ್ಲಿರುವ ಸೂತ್ರದಲ್ಲಾದರೂ 'ವಹ್ನಿ' ಎಂಬರ್ಥದಲ್ಲಿ ಪೂರ್ವಪಕ್ಷವನ್ನು ಮಾಡಿದ್ದರಿಂದ ಅನ್ಯತ್ರಪ್ರಸಿದ್ಧತ್ವವು ಬರುತ್ತದೆ.

ಆಕ್ಷೇಪ - ಹಾಗಾದರೆ 'ಕಾರಣತ್ವೇನ' ಎಂಬ ಸೂತ್ರದ ಮತ್ತು 'ಜ್ಯೋತಿರುಪಕ್ರಮಾತ್' ಎಂಬ ಸೂತ್ರದ ಪೂರ್ವಪಕ್ಷದಲ್ಲಿ ಹಿಂದೆ ಹೇಳಿದ 'ಆಕಾಶ' ಹಾಗೂ 'ಜ್ಯೋತಿ'ಶಬ್ದಗಳಿಗೆ ವಿಷ್ಣುಪರತ್ವವನ್ನು ಆಕ್ಷೇಪಿಸುತ್ತಿಲ್ಲ. ಆದ್ದರಿಂದ ನಾಲ್ಕನೇ ಪಾದದ ಈ ಎರಡು ಅಧಿಕರಣಗಳು ಉಭಯತ್ರಪ್ರಸಿದ್ಧವೆನಿಸಿ ಮೂರನೇ ಪಾದದಲ್ಲಿ ಸೇರಬೇಕಾದೀತಲ್ಲವೆ?

ಸಮಾಧಾನ - ಹೌದು, ಒಂದು ವೇಳೆ 'ಆಕಾಶ' ಹಾಗೂ 'ಜ್ಯೋತಿ'ಶಬ್ದಗಳ ಸಮನ್ವಯವನ್ನಷ್ಟೇ ಹೇಳಿದ್ದರೆ ನಿಮ್ಮ ಆಕ್ಷೇಪವನ್ನು ಒಪ್ಪಬಹುದಿತ್ತು. ಆದರೆ ಈ ಶಬ್ದಗಳನ್ನಷ್ಟೇ ಸಮನ್ವಯ ಮಾಡದೇ ಹಿಂದಿನ ಯಾವುದೇ ಪಾದಗಳಲ್ಲಿಯೂ ಸಮರ್ಥನೆ ಮಾಡದ ಆವಾಂತರಕಾರಣತ್ವ ಎಂಬ ಲಿಂಗವನ್ನು ಮತ್ತು ಓಷಧಿ ಮೊದಲಾದ ನಾಮಾತ್ಕರ್ಷಶಬ್ದಗಳನ್ನು ಮತ್ತು ಜ್ಯೋತಿಷ್ಟೋಮ ವಸಂತ ಮೊದಲಾದ ಶಬ್ದಗಳ ಸಮನ್ವಯವನ್ನು ಮಾಡುತ್ತಿರುವುದರಿಂದ ಈ ಎರಡು ಅಧಿಕರಣಗಳು ಉಭಯತ್ರಪ್ರಸಿದ್ಧವಾದ ಪಾದದಲ್ಲಿ ಅಂತರ್ಭಾವ ಹೊಂದುವುದಿಲ್ಲ.

ಅಥವಾ ಪ್ರಾಣಾದಿಶಬ್ದಗಳನ್ನು ಮೊದಲು ಸಮನ್ವಯ ಮಾಡಿದ್ದರೂ ಲೋಕದ ದೃಷ್ಟಿಯಿಂದ ಅನ್ಯತ್ರಪ್ರಸಿದ್ಧವಾದ್ದರಿಂದ ಅನ್ಯತ್ರಪ್ರಸಿದ್ಧವೆನಿಸಿವೆ. ಹಾಗಾದರೆ 'ಆಕಾಶೋಽರ್ಥಾಂತರ ಇತ್ಯಾದಿ ಸೂತ್ರಗಳಲ್ಲಿ ಹೇಳುವ ಆಕಾಶಶಬ್ದಕ್ಕೆ ಉಭಯತ್ರಪ್ರಸಿದ್ಧತ್ವವನ್ನು ಹೇಗೆ ಸಮರ್ಥಿಸುತ್ತೀರಿ? ಎಂದರೆ ಆಕಾಶಶಬ್ದವು ಪ್ರಥಮಪಾದದಲ್ಲಿ ಸಮನ್ವಯವಾಗಿರುವುದರಿಂದ ಮೂರನೇ ಪಾದದಲ್ಲಿ ಉಭಯತ್ರಪ್ರಸಿದ್ಧವೆಂದು ಸಮರ್ಥಿಸಿರುವುದಿಲ್ಲ. ಹೊರತಾಗಿ 'ಆಕಾಶೋ ವೈ ನಾಮ' ಎಂಬಲ್ಲಿರುವ 'ವೈ' ಎಂಬ ನಿಪಾತವು ಪ್ರಸಿದ್ಧವಾದ ಭೂತಾಕಾಶವನ್ನು ಸೂಚಿಸುತ್ತಿದೆ. ಪ್ರಸಿದ್ಧವಾದ ಆಕಾಶವಿರಬೇಕಾದರೆ ಅಪ್ರಸಿದ್ಧವಾದ ಬ್ರಹ್ಮನೆಂಬ ಆಕಾಶವನ್ನು ಪೂರ್ವಪಕ್ಷಿಯು ಒಪ್ಪಿದಂತಾಯಿತೆಂದು ತಿಳಿಯಬೇಕು. ಆದ್ದರಿಂದ ಅಂತಿಮಪ್ರಾಣಾಧಿಕರಣಕ್ಕೆ ಪಾದಸಂಗತಿಯು ಸ್ಪಷ್ಟವಾಗಿ ಇರುತ್ತದೆ. ಪೂರ್ವಪಕ್ಷದ ಉದಯವೂ ಸಹ ಆಗುತ್ತದೆ.

ಕಠಿಣಪದಾರ್ಥ :

ಜ್ಯೋತಿರ್ದರ್ಶನಾದಿತ್ಯತ್ರ = ಮೂರನೇ ಪಾದದಲ್ಲಿ ಬರುವ ಜ್ಯೋತಿರಧಿಕರಣದಲ್ಲಿ, ಪೂರ್ವೋಕ್ತಮಪಿ = ಪ್ರಥಮಪಾದದಲ್ಲಿ ಹೇಳಲ್ಪಟ್ಟ ಜ್ಯೋತಿಯೂ ಸಹ, ತಸ್ಯ = ಜ್ಯೋತಿರ್ದರ್ಶನಾತ್ ಎಂಬ ಸೂತ್ರಕ್ಕೆ, ಜ್ಞಾನಾತ್ಕರ್ತ್ವಾತ್ = ಜ್ಞಾನಸ್ವರೂಪನಾದ್ದರಿಂದ, ಪ್ರವೃತ್ತಿಃ = ಜ್ಞಾನಾತ್ಕರ್ತ್ವ ಎಂಬ ಪ್ರವೃತ್ತಿನಿಮಿತ್ತದಿಂದ ಜೀವನಲ್ಲಿ ಜ್ಯೋತಿ ಶಬ್ದವು ಪ್ರವೃತ್ತವಾಗಿದೆ, ಪೂರ್ವೋಕ್ತಾಯಾಃ = ಪ್ರಥಮಪಾದದಲ್ಲಿ ಹೇಳಲ್ಪಟ್ಟ, ತತ್ರ = ನಾಲ್ಕನೆಯ ಪಾದದಲ್ಲಿರುವ, ಪ್ರಾಗುಕ್ತ = ಹಿಂದಿನ ಮೂರು ಪಾದಗಳಲ್ಲಿ ಹೇಳಲ್ಪಡದ, ಜ್ಯೋತಿಷ್ಟೋಮವಸಂತಾದಿ ಶಬ್ದಸ್ಯ = ಯಾಗವಾಚಿಯಾದ ಹಾಗೂ ಕಾಲವಾಚಿಗಳ ಶಬ್ದಗಳ, ತಯೋಃ = ನಾಲ್ಕನೇ ಪಾದದಲ್ಲಿರುವ ಕಾರಣತ್ವೇನ ಎಂಬ ಸೂತ್ರಕ್ಕೆ, ಮತ್ತು ಜ್ಯೋತಿರುಪಕ್ರಮ ಎಂಬ ಸೂತ್ರಕ್ಕೆ, ನಿಪಾತ = ವೈ ಎಂಬ ನಿಪಾತದಿಂದ, ಪೂರ್ವಪಕ್ಷೋದಯಶ್ಚ = ಪೂರ್ವಪಕ್ಷದ ಉದಯ ಹಾಗೂ ಪೂರ್ವಪಕ್ಷದ ಫಲವು ಯುಕ್ತವಾಗುತ್ತದೆ.

**ಪ್ರಕಾಶಃ** – यद्येवं प्राणशब्दस्योभयत्रप्रसिद्धत्वाभावस्तर्हि ज्योतिश्शब्दस्यापि उक्तन्यायेन तदभावापत्त्या तृतीये निवेशो न स्यादित्याशङ्कते – नन्वेवमिति ॥ तृतीयेति ॥ आद्य एव स्यादित्यर्थः । तत्र पूर्वोक्तान्यत्रप्रसिद्धिभ्यां नोभयसाधारण्यं, किन्तु प्रवृत्तिहेतुसाधारण्याश्रयेण । अतः पूर्वोक्ताक्षेपेऽपि न क्षतिरिति समाधत्ते –

**मैवमिति ॥** एवं तर्हि कथमाद्ये ज्योतिश्शब्दसमन्वय इत्यत आह **ज्योतिश्चरणेति ॥** तत्र लोकत एव प्रसिद्धिसत्त्वादिति भावः ।

ननु यदि प्रागुक्तानाक्षेपेण **''आकाशोऽर्थान्तर''** इत्यत्रोभयत्रप्रसिद्धता, तर्हि चतुर्थपादे समन्वीयमानयोः **'कारणत्वेन चाकाशादिषु यथा व्यपदिष्टोक्तेः''** **''ज्योति-रुपक्रमात्''** इत्याकाशज्योतिश्शब्दयोरुभयत्रप्रसिद्धता स्यादित्यत आह – **कारणत्वे-नेति ॥ लिङ्गस्येति ॥ 'अवान्तरं कारणं च'** इत्यणुभाष्योक्तेरिति भावः। **ओषधीति ॥** **''पृथिव्या ओषधयः''** इत्यपि श्रवणादिति भावः ॥ **ज्योतिष्टोमेति ॥** यागकालादि-वाचिन इत्यर्थः ।

ननु **'पूर्वोक्त्यन्यत्रप्रसिद्धिभ्यां उभयत्रप्रसिद्धत्वम्, तच्चात्र प्राणशब्दे नास्ति, पूर्वोक्तेराक्षेपात्''** इत्युक्तमयुक्तं, अयं प्राणोऽन्यश्चेत् प्राचीनोऽप्यन्य एव न विष्णु-रित्याक्षेपायोगेन प्राचीनोऽन्यो वा विष्णुर्वेति शङ्कामात्रत्वात्, तस्य चोभयत्र-प्रसिद्धविरोधात् स्यादेव तथात्वं प्राणशब्दस्येत्याशङ्क्य पक्षान्तरमाह – **यद्वेति ॥** ज्योतिश्शब्देऽपि प्रवृत्तिहेतुसाधारण्यस्य पूर्वपक्षिणोऽभिमतत्वादिति भावः ॥ **वै नामेति ॥** नामरूपनिर्वहिता प्रसिद्धाकाश इत्युक्तौ न त्वन्योऽप्रसिद्धाकाश इति गम्यते । नच तदनङ्गीकारे प्रसिद्धाकाश एव तन्निर्वहितेत्युक्तिर्युज्यत इत्यर्थः । चशब्दात् 'प्रयोजनं च युज्यते' इति शेषः ।

ವಿವರಣೆ - ಇಲ್ಲಿಯತನಕ ಪೂರ್ವೋಕ್ತ ಆಕ್ಷೇಪವನ್ನು ಮಾಡಿದ್ದರಿಂದ ಪ್ರಾಣಶಬ್ದವು ಉಭಯತ್ರಪ್ರಸಿದ್ಧವಾಗಿಲ್ಲ. ಪೂರ್ವೋಕ್ತ ಆಕ್ಷೇಪವನ್ನು ಮಾಡದೇ ಇದ್ದರಿಂದ ಆಕಾಶಶಬ್ದವು ಉಭಯತ್ರಪ್ರಸಿದ್ಧವಾಯಿತು ಎಂದು ಹೇಳಿದಿರಿ. ಹೀಗೆ ವಿಭಾಗವನ್ನು ಮಾಡುವುದಾದರೆ, ತೃತೀಯಪಾದದಲ್ಲಿ ಸಮನ್ವಯ ಮಾಡುವ ಜ್ಯೋತಿಶಬ್ದವೂ ಸಹ ಇದೇ ನ್ಯಾಯದಿಂದ ಉಭಯತ್ರಪ್ರಸಿದ್ಧವಾಗಿ-ರಲೇಬೇಕಾದೀತು. ಆದ್ದರಿಂದ 'ಜ್ಯೋತಿರ್ದರ್ಶನಾತ್' ಎಂಬ ಅಧಿಕರಣಕ್ಕೆ ಮೂರನೇ ಸೂತ್ರದಲ್ಲಿ ಅಂತರ್ಭಾವವೂ ಸಹ ಇಲ್ಲದೇ ಇರಬೇಕಾದೀತೆಂಬುದಾಗಿ 'ನನ್ವೇವಂ' ಇತ್ಯಾದಿ ವಾಕ್ಯದಿಂದ ಹೇಳುತ್ತಿದ್ದಾರೆ. ಜ್ಯೋತಿರಧಿಕರಣವೂ ಸಹ ಪ್ರಥಮಪಾದದಲ್ಲಿಯೇ ಸೇರಬೇಕಾದೀತೆಂಬುದು ವಾಕ್ಯದ ಅಭಿಪ್ರಾಯ.

ಈ ಆಕ್ಷೇಪಕ್ಕೆ 'ಮೈವಂ' ಇತ್ಯಾದಿ ವಾಕ್ಯದಿಂದ ಉತ್ತರಿಸುತ್ತಿದ್ದಾರೆ. ತೃತೀಯಪಾದದಲ್ಲಿ ಸಮನ್ವಯ ಮಾಡಿದ್ದಕ್ಕೆ ಉಭಯತ್ರಪ್ರಸಿದ್ಧಿಯನ್ನು ಬೇರೆ ಕ್ರಮದಲ್ಲಿಯೇ ಸಮರ್ಥಿಸುತ್ತಿದ್ದಾರೆ. ಪೂರ್ವೋಕ್ತಿ ಹಾಗೂ ಅನ್ಯತ್ರಪ್ರಸಿದ್ಧಿ ಇವುಗಳನ್ನು ವಿವಕ್ಷಿಸಿ ಉಭಯತ್ರಪ್ರಸಿದ್ಧಿಯನ್ನು ಅವು ಹೇಳುವುದಿಲ್ಲ; ಹೊರತಾಗಿ ಪ್ರವೃತ್ತಿನಿಮಿತ್ತ ಸಾಧಾರಣವಾದ್ದರಿಂದ ಉಭಯತ್ರಪ್ರಸಿದ್ಧತ್ವವನ್ನು ಹೇಳುತ್ತೇವೆ. ಆದ್ದರಿಂದ ಪೂರ್ವೋಕ್ತ ಆಕ್ಷೇಪವನ್ನು ಮಾಡಲಿ ಬಿಡಲಿ ದೋಷ ಬರುವುದಿಲ್ಲ.

ನೀವು ಹೇಳುವ ಪ್ರಕಾರ ಜ್ಯೋತಿಶಬ್ದವೂ ಉಭಯತ್ರಪ್ರಸಿದ್ಧ ಎಂದಂತಾಯಿತು. ಹಾಗಾದರೆ ಪ್ರಥಮಪಾದದಲ್ಲಿ ಅದರ ಸಮನ್ವಯವನ್ನು ಹೇಗೆ ಮಾಡುತ್ತೀರಿ? ಎಂಬ ಪ್ರಶ್ನೆಗೆ 'ಜ್ಯೋತಿಶ್ಚರಣ' ಎಂಬ ವಾಕ್ಯದಿಂದ ಉತ್ತರಿಸುತ್ತಿದ್ದಾರೆ. ಅಗ್ನಿಯಲ್ಲಿ ಜ್ಯೋತಿಶಬ್ದಕ್ಕೆ ಲೋಕಪ್ರಸಿದ್ಧಿ ಇರುವುದರಿಂದಷ್ಟೇ ಅನ್ಯತ್ರಪ್ರಸಿದ್ಧಿ ಎಂದು ಪ್ರಥಮಪಾದದಲ್ಲಿ ಸಮರ್ಥಿಸಲಾಗಿದೆ. ಒಂದು ವೇಳೆ ಜ್ಯೋತಿಯು ಜೀವನೆಂದು ಪೂರ್ವಪಕ್ಷ ಮಾಡಿದರೆ ಉಭಯತ್ರಪ್ರಸಿದ್ಧವಾಗುವುದರಿಂದ ಮೂರನೇ ಪಾದದಲ್ಲಿ ಸೇರುತ್ತದೆ.

'ಯತ್ರ ಪೂರ್ವೋಕ್ತ' ಎಂದರೆ ಎಲ್ಲಿ ಪೂರ್ವೋಕ್ತ ಆಕ್ಷೇಪವೂ ಇರುವುದಿಲ್ಲವೊ ಅಲ್ಲಿ ಉಭಯತ್ರಸಿದ್ಧತ್ವವು ಇರುವುದಿಲ್ಲವೆಂದು ನೀವು ವ್ಯಾಪ್ತಿ ಹೇಳಿದರೆ ಮತ್ತೊಂದು ದೋಷ ಬರುತ್ತದೆ - ಚತುರ್ಥಪಾದದಲ್ಲಿ ಸಮನ್ವಯ ಮಾಡುವ ''ಕಾರಣತ್ವೇನ ಚಾಕಾಶಾದಿಷು ಯಥಾ ವ್ಯಪದಿಷ್ಟೋಕ್ತೇಃ'' ''ಜ್ಯೋತಿರುಪಕ್ರಮಾತ್'' ಎಂಬ ಸೂತ್ರಗಳಲ್ಲಿ ಹೇಳುವ ಆಕಾಶ ಹಾಗೂ ಜ್ಯೋತಿಶಬ್ದಗಳೂ ಸಹ ಉಭಯತ್ರಪ್ರಸಿದ್ಧಗಳಾಗಬೇಕಾದೀತು? ಎಂಬ ಪ್ರಶ್ನೆಗೆ 'ಕಾರಣತ್ವೇನ' ಎಂಬ ವಾಕ್ಯದಿಂದ ಉತ್ತರಿಸುತ್ತಿದ್ದಾರೆ- ಈ ಅಧಿಕರಣಗಳಲ್ಲಿ ಆಕಾಶ ಹಾಗೂ ಜ್ಯೋತಿಶಬ್ದಸಮನ್ವಯವನ್ನಷ್ಟೇ ಮಾಡುತ್ತಿಲ್ಲ; ಹೊರತಾಗಿ ''ಅವಾಂತರಂ ಕಾರಣಂಚ'' ಎಂಬುದಾಗಿ ಅಣುಭಾಷ್ಯದಲ್ಲಿ ಹೇಳಿದಂತೆ ಅವಾಂತರಕಾರಣತ್ವವನ್ನು ಸಮರ್ಥಿಸುತ್ತಿದ್ದಾರೆ. ಮತ್ತು ''ಪೃಥಿವ್ಯಾಃ ಓಷಧಯಃ'' ಎಂಬಲ್ಲಿ ಕೇಳಿಸುತ್ತಿರುವ 'ಓಷಧಿ' ಮೊದಲಾದ ನಾಮಾತ್ಮಕಶಬ್ದಗಳ ಸಮನ್ವಯವನ್ನೂ ಮಾಡುತ್ತಿದ್ದಾರೆ. ಮತ್ತು ಯಾಗವಾಚಕ ಶಬ್ದಗಳ ಸಮನ್ವಯವನ್ನು ಮತ್ತು ಕಾಲವಾಚಕ ಶಬ್ದಗಳ ಸಮನ್ವಯವನ್ನೂ ಮಾಡುತ್ತಿದ್ದಾರೆ.

ಆಕ್ಷೇಪ - ಪೂರ್ವೋಕ್ತಿ ಹಾಗೂ ಅನ್ಯತ್ರಪ್ರಸಿದ್ಧಿಯಿಂದ ಉಭಯತ್ರಪ್ರಸಿದ್ಧತ್ವವನ್ನು ಹೇಳಬೇಕು. ಇವುಗಳು ಪ್ರಾಣಶಬ್ದದಲ್ಲಿ ಇರುವುದಿಲ್ಲ. ಆದ್ದರಿಂದ ಪ್ರಾಣಶಬ್ದವು ಅನ್ಯತ್ರಪ್ರಸಿದ್ಧವಾಗುತ್ತದೆಂದು ಹೇಳಿದಿರಿ. ಇದು ತಪ್ಪು. ಏಕೆಂದರೆ ಈ ಪ್ರಾಣನು ಅನ್ಯನಾದರೆ ಹಿಂದಿನ ಪ್ರಾಣಾಧಿಕರಣದಲ್ಲಿ ಹೇಳಲ್ಪಟ್ಟ ಪ್ರಾಣನೂ ಸಹ ಅನ್ಯನೇ ಆಗುತ್ತಾನೆಂಬ ಅವಧಾರಣ ಪೂರ್ವಕವಾದ ಆಕ್ಷೇಪ ಬರುವುದಿಲ್ಲ. ಹೊರತಾಗಿ ಪೂರ್ವಾಧಿಕರಣದ ಪ್ರಾಣನು ವಿಷ್ಣುವೋ ಅಥವಾ ಬೇರೆಯವನೋ? ಎಂಬ ಸಂಶಯವಷ್ಟೇ ಬರುತ್ತದೆಂದು ಹೇಳಿದಿರಿ. ಹಾಗಾದರೆ ಕೇವಲ ಶಂಕಾಮಾತ್ರವು ಉಭಯತ್ರಪ್ರಸಿದ್ಧಿಗೆ ವಿರೋಧವಲ್ಲ. ಏಕೆಂದರೆ ಅಂತಿಮ-ಪ್ರಾಣಾಧಿಕರಣದಲ್ಲಿ ಹೇಳಲ್ಪಟ್ಟ ಪ್ರಾಣನಿಗೆ ಲೋಕತಃ ಅನ್ಯತ್ರಪ್ರಸಿದ್ಧಿ ಇದೆ. ಮತ್ತು ಪೂರ್ವೋಕ್ತಿಯೂ ಇದೆ. ಆದ್ದರಿಂದ ಪ್ರಾಣಶಬ್ದವು ಉಭಯತ್ರಪ್ರಸಿದ್ಧವಾಗುತ್ತದೆ. ಹೀಗಿರುವಾಗ ಅನ್ಯತ್ರಪ್ರಸಿದ್ಧವೆಂದು ಹೇಗೆ ಸಮರ್ಥಿಸುತ್ತೀರಿ?

ಸಮಾಧಾನ - ಈ ಆಕ್ಷೇಪಕ್ಕೆ ಉತ್ತರಿಸುವುದಕ್ಕಾಗಿ 'ಯದ್ವಾ' ಇತ್ಯಾದಿಯಾಗಿ ಮತ್ತೊಂದು ಪಕ್ಷವನ್ನು ಆಶ್ರಯಿಸಿದ್ದಾರೆ. ಪೂರ್ವೋಕ್ತಿಯನ್ನು ಆಕ್ಷೇಪ ಮಾಡದಿದ್ದರೂ ಪೂರ್ವೋಕ್ತಿಯ ವಿಷಯದಲ್ಲಿ ಸಂಶಯ ಪಡಲಾಗಿದೆ. ಸಂಶಯವಿದ್ದರೂ ಸಹ ಅನ್ಯತ್ರಪ್ರಸಿದ್ಧವೆಂದು ಹೇಳಬಹುದು. ಈ ಸಮಾಧಾನವನ್ನು ಹೇಳಿಯೇ ಆಕ್ಷೇಪವನ್ನು ನಿರಾಕರಿಸಲು ಬರುತ್ತದೆ. ಆದರೂ ಸಹ ಗ್ರಂಥಕಾರರು 'ಯದ್ವಾ' ಇತ್ಯಾದಿಯಾಗಿ ಪಕ್ಷಾಂತರವನ್ನು ಆಶ್ರಯಿಸಿದ್ದಾರೆ. ಜ್ಯೋತಿಶಬ್ದದಲ್ಲಿಯೂ ಪ್ರವೃತ್ತಿನಿಮಿತ್ತ ಸಾಧಾರಣವಾಗಿರುವುದರಿಂದ ಪೂರ್ವಪಕ್ಷಿಗೆ ಅಭಿಮತವಾಗಿದೆ ಎಂದು ಅಭಿಪ್ರಾಯ. 'ವೈ ನಾಮ' ಎಂಬ ವಾಕ್ಯದಲ್ಲಿ ಪ್ರಸಿದ್ಧಾಕಾಶವೇ

ನಾಮರೂಪನಿರ್ವಹಿತವಾಗಿದೆಯೆಂದು ಹೇಳಿದಂತಾಯಿತು. ಇದರಿಂದ ಅಪ್ರಸಿದ್ಧವಾದ ಆಕಾಶವು ನಾಮರೂಪಗಳಿಂದ ನಿರ್ವಹಿತವಾಗಿಲ್ಲವೆಂದು ತಿಳಿಯುತ್ತದೆ. ಒಂದುವೇಳೆ ಅಪ್ರಸಿದ್ಧವಾದ ಆಕಾಶವನ್ನು ಒಪ್ಪದಿದ್ದರೆ ಪ್ರಸಿದ್ಧವಾದ ಆಕಾಶವು ನಾಮರೂಪಗಳಿಂದ ನಿರ್ವಹಿತವಾಗಿದೆಯೆಂಬುದಾಗಿ ಹೇಳಲು ಸಾಧ್ಯವೇ ಇಲ್ಲವೆಂದು ಈ ವಾಕ್ಯದ ಅಭಿಪ್ರಾಯ. 'ಪೂರ್ವಪಕ್ಷೋದಯಶ್ಚ ಎಂಬಲ್ಲಿರುವ 'ಚ' ಶಬ್ದದಿಂದ ಪೂರ್ವಪಕ್ಷದ ಪ್ರಯೋಜನವೂ ಸಹ ಸಿದ್ಧವಾಯಿತೆಂದು ತಿಳಿಯಬೇಕು. 'ಯುಜ್ಯತೇ' ಎಂಬ ಪದವನ್ನು ಶೇಷಪೂರಣಮಾಡಿಕೊಳ್ಳಬೇಕು.

ಆದ್ದರಿಂದ ಆಂತಿಮಪ್ರಾಣಾಧಿಕರಣಕ್ಕೆ ಪಾದಸಂಗತಿ ಪೂರ್ವಪಕ್ಷದಉದಯ ಮತ್ತು ಪೂರ್ವಪಕ್ಷದ ಫಲವು ಸಿದ್ಧವಾಯಿತು.

**ಗುರುರಾಜೀಯಮ್ – ನನ್ವೇವಂ ಕಾರಣತ್ವೇನೇತ್ಯಾದಾವಧಿಕಸಮನ್ವಯೇಪಿ ಸಾಕ್ಷಾತ್ಸೂತ್ರೋಪಾತ್ತ-ಜ್ಯೋತಿಶ್ಶಬ್ದಾಂಶ ಉಭಯತ್ರಪ್ರಸಿದ್ಧತಾ ಸ್ಯಾದಿತ್ಯತ ಆಹ – ಯಚ್ಚೇತಿ ॥ ನನ್ವಾಕಾಶಶಬ್ದ-ಸಮನ್ವಯಸ್ಯಾಪಿ ವಿರೋಧಿಸರ್ವಬಾಹ್ಯಲ್ಯಕಾರಣತ್ವಾದಿನಿಷೇಧಿನಾಮಿತ್ಯಾದ್ಯುಕ್ತರೀತ್ಯಾ ಕಾರಣತ್ವೇನೇತ್ಯ-ತ್ರಾಙ್ಗೀಕಾರಾತ್ಕಥಮೇತತ್ । ಕಿಞ್ಚ ಜ್ಯೋತಿರ್ದರ್ಶನಾದಿತ್ಯತ್ರೇವಾತ್ರಾಪಿ ಪೂರ್ವೋಕ್ತನ್ಯಾಯೇನ ಪ್ರಾಣ-ಶಬ್ದಪ್ರವೃತ್ತಿನಿಮಿತ್ತಸಾಧಾರಣ್ಯೇನಾಸ್ತ್ವುಭಯತ್ರಪ್ರಸಿದ್ಧತಾ । ಪ್ರಸಙ್ಗಾದಿತ್ಯತೋ ವಾಹ – ಯಚ್ಚೇತಿ ॥ ಪಾದಸಙ್ಗತಿರಿತಿ ॥ ಉಪಲಕ್ಷಣಂ ಚೈತತ್ । ಪ್ರಯೋಜನೋಕ್ತಿಶ್ಚೇತ್ಯಪಿ ದ್ರಷ್ಟವ್ಯಮ್ ॥**

## ಸಾರ

''ಹಿಂದಿನ ಅಧಿಕರಣದ ಸಿದ್ಧಾಂತ ಪ್ರಮೇಯವನ್ನು ಆಕ್ಷೇಪ ಮಾಡಿದ್ದರೆ ಅನ್ಯತ್ರಪ್ರಸಿದ್ಧವಾಗುತ್ತದೆ. ಹಿಂದಿನ ಅಧಿಕರಣದ ಪ್ರಮೇಯವನ್ನು ಆಕ್ಷೇಪ ಮಾಡದಿದ್ದರೆ ಉಭಯತ್ರಪ್ರಸಿದ್ಧ ಎನಿಸುತ್ತದೆ'' ಎಂಬ ವ್ಯಾಪ್ತಿಯನ್ನು ಹೇಳಿದಂತಾಯಿತು.

ವಸ್ತುತಃ ಮೂರನೇ ಪಾದದಲ್ಲಿರುವ 'ಜ್ಯೋತಿರ್ದರ್ಶನಾತ್' ಎಂಬ ಸೂತ್ರದಲ್ಲಿ ಪ್ರಥಮಪಾದದಲ್ಲಿರುವ ಜ್ಯೋತಿರಧಿಕರಣದಲ್ಲಿರುವ ಪ್ರಮೇಯವನ್ನು ಆಕ್ಷೇಪಿಸಿಲ್ಲ. ಆದ್ದರಿಂದ ಅನ್ಯತ್ರಪ್ರಸಿದ್ಧವಾಗಬೇಕೆಂಬ ಸಂಶಯವು ಬರುತ್ತದೆ. ಆದರೆ ಜ್ಯೋತಿಶಬ್ದದಿಂದ ಅಗ್ನಿ ಎಂಬ ಪೂರ್ವಪಕ್ಷವನ್ನು ಮೂರನೇ ಪಾದದಲ್ಲಿ ಮಾಡಿಯೇ ಇಲ್ಲ. ಪ್ರಥಮಪಾದದಲ್ಲಿ ಅಗ್ನಿ ಎಂದು ಪೂರ್ವಪಕ್ಷ ಮಾಡಲಾಗಿದೆ. ಆದ್ದರಿಂದ ಎರಡೂ ಅಧಿಕರಣಗಳಲ್ಲಿ ಜ್ಯೋತಿಶಬ್ದವು ಸಮಾನವಾಗಿದ್ದರೂ ಬೇರೆ ಬೇರೆ ಅರ್ಥಗಳಲ್ಲಿ ಜ್ಯೋತಿಶಬ್ದವು ಪ್ರಯುಕ್ತವಾಗಿದೆ. ಪ್ರಥಮ ಪಾದದಲ್ಲಿ ಅಗ್ನಿಯೆಂದು ಪೂರ್ವಪಕ್ಷ ಮಾಡಿದರೆ, ತೃತೀಯಪಾದದಲ್ಲಿ ಜೀವನೆಂದು ಪೂರ್ವಪಕ್ಷ ಮಾಡಲಾಗಿದೆ. ಆದ್ದರಿಂದ ಹಿಂದಿನ ಅಧಿ-ಕರಣದ ಪ್ರಮೇಯವನ್ನು ಹೇಗೆ ತಾನೇ ಆಕ್ಷೇಪಿಸಲು ಸಾಧ್ಯವಾಗುತ್ತದೆ.

ಹಾಗಾದರೆ ನಾಲ್ಕನೇ ಪಾದದಲ್ಲಿ ಆಕಾಶ ಹಾಗೂ ಜ್ಯೋತಿಶಬ್ದದ ಸಮನ್ವಯವನ್ನು ಮಾಡಿದ್ದಾರೆ. ಆದರೆ ಹಿಂದಿನ ಅಧಿಕರಣದ ಪ್ರಮೇಯವನ್ನು ಆಲ್ಲಿಯೂ ಸಹ ಆಕ್ಷೇಪಿಸಿಲ್ಲ. ಆದ್ದರಿಂದ ಆ ಶಬ್ದಗಳು ಉಭಯತ್ರಪ್ರಸಿದ್ಧವಾಗಬೇಕಲ್ಲವೆ? ಎಂದು ಪ್ರಶ್ನೆ ಬರುತ್ತದೆ. ಇದೂ ಸಹ ತಪ್ಪು. ಒಂದು ವೇಳೆ 'ಕಾರಣತ್ವೇನ' ಎಂಬ ಸೂತ್ರದಲ್ಲಿ 'ಜ್ಯೋತಿರುಪಕ್ರಮಾತ್' ಎಂಬ ಸೂತ್ರದಲ್ಲಿ ಕೇವಲ ಆಕಾಶ ಹಾಗೂ ಜ್ಯೋತಿಶಬ್ದಗಳ

ಸಮನ್ವಯವು ವಿವಕ್ಷಿತವಾಗಿದ್ದಲ್ಲಿ, ನಿಮ್ಮ ಆಕ್ಷೇಪವನ್ನು ಒಪ್ಪಬಹುದಿತ್ತು. ಆದರೆ ಯಾಗವಾಚಕವಾದ ಮತ್ತು ಕಾಲವಾಚಕವಾದ ಅನೇಕ ಶಬ್ದಗಳ ಸಮನ್ವಯಗಳನ್ನು ಆ ಅಧಿಕರಣಗಳಲ್ಲಿ ಮಾಡುತ್ತಿದ್ದಾರೆ. ಕೇವಲ ಲೋಕಪ್ರಸಿದ್ಧಿ ಹಾಗೂ ಪೂರ್ವೋಕ್ತಿಗಳು ಇದ್ದರೆ ಮಾತ್ರ ಉಭಯತ್ರಪ್ರಸಿದ್ಧವೆನ್ನಬೇಕು.

ಅಥವಾ ಲೋಕದಿಂದ ಅನ್ಯತ್ರಪ್ರಸಿದ್ಧವಾಗಿದ್ದರೆ ಮಾತ್ರ ಅನ್ಯತ್ರಪ್ರಸಿದ್ಧ ಎನಿಸುತ್ತದೆ. ಮೂರನೇ ಪಾದದಲ್ಲಿರುವ ಆಕಾಶಶಬ್ದವು ಏಕೆ ಉಭಯತ್ರಪ್ರಸಿದ್ಧವೆಂದರೆ, 'ವೈ ನಾಮ' ಎಂಬ ಶ್ರುತಿಯಲ್ಲಿರುವ ನಿಪಾತದಿಂದ ಪ್ರಸಿದ್ಧಾಕಾಶ ಎಂಬರ್ಥವು ತಿಳಿಯುತ್ತದೆ. ಇದರಿಂದ 'ಅಪ್ರಸಿದ್ಧಾಕಾಶ' ಎಂಬ ಮತ್ತೊಂದು ಪದಾರ್ಥವನ್ನು ಪೂರ್ವಪಕ್ಷಿಯು ಒಪ್ಪಿದ್ದಾನೆಂದು ಸಿದ್ಧವಾಗುತ್ತದೆ. ಈ ಕಾರಣದಿಂದಷ್ಟೇ 'ಆಕಾಶ' ಶಬ್ದವು ಉಭಯತ್ರಪ್ರಸಿದ್ಧವಾಗಿದೆ.

* * * *

## ಸಿದ್ಧಾಂತ ಸ್ಥಾಪನೆ

ತಾತ್ಪರ್ಯಚಂದ್ರಿಕಾ

**ಸಿದ್ಧಾನ್ತಸ್ತು – ''ತಂ ದೇವಾಃ ಪ್ರಾಣಯನ್ತ'' ಇತಿ ದೇವೋಪದೇಶ್ಯತ್ವಂ, ''ತಂ ಭೂತಿರಿತಿ ದೇವಾ ಉಪಾಸಾಞ್ಚಕ್ರಿರೇ'' ಇತಿ ಭೂತಿತ್ವೇನ ದೇವೋಪಾಸ್ಯತ್ವಂ, ''ಸರ್ವೇ ವೇದಾಃ'' ಇತಿ ಸರ್ವವೇದಪ್ರತಿಪಾದ್ಯತ್ವಂ, ''ಪ್ರಾಣೋ ಹ್ಯೇಷ ಯ ಏಷ ತಪತಿ'' ಇತಿ ಸೂರ್ಯಮಣ್ಡಲಸ್ಥತ್ವಂ, ''ಪ್ರಾಣಸ್ತ್ವಂ ಪ್ರಾಣಃ ಸರ್ವಾಣಿ ಭೂತಾನಿ'' ಇತಿ ಸರ್ವಾನ್ತರ್ಯಾಮಿತ್ವಂ, ''ಸರ್ವಾಣಿ ಭೂತಾನ್ಯಾಪಿಪೀಲಿಕಾಭ್ಯಃ ಪ್ರಾಣೇನ ಬೃಹತ್ಯಾ ವಿಷ್ಟಬ್ಧಾನಿ'' ಇತಿ ಸರ್ವವ್ಯಾಪಿತ್ವಮಿತ್ಯಾದೀನಿ ಪ್ರಾಣೇ ಶ್ರೂಯನ್ತೇ ।**

**ತಾನಿ ಚ ''ವಿಷ್ಣುಮೇವಾನಯನ್ ದೇವಾಃ'' ಇತ್ಯಾದಿಭಾಷ್ಯೋಕ್ತಸ್ಮೃತ್ಯಾ ''ಸರ್ವೇ ವೇದಾ ಯತ್ಪದಮಾಮನನ್ತಿ'' ''ಯ ಏಷೋಽನ್ತರಾದಿತ್ಯೇ ಹಿರಣ್ಮಯಃ ಪುರುಷೋ ದೃಶ್ಯತೇ ತಸ್ಯ ಯಥಾ ಕಪ್ಯಾಸಂ ಪುಣ್ಡರೀಕಮೇವಮಕ್ಷಿಣೀ'' ''ಪುರುಷ ಏವೇದಂ ಸರ್ವಮ್'' 'ಅನ್ತರ್ಬಹಿಶ್ಚ ತತ್ಸರ್ವಂ ವ್ಯಾಪ್ಯ ನಾರಾಯಣಃ ಸ್ಥಿತಃ' ಇತ್ಯಾದಿಶ್ರುತಿಭಿಃ, ''ವೇದೈಶ್ಚ ಸರ್ವೈರಹಮೇವ ವೇದ್ಯಃ'' ''ಧ್ಯೇಯಸ್ಸದಾ ಸವಿತೃಮಣ್ಡಲ-ಮಧ್ಯವರ್ತೀ''**

**ತಪಾಮ್ಯಹಮಹಂ ವರ್ಷಂ ನಿಗೃಹ್ಣೇಮ್ಯುತ್ಸೃಜಾಮಿ ಚ ।**
**ವಿಷ್ಟಭ್ಯಾಹಮಿದಂ ಕೃತ್ಸ್ನಮೇಕಾಂಶೇನ ಸ್ಥಿತೋ ಜಗತ್ ॥**
**ಇತ್ಯಾದಿಸ್ಮೃತಿಭಿಶ್ಚ ವಿಷ್ಣೋರೇವ ।**

ಅನುವಾದ - ಪೂರ್ವಪಕ್ಷದಲ್ಲಿ ಆಕ್ಷೇಪಿಸಲ್ಪಟ್ಟ ಲಿಂಗಗಳಿಗಿಂತಲೂ ಸಿದ್ಧಾಂತದ ಲಿಂಗಗಳು ಮತ್ತಷ್ಟು ನಿರವಕಾಶಗಳಾಗಿವೆ. ಏತರೇಯದಲ್ಲಿ ಮೊದಲಿನಿಂದಲೂ ಪ್ರಸಕ್ತವಾದ ಸಿದ್ಧಾಂತಲಿಂಗಗಳು ಹೀಗಿವೆ -

''ತಂ ದೇವಾಃ ಪ್ರಾಣಯಂತ'' ದೇವತೆಗಳು ಪರಮಾತ್ಮನನ್ನು ಉಪದೇಶಿಸಿದರು. (ಪ್ರಾಣಯಂತ = ಶಿಷ್ಯರಲ್ಲಿಗೆ ಕರೆದುಕೊಂಡು ಹೋದರು) ಎಂಬಲ್ಲಿ 'ದೇವೋಪದೇಶ್ಯತ್ವ' ಎಂಬ ಲಿಂಗವು ಕೇಳಿಸುತ್ತಿದೆ.

''ತಂ ಭೂತಿರಿತಿ ದೇವಾ ಉಪಾಸಾಂಚಕ್ರಿರೇ'' ದೇವತೆಗಳು ಪರಮಾತ್ಮನನ್ನು ಐಶ್ವರ್ಯ-ಸ್ವರೂಪನೆಂದು ಉಪಾಸನೆ ಮಾಡಿದರು ಎಂದು ಪ್ರಾರಂಭದಲ್ಲಿ 'ಭೂತಿತ್ವೇನ ದೇವೋಪಾಸ್ಯತ್ವ' ಎಂಬ ಲಿಂಗವು ಕೇಳಿಸುತ್ತಿದೆ.

''ಸರ್ವೇ ವೇದಾಃ'' ಎಂಬಲ್ಲಿ ಬೇರೆ ಯಾರಲ್ಲಿಯೂ ಇಲ್ಲದ 'ಸರ್ವವೇದಪ್ರತಿಪಾದ್ಯತ್ವ'ಲಿಂಗವು ಶ್ರುತವಾಗಿದೆ.

''ಪ್ರಾಣೋ ಹ್ಯೇಷ ಯ ಏಷ ತಪತಿ'' ''ಸೂರ್ಯಮಂಡಲದಲ್ಲಿದ್ದು ಪ್ರಾಣನೇ ತಾಪವನ್ನು ಕೊಡುತ್ತಾನೆ'' ಎಂಬುದಾಗಿ ''ಸೂರ್ಯಮಂಡಲಸ್ಥತ್ವ'' ಎಂಬ ಲಿಂಗವು ಕೇಳಿಸುತ್ತಿದೆ.

''ಪ್ರಾಣಸ್ತ್ವಂ ಪ್ರಾಣಃ ಸರ್ವಾಣಿ ಭೂತಾನಿ'' ನೀನು ಪ್ರಾಣ, ನಾನು ಪ್ರಾಣ ಎಲ್ಲ ಭೂತಗಳೂ ಪ್ರಾಣನೆಂದು ಶ್ರುತಿ ಹೇಳುತ್ತಿದೆ. ಇದರಿಂದ 'ಸರ್ವಂತರ್ಯಾಮಿತ್ವ' ಎಂಬ ಲಿಂಗವನ್ನು ಹೇಳಿದಂತಾಯಿತು.

''ಸರ್ವಾಣಿ ಭೂತಾನ್ಯಾಪಿಪೀಲಿಕಾಭ್ಯಃ ಪ್ರಾಣೇನ ಬೃಹತ್ಯಾ ವಿಷ್ಟಬ್ಧಾನಿ'' ''ಇರುವೆಯಿಂದ ಪ್ರಾರಂಭಿಸಿ ಸಕಲ ಭೂತಗಳು ವ್ಯಾಪ್ತನಾದ ಪ್ರಾಣನಿಂದ ಸಂಪರ್ಕ ಹೊಂದಿವೆ'' ಎಂಬ ಶ್ರುತಿಯಲ್ಲಿ ಸರ್ವವ್ಯಾಪಿತ್ವವೆಂಬ ಲಿಂಗವು ಕೇಳಿಸುತ್ತಿವೆ. ಮೇಲೆ ಹೇಳಿದ ಈ ಎಲ್ಲ ಲಿಂಗಗಳನ್ನು ಐತರೇಯ ಶ್ರುತಿಯು ಪ್ರಾಣನಲ್ಲಿ ಹೇಳುತ್ತಿದೆ.

ಈ ಎಲ್ಲಾ ಲಿಂಗಗಳು ವಿಷ್ಣುವಿನದ್ದೇ ಆಗಿವೆಯೆನ್ನಲು ಅನೇಕ ಪ್ರಮಾಣಗಳಿವೆ. ''ವಿಷ್ಣುಮೇವಾನಯನ್ ದೇವಾಃ'' ದೇವತೆಗಳು ಶಿಷ್ಯರಿಗೆ ವಿಷ್ಣುವನ್ನು ಉಪದೇಶಿಸಿದರು ಎಂಬ ಐತರೇಯ ಭಾಷ್ಯದಲ್ಲಿ ಹೇಳಲ್ಪಟ್ಟ ಸ್ಮೃತಿಯಿಂದ 'ತಂ ದೇವಾಃ ಪ್ರಾಣಯಂತ' ಎಂಬಲ್ಲಿ ಹೇಳಲ್ಪಟ್ಟ ದೇವೋಪದೇಶ್ಯತ್ವವು ವಿಷ್ಣುವಿನಲ್ಲೇ ಹೊಂದುತ್ತದೆ.

ಕಾಠಕೋಪನಿಷತ್ತಿನಲ್ಲಿರುವ ''ಸರ್ವೇ ವೇದಾ ಯತ್ಪದಮಾಮನಂತಿ'' ಹೀಗೆ ಪ್ರಾರಂಭಿಸಿ 'ತದ್ವಿಷ್ಣೋಃ ಪರಮಂ ಪದಂ' ಎಂದು ಕಾಠಕದಲ್ಲಿ ಹೇಳಿದ್ದರಿಂದ ಸರ್ವವೇದಪ್ರತಿಪಾದ್ಯತ್ವವು ವಿಷ್ಣುವಿನ ಧರ್ಮವೆಂದು ತಿಳಿಯುತ್ತದೆ.

''ಯ ಏಷೋಽಂತರಾದಿತ್ಯೇ ಹಿರಣ್ಮಯಃ ಪುರುಷೋ ದೃಶ್ಯತೇ ತಸ್ಯ ಯಥಾ ಕಪ್ಯಾಸಂ ಪುಂಡರೀಕಮೇವಮಕ್ಷಿಣೀ'' ಆದಿತ್ಯನಲ್ಲಿ ಹಿರಣ್ಮಯಪುರುಷನನ್ನು ಹೇಳಿ ಅವನಲ್ಲಿ ಪುಂಡರೀಕಾಕ್ಷತ್ವಲಿಂಗವನ್ನು ಹೇಳಿದ್ದರಿಂದ ವಿಷ್ಣುವಿನಲ್ಲಿಯೇ ಸೂರ್ಯಮಂಡಲಸ್ಥಲಿಂಗವು ಬರುತ್ತದೆ.

''ಪುರುಷ ಏವೇದಂ ಸರ್ವಮ್'' ಇತ್ಯಾದಿ ಶ್ರುತಿಗಳಿಂದ ಸರ್ವಾಂತರ್ಯಾಮಿತ್ವವು ವಿಷ್ಣುವಿನ ಲಿಂಗಗಳೆಂದು ತಿಳಿಯುತ್ತದೆ.

''ಅಂತರ್ಬಹಿಶ್ಚ ತತ್ಸರ್ವಂ ವ್ಯಾಪ್ಯ ನಾರಾಯಣಸ್ಸ್ಥಿತಃ''

''ವೇದೈಶ್ಚ ಸರ್ವೈರಹಮೇವ ವೇದ್ಯಃ'' ಶ್ರುತಿಗಳಿಂದ ಸಕಲವೇದಪ್ರತಿಪಾದತ್ವವು ''ಧ್ಯೇಯಸ್ಸದಾ ಸವಿತೃಮಂಡಲಮಧ್ಯವರ್ತೀ'' ಎಂಬ ಶ್ರುತಿಯಿಂದ ಸೂರ್ಯಮಂಡಲಸ್ಥಿತತ್ವವು. ''ತಪಾಮ್ಯಹಮಹಂ ವರ್ಷಮ್'' ಎಂಬಲ್ಲಿ ಸರ್ವಂತರ್ಯಾಮಿತ್ವವು ''ವಿಷ್ಣೂಹ್ಯಮಿದಂ ಕೃತ್ಸ್ನಂ'' ಎಂಬಲ್ಲಿ ಸರ್ವವ್ಯಾಪಿತ್ವವು ವಿಷ್ಣುವಿನ ಲಿಂಗವೆಂದು ಹೇಳಿದ್ದಾರೆ.

**ಪ್ರಕಾಶಃ** – ಏವಂ ನಿರವಕಾಶಲಿಙ್ಗಾದಿಭಿಃ ಪೂರ್ವಪಕ್ಷೇ ಕೃತೇ ತತೋऽಪಿ ಪ್ರಬಲನಿರವಕಾಶವಿಷ್ಣುಲಿಙ್ಗಾದಿಬಾಹುಲ್ಯೇನ ಸಿದ್ಧಾನ್ತೋತ್ಥಿತಿಮಾಹ – **ಸಿದ್ಧಾನ್ತಸ್ತ್ವಿತಿ** ॥ 'ತಂ' ಪ್ರಾಣಂ ದೇವಾಃ ಶಿಷ್ಯಾದಿಷು ಸಮ್ಯಙ್ ನೀತವನ್ತ ಇತ್ಯರ್ಥಃ । ''**ಸ ಏಷೋऽಸುಃ ಸ ಏಷ ಪ್ರಾಣಃ**'' ''**ಏಷ ಭೂತಿಶ್ಚಾಭೂತಿಶ್ಚ**'' ''**ತಂ ಭೂತಿರಿತಿ ದೇವಾ ಉಪಾಸಾಞ್ಚಕ್ರಿರೇ**'' ಇತ್ಯತ್ರ ದೇವೋಪಾಸ್ಯತ್ವಂ, ''**ಸರ್ವೇ ವೇದಾಸ್ಸರ್ವೇ ಘೋಷಾಃ ಏಕೈವ ವ್ಯಾಹೃತಿಃ ಪ್ರಾಣ ಏವ**'' ಇತ್ಯತ್ರ ಸರ್ವವೇದೋಕ್ತತ್ವಮಿತ್ಯರ್ಥಃ ॥ **ಇತ್ಯಾದೀನೀತಿ** ॥ 'ಲಿಙ್ಗಾನಿ' ಇತಿ ಶೇಷಃ । ಉಪಲಕ್ಷಣಮೇತತ್, ''**ಬ್ರಹ್ಮೇಮಂ ಪುರುಷಂ**'' ''**ಉದರಂ ಬ್ರಹ್ಮ**'' ಇತ್ಯಾದಿಬ್ರಹ್ಮಶಬ್ದಾಭ್ಯಾಸೋऽಪಿ ಧ್ಯೇಯಃ । ನನು ಪೂರ್ವಪಕ್ಷೇऽಪಿ ಲಿಙ್ಗಬಾಹುಲ್ಯಸತ್ತ್ವಾತ್ಕಥಂ ನಿರ್ಣಯ ಇತ್ಯತಃ, ತಾನಿ ಸಾವಕಾಶಾನಿಯತ್ವನಿರವಕಾಶತ್ವಮೇಷಾಂ ಸಾಧಯತಿ – **ತಾನಿ ಚೇತಿ** ॥

**ವಿಷ್ಣುಮೇವಾನಯನ್ ದೇವಾ ವಿಷ್ಣುಂ ಭೂತಿಮುಪಾಸತೇ ।**
**ಸ ಏವ ಸರ್ವವೇದೋಕ್ತಸ್ತದ್ರಥೋ ದೇಹ ಉಚ್ಯತ ॥**

ಇತಿ ಸ್ಕಾನ್ದವಚನೇನೇತ್ಯರ್ಥಃ ।

**ಸರ್ವೇ ವೇದಾ ಯತ್ಪದಮಾಮನನ್ತಿ ತಪಾಂಸಿ ಸರ್ವಾಣಿ ಚ ಯದ್ವದನ್ತಿ ।**
**ಯದಿಚ್ಛನ್ತೋ ಬ್ರಹ್ಮಚರ್ಯಂ ಚರನ್ತಿ ತತ್ತೇ ಪದಂ ಸಙ್ಗ್ರಹೇಣ ಬ್ರವೀಮಿ ॥**

ಇತ್ಯುಪಕ್ರಮ್ಯ ''**ತದ್ವಿಷ್ಣೋಃ ಪರಮಂ ಪದಮ್**'' ಇತಿ ಕಾಠಕೋಕ್ತೇಃ ಸರ್ವವೇದೋಕ್ತತ್ವಸ್ಯ ವಿಷ್ಣೋರವಗಮ ಇತ್ಯರ್ಥಃ । ಸೂರ್ಯಮಣ್ಡಲಮಧ್ಯಸ್ಥತ್ವಂ ವಿಷ್ಣ್ವೇಕನಿಷ್ಠಮಿತ್ಯಾಹ – **ಯ ಏಷ ಇತಿ** ॥ ಛಾನ್ದೋಗ್ಯೇ ಆದಿತ್ಯಾನ್ತರ್ಹಿರಣ್ಮಯಪುರುಷಮಭಿಧಾಯ ತಸ್ಯ ಪುಣ್ಡರೀಕಾಕ್ಷತ್ವಲಿಙ್ಗೋಕ್ತ್ಯಾ ವಿಷ್ಣುತ್ವಾವಗತಿರಿತ್ಯರ್ಥಃ । ವಿಸ್ತೃತಂ ಚೈತತ್ ''**ಅನ್ತಃ**'' ಇತ್ಯತ್ರಾಸ್ಮಾಭಿಃ । ಸರ್ವವ್ಯಾಪಿತ್ವಸ್ಯ ವಿಷ್ಣುಗತತ್ವೇ ವಾಕ್ಯದ್ವಯಮಾಹ – **ಪುರುಷ ಇತಿ** ॥

**ಪುರುಷ ಏವೇದಂ ಸರ್ವಂ ಯದ್ಭೂತಂ ಯಚ್ಚ ಭವ್ಯಮ್ ।**

ಇತಿ ಪುರುಷಸೂಕ್ತೇ ಸಹಸ್ರಶೀರ್ಷತ್ವಾದಿನಾ ಪ್ರಕೃತಸ್ಯ ವಿಷ್ಣೋರೇವ ಸರ್ವವ್ಯಾಪಿತ್ವಮುಚ್ಯತೇ, ಪುರುಷಸೂಕ್ತಂ ಚ ವಿಷ್ಣುಪರಮಿತಿ ''**ತಸ್ಮಿನ್ ಕಾಲೇ ಮಹಾರಾಜಾ**'' ಇತ್ಯಾದಿನಾ ಪ್ರಸಿದ್ಧಮಿತ್ಯರ್ಥಃ॥

"अन्तर्बहिः" इति नारायणोपनिषदि । आदिपदेन – सर्वे वेदा युक्तयस्सुप्रमाणाः ब्राह्मं ज्ञानं परमं त्वेकमेव । "य आदित्ये तिष्ठन्" "सर्वं खल्विदं ब्रह्म" इत्यादि गृह्यते ।

**वेदैश्च सर्वैरहमेव वेद्यो वेदान्तकृद्वेदविदेव चाहम् ।**

इति गीतावाक्येन, "ध्येयः सदा" इति नारसिंहपुराणवाक्येन,

**तपाम्यहमहं वर्षं निगृह्णाम्युत्सृजामि च इति**

**विष्टभ्याहमिदं कृत्स्नमेकांशेन स्थितो जगत्**

इत्यादिगीतावचनेन च विष्णोरेव तानि लिङ्गानीत्यर्थः । तथाच प्राणो विष्णुरेव, तल्लिङ्गानामत्रानुगमादिति सूत्रार्थ उक्तो भवति ।

ವಿವರಣೆ - ಇಲ್ಲಿಯ ತನಕ ನಿರವಕಾಶಲಿಂಗದಿಂದ ಪೂರ್ವಪಕ್ಷ ಮಾಡಿದ್ದಾಯಿತು. ಈಗ ಅದಕ್ಕಿಂತಲೂ ಪ್ರಬಲವಾದ, ನಿರವಕಾಶವಾದ ಮತ್ತು ಬಹಳವಾದ ವಿಷ್ಣುವಿನ ಲಿಂಗಗಳಿಂದ ಸಿದ್ಧಾಂತ ಸ್ಥಾಪನೆಯನ್ನು ಮಾಡುತ್ತಿದ್ದಾರೆ.

ತಂ = ಪ್ರಾಣನನ್ನು, ದೇವಾಃ = ದೇವತೆಗಳು, ಪ್ರಾಣಯಂತ = ಶಿಷ್ಯಾದಿಗಳಲ್ಲಿ ಚೆನ್ನಾಗಿ ಕರೆದುಕೊಂಡು ಹೋದರು ಎಂದು 'ತಂ ದೇವಾಃ' ಎಂಬ ಶ್ರುತಿಗೆ ಅರ್ಥ. "ಸ ಏಷೋಽಸುಃ ಸ ಏಷ ಪ್ರಾಣಃ" "ಏಷ ಭೂತಿಶ್ಚಾಭೂತಿಶ್ಚ" "ತಂ ಭೂತಿರಿತಿ ದೇವಾ ಉಪಸಾಂಚಕ್ರಿರೇ" ಎಂಬಲ್ಲಿ ದೇವೋಪಾಸ್ಯತ್ವವು ಪ್ರಾಣನಲ್ಲಿ ಕೇಳಿಸುತ್ತಿದೆ. "ಸರ್ವೇ ವೇದಾಸ್ಸರ್ವೇ ಘೋಷಾಃ ಏಕೈವ ವ್ಯಾಹೃತಿಃ ಪ್ರಾಣ ಏವ" ಎಂಬಲ್ಲಿ ಸರ್ವವೇದ-ಪ್ರತಿಪಾದ್ಯತ್ವವು ಪ್ರಾಣನಲ್ಲಿ ಕೇಳಿಸುತ್ತಿದೆ. 'ಇತ್ಯಾದೀನಿ' ಎಂಬ ಪದದ ಅನಂತರ ಲಿಂಗಾನಿ ಎಂಬ ಪದವನ್ನು ಶೇಷಪೂರಣ ಮಾಡಿಕೊಳ್ಳಬೇಕು. ಉಪಲಕ್ಷಣಯಾ "ಬ್ರಹ್ಮೇಮಂ ಪುರುಷಂ" "ಉದರಂ ಬ್ರಹ್ಮ" ಎಂಬಲ್ಲಿ ಅನೇಕ ಕಡೆ ಕೇಳಿಸುತ್ತಿರುವ ಬ್ರಹ್ಮಶಬ್ದಾಭ್ಯಾಸವನ್ನು ವಿವಕ್ಷಿಸಬೇಕು.

ಪೂರ್ವಪಕ್ಷದಲ್ಲಿಯೂ ಸಹ ಅನೇಕ ಲಿಂಗಗಳು ಕೇಳಿಸುತ್ತಿರುವುದರಿಂದ ಹೇಗೆ ನಿರ್ಣಯಿಸುತ್ತೀರಿ? ಎಂಬ ಪ್ರಶ್ನೆಗೆ ಪೂರ್ವಪಕ್ಷದ ಲಿಂಗಗಳನ್ನು ಸಾವಕಾಶ ಮಾಡಿ ಸಿದ್ಧಾಂತಲಿಂಗಗಳಿಗೆ ನಿರವಕಾಶತ್ವವನ್ನು "ತಾನಿ ಚ" ಇತ್ಯಾದಿ ವಾಕ್ಯದಿಂದ ಸಾಧಿಸುತ್ತಿದ್ದಾರೆ.

ವಿಷ್ಣುಮೇವಾನಯನ್ ದೇವಾ ವಿಷ್ಣುಂ ಭೂತಿಮುಪಾಸತೇ ॥
ಸ ಏವ ಸರ್ವವೇದೋಕ್ತಸ್ತದ್ರಥೋ ದೇಹ ಉಚ್ಯತೇ ॥

ವಿಷ್ಣುವನ್ನು ಶಿಷ್ಯರಿಗೆ ಉಪದೇಶಿಸಿದರು. ವಿಷ್ಣುವನ್ನು ಐಶ್ವರ್ಯಸ್ವರೂಪನೆಂದು ಉಪಾಸನೆ ಮಾಡಿದರು. ಅಂತಹ ವಿಷ್ಣುವೇ ಸರ್ವವೇದಪ್ರತಿಪಾದ್ಯನು ಅವನ ರಥವೇ ಈ ದೇಹವೆಂದು ಕರೆಯಲ್ಪಟ್ಟಿದೆ ಎಂದು ಸ್ಕಾಂದಪುರಾಣದಲ್ಲಿ ಹೇಳಲ್ಪಟ್ಟಿದೆ.

**ಸರ್ವೇ ವೇದಾ ಯತ್ಪದಮಾಮನಂತಿ ತಪಾಂಸಿ ಸರ್ವಾಣಿ ಚ ಯದ್ವದಂತಿ ।**
**ಯದಿಚ್ಛಂತೋ ಬ್ರಹ್ಮಚರ್ಯಂ ಚರಂತಿ ತತ್ತೇ ಪದಂ ಸಂಗ್ರಹೇಣ ಬ್ರವೀಮಿ ॥**

ಎಲ್ಲ ವೇದಗಳು ಎಲ್ಲ ಪದಗಳೂ ಸಕಲ ತಪಸ್ಸುಗಳು ಯಾರನ್ನೂ ಕುರಿತು ಹೊರಟಿವೆಯೋ ಯಾರನ್ನು ಆಪೇಕ್ಷಿಸಿ ತಪಸ್ವಿಗಳು ಬ್ರಹ್ಮಚರ್ಯವನ್ನು ಹೊಂದುತ್ತಾರೋ ಅಂತಹವನ ಬಗ್ಗೆ ಸಂಗ್ರಹವಾಗಿ ಹೇಳುತ್ತೇನೆ ಎಂದು ಪ್ರಾರಂಭಿಸಿ 'ತದ್ವಿಷ್ಣೋಃ ಪರಮಂ ಪದಂ' ಎಂದು ಕಾಠಕದಲ್ಲಿ ಹೇಳಿದ್ದರಿಂದ ಸರ್ವವೇದ-ಪ್ರತಿಪಾದ್ಯತ್ವವು ವಿಷ್ಣುವಿನಲ್ಲಿ ತಿಳಿಯುತ್ತದೆ.

'ಸೂರ್ಯಮಂಡಲಸ್ಥತ್ವವೂ' ಸಹ ವಿಷ್ಣುವಿನಲ್ಲಿಯೇ ಇದೆಯೆಂದು 'ಯ ಏಷ' ಎಂಬ ವಾಕ್ಯದಿಂದ ಹೇಳಿದ್ದಾರೆ. ಛಾಂದೋಗ್ಯದಲ್ಲಿ ಆದಿತ್ಯನ ಅಂತರ್ಗತನಾಗಿ ಹಿರಣ್ಮಯಪುರುಷನನ್ನು ಹೇಳಿ ಅವನಿಗೆ ಪುಂಡರೀಕಾಕ್ಷತ್ವ ಲಿಂಗವನ್ನು ಹೇಳಿದ್ದರಿಂದ ವಿಷ್ಣುವೇ ಸೂರ್ಯಾಂತರ್ಗತನೆಂದು ತಿಳಿಯುತ್ತದೆ. ಈ ಹಿಂದೆ ಅಂತರಧಿಕರಣದಲ್ಲಿ ಇದರ ಬಗ್ಗೆ ವಿವರಿಸಿದ್ದೇವೆ.

ಸರ್ವವ್ಯಾಪಿತ್ವವು ವಿಷ್ಣುಗತವೆನ್ನಲು ಎರಡು ವಾಕ್ಯಗಳನ್ನು ಉದಾಹರಿಸುತ್ತಿದ್ದಾರೆ. ''ಪುರುಷ ಏವೇದಂ ಸರ್ವಂ ಯದ್ಭೂತಂ ಯಚ್ಚ ಭವ್ಯಂ'' ಎಂಬುದಾಗಿ. ಪುರುಷಸೂಕ್ತದಲ್ಲಿ ಸಹಸ್ರಶೀರ್ಷತ್ವಾದಿನಾಮಗಳಿಂದ ಪ್ರಕೃತನಾದ ವಿಷ್ಣುವಿಗೆ ಸರ್ವವ್ಯಾಪಿತ್ವವು ಶ್ರುತವಾಗಿದೆ. ''ತಸ್ಮಿನ್ ಕಾಲೇ ಮಹಾರಾಜಾ'' ಇತ್ಯಾದಿ ಪ್ರಮಾಣದಿಂದ ಪುರುಷಸೂಕ್ತವು ವಿಷ್ಣುಪರವೆಂದು ಸಿದ್ಧವಾಗಿದೆ. ''ಅಂತರ್ಬಹಿಃ'' ಎಂಬುದು ನಾರಾಯಣೋಪನಿಷತ್ತಿನಲ್ಲಿದೆ. ಆದಿಪದದಿಂದ ತತ್ವನಿರ್ಣಯದಲ್ಲಿ ವಿವರಿಸಿದ

''ಸರ್ವೇ ವೇದಾ ಯುಕ್ತಯಸ್ತುಪ್ರಮಾಣಾಃ ಬ್ರಹ್ಮಂ ಜ್ಞಾನಂ ಪರಮಂ ತ್ವೇಕಮೇವ ।
''ಯ ಆದಿತ್ಯೇ ತಿಷ್ಠನ್'' ''ಸರ್ವಂ ಖಲ್ವಿದಂ ಬ್ರಹ್ಮ'' ಇತ್ಯಾದಿ ಪ್ರಮಾಣಗಳನ್ನು ಸ್ಮರಿಸಿಕೊಳ್ಳಬೇಕು.

''ವೇದೈಶ್ಚ ಸರ್ವೈರಹಮೇವ ವೇದ್ಯೋ ವೇದಾಂತಕೃದ್ವೇದವಿದೇವ ಚಾಹಂ'' ಎಂಬ ಗೀತಾವಾಕ್ಯದಿಂದ ''ಧ್ಯೇಯಃ ಸದಾ'' ಎಂಬ ನಾರಸಿಂಹಪುರಾಣವಾಕ್ಯದಿಂದ ''ತಪಾಮ್ಯಹಮಹಂ ವರ್ಷಂ ನಿಗೃಹ್ಣಾಮ್ಯುತ್ಸೃಜಾಮಿ ಚ'' ಇತ್ಯಾದಿಯಾಗಿ ''ವಿಷ್ಟಭ್ಯಾಹಮಿದಂ ಕೃತ್ಸ್ನಮೇಕಾಂಶೇನ ಸ್ಥಿತೋ ಜಗತ್'' ಇತ್ಯಾದಿ ಗೀತಾ ಮಾತಿನಿಂದ ಇವೆಲ್ಲವು ವಿಷ್ಣುವಿನ ಲಿಂಗಗಳೇ ಎಂದು ನಿರ್ಣಯವಾಗುತ್ತದೆ.

ಆದ್ದರಿಂದ ಪ್ರಾಣಶಬ್ದದಿಂದ ವಿಷ್ಣುವೇ ಪ್ರತಿಪಾದ್ಯನು. ಪ್ರಾಣನಲ್ಲಿ ಶ್ರುತವಾದ ಲಿಂಗಗಳೆಲ್ಲವೂ ವಿಷ್ಣುವಿನಲ್ಲಿ ಅನುಗಮವಾಗುವುದರಿಂದ ಎಂದು ಸೂತ್ರಾರ್ಥವನ್ನು ಹೇಳಿದಂತಾಯಿತು.

**ಗುರುರಾಜೀಯಮ್ –**

ಏವಮಹಂಶ್ರುತ್ಯಾದೇಃ ಸಾವಕಾಶತ್ವಮುಪಪಾದ್ಯ ಪರೋಕ್ತಲಿಙ್ಗಾನಾಮಪಿ ಸಾವಕಾಶತ್ವಮುಪಪಾದಯತಿ – **ಚಕ್ಷುರಾದೀತಿ** ॥ ಬಾಹ್ಯರೂಪೇಣ ವಾಽನಂತರ್ಯಾಮಿರೂಪೇಣ । ಪ್ರಾಣಸಂವಾದಾದಿಲಿಙ್ಗಾನಾಮಂತರ್ಯಾಮಿಣಿ ವಿಷ್ಣೌ ಮುಖ್ಯತ್ವೇ **ದುಃಖಾದೇರಂತರ್ಯಾಮಿಣಿ ಮುಖ್ಯತ್ವಂ ಸ್ಯಾದಿತ್ಯೇತದ್ಬಾಧಕಂ ಪರಿಹರತಿ – ದುಃಖಿತ್ವಾದಿಕಂ ತ್ವಿತಿ** ॥

ಸಾರ

ಸಿದ್ಧಾಂತ ಸ್ಥಾಪನೆ ಹೀಗಿದೆ - ಪೂರ್ವಪಕ್ಷದಲ್ಲಿ ಎಷ್ಟು ನಿರವಕಾಶಯುಕ್ತಿಗಳನ್ನು ಹೇಳಿದರೋ ಅದಕ್ಕಿಂತಲೂ ನಿರವಕಾಶವಾದ ಅನೇಕ ಲಿಂಗಗಳು ವಿಷ್ಣುವಿನಲ್ಲೇ ಶ್ರುತವಾಗಿವೆ. ಐತರೇಯದ ಪ್ರಾರಂಭದಿಂದಲೂ ವಿಷ್ಣುವಿನ ಅನೇಕ ಅಸಾಧಾರಣ ಲಿಂಗಗಳೇ ಕೇಳಿಸುತ್ತಿವೆ - ದೇವೋಪಾಸ್ಯತ್ವ, ಸೂರ್ಯಮಂಡಲಸ್ಥಸ್ತ್ವ, ಸರ್ವಂತರ್ಯಾಮಿತ್ವ, ಸರ್ವವ್ಯಾಪಿತ್ವ. ಈ ಲಿಂಗಗಳೆಲ್ಲವೂ ಶ್ರುತಿಸ್ಪೃತಿಗಳ ಆಧಾರದಿಂದ ವಿಷ್ಣುವಿನಲ್ಲಿಯೇ ಇದೆಯೆಂದು ನಿರ್ಣಯವಾಗಿದೆ.

* * * *

## ದೇವೇಂದ್ರನ ಲಿಂಗಗಳೆಲ್ಲವೂ ಸಾವಕಾಶ

ತಾತ್ಪರ್ಯಚಂದ್ರಿಕಾ

**परकीयश्रुत्यादिकं तु सावकाशम् । तथाहि – इन्द्रस्य प्रसिद्धेन्द्रत्वेऽपि तत्प्रयुक्तोऽहंशब्दस्तावत् ''अहं मनुः'' इति वामदेवप्रयुक्ताहंशब्दवत् श्रुतितुल्यया निरूढया लक्षणया,**

**सर्वान्तर्यामिको विष्णुः सर्वनाम्नाऽभिधीयते ।**
**एषोऽहं त्वमसौ चेति नतु सर्वस्वरूपतः ॥**

**इत्यादिस्मृतिभिर्मुख्यवृत्त्या वा अन्तर्यामिपरः । नच तत्रापि विवादः, विशिष्टस्य वामदेवस्य मन्वादित्वाभावात् । अहंमन्वादिशब्दे चैतन्यमात्रलक्षणा चेत्, प्राण इन्द्र इति पूर्वपक्षे इन्द्रशब्देन विशिष्टोक्तो विशिष्टेन्द्राभिन्नस्य प्राणस्य ''प्राणस्त्वं प्राणः सर्वाणि'' इति सार्वात्म्योक्तिरयुक्ता स्यात् । इन्द्रशब्देन शुद्धोक्तौ तु, प्राणस्य शुद्धब्रह्मत्वेन प्राणो न ब्रह्मेति पूर्वपक्षायोगः ''प्राणो ह्येष य एष तपति'' इति पूर्ववाक्यायोगश्च । नहि चिन्मात्रं तापकम् ।**

ಅನುವಾದ - ಪರಕೀಯರು ಉದಾಹರಿಸಿದ ಶ್ರುತಿಗಳೆಲ್ಲವೂ ಸಾವಕಾಶವೇ ಆಗಿವೆ. ಅದು ಹೀಗೆ ಇಂದ್ರಪ್ರತರ್ದನರ ಸಂವಾದಪ್ರಕರಣದಲ್ಲಿ ಪ್ರಸಕ್ತವಾಗಿರುವ ಇಂದ್ರಶಬ್ದ, ರುದ್ರಹಂತೃತ್ವ ಮೊದಲಾದ ಲಿಂಗಗಳು ದೇವೇಂದ್ರನಲ್ಲಿ ಪ್ರಸಿದ್ಧವಾಗಿವೆಯೆಂದು ಒಪ್ಪೋಣ; ಆದರೆ ದೇವೇಂದ್ರನಲ್ಲಿ ಹೇಳಲ್ಪಟ್ಟ 'ಅಹಂ' ಶಬ್ದವು ಮಾತ್ರ ಅಂತರ್ಯಾಮಿಪರವೇ ಆಗಿದೆ. ಯಾವರೀತಿಯಾಗಿ 'ಅಹಮಮನುರವಭವಂ' ಎಂಬುದಾಗಿ ವಾಮದೇವರಿಂದ ಪ್ರಯೋಗಿಸಲ್ಪಟ್ಟ 'ಅಹಂ' ಶಬ್ದವು ಅಂತರ್ಯಾಮಿಪರವಾಗಿದೆಯೋ

ಆದರಂತೆ ಎಂದು ತಿಳಿಯಬೇಕು. 'ಅಹಂ' ಶಬ್ದಕ್ಕೆ 'ಅಂತರ್ಯಾಮಿ' ಎಂಬರ್ಥವೇ ಮುಖ್ಯವಾದದ್ದು. ಏಕೆಂದರೆ, ಶ್ರುತಿತುಲ್ಯವಾದ ನಿರೂಢಲಕ್ಷಣಾದಿಂದ ಮತ್ತು

ಸರ್ವಾಂತರ್ಯಾಮಿಕೋ ವಿಷ್ಣುಃ ಸರ್ವನಾಮ್ನಾऽಭಿಧೀಯತೇ।
ವಿಷೋ೭ಹಂ ತ್ವಮಸೌ ಚೇತಿ ನತು ಸರ್ವಸ್ವರೂಪತಃ॥

ವಿಷ್ಣುವು ಸರ್ವಂತರ್ಯಾಮಿಯಾದ್ದರಿಂದ ವಿಷಃ, ಅಹಂ ತ್ವಂ ಅಸೌ ಮೊದಲಾದ ಸರ್ವನಾಮ ಶಬ್ದಗಳಿಂದ ಪ್ರತಿಪಾದ್ಯನಾಗಿದ್ದಾನೆ ಹೊರತು ಸಕಲಪದಾರ್ಥಗಳಿಂದ ಅಭಿನ್ನನಾದ್ದರಿಂದ ಅಲ್ಲ. ಇವೇ ಮೊದಲಾದ ಶ್ರುತಿಗಳಿಂದಲೂ 'ಅಹಂ' ಶಬ್ದಕ್ಕೆ 'ಅಂತರ್ಯಾಮಿ' ಎಂಬರ್ಥವೇ ಮುಖ್ಯವಾಗಿದೆ.

'ಅಹಂ ಮನುಃ' ಎಂಬ ದೃಷ್ಟಾಂತ ವಾಕ್ಯದಲ್ಲಿಯೇ ವಿವಾದವಿದೆ ಎನ್ನಬಾರದು. ವಿಶಿಷ್ಟನಾದ ವಾಮದೇವನಿಗೆ ಮನ್ವಾದಿತ್ವವನ್ನು ಹೇಳಲು ಸಾಧ್ಯವಿಲ್ಲ. ಅಂದರೆ ವಿಶಿಷ್ಟನಾದ ವಾಮದೇವನಿಗೂ ವಿಶಿಷ್ಟನಾದ ಮನುವಿಗೂ ಅಭೇದವನ್ನು ಹೇಳಲಾಗದು. ಇನ್ನು 'ಅಹಂ' ಎಂಬ ಪದಕ್ಕೂ 'ಮನು' ಎಂಬ ಪದಕ್ಕೂ ಶಬ್ದಚೈತನ್ಯದಲ್ಲಿ ಲಕ್ಷಣಾ ಮಾಡಿ ಅಭೇದವನ್ನು ಹೇಳಬೇಕು. ಹಾಗೇ ಹೇಳಿದರೆ ''ಇಂದ್ರನೇ ಪ್ರಾಣನು'' ಎಂಬ ಪೂರ್ವಪಕ್ಷದಲ್ಲಿ ಇಂದ್ರ ಶಬ್ದದಿಂದ ವಿಶಿಷ್ಟಚೈತನ್ಯನು ಪ್ರತಿಪಾದ್ಯನಾಗುತ್ತಾನೆ. ಇಂತಹ ವಿಶಿಷ್ಟನಾದ ಇಂದ್ರನಿಂದ ಅಭಿನ್ನನಾದ ಪ್ರಾಣನಿಗೆ ''ಪ್ರಾಣಸ್ತ್ವಂ ಪ್ರಾಣಃ ಸರ್ವಾಣಿ'' ಇತ್ಯಾದಿಯಾಗಿ ಸಕಲವಸ್ತುಸ್ವರೂಪತ್ವವನ್ನು ಹೇಳಲು ಸಾಧ್ಯವಿಲ್ಲ. ಇನ್ನು ಇಂದ್ರಶಬ್ದದಿಂದ ಶುದ್ಧಾತ್ಮನನ್ನು ಹೇಳಬೇಕು. ಆವಾಗ ಪ್ರಾಣನೂ ಸಹ ಶುದ್ಧಬ್ರಹ್ಮನೆಂದು ಹೇಳಿದಂತಾಗುತ್ತದೆ. ಹೀಗಿರುವಾಗ ಪ್ರಾಣನು ಬ್ರಹ್ಮನಲ್ಲ ಎಂಬ ಪೂರ್ವಪಕ್ಷವೇ ಹುಟ್ಟುವುದಿಲ್ಲ. ಮತ್ತು ''ಪ್ರಾಣೋ ಹ್ಯೇಷ ಯ ಏಷ ತಪತಿ'' ಎಂಬ ಹಿಂದಿನ ವಾಕ್ಯದಲ್ಲಿ ಹೇಳಲ್ಪಟ್ಟ 'ಎಲ್ಲವನ್ನೂ ತಪನ ಮಾಡುವಿಕೆ' ಎಂಬ ಧರ್ಮವು ಅಯುಕ್ತವಾಗುತ್ತದೆ. ಏಕೆಂದರೆ ಚಿನ್ಮಾತ್ರವು ತಾಪಕವೇ ಅಲ್ಲ.

ಕಠಿಣಪದಾರ್ಥ :

ಸರ್ವನಾಮ್ನಾ = ಅಹಂ ತ್ವಂ ಮೊದಲಾದ ಸರ್ವನಾಮ ಶಬ್ದಗಳಿಂದ, ತತ್ರಾಪಿ = ಅಹಂ ಮನುಃ ಎಂಬ ದೃಷ್ಟಾಂತದ ಮಾತಿನಲ್ಲಿ, ವಿಶಿಷ್ಟಸ್ಯ = ಅಂತಃಕರಣ ವಿಶಿಷ್ಟನಾದ, ವಿಷಃ = ಸೂರ್ಯಮಂಡಲದಲ್ಲಿರುವ ಪ್ರಾಣನು.

**ಪ್ರಕಾಶಃ** – ನನು ಪೂರ್ವಪಕ್ಷಲಿಙ್ಗಾನ್ಯಪಿ ನಿರವಕಾಶಾನೀತ್ಯುಕ್ತಮಿತ್ಯತಶ್ಶಾಸ್ತ್ರದೃಷ್ಟಿಸೂತ್ರತಾತ್ಪರ್ಯಮಾಹ – **ಪರಕೀಯೇತಿ** ॥ **ಪ್ರಸಿದ್ಧೇತಿ** ॥ ವೃತ್ರಹನ್ತೃತ್ವಾದೇರ್ನಿರವಕಾಶತ್ವಾದಿತಿ ಭಾವಃ। **'ತಮಿನ್ದ್ರ ತ್ವಾಚ ಪ್ರಾಣೋ ವಾ ಅಹಮಸ್ಮೃಷೇ'** ಇತೀನ್ದ್ರೇಣ ಪ್ರಯುಕ್ತೋಹಂಶಬ್ದೋऽನ್ತರ್ಯಾಮಿಪರ ಇತ್ಯನ್ವಯಃ । ಲಕ್ಷಣಾಯಾಂ ಕಿಂ ಪ್ರಯೋಜನಮಿತ್ಯತೊ **'ಮಞ್ಚಾಃ ಕ್ರೋಶನ್ತಿ'** ಇತ್ಯಾದೌ ಮಞ್ಚಸ್ಥಪುರುಷಾಭಿಪ್ರಾಯೇಣ ಮಞ್ಚಪದಪ್ರಯೋಗವನ್ನಿರೂಢತ್ವೇನ ಪ್ರಯೋಜನಾನಪೇಕ್ಷಣಾದಿತಿ ಭಾವೇನೋಕ್ತಂ – **ನಿರೂಢೇತಿ** ॥ ಲಕ್ಷಣೈವ ದೋಷ ಇತ್ಯತ ಉಕ್ತಂ – **ಶ್ರುತೀತಿ** ॥ **''ಸರ್ವಾನ್ತರ್ಯಾಮಿಕಃ''** ಇತಿ ಆನನ್ದಮಯಾಧಿಕರಣಭಾಷ್ಯೋದಾಹೃತಸ್ಮೃತ್ಯಾ,

**तत्तन्नाम्नोच्यते विष्णुः सर्वशास्तृत्वहेतुतः ।**
**इत्येतद्भाष्योक्ताभिः स्मृत्यादिभिश्चेत्यर्थः ।**

ನನು 'ವಾಮದೇವವತ್' ಇತ್ಯಯುಕ್ತಂ, ತತ್ಪ್ರಯುಕ್ತಾಹಂಶಬ್ದಸ್ಯ ಅನ್ತರ್ಯಾಮಿಪರತ್ವಾಸಿದ್ಧೇರಿತ್ಯಾಶಙ್ಕ್ಯಾದ್ಯಾಧ್ಯಾಯಬೃಹದ್ಭಾಷ್ಯದಿಶಾ ಸಾಧಯತಿ – **नच तत्रेति** ॥ ವಾಮದೇವಪ್ರಯುಕ್ತಾಹಂಶಬ್ದಸ್ಯಾನ್ತರ್ಯಾಮಿಪರತ್ವಾಭಾವೇ ತಸ್ಯೈವ ಮನ್ವಾದಿಭಿರೈಕ್ಯಂ ವಾಚ್ಯಮ್ । ತಚ್ಚ ಕಿಂ ಮುಖ್ಯತೋ ವಿಶಿಷ್ಟಸ್ಯೈವೋತ ಚಿನ್ಮಾತ್ರಲಕ್ಷಣಯಾ ವಿಶಿಷ್ಯಸ್ಯ । ಆಧಂ ನಿರಸ್ಯತಿ – **विशिष्टस्येति** ॥ ದ್ವಿತೀಯಂ ಶಙ್ಕತೇ – **अहमिति** ॥

ಯದಿ ಲಕ್ಷಣಯಾ ವಿಶೇಷ್ಯೈಕ್ಯಂ, ತರ್ಹಿ ದಾರ್ಷ್ಟಾನ್ತಿಕೇ ಇನ್ದ್ರಪ್ರಯುಕ್ತಾಹಂಶಬ್ದಸಾಮಾನಾಧಿಕರಣ್ಯಾತ್ಪ್ರಾಣ ಇನ್ದ್ರ ಇತಿ ಪಕ್ಷೇ ಇನ್ದ್ರಪದೇನ ವಿಶಿಷ್ಟಂ, ಲಕ್ಷಣಯಾ ವಿಶೇಷ್ಯಮಾತ್ರಂ ವಾ । ಆಧೇ ವಿಶಿಷ್ಟೈಕ್ಯಾನಙ್ಗೀಕಾರೇಣ ವಿಶಿಷ್ಟೇನ್ದ್ರಾತ್ಮಕಸ್ಯ ಪ್ರಾಣಸ್ಯ ಸರ್ವಾಭೇದೋಕ್ತ್ಯಯೋಗಃ । ದ್ವಿತೀಯೇ ಪ್ರಾಣೋ ನ ಬ್ರಹ್ಮೇತ್ಯುಕ್ತ್ಯಯೋಗ ಇತಿ ಪೂರ್ವಪಕ್ಷಿಣಂ ಪ್ರತ್ಯನಿಷ್ಟಮಾಹ – **प्राण इन्द्र इतीति** ॥ ವಿಶೇಷ್ಯೈಕ್ಯಮಾತ್ರಮಙ್ಗೀಕುರ್ವತಃ ಪೂರ್ವವಾದಿನಸ್ತವ ಪಕ್ಷ ಇತ್ಯರ್ಥಃ ।

**''नहि मनुसूर्यादिर्भवति वामदेवस्तत्पक्षेऽपि''** ಇತ್ಯೈತರೇಯಭಾಷ್ಯೇ ದೃಷ್ಟಾನ್ತೇऽಭಿಹಿತದೋಷಂ ದಾರ್ಷ್ಟಾನ್ತಿಕೇऽಪ್ಯಾಹ – **इति सार्वात्म्येति** ॥ ಇತಿ ಪೂರ್ವವಾಕ್ಯಾಯೋಗ ಇತ್ಯುಪಲಕ್ಷಣಮ್ । **''अत्र च ''अहं भूमिमददामार्याय''** ಇತ್ಯಾದಿನಾ ಪ್ರವೃತ್ತಿರೇವೋಚ್ಯತೇ । **नहि वामदेवेन मन्वादिकर्म क्रियते कदापि''** ಇತ್ಯಾದ್ಯೈತರೇಯಭಾಷ್ಯೋಕ್ತಂ ಚ ಗ್ರಾಹ್ಯಮ್ ।

ವಿವರಣೆ - ಸಿದ್ಧಾಂತಲಿಂಗಗಳಂತೆ ಪೂರ್ವಪಕ್ಷದ ಲಿಂಗಗಳೂ ಸಹ ನಿರವಕಾಶಗಳೇ ಆಗಿವೆಯಲ್ಲವೇ? ಎಂಬ ಶಂಕೆಯನ್ನು ನಿರಾಕರಿಸಲು 'ಶಾಸ್ತ್ರದೃಷ್ಟಿ' ಎಂಬ ಸೂತ್ರದ ತಾತ್ಪರ್ಯವನ್ನು 'ಪರಕೀಯ' ಇತ್ಯಾದಿ ಗ್ರಂಥದಿಂದ ಹೇಳಿದ್ದಾರೆ. 'ರುದ್ರಹಂತೃತ್ವ' ಮೊದಲಾದ ಲಿಂಗಗಳು ಇಂದ್ರನಲ್ಲಿ ನಿರವಕಾಶವಾದ್ದರಿಂದ ಇಂದ್ರಶಬ್ದದಿಂದ ದೇವೇಂದ್ರನೇ ಪ್ರತಿಪಾದ್ಯನಾಗಲಿ ಎಂದು 'ಪ್ರಸಿದ್ಧ' ಎಂಬ ಪದದ ಅಭಿಪ್ರಾಯ. ''ತಮಿಂದ್ರ ಉವಾಚ ಪ್ರಾಣೋ ವಾ ಅಹಮಸ್ಮ್ಯಷೇ'' ಎಂಬುದಾಗಿ ಇಂದ್ರನಿಂದ ಪ್ರಯೋಗಿಸಲ್ಪಟ್ಟ 'ಅಹಂ' ಶಬ್ದವು ಅಂತರ್ಯಾಮಿ ಪರವಾಗಿದೆ ಎಂದು ವಾಕ್ಯದ ಅನ್ವಯ.

'ಅಹಂ' ಶಬ್ದಕ್ಕೆ ಅಂತರ್ಯಾಮಿ ಎಂಬಲ್ಲಿ ಲಕ್ಷಣಾ ಮಾಡುವುದದರಿಂದ ಏನು ಪ್ರಯೋಜನ ಎಂದರೆ ''ಮಂಚಾಃ ಕ್ರೋಶಂತಿ'' ಇತ್ಯಾದಿ ಸ್ಥಳಗಳಲ್ಲಿ ಮಂಚದಲ್ಲಿರುವ ಪುರುಷರನ್ನು ವಿವಕ್ಷಿಸಿ 'ಮಂಚ' ಪದವನ್ನು ಪ್ರಯೋಗಿಸಲಾಗುತ್ತದೆ. ಇಲ್ಲಿ ಮಂಚಸ್ಥಪುರುಷರಲ್ಲಿ ಮಂಚ ಪದಕ್ಕೆ ನಿರೂಢಲಕ್ಷಣಾ ಮಾಡಲು ಯಾವುದೇ ರೀತಿಯಾದ ಪ್ರಯೋಜನವಿಲ್ಲವೋ ಅದರಂತೆ 'ಅಂತರ್ಯಾಮಿ' ಎಂಬರ್ಥದಲ್ಲಿ 'ಅಹಂ'

ಶಬ್ದಕ್ಕೆ ಲಕ್ಷಣಾ ಮಾಡಬೇಕಾದರೂ ಯಾವುದೇ ಪ್ರಯೋಜನ ಬೇಕಾಗಿರುವುದಿಲ್ಲ ಎಂಬ ಅಭಿಪ್ರಾಯದಿಂದ 'ನಿರೂಢ' ಎಂಬ ಪದವನ್ನು ಬಳಸಿದ್ದಾರೆ. ಲಕ್ಷಣಾ ಮಾಡುವುದು ದೋಷವಲ್ಲವೇ? ಎಂಬ ಪ್ರಶ್ನೆಗೆ 'ಶ್ರುತಿತುಲ್ಯಯಾ' ಎಂದು ಉತ್ತರಿಸಿದ್ದಾರೆ. ನಿರೂಢಲಕ್ಷಣಾವು ಶ್ರುತಿಗೆ ಸಮಾನವಾದ್ದರಿಂದ ದೋಷವಿಲ್ಲ. ಆದರೂ ಲಕ್ಷಣಾ ಮಾಡುವುದೇ ಕಷ್ಟವೆಂದು ಹೇಳುವುದಾದರೆ 'ಅಂತರ್ಯಾಮಿ' ಎಂಬರ್ಥದಲ್ಲಿ ಮುಖ್ಯಾರ್ಥವನ್ನೇ ಹೇಳುತ್ತೇವೆಂದು 'ಸರ್ವಂತರ್ಯಾಮಿ' ಎಂಬ ಶ್ಲೋಕದಿಂದ ಉಪಪಾದಿಸುತ್ತಿದ್ದಾರೆ. ಈ ಸ್ಮೃತಿವಾಕ್ಯವು ಆನಂದಮಯಾಧಿಕರಣದ ಭಾಷ್ಯದಲ್ಲಿ ಉದಾಹರಿಸಲ್ಪಟ್ಟಿದೆ. ಇದರ ಜೊತೆಗೆ ''ತತ್ತನ್ನಾಮ್ನೋಚ್ಯತೇ ವಿಷ್ಣುಸರ್ವಶಾಸ್ತ್ರತ್ವಹೇತುತಃ''. ಇತ್ಯಾದಿಯಾಗಿ ಭಾಷ್ಯದಲ್ಲಿ ಹೇಳಲ್ಪಟ್ಟ ಸ್ಮೃತಿಗಳನ್ನೂ ಸಹ ವಿವಕ್ಷಿಸಬೇಕು.

ಶಂಕೆ - 'ವಾಮದೇವವತ್' ಎಂಬ ಉದಾಹರಣೆ ನೀಡಿದ್ದೇ ತಪ್ಪು. ಏಕೆಂದರೆ ವಾಮದೇವನಿಂದ ಪ್ರಯೋಗಿಸಲ್ಪಟ್ಟ 'ಅಹಂ' ಶಬ್ದಕ್ಕೆ 'ಅಂತರ್ಯಾಮಿ ಪರತ್ವ' ಇದುವರೆಗೂ ಸಿದ್ಧವಾಗಿಲ್ಲವಲ್ಲವೇ?

ಸಮಾಧಾನ - ಈ ಶಂಕೆಗೆ ಬೃಹದ್ಭಾಷ್ಯದ ಮೊದಲನೇ ಅಧ್ಯಾಯದ ಮಾರ್ಗದರ್ಶನದಂತೆ ಅಂತರ್ಯಾಮಿಪರತ್ವವನ್ನು 'ನಚ ತತ್ರ' ಇತ್ಯಾದಿ ವಾಕ್ಯದಿಂದ ಸಾಧಿಸುತ್ತಿದ್ದಾರೆ. ವಾಮದೇವನಿಂದ ಪ್ರಯೋಗಿಸಲ್ಪಟ್ಟ ಅಹಂ ಶಬ್ದಕ್ಕೆ ಅಂತರ್ಯಾಮಿ ಎಂಬರ್ಥವನ್ನು ಹೇಳದಿದ್ದರೆ ಆ ವಾಮದೇವನಿಗೆ ಮನ್ವಾದಿಗಳಿಂದ ಐಕ್ಯವನ್ನು ಹೇಳಬೇಕಾಗುತ್ತದೆ. ಅಂತಹ ಐಕ್ಯವನ್ನು ಇಬ್ಬರು ವಿಶಿಷ್ಟಾತ್ಮರಿಗೆ ಹೇಳುತ್ತೀರೋ? ಅಥವಾ ಚಿನ್ಮಾತ್ರದಲ್ಲಿ ಲಕ್ಷಣಾ ಮಾಡಿ ಐಕ್ಯವನ್ನು ಹೇಳುತ್ತೀರೋ? ಮೊದಲನೆಯ ಪಕ್ಷವನ್ನು 'ವಿಶಿಷ್ಟಸ್ಯ' ಎಂಬ ವಾಕ್ಯದಿಂದ ನಿರಾಕರಿಸಿದ್ದಾರೆ. ಎರಡನೆಯ ಪಕ್ಷವನ್ನು 'ಅಹಂ' ಇತ್ಯಾದಿ ವಾಕ್ಯದಿಂದ ನಿರಾಕರಿಸಿದ್ದಾರೆ.

ಒಂದು ವೇಳೆ ಲಕ್ಷಣಾದಿಂದ ದೃಷ್ಟಾಂತದಲ್ಲಿ ವಿಶೇಷ್ಯಗಳಿಗೆ ಐಕ್ಯಗಳನ್ನು ಒಪ್ಪಿದರೆ ಆವಾಗ ದಾರ್ಷ್ಟಾಂತಿಕದಲ್ಲಿ ಸಮಸ್ಯೆ ಬರುತ್ತದೆ. ಇಂದ್ರನಿಂದ ಪ್ರಯೋಗಿಸಲ್ಪಟ್ಟ 'ಅಹಂ' ಶಬ್ದದ ಸಾಮಾನಾಧಿಕರಣ್ಯವು ಪ್ರಾಣಶಬ್ದಕ್ಕಿರುವುದರಿಂದ ಇಂದ್ರನು ಪ್ರಾಣನಾಗಿದ್ದಾನೆಂದು ಹೇಳಿದರೆ 'ಇಂದ್ರ'-ಪದಕ್ಕೆ 'ವಿಶಿಷ್ಟ' ಎಂಬರ್ಥವನ್ನು ಹೇಳುತ್ತೀರೋ? ಅಥವಾ ಲಕ್ಷಣಾ ಮಾಡಿ 'ವಿಶೇಷಣ' ಎಂಬರ್ಥವನ್ನು ಹೇಳುತ್ತೀರೋ? ಪ್ರಥಮಪಕ್ಷದಲ್ಲಿ ಎರಡು ವಿಶಿಷ್ಟಪದಾರ್ಥಗಳಿಗೆ ಐಕ್ಯವನ್ನು ಅದ್ವೈತಿಗಳೇ ಒಪ್ಪಿರುವುದಿಲ್ಲ. ಮತ್ತು ವಿಶಿಷ್ಟನಾದ ಇಂದ್ರಸ್ವರೂಪನಾದ ಪ್ರಾಣನಿಗೆ ಸಕಲಪದಾರ್ಥಗಳಿಂದ ಅಭೇದವನ್ನು ಹೇಳುವುದೂ ಸಹ ಅಯುಕ್ತವಾಗುತ್ತದೆ. ಎರಡನೇ ಪಕ್ಷದಲ್ಲಿ ಪ್ರಾಣನು ಬ್ರಹ್ಮನಲ್ಲವೆಂಬ ಮಾತೇ ತಪ್ಪಾಗುತ್ತದೆಂದು ಪೂರ್ವಪಕ್ಷಿಗೆ 'ಪ್ರಾಣ ಇಂದ್ರ' ಇತ್ಯಾದಿ ವಾಕ್ಯದಿಂದ ಅನಿಷ್ಟಾಪಾದನೆಯನ್ನು ಮಾಡುತ್ತಿದ್ದಾರೆ. ಕೇವಲ ವಿಶೇಷಗಳಿಗಷ್ಟೇ ಐಕ್ಯವನ್ನು ಒಪ್ಪುವ ಪೂರ್ವಪಕ್ಷಿಯಾದ ನಿನಗೆ ವಿಶಿಷ್ಟಗಳಿಗೆ ಐಕ್ಯವನ್ನು ಒಪ್ಪುವುದು ಅನಿಷ್ಟವಾಗಿದೆಯೆಂದು ಅಭಿಪ್ರಾಯ.

''ನಹಿ ಮನುಸೂರ್ಯಾದಿರ್ಭವತಿ ವಾಮದೇವಸ್ತತ್ಕ್ಷೇಽಪಿ'' ಎಂಬುದಾಗಿ ಐತರೇಯ ಭಾಷ್ಯದಲ್ಲಿ ದೃಷ್ಟಾಂತಕ್ಕೆ ಹೇಳಲ್ಪಟ್ಟ ದೋಷವನ್ನು 'ಇತಿ ಸಾರ್ವಾತ್ಮ್ಯೇತಿ' ಎಂದು ದಾರ್ಷ್ಟಾಂತಿಕಕ್ಕೂ ಹೇಳುತ್ತಿದ್ದಾರೆ. 'ಇತಿ ಪೂರ್ವವಾಕ್ಯಾಯೋಗಃ' ಎಂಬುದು ಉಪಲಕ್ಷಣವಾಗಿದೆ. - ''ಅಹಂ ಭೂಮಿಮದದಾಮರ್ಯಾಯ

ಇತ್ಯಾದೀನಾ ಪ್ರವೃತ್ತಿರೇವೋಚ್ಯತೇ । ನಹಿ ವಾಮದೇವೇನ ಮನ್ವಾದಿಕರ್ಮ ಕ್ರಿಯತೇ ಕದಾಪಿ'' ಇತ್ಯಾದಿಯಾಗಿ ಏತರೇಯ ಭಾಷ್ಯದಲ್ಲಿ ಭೂಮಿ ಪ್ರಧಾನಾದಿಗಳನ್ನು ಹೇಳಿದ್ದಾರೆ. ಇವುಗಳು ವಿಷ್ಣುವಿನಲ್ಲಿ ಬರುತ್ತವೆ ಹೊರತು ಶುದ್ಧಚಿನ್ಮಾತ್ರದಲ್ಲಿ ಬರಲಾರವು.

**ಗುರುರಾಜೀಯಮ್ – ಸರ್ವವ್ಯಾಪಿತ್ವಮಿತ್ಯಾದೀನಿತ್ಯತ್ರಾದಿಪದೇನ ದೇಹರಥಿತ್ವಪರಾಮರ್ಶಃ – ಶ್ರುತಿತುಲ್ಯಯೇತಿ ॥ ತಥಾಚೇಶ್ವರಪ್ರಯುಕ್ತೋऽಹಂಶಬ್ದೋ ಮುಖ್ಯಾರ್ಥ ಏವೇತಿ ಭಾವಃ । ನನ್ವಹಂಶಬ್ದೇನಾನ್ತರ್ಯಾಮಿಣೋ ಲಕ್ಷಣಾ ನೋಪಪದ್ಯತೇ । ಪ್ರಯೋಜನಾಭಾವಾದಿತ್ಯತೋऽನಿರೂಢಲಕ್ಷಣಾಯಾಮೇವ ತದಪೇಕ್ಷಾ ನತು ನಿರೂಢಲಕ್ಷಣಾಯಾಮಪಿ । ಇಯಞ್ಚ ನಿರೂಢಲಕ್ಷಣೇತ್ಯಾಹ – ನಿರೂಢೇತಿ ॥ ತತ್ರ ಹೇತುಃ ಶ್ರುತಿತುಲ್ಯತಯೇತಿ ॥ ನನ್ವೇತದಯುಕ್ತಮ್ । ಸರ್ವೇಷಾಂ ಶಬ್ದಾನಾಮನ್ತರ್ಯಾಮಿಣಿ ಮುಖ್ಯತ್ವಾದಹಂಶಬ್ದಸ್ಯ ತತ್ರ ಮುಖ್ಯತ್ವಸ್ಯೈವ ಸತ್ತ್ವೇನ ಲಕ್ಷಣಯಾ ತತ್ಪರತ್ವಸ್ಯಾಸಮ್ಭವಾದಿತ್ಯರುಚೇರಾಹ – ಸರ್ವಾನ್ತರ್ಯಾಮಿಕ ಇತ್ಯಾದಿನಾ ॥ ಮುಖ್ಯವೃತ್ತ್ಯಾ ವೇತಿ ॥ ತಥಾ ಚಾಕ್ಷಾದಿಶಬ್ದವನ್ಞಾನಾರ್ಥತ್ವಸ್ಯ ವಕ್ಷ್ಯಮಾಣಶ್ರೌತಾನುಶಾಸನಾದಿಸಿದ್ಧತ್ವಾನ್ನೋಕ್ತ ದೋಷ ಇತಿ ಭಾವಃ ।**

## ಸಾರ

ಪರಕೀಯರು ಉದಾಹರಿಸಿದ ಶ್ರುತಿವಾಕ್ಯವು ಸಾವಕಾಶವಾಗಿದೆ. ''ಪ್ರಾಣೋವಾ ಅಹಂ'' ಎಂಬಲ್ಲಿರುವ 'ಅಹಂ' ಶಬ್ದವು ಅಂತರ್ಯಾಮಿಯಾದ ವಿಷ್ಣುವನ್ನೇ ಹೇಳುತ್ತದೆ. ಸಕಲ ಪದಾರ್ಥಗಳ ಅಂತರ್ಯಾಮಿಯಾದ್ದರಿಂದ ಒಬ್ಬನೇ ವಿಷ್ಣುವು 'ಏಷೋऽಹಂ ತ್ವಂ ಅಸೌ' ಇತ್ಯಾದಿ ಸರ್ವನಾಮಶಬ್ದಗಳಿಂದ ಪ್ರತಿಪಾದ್ಯನಾಗಿದ್ದಾನೆ. 'ಅಹಂ ಮನುಃ' ಎನ್ನುವ ದೃಷ್ಟಾಂತದಲ್ಲಿಯೂ ಐಕ್ಯವನ್ನು ಹೇಳಲಾಗದು. ವಿಶಿಷ್ಟನಾದ ವಾಮದೇವನಿಗೆ ವಿಶಿಷ್ಟನಾದ ಮನ್ವಾದಿಗಳಿಂದ ಐಕ್ಯವು ಕೂಡುವುದಿಲ್ಲ. ದಾರ್ಷ್ಟಾಂತಿಕದಲ್ಲಿಯೂ ಸಹ ಚಿನ್ಮಾತ್ರದಲ್ಲಿ ಲಕ್ಷಣಾ ಮಾಡಿದರೆ ಪ್ರಾಣನು ಬ್ರಹ್ಮನಲ್ಲವೆಂಬ ಪೂರ್ವಪಕ್ಷವೇ ಕೂಡುವುದಿಲ್ಲ. ಮತ್ತು ಭೂಮಿಪ್ರಧಾನಾದಿಧರ್ಮಗಳೂ ಸಹ ಚಿನ್ಮಾತ್ರದಲ್ಲಿ ಕೂಡುವುದಿಲ್ಲ. ಆದ್ದರಿಂದ ಇಂದ್ರಶಬ್ದಕ್ಕೆ ದೇವೇಂದ್ರನೆಂದೇ ಅರ್ಥವನ್ನಿಟ್ಟುಕೊಂಡು 'ಅಹಂ' ಶಬ್ದಕ್ಕೆ 'ಅಂತರ್ಯಾಮಿ' ಎಂಬರ್ಥವನ್ನು ಹೇಳಬೇಕು.

* * * *

## ವಿಷ್ಣುವೇ ಅಹಂ ಶಬ್ದಾರ್ಥ

### ತಾತ್ಪರ್ಯಚನ್ದ್ರಿಕಾ

**ಯದ್ಯಪಿ ''ಅ ಇತಿ ಬ್ರಹ್ಮ ತತ್ರಾऽऽಗತಮಹಮಿತಿ ತಸ್ಯೋಪನಿಷದಹಮಿತಿ । ತತೋऽಹಂನಾಮಾಭವತ್'' ಇತ್ಯಾದಿ ಶ್ರುತೇಃ । ''ನ ವಾ ಅಹಮಿಮಂ ವಿಜಾನಾತಿ'' ಇತಿ, ''ಅಹಂ ತತ್ತೇಜೋರಶ್ಮೀನ್ನಾರಾಯಣಂ ಪುರುಷಂ ಜಾತಮಗ್ರತಃ'' ಇತ್ಯಾದಿಶ್ರೌತಪ್ರಯೋಗಾತ್, ''ಅಹೇಯತ್ವಾದಹಂನಾಮಾ''**

**इत्यादिस्मृतेश्च अहंशब्दोऽहेयत्वाद्यर्थेऽप्यस्ति । ''न वा'' इत्यादिश्रुतावहंशब्दस्यास्मच्छब्दत्वे 'विजानामि' इति स्यात् । ''भूरिति शिरः'' इत्यादिनाऽक्षिस्थो भगवान् हि तत्राहम् । तथाऽपीह प्राणे ''प्राणो वा अहमस्मि'' इत्युत्तमपुरुषश्रवणादन्तर्यामिपरतैवोक्ता ।**

ಅನುವಾದ - ಪ್ರಶ್ನೆ - ಅಹಂ ಶಬ್ದಕ್ಕೆ ನೇರವಾಗಿ ಭಗವಂತನ ರೂಪಗಳೇ ಅರ್ಥವೆಂದು ಹೇಳಬಹುದು. ಹೀಗಿರುವಾಗ ಅಂತರ್ಯಾಮಿ ಎಂಬರ್ಥವನ್ನು ಏಕೆ ಹೇಳುತ್ತಿದ್ದೀರಿ? ಏಕೆಂದರೆ ''ಅ ಇತಿ ಬ್ರಹ್ಮ ತತ್ಸಾSSಗತಮಹಮಿತಿ ತಸ್ಯೋಪನಿಷದಹಮಿತಿ । ತತೋSಹಂ ನಾಮಾಭವತ್'' 'ಅ' ಎಂದರೆ 'ಬ್ರಹ್ಮನು' ಅವನಿಗೆ 'ಅಹಂ' ಎಂಬ ಮತ್ತೊಂದು ನಾಮಾಂತರವು ಬಂದಿದೆ. ಅವನ 'ಅಹಂ' ಹೆಸರು ರಹಸ್ಯವಾದದ್ದು. ಆದ್ದರಿಂದ 'ಅಹಂ' ಎಂಬ ಹೆಸರನ್ನು ಧರಿಸಿದ್ದಾನೆ. ಇತ್ಯಾದಿಯಾಗಿ ಛಾಂದೋಗ್ಯವು ಹೇಳುತ್ತಿದೆ.

ಮತ್ತು ''ನ ವಾ ಅಹಮಿಮಂ ವಿಜಾನಾತಿ'' ''ಅಹಂ ತತ್ತೇಜೋರಶ್ಮಿನ್ನಾರಾಯಣಂ ಪುರುಷಂ ಜಾತಮಗ್ರತಃ'' ಇತ್ಯಾದಿ ಶ್ರುತಿಯಲ್ಲಿ 'ಅಹಂ' ಶಬ್ದವನ್ನು ಪ್ರಯೋಗಿಸಿದ್ದರಿಂದ 'ಅಹೇಯತ್ವದಹಂನಾಮಾ' ಇತ್ಯಾದಿ ಸ್ಮೃತಿಗಳಲ್ಲಿ ಹೇಳಿದ್ದರಿಂದಲೂ 'ಅಹೇಯತ್ವ' ಮೊದಲಾದ ಅರ್ಥಗಳಲ್ಲಿಯೂ 'ಅಹಂ' ಶಬ್ದವು ಪ್ರಸಿದ್ಧವಾಗಿದೆ. 'ನ ವಾ' ಇತ್ಯಾದಿ ಶ್ರುತಿಯಲ್ಲಿರುವ 'ಅಹಂ' ಶಬ್ದವು 'ಅಸ್ಮತ್' ಶಬ್ದವಾದಲ್ಲಿ 'ವಿಜಾನಾಮಿ' ಎಂದು ಪ್ರಯೋಗವಿರಬೇಕಾಗಿತ್ತು. 'ವಿಜಾನಾತಿ' ಎಂದಿರುವುದರಿಂದ 'ಅಹೇಯತ್ವ' ಎಂಬರ್ಥವನ್ನೇ ಹೇಳಬೇಕು.

''ಭೂರಿತಿ ಶಿರಃ'' ಇತ್ಯಾದಿ ಶ್ರುತಿಯಲ್ಲಿ ಕಣ್ಣಿನಲ್ಲಿರುವ ಭಗವಂತನೇ ಅಹಂ ಶಬ್ದ ಪ್ರತಿಪಾದ್ಯನಾಗಿದ್ದಾನೆ. ಹೀಗಿರುವಾಗ ಅಂತರ್ಯಾಮಿ ಎಂಬರ್ಥವನ್ನು ಹೇಗೆ ಹೇಳುತ್ತೀರಿ?

ಉತ್ತರ - ಹೌದು, ಆದರೆ ಪ್ರಕೃತ ಪ್ರಾಣನಲ್ಲಿ ''ಪ್ರಾಣೋ ವಾ ಅಹಮಸ್ಮಿ,'' ಎಂಬುದಾಗಿ ಉತ್ತಮ ಪುರುಷವು ಕೇಳಿಸುತ್ತಿರುವುದರಿಂದ ಅಂತರ್ಯಾಮಿಪರತ್ವವನ್ನೇ ಹೇಳಬೇಕು.

ಕಠಿಣ ಪದಾರ್ಥ :

ತತ್ರ = ಬ್ರಹ್ಮನ ವಿಷಯದಲ್ಲಿ, ಅಹಂ = ಎಂಬ ಪದವು, ಆಗತಂ = ವಾಚಕವಾಗಿ
ತಿಳಿದಿದೆ, ಉಪನಿಷತ್ = ರಹಸ್ಯವಾದ ಹೆಸರು, ಉತ್ತಮಪುರುಷಶ್ರವಣಾತ್ = ಅಸ್ಮಿ
ಎಂಬ ಉತ್ತಮಪುರುಷ ಪ್ರಯೋಗವು ಕೇಳಿಸುತ್ತಿರುವುದರಿಂದ.

**ಪ್ರಕಾಶಃ –** नन्वहंशब्दस्यान्तर्याम्यर्थकत्वमनुक्त्वैव प्रयोगबाहुल्येन विष्णावेव मुख्यत्वमुपेत्य विष्णुर्ब्रह्मेतिवदहं सर्वैरप्यहेयः परमात्मा प्राण इतीन्द्रेणोक्तमित्यपि समाधातुं शक्यत्वात् सूत्रादावन्तर्यामित्ववर्णनं किमर्थमित्याक्षिपति – यद्यपीति ॥

तत्र ब्रह्मणि अहमितिपदं वाचकतयाऽवगतमित्यर्थः । 'उपनिषत्' रहस्यं नामेत्यर्थः । रूढिमुक्त्वा योगं चाह – **अहेयत्वादिति ॥**

**अहेयत्वादहंनामाऽस्म्यसनान्मनुतेरपि ।**
**ततो वेत्तीति च त्वं स पूर्णत्वात्सर्वनामकः ॥**

इति ब्रह्माण्डवचनात्,

**अहंनामा हरिर्नित्यमहेयत्वात्प्रकीर्तितः ।**

इति श्रुतिश्चेत्यपि ध्येयम् । ननु **''न वा अरे अहमिमं विजानाति''** इति मैत्रीयीं प्रति याज्ञवल्क्योक्ते वाक्ये अहंशब्दस्याहेयत्वार्थत्वं कुत इत्यत आह **न वा इतीति ॥ उत्तमेति ॥** अन्यथा **''प्राणो वा अहमस्मि''** इति श्रूयेतेति भावः ।

ननु नेदमुत्तमपुरुषस्य रूपं, किन्तु 'असनान्मनुतेरस्मि' इत्यैतरेयभाष्य-दिशाऽर्थान्तरपरमेवेति चेत्सत्यं, अस्मीत्यस्योत्तमपुरुषत्वाहाननैवैतद्भाष्यदिशा वाक्यमर्यादया अर्थान्तरवर्णनमेतदिति ध्येयम् । ननूक्तमत्राहंशब्दस्यान्तर्यामिणि मुख्यत्वे **''तदात्मानमेवाऽवेदहं ब्रह्मास्मि''** इत्यादावपि वाजसनेये तथा स्यादिति चेन्न, तत्र, बाधेनान्तर्याम्यर्थत्वास्वीकारादिति भावः ।

ವಿವರಣೆ - 'ಅಹಂ' ಶಬ್ದಕ್ಕೆ ಅಂತರ್ಯಾಮಿ ಎಂಬ ಅರ್ಥವನ್ನು ಹೇಳಿದೆ, ಪ್ರಯೋಗಬಾಹುಲ್ಯದಿಂದ, ವಿಷ್ಣುವಿನಲ್ಲಿಯೇ ಮುಖ್ಯಾರ್ಥವನ್ನು ಅಂಗೀಕರಿಸಲು ಬರುತ್ತದೆ. ವಿಷ್ಣುವನ್ನು ಬ್ರಹ್ಮ ಎಂಬ ಶಬ್ದದಿಂದ ಕರೆಯುವಂತೆ 'ಅಹೇಯತ್ವ'ಗುಣವಿರುವ ಪ್ರಯುಕ್ತವಾಗಿ 'ಅಹಂ' ಎಂದೂ ಸಹ ಕರೆಯಬಹುದು. ಆದ್ದರಿಂದ ಎಲ್ಲರಿಂದಲೂ ಅಹೇಯನಾಗಿರುವ ಪ್ರಯುಕ್ತ ಪರಮಾತ್ಮನು ಪ್ರಾಣಶಬ್ದವಾಚ್ಯನಾಗಿದ್ದಾನೆಂದು ದೇವೇಂದ್ರನಿಂದ ಹೇಳಲ್ಪಟ್ಟಿದೆ. ಹೀಗೂ ಸಮಾಧಾನವನ್ನು ಮಾಡಲು ಬರುವಾಗ ಸೂತ್ರದಲ್ಲಿ ಅಂತರ್ಯಾಮಿ ಎಂಬರ್ಥವನ್ನು ಹೇಳಿದ್ದು ವ್ಯರ್ಥವಲ್ಲವೇ?

ಈ ಆಕ್ಷೇಪವನ್ನು 'ಯದ್ಯಪಿ' ಇತ್ಯಾದಿ ವಾಕ್ಯದಿಂದ ಹೇಳಿದ್ದಾರೆ. 'ಅಹಂ' ಎಂಬ ಶಬ್ದಕ್ಕೆ ಪರಮಾತ್ಮನಲ್ಲಿ ರೂಢಿಯನ್ನು ಹೇಳಿ ಯೋಗವನ್ನು ಸಹ 'ಅಹೇಯತ್ವಾದಿ' ಇತ್ಯಾದಿ ವಾಕ್ಯದಿಂದ ಹೇಳುತ್ತಿದ್ದಾರೆ.

ಅಹೇಯತ್ವಾದಹಂನಾಮಾऽಸ್ಮ್ಯಸನಾನ್ಮನುತೇರಪಿ।
ತತೋ ವೇತ್ತೀತಿ ಚ ತ್ವಂ ಸ ಪೂರ್ಣತ್ವಾತ್ಸರ್ವನಾಮಕಃ॥

ಅಹೇಯನಾದ್ದರಿಂದ 'ಅಹಂ' ಶಬ್ದವಾಚ್ಯನು ಶತ್ರುಗಳನ್ನು ನಿರಸನ ಮಾಡುವುದರಿಂದ, ಮತ್ತು ಜ್ಞಾನರೂಪನಾದ್ದರಿಂದ 'ಅಸ್ಮಿ' ಎಂಬ ಶಬ್ದದಿಂದ ವಾಚ್ಯನು, ವ್ಯಾಪ್ತನಾದ್ದರಿಂದ ಮತ್ತು ತಿಳಿಯಲ್ಪಡು-

ವವನಾದ್ದರಿಂದ 'ತ್ವಂ' ಶಬ್ದದಿಂದ ವಾಚ್ಯನು. ಪೂರ್ಣನಾದ್ದರಿಂದ ಸಕಲಶಬ್ದಗಳಿಂದ ಪರಮಾತ್ಮನು ವಾಚ್ಯನಾಗಿದ್ದಾನೆ. ಹೀಗೆ ಬ್ರಹ್ಮಾಂಡ ಪುರಾಣದ ವಚನದಿಂದ ಮತ್ತು 'ಅಹಂನಾಮಾ ಹರಿರ್ನಿತ್ಯ-ಮಹೇಯತ್ವಾತ್ತತ್ಕೀರ್ತಿತಃ'' 'ಅಹೇಯನಾದ್ದರಿಂದ ಹರಿಯು ನಿತ್ಯವಾಗಿ ಅಹಂ' ಎನಿಸಿದ್ದಾನೆ ಎಂಬ ಶ್ರುತಿಪ್ರಮಾಣದಿಂದಲೂ 'ಅಹಂ' ಶಬ್ದದಿಂದ ಪರಮಾತ್ಮನೇ ವಾಚ್ಯನಾಗಿದ್ದಾನೆ.

''ನ ವಾ ಅರೇ ಅಹಮಿಮಂ ವಿಜಾನಾತಿ'' ಎಂಬುದಾಗಿ ಮೈತ್ರೇಯಿಯನ್ನು ಕುರಿತು ಯಾಜ್ಞವಲ್ಕ್ಯರು ಉಪದೇಶಿಸುವ ಈ ವಾಕ್ಯದಲ್ಲಿ 'ಅಹೇಯತ್ವ' ಎಂಬರ್ಥವನ್ನು 'ಅಹಂ' ಶಬ್ದಕ್ಕೆ ಏಕೆ ಹೇಳಬೇಕು? ಎಂಬ ಪ್ರಶ್ನೆಗೆ 'ನ ವಾ' ಎಂಬ ವಾಕ್ಯದಿಂದ ಉತ್ತರಿಸುತ್ತಿದ್ದಾರೆ. 'ಉತ್ತಮ ಪುರುಷಶ್ರವಣಾತ್' ಎಂಬ ವಾಕ್ಯದಲ್ಲಿ 'ಅಹಂ' ಶಬ್ದಕ್ಕೆ 'ಅಂತರ್ಯಾಮಿಪರತ್ವವನ್ನು ಹೇಳಿದ್ದಾರೆ. ಇಲ್ಲದಿದ್ದರೆ 'ಪ್ರಾಣೋವಾ ಅಹಮಸ್ಮಿ' ಎಂದು ಹೇಳಬೇಕಾಗಿತ್ತು ಎಂದರ್ಥ. 'ಪ್ರಾಣೋವಾ ಅಹಮಸ್ಮಿ' ಎಂಬ ವಾಕ್ಯದಲ್ಲಿ 'ಅಸ್ಮಿ' ಎಂಬುದನ್ನು ಉತ್ತಮಪುರುಷವೆಂದೇಕೆ ಹೇಳಬೇಕು; ಹೊರತಾಗಿ 'ಅಸನಾನ್ಯತೇರಸ್ಮಿ' ಎಂಬ ತೈತ್ತಿರೀಯಾಭಾಷ್ಯದ ಪ್ರಕಾರ ಬೇರೆ ಅರ್ಥವನ್ನೇ ಹೇಳಬಹುದಲ್ಲವೇ? ಹೌದು, ಆದರೆ 'ಅಸ್ಮಿ' ಎಂದು ಉತ್ತಮಪುರುಷತ್ವವನ್ನು ಬಿಡದೇ ಐತರೇಯಭಾಷ್ಯದ ಪ್ರಕಾರ ವಾಕ್ಯಮರ್ಯಾದೆಗೋಸ್ಕರ ಅರ್ಥಾಂತರವನ್ನು ಹೇಳಿದ್ದೇವೆ. ಅಂದರೆ ಐತರೇಯಭಾಷ್ಯದ ಅಭಿಪ್ರಾಯವನ್ನು ವಿವಕ್ಷಿಸಿ ಮತ್ತೊಂದು ಅರ್ಥವನ್ನು ವರ್ಣಿಸಿದ್ದೇವೆಂದು ಅಭಿಪ್ರಾಯ.

ಶಂಕೆ - 'ಅಹಂ' ಶಬ್ದಕ್ಕೆ 'ಅಂತರ್ಯಾಮಿ' ಎಂಬರ್ಥದಲ್ಲಿ ಮುಖ್ಯತ್ವವನ್ನು ಹೇಳಿದ್ದಾರೆ. ''ತದಾತ್ಮಾನಮೇವಾऽವೇದಹಂ ಬ್ರಹ್ಮಾಸ್ಮಿ'' ಇತ್ಯಾದಿಯಾಗಿ ಪರಮಾತ್ಮನೇ ಎಲ್ಲಿ 'ಅಹಂ' ಎಂಬ ಪದವನ್ನು ಉಪಯೋಗಿಸಿದ್ದಾನೋ ಅಲ್ಲಿಯೂ ಸಹ 'ಅಹಂ' ಶಬ್ದಕ್ಕೆ 'ಅಂತರ್ಯಾಮಿ' ಎಂಬರ್ಥವನ್ನು ವಿವಕ್ಷಿಸಬೇಕಾದೀತು ಎಂಬ ಪೂರ್ವಪಕ್ಷಕ್ಕೆ ಏನು ಉತ್ತರ ?

ಸಮಾಧಾನ - 'ಅಂತರ್ಯಾಮಿತ್ವ' ಎಂಬರ್ಥವನ್ನು ಬಾಧವಿಲ್ಲದಿದ್ದಾಗ ಮಾತ್ರ ಸ್ವೀಕರಿಸಬೇಕು. ಪರಮಾತ್ಮನು ಪ್ರಯೋಗಿಸುವ ವಾಕ್ಯಗಳಲ್ಲಿ ಅಂತರ್ಯಾಮಿ ಎಂಬರ್ಥವನ್ನು ಸ್ವೀಕರಿಸಿದರೆ ಬಾಧಬರುತ್ತದೆ.

**ಗುರುರಾಜೀಯಮ್** – ಅಥೈತಿಮತೇ ಸ್ಥಿತ್ವಾ ಶಙ್ಕತೇ – **ಅಹಮಿತಿ** ॥ ಇನ್ದ್ರಶಬ್ದೇನ ವಿಶಿಷ್ಟೋಕ್ತಾವಿತಿ ॥ ಅನೇನ ಕಿಮತ್ರ ಸಾಕ್ಷಾದೈಕ್ಯಮುಚ್ಯತೇ ಲಕ್ಷಣಯಾ ವೇತ್ಯಾದಿಟೀಕಾವಾಕ್ಯಂ ದಾರ್ಷ್ಟಾನ್ತಿಕಪರತಯಾ ಯೋಜಿತಂ ಭವತಿ । ಅನ್ಯಥಾ ದೃಷ್ಟಾನ್ತವಾಕ್ಯೇ ವಿಶಿಷ್ಟಚೈತನ್ಯೈಕ್ಯ-ಪಕ್ಷಯೋರ್ವಾಮದೇವಸ್ಯ ಮನ್ವಾದಿತ್ವಾಭಾವಾಚ್ಚೈತನ್ಯೈಕ್ಯವಿವಕ್ಷಯೋಕ್ತಿರಿತಿ ಚೇದಿತ್ಯಾದಿನೋಕ್ತತ್ವೇನ ಕಿಮತ್ರ ಸಾಕ್ಷಾದೈಕ್ಯಮುಚ್ಯತೇ ಲಕ್ಷಣಯಾ ವೇತ್ಯಾದಿವಿಕಲ್ಪಸ್ಯಾಸಙ್ಗತತ್ವಾದಿತಿ ಭಾವಃ । ನ ವಾ ಇತ್ಯಾದಿಶ್ರುತಾವಿತ್ಯಾದಿಶಬ್ದೋಪಾತ್ತಪಾರ್ಷ್ಟಿಕವಾಕ್ಯಮುಪಪಾದಯತಿ – **ಭೂರಿತಿ ಶಿರ ಇತಿ** ॥

## ಸಾರ

ಲೋಕದಲ್ಲಿ 'ನಾನು' ಎಂಬರ್ಥದಲ್ಲಿ 'ಅಹಂ' ಶಬ್ದವನ್ನು ಪ್ರಯೋಗಿಸುತ್ತೇವೆ. ಆದರೆ ನಿಜವಾಗಿಯೂ 'ಅಹಂ' ಶಬ್ದದ ಯೋಗ ಮತ್ತು ರೂಢಿಗಳು ವಿಷ್ಣುವಿನಲ್ಲಿಯೇ ಇರುತ್ತವೆ. 'ಅ ಇತಿ ಬ್ರಹ್ಮ,' ಇತ್ಯಾದಿ

ಶ್ರುತಿಗಳಲ್ಲಿ 'ಅಹಂ' ಶಬ್ದದ ರೂಢಿ ವಿಷ್ಣುವಿನಲ್ಲಿ ಪ್ರಸಿದ್ಧವಾಗಿವೆ. ಮತ್ತು 'ಅಹೇಯತ್ವಾದಹಂ ನಾಮಾ' ಇತ್ಯಾದಿ ಶ್ರುತಿಗಳಂತೆ ಭಗವಂತನು ಅಹೇಯನಾದ್ದರಿಂದ 'ಅಹಂ' ಶಬ್ದದಿಂದ ವಾಚ್ಯನಾಗಿದ್ದಾನೆ. ಆದರೆ 'ಪ್ರಾಣೋವಾ ಅಹಂ ಅಸ್ಮಿ' ಎಂಬಲ್ಲಿ 'ಅಹಂ' ಪದದಿಂದ ವಿಷ್ಣುವನ್ನು ನೇರವಾಗಿ ವಿವಕ್ಷಿಸಿಲ್ಲ. 'ಅಂತರ್ಯಾಮಿ' ರೂಪವನ್ನು ವಿವಕ್ಷಿಸಲಾಗಿದೆ. 'ಅಸ್ಮಿ' ಎಂಬ ಉತ್ತಮಪುರುಷಪದಪ್ರಯೋಗವೇ ಈ ಅರ್ಥವನ್ನು ಸ್ವೀಕರಿಸಲು ಕಾರಣ.

* * * *

## ಮುಖ್ಯವಾಯುವಿನ ಲಿಂಗಗಳೆಲ್ಲವೂ ಸಾವಕಾಶ

ತಾತ್ಪರ್ಯಚಂದ್ರಿಕಾ

**चक्षुरादिसाहचर्यं तु सति संशये निर्णायकम् । उक्तं हि – ''विशये प्रायदर्शनात्'' इति । अत्र तूक्तलिङ्गादिना निश्चयान्न संशयः । प्राणसंवादोऽपि ''त्वमुक्थमसि त्वमिदं सर्वमसि तव वयं स्मः'' इत्युत्कर्षपर्यवसायित्वादन्तर्यामिणि विष्णौ युक्तः । एवञ्च –**

**प्राणलिङ्गादिकं यद्यप्यवकाशोज्झितं स्वतः ।**
**तथाऽप्यन्तर्यामिगततया नेतुं हि शक्यते ॥**

**''उदासीनौ च तावास्तां केशवश्चाब्जसम्भवः ।''**

**इत्यौदासीन्यं तु बाह्यरूपेण । दुःखित्वादिकं त्वन्तर्यामिणि बाधितम् ।**

ಅನುವಾದ – 'ಚಕ್ಷುಃಶ್ರೋತ್ರಂ' ಇತ್ಯಾದಿಯಾಗಿ ಚಕ್ಷುರಾದಿ ಇಂದ್ರಿಯಗಳ ಸಾಹಚರ್ಯ-ವಿರುವುದರಿಂದ ಪ್ರಾಣನು ಬ್ರಹ್ಮನಲ್ಲವೆಂಬ ಪೂರ್ವಪಕ್ಷವು ತಪ್ಪು. ಏಕೆಂದರೆ ಸಂಶಯವಿದ್ದಾಗ ಮಾತ್ರ ಸಾಹಚರ್ಯವು (ಪ್ರಾಯಪಾಠವು) ನಿರ್ಣಾಯಕವಾಗುತ್ತದೆಂದು ''ವಿಶಯೇ ಪ್ರಾಯದರ್ಶನಾತ್'' ಎಂಬಲ್ಲಿ ಹೇಳಿದ್ದಾರೆ. ಆದರೆ ಪ್ರಕೃತ ಇಲ್ಲಿಯ ತನಕ ಸಮರ್ಥಿಸಿದ ಅನೇಕ ವಿಷ್ಣುಲಿಂಗಗಳ ಬಲದಿಂದ ಸಂಶಯಕ್ಕೆ ಆಸ್ಪದವೇ ಇಲ್ಲ.

ಪ್ರಾಣಸಂವಾದಾದಿಗಳನ್ನು ಅಂತರ್ಯಾಮಿಯಾದ ವಿಷ್ಣುವಿನಲ್ಲಿಯೇ ಕೂಡಿಸಬಹುದು. ಏಕೆಂದರೆ ಕೊನೆಯಲ್ಲಿ ದೇವತೆಗಳೆಲ್ಲರೂ ''ತ್ವಮುಕ್ಥಮಸಿ ತ್ವಮಿದಂ ಸರ್ವಮಸಿ ತವ ವಯಂ ಸ್ಮಃ'' ನೀವೇ ಉತ್ಕೃಷ್ಟರಾಗಿದ್ದೀರಿ. ಇದೆಲ್ಲವೂ ನಿಮ್ಮ ಅಧೀನವೇ ಆಗಿದೆ. ನಾವೆಲ್ಲರೂ ನಿಮ್ಮ ದಾಸರಾಗಿದ್ದೇವೆ ಎಂಬುದಾಗಿ ಹೇಳಿದ್ದರಿಂದ ಈ ಎಲ್ಲಾ ಧರ್ಮಗಳು ಅಂತರ್ಯಾಮಿ ವಿಷ್ಣುವಿನಲ್ಲಿಯೇ ಮುಖ್ಯವಾಗಿ ಬರುತ್ತವೆ.

ಆದ್ದರಿಂದ ಸಿದ್ಧಾಂತದ ಸಂಗ್ರಹ ಹೀಗಿದೆ -

ಪ್ರಾಣಲಿಂಗಾದಿಕಂ ಯದ್ಯಪ್ಯವಕಾಶೋಜ್ಝಿತಂ ಸ್ವತಃ ।
ತಥಾऽಪ್ಯಂತರ್ಯಾಮಿಗತತಯಾ ನೇತುಂ ಹಿ ಶಕ್ಯತೇ ॥

ವಸ್ತುತಃ ಪ್ರಾಣನ ಲಿಂಗಗಳೆಲ್ಲವೂ ನಿರವಕಾಶಗಳಾಗಿವೆ. ಆದರೂ ಸಹ ಅಂತರ್ಯಾಮಿ ಪರವಾಗಿ ಅರ್ಥೈಸಲು ಬರುತ್ತದೆ.

"ಉದಾಸೀನೌ ಹಿ ತಾವಾಸ್ತಾಂ ಕೇಶವಶ್ಚಾಬ್ಜಸಂಭವಃ" ದೇಹಪಾತಾದಿ ಸಂದರ್ಭದಲ್ಲಿ ವಿಷ್ಣು ಹಾಗೂ ಬ್ರಹ್ಮದೇವರು ಉದಾಸೀನರಾಗಿ ಇದ್ದಾರೆಂದು ಈ ವಾಕ್ಯದಿಂದ ಕೇಳಿಸುತ್ತಿದೆ. ಇದನ್ನು ಕೇವಲ ಬಾಹ್ಯರೂಪದಿಂದಷ್ಟೇ ವಿವಕ್ಷಿಸಬೇಕು. ಮುಖ್ಯಪ್ರಾಣದೇವರ ಶರೀರದೊಳಗಿದ್ದು ಎಲ್ಲಾ ವ್ಯಾಪಾರವನ್ನು ಪರಮಾತ್ಮನು ಮಾಡುತ್ತಿರುತ್ತಾನೆ.

ದುಃಖಿತ್ವಾದಿಗಳನ್ನು ಅಂತರ್ಯಾಮಿಗಳಲ್ಲಿ ಹೇಳಬೇಕಾದೀತೆಂದು ಪೂರ್ವಪಕ್ಷ ಮಾಡಿದ್ದರು. ಇದೂ ಸಹ ತಪ್ಪು. ಬಾಧಿತವಾದ್ದರಿಂದ ಅಂತರ್ಯಾಮಿಯಲ್ಲಿ ದುಃಖಿತ್ವಾದಿಗಳನ್ನು ವಿವಕ್ಷಿಸಬಾರದು.

ಕಠಿಣಪದಾರ್ಥ

ಚಕ್ಷುರಾದಿಸಾಹಚರ್ಯಂ = ಚಕ್ಷುರಾದಿ ಇಂದ್ರಿಯಗಳ ಸಾಹಚರ್ಯವು, ವಿಶಯೇ = ಸಂಶಯವಿದ್ದಾಗ, ಉಕ್ತಲಿಂಗಾದಿನಾ = ವಿಷ್ಣುವಿನಲ್ಲಿ ಹೇಳಲ್ಪಟ್ಟ ನಿರವಕಾಶಲಿಂಗಗಳಿಂದ, ಉಕ್ಥಂ = ಉತ್ಥಾಪಕನು, ಸರ್ವಂ = ಸಕಲಪದಾರ್ಥಗಳಿಗೆ ಈಶನು. ಸ್ಮಃ = ದಾಸರಾಗಿದ್ದೇವೆ. ಉತ್ಕರ್ಷಪರ್ಯವಸಾಯಿತ್ವಾತ್ = ಸರ್ವೋತ್ಕೃಷ್ಟಪದ್ವದಲ್ಲಿ ಪರ್ಯವಸಾನವಾಗುವುದರಿಂದ, ಅವಕಾಶೋಜ್ಝಿತಂ = ನಿರವಕಾಶವಾಗಿದೆ, ಉದಾಸೀನೌ = ನಿರ್ವ್ಯಾಪಾರವುಳ್ಳವರು. ಅಬ್ಜಸಂಭವಃ = ಚತುರ್ಮುಖ ಬ್ರಹ್ಮದೇವರು, ಬಾಹ್ಯರೂಪೇಣ = ಅಂತರ್ಯಾಮಿಯಾದ ಬಾಹ್ಯ ರೂಪದಿಂದ.

**ಪ್ರಕಾಶಃ** – ಏವಮಿನ್ದ್ರಪ್ರಾಪಕಂ ವಿಷ್ಣೌ ಸಾವಕಾಶಮಿತಿ ಸಮರ್ಥ್ಯ ವಾಯುಲಿಙ್ಗಾನ್ಯಪಿ ತಥೇತ್ಯಾಹ – **ಚಕ್ಷುರಿತಿ** ॥ ಯದುಕ್ತಂ ಗೋದೋಹನಸಾಹಚರ್ಯಾತ್ ವತ್ಸಾಲಮ್ಭನಂ ಗುಣಕರ್ಮೇತಿವತ್ ಅಪ್ರಧಾನಸಾಹಚರ್ಯಾತ್ ಪ್ರಾಣೋऽಪ್ರಧಾನ ಇತಿ, ತನ್ನ, ವೈಷಮ್ಯಾತ್ । ಪ್ರಾಣೋ ವಿಷ್ಣುರನ್ಯೋ ವೇತಿ ಸಂಶಯೇ ಸತ್ಯೇವ, ಸಾಹಚರ್ಯಸ್ಯ ನಿರ್ಣಾಯಕತ್ವಾತ್ । ಇಹ ಚ ನಿರವಕಾಶವಿಷ್ಣುಲಿಙ್ಗಾದಿನಾ ನಿರ್ಣಯಸಮ್ಭವಾನ್ನಾಯಂ ತನ್ಯಾಯಸ್ಯ ವಿಷಯ ಇತ್ಯಾಹ – **ವಿಶಯ ಇತಿ** ॥ ಸಂಶಯೇ ಸತಿ ಪ್ರಾಯಶಬ್ದಿತಸಾಹಚರ್ಯದರ್ಶನಾನ್ನಿರ್ಣಯ ಇತ್ಯೇವ ಜೈಮಿನ್ಯಾಚಾರ್ಯೈರುಕ್ತಮಿತ್ಯರ್ಥಃ। ಹಿ ಶಬ್ದೇನ ಮೀಮಾಂಸಕಸಮ್ಮತಿಮಾಹ – 'ತ್ವಮುಕ್ಥಮಸಿ' ಅಸ್ಮಾಕಮುತ್ಥಾಪಕोऽಸಿ । ಅಸ್ಯ ಸರ್ವಸ್ಯ ತ್ವಮೇವೇಶोऽಸಿ, ವಯಂ ತವ ದಾಸಾಃ ಸ್ಮಃ, ತ್ವಮಸ್ಮಾಕಂ ಸ್ವಾಮ್ಯಸೀತ್ಯುತ್ತರವಾಕ್ಯಸ್ಯೋತ್ಕರ್ಷಪರ್ಯವಸಾಯಿತ್ವಾತ್ ಸ್ವಸ್ಯೋತ್ತಮತಾಪ್ರಕಾಶನಾಯೈವ ನಿಕೃಷ್ಟೈಃ ತೇಷು ಅನ್ತಃಸ್ಥಿತ್ವಾ ಸಂವಾದಮಕರೋದಿತ್ಯರ್ಥಃ । ಏತೇನ "ಲಿಙ್ಗಾನಾಂ ತದನ್ತರ್ಯಾಮಿಭಗವದ್ವಿಷಯತಯೋಪಪತ್ತೇಃ" ಇತಿ ಟೀಕಾ

विवृता । ननु विष्णोः संवादादिवेलायामौदासीन्यावगतेः कथं संवादकर्तृत्वं अन्तर्यामितयाऽपीत्यत आह – उदासीनादिति ॥ यथोक्तं तृतीयस्कन्धतात्पर्ये सप्तविंशेऽध्याये –

**यज्ञान्तस्थः स्वयं पादौ विशन्नोत्थापयद्धरिः ।**
**शक्तोऽपि ब्रह्मवाय्वोस्तु बलज्ञास्यै जनार्दनः ।**
**तत्स्थ उत्थापयामास ब्रह्मदेहं विशन् प्रभुः ॥**

इति । अन्तर्यामिभिन्नप्रपदद्वाराप्रविष्टरूपाभिप्रायं, न त्वन्तर्यामिरूपविषयं, ''न ऋते त्वत्क्रियते'' इत्यादिवचनविरोधादित्यर्थः । ननु कथं चतुर्मुखस्य देहधारणादौ औदासीन्योक्तिः, अष्टमे बृहदारण्यकभाष्ये –

**प्राणं विना च ब्रह्मा तं विना प्राण एव च ।**
**अन्योन्यापाश्रयाच्छक्तौ स्थातुमन्ये कुतस्ततः॥**

इत्यादिवामनस्मृत्या प्राणस्योत्क्रमणे सति ब्रह्मणोऽवस्थान एव शक्त्यभावोक्तेरिति, मैवं, अंशेन प्राणेन सह निर्गतस्याप्यंशेन देहेऽवस्थानसम्भवात्, औदासीन्यस्य सुप्त्यर्थत्वोपपत्तेः । यथोक्तं तृतीयस्कन्धतात्पर्ये तत्रैव –

**अंशेन सुप्तो ब्रह्मा तु त्वंशेन निरगात्तथा ।**
**स्वदेहाद्वायुसहितो विष्णुना च जगत्प्रभुः ।**
**तमुत्थापयितुं देवांस्तानृते त्रीन् महाबलान् ।**
**नाशक्नुवन्नेकसंस्था स्ततस्तत्राविशंस्त्रयः ।**
**उदतिष्ठद्ब्रह्मदेहः तदा तेषां प्रभावतः ॥**

इति । नन्वेवं जीवगतदुःखसमवायित्वमपि स्यादित्युक्तमित्यत आह – दुःखित्वेति ॥ नहि जातिः पदार्थ इति मते 'घटोऽनित्यः' इत्यनित्यत्वं जातावन्वेतीति भावः ।

ವಿವರಣೆ - ಇಲ್ಲಿಯ ತನಕ ದೇವೇಂದ್ರನಲ್ಲಿ ಪ್ರಸಿದ್ಧವಾದ ಲಿಂಗಗಳನ್ನು ವಿಷ್ಣುವಿನಲ್ಲಿ ಸಾವಕಾಶ ಮಾಡಿದ್ದಾಯಿತು. ಪ್ರಕೃತ ಮುಖ್ಯವಾಯುವಿನಲ್ಲಿ ಪ್ರಸಿದ್ಧವಾದ ಲಿಂಗಗಳೂ ಸಹ ವಿಷ್ಣುವಿನಲ್ಲಿ ಸಾವಕಾಶವಾಗಿದೆಯೆಂದು ಸಮರ್ಥಿಸುತ್ತಿದ್ದಾರೆ.

ಗೋದೋಹನದ ಸಾಹಚರ್ಯದಿಂದ ವತ್ಸಾಲಂಬನವೂ ಗುಣಕರ್ಮವಾಗುತ್ತದೆ. ಆದರಂತೆ ಅಪ್ರಧಾನವಾದ ಚಕ್ಷುರಾದಿಗಳ ಸಾಹಚರ್ಯದಿಂದ ಪ್ರಾಣನೂ ಸಹ ಅಪ್ರಧಾನನಾಗುತ್ತಾನೆಂದು ಹಿಂದೆ ಪೂರ್ವಪಕ್ಷಿಯು ಆಕ್ಷೇಪಿಸಿದ್ದ. ಇದು ತಪ್ಪು. ದೃಷ್ಟಾಂತಕ್ಕೂ ದಾರ್ಷ್ಟಾಂತಿಕಕ್ಕೂ ವ್ಯತ್ಯಾಸವಿದೆ. ಪ್ರಾಣನು ವಿಷ್ಣುವು ಅಥವಾ ಬೇರೆಯವನೋ ಎಂಬ ಸಂಶಯವಿದ್ದರೆ ಮಾತ್ರ ಸಾಹಚರ್ಯವು ನಿರ್ಣಾಯಕವಾಗುತ್ತದೆ. ಆದರೆ ಪ್ರಕೃತ ನಿರವಕಾಶವಾದ ಅನೇಕ ವಿಷ್ಣುಲಿಂಗಗಳಿಂದಲೇ ನಿರ್ಣಯವನ್ನು ಮಾಡಲು ಬರುವಾಗ ಸಂಶಯಕ್ಕೆ ಅವಕಾಶವೇ ಇಲ್ಲ. ನಿಮ್ಮನ್ಯಾಯಕ್ಕೆ ಇಲ್ಲಿ ಪ್ರಸಕ್ತಿಯೇ ಇಲ್ಲ. 'ಸಂಶಯೇ ಸತಿ ಪ್ರಾಯಶಬ್ದತ ಸಾಹಚರ್ಯದರ್ಶನಾನ್ನಿರ್ಣಯಃ' - 'ಸಂಶಯ ಇದ್ದಾಗ ಮಾತ್ರ ಸಾಹಚರ್ಯದಿಂದ ನಿರ್ಣಯ ಮಾಡಬೇಕೆಂದು' ಜೈಮಿನಾಚಾರ್ಯರು ಹೇಳಿದ್ದಾರೆ. 'ಹಿ' ಶಬ್ದದಿಂದ ಮೀಮಾಂಸಕರ ಸಮ್ಮತಿಯನ್ನು ಸೂಚಿಸಿದ್ದಾರೆ. 'ತ್ವಮುಕ್ಥಮಸಿ' ನಮ್ಮೆಲ್ಲರಿಗೆ ಉತ್ಥಾಪಕನಾಗಿದ್ದೀ. ತ್ವಮಿದಂ ಸರ್ವಮಸಿ = ಈ ಎಲ್ಲಾ ಲೋಕಕ್ಕೆ ನೀನೇ ಈಶನಾಗಿದ್ದೀ. ವಯಂ ತವ ದಾಸಾಃ ಸ್ಮಃ = ನಿನಗೆ ನಾವೆಲ್ಲರೂ ದಾಸರಾಗಿದ್ದೇವೆ. ನೀನು ನಮಗೆಲ್ಲರಿಗೂ ಸ್ವಾಮಿಯಾಗಿದ್ದೀ; ಎಂಬುದಾಗಿ ಮುಂದಿನ ವಾಕ್ಯದಲ್ಲಿ ಪರಮಾತ್ಮನ ಉತ್ಕರ್ಷವು ಕೇಳಿಸುತ್ತಿದೆ. ತನಗೆ ಉತ್ತಮತ್ವವನ್ನು ತೋರಿಸುವುಕೊಳ್ಳುವುದಕ್ಕಾಗಿಯೇ ನಿಕೃಷ್ಟರಾದ ದೇವತೆಗಳ ಒಳಗೆ ನಿಂತು ಸಂವಾದವನ್ನು ಮಾಡಿದ್ದಾನೆಂದು ಇದರ ಅರ್ಥ. ಹೀಗೆ ಹೇಳಿದ್ದರಿಂದ ''ಲಿಂಗಾನಾಂ ತದಂತರ್ಯಾಮಿಭಗವದ್ವಿಷಯತಯೋಪಪತ್ತೇಃ'' ಎಂಬ ಟೀಕೆಯನ್ನು ವ್ಯಾಖ್ಯಾನಿಸಿದಂತಾಯಿತು.

ಸಂವಾದ ನಡೆಯುವ ಸಂದರ್ಭದಲ್ಲಿ ವಿಷ್ಣುವಿಗೆ ಹಾಗೂ ಚತುರ್ಮುಖಬ್ರಹ್ಮನಿಗೆ ಔದಾಸೀನ್ಯವು ತಿಳಿಯುತ್ತಿರುವುದರಿಂದ ಅಂತರ್ಯಾಮಿತ್ವೇನ ಪರಮಾತ್ಮನು ಸಂವಾದಕರ್ತೃವಾಗಿದ್ದಾನೆಂದು ಹೇಗೆ ತಾನೆ ಹೇಳುತ್ತೀರಿ? ಎಂಬ ಪ್ರಶ್ನೆಗೆ ''ಉದಾಸೀನವತ್'' ಎಂಬ ವಾಕ್ಯದಿಂದ ಉತ್ತರಿಸಿದ್ದಾರೆ. ಈ ವಿಷಯದ ಬಗ್ಗೆ ತೃತೀಯಸ್ಕಂಧ ಭಾಗವತ ತಾತ್ಪರ್ಯದ ೨೭ನೇ ಅಧ್ಯಾಯದಲ್ಲಿ ಹೀಗೆ ಹೇಳಿದ್ದಾರೆ -

ಯಜ್ಞಾಂತಸ್ಥಃ ಸ್ವಯಂ ಪಾದೌ ವಿಶನ್ನೋತ್ತಾಪಯದ್ಧರಿಃ।
ಶಕ್ತೋಽಪಿ ಬ್ರಹ್ಮವಾಯ್ವೋಸ್ತು ಬಲಜ್ಞಾಪ್ಯೈ ಜನಾರ್ದನಃ।
ತತ್ಸ್ಥ ಉತ್ಥಾಪಯಾಮಸ ಬ್ರಹ್ಮದೇಹಂ ವಿಶನ್ ಪ್ರಭುಃ॥

ಸ್ವತಃ ಪಾದದಲ್ಲಿ ಪ್ರವೇಶ ಮಾಡಿದ ಯಜ್ಞಾಂತರ್ಗತನಾದ ಭಗವಂತನು ಸಮರ್ಥನಾಗಿದ್ದರೂ ದೇಹವನ್ನು ಎಬ್ಬಿಸಲಿಲ್ಲ. ಆದರೆ ಬ್ರಹ್ಮ ಹಾಗೂ ವಾಯುದೇವರ ಬಲವನ್ನು ತಿಳಿಸುವುದಕ್ಕೋಸ್ಕರ ಬ್ರಹ್ಮ ವಾಯುದೇವರ ಒಳಗಡೆ ಇದ್ದು ಆ ದೇಹವನ್ನು ಎಬ್ಬಿಸಿದನು.

ಈ ಪ್ರಮಾಣದಿಂದ ಭಗವಂತನು ಏಕೆ ಉದಾಸೀನನಾಗಿದ್ದಾನೆಂದು ಸ್ಪಷ್ಟವಾಗುತ್ತದೆ. ಅಂತರ್ಯಾಮಿ ರೂಪಕ್ಕಿಂತ ಭಿನ್ನವಾದ ಪ್ರಪದ ಎಂಬ ರೂಪದ ಮೂಲಕ ಯಜ್ಞಾಂತರ್ಗತರೂಪಕ್ಕೆ ಔದಾಸೀನ್ಯವನ್ನು ಹೇಳಲಾಗಿದೆ ಹೊರತು ಅಂತರ್ಯಾಮಿ ರೂಪದ ವಿವಕ್ಷೆಯಿಂದ ಔದಾಸೀನ್ಯವನ್ನು ಹೇಳಿಲ್ಲ. ಹಾಗೇನಾದರೂ ಅಂತರ್ಯಾಮಿ ರೂಪಕ್ಕೆ ಔದಾಸೀನ್ಯವನ್ನು ಹೇಳಿದರೆ ''ನ ಋತೇ ತ್ವತ್ಕ್ರಿಯತೇ'' ಎಂಬ ಶ್ರುತಿಯ ವಿರೋಧ ಬರುತ್ತದೆ.

ಪ್ರಶ್ನೆ - ಚತುರ್ಮುಖನಿಗೆ ದೇಹಧಾರಣಾದಿಗಳಲ್ಲಿ ಔದಾಸೀನ್ಯವನ್ನು ಏಕೆ ಹೇಳುತ್ತೀರಿ?. ಏಕೆಂದರೆ ಎಂಟನೇ ಅಧ್ಯಾಯದ ಬೃಹದಾರಣ್ಯಕಭಾಷ್ಯದಲ್ಲಿ -

ಪ್ರಾಣಂ ವಿನಾ ನಚ ಬ್ರಹ್ಮಾತಂ ವಿನಾ ಪ್ರಾಣ ಏವ ಚ।
ಅನ್ಯೋನ್ಯಾಪಾಶ್ರಯಾಚ್ಚಕ್ತೌ ಸ್ಥಾತುಮನ್ಯೇ ಕುತಸ್ತತಃ॥

ಪ್ರಾಣನನ್ನು ಬಿಟ್ಟು ಬ್ರಹ್ಮನು ಇರುವುದಿಲ್ಲ. ಬ್ರಹ್ಮನನ್ನು ಬಿಟ್ಟು ಪ್ರಾಣನು ಇರುವುದಿಲ್ಲ ಎಂದು ವಾಮನ ಪುರಾಣದ ಮಾತನ್ನು ಉದಾಹರಿಸಿದ್ದಾರೆ. ಈ ವಚನದಂತೆ ಪ್ರಾಣನಿಗೆ ಉತ್ಕ್ರಮಣವಾದರೆ, ಬ್ರಹ್ಮನಿಗೆ ದೇಹದಲ್ಲಿ ಇರಲು ಸಾಧ್ಯವೇ ಇಲ್ಲ. ಹೀಗಿರುವಾಗ ದೇಹಧಾರಣವಿಷಯದಲ್ಲಿ ಉದಾಸೀನನಾಗಿದ್ದಾನೆಂದು ಹೇಗೆ ಹೇಳಿದಿರಿ?

ಉತ್ತರ - ಒಂದು ಅಂಶದಿಂದ ಚತುರ್ಮುಖನು ಪ್ರಾಣನ ಜೊತೆಗೆ ನಿರ್ಗಮನ ಮಾಡಿದರೂ ಮತ್ತೊಂದು ಅಂಶದಿಂದ ದೇಹದಲ್ಲಿರುತ್ತಾನೆ. ಉದಾಸೀನ ಎಂಬ ಶಬ್ದಕ್ಕೆ ಸುಪ್ತನಾಗಿದ್ದಾಗ ಎಂಬರ್ಥವನ್ನು ಹೇಳಬಹುದು. (ಇಲ್ಲಿ 'ಸುಪ್ತ' ಎಂಬ ಶಬ್ದಕ್ಕೆ ನಿರ್ವ್ಯಾಪಾರದಿಂದ ಇದ್ದಾನೆಂದು ಅರ್ಥೈಸಬೇಕು. ಏಕೆಂದರೆ ಚತುರ್ಮುಖಬ್ರಹ್ಮದೇವರಿಗೆ ಪ್ರಲಯಕಾಲದ ಸುಷುಪ್ತಿಯ ಅವಸ್ಥೆಯೇ ಇರುವುದಿಲ್ಲ.) ಏಕೆಂದರೆ ತೃತೀಯಸ್ಕಂಧದ ತಾತ್ಪರ್ಯದಲ್ಲಿ ಹೀಗೆ ಹೇಳಿದ್ದಾರೆ -

ಅಂಶೇನ ಸುಪ್ತೋ ಬ್ರಹ್ಮಾತು ತ್ವಂಶೇನ ನಿರಗಾತ್ತಥಾ।
ಸ್ವದೇಹಾದ್ವಾಯುಸಹಿತೋ ವಿಷ್ಣುನಾ ಚ ಜಗತ್ಪ್ರಭುಃ।
ತಮುತ್ಥಾಪಯಿತುಂ ದೇವಾಂಸ್ತಾನ್ಕತೇ ತ್ರೀನ್ ಮಹಾಬಲಾನ್।
ನಾಶಕ್ನುವನ್ನೇಕಸಂಸ್ಥಾಸ್ತತಸ್ತತ್ರಾವಿಂಶಂಸ್ತ್ರಯಃ।
ಉದತಿಷ್ಠದ್ಬ್ರಹ್ಮದೇಹಃ ತದಾ ತೇಷಾಂ ಪ್ರಭಾವತಃ॥

ಒಂದು ಅಂಶದಿಂದ ಬ್ರಹ್ಮನು ಸುಪ್ತನಾಗಿ ದೇಹದಲ್ಲಿ ಉಳಿದು (ನಿರ್ವ್ಯಾಪಾರದಿಂದ ಇದ್ದು) ಮತ್ತೊಂದು ಅಂಶದಿಂದ ವಾಯು ಹಾಗೂ ವಿಷ್ಣುವಿನ ಜೊತೆಗೆ ದೇಹದಿಂದ ಹೊರಗೆ ಹೊರಟನು. ಈ ಮೂವರು ಬಲಿಷ್ಠರು ಹೊರಗೆ ಹೊರಟಾಗ ದೇವತೆಗಳಿಗೆ ದೇಹವನ್ನು ಎಬ್ಬಿಸಲು ಸಾಧ್ಯವಾಗಲಿಲ್ಲ. ಯಾವಾಗ ಪುನಃ ಆ ಮೂವರು ದೇಹದಲ್ಲಿ ಪ್ರವೇಶಿಸಿದರೋ ಆವಾಗ ಬ್ರಹ್ಮನ ದೇಹವು ಕುಳಿತುಕೊಂಡಿತು. ಅದ್ದರಿಂದ ಚತುರ್ಮುಖನಿಗೆ ದೇಹಧಾರಣ ವಿಷಯದಲ್ಲಿ ಔದಾಸೀನ್ಯ ಹೇಳಿದ್ದು ತಪ್ಪಲ್ಲ.

ಜೀವಾದಿಗಳಲ್ಲಿರುವ ಧರ್ಮಗಳು ಬ್ರಹ್ಮನಲ್ಲಿ ಬರುವುದಾದರೆ ದುಃಖಸಮವಾಯವೂ ಸಹ ಬ್ರಹ್ಮನಲ್ಲಿ ಬರಬೇಕಾದೀತು ಎಂಬ ಪೂರ್ವಪಕ್ಷಕ್ಕೆ 'ದುಃಖಿತ್ವಾದಿಕಂ' ಎಂಬ ವಾಕ್ಯದಿಂದ ಉತ್ತರಿಸುತ್ತಿದ್ದಾರೆ. ಯಾವ ಮತದಲ್ಲಿ ಜಾತಿಯನ್ನು ಪದಾರ್ಥವೆಂದು ಒಪ್ಪಿದ್ದಾರೋ ಅವರ ಮತದ ಪ್ರಕಾರ 'ಘಟೋऽನಿತ್ಯಃ'' ಎಂದು ಹೇಳಿದಾಗ ಅನಿತ್ಯತ್ವವು ಜಾತಿಯಲ್ಲಿ ಅನ್ವಯವಾಗುವುದಿಲ್ಲ. ಹೊರತಾಗಿ ಘಟದಲ್ಲಿಯೇ ಅನ್ವಯವಾಗುತ್ತದೆ. ಆದರಂತೆ ದುಃಖಿತ್ವದ ಅನ್ವಯವೂ ಸಹ ಅನ್ವಯಯೋಗ್ಯತಾವಿಲ್ಲದ ಕಾರಣ ವಿಷ್ಣುವಿನಲ್ಲಿ ಅನ್ವಿತವಾಗುವುದಿಲ್ಲ.

ಇಂದ್ರ ಹಾಗೂ ವಾಯುಪ್ರಾಪಕವಾದ ಲಿಂಗಗಳನ್ನು ಸಾವಕಾಶ ಮಾಡಿದ್ದಾಯಿತು. ಈಗ ಜೀವ ಪ್ರಾಪಕವಾದ ಲಿಂಗವನ್ನು ಸಾವಕಾಶ ಮಾಡುತ್ತಿದ್ದಾರೆ - 'ಶತಂ ವರ್ಷಾಣಿ' ಇತ್ಯಾದಿ ವಾಕ್ಯದಿಂದ.

## ಜೀವನ ಲಿಂಗಗಳೆಲ್ಲವೂ ಸಾವಕಾಶ (ಸಿದ್ಧಾಂತದ ಉಪಸಂಹಾರ)

तात्पर्यचन्द्रिका

**''तं शतं वर्षाण्यभ्यार्चत्'' इति यच्छतसंवत्सरपर्यन्तं प्राणस्य जीव-शरीरेऽवस्थानं न तज्जीवलिङ्गम्, किन्तु ''तस्माच्छतं वर्षाणि पुरुषायुषो भवन्ति'' इति तद्धेतुकं शतायुष्त्वम्। तच्च न प्राणे श्रुतम्। तस्मात् –**

**बहुत्वात् श्रुतिसाहित्यादवकाशोज्झितत्वतः।**
**बलवद्भिर्विष्णुलिङ्गैः प्राणश्रुत्यादि नीयते॥**

**तदेतदभिप्रेत्योक्तम् न्यायविवरणे – ''न चानन्यथासिद्धत्वमन्यत्र श्रुतिलिङ्गादेः, अन्यगतलिङ्गादीनामपि तद्गतभगवद्रूपापेक्षया युक्तेः'' इति।**

ಅನುವಾದ - ಜೀವಪ್ರಾಪಕವಾದ ಲಿಂಗಗಳೂ ಸಹ ಸಾವಕಾಶವಾಗಿವೆ. ಇದರಂತೆ ''ತಂ ಶತಂ ವರ್ಷಾಣ್ಯಭ್ಯಾರ್ಚತ್'' ಎಂದು ಪ್ರಾಣನಲ್ಲಿ ಕೇಳಿಸುತ್ತಿದೆ. ನೂರು ವರ್ಷಗಳ ಕಾಲ ಪ್ರಾಣನು ಜೀವಶರೀರದಲ್ಲಿರುತ್ತಾನೆಂಬ ಈ ಲಿಂಗವೂ ಸಹ ಜೀವನಲ್ಲಿ ಬರುವುದಿಲ್ಲ. ಹೊರತಾಗಿ ''ತಸ್ಮಾಚ್ಛತಂ ವರ್ಷಾಣಿ ಪುರುಷಾಯುಷೋ ಭವಂತಿ'' ನೂರುವರ್ಷಗಳ ಕಾಲ ಪರಮಾತ್ಮನು ಶರೀರದಲ್ಲಿರುತ್ತಾನಾದ್ದರಿಂದ ಜೀವನು ನೂರು ವರ್ಷಗಳ ಕಾಲ ಬದುಕುತ್ತಾನೆ ಎಂದು ಜೀವನಕ್ಕೆ ಹೇತುವಾದ ಶತಾಯುಷ್ಟ್ವವು ಜೀವನ ಲಿಂಗವಾಗಿ ಕೇಳಿಸುತ್ತಿದೆ. ಇಂತಹ ಶತಾಯುಷ್ಟ್ವ ಲಿಂಗವು ಪ್ರಾಣನಲ್ಲಿ ಕೇಳಿಸುತ್ತಲೇ ಇಲ್ಲ. ಆದ್ದರಿಂದ

ಬಹುತ್ವಾತ್ ಶ್ರುತಿಸಾಹಿತ್ಯಾದವಕಾಶೋಜ್ಝಿತತ್ವತಃ।
ಬಲವದ್ಭಿರ್ವಿಷ್ಣುಲಿಂಗೈಃ ಪ್ರಾಣಶ್ರುತ್ಯಾದಿ ನೀಯತೇ॥

ಪರಮಾತ್ಮನ ಲಿಂಗಗಳು ಬಹುವಾದ್ದರಿಂದ ಶ್ರುತಿಸಾಹಿತ್ಯವಿರುವುದರಿಂದ ಮತ್ತು ನಿರವಕಾಶವಾದ್ದರಿಂದ ವಿಷ್ಣುವಿನ ಲಿಂಗಗಳು ಬಲಿಷ್ಠವಾಗಿವೆ. ಇವುಗಳಿಗೆ ಅನುಸಾರಿಯಾಗಿ ಪ್ರಾಣಶ್ರುತ್ಯಾದಿಗಳನ್ನು ಅರ್ಥೈಸಬೇಕು.

ಈ ಅಭಿಪ್ರಾಯದಿಂದಲೇ ನ್ಯಾಯವಿವರಣದಲ್ಲಿ ''ನ ಚಾನ್ಯಥಾಸಿದ್ಧತ್ವಮನ್ಯತ್ರ ಶ್ರುತಿಲಿಂಗಾದೇಃ, ಅನ್ಯಗತಲಿಂಗಾದೀನಾಮಪಿ ತದ್ಗತಭಗವದ್ರೂಪಾಪೇಕ್ಷಯಾ ಯುಕ್ತೇಃ'' ಮುಖ್ಯಪ್ರಾಣಾದಿಗಳಲ್ಲಿ ಶ್ರುತಿಲಿಂಗಾದಿಗಳು ಅನ್ಯಥಾಸಿದ್ಧವಾಗಿ ನಿರ್ಣಯವಾಗಿಲ್ಲ. ಅವರಲ್ಲಿ ಪ್ರಸಿದ್ಧವಾಗಿರುವ ಲಿಂಗಗಳೆಲ್ಲವನ್ನು ಅವರವರ ಅಂತರ್ಯಾಮಿಯಾದ ಭಗವದ್ರೂಪದ ಅಪೇಕ್ಷೆಯಿಂದ ಕೂಡಿಸಬೇಕು ಎಂದು ಹೇಳಿದ್ದಾರೆ.

ಕಠಿಣಪದಾರ್ಥ

ತತ್ = ಪ್ರಾಣನ ಅವಸ್ಥಾನವು, ತದ್ಧೇತುಕಂ = ನೂರುವರ್ಷಗಳ ಅವಸ್ಥಾನಕ್ಕೆ ನಿಮಿತ್ತವಾದ, ತಸ್ಮಾತ್ = ಬ್ರಹ್ಮಶ್ರುತಿ ಸಾಹಿತ್ಯವಿರುವುದರಿಂದ, ತದ್ಧೇತುಕಂ = ಭಗವಂತನಿಗಿಂತ ಅನ್ಯವಿಷಯವಾದ ಶ್ರುತ್ಯಾದಿಗಳನ್ನು, ಅನನ್ಯಥಾಸಿದ್ಧತ್ವಂ = ನಿರಕವಾಶತ್ವವು, ಅನ್ಯಗತ = ಇಂದ್ರಾದಿಗಳಲ್ಲಿರುವ.

**ಪ್ರಕಾಶಃ – ಇದಾನೀಂ ಜೀವಪ್ರಾಪಕಮನ್ಯಥಯತಿ – ಶತಮಿತಿ ॥ 'ಇಮಂ ಲಾಕಂ' ಇತ್ಯಸ್ಯಾರ್ಥಃ – ಜೀವಶರೀರ ಇತಿ ॥ 'ತದ್ಧೇತುಕಂ' ಪ್ರಾಣಸ್ಯ ಶತವರ್ಷಪರ್ಯನ್ತಂ ಶರೀರೇ ಅವಸ್ಥಾನನಿಮಿತ್ತಕಮಿತ್ಯರ್ಥಃ । ಸಿದ್ಧಾನ್ತಮುಪಸಂಹರನ್ ಸಙ್ಗೃಹ್ಣಾತಿ ತಸ್ಮಾದಿತಿ ॥ ಬ್ರಹ್ಮಶ್ರುತಿಸಾಹಿತ್ಯಾದಿತ್ಯರ್ಥಃ । ಇಯತಾ ಪ್ರಪಞ್ಚಿತಮನ್ಯಲಿಙ್ಗಾನಾಂ ನಿರವಕಾಶತ್ವಮುಪೇತ್ಯ ಪೂರ್ವಪಕ್ಷಕರಣಂ, ಸಿದ್ಧಾನ್ತೇ ಚ ಭಗವಲಿಙ್ಗಾನಾಂ ನಿರವಕಾಶತ್ವಂ, ಅನ್ಯಲಿಙ್ಗಾನಾಂ ವಿಷ್ಣುನಿಷ್ಠತ್ವಂ ಚ ಟೀಕೋಕ್ತಂ ಆಚಾರ್ಯವಾಕ್ಯಾರೂಢಂ ಕರೋತಿ – ತದೇತದಿತಿ ॥ 'ಅನ್ಯತ್ರ' ಭಗವತೋऽನ್ಯವಿಷಯಸ್ಯ ಶ್ರುತ್ಯಾದೇಃ । 'ಅನನ್ಯಥಾಸಿದ್ಧತ್ವಂ' ನಿರವಕಾಶತ್ವಮ್ । ಆದಿಪದೇನ ''ಪ್ರಾಣೋ ವಾ ಅಹಮಸ್ಮಿ'' ಇತಿ ವಾಕ್ಯಂ ಗೃಹ್ಯತೇ । ಇತಿ ನಚ ವಾಚ್ಯಮಿತ್ಯರ್ಥಃ ।**

**ಕುತ ಏತದಿತ್ಯತ ಉಕ್ತಂ – ಅನ್ಯಗತೇತಿ । ಇನ್ದ್ರಾದಿಗತಾನಾಮಪ್ಯಹಂಶಬ್ದಾದೀನಾ ಮುಖ್ಯತಸ್ತದನ್ತರ್ಯಾಮಿಭಗವತ್ಸಮ್ಬನ್ಧಿತ್ವಾತ್ತದಪೇಕ್ಷಯಾ ಸಾವಕಾಶತ್ವಾದಿತಿ । ಪ್ರಾಕ್ 'ಶ್ರುತಿಲಿಙ್ಗಾದೇಃ' ಇತ್ಯುಕ್ತಂ, ತದೇತತ್ಪ್ರಾಬಲ್ಯಾಪೇಕ್ಷಯಾ । ಇದಾನೀಂ 'ಲಿಙ್ಗಾದೀನಾಂ' ಇತಿ ವಚನಂ ಲಿಙ್ಗನಿರವಕಾಶತಯೈವ ಶ್ರುತ್ಯಾದಿನಿರವಕಾಶತಾಪೂರ್ವಪಕ್ಷಸೂಚನಾರ್ಥಮ್ । ಅತ ಏವ ಪೂರ್ವಂ ಶ್ರುತೇಃ ಸಾವಕಾಶತ್ವಮಾಶಙ್ಕ್ಯ; ವೃತ್ರಹನ್ತೃತ್ವಾದಿಲಿಙ್ಗವಶೇನೈವ ಶ್ರುತಿರುಜ್ಜೀವಿತೇತಿ ಧ್ಯೇಯಮ್ ।**

ವಿವರಣೆ - ''ಇಮಂ ಲೋಕಂ'' ಎಂಬ ಶಬ್ದಕ್ಕೆ ಜೀವಶರೀರಂ ಎಂದರ್ಥ. ಜೀವನ ಶರೀರಕ್ಕೆ ಹೇತುವಾದದ್ದು. ಮುಖ್ಯಪ್ರಾಣನು ನೂರು ವರ್ಷಗಳ ಪರ್ಯಂತ ಶರೀರದಲ್ಲಿರುವಿಕೆಯು. ಆದಕ್ಕೆ ನಿಮಿತ್ತವಾದದ್ದು ಎಂದರ್ಥ. ಸಿದ್ಧಾಂತವನ್ನು ಉಪಸಂಹಾರ ಮಾಡುತ್ತಾ ಶ್ಲೋಕದಿಂದ ಸಂಗ್ರಹಿಸಿದ್ದಾರೆ 'ತಸ್ಮಾದ್' ಇತ್ಯಾದಿಯಾಗಿ.

ಇಲ್ಲಿಯ ತನಕ ಇಂದ್ರಾದಿ ಪ್ರಾಪಕವಾದ ಲಿಂಗಗಳಿಗೆ ನಿರವಕಾಶತ್ವವನ್ನು ಅಂಗೀಕರಿಸಿ ಪೂರ್ವಪಕ್ಷವನ್ನು ಮಾಡಿದರೂ ಸಹ ಸಿದ್ಧಾಂತದಲ್ಲಿ ವಿಷ್ಣುಲಿಂಗಗಳಿಗೆ ನಿರವಕಾಶತ್ವವನ್ನು ಸಮರ್ಥಿಸಿ ಇಂದ್ರಾದಿ ಲಿಂಗಗಳನ್ನು ವಿಷ್ಣುವಿನಲ್ಲಿ ಸಾವಕಾಶ ಮಾಡಿದರು. ಈ ಎಲ್ಲಾ ವ್ಯಾಖ್ಯಾನವನ್ನು ಟೀಕೆಯಲ್ಲಿಯೇ ಹೇಳಿದಂತೆ. ಆಚಾರ್ಯರ ವಾಕ್ಯದಲ್ಲಿ ಸಮನ್ವಯ ಮಾಡುತ್ತಿದ್ದಾರೆ 'ತದೇತದ್' ಇತ್ಯಾದಿಯಾಗಿ. ಅನ್ಯತ್ರ ಎಂಬ ಪದಕ್ಕೆ ಭಗವಂತನಿಂದ ಅನ್ಯರಾದ ಇಂದ್ರಾದಿ ವಿಷಯಕವಾದ ಶ್ರುತ್ಯಾದಿಗಳಿಗೆ ಎಂದರ್ಥ. ಆದಿ ಪದದಿಂದ ''ಪ್ರಾಣೋ ವಾ ಅಹಮಸ್ಮಿ'' ಎಂಬ ವಾಕ್ಯವನ್ನು ಸ್ವೀಕರಿಸಬೇಕು. 'ಇತಿ ನಚ ವಾಚ್ಯಮ್' ಎಂದು ಅನ್ವಯ.

ಹೀಗೇಕೆ ಒಪ್ಪಬೇಕು? ಎಂದರೆ 'ಅನ್ಯಗತ ಲಿಂಗಾದಿನಾಮಪಿ' ಎಂದು ಉತ್ತರಿಸಿದ್ದಾರೆ. ಇಂದ್ರಾದಿಗಳಲ್ಲಿರುವ ಅಹಂ ಶಬ್ದಾದಿಗಳಿಗೆ ಮುಖ್ಯವಾಗಿ ಅಂತರ್ಯಾಮಿಯಾದ ಭಗವದ್ರೂಪವೆಂದು ಅರ್ಥೈಸಬೇಕು. ಆವಾಗ ಆ ಭಗವದ್ರೂಪವಿವಕ್ಷೆಯಿಂದ ಇಂದ್ರಾದಿಗಳಲ್ಲಿರುವ ಲಿಂಗಗಳೆಲ್ಲವೂ ಸಾವಕಾಶವಾಗುತ್ತವೆಂದು ಇದರ ಅಭಿಪ್ರಾಯ.

ಶ್ರೀಮದಾಚಾರ್ಯರ ನ್ಯಾಯವಿವರಣದ ಈ ಮಾತಿನಲ್ಲಿ ಮೊದಲು 'ಶ್ರುತಿಲಿಂಗಾದೇಃ' ಎಂದು ಹೇಳಿದ್ದಾರೆ. ಆನಂತರ 'ಲಿಂಗಾದೀನಾಂ' ಎಂದಿದ್ದಾರೆ. ಹೀಗೇಕೆ ಪ್ರಯೋಗಿಸಿದ್ದಾರೆ? ಎಂದರೆ ಶ್ರುತಿಯು ಪ್ರಬಲವಾದ್ದರಿಂದ ಮೊದಲು ಶ್ರುತಿಶಬ್ದವನ್ನು ಉಪಯೋಗಿಸಿ 'ಶ್ರುತಿಲಿಂಗಾದೇಃ' ಎಂದು ಹೇಳಿದರು. ಪೂರ್ವಪಕ್ಷದಲ್ಲಿ ಲಿಂಗವು ನಿರವಕಾಶವಾದ್ದರಿಂದ ಶ್ರುತಿಯನ್ನು ಸಾವಕಾಶ ಮಾಡಿ ಆಕ್ಷೇಪಿಸಲಾಗಿದೆ. ಇದನ್ನು ಸೂಚನೆ ಮಾಡುವುದಕ್ಕೋಸ್ಕರ 'ಲಿಂಗಾದೀನಾಂ' ಎಂಬಲ್ಲಿ ಲಿಂಗಪದವನ್ನು ಬಳಸಿದ್ದಾರೆ. ಆದರಂತೆ ಗ್ರಂಥಕಾರರೂ ಸಹ ಮೊದಲು ಶ್ರುತಿಗೆ ಸಾವಕಾಶತ್ವವನ್ನು ಆಶಂಕಿಸಿ ವೃತ್ರಹಂತೃತ್ವಾದಿ ಲಿಂಗಗಳ ಬಲದಿಂದಲೇ ಶ್ರುತಿಯನ್ನು ಉಜ್ಜೀವನ ಮಾಡಿದ್ದಾರೆ. ಈ ಸೂಕ್ಷ್ಮವನ್ನು ಗಮನಿಸಬೇಕು.

## ಸಾರ

ಜೀವಪ್ರಾಪಕವಾದ ಲಿಂಗಗಳೂ ಸಹ ಸಾವಕಾಶವಾಗಿವೆ. ಏಕೆಂದರೆ ಜೀವನ ಶರೀರದಲ್ಲಿ ನೂರು ವರ್ಷಗಳ ಕಾಲ ಪ್ರಾಣನು ಇರುತ್ತಾನೆಂಬುದು ಜೀವನ ಲಿಂಗವಲ್ಲ; ಹೊರತು ಆದಕ್ಕೂ ಕಾರಣವಾದ ಶತಾಯುಷ್ಟ್ವ ಎಂಬುದು ಜೀವನ ಲಿಂಗವಾಗಿದೆ. ಆದರೆ ಈ ಲಿಂಗವು ಮುಖ್ಯಪ್ರಾಣನಲ್ಲಿ ಕೇಳಿಸುತ್ತಿಲ್ಲ. ಆದ್ದರಿಂದ ಇಂದ್ರಪ್ರಾಪಕವಾದ ಲಿಂಗಗಳು, ಮುಖ್ಯವಾಯುಪ್ರಾಪಕವಾದ ಲಿಂಗಗಳು, ಜೀವಪ್ರಾಪಕವಾದ ಲಿಂಗಗಳೆಲ್ಲವೂ ಸಾವಕಾಶಗಳೇ ಆಗಿವೆ. ಆದರೆ ವಿಷ್ಣುವಿನ ಲಿಂಗಗಳೆಲ್ಲವೂ ನಿರವಕಾಶಗಳಾದ್ದರಿಂದ ಭಗವಂತನೇ ಏತರೇಯದಲ್ಲಿರುವ ಪ್ರಾಣಶಬ್ದದಿಂದ ವಾಚ್ಯನಾಗಿದ್ದಾನೆ. ಇಲ್ಲಿಗೆ ನಮ್ಮ ಪ್ರಕಾರ ಸಿದ್ಧಾಂತ ಸ್ಥಾಪನೆಯು ಮುಕ್ತಾಯವಾಯಿತು.

* * * *

## ಸೂತ್ರಗಳ ವಿನ್ಯಾಸ ಕ್ರಮ

ತಾತ್ಪರ್ಯಚನ್ದ್ರಿಕಾ

**ಸೂತ್ರಕ್ರಮಸ್ತು – ಆದ್ಯೇ ಸ್ವಪಕ್ಷಹೇತೂಕ್ತಿಃ । ತಸ್ಯ ಚ ''ತದ್ವೈ ತ್ವಂ ಪ್ರಾಣಃ'' ಇತ್ಯತ್ರ ಯಥಾ ಪ್ರಾಣೋ ವಿಷ್ಣುಸ್ತಥಾऽತ್ರಾಪಿ ಪ್ರಾಣೋ ವಿಷ್ಣುಃ, ತತ್ ಶ್ರುತಿಲಿಙ್ಗಾನಾಮಸ್ಮಿನ್ ಪ್ರಕರಣೇ ಬಹುಸ್ಥಲೇಷ್ವನುಗಮಾದಿತ್ಯರ್ಥಃ । ಏವಞ್ಚ – ''ತದ್ವೈ ತ್ವಂ ಪ್ರಾಣಃ'' ಇತಿ ಶ್ರುತಾವಿವ ಇತಿ ಟೀಕಾಯಾಃ ''ತಥಾಶಬ್ದಃ ಸಮುಚ್ಚಯಾರ್ಥಃ'' ಇತಿ ಟೀಕಯಾ ಸಹ ನ ವಿರೋಧಃ ।**

**ದ್ವಿತೀಯೇ 'ಪ್ರಾಣೋ ವಾ ಅಹಮ್' ಇತಿ ಇನ್ದ್ರಪ್ರಯುಕ್ತಾಹಂಶಬ್ದರೂಪಬಾಧಕೋದ್ಧಾರಃ । ತತ್ರಾಧ್ಯಾತ್ಮ-ಸಮ್ಬನ್ಧಭೂಮಶಬ್ದಸ್ಯ ಯದಾ ''ಪ್ರಾಣಸ್ತ್ವಂ'' ಇತ್ಯಾದಿಭಾಷ್ಯಾನುಸಾರೇಣ ಅಧ್ಯಾತ್ಮಶಬ್ದಸ್ಯ**

ದೇಹಾರ್ಥತ್ವಸ್ವೀಕಾರೇಣ ಭಗವದ್ದೇಹಭೂತೇನ್ದ್ರವಿಶ್ವಾಮಿತ್ರಾದಿವಹಾತ್ಮ-ಸಮ್ಬನ್ಧೋऽರ್ಥಃ, 'ಅಸ್ಮಿನ್' ಇತ್ಯಸ್ಯ ಚೈತತ್ಪ್ರಕರಣೇ ಇತ್ಯರ್ಥಃ, ತದೇನ್ದ್ರೇ ಭಗವತಸ್ಸತ್ತ್ವಾತ್ತದಭಿಪ್ರಾಯೇಣ ''ಪ್ರಾಣೋ ವಾ ಅಹಂ'' ಇತ್ಯುಕ್ತಿಃ । ಅನ್ಯಥಾऽಸ್ಮಿನ್ನೇವ ಪ್ರಕರಣೇ ''ಪ್ರಾಣಸ್ತ್ವಂ ಪ್ರಾಣಃ ಸರ್ವಾಣಿ ಭೂತಾನಿ'' ಇತಿ ನ ಸ್ಯಾತ್, ಪೂರ್ವಪಕ್ಷೇऽಪಿ ವಿಶ್ವಾಮಿತ್ರಾದೇಃ ಪ್ರಾಣತ್ವಾಭಾವಾದಿತಿ ಪರಿಹಾರಾರ್ಥಃ । ಅತ ಏವ ಸೂತ್ರೇ ಭೂಮಪದಂ, ಭಾಷ್ಯೇऽಪಿ ''ಪ್ರಾಣಸ್ತ್ವಂ'' ಇತ್ಯಾದೇರುಪಾದಾನಮ್ ।

ಯದಾ ತ್ವಧ್ಯಾತ್ಮಸಮ್ಬನ್ಧಶಬ್ದೇನ ಆವೇಶೋ ವಿಷ್ಣೋರಿನ್ದ್ರೇ ವಿವಕ್ಷಿತಃ, ''ಅಧಿಕಾತ್ಮನಃ ಪರಮಾತ್ಮನಃ ಸಮ್ಬನ್ಧೋ ಹ್ಯಧ್ಯಾತ್ಮಸಮ್ಬನ್ಧಃ'' ಇತ್ಯೈತರೇಯಭಾಷ್ಯಾನುಸಾರೇಣ ಭಗವತಸ್ಮನ್ನಿಧಾನ-ವಿಶೇಷೋऽಧ್ಯಾತ್ಮಸಮ್ಬನ್ಧಭೂಮಶಬ್ದಾರ್ಥಃ, ''ಅಸ್ಮಿನ್'' ಇತ್ಯಸ್ಯ ಚ ಇನ್ದ್ರೇ ಇತ್ಯರ್ಥಃ, ತದೇನ್ದ್ರೇ ತಾತ್ಕಾಲಿಕಭಗವತ್ಸನ್ನಿಧಾನವಿಶೇಷಾಭಿಪ್ರಾಯೇಣ ''ಪ್ರಾಣೋ ವಾ ಅಹಂ'' ಇತ್ಯುಕ್ತಿರಿತ್ಯರ್ಥಃ । ಏತಚ್ಚ ಏತರೇಯಭಾಷ್ಯೋದಾಹೃತಾತ್ –

ಆವಿಶ್ಟೋ ವಿಷ್ಣುನಾऽಥೇನ್ದ್ರಃ ಪ್ರಾಣೇನ ಸಹ ಕೌಶಿಕಮ್ ।

ಇತ್ಯಾದಿಬ್ರಹ್ಮಾण್ಡವಾಕ್ಯಾದವಗನ್ತವ್ಯಮ್ । ತೃತೀಯೇ ತು ತರ್ಹಿ ಮಯೀತಿ ಸ್ಯಾದಿತೀದಂ ಬಾಧಕೋದ್ಧಾರೇ ಯದ್ಬಾಧಕಂ ತದುದ್ಧಾರಃ । ತತ್ರ ಚ ಶಾಸ್ತ್ರಪದಂ ಬ್ರಹ್ಮಣಃ ಸರ್ವಶಾಸ್ತೃತ್ವಾತ್ ತತ್ತಚ್ಛಬ್ದವಾಚ್ಯತಾ ಯುಕ್ತೇತಿ ದರ್ಶಯಿತುಮ್ । ಅತ ಏವ ಭಾಷ್ಯೇ –

ತತ್ತನ್ನಾಮ್ನೋಚ್ಯತೇ ವಿಷ್ಣುಃ ಸರ್ವಶಾಸ್ತೃತ್ವಹೇತುತಃ ।

ಇತಿ ಸ್ಮೃತಿರುದಾಹೃತಾ । ಚತುರ್ಥೇ ಜೀವಾದಿಲಿಙ್ಗಂ ತದನ್ತರ್ಯಾಮಿನಿಷ್ಠಮಿತ್ಯಸ್ಯಾರ್ಥಸ್ಯ ತೃತೀಯೇನೇನ್ದ್ರಪ್ರಯುಕ್ತಾಹಂಶಬ್ದಸ್ಯಾನ್ತರ್ಯಾಮಿವಿಷಯತ್ವಂ ವದತೋಕ್ತಪ್ರಾಯತ್ವಾತ್ ತದನುಕ್ತತ್ವಾऽನ್ತರ್ಯಾಮಿ-ಕಥನಂ ಕಸ್ಮಾದಿತಿ ಶಙ್ಕಾಯಾಮನ್ತರಾದಿಭೇದೇನೋಪಾಸಾತ್ರೈವಿಧ್ಯಾದಿತ್ಯೇವೋಕ್ತಮ್ ।

ಸೂತ್ರಗಳ ಕ್ರಮ ಹೀಗಿದೆ - 'ಪ್ರಾಣಸ್ತಥಾನುಗಮಾತ್' ಎಂಬ ಪ್ರಥಮ ಸೂತ್ರದಲ್ಲಿ ಸ್ವಪಕ್ಷ-ಸಾಧಕವಾದ ಹೇತುವನ್ನು ಹೇಳಿದ್ದಾರೆ. ತಥಾ = 'ತದ್ವೈ ತ್ವಂ ಪ್ರಾಣಃ' ಎಂಬಲ್ಲಿ ಯಾವರೀತಿಯಾಗಿ ಪ್ರಾಣಶಬ್ದದಿಂದ ವಿಷ್ಣುವು ವಾಚ್ಯವಾಗಿದ್ದಾನೋ ಅದೇ ರೀತಿಯಾಗಿ ಇಲ್ಲಿಯೂ ಸಹ ಪ್ರಾಣಶಬ್ದದಿಂದ ವಿಷ್ಣುವೇ ವಾಚ್ಯನಾಗಿದ್ದಾನೆ. ಏಕೆಂದರೆ ತಥಾನುಗಮಾತ್ = ವಿಷ್ಣುವಿನ ಶ್ರುತಿ ಹಾಗೂ ವಿಷ್ಣುವಿನ ಲಿಂಗಗಳು ಈ ಪ್ರಕರಣದಲ್ಲಿ ಅನೇಕ ಕಡೆ ಕೇಳಿಬರುತ್ತಿವೆ ಎಂದು ಸೂತ್ರಾರ್ಥ. ಆದ್ದರಿಂದ 'ತದ್ವೈ ತ್ವಂ ಪ್ರಾಣಃ ಇತಿ ಶ್ರುತಾವಿವ' ಎಂಬ ಟೀಕೆಯಿಂದ ''ತಥಾಶಬ್ದಃ ಸಮುಚ್ಚಯಾರ್ಥಃ' ಎಂಬ ಟೀಕೆಯಿಂದಲೂ ವಿರೋಧ ಬರುವುದಿಲ್ಲ. ಏಕೆಂದರೆ 'ತಥಾ' ಶಬ್ದಕ್ಕೆ 'ದೃಷ್ಟಾಂತ'ವೆಂದು ಮತ್ತು 'ಸಮುಚ್ಚಯ'ವೆಂದು ಎರಡರ್ಥವನ್ನು ಹೇಳಿದ್ದರಿಂದ.

'ನ ವಕ್ತುಃ ಆತ್ಮೋಪದೇಶಾತ್ ಇತಿಚೇತ್ ಅಧ್ಯಾತ್ಮಸಂಬಂಧಭೂಮಾ ಅಸ್ಮಿನ್' ಎಂಬ ಎರಡನೆಯ ಸೂತ್ರದಲ್ಲಿ ''ಪ್ರಾಣೋ ವಾ ಅಹಂ'' ಎಂಬುದಾಗಿ ಇಂದ್ರನಿಂದ ಪ್ರಯುಕ್ತವಾದ 'ಅಹಂ' ಶಬ್ದವೆಂಬ ಬಾಧಕವನ್ನು ಪರಿಹರಿಸುತ್ತಿದ್ದಾರೆ. ಅದು ಹೀಗೆ - ಈ ಸೂತ್ರದಲ್ಲಿ 'ಅಧ್ಯಾತ್ಮಸಂಬಂಧಭೂಮಾ' ಎಂಬ ಶಬ್ದಕ್ಕೆ 'ಪ್ರಾಣಸ್ತ್ವಂ' ಇತ್ಯಾದಿ ಭಾಷ್ಯಾನುಸಾರಿಯಾಗಿ 'ಅಧ್ಯಾತ್ಮ' ಎಂಬ ಶಬ್ದಕ್ಕೆ ದೇಹವೆಂಬರ್ಥವನ್ನು ಸ್ವೀಕರಿಸಲಾಗಿದೆ. ಆವಾಗ ಪರಮಾತ್ಮನಿಗೆ ದೇಹಭೂತರಾದ ಇಂದ್ರ, ವಿಶ್ವಾಮಿತ್ರ ಮೊದಲಾದ ಅನೇಕ ಜೀವರ ಸಂಬಂಧವು ಪರಮಾತ್ಮನಿಗಿದೆ ಎಂದಂತಾಯಿತು. ಅಸ್ಮಿನ್ = ಈ ಪ್ರಕರಣದಲ್ಲಿ ಎಂದು ಇದರ ಅರ್ಥ. ಹೀಗೆ ಸೂತ್ರಾರ್ಥವನ್ನು ಹೇಳಿದಾಗ ಇಂದ್ರನಲ್ಲಿ ಭಗವಂತನು ಇದ್ದಾನೆಂದು ತಿಳಿಯುತ್ತದೆ. ಈ ಅಭಿಪ್ರಾಯದಿಂದ ದೇವೇಂದ್ರನು 'ಪ್ರಾಣೋ ವಾ ಅಹಂ' ಎಂದು ಹೇಳಿದ್ದಾನೆ. ಇಲ್ಲದಿದ್ದರೆ, 'ಅಹಂ' ಶಬ್ದಕ್ಕೆ ಅಂತರ್ಯಾಮಿ ಎಂದು ಹೇಳದಿದ್ದರೆ ಇದೇ ಪ್ರಕರಣದಲ್ಲಿ ಕೇಳಿಸುತ್ತಿರುವ, ''ಪ್ರಾಣಸ್ತ್ವಂ ಪ್ರಾಣಃ ಸರ್ವಾಣಿ ಭೂತಾನಿ'' ಎಂಬ ಮುಂದಿನ ವಾಕ್ಯದಿಂದ ಅನುಪಪತ್ತಿ ಬರುತ್ತದೆ. ಏಕೆಂದರೆ ಪೂರ್ವಪಕ್ಷದಲ್ಲಿಯೂ ಸಹ ವಿಶ್ವಾಮಿತ್ರಾದಿಗಳಿಗೆ ಪ್ರಾಣತ್ವವನ್ನು ಒಪ್ಪಲು ಸಾಧ್ಯವಿಲ್ಲ. ಆದ್ದರಿಂದಲೇ ಸೂತ್ರದಲ್ಲಿ ''ಭೂಮಾ'' ಎಂಬ ಪದವನ್ನು ಬಳಸಿದ್ದಾರೆ. ಎಲ್ಲಾ ಜೀವರ ಸಂಬಂಧವು ಪರಮಾತ್ಮನಿಗಿರುವುದರಿಂದ ವಿಪಕ್ಷೇಯ ಬಾಧಕವನ್ನು 'ಭೂಮಾ' ಎಂಬ ಪದದಿಂದ ಪರಿಹರಿಸಿದ್ದಾರೆ. ಇದೇ ಕಾರಣಕ್ಕಾಗಿ ಭಾಷ್ಯದಲ್ಲಿಯೂ ಸಹ 'ಪ್ರಾಣಸ್ತ್ವಂ' ಎಂದು ಹೇಳಿದ್ದಾರೆ.

ಒಂದು ವೇಳೆ ಅಧ್ಯಾತ್ಮಶಬ್ದದಿಂದ ವಿಷ್ಣುವಿನ ಆವೇಶವು ಇಂದ್ರನಲ್ಲಿದೆ ಎಂದು ವಿವಕ್ಷಿತವಾಗಿ ಇಂದ್ರನು 'ಅಹಂ' ಎಂದು ಹೇಳುವುದಾದರೆ ಆವಾಗ 'ಭೂಮಾ' ಎಂಬ ಶಬ್ದಕ್ಕೆ ಬೇರೆ ಅರ್ಥವನ್ನು ಮಾಡಬೇಕು. ''ಅಧಿಕಾತ್ಮನಃ ಪರಮಾತ್ಮನಃ ಸಂಬಂಧೋ ಹ್ಯಧ್ಯಾತ್ಮಸಂಬಂಧಃ'' ಶ್ರೇಷ್ಠನಾದ ಪರಮಾತ್ಮನ ಸನ್ನಿಧಾನವಿಶೇಷವು ಅಧ್ಯಾತ್ಮಸಂಬಂಧ ಎನಿಸುತ್ತದೆಂಬ ಐತರೇಯ ಭಾಷ್ಯಕ್ಕೆ ಅನುಸಾರಿಯಾಗಿ ಭಗವಂತನ ಸನ್ನಿಧಾನವಿಶೇಷವೇ 'ಅಧ್ಯಾತ್ಮಸಂಬಂಧಭೂಮಾ' ಎಂಬ ಶಬ್ದದ ಅರ್ಥವಾಗಿದೆ. ಈ ಅರ್ಥದಲ್ಲಿ 'ಅಸ್ಮಿನ್' ಎಂಬ ಪದಕ್ಕೆ 'ಇಂದ್ರನಲ್ಲಿ' ಎಂದು ಅರ್ಥ. ಇಂದ್ರನಲ್ಲಿ ಭಗವಂತನ ತಾತ್ಕಾಲಿಕವಾಗಿ ಸನ್ನಿಧಾನವಿರುವುದರಿಂದ ಅದನ್ನು ವಿವಕ್ಷಿಸಿ ದೇವೇಂದ್ರನು ''ಪ್ರಾಣೋ ವಾ ಅಹಂ'' ಎಂದು ಹೇಳಿದ್ದಾನೆ ಎಂದು ಸೂತ್ರಾರ್ಥ. ಈ ಅರ್ಥವನ್ನು ಐತರೇಯ ಭಾಷ್ಯದಲ್ಲಿ ಉದಾಹರಿಸಿದ ''ಆವಿಷ್ಟೋ ವಿಷ್ಣುನಾऽಥೇಂದ್ರಃ ಪ್ರಾಣೇನ ಸಹ ಕೌಶಿಕಮ್'' ದೇವೇಂದ್ರನು ವಿಷ್ಣುವಿನಿಂದ ಹಾಗೂ ಪ್ರಾಣನಿಂದ ಆವಿಷ್ಟನಾಗಿದ್ದಾನೆಂಬ ಬ್ರಹ್ಮಾಂಡಪುರಾಣದ ಮಾತಿನಿಂದ ತಿಳಿಯಬೇಕು.

'ಶಾಸ್ತ್ರದೃಷ್ಟ್ಯಾತೂದೇಶೋ ವಾಮದೇ ವವತ್' ಎಂಬುದು ಮೂರನೇ ಸೂತ್ರ. ಹಿಂದಿನ ಸೂತ್ರದ ಪ್ರಕಾರ 'ಅಹಂ' ಎಂಬ ಶಬ್ದದ ಬದಲು 'ಮಯಿ' ಎಂದು ಹೇಳಬೇಕಿತ್ತಲ್ಲವೇ? ಎಂಬುದರ ಬಾಧಕೋದ್ಧಾರ ವಿಷಯದಲ್ಲಿ ಯಾವ ಬಾಧಕಬರುತ್ತದೋ ಅದನ್ನು ಪರಿಹರಿಸಿದ್ದಾರೆ. ಈ ಸೂತ್ರದಲ್ಲಿರುವ ಶಾಸ್ತ್ರಪದಕ್ಕೆ ಬ್ರಹ್ಮನು ಸಕಲ ನಿಯಾಮಕನಾದ್ದರಿಂದ, ಶಾಸ್ತ್ರ ಎನಿಸಿದ್ದಾನೆಂದು ಅರ್ಥ. ಆದ್ದರಿಂದಲೇ ಭಾಷ್ಯದಲ್ಲಿ ''ತತ್ತನ್ನಾಮ್ನೋಚ್ಯತೇ ವಿಷ್ಣುಃ ಸರ್ವಶಾಸ್ತೃತ್ವಹೇತುತಃ'' ಎಂಬ ಶ್ರುತಿ ಉದಾಹರಿಸಿದ್ದಾರೆ.

'ಜೀವಮುಖ್ಯಪ್ರಾಣಲಿಂಗಾತ್' ಎಂಬ ನಾಲ್ಕನೇ ಸೂತ್ರದಲ್ಲಿ ಜೀವಾದಿ ಲಿಂಗವು ಅಂತರ್ಯಾಮಿಯಲ್ಲಿ ಬರುತ್ತದೆಂದು ಸಮರ್ಥಿಸಿದ್ದಾಯಿತು. ಇಂದ್ರಪ್ರಯುಕ್ತವಾದ 'ಅಹಂ' ಶಬ್ದಕ್ಕೆ ಅಂತರ್ಯಾಮಿವಿಷಯತ್ವವನ್ನು ಹೇಳಿದ್ದರಿಂದಲೇ ಮೂರನೆಯ ಸೂತ್ರದಲ್ಲಿ ಅಂತರ್ಯಾಮಿ-ನಿಷ್ಠತ್ವವನ್ನು ಹೇಳಿದಂತಾಯಿತು. ಆದ್ದರಿಂದ ಸಾಕ್ಷಾತ್ತಾಗಿ ಪರಮಾತ್ಮನನ್ನೇ ಹೇಳದೆ ಅಂತರ್ಯಾಮಿ-ಯಾಗಿ ಅವನನ್ನು ಏಕೆ ಹೇಳಿದ್ದು? ಎಂಬ ಪ್ರಶ್ನೆಗೆ ಮೂರುವಿಧ ಉಪಾಸನೆಗೋಸ್ಕರವೆಂದು ಉತ್ತರಿಸಲಾಗಿದೆ.

इत्युपासनाकर्मतया इन्द्रप्राणशब्दनिर्दिष्टः किं प्रसिद्ध इन्द्र उत परमात्मेति संशये, ''मामेव विजानीहि'' ''प्राणोऽस्मि प्रज्ञात्मा तं मामायुरमृतमित्युपास्व'' इतीन्द्रलिङ्गात् अस्य च ''इन्द्रः.....त्रिशीर्षाणं त्वाष्ट्रमहनम्'' इत्युपक्रमे श्रुतत्वाष्ट्रवधादिभिः प्रसिद्धत्वात्, ''आनन्दोऽजरोऽमृतः'' इत्यानन्दादिलिङ्गानामुपक्रमावगतत्वाष्ट्रहननादिलिङ्गानुरोधेन नेयत्वादिन्द्र एव ।

ವಿವರಣೆ - ರಾಮಾನುಜಮತವನ್ನು ಅನುವಾದ ಮಾಡಿ ನಿರಾಕರಿಸುತ್ತಿದ್ದಾರೆ 'केचित्तु' ಇತ್ಯಾದಿಯಾಗಿ. ಪ್ರತರ್ದನವಿದ್ಯೆಯಲ್ಲಿ ''स होवाच प्राणोऽस्मि प्रज्ञात्मा मामायुरमृतमित्युपास्व'' ಎಂಬುದಾಗಿ ಉಪಾಸನೆಗೆ ವಿಷಯನನ್ನು ಇಂದ್ರ ಹಾಗೂ ಪ್ರಾಣಶಬ್ದಗಳಿಂದ ನಿರ್ದೇಶಿಸಲಾಗಿದೆ. ಇಲ್ಲಿ ಕೇಳಿಸುತ್ತಿರುವ ಪ್ರಾಣಶಬ್ದವು ಇಂದ್ರನನ್ನು ಪ್ರತಿಪಾದಿಸುತ್ತಿದೆಯೋ? ಅಥವಾ ಪರಮಾತ್ಮನನ್ನು ಪ್ರತಿಪಾದಿಸುತ್ತಿದೆಯೋ? ಎಂದು ಸಂಶಯ.

''ಮಾಮೇವ ವಿಜಾನೀಹಿ'' ಎಂದು ಪ್ರಾರಂಭವಾದ ಪ್ರಕರಣದಲ್ಲಿ

'प्राणोऽस्मि प्रज्ञात्मा मामायुरमृतमित्युपास्व'

ನಾನೇ ಪ್ರಾಣನಾಗಿದ್ದೇನೆ. ನನ್ನನ್ನು ''ಆಯು, ಅಮೃತ'' ಎಂದು ಉಪಾಸನೆ ಮಾಡು ಎಂಬುದಾಗಿ ಇಂದ್ರನ ಲಿಂಗವು ಕೇಳಿಸುತ್ತಿದೆ. ಆದ್ದರಿಂದ ಪ್ರಾಣಶಬ್ದವಾಚ್ಯನಾದವನು ದೇವೇಂದ್ರನೇ ಆಗುತ್ತಾನೆ.

ಮತ್ತು ''ಇಂದ್ರ....ತ್ರಿಶೀರ್ಷಾಣಂ ತ್ವಾಷ್ಟ್ರಮಹನಮ್'' ಮೂರು ತಲೆಯುಳ್ಳ ವಿಶ್ವರೂಪಾಚಾರ್ಯರನ್ನು ದೇವೇಂದ್ರನು ಸಂಹರಿಸಿದನು ಎಂಬುದಾಗಿ ಪ್ರಾರಂಭದಲ್ಲಿ ವಿಶ್ವರೂಪಾಚಾರ್ಯರ ವಧೆಯು ಕೇಳಿಸುತ್ತಿದೆ. ಇದು ದೇವೇಂದ್ರನಲ್ಲೇ ಪ್ರಸಿದ್ಧವಾದ ಲಿಂಗವಾಗಿದೆ. ಮತ್ತು ''ಆನಂದೋऽಜರೋऽಮೃತಃ'' ಎಂಬಲ್ಲಿ ಕೇಳಿಸುತ್ತಿರುವ ಆನಂದಾದಿ ಲಿಂಗಗಳನ್ನು ತ್ವಾಷ್ಟ್ರಹನನವೆಂಬ ಲಿಂಗಕ್ಕೆ ಅನುಗುಣವಾಗಿ ದೇವೇಂದ್ರನಲ್ಲಿಯೇ ಸಮನ್ವಯ ಮಾಡಬೇಕು. ಅಂದರೆ ಉಪಕ್ರಮಕ್ಕೆ ಅನುಗುಣವಾಗಿ ಮುಂದಿನ ಪ್ರಕರಣವನ್ನು ಅರ್ಥೈಸಬೇಕು. ಆದ್ದರಿಂದ ದೇವೇಂದ್ರನೇ ಪ್ರತರ್ದನವಿದ್ಯೆಯಿಂದ ಪ್ರತಿಪಾದ್ಯನಾಗಿದ್ದಾನೆ.

**ಪ್ರಕಾಶಃ** – यद्यपि ''वक्तारं विद्यात्'' इति जीवमात्रलिङ्गं, ''इदं शरीरं परिगृह्योत्थापयति'' इति पञ्चवृत्तिरूपमुख्यप्राणलिङ्गं चास्ति तथाऽपि विशेषाकाङ्क्षायां जीवधर्मस्येन्द्रशब्दवाच्यप्रकृतजीवविशेषनिष्ठत्वप्रतीतेः,''**प्राणोस्मि**'' इति सामानाधिकरण्येन प्राणस्य जीवविशेषेन्द्रविशेषणत्वप्रतीतेः, प्राधान्येन प्रतिपाद्यत्वशङ्कानुदयान्न तयोरिह प्राप्तिरिति प्राप्ते,

ವಸ್ತುತಸ್ತು ಪ್ರತರ್ದನ ವಿದ್ಯೆಯಲ್ಲಿ "ವಕ್ತಾರಂ ವಿದ್ಯಾತ್" ಎಂಬುದಾಗಿ ಕೇವಲ ಜೀವನಲ್ಲಿ ಪ್ರಸಿದ್ಧವಾದ ವಕ್ತೃತ್ವಧರ್ಮವು ಕೇಳಿಸುತ್ತಿದೆ. ಮತ್ತು "ಇದಂ ಶರೀರಂ ಪರಿಗೃಹ್ಯೋತ್ಥಾಪಯತಿ" ಎಂಬುದಾಗಿ ಶರೀರಧಾರಕತ್ವ ಎಂಬ ಪ್ರಾಣಾಪಾನಾದಿ ಐದು ರೂಪಗಳನ್ನು ಹೊಂದಿದ ಮುಖ್ಯಪ್ರಾಣನ ಲಿಂಗವು ಕೇಳಿಸುತ್ತಿದೆ. ಆದರೂ ಸಹ ಜೀವನಾಗಲೀ, ಮುಖ್ಯವಾಯುವಾಗಲೀ, ಈ ಪ್ರಕರಣದಿಂದ ಪ್ರತಿಪಾದ್ಯರಲ್ಲ. ಆದರೂ ಸಹ ಜೀವನ ಬಗ್ಗೆ ವಿಶೇಷಾಕಾಂಕ್ಷೆಯು ಹುಟ್ಟಿದಾಗ ಜೀವಶಬ್ದವಾಚ್ಯನು ದೇವೇಂದ್ರನೇ ಎಂದು ನಿರ್ಣಯವಾಗುತ್ತದೆ. ಏಕೆಂದರೆ ಜೀವನಲ್ಲಿರುವ ಧರ್ಮವು ಇಂದ್ರಶಬ್ದವಾಚ್ಯನಾಗಿ ಪ್ರಕೃತನಾದ ಜೀವವಿಶೇಷನಲ್ಲಿಯೇ ಪ್ರತೀತವಾಗುತ್ತಿದೆ. ಆದ್ದರಿಂದ ಜೀವನು ಈ ಪ್ರಕರಣ ಪ್ರತಿಪಾದ್ಯನಾಗಲಾರ.

ಪ್ರಾಣನೂ ಸಹ ಪ್ರಾಣಶಬ್ದವಾಚ್ಯನಲ್ಲ ಏಕೆಂದರೆ 'ಪ್ರಾಣೋಽಸ್ಮಿ' ಎಂಬುದಾಗಿ ಸಾಮಾನಾಧಿಕರಣ್ಯೇನ ಪ್ರಾಣನು ದೇವೇಂದ್ರನಲ್ಲಿ ವಿಶೇಷಣನಾಗಿದ್ದಾನೆ. ವಿಶೇಷಣವಾದದ್ದನ್ನು ಪ್ರಧಾನವಾಗಿ ವಿವಕ್ಷಿಸಲು ಸಾಧ್ಯವಿಲ್ಲ. ಆದ್ದರಿಂದ ದೇವೇಂದ್ರನೇ ಪ್ರಾಣಶಬ್ದವಾಚ್ಯನಾಗಬೇಕು ಹೊರತು ಮುಖ್ಯಪ್ರಾಣನಲ್ಲ. ಇಷ್ಟು ಪೂರ್ವಪಕ್ಷ.

**प्रकाशः** – "स एष प्रज्ञाऽऽनन्दोऽजरोमृतं मनुष्याय हिततमं एष ह्येव साधु कर्म कारयति । तद्यथा रथस्यारेषु नेमिरर्पिता नाभावरा अर्पिता एवमेवैता भूतमात्राः प्रज्ञामात्रास्वर्पिताः प्रज्ञामात्राः प्राणेऽर्पिताः एष लोकाधिपतिरेष सर्वेश्वरः" इत्यादिनाऽऽनन्दाजरामृतत्वहिततमत्वसाध्वसाधुकर्मकारयितृत्वचेतनाचेतनात्मककृत्स्नवस्त्वाधारत्वसर्वलोकाधिपतित्वादिपरमात्मधर्मबाहुल्यात् स्वावस्थितपरमात्मोपासनाभिप्रायेण 'मामुपास्व' इत्युपदेशोपपत्तेरानन्दादिबहुतरगुणानुरोधेन त्वाष्ट्रवधादेः वर्णनीयत्वादिन्द्रप्राणादिनिर्दिष्टो जीवादर्थान्तरभूतः परमात्मेति सिद्धान्त इत्याहुरित्यर्थः ।

उक्तञ्च –

विद्या प्रातर्दनी सा वदति हिततमोपास्तिकर्मेन्द्रमेव
ख्यातप्राणेन्द्रचिह्नान्वितमपि तदसौ विश्वकर्तेति चेन्न ।
ब्रह्म त्रेधा ह्युपास्यं बहुविधचिदचित्कञ्चुकं स्वात्मना च
प्राणेन्द्रप्रक्रमोऽपि प्रबलतरमहावाक्यवैघट्यभङ्गः ॥

इत्यादि ।

ಸಿದ್ಧಾಂತ - ಪ್ರಾಣಶಬ್ದವಾಚ್ಯನಾದವನು ಪರಮಾತ್ಮನೇ ಹೊರತು ದೇವೇಂದ್ರನಲ್ಲ. ಏಕೆಂದರೆ ಪ್ರತರ್ದನವಿದ್ಯೆಯಲ್ಲಿ ಪರಮಾತ್ಮನ ಲಿಂಗಗಳೇ ಬಹಳವಾಗಿ ಕೇಳಿಸುತ್ತಿವೆ -

''ಸ ಏಷ ಪ್ರಜ್ಞಾತಽನಂದೋಽಜರೋಮೃತಂ ಮನುಷ್ಯಾಯ ಹಿತತಮಂ ಏಷ ಹ್ಯೇವ ಸಾಧು ಕರ್ಮ ಕಾರಯತಿ। ತದ್ಯಥಾ ರಥಸ್ಯಾರೇಷು ನೇಮಿರರ್ಪಿತಾ ನಾಭಾವರಾ ಅರ್ಪಿತಾ ಏವಮೇವೈತಾ ಭೂತಮಾತ್ರಾಃ ಪ್ರಜ್ಞಾಮಾತ್ರಾಸ್ವರ್ಪಿತಾಃ ಪ್ರಜ್ಞಾಮಾತ್ರಾಃ ಪ್ರಾಣೇಽರ್ಪಿತಾಃ ಏಷ ಲೋಕಾಧಿಪತಿರೇಷ ಸರ್ವೇಶ್ವರಃ''

ಈ ವಾಕ್ಯದಲ್ಲಿ ಆನಂದ, ಅಜರ, ಅಮೃತತ್ವ, ಹಿತತಮತ್ವ, ಸಾಧು ಅಸಾಧುಕರ್ಮಕಾರಯಿರ್ತೃತ್ವ, ಚೇತನಾಚೇನಾತ್ಮಕಕೃತ್ಸ್ನವಸ್ತ್ವಾಧಾರತ್ವ ಸರ್ವಲೋಕಾಧಿಪತಿತ್ವ ಮೊದಲಾದ ಪರಮಾತ್ಮನ ಅನೇಕ ಧರ್ಮಗಳು ಶ್ರುತವಾಗಿವೆ. ಹೀಗೆ ನಿರವಕಾಶವಾದ ಅನೇಕ ಲಿಂಗಗಳ ಬಲದಿಂದ ಪರಮಾತ್ಮನೇ ಪ್ರತರ್ದನವಿದ್ಯೆಯಿಂದ ಪ್ರತಿಪಾದ್ಯನಾಗಿದ್ದಾನೆ ಮತ್ತು ಪ್ರಾಣಶಬ್ದವಾಚ್ಯನಾಗಿದ್ದಾನೆ.

ಪ್ರಶ್ನೆ - ಹಾಗಾದರೆ ಪ್ರತರ್ದನರಾಜನನ್ನು ಕುರಿತು ದೇವೇಂದ್ರನು ಪರಮಾತ್ಮನ ಉಪಾಸನೆಯನ್ನು ಹೇಳಬೇಕಿತ್ತೇ ಹೊರತು, 'ನನ್ನನ್ನು ಉಪಾಸನೆ ಮಾಡು' ಎಂದೇಕೆ ಹೇಳಿದನು ?

ಉತ್ತರ - ದೇವೇಂದ್ರನ ಈ ಮಾತೇನು ತಪ್ಪಲ್ಲ. ತನ್ನ ಒಳಗಿರುವ ಪರಮಾತ್ಮನನ್ನು ಉಪಾಸನೆ ಮಾಡು ಎಂಬ ಅಭಿಪ್ರಾಯದಿಂದ, ದೇವೇಂದ್ರನು 'ಮಾಮುಪಾಸ್ಸ' ಎಂದು ಹೇಳಿದ್ದಾನೆ ಹೊರತಾಗಿ ತನ್ನನ್ನೇ ಉಪಾಸನೆ ಮಾಡೆಂದು ದೇವೇಂದ್ರನಿಗೆ ಅಭಿಪ್ರಾಯವಿರುವುದಿಲ್ಲ.

ಪ್ರಶ್ನೆ - ಉಪಕ್ರಮದಲ್ಲಿ ವಿಶ್ವರೂಪಾಚಾರ್ಯರ ಹನನದ ಬಗ್ಗೆ ಹೇಳಿರುವುದರಿಂದ ತ್ವಾಷ್ಟ್ರವಧವು ದೇವೇಂದ್ರನ ನಿರವಕಾಶಲಿಂಗವಾಗಿದೆ. ಉಪಕ್ರಮಕ್ಕೆ ಅನುಗುಣವಾಗಿ ಸಂಪೂರ್ಣ ಪ್ರಕರಣವು ದೇವೇಂದ್ರನನ್ನೇ ಪ್ರತಿಪಾದಿಸಬೇಕಲ್ಲವೆ?

ಉತ್ತರ - ಇದು ತಪ್ಪು. ಆನಂದ ಮೊದಲಾದ ಅನೇಕ ನಿರವಕಾಶಲಿಂಗಗಳು ಪರಮಾತ್ಮನಲ್ಲಿ ಶ್ರುತವಾಗಿವೆ. ಈ ಎಲ್ಲಾ ಲಿಂಗಗಳು ತ್ವಾಷ್ಟ್ರವಧವೆಂಬ ಒಂದು ಲಿಂಗವನ್ನು ಸುತರಾಂ ಬಾಧಿಸುತ್ತಿದೆ. ಆದ್ದರಿಂದ ದೇವೇಂದ್ರನಲ್ಲಿರುವ ಪರಮಾತ್ಮ ತ್ವಾಷ್ಟ್ರವಧಕ್ಕೆ ಕಾರಣನಾಗಿದ್ದಾನೆಂದೇ ಶ್ರುತಿಗೆ ಅರ್ಥೈಸಬೇಕು.

ಈ ಎಲ್ಲಾ ಕಾರಣಗಳಿಂದ ಪ್ರತರ್ದನವಿದ್ಯೆಯಲ್ಲಿರುವ ಇಂದ್ರಪ್ರಾಣಾದಿಶಬ್ದಗಳಿಂದ ಪ್ರತಿಪಾದ್ಯನಾದವನು ಜೀವನಿಗಿಂತ ವಿಲಕ್ಷಣನಾದ ಪರಮಾತ್ಮನೇ ಆಗಿದ್ದಾನೆ.

ಈ ಅಧಿಕರಣವನ್ನು ಶ್ರುತಪ್ರಕಾಶದಲ್ಲಿ ಹೀಗೆ ಸಂಗ್ರಹಿಸಲಾಗಿದೆ -

ವಿದ್ಯಾ ಪ್ರಾತರ್ದನೀ ಸಾ ವದತಿ ಹಿತತಮೋಪಾಸ್ತಿಕರ್ಮೇಂದ್ರಮೇವ
ಖ್ಯಾತಪ್ರಾಣೇಂದ್ರಚಿಹ್ನಾನ್ವಿತಮಪಿ ತದಸೌ ವಿಶ್ವಕರ್ತೇತಿ ಚೇನ್ನ।
ಬ್ರಹ್ಮತ್ರೇಧಾ ಹ್ಯುಪಾಸ್ಯಂ ಬಹುವಿಧಚಿದಚಿತ್ಕಂಚುಕಂ ಸ್ವಾತ್ಮನಾ ಚ
ಪ್ರಾಣೇಂದ್ರಪ್ರಕ್ರಮೋಽಪಿ ಪ್ರಬಲತರಮಹಾವಾಕ್ಯವೈಘಟ್ಯಭಗ್ನಃ॥

''ಹಿತತಮ'' ಎಂಬ ಉಪಾಸನೆಗೆ ದೇವೇಂದ್ರನೇ ವಿಷಯನಾಗಿದ್ದಾನೆಂದು ಪ್ರತರ್ದನವಿದ್ಯೆಯು ಹೇಳುತ್ತಿದೆ. ಜೀವ ಹಾಗೂ ಪ್ರಾಣರ ಲಿಂಗಗಳಿದ್ದರೂ ದೇವೇಂದ್ರನೇ ಪ್ರತಿಪಾದ್ಯನು. ಇಂತಹ ದೇವೇಂದ್ರನೇ ಜಗತ್ಕಾರಣನಾಗಿದ್ದಾನೆಂಬ ಪೂರ್ವಪಕ್ಷವು ತಪ್ಪು. ಏಕೆಂದರೆ ಬ್ರಹ್ಮನೇ ಜೀವ, ಪ್ರಾಣ, ಇಂದ್ರಾದಿಲಿಂಗಗಳಿಂದ ಉಪಾಸ್ಯನು ಬಹುವಿಧವಾದ ಮತ್ತು ಚಿದಚಿದಾತ್ಮಕವಾದ ಜಗತ್ತಿನ ಒಳಗೆ ಇಂತಹ ಪರಮಾತ್ಮನು ನೆಲೆಸಿದ್ದಾನೆ. ಪ್ರಾಣ ಹಾಗೂ ಇಂದ್ರರು ಉಪಕ್ರಮದಲ್ಲಿ ಪ್ರಸಕ್ತರಾಗಿದ್ದರೂ ಪ್ರಬಲವಾದ ಮಹಾವಾಕ್ಯದಿಂದ ಇಂದ್ರನೆಂಬ ಅರ್ಥವು ಭಗ್ನವಾಗುತ್ತದೆ ಎಂದು.

**ಪ್ರಕಾಶಃ – ಯದ್ಯಪಿ ಭಾಷ್ಯೇ ಪ್ರಾಣಶಬ್ದನಿರ್ದಿಷ್ಟೋ ಜೀವ ಏವೇತ ಪರಮಾತ್ಮೇತ್ಯೇವ ಸಂಶಯೋ ದರ್ಶಿತಃ, ನ ತ್ವಿನ್ದ್ರ ಏವೇತಿ । ತಥಾऽಪಿ ಪ್ರಸಿದ್ಧಜೀವಭಾವ ಇನ್ದ್ರ ಏವೇತಿ ಪೂರ್ವಪಕ್ಷಾನ್ತೇ ಕಥನಾತ್ ಶ್ರುತಪ್ರಕಾಶೇ ತಥೈವ ವ್ಯಾಖ್ಯಾತತ್ವಾಚ್ಚ ಇನ್ದ್ರಃ ಪ್ರಾಣ ಇತಿ ಪ್ರಾಪ್ತೇ ಇತ್ಯುಕ್ತಮಿತಿ ಧ್ಯೇಯಮ್ ।**

ಶಂಕೆ - ಇಲ್ಲಿಯ ತನಕ ಸಮರ್ಥಿಸಿದ ಅಧಿಕರಣಶರೀರವು ಕೇವಲ ಶ್ರುತಪ್ರಕಾಶದಲ್ಲಷ್ಟೇ ನೋಡಬಹುದು. ಆದರೆ ರಾಮಾನುಜಭಾಷ್ಯದಲ್ಲಿ ಸ್ವಲ್ಪ ವಿಭಿನ್ನವಾದ ಪೂರ್ವಪಕ್ಷಸಿದ್ಧಾಂತಗಳು ಕಾಣಿಸುತ್ತವೆ. ಪ್ರಾಣಶಬ್ದದಿಂದ ನಿರ್ದೇಶಿಸಲ್ಪಟ್ಟರುವವನು ಜೀವನೋ? ಅಥವಾ ಪರಮಾತ್ಮನೋ? ಎಂಬುದಾಗಿ ಸಂಶಯ ಪ್ರದರ್ಶನ ಮಾಡಿದ್ದಾರೆ; ಹೊರತು ಇಂದ್ರನೋ? ಅಥವಾ ಪರಮಾತ್ಮನೋ? ಎಂಬುದಾಗಿ ಸಂಶಯ ತೋರಿಸಿಲ್ಲ. ಹೀಗಿರುವಾಗ ಇಲ್ಲಿ ಗ್ರಂಥಕಾರರು ಶ್ರುತಪ್ರಕಾಶದಲ್ಲಿ ಹೇಳಿರುವ ಪಕ್ಷವನ್ನೇ ಏಕೆ ಸ್ವೀಕರಿಸಿದರು?

ಸಮಾಧಾನ - ಹೌದು; ಆದರೆ ರಾಮಾನುಜಭಾಷ್ಯದ ಕೊನೆಯಲ್ಲಿ ''ಪ್ರಸಿದ್ಧಜೀವಭಾವಃ ಇಂದ್ರ ಏವ'' ಅಂದರೆ ಜೀವನೆಂದು ಪೂರ್ವಪಕ್ಷ ಮಾಡಿ, ಇಂತಹ ಜೀವನು ಯಾರೆಂದು ಪ್ರಶ್ನಿಸಿದಾಗ ಇಂದ್ರನೇ ಆಗಿದ್ದಾನೆಂದು ಹೇಳಿದ್ದಾನೆ. ಆದ್ದರಿಂದಲೇ ಶ್ರುತಪ್ರಕಾಶದಲ್ಲಿ ನೇರವಾಗಿ ಇಂದ್ರನನ್ನೇ ಪೂರ್ವಪಕ್ಷದ ವಿಷಯವನ್ನಾಗಿ ಸ್ವೀಕರಿಸಲಾಗಿದೆ. ಆದನ್ನೇ ಗ್ರಂಥಕಾರರು ಇಲ್ಲಿ ಅನುವಾದ ಮಾಡಿದ್ದು ಅತ್ಯಂತ ಸಮಂಜಸವಾಗಿದೆಯೆಂದು ತಿಳಿಯಬೇಕು.

## ಸಾರ

ಆದ್ವೈತಿಗಳಂತೆ ರಾಮಾನುಜರೂ ಸಹ ಪ್ರತರ್ದನವಿದ್ಯೆಯಲ್ಲಿರುವ 'ಪ್ರಾಣೋऽಸ್ಮಿ ಪ್ರಜ್ಞಾತ್ಮಾ' ಎಂಬುದನ್ನೇ ವಿಷಯವಾಕ್ಯವನ್ನಾಗಿ ಹೇಳುತ್ತಾರೆ. ಆದರೆ ಆದ್ವೈತಿಗಳು ಜೀವ, ಇಂದ್ರ ಮತ್ತು ವಾಯು ಈ ಮೂವರು ಪ್ರಾಣಶಬ್ದವಾಚ್ಯರೆಂದು ಪೂರ್ವಪಕ್ಷ ಮಾಡಿದ್ದರೂ ಇವರು ಕೇವಲ ದೇವೇಂದ್ರನನ್ನೇ ಪ್ರಾಣಶಬ್ದವಾಚ್ಯನೆಂದು ಪೂರ್ವಪಕ್ಷ ಮಾಡುತ್ತಿದ್ದಾರೆ.

ಈ ಪ್ರಕರಣದಲ್ಲಿರುವ ಜೀವಲಿಂಗ ಹಾಗೂ ಪ್ರಾಣಲಿಂಗಗಳನ್ನು ದೇವೇಂದ್ರನಲ್ಲಿಯೇ ಪರ್ಯವಸಾನ-ಮಾಡಿ ಪೂರ್ವಪಕ್ಷವನ್ನು ದೃಢಗೊಳಿಸುತ್ತಾರೆ. ಮತ್ತು ಆದ್ವೈತಿಗಳು ಹೇಳುವಂತೆ 'ಆನಂದೋऽ-

ಜರೋಽಮೃತಃ ಎಂಬ ಅನೇಕ ಬ್ರಹ್ಮಲಿಂಗಗಳು ಕೇಳಿಸುತ್ತಿರುವುದರಿಂದ ಬ್ರಹ್ಮನೇ ಪ್ರಕರಣ ಪ್ರತಿಪಾದ್ಯನೆಂದು ಸಿದ್ಧಾಂತ ಮಾಡಿದ್ದಾರೆ.

* * * *

## ರಾಮಾನುಜರ ಅಧಿಕರಣ ನಿರಾಸ

ತಾತ್ಪರ್ಯಚನ್ದ್ರಿಕಾ

**ತನ್ನ, ಇನ್ದ್ರ ಇತ್ಯೇವ ಪೂರ್ವಪಕ್ಷೇ ಸತಿ ಸೂತ್ರೇ 'ಜೀವಮುಖ್ಯಪ್ರಾಣಲಿಙ್ಗಾತ್' ಇತಿ ಶಙ್ಕಾಯೋಗಾತ್। ತತ್ರ ಜೀವಶಬ್ದಸ್ಯ ತದ್ವಿಶೇಷೇನ್ದ್ರಪರತ್ವೇ ಚ ವಕ್ತುರಾತ್ಮೋಪದೇಶಸ್ಯಾಪಿ ಇನ್ದ್ರಲಿಙ್ಗಸ್ಯಾನೇನೈವ ಸಙ್ಗಹಸಮ್ಭವಾತ್ ''ನ ವಕ್ತುರಾತ್ಮೋಪದೇಶಾತ್'' ಇತಿ ಪೃಥಕ್ಸೌತ್ರಶಙ್ಕಾಯೋಗಾತ್ । ಅಸ್ಮದೀಯೋದಾಹರಣೇ ತು ಜೀವಲಿಙ್ಗಂ ಶತಾಯುಷ್ಟ್ವಂ ನೇನ್ದ್ರೇ ಯುಕ್ತಮ್ । ''ಮನೋ ವಾಕ್ ಪ್ರಾಣಃ'' ಇತ್ಯಾದೌ ಪ್ರಾಣೋಽಪಿ ನಾನ್ಯವಿಶೇಷಣಮ್।**

ಅನುವಾದ - ರಾಮಾನುಜರು ರಚಿಸಿದ ಈ ಅಧಿಕರಣಶರೀರದಲ್ಲಿ ಹುರುಳಿಲ್ಲ. ರಾಮಾನುಜರು ಹೇಳುವಂತೆ ಇಂದ್ರನೇ ಪೂರ್ವಪಕ್ಷಕ್ಕೆ ವಿಷಯನಾಗುವುದಾದರೆ, ಸೂತ್ರಕಾರರು ಕೇವಲ ಇಂದ್ರನ ಲಿಂಗವನ್ನಷ್ಟೇ ಶಂಕಿಸಿದರೆ ಸಾಕಾಗುತ್ತಿತ್ತು. 'ಜೀವಮುಖ್ಯಪ್ರಾಣಾಲಿಂಗಾತ್' ಎಂಬುದಾಗಿ ಜೀವನ ಲಿಂಗವನ್ನಾಗಲೀ ಮುಖ್ಯಪ್ರಾಣನ ಲಿಂಗವನ್ನಾಗಲೀ ಶಂಕಿಸುವ ಅಗತ್ಯವಿರಲಿಲ್ಲ.

ಪ್ರತರ್ದನವಿದ್ಯೆಯಲ್ಲಿರುವ ಜೀವಶಬ್ದವು ಜೀವವಿಶೇಷನಾದ ಇಂದ್ರನಲ್ಲಿ ಪರ್ಯವಸಾನವಾಗುವುದಾದಲ್ಲಿ, ಈ ಪ್ರಕರಣದಿಂದ ಇಂದ್ರನನ್ನೇ ತೆಗೆದುಕೊಳ್ಳಬೇಕೆನ್ನಲು ''ವಕ್ತುರಾತ್ಮೋಪದೇಶ'' ಎಂಬುದು ಒಂದು ಲಿಂಗವಾಗಿದೆ. ಆವಾಗ ''ನ ವಕ್ತುರಾತ್ಮೋಪದೇಶಾತ್'' ಎಂಬ ಪ್ರತ್ಯೇಕ ಸೂತ್ರದಿಂದ ಶಂಕಿಸುವ ಅಗತ್ಯವಿರಲಿಲ್ಲ.

ನಾವು ಹೇಳುವ ವಿಷಯವಾಕ್ಯದಲ್ಲಿ ಈ ದೋಷಗಳಿಗೆ ಅವಕಾಶವಿಲ್ಲ. ಏಕೆಂದರೆ ಶತಾಯುಷ್ಟ್ವಎಂಬ ಜೀವನ ಲಿಂಗವು ದೇವೇಂದ್ರನಲ್ಲಿರುವುದಿಲ್ಲ. ಮತ್ತು ''ಮನೋ ವಾಕ್ ಪ್ರಾಣಃ'' ಎಂಬಲ್ಲಿರುವ ಪ್ರಾಣಶಬ್ದವು ದೇವೇಂದ್ರಾದಿಗಳಲ್ಲಿ ವಿಶೇಷಣವೂ ಆಗಿರುವುದಿಲ್ಲ. ಆದ್ದರಿಂದ ರಾಮಾನುಜರು ಉಲ್ಲೇಖಿಸುವ ವಿಷಯವಾಕ್ಯವು ಸಮಂಜಸವಲ್ಲವೆಂದು ತಿಳಿಯುತ್ತದೆ.

**ಪ್ರಕಾಶಃ – ಸೂತ್ರಾನಾನುಗುಣ್ಯೇನ ಪೂರ್ವಪಕ್ಷಂ ನಿರಸ್ಯತಿ – ತನ್ನೇತಿ ॥** ನನು ಜೀವಶಬ್ದಸ್ಯ ಜೀವವಿಶೇಷೇನ್ದ್ರಪರತ್ವಮುಚ್ಯತ ಇತಿ ಚೇತ್ತಥಾಽಪಿ ಮುಖ್ಯಪ್ರಾಣಪದಾಯೋಗಾತ್, ತಸ್ಯ ತ್ವನ್ಮತೇ ಜಡತ್ವೇನ ತದ್ವಿಶೇಷೇನ್ದ್ರಪರತ್ವಾಯೋಗಾತ್। ಸಾಮಾನ್ಯಶಬ್ದಸ್ಯ ವಿಶೇಷಪರತ್ವೇ ಲಕ್ಷಣಾಪತ್ತೇಶ್ಚ ।

ದೋಷಾನ್ತರಂ ಚಾಹ – **ತತ್ರೇತಿ ॥** ''ಮಾಮುಪಾಸ್ವ ಇತಿ ವಕ್ತುರಿನ್ದ್ರಸ್ಯ ಸ್ವಾತ್ಮನ ಏವೋಪದೇಶಾತ್'' ಇತಿ ತ್ವಯಾ ವ್ಯಾಖ್ಯಾತತ್ವಾಜ್ಜೀವಲಿಙ್ಗಪದೇನ ವಕ್ತೃತ್ವಾದೇರ್ಗ್ರಹಣಮಿವಾऽऽತ್ಮೋಪ-

देशोऽपि ग्रहीतुं शक्यत इति तत्सूत्रं व्यर्थमित्यर्थः । उपलक्षणमेतत्, प्राणस्येन्द्र-विशेषणत्वेनाप्राधान्ये धर्मिनिर्देशाय सूत्रे ''प्राणस्तथा'' इति प्राणपदप्रयोगो न स्यात् । किन्तु 'इन्द्रस्तथाऽनुगमात्' इत्येव स्यात् ।

ಏವರಣೆ - ರಾಮಾನುಜರ ಅಧಿಕರಣಶರೀರವು ಅಸಮಂಜಸವಾಗಿದೆ. ಮತ್ತು ಅವರು ಮಾಡಿದ ಪೂರ್ವಪಕ್ಷವು ಸೂತ್ರಕ್ಕೆ ಅನುಗುಣವಾಗಿಲ್ಲವೆಂದು 'ತನ್ನ' ಇತ್ಯಾದಿ ವಾಕ್ಯದಿಂದ ನಿರಾಕರಿಸುತ್ತಿದ್ದಾರೆ.

ಶಂಕೆ - ಗ್ರಂಥದಲ್ಲಿ ಮಾಡಿರುವ ನಿರಾಕರಣೆಯು ಸರಿಯಲ್ಲ. ಸೂತ್ರದಲ್ಲಿರುವ 'ಜೀವಮುಖ್ಯಪ್ರಾಣ-ಲಿಂಗಾತ್' ಎಂಬಲ್ಲಿ ಜೀವಪದಕ್ಕೂ ನಾವು ಇಂದ್ರನೆಂಬರ್ಥವನ್ನು ಅಂಗೀಕರಿಸಿದ್ದೇವೆ.ಸೂತ್ರದಲ್ಲಿರುವ 'ಜೀವಲಿಂಗಾತ್' ಎಂಬ ಪದವು ಹೇಗೆ ವ್ಯರ್ಥವಾಗುತ್ತದೆ?

ಸಮಾಧಾನ - ಜೀವಶಬ್ದಕ್ಕೆ ಇಂದ್ರನೆಂಬರ್ಥವನ್ನು ಮಾಡಬಹುದು, ಆದರೆ 'ಮುಖ್ಯಪ್ರಾಣಲಿಂಗಾತ್' ಎಂಬ ಪದವು ಅಯುಕ್ತವಾಗುತ್ತದೆ. ಏಕೆಂದರೆ ನಿಮ್ಮ ಮತದಲ್ಲಿ ಪ್ರಾಣನನ್ನು ಜಡಪದಾರ್ಥವೆಂದು ಅಂಗೀಕರಿಸಲಾಗಿದೆ. ಪಂಚವೃತ್ತಿಗಳಾದ ಜಡಪದಾರ್ಥಗಳನ್ನು ಹೇಳುವ ಪ್ರಾಣಪದಕ್ಕೆ ಚೇತನನಾದ ಇಂದ್ರಪರತ್ವವನ್ನು ಅಂಗೀಕರಿಸಲು ಸಾಧ್ಯವಿಲ್ಲ. ಮತ್ತು ಸಾಮಾನ್ಯವಾಚಕ ಪದಗಳಿಗೆ ವಿಶೇಷವ್ಯಕ್ತಿ ವಾಚಕತ್ವವನ್ನು ಒಪ್ಪಿದಲ್ಲಿ ಲಕ್ಷಣಾಪ್ರಸಂಗದೋಷವೂ ಸಹ ಬರುತ್ತದೆ.

ಮತ್ತೊಂದು ದೋಷವನ್ನು 'ತತ್ರ' ಇತ್ಯಾದಿ ವಾಕ್ಯದಿಂದ ಹೇಳುತ್ತಿದ್ದಾರೆ.

''ಮಾಮುಪಾಸ್ವ ಇತಿ ವಕ್ತುರಿಂದ್ರಸ್ಯ ಸ್ವಾತ್ಮನ ಏವೋಪದೇಶಾತ್'' ಎಂದು ಶ್ರುತಿಗೆ ನೀವು ವ್ಯಾಖ್ಯಾನಿಸುತ್ತೀರಿ. ಆದ್ದರಿಂದ ''ಸೂತ್ರದಲ್ಲಿರುವ ಜೀವಲಿಂಗಪದದಿಂದ ವಕ್ತೃತ್ವ ಎಂಬ ಲಿಂಗವನ್ನು ಸ್ವೀಕರಿಸುವಂತೆ, ಆತ್ಮೋಪದೇಶವೆಂಬ ಲಿಂಗವನ್ನೂ ಸಹ ಸ್ವೀಕರಿಸಬಹುದು'' ಎಂಬ ನಿಮ್ಮ ಸೂತ್ರವ್ಯಾಖ್ಯಾನವು ಸಹ ಈಗ ವ್ಯರ್ಥವಾಗುತ್ತದೆ.

ಉಪಲಕ್ಷಣಯಾ ಮತ್ತೊಂದು ದೋಷವನ್ನು ತಿಳಿಯಬೇಕು - ಇಂದ್ರನಲ್ಲಿ ವಿಶೇಷಣವಾದ್ದರಿಂದ ಪ್ರಾಣಪದವು ಅಪ್ರಧಾನವಾಚಕವಾದಲ್ಲಿ ಸೂತ್ರಕಾರರು ಧರ್ಮಿಯನ್ನು ನಿರ್ದೇಶನ ಮಾಡುವುದಕ್ಕಾಗಿ ''ಪ್ರಾಣಸ್ತಥಾ'' ಎಂದು ಪ್ರಾಣಪದಪ್ರಯೋಗವನ್ನು ಮಾಡಿದ್ದು ತಪ್ಪಾಗುತ್ತದೆ. ಹೊರತಾಗಿ 'ಇಂದ್ರಸ್ತಥಾऽನುಗಮಾತ್' ಎಂದು ಉಲ್ಲೇಖಿಸಬಹುದಿತ್ತು.

**प्रकाशः** – यदत्रोक्तं श्रुतप्रकाशे – प्राणशब्दस्य परमात्मलिङ्गप्रतिपादक-वाक्यस्थत्वेन सिद्धान्तहेतुद्योतकत्वात् सूत्रे प्राणपदेन धर्मी निर्दिष्ट इति, तन्न, सिद्धान्तहेतोः 'तथाऽनुगमात्' इत्यादिनैव स्फुटं प्रतिभासात्, पूर्वपक्षहेतोः केनाप्य-प्रतीतेः तत्सूचनार्थत्वात् प्राधान्याच्च 'इन्द्रः' इत्येव निर्देष्टव्यत्वात् । अत एव तद् भाष्ये 'इन्द्रशब्दस्य जीवविशेष एव प्रसिद्धे'रिति पूर्वपक्षहेतुर्बहिरेवोक्त इति ध्येयम् ।

ಶ್ರುತಪ್ರಕಾಶದಲ್ಲಿ ಸೂತ್ರದಲ್ಲಿ ಪ್ರಾಣಶಬ್ದವನ್ನು ಹೀಗೆ ಸಮರ್ಥಿಸಲಾಗಿದೆ - ಪರಮಾತ್ಮನ ಲಿಂಗಗಳನ್ನು ಪ್ರತಿಪಾದಿಸುವ ವಾಕ್ಯಗಳ ಮಧ್ಯದಲ್ಲಿ ಪ್ರಾಣಶಬ್ದವು ಕಾಣಿಸುತ್ತಿದೆ. ಆದ್ದರಿಂದ ಸಿದ್ಧಾಂತಹೇತುವನ್ನು ಸಮರ್ಥಿಸುವುದಕ್ಕಾಗಿ ಪ್ರಾಣಪದವು ಅತ್ಯಂತ ಉಪಕಾರಿಯಾಗಿದೆ. ಅದಕ್ಕೋಸ್ಕರವೇ ಸೂತ್ರದಲ್ಲಿ ಪ್ರಾಣಪದದಿಂದಲೇ ಧರ್ಮಿಯನ್ನು ನಿರ್ದೇಶಿಸಿದ್ದಾರೆ.

ನಿರಾಕರಣೆ - ಶ್ರುತಪ್ರಕಾಶದ ಈ ನಿಲುವು ಸರಿಯಲ್ಲ. 'ತಥಾऽನುಗಮಾತ್' ಎಂಬ ಸೂತ್ರದ ಆಂಶದಿಂದಲೇ ಸಿದ್ಧಾಂತಹೇತುವನ್ನು ಸ್ಪಷ್ಟವಾಗಿ ಸಮರ್ಥಿಸಲು ಬರುತ್ತದೆ. ಮತ್ತು ಪೂರ್ವಪಕ್ಷಹೇತುವು ಸ್ಪಷ್ಟವಾಗಿ ತೋರುತ್ತಿಲ್ಲ. ಅದನ್ನು ತೋರಿಸುವುದಕ್ಕಾಗಿ ಮತ್ತು ಪ್ರಾಧಾನ್ಯವಿರುವುದರಿಂದಲೂ ಇಂದ್ರಶಬ್ದವನ್ನು ಸೂತ್ರದಲ್ಲಿ ಬಳಸಿದ್ದರೆ, ಸೂತ್ರದಲ್ಲಿ ಪೂರ್ವಪಕ್ಷಹೇತು ಸ್ಪಷ್ಟವಾಗಿ ತೋರದ ಕಾರಣದಿಂದಲೇ ರಾಮಾನುಜ -ಭಾಷ್ಯದಲ್ಲಿ ''ಇಂದ್ರಶಬ್ದಸ್ಯ ಜೀವವಿಶೇಷ ಏವ ಪ್ರಸಿದ್ಧೇಃ'' ''ಇಂದ್ರಶಬ್ದವು ಜೀವನಲ್ಲಿ ಪ್ರಸಿದ್ಧವಾದ್ದರಿಂದ'' ಎಂಬುದಾಗಿ ಪೂರ್ವಪಕ್ಷಹೇತುವನ್ನು ಸೂತ್ರದಿಂದ ಹೊರಗಡೆ ಸಮರ್ಥಿಸಲಾಗಿದೆಯೆಂಬುದನ್ನು ವಿಮರ್ಶಕರು ಗಮನಿಸಬೇಕು.

ಆದ್ದರಿಂದ ರಾಮಾನುಜರಿಗೆ ಸೂತ್ರದಲ್ಲಿ ಪ್ರಾಣಶಬ್ದವನ್ನೇ ಏಕೆ ಉಲ್ಲೇಖಿಸಿದರು? ಎಂಬುದಕ್ಕೆ ಮನದಟ್ಟಾಗುವಂತಹ ಕಾರಣವನ್ನು ನೀಡಲು ಸಾಧ್ಯವಿಲ್ಲ.

**ಪ್ರಕಾಶಃ** – ನನೂಕ್ತರೀತ್ಯಾ ಜೀವಮುಖ್ಯಪ್ರಾಣಕೋಟಿಕಪೂರ್ವಪಕ್ಷಾಸಮ್ಭವಾದಗತ್ಯಾ ಸರ್ವಸಮಾಧೇಯಮೇತತ್ । ಅನ್ಯಥಾऽಯಂ ದೋಷೋ ಭವತಾಮಪಿ ಸಮ ಇತ್ಯಾಶಙ್ಕ್ಯ, ಸ್ಯಾದಯಂ ದೋಷೋऽದ್ವೈತಿನಾಮಿದಮೇವೋದಾಹೃತ್ಯ ತ್ರಿತಯಪರತ್ವೇನ ಪೂರ್ವಪಕ್ಷಯತಾಂ, ನ ತ್ವಸ್ಮಾಕಂ ಉಕ್ತದೋಷಾಸ್ಪೃಷ್ಟೋದಾಹರಣಾನ್ತರಂ ಕುರ್ವತಾಮಿತ್ಯಾಹ – **ಅಸ್ಮದೀಯೇತಿ ॥ ನೇನ್ದ್ರ ಇತಿ ॥** ತಸ್ಯಾಮರತ್ವೇನ ಬಹುಕಾಲಸ್ಥಾಯಿನಃ ಶತಾಯುಷ್ಕಾಯೋಗಾತ್, ತ್ವನ್ಮತೇ ವಕ್ತೃತ್ವಾದಿಜೀವಲಿಙ್ಗಸ್ಯ ತದ್ವಿಶೇಷೇನ್ದ್ರನಿಷ್ಠತ್ವೇನ ತತ್ರ ಪರ್ಯವಸಾನಮಿವ ನಾಸ್ಮನ್ಮತೇ ಜೀವಲಿಙ್ಗಮಿನ್ದ್ರೇ ಪರ್ಯವಸಾಯಯಿತುಂ ಶಕ್ಯತ ಇತಿ ಸ್ವಾತನ್ತ್ರ್ಯೇಣ ಜೀವಕೋಟಿಕಪೂರ್ವಪಕ್ಷೋ ಯುಕ್ತಃ, ಪ್ರಾಣೋऽಪಿ ನಾನ್ಯವಿಶೇಷಣತಯಾ ಪ್ರತೀಯತ ಇತಿ ತತ್ಕೋಟಿಕಪೂರ್ವಪಕ್ಷೋऽಪಿ ಯುಕ್ತ ಇತಿ ಸರ್ವಮನವದ್ಯಮಿತಿ ಭಾವಃ ।

ಶಂಕೆ - ಇಲ್ಲಿಯ ತನಕ ನೀವು ಹೇಳಿದ ದೋಷ ನಮಗೆ ಮಾತ್ರವಲ್ಲ. ಎಲ್ಲರಿಗೂ ಬರುತ್ತದೆ. ಜೀವಕೋಟಿಕ ಪೂರ್ವಪಕ್ಷವನ್ನಾಗಲಿ ಮುಖ್ಯಪ್ರಾಣಕೋಟಿಕ ಪೂರ್ವಪಕ್ಷವನ್ನಾಗಲೀ ಸಮರ್ಥಿಸುವುದು ಸುಲಭವಲ್ಲ. ಆದರೆ ಸೂತ್ರಕಾರರು ಈ ಎರಡು ಪೂರ್ವಪಕ್ಷಗಳನ್ನೇ ಉಲ್ಲೇಖಿಸಿದ್ದಾರೆ. ಶ್ರುತಿಯನ್ನು ನೋಡಿದಾಗ ಇಂದ್ರಕೋಟಿಕಪೂರ್ವಪಕ್ಷವೇ ಸುಲಭವಾಗಿ ಕಾಣಿಸುತ್ತಿದೆ. ಹಾಗಾಗಿ ಈ ಗೊಂದಲದ ಪರಿಹಾರದ ಭಾರ ನಮಗೆ ಮಾತ್ರವಲ್ಲ ಎಲ್ಲಾ ಭಾಷ್ಯಕಾರರಿಗೂ ಸಮಾನವಾಗಿದೆ. ಒಂದು ವೇಳೆ ಸಮಾಧಾನವನ್ನು ನೀಡದಿದ್ದಲ್ಲಿ ನಿಮಗೂ ಸಹ ನಮಗೆ ಬಂದ ದೋಷವು ತಪ್ಪಿದ್ದಲ್ಲ.

ಸಮಾಧಾನ - ಸಾಧ್ಯವೇ ಇಲ್ಲ. ಈ ದೋಷವು ಯಾರು ಪ್ರತರ್ದನವಿದ್ಯೆಯನ್ನು ವಿಷಯವಾಕ್ಯವನ್ನಾಗಿ ಸ್ವೀಕರಿಸುತ್ತಾರೋ ಅಂತಹ ನಿಮಗೆ ಈ ದೋಷ ಬರುತ್ತದೆ. ಅಥವಾ ಜೀವ, ಮುಖ್ಯಪ್ರಾಣ, ಇಂದ್ರ ಎಂಬ

ಮೂರು ಬಗೆಯಲ್ಲಿ ಪೂರ್ವಪಕ್ಷವನ್ನು ರಚಿಸುವ ಆದ್ವೈತಿಗಳಿಗೆ ಈ ದೋಷ ಬರುತ್ತದೆ. ಹೊರತು ನಮಗೆ ಈ ಯಾವ ದೋಷಗಳೂ ಬರುವುದಿಲ್ಲ. ಏಕೆಂದರೆ ನಾವು ಉದಾಹರಿಸುವ ವಿಷಯವಾಕ್ಯದಲ್ಲಿ ಈ ಆಕ್ಷೇಪಕ್ಕೆ ಅವಕಾಶವಿಲ್ಲವೆಂದು 'ಅಸ್ಮದೀಯ' ಇತ್ಯಾದಿ ವಾಕ್ಯದಿಂದ ಸಮರ್ಥಿಸುತ್ತಿದ್ದಾರೆ.

''ನೇಂದ್ರೇ ಯುಕ್ತಂ'' ಎಂಬುದಾಗಿ ಶತಾಯುಷ್ಪ್ರ ಎಂಬ ಜೀವಲಿಂಗವು ದೇವೇಂದ್ರನಲ್ಲಿ ಸರ್ವಥಾ ಬರುವುದಿಲ್ಲ ಎಂದಿದ್ದಾರೆ. ಏಕೆಂದರೆ ದೇವೇಂದ್ರನು ಅಮರನಾದ್ದರಿಂದ, ಬಹುಕಾಲವಿರುತ್ತಾನೆ. ಆದ್ದರಿಂದ ಕೇವಲ ನೂರು ವರ್ಷ ಮಾತ್ರ ಬದುಕಿರುವಿಕೆ ಎಂಬ ಧರ್ಮವು ಅವನಲ್ಲಿ ಬರುವುದಿಲ್ಲ.

ನಿಮ್ಮ ಮತದಲ್ಲಿ ವಕ್ತೃತ್ವವೇ ಮೊದಲಾದ ಜೀವಲಿಂಗವು ಜೀವವಿಶೇಷನಾದ ಇಂದ್ರನಲ್ಲಿ ಇದೆಯೆಂದು ಪರ್ಯವಸಾನ ಮಾಡಿದಿರಿ. ಆದರೆ ನಮ್ಮ ಮತದಲ್ಲಿ ಜೀವನ ಲಿಂಗವನ್ನು ಇಂದ್ರನಲ್ಲಿ ಪರ್ಯವಸಾನ ಮಾಡಲು ಸಾಧ್ಯವಿಲ್ಲ. ಆದ್ದರಿಂದ ಪ್ರತ್ಯೇಕವಾಗಿ (ಸ್ವತಂತ್ರವಾಗಿ) ಜೀವಕೋಟಿಕ ಪೂರ್ವಪಕ್ಷವನ್ನು ರಚಿಸಬಹುದು.

ಪ್ರಾಣನೂ ಸಹ ಮತ್ತೊಂದೆಡೆ ವಿಶೇಷಣನಾಗದ ಕಾರಣ ಪ್ರಾಣಕೋಟಿಕ ಪೂರ್ವಪಕ್ಷವನ್ನೂ ಸಹ ನಾವು ಸುಲಭವಾಗಿ ಮಾಡಬಹುದು. ಆದ್ದರಿಂದ ಪ್ರಾಣಕೋಟಿಕ ಪೂರ್ವಪಕ್ಷವೂ ಸಮಂಜಸವಾಗಿದೆ. ಏನೇ ಆದರು ಸೂತ್ರದಲ್ಲಿರುವ 'ಜೀವಮುಖ್ಯಪ್ರಾಣಲಿಂಗಾತ್' ಎಂಬ ಪೂರ್ವಪಕ್ಷದ ಭಾಗವನ್ನು ಸುಂದರವಾಗಿ ವ್ಯಾಖ್ಯಾನಿಸಿರುವುದೇ ನಮ್ಮ ಹೆಗ್ಗಳಿಕೆ. ಆದ್ದರಿಂದ ಶ್ರೀಮದಾಚಾರ್ಯರು ಮಾಡಿದ ಸೂತ್ರವ್ಯಾಖ್ಯಾನವು ನಿಷ್ಕಳಂಕವಾಗಿದೆ ಎಂಬುದನ್ನು ಸಜ್ಜನರು ಗಮನಿಸಬಹುದು.

**ಗುರುರಾಜೀಯಮ್ – ನನ್ವೇವಂ ಭವತ್ಪಕ್ಷೇಪಿ ಜೀವಲಿಙ್ಗಾನಾಂ ತದ್ವಿಶೇಷೇನ್ದ್ರಪರತ್ವೇನ ಪ್ರಾಣೋऽಸ್ಮೀತಿ ಪ್ರಾಣಸ್ಯ ಜೀವವಿಶೇಷೇನ್ದ್ರವಿಶೇಷಣತ್ವಪ್ರತೀತೇಃ ಪ್ರಾಣಲಿಙ್ಗಸ್ಯಾಪಿ ತತ್ಪರತ್ವೇನೇನ್ದ್ರ ಏವ ಪ್ರಾಣ ಇತ್ಯೇಕ ಏವ ಪೂರ್ವಪಕ್ಷೋ ವಾಚ್ಯಃ । ತಥಾಚ ಜೀವಪ್ರಾಣಲಿಙ್ಗಾಯೋಗಾದಿತಿ ಶಙ್ಕಾಯೋಗಃ ತತ್ರ ಜೀವಶಬ್ದಸ್ಯ ತದ್ವಿಶೇಷಪರತ್ವೇ ಚ ವಕ್ತುರಾತ್ಮೋಪದೇಶೇಪಿ ಇನ್ದ್ರಲಿಙ್ಗಸ್ಯಾನೇನೈವ ಸಙ್ಗ್ರಹಸಮ್ಭವಾತ್ ವಕ್ತುರಾತ್ಮೋಪದೇಶಾದಿತಿ ಪೃಥಕ್ ಸೌತ್ರಶಙ್ಕಾಯೋಗಾದಿತಿ ದೋಷತಾದವಸ್ಥ್ಯಮೇವೇತ್ಯತ ಆಹ – ಅಸ್ಮದೀಯೋದಾಹರಣೇ ತ್ವಿತಿ ॥**

## ಸಾರ

ರಾಮಾನುಜ ಮತದಲ್ಲಿ ಪ್ರಾಣಶಬ್ದವಾಚ್ಯನಾದವನು ಇಂದ್ರನೇ ಆಗಿದ್ದಾನೆಂದು ಪೂರ್ವಪಕ್ಷ ಮಾಡಲಾಗಿದೆ. ಹಾಗಾದಲ್ಲಿ 'ಜೀವಮುಖ್ಯಪ್ರಾಣಲಿಂಗಾತ್' ಎಂಬ ಸೂತ್ರದಲ್ಲಿರುವ ಜೀವಪದಕ್ಕೆ ಅಸ್ವಾರಸ್ಯವನ್ನು ಹೇಳಿದಂತಾಗುತ್ತದೆ. ಒಂದುವೇಳೆ ಇಂದ್ರನೆಂಬ ಜೀವ ವಿಶೇಷಪರತ್ವವನ್ನು ಅಂಗೀಕರಿಸಿದರೆ ''ನ ವಕ್ತುರಾತ್ಮೋಪದೇಶಾತ್'' ಎಂಬ ಸೂತ್ರವೇ ವ್ಯರ್ಥವಾಗುತ್ತದೆ. ಏಕೆಂದರೆ ನಾನೇ ಪ್ರಾಣನೆಂಬ ಇಂದ್ರನ ವಾಕ್ಯವು ಜೀವಲಿಂಗವಾಗಿದೆ. ಆದ್ದರಿಂದ 'ಜೀವಮುಖ್ಯಪ್ರಾಣಲಿಂಗಾತ್' ಎಂಬ ಸೂತ್ರದಿಂದಲೇ ಇದು ಸಂಗ್ರಹವಾಗುತ್ತದೆ. ಪುನಃ ''ಆತ್ಮೋಪದೇಶಾತ್'' ಎಂಬ ಸೂತ್ರದಿಂದ ಆಕ್ಷೇಪ ಹಾಗೂ ಸಮಾಧಾನಗಳು ಬೇಕಾಗಿರುವುದಿಲ್ಲ.

ಆದರೆ ನಮ್ಮ ಮತದಲ್ಲಿ ಈ ದೋಷವಿಲ್ಲ. ''ಶತಾಯುಷ್ಟ್ವ''(ನೂರುವರ್ಷದ ಜೀವನ) ಎಂಬ ಲಿಂಗವು ಮರಣವಿಲ್ಲದ ಇಂದ್ರನಲ್ಲಿ ಸುತರಾಂ ಬರುವುದಿಲ್ಲ. ಆದ್ದರಿಂದ ಪ್ರತ್ಯೇಕ ಸೂತ್ರದ ಅನಿವಾರ್ಯತೆ ಇದೆ.

* * * *

## ಆದ್ಯೈತಿಗಳ ಎರಡನೇ ಸೂತ್ರ ವ್ಯಾಖ್ಯಾನ

ತಾತ್ಪರ್ಯಚಂದ್ರಿಕಾ

**यत्तु परकीयं ''न वक्तुः'' इति सूत्रव्याख्यानं 'वक्तुः' उपदेष्टुरिन्द्रस्य 'प्राणोऽस्मि' इत्यात्मोपदेशान्नेति चेन्न,**

**अस्मिन् प्रकरणे ''यावद्ध्यस्मिन् शरीरे प्राणो वसति तावदायुः'' इत्यायुरवधित्वस्य ''वक्तारं विद्यात्'' इत वक्तृत्वप्रज्ञात्मत्वादेश्चोक्तेः प्रत्यगात्मसम्बन्धबाहुल्यमस्ति, तच्च पराचीनेन्द्रे न युक्तमिति,**

---

**शङ्करभाष्यम्** – न वक्तुरात्मोपदेशादिति चेदध्यात्मसम्बन्धभूमा ह्यस्मिन् ॥ २९ ॥

यदुक्तं प्राणो ब्रह्मेति, तदाक्षिप्यते । न परं ब्रह्म प्राणशब्दम् । कस्मात्, वक्तुरात्मोपदेशात् वक्तृहीन्द्रो नाम कश्चिद्विग्रहवान्देवताविशेषः स्वमात्मानं प्रतर्दनायाचचक्षे – 'मामेव विजानीहि' इत्युपक्रम्य 'प्राणोऽस्मि प्रज्ञात्मा' इत्यहङ्कारवादेन । स एष वक्तुरात्मत्वेनोपदिश्यमानः प्राणः कथं ब्रह्म स्यात् । नहि ब्रह्मणो वक्तृत्वं सम्भवति, 'अवागमनाः' (बृह.३।८।८) इत्यादिश्रुतिभ्यः । तथा विग्रहसम्बन्धिभिरेव ब्रह्मण्यसम्बद्धिर्धर्मैरात्मानं तुष्टाव – 'त्रिशीर्षाणं त्वाष्ट्रमहनमरुन्मुखान्यतीञ्शालावृकेभ्यः प्रायच्छम्' इत्येवमादिभिः । प्राणत्वं चेन्द्रस्य बलवत्त्वादुपपद्यते । 'प्राणो वै बलम्' इति हि विज्ञायते । बलस्य चेन्द्रो देवता प्रसिद्धा । या च काचिद्बलकृतिरिन्द्रकर्मैव तदिति हि वदन्ति । प्रज्ञात्मत्वमप्यप्रतिहतज्ञानत्वादेवतात्मनः सम्भवति । अप्रतिहतज्ञाना देवता इति हि वदन्ति । निश्चिते चैवं देवतात्मोपदेशे हिततमत्वादिवचनानि यथासम्भवं तद्विषयाण्येव योजयितव्यानि । तस्माद्वक्तुरिन्द्रस्यात्मोपदेशात्र प्राणो ब्रह्मेत्याक्षिप्य प्रतिसमाधीयते – 'अध्यात्मसम्बन्धभूमा ह्यस्मिन्' इति । अध्यात्मसम्बन्धः प्रत्यगात्मसम्बन्धस्तस्य भूमा बाहुल्यमस्मिन्नध्याय उपलभ्यते 'यावद्ध्यस्मिञ्शरीरे प्राणो वसति तावदायुः' इति प्राणस्यैव प्रज्ञात्मनः प्रत्युग्भूतस्यायुष्प्रदानोपसंहारयोः स्वातन्त्र्यं दर्शयति न देवताविशेषस्य पराचीनस्य । तथास्तित्वे च प्राणानां निःश्रेयसमित्यध्यात्ममेवेन्द्रियाश्रयं प्राणं दर्शयति । तथा 'प्राण एव प्रज्ञात्मेदं शरीरं परिगृह्योत्थापयति' (कौ. ३।३) इति, 'न

ಅನುವಾದ - ''ನ ವಕ್ತುಃ'' ಎಂಬ ಎರಡನೇ ಸೂತ್ರವನ್ನು ಅದ್ವೈತಿಗಳು ಹೀಗೆ ವ್ಯಾಖ್ಯಾನಿಸುತ್ತಾರೆ -

ವಕ್ತುಃ = ಉಪದೇಶಮಾಡುತ್ತಿರುವ ಇಂದ್ರನ, ಆತ್ಮೋಪದೇಶಾತ್ = ಪ್ರಾಣೋಽಸ್ಮಿ ಪ್ರಜ್ಞಾತ್ಮಾ ಎಂಬುದಾಗಿ ತಾನೇ ಪ್ರಾಣನೆಂಬ ಉಪದೇಶವಿರುವುದರಿಂದ ಪ್ರಾಣನು ಬ್ರಹ್ಮನಲ್ಲ. ಇತಿ ಚೇತ್ = ಹೀಗೆ ಹೇಳಿದರೆ, ನ = ತಪ್ಪು. ಅಸ್ಮಿನ್ = ಇಂದ್ರಪ್ರತರ್ದನ ಸಂವಾದ ಪ್ರಕರಣದಲ್ಲಿ ಅಧ್ಯಾತ್ಮಸಂಬಂಧ ಭೂಮಾ = ಶುದ್ಧಾತ್ಮನಿಗೆ ಸಂಬಂಧಿಸಿದ ಧರ್ಮಗಳೇ ಬಹಳವಾಗಿ ಇವೆ. ಏಕೆಂದರೆ - ''ಯಾವದ್ಧಿ ಅಸ್ಮಿನ್ ಶರೀರೇ ಪ್ರಾಣೋ ವಸತಿ ತಾವದಾಯುಃ'' ಎಲ್ಲಿಯ ತನಕ ಈ ಶರೀರದಲ್ಲಿ ಪ್ರಾಣನು ವಾಸವಾಗಿರುತ್ತಾನೋ ಆಲ್ಲಿಯ ತನಕ ಆಯುಷ್ಯ ಇರುತ್ತದೆ. ಹೀಗೆ 'ಆಯುಷ್ಯವನ್ನು ಕೊಡುವಿಕೆ' ಮತ್ತು 'ಆಯುಷ್ಯವನ್ನು ಉಪಸಂಹಾರ ಮಾಡುವಿಕೆ' ಎಂಬ ಲಿಂಗವು ಶುದ್ಧಾತ್ಮನಿಗೆ ಸಂಬಂಧಪಟ್ಟ ಧರ್ಮವಾಗಿದೆ.

''ವಕ್ತಾರಂ ವಿದ್ಯಾತ್'' ಎಂಬಲ್ಲಿ ವಕೃತ್ವ ಪ್ರಜ್ಞಾತೃತ್ವ ಮೊದಲಾದ ಲಿಂಗಗಳು ಕೇಳಿಸುತ್ತಿವೆ. ಇವುಗಳೂ ಸಹ ಪ್ರತ್ಯಗಾತ್ಮನಲ್ಲೇ ಇರುವಂತಹ ಧರ್ಮಗಳು. ಹೊರತು ಹೊರಗಿರುವ (ಪ್ರಾಗ್ಭೂತನಾದ) ದೇವೇಂದ್ರನಲ್ಲಿ ಸರ್ವಥಾ ಕೂಡುವುದಿಲ್ಲ.

ಕಠಿಣ ಪದಾರ್ಥ

ಇಂದ್ರಸ್ಯ = ಇಂದ್ರನ (ಕರ್ತರಿ ಷಷ್ಠಿ), ಅಸ್ಮಿನ್ಪ್ರಕರಣೇ = ಇಂದ್ರಪ್ರತರ್ದನರ ಸಂವಾದ ಪ್ರಕರಣದಲ್ಲಿ, ಆಯುರವಧಿತ್ವಸ್ಯ = ಆಯುಷ್ಕರಾನ ಮತ್ತು ಆಯುಷ್ಕರ ಉಪಸಂಹಾರದ ಸ್ವಾತಂತ್ರ್ಯವು, ಪ್ರತ್ಯಗಾತ್ಮ = ಶುದ್ಧಾತ್ಮನಿಗೆ, ಪರಾಚೀನೇ = ಸಂಸಾರಿಯಾದ್ದರಿಂದ ಹೊರಗಿರುವ.

**ಪ್ರಕಾಶಃ – ಏವಂ ಮತದ್ವಯೇ ಅಧಿಕರಣಶರೀರಮಾದ್ಯಸೂತ್ರಾರ್ಥೆ ಚ ನಿರಸ್ಯಾಧುನಾ ಪೂರ್ವಮತಾಭಿಮತಂ ದ್ವಿತೀಯಸೂತ್ರಾರ್ಥಮನೂದ್ಯ ನಿರಸ್ಯತಿ – ವಕ್ತೇತಿ ॥ ಪ್ರಾಗ್ವಿವೃತಾನಿ ಸೂತ್ರಾಣ್ಯಸ್ಮಾಭಿಃ । 'ಪರಾಚೀನೇ' ಸಂಸಾರಿತ್ವೇನ ಪರಾಗ್ಭೂತೇ ।**

ವಿವರಣೆ - ಇಲ್ಲಿಯ ತನಕ ಅದ್ವೈತಿಗಳ ಹಾಗೂ ರಾಮಾನುಜರ ಅಧಿಕರಣ ಶರೀರವನ್ನು ತೋರಿಸಿ ನಿರಾಕರಿಸಿದ್ದಾಯಿತು. ಮತ್ತು 'ಪ್ರಾಣಸ್ತಥಾಽನುಗಮನಾತ್' ಎಂಬ ಪ್ರಥಮ ಸೂತ್ರಾರ್ಥವನ್ನು

ವಾಚಂ ವಿಜಿಜ್ಞಾಸೀತ ವಕ್ತಾರಂ ವಿದ್ಯಾತ್' ಇತಿ ಚೋಪಕ್ರಮ್ಯ 'ತದ್ಯಥಾ ರಥಸ್ಯಾರೇಷು ನೇಮಿರರ್ಪಿತಾ ನಾಭಾವರಾ ಅರ್ಪಿತಾ ಏವಮೇವೈತಾ ಭೂತಮಾತ್ರಾಃ ಪ್ರಜ್ಞಾಮಾತ್ರಾಸ್ವರ್ಪಿತಾಃ ಪ್ರಜ್ಞಾಮಾತ್ರಾಃ ಪ್ರಾಣೇಽರ್ಪಿತಾಃ ಸ ಏಷ ಪ್ರಾಣ ಏವ ಪ್ರಜ್ಞಾತ್ಮಾನಂದೋಽಜರೋಽಮೃತಃ' ಇತಿ ವಿಷಯೇಂದ್ರಿಯವ್ಯವಹಾರಾನಾಭಿಭೂತಂ ಪ್ರತ್ಯಗಾತ್ಮಾನ-ಮೇವೋಪಸಂಹರತಿ । 'ಸ ಮ ಆತ್ಮೇತಿ ವಿದ್ಯಾತ್' ಇತಿ ಚೋಪಸಂಹಾರಃ ಪ್ರತ್ಯಗಾತ್ಮಪರಿಗ್ರಹೇ ಸಾಧುರ್ನ ಪರಾಚೀನಪರಿಗ್ರಹೇ । 'ಅಯಮಾತ್ಮಾ ಬ್ರಹ್ಮ ಸರ್ವಾನುಭೂಃ' (ಬೃಹ. ೨।೫।೧೯) ಇತಿ ಚ ಶ್ರುತ್ಯನ್ತರಮ್ । ತಸ್ಮಾದಧ್ಯಾತ್ಮಸಮ್ಬನ್ಧಬಾಹುಲ್ಯಾದ್ಬ್ರಹ್ಮೋಪದೇಶ ಏವಾಯಂ ನ ದೇವಾತಾತ್ಮೋಪದೇಶಃ ॥೨೯॥

ನಿರಾಕರಿಸಿದ್ದಾಯಿತು. ಪ್ರಕೃತ ದ್ವಿತೀಯ ಸೂತ್ರದ ವ್ಯಾಖ್ಯಾನವನ್ನು ಅದ್ವೈತಿಗಳು ಮತ್ತು ರಾಮಾನುಜರು ಹೇಗೆ ಮಾಡಿದ್ದಾರೆಂಬುದನ್ನು ಅನುವಾದ ಮಾಡಿ ನಿರಾಕರಿಸಲು ಹೊರಟಿದ್ದಾರೆ.

'ಯತ್ತು' ಇತ್ಯಾದಿ ಗ್ರಂಥದಿಂದ ಅದ್ವೈತಿಗಳ 'ನ ವಕ್ತುಃ' ಎಂಬ ಎರಡನೇ ಸೂತ್ರವ್ಯಾಖ್ಯಾನವನ್ನು ಅನುವಾದ ಮಾಡುತ್ತಿದ್ದಾರೆ. ವಸ್ತುತಃ ಈ ಹಿಂದೆಯೇ ಪ್ರಾಸಂಗಿಕವಾಗಿ ಅದ್ವೈತಿಗಳ ಸೂತ್ರಾರ್ಥವನ್ನು ವಿವರಿಸಿದ್ದಾಗಿದೆ.

ಸಾರ

ಅದ್ವೈತಿಗಳ ಎರಡನೇ ಸೂತ್ರ ವ್ಯಾಖ್ಯಾನ - 'ಪ್ರಾಣೋಽಸ್ಮಿ ಪ್ರಜ್ಞಾತ್ಮಾ' ಎಂಬುದಾಗಿ ಇಂದ್ರನು ತನ್ನ ಉಪದೇಶ ಮಾಡುತ್ತಿರುವುದರಿಂದ ಪ್ರಾಣನು ಬ್ರಹ್ಮನಲ್ಲವೆಂದು ಪೂರ್ವಪಕ್ಷ.

ಇಂದ್ರ ಪ್ರತರ್ದನ ಸಂವಾದ ಪ್ರಕರಣದಲ್ಲಿ ಕೇಳಿಸುತ್ತಿರುವ ಧರ್ಮಗಳೆಲ್ಲವು ಶುದ್ಧಾತ್ಮನದ್ದೇ ಆಗಿವೆ. ಸಂಸಾರಿಯಾದ ಇಂದ್ರನಲ್ಲಿ ಆ ಧರ್ಮಗಳು ಅಸಂಭಾವಿತಗಳಾದ್ದರಿಂದ ಶುದ್ಧಾತ್ಮನೇ ಪ್ರಾಣಶಬ್ದವಾಚ್ಯನೆಂದು ಸಿದ್ಧಾಂತ.

* * * *

## ಅದ್ವೈತಿಗಳ ಎರಡನೆಯ ಸೂತ್ರವ್ಯಾಖ್ಯಾನದಲ್ಲಿ 'ವಕ್ತುಃ' ಎಂಬ ಪದವು ವ್ಯರ್ಥ

ತಾತ್ಪರ್ಯಚನ್ದ್ರಿಕಾ

**ತನ್ನ, 'ಉಪದೇಶಾತ್' ಇತ್ಯನೇನೈವ ಉಪದೇಷ್ಟೃತ್ವರೂಪವಕ್ತೃತ್ವಲಾಭೇನ 'ವಕ್ತುಃ' ಇತ್ಯಸ್ಯ ವೈಯರ್ಥ್ಯಾತ್, ಸ್ವಾತ್ಮೋಪದೇಶಾದಿತ್ಯಸ್ಯ ತು ವಕ್ತೃಪದಪ್ರಯೋಗೇಽಪ್ಯಲಾಭಾತ್ ।**

**ಅಸ್ಮತ್ಪಕ್ಷೇ ಚ ಬೃಹತೀಸಹಸ್ರವಕ್ತಾರಂ ಪ್ರತೀನ್ದ್ರಸ್ಯ ವಿಪ್ರಲಮ್ಭೋ ನ ಯುಕ್ತ ಇತಿ ಸೂಚನಾಯ ತಸ್ಯ ಸಾರ್ಥಕ್ಯಾತ್ । ಇನ್ದ್ರೇಽಪಿ ಸ್ವಶರೀರಾವಸ್ಥಾನವಕ್ತೃತ್ವಪ್ರಜ್ಞಾತ್ಮತ್ವಾದೇಃ ಸಮ್ಭವಾದಾಯುರವಧಿತ್ವವಕ್ತೃತ್ವಯೋಶ್ಚ ವಾಯುಜೀವಯೋರೇವ ಸಮ್ಭವೇನ ಸದಾ ಸರ್ವಗತೇ ಇನ್ದ್ರಿಯಾದಿರಹಿತೇ ಚ ಬ್ರಹ್ಮಣಿ ಅಸಮ್ಭವೇನ ಚ ಬ್ರಹ್ಮಪಕ್ಷಪ್ರತಿಕೂಲತ್ವಾತ್ ।**

**ಕಿಞ್ಚಾಸ್ಮಾಕಂ ಮತ ಇವ ವಕ್ತುರಾತ್ಮೋಪದೇಶಸ್ಯ ಗತಿಮನುಕ್ತ್ವಾ ಪ್ರಕರಣಸ್ಯ ಬ್ರಹ್ಮಪರತ್ವೋಕ್ತಿರಯುಕ್ತಾ । ಉಕ್ತಞ್ಚ 'ಅನುಗಮಾತ್' ಇತ್ಯನೇನೈವ ಪ್ರಕರಣಸ್ಯ ಬ್ರಹ್ಮಪರತ್ವಮ್ ।**

ಅನುವಾದ - ಈ ವ್ಯಾಖ್ಯಾನವು ಸರಿಯಿಲ್ಲ. 'ಆತ್ಮೋಪದೇಶಾತ್' ಎಂಬುದರಿಂದಲೇ ಉಪದೇಷ್ಟೃತ್ವ ಎಂಬ ವಕ್ತೃತ್ವವು ಲಭಿಸುವಾಗ 'ವಕ್ತುಃ' ಎಂಬ ಪದವು ವ್ಯರ್ಥವಾಗುತ್ತದೆ. ಏಕೆಂದರೆ ಸ್ವಾತ್ಮೋಪದೇಶವು ವಕ್ತೃಪದವಿಲ್ಲದಿದ್ದರೂ ತಿಳಿಯುತ್ತದೆ.

ನಮ್ಮ ವಾಖ್ಯಾನದಲ್ಲಿ 'ವಕ್ತುಃ' ಎಂಬ ಪದಕ್ಕೆ ಬೃಹತೀಸಹಸ್ರವನ್ನು ಪಠಿಸುವಾಗ ಪಠಿಸುವ ವಿಶ್ವಾಮಿತ್ರ ಋಷಿಗೆ ಎಂದರ್ಥ. "ಇಂದ್ರನು ವಿಶ್ವಾಮಿತ್ರ ಋಷಿಗೆ ಸುಳ್ಳು ಹೇಳಿ ವಂಚನೆಯನ್ನು

---

**ಶ್ರೀಭಾಷ್ಯ - ನ ವಕ್ತುರಾತ್ಮೋಪದೇಶಾದಿತಿ ಚೇದಧ್ಯಾತ್ಮಸಮ್ಬನ್ಧಭೂಮಾ ಹ್ಯಸ್ಮಿನ್ ॥ ೩೦ ॥**

ಯದುಕ್ತಮ್ - ಇನ್ದ್ರಪ್ರಾಣಶಬ್ದನಿರ್ದಿಷ್ಟಸ್ಯ 'ಆನನ್ದೋऽಜರೋऽಮೃತಃ' (ಕೌ. ೩-೯) ಇತ್ಯನೇನೈಕಾರ್ಥ್ಯಾದಯಂ ಪರಂ ಬ್ರಹ್ಮೇತಿ ತಚ್ಚೋಪಪದ್ಯತೇ; 'ಮಾಮೇವ ವಿಜಾನೀಹಿ', 'ಪ್ರಾಣೋऽಸ್ಮಿ ಪ್ರಜ್ಞಾತ್ಮಾ ತಂ ಮಾಮಾಯುರಮೃತಮಿತ್ಯುಪಾಸ್ಸ್ವ' (ಕೌ. ೩-೧) ಇತಿ ವಕ್ತಾ ಹೀನ್ದ್ರಃ, 'ತ್ರಿಶೀರ್ಷಾಣಂ ತ್ವಾಷ್ಟ್ರಮಹನಮ್' ಇತ್ಯೇವಮಾದಿನಾ ತ್ವಾಷ್ಟ್ರವಧಾದಿಭಿಃ ಪ್ರಜ್ಞಾತಜೀವಭಾವಸ್ಯ ಸ್ವಾತ್ಮನ ಏವೋಪಾಸ್ಯತಾಂ ಪ್ರತರ್ದನಾಯೋಪದಿಶತಿ; ಅತ ಉಪಕ್ರಮೇ ಜೀವವಿಶೇಷ ಇತ್ಯವಗತೇ ಸತಿ 'ಆನನ್ದೋऽಜರೋऽಮೃತಃ' (ಕೌ. ೩-೯) ಇತ್ಯಾದಿಭಿರುಪಸಂಹಾರಸ್ತದನುಗುಣ ಏವ ವರ್ಣನೀಯ ಇತಿ ಚೇತ್-ಪರಿಹರತಿ-ಅಧ್ಯಾತ್ಮಸಮ್ಬನ್ಧಭೂತಾ ಹ್ಯಸ್ಮಿನ್ ।

ಆತ್ಮನಿ ಯಃ ಸಮ್ಬನ್ಧಃ ಸೋऽಧ್ಯಾತ್ಮಸಮ್ಬನ್ಧಃ । ತಸ್ಯ ಭೂಮಾ-ಭೂಯಸ್ತ್ವಮ್ । ಬಹುತ್ವಮಿತ್ಯರ್ಥಃ । ಆತ್ಮನ್ಯಾಧೇಯತಯಾ ಸಮ್ಬಧ್ಯಮಾನಾನಾಂ ಬಹುತ್ವೇನ ಸಮ್ಬನ್ಧಬಹುತ್ವಮ್ । ತಚ್ಚಾಸ್ಮಿನ್-ವಕ್ತರಿ ಪರಮಾತ್ಮನ್ಯೇವ ಹಿ ಸಮ್ಭವತಿ । 'ತದ್ಯಥಾ ರಥಸ್ಯಾರೇಷು ನೇಮಿರರ್ಪಿತಾ ನಾಭಾವರಾ ಅರ್ಪಿತಾಃ ಏವಮೇವೈತಾ ಭೂತಮಾತ್ರಾಃ ಪ್ರಜ್ಞಾಮಾತ್ರಸ್ವರ್ಪಿತಾಃ, ಪ್ರಜ್ಞಾಮಾತ್ರಾಃ ಪ್ರಾಣೇऽರ್ಪಿತಾಃ । ಸ ಏಷ ಪ್ರಾಣ ಏವ ಪ್ರಜ್ಞಾತ್ಮಾऽऽನನ್ದೋऽಜರೋऽಮೃತಾಃ' (ಕೌ. ೩-೯) ಇತಿ ಭೂತಮಾತ್ರಾಶಬ್ದೇನಾಚೇತನವಸ್ತುಜಾತಮಭಿಧಾಯ ಪ್ರಜ್ಞಾಮಾತ್ರಾಶಬ್ದೇನ ತದಾಧಾರತಯಾ ಚೇತನವರ್ಗಂ ಚಾಭಿಧಾಯ ತಸ್ಯಾಪ್ಯಧಾರತಯಾ ಪ್ರಕೃತಮಿನ್ದ್ರಪ್ರಾಣಶಬ್ದಾಭಿಧೇಯಂ ನಿರ್ದಿಶ್ಯ ತಮೇವ, 'ಆನನ್ದೋऽಜರೋऽಮೃತಃ' ಇತ್ಯುಪದಿಶತಿ । ತದೇತಚ್ಚೇತನಾಚೇತನಾತ್ಮಕಕೃತ್ಸ್ನವಸ್ತ್ವಾಧಾರತ್ವಂ ಜೀವಾದರ್ಥಾನ್ತರಭೂತೇऽಸ್ಮಿನ್ಪರಮಾತ್ಮನ್ಯೇವೋಪಪದ್ಯತೇ ಇತ್ಯರ್ಥಃ ॥

ಅಥವಾ, ಅಧ್ಯಾತ್ಮಸಮ್ಬನ್ಧಭೂಮಾ ಹ್ಯಸ್ಮಿನ್-ಪರಮಾತ್ಮಾಸಾಧಾರಣಧರ್ಮಸಮ್ಬನ್ಧೋऽಧ್ಯಾತ್ಮಸಮ್ಬನ್ಧಃ । ತಸ್ಯ ಭೂಮಾ ಬಹುತ್ವಂ ಹಿ ಅಸ್ಮಿನ್-ಪ್ರಕರಣೇ ವಿದ್ಯತೇ । ತಥಾ ಹಿ-ಪ್ರಥಮಮ್, 'ತ್ವಮೇವ ಮೇ ವರಂ ವೃಣೀಷ್ವ ಯಂ ತ್ವಂ ಮನುಷ್ಯಾಯ ಹಿತತಮಂ ಮನ್ಯಸೇ' (ಕೌ. ೩-೧) ಇತಿ, 'ಮಾಮುಪಾಸ್ಸ್ವ' (ಕೌ. ೩-೧) ಇತಿ ಚ ಪರಮಾತ್ಮಾಸಾಧಾರಣಮೋಕ್ಷಸಾಧನೋಪಾಸನಕರ್ಮತ್ವಂ ಪ್ರಾಣಶಬ್ದನಿರ್ದಿಷ್ಟಸ್ಯೇನ್ದ್ರಸ್ಯ ಪ್ರತೀಯತೇ । ತಥಾ, 'ಏಷ ಏವ ಸಾಧು ಕರ್ಮ ಕಾರಯತಿ ತಮ್, ಯಮೇಭ್ಯೋ ಲೋಕೇಭ್ಯ ಉನ್ನಿನೀಪತಿ । ಏಷ ಏವಾಸಾಧು ಕರ್ಮ ಕಾರಯತಿ ತಮ್, ಯಮಧೋ ನಿನೀಷತಿ' (ಕೌ. ೩-೯) ಇತಿ ಸರ್ವಸ್ಯ ಕರ್ಮಣಃ ಕಾರಯಿತೃತ್ವಂ ಚ ಪರಮಾತ್ಮಧರ್ಮಃ । ತಥಾ 'ತದ್ಯಥಾ ರಥಸ್ಯಾರೇಷು ನೇಮಿರರ್ಪಿತಾ ನಾಭಾವರಾ ಅರ್ಪಿತಾಃ, ಏವಮೇವೈತಾ ಭೂತಮಾತ್ರಾಃ ಪ್ರಜ್ಞಾಮಾತ್ರಾಸ್ವರ್ಪಿತಾಃ ಪ್ರಜ್ಞಾಮಾತ್ರಾಃ ಪ್ರಾಣೇऽರ್ಪಿತಾಃ' (ಕೌ. ೩-೯) ಇತಿ ಸರ್ವಾಧಾರತ್ವಂ ಚ ತಸ್ಯೈವ ಧರ್ಮಃ । ತಥಾ 'ಸ ಏಷ ಪ್ರಾಣ ಏವ ಪ್ರಜ್ಞಾತ್ಮಾऽऽನನ್ದೋऽಜರೋऽಮೃತಃ' ಇತ್ಯೇತೇऽಪಿ ಪರಮಾತ್ಮನ ಏವ ಧರ್ಮಾಃ । 'ಏಷ ಲೋಕಾಧಿಪತಿರೇಷ ಸರ್ವೇಶಃ' ಇತಿ ಚ ಪರಮಾತ್ಮನ್ಯೇವ ಸಮ್ಭವತಿ । ತದೇವಮಧ್ಯಾತ್ಮಸಮ್ಬನ್ಧಭೂಮ್ನೋऽತ್ರ ವಿದ್ಯಮಾನತ್ವಾತ್ ಪರಮಾತ್ಮೈವಾತ್ರೇನ್ದ್ರಪ್ರಾಣಶಬ್ದನಿರ್ದಿಷ್ಟಃ ॥ ೩೦ ॥

ಮಾಡಲಾರ'' ಎಂಬುದನ್ನು ತಿಳಿಸಲು 'ವಕ್ತುಃ' ಎಂಬ ಪದವು ಸಾರ್ಥಕವಾಗಿದೆ. ಆದರೆ ಅದ್ವೈತ ಸಿದ್ಧಾಂತದಲ್ಲಿ 'ವಕ್ತುಃ' ಎಂಬ ಪದಕ್ಕೆ ಇಂದ್ರನಿಗೆ ಎಂದು ಅರ್ಥ. ಆವಾಗ 'ಆತ್ಮೋಪದೇಶಾತ್' (ಇಂದ್ರನ ಉಪದೇಶದಿಂದ) ಎಂಬ ಪದದಿಂದಲೇ ಈ ಅರ್ಥವು ದೊರೆಯುವಾಗ 'ವಕ್ತುಃ' ಎಂಬ ಪದವು ವ್ಯರ್ಥವಲ್ಲವೆ?

ಅದ್ವೈತಿಗಳು ಮಾಡಿದ ಸಿದ್ಧಾಂತವೂ ಸರಿಯಿಲ್ಲ. 'ಸ್ವಶರೀರಾವಸ್ಥಾನ, ವಕ್ತೃತ್ವ ಮತ್ತು ಪ್ರಜ್ಞಾತೃತ್ವ' ಮೊದಲಾದ ಧರ್ಮಗಳು ಇಂದ್ರನಲ್ಲಿ ಉಪಪನ್ನವಾಗುತ್ತವೆ. ಆಯುರಾವಧಿತ್ವವು ಪ್ರಾಣನಲ್ಲಿ ಉಪಪನ್ನವಾಗಿದೆ. ಮತ್ತು ವಕ್ತೃತ್ವ ಧರ್ಮವು ಜೀವನಲ್ಲಿ ಉಪಪನ್ನವಾಗಿದೆ. ಆದರೆ ಈ ಯಾವುದೇ ಧರ್ಮಗಳು ಬ್ರಹ್ಮನಲ್ಲಿ ಸರ್ವಥಾ ಉಪಪನ್ನಗಳಾಗಲಾರವು. ಏಕೆಂದರೆ ನಿರಂತರವಾಗಿ ಬ್ರಹ್ಮನು ಸರ್ವಗತನಾಗಿರುವುದರಿಂದ ಶರೀರದಲ್ಲಿ ಮಾತ್ರ ಇದ್ದಾನೆಂದು ಹೇಳಲಾಗದು. ಮತ್ತು ಯಾವುದೇ ಇಂದ್ರಿಯಗಳಿಲ್ಲದ ಬ್ರಹ್ಮನಲ್ಲಿ ವಕ್ತೃತ್ವಾದಿಗಳನ್ನೂ ಸಹ ಹೇಳಲಾಗದು. ಆದ್ದರಿಂದ ನೀವು ಹೇಳಿದ ಸಿದ್ಧಾಂತ ಲಿಂಗಗಳೆಲ್ಲವೂ ಶುದ್ಧಬ್ರಹ್ಮನು ಪ್ರಾಣಶಬ್ದವಾಚ್ಯನೆನ್ನುವುದಕ್ಕೆ ಪ್ರತಿಕೂಲವೇ ಆಗಿವೆ ಹೊರತು ಅನುಕೂಲಗಳಾಗಿಲ್ಲ.

ಮತ್ತೊಂದು ದೋಷ - ನಮ್ಮ ಮತದಲ್ಲಿ ಬೃಹತೀಸಹಸ್ರದ ವಕ್ಯವಿಗೆ ಮಾಡಿದ ಆತ್ಮೋಪದೇಶಕ್ಕೆ ಗತಿಯನ್ನು ಮೊದಲು ನಿರೂಪಿಸಿ ಆನಂತರ ಪ್ರಕರಣಕ್ಕೆ ಬ್ರಹ್ಮಪರತ್ವವನ್ನು ನಿರೂಪಿಸಲಾಗಿದೆ. ಆದರೆ ನಿಮ್ಮ ಮತದಲ್ಲಿ ವಕ್ಯವಿನ ಆತ್ಮೋಪದೇಶಕ್ಕೆ ಗತಿಯನ್ನು ಹೇಳದೆ ಬ್ರಹ್ಮಪರತ್ವವನ್ನು ಹೇಳುತ್ತಿದ್ದೀರಿ. ಇದು ತಪ್ಪಾಗುತ್ತದೆ. 'ಅನುಗಮಾತ್' ಎಂಬುದರಿಂದ ಪ್ರಕರಣಕ್ಕೆ ಬ್ರಹ್ಮಪರತ್ವವನ್ನು ನೀವೇ ಸಮರ್ಥಿಸಿದ್ದೀರಿ.

ಕಠಿಣ ಪದಾರ್ಥ -

ತಸ್ಯ = ವಕ್ತುಃ ಎಂಬ ಪದಕ್ಕೆ, ವಾಯು = ವಾಯು ಅಥವಾ ಮುಖ್ಯಪ್ರಾಣ ಎಂಬ ಶಬ್ದಗಳಿಂದ ಪ್ರತಿಪಾದ್ಯವಾದ ಪ್ರಾಣಾಪಾನಾದಿ ಪಂಚ ವೃತ್ತಿಗಳು, ಸರ್ವಗತೇ = ಎಲ್ಲ ದೇಶಗಳಲ್ಲಿರುವ, ಉಕ್ತಂಚ = ಪ್ರಥಮ ಸೂತ್ರದಲ್ಲಿ ಹೇಳಿದ್ದಾರೆ, ಗತಿಂ = ನಿಜವಾದ ಅರ್ಥವನ್ನು.

**ಪ್ರಕಾಶಃ** – ननु 'आत्मोपदेशात्' इत्यनेन स्वोपदेशलाभात्तदर्थं 'वक्तुः' इत्येतदित्यत आह – **स्वात्मेति** ॥ भवतामप्ययं दोष इत्यत आह – **अस्मदिति** ॥ न त्वन्मत इव मन्मते 'वक्तुः' इत्यनेनेन्द्रो गृह्यते, किन्तु विश्वामित्रः । तथाऽपि तङ्चर्थमिति चेन्न, पूर्वपक्षदार्ढ्यार्थत्वादिति भावः ।

ವಿವರಣೆ - ಸೂತ್ರದಲ್ಲಿರುವ 'ಆತ್ಮೋಪದೇಶಾತ್' ಎಂಬ ಪದಕ್ಕೆ 'ಸ್ವಾತ್ಮೋಪದೇಶಾತ್' ಎಂಬ ಅರ್ಥವನ್ನು ತಿಳಿಯಲು ವಕ್ಯಪದವು ಬೇಕು. ಇಲ್ಲದಿದ್ದಲ್ಲಿ ಆತ್ಮ ಶಬ್ದಕ್ಕೆ ಪರಮಾತ್ಮ ಎಂದೂ ಸಹ ಅರ್ಥವಾಗಬಹುದಲ್ಲವೆ? ಎಂಬ ಪ್ರಶ್ನೆಗೆ 'ಸ್ವಾತ್ಮೋಪದೇಶಾತ್' ಎಂಬ ವಾಕ್ಯದಿಂದ ಉತ್ತರಿಸುತ್ತಿದ್ದಾರೆ.

ವಕ್ತೃಪದವಿದ್ದಲ್ಲಿ ಮಾತ್ರ ಸ್ವಾತ್ಮೋಪದೇಶವೆಂದೇನೂ ತಿಳಿಯಬೇಕಾಗಿಲ್ಲ. ವಕ್ತೃವು ಆತ್ಮನ ಬಗ್ಗೆ ಉಪದೇಶ ಮಾಡಿದ್ದಾನೆಂಬ ಅರ್ಥವನ್ನೂ ಸಹ ಇದರಿಂದ ತಿಳಿಯಬಹುದು. ಆದ್ದರಿಂದ ವಕ್ತೃ ಪದವು ಬೇಕಾಗಿಲ್ಲ.

ಈ ದೋಷವು ದ್ವೈತಿಗಳಿಗೂ ಬರುತ್ತದಲ್ಲವೆ? ಎಂಬ ಪ್ರಶ್ನೆಗೆ 'ಅಸ್ಮತ್‌ಪಕ್ಷೇ' ಎಂಬ ವಾಕ್ಯದಿಂದ ಉತ್ತರಿಸುತ್ತಿದ್ದಾರೆ. ನಮ್ಮ ಮತದಲ್ಲಿ ನಿಮ್ಮಂತೆ 'ವಕ್ತುಃ' ಎಂಬ ಪದಕ್ಕೆ ಇಂದ್ರನೆಂಬರ್ಥವನ್ನು ಮಾಡಿರುವುದಿಲ್ಲ. ಹೊರತಾಗಿ, 'ಬೃಹತೀಸಹಸ್ರವನ್ನು ಪಠಿಸುವ ವಿಶ್ವಾಮಿತ್ರ ಋಷಿಗೆ' ಎಂದರ್ಥ. ಇಷ್ಟಾದರೂ ವಕ್ತೃಪದವನ್ನು ವ್ಯರ್ಥವೆಂದು ಹೇಳಬಾರದು. ಪೂರ್ವಪಕ್ಷದ ದಾರ್ಢ್ಯಕ್ಕೋಸ್ಕರ ಸಾರ್ಥಕವಾಗಿದೆ.

**ಪ್ರಕಾಶಃ – ಸಿದ್ಧಾನ್ತಾಂಶಾರ್ಥೆ ನಿರಸ್ಯತಿ – ಇನ್ದ್ರ ಇತಿ ॥ ನ ಕೇವಲಮನ್ಯಥಾಸಿದ್ಧತ್ವಂ ಹೇತೂನಾಮಸಿದ್ಧಿಶ್ಚೇತ್ಯಾಹ – ಆಯುರಿತಿ ॥ ವಾವ್ವಿತಿ ॥ ವಾಯುಮುಖ್ಯಪ್ರಾಣಶಬ್ದಿತಪಞ್ಚವೃತ್ತಿ-ರೂಪವಾವ್ವಿತ್ಯರ್ಥಃ। ಸರ್ವಗತತ್ವಾನ್ನಾವಧಿತ್ವಂ, ಕರಣಶೂನ್ಯತ್ವಾನ್ನ ವಕ್ತೃತ್ವಮಿತ್ಯರ್ಥಃ ॥**

**ಗತಿಮನುಕ್ತ್ವೇತಿ ॥ ಬ್ರಹ್ಮಪರತ್ವೇ ಸ್ವಾತ್ಮೋಪದೇಶರೂಪಬಾಧಕೇ ಶಙ್ಕಿತೇ ಮನ್ಮತ ಇವಾನ್ತರ್ಯಾಮ್ಯಾದಿವಿವಕ್ಷಯಾ ತದುಕ್ತಿರಿತಿ ಗತ್ಯುಕ್ತ್ಯಾ ಬಾಧಕಮಪರಿಹೃತ್ಯ ಪ್ರಕರಣಸ್ಯ ಬ್ರಹ್ಮಪರತ್ವೋಕ್ತಿರಯುಕ್ತೇತ್ಯರ್ಥಃ । ಅಯಂ ಚ ದೋಷಸ್ತವಾಪಿ ತುಲ್ಯ ಇತಿ ಶಙ್ಕಾನಿರಾಸಾಯ ವಾ, ಗತ್ಯುಕ್ತಿಪರತ್ವಮಸ್ಯ ಯುಜ್ಯತ ಇತ್ಯಗತ್ಯೈವಮಾಶ್ರಿತಮಿತ್ಯಾಶಙ್ಕಾನಿರಾಸಾಯ ವೋಕ್ತಂ – ಅಸ್ಮನ್ಮತ ಇವೇತಿ ।**

ಅದ್ವೈತಿಗಳ ಸಿದ್ಧಾಂತವನ್ನು 'ಇಂದ್ರೇತಿ' ಎಂಬ ವಾಕ್ಯದಿಂದ ನಿರಾಕರಿಸುತ್ತಿದ್ದಾರೆ. ಶರೀರಾವಸ್ಥಾನ, ವಕ್ತೃತ್ವ, ಮೊದಲಾದ ಧರ್ಮಗಳು ಬ್ರಹ್ಮನನ್ನು ಬಿಟ್ಟು ಬೇರೆಡೆ ಪ್ರಸಿದ್ಧವಾಗಿವೆಯೆಂದು 'ಬ್ರಹ್ಮತ್ವಂ ಅನ್ಯಾಥಾಪಿ ಸಿದ್ಧವಾಗುತ್ತದೆ' ಎಂಬುದಾಗಿ ಸಿದ್ಧಾಂತ ಹೇತುಗಳಿಗೆ ಅನ್ಯಥಾಸಿದ್ಧಿ ದೋಷವನ್ನು ಹೇಳಿದರು. ಈಗ ಆಸಿದ್ಧಿದೋಷವನ್ನು 'ಆಯುರವಧಿತ್ವ' ಇತ್ಯಾದಿ ವಾಕ್ಯದಿಂದ ಹೇಳುತ್ತಿದ್ದಾರೆ.

'ಗತಿಮನುಕ್ತ್ವಾ,' ಎಂಬ ಗ್ರಂಥಕ್ಕೆ ಹೀಗರ್ಥ - ಪ್ರಾಣ ಪದವು ಬ್ರಹ್ಮಪರವಾದಲ್ಲಿ ಇಂದ್ರನ ಸ್ವಾತ್ಮೋ-ಪದೇಶವು ತಪ್ಪಾಗುತ್ತದಲ್ಲವೆ? ಎಂದು ಶಂಕಿಸಿದರೆ ಇಂದ್ರನು ಅಂತರ್ಯಾಮಿಯಾದ ಪರಮಾತ್ಮನನ್ನು ವಿವಕ್ಷಿಸಿ ತನ್ನನ್ನು ಪ್ರಾಣನೆಂದು ಉಪದೇಶಿಸಿಕೊಂಡಿದ್ದಾನೆಂಬುದಾಗಿ ನಾವು ಉತ್ತರಿಸುತ್ತೇವೆ. ಅಂದರೆ ಸ್ವಾತ್ಮೋಪದೇಶಕ್ಕೆ ಬಂದಿರುವಂತಹ ಬಾಧಕವನ್ನು ಮೊದಲು ಪರಿಹರಿಸಿ. ಆನಂತರ ಪ್ರಕರಣಕ್ಕೆ ಬ್ರಹ್ಮಪರತ್ವವನ್ನು ಸಾಧಿಸುವುದು ನ್ಯಾಯ. ಆದರೆ ಅದ್ವೈತಿಗಳು ಸ್ವಾತ್ಮೋಪದೇಶಕ್ಕೆ ಬಂದಿರುವ ಬಾಧಕ-ವನ್ನು ಪರಿಹರಿಸದೇ ಪ್ರಕರಣಕ್ಕೆ ಬ್ರಹ್ಮಪರತ್ವವನ್ನು ಸಮರ್ಥಿಸಲು ಹೊರಟಿದ್ದಾರೆ. ಇದು ತಪ್ಪಾಗುತ್ತದೆ. ತಪ್ಪಾಗುತ್ತದೆ.

ಅಥವಾ ನಮಗೆ ಹೇಳಿದ ದೋಷ ಅದ್ವೈತಿಗಳಿಗೂ ಬರುತ್ತದಲ್ಲವೆ? ಎಂಬ ಶಂಕೆಯನ್ನು ಪರಿಹರಿಸುವುದಕ್ಕಾಗಿ 'ಅಸ್ಮನ್‌ಮತೇ ಏವ' ಎಂದು ಹೇಳಿದ್ದಾರೆ.

**प्रकाशः** – नन्वेवं बाधके शङ्किते स्वपक्षहेतुं प्रथममुक्त्वा 'शास्त्रदृष्ट्या' इत्यनेन तत्परिहारः क्रियते । अतो न दोष इत्यत आह – **उक्तश्चेति** ॥ तथा च इहैव बाधकपरिहारः कर्तव्य इति भावः ।

एतेनास्यापि स्वपक्षहेतुपरत्वे आद्यस्य वैयर्थ्यमित्युक्तं भवति । नच तत्र हिततमत्वाजरत्वादिकमेव विवक्षितमिह पुनरायुरवधित्वादिकमतो न दोष इति वाच्यं, निरसिष्यमाणत्वादिति भावः ।

ಹೀಗೆ ಬಾಧಕವನ್ನು ಶಂಕಿಸಿದಾಗ ಸ್ವಪಕ್ಷಹೇತುವನ್ನು ಮೊದಲು ಹೇಳಿ ಆನಂತರ ಬಾಧಕವನ್ನು ಪರಿಹರಿಸುತ್ತೇವೆ. ಆದ್ದರಿಂದ 'ಶಾಸ್ತ್ರದೃಷ್ಟ್ಯಾ' ಎಂಬ ಮುಂದಿನ ಸೂತ್ರದಿಂದ ಸ್ವಾತ್ಮೋಪದೇಶಕ್ಕೆ ಬಂದಿರುವಂತಹ ಬಾಧಕವನ್ನೇ ಪರಿಹರಿಸಿಲ್ಲವೆಂಬ ಶಂಕೆಗೆ ಅವಕಾಶವಿಲ್ಲವೆಂದು ಅದ್ವೈತಿಗಳು ಸಮಾಧಾನ ನೀಡಿದರೆ 'ಉಕ್ತಂಚ' ಎಂಬ ವಾಕ್ಯದಿಂದ ನಿರಾಕರಿಸುತ್ತಿದ್ದಾರೆ. 'ಪ್ರಾಣಸ್ತಥಾನುಗಮಾತ್' ಎಂಬ ಪ್ರಥಮ-ಸೂತ್ರದಲ್ಲಿಯೇ 'ಅನುಗಮಾತ್' ಎಂಬುದಾಗಿ ಮೊದಲೇ ಬ್ರಹ್ಮಪರತ್ವವನ್ನು ಸಮರ್ಥಿಸಿದ್ದರಿಂದ ಇಲ್ಲಿಯೇ ಬಾಧಕವನ್ನು ಪರಿಹರಿಸಬೇಕೆಂದು ಅಭಿಪ್ರಾಯ.

ಹೀಗೆ ಹೇಳಿದ್ದರಿಂದ ಮತ್ತೊಂದು ದೋಷವನ್ನು ತೋರಿಸಿದಂತಾಯಿತು. ಮೊದಲನೆಯ ಸೂತ್ರದಂತೆ ಎರಡನೆಯ ಸೂತ್ರವೂ ಸಹ ಸ್ವಪಕ್ಷಹೇತುವನ್ನೇ ಸಾಧಿಸಲು ಹೊರಟರೆ ಮೊದಲನೇ ಸೂತ್ರವು ವ್ಯರ್ಥವಾಗುತ್ತದೆ. ಇನ್ನು ''ಹಿತತಮತ್ವ, ಅಜರತ್ವ ಮೊದಲಾದ ಬ್ರಹ್ಮನ ಧರ್ಮಗಳನ್ನು ಸಾಧಿಸುವುದಕ್ಕಾಗಿ ಪ್ರಥಮ ಸೂತ್ರವು ಸಾರ್ಥಕ. 'ಆಯುರವಧಿತ್ವ' ಮೊದಲಾದವುಗಳನ್ನು ಬ್ರಹ್ಮನ ಧರ್ಮವೆಂದು ಸಾಧಿಸಲು ಎರಡನೆಯ ಸೂತ್ರವು ಸಾರ್ಥಕವೆಂದು ಅದ್ವೈತಿಗಳು ಉತ್ತರಿಸಬಹುದು''. ಅದ್ವೈತಿಗಳ ಈ ಧೋರಣೆಯನ್ನು ಈ ಮುಂದೆ ನಿರಾಕರಿಸುವವರಿದ್ದೇವೆ.

**गुरुराजीयम्** – नन्वेवं भवत्पक्षेप्युपदेशादित्यनेनैवोपदेशृत्वरूपवक्तृत्व-लाभाद्वक्तुरित्यस्य वैयर्थ्यं स्यादित्यतः स्यादेवं यद्यस्माभिर्वक्तुरिन्द्रस्येति व्याख्यायते नैवमित्याह – **अस्मत्पक्षे चेति** ॥ **सदा सर्वगत इति** ॥ अत्र ब्रह्मणि सदा सर्वगतत्वादायुरवधित्वस्यासम्भवः । इन्द्रियरहितत्वाद्वक्तृत्वस्यासम्भव इति सम्बन्धो बोध्यः ॥

## ಸಾರ

ಅದ್ವೈತಿಗಳಿಗೆ ಎರಡನೆಯ ಸೂತ್ರದಲ್ಲಿ 'ವಕ್ತುಃ' ಎಂಬ ಪದದ ಸಾರ್ಥಕ್ಯವನ್ನು ಸಮರ್ಥಿಸಲಾಗದು. ಸೂತ್ರದಲ್ಲಿರುವ 'ಆತ್ಮೋಪದೇಶಾತ್' ಎಂಬ ಪದಕ್ಕೆ ವಕ್ತೃವು ಆತ್ಮನ ಬಗ್ಗೆ ಉಪದೇಶ ಮಾಡುತ್ತಿದ್ದಾನೆಂಬ ಅರ್ಥವು ಸುಲಭವಾಗಿ ತಿಳಿಯುತ್ತದೆ. ಪುನಃ ಪ್ರತ್ಯೇಕವಾಗಿ ವಕ್ತುಃ ಎಂದು ಹೇಳಬೇಕಾಗಿಲ್ಲ. 'ಆತ್ಮೋಪದೇಶ' ಪದಕ್ಕೆ

ಸ್ವಾತ್ಮೋಪದೇಶ ಎಂಬರ್ಥವನ್ನು ಮಾಡಲು ವಕ್ತೃಪದವು ಬೇಕಾಗುತ್ತದೆಂದು ಅದ್ವೈತಿಗಳು ಹೇಳಿಕೊಳ್ಳಬಹುದು. ಆದರೆ ವಕ್ತೃ ಪದವಿಲ್ಲದಿದ್ದರೂ ಈ ಅರ್ಥ ತಿಳಿಯುವಾಗ 'ವಕ್ತೃ' ಪದವು ಏಕೆಂದು ಯಾರಿಗೂ ಮನವರಿಕೆಯಾಗುವುದಿಲ್ಲ.

ನಮ್ಮಲ್ಲಿ ಈ ದೋಷವಿಲ್ಲ. 'ವಕ್ತುಃ' ಎಂಬ ಪದವೇ ಬೇರೆ ವ್ಯಕ್ತಿಯನ್ನು ಹೇಳುತ್ತಿದೆ. 'ಆತ್ಮೋಪದೇಶ' ಎಂಬ ಪದವೇ ಬೇರೆ ವ್ಯಕ್ತಿಯನ್ನು ಹೇಳುತ್ತಿದೆ. ಬ್ರಹತೀಸಹಸ್ರವನ್ನು ಪಠಿಸುವ ವಿಶ್ವಾಮಿತ್ರನಿಗೆ ಎಂಬರ್ಥವನ್ನು ಹೇಳಲು ವಕ್ತೃಪದವು ಬೇಕಾಗುತ್ತದೆ. ಈ ಪದದ ಅಂತರಂಗದಲ್ಲಿ ಇಂದ್ರನು ವಿಶ್ವಾಮಿತ್ರನಿಗೆ ಸುಳ್ಳು ಹೇಳಲಾರ ಎಂಬ ಅರ್ಥವು ಗರ್ಭಿತವಾಗಿದೆ. ಆದ್ದರಿಂದ 'ವಕ್ತುಃ' ಎಂಬ ಪದವು ಅತ್ಯಂತ ಅನಿವಾರ್ಯ.

* * * *

## ಅದ್ವೈತಿಗಳ ದ್ವಿತೀಯ ಸೂತ್ರ ವ್ಯಾಖ್ಯಾನ ನಿರಾಕರಣೆ

ತಾತ್ಪರ್ಯಚಂದ್ರಿಕಾ

**केचित्तु – परमात्मासाधारणधर्मः अध्यात्मशब्दार्थः । तत्सम्बन्धबहुत्वं अध्यात्मसम्बन्धभूमेत्याहुः ।**

**तन्न, उक्तदोषत्वात् । सम्बन्धपदवैयर्थ्याच्च । अन्यथा ''अन्तस्तद्धर्म'' इत्यादावपि सम्बन्धपदप्रसङ्गात् । 'अस्मिन्' इति सप्तम्यैव सम्बन्धोक्तेश्च ।**

**किञ्चेह भूमपदप्रयोगाद्धिततमत्वादिवदानन्दाजरत्वादीनां सर्वेषां ब्रह्मधर्माणामत्रैव विवक्षासम्भवेन 'अनुगमात्' इति व्यर्थम् ।**

ಅನುವಾದ - 'ನ ವಕ್ತುಃ' ಎಂಬ ಸೂತ್ರಕ್ಕೆ ರಾಮಾನುಜರು ಹೀಗೆ ವ್ಯಾಖ್ಯಾನಿಸುತ್ತಾರೆ - ಪರಮಾತ್ಮನಲ್ಲಿ ಅಸಾಧಾರಣವಾದ ಅನೇಕ ಧರ್ಮಗಳನ್ನು ಈ ಪ್ರಕರಣದಲ್ಲಿ ಹೇಳಲಾಗಿದೆ. ಆ ಧರ್ಮಗಳ ಸಂಬಂಧವು ಬ್ರಹ್ಮನಲ್ಲಿರುವುದರಿಂದ ಬ್ರಹ್ಮನೇ ಪ್ರಾಣಶಬ್ದವಾಚ್ಯನು. ಹೀಗೆ ಪರಮಾತ್ಮನ ಅಸಾಧಾರಣ ಧರ್ಮವನ್ನು ಸೂತ್ರದಲ್ಲಿರುವ ಅಧ್ಯಾತ್ಮಶಬ್ದ ತಿಳಿಸುತ್ತಿದೆ ಎಂದು.

ಇದು ತಪ್ಪು. ಬಾಧಕವನ್ನು ಪರಿಹರಿಸದೆ ಬ್ರಹ್ಮಧರ್ಮಗಳ ಬಾಹುಲ್ಯವನ್ನು ಹೇಳುವಂಥದ್ದು ತಪ್ಪಾಗುತ್ತದೆಂದು ಹೇಳುವ ಹಿಂದಿನ ದೋಷ ಇವರಿಗೂ ತಪ್ಪಿದಲ್ಲ. ಸಂಬಂಧ ಪದಕ್ಕೆ ಅರ್ಥವೇ ಇಲ್ಲ. ಧರ್ಮಗಳ ಸಂಬಂಧವನ್ನು ಬ್ರಹ್ಮನಲ್ಲಿ ಹೇಳುವುದಕ್ಕಾಗಿಯೇ ಸಂಬಂಧಪದವು ಸಾರ್ಥಕವೆಂದು ಹೇಳಿದರೆ 'ಅಂತಸ್ತದ್ಧರ್ಮ' ಇತ್ಯಾದಿ ಸೂತ್ರಗಳಲ್ಲಿಯೂ ಸಂಬಂಧಪದವನ್ನು ಹೇಳಬೇಕಾಗುವ ಪ್ರಸಂಗ ಬರುತ್ತದೆ. ಅಷ್ಟೇ ಅಲ್ಲದೆ 'ಅಸ್ಮಿನ್' ಎಂಬುದಾಗಿ ಸಪ್ತಮೀವಿಭಕ್ತಿಯಿಂದಲೇ ಸಂಬಂಧವು ತಿಳಿಯುತ್ತಿರುವಾಗ ಪುನಃ ಸಂಬಂಧಪದವು ವ್ಯರ್ಥವಲ್ಲವೇ?

ಮತ್ತೊಂದು ದೋಷ - ಈ ಸೂತ್ರದಲ್ಲಿ ''ಭೂಮಾ'' ಎಂಬ ಪದವನ್ನು ಪ್ರಯೋಗಿಸಿದ್ದರಿಂದ ಹಿತತಮತ್ವಾದಿ ಲಿಂಗಗಳನ್ನು ವಿವಕ್ಷಿಸುವಂತೆ ಆನಂದ, ಆಜರತ್ವ ಮೊದಲಾದ ಬ್ರಹ್ಮನ ಧರ್ಮಗಳನ್ನು ಇಲ್ಲಿಯೇ ವಿವಕ್ಷಿಸಲು ಬರುವಾಗ 'ಅನುಗಮಾತ್' ಎಂಬ ಪದವು ವ್ಯರ್ಥವಾಗುತ್ತದೆ.

ಕಠಿಣಪದಾರ್ಥ :

ತತ್ಸಂಬಂಧ ಬಹುತ್ವಂ = ಬ್ರಹ್ಮನಲ್ಲಿ ಅನೇಕ ಧರ್ಮಗಳ ಸಂಬಂಧವನ್ನು,
ಉಕ್ತದೋಷತ್ವಾತ್ = ಬಾಧಕವನ್ನು ಪರಿಹರಿಸದೇ ಸಾಧಕವನ್ನು ಹೇಳುವುದು ತಪ್ಪು
ಎಂಬ ಹಿಂದಿನ ದೋಷವನ್ನು, ಅನ್ಯಥಾ = ಸಂಬಂಧಪದವು ಬೇಕೆಂದು ಹೇಳಿದರೆ,
ಅತ್ಯೈವ = ದ್ವಿತೀಯ ಸೂತ್ರದಲ್ಲಿಯೇ.

**ಪ್ರಕಾಶಃ – केचित्त्विति ॥** ''मामेव विजानीहि'' ''मामुपास्स्व'' इत्यादि वक्तुः त्वाष्ट्रवधादिना प्रज्ञातजीवभावस्येन्द्रस्योपास्यत्वेनाऽऽत्मन एव उपदेशादिप्रक्रमस्य जीवविषयत्वे ''आनन्दोऽजरः'' इत्याद्युपसंहारस्तदनुगुण एव नेय इति चेत्,

अस्मिन् प्रकरणे हिततमत्वसाध्वसाधुकर्मकारयितृत्वादीनां अध्यात्मशब्दितानां परमात्मासाधारणधर्माणां सम्बन्धबाहुल्यमस्तीत्यर्थ इत्याहुरित्यर्थः ॥

**उक्तेति ॥** उक्तं बाधकमपरिहृत्य ब्रह्मधर्मबाहुल्योक्तिरयुक्ता । नच स्वपक्षहेतुं पूर्वमुक्त्वा पश्चाद्बाधकं शास्त्रसूत्रेण निरसिष्यते । उक्तं च श्रुतप्रकाशे – 'पूर्वं परमात्मपरत्वसाधकहेतुरुक्तः। पूर्वपक्षयुक्तेः कः परिहार इत्यतः शास्त्रसूत्रं' इतीति वाच्यं, 'अनुगमात्' इत्यनेनैव स्वपक्षहेतोरुक्तत्वात् । अत्र विशेषस्तु 'किञ्चेह' इत्यत्र निरसिष्यत इति प्रागुक्तदोषग्रस्तत्वादित्यर्थः॥

ವಿವರಣೆ - ರಾಮಾನುಜರ ಸೂತ್ರವ್ಯಾಖ್ಯಾನದ ವಿವರಣೆ ಹೀಗಿದೆ -

'ಮಾಮೇವ ವಿಜಾನೀಹಿ' 'ಮಾ ಉಪಾಸ್ವ' ಇತ್ಯಾದಿಯಾಗಿ ಹೇಳುತ್ತಿರುವವನು ಇಂದ್ರನೇ ಆಗಿದ್ದಾನೆ. ತ್ವಾಷ್ಟ್ರವಧ ಮೊದಲಾದ ಲಿಂಗಗಳು ಇದಕ್ಕೆ ಉಪಪಾದಕಗಳಾಗಿವೆ. ಆದ್ದರಿಂದ ಇಂದ್ರನೇ ತನ್ನ ಬಗ್ಗೆ ಉಪದೇಶಿಸುತ್ತಿದ್ದಾನೆಂದು ಪ್ರಕರಣವು ಜೀವವಿಷಯಕವಾಗಿ ಆರಂಭವಾಗಿದೆ. ಈ ಉಪಕ್ರಮಕ್ಕೆ ಅನುಗುಣವಾಗಿ ''ಆನಂದೋऽಜರಃ'' ಇತ್ಯಾದಿಯಾಗಿ ಉಪಸಂಹಾರ ವಾಕ್ಯವನ್ನು ಅರ್ಥೈಸಬೇಕು. ಆದ್ದರಿಂದ ದೇವೇಂದ್ರನೇ ಪ್ರಾಣಶಬ್ದವಾಚ್ಯನೆಂದು ಪೂರ್ವಪಕ್ಷ.

ಈ ಪ್ರಕರಣದಲ್ಲಿ ಹಿತತಮತ್ವ ಸಾಧ್ವಸಾಧುಕರ್ಮ ಕಾರಯಿತೃತ್ವ ಮೊದಲಾದವು ಅಧ್ಯಾತ್ಮಶಬ್ದದಿಂದ ಪ್ರತಿಪಾದ್ಯವಾಗುತ್ತವೆ. ಹೀಗೆ ಪರಮಾತ್ಮನ ಅನೇಕ ಅಸಾಧಾರಣ ಧರ್ಮಗಳು ಕೇಳಿಸುತ್ತಿವೆ. ಆದ್ದರಿಂದ ಪರಮಾತ್ಮನೇ ಪ್ರಾಣಶಬ್ದವಾಚ್ಯನೆಂದು ಸಿದ್ಧಾಂತ.

ರಾಮಾನುಜರ ಈ ವ್ಯಾಖ್ಯಾನವು ಸಮಂಜಸವಲ್ಲ. ''ಆತ್ಮೋಪದೇಶದ ವಿಷಯದಲ್ಲಿ ಪ್ರಾಪ್ತವಾದ ಬಾಧಕವನ್ನು ಪರಿಹರಿಸದೆ ಅನೇಕ ಬ್ರಹ್ಮಧರ್ಮಗಳನ್ನು ಉಪಪಾದಿಸುವುದರಿಂದ ಏನೂ ಪ್ರಯೋಜನವಿಲ್ಲ.'' ಅದ್ವೈತಿಗಳಿಗೆ ಹೇಳಿದ ದೋಷವನ್ನು ರಾಮಾನುಜರಿಂದಲೂ ತಪ್ಪಿಸಿಕೊಳ್ಳಲಾಗದು.

ಆಕ್ಷೇಪ - ಸ್ವಪಕ್ಷಸಾಧಕವಾದ ಹೇತುವನ್ನು ಮೊದಲು ಈ ಸೂತ್ರದಿಂದ ಸಾಧಿಸಿ, ಆನಂತರ ಮುಂದಿನ 'ಶಾಸ್ತ್ರದೃಷ್ಟ್ಯಾ' ಎಂಬ ಸೂತ್ರದಿಂದ ಬಾಧಕವನ್ನು ಪರಿಹರಿಸುತ್ತೇವೆ. ಶ್ರುತ ಪ್ರಕಾಶವು ಈ ವಾದವನ್ನು ಸಮರ್ಥಿಸುತ್ತದೆ - ''ಪೂರ್ವಂ ಪರಮಾತ್ಮಪರತ್ವಸಾಧಕಹೇತುರುಕ್ತಃ । ಪೂರ್ವಪಕ್ಷಯುಕ್ತೇಃ ಕಃ ಪರಿಹಾರ ಇತ್ಯತಃ ಶಾಸ್ತ್ರಸೂತ್ರಂ ಇತಿ'' ''ಮೊದಲು ಪರಮಾತ್ಮಪರತ್ವಕ್ಕೆ ಸಾಧಕವಾದ ಹೇತು ಹೇಳಲ್ಪಟ್ಟಿದೆ. ಹಾಗಾದರೆ ಪೂರ್ವಪಕ್ಷದ ಯುಕ್ತಿಗೆ ಏನು ಪರಿಹಾರ ? ಎಂಬ ಪ್ರಶ್ನೆಗೆ ಶಾಸ್ತ್ರ, ಸೂತ್ರವು ಹೊರಟಿದೆ'' ಎಂದು. ಆದ್ದರಿಂದ ಸ್ವಾತ್ಮೋಪದೇಶ ವಿಷಯದಲ್ಲಿ ಪ್ರಾಪ್ತವಾದ ಬಾಧಕವನ್ನು ಪರಿಹರಿಸಿಲ್ಲವೆಂಬ ಶಂಕೆಗೆ ಅವಕಾಶವಿಲ್ಲ.

ಸಮಾಧಾನ - ಹಾಗಾದರೆ ಪ್ರಥಮಸೂತ್ರವು ಅದ್ವೈತಿಗಳಂತೆ ನಿಮ್ಮ ಪಕ್ಷದಲ್ಲಿಯೂ ವ್ಯರ್ಥ. ಏಕೆಂದರೆ 'ಅನುಗಮಾತ್' ಎಂಬುದಾಗಿ ಸ್ವಪಕ್ಷಸಾಧಕಹೇತುವನ್ನು ಹೇಳಿದ್ದೀರಿ. ಈ ಸೂತ್ರದಲ್ಲಿಯೇ ಸ್ವಪಕ್ಷಸಾಧಕ ಹೇತುವನ್ನು ಹೇಳುವುದಾದರೆ ಪ್ರಾಣಸ್ತಥಾನುಮಾತ್ ಎಂಬ ಸೂತ್ರವೇ ವ್ಯರ್ಥವಾಗುತ್ತದೆ.

**ಪ್ರಕಾಶಃ – ಸಮ್ಬನ್ಧೇತಿ ॥ 'ಅಧ್ಯಾತ್ಮಭೂಮಾ' ಇತ್ಯನೇನೈವ ಪೂರ್ಣತ್ವಾದಿತಿ ಭಾವಃ । ನನ್ವಸಿದ್ಧಿಪರಿಹಾರಾಯ ಸಮ್ಬನ್ಧಪದಮಿತ್ಯತ ಆಹ – ಅಸ್ಮಿನ್ನಿತಿ ॥ ಆಧಾರಾಧೇಯಭಾವಸ್ಯ ಸಮ್ಬನ್ಧಸ್ಯಾರ್ಥತ್ವಾದಿತಿ ಭಾವಃ । ಸ್ವಪಕ್ಷಹೇತ್ವಪರತ್ವೇ ದೋಷಾನ್ತರಮಾಹ – ಕಿಞ್ಚೇತಿ ॥ ಭೂಮಪದಪ್ರಯೋಗಾದಿತಿ ॥**

ಅಧ್ಯಾತ್ಮಭೂಮಾ ಎಂದಷ್ಟೇ ಸೂತ್ರದಿಂದ ನಿಮ್ಮ ಅಭಿಪ್ರಾಯವು ಪೂರ್ಣವಾಗುವಾಗ ಸಂಬಂಧಪದವು ವ್ಯರ್ಥ.

ಆಕ್ಷೇಪ - ಅಸಿದ್ಧಿಪರಿಹಾರಕ್ಕೋಸ್ಕರ ಹಿತತಮತ್ವಾದಿಧರ್ಮಗಳು ಬ್ರಹ್ಮನಲ್ಲಿ ಅಸಿದ್ಧವಾಗಿವೆಯೆಂಬ ಹೇತುಸಿದ್ಧಿಶಂಕೆಯು ಬರುತ್ತದೆ. ಅದನ್ನು ಪರಿಹಾರ ಮಾಡುವುದಕ್ಕಾಗಿ ಸಂಬಧಪದವನ್ನು ಸೂತ್ರವು ಹೇಳುತ್ತಿದೆ. ಹಿತತಮತ್ವಾದಿಧರ್ಮಗಳ ಸಂಬಂಧ ಬ್ರಹ್ಮನಲ್ಲಿರುವುದರಿಂದ ಅಸಿದ್ಧಿಯು ಬರುವುದಿಲ್ಲ.

ಸಮಾಧಾನ - ಹಾಗಾದಲ್ಲಿ 'ಅಂತಸ್ತದ್ಧರ್ಮೋಪದೇಶಾತ್' ಎಂಬಲ್ಲಿ ಹೇಳಿದ ಧರ್ಮಗಳು ಬ್ರಹ್ಮನಲ್ಲಿ ಅಸಿದ್ಧವಾಗಿವೆಯೆಂಬ ಶಂಕೆಯನ್ನು ಪರಿಹರಿಸಲು ಅಲ್ಲಿಯೂ ಸಂಬಂಧ ಪದವನ್ನು ಪ್ರಯೋಗಿಸಬೇಕಾದೀತು. ಇಷ್ಟಾದರೂ ಸಂಬಂಧವನ್ನು ಹೇಳಲೇಬೇಕೆಂದು ನೀವು ಆಗ್ರಹಿಸಿದರೆ 'ಅಸ್ಮಿನ್' ಎಂಬ ಸಪ್ತಮೀವಿಭಕ್ತಿಯಿಂದಲೇ ಸಂಬಂಧವು ತಿಳಿಯುತ್ತದೆ. ಆಧಾರಾಧೇಯಭಾವವೇ ಸಪ್ತಮ್ಯರ್ಥವೆಂಬುದು ಪ್ರಸಿದ್ಧ.

ಈ ಸೂತ್ರವು ಸ್ವಪಕ್ಷಸಾಧಕವಾದ ಹೇತುವನ್ನು ಹೇಳುವುದಾದರೆ, ಮತ್ತೊಂದು ದೋಷವನ್ನು 'ಕಿಂಚ'

ಇತ್ಯಾದಿ ಗ್ರಂಥದಿಂದ ಹೇಳುತ್ತಿದ್ದಾರೆ. ಭೂಮಪದ ಪ್ರಯೋಗದಿಂದಲೇ ಹಿತತಮತ್ವಾದಿ ಧರ್ಮಗಳನ್ನು ಸಂಗ್ರಹಿಸಲು ಬರುತ್ತದೆಂದು 'ಭೂಮಪದಪ್ರಯೋಗಾತ್' ಎಂಬುದರ ಅರ್ಥ.

**ಪ್ರಕಾಶಃ – ಏತೇನ ಯದತ್ರೋಕ್ತಂ ಶ್ರುತಪ್ರಕಾಶೇ – ಆದ್ಯಂ ಸೂತ್ರಂ ''ಸ ಏಷ ಪ್ರಾಣ ಏವ ಪ್ರಜ್ಞಾತ್ಮಾऽऽನನ್ದೋऽಜರಃ'' ಇತ್ಯಾದಿವಾಕ್ಯಮಾತ್ರವಿಷಯಂ ವ್ಯಾಖ್ಯಾನಂ, ನತು ಪರೈರಿವ ವಾಕ್ಯಾನ್ತರ-ಸ್ಥಹೇತವೋಪ್ಯತ್ರ ವಿವಕ್ಷಿತತ್ವೇನೋಕ್ತಾಃ, 'ಅಧ್ಯಾತ್ಮಸಮ್ಬನ್ಧಭೂಮಾ' ಇತಿ ದ್ವಿತೀಯಸೂತ್ರ ಏವ ಬಹುವಾಕ್ಯಸ್ಥಹೇತುಬಾಹುಲ್ಯಸ್ಯ ವಿವಕ್ಷಿತತ್ವಾವಗಮಾದಿತಿ ನಾದ್ವೈತಿಮತ ಇವಾಸ್ಮಾಕಂ ಪೌನರುಕ್ತ್ಯಮಿತಿ, ತನ್ನಿರಸ್ತಂ, ಅತ್ರೈವ ಬಾಹುಲ್ಯವಾಚಿಭೂಮಶಬ್ದೇನ ಸರ್ವಸ್ಯ ವಿವಕ್ಷಿತುಂ ಶಕ್ಯತ್ವಾದಿತಿ ॥**

ಹೀಗೆ ಹೇಳಿದ್ದರಿಂದ ಶ್ರುತಪ್ರಕಾಶದ ಮತ್ತೊಂದು ಧೋರಣೆಯನ್ನು ನಿರಾಕರಿಸಿದಂತಾಯಿತು.

''ಆದ್ಯಂ ಸೂತ್ರಂ 'ಸ ಏಷ ಪ್ರಾಣ ಏವ ಪ್ರಜ್ಞಾತ್ಮಾऽऽನಂದೋऽಜರಃ ಇತ್ಯಾದಿವಾಕ್ಯಮಾತ್ರ-ವಿಷಯಂ ವ್ಯಾಖ್ಯಾನಮ್, ನತು ಪರೈರಿವ ವಾಕ್ಯಾನಂತರಸ್ಥಹೇತುವೋಪ್ಯತ್ರ ವಿವಕ್ಷಿತತ್ವೇನೋಕ್ತಾಃ, 'ಅಧ್ಯಾತ್ಮಸಂಬಂಧಭೂಮಾ' ಇತಿ ದ್ವಿತೀಯಸೂತ್ರ ಏವ ಬಹುವಾಕ್ಯಸ್ಥಹೇತುಬಾಹುಲ್ಯಸ್ಯ ವಿವಕ್ಷಿತತ್ವಾವಗಮಾತ್''

ಮೊದಲನೆಯ ಸೂತ್ರವು ''ಸ ಏವ ಪ್ರಜ್ಞಾತ್ಮಾ ಆನಂದೋऽಜರಃ'' ಇತ್ಯಾದಿ ವಾಕ್ಯವನ್ನಷ್ಟೇ ಸ್ವೀಕರಿಸುತ್ತಿದೆ. ಆದರೆ ಅದ್ವೈತಿಗಳು ಬೇರೆ ವಿಷಯವಾಕ್ಯಗಳಲ್ಲಿರುವ ಹೇತುವನ್ನೂ ಸಹ ಈ ಸೂತ್ರ-ದಿಂದಲೇ ವಿವಕ್ಷಿಸುತ್ತಾರೆ. ಇದು ತಪ್ಪು. ಹಾಗಾದಲ್ಲಿ 'ಅಧ್ಯಾತ್ಮಸಂಬಂಧಭೂಮಾ' ಎಂಬ ದ್ವಿತೀಯ ಸೂತ್ರದಲ್ಲಿಯೇ ಅನೇಕ ವಾಕ್ಯಗಳಲ್ಲಿರುವ ಹೇತುಬಾಹುಲ್ಯಗಳನ್ನು ವಿವಕ್ಷಿಸಲು ಬರುವಾಗ ಪ್ರಥಮಸೂತ್ರವು ಏಕೆ? ಆದ್ದರಿಂದ ವಿಷಯವಾಕ್ಯಗಳು ಭಿನ್ನಭಿನ್ನವಾದ್ದರಿಂದ ಎರಡೂ ಸೂತ್ರಗಳು ನಮ್ಮಮತದಲ್ಲಿ ಸಾರ್ಥಕವಾಗುತ್ತವೆ. ಆದರೆ ವಿಷಯವಾಕ್ಯದಲ್ಲಿರುವ ಹೇತುಗಳನ್ನು ಉಪಪಾದನೆ ಮಾಡುವುದಕ್ಕಾಗಿ ಎರಡನೆಯ ಸೂತ್ರ ಹೊರಟಿದೆ ಎಂಬ ಅದ್ವೈತಿಗಳಿಗೆ ಪುನರುಕ್ತಿ ದೋಷ ಬರುತ್ತದೆ.''

ಶ್ರುತಪ್ರಕಾಶದ ಈ ಸಮರ್ಥನೆಯೂ ನಿರಾಕೃತವಾಯಿತು. ಏಕೆಂದರೆ ಈ ಸೂತ್ರದಲ್ಲಿಯೇ ''ಭೂಮಾ'' ಎಂಬ ಪದದಿಂದ ಎಲ್ಲಾ ವಿಷಯವಾಕ್ಯಗಳನ್ನು ವಿವಕ್ಷಿಸಿ ಬ್ರಹ್ಮಪರತ್ವವನ್ನು ಸಮರ್ಥಿಸಲು ಬರುವಾಗ ಪ್ರಥಮಸೂತ್ರದಿಂದ ಪುನರುಕ್ತಿ ಎಂಬ ದೋಷವು ನಿಮಗೂ ತಪ್ಪಿದಲ್ಲ.

**ಪ್ರಕಾಶಃ – ಆನನ್ದೇತಿ ॥ ಆದ್ಯಸೂತ್ರೋಕ್ತಾನಾಮಪೀತ್ಯರ್ಥಃ । ಏತೇನ ಪ್ರಾಣಶಬ್ದಚಿಹ್ನಿತಸೂತ್ರೇ ಪ್ರಾಣಶಬ್ದಚಿಹ್ನಿತವಾಕ್ಯಗತಹೇತೋರೇವ ವರ್ಣನೀಯತ್ವಾದಿತ್ಯಪಿ ಪ್ರತ್ಯುಕ್ತಮ್ । ತೇನಾಸ್ಯ ವೈಯರ್ಥ್ಯಾ-ಭಾವೇऽಪ್ಯನೇನ ಬಹುವಿಷಯೇಣ ತಸ್ಯ ವೈಯರ್ಥ್ಯಕಥನಾತ್ ।**

'ಆನಂದಾಜರತ್ವಾದಿನಾಂ' ಎಂದು ಗ್ರಂಥದಲ್ಲಿದೆ. ಇದಕ್ಕೆ ''ಪ್ರಥಮಸೂತ್ರದಲ್ಲಿ ಹೇಳಲ್ಪಟ್ಟ'' ಆನಂದಾದಿ ಧರ್ಮಗಳನ್ನು ಎಂದರ್ಥ. ಹೀಗೆ ಹೇಳಿದ್ದರಿಂದ ಪ್ರಾಣಶಬ್ದದಿಂದ ಕೂಡಿರುವ ವಾಕ್ಯಗಳಲ್ಲಿರುವ

ಹೇತುವನ್ನಷ್ಟೇ ಪ್ರಥಮಸೂತ್ರದಲ್ಲಿ ವಿವಕ್ಷಿಸಬೇಕೆಂಬ ಅಭಿಪ್ರಾಯವನ್ನು ನಿರಾಕರಿಸಿದಂತಾಯಿತು. ಪ್ರಥಮಸೂತ್ರದಿಂದ ದ್ವಿತೀಯಸೂತ್ರಾರ್ಥ ಗತಾರ್ಥವಾಗಿದೆಯೆಂದು ನಾವು ಆಕ್ಷೇಪಿಸುತ್ತಿಲ್ಲ; ಹೊರತಾಗಿ ದ್ವಿತೀಯಸೂತ್ರವು ಬಹುವಿಷಯಕವಾದ್ದರಿಂದ ಪ್ರಥಮಸೂತ್ರದ ಹೇತುವು ಗಥಾರ್ಥವಾಗಿದೆಯೆಂದು ಆಕ್ಷೇಪಿಸುತ್ತಿದ್ದೇವೆ. ಈ ಸೂಕ್ಷ್ಮವನ್ನು ಗಮನಿಸಬೇಕು.

**ಗುರುರಾಜೀಯಮ್ – ಉಕ್ತದೋಷತ್ವಾದಿತಿ ॥ ಕಿಂ ಚಾಸ್ಮನ್ಮತ ಇವ ವಕ್ತುರಾತ್ಮೋಪದೇಶಸ್ಯ ಗತಿಮನುಕ್ತ್ವಾ ಪ್ರಕರಣಸ್ಯ ಬ್ರಹ್ಮಪರತ್ವೋಕ್ತಿರಯುಕ್ತೇತ್ಯುಕ್ತದೋಷಾದಿತ್ಯರ್ಥಃ ।**

## ಸಾರ

ಪರಮಾತ್ಮನಲ್ಲೇ ಅಸಾಧಾರಣವಾದ ಅನೇಕ ಧರ್ಮಗಳ ಸಂಬಂಧವನ್ನು ಈ ಪ್ರಕರಣವು ಹೇಳುತ್ತಿದೆ. ಆದ್ದರಿಂದ ಪ್ರಾಣನೇ ಬ್ರಹ್ಮನೆಂದು ರಾಮಾನುಜರು 'ನ ವಕ್ತುಃ' ಎಂಬ ಸೂತ್ರವನ್ನು ವ್ಯಾಖ್ಯಾನಿಸುತ್ತಾರೆ.

ಅದ್ವೈತಿಗಳಿಗೆ ಬಂದ ದೋಷವು ಇವರಿಗೂ ಬರುತ್ತದೆ. ಪೂರ್ವಪಕ್ಷ ಯುಕ್ತಿಯನ್ನು ಪರಿಹರಿಸದೆ ಸಿದ್ಧಾಂತಯುಕ್ತಿಯನ್ನೇ ನೇರವಾಗಿ ಹೇಳುವುದು ತಪ್ಪಲ್ಲವೇ? ಮತ್ತು ಸೂತ್ರದಲ್ಲಿ ಸಂಬಂಧಪದವಿಲ್ಲದೆ ಕೇವಲ 'ಅಧ್ಯಾತ್ಮಭೂಮಾ' ಎಂಬುದರಿಂದಲೇ ರಾಮಾನುಜರ ಅಭಿಪ್ರಾಯವು ಪೂರ್ಣವಾಗುವಾಗ ಸಂಬಂಧ -ಪದವು ವ್ಯರ್ಥವಾಗಿದೆ. ಮತ್ತು ಸೂತ್ರದಲ್ಲಿ 'ಭೂಮಾ' ಎಂಬ ಪದವನ್ನು ಪ್ರಯೋಗಿಸಿದ್ದರಿಂದಲೇ ಪ್ರಥಮ -ಸೂತ್ರದಲ್ಲಿ ಹೇಳಲ್ಪಟ್ಟ ಹಿತತಮತ್ವಾದಿ ಧರ್ಮಗಳನ್ನು ವಿವಕ್ಷಿಸಲು ಬರುವುದರಿಂದ ಕೇವಲ ಎರಡನೆಯ ಸೂತ್ರವು ಸಾಕಾಗುತ್ತದೆ.

* * * *

## ಅದ್ವೈತಿಗಳ ಮೂರನೇ ಸೂತ್ರಾರ್ಥ ವಿಮರ್ಶೆ

ತಾತ್ಪರ್ಯಚನ್ದ್ರಿಕಾ

**ಯಚ್ಚ ''ಶಾಸ್ತ್ರದೃಶ್ಯಾ'' ಇತ್ಯಸ್ಯ ಪರಕೀಯಂ ವ್ಯಾಖ್ಯಾನಂ – ಇನ್ದ್ರಃ ಸ್ವಾತ್ಮಾನಂ ಯಥಾ ಶಾಸ್ತ್ರಮಾರ್ಗೇಣ ಜ್ಞಾನೇನ ಅಹಂ ಬ್ರಹ್ಮೇತಿ ಪಶ್ಯನ್ 'ಮಾಮೇವ ವಿಜಾನೀಹಿ' ಇತ್ಯುಪದಿದೇಶ ವಾಮದೇವವದಿತಿ[೬], ತನ್ನ,**

**ಚಿದಚಿತ್ಸಂವಲನಾತ್ಮಕಾಹಮರ್ಥೇ ಬ್ರಹ್ಮತ್ವಸ್ಯ ಮನ್ವಾದಿತ್ವಸ್ಯ ಚಾಭಾವೇನ ''ಮಾಮೇವ ವಿಜಾನೀಹಿ'' ''ಅಹಂ ಮನುಃ'' ಇತ್ಯಾದಿವ್ಯಪದೇಶಹೇತೋಃ ಅಹಂಬ್ರಹ್ಮೇತ್ಯಾದಿದೃಷ್ಟೇಃ ಭ್ರಾನ್ತಿದೃಷ್ಟಿತ್ವೇನ ಶಾಸ್ತ್ರದೃಷ್ಟಿತ್ವಾಭಾವಾತ್ । ಚಿನ್ಮಾತ್ರೈಕ್ಯದೃಷ್ಟೇಶ್ಚ ಭಿನ್ನವಿಷಯತ್ವೇನ 'ಮಾಂ ವಿಜಾನೀಹಿ' ಇತ್ಯಾದಿ-ವ್ಯಪದೇಶಾಹೇತುತ್ವಾತ್ । 'ಮಾಮ್' ಇತ್ಯಾದೌ ಚಿನ್ಮಾತ್ರಲಕ್ಷಣಾಯಾಂ ಚ ''ಮಾಂ ವಿಜಾನೀಹಿ, ಯೋ ಮಾಂ ವೇದ'' ಇತಿ ವಿತ್ತಿಕರ್ಮತ್ವೋಕ್ತಿರಯುಕ್ತಾ ।**

ಅನುವಾದ - ''ಶಾಸ್ತ್ರದೃಷ್ಟ್ಯಾ'' ಎಂಬ ಮೂರನೇ ಸೂತ್ರವನ್ನು ಆದ್ವೈತಿಗಳು ಹೀಗೆ ವ್ಯಾಖ್ಯಾನಿಸುತ್ತಾರೆ. ದೇವೇಂದ್ರನು ತನ್ನನ್ನು ಶಾಸ್ತ್ರಮಾರ್ಗದಿಂದ ''ಅಹಂ ಬ್ರಹ್ಮ'' ''ನಾನು ಬ್ರಹ್ಮನು.'' ಎಂಬ ಜ್ಞಾನವುಳ್ಳವನಾಗಿ 'ನನ್ನನ್ನೇ ತಿಳಿ' ಎಂದು ಉಪದೇಶಿಸಿದನು. ವಾಮದೇವ ಋಷಿಯು ತನ್ನನ್ನೇ ಮನುಸೂರ್ಯ ಎಂದು ಉಪದೇಶಿಸಿದಂತೆ.

ಇವರ ಈ ವ್ಯಾಖ್ಯಾನವು ಸಾಧುವಲ್ಲ. ಚಿದಚಿತ್‌ಸಂವಲನಾತ್ಮಕವಾದದ್ದು ಅಹಂ ಶಬ್ದಾರ್ಥವೆಂದು ಆದ್ವೈತಿಗಳು ಹೇಳುತ್ತಾರೆ. ಇದರಲ್ಲಿ ಬ್ರಹ್ಮತ್ವವಾಗಲಿ, ಮನ್ವಾದಿತ್ವಗಳಾಗಲಿ ಇರಲು ಸಾಧ್ಯವಿಲ್ಲ. ಮತ್ತು ''ಮಾಂ ವಿಜಾನೀಹಿ'' ''ಅಹಂ ಮನುಃ'' ಇತ್ಯಾದಿಯಾಗಿ ವ್ಯಪದೇಶಹೇತುವಿರುವುದರಿಂದ 'ಅಹಂ ಬ್ರಹ್ಮ' ಎಂಬ ತಿಳುವಳಿಕೆಯು ಭ್ರಾಂತ್ಯಾತ್ಮಕವಾಗಿದೆ. ಹೀಗಿರುವಾಗ ಶಾಸ್ತ್ರಜನ್ಯ ಜ್ಞಾನವೆಂದು ಹೇಳಲು ಸಾಧ್ಯವಿಲ್ಲ.

ಇನ್ನು ಮಾಂ ಎಂಬ ಪದಕ್ಕೆ ಹಾಗೂ ಮನುಃ ಎಂಬ ಪದಕ್ಕೆ ಚಿನ್‌ಮಾತ್ರದಲ್ಲಿ ಲಕ್ಷಣಾ ಮಾಡಬಹುದು. ಆದರೆ ''ಮಾಂ ವಿಜಾನೀಹಿ'' ''ಯೋ ಮಾಂ ವೇದ'' ಎಂಬಲ್ಲಿ ಹೇಳಿದ ಜ್ಞಾನಕರ್ಮತ್ವವು ತಪ್ಪಾಗುತ್ತದೆ.

ಕಠಿಣ ಪದಾರ್ಥ

ಪರಕೀಯಂ = ಆದ್ವೈತಿಗಳ, ಶಾಸ್ತ್ರಮಾರ್ಗೇಣ = ಶಾಸ್ತ್ರಾಧ್ಯಯನದಿಂದ ಹುಟ್ಟಿದ, ಅಹಂ ಶಬ್ದಾರ್ಥೇ = ಅಂತಃಕರಣವಿಶಿಷ್ಟನಾದ ಆತ್ಮನಲ್ಲಿ, ವ್ಯಪದೇಶಹೇತುಃ =

---

**೧.ಶಾಙ್ಕರಭಾಷ್ಯಮ್** – कथं तर्हि वक्तुरात्मोपदेशः –

शास्त्रदृष्ट्या तूपदेशो वामदेववत् ॥ ३० ॥

इन्द्रो नाम देवतात्मा स्वमात्मानं परमात्मत्वेनाहमेव परं ब्रह्मेत्यार्षेण दर्शनेन यथाशास्त्रं पश्यन्नुपदिशति स्म – 'मामेव विजानीहि' इति । यथा 'तद्धैतत्पश्यन्नृषिर्वामदेवः प्रतिपेदेऽहं मनुरभवं सूर्यश्च' इति तद्वत् । 'तद्यो यो देवानां प्रत्यबुध्यत स एव तदभवत्' (बृ. १।४।१०) इति श्रुतेः । यत्पुनरुक्तं 'मामेव विजानीहि' इत्युक्त्वा विग्रहधर्मैरिन्द्र आत्मानं तुष्टाव त्वाष्ट्रवधादिभिरिति, तत्परिहर्तव्यम् । अत्रोच्यते – न त्वाष्ट्रवधादीनां विज्ञेयेन्द्रस्तुत्यर्थत्वेनोपन्यासो यस्मादेवंकर्माहं तस्मान्मां विजानीहीति । कथं तर्हि । विज्ञानस्तुत्यर्थत्वेन । यत्कारणं त्वाष्ट्रवधादीनि साहसान्युपन्यस्य परेण विज्ञानस्तुतिमनुसन्दधाति – 'तस्य मे तत्र लोम च न मीयते स या मां वेद न ह वै तस्य केन च कर्मणा लोको मीयते' इत्यादिना । एतदुक्तं भवति – यस्मादीदृशान्यपि क्रूराणि कर्माणि कृतवतो मम ब्रह्मभूतस्य लोमापि न हिंस्यते, स योऽन्योऽपि मां वेद न तस्य केनचिदपि कर्मणा लोको हिंस्यत इति । विज्ञेयं तु ब्रह्मैव प्राणोऽस्मि प्रज्ञात्मा' इति वक्ष्यमाणम् । तस्माद्ब्रह्मवाक्यमेतत् ॥ ३० ॥

ಶಬ್ದಪ್ರಯೋಗಕ್ಕೆ ಕಾರಣವಾಗಿರುವ, ಚಿನ್ಮಾತ್ರಕ್ಕ = ಚಿನ್ಮಾತ್ರದಿಂದ ಐಕ್ಯಜ್ಞಾನವು,
ವಿತ್ತಿಕರ್ಮತ್ವೋಕ್ತಿಃ = ಜ್ಞಾನವಿಷಯತ್ವವೆಂಬ ವಚನವು.

**ಪ್ರಕಾಶಃ** – ಅದ್ವೈತಿಮತೇ ತೃತೀಯಸೂತ್ರಾರ್ಥಮನೂದ್ಯ ನಿರಸ್ಯತಿ – **ಯಚ್ಚೇತಿ** ॥ ದೃಷ್ಟಾನ್ತೇ ದಾರ್ಷ್ಟಾನ್ತಿಕೇ ಚ ಬ್ರಹ್ಮಾತ್ಮೈಕ್ಯಜ್ಞಾನಂ ತಾದೃಶವ್ಯಪದೇಶಹೇತುರಿತ್ಯರ್ಥಃ । ಕಿಮತ್ರ ದಾರ್ಷ್ಟಾನ್ತಿಕ ಇನ್ದ್ರೇ ದೃಷ್ಟಾನ್ತೇ ವಾಮದೇವೇ ವಾಹಮರ್ಥೇ ವಿಶಿಷ್ಟ ಏವ ಪ್ರಾಣಶಬ್ದಿತಬ್ರಹ್ಮತ್ವಸ್ಯ ಮನ್ವಾದಿತ್ವಸ್ಯ ಚ ಜ್ಞಾನಂ ''ಮಾಮೇವ ವಿಜಾನೀಹಿ'' ಇತ್ಯಾದಿವ್ಯಪದೇಶಹೇತುರುಚ್ಯತೇ, ಉತ ಲಕ್ಷಿತಸ್ಯ ಚಿನ್ಮಾತ್ರಸ್ಯ ಚಿನ್ಮಾತ್ರೇಣೈಕ್ಯಜ್ಞಾನಂ ತಸ್ಯ ಹೇತುರಿತಿ ವಿಕಲ್ಪ್ಯ, ಆದ್ಯಂ ನಿರಸ್ಯತಿ – **ಚಿದಿಚದಿತಿ** ॥

ದ್ವಿತೀಯಂ ನಿರಸ್ಯತಿ – **ಚಿನ್ಮಾತ್ರೇತಿ** ॥ 'ಚಿನ್ಮಾತ್ರಂ ವಿಜಾನೀಹಿ' 'ಚಿನ್ಮಾತ್ರಂ ಮನ್ವಾದಿ' ಇತ್ಯೇವ ಸ್ಯಾತ್, ನತು 'ಮಾಂ' ಇತಿ 'ಅಹಂ' ಇತಿ ಚ । ನಹಿ 'ಏಕ್ಯಂ ವಿಜಾನೀಹಿ' ಇತಿ ವಕ್ತವ್ಯೇ 'ಮಾಂ' ಇತಿ ವ್ಯಪದೇಶೋ ಯುಜ್ಯತ ಇತ್ಯರ್ಥಃ ।

ನನು 'ಮಾಂ' ಇತ್ಯಸ್ಯ 'ಅಹಂ' ಇತ್ಯಸ್ಯ ಚ ಚಿನ್ಮಾತ್ರಮರ್ಥ ಇತ್ಯತ ಆಹ – **ಮಾಮಿತ್ಯಾದಾವಿತಿ** ॥ ತಸ್ಯೋದಾಸೀನಸ್ಯ ಸಕಲಕಾರಕಶಕ್ತಿವಿಧುರಸ್ಯ ಕರ್ಮತ್ವಾಯೋಗಾತ್ । ನನ್ವಲ್ಲೇಖಿತ್ವಮಾತ್ರೇಣ 'ಮಾಂ' ಇತ್ಯುಕ್ತಿರ್ನ ತು ಕರ್ಮತ್ವಮಿತಿ ಚೇತ್, ''ಕರ್ಮಣಿ ದ್ವಿತೀಯಾ'' ಇತಿ ಕರ್ಮಾರ್ಥಕದ್ವಿತೀಯಾಶ್ರವಣಾದಿತಿ ಭಾವಃ । ಲಕ್ಷಣಾಪತ್ತೇಶ್ಚೇತ್ಯಪಿ ಧ್ಯೇಯಮ್ । ಸಿದ್ಧಾನ್ತೇ ಚ ಸ್ವಪ್ರಯುಕ್ತಾಸ್ಮಚ್ಛಬ್ದಸ್ಯ ಸ್ವಾನ್ತರ್ಯಾಮಿಣ್ಯೇವ ಮುಖ್ಯತ್ವೋಕ್ತೇರ್ನ ಕೋऽಪಿ ದೋಷ ಇತಿ ಭಾವಃ ।

ವಿವರಣೆ - ಅದ್ವೈತಿಗಳ ಮತದಲ್ಲಿ 'ಶಾಸ್ತ್ರದೃಷ್ಟ್ಯಾ' ಎಂಬ ಮೂರನೇ ಸೂತ್ರಾರ್ಥವನ್ನು ಅನುವಾದ ಮಾಡಿ ನಿರಾಕರಿಸುತ್ತಿದ್ದಾರೆ 'ಯಚ್ಚ' ಇತ್ಯಾದಿ ವಾಕ್ಯದಿಂದ.

ದೃಷ್ಟಾಂತದಲ್ಲಿ ವಾಮದೇವ ಋಷಿಯು ಮನುವಿನಿಂದ ಐಕ್ಯಜ್ಞಾನವನ್ನು ಪಡೆದಿದ್ದಾನೆ. ಈ ಐಕ್ಯ ಜ್ಞಾನವೇ 'ಅಹಂ ಮನುಃ' ಎಂಬ ವ್ಯಪದೇಶಕ್ಕೆ (ಶಬ್ದಪ್ರಯೋಗಕ್ಕೆ) ಕಾರಣವಾಗಿದೆ.

ದಾರ್ಷ್ಟಾಂತಿಕದಲ್ಲಿ ದೇವೇಂದ್ರನು ಬ್ರಹ್ಮನಿಂದ ಐಕ್ಯಜ್ಞಾನವನ್ನು ಪಡೆದಿದ್ದಾನೆ. ಈ ಐಕ್ಯಜ್ಞಾನವೇ 'ಮಾಂ ವಿಜಾನೀಹಿ' ಎಂಬ ಶಬ್ದಪ್ರಯೋಗಕ್ಕೆ ಕಾರಣವಾಗಿದೆ. ಇಷ್ಟು 'ಯಚ್ಚ' ಇತ್ಯಾದಿ ವಾಕ್ಯದ ಅಭಿಪ್ರಾಯ.

ಅದ್ವೈತಿಗಳ ಈ ವ್ಯಾಖ್ಯಾನ ಸರಿಯಲ್ಲ. ದಾರ್ಷ್ಟಾಂತಿಕದಲ್ಲಿ ಹೇಳಿದ ಐಕ್ಯಜ್ಞಾನವೆಂದರೇನು? ಇಂದ್ರನಿಗೆ ವಿಶಿಷ್ಟನಾದ ಅಹಮರ್ಥದಲ್ಲಿ ಬ್ರಹ್ಮತ್ವದ ಜ್ಞಾನವಿರುವುದರಿಂದ 'ಮಾಮೇವ ವಿಜಾನೀಹಿ' ಎಂದು ಹೇಳಿದ್ದಾನೋ? ಅಥವಾ ಪ್ರಾಣಶಬ್ದದಿಂದ ಲಕ್ಷಿತನಾದ ಚಿನ್ಮಾತ್ರದಿಂದ ಐಕ್ಯಜ್ಞಾನವಿರುವ ಕಾರಣ 'ಮಾಮೇವ ವಿಜಾನೀಹಿ' ಎಂದು ಹೇಳಿದ್ದಾನೋ?

ಮತ್ತು ದೃಷ್ಟಾಂತದಲ್ಲಿ ಹೇಳಿದ ಐಕ್ಯಜ್ಞಾನವೆಂದರೇನು ? ವಾಮದೇವಋಷಿಗೆ ಅಹಮರ್ಥನಾದ ವಿಶಿಷ್ಟನಲ್ಲಿಯೇ ಮನ್ವಾದಿತ್ವದ ಜ್ಞಾನವಿರುವುದರಿಂದ 'ಅಹಂ ಮನುಃ' ಎಂಬುದಾಗಿ ಶಬ್ದಪ್ರಯೋಗ

ಮಾಡಿದ್ದಾನೋ? ಅಥವಾ ಮನ್ವಾದಿ ಶಬ್ದಗಳಿಂದ ಲಕ್ಷಿತನಾದ ಚಿನ್ಮಾತ್ರದಿಂದ ಐಕ್ಯಜ್ಞಾನವಿರುವ ಕಾರಣ 'ಅಹಂ ಮನುಃ' ಎಂದು ಪ್ರಯೋಗಿಸಿದ್ದಾನೋ?

ಈ ಎರಡು ವಿಕಲ್ಪಗಳಲ್ಲಿ ಮೊದಲನೇ ಪಕ್ಷವನ್ನು 'ಚಿದಚಿತ್' ಇತ್ಯಾದಿ ವಾಕ್ಯದಿಂದ ನಿರಾಕರಿಸುತ್ತಿದ್ದಾರೆ. ಅಂದರೆ ಅಹಂ ಶಬ್ದಾರ್ಥದಲ್ಲಿ ಬ್ರಹ್ಮತ್ವವಾಗಲೀ ಮನ್ವಾದಿತ್ವವಾಗಲಿ ಇರುವುದಿಲ್ಲ ಎಂದು ಅದ್ವೈತಿಗಳೇ ಒಪ್ಪಿಕೊಂಡಿದ್ದಾರೆ. ಎರಡನೆಯ ಪಕ್ಷವನ್ನು 'ಚಿನ್ಮಾತ್ರ ಲಕ್ಷಣಾಯಾಂ' ಎಂಬ ವಾಕ್ಯದಿಂದ ನಿರಾಕರಿಸಿದ್ದಾರೆ. ಚಿನ್ಮಾತ್ರದಲ್ಲಿ ಲಕ್ಷಣಾ ಮಾಡಿದರೆ. 'ಚಿನ್ಮಾತ್ರಂ ವಿಜಾನೀಹಿ' 'ಚಿನ್ಮಾತ್ರಂ ಮನುಃ' ಎಂದೇ ಪ್ರಯೋಗಿಸಬೇಕಿತ್ತು. ಹೊರತು 'ಮಾಂ ವಿಜಾನೀಹಿ' ಎಂಬಲ್ಲಿ 'ಮಾಂ' ಎಂಬ ಪದವನ್ನಾಗಲೀ, ಅಹಂ ಮನುಃ ಎಂಬಲ್ಲಿ ಅಹಂ ಪದವನ್ನಾಗಲೀ ಪ್ರಯೋಗಿಸಬಾರದಿತ್ತು. ಏಕೆಂದರೆ 'ಚೈತ್ರನನ್ನು ತಿಳಿ' ಎಂದು ಹೇಳುವ ಸಂದರ್ಭದಲ್ಲಿ ನನ್ನನ್ನು ಎಂಬ ಶಬ್ದವನ್ನು ಯಾರೂ ಪ್ರಯೋಗಿಸಲಾರರು. ಏಕೆಂದರೆ ಚೈತ್ರನೇ ಬೇರೆ, ನಾನೇ ಬೇರೆ ಎಂಬ ಅರಿವು ಹೇಳುವ ವ್ಯಕ್ತಿಗೆ ಇರುತ್ತದೆ. ಆದರಂತೆ ಚಿನ್ಮಾತ್ರವೇ ಬೇರೆ, ಅಹಮರ್ಥವೇ ಬೇರೆಯಾಗಿರುವಾಗ ಚಿನ್ಮಾತ್ರದ ಜ್ಞಾನಕ್ಕೋಸ್ಕರ 'ಅಹಂ' ಎಂಬ ಶಬ್ದಪ್ರಯೋಗವನ್ನು ಮಾಡುವುದು ಸರಿಯಲ್ಲ.

'ಮಾಂ' ಎಂಬ ಪದಕ್ಕೆ ಮತ್ತು 'ಅಹಂ' ಎಂಬ ಪದಕ್ಕೆ ಚಿನ್ಮಾತ್ರದಲ್ಲಿ ಲಕ್ಷಣಾ ಮಾಡುತ್ತೇವೆ. ಆವಾಗ ಹಿಂದಿನ ದೋಷವಿರುವುದಿಲ್ಲ ಎಂಬ ಪ್ರಶ್ನೆಗೆ 'ಮಾಂ' ಎಂಬ ವಾಕ್ಯದಿಂದ ಉತ್ತರಿಸಿದ್ದಾರೆ. ಶುದ್ಧಾತ್ಮನು ಉದಾಸೀನಸ್ವಭಾವನಾದ್ದರಿಂದ ಸಕಲಕಾರಕ ವಿದುರನಾಗಿದ್ದಾನೆ. ಆದ್ದರಿಂದ ಜ್ಞಾನಕರ್ಮತ್ವವು ಶುದ್ಧಾತ್ಮನಲ್ಲಿ ಬರುವುದಿಲ್ಲ.

ಶಂಕೆ - ಜ್ಞಾನಕರ್ಮತ್ವವನ್ನು ಹೇಳಲು ಬಾರದಿದ್ದರೂ ಉಲ್ಲೇಖಿತ್ವವನ್ನು ಹೇಳಬಹುದು. ಆದ್ದರಿಂದ ಉದಾಸೀನಸ್ವಭಾವನಾದ ಶುದ್ಧಾತ್ಮನು ಜ್ಞಾನದಿಂದ ಉಲ್ಲೇಖ್ಯನಾದ ಕಾರಣ 'ಮಾಂ ವಿಜಾನೀಹಿ' ಎಂದು ಹೇಳಬಹುದಲ್ಲವೆ?

ಸಮಾಧಾನ - 'ಕರ್ಮಣಿ ದ್ವಿತೀಯಾ' ಎಂಬ ಸೂತ್ರದಂತೆ ದ್ವಿತೀಯಾ ವಿಭಕ್ತಿಯು ಕೇವಲ ಕರ್ಮಾರ್ಥದಲ್ಲಿ ಬರುತ್ತದೆ. ಪ್ರಕೃತ 'ಮಾಂ ವಿಜಾನೀಹಿ' ಎಂಬಲ್ಲಿ ದ್ವಿತೀಯಾ ವಿಭಕ್ತಿಯು ಕೇಳಿಸುತ್ತಿರುವುದರಿಂದ ಕರ್ಮತ್ವವನ್ನು ಹೇಳಬೇಕು. ಉಲ್ಲೇಖಿತ್ವವನ್ನು ಹೇಳಬಾರದು. ಮತ್ತು ಲಕ್ಷಣಾ ಮಾಡಬೇಕಾದ ಪ್ರಸಂಗವೂ ಬರುತ್ತದೆ.

ಸಿದ್ಧಾಂತದಲ್ಲಿ ಈ ಯಾವ ದೋಷಗಳಿರುವುದಿಲ್ಲ. ತಾನು ಪ್ರಯೋಗಿಸಿದ 'ಮಾಂ' ಎಂಬ ಶಬ್ದವು ತನ್ನ ಅಂತರ್ಯಾಮಿಯಲ್ಲಿಯೇ ಮುಖ್ಯವಾಗಿದೆ. ಆದ್ದರಿಂದ ನನ್ನ ಅಂತರ್ಯಾಮಿಯಾದ ಪರಮಾತ್ಮನನ್ನು ತಿಳಿ ಎಂಬುದಾಗಿ ದೇವೇಂದ್ರನ ಅಭಿಪ್ರಾಯ. ಅಂತರ್ಯಾಮಿಯಲ್ಲಿ ಅಸ್ಮತ್ ಶಬ್ದಕ್ಕೆ ಮುಖ್ಯಾರ್ಥವನ್ನೇ ಒಪ್ಪಿರುವುದರಿಂದ ಲಕ್ಷಣಾಪ್ರಸಂಗ ದೋಷವೂ ಇರುವುದಿಲ್ಲವೆಂದು ತಿಳಿಯಬೇಕು.

**ಗುರುರಾಜೀಯಮ್** – ವಿತ್ತಿಕರ್ಮತ್ವೋಕ್ತಿರಯುಕ್ತೇತಿ ॥ ಅನ್ಯಥಾ ವಿತ್ತಿಕರ್ಮತ್ವರೂಪದೃಶ್ಯತ್ವೇನ ಶುದ್ಧಸ್ಯಾಪಿ ಮಿಥ್ಯಾತ್ವಂ ಸ್ಯಾದಿತಿ ಭಾವಃ ।

ಸಾರ

ಅದ್ವೈತಿಗಳ ಮೂರನೇ ಸೂತ್ರ ವ್ಯಾಖ್ಯಾನ ಹೀಗಿದೆ - ಉಪದೇಶಃ = ಇಂದ್ರನು ಮಾಡಿದ ಮಾಮೇವ ವಿಜಾನೀಹಿ ಎಂಬ ಉಪದೇಶವು, ವಾಮದೇವವತ್ = ವಾಮದೇವಋಷಿಗಳು ತನ್ನನ್ನೇ ಮನು ಮತ್ತು ಸೂರ್ಯ ಎಂದು ಉಪದೇಶಿಸಿದಂತೆ, ಇಂದ್ರನು ತನ್ನಲ್ಲಿರುವ ಬ್ರಹ್ಮತ್ವವನ್ನು ಶಾಸ್ತ್ರಾದೃಷ್ಟ್ಯಾ = ಶಾಸ್ತ್ರಾಧ್ಯಯನದಿಂದ ತಿಳಿದಿದ್ದಾನೆ. ಈ ರೀತಿಯಾದ ಸೂತ್ರವ್ಯಾಖ್ಯಾನದಿಂದ ಬ್ರಹ್ಮೈಕ್ಯವನ್ನು ತಿಳಿದು ಇಂದ್ರನು ನಾನೇ ಪ್ರಾಣಶಬ್ದವಾಚ್ಯ-ನೆಂದು ಹೇಳಿಕೊಂಡಿದ್ದಾನೆ.

ಅದ್ವೈತಿಗಳ ಈ ವ್ಯಾಖ್ಯಾನ ಸರಿಯಲ್ಲ. ಏಕೆಂದರೆ 'ಮಾಮೇವ ವಿಜಾನೀಹಿ' ಎಂಬಲ್ಲಿರುವ 'ಮಾಂ' ಎಂಬ ಪದವು ಅಂತಃಕರಣವಿಶಿಷ್ಟನಾದ ಆತ್ಮನನ್ನು ಹೇಳುತ್ತಿದೆ. ಈ ಆತ್ಮಕ್ಕೆ ಬ್ರಹ್ಮನ ಅಭೇದವೂ ಯುಕ್ತವಲ್ಲ. ಇನ್ನು ಚಿನ್‌ಮಾತ್ರದಲ್ಲಿ ಲಕ್ಷಣಾ ಮಾಡಿದರೂ ಸಹ ಜ್ಞಾನಕರ್ಮತ್ವವನ್ನು ಚಿನ್‌ಮಾತ್ರನಿಗೆ ಹೇಳಿದಂತಾಗುತ್ತದೆ. ಯಾವುದೇ ಧರ್ಮಗಳಿಲ್ಲದ ಸಕಲಕಾರಕಶಕ್ತಿಗಳಿಂದ ದೂರನಾದ ಚಿನ್‌ಮಾತ್ರದಲ್ಲಿ ಜ್ಞಾನಕರ್ಮತ್ವವನ್ನಾದರೂ ಹೇಗೆ ತಾನೇ ಒಪ್ಪಿಯಾರು?

* * * *

## ಶಾಸ್ತ್ರಶಬ್ದಾರ್ಥ ವಿಮರ್ಶೆ

### ತಾತ್ಪರ್ಯಚನ್ದ್ರಿಕಾ

**किञ्च – शास्त्रशब्दस्य हिताहितशास्तरि वेदादौ योगसम्भवान्न रूढिः । उक्तञ्च –**

**भवेतां यदि वृक्षस्य वाजिकर्णौ कथञ्चन ।**
**अदृष्टां समुदायस्य कः शक्तिं जातु कल्पयेत् ॥ इति ।**

**शास्तृत्वं च ''एकः शास्ता न द्वितीयोऽस्ति शास्ता'' इत्यादिश्रुत्या ब्रह्मण्येव मुख्यम् । मुख्यसम्भवे चामुख्यमयुक्तम् । दर्शितश्च भाष्यकृता ''संविच्छास्त्रं परं पदम्'' इति ब्रह्मणि शास्त्रपदप्रयोगः । लोकप्रसिद्धिस्तु शास्त्रशब्दस्य वेदादन्यत्रैव ।**

**अपि च सकारणकदृष्टिद्वारा व्यपदेशविषयोक्तितोऽपि अस्मद्वीत्या साक्षादेव तदुक्तिर्युक्ता । सौत्रो वामदेवदृष्टान्तोऽपि परपक्षे न युक्तः । ''अहं मनुः'' इत्यादिनोक्तं ह्यैक्यं चिन्मात्रविवक्षया वक्तव्यम् । नच तद्विवक्षायां ''अहं भूमिमददामार्यायाहं दृष्टिं दाशुषे मर्त्याय'' इत्यादिविशिष्टविषयमुत्तरवाक्यं युज्यते । भगवद्धर्मो हीन्द्राय भूमिप्रदानादिकम् ।**

ಅನುವಾದ - ಶಾಸ್ತ್ರಪದಕ್ಕೆ 'ಶಾಸನ ಮಾಡುವಿಕೆ' ಎಂದರ್ಥ. ಹಿತವನ್ನಾಗಲೀ ಅಹಿತವನ್ನಾಗಲೀ ಶಾಸನ ಮಾಡುವ ವೇದದಲ್ಲಿಯೇ ಶಾಸ್ತ್ರಶಬ್ದದ ಯೌಗಿಕಾರ್ಥ ಕೂಡುತ್ತದೆ. ಹೀಗಿರುವಾಗ ರೂಢ್ಯರ್ಥವನ್ನು ಹೇಳಬಾರದು. ಯೌಗಿಕಾರ್ಥ ಹಾಗೂ ರೂಢ್ಯರ್ಥಗಳು ಒಂದೇ ಶಬ್ದದಲ್ಲಿ ಉಪಸ್ಥಿತವಾದಾಗ ಯಾವುದನ್ನು ಸ್ವೀಕರಿಸಬೇಕೆನ್ನಲು ಆಧಾರ ಹೀಗಿದೆ -

ಭವೇತಾಂ ಯದಿ ವೃಕ್ಷಸ್ಯ ವಾಜಿಕರ್ತೃ ಕಥಂಚನ।
ಆದೃಷ್ಟಾಂ ಸಮುದಾಯಸ್ಯ ಕಃ ಶಕ್ತಂ ಜಾತು ಕಲ್ಪಯೇತ್ ॥

'ವಾಜಿಕರಣ' ಎಂಬ ವೃಕ್ಷವಿಶೇಷಕ್ಕೆ ಒಂದುವೇಳೆ ಕುದುರೆಯಂತಹ ಕಿವಿಗಳು ಇದ್ದಿದ್ದಲ್ಲಿ ಆವಾಗ ಯೌಗಿಕಾರ್ಥವನ್ನೇ ಹೇಳಬಹುದಿತ್ತು. ಆದೃಷ್ಟವಾದ ಸಮುದಾಯಶಕ್ತಿಯನ್ನು ಯಾರೂ ಸಹ ಕಲ್ಪಿಸುತ್ತಿರಲಿಲ್ಲ. ಆದ್ದರಿಂದ ಅವಯವಾರ್ಥ ಕೂಡುತ್ತಿದ್ದರೆ ಮಾತ್ರ ರೂಢಿಯನ್ನು ಕಲ್ಪಿಸಬೇಕೆಂದು ಈ ವಾಕ್ಯದಿಂದ ತಿಳಿಯುತ್ತದೆ. ಶಾಸ್ತೃತ್ವವು ಶಾಸ್ತ್ರಶಬ್ದದ ಪ್ರವೃತ್ತಿನಿಮಿತ್ತವಾಗಿದೆ. ಪ್ರವೃತ್ತಿನಿಮಿತ್ತವು ''ಏಕಃ ಶಾಸ್ತಾ ನ ದ್ವಿತಿಯೋऽಸ್ತಿ ಶಾಸ್ತಾ'' ಎಂಬ ಶ್ರುತಿಯಂತೆ ಬ್ರಹ್ಮನಲ್ಲಿ ಮಾತ್ರ ಮುಖ್ಯವಾಗಿರುತ್ತದೆ. ಮುಖ್ಯಾರ್ಥವನ್ನೇ ಹೇಳಲು ಬರುವಾಗ ಅಮುಖ್ಯಾರ್ಥವನ್ನು ಸ್ವೀಕರಿಸಬಾರದು. ಶ್ರೀಮದಾಚಾರ್ಯರು 'ಸಂವಿಜ್ಜಾಸ್ತ್ರಂ ಪರಂ ಪದಂ' ಎಂಬುದಾಗಿ ಬ್ರಹ್ಮನಲ್ಲಿ ಶಾಸ್ತ್ರಶಬ್ದವನ್ನು ಪ್ರಯೋಗಿಸಿದ್ದಾರೆ. ಶಾಸ್ತ್ರಶಬ್ದಕ್ಕೆ ವೇದ ಎಂಬರ್ಥವನ್ನು ಹೇಳುವುದಾದರೆ ಲೋಕಪ್ರಸಿದ್ಧಿಯೆಂಬ ರೂಢಿಯು ವೇದಕ್ಕಿಂತ ಹೆಚ್ಚಾಗಿ ಪುರಾಣಾದಿಗಳಲ್ಲಿಯೇ ಪ್ರಸಿದ್ಧವಾಗಿದೆ.

ಮತ್ತು ಶಾಸ್ತ್ರಶಬ್ದದಿಂದ ಅಂತರ್ಯಾಮಿಯನ್ನು ಸ್ವೀಕರಿಸುವುದರಿಂದ ನೇರವಾದ ಅರ್ಥವನ್ನು ಹೇಳಿದಂತಾಗುತ್ತದೆ. ನಿಮ್ಮ ಪ್ರಕಾರ ಭೇದ ಎಂಬ ಅರ್ಥವನ್ನು ಹೇಳಿದರೆ, ಶಾಸ್ತ್ರದಿಂದ ಹುಟ್ಟಿದ ಐಕ್ಯಜ್ಞಾನದ ಮೂಲಕ ವ್ಯಪದೇಶವಿಷಯತ್ವವನ್ನು ಹೇಳಿದಂತಾಗುವುದರಿಂದ ಪರಂಪರೆಯ ಕಾರಣತ್ವವನ್ನು ನಿರೂಪಿಸಬೇಕಾಗುತ್ತದೆ.

ಅದ್ವೈತಿಗಳ ಪಕ್ಷದಲ್ಲಿ ಸೂತ್ರದಲ್ಲಿ ನೀಡಿದ ವಾಮದೇವದೃಷ್ಟಾಂತವೇ ತಪ್ಪಾಗುತ್ತದೆ. 'ಅಹಂ ಮನುಃ' ಇತ್ಯಾದಿ ಶಬ್ದದಿಂದ ಹೇಳಲ್ಪಟ್ಟ ಐಕ್ಯವನ್ನು ಚಿನ್ಮಾತ್ರದ ಐಕ್ಯವಿವಕ್ಷೆಯಿಂದ ಹೇಳಬೇಕು. ಆದರೆ ಚಿನ್ಮಾತ್ರವನ್ನು ಇಲ್ಲಿ ವಿವಕ್ಷಿಸಿದರೆ 'ಅಹಂ ಭೂಮಿಮದದಾಮಾರ್ಯಾಯಾಹಂ ದೃಷ್ಟಿಂ ದಾಶುಷೇ ಮರ್ತ್ಯಾಯ' ನಾನು ಇಂದ್ರನಿಗೆ ಭೂಮಿಯನ್ನು ನೀಡಿದೆನು. ದಾನಶೀಲನಾದ ಮನುಷ್ಯನಿಗೆ ಜ್ಞಾನವನ್ನು ನೀಡಿದೆನು. ಇತ್ಯಾದಿಯಾಗಿ ವಿಶಿಷ್ಟಬ್ರಹ್ಮನ ಬಗ್ಗೆ ಮುಂದಿನ ವಾಕ್ಯವು ಹೇಳುತ್ತಿದೆ. ಇಂದ್ರನಿಗೆ ನೀಡುವ ಭೂಮಿದಾನವು ವಿಶಿಷ್ಟನಾದ ಭಗವಂತನ ಧರ್ಮವೇ ಆಗಿದೆ ಹೊರತು ಶುದ್ಧಚಿನ್ಮಾತ್ರನ ಧರ್ಮವಾಗಿಲ್ಲ.

ಕಠಿಣಪದಾರ್ಥ

ಹಿತಾಹಿತಶಾಸ್ತರಿ = ಹಿತವನ್ನು ಅಹಿತವನ್ನು ನಿಯಮನ ಮಾಡುವ, ಉಕ್ತಂಚ = ವಾರ್ತಿಕಕಾರನಿಂದ ಹೇಳಲ್ಪಟ್ಟದೆ, ಶಾಸ್ತಾ = ನಿಯಾಮಕನು, ಸಕಾರಣಕದೃಷ್ಟಿದ್ವಾರಾ =

ಬ್ರಹ್ಮಾತ್ಮೈಕ್ಯ ಜ್ಞಾನದ ಮೂಲಕವಾಗಿ, ಸಾಕ್ಷಾದೇವ = ಅಂತರ್ಯಾಮಿ ವಿವಕ್ಷೆಯಿಂದ ನೇರವಾಗಿ, ತದುಕ್ತಿಃ = ಶಾಸ್ತ್ರಪದದ ಹೇಳುವಿಕೆಯು.

**प्रकाशः** – नन्वथापि भवन्मते शास्त्रशब्दस्यान्तर्यामिणि यौगिकत्वाद्वेदादिशास्त्रे रूढत्वात् रूढेश्च योगापेक्षया मुख्यत्वस्य स्थितत्वात् शास्त्रशब्दो मुख्यामुख्यन्यायेन वेदादिपरो नान्तर्यामिपर इत्याशङ्क्याह – **किञ्चेति** ॥ ''सन्ध्यामुपासीत'' ''न सुरां पिबेत्'' इत्यादिना हितमिदं कर्तव्यं अहितमिदं न कर्तव्यमिति शासकत्वाच्छास्त्रमिति ''शासु अनुशिष्टौ'' इत्यतः ष्ट्रन्प्रत्यये शास्त्रमिति योगेनैवोपपत्तेर्न रूढिरित्यर्थः ।

ವಿವರಣೆ - ಆಕ್ಷೇಪ - ನಿಮ್ಮ ಮತದಲ್ಲಿ ಶಾಸ್ತ್ರಶಬ್ದಕ್ಕೆ ಅಂತರ್ಯಾಮಿ ಎಂಬರ್ಥದಲ್ಲಿ ಯೋಗಾರ್ಥವನ್ನು ಹೇಳುತ್ತೀರಿ. ಆದರೆ ವೇದಾದಿಶಾಸ್ತ್ರಗಳಲ್ಲಿ ಶಾಸ್ತ್ರಶಬ್ದಕ್ಕೆ ರೂಢಿಯಿರುತ್ತದೆ. ಯೋಗಕ್ಕಿಂತ ರೂಢಿಯೇ ಪ್ರಬಲವೆಂದು ರಥಕಾರಾಧಿಕರಣದಲ್ಲಿ ಸಿದ್ಧವಾಗಿದೆ. ಮುಖ್ಯಾಮುಖ್ಯಗಳಲ್ಲಿ ಮುಖ್ಯವನ್ನೇ ಸ್ವೀಕರಿಸಬೇಕಾದ್ದರಿಂದ, ಶಾಸ್ತ್ರಶಬ್ದದಿಂದ ವೇದ ಎಂಬರ್ಥವನ್ನೇ ಹೇಳಬೇಕು ಹೊರತು, ಅಂತರ್ಯಾಮಿ ಎಂಬರ್ಥವನ್ನು ಹೇಳಬಾರದಲ್ಲವೇ?

ಸಮಾಧಾನ - ಈ ಆಕ್ಷೇಪಕ್ಕೆ 'ಕಿಂಚ' ಇತ್ಯಾದಿ ಗ್ರಂಥಗಳಿಂದ ಉತ್ತರಿಸುತ್ತಿದ್ದಾರೆ. ''ಅಹರಹಃಸಂಧ್ಯಾಮುಪಾಸೀತ'' ''ನ ಸುರಾಂ ಪಿಬೇತ್'' ಇತ್ಯಾದಿಯಾಗಿ ಹಿತವನ್ನು ಆಚರಿಸಬೇಕು, ಅಹಿತವನ್ನು ಆಚರಿಸಬಾರದು ಎಂಬುದಾಗಿ ಶಾಸನಕರ್ತೃವಾದದ್ದೇ ಶಾಸ್ತ್ರವೆನಿಸುತ್ತದೆ. ''ಶಾಸು ಅನುಶಿಷ್ಟೌ'' ಎಂಬ ಧಾತುವಿನ ಮೇಲೆ 'ಷ್ಟ್ರನ್' ಪ್ರತ್ಯಯ ಬಂದು ಶಾಸ್ತ್ರ ಶಬ್ದವು ನಿಷ್ಪನ್ನವಾಗಿದೆ. ಹೀಗೆ ಯೋಗದಿಂದಲೇ ಶಾಸ್ತ್ರಶಬ್ದಾರ್ಥವನ್ನು ಸ್ವೀಕರಿಸಲು ಬರುವಾಗ ರೂಢಿಯನ್ನು ಸ್ವೀಕರಿಸಬಾರದು.

**प्रकाशः** – नन्वेवं रूढिमात्रपरिलोपः, सर्वत्र योगेनैवोपपत्तेरित्यतो यत्र योगाभावस्तत्रैव रूढिरिति भावेन तत्र वार्तिकसम्मतिमाह – **उक्तञ्चेति** ॥ नामधेयपादे प्रोक्षण्यधिकरणे उक्तमित्यर्थः । तदधिकरणं जन्मादिसूत्रे प्रपञ्चितम् । 'अश्वकर्णः' इति शब्दवाच्ये कर्मिंश्चिद्वृक्षविशेषे यदि वाजिकर्णसदृशौ कर्णौ भवेतां, तर्ह्यश्वकर्णपदस्य सत्स्ववयवार्थेषु तत एवोपपन्नत्वेन कल्पकाभावात् 'समुदायशक्तिं' रूढिं कः कल्पयेन्न कोऽपि । ततस्तत्रावयवार्थाभावादेव रूढिरङ्गीकृता, अत्रावयवार्थोऽस्तीत्यर्थः । नन्वस्तूभयत्र योगस्तथाऽप्यन्तर्यामिग्रहणे को हेतुरिति चेत्, उक्तानुपपत्तिगण एवेति ब्रूमः । हेत्वन्तरं चात्राह – **शास्तृत्वं चेति** ॥ प्रवृत्तिहेतुपौष्कल्यस्य ब्रह्मण्येव भावादिति भावः । वैदिकप्रयोगबाहुल्यरूपरूढिश्चास्तीत्याह – **दर्शितश्चेति** ॥ रूढिश्च तत्र नास्तीत्याह – **लोकेति** ॥

ಆಕ್ಷೇಪ - ಹಾಗಾದಲ್ಲಿ ರೂಢಿ ಎಂಬ ಪರಿಕಲ್ಪನೆಯೇ ಇಲ್ಲವಾಗಬೇಕಾದೀತು? ಎಲ್ಲೆಡೆ ಯೋಗದಿಂದಲೇ ಅರ್ಥವನ್ನು ತಿಳಿಯಲು ಬರುತ್ತದಲ್ಲವೆ?

ಸಮಾಧಾನ - ಎಲ್ಲಿ ಯೋಗಾರ್ಥವನ್ನು ಹೇಳಲು ಬರುವುದಿಲ್ಲವೋ ಅಲ್ಲಿ ಮಾತ್ರ ರೂಢಿಯನ್ನು ಸ್ವೀಕರಿಸಬೇಕೆಂಬ ವಿಷಯದಲ್ಲಿ ವಾರ್ತಿಕ ಸಮ್ಮತಿಯನ್ನು ತೋರಿಸುತ್ತಿದ್ದಾರೆ 'ಉಕ್ತಂಚ' ಇತ್ಯಾದಿಯಾಗಿ. ನಾಮಧೇಯಪಾದದ ಪ್ರೋಕ್ಷಣ್ಯಧಿಕರಣದಲ್ಲಿ ಈ ಶ್ಲೋಕವನ್ನು ಕಾಣಬಹುದು. ಪ್ರೋಕ್ಷಣ್ಯಧಿಕರಣವನ್ನು ಜನ್ಮಾದಿಸೂತ್ರದಲ್ಲಿ ವಿವರಿಸಲಾಗಿದೆ -

'ಅಶ್ವಕರ್ಣ' ಎಂಬ ಶಬ್ದವು ವೃಕ್ಷ ವಿಶೇಷವನ್ನು ಹೇಳುತ್ತಿದೆ. ಒಂದು ವೇಳೆ ಆ ವೃಕ್ಷ ವಿಶೇಷಕ್ಕೆ ಕುದುರೆಯ ಕಿವಿಗಳಂತೆ ಕಿವಿಗಳು ಇದ್ದಲ್ಲಿ ಆವಾಗ 'ಅಶ್ವಕರ್ಣ' ಶಬ್ದಕ್ಕೆ ಅವಯವಾರ್ಥವನ್ನೇ ಸ್ವೀಕರಿಸಿ ಅರ್ಥವನ್ನು ಹೇಳಲು ಬರುವಾಗ ಸಮುದಾಯಶಕ್ತಿಯೆಂಬ ರೂಢಿಯನ್ನು ಯಾರು ತಾನೇ ಕಲ್ಪಿಸುತ್ತಿದ್ದರು? ಯಾರೂ ಕಲ್ಪಿಸುತ್ತಿರಲಿಲ್ಲ. ಹಾಗಾಗಿ 'ಅಶ್ವಕರ್ಣ' ಶಬ್ದಕ್ಕೆ ಅವಯವಾರ್ಥವನ್ನು ಹೇಳಲು ಬಾರದ ಕಾರಣವೇ ರೂಢಿಯನ್ನು ಸ್ವೀಕರಿಸಲಾಗಿದೆ. ಆದರೆ ಪ್ರಕೃತ ಶಾಸ್ತ್ರಶಬ್ದಕ್ಕೆ ಯೌಗಿಕಾರ್ಥವನ್ನು ಹೇಳಲು ಬರುವುದಿಲ್ಲ ಎಂಬ ಸ್ಥಿತಿಯಿಲ್ಲ. ಆದ್ದರಿಂದ ಯೌಗಿಕಾರ್ಥವನ್ನೇ ಸ್ವೀಕರಿಸಲು ಬರುವಾಗ ವೇದಾದಿ-ಶಾಸ್ತ್ರವೆಂಬ ರೂಢ್ಯರ್ಥವನ್ನು ಸ್ವೀಕರಿಸಬಾರದು.

ಇದು ಸರಿಯಲ್ಲ. ಪ್ರಾಣನನ್ನು ಹೇಳುತ್ತಿರುವ ಶ್ರುತಿಯು ಅಪಹತಪಾಪ್ಮತ್ವವೆಂದು ಪ್ರಾಣನಲ್ಲಿ ಪಾಪರಾಹಿತ್ಯವನ್ನು ಹೇಳುತ್ತಿದೆ. ಪಾಪರಾಹಿತ್ಯವು ಕೇವಲ ಚೇತನದಲ್ಲಷ್ಟೇ ಬರಲು ಸಾಧ್ಯ. ಆದರೆ ರಾಮಾನುಜರು ಪ್ರಾಣಶಬ್ದದಿಂದ ಜಡಪದಾರ್ಥವನ್ನು ವಾಚ್ಯವೆನ್ನುತ್ತಾರೆ.

ಈ ಕಾರಣದಿಂದ ತ್ರಿವಿಧ ಉಪಾಸನೆಯನ್ನು ಬ್ರಹ್ಮನಲ್ಲಿ ಹೇಳಬಹುದೇ ಹೊರತು ಉಪಾಸಾತ್ರೈವಿಧ್ಯವನ್ನು ರಾಮಾನುಜರಿಗೆ ಸಮರ್ಥಿಸಲು ಸಾಧ್ಯವೇ ಇಲ್ಲ.

* * * *

**ಪ್ರಕಾಶಃ** – एतेन यत्केनचित्प्रलपितं – ''प्राणोऽस्मि प्रज्ञात्मा तं मामायुरमृतमित्युपास्व'' इत्यत्रेन्द्रवाक्ये उपासनाकर्मत्वेनेन्द्रशब्दनिर्दिष्टः किमिन्द्र उत शिव इति सन्देहे, वृष्टिद्वारा सकलरक्षकत्वरूपप्राणत्वस्य ''इन्द्रो राजा जगतो य ईशे'' इति श्रुत्या परमैश्वर्येण सर्वोपास्यत्वस्य च सम्भवात् जीवलिङ्गानां च जीवविशेषेन्द्र एव पर्यवसानात् प्राणलिङ्गे सत्यपि प्राणस्येन्द्रविशेषणत्वप्रतीतेः

जीववायुपक्षयोरनुत्थानादिन्द्र एवेति प्राप्ते, अजरामृतत्वादिलिङ्गानामनुगमादुपसंहारेऽवगमाच्छिव एवेति सिद्धान्त इति । उक्तञ्च –

**प्राणोऽस्मीत्युक्त इन्द्रः स हि जगदखिलं प्राणयत्यम्बुवर्षैः**
**इन्द्रो राजेत्यनेकश्रुतिमितमहिमा स्यादुपास्यश्च मुक्तयै ।**
**मैवं क्षुण्णः स सृज्यस्तमजरममृतं शक्रुमो नैव वक्तुं**
**तस्मात्तं मामुपास्वेत्यखिलपरिवृढे युज्यतां शास्त्रदृष्ट्या ॥**

इति, तन्निरस्तं, इन्द्र इत्येव पूर्वपक्षे सति सूत्रे ''जीवमुख्यप्राणलिङ्गात्'' इति शङ्काऽयोगात् । तत्र जीवादिशब्दस्य तद्विशेषेन्द्रपरत्वे च वक्तुरात्मोपदेशस्यापीन्द्रलिङ्गस्य अनेनैव सङ्गहसम्भवेन ''न वक्तुः'' इति पृथक् शङ्काऽयोगात् । प्राणस्येन्द्रविशेषणत्वेनाप्राधान्ये सूत्रे धर्मिनिर्देशाय प्राणपदप्रयोगायोगाच्च । प्राणत्वस्य विष्णावेव प्राणाधिकरणे साधितत्वाच्च । अमृतत्वादेः ''त्रिपादस्यामृतं दिवि'' इत्यादौ विष्णुधर्मत्वस्योक्तत्वाच्च । शिवस्यापि ''रुद्रस्य शिर उत्पिपेष'' इत्यादेरमृतत्वाद्ययोगाच्च ।

यदपि – ''न वक्तुः'' इत्यादीनां रामानुजरीत्याऽर्थकथनं, तदपि तदूषणेनैव निरस्तम् । तच्चोक्तं शिवार्कमणिदीपिकायां – ऐतरेये ''प्राणो वा अहमस्म्यृषे'' इत्यत्र ''प्राणः सर्वाणि भूतानि'' इत्यादिना सार्वात्म्यस्य ब्रह्मलिङ्गस्य सत्त्वेन प्राणस्य ब्रह्मत्वं निश्चितमिति तत्र न सन्देहः । ''प्राणोऽस्मि प्रज्ञात्मा'' इत्यत्र तु त्वाष्ट्रवधादीन्द्रलिङ्गात् ''शरीरं परिगृह्य'' इत्यादिप्राणलिङ्गाच्च वैषम्यमिति, मूर्खप्रलपितमेतत्, तत्रेवात्रापि भूयसां ब्रह्मलिङ्गानां सत्त्वात् । तत्र ब्रह्मत्वस्यात्रत्यन्यायं विनाऽन्येनासिद्धेः । इन्द्रादिलिङ्गानां निरवकाशानां भूयसां दर्शितत्वाच्च । तस्यैवोदाहरणे सूत्रोक्तत्रयकोटिकपूर्वपक्षसम्भवेन सूत्रस्य सामञ्जस्यस्योक्तत्वाच्च । संशयबीजस्य टीकायामेवोक्तत्वाच्चेति ।

ಶೈವರ ಅಧಿಕರಣಶರೀರ ಹೀಗಿದೆ –

'ಪ್ರಾಣೋಽಸ್ಮಿ ಪ್ರಜ್ಞಾತ್ಮಾ ತಂ ಮಾಮಾಯುರಮೃತಮಿತ್ಯುಪಾಸ್ವ' ಎಂಬ ಇಂದ್ರವಾಕ್ಯದಲ್ಲಿ ಉಪಾಸನೆಗೆ ವಿಷಯಭೂತನಾದ ಇಂದ್ರಶಬ್ದದಿಂದ ನಿರ್ದೇಶಿಸಲ್ಪಟ್ಟ ಇಂದ್ರನು ಪ್ರತಿಪಾದ್ಯನೋ? ಅಥವಾ ಶಿವನೋ? ಎಂದು ಸಂದೇಹ.

ಸಂದೇಹ - ಇಂದ್ರನು ಪ್ರತಿಪಾದ್ಯನೆಂದು ಪೂರ್ವಪಕ್ಷ. ದೇವೇಂದ್ರನು ಮಳೆಯನ್ನು ಸುರಿಸುವ ಮೂಲಕ ಎಲ್ಲವನ್ನು ರಕ್ಷಿಸುತ್ತಾನೆ. ಆದ್ದರಿಂದ ಶ್ರುತಿಯಲ್ಲಿ ಹೇಳಿದ ಪ್ರಾಣತ್ವವೂ ದೇವೇಂದ್ರನಲ್ಲಿಯೇ ಉಪಪನ್ನವಾಗುತ್ತದೆ. ''ಇಂದ್ರೋ ರಾಜೋ ಜಗತೋ ಯ ಈಶೇ' ಎಂಬ ಶ್ರುತಿಯಲ್ಲಿ ಹೇಳಲ್ಪಟ್ಟ ಪರಮೈಶ್ವರ್ಯವೂ ಸಹ ದೇವೇಂದ್ರನಲ್ಲಿಯೇ ಯುಕ್ತವಾಗುತ್ತದೆ. ಆದ್ದರಿಂದ ಸಕಲರಿಂದ ಉಪಾಸ್ಯನಾದವನು ದೇವೇಂದ್ರನು.

ಇನ್ನು ಆ ಪ್ರಕರಣದಲ್ಲಿ ಕೇಳಿಸುತ್ತಿರುವ ಜೀವನ ಲಿಂಗಗಳೆಲ್ಲವೂ ಜೀವವಿಶೇಷನೆನಿಸಿದ ಇಂದ್ರನಲ್ಲಿ ಪರ್ಯವಸಾನವಾಗುತ್ತದೆ. ಪ್ರಾಣಲಿಂಗಗಳಿದ್ದರೂ ಪ್ರಾಣನು ಇಂದ್ರನಿಗೆ ವಿಶೇಷಣನಾದ್ದರಿಂದ ಜೀವನಾಗಲೀ ಪ್ರಾಣನಾಗಲೀ ಈ ಪ್ರಕರಣದಿಂದ ಪ್ರತಿಪಾದ್ಯರಾಗುವುದಿಲ್ಲ. ಹಾಗಾಗಿ ದೇವೇಂದ್ರನೇ ಪ್ರಾಣಪ್ರಕರಣ ಪ್ರತಿಪಾದ್ಯನೆಂದು ಪೂರ್ವಪಕ್ಷ.

ಸಿದ್ಧಾಂತ - ಶಿವನ ಅಜರಾಮರತ್ವಾದಿ ಲಿಂಗಗಳು ಉಪಸಂಹಾರದಲ್ಲಿ ಕೇಳಿಸುತ್ತಿವೆ. ಉಪಸಂಹಾರವೇ ಪ್ರಬಲವಾದ್ದರಿಂದ ಶಿವನೇ ಪ್ರಕರಣಪ್ರತಿಪಾದ್ಯನೆಂದು ಸಿದ್ಧಾಂತ. ಈ ಅಧಿಕರಣದ ಅಭಿಪ್ರಾಯ ಹೀಗಿದೆ -

ಪ್ರಾಣೋಽಸ್ಮೀತ್ಯುಕ್ತ ಇಂದ್ರಃ ಸ ಹಿ ಜಗದಖಿಲಂ ಪ್ರಾಣಯಂತ್ಯಂಬುವರ್ಷೈಃ
ಇಂದ್ರೋ ರಾಜೇತ್ಯನೇಕಶ್ರುತಿಮಿತಮಹಿಮಾ ಸ್ಯಾದುಪಾಸ್ಯಶ್ಚ ಮುಕ್ಯೈ।
ಮೈವಂ ಕ್ಷುಣ್ಣಃ ಸ ಸೃಜ್ಯಸ್ತಮಜರಮಮೃತಂ ಶಕ್ನುಮೋ ನೈವ ವಕ್ತುಂ
ತಸ್ಮಾತ್ತಂ ಮಾಮುಪಾಸ್ವೇತ್ಯಖಿಲಪರಿವೃಢೇ ಯುಜ್ಯತಾಂ ಶಾಸ್ತ್ರದೃಷ್ಟ್ಯಾ॥

''ಪ್ರಾಣೋಽಸ್ಮಿ ಪ್ರಜ್ಞಾತ್ಮಾ'' ಎಂಬಲ್ಲಿ ಇಂದ್ರನು ಪ್ರತಿಪಾದ್ಯನು. ಏಕೆಂದರೆ ಸಮಸ್ತ ಜಗತ್ತನ್ನು ಮಳೆ ಸುರಿಸುವ ಮೂಲಕ ರಕ್ಷಿಸುತ್ತಿದ್ದಾನೆ. ಮತ್ತು ''ಇಂದ್ರೋ ರಾಜಾ'' ಇತ್ಯಾದಿ ಅನೇಕ ಶ್ರುತಿಗಳಿಂದ ಪರಮೈಶ್ವರ್ಯಾದಿ ಮಹಿಮೆಗಳು ಅವನಲ್ಲಿ ತಿಳಿಯುತ್ತಿವೆ. ಇಂತಹ ಇಂದ್ರನನ್ನು ಮುಕ್ತಗೋಸ್ಕರ ಉಪಾಸನೆ ಮಾಡಬೇಕೆಂದು ಪೂರ್ವಪಕ್ಷ. ಇದು ತಪ್ಪು. ಅಜರಾಮರತ್ವಾದಿ ಶಿವನ ಲಿಂಗಗಳೇ ಉಪಸಂಹಾರದಲ್ಲಿ ಕೇಳಿಸುತ್ತಿರುವುದರಿಂದ ಇಂದ್ರನು ಪ್ರಕರಣಪ್ರತಿಪಾದ್ಯನೆಂದು ಹೇಳಬಾರದು. ಆದ್ದರಿಂದ ಶಾಸ್ತ್ರದ ಮೂಲಕ ವಿಚಾರ ಮಾಡಿದಾಗ ಶಿವನೇ ''ಮಾಮುಪಾಸ್ವ'' ಇತ್ಯಾದಿ ವಾಕ್ಯಗಳಿಂದ ಪ್ರತಿಪಾದ್ಯನೆಂದು ತಿಳಿಯುತ್ತದೆ.

ಜೀವರಿಗೆ ಅಧಿಕರಣರಚನೆಯು ಅಸಾಧುವಾಗಿದೆ. ಏಕೆಂದರೆ ಇಂದ್ರನೇ ಪೂರ್ವಪಕ್ಷಕ್ಕೆ ವಿಷಯನಾದಲ್ಲಿ ಜೀವಮುಖ್ಯಪ್ರಾಣರ ಲಿಂಗವನ್ನು ಸೂತ್ರದಲ್ಲಿ ಏಕೆ ಹೇಳಬೇಕಿತ್ತು. ಒಂದು ವೇಳೆ ಜೀವಾದಿ ಶಬ್ದಗಳನ್ನು ಜೀವವಿಶೇಷನಾದ ಇಂದ್ರನಲ್ಲಿಯೇ ಪರ್ಯವಸಾನ ಮಾಡಬೇಕಾದರೆ 'ನ ವಕ್ತುಃ' ಎಂಬ ಆತ್ಮೋಪದೇಶವೆಂಬ ಇಂದ್ರನ ಲಿಂಗವನ್ನು ಇದೇ ಸೂತ್ರದಿಂದಲೇ ಸಂಗ್ರಹಿಸಲು ಬರುತ್ತಿರುವಾಗ ಪುನಃ 'ವಕ್ತುಃ' ಎಂಬ ಸೂತ್ರದಿಂದ ಶಂಕಿಸುವುದು ತಪ್ಪಾಗುತ್ತದೆ.

ಮತ್ತು ಪ್ರಾಣನನ್ನು ಇಂದ್ರನಲ್ಲಿ ವಿಶೇಷಣ ಮಾಡಿದಿರಿ. ಹಾಗಾದಲ್ಲಿ ವಿಶೇಷಣತ್ವೇನ ಅಪ್ರಧಾನನಾದ ಪ್ರಾಣನೆಂಬ ಧರ್ಮಿಯನ್ನು ಉಲ್ಲೇಖಿಸುವುದಕ್ಕಾಗಿ ಸೂತ್ರದಲ್ಲಿ ಪ್ರಾಣಪದವನ್ನು ಪ್ರಯೋಗಿಸಿದ್ದು ಅಯುಕ್ತವಾಗುತ್ತದೆ. ಅಲ್ಲದೆ ಪ್ರಾಣತ್ವವು ವಿಷ್ಣುವಿನಲ್ಲಿಯೇ ಸಮಂಜಸವಾಗುತ್ತದೆಂದು ಪ್ರಾಣಾಧಿಕರಣದಲ್ಲಿ ಈಗಾಗಲೇ ನಾವು ಸಮರ್ಥಿಸಿದ್ದೇವೆ.

ಶಿವನಲ್ಲಿ ಹೇಳಿದ ಅಮೃತತ್ವಾದಿ ಲಿಂಗಗಳೂ ಸಹ 'ತ್ರಿಪಾದಸ್ಯಾಮೃತಂ ದಿವಿ' ಇತ್ಯಾದಿ ಶ್ರುತಿಗಳ ಆಧಾರದಿಂದ ವಿಷ್ಣುಧರ್ಮಗಳಾಗಿವೆ ಎಂಬುದನ್ನು ಸಮರ್ಥಿಸಿದ್ದೇವೆ. ಅಷ್ಟೇ ಅಲ್ಲದೆ 'ರುದ್ರಸ್ಯ ಶಿರಃ' ಇತ್ಯಾದಿ ಪ್ರಮಾಣದಂತೆ ರುದ್ರನ ತಲೆಯು ಬಿದ್ದಿತ್ತೆಂದು ತಿಳಿಯುವಾಗ ಅಮೃತತ್ವಾದಿ ಲಿಂಗಗಳು ರುದ್ರನಲ್ಲಿ ಸರ್ವಥಾ ಕೂಡಲಾರವು. ಇನ್ನು ''ನ ವಕ್ತುಃ'' ಇತ್ಯಾದಿ ಸೂತ್ರಗಳಿಗೆ ಶೈವರು ರಾಮಾನುಜಮತದಂತೆ ವ್ಯಾಖ್ಯಾನಿಸಿದ್ದಾರೆ. ರಾಮಾನುಜಮತವನ್ನು ನಿರಾಕರಿಸಿದ್ದರಿಂದಲೇ ಶೈವರ ವ್ಯಾಖ್ಯಾನವನ್ನು ನಿರಾಕರಿಸಿದಂತಾಯಿತು.

ಶಿವಾರ್ಕಮಣಿದೀಪಿಕೆಯಲ್ಲಿ ಹೀಗೆ ಹೇಳಿದ್ದಾರೆ - ಐತರೇಯದಲ್ಲಿ ಕೇಳಿಸುತ್ತಿರುವ ''ಪ್ರಾಣೋ ವಾ ಅಹಮಸ್ಮ್ಯಷೇ'' ಎಂಬಲ್ಲಿ ''ಪ್ರಾಣಸ್ತ್ವಂ ಪ್ರಾಣಸ್ಯಾರ್ವಾಣಿ ಭೂತಾನಿ'' ಇತ್ಯಾದಿಯಾಗಿ ಬ್ರಹ್ಮನ ಲಿಂಗವೆನಿಸಿದ ಸಾರ್ವಾತ್ಮ್ಯವು ಕೇಳಿಸುತ್ತಿದೆ. ಆದ್ದರಿಂದ ಪ್ರಾಣಶಬ್ದದಿಂದ ಬ್ರಹ್ಮನೇ ವಾಚ್ಯನೆಂದು ನಿಶ್ಚಯವಾದ್ದರಿಂದ ಸಂದೇಹಕ್ಕೆ ಆಸ್ಪದವಿಲ್ಲ. ಆದರೆ ''ಪ್ರಾಣೋಽಸ್ಮಿ ಪ್ರಜ್ಞಾತ್ಮಾ'' ಎಂಬಲ್ಲಿ ಮಾತ್ರ ತ್ವಾಷ್ಟ್ರವಧಾ ಮೊದಲಾದ ಇಂದ್ರನ ಲಿಂಗಗಳು ಕೇಳಿಸುತ್ತಿರುವುದು. ''ಶರೀರಂ ಪರಿಗೃಹ್ಯ'' ಇತ್ಯಾದಿಯಾಗಿ ಪ್ರಾಣಲಿಂಗಗಳು ಕೇಳಿಸುತ್ತಿರುವುದರಿಂದ ಸಂಶಯಕ್ಕೆ ಆವಕಾಶವಿದೆ. ಶಿವಾರ್ಕಮಣಿದೀಪಿಕೆಯ ಈ ಮಾತುಗಳು ಮೂರ್ಖರ ಜೊಳ್ಳುಮಾತುಗಳು. ಏಕೆಂದರೆ ''ಪ್ರಾಣೋ ವಾ'' ಎಂಬಲ್ಲಿ ಯಾವರೀತಿಯಾಗಿ ಅನೇಕ ಬ್ರಹ್ಮಲಿಂಗಗಳು ಕೇಳಿಸುತ್ತಿವೆಯೋ ಅದರಂತೆ ''ಪ್ರಾಣೋಽಸ್ಮಿ'' ಎಂಬಲ್ಲಿಯೂ ಬ್ರಹ್ಮಲಿಂಗಗಳು ಕೇಳಿಸುತ್ತಿವೆ. ಮತ್ತು ಇಲ್ಲಿರುವ ನ್ಯಾಯವನ್ನು ಬಿಟ್ಟು ಅಲ್ಲಿಯೂ ಸಹ ಬ್ರಹ್ಮತ್ವವು ಸಿದ್ಧವಾಗದು. ಅಷ್ಟೇ ಅಲ್ಲದೆ ನಿರವಕಾಶವಾದ ಇಂದ್ರಾದಿ ಅನೇಕಗಳು ಲಿಂಗಗಳು ಅಲ್ಲಿಯೂ ಇದೆಯೆಂದು ತೋರಿಸಿದ್ದೇವೆ. ಆದ್ದರಿಂದ ''ಪ್ರಾಣೋ ವಾ'' ಎಂಬ ಐತರೇಯ ವಾಕ್ಯವನ್ನೇ ಈ ಅಧಿಕರಣದಲ್ಲಿ ಉದಾಹರಿಸಿದಾಗ ಸೂತ್ರದಲ್ಲಿ ಹೇಳಲ್ಪಟ್ಟ ಮೂರುಕೋಟಿಯುಳ್ಳ ಪೂರ್ವಪಕ್ಷವೂ ಸಹ ಸಮಂಜಸವಾಗುತ್ತದೆ. ಸಂಶಯಬೀಜವನ್ನು ಟೀಕೆಯಲ್ಲಿಯೇ ಸ್ಪಷ್ಟವಾಗಿ ಹೇಳಿದ್ದಾರೆ. ಆದ್ದರಿಂದ ಶೈವರ ಅಧಿಕರಣ ರಚನೆಯು ಅತ್ಯಂತ ಅಸಾಧುವಾಗಿದೆ.

## ಟೀಕೆಯ ಕಠಿಣಪದಾರ್ಥ

ತಾತ್ಪರ್ಯಚನ್ದ್ರಿಕಾ

**ಟೀಕಾಕ್ಷರಾರ್ಥಸ್ತು – ನನು ''ಏತದ್ಧ ಸ್ಮ ವೈ ತದ್ವಿದ್ವಾನಾಹ ಹಿರಣ್ಯದನ್ತಾವೈದಃ'' ಇತಿ ಹಿರಣ್ಯದನ್ತಾವೈದವತ್ ಮಹಿದಾಸೋऽಪಿ ಋಷಿತ್ವೇನೋಚ್ಯತಾಮಿತ್ಯತ ಆಹ – ನಹಿ ಮಹಿದಾಸೋऽಪಿ ಮುನಿತಯೈವೋಚ್ಯತೇ। ವೈಯರ್ಥ್ಯಾದಿತಿ ॥ ಅಸ್ಯಾ ಉಪನಿಷದಃ ಐತರೇಯಸಂಜ್ಞಯೈವ ಇತರಾಪುತ್ರಸ್ಯ ಮಹಿದಾಸಸ್ಯ ಋಷಿತ್ವಸಿದ್ಧ್ಯಾ ತದುಕ್ತಿನೈಷ್ಫಲ್ಯಾದಿತ್ಯರ್ಥಃ ।**

**ಯದ್ವಾ – ಋಷಿಮಾತ್ರತ್ವೇ ಮಹಿದಾಸಸ್ಯ ''ಇತಃಪ್ರದಾನಾ ಹ್ಯೇತ ಇತಃ ಸಮ್ಭೃತಾಃ'' ಇತ್ಯಾದಿನಾ**

**ದೇವತಾಪದಪ್ರದಾತೃತ್ವಂ ತತ್ಪೋಷಕತ್ವಮಿತ್ಯಾದೀನಾಂ ತಮುಪಾಸ್ಯಬ್ರಹ್ಮಧರ್ಮಾಣಾಮುಕ್ತೇರೈಷ್ಫಲ್ಯಾದಿತ್ಯರ್ಥಃ ।**

**ಯದ್ವಾ – ಮಹಿದಾಸಸ್ಯ ಮುನಿತ್ವೇನಾಪ್ಯುಕ್ತಿರಿಷ್ಟಾ, ಮುನಿತ್ವೇನೈವೋಕ್ತಿಃ ನತು ಬ್ರಹ್ಮತಯೇತಿ ತು ನ ಯುಕ್ತಮ್, ''ಇತಃಪ್ರದಾನಾಹ್ಯೇತ ಇತಃ ಸಮ್ಭೃತಾಃ'' ಇತ್ಯಾದೀನಾಂ ಬ್ರಹ್ಮಧರ್ಮವಾಚಿನಾಂ ವಿರುದ್ಧಾರ್ಥತ್ವಾದಿತ್ಯರ್ಥಃ॥**

ಅನುವಾದ - ಟೀಕೆಯ ಕಠಿಣಪದಾರ್ಥ ಹೀಗಿದೆ - ''ಏತದ್ವಸ್ಮೈ ತದ್ವಿದ್ವಾನಾಹ ಹಿರಣ್ಯದನ್ ವೈದಃ'' ಏತರೇಯ ಶ್ರುತಿಯಲ್ಲಿ ಇರುವ ಈ ವಾಕ್ಯವು ''ಹಿರಣ್ಯದನ್ ಬೈದಃ'' ಎಂಬ ಇಬ್ಬರು ಋಷಿಗಳನ್ನು ಹೇಳುತ್ತಿದೆ. ಆದರಂತೆ ಏತರೇಯದಲ್ಲಿಯೇ ಪ್ರಸಕ್ತನಾದ ಮಹಿದಾಸನೂ ಸಹ ಋಷಿಯೇ ಆಗಬಹುದಲ್ಲವೇ? ಎಂಬ ಪ್ರಶ್ನೆಗೆ 'ನಹಿ ಮಹಿದಾಸೋಽಪಿ ಮುನಿತಯೈವೋಚ್ಯತೇ' ಎಂಬ ಟೀಕೆಯಿಂದ ಉತ್ತರಿಸುತ್ತಿದ್ದಾರೆ. ಮಹಿದಾಸನನ್ನಾದರೂ ಇಲ್ಲಿ ಮುನಿ ಎಂದು ತಿಳಿಯಬಾರದು. ಏಕೆಂದರೆ 'ವೈಯರ್ಥ್ಯಾತ್' ವ್ಯರ್ಥವಾಗುತ್ತದೆ. ಏಕೆಂದರೆ ಈ ಉಪನಿಷತ್ತಿಗೆ ಏತರೇಯ ಎಂದು ಹೆಸರು. ಈ ಹೆಸರಿನಿಂದಲೇ ಇತರಾದೇವಿಯ ಮಗನಾದ ಮಹಿದಾಸನಿಂದ ಹೊರಹೊಮ್ಮಿದ್ದರಿಂದ ಮಹಿದಾಸನು ಋಷಿಯೆಂದು ಸುಲಭವಾಗಿ ಸಿದ್ಧವಾಗುತ್ತದೆ. ಪುನಃ ಋಷಿ ಎಂದು ಅವನನ್ನು ಪರಿಚಯಿಸುವುದು ವ್ಯರ್ಥ. ಹೀಗೆ ಟೀಕೆಯ ಮಾತುಗಳನ್ನು ಅರ್ಥೈಸಿಕೊಳ್ಳಬೇಕು. ಅಥವಾ ಮಹಿದಾಸನನ್ನು ಬೇರೆ ಋಷಿಗಳಂತೆ ಕೇವಲ ಋಷಿಯೆಂದು ಪರಿಗಣಿಸಿದರೆ ಆಗ ''ಇತಃ ಪ್ರದಾನಾ ಹ್ಯೇತ ಇತಃ ಸಂಭೃತಾ'' ಇತ್ಯಾದಿಯಾಗಿ ಮಹಿದಾಸನಲ್ಲಿ ಕೇಳಿಬರುತ್ತಿರುವ ದೇವತಾಪದಪ್ರದಾತೃತ್ವ ದೇವತಾಪೋಷಕತ್ವ ಮೊದಲಾದ ಧರ್ಮಗಳನ್ನೇ ಹೇಳಿದ್ದು ವ್ಯರ್ಥವಾಗುತ್ತದೆ. ಉಪಾಸ್ಯನಾದ ಬ್ರಹ್ಮನ ಧರ್ಮಗಳನ್ನು ಕೇವಲ ಋಷಿ ಎನಿಸಿಕೊಂಡ ಮಹಿದಾಸನಲ್ಲಿ ಹೇಳುವುದು ವ್ಯರ್ಥವಲ್ಲವೇ? ಅಥವಾ ಮಹಿದಾಸನನ್ನು ಮುನಿಯೆಂದು ಒಪ್ಪಿಕೊಳ್ಳೋಣ ಆದರೆ ಕೇವಲ ಮುನಿಯಾಗಿದ್ದಾನೆ ಹೊರತು ಬ್ರಹ್ಮನಲ್ಲವೆಂಬ ಮಾತು ಅಯುಕ್ತವಾಗಿದೆ. ಏಕೆಂದರೆ ''ಇತಃ ಪ್ರದಾನಾಹ್ಯೇತ ಇತಃ ಸಂಭೃತಾ'' ಇತ್ಯಾದಿಯಾಗಿ ಬ್ರಹ್ಮನ ಧರ್ಮಗಳನ್ನು ಹೇಳುವ ಮಾತುಗಳಿಂದ ವಿರೋಧ ಬರುತ್ತದೆ. ಹೀಗೆ ಮೂರು ಬಗೆಯಲ್ಲಿ ಟೀಕೆಯ ಮಾತನ್ನು ಅರ್ಥೈಸಿಕೊಳ್ಳಬೇಕು.

**ಪ್ರಕಾಶಃ** – ಅಧಿಕರಣಾನ್ತೇ ಟೀಕಾಯಾಂ ''ನಹಿ ಮಹಿದಾಸೋ ಮುನಿತಯೈವೋಚ್ಯತೇ, ವೈಯರ್ಥ್ಯಾದಿವ'' ಇತ್ಯೇತದ್ವಾಕ್ಯೇ ವೈಯರ್ಥ್ಯಾದಿತ್ಯಯುಕ್ತಮ್, ಋಷಿಜ್ಞಾನಾರ್ಥತ್ವಾದಿತ್ಯತೋಽವತಾರ್ಯಾರ್ಥಮಾಹ – **ನನ್ವಿತಿ ॥ ಋಷಿತ್ವೇತಿ ॥** ಋಷಿಜ್ಞಾನಸ್ಯಾನ್ಯಥಾಸಿದ್ಧೇರಿತ್ಯರ್ಥಃ । ''ವೈಯರ್ಥ್ಯಾತ್'' ಇತ್ಯತ್ರ ಪ್ರತಿಯೋಗಿನಮಧ್ಯಾಹೃತ್ಯಾರ್ಥಾನ್ತರಮಾಹ – **ಯದ್ವೇತಿ ॥** ಇತಃ ಪ್ರದಾನಂ ಯೇಷಾನ್ತ ಇತಿ ಪದದಾತೃತ್ವಂ, 'ಸಮ್ಭೃತಾಃ' ಇತಿ ಪೋಷಕತ್ವಮಿತಿ ಧ್ಯೇಯಮ್ । 'ತಮುಪಾಸ್ಯಾನಾಂ ಬ್ರಹ್ಮಧರ್ಮಾಣಾಮಿತ್ಯರ್ಥಃ । ವಿಶಬ್ದಸ್ಯ ವಿರುದ್ಧಾರ್ಥತ್ವಂ ಮತ್ವಾಽನ್ಯಥಾ ಯೋಜಯತಿ – **ಯದ್ವೇತಿ ॥** ಶಿಷ್ಟಂ ಸುಗಮಮಿತಿ ಭಾವಃ ।

ವಿವರಣೆ - ಟೀಕೆಯ ಕಠಿಣಪದಾರ್ಥವನ್ನು ಅಧಿಕರಣ ಕೊನೆಯಲ್ಲಿ ನಿರೂಪಿಸುತ್ತಿದ್ದಾರೆ. ''ನಹಿ ಮಹಿದಾಸೋ ಮುನಿತಯೈವೋಚ್ಯತೇ । ವೈಯರ್ಥ್ಯಾದೇವ'' ಎಂಬ ಟೀಕಾ ಮಾತಿನಲ್ಲಿ ''ವೈಯರ್ಥ್ಯಾದೇವ'' ಎಂದು ಹೇಳಿದ್ದು ತಪ್ಪಲ್ಲವೇ? ಋಷಿ ಎಂದು ತಿಳಿಸುವುದಕ್ಕಾಗಿ ಹಾಗೇ ಹೇಳಿದ್ದಾರೆಂದು ಪ್ರಶ್ನಿಸಿದರೆ ಟೀಕೆಯ ವಾಕ್ಯಕ್ಕೆ ಅವತಾರಿಕೆಯನ್ನು ನೀಡಿ ಉತ್ತರವನ್ನು ನೀಡುತ್ತಿದ್ದಾರೆ 'ನನು' ಇತ್ಯಾದಿಯಾಗಿ. 'ಋಷಿತ್ವಸಿದ್ಧ್ಯೈ' ಎಂಬ ಪದಕ್ಕೆ ಋಷಿ ಎಂಬ ಜ್ಞಾನವು ಅನ್ಯಥಾಸಿದ್ಧವಾಗಿದೆ ಎಂದು ಅರ್ಥ. 'ವೈಯರ್ಥ್ಯಾತ್' ಎಂಬಲ್ಲಿ ಪ್ರತಿಯೋಗಿಪದವನ್ನು ಅಧ್ಯಾಹಾರ ಮಾಡಿಕೊಂಡು ಮತ್ತೊಂದು ವಾಕ್ಯವನ್ನು 'ಯದ್ವಾ' ಇತ್ಯಾದಿ ವಾಕ್ಯದಿಂದ ಹೇಳುತ್ತಿದ್ದಾರೆ. 'ಇತಃ ಪ್ರದಾನಂ ಯೇಷಾಂ ತೇ' ಎಂಬುದಾಗಿ ದೇವತಾಪದದಾತೃತ್ವವನ್ನು ಹೇಳಿದ್ದಾರೆ. 'ಸಂಭೃತಾಃ' ಎಂಬುದರಿಂದ ಪೋಷಕತ್ವವನ್ನು ಹೇಳಿದ್ದಾರೆಂದು ತಿಳಿಯಬೇಕು. ಉಪಾಸ್ಯವಾದದ್ದು ಬ್ರಹ್ಮಧರ್ಮಗಳೆಂದು ಅನ್ವಯ. 'ವೈಯರ್ಥ್ಯಾತ್' ಎಂಬಲ್ಲಿರುವ 'ವಿ' ಎಂಬ ಶಬ್ದಕ್ಕೆ 'ವಿರುದ್ಧ' ಎಂಬರ್ಥವನ್ನು ವಿವಕ್ಷಿಸಿ. ಮತ್ತೊಂದು ಬಗೆಯಲ್ಲಿ ವ್ಯಾಖ್ಯಾನಿಸುತ್ತಿದ್ದಾರೆ. 'ಯದ್ವಾ' ಇತ್ಯಾದಿಯಾಗಿ. ಈ ಅಧಿಕರಣದ ಟೀಕೆಯಲ್ಲಿರುವ ಉಳಿದ ಪದಗಳ ಅರ್ಥವನ್ನು ಶಿಷ್ಯರೇ ಸುಲಭವಾಗಿ ತಿಳಿಯಬಹುದು.

## ಪ್ರಥಮಪಾದದಲ್ಲಿ ಹನ್ನೆರಡು ಅಧಿಕರಣಗಳ ಪೆಟ್ಟಿಗೆ

ತಾತ್ಪರ್ಯಚನ್ದ್ರಿಕಾ

**अत्र चाद्या पञ्चाधिकरणी समन्वयविशेषाप्रतिपादकत्वादध्यायपादबहिर्भूता तदुपोद्घातत्वेनैका पेटिका । तत्राप्याद्यं शास्त्रमात्रोपोद्घातरूपम् । इतरा चतुरधिकरणी तु शास्त्रान्तर्गताऽपि अध्यायोपोद्घातरूपा । आनन्दमयाधिकरणमारभ्यापादपरिसमाप्ति समन्वयपरत्वेन एका महापेटिका ।**

**तत्राप्यानन्दमयान्तरधिकरणे बहुविषयपूर्वपक्षयुक्तत्वेन, अन्तरादिचतुरधिकरणी तु साक्षादानन्दमयाक्षेपकपूर्वपक्षयुक्तत्वेन, तत्राप्याकाशादित्रयमन्तरधिकरणन्यायातिदेशकत्वेन भूते प्रसिद्धनामविषयकत्वेन चैकाऽवान्तरपेटिकेत्याचूह्यम् ।**

**शब्दास्सामान्याधिदैवाधिभूताध्यात्मगोचराः ।**
**ससूक्ता अधिवेदस्थाः सलिङ्गाश्चात्र चिन्तिताः ॥**

**अस्मिंश्च पादे –**

''आनन्दमयः'' इत्यत्र सामान्यशब्दाः, ''अन्तः'' इत्यत्र अधिदैवगताः, ''आकाशः'' इत्यत्र अधिभूतगताः, ''अत एव प्राणः'' इत्यत्र अध्यात्मगताः,

**''ಜ್ಯೋತಿಃ'' ಇತ್ಯತ್ರ ಸೂಕ್ತಸಹಿತಾಃ, ''ಛನ್ದ'' ಇತ್ಯತ್ರ ಅಧಿವೇದಗತಾಃ, ''ಪ್ರಾಣಸ್ತಥಾ'' ಇತ್ಯತ್ರ ಲಿಙ್ಗಸಹಿತಾಃ ಶಬ್ದಾ ವಿಚಾರಿತಾ ಇತಿ ॥ ಇತ್ಯನ್ತಿಮಪ್ರಾಣಾಧಿಕರಣಮ್ ॥ ೧೨ ॥**

**ಇತಿ ಶ್ರೀಮದ್ಬ್ರಹ್ಮಣ್ಯತೀರ್ಥಪೂಜ್ಯಪಾದಾನಾಂ ಶಿಷ್ಯೇಣ**
**ಶ್ರೀವ್ಯಾಸಯತಿನಾ ವಿರಚಿತಾಯಾಂ**
**ಶ್ರೀಮದ್ಭಾಷ್ಯಟೀಕಾವಿವೃತೌ ತಾತ್ಪರ್ಯಚನ್ದ್ರಿಕಾಯಾಂ ಪ್ರಥಮಾಧ್ಯಾಯಸ್ಯ ಪ್ರಥಮಃ ಪಾದಃ ॥**

ಅನುವಾದ - ಪ್ರಥಮಾಧ್ಯಾಯದ ಪ್ರಥಮಪಾದದಲ್ಲಿ ಮೊದಲ ಐದು ಅಧಿಕರಣಗಳು 'ಪಂಚಾಧಿಕರಣ'ಗಳೆನಿಸಿವೆ. ಇವುಗಳಲ್ಲಿ ಯಾವುದೇ ಶಬ್ದಗಳ ಸಮನ್ವಯವನ್ನು ಖುದ್ದಾಗಿ ಮಾಡಿರುವುದಿಲ್ಲ. ಆದ್ದರಿಂದ ಅಧ್ಯಾಯದಲ್ಲಾಗಲೀ ಅಥವಾ ಪಾದದಲ್ಲಾಗಲೀ ಇದು ಅಂತರ್ಭೂತವಾಗುವುದಿಲ್ಲ. ಆದ್ದರಿಂದ ಈ ಐದು ಅಧಿಕರಣಗಳು ಉಪೋದ್ಘಾತರೂಪವಾಗಿ ಒಂದು ಪೆಟ್ಟಿಗೆಯಾಗಿದೆ. ಈ ಐದು ಅಧಿಕರಣಗಳಲ್ಲಿ ಮೊದಲನೆಯ 'ಜಿಜ್ಞಾಸಾಧಿಕರಣವು' ಸಮಗ್ರ ಶಾಸ್ತ್ರಕ್ಕೆ ಉಪೋದ್ಘಾತರೂಪವಾಗಿದೆ. ಆದ್ದರಿಂದ 'ಶಾಸ್ತ್ರಮಾತ್ರೋಪೋದ್ಘಾತತ್ವ' ಎಂಬುದು ಜಿಜ್ಞಾಸಾಧಿಕರಣದ ಅವಾಂತರ ಪೆಟ್ಟಿಗೆ (ಒಳಪೆಟ್ಟಿಗೆ). ಉಳಿದ ನಾಲ್ಕು ಅಧಿಕರಣಗಳು ಶಾಸ್ತ್ರದಲ್ಲಿ ಸೇರಿರುವುದರಿಂದ ಪ್ರಥಮಾಧ್ಯಾಯಕ್ಕೆ ಉಪೋದ್ಘಾತರೂಪವಾಗಿದೆ.

ಆದ್ದರಿಂದ ಅಧ್ಯಾಯೋಪೋದ್ಘಾತತ್ವ ಎಂಬುದು ಇವುಗಳ 'ಅವಾಂತರ ಪೆಟ್ಟಿಗೆ'.

ಆನಂದಮಯಾಧಿಕರಣದಿಂದ ಪ್ರಾರಂಭಿಸಿ ಪಾದ ಮುಗಿಯುವ ತನಕ ಇರುವ ಅಧಿಕರಣಗಳಿಗೆ 'ಸಮನ್ವಯಪರತ್ವ' ಎಂಬುದು 'ಮಹಾಪೆಟ್ಟಿಗೆ'. ಆದರಲ್ಲಿಯೂ ಸಹ ಆನಂದಮಯಾಧಿಕರಣಕ್ಕೆ ಬಹುವಿಷಯಪೂರ್ವಪಕ್ಷಯುಕ್ತತ್ವ ಎಂಬುದು ಅವಾಂತರಪೆಟ್ಟಿಗೆ. ಅಂತರಧಿಕರಣದಿಂದ ಪ್ರಾರಂಭಿಸಿ ನಾಲ್ಕು ಅಧಿಕರಣಗಳಿಗೆ 'ಸಾಕ್ಷಾದಾನಂದಮಯಾಕ್ಷೇಪಕಪೂರ್ವಪಕ್ಷಯುಕ್ತತ್ವ' ಎಂಬುದು ಅವಾಂತರ ಪೆಟ್ಟಿಗೆ. ಅವುಗಳಲ್ಲಿಯೂ ಆಕಾಶಾಧಿಕರಣದಿಂದ ಮೂರು ಅಧಿಕರಣಗಳಿಗೆ 'ಅಂತರಧಿಕರಣನ್ಯಾಯಾತಿದೇಶಕತ್ವ' ಎಂಬುದು ಮತ್ತು 'ಭೂತೇ ಪ್ರಸಿದ್ಧನಾಮವಿಷಯಕತ್ವ' ಎಂಬುದು ಅವಾಂತರಪೆಟ್ಟಿಗೆ ಹೀಗೆ ಪೇಟಿಕಾಸಂಗತಿಗಳನ್ನು ಸ್ವತಃ ಊಹಿಸಿಕೊಳ್ಳಬೇಕು.

ಶಬ್ದಸ್ಯಾಮಾನ್ಯಾಧಿದೈವಾಧಿಭೂತಾಧ್ಯಾತ್ಮಗೋಚರಾಃ।
ಸಸೂಕ್ತಾ ಅಧಿವೇದಸ್ಥಾಃ ಸಲಿಂಗಾಶ್ಚಾತ್ರ ಚಿಂತಿತಾಃ ॥

ಅನೇಕವಿಧವಾದ ಶಬ್ದಗಳನ್ನು ಈ ಪಾದದಲ್ಲಿ ಸಮನ್ವಯ ಮಾಡಲಾಗಿದೆ.

'ಆನಂದಮಯಃ' ಎಂಬ ಸೂತ್ರದಲ್ಲಿ ಸಾಮಾನ್ಯವಾಚಕ ಶಬ್ದಗಳನ್ನು ಸಮನ್ವಯ ಮಾಡಲಾಗಿದೆ.

ಅಂತರಧಿಕರಣದಲ್ಲಿ ಅಧಿದೈವಗತವಾದ ಶಬ್ದಗಳನ್ನು ಆಕಾಶಾಧಿಕರಣದಲ್ಲಿ ಅಧಿಭೂತಗತವಾದ ಶಬ್ದಗಳನ್ನು ಪ್ರಾಣಾಧಿಕರಣದಲ್ಲಿ ಅಧ್ಯಾತ್ಮಗತಶಬ್ದಗಳನ್ನು ಸಮನ್ವಯ ಮಾಡಲಾಗಿದೆ.

ಜ್ಯೋತಿರಧಿಕರಣದಲ್ಲಿ ಸೂಕ್ತಸಹಿತವಾದ ಶಬ್ದಗಳನ್ನು, ಗಾಯತ್ರ್ಯಧಿಕರಣದಲ್ಲಿ ಆಧಿವೇದಗತವಾದ ಶಬ್ದಗಳನ್ನು, ಅಂತಿಮಪ್ರಾಣಾಧಿಕರಣದಲ್ಲಿ ಲಿಂಗಸಹಿತವಾದ ಶಬ್ದಗಳ ಸಮನ್ವಯವನ್ನು ವಿಚಾರ ಮಾಡಲಾಗಿದೆ.

ಇಲ್ಲಿಗೆ ತಾತ್ಪರ್ಯಚಂದ್ರಿಕೆಯ ಕನ್ನಡಾನುವಾದದಲ್ಲಿ
ಅಂತಿಮಪ್ರಾಣಾಧಿಕರಣವು ಸಂಪೂರ್ಣವಾಯಿತು.

**ಪ್ರಕಾಶಃ** – ಏತತ್ಪಾದೀಯದ್ವಾದಶಾಧಿಕರಣಾನಾಂ ಪ್ರಮೇಯಸ್ಯ ಸುಜ್ಞಾನಾಯ ಪೇಟಿಕಾಸಙ್ಗತಿಮಾಹ – **ಅತ್ರೇತಿ** ॥ ಸಮನ್ವಯಸೂತ್ರೇ ಸಾಮಾನ್ಯತಃ ಪ್ರತಿಪಾದನಾತ್ 'ವಿಶೇಷ' ಇತ್ಯುಕ್ತಮ್ । ಸಮನ್ವಯಾಪ್ರತಿಪಾದನೇ ಕಿಮರ್ಥಮತ್ರ ನಿವೇಶ ಇತ್ಯತ ಉಕ್ತಂ – **ಉಪೋದ್ಘಾತತ್ವೇನೇತಿ** । ಏತಚ್ಚೇಕ್ಷತ್ಯಧಿಕರಣೇ ಸ್ಪಷ್ಟಮ್ ॥ **ತತ್ರಾಪ್ಯಾಯಮಿತಿ** ॥ ಯಥಾ ಚೈತತ್ ತಥೋಕ್ತಂ ಜಿಜ್ಞಾಸಾಧಿಕರಣೇ ॥ **ಯುಕ್ತತ್ವೇನೇತಿ** ॥ **'ಏಕಾऽವಾನ್ತರಪೇಟಿಕಾ'** ಇತ್ಯನ್ವಯಃ । ಆದಿಪದೇನ ಚ್ಛನ್ದಃಪ್ರಾಣಾಧಿಕರಣಯೋಃ ಬಹ್ವೃಶ್ರುತಿಲಿಙ್ಗವಿಷಯತ್ವೇನ ವಾ ಜ್ಯೋತಿಃ ಪ್ರಾಣದ್ವಾರಾऽऽನನ್ದಮಯಾಕ್ಷೇಪಕತ್ವೇನ ವಾ ಅನ್ಯತ್ರಪ್ರಸಿದ್ಧಶ್ರುತಿಲಿಙ್ಗೋತ್ಕೀರ್ತನಸ್ಯ ಪ್ರಯೋಜನೋಕ್ತಿಪರತ್ವೇನ ವಾ ಏಕಾ ಪೇಟಿಕಾ । ಏವಮುತ್ತರಪಾದೇಷ್ವಪಿ ಧ್ಯೇಯಮಿತಿ ಭಾವಃ ।

ಸಪ್ತಾನಾಮಪ್ಯಧಿಕರಣಾನಾಂ ವಿಷಯೋಪಾಧೀನ್ ಸಙ್ಗೃಹ್ಯ ವಿಶದಯತಿ – **ಶಬ್ದಾ ಇತಿ** ॥ ಗುಣಿಸಾಮಾನ್ಯವಾಚಕಾ ಇತ್ಯರ್ಥಃ । **ಲಿಙ್ಗೇತಿ** ॥ ಪೂರ್ವಪಕ್ಷಪ್ರಾಪಕಾನೇಕಲಿಙ್ಗಸಹಿತಾ ಇತ್ಯರ್ಥಃ ॥ **ಶಬ್ದಾ ಇತಿ** ॥ ನಾಮಾತ್ಮಕಾ ವಿಷ್ಣೌ ಸಮನ್ವಿತಾ ಇತ್ಯರ್ಥಃ ॥ ಚ ॥

**ಅನ್ತಿಮಪ್ರಾಣಾಧಿಕರಣಂ ಸಮ್ಪೂರ್ಣಮ್ ॥**
**ಇತಿ ಶ್ರೀಮತ್ಸರ್ವತನ್ತ್ರಸ್ವತನ್ತ್ರಸುಧೀನ್ದ್ರತೀರ್ಥಗುರುಪಾದಶಿಷ್ಯರಾಘವೇನ್ದ್ರಯತಿಕೃತೇ**
**ಚನ್ದ್ರಿಕಾಪ್ರಕಾಶೇ ಪ್ರಥಮಾಧ್ಯಾಯಸ್ಯ ಪ್ರಥಮಃ ಪಾದಃ ಸಮ್ಪೂರ್ಣಮ್ ॥೧॥**

ವಿವರಣೆ - ಈ ಪಾದದಲ್ಲಿ ಒಟ್ಟು ಹನ್ನೆರಡು ಅಧಿಕರಣಗಳಿವೆ, ಅವುಗಳ ಪ್ರಮೇಯವನ್ನು ಸುಲಭವಾಗಿ ತಿಳಿಸುವುದಕ್ಕಾಗಿ ಪೇಟಿಕಾಸಂಗತಿಯನ್ನು 'ಅತ್ರ' ಇತ್ಯಾದಿ ಗ್ರಂಥದಿಂದ ಹೇಳುತ್ತಿದ್ದಾರೆ. ಸಮನ್ವಯ ಸೂತ್ರದಲ್ಲಿ ಸಾಮಾನ್ಯವಾಗಿ ಶಬ್ದಸಮನ್ವಯವನ್ನು ಹೇಳಿದ್ದರಿಂದ 'ವಿಶೇಷ' ಎಂಬ ಪದವನ್ನು ಗ್ರಂಥಕಾರರು ಹೇಳಿದ್ದಾರೆ. ಐದು ಅಧಿಕರಣಗಳು ಸಮನ್ವಯವನ್ನು ಮಾಡದಿದ್ದಲ್ಲಿ ಇಲ್ಲೇಕೆ ಸೇರಿಸಬೇಕು ಎಂಬ ಪ್ರಶ್ನೆಗೆ 'ಉಪೋದ್ಘಾತತ್ವೇನ' ಎಂದು ವಿವರಿಸಿದ್ದಾರೆ. ಈ ಐದು ಅಧಿಕರಣಗಳು ಉಪೋದ್ಘಾತವಾದ್ದರಿಂದ ಇಲ್ಲಿಯೇ ಸೇರಿಸಲು ಅರ್ಹವಾಗಿವೆ ಎಂಬ ವಿಚಾರವನ್ನು ಈಕ್ಷತ್ಯಧಿಕರಣದಲ್ಲಿ ಸ್ಪಷ್ಟಪಡಿಸಲಾಗಿದೆ. 'ತತ್ರಾಪಿ ಆದ್ಯಂ' ಎಂಬುದಕ್ಕೆ ಜಿಜ್ಞಾಸಾಧಿಕರಣದಲ್ಲಿ ಹೇಳಿದ್ದನ್ನು ಸ್ಮರಿಸಿಕೊಳ್ಳಬೇಕು. 'ಯುಕ್ತತ್ವೇನ' ಎಂಬ ಪದಕ್ಕೆ 'ಅವಾಂತರಪೇಟಿಕಾ' ಎಂಬಲ್ಲಿ ಅನ್ವಯ. ಆದಿಪದಿಂದ ಹೀಗೆ ತಿಳಿಯಬೇಕು. ಗಾಯತ್ರ್ಯಧಿಕರಣ ಹಾಗೂ

ಪ್ರಾಣಾಧಿಕರಣದಲ್ಲಿ ಬಹುಶ್ರುತಿಲಿಂಗವಿಷಯತ್ವ ಎಂಬುದು ಅವಾಂತರ ಪೆಟ್ಟಿಗೆ. ಅಥವಾ 'ಜ್ಯೋತಿಃ-ಪ್ರಾಣದ್ವಾರಾऽऽನಂದಮಯಾಕ್ಷೇಪಕತ್ವ' ಎಂಬುದು ಅವಾಂತರಪೆಟ್ಟಿಗೆ. ಅಥವಾ ಅನ್ಯತ್ರಪ್ರಸಿದ್ಧವಾದ ಶ್ರುತಿಲಿಂಗಗಳಿಗೆ ಪ್ರಯೋಜವನ್ನು ಹೇಳುವಿಕೆ ಅವಾಂತರಪೆಟ್ಟಿಗೆ. ಇದರಂತೆ ಮುಂದಿನ ಪಾದಗಳಲ್ಲಿಯೂ ತಿಳಿಯಬೇಕು.

ಆನಂದಮಯಾಧಿಕರಣದಿಂದ ಪ್ರಾರಂಭಿಸಿ ಏಳು ಅಧಿಕರಣಗಳಲ್ಲಿರುವ ವಿಷಯೋಪಾದಿಗಳನ್ನು ಸಂಗ್ರಹಿಸಿ 'ಶಬ್ದಾಃ' ಇತ್ಯಾದಿ ವಾಕ್ಯದಿಂದ ನಿರೂಪಿಸುತ್ತಿದ್ದಾರೆ. 'ಶಬ್ದಾಃ' ಎಂದರೆ ಗುಣಸಾಮಾನ್ಯ-ವಾಚಕಶಬ್ದಗಳು ಎಂದರ್ಥ. ಲಿಂಗ ಎಂದರೆ ಪೂರ್ವಪಕ್ಷಪ್ರಾಪಕವಾದ ಅನೇಕ ಲಿಂಗಗಳಿಂದ ಸಹಿತ-ವಾದವುಗಳು ಎಂದರ್ಥ. 'ಶಬ್ದಾಃ' ಎಂದರೆ ನಾಮಾತ್ಮಕವಾದ ವಿಷ್ಣುವಿನಲ್ಲಿಯೇ ಸಮನ್ವಯ ಮಾಡ-ಬೇಕಾದ ಸಮನ್ವಯಗಳು ಎಂದರ್ಥ.

ಇಲ್ಲಿಗೆ ಪ್ರಕಾಶಟಪ್ಪಣಿಯ ಕನ್ನಡಾನುವಾದದಲ್ಲಿ ಅಂತಿಮಪ್ರಾಣಾಧಿಕರಣ ಪ್ರಥಮಧ್ಯಾಯದ ಪ್ರಥಮ ಪಾದವು ಮುಕ್ತಾಯವಾಯಿತು.

* * * * * * *

ಶ್ರೀಕೃಷ್ಣಾರ್ಪಣಮಸ್ತು.

ಗುರುರಾಜೀಯಮ್ – ವಚನಕ್ರಿಯಾಯಾಮನ್ಯಯೋಗವ್ಯವಚ್ಛೇದಕೈವಕಾರಸ್ವಾರಸ್ಯಾರ್ಥಮಾಹ – **ಯದ್ವೇತಿ** ॥ ಯದ್ವಾऽಸ್ಮಿನ್ನಪಿ ಟೀಕಾಸ್ಥಸ್ಯ ಮುನಿತಯೈವೋಚ್ಯತ ಇತ್ಯತ್ರೈವಕಾರಸ್ಯ ವೈಯರ್ಥ್ಯೆ ಭವತೀತ್ಯತ ಏವಕಾರಸೂಚಿತಂ ಪಕ್ಷಾನ್ತರಮಾಹ – **ಯದ್ವೇತಿ** ॥ ಅನ್ತಿಮಪ್ರಾಣಾಧಿಕರಣಂ ಸಮ್ಪೂರ್ಣಮ್ ॥ ೧೨ ॥

**ಇತಿ ಶ್ರೀವಿದ್ಯಾಧೀಶಪೂಜ್ಯಪಾದಶಿಷ್ಯೇಣ ಕೇಶವಭಟ್ಟಾರಕೇಣ ವಿರಚಿತಾಯಾಂ ಚನ್ದ್ರಿಕಾವಾಕ್ಯವಿವೃತೌ ಭಾವದೀಪಿಕಾಯಾಂ ಪ್ರಥಮಾಧ್ಯಾಯಸ್ಯ ಪ್ರಥಮಃಪಾದಃ ॥ ೧ ॥**

**॥ ಶ್ರೀಮಧ್ವೇಶಾರ್ಪಣಮಸ್ತು ॥**

# ೧೧೨- ಅಂತಿಮಪ್ರಾಣಾಧಿಕರಣ

ಭಾಗ -೩

ನ್ಯಾಯವಿವರಣ, ನ್ಯಾಯವಿವರಣಟೀಕಾ,

ಅಣುಭಾಷ್ಯ, ತತ್ವಮಂಜರೀ,

ತಂತ್ರದೀಪಿಕಾ, ನ್ಯಾಯಮುಕ್ತಾವಳಿಃ,

ಸೂತ್ರಾರ್ಥರತ್ನಾವಳಿಃ

## ಶ್ರೀಮದಾನನ್ದತೀರ್ಥಭಗವತ್ಪಾದಾಚಾರ್ಯವಿರಚಿತಂ
# ನ್ಯಾಯವಿವರಣಮ್

**ನ ಚಾऽನನ್ಯಥಾಸಿದ್ಧತ್ವಮನ್ಯತ್ರ ಶ್ರುತಿಲಿಙ್ಗಾದೇಃ ।**
**ಅನ್ಯಗತಲಿಙ್ಗಾऽऽದೀನಾಮಪಿ ತದ್ಗತಭಗವದಪೇಕ್ಷಯಾ ಯುಕ್ತೇಃ ॥೧೨॥**

**ಇತಿ ನ್ಯಾಯವಿವರಣೇ ಪ್ರಥಮಾಧ್ಯಾಯಸ್ಯಃ ಪ್ರಥಮಃ ಪಾದಃ**

ಇಂದ್ರಾದಿಗಳಲ್ಲಿರುವ ಇಂದ್ರಶ್ರುತಿ ಹಾಗೂ ರುದ್ರಹನನಾದಿ ಲಿಂಗಗಳು ನಿರವಕಾಶಗಳಾಗಿವೆ ಎಂದು ಹೇಳಬಾರದು. ಏಕೆಂದರೆ, ಇಂದ್ರಾದಿಗಳಲ್ಲಿದ್ದರೂ ಇಂದ್ರಾದಿಗಳ ಅಂತರ್ಯಾಮಿಯಾದ ಭಗವಂತನಲ್ಲಿ ಮುಖ್ಯವಾಗಿ ಇರುತ್ತವೆ. ಮತ್ತು ಇಂದ್ರಾದಿಗಳಲ್ಲಿರುವ ಈ ಧರ್ಮಗಳೆಲ್ಲವೂ ಭಗವಂತನ ಅಧೀನವಾಗಿ ಇರುತ್ತವೆ. ಆದ್ದರಿಂದ ಇಂದ್ರಪ್ರಾಣ ಮೊದಲಾದ ಶಬ್ದಗಳಿಂದೆಲ್ಲ ಭಗವಂತನೇ ಪ್ರತಿಪಾದ್ಯನಾಗುತ್ತಾನೆ.

## ಶ್ರೀ ಜಯತೀರ್ಥವಿರಚಿತಾ ನ್ಯಾಯವಿವರಣಪಞ್ಜಿಕಾ

॥ ಶ್ರೀಃ ॥ ॐ ಪ್ರಾಣಸ್ತಥಾऽನುಗಮಾತ್ ॐ ॥ ನನು, ಗತಾऽರ್ಥಮಿದಮಧಿಕರಣಮ್; ಸರ್ವಾಸಾಂ ಪ್ರಾಣವಿದ್ಯಾನಾಂ ''ಅತ ಏವ ಪ್ರಾಣಃ'' ಇತ್ಯನೇನೈವ ಭಗವದ್ವಿಷಯತಾಯಾಃ ಸಮರ್ಥಿತತ್ವಾತ್ । ಮೈವಮ್; ವಿದ್ಯಾವಿಶೇಷೇऽಧಿಕಾऽಶಙ್ಕ್ಯಾ ಪುನಃ ಪ್ರತ್ಯವಸ್ಥಾನಾತ್ । ತರ್ಹಿ, ತದನನ್ತರಮೇವೇದಂ ಪಠಿತವ್ಯಮ್ । ಮೈವಮ್; ಗಾಯತ್ರ್ಯಧಿಕರಣಸಿದ್ಧಾನ್ತನ್ಯಾಯಾऽವಲಮ್ಬೇನಾऽತ್ರ ಪೂರ್ವಪಕ್ಷೋऽತ್ಥಾನಾದಿತ್ಯಾಶಯವಾನ್ ಪೂರ್ವಪಕ್ಷನ್ಯಾಯಂ ವಿವೃಣ್ವನ್ಪ್ರತಿಷೇಧತಿ ॥ ನ ಚಾऽನನ್ಯಥೇತಿ ॥ ಅನ್ಯತ್ರ, ಭಗವತೋऽನ್ಯವಿಷಯಸ್ಯ ಶ್ರುತ್ಯಾದೇಃ । ಅನನ್ಯಥಾಸಿದ್ಧತ್ವಂ, ನಿರವಕಾಶತ್ವಮ್ । ಕಥಂ, ಇನ್ದ್ರಶ್ರುತಿಸ್ತಾವನ್ನಿರವಕಾಶಾ; ''ಇನ್ದ್ರೋ ವೈ ವೃತ್ರಂ ಹತ್ವಾ ಮಹಾನಭೂತ್'' ಇತಿ, ಪ್ರಕೃತಸ್ಯೈವ, ''ವಿಶ್ವಾಮಿತ್ರ ಹ್ಯೇತದಹಃ ಶಂಸಿಷ್ಯನ್ತಮಿನ್ದ್ರ ಉಪನಿಷಸಾದ-'' ಇತ್ಯನುಸನ್ಧಾನಾತ್ । ವೃತ್ರಹನನಂ, ಮಹಾವ್ರತಯಾಜಿತ್ವಂ ಚ ಲಿಙ್ಗಂ ನಿರವಕಾಶಮ್; ಯಥೇನ್ದ್ರಿಯೈಃ ಸಹಾऽಭಿಧಾನಂ, ಪ್ರಾಣಸಂವಾದಾದಿಕಂ ಚ ನಿರವಕಾಶಮ್ । ತತ್ಸಮಭಿವ್ಯಾಹೃತಪ್ರಾಣಶ್ರುತಿರಪ್ಯೇವಮೇವ ।

ಶತಾऽऽಯುಷ್ಟ್ವಾऽऽದಿಲಿಙ್ಗಂ ಚ ನಿರವಕಾಶಮ್ । ತತ್ಸಹಚರಿತಾ ಪುರುಷಶ್ರುತಿರಪಿ ತಥೈವ । ಆದಿಪದೇನ ''ಪ್ರಾಣೋ ವಾ ಅಹಮಸ್ಮೀ''ತಿ । ವಾಕ್ಯಂ ಗೃಹ್ಯತೇ । ತಸ್ಯ ಚ ನಿರವಕಾಶತ್ವ-

मुक्तश्रुतिलिङ्गसाहचर्याद्गम्यते । कुतोऽनन्यथासिद्धत्वमित्यत आह – अन्यगतेति ॥ इन्द्रादिगतानामपि लिङ्गाऽऽदीनां वृत्रवधादीनां मुख्यतस्तदन्तर्यामिभगवत्-सम्बन्धित्वात्, तदपेक्षया सावकाशत्वात् । तथा चोक्तं –''शास्त्रदृष्ट्या''ति, ''उपासात्रैविध्यादि''ति च ।

प्राक् श्रुतिलिङ्गाऽऽदेरित्युक्तम्; तत्प्राबल्यापेक्षया, इदानीं लिङ्गाऽऽदीनामिति वचनं, लिङ्गनिरवकाशतयैव श्रुत्यादिनिरवकाशतापूर्वपक्ष इति सूचनार्थम् ॥

**इति श्रीमदानन्दतीर्थभगवत्पादाचार्यविरचितन्यायविवरणपञ्जिकायां**

**प्रथमाऽध्यायस्य प्रथमः पादः ॥ श्रीः।**

ಈ ಅಂತಿಮಪ್ರಾಣಾಧಿಕರಣವು ಗತಾರ್ಥವಾಗಿದೆ. ಏಕೆಂದರೆ ಪ್ರಾಣಶಬ್ದವಿರುವ ಎಲ್ಲ ಶ್ರುತಿಗಳನ್ನು 'ಅತ ಏವ ಪ್ರಾಣಃ' ಎಂಬ ಸೂತ್ರದಿಂದ ಭಗವಂತನಲ್ಲಿ ಸಮರ್ಥಿಸಿದ್ದಾಗಿದೆಯಲ್ಲವೇ? ಎಂಬ ಶಂಕೆಯು ತಪ್ಪು. ಐತರೇಯೋಪನಿಷತ್ತಿನಲ್ಲಿ ಪ್ರಸಕ್ತವಾಗುವ ಪ್ರಾಣವಿದ್ಯೆಯಲ್ಲಿ ಅಧಿಕಾಶಂಕೆಯು ಇರುವುದರಿಂದ ಪುನಃ ಜಿಜ್ಞಾಸೆಯು ಹುಟ್ಟುತ್ತದೆ. ಹಾಗಾದರೆ ಹಿಂದಿನ ಪ್ರಾಣಾಧಿಕರಣದ ಅನಂತರವೇ ಇದನ್ನು ಉಲ್ಲೇಖಿಸಬೇಕಿತ್ತಲ್ಲವೇ? ಹೌದು; ಆದರೆ ಗಾಯತ್ರ್ಯಧಿಕರಣದ ಸಿದ್ಧಾಂತದ ನ್ಯಾಯವನ್ನು ಅವಲಂಬಿಸಿ ಈ ಅಧಿಕರಣದಲ್ಲಿ ಪೂರ್ವಪಕ್ಷವು ಹುಟ್ಟುತ್ತಿರುವುದರಿಂದ ಅಲ್ಲಿ ಇದನ್ನು ಉಲ್ಲೇಖಿಸಿಲ್ಲ. ಪ್ರಕೃತ ಈ ಅಧಿಕರಣದ ಪೂರ್ವಪಕ್ಷನ್ಯಾಯವನ್ನು ವಿವರಿಸಿ ನಿರಾಕರಿಸುತ್ತಿದ್ದಾರೆ ''ನಚಾನನ್ಯಥಾ'' ಎಂಬುದಾಗಿ. ಅನ್ಯತ್ರ ಎಂಬ ಪದಕ್ಕೆ ಭಗವಂತನನ್ನು ಬಿಟ್ಟು ಉಳಿದ ವಿಷಯವನ್ನು ಪ್ರತಿಪಾದಿಸುವ ಶ್ರುತ್ಯಾದಿಗಳಲ್ಲಿ ಎಂದರ್ಥ. ಅನನ್ಯಥಾಸಿದ್ಧತ್ವಂ ಎಂದರೆ ನಿರವಕಾಶವಾಗಿರುವಿಕೆ ಎಂದರ್ಥ. ಇಂದ್ರಶ್ರುತಿಯು ಹೇಗೆ ನಿರವಕಾಶವಾಗಿದೆಯೆಂದರೆ 'ಇಂದ್ರೋ ವೈ ವೃತ್ರಂ ಹತ್ವಾ ಮಹಾನಭೂತ್' ಎಂದು ಪ್ರಕೃತನಾದ ಇಂದ್ರನಿಗೆ 'ವಿಶ್ವಾಮಿತ್ರಂ ಹೈತದಹಃ....' ಎಂದು ಅನುಸಂಧಾನಮಾಡಿದ್ದರಿಂದ. ಮತ್ತು ವೃತ್ರಹನನ, ಮಹಾವ್ರತ-ಯಾಜಿತ್ವ ಮೊದಲಾದ ಲಿಂಗಗಳು ನಿರವಕಾಶಗಳಾಗಿವೆ. ಯಾವರೀತಿಯಾಗಿ ಇಂದ್ರಿಯಗಳ ಜೊತೆಗೆ ಸಹಾಭಿಧಾನವು ಮತ್ತು ಪ್ರಾಣಸಂವಾದಾದಿಗಳು ನಿರವಕಾಶಗಳಾಗಿವೆಯೋ ಅದರಂತೆ ತತ್ಸಮಭಿವ್ಯಾಹತವಾದ ಪ್ರಾಣಶ್ರುತಿಯು ಸಹ ನಿರವಕಾಶವಾಗಿದೆ.

ಶತಾಯುಷ್ಟ್ವಾದಿ ಜೀವನ ಲಿಂಗವೂ ಸಹ ನಿರವಕಾಶವಾಗಿದೆ. ತತ್ಸಹಚರಿತವಾದ ಪುರುಷಶ್ರುತಿಯೂ ಸಹ ನಿರವಕಾಶವಾಗಿದೆ. ಆದಿಪದದಿಂದ 'ಪ್ರಾಣೋ ವಾ ಅಹಮಸ್ಮಿ' ಎಂಬ ವಾಕ್ಯವನ್ನು ಸ್ವೀಕರಿಸಬೇಕು. ಈ ಶ್ರುತಿಯು ನಿರವಕಾಶವೆಂದು ಹಿಂದೆ ಹೇಳಲ್ಪಟ್ಟ ಶ್ರುತಿಹಾಗೂ ಲಿಂಗಗಳ ಸಾಹಚರ್ಯದಿಂದ ತಿಳಿಯುತ್ತದೆ.

ಇವುಗಳು ಅನನ್ಯಥಾಸಿದ್ಧಲಿಂಗವೆಂದು ಹೇಗೆ ತಿಳಿಯುತ್ತದೆ ಎಂಬ ಪ್ರಶ್ನೆಗೆ 'ಅನ್ಯಗತ' ಎಂಬುದರಿಂದ ಉತ್ತರಿಸುತ್ತಿದ್ದಾರೆ. ವೃತ್ರಹನನಾದಿ ಲಿಂಗಗಳೆಲ್ಲ ಇಂದ್ರಾದಿಗಳಲ್ಲಿದ್ದರೂ ಮುಖ್ಯವಾಗಿ ಇಂದ್ರಾದಿಗಳ ಅಂತರ್ಯಾಮಿಯಾದ ಭಗವಂತನಲ್ಲೇ ಇರುತ್ತವೆ. ಆದ್ದರಿಂದ ಇಂದ್ರಾದಿಗಳಲ್ಲಿ ಸಾವಕಾಶವಾಗಿವೆ. ಆದ್ದರಿಂದಲೇ 'ಶಾಸ್ತ್ರದೃಷ್ಟ್ಯಾ' ಎಂದು ಮತ್ತು 'ಉಪಾಸಾತ್ರೈವಿಧ್ಯಾತ್' ಎಂದು ಹೇಳಿದ್ದಾರೆ.

ಹಿಂದೆ 'ಶ್ರುತಿಲಿಂಗಾದೇಃ' ಎಂದು ಹೇಳಿದ್ದರು, ಆದರೆ ಈಗ 'ಲಿಂಗಾದೀನಾಂ' ಎನ್ನುತ್ತಿದ್ದಾರೆ. ಏಕೆಂದರೆ ಶ್ರುತಿಯು ಪ್ರಬಲವೆಂಬ ವಿವಕ್ಷೆಯಿಂದ ಹಿಂದೆ ಶ್ರುತಿಯನ್ನು ಮೊದಲು ಪರಿಗಣಿಸಿದ್ದರು. ಆದರೆ ಈಗ ಲಿಂಗವನ್ನು ನಿರವಕಾಶವೆಂದು ಒಪ್ಪಿ ಶ್ರುತ್ಯಾದಿಗಳ ನಿರವಕಾಶತ್ವವನ್ನು ಹೇಳುವ ಮೂಲಕ ಪೂರ್ವಪಕ್ಷವನ್ನು ಮಾಡಬೇಕು. ಇದನ್ನು ಸೂಚಿಸುವುದಕ್ಕಾಗಿ ಲಿಂಗವನ್ನು ಮೊದಲು ಇಲ್ಲಿ ಪರಿಗಣಿಸಿದ್ದಾರೆ.

श्रीमदानन्दतीर्थभगवत्पादाचार्यविरचितम्

# अणुभाष्यम्;

श्रीमद्राघवेन्द्रतीर्थविरचिततत्त्वमञ्जर्या समेतम्

# अन्तिमप्राणाधिकरणम्

प्राणपदप्रवृत्तिनिमित्तगुणलाभस्य प्रणेतेत्यनेनैव उक्तत्वात् प्राणस्तथेत्येतत्सङ्ग्रहो न कृतः ।

यद्वा नन्वथापि प्रणेता विष्णुरित्ययुक्तम् । **''चक्षुः श्रोत्रं मनो वाक् प्राणः''** इत्यैतरेये श्रुतस्य प्राणशब्दितस्य प्रणेतुः चक्षुरादीन्द्रियसहपाठेन्द्रियसंवादादिना मुख्यप्राणस्य **''प्राणो वा अहमस्मि''** इतीन्द्रेण आत्मनः प्राणतादात्म्येक्तेः इन्द्रस्य **''यच्छतं वर्षाणि पुरुषायुषो भवन्ति''** इति जीवलिङ्गेन जीवत्वस्य च अवगमात् । वाक्यभेदेन त्रितयपरत्वोपपत्तेश्चेत्यत उक्तम् – प्राणस्तथाऽनुगमादिति सूत्रचतुष्टयम् ॥

ಅಣುಭಾಷ್ಯದಲ್ಲಿ ಅಂತಿಮಪ್ರಾಣಾಧಿಕರಣದ ಸಾರವನ್ನು ಪ್ರತ್ಯೇಕವಾಗಿ ಸಂಗ್ರಹಿಸಿಲ್ಲ. ಪ್ರಾಣಪದದ ಪ್ರವೃತ್ತಿನಿಮಿತ್ತವಾದ ಗುಣವನ್ನು 'ಪ್ರಣೇತಾ' ಎಂಬ ಪದವೇ ಹೇಳುತ್ತದೆ. ಆದ್ದರಿಂದ ಹಿಂದಿನ ಪ್ರಾಣಾಧಿ -ಕರಣದ ಸಾರವನ್ನು ಹೇಳುವ ಪ್ರಣೇತಾ ಎಂಬ ಪದದಿಂದಲೇ ಈ ಅಧಿಕರಣದ ಸಾರವನ್ನೂ ಸಹ ತಿಳಿಯಬೇಕು.

ಅಥವಾ ಪ್ರಣೇತೃತ್ವವು ವಿಷ್ಣುವಿನ ಧರ್ಮವೆಂದು ಹೇಳಿರುವುದು ಸರಿಯಲ್ಲ. ಏಕೆಂದರೆ, 'ಚಕ್ಷುಃ ಶ್ರೋತ್ರಂ ಮನೋ ವಾಕ್ ಪ್ರಾಣಃ' ಎಂಬುದಾಗಿ ಐತರೇಯಶ್ರುತಿಯಲ್ಲಿ ಪ್ರಾಣಶಬ್ದದಿಂದ ಪ್ರಣೇತೃತ್ವವು ಕೇಳಿಸುತ್ತಿದೆ. ಮತ್ತು ಚಕ್ಷುರಾದಿ ಇಂದ್ರಿಯಗಳ ಜೊತೆಗೆ ಪಠಿತವಾಗಿದೆ. ಮತ್ತು ಇಂದ್ರಿಯಗಳೊಡನೆ

ಸಂವಾದವೂ ಸಹ ಕೇಳಿಸುತ್ತಿದೆ. ಈ ಎಲ್ಲ ಕಾರಣಗಳಿಂದ ಮುಖ್ಯಪ್ರಾಣನೇ ಪ್ರಾಣನೆನಿಸುತ್ತಾನೆ. ಅಥವಾ ಪ್ರಾಣೋ ವಾ ಅಹಮಸ್ಮಿ' ಎಂಬುದಾಗಿ ದೇವೇಂದ್ರನು ತನ್ನನ್ನೇ ಪ್ರಾಣನೆಂದು ಹೇಳಿದ್ದರಿಂದ, ಪ್ರಾಣಶಬ್ದವು ದೇವೇಂದ್ರನನ್ನು ಪ್ರತಿಪಾದಿಸಬಹುದು.

ಅಥವಾ 'ಯಚ್ಛತಂ ವರ್ಷಾಣಿ ಪುರುಷಾಯುಷೋ ಭವಂತಿ' ಇತ್ಯಾದಿಯಾಗಿ ಶತಾಯುಷ್ಟ್ವವೆಂಬ ಜೀವನ ಲಿಂಗವು ಕೇಳಿಸುತ್ತಿರುವುದರಿಂದ ಪ್ರಾಣಶಬ್ದವು ಜೀವನನ್ನೂ ಸಹ ಹೇಳಬಹುದು. ಹೀಗೆ ವಾಕ್ಯಭೇದದಿಂದ ಐತರೇಯದಲ್ಲಿ ಕೇಳಿಸುತ್ತಿರುವ ಪ್ರಾಣಶಬ್ದವು ಮೂವರಲ್ಲಿ ಯಾರೊಬ್ಬರನ್ನೂ ಸಹ ಪ್ರತಿಪಾದಿಸಬಹುದಲ್ಲವೇ? ಎಂಬ ಪ್ರಶ್ನೆಗೆ ಉತ್ತರರೂಪವಾಗಿ "ಪ್ರಾಣಸ್ತಥಾನುಗಮಾತ್" ಇತ್ಯಾದಿಯಾದ ನಾಲ್ಕು ಸೂತ್ರಗಳು ಹೊರಟಿವೆ.

ತದರ್ಥಃ – **ಇತ್ಯಾದ್ಯೈಃ ಪ್ರಸಿದ್ಧೈರನ್ಯವಸ್ತುಷು ॥ ಉಚ್ಯತೇ ವಿಷ್ಣುರೇವೈಕಃ ಸರ್ವೈಃ ಸರ್ವಗುಣತ್ವತಃ ॥** ಇತಿ । ಮುಖ್ಯಪ್ರಾಣಾದಿರೂಪಾನ್ಯಪ್ರಾಪಕಪ್ರಬಲಲಿಙ್ಗೋಪೇತಪ್ರಾಣಾದ್ಯೈಃ ಸರ್ವೈರನ್ಯವಸ್ತುಷು ಪ್ರಸಿದ್ಧೈಃ ಶಬ್ದೈರೇಕೋ ವಿಷ್ಣುರೇವೋಚ್ಯತೇ । ನ ತು ಮುಖ್ಯಪ್ರಾಣಾದಿರನೇಕಃ । ಯೇನ ವಾಕ್ಯಭೇದ ಆಶ್ರೀಯೇತ । ಕುತಃ । **ಸರ್ವಗುಣತ್ವತಃ** । ''**ತಂ ದೇವಾಃ ಪ್ರಾಣಯನ್ತ**'' ''**ತಂ ದೇವಾ ಭೂತಿರಿತ್ಯುಪಾಸಾಞ್ಚಕ್ರಿರೇ**'' '**ತದಯಂ ಪ್ರಾಣೋऽಧಿತಿಷ್ಠತಿ**' ಇತ್ಯಾದಿನೋಕ್ತೈತತ್ಪ್ರಕರಣಸ್ಥದೇವೋಪಾಸ್ಯತ್ವದೇಹಾಖ್ಯರಥಾಧಿಷ್ಠಾತೃತ್ವಾದಿ ಸರ್ವ-ಗುಣತ್ವಾತ್ ವಿಷ್ಣೋರಿತ್ಯರ್ಥಃ । ಕೇನ ನಿಮಿತ್ತೇನೋಚ್ಯತೇ । ಸರ್ವಗುಣತ್ವತಃ ।

ಪ್ರಾಗುಕ್ತದಿಶಾ ಸರ್ವಜೀವನಹೇತುತ್ವಾದಿರೂಪಪ್ರಾಣಾದಿತತ್ತಚ್ಛಬ್ದಪ್ರವೃತ್ತಿನಿಮಿತ್ತಗುಣವತ್ತ್ವಾತ್ ಅನ್ಯಗತಂ ಪ್ರತಿ ಸ್ವಾತನ್ತ್ರ್ಯಾಚ್ಚ । ನ ಚ ಅನ್ಯಲಿಙ್ಗವಿರೋಧಃ । **ಸರ್ವಗುಣತ್ವತಃ** । ಪ್ರಾಣ-ಸಂವಾದಾದ್ಯನ್ಯಲಿಙ್ಗರೂಪಸರ್ವಗುಣವತ್ತ್ವಾದಿತ್ಯರ್ಥಃ । ಪ್ರಾಣಸಂವಾದಾದಿಶತಾಯುಷ್ಕರೂಪಸ್ಯ ಇನ್ದ್ರೋಕ್ತ-ಪ್ರಾಣತಾದಾತ್ಮ್ಯಸ್ಯ ಚ ತತ್ಸ್ಥಿತಾನ್ತರ್ಯಾಮಿಣ್ಯುಪಪತ್ತೇಃ । ನ ಚ ''**ಉದಾಸೀನವದಾಸ್ತಾಂ ತೌ ಕೇಶವಶ್ಚಾಬ್ಜಸಮ್ಭವಃ**'' ಇತಿ ಸ್ಮೃತಿವಿರೋಧಃ । ಸರ್ವಗುಣತ್ವತಃ । ಅನ್ತರ್ಯಾಮಿಣಃ ತದೀಯ-ಪ್ರಾಣಸಂವಾದಿಸರ್ವಗುಣತ್ವಾತ್ । ಸ್ಮೃತೇಸ್ತು ತತೋ ಬಾಹ್ಯರೂಪವಿಷಯತ್ವೇನೋಪಪತ್ತೇರಿತಿ ।

ಇದರ ಅರ್ಥವನ್ನೇ 'ಇತ್ಯಾದ್ಯೈಃ ಪ್ರಸಿದ್ಧೈರನ್ಯವಸ್ತುಷು । ಉಚ್ಯತೇ ವಿಷ್ಣುರೇವೈಕಃ ಸರ್ವೈಃ ಸರ್ವಗುಣತ್ವತಃ ॥'' ಎಂದು ಅಣುಭಾಷ್ಯದಲ್ಲಿ ಸಂಗ್ರಹಿಸಲಾಗಿದೆ.

ವಸ್ತುತಃ ಮುಖ್ಯಪ್ರಾಣಾದಿಗಳನ್ನು ಪ್ರಾಣಶಬ್ದವಾಚ್ಯರೆನ್ನಲು ಪ್ರಬಲವಾದ ಲಿಂಗ ಮೊದಲಾದ ಪ್ರಮಾಣಗಳಿವೆ. ಆದರೂ ಸಹ ಅನ್ಯವಸ್ತುಗಳಲ್ಲಿ ಪ್ರಸಿದ್ಧವಾದ ಎಲ್ಲ ಶಬ್ದಗಳಿಂದಲೂ ವಿಷ್ಣುವೊಬ್ಬನೇ ಪ್ರತಿಪಾದ್ಯನಾಗುತ್ತಾನೆ. ಹೊರತು ಮುಖ್ಯಪ್ರಾಣಾದಿಗಳೆಲ್ಲರೂ ಪ್ರತಿಪಾದ್ಯರಾಗುವುದಿಲ್ಲ. ಹಾಗೆ ಅನೇಕರನ್ನು ಪ್ರತಿಪಾದ್ಯರೆಂದು ಒಪ್ಪಿದರೆ, ವಾಕ್ಯಭೇದದೋಷವು ಬರುತ್ತದೆ. ಏಕೆಂದರೆ, ''ಸರ್ವಗುಣ-ತ್ವತಃ'' ಎಂದು ಉತ್ತರ. ಆಂದರೆ, 'ತಂ ದೇವಾಃ ಪ್ರಾಣಯಂತ, 'ತಂ ದೇವಾಃ ಭೂತಿರಿತ್ಯುಪಾಸಾಂ ಚಕ್ರಿರೇ' 'ತದಯಂ ಪ್ರಾಣೋऽಧಿತಿಷ್ಠತಿ' ಇತ್ಯಾದಿಯಾಗಿ ಈ ಪ್ರಕರಣದಲ್ಲಿ ಪ್ರತಿಪಾದ್ಯವಾದ ದೇವೋಪಾಸ್ಯತ್ವ

ದೇಹರೂಪವಾದ ರಥಾಧಿಷ್ಠಾತೃತ್ವ ಮೊದಲಾದ ಲಿಂಗಗಳೆಲ್ಲವೂ ಸಕಲಗುಣಪೂರ್ಣನಾದ ವಿಷ್ಣುವಿನಲ್ಲೇ ಬರುತ್ತವೆ. ಯಾವ ಕಾರಣದಿಂದ ಎಂದರೆ, ಸರ್ವಗುಣತ್ವತಃ ಸಕಲಗುಣಗಳುಳ್ಳವನಾದ್ದರಿಂದ.

ಹಿಂದೆ ಹೇಳಿದ ಪ್ರಕಾರ ಸರ್ವಜೀವನಹೇತುತ್ವ ಮೊದಲಾದ ಪ್ರಾಣಾದಿಶಬ್ದಪ್ರವೃತ್ತಿನಿಮಿತ್ತದಿಂದ ತಿಳಿಯುವ ಗುಣಗಳೆಲ್ಲವೂ ಭಗವಂತನಲ್ಲಿಯೇ ಇರುತ್ತವೆ. ಬೇರೆಯವರಲ್ಲಿದ್ದರೂ ಅದಕ್ಕೆ ಭಗವಂತನೇ ನಿಯಾಮಕನಾಗಿರುತ್ತಾನೆ. ಹೀಗೆ ಹೇಳಿದಾಗ ಮುಖ್ಯಪ್ರಾಣಾದಿಗಳ ಲಿಂಗದ ವಿರೋಧವು ಬರುವುದಿಲ್ಲ. ಇದಕ್ಕೂ ಸಹ ಸರ್ವಗುಣತ್ವತಃ ಎಂಬುದೇ ಉತ್ತರ. ಅಂದರೆ ಪ್ರಾಣಸಂವಾದವೇ ಮೊದಲಾದ ಲಿಂಗ-ಗಳೆಲ್ಲವೂ ಸರ್ವಗುಣವುಳ್ಳ ಪರಮಾತ್ಮನಲ್ಲೇ ಇರುತ್ತವೆ. ಪ್ರಾಣಸಂವಾದ, ಶತಾಯುಷ್ಟ್ವ, ಇಂದ್ರೋಕ್ತ ಪ್ರಾಣತಾದಾತ್ಮ್ಯ ಎಲ್ಲವೂ ಸಹ ಆಯಾ ಜೀವಿಗಳ ಅಂತರ್ಯಾಮಿಯಾದ ಭಗವಂತನಲ್ಲಿಯೇ ಕೂಡುತ್ತದೆ.

'ಉದಾಸೀನವದಾಸ್ತಾಂ ತೌ ಕೇಶವಶ್ಚಾಬ್ಜಸಂಭವಃ' ಎಂಬ ಸ್ಮೃತಿವಿರೋಧವೂ ಸಹ ಬರುವುದಿಲ್ಲ. ಏಕೆಂದರೆ ಸರ್ವಗುಣತ್ವತಃ ಎಂದೇ ಉತ್ತರ. ಅಂತರ್ಯಾಮಿಯಾದ ಭಗವಂತನು ಆಯಾ ಜೀವಿಗಳಲ್ಲಿರುವ ಪ್ರಾಣಸಂವಾದಾದಿ ಗುಣಗಳಿಂದ ಕೂಡಿದ್ದಾನೆ. ಭಗವಂತ ಬಾಹ್ಯರೂಪದ ವಿವಕ್ಷೆ- ಯಿಂದ ಸ್ಮೃತಿಯು ಔದಾಸೀನ್ಯವನ್ನು ಹೇಳುತ್ತಿದೆ.

**ನ ಚಾನ್ತರ್ಯಾಮ್ಯುಕ್ತಿಃ ನಾಭಿಮತಾ । ಸರ್ವಗುಣತ್ವತಃ । ''ಸ ಇದಂ ಬ್ರಹ್ಮ ತತಮಮ್'' ಇತಿ, ''ಏತಯಾ ದ್ವಾರಾ ಪ್ರಾಪದ್ಯತೇ'' ಇತಿ, ''ಇತ್ಯಾಹ ಮಹಿದಾಸಃ'' ಇತಿ ವ್ಯಾಪ್ತತ್ವಾನ್ತಸ್ಥತ್ವ-ಬಹಿಷ್ಠತ್ವಗುಣವತ್ತ್ವೋಕ್ತೇರಿತ್ಯರ್ಥಃ ।**

**ನ ಚ ತ್ರಿತಯೋಕ್ತಿಃ ವ್ಯರ್ಥಾ । ಸರ್ವಗುಣತ್ವತಃ । ಉಪಾಸನಾರ್ಥೆ ಸರ್ವಾನ್ ತ್ರಿವಿಧಾಧಿಕಾರಿಣಃ ಪ್ರತಿ ಗುಣತ್ವಾದನುರೂಪತ್ವಾದಿತಿ ।**

ಅಂತರ್ಯಾಮಿಯನ್ನೇ ವಿವಕ್ಷಿಸಬೇಕೆಂದು ಸರ್ವಗುಣತ್ವತಃ ಎಂಬುದರಿಂದಲೇ ಉತ್ತರಿಸಿದ್ದಾರೆ. ಏಕೆಂದರೆ 'ಸ ಇದಂ ಬ್ರಹ್ಮ ತತಮ್' 'ಏತಯಾ ದ್ವಾರಾ ಪ್ರಾಪದ್ಯತೇ' 'ಇತ್ಯಾಹ ಮಹಿದಾಸಃ' ಇವೇ ಮೊದಲಾದ ಶ್ರುತಿವಾಕ್ಯಗಳಿಂದ ವಾಪ್ತತ್ವ, ಅಂತಃಸ್ಥತ್ವ, ಬಹಿಷ್ಠತ್ವ ಮೊದಲಾದ ಸಕಲಗುಣಗಳು ಪರಮಾತ್ಮನಲ್ಲಿರುವುದೇ ಸ್ಪಷ್ಟವಾಗುತ್ತದೆ.

ಮೂರು ಗುಣಗಳನ್ನು ಹೇಳಿದ್ದು ವ್ಯರ್ಥವಲ್ಲ. ಏಕೆಂದರೆ ಸರ್ವಗುಣತ್ವತಃ ಎಂದೇ ಉತ್ತರ. ಉಪಾಸನೆಗೋಸ್ಕರ ಮೂರುವಿಧ ಅಧಿಕಾರಿಗಳಿಗೆ ಯೋಗ್ಯತಾಭೇದದಿಂದ ಮೂರು ರೂಪಗಳು ಹೇಳಲ್ಪಟ್ಟವೆ.

**ಪಾದಾರ್ಥಮುಪಸಂಹರತಿ । ಇತ್ಯಾದೈರಿತಿ । ಸಮನ್ವಿತಪೂರ್ಣಾನನ್ದಾದಿಶಬ್ದಾನಾಂ ಇತ್ಯಾದೈರಿತಿ ಪರಾಮರ್ಶಃ ।**

**॥ ಇತಿ ಶ್ರೀಬ್ರಹ್ಮಸೂತ್ರಾಣುಭಾಷ್ಯವಿವೃತೌ ತತ್ತ್ವಮಞ್ಜರ್ಯಾಂ**
**ರಾಘವೇನ್ದ್ರಯವಿಕೃತಾಯಾಂ ಪ್ರಥಮಾಧ್ಯಾಯಸ್ಯ ಪ್ರಥಮಃ ಪಾದಃ ॥**

ಸಮಸ್ತಪಾದದ ಪ್ರಮೇಯವನ್ನು ಉಪಸಂಹಾರ ಮಾಡುತ್ತಿದ್ದಾರೆ. 'ಇತ್ಯಾದ್ಯೈಃ ಪ್ರಸಿದ್ಧೈರನ್ಯ-ವಸ್ತುಷು' ಎಂಬುದಾಗಿ. 'ಇತ್ಯಾದ್ಯೈಃ' ಎಂಬುದರಿಂದ ಈ ಪಾದದಲ್ಲಿ ಸಮನ್ವಯಮಾಡಿದ ಪೂರ್ಣಾ-ನಂದಾದಿಶಬ್ದಗಳನ್ನು ಪರಾಮರ್ಶಿಸಿದ್ದಾರೆ.

## ಶ್ರೀ ರಾಘವೇಂದ್ರತೀರ್ಥವಿರಚಿತಾ

# ತನ್ತ್ರದೀಪಿಕಾ

## ಅನ್ತಿಮಪ್ರಾಣಾಧಿಕರಣಮ್

**॥ ॐ प्राणस्तथाऽनुगमात् ॐ ॥ ೧-೧-೨೮**

**ಅತ್ರ ನಯೇऽನ್ಯಪ್ರಾಪಕಬಹುಲಿಙ್ಗಯುತನಾಮಸಮನ್ವಯ ಉಚ್ಯತೇ । ಏತರೇಯೇ ಬಹುಕೃತ್ವಃ "ತಾ ವಾ ಏತಾ" ಇತ್ಯಾರಭ್ಯ ಶ್ರುತಃ ಪ್ರಾಣೋ ಯಥಾ "ತದ್ವೈ ತ್ವಂ ಪ್ರಾಣ" ಇತ್ಯಯಂ ಬ್ರಹ್ಮ ತಥಾ ಅಯಂ ಚ ತತ್ತು ಬ್ರಹ್ಮೈವ । ನ ತ್ವಿನ್ದ್ರಜೀವಮುಖ್ಯಪ್ರಾಣಾಃ । ಕುತಃ? ಬ್ರಹ್ಮಶಬ್ದದೇವೋಪಾಸ್ಯತ್ವಾದಿತಚ್ಛ್ರುತಿಲಿಙ್ಗಾನಾ-ಮಸ್ಮಿನ್ ಪ್ರಕರಣೇऽನುಗಮಾದನುವೃತ್ತೇರಭ್ಯಾಸಾದಿತ್ಯರ್ಥಃ ।**

**ತಥೇತ್ಯುಕ್ತಿಸ್ತತ್ರೋಕ್ತಜೀವನಹೇತುತ್ವರೂಪಪ್ರಾಣಪದಪ್ರವೃತ್ತಿನಿಮಿತ್ತಸತ್ತ್ವಸ್ಮಾರಣಾರ್ಥಾ । "ತಥಾ ಪ್ರಾಣಾಃ ತಥಾऽನ್ಯತ್ರಪ್ರತಿಷೇಧಾತ್" ಇತ್ಯಾದಿವತ್ । ಯದ್ವಾ ಅಸ್ಯಾನ್ಯತ್ವೇ ಪ್ರಾಚೀನೋऽಪ್ಯನ್ಯ ಇತಿ ನ ಶಙ್ಕ್ಯಮ್ । ಸ ಚಾಯಂ ಚ ಬ್ರಹ್ಮೈವೇತಿ ವಕ್ತುಂ ತಥೇತ್ಯುಕ್ತಿಃ । ಅನುಗಮಾದಿತ್ಯುಕ್ತಿರೇತತ್ಪ್ರಕರಣಸ್ಯ ವೈಷ್ಣವತ್ವೋಕ್ತ್ಯರ್ಥಾ ।**

ಪ್ರಾಣಸ್ತಥಾನುಗಮಾತ್ - ಈ ಅಧಿಕರಣದಲ್ಲಿ ವಿಷ್ಣುವಿಗಿಂತ ಅನ್ಯರಾದ ಮುಖ್ಯಪ್ರಾಣಾದಿಗಳಿಗೆ ಸಂಬಂಧಿಸಿದ ಅನೇಕ ಲಿಂಗಗಳಿಂದ ಕೂಡಿದ ನಾಮಾತ್ಮಕಶಬ್ದದ ಸಮನ್ವಯವನ್ನು ಮಾಡಲಾಗುತ್ತಿದೆ. ಐತರೇಯೋಪನಿಷತ್ತಿನಲ್ಲಿ 'ತಾ ವಾ ಏತಾಃ' ಎಂದು ಪ್ರಾರಂಭವಾಗಿ ಕೇಳಿಸುತ್ತಿರುವ ಪ್ರಾಣನು 'ತದ್ ವೈ ತ್ವಂ ಪ್ರಾಣಃ' ಎಂದು ತೃತ್ತೀರೀಯದಲ್ಲಿ ಶ್ರುತನಾಗಿರುವ ಪ್ರಾಣನು ಹೇಗೆ ಬ್ರಹ್ಮನಾಗಿದ್ದಾನೋ, ತಥಾ = ಆದರಂತೆ ಪ್ರಾಣಃ = ಈ ಪ್ರಾಣನೂ, ತತ್ತು = ಸಹ ಬ್ರಹ್ಮನೇ ಆಗಿದ್ದಾನೆ. ಹೊರತು ಇಂದ್ರ ಜೀವ ಮುಖ್ಯಪ್ರಾಣಾದಿಗಳು ಪ್ರಾಣಶಬ್ದವಾಚ್ಯರಾಗುವುದಿಲ್ಲ. ಏಕೆಂದರೆ ಈ ಪ್ರಕರಣದಲ್ಲಿ ಬ್ರಹ್ಮನಿಗೆ ಸಂಬಂಧಿಸಿದ

ಬ್ರಹ್ಮಶಬ್ದ ದೇವೋಪಾಸ್ಯತ್ವ ಮೊದಲಾದ ಶ್ರುತಿ ಹಾಗೂ ಲಿಂಗಗಳು ಆನುಗಮಾತ್ = ಆನುವೃತ್ತವಾಗಿವೆ. ಅಂದರೆ ಅನೇಕಬಾರಿ ಕೇಳಿಸುತ್ತಿರುವುದರಿಂದ ಎಂದರ್ಥ.

ಸೂತ್ರದಲ್ಲಿರುವ ತಥಾ ಎಂಬ ವಚನವು ಯುಕ್ತಿಗಳ ಸ್ಮರಣೆಯನ್ನು ತಂದುಕೊಡುತ್ತದೆ. ಯಾವರೀತಿಯಾಗಿ 'ತಥಾ ಪ್ರಾಣಾಃ ತಥಾऽನ್ಯತ್ ಪ್ರತಿಷೇಧಾತ್' ಇತ್ಯಾದಿ ಸೂತ್ರಗಳಲ್ಲಿ ತಥಾಶಬ್ದವು ಹಿಂದಿನ ಸೂತ್ರಗಳಲ್ಲಿರುವ ಯುಕ್ತಿಯನ್ನು ಸ್ಮರಣೆಗೆ ತಂದು ಕೊಡುತ್ತದೋ ಆದರಂತೆ ಈ ಸೂತ್ರದಲ್ಲಿರುವ ತಥಾ ಶಬ್ದವೂ ಸಹ ಹಿಂದಿನ ಪ್ರಾಣಾಧಿಕರಣದಲ್ಲಿ ಹೇಳಲ್ಪಟ್ಟ ಪ್ರಾಣಪದಪ್ರವೃತ್ತಿ- ನಿಮಿತ್ತವೆನಿಸಿದ ಜೀವನಹೇತುತ್ವವೆಂಬ ಯುಕ್ತಿಯನ್ನು ಸ್ಮರಿಸಿಕೊಡುತ್ತದೆ.

ಅಥವಾ ಈ ಐತರೇಯೋಪನಿಷತ್ತಿನಲ್ಲಿ ಕೇಳಿಸುತ್ತಿರುವ ಪ್ರಾಣನು ಬ್ರಹ್ಮನಾಗದಿದ್ದಲ್ಲಿ ಹಿಂದಿನ ತೈತ್ತಿರೀಯೋಪನಿಷತ್ತಿನಲ್ಲಿ ಶ್ರುತನಾದ ಪ್ರಾಣನೂ ಸಹ ಬ್ರಹ್ಮನಾಗುವುದಿಲ್ಲ ಎಂದು ಶಂಕಿಸಬಾರದು. ತೈತ್ತಿರೀಯದಲ್ಲಿ ಹಾಗೂ ಐತರೇಯದಲ್ಲಿ ಪ್ರಸಕ್ತನಾಗಿರುವ ಪ್ರಾಣನು ಒಬ್ಬನೇ ಬ್ರಹ್ಮನಾಗಿದ್ದಾನೆ. ಈ ವಿಚಾರವನ್ನು ತಿಳಿಸಲೂ ಸಹ ತಥಾ ಎಂದು ಸೂತ್ರದಲ್ಲಿ ಹೇಳಿದ್ದಾರೆ. ಈ ಪ್ರಕರಣವು ವಿಷ್ಣುಸಂಬಂಧಿಯಾಗಿದೆ ಎಂದು ಸೂಚಿಸಲು ಆನುಗಮಾತ್ ಎಂದು ಹೇಳಿದ್ದಾರೆ.

ಉಕ್ತಮಾಕ್ಷಿಪ್ಯ ಸಮಾಧತ್ತೇ -

**॥ ॐ ನ ವುಕ್ತರಾತ್ಮೋಪದೇಶಾದಿತಿ ಚೇದಧ್ಯಾತ್ಮ-**
**ಸಮ್ಬನ್ಧಭೂತಾ ಹ್ಯಸ್ಮಿನ್ ॐ ॥ ೧-೧-೨೯**

**ವಕ್ತುರ್ಬೃಹತೀಸಹಸ್ರಂ ವಕ್ತುರ್ವಿಶ್ವಾಮಿತ್ರಸ್ಯೇನ್ದ್ರೇಣ ''ಪ್ರಾಣೋ ವಾ ಅಹಮಸ್ಮ್ಯೃಷೇ''** ಇತ್ಯಾತ್ಮನ ಏವ ಪ್ರಾಣತಯೋಪದೇಶಾನ್ನ ಪ್ರಾಣೋ ಬ್ರಹ್ಮೇತಿ ಚೇನ್ನೇತಿ ಶೇಷಃ । ಕುತಃ? ಹಿ ಯಸ್ಮಾತ್ ಅಸ್ಮಿನ್ ಪ್ರಕರಣೇऽಧ್ಯಾತ್ಮಂ ದೇಹೇಷು ವಿಷ್ಣುದೇಹಭೂತೇಷ್ವಿನ್ದ್ರವಿಶ್ವಾಮಿತ್ರಾದಿಷು ಸಮ್ಬನ್ಧಭೂಮಾ ಸಮ್ಬನ್ಧಬಾಹುಲ್ಯಮ್, **''ಪ್ರಾಣೋऽಹಂ ಪ್ರಾಣಸ್ತ್ವಂ ಪ್ರಾಣಸ್ಸರ್ವಾಣಿ ಭೂತಾನಿ''** ಇತ್ಯುಕ್ತಬಹ್ವಧ್ಯಾತ್ಮಸಮ್ಬನ್ಧ ಇತಿ ಯಾವತ್, ವ್ಯಪದಿಶ್ಯತೇ ಯತೋऽತಃ ಪ್ರಾಣೋ ವಿಷ್ಣುರಿತ್ಯರ್ಥಃ । ಇನ್ದ್ರೇಣ ಪ್ರಾಣಾಖ್ಯಬ್ರಹ್ಮಣಃ ಸರ್ವಗತತ್ವಮೇವೋಚ್ಯತೇ ನತು ಪ್ರಾಣತ್ವೇನಾತ್ಮೋಪದಿಶ್ಯತ ಇತಿ ಭಾವಃ । ಯದ್ವಾ ಅಸ್ಮಿನ್ನಿನ್ದ್ರೇऽಧಿಕಾತ್ಮನಃ ಸಮ್ಬನ್ಧಭೂಮಾ ಆವೇಶಬಾಹುಲ್ಯಂ ಹಿ ಯಸ್ಮಾದಸ್ತ್ಯತಸ್ತದಪೇಕ್ಷಯಾ **''ಪ್ರಾಣೋ ವಾ ಅಹಮ್''** ಇತ್ಯುಕ್ತಿರಿತ್ಯರ್ಥಃ । ಆತ್ಮೋಪದೇಶಾದಿತ್ಯೇವ ಪೂರ್ವೌ ವಕ್ತುರಿತ್ಯುಕ್ತಿಃ ಶಾಸ್ತ್ರವಕ್ತಾರಂ ಪತಿ ಇನ್ದ್ರಸ್ಯ ನ ವಿಪ್ರಲಮ್ಭ ಇತಿ ಪೂರ್ವಪಕ್ಷೇ ಯುಕ್ತಿಸೂಚಾನಾರ್ಥಾ । ಸಮ್ಬನ್ಧೇತ್ಯುಕ್ತಿರೈಕ್ಯನಿವೃತ್ತ್ಯರ್ಥಾ ॥

ಇಲ್ಲಿಯ ತನಕ ಹೇಳಿದ್ದನ್ನು ಆಕ್ಷೇಪಿಸಿ ಸಮಾಧಾನವನ್ನು ಹೇಳುವುದಕ್ಕಾಗಿ ಮುಂದಿನ ಸೂತ್ರ ಹೊರಡುತ್ತಿದೆ. ವಕ್ತುಃ = ಬೃಹತೀಸಹಸ್ರವನ್ನು ಪಠಿಸಿದ ವಿಶ್ವಾಮಿತ್ರನನ್ನು ಕುರಿತು ದೇವೇಂದ್ರನು 'ಪ್ರಾಣೋ ವಾ ಅಹಮಸ್ಮಿ ಋಷೇ' ಎಂಬುದಾಗಿ ತನ್ನನ್ನೇ ಪ್ರಾಣನು ಎಂದು ಉಪದೇಶಿಸಿಕೊಂಡಿದ್ದಾನೆ. ಇಲ್ಲಿರುವ

ಪ್ರಾಣಶಬ್ದಕ್ಕೆ ಬ್ರಹ್ಮನಲ್ಲವೆಂಬರ್ಥವನ್ನು ಹೇಳಬಾರದು. ಏಕೆಂದರೆ, ಹಿ = ಯಾವ ಕಾರಣದಿಂದ, ಅಸ್ಮಿನ್ = ಈ ಪ್ರಕರಣದಲ್ಲಿ, ಅಧ್ಯಾತ್ಮಂ = ದೇಹಗಳಲ್ಲಿ ಅಂದರೆ ವಿಷ್ಣುವಿನ ದೇಹವೆನಿಸಿದ ಇಂದ್ರ ವಿಶ್ವಾಮಿತ್ರ ಮೊದಲಾದವರಲ್ಲಿ ಸಂಬಂಧಭೂಮಾ = ಬಹಳವಾದ ಸಂಬಂಧವು ಅಂದರೆ 'ಪ್ರಾಣೋಽಹಂ ಪ್ರಾಣಸ್ತ್ವಂ ಪ್ರಾಣಃ ಸರ್ವಾಣಿ ಭೂತಾನಿ' ಎಂಬುದಾಗಿ ಬಹಳವಾದ ಅಧ್ಯಾತ್ಮಸಂಬಂಧವು ಹೇಳಲ್ಪಟ್ಟದೆಯೋ ಆ ಕಾರಣದಿಂದ ಪ್ರಾಣನು ವಿಷ್ಣುವೇ ಆಗಿದ್ದಾನೆಂದರ್ಥ. ಇಂದ್ರನಿಂದ ಪ್ರಾಣನೆಂಬ ಬ್ರಹ್ಮನನ್ನೇ ಸರ್ವಗತನೆಂದು ಉಪದೇಶಿಸಲಾಗಿದೆ. ಹೊರತು ತನ್ನನ್ನು ಪ್ರಾಣನೆಂದು ಉಪದೇಶಿಸಿರುವುದಿಲ್ಲವೆಂದು ಭಾವ.

ಅಥವಾ, ಅಸ್ಮಿನ್ = ಈ ಇಂದ್ರನಲ್ಲಿ, ಅಧ್ಯಾತ್ಮಸಂಬಂಧಭೂಮಾ = ಅಧಿಕನಾದ ಆತ್ಮನ ಬಹಳವಾದ ಆವೇಶವು ಯಾವ ಕಾರಣದಿಂದ ಇದೆಯೋ, ಆ ಕಾರಣದಿಂದ 'ಪ್ರಾಣೋ ವಾ ಅಹಮ್' ಎಂದು ಹೇಳಲಾಗಿದೆ ಎಂದರ್ಥ. ಆತ್ಮೋಪದೇಶಾತ್ ಎಂದಷ್ಟೇ ಸೂತ್ರದಲ್ಲಿ ಹೇಳಿದ್ದರೆ ಸಾಕಾಗುತ್ತಿತ್ತು. ಆದರೂ ಸಹ 'ವಕ್ತುಃ' ಎಂದು ಹೇಳಿದ್ದರಿಂದ ಶಾಸ್ತ್ರವನ್ನು ಉಪದೇಶಿಸುವ ದೇವೇಂದ್ರನು ಮತ್ತೊಬ್ಬನನ್ನು ವಂಚಿಸಲಾರ ಎಂಬ ಪೂರ್ವಪಕ್ಷಯುಕ್ತಿಯನ್ನು ಸೂಚಿಸಿದ್ದಾರೆ. ಸಂಬಂಧಪದವನ್ನು ಹೇಳಿದ್ದರಿಂದ ಐಕ್ಯವನ್ನು ನಿರಾಕರಿಸಿದ್ದಾರೆ.

तर्हि प्राणो मय्यस्त्यृषे इत्यादि स्यादित्यत आह

## ॥ ॐ शास्त्रदृष्ट्या तूपदेशो वामदेववत् ॐ ॥ १-१-३०

तुरेव । शास्तीति शास्त्रमन्तर्यामी । ''संविच्छास्त्रं परं पदम्'' इत्यादेः । तद्दृष्ट्यैव ''प्राणो वा अहम्'' इत्युपदेशो न तु तादात्म्येन । वामदेववत् वामदेवोपदेशवत् । यथा वामदेवोऽन्तर्यामिदृष्ट्या ''अहं मनुरभवम्'' इत्याद्याह तद्वदित्यर्थः । अन्तर्यामिदृष्टयेति वाच्ये शास्त्रेत्युक्तिः सर्वशास्तृत्वात् तत्तच्छब्द-वाच्यतेति ज्ञापनार्था । ''तत्तन्नाम्नोच्यते विष्णुस्सर्वशास्तृत्वहेतुतः'' इत्यादेः ।

ಹಾಗಾದರೆ ದೇವೇಂದ್ರನು ನನ್ನಲ್ಲಿ ಪ್ರಾಣನಿದ್ದಾನೆಂದು ಹೇಳಬೇಕಿತ್ತಲ್ಲವೇ? ಎಂಬ ಆಕ್ಷೇಪಕ್ಕೆ ಸಮಾಧಾನವನ್ನು ನೀಡಲು ಮುಂದಿನ ಸೂತ್ರ ಹೊರಟಿದೆ.

ಸೂತ್ರಾರ್ಥ - ತುಶಬ್ದಕ್ಕೆ ಏವ ಎಂದರ್ಥ. ಶಾಸ್ತ್ರದೃಷ್ಟ್ಯಾ = ಶಾಸ್ತೀತಿ ಶಾಸ್ತ್ರಮ್ ಹಾಗೂ 'ಸಂವಿಚ್ಛಾಸ್ತ್ರಂ ಪರಂ ಪದಮ್' ಎಂಬ ಪ್ರಮಾಣದ ಆಧಾರದಿಂದ ಶಾಸ್ತ್ರ ಎಂದರೆ ಅಂತರ್ಯಾಮಿ ಎಂದರ್ಥ. ಆ ಅಂತರ್ಯಾಮಿಯ ದೃಷ್ಟಿಯಿಂದಲೇ ದೇವೇಂದ್ರನು 'ಪ್ರಾಣೋ ವಾ ಅಹಮ್' ಎಂಬುದಾಗಿ ಉಪದೇಶಿಸಿದ್ದಾನೆ; ಹೊರತು ಅಭೇದವಿರುವುದರಿಂದಲ್ಲ. ವಾಮದೇವವತ್ ವಾಮದೇವನ ಉಪದೇಶದಂತೆ ಯಾವರೀತಿಯಾಗಿ ವಾಮದೇವನು ಅಂತರ್ಯಾಮಿ ದೃಷ್ಟಿಯಿಂದ 'ಅಹಂ ಮನುರಭವಮ್' ಎಂದು ತನ್ನನ್ನೇ ಮನುವೆಂದು ಹೇಳಿಕೊಂಡಿದ್ದಾನೋ ಆದರಂತೆ ಎಂದರ್ಥ.

ಅಂತರ್ಯಾಮಿ ದೃಷ್ಟ್ಯಾ ಎಂದು ಹೇಳುವ ಬದಲು ಶಾಸ್ತ್ರದೃಷ್ಟ್ಯಾ ಎಂದು ಹೇಳಿದ್ದರಿಂದ ಪರಮಾತ್ಮನು ಎಲ್ಲರಿಗೂ ನಿಯಾಮಕನಾದ್ದರಿಂದ ಆಯಾ ಶಬ್ದದಿಂದ ವಾಚ್ಯನಾಗಿದ್ದಾನೆ ಎಂಬುದನ್ನು ನೆನೆಪಿಸಿದಂತಾಯಿತು. ''ತತ್ತನ್ನಾಮ್ನೋಚ್ಯತೇ ವಿಷ್ಣುಃ ಸರ್ವಶಾಸ್ತ್ರೇಷ್ವ ಹೇತುತಃ' ಎಂದು ಹೇಳಿರುವುದರಿಂದ.

**॥ ॐ जीवमुख्यप्राणलिङ्गान्नेति चेन्नोपासात्रैविध्या-**
**दाश्रितत्वादिह तद्योगात् ॐ ॥ १-१-३१**

प्राणो ब्रह्मेति वर्तते । नेत्यनन्तरं शास्त्रदृष्ट्या तूपदेश इति च । ''तं शतं वर्षाण्यभ्यार्चत्'' इति शतायुष्ट्वादिरूपजीवलिङ्गात् प्राणसंवादादिमुख्यप्राणलिङ्गान्न प्राणो ब्रह्मेति चेन्न । ''तं शतम्'' इत्यादिजीवप्राणलिङ्गोपदेशः तदन्तर्यामिदृष्टयैव युक्तः । ''उदासीनावदास्तां तौ'' इत्यौदासीन्यं तु बाह्यरूपेणेत्यविरोधः । किमर्थाऽन्तर्याम्युक्तिरित्यत उक्तमुपासेत्यादि ।

अन्तर्यामित्वबहिष्टत्वभेदेन ब्रह्मोपासायाः त्रैविध्यादिह प्रकरणे ''स एतमेव सीमानं विदार्यैतया द्वारा प्रापद्यत'' इति ''स एतमेव पुरुषं ब्रह्मततममपश्यत्'' इति ''एतद्ध स्म वै तद्विद्वानाह महिदास ऐतरेयः'' इति च तत्त्रैविध्यस्याश्रितत्वादुक्तत्वादित्यर्थः । एकयैवोपासायाऽलं किं त्रैविध्येनेत्यत उक्तं - तद्योगात् । तस्योपासात्रैविध्यस्याधिकारिभेदेन योगाद्युक्तत्वादित्यर्थः ।

'पूरणगुण' इति गुणेन समासनिषेधस्यानित्यत्वोक्तेरुपासात्रैविध्यादिति साधु । संज्ञाप्रमाणत्वादित्यादिवत् । एवमग्रेऽपि । ''ण्यासश्रन्थोयुच्'' इति विशेषमनाश्रित्य ''गुरोश्च हलः'' इत्युत्सर्गस्यैवाश्रयणाद्वा, ''रोगाख्यायां ण्वुल् बहुलम्'' इति बहुलग्रहणाद्वा, ''ण्वाऽसरूपोऽस्त्रियाम् इति सरूपप्रत्ययस्य विकल्पेन बाधोक्तेर्घञन्तत्वेन वा उपासेति साधु ॥ ''घञन्तः पुंसि'' इति पाणिनीयलिङ्गानुशासनस्य तृतीये ''नौ वृ धान्ये'' इत्यत्र मञ्जर्यां प्रायिकत्वोक्तेः ॥ १२ ॥

ಈ ಸೂತ್ರದಲ್ಲಿ 'ಪ್ರಾಣಃ' ಬ್ರಹ್ಮ ಎಂಬೆರೆಡು ಪದಗಳನ್ನು ಸೇರಿಸಿಕೊಳ್ಳಬೇಕು. ನ ಎಂಬುದರ ಅನಂತರ ಶಾಸ್ತ್ರದೃಷ್ಟ್ಯಾ ತೂಪದೇಶಃ ಎಂಬ ವಾಕ್ಯವನ್ನು ಅನುವೃತ್ತಿ ಮಾಡಿಕೊಳ್ಳಬೇಕು.

'ತಂ ಶತಂ ವರ್ಷಾಣ್ಯಭ್ಯಾರ್ಚತ್ ಎಂಬ ಶ್ರುತಿಯಲ್ಲಿ ಶತಾಯುಷ್ಟ್ವವೆಂಬ ಜೀವಲಿಂಗವು ಕೇಳಿಸುತ್ತಿದೆ. ಮತ್ತು ಇಂದ್ರಿಯಗಳೊಡನೆ ಸಂವಾದವೆಂಬ ಮುಖ್ಯಪ್ರಾಣನ ಲಿಂಗವೂ ಮತ್ತೊಂದು ಶ್ರುತಿಯಲ್ಲಿ ಕೇಳಿಸುತ್ತಿದೆ. ಆದ್ದರಿಂದ ಪ್ರಾಣನು ಬ್ರಹ್ಮನಾಗಲು ಸಾಧ್ಯವಿಲ್ಲ.

ಈ ಆಕ್ಷೇಪವು ತಪ್ಪು. ಏಕೆಂದರೆ ತಂ ಶತಂ ಇತ್ಯಾದಿಯಾಗಿ ಶತಾಯುಷ್ಟ್ವವೆಂಬ ಜೀವನ ಲಿಂಗವನ್ನು ಹಾಗೂ ಮುಖ್ಯಪ್ರಾಣದೇವನ ಲಿಂಗವನ್ನು ಅಂತರ್ಯಾಮಿಯಾದ ಪರಮಾತ್ಮನ ದೃಷ್ಟಿಯಿಂದಷ್ಟೇ ಶ್ರುತಿಯಲ್ಲಿ ಹೇಳಲಾಗಿದೆ. ಹಾಗಾದರೆ 'ಉದಾಸೀನವದಾಸ್ತಾಂ ತೌ' ಎಂಬುದಾಗಿ ಅಂತರ್ಯಾಮಿಯಾದ ಭಗವಂತ ಹಾಗೂ ಚತುರ್ಮುಖಬ್ರಹ್ಮದೇವರು ಉದಾಸೀನರಾಗಿದ್ದಾರೆಂದು ಕೇಳಿಸುತ್ತಿದೆಯಲ್ಲವೇ ಎಂದು ಪ್ರಶ್ನಿಸಬಾರದು. ಹಾಗೆ ಔದಾಸೀನ್ಯವನ್ನು ಹೇಳಿರುವುದು ಬಾಹ್ಯರೂಪದ ವಿವಕ್ಷೆಯಿಂದ. ಆದ್ದರಿಂದ ವಿರೋಧಕ್ಕೆ ಅವಕಾಶವಿಲ್ಲ.

ಅಂತರ್ಯಾಮಿಯನ್ನು ಹೇಳಿದ್ದಕ್ಕೆ ಏನುಪ್ರಯೋಜನ? ಎಂಬ ಪ್ರಶ್ನೆಗೆ ಸೂತ್ರದಲ್ಲಿ ಉಪಾಸಾ ಇತ್ಯಾದಿಯಾಗಿ ಉತ್ತರಿಸಿದ್ದಾರೆ. ಭಗವಂತನ ಉಪಾಸನೆಯು ಅಂತರುಪಾಸನೆ, ವ್ಯಾಪ್ತ್ಯೋಪಾಸನೆ, ಬಹಿರುಪಾಸನೆ ಎಂಬುದಾಗಿ ಮೂರು ವಿಧವಾಗಿದೆ. ಇದನ್ನೇ ಈ ಪ್ರಕರಣದಲ್ಲಿ 'ಸ ಏತಮೇವ ಸೀಮಾನಂ ವಿದಾರ್ಯೈತಯಾ ದ್ವಾರಾ ಪ್ರಾಪದ್ಯತೇ' 'ಸ ಏತಮೇವ ಪುರುಷಂ...' ಎಂಬುದಾಗಿ ತ್ರೈವಿಧ್ಯವನ್ನು ಆಶ್ರಯಿಸಲಾಗಿದೆ. ಆಶ್ರಿತತ್ವಾತ್ ಎಂದರೆ ಹೇಳಿರುವುದರಿಂದ ಎಂದರ್ಥ. ಒಂದು ಬಗೆಯ ಉಪಾಸನೆಯನ್ನು ಹೇಳಿದರೆ ಸಾಕು. ಮೂರು ಬಗೆಯ ಉಪಾಸನೆಯನ್ನು ಏಕೆ ಹೇಳಬೇಕು? ಎಂಬ ಪ್ರಶ್ನೆಗೆ 'ತದ್ಯೋಗಾತ್' ಎಂಬುದರಿಂದ ಉತ್ತರಿಸಿದ್ದಾರೆ. ಬೇರೆಬೇರೆ ಅಧಿಕಾರಿಗಳಿಗೆ ಬೇರೆ ಬೇರೆ ಉಪಾಸನೆಯನ್ನು ಹೇಳುವುದಕ್ಕಾಗಿ ತ್ರಿವಿಧೋಪಾಸನೆಯನ್ನು ಹೇಳಿದ್ದು ಯುಕ್ತವಾಗಿದೆ ಎಂದರ್ಥ.

ಉಪಾಸಾತ್ರೈವಿಧ್ಯಾತ್ ಎಂಬ ಸಮಾಸವು ಸಾಧುವಾಗಿದೆ. ಏಕೆಂದರೆ 'ಪೂರಣಗುಣಃ'(೨/೨/೧೧) ಎಂಬ ವ್ಯಾಕರಣ ಸೂತ್ರದಲ್ಲಿ ಗುಣವನ್ನು ಹೇಳುವ ಶಬ್ದದ ಜೊತೆಗೆ ಷಷ್ಠೀಸಮಾಸವನ್ನು ನಿಷೇಧಿಸಲಾಗಿದೆ. ಆದರೂ ಸಹ ಈ ನಿಷೇಧವನ್ನು ಅನಿತ್ಯವೆಂದು ವೈಯ್ಯಾಕರಣರೇ ಒಪ್ಪಿದ್ದರಿಂದ 'ಸಂಜ್ಞಾಪ್ರಮಾಣತ್ವಾತ್' ಎಂಬಲ್ಲಿ ಹೇಗೆ ಸಮಾಸವಾಗುತ್ತದೋ ಆದರಂತೆ ಉಪಾಸಾತ್ರೈವಿಧ್ಯಾತ್ ಎಂಬಲ್ಲಿಯೂ ಸಮಾಸವಾಗುತ್ತದೆ. ಇದರಂತೆ ಮುಂದೆಯೂ ಸಹ ಸಮಾಸವಿಚಾರವನ್ನು ತಿಳಿಯಬೇಕು.

'ಉಪಾಸಾ' ಎಂಬ ಪದವು ಸಾಧುವಾಗಿದೆ. ಏಕೆಂದರೆ 'ಣ್ಯಾಸಶ್ರಂಥೋ ಯುಚ್'(೩/೩/೧೦೭) ಎಂಬ ಸೂತ್ರವು ಆಸ ಧಾತುವಿಗೆ ಯುಚ್ ಪ್ರತ್ಯಯವನ್ನು ವಿಧಿಸುತ್ತದೆ. ಆವಾಗ ಉಪಾಸನಾ ಎಂದು ರೂಪವಾಗುತ್ತದೆ. ಆದರೆ 'ಗುರೋಶ್ಚ ಹಲಃ' ಎಂಬ ಸೂತ್ರದ ಪ್ರಕಾರ 'ಉಪ' ಎಂಬ ಉಪಸರ್ಗದಿಂದ ಕೂಡಿದ್ದರೆ ಆಸಧಾತುವಿಗೆ ಆಕಾರಪ್ರತ್ಯಯವನ್ನು ಹೇಳಲಾಗಿದೆ. ಆವಾಗ ಉಪಾಸಾ ಎಂಬ ರೂಪವು ನಿಷ್ಪನ್ನವಾಗುತ್ತದೆ. ಇಲ್ಲಿ ಯುಚ್‌ಪ್ರತ್ಯಯವನ್ನು ವಿಧಿಸುವ ವಿಶೇಷಸೂತ್ರವನ್ನು ಆಶ್ರಯಿಸದೆ ಸಾಮಾನ್ಯಸೂತ್ರವನ್ನು ಆಶ್ರಯಿಸಿದ್ದರಿಂದ ದೋಷವಿಲ್ಲ. ಅಥವಾ 'ರೋಗಾಖ್ಯಾಯಾಂ ಣ್ವುಲ್ ಬಹುಲಮ್'(೩/೩/೧೦೮) ಎಂಬ ಸೂತ್ರದಲ್ಲಿ ಬಹುಲಗ್ರಹಣದಿಂದ 'ವ್ಯಾಸರೂಪೋಽಸ್ತ್ರಿಯಾಮ್' (೩/೧/೯೪) ಎಂಬುದಾಗಿ ಸಮಾನರೂಪವಿರುವ ಪ್ರತ್ಯಯಕ್ಕೆ ವಿಕಲ್ಪದಿಂದ ಬಾಧವನ್ನು ಹೇಳಲಾಗಿದೆ. ಆದ್ದರಿಂದ ಘಞ್‌ಪ್ರತ್ಯಯಾಂತವಾದ ಉಪಾಸಾ ಎಂಬ ಪದವು ಸಾಧುವಾಗುತ್ತದೆ.

ವಸ್ತುತಃ ಉಪಾಸಾ ಎಂಬ ಪದವು ಪುಲ್ಲಿಂಗದಲ್ಲಿರಬೇಕು. 'ಘಞಂತಃ ಪುಂಸಿ' ಎಂಬ ಸೂತ್ರವು ಘಞ್ ಪ್ರತ್ಯಯಾಂತವಾದ ಶಬ್ದಗಳೆಲ್ಲವೂ ಪುಲ್ಲಿಂಗದಲ್ಲಿರುತ್ತವೆಂದು ಹೇಳುತ್ತಿದೆ. ಆದರೆ ಪಾಣಿನೀಯ

ಲಿಂಗಾನುಶಾಸನವನ್ನು, 'ನೌ ವೃ ಧಾನ್ಯೇ' ಎಂಬ ಸೂತ್ರವನ್ನು ವ್ಯಾಖ್ಯಾನಿಸುವಾಗ, ಮಂಜರೀ ಗ್ರಂಥವು ಪ್ರಾಯಿಕವೆಂದು ಹೇಳಿದೆ. ಆದ್ದರಿಂದ ಉಪಾಸಾ ಎಂಬ ಸ್ತ್ರೀಲಿಂಗರೂಪವು ಅಸಾಧುವಲ್ಲ.

अत्रानन्दमयनये विष्णोः स्वावयवैक्यं, अन्तर्नये इन्द्रादिदेवगतैश्वर्यादेः आकाशनये सर्वस्वभावस्य चेशायत्तत्वं, प्राणनये सर्वजीवनहेतुत्वं, ज्योतिर्नये सर्वसूक्तानामवैष्णवत्वप्रसिद्धेरज्ञानमूलत्वं, छन्दोनयो अनादिनित्यस्यापीशाधीनत्वं, अन्त्यनये सर्वतत्तच्छ्रुतिलिङ्गानां तत्तदन्तर्यामिस्थत्वं सिद्धमित्यादि बोध्यम् ॥

**॥ इति श्रीमद्राघवेन्द्रयतिकृतायां तन्त्रदीपिकायां प्रथमाध्यायस्य प्रथमः पादः ॥**

ಈ ಪಾದದಲ್ಲಿ ಸಿದ್ಧವಾದ ಪ್ರಮೇಯಗಳು ಹೀಗಿವೆ. ಆನಂದಮಯಾಧಿಕರಣದಲ್ಲಿ ವಿಷ್ಣುವಿಗೆ ತನ್ನ ಅವಯವಗಳಿಂದ ಐಕ್ಯವು ಸಿದ್ಧವಾಗಿದೆ. ಅಂತರಧಿಕರಣದಲ್ಲಿ ಇಂದ್ರಾದಿದೇವತೆಗಳ ಐಶ್ವರ್ಯವು ಈಶಾಧೀನವೆಂದು ಸಿದ್ಧವಾಗಿದೆ. ಆಕಾಶಾಧಿಕರಣದಲ್ಲಿ ಸಕಲವಸ್ತುಗಳ ಸ್ವಭಾವವು ಈಶಾಧೀನವೆಂದು ಸಿದ್ಧವಾಗಿದೆ. ಪ್ರಾಣಾಧಿಕರಣದಲ್ಲಿ ಸರ್ವಜೀವನ ಹೇತುತ್ವವು, ಜ್ಯೋತಿರಧಿಕರಣದಲ್ಲಿ ಸಕಲಸೂಕ್ತಗಳ ಅವೈಷ್ಣವತ್ವ-ಪ್ರಸಿದ್ಧಿಯು ಅಜ್ಞಾನಮೂಲಕವೆಂದು, ಛಂದೋಧಿಕರಣದಲ್ಲಿ ಅನಾದಿನಿತ್ಯವಾದದ್ದಲ್ಲವೂ ಈಶಾಧೀನವಾದದ್ದೆಂದೂ, ಅಂತಿಮಪ್ರಾಣಾಧಿಕರಣದಲ್ಲಿ ಸಕಲ ದೇವತೆಗಳ ಶ್ರುತಿಲಿಂಗಗಳಿಗೆ ಅಂತರ್ಯಾಮಿಸ್ಥತ್ವವು ಸಿದ್ಧವಾಯಿತೆಂದು ತಿಳಿಯಬೇಕು.

ಇಲ್ಲಿಗೆ ತಂತ್ರದೀಪಿಕಾದ ಕನ್ನಡಾನುವಾದದಲ್ಲಿ ಪ್ರಥಮಾಧ್ಯಾಯದ ಪ್ರಥಮಪಾದವು ಮುಗಿಯಿತು ॥

श्रीराघवेन्द्रयतिकृता

# न्यायमुक्तावलिः

## अन्तिमप्राणाधिकरणम्

॥ ॐ प्राणस्तथानुगमात् ॐ ॥ १२ ॥

ः ॐ न वुक्तरात्मोपदेशादिति चेदध्यात्मसम्बन्धभूमा ह्यस्मिन् ॐ ॥

॥ ॐ शास्त्रदृष्ट्या तूपदेशो वामदेववत् ॐ ॥
॥ ॐ जीवमुख्यप्राणलिङ्गान्नेति चेन्नोपासात्रैविध्या-
दाश्रितत्वादिह तद्योगात् ॐ ॥

ಅತ್ರ ಶ್ರುತಿಲಿಙ್ಗಬಾಹುಲ್ಯೇನ ಪೂರ್ವಸಿದ್ಧಾನ್ತನ್ಯಾಯೇನ ಪೂರ್ವಪಕ್ಷಪ್ರವೃತ್ತೇರಾಪವಾದಿಕೀ ಸಙ್ಗತಿಃ । ಐತರೇಯೇ ''ತಾ ವಾ ಏತಾಃ ಶೀರ್ಷಚ್ಛಿಯಃ ಶ್ರಿತಾಶ್ಚಕ್ಷುಃ ಶ್ರೋತ್ರಂ ಮನೋ ವಾಕ್ ಪ್ರಾಣಃ'' (ಐ. ೨-೧-೪) ಇತ್ಯಾದಿನಾ ಬಹುಸ್ಥಲೇಷು ಶ್ರುತಃ ಪ್ರಾಣ. ಕಿಂ ಮುಖ್ಯವಾಯ್ವಾದಿರುತ ವಿಷ್ಣುರಿತಿ ಸನ್ದೇಹಃ । ವಾಯ್ವಿನ್ದ್ರಜೀವಾ ಇತಿ ಪೂರ್ವಃ ಪಕ್ಷಃ ॥ ತಚ್ಛ್ರುತಿಲಿಙ್ಗಾನಾಂ ಬಾಹುಲ್ಯಾತ್ । ತಥಾಹಿ । ಚಕ್ಷುಃ-ಶ್ರೋತ್ರಾದಿಭಿಃ ಸಹ ಪಾಠಃ, ತಾ ಅಹಿಂಸನ್ತೇತ್ಯಾದಿನೋಕ್ತಾನಿ 'ಪ್ರಾಣವಿವಾದೋ ದೇಹಾದುತ್ಕ್ರಮಣಪ್ರವೇಶೌ ತತೋ ದೇಹಪಾತೋತ್ಥಾನೇ ಪ್ರಾಣಸಂವಾದಶ್ಚ' ಇತ್ಯಾದೀನಿ ಮುಖ್ಯಪ್ರಾಣಲಿಙ್ಗಾನಿ ತತ್ಸಹಚರಿತ-ಪ್ರಾಣಶ್ರುತಿಶ್ಚ । ತಥಾ ''ತಂ ಯಚ್ಚತಂ ವರ್ಷಾಣ್ಯಭ್ಯಾರ್ಚತ್'' ಇತಿ (ಐ. ೨-೨-೧) ಶ್ರುತ ಶತಾಯುಷ್ಟ್ವಂ ತತ್ಸಹಪಠಿತಪುರುಷಶ್ರುತಿಃ ''ಪ್ರಾಣೋ ವಂಶ'' (ಐ. ೩-೨-೧) ಇತಿ ಚಕ್ಷುರಾದೀನ್ ಪ್ರತಿ ವಂಶತ್ವ-ಮಿತ್ಯಾದಿಜೀವಲಿಙ್ಗಾನಿ 'ಇನ್ದ್ರೋ ವೈ ವೃತ್ರಂ ಹತ್ವಾ' ಇತ್ಯಾದ್ಯುಕ್ತವೃತ್ರಹನನಮಹಾವ್ರತಯಾಜಿತ್ವಾ-ದಿಲಿಙ್ಗಾನಿ ಇನ್ದ್ರೋ ವೈ ವೃತ್ರಂ ಹತ್ವೇತ್ಯಾದ್ಯುಕ್ತವೃತ್ರಹನನಮಹಾವ್ರತಯಾಜಿತ್ಯಾದಿಲಿಙ್ಗಾನಿ ''ತಮಿನ್ದ್ರ ಉವಾಚ ಪ್ರಾಣೋ ವಾಹಮಸ್ಮ್ಯೃಷೇ'' (ಐ. ೨-೨-೩) ಇತೀನ್ದ್ರಪ್ರಯುಕ್ತಾಹಂಶ್ರುತಿಶ್ಚೇತಿ ಶ್ರುತಿಲಿಙ್ಗಬಾಹುಲ್ಯಂ ಶ್ರೂಯತೇ । ನಚೈತಾನಿ ವಿಷ್ಣೌ ಸಮ್ಭವನ್ತೀತಿ ॥

ಈ ಅಧಿಕರಣದಲ್ಲಿ ಶ್ರುತಿಲಿಂಗಬಾಹುಲ್ಯದಿಂದ ಪೂರ್ವಸಿದ್ಧಾಂತನ್ಯಾಯವನ್ನು ಅನುಸರಿಸಿ, ಪೂರ್ವ-ಪಕ್ಷವು ಹೊರಟಿರುವುದರಿಂದ ಅಪವಾದಕೀಸಂಗತಿಯು ಇರುತ್ತದೆ. ಐತರೇಯದಲ್ಲಿ 'ತಾವಾ ಏತಾಃ ಶೀರ್ಷನ್ ಶ್ರಿಯಃ ಶ್ರಿತಾಚಕ್ಷುಃ ಶ್ರೋತ್ರಂ ಮನೋ ವಾಕ್ ಪ್ರಾಣಃ' ಇತ್ಯಾದಿಯಾಗಿ ಅನೇಕಬಾರಿ ಪ್ರಾಣ-ಶಬ್ದವು ಕೇಳಿಸುತ್ತಿದೆ. ಈ ಪ್ರಾಣಶಬ್ದದಿಂದ ವಾಚ್ಯನಾದವನು ಮುಖ್ಯಪ್ರಾಣಾದಿಗಳೋ ಅಥವಾ ವಿಷ್ಣುವೋ ಎಂದು ಸಂದೇಹ.

ಮುಖ್ಯಪ್ರಾಣ, ಇಂದ್ರ, ಜೀವ ಇವರುಗಳೇ ಪ್ರಾಣಶಬ್ದವಾಚ್ಯರೆಂದು ಪೂರ್ವಪಕ್ಷ. ಏಕೆಂದರೆ, ಅವರ ಪರವಾದ ಶ್ರುತಿಲಿಂಗಗಳೇ ಬಹಳವಾಗಿವೆ. ಅದು ಹೀಗೆ— ಚಕ್ಷುಸ್ಸು ಶ್ರೋತೃ ಮೊದಲಾದ ಇಂದ್ರಿಯಗಳ ಜೊತೆಗೆ ಪ್ರಾಣಶಬ್ದವು ಪಠಿತವಾಗಿದೆ. ಮತ್ತು 'ತಾ ಅಹಿಂಸಂತ' ಇತ್ಯಾದಿಯಾಗಿ ಮುಖ್ಯಪ್ರಾಣನ ಲಿಂಗಗಳು ಕೇಳಿಸುತ್ತಿವೆ. ಆಷ್ಟೇ ಅಲ್ಲದೆ 'ಪ್ರಾಣವಿವಾದೋ ದೇಹಾದುತ್ಕ್ರಮಣಪ್ರವೇಶೌ ತತೋ ದೇಹಪಾತೋತ್ಥಾನೇ ಪ್ರಾಣಸಂವಾದಶ್ಚ' ಎಂಬುದಾಗಿ ಮುಖ್ಯಪ್ರಾಣನ ಅಸಾಧಾರಣಧರ್ಮವು ಶ್ರುತವಾಗಿದೆ. ಇಂತಹ ಲಿಂಗಗಳ ಜೊತೆಗೆ ಪ್ರಾಣಶ್ರುತಿಯೂ ಸಹ ಸೇರಿಕೊಂಡಿದೆ.

ಆದರಂತೆ 'ತಂ ಯಚ್ಚತಂ ವರ್ಷಾಣ್ಯಭ್ಯಾರ್ಚತ್' ಎಂಬುದಾಗಿ ಐತರೇಯದಲ್ಲಿ ಕೇಳಿಸುತ್ತಿರುವ ಶತಾಯುಷ್ಟ್ವ ಎಂಬ ಲಿಂಗವು ಅದರ ಜೊತೆಗೆ ಪಠಿತವಾದ ಪುರುಷಶ್ರುತಿಯು 'ಪ್ರಾಣೋ ವಂಶಃ'

ಎಂಬುದಾಗಿ ಚಕ್ಷುರಾದಿ ಇಂದ್ರಿಯಗಳನ್ನು ಕುರಿತು ವಂಶತ್ವವನ್ನು ಹೇಳಿದ್ದರಿಂದ ಇವೆಲ್ಲವೂ ಜೀವಲಿಂಗವೇ ಆಗಿವೆ. ಆದ್ದರಿಂದ ಜೀವನೂ ಸಹ ಪ್ರಾಣಶಬ್ದವಾಚ್ಯನಾಗಬಹುದು.

ಅಥವಾ 'ಇಂದ್ರೋ ವೈ ರುದ್ರಂ ಹತ್ವಾ' ಇತ್ಯಾದಿಯಾಗಿ ಹೇಳಲ್ಪಟ್ಟ ರುದ್ರಹಂತೃತ್ವ, ಮಹಾವ್ರತಯಾಜಿತ್ವ, ಮೊದಲಾದ ಲಿಂಗಗಳು ಹಾಗೂ 'ತಮಿಂದ್ರ ಉವಾಚ ಪ್ರಾಣೋವಾಹಮಸ್ಮ್ಯಪೇ' ಎಂಬುದಾಗಿ ಹೇಳಲ್ಪಟ್ಟ ಅಹಂಶ್ರುತಿಯು ದೇವೇಂದ್ರನಲ್ಲಿರುವುದರಿಂದ ದೇವೇಂದ್ರನೂ ಸಹ ಪ್ರಾಣನಾಗಬಹುದು.

ಹೀಗೆ ಮುಖ್ಯಪ್ರಾಣಾದಿಗಳಲ್ಲಿ ಶ್ರುತಿಲಿಂಗಬಾಹುಲ್ಯವಿದೆ. ಇವುಗಳನ್ನು ವಿಷ್ಣುವಿನಲ್ಲಿ ಕೂಡಿಸಲು ಸಾಧ್ಯವಿಲ್ಲವೆಂದು ಪೂರ್ವಪಕ್ಷ.

**ಸಿದ್ಧಾನ್ತಸ್ತು ॥ ಏತದ್ಧ್ಯೇತತ್ಸತ್ಯಂ (ಐ. ೨-೧-೧), ತಂ ಪ್ರಪದಾಭ್ಯಾಂ ಪ್ರಾಪದ್ಯತ (೨-೧-೪) ಬ್ರಹ್ಮೇಮಂ ಪುರುಷಂ (೨-೧-೪), ಅಃ ಇತಿ ಬ್ರಹ್ಮ (೨-೩-೮)** ಇತ್ಯಾದಿಶ್ರುತೀನಾಂ ''**ತಂ ದೇವಾಃ ಪ್ರಾಣಯನ್ತ (ಐ. ೨-೧-೫), ತಂ ಭೂತಿರಿತಿ ದೇವಾ ಉಪಾಸಾಞ್ಚಕ್ರಿರೇ (೨-೧-೮), ಸರ್ವೇ ವೇದಾ (೨-೨-೨) ಇತಿ, ಪ್ರಾಣೋ ಹ್ಯೇಷ ಯ ಏಷ ತಪತಿ (೨-೨-೧), ಪ್ರಾಣಸ್ತ್ವಂ ಪ್ರಾಣಃ ಸರ್ವಾಣಿ ಭೂತಾನಿ (೨-೨-೩) ಆಪಿಪೀಲಿಕಾಭ್ಯಃ ಪ್ರಾಣೇನ ಬಹುತ್ಯಾವಿಷ್ಟಬ್ಧಾನಿ**'' ಇತ್ಯಾದಿನಾ (ಐ. ೨-೧-೬) ಶ್ರುತಾನಾಂ ದೇವೋಪದೇಶ್ಯತ್ವಭೂತಿತ್ವಪ್ರಕಾರಕದೇವೋಪಾಸ್ಯತ್ವಸರ್ವವೇದಪ್ರತಿಪಾದ್ಯತ್ವಸೂರ್ಯಮಂಡಲಸ್ಥತ್ವ- ಸರ್ವಾನ್ತರ್ಯಾಮಿತ್ವ ಸರ್ವವ್ಯಾಪಿತ್ವಲಿಙ್ಗಾನಾಂ ಚ ಭಾಷ್ಯಾಭ್ಯುಕ್ತವಚನಾನನ್ತರಬಲೇನ ವಿಷ್ಣವೇಕನಿಷ್ಠತ್ವಾತ್ ಪ್ರಾಗುಕ್ತಶ್ರುತ್ಯಾದಿತೋऽಪಿ ಬಾಹುಲ್ಯಾಚ್ಚ । ಪ್ರಾಗುಕ್ತಶ್ರುತಿಲಿಙ್ಗಾನಂ ತತ್ತದನ್ತರ್ಯಾಮಿಸ್ಥತಯಾ ಸಾವಕಾಶತ್ವಾತ್ । ಉದಾಸೀನವದಾಸ್ತಾಮಿತ್ಯಸ್ಯ (ಬೃ. ಭಾ. ೨-೧-೪) ಬಾಹ್ಯರೂಪವಿಷಯತ್ವೇನಾವಿರೋಧಾತ್ । ಇನ್ದ್ರಪ್ರಯುಕ್ತಾಹಂಶಬ್ದಸ್ಯಾಪಿ **ಅಹಂ ಮನುರಭವಮ್** ಇತ್ಯಾದೌ ವಾಮದೇವಪ್ರಯುಕ್ತಾಹಂಶಬ್ದವಲ್ಲಕ್ಷಣಯಾ ವಾ, ''**ಸರ್ವಾನ್ತರ್ಯಾಮಿಕೋ ವಿಷ್ಣುಃ ಸರ್ವನಾಮ್ನಾಭಿಧೀಯತೇ । ಏಷೋऽಹಂ ತ್ವಮಸೌ ಚ**'' ಇತ್ಯಾದಿಸ್ಮೃತ್ಯಾ (ಬ್ರ.ಸೂ.ಭಾ. ೧-೧-೧೭) ಮುಖ್ಯವೃತ್ತ್ಯಾ ವಾ ಅನ್ತರ್ಯಾಮಿಪರತ್ವಾತ್ ಪ್ರಾಣೋ ವಿಷ್ಣುರೇವೇತಿ । ಫಲೇ ತು ಅತ ಏವ ಪ್ರಾಣ ಇತ್ಯುಕ್ತಪ್ರಾಣಸ್ಯ ವಿಷ್ಣುತ್ವಾಕ್ಷೇಪಸಮಾಧೀ ॥ ೧೨ ॥

**ಇತಿ ಶ್ರೀರಾಘವೇನ್ದ್ರಯತಿಕೃತಾಯಾಂ ನ್ಯಾಯಮುಕ್ತಾವಲ್ಯಾಂ ಆಚೇऽಧ್ಯಾಯೇ ಪ್ರಥಮಃ ಪಾದಃ**

'ಏತದ್ ಬ್ರಹ್ಮೈತತ್ಸತ್ಯಮ್' 'ತಂ ಪ್ರಪದಾಭ್ಯಾಂ ಪ್ರಾಪದ್ಯತೇ' 'ಬ್ರಹ್ಮೇಮಂ ಪುರುಷಂ' 'ಅಃ ಇತಿ ಬ್ರಹ್ಮ' ಹಾಗೂ 'ತಂ ದೇವಾಃ ಪ್ರಾಣಯಂತ' 'ತಂ ಭೂತಿರಿತಿ ದೇವಾ ಉಪಾಸಾಂ ಚಕ್ರಿರೇ' 'ಸರ್ವೇ ವೇದಾಃ' ಹಾಗೂ 'ಪ್ರಾಣೋ ಹ್ಯೇಷ ಯ ಏಷ ತಪತಿ' 'ಪ್ರಾಣಸ್ತ್ವಂ ಪ್ರಾಣಃ ಸರ್ವಾಣಿ ಭೂತಾನಿ' 'ಆಪಿಪೀಲಿಕಾಭ್ಯಃ ಪ್ರಾಣೇನ ಬಹುತ್ಯಾವಿಷ್ಟಬ್ಧಾನಿ' ಇತ್ಯಾದಿ ಶ್ರುತಿಗಳು 'ಇತ್ಯಾದಿಯಾಗಿ ಕೇಳಿಸಲ್ಪಟ್ಟ

ದೇವೋಪದೇಶ್ಯತ್ವ, ಹಾಗೂ ಭೂತಿತ್ವಪ್ರಕಾರಕವಾದ ದೇವೋಪಾಸ್ಯತ್ವ, ಸರ್ವವೇದಪ್ರತಿಪಾದ್ಯತ್ವ, ಸೂರ್ಯಮಂಡಲಸ್ಥತ್ವ, ಸರ್ವಾಂತರ್ಯಾಮಿತ್ವ, ಸರ್ವವ್ಯಾಪಿತ್ವ ಇವೇ ಮೊದಲಾದ ಅನೇಕ ಲಿಂಗಗಳು ಭಾಷ್ಯದಲ್ಲಿ ಹೇಳಲ್ಪಟ್ಟ ಅನೇಕ ವಚನಗಳ ಆಧಾರದಿಂದ ವಿಷ್ಣುವಿನಲ್ಲಿ ಮಾತ್ರ ಇರುತ್ತವೆಂದು ನಿರ್ಣಯವಾಗುತ್ತವೆ. ಇಂತಹ ಲಿಂಗಗಳು ಪೂರ್ವಪಕ್ಷದಲ್ಲಿ ಹೇಳಲ್ಪಟ್ಟ ಶ್ರುತಿಲಿಂಗಗಳಿಗಿಂತಲೂ ಬಲಿಷ್ಠವಾಗಿವೆ. ಮತ್ತು ಪೂರ್ವಪಕ್ಷದಲ್ಲಿ ಹೇಳಲ್ಪಟ್ಟ ಶ್ರುತಿಲಿಂಗಗಳನ್ನು ಅಂತರ್ಯಾಮಿಯಲ್ಲಿ ಸಾವಕಾಶವಾಗಿ ಹೇಳಬಹುದು. 'ಉದಾಸೀನವದಾಸ್ತಾಮ್' ಎಂಬುದನ್ನು ಭಗವಂತನ ಬಾಹ್ಯರೂಪವಿಶೇಷವನ್ನು ಅನುಸರಿಸಿ ವಿರೋಧವನ್ನು ಪರಿಹರಿಸಬಹುದು. ಇಂದ್ರನಿಂದ ಪ್ರಯೋಗಿಸಲ್ಪಟ್ಟ ಅಹಂಶಬ್ದವೂ ಸಹ ಅಹಂ ಮನುರಭವಮ್' ಎಂಬಲ್ಲಿ ವಾಮದೇವರಿಂದ ಪ್ರಯೋಗಿಸಲ್ಪಟ್ಟ ಅಹಂಶಬ್ದಕ್ಕೆ ಹೇಗೆ ಲಕ್ಷಣ ಮಾಡುತ್ತೇವೋ, ಆದರಂತೆ ಇಲ್ಲಿಯೂ ಲಕ್ಷಣಮಾಡಬಹುದು. ''ಸರ್ವಾಂತರ್ಯಾಮಿಕೋ ವಿಷ್ಣುಃ ಸರ್ವನಾಮ್ನಾಭಧೀಯತೇ । ಏಷೋಽಹಂ ತ್ವಮಸೌ ಚ'' ಇತ್ಯಾದಿ ಸ್ಮೃತಿಯಿಂದ ಮುಖ್ಯವೃತ್ತಿ-ಯಿಂದಲೇ ಅಂತರ್ಯಾಮಿಯಲ್ಲಿ ಅಹಂಶಬ್ದವನ್ನು ಸಮನ್ವಯಮಾಡಬಹುದಾದ್ದರಿಂದ ಪ್ರಾಣನು ವಿಷ್ಣುವೇ ಆಗಿದ್ದಾನೆ. 'ಅತ ಏವ ಪ್ರಾಣಃ' ಎಂಬಲ್ಲಿ ಹೇಳಲ್ಪಟ್ಟ ಪ್ರಾಣನು ವಿಷ್ಣುವಲ್ಲವೆಂಬ ಆಕ್ಷೇಪವು ಪೂರ್ವಪಕ್ಷದ ಫಲ. ಆದರ ಸಮಾಧಾನವು ಸಿದ್ಧಾಂತದ ಫಲ.

॥ ಇಲ್ಲಿಗೆ ಶ್ರೀರಾಘವೇಂದ್ರತೀರ್ಥಶ್ರೀಪಾದರಿಂದ ರಚಿತವಾದ ನ್ಯಾಯಮುಕ್ತಾವಳಿಯ ಕನ್ನಡಾನುವಾದದಲ್ಲಿ ಅಂತಿಮಪ್ರಾಕಾಧಿಕರಣವು ಮುಗಿಯಿತು ॥

# सूत्रार्थरत्नावलिः

अत्र लोकतोऽन्यत्रप्रसिद्धप्राणनाम्नो विष्णौ समन्वयः प्रतिपाद्यते ।

**सू - ॐ ॥ प्राणस्तथाऽनुगमात् ॥ ॐ॥ २८ ॥**

ननु 'ता वा एताः' (ऐ.आ.२/१/४) इत्युक्तप्राणो न विष्णुः । इन्द्रियगणे गणितत्वात् । जीवो वा । 'एष इमे लोकमभ्यार्चत्' (ऐ.आ. २/२/१/१) इति जीवलिङ्गात् । मुख्यप्राणो वा । 'ता अहिंसन्त' (ऐ.आ.२/१/४/९) तल्लिङ्गात् – इति प्राप्ते सूत्रमुपन्यस्यति –

ॐ ॥ प्राणस्तथाऽनुगमादिति ॥ अस्यार्थः – तथा 'तद् वै त्वम्' (तै.आ.३/१४/४) इति तैत्तिरीयोक्तप्राणवत्, 'ता वा' इत्यैतरेयोक्तप्राणोऽपि विष्णुरेव । कुतः? अनुगमात् देवतोपास्यादिविष्णुलिङ्गब्रह्मशब्दानाम् असकृच्छ्रवणादित्यर्थः ।

एवं च 'स एषोऽसुः'(ऐ.आ.२/१/८) इत्यत्र दुष्टनिरसनाद् असुत्वेन प्रकृष्टानन्दरूपत्वात् प्राणत्वेन देवानां ज्ञानावैश्वर्यप्रदत्वाद् असुराणामज्ञानावैश्वर्य-

ಹೇತುತ್ವಾಚ್ಚ ಭೂತ್ಯಭೂತಿತ್ವೇನ ಚ 'ತಾ ವಾ ಏತಾಃ' ಇತ್ಯತ್ರ ಸರ್ವವೇದೋಕ್ತತ್ವೇನ 'ತದಯಂ ಪ್ರಾಣಃ' (ಐ.ಆ. ೨/೩/೮) ಇತ್ಯತ್ರ ದೇಹರಥಿತ್ವೇನ, 'ತಂ ದೇವಾಃ ಪ್ರಾಣಯನ್ತೇ' (ಐ.ಆ.೨/೧/೫) ಇತ್ಯತ್ರ ಸರ್ವದೇವತೋಪಾಸ್ಯತ್ವೇನ ಚೋಕ್ತತ್ವಾತ್ । ನಚ ಪೂರ್ವಪಕ್ಷಿಲಿಙ್ಗಸ್ಯ ನಿರವಕಾಶತ್ವೇನಾಪಿ ಪ್ರಾಬಲ್ಯಮ್ । ಪ್ರಾಣೈಃ ಸಹ ಗಣಿತತ್ವಸ್ಯಾನ್ತರ್ಯಾಮಿನಿಷ್ಠತಾಸಮ್ಭವಾತ್ । ಪ್ರಾಬಲ್ಯೇऽಪ್ಯೇಕಪ್ರಕಾರೇಣ ಪ್ರಬಲಾತ್ ಪೂರ್ವಪಕ್ಷಿಲಿಙ್ಗಾತ್ ಪ್ರಕಾರದ್ವಯೇನಾಪಿ ಪ್ರಬಲಸ್ಯ ಸೈದ್ಧಾನ್ತಿಕಲಿಙ್ಗಸ್ಯಾಧಿಕ್ಯೇನ ನಿರ್ಣಯೋಪಪತ್ತೇಃ । ಅಸ್ಮಿನ್ ಪ್ರಕರಣೇ 'ಏತದ್ ಬ್ರಹ್ಮ'(ಐ.ಆ.೨/೧/೧/೧) 'ಬ್ರಹ್ಮಣೋ ಲೋಕಃ' (ಐ.ಆ.೨/೧/೩/೧), 'ಬ್ರಹ್ಮೇಮಂ ಪುರುಷಮ್' (ಐ.ಆ.೨/೧/೪/೧), 'ಉದರಂ ಬ್ರಹ್ಮೇತ್ಯಾಚಕ್ಷತೇ' (ಐ.ಆ.೨/೧/೪/೫) 'ಅ ಇತಿ ಬ್ರಹ್ಮ' (ಐ.ಆ.೨/೩/೮/೭) ಇತ್ಯಾದಿ ನಿರವಕಾಶಬ್ರಹ್ಮಶಬ್ದಾಭ್ಯಾಸಾತ್ । ಅತೋऽಯಂ ಪ್ರಾಣೋ ವಿಷ್ಣುರೇವೇತಿ ಸಿದ್ಧಮ್ ।

**ॐ ॥ ನ ವಕ್ತುರಾತ್ಮೋಪದೇಶಾದಿತಿ ಚೇದಧ್ಯಾತ್ಮ-**

**ಸಮ್ಬನ್ಧಭೂಮಾ ಹ್ಯಸ್ಮಿನ್ ॥ ॐ ॥ ೨೯ ॥**

ನನು ನಾಯಂ ಪ್ರಾಣೋ ವಿಷ್ಣುಃ । ಕಿನ್ತು ಇನ್ದ್ರ ಏವ । 'ಪ್ರಾಣೋ ವಾऽಹಮ್' ಇತಿ (ಐ.ಆ. ೨/೨/೩) ವಾಕ್ಯೇನ ಬೃಹತೀಸಹಸ್ರವಕ್ತುರ್ವಿಶ್ವಾಮಿತ್ರಸ್ಯೇನ್ದ್ರೇಣ ಪ್ರಾಣತಯಾऽऽತ್ಮನಃ ಸ್ವಸ್ಯೈವೋಪದೇಶಾತ್ ಇತ್ಯಾಕ್ಷಿಪ್ಯ ಸಮಾದಧತ್ ಸೂತ್ರಮಾಹ –

ॐ ॥ ನ ವಕ್ತುರಾತ್ಮೋಪದೇಶಾದಿತಿ ಚೇದಧ್ಯಾತ್ಮಸಮ್ಬನ್ಧಭೂಮಾ ಹ್ಯಸ್ಮಿನ್ನಿತಿ । ಅಸ್ಯಾರ್ಥಃ –ದ್ವಿತೀಯಾರ್ಥೇ ಷಷ್ಠೀ । ವಕ್ತುಃ ಬೃಹತೀಸಹಸ್ರವಕ್ತಾರಮ್ । ವಿಶ್ವಾಮಿತ್ರಂ ಪ್ರತೀನ್ದ್ರೇಣ । ಆತ್ಮೋಪದೇಶಾತ್ ಆತ್ಮನಃ ಸ್ವಸ್ಯ ಪ್ರಾಣತಯೋಪದೇಶಾತ್ ಇನ್ದ್ರ ಏವಾಯಂ ಪ್ರಾಣಃ ನ ವಿಷ್ಣುರಿತಿ ಚೇತ್ ನೇತಿ ಶೇಷಃ । ತಸ್ಯಾವೃತ್ತಿಃ ಅನುಗಮಾತ್ ಇತ್ಯನುವರ್ತತೇ । ತಥಾಚ ಪ್ರಾಗುಕ್ತಾನುಗಮಹೇತೋರ್ನೇನ್ದ್ರಃ ಪ್ರಾಣಃ । ತಥಾ ಸತಿ ಉಪದೇಶವಿರೋಧ ಇತ್ಯಪಿ ನ । ಕುತಃ? ಯಸ್ಮಾತ್ ಅಸ್ಮಿನ್ಪ್ರಕರಣೇ ಭಗವತಃ ಅಧ್ಯಾತ್ಮಸಮ್ಬನ್ಧಭೂಮಾ ಇನ್ದ್ರವಿಶ್ವಾಮಿತ್ರಾದಿರೂಪಬಹುದೇಹಸಮ್ಬನ್ಧಃ ಉಕ್ತोऽಸ್ತಿ । ತಸ್ಮಾದಿತ್ಯರ್ಥಃ । ಯದ್ವಾ, ಹಿ ಯಸ್ಮಾತ್ । ಅಸ್ಮಿನ್ ಇನ್ದ್ರೇ । ಅಧ್ಯಾತ್ಮಸಮ್ಬನ್ಧಭೂಮಾ । ಅಧಿ ಅಧಿಕಸ್ಯ ಆತ್ಮನಃ । ಸಮ್ಬನ್ಧಸ್ಯ ಆವೇಶಸ್ಯ । ಭೂಮಾ ಬಾಹುಲ್ಯಂ ವಿದ್ಯತೇ । ತಸ್ಮಾದಿತ್ಯರ್ಥಃ ।

ಏವಂಚ ಪ್ರಾಣೋ ವಿಷ್ಣುರಿತಿ ಸಿದ್ಧಮ್ ॥

**ॐ॥ ಶಾಸ್ತ್ರದೃಷ್ಟ್ಯಾ ತೂಪದೇಶೋ ವಾಮದೇವವತ್ ॥ ॐ ॥೩೦॥**

ನನು ಯದಿ ಪ್ರಾಣಶಬ್ದೇನೇನ್ದ್ರೇಣಾಪಿ ವಿಷ್ಣುರೇವ ಸ್ವಾತ್ಮಾದಿಸರ್ವಗತತಯೋಚ್ಯತೇ ತರ್ಹಿ 'ಮಯಿ ಪ್ರಾಣಃ' ಇತಿ ನಿರ್ದೇಶಃ ಸ್ಯಾತ್ । ನ ತ್ವಹಮಿತಿ । ವಿಷ್ಣಾವಹಮಿತ್ಯಾದಿರೂಪೋಪದೇಶಾಯೋಗಾದಿತಿ ಪ್ರಾಪ್ತೇ – ಪರಿಹರತ್ ಸೂತ್ರಂ ಪಠತಿ –

ॐ॥ ಶಾಸ್ತ್ರದೃಷ್ಟ್ಯಾ ತೂಪದೇಶೋ ವಾಮದೇವವತ್ ಇತಿ । ಅಸ್ಯಾರ್ಥಃ – ತುಶಬ್ದ ಏವಾರ್ಥೇ ।

वामदेववत् यथाऽन्तर्यामिविवक्षया वामदेवर्षिः । 'अहं मनुरभवम्' इति स्वस्य मनुसूर्याद्यैक्यमाह, तद्वत् । शास्त्रदृष्ट्या 'शास्ति सर्वम्' इति शास्त्रम् अन्तर्यामि । तद्दृष्ट्या तद्विवक्षयैवोपदेशः 'प्राणोऽहम्' इति व्यपदेशः । नत्वैक्येनेत्यर्थः ॥

एवंच इन्द्रस्य प्राणतयाऽऽत्मोपदेशस्यान्तर्यामिविवक्षया प्रवृत्तत्वात् । अन्यथा 'त्वं प्राणः' इति व्यपदेशानुपपत्तेः । ईश्वरपक्षे तु अहमादिशब्दानां शास्त्रदृष्ट्या प्रवृत्तत्वेन बाधकाभावात् । 'तत्तन्नाम्नोच्यते विष्णुः' (पाद्मे) इति वचनात् प्राणोऽयं विष्णुरेवेति सिद्धम् ।

**सू - ॐ ॥ जीवमुख्यप्राणलिङ्गान्नेति चेन्नोपासात्रैविध्यादा-**
**श्रितत्वादिह तद्योगात् ॥ ॐ ॥**

पुनरुक्तमाक्षिप्य समादधत् सूत्रमुपन्यस्यति ।

सू - ॐ ॥ जीवमुख्यप्राणलिङ्गान्नेति चेन्नोपासात्रैविध्यादाश्रितत्वादिह तद्योगात् इति ।

अस्यार्थः – जीवमुख्यप्राणलिङ्गात् शतायुष्त्वादिजीवलिङ्गानाम् इन्द्रियदेवैः संवादादिरूपमुख्यप्राणलिङ्गानां च श्रवणात् । (ऐ.आ.२/२/४) प्राणोऽन्य एव न विष्णुरिति चेन्न । कुतः? अनुगमात् । नच लिङ्गविरोधः । 'तल्लिङ्गानाम् अन्तर्यामिविषयत्वेनोपपत्तेः' इत्यादिकमध्याहार्यम् । किमर्थमन्तर्यामिकथनम्? इत्यत उक्तम् – उपासात्रैविध्यादिति ॥ अन्तर्बहिः सर्वगतभेदेन ब्रह्मोपासनस्य त्रिविधत्वात् । इह प्रकरणे । तत् त्रैविध्यस्याश्रितत्वात् उक्तत्वात् । तद्योगात् तेषामधिकारिणां त्रिविधोपासनायोग्यत्वादित्यर्थः ।

एवंच तत्तच्छब्दैस्तत्तदधिकारिभेदेनोपासनार्थम् अन्तर्यामिकथनं युक्तमिति भावः । तस्मादयं प्राणो विष्णुरेवेति प्रागुक्तः प्राण आनन्दमयश्सच स एवेति युक्ता तज्जिज्ञासेति सिद्धम् ॥

॥ इति पादान्त्यप्राणाधिकरणम् ॥
॥ इति परिपूर्णचन्द्रिकायां पादान्त्यप्राणाधिकरणम् ॥

# ಎಲ್ಲಾ ಹೆಸರೂ ದೇವರ ನಾಮವೆ !

ದೇವನೊಬ್ಬನಾಮ ಹಲವು ಎಂಬುದೇ ಸತ್ಯ.
ದೇವನೊಬ್ಬ ವ್ಯಕ್ತಿ ಹಲವೆಂಬುದು ಮಿಥ್ಯಾ.
ಸರ್ವೋತ್ತಮನಾದ ದೇವನೆಂದರೆ ಮಹಾವಿಷ್ಣುವೇ.

ಇವನನ್ನು ಯಾವ ಹೆಸರಿನಿಂದಾದರೂ ಕರೆಯಿರಿ. ಗಣಪತಿ, ರುದ್ರ, ಚಂದ್ರ, ಬ್ರಹ್ಮ... ಅಷ್ಟೇ ಅಲ್ಲ...
ಪೃಥ್ವಿ, ಜಲ ತೇಜಸ್ಸು, ಆಕಾಶ ಮೊದಲಾದ ಭೌತಿಕ ಪದಾರ್ಥಗಳ ಹೆಸರುಗಳಿಂದಲೂ
ಅವನನ್ನು ಕರೆಯಬಹುದು. ತಪ್ಪೇ ಇಲ್ಲ...

ಇನ್ನೂ ಆಶ್ಚರ್ಯವೆಂದರೆ ದೇಹ, ಇಂದ್ರಿಯ, ಪ್ರಾಣ ಮೊದಲಾದ ಆಧ್ಯಾತ್ಮಿಕ ಶಬ್ದಗಳಿಂದಲೂ ಅವನನ್ನು
ಕೂಗಬಹುದು. ವೇದದಲ್ಲಿರುವ ಜ್ಯೋತಿ ಮೊದಲಾದ ಶಬ್ದಗಳಿಂದ ಗಾಯತ್ರಿ ಮೊದಲಾದ ಛಂದೋವಾಚಕ
ಶಬ್ದಗಳಿಂದಲೂ ಅವನನ್ನು ಕರೆಯಬಹುದು.

ಇದಕ್ಕಾಗಿಯೇ ಆಕಾಶಾಧಿಕರಣ, ಪ್ರಾಣಾಧಿಕರಣ, ಜ್ಯೋತಿರಧಿಕರಣ, ಗಾಯತ್ರ್ಯಧಿಕರಣ,
ಆಂತಿಮಪ್ರಾಣಾಧಿಕರಣಗಳು ಹೊರಟಿರುತ್ತವೆ.

ಒಟ್ಟಾರೆ ವೇದದಲ್ಲಿರುವ ಎಲ್ಲಾ ವಿಧವಾದ ನಾಮಾತ್ಮಕ ಶಬ್ದಗಳು ಭಗವಂತನಾದ ಮಹಾವಿಷ್ಣುವಿನ
ಹೆಸರುಗಳೆಂದು ಏಕಕಂಠದಿಂದ ಘೋಷಿಸುತ್ತದೆ ಈ ಪ್ರಥಮಪಾದ.

ಈ ತಿಳುವಳಿಕೆ ರಕ್ತಗತವಾಗಿ ನರನಾಡಿಗಳಲ್ಲಿ ಹರಿಯುವಂತೆ ಅನುಷ್ಠಾನಕ್ಕೆ ತಂದರೆ ಮಾತ್ರ
ಈ ಪಾದದ ಅಧ್ಯಯನ ಸಾರ್ಥಕ ! ಸಾರ್ಥಕ ! ಸಾರ್ಥಕ !

ಪ್ರಕಾಶಕರು : ಶ್ರೀಪಾದರಾಜಮಠ, ಮುಳಬಾಗಿಲು